ನವಯುಗ

VOL. 43 No. 18

ಸಂಪುಟ ೪೩ ಸಂಚಿಕೆ ೧೮

NAVA YUGA—Nationalist Weekly ‡‡ ಉಡುಪಿ 2-1-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಡಾ| ನಾಗಪ್ಪ ಆಳ್ವ

ಕರ್ನಾಟಕದ ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವ ಅವರು ದಕ್ಷಿಣ ಕನ್ನಡ ಜಿಲ್ಲೆಯ ರಾಜಧಾನಿ ಮಂಗಳೂರಿನಲ್ಲಿ ಮೊದಲು ವೈದ್ಯಕೀಯ ವೃತ್ತಿಯಲ್ಲಿದ್ದರು. ಆಗಲೇ ಕಾಂಗ್ರೆಸ್‌ನ ಗಾಳಿ ಇವರಿಗೆ ತಾಗಿತ್ತು. ಜಿಲ್ಲಾ ಬೋರ್ಡಿನ ಸದಸ್ಯರಾಗಿ, ನಗರ ಸಭೆಯ ಕೌನ್ಸಿಲರರಾಗಿ ಸ್ಥಳೀಯ ಸರಕಾರ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಇವರು ದುಡಿದರು; ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾಗಿ, ಪಕ್ಷ ಕಟ್ಟುವ ಕಲೆಯನ್ನು ಅರಿತು ಕೊಂಡರು. ಈ ಅನುಭವದ ಫಲವಾಗಿಯೇ ಇವರೀಗ ಆರೋಗ್ಯ ಮಂತ್ರಿ ಪದವಿಯನ್ನು ಪಡೆದಿದ್ದಾರೆ. ವಿದೇಶ ಸಂಚಾರವನ್ನೂ ಕೈಗೊಂಡು, ಅಲ್ಲಿ ಪಡೆದ ತಮ್ಮ ಅನುಭವಗಳಿಂದ ರಾಜ್ಯವನ್ನೇ ಬೆಳಗಬಲ್ಲ ಚೇತನವುಳ್ಳವರು ಡಾ| ಆಳ್ವ ಅವರು. ವೃತ್ತಿಯಲ್ಲಿ ವೈದ್ಯರಾದವರಾದ ಇವರಿಗೆ ವೈದ್ಯಕೀಯ ಶಾಖೆಯ ಮಹತ್ವವನ್ನು ಆವಶ್ಯಕತೆಯನ್ನೂ ತಿಳಿದುಕೊಳ್ಳುವುದು ಕಠಿನವಲ್ಲ. ರಾಜ್ಯದಾದ್ಯಂತದಲ್ಲೂ ಆರೋಗ್ಯ ಸೌಕರ್ಯದ ಲಾಭವನ್ನು ಯಥೋಚಿತವಾಗಿ ಹಂಚುವ ಮಹಾ ಹೊಣೆಗಾರಿಕೆಯನ್ನು ಇದುವರೆಗೂ ಡಾ| ಆಳ್ವ ಉತ್ತಮ ರೀತಿಯಲ್ಲೇ ನಿರ್ವಹಿಸಿದ್ದಾರೆ. ವೈದ್ಯಕೀಯ ಕಾಲೇಜುಗಳ ಸ್ಥಾಪನೆ ಮತ್ತವುಗಳಿಗೆ ಪ್ರವೇಶ ನೀಡುವ ನೀತಿಯಲ್ಲಿ ಒಂದು ನಿರ್ದಿಷ್ಟ ಸಂಪ್ರದಾಯವಿನ್ನೂ ಪ್ರಾರಂಭವಾಗಬೇಕು. ಮುಂದಿನವರ್ಷ ಪ್ರಾರಂಭವಾಗುದಕ್ಕೆ ಮೊದಲಾದರೂ ಕ್ರಮನಿಬಂಧನೆಗಳು ನ್ಯಾಯೋಚಿತವಾಗಿ ರೂಪಿಸಲ್ಪಟ್ಟು ಆ ಸಂಬಂಧದಲ್ಲಿ ನ್ಯಾಯಾಲಯಗಳ ಮೊರೆಹೋಗುವಂತಹ ಪರಿಸ್ಥಿತಿ ಬಾರದಂತೆ ಆಗಬೇಕು.

ಸದಾ ನಗುಮುಖದವರಾದ ಆಳ್ವರ ಸ್ನೇಹಶೀಲ ವ್ಯಕ್ತಿತ್ವಕ್ಕೆ ದರ್ಶಕನು ಅವರಿಂದ ಆಕರ್ಷಿತನಾಗುತ್ತಾನೆ. ಧರ್ಮಿಷ್ಠರಾದ ಆಳ್ವ ಅವರು ಒಂದು ರೀತಿಯಿಂದ ಧಾರ್ಮಿಕ ಜೀವನವನ್ನೇ ನಡೆಸುತ್ತಾರೆ, ಆರೋಗ್ಯ ದಾನಕ್ಕಿಂತ ದೊಡ್ಡ ದಾನವು ಬೇರಾವುದಿದೆ? ಮೊದಲೂ ಇವರು ಆರೋಗ್ಯ ದಾನ ಮಾಡುತ್ತಿದ್ದರು; ಇಂದವರ ಕಾರ್ಯಕ್ಷೇತ್ರ ವಿಶಾಲವಾಗಿದೆ, ವಿಸ್ತೃತಗೊಂಡಿದೆ ಇಡಿಯ ರಾಜ್ಯದ ೩|| ಕೋಟಿ ಕನ್ನಡಿಗರಿಗೆ ಆರೋಗ್ಯದಾನ ಮಾಡುವ ಮಹಾಕಾರ್ಯ ಅವರ ಪಾಲಿಗಿದೆ. ಯೋಜಕ ಬಂಧುವೆನಿಸಿದ ಆಳ್ವ ಅವರು ರಾಜ್ಯದ ಆಸ್ಪತ್ರೆಗಳಲ್ಲಿ ಆವಶ್ಯಕ ಸಂಖ್ಯೆಯ ಡಾಕ್ಟರರು ಮತ್ತು ಔಷಧಿಗಳ ಪೂರೈಕೆಯನ್ನು ಮಾಡುವಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕು; ಇಂದು ಈ ದಿಸೆಯಲ್ಲಿ ಕಂಡುಬರುವ ನ್ಯೂನಾತಿರೇಕಗಳನ್ನು ಕೂಡಲೇ ಸರಿಪಡಿಸಿಕೊಳ್ಳಬೇಕು. ರಾಜ್ಯದ ಆರೋಗ್ಯವು ಉತ್ತಮವಾಗಿದ್ದರೆ ತಾನೇ ನಾವು ನಿರೀಕ್ಷಿಸಿದ ಅಭಿವೃದ್ಧಿ ಕಾರ್ಯಗಳು ಸಾಂಗವಾಗಿ ನಡೆಯುವವು? ನಮ್ಮ ಸುಖೀರಾಜ್ಯದ ಕನಸು ನನಸಾಗುವುದು? ಇಂತಹ ಶಕ್ತಿ ಡಾ ಆಳ್ವರಲ್ಲಿದೆ. ಅವರು ಆರೋಗ್ಯ ದಾನಿಗಳಾಗಿ ಉಳಿವುದಲ್ಲ, ಜನತೆಯು ಅವರಿಂದ ಇನ್ನೂ ಅಳಿಸಿಕೊಳ್ಳಬೇಕು.



ಪ್ರಿ| ಎಚ್. ಸುಂದರ ರಾವ್

ಉಡುಪಿಯ ಮೊತ್ತಮೊದಲ ಆರ್ಟ್ಸ್ ಸಾಯನ್ಸ್ ಮತ್ತು ಕಾಮರ್ಸ್ ಕಾಲೇಜೆಂದರೆ, ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನವರು ನಡೆಸುವ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು. ಎಂ. ಜಿ ಎಂ. ಕಾಲೇಜೆಂದು ಹೆಸರುಗಳಿಸಿದ ಇದು ಹಿಂದೆ ಮದ್ರಾಸು, ನಡುವೆ ಕರ್ನಾಟಕ ಮತ್ತೀಗ ಮೈಸೂರು ವಿಶ್ವವಿದ್ಯಾಲಯಗಳಿಗೆ ಸೇರ್ಪಡೆ ಹೊಂದಿದ ಆದರ್ಶ ಕಾಲೇಜುಗಳಲ್ಲಿ ಒಂದೆನಿಸಿದೆ. ಈ ಕಾಲೇಜು ೧೯೪೯ರಲ್ಲಿ ಸ್ಥಾಪನೆಯಾದಂದಿನಿಂದ ಇಂದಿನ ವರೆಗೂ ಪ್ರಿನ್ಸಿಪಾಲರಾಗಿ ಅನವರತವಾಗಿ ದುಡಿದು, ಕಾಲೇಜಿನ ನಿರ್ಮಾಣ ಮತ್ತು ಬೆಳವಣಿಗೆಗಾಗಿ ಅಹರ್ನಿಶಿ ಹೆಣಗಾಡಿದ ಪ್ರಿ|| ಎಚ್ ಸುಂದರರಾಯರು ಇನ್ನೇನು, ನಿವೃತ್ತರಾಗುತ್ತಾರೆ. ಪ್ರಿ| ಸುಂದರ ರಾಯರು ಮೊದಲು ಉಡುಪಿಗೆ ಬಂದಾಗ ಚಿರಪರಿಚಿತರಾಗಿರಲಿಲ್ಲ; ಆದರೆ, ಬಂದವರೇ ಹೆಚ್ಚಿನ ಪ್ರಿನ್ಸಿಪಾಲ್ ಎಂಬ ಕೀರ್ತಿಗಳಿಸಿದರು. ಸುದೃಢ ಉನ್ನತಕಾಯವೂ ವ್ಯಕ್ತಿತ್ವವೂ ಉಳ್ಳ ಇವರು ಕಾಲೇಜಿನ ಕೀರ್ತಿ ಪತಾಕೆಯನ್ನು ಬಾನೆತ್ತರದಲ್ಲಿ ಹಾರಿಸಿದರು ಆಡಳಿತ ದಕ್ಷರಾಗಿದ್ದ ರಾಯರು ಉತ್ತಮ ಪ್ರಾಧ್ಯಾಪಕರು. ಶೇಕ್ಸ್‌ಪಿಯರನೆಂದರೆ, ಅವರಿಗೆ ಪಂಚಪ್ರಾಣ; ಅವನಿವರ ಕರತಲಾಮಲಕ. ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಉತ್ತಮವಾಗ್ಮಿ ಎಂದು ಹೆಸರುಗಳಿಸಿದವರು ತಮ್ಮ ಪ್ರಾಧ್ಯಾಪಕತನದಲ್ಲಿ ಅದನ್ನು ಉಳಿಸಿಕೊಂಡರು; ಬೆಳೆಸಿಕೊಂಡರು, ಅದರ ಪ್ರಯೋಜನವನ್ನು ಎಲ್ಲರಿಗೂ ಹಂಚಿದರು, ಇವರು ಲೇಖನ ಕಲೆಯಲ್ಲಿಯೂ ತಮ್ಮ ಕೈಯನ್ನಾಡಿಸಿದ್ದಾರೆ, ಕೃತಕೃತ್ಯರೆನಿಸಿದ್ದಾರೆ.

ಗಂಭೀರರಾದ ಸುಂದರರಾಯರು ಗಂಭೀರರಾಗಿಯೇ ಮಾತಾಡುತ್ತಾರೆ; ಒಮ್ಮೊಮ್ಮೆ ಅವರ ಮಾತುಗಳು ಹಾಸ್ಯದ ಹೊನಲು ಹರಿಸುವುದೂ ಇದೆ. ಹಿತವಾಗಿ ಮಿತವಾಗಿ ಮಾತನಾಡುವ ಇವರದ್ದು ಆಕರ್ಷಕವ್ಯಕ್ತಿತ್ವ ಪ್ರಿನ್ಸಿಪಲರಾಗಿ ಕಾಲೇಜಿನ ಮೇಲ್ಮೆಯನ್ನು ಸಾಧಿಸಿದ್ದಾರೆ, ಅದರ ಸ್ಥಾಪನೆಯಿಂದ ತೊಡಗಿ ಅದನ್ನು ಒಂದು ಸುವ್ಯವಸ್ಥಿತ ರೂಪಕ್ಕೆ ತಂದುನಿಲ್ಲಿಸುವುದಕ್ಕಾಗಿ ಹೆಣಗಿದ್ದಾರೆ ವಿದ್ಯಾರ್ಥಿಗಳನ್ನು ಪ್ರೇಮದಿಂದ ನೋಡುವ ಇವರ ಉದಾರ ಗುಣದಿಂದಾಗಿಯೇ ಪ್ರಾಧ್ಯಾಪಕ-ವಿದ್ಯಾರ್ಥಿಗಳ ನಡುವೆ ಸಮರಸದ ಭಾವನೆಯು ಎಂ.ಜಿ ಎಂ.ನಲ್ಲಿದೆಯೆಂದು ಹೇಳಬಹುದು. ಸುಂದರರಾಯರು ನಿವೃತ್ತರಾದರೂ ಕಾಲೇಜಿನ ಇತಿಹಾಸದಲ್ಲಿ ಸಾಂಸ್ಕೃತಿಕ ಸಮಾಜದಲ್ಲಿ ಅವರು ಸಲ್ಲಿಸಿದ ಸೇವೆಯು ಅಜರಾಮರವಾಗಿ ಉಳಿಯುವುದು ಖಂಡಿತ.

ಬಿ. ಡಿ. ಜತ್ತಿ

ಕರ್ನಾಟಕದ ಅರ್ಥಮಂತ್ರಿ ಬಸಪ್ಪ ದಾನಪ್ಪ ಜತ್ತಿಯವರು ಮುಖ್ಯಮಂತ್ರಿ ಪದವಿಯಿಂದ ಇಳಿದರೂ ಮುಖ್ಯಮಂತ್ರಿ ಛಾಯೆಯನ್ನು ಕೈಬಿಡಲಿಲ್ಲ. ಅವರು ರಾಜ್ಯ ಸರಕಾರದ ನೌಕರರಿಗೆ ಎರಡು ವರ್ಷಗಳ ನಂತರ ವೇತನ ಕೊಡಲು ಹಣ ದೊರೆಯಲಾರದು ಎಂಬ ಭೀತಿಯನ್ನು ಹುಟ್ಟಿಸಿಬಿಟ್ಟಿದ್ದಾರೆ. ಸರಕಾರಿ ನೌಕರಿಯನ್ನು ಹಾರೈಸುವವರ ಕ್ಯೂ ಅತಿ ಉದ್ದವಾಗುತ್ತಿರುವುದನ್ನು ಕಂಡವರು ಹೀಗೆ ಅಂದಿರಲೂ ಬಹುದು. ಇಂದೀಗ ಅವರು ಸುಶಿಕ್ಷಿತರು ಒಕ್ಕಲುತನದತ್ತ ಆಸಕ್ತಿ ವಹಿಸಬೇಕು ಎಂದು ಕರೆಯಿತ್ತಿದ್ದಾರೆ. ಒಂದು ಕಾಲದಲ್ಲಿ ಒಕ್ಕಲುತನವು ಅಶಿಕ್ಷಿತರ ವೃತ್ತಿಯೆಂದು ಪರಿಗಣಿತವಾಗಿದ್ದರೂ ಭಾರತವು ಒಕ್ಕಲುತನದ ಪ್ರಧಾನ ದೇಶವಾದುದರಿಂದ ಶಿಕ್ಷಿತರು ಈ ರಂಗಕ್ಕಿಳಿದು ವೈಜ್ಞಾನಿಕ ವಿಧಾನಗಳನ್ನು ಬಳಸಿಕೊಂಡು ಅದು ಲಾಭದಾಯಕವಾಗುವಂತೆ ಮಾಡುವುದು ಅಗತ್ಯವೆಂದವರ ಅಭಿಪ್ರಾಯ.

ಜತ್ತಿಯವರು ಆಕಾರದಲ್ಲಿ ಗಿಡ್ಡವಾದರೂ ದೂರದೃಷ್ಟಿಯುಳ್ಳವರು. ಇದರಿಂದಾಗಿಯೇ ಅವರು ಏರಿದ ಮುಖ್ಯ ಮಂತ್ರಿ ಪಟ್ಟವನ್ನು ಕೊನೆಯ ವರೆಗೂ ಮುಳ್ಳಿನ ಹಾಸಿಗೆಯಲ್ಲಿ ಹೋರಾಡಿಯೇ ಉಳಿಸಿಕೊಂಡರು, ಮುಂದೆಯೂ ಡೋಲಾಯಮಾನ ಪರಿಸ್ಥಿತಿಯಲ್ಲಿಯೇ ಅರ್ಥ ಮಂತ್ರಿತ್ವವನ್ನೂ ಗಳಿಸಿಕೊಂಡರು. ಅವರು ಕೇಂದ್ರಕ್ಕೆ ಕೆಲವೊಂದು ಸೂಚನೆಗಳನ್ನು ಕಳಿಸಿ, ಜಿಲ್ಲಾ ಮಟ್ಟದ ಒಕ್ಕಲುತನ ಬ್ಯಾಂಕುಗಳು ರೈತರಿಗೆ ನೀಡುವ ಸಾಲದ ಬಡ್ಡಿಯು ರಿಜರ್ವ್ ಬ್ಯಾಂಕಿನ ದರಕ್ಕಿಂತ ಮೂರು ಪಟ್ಟಿದೆ. ಈ ಹೆಚ್ಚಳದ ಭಾರವನ್ನು ರೈತ ಜನರೇ ಹೊರಬೇಕಾಗಿದೆ ಎಂದು ತಿಳಿಸಿ ಈ ಭಾರವನ್ನು ಇಳಿಸುವಂತೆ ಕೇಳಿಕೊಂಡಿದ್ದಾರೆ. ಈ ಭಾರ ಇಳಿಸುವುದೆಂದರೆ, ಮಧ್ಯದ ದಲ್ಲಾಲಿಗಳನ್ನು ನಿರ್ಮೂಲ ಮಾಡುವುದು ಜಿಲ್ಲಾ ಮಟ್ಟದ ಬ್ಯಾಂಕುಗಳು ಮತ್ತು ಪಂಚಾಯತುಗಳು ಹೆಚ್ಚಿನ ಜವಾಬುದಾರಿ ವಹಿಸಲು ಶಕ್ತವಾದರೆ ಮಾತ್ರ ಇದು ಸಾಧ್ಯವಾದೀತು. ಆದರೆ, ನಮ್ಮ ಬ್ಯಾಂಕು ಮತ್ತು ಪಂಚಾಯತುಗಳು ಇದನ್ನು ನಿರ್ವಹಿ

[illegible]ನೇಯ ಪುಟ ನೋಡಿರಿ

ನಾರದ ಕಥೆ

ಎಲೆಯುದುರಿದಾಗ....

"ಯಾಗ ಯಜ್ಞ ಮಾಡಲೇಕೆ
ಯೋಗಿಯಾತಿಯು ಆಗಲೇಕೆ ..."

ರಮೇಶ ಶ್ರೀ ಕೃಷ್ಣನ ಭಾವಚಿತ್ರದ ಮುಂದೆ ಕುಳಿತು ಭಕ್ತಿಪೂರ್ವಕವಾಗಿ ಹಾಡುತ್ತಿದ್ದ. ಆತನ ಎದುರಲ್ಲಿ ಶ್ರೀ ಕೃಷ್ಣನ ಭಾವಚಿತ್ರದ ಜೊತೆಗೆ ಹಣತೆಯ ದೀಪವು ಪ್ರಕಾಶಮಾನವಾಗಿ ಉರಿಯುತ್ತ ಇತ್ತು.

ಎಂಟರ ಹರೆಯದ ಬಾಲಕ ರಮೇಶ ರಾಗ ಪೂರ್ವಕವಾಗಿ, ನಿರರ್ಗಳವಾಗಿ ಹಾಡಬಲ್ಲ. ಆತನ ತಾಯಿ ರತ್ನಾವತಿ ತನ್ನ ಏಕಮಾತ್ರ ಪುತ್ರರತ್ನದ ಬಾಯಿಂದ ಬರುವ ಆ ಹಾಡನ್ನು ಆಲಿಸುತ್ತಾ ಕುಳಿತಿದ್ದಳು.

ಚಿಕ್ಕ ಗಾತ್ರದ ಹೊಂಬಣ್ಣದ ದೇಹ, ಧರಿಸಿದ ಚಿಕ್ಕ ಚಡ್ಡಿ ಮತ್ತು ಅಂಗಿ, ಕೆದರಿದ ತಲೆಗೂದಲು, ತಾಳಗಳನ್ನು ಹಿಡಿದು ಕೊಂಡ ಪುಟ್ಟ ಕೈಗಳು, ಆಕರ್ಷಕವಾದ ನಯನಗಳಿಂದೊಡಗೂಡಿದ ಆ ಮೃದು ವದನ- ಇವನ್ನು ನೋಡಿದಾಗ ಆತನ ತಾಯಿಗೆ ಸ್ವರ್ಗವೇ ಕೆಳಗಿಳಿದು ಬಂದಂತೆ ಆನಂದವಾಗುತ್ತಿತ್ತು.

ರಮೇಶ ಆ ಹಾಡನ್ನು ಹಾಡಿ ಮುಗಿಸಿದ.

ಆತನ ತಾಯಿ ಹೇಳಿದಳು—"ನನ್ನ ರಾಜಾ, ಆ ಹಾಡನ್ನು ಇನ್ನೊಮ್ಮೆ ಹಾಡು"

ರಮೇಶ ರಾಗಯುಕ್ತವಾಗಿ ಹಾಡಿದ.

"ಮರೆಯ ಬೇಡ ಮನವೆ ನೀನು
ಹರಿಯ ಸ್ಮರಣೆಯಾ ಽಽಽ"

೦ ೦ ೦ ೦

ಗೃಹಸ್ಥಾಶ್ರಮದ ಬಾಗಿಲಿನಲ್ಲಿ ರಮೇಶ ಹೆಜ್ಜೆ ಇಟ್ಟಿದ್ದಾನೆ. ತನ್ನ ಬಾಲ್ಯ ಸ್ಮರಣೆಗಳನ್ನು ಒಂದೊಂದಾಗಿ ಮಡದಿ ರಮಾಳ ಕೂಡೆ ರಮೇಶ ಹೇಳುತ್ತಾ ಇದ್ದಾನೆ- ವಿನೋದಕ್ಕಾಗಿ.

ಆಕೆ ಅಂದಳು"-ಹಾಗಾದರೆ ಬಾಲ್ಯದಲ್ಲಿ ನಿಮಗೆ ಕಷ್ಟ ಸ್ವಲ್ಪವೂ ಇರಲಿಲ್ಲವೇ?"

ರಮೇಶ ಉತ್ತರಿಸಿದ್ದ—"ಇಲ್ಲ; ನಿನ್ನ ಹಾಗೆ ನಾನೇ? ನಾನು ನನ್ನ ತಾಯಿ ತಂದೆಯರಿಗೆ ಒಬ್ಬನೇ ಮಗನಾದ್ದರಿಂದ ನನ್ನನ್ನು ಮಮತೆಯಲ್ಲಿ ಸಾಕಿದರು. ನನಗೆ ಅಕ್ಕತಂಗಿಯರಿಲ್ಲ. ಮಾವನಾಗಲೀ ದಾಯಾದಿಗಳಾಗಲೀ ಯಾರೂ ಇಲ್ಲ, ಆದ್ದರಿಂದ ನಮ್ಮ ಕುಟುಂಬದ ಪ್ರಗತಿಗೆ ನಾನೇ ಮೊಳಕೆಯಾಗಿದ್ದೆ. ಆದ್ದರಿಂದ..."

ರಮಾ ಮಧ್ಯೆ ಪ್ರಶ್ನಿಸಿದಳು" ಓಹೋ! ಆದ್ದರಿಂದ ನೀವು ನನ್ನನ್ನು ಮದುವೆಯಾದುದು."

ರಮೇಶ ನಿರುತ್ತರನಾದ. ಆತನ ಕಣ್ಣಲ್ಲಿ ಕಣ್ಣೀರ ಹನಿಯೊಂದು ಕೆಳಗುರುಳಿತು

ಏಕೆ ಮೌನ ತಾಳಿರುವಿರಿ? ನಾನು ಹೀಗೆ ಹೇಳಿದೆನೆಂದು ಬೇಸರವೇ? ಸ್ವಾಮಿ, ದಯಮಾಡಿ ಕ್ಷಮಿಸಿ" ಎಂದಳು ರಮಾ.

"ಹಾಗಲ್ಲ ರಮಾ, ನಮ್ಮ ಮದುವೆಯ ಮೇಲಾದರೂ ನನ್ನ ತಾಯಿ ತಂದೆಯವರು ನಮ್ಮೀ ಪುಟ್ಟ ಸಂಸಾರದ ಸಂತೋಷದಲ್ಲಿ ಪಾಲುಗೊಂಡು ಆನಂದವಾಗಿ ಕಾಲಹರಣ ಮಾಡಬಹುದು ಎಂದುಕೊಂಡಿದ್ದೆ. ಆದರೆ ನನ್ನ ಬಯಕೆಗೆ ಬೆಂಕಿ ಬಿತ್ತು, ರಮಾ."

"ಅದು ಹೇಗೆ?"

"ನನ್ನ ಮಾತಾಪಿತೃಗಳಿಗೆ ಜೀವನದಲ್ಲಿ ಸುಖವೆಂಬುದೇ ಇರಲಿಲ್ಲ. ಅದು ನನಗೆ ಈಗ ಗೊತ್ತು. ನನ್ನನ್ನು ಬಾಲ್ಯದಲ್ಲಿ ತುಂಬಾ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಆ ಮೇಲೆ ನನ್ನನ್ನು ಬಿ. ಎ. ತನಕ ಓದಿಸಿದರು ಅನಂತರ ನನ್ನ ಮದುವೆಯ ಪ್ರಸ್ತಾಪವೆತ್ತಿದರು. ಆ ಸಮಯದಲ್ಲಿ ನನ್ನ ಜೀವನದಲ್ಲಿ ಮರೆಯಲಾಗದ ಘಟನೆಯೊಂದು ನಡೆದು ಹೋಯಿತು ರಮಾ."

"........."

"ನನ್ನ ತಂದೆಯವರು ಆಕಸ್ಮಿಕವಾಗಿ ಸ್ವರ್ಗಸ್ಥರಾದರು." ಕಣ್ಣೀರ ಹನಿಯೊಂದು ಕೆಳಗುದುರಿತು,

ರಮಾಳನ್ನು ಮೌನವೇ ಆವರಿಸಿತ್ತು.

"ಈ ಘಟನೆ ನಡೆದ ಸುಮಾರು ಒಂದು ತಿಂಗಳೊಳಗೆ ಮಾತೃಶ್ರೀಯವರೂ ಇಹಲೋಕ ವ್ಯಾಪಾರದಿಂದ ಬಿಡುಗಡೆಯಾದರು."

ರಮೇಶನ ಈ ವಾಕ್ಯವು ರಮಾಳ ಕಣ್ಣಿಂದ ಕಂಬನಿಯ ಕಾಣಿಕೆಯನ್ನು ಪಡೆಯಿತು.

"ಹೆತ್ತು ಹೊತ್ತ ತಂದೆ ತಾಯಿಗಳು ನನ್ನ ಮದುವೆಯ ಸಮಯದಲ್ಲಿಯೇ ಮೃತರಾದರು "

"ಇನ್ನು ಹೇಳಬೇಡಿ ನನ್ನ ದೊರೆ, ನಿಮ್ಮ ಈ ದುರ್ಘಟನೆಯ ವಿಷಯ." ರಮಾಳ ಕಣ್ಣಿಂದ ಕಣ್ಣೀರ ಕೋಡಿ ಹರಿಯಿತು.

೦ ೦ ೦

ಮುಂಬೈಯ ಹತ್ತಿಯ ಕಾರ್ಖಾನೆಯೊಂದರಲ್ಲಿ ರಮೇಶನಿಗೆ ನೌಕರಿ ದೊರಕಿತು. ಈಗ ರಮೇಶನಿಗೆ ಜೀವನದಲ್ಲಿ ಸಂತೋಷ, ಆನಂದವನ್ನು ಕೊಡಬಲ್ಲವರೆಂದರೆ ರಮಾ ಒಬ್ಬಳು ಮಾತ್ರ.

ರಮಾ ಇಲ್ಲದಿರುತ್ತಿದ್ದರೆ ಅವನ ಬಾಳೇ ನಿರರ್ಥಕ. ಅವನಿಗೆ ರಮಾಳೇ ಸರ್ವಸ್ವ. ತನಗಾರೂ ಬಂಧುಬಳಗ ಇಲ್ಲದ್ದರಿಂದ ರಮಾಳ ಮೇಲೆ ಅವನಿಗೆ ಅಪಾರ ಪ್ರೀತಿ.

ಈಗ ರಮಾ ಏಳು ತಿಂಗಳ ಬಸಿರಿ ಪ್ರಸವಿಸಲು ತವರು ಮನೆಗೆ ಹೋಗುವೆನೆಂದು ರಮೇಶನ ಕೂಡೆ ಹೇಳಿದಳು.

ರಮೇಶ ಅವಳ ಈ ಮಾತಿಗೆ ಒಪ್ಪಲಿಲ್ಲ. "ರಮಾ ನಿನ್ನ ಹಾಳು ಹಳ್ಳಿಗಿಂತ ಮುಂಬೈ ನಗರವೇ ಉತ್ತಮ. ಇಲ್ಲಿ ಉತ್ತಮ ರೀತಿಯ ಆಸ್ಪತ್ರೆಗಳಿವೆ. ಅಲ್ಲದೆ ನಿನಗೆ ಬೇಕಾದ ಎಲ್ಲ ಅನುಕೂಲತೆಗಳೂ ಇವೆ. ಆದ್ದರಿಂದ ನೀನು ತವರಿಗೆ ಹೋಗ ಕೂಡದು ರಮಾ."

ರಮೇಶನ ಈ ಸಲಹೆಯು ರಮಾಳಿಗೆ ಸರಿದೋರಲಿಲ್ಲ. ತಾಯಿಯನ್ನು ಕಾಣಬೇಕಾಗಿಯೂ ಹೇಳಿದಳು. ಮತ್ತು ಪ್ರಸವದ ಒಂದು ತಿಂಗಳ ನಂತರ ಬರುವುದಾಗಿ ತಿಳಿಸಿದಳು.

ರಮಾ ಊರಿಗೆ ಹೊರಡುವ ಮೊದಲ ದಿನ ರಮೇಶ ಅವಳ ಪ್ರಯಾಣದ ಸಿದ್ಧತೆಯನ್ನು ಮಾಡತೊಡಗಿದನು.

ರಮಾ ಊರಿಗೆ ಹೊರಟಳು. ಹೊರಡುವ ಮೊದಲು ದಂಪತಿಗಳಿಬ್ಬರ ಕಣ್ಣಲ್ಲೂ ಕಣ್ಣೀರು ಉದುರಿತು; ರಮೇಶನ ಬಾಯಿಯಿಂದ ಆತನಿಗರಿವಿಲ್ಲದಂತೆಯೇ 'ರಮಾ' ಎಂಬ ಎರಡು ಅಕ್ಷರಗಳ ಹೆಸರು ಬಂದು ಹೋಯಿತು.

ರಮಾ ಕುಳಿತ ರೈಲುಗಾಡಿ ಚಲಿಸಲು ಪ್ರಾರಂಭವಾಯಿತು, ರಮೇಶ ರೈಲು ಬಂಡಿ ಕಣ್ಮರೆಯಾಗುವ ತನಕವೂ ಅದನ್ನೇ ಎವೆಯಿಕ್ಕದೆ ನೋಡುತ್ತಲಿದ್ದ. ಭಾರವಾದ ಮನಸ್ಸಿನಿಂದ ಮನೆಗೆ ಮರಳಿದ.

ಅದೊಂದು ದಿನ ರಮೇಶನಿಗೆ ರಮಾಳಿಂದ ಕಾಗದ ಬಂತು ಒಂದು ತಿಂಗಳೊಳಗಾಗಿ ಬರುವುದೆಂದು ಆಕೆ ಆ ಪತ್ರದಲ್ಲಿ ತಿಳಿಸಿದ್ದಳು. ರಮೇಶನಿಗೆ ಆ ಕಾಗದವನ್ನು ಓದಿದಷ್ಟೂ ಸಾಲದು. ಆತನಿಗೆ ಏನೋ ಒಂದು ಬಗೆಯ ತೃಪ್ತಿ—ಆ ಕಾಗದದಲ್ಲಿ.

ಒಂದು ಸಾಯಂಕಾಲ ರಮೇಶ ಕಾರ್ಖಾನೆಯಿಂದ ಮನೆಗೆ ಬಂದು ತನ್ನ ಬಟ್ಟೆ ಬದಲಾಯಿಸುತ್ತಿದ್ದ, ಅದರೊಂದಿಗೆ ಮಡದಿ ರಮಾಳ ಮೆಚ್ಚಿನ ಪದ್ಯವನ್ನು ರಾಗವಾಗಿ ಹಾಡುತ್ತಿದ್ದ.

"ಕತ್ತಲೆಯ ಜೀವನಕೆ ಬೆಳಕ
ಪಾಲಿಸು ದೇವಿ
ಹಾಡುವೆನು ಭಕ್ತಿಯಲಿ ದಾರಿ
ತೋರಿಸು ದೇವಿ"

ಹೊರಗಿನಿಂದ ಅಂಚೆಯವನು ಬಾಗಿಲು ತಟ್ಟಿದ. ರಮೇಶ ಹೊರಬಂದು ಅಂಚೆಯವನಿತ್ತ ತಾರನ್ನು ಅವಸರದಿಂದ ಓದಿದ. 'ರಮಾಳಿಗೆ ವಿಶೇಷ ಖಾಯಿಲೆ. ಕೂಡಲೇ ಹೊರಡು' ಎಂದಿತ್ತು ಆ ತಾರಿನಲ್ಲಿ.

ರಮೇಶನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಅವನಿಗೆ ಮನೆಯಲ್ಲಿ ಗೋಡೆಯಲ್ಲೆಲ್ಲ "ರಮಾ" ಎಂದು ಬರೆದಿಟ್ಟಂತೆ ಕಂಡಿತು. ಮನೆಯಲ್ಲಿನ ಮೇಜು ಕುರ್ಚಿಗಳಲ್ಲೆಲ್ಲ "ರಮಾ" ಎಂಬ ಅಕ್ಷರಗಳೆರಡು ಕಂಡುಬಂದವು. ತಾನು ಮತ್ತು ರಮಾ ತೆಗೆಸಿಕೊಂಡ ಭಾವಚಿತ್ರವನ್ನೊಮ್ಮೆ ದುಃಖಪೂರಿತವಾಗಿ ನೋಡಿದ. ಉಟ್ಟ ಉಡಿಗೆಯಲ್ಲೇ ಕಾರ್ಖಾನೆಗೋಡಿದ. ಮಾಲಿಕನೊಡನೆ ರಜೆಗಾಗಿ ಬೇಡಿದ. ಆದರೆ ಮಾಲಿಕ ರಜೆ ಕೊಡಲು ಒಪ್ಪಲಿಲ್ಲ. ರಜೆಯಲ್ಲಿ ಹೋದ ಇತರ ನೌಕರರು ಬರಬೇಕೆಂದು ಉತ್ತರವಿತ್ತ.

ರಮೇಶ ಕಾರ್ಖಾನೆಯ ಕೆಲಸಕ್ಕೆ ರಾಜಿನಾಮೆಯಿತ್ತ. ತನ್ನ ಸಂಬಳ ಪಡೆದುಕೊಂಡು ಮುಂಬೈ ತ್ಯಜಿಸಿದ.

ಮಾವನ ಮನೆ ಸಮೀಪಿಸುತ್ತಿದ್ದಂತೆ ರಮೇಶನ ಎದೆಬಡಿತದ ವೇಗವೂ ಹೆಚ್ಚಾಗ ತೊಡಗಿತು. ಮನೆಯಲ್ಲಿ ಹತ್ತಾರು ಜನರು ಕೂಗುತ್ತಿರುವ ಶಬ್ದ ಕೇಳಿಸಿತು. ರಮೇಶ ಮನೆಯನ್ನು ಮುಟ್ಟಿದ ತಕ್ಷಣ ನೋಡಿದ ದೃಶ್ಯವೆಂದರೆ ಬಿಳಿ ವಸ್ತ್ರದಿಂದ

(೧೧ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಆವಶ್ಯಕತೆಗಳಿಗೆ.........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ

ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦
ವಿದೇಶ ರೂ. ೧೫

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚೀನೀಯ ಮಕ್ಕಳಿಗೆ

ಕುಡುಗೋಲು ಮತ್ತು ಸುತ್ತಿಗೆಗಳ ಪಾಠ

ಕಮ್ಯೂನಿಸ್ಟ್ ಚೈನಾದಲ್ಲಿ ಕಲ್ಯಾಣ ಕಟ್ಟಳೆ ಹೇಗಿದೆಂಬುದನ್ನು ಈ ಹಿಂದೆ ನಾವರಿತುಕೊಂಡಿದ್ದೇವೆ. ಅಲ್ಲಿ ವಿವಾಹವು ಕೇವಲ ಯಾಂತ್ರಿಕವೆಂಬುದು ನಮಗೆ ಗೊತ್ತಿದೆ. ಮದುವೆಯಾಯಿತು, ಮತ್ತೆ ಮಕ್ಕಳಾದಲ್ಲಿ ಅವುಗಳ ಅವಸ್ಥೆ ಏನು? ಕಮ್ಯೂನಿಸ್ಟ್ ಚೈನಾದಲ್ಲಿ ಕುಟುಂಬ ಪದ್ಧತಿ ಹೇಗಿದೆ, ಸಮಾಜ ರಚನೆ ಹೇಗಿದೆಂಬುದನ್ನು ಸದ್ಯ ತಿಳಿದುಕೊಳ್ಳುವ.

ಅಖಿಲ ಜಗತ್ತಿನಲ್ಲಿ ಮಾತೆಯ ಸ್ಥಾನವು ಬಹಳ ಪವಿತ್ರ ಹಾಗೂ ಗೌರವಯೋಗ್ಯ. ಭಾರತದಲ್ಲಿ ಮಾತೆಗೆ ದೇವರ ಸ್ಥಾನವನ್ನೇ ಕೊಡುತ್ತೇವೆ. ಆಕೆಗೆ ಜಗಜ್ಜನನಿಯ ರೂಪದಲ್ಲಿ ಪೂಜೆ ಸಲ್ಲುತ್ತದೆ. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪೀ ಗರೀಯಸಿ" [ವಾಲ್ಮೀಕಿ ರಾಮಾಯಣ] ಅಂದರೆ ಮಾತೆಯ ಸ್ಥಾನ ಸ್ವರ್ಗಕ್ಕಿಂತಲೂ ಮೇಲ್ಪಟ್ಟದ್ದಿದೆ, ಉನ್ನತ ಸ್ಥಾನವಿದೆ. ಒಂದೆಡೆ ಬಾಲಗೋವಿಂದನು ಮಾತೆ ಯಶೋದೆಯೊಂದಿಗಿರುವ ರೂಪವನ್ನು ಭಕ್ತಿಯಿಂದ ಕಾಣುತ್ತಾರಾದಲ್ಲಿ ಇನ್ನೊಂದೆಡೆ ಬಾಲ ಕ್ರಿಸ್ತನು ಮೇರಿಯೊಂದಿಗಿರುವ ರೂಪಕ್ಕೆ ಪೂಜೆ ಸಲ್ಲುತ್ತದೆ. ಪ್ರತಿಯೊಂದು ಮತದಲ್ಲೂ ತಾಯಿ-ತಂದೆಯನ್ನು ಭಕ್ತಿಯಿಂದ ಕಾಣಬೇಕೆನ್ನುವ ಹಾಗೂ ಗೌರವ ಸಲ್ಲಿಸಬೇಕೆನ್ನುವ ಉಪದೇಶವಿದೆ. ಸಮಾಜದಲ್ಲಿರುವ ಮಾನವನಿಗೆ ಅದು ಸಾಮಾಜಿಕ ಸಂಘಟನೆಯ ತಳಹದಿಯೆನ್ನಲಾಗುತ್ತಿದೆ. ಚೈನಾದಲ್ಲಿ ಸಹಸ್ರ ಸಂವತ್ಸರಗಳ ಹಿಂದೆ ಸಂತ ಕನ್‌ಫ್ಯೂಶಿಯಸನು ತಾಯಿ-ತಂದೆಯರ ಮೇಲಣ ಭಕ್ತಿ ಹಾಗೂ ಮಮತೆಯು ಸದಾಚಾರದ ಆಧಾರಶಿಲೆ ಎಂದಿರುವನು. ಚೈನಾದಲ್ಲಿ ಹಿಂದೆ ಪಿತೃ ಪೂಜೆಯೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸೇರಿಕೊಂಡಿತ್ತು. ಆದರೆ ಅಲ್ಲಿ ಕಮ್ಯೂನಿಸ್ಟ್ ಕಾಲ ಕಾಲಿಟ್ಟೊಡನೆ ಕನ್‌ಫ್ಯೂಶಿಯಸನ ಸ್ಥಾನವೂ ಹೋಯಿತು, ತಾಯಿ-ತಂದೆಯರ ಉಚ್ಚ ಸ್ಥಾನವೂ ಹೋಯಿತು. ಕಮ್ಯೂನಿಸ್ಟ್ ತಾನಾಶಾಹಿಯಲ್ಲಿ ಕುಟುಂಬವು ಸಮಾಜದ ಆಧಾರಶಿಲೆ ಇರುವದಿಲ್ಲ, ಬದಲು ಶೋಷಣೆಯ ಸಾಧನವೆನಿಸಿದೆ. ಸಾಮ್ಯವಾದಿ ಲೇಖಕನೋರ್ವನು ಬರೆದಿರುವ "ಫೆಮಿಲಿ ಪ್ರೈವೇಟ್ ಪ್ರೊಪರ್ಟಿ ಏಂಡ್ ಒರಿಜಿನ್ ಓಫ್ ಸ್ಟೇಟ್" [ಕುಟುಂಬ ಸ್ವ-ಆಸ್ತಿ ಮತ್ತು ರಾಜ್ಯದ ಮೂಲ] ಪುಸ್ತಕದಲ್ಲಿ "ಕುಟುಂಬವು ಶೋಷಣೆಯ ಮತ್ತು ಜನತೆಯ ದಮನಕ್ಕಾಗಿ ಶಾಸಕ ವರ್ಗದ ಕೈಯಲ್ಲಿರುವ ಒಂದು ಸಾಧನ. ಪ್ರತ್ಯೇಕ ಪ್ರತ್ಯೇಕ ಕುಟುಂಬದ ಅಸ್ತಿತ್ವವು ಆರ್ಥಿಕ ದೃಷ್ಟಿಯಿಂದ ಹಾನಿಕರವಿದೆ ಮತ್ತು ಮಕ್ಕಳ ಪಾಲನೆ-ಪೋಷಣೆಯ ಕೆಲಸವು ಕುಟುಂಬದ್ದಿರುವದಿಲ್ಲ, ಅದು ಸಮಾಜದ್ದಿದೆ"ಂದು ಬರೆದಿರುವನು

ಚೈನಾದ ಕಮ್ಯುನಿಸ್ಟ್ ಶಾಸಕರು ತಮ್ಮ ಸಂವಿಧಾನದಲ್ಲಿ ಈ ಸಿದ್ಧಾಂತವನ್ನು ಬಹಳ ಜಾಗರೂಕತೆಯಿಂದ ಮಂಡಿಸಿರುವರು. ಆದರೂ ಅವರಿಗೆ ಚೆನ್ನಾಗಿ ಗೊತ್ತು ಕುಟುಂಬ ಜೀವನವನ್ನು ನಾಶಗೊಳಿಸುವದು ಅಪತ್ಕಾರಿಯೆಂಬುದು. ಆದುದ ಮೆಲ್ಲ—ಮೆಲ್ಲನೆ ಬಹಳ ಜಾಗ್ರತೆಯಿಂದ ಆ ಕೆಲಸವನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಕುಟುಂಬ ಜೀವನವನ್ನು ಮುಗಿಸಿ ಬಿಡುವ ಈ ಕಾರ್ಯಕ್ಕೆ ಅಲ್ಲಿ ಸ್ತ್ರೀ ಸ್ವಾತಂತ್ರ್ಯವೆಂಬ ದೊಡ್ಡ ಹೆಸರನ್ನೇ ಕೊಡಲಾಗಿರುತ್ತದೆ. ಗುಲಾಮರಂತೆ ನಡೆಸಿಕೊಳ್ಳಲಾಗುತ್ತಿರುವ ನಾರಿಯರನ್ನು ಬಂಧನದಿಂದ ಬಿಡುಗಡೆಗೊಳಿಸಲಿಕ್ಕಾಗಿ ಆ ಹೋರಾಟವನ್ನು ನಡೆಸಲಾಗುತ್ತಿದೆ. ಅದನ್ನೇ ಅಲ್ಲಿಯ ಒಂದು ಕ್ವಾಂಗ್‌ಕಿಂಗ್ ದಿನ ಪತ್ರಿಕೆಯೂ ತನ್ನ ೨೩–೧೨–'೫೮ರ ಸಂಚಿಕೆಯಲ್ಲಿ ಸಮರ್ಥಿಸಿರುತ್ತದೆ. ಅದು ಮುಂದರಿದು ಆ ವ್ಯವಸ್ಥೆಯನ್ನು ಲೆನಿನನೇ ಸೂಚಿಸಿರುವನೆಂದೂ, ಅದುವೇ ಅಪ್ಪಟ ಕಮ್ಯೂನಿಸಂವೆಂದೂ, ಕುಟುಂಬದ ಕೆಲಸವನ್ನು ಸಮಾಜ ಮಾಡುತ್ತದೆಂದೂ ಹೇಳಿದೆ. ಅಲ್ಲಿಯ ಪೀಪಲ್ಸ್ ಡೈಲಿ [ಜನತಾ ದೈನಿಕ] ಇನ್ನಷ್ಟು ಮುಂದರಿದಿರುತ್ತದೆ. ಅದು ತನ್ನ ದಿನಾಂಕ ೧–೬–೫೮ರ ಸಂಚಿಕೆಯಲ್ಲಿ ಮನೆಯನ್ನು ಕೇವಲ ಸಂಭೋಗಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆಯೆಂದೂ ಅವರಿಂದ ಅಂಗನೆಯರಿಗೆ ಬಿಡುಗಡೆ ದೊರೆಯಬೇಕಾದಲ್ಲಿ ಅವರನ್ನು ಗದ್ದೆಗಳಲ್ಲಿ ಹಾಗೂ ಕಾರ್ಖಾನೆಗಳಲ್ಲಿ ಗಂಡಸರಿಗೆ ಸರಿಸಮವಾಗಿ ದುಡಿಯಲು ಕಳುಹಿಸಬೇಕೆಂದೂ ಸರಕಾರವನ್ನು ಒತ್ತಾಯಿಸಿರುತ್ತದೆ. ಜೂನ್ ೧೯೫೮ರಲ್ಲಿ ಮಾವೊತ್ಸೆ-ಟುಂಗನು ನಮ್ಮ ಉದ್ದೇಶವು ಕುಟುಂಬ ಪದ್ಧತಿಯನ್ನು ನಾಶಗೊಳಿಸಿ ಆ ಸ್ಥಾನವನ್ನು ಕಮ್ಯೂನ್‌ಗಳಿಗೆ ಕೊಡುವದೇ ಇದೆಯೆಂದೂ ನಾವು ಮಜ್ದೂರ್, ಕಿಸಾನ್, ಅಂಗಡಿಯವ, ವಿದ್ಯಾರ್ಥಿ ಹಾಗೂ ಸೈನಿಕ.... ಹೀಗೆ ಸರ್ವರನ್ನೂ ಕಮ್ಯೂನ್‌ಗಳಲ್ಲಿ ಒಂದಾಗಲಿಚ್ಛಿಸುತ್ತೇವೆ. ಕಮ್ಯೂನಿಸ್ಟ್ ಚೈನಾದಲ್ಲಿ ಸಮಾಜದ ಆಧಾರವು ಪರಿವಾರವಲ್ಲ, ಕಮ್ಯೂನ್ ಇದೆ ಎಂದೂ ಬಹಿರಂಗಪಡಿಸಿರುವನು.

ಫಲರೂಪವಾಗಿ ೧೯೫೮ರಲ್ಲಿ ಗ್ರಾಮ ಗ್ರಾಮಗಳಲ್ಲಿ "ಕಮ್ಯೂನ್" ರಚಿಸುವ ಆಂದೋಲನ"ಕ್ಕೆ ಪ್ರಾರಂಭವಾಯಿತು. ಕೃಷಿಕರ ನೊಗ, ಹಲಗೆ ಅಲ್ಲದೆ ಹೋರಿಗಳನ್ನೂ ಕಮ್ಯೂನ್‌ಗಳಿಗೆ [ಸಾಮೂಹಿಕ ಬಲಾತ್ಕಾರ ಕೃಷಿ ಪದ್ಧತಿ] ಕೊಂಡೊಯ್ಯಲಾಯಿತು. ಮನೆಮನೆಗಳಲ್ಲಿ ಪ್ರತ್ಯೇಕವಾಗಿ ನಡೆಸಲ್ಪಡುತ್ತಿದ್ದ ಭೋಜನ ವ್ಯವಸ್ಥೆಯನ್ನು ನಿಲ್ಲಿಸಲಾಯಿತು. [ಇದರ ವಿವರಗಳನ್ನು ಹಿಂದಿನ ಸಂಚಿಕೆಗಳಲ್ಲಿ ಕಂಡಿರುವೆವು.] ಆಹಾರ ತಯಾರಿಕೆಯ ಕೆಲಸವನ್ನು ಮುದುಕಿಯರಿಗೆ ಬಿಟ್ಟುಕೊಡಲಾಯಿತು. ಊಟಕ್ಕೆ ಎಲ್ಲರೂ ನಿಯಮಿತ ಕಾಲದಲ್ಲಿ ಒಟ್ಟಿಗೆ ಬಂದು ಕೂತುಕೊಳ್ಳಬೇಕು. ಚಿಕ್ಕ ಮಕ್ಕಳಿಗೆ ಪಾಲಿಕಾ-ವಿಭಾಗಗಳನ್ನು ತೆರೆಯಲಾಯಿತು. ನಗರಗಳಲ್ಲಿ ಕೂಡಾ ಕಮ್ಯೂನ್ ಪದ್ಧತಿಯನ್ನು ಪ್ರಚಾರಕ್ಕೆ ತರಲಾಯಿತು. ಇದರಿಂದ ಕೆಲಸ ಮಾಡಲು ಶಕ್ತಿಯಿದ್ದ ಸ್ತ್ರೀಯರ್ಯಾರೂ ಮನೆಯಲ್ಲಿ ಕಾಣಲು ಸಿಗದಾಯಿತು. ಗೃಹಬಂಧನದಿಂದ ಅವರನ್ನು ಮುಕ್ತಗೊಳಿಸುವದೆಂಬ ದೊಡ್ಡ ಶಬ್ದವನ್ನುಪಯೋಗಿಸಲಾಯಿತು. ಪಾಪ! ತಮ್ಮಿಷ್ಟದಂತೆ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಸ್ತ್ರೀಯರೀಗ ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ ಹೀಗೆ ಭಿನ್ನ ಭಿನ್ನ ರಂಗಗಳಲ್ಲಿ ಕತ್ತಲಾಗುವ ತನಕವೂ ದುಡಿಯಬೇಕಾಗಿರುತ್ತದೆ.

ಚೈನಾದ ಕಮ್ಯೂನಿಸ್ಟ್ ಪಕ್ಷವು ತಾನೇ ಜನತೆಯ ಹಿತದ ಗುತ್ತಿಗೆದಾರ ಎಂದುಕೊಳ್ಳುತ್ತಿದೆ ಆ ಕಮ್ಯೂನಿಸ್ಟ್‌ಶಾಹಿಯಲ್ಲಿ ಸ್ತ್ರೀಯರ ಸ್ಥಿತಿ ಶೋಚನೀಯವಿದೆ. ಮೇಲ್ಪಟ್ಟದ ಅಧಿಕಾರದಲ್ಲಿರುವ ಮಹಿಳೆಯರಿಗಾದರೆ ತಮ್ಮ ಮಕ್ಕಳ ಆರೋಗ್ಯಪಾಲನೆ ನೋಡಲು ಬಿಡುವು ಕೊಡಲಾಗುತ್ತದೆ, ಅಲ್ಲದೆ ಅವರಿಗೆ ಮೋಟಾರು ಹಾಗೂ ನೌಕರರನ್ನು ಕೊಡಲಾಗುತ್ತಿದೆ, ಆದರೆ ಸಾಧಾರಣ ಸ್ತ್ರೀಯರಿಗೆ ದಿನವಿಡೀ ದುಡಿಯಲು ಒತ್ತಾಯಿಸಲಾಗುತ್ತಿದೆ. ಅವರಿಗೆ ತಮ್ಮ ಮಕ್ಕಳನ್ನು ಕಾಣಲು ಬಿಡುವನ್ನು ಕೊಡಲಾಗುವುದಿಲ್ಲ. ತನ್ನ ಹೆಂಡತಿಯು ಬೆಳಗ್ಗೆ ಆರು ಘಂಟೆಗೆ ಕೆಲಸಕ್ಕೆ ಹೋದರೆ ಹಿಂತಿರುಗುವಾಗ ರಾತ್ರಿ ಹನ್ನೊಂದು ಘಂಟೆಯಾಗುತ್ತದೆ ಆಗ ತಮ್ಮ ಐವ್ವರು ಮಕ್ಕಳನ್ನು ನೋಡಿಕೊಳ್ಳಲು ಯಾರೂ ಇರುವುದಿಲ್ಲವೆಂದು ನೆಂಜಾಂಗಿನ ಕಮ್ಯುನಿಸ್ಟ್ ಕಾರ್ಯಕರ್ತನೋರ್ವನು ಒಂದು ಸಲ ದೂರು ಕೊಟ್ಟನು. ವಾರವಿಡೀ ಅರ್ಧರಾತ್ರಿಯ ವರೆಗೂ ದುಡಿಸಿಕೊಳ್ಳಲಾಗುತ್ತಿದೆಯೆಂದೂ, ಆದಿತ್ಯವಾರ ಸಹ ಬಿಡುವು ದೊರಕುತ್ತಿಲ್ಲವೆಂದೂ ಆದರಿಂದಾಗಿ ತನ್ನ ಮಕ್ಕಳನ್ನು ನೋಡಲಾಗುವುದಿಲ್ಲವೆಂದೂ, ಇನ್ನೋರ್ವ ಸ್ತ್ರೀಯು ಪಕ್ಷಕ್ಕೆ ದೂರು ಕೊಟ್ಟಿದ್ದಳು. [ಅವುಗಳ ಪ್ರತಿಫಲವಾಗಿ ಏನಾಗಿರಬಹುದೆಂಬುದನ್ನು ವಾಚಕರು ಸುಲಭವಾಗಿ ತಿಳಿದುಕೊಳ್ಳಬಹುದು. ಈ ಸಮಯದಲ್ಲಿ 'ಕೆಂಪು ಪರದೆಯೊಳಗೆ' ಲೇಖನವನ್ನು ಜ್ಞಾಪಿಸಿಕೊಳ್ಳಬಹುದು.]

ಈ ರೀತಿ ತಾಯಂದಿರನ್ನು ದುಡಿಸುತ್ತಿರುವಾಗ ಅವರ ಮಕ್ಕಳ ಪಾಡು ಹೇಗಿರಬಹುದು? ಅವರಿಗಾಗಿ ಬಾಲಗೃಹ ತೆರೆಯಲಾಗಿರುತ್ತದೆ ಅವುಗಳ ಸ್ಥಿತಿ ಹೇಗಿದೆ? ೧೯೫೮ರ ಕೊನೆಯ ವರೆಗೆ ಚೈನಾದಲ್ಲಿ ಸುಮಾರು ಮೂವತ್ತು ಲಕ್ಷ ಬಾಲಗೃಹಗಳನ್ನು ತೆರೆಯಲಾಗಿರುತ್ತದೆ. ಅವುಗಳಲ್ಲಿ ಒಂದು ವರ್ಷದಿಂದ ಮೂರು ವರ್ಷಗಳ ವರೆಗಿನ ಮೂರು ಕೋಟಿ ನಲ್ವತ್ತು ಲಕ್ಷ ಮಕ್ಕಳನ್ನು ದಾಖಲು ಮಾಡಲಾಗಿರುತ್ತದೆ ಈ ರೀತಿ ಒಂದೇ ಪೆಟ್ಟಿಗೆ ಅಷ್ಟು ಬಾಲಗೃಹಗಳನ್ನು ತೆರೆಯುವುದು ಜಾದೂವಿದ್ಯೆಯಲ್ಲ, ಆದುದರಿಂದ ಸ್ಥಳ ಸಿಕ್ಕಿದಲ್ಲೆಲ್ಲಾ ಬಾಲಗೃಹಗಳನ್ನು ತೆರೆಯಲಾಗಿರುತ್ತದೆ. ಗುಡ್ಡ ಪ್ರದೇಶವೇ ಇರಲಿ, ಕುದುರೆ ಲಾಯವೇ ಇರಲಿ, ಬೌದ್ಧ

(೧೦ನೇ ಪುಟ ನೋಡಿರಿ)

ಪ್ರೊ. ಕು.ಶಿ. ಹರಿದಾಸ ಭಟ್ಟ, ಎಂ.ಎ.,
ಅವರ ನವೀನ ಪುಸ್ತಕಗಳು

	ರೂ.ನ.
ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಾ	2=00
ವಿಶ್ವದ ಸಂಪತ್ತು	2=00
ಅಮೆರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ, ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ — ಸೇಕಡಾ **5**
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ — ಸೇಕಡಾ **5½** ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ — ಸೇಕಡಾ **3**

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧–೦೦
ಉತ್ತಮ ಪ್ರತಿ ರೂ. ೧–೫೦

ರಖಂ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್ ಉಡುಪಿ, ದ. ಕ

ರಾಜಕೀಯ ದೃಷ್ಟಿಯಲ್ಲಿ

ಅಯ್ಯೂಬ ಖಾನರ ಸಿಂಹಳ ಯಾತ್ರೆ

ಪಾಕಿಸ್ತಾನದ ಅಧ್ಯಕ್ಷ ಮೊ| ಜ| ಅಯ್ಯೂಬಖಾನ ಮತ್ತವರ ವಿದೇಶ ಮಂತ್ರಿ ಶ್ರೀ ಜಡ್ ಎ. ಭುಟ್ಟೊ ಅವರು ಇತ್ತೀಚೆಗೆ ಸಿಂಹಳದ ಯಾತ್ರೆಯನ್ನು ಮೈತ್ರಿ ಪ್ರೇರಿತರಾಗಿ ಕೈಗೊಂಡರು; ಆದರೆ ಬಹು ಮಟ್ಟಿಗೆ ಶತ್ರು ಭಾವನೆಯನ್ನೇ ಸೃಷ್ಟಿಸಿ ಕೋಪೋದ್ರೇಕದಿಂದಲೇ ಮರಳಿ ಬಂದರು. ಇವರಿಬ್ಬರು ಮಹಾಶಯರೂ ಸಂಪೂರ್ಣ ನಿರಾಶೆಯನ್ನೇ ಹೊತ್ತು ತಂದರು ಪರಸ್ಪರ ವಿರೋಧಾಭಾಸದ ಹೇಳಿಕೆಗಳನ್ನಿತ್ತು ಮೈತ್ರಿ, ಭಾವನೆಯನ್ನೇ ಕಳೆದುಕೊಂಡರು. ವಿದೇಶ ಸಚಿವರು ಇನ್ನೂ ಮುಂದುವರಿದು ಪತ್ರಿಕಾ ಪ್ರತಿನಿಧಿಗಳೊಂದಿಗೆ ಜಗಳಕಾದು ಅಂತಃರಾಷ್ಟ್ರೀಯ ವ್ಯಕ್ತಿತ್ವವನ್ನೇ ಗಳಿಸಿದರು; ರಾಜಕೀಯ ಇತಿಹಾಸದಲ್ಲಿಯೇ ಅದ್ಭುತ ಮಹಾಶಯರಾಗಿ ಪರಿಣಮಿಸಿದರು.

ಶ್ರೀ ಭುಟ್ಟೊ ಮಹಾಶಯರ ಹುಡುಗಾಟಿಕೆಯ ತುಡುಗುತನ ತುಂಬಿದ ಉರಿಮೋರೆಯು ಸಿಂಹಳದಲ್ಲಿರಬಹುದಾದ ಪಾಕ್ ಮಿತ್ರರನ್ನೂ ಅದರ ಶತ್ರುಗಳನ್ನಾಗಿ ಮಾಡಿತೆಂದು ಹೇಳಬಹುದು. ಭುಟ್ಟೋರವರ ಈ ಬಗೆಯ ವರ್ತನೆಯು ಅವರ ನಿರಾಶೆಯ ಪ್ರತೀಕವಾಗಿತ್ತು; ಆವಿಟ್ಟುಕೊಂಡು ಬಂದಿದ್ದ ಗುರಿಯಲ್ಲವೂ ಬುಡ ಮೇಲಾದುದರಿಂದಾಗಿ ಅವರು ಮೈಮರೆತುಬಿಟ್ಟರು.

ಸಿಂಹಳದ ನೆಲದಲ್ಲಿ ಪಾದಾರ್ಪಣಮಾಡುವಾಗ ಪಾಕ್ ನಿಯೋಗವು ನಾಲ್ಕು ಮುಖ್ಯ ಗುರಿಯನ್ನಿಟ್ಟುಕೊಂಡಿತ್ತು. ತಟಸ್ಥರಾಷ್ಟ್ರ ಸಮ್ಮೇಳನವನ್ನು ನಡೆಯದಂತೆ ಮಾಡುವ ಪೀಕಿಂಗಿನ ನೀತಿಯನ್ನು ಕೊಲಂಬೊದಲ್ಲಿ ಪ್ರತಿಬಿಂಬಿಸುವುದು ಪ್ರಥಮದ್ದು. ಚೀನೀಯ ಪ್ರಧಾನಿ ಚ್ಔ-ಎನ್-ಲಾಯ್ ಅವರು ಆಫ್ರಿಕೆಯನ್ನು ಸಂದರ್ಶಿಸುವ ವೇಳೆಯಲ್ಲೇ ಅಯ್ಯೂಬ ಖಾನರು ಸಿಂಹಳದ ಯಾತ್ರೆ ಕೈಗೊಂಡುದು ಕಾಕತಾಳೀಯವಲ್ಲ. ಸಿಲೋನಿನ ಸರಕಾರ, ಪಾರ್ಲಿಮೆಂಟ್ ಮತ್ತು ಜನತೆಯಲ್ಲಿ ಎರಡನೆಯ ಬಲ್ಗ್ರೇಡ್ ಮಾದರಿಯ ಸಮ್ಮೇಳನ "ಸಂಪೂರ್ಣ ನಿರುಪಯುಕ್ತ"ವೆಂಬ ಅಭಿಪ್ರಾಯ ಮೂಡಿಸಲು ಆಕಾಶ ಪಾತಾಳಗಳನ್ನೊಂದು ಮಾಡಿದರು. ಸಿಲೋನ್ ಮತ್ತು ಸಂಯುಕ್ತ ಅರಬ ಗಣರಾಜ್ಯಗಳು ಈ ಸಮ್ಮೇಳನದ ಕುರಿತು ಕೆಲವು ತಿಂಗಳುಗಳಿಗೆ ಮೊದಲೇ ಆಲೋಚಿಸಿರುವರೆಂಬುದನ್ನೂ ಪ್ರಧಾನಿ ಸಿರಿಮಾವೊ ಭಂಡಾರ ನಾಯಿಕೆಯವರು ಇದರಲ್ಲಿ ಪರಿಪೂರ್ಣ ಆಸಕ್ತಿ ತೋರಿಸುತ್ತಿರುವರೆಂಬುದನ್ನೂ ಅರಿತುಕೊಂಡು ಅಯ್ಯೂಬಖಾನರು ಇಂತಹ ಸಮ್ಮೇಳನಗಳಲ್ಲಿ ಭಾಗವಹಿಸಿ ತನ್ನ ಸಮಯವನ್ನು ಪೋಲುಮಾಡಲಾರೆನೆಂದು ಕೊಲಂಬೋದಲ್ಲಿಯೇ ಉದ್ಗರಿಸಿದುದು ಮರ್ಮಸ್ಪರ್ಶಿಯಾದುದು; ಆತಿಥೇಯ ರಾಷ್ಟ್ರಕ್ಕೆ ಅಪಮಾನ ಮಾಡುವಂತಹುದು. ಈ ಅಂತ್ಯದಲ್ಲಿ ಹೊರಟ ಪತ್ರಿಕಾ ಪ್ರಕಟನೆಯಲ್ಲಿ ಬಂದ ವಾಕ್ಯ ಮಾತ್ರ ಈ ಸಮ್ಮೇಳನದ ಕುರಿತು ಹೇಳುತ್ತದೆ: "ತಟಸ್ಥ ರಾಷ್ಟ್ರಗಳ ಇನ್ನೊಂದು ಸಮ್ಮೇಳನದಲ್ಲಿ ಪ್ರಧಾನ ಮಂತ್ರಿ ಸಿರಿಮಾವೋ ಭಂಡಾರನಾಯಿಕೆಯವರು ತೋರಿಸುತ್ತಿರುವ ಆಸಕ್ತಿಯನ್ನು ಅಧ್ಯಕ್ಷರು ಕಂಡುಕೊಂಡರು"—

ಅಯ್ಯೂಬ್ ಖಾನ್

ಇದಕ್ಕೆ ಅಧ್ಯಕ್ಷರ ವಿರೋಧವಿದೆಯೆಂಬುದನ್ನು ಯಾರೂ ಹೇಳಲಿಲ್ಲ!

ಪಾಕ್ ಅತಿಥಿಗಳು ಸಿಲೋನಿನಲ್ಲಿ ಪ್ರತಿಬಿಂಬಿಸಿದ ಇನ್ನೊಂದು ಉದ್ದೇಶವೆಂದರೆ, ಬಾಡುಂಗ ಮಾದರಿಯ ಆಫ್ರೋ ಏಶ್ಯನ್ ರಾಷ್ಟ್ರ ಪರಿಷತ್ತು ಜರಗು[illegible] ಸಂಗತಿ. ಇದು ಸಿಲೋನಿಗೆ ಹೊಸತಲ್ಲ [illegible] ೧೯೫೬ರಲ್ಲಿ ಸೋಲಮನ್ ಭಂಡಾರ ನಾಯಕೆಯವರು ಪ್ರಧಾನ ಪಟ್ಟ ಗ್ರಹ[illegible] ಮಾಡಿದೊಡನೆಯೇ ಇಂತಹ ಸಮ್ಮೇಳ[illegible]ವನ್ನು ಕರೆಯುವ ಆಲೋಚನೆ ಮಾಡಿದ್ದರು. ಇದರೆ, ತನ್ನ ಕೈ'ಮೀರಿದ ಕಾರಣ[illegible]ಗಳಿಂದ ಅವರಿಂದ ಇದು ಸಾಧ್ಯವಾಗಲಿ[illegible] ಇತ್ತೀಚೆಗೆ ಸಿಲೋನಿನ ಪ್ರತಿನಿಧಿ ಸ[illegible]ಯು ಆಫ್ರೋ ಏಶ್ಯ ದೇಶಗಳಲ್ಲಿ ಹೆಚ್ಚಿನ [illegible]ಧಿಕ ಸಂಬಂಧವಿರಬೇಕೆಂಬ ಇಚ್ಛೆ[illegible]ಯನ್ನು ಪ್ರಕಟಿಸಿತ್ತು.

ಸದ್ಯ ಪಾಕಿಸ್ತಾನವು ಚೀನಾ [illegible] ಬಯಕೆಯಂತೆ ಕರೆಯ[illegible] ಯಸುವ ಬಾಡುಂಗ ಮಾದರಿ[illegible] ಸಮ್ಮೇಳನವು ಸಿಲೋನಿನ ಇಚ್ಛೆಗೆ [illegible] ದೂರವಾದುದು. ಪಾಕ್ ನಾಯಕರು [illegible] ಬಾಡುಂಗ ಸಮ್ಮೇಳನವು ಅತ್ಯಗತ್ಯವೆಂದು, ಕ್ಷಿಪ್ರದಲ್ಲಿಯೇ ಸೇರಬೇಕೆಂದು ವಾದ ಮಾಡಿದರು. ಇದರ ಪರಿಣಾಮ [illegible]ತ್ರಿಕಾ ಪ್ರಕಟಣೆಯಲ್ಲಿ ಹೀಗೆ ರೂಪಿತವಾಗಿದೆ: "ಪ್ರಧಾನ ಮಂತ್ರಿಯವರು ಅಂತ[illegible] ಸಮ್ಮೇಳನವು ಉಪಯುಕ್ತ ಉದ್ದೇಶವನ್ನು ಈಡೇರಿಸಬಹುದೆಂದು ಒಪ್ಪಿದರು." ಇದು ಚೀನಾ ಮತ್ತು ಪಾಕಿಸ್ತಾನಗಳ ಸ್ವಾರ್ಥಸಾಧನೆಗಾಗಿ ಭಾರತದ ಮು[illegible]ಕ್ಕೆ ಮಸಿ ಬಳೆಯುವ ಪ್ರಯತ್ನವಾದುದರಿಂದ ಅಷ್ಟೇನೂ ಆಗತ್ಯದ್ದಲ್ಲವೆಂಬುದು ಕೊಲಂಬೋವಿನ ಉತ್ತರ. ನೆರೆಯ [illegible] ರಾಷ್ಟ್ರವೊಂದಕ್ಕೆ ಅಪಮಾನ ಮಾಡುವುದಕ್ಕೆ ಸಿಲೋನು ಒಪ್ಪುವುದಿಲ್ಲ. ಭಾರತ ಮತ್ತು ಸಿಂಹಳಗಳು ಪರಸ್ಪರ ಆಸ್ತಿಯ ವಿಷಯಗಳಲ್ಲಿ ಹೊಡೆದಾಡಬಹುದು; ಆದರೆ, ಅಂತರ್ರಾಷ್ಟ್ರೀಯ ನೆಲೆಯಲ್ಲಿ ಇವು ಸಹೋದರ ರಾಷ್ಟ್ರಗಳು, ಇವುಗಳ ನಡುವಣ ಜಗಳದಿಂದ ಸ್ವಲಾಭಗಳಿಸಬಯಸುವ ಪಾಕ್-ಚೀನೀ ನರಿಗಳಿಗೆ ನಿರಾಶೆಯಲ್ಲದೆ ಮತ್ತೇನೂ ಸಿಗಲಾರದು.

ಭಾರತವು ಶಸ್ತ್ರಾಸ್ತ್ರ ಸಂಗ್ರಹ ಮಾಡುತ್ತಿರುವುದಕ್ಕೆ ಪ್ರಚಾರ ನೀಡಿ ಸಿಂಹಳದಲ್ಲಿ ಭಯವನ್ನು ಹುಟ್ಟಿಸುವುದು ಪಾಕ್ ನಿಯೋಗದ ಮೂರನೆಯ ಉದ್ದೇಶ. ಈ ಸಂಬಂಧದಲ್ಲಿ ಪಾಕ್ ಅಧ್ಯಕ್ಷರೂ ವಿದೇಶಮಂತ್ರಿಯವರೂ ಯಾವ ರಹಸ್ಯವನ್ನೂ

(೯ನೇ ಪುಟ ನೋಡಿರಿ)

ಕ್ಷಯರೋಗವನ್ನು ಗುಣಪಡಿಸುವ ಔಷಧಗಳು ಈಗ ಬಳಕೆಯಲ್ಲಿವೆ ಮತ್ತು ನಿಮ್ಮ ಮನೆಯಲ್ಲಿಯೇ ಚಿಕಿತ್ಸೆ ಹೊಂದಬಹುದಾಗಿದೆ. ಬೇಗನೆ ರೋಗ ಪರೀಕ್ಷೆ ನಡೆದರೆ ಮತ್ತು ಡಾಕ್ಟರರು ಸೂಚಿಸಿದಂತೆ ಹೇಳಿದ ಅವಧಿ ತನಕ ಕ್ರಮವಾಗಿ ಔಷಧಿಗಳನ್ನು ತೆಗೆದುಕೊಂಡರೆ ನೀವು ಗುಣಹೊಂದುವ ಸಂಭವ ಖಂಡಿತ. ಹಾಗೂ ಭಂಗಕ್ಕೊಳಪಟ್ಟ ನಿಮ್ಮ ಜೀವನವು ಮೊದಲಿನ ಸ್ಥಿತಿಯನ್ನು ಹೊಂದಬಹುದಾಗಿದೆ.

ಕ್ಷಯರೋಗಿಗಳೆಲ್ಲಾ ಈ ರಹಸ್ಯವನ್ನು ಅರಿತಿಲ್ಲ. ನಿಮ್ಮ ರಾಜ್ಯದ ಕ್ಷಯರೋಗ ಸಮಿತಿಯು ಈ ವಿಷಯದಲ್ಲಿ ಜನತೆಯಲ್ಲಿ ತಿಳುವಳಿಕೆಯನ್ನುಂಟು ಮಾಡಲು ಪ್ರಯತ್ನಿಸುತ್ತದೆ. ಅವರಿಗೆ ನಿಮ್ಮ ಸಹಾಯವು ಅಗತ್ಯವಿದೆ. ಅವರಿಗೆ ಹಣ ಬೇಕಾಗಿದೆ. ನೀವು ಟಿಬಿ ಮೊಹರುಗಳನ್ನು ಕೊಂಡುಕೊಳ್ಳುವುದರಿಂದ ಅವರಿಗೆ ಸಹಾಯ ಮಾಡಬಹುದು. ಒಂದು ಮೊಹರಿನ ಬೆಲೆ 10 ನಯೇ ಪೈಸೆ ಮಾತ್ರ.

ಮೊಹರುಗಳು— ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಸರಕಾರಿ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು ಮತ್ತು ಅವರ ವಿವಿಧ ಏಜನ್ಸಿಗಳಲ್ಲಿ ದೊರೆಯುತ್ತವೆ.

14ನೇ ಟಿಬಿ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ನಡೆಸಲ್ಪಡುವಂತಹದ್ದು)

ಈ ಸ್ಥಳ—

'ನವಯುಗ' ವಾರಪತ್ರಿಕೆಯ ಉದಾರ ದಾನ.

ಸಿಂಹಾವಲೋಕನ

ಮಿಶ್ರಫಲವಿತ್ತ ೧೯೬೩

೧೯೬೩ನೆಯ ವರ್ಷವು ಕಠಾರ ಪ್ರಭಾವಿತವೆಂದರೆ ಅತ್ಯುಕ್ತಿಯಾಗಲಾರದು. ಅಮೆರಿಕೆಯ ಅಧ್ಯಕ್ಷ ಕೆನ್ನೆಡಿಯವರು ಗುಂಡಿಗೆ ಬಲಿಯಾದರು. ಇಂಗ್ಲೆಂಡಿನ ಕ್ರಿಶ್ಚಿಯನ್ ಕೀಲರ್ ಕನ್ಸರ್‌ವೇಟಿವ್ ಪಕ್ಷವನ್ನು ಧರ್ಮಸಂಕಟಕ್ಕೆ ಗುರಿ ಮಾಡಿದಳು. ಕೆನ್ನೆಡಿ-ಕ್ರುಶ್ಚೇವರ ನಡುವೆ ಆದ ಅಣ್ವಸ್ತ್ರ ಪರಿಶೀಲನಾ ಒಡಂಡಿಕೆಯು ಪೂರ್ವ ಪಶ್ಚಿಮ ಬಣಗಳನ್ನು ನಿಕಟ ತರುವ ಪ್ರಥಮ ಪ್ರಯತ್ನವಾಗಬಹುದು. ನಮ್ಮ ದೇಶದಲ್ಲಾದರೂ ಕಾಮರಾಜ ಯೋಜನೆಯಿಂದಾಗಿ ಮಂತ್ರಿಮಂಡಳಿಯಲ್ಲಿ ಎಂದೂ ನಡೆಯದ ಬದಲಾವಣೆಗಳು ತಲೆದೋರಿದುವು. ಕೇಂದ್ರ ಸರಕಾರದಲ್ಲಿ ಹಿಂದಿನ ವರ್ಷ ಕೃಷ್ಣ ಮೆನನ್ ತನ್ನ ಪ್ರಭಾವವನ್ನು ಕಳೆದುಕೊಂಡರೆ, ಕೃಷ್ಣಮಾಚಾರಿಯವರು ಇಂದು ಪ್ರತಿಭಾವಂತರಾಗಿದ್ದಾರೆ.

ಪಂಚ ಮಹಾರಾಷ್ಟ್ರಗಳಲ್ಲಿ ಫ್ರಾನ್ಸಿನ ಮಹಾಮಾನವ ಡಿಗಾಲೆ ಮತ್ತು ಸೋವಿಯತ್ತಿನ ವಿರಾಟ್‌ವ್ಯಕ್ತಿ ಕ್ರುಶ್ಚೇವರು ಮಾತ್ರ ತಮ್ಮ ಗದ್ದುಗೆಯನ್ನುಳಿಸಿಕೊಂಡರು ಕೆನ್ನಡಿ ಕೊಲೆಯಿಂದ ಲಿಂಡನ್ ಜಾನ್ಸನ್ ಅಮೇರಿಕೆ ಅಧ್ಯಕ್ಷರಾದರು; ಬಹು ಸಮಯದಿಂದ ನಿವೃತ್ತರಾಗಲು ಅವಕಾಶ ಕಾಯುತ್ತಿದ್ದ ಪಶ್ಚಿಮ ಜರ್ಮನಿಯ ಛಾನ್ಸೆಲರ್ ಅಡೆನ್ಯೂರ್; ಲುಡ್ವಿಂಗ್ ಎರ್ಹಾರ್ಡರನ್ನು ಸಿಂಹಾಸನಾರೋಹಣ ಮಾಡಿಸಿ ಈ ವರ್ಷ ದೂರ ಕುಳಿತರು; ಬ್ರಿಟನ್ನಿನ ಹೆರಾಲ್ಡ್ ಮ್ಯಾಕ್‌ಮಿಲನರು ಮೌನವಾಗಿಯೇ ಹೊರನಡೆದು ಕನಸಿನಲ್ಲೂ ಪ್ರಧಾನಿಯಾಗುವುದನ್ನು ಕಲ್ಪಿಸದ ಡಗ್ಲಸ್ ಹೋಮರಿಗೆ ಅವಕಾಶ ಮಾಡಿಕೊಟ್ಟರು. ರಶ್ಯದ ವೆಲೆಂಟೀನಾ ವ್ಯೋಮಯಾತ್ರಿ ಮಹಿಳೆಯರಲ್ಲಿ ಮೊತ್ತಮೊದಲಿಗಳಾದಳು.

ಅಮೆರಿಕೆಯ ಆರನೆಯ ಗಗನಯಾತ್ರಿ ಮೇಜರ್ ಗಾರ್ಡನ್ ಕೂಪರರು ೨೨ ಬಾರಿ ಅಂತರಿಕ್ಷದಲ್ಲಿ ಪ್ರಪಂಚ ಪ್ರದಕ್ಷಿಣೆ ಮಾಡಿದರು. ರಶ್ಯದ ಐದನೆಯ ಗಗನಯಾತ್ರಿ ವೆಲೆರಿ ಬೈಕೊವ್‌ಸ್ಕಿಯವರು ಅಂತರಿಕ್ಷಕ್ಕೆ ನೆಗೆದರು. ಎರಡು ದಿನಗಳ ನಂತರ ಹಾರಿದ ಪ್ರಥಮ ಸ್ತ್ರೀ ವ್ಯೋಮಯಾತ್ರಿ ವೆಲೆಂಟೀನಾ ವ್ಯೋಮಯಾತ್ರಿಯೊಬ್ಬನನ್ನು ವ್ಯೋಮದಲ್ಲಿಯೇ ಲಗ್ನವಾದಳು. ರಶ್ಯ ಅಮೆರಿಕೆ ಮತ್ತು ಬ್ರಿಟನ್ನುಗಳು ಭೂಮಿಯೊಳಗಿನದಲ್ಲದೆ ಎಲ್ಲ ಅಣ್ವಸ್ತ್ರ ಪರಿಶೀಲನೆಯನ್ನು ಪ್ರತಿಬಂಧಿಸುವ ಒಡಂಬಡಿಕೆ ಮಾಡಿಕೊಂಡುವು; ಪಾಶ್ಚಾತ್ಯ ಮತ್ತು ಪೌರ್ವಾತ್ಯ ಬಣಗಳನ್ನು ಸಮೀಪಕ್ಕೆ ತಂದು ವಿಶ್ವಶಾಂತಿಯ ಮಾರ್ಗವನ್ನು ಹಸನುಗೊಳಿಸುವ ಪ್ರಯತ್ನ ಮಾಡಿದುವು.

೧೯೬೦ರಿಂದ ಬೆಳೆಯುತ್ತಲೇ ಬಂದಿದ್ದ ಕಮ್ಯೂನಿಸ್ಟ ತತ್ತ್ವ ಬಿನ್ನಾಭಿಪ್ರಾಯವು ಮತ್ತಷ್ಟು ಹೆಚ್ಚುತ್ತಲೇ ಬಂತು. ರಶ್ಯ ಮತ್ತು ಚೀನಾಗಳ ನಡುವಣ ತಾತ್ತ್ವಿಕ ಭಿನ್ನಮತ ನಿವಾರಣೆಗೆ ಸಮ್ಮೇಳನವೂ ಕೂಡಿತು. ಆದರೆ, ಒಮ್ಮತವು ಸಾಧ್ಯವಾಗದೆ ಭಿನ್ನತೆಯು ಕಮ್ಯುನಿಸ್ಟ ಚಳವಳದ ಮೇಲೆಯೇ ತನ್ನ ಪ್ರಭಾವವನ್ನು ಅಚ್ಚೊತ್ತುವಂತಾಯಿತು.

ಆಗ್ನೇಯ ಏಶ್ಯದಲ್ಲಿ ಮಲೇಶಿಯಾ ಸ್ವತಂತ್ರ ರಾಷ್ಟ್ರ ಕೂಟವೊಂದರ ಉದಯವಾಯಿತು. ಮಲಯಾ, ಸಿಂಗಾಪೂರ, ಸರವಾಕ ಮತ್ತು ಸಾಬಾಗಳ ಒಂದು ಕೋಟಿ ಜನತೆಯು ಸಪ್ಟಂಬರ ೧೬ರಂದು ಏಕ ರಾಷ್ಟ್ರವಾಗಿ ರೂಪುಗೊಂಡುವು. ಇಂಡೋನೇಶ್ಯವೂ ಅದರಲ್ಲಿ ಸೇರ್ಪಡೆಗೊಳ್ಳುವ ನಿರೀಕ್ಷೆಯಿದ್ದಿತ್ತಾದರೂ ಅದರ ವಿದೇಶ ಮಂತ್ರಿ ಸುಬಾಂಡ್ರಿಯೊರವರು ಮಲೇಶಿಯಾದ ಇಂದಿನ ಸ್ವರೂಪವನ್ನು ಮನ್ನಿಸುವುದಿಲ್ಲವೆಂದು ಘೋಷಿಸಿದರು. ೧। ಲಕ್ಷ ಚದರ ಮೈಲಿ ವಿಸ್ತಾರದ ಮಲೇಶ್ಯವು ರಬ್ಬರು, ಟಿನ್, ಕೊಬ್ಬರಿ ಮತ್ತಿತರ ಕೃಷ್ಯುತ್ಪನ್ನಗಳಿಗೆ ಹೆಸರುವಾಸಿಯಾಗಿದೆ. ಖನಿಜಗಳೂ ಇಲ್ಲಿ ಧಾರಾಳವಾಗಿವೆ. ದಶಂಬರ ೧೧ನೆಯ ದಿನ ಮಧ್ಯರಾತ್ರಿಯ ಹೊತ್ತು ಕೆನ್ಯಾ ಸ್ವತಂತ್ರವಾಯಿತು; ಆಫ್ರಿಕೆಯ ೩೬ನೆಯ ಸ್ವತಂತ್ರ ದೇಶವೆನಿಸಿತು. ಜೋಮೋ ಕೆನ್ಯಟ್ಟ ತನ್ನ ನಲ್ವತ್ತು ವರ್ಷಗಳ ಸಾಧನೆಯ ನಂತರ ಅದರ ಪ್ರಧಾನಿಯಾದರು. ಅದಕ್ಕೆ ಎರಡು ದಿನ ಮೊದಲು ಸಂಬಾರ ಜೀನಸುಗಳ ದ್ವೀಪ ಜಾಂಜಿಬಾರ್ ಸ್ವರಾಜ್ಯಗಳಿಸಿತು.

ವರ್ಷಾರಂಭದಲ್ಲಿ ಬಗದಾದದ ಮಿಲಿಟರಿ ಕ್ರಾಂತಿಯಾಗಿ ಜನರಲ್ ಕಾಸೀಮರ ಸರಕಾರವು ಉರುಳಿಸಲ್ಪಟ್ಟಿತು; ಫೆಬ್ರವರಿಯಲ್ಲಿ ಕಾಸೀಮರ ಕೊಲೆ ನಡೆಯಿತು; ಕ್ರಾಂತಿಕಾರಿಗಳು ಕೊಲೊನಲ್ ಆರೇಫರನ್ನು ಅಧ್ಯಕ್ಷರನ್ನಾಗಿ ನಾಮಕರಣ ಮಾಡಿತು. ವರ್ಷಾಂತ್ಯದಲ್ಲಿ ವಿಯತನಾಮದಲ್ಲಿ ಅಧ್ಯಕ್ಷರ ಅರಮನೆಯನ್ನ ಸೇನೆಯು ಮುತ್ತಿಗೆ ಹಾಕಿತು; ಅಧ್ಯಕ್ಷ ಡೀಯಂ ಮತ್ತು ಅವರ ತಮ್ಮ ಡಿನ್ ನೂಗನರನ್ನು ಗುಂಡಿಕ್ಕಿ ಕೊಲ್ಲಲಾಯಿತು; ಅಲ್ಲವಾದರೆ ಅವರು ಆತ್ಮಹತ್ಯೆ ಮಾಡಿಕೊಂಡರು. ಹೀಗೆ ಹಿಂಸಾಕಾಂಡದಿಂದಲೇ ಆರಂಭವಾದ ವರ್ಷವು ಹಿಂಸಾಕಾಂಡದಿಂದಲೇ ಕೊನೆಗೊಂಡಿತು. ಪ್ರಕೃತಿ ಕೂಡಾ ಲೋಕದ ಮೇಲೆ ಉಗ್ರಭಾವ ತಳೆದಂತಿತ್ತು. ಮೆಸಿಡೋನಿಯಾ, ಯುಗೋಸ್ಲಾವಿಯಾಗಳಲ್ಲಿ ಭೂಕಂಪವು ಕಾಣಿಸಿ ಬೃಹತ್ ನಾಶಕ್ಕೆ ಕಾರಣವಾಯಿತು. ಪೂರ್ವ ಪಾಕಿಸ್ತಾನದಲ್ಲಿ ಸುಂಟರ ಗಾಳಿಯೆದ್ದು ನಾಗರಿಕರಿಗೆ ಅಪಾರ ಸಂಕಟವನ್ನುಂಟು ಮಾಡಿತು.

"ಅಧಿಕಾರಕ್ಕೆ ಮೊದಲು ಪಕ್ಷ"ವೆಂಬ ತತ್ತ್ವವನ್ನು ಪ್ರತಿಷ್ಠಿಸುವ ಕಾಮರಾಜ ಸೂತ್ರವು ಭಾರತದಲ್ಲಿಯೂ ಹಲವು ಸ್ಥಿತ್ಯಂತರವನ್ನುಂಟು ಮಾಡಿತು. ಆಗೋಸ್ತು ಲರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ಸೂತ್ರವನ್ನು ಸ್ವೀಕರಿಸಿತು. ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟುವುದಕ್ಕಾಗಿ ಅನೇಕ ಕೇಂದ್ರ ಮತ್ತು ರಾಜ್ಯ ಮಂತ್ರಿಗಳು ಮುಂದೆ ಬಂದರು. ಆಗಸ್ತ ೨೪ರಂದು ಪ್ರಧಾನಿ ನೆಹರುರವರ ಅಪೇಕ್ಷೆಯಂತೆ ಆರು ಜನ ಕೇಂದ್ರ ಮಂತ್ರಿಗಳು ಅಧಿಕಾರ ತ್ಯಜಿಸಿ ಪಕ್ಷ ಕಟ್ಟುವ ಕಾರ್ಯದಲ್ಲಿ ತೊಡಗಬೇಕೆಂಬ ನಿರ್ಣಯವನ್ನು ಕಾಂಗ್ರೆಸ್ ಒಪ್ಪಿಕೊಂಡಿತು. ಕೆಲವಾರು ರಾಜ್ಯದ ಮುಖ್ಯ ಮಂತ್ರಿಗಳೂ ಪಕ್ಷದ ಕಾರ್ಯಕ್ಕಾಗಿ ಅಧಿಕಾರ ತ್ಯಜಿಸಿದರು. ಇದು ವರ್ಷದ ಉತ್ತರಾರ್ಧದ ಚಟುವಟಿಕೆಗಳಾ

(೭ನೇ ಪುಟ ನೋಡಿರಿ)

400 ವರ್ಷಗಳ ಹಿಂದಿನ ಒಂದು

ಪುಣ್ಯಸ್ಮರಣೆ

ಇಂದಿನ ದಿನವೇ ಶುಭದಿನವು। ಇಂದಿನ ವಾರ ಶುಭವಾರ
ಇಂದಿನ ತಾರೆ ಶುಭತಾರೆ। ಇಂದಿನ ಯೋಗ ಶುಭಯೋಗ
ಇಂದಿನ ಕರಣ ಶುಭಕರಣ। ಇಂದು ಪುರಂದರ ವಿಠ್ಠಲರಾಯನ
ಸಂದರುಶನ ಫಲವೆನಗಾಯ್ತು। ಸಂದರುಶನ ಫಲವೆನಗಾಯ್ತು



'ಉಳಿತಾಯ' ಆರಂಭಿಸಲು
ಇಂದೇ
ಶುಭದಿನವು

ನಮ್ಮ ಆಕರ್ಷಣೀಯ ಉಳಿತಾಯ ಯೋಜನೆಗಳು

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ — ರೆಕರಿಂಗ್ ಡಿಪಾಸಿಟ್ — ಫಿಕ್ಸೆಡ್ ಡಿಪಾಸಿಟ್
ಮತ್ತು ಕ್ಯಾಷ್ ಸರ್ಟಿಫಿಕೇಟ್

ಈ ಉಳಿತಾಯ ಯೋಜನೆಗಳ ವಿಶೇಷ ಮಾಹಿತಿಗಾಗಿ
ನಮ್ಮ ಯಾವುದೇ ಶಾಖೆಯಲ್ಲಿ ವಿಚಾರಿಸಿ

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ . ಮಂಗಳೂರು ಸ್ಥಾಪನೆ . 1906 ಆಡಳಿತ ಕಛೇರಿ : ಬೆಂಗಳೂರು

ನವಯುಗ

ವರುಷ	ಉಡುಪಿ	ವಾರ
೪೩	೨-೧-೧೯೬೪	೧೮

ಪುರಂದರ ಸಂದೇಶ

ಕರ್ನಾಟಕದ ಭಕ್ತಿಪಂಥದ ಮಹಾನುಭಾವರಲ್ಲಿ ಪುರಂದರದಾಸರು ಒಬ್ಬರು. ಇವರನ್ನು ಸರಿಕಟ್ಟಬಲ್ಲವರು ಪ್ರಾಯಃ ಯಾರೂ ಇಲ್ಲವೆನ್ನಬಹುದು. ಅಪಾರ ಧನಧಾನ್ಯ ಸಂಪನ್ನರಾಗಿದ್ದು ಬಳಿಕ ವೈರಾಗ್ಯ ಸಂಪನ್ನರಾಗಿ ತನ್ನ ಅತುಲ ಸಂಪತ್ತನ್ನು ತ್ಯಾಗ ಮಾಡಿದ ಮಹಾ ವಿರಕ್ತರು ಇವರು. ತನ್ನ ನಾಲ್ಕುಲಕ್ಷ ಕೀರ್ತನೆ ಉಗಾಭೋಗಾದಿಗಳಿಂದ ಕನ್ನಡಿಗರ ಮನೆ ಮನೆಗೆ ಸಂಸ್ಕೃತಿಯ ಸಂದೇಶವನ್ನು ಸುಲಲಿತವಾಗಿ ಮುಟ್ಟಿಸಿದವರು ಅವರು. ಭಾರತೀಯ ಸಂಸ್ಕೃತಿಯ ಅಪಾರ ಜ್ಞಾನವು ಸಂಸ್ಕೃತ ಭಾಷಾ ಭಾಂಡಾರದಲ್ಲಿ ಸುರಕ್ಷಿತವಾಗಿದ್ದ ಆ ಕಾಲದಲ್ಲಿ ಭಾಂಡಾರದ ಮುದ್ರೆಯನ್ನು ಒಡೆದು ಒಳಗಿನ ಜ್ಞಾನವನ್ನು ಕನ್ನಡಿಗರೆಲ್ಲರಿಗೂ ಹಂಚುವ ಮಹಾ ಸಾಹಸವನ್ನು ಕೈಗೊಂಡು ಅದರಲ್ಲಿ ಯಶಸ್ವಿಯಾದವರು ಅವರು. ಇಂತಹ ಕನ್ನಡದ ವರಪುತ್ರನ ಚತುಃಶತಮಾನೋತ್ಸವವೀಗ ಕರ್ನಾಟಕದಲ್ಲಿ ಎಲ್ಲೆಲ್ಲೂ ನಡೆಯುತ್ತಿದೆ; ನಡೆಯಲಿದೆ. ಅಖಿಲ ಭಾರತ ಮಟ್ಟದಲ್ಲಿಯೂ ಈ ಉತ್ಸವವು ನೆರವೇರುವುದೆಂದೂ ಅದನ್ನು ಪ್ರಧಾನಿ ನೆಹರು ಉದ್ಘಾಟಿಸುವರೆಂದೂ ತಿಳಿಯುತ್ತದೆ.

ಕನ್ನಡದ ಸಂಸ್ಕೃತಿಗೆ, ಸಾಹಿತ್ಯಕ್ಕೆ ದಾಸಪಂಥದ ಕೊಡುಗೆ ಅಮೋಘವಾದುದು. ಸುಲಿದ ಬಾಳೆಯ ಹಣ್ಣಿನಂದದಲ್ಲಿ ಸುಲಭವಾದ ನಾಡನುಡಿ ಕನ್ನಡದಲ್ಲಿಯೇ ಭಕ್ತಿ, ಜ್ಞಾನ, ವೈರಾಗ್ಯಗಳ ಸಾರವನ್ನು ಜನರಿಗೆ ಈ ಪಂಥದವರು ನೀಡಿದ್ದಾರೆ. ಮಾನವರೆಲ್ಲರೂ ಒಂದೇ ಕುಲಕ್ಕೆ 'ಸೇರಿದವರು ಎಂಬುದನ್ನವರು ಅಂದೇ ಘೋಷಿಸಿದ್ದಾರೆ. ಧರ್ಮಾರ್ಥ ಕಾಮಮೋಕ್ಷಗಳೆಂಬ ಪುರುಷಾರ್ಥಚತುಷ್ಟಯಗಳಲ್ಲಿ ಆದ್ಯಂತದ ಧರ್ಮ ಮತ್ತು ಕಾಮನೆಗಳನ್ನು ಮರೆತು ಅಥವಾ ಅಲಕ್ಷಿಸಿ, ಅರ್ಥ ಮತ್ತು ಕಾಮಗಳನ್ನೇ ಮಹಾರ್ಥವೆಂದು ಬಗೆದು ಜೀವನ ಸಂಗ್ರಾಮದಲ್ಲಿ ದುಮುಕುವ ಇಂದಿನ ಜನತೆ ಈ ದಾಸ ಕೂಟದ ಉಪದೇಶಾಮೃತದಿಂದ ಮರಳಿ ಜಾಗೃತವಾಗ ಬೇಕಾಗಿದೆ. ದೇಶದಲ್ಲಿ ಭಾವೈಕ್ಯದ, ಸಂಸ್ಕೃತಿ ಸಂರಕ್ಷಣೆಯ, ಸ್ವದೇಶ ಭದ್ರತೆಯ ಆವಶ್ಯಕತೆ ಹೆಚ್ಚಿರುವ ಇಂದಿನ ದಿನಗಳಲ್ಲಿ ನಾವು ನಮ್ಮ ಆತ್ಮಶಕ್ತಿಯನ್ನು ಬೆಳೆಯಿಸಿಕೊಳ್ಳಬೇಕು. ಇಂತಹ ಆತ್ಮಶಕ್ತಿ ಸಂವರ್ಧನೆಯು ನಮ್ಮ ಸಂಸ್ಕೃತಿಯ ಅಧ್ಯಯನದಿಂದಲೇ ಸಾಧ್ಯ. ಆತ್ಮೋದ್ಧಾರದ ಮಾರ್ಗದಲ್ಲಿ ನಾವು ಮುಂದುವರಿದರೆ ಮಾತ್ರ ಈ ಗುರಿಯನ್ನು ಸೇರಬಹುದು. ಆತ್ಮೋದ್ಧಾರವೆಂದರೆ ತನ್ನ ಉದ್ಧಾರ ಮಾತ್ರವಲ್ಲ; ಪ್ರತಿ ಜೀವಜಂತುವಿನಲ್ಲಿಯೂ ಪರಮಾತ್ಮನ ಅಂಶವೇ ಇರುವುದರಿಂದ, ಆತ್ಮೋದ್ಧಾರವೆಂದರೆ ಆತ್ಮವನ್ನು ಉದ್ಧರಿಸಿಕೊಳ್ಳುವುದು ಆದರಿಂದಲೇ ತನ್ನ ಉದ್ಧಾರ, ಕುಟುಂಬ-ಸಮಾಜದ ಉದ್ಧಾರ ಮತ್ತು ತನ್ಮೂಲಕ ರಾಜ್ಯ-ದೇಶಗಳ ಉದ್ಧಾರ. ಪುರಂದರದಾಸರು ತಾನು ಪರಮಾತ್ಮನಲ್ಲಿ ಭಕ್ತಿಭಾವವನ್ನಿಟ್ಟರು; ಆತನ ದರ್ಶನ ಮಾಡಿದರು, ಜ್ಞಾನಸಂಪನ್ನರಾದರು; ತಾನು ಆರ್ಜಿಸಿದ ಜ್ಞಾನವನ್ನು ತಾನು ಗಳಿಸಿದ ಅನುಭವವನ್ನು ಜನತೆಯ ಮುಂದೆ ಸಾಮಾನ್ಯ ಜನರ ಮುಂದೆ ಹಾಡಿದರು. ಜ್ಞಾನವೆನ್ನುವುದು ವಿದ್ವಾಂಸರ ತಂಡಕ್ಕೆ, ಅಥವಾ ಒಂದು ವಿಶಿಷ್ಟ ಕೂಟಕ್ಕೆ ಮಾತ್ರ ಸಂಬಂಧಿಸಿದ ವಸ್ತುವಲ್ಲ. ಕಲ್ಲುಸಕ್ಕರೆಯನ್ನು ಎಲ್ಲರೂ ಪಡೆದು ಮೆಲ್ಲಬಲ್ಲರಾದರೆ ಶ್ರೀಕೃಷ್ಣ ನಾಮವೆಂಬ ಕಲ್ಲುಸಕ್ಕರೆ ಯಾರಿಗೆತಾನೇ ಬೇಡವಾಗಿದೆ? ಎಂತಲೇ ಅವರು "ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರೂ" ಎಂದು ತಾಳಶ್ರುತಿಲಯಬದ್ಧವಾಗಿ ಹಾಡಿದರು. ಇಲ್ಲಿ ಅಡಗಿದೆ ಪುರಂದರದಾಸರ ಮಹಾ ವ್ಯಕ್ತಿತ್ವ; ಆಧ್ಯಾತ್ಮಿಕ ಜ್ಞಾನಸಾಗರ, ಅವರು ನೀಡಿದ ಅಮರ ಸಂದೇಶ, ಆತ್ಮಶಕ್ತಿ ಸಂವರ್ಧನೆಯ ಸರಲ ಮಾರ್ಗ.

ಇದು ವೈಜ್ಞಾನಿಕ ಸಂಶೋಧನೆಗಳ ಕಾಲ; ರಾಜಕೀಯ ಕೋಲಾಹಲದ ಸಂಘರ್ಷಣೆಯ ರಂಗಸ್ಥಳ. ಆಧ್ಯಾತ್ಮಿಕತೆಯ ಹಿನ್ನೆಲೆಯಿಲ್ಲದ ವಿಜ್ಞಾನ ಅಥವಾ ರಾಜಕಾರಣ ಕ್ಷೇಮಕರವಲ್ಲವೆಂದು ಮಹಾತ್ಮರ ಅಭಿಪ್ರಾಯ. ಭಾರತವಿಂದು ರಾಷ್ಟ್ರ ಪುನಾರಚನೆಯ ಭರದಲ್ಲಿ ವೈಜ್ಞಾನಿಕವಾಗಿ ಮುಂದುವರಿಯುತ್ತಿದೆ; ಆರ್ಥಿಕ ಸಮಾನತೆಯನ್ನು ತರುವಲ್ಲಿ ಆಸಕ್ತಿವಹಿಸುತ್ತಿದೆ. ಇದರೊಡನೆ ಉಳಿದ ಪುರುಷಾರ್ಥಗಳಲ್ಲಿಯೂ ಸಮಾನತೆಯನ್ನು ತಂದುಕೊಂಡು ನಾವು ಮುಂದುವರಿಯಬೇಕು. ಇಂದು ಲೋಕ ಭಾರತವನ್ನು ಗೌರವಿಸುವುದಕ್ಕೆ ನಮ್ಮಲ್ಲಿರುವ ಆಧ್ಯಾತ್ಮಿಕ ತತ್ವವೇತ್ತರೇ ಮೂಲ ಕಾರಣ. ವೀರಪ್ರಸವಿನಿಯಾದ ಭಾರತವು ಇಂತಹರನ್ನು ಹೆರುತ್ತಲೇ ಇದೆ. ಪುರಂದರ ದಾಸರೂ ಭಾರತಾಂಬೆಯ ವೀರ ಪುತ್ರರು. ಅವರು ಅಜ್ಞಾನದ ಮುಂದೆ ಕತ್ತಿ ಹಿರಿದರು. ನಾವು ನಡೆಸುವ ಸಭೆ ಸಮ್ಮೇಳನಗಳಲ್ಲಿ ದಾಸರ ತತ್ತ್ವದರ್ಶನವನ್ನು ಅಂತರಾತ್ಮನಿಗೆ ಮುಟ್ಟಿಸಿ ಅವರು ಉಪದೇಶಿಸಿದ ಸನ್ಮಾರ್ಗ, ತನ್ಮಯತೆ ಮತ್ತು ಸರ್ವ ಸಮತಾ ಭಾವಗಳನ್ನು ಅನುಷ್ಠಾನಕ್ಕೆ ತರಬೇಕು. ದೇಶವು ಗಂಡಾಂತರ ಪರಿಸ್ಥಿತಿಯನ್ನೆದುರಿಸುವ ಇಂದಿನ ದಿನಗಳಲ್ಲಿ ಭಾರತೀಯನು ಈ ಅಮೂಲ್ಯ ತತ್ತ್ವಗಳನ್ನು ರಕ್ತಗತಗೊಳಿಸುವುದು ಅಗತ್ಯವಿದೆ, ದಾಸರ ಸಂಬಂಧವಾಗಿ ನೆರೆಯುವ ಉತ್ಸವಗಳು ಕೇವಲ ಉತ್ಸವಗಳಾಗಿ ಪರಿಣಮಿಸದೆ ಜನತೆಯಲ್ಲಿ ಆತ್ಮಶಕ್ತಿಯನ್ನು ಹೆಚ್ಚಿಸಲು ನೆರವಾಗುವುದೆಂದು ನಂಬುತ್ತೇವೆ.

ಏಕ ಲಿಪಿಯೇಕೆ?

ಕೇಂದ್ರ ಶಿಕ್ಷಣ ಮಂತ್ರಿ ಎಂ. ಸಿ. ಛಗಲಾ ಅವರು ರಾಷ್ಟ್ರೀಯ ಐಕ್ಯ ಮತ್ತು ಏಕಲಿಪಿಯ ಉಪಯೋಗಗಳಿಗೆ ಗಂಟು ಹಾಕಿದ್ದಾರೆ. ಎಲ್ಲ ಭಾರತೀಯ ಭಾಷೆಗಳಿಗೂ ಸಮಾನ ಲಿಪಿಯಿರಬೇಕೆಂದೂ ಅದರಿಂದ ವಿವಿಧ ರಾಜ್ಯಗಳ ಜನರ ಸಂಬಂಧ ನಿಕಟಗೊಳಿಸುವುದಕ್ಕಿರುವ ಅರ್ಧದಷ್ಟು ತೊಂದರೆಗಳು ನಿವಾರಣೆಯಾಗುವವೆಂದೂ ಅವರು ಹೇಳುತ್ತಾರೆ. ಭಾರತದಲ್ಲಿ ಏಕಲಿಪಿಯನ್ನು ಪ್ರಯೋಗಿಸಬೇಕೆಂದರೆ, ದೇವನಾಗರಿ ಲಿಪಿಯನ್ನೇ ಒಪ್ಪಿಕೊಳ್ಳುವುದು ನ್ಯಾಯ. ಆದರೆ, ಹೀಗೆ ಮಾಡುವುದಕ್ಕೆ ಮೊದಲು ಅದರಿಂದ ಯಾವ ಸಿದ್ಧಿಯಾದೀತೆಂದು ಪರಾಮರ್ಶಿಸಬೇಕಾಗುತ್ತದೆ. ಭಾರತೀಯ ರಾಷ್ಟ್ರೀಯ ಐಕ್ಯವನ್ನು ದೇವನಾಗರಿ ಲಿಪಿಯನ್ನು ಎಲ್ಲ ಭಾಷೆಗಳಿಗೂ ಬಳಸಿ ಸಾಧಿಸಬಹುದಾದರೆ, ಜಾಗತಿಕ ಐಕ್ಯವನ್ನು ರೋಮನ್ ಲಿಪಿಯಿಂದ ಸಾಧಿಸಬಹುದಲ್ಲವೆ? ಪ್ರತಿ ಭಾಷೆಗೂ ತನ್ನದೇ ಆದ ವೈಶಿಷ್ಟ್ಯವಿರುತ್ತದೆ. ಅದನ್ನು ಕಳೆದುಕೊಂಡರೆ, ಭಾಷೆಯು ತನ್ನ ವ್ಯಕ್ತಿತ್ವವನ್ನೇ ಕಳೆದುಕೊಳ್ಳುತ್ತದೆ; ಕೆಚ್ಚಿಲ್ಲದ ದನದಂತಾಗುತ್ತದೆ ಎಲ್ಲ ಭಾರತೀಯ ಭಾಷೆಗಳ ಉಚ್ಚಾರಣೆಗೂ ಅನುಕೂಲವಾಗುವಂತೆ ದೇವನಾಗರಿ ಲಿಪಿಯಲ್ಲಿ ಸುಧಾರಣೆ ಮಾಡಿಕೊಳ್ಳಬಹುದೆನ್ನಬಹುದು. ಆದರೆ, ಲಿಪಿಯೊಂದಾಯಿತೆಂದರೆ, ಭಾಷಾಧ್ಯಯನ ಸರಳವಾಗುವುದಿಲ್ಲ, ಪ್ರತಿಯೊಂದು ಭಾಷೆಯಲ್ಲಿರುವ ಹಳೆಯ ಗ್ರಂಥಗಳನ್ನು ಸಮಾನ ಲಿಪಿಯಲ್ಲಿ ಮುದ್ರಿಸಬೇಕು; ಪ್ರಾದೇಶಿಕ ಲಿಪಿಯನ್ನರಿಯದ ಮಕ್ಕಳು ತಂತಮ್ಮ ಭಾಷೆಯ ಸಾಹಿತ್ಯವನ್ನು ಓದುವಂತಾಗಬೇಕು. ಇದಕ್ಕೆಲ್ಲಾ ಅದೆಷ್ಟು ಹಣ ನಷ್ಟವಾಗುವುದಿಲ್ಲ! ಇದಕ್ಕಿಂತ ಮುಖ್ಯವಾದ, ವ್ಯವಹಾರವಾದ ಅನೇಕ ಮಾರ್ಗಗಳು ರಾಷ್ಟ್ರೀಯ ಐಕ್ಯ ಸಾಧನೆಗಿರುವಾಗ ಇಂತಹ ಜಟಿಲ ಪ್ರಶ್ನೆಯನ್ನು ಎತ್ತುವುದರಿಂದ ಭಾವೈಕ್ಯಕ್ಕೆ ಬಾಧಕ ಬರುವುದಿಲ್ಲವೆ? ತ್ರಿಭಾಷಾ ಸೂತ್ರವನ್ನೇ ಒಪ್ಪದಿರುವವರು ಹಿಂದಿಯನ್ನು ವಿರೋಧಿಸುವವರು ನಮ್ಮ ನಡುವೆಯೇ ಇರುವಾಗ ಈ ಸಮಾನ ಲಿಪಿಯ ಪ್ರಶ್ನೆ ನಿಜಕ್ಕೂ ಅಪ್ರಸ್ತುತ ಮತ್ತು ಅವ್ಯವಹಾರ್ಯವೆನ್ನಲೇ ಬೇಕು.

ಜಗತ್ಪರ್ಯಟನ

ಕಾಮರಾಜರ ದಾಖಲೆ

ಕಾಂಗ್ರೆಸಿನ ಅಧಿವೇಶನ ಸಧ್ಯದಲ್ಲೇ ಸೇರಲಿದೆ. ಕಾಮರಾಜ ಸೂತ್ರದ ಜನಕರಾದ ಕಾಮರಾಜರನ್ನೇ ಸರ್ವಾನುಮತದಿಂದ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆರಿಸಲಾಗಿದೆ. ತನ್ನ ಸೂತ್ರವನ್ನು ಕಾರ್ಯಗತಗೊಳಿಸಿ, ಅದರಿಂದಾಗಿ ಕಾಂಗ್ರೆಸ್ ಪಕ್ಷವನ್ನು ಬಲಗೊಳಿಸುವ ಮಹಾಕಾರ್ಯವನ್ನು ಕಾಂಗ್ರೆಸಿಗರು ಕಾಮರಾಜರ ತಲೆಯ ಮೇಲೆಯೇ ಹೊರಿಸಿದರು. ನಿಯೋಜಿತ ಅಧ್ಯಕ್ಷ ಕಾಮರಾಜರು ತನ್ನ ಅಧ್ಯಕ್ಷೀಯ ಭಾಷಣವನ್ನು ತಮಿಳಿನಲ್ಲಿ ಮಾಡಿ ಅದ್ವಿತೀಯ ದಾಖಲೆಯನ್ನು ನಿರ್ಮಿಸುತ್ತಾರೆ; ಜೊತೆಗೆ ಕೇವಲ ೧೫ ಪುಟಗಳ ಭಾಷಣವನ್ನು ಮಾಡಿ ಮುಂದಿನವರಿಗೆ ಮಾರ್ಗದರ್ಶನ ಮಾಡುತ್ತಾರೆ. ಉದ್ದುದ್ದ ಭಾಷಣಗಳನ್ನು ಬಿಗಿದು ಮೊತಿನಲ್ಲಿ ಮುಂದಿರುವ ನಮ್ಮ ನಾಯಕರಿಗೆ ಮಾತು ಕಡಿಮೆ ಮಾಡಿ; ಕೃತಿಯನ್ನು ಹೆಚ್ಚಿಸಿರಿ ಎಂಬ ಉಪಯುಕ್ತ ಪಾಠವನ್ನು ಮೊದಲಿಗೆ ಕೊಡುವ ಇರಾದೆಯಿಂದ ಅವರು ಹೀಗೆ ಮಾಡಲು ಯೋಚಿಸಿರಬಹುದೆ? ಕಾಮರಾಜ ಯೋಜನೆಯು ಕಾಂಗ್ರೆಸಿಗೆ ಮಾತ್ರ ಸೀಮಿತವಿದ್ದರೂ ಅದರ ಸತ್ಫಲವನ್ನು ದೇಶದ ೪೪ ಕೋಟಿ ಜನರು ಉಣ್ಣುವುದರಿಂದ ಇದು ಸಂಪೂರ್ಣ ಯಶಸ್ವಿಯಾಗಬೇಕು; ಕಾಂಗ್ರೆಸ್ ಸಂಸ್ಥೆ ನವಚೇತನದಿಂದ ದೇಶಸೇವೆಯನ್ನು ಮಾಡುತ್ತ ದೇಶಕಲ್ಯಾಣವನ್ನು ಸಾಧಿಸಬೇಕು.

ಕನ್ನಡಕೋಶ ತಯಾರಿ

ಬಹು ಸಮಯದಿಂದ ನಿರೀಕ್ಷಿಸುತ್ತಿದ್ದ 'ಕನ್ನಡ-ಕೋಶ' ರಚನೆಯ ಕಾರ್ಯವು ಇನ್ನು ಮೂರು-ನಾಲ್ಕು ವರ್ಷಗಳಲ್ಲಿ ಸಂಪೂರ್ಣವಾಗಿ ಮುದ್ರಣಗೊಂಡು ಕನ್ನಡಿಗರ ಕೈಸೇರುವುದೆಂದು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಶಿವಮೂರ್ತಿ ಶಾಸ್ತ್ರಿಯವರು ಭರವಸೆ ನೀಡಿದ್ದಾರೆ. ಇದರ ಮೊದಲ ಸಂಪುಟವು ಇದೇ ಎಪ್ರಿಲದಲ್ಲಿ ಹೊರಬೀಳಲಿರುವುದು. ಈ ಕೋಶವು ಸುಮಾರು ೫,೦೦೦ ಪುಟಗಳಷ್ಟು ದೊಡ್ಡದಾಗಿದ್ದು ರೂ. ೧೨೦ ಬೆಲೆ ಬಾಳುವುದು. ಆದರೆ, ಮೊದಲು ಚಂದಾದಾರರಾಗುವವರಿಗೆ ಇದು ರೂ. ೧೦೦ಕ್ಕೆ ದೊರೆಯುವುದೆಂದೂ ಅವರು ಹೇಳಿದ್ದಾರೆ.

ಶ್ರೀನಗರದಲ್ಲಿ ಗಲಭೆ

ಮಹಮ್ಮದ ಪೈಗಂಬರರ ಪ್ರತೀಕವೆಂದು ಶ್ರೀನಗರದ ಹಜರತ್‌ಬಲ್ ಮಂದಿರದಲ್ಲಿ ಕಳೆದ ೩೦೦ ವರ್ಷಗಳಿಂದಲೂ ಇದ್ದ ತಲೆಗೂದಲು ಒಮ್ಮಿಂದೊಮ್ಮೆಗೆ ಕಳವಾದುದರಿಂದ ನೊಂದ ಕಾಶ್ಮೀರಿಗಳು ಹಿಂಸಾಕಾಂಡವನ್ನು ತೊಡಗಿದರು. ಕಾಶ್ಮೀರ ಸರಕಾರವು ಈ ಕೂದಲಿನ ಶೋಧದಲ್ಲಿ ವ್ಯಸ್ತವಾಗಿದೆ. ಪಾಕ್ ಪರ ನಾಯಕರು ಜನತೆಯನ್ನುದ್ದೇಶಿಸಿ ಮಾತಾಡಿದ ಬಳಿಕ ಪ್ರದರ್ಶಕರು ಬೆಂಕಿ ಹಚ್ಚುವ ದುಸ್ಸಾಹಸ ಮಾಡಿದ್ದರಿಂದ ಶ್ರೀನಗರದಲ್ಲಿ ಕರ್ಫ್ಯೂ ಆಜ್ಞೆಯನ್ನು ಜ್ಯಾರಿಗೆ ತರಬೇಕಾಯಿತು. ಭಾರತದ ವಿರುದ್ಧ ಕಾಶ್ಮೀರದ ಮುಸ್ಲಿಮರನ್ನು ಎತ್ತಿಕಟ್ಟಲು ಪಾಕಿಸ್ತಾನದ ಕುತಂತ್ರವಿದು ಇದ್ದರೂ ಇರಬಹುದೆನ್ನಿಸುತ್ತದೆ.

ಉಡ್ಪಿ ಡಿ. ಮು ಕೋರ್ಟಿನಲ್ಲಿ—

O. S. 3?1/ 63.

ಕೆ. ಸದಾನಂದ ಸೆಟ್ಟಿ —ವಾದಿ

ಮತ್ತು

ಮೀನಕ್ಕ ಸೆಡ್ತಿ ಕೂಡಾ —ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ ವಿಠ್ಠಲ ಸೆಟ್ಟಿ—ಮೀನಕ್ಕ ಸೆಡ್ತಿರ ಮಗ, ಬೊಂಬೈ ಸ್ಟುಡಿಯೋಸ್ ಕ್ಯಾಂಟಿನ್, ಬೊಂಬೈ ಸ್ಟುಡಿಯೋಸ್, ಗೋಡ್ ಬಂದರ್ – ಗಿರ್‌ಗಾಮ್, ಬೊಂಬೈ 62. (ಉಡ್ಪಿ ತಾಲ್ಕು ಉಳಿಯಾರ ಗೋಳಿ ಗ್ರಾಮದ ಕೊತಲಗುತ್ತು ಅಬ್ಬೆರುವಾಸ್ತವ್ಯದ ಮನೆ)

2ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ—

ವಾದಿರು ಹಿಡೇ ನಿವೃತ್ತಿ ಕೇಳಿ ದಾಖಲ್ಲು ಮಾಡಿದ ಮೇಲಿನ ದಾವೆಯು ತಾರೀಕು 13—1—64ಕ್ಕೆ ನಿಮ್ಮ ಹಾಜರು ಬಗ್ಗೆ ಯಿಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉದಾಹರಿಸುವುದಿದ್ದರೆ— ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳುವುದು.

Y. C. S. Hegde,
Advocate for Plff.

ಉಡ್ಪಿ, ತಾ. 31-12-63

ಮಿಶ್ರಫಲವಿತ್ತ ೧೯೬೩

(೫ನೇ ಪುಟದಿಂದ)

ದರೆ, ಪೂರ್ವಾರ್ಧದಲ್ಲಿ ಕೆ. ಡಿ. ಮಾಳವೀಯಾ ಆಪವಾದಕ್ಕೊಳಗಾಗಿ, ಹಫೀಜ ಮಹಮ್ಮದ ಇಬ್ರಾಹಿಮರು ಚುನಾವಣೆಯಲ್ಲಿ ಸೋತು ತಮ್ಮ ಪದವಿಗಳಿಗೆ ರಾಜಿನಾಮೆಯಿತ್ತರು.

ಅಫಘಾನಿಸ್ತಾನ ಮತ್ತು ಇರಾನಗಳನ್ನು ಸಂದರ್ಶಿಸಿದ ಅಧ್ಯಕ್ಷ ಡಾ|ರಾಧಾಕೃಷ್ಣನ್ ಅಮೇರಿಕೆ ಮತ್ತು ಬ್ರಿಟನ್ನುಗಳನ್ನೂ ಜೂನಿನಲ್ಲಿ ಭೆಟ್ಟಿ ಮಾಡಿದರು. ಜೂನ್ ೨ರಂದು ಅಮೇರಿಕೆಗೆ ಕಾಲಿಟ್ಟ ರಾಧಾಕೃಷ್ಣನ್ ಅಧ್ಯಕ್ಷ ಕೆನೆಡಿಯವರೊಡನೆ ಒಂಭತ್ತು ದಿನಗಳ ತನಕ ಉಳಿದರು. ಬ್ರಿಟನ್ನಿನಲ್ಲಿ ರಾಣಿ ಎಲಿಜಬೆಥರು ಅಧ್ಯಕ್ಷರನ್ನು ಆರ್ಡರ್ ಆಫ್ ಮೆರಿಟ್‌ನ ಗೌರವ ಸದಸ್ಯರನ್ನಾಗಿ ನೇಮಿಸಿ ಗೌರವಿಸಿದರು. ಭಾರತೀಯ ರಾಷ್ಟ್ರಪತಿಯವರೂ ಈ ದೇಶಗಳನ್ನು ಸಂದರ್ಶಿಸುವುದು ಇದೇ ಮೊದಲು.

ದಶಂಬರದಲ್ಲಿ ಭಾರತದ ೧೬ನೆಯ ರಾಜ್ಯವಾದ ನಾಗಾಲ್ಯಾಂಡಿನ ಉದಯವಾಯಿತು. ಅಲ್ಲಿ ಮೊದಲಿದ್ದ ಆಡಳಿತ ಮಂಡಳಿಯು ಮಂತ್ರಿ ಮಂಡಳಿಯಾಗಿ ರೂಪಾಂತರ ಹೊಂದಿತು. ಜನವರಿ ೬೪ರಲ್ಲಿ ಅಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವುವು.

ಎರಡು ವರ್ಷಗಳಿಗೆ ಮೊದಲು ದಾಸ್ಯಮುಕ್ತವಾದ ಗೋವಾ, ದಮನ ಮತ್ತು ದಿವಿಗಳು ಪ್ರಜಾಸತ್ತಾತ್ಮಕ ಆಡಳಿತೆಯಲ್ಲಿ ಮಹತ್ವದ ಹೆಜ್ಜೆಯನ್ನಿಟ್ಟುವು. ಅಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು ಸ್ವತಂತ್ರ ಸದಸ್ಯರ ಸಹಕಾರದಿಂದ ಸರಕಾರ ರಚಿಸಿತು. ಗೋವೆಯ ಚುನಾವಣೆಗಳಲ್ಲಿ ಎಲ್ಲ ಸ್ಥಾನಗಳಿಗೂ ಸ್ಪರ್ಧಿಸಿದ್ದ ಕಾಂಗ್ರೆಸ್ಸು ಕೇವಲ ಒಂದೇ ಒಂದು ಸ್ಥಾನವನ್ನು ಗಳಿಸಿ ಅಪೂರ್ವ ಸೋಲನ್ನು ತನ್ನ ಇತಿಹಾಸದಲ್ಲೇ ಪಡೆಯಿತು.

ಚೀನೀಯರ ಆಕ್ರಮಣ ಭೀತಿಯು ಯಥಾಸ್ಥಿತಿಯಲ್ಲಿಯೇ ಉಳಿದಿದೆ. ಭಾರತವು ತನ್ನ ಸೈನಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಲ್ಲಿ ಮುಂದುವರಿಯುತ್ತಿದೆ. ಮಿತ್ರ ರಾಷ್ಟ್ರಗಳ ಸಹಾಯದಿಂದ ಸಂಯುಕ್ತ ವಿಮಾನ ತರಬೇತಿಯನ್ನು ತನ್ನ ವಾಯುಪಡೆಗೆ ಇತ್ತಿತು. ಆಕ್ರಮಣಕಾರರನ್ನು ಬಡಿದೋಡಿಸುವ ತನ್ನ ನಿರ್ಧಾರವನ್ನದು ಮತ್ತೊಮ್ಮೆ ಜಗಜ್ಜಾಹೀರು ಮಾಡಿತು. ಭಾರತೀಯ ವಿಮಾನ ಪಡೆಯ ಐವರು ವೈಮಾನಿಕಾಧಿಕಾರಿಗಳು ಅಪಘಾತಕ್ಕೆ ಗುರಿಯಾಗಿ ಮಡಿದು ಹೋದರು.

ದೇಶದಲ್ಲಿ ಹೆಚ್ಚಿನ ಅಶಾಂತಿ—ಗಂಡಾಂತರಗಳು ತಲೆದೋರದೆ ಇದ್ದರೂ ಚೀನಾ ಮತ್ತು ಪಾಕಿಸ್ತಾನಗಳ ಕುತಂತ್ರದಿಂದಾಗಿ ಆಗಾಗ ಕೀಟಲೆಗಳು ಕಾಣಿಸುತ್ತಲೇ ಇವೆ. ಇವುಗಳಿಗೆ ಬಗ್ಗದೆ ಸತ್ಯ, ನ್ಯಾಯ ಮತ್ತು ಧರ್ಮಗಳನ್ನು ಮುಪ್ಪುರಿಗೊಳಿಸಿ ಮುಂದುವರಿವ ದೃಢ ನಿಲುಮೆಯನ್ನು ಭಾರತೀಯರು ತಳೆದಿದ್ದಾರೆ. ಒಟ್ಟಿನಲ್ಲಿ ಇಡಿಯ ಲೋಕಕ್ಕೆ ೧೯೬೩ನೆಯ ವರ್ಷವು ಮಿಶ್ರಫಲವನ್ನು ನೀಡಿದೆಯೆಂದರೆ ಸರಿಯಾದೀತು.

ಅಲ್ಲಲ್ಲಿಯ ಸುದ್ದಿ ಸಾರ

ಪಂಚಾಯತ ಕಾರ್ಯದರ್ಶಿಗಳ ಸಂಘ—ಉಡುಪಿ ತಾಲೂಕು ಪಂಚಾಯತ್ ಕಾರ್ಯದರ್ಶಿಗಳು ಶ್ರೀ ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮ್ಮ ಸಂಘವೊಂದನ್ನು ಕಟ್ಟಿಕೊಳ್ಳುವ ನಿರ್ಧಾರ ಮಾಡಿದರು. ಪಂಚಾಯತ ವಿಸ್ತರಣಾಧಿಕಾರಿ ಶ್ರೀ ಸೋಮನಾಥ ಮತ್ತು ಪ್ರಕಾಶ ಸಾಪ್ತಾಹಿಕದ ಸಂಪಾದಕ ಶ್ರೀ ಎ. ಜೆ. ಆಲ್ಸೆಯವರು ಪ್ರಜಾಸತ್ತಾತ್ಮಕ ತಳಹದಿಯನ್ನು ರಚನಾತ್ಮಕ ಕಾರ್ಯಕ್ರಮಗಳ ಮೂಲಕ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಸಂಘಶಕ್ತಿಯು ಉಪಯುಕ್ತವಾಗುವುದೆಂದರು. ಬಳಿಕ, ಸಂಘವನ್ನು 'ಇಂಟಕ್'ನೊಂದಿಗೆ ಸೇರ್ಪಡೆಗೊಳಿಸುವುದೆಂದು ನಿರ್ಧರಿಸಿ ಶ್ರೀ ಕೆ. ಕೆ. ಪೈ ಅಧ್ಯಕ್ಷರಾಗಿ ಶ್ರೀ ಸಂಜೀವ ಎ. ಶೆಟ್ಟರು ಕಾರ್ಯದರ್ಶಿಯಾಗಿರುವ ಒಂದು ಸಮಿತಿಯನ್ನು ನೇಮಿಸಿಕೊಂಡರು.

ಮಂಗಳೂರಿನ ಕರ್ನಾಟಕ ಬ್ಯಾಂಕ್ ಲಿ.—ಸಂಸ್ಥೆಗೆ ೨೦ರೂ. ಮುಖ ಬೆಲೆಯ ೫೦ ಸಾವಿರ ಇಕ್ವಿಟಿ ಪಾಲುಗಳನ್ನು ನಮೂದು ಬೆಲೆಯಲ್ಲಿ ಮಾರಿ ರೂ. ೧೦ ಲಕ್ಷ ಹೊಸ ಬಂಡವಳವನ್ನು ಎತ್ತಲು ಅನುಮತಿ ದೊರಕಿದೆ. ಈ ಪಾಲುದಾರರಿಗೆ ಪ್ರತಿ ಎರಡಕ್ಕೆ ಒಂದರಂತೆ ಹಂಚಲಾಗುವುದು; ಉಳಿದ ೨೫ ಸಾವಿರವನ್ನು ಸಾರ್ವಜನಿಕರಿಗೆ ಮೀಸಲಿಡಲಾಗುವುದು ಎಂದು ಗೊತ್ತಾಗಿದೆ.

ಬಂಟ ಸಮಾಜದ ಸಂಘ—ಮೂಲ್ಕಿಯ ವಿಜಯಾ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಬಂಟ ಸಮಾಜದ ಸಂಘವೊಂದನ್ನು ಸ್ಥಾಪಿಸಲು ಸದ್ಯ ಒಂದು ಸಮಿತಿಯು ನಿಯುಕ್ತವಾಗಿದೆ. ಆರ್ಥಿಕ, ಶೈಕ್ಷಣಿಕ ಮತ್ತು ಧಾರ್ಮಿಕ ರಂಗಗಳಲ್ಲಿ ಪ್ರಗತಿ ಹೊಂದುವಂತೆ ಪ್ರಯತ್ನಿಸುವ ಉದ್ದೇಶವನ್ನು ಸಂಘವಿಟ್ಟುಕೊಳ್ಳುವುದು. ಮೂಲ್ಕಿ, ಹಳೆಯಂಗಡಿ, ಕಿನ್ನಿಗೋಳಿ, ಮುಂಡ್ಕೂರು ಮತ್ತು ಪಡುಬಿದ್ರಿಗಳಲ್ಲಿ ಸಮಾಜದ ಉಪಕೇಂದ್ರಗಳನ್ನು ರಚಿಸಿ ಸಂಘಟನೆಯನ್ನು ಬಲಪಡಿಸಲು ಸಂಘವು ನಿರ್ಧರಿಸಿದೆ. ಮೂಲ್ಕಿಯ ದೊಡ್ಡ ಮನೆಯಲ್ಲಿ ಸದ್ಯಕ್ಕೆ ವಿದ್ಯಾರ್ಥಿ ಭವನವು ತೆರೆಯಲ್ಪಟ್ಟಿರುತ್ತದೆ.

ವಾರ್ಷಿಕೋತ್ಸವ—ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. ೨೧ರಂದು ಡಿಪ್ಯುಟಿ ಕಮಿಷನರ್ ಶ್ರೀ ಕೆ. ಆರ್. ರಾಮಚಂದ್ರನ್ನರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಪಿ. ಶ್ರೀನಿವಾಸರಾಯರು ಸ್ವಾಗತ ಬಯಸಿದ ಬಳಿಕ ಶ್ರೀ ಪಿ. ನಾರಾ ಉಪಾಧ್ಯಾಯರು ಸ್ವಸ್ತಿವಾಚನ ಮಾಡಿದರು. ಶ್ರೀ ಯಂ. ವಾಸುದೇವ ರಾವ್ ಅವರು ವರದಿಯೋದಿದರು. ಶ್ರೀಮತಿ ರಾಮಚಂದ್ರನ್ ಬಹುಮಾನ ಹಂಚಿದರು. ವಿದ್ಯಾರ್ಥಿಗಳಿಂದ ನಾಟಕ ನೃತ್ಯಾದಿ ವಿವಿಧ ಮನೋರಂಜನಾ ಕಾರ್ಯಕ್ರಮಗಳು ನಡೆದುವು.

ನೋದಿಯವರಿಗೆ ಗೌರವಾರ್ಪಣೆ

ಕಾರ್ಕಳದಲ್ಲಿ ನೇತ್ರ ಚಿಕಿತ್ಸಾ ಕೇಂದ್ರವನ್ನು ತೆರೆದಿದ್ದ ನೇತ್ರದಾನ ಡಾ| ನೋದಿಯವರನ್ನು ಜನತೆಯು ಶ್ರೀ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಗೌರವಿಸಿ ಅವರಿಗೆ ಪಂಚಾಯತದ ಪರವಾಗಿ ಒಂದು ನಿಧಿಯನ್ನು ಅರ್ಪಿಸಿತು. ನೇತ್ರ ಚಿಕಿತ್ಸೆಗೊಳಗಾದ ರೋಗಿಗಳನೇಕರು ನೋದಿಯವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಕಾರ್ಕಳದ ಜನತೆ ತನಗಿತ್ತ ಸಹಾಯವನ್ನು ನೋದಿಯವರು ಪ್ರಶಂಸಿಸಿದರು. ಶ್ರೀ ಎಸ್. ಆರ್. ಆಚಾರ್ಯರು ಧನ್ಯವಾದವರ್ಪಿಸಿದರು.

ಶ್ರೀ ಕೆ. ವಿಠಲ ಶೆಣೈ—ದಕ್ಷಿಣಕನ್ನಡ ಜಿಲ್ಲೆಯ ವಿದ್ಯಾಧಿಕಾರಿಗಳಾದ ಶ್ರೀ ಕೆ. ವಿಠಲ ಶೆಣೈ ಅವರನ್ನು ಡಿ. ಪಿ. ಐ. ಆಫೀಸಿನಲ್ಲಿ ಎಸ್ಟಾಬ್ಲಿಷ್‌ಮೆಂಟ್ ವಿಭಾಗದ ಸೀನಿಯರ್ ಅಸಿಸ್ಟೆಂಟರನ್ನಾಗಿ ವರ್ಗ ಮಾಡಲಾಗಿಯೆಂದು ತಿಳಿಯುತ್ತದೆ.

ಕಣ್ಮರೆ—ವಿಖ್ಯಾತ ಸಮಾಜ ಕಾರ್ಯಕರ್ತ ಡಾ. ಎಂ. ಎಸ್. ಹೆಗ್ಡೆಯವರು ತಮ್ಮ ೪೮ ವರ್ಷ ಪ್ರಾಯದಲ್ಲಿಯೇ ಬಿಕರ್ನಕಟ್ಟೆ ನಿವಾಸದಲ್ಲಿ ಹೃದಯಸ್ತಂಭನದಿಂದ ತಾ. ೨೫ರಂದು ನಿಧನರಾದರು. ಡಾಕ್ಟರರು ಬಂಟ್ವಾಳ ಮತ್ತು ಶಾಣೆಮಂಗಳೂರುಗಳಲ್ಲಿ ತುಂಬ ದುಡಿದಿದ್ದರು. ದ. ಕ. ಜಿಲ್ಲೆಯ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯಾಗಿ ಇವರು ಸೇವೆ ಸಲ್ಲಿಸಿದರು. ದಿವಂಗತರಿಗೆ ತರುಣ ಪತ್ನಿ, ಮೂವರು ಹೆಮ್ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳನ್ನು ತಮ್ಮ ಹಿಂದೆ ಬಿಟ್ಟಿರುತ್ತಾರೆ.

ವೈದ್ಯಕೀಯ ರಿಫ್ರೆಶರ್ ಕೋರ್ಸ್

ಆಗಾಗ್ಗೆ ರಿಫ್ರೆಶರ್ ಕೋರ್ಸುಗಳನ್ನು ನಡೆಸುವುದರಿಂದ, ವೈದ್ಯಕೀಯ ವಿಜ್ಞಾನದಲ್ಲಾಗುತ್ತಿರುವ ಭಾರಿ ಪ್ರಗತಿಯನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು, ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಜಿ. ಡಿ. ವೇಲಿಯತ್‌ರವರು ಇಂದಿಲ್ಲಿ ಹೇಳಿದರು.

ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ನಿನ ಉಡುಪಿ ಶಾಖೆ ಹಾಗೂ ಕಸ್ತೂರ್ ಬಾ ಜನರಲ್ ಆಸ್ಪತ್ರೆಯ ಆಶ್ರಯದಲ್ಲಿ ಸ್ವಂತವಾಗಿ ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿರುವವರಾಗಿ ಏರ್ಪಡಿಸಲಾಗಿರುವ ಎರಡು ದಿನಗಳ ರಿಫ್ರೆಶರ್ ಕೋರ್ಸನ್ನು ಅವರು ಉದ್ಘಾಟಿಸುತ್ತಾ, ಇಂತಹ ರಿಫ್ರೆಶರ್ ಕೋರ್ಸುಗಳು ಪರಿಣತರೊಂದಿಗೆ ವೈದ್ಯರುಗಳು ಸಹಕಾರ ಬೆಳೆಸಿ ಪರಸ್ಪರ ಪ್ರಯೋಜನ ಪಡೆಯುವಂತೆ ಮಾಡುತ್ತವೆಂದರು.

ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಡೀನ್ ಡಾ. ಪಿ. ಕೃಷ್ಣ ರಾವ್‌ರವರು ಅಧ್ಯಕ್ಷತೆ ವಹಿಸಿದ್ದರು. ಈ ಕೋರ್ಸಿನಲ್ಲಿ ಅಲೋಪತಿ ವೈದ್ಯರೊಂದಿಗೆ ಆಯುರ್ವೇದಿಕ್ ವೈದ್ಯರುಗಳೂ ಭಾಗವಹಿಸುತ್ತಿದ್ದಾರೆಂದು ಅವರು ತಿಳಿಸಿದರು.

ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಧರ್ಮದರ್ಶಿಗಳಲ್ಲೊಬ್ಬರಾದ ಶ್ರೀ ರಮೇಶ್ ಪೈಯವರು ವಂದನಾರ್ಪಣೆ ಮಾಡಿದರು.

ನಿಧನ—ಶ್ರೀ ನಂದಳ್ಕೆ ಮುಟ್ಟಿಕಲ್ಲು ಶಾಡ್ಯ ಯಾನೆ ನಾಗಪ್ಪ ಶೆಟ್ರು ತಾ. 22-12-63ರಂದು 85ನೇ ವಯಸ್ಸಿನಲ್ಲಿ ನಿಧನರಾದರು. ಇವರು ರಾಷ್ಟ್ರೀಯ ಮನೋವೃತ್ತಿಯವರೂ ನ್ಯಾಯನಿಷ್ಠರೂ ಜನಪ್ರಿಯರೂ ಆಗಿದ್ದಲ್ಲದೆ ಆಪ್ತ ಕುಟುಂಬದ ಆದರ್ಶ ಯಜಮಾನರಾಗಿದ್ದರು.

ಉಡುಪಿಗೆ ಬೇಗನೇ ಬರಲಿದೆ!
ಮೊತ್ತಮೊದಲ ಬಾರಿಗೆ ಈ ಮಾದರಿಯ ಸರ್ಕಸ್!
ಆಯ್ದ ಸರ್ಕಸ್ ಆಟಗಾರರ ಪಂಗಡ ಮತ್ತು ಉತ್ತಮ ತರಬೇತಿ ಹೊಂದಿದ ಪ್ರಾಣಿಗಳ ಚಿಕ್ಕ ಸಮೂಹಗಳೊಂದಿಗೆ
ವಿಜಯ ಸರ್ಕಸ್
ದಿನ ಮತ್ತು ಸ್ಥಳವನ್ನು ನಿರೀಕ್ಷಿಸಿರಿ!

ಪುರಂದರದಾಸರ ಉತ್ಸವ

ಉಡುಪಿಯ ಸಂಗೀತ ಸಭೆಯ ಆಶ್ರಯದಲ್ಲಿ ಕರ್ನಾಟಕದ ದಾಸಶ್ರೇಷ್ಠ ಶ್ರೀ ಪುರಂದರದಾಸರ ನಾಲ್ಕುನೂರನೆಯ ಉತ್ಸವವು ವೈಭವೋಪೇತವಾಗಿ ತಾ. ೨೮, ೨೯ ಮತ್ತು ೩೦ರಂದು ನೆರವೇರಿತು. ವಿಕ್ಟೋರಿಯಾ ಯೂನಿಯನ್ ಜುಬಿಲಿ ಕ್ಲಬ್ಬಿನ ಆವರಣದಲ್ಲಿ ಹಾಕಿದ ಭವ್ಯವಾದ ಪುರಂದರ ಮಂಟಪದಲ್ಲಿ ಎಲ್ಲ ಕಾರ್ಯಕ್ರಮಗಳೂ ಸಾಂಗವಾಗಿ ನಡೆದುವು. ಸಂಗೀತ ಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈ ಅವರು ನೆರವಿಯನ್ನು ಸ್ವಾಗತಿಸುತ್ತ ಪುರಂದರದಾಸರು ಸಮಾಜವನ್ನು ಸನ್ಮಾರ್ಗಕ್ಕೆಳೆಯುವ ಸಂತ ಪರಂಪರೆಯಲ್ಲಿ ಅಗ್ರಗಣ್ಯರೆಂದು ಹೇಳಿ, ತಮ್ಮ ಉದ್ಯಮದಲ್ಲಿ ನೆರವಾದವರನ್ನು ನೆನೆದುಕೊಂಡರು. ಶ್ರೀ ಕಾಲಗಿ ಶೇಷಾಚಾರ್ಯರು ಸಂದೇಶಗಳನ್ನು ಓದಿದರು. ಉತ್ಸವವನ್ನು ಉದ್ಘಾಟಿಸಿದ ತಿರುವಾಂಕೂರಿನ ಯುವರಾಜ ಶ್ರೀ ಮಾರ್ತಾಂಡ ವರ್ಮರು ಪುರಂದರ ದಾಸರ ವೈರಾಗ್ಯ ಭಾವನೆಯನ್ನು ವಿವರಿಸಿ, ಭಗವದ್ಗೀತೆಯಲ್ಲಿ ಕೃಷ್ಣನು ನುಡಿದ 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂಬುದನ್ನು ಅವರು ಚರಿತಾರ್ಥಗೊಳಿಸಿದರೆಂದು ತಿಳಿಸಿದರು. ಪ್ರೊ. ಎಸ್. ಕೆ. ರಾಮಚಂದ್ರರಾಯರು 'ಪುರಂದರದಾಸರ ಜೀವನ' ಎಂಬ ವಿಷಯದ ಮೇಲೆ ಮಾತಾಡಿದರು. ಅಧ್ಯಕ್ಷಸ್ಥಾನದಿಂದ ರಾವ್‌ಬಹದ್ದೂರ್ ಬಿ. ವೆಂಕಟೇಶಾಚಾರ್ಯರು ಜ್ಞಾನ ಮತ್ತು ಭಕ್ತಿಯಿಂದ ಕೂಡಿದ ಶಕ್ತಿಯು ಯಾವಾಗಲೂ ದೇವರನ್ನು ತೋರಿಸಿ ಕೊಡುತ್ತದೆಂದು ದಾಸರು ತೋರಿಸಿದವರೆಂದರು. ಶ್ರೀ ಎಂ. ಜಿ. ಭಾಗವತರಿಂದ ಪುರಂದರ ದಾಸರ ಸಂಗೀತ ಕಾರ್ಯಕ್ರಮ, ಭದ್ರಗಿರಿ ಕೇಶವದಾಸರಿಂದ ಹರಿಕಥೆಗಳು ಕೊನೆಯಲ್ಲಿ ಜರಗಿ ಮೊದಲದಿನದ ಕಾರ್ಯಕ್ರಮಗಳು ಕೊನೆಗೊಂಡುವು.

ಎರಡನೆಯ ದಿನ ಅಧ್ಯಕ್ಷತೆಯನ್ನು ಶ್ರೀ ಸುಬೋಧ ರಾಮರಾಯರು ವಹಿಸಿದ್ದರು. ಶ್ರೀ ಸಂಪದ್ಗಿರಿರಾಯರು ಸಮಾಜ ಶಿಕ್ಷಕ ಪುರಂದರದಾಸ ಎಂಬ ಕುರಿತು ಮಾತಾಡಿದರು. ಮೈಸೂರು ಆಕಾಶ ವಾಣಿಯವರು ತಮ್ಮ ಕಲಾವಿದರಿಂದ ಪುರಂದರದಾಸರ ಕೀರ್ತನಾಗೋಷ್ಠಿಯನ್ನು ಏರ್ಪಡಿಸಿದ್ದರು. ರಾತ್ರಿ ಬಂಟ್ವಾಳದ ಶ್ರೀಕೃಷ್ಣ ಲಲಿತ ಕಲಾ ಪ್ರಸಾರಕ ಸಂಘದವರು "ದಾಸಶ್ರೇಷ್ಠ ಪುರಂದರದಾಸ" ಗೀತ ನಾಟಕವನ್ನು ಅಭಿನಯಿಸಿದರು. ಈ ಸಭೆಯಲ್ಲಿ ರಾಜ್ಯದ ವಿತ್ತಮಂತ್ರಿ ಶ್ರೀ ಬಿ. ಡಿ. ಜತ್ತಿಯವರೂ ಭಾಗವಹಿಸಿದ್ದರು. ಸಭೆಗೆ ಮೊದಲು ಶ್ರೀ ವೆಂಕಟರಮಣ ಹೊಗ್ರರ ಸ್ಯಾಕ್ಸೊಫೋನ್ ವಾದನವೂ ಇತ್ತು.

ಮೂರನೆಯ ದಿನದಂದು ಶ್ರೀ ರಂ. ರಾ. ದಿವಾಕರರ ಹಿರಿತನದಲ್ಲಿ ಶ್ರೀ ಯಮುನಾಚಾರ್ಯರು ಮತ್ತು ಶ್ರೀ ಸುಬೋಧ ರಾಮರಾಯರು ಪುರಂದರ ದಾಸರ ಸಂದೇಶದ ಕುರಿತಾಗಿ ಉಪನ್ಯಾಸವಿತ್ತರು. ಉತ್ಸವದ ಅಂಗವಾಗಿ ಪ್ರಕಟಿತವಾದ ಗ್ರಂಥಗಳ ಉದ್ಘಾಟನೆಯನ್ನು ಡಾ|| ಟಿ. ಮಾಧವ ಪೈಯವರು ಮಾಡಿದರು. ನಾಲ್ಕು ಶತಮಾನೋತ್ಸವದ ಅವಸರದಲ್ಲಿ ಏರ್ಪಡಿಸಲಾದ ಲೇಖನ ಮತ್ತು ಕೀರ್ತನಾ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಲಾಯಿತು. ರಾತ್ರಿ ಶ್ರೀ ಮಾಸ್ಟರ್ ವಿಠಲ್ ಮತ್ತು ಬಳಗದವರಿಂದ ನೃತ್ಯ ಕಾರ್ಯಕ್ರಮವೂ ನಡೆಯಿತು.

ಭವ್ಯವಾಗಿ ಅಲಂಕರಿಸಿದ ಪುರಂದರ ಮಂಟಪದಲ್ಲಿ ಮೂರು ದಿನಗಳ ಉತ್ಸವವು ಉಚ್ಚ ಮಾದರಿಯಲ್ಲಿ ನಡೆಯಿತು. ಉಳಿದವರಿಗೆ ಮಾದರಿಯೆನಿಸಿತ್ತು. ಉತ್ಸವವನ್ನು ಸಂಯೋಜಿಸಿದ ಸಂಗೀತ ಸಭೆ ಮತ್ತು ಉತ್ಸವ ಸಮಿತಿಗಳು ಒಂದು ಆದರ್ಶವನ್ನು ಹಾಕಿಕೊಟ್ಟವೆಂದರೆ ತಪ್ಪಲ್ಲ. ಉತ್ಸವ ಪ್ರಾರಂಭವಾಗುವುದಕ್ಕೆ ಹಲವು ದಿನ ಮೊದಲೇ ಶ್ರೀ ರಾಘವೇಂದ್ರ ಕೃಷ್ಣ ಭಟ್, ಕವಿರಾಜ ಎಂ. ಜಿ. ಶೆಣೈ ಮೊದಲಾದವರ ನೇತೃತ್ವದಲ್ಲಿ ಪ್ರತಿದಿನವೂ ಪುರಭಜನೆಯು ನಡೆದಿತ್ತು.

ಗೇಹರಾಜ್ಯದಲ್ಲಿ

ಹೊಸ ವರ್ಷದ ಕುಟುಂಬ ಯೋಜನೆ

"ಏನು, ಸಾಹೇಬ್ರು ಬರೋಕೆ ತಡವಾಯ್ತು?"

"ಏನಂದೆ? ತಡವೆಂದೆ? ಅಲ್ಲಾ ಗಂಟೆಯಾದ್ರು ಎಷ್ಟಾಯ್ತೂಂತ..."

"ರಿಸ್ಟ್‌ವಾಚ್ ಕಟ್ಟಿಕೊಂಡಿರೋದು ನೀವು; ಗಂಟೆ ಹೇಳೋದು ನಾನು! ಸರಿಯಾಯ್ತು ನಿಮ್ಮ ವಿಚಾರ."

"ಮತ್ತೆ ತಡವಾಯ್ತೂಂತ ಹೇಳಿದೆಯಲ್ಲಾ...."

"ಆಗ ತಾನೇ ಎಂಟು ಗಂಟೆಯ ಕೋಳಿ ಕೂಗಿಬಿಟ್ತು ನೋಡಿ. ಅದ್ರಿಂದ್ಲೇ ಹೇಳಿದೆ."

"ಎಂಟು ಗಂಟೆಯ ಕೋಳಿಯ? ಅದಾವ ಹೊಸ ಕೋಳಿಯಪ್ಪಾ..."

"ಅದೇ ನೋಡಿ, ಭೂ ಅಂತ ಕೂಗುತ್ತೆ...."

"ಓ ಬಲು ಜಾಣೆ ಕಣೇ ನೀನು ಆ ಸೈರನ್ನಿಗೂ ಒಂದು ಒಳ್ಳೆ ನಾಮಕರಣ ಮಾಡಿದೆ. ಆಗ್ಲಿ, ನಿನ್ನ ಕಿವಿಯಾದ್ರೂ ಸೂಕ್ಷ್ಮವಿದೆಯಲ್ಲ...."

"ಅದ್ರಿಂದೇನು ಲಾಭಾಂತ ದಧ್ಯ ತಡವೇಕಾಯ್ತೂಂತ. . . . ."

"ಅಲ್ಲ, ನಾನು ತಡ ಮಾಡ್ಕೊಂಡು ಬರ್ತೀನೆ, ಬೇಗ ಬರ್ತೀನೆ, ಯಾಕೇಂತ ಕೇಳೋಕೆ ನೀನು ಯಾರು? ಒಂದ್ವೇಳೆ ನಾನು ಯಾಕೇಂತಂದ್ರೂ ನಿನ್ಗೇನು ಗೊತ್ತಾಗುತ್ತೆ?"

"ಯಾಕೇಂತ ಕೇಳೋದೇ ತಪ್ಪ. ಗಂಟು ಬಿತ್ತು ಉರಿಮೋರೆಯಲ್ಲಿ. ಯಾಕೆ ಹಾಗಂತೀರಾ? ನಾನು ಕೇಳ್ಳೀಬಾರದೇ? ಸರಿಹೋಯ್ತು ಬಿಡಿ. ಇನ್ನು ಮುಂದೆ ಕೇಳೋದಿಲ್ಲ, ಆಯ್ತಲ್ಲ; ಇನ್ನಾದ್ರೂ ಆ ಗಂಟು ಮುಖದ ಮೇಲೆ ನಗೆ . . ."

'ಛೆ, ಛೇ, ಏನೇ ಹೀಗೆಲ್ಲಾ ಅನ್ತಿ? ನಾನು ಕುಶಾಲಿಗೆ ಅಂದ್ಬಿಟ್ರೆ ನೀನು ನಿಜವಂದೇ ಬಗೆಯುವುದೆ? ನನ್ಗೇಕೆ ನಿನ್ಮೇಲೆ ಸಿಟ್ಟು ಹೇಳು. ಏನೋ ಆಫೀಸು ಕೆಲ್ಸ ತುಂಬ ಇತ್ತು. ಸ್ವಲ್ಪ ತಡವಾಯ್ತು."

ಇವತ್ತು ರಜೆ ಅಲ್ವಾ? ಅದ್ರೂ ಕೆಲಸವೆ?"

"ಹೇಳೋಕೆ ರಜೆ, ಅನುಭವಿಸೋಕೆ ಸಜೆ"

"ಅಂದ್ರೆ..."

"ಏನನ್ನೋದು ಹೇಳು. ಒಂದುದಿನ ರಜೆ ಇದ್ದು ಬಿಟ್ರೆ ಅದರ ಭಾರ ಮತ್ತೆ ನಾಲ್ಕುದಿನ ತಲೇ ಮೇಲೆ. ಅದ್ರ ಮೇಲೆ ಈಗ ಇಯರ್ ಎಂಡ್ ನೋಡು..."

"ಓ, ಈಗ ಗೊತ್ತಾಯ್ತು. ನಾಳೆಯಿಂದ ಹೊಸ ವರ್ಷ ಆರಂಭವಲ್ವೆ? ಒಂದು ವರ್ಷದ ಯೋಜನೆಯನ್ನು ಕೃಷ್ಣಾರ್ಪಣ ಬಿಟ್ಟು, ಹೊಸ ವರ್ಷದ ಯೋಜನೆ ತಯಾರಿಸೋ ದಿನವಿಂದು."

"ಹ್ಞಾ, ಹೌದು ಅಂತೂ ಕಳೆದ ವರ್ಷದ ಯೋಜನೆಯನ್ನ ಹಾಗೇಬಿಟ್ಟು, ಮುಂದಿನ ವರ್ಷದ ಬಜೆಟ್ ತಯಾರಿಸಬೇಕು...."

ಸರೀನ್ನಿ, ಇನ್ನು ಮಲಗುವಾಗ ತಾಸು ಹನ್ನೆರಡೋ ಹದಿಮೂರೋ..."

"ನೋಡು ಈ ವರ್ಷದ ಬಜೆಟ್ನಲ್ಲಾದರೂ ಮೈಸೂರು ಬೆಂಗಳೂರು ಬೇಲೂರು ಹಳೆಯಬೀಡು ಯಾತ್ರೆಗೆ ಪ್ರೊವಿಜನ್ ಮಾಡಬೇಕೂಂತಿದ್ದ."

"ಕಳೆದ ವರ್ಷ ಇದ್ದ ಪ್ರೊವಿಜನ್ನು ಹಾಗೇ ಉಳೀತು."

"ಇರ್ಲಿ ಬಿಡು. ಪರಕೀಯ ಸಹಾಯವನ್ನು ಹೊಂದಿಕೊಂಡು ತಾನೇ ನಮ್ಮ ಬಜೆಟ್ಟು ಇರೋದು . . . ."

"ಸರೀನ್ನಿ. ನಮ್ಮ ಸಂಪಾದನೆ ನಮ್ಮ ಹೊಟ್ಟೆ ತುಂಬಿಸೋಕೇನೇ ಕಡಿಮೆಯಾಗಿರುವಾಗ ಮತ್ತೆ ಮಾಡುವುದಾದರೂ ಏನು?"

"ಬಟ್ಟೆಬರೆ ಈ ವರ್ಷ ದೀಪಾವಳಿಗೆ ಕೊಂಡದ್ದು. ಅದ್ರಿಂದ ಮುಂದಿನ ದೀಪಾವಳಿ ಬದ್ಲು, ಮತ್ತೊಂದು ಉಗಾದಿಗೆ ಕೊಂಡುಕೊಳ್ಳುವ, ಆಗದೆ?"

"ಅಂದ್ರೆ ರೂ. ೩೦೦ ಉಳಿಯುತ್ತೆಂತಾಯ್ತು"

"ಸರಿ, ಆದ್ರೆ ಬಟ್ಟೆ ರಿಪೇರಿಗೇಂತ ಒಂದೈವತ್ತು ಬೇಕಾಗಬಹುದೂನ್ನು."

"ಆಗ ಇನ್ನೂರೈವತ್ತು ಮಿಗುತ್ತೆ."

"ಅದನ್ನ ಟ್ರಿಪ್ಪಿಗೇಂತ ತೆಗೆದಿಡೋಣ,"

"ಅಷ್ಟೂ ಹಣ . . . ."

"ಮತ್ತೆ ಬೇಡಾಂತೀಯಾ?"

"ಇರ್ಲಿ ಬಿಡಿ. ಈ ಬಾರಿ ನಿರೀಕ್ಷಿಸಿದಷ್ಟು ಪರಕೀಯ ಸಹಾಯ ದೊರೆಯಲಿಲ್ಲ. ಅದ್ರಿಂದ್ಲೆ ನಮ್ಮ ಯೋಜನೆ ಮುಗ್ಗರಿಸುತ್ತ ಇದೆ. . . ."

"ಮುಂದಿನ್ಸಲ ಪ್ರಯತ್ನ ಮಾಡೋದು. ಸಹಾಯ ದೊರೆತ್ರೆ ಯೋಜನೆ ಪೂರ್ತಿ, ..."

"ಅಲ್ಲಾ ಈ ಸಹಾಯ ಪಡೆದದ್ದನ್ನ ಹಿಂದೆ ಕೊಡುವುದು ಯಾವಾಗಾಂತ.."

"ಅಲ್ಲಾ, ನಮ್ಮ ದೇಶವೇ ಆಚೆ ಈಚೆ ನೋಡದೆ ವಿದೇಶೀ ಸಾಲಾನ ತಂದು ದೇಶ ಪುನಾರಚನೆ ಮಾಡುತ್ತಿರುವಾಗ, ನಾವೂನೂ ಹಾಗೆಯೇ ಅನ್ನು ಮತ್ತೆ ಹಿಂದೆ ತೆಗೆದುಕೊಳ್ಳೋ ವಿಷಯ ಕೊಟ್ಟವರು ಯೋಚಿಸ್ಕೋಬೇಕಲ್ವೆ ನಾವ್ಯಾಕೆ ಚಿಂತೆ ಮಾಡ್ಬೇಕೂಂತ. . . ."

"ಇದು ವರೆಗೆ ನಮ್ಮ ಯೋಜನೆಗೆ ಎಷ್ಟು ಪರಕೀಯ ಸಹಾಯ ಬಿದ್ದಿದೆ?"

"ಬಿದ್ದಿರ್ಬೇಕು ಸದ್ಯ ಮೂರ್ನಾಲ್ಕು ಸಾವಿರ...."

"ಏನಂದ್ರಿ ಮೂರ್ನಾಲ್ಕು ಸಾವಿರ....!"

"ಏನು ಕಂಗಾಲಾಗಿ ಬಿಟ್ಟೆಯಾ?"

"ಅಲ್ಲ ಅದ್ರ ಬಡ್ಡಿ ಕೊಡೋಕೆ ನಿಮ್ಮ ಮೂರು ತಿಂಗ್ಳ ಪಗಾರ ಬೇಕಾಗಿರೋವಾಗ ಮತ್ತೆ ನಮ್ಮ ಯೋಜನೆ...!"

"ಅದ್ಕೇ ನೋಡು ಮೊದ್ಲೇ ಅಂದೆ ನಮ್ಮ ಯೋಜನೆ ನಿಂತಿರೋದು ಪರಕೀಯ ಸಹಾಯದ ಮೇಲೆ; ಮತ್ತು ಪಡೆದ ಸಹಾಯವನ್ನ ಮರಳಿಸೋ ಚಿಂತೆ ಬೇಡಾಂತ"

"ಛೆ, ಛೆ, ಅದೆಲ್ಲಾ ಹೇಗಾಗುತ್ತೆ! ದಾಸರು ಹಾಡಿಲ್ಲವೆ? ಮತ್ತೆ ಋಣ ಸೂತಕವು ಜನ್ಮ ಜನ್ಮಾಂತರ ಕೇಂತ"

"ಅವನೊಬ್ಬ ಕಿರುಬಾಯಿ.ದಾಸ"

"ಕಿರುಬಾಯಿದಾಸ ಅಲ್ವೆ, ಅವ ದಾಸವರ ಪುರಂದರದಾಸ."

"ಪುರಂದರನೋ ಕಿರಂದರನೋ ನನಗದರಿಂದೇನಂತೆ? ನೀನನ್ನೋದೇನು, ಋಣಸೂತಕದ ವಿಚಾರ ಅಲ್ವೆ? ನೋಡು ನಾವು ನಮ್ಮ ಯೋಜನೆಗ ಪಡೆದಿರೋದು, ಪಡೆಯೋಗು ಪರಕೀಯ ಸಹಾಯವನ್ನು; ಋಣವನ್ನಲ್ಲ."

"ಸಿಂಹದ ಚರ್ಮವನ್ನು ಹೊದ್ದ ಮಾತ್ರಕ್ಕೆ ಕತ್ತೆ ಸಿಂಹವಾಗುತ್ಯೆ?"

"ಇರ್ಲಿ ನೋಡು, ಮರುಜನ್ಮವಿದೇಂ ನಂಬಿದರೆ ತಾನೇ ಆ ಸೂತಕದ ಭಯ ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ಅಂದಿದ್ದಾನೆ ಕೌಟಲ್ಯ..."

"ಭಸ್ಮವನ್ನು ದೇಹದ ಮೇಲೆ ಚೆಲ್ಲಿದ್ರೆನೇ ಭೂತದ ಆಗಮನವಾಗುವುದಿಲ್ಲ- ಅದು ನಿಜ. ಆದ್ರೆ ನಮ್ಮ ಕುಟುಂಬ ಯೋಜನೆಗೂ ಇದಕ್ಕೂ ಸಂಬಂಧವೇನೂಂತ..."

"ಹ್ಹ ಹ್ಹ ಹ್ಹ....ಸರಿ ಹೋಯ್ತು ಬಿಡು. ನಿನ್ಗೆ ಸಂಸ್ಕೃತ ಅರ್ಥವಾಗುತ್ತೇಂತಾಯ್ತು. ನೋಡು ಲಜ್ಜೆಗೇಡಿತನ ಎಂಬೋ ಭಸ್ಮವನ್ನ ಸುರಿದುಕೊಂಡ್ರೆ ಮತ್ತೆ ಯಾವ ಸೂತಕದ ಭಯೂನು ನಮ್ಮ ಕುಟುಂಬ ಯೋಜನೆಗಿಲ್ಲ...."

"ಅಂದ್ರೆ ಮ ರ್ಯಾ ದೆ ಗೆ ಟ್ಟ ರೋ ದೂನ್ನಿ...."

"ಹಾಗೆ ಬೇಕಾದ್ರೂ ತಿಳಿದುಕೊ."

"ಅಂದ್ರೆ ಈ ಬಾರಿ ಪರಕೀಯ ಸಹಾಯ ನಿರೀಕ್ಷೆಯನ್ನು ಮಟ್ಟಿಸ್ಲಿ ಅದಕ್ಕೂ ಈ ಭಸ್ಮಕ್ಕೂ ಏನಾದ್ರೂ ಸಂಬಂಧವಿದೆ......'

"ಇಲ್ಲದೆ ಉಂಟೆ?"

• "ಸರಿ ಗೊತ್ತಾಯ್ತು ಬಿಡಿ ಮತ್ತೆ.... ನಿಮ್ಮ ಏನನ್ನಬೇಕೋ ನನಗೆ ತಿಳಿಯದು.

(೧೩ನೇ ಪುಟ ನೋಡಿರಿ)

ಪ್ರಜಾರಾಜ್ಯ ವಿಶೇಷ ಸಂಚಿಕೆ.

'ನವಯುಗ' ಪತ್ರಿಕೆಯ ವಿಜ್ಞಾಪನೆ

೧೯೬೪ನೆಯ ಜನವರಿ ೨೬ರಂದು ನಮ್ಮ ನಾಡಿನ ಇತಿಹಾಸದಲ್ಲಿ ಚಿರಸ್ಮರಣೀಯವಾದ ಒಂದು ದಿನವಷ್ಟೆ. ಅಂದು ಭಾರತೀಯ ಪ್ರಜಾಪ್ರಭುತ್ವವು "ಪ್ರಜಾರಾಜ್ಯ ದಿನ"ವನ್ನಾಚರಿಸಲಿದೆ. ಈ ಹದಿನಾರು ವರ್ಷಗಳ ಸಂತತ ಉದ್ಯೋಗದ ಪರಿಣಾಮವಾಗಿ ನಾಡಿನ ನಾನಾ ಭಾಗದಲ್ಲಿ ಜನಜೀವನವನ್ನು ಉತ್ತಮಗೊಳಿಸುವ ಅನೇಕ ಸಾರ್ಥಕ ಪ್ರಯತ್ನಗಳು ನಡೆಯುತ್ತಿವೆ ಎಂಬುದನ್ನು ನೀವು ಬಲ್ಲಿರಿ.

ಒಟ್ಟು ನಾಡಿನ ರಾಜಕೀಯ-ಸಾಮಾಜಿಕ ಮತ್ತು ಸಾಂಸ್ಕೃತಿಕ ಪುರೋಗಮನದ ಫಲಶ್ರುತಿ ಎಂಬಂತೆ ಈ ಶುಭದಿನದಲ್ಲಿ ಕನ್ನಡ ನಾಡಿನ ಜನಪ್ರಿಯ ಸಾಪ್ತಾಹಿಕವೆನಿಸಿದ "ನವಯುಗ"ವು ಒಂದು ವಿಶೇಷ ಸಂಚಿಕೆಯನ್ನು ಹೊರಡಿಸುವ ಹವಣಿಕೆಯಲ್ಲಿದೆ. ಈ ಸಂಚಿಕೆಯಲ್ಲಿ ನಾಡಿನ ಪ್ರಖ್ಯಾತ ವಿದ್ವಾಂಸರು ಬರೆದ ಲೇಖನಗಳನ್ನು ಅಳವಡಿಸಿಕೊಳ್ಳಲಾಗಿದೆ. ಚಿತ್ತಾಕರ್ಷಕವಾದ ಪ್ರಬಂಧ-ಕಥೆ ಕವನ-ನಾಟಕಗಳಿಂದೊಡಗೂಡಿದ **ಈ ವಿಶೇಷ ಸಂಚಿಕೆಯು ಕನ್ನಡ ನಾಡಿನ ಎಲ್ಲ ಭಾಗಗಳಲ್ಲಿಯೂ ಪ್ರಸಾರಿತವಾಗಲಿರುವುದರಿಂದ ನೀವು ಕೊಡುವ ಜಾಹೀರಾತಿಗೆ ಇದೊಂದು ಉತ್ತಮ ಸಾಧನವಾಗಿದೆ ಎಂದು ನಾವು ಬೇರೆ ಹೇಳಬೇಕಾಗಿಲ್ಲ.**

ದಯವಿಟ್ಟು ನಿಮ್ಮ ಜಾಹೀರಾತು ೧೧—೧—೧೯೬೪ರ ಒಳಗೆ ನಮ್ಮ ಕೈ ಸೇರುವಂತೆ ಉಪಕರಿಸಬೇಕಾಗಿ ಪ್ರಾರ್ಥನೆ.

ಇತಿ

ನಿಮ್ಮ ವಿಶ್ವಾಸಿ,

ಜಾಹೀರಾತು ವಿಭಾಗದ ಸಂಚಾಲಕ.

ADVERTISEMENT RATES

Full Page ...	Rs. 125/-	Back Cover Page ...	Rs. 500/-
Half Page ...	Rs. 65/-	Inside Ist Cover Page ...	Rs. 400/-
Quarter Page ...	Rs. 35/-	Inside 2nd Cover Page...	Rs. 300/-

Ordinary Full Page in Double colours . . Rs. 200/-

MECHANICAL DATA

Paper size ... 15" x 10" Size of type page ... 13" x 8"
(37·5 Cm. x 25 Cm.) Half Crown (32·5 Cm. x 20 Cm)

Date of Publication : 23—1—1964.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ

ಕ್ರಾಂತಿಕಾರಿ ಲೇಖನಿಯು

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟ್ಯಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಶ್ರೀ ಎಮ್. ವಿ ಹೆಗ್ಡೆಯವರ

ಪುಸ್ತಕಗಳು

ವಿಷ್ಣುವಿನ ದಶಾಪರಾಧ ಅರ್ಥಾತ್ ದಶಾವತಾರ	0=75
ಸ್ವರಾಜ್ಯ ವಿಜಯ	0=50
1949ರ ಬಿರುದಾವಳಿ	0=18
ಆ ಸುದ್ದಿ	0=25
ಹೈದರಾಬಾದ್ ವಿಜಯ	0=25
ಗಾಡಿಯ ಗಾಂಧಿ	0=18
ಆಗಲಿದ ಅಕ್ಕ ಸರೋಜಿನಿ	0=18
ನುಡಿಮುತ್ತುಗಳು ೧, ೨, ೩	0=56

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಗತಿಪಥದಲ್ಲಿ ಭಾರತ

ಪಿಂಜೋರಿನ ಎಚ್.ಎಂ.ಟಿ. ವಿಭಾಗ



ಚಂಡೀಗಢಕ್ಕೆ ಸಮೀಪದ ಪಿಂಜೋರಿನಲ್ಲಿರುವ ಹಿಂದುಸ್ಥಾನ್ ಮೆಶಿನ್ ಟೂಲ್ಸ್ ಕಾರಖಾನೆಯ ಹೊಸ ಉತ್ಪಾದನಾ ವಿಭಾಗದ ಒಂದು ವಿಹಂಗಮ ನೋಟ.

ಹಿಂದುಸ್ಥಾನ್ ಮೆಷಿನ್ ಟೂಲ್ಸ್ ಸಂಸ್ಥೆಯ ತೃತೀಯ ಸಾಧನ ಯಂತ್ರಗಳ ಕಾರ್ಖಾನೆಯನ್ನು ಪ್ರಧಾನ ಮಂತ್ರಿ ಶ್ರೀ ನೆಹರು ಅವರು ಅಕ್ಟೋಬರ್ ತಿಂಗಳಲ್ಲಿ ಉದ್ಘಾಟಿಸಿದರು. ಈ ಕಾರ್ಖಾನೆಯು, ಪಿಂಜೋರ್‌ನಲ್ಲಿದ್ದು ಸುಪ್ರಸಿದ್ಧ ಪ್ರಾಚೀನ ಮೊಗಲ ಉಪವನಗಳಿಗೆ ಸಮೀಪವಿದೆ. ಕಾರ್ಖಾನೆಯು ಒಟ್ಟು ೯೦೦ ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಸ್ಥಾಪನಗೊಂಡಿದೆ.

ಪಿಂಜೋರ್ ಕಾರ್ಖಾನೆಯ ಸ್ಥಾಪನೆಯ ಕಾರ್ಯವನ್ನು ಎರಡು ಹಂತಗಳಲ್ಲಿ ಮುಗಿಸುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಕಾರ್ಖಾನೆಯ ನಿರ್ಮಾಣ ಕಾರ್ಯ ಮುಗಿದಾಗ ಅದು ಪ್ರತಿ ವರ್ಷ ೧೦ ಕೋಟಿ ರೂಪಾಯಿ ಬೆಲೆ ಬಾಳುವ ಸಾಧನ ಯಂತ್ರಗಳನ್ನು ತಯಾರಿಸುವುದು.

ಕಾರ್ಖಾನೆಯ ನಿರ್ಮಾಣದ ಮೊದಲ ಹಂತದ ಕಾರ್ಯ ಈಗಾಗಲೇ ಆರಂಭವಾಗಿದೆ. ಈ ಅವಧಿಯಲ್ಲಿ ಅದು ೫ ಕೋಟಿ ರೂಪಾಯಿ ಮೌಲ್ಯದ ಸಾಧನ ಯಂತ್ರಗಳನ್ನು ಉತ್ಪಾದಿಸುವುದು ಮತ್ತು ಸುಮಾರು ೩,೦೦೦ ಮಂದಿಗೆ ಉದ್ಯೋಗ ಒದಗಿಸುವುದೆಂದು ನಿರೀಕ್ಷಿಸಲಾಗಿದೆ. ಎರಡನೆಯ ಹಂತದಲ್ಲಿ ೬,೦೦೦ ಮಂದಿಗೆ ದೊರೆಯುವುದು.

ಹೊಸ ಕಾರ್ಖಾನೆಯು ವಿದ್ಯುಚ್ಛಕ್ತಿ ನಿಯಂತ್ರಿತ ಸ್ಲಿಟ್ಟಿಂಗ್ ಮಿಲ್ಲಿಂಗ್ ಯಂತ್ರಗಳಿಂದ ಮೊದಲುಗೊಂಡು ಅನೇಕ ನಮೂನೆಯ ಮಿಲ್ಲಿಂಗ್ ಮೆಷೀನ್‌ಗಳನ್ನು, ಗಿಯರ್ ಕಟ್ಟಿಂಗ್ ಯಂತ್ರಗಳನ್ನು ಉತ್ಪಾದಿಸುವುದು. ಕಾರ್ಖಾನೆಯ ಪ್ರಧಾನ ಕಟ್ಟಡವು ೫೦ ಎಕರೆ ಪ್ರದೇಶವನ್ನು ಆವರಿಸಿದೆ. ಈ ಪ್ರದೇಶದಲ್ಲಿಯೇ ಕಾರ್ಖಾನೆಯ ಅನೇಕ ಉತ್ಪಾದನಾ ವಿಭಾಗಗಳಿವೆ. ಭವಿಷ್ಯದಲ್ಲಿ ಕಾರ್ಖಾನೆಯ ವಿಸ್ತರಣೆಯಿಂದ ಉತ್ಪಾದನೆಗೆ ಧಕ್ಕೆ ತಗಲದಂತೆ ಈ ಉತ್ಪಾದನಾ ವಿಭಾಗಗಳ ವಿನ್ಯಾಸವನ್ನು ರಚಿಸಲಾಗಿದೆ. ಕಾರ್ಖಾನೆಯ ಕುಲುಮೆಯನ್ನು ವಿಸ್ತರಣೆಗೆ ಅನುಕೂಲವಾಗುವಂತೆ ಆಧುನಿಕ ರೀತಿಯಲ್ಲಿ ನಿರ್ಮಿಸಲಾಗಿದೆ. ಕುಲುಮೆಯನ್ನು, ಲೋಹಗಳನ್ನು ಕರಗಿಸುವ ವಿದ್ಯುಚ್ಛಕ್ತಿ ಯಂತ್ರೋಪಕರಣಗಳಿಂದ ಸುಸಜ್ಜಿತಗೊಳಿಸಲಾಗಿದೆ. ಕುಲುಮೆಯು ೧೯೬೪ರಿಂದ ಕಾರ್ಯಾರಂಭ ಮಾಡುವುದೆಂದು ನಿರೀಕ್ಷಿಸಲಾಗಿದೆ.

ಕಾರ್ಖಾನೆಗೆ ಮತ್ತು ಕುಲುಮೆಗೆ ಅಗತ್ಯವಾದ ವಿದ್ಯುಚ್ಛಕ್ತಿಯನ್ನು ಭಾಕ್ರಾ ವಿದ್ಯುಚ್ಛಕ್ತಿ ಕೇಂದ್ರದಿಂದ ಪೂರೈಸಲಾಗುತ್ತಿದೆ.

ಸಾಧನಾ ಯಂತ್ರಗಳನ್ನು ನಿಯಂತ್ರಿಸುವವರಿಗೆ ತರಬೇತಿ ನೀಡುವ ಉದ್ದೇಶದಿಂದ ತರಬೇತಿ ಕೇಂದ್ರವೊಂದನ್ನು ಆರಂಭಿಸಲಾಗಿದೆ. ಈ ಕೇಂದ್ರವು ಪ್ರತಿಯೊಂದು ಪಾಳಿಯಲ್ಲಿ ೧೦೦ ಮಂದಿಗೆ ತರಬೇತಿ ನೀಡುವುದು. ಹೊಸ ಕಾರ್ಖಾನೆಯ ಸ್ಥಾಪನೆ ಕಾರ್ಯ ನಡೆದಿರುವಾಗ ಸಿಬ್ಬಂದಿಗೆ ತರಬೇತಿ ನೀಡಲು ಹೆಚ್ಚು ಅವಧಿ ತಗಲಬಹುದಾದ್ದರಿಂದ, ಮೊತ್ತ ಮೊದಲು ತರಬೇತಿ ಕೇಂದ್ರದಲ್ಲಿ, ೮೫೦ ಮಂದಿ ಎಂಜಿನಿಯರರು ಮತ್ತು ತಂತ್ರಜ್ಞರಿಗೆ ಕಾರ್ಖಾನೆಯ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ತರಬೇತಿ ಕೊಡಲಾಯಿತು. ಕಾರ್ಖಾನೆಗೆ ಹೊಂದಿಕೊಂಡು ಆಧುನಿಕ ಸೌಲಭ್ಯಗಳಿಂದ ಕೂಡಿದ ಒಂದು ಪುಟ್ಟ ನಗರವಿದೆ. ಈ ನಗರವು ಉದ್ಯಾನಗಳ ನಗರವಾಗುವಂತೆ ಅದರ ನಿರ್ಮಾಣ ಕಾರ್ಯದಲ್ಲಿ ವಿಶೇಷ ಜಾಗರೂಕತೆ ವಹಿಸಲಾಗಿದೆ.

ಮುಖ್ಯ ಕಾರ್ಖಾನೆಗೆ ಸಹಾಯಕವಾಗುವಂತೆ ಕೈಗಾರಿಕಾ ಎಸ್ಟೇಟ್ ಒಂದನ್ನು ನಿರ್ಮಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಅಯ್ಯೂಬ ಖಾನರ ಸಿಂಹಳ ಯಾತ್ರೆ

(೪ನೇ ಪುಟದಿಂದ)

ಕಾಪಾಡಲಿಲ್ಲ. ತಾನು ಕಾಲಿರಿಸಿದ ಮೊದಲ ದಿನವೇ ಅಯ್ಯೂಬಖಾನರು ಭಾರತದ ಶಸ್ತ್ರ ಸಂಗ್ರಹವು ಪಾಕಿಸ್ತಾನಕ್ಕೆ ಮಾತ್ರ ಗಂಡಾಂತರವಲ್ಲ ಅದರೊಡನೆ ಸಮಸ್ಯೆಯಿಟ್ಟುಕೊಂಡಿರುವ ಎಲ್ಲ ದೇಶಗಳಿಗೂ ಬೆದರಿಕೆಯದು ಎಂದು ಗುಡುಗಿದರು. ಭಾರತವು ನೆರೆಯ ರಾಷ್ಟ್ರಗಳೊಡನಿರುವ ಸಮಸ್ಯೆಗಳನ್ನು ಶಾಂತವಾಗಿ ಪರಿಹರಿಸಿಕೊಂಡ ನಿದರ್ಶನಗಳು ಅದರ ಇತಿಹಾಸದಲ್ಲಿಯೇ ಇಲ್ಲವೆಂದವರು ವಿವರಿಸಿದರು. ಈ ಹೇಳಿಕೆಯಿತ್ತಾಗ, ಅಯ್ಯೂಬಖಾನರು ತನ್ನ ಪಾಕಿಸ್ತಾನಕ್ಕೆ ಕೇವಲ ೧೬ ವರ್ಷಗಳ ಇತಿಹಾಸವಿರುವುದೆಂಬುದನ್ನೂ ಅದಕ್ಕೆ ಮೊದಲು ಭಾರತದ ಇತಿಹಾಸ ತನ್ನ ಇತಿಹಾಸವೇ ಆಗಿತ್ತು ಎಂಬ ಸತ್ಯ ಸಂಗತಿಯನ್ನು ಮರೆತಿರಬೇಕು!

ಚೀನಾವು ಸ್ವತಂತ್ರಗೊಂಡ ಬಳಿಕ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಭಾರತದ ೧೨,೦೦೦ ಚದರ ಮೈಲಿ ಭೂಮಿಯನ್ನು ಆಕ್ರಮಿಸಿದಾಗ ಚೀನಾವು ಭಾರತಕ್ಕೆ ಗಂಡಾಂತರಕಾರಿಯೆಂದು ಸಿಂಹಳ ಹೇಳಲಿಲ್ಲ. ಪಾಕಿಸ್ತಾನವು ಸೀಟೋ ಒಡಂಬಡಿಕೆಯಲ್ಲಿ ಸೇರಿಕೊಂಡು ಪಾಶ್ಚಾತ್ಯರಿಂದ ಶಸ್ತ್ರಾಸ್ತ್ರಗಳನ್ನು ಪಡೆದಾಗ ಅದು ನೆರೆಯ ರಾಷ್ಟ್ರಗಳಿಗೆ ಭಯೋತ್ಪಾದಕವೆಂದು ಅದು ಸಾರಲಿಲ್ಲ. ಹಾಗಿರುವಾಗ, ತನ್ನ ಮೇಲಾದ ಚೀನೀಯರ ನಗ್ನಾಕ್ರಮಣದ ವಿರುದ್ಧ ಭಾರತವು ಶಕ್ತಿ ಸಂಚಯ ಮಾಡುತ್ತಿರುವುದನ್ನು ಸಿಂಹಳವು ಅಪಸ್ವರವೆತ್ತಿಸುವುದು ಹೇಗೆ ಸಾಧ್ಯ? ಈ ಸತ್ಯವನ್ನು ಅಯ್ಯೂಬಖಾನರು ತಿಳಿಯದೆ ಹೋದರು.

ಒಂದು ಕಾಲದಲ್ಲಿ ಬ್ರಿಟಿಷರ ನೌಕಾ ರಾಣಿಯಾಗಿದ್ದ ಟ್ರಿಂಕೋಮಲಿ ಮತ್ತು ಕೊಲಂಬೊ ಬಂದರಗಳನ್ನು ಸಂದರ್ಶಿಸುವುದು ಪಾಕ್ ನಿಯೋಗದ ಸಲ್ಯನೆಯ ಗುರಿ. ಸಿಲೋನನ್ನು ಸಂದರ್ಶಿಸಿದ ವಿಭೂತಿ ಪುರುಷರು ತಾವಾಗಿಯೇ ಟ್ರಿಂಕೋಮಲಿಯನ್ನು ನೋಡುವ ಆಶಯ ಇತ್ತೀಚೆಗೆ ತೋರಿಸಿಲ್ಲ. ಉತ್ತರ ಮತ್ತು ಪೂರ್ವದಲ್ಲಿರುವ ತಮಿಳರು ವಿದೇಶಿಯರನ್ನು ತಮ್ಮೊಡನೆ ಬಂದು ನೋಡುವ ಅವಕಾಶವೀಯುತ್ತಿಲ್ಲವೆಂದು ಸಿಂಹಳ ಸರಕಾರವನ್ನು ದೂರುತ್ತಲೇ ಇದ್ದಾರೆ. ಆದರೂ ಒಬ್ಬ ಮಿಲಿಟರಿ ಪುರುಷರಾದ ಅಧ್ಯಕ್ಷ ಅಯ್ಯೂಬರು ಟ್ರಿಂಕೊಮಲಿಯನ್ನು ಸಂದರ್ಶಿಸುವ ಇಚ್ಛೆಯೇಕೆ ಪ್ರಕಟಿಸಿದರು? ಸಿಂಹಳವನ್ನು ಚೀನಾದ ರಕ್ಷಣೆಯಲ್ಲಿ ಉಪಯುಕ್ತಗೊಳಿಸುವ ಆಶಯ ಅವರಲ್ಲಿತ್ತೆ? ಪಾಕ್ ವಿಮಾನವಿಂದ ರತ್ಮಲಾನಾದಲ್ಲಿಳಿದ ಅಯ್ಯೂಬರು ಕೊಲಂಬೊ ಬಂದರದಿಂದ ನಿರ್ಗಮಿಸಿದುದು ಆಕಸ್ಮಿಕವೆ? ಅಯ್ಯೂಬರ ಮನಸ್ಸಿನ ಹಿಂದೆ ಏನಿತ್ತು ಯಾರೂ ಅರಿಯರು. ಇವರು ಅಶುಭವಾದ ದುರಾಲೋಚನೆಯಿಂದ ಪ್ರೇರಿತರಾಗಿರುವರಾದರೆ, ಅವರಿಗೆ ಉತ್ತರವೀಗ ತಾನೇ ಸಿದ್ಧವಿದೆ. ಚೀನಾದೊಡನೆ ನಿಕಟ ಸೈನಿಕ ಒಡಂಬಡಿಕೆ ಮಾಡಿಕೊಂಡರೆ, ಹಿಂದೂ ಮಹಾ ಸಾಗರದ ಪಥದಲ್ಲಿಯೇ ಯಾರೂ ಬಯಸದ ಎಲ್ಲರೂ ತಡೆಯಲಿಚ್ಛಿಸುವ ಮಹಾಸಂಗ್ರಾಮವೇ ತೊಡಗಬಹುದು ಎಂದು ಅಮೆರಿಕೆಯ ಏಳನೆಯ ರಣನೌಕಾ ವಿಭಾಗವು ಸರಿಯಾಗಿಯೇ ಹಿಂದೂ ಸಾಗರದಲ್ಲಿ ಕಾರುಬಾರಿಕ್ಕೆ ತೊಡಗುತ್ತಲಿದೆ. ಇದು ಕುತಂತ್ರಿ ಪಾಕಿಸ್ತಾನಿ ರಾಜಕಾರಣಿಗಳಿಗೆ ಎಚ್ಚರಿಕೆಯ ಮುನ್ಸೂಚನೆ.

ನೆರೆಯ ರಾಷ್ಟ್ರಗಳೊಂದಿಗೆ ವೈರಭಾವನೆಯನ್ನು ತಾಳಿ ಅದರ ವಿಷಗಾಳಿಯನ್ನು ಇತರತ್ರ ಹಾಡುವ ಪಾಕ್‌ನಿಯೋಗದ ಕುಯುಕ್ತಿಗಳಿಗೆ ಸಿಂಹಳವು ಬಗ್ಗಲಿಲ್ಲ. ಪಾಕ್ ನಾಯಕ ಮಣಿಗಳು ಪರಮಸುಖಕ್ಕೆ ಮುಳುಗಿ ಬಳಿಯುವ ಸಾಹಸವೂಡಿ, ತಮ್ಮ ಬಾಯಿಮುಖಗಳನ್ನು ಕೊಳಕು ಮಾಡಿಕೊಂಡರು. ಅವರ ಅಸಾಂಗೋಪಾಂಗ ಮಕ್ಕಳಾಟದ ಇಸ್ಪೀಟಿನ ಮನೆಯಾಯಿತು. ರಾಜಕಾರಣವೆಂದರೆ ಹುಡುಗಾಟವಲ್ಲ ವೆಂಬುದು ಈ ದುರಭಿಮಾನಿಗಳಿಗೆ ಎಂದು ಮನವರಿಕೆಯಾದೀತು?

— —

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ಹಿ ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ

ಪ್ರೊಪ್ರೈಟರ್ ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ 66

READ & ADVERTISE IN **NAVAYUGA WEEKLY**

ಕುಡುಗೋಲು ಮತ್ತು ಸುತ್ತಿಗೆಗಳ ಪಾಠ

(೯ನೇ ಪುಟದಿಂದ)

ವಿಹಾರವೇ ಇರಲಿ, ಕ್ರಿಸ್ತೀಯ ಇಗರ್ಜಿಗಳೇ ಇರಲಿ, ಯಾವ ಸ್ಥಳವಾದರೂ ಸರಿ, ಬಾಲಗೃಹಗಳನ್ನಲ್ಲಿ ತೆರೆಯಲಾಯಿತು. ಕಮ್ಯೂನ್" ಎಲ್ಲೆಲ್ಲಿ ಇದೆಯೋ ಅಲ್ಲಿ, ಬಾಲಗೃಹವೂ ಇದೆ. ರಾತ್ರಿ ಹಗಲೆನ್ನದೆ ದುಡಿದು ಕಟ್ಟಡಗಳನ್ನು ಕಟ್ಟಿ, ಬಾಲಗೃಹಗಳನ್ನು ನಿರ್ಮಿಸಲಾಗಿತ್ತು. ಅಲ್ಲಿ ವೃದ್ಧೆಯರು ಹಾಗೂ ಅಸಕ್ತ ಅಬಲೆಯರು ಆ ಮಕ್ಕಳ ಲಾಲನೆ ಪಾಲನೆಗಳನ್ನು ನೋಡಿಕೊಳ್ಳುವರು ಸ್ಥಿತಿ ಅಲ್ಲಿಯವರೆಗೆ ಕರುಣಾಜನಕವಿದೆ ೧೯೫೮ರಲ್ಲಿ ಸರಕಾರವು ಹೊಸ ಆಜ್ಞೆಯನ್ನಿತ್ತು, ಆಡಳಿತ ಸೂತ್ರವು ಜಾಗ್ರತೆಯಿಂದಿರ ಬೇಕೆಂದು ಎಚ್ಚರಿಸಿತು ಬಾಲಗೃಹವು ಬಾಲಕರನ್ನು ತಿದ್ದಲಿರುವ ಪ್ರಪ್ರಥಮ ಶಾಲೆ ಅದು ಮಕ್ಕಳಲ್ಲಿರುವ "ತಾಯಿ—ತಂದೆ"ಯೆಂಬ "ಅಂಧಶ್ರದ್ಧೆ"ಯನ್ನು ಬಿಡಿಸಲಿಕ್ಕಾಗಿ ಇರುವುದು. ಆ ರೀತಿಯ ಸಂಕೋಚ ಮನೋಭಾವನೆ" ದೂರವಾಯಿತೆಂದರೆ ಆ ಪರಂಪರೆಗೆ ಸಾಮೂಜಿಕ ಜೀವನದಲ್ಲಿ ಅನೇನೂ ಕಷ್ಟವಾಗುವುದಿಲ್ಲ. ಆ ವಿಷಯದ ಮೇಲೆ ಪೂರ್ಣ ಗಮನ ಸಲ್ಲಿಸ ಬೇಕೆಂದು ಸರಕಾರ ಸ್ಪಷ್ಟ ಆಜ್ಞೆ ಇತ್ತಿತು.

ಬಾಲಗೃಹದ ನಂತರ ಬಾಲೋದ್ಯಾನ ಇದೆ. ಬಾಲ ಮನಸ್ಸಿನ ಮೇಲೆ ಬೀಳುವ ಸಂಸ್ಕಾರವು ಮುಂದಿನ ಜೀವನದಲ್ಲಿ ಪ್ರಯೋಜನಕ್ಕೆ ಬರುತ್ತದೆ ಆದುದರಿಂದಲೇ ಕಮ್ಯೂನಿಸ್ಟರೂ ಅದನ್ನು ಗಮನದಲ್ಲಿಟ್ಟುಕೊಂಡಿದ್ದಾರೆ ೧೯೬೧ರ ವರೆಗೆ ಚೈನಾದಲ್ಲಿ ಏಳು ಲಕ್ಷ ಬಾಲೋದ್ಯಾನಗಳು ತೆರೆಯಲ್ಪಟ್ಟವೆ ಹತ್ತು ಸಹಸ್ರಕ್ಕಿಂತಲೂ ಅಧಿಕ ಶಿಕ್ಷಕರಿಗೆ ತರಬೇತಿ ಕೊಡಲಾಗಿರುತ್ತದೆ. 'ತಾಯಿ-ತಂದೆ" ಎಂಬ 'ಸಂಕೋಚ ಭಾವನೆ"ಯನ್ನು ದೂರವಾಗಿಸಿದ ಮೇಲೆ ಬಾಲೋದ್ಯಾನ ಶಿಕ್ಷಣ ಪದ್ಧತಿಯಲ್ಲಿ 'ನಮ್ಮ ಮನೆ" ಮುಂತಾದ 'ಸ್ವಾರ್ಥಪೂರ್ಣ ಮನೋಭಾವನೆ"ಯನ್ನು ದೂರವಾಗಿಸಿ ಅವುಗಳ ಸ್ಥಾನದಲ್ಲಿ ಕಮ್ಯೂನಿಸ್ಟ್ ಪಕ್ಷ ಹಾಗೂ ಪಕ್ಷದ ಪ್ರಮುಖರ ಮೇಲೆ ಭಕ್ತಿ ಮತ್ತು ಪ್ರೇಮ ಭಾವನೆಗಳನ್ನು ತುಂಬಿಸಿಬಿಟ್ಟು ಸಾಮೂಹಿಕ ಜೀವನಕ್ಕೆ ಸಿದ್ಧಗೊಳಿಸಬೇಕಾಗಿರುತ್ತದೆ. ಬಾಲೋದ್ಯಾನದಲ್ಲಿ ಬಾಲಕ-ಬಾಲಕಿಯರಿಗೆ ಲಾಲನೆ-ಪಾಲನೆ, ಆಟ-ಪಾಟ, ತಿಂಡಿ-ತೀರ್ಥ, ಓದು-ಬರಹ -- ಇತ್ಯಾದಿಯೇನೋ ಇವೆ, ಸರಿ. ಆದರೆ ಮಕ್ಕಳ ಮನಸ್ಸಿನಲ್ಲಿರುವ ಸ್ವಾಭಾವಿಕ ಸಂಸ್ಕಾರವನ್ನು ಪರಿಸಿ ಹೊಸತನ್ನು ಸ್ಥಾಪಿಸಲು ಅಲ್ಲಿ ಪ್ರಯತ್ನ ನಡೆಯುತ್ತಿದೆ, ಆ ಎಳೆ ಮಕ್ಕಳಿಗೆ ಬಾಯಿ-ಪಾಠ ಮಾಡಿಸಲಾಗುತ್ತಿರುವ ಹಾಡಿನ ಪಲ್ಲವಿಯೇ ಈ ರೀತಿ ಇದೆ — ಬಾಲೋದ್ಯಾನ ಎನ್ನ ಮನೆ ಶಿಕ್ಷಕಿಯೇ ಎನ್ನ ಮಾತೆ || ಆಟಗಳು ಕೂಡಾ ಅದೇ ರೀತಿಯವಿವೆ. ಮಕ್ಕಳ ಮನಸ್ಸಿನಲ್ಲಿ ಕಮ್ಯೂನಿಸ್ಟ್ ಭಾವನೆಯನ್ನು ತುಂಬಿಸುವದೇ ಅವರ ಗುರಿ ಇದೆ. ಕಣ್ಣು ಮುಚ್ಚಾಲೆಯಲ್ಲಿ ಮಾವೋತ್ಸೆ ಟುಂಗನನ್ನು ಕಂಡು ಹಿಡಿಯುವ ಹೊಸ ರೀತಿಯ ಆಟವನ್ನು ಆಡಿಸಲಾಗುತ್ತದಲ್ಲಿ ಹಿಂದೆಯೆ ತಿಳಿಸಿರುವಂತೆ ಕಲಿಸುತ್ತಿರುವ ಹಾಡುಗಳೂ ಕೇವಲ ಮಾವನ ಪ್ರಶಂಸೆ-ಮಾವ ತೋರಿಸಿದನದೋ ಬೆರಳು। ಪಚ್ಚೆ ಪಚ್ಚೆಯಾದುವು ಪರ್ವತಗಳು ಮಾವ ತೋರಿಸಿದನದೋ ಬೆರಳು। ನಿರ್ಮಲವಾದುವದೋ ನದಿಗಳು ಕಾಗದದ ಮೇಲೆ ಹಾಕಬನದೋ ಗೀಟು ಬಂದುವದೋ ರಸ್ತೆ ಹಳ್ಳಿಗಳ ಸಾಲೋ ಸಾಲು.

ಬಾಲೋದ್ಯಾನದ ನಂತರ ಪ್ರಾಥಮಿಕ ಪಾಠ ಶಾಲೆ, ಆದರ ಭಾರವೆಲ್ಲಾ ಕಮ್ಯೂನ್‌ಗಳ ಮೇಲೆ ಅಂದರೆ ಅವುಗಳ ನಿಯಂತ್ರಣ ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿದ್ದು ಕಮ್ಯೂನಿಸ್ಟ್ ಪಕ್ಷದ ಸದಸ್ಯರೋ ಅಲ್ಲಿ ಶಿಕ್ಷಕರಾಗಿರುತ್ತಾರೆ ಅಧ್ಯಾಪಕರಿಗೆ ಪಕ್ಷದ ಸೈದ್ಧಾಂತಿಕ ಜ್ಞಾನ ಅತ್ಯಾವಶ್ಯಕ ಶಿಕ್ಷಕರು ಪಕ್ಷದ ಆಜ್ಞೆಗಳಿಗೆ ತಲೆ ತಗ್ಗಿಸಿಕೊಂಡಿರಲೇ ಬೇಕು. ಅವರ ಕರ್ತವ್ಯವಾದರೋ ಬಾಲಕರ ನರನರಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಧೋರಣೆಗಳನ್ನು ತುಂಬಿಸುವದು.

ಕಮ್ಯೂನಿಸ್ಟೇತರ ಅಧ್ಯಾಪಕನ್ಯಾವನಾದರೂ ಇದ್ದಲ್ಲಿ ಕಮ್ಯೂನಿಸ್ಟ್ ಉಪಾಧ್ಯಾಯರ ಗೃದ್ಧ ದೃಷ್ಟಿ ಯಾವಾಗಲೂ ಆ ಕೊಳ್ಳಿಯ ಮೇಲೆಯೇ ಇರುತ್ತದೆ; ವಿದ್ಯಾಭ್ಯಾಸಕ್ಕೆ ಅಲ್ಲಿ ಅಷ್ಟು ಪ್ರಾಮುಖ್ಯತೆ ಇರುವದಿಲ್ಲ. ಶಾಲೆಗಳಲ್ಲಿ ಮಾನಸಿಕ ವಿದ್ಯೆಗಿಂತಲೂ ದೈಹಿಕ ವಿದ್ಯೆಯತ್ತ ಅಲ್ಲಿ ಗಮನ ಹೆಚ್ಚು ಕೊಡಲಾಗುತ್ತಿದೆ. ಶಾಲೆಗಳನ್ನು ಮಾದುವದರಿಂದ ಒಡಿದು ಗದ್ದೆ ಮಾಡುವದನ್ನೂ ಹೇಳಿಕೊಡಲಾಗುತ್ತಿದೆ. ತಾವು ನಾಟಿಸಿರುವ ಕೆಂಪು ಧ್ವಜವು ಭದ್ರವಾಗಿರಬೇಕೆಂದು ಭಾವೀ ಜನಾಂಗವನ್ನು ಅದಕ್ಕಾಗಿ ನಿರ್ಮಾಣಮಾಡುವದು ಮಾವೋ ಕರ್ತವ್ಯ ಇರುತ್ತದೆ.

ಇಲ್ಲಿ ಕ್ಷಣ ಕಾಲ ತಂಗಿ ಸ್ವಲ್ಪ ಯೋಚಿಸಬೇಕಾಗುತ್ತದೆ ಚೈನಾವು ಹೇಳಿ ಕೇಳಿ ಸಮಾಜವಾದೀ ರಾಷ್ಟ್ರ. ಭಾರತವನ್ನೂ ಸಮಾಜವಾದೀ ಮಾದರಿಯ ರಾಷ್ಟ್ರವೆನ್ನಲಾಗುತ್ತಿದೆ, ಪ್ರಚಲಿತ ಪರಿಸ್ಥಿತಿಯಲ್ಲಿ ಈ ರಾಷ್ಟ್ರಗಳೆರಡರ ನಡುವಣ ವ್ಯತ್ಯಾಸವನ್ನು ಹಿಂದಿನ ಸಂಚಿಕೆಗಳಿಂದ ತಿಳಿದುಕೊಂಡಿರುವೆವು ಇಲ್ಲೀಗ ಭಾವೀ ಜನಾಂಗದ ಕುರಿತು ನಾವು ಯೋಚಿಸಬೇಕಾಗಿರುತ್ತದೆ. ರಷ್ಯಾದಲ್ಲಿ ಕಮ್ಯೂನ್ ಪದ್ಧತಿ ಇದೆಯಾದರೂ ಬೃಹತ್ ಪ್ರಮಾಣದಲ್ಲಿರದೆ ಅಲ್ಲಿ ಇಲ್ಲಿ ಪರೀಕ್ಷಾ ಪ್ರಮಾಣದಲ್ಲಿದೆ ಚೈನಾದಲ್ಲಿ ಹಾಗಲ್ಲ. ಎಲ್ಲೆಲ್ಲೂ ಕಮ್ಯೂನ್‌ಗಳೇ ಇವೆ. ಭಾರತವೂ ಅದಕ್ಕೆ ಹೊರತಾಗಿರುವದಿಲ್ಲ. ಅದೃಷ್ಟವಶಾತ್ ನಮ್ಮ ನಾಡಿನಲ್ಲಿ ಕಮ್ಯೂನ್ ಪ್ರಯೋಗಕ್ಕೆ ಬಂದಿರುವದಿಲ್ಲ. ಆದರೆ ಅದು ಬೇರೆ ರೂಪದಲ್ಲಿ ಸ್ವಲ್ಪ ಮುಖ ಕಾಣಿಸುತ್ತಿದೆ. ಅದು ರಾಜ್ಯಾಡಳಿತ ಕೈಕೊಳ್ಳಲ್ಪಟ್ಟಿರುವ ಸಹಕಾರೀ ಕೃಷಿಪದ್ಧತಿ ಇರಬಹುದು, ಅಥವಾ ವಿನೋಬಾಜೀಯವರ ಕೃಷಿಪದ್ಧತಿ ಇರಬಹುದು. ಅವು ಚೈನಾದಲ್ಲೇ ಆಗುತ್ತಿರುವಂತೆ ನಷ್ಟದೇವತೆಯ ನರ್ತನಾರಂಗವಾಗಿರುತ್ತದೆ.

ಭಾರತದಲ್ಲಿ ಬಾಲಗೃಹಗಳೂ ಅಷ್ಟೇನೂ ಇರುವದಿಲ್ಲ ಇಲ್ಲಿಯ ಬಾಲಗೃಹಗಳಲ್ಲಿ ಶಿಶುಗಳನ್ನು ಬಿಡುವವರು ಕೃಷಿಕರು ಅಥವಾ ಕಾರ್ಮಿಕರಿರುವದಿಲ್ಲ, ಬದಲು ಶ್ರೀಮಂತರೇ ಇದ್ದಾರೆ ಇಲ್ಲಿಯ ಮಕ್ಕಳಲ್ಲಿರುವ 'ತಾಯಿ-ತಂದೆ" ಭಾವನೆಯನ್ನು ತೊಡೆದುಹಾಕಲು ಪ್ರಯತ್ನಿಸುವವರು ಧನಾಢ್ಯರೇ ಇದ್ದಾರೆ. ಹಾಗೆಯೇ ಇನ್ನೊಂದು ರೀತಿಯ ಬಾಲಗೃಹಗಳನ್ನು ಕಾಣಬಹುದು. ಅದನ್ನೇ ಅನಾಥಾಲಯವೆನ್ನಲಾಗುತ್ತದೆ. "ಮಾತಾ-ಪಿತೃ" ಭಾವನೆ ಮಾತ್ರ ಬಹಳ ಸಹಜ ಹಾಗೂ ನೈಸರ್ಗಿಕವೇ ಇರುತ್ತದೆ ಹಾಗೆಯೇ ಬಾಲೋದ್ಯಾನಗಳು ಕೂಡಾ ಶ್ರೀಮಂತರ ಬಾಲಕ-ಬಾಲಕಿಯರಿಗಾಗಿ ಇವೆ. ಇನ್ನೊಂದು ಅನಾಥಾಲಯವೆಂಬ ಅಭಿನಾಮದಲ್ಲಿದೆ. ಶಿಕ್ಷಣ ಕ್ರಮದಲ್ಲಿ ಸುಧಾರಣೆ ಬೇಕಾದರೂ ಅದು ಭಾರತೀಯವೇ ಆಗಿರಬೇಕು. ಇದರಿಂದ ಚೈನಿ (ಕಮ್ಯೂನಿಸ್ಟ್) ಬಾಲಕರು ಹೇಗೆ ಬೆಳೆಯುತ್ತಿದ್ದಾರೆ, ನಮ್ಮ ಬಾಲಕರು (ದಾರಿ ತಪ್ಪಿಯಾದರೂ) ಹೇಗೆ ಬೆಳೆಯುತ್ತಿದ್ದಾರೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಹಾಗಿರುವಾಗ ಕಮ್ಯೂನಿಸ್ಟ್ ಚೈನಿ ಕಪಿಚೇಷ್ಟೆಯೆದುರಿಗೆ ನಮ್ಮ ನಿರ್ಮಲ ಹೃದಯದ ಬಾಲಕರನ್ನು ಕಳುಹಿಸಿದಲ್ಲಿ ವಾಸ್ತವಿಕ ದೃಷ್ಟಿಯಿಂದ ಏನಾದೀತು?

— ಶ್ರೀ ಶಿವಶಂಕರ್, ಮದ್ರಾಸು.

ಅಮೃತ ಬಿಂದು

ಆರೋಗ್ಯವನ್ನು ಡಾಕ್ಟರಿಗೆ ಫೀಜು ತೆತ್ತು ಪಡೆಯಲೆತ್ನಿಸುವುದಕ್ಕಿಂತಾ ಬಯಲಿನಲ್ಲಿ ಓಡಾಡಿ ಆರೋಗ್ಯವನ್ನು ಹುಡುಕುವುದು ಮೇಲು

o o o o

ಸಂತೋಷದ ಸುಗ್ಗಿಯ ಸಂದರ್ಭದಲ್ಲಿ ಗತಿಸಿದ ದುಃಖದ ನೆನಪನ್ನು ಮಾಡಿಕೊಳ್ಳುವುದಕ್ಕಿಂತಾ ಹೆಚ್ಚಿನ ದುಃಖ ಬೇರಿಲ್ಲ,

o o o o

ಊಟದಿಂದೆದ್ದವನಂತೆ ಜೀವನದಿಂದೇಳಬೇಕು. ಹೆಚ್ಚು ಕುಡಿದು ಮತ್ತನಾಗಿರಲೂ ಬಾರದು. ಕುಡಿಯದೆ ಬಾಯಾರಿರಲೂ ಕೂಡದು

o o o o

ಪ್ರಾತಃಕಾಲದ ಒಂದು ಘಂಟೆಯ ಸಮಯವನ್ನು ವ್ಯರ್ಥ ಕಳಕೊಂಡರೆ ಇಡೀ ದಿನದ ಸಮಯ ಅದನ್ನು ಹುಡುಕುವುದರಲ್ಲಿ ಕಳೆಯುವುದು.

o o o o

ಔತಣ ಆನಂದದ ಸ್ಥಾನಕ್ಕೆ ಹೋಗುವುದಕ್ಕಿಂತಾ ದುಃಖ, ಸಂತಾಪಗಳಿರುವಲ್ಲಿಗೆ ಹೋಗುವುದು ಲೇಸು. ಎರಡನೆಯದರಲ್ಲಿ ಹೃದಯ ಶುದ್ಧತೆ ಹೆಚ್ಚುತ್ತದೆ

o o o o

ಒಂದೇ ನೇರ ಬಿಲವಿರುವ ಇಲಿ ಬೇಗ ಹಿಡಿಯಲ್ಪಡುತ್ತದೆ. ಒಂದೇ ಮಾರ್ಗದ ಆದಾಯವಿರುವವ ಬೇಗ ಕಷ್ಟಕ್ಕೊಳಗಾಗುತ್ತಾನೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ



ಆದರ್ಶ ಚರಿತೆಗಳು-೧೬

ಮಹರ್ಷಿ ದೇವೇಂದ್ರನಾಥ ಠಾಕೂರು

—ಶ್ರೀ ಎಸ್. ಎಂ. ಶೆಟ್ಟಿ ಶಿಮುಂಜೆ ಪರಾರಿ

ಬಂಗಾಲದ ಸುಪ್ರಸಿದ್ಧ ಠಾಕೂರ್ ಪರಿವಾರದಲ್ಲಿ, ಸನ್ ೧೮೧೭ರಲ್ಲಿ ಶ್ರೀ ದೇವೇಂದ್ರನಾಥರ ಜನನವಾಯ್ತು. ಇವರ ತಂದೆ ಶ್ರೀ ದ್ವಾರಕನಾಥ ಠಾಕೂರ್ ಅವರು ತಮ್ಮ ಆಡಂಬರ ಪೂರ್ಣ ಜೀವನ ಹಾಗೂ ದುಂದುಗಾರಿಕೆಗಾಗಿ ಬಹು ಪ್ರಸಿದ್ಧರಿದ್ದರು ದೇವೇಂದ್ರನಾಥರು, ಒಬ್ಬ ರಾಜ ಕುಮಾರನಂತೆ ಬೆಳೆದರು ಆದರೆ ಅವರ ಅಜ್ಜಿಯು ಯಾವಾಗಲೂ, ವ್ರತ ಅನುಷ್ಠಾನ—ಭಜನೆ ಕೀರ್ತನೆಗಳಲ್ಲಿ ಲೀನವಾಗಿರುತ್ತಿದ್ದಳು ಬಾಲಕ ದೇವೇಂದ್ರನಾಥರ ಮನದ ಮೇಲೆ ಅಜ್ಜಿಯ ನೇಮಗಳು ಬಹು ಪ್ರಭಾವ ಬೀರಿದವು. ಬಾಲ್ಯದಿಂದಲೇ ಅವರ ಮನಸ್ಸು ಮನನ, ಚಿಂತನ, ಪರಮಾರ್ಥಗಳ ಸಾಧನೆಯತ್ತ ತಿರುಗಿತು. ಅಜ್ಜಿಯು ಮೃತಳಾದಾಗ ಅವರಿಗೆ ತುಂಬಾ ನಿರಾಶೆಯುಂಟಾಯ್ತು; ಈ ಜಗದ ನಶ್ವರತೆಯ ಅನುಭವವಾಯ್ತು—ಧನ, ಭೋಗಗಳನ್ನವರು ತಿರಸ್ಕರಿಸಿದರು, ಅವನ್ನು ತ್ಯಜಿಸಿದರು.

ಒಮ್ಮೆ ಯಾವುದೋ ಒಂದು ಹಳೆಯ ಪುಸ್ತಕ ಮಗುಚುತ್ತಿರುವಾಗ, ಅವರಿಗೆ ಈಶೋಪನಿಷತ್ತಿನ ಒಂದು ಹಳೆಯ ಹಾಳೆ ಅದರೊಳಗೆ ದೊರೆಯಿತಂತೆ. ಅದನ್ನು ಓದಿದ ಬಳಿಕ ಆನಂದ ತುಂದಿಲರಾಗಿ ಅವರು ಎಲ್ಲಾ ವೇದ ಉಪನಿಷತ್ತುಗಳನ್ನು ಒಮ್ಮೆ ಓದಬೇಕು ಎಂಬ ಹಂಬಲದಿಂದ ಪ್ರೇರಿತರಾಗಿ, ವೇದಾಂತ ಉಪನಿಷತ್ತುಗಳನ್ನು ಆಳವಾಗಿ ಅಧ್ಯಯನ ಗೈದರಂತೆ! ವೈದಿಕ ತತ್ವಜ್ಞಾನದ ಪ್ರಚಾರಕ್ಕಾಗಿ ಇವರು "ತತ್ವಬೋಧಿನಿ ಸಭಾ" ಎಂಬೊಂದು ಸಂಘ ಸ್ಥಾಪನೆ ಗೈದುದಲ್ಲದೆ, ಅದೇ ಹೆಸರಿನ ಒಂದು ಪತ್ರಿಕೆಯನ್ನೂ ಹೊರಡಿಸಿದರು. ವೇದಗಳ ಅನುವಾದಗಳನ್ನು ಪ್ರಕಟಿಸುವ ಸರ್ವ ಪ್ರಥಮ ಸಾಹಸ ಗೈದವರೆಂದರೆ ಶ್ರೀ ದೇವೇಂದ್ರನಾಥ ಠಾಕೂರ್ ಅವರು.

ರಾಜಾ ರಾಮಮೋಹನ ರಾಯರು ಹಾಗೂ ದೇವೇಂದ್ರನಾಥರ ತಂದೆಯವರು ಬಹಳ ನಿಕಟ ಮಿತ್ರರಾಗಿದ್ದರು. ಅವರ ಮರಣಾನಂತರ ಕೆಲವು ಸಮಯ ದೇವೇಂದ್ರನಾಥ ಠಾಕೂರರೇ "ಬ್ರಹ್ಮ ಸಮಾಜ"ವನ್ನು ನಡೆಸ ಬೇಕಾಯ್ತು. ಇವರೇ "ಬ್ರಹ್ಮ ಸಮಾಜ"ವನ್ನು ಸುಸಂಘಟಿತಗೊಳಿಸಿದರು. ಕಿಂತು "ಬ್ರಹ್ಮ ಸಮಾಜ"ದಲ್ಲಿ ಪಾಶ್ಚಾತ್ಯ ಸಭ್ಯತೆಯ ಅನುಕರಣೆ; ಹಾಗೂ ಭಾರತೀಯ ಪರಂಪರೆಗಳ ಉಪೇಕ್ಷೆಯೂ ಆಗತೊಡಗಿದಂದೇ ಶ್ರೀ ದೇವೇಂದ್ರನಾಥರು ಅದರಿಂದ ಹೊರಬಿದ್ದರು, ಆಂಗ್ಲ ಭಾಷೆಯನ್ನು ಕಲಿತ ಜನರು ಕೂಡಾ ಭಾರತೀಯ ತತ್ವಜ್ಞಾನ ಮತ್ತು ಭಾರತೀಯ ಪರಂಪರೆಗಳ ಗೌರವಗಳನ್ನು ತಿಳಿದು ಗೌರವಿಸಿ ಅನುಸರಿಸಬೇಕು ಎಂದು ಮಹರ್ಷಿ ದೇವೇಂದ್ರನಾಥರು ಉಪದೇಶಿಸುತ್ತಿದ್ದರು ಇದಕ್ಕಾಗಿ ಅವರು ಬಹು ಪ್ರಯತ್ನ ಗೈದರು. ಫಲಸ್ವರೂಪವಾಗಿ ಬ್ರಹ್ಮ ಸಮಾಜ ದಲ್ಲಿಯೇ ಎರಡು ವಿಭಾಗಗಳಾದುವು. ಇವರೊಡನೆ ಮತಭೇದವಿರುವ ಜನ ಕೂಡಾ, ಇವರ ಉದಾರತೆ, ಮಹಾನತೆಗಳಿಗೆ ಸನ್ಮಾನವಿತ್ತು ತಲೆ ಬಾಗುತ್ತಿದ್ದರು. ಬ್ರಹ್ಮ ಸಮಾಜದಿಂದ ಸಿಡಿದ ಆ ಇನ್ನೊಂದು ಪಂಗಡವೇ ಇವರಿಗೆ ಮಹರ್ಷಿ ಯೆಂಬ ಬಿರುದನ್ನಿತ್ತು ಸತ್ಕರಿಸಿತು.

ಪಟ್ಟಣದ ಕೋಲಾಹಲ ಪೂರ್ಣ ವಾತಾವರಣವು ಅವರ ಮನಸಿಗೆ ಹಿಡಿಯುತ್ತಿರಲಿಲ್ಲ. ಅವಕಾಶ ಸಿಗುತ್ತಲೇ ಅವರು ಏಕಾಂತ ಸಾಧನೆಯ ಉದ್ದೇಶದಿಂದ ಉತ್ತರಖಾಂಡದ ಪರ್ವತಶ್ರೇಣಿಗಳತ್ತ ಹೊರಟುಬಿಟ್ಟರು. ಬ್ರಹ್ಮ ಸಮಾಜದ ವಿಭಜನೆಯ ಬಳಿಕ ಅವರು ಹೆಚ್ಚಾಗಿ ಏಕಾಂತದಲ್ಲಿಯೇ ಇರುತ್ತಿದ್ದರು. ಗಂಗಾತೀರದಲ್ಲಿದ್ದ ತನ್ನ ತೋಟದಲ್ಲಿ ಕುಳಿತು ಅವರು ತನ್ನ ಪ್ರತಿಯೊಂದು ಶ್ವಾಸದೊಡನೆ ಭಗವಂತನನ್ನು ಆರಾಧಿಸುತ್ತಾ ಇರುತ್ತಿದ್ದರು.

ಗಾಯಿತ್ರೀ ಮಂತ್ರ ಜಪದ ಕುರಿತು ಇವರಿಗೆ ತುಂಬಾ ಶ್ರದ್ಧೆಯಿತ್ತು. ೧೯ನೇ ಜನವರಿ ೧೯೦೫ರಂದು ಇವರು ಗಾಯಿತ್ರೀ ಮಂತ್ರವನ್ನು ಜಪಿಸುತ್ತಾ ಸಾಯುಜ್ಯವನ್ನು ಸೇರಿದರು.

ಮೂಲ: ಠಾಕುರ್ ಸುದರ್ಶನ ಸಿಂಹ

ಎಳೆಯುದುರಿದಾಗ....

(೨ನೇ ಪುಟದಿಂದ)

ಆವೃತ್ತವಾದ ಒಂದು ಹೆಣ್ಣಿನ ಹೆಣ ಮತ್ತು ಬಾಲಕರಿಗೆ ಉರಿಯುತ್ತಿರುವ ಒಂದು ದೀಪ.

೦೦ ೦೦ ೦೦

ರಮೇಶ ಟ್ರಿಚೂರಿನ ಸರಕಾರಿ ಆಸ್ಪತ್ರೆಯೊಂದರಲ್ಲಿ ಮಂಚವೊಂದಕ್ಕೆ ಒರಗಿಕೊಂಡು ಬಲವಾಗಿ ಕೆಮ್ಮುತ್ತಿದ್ದಾನೆ. ವಿಪರೀತ ಕೆಮ್ಮು ಮತ್ತು ನಿಶ್ಶಕ್ತಿಯಿಂದ ಬಳಲುತಿದ್ದಾನೆ.

ಡಾಕ್ಟರ್ ಬಂದು ಅವನನ್ನು ಪರೀಕ್ಷಿಸಿದರು. ಮಂಚದ ಕೆಳಗೆ ಸಿಕ್ಕಿದ ಕಾಗದವೊಂದರಲ್ಲಿ ಬರೆಯತೊಡಗಿದರು.

"ನಿಮ್ಮ ಹೆಸರು?"

"ರಮೇಶ್" ರಮೇಶ ಉತ್ತರಿಸಿದ.

"ನಿಮ್ಮ ಊರು?"

"ಮಂಗಳೂರು"

"ಇಲ್ಲಿ ನಿಮ್ಮ ಶುಶ್ರೂಷೆಗಾಗಿ ಮನೆಯವರಲ್ಲಿ ಯಾರಾದರೂ ಇರಬೇಕಾಗುತ್ತದೆ".

ರಮೇಶ ನಿರುತ್ತರನಾದ

"ನಿಮ್ಮ ತಂದೆ ಅಥವಾ ತಾಯಿ ಇಲ್ಲವೆ?"

"ಇ....ಲ್ಲ" ರಮೇಶನ ಕಣ್ಣಲ್ಲಿ ಧಾರಾಕಾರವಾಗಿ ನೀರಿಳಿಯಿತ.

"ಹೆಂಡತಿ ಇಲ್ಲವೇ?"

"ಇ....ಲ್ಲ....ಡಾಕ್ಟರ್" ರಮೇಶ ಒಳಗಿಂದೊಳಗೆ ಕೂಗಲು ಪ್ರಾರಂಭಿಸಿದ. ರಮೇಶನ ಹೃದಯ ಪ್ರತಿಧ್ವನಿಸುತ್ತಿತ್ತು "ಹೆಂಡತಿ ಇಲ್ಲವೆ"? ಡಾಕ್ಟರರ ಸೊಲ್ಲು.

ರಮೇಶನ ಕಣ್ಣಲ್ಲಿ ನೀರಿಳಿಯಿತು. ರವೂಳ ಆ ಪದ್ಯವು ಆತನಿಗರಿವಿಲ್ಲದಂತೆಯೇ ಆತನ ಬಾಯಲ್ಲಿ ಹೊರಟಿತು.

"ಕತ್ತಲೆಯ ಜೀವನಕೆ ಬೆಳಕ
ಪಾಲಿಸು ದೇವಿ
ಭಕ್ತಿಯಲಿ ಹಾಡುವೆನು ದಾರಿ
ತೋರಿಸು ದೇವಿ"

ಆಸ್ಪತ್ರೆಯಲ್ಲಿನ ಇತರ ರೋಗಿಗಳೆಲ್ಲರೂ ಆತನನ್ನೇ ನೋಡುತ್ತಿದ್ದರು.

ರಮೇಶನ ಪಕ್ಕದ ಮಂಚಕ್ಕೆ ಹುಚ್ಚನೊಬ್ಬನನ್ನು ತಂದರು. ಸದಾ ಕಾಲ ಹಾಡುವುದೇ ಆ ಹುಚ್ಚನ ಹುಚ್ಚಾಗಿತ್ತು. ಒಂದು ದಿನ ಮುಂಜಾನೆ ಆತ ಹಾಡಿದ.

"ಯಾಗ ಯಜ್ಞ ಮಾಡಲೇಕೆ
ಯೋಗಿ ಯತಿಯು ಆಗಲೇಕೆ"

ರಮೇಶನಿಗೆ ತನ್ನ ಬಾಲ್ಯ ನೆನಪಾಯಿತು.

"ರಾಜಾ, ಇನ್ನೊಮ್ಮೆ ಹೇಳು ಆ ಹಾಡನ್ನು" ಆತನಿಗೆ ತಾಯಿ ಹೇಳಿದ ಆ ವಾಕ್ಯ ಚೆನ್ನಾಗಿ ನೆನಪಿತ್ತು.

ರಮೇಶನ ಕಣ್ಣಲ್ಲಿ ನೀರಿಳಿಯಿತು. ಮನೋವೇದನೆಯ ಪರಿಣಾಮವಾಗಿ ಆತನ ಹೃದಯ ಬಡಿತದ ವೇಗ ಜೋರಾಯಿತು. ಡಾಕ್ಟರರು ಆಗಾಗ್ಗೆ ಆತನನ್ನು ಪರೀಕ್ಷಿಸುತ್ತಾ ಇದ್ದರು.

ಪಕ್ಕದ ಮಂಚದ ರೋಗಿಯೊಬ್ಬ ಆತನ ಶುಶ್ರೂಷೆ ಮಾಡಲು ಬಂದವರೊಬ್ಬರೊಡನೆ ಹೇಳಿದ—"ಇವರ ಊರು ಮಂಗಳೂರಂತೆ. ಅಲ್ಲಿಂದ ಇವರು ಮುಂಬೈಗೆ ಹೋದರಂತೆ. ಅಲ್ಲಿ ಕೆಲಕಾಲವಿದ್ದರಂತೆ. ಆ ಮೇಲೆ ಕಾರಣಾಂತರದಿಂದ ಇವರು ಸನ್ಯಾಸಿಯಾಗಿ ನಮ್ಮ ಟ್ರಿಚೂರಿನ ಕಡೆ ಬಂದರಂತೆ. ಇಲ್ಲಿ ಇವರಿಗೆ ಕ್ಷಯ ರೋಗ ಪ್ರಾರಂಭಿಸಿದ್ದರಿಂದ ಈ ಆಸ್ಪತ್ರೆಗೆ ಸೇರಿದರಂತೆ."

ಆತನ ಸಂಬಂಧಿಕ ಉತ್ತರಿಸಿದ "ನಿಜವಾಗಿಯೂ ಈತ ಬಿರುಗಾಳಿಗೆ ಸಿಕ್ಕ ತರಗೆಲೆಯಂತಾದನಪ್ಪಾ. ಮಂಗಳೂರಲ್ಲಿ ಹುಟ್ಟಿ, ಮುಂಬೈಯಲ್ಲಿ ಜೀವಿಸಿ, ಟ್ರಿಚೂರ ಆಸ್ಪತ್ರೆ ಸೇರಿದ."

ಇಷ್ಟು ಹೊತ್ತಿನಲ್ಲಿ ರಮೇಶನ ಆತ್ಮವು ಅಪಾರವಾದ ಪ್ರಪಂಚದಲ್ಲಿ ಅಡಗಿತು. ಆದರೆ ಮೈಯ ನಾಡಿ ಮಾತ್ರ ಇನ್ನೂ ಆರಲಿಲ್ಲ. ಆತ ಏನೋ ನಿಧಾನವಾಗಿ ಬಾಯಿ ಅಲುಗಾಡಿಸುತ್ತಿದ್ದ.

ನರ್ಸ್ ಒಬ್ಬಳು ಆತನ ಬಾಯಿ ಹತ್ತಿರ ಕಿವಿ ಇಟ್ಟು ಆಲಿಸುತ್ತಿದ್ದಳು.

ರಮೇಶ ನಿಧಾನವಾಗಿ ಹಾಡುತ್ತಿದ್ದ ಹಾಗೆಯೇ ಮೈಯ ಕಾವು ಇಳಿಯಿತು. ಪ್ರಾಣಪಕ್ಷಿಯು ಸಂಪೂರ್ಣವಾಗಿ ಹಾರಿ ಹೋಯಿತು.

ನರ್ಸ್ ರಮೇಶನ ಬಾಯಿಯಿಂದ ನಿಧಾನವಾಗಿ ಬಂದಿದ್ದ ಹಾಡನ್ನು ಮೆಲುಕು ಹಾಕಿದಳು.

"ಕತ್ತಲೆಯ ಜೀವನಕೆ ಬೆಳಕ
ಪಾಲಿಸು ದೇವಿ
ಭಕ್ತಿಯಲಿ ಹಾಡುವೆನು ದಾರಿ
ತೋರಿಸು ದೇವಿ."

ಶ್ರೀ ಕುತ್ಯಾರುಗುತ್ತು ರವೀಂದ್ರ ಶೆಟ್ಟಿ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು
(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ನಿರೂಪಿಸಲ್ಪಟ್ಟಿದೆ.
ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಖಾತಾ ರಿಜಿಸ್ತ್ರಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

REGD. No. B. G. 176
LICENCE No. 31
Licensed to Post without Prepayment

ವಾರ್ತೆ—ಪ್ರತಿವಾರ್ತೆ

ಕಾಂಗ್ರೆಸ್ಸು ನಿರಂತರವಾಗಿ ಹದಿನಾರು ವರ್ಷಗಳಿಂದಲೂ ಅಧಿಕಾರದಲ್ಲಿದೆ. ಹೀಗಾಗದಿರುತ್ತಿದ್ದರೆ ಒಳ್ಳೆಯದಿತ್ತು ಎನ್ನುತ್ತಾರೆ ಮಾಜಿ ಕೇಂದ್ರವಿತ್ತ ಮಂತ್ರಿ ಮುರಾರ್ಜಿ ದೇಸಾಯಿ.

—ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಟ್ಟ ಮತ್ತು ಜನತೆಯ ವಿಶ್ವಾಸಕ್ಕೆ ಪಾತ್ರ ಬೇರೊಂದು ಪಕ್ಷವಿಲ್ಲದುದರಿಂದ ಹೀಗಾಯ್ತು ಎಂದವರೇ ಸಮಾಧಾನ ಹೇಳಿದ್ದಾರೆ.

o o o

ಬೊಂಬಾಯಿಯು ಭಾರತದಲ್ಲಿಯೇ ದೊಡ್ಡದಾದ ಮತ್ತು ಸುರಕ್ಷಿತವಾದ ನಗರ.

—ವ್ಯಾಪಾರ ವ್ಯಭಿಚಾರಗಳಲ್ಲಿ ಆಚಾರ ಅನಾಚಾರಗಳಲ್ಲಿ ಸುಶಿಕ್ಷೆ ಕುಶಿಕ್ಷೆಗಳಲ್ಲಿ . . . . ಎಲ್ಲದರಲ್ಲಿಯೂ ಅದು ದೊಡ್ಡದು ಎಂಬುದು ಸರ್ವಜನಿತ.

o o o

ಪ್ರಧಾನಿ ನೆಹರುರವರು ತಮ್ಮ ಜೀವವಿಮೆ ಇಳಿಸಿಲ್ಲವೆಂಬುದನ್ನು ಜೀವವಿಮಾ ಕಾರ್ಪೊರೇಶನಿನ ಕೇಂದ್ರ ಕಛೇರಿ ಕಟ್ಟಡವನ್ನು ಉದ್ಘಾಟಿಸುವಾಗ ಒಪ್ಪಿಕೊಂಡರು.

—ಈ ದಿಸೆಯಲ್ಲಿ ತಮ್ಮ ಮಾದರಿಯನ್ನು ಯಾರೂ ಅನುಸರಿಸಬಾರದು ಎಂಬುದು ಅವರ ಆಶಯವಿರಲೂ ಬಹುದು.

o o o

ಚತುರ್ಥ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯು ಸ್ವಯಂಚಾಲಿತ ಅವಸ್ಥೆಯನ್ನು ತಲುಪುವುದು.

ತೃತೀಯ ಯೋಜನೆಯ ಮಧ್ಯಾವಧಿ ವರದಿಯಿಂದ ನೊಂದ ಭಾರತೀಯರು ಈ ವಾರ್ತೆಯಿಂದ ಸಮಾಧಾನ ಪಟ್ಟುಕೊಳ್ಳಬಹುದು.

o o o

ಪಾನ ಪ್ರತಿಬಂಧ ಶಾಸನವನ್ನು ಕಿತ್ತೊಗೆಯಬೇಕು ಎಂದು ಕೇಂದ್ರದ ಮಾಜಿ ಮಂತ್ರಿ ಸದೋಬಾ ಪಾಟೀಲರು ಈಗ ಅಭಿಪ್ರಾಯಪಡುತ್ತಾರೆ.

—ಗದ್ದುಗೆಯಲ್ಲಿರುವಾಗ ಒಂದು ಗದ್ದುಗೆಯಿಂದ ಬಳಿಕ ಮತ್ತೊಂದು ಎಂಬ ಗಾದೆಯನ್ನು ಪಾಟೀಲರು ಸುಳ್ಳು ಮಾಡಲಿಲ್ಲ.

o o o

ವಿದ್ಯುಚ್ಛಕ್ತಿ ಉತ್ಪಾದನಾ ಯಂತ್ರಗಳು ಇತ್ತೀಚೆಗೆ ಕಾರ್ಯ ಪ್ರಾರಂಭಿಸಿರುವುದರಿಂದ ಅದರ ಪೂರೈಕೆಯ ಪರಿಸ್ಥಿತಿ ಸ್ವಲ್ಪ ಸುಧಾರಿಸಿದ್ದರೂ ನಿರೀಕ್ಷಿತ ಮಟ್ಟಕ್ಕೆ ಬಾರದಿರುವುದರಿಂದ ನಿರ್ಬಂಧವು ಇನ್ನೂ ಕೆಲಕಾಲ ಮುಂದುವರಿಯುವುದು.

—ವಿದ್ಯುತ್ ಪೂರೈಕೆ ಕೇಂದ್ರದ ಕಣ್ಣು ಮುಚ್ಚಾಲೆ ಆಟದ ಪರಿಸ್ಥಿತಿಯು ಸುಧಾರಿಸಿದೆಯೇ ಎಂದು ಕೇಳುತ್ತದೆ ಜನತೆ.

o o o

ಧಾರವಾಡದ ಕರ್ನಾಟಕ ಕಾಲೇಜದಲ್ಲಿ ಕನ್ನಡ ಬಾರದ ಪ್ರಾಧ್ಯಾಪಕರು ಇದ್ದ ಕಾಲವೊಂದಿತ್ತು.

—ಕನ್ನಡ ಬಂದರೂ ನುಡಿಯಲೊಲ್ಲದ ಕನ್ನಡ ಪ್ರೇಮಿಗಳು ಅಲ್ಲಿಂದೇನು, ಎಲ್ಲೆಲ್ಲಿಯೂ ಇರುತ್ತಾರೆ.

o o o

ಭಾರತೀಯ ಸಂಸ್ಕೃತಿಯು ಸಮಾಜಕ್ಕೆ ಬೇಡವಾದುದನ್ನು ತ್ಯಜಿಸುತ್ತ ಅದರ ಸ್ಥಾನದಲ್ಲಿ ಹೊಸ ವಿಚಾರಗಳನ್ನು ಸ್ವಾಗತಿಸುತ್ತ ಸ್ವಾಭಾವಿಕ ಮಾರ್ಗದಲ್ಲಿ ಮುಂದುವರಿದಿದೆ—ಪಾಣಿಕ್ಕರರು ಬರೆದ ಭಾಷಣ.

—ಮೈಸೂರು ಸಂಸ್ಕೃತಿ ಮಾತ್ರ ಇದಕ್ಕೆ ಬಹುದೂರವಿದೆ ಎನ್ನುತ್ತಾರೆ ಮೈಸೂರಿನೊಂದಿಗೆ ವಿಲೀನಗೊಂಡಿದ ಕನ್ನಡಿಗರು.

o o o

ಹೊಸ ವರ್ಷದ ಕುಟುಂಬ ಯೋಜನೆ

(೮ನೇ ಪುಟದಿಂದ)

ಅಲ್ಲ ಹೀಗೆಲ್ಲಾ ಮಾಡಿದ್ರೆ ನಮ್ಗೆ ಯಾರು ಸಾಲ ಕೊಡ್ತೋರು? ಕೊಡೋರು ಇಲ್ಲಾಂತ್ಲೆ ನಿಮ್ಮ ಸಹಾಯ ಕಡಿಮೆಯಾಗಿರೋದು.

"ಸರೀನ್ನ........"

"ಅಲ್ಲಾ ಕೊಡೋರಾದ್ರೂ ಏನನ್ನ ನೋಡಿ ಕೊಡ್ತೋರು?"

"ಏನಂತೀಯ, ನೀನು, ಕೊಡೋ ಮನ್ಸಿದ್ರೆ ಹೇಗೂ ಕೊಡ್ಬಹುದು."

"ಅದೇ ಕೊಡೋ ಮನ್ಸನ್ನ ಅವರಲ್ಲಿ ತರುವುದು ಹೇಗೇಂತ...."

"ಏನಾದ್ರೂ ಬಡಿವಾರ ಬಡೀಬೇಕು."

"ಆದ್ರೆ ನೋಡಿ, ನಿಮ್ಮ ಆ ಭಕ್ಕ ಮಾತ್ರ ಬಡಿದುಕೊಳ್ಬೇಡಿ. ಹೀಗೆಲ್ಲ ಯಾಚನೆಗೆ ಕೈ ಮುಂದೆ ಮಾಡಿದ್ರೆ ನಮ್ಮ ಮಕ್ಕಳು ಮರಿಗಳು ದಿನ ಹೇಗೆ ದೂಡ್ಬೇಕು?"

"ಅವ್ರನ್ನೇ ನೋಡಿ ತಾನೆ ಸಹಾಯ ಸಿಗೋದು........'

"ಪ್ರಾಯಃ ಅವರ ಬೆಲೆಯನ್ನೂ ಪಡೆದ ಸಹಾಯ ಮೀರಿಸಿತೂಂತ ತೋರುತ್ತೆ..."

"ಹ್ನೂಂ. ತೋರುತ್ತೆ...."

"ಹಾಂಗಾದ್ರೆ ಮುಂದೇನೂಂತ..."

"ಮುಂದೆ ಇದ್ದೇ ಇದೆಯಲ್ಲ...."

"ಏನು.... ನಮ್ಮ ಕುಟುಂಬ ಯೋಜನೆ ......'

"ಅದನ್ನ ಸಾಧಿಸೋ ಪ್ರಯತ್ನ ಮಾಡೋ ಸ್ವಂತ ಉತ್ಪನ್ನಗಳನ್ನಷ್ಟೇ ಬಳಸೋ ಯತ್ನ ಮಾಡೋದು . . . ."

"ಅಂದ್ರೆ ಒಪ್ಪತ್ತು ಉಪ್ವಾಸ ಬೀಳೋದು, . . ."

"ಮತ್ತೆ ಮಾಡುವುದಾದ್ರೂ ಏನು?"

"ಸರಿ ಹಾಗಂದ್ರೆ ಸದ್ಯ ಒಮ್ಮೆ ನೀವು ಮಾಡಿದ ಸಾಲಾನ್ನ ಹಿಂದೆ; . . ."

"ಸಾಲ ಅಲ್ವೆ ಅದು ಸಹಾಯ . . ," ಆದ್ರೆ ಬಡ್ಡಿಯನ್ನಾದ್ರೂ ಕೊಡ್ಬೇಕೂಂತ ಲ್ವೆ ಸೇನ್ನೋದು ಎಲ್ಲ ಸರಿ. ಆಯ ವ್ಯಯಗಳ ಮುಖಗೂಡಿಸಿರಿ ಅನ್ನೋರೆಲ್ಲಾ ಸಾಲದಿಂದ ಸೇರಿರೋವಾಗ ಮತ್ತೆ ನಮ್ಮದೇನೂಂತ ಸಾವಿರದ ವರೆಗೆ ಸಾಲ; ಆ ಮೇಲೆ ನೋಲ . . . . ಹ್ಞ ಹ್ಞ ."

"ಸರೀನ್ನಿ ಎಲ್ರೂ ಹೀಗೇ . . . ನಿಮ್ಮ ನಿಮ್ಮ ಟೋಪಿ ಸರ್ಕಾರದ ಯೋಜನೆಗಳಿಂದ ದೊಡ್ಡೋರು ಮತ್ತೂ ದೊಡ್ಡೋರಾದ್ರು ಬಡವ್ರು ಮತ್ತೂ ಬಡವರಾದ್ರು . . . . "

"ಬಿಡು. ಅದನ್ನ ಸುರುವಾಯ್ತು ಇವ ಳದ್ದೊಂದು."

"ಟೋಪೀ ಸರ್ಕಾರಾಂತನ್ನುತ್ಲಾ ನಿಮ್ಗೆ...."

"ಬೇಡದೂಂತಂದೆಯಲ್ಲ.... ಹೋಗು, ನಮ್ಮ ಯೋಜನೆ ಯೋಜನೆಯಲ್ಲೇ ಮಾಗಿಯಿತು. ನೋಡೋಣ, ಏನಾಗುತ್ತೇತ..."

"ಸರಿ ಬಿಡಿ, ಹೋಗಿ ಕೈಕಾಲನ್ನು ತೊಳ್ಕೊಳ್ಳಿ. ಈ ವರ್ಷದ ಕೊನೆಯ ಊಟವಾದ್ರೂ ಮಾಡಿ. ಮತ್ತೆ ಮುಂದಿನ ವರ್ಷ ನಿಮ್ಮ ಯೋಜನೆ ಏನೇನು ಪ್ರೊವಿಜನ್ ಮಾಡಿವೆಯೆ?"

"ಕಾಸು ಕರ್ಚಿಲ್ಲದೆ ನಿನಗೆ ತುಸು ಸಂಸ್ಕೃತ ಕಲಿಸೋ ಪ್ರೊವಿಜನ್ ಖಂಡಿತ ಇದೆ."

"ನಾಕು ನಿಮ್ಮ ತಮಾಷೆ, ನಾನು ಸಂಸ್ಕೃತ ಕಲ್ತು ಆಗ್ಬೇಕಾದ್ದೂ ಏನು?"

"ಸುಸಂಸ್ಕೃತಳಾಗೋದು."

"ಹೊ ಬಿಡಿ ಮತ್ತೆ, ಸಾಕು ಅದೆಲ್ಲಾ. ಊಟಕ್ಕೆ ಬನ್ನಿ.."

"ಹೂ. ಬಾರದೆ ಉಂಟೆ?"

— ಗೋರಾ.

ವ್ಯರ್ಥ ವಾದದಲ್ಲಿ ತೊಡಗದೆ ಶಾಂತಿಯುತ ಸಹಜೀವನ ನಡೆಸಬೇಕು—ಚೀನಾಕ್ಕೆ ರಶ್ಯನ್ ಸಾಹಿತಿಯ ಉಪದೇಶ.

—ತಾವೀಗ ಹೇಳುತ್ತಿರುವುದೂ ಅದನ್ನೇ ಎಂದು ಚೌ ಅನ್ನದಿರುತ್ತಾರೆಯೇ?

ನಮ್ಮ ನಮ್ಮವರು

(೧ ನೇ ಪುಟದಿಂದ)

ಬಲು ಶಕ್ತವಾದಾವೆ? ಪಂಚಾಯತರಾಜ್ಯದಲ್ಲಿ ಪಂಚಾಯತುಗಳ ಹೊಣೆ ಹೆಚ್ಚಿದೆಯಾದರೂ ಎಷ್ಟು ಪಂಚಾಯತುಗಳು ಯಶಸ್ವಿಯಾಗಿ ಕಾರ್ಯತತ್ಪರವಾಗಿವೆ? ಶ್ರೀ ಜತ್ತಿಯವರ ಸಲಹೆ ಕಾರ್ಯರೂಪಕ್ಕೆ ಬರ ಬೇಕಾದರೆ. ಪಂಚಾಯತ್ ರಾಜ್ಯ ಮಂತ್ರಿ ಶಾಖೆ ಸರಿಯಾಗಿ ಕೆಲಸ ನಿರ್ವಹಿಸ ಬೇಡವೆ?

ಜನತೆಯ ಸೌಕರ್ಯಕ್ಕಾಗಿ

ಹೊಸ ಬಗೆಯ

ಸೇವಿಂಗ್ಸ್ ಬ್ಯಾಂಕ್ ಸೌಲಭ್ಯಗಳು.

- ಪ್ರಾಯಕ್ಕೆ ಬಾರದ ಮಕ್ಕಳು ಕೂಡಾ 12 ವರ್ಷಕ್ಕೆ ಮೇಲ್ಪಟ್ಟವರಾದರೆ ತಮ್ಮ ಹೆಸರಿನಲ್ಲೇ **ಸೇವಿಂಗ್** ಬ್ಯಾಂಕ್ ಖಾತೆಗಳನ್ನು ತೆರೆಯಬಹುದು.
- ನೀವು ನಿಮ್ಮ **ಸೇವಿಂಗ್ಸ್ ಬ್ಯಾಂಕ್** ಖಾತೆಯಿಂದ 1 ವರ್ಷದಲ್ಲಿ 150 ಬಾರಿ ಹಣವನ್ನು ತೆಗೆಯಬಹುದು.
- ನಿಮ್ಮ **ಸೇವಿಂಗ್ಸ್ ಬ್ಯಾಂಕ್** ಖಾತೆಯಿಂದ ಎಂದು ಬೇಕಾದರೂ ಎಷ್ಟು ಮೊತ್ತವನ್ನಾದರೂ ಯಾವುದೇ ಪೂರ್ವ ಸೂಚನೆಯಿಲ್ಲದೆ ಹಿಂದೆ ಪಡೆಯಬಹುದು.
- **ಸೇವಿಂಗ್ಸ್ ಬ್ಯಾಂಕ್** ಖಾತೆಯ ಮೇಲೆ ಅರ್ಧ ವಾರ್ಷಿಕ ಮಿರ್ಚು ವೆಚ್ಚಗಳನ್ನು ವಸೂಲು ಮಾಡಲಾಗುವುದಿಲ್ಲ.
- **ಸೇವಿಂಗ್ಸ್ ಖಾತೆಯ** ಮೂಲಕ ಧರ್ಮಾರ್ಥವಾಗಿ ಹಣವನ್ನು ರವಾನಿಸಬಹುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಸೇವಿಂಗ್ಸ್ ಖಾತೆ ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ಚಲಾವಣೆ ಬಂಡವಾಳ ರುಪಾಯ 45 ಕೋಟಿಗೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಉಡುಪಿ.

ಹೊಸ ಪುಸ್ತಕ—

'ನಚಿಕೇತ'ರ
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

VOL. 43 ಸಂಪುಟ ೪೩
No 19 ಸಂಚಿಕೆ ೧೯

NAVAYUGA—Nationalist Weekly ‡‡ ಉಡುಪಿ 9-1-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಶ್ರೀ ಎ ರಾಮಮೋಹನ ರಾವ್

ಉಡುಪಿಯ ಸುಪ್ರಖ್ಯಾತ ಸಾರ್ವಜನಿಕ ಕಾರ್ಯಕರ್ತರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಪುತ್ರರಾದ ಶ್ರೀ ಎ ರಾಮಮೋಹನ ರಾಯರು ಮಂಗಳೂರಿನ ದಿ ಶಂಕರ ವಿಠಲ್ ಮೋಟಾರ್ ಕಂಪೆನಿ, ಲಿಮಿಟೆಡ್‌ನ ಮೆನೇಜಿಂಗ್ ಡೈರೆಕ್ಟರರು ಬಿ ಎ,ಬಿ ಎಲ್ ಪದವೀಧರರಾದ ಶ್ರೀ ರಾಯರು ವಕೀಲಿ ವೃತ್ತಿಯನ್ನು ಕೈಗೊಳ್ಳದ ಸಾರಿಗೆಯ ರಂಗದಲ್ಲಿ ಪಾದಾರ್ಪಣೆ ಮಾಡಿ ಅದರಲ್ಲಿ ಯಶಸ್ಸನ್ನು ಸಂಪಾದಿಸಿದರು ಜಿಲ್ಲೆಯ ಸಾರಿಗೆ ವ್ಯವಸ್ಥೆಯಲ್ಲಿ ಅತ್ಯುತ್ತಮ ಸೇವೆಯನ್ನು ಸಲ್ಲಿಸುತ್ತಿರುವ ಶಂಕರ ವಿಠಲ್ ಮೋಟಾರ್ ಕಂಪೆನಿಯು ಬೆಳೆದು ಬಲಾಢ್ಯವಾಗುವುದಕ್ಕೆ ಶ್ರೀ ರಾಯರ ಮಾರ್ಗದರ್ಶನವೇ ಕಾರಣವೆಂದರೆ ಅತಿಶಯೋಕ್ತಿಯಲ್ಲ

ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಅತ್ಯಂತಾಸಕ್ತಿ ತಳೆದಿರುವ ಶ್ರೀ ರಾಯರು ಕರ್ತೃತ್ವಶಾಲೀ ವ್ಯಕ್ತಿತ್ವವುಳ್ಳವರು ಶಿಕ್ಷಣದಲ್ಲಿ ಇವರಿಗೆ ಅಭಿರುಚಿ ಬಹಳ ಶಿಕ್ಷಣ ಸಂಸ್ಥೆಗಳಿಗೆ ಇವರು ಮಾಡುವ ಸಹಾಯವೂ ಅತ್ಯುದಾರ ತನ್ನ ಶಂಕರ ವಿಠ್ಠಲ್ ಮೋಟಾರ್ ಕಂಪೆನಿ ಮತ್ತದರ ಸಹಸಂಸ್ಥೆ ಯುನೈಟೆಡ್ ಟ್ರೇಡಿಂಗ್ ಕಾರ್ಪೊರೇಶನ್ ಮತ್ತು ವರ್ಕ್‌ಶಾಪ್ ಲಿಮಿಟೆಡ್ ಈ ಸಂಸ್ಥೆಗಳು ೧೯೬೩ರ ದಶಂಬರಾಂತ್ಯಕ್ಕೆ ತಮ್ಮ ಲಾಭಾಂಶದಲ್ಲಿ ವಿವಿಧ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಗಳಿಗೆ ಸುಮಾರು ರೂ ೨೦,೦೦೦ವನ್ನು ಸಹಾಯಧನವಾಗಿ ನೀಡಿವೆ

ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ಅಲ್ಲಿನ ಮೆಡಿಕಲ್ ಕಾಲೇಜ್ ಸೊಸೈಟಿಯ ಮೂಲಕ ಈ ಮೊದಲೇ ರೂ ೨೦,೦೦೦ವನ್ನು ಕೊಡಲಾಗಿತ್ತು. ಈ ವರ್ಷ ಮರಳಿ ರೂ ೫,೦೦೦ವನ್ನು ಮಂಜೂರು ಮಾಡಿ, ಈ ಸಹಾಯದ ಮೊತ್ತವನ್ನು ರೂ ೨೫,೦೦೦ಕ್ಕೆ ತಂದು ನಿಲ್ಲಿಸಿವೆ

ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿಗೆ ರೂ ೩,೦೦೦, ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್ ಮತ್ತು ಶ್ರೀ ಪೂರ್ಣಪ್ರಜ್ಞ ಕಾಲೇಜುಗಳಲ್ಲಿ ಪ್ರತ್ಯೇಕವಾಗಿ ಪ್ರತಿ ವರ್ಷ ಅತ್ಯುತ್ತಮ ವಿದ್ಯಾರ್ಥಿಯೋರ್ವನಿಗೆ ತಲಾ ರೂ.೧೦೦|-ರ ವಿದ್ಯಾರ್ಥಿವೇತನ ನೀಡಲು ಅನುಕೂಲವಾಗುವಂತೆ ಎರಡೆರಡು ಸಾವಿರ ರೂಪಾಯಿಗಳ ದತ್ತಿಯಾಗಿ ಒಟ್ಟು ರೂ. ೪,೦೦೦ ಪುತ್ತೂರಿನ ಕರ್ನಾಡು ಸದಾಶಿವ ರಾವ್ ಜನ ಧಾಲಯಕ್ಕೆ ರೂ ೫೦೦, ಅಲೆವೂರು ಹೈಸ್ಕೂಲಿಗೆ ರೂ ೫೦೦, ಕಟೀಲ್ ಹೈಸ್ಕೂಲಿಗೆ ರೂ ೧,೦೦೦, ಕರ್ಕಳ ಹೈಸ್ಕೂಲಿಗೆ ರೂ ೫೦೦, ಉಡುಪಿಯ ಮುನಿಸಿಪಲ್ ಹೈಸ್ಕೂಲಿಗೆ ರೂ ೧೦೦೦ ಮತ್ತ ಕಾಪು ಆಸ್ಪತ್ರೆಯ ಕಟ್ಟಡ ಕಟ್ಟಲು ರೂ ೧,೦೦೦ವನ್ನ ಮಂಜೂರು ಮಾಡಲಾಗಿದ

ಹೀಗೆ, ಇದಕ್ಕೂ ಮೊದಲು ಕೂಡಾ ವಿವಿದ ಸಂಸ್ಥೆಗಳಿಗೆ,ಮುಖ್ಯವಾಗಿ ಶಿಕ್ಷಣ ರಂಗಕ್ಕೆ, ಇವರು ಸಹಾಯವನ್ನು ಸಲ್ಲಿಸಿದ್ದಾರೆ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆ ಮತ್ತು ಶ್ರೀ ಆರೂರು ರಾಮಮೋಹನರಾಯರ ಮಾರ್ಗದರ್ಶನದಲ್ಲಿ ಪ್ರಗತಿಪಥಗಾಮಿಯೆನಿಸಿದ ಮೋಟಾರು ಕಂಪೆನಿಯು ಜಿಲ್ಲೆಯ ಸಾರಿಗೆ ವ್ಯವಸ್ಥೆಯಲ್ಲಿ ಮಹತ್ವಪೂರ್ಣ ಸೇವೆಸಲ್ಲಿಸುವುದರೊಡನೆ ಇತರ ಸಾರ್ವಜನಿಕ ಸೇವಾಕಾರ್ಯಗಳಿಗೂ ಸಹಾಯಕವಾಗುತ್ತಿರುವುದು ಸ್ತುತ್ಯ

ಪ್ರೊ| ಕು ಶಿ ಹರಿದಾಸ ಭಟ್ಟ

ಪ್ರಾಥಮಿಕ ಶಾಲಾಶಿಕ್ಷಕರಾಗಿದ್ದವರೊಬ್ಬರು ಆರ್ಟ್ಸ್ ಸಾಯನ್ಸ್ ಮತ್ತು ಕಾಮರ್ಸ್ ಕಾಲೇಜಿನ ಪ್ರಿನ್ಸಿಪಾಲರಾಗುವುದೆಂದರೆ ಅದಕ್ಕಿಂತ ವಿಸ್ಮಯ ಸಂಗತಿ ಬೇರೊಂದಿರಲಾರದು ಉಡುಪಿಯಲ್ಲಿಯೇ ಜನಿಸಿ ಇಲ್ಲಿಯೇ ಬೆಳೆದು ಇಲ್ಲಿಯೇ ಅಧ್ಯಾಪಕ ವೃತ್ತಿಯನ್ನವಲಂಬಿಸಿ, ಅದರಲ್ಲಿಯೇ ಕೀರ್ತಿವೆತ್ತು ಇಂದು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ಪ್ರಿನ್ಸಿಪಾಲರಾಗಿ ನಿಯುಕ್ತಿ ಹೊಂದಿದ ಘನವಂತರು ಶ್ರೀ ಕು ಶಿ. ಹರಿದಾಸ ಭಟ್ಟರು ಶ್ರೀ ಭಟ್ಟರು ಮೆಟ್ರಿಕ್ ಪರೀಕ್ಷೆ ಉತ್ತೀರ್ಣರಾದ ಬಳಿಕ ಅಧ್ಯಾಪಕ ತರಬೇತಿ ಪಡೆದು ಇಲ್ಲಿಯ ಕೊಡಿಯಾಳ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶಿಕ್ಷಕರಾಗಿ ಉಪಜೀವನ ಆರಂಭಿಸಿದರು ಸುಮಾರು ಮೂರು ವರ್ಷ ಅಲ್ಲಿ ದುಡಿದ ಬಳಿಕ ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲನ್ನು ಸೇರಿಕೊಂಡರು ಅಗಲೇ ಖಾಸಗಿಯಾಗಿ ಕಲಿತು ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ ಎ (ಆನರ್ಸ್) ಪದವಿಯನ್ನು ಪಡೆದ ಬಳಿಕ ೧೯೪೯ರಲ್ಲಿ ಎಂ ಜಿ ಎಂ ಕಾಲೇಜನ್ನು ಸೇರಿದರು ಅಲ್ಲಿಯೇ ಮುಂದೆ ಅರ್ಥಶಾಸ್ತ್ರ ಮತ್ತು ಇತಿಹಾಸ ವಿಭಾಗದ ಪ್ರೊಫೆಸರರಾಗಿ ಇವರು ಮುಂದೆ ಕಾಲೇಜಿನ ವೈಸ್ ಪ್ರಿನ್ಸಿಪಾಲರೆಂದು ನಿಯುಕ್ತರಾದರು ಈ ವರ್ಷದ ಆರಂಭದಲ್ಲಿಯೇ ಪ್ರಿನ್ಸಿಪಾಲರಾಗಿ ಕಾಲೇಜಿನ ಪ್ರಾರಂಭದಿಂದಲೂ ಸೇವೆ ಸಲ್ಲಿಸಿದ ಶ್ರೀ ಎಚ್ ಸುಂದರ ರಾಯರು ನಿವೃತ್ತರಾದ ಬಳಿಕ ಅವರ ಸ್ಥಾನಾಪನ್ನರಾದರು. ಶ್ರೀ ಭಟ್ಟರು

ಶ್ರೀ ಭಟ್ಟರು ಕಾಲೇಜುಗಳಿಸಿರುವ ಘನಸ್ಥಿಕೆಯನ್ನು ಉಳಿಸಿಕೊಳ್ಳಲು ಸರ್ವಸಮರ್ಥರು ವಿದ್ಯಾರ್ಥಿಗಳನ್ನು ಆತ್ಮೀಯ ದೃಷ್ಟಿಯಿಂದ ಕಾಣುವರು. ಆದುದರಿಂದಲೇ ತನ್ನ ಸಹ ಪ್ರಾಧ್ಯಾಪಕರ ಸಂಪೂರ್ಣ ಸಹಕಾರದಿಂದ ಕಾಲೇಜಿನಲ್ಲಿನ ಬಂಧುಭಾವವನ್ನು ಬೆಳೆಸಿ, ಗಳಿಸಿದ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸುವರೆಂಬುದು ನಿಸ್ಸಂದೇಹ.

ಶ್ರೀ ಹರಿದಾಸ ಭಟ್ಟರು ಸಾಹಿತಿಗಳು, ಅವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ರವಾನಾಥ ಮತ್ತು ಘಂಟಮಾರಾಗಳು ಅವರ ಅನುವಾದಿತ ಕೃತಿಗಳು, ಅರ್ಥಶಾಸ್ತ್ರ, ಏಶಿಯೂದ ಸಂಪತ್ತುಗಳು ಅರ್ಥಶಾಸ್ತ್ರದ ಗ್ರಂಥಗಳ. ಇನ್ನೂ ಹಲವಾರು ಕೃತಿಗಳನ್ನು ಅವರು ಪಡೆದಿದ್ದಾರೆ, ಪತ್ರಿಕೆಗಳಿಗೆ ಲೇಖನಗಳನ್ನೂ ಬರೆಯುತ್ತಿದ್ದಾರೆ ಅಲ್ಲದೆ, ಭಟ್ಟರು ಉತ್ತಮ ವಾಗ್ಮಿಗಳು, ವಿಚಾರಶೀಲರ, ಭಾಷಣ ಕರ್ತರ. ಅವರ ಮಾತನ್ನು ಕೇಳುತ್ತಿರುವಾಗ ಇನ್ನೂ ಕೇಳೋಣವೆನಿಸುವುದು

ಮಣಿಪಾಲದಲ್ಲಿ ನಡೆದ ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯ, ಉಡುಪಿಯ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ; ಈಗ ಅದರ ಅಧ್ಯಕ್ಷಸ್ಥಾನವನ್ನು ಪಡೆದಿದ್ದಾರೆ ತಾನು ಪ್ರಾಥಮಿಕ ಶಿಕ್ಷಣ ಪಡೆದ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾಗಿ, ಹೈಸ್ಕೂಲ್ ಶಿಕ್ಷಣ ಪಡೆದ ಬೋರ್ಡ್ ಹೈಸ್ಕೂಲಿನ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ತನ್ನ ಅಳಿಲ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಕಡಿಯಾಳಿಯ ಕಮಲಾ ಬಾಯಿ ಹೈಸ್ಕೂಲ್ ಟ್ರಸ್ಟಿನ ಸದಸ್ಯರಲ್ಲಿ ಇವರೊಬ್ಬರು ಸಿಂಡಿಕೇಟ್ ಬ್ಯಾಂಕಿನ ಇಂಟಲಿಜೆನ್ಸ್ ವಿಭಾಗದ ಪಿನ್ಸಿಪಾಲರು ಇವರು

ಹೀಗೆ ಒಂದಲ್ಲ ಹತ್ತು ರೀತಿಯಲ್ಲಿ ಉಡುಪಿಯ ಏಕೆ, ಕರ್ನಾಟಕದ ನಾಗರಿಕರಿಗೆ ಚಿರಪರಿಚಿತರಾದ ಶ್ರೀಭಟ್ಟರು ಸ್ವಪರಿಶ್ರಮದಿಂದಲೇ ಉನ್ನತಿ ಪಡೆದವರ, ಕೇವಲ ಮಧ್ಯಮ ವರ್ಗದ ಕುಟುಂಬದವರಾದ ಇವರು ಸಾಹಸಿಗರು. ಕ್ರಿಯಾಪಟುಗಳು, ಉತ್ಸಾಹಿಗಳು. ಅವರು ಈಗ ವಹಿಸಲಾದ ಹೊಸ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಿ ಮತ್ತಷ್ಟು ಜನ ಪ್ರಿಯರಾಗುವುದರಲ್ಲಿ ಸಂದೇಹವಿಲ್ಲ

ಪರಿಸ್ಥಿತಿಯು ಮನುಷ್ಯನನ್ನು ದುರ್ಬಲನನ್ನಾಗಿಮಾಡುವುದಿಲ್ಲ; ಅವನ ದೌರ್ಬಲ್ಯವನ್ನು ಹೊರಗೆಳೆಯುತ್ತದೆ ಮಾತ್ರ

—ಥಾಮಸ್ ಎ ಕೆಂಪಿಸ್

ಡಾಂಭಿಕನು ಎಂದಾದರೊಮ್ಮೆ ಸದಿಚ್ಛೆಯ ಪ್ರೇರಣೆಯನ್ನು ಪಡೆಯಬಹುದು, ಆದರೆ ವಿಪರೀತ ಬುದ್ಧಿಯ ನೆಂದೂ ತನ್ನ ವಕ್ರಗತಿಯನ್ನೇ ಬಿಡನು

ಅಲ್ಲನ್ ಹಕ್ಸ್ಲೇ

ವ ಹತ್ತಾದ ಕ್ಲೇಶ—ಇದೇ ಮಹಾಪುರುಷರ ಮತ್ತು ಸತ್ಪುರುಷರ ಪಾಲಿಗೆ ಬರುವ ಆದಾಯ

—ವಿ. ಎಸ್. ಶ್ರೀನಿವಾಸ ಶಾಸ್ತ್ರಿ

ನಾರದ ಕಥೆ

ಬರಿ ಬಾಳು ತುಂಬಿ ಬಾಳಿತು

ಆಕೆ ತೀರಿ ಹೋದಳೆಂಬ ವಾರ್ತೆ ಕೇಳಿದ್ದೇ ತಡ, ನಾಗರಾಜನ ಎದೆಯಲ್ಲಿ ಎಂಟೊಸಿಕೆಗಳ ಬಡಿದಾಟ ಸುರುವಾಯಿತು. ಮೊದಲ ರಾತ್ರಿ ತಾನೇ ಆಕೆಯ ತೂಕ ಎಂಟು ಪೌಂಡು ಹೆಚ್ಚಿದೆ; ಸುಧಾರಿಸುವ ಲಕ್ಷಣ ಗೋಚರಿಸುತ್ತಿದೆ; ಇನ್ನೇನೂ ಗಾಬರಿ ಪಡುವ ಅಗತ್ಯವಿಲ್ಲ, ಎಂಬ ಸಾಂತ್ವನ ನರ್ಸ್ ಕೊಟ್ಟಿರುವಾಗ ಇದೇನು ನಡೆಯಿತು ಅನರ್ಥ? ಆದರೆ, ಅರ್ಥಾನರ್ಥಗಳ ಕಡೆಗೆ ಗಮನ ಹರಿಸುವ ಅವಕಾಶ ಆಗ ಉಳಿದಿರಲಿಲ್ಲ. ಆಸ್ಪತ್ರೆಯಲ್ಲೇ ಮೃತ್ಯು ಮುಖವಾದ ಆಕೆಯ ಅಂತಿಮ ಸಂಸ್ಕಾರವನ್ನು ಮುಗಿಸುವುದೀಗ ಆತನ ತಲೆಯ ಮೇಲೆ ಬಿದ್ದ ಭಾರವಾಗಿತ್ತು. ಅದನ್ನು ನಿರ್ವಹಿಸದೆ ಇರುವುದಕ್ಕಾಗುತ್ತದೆಯೇ?

ನಾಗರಾಜನ ಮನೆ ಮತ್ತು ಕುಸುಮ ದೀರ್ಘ ನಿದ್ರೆಗೆಯ್ದ ಆಸ್ಪತ್ರೆಗಳ ನಡುವೆ ಸುಮಾರು ಒಂದು ಮೈಲು ದೂರ. ಮೃತ ಶರೀರವನ್ನು ಅಲ್ಲಿಂದ ತರುವುದು ಆತನ ಮೊದಲ ಕರ್ತವ್ಯವಿತ್ತು. ಅದಕ್ಕಾಗಿ ಟ್ಯಾಕ್ಸಿ ಸಿಗುವುದೇನೋ ಎಂದು ಅತ್ತಿತ್ತ ಇಣಿಕಿದನು. ಆದರೆ, ಜೀವಂತ ಹೆಣಗಳನ್ನೇ ಹೊರುವುದನ್ನು ಅಭ್ಯಾಸ ಮಾಡಿಕೊಂಡ ಟ್ಯಾಕ್ಸಿಗಳು ಮೃತ ಶರೀರವನ್ನು ಹೊರಲು ತಯಾರಿರಲಿಲ್ಲ. ಮತ್ತೆ ಮಾಡುವುದಾದರೂ ಏನು? ಅಸಹಾಯಕ ಶೂರನಾಗಿ ನಾಗರಾಜ ನೇರಾಗಿ ಆಸ್ಪತ್ರೆಯತ್ತ ಕಂಬಿ ಕೀಳತೊಡಗಿದನು.

ನಾಗರಾಜನ ತಾಯಿಗೆ ಐವರು ಮಕ್ಕಳು. ನಾಲ್ಕು ಗಂಡು; ಏಕಮಾತ್ರ ಪುತ್ರಿಯಾದ ಕುಸುಮಳ ವಿವಾಹ ಆಕೆಯ ಕುಮಾರಾವಸ್ಥೆಯಲ್ಲೇ ನಡೆದಿತ್ತು. ಆದರೆ, ಪತಿದೇವನು ನಗನಿಗೂ ಒಂದು ತೂಕ ಮಿಗಿಲು ಉದ್ಯೋಗದಲ್ಲಿದ್ದ. ಕುಸುಮ ವಿವಾಹಿತಳಾದ ಕೂಡಲೇ ಮನೆ ತುಂಬಲೆಂದು ಪತಿಗೃಹ ಸೇರಿದಳು; ಆದರೆ, ಆಕೆಯನ್ನು ಪತಿಯನ್ನುಳಿದು ಇತರರೆಲ್ಲರೂ ಹರಿದು ತಿನ್ನಲು ಬಯಸುವಂತಿದ್ದರು. ಇದಕ್ಕೆ ಕಾರಣವಾದರೂ ಇಲ್ಲದಿಲ್ಲ. ಕುಸುಮ ತನ್ನ ಅಕ್ಕ—ನಾದಿನಿಯರಿಗಿಂತ ಸುಂದರಿ ಮೇಲಾಗಿ ವಿದ್ಯಾಭ್ಯಾಸವನ್ನು ಕಲಿತು, ಉದ್ಯೋಗಾವಲಂಬಿಯಾಗಿದ್ದವಳು.

ಹೊಸ ಮನೆಗೆ ಬಂದ ಕುಸುಮ ಕುಸುಮ ಕೋಮಲ ಹೃದಯವಿದ್ದರೂ ಮನೆಯವರ ಒಲವುಗಳಿಸದೆ ಹೋದಳು. ಪತಿಯ ಒಲುಮೆಯೂ ಕೃತಕವೆಂಬುದು ಮನವರಿಕೆಯಾಗಲು ತಡವಾಗಲಿಲ್ಲ. ಆತನಾದರೂ ನಿಂತಲ್ಲಿ ನಿಲ್ಲದ ಕುಳಿತಲ್ಲಿ ಕೂರದ ಚಂಚಲಚಿತ್ತ, ಒಂದು ಬಾರಿ ಆತ ಕುಸುಮೆಯನ್ನು ಬೆಂಗಳೂರಿಗೆ ಕರೆದೊಯ್ದ. ನಾಲ್ಕಾರು ದಿನ ಕಳೆದ ಬಳಿಕ ಆತನ ಪತ್ತೆಯಿಲ್ಲ. ಉಳಕೊಂಡ ಹೋಟಲಲ್ಲಿ ಆಕೆಯೊಬ್ಬಳೆ. ಕೊನೆಗೆ ಮನೆಯಿಂದ ಕಾಗದ—ತಾನು ಊರು ಸೇರಿದ್ದೇನೆ; ನೀನು ಬರುವುದಾದರೆ ಬಾ, ಎಂದು! ಪಾಪ, ಹೋಟೇಲಿನ ಬಿಲ್ಲು ಕೊಡದೆ ಹೊರಡುವುದ ಉಂಟೆ? ಏಕಾಕಿಯಾಗಿ ಪ್ರಯಾಣ ಮಾಡುವುದುಂಟೆ?

ಕೊನೆಗೆ ದೃಢ ಮನಸ್ಸಿನವಳಾಗಿ ತನ್ನ ಆಭರಣಗಳಲ್ಲಿ ಒಂದೆರಡನ್ನು ಮಾರಿ ಊರು ಮನೆ ಸೇರಿದಳು ಕುಸುಮ.

ಹೀಗೆ ನಡೆದುದು ಒಂದೆರಡು ಸಲವಲ್ಲ. ಹತ್ತು ಹಲವು ಸಲ. ಇದೇ ರೀತಿ ಆಕೆಯ ಬಳಿಯಿದ್ದ ಸಂಪಾದನೆಯ ಹಣವು ಕರಗುತ್ತ ಬಂತು. ಪತಿ—ಮತ್ತಾತನ ಕುಟುಂಬದವರ ಜೀವನೋಪಾಯಕ್ಕೆಂದು ಆಕೆ ತನ್ನ ಕೂಡಿಟ್ಟ ಹಣವನ್ನೇ ಧಾರೆಯೆರೆದಳು. ಆದರೂ ಪತಿದೇವನು ತನ್ನ ತಾಮಸ ಸ್ವಭಾವವನ್ನು ಬಿಡಲಿಲ್ಲ ಆಕೆಯ ಸರ್ವಸ್ವವೂ ಈಗ ತನ್ನದೇ—ಅಲ್ಲವೇ?

ಪತಿಯ ಮೇಲೆ ವಿಶ್ವಾಸವಿಡುವುದಕ್ಕೂ ಅವಕಾಶವುಳಿಯಲಿಲ್ಲ. ಆಕೆಯ ಪ್ರಾಣವೊಂದನ್ನುಳಿದು ಉಳಿದ ಸಕಲವನ್ನೂ ಆತ ತನ್ನ ಕೈವಶ ಮಾಡಿಕೊಂಡು ಕಳೆದುಕೊಂಡ. ಅತ್ತ ಮನೆಯ ಪರಿಸ್ಥಿತಿಯೂ ಕೆಡುತ್ತ ಬಂತು. ಒಪ್ಪೊತ್ತು ಊಟಕ್ಕೇನೇ ತತ್ವಾರ ಬಂತು. ಈ ನರಕ ಯಾತನೆಯಿಂದ ಬಿಡುಗಡೆಯೆಂದು ಎಂದು ಆಕೆ ದಿನ ದೂಡುವ ಹೊತ್ತು ಬಂದಿತು.

ಒಂದು ದಿನ ಇದ್ದಕ್ಕಿದ್ದಂತೆ ಪತಿದೇವನ ಪ್ರತ್ಯಕ್ಷವಾಯಿತು. ತವರಿಗೆ ಹೋಗಿ ಬರೋಣವೆ? ಎಂದಾತ ಪ್ರಶ್ನಿಸಿದ. ಯಾವ ಹೆಣ್ಣಿಗೆ ತವರು ಬೇಡವೆನಿಸೀತು? ಇದುವರೆಗೆ ಹಲವು ಬಾರಿ ತವರಿಗೆ ಹೋಗುವ ತವಕಗೊಂಡಿದ್ದರೂ ಒಲ್ಲದಿದ್ದ ಪತಿಯೇ ಇಂದು ಸಿದ್ಧನಾಗಿರುವಾಗ, ನಾಲ್ಕಾರು ದಿನ ಹಾಯೆಂದು ತಂಪುಗಾಳಿಯಲ್ಲಿ ಉಸಿರಾಡಿಯಾದರೂ ಬರೋಣವೆಂದಾಕೆ ಒಪ್ಪಿದಳು.

ಆದರೆ, ಕುಸುಮೆಯ ಯೋಚನೆಯೆಲ್ಲಾ ತಲೆಕೆಳಗು. ತಾನು ಪೇಟೆ ತಿರುಗಾಡಿ ಬರುವೆನೆಂದು ಹೊರಟ ಪತಿ ಮಹಾರಾಜ ಮತ್ತೆ ಆಕೆಯಲ್ಲಿಗೆ ಬರಲಿಲ್ಲ. ನಾಲ್ಕಾರು ತಿಂಗಳುಗಳ ನಂತರ ಬಂದದ್ದು ರಿಜಿಸ್ಟ್ರಿ ನೋಟೀಸು. "ನೀನು ಬರುವುದಾದರೆ ಕೂಡಲೆ ಹೊರಟು ಬಾ; ಇಲ್ಲವಾದರೆ ಬೇರೆ ಮದುವೆ ಮಾಡಿಕೊಳ್ಳಲು ಸಿದ್ಧತೆ ನಡೆಸಬೇಕಾಗುತ್ತದೆ.

○ ○ ○

"ನೀನು ಹೊರಟು ಬಾ, ಬೇರೆ ಮದುವೆಯ ಸಿದ್ಧತೆ ಮಾಡಬೇಕು...."

ಹೊರಟು ಬರುವುದೆಂದರೇನು? ಅವರೇ ಬಂದಿಲ್ಲಿ ಬಿಟ್ಟು ಹೋಗಿರುವಾಗ, ನಾನಾಗಿ ಹೊರಟು ಬರುವುದೆಂದರೇನು? ನಾನೇನು ಕುಂಟಿಯೆ? ನನ್ನ ತವರು ಮನೆಯವರು ಅಷ್ಟೂ ದುಷ್ಕಲರೇ?

ಈಗ ನಾನು ಮಾಡಬೇಕಾದುದಾದರೂ ಏನು? ಹೊರಟು ಬಿಡುವುದೆ? ಯಾವ ಧೈರ್ಯದಲ್ಲಿ? ಒಲ್ಲದ ಮಡದಿಯಾಗಿ ಅವರೊಡನೆ ಬಾಳ್ವೆ ನಡೆಸುವುದು ಸಾಧ್ಯವೆ? ನನ್ನೊಡನಿದ್ದ ಸಂಪತ್ತನ್ನು, ಆಭರಣವೆಲ್ಲವನ್ನೂ ದೋಚಿ ಕಳೆದುಕೊಂಡ ಮೇಲೀಗ ಬರುವುದಾದರೆ ಬಾ ಎಂದು ಕರೆ. ಅಂದರೆ, ನನಗೆ ಬೇಕಾದರೆ ನಾನು ಹೋಗಬೇಕು; ಅವರಿಗೆ ನಾನು ಬೇಕಾಗಿಲ್ಲ, ಅವರಿಗೆ ಮರುಮದುವೆ!

ಪತಿ ಪರಾಯಣೆಯು ತನ್ನ ಜೀವಕ್ಕೆ ಸಂಚಕಾರ ಬಂದರೂ ಪತಿಯ ಮನಸ್ಸನ್ನು ತೃಪ್ತಿಪಡಿಸಬೇಕು. ಅದು ಆಕೆಯ ಕರ್ತವ್ಯ ಆದುದರಿಂದ ನಾನವರಿಗೆ ಬೇಡವಾಗಿರುವಾಗ, ಅವರ ಬಳಿಯಿದ್ದು ಅವರ ಮನಸ್ಸಿಗೆ ಆತಂಕವನ್ನೇಕೆ ಒಡ್ಡಬೇಕು? ಹೇಗೆ ಬೇಕಾದರೂ ಇರಲಿ; ಅವರಾದರೂ ತೃಪ್ತಿಯಿಂದ ಬಾಳಲಿ. ನನ್ನದಂತೂ ನರಕಯಾತನೆ, ಅಲ್ಲಿ; ಇಲ್ಲಿ ಕೂಡ. ಸ್ವರ್ಗ ಸುಖ ಅವರಿಗೆ ಎರಡನೆಯ ಮದುವೆಯಿಂದ ದೊರೆಯುವುದಾದರೆ, ಅದರಿಂದಲೇ ನಾನೂ ತೃಪ್ತೆ.

ಆದರೆ, ಬರಲಿರುವ ಆಕೆಯನ್ನೂ ಅವರು ಹೇಗೆ ನೋಡಿಕೊಂಡಾರು? ನನ್ನಂತೆಯೇ ಬೀದಿ ಬಿಕಾರಿಯನ್ನಾಗಿ ಮಾಡಲಾರರೆ?.... ದೇವರೇ, ಹಾಗೆ ಮಾಡಬೇಡ. ಈ ಪ್ರಪಂಚದ ಸುಖ ನನಗಾದರೂ ದೊರೆಯಲಿಲ್ಲ; ಅವಳಿಗಾದರೂ ಅದನ್ನು ಕರುಣಿಸು...."

○ ○ ○

"ವಕೀಲರೇ, ಈಗ ಏನು ಮಾಡುವುದಕ್ಕಾಗುತ್ತದೆ? ಅವರಂತೂ ಸಂಧಾನಕ್ಕೆ ಬಂದಿರುತ್ತಾರೆಂದು ಹೇಳಿದಿರಿ. ಅವಳೂ ತಾನು ಅವರಿಗೆ ಬೇಡವಾಗಿ ಅವರ ಬಳಿ ಹೋಗುವುದಿಲ್ಲವೆಂದು ಹಠ ಹಿಡಿದಿರುತ್ತಾಳೆ."

"ಆ ಕಡೆಯವರ ಅಭಿಪ್ರಾಯವೆಂದರೆ, ಎರಡನೆಯ ಮದುವೆಗೆ ಒಪ್ಪಿಗೆ ಪಡೆದುಕೊಳ್ಳುವುದು. ಅದಕ್ಕಾಗಿಯೇ ಅವರು ಹೂಡಿದ ತಂತ್ರವಿದು. ಆದರೆ, ಈಕೆ ಒಪ್ಪದೆ ಹೋದರೆ ಅವರ ಉಪಾಯ ನಡೆಯದು".

"ಅದು ಸರಿಯೆನ್ನಿ. ಆದರೆ, ಆಕೆ ಮಾತ್ರ ಅಲ್ಲಿ ಹೋಗುವುದಿಲ್ಲಾಂತ ಅನ್ನುತ್ತಾಳೆ."

"ಅವರಿಗೂ ಸ್ವಲ್ಪ ಸಂಶಯವಿತ್ತು, ನೀವು ಆ ದಿವಸ ಹೋಗಿ ಆ ಮದುವೆ ವಿಚಾರದಲ್ಲಿ ಅಡ್ಡಿಯೆತ್ತಿದ್ದರಿಂದ ತಮ್ಮ ಕೆಲಸ ಸುಲಭವಲ್ಲಾಂತ. ಅದ್ಕೇ, ಈಗ, ಹೇಗಾದ್ರೂ ಮಾಡಿ, ಅವಳನ್ನು ಒಲ್ಸಿ ತಮ್ಮ ಹೋಳಿಗೆಯನ್ನ ತುಪ್ಪಕ್ಕೆ ಹಾಕೋ ಯುಕ್ತಿ ಅವ್ರದ್ದು. ಅದಕ್ಕಾಗಿ ಒಂದೆರಡು ಸಾವಿರ ಕೈಬಿಟ್ರೂನೂ ಚಿಂತಿಲ್ಲಾಂತಿದ್ದಾರೆ"

"ವಕೀಲರೆ, ನನಗಂತೂ ಹೇಗೆ ಮುಂದುವರಿಯುವುದೆಂದು ತೋಚದಾಗಿದೆ. ಆಕೆಯ ಭವಿಷ್ಯದ ಬಗೆಗೆ ಚಿಂತಿಸುವಾಗ ಕತ್ತಲೆಯ ಕಂಗಳನ್ನ ದರುತ್ತದೆ. ಆದರೆ, ಆಕೆಯನ್ನು ಮತ್ತೆ, ಅವರ ಬಳಿಗೆ ಹೋದಳೆಂದರೆ, ಮುಂದೆ ಏನಾಗುವುದೋ ಕಲ್ಪನಾತೀತವಾಗಿದೆ. ವಿಷವಿಕ್ಕಿ ಕೊಲ್ಲುವುದಕ್ಕೂ ಆ ಕಟುಕರು ಹಿಂಜರಿಯಲಾರರು."

"ಅದಕ್ಕೆಂದೇ, ಏನು ಮಾಡುತ್ತೀರಿ?"

"ಯಾವುದಕ್ಕೂ ಅವಳನ್ನೇ ವಿಚಾರಿಸಿ, ತಿಳಿಸುತ್ತೇನೆ."

○ ○ ○ ○

ಅಶಕ್ತತೆಯಿಂದ ಕುಸುಮೆಗೆ ಏಳುವುದಕ್ಕೂ ಮಾತಾಡುವುದಕ್ಕೂ ಅಸಾಧ್ಯವಾಗಿತ್ತು. ಅಸ್ಥಿಪಂಜರದ ಮೇಲೆ ಚರ್ಮದ ಹೊದಿಕೆಯಿತ್ತೇ ಹೊರತು ರಕ್ತದ ಛಾಯೆಯೂ ಉಳಿದಿರಲಿಲ್ಲ. ಕಣ್ಣುಗಳು ನಿಷ್ಪ್ರಭ—ಮುಖ ಬಿಳಿಚು. ಅಪರಿಚಿತರು ರಾತ್ರೆ ಹೊತ್ತು ಕಂಡರೆಂದರೆ, ಇದೆಲ್ಲಿಯ ಭೂತವೆಂದು ಹೆದರಿ ಓಡುವಂತಿತ್ತು ಆ

(೧೨ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೇಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಭಾರತಿ ಬಣ್ಣಿಸಿದಂತೆ

ನಮ್ಮ ಮಾತೃಭೂಮಿ ಭಾರತ

ಸಮುದ್ರ ವಸನೇ ದೇವಿ| ಪರ್ವತ
ಸ್ತನ ಮಂಡಲೇ
ವಿಷ್ಣು ಪತ್ನಿ ನಮೋಸ್ತುಭ್ಯಂ |
ಪಾದಸ್ಪರ್ಶಂ ಕ್ಷಮಸ್ವಮೇ ||

ಇದು ಪ್ರಾತಃ ಸ್ಮರಣೆಯ [ಭಾರ ಭಕ್ತಿ ಸ್ತೋತ್ರಂ] ಒಂದು ಶ್ಲೋಕ. ಇ ಇಂದಿನ ಸಾಧಾರಣ ಬಾಲಕ—ಬಾಲಿಕಿಯರಿಗೆ ಅರ್ಥವಾಗುತ್ತದೆಯೇ? ಇಂ ನ ಬಹು ಪಾಲು ವಿದ್ಯಾರ್ಥಿಗಳ ಬಳಿ ನಮ್ಮ ದೇಶದ ಹೆಸರೇನು, ಅದರ ಎಲ್ಲೆ ಯಾವುದೆಂದು ಕೇಳಿದಾಗ ಸರಿಯಾದ ಉತ್ತರ ಸಿಗಬಹುದೇ? ನಮ್ಮ ಪೂರ್ವಜರು ನಮ್ಮ ಭೂಮಿಯ ಕುರಿತು ಯಾವ ಅಭಿಪ್ರಾಯ ಇಟ್ಟುಕೊಂಡಿದ್ದಾರೆಂಬುದಕ್ಕೆ ಮೇಲಿನ ಶ್ಲೋಕವೇ ಆಧಾರ. ಸಾಧಾರಣ ಬಾಲಕ-ಬಾಲಕಿಯರಿಗೂ ಅರ್ಥವಾಗಬೇಕೆಂದು ತಮಿಳಿನಲ್ಲಿ ವರ ಕವಿ ಭಾರತಿಯವರು ಹಾಡಿರುತ್ತಾರೆ—

"ಬಡಗಲು ಹಿಮಗಿರಿಯು, ಪಾಪಾ!—
ತೆಂಕ
ಲಲಿ ಬಾಕ್ಸ ಕುಮಾರಿ ಮೊನೆ ಪಾಪಾ!
ಕಡೆದಿರುವ ಪರ್ಗಡಲು ಕಂಡಾ!—
ಇದರ
ಪೂರ್ವಕೂ ಪಶ್ಚಿಮಕೂ ಪಾಪಾ!..
ಭೇದವಿಲ್ಲದ ಹಿಂದೂಸ್ಥಾನ—ಇದನು
ದೈವವೆಂದು ಕೈ ಮುಗಿಯಮ್ಮ,
ಪಾಪಾ!

ಕನ್ನಡದ ಕವಿಯೊರ್ವರು ಭಾರತಿಯವರ ಹಾಡನ್ನು ಭಾಷಾಂತರಿಸಿ ಕನ್ನಡ ಮಕ್ಕಳಿಗೆ ಉಪಕಾರ ಮಾಡಿರುವರು. ಭಾರತಿಯವರ ಹಾಡಿನಿಂದ ನಮ್ಮ ದೇಶದ ಗಡಿ ಯಾವುದೆಂಬುದು ಗೊತ್ತಾಗುತ್ತದೆ ದೈವ ಕೃಪೆಯಿಂದ ಈ ಪುಣ್ಯ ಭೂಮಿಗೆ ನೈಸರ್ಗಿಕ ಎಲ್ಲೆಗಳಿವೆ. ಮೂರು ಬದಿಗಳಲ್ಲಿ ಕ್ರಮಶಃ ಹಿಂದೂ ಸಾಗರ, ಹಿಂದೂ ಮಹಾ ಸಾಗರ ಮತ್ತು ಗಂಗಾ ಸಾಗರಗಳಿವೆ ಮೂಡಲ್ಲಿ ಉತ್ತರದಲ್ಲಿ ಧವಳಗಿರಿ ಹಿಮಾಲಯವಿದೆ. ಅದು ಹಿಮಾಚ್ಛಾದಿತ, ಆದಕ್ಕಿಂತಲೂ ಅದು ಹಿಮಾಲಯವಿದೆ: ಹಿಮವಾದರೂ ಏನಿದೆ? ಸಾಗರದಲ್ಲಾದರೂ ಏನಿದೆ? ಅಲ್ಲಿ ಸಿಹಿ ನೀರಿಂದರೆ. ಇಲ್ಲಿ ಉಪ್ಪು ನೀರು, ಅಷ್ಟೆ. ನೈಸರ್ಗಿಕ ಗಡಿ ಇರುವ ಈ ಭೂ ಪ್ರದೇಶ ಒಂದು ದೇಶ. ಅದು ಭೇದವಿಲ್ಲದ ಹಿಂದೂಸ್ಥಾನ. ಹಾಗಿರುವಾಗ ಯಾರಾದರೂ ಪ್ರತ್ಯೇಕ ನಾಡನ್ನು ಕೇಳಲು ಸಾಧ್ಯವೇನು? ಕೆಲ ಪುಢಾರಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಕೆಲ ಮುಗ್ಧ ಜನರನ್ನು ತಮ್ಮ ಜೋಳಿಗೆಯೊಳಗೆ ಹಾಕಿಕೊಂಡು ಸುಮ್ಮಗೆ ಶಬ್ದ ಮಾಡುತ್ತಿದ್ದರು. ಅದೂ ಈಗ ಮದರಾಸು ಎನಿಸಿಕೊಂಡಿರುವ ಈ ತಮಿಳು ಪ್ರಾಂತ್ಯದಲ್ಲಿ ಜಾಸ್ತಿಯಾಗಿತ್ತು. ಕೆಲ "ಕಲಿತವರು" ಬ್ರಿಟಿಷರ ಒಡೆದು ಆಳುವ ನೀತಿಗೆ ಬಲಿಯಾಗಿ ಅನೇಕ ವೇಷಗಳನ್ನು ಹಾಕಿಕೊಳ್ಳುತ್ತಿದ್ದರು. ಅವರಿಗೆ ಆಂಗ್ಲೇಯರು ಆಪ್ತ ಪೋಷಕರಾಗಿದ್ದರು. ಬರಬರುತ್ತ ಅಂತಹ ಒಂದು ಗುಂಪು 'ದ್ರಾವಿಡ ಕಳ್ಗಗಂ" ಎಂಬ ಹೆಸರಿನಿಂದಿದ್ದು ಆಂಗ್ಲೇಯರ ನಿರ್ಗಮನದ ಸಮಯ ಅದು ಒಡೆದು ಅದರಿಂದ ಕೆಲವರು ಹೊರಬಂದು 'ದ್ರಾವಿಡ ಮುನ್ನೇದ್ರ ಕಳ್ಗಗಂ" ಎಂಬ ರಾಜಕೀಯ ಪಕ್ಷವನ್ನು ಕಟ್ಟಿಕೊಂಡು, ಚುನಾವಣೆಯಲ್ಲಿ ಹೋರಾಡಿ ಕೆಲ ಸ್ಥಾನಗಳನ್ನು ಗಿಟ್ಟಿಸಿಕೊಂಡಿದ್ದರು. ಅದರಿಂದಲೂ ಕೆಲವರು ಹೊರಬಂದು ತಮಿಳು ದೇಶೀಯ ಪಕ್ಷವನ್ನು ಮಾಡಿಕೊಂಡು ಚುನಾವಣೆಯಲ್ಲಿ ಭೀಮಾರಿ ಹಾಕಿಸಿಕೊಂಡಿರುವರು; ಮತ್ತು ಇದೀಗ ಪುನಃ ಒಂದಾಗಿ ಬಿಟ್ಟಿದ್ದಾರೆ, ಈ ಪ್ರಯಾಣದ ಸಮಯ ಭಾರತಿಯವರು ಹಾಡಿರುವ ಇದು ಭೇದವಿಲ್ಲದ ಹಿಂದೂಸ್ಥಾನ"ವೆಂಬ ಹಾಡು ಅವರ ಕಿವಿಗೆ (ಕಿವುಡರಿಗೆ?" ಬಿದ್ದಿರಬೇಕು. ಪ್ರತ್ಯೇಕ ದ್ರಾವಿಡ (ತಮಿಳು?) ನಾಡನ್ನು ಕೇಳುವ ಛಟವನ್ನು 'ರಾಷ್ಟ್ರ" ಗಂಡಾಂತರಕ್ಕೊಳಗಾಗಿರುವಾಗ ಬಿಟ್ಟು ಬಿಡುವದಾಗಿ ಕಳೆದ ವರ್ಷ ಸಾರಿದ್ದ ದ್ರಾವಿಡ ಮುನ್ನೇಟ್ರ ಕಳ್ಗಗಮಿನವರು ಈ ವರ್ಷ ಇನ್ನೂ ಒಂದು ಹೆಜ್ಜೆ ಮುಂದಿಡು ನಮ್ಮ ಘಟನೆಯಿಂದ ಆ ಕೇಳಿಕೆಯನ್ನು ಕತ್ತರಿಸಿ ಬಿಸಾಡುವದಾಗಿ ಘೋಷಿಸಿದ್ದಾರೆ: ಅಂದರೆ ಇನ್ನೂ ಅವರು ಭೇದವಿಲ್ಲದ ಹಿಂದುಸ್ಥಾನವನ್ನು ದೈವವೆಂದು ಕೈಮುಗಿಯುವ [ವಿಷ್ಣು ಪತ್ನಿ ನಮೋಸ್ತುಭ್ಯಂ] ಸ್ಥಿತಿಗೆ ಪ್ರಗತಿ [ಮುನ್ನೇಟ್ರ] ಹೊಂದಿರುವುದಿಲ್ಲ. ಇದನ್ನು ದೈವ ಭೂಮಿಯೆಂದು ಕೈ ಮುಗಿಯಲಾರಂಭಿಸಿದೆವೆಂದರೆ ಆಗ ನಮಗಿದು ಕೇವಲ ಹಿಮ, ಕಲ್ಲು, ಮಣ್ಣು, ಮುಳ್ಳುಗಿರುವುದಿಲ್ಲ. ನಾವಾಗ ಪರಕೀಯರ ಆಕ್ರಮಣವನ್ನು ಸಹಿಸಲು ಸಿದ್ಧರಾಗಿರುವುದಿಲ್ಲ. ಇದನ್ನು ದೈವವೆಂದೇಕೆ ಅರಿತುಕೊಳ್ಳಬೇಕು; ಏತಕ್ಕಾಗಿ ಕೈ ಮುಗಿಯಬೇಕು?

"ಇನಿಯ ಸಿರಿತ್ತಿಮ್ಮ ಹೆತ್ತ ಬೆಳಿಸಿ,
ಕೃಪೆ
ಯಿತ್ತುದುಯಿ ನಾಡು."

ಹೌದು, ಹೌದು, ಬಲು ಭೇಷಕ್ಕಾಗಿ ಬಣ್ಣಿಸಿದ್ದಾರಯ್ಯ ಬರಡು ಭಾರತವನ್ನು ಭಾರತಿಯವರೆಂದು ಕಾರ್ಮಿಕ ಕುಲ ಕುಠಾರೋದ್ಧಾರಕರು ಹಾಹಾರಿ ಹೇಳಬಹುದು. ಕೇವಲ ಗಾಳಿ ಮಾತ್ರ ಇಲ್ಲಿರುವದರಿಂದ ಉಳಿದುದೆಲ್ಲವನ್ನೂ ಅವರು ಮಾಡಿಕೊಳ್ಳಲಾಗುತ್ತಿದೆಂದು ಅವರಾಡ ಬಹುದು. ಇಂದು ಆ ದುರವಸ್ಥೆ ಬಂದೊದಗಿರ ಬಹುದು ಘಜ್ನಿ ಮಹಮದ, ಘೋರಿ ಮುಹಮ್ಮದ, ನಾದಿರ್ ಷಾ, ತೈಮೂರ, ಚೇಂಗೀಸ್‌ಖಾನ್, ಕಾಸಿಂ. ಆವರ ಸಂತಾನ, ಬ್ರಿಟಿಷರು, ಫ್ರೆಂಚರು, ಪೋರ್ಚುಗೀಸರು, ಅಲ್ಲದೆ ಇನ್ನೂ ಅನ್ಯರು ಅದೇನನ್ನು ಇಲ್ಲಿಂದ ಕೊಳ್ಳೆ ಹೊಡೆದುಕೊಂಡು ಹೋಗಿರುವರು? ಕೇವಲ ಗಾಳಿಯನ್ನೇನು? ಹೋಗಲಿ, ಆ ಹೆಳೆಯ ಕಂತೆ. ಮತ್ತೇಕೆ ಬರಹೀಡಿತ ಚೈನಾದಿಂದ ಕೆಂಪು ಸೈನ್ಯ ಇತ್ತ ಬರಲು ಪ್ರಯತ್ನಿಸುತ್ತಿದೆ? ಅಲ್ಲಿ ಗಾಳಿ ಇಲ್ಲವೇನು?

"ಇನಿಯ ತೋಪುಗಳ ನಿಡು
ಬಯಲ್ಗಳ
ಎಣಿಕೆ ಮೀರಿ ಒಡೆದ ನಾಡು;
ಹಣ್ಣು ಕಾಯಿ ಗಡ್ಡೆಗೆಣಸು
ಧಾನ್ಯಂಗಳೆಲ್ಲವಂ
ಲೆಕ್ಕವಿರದೆ ಕೊಡುವ ನಾಡು ಇದು"ಎಂ

ದಿರುವರು ಭಾರತಿಯವರು. ಆದುದರಿಂದಲೇ ಈ ಪವಿತ್ರ ಭೂಮಿಯನ್ನು ಕಾಮಧೇನುವಿನ ಭೂಮಿ, ಕಲ್ಪ ವೃಕ್ಷದ ನಾಡೆಂದು ಹಿರಿಯರು ಹೇಳಿರುವರು. ಅದನ್ನೇ ಅನೇಕರು"ಧನ ಜನ ಬಲವೇ ಕಭೀ ನಕಮತೆ ಜಗವೊಕಭಸೇ ಬಡಕರ ಹಮತೆ ಹಿಂದಿಯಲ್ಲಿ ಹಾಡುತ್ತಿದ್ದಾರೆ.

ಕೇಳುವವರಿಗೆ ಕೊಡಯ್ಯಾ—ಹಣ್ಣು ಕಾಯಿ, ಗಡ್ಡೆ ಗೆಣಸು, ಧಾನ್ಯಗಳನ್ನು ಹೇರಳವಾಗಿ ಇರುವಾಗ, ದಾನ ವೀರ ಕರ್ಣನ ನಾಡಲ್ಲವೇ ಇದು— ಕಾರ್ಮಿಕರ ಕರ್ಣ ಕಡಿಯುವ ಕತ್ತಿ ಪ್ರಿಯರು ಹೇಳಬಹುದು. ನಿಡು ಬಯಲ್ಗಳು ಬೇಕಾದಷ್ಟಿರುವಾಗ ಬಿಟ್ಟು ಕೊಡಯ್ಯಾ ಸ್ವಲ್ಪ, ಅಧಿಕ ಜನಸಂಖ್ಯೆ ಇರುವವರಿಗೆ, ಏತಕ್ಕಯ್ಯಾ ಯುದ್ಧ? ನಾವು ಶಾಂತಿ ಪ್ರಿಯರಲ್ಲವೇನು? ಕವಿಯಾದ ಬಹುದು ಚೈನಿಚೇಲಾಗಳು, ಭಾರತೀಯರಿಗೆ ಇದು ಕೇವಲ ನಿಡು ಬಯಲ್ಗಳ ಗಡ್ಡೆಗೆಣಸುಗಳ ಭೂಮಿಯೇನು?

"ಭಾರತ ಭೂಮಿ ಪುರಾತನ
ಮಹಾಭೂಮಿ
ನೀವದರ ಪುತ್ರರೈ; ಈ ನೆನವ
ತೊರೆಯದಿರಿ

(೧೦ನೇ ಪುಟ ನೋಡಿರಿ)

In the Court of the
Subordinate Judge Udipi.
O. S. No. 43/61
R. I. A. 460/63 and 470/63
Nagamma Hegadthi & others—
Petitioners
Vs
Manjamma Hegadthi & others —
Respondents

Notice

is hereby given to the 3rd Respondent—Susheela Hegadthi also as guardian of her minor children that the above applications filed by the Petitioners for the appointment of a Receiver and for final decree stand posted to 18—1—64. You are directed to appear before the Court either in person or by pleader on 18—1—64 at 11 a. m. failing which orders will be passed in your absence.

B. O.
K. L. Aithal,
Vakil for Petitioners.
—1—64.

ನವಯುಗ
ಪ್ರಜಾರಾಜ್ಯ ವಿಶೇಷ ಸಂಚಿಕೆ.

೧೯೬೪ನೆಯ ಜನವರಿ ೨೬ರಂದು ನಮ್ಮ ನಾಡಿನ ಇತಿಹಾಸದಲ್ಲಿ ಚಿರ ಸ್ಮರಣೀಯವಾದ ಒಂದು ದಿನವಷ್ಟೆ. ಅಂದು ಭಾರತೀಯ ಪ್ರಜಾಪ್ರಭುತ್ವವು "ಪ್ರಜಾರಾಜ್ಯ ದಿನ"ವನ್ನಾಚರಿಸಲಿದೆ. ಈ ಹದಿನಾರು ವರ್ಷಗಳ ಸಂತತ ಉದ್ಯೋಗದ ಪರಿಣಾಮವಾಗಿ ನಾಡಿನ ನಾನಾ ಭಾಗದಲ್ಲಿ ಜನಜೀವನವನ್ನು ಉತ್ತಮಗೊಳಿಸುವ ಅನೇಕ ಸಾರ್ಥಕ ಪ್ರಯತ್ನಗಳು ನಡೆಯುತ್ತಿವೆ ಎಂಬುದನ್ನು ನೀವು ಬಲ್ಲಿರಿ.

ಒಟ್ಟು ನಾಡಿನ ರಾಜಕೀಯ-ಸಾಮಾಜಿಕ ಮತ್ತು ಸಾಂಸ್ಕೃತಿಕ ಪುರೋಗಮನದ ಫಲಶ್ರುತಿ ಎಂಬಂತೆ ಈ ಶುಭದಿನದಲ್ಲಿ ಕನ್ನಡ ನಾಡಿನ ಜನಪ್ರಿಯ ಸಾಪ್ತಾಹಿಕವೆನಿಸಿದ "**ನವಯುಗ**"ವು ಒಂದು ವಿಶೇಷ ಸಂಚಿಕೆಯನ್ನು ಹೊರಡಿಸುವ ಹವಣಿಕೆಯಲ್ಲಿದೆ. ಈ ಸಂಚಿಕೆಯಲ್ಲಿ ನಾಡಿನ ಪ್ರಖ್ಯಾತ ವಿದ್ವಾಂಸರು ಬರೆದ ಲೇಖನಗಳನ್ನು ಅಳವಡಿಸಿಕೊಳ್ಳಲಾಗಿದೆ ಚಿತ್ತಾಕರ್ಷಕವಾದ ಪ್ರಬಂಧ-ಕಥೆ ಕವನ-ನಾಟಕಗಳಿಂದೊಡಗೂಡಿದ **ಈ ವಿಶೇಷ ಸಂಚಿಕೆಯು ಕನ್ನಡ ನಾಡಿನ ಎಲ್ಲ ಭಾಗಗಳಲ್ಲಿಯೂ ಪ್ರಸಾರಿತವಾಗಲಿರುವುದರಿಂದ ನೀವು ಕೊಡುವ ಜಾಹೀರಾತಿಗೆ ಇದೊಂದು ಉತ್ತಮ ಸಾಧನವಾಗಿದೆ ಎಂದು ನಾವು ಬೇರೆ ಹೇಳಬೇಕಾಗಿಲ್ಲ.**

ದಯವಿಟ್ಟು ನಿಮ್ಮ ಜಾಹೀರಾತು ೧೧—೧—೧೯೬೪ರ ಒಳಗೆ ನಮ್ಮ ಕೈ ಸೇರುವಂತೆ ಉಪಕರಿಸಬೇಕಾಗಿ ಪ್ರಾರ್ಥನೆ.

ಇತಿ

ನಿಮ್ಮ ವಿಶ್ವಾಸಿ,
ಜಾಹೀರಾತು ವಿಭಾಗದ ಸಂಚಾಲಕ.

ADVERTISEMENT RATES

Full Page ...	Rs. 125/-	Back Cover Page ...	Rs. 500/-
Half Page ...	Rs. 65/-	Inside 1st Cover Page ...	Rs. 400/-
Quarter Page ...	Rs. 35/-	Inside 2nd Cover Page ...	Rs. 300/-

Ordinary Full Page in Double colours ... Rs. 200/-

MECHANICAL DATA

Paper size ... 15" x 10" Size of type page ... 13" x 8"
(37·5 Cm. x 25 Cm.) Half Crown (32·5 Cm. x 20 Cm.)

Date of Publication : 23—1—1964.

ಗೇಹರಾಜ್ಯದಲ್ಲಿ

ಸಮಸ್ಯೆ ಬಗೆಹರಿಯಿತು!

"ಇಲ್ಲಿ ಬಾರೇ, ಒಂದು ಗಡಚಿನ ಸಮಸ್ಯೆ ಇದೆ. ನಿನ್ನಿಂದ ಬಿಡಿಸೋಣಾಗುತ್ತೋ ನೋಡೋಣ"

"ಅಲ್ಲಾ ಸಮಸ್ಯೆಯಂತೆ ಸಮಸ್ಯೆ. ಯಾರ ಸಮಸ್ಯೆ ಅದು? ಅದನ್ನ ನಾನಾದ್ರೂ ಯಾಕೆ ಬಿಡಿಸ ಬೇಕೂಂತ .."

"ಯಾರದ್ದು ಅಂದ್ರೆ? ನನ್ನದೇ, ನಿನ್ನದೇ . ಹಾಗೆ ಇಡಿಯ ದೇಶದ ಮುಂದಿರೋ ಸಮಸ್ಯೆ ..."

"ಹಾಗಂದ್ರೆ ಏನೂಂತ? ದೇಶದ ಸಮಸ್ಯೆ ಬಿಡಿಸೋಕೆ ಮಂತ್ರಿ ಮಹಾಶಯರು ಸೊಂಟ ಕಟ್ಟಿರೋವಾಗ . . . ."

"ಸಾಕು ಬಿಡೇ ಅವರೇನು ಸಮಸ್ಯೆ ಬಿಡಿಸ್ತಾರೇಂತಿ? ಪಾಪ, ಕಾಲೇಜು ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸೋಕೇ ಅವ್ರಿಂದ ಆಗ್ಲಿಲ್ಲ ..."

"ಛಿ .... ಛೆ, ಏನು ಮಾತಿದು? ನಿಮ್ಮ ಬಾಯಲ್ಲೂ ಇಂಥಹ ಮಾತು.... ಸದ್ಯ ಮತ್ಯಾರ ಮುಂದೂ ಅನ್ಲಿಲ್ಲವಲ್ಲ ... ಅದೇ ಸಮಾಧಾನ .."

"ಹೌದು ಕಣೇ, ಏನು ಮಾಡೋದು . ಎಷ್ಟು ತಡೆದು ಹಿಡ್ಕೊಂಡ್ರೂ ಒಮ್ಮೊಮ್ಮೆ ಅರಿವಿಲ್ಲದ ಹಾಂಗೇ ಹೊರ ಬಂದು ಬಿಡುತ್ತೆ .."

"ಮತ್ತೆ ಹೇಳ್ತೀರಾ ನನಗೆ, ಒಂದು ಮಾತಾಡೋಕೆ ಮೊದ್ಲು ನೂರು ಯೋಚಿಸ್ಬೇಕೂಂತ .."

"ಹೌದು, ಹಾಗೆ ಮಾಡೋದು ಅಗತ್ಯ ನೋಡು"

"ತೀಲಿತು ಬಿಡಿ ನಿಮ್ಮ ಒಣ ಉಪದೇಶ. ಯಾರೋ ಅಂದಂತೆ ನಾವನ್ನೋ ಮಾತೆಲ್ಲ ನಮ್ಮನ್ನ ಬಿಟ್ಟು ಬೇರೆಯವರಿಗೇಂತ...."

"ಸಾಕು ಬಿಡೇ ನಿನ್ನ ಬಡಿವಾರ. ಸದ್ಯ ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡೂದಾದ್ರೆ ಕೊಡು, ..."

"ಅಯ್ಯಯ್ಯ ಇವ್ರೊಂದು ... ಬಂದವ್ರೇ ಸಮಸ್ಯೆ ಸಮಸ್ಯೇಂತ ಬಡ್ಕೋತಾ ಇದ್ದೀರಲ್ಲ ಏನೂಂತ ಹೇಳೊಲ್ಲ, ಮತ್ತೆ ಉತ್ರಹೇಳ್ಬೇಕಂತೆ! ಏನಿದು ನಿಮ್ಮ ಬುದ್ಧಿಗಿದ್ಧಿ ..."

"ಎಲ್ಲ ಸರಿಯಾಗಿದೆ ಕಣೇ ..."

ಮತ್ತೆ ಏನು ವಿಷ್ಯಾಂತ ಹೇಳೋಕೇಕೆ ಇಷ್ಟು ರಂಪಾಟ ಮಾಡ್ತಾ ಇದ್ದೀರಾ? ಹೇಳ್ಬಿಡಿ ಅಂಥ ಮನೆ ಹೋಗೋ ಪ್ರಶ್ನೆ ಏನೂಂತ ."

"ಮನೆ ಹೋಗೋದಲ್ವೆ ......ಪಕ್ಷ ಹೋಗೋದು"

"ಯಾವ ಪಕ್ಷ? ಯಾಕೆ ಹೋಗೋದು, ಏನು ಕಥೆ? ಎಲ್ಲ ಬಿಡಿಸಿ ಹೇಳೋದು ಬಿಟ್ಟು..."

"ಅದೇ ಪ್ರಜಾ ಸಮಾಜವಾದಿ ಪಕ್ಷದ ನಾಯಕ್ರು ಇದ್ದಾರಲ್ಲಾ...."

"ಯಾರದು....?"

"ಅಯ್ಯೋ, ಅದೂನು ಗೊತ್ತಿಲ್ಲ....ಭಲೇ ಜಾಣೆ ಕಣೆ ನೀನು, ಇಂಗ್ಲಿಷ್ ಓದೋಕೆ ಬರೋದಿಲ್ಲಾದ್ರೆ ಬಿಡು; ಬರೋ ಕನ್ನಡ ಪತ್ರಿಕೇನ ಓದೋಕೂ ಆಗೊಲ್ವೆ?"

"ಯಾರದು ಹೇಳೀಂತಂದ್ರೆ, ಸುರುವಾಯ್ತು ಇವ್ರದ್ದೊಂದು...."

"ಒಂದೂ ಅಲ್ಲ; ಎರಡೂ ಇಲ್ಲ. ನೋಡು, ಅಶೋಕ ಮೆಹ್ತಾ ಇದ್ದಾರೆ ನೋಡು...."



ಕೊಯನಾ ಅಣೆಕಟ್ಟಿನ ಕೆಲಸ ಭರದಿಂದ ಸಾಗುತ್ತಿದೆ.

"... ಅಂದ್ರೆ ಯೋಜನಾ ಆಯೋಗದ ಉಪಾಧ್ಯಕ್ಷರಾಗೋರೂನ್ನಾ...."

"ಸರಿ ಸರಿ, ಮತ್ತೆ ಗೊತ್ತಿದೆ ನಿನ್ಗೆ ಗೊತ್ತಿಲ್ಲಾಂತಂದೆಯಲ್ಲಾ...."

"ಏನು ಗೊತ್ತಿಲ್ಲಾಂತಂದೆ ನಾನು? ನಿಮ್ಮ ಸಮಸ್ಯೆ ಅರಿತಿಲ್ಲಾಂತಂದ್ರೆ..."

"ಮತ್ತೇನೂ ಇಲ್ಲ ಸಮಸ್ಯೆ, ಅವ್ರು ಆ ಉಪಾಧ್ಯಕ್ಷ ಪದವಿಯನ್ನ ಸ್ವೀಕರಿಸ್ತಾರಂಲ್ಲಾ...."

"ಬಹಳ ಚೆನ್ನಾಯ್ತು ಬಿಡಿ ಈಗ್ಲಾದ್ರೂ ನಿಮ್ಮ ಟೋಪಿ ಸರ್ಕಾರಕ್ಕೆ ಬಂತಲ್ಲಾ ಬುದ್ಧೀಂತ ದೇವ್ರಿಗೆ ತುಪ್ಪದ ನಂದಾದೀಪ ಹಚ್ಬೇಕು .."

"ಏನೇ ಅದು ನೀನನ್ನೋದು. ನಿನ್ನ ಹತ್ರ ಮಾತಾಡೋದೂ ಕಷ್ಟ ಕಣೇ ಬೆರಳು ತೋರ್ಸಿದ್ರೆ ಕೈ ನುಂಗೋ ಯತ್ನ ಮಾಡ್ತಿ."

"ಹಾಗೆಲ್ಲಾ ಮಾಡೋಕೆ ನಾನೇನೂ ಸರ್ಕಾರಿ ನೌಕರಿಯಲ್ಲಿಲ್ಲಾ?"

"ಇರ್ತಿದ್ರೆ ಹಾಗೇ ಮಾಡ್ತಿದ್ದೆ ಅಲ್ವೆ? ಅದ್ಕೇ ನಿನ್ನಪ್ಪ ಅಷ್ಟು ಓದ್ಸದೇ ಇರೋದು...."

"ಸ್ತ್ರೀ ವಿದ್ಯಾಭ್ಯಾಸದ ಸಮರ್ಥಕರಾದ ನೀವೇ ಹಾಗಂದ್ರೆ ಸರಿಯಾಗುತ್ತೆ ಬಿಡಿ..."

"ಅದೆಲ್ಲಾ ಇರ್ಲಿ ಈಗ ನೋಡೋಣ ಏನು ಮಾಡ್ಬೇಕೂಂತ ."

"ಯಾವುದಕ್ಕೀಂದ್ರೆ...."

"ಅದೇ ಅದ್ಕೆ ಮೆಹ್ತಾರು ಆ ಉಪಾಧ್ಯಕ್ಷ ಪದವಿ ಸ್ವೀಕರಿಸಲು ಒಪ್ಪಿದ್ದಾರೆ ಈಗ ಅವ್ರ ಪಕ್ಷದವ್ರು ಅವ್ರು ರಾಜಿನಾಮೆ ಕೊಡ್ಬೇಕೂಂತ ಅಂತಾರೆ ಅದ್ರಿಂದ ಮೆಹ್ತಾ ಮಾಡ್ಬೇಕಾದ್ದೂ ಏನು?"

"ಅಯ್ಯಯ್ಯೋ, ಕೊಳ್ಳೋರು ಬಿಡೋರು ಅವ್ರೇ ಇರೋವಾಗ ನೀವ್ಯಾಕೆ ಅದ್ಕೆ ಯೋಚಿಸ್ಬೇಕೂಂತ?"

"ಯಾಕೇಂತಂದ್ರೆ ...ಅದು ದೇಶದ ಪ್ರಶ್ನೆ ನೋಡು "

"ಹ್ಞಾ ...ದೇಶದ ಪ್ರಶ್ನೆಯಂತೆ ನಮ್ಮ ಕಥ ಹೀಗೇನೇ ಇರ್ಲಿ, ಅವ್ರು ಏನಂತಾರಂತೆ"

"ದೇಶದ ಕರೆಯನ್ನ ತಿರಸ್ಕರಿಸೋಕೆ ತಾನು ಸಿದ್ಧನಿಲ್ಲ ಅದ್ರಿಂದ ಪದವನ್ನ ಸ್ವೀಕರಿಸಿಯೇ ಬಿಡ್ತೇನೆ. ಅನ್ರೆ ರಾಜಿನಾಮೆ ಕೊಡೋ ಅಗತ್ಯವಿಲ್ಲಾಂತಂತಾರಂತೆ"

"ಅದ್ರೆ, ಯೋಜನಾ ಆಯೋಗ ಯಾರದ್ದೂಂತ?

"ನಮ್ಮೇರದ್ದು...."

"ನಿಮ್ಮ ಟೋಪಿಯವ್ರದ್ದಲ್ಲ ..." -

"ಅಯ್ಯೋ ಪೆದ್ದಿ, ಯೋಜನೆ ಒಂದು ಪಕ್ಷದಲ್ಲ ದೇಶದ್ದು ತಾನೆ?"

"ಹಾಗಂದ್ರೆ ಮೆಹ್ತಾ ಹೇಳಿದ್ದು ಸರಿಯಾಯ್ತು"

(೯ನೇ ಪುಟ ನೋಡಿರಿ)

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ ಇದೀಗ ನೂರಾಟಕ್ಕೆ ಸಿದ್ಧವಾಗಿದೆ

360 ಪುಟಗಳಿಗೂ ಮಿಕ್ಕಿದ ಪಾಕೆಟ್ ಎಡಿಷನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ. ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

೧೦೦ ಪ್ರತಿಗಳ ವರೆಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ... ..

ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಪ್ರೊ. ಕು.ಶಿ ಹರಿದಾಸ ಭಟ್ಟ,ಎಂ.ಎ.,

ಅವರ ನವೀನ ಪುಸ್ತಕಗಳು ರೂ.ನ.

ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಾ	2=00
ವಿಶ್ವದ ಸಂಪತ್ತು	2=00
ಅನೆಂಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ದಕ್ಷಿಣ ಕನ್ನಡದ

ಗೌರವಾನ್ವಿತ ವ್ಯಕ್ತಿಗಳು

ಮಣಿಪಾಲದ ಅಕೆಡೆಮಿ ಆಫ್ ಜನರಲ್ ಎಜುಕೇಶನ್, ಉಡುಪಿಯ ರೋಟರಿ ಕ್ಲಬ್ ಮತ್ತು ಅತಿಥೇಯ ಸಂಘ ಸಂಸ್ಥೆಗಳು ನವವರ್ಷಾರಂಭದ ಸುದಿನದಂದು ವಿವಿಧ ರಂಗಗಳಲ್ಲಿ ಯಶಸ್ವಿ ಸೇವೆ ಸಲ್ಲಿಸಿದ ನಾಲ್ವರು ಮಹಾನುಭಾವರನ್ನು ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನ ಆವರಣದ ಪುರಂದರ ಮಂಟಪದಲ್ಲಿ ಸತ್ಕರಿಸಿದುವು. ಅಧ್ಯಕ್ಷತೆ ವಹಿಸಿದ್ದ ಅಕೆಡೆಮಿಯ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈ ಅವರು ಅತಿಥಿಗಳನ್ನೂ ಸಭ್ಯರನ್ನೂ ಸ್ವಾಗತಿಸಿದರು. ಅತಿಥಿಗಳಲ್ಲಿ ಶ್ರೀ ಆಲ್ಫ್ರೆಡ್ ಜಿ ಸೋನ್ಸರನ್ನು ಶ್ರೀ ಪಿ. ಶ್ರೀಪತಿ ಆಚಾರ್ಯರೂ ಪ್ರೊ| ಎಚ್. ಸುಂದರ ರಾಯರನ್ನು ಡಾ| ಕೃಷ್ಣರಾಯರೂ ಡಾ| ಎ. ಎಫ್. ಕೊಯಿಲೊರನ್ನು ಡಾ| ಕೆ. ಎಲ್. ಐತಾಳರೂ ಶ್ರೀ ಎಂ. ವಾಮನ ನಾಯಕರನ್ನು ಶ್ರೀ ಟಿ ಎ. ಪೈ ಅವರೂ ಪರಿಚಯ ಮಾಡಿಕೊಟ್ಟರು. ಈ ಮಹನೀಯರಿಗೆ ಅಧ್ಯಕ್ಷರು ಪ್ರಶಸ್ತಿದಾನವನ್ನು ಮಾಡಿದ ಮೇಲೆ ಅತಿಥಿಯಾಗಿ ಸಮಾಗಮಿಸಿದ್ದ ಕವಿವರ್ಯ ದ. ರಾ. ಬೇಂದ್ರೆಯವರು ನವವರ್ಷಾರಂಭದಲ್ಲಿ ಇತರರಲ್ಲಿಯ ಸದ್ಗುಣಗಳನ್ನು ಗುರುತಿಸಿ ಗೌರವಿಸುವ ಸತ್ಸಂಪ್ರದಾಯ ಅನುಕರಣೀಯ ಹಾಗೂ ಆದರ್ಶನೀಯವೆಂದು ವಿಚಾರಪೂರ್ಣವೂ ವಿನೋದಕರವೂ ಆದ ಉಪನ್ಯಾಸ ಗೈದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಟಿ. ರಮೇಶ ಪೈ ಅವರು ಧನ್ಯವಾದಗಳನ್ನು ಅರ್ಪಿಸಿದರು. ಅಂತ್ಯದಲ್ಲಿ ಡಾ| ಬಿ ಬಿ ಶೆಟ್ಟಿ ಮತ್ತು ಪಾರ್ಟಿಯವರಿಂದ ಛಾಯಾ ಪ್ರದರ್ಶನ ನಡೆಯಿತು.

ಗೌರವಾನ್ವಿತರ ಸ್ಥೂಲ ಪರಿಚಯ

ಶ್ರೀ ಆಲ್ಫ್ರೆಡ್ ಜಿ. ಸೋನ್ಸ್

ಮಧ್ಯಮ ವರ್ಗದಲ್ಲಿ ಹುಟ್ಟಿಬಂದ ಶ್ರೀ ಸೋನ್ಸರು ಕೃಷಿ ಕ್ಷೇತ್ರದಲ್ಲಿ ಅದ್ವಿತೀಯ ಸೇವೆಯನ್ನು ಸಲ್ಲಿಸಿದವರು. ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜು ಪಿಯುಸಿರಿ ಪರಿಪ್ರಜ್ಞೆಯಿಂದ ಪಡೆದೇ ತಮ್ಮ ಶಿಕ್ಷಣವನ್ನು ಇವರು ಪಡೆದರು. ವಿದ್ಯಾರ್ಥಿದಸೆಯಲ್ಲಿಯೇ ತೋಟಗಾರಿಕೆಯಲ್ಲಿ ಆಸಕ್ತಿ ವಹಿಸಿದ ಇವರು ಮುಂದೆ ರಡು ವರ್ಷ ಅಧ್ಯಾಪಕ ವೃತ್ತಿಯನ್ನೂ ಕೈಗೊಂಡರು. ಆ ಮೇಲೆ ಅಲ್ಲಹಾಬಾದ ದ ಕೃಷಿ ಕಾಲೇಜಿನಲ್ಲಿ ಪ್ರೌಢ ಶಿಕ್ಷಣವನ್ನು ಮೂಡಬಿದಿರೆಯ ಬಾಸೆಲ್ ಮಿಶನ್ ಫರ್ಮಿನ ಸಹಾಯದಿಂದ ಹೊಂದಿದರು. ಸ್ಥಳೀಯ ವಾತಾವರಣವನ್ನು ಸರಿಯಾಗಿ ಅಧ್ಯಯನ ಮಾಡಿದ ಸೋನ್ಸರು "ದಾರಿದ್ರ್ಯ ಮತ್ತು ಅಪನ್ಯಾಯ"ಗಳ ಮೇಲೆ ಸಮರವನ್ನು ಹೂಡಿದರು. ರಾಜ್ಯ ಮತ್ತು ಕೇಂದ್ರ ಸರಕಾರದ ವಿವಿಧ ವ್ಯಾವಸಾಯಿಕ ಸಮಿತಿಗಳ ಸದಸ್ಯರಾಗಿ ಇವರು ತಮ್ಮ ಕ್ಷೇತ್ರದಲ್ಲಿ ಅವಿರತ ಸೇವೆ ಸಲ್ಲಿಸಿದ್ದಾರೆ. ತಾನು ಸ್ವಯಂ ರೈತರಾಗಿ ಉಳಿದಿರುವ ಶ್ರೀ ಸೋನ್ಸರು ರೈತರೆಲ್ಲರಿಗೆ ಮಾದರಿಯಾಗಿ ನಿಂತಿದ್ದಾರೆ.

ಪ್ರೊ| ಎಚ್. ಸುಂದರ ರಾವ್

ಪ್ರೊ| ಸುಂದರ ರಾಯರು ಜನಿಸಿದ್ದು ಉಡುಪಿಯಲ್ಲಿಯೇ. ಅವರ ತಂದೆ ಸಬ್ ಪೋಸ್ಟ್ ಮಾಸ್ತರರಾಗಿದ್ದುದರಿಂದ ಅವರ ಶಿಕ್ಷಣವು ಕಾಸರಗೋಡು, ಮಡಿಕೇರಿ, ಸಿಕಂದರಬಾದ, ಹೈದರಾಬಾದ, ಅನಂತಪುರ ಮತ್ತು ಮಂಗಳೂರುಗಳಲ್ಲಾಯಿತು. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಬಿ. ಎ. (ಆನರ್ಸ್) ಪದವೀಧರರಾಗಿ ಹೊರ ಬಿದ್ದರು; ಎಂ. ಎ. ಪದವಿಯನ್ನೂ ಪಡೆದರು. ಟ್ರೈಪ್ರೋಸ್ ಸಾಯನ್ಸಿನಲ್ಲಿಯೂ ಪ್ರಶಸ್ತಿ ಪತ್ರ ಗಳಿಸಿದರು. ತಿರುವನಂತಪುರದ ಅಲ್ವಾಯಿ ಕಾಲೇಜಿನಲ್ಲಿ ಇಂಗ್ಲೀಷಿನ ಟ್ಯೂಟರರಾಗಿ ಶ್ರೀ ರಾಯರು ಉದ್ಯೋಗವನ್ನಾರಂಭಿಸಿದರು. ಮುಂದೆ ೧೯೪೭ರಲ್ಲಿ ಉಡುಪಿಯ ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲರಾಗಿ ಮರಳಿ ಉಡುಪಿಗೆ ಬಂದರು. ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ರಂಗಗಳಲ್ಲಿ ಇವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಮದ್ರಾಸು-ಮೈಸೂರು ವಿಶ್ವವಿದ್ಯಾಲಯಗಳ ಸಿನೇಟರರಾಗಿದ್ದ ಇವರು ದಕ್ಷಿಣ ಭಾರತ ಅಧ್ಯಾಪಕ ಸಂಘ ಮತ್ತು ಅಖಿಲ ಭಾರತ ಶೈಕ್ಷಣಿಕ ಸಮ್ಮೇಳನಗಳ ನಡುವೆ ಸಂಬಂಧವಿರಿಸಿಕೊಂಡಿದ್ದರು. ಸಾಮಾಜಿಕ ಕಾರ್ಯ ಕಲಾಪಗಳಲ್ಲಿ ಆಸಕ್ತಿ ವಹಿಸಿದ ಪ್ರೊ| ಸುಂದರ ರಾಯರು ಸದ್ಯ ತಮ್ಮ ಉದ್ಯೋಗದಿಂದ ನಿವೃತ್ತರಾಗಿದ್ದಾರೆ.

ಡಾ| ಎ. ಎಫ್. ಕೊಯಿಲೊ

ಮಂಗಳೂರಿನ ಗೌರವಸ್ಥ ಮನೆತನದಲ್ಲಿ ಜನಿಸಿದ ಕೊಯಿಲೋರವರು ಕುಷ್ಠ ನಿವಾರಣಾ ಕಾರ್ಯದಲ್ಲಿಯೇ ತಮ್ಮ ಜೀವನವನ್ನು ಸವೆಯಿಸಿದವರು. ಬೊಂಬಾಯಿಯ ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿಗಳಿಸಿದ ನಂತರ ಇವರು ಕುಷ್ಠ ರೋಗದ ಮೇಲೆ ಕಲ್ಕತ್ತಾ ಮತ್ತು ಮದ್ರಾಸುಗಳಲ್ಲಿ ವಿಶೇಷ ಅಧ್ಯಯನ ನಡೆಸಿದರು. ೧೯೩೧ರಲ್ಲಿಯೇ ಇವರು ಈ ರೋಗ ಚಿಕಿತ್ಸೆಗೆ ತೊಡಗಿ ಅಂದಿನಿಂದ ಇಂದಿನ ವರೆಗೂ ಅದರಲ್ಲಿಯೇ ದುಡಿಯುತ್ತಿದ್ದಾರೆ. ಮಂಗಳೂರಿನ ವೆನ್‌ಲೋಕ್ ಆಸ್ಪತ್ರೆಯಲ್ಲಿ ಚರ್ಮರೋಗ ತಜ್ಞರೆಂದು ಕೆಲಸ ಮಾಡುತ್ತಾರೆ. ಸೈಂಟ್ ಜೋಸೆಫರ ಕುಷ್ಠ ಚಿಕಿತ್ಸಾಲಯದಲ್ಲಿ ಇವರು ವೈದ್ಯಕೀಯಾಧಿಕಾರಿಯಾಗಿದ್ದರು. ಇಂದಿಗೂ ಅವರು ಫಾದರ್ ಮುಲ್ಲರ್ಸ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕುಷ್ಠ ನಿವಾರಣಾ ಸಂಘದ ಅಧ್ವರ್ಯುವಾಗಿ ಅವರು ಸಲ್ಲಿಸಿದ ಸೇವೆಯು ಶ್ಲಾಘನೀಯ. ನಗರ ಸಭೆಯೇ ಮೊದಲಾದ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿಯೂ ಇವರು ದುಡಿದಿದ್ದಾರೆ. ಕರ್ನಾಟಕ ಸರಕಾರವು ಅವರಿಗೆ ದಸರಾ ಸಮಾರಂಭದಲ್ಲಿ ಸನ್ಮಾನವಿತ್ತಿತು. ಸುವರ್ಣ ಜ್ಯೂಬಿಲಿ ಸಂದರ್ಭದಲ್ಲಿ ಪೋಪ ಮಹಾಶಯರೂ ಅವರನ್ನು ಗೌರವಿಸಿದರು. ಅಮೂಲ್ಯ ಮತ್ತು ನಿಸ್ವಾರ್ಥವಾದ ಆರೋಗ್ಯ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿದ ಶ್ರೀ ಕೊಯಿಲೋರವರದು ಸಾರ್ಥಕ ಜೀವನವೆಂದರೆ ತಪ್ಪಲ್ಲ.

ಶ್ರೀ ಎಂ ವಾಮನ ನಾಯಕ್

ನಮ್ಮ ರಾಜ್ಯದ ಏಕಮೇವ ಗಡಿಯಾರ ತಯಾರಿಸುವ ಉದ್ದಿಮೆದಾರರಾದ ಮಂಗಳೂರಿನ ನಾಯಕ್ ಕ್ಲಾಕ್ ಇಂಡಸ್ಟ್ರಿಯ ಸ್ಥಾಪಕರು ಶ್ರೀ ಎಂ. ವಾಮನ ನಾಯಕರು, ಬೊಂಬಾಯಿಯ ವೆಸ್ಟ್ ಎಂಡ್ ವಾಚ್ ಕಂಪೆನಿಯಲ್ಲಿ ದುಡಿಯುತ್ತಿರುವಾಗಲೇ ಇವರಲ್ಲಿ ಇಂತಹ ಕಂಪೆನಿಯನ್ನು ಸ್ಥಾಪಿಸುವ ಹಂಬಲವಿತ್ತು. ಮುಂದೆ ತಮ್ಮೂರು ಮಂಗಳೂರಿಗೆ ಬಂದನಂತರವೂ ಅವರು ಗಡಿಯಾರ ರಿಪೇರಿಯ ಕಾರ್ಯದಲ್ಲೇ ತೃಪ್ತಿ ಪಡಬೇಕಾಯಿತು. ಜರ್ಮನ್ ಇಂಜಿನಿಯರನೊಬ್ಬನ ಸಂಪರ್ಕದಿಂದ ಅವರ ಆಶಾಲತೆ ಮರಳಿ ಚಿಗುರಿತು; ಹಲವಾರು ವಿಘ್ನ ಬಾಧೆಗಳನ್ನು ಎದುರಿಸುತ್ತ ಅವರು ೧೯೪೯ರಲ್ಲಿ ತಮ್ಮ ಕನಸನ್ನು ನನಸು ಮಾಡಲು ಶಕ್ತರಾದರು. ಹತ್ತು-ಹನ್ನೆರಡು ಕೆಲಸಗಾರರಿಂದ ಪ್ರಾರಂಭವಾದ ಅವರ ಗಡಿಯಾರ ತಯಾರಿಕೆಯ ಕಂಪೆನಿಯಲ್ಲಿ ಇಂದು ೧೦೦ ಜನ ನೌಕರರಿದ್ದಾರೆ; ಒಂದು ತಿಂಗಳಿಗೆ ೧,೦೦೦ ಗಡಿಯಾರಗಳನ್ನು ಇವರು ತಯಾರಿಸುತ್ತಾರೆ. ದೇಶದ ಎಲ್ಲೆಡೆಯಲ್ಲಿಯೂ ಇವಕ್ಕೆ ಬೇಡಿಕೆಯಿದೆ. ಆಧುನಿಕ ಯಂತ್ರಗಳಿಂದ ಸುಸಜ್ಜಿತವಾದ ಕಂಪೆನಿ, ಅನುಭವಿಗಳೂ ತಂತ್ರಜ್ಞರೂ ಆದ ಆದರ್ಶ ಮಾರ್ಗದರ್ಶಕರು ಮತ್ತು ಉತ್ಸಾಹಿ ಕರ್ಮಚಾರಿಗಳು. ತ್ರಿವೇಣೀ ಸಂಗಮವಾದ ನಾಯಕ್ ವಾಚ್ ಇಂಡಸ್ಟ್ರಿಯು ಯಶಸ್ವಿಯಾಗಿ ನಾಡಿನ ಆರ್ಥಿಕ ಪುನಾರಚನಾ ಕಾರ್ಯದಲ್ಲಿ ದುಡಿಯುತ್ತಿದೆ. ಇದಕ್ಕಾಗಿ ದೇಹ ಸವೆಸುವ ಶ್ರೀ ವಾಮನ ನಾಯಕರದು ಸಫಲ ಜೀವನವೆಂದರೆ ಸರಿಯಾಗುವುದು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. 42/ 63.

Smt. ಶಾಂತಾ ಬಾಯಿ M. ಬಂಗೇರ .
— ಅರ್ಜಿದಾರಳು

ಮತ್ತು

1. ಚಂದ್ರಶೇಖ, 2. ಕೇಶವ ಇವರ ಗಾರ್ಡಿಯನ್—J. K. ಅಮೀನ್
ಎದುರಿದಾರರು.

ಇವರೊಳಗೆ

ಈ ಮೂಲಕ ಯಾವತ್ತು ಜನರಿಗೆ ತಿಳಿಯಪಡಿಸುವುದೇನೆಂದರೆ- 1ನೇ ಅರ್ಜಿದಾರಳ ಗಂಡ ವ 1 ಮತ್ತು 2ನೇ ಎದುರಿಯವರ ತಂದೆ ತಾ. 18-7-1962ರಲ್ಲಿ ಮೃತಪಟ್ಟ ಮಧುರ B. ಬಂಗೇರರಿಗೆ ಬರತಕ್ಕ ಆಜ್ಞೆಯಲ್ಲಿ ಕಾಣಿಸಿದ ಐವೇಜು ವಗೈರೆ ವಸೂಲು ಮಾಡುವರೆ ಅರ್ಜಿದಾರಳು ಮಾಕ್ರೆ ಮೃತ ಮಧುರ B. ಬಂಗೇರರು ತಾ. 28-6-1963ರ ವೀಲೂ ನಾಮೆ ಪ್ರಕಾರ ಹಕ್ಕುದಾರಳಾಗಿರುವುದರಿಂದ ಆ ಬಗ್ಗೆ ಅರ್ಜಿದಾರಳು ತನ್ನ ಹೆಸರಿನಲ್ಲಿ Succession ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರಳು ಮೇಲಿನ ಅರ್ಜಿ ಮಾಡಿರುವುದರಿಂದ ಆ ಕುರಿತು ಯಾರಾದರೂ ಆಕ್ಷೇಪ ಹೇಳತಕ್ಕವರೂ ಇದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 27-1-1964ರಲ್ಲಿ ಹಗಲು ಗಂಟೆ 10ಕ್ಕೆ ಹಾಜರು ಆಗಿ ತ್ಯಾಜ್ಯರು ಮಾಡಿಕೊಳ್ಳತಕ್ಕದು. ತಪ್ಪಿದರೆ ಏಕಪಕ್ಷೀಯವಾಗಿ ತೀರ್ಮಾನಿಸಲು ಪಡುವುದು ಎಂಬ ಸಂಗತಿ ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

(By order of the court)

ಶಿವಾಜಿ ಶೆಟ್ಟಿ; ಪೆರೋಡಿ,

Advocate for petitioner.

Udipi Dated 6-1-64.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 537/63

ಕೊರಗಪ್ಪ ರೈ —ವಾದಿ.

7) ಕಮಲಾ—ಆಟ್ಟಕ್ಕ ಮಗಳು ಕುರಿಯ ಗ್ರಾಮದಲ್ಲಿ ಚುಂಚಪ್ಪ ರೈಗಳ ಮನೆಯಲ್ಲಿ.

ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಯು ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯನ್ನು ತಾ. 16-1-64ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿಲು ದಪರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/ M. Sadashiva Rao,

Vakil for plff.

ಪುತ್ತೂರು, ತಾ. 8—1—1964.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ನವಯುಗ

ರೂಪ	ಉಡುಪಿ	ವಾರ
೪೩	೯-೧-೧೯೬೪	೧೯

ಕಾಂಗ್ರೆಸಿನ ಹೊಸಗುರಿ

ಕಾಮರಾಜ ಸೂತ್ರವನ್ನು ಕಾರ್ಯಕೃತಗೊಳಿಸಿದುದು ಕಾಂಗ್ರೆಸಿನ ಇತಿಹಾಸದಲ್ಲೊಂದು ಮಹತ್ವದ ಮೈಲಿಗಲ್ಲೆಂದು ತಿಳಿಯಲಾಗುತ್ತಿದೆ. ಕಾಂಗ್ರೆಸಿಗಂತೂ ಆತ್ಮಶೋಧ ಮಾಡಿಕೊಳ್ಳುವ ಒಂದು ಅವಕಾಶವೆಂದೂ ತ್ಯಾಗ ಬುದ್ಧಿಯ ಪಾಠವೆಂದೂ ಅದನ್ನು ವರ್ಣಿಸಿದ್ದುಂಟು. ಪಕ್ಷದ ಸಂಘಟನೆಯ ಕಾರ್ಯದಲ್ಲಿ ಆಗಬೇಕಾದ ಕಾರ್ಯಕ್ರಮಗಳ ಬಗೆಗೆ ತೀವ್ರ ಗಮನ ಹರಿಸಿ, ಅದರಿಂದ ಪಕ್ಷದಲ್ಲಿ ನವಚೈತನ್ಯವನ್ನು ತುಂಬುವ ಸಂಜೀವಿನಿ ಶಕ್ತಿಯದು ಎಂದು ತಿಳಿಯಲಾಗುತ್ತಿದೆ. ಮುಖ್ಯ ಮುಖಂಡರು ಹೇಳುವಂತೆ, ಈ ಸೂತ್ರದ ಫಲವನ್ನು ಒಂದೆರಡು ದಿನ ಅಥವಾ ತಿಂಗಳುಗಳಲ್ಲಿ ನಿರೀಕ್ಷಿಸುವುದು ಸಾಧ್ಯವಿಲ್ಲವೆಂದೂ ಆ ಬಗ್ಗೆ ಇನ್ನೂ ಕೆಲಕಾಲ ಕಾದು ನೋಡಬೇಕಾಗಿದೆಯೆಂದೂ ಹೇಳುವುದು ಅಸಂಗತವಾಗದು. ಹೀಗಾಗಿ ಕಳೆದ ಪಾಟ್ನಾ ಅಧಿವೇಶನದಿಂದ ಇಂದು ನಡೆಯುವ ಭುವನೇಶ್ವರದ ಅಧಿವೇಶನದ ವರೆಗಿನ ಕಾಲವು ಕಾಂಗ್ರೆಸಿನ ಚರಿತ್ರೆಯಲ್ಲಿ ಮಹಾ ಸ್ಥಿತ್ಯಂತರದ ಅವಧಿಯೆನ್ನುವುದು ಸಮಂಜಸ.

ಆವಡಿಯಲ್ಲಿ ಶ್ರೀ ಯು. ಎನ್. ಢೇಬರರು ಕಾಂಗ್ರೆಸ್ ಅಧ್ಯಕ್ಷರಾದಾಗ, ಕಾಂಗ್ರೆಸ್ಸು ಸಮಾಜವಾದ ಮಾದರಿಯ ಸಮಾಜ ನಿರ್ಮಾಣವನ್ನೇ ತನ್ನ ಧ್ಯೇಯವೆಂದು ಘೋಷಿಸಿತು. ಇದೀಗ ಕಾಂಗ್ರೆಸ್ಸು ತನ್ನ ಗುರಿಯ ವ್ಯಾಖ್ಯೆಯನ್ನು ತುಸು ಬದಲಿಸಿ ಭಾರತದಲ್ಲಿ ಶಾಂತಿಯುತ ಹಾಗೂ ಘಟನಾತ್ಮಕ ವಿಧಾನಗಳ ಮೂಲಕ ಪಾರ್ಲಿಮೆಂಟರಿ ಸಮಾಜವಾದಿ ರಾಜ್ಯ ಸ್ಥಾಪಿಸುವುದೇ ತನ್ನ ಗುರಿಯೆಂದು ವಿಶಿಷ್ಟ ಆದರೆ, ಮಹತ್ವ ಪೂರ್ಣ ಬದಲಾವಣೆಯನ್ನು ಮಾಡಿದೆ. ಈ ಉದ್ದೇಶದಂತೆ ಹತ್ತು ವರ್ಷಗಳ ಒಳಗೆ ಒಂದು ಕನಿಷ್ಠ ಅಪೇಕ್ಷಿತ ಪ್ರಮಾಣದಲ್ಲಿ ಸರ್ವಾಂಗೀಣ ಉನ್ನತಿಯನ್ನು ಸಾಧಿಸುವ ಭರವಸೆಯನ್ನು ಕಾಂಗ್ರೆಸ್ಸು ಜನತೆಗೆ ನೀಡುತ್ತದೆ. ಧ್ಯೇಯವಾಕ್ಯದಲ್ಲಿ ನಿರೂಪಿತವಾದ ಸಮಾಜವಾದವು ಗಾಂಧೀ ತತ್ವಗಳಿಗನುಸಾರವಾಗಿಯೇ ವ್ಯವಹೃತವಾಗಬೇಕೆಂದೂ ಅದು ಮಾರ್ಕ್ಸವಾದವನ್ನು ಅನುಸರಿಸುವುದಿಲ್ಲವೆಂದೂ ಸ್ಪಷ್ಟ ಪಡಿಸಬೇಕೆಂದು ಕೆಲವು ಪ್ರತಿನಿಧಿಗಳು ವಾದಿಸಿದರು. ಆದರೆ, ಒಡಿಸ್ಸಾದ ನಾಯಕ ಡಾ| ಹರಿಕೃಷ್ಣ ಮೆಹತಾಬರು ಹೇಳುವಂತೆ ಮೂಲ ತಿದ್ದುಪಡಿ ಗೊತ್ತುವಳಿಯೇ ಕಾಂಗ್ರೆಸಿನ ಇಂಗಿತವನ್ನು ಪ್ರಸ್ಫುಟವಾಗಿ ವ್ಯಕ್ತಪಡಿಸುತ್ತದೆ. ಪ್ರಜಾಪ್ರಭುತ್ವದ ತಳಹದಿಯಲ್ಲಿ ರೂಪಿತವಾಗುವ ಸಮಾಜವೆಂದರೆ, ಭಾರತೀಯ ಸಮಾಜವಾದವು ಮಾರ್ಕ್ಸವಾದಕ್ಕಿಂತ ಭಿನ್ನವಾದುದೆಂದೂ ಗಾಂಧೀ ತತ್ವಗಳನ್ನೇ ಅನುಸರಿಸುವುದೆಂದೂ ಅರ್ಥ ಬರುತ್ತದೆ. ಆದುದರಿಂದ ಈ ಸಂಬಂಧದಲ್ಲಿ ಅಧಿಕ ವ್ಯಾಖ್ಯೆಗಿಂತ ತೀವ್ರಗತಿಯು ಅಗತ್ಯದ್ದೆನಿಸುತ್ತಿದೆ. ಕಾಂಗ್ರೆಸ್ಸು ಸಮಾಜವಾದದ ತತ್ವಗಳನ್ನು ಸ್ವೀಕರಿಸಿ ಹಲವು ವರ್ಷಗಳೇ ಸಂದುವಾದರೂ ಜನತೆಗೆ ಇದರ ಲಾಭವು ಲಭಿಸಿದೆಯೆಂದು ಹೇಳಲಿಕ್ಕಾಗುವುದಿಲ್ಲ. ಇದಕ್ಕೆ ಹಲವಾರು ವ್ಯಾವಹಾರಿಕ ಅಡೆತಡೆಗಳು ಕಾರಣವೆಂಬುದನ್ನು ಒಪ್ಪಲೇ ಬೇಕಾದರೂ ಜನತೆಯಲ್ಲಿ ಸಮಾಜವಾದದ ಬಗೆಗೆ ಹುಟ್ಟಿದ ಅತೃಪ್ತಿಯನ್ನು ನಾವು ಅಲ್ಲಗಳೆಯುವುದು ಸಾಧ್ಯವಿಲ್ಲ. ಕಾಂಗ್ರೆಸ್ಸಿನ ಸಮಾಜವಾದದ ಧ್ಯೇಯವು ತನ್ನ ಅರ್ಥವನ್ನು ಕಳೆದುಕೊಂಡಿದೆಯೆಂಬ ಅಭಿಪ್ರಾಯವೂ ಅಲ್ಲಲ್ಲಿ ಹೊರ ಬರತೊಡಗಿದೆ. ಆದುದರಿಂದ ಜನತೆಯಿಂದು ನಿರೀಕ್ಷಿಸುವುದು ಬರಿಯ ಧ್ಯೇಯವಾಕ್ಯಗಳನ್ನಲ್ಲ; ಅದರ ಕಾರ್ಯರೂಪವನ್ನು. ಇದಕ್ಕಾಗಿ ಕಾಂಗ್ರೆಸ್ಸು ಕೃತಿರೂಪದಲ್ಲಿ ತನ್ನ ಗುರಿಯನ್ನು ತ್ವರಿತ ಗತಿಯಲ್ಲಿ ತರುವುದು ಅತ್ಯಗತ್ಯದ್ದಿದೆ; ಮತ್ತು ಈ ದಿಸೆಯಲ್ಲದು ಕಾರ್ಯಪ್ರವೃತ್ತವಾಗಬೇಕಾಗಿದೆ.

ದೇಶವಿಂದು ಸಂಕ್ರಾಂತಿ ಕಾಲದಲ್ಲಿ ನಿಂತಿದೆ. ಒಂದೆಡೆ ದೇಶದ ಆಂತರಿಕ ಪುನಾರಚನೆಯನ್ನು ಮಾಡಿ ಬಡತನ, ಅಜ್ಞಾನ, ಅನಾರೋಗ್ಯಗಳ ವಿರುದ್ಧ ನಾವು ಸಮರ ಹೂಡಿ ಅವೆಲ್ಲ ದುರ್ಬಲತೆಗಳನ್ನು ಪರಾಜಯಗೊಳಿಸ ಬೇಕಾಗಿದೆ. ಇದರೊಂದಿಗೆ ದೇಶದ ಬಾಹ್ಯ ಶತ್ರುಗಳಾದ ಕಮ್ಯುನಿಷ್ಟ ಚೀನೀಯರನ್ನೂ ಹಿತ ಶತ್ರುಗಳಂತೆ ವರ್ತಿಸುವ ಪಾಕಿಸ್ತಾನದ ಬೆದರಿಕೆ ಗದರಿಕೆಗಳನ್ನೂ ನಾವು ದಿಟ್ಟತನದಿಂದ ಎದುರಿಸಿ, ನಮ್ಮ ರಕ್ಷಣೆಯನ್ನೂ ಮಾಡಿಕೊಳ್ಳಬೇಕಾಗಿದೆ. ಈ ಉಭಯ ಕರ್ತವ್ಯಗಳೂ ಕಠಿಣವಾದರೂ ಅನಿವಾರ್ಯ. ಎಂತಲೇ ನಾವಿಂದು ಈ ಬಗೆ ಅತ್ಯಂತಾಸಕ್ತಿಯಿಂದ ಕೆಚ್ಚೆದೆಯಿಂದ ಮುಂದಡಿಯಿಡಬೇಕಾಗಿದೆ. ಬಾಹ್ಯ ಶತ್ರುಗಳನ್ನು ಗೆಲ್ಲುವುದಕ್ಕೆ ಆಂತರಿಕಾಭಿವೃದ್ಧಿಯೇ ಮೂಲ ಪ್ರೇರಕ ಶಕ್ತಿಯೆಂಬುದರಿಂದ ನಾವು ರಾಷ್ಟ್ರ ಪುನಾರಚನೆಯಲ್ಲಿ ದ್ರುತಗತಿಯನ್ನು ಹೊಂದಬೇಕು. ಇದರ ಹೊಣೆಗಾರಿಕೆಯು ದೇಶದ ಆಡಳಿತ ಸೂತ್ರವನ್ನು ಹಿಡಿದಿರುವ ಮಹಾ ಸಂಸ್ಥೆ ಕಾಂಗ್ರೆಸ್ಸಿನ ತಲೆಯ ಮೇಲಿದೆ, ಯಾರು ಏನೇ ಹೇಳಿದರೂ ಕಾಂಗ್ರೆಸ್ ಈ ಗುರುತರ ಉತ್ತರದಾಯಿತ್ವದಿಂದ ದೂರವುಳಿಯುವುದು ಸಾಧ್ಯವಿಲ್ಲ. ಆದುದರಿಂದ ಇದೀಗ ಪರಿಷ್ಕರಿಸಿಕೊಂಡ ತನ್ನ ಗುರಿಯನ್ನು ನಿರ್ಧರಿಸಿದ ಸಮಯದಲ್ಲಿಯೇ ಅದನ್ನು ಸಾಧಿಸುವ ಕಾರ್ಯದಲ್ಲಿ ಯಶಸ್ವಿಯಾಗಬೇಕು; ಇದಕ್ಕಾಗಿ ಕಾಂಗ್ರೆಸಿಗರೆಲ್ಲರೂ ಕಳಕಳಿಯಿಂದ ದುಡಿಯಬೇಕು.

ಅಡಿಯು ಹಿಂದಿಡೆ…….

ಮಹಾರಾಷ್ಟ್ರದ ಮುಖ್ಯ ಮಂತ್ರಿ ಶ್ರೀ. ವಿ. ಪಿ. ನಾಯಕರು ಹೊಸ ವರ್ಷದ ಉಡುಗೊರೆಯೆಂದು ಪಾನಪ್ರತಿಬಂಧ ಕಾಯದೆಯಲ್ಲಿ ಕೆಲವೊಂದು ಮಹತ್ವದ ರಿಯಾಯತಿಯನ್ನು ಘೋಷಿಸಿದರು. ಇದರಿಂದ ಸ್ಫೂರ್ತಿಗೊಂಡ ಇತರ ಮುಖ್ಯ ಮಂತ್ರಿಗಳೂ ತಂತಮ್ಮ ರಾಜ್ಯದಲ್ಲಿ ಇಂತಹ ರಿಯಾಯತಿಯನ್ನು ಕೊಡುವುದರ ಬಗ್ಗೆ ವಿಚಾರಿಸ ಹತ್ತಿರುವರೆಂದು ತಿಳಿಯುತ್ತದೆ. ಆದರೆ, ಪಾನಪ್ರತಿಬಂಧ ಶಾಸನದ ಪರಿಣಾಮಗಳ ಕುರಿತು ಅಧ್ಯಯನ ನಡೆಸಿ ವರದಿಯೊಪ್ಪಿಸಬೇಕಾದ ಟೇಕ್ ಚಂದ ಸಮಿತಿಯ ವರದಿಯು ಇನ್ನೂ ಕೈಸೇರಬೇಕಾಗಿರುವುದರಿಂದ, ಈ ಬಗ್ಗೆ ಕುತೂಹಲವನ್ನು ವ್ಯಕ್ತಪಡಿಸಲಾಗುತ್ತಿದೆ. ಶ್ರೀ ನಾಯಕರು ಕೂಡ, ತಾವು ಘೋಷಿಸಿದ ಬದಲಾವಣೆಗಳನ್ನು ಎಪ್ರಿಲ್ ಮೊದಲನೆ ದಿನದಿಂದ ಮಾಡಲಿರುವುದಾಗಿಯೂ ಅದರೊಳಗೆ ನಿರೀಕ್ಷಿತ ವರದಿಯು ಕೈ ಸೇರುವುದೆಂದೂ ಹೇಳುತ್ತಾರೆ. ಕಾಂಗ್ರೆಸ್ಸು ಮುಂದಿಟ್ಟ ಆದರ್ಶಗಳಲ್ಲಿ ಪಾನಪ್ರತಿಬಂಧವೂ ಒಂದು. ಇದನ್ನು ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಬಹುಕಾಲ ಅನುಷ್ಠಾನಕ್ಕೆ ತರಲಾಗಿದೆ. ಈಗ ನಿಯೋಜಿಸಿರುವ ರಿಯಾಯತಿ ಅಥವಾ ರದ್ಧತಿಯು ಅಧಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಎನ್ನುವುದಕ್ಕಿಂತಲೂ ಕಾಯದೆಯನ್ನು ಕಟ್ಟುನಿಟ್ಟಾಗಿ ವ್ಯವಹೃತಗೊಳಿಸಲು ಸರಕಾರಗಳು ನಿರ್ಬಲವಾದುದೇ ಮುಖ್ಯ ಕಾರಣವೆನ್ನಬೇಕು. ಏಕೆಂದರೆ, ಜನತೆಗೆ ಅಮಲು ಕುಡಿಸಿ ಹಣಗಳಿಸುವುದು ನ್ಯಾಯ ಮಾರ್ಗವೆಂದು ಜನಹಿತ ಸರಕಾರ ಹೇಳಬಾರದು. ಹಾಗೆಂದು ತನ್ನ ಅಸಮರ್ಥತೆಯನ್ನು ಒಪ್ಪಿಕೊಳ್ಳಲು ಹಿಂಜರಿದು ಈ ಬಗೆಯ ಪುನರ್ ಪರಿಶೀಲನೆ ಮಾಡುವುದು ಕಾಂಗ್ರೆಸಿಗೆ ಶೋಭನೀಯವಲ್ಲ. ಕಾನೂನನ್ನು ಕಠಿನವಾಗಿ ಕಾರ್ಯರೂಪಕ್ಕೆ ತರುವುದರೊಡನೆ, ತಪ್ಪಿತಸ್ಥರನ್ನು ಕಂಡುಹಿಡಿಯುವ "ಮೆಶಿನರಿ"ಯಲ್ಲಿ ತೀವ್ರ ಸುಧಾರಣೆ ನಡೆಯಬೇಕು. ಕಾಯದೆ ಭಂಗ ಮಾಡುವವರನ್ನು ಯಾವ ಹಂಗು ದಾಕ್ಷಿಣ್ಯ ವಶೀಲಿ ರುಷುವತ್ತುಗಳಿಗೆ ಬಲಿ ಬೀಳದೆ ಉಗ್ರವಾಗಿ ದಂಡಿಸಬೇಕು. ಭಾರತದಂತಹ ರಾಷ್ಟ್ರದಲ್ಲಿಯೇ ಪಾನಪ್ರತಿಬಂಧವು ಅಯಶಸ್ವಿಯೆಂದು ಇಟ್ಟ ಹೆಜ್ಜೆಯನ್ನು ಹಿಂದಿಟ್ಟಲ್ಲಿ ಅದು ಮಹಾ ಕಲಂಕ; ಭಾರತಕ್ಕೂ, ಕಾಂಗ್ರೆಸ್ ಪಕ್ಷಕ್ಕೂ ಒಂದು ಸೋಲು ಎನ್ನಬೇಕಾಗುತ್ತದೆ.

ಜಗತ್ಪರ್ಯಟನ

ಕಾಮರಾಜ ನಾಡಾರ್

ಯಶಸ್ವೀ ಮುಖ್ಯ ಮಂತ್ರಿಯಾಗಿದ್ದ ಬ್ರಹ್ಮಚಾರಿ ಕಾಮರಾಜ ನಾಡಾರರು ತಾನು ರೂಪಿಸಿದ ಸೂತ್ರವನ್ನು ಅನುಷ್ಠಾನಕ್ಕೆ ತರುವ ಹೊಣೆಗಾರಿಕೆಯನ್ನು ಅನಿವಾರ್ಯವಾಗಿ ತಾನೇ ಹೊರಬೇಕಾಯಿತು. ಆದಕ್ಕೆಂದೇ ಅವರು ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಸ್ವೀಕರಿಸಬೇಕಾಯಿತು. ವ್ಯಕ್ತಿಗಿಂತ ಪಕ್ಷದ ಹಿತಕ್ಕೆ ಹೆಚ್ಚು ಪ್ರಾಧಾನ್ಯ ನೀಡುವ ನಾಡಾರರು ಕಾಮನನ್ನು ಜಯಿಸಿ ಕಾಮರಾಜ ನಾಮವನ್ನು ಸಾರ್ಥಕಗೊಳಿಸಿದಂತೆ ಪ್ರಜಾಸತ್ತಾತ್ಮಕ ಸಮಾಜವಾದವೆಂಬ ಕಾಂಗ್ರೆಸ್ ಪಕ್ಷದ ಪರಿಷ್ಕೃತ ಉದ್ದೇಶವನ್ನೂ ಸಾರ್ಥಕಗೊಳಿಸಬೇಕಾಗಿದೆ. ನಾಯಕರು ಮತ್ತು ಜನತೆಯ ಸಹಕಾರ ಅವರಿಗೆ ದೊರೆಯಿತೆಂದರೆ, ಯಶಸ್ಸೂ ತಾನಾಗಿಯೇ ಅವರದ್ದಾಗುವುದು.

ಶಂಸೂದ್ದೀನ

ಶ್ರೀನಗರದಲ್ಲಿನ ಮಹಮ್ಮದ ಪೈಗಂಬರರ ಪವಿತ್ರ ಕೇಶವು ಕಾಣೆಯಾದುದರಿಂದ ನಡೆದ ಗಲಭೆಯು ಆ ಕೇಶವು ಅಲ್ಲೇ ಇಡಲ್ಪಟ್ಟುದರಿಂದ ನಿಲ್ಲುವಂತಾಯಿತು. ಜಮ್ಮೂ ಕಾಶ್ಮೀರದ ಮುಖ್ಯ ಮಂತ್ರಿ ಶಂಸುದ್ದೀನರು ಸಮಾಧಾನ ತಾಳುವಂತಾಯಿತು; ಕೇಂದ್ರ ಗೃಹ ಖಾತೆಯೂ ಸಮಾಧಾನದ ಉಸಿರುಬಿಡುವಂತಾಯಿತು. ಮಧ್ಯಾವಧಿಯಲ್ಲಿ ಕೇಶದ ಕಳವಿನ ಬಗೆಗೆ ನಡೆದ ಸಂಶೋಧನಾ ಕಾರ್ಯದ ವಿವರಗಳು ತಿಳಿದಿಲ್ಲವಾದರೂ ಅಪಹಾರ ನೆಸಗಿದವರ ಶೋಧವಿನ್ನೂ ಆಗಿಲ್ಲವೆಂದು ಗೊತ್ತಾಗುತ್ತದೆ. ಅನವಶ್ಯ ತಿಳಿಗೇಡಿತನದಿಂದ ಅನಪೇಕ್ಷಿತ ಉದ್ವೇಗಕ್ಕೆ ಕಾರಣನಾದ ಅಪಹಾರಿಯನ್ನು ಹಿಡಿದು ಅವನ ಮೇಲೆ ಖಟ್ಲೆ ಹೊರಿಸುವ ಭರವಸೆಯನ್ನು ಕೇಂದ್ರ ಸರಕಾರವಿತ್ತಿದೆ.

ಅಯ್ಯೂಬಖಾನ್

ಪಾಕಿಸ್ತಾನದಲ್ಲಿ ಸರ್ವಾಧಿಕಾರವು ಯಾವ ರೀತಿ ನಡೆಯುತ್ತಿದೆಯೆಂಬುದನ್ನು ಪ್ರೆ| ಜ| ಆಯ್ಯೂಬಖಾನರ ಆಡಳಿತೆಯು ಸಾರಿ ಹೇಳುತ್ತಲೇ ಬಂದಿದೆ. ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕು ಮಾಡಿದ ಅಧ್ಯಕ್ಷ ಅಯ್ಯೂಬರೀಗ ತನ್ನ ವಿರೋಧಿಯಾದ ಜಮಾತೆ ಇಸ್ಲಾಮ ಪಕ್ಷದ ಮೇಲೆ ಪ್ರತಿಬಂಧವನ್ನು ಹೇರಿದ್ದು ಮಾತ್ರವಲ್ಲ, ಅದರ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿಗಳನ್ನೂ ಹಲವು ಸದಸ್ಯರನ್ನು ಬಂಧಿಸಿದ್ದಾರೆ ಅಯ್ಯೂಬರ ಮುಸ್ಲಿಂ ಲೀಗ ಸರಕಾರದ ನೀತಿಯನ್ನು ವಿರೋಧಿಸುವ ಸುಸಂಘಟಿತ ಪಕ್ಷವಿದಾಗಿತ್ತು. ಅತ್ಯಧಿಕ ರಾಜಕೀಯ ಚಟುವಟಿಕೆಯುಳ್ಳ ಈ ಪಕ್ಷಕ್ಕೆ ಅರ್ಧ ಚಂದ್ರ ಬಿದ್ದುದರಿಂದ ಅಯ್ಯೂಬರ ಸರ್ವಾಧಿಕಾರವು ನಿರಂತರವಾಗಿ ಮುಂದುವರಿಯಲಿನ್ನು ಅಡ್ಡಿಯಿಲ್ಲ.

ನಿಕೀಟಾ ಕ್ರುಶ್ಚೇವ್

ಸೋವಿಯತ್ ರಶ್ಯ ಮತ್ತು ಚೀನಾಗಳ ನಡುವಣ ತಾತ್ವಿಕ ಭಿನ್ನಾಭಿಪ್ರಾಯವು ಜಗಜ್ಜನಿತವಿರುವಂತೆಯೇ ಅದು ಅಪರಿಹಾರ್ಯವೆಂಬುದನ್ನೂ ಎಲ್ಲರೂ ಬಲ್ಲರು. ಸೋವಿಯತ್ತು ಈಗ ಮತ್ತೆ ಪೀಕಿಂಗಿಗೆ ಒಂದು ಕರೆಯಿತ್ತು ಅದು ಶಕ್ತಿಪ್ರದರ್ಶನದ ಮೂಲಕ ಶಾಂತಿಯುತ ಜೀವನ ನಡೆಸುವ ಇರಾದೆಯನ್ನು ಬಿಟ್ಟು ಬಿಡಬೇಕೆಂದು ಕೇಳಿಕೊಂಡಿದೆ. ಸೋವಿಯತ್ ಪ್ರಧಾನಿ ನಿಕೀಟಾ ಕ್ರುಶ್ಚೇವರು ಆಕ್ರಮಣವನ್ನು ಹಿಂದಿನಿಂದಲೂ ವಿರೋಧಿಸುತ್ತ ಬಂದವರು. ಸಧ್ಯ, ಚೀನಾವು ಭಾರತದ ಗಡಿಯಲ್ಲಿ ಕೊಡುತ್ತಿರುವ ಉಪದ್ರವವು ವಿಶ್ವಶಾಂತಿಗೆ ಮಾರಕವೆಂದು ಅವರು ಸರಿಯಾಗಿ ತಿಳಿದಿದ್ದಾರೆ.

ಫಿಜೋ

ನಾಗಾ ಬಂಡುಗಾರರ ನಾಯಕ ಫಿಜೋವಿನ ಜೀವ ರಕ್ಷಣೆಯ ಬಗ್ಗೆ ಭಾರತ ಸರಕಾರವು ಭರವಸೆಯನ್ನು ನೀಡುವ ಉದಾರತೆಯನ್ನು ತೋರಿಸಿರುವುದರಿಂದ ಅವರು ಎಂದು ಬೇಕಾದರೂ ನಾಗಾಲ್ಯಾಂಡನ್ನು ಹೊಗಬಹುದು. ಮುಖ್ಯ ಮಂತ್ರಿ ಶಿಲೂ ಆವೊರವರೊಡನೆ ಫಿಜೋವಿಗೆ ಮಾತನಾಡುವ ಇಚ್ಛೆಯಿರುವುದೆಂದೂ ಅದಕ್ಕಾಗಿ ಅವೊ ಕೇಂದ್ರ ಸರಕಾರವನ್ನು ರಕ್ಷಣೆ ನೀಡುವಂತೆ ಕೇಳಿಕೊಂಡ

ಅಲ್ಲಲ್ಲಿಯ ಸುದ್ದಿ ಸಾರ

ಸುಬ್ರಹ್ಮಣ್ಯದಲ್ಲಿ ಧರ್ಮ ಸಮ್ಮೇಳನ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಇದೇ ತಾ. ೫ರಲ್ಲಿ ಧರ್ಮ ಸಮ್ಮೇಳನವು ಭವ್ಯವಾಗಿ ಅಲಂಕರಿಸಲ್ಪಟ್ಟ ವಿಶಾಲ ಮಂಟಪದಲ್ಲಿ ಮಣಿಪಾಲದ ಏಕಾಡೆಮಿ ಒಫ್ ಜನರಲ್ ಎಜುಕೇಶನಿನ ರಜಿಸ್ಟ್ರಾರ್ ಡಾ। ಟಿ ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು ದೇವಳದ ಆಡಳಿತ ಮಂಡಳಿಯ ಅಧ್ಯಕ್ಷರೂ ಪುತ್ತೂರು ತಾಲೂಕು ಬೋರ್ಡಿನ ಅಧ್ಯಕ್ಷರೂ ಆದ ಎಡ್ವಕೇಟ್ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಸ್ವಾಗತ ಭಾಷಣ ಮಾಡುತ್ತಾ ಇತ್ತೀಚಿಗೆ ದೇವಸ್ಥಾನದಲ್ಲಾದ ಪ್ರಗತಿ ಕಾರ್ಯಗಳನ್ನು ವಿವರಿಸಿ ಮಲೆನಾಡಿಗೊಂದು ಕಾಲೇಜನ್ನು ಸ್ಥಾಪಿಸುವ ಉದ್ದೇಶವಿದೆಯೆಂದು ಹೇಳಿದರು. ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಬಿ. ನಾರಾಯಣ ಶೆಟ್ಟರು ೧೯೫೭ರಿಂದ ಪ್ರಾರಂಭವಾದ ಧರ್ಮಸಮ್ಮೇಳನದ ವರದಿಯನ್ನೊಪ್ಪಿಸುತ್ತ ಈ ಸಮ್ಮೇಳನವು ವರ್ಷವರ್ಷವೂ ಹೆಚ್ಚುಹೆಚ್ಚು ಜನರನ್ನು ಆಕರ್ಷಿಸುತ್ತಿದೆ ಎಂದರು. ಉಡುಪಿ ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಶಿಕ್ಷಣ ಮತ್ತು ಧರ್ಮದ ಕುರಿತು ಮಾತನಾಡುತ್ತ ಸ್ವಾತಂತ್ರ್ಯ ದೊರೆತು 16 ವರ್ಷ ಕಳೆದರೂ ನಮ್ಮ ದೇಶಕ್ಕೆ ಅನುಗುಣವಾದ ಶಿಕ್ಷಣ ಕ್ರಮವನ್ನು ರೂಪಿಸಿಲ್ಲವೆಂದೂ ವಿದ್ಯಾರ್ಥಿಗಳಲ್ಲಿ ಧರ್ಮದ ಮನೋಭಾವ ಮೂಡಿಸುವುದು ಅಗತ್ಯವೆಂದು ತಿಳಿಸಿದರು. ಎಂ. ಜಿ. ಎಂ. ಕಾಲೇಜಿನ ಪ್ರೊಫೆಸರ್ ಶ್ರೀ ಯು. ಲಕ್ಷ್ಮೀನಾರಾಯಣ ಆಚಾರರು ವಿಜ್ಞಾನ ಮತ್ತು ಧರ್ಮದ ಬಗೆಗೆ ಮಾತನಾಡುತ್ತ, ನಮ್ಮ ಹಿರಿಯರು ವಿಜ್ಞಾನದ ಕುರಿತು ಅಗಾಧ ಪಾಂಡಿತ್ಯ ಉಳ್ಳವರಾಗಿದ್ದರೆಂದೂ ನಮ್ಮ ನಡಾವಳಿಗಳಲ್ಲಿ ಧರ್ಮವನ್ನು ಪಾಲಿಸಬೇಕೆಂದೂ ತಿಳಿಸಿದರು. ಅಧ್ಯಕ್ಷ ಡಾ। ಪೈಗಳು ಮಾತನಾಡುತ್ತ ಹಿಂದೂ ಧರ್ಮವು ಅತ್ಯಂತ ವಿಶಾಲವಾದುದೆಂದೂ ಪ್ರತಿಯೊಂದು ಕಟ್ಟುಕಟ್ಟಳೆಗಳಲ್ಲಿ, ಹಬ್ಬ ಉತ್ಸವಗಳಲ್ಲಿ ಧರ್ಮವು ಅಡಗಿದೆಯೆಂದೂ ಹಿಂದೂ ಧರ್ಮವು ಅತ್ಯಂತ ಶ್ರೇಷ್ಠವಾದುದೆಂದೂ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ವರ್ಗದವರು ಇಂತಹ ಸಮ್ಮೇಳನವನ್ನು ಜರಗಿಸುತ್ತಿರುವುದು ಅನುಸರಣೀಯವೆಂದೂ ಹೇಳಿದರು. ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಬಿ. ಬಾಲಕೃಷ್ಣ ರೈಗಳು ಧನ್ಯವಾದಗಳನ್ನು ಅರ್ಪಿಸುತ್ತಾ ಇತ್ತೀಚೆಗೆ ದೇವಳದ ಕಡೆಯಿಂದ ಸ್ಥಾಪಿಸಿರುವ ಹೈಸ್ಕೂಲಿನ ಪ್ರಗತಿಗಾಗಿ ಸರ್ವರ ಸಹಕಾರವನ್ನು ಕೋರಿದರು. ದೇವಳದ ಮೆನೇಜರ್ ಶ್ರೀ ಎಸ್. ರಾಮಕೃಷ್ಣ ಭಟ್ಟರೂ ಶ್ರೀ ಡಿ ಕೆ. ಹೆಬ್ಬಾರರೂ ಮತ್ತಿತರರೂ ಕಾರ್ಯಕ್ರಮಗಳ ವ್ಯವಸ್ಥೆಗಾಗಿ ಪರಿಶ್ರಮಿಸಿದ್ದರು. ಜಿಲ್ಲಾಧಿಕಾರಿ ಶ್ರೀ ರಾಮಚಂದ್ರನ್‌ರೂ ಉಪಸ್ಥಿತರಿದ್ದರು.

ಬಡಗುಬೆಟ್ಟು ಮಹಾಬಲ ಹೆಗ್ಡೆಯವರ ನಿಧನ—ಪ್ರಸಿದ್ಧ ಬಂಟರ ಯಾನ ನಾಡವ ಕುಟುಂಬದ ಹಿರಿಯರೂ ಪರೋಪಕಾರಿಗಳೂ ಆದ ಬಡಗುಬೆಟ್ಟು ಮಹಾಬಲ ಹೆಗ್ಡೆಯವರು ತಾ. 6-1-64ರಂದು ತಮ್ಮ 75ನೆಯ ವಯಸ್ಸಿನ

ರೆಂದೂ ಗೊತ್ತಾಗಿದೆ. ಪ್ರತ್ಯೇಕ ಸ್ವತಂತ್ರ ನಾಗಾಲ್ಯಾಂಡಿನ ಬೇಡಿಕೆಯನು ಮುಂದಿಟ್ಟು ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿದ ಫಿಜೋ ಇಂದು ಎಲ್ಲಿರುವರೆಂದು ಸರಿಯಾಗಿ ತಿಳಿದಿಲ್ಲ; ಪ್ರಾಯಶಃ ಇಂಗ್ಲೆಂಡಿನಲ್ಲಿರಬೇಕೆನ್ನಲಾಗುತ್ತಿದೆ.

WANTED: A clerk for the Udipi Taluk Agricultural Produce Co-op. Marketing Society Ltd., Court Road, Udipi. The minimum qualification required is pass in S. S. L. C. The application addressed to the President, should reach the office before 20—1—64.

ಲ್ಲಿ ಉಡುಪಿಯಲ್ಲಿ ತಮ್ಮ ಪುತ್ರ ಶ್ರೀ ಬಿ. ಮಹೇಶ ಹೆಗ್ಡೆಯವರ ನಿವಾಸದಲ್ಲಿ ಹೃದಯ ಸ್ತಂಭನದಿಂದ ನಿಧನರಾದರು. ದಿವಂಗತ ಹೆಗ್ಡೆಯವರು ಕೃಷಿಯಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿದ್ದು ಈ ಕುರಿತು ಅನುಭವ ಪಡೆದುಕೊಳ್ಳಲು ದೇಶದ ಹಲವು ಕಡೆಗೆ ಸಂಚರಿಸಿದ್ದರು. ಸದಾ ಉತ್ಸಾಹಿಗಳೂ ಕಾರ್ಯಪಟುಗಳೂ ಆಗಿ ಜನಾನುರಾಗ ಬೆಳೆಸಿದ್ದರು

ಮಣಿಪಾಲದಲ್ಲಿ ಕುಟುಂಬ ಯೋಜನಾ ಶಿಬಿರ—ಪುಕಳೆದ ತಾ. 21ರಂದು ಜಿಲ್ಲಾ ಸರ್ಜನ್ ಡಾ. ಶ್ರೀನಿವಾಸನ್‌ರವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಟಿ ರಮೇಶ ಪೈಯವರು ಸ್ವಾಗತಿಸಿದರು ಡಾ. ಟಿ ಎಂ. ಪೈಯವರು ಸಂದೇಶಗಳನ್ನೋದಿದರು. ಸಭೆಯ ಅಧ್ಯಕ್ಷತೆ ಡಾ। ಎಚ್. ಶಂಕರ ನಾಯ್ಕರು ವಹಿಸಿದ್ದರು ಡಾ. ಎ. ಸತ್ಯರಾವ್‌ರವರು ಧನ್ಯವಾದಗಳನ್ನರ್ಪಿಸಿದರು.

ಕಳೆದ ತಾ. 29ರಂದು ಶಿಬಿರದ ಮುಕ್ತಾಯ ಭಾಷಣ ಮಾಡುತ್ತಾ ರಾಜ್ಯದ ಹಣಕಾಸು ಮಂತ್ರಿ ಶ್ರೀ ಬಿ. ಡಿ ಜತ್ತಿಯವರು ಈ ಯೋಜನೆಯ ಪ್ರಚಾರಕ್ಕೆ ಉಪಾಧ್ಯಾಯರ ಸೇವೆಯನ್ನು ಬಳಸಿಕೊಂಡರೆ ಯೋಜನೆ ಯಶಸ್ವಿಯಾದೀತೆಂದೂ ಈ ಕಾರ್ಯವು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕೆಂದೂ ಹೇಳಿದರು. ಆರಂಭದಲ್ಲಿ ಡಾ। ಟಿ.ಎಂ. ಎ. ಪೈಯವರು ಸ್ವಾಗತಿಸಿದರು. ಶ್ರೀ ಎಂ. ಮಧ್ವರಾಜ್ ಎಂ. ಎಲ್. ಎ. ಯವರು ಶಿಬಿರದಲ್ಲಿ ಭಾಗವಹಿಸಿದ್ದ ೪೭ ಉಪಾಧ್ಯಾಯರುಗಳಿಗೆ ಅರ್ಹತಾಪತ್ರಗಳನ್ನು ವಿತರಣೆಗೈದರು.

ಅರ್ಥಮಂತ್ರಿಯವರಿಗೆ ಮನವಿ—ಆರ್ಥಿಕ ಮಂತ್ರಿ ಶ್ರೀ ಬಿ, ಡಿ. ಜತ್ತಿಯವರು ತಾ. 29—12—63ರಲ್ಲಿ ಮಣಿಪಾಲಕ್ಕೆ ಸಂದರ್ಶಿಸಿದಾಗ್ಗೆ, ದ ಕ ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಆಡಳಿತದಾರರಾದ ಶ್ರೀಗಳಾದ ಟಿ. ಎ. ಪೈ, ಕುರುಕಾಲು ಗಣಪಯ್ಯ ಶೆಟ್ಟಿ ಸರ್ಕಾರ ರಾಜೀವ ಕೋಟ್ಯಾನರು ಮೈಂಟೆನೆನ್ಸು ಗ್ರಾಂಟು ಸಂಪೂರ್ಣ ಕೊಡಿಸುವ ವಗೈರೆ ವಿಚಾರಗಳಲ್ಲಿ ಮನವಿಯನ್ನು ಅರ್ಪಿಸಿದಾಗ ಮಂತ್ರಿಯವರು ಮೈಂಟೆನೆನ್ಸು ಗ್ರಾಂಟು ಕೊಡಿಸುವದಾಗಿ ಆಶ್ವಾಸನೆಯಿತ್ತರು.

ನಿಧನ:— ಶ್ರೀ ಅತ್ರಾಡಿ ವೆಂಕಪ್ಪಯ್ಯ ಹೆಗ್ಡೆಯವರು ಕಳೆದ ತಾ. 23.12.63ರಂದು ಸ್ವರ್ಗಸ್ಥರಾದುದು ವಿಷಾದಕರವಾಗಿದೆ. ಇವರು ಕೆಲವು ಸಮಯದಿಂದ ಅಸ್ವಸ್ಥರಾಗಿದ್ದರು ದಿವಂಗತರು ಸರಳ ಜೀವಿಗಳೂ ಸತತ ಉದ್ಯೋಗಪ್ರಿಯರೂ ಸಾಧಕರೂ ಆಗಿ ಜನಾನುರಾಗ ಗಳಿಸಿದ್ದರು.

ಉದ್ಘಾಟನಾ ಸಮಾರಂಭ—ಪ್ರಾಥಮಿಕ ಶಾಲಾ ಶಿಕ್ಷಕರ ವಿಜ್ಞಾನ ಶಿಬಿರದ ಉದ್ಘಾಟನಾ ಸಮಾರಂಭವು ಕಡಿಯಾಳಿಯ ಕಮಲಾ ಬಾಯಿ ಹೈಸ್ಕೂಲಿನ ಭವನದಲ್ಲಿ ತಾ. ೨೬ರಂದು ಶ್ರೀ ಎ. ಜಿ. ಆಲ್ವೆ ಇವರ ಅಧ್ಯಕ್ಷತೆಯಲ್ಲಿ ಉಡುಪಿಯ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಜಿ. ವಿ. ಸಿದ್ಧೇಶ್ವರ ಇವರಿಂದ ಜರಗಿತು. ಆರಂಭದಲ್ಲಿ ಶಿಬಿರದ ಸಂಚಾಲಕರಾದ ಶ್ರೀ ಎ. ನರಸಿಂಹಯ್ಯ ಸ್ವಾಗತಿಸಿದರು. ಶಿಬಿರದ ಸಹಾಯಕರಾದ ಶ್ರೀ ಅನಂತಯ್ಯ ಹಂದೆ ಮತ್ತು ಶ್ರೀ ಜಿ. ಶಿವರಾವ್ ಇವರು ವಿಜ್ಞಾನದ ಉಪಯೋಗ ಹಾಗೂ ವಿಜ್ಞಾನದ ಅಧ್ಯಾಪಕರು ಎದುರಿಸಬೇಕಾದ ಸಮಸ್ಯೆಗಳನ್ನು ವಿವರಿಸಿದರು. ಅಧ್ಯಕ್ಷರು ವಿಜ್ಞಾನಪಾಠದ ಮೂಲಕ ವಿದ್ಯಾರ್ಥಿಗಳಲ್ಲಿ ಸತ್ಯವನ್ನು ಶೋಧಿಸಿ ತಿಳಿಯುವ ಮನೋವೃತ್ತಿಯನ್ನು ಬೆಳೆಸಬೇಕೆಂದರು

ಪ್ರಾಥಮಿಕ ಶಾಲೆಗಳಿಗೆ ರೋಟರಿ ಕ್ಲಬ್ಬಿನ ಸಹಾಯ....ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯು ಆರಂಭಿಸಿರುವ ಯೋಜನೆಯು ಪ್ರಕಾರ ಪುಸ್ತಕ ಭಂಡಾರಕ್ಕಾಗಿ ಪುಸ್ತಕಗಳು ಮತ್ತು ಮೇಜು, ಕುರ್ಚಿ ಇತ್ಯಾದಿಗಳನ್ನು ಒದಗಿಸಿಕೊಳ್ಳುವುದಕ್ಕಾಗಿ ೨೫ ಎಲಿಮೆಂಟರಿ ಶಾಲೆಗಳಿಗೆ ಉಡುಪಿ ರೋಟರಿ ಕ್ಲಬ್ ೪,೦೦೦ ರೂ.ಗಳನ್ನು ಮಂಜೂರು ಮಾಡಿದೆ.

ಕಬ್ಬಿನ ಕಾರ್ಯದರ್ಶಿ ಶ್ರೀ ಎಂ. ಜಿ. ಆಳ್ವೆಯವರು ಉಪಾಧ್ಯಕ್ಷ ಶ್ರೀ ಕೆ. ಕೆ. ಪೈಯವರು ಸೇರಿದ್ದ ಕ್ಲಬ್ಬಿನ ಸಭೆಯಲ್ಲಿ ವರದಿಯನ್ನು ತಿಳಿಸುತ್ತಾ ಈ ಧನ ಸಹಾಯ ಪಡೆಯುವ ಶಾಲೆಗಳು ಅದಕ್ಕೆ ಸಮವಾದ ಮೊತ್ತವನ್ನು ಒದಗಿಸಬೇಕಾಗುತ್ತದೆಂದರು

ಸಿಂಡಿಕೇಟ್ ಬ್ಯಾಂಕಿನ ಸ್ಥಳಾಂತರ—ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟಿನ ರಜಿಸ್ಟರ್ಡ್ ಕಛೇರಿಯನ್ನು ತಾ 1ರಂದು ಉಡುಪಿಯಿಂದ ಮಣಿಪಾಲಕ್ಕೆ ಸ್ಥಳಾಂತರಿಸಲಾಗಿದೆ ಈ ಸಂದರ್ಭದಲ್ಲಿಯೇ ಬ್ಯಾಂಕಿನ ಹೆಸರು "ಸಿಂಡಿಕೇಟ್ ಬ್ಯಾಂಕ್" ಎಂದು ಬದಲಾವಣೆ ಗೊಂಡಿದೆ. ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ ಎ. ಪೈಯವರು ಈ ಸಂದರ್ಭದಲ್ಲಿ ಮಾತಾಡುತ್ತ ಇನ್ನೈದು ವರ್ಷಗಳಲ್ಲಿ ಬ್ಯಾಂಕಿನ ಡಿಪೋಸಿಟು ಗಳನ್ನು 100 ಕೋಟಿ ರೂಪಾಯಿಗಳಿಗೆ ಹೆಚ್ಚಿಸುವ ಉದ್ದೇಶವಿದೆಯೆಂದಲ್ಲದೆ ಸಿಂಡಿಕೇಟ್ ಬ್ಯಾಂಕ್ ಜಾರಿಗೆ ತಂದಿರುವ ಹೊಸ ವಿಧಾನಗಳನ್ನು ವಿವರಿಸಿದರು. ಅಧ್ಯಕ್ಷ ಡಾ. ಟಿ. ಎಂ. ಎ ಪೈಯವರು ಹೊಸ ಕಟ್ಟಡದ ಸ್ಥಳವನ್ನು 1937ರಲ್ಲಿ ಕೊಳ್ಳಲಾಗಿತ್ತಾದರೂ ಆ ಯೋಜನೆ ರೂಪುಗೊಳ್ಳಲು ದೀರ್ಘಾವಧಿ ಹಿಡಿಯಿತೆಂದರು.

ರಜತಮಹೋತ್ಸವ— ಮಣಿಪಾಲ ಅಂಚೆ ಕಚೇರಿಯ ರಜತ ಮಹೋತ್ಸವವು ಕಳೆದ ತಾ. 27ರಂದು ನೆರವೇರಿತು. ಮೈಸೂರು ಸರ್ಕಲಿನ ಪೋಸ್ಟಲ್ ಸರ್ವಿಸಸ್ ಡೈರೆಕ್ಟರ್ ಶ್ರೀ ವಿ. ಇ. ಅರುಣಾಚಲಂ ಅವರು ಸಣ್ಣ ಅಂಚೆ ಕಚೇರಿಯೊಂದರ ರಜತೋತ್ಸವವನ್ನು ಆಚರಿಸುತ್ತಿರುವುದು ಇದೇ ಪ್ರಥಮವೆಂದೂ ಅಂಚೆ ಇಲಾಖೆಯಲ್ಲಿ ಉಚ್ಚಮಟ್ಟದ ದಕ್ಷತೆ ಇದೆಯೆಂದೂ ಅಂಚೆ ಇಲಾಖೆಯ ನೌಕರರು ಜನರಿಗೆ ಒಳ್ಳೆಯ ಸೇವೆ ಸಲ್ಲಿಸಬೇಕೆಂದೂ ಹೇಳಿದರು. ಆರಂಭದಲ್ಲಿ ಶಿವಳ್ಳಿ ಪಂಚಾಯತಿನ ಅಧ್ಯಕ್ಷ ಶ್ರೀ ಟಿ. ರಮೇಶ ಪೈಯವರು ಸ್ವಾಗತ ಭಾಷಣ ಮಾಡಿದರು. ಡಾ। ಟಿ. ಎಂ. ಎ. ಪೈಯವರು ಸಂದೇಶಗಳನ್ನು ಓದಿದರು ಡಾ. ಎ. ಕೃಷ್ಣರಾಯರು ವಂದನೆಗಳನ್ನರ್ಪಿಸಿದರು.

ಹಿರಿಯಡ್ಕ— ಉಡುಪಿ ಸಮಾಜಾಭಿವೃದ್ಧಿಯ ನೆರವಿನಿಂದ ಹಿರಿಯಡ್ಕ ಪಂಚಾಯತು ಮತ್ತು ಕೋಡಿಬೆಟ್ಟು ಯುವಕ ಮಂಡಲದ ವತಿಯಿಂದ ಹಿರಿಯಡ್ಕ ಪಂಚಾಯತು ಕ್ಷೇತ್ರದ ಗ್ರಾಮ ಸಹಾಯಕ ತರಬೇತಿ ಶಿಬಿರದ ಉದ್ಘಾಟನೆಯು ತಾ 23—12—63ರಂದು ಕೋಡಿಬೆಟ್ಟು ಎಲಿಮೆಂಟರಿ ಶಾಲೆಯಲ್ಲಿ ಡಾ। ಚಂದಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಉಡುಪಿ ತಾಲೂಕು ಬೋರ್ಡ್ ಸದಸ್ಯ ಎಡ್ವಕೇಟ್ ಶ್ರೀ ಶಿವಾಜಿ ಶೆಟ್ಟರಿಂದ ನೆರವೇರಿಸಲ್ಪಟ್ಟಿತು. ಪ್ರಾರಂಭದಲ್ಲಿ ಪಂಚಾಯತು ಅಧ್ಯಕ್ಷ ಶ್ರೀ ವಿ. ಗೋವಿಂದರಾಜ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು

ಪರ್ಕಳ-ಹೆರ್ಗ ಪಂಚಾಯತು ಗ್ರಾಮ ಮುಂದಾಳು ಶಿಕ್ಷಣ ಶಿಬಿರದ ಸಮಾರೋಪ ಸಮಾರಂಭವು ಉಡುಪಿ ರಾಷ್ಟ್ರೀಯ ವಿಸ್ತರಣಾ ಯೋಜನಾ ಕ್ಷೇತ್ರದ ಆಶ್ರಯದಲ್ಲಿ ತಾ. 27 12. 63ರಂದು ಉಡುಪಿ ತಾಲೂಕು ಬೋರ್ಡು ಮೆಂಬರರಾದ ಎಡ್ವಕೇಟ್ ಶ್ರೀ ಪಿ ಶಿವಾಜಿ ಶೆಟ್ಟರ ಅಧ್ಯಕ್ಷತೆಯಲ್ಲಿ ಉಡುಪಿ ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರಿಂದ ನೆರವೇರಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂತಹ ಶಿಬಿರದಿಂದಾಗುವ ಪ್ರಯೋಜನಗಳನ್ನು ತಿಳಿಸಿದರು. ಸಭೆಯಲ್ಲಿ ಶ್ರೀ ಶ್ರೀನಿವಾಸ ಆಚಾರ್ಯ ಮತ್ತು ಇತರರೂ ಭಾಷಣ ಮಾಡಿದರು

ಭಾಷಣ:— ಉಡುಪಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. ೨ರಂದು ಕವಿ ಅರ್ಚಕ ಶ್ರೀ ವೆಂಕಟೇಶರು ಪತ್ರಿಕೋದ್ಯಮದ ಕುರಿತು ಭಾಷಣವಿತ್ತರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಕು. ಶಿ. ಹರಿದಾಸ ಭಟ್ಟರು ವಹಿಸಿದ್ದರು. ಕಾರ್ಯದರ್ಶಿ ಶ್ರೀ ಎಸ್. ನಾರಾಯಣ ಬಲ್ಲಾಳರು ಸ್ವಾಗತ ಭಾಷಣ ಮಾಡಿ ಅತಿಥಿಗಳ ಪರಿಚಯ ಮಾಡಿಕೊಟ್ಟರು

ಎಲ್ಲೂರು— ಸ್ಥಳೀಯ ಯುವಕ ಮಂಡಳದ ವಾರ್ಷಿಕೋತ್ಸವವು ತಾ. 21.12.63 ರಂದು ಎಲ್ಲೂರು ಸಮಾಜಮಂದಿರದಲ್ಲಿ ಮುಂಬೈ ಹೈಕೋರ್ಟು ವಕೀಲ್ ವಿಶ್ವನಾಥ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಪತಿ ಭಟ್ಟರಿಂದ ಸ್ವಾಗತ, ವೈ. ಜಗದೀಶ ರಾಯರಿಂದ ವರದಿವಾಚನ, ಶ್ರೀಗಳಾದ ಎ. ಎಸ್. ಭಟ್, ಕೆ. ಕೃಷ್ಣಮೂರ್ತಿ ರಾವ್ ಮೊದಲಾದವರ ಭಾಷಣಗಳಾದುವು.

ನಡೂರು:— ತಾ 1—1—1964 ರಂದು ನಡೂರು ಬ್ರಾಂಚ್ ಪೋಸ್ಟಾಫೀಸು ಡಾ। ಎನ್.ಎಸ್. ಕೊಳ್ಳೆಬೈಲ್‌ರವರ ಅಧ್ಯಕ್ಷತೆಯಲ್ಲಿ ಉಡುಪಿ ಸಬ್ ಡಿವಿಜನ್ ಪೋಸ್ಟಲ್ ಇನ್ಸ್‌ಪೆಕ್ಟರವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಬಿ. ಶಿವರಾಮ ಶೆಟ್ಟರು ಸ್ವಾಗತಿಸಿದರು. ಶ್ರೀ ಕೆ. ಕೆ. ಶೆಟ್ಟರಿಂದ ಸಂದೇಶ ವಾಚನವು ನಡೆಯಿತು. ಶ್ರೀ ಕೊರಗಪ್ಪನವರಿಂದ ಬಾಪೂಜಿ ಮತ್ತು ನೆಹರೂರವರ ಭಾವಚಿತ್ರವು ಅನಾವರಣವು ಮಾಡಲ್ಪಟ್ಟು ಸಭಿಕರಲ್ಲಿ ಶ್ರೀಗಳಾದ ಕೆ. ವಿ. ಕಲ್ಕೂರ್, ಕೆ. ವಿ. ಕಾಮತ್ ಮತ್ತು ಎನ್. ಎನ್. ಭಟ್ ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣಾನಂತರ ಶ್ರೀ ವಿ. ಎನ್. ಸೆಟ್ಟರು ಧನ್ಯವಾದ ಸಮರ್ಪಿಸಿದರು.

ತಿರುಪತಿಯಲ್ಲಿ "ಅತಿಥಿ ಗೃಹ" ರಚನೆಗೆ ನಿಧಿ—ಶ್ರೀ ಸಂಸ್ಥಾನ ಶ್ರೀ ಕಾಶೀ ಮಠಾಧೀಶ್ ಶ್ರೀಮತ್ ಸುಧೀಂದ್ರ ತೀರ್ಥ ಸ್ವಾಮಿಜಿಯವರು ತಾ. 1—1—64ರಲ್ಲಿ ಮೂಲ್ಕಿ ಮೊಕ್ಕಾಂನಿಂದ ಹೊರಟು, ಮೈಸೂರಿಗೆ ತೆರಳಿ, ಮೂರು ದಿನಗಳ ಮೊಕ್ಕಾಂ ಮಾಡಿ, ತಾ. ೪—1—64ರಂದು ತಿರುಪತಿಗೆ ಪ್ರಯಾಣ ಬೆಳೆಸಿದರು.

ತಿರುಪತಿಯಲ್ಲಿ ಶ್ರೀ ಕಾಶೀ ಮಠಾಧೀಶರ ಹೆಸರಲ್ಲಿ ಒಂದು ಅತಿಥಿ ಗೃಹವನ್ನು ಕಟ್ಟಿಸುವ ಸಲುವಾಗಿ, ಮಂಗಳೂರಿನ ಗೌ। ಸಾ। ಬ್ರಾ। ವೃಂದದ ಶಿಷ್ಯವೃಂದದವರು ಮಂಗಳೂರು ನಗರದಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದ್ದು, ಈ ನಿಧಿಯನ್ನು ಶ್ರೀಶ್ರೀಯವರಿಗೆ ಅವರ ಮೂಲ್ಕಿ ಮೊಕ್ಕಾಂನಲ್ಲಿ ತಾ 29—12—63ರಂದು ಒಪ್ಪಿಸಿದರು ಈ ನಿಧಿಯನ್ನು ಶ್ರೀಶ್ರೀಯವರು ಶ್ರೀ ತಿರುಪತಿ ತಿರುಮಲೆ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರಿಗೆ ಕಟ್ಟಡ ಕಟ್ಟಿಸುವ ಸಲುವಾಗಿ ಅರ್ಪಣೆ ಕೊಡಿಸುವರು.

ಕೃತಜ್ಞತೆಗಳು
"ನವಯುಗ"ದ ಪರಿಷ್ಕರಣಕ್ಕಾಗಿ ಇತ್ತೀಚೆಗೆ ಸಂಚರಿಸಿದಾಗ ಹೋದಲ್ಲೆಲ್ಲಾ ಹಾರ್ದಿಕ ಸ್ವಾಗತವಿತ್ತು ಸಹಕರಿಸಿ ಪ್ರೋತ್ಸಾಹಿಸಿದ ಸಕಲ ಹಿತೈಷಿಗಳಿಗೂ ಕೃತಜ್ಞತೆಗಳು.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ—ಸಂಪಾದಕ.

ಮುದ್ರಣ
ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ:
ನವಯುಗ ಪ್ರೆಸ್
ಸಂತೆಕಟ್ಟೆ
ಉಡುಪಿ

ಜನತಾ ವಾಣಿ

ಫಾರ್ಮಸಿಸ್ಟ್‌ಗಳಿಗೆ ನ್ಯಾಯ ಬೇಕು

ಈ ಲೇಖನವು 'ಫಾರ್ಮಸಿ' ಉದ್ಯೋಗದ ಮೇಲೆ ಕೊಂಚ ಬೆಳಕು ಚೆಲ್ಲಲೆತ್ನಿಸಿದೆ ಆದರೆ ಸ್ಪಷ್ಟವಾಗಿ ಅದರ ಅಗತ್ಯತೆ ಅಥವಾ ಉದ್ಯೋಗದ ಸಾಫಲ್ಯದ ಕಡೆಗೆ ಸಂಪೂರ್ಣ ಸ್ಪಷ್ಟೀಕರಣ ನೀಡದಿದ್ದರೂ, ಅದರ ಗುರಿಯೆಡೆಗೆ ಒಂದಲ್ಲಾ ಒಂದು ರೀತಿಯಿಂದ, ಒಂದಲ್ಲಾ ಒಂದು ದಾರಿಯಿಂದ ಮುಂದುವರಿಯಲೆತ್ನಿಸಿದೆ.

ಭಾರತೀಯ ಚಿಕಿತ್ಸಾ ಪದ್ಧತಿಯ ಯಶಸ್ವಿ ಚಿಕಿತ್ಸಕನೂ ಮಹಾ ಮೇಧಾವಿ ಔಷಧಕಾರನೂ ಆದ ಚರಕನು "ನಿನ್ನನ್ನವಲಂಬಿಸಿದ, ನಿನ್ನನ್ನು ಮೆಚ್ಚಿದ ರೋಗಿಯನ್ನು ಉಳಿಸುವಲ್ಲಿ ನಿನ್ನ ಆತ್ಮಾರ್ಪಣೆಯ ಪ್ರಸಂಗ ಒದಗಿದರೂ ಹಿಂಜರಿಯಬೇಡ" ಎಂದುದು ಆವನು ತನ್ನ ಸೇವಾ ವೃತ್ತಿಗಿತ್ತ ಮಹತ್ವವನ್ನು ತೋರಿಸುವುದಲ್ಲದೆ ಸೇವಕನೂ ಪಾಲಿಸಬೇಕಾದ ತತ್ವವನ್ನು ಸಾರುತ್ತಿದೆ ಇದು ಎಲ್ಲ ಕಾಲಗಳಿಗೂ ಅನ್ವಯಿಸುವಂತಹುದಾಗಿದೆ ಅವುಗಳಲ್ಲಿ ಎಂತಹ ಎಡೆತಡೆಗಳು ಒದಗಿಬಂದರೂ, ಸಹಾನುಭೂತಿಯಿಂದ, ಮಾನವೀಯ ಮಾನದಂಡದಿಂದ ಆಳಿದ ಔಷಧಕಾರರಲ್ಲಿ ಅನಿವಾರ್ಯವಾಗಿ ಬೆಳೆದು ಬಂದ ಯಾಂತ್ರಿಕತೆಯನ್ನು ಹೋಗಲಾಡಿಸದಲ್ಲಿ ಮಾತ್ರ ವೈದ್ಯ ಶಾಸ್ತ್ರದ ಈ ಪ್ರಮುಖ ವಿಭಾಗವು ಪ್ರಗತಿ ಹೊಂದಿ ರೋಗಿಗಳಿಗೆ ಕ್ಷೇಮನೀಡೀತು.

ಭಾರತದಲ್ಲಿ ಇಂದು ಹಲವು ರೀತಿಯ ಚಿಕಿತ್ಸಾ ಪದ್ಧತಿಯನ್ನು ಅನುಸರಿಸುತ್ತಿರುವುದನ್ನು ನೋಡಬಹುದು. ಭಾರತದ ಪ್ರಾಚೀನ ಆಯುರ್ವೇದ ಮುಸಲ್ಮಾನರ ಸಂಪರ್ಕದಿಂದ ಪ್ರವೇಶಿಸಿದ ಯುನಾನೀ ಪದ್ಧತಿ, ಪಾಶ್ಚಾತ್ಯರ ಎಲೋಪಥಿ, ಅದರಿಂದಲೇ ಕವಲೊಡೆದು ಮುಂದೆ ಸ್ವತಂತ್ರವಾಗಿ ಬೆಳೆದ ಹೋಮಿಯೋಪಥಿ ಮತ್ತು ಮನೆಮನೆಗಳಲ್ಲಿಯೂ ಚಿಕ್ಕ ಚಿಕ್ಕ ಕಾಹಿಲೆಗಳಿಗೆ ಮತ್ತು ಅನಿರೀಕ್ಷಿತ ಒದಗುವ ಆಪತ್ತಿಗೆ "ಅಜ್ಜಿಯ ಮದ್ದು" ಇವುಗಳೆಲ್ಲವನ್ನೂ ಸಮದೃಷ್ಟಿಯಿಂದ ಭಾರತೀಯನು ನೋಡುತ್ತಿರುವನಾದರೂ ವೈಜ್ಞಾನಿಕ ಪ್ರಗತಿಯ ಫಲವಾಗಿ ಎಲೋಪಥಿಯು ಅಗ್ರಸ್ಥಾನವನ್ನು ಪಡೆದಿದೆ ವೈದ್ಯ ವಿಜ್ಞಾನದ ಪ್ರಗತಿಯಿಂದಾಗಿ ನವನವೀನ ಔಷಧಗಳ ಆವಿಷ್ಕಾರಗಳಿಂದಾಗಿ ಜೀವಿಗಳ ಮೇಲೆ ಉಪಕಾರವೊಂದಿಗೇನೇ ಅವುಗಳು ಮಾಡಬಹುದಾದ ಅಪಾಯಗಳ ನಿವಾರಣೆ ಮತ್ತು ಅವಶ್ಯಕ ಪ್ರಮಾಣದಲ್ಲಿ ಉತ್ತಮ ವರ್ಗದ ಔಷಧಗಳ ಪೂರೈಕೆ ಈ ಎಲ್ಲಾ ಕೆಲಸಗಳ ಸಮಗ್ರ ಉತ್ತರದಾಯಿತ್ವವನ್ನು ಹೊಂದುವ ಔಷಧಕಾರ (pharmacist)ನ ಸ್ಥಾನವೆಂತಹದು ಆತನಲ್ಲಿ ಜ್ಞಾನದ ಏಕಾಗ್ರತೆಯು ಮತ್ತು ಸದಾ ಜಾಗೃತ ಮನೋವೃತ್ತಿಯ ಅವಶ್ಯಕತೆ ಎಷ್ಟಿದೆ ಎಂಬುವನ್ನು ಬೇರೆ ಹೇಳಬೇಕಾಗಿಲ್ಲ.

ಅಧಿಕೃತವಾಗಿ ಅಂಗೀಕರಿಸಲ್ಪಟ್ಟ ಸೂತ್ರದನ್ವಯ ಔಷಧಗಳನ್ನು ದೊಡ್ಡ ಪ್ರಮಾಣಗಳಲ್ಲಿ ತಯಾರಿಸುವ ಪ್ರಯೋಗ ಶಾಲೆ ಮತ್ತು ಆಸ್ಪತ್ರೆಗಳಿಗೆ ಹೊಂದಿಸಿದ ಅಥವಾ ಸ್ವತಂತ್ರ ಔಷಧ ಶಾಲೆ (Dispensary) ಎಂಬುದಾಗಿ ಔಷಧಕಾರರ ಕ್ಷೇತ್ರವನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಈ ಎರಡು ವಿಭಾಗಗಳಲ್ಲಿ ಔಷಧಕಾರರು ನಿರ್ವಹಿಸಬೇಕಾದ ಕಾರ್ಯಗಳಲ್ಲಿ ವ್ಯವಹಾರತಃ ಸ್ವಲ್ಪ ಭಿನ್ನತೆಯಿದ್ದರೂ ತಾತ್ವಿಕವಾಗಿ ಭಿನ್ನತೆಯಿಲ್ಲ ಪ್ರಯೋಗ ಶಾಲೆಯಲ್ಲಿ ಮತ್ತು ಔಷಧ ಶಾಲೆಯಲ್ಲಿ ಕೆಲಸ ಮಾಡುವ ಔಷಧಕಾರರ ವಿದ್ಯಾರ್ಹತೆಗಳಲ್ಲಿ ಆವರವರ ವಿಭಾಗಗಳಿಗನುಸಾರವಾಗಿ ವ್ಯತ್ಯಾಸಗಳಿರುವುದಾದರೂ ಇಡೀ ಕ್ಷೇತ್ರದ ಸಂಪೂರ್ಣ ಸ್ಥೂಲಜ್ಞಾನ ಮತ್ತು ತಮ್ಮ ವಿಭಾಗದ ಸೂಕ್ಷ್ಮತಮಜ್ಞಾನ ಎರಡೂ ವಿಭಾಗಗಳ ಔಷಧಕಾರನಿಗೆ ಅನಿವಾರ್ಯವಾಗಿದೆ. ಈ ಕ್ಷೇತ್ರದಲ್ಲಿ ಔಷಧಶಾಲೆಯ ವಿಭಾಗದ ಔಷಧಕಾರ (compounder)ನ ಪರಿಸ್ಥಿತಿ ಎಷ್ಟು ಕೆಳ ಮಟ್ಟಕ್ಕಿಳಿದಿದೆಯಲ್ಲದೆ ಅದರ ಪರಿಣಾಮ ರೋಗಿಗಳ ಮೇಲೆ ಹೇಗಾಗಬಹುದೆಂಬುದನ್ನು ಮರೆಯುವಂತಿಲ್ಲ

ಸ್ವತಂತ್ರ ಔಷಧ ಶಾಲೆಗಳನ್ನು ನಡೆಸಿಕೊಂಡು ಬರುತ್ತಿರುವ ಔಷಧಕಾರನು ಕೇಂದ್ರ ಸರಕಾರದ ಇತ್ತೀಚಿನ ವಿಧೇಯಕ (Act)ದಿಂದ ಸ್ವಲ್ಪ ಕಷ್ಟಕ್ಕೊಳಗಾಗಬಹುದಾದರೂ, ಆತನು ಸ್ವತಂತ್ರನು. ತನ್ನ ಕಾರ್ಯಕ್ಕೆ ತಕ್ಕಂತೆ ಪ್ರತಿಫಲ ಪಡೆಯುವುದರಿಂದ ಆರ್ಥಿಕ ವಿಭಾಗದಲ್ಲಿ ಈತನು ಚಿಂತೆಗೊಳಗಾಗಬೇಕಿಲ್ಲ. ಆದರೆ ಪರಾವಲಂಬಿತ ಔಷಧಕಾರನ ಕ್ಷೇತ್ರವನ್ನು ಸ್ವತಂತ್ರ ಔಷಧಕಾರನ ಕ್ಷೇತ್ರವನ್ನೂ ಪರಿಶೀಲಿಸಬೇಕು. ಇಂದಿನ ಸರಕಾರೀ ಔಷಧ ಶಾಲೆಗಳ ಪರಿಸ್ಥಿತಿ ಹೇಗಿದೆ? ಅವುಗಳಲ್ಲಿ ನಿಯುಕ್ತರಾದ ಔಷಧಕಾರರ ಸ್ಥಿತಿ ಹೇಗಿದೆ? ಕೇಂದ್ರ ಸರಕಾರವು ೧೯೪೮ರಲ್ಲಿಯೇ ಈ ಕುರಿತು ವಿಧೇಯಕ (The pharmacy Act of 1948)ವನ್ನು ಕೈಕೊಂಡಿದ್ದರೂ ಅದು ನಮ್ಮ ರಾಜ್ಯದಲ್ಲಿ ಇನ್ನೂ ಮರ್ಯಾದಿತವಾಗಿಲ್ಲ? ಇದು ರಾಜ್ಯ ಸರಕಾರದ ಕಾರ್ಯದಕ್ಷತೆಗೆ ಭೂಷಣವಲ್ಲ ಕೇಂದ್ರ ಸರಕಾರದ ವಿಧೇಯಕವು ಔಷಧಕಾರನು ಕನಿಷ್ಠಪಕ್ಷ ಮೆಟ್ರಿಕ್ಯುಲೇಶನ್ ಯಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂದಿರುವಲ್ಲದೆ "ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ'ವು ವಿಧಿಸಿದ ನಿಯಮಗಳ ಎರಡು ವರ್ಷ ಅವಧಿಯ 'ಡಿಪ್ಲೋಮಾ ಇನ್ ಫಾರ್ಮಸಿ"ಯ ಔಷಧಕಾರನ ಕನಿಷ್ಠ ತಾಂತ್ರಿಕ ವಿದ್ಯಾರ್ಹತೆ ಎಂದೂ ವಿಧಿಸಿದೆ. ನಮ್ಮ ಸರಕಾರವು ಇದನ್ನು ಗಮನಿಸದೆ, ಹೆಚ್ಚು ಕಡಿಮೆ ಶತಮಾನ ಪೂರ್ವದ ಪದ್ಧತಿಯ ತರಬೇತಿಯನ್ನೇ ಇನ್ನೂ ಮುಂದುವರಿಸುತ್ತಿದೆ!

ಯೋಗ್ಯ ವಿದ್ಯೆ ಮತ್ತು ಅರ್ಹತೆಯಿರುವ ಔಷಧಕಾರನು ನಮ್ಮ ಸರಕಾರದಿಂದ ಏನು ಪುರಸ್ಕಾರ ಪಡೆಯುತ್ತಿದ್ದಾನೆ? ಆವನ ವೇತನವೆಷ್ಟು? ಆವನಿಗೆ ಅಭಿವೃದ್ಧಿಯ ಸೋಪಾನಗಳೆಷ್ಟು? ಮೆಟ್ರಿಕ್ಯುಲೇಶನ್ ಅಥವಾ ತತ್ಸಮ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಈ ವೃತ್ತಿಗೆ ಸಂಬಂಧಿಸಿದ ತಾಂತ್ರಿಕ ವಿದ್ಯೆಯನ್ನು ಪಡೆದ ಔಷಧಕಾರನು ಎಸ್. ಎಸ್. ಎಲ್. ಸಿ ಆದ ಗುಮಾಸ್ತನಿಗಿಂತ ಕಡಿಮೆ ವೇತನ ಪಡೆಯುತ್ತಾನೆ.

ನಮ್ಮ ಸರಕಾರದ ಸಂಬಂಧಿಸಿದ ಅಧಿಕಾರಿಗಳು ಈ ಕುರಿತು ಯೋಗ್ಯ ಪರಿಶೀಲನ ಮಾಡಿ ಔಷಧಕಾರನ (Pharmacist) ವೃತ್ತಿಗೂ ನ್ಯಾಯದಾನವನ್ನಿತ್ತು ತತ್ಪರಿಣಾಮವಾಗಿ ಅಸಂಖ್ಯಾತ ರೋಗಿಗಳ ಹಿತವನ್ನು ಸಾಧಿಸಿ, ತಾವು ತತ್ವಶೀಲರೂ, ಕರ್ತವ್ಯನಿಷ್ಠರೂ, ನ್ಯಾಯಪಕ್ಷಪಾತಿಗಳೂ ಎಂಬುದನ್ನು ತೋರಿಸಿ ಕೊಡಬೇಕು.

—ಶ್ರೀ ಬಿ. ಪಿ.

ಪುನರ್ವಸತಿ

ಕ್ಷಯ ರೋಗಿಗಳಿಗೆ ದೀರ್ಘ ಅವಧಿಯ ಚಿಕಿತ್ಸೆ, ಮತ್ತು ಚಿಕಿತ್ಸೆಯ ನಂತರದ ಉಪಚಾರ ಬೇಕು ಚಿಕಿತ್ಸೆಯ ಮತ್ತು ಚಿಕಿತ್ಸೆಯ ನಂತರದ ಉಪಚಾರ ತುಂಬಾ ವೆಚ್ಚದ್ದು ಹೆಚ್ಚಿನ ರೋಗಿಗಳು ಬಡವರಿದ್ದು ಚಿಕಿತ್ಸೆಯ ಯಾ ಚಿಕಿತ್ಸೆಯ ನಂತರದ ಉಪಚಾರ ವೆಚ್ಚವನ್ನು ನಿರ್ವಹಿಸಲಾರರು ಸರಕಾರವು ಅನೇಕರಿಗೆ ದೀರ್ಘ ಚಿಕಿತ್ಸೆ ಒದಗಿಸಬಹುದು. ಆದರೆ ಚಿಕಿತ್ಸೆಯ ನಂತರದ ಉಪಚಾರವು ವಾಲಂಟರಿ ಸಂಸ್ಥೆಗಳ ಜವಾಬ್ದಾರಿಯಾಗಿರಬೇಕು ಆದರೂ ಕೂಡ ದೀರ್ಘ ಅವಧಿಯ ಚಿಕಿತ್ಸಾ ನಂತರ ಉಪಚಾರ ಅಸಾಧ್ಯ. ಆದ್ದರಿಂದ ಪೂರ್ಣ ಚಿಕಿತ್ಸೆಯ ನಂತರ ಕ್ಷಯರೋಗಿಗಳು ತಮ್ಮ ಸಂಪಾದನೆ ತಾವೇ ಮಾಡಿಕೊಳ್ಳುವಂತೆ ಅವರಿಗೆ ಯಾವುದಾದರೊಂದು ಉದ್ಯಮವನ್ನು ಕಲಿಸಬೇಕು ಇದಕ್ಕಾಗಿ ಪುನರ್ವಸತಿ ಕೇಂದ್ರಗಳು ಸ್ಥಾಪಿಸಲ್ಪಡಬೇಕು. ನಿಮ್ಮ ಉದಾರ ಸಹಾಯವು ಕ್ಷಯರೋಗಿಗಳ ಚಿಕಿತ್ಸೆ, ಚಿಕಿತ್ಸಾ ನಂತರದ ಉಪಚಾರ ಹಾಗೂ ಪುನರ್ವಸತಿ ಏರ್ಪಾಡುಗಳಿಗೆ ಸಹಾಯಕವಾಗುವುದು.

ಹೆಚ್ಚು ಸಂಖ್ಯೆಯಲ್ಲಿ ಟಿ ಬಿ ಸೀಲುಗಳನ್ನು ಪಡೆದುಕೊಂಡು
ನಿಮ್ಮ ಟಿ ಬಿ ಸಂಸ್ಥೆಗಳನ್ನು ಬಲಪಡಿಸಿ

೧ ಟಿ ಬಿ ಸೀಲಿನ ಬೆಲೆ ೧೦ ನ. ಪೈ ಮಾತ್ರ.

ಮೊಹರುಗಳು — ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಸರಕಾರಿ ವೆನ್‌ಲೊಕ್ ಆಸ್ಪತ್ರೆ, ಮಂಗಳೂರು ಮತ್ತು ಇವರ ಇತರ ಏಜನ್ಸಿಗಳಲ್ಲಿ ದೊರೆಯುತ್ತವೆ.

ಹದಿನಾಲ್ಕನೇ ಟಿ ಬಿ ಸೀಲ್ ಮಾರಾಟ ಚಳವಳ

(ಹೊಸ ಡಿಲ್ಲಿಯಲ್ಲಿರುವ ಭಾರತದ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂಥಾದ್ದು)

ಈ ಜಾಹೀರಾತು ಸ್ಥಳದ ದಾತೃಗಳು:

Tube Investments of India Ltd., Madras.

ಸಮಸ್ಯೆ ಬಗೆಹರಿಯಿತು
(೪ನೇ ಪುಟದಿಂದ)

"ಭಲೆ, ಭಲೇ, ಅದ್ಕೇ ಹೇಳೊದು ನೀನು ನನ್ನ ಹೆಂಡ್ತಿ ಅಂತ."

"ಅಯ್ಯಯ್ಯ, ಯಾರಲ್ಲಾಂತಾರೆ?"

"ಯಾರು ಅಲ್ಲಾಂತಂದ್ರೂ ಸಾಕ್ಷಿಯಾಗಿ ನಿಂತ ಅಗ್ನಿ ದೇವ ಖಂಡಿತಕ್ಕೂ ಹಾಗನ್ನಿಕ್ಕಿಲ್ಲ."

"ಅಗ್ನಿಯ ಮೇಲೆ ಭಾರಿ ವಿಶ್ವಾಸ ನಿಮ್ಗೆ"....

"ಮತ್ತೆ ಯಾರ ಮೇಲೂ ಈಗ ವಿಶ್ವಾಸ ಇಡೋಕಾಗ್ದು. ಅಗ್ನಿಯಾದ್ರೆ ಮುಟ್ಟಿದ್ದನ್ನೆಲ್ಲಾ ಭಸ್ಮ ಮಾಡಿ ಬಿಡ್ತಾನೆ. ಇದು ಗ್ಯಾರಂಟಿ."

"ಹದಿನಾಲ್ಕು ಕ್ಯಾರೆಟ್ಟಿನ ಗ್ಯಾರಂಟಿ ಅಲ್ಲಲ್ವೆ?"

"ಸರಿ, ಮಾಡ್ದಿ ಪುನ; ಕ್ಯಾರೆಟ್ ಗೀರೆಟ್ಟೊಂತ. ."

"ಇಲ್ಲ ನಿಮ್ಮ ಬಿಡಿ, ದಮ್ಮಯ್ಯಾಂತೀನಿ...."

"ಸರಿ ಬಿಟ್ಟೆ, ಬಿಟ್ಟೇನ್ನು. ಈಗ ಮೆಹ್ತಾ ಹೇಳೋದು ಸರೀಯನ್ನು."

"ಅವ್ರು ಹೇಳೋದು ನ್ಯಾಯ. ಆದ್ರೆ"..."

"ಏನಂತೆ ಆದ್ರೆ....?"

"ಅಲ್ಲ, ನೀವೆಲ್ಲಾ ಹೀಗೆ ಮಾಡೋಕೆ ಯಾವಾಗ್ನಿಂದ ಸುರು ಮಾಡಿದ್ರೀಂತ...."

"ಅಂದ್ರೆ..."

"ನೋಡಿ, ಆ ದಿವ್ಸ ಕೇರಳದಲ್ಲಿ ಗಲಾಟೆಯೆದ್ದ ಕೂಡ್ಲೆ ಪಟ್ಟಂಥಾನುಪಿಳ್ಳೆಯನ್ನ ಪಂಜಾಬದ ರಾಜ್ಯಪಾಲರನ್ನಾಗಿ ಮಾಡಿ, ಕೇರಳದಲ್ಲಿ ಪ್ರಸಪಾ ವನ್ನ ಕಂಗೆಡಿಸಿದಿರಿ. ಈಗ ಮೆಹ್ತಾರನ್ನ ಒಳಗೆ ಮಾಡಿ...."

"ಓ .. ಬಲು ಸೂಕ್ಷ್ಮಮತಿ ಕಣೇ ನೀನು..."

"ಮೊನ್ನೆ ಎಲ್ಲೋ ನೋಡಿದ ನೆನಪಾಗುತ್ತೆ..."

"ಏನು?"

"ಪ್ರಧಾನಿ ನೆಹ್ರು ವಿರೋಧಿ ಪಕ್ಷಗಳನ್ನ ತಲೆಯೆತ್ತೋಕೇನೇ ಬಿಡೋಲ್ಲಾಂತ..."

ಯಾಕಂತೆ?..."

"ಅಲ್ಲಾ, ವಿರೋಧೀ ಪಕ್ಷದವ್ರು ಯಾವ ಉದ್ದೇಶವನ್ನ ಇಟ್ಕೊಳ್ಳುತ್ತಾರೇ ಅವನ್ನ ಕಾಂಗ್ರೆಸ್ಸಿನಲ್ಲಿ ತಂದು ಬಿಡ್ತಾರೇಂತ, ಮತ್ತು ಅದ್ರಿಂದ ವಿರೋಧಿಗಳು ಹತಪ್ರಭರಾಗ್ತಾರೇಂತ"

"ಕಾಂಗ್ರೆಸ್ಸು ಜನತೆಗಾಗಿದೋದೆ; ಆದ್ರಿಂದ ಜನ ಏನು ಬಯಸ್ತಾರೆ; ಅದನ್ನ ಅದ್ರಲ್ಲಿ ತರ್ತಾರೆ."

"ಹಾಗೇ ಈಗ ನಾಯಕರನ್ನು ಕೂಡ ವಿರೋಧ ಪಕ್ಷಗಳಿಂದ ತಪ್ಪಿಸ್ತಾರೆ..."

"ದೇಶಸೇವೆ ಮಾಡೋ ಶಕ್ತಿ—ಆಸಕ್ತಿಯುಳ್ಳವ್ರಿಂದ ದೇಶಕ್ಕೆ ಒಳಿತು ಮಾಡೋ ತಂತ್ರವಿದು.'

"ಅಲ್ಲಾ, ಪ್ರಸಪಾ ಪಕ್ಷದವ್ರು ಮೆಹ್ತಾರಿಗೇಕೆ ಅಡ್ಡಿ ಮಾಡ್ತಾರೆ?"

"ಅಡ್ಡಿಯೇನು ಮಾಡ್ತಾರೆ? ಮೊದ್ಲು ರಾಜಿನಾಮೆ ಕೊಡ್ಬೇಕೂಂದ್ರು...."

"ಮತ್ತೆ ಈಗ?"

"ಮತ್ತೇನಂತಾರೆ?"

"ಪಕ್ಷದ ಆದೇಶವನ್ನ ಒಪ್ಪಿದಿದ್ರೆ ಅದೇನೂ ಶಿಸ್ತು ಭಂಗವಲ್ಲಾಂತಂತಾರೆ, ರಾಜಿನಾಮೆ ನೀಡಲು ಕಾಲನಿರ್ಬಂಧ ಹೇರಿಲ್ಲಾಂತಾರೆ.

"ಅದೀಗ ಸರಿಯಾದ್ದು. ಅಂದ್ರೆ ಮೆಹ್ತಾನ್ನ ಬಿಟ್ಟುಬಿಡೋಕೆ ಅವ್ರು ತಯಾರಿಲ್ಲಾಂತಾಯ್ತು "

"ಮತ್ತೂ ಒಂದು ನೋಡು..."

"ಏನು....?"

"ಯೋಜನೆ ರಚಿಸೋ ಮುಖ್ಯ ಕೆಲ್ಸಕ್ಕೆ ತನ್ನವರೊಬ್ಬರನ್ನ ಮುಖ್ಯಸ್ಥರನ್ನಾಗಿ ಮಾಡಿದ್ದ ತನಗೇನೇ ಗೌರವಾಂತವ್ರು ತಿಳ್ಕೊಂಡಿದ್ರೂ ಇರ್ಬಹುದು...."

"ಏನು ಬೇಕಾದ್ರೂ ಹೇಳಿ, ಮೆಹ್ತಾ ಅದ್ಕೆ ಯೋಗ್ಯರೂಂತ ಎಲ್ರೂ ಅಂತಾರೆ."

"ಸರಿಯೆನ್ನು, ಆದ್ರಿಂದ್ಲೆ ನೆಹ್ರೂ ದೃಷ್ಟಿ ಅವರತ್ತ ಹರಿಯಿತು...."

"ಏನು, ನಿಮ್ಮ ದೃಷ್ಟಿ ನನ್ಮೇಲೇನೇ ಹರಿಯುತ್ತೆ?"

"ಮತ್ತೇನೂಂತ? ಹೊಟ್ಟೆ ಹಸಿಯುತ್ತೆ...."

"ಸರಿ ಹಾಗಾಂದ್ರೆ.. ಹೋಗಿ ಬಟ್ಟೇನಾದ್ರೂ ಬದ್ಲಾಯಿಸಿ...."

"ಆಗ್ಲೆ ಬದ್ಲಾಯಿಸಿದ್ದೇನಲ್ಲಾ...."

"ಓ, ಹೌದೂಂದ್ರೆ....ನಾನು ನೋಡ್ಲೇ ಇಲ್ಲ, ಮಾತಿಗೆ ನಿಮ್ಮೊಡನೆ ಕೂತ್ರೆ ಎಲ್ಲಾ ಮರೆತೇ ಹೋಗುತ್ತೆ."

"ಅದೇ ನೆನಪು ಮಾಡ್ದೆ, ಬಟ್ಲಡೂಂತ .."

"ಹೂಂ, ಬನ್ನಿ ಬನ್ನಿ..."

"ಮತ್ತೆ ಬಾರ್ದು ಉಂಟೆ....?"

ಗೋರಾ.

ಆದರ್ಶ ಚರಿತೆಗಳು—೧೭

ಈಶ್ವರ ಚಂದ್ರ ವಿದ್ಯಾಸಾಗರ

—ಶ್ರೀ ಎಸ್. ಎಂ. ಶೆಟ್ಟಿ,
ಶಿವಮುಂಜೆ ಪರಾರಿ.

ಬಂಗಾಲದ ಮೇದನೀಪುರ ಜಿಲ್ಲೆಯ ಬೀರಸಿಂಗ್ ಗ್ರಾಮದಲ್ಲಿ, ೧೮೨೦ನೇ ಇಸವಿಯಲ್ಲಿ ಶ್ರೀ ಈಶ್ವರಚಂದ್ರ ವಿದ್ಯಾಸಾಗರರು ಜನ್ಮ ತಾಳಿದರು. ಇವರ ತಂದೆಯ ಹೆಸರು ಠಾಕೂರ್‌ದಾಸ್ ವಂದ್ಯೋಪಾಧ್ಯಾಯ ಎಂದು. ಬಾಲ್ಯದಿಂದಲೂ ಶ್ರೀ ಈಶ್ವರಚಂದ್ರರು ತುಂಬಾ ಮೇಧಾವಿಯೂ, ವಿದ್ಯಾನುರಾಗಿಯೂ ಆಗಿದ್ದರು. ಸ್ವಲ್ಪವೇ ಸಮಯದಲ್ಲಿ ಅವರು ವ್ಯಾಕರಣ, ಸಾಹಿತ್ಯ, ವೇದಾಂತ ಸ್ಮೃತಿ ಮತ್ತು ನ್ಯಾಯ ದರ್ಶನಗಳನ್ನು ಗಂಭೀರವಾಗಿ ಅಧ್ಯಯನಗೈದರು. ಅವರ ಪ್ರಬಾಂಡ ವಿದ್ವತ್ತಿಗಾಗಿಯೇ ಅವರಿಗೆ—'ವಿದ್ಯಾಸಾಗರ' ಎಂಬ ಬಿರುದು ದೊರೆಯಿತು.

ತನ್ನ ಮುವತ್ತನೇ ವರ್ಷ ಪ್ರಾಯದಲ್ಲಿ ಇವರು ಸಂಸ್ಕೃತ ಕಾಲೇಜಿನ ಸಾಹಿತ್ಯಾಧ್ಯಾಪಕರೆಂದು ನಿಯೋಜಿಸಲ್ಪಟ್ಟರು. ತನ್ನ ಅದ್ಭುತ ಯೋಗ್ಯತೆಯಿಂದಾಗಿ ಅವರ, ಮರುವರ್ಷನೇ ಅದೇ ಕಾಲೇಜಿನ ಪ್ರಿನ್ಸಿಪಾಲರಾದರು. ಅನಂತರ ಸ್ಕೂಲ್ ಇನ್‌ಸ್ಪೆಕ್ಟರ್ ಕೂಡಾ ಆದರು. ಸ್ತ್ರೀ ಶಿಕ್ಷಣದತ್ತ ಅವರಿಗೆ ಬಹಳೇ ಅಭಿರುಚಿ ಇತ್ತು. ಸುಮಾರು ೫೦-೬೦ ಬಾಲಿಕಾ ವಿದ್ಯಾಲಯಗಳನ್ನು ಇವರು ಸ್ಥಾಪಿಸಿ, ಬಹು ಉತ್ಸಾಹದಿಂದ ನಡೆಸ ತೊಡಗಿದರು.

'ವಿದ್ಯಾದಾನ ಮತ್ತು ಬಡವರ ಸೇವೆ' ಇವೆರಡು ವಿದ್ಯಾ ಸಾಗರರ ಮಹಾನ್ ವ್ರತಗಳಾಗಿದ್ದುವು. ಅವರು ದಯೆಯ ಸಾಕ್ಷಾತ್ ಮೂರ್ತಿಯಾಗಿದ್ದರು, ಬಡವರಿಗೆ ಹಾಗೂ ವಿದ್ಯಾರ್ಥಿಗಳಿಗೆ ಇವರು "ಕೊಡುಗೈಯ ದೊರೆ"ಯಾಗಿದ್ದರು. ಬಹಳವಾಗಿ ಅವರು ಮಾಡುವ ಗುಪ್ತ ಧನ ಸಹಾಯವು ಕೆಗೆದು ಕೊಂಡವನಿಗೆ ಕೂಡಾ ಗೊತ್ತಾಗುವಂತಿರಲಿಲ್ಲ ಇಂತಹ ಚತುರತೆಯಿಂದ ಅವರು ದಾನ ಗೈಯುತ್ತಿದ್ದರು. ಬಂಗಾಲದಲ್ಲಿ ಭಯಂಕರ ಬರಗಾಲ ಬಂದಿತ್ತು ಆಗ ಕೆಲವೊಂದು ತಿಂಗಳುಗಳ ತನಕ ಸ್ತ್ರೀ ಪುರುಷರೆಲ್ಲರಿಗೂ ಅವರು ಅನ್ನ ವಸ್ತ್ರಗಳ ದಾನ ಗೈದರು.

ಶ್ರೀಮಂತ— ಬಡವರೆಲ್ಲರೂ ಈಶ್ವರ ಚಂದ್ರರ ಸಹೋದರರು. ಎಲ್ಲರಲ್ಲಿಯೂ ಒಂದೇ ರೀತಿಯ ವ್ಯವಹಾರ, ಅದು ಪ್ರೇಮ ಪೂರ್ಣ ವ್ಯವಹಾರ! ಆದರೆ ಬಡವರ ಬಡತನ, ವಿಧವೆಯರ ಕಣ್ಣೀರು ಇವೆರಡನ್ನು ಅವರಿಂದ ನೋಡಲಾಗುತ್ತಿದ್ದಿಲ್ಲ. ಅವರ ದುಃಖವನ್ನು ದೂರೀಕರಿಸಲು ಅವರು ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು. ಬೇಸಿಗೆಯ ದಿನಗಳಲ್ಲಿ ಇವರು 'ವೈದ್ಯನಾಥ ಧಾಮ'ದ ಬಳಿ ಇರುವ 'ಕರ್ಮಟಾಂಡ'ದಲ್ಲಿ ಬಂದು ಇರುತ್ತಿದ್ದರು ಅಲ್ಲಿಯ 'ಸಂಥಾಲೀ' ಜಾತಿಯ ಜನರು, ಇವರ ಉಪಕಾರಗಳನ್ನು ಸ್ಮರಿಸುತ್ತಾ ಇವರನ್ನು ದೇವರಂತೆ ಕಾಣುತ್ತಿದ್ದರು; ಪೂಜಿಸುತ್ತಿದ್ದರು.

ಶ್ರೀ ಈಶ್ವರಚಂದ್ರ ವಿದ್ಯಾಸಾಗರರು 'ಬ್ರಹ್ಮ ಸಮಾಜ'ದ ಕಾರ್ಯದರ್ಶಿಗಳಾಗಿದ್ದರು. ಶ್ರೀ ಮಹರ್ಷಿ ದೇವೇಂದ್ರನಾಥ ಠಾಕೂರರು ಇವರನ್ನು ತುಂಬಾ ಸನ್ಮಾನಿಸುತ್ತಿದ್ದರು. ತನ್ನ ಸಹಜ ಸರಳತನಕ್ಕಾಗಿ ಇವರು ಬಹು ಪ್ರಸಿದ್ಧರಿರುವರು—ಆದರ್ಶರಿರುವರು. ತನ್ನ ಅಪಾರ ಸರಳತೆ, ವಿಶಾಲ ಆದರ್ಶ, ಪರೋಪಕಾರ ಬುದ್ಧಿಗಾಗಿ ಪ್ರಸಿದ್ಧರಿರುವಷ್ಟು ಇವರು ಸುಧಾರಕರೆಂದು ಪ್ರಸಿದ್ಧರಲ್ಲ!

ಮಾತಾಪಿತರ ಮೇಲಿದ್ದ ಅವರ ಭಕ್ತಿಯೇ, ಅವರ ಎಲ್ಲಾ ಗುಣಕ್ಕಿಂತಲೂ ದೊಡ್ಡ ಗುಣ. ಮಾತಾಪಿತರೇ ಪ್ರತ್ಯಕ್ಷ ದೇವತೆಗಳು ಎಂದವರು ತಿಳಿದು ಪೂಜಿಸುತ್ತಿದ್ದರು. ತಾಯಿಯ ಚರಣದಲ್ಲಿ ಅವರಿಗೆ ಅತಿ ಶ್ರದ್ಧೆ!

ಇವರು ೧೮೯೧ರ ಜುಲೈ ತಿಂಗಳಲ್ಲಿ ಕೈವಲ್ಯವಾಸಿಯಾದರು. ಯಾವ ಕಾಲದಲ್ಲಿ ಆಂಗ್ಲ ಭಾಷೆಯನ್ನು ಕಲಿತ ಮಾತ್ರಕ್ಕೆ ಅಪೂರ್ವ ಸನ್ಮಾನ ದೊರೆಯುತ್ತಿತ್ತೋ, ಅಂತಹ ಸಮಯ ಒಂದು ಉಚ್ಚ ಪದವಿಯಲ್ಲಿದ್ದು ಕೊಂಡು ಕೂಡಾ, ತನ್ನ ಸರಳತೆ ಹಾಗೂ ಬಡವರ ಸೇವೆಯ ಆದರ್ಶವನ್ನು ಅವಲಂಭಿಸಿ ಶ್ರೀ ಈಶ್ವರ ಚಂದ್ರ ವಿದ್ಯಾ ಸಾಗರ ಇವರು ನಿಜವಾದ ಮಾನವತೆಯ ಆದರ್ಶವನ್ನು ನಮ್ಮ ಮುಂದೆ ಇಟ್ಟಿರುವರು.

(ಮೂಲ: ಠಾಕೂರ ಸುದರ್ಶನ ಸಿಂಹ)

ಕತ್ತಿಯಿಂದ ಕೊಲ್ಲಬಹುದು. ಆದರೆ ಹಾಗೆ ಮಾಡಿ ಶತ್ರುವನ್ನು ಗೆಲ್ಲಲಾಗುವುದಿಲ್ಲ. ವಿರೋಧ ವಿರೋಧವನ್ನು ಬೆಳೆಸುತ್ತದೆಯೇ ಹೊರತು, ಅದು ಎಂದಿಗೂ ಗೆಲುವನ್ನು ಕೊಡದು. —ಗಾಂಧೀಜಿ.

ಶಾಂತಿಯಿಂದ ಕಾದು ನೋಡಿ. ಸ್ಥಿರವಾದ ಜಯವು ಒಂದು ದಿನದಲ್ಲೇ ಲಭ್ಯವಾಗದು. —ಗಾಂಧೀಜಿ,

ನಿಂದೆ ಮಾಡಬೇಡಿರಿ! ಹಿಂಸೆ ಮಾಡಬೇಡಿರಿ. ಆಚಾರ ಮತ್ತು ನಿಯಮಗಳಿಂದಾಗಿ ನಿಮ್ಮನ್ನು ಹತೋಟಿಯಲ್ಲಿಟ್ಟುಕೊಳ್ಳಿರಿ. ಮಿತಭೋಜನ ಮಾಡಿರಿ. ಏಕಾಂತವಾಸ ಮಾಡುವುದರಿಂದ ಚಿತ್ತವನ್ನು ಸಾಂಸಾರಿಕ ವಿಷಯ ವಾಸನೆಯಿಂದ ದೂರೀಕರಿಸಿರಿ —ಭಗವಾನ್ ಬುದ್ಧ.

ಸಂಗ್ರಾಹಕರು: ಕೆ. ಎಮ್. ಕೃಷ್ಣ ಭಟ್.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ಕ್ರಾಂತಿಕಾರಿ ಲೇಖನಿಯ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಅಂಚೆವೆಚ್ಚ ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಡಬಿದ್ದಲ್ಲಿ 1 ರೂ, ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ನಮ್ಮ ಮಾತೃಭೂಮಿ ಭಾರತ

(೩ನೇ ಪುಟದಿಂದ)

ಭಾರತನಾಡು ಭೂಮಿಗೆಲ್ಲ
ಚೆಲು ತಿಲಕ
ಶಿವದರ ಪುತ್ರರೈ; ಈ ನೆನವ
ತೊರೆಯದಿರಿ"

ಆ ನೆನವ ತೊರೆದುದರಿಂದಲೇ ಪ್ರತ್ಯೇಕ ರಾಜ್ಯಗಳ ರಾದ್ಧಾಂತದ ಗುಡುಗು ಇಂದಿನ ಭೀಕರ ಪರಿಸ್ಥಿತಿಯಲ್ಲೂ ಕೇಳಿ ಬರುತ್ತಿದೆ ದ್ರಾವಿಡ (ತಮಿಳು) ನಾಡು ಬೇರೆ, ನಾಗಾಲೇಂಡು ಬೇರೆ, ಖಲಿಸ್ತಾನ...ಬೇರೆಯೆಂಬ ಅಪಸ್ವರ, ಇಷ್ಟು ಮಾತ್ರವಲ್ಲ. ಶಾಂತಿಯ ಹೆಸರಿನಲ್ಲಿ ಕ್ರಮಶಃ ಸಾವಿರಾರು ಮೈಲುಗಳನ್ನು ಕಮ್ಯೂನಿಸ್ಟ್ ಚೈನಿಯರಿಗೆ ಬಿಟ್ಟುಕೊಡಬೇಕೆಂದು ಹೇಳುವವರ ಗರ್ಭಭಂಗವೂ ಕೇಳಿ ಬರುತ್ತಿದೆ ಜನ್ಮಭೂಮಿಯು ಸ್ವರ್ಗಕ್ಕಿಂತಲೂ ಪ್ರಿಯವಾದದೆನ್ನುವವರ ಕುತ್ತಿಗೆಗೆ ಕುಡುಗೋಲನ್ನು ಹಾಗೆ ತಲೆಗೆ ಸುತ್ತಿಗೆಯಿಂದ ಹೊಡೆಯಲು ಕೆಲವರು ಹವಣಿಸುತ್ತಿದ್ದಾರೆ. ಮೇಲಿನ ಹಾಡಿನ ಅರ್ಥ ಅವರಿಗಾದಲ್ಲಿ ಆಗ ಅವರಿಗೂ ಅರಿವಾಗುತ್ತದೆ.

"ಶ್ರೀ ಮಾತೃ ಭೂಮಿಯನು
ಕ್ರೂರಿಗಳು ಮ್ಲೇಚ್ಛರು, ಪಿ
ಶಾಚವೃತ್ತಿಯ ಕೊಂಡು
ಶೌರ್ಯವನು ತ್ಯಾಗವನು
ಜ್ಞಾನವನು ಅರಿಯದೆಯೆ ಕೇಡೆಣಿಪ
ವೈರಿಗಳು,
ಬಾಂದಳವ ಮುಟ್ಟುವೊಲು ಕವಿದು
ಬಹ ರಕ್ಕಸರೊ
ಲಿಂದು ಪಡೆಗಳ ತಂದು
ಪೀಡಿಸುತಲಿಹರು."

ಯವನರು, ಹೂಣರು, ಶಕರು, ಮ್ಲೇಂಚರು, ಬ್ರಿಟಿಷರು, ಫ್ರೆಂಚರು, ಪೋರ್ಚುಗೀಸರು ...ಇಲ್ಲಿಗನೇ ಶತ್ರು ಪ್ರವಾಹ ನಿಂತಿರುವದಿಲ್ಲ ಇದೀಗ ಚೈನಾದ ಕೆಂಪು ರಾಕ್ಷಸ ಬಂದು ನಮ್ಮ ಬಾಗಿಲಲ್ಲಿ ನಿಂತುಕೊಂಡು ದಿನಕ್ಕೊಬ್ಬನ (ಇಂದು ಲಡಖಾ, ನಾಳೆ ನೇಫಾ, ನಾಳಿದ್ದು ಆಸ್ಸಾಂ.. ಹೀಗೆ) ಬಲಿ ಕೇಳುತ್ತಿದ್ದಾನೆ. ಅವನನ್ನು ಸೀಳಲಿಂದು ಭಾರತದ ಭೀಮನೆಲ್ಲಿ? ಅಂದಿನಂತೆ ಇಂದಲ್ಲ ಇಂದು ಕೆಂಪು ರಕ್ಕಸನ ಪಡೆಯವರು ನಮ್ಮ ನಡುವೆಯೇ ಇದ್ದಾರೆ! ಆದುದರಿಂದ ಭಾರತಮಾತೆಯ ಸುಪುತ್ರರೆಲ್ಲರೂ ಭೀಮ ಬಲದಿಂದ ಒಂದಾಗಿ ನಿಲ್ಲಬೇಕು. ಆದರೆ ಇಂದು ಅದೆಂತು ಸಾಧ್ಯ? ಹತ್ತು-ಹದಿನಾರಾಗಿ ಹರಿದಿರುವ ಭಾರತ ಒಂದಾಗಿ ಭೀಮ ಬಲವನ್ನು ತೋರಿಸಲು ಸಾಧ್ಯವೇನು?

"ರಾಜೇಶ್ವರೀ ಹಿರಿಯ ಭಾರತದರಸೀ!
ಬಗೆ ಬಗೆಯ ನಿನ್ನ ಹದಿನೆಂಟು
ನುಡಿಗಳಾಡಿ
ಬೇಕಾದಂತೆ ನಿನ್ನ ಹಾಡುವೆವು
ತಾಯಾ!"

ಹತ್ತು-ಹದಿನೆಂಟಾಗಿ ಹಂಚಿ ಹೋದರೂ ಭಾರತದ ಆತ್ಮ ಎಲ್ಲಿದೆಂಬುದನ್ನು ಕವಿವರ ಭಾರತಿಯವರು ಬಣ್ಣಿಸಿದ್ದಾರೆ ಈ ಅನುಭವ ನಮಗುಂಟಾದಾಗ ಆಗ ನಾವೇ

(ಒಂದೇ) "ತಾಯ ಹೊಟ್ಟೆಯಲಿ
ಹುಟ್ಟಿದವರ್—ತನ್ನೊಳ್
ಜಗಳನಾಡಿದರೂ ಸೋದರರಲ್ಲವೇನೋ? ಎಂದು ಕೇಳಿಕೊಳ್ಳುತ್ತೇವೆ, ಆಗ ಭಾಷಾ-ರಾಜ್ಯ ಬಡಿದಾಟಕ್ಕೆಡೆಯೇ ಇರುವದಿಲ್ಲ. ನೆರೆ 'ರಾಜ್ಯ'ದವರನ್ನು ಚೈನೀಯರೆನ್ನುವ ಚಪಲ ಬರಲಿಕ್ಕಿಲ್ಲ ಆಗ ನಾವೆಲ್ಲರೂ ಒಂದಾಗುತ್ತೇವೆ. ಭಾರತದರಸಿಗೆ ಕೇಡೆಣಿಪ ವೈರಿಗಳನ್ನು ಸದೆ ಬಡಿಯಲು

"ಬಾಂದಳವ ಮುಟ್ಟುವ ಹಿಮಾಲಯ
ಮಹಾಗಿರಿಯೂ
ಮಿಕ್ಕ ದೆಸೆಗಳು ನೆಲೆಗೊಂಡ ಪೆರ್ಗೆರೆ
ಗಡಲೂ
ಕಾಪಿಡುವ ನಾಡು!... ......"

ನಮ್ಮ ನಾಡು ಭಾರತವಾದರೂ ಆ ಮಹಾ ಗಿರಿಯನ್ನೂ ದಾಟಿ ದೂರ್ತರು ಇತ್ತ ಬಂದಿದ್ದಾರೆ ಅವರ ಮಿತ್ರರು ನಮ್ಮ ನಡುವೆಯೂ ಇದ್ದಾರೆ. ಹಾಗಿರುವದರಿಂದ ನೈಸರ್ಗಿಕ ಎಲ್ಲೆಗಳು ನಮ್ಮನ್ನು ಕಾಪಾಡುತ್ತೇವೆಂದು ಕೈಕಟ್ಟಿ ಪಂಚಶೀಲ ಮಂತ್ರ ಪಠಿಸುವ ಕಾಲ ಇದಲ್ಲ. ಸೋಮನಾಥ ಧ್ವಂಸವಾಗುತ್ತಿದ್ದಾಗ ಪ್ರತಿಭಟಿಸದೆ ಮಂತ್ರ ಪಠಿಸುತ್ತಿದ್ದಂತಾದೀತು, ಇಂದು ನಾವು ಬಂದೊದಗಿರುವ ಸಂಕಟವನ್ನೆದುರಿಸಲು ಒಂದಾಗದಿದ್ದಲ್ಲಿ

"ಒಂದುಗೂಡಿದರುಂಟು ಬಾಳ್ವೆ ನ
ಮ್ಮೊಳ್
ಒಗ್ಗಟ್ಟು ನೀಗಲೆಲ್ಲರಿಗೂ ಬೀಳೇ;
ಚೆನ್ನಾಗಿದನಾರೈಯ್ಯಾ ಬೇಕು—ಈ
ಜ್ಞಾನ ಬಂದಾ ಮೇಲೆ ನಮಗೇನು
ಬೇಕು?"

ಬರಬೇಕಲ್ಲವೇ ಆ ಸುಜ್ಞಾನ! ಆ ಜ್ಞಾನೋದಯವಾದಾಗ ಭಾರತೀಯರೆಲ್ಲರೂ ಮಹಾ ವಿರಾಟ ಪುರುಷನಂತೆ ಎದ್ದು ನಿಲ್ಲುವರು.

"ಮೂವತ್ತು ಕೋಟಿ ಬಾಳುವೆವು—
ಬೀಳಲ್
ಮೂವತ್ತು ಕೋಟಿಯೆಲ್ಲಾ ಬೀಳ್ವೆ
ವೆವು."

ಜ್ಞಾನೋದಯವಾದಲ್ಲಿ ಬೀಳುವ ಮಾತೇ ಬರುವದಿಲ್ಲ. ಬಾಳುವ ಮಾತು ಮಾತ್ರ ಬಾಳುತ್ತದೆ.

"ಧರ್ಮವೇ ಗೆಲ್ಲುವುದೆಂಬ
ಸಂತರುಕ್ತಿ ಹುಸಿಯಹುದೋ?"

ಎಂದಾದರೂ ಹಾಗಾಗ ವದುಂಟೇ? ನಾವಾದರೋ ಧರ್ಮರಕ್ಷಣೆಗಾಗಿ ಹೋರಾಡುತ್ತಿದ್ದೇವೆ ಚೈನಾಗೋಡೆಯನ್ನೊಡೆದಾಕ್ರಮಿಸಿ ಕಮ್ಯೂನಿಷ್ಟರನ್ನು ಸಂಹರಿಸಲು ನಾವು ಹೋಗಿರುವದಿಲ್ಲ ನಮ್ಮ ದೇಶ, ಧ್ವಜ, ಧರ್ಮದ ಮೇಲೆ ಮಾಡಿರುವ ಆಸುರೀ ಶಕ್ತಿಯ ನಾಶಕ್ಕೆ ಬದ್ಧಕಂಕಣರಾಗಿದ್ದೇವೆ. ಧರ್ಮದ ಬೆಲೆ. ಸ್ವಾತಂತ್ರ್ಯದ ಬೆಲೆ ನಮಗೆ ಗೊತ್ತು.

"ವೀರ ಸ್ವಾತಂತ್ರ್ಯವ ಬಯಸಿ ನಿಂದ
ವರ್ ಮತ್ತೆ
ಬೇರೊಂದ ಕೈಕೊಳ್ವರೇ — ಎಂ
ದೂ.... ..."

ಯೂಕೆ? [ಸ್ವಾತಂತ್ರ್ಯ] ದೇವಿ! ನಿನ್ನ ಕಳೆಪಡೆಯದ

ದೇಶವೊಂದು ದೇಶವಹುದೋ ."

ಗುಲಾಮಿ ರಾಷ್ಟ್ರವೊಂದು ರಾಷ್ಟ್ರವೇ ಅಲ್ಲ. ಇಂದಿನ ಈ ಸ್ವಾತಂತ್ರ್ಯಕ್ಕೂ ಪಟ್ಟ ಪಾಡೆಷ್ಟು? ಅದನ್ನು ಕೇವಲ ಭ್ರಾಮಕ ಶಬ್ದ ಜಾಲಕ್ಕೋಸ್ಕರ ಬಿಟ್ಟು ಕೊಡುವುದೇ? ಸಹಬಾಳ್ವೆಯ ಹೆಸರಿನಲ್ಲಿ ಇಷ್ಟತ್ತು ಮಂತ್ರಿಗಳ ಸಂಖ್ಯೆಯಲ್ಲಿ ಹತ್ತು ಸ್ಥಾನವನ್ನು ಚೈನೀ ಕಮ್ಯುನಿಸ್ಟರಿಗೋ ಇತರ ಆಕ್ರಮಣಗಾರರಿಗೋ ಬಿಟ್ಟುಕೊಡುವದು ನ್ಯಾಯವೇನು? ಇಂತಹ ದುರ್ದೆಸೆ ಬಾರದಿರಲಿ! 'ಧಾರಿಣಿಯಲ್ಲೇ ಇದು ಒಳ್ಳೇ ನಾಡಿದೆ.' "ಭಾರತ ನಾಡು ಪುರಾತನ ಹಿರಿ ನಾಡಿದೆ. "ಮಾರಥ ವೀರರು ಹೇರಳವಾದ ನಲ್ನಾಡಿದು, ಪೂರ್ಣ ಜ್ಞಾನವು ಬೆಳಗಿದ ನಾಡು ಇದು."

ನಾವಾದರೂ ಆ ವೀರರ ಪರಂಪರೆಯಲ್ಲಿ ಹುಟ್ಟಿಲ್ಲವೇನು? ರಾಣಾ ಪ್ರತಾಪ, ಶಿವಾಜಿ, ಗುರು ಗೋವಿಂದ ಸಿಂಘ, ಛತ್ರಸಾಲ, ಹಕ್ಕ-ಬುಕ್ಕ, ಕೆಂಪಣ, ತಾಂತ್ಯಾ, ಝಾನ್ಸಿ ಲಕ್ಷ್ಮಿ, ಕಿಟ್ಟೂರು ಚೆನ್ನಮ್ಮ, ಸುಭಾಷ್, ಭಗತ್‌ಸಿಂಘ. . . ದೊಡ್ಡ ಕೃತಿಯೇ ರಚನೆಯಾದೀತು ನಮ್ಮ ನರನಾಡಿಗಳಲ್ಲೂ ಆ ವೀರಪುರುಷರ ಭಾರತೀಯ ರಕ್ತ ಹರಿಯುತ್ತಿಲ್ಲವೇನು? ಆ ವೀರ ಪರಂಪರೆಗೆ ನಾವು ಅಪಮಾನ ಮಾಡುವದೇನು?

ಅದನ್ನು ಅರಿತುಕೊಂಡ ಭಾರತೀಯರು ಭಾರತವನ್ನು ಬಹಳ ಚೆನ್ನಾಗಿ ಬಣ್ಣಿಸಿದ್ದಾರೆ ಅನೇತು ಹಿಮಾಚಲ ಪರ್ಯಂತ ವಸನೇ ದೇವಿಯ ಸೃಷ್ಟಿ ಪವಿತ್ರ ಚಿತ್ರವನ್ನು ಭಾರತೀಯರ ಕಣ್ಮುಂದೆ ಅವರು ನಿಲ್ಲಿಸಿದ್ದಾರೆ, ಪಠಕೀಯರಧಾಳಿ ಹಾಗೂ ಬ್ರಿಟಿಷರ ಒಡೆದು ಆಳುವ ನೀತಿ ಅನಂತರದ ರಾಜಕೀಯ ಗಡಿಬಿಡಿಯಿಂದ ಹರಿಹಂಚಾಗಿ ಹೋದ ಭಾರತವನ್ನು ಪಟೇಲರು ಒಂದಾಗಿಸಲು ಪ್ರಯತ್ನಿಸಿದರು. ದುರದೃಷ್ಟ ವಶಾತ್ ಅವರ ಕಾರ್ಯ ಅಪೂರ್ಣವಾಗಿ ನಿಂತಿದೆ. ಹರಿಹಂಚಾಗಿ ಹೋಗಿದೆಂದು ಕಾಣುವಂತಹ ಭಾರತವನ್ನು ನುಂಗಲು ಚೈನೀ ಕಮ್ಯುನಿಸ್ಟ ರಕ್ಕಸ ತನ್ನ ನೀಳ ನಾಲಿಗೆಯನ್ನು ಹೊರಹಾಕಿ ಇತ್ತ ಕಾಯು ಹಾಕಿದ್ದಾನೆ, ಶಾಂತಿ ಸ್ಥಾಪನೆಗಾಗಿ, ಧರ್ಮ ರಕ್ಷಣೆಗಾಗಿ, ದುಷ್ಟ ಮರ್ದನಕ್ಕಾಗಿ, ಶಿಷ್ಯರ ಪರಿಪಾಲನೆಗಾಗಿ ಪ್ರಪಂಚದ ಮಹಾನ್ ಗುರು ಭಾರತವು ಒಂದಾಗ ಬೇಕು.

"ಭಾರತ ಸಮುದಾಯವು ಬಾಳಲಿ!
ಬಾಳ್ಗ ಬಾಳ್ಗ
ಭಾರತ ಸಮುದಾಯವು ಬಾಳಲಿ!
—ಜಯ, ಜಯ, ಜಯ!"

—ಶ್ರೀ ಶಿವಶಂಕರ.

ಹಾಡುಗಳು "ಭಾರತಿ"ಯವರ ಕವಿಗತೆಯಿಂದ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ. ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ರಶ್ಯನ್ ಮತ್ತು ಸಂಸ್ಕೃತ ಭಾಷೆಗಳಲ್ಲಿ

ಕೌತುಕಮಯ ಸಮಾನತೆಗಳು

ಪ್ರಪಂಚದ ಯಾವ ಎರಡು ಭಾಷೆಗಳಲ್ಲಿ ಹೆಚ್ಚಿನ ಪರಸ್ಪರ ಸಾಮ್ಯವಿದೆಯೆಂದು ನನ್ನಲ್ಲಿ ಕೇಳಿದರೆ ನಾನೂ ಏನೂ ಅನುಮಾನವಿಲ್ಲದೆ ರಶ್ಯನ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಎಂದು ಹೇಳಬಲ್ಲೆನು.

ಇಂಡೋ-ಯುರೋಪಿಯನ್ ಭಾಷಾ ವರ್ಗಕ್ಕೆ ಸೇರಿದ ಲ್ಯಾಟಿನ್, ಜರ್ಮನ್, ಸಂಸ್ಕೃತ, ಪರ್ಷಿಯನ್ ಮತ್ತು ರಷ್ಯನ್ ಭಾಷೆಗಳಲ್ಲಿ ಸಮಾನವಾದ ಪದಗಳು ಕಂಡು ಬರುತ್ತವೆ. ಹೀಗೆ ಒಂದೇ ಕುಟುಂಬಕ್ಕೆ ಸೇರಿದ ಅನೇಕ ಭಾಷೆಗಳಲ್ಲಿ ಬರುವಂತೆ ಎರಡು ಭಾಷೆಗಳಲ್ಲಿ ಅಲ್ಲಲ್ಲಿ ಬರುಬರುವ ಕೇವಲ ಕೆಲವು ಶಬ್ದಗಳು ಸಮಾನವಾಗಿರುವುದರಿಂದ ಮಾತ್ರ ಈ ಸಾದೃಶ್ಯವಲ್ಲ. ಎರಡು ಭಾಷೆಗಳ ವ್ಯಾಕರಣ ನಿಯಮಗಳ ನಿಕಟ ಸಂಬಂಧದಿಂದ ಕೂಡಿದ ಪದ ರಚನೆ ಕ್ರಮ ಮತ್ತು ವಾಕ್ಯ ರಚನೆಗಳ ಅದ್ಭುತ ಸಾದೃಶ್ಯವಾಗಿದೆ. ಇದು ಬಹು ಪುರಾತನ ಕಾಲದಲ್ಲಿ ರಶ್ಯಾ ಮತ್ತು ಇಂಡಿಯಾ ಜನರೊಳಗಿದ್ದ ನಿಕಟ ಸಂಬಂಧದ ಕುರಿತು ಕೌತುಕಪ್ರದವಾದ ವಿಷಯವನ್ನೂ ಭಾಷಾಸಂಬಂಧಿ ವಿಚಾರಗಳನ್ನೂ ತಿಳಿಯುವ ಆಸಕ್ತಿಯುಳ್ಳವರೆಲ್ಲರ ಬಲವಾದ ಲಕ್ಷ್ಯವನ್ನು ಸೆಳೆಯತಕ್ಕದಾಗಿದೆ.

ಉದಾಹರಣೆ:— ಈ ಶತಮಾನದ ಅತಿ ಪ್ರಸಿದ್ಧವಾದ "ಸ್ಪುತ್ನಿಕ್" ಎಂಬ ಪದವನ್ನು ತೆಗೆದುಕೊಳ್ಳೋಣ. ಇದು ಮೂರು ಅಂಶಗಳಿಂದ ಕೂಡಿದೆ. ೧) ಸ್. ಉಪಸರ್ಗ (Prefix) ೨) ಪುತ್, ಮೂಲ (Substantive) ೩) ನಿಕ್, ಪ್ರತ್ಯಯ, (suffix), ಪುತ್ ಎಂಬ ರಶ್ಯನ್ ಪದವು ಇತರ ಅನೇಕ ಇಂಡೋ-ಯುರೋಪಿಯನ್ ಭಾಷಾ ಕುಟುಂಬದಲ್ಲಿ ಸಮಾನವಾಗಿದೆ. ಇಂಗ್ಲೀಷಿನಲ್ಲಿ path, ಸಂಸ್ಕೃತದಲ್ಲಿ ಪಥ್. ಅಷ್ಟು ಮಾತ್ರ. ಆದರೆ, ರಶ್ಯನ್ ಮತ್ತು ಸಂಸ್ಕೃತದೊಳಗಣ ಸಾಮ್ಯವು ಇನ್ನೂ ಮುಂದೆ ಹೋಗುತ್ತದೆ. ಪಥ್ ಎಂಬ ಸಂಸ್ಕೃತ ಪದವು ಪಥಿಕ ಎಂಬ ಪದ ರಚನೆಗೆ ಇಕ್ ಎಂಬ ಪ್ರತ್ಯಯವನ್ನು ತೆಗೆದುಕೊಳ್ಳುತ್ತದೆ, ದಾರಿ ನಡೆಯುವವನು ಅಂದರೆ ಪ್ರಯಾಣಿಕನು ಎಂಬ ಅರ್ಥ ಕೊಡುತ್ತದೆ. ರಶ್ಯನ್ ಭಾಷೆಯಲ್ಲಿ ಪುತಿಕ್ ಮತ್ತು ಪುತ್ನಿಕ್ ಎಂಬ ಎರಡು ಪದಗಳ ರಚನೆಗಳು ಇವೆ. ಈ ಪದದ ಸೋಜಿಗದ ಕಥೆಯೇನೆಂದರೆ ಸಂಸ್ಕೃತದಲ್ಲಿ ಸಪಥಿಕ ಎಂಬ ಪದವನ್ನು ರಚಿಸಲು "ಸ" ಎಂಬುದನ್ನು ಮೊದಲು ಸೇರಿಸಬೇಕು, ರಶ್ಯನ್ ಭಾಷೆಯಲ್ಲಿ ಸ್ಪುತಿಕ್ ಅಥವಾ ಸ್ಪುತ್ನಿಕ್ ಎಂಬ ಪದರಚನೆಗೆ "ಸ" ಎಂಬುದನ್ನು ಸೇರಿಸಬೇಕು. ಎರಡು ಭಾಷೆಗಳಲ್ಲೂ ಸಮಾನವಾದ ದಾರಿಯಲ್ಲಿ ಹೋಗುವವನು ಎಂಬ ಒಂದೇ ಯುಕ್ತವಾದ ಅರ್ಥವು ಆ ಪದಗಳಿಗೆ ಬರುತ್ತದೆ. ಅಂತರ್ರಾಷ್ಟ್ರೀಯ ಮತ್ತು ವಿಶ್ವವ್ಯಾಪಿಯಾದ ಈ ಪದವನ್ನು ಆರಿಸಿದುದಕ್ಕೆ ಸೋವಿಯಟ್ ಜನರನ್ನು ನಾವು ಅಭಿನಂದಿಸಲೇ ಬೇಕು. (ಸ್ಪುತ್ನಿಕ್ ಎಂಬುದನ್ನು ಸ್ಪುಟ್ನಿಕ್ ಎಂದು ಉಚ್ಚರಿಸಿದರೂ ಅದರಿಂದ ವ್ಯತ್ಯಾಸವಿಲ್ಲ— ಅನು.)

ನಾನು ಮೋಸ್ಕೋ ಪಟ್ಟಣಕ್ಕೆ ಬಂದಾಗ ನನ್ನ ಹೋಟೇಲಿನ ಮೇನೇಜರರು ನಂಬ್ರ ೩೪ರ ಕೋಣೆಯ ಬೀಗದ ಕೈಯನ್ನು ಕೊಟ್ಟು "ದ್ವೇಷ್ಟಿ ಚ್ರಿದ್‌ಶತ್ ಚೆತಿರೆ" ಎಂದು ಹೇಳಿದರು. ಸ್ವಲ್ಪ ಸಮಯ ನಾನು ಮೋಸ್ಕೋ ಪಟ್ಟಣದಲ್ಲಿ ಒಬ್ಬ ಚೆಲುವೆಯಾದ ಹುಡುಗಿಯ ಮುಂದೆ ನಿಂತಿದ್ದೇನೋ ಅಥವಾ ೨೦೦೦ ವರ್ಷಗಳ ಹಿಂದಿನ ವೈಭವ ಕಾಲದ ಬನಾರಸ್ ಅಥವಾ ಉಜ್ಜಯಿನೀ ನಗರದಲ್ಲಿದ್ದೇನೋ ಎಂದು ನನಗೆ ನಿರ್ಣಯವಾಗಲಿಲ್ಲ. ಸಂಸ್ಕೃತದಲ್ಲಿ ೩೩೪ ಎಂಬುದು ದ್ವಿಶತ ತ್ರಿಂಶತ್ ಚತ್ವಾರಿ ಎಂದು. ಇದಕ್ಕಿಂತ ಹೆಚ್ಚಿನ ನಿಕಟ ಸಂಬಂಧವು ಬೇರೆಲ್ಲಿಯಾದರೂ ಇರಬಹುದೇ? ಇವತ್ತು ಪುರಾತನ ಸಂಪತ್ತನ್ನು ಇಷ್ಟು ಸಮನವಾಗಿ, ಉಚ್ಚಾರದಲ್ಲಿ ಉಳಿಸಿಕೊಂಡಿರುವ ಬೇರೆ ಯಾವ ಎರಡು ವಿಭಿನ್ನ ಭಾಷೆಗಳೂ ಇರಲಾರವು.

ಮೋಸ್ಕೋ ಪಟ್ಟಣದಿಂದ ೩೫ ಕಿಲೋ ಮೀಟರ್ ದೂರದ "ಕಲಿಸಾ" ಎಂಬ ಒಂದು ಹಳ್ಳಿಯನ್ನು ಸಂದರ್ಶಿಸುವ ಯೋಗವು ನನಗೆ ಲಭಿಸಿತು. ಒಂದು ರಶ್ಯನ್ ಕೃಷಿಕ ಕುಟುಂಬದವರೊಡನೆ ಭೋಜನ ಮಾಡಲು ನನಗೊಂದು ಆಮಂತ್ರಣ ಬಂತು. ಆಗ ಒಬ್ಬಳು ವೃದ್ಧ ಮಹಿಳೆಯು ನನ್ನೊಡನೆ ಕುಳಿತುಕೊಂಡಿದ್ದ ತರುಣ ದಂಪತಿಗಳ ಪರಿಚಯವನ್ನು ನನಗೆ ಮಾಡಿ ಕೊಟ್ಟಳು. ಅವಳು ರಶ್ಯನ್ ಭಾಷೆಯಲ್ಲಿ "ಓನ್ ಮೋಯ್ ಸೀನ್ ಓನ್ ಮೋಯಾ ಸ್ನೋಖಾ" ಎಂದು ಹೇಳಿದಳು.

ಸುಮಾರ ೨,೬೦೦ ವರ್ಷಗಳ ಹಿಂದೆ ಬದುಕಿದ್ದ ಭಾರತದ ಮಹಾ ವೈಯಾಕರಣಿಯಾದ ಪಾಣಿನಿಯು ಇಲ್ಲಿ ನನ್ನೊಡನಿದ್ದು ಪ್ರಪಂಚದ ಈ ಭಾಗದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲದೆ ಉಳಿದು ಬಂದಿರುವ ತನ್ನ ಕಾಲದ ಭಾಷೆಯನ್ನು ಸ್ವತಃ ಕೇಳಬೇಕೆಂದು ನಾನು ಬಯಸಿದೆನು. ಸೀನ್ ಎಂಬ ರಶ್ಯನ್ ಪದವು ಇಂಗ್ಲೀಷಿನಲ್ಲಿ ಸನ್ ಎಂದೂ ಸಂಸ್ಕೃತದಲ್ಲಿ ಸೂನು ಎಂದೂ ಇರುತ್ತದೆ. ಸಂಸ್ಕೃತದ ಮದೀಯ ಎಂಬುದನ್ನು ರಶ್ಯನ್ ಭಾಷೆಯಲ್ಲಿ ಮೋಯ್ ಎಂಬುದರೊಡನೆಯೂ ಇಂಗ್ಲೀಷಿನಲ್ಲಿ "ಮಯ್" ಎಂಬುದರೊಡನೆಯೂ ಹೋಲಿಸ ಬಹುದು. ಆದರೆ ರಶ್ಯನ್ ಮತ್ತು ಸಂಸ್ಕೃತಗಳಲ್ಲಿ ಷಷ್ಠೀವಿಭಕ್ತಿಯ ಮೋಯ್ ಮತ್ತು ಮದೀಯ್ ಎಂಬ ಸರ್ವನಾಮಗಳನ್ನು ಮೋಯಾ ಮತ್ತು ಮದೀಯಾ ಎಂದು ಬದಲಾಯಿಸ ಬಹುದು. ಏಕೆಂದರೆ ಅದು ಸ್ತ್ರೀಲಿಂಗದಲ್ಲಿರುವ ಸ್ನೋಖಾ ಎಂಬ ಪದಕ್ಕೆ ವಿಶೇಷಣವಾಗಿದೆ. ಸ್ನೋಖಾ ಎಂಬ ರಶ್ಯನ್ ಪದವು ಸಂಸ್ಕೃತದಲ್ಲಿ ಸ್ನುಷಾ ಅಥವಾ ಸ್ನುಷಾ ಎಂದು ಇದೆ. ಅದನ್ನು ಎರಡು ರೀತಿಗಳಿಂದ ಉಚ್ಚರಿಸಬಹುದ, ಎರಡು ಭಾಷೆಗಳಲ್ಲಿರುವ ಸಮಾನ ಪದಗಳಿಂದ ಈ ಸಂಬಂಧವು ಸೂನುವನ್ನು ದಾಟಿ ಸೂನುವಿನ ಹೆಂಡತಿಯ ತನಕ ಹೋಗುತ್ತದೆ.

ಇಲ್ಲಿ ಇನ್ನೊಂದು ರಶ್ಯನ್ ವಾಕ್ಯವಿದೆ. "ತೋಕ್ ವಶ್ ದೋಮ್, ಎತೋಕ್ ನಶ್ ದೋಮ್." ಸಂಸ್ಕೃತದಲ್ಲಿ ಅದು ತದ್ ವಸ್ ಧಾಮ, ಏತದ್ ನಸ್ ಧಾಮ ಎಂದಿವೆ. ತೋತ್ ಅಥವಾ ತದ್ ಎಂಬುದು ಎರಡು ಭಾಷೆಗಳಲ್ಲೂ ನಿರ್ದೇಶಕ ಸರ್ವನಾಮ ಏಕವಚನ. ದೂರದ ವಸ್ತುಗಳನ್ನು ಸೂಚಿಸುತ್ತದೆ. ಎರಡೂ ಸಾಮೀಪ್ಯವನ್ನು ಸೂಚಿಸಲು ತಮ್ಮ ಆದಿಯಲ್ಲಿ ಏಕಾರವನ್ನು ಅಪೇಕ್ಷಿಸುತ್ತವೆ. ರಶ್ಯನ್ ಮತ್ತು ಸಂಸ್ಕೃತಗಳಲ್ಲಿ ಒಂದೇ ಸಮಾನವಾದ ನಿಯಮ. ಸಂಸ್ಕೃತದ ಧಾಮ ಎಂಬುದು ರಶ್ಯನ್ ಭಾಷೆಯಲ್ಲಿ ದೋಮ್ ಎಂದಿದೆ. ಏಕೆಂದರೆ ರಶ್ಯನ್ ಭಾಷೆಯಲ್ಲಿ ಮಹಾಪ್ರಾಣ ಹ್ ಧ್ವನಿಯಿಲ್ಲ.

ನಿಯಮ

ಇಂಡೋ ಯುರೋಪಿಯನ್ ವರ್ಗದ ಇಂಗ್ಲಿಷು, ಫ್ರೆಂಚ್, ಜರ್ಮನ್, ಮತ್ತು ಸಂಸ್ಕೃತದಿಂದ ನೇರವಾಗಿ ಹುಟ್ಟಿದ ಹಿಂದಿಯಂತಹ ಆಧುನಿಕ ಭಾಷೆಗಳಲ್ಲಿ ಮೇಲೆ ಹೇಳಿದ ವಾಕ್ಯಕ್ಕೆ ಇದೆ ಅಥವಾ ಆಗಿದೆ ಎಂಬ ಪದವು ಇರಲೇ ಬೇಕಾಗುತ್ತದೆ. ಅದಿಲ್ಲದೆ ಈ ಭಾಷೆಗಳಲ್ಲಿ ಅದೊಂದು ವಾಕ್ಯವಾಗಿ ನಿಲ್ಲಲಾರದು. ಮೇಲಿನ ವಾಕ್ಯದಲ್ಲಿ ಇದೆ ಅಥವಾ ಆಗಿದೆ ಎಂಬ ಪದವಿಲ್ಲದಿದ್ದರೂ ವ್ಯಾಕರಣ ಮತ್ತು ನುಡಿಕಟ್ಟಿಗೆ ಸಮ್ಮತವಾಗಿ ಸಂಪೂರ್ಣ ಶುದ್ಧವಾಗಿರುವವುಗಳು ರಶ್ಯನ್ ಮತ್ತು ಸಂಸ್ಕೃತ ಭಾಷೆಗಳು ಮಾತ್ರ. ಇದೆ ಎಂಬರ್ಥದ ಪದವೂ ಎರಡು ಭಾಷೆಗಳಲ್ಲಿ ಅತಿ ಸಮಾನವಾಗಿವೆ, ರಶ್ಯನ್ ಭಾಷೆಯಲ್ಲಿ 'ಎಸ್ಟ್' ಎಂದೂ ಸಂಸ್ಕೃತದಲ್ಲಿ ಅಸ್ತಿ ಎಂದೂ ಇವೆ. ಮತ್ತು ರಶ್ಯನ್ ಭಾಷೆಯಲ್ಲಿ 'ಎಸ್ಟ್ವ' ಎಂಬುದೂ ಸಂಸ್ಕೃತದಲ್ಲಿ ಅಸ್ತಿತ್ವ ಎಂಬುದೂ ಇರುವಿಕೆ ಎಂಬ ಅರ್ಥ ಕೊಡುತ್ತವೆ. ಇದರಿಂದ ವಾಕ್ಯ ರಚನೆ, ಪದ ಕ್ರಮಗಳು ಮಾತ್ರವಲ್ಲ ಭಾಷಾ ವಿಚಾರ ಮತ್ತು ಗತಿಗಳು ಕೂಡ ಎರಡು ಭಾಷೆಗಳಲ್ಲಿ ಬದಲಾವಣೆಯಿಲ್ಲದೆ ಮೂಲ ರೂಪದಲ್ಲಿರುತ್ತವೆ ಎಂಬುದು ಸ್ಪಷ್ಟವಾಗುತ್ತದೆ.

ಪಾಣಿನಿಯು, ಒಂದು ಸಾಮಾನ್ಯ ಆದರೂ ಅತಿ ಉಪಯುಕ್ತವಾದ ವ್ಯಾಕರಣ ನಿಯಮವನ್ನು ಕೊಟ್ಟು, ಅದು ರಶ್ಯನ್ ಭಾಷೆಯಲ್ಲಿ ಪದ ರಚನೆಗೆ ಹೇಗೆ ಹೊಂದಿಕೊಂಡಿದೆ ಎಂದು ತೋರಿಸಿ, ಈ ಲೇಖನವನ್ನು ನಾನು ಅಂತ್ಯಗೊಳಿಸುತ್ತೇನೆ. ಪಾಣಿನಿಯು ಆರು ಸರ್ವನಾಮ ಶಬ್ದಗಳನ್ನು ದಾ ಪ್ರತ್ಯಯವನ್ನು ಸೇರಿಸಿ ಕಾಲ ವಾಚಕವಾಗಿ ಮಾಡಲು ಒಂದು ಸಾಮಾನ್ಯ ನಿಯಮವನ್ನು ಹೇಳುತ್ತಾನೆ. ಪಾಣಿನಿಯು ಸಂಸ್ಕೃತದ ಆರು ಸರ್ವನಾಮಗಳಲ್ಲಿ ಈಗ ರಶ್ಯನ್ ಭಾಷೆಯು ಇನ್ನು ಮೂರು ಉಳಿಸಿಕೊಂಡು ಕಾಲ ವಾಚಕವಾಗಿ ಮಾಡಲು ಅದೇ ೨೬೦೦ ವರ್ಷಗಳಷ್ಟು ಪುರಾತನವಾದ ನಿಯಮವನ್ನು ಅನುಸರಿಸುತ್ತದೆ. ಅದು ಹೀಗಿದೆ:—

ಸರ್ವನಾಮ	ಅರ್ಥ	ಸಂಸ್ಕೃತ	ರಶ್ಯನ್
ಕಿಮ್	ಏನು	ಕದಾ	ಕೋಗ್ದಾ
ತದ್	ಅದು	ತದಾ	ತೋಗ್ದಾ
ಸರ್ವ	ಎಲ್ಲಾ	ಸದಾ	ಸ್ಸೇಗ್ದಾ

ಮೇಲಿನ ರಶ್ಯನ್ ಪದಗಳಲ್ಲಿ ಗ್ ಎಂಬ ಅಕ್ಷರವು ಒಂದಾಗಿ ಮಾಡಲ್ಪಟ್ಟ ಪದದ ಭಿನ್ನಾಂಶವನ್ನು ತೋರಿಸಲು ಸಹಾಯಕವಾಗಿ ಉಪಯೋಗಿಸಲ್ಪಟ್ಟಿದೆ. ರಶ್ಯನ್ ಭಾಷೆಯಂತೆ ಆಧುನಿಕ ಯುರೋಪ ಅಥವಾ ಭಾರತೀಯವಾದ ಯಾವ ಭಾಷೆಯೂ ಪುರಾತನ ಭಾಷಾ ಕ್ರಮವನ್ನು ಉಳಿಸಿಕೊಂಡಿದೆಯೆಂದು ತೋರಿಸುವುದಿಲ್ಲ. ಇಂಡೋ ಯುರೋಪಿಯನ್ ಕುಟುಂಬದ ಶಾಖೆಗಳಾದ ಈ ಎರಡು ಭಾಷೆಗಳಲ್ಲಿ ಸಂಶೋಧನೆಯನ್ನು ಪ್ರಬಲಗೊಳಿಸಿ, ಎಲ್ಲಾ ಜನಾಂಗಗಳ ಸೌಕರ್ಯಕ್ಕಾಗಿ ಪುರಾತನ ಚರಿತ್ರೆಯ ಕೆಲವು ಗೂಢವಾದ ಅಧ್ಯಾಯಗಳನ್ನು ಹೊರಗೆಡಹುವ ಕಾಲವು ಈಗ ಸನ್ನಿಹಿತವಾಗಿದೆ.

(ಸ್ಪುಟ್ನಿಕ್ ಪತ್ರಿಕೆಯಿಂದ.)

— ಅನು: ಶ್ರೀ ಕೆ. ನಾರಾಯಣ ಆಚಾರ್, ಶಿರೋಮಣಿ, ವಿದ್ವಾನ್.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಹೊಸ ಪುಸ್ತಕ—

'ನಚಿಕೇತ'ರ
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿ,
ನವಯುಗ ಪ್ರೆಸ್, ಉಡುಪಿ.

REGD. No. B. G. 176
LICENCE No. 31
Licensed to Post without Prepayment

ಬರಿ ಬಾಳು ತುಂಬಿ ಬಾಳಿತು

(೨ನೇ ಪುಟದಿಂದ)

ದೇಹ. ಆದರೂ ಪ್ರಾಣ ಮಾತ್ರ ಇನ್ನೂ ಇರುವೆನೆಂದು ಹೇಳುತಿತ್ತು.

ಪತಿತ್ಯಕ್ತೆಯಾದ ಕುಸುಮೆ ಉದ್ಯೋಗವನ್ನವಲಂಬಿಸಿದ್ದಳು. ಮಗಂದಿರೆಂದರಾಗದ ತಾಯಿಯೊಡನೆ ಬೇರೆಯೇ ಬಿಡಾರ ಹೂಡಿದಳು. ತನ್ನ ಸಂಪಾದನೆಯಿಂದ ಜೀವಿಸತೊಡಗಿದಳು. ಆಕೆ—ಮತ್ತಾಕೆಯ ಪತಿಯ ನಡುವಣ ವಿವಾದವು ಹೇಗೆ ಕೊನೆಗೊಂಡಿತೆಂದು ಅವರಿಬ್ಬರಲ್ಲದೆ ಮತ್ತಾರೂ ಅರಿಯರು. ಕೆಲವರನ್ನುತಿದ್ದರು, ವಿಚ್ಛೇದ ಮಾಡಿಕೊಂಡಿದ್ದಾರೆಂದು; ಮತ್ತೆ ಕೆಲವರನ್ನುತಿದ್ದರು. ದ್ವಿತೀಯ ವಿವಾಹಕ್ಕೆ ಅನುಮತಿ ಕೊಟ್ಟಿದ್ದಾಳೆ ಈಕೆಯೆಂದು ಒಬ್ಬೊಬ್ಬರೂ ಅವರವರ ಮನಸ್ಸಿಗೆ ತೋಚಿದಂತೆ ಆಡಿಕೊಳ್ಳುತ್ತಿದ್ದರು.

ನರಪೇತಲಳಾದ ಕುಸುಮೆಯು ಊರಲ್ಲಿರುವ ಅಣ್ಣ ನಾಗರಾಜನಿಗೆ ಹೇಳಿಕಳಿಸಿದಳು. ಕಳೆದಾರು ವರ್ಷಗಳಲ್ಲಿಯೂ ಮುಖಾಮುಖಿಯಾಗದ, ನೆರೆಯಲ್ಲಿದ್ದೂ, ತಂಗಿಯ ಕರೆಯನ್ನು ಈಗ ಕರ್ತವ್ಯವೆಂದಾತನಿಗೆ ಮನ್ನಿಸಲೇ ಬೇಕಾಯಿತು. ಆಕೆಯನ್ನು ಕಂಡಾಗ ಆತ ತನ್ನ ಕಣ್ಣುಗಳನ್ನೇ ನಂಬದಾದ, ಹೆಚ್ಚು ಮಾತಾಡಲು ಮನಕೊರಗಿಸಲು ಸಮಯವದಲ್ಲ. ಎಂತಲೇ ವಿಚಾರಿಸಿದ: "ಎಲ್ಲೆಲ್ಲಿಯ ಔಷಧಿ ನಡೆಯಿತು?"

ಕುಸುಮೆಗೆ ಮಾತಾಡುವ ಶಕ್ತಿಯೇ ಉಳಿದಿರಲಿಲ್ಲ. ತಾಯಿಯು ಹತ್ತಾರು ವೈದ್ಯರ, ಮಂತ್ರವಾದಿಗಳ ಹೆಸರು ಹೇಳಿದರು. ನಾಗರಾಜ ಕುಸುಮೆಯನ್ನು ಆಸ್ಪತ್ರೆಗೆ ಸೇರಿಸಿದ. ಬಹು ದೀರ್ಘ ಪರಿಶೋಧನೆಯ ನಂತರ "ರಕ್ತ ಬೇಕು" ಎಂಬ ಕರೆ ಬಂತು.

ರಕ್ತ....ಯಾರಲ್ಲಿದೆ ರಕ್ತ? ಆದರೂ ಆರು ದಿನಗಳ ನಿರಂತರ ಶ್ರಮದ ಪರಿಣಾಮವಾಗಿ ರಕ್ತ ತಂದಿತ್ತ ಆತ. ಅಂದಿನಿಂದ ನಿಯಮಿತ ಆಹಾರ ಆರೈಕೆಗಳ ಪರಿಣಾಮವಾಗಿ ಕುಸುಮೆಯ ದೇಹಸ್ಥಿತಿ ಚೇತರಿಸುತ್ತ ಬಂತು. ಆಕೆಯ ಭಾರವೂ ಎಂಟು ಪೌಂಡುಗಳಷ್ಟು ಹೆಚ್ಚಿತ್ತು!

o o o

"ಅಮ್ಮಾ, ಏನು ಇಂದು ಬೇಗ ಬಂದಿರಿ?" ಎಂದಿನ ಹೊತ್ತಿಗೂ ಮೊದಲೇ ಬಂದ ಅಮ್ಮನನ್ನು ಕೇಳಿದಳು ಕುಸುಮಾ.

"ಏನಿಲ್ಲ ಮಗೂ, ಬೇಗ ಎಚ್ಚರಾಯಿತು; ಬಂದು ಬಿಟ್ಟೆ. ಹೇಗಿದ್ದಿ ಇವತ್ತು."

"ಇನ್ನು ಚಿಂತೆಯಿಲ್ಲಮ್ಮಾ. ಈಗ ತುಂಬಾ ಹುಷಾರಾದಂತಿದೆ,"

"ಹೌದು ಮಗು, ಮುಖದಲ್ಲಿ ರಕ್ತದ ಪಸೆ ತೋರುತ್ತಿದೆ."

"ಅಮ್ಮಾ ನಿನ್ನೆ ಅವರದ್ದೊಂದು ಕಾಗದ ಬಂದಿತ್ತು."

"ಯಾರದ್ದು?"

"ಅವರದ್ದು."

"ಎಲ್ಲದೆ ನೋಡೋಣ."

"ನೋಡುವುದೇನು ಮಣ್ಣು... ಇರಲಮ್ಮಾ ನಾನೀಗ ಮೂತ್ರ ಮಾಡಿ ಬರುತ್ತೇನೆ . . ."

ಹೊರಟ ಕುಸುಮ "ಅಮ್ಮ ಅಮ್ಮಾ" ಎಂದು ಹೊಟ್ಟೆಗೆ ಕೈಯೂಡಿಸಿಯೇ ತಿರುಗಿ ಬಂದಳು; ತಾಯಿ ಬಳಿ ದೊಪ್ಪನೆ ಬಿದ್ದಳು.

ಸದ್ದು ಕೇಳಿ ಧಾವಿಸಿ ಬಂದ ನರ್ಸ್ ಎಲ್ಲವೂ ಮುಗಿಯಿತು ಎಂದು ಸನ್ನೆ ಮಾಡಿದಳು.

ಬರಿದಾಗಿದ್ದ ಬಾಳು ತುಂಬಿ ಬಾಳಲು ಹಾರಿಹೋಯಿತು.

—ರಾಶಿ.

ವಿಚಿತ್ರ ಸತ್ಯ

ಪುನರ್ಜನ್ಮ ಪಡೆದ ಶ್ರೀ ಕೃಷ್ಣ ಸೇಠ್

ಜನ್ಮಾಂತರದ ಕಲ್ಪನೆಯು ಭಾರತೀಯ ಸಂಸ್ಕೃತಿಯಲ್ಲಿ ಅವ್ಯಾಹತವಾಗಿ ಹರಿದು ಬಂದಿದೆ. ಆದರೆ, ಭೌತಿಕ ವಿಲಾಸದಿಂದಾಗಿ ಪುನರ್ಜನ್ಮವೆಂಬುದನ್ನು ಅಲ್ಲಗಳೆಯುವ ಪರಿಪಾಟವಿಂದು ನಡೆದು ಬರುತ್ತಿದೆ. ಜನ್ಮಾಂತರದ ವಿಚಾರವು ಕಾಲ್ಪನಿಕವಲ್ಲವೆಂದೂ ಅದರಲ್ಲಿ ಸತ್ಯಾಂಶವಿದೆಯೆಂದೂ ಸಾರುವ ನಿದರ್ಶನವೊಂದು ಈಗ ಬೆಳಕಿಗೆ ಬಂದಿದೆ. ಈ ವಿಷಯದಲ್ಲಿ ಅಧಿಕ ಸಂಶೋಧನೆಗಳು ನಡೆಯುವುದು ಅಪೇಕ್ಷಣೀಯ. ಪುನರ್ಜನ್ಮದ ವಿಚಾರವು ಸಾಕಷ್ಟು ಸಂಶೋಧನೆ ನಡೆಸಲು ಒಂದು ಉಪಯುಕ್ತ ವಿಷಯ. ಶ್ರೀ ಮದ್ಭಗವದ್ಗೀತೆಯಲ್ಲಿ ಹೇಳಿದಂತೆ ಹಳೆಯ ಬಟ್ಟೆಗಳನ್ನು ಬಿಸುಟು ಹೊಸತನ್ನು ತೊಡುವಂತೆ ಆತ್ಮನು ಒಂದು ದೇಹವನ್ನು ಬಿಟ್ಟು ಇನ್ನೊಂದನ್ನು ಪ್ರವೇಶಿಸುತ್ತಾನೆ. ಇದನ್ನು ಸಮರ್ಥಿಸುವ ಘಟನೆ ನಡೆದುದು ಬಡಾನ್ ನಗರದಲ್ಲಿ

ಬರೈಲಿಯ ಚದಮ್ಮಿಲಾಲ್ ಸಕ್ಸೇನಾ ಎಂಬವರಿಗೆ ಸುನೀಲ್‌ದತ್ತ ಎಂಬವನು ಪುತ್ರ. ಅವನಿಗೀಗ ನಾಲ್ಕು ವರ್ಷ ಪ್ರಾಯ. ತನ್ನ ತಂದೆತಾಯಿಗಳು ಹೇಳಿದ ಯಾವ ಕೆಲಸವನ್ನೂ ಮಾಡಲು ಸುನೀಲನು ನಿರಾಕರಿಸುತಿದ್ದನು. ಯಾವ ಕೆಲಸ ಹೇಳಿದರೂ ಅವನ ಉತ್ತರ ಒಂದೇ: "ನನಗೆ ಉಪದ್ರವ ಕೊಡಬೇಡಿ; ನನ್ನ ಸೇವಕನಿಂದ ಮಾಡಿಸಿಕೊಳ್ಳಿ" ಆದರೆ ಪುಟ್ಟ ಬಾಲಕನ ಮಾತಿದು ಎಂದು ಹೆತ್ತವರು ಅದನ್ನು ಸಾಮಾನ್ಯವಾಗಿ ಗಮನಿಸುತ್ತಿರಲಿಲ್ಲ.

ಸುನೀಲನ ತಂದೆಯು ಮಗನನ್ನು ಶಾಲೆಯೊಂದಕ್ಕೆ ದಾಖಲು ಮಾಡಿಸಲು ಕರೆದೊಯ್ದಾಗ ಪ್ರಸಂಗ ಮತ್ತಷ್ಟು ಬಿಗಡಾಯಿಸಿತು. ಆ ಶಾಲೆಯಲ್ಲಿ ತಾನು ಅಧ್ಯಯನ ಮಾಡುವುದಿಲ್ಲವೆಂದೂ ತನ್ನದೇ ಆದ ಶಾಲೆಯು ಬಡಾನದಲ್ಲಿರುವುದೆಂದೂ ಅಲ್ಲಿಯೇ ತಾನು ಅಭ್ಯಾಸ ನಡೆಸುವೆನೆಂದೂ ಆತನು ಹಠ ತೊಟ್ಟನು.

ಆತನ ಶಾಲೆಯಾವುದು ಎಂದು ವಿಚಾರಿಸಿದಾಗ ಹುಡುಗನು ಬಾಡಾನದ ಸೇಠ್ ಶ್ರೀಕೃಷ್ಣ ಇಂಟರ್ ಮೀಡಿಯೆಟ್ ಕಾಲೇಜ್ ಎಂದು ಉತ್ತರಿಸಿದನು. ಈ ಕಾಲೇಜನ್ನು ಸೇಠ ಶ್ರೀ ಕೃಷ್ಣರು ಸ್ಥಾಪಿಸಿದ್ದರು. ಅವರು ೧೯೫೧ರಲ್ಲಿ ದಿವಂಗತರಾಗಿದ್ದರು.

ಮಗುವನ್ನು ಬಾಡಾನಿಗೆ ಕರೆತಂದರು. ಆತನು ನೆಟ್ಟನೆ ಕಾಲೇಜ್ ಕಟ್ಟಡವನ್ನು ಗುರುತಿಸಿ ಅತ್ತ ಧಾವಿಸಿದನು. ಬೀರಾಮ್‌ಪುರ ಮೊಹಲ್ಲಾದಲ್ಲಿ ತನ್ನ ಹೆಸರಿನ ನಾಮ ಫಲಕವು ಕಾಣೆಯಾಗಿರುವುದೆಂದು ಉದ್ಗರಿಸಿದನು.

ಸುನೀಲನು ನೇರವಾಗಿ ಪ್ರಿನ್ಸಿಪಾಲರ ಕೋಣೆಗೆ ಧಾವಿಸಿದನು. ಆದರೆ, ಪ್ರಿನ್ಸಿಪಾಲರ ಕುರ್ಚಿಯಲ್ಲಿ 'ಅಪರಿಚಿತ'ನೊಬ್ಬನು ಮಂಡಿಸಿರುವುದನ್ನು ಕಂಡು ಅವನು ಅವಾಕ್ಕಾದನು. ದಿವಂಗತ ಸೇಠ್‌ರವರಿಂದ ನಿಯುಕ್ತರಾದ ಪ್ರಿನ್ಸಿಪಾಲರನ್ನು ಸೇಟರ ಮರಣ ನಂತರ ಕೆಲಸದಿಂದ ತೆಗೆದು ಹಾಕಲಾಗಿತ್ತು.

ಅನಂತರ ಆ ನಗರದ ಶ್ರೀ ಕೃಷ್ಣ ಆಯಿಲ್ ಮಿಲ್‌ಗೆ ಹುಡುಗನನ್ನು ಕರೆದುಕೊಂಡು ಹೋದರು. ಅಲ್ಲಿ ಆತನು ಗದ್ದಿಯ ಬಳಿಗೋಡಿ, ಅಲ್ಲಿದ್ದ ಕಛಾಟ್ ಎಂಬ ಸೇವಕನೊಡನೆ ಆತನ ಸುಖಕಷ್ಟವನ್ನು ವಿಚಾರಿಸಿದನು. ಅದೇ ಪರಾರದಲ್ಲಿ ದಿ| ಶ್ರೀಕೃಷ್ಣರು ವಾಸಿಸುತಿದ್ದ ಮನೆಯೊಂದನ್ನು ಪ್ರವೇಶಿಸಿ, ಅಲ್ಲಿ 'ತನ್ನ ಹೆಂಡತಿ' ಶಕುಂತಲಾದೇವಿಯನ್ನು ವಿಚಾರಿಸಿದನು. ಸೇಠರು ಮೃತ್ಯುಮುಖರಾದ ಬಳಿಕ ಆಕೆಯು ತನ್ನ ದತ್ತಪುತ್ರನೊಡನೆ ಬೀರಾಂಪುರ ಮೊಹಲ್ಲಾದಲ್ಲಿ ವಾಸಿಸುತ್ತಿರುವಳೆಂದು ಆತನಿಗೆ ಹೇಳಿದರು

ಮಿಲ್ಲಿನಲ್ಲಿ ಸೇಟರ ಹಿರಿಯ ಅಕ್ಕ ಮತ್ತು ಭಾವರನ್ನು ಕಂಡೊಡನೆ ಹುಡುಗನು ಅವರ ಪಾದವನ್ನು ಮುಟ್ಟಿ ನಮಸ್ಕರಿಸಿದ ಸರಿ. ನಗರದಲ್ಲಿ ಸಂಚರಿಸುತ್ತಿರುವಾಗ, ಗಾಂಧೀ ಪಾರ್ಕಿನ ಗೇಟನ್ನು ತೋರಿಸಿ, ಇದನ್ನು ನಾನು ೧೯೪೮ರಲ್ಲಿ ಕಟ್ಟಿಸಿದೆನೆಂದನು.

ಕೊನೆಯಲ್ಲಿ ದಿ|| ಸೇಟರ ವಿಧವೆ ವಾಸಿಸುತ್ತಿದ್ದ ಮನೆಗೆ ಸುನೀಲನನ್ನು ಕರೆದುಕೊಂಡು ಹೋದರು. ಇಬ್ಬರೂ ಪರಸ್ಪರರನ್ನು ಕಂಡರು, ಇಬ್ಬರ ಕಣ್ಣುಗಳಲ್ಲಿಯೂ ನೀರು ಹರಿಯ ತೊಡಗಿತು. ತಾನು ಆಕೆಗೆ ಉಡುಗೊರೆಯಾಗಿ ಕೊಟ್ಟಿದ್ದ ತಮ್ಮ ಕುಲದೇವತೆಯ ಪ್ರತಿಮೆಯೆಲ್ಲಿದೆಯೆಂದು ಪ್ರಶ್ನಿಸಿದನು ಸುನೀಲ ,,."

೧೯೪೭-೪೮ರಲ್ಲಿ ಅಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫರಾಗಿದ್ದ ಶ್ರೀ ಜೆ. ಡಿ. ಶುಕ್ಲಾರವರ ಪರಿಚಯವಿದೆಯೇ ಎಂದು ಆತನನ್ನು ಕೇಳಿದಾಗ, ಇದೆಯೆಂದು ಉತ್ತರಿಸಿದನು. ಒಂದು ಸಾಮೂಹಿಕ ಚಿತ್ರವನ್ನು ತೋರಿಸಿದಾಗ, ಈಗ ಅಲಹಾಬಾದ ಡಿವಿಜನಿನ ಕಮಿಷನರಾಗಿರುವ ಶುಕ್ಲರನ್ನು ಆವನು ಗುರುತಿಸಿದನು.

ಈ ಬಾಲಕನು ತನ್ನ ಪೂರ್ವ ಜನ್ಮದ ವಿಚಾರವೆಲ್ಲವನ್ನು ಅರಿತಿರುವುದು ನಿಜಕ್ಕೂ ವಿಲಕ್ಷಣವಲ್ಲವೆ? ಹಾಗಾದರೆ ಪುನರ್ಜನ್ಮವಿಲ್ಲವೆಂದು ಹೇಳುವುದಾದರೂ ಹೇಗೆ?

ವಾರ್ತೆ-ಪ್ರತಿವಾರ್ತೆ

ಇದು ವರೆಗೆ ಅಭೇದ್ಯವೆಂದು ಹೇಳಲಾಗುತ್ತಿದ್ದ ಭಾರತೀಯ ಕಮ್ಯುನಿಸ್ಟ ಪಕ್ಷದಲ್ಲಿಯೂ ಅಧಿಕಾರಕ್ಕಾಗಿ ಜಗಳ ನಡೆದು ತುಂಬಲಾರದ ಬಿರುಕು ಕಾಣಿಸತೊಡಗಿದೆಯಂತೆ.

—ಕಮ್ಯುನಿಜಮ್ಮಿನಲ್ಲಿಯೂ ಭಾರತೀಯತೆ ಇರಬೇಕೆನ್ನುವ ಒಂದು ಗುಂಪಿನವರು ಮುಂದಿಟ್ಟವಾದವೇ ಇದಕ್ಕೆ ಮೂಲ ಕಾರಣವೆಂದು ಎಲ್ಲರೂ ನಂಬಿದ್ದಾರೆ.

o o o o

ಪ್ರಯಾಗದ ಮಹಿಳಾ ವಿದ್ಯಾಪೀಠದವರು ಕಳೆದ ನವಂಬರದಲ್ಲಿ ನಡೆಸಿದ ವಿವಿಧ ಪರೀಕ್ಷೆಗಳಿಗೆ ಪರೀಕ್ಷಕರ ನೇಮಕ ಇನ್ನೂ ಆಗ ಬೇಕಾಗಿದೆ.

—ಅದಕ್ಕೇಕೆ ಚಿಂತೆ? ಪರೀಕ್ಷಕರನ್ನು ನೇಮಿಸಿ ಅವರೆಲ್ಲರನ್ನೂ ಪ್ರಯಾಗಕ್ಕೇ ಕರೆಸಿ ತ್ರಿವೇಣೀ ಸಂಗಮ ಸ್ನಾನ ಮಾಡಿಸುವ ಪುಣ್ಯವನ್ನು ಕಟ್ಟಿಕೊಳ್ಳ ಬಹುದು.

o o o o

ಅಮೇರಿಕಕ್ಕೆ ಆಮದಾಗುತ್ತಿರುವ ಅಶ್ಲೀಲ ಸಾಹಿತ್ಯ ಸಾಮಗ್ರಿಗಳನ್ನು ತಡೆಗಟ್ಟುವುದು ಹೇಗೆಂದು ಸುಂಕದ ಅಧಿಕಾರಿಗಳು ಚಿಂತಿಸುತ್ತಾರೆ.

—ಒಳಗಿನ ಅಶ್ಲೀಲ ಸಾಹಿತ್ಯ ಸಾಮಗ್ರಿ ನಾಲದೆಂದಲ್ಲವೇ ಆಯಾತಕ್ಕೆ ತೊಡಗಿದುದು? ಹಾಗಿರುವಾಗ ತಡೆಗಟ್ಟುವ ಅಗತ್ಯವಾದರೂ ಏನು?

o o o o

ಶ್ರೀ ನಗರದಲ್ಲಿ ಕಾಣೆಯಾದ ಪವಿತ್ರ ಕೇಶವನ್ನು ಹುಡುಕಿ ಕೊಡುವವರಿಗೆ ಒಂದು ಲಕ್ಷ ರೂಪಾಯಿಯ ಬಹುಮಾನ ದೊರೆಯಲಿದೆ

—ಇದರಲ್ಲಿಯೂ ಲಂಚಾಸುರನ ಹಾವಳಿಯಿಲ್ಲವೆಂದು ನಂಬುವುದು ಸಾಧ್ಯವೆ?

o o o o

ಆಹಾರ ನುಂಗುವಾಗ ದವಡೆ ಹರಿದುಕೊಂಡ ಹದಿನಾರಡಿ ಉದ್ದದ ಹೆಬ್ಬಾವಿನ ಬಾಯಿಗೆ ೫೭ ಹೊಲಿಗೆ ಹಾಕಿದರು, ರಷ್ಯದಲ್ಲಿ.

—ಲಂಚ ನುಂಗದಂತೆ ಸರಕಾರಿ ನೌಕರರ ಬಾಯಿಗೆ ಅದೆಷ್ಟು ಹೊಲಿಗೆ ಹಾಕಬೇಕಾಗುವುದೆಂದು ಭಾರತ ಸರಕಾರ ಗಂಭೀರ ಪರಿಶೀಲನೆಗೆ ತೊಡಗಿದೆಯಂತೆ!

o o o o

ಗ್ರಾಮ ಪಟೇಲರ ಅನುವಂಶಿಕ ಅಧಿಕಾರವನ್ನು ಇನ್ನೂ ಕೆಲಕಾಲ ಮುಂದುವರಿಸಲಾಗುವುದು—ಕೃಷ್ಣಪ್ಪನವರ ಹೇಳಿಕೆ.

—ಪ್ರಾಯಃ ಇನ್ನೊಂದು ಚುನಾವಣೆಯ ವರೆಗೆ.

o o o o

ಘಾನಾದ ಅಧ್ಯಕ್ಷ ಕ್ವಾಮೆನು ಕ್ರೂಮಾರನ್ನು ಕೊಲೆ ಮಾಡುವ ಪ್ರಯತ್ನ ನಡೆಯುತ್ತಲೇ ಇದೆ.

—ಇದರಿಂದಲೇ ತಿಳಿಯುತ್ತದೆ ಅವರ ಜನಪ್ರಿಯತೆಯ ಪರಿಣಾಮ!

Edited, Printed & Published by K. H. Shetty, at the Navayuga Press, Udipi, S. India.

ನವಯುಗ

VOL. 43 No 20 | ಸಂಪುಟ ೪೩ ಸಂಚಿಕೆ ೨೦

NAVAYUGA—Nationalist Weekly ‡‡ ಉಡುಪಿ 16-1-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಡಾ| ಮಾಧವ ಪೈ

ಮಾನವನೊಬ್ಬ ವ್ಯಕ್ತಿ ಮಾತ್ರವಲ್ಲ, ಆತನೊಂದು ಅದ್ಭುತ ಶಕ್ತಿಯೆಂಬುದನ್ನು ತೋರಿಸಿಕೊಟ್ಟ ದಿವಂಗತರು ಡಾ| ಟಿ. ಮಾಧವ ಪೈ. ಅವರು ಕಷ್ಟದ ಜೀವನವನ್ನು ಅನುಭವಿಸಿಯೂ ದಿಟ್ಟತನವನ್ನು ಕಳೆದುಕೊಂಡವರಲ್ಲ. ಇದು ತನ್ನ ವೈಶಿಷ್ಟ್ಯಕ್ಕೆ ಹೆಸರಾಗಿತ್ತು. ಆದರಿಂದಾಗಿ ಬೆಳೆದು ಹೆಮ್ಮರದಂತೆ ದೃಢವಾಗಿ ನಿಂತ ಸಿಂಡಿಕೇಟ್ ಬ್ಯಾಂಕ್ ಮತ್ತಿತರ ಹಲವಾರು ಸಂಘಸಂಸ್ಥೆಗಳು ಅವರಿಗೆ ದೇಶದಲ್ಲಿಯೇ ಅಗ್ರಗಣ್ಯ ಸ್ಥಾನವನ್ನು ತಂದುಕೊಟ್ಟವು. ಸಾಹಸಪ್ರಿಯರಾದ ಡಾ| ಪೈ ಸ್ವಪರಿಶ್ರಮ ಮತ್ತು ಸಾಹಸಗಳಿಂದಾಗಿಯೇ ವೈದ್ಯಕೀಯ ಪದವಿ ಪಡೆದರು; ಅದರಲ್ಲಿಯೇ ಸ್ವಲ್ಪ ಕಾಲ ನಡೆದರು. ಅಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಸಂಸ್ಥೆಯು ದೇಶದ ಶೈಕ್ಷಣಿಕ ರಂಗದಲ್ಲಿ ಮಾಡಿದ ಕ್ರಾಂತಿಗೆ ಕಾರಣ ಪುರುಷರು ಡಾ| ಪೈ. ಉಡುಪಿ, ಕಾರ್ಕಳ, ಕುಂದಾಪುರ ಮತ್ತು ಮೂಲ್ಕಿಗಳಲ್ಲಿ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳನ್ನೂ ಉಡುಪಿಯಲ್ಲಿ ಲಾ ಕಾಲೇಜನ್ನೂ ಮಣಿಪಾಲದಲ್ಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನೂ ನಡೆಸಿಕೊಂಡು ಬರುತ್ತಿರುವ ಈ ಸಂಸ್ಥೆಯು ಕಡಿಯಾಳಿ, ಮಣಿಪಾಲ, ಮತ್ತು ಮಂಗಳೂರುಗಳಲ್ಲಿ ಪ್ರೌಢಶಾಲೆಗಳನ್ನೂ ವ್ಯವಸ್ಥಿತಗೊಳಿಸಿದೆ. ಪ್ರಾಥಮಿಕ ಶಾಲೆಗಳು ಒಲಿತಕಲಾ ಶಾಲೆಗಳು ಮೊದಲಾದುವನ್ನೂ ಇದು ಮುನ್ನಡೆಸುತ್ತಿದೆ. ಹೀಗೆ ಒಂದು ಖಾಸಗಿ ಸಂಸ್ಥೆಯು ಪ್ರಾಥಮಿಕ ಶಾಲೆಯಿಂದ ತೊಡಗಿ ವೃತ್ತಿಪರ ಕಾಲೇಜುಗಳವರೆಗಣ ವಿವಿಧ ಶಿಕ್ಷಣ ಸಂಸ್ಥೆಗಳನ್ನು ಕಟ್ಟುತ್ತಿರುವುದು ದೇಶಕ್ಕೊಂದು ಗೌರವ, ಖಾಸಗೀ ರಂಗವು ಸಾಧಿಸಬಹುದಾದ ಸಾಧನೆಗೊಂದು ನಿದರ್ಶನ. ಇದರಿಂದಾಗಿಯೇ ಡಾ| ಮಾಧವ ಪೈಯವರಿಂದು ಒಂದು ಜಿಲ್ಲೆಗೆ ಸಂಬಂಧಿಸಿದವರಲ್ಲ, ಇವರು ದೇಶಕ್ಕೆ ಸೇರಿದವರು, ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದವರು.

ಶಿಕ್ಷಣ ಪಡೆಯುವುದರಲ್ಲಿ ಅತೀವ ವೆಚ್ಚವಿಂದು ಬರುವುದಕ್ಕೆ ವಿದ್ಯಾರ್ಥಿಗಳು ದೂರ ದೂರ ಹೋಗಿ ವಿದ್ಯಾಭ್ಯಾಸ ಪಡೆಯಬೇಕಾಗಿರುವುದೇ ಕಾರಣವೆಂದು ಹೇಳುವ ಡಾ| ಪೈ ಅವಶ್ಯವಿರುವಲ್ಲೆಲ್ಲಾ ಶಾಲೆಗಳು ನಿರ್ಮಾಣವಾಗಬೇಕೆಂದು ಹೇಳುತ್ತಾರೆ. ಅದಕ್ಕಾಗಿ ಅಕೆಡೆಮಿಯು ರಾಜ್ಯದಲ್ಲಿ ೧೦೦ ಹೈಸ್ಕೂಲುಗಳನ್ನು ತೆರೆಯಲು ಮುಂದೆ ಬರುವಂತೆ ಮಾಡಿದ್ದಾರೆ. ಲೇಕ್ ಯುನಿವರ್ಸಿಟಿಯನ್ನು ಸ್ಥಾಪಿಸುವ ಒಂದು ಮಹಾಯೋಜನೆಯನ್ನು ಅವರು ಇಟ್ಟುಕೊಂಡಿದ್ದಾರೆ. ಮುಂದಿನ ವರ್ಷದಿಂದ ಲೇಬರ್ ಮತ್ತು ಶಾರೀರಿಕ ಶಿಕ್ಷಣ ಕಾಲೇಜುಗಳನ್ನೂ ಕರ್ಕಳ ಮತ್ತು ಅರೆಪುರಗಳಲ್ಲಿ ಹೈಸ್ಕೂಲುಗಳನ್ನೂ ತೆರೆಯುವ ಉಗ್ರ ಕಾರ್ಯಗಳು ಈಗಾಗಲೇ ತೊಡಗಿವೆ. ಡಾ| ಪೈಗಳದು ಸರಳ ವ್ಯಕ್ತಿತ್ವ. ಆದರೆ ಅವರ ಮುಷ್ಟಿ ಬಿಗಿ. ಹಿಡಿದ ಕಾರ್ಯದಲ್ಲಿ ಸಿದ್ಧಿ ಪಡೆಯುವ ವರೆಗೂ ದುಡಿಯುವ ಎಂಟೆದೆ ಅವರದು. ಐವತ್ತು ದಾಟಿದರೂ ಯುವಕರ ಉತ್ಸಾಹ ತುಂಬಿದ ಡಾ| ಪೈ ಅವರೊಬ್ಬ ಕ್ರಾಂತಿಕಾರಿ ಸಂಕ್ರಾಂತಿ ಪುರುಷರು, ಅವರನ್ನು ಮೇರೆಕ್ಕೆ ಬೇರೆ ವೇ ಎನಿಸಂವಿಸುತ್ತದೆ.

ಡಾ| ಕೆ. ಎಲ್ ಐತಾಳ

ಉಟ್ಟ ಬಿಳಿಯ ದೋತಿ, ತೊಟ್ಟ ಸಡಿಲಿದ ಕೋಟು, ಇಟ್ಟ ಗಾಂಧೀ ಟೋಪಿ, ಗಂಭೀರ, ಆದರೆ ಸರಳ ಮತ್ತು ಸ್ನಿಗ್ಧ ಮುಖಗಳಿರುವ ಮಧ್ಯಮಾಕಾರದ ವ್ಯಕ್ತಿ ಡಾ| ಕೆ ಎಲ್ ಐತಾಳರು, ಉಡುಪಿಯ ನಗರ ಸಭಾಪತಿಗಳಾಗಿದ್ದವರು, ಅಥವಾ ನಗರ ಸಭಾಧ್ಯಕ್ಷರಿದ್ದವರು ಎಂದು ಮಾತ್ರ ಪರಿಚಿತರಲ್ಲ. ಅದಕ್ಕೆ ಮೊದಲೇ ಅವರು ಜನಪ್ರಿಯ ಡಾಕ್ಟರೆಂದು ಪ್ರಸಿದ್ಧರಾಗಿದ್ದಾರೆ. ಸೂಕ್ಷ್ಮವಾಗಿ ರೋಗಿಯನ್ನು ಪರಿಶೀಲಿಸಿ, ಆತನ ರೋಗವನ್ನು ವಿಶ್ಲೇಷಿಸುವುದರಲ್ಲಿ ಡಾ| ಐತಾಳರದು ಎತ್ತಿದ ಕೈ. ಅವರಿಂದ ವೈದ್ಯಕೀಯ ಸಹಾಯ ಪಡೆದವರು ಇದರ ಪೂರ್ಣ ಪರಿಚಿತರು.

ಡಾ| ಐತಾಳರು ಡಾಕ್ಟರೆಂದು ಮಾತ್ರ ಪ್ರಸಿದ್ಧರಲ್ಲ. ಸಾರ್ವಜನಿಕ ಸಂಘಸಂಸ್ಥೆಗಳಲ್ಲಿಯೂ ಅವರ ಕೈವಾಡವಿದೆ. ನಗರ ಸಭಾಪತಿಯಾಗಿರುವಾಗ ಅವರು ಮುಂದಿನವರಿಗೆ ಮೇಲ್ಪಂಕ್ತಿಯೊಂದನ್ನು ಹಾಕಿಕೊಡಲು ಪ್ರಯತ್ನಿಸಿದರು. ಸಭೆಯು ರಜತಮಹೋತ್ಸವದ ವೇಳೆ ಪುರಭವನ ಮತ್ತು ಮಾರುಕಟ್ಟೆಗಳನ್ನು ನಿರ್ಮಾಣ ಮಾಡುವ ಆಶೆಯನ್ನಿಟ್ಟುಕೊಂಡಿದ್ದರು.

ಡಾ| ಐತಾಳರು ಶೈಕ್ಷಣಿಕ ಕ್ಷೇತ್ರದಲ್ಲಿಯೂ ದುಡಿಯುತ್ತಿದ್ದಾರೆ. ಮಣಿಪಾಲದ ಅಕೆಡೆಮಿಯೊಂದಿಗೆ ಇವರ ಸಂಬಂಧವಿದೆ. ಸಿಂಡಿಕೇಟ್ ಬ್ಯಾಂಕ್ ಮೊದಲಾದ ಕೆಲವು ಸಂಸ್ಥೆಗಳ ಡೈರೆಕ್ಟರರ; ಎಂ ಜಿ ಎಂ ಕಾಲೇಜಿನ ಮೆಡಿಕಲ್ ಆಫೀಸರರು ಇವರು. ಮಧ್ವ ಸಂಪ್ರದಾಯಕ್ಕೆ ಸೇರಿದ ಡಾ| ಐತಾಳರ ಸಂಪರ್ಕ ಅಖಿಲ ಭಾರತ ಮಾಧ್ವ ಮಹಾ ಮಂಡಳದೊಡನೆಯೂ ಇದೆ. ಉಡುಪಿಯ ಕರ್ನಾಟಕ ಸಂಘದ ಪದಗಳಲ್ಲಿಯೂ ಇದ್ದ ಇವರು ಲೇಖಕರೂ ಹೌದು. "ಸಾಮಾನ್ಯ ರೋಗಗಳು" ಎಂಬ ತಮ್ಮ ಪುಸ್ತಕದಲ್ಲಿ ಇವರು ತಮ್ಮ ಅನುಭವದ ಪ್ರಯೋಜನವನ್ನು ಜನರಿಗ ನೀಡಿದ್ದಾರೆ.

ಡಾ| ಐತಾಳರು ಸರಳರು, ಉದಾರರು. ಎಲ್ಲರ ಅಳವಿಗೂ ದೊರೆಯುವವರು, ಆದರೆ, ಅವರ ಆಳವನ್ನು ಅರಿತುಕೊಂಡವರು ಕಡಿಮೆ. ಇವರು ಸಜ್ಜನಿಕೆ, ಸತ್ಸಂಗ ಮತ್ತು ಸಸ್ನೇಹಗಳ ತ್ರಿವೇಣಿ ಉದಾರಚರಿತರಾದ ಇವರು ವಸುಧೆಯನ್ನೇ ಕುಟುಂಬವೆಂದು ನಂಬಿದವರು ಮಾತ್ರವಲ್ಲ ನಂಬಿದಂತೆ ನಡೆಯುವವರು. ಧಾರ್ಮಿಕ ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ನಿರಾಡಂಬರರಾಗಿ ದುಡಿಯುವ ಡಾ| ಐತಾಳರಿಂದ ಸಮಾಜವಿನ್ನೂ ಒಳಿತನ್ನು ಬಯಸುತ್ತಿದೆ.



ಶ್ರೀ ಕೆ ಕೆ ಶೆಟ್ಟಿ

ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಎರಡನೆಯ ಬಾರಿಗೆ ಆಯ್ಕೆಗೊಂಡ ಶ್ರೀ ಕೆ ಕೆ ಶೆಟ್ಟಿ ಅವರು ಹಳೆಯ ಕಾಂಗ್ರೆಸಿಗರು. ಗಣಾರಿತ್ಯೆಯೇ ತಾವು ಕ್ರಿಶ್ಚಿಯನ ಹೈಸ್ಕೂಲಿನಲ್ಲಿ (ಉಡುಪಿ) ವಿದ್ಯಾರ್ಥಿಯಾಗಿದ್ದಾಗಲೇ ಕಾಂಗ್ರೆಸ್ಸಿನ ಗಾಳಿ ತಾಗಿ ಶಾಲೆಗೆ ತಿಲಾಂಜಲಿಯನ್ನಿತ್ತ ಉತ್ಸಾಹಿ ತಂಡದವರಲ್ಲಿದ್ದ ಹಠವನ್ನು, ಕ್ರಿಯಾ ಪಟುತ್ವಗಳು ಇಂದಿಗೂ ತೋರಿಬರುತ್ತವೆ. ವಿಶ್ವಕವಿ ರವೀಂದ್ರನಾಥ ಠಾಕೂರರ ಶಾಂತಿನಿಕೇತನದ ಪ್ರಾರಂಭಿಕ ವಿದ್ಯಾರ್ಥಿಗಳಲ್ಲಿ ಒಬ್ಬನಾಗುವ ಭಾಗ್ಯ ಅವರದಾಯಿತು, ಮುಂದೆ, ಉಡುಪಿ ತಾಲೂಕಿನ ಸಾತಾರದ ತೆರೆಯಲಾದ ರಾಷ್ಟ್ರೀಯ ಶಿಕ್ಷಣ ಶಾಲೆಯಲ್ಲಿ ಅಧ್ಯಾಪಕನಾಗುವ ಗೌರವ ಅವರ ಪಾಲಿಗಾಯಿತು.

ಇದೇ ಸಮಯದಲ್ಲಿ ಮಂಗಳೂರಿನಲ್ಲಿ ಎ ಬಿ ಶೆಟ್ಟರು ಸಂಪಾದಿಸುತ್ತಿದ್ದ 'ನವಯುಗ ವಾರಪತ್ರಿಕೆಯ ಸಂಪಾದಕ ಮಂಡಳಿಯನ್ನು ಸೇರಿದ ಶ್ರೀ ಶೆಟ್ಟರು ಮುಂದೆ ಅದರ ಸಂಪಾದಕರೂ ಆದರು. ಅವರಿಂದ ಸ್ಪಷ್ಟವಾದಿತನ, ನಿರ್ದಾಕ್ಷಿಣ್ಯ ಮತ್ತು ಶಿಸ್ತಿನವಾದ ಪತ್ರಿಕಾ ಶೈಲಿ ಪತ್ರಿಕೋದ್ಯಮಕ್ಕೆ ಆದರ್ಶನೀಯ ರೀತಿಯಲ್ಲಿ ಬೆಳೆದ. ಬರುವನಂತರಾಯಿತು 'ನವಯುಗ'ವು ಉಡುಪಿಗೆ ಸ್ಥಳಾಂತರಿಸಿದ ಬಳಿಕವೂ ಅದರ ಸಂಪಾದಕರಾದಾಗ ಉಡುಪಿಯೇ ಅವರ ಕಾರ್ಯಕ್ಷೇತ್ರವಾಯಿತು. ಹಲವಾರು ಸಾಮಾಜಿಕ ನಾಟಕಗಳನ್ನು ಬರೆದು ಸ್ವತಃ ಅಭಿನಯಿಸಿ ಉನ್ನತ ಕಲಾವಿದರೆಂದೂ ಸಮರ್ಥ

(೧೨ನೇ ಪುಟ ನೋಡಿರಿ)

ವಾರದ ಕಥೆ

ಇದೂ ಒಂದು ಕಥೆ

ಆಗ ತಾನೇ ಹನಿ ಮಳೆ ಉದುರಿ ಬೆಂದ ಭೂಮಿಗೆ ತಂಪನ್ನಿತ್ತು ಹೋಗಿತ್ತು. ಸಂಜೆಯ ಸಮಯ ಮನೆಯಲ್ಲಿ ಆಡಲು ಅಥವಾ ಆಡಿಸಲು ಯಾವ ಮಕ್ಕಳೂ ಸಿಗದೆ ಹರಟೆ ಕೊಚ್ಚಲೂ ಯಾರೂ ಇಲ್ಲದಿದ್ದುದರಿಂದ ಹಾಗೆಯೇ ಸ್ವಲ್ಪ ತಿರುಗಾಡಿ ಕೈ ಕಾಲುಗಳಿಗೆ ಕೊಂಚ ಕಸರತ್ತನಿತ್ತು, ತಂಗಾಳಿ ಸೇವಿಸಿಕೊಂಡು ಬರೋಣವೆಂದು ಹೊರಟೆ. ಅದೇ ಊರಿನಲ್ಲಿ ಹುಟ್ಟಿದ್ದೆನಾದರೂ ಅಲ್ಲಿಯೇ ಬೆಳೆದು ಅಲ್ಲಿಯ ಪ್ರಕೃತಿಯೊಂದಿಗೇ ಆಟವಾಡಿ ಅಲ್ಲಿಯ ಸ್ಥಳಗಳನ್ನೆಲ್ಲ ಪರಿಚಯ ಮಾಡಿಕೊಂಡಿರಲಿಲ್ಲ ನಾನು. ನೂರಾರು ಮೈಲುಗಳ ದೂರದಿಂದ ಆಗೊಮ್ಮೆ ಈಗೊಮ್ಮೆ ಹೋಗಿ ಒಂದೆರಡು ದಿನಗಳಿದ್ದು ಹಿಂದಿರುಗುವ ಪರಿಪಾಠವಾಗಿತ್ತು. ಈ ಕಾರಣದಿಂದ ಊರಿನ ಅನೇಕ ಸ್ಥಳಗಳು ನನ್ನ ದೃಷ್ಟಿಗೆ ಬಿದ್ದಿರಲಿಲ್ಲ. ಅಲ್ಲದೆ ಅಲ್ಲಿಯ ಅನೇಕ ಜನಗಳ ಪರಿಚಯವೂ ನನಗಾಗಿರಲಿಲ್ಲ. ಊರಿಗೆ ಹೊಸಬನಾಗಿಯೇ ಹೊರಟೆ ತಿರುಗಾಡಲು ಅಂದು.

ಹಳ್ಳಿಯೂ ಆಗಿ ಉಳಿಯದೆ ಪೇಟೆಯೂ ಆಗಿ ಬೆಳೆಯದೆ ಉಳಿದಿರುವ ಆ ಊರಿನಲ್ಲಿ ವಿಶೇಷ ವಸ್ತುಗಳೇನೂ ಇರಲಿಕ್ಕಿಲ್ಲ, ಅಲ್ಲಿಯ ಜನಗಳೂ ಅಷ್ಟು ಮುಂದುವರಿದಿರಲಿಕ್ಕಿಲ್ಲ ಎಂಬ ಭಾವನೆಯನ್ನು ಹೊತ್ತಿದ್ದೆನಾದರೂ ಕ್ರಮೇಣ ಆ ಭಾವನೆಯನ್ನು ಮನದಿಂದ ಹೊರದೂಡಬೇಕಾಯ್ತು. ಒಬ್ಬನೇ ಹೊರಟಿದ್ದೆನಾದುದರಿಂದ ಒಂದೊಂದು ತಾಣವನ್ನು ನೋಡುತ್ತಲೂ, ಒಂದೊಂದು ವಸ್ತುವನ್ನು ನೋಡುತ್ತಲೂ ಒಂದೊಂದು ಭಾವನೆ ಮನದಲ್ಲಿ ಹುಟ್ಟಿ ನಾಶವಾಗುತ್ತಿತ್ತು. ಭೂದೇವಿ ಕೆಲವೆಡೆ ಹಸುರ ಸೀರೆಯನ್ನುಟ್ಟು ನಾರಿಯಾಗಿದ್ದರೆ ಇನ್ನು ಕೆಲವೆಡೆ ಭೀಭತ್ಸ ರೂಪಗಳನ್ನು ಧರಿಸಿದ್ದ ಮಾರಿಯಾಗಿದ್ದಳು. ಕೆಲವೆಡೆ ಹುಲುಸಾಗಿ ಬೆಳೆದ ಪಚ್ಚೆ ಪೈರುಗಳಿದ್ದರೆ ಇನ್ನು ಕೆಲವೆಡೆ ಕೇವಲ ಬಂಡೆ ಕಲ್ಲುಗಳೇ ತಮ್ಮ ರೂಪವನ್ನು ಪ್ರದರ್ಶಿಸುತ್ತಿದ್ದುವು. ಮುಂಗಿಡ ಒಳ್ಳೆಗಳ ಒಲ್ಲೆಗಳಲ್ಲಿ ನುಸುಳಿ, ಕಿರು ಹಾಗೂ ಹೆದ್ದಾರಿಗಳಲ್ಲಿ ನಡೆದು ಕಣ್ಣಿಗೆ ಬಿದ್ದ ಪಶುಪಕ್ಷಿಗಳನ್ನೂ ಇತರ ಅನೇಕ ವಸ್ತುಗಳನ್ನೂ ನೋಡುತ್ತಾ ಮುಂದುವರಿಯುತ್ತಿದ್ದೆ. ಕೆಲವು ಗಜಗಳ ದೂರದಲ್ಲಿ ದೊಡ್ಡ ಮನೆಯೊಂದು ಇರುವುದು ಕಾಣಿಸಿತು. ಅಲ್ಲದೆ ಅಲ್ಲಿ ಸುಮಾರು ಹತ್ತಿಪ್ಪತ್ತು ಜನಗಳು ಗಾಬರಿಯನ್ನು ವ್ಯಕ್ತಪಡಿಸುತ್ತಾ ನಿಂತಿದ್ದಂತೆಯೂ ಕಾಣಿಸಿತು. ಜಗಳವೇ, ಜನನವೇ, ಮರಣವೇ, ದರೋಡೆಯೋ ಏನೆಂಬುದು ತಿಳಿಯಲಿಲ್ಲ. ಹತ್ತಿರ ಹತ್ತಿರ ಹೋದಂತೆ ಅಲ್ಲಿಯ ಗದ್ದಲ ಹೆಚ್ಚು ಜೋರಾಗಿಯೇ ಕೇಳಿಸಿತು. ಏನಿರಬಹುದು? ಎಂದು ಪ್ರಶ್ನಿಸಿಕೊಂಡು ನನ್ನ ವೇಗವನ್ನು ತೀವ್ರಗೊಳಿಸಿ ಆ ಮನೆಯ ಬಳಿ ತೆರಳಿದೆ.

ಯಾವುದೋ ಒಂದು ವ್ಯಕ್ತಿಯ ಆಕ್ರಂದನ ಕರ್ಕಶವಾಗಿ ಕೇಳಿಬರುತ್ತಿತ್ತು. ಆದರೆ ಆ ವ್ಯಕ್ತಿಯು ಗೋಚರವಾಗಲಿಲ್ಲ. ಮನೆಯ ಬಾಗಿಲು ಭದ್ರಪಡಿಸಿತ್ತು, ಕಿಟಕಿಯ ಬಾಗಿಲುಗಳು ಮುಚ್ಚಿದ್ದುವು. ಆದರೂ ಒಳಗಿನ ಧ್ವನಿ ಅಸ್ಪಷ್ಟವಾಗಿ ಕೇಳಿಬರುತ್ತಿತ್ತು, ಹೊರಗಿನವರಿಗೆಲ್ಲ ಕೇಳಿಸುವಂತಿತ್ತು ಅದು, "ಅಯ್ಯೋ ಅಪ್ಪಾ, ಅಮ್ಮಾ, ಸತ್ತೇ, ಸಾಯುತ್ತೇನೆ. ಸತ್ತೇ ಹೋಗುತ್ತೇನೆ. ಬೇಡ, ನನಗೆ ಈ ಬಾಳೇ ಬೇಡ, ಈ ಹಾಳು ಜನರ ಸಹವಾಸವೇ ಬೇಡ.." ಎಂಬಿತ್ಯಾದಿ ಮಾತುಗಳು ಕೇಳಿಬರುತ್ತಿದ್ದುವು. ಇದನ್ನು ಕಂಡು ನನಗೆ ಆಶ್ಚರ್ಯವಾಯ್ತು. ಜನಗಳ ಗುಂಪು ಕೂಡಾ ದೊಡ್ಡದಾಯ್ತು. ಆ ಆಸುಪಾಸಿನ ಹತ್ತಾರು ಮನೆಯ ವ್ಯಕ್ತಿಗಳೆಲ್ಲ ಬಂದು ಸೇರಿದರು ಅಲ್ಲಿ. ಕೆಲವು ಹೆಂಗಸರು ಮಕ್ಕಳೂ ಓಡಿ ಬಂದರು. ಅಷ್ಟರಲ್ಲಿ ನಾಲ್ಕಾರು ಧಾಂಡಿಗರು ಬಾಗಿಲು ಬಡಿಯುತ್ತಾ "ಬಾಗಿಲು ತೆರೆಯಿರಿ ಮಾಸ್ತರರೇ, ಮೊದಲು ಬಾಗಿಲು ತೆರೆಯಿರಿ" ಎಂದರು. ಕೆಲವರು ಕಿಟಕಿಯ ಬಾಗಿಲನ್ನು ಗುದ್ದಿದರು. ಇನ್ನು ಕೆಲವರು ದೂರದಲ್ಲೇ ನಿಂತು "ಮೊದಲು ಬಾಗಿಲು ತೆಗೆಯಿರಿ ಮಾರಾಯರೇ, ಸಾಯುವುದಾದರೆ ಆ ಮೇಲೆ ನಿಧಾನವಾಗಿ ಸಾಯಿರಿ" ಎಂದರು.

ಹೊರಗಿನ ಭಕ್ತರ ಕೂಗು ಒಳಗಿದ್ದ ಭಗವಂತನ ಕಿವಿಗೆ ಬಿತ್ತೋ ಏನೋ! ಉತ್ತರ ಬರತೊಡಗಿತು "ಇಲ್ಲ ಇಲ್ಲ. ಬಾಗಿಲು ತೆಗೆಯೋಲ್ಲ. ನಾನು ಬಾಗಿಲು ತೆಗೆಯೋದೆ ಇಲ್ಲ. ನಾನು ಸಾಯಬೇಕು, ನಾನು ಸಾಯುತ್ತೇನೆ. ನಾನು ಬದುಕೋಲ್ಲ. ಅವಳು ಬರಬೇಕು, ಅವನು ಬರಬೇಕು, ಅವರೆಲ್ಲಾ ಬರಬೇಕು. ನನ್ನ ಕ್ಷಮೆ ಕೇಳಬೇಕು. ಇಲ್ಲವಾದರೆ ಇನ್ನು ಹತ್ತೇ ನಿಮಿಷಗಳೊಳಗೆ ನನ್ನ ಪ್ರಾಣ ಹೋಗುತ್ತೆ" ಅವ್ಯಾಹತವಾಗಿ ಸಾಗುತ್ತಲೇ ಇತ್ತು ಮಾತಿನ ಝರಿ. ನನಗೆ ಇದರ ತಲೆಬುಡ ಒಂದೂ ಅರ್ಥವಾಗಲಿಲ್ಲ. ಕಣ್ಣಗಲಿಸಿ, ಕತ್ತನ್ನು ಉದ್ದಮಾಡಿ ನಿಂತೇ ಇದ್ದೆ. ಎಲ್ಲವನ್ನೂ ವೀಕ್ಷಿಸುತ್ತಾ, ಹಾಗೂ ಎಲ್ಲವನ್ನೂ ಕೇಳುತ್ತಾ. ಈ ವೇಳೆಗಾಗಲೇ ಕೆಲವರು ಒಂದೆರಡು ಫರ್ಲಾಂಗ್ ದೂರದಲ್ಲಿದ್ದ ಮನೆಯೊಂದಕ್ಕೆ ಹೋಗಿ ಈ ಜಾದೂ ವಿಚಾರವನ್ನು ಅಲ್ಲಿಗಿರುವರಿಗೆ ಅರುಹಿರಬೇಕು.

ಒಬ್ಬ ಗಂಡಸು, ಇಬ್ಬರು ಹೆಂಗಸರು, ಮೂರುನಾಲ್ಕು ಜನ ಮಕ್ಕಳು ಎಲ್ಲರೂ ಓಡಿಬಂದರು. ಆ ಗಂಡಸಾದರೋ ನಡುಪ್ರಾಯದ ವ್ಯಕ್ತಿ. ವಿಶಾಲವಾದ ಎದೆ, ಎದೆಯಲ್ಲಿ ಕಬ್ಬಿಣದ ಸರಿಗೆಯಂಥ ರೋಮಗಳು, ದಷ್ಟಪುಷ್ಟವಾದ ಕೈ ಕಾಲುಗಳು, ಅಗಲವಾದ ಹಣೆ—ಎಲ್ಲವೂ ಇತ್ತು ಅವರಿಗೆ. ಅವರ ಮಾತು ಕೂಡಾ ತುಫಾಕಿಯ ಸದ್ದಿನಂತಿತ್ತು. ಆ ಹೆಂಗಸರಾದರೋ ನಿಜವಾಗಿಯೂ ಹೆಂಗಸರು. ದಾರಿಯುದ್ದಕ್ಕೂ ರೋಧನಗೈಯುತ್ತಾ ಬರುತ್ತಿದ್ದರು. ಬಂದ ಆ ಗಂಡಸು ಸಮಯವನ್ನು ವ್ಯರ್ಥಮಾಡದೆ ತಮ್ಮ ತುಫಾಕಿಗೆ ಮದ್ದನ್ನು ತುಂಬಿಸಿ ಪ್ರಯೋಗಿಸಿಯೇ ಬಿಟ್ಟರು — "ಏ ನರಸಿಂಹಾ, ಬಾಗಿಲು ತೆಗಿಯೋ, ಯಾಕೆ ಮಹಾರಾಯ ನಮ್ಮನ್ನು ಹೀಗೇ ಪೀಡಿಸುತ್ತಿಯೋ. ಅವಳೂ ಬಂದಿದ್ದಾಳೆ ನೋಡೋ. ನಿನಗೆ ನಾನು ಏನು ತಪ್ಪು ಮಾಡಿದ್ದರೂ ನಾಳೆ ಅದರ ವಿಚಾರಣೆ ಮಾಡಿ ಇತ್ಯರ್ಥ ಮಾಡಿಬಿಡುವ, ಈಗ ಬಾಗಿಲು ತೆಗೆ" ಎಂದು ಕೂಗಿದರು. ಆದರೆ ಒಳಗಿನ ನರಸಿಂಹನ ಉತ್ತರವೇ ಬೇರೆ. "ಇಲ್ಲ ನಾನು ಬಾಗಿಲು ತೆಗೆಯೋಲ್ಲ. ನನಗೆ ದ್ರೋಹ ಮಾಡಿದಿರಿ, ನನ್ನ ಸರ್ವಸ್ವವನ್ನೂ ಹಾಳು ಮಾಡಿದಿರಿ. ಇನ್ನು ನಾನಿದ್ದು ಪ್ರಯೋಜನವಿಲ್ಲ. ನನಗೆ ಹೆಂಡತಿ ಬೇಡ, ಮಕ್ಕಳು ಬೇಡ, ಆಸ್ತಿ, ಪಾಸ್ತಿ, ಜೀವ ಒಂದೂ ಬೇಡ. ನಾನು ಸತ್ತೇ ಹೋಗುತ್ತೇನೆ," ಎಂದು ಅರಚುತ್ತಲೇ ಇತ್ತು ಆ ವ್ಯಕ್ತಿ ಒಳಗಿಂದ. ಆತ ಸಾಯಲೂ ಇಲ್ಲ, ಬಾಗಿಲು ತೆಗೆಯಲೂ ಇಲ್ಲ, ಹೊರಗೆ ನಿಂತವರು ಬೇಗನೆ ತಮ್ಮ ತಮ್ಮ ಮನೆಗೆ ಹೋಗುವಂತೆಯೂ ಇರಲಿಲ್ಲ. ಉಳಿದಿದ್ದ ಉಪಾಯ ಬಾಗಿಲು ಒಡೆದು ಒಳಗೆ ನುಗ್ಗುವುದೊಂದೇ ಆಗಿತ್ತು. ಆದರೆ ಅಷ್ಟು ಸುಲಭದಲ್ಲಿ ಒಡೆದು ಬಿಡಬಹುದಾದಂಥ ಬಾಗಿಲಾಗಿರಲಿಲ್ಲ ಅದು. ಆ ಮನೆಯನ್ನು ಕಟ್ಟಿಸಿ ಹೆಚ್ಚು ಕಡಿಮೆ ಒಂದು ವರ್ಷವಾಗಿರಬಹುದು. ಅಂದ ಚಂದವಾಗಿ ಕಂಗೊಳಿಸುತ್ತಿದ್ದ ಸುಂದರ ನಿವಾಸ. ಅಂಥ ಮನೆಯ ಬಾಗಿಲು ಕಿಟಕಿಗಳನ್ನು ಒಡೆದು ಹಾಳು ಮಾಡುವುದೇ? ಆದರೆ ಆ ಸಮಯ ಸಂದರ್ಭಗಳೆಲ್ಲ ಬೇರೆಯಾಗಿತ್ತಾದ್ದರಿಂದ ಕೆಲವು ತರುಣರು ಮಾಡಿನ ಹಂಚುಗಳನ್ನು ತೆಗೆದು ಒಳ ನುಗ್ಗಿದರು. ಇನ್ನು ಕೆಲವು ಪುಂಡ ಪೋಕರಿಗಳು ಬಾಗಿಲನ್ನು ಒಡೆದು ತೆರೆದೇ ಬಿಟ್ಟರು.

ಒಳ ಹೊಕ್ಕ ನನಗೆ ಅಲ್ಲಿ ಕಂಡ ವ್ಯಕ್ತಿಯನ್ನು ಕಂಡು ಒಂದು ಬಾರಿ ಎದೆ ಧಸಕ್ಕೆಂದಿತು. ಅದುವರೆಗೆ ಅಷ್ಟು ಗಲಾಟೆ ಮಾಡುತ್ತಿದ್ದ ವ್ಯಕ್ತಿ ಸುಮಾರು ಐದಡಿ ಎರಡಂಗುಲ ಉದ್ದ, ಇಪ್ಪತ್ತೊಕ್ಕಾರು ಇಂಚು ಹೊಟ್ಟೆ, ಇಪ್ಪತ್ತಾರು ಇಂಚುಗಳ ಎದೆಯ ಕಡ್ಡಿ ಪೈಲ್ವಾನ್.

ನನಗಂತೂ ನನ್ನ ಮೇಲೆಯೇ ನಂಬಿಕೆ ಬರಲಿಲ್ಲ, ಆದರೂ ಎದುರಿದ್ದ ದೃಶ್ಯಗಳನ್ನೆಲ್ಲ ನಂಬಬೇಕಾಯ್ತು. ಒಂದು ಹಗ್ಗ, ಒಂದು ಚೂರಿ, ಒಂದು 'ವಿಷ' ಎಂದು ಲೇಬಲ್ ಅಂಟಿಸಿದ್ದ ಬಾಟಲ್, ಒಂದು ಬೆಂಕಿಪೊಟ್ಟಣ, ಒಂದು ಬಾಟಲ್ ಸೀಮೆ ಎಣ್ಣೆ, ಒಂದು ನೀಳ ಬಿಳಿ ರಂಗಿನ ಹಾಗೂ ಒಂದು ಫೌಂಟನ್ ಪೆನ್ ಆ ಮನುಷ್ಯನ ಸುತ್ತಲೂ ಹರಡಿದ್ದುವು. ಅಷ್ಟು ಸಾಧನಗಳಿದ್ದೂ ಆತ ಅವುಗಳ ಉಪಯೋಗವನ್ನು ಮಾಡದೇ ಇದ್ದುದು ದುರದೃಷ್ಟವೇ ಸರಿ.

ಎಲ್ಲವನ್ನೂ ನೋಡಿದೆ, ನೋಡುತ್ತಲೇ ಇದ್ದೆ. ಆದರೆ ಆ ಕಥೆಯ ಜಾಡು ಸಿಗಲಿ

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ.

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೫

ಜಾಹೀರಾತು ದರಗಳು.

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1–50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ **5**
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ **5½** ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ **3**

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಪ್ರಗತಿ ಪಥದಲ್ಲಿ ಭಾರತ

ವಿಶಾಖ ಪಟ್ಟಣದ

ನೌಕಾಂಗಣ

"ಜಲ ಉಷಾ' ವಿಶಾಖಪಟ್ಟಣದಲ್ಲಿರುವ ಭಾರತದ ಮೊತ್ತಮೊದಲನೆಯ ನೌಕಾ ನಿರ್ಮಾಣ ಕೇಂದ್ರವು ನಿರ್ಮಿಸಿದ ಮೊದಲ ನೌಕೆ ಪ್ರಧಾನ ಮಂತ್ರಿ ಶ್ರೀ ನೆಹರೂರವರು ೧೯೪೮ರ ಮಾರ್ಚಿ ೧೪ರಂದು ಈ ನೌಕೆಯ ಸಮುದ್ರ ಪ್ರವೇಶ ಸಮಾರಂಭವನ್ನು ನೆರವೇರಿಸಿದರು. ಈ ಘಟನೆಯು ನೌಕೆಗಳನ್ನು ನಿರ್ಮಿಸುತ್ತಿರುವ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಬೇಕೆಂಬ ದೃಢ ಸಂಕಲ್ಪದ ಪ್ರತೀಕವಾಗಿದೆ.

ವಿಶಾಖ ಪಟ್ಟಣದಲ್ಲಿನ ನೌಕಾ ನಿರ್ಮಾಣ ಕೇಂದ್ರವು ೫೭ ಎಕರೆಗಳಷ್ಟು ವಿಸ್ತೀರ್ಣವಾಗಿದೆ. ಸಿಂಧಿಯಾ ಸ್ಟೀಂ ನ್ಯಾವಿಗೇಷನ್ ಕಂಪನಿಯ ಪ್ರಯತ್ನದ ಫಲವಾಗಿ ಈ ಕೇಂದ್ರವು ೧೯೪೧ರಲ್ಲಿ ಸ್ಥಾಪನೆಗೊಂಡಿತು.

ಭಾರತವು ವಿದೇಶಗಳೊಂದಿಗೆ ನಡೆಸುತ್ತಿದ್ದ ವ್ಯಾಪಾರದಲ್ಲಿ ಶೇ. ೯೮ರಷ್ಟು ವ್ಯಾಪಾರವು ಜಲ ಮಾರ್ಗದ ಮೂಲಕವೇ ನಡೆಯುತ್ತಿತ್ತು. ಇದರಿಂದಾಗಿ ಭಾರತೀಯ ಒಡೆತನಕ್ಕೊಳಪಟ್ಟ ನೌಕಾ ಪಡೆಯನ್ನು ಬಲಗೊಳಿಸಲು ಮತ್ತು ನೌಕೆಗಳನ್ನು ನಿರ್ಮಿಸುವ ಉದ್ಯಮವನ್ನು ಅಭಿವೃದ್ಧಿಗೊಳಿಸಲು ಕ್ರಿಯಾಶೀಲ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರಕ್ಕೆ ಅನಿವಾರ್ಯವಾಗಿ ಪರಿಣಮಿಸಿತು. ಈ ಗುರಿ ಸಾಧನೆಗಾಗಿಯೇ ೧೯೫೨ರ ಮಾರ್ಚ ತಿಂಗಳಲ್ಲಿ ಹಿಂದೂಸ್ಥಾನ ನೌಕಾ ನಿರ್ಮಾಣ ಸಂಸ್ಥೆಯವರು ವಿಶಾಖಪಟ್ಟಣದಲ್ಲಿನ ನೌಕಾನಿರ್ಮಾಣ ಕೇಂದ್ರವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡರು ಭಾರತ ಸರಕಾರವು ಸಂಸ್ಥೆಯ ಬಹುತೇಕ ಷೇರುಗಳನ್ನು ಕೊಳ್ಳುವ ಮೂಲಕ ನೌಕಾ ನಿರ್ಮಾಣ ಕಾರ್ಯದ ಪ್ರಗತಿಗೆ ನೆರವಾಗುತ್ತಿದೆ. ಹಿಂದೂಸ್ಥಾನ ನೌಕಾ ನಿರ್ಮಾಣ ಕೇಂದ್ರವು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ತ್ವರಿತ ಪ್ರಗತಿ ಸಾಧಿಸಿತು.



ಹಿಂದುಸ್ಥಾನ ನೌಕಾಂಗಣದ ನೌಕಾ ನಿರ್ಮಾಣದ ವಿಭಾಗ.

ದ್ವಿತೀಯ ಯೋಜನೆಯು ಮುಗಿಯುವ ವೇಳೆಗೆ ಕೇಂದ್ರದಲ್ಲಿ ಡೀಸೆಲ್‌ನಿಂದ ಚಲಿಸುವ ಆಧುನಿಕ ವಿನ್ಯಾಸವುಳ್ಳ ನೌಕೆಗಳನ್ನು ನಿರ್ಮಿಸಲು ನಾಲ್ಕು ನೌಕಾ ನಿರ್ಮಾಣ ವಿಭಾಗಗಳಿದ್ದುವು. ಚಿಕ್ಕ ಪುಟ್ಟ ನೌಕೆಗಳನ್ನು ನಿರ್ಮಿಸಲು ಐದನೆಯ ವಿಭಾಗವೊಂದನ್ನು ತೆರೆಯಲಾಗಿದೆ. ಇದಲ್ಲದೆ ೧೨೦೦ ಅಡಿ ಉದ್ದವಾದ ಕಟ್ಟೆಯನ್ನು ನಿರ್ಮಿಸಲಾಗಿದೆ

ನೌಕಾ ನಿರ್ಮಾಣ ಕೇಂದ್ರದ ವಾರ್ಷಿಕ ಉತ್ಪಾದನೆಯು ೧೯೬೨-೬೩ರಲ್ಲಿ ೪.೯೮ ಕೋಟಿ ರೂ.ಗಳಷ್ಟಿತ್ತು. ೧೯೬೩ ನವೆಂಬರ್ ತಿಂಗಳ ವರೆಗೆ ಕೇಂದ್ರವು ಒಟ್ಟು ೨,೬೦,೦೦೦ ಡೆಡ್‌ವೇಟ್ ಟನ್ನುಗಳಷ್ಟು ಭಾರದ ನೌಕೆಗಳನ್ನು ನಿರ್ಮಿಸಿ, ಭಾರತೀಯ ನೌಕಾಯಾನ ಸಂಸ್ಥೆಗಳಿಗೆ ಪೂರೈಸಿತು. ನೌಕೆಗಳ ಟನ್‌ಮಾನದ ಬಗ್ಗೆ ಭಾರತ ಸರಕಾರವು ಸಿದ್ಧಗೊಳಿಸಿರುವ ಪಟ್ಟಿಯಲ್ಲಿ, ವಿಶಾಖಪಟ್ಟಣ ನೌಕಾ ಕೇಂದ್ರದ ನೌಕೆಗಳ ಟನ್‌ಮಾನವು ಶೇ ೧೮ರಷ್ಟಿದೆ ಕೇಂದ್ರವು ತಯಾರಿಸಿದ "ಸ್ಟೇಟ್ ಆಫ್ ಮಧ್ಯ ಪ್ರದೇಶ್" ಎಂಬ ೩೯ನೆಯ ನೌಕೆಯನ್ನು ೧೯೬೩ ಅಕ್ಟೋಬರ್ ೧೫ರಂದು ಜಲಯಾನಕ್ಕೆ ಮುಕ್ತಗೊಳಿಸಲಾಯಿತು.

ಹಿಂದೂಸ್ಥಾನ ನೌಕಾನಿರ್ಮಾಣ ಕೇಂದ್ರದ ಸಮಗ್ರ ಆಡಳಿತ ವ್ಯವಸ್ಥೆಯನ್ನು ನೌಕಾ ನಿರ್ಮಾಣ ಕೇಂದ್ರದ ಕಾರ್ಯದಲ್ಲಿ ವಿಶೇಷ ಅನುಭವವುಳ್ಳ ಭಾರತೀಯ ತಜ್ಞರೇ ನಿರ್ವಹಿಸುತ್ತಿದ್ದಾರೆ. ಕೇಂದ್ರದಲ್ಲಿ ಈಗ ೫೦೦೦ಕ್ಕೂ ಹೆಚ್ಚು ಮಂದಿ ಕಾರ್ಮಿಕರು, ತಂತ್ರಜ್ಞರು, ಎಂಜಿನಿಯರರು ಕೆಲಸಮಾಡುತ್ತಿದ್ದಾರೆ

ಕಳೆದ ಕೆಲವು ವರ್ಷಗಳಿಂದ ಕೇಂದ್ರದಲ್ಲಿ ವ್ಯಾಪಕ ಪ್ರಮಾಣದ ತರಬೇತಿ ಕಾರ್ಯಕ್ರಮವೊಂದನ್ನು ಕೈಗೊಳ್ಳಲಾಗಿದೆ. ನೌಕಾ ನಿರ್ಮಾಣ ಉದ್ಯಮವನ್ನು ಅಭಿವೃದ್ಧಿಗೊಳಿಸಲು ಅಗತ್ಯವಾದ ವಿಶೇಷ ತರಬೇತಿಯನ್ನು ಕೊಡಲಾಗುತ್ತಿದೆ ಹೀಗೆ ತರಬೇತಿ ಪಡೆದ ತಂತ್ರಜ್ಞರು ಮತ್ತು ಎಂಜಿನಿಯರರೇ ಹಿಂದೂಸ್ಥಾನ ನೌಕಾನಿರ್ಮಾಣ ಕೇಂದ್ರದ ವಿವಿಧ ಹುದ್ದೆಗಳಿಗೆ ನೇಮಕಗೊಳ್ಳುತ್ತಾರೆ

ತೃತೀಯ ಯೋಜನೆಯಲ್ಲಿ ಈ ನೌಕಾ ನಿರ್ಮಾಣ ಕೇಂದ್ರವನ್ನು ವಿಸ್ತರಿಸುವ ಉದ್ದೇಶವಿದೆ. ಈ ಕಾರ್ಯ ಯೋಜನೆಗೆ ೨.೪೪ ಕೋಟಿ ರೂ ಗಳ ವೆಚ್ಚತಗಲುವುದೆಂದು ಅಂದಾಜು ಮಾಡಲಾಗಿದೆ. ತೃತೀಯ ಯೋಜನೆಯ ಅಂತ್ಯದ ವೇಳೆಗೆ ಈ ವಿಸ್ತರಣೆ ಕಾರ್ಯ ಮುಕ್ತಾಯಗೊಂಡಾಗ, ನೌಕಾ ನಿರ್ಮಾಣ ಕೇಂದ್ರದ ಉತ್ಪಾದನಾ ಸಾಮರ್ಥ್ಯವು ೨೫,೦೦೦ ಡೆಡ್‌ವೇಟ್ ಟನ್ನುಗಳಿಂದ ೩೫,೦೦೦ ಹಾಗೂ ೪೦.೦೦೦ ಡೆಡ್‌ವೇಟ್‌ಟನ್ನುಗಳವರೆಗೆ ಹೆಚ್ಚುವ ನಿರೀಕ್ಷೆಯಿದೆ ಭಾರತ ಸರ್ಕಾರದವರು ವಿಶಾಖಪಟ್ಟಣದಲ್ಲಿ ಒಂದು ಶುಷ್ಕ ನೌಕಾಂಗಣವನ್ನು ನಿರ್ಮಿಸುವ ಕಾರ್ಯಯೋಜನೆಗೆ ಮಂಜೂರಾತಿ ನೀಡಿದ್ದಾರೆ. ಈ ಯೋಜನೆಗೆ ೨ ೬೯ ಕೋಟಿ ರೂ.ಗಳ ವೆಚ್ಚತಗಲುವುದೆಂದು ಅಂದಾಜು ಮಾಡಲಾಗಿದೆ. ತೃತೀಯ ಯೋಜನೆಯಲ್ಲಿ ಈ ಕಾರ್ಯ ಯೋಜನೆಗಾಗಿ ೨ ಕೋಟಿ ರೂ ಗಳನ್ನು ಒದಗಿಸಲಾಗಿದೆ



ಹಿಂದುಸ್ಥಾನ ನೌಕಾಂಗಣದಲ್ಲಿ ೩೫ ಟನ್ ಭಾರದ ಕ್ರೇನ್ ಕಾರ್ಯ ಶೀಲವಾಗಿದೆ.

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ:

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

ವಿವೇಕವಾಣಿ

ಮಾತೆಯ ಪಾದದಲ್ಲಿ ಪುಷ್ಪಾರ್ಪಣೆ

ಆಕ್ರಮಣಕಾರ ದುಷ್ಟ ಚೈನಾ ಯುದ್ಧ ನಿಲ್ಲಿಸಿ ಸಾಧಾರಣ ಒಂದು ವರ್ಷವಾಗುತ್ತ ಬಂದಿದೆ. ಅಂದರೆ ಕಳೆದ ವರ್ಷ ಧರ್ಮವೀರ ಸ್ವಾಮಿ ವಿವೇಕಾನಂದರ ಶತಮಾನೋತ್ಸವವನ್ನಾಚರಿಸುವಾಗ ಚೈನಾ ಉಂಟಾಗಿಸಿದ್ದ ಬಿಸಿ ಚೆನ್ನಾಗಿಯೇ ಇತ್ತು; ಅದು ಆರಿರಲಿಲ್ಲ. ಭಾರತಮಾತೆಯ ವೀರಪುತ್ರ, ಧೀರ ಸನ್ಯಾಸಿಯು ಸಾಧಾರಣ ಎಪ್ಪತ್ತು ವರ್ಷಗಳ ಹಿಂದೆಯೇ ಭಾರತೀಯರಿಗೆ ಎಚ್ಚರಿಕೆಯನ್ನಿತ್ತಿದ್ದರೂ ನಾವು ಅತ್ತ ಅಷ್ಟು ಗಮನ ಕೊಟ್ಟಿರಲಿಲ್ಲವಲ್ಲಾ ಎಂಬ ಅಳುಕು ನಮ್ಮ ಹೃದಯವನ್ನಾಗ ಕೊರೆಯುತ್ತಿತ್ತು. ಅಪಾಯ ಸೂಚಕ ದೀಪವನ್ನು ಕಂಡ ಮೇಲಾದರೂ ನಾವು ಎಚ್ಚರಿಕೆಯನ್ನು ವಹಿಸಿದ್ದೇವೆಯೇ? ಸರಕಾರವು ಎಚ್ಚರಿಕೆ ಸೂಚಿಸುವ ಜಾಹೀರಾತುಗಳನ್ನು ಪ್ರಕಟಿಸುತ್ತದೆ. ಆದರಲ್ಲಿ, ಶತ್ರುವು ಗಡಿಯಲ್ಲಿ ಸೈನ್ಯ ಜಮಾವಣೆ ನಡೆಸುತ್ತಿದ್ದಾನೆಂದೂ, ನಾವು ಜಾಗರೂಕತೆಯಿಂದಿರಬೇಕೆಂದೂ ಹೇಳಲಾಗಿರುತ್ತದೆ. ಅಂದರೆ, ಸಾಧಾರಣ ಒಂದು ವರ್ಷ ಕಳೆದರೂ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಕಮ್ಯುನಿಸ್ಟ್ ಚೈನಾವನ್ನು ಹೊಡೆದಟ್ಟುವುದು ಸುಲಿದ ಬಾಳೆಹಣ್ಣನ್ನು ನುಂಗಿದಂತೆ ಅಲ್ಲ. ಹಾಗಿದ್ದರೂ ವಿಷದ ಅನ್ನವನ್ನೇ ಅರಗಿಸಿಕೊಂಡಿರುವ ಭೀಮನ ಸಂತತಿಯವರು ನಾವಲ್ಲವೇನು? ಹಾಲಾಹಲವನ್ನೇ ಘಟಘಟನೆ ಕುಡಿದಿರುವ ನೀಲಕಂಠನ ವಂಶಜರು ನಾವಲ್ಲವೇನು? ಮತ್ತೇಕೆ ಚೈನೀ ಕಮ್ಯುನಿಸ್ಟರನ್ನು ಹೊಡೆದಟ್ಟಲು ಸಾಧ್ಯವಾಗಿಲ್ಲ?

ಭಾರತದ ಆತ್ಮವು ಧರ್ಮವೆಂದು ಸ್ವಾಮಿ ವಿವೇಕಾನಂದರು ಹೇಳಿರುವರು. ಭಾರತದ ಆತ್ಮವೆನ್ನುವಾಗ ಅವು ಒಂದಕ್ಕೊಂದು ಹಾಸುಹೊಕ್ಕಾಗಿರುವುದನ್ನು ಮರೆಯಲು ಸಾಧ್ಯ ಇರುವದಿಲ್ಲ. ದೇಹವಿಲ್ಲದಿದ್ದಲ್ಲಿ ಆತ್ಮ ಚಟುವಟಿಕೆ ಕಾಣಿಸಲು ಸಾಧ್ಯವೇನು? ಹಾಗೆಯೇ ಆತ್ಮ ಹೋದ ಮೇಲೆ ಶವದ ಪ್ರಯೋಜನವಾದರೂ ಏನು? ಕಾಗೆ-ಗೂಗೆ, ನರಿ-ನಾಯಿಗಳಿಗೆ ಅದು ಹಬ್ಬದೌತಣ ಆಗಿಬಿಡಬಹುದು, ಅಷ್ಟೆ. ಪಕ್ಕದಲ್ಲಿ ಯಾರೂ ಇಲ್ಲದಿದ್ದಲ್ಲಿ, ಜೀವ ಹೋಗಬೇಕಾದರೇನೇ ಆ ದೇಹದ ಸುತ್ತಮುತ್ತ ಕಾಗೆಗಳು ಕೂಗುವದನ್ನು ಕುಟುಕುವದನ್ನು ನಾಯಿ ಓಡಾಡುವದನ್ನು, ಬೊಗಳುವದನ್ನು ಕಾಣಬಹುದು. ನಮ್ಮ ಪರಿಸ್ಥಿತಿಯಾದರೋ ಇಂದು ಹಾಗೆಯೇ ಆಗಿದೆ, ಒಂದೆಡೆ ರಷ್ಯಾದ, ಚೈನಾದ ಕಮ್ಯುನಿಸ್ಟರು ನಮ್ಮನ್ನು ನುಂಗಲು ಹೊಂಚು ಹಾಕುತ್ತಿದ್ದಲ್ಲಿ ಇನ್ನೊಂದೆಡೆ ಪಾಕಿಸ್ತಾನ, ಅಲ್ಲದೆ ಅರಬ ಕೂಟ ಮತ್ತು ಇಂಡೋನೇಸ್ಯಾ ಸಮಯ ನೋಡುತ್ತಿವೆಯಾದಲ್ಲಿ ಮತ್ತೊಂದೆಡೆ ಅಮೇರಿಕ-ಬ್ರಿಟನು, ಸ್ವಿಜರ್ಲೆಂಡುಗಳು (ಮತಪ್ರಚಾರಕರು) ಸಂದರ್ಭ ಕಾಯುತ್ತಿವೆ. ಈ ಭಾರತದ ಅನ್ನ ಉಂಡು, ನೀರು ಕುಡಿದು, ಗಾಳಿ ಸೇವಿಸಿರುವ ನಮಗೇನೇ ಅವಳ ಮೇಲಾಗಲೀ, ಅವಳ ಆತ್ಮದ ಮೇಲಾಗಲೀ ಅಭಿಮಾನ, ಶ್ರದ್ಧೆ, ಕಮ್ಮಿಯಾಗುತ್ತ ಬರುತ್ತಿದೆ. ಸ್ವಾಮೀಜೀಯವರಾದರೋ ಈ ದೇಶದ ನೀರು ತೀರ್ಥವೆಂದೂ, ಧೂಳು ಗಂಧವೆಂದೂ, ಗಾಳಿಯೇ ಸುವಾಸನೆಯುಳ್ಳದ್ದೆಂದೂ, ಅದರ ಕಣಕಣವೂ ತನಗೆ ಪವಿತ್ರ ಕ್ಷೇತ್ರ, ನದಿ ಹೊಳೆಗಳೆಲ್ಲವೂ ತನಗೆ ತೀರ್ಥಸ್ನಾನಗಳೆಂದೂ ಹೇಳಿರುವರು. ನಾವು ಆ ಮಾತಿಗೆ ಅದೆಷ್ಟು ಗಮನ ಕೊಟ್ಟಿದ್ದೇವೆ? ದೇಶವನ್ನು ಇಬ್ಭಾಗ ಮಾಡಲೂ ನಾವು ಹೇಸಲಿಲ್ಲ, ಪುನಃ ಪುನಃ ಹೊಸ ಹೊಸ ಪ್ರದೇಶಗಳನ್ನು ಬಿಟ್ಟುಕೊಡದಷ್ಟು "ಜಿಪುಣ"ರೂ ನಾವಾಗಿಲ್ಲ, ಚೈನಿ ಕಮ್ಯೂನಿಷ್ಟರು ನಮ್ಮ ಸ್ವದೇಶ ಬಾಂಧವ ಗಿರಿನಿವಾಸಿಗಳ ಚರ್ಮ ಸುಲಿಯುತ್ತಿದ್ದರೂ ತಾಳ್ಮೆಗೆಡದ 'ಸಹನಶೀಲರು' ನಾವಾಗಿದ್ದೇವೆ! ಪವಿತ್ರ ಕ್ಷೇತ್ರ, ತೀರ್ಥಸ್ನಾನಗಳನ್ನು ಅಪವಿತ್ರಗೊಳಿಸಲು ನಾವು ಬಿಡಬಹುದೇನು? ಮಹಾಮುನಿ ವಿಶ್ವಾಮಿತ್ರರು ಯಜ್ಞಯಾಗಾದಿಗಳನ್ನು ಹಾಳುಮಾಡುತ್ತಿದ್ದ ರಕ್ಕಸರಿಗೆ ಏನು ಮಾಡಿದರು? ನಾವು ಆ ವಿಶ್ವಾಮಿತ್ರರ, ರಾಮ-ಲಕ್ಷ್ಮಣರ ನಿಜ ಸಂತತಿಯವರಲ್ಲವೇನು?

"ಓ ಭಾರತ

ಮರೆಯದಿರು ಆದರ್ಶದ ನಿನ್ನ ಮಾತೆಯರು ಸೀತಾ ಸಾವಿತ್ರಿ, ದಮಯಂತಿ;

ಮರೆಯದಿರು ನೀನು ಪೂಜಿಸುವ ದೇವರು ಸನ್ಯಾಸಿಗಳ ಸನ್ಯಾಸಿ, ಸರ್ವ-ಪರಿತ್ಯಾಗಿ ಶಂಕರ, ಉಮೇಶ,

ಮರೆಯದಿರು ನಿನ್ನ ಕಲ್ಯಾಣವು, ನಿನ್ನ ಸಂಪತ್ತು, ನಿನ್ನ ಜೀವನವು ಸುಖಕ್ಕಾಗಿರುವದಲ್ಲ,

ಅದು ನಿನ್ನ ವೈಯಕ್ತಿಕ ಸುಖಕ್ಕಾಗಿರುವದಲ್ಲ;

ಮರೆಯದಿರು ನೀನು ಮಾತೆಯ ಮಂದಿರದ ಬಲಿಪೀಠದಲ್ಲಿ ಬಲಿಯಾಗಿ ಜನಿಸಿರುವೆನೆಂಬುದನ್ನು;

ಮರೆಯದಿರು ನಿನ್ನ ಸಾಮಾಜಿಕ ಪದ್ಧತಿ-ನಿಯಮಗಳೆಲ್ಲವೂ ವಿಶ್ವವ್ಯಾಪೀ ಮಾತೃತ್ವದ ಪ್ರತಿಬಿಂಬವೆಂಬುದನ್ನು;

ಮರೆಯದಿರು ಬಡಜನರು, ದಡ್ಡರು, ಕೀಳ್ತರಗತಿಯವರು, ಅನಕ್ಷರಸ್ಥರು, ಸಮಗಾರರು,

ತೋಟಿಗಳು....ಎಲ್ಲರೂ ನಿನ್ನ ಮಾಂಸವೇ ರಕ್ತವೇ ಇದ್ದು ನಿನ್ನ ಅಣ್ಣ-ತಮ್ಮಂದಿರೇ ಇದ್ದಾರೆ."

ಈ ರೀತಿ ಸ್ವಾಮಿ ವಿವೇಕಾನಂದರು ತನ್ನ ಸ್ವದೇಶ ಬಾಂಧವರಿಗೆ ಜ್ಞಾಪಕದಲ್ಲಿಟ್ಟುಕೊಳ್ಳಲು ಕೆಲ ವಿಷಯಗಳನ್ನು ತಿಳಿಸಿರುವರು. ಆದರೆ ದುರಾದೃಷ್ಟವಶಾತ್ ನಾವು ಅವುಗಳನ್ನು ಮರೆತಿದ್ದೇವೆ. ಮರೆಯದ ರಾಷ್ಟ್ರೀಯರನ್ನು ಕೈಬೆರಳಿನಲ್ಲೇ ಎಣಿಸಿ ಬಿಡಬಹುದು.

ಓ ಧೈರ್ಯವಾನ್.

ಧೈರ್ಯದಿಂದಿರು, ನೀನು ಭಾರತವಾಸಿ ಎಂಬುದರ ಮೇಲೆ ಅಭಿಮಾನಪಡು, ಧೈರ್ಯದಿಂದ—ಅಭಿಮಾನದಿಂದ "ನಾನು ಭಾರತವಾಸಿ ಇದ್ದೇನೆ, ಪ್ರತಿಯೊಬ್ಬ ಭಾರತವಾಸಿಯೂ ನನ್ನ ಸಹೋದರನಿದ್ದಾನೆ"ಂದು ಸಾರಿ ಹೇಳು. ಹೇಳು, "ಭೋಳೇ ಭಾರತವಾಸಿ, ಬಡ—ನಿರ್ಗತಿಕ ಭಾರತವಾಸಿ, ಬ್ರಾಹ್ಮಣ ಭಾರತವಾಸಿ, ಹೊಲೆಯ ಭಾರತವಾಸಿ....ಎಲ್ಲರೂ ನನ್ನ ಸಹೋದರರೇ ಇದ್ದಾರೆ."

ನೀನು ಕೂಡಾ, ಸೊಂಟದ ಮೇಲೆ ಪಟ್ಟೆಯನ್ನು ಕಟ್ಟಿಕೊಂಡಿರುವ ನೀನು ಕೂಡಾ, ಅಭಿಮಾನದಿಂದ ಹಾಗೂ ಪೂರ್ಣ ಸ್ವರದಿಂದ ಹೇಳು "ಭಾರತವಾಸಿ ನನ್ನ ಸಹೋದರನಿದ್ದಾನೆ, ಭಾರತೀಯತೆಯು ನನ್ನ ಜೀವನವಿದೆ, ಭಾರತದ ದೇವ—ದೇವತೆಯರೇ ನನ್ನ ದೇವರಿದ್ದಾರೆ. ಭಾರತದ ಸಮಾಜವೇ ನನ್ನ ಬಾಲ್ಯದ ತೊಟ್ಟಿಲಿದೆ, ತಾರುಣ್ಯದ ಆಡಂಬೊಲವಿದೆ, ವೃದ್ಧಾಪ್ಯದ ವಾರಣಾಸಿ ಹಾಗೂ ಸ್ವರ್ಗವಿದೆ."

ಈ ವಿವೇಕವಾಣಿಯಂತೆ ನಾವದೆಷ್ಟರ ಮಟ್ಟಿಗೆ ನಡೆದುಕೊಂಡಿದ್ದೇವೆ? ನಮಗೆ ಈ ದೇಶದ ಮೇಲೆ ನೈಜ ಅಭಿಮಾನ ಇರುತ್ತಿದ್ದಲ್ಲಿ ಆಕ್ರಮಣದ ಅಪಮಾನವನ್ನು ತೊಡೆದು ಹಾಕದೆ ಸುಮ್ಮನೆ ಗುಮ್ಮನಂತೆ ಕುಳಿತುಕೊಳ್ಳುತ್ತಿದ್ದೆವೇ? ಅಲ್ಲದೆ, ನಮ್ಮ ಸಹೋದರ ಗಿರಿ ಜನರನ್ನು ಶತ್ರುಗಳು ಕೊಲ್ಲುತ್ತಿರುವಾಗಲೂ ನಾವು ಕಣ್ಣು ಮುಚ್ಚಿಕೊಂಡಿರುತ್ತಿದ್ದೇವೆ? ಈ ಅಭಿಮಾನಕ್ಕೆ ಬರಗಾಲ ಬಂದಿರುವದರಿಂದಲೇ ನಾವು 'ಭಾರತೀಯರೆ'ಂದು ಹೇಳಿಕೊಳ್ಳಲು ನಾಚಿಕೆಪಡುತ್ತಿದ್ದೇವೇ? ತಾಯಿ-ತಂದೆಯರ ಕಾಮದ ಫಲವಾಗಿ, ಅವರ ತಪ್ಪಿನಿಂದಾಗಿ ಇಲ್ಲಿ ಹುಟ್ಟಲ್ಪಟ್ಟಿದ್ದು. ಈ ದೇಶದವನೆಂದು ಹೇಳಲು ಅವರಿಗೆ ಅಪಮಾನವಾಗುತ್ತಿದೆ! ಮಾತ್ರವಲ್ಲ, ಮಾತೃಭೂಮಿಯು ಅವರಿಗೆ ಕೇವಲ ಭೋಗ ಭೂಮಿ ಇದೆ. ಆದುದರಿಂದಲೇ ಅವರು—ಹುಲ್ಲು — ಮುಳ್ಳು ಹುಟ್ಟಿದ ಬರಡು ಭೂಮಿ ಎಂದು ಅಪಮಾನ ಮಾಡಲೂ ಹೇಸುವದಿಲ್ಲ.

ಅವರು ಆವೇಶದ ವೇಗದಲ್ಲೋ, ಅಜ್ಞಾನ ಅಥವಾ ತಪ್ಪಭಿಪ್ರಾಯದ ಭ್ರಮೆಯಿಂದಲೋ ಆ ರೀತಿ ಯದ್ವಾ-ತದ್ವಾ ಆಡಿದರೂ ಭಾರತ ಮಾತೆಗೆ ಅವರೂ ಮಕ್ಕಳೇ ಇದ್ದಾರೆ. ಭಾರತಕ್ಕೆ ಇಂತಹಾ ಆಘಾತಗಳೇನೂ ಹೊಸತಲ್ಲ. ಇಷ್ಟು ಆಘಾತಗಳನ್ನು ಸಹಿಸಿರುವ ರಾಷ್ಟ್ರ ಚರಿತ್ರೆಯಲ್ಲಿ ಬೇರೆನ್ನಾವದೂ ಇಲ್ಲ. ಶತಮಾನಗಳ ಆಘಾತಗಳನ್ನು ಎದುರಿಸಿ ನಿಂತಿರುವದು ಇದೇ ಭಾರತವಿದೆ. ನೂರಾರು ಶತ್ರುಗಳು ಹಲವಾರು ಬಾರಿ ಭಾರತದ ಮೇಲೆ ಆಕ್ರಮಣ ನಡೆಸಿರುವರು. ಬತ್ತದ ವೀರ್ಯ ಹಾಗೂ ನಾಶಗೈಯಲಾಗದ ಜೀವದಿಂದ ಬಂಡೆಯಂತೆ—ಪ್ರಪಂಚದಲ್ಲಿರುವ ಯಾವ ಬಂಡೆಗಿಂತಲೂ ಭದ್ರವಾಗಿ—ನಿಂತಿರುವದು ಇದೇ ಭೂಮಿ ಇದೆ. ನಾವು ಆ ದೇಶದ ಸುಪುತ್ರರಿದ್ದೇವೆ." ಸ್ವಾಮೀಜೀಯವರು ಅದನ್ನು ಸ್ಪಷ್ಟಗೊಳಿಸಿದ್ದಾರೆ. ನಾವು ಸುಪುತ್ರರೆಂಬುದನ್ನೊಪ್ಪಿಕೊಂಡ ಮೇಲೆ ಮಾತೆಯ ಮೇಲೆ ಅನ್ಯರ ಗೃದ್ಧ ದೃಷ್ಟಿ ಬೀಳಲು, ಆಕ್ರಮಣ ನಡೆಯಲು ನಾವು ಬಿಡಬಹುದೇನು?

ಆಕ್ರಮಣ ನಡೆಯದಂತೆ ನೋಡಿಕೊಳ್ಳಬೇಕಾದಲ್ಲಿ, ಆದ ಅಪಮಾನವನ್ನು ತೊಡೆದು ಹಾಕಬೇಕಾದಲ್ಲಿ ಕೆಲವು ಪ್ರಶ್ನೆಗಳಿಗೆ ನಾವು ಉತ್ತರ ಕೊಡಬೇಕಾಗಿರುತ್ತದೆ.

"ಸ್ವದೇಶ ಬಾಂಧವರ ಹೆಸರು ಕೇಳಿದೊಡನೆಯೇ ನರನಾಡಿಗಳಲ್ಲಿ ಅಪೂರ್ವ ಶಕ್ತಿಯ ಸಂಚಾರವಾಗುತ್ತದೆಯೇ? ಭೂಲೋಕದ ಯಾವ ಭಾಗದಲ್ಲಾದರೂ ವಾಸಿಸಿಕೊಂಡಿದ್ದರೂ, ಯಾವ ಭಾಷೆಯನ್ನಾದರೂ ಆಡಿಕೊಂಡಿದ್ದರೂ ಕೂಡಾ ನಮ್ಮ ದೇಶದವನೆಂದು ತಿಳಿದೊಡನೆ ಮನಸ್ಸಿಗೆ ಅವನು ಹತ್ತಿರದವನಾಗುತ್ತಾನೇನು? ಸ್ವದೇಶ ಬಾಂಧವನಾವನಿಗಾದರೂ ಕಷ್ಟ ಬಂದಾಗ ಅದು ತಮ್ಮ ಕಷ್ಟವೆಂದು ತಿಳಿದು ಕೊಳ್ಳುತ್ತಿರೇನು....? ಇಂತಹ ಕೆಲ ಪ್ರಶ್ನೆಗಳ ಉತ್ತರವನ್ನೂ ಸ್ವಾಮೀಜೀಯವರು ತಿಳಿಸಿರುವರು. ಇವೆಲ್ಲವುಗಳ ಅಭಾವ ನಮ್ಮಲ್ಲಿ ಮನೆಮಾಡಿಕೊಂಡಿರುವದರಿಂದಲೇ ದೇಶ ಇಂದು ದುರ್ದಿನಗಳನ್ನೆದುರಿಸಬೇಕಾಗಿರುತ್ತದೆ.

ಅದಕ್ಕಾಗಿ ಎದೆಗುಂದಬೇಕಾಗಿಲ್ಲವೆಂದೂ ವಿವೇಕವಾಣಿ ತಿಳಿಸುತ್ತದೆ. ಶ್ರೀ ಸ್ವಾಮೀಜೀಯವರು ನಮ್ಮ ದೇಶದ ಮೇಲಾಗಿರುವ ಆಕ್ರಮಣಗಳ ಪ್ರವಾಹದ ಸಮಾಚಾರವನ್ನು ವಿವರಿಸಿ ನೋಮನಾಥ ಮುಂತಾದ ದೇಗುಲಗಳತ್ತ ನಮ್ಮ ಗಮನ ಸೆಳೆದಿರುವರು, "ಶತಮಾನಗಳ ಆಘಾತ, ನೂರಾರು ಆಕ್ರಮಣಗಾರರಿಂದ ನಡೆಸಲ್ಪಟ್ಟಿರುವ ಆಕ್ರಮಣವನ್ನೆದುರಿಸಿರುವ ರಾಷ್ಟ್ರ ಇದೇ ಭಾರತವಿದೆ. ಬತ್ತದ ವೀರ್ಯ ಹಾಗೂ ನಾಶಗೈಯ್ಯಲಾಗದ ಚೈತನ್ಯದಿಂದ ಪ್ರಪಂಚದಲ್ಲಿ ಬಂಡೆಯಂತೆ ಅವಿಚಲವಾಗಿ ದೃಢನಾಗಿ ನಿಂತಿರುವ ದೇಶ ಇದು ಭಾರತವಿದೆ; ಮತ್ತು ನಾವು ಆ ದೇಶದ ಮಕ್ಕಳಿದ್ದೇವೆ" ಮಾತೃಭೂಮಿಗೆ ನಾವು ದ್ರೋಹ ಬಗೆಯಬಹುದೇನು? ಇದು ನಮಗೆ ಮಾತೃಭೂಮಿ ಅಲ್ಲದೆ ಕರ್ಮಭೂಮಿಯೂ ಇದೆ. ಆತ್ಮ ವಿಸ್ಮೃತಿಯನ್ನು ತೊಡೆದು ಹಾಕಿ, ವಿವೇಕಾನಂದರ ವಿವೇಕವಾಣಿಯನ್ನು ಅರಿತು, ಅದರಂತೆ ರಾಷ್ಟ್ರಮಾತೆಯ ಪವಿತ್ರ ಪಾದಗಳಲ್ಲಿ ಪುಷ್ಪಗಳಂತೆ ನಮ್ಮ ಜೀವನದ ಸದುಪಯೋಗ ಪಡಿಸಿಕೊಳ್ಳೋಣ.

—ಶ್ರೀ ಶಿವಶಂಕರ, ಮದ್ರಾಸು.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ತೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ
ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ರೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಶ್ರೀಕೃಷ್ಣನ ಉಡುಪಿಯಲ್ಲಿ

ಪರ್ಯಾಯ ಮಹೋತ್ಸವ

ದ್ವೈತ ಮತ ಪ್ರತಿಷ್ಠಾಪನಾಚಾರ್ಯ ಆಚಾರ್ಯ ಮಧ್ವರ ಕ್ರೀಡಾಂಗಣ ಉಡುಪಿ. ಇಲ್ಲಿ ಮಧ್ವಾಚಾರ್ಯರೇ ಸ್ಥಾಪಿಸಿದ ಶ್ರೀ ಕೃಷ್ಣ ಮಠವೂ ಶ್ರೀ ಕೃಷ್ಣನ ಪೂಜಾಕಾರ್ಯಗಳಿಗಾಗಿ ನಿಯಮಿತರಾದ ಎಂಟು ಸನ್ಯಾಸಿಗಳ ಮಠಗಳೂ ಇವೆ ಈ ಸನ್ಯಾಸಿಗಳು ಪರ್ಯಾಯವಾಗಿ ಶ್ರೀ ಕೃಷ್ಣನ ಪೂಜಾದಿಗಳನ್ನು ಮಾಡುತ್ತಿರುವರು. ಒಂದು ಮಠದ ಸ್ವಾಮಿಯವರು ಇನ್ನೊಂದು ಮಠದ ಸ್ವಾಮಿಯವರಿಗೆ ಶ್ರೀ ಕೃಷ್ಣನ ಪೂಜಾಧಿಕಾರವನ್ನೂ ಆ ಮಠದ ಆಡಳಿತೆಯನ್ನೂ ಒಪ್ಪಿ ಕೊಡುವ ಸಮಾರಂಭವನ್ನು ಪರ್ಯಾಯ ಮಹೋತ್ಸವವೆನ್ನುತ್ತಾರೆ.

ಸಪ್ತೋತ್ಸವ

ಮಕರಸಂಕ್ರಮಣಕ್ಕೆ ಐದು ದಿನಗಳಿಗೆ ಮೊದಲು ಶ್ರೀ ಕೃಷ್ಣನಿಗೆ ಕಾಲಾವಧಿ ಉತ್ಸವವು ನಡೆಯುತ್ತದೆ ಸಂಕ್ರಮಣದಂದು ಮೂರು ರಥಗಳನ್ನು ಎಳೆಯುವ ಉತ್ಸವವು ಹೃದಯಂಗಮವಾದುದು ಮರುದಿನ ಹಗಲಿನಲ್ಲಿ ಚೂರ್ಣೋತ್ಸವವು ನಡೆದು ಅವಭೃತವಾಗುವುದು. ಹೀಗೆ ಒಟ್ಟು ಏಳು ದಿನಗಳ ಉತ್ಸವವು ಸಪ್ತೋತ್ಸವವೆಂದು ಪ್ರಸಿದ್ಧವಿದೆ ಈ ಸಮಯದಲ್ಲಿ ಪರಮಾತ್ಮನ ದರ್ಶನಕ್ಕಾಗಿ ಯಾತ್ರಿಕರು ಕಿಕ್ಕಿರಿದು ನೆರೆಯುತ್ತಾರೆ.

ಪರ್ಯಾಯ ಮಹೋತ್ಸವ

ಎರಡು ತಿಂಗಳಿಗೊಮ್ಮೆ ಪರ್ಯಾಯ ಕೊಡುಕೊಳ್ಳುವ ಸಂಪ್ರದಾಯ ಪ್ರಾರಂಭದಲ್ಲಿತ್ತೆಂದೂ ಶ್ರೀ ಸೋದೆ ಮಠದ ಶ್ರೀ ಶ್ರೀ ವಾದಿರಾಜ ಯತಿವರ್ಯರು ಇದರಿಂದೊದಗುವ ಅನನುಕೂಲಗಳನ್ನು ದೂರ ಮಾಡಲು, ಈ ಅವಧಿಯನ್ನು ಎರಡು ವರ್ಷಗಳ ವರೆಗೆ ವಿಸ್ತರಿಸಿದರೆಂದೂ ಗೊತ್ತಾಗುತ್ತದೆ ಹೀಗಾಗಿ ಈಗ ಒಂದು ಮಠದ ಸ್ವಾಮಿಯವರು ಹದಿನಾರು ವರ್ಷಗಳಲ್ಲಿ ಎರಡು ವರ್ಷಗಳ ಪೂಜಾಧಿಕಾರವನ್ನು ಪಡೆಯುತ್ತಾರೆ. ಮಕರಸಂಕ್ರಮಣದ ಮೂರು-ನಾಲ್ಕನೆಯ ದಿನವೇ ಎರಡು ವರ್ಷಗಳಿಗೊಮ್ಮೆ ಪರ್ಯಾಯ ಮಹೋತ್ಸವವು ನಡೆಯುವುದು. ಈ ಉತ್ಸವವು ವೈಭವೋಪೇತವಾಗಿ ಜರುಗುವುದರಿಂದ ಪ್ರೇಕ್ಷಣೀಯವಾಗಿಯೂ ಇರುತ್ತದೆ. ಇದಕ್ಕೆಂದೇ ಅಖಿಲ ಭಾರತದ ಭಗವದ್ಭಕ್ತರು, ವಿಶೇಷವಾಗಿ ಮಾಧ್ವ ಸಂಪ್ರದಾಯದವರು ಇಲ್ಲಿ ಸೇರುತ್ತಾರೆ; ಕೃತಾರ್ಥರಾದೆವೆಂದು ಹಿರಿಹಿರಿ ಹಿಗ್ಗುತ್ತಾರೆ.

ಈ ವರ್ಷವು ಪರ್ಯಾಯದ ವರ್ಷವಾಗಿದ್ದು, ಈ ತಿಂಗಳ ೧೮ನೇ ದಿನಾಂಕದಂದು ಇದು ಏರ್ಪಡುವುದು. ಈ ಸಲ ಪರ್ಯಾಯ ಪೀಠಾವರೋಹಣ ಮಾಡುವವರು ಶ್ರೀ ಶೀರೂರು ಮಠದ ಸ್ವಾಮಿಯವರ; ಪೀಠಾರೋಹಣ ಮಾಡುವವರು ಶ್ರೀ ಸೋದೆ ವಾದಿರಾಜ ಮಠದ ಯತಿಗಳು.

ಶ್ರೀ ಶೀರೂರು ಯತಿವರ್ಯರು

೧೯೬೨ರಲ್ಲಿ ಶ್ರೀ ಶೀರೂರು ಮಠದ ಶ್ರೀ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ಪರ್ಯಾಯ ಪೀಠವೇರಿದ್ದರು. ಆದರೆ, ೧೯೬೩ರಲ್ಲಿ ಇವರು ಸಮಾಧಿಸ್ಥರಾದುದರಿಂದ ಆಶ್ರಮ ಸ್ವೀಕರಿಸಿದ ಶ್ರೀ ಶ್ರೀ ಲಕ್ಷ್ಮೀ ಮನೋಜ್ಞತೀರ್ಥರು ಅವರ ಕರ್ತವ್ಯಗಳನ್ನು ಮುಂದೆ ನಿರ್ವಹಿಸ ಬೇಕಾಯಿತು, ಶ್ರೀ ಶ್ರೀ ಲಕ್ಷ್ಮೀಂದ್ರ ತೀರ್ಥರು ವಾಗ್ಮಿಗಳೂ, ಧಾರ್ಮಿಕ ವಿಚಾರ ಶೀಲರೂ ಶಾಸ್ತ್ರಾರ್ಥ ಕೋವಿದರೂ ಆಗಿದ್ದರು. ಧರ್ಮಪ್ರಚಾರಕ್ಕಾಗಿ ಇವರು ಹಲವಾರು ಉಪಕ್ರಮಗಳನ್ನು ಸಂಯೋಜಿಸಿದ್ದರು. ಈಗ, ಮಠಾಧಿಪತಿಯಾಗಿರುವ ಶ್ರೀಲಕ್ಷ್ಮೀಮನೋಜ್ಞತೀರ್ಥರು ವಯಸ್ಸಿನಲ್ಲಿ ಕಿರಿಯರಾದರೂ ಧರ್ಮಮತ್ತು ಸಂಸ್ಕೃತಿಗಳಲ್ಲಿ ಆಸಕ್ತಿಯಿರುವವರು, ಶ್ರದ್ಧಾವಂತರು. ಅನಿರೀಕ್ಷಿತವಾಗಿ ತಾನು ನಿರ್ವಹಿಸಬೇಕಾಗಿ ಬಂದಿರುವ ಕರ್ತವ್ಯಗಳನ್ನು ನಿರ್ವಿಘ್ನವಾಗಿ ಪೂರೈಸಿದ್ದಾರೆ, ಇವರು. ಸಾಮಾಜಿಕ ಕಾರ್ಯಗಳಲ್ಲಿಯೂ ಇವರು ನಿರಾಸಕ್ತರಾಗಿರಲಿಲ್ಲ ಶ್ರೀ ಕೃಷ್ಣ ಮಠದಲ್ಲಿ ನಡೆಯುವ ಪೂಜೆ, ಧರ್ಮಕಾರ್ಯಗಳನ್ನು ಯಾವ ಲೋಪದೋಷಗಳೂ ಇಲ್ಲದಂತೆ ಶೀರೂರು ಮಠದ ಯತಿವರ್ಯರು ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ

ಶ್ರೀ ವಿಶ್ವೋತ್ತಮ ತೀರ್ಥರು

ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರೀಗ ಎರಡನೆಯ ಬಾರಿಗೆ ಪರ್ಯಾಯ ಪೀಠಾರೋಹಣ ಮಾಡುವರು ಇವರು ಹದಿನಾರು ವರ್ಷಗಳಿಗೆ ಮೊದಲು, ತನ್ನ ಬಾಲ್ಯದಲ್ಲಿಯೇ ಒಂದು ಪರ್ಯಾಯವನ್ನು ಯಶಸ್ವಿಯಾಗಿ ನಿರ್ವಹಿಸಿದವರು. ಉಡುಪಿಯ ಸಂಪ

ನ್ನ ಮಠಗಳಲ್ಲಿ ಒಂದಾದ ಸೋದೆ ಮಠದ ಪರ್ಯಾಯ ಕಾಲವು ನಿಜಕ್ಕೂ ವೈಭವಯುತವಾಗುವುದರಲ್ಲಿ ಸಂದೇಹವಿಲ್ಲ. ಸ್ವಯಂ ಅಧ್ಯಯನಶೀಲರೂ ಮನಸ್ವಿಯರೂ ಆದ ಶ್ರೀಪಾದಂಗಳವರು ಧರ್ಮದ ಆಳವನ್ನು ಅರಿತಿರುವವರ; ಧರ್ಮಕಾರ್ಯಗಳಲ್ಲಿಯೂ ಸಾಮಾಜಿಕ ಕಾರ್ಯಕ್ರಮಗಳಲ್ಲಿಯೂ ಉದಾರವಾಗಿ ನೆರವನ್ನು ನೀಡುವವರು. ಸ್ಥಳೀಯ ಎಂ ಜಿ. ಎಂ ಕಾಲೇಜಿಗಾಗಿ ವಾದಿರಾಜ ವಿದ್ಯಾರ್ಥಿಭವನವನ್ನೂ ಸಂಸ್ಕೃತ ಕಾಲೇಜಿಗಾಗಿ ವಾದಿರಾಜ ಪುಸ್ತಕ ಭಂಡಾರವನ್ನೂ ನಿರ್ಮಿಸಿಕೊಟ್ಟಿರುವರು. ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ನೆರವನ್ನು ನೀಡಿರುವರು. ಉದಾರತರಾದ ಇವರ ಪರ್ಯಾಯಾವಧಿಯೂ ಯಾವ ನ್ಯೂನಾತಿರೇಕಗಳಿಗೆ ಆಸ್ಪದ ಕೊಡದೆ ತನ್ನ ಭವ್ಯ ಪರಂಪರೆಗನುಗುಣವಾಗಿ ನಡೆದು ಬರುವುದೆಂದು ನಿರೀಕ್ಷಿಸಬಹುದು.

In the Court of the District Munsiff of Karkala

O S. No. 400/1963.

Between

Narsu Shetty............ *Plaintiff.*

Sadu Shetty............ *Defendant.*

To

The Defendant Sadu Shetty, son of Honnaya Shetty residing in Kankanaguthu in Nandikur Village, Udipi Taluk.

Whereas the plaintiff has instituted the above suit against you for recovery of arrears of Chalgeni rentRs 642 -98 and farther interest and costs of suit etc. and the said suit stands posted to 21—1—1964, you are hereby informed that you are at liberty to appear before the said Court at 11 A M on the said date and plead your defence if any, failing which the suit will be decided exparte.

V. V. Upadhyaya,
Advocate for Plaintiff.

Karkala, Dated 11-1-64.

ವಾರ್ತೆ–ಪ್ರತಿವಾರ್ತೆ

ನಾಗಾಲ್ಯಾಂಡಿನಲ್ಲಿ ನಡೆದ ಚುನಾವಣೆಗಳು ಶಾಂತಿಯುತವಾಗಿ ಜರಗಿದುವು ಮತ್ತು ಅನಿರೀಕ್ಷಿತವಾಗಿ ಅತ್ಯಧಿಕ ಪ್ರಮಾಣದಲ್ಲಿ ಮತದಾನವು ನಡೆಯಿತು.

—ಮತದಾನದಲ್ಲಿ ಶಾಂತತೆಯಿದ್ದರೂ ಬಂಡುಗಾರರ ಹಿಂಸೆ ಮಾತ್ರ ನಿಲ್ಲಲಿಲ್ಲ. ಆದರಿಂದಾಗಿಯೇ ನೇತವೆಯೊಂದನ್ನವರು ಉರುಳಿಸಿದರು.

o o o

ಕಲ್ಕತ್ತೆಯಲ್ಲಿದ್ದ ಹುಲಿಯನ್ನು ಅಣಗಿಸಲು ಪಿ.ಟಿ.ಟಿಂಗೂ ಬಹಳ ಪ್ರಯಾಸವಾಯಿತು.

—ಚೀನೀಯ ಕಿರುಬ ಅಥವಾ ಪಾಕ್ ಜಿಂಕೆಗಳಿಗಿಂತ ಬಂಗಾಳದ ಹುಲಿಗಳು ಬಲಿಷ್ಠವೆಂದು ಮತ್ತೊಮ್ಮೆ ಸಿದ್ಧವಾಯಿತು.

o o o

ಪ್ರಧಾನಿ ನೆಹರು ಆರೋಗ್ಯವನ್ನು ನಿಧಾನವಾಗಿ ಸುಧಾರಿಸುತಿದ್ದಾರೆ.

— ಜತೆಗೆ ದೇಶದ ಆರೋಗ್ಯವನ್ನೂ.

o o o

ಪಾಕಿಸ್ತಾನ ಮತ್ತು ಭಾರತಗಳು ಏಕಕಾಲದಲ್ಲಿ ಆಕಾಶ ಬಾಣವನ್ನು ಹಾರಿಸಿದುವು.

—ದಕ್ಷದಲ್ಲಿ ಜಾತೀಯ ಗಲಭೆ ಉಂಟಾದ ನಂತರವೇ ಅದರ ಗಾಳಿ ಕಲಕತ್ತೆಗೆ ಬೀಡಸೆಂದರೂ ಬೀಸಿತು ಎಂಬುದು ಖಂಡಿತ.

o o o

ಕರ್ನಾಟಕ—ಮಹಾ ರಾಷ್ಟ್ರ ಗಡಿಯಲ್ಲಿ ವಿಶೇಷ ಬದಲಾವಣೆಯನ್ನು ತಾನು ಒಪ್ಪುವುದಿಲ್ಲವೆಂದೂ ಕೊಂಚ ಪಟ್ಟಿನ ಹೊಂದಾಣಿಕೆ ಮಾತ್ರ ನಡೆಸಬಹುದೆಂದೂ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಹೇಳುವುದು ಸ್ವಾಗತಾರ್ಹ/ಸಮಯೋಚಿತ.

—ಮುಖ್ಯಮಂತ್ರಿ ಆರ್. ಶಂಕರರು ಇದೇ ಮಾತನ್ನು ಪುನರುಚ್ಚರಿಸಿದರೆ ಅದು ಮಾತ್ರ ಶುದ್ಧ ಅನ್ಯಾಯ

o o o

ಅಮೇರಿಕ ಮತ್ತು ಪನಾಮಾಗಳು ಒಂದು ದಿನ ಒಬ್ಬರ ಮುಖವೊಬ್ಬರು ನೋಡಲಿಲ್ಲ

—ಭಾರತೀಯರು ಕಲಿಯಬೇಕಾದ ಮೊದಲ ಪಾಠ ಇಲ್ಲಿದೆ.

ಪುತ್ತೂರು ಡಿ. ಮು ಕೋರ್ಟಿನಲ್ಲಿ

S. C. No. 489/1963.

ದಿ ಯುಂ. ಮೈದಿನ್ ಕುಂಞ ಬ್ಯಾರಿ —ವಾದಿ.

ಮತ್ತು

ಶಿವಪ್ಪ ಗೌಡ, ಚೆಲ್ಲ ಗೌಡರ ಮಗ, ಬಲ್ನಾಡು ಗ್ರಾಮದ ಕುಂಜತ್ತಾಡಿಯೆಂಬಲ್ಲಿ ಪುತ್ತೂರು ತಾಲೂಕು —ಪ್ರತಿವಾದಿ,

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ದಾವೆಯು ತಾರೀಕು 23—1—64ಕ್ಕೆ ಇಟ್ಟಿರುವುದರಿಂದ ನೀವು ಆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉಪಾಕರಣೆಯನ್ನು ದಾಖಲು ಮಾಡತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಿಂದ ನಿಮ್ಮನ್ನು ಶಿಕ್ಷಿಸಿ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

Sd/-B. T. Rai
Advocate for Plaintiff.

ಪುತ್ತೂರು, ತಾ. 6—1—1.64.

ನವಯುಗ

ರುಷ	ಉಡುಪಿ	ವಾರ
೪೩	೧೬-೧-೧೯೬೪	೨೦

ಗೋಪಬಂಧು ನಗರ

ಭುವನೇಶ್ವರದ ಗೋಪಬಂಧು ನಗರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ಪ್ರಜಾಪ್ರಭುತ್ವದ ತಳಹದಿಯಲ್ಲಿ ಶಾಂತಿಯುತವಾದ ವಿಧಾನಗಳಿಂದ ಸಾರ್ವತ್ರಿಕ ಅಭಿವೃದ್ಧಿಯನ್ನು ಸಾಧಿಸುವ ನೀತಿಯಲ್ಲೊಂದು ಪ್ರಮುಖವಾದ ಮೈಲಿಗಲ್ಲನ್ನು ನಾಟಿದೆಯೆನ್ನಬೇಕು. ತನ್ನ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಮಾಜವಾದವನ್ನು ಅನುಸರಿಸುವ ನೀತಿಯನ್ನು ಕಾಂಗ್ರೆಸ್ಸು ಬಹಳ ಮೊದಲೇ ಎಂದರೆ, ಲಾಹೋರಿನಲ್ಲಿ ಪಂಡಿತ ನೆಹರುರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಮ್ಮೇಳನದಲ್ಲಿಯೇ ನಿರ್ಧರಿಸಿತ್ತು. "ಸಮಾಜವಾದ"ದ ಅರ್ಥ ವಿವರಣೆಯ ಬಗ್ಗೆ ವಿವಾದಗಳುಂಟಾದರೂ ಅದು ಪ್ರಜಾಪ್ರಭುತ್ವದ ತಳಹದಿಯಲ್ಲೇ ವ್ಯವಹೃತವಾಗುವುದೆಂಬ ಭರವಸೆಯಿರುವುದರಿಂದ ಯಾರೂ ಹಂಗೆಡಬೇಕಾದ ಆವಶ್ಯಕತೆಯಿಲ್ಲ. ಕಾಂಗ್ರೆಸ್ ಸಮಾಜವಾದದ ಮೂಲತತ್ವಗಳನ್ನು ಈ ಹಿಂದೆಯೇ ಸ್ವೀಕರಿಸಿದ್ದರೂ ಆವಡಿಯ ಸಮ್ಮೇಳನದಲ್ಲಿ ಸಮಾಜವಾದ ಮಾದರಿಯ ಸಮಾಜವನ್ನು ಕಟ್ಟುವ ಗುರಿಯನ್ನಿಟ್ಟು ಸ್ವೀಕರಿಸಿದರೂ ಇಂದಿನವರೆಗೂ 'ಸಮಾಜವಾದ'ವು ಪರಿಣಾಮಕಾರಿಯಾಗಿ ಕಾರ್ಯಗತವಾದಂತೆ ತೋರಿಬಾರದಿರುವುದರಿಂದ ಜನತೆಯಲ್ಲಿ ನಿರಾಶೆಯ ಭಾವನೆ ಮೂಡುವಂತಾಗಿದೆ. ಇದಕ್ಕಾಗಿಯೇ ಸದ್ಯಕ್ಕೆ ಈ ವಿಚಾರದ ಮೇಲೆ ಗಂಭೀರ ಪರಿಶೀಲನೆ ನಡೆದು ೧೯೭೫ರ ಒಳಗೆ ಸರ್ವಸಾಮಾನ್ಯವಾದ ಸಮಾಜವಾದದ ಪರಿಣಾಮ ಅನುಭವಕ್ಕೆ ಬರುವಂತೆ ಮಾಡುವ ಉದ್ದೇಶವನ್ನು ಕಾಂಗ್ರೆಸ್ಸು ಇಟ್ಟುಕೊಂಡಿದೆ. ಇಲ್ಲಿ ಒಂದು ಮಾತನ್ನು ನಾವು ಮರೆಯುವಂತಿಲ್ಲ. ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಸಮಾಜವಾದದ ತತ್ತ್ವವನ್ನು ಸ್ವೀಕರಿಸುವುದರಿಂದಲೇ ಉನ್ನತಗೊಳಿಸುವುದು ಅಶಕ್ಯ. ದೇಶದ ಬಡತನ ಮತ್ತು ಜನಸಂಖ್ಯೆಯ ಹೆಚ್ಚಳಗಳೇ ನಮ್ಮಿಂದಿನ ಮುಖ್ಯ ಸಮಸ್ಯೆಗಳು. ಇದನ್ನು ದೂರ ಮಾಡಿದರೆ ಮಾತ್ರ ನಾವು ಆರ್ಥಿಕ ಸಮಾಜವಾದವನ್ನು ಅನುಷ್ಠಾನಕ್ಕೆ ತರಬಲ್ಲೆವು. ಆದುದರಿಂದ ಆರ್ಥಿಕವಾಗಿ ದೇಶವು ಉನ್ನತವಾಗುವಂತಹ ಕಾರ್ಯಪ್ರಣಾಲಿಯನ್ನು ನಾವು ಅನುಸರಿಸಬೇಕಾಗುತ್ತದೆ. ಅದನ್ನು ಬಿಟ್ಟು, ಸಮಾಜವಾದದ ಹೆಸರಿನಲ್ಲಿ ರಾಷ್ಟ್ರೀಕರಣದ ಪ್ರಶ್ನೆಯೊಂದನ್ನೇ ನೆಮ್ಮಿಕೊಂಡಿರುವುದೂ ಸರ್ವಥಾ ಅನುಚಿತ. ಕಾಂಗ್ರೆಸಿನ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಡುವ ಸಮಾಜವಾದವು ರಾಷ್ಟ್ರೀಕರಣದ ಗುರಿಯನ್ನೇ ಮುಖ್ಯವೆಂದು ಇಟ್ಟುಕೊಂಡಿಲ್ಲವೆಂಬುದು ಸಮಾಧಾನಕರ.

ಸಮ್ಮೇಳನದ ವಿಷಯ ನಿಯಾಮಕ ಸಭೆಯಲ್ಲಿ ಕೆಲವು ಸದಸ್ಯರು ಬ್ಯಾಂಕುಗಳ ರಾಷ್ಟ್ರೀಕರಣದ ಪ್ರಶ್ನೆಯನ್ನು ಬಲವಾಗಿ ಎತ್ತಿದರು. ಖಾಸಗಿ ರಂಗದಲ್ಲಿರುವ ಆರು ದೊಡ್ಡ ಬ್ಯಾಂಕುಗಳು ದೇಶದ ಬ್ಯಾಂಕುಗಳು ಹೊಂದಿರುವ ಠೇವಣಾತಿಯಲ್ಲಿ ಸುಮಾರು ಅರ್ಧಾಂಶದಷ್ಟನ್ನು ಪಡೆದಿವೆಯೆಂದು ಬಿಜಯಾನಂದ ಪಟ್ನಾಯಕರು ಉದ್ಗರಿಸಿದರು. 'ಇಂತಹ ಬ್ಯಾಂಕುಗಳ ರಾಷ್ಟ್ರೀಕರಣ ಮಾಡುವುದರಿಂದ ದೇಶದ ಅಭಿವೃದ್ಧಿ ಯೋಜನೆಗಳಿಗೆ ಸಾಕಷ್ಟು ಬಂಡವಾಳವು ದೊರೆಯುವುದು ಎಂಬ ಅಭಿಪ್ರಾಯ ಇವರಲ್ಲಿ ಮತ್ತವರ ಸಮರ್ಥಕರಲ್ಲಿದೆ. ಇದು ಎಷ್ಟು ಮಟ್ಟಿಗೆ ಸಾಧುವಾದುದು ಎಂದು ತುಸು ವಿವೇಚಿಸಿದರೆ ತಿಳಿಯುವುದು. ಬ್ಯಾಂಕುಗಳಲ್ಲಿರುವ ಠೇವಿನ ಮೊತ್ತವು ದೊಡ್ಡದೆಂದೂ ಅದು ದೇಶದ ಆರ್ಥಿಕ ಪುನಾರಚನೆಯ ಕಾರ್ಯಕ್ಕೆ ದೊರೆಯಬಲ್ಲುದೆಂದೂ ಹೇಳುವವರಿದ್ದಾರೆ. ಆದರೆ, ಬ್ಯಾಂಕುಗಳ ಠೇವುಗಳನ್ನು ವಿನಿಯೋಗಿಸುವುದರ ಮೇಲೆ ರಿಜರ್ವ ಬ್ಯಾಂಕಿನ ಆದೇಶವೂ ನಿಯಂತ್ರಣವೂ ಬಹಳಷ್ಟಿದೆ. ಈ ಆದೇಶದಿಂದಾಗಿ ಸರಕಾರ ಮತ್ತಿತರ ವಿವಿಧ ಉದ್ಯಮ ರಂಗಕ್ಕೆ ಬ್ಯಾಂಕುಗಳ ಠೇವಣಿ ಹಣದ ಬಹು ಪಾಲು ದೊರೆಯುವುದೆಂಬುದನ್ನು ಮರೆಯುವಂತಿಲ್ಲ. ತನ್ನನ್ನು ಸಮಾಜವಾದಿಯೆಂದು ಕರೆದುಕೊಳ್ಳುತ್ತಿದ್ದ ಮಹಾತ್ಮಾ ಗಾಂಧೀಜಿಯವರಾದರೂ ಆರ್ಥಿಕ ಮತ್ತು ರಾಜಕೀಯಾಧಿಕಾರಗಳು ವಿಕೇಂದ್ರೀಕೃತವಾಗುವುದರಲ್ಲಿಯೇ ಪ್ರಜಾಪ್ರಭುತ್ವದ ಆರೋಗ್ಯವಡಗಿದೆಯೆಂದು ಹೇಳಿದ್ದಾರೆ. ಇದನ್ನೇ ತಿಳಿದು ಗೃಹಮಂತ್ರಿ ಗುಲ್ಜಾರೀಲಾಲನಂದಾರವರು ಬ್ಯಾಂಕುಗಳ ರಾಷ್ಟ್ರೀಕರಣದ ಬಗ್ಗೆ ವಿಶೇಷ ಆಗ್ರಹ ತೊಡಬಾರದೆಂದು ಸದಸ್ಯರನ್ನು ವಿನಂತಿಸಿದರು.

ಪ್ರಜಾಪ್ರಭುತ್ವವು ಸುಸೂತ್ರವಾಗಿ ಮುನ್ನಡೆಯಬೇಕಾದರೆ, ದೇಶದ ಆಂತರಿಕ ಅಭಿವೃದ್ಧಿಯಾಗುವುದು ಅಗತ್ಯವಾಗಿದೆ. ಆರ್ಥಿಕ ಏರುಪೇರುಗಳನ್ನು ದೂರ ಮಾಡುವುದು ಅಪೇಕ್ಷಣೀಯ. ಇದಕ್ಕಾಗಿ ಕ್ರಾಂತಿಕಾರಿ ವಿಧಾನವನ್ನು ಅನುಸರಿಸದೆ, ಪ್ರಜಾಪ್ರಭುತ್ವಕ್ಕೆ ಅನುಗುಣವಾದ ವಿಧಾನಗಳನ್ನು ಕೈಗೊಳ್ಳುವ ನಿರ್ಧಾರವು ನಮ್ಮದು. ಜಾತ್ಯತೀತ ರಾಷ್ಟ್ರ ಭಾರತವು ತನ್ನ ಆರ್ಥಿಕ ಯೋಜನೆಗಳನ್ನು ಕಾರ್ಯಕೃತಗೊಳಿಸಲು ಪ್ರಜಾಪ್ರಭುತ್ವದ ತತ್ವಗಳನ್ನು ಮೀರದೆ, ಕಾರ್ಯತತ್ಪರವಾಗುವುದು; ಮತ್ತು ಇದರಿಂದಾಗಿ ಆರ್ಥಿಕ ಪುನಾರಚನೆಯನ್ನು ಸಾಧಿಸಿ, ಆರ್ಥಿಕ ವರ್ಗಭೇದ ನಿರ್ಮೂಲನೆ ಮಾಡುವುದೆಂದು ನಂಬಬಹುದು. ಯೋಜನೆಗಳ ಪರಿಣಾಮವಾಗಿ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿರುವರು; ಬಡವರು ಮತ್ತಷ್ಟು ಬಡವರಾಗಿರುವರೆಂಬ ಆರೋಪವನ್ನು ಸಂಪೂರ್ಣ ಒಪ್ಪುವುದು ಸಾಧ್ಯವಿಲ್ಲವಾದರೂ ಅಲ್ಲಗಳೆಯುವುದೂ ಅಷ್ಟೇ ಕಷ್ಟ. ದೇಶದಲ್ಲಿ ಅಧಿಕ ಉತ್ಪನ್ನಕ್ಕೆ ಅವಕಾಶಗಳು ಅಧಿಕಾಧಿಕವಾದಂತೆ ಆರ್ಥಿಕ ಪರಿಸ್ಥಿತಿಯು ಸುಧಾರಿಸುತ್ತ ಹೋಗುವುದರಿಂದ, ಕಾಂಗ್ರೆಸ್ಸು ತನ್ನ ಸಮಾಜವಾದದ ನೀತಿಯಂತೆ ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಬೇಕು; ಆಗತಾನೇ ದೇಶವು ಸುಭಿಕ್ಷೆ ಹೊಂದಬಹುದು.

ಜಗತ್ಪರ್ಯಟನ

ವಿ. ಪಿ. ನಾಯಕ್

ಮಹಾರಾಷ್ಟ್ರದ ಮುಖ್ಯ ಮಂತ್ರಿ ವಿ. ಪಿ. ನಾಯಕರು ಪಾನಪ್ರತಿಬಂಧದಲ್ಲಿ ತುಸು ರಿಯಾಯತಿಯನ್ನು ತೋರಿಸಲು ನಿರ್ಧರಿಸಿದುದು ದೇಶದಲ್ಲಿ ಎಲ್ಲೆಡೆಯೂ ವಿಚಾರಕ್ಕೊಂದು ವಿಷಯವಾಗಿದೆ. ಉಳಿದ ರಾಜ್ಯಗಳು ಅದರ ಮಾದರಿಯನ್ನು ಅನುಸರಿಸಲು ಮನ ಮಾಡುತ್ತಿರುವಾಗ ಕೇಂದ್ರ ಗೃಹ ಮಂತ್ರಿ ಹೇಳಿದರು: "ಇಡಿಯ ಭಾರತದಲ್ಲಿ ಏಕ ರೀತಿಯ ಪಾನಪ್ರತಿಬಂಧ ಕಾನೂನು ಇರಬೇಕು" ಎಂದು. ಪಾನಪ್ರತಿಬಂಧವು ಕಾಂಗ್ರೆಸ್ಸಿನ ನೀತಿಯಾಗಿರುವುದರಿಂದ ಅದರ ಅನುಷ್ಠಾನದಲ್ಲಿ ಸಮಾನತೆಯಿರಬೇಕೆಂಬುದನ್ನು ಒಪ್ಪಲೇ ಬೇಕು. ಆದರೆ, ರಾಜ್ಯ ಸರಕಾರದ ಕಕ್ಷೆಗೆ ಬರುವ ಈ ವಿಷಯದ ಮೇಲೆ ಕೇಂದ್ರವೇಕೆ ಕೈಹಾಕಬೇಕು ಎಂದೂ ಕೆಲವರು ಅನ್ನ ತೊಡಗಿದ್ದಾರೆ. ಇಂತಹ ಗೊಣಗಾಟಕ್ಕೆ ಅವಕಾಶವಿಲ್ಲದಂತೆ ಎಲ್ಲ ಮುಖ್ಯ ಮಂತ್ರಿಗಳು — ಮಂತ್ರಿಗಳು ವ್ಯವಹರಿಸುವುದು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಡಾಕ್ಕಾದಿಂದ ಕಲಕತ್ತೆ

ಪೂರ್ವ ಪಾಕಿಸ್ತಾನದಲ್ಲಾದ ಜಾತೀಯ ಗಲಭೆಯ ಕಿಡಿ ಕಲಕತ್ತೆಗೂ ಹಾರಿದುದರಿಂದ ಅಲ್ಲಿ ಭಯಂಕರ ಪರಿಸ್ಥಿತಿ ತೋರಿಬಂತು. ಅದು ಕೈಮೀರಿ ಹೋದುದರ ಪರಿಣಾಮವಾಗಿ ಮಿಲಿಟರಿಯ ಪ್ರವೇಶವೂ ಆಗ ಬೇಕಾಯಿತು. ಅಲ್ಪ ಸಂಖ್ಯಾಕರ ಪ್ರಶ್ನೆಯು ಪಾಕಿಸ್ತಾನದಲ್ಲಿ ಹಿಂದಿನಿಂದಲೂ ಇದೆ. ಇಸ್ಲಾಮನ್ನು ತನ್ನ ರಾಷ್ಟ್ರಧರ್ಮವೆಂದದು ಸ್ವೀಕರಿಸಿದುದರಿಂದ ಅಲ್ಲಿ ಈ ಸಮಸ್ಯೆ ಇರುವುದಾದರೂ ಸ್ವಾಭಾವಿಕ. ಆದರೆ, ಭಾರತವು ತನ್ನನ್ನು ಜಾತ್ಯತೀತ ರಾಷ್ಟ್ರವೆಂದು ಬಹಳ ಹಿಂದೆಯೇ ಘೋಷಿಸಿದೆ; ಅಲ್ಲದೆ ಕಳೆದ ೧೬ ವರ್ಷಗಳಿಂದಲೂ ಅದು ಇದನ್ನು ಲೋಕಕ್ಕೆ ಎತ್ತಿ ತೋರಿಸಿದೆ. ಇಲ್ಲಿ ಜಾತಿಗಳು ಹೇರಳವಾಗಿದ್ದರೂ, ಜಾತೀಯತೆಯ ಕಾರಣದಿಂದ ಜಗಳವಾದ ನಿದರ್ಶನಗಳು ತೀರ ಕಡಮೆ; ಆದರೆ, ಪೂರ್ವ ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾಕ ಹಿಂದೂಗಳ ಮೇಲೆ ಬಹು ಸಂಖ್ಯಾಕ ಮುಸ್ಲಿಮರು ಮಾಡಿದ ಹಲ್ಲೆಯ ಪರಿಣಾಮದಿಂದ ಕಲಕತ್ತೆಯೂ ಗೊಂದಲವನ್ನು ಎದುರಿಸಬೇಕಾಯ್ತು. ಶ್ರೀನಗರದಲ್ಲಿ ಪೈಗಂಬರರ ಪವಿತ್ರ ಕೇಶದ ಕಣ್ಮರೆಗೂ ಈ ಗೊಂದಲಕ್ಕೂ ಸಂಬಂಧ ಕಲ್ಪಿಸಲಾಗುತ್ತಿದೆ. ಅದೇನೇ ಇದ್ದರೂ, ಪಾಕ್ ಗಲಭೆಯಿಂದ ಅಲ್ಲಿನ ಹಿಂದೂಗಳು ಭಾರತದತ್ತ ಧಾವಿಸಿ ಬರತೊಡಗಿದ್ದಾರೆ ಅಷ್ಟೆ. ಭಾರತೀಯರು ಜಾತೀಯತೆಯನ್ನೆಂದಿಗೂ ನೆಮ್ಮಿರುವುದಿಲ್ಲ. ಕಲಕತ್ತೆಯ ದುರ್ಘಟನೆಯು ಶೀಘ್ರದಲ್ಲೇ ಸರಿಹೊಂದಿ, ಅಲ್ಲಿನ ನಾಗರಿಕರು ಹಿಂದಿನಂತೆಯೇ ಸೌಹಾರ್ದದಿಂದ ಬಾಳುವರೆಂದು ದೇಶದ ಆಸೆ. ಪಾಕ್ ಸರಕಾರವು ತನ್ನ ಸ್ವಾರ್ಥಕ್ಕಾಗಿ ಜಾತೀಯತೆಯನ್ನು ನೆಮ್ಮುವ ಹುಚ್ಚು ಕಾರ್ಯವನ್ನು ಇನ್ನಾದರೂ ಮಾಡದಿರಲಿ.

ಹನುಮಂತಯ್ಯ

ಕೆಂಗಲ್ ಹನುಮಂತಯ್ಯನವರು ನಿರ್ದಿಷ್ಟವಾದಿಗಳು. ಕಂಡುದನ್ನು ಕಂಡಂತೆಯೂ ಇದ್ದುದನ್ನು ಇದ್ದಂತೆಯೂ ಹೇಳುವವರು. 'ಹಲವು ಬಾರಿ ಇವರು ಈ ಗುಣದಿಂದಾಗಿಯೇ ಹಿಂದೆ ಜಗ್ಗಲ್ಪಟ್ಟಿದ್ದಾರೆ. ಪಾರ್ಲಿಮೆಂಟಿಗೆ ಚುನಾಯಿತರಾದಾಗ ಇವರಲ್ಲಿ ಮಂತ್ರಿಯಾಗಲೂ ಬಹುದೆಂಬ ಊಹಾಪೋಹಗಳೆದ್ದುವು. ಮುಂದವರು ಮಂತ್ರಿ ಆಗಲಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ೭ ಚುನಾಯಿತ ಸ್ಥಾನಗಳಲ್ಲಿ ಒಂದಕ್ಕೆ ಸ್ಪರ್ಧಿಸಿದಾಗಲೂ ಇವರ ಆಯ್ಕೆ ನಿಶ್ಚಿತವೆಂದು ತಿಳಿಯಲಾಗಿತ್ತು. ಪ್ರಧಾನಿ ನೆಹರುರವರೂ ಅವರ ಉಮೇದ್ವಾರಿಕೆಗೆ ಬೆಂಬಲ ನೀಡಿದ್ದರೆಂಬುದೇ ಇದಕ್ಕೆ ಕಾರಣವಾಗಿತ್ತು. ಆದರೆ, ಚುನಾವಣೆಯಲ್ಲಿ ಎಲ್ಲರಿಗಿಂತ ಕಡಿಮೆ ಮತ ಗಳಿಸಿ ಇವರು ಹಿಂದುಳಿದರು. ವಿಪರೀತ ಬುದ್ಧಿವಂತಿಕೆ ಮತ್ತು ಪ್ರತಿಭೆಗಳೂ ಹಲವು ಬಾರಿ ಏಳಲು ಆತಂಕ ಒಡ್ಡುವುವಲ್ಲವೆ?

ನಿಜಲಿಂಗಪ್ಪ

ಗೋವೆಯ ಭವಿತವ್ಯವನ್ನು ಗೋಮಾಂತಕರೇ ನಿರ್ಧರಿಸಬೇಕೆಂದು ಹೇಳುತ್ತಿದ್ದ ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರೂ ಈಗ ತಮ್ಮ ಹಾಡಿನ ರಾಗವನ್ನು ತುಸು ಬದಲಿಸಿದ್ದಾರೆ. ಗೋವೆಯು ಕರ್ನಾಟಕದಲ್ಲಿ ಇಲ್ಲವೇ ಮಹಾರಾಷ್ಟ್ರದಲ್ಲಿ ವಿಲೀನಗೊಳ್ಳುವ ಬಗ್ಗೆ ಆಗ್ರಹ ಹೇರುವುದನ್ನು ಅವರೆಂದಿಗೂ ಒಪ್ಪುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯ ಸುಖವನ್ನು ಅನುಭವಿಸಲು ಗೋಮಂತರಿಗೆ ಅವಕಾಶ ಕೊಡಬೇಕೆನ್ನುತ್ತಾರೆ ಅವರು. ಆದರೂ ಕರ್ನಾಟಕದಲ್ಲಿ ಕೊಂಕಣಿ ಮಾತನಾಡುವ ಜನರು ಹಲವಾರು ಲಕ್ಷವಿರುವುದರಿಂದ ಗೋವೆಯು ಕರ್ನಾ

ಟಕದೊಡನೆ ಸೇರುವುದರಿಂದ ಗೋವೆಯ ಅಂತರ ಒಳಿತಾಗುವುದು ಎಂದವರು ಅಭಿಪ್ರಾಯ ಪಡುತ್ತಾರೆ.

ಮಂತ್ರಿ--ರಾಜ್ಯಪಾಲ

ಸದ್ಯದಲ್ಲಿಯೇ ದೇಶದಲ್ಲಿ ರಾಜ್ಯಪಾಲರುಗಳ ವರ್ಗಾವಣೆಯಾಗುವುದು ಖಂಡಿತವಿದೆ. ಮದ್ರಾಸದ ಮೇಧಿಯವರು ನಿವೃತ್ತರಾಗುವರು; ಕರ್ನಾಟಕದ ಶ್ರೀ ಜಯಚಾಮರಾಜರು ಮದ್ರಾಸಕ್ಕೆ ಹೋಗುವರು. ಪಂಜಾಬದ ಪಟ್ಟಂಥಾನು ಪಿಳ್ಳೆ ಕರ್ನಾಟಕಕ್ಕೆ ಬರುವರು. ಉಪ ಚುನಾವಣೆಯಲ್ಲಿ ಸೋತುದರಿಂದ ಮಂತ್ರಿ ಪದಕ್ಕೆ ರಾಜಿನಾಮೆಯಿತ್ತಿದ್ದ ಹಫೀಜ ಮಹಮ್ಮದ ಇಬ್ರಾಹಿಮರು ಪಂಜಾಬದ ರಾಜ್ಯಪಾಲರೆಂದು ನೇಮಕಗೊಳ್ಳುವ ನಿರೀಕ್ಷೆಯಿದೆ. ಆದರೆ, ಇದರಲ್ಲಿ ಎಷ್ಟು ಕಾರ್ಯರೂಪಕ್ಕೆ ಬರಬಹುದು ಎಂದು ಈಗಲೇ ಹೇಳುವಂತಿಲ್ಲ. ಇತ್ತೀಚೆಗೆ ರಾಜ್ಯಪಾಲರ ಹುದ್ದೆಗಳಿಗೆ ಹುದ್ದರಿಗಳೇ ಸಿಗದಂತಾಗುವ ವಿಚಿತ್ರ ಸನ್ನಿವೇಶಗಳು ಮರುಕೊಳಿಸದಂತೆ ಮಾಡದೆ ಹೋದರೆ, ತುಂಬ ಕಷ್ಟಕರವಾಗಿ ಪರಿಣಮಿಸೀತು. ಇದಕ್ಕೆ ಮಂತ್ರಿ ಪಟ್ಟದ ಆಕರ್ಷಣೆಯನ್ನು ಕಡಿಮೆ ಮಾಡುವುದೇ ಉಪಾಯವಲ್ಲವೆ?

ಬೆಳ್ತಂಗಡಿ ಡಿಸ್ಟ್ರಿಕ್ಟ್ ಮುನ್ಸಿಫ್ ಕಂ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

S C 11/64

ಬಿ. ಕೆ. ಸುಬ್ಬರಾವ್ —ವಾದಿ.

ಮತ್ತು

ಐತಪ್ಪ ಪೂಜಾರಿ —ಪ್ರತಿವಾದಿ.

ಬೆಳ್ತಂಗಡಿ ತಾಲೂಕು ವಿತ್ತಬಾಗಿಲು ಗ್ರಾಮದ ಹಿರಿಯೂರು ಎಂಬಲ್ಲಿರುವ ಶ್ರೀಮತಿ ಗಂಗೆ ಹೆಂಗಸು ಎಂಬವರ ಮಗ ಯಾ ಶ್ರೀ ಕೃಷ್ಣಪ್ಪ ಪೂಜಾರಿಗಳ ಅಳಿಯ ಶ್ರೀ ಐತಪ್ಪ ಪೂಜಾರಿಗಳಿಗೆ ತಿಳಿಸುವುದೇನೆಂದರೆ—

ವಾದಿ ಶ್ರೀ ಬಿ. ಕೆ. ಸುಬ್ಬರಾಯರು ನಿಮ್ಮ ಮೇಲೆ ದಾಖಲ್ಲ ಮಾಡಿರುವ ವ್ಯಾಜ್ಯವು ಕನಿಷ್ಠ ವ ನಿಮ್ಮ ಹಾಜರಾತಿಯ ಬಗ್ಗೆ ತಾ. 29-1-64ಕ್ಕೆ ಇಟ್ಟಿದೆ. ಆದರಲ್ಲಿ ಉದಯರಿಸುವದಿದ್ದರೆ ಸದ್ರಿ ವ್ಯಾದಿಗೆ ಕೋರ್ಟಿನಲ್ಲಿ ಬೆಳಿಗ್ಗೆ ಗಂಟೆ 10ಕ್ಕೆ ಸರಿಯಾಗಿ ಸ್ವತಹ ವ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿಪ್ಪಾ ಮಾಡಿ ಏಕಪಕ್ಷ ವಿಚಾರಣೆಯಿಂದ ವ್ಯಾಜ್ಯ ತೀರ್ಮಾನ ಮಾಡಲಾಗುವುದು. ತಿಳಿದಿರಲಿ—

ಬಿ. ಕೆ. ಸೂರ್ಯನಾರಾಯಣ ರಾವ್.

ಎಡ್ವೋಕೇಟ್.

ಬೆಳ್ತಂಗಡಿ, 10-1-64.

ಅಲ್ಲಲ್ಲಿಯ ಸುದ್ದಿಸಾರ

ಎಂ. ಜಿ. ಯಂ. ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು—

ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ಕಳೆದ ವಾರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದುವು. ತಾರೀಕು 6—1—1964ರಂದು ಡಾ| ಶಿವರಾಮ ಕಾರಂತರು ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಕೂತನಾಡುತ್ತ ಇಂದಿನ ಶಿಕ್ಷಣರಂಗದಲ್ಲಿ ಎದ್ದು ಕಾಣುವ ಕುಂದುಕೊರತೆಗಳನ್ನು ಪರಿಶೀಲಿಸಿದರು. ಮುಖ್ಯವಾಗಿ ವಿದ್ಯಾರ್ಥಿಗಳ ವಯೋಮಾನಕ್ಕೂ ವೈಯಕ್ತಿಕ ಅಭಿರುಚಿಗೂ ಅನುಗುಣವಾಗಿರುವ ಪಠ್ಯಕ್ರಮವನ್ನು ಅಳವಡಿಸುವುದರಲ್ಲಿ ನಮ್ಮ ಶಿಕ್ಷಣ ನೀತಿಯು ವಿಫಲವಾಗಿದೆಯೆಂದು ತಿಳಿಸಿದರು. ಆ ವೇಳೆ ವಿದ್ಯಾರ್ಥಿಗಳಿಗೆ ಹಿತವಚನಗಳನ್ನಾಡುತ್ತ ತನಗೆ ಮೆಚ್ಚುಗೆಯಿರುವ ವಿಷಯದ ಮೇಲೆ ಪ್ರತಿಯೊಬ್ಬ ವಿದ್ಯಾರ್ಥಿಯೂ ವಿಶೇಷ ಪರಿಜ್ಞಾನವನ್ನು ಆಳವಾದ ಅಭ್ಯಾಸದಿಂದ ಪಡೆಯುವುದು ಅಗತ್ಯವೆಂದು ತಿಳಿಸಿದರು.

ತಾ. 10—1—1964ರಂದು ಧಾರವಾಡ ಆಕಾಶವಾಣಿ ನಿಲಯದ ಶ್ರೀ ಸಿ. ನಾರಾಯಣ ಶಾಸ್ತ್ರಿಗಳು ಪುರಂದರದಾಸರ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿದರು. ಹಿಮ್ಮೇಳನದಲ್ಲಿ ಶ್ರೀ ಮಂಜುನಾಥಯ್ಯನವರು ಪಿಟೀಲನ್ನೂ ಶ್ರೀ ರಾಘವೇಂದ್ರ ಭಟ್ಟರು ತಬ್ಲಾವನ್ನೂ ನುಡಿಸಿದರು.

ತಾ 12—1—1964ರಂದು ಕುಂದಾಪುರದ ಶ್ರೀ ಭಂಡಾರ್‌ಕಾರ್ ಕಾಲೇಜಿನ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ತಂಡವೊಂದು ಇಲ್ಲಿಯ ಎಂ. ಜಿ. ಎಂ. ಕಾಲೇಜನ್ನು ಸಂದರ್ಶಿಸಿತು. ನಡೆದ ಸಮಾರಂಭವೊಂದರಲ್ಲಿ ಎರಡೂ ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿವಿಧ ಕಲಾಪ್ರತಿಭೆಗಳನ್ನು ಪ್ರದರ್ಶಿಸಿದರು. ಭಂಡಾರ್‌ಕಾರ್ ಕಾಲೇಜಿನ ವಿದ್ಯಾರ್ಥಿಗಳು "ಮುದುಕನ ಮದುವೆ" ಎಂಬ ಹಾಸ್ಯಮಯ ನಾಟಕವನ್ನು ಅಭಿನಯಿಸಿದರು.

ಉಡುಪಿಯಲ್ಲಿ ಶ್ರೀ ಅರಲಿಯವರ ಅದ್ಭುತ ಚಿತ್ರ ಕಲಾಪ್ರದರ್ಶನ:

ಅಖಿಲ ಭಾರತದಲ್ಲೇ ಖ್ಯಾತರಾದ ರಂಗವಲ್ಲಿ ಚಿತ್ರಕಾರ ಶ್ರೀ ವಾಸುದೇವ ರಾಮಚಂದ್ರ ಅರಲಿಯವರು ಶ್ರೀ ಪೇಜಾವರ ಶ್ರೀ ಪಾದಂಗಳವರ ಆಹ್ವಾನದ ಮೇರೆಗೆ ಇದೀಗ ಉಡುಪಿಯ ಆಗಮಿಸಿದ್ದು ಅವರ ಈ ಅದ್ಭುತ ಚಿತ್ರಕಲಾ ಪ್ರದರ್ಶನವು ಪರ್ಯಾಯ ಮಹೋತ್ಸವದ ಸಂದರ್ಭದಲ್ಲಿ ಜನವರಿ ೧೭ರಿಂದ ೩೧ರ ತನಕ ಜರಗಲಿರುವುದು. ಶ್ರೀ ಅರಲಿಯವರಿಗೆ ಶಿಕ್ಷಣ ತಜ್ಞ ಡಾ| ಟಿ ಮಾಧವ ಪೈಯವರು ಸಿಂಡಿಕೇಟ್ ಬ್ಯಾಂಕಿನ ಸ್ಟಾಫ್ ಟ್ರೈನಿಂಗ್ ಕಾಲೇಜಿನ ಭವ್ಯ ಹಾಲನ್ನು ಉದಾರವಾಗಿತ್ತು ಎಲ್ಲಾ ತರದ ಪ್ರೋತ್ಸಾಹ ನೀಡುವುದಾಗಿ ಭರವಸೆಯನ್ನಿತ್ತಿದ್ದಾರೆ. ಶ್ರೀ ಅರಲಿಯವರೇ ಜರಗಿಸುವ ಈ ಪ್ರದರ್ಶನಕ್ಕೆ ನಗರಸಭಾಧ್ಯಕ್ಷರು, ಪುರಪ್ರಮುಖರು, ಮಠಾಧೀಶರುಗಳೇ ಮೊದಲಾದ ಎಲ್ಲಾ ಮಹನೀಯರೂ ತಮ್ಮ ಹೃತ್ಪೂರ್ವಕವಾದ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ.

ಮುಂಬಯಿ— ಇಲ್ಲಿಯ ಸುಪ್ರಸಿದ್ಧ ರಾತ್ರಿ ಶಾಲೆಗಳಲ್ಲಿ ಒಂದಾದ ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನ ಹತ್ತನೇ ವರ್ಗದವರು ತಯಾರಿಸಿದ "ಕಿರಣ"ಎಂಬ ಹಸ್ತಪತ್ರಿಕೆಯನ್ನು ಶ್ರೀ, ಆಚಾರ್ಯ ರಾಮಚಂದ್ರ ಜೋಶಿ ಕುಂದರಗಿ 'ಸಾಹಿತ್ಯ ವಿಶಾರದ' ಅವರು ತಾ. 4-1-1964ರಂದು ಉದ್ಘಾಟಿಸಿದರು. ವಿದ್ಯಾರ್ಥಿ ಪಿ. ಯಸ್. ಹೆಗ್ಡೆ ವರದಿಯನ್ನು ಓದಿದ ಬಳಿಕ ಅಧ್ಯಾಪಕರಲ್ಲಿ ಸರ್ವಶ್ರೀ ಶೇಖರ ಇಡ್ಯ, ಕಿಣಿ, ಜೈನ್, ಡಿಮೆಲ್ಲೊ, ಅಣ್ಣಣ್ಣ ಶೆಟ್ಟಿ ಮತ್ತು ಎಸ್. ಎ. ಅವರು ವಿದ್ಯಾರ್ಥಿಗಳನ್ನು ಹರಸಿದರು. ಉತ್ತಮ ಕವನಗಳನ್ನು ಬರೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಗೈದ ಬಳಿಕ ಹಸ್ತಪತ್ರಿಕೆಯ ಸಂಪಾದಕ ವಿದ್ಯಾರ್ಥಿ ಶ್ರೀಪತಿ ಭಟ ಧನ್ಯವಾದ ಸಮರ್ಪಣೆಗೈದನು.

ಶ್ರೀ ಸುಬ್ರಹ್ಮಣ್ಯದಲ್ಲಿ ಧರ್ಮ ಸಮ್ಮೇಳನ



ಇದೇ ತಾ: 5 ರಂದು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಧರ್ಮಸಮ್ಮೇಳನದ ವೇಳೆ ತೆಗೆದ ಚಿತ್ರ.

ಎಡದಿಂದ ಬಲಕ್ಕೆ— ಟ್ರಸ್ಟಿ ಶ್ರೀ ಬಿ. ಬಾಲಕೃಷ್ಣ ರೈ, ಭಾಷಣಕರ್ತರಾದ ಪ್ರೊ| ಯು. ಎಲ್. ಆಚಾರ್ಯ ಮತ್ತು ಪ್ರೊ| ಕು. ಶಿ. ಹರಿದಾಸ ಭಟ್, ಅಧ್ಯಕ್ಷ ಡಾ| ಟಿ. ಎಂ. ಎ. ಪೈ, ಟ್ರಸ್ಟಿ ಶ್ರೀ ಕೆ. ಸುಬ್ರಹ್ಮಣ್ಯ ಗೌಡ, ಮೆನೇಜರ್ ಶ್ರೀ ಎಸ್. ರಾಮಕೃಷ್ಣ ಭಟ್ ಮತ್ತು ಟ್ರಸ್ಟಿ ಶ್ರೀ ಬಿ. ನಾರಾಯಣ ಶೇಕ!

ಪ್ರದರ್ಶನ—ಲೈಫ್ ಇನ್ಶೂರೆನ್ಸ್ ಕಾರ್ಪೋರೇಶನ್‌ನ ಉಡುಪಿ ಶಾಖೆಯವರು ಪರ್ಯಾಯ ಮಹೋತ್ಸವದ ಸಂಬಂಧ ವ್ಯವಸ್ಥಾಪಿಸಿದ ಪ್ರದರ್ಶನದ ಉದ್ಘಾಟನಾ ಸಮಾರಂಭವು ತಾ. 9-1-64ರಂದು ಅದಮಾರು ಮಠದ ಶ್ರೀ ವಿಭುಧೇಶ ತೀರ್ಥ ಶ್ರೀ ಪಾದಂಗಳವರಿಂದ ನೆರವೇರಿಸಲ್ಪಟ್ಟಿತು. ಸ್ವಾಮಿಗಳವರು ಉದ್ಘಾಟನಾ ಭಾಷಣದಲ್ಲಿ 'ಯೋಗಕ್ಷೇಮ ವಹಾಮ್ಯಹಂ' ಎಂಬುದರ ಅರ್ಥ ವಿವರಣೆಯನ್ನಿತ್ತು ಸಂಸಾರಿಕನಿಗೆ ವಿಮೆಯು ಅತ್ಯಾವಶ್ಯಕವೆಂದರು. ಶ್ರೀಗಳಾದ ಎಂ ಮಧ್ವರಾಜ, ಎಂ. ಎಲ್. ಎ., ಎಸ್. ಡಿ. ಪೆಜತ್ತಾಯ, ಟಿ. ಆರ್. ಎ. ಪೈ., ಎಲ್. ಎಫ್. ಸಿ. ಪಾಸ್ ಮೊದಲಾದವರು ಈ ಸಂದರ್ಭದಲ್ಲಿ ಹಾಜರಿದ್ದು ಪ್ರದರ್ಶನಕ್ಕೆ ಶುಭ ಕೋರಿದರು. ಬ್ರಾಂಚ್ ಮೆನೇಜರ್ ಶ್ರೀ. ಟಿ. ಟಿ. ಎನ್. ನಂಬಿಯಾರರು ಧನ್ಯವಾದಗಳನ್ನರ್ಪಿಸಿದರು. ಈ ಪ್ರದರ್ಶನವು ಇದೇ ತಾ. 18ರ ತನಕ ಇದ್ದು ಪ್ರತಿದಿನ ಫಿಲ್ಮ್ ಪ್ರದರ್ಶನವು ನಡೆಯುತ್ತಿದೆ.

ಮಂಬೆಟ್ಟು ಕಮಲಾಕ್ಷಿ ಹೆಗ್ಗಡ್ತಿಯವರ ನಿಧನ— ಆರು ತಿಂಗಳ ಹಿಂದೆ ದೈವಾಧೀನರಾದ ಶ್ರೀ ಮುಲ್ಕಿ ಚಂದಯ್ಯ ಶೆಟ್ಟರ ಧರ್ಮಪತ್ನಿ ಶ್ರೀಮತಿ ಮಂಬೆಟ್ಟು ಕಮಲಾಕ್ಷಿ ಹೆಗ್ಗಡ್ತಿಯವರು ತಾ 10-1-64 ರಂದು ತಮ್ಮ 69ನೇ ಪ್ರಾಯದಲ್ಲಿ ಮಂಗಳೂರಲ್ಲಿ ನಿಧನರಾದರು. ದಿವಂಗತೆಯರು ತನ್ನ ಮತ್ತು ಪತಿಯ ಕುಟುಂಬಿಕರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರಲ್ಲದೆ ಪರೋಪಕಾರ, ಸರಳ ಜೀವನಕ್ಕೆ ಪ್ರಸಿದ್ಧರಾಗಿದ್ದರು. ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಹಿರೀ ಪುತ್ರ ಡಾ| ಎಂ. ಎಸ್ ಶೆಟ್ಟರು ಮರಣ ಕಾಲದಲ್ಲಿ ಬಳಿಯಲ್ಲಿದ್ದರು. ಎರಡನೇ ಪುತ್ರ ಡಾ| ವಸಂತಕುಮಾರ ಶೆಟ್ಟರು ಅಮೇರಿಕಾದಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿದ್ದಾರೆ.

ಹರಿಕಥೆ—ಪುರಂದರದಾಸರ ನಾಲ್ಕನೇ ಶತಮಾನೋತ್ಸವದ ಅಂಗವಾಗಿ ಇದೇ ತಾ. 10ರಿಂದ ತಾ. 20ರ ವರೆಗೆ ಉಡುಪಿ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ಧಾರವಾಡದ ಹರಿಕಥಾ ಧುರೀಣ ಶ್ರೀ ಗುರುರಾಯ ಆಚಾರ್ಯ ಗುಡಿ, ಇವರ ಹರಿಕಥಾ ಕಾರ್ಯಕ್ರಮಗಳೂ ದಾಸರ ಕೀರ್ತನೆ, ಪುರಂದರ ತತ್ತ್ವಸಾರ ಪ್ರವಚನಗಳೂ ನಡೆಯುತ್ತವೆ ಎಂದೂ ಸರ್ವರಿಗೂ ಸ್ವಾಗತವೆಂದೂ ಶ್ರೀ ರಾಘವೇಂದ್ರ ಕೃಷ್ಣ ಭಟ್ಟರು ತಿಳಿಸುತ್ತಾರೆ.

ಮಣಿಪಾಲ—ತಾ. 7ರಂದು ಇಲ್ಲಿಯ ಲಾ ಶಾಂಪ್ರಿಲಾ ಗಾರ್ಡನ್ಸಿನಲ್ಲಿ ಸೇರಿದ್ದ ಉಡುಪಿ ರೋಟರಿ ಕ್ಲಬ್ ಸಭೆಯಲ್ಲಿ ಪುರಂದರದಾಸರ ಕೀರ್ತನೆಗಳ ಹಾಡುಗಾರಿಕೆ ಹಾಗೂ ರೋಟರಿ ಆ್ಯನ್‌ಗಳು ತಯಾರಿಸಿದ ಭೋಜನ ಮುಖ್ಯ ಕಾರ್ಯಕ್ರಮಗಳಾಗಿದ್ದವು.

ಶ್ರೀಮತಿ ಅನಸೂಯ ಬಿ. ಶೆಟ್ಟಿ, ಕುಮಾರಿ ಪ್ರೇಮಲೀಲಾ ಪೈ. ಶ್ರೀಮತಿ ತಾರಾ ಡಿ. ಕುಡ್ವ ಮತ್ತು ಶ್ರೀಮತಿ ಸಗುಣಾ ಕೆ. ಪೈಯವರು ಪಕ್ಕವಾದ್ಯವಾದ ತಬ್ಲಾದೊಂದಿಗೆ ಪುರಂದರದಾಸರ ಹಲವಾರು ಕೀರ್ತನೆಗಳನ್ನು ಕರ್ಣಾನಂದಕರವಾಗಿ ಹಾಡಿದರು.

ಅಧ್ಯಕ್ಷ ರಮೇಶ ಪೈಯವರು ಕ್ಲಬ್ಬಿನ ಸದಸ್ಯ ಪ್ರಿನ್ಸಿಪಾಲ್ ಎಚ್. ಸುಂದರ ರಾವ್‌ರವರು ಈಚೆಗೆ ನಿವೃತ್ತರಾದುದನ್ನು ಸ್ಮರಿಸಿ ಅವರು ಕ್ಲಬ್ಬಿನ ಪಾಸ್ಟ್ ಸರ್ವಿಸ್ ಸದಸ್ಯರಾಗಿ ಮುಂದುವರಿಯುತ್ತಾರೆಂದು ತಿಳಿಸಿದರು.

ಉಡುಪಿ ನಗರ ಸಭೆಯವರು— ತಾ. 18ರಂದು ಪರ್ಯಾಯ ಪೀಠಾರೋಹಣ ಮಾಡಲಿರುವ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರನ್ನು ತಾ. 11ರಂದು ಮಾನಪತ್ರವಿತ್ತು ಗೌರವಿಸಿದರು.

ಕರ್ನಾಟಕದ ಹಲವಾರು ಪ್ರಸಿದ್ಧ ಲೇಖಕ ಲೇಖಕಿಯರ ಲೇಖನ, ಕವನ, ಕತೆ ಮೊದಲಾದುವುಗಳಿಂದೊಡಗೂಡಿ ಭರದಿಂದ ತಯಾರಾಗುತ್ತಿರುವ

ನವಯುಗದ

ಪ್ರಜಾರಾಜ್ಯ ವಿಶೇಷಾಂಕವು

ತಾರೀಕು 26ರೊಳಗೆ ಪ್ರಕಟವಾಗುವುದು.

ತಾರೀಕು 23ರ ಪ್ರತ್ಯೇಕ ಸಂಚಿಕೆ ಪ್ರಕಟವಾಗುವುದಿಲ್ಲ.

ವಿಶೇಷ ಸಂಚಿಕೆಯ ಬೆಲೆ ರೂ. 0=50

0=60 ನ ಪೈ ಕಳಿಸಿದರೆ ಪ್ರತಿಯನ್ನು ಕಳಿಸಲಾಗುವುದು.

ಏಜಂಟರು: 10ಪ್ರತಿಗಳಿಗಾದರೆ ರೂ. 4ನ್ನೂ 25 ಪ್ರತಿಗಳಿಗಾದರೆ ರೂ. 10ನ್ನೂ ಮುಂದಾಗಿ ಮನಿಯಾರ್ಡರ್ ಮಾಡಬೇಕು.

—ಮೆನೇಜರ್

ಗೋರಾರಾಜ್ಯದಲ್ಲಿ

ವೀರ ಪುತ್ರನಿಗಾಗಿ ಸಂಪ್ರಾರ್ಥನೆ

"ಕಾಂಗ್ರೆಸ್ ಅಧಿವೇಶನವಂತೂ ಈ ವರ್ಷ ಬಹಳ ಸಪ್ಪೆ ಯಾಯ್ತು ಅಲ್ವೆ?"

"ಯಾಕೆ ಹಾಗೇಂತಿ?"

ಮತ್ತೇನಿಲ್ಲ, ಕಾಂಗ್ರೆಸಿನ ನರನಾಡಿಯೇ ಸ್ಥಗಿತವಾಯಿತೆಂದ ಮೇಲೆ....?"

"ಅಂದ್ರೆ..."

"ಅಲ್ಲ, ಪಂಡಿತ ನೆಹರು ಅಲ್ಲಿಲ್ಲಾಂತಾದ ಮೇಲೆ, ಸಮ್ಮೇಳನವೆಲ್ಲಾ ಸಪ್ಪೆಯೇ ಅಲ್ವೆ?"

"ಸರಿಯಾಗಿ ಊಹಿಸಿದೆ ಕಣೇ. ಇದಕ್ಕೇ ಅವ್ನ ಬೇಳು, ನೀನು ಜಾಣೇಂತ."

"ಅಂದ್ರೆ ಇಷ್ಟರ ವರೆಗೆ ನಾನೇನು...."

'ಛೆ ಛೆ, ಹಾಗನ್ನ ಬೇಡ್ವೇ, ಯಾರು ಹಾಗೇಂತಂದ್ರು ನಿನ್ನನ್ನ..."?

"ಮತ್ಯಾರಾರು ಹೇಳಿದ್ರೆ ಯಾರು ಕೇಳ್ತಾರೇಂತ?"

"ಅಂದ್ರೆ, ನಾನೇ ಅಂದೇಂತ ತಾನ್ವೆ ನೀನನ್ನೋದು?"

"ಹೋಗ್ಲಿ ಬಿಡಿ. ನಮ್ಮ ನಮ್ಮೊಳಗೆ ಯಾಕೆ ಸುಮ್ನೆ ಮಾತು? ನೆಹ್ರೂಜಿ ಇಲ್ದೇನೇ ಸಮ್ಮೇಳನ ನಡಿಯುತ್ತೇಂತಾಯ್ತು,"

"ಅದು ಸರಿಯೇ ಅನ್ನು. ಜಾತ್ರೆಯಲ್ಲಿ ಪುರೋಹಿತನಿದ್ದೇನು; ಒಂದ್ವೇಳೆ ಅತನಿಲ್ಲಾಂತಾದ್ರೆ, ಜಾತ್ರೆ ನಿಲ್ಲೋದಾಗುತ್ಯೆ?"

"ಆಗುವಂತಾದ್ದು ಆಗ್ಲೇ ಬೇಕು ತಾನೆ? ಅಂತೂ ಈ ಬಾರಿಯ ಸಮ್ಮೇಳನ ನಿಜಕ್ಕೂ ಇತಿಹಾಸ ಪ್ರಸಿದ್ಧವಾದದ್ದು."

"ಯಾಕೆ ಹಾಗಂತೀಯೊ ನೀನು?"

"ಯಾಕೆ ಹೇಳಿ ನೋಡೋಣ."

"ಹೇಳಿದವಳಿಗೆ ಸಮರ್ಥಿಸೋಕೆ ತಿಳಿಯೋದಿಲ್ವೆ?"

"ಯಾಕೇಂತ ನೀವು ಹೇಳಿ ನೋಡೋಣಾಂತಂದೆ. ನಾನಾದ್ರೋ ಕನ್ನಡ ಪತ್ರಿಕೆಯನ್ನೂ ಓದದಿರುವವಳು. ನೀವೋ ನಾಲ್ಕಾರು ಇಂಗ್ಲಿಷ್ ಪೇಪ್ರನ್ನು ಓದುವವರು...."

"ಸಾಕು ಬಿಡೇ ನೀನು...ಕಲ್ತಿದ್ದಾಳೊಂದು...."

"....ಇಲ್ಲ ಇಲ್ಲ, ಕೋಪಿಸ್ಕೋ ಬೇಡ್ವಿ. ತಪ್ಪಾದ್ರೆ ಕ್ಷಮಿಸಿ ಬಿಡಿ ನನ್ನನ್ನ...."

"ಹ್ಞಾ.... ಕ್ಷಮಿಸೋದಂತೆ! ಕ್ಷಮಿಸೋದು. ಅಲ್ಲಾ, ನಿನ್ನನ್ನ ನಾನು ಕ್ಷಮಿಸೋದು ಎಷ್ಟು ಸಲಾಂತ....?"

"ಯಾಕೆ ಸುಂಸುಮ್ನೆ ರೇಗ್ತೀರಾ?"

"ನೀನು ಹೀಗೆಲ್ಲಾ ಅನ್ನೋಕೆ ಶುರು ಮಾಡಿದ್ರೆ ಮತ್ತೇನು ಮಾಡ್ಬೇಕೂಂತ.."

"ಅಲ್ಲಾ; ಒಂದು ಮಾತು ಕೇಳಿದ್ದೀರಾ?"

"ಒಂದಲ್ಲ ನಾಲ್ಕು ಕೇಳಿದ್ದೇನೆ."

"ಅಷ್ಟೇನೆ ನೀವು ಕೇಳಿದ್ದು- ನಾಚಿಗೆ ಆಗೋದಿಲ್ವೆ? ಮತ್ತೆ ಹೇಳ್ತೀರಿ ನಿಂಗೇನು ಗೊತ್ತೂಂತ...."

"ಹ್ಞಾ.... ಸರಿಹೋಯ್ತು ಬಿಡು. ಅಂತೂ ನಾನು ನಿನ್ನಷ್ಟು ತಿಳಿದಿಲ್ಲಾಂತ ತಾನೇ ನೀನನ್ನೋದು? ಸರಿಯಾಯ್ತು, ಇನ್ನಾದ್ರೂ ಹೇಳು ಯಾವ ಮಾತೂಂತ"

"ಮತ್ತೇನು ಇಲ್ಲ...."

"ಹೇಳ್ಬಾರ್ದೆ ಬೇಗ"

"ಅಲ್ಲಾ ಹೇಳಿದಿನಲ್ಲಾ, ಅಂತಹ ದೊಡ್ಡ ಮಾತೇನೂ ಅಲ್ಲ...."

"ಸರಿ, ಶುರುವಾಯ್ತು ಪುನಃ ಇವಳದ್ದೊಂದು. ಹೇಳ್ಬಾರ್ದೇ, ಏನು ಹೇಳ್ಬೇಕೋ ಅದ್ನ ಹೇಳ್ಬಿಡು".

"ಹೇಳಿದ್ನಲ್ಲಾ....ಅದೇ..... ಯಾರೋ ಅನ್ನುತಿದ್ರು...."

"ಅದೇ ಅದೇ ಏನೂಂತ?"

"ಹೇಳ್ತೇನೆ...."

"ಯಾಕೆ ಹೀಗೆ ಕಾಡ್ತಾ ಇದ್ದೀಯ? ಏನಾಗಿದೆ ನಿನಗೆ ಇಂದು?"

"ನನಗೇನೂ ಆಗಿಲ್ಲ. ಆಗಿರೋದು ನಿಮಗೆ...."

"ಏನೇ ಏನಾಗಿದೆ ನನಗೆ?....?"

"ತಪ್ಪಿದೆ. ಆಗಿರೋದಲ್ಲ, ಬಂದಿರೋದು?"

"ಏನೇ ಅದು ಬಂದಿರೋದು?"

"....ಅಲ್ಲಾ ಹೇಳ್ಲೇ ಬೇಕಾದ್ರೆ ಹೇಳ್ತೇನೆ. ಮತ್ತೆ..."

"ಮತ್ತೂ ಇಲ್ಲ ಗಿತ್ತೂ ಇಲ್ಲ. ಏನು ಹೇಳ್ಬೇಕೋ ಹೇಳ್ಬಿಡೂಂದೆ."

"ಹೇಳಲೇನು...?"

"ಹೇಳೂಂತಂದ್ನಲ್ಲಾ ಮತ್ತೆ...?"

"ನೋಡಿ, ಬಂದಿರೋದು ನಿಮಗಿಂದು ಕೋಪ!"....

"ಹ್ಞ ಹ್ಞ....ಸಾಕೇ ಸಾಕೇ ನಿನ್ನ ಕಾಟ. ಸದ್ಯ, ನೀನೊಂದು ಮಾತು ಹೇಳ್ತಿನಂದಿಯಲ್ಲ, ಅದನ್ನ ಹೇಳು...."

"ಓ ಅದೇ....ನೋಡಿ .... ಯಾರೋ ಅಂದಿದ್ರಂತೆ.......ಕೋಪ ಬರೋವಾಗ, ಯಾಕೆ ಕೋಪ ಬಂತೂಂತ ಯೋಚಿಸ್ಕೋಬೇಕಂತೆ..."

"ಸರಿ ಸರಿ ಕಣೆ, ನನ್ನ ಮಾತನ್ನ ನನಗೇ ಹಿಂದೆ ಕೊಟ್ಬಿಟ್ಟೆ."

"ನನ್ನಲ್ಲಿರೋದೆಲ್ಲಾ ನಿಮ್ಮದೇಂತಾದ ಮೇಲೆ, ಯಾರು ಯಾರಿಗೆ ಏನನ್ನ ಕೊಡೋದು? ಅದಿರ್ಲಿ, ಸದ್ಯ ಹೇಳಿ ನೋಡೋಣ, ಈ ಸಲ್ದ ಕಾಂಗ್ರೆಸ್ ಸಮ್ಮೇಳನ ಯಾಕೆ ಪ್ರಸಿದ್ಧವಾಯ್ತೂಂತ?"

"ಅಲ್ಲಾ, ಅಂಗಯ್ ನೋಡೋಕೂ ಕನ್ನಡಿ ಬೇಕೇನು? ಕೇಳು ಹಾಗಾದ್ರೆ.'

"ಕೇಳಿ, ಕೇಳ್ತಾ ಇದ್ದೇನೆ.."

"ಮೊದಲನೆಯದಾಗಿ ಅಧ್ಯಕ್ಷ ಕಾಮರಾಜರು ಪವಿಳಿನಲ್ಲಿ ತಮ್ಮ ಸಾಮಾನ್ಯ ಭಾಷಣವನ್ನು ಚುಟುಕಿನಲ್ಲಿ ಮಾಡಿದ್ರು"

"ಹ್ಞೂ... ಮತ್ತೆ ಮಾತಾದ್ರೂ ಯಾಕೆ? ಕೃತಿ ಬೇಕೂಂತ ಅವ್ರ ಅಭಿಪ್ರಾಯ ವಿರಬಹುದೂನ್ನಿ... ಮತ್ತೆ...."

"ಎರಡನೆಯದಾಗಿ ಕಾಂಗ್ರೆಸ್ ಪ್ರಜಾಪ್ರಭುತ್ವವಾದಿ ಸಮಾಜವಾದದ ಗುರಿಯನ್ನು ಇಟ್ಟುಕೊಳ್ಳುವಂತೆ ತನ್ನ ಸಂವಿಧಾನಕ್ಕೆ ತಿದ್ದುಪಡಿ ಮಾಡ್ತು'

"ಅದೂ ಮೊದ್ಲೇ ಗೊತ್ತಾಗಿತ್ತೂನ್ನಿ ಅದ್ರೂ ಘಟನಾತ್ಮಕವಾದ ಪರಿವರ್ತನೆ."

"ಮತ್ತೆ ಮೂರನೆಯದಾಗಿ... ಸಮಾಜವಾದದಲ್ಲಿ ವಿಶ್ವಾಸವಿರುವವರೆಲ್ಲಾ ಒಂದಾಗ ಬೇಕೂಂತ ಕಾಮರಾಜರು ಕರೆಯಿತ್ತರು"

"ಸ್ವಾಭಾವಿಕವೇ, ಇದರಲ್ಲೇನು ವಿಶೇಷ ಬಂತು? ಬೇರೇನಾದ್ರೂ ಇದೆಯೇ ಹೇಳಿ."

"....ಬೇರೆ...ಬೇರೆ....ಹ್ಞೂಂ ಇದೆ ಕಣೇ ಇದೆ. ಯಾವಾಗ್ಲೂ ಹಿಂದಿ ಭಾಷೆ ಪ್ರತಿಧ್ವನಿಸುತಿದ್ದ ಸಮ್ಮೇಳನ ನಗರದಲ್ಲಿ ಈ ಬಾರಿ ಇಂಗ್ಲಿಷಿನ ಗಾಳಿ ಬೀಸಿ ಬಿಟ್ಟಿತು."

"ಇದೆಲ್ಲಾ ಏನೂಂತ? ಭಾಷೆ ಯಾವುದಾದ್ರೇನಂತೆ! ಅದಕ್ಕಿಂತ್ಲೂ ಮುಖ್ಯವಾದದ್ದೊಂದಿದೆ"

"ಅದ್ಕಿಂತ್ಲೂ ಮುಖ್ಯ........ಏನಪ್ಪಾ ಅದ.? ತಿಳೀತು ಬಿಡು, ಒಡಿಸ್ಸಾದಲ್ಲಿ ಮೊದಲ ಬಾರಿಗೆ ಸಮ್ಮೇಳನ........"

"ಅದು ಅಲ್ಲ ......"

"ಮತ್ತೆ........"

"ಗೊತ್ತಿಲ್ಲಾದ್ರೆ ಇಲ್ಲಾನ್ನಿ. ಸೋಲೊಪ್ಪಿಕೊಳ್ಳಿ."

"ಛೆ...ಛೆ...ತಡಿ ಸ್ವಲ್ಪ ನೆನಪು ಮಾಡ್ತೇನೆ, ...ಸರಿ ಬಿಡು ಮತ್ತೆ....ಗೋಪಬಂಧು ನಗರದಲ್ಲಿ ಶಾಂತಿ ಕಥೇರಿಗಳು...."

"ಅದೂ ಅಲ್ಲ........"

"ಅದೂ ಅಲ್ಲ.... ...ಸರಿ ಹಾಗಾದ್ರೆ ನೀನೇ ಹೇಳು ನೋಡೋಣ."

"ಹೇಳ್ತೇನೆ ಆದ್ರೆ. ಸೊದ್ಲು ಸೋತೇಂತನ್ನಿ"

"ಯಾಕೇಂತ?"

"ಇದನ್ನು ಹೇಳೋಕಾಗದೋರು ಹೆಂಗಸ್ರ ಬಾದ್ಧಿ ಮೊಣಕಾಲ ಕೆಳಗೇಂತ ಅಸ್ತಿರಲ್ಲಾ?"

"ಪ್ರಿಯೆ! ರಾಣೀ ಸಾಹೇಬ್ರು ಭುವನೇಶ್ವರಕ್ಕೆ ಹೋಗಿದ್ದೇವೂಂತ ತಿಳಿದಿತ್ತೆ...."

"ಹ್ಞೂಂ ಅನ್ನಿ. ಆದ್ರೆ ಭುವನೇಶ್ವರಕ್ಕಲ್ಲ; ಭುವನೇಶ್ವರಿ ಮಂದಿರಕ್ಕೆ..."

"ಮಂದಿರಕ್ಕೆ ಹೋಗಿರೋದು?...ಇವತ್ತು ಶುಕ್ರವಾರ. ಸರಿಯಾಯ್ತೂನ್ನು. ಪ್ರತಿ ಶುಕ್ರವಾರದ ಪ್ರೋಗ್ರಾಂ ಅದು. ಇಂದೇನದರಲ್ಲಿ ವಿಶೇಷಾಂತ?"

ಅದ್ನೇ ಹೇಳಿದೆ....ಸೋತೇಂತನ್ನಿ, ಹೇಳ್ತೇನೆಂತ"

"ಅಲ್ವೆ, ನಾನು ಸೋಲೋದಕ್ಕೂ ಭುವನೇಶ್ವರಿ ದರ್ಶನಕ್ಕೂ ಗೋಪಬಂಧು ನಗರಕ್ಕೂ ಸಂಬಂಧವೇನೂಂತ..."

"ಹೇಳಿದ್ನಲ್ಲಾ, ಸೋತೇಂತನ್ನಿ."

"ಅಂತೂ ಯಾವಾಗ್ಲೂ ನಾನು ನಿನ್ನ ಗೋಳು ಹೊಯ್ಕೊಳ್ಳುತಿದ್ದೆ. ಇಂದು ಅದು ತಿರುವು ಮುರುವು, ಏನೋ ನನ್ನ ಗ್ರಹಚಾರ ಕೆಟ್ಟಿರ್ಬೇಕು."

"ಕೆಟ್ಟಿರೋದು ನನ್ನ ನಿಮ್ಮ ಗ್ರಹಚಾರವಲ್ಲ. ದೇಶದ ಗ್ರಹಚಾರ...."

"ಏನೇ ಹಾಗಂತಂದ್ರೆ..."

"ಹೇಳಿ ಸೋತೇಂತ...."

"ಸರಿ ಕಣೆ, ನೀನು ಹಟ ಬಿಡೋಕಿಲ್ಲ"

"ನೀವು ನಿಮ್ಮದನ್ನ ಬಿಡೋದಿಲ್ಲ."

"ಸರಿಯಾಯ್ತು, ಇಂಗ್ಲಿಷಿನಲ್ಲಿ ಒಂದು ಗಾದೆಯಿದೆ ಮಹಮ್ಮದ ಪರ್ವತವಿದ್ದಲ್ಲಿ ನಡೀದಿದ್ರೆ ಪರ್ವತವೇ ಅವನಲ್ಲಿಗೆ ಬರುತ್ತೇಂತ. ಸರಿ. ಸೋತೆ. ಇನ್ನಾದ್ರೂ ಹೇಳ್ಬಹುದಲ್ಲ."

"ಏನು ಹೇಳ್ಬೇಕು?"

"ದೇಶದ ಗ್ರಹಚಾರ ಕೆಟ್ಟಿದೆ ಅಂದೆಯಲ್ಲಾ, ಅದು ಹೇಗೇಂತ? ಸಮಾಜವಾದದ ಮೇಲೆ ನಿನ್ನ ಗದೆಯೆತ್ತಿಲ್ಲ ತಾನೆ?"

"ಅಲ್ಲಾ, ದೇಶಕ್ಕೆ ಕಣ್ಣಾಗಿರೋ ಜವಹರಲಾಲರು ಖಾಯಿಲೆಗೊಂಡಿರೋವಾಗ...."

"ಓ, ಹೌದು ಕಣೆ...ಸಮಾಜವಾದ—ಪ್ರಜಾಪ್ರಭುತ್ವಗಳ ಜಂಜಾಟದಲ್ಲಿ ಅದನ್ನ ಮರೆತೇ ಬಿಟ್ಟೆ. ಇನ್ನು ಬಿಡು, ಎಲ್ಲಾ ಅರ್ಥವಾಯ್ತು."

"ಏನರ್ಥವಾಯ್ತೂಂತ...."

"ನೀನು ಭುವನೇಶ್ವರಿಯ ದರ್ಶನದಲ್ಲಿ ಜವಹರರ ಆರೋಗ್ಯದ ಬಗ್ಗೆ ಪ್ರಾರ್ಥಿಸಿಕೊಂಡೆ....

"ನಾನೊಂತೇನು? ಎಲ್ಲರೂನ್ನಿ...."

"ನೆಹ್ರೂ ಅನಾರೋಗ್ಯದಿಂದಾಗಿ ಸಮ್ಮೇಳನಕ್ಕೆ ಹಾಜರಾಗದೆ ಇದ್ದದ್ದೇ ಸಮ್ಮೇಳನದ ಪ್ರಸಿದ್ಧಿಗೊಂದು ಕಾರಣ"

"ಅದೂ ಹೌದೂನ್ನಿ,"

"ಅಂತೂ ಜವಹರರ ಬಗ್ಗೆ ನನ್ಗೆ ಮರ್ತೇ ಹೋಯ್ತು. ಹಾಳು ನೆನಪು....ಅಗ್ಲಿ ನೀನಾದ್ರೂ ಪ್ರಾರ್ಥಿಸಿದೆಯಲ್ಲ..."

"ನಿಮಗೂ ಪ್ರಾರ್ಥನೆ ಮಾಡ್ಬೇಕೂ ಎನಿಸುತ್ತೆ ಈಗ ಅಲ್ವೆ?"

"ಹೌದು. ಹೋಗು, ದೇವ್ರ ಮುಂದೆ ದೀಪ ಇಡು... ಭಾರತಾಂಬೆಯ ವೀರ ಪುತ್ರ ಜವಹರನಿಗೆ ಆಯುರಾರೋಗ್ಯ ಹೆಚ್ಚಲೆಂದು ಬೇಡಿಕೊಳ್ಳೋಣ"

"ಹ್ಞಾ.... ಬಂದೇ ನೀವು ಕೈಕಾಲು ತೊಳ್ಕೊಳ್ಳಿ..."

"ಹ್ಞೂಂ....ಬೇಗ ಬಂದ್ಬಿಟ್ಟೆ."

—ಗೋರಾ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಡವಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸೆನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ಕನ್ನಡದ ಮುಗುಳಿ

ಡಾ। ರಂ. ಶ್ರೀ ಮುಗುಳಿ

ಛಳನೆಯ ಕನ್ನಡ ಸಾಹಿತ್ಯ ಸಮ್ಮೇಳನವು ತುಮಕೂರಿನ ಬಳಿಯ ಸಿದ್ಧಗಂಗಾ ಕ್ಷೇತ್ರದಲ್ಲಿ ಕಳೆದವಾರ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಸುಪ್ರಸಿದ್ಧ ಸಾಹಿತಿ, ಕವಿ, ವಿಮರ್ಶಕರಾದ ಪ್ರಿನ್ಸಿಪಾಲ್ ಡಾ| ರಂ. ಶ್ರೀ. ಮುಗುಳಿಯವರು ವಹಿಸಿದರು.

ಕನ್ನಡದ ಬಗೆಗೆ ತುಂಬು ಅಭಿಮಾನ ಗೌರವವಿರುವ ಕೆಲವೇ ಮಂದಿ ಪ್ರಾಚಾರ್ಯರಲ್ಲಿ ಮುಗುಳಿಯವರದು ಅಗ್ರಸ್ಥಾನ. ಇವರು ಕಲಿಸುತಿದ್ದುದು ಕನ್ನಡವಾದರೂ ಇಷ್ಟರಲ್ಲೇ ಅವರ ಅಧ್ಯಾಪನ ಸೀಮಿತವಾಗಿರಲಿಲ್ಲ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳನ್ನೂ ಇವರು ಕಲಿಸುತ್ತಾರೆ. ಸಾಂಗಲಿಯ ವೆಲ್ಲಿಂಗಟನ್ ಕಾಲೇಜನಲ್ಲಿ ಸುಮಾರು ೩೦ ವರ್ಷಗಳ ಕಾಲ ಪ್ರಾಚಾರ್ಯರಾದ ಇವರು ಮೂರು ವರ್ಷಗಳಿಗೆ ಮೊದಲು ಅಲ್ಲಿಯೇ ಪ್ರಿನ್ಸಿಪಾಲರಾದರು.

ಡಾ| ಮುಗುಳಿಯವರದು ಮುಗುಳು ಮುಖ. ಅವರ ತುಟಿಗಳಲ್ಲಿ ಸದಾ ಕಾಲ ನಲಿದಾಡುವುದು ಮುಗುಳ್ನಗೆ. ಅವರ ವ್ಯಕ್ತಿತ್ವವು ಇತರ ಕನ್ನಡಿಗರಿಗೆ ಮುಗುಳಿ ಪ್ರಾಯ. ಅವರ ಕನ್ನಡದ ಪರಿಜ್ಞಾನ, ಅಭ್ಯಾಸ, ಪ್ರೇಮಾದರಗಳೂ ಇತರರ ಮುಂದೆ ಮುಗುಳಿಯಂತೆ ಮುಗಿಲೆತ್ತರಕ್ಕೆ ನಿಲ್ಲುತ್ತವೆ. ಅಧ್ಯಾಪಕರಲ್ಲಿ ಮುಗುಳಿಯಂತೆ ಮೆರೆಯುತ್ತಿರುವ ಮುಗುಳಿಯವರದು ಕವಿ ಹೃದಯ; ಆದರೆ, ಆ ಕವಿ ಹೃದಯದಲ್ಲಿಯೂ ಸತ್ಯಾನ್ವೇಷಣೆಯು ಇರಾದೆ ಎದ್ದು ತೋರುತ್ತದೆ.

ಡಾ| ಮುಗುಳಿಯವರು ಸಣ್ಣ ಕತೆಗಳಿಂದ ತೊಡಗಿ ಕಾದಂಬರಿಗಳನ್ನೂ ಬರೆದಿದ್ದಾರೆ. ಇವರ "ಕನಸಿನ ಕೆಳದಿ"ಯು ಕನ್ನಡದ ಅತ್ಯುತ್ತಮ ಕಥಾ ಸಂಕಲನಗಳ ಸಾಲಿನಲ್ಲಿ ನಿಲ್ಲುತ್ತದೆ. "ಕಾರಣ ಪುರುಷ", "ಬಾಳುರಿ", "ಅನ್ನ" ಇವೆಲ್ಲ ಕಾದಂಬರಿಗಳು; ಜನ ಜೀವನದ ಸ್ಫುಟವಾದ ಚಿತ್ರವನ್ನು ನಮ್ಮ ಮುಂದಿಡುವಲ್ಲಿ ವು ಸಮರ್ಥವಾಗಿವೆ; "ಸೇವಾಪ್ರದೀಪ" ಮತ್ತು "ವಿಜಯ ಸಾಮ್ರಾಜ್ಯಗಳು ವಿಜಯನಗರ ಸಾಮ್ರಾಜ್ಯದ ಇತಿಹಾಸದ ಹಿನ್ನೆಲೆಯಲ್ಲಿ ಬರೆದ ನಾಟಕಗಳು. 'ಅಕ್ಕಮಹಾದೇವಿ' ಅನುಭಾವೆಯ ಜೀವಂತ ನಾಟಕ; 'ನಾಮಧಾರಿ' 'ಧನಂಜಯ'ಗಳು ಸಮಾಜದ ಡಾಂಭಿಕತೆಯ ಪ್ರತಿರೂಪಗಳು. ಹತ್ತಾರು ಏಕಾಂತ ನಾಟಕಗಳನ್ನು ಬರೆದ ಮುಗುಳಿಯವರು ಉತ್ತಮ ನಾಟಕಕಾರರೂ ಹೌದು.

'ಬಾಸಿಗ', 'ಅಪಾರ ಕರುಣೆ', 'ಅಶಾಂತಿ'ಗಳು ಇವರ ಕವನ ಸಂಕಲನ. ಪ್ರಶಾಂತ ಸಾತ್ವಿಕ ಜೀವನ ನಡೆಸುವ ಮುಗುಳಿಯವರ ನೈಜ ಸಾತ್ವಿಕ ಕವಿ ಹೃದಯ ಈ ಸಂಗ್ರಹಗಳ ಕವಿತೆಗಳಲ್ಲಿ ಮೂಡಿಬಂದಿದೆ; ಲಾಲಿತ್ಯ, ಮಾಧುರ್ಯ ಮತ್ತು ಗೇಯತೆಗಳ ತ್ರಿವೇಣಿ ಸಂಗಮವಿಲ್ಲಿ ಆಗಿದೆ. ಡಾ| ಮುಗುಳಿ ಮಧುರ ಗಾಯಕರೂ ಹೌದು.

ಮುಗುಳಿಯವರನ್ನು ಡಾಕ್ಟರರನ್ನಾಗಿ ಮಾಡಿದ ಮೊದಲ ಕೀರ್ತಿ ಪುಣೆ ವಿಶ್ವವಿದ್ಯಾಲಯಕ್ಕೆ ಸಲ್ಲಬೇಕು; ಇದಕ್ಕೆ ಕಾರಣ ಪುರುಷನಾದ ಕೃತಿ "ಕನ್ನಡ ಸಾಹಿತ್ಯ ಚರಿತ್ರೆ," ಕನ್ನಡ ಸಾಹಿತ್ಯದ ತುಲನಾತ್ಮಕ, ಸಂಶೋಧನಾತ್ಮಕ, ಸಂಗ್ರಹಾತ್ಮಕ, ವಿಮರ್ಶಾತ್ಮಕ ಅಭ್ಯಾಸದ ಫಲವನ್ನು ನಾವಿಲ್ಲಿ ಕಾಣಬಹುದು. ಕನ್ನಡದಲ್ಲಿ ರಾ| ನರಸಿಂಹಾಚಾರ್ಯರ ಕವಿಚರಿತ್ರೆಯನ್ನು ಬಿಟ್ಟರೆ ಇತರ ಸಾಹಿತ್ಯ ವಿಷಯಕ ಗ್ರಂಥಗಳ ಅಭಾವವಿರುವಾಗ, ಕನ್ನ ಆಳವಾದ ಸಂಶೋಧನ ಮತ್ತು ವಿಮರ್ಶೆ, ಅಧ್ಯಯನಗಳಿಂದ ನಿರ್ಮಿಸಿದ ಈ ಕೃತಿ ಸಾಹಿತ್ಯದ ಮೇರುಕೃತಿಗಳಲ್ಲಿ ಒಂದ.

ಮುಗುಳಿಯವರು ಇಂಗ್ಲಿಷಿನಲ್ಲಿ "Heritage of Karnatak" ಎಂಬ ಕೃತಿಯನ್ನು ಬರೆದು ಕನ್ನಡಿಗೇತರರಿಗೆ ಕನ್ನಡನಾಡಿನ ಸಾಂಸ್ಕೃತಿಕ ಮತ್ತು ಐತಿಹಾಸಿಕ ಚರಿತ್ರೆಯ ಕೂಲಂಕುಷ ವಿವೇಚನೆಯೊಂದನ್ನು ಒದಗಿಸಿದ್ದಾರೆ, ಯಾವ ದೃಷ್ಟಿಯಲ್ಲೂ ತಲೆಯೆತ್ತಿ ನಿಲ್ಲುವಂತೆ ನಮ್ಮ! ಇತಿಹಾಸ ಮತ್ತು ಸಂಸ್ಕೃತಿಗಳು ಸಾರುತ್ತಿರುವುದನ್ನು ಅವರು ಎಲ್ಲರಿಗೂ ತೋರಿಸಿಕೊಟ್ಟಿದ್ದಾರೆ.

ತಾನು ಮೆಚ್ಚಿದ ಪ್ರತಿಭಾರಿಯಲ್ಲೂ ಗುರಿ ಸೇರಿದ ಯಶಸ್ವೀ ಮುಗುಳಿಯವರು ತುಂಬಿದ ವ್ಯಕ್ತಿ. ಎಂತಲೇ ಅವರು ಎಂದಿಗೂ ತುಳುಕುವುದಿಲ್ಲ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಅವರು ಮಾಡಿದ ಭಾಷಣವೇ ಇದಕ್ಕೆ ಸಾಕ್ಷಿ. ನಿರಹಂಕಾರಿ, ನಿಗರ್ವಿ, ನಿಸ್ವಾರ್ಥಿ ಮುಗುಳಿ ಕನ್ನಡದಲ್ಲಿ ಹುಟ್ಟಿ ಮರಾಠಿಯಲ್ಲಿ ನಡೆಯುತ್ತಾರೆ. ಕನ್ನಡ ಮತ್ತು ಮರಾಠಿಗಳು ತನ್ನೆರಡು ಕಣ್ಣುಗಳೆಂದು ತಿಳಿಯುವ ಡಾ| ಮುಗುಳಿಯವರು ಭಾವೈಕ್ಯದ ಗುಳಿಗೆಯನ್ನು ತಯಾರಿಸಿದ್ದಾರೆ; ಈ ಗುಳಿಗೆಯನ್ನು ಸಮ್ಮೇಳನದ ಮೂಲಕ ಕನ್ನಡ ಜನ ಜನಕ್ಕೆ ಹಂಚಿದ್ದಾರೆ. ಮುಗಳಿಯವರು ಕನ್ನಡ ನೆಲ, ಜನ, ಮನದ ಮುಗುಳಿಯೆಂದರೆ ತಪ್ಪೇನು?

ಸಂಕ್ರಾಂತಿಯ ಸಂಭ್ರಮದಲ್ಲಿ

ಸುಗ್ಗಿಯನ್ನು ಮರೆಯಬೇಡಿರಿ

ಜನವರಿ ತಿಂಗಳಲ್ಲಿ ಸಂಕ್ರಾಂತಿಯ ಸಂಭ್ರಮ. ದೇಶದ ಅನೇಕ ಭಾಗಗಳಲ್ಲಿ ಬೆಳೆಯು ಹುಲುಸಾಗಿ ಬೆಳೆದು ಇಷ್ಟರಲ್ಲಿಯೇ ಕಟಾವಿಗೆ ಸಿದ್ಧವಾಗಿದೆ. ಬಂದ ಫಸಲನ್ನು ಜಾಗ್ರತೆಯಿಂದ ಸಂಗ್ರಹಿಸಿ ಅದಕ್ಕೆ ಒಳ್ಳೆಯ ದರ ಬರುವುದನ್ನು ಕಾಯಬೇಕು. ಸಂಕ್ರಾಂತಿಯ ಸುಗ್ಗಿಯ ಉತ್ಸಾಹದಲ್ಲಿ ಬೇಸಗೆ ಬೆಳೆಯನ್ನು ಮರೆಯದೆ ದೊರೆತ ಫಸಲನ್ನು ಜೋಪಾನ ಮಾಡುವುದು ರೈತರಿಗೆ ಮತ್ತು ದೇಶಕ್ಕೆ ಕ್ಷೇಮಕರ.

ಭತ್ತದ ಸಂಗ್ರಹ

ಸಂಗ್ರಹಿಸಿದ ಕಾಳಿನಲ್ಲಿ ಸೇ. ೧೨ಕ್ಕಿಂತ ಹೆಚ್ಚಿನ ತೇವಾಂಶವಿದ್ದರೆ ಅದರಲ್ಲಿ ಹುಳುಗಳು ಹುಟ್ಟಬಹುದು. ಆದುದರಿಂದ ಕಾಳನ್ನು ಸರಿಯಾಗಿ ಒಣಗಿಸುವುದು ಅಗತ್ಯ ಉಗ್ರಾಣವನ್ನು ಶುಭ್ರಗೊಳಿಸಿ, ನೆಲ ಗೋಡೆ ಮತ್ತು ಮೇಲ್ಭಾಗಗಳಿಗೆ ಸೇ. ೧೦ರ ಬಿ. ಎಚ್. ಸಿ. ಪುಡಿಯನ್ನು ತೆಳುವಾಗಿ ಹರಡಬೇಕು ನೆಲ ಅಥವಾ ಗೋಡೆಗಳಲ್ಲಿ ಬಿರುಕುಗಳಿದ್ದರೆ, ಮುಚ್ಚಬೇಕು. ಬೀಜಕ್ಕಾಗಿ ಇಡುವ ಕಾಳನ್ನು ಸರಿಯಾಗಿ ಒಣಗಿಸಿ ಸೇ. ೧೦ರ ಬಿ. ಎಚ್. ಸಿ. ಪುಡಿಯನ್ನು ಪ್ರತಿ ಮೂರು ಪೌಂಡು ಕಾಳಿಗೆ ನಾಲ್ಕು ಔನ್ಸಿನಂತೆ ಬೆರಸಬೇಕು

ಕಬ್ಬಿನ ಗದ್ದೆ

ಡಿಸೆಂಬರ ತಿಂಗಳಲ್ಲಿ ಕಬ್ಬನ್ನು ನಾಟಿ ಮಾಡಿರುವವರು ಇನ್ನು ತಡ ಮಾಡಬಾರದು. ಸಾಲುಗಳ ದಿಂಡುಗಳ ಮೇಲೆ ಆರಿಸಿದ ಕಬ್ಬಿನ ತುಂಡುಗಳನ್ನು ಸಾಲಾಗಿ ಇಟ್ಟು ಹಾಕಿದ ಗೊಬ್ಬರ ಕೊಚ್ಚಿ ಹೋಗದಂತೆ ಸಾಲುಗಳಲ್ಲಿ ಸ್ವಲ್ಪವಾಗಿ ನೀರು ಬಿಟ್ಟುಕೊಳ್ಳಬೇಕು. ತುಂಡುಗಳನ್ನು ಹುಡಿ ಮಣ್ಣಿನಲ್ಲಿ ಹಗುರವಾಗಿಡುವುದು ಒಳ್ಳೆಯದು. ಎಳೆಯ ಸಸಿಗಳಿಗೆ ಬಾಧಕವಾಗದಂತೆ ಆಗಾಗ್ಗೆ ಮಿತವಾಗಿ ಮಣ್ಣಿನಲ್ಲಿ ತನುವಿರುವಂತೆ ನೀರು ಹಾಯಿಸುವುದು ಉತ್ತಮ.

ಅಡಿಕೆ ತೋಟ.

ಹಣ್ಣಾದ ಅಡಿಕೆಗಳನ್ನು ಈ ತಿಂಗಳು ಜಾಗ್ರತೆಯಾಗಿ ಕೊಯ್ಯಬಹುದು. ಬಿತ್ತನೆಗೆ ಉಪಯೋಗಿಸಲು ಗುರುತಿಸಿದ ತಾಯಿಮರಗಳ ಮಧ್ಯದ ಎರಡನೆ ಮತ್ತು ಮೂರನೆ ಗೊಂಚಲುಗಳಿಂದ ಮರದಲ್ಲೇ ಹಣ್ಣಾದ ಬೀಜಗಳನ್ನು ಸ್ವಲ್ಪ ಸಮಯದಲ್ಲೇ ಬಿತ್ತಬಹುದು. ಅವು ನಲ್ವತ್ತು ದಿನಗಳಿಂದ ನೂರು ದಿನಗಳ ವರೆಗೆ ಮೊಳಕೆ ಬರುತ್ತಿರುತ್ತವೆ. ಮುಂದಿವನ್ನು ನೆಟ್ಟಾಗ ನೆರಳು ಸಿಗುವಂತೆ ಈಗಲೇ ತೋಟದಲ್ಲಿ ಬಾಳೆಗಿಡಗಳನ್ನು ನಾಟಬಹುದು. ಸೆಸ್ಬೇನಿಯಾ ಮುಂತಾದ ನೆರಳೀಯುವ ಗಿಡಗಳನ್ನೂ ವಾತಿಗಳ ಪಶ್ಚಿಮಕ್ಕೆ ಬೆಳೆಸಬಹುದು. ಸಸಿ ಮತ್ತು ಹಣ್ಣು ಬಿಡುವ ಅಡಿಕೆ ಮರಗಳಲ್ಲಿ ಕೆಂಪು ಮತ್ತು ಬಿಳಿ ಜಾತಿಯ ಹುಳಗಳು ಕಾಣಿಸಿಕೊಳ್ಳಬಹುದು. ಹಳದಿ ಬಣ್ಣದ ಮಚ್ಚೆಗಳಾಗಿ ಇದರಿಂದ ಎಲೆಗಳು ಒಣಗುತ್ತವೆ. ಇದಕ್ಕಾಗಿ ಒಣಗಿದ ಮತ್ತು ಹುಳಬಿದ್ದ ಎಲೆಗಳನ್ನು ಕೊಯ್ದು ಬಿಡಬೇಕು; ೧೫೦ ಲೀಟರ್ ನೀರಿಗೆ ೧ ಕಿಲೋಗ್ರಾಂ ಗಂಧಕದ ಪ್ರಮಾಣದಲ್ಲಿ ವೆಟ್ಟಬಲ್ ಗಂಧಕವನ್ನು ಎಲೆಗಳ ಅಡಿ ಭಾಗದಲ್ಲಿ ಚೆನ್ನಾಗಿ ಅಂಟಿಕೊಳ್ಳುವಂತೆ ಜಾಗ್ರತೆ ವಹಿಸಿ ಸಿಂಪಡಿಸಬೇಕು.

ತೆಂಗಿನ ತೋಟ

ಎಲೆಗಳಿಗೆ ರೋಗ ತಟ್ಟದಂತೆ ಸೇ. ೧ರ ಪ್ರಮಾಣದ ಬೋರ್ಡೋ ಮಿಶ್ರಣವನ್ನು ಸಿಂಪಡಿಸಬೇಕು. ರೋಗ ತಗಲಿದ ಎಲೆಗಳ ಕೊನೆಯು ಕಪ್ಪಾಗಿ ಮುದುಡಿಕೊಂಡಿರುತ್ತದೆ. ಇದರಿಂದ ಕಾಯಿಗಳ ಇಳುವರಿಗೆ ಭಾರಿ ಧಕ್ಕೆಯುಂಟಾಗುವುದು. ಕಳೆ ಹುಲ್ಲನ್ನು ತೋಟದಿಂದ ಕಿತ್ತೊಗೆಯಬೇಕು. ಹೊಸತಾಗಿ ನೆಟ್ಟ ಗಿಡಗಳಿಗೆ ವಾರಕ್ಕೆ ಎರಡಾವರ್ತಿ ನೀರೆರೆಯಬೇಕು. ಮುಂದಿನ ತಿಂಗಳಲ್ಲಿ ಬೀಜದ ಕಾಯಿಗಳನ್ನು ಆರಿಸಿ ಆಯಿಸಲು ಈಗಲೇ ಪ್ರಾರಂಭ ಮಾಡಬಹುದು. ಉತ್ತಮವಾದ ಒಳ್ಳೆಯ ಗಾತ್ರದ ಬೀಜದ ಕಾಯಿಗಳನ್ನು ಪುಷ್ಟಿಯಾದ ಮಧ್ಯ ವಯಸ್ಸಿನ ತಾಯಿ ಮರಗಳಿಂದ ಆರಿಸಿಕೊಳ್ಳಬೇಕು.



"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಮಂಗಳಾರತಿ

ಬೆಂಗಳೂರು ಬೆಳೆಯುತ್ತಿದೆ.

ದಿನ ದಿನಕ್ಕೆ ಹೆಚ್ಚು ಹೆಚ್ಚಾಗಿ (ಬೇಕಾಗಿದ್ದರೆ ಸೆಚ್ಚು ಸೆಚ್ಚಾಗಿ) ಪ್ರಗತಿಯತ್ತ ಒಲಿಯುತ್ತಿದೆ.

ಇದು ತುಂಬು ಸಂತೋಷದ ಸಂಗತಿ.

ಇದನ್ನು ಕೇಳಿ ತಿಳಿಯುವದರಲ್ಲಿ ಅರ್ಥವಿಲ್ಲ. ಕಣ್ಣಾರೆ ಕಂಡು ಅನುಭವಿಸಬೇಕು. ಆಗ ಮಾತ್ರ ಈ ಮಾತಿಗೆ ಹೆಚ್ಚು ಬೆಲೆ.

ಬನ್ನಿ, ನೀವೂ ಒಮ್ಮೆ, ಕರ್ನಾಟಕದ ರಾಜಧಾನಿ, ಅಲ್ಲ ಮೈಸೂರಿನ—ಮಹಾ ಮೈಸೂರಿನ—ವಿಶಾಲ ಮೈಸೂರಿನ (ಮೂದರಿ ಮೈಸೂರಿನ?) ರಾಜಧಾನಿ ಕರ್ನಾಟಕದಲ್ಲಿರುವ ಬೆಂಗಳೂರಿಗೆ.

ನಿಮಗಿದೋ ಸ್ವಾಗತ!

ಈ ಪೇಟೆ, ಈ ಪಟ್ಟಣ, ಈ ಬೀದಿ, ಈ ಗಲ್ಲಿ, ಈ ಸಂದು, ಈ ಮನೆ, ಈ ಭಾಷೆ, ಎಲ್ಲವೂ ನಿಮಗೆ ಹೊಸತು—ಅಪರಿಚಿತ ಎಂದು ಅನ್ನಿಸುತ್ತಿದೆಯೆ?

ನಿಜ. ಇದೆಲ್ಲಾ ಮೂದರಿ ಮೈಸೂರಿನ ಮೂದರೀತನದ ಸಂಕೇತಗಳು ಮಾತ್ರ.

"ವಾಂಗೋ ಸಾರ್, ಉಂಗಳ್ಕು ಎನ್ನ ವಾಂಗೊಣಾ?"

"ಕ್ಯಾಂ ಜೀ ಕ್ಯಾ ಬಾತ್ ಹೈ"?

"ಕಿತ್ತೆ ಜಸವಂತ್ ಸಿಂಗ್‌ಜೀ ಕೀ ಹಾಲ್ ಹೈ?"

"ಕಾಯ್ ಸಖಾರಾಮ್ ಬಾವು? ಹೈ ಕುಠೆ ತುಮಿ?

"ಎಂಚಿನ ಮಾರಾಯ್ರೆ? ಅಲೆಗು ಪಂಡಲಾ ಅರ್ಥ ಆವೊಡತ್ತಾ!"

"ಏಮಿ, ರಾವು ಗಾರು, ಮನವಾಳ್ಳಂಟೆ......"

"ಎಂದೊ ಚಕ್ಕ ಊಣಾ ಕಳಿಂಜೊ?"

ಒಂದಲ್ಲ ಎರಡಲ್ಲ ಪಲಭಾಷೆಗಳ್ ಇವೆ ಈ ಕನ್ನಡನಾಡಿನ ರಾಜಧಾನಿಯಲ್ಲಿ ಕನ್ನಡವು ಹುಡುಕಿದರೂ ಸಿಕ್ಕುವುದಿಲ್ಲ ಎಂಬುದು ಮಹಾ ಮೂರ್ಖರೊಬ್ಬರ ಮಾತು.

ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಕನ್ನಡವು ಎಂತು ಯಾವ ರೀತಿಯಲ್ಲಿದೆ? ಈ ಮಾತಿಗೆ ಕನ್ನಡವೂ ಇಲ್ಲಿದೆ ಎಂಬುದೂ ನನ್ನ ಉತ್ತರ.

ಕನ್ನಡವೂ ಇದೆ. ಕನ್ನಡ ಚಳುವಳಿಯೂ ಇದೆ. (ಕನ್ನಡಕ್ಕಾಗಿ ಕನ್ನಡ ಚಳುವಳಿ! ಎಷ್ಟು ಅಭಿಮಾನಪಟ್ಟುಕೊಳ್ಳಬೇಕಾದಂಥ ಸಂಸ್ಕೃತಿ ನಮ್ಮದು!) ಕನ್ನಡ ಪತ್ರಿಕೆಗಳೂ ಇವೆ. (ಇವುಗಳಲ್ಲಿ ಹಲವಕ್ಕೆ ನಮ್ಮಂತೆಯೇ ಹುಟ್ಟುವುದು ಬೆಳೆಯುವದು, ಸಾಯುವದು ಎಂಬ ಘಟ್ಟಗಳ ವ್ಯವಸ್ಥೆಯನ್ನು ನಾವು ಮೊದಲೇ ಮಾಡಿಕೊಟ್ಟಿರುತ್ತೇವೆ.)

ಹಂಯುತ್ತಿರುವ ಚರಂಡಿಯೋ ಸುರಿಯುತ್ತಿರುವ ಮಳೆಯೋ ಇತ್ಯಾದಿಗಳು ಊಹೆಗೂ ನಿಲುಕದ ವಿಚಾರಗಳೆಂದು ನಿಮಗನ್ನಿಸದೆ ಇರಲಿಕ್ಕಿಲ್ಲ.

ರಸ್ತೆಯಲ್ಲಿ ನಡೆದಾಗಲೂ ಘಮ್ಮೆಂದು ಬರುತ್ತಿರುವ ವಾಸನೆಯೋ ಸುವಾಸನೆಯೋ ಅಥವಾ....ಅದೊಂದನ್ನೂ, ನೀವು ಕಂಡ ನಿಮ್ಮ ಮೂಗು ಅನುಭವಿಸಿದ ವಿಷಯಗಳ ಬಗ್ಗೆ ದಯವಿಟ್ಟು ನೀವು ಯಾರಿಬನೆಯೂ ಹೇಳಬೇಡಿ ಎಂದು ಸವಿನಯ ವಿನಂತಿ.



ವಿಶಾಖ ಪಟ್ಟಣದ ನೌಕಾಂಗಣದ ಒಂದು ದೃಶ್ಯ.

ಸವಿನಯ ವಿನಂತಿಗೆ ಹೆಚ್ಚು ಬೆಲೆಯಿದೆಯೇ ಎಂಬುದರ ಬಗ್ಗೆ ನನಗೇ ಸಂಶಯವಿದೆ. ಸವಿನಯ ವಿನಂತಿಯೂ, ಸವಿನಯ ಪ್ರಾರ್ಥನೆಯೂ ಕನ್ನಡಿಗರ ಇಲ್ಲವೆ ಸಮ್ಮಿಶ್ರಿತಗೊಂಡ ಸುವಿಶಾಲ ಹೃದಯದ ಮೈಸೂರು ರಾಜ್ಯದ ಕನ್ನಡಿಗರ ಅಭಿಮಾನವತ್ತಾದ ಅಭಿನಯದ ಒಂದು ಅವಿಭಾಜ್ಯವೆನಿಸಿಕೊಂಡ ವಿಷಯ.

ನಾವು ಸೌಜನ್ಯಕ್ಕೆ ಮಾರುಹೋದವರು. ಯಾರು ಬಂದರೂ ನಮ್ಮ ಸೌಜನ್ಯವನ್ನು ನಾವು ಬಿಟ್ಟುಕೊಟ್ಟಿಲ್ಲ. ಕೊಡುವಂತೆಯೇ ಇಲ್ಲ.

ಭಾರತಕ್ಕೆ |ಆರ್ಯರೋ, ಮೊಗಲರೊ ಕ್ರೈಸ್ತರೋ ಇನ್ನೂ ಯಾರ್‍ಯಾರೋ ಬಂದರು, ಬಂದು ಇಲ್ಲೇ ತಳವೂರಿದರು. ಇದರಿಂದ ಭಾರತಕ್ಕೇನಾದರೂ ಹಾನಿಯೂಯಿತೇ?.

ಭಾರತವು ನಾಗರಿಕ ದೇಶವೆಂದು ಕರೆಸಿಕೊಂಡುದೇ ಇವರೆಲ್ಲರ ಆಗಮನದನಂತರ? ನಮ್ಮ ದೇಶವು ಪವಿತ್ರತೆಯಿಂದ ಪವಿತ್ರ ತಮವೆನಿಸಿತು, ಅಬಳಿಕ.

ಭಾರತದ ಒಂದು ಅಂಗ, ನಮ್ಮ ಕನ್ನಡನಾಡು. ಭಾರತದ ಸಂಸ್ಕೃತಿಯನ್ನು ಉಳಿದ ಪ್ರಾಂತಗಳವರು ಹೇಗೆ ಬೆಳೆಸಿದರೋ ಹೇಗೆ ಉಳಿಸಿದರೋ, ಅದು ನಮಗೆ ಬೇಡ. ಅವರ ಮೂರ್ಖತನವನ್ನು ನಮ್ಮ ಬುದ್ಧಿವಂತಿಕೆಯೊಡನೆ ತೂಗಿನೋಡುವದೂ ಬೇಡ.

ನಾವಂತೂ ಅನೂಚಾನವಾಗಿ ಭಾರತೀಯ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದೇವೆ. ತಪ್ಪದೆ ಬೆಳೆಸಿಕೊಂಡು ಬಂದಿದ್ದೇವೆ ಅಂತೆಯೇ ಭಾರತೀಯೂ ಕನ್ನಡವ್ಮನಿಗೆ ಋಣಿಯಾಗಿರಬೇಕು.

ಭಾರತೀಯ ಸಂಸ್ಕೃತಿಯನ್ನು ಕಾಣಲು ನೀವು ಬೆಂಗಳೂರಿಗಾದರೂ ಬನ್ನಿ. ಇಲ್ಲಿ ಏನಿಲ್ಲ ಇಲ್ಲ?

ಕುಡಿತವೇ? ಕುಣಿತವೆ?

ಎಲ್ಲಕ್ಕೂ, ಇಲ್ಲಿ ಮಾನ್ಯತೆ ಇದೆ. ನೀವು ರಸಿಕರೋ ಅರಸಿಕರೋ? ಸರ್ವರಿಗೂ ಸರ್ವ ರೀತಿಯ ಸೌಲಭ್ಯಗಳು ದಕ್ಕುವಂತಹ ನಗರವಿದು, ಎಂತಲೇ ನಿಮಗೆ ಸ್ವಾಗತ!

ಬೆಂಗಳೂರು ಬೆಳೆಯುತ್ತಿದೆ.

ಜಾತಿಮತ ಭೇದವನ್ನು ಒತ್ತಟ್ಟಿಗಿಟ್ಟು, ಭಾಷಾವ್ಯಾಮೋಹವನ್ನು ಬದಿಗೆ ಸರಿಸಿಟ್ಟು, ಕೊಳಚೆಯನ್ನೂ, ಕೊಟಚೆಯನ್ನೂ, ಸ್ವಚ್ಛಂದರನ್ನೂ, ಶುಚಿಭರ್ಾವಿಗಳನ್ನೂ ಕೂಡಿಕೊಂಡೇ ಬೆಳೆಯುತ್ತಿದೆ ಬೆಂಗಳೂರು.

ಈ ರೀತಿ ಬೆಳೆಯುತ್ತಿರುವ ಬೆಂಗಳೂರಿಗೆ ತಮ್ಮ ಅಮೂಲ್ಯ ಸಹಕಾರವಿತ್ತು ಸಹಕರಿಸುವ ನಮ್ಮ ಕನ್ನಡ ಬಂಧುಬಾಂಧವರಿಗೆ (ಈ ಪಟ್ಟಿಯಲ್ಲಿ ಸಾಹಿತಿಗಳ ಹೆಸರನ್ನು ಅಂಕಿತಗೊಳಿಸಲಾಗಿಲ್ಲ) ಅವರು ಮಾಡಿರುವ ಮಹಾ ಸಾಹಸದ ಪ್ರತೀಕವಾಗಿ ಇಂದು ಈ ಬೆಂಗಳೂರಿನ ಸಂಸ್ಕರಣಾರ್ಥವಾಗಿ ಕೊಡುವ ಸತ್ಕಾರ ಕೂಟದಲ್ಲಿ, ಅವರ ಮುಖಕ್ಕೆ ಎತ್ತುವ ಮಂಗಳಾರತಿಯನ್ನು ನೋಡಲಾದರೂ ನೀವು, ಬೆಂಗಳೂರಿಗೆ ಒಮ್ಮೆ ಬನ್ನಿ.

ಬರುತ್ತೀರಲ್ಲ?

ನೀವು ನಮ್ಮವರೇ ಎಂದು ಪ್ರತ್ಯೇಕ ಆಮಂತ್ರಣವನ್ನು ಕಳಿಸುವದಿಲ್ಲ. ಇದನ್ನೇ ಆಮಂತ್ರಣವೆಂದು ತಿಳಿಯಬೇಕಾಗಿ ಬಿನ್ನಹ.

ಆಮಂತ್ರಣ ಪತ್ರವು ಉದ್ದವಾಯಿತು ಎನ್ನುತ್ತೀರಾ?

ಕ್ಷಮಿಸಿ; ಮಂತ್ರಿಗಳ ಭಾಷಣದಷ್ಟು ಬೆಳೆಸಬೇಕೆಂಬ ಪ್ರಯತ್ನ ನಡೆಸಿದೆ. ಆ ಪ್ರಯತ್ನ ಕೈಗೂಡಿಲ್ಲ. ಅಲ್ಲವೆ?

—ಸುದಾಸ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 482/63

K. ಅಬ್ದುಲ್ ಬ್ಯಾರಿ— ವಾದಿ.

P. ಅಬ್ದುಲ್ ಖಾದರ ಬ್ಯಾರಿ—ಮಹಮ್ಮದ ಬ್ಯಾರಿಗಳ ಮಗ, ಪುದುಬೆಟ್ಟು ಬಸ್ತಿಬಳಿ, ಸವಣೂರು ಗ್ರಾಮ—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಯ ಅಂಗಡಿಯಲ್ಲಿ ನೀವು ವ್ಯಾಪಾರ ಮಾಡಿ ಸಾಮಾನು ಕೊಂಡು ಹೋದ ಬಾಬ್ತು, ನೀವು ಕೊಟ್ಟ ಹಣ ಹೋಗಲಾಗಿ, ಇನ್ನು ನಿಮ್ಮಿಂದ ಬಡ್ಡಿ ಸಮೇತ ಬರಬೇಕಾದ ರೂ. 245—64ನ್ನು ವಾದಿಯು ಕೇಳಿ, ನಿಮ್ಮ ಮೇಲೆ ಮಾಡಿದ ಈ ದಾವೆಯನ್ನು ತಾ. 5—2—64ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕ್ಸ್‌ಪಾರ್ಟಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Sadashiva Rao

Vakil for plaintiff.

ಪುತ್ತೂರು, ತಾ, 9—1—64.

ಪ್ರಿ. ಕು.ಶಿ. ಹರಿದಾಸ ಭಟ್ಟ, ಎಂ. ಎ.,

ಅವರ ನವೀನ ಪುಸ್ತಕಗಳು ರೂ.ನ.

ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಾ	2=00
ಐಶ್ವದ ಸಂಪತ್ತು	2=00
ಅಮೆರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕೆಟಲಾಗ್‌ಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇದೂ ಒಂದು ಕಥೆ

(೨ನೇ ಪುಟದಿಂದ)

...ಪ್ಪರಲ್ಲಿ ಆ ಕಬ್ಬಿಣದ "ಸರಿಗೆಯಂಥ ರೋಮವುಳ್ಳ ವ್ಯಕ್ತಿ ನನ್ನ ಬಳಿ ಬಂದು ದಯವಿಟ್ಟು ಹೊರಗೆ ಹೋಗಿ, ಏನೂ ಗಾಬರಿ ಪಡಬೇಕಾಗಿಲ್ಲ. ಇದು ಯಾವಾಗಲೂ ನಡೆಯುವಂಥಾದ್ದೇ. ನಾಳೆ ಎಲ್ಲಾ ಸರಿ ಹೋಗುತ್ತೆ' ಎಂದನು. ಹಿರಿಯರ ಮಾತಿಗೆ ಬೆಲೆ ಕೊಡಬೇಕೆನ್ನುವ ದೃಷ್ಟಿಯಿಂದ ಹೊರಗೆ ಬಂದೆ.

ಹೊರಗಿನ ಜನರೆಲ್ಲರೋ ಬಾಯಿಗೆ ಬಂದ ಹಾಗೆ ಮಾತಾಡುತ್ತಿದ್ದರು. ಅವಕ್ಕೆ ಕಿವಿಕೊಟ್ಟೆನಾದರೂ ಸರಿಯಾದ ವಿಚಾರ ನನಗೆ ತಿಳಿಯಲಿಲ್ಲ. ಅಲ್ಲೇ ಪಕ್ಕದಲ್ಲಿ ನಿಂತಿದ್ದ ಸಭ್ಯನಂತಿದ್ದ ವ್ಯಕ್ತಿಯೊಡನೆ ಕೇಳಿದೆ—'ಆ ಮನುಷ್ಯನಿಗೆ ತಲೆ ಸರಿ ಇಲ್ಲವೇ ಅಥವಾ ಭೂತ ಪ್ರೇತವೇನಾದರೂ ಮೈಮೇಲೆ ಬರುತ್ತಿದೆಯೋ" ಎಂದು

"ಭೂತವೂ ಇಲ್ಲ ಪ್ರೇತವೂ ಇಲ್ಲ. ಆ ಬಡ ಬ್ರಾಹ್ಮಣನ ಹಣೆಬರಹವೇ ಇಷ್ಟು. ಏನೋ ಹೆದರಿಸಿ ಮಾವನ ಆಸ್ತಿಪಾಸ್ತಿಗಳನ್ನೆಲ್ಲ 'ಗುಳುಂ' ಮಾಡಲು ಈ ಉಪಾಯ ಹೂಡಿದ್ದಾನೆ ಅಷ್ಟೆ."

"ಅಂದ ಹಾಗೆ ಆ ಕಬ್ಬಿಣದ ಸರಿಗೆಯ ವ್ಯಕ್ತಿ "ಇದು ಯಾವಾಗಲೂ ನಡೆಯುತ್ತಿರುತ್ತೆ" ಅಂದರಲ್ಲಾ ಹಾಗೆಯೇ ಯಾವಾಗಲೂ ಮಾಡುತ್ತಿರುತ್ತಾರೋ ಅವರು?"

"ಏನೋ ಸಣ್ಣಪುಟ್ಟ ಗಲಾಟೆ ಮಾಡುತ್ತಿದ್ದನಂತೆ, ಈ ಸಾರಿ ಮಾತ್ರ ಅದು ಜೋರಾಗಿಹೋಗಿದೆ. ಎಂಥ ಮನುಷ್ಯನೋ ಅದು! ಅವನಿಗೆ ಯಾವ ಆಧಾರದ ಮೇಲೆ ಮಾಸ್ತರರ ಕೆಲಸ ಕೊಟ್ಟರೋ! ಅಯೋಗ್ಯ, ಶುದ್ಧ ಅಯೋಗ್ಯ!

ಆ ಮನೆಯೊಳಗೆ ಅಷ್ಟೊಂದು ರಾದ್ಧಾಂತ ಮಾಡಿದ ವ್ಯಕ್ತಿ ಓರ್ವ ಶಾಲಾ ಮಾಸ್ತರ ಎಂಬುದನ್ನು ತಿಳಿಯಿತೇ ವಿನಾ ಬೇರೆ ಯಾವ ವಿಚಾರವೂ ನನಗೆ ತಿಳಿಯಲಿಲ್ಲ.

"ಈಗ ಆ ಮಾಸ್ತರರು ಏನನ್ನು ಕೇಳಿದ್ದರು? ಆ ಕಬ್ಬಿಣದ ಸರಿಗೆಯಂಥ ರೋಮವುಳ್ಳ ಗಂಡಸು ಯಾರು?"

"ಅವರೇ ಸ್ವಾಮಿ ಆ ಮಾಸ್ತರರ ಮಾವ."

"ಅಂದರೆ ಅವರು ಒಳ್ಳೆಯ ಅನುಕೂಲವುಳ್ಳ ಮನುಷ್ಯರೇ?"

"ಅನುಕೂಲವೆಲ್ಲಿಂದ ಬಂತು! ಅಂತೂ ಇದೆ ಅಲ್ಪಸ್ವಲ್ಪ. ಹಿಂದೆ ಜ್ಯೋತಿಷ್ಯದಲ್ಲಿ ತುಂಬ ಹೆಸರು ಮಾಡಿದವರು. ಆ ಮನುಷ್ಯ. ಚಿಕ್ಕಮಗಳೂರು, ಜಯಪುರ, ಕೊಪ್ಪ, ಕಮ್ಮರಡಿಗಳಲ್ಲಿ ಜ್ಯೋತಿಷ್ಯದಲ್ಲಿ ಆಸಕ್ತಿ ಇದ್ದವರಿಗೆಲ್ಲಾ ಬೂದಿ, ಕುಂಕುಮ, ತಾಯಿತ, ಮಂತ್ರದ ಹಗ್ಗ ಇತ್ಯಾದಿಗಳನ್ನು ಕೊಟ್ಟು ಸ್ವಲ್ಪ ಹಣ ಸಂಪಾದಿಸಿದ್ದರು. ಅಲ್ಲದೆ ಇಲ್ಲಿ ಸುಮಾರು ಐವತ್ತು ಎಕ್ರೆ ಗದ್ದೆ, ಸ್ವಂತ ಮನೆ, ಅಡಿಕೆ ತೋಟ, ಆಳುಕಾಳು ಏನೇನೋ ಇವೆ. ಇಷ್ಟಿದ್ದರೂ ದೇವರು ಅವರಿಗೆ ಔಷಧಿಗಾಗಿಯಾದರೂ ಒಂದು ಗಂಡು ಮಗುವನ್ನು ಕರುಣಿಸಲಿಲ್ಲ. ಐದ[illegible]ಗಿ ಸಾಲಾಗಿ ಐದಾರು ಹೆಣ್ಣುಮಕ್ಕಳನ್ನೇ ಕೊಟ್ಟ. ಮುಟ್ಟಿ ಕೈತೊಳೆಯುವಂಥಾ ಅಲ್ಲ ಅಲ್ಲ ಕೈತೊಳೆದು ಮುಟ್ಟಬೇಕಾದಂಥ ಮಕ್ಕಳು. ಅವರಲ್ಲೂ ದೊಡ್ಡ ಮಗಳಂತೂ ಧರ್ಮ ದೇವತೆ...."

"ಹೆಣ್ಣುಮಕ್ಕಳಿಗೆಲ್ಲರಿಗೂ ಮದುವೆಯಾಗಿದೆಯೇ?"

"ಹೇಳ್ತೀನಿ ಕೇಳಿ. ಐದು ಜನರಿಗೆ ಮದುವೆಯಾಗಿದೆ. ಆರನೆಯದು ಇನ್ನೂ ಸಣ್ಣದು. ಹತ್ತು ಹನ್ನೆರಡು ವರ್ಷವಿರಬಹುದು. ಸ್ಕೂಲಿಗೆ ಹೋಗ್ತಾ ಇದೆ. ಏನೋ ದೇವರ ದಯದಿಂದ ಎಲ್ಲ ಮಕ್ಕಳೂ ಒಳ್ಳೊಳ್ಳೆಯ ಮನೆಗಳನ್ನೇ ಸೇರಿದ್ದಾರೆ. ಇವರ ಕೈ ಹಿಡಿದು ಅವರೆಲ್ಲ ಅನುಕೂಲಸ್ಥರಾದರೋ ಅಥವಾ ಅದಕ್ಕೆ ಮೊದಲೇ ಆಗಿದ್ದರೋ ತಿಳಿಯದು. ಅಂತೂ ಎಲ್ಲ ಅಳಿಯಂದಿರೂ ಕಾರಿನಲ್ಲೇ ಓಡಾಡುವವರು. ಹೆಚ್ಚಾಗಿ ಎಲ್ಲರೂ ಹೋಟೆಲು ಸಾಹುಕಾರರೇ. ಅವರಲ್ಲಿ ದೊಡ್ಡ ಮಗಳ ಗಂಡ ಮಾತ್ರ ಇಲ್ಲೇ ಕೈಯಾಡಿಯಲ್ಲಿದ್ದಾರೆ."

"ಯಾವ ಕೈಯಾಡಿ? ಅಲ್ಲಿಷ್ಟು ಪ್ರಸಿದ್ಧ ಜ್ಯೋತಿಷಿ ಇದ್ದಾರಂತಲ್ಲಾ, ಆ ಕೈಯಾಡಿಯೇ?"

"ಹಾಂ ಹೌದು ಆ ಪ್ರಸಿದ್ಧ ಜ್ಯೋತಿಷಿಯೇ ಇವರ ಮೊದಲ ಅಳಿಯ ಅವನಾದರೋ ದೇವರಂಥ ಮನುಷ್ಯ ಸ್ವಾಮಿ...."

ಅಂದ ಹಾಗೆ ಆ ಜ್ಯೋತಿಷಿಯ ವಿಚಾರ ಹೇಳುತ್ತಿದ್ದೆನಲ್ಲಾ. ಒಳ್ಳೆ ಮನುಷ್ಯ ಆತ. ಹಣವೂ ಇದೆ, ಗುಣವೂ ಇದೆ. ಯಾರೇ ಹೋಗಲಿ ಬಹಳ ಚೆನ್ನಾಗಿ ಆದರಿಸಿ ಕಳುಹಿಸುವ ಹಿರಿಯತನ ಅವರಲ್ಲಿದೆ. ವರ್ಷಕ್ಕೆ ಏನಿಲ್ಲೆಂದರೂ ಹತ್ತು ಸಾವಿರ ರೂಪಾಯಿ ಬರೇ ದಾನ ಧರ್ಮಗಳಿಗೆ ಚೆಲ್ಲುವಂಥ ಧಾರಾಳ ವ್ಯಕ್ತಿ ಅವರು. ಈಗ ನೀವೇ ನೋಡಿದಿರಲ್ಲ, ಸಾಯುತ್ತೇನೆಂದು ಬಡಿದುಕೊಳ್ಳುತ್ತಿದ್ದದನ್ನು ಈ ನಾಲ್ಕನೇ ಅಳಿಯ ಯಾವ ಗಳಿಗೆಯಲ್ಲಿ ಇವರಿಗೆ ಸಿಕ್ಕಿದರೋ ನಾಕಾಣೆ.

"ಆದರೂ ನೋಡಲು ಲಕ್ಷಣವಾಗಿಯೇ ಇದ್ದಾರೆ. ಮೊದಲಿನಿಂದಲೂ ಇವರು ಇಷ್ಟು ರಾದ್ಧಾಂತ ಮಾಡುತ್ತಿದ್ದರೆಂದು ನಂಬುವುದಕ್ಕಾಗುವುದಿಲ್ಲ"

"ಅದೂ ನಿಜವೇ. ಮೊದಲು ಇಷ್ಟು ಜೋರಿರಲಿಲ್ಲ ಅದು ಬಿಡಿ, ಗಂಜಿಗೂ ಗತಿ ಇರಲಿಲ್ಲ ಚಿಕ್ಕಂದಿನಲ್ಲಿ. ಇಲ್ಲೇ ವಾರಾನ್ನ, ಭಿಕ್ಷಾನ್ನ ಮಾಡಿಕೊಂಡು ಹದಿನೈದು ರೂಪಾಯಿ ಪರೀಕ್ಷೆ ಪಾಸಾದವರು. ಅನಂತರ ಯಾರದೋ ಶಿಫಾರಸ್ಸಿನ ಮೇಲೆ ಇಲ್ಲೇ ಮಾಸ್ತರರ ಕೆಲಸವೂ ಸಿಕ್ಕಿತು. ಹುಡುಗ ಯೋಗ್ಯನಾಗಿಯೇ ಕಂಡ. ಗುಂಡಣ್ಣನವರಿಗೂ ಮನಸ್ಸಾಯ್ತು...."

"ಯಾವ ಗುಂಡಣ್ಣ"

"ಅದೇ ಆ ಕಬ್ಬಿಣದ ಸರಿಗೆಯಂಥ ರೋಮವುಳ್ಳ ವ್ಯಕ್ತಿ ಎಂದು ಹೇಳಿದಿರಲ್ಲಾ, ಅವರೇ ಈ ಗಲಾಟೆ ಮಾಡಿದ ಮನುಷ್ಯನ ಮಾವ. ಅವರಿಗೆ ಹುಡುಗನನ್ನು ನೋಡಿ ಖುಷಿಯಾಯ್ತೆಂದು ಕಾಣುತ್ತೆ. ಒಂದು ಹುಡುಗಿಯಾದರೂ ಮನೆಯ ಹತ್ತಿರವೇ ಇರಲಿ ಎಂಬ ದೃಷ್ಟಿಯಿಂದ ಈ ನರಸಿಂಹನ ಕೊರಳಿಗೆ ಕಟ್ಟಿದರು. ಹಾಕಿದರು. ತಮ್ಮ ನಾಲ್ಕನೆಯ ಕುವರಿಯನ್ನು. ಆದರೆ ಅದೇಕೋ ಆ ಜೋಡಿಯೇ ಸರಿ ಇಲ್ಲ.

"ಅದೆಲ್ಲ ಸರಿ, ಅವರು ಜ್ಯೋತಿಷಿಯೆಂದು ಹೇಳಿದಿರಲ್ಲಾ, ಅವರು ಜಾತಕ ನೋಡಿ ಮದುವೆ ಮಾಡಿಸಲಿಲ್ಲವೇ?"

"ಜಾತಕ ಗೀತಕ ಎಲ್ಲಾ ನಮ್ಮಂಥವರಿಗೆ. ಗಾದೆ ಕೇಳಲಿಲ್ಲವೇ ನೀವು "ಡಾಕ್ಟರರ ಮನೆಯಲ್ಲಿ ಖಾಯಿಲೆ ತಪ್ಪೋಲ್ಲ, ಜೋಯಿಸರ ಮಗಳು ಮುಂಡೆ ಎಂಬುದಾಗಿ" ಬ್ರಹ್ಮ ಬರೆದ ಬರಹವನ್ನು ಅಳಿಸಲು ಯಾವ ರಬ್ಬರೂ ಸೃಷ್ಟಿಯಾಗಲಿಲ್ಲ ಸ್ವಾಮಿ ಈ ವರೆಗೆ. ಅವರವರ ಹಣೆಯಲ್ಲಿ ಬರೆದ ಹಾಗೆಯೇ ಆಗ ಬೇಕಲ್ಲ'.

"ಆಗಲೇ ಬೇಕು, ಆಗಲೇ ಬೇಕು. ಈ ನರಸಿಂಹನ ಹಣೆಯ ಮೇಲೂ ಹೀಗೆಯೇ ಬರೆದಿರಬೇಕು ಬ್ರಹ್ಮ. ಅದ್ದರಿಂದಲೇ ಆತ ಹಾಗೆ ಮಾಡಿದ."

"ಒಳ್ಳೇ ಚೆನ್ನಾಗಿ ಕೇಳಿದಿರಿ ಆತ ತಪ್ಪೇನೂ ಮಾಡಲಿಲ್ಲ. ಮಾಡಿದ್ದಿಷ್ಟೆ—ನಾಲ್ಕು ಮಕ್ಕಳನ್ನು ಸೃಷ್ಟಿ ಮಾಡಿದ, ಮಾವನನ್ನು ಹೆದರಿಸಿ ಹೊಸ ಮನೆ ಕಟ್ಟಿಸಿಕೊಂಡ. ಇದೆಲ್ಲಾ ಹಾಳಾಗಿ ಹೋಗಲಿ. ಹೆಂಡತಿ ಮಕ್ಕಳಿಗೆ ಹೊಡೆಯುವುದು, ಬಡಿಯುವುದು, ನೆಂಟರಿಷ್ಟರಿಗೆ ಸಿಕ್ಕಾಬಟ್ಟೆ ಬೈಯುವುದು, ಇದೆಲ್ಲಾ ಏತಕ್ಕೆ ಹೇಳಿ?

'ಇದಕ್ಕೂ ಏನಾದರೂ ಕಾರಣವಿರಲೇ ಬೇಕು, ಆ ಹೆಂಡತಿಯದ್ದೇ ತಪ್ಪಿರಬಾರದೇಕೆ?"

'ತಪ್ಪೆಂಥದು ಮಣ್ಣು. ಆಕೆ ಆತನನ್ನು ಮದುವೆಯಾದದ್ದೇ ತಪ್ಪು."

'ನಿಮ್ಮ ಈ ಮಾತನ್ನು ನಾನು ನಂಬಲಾರೆ. ಇದಕ್ಕೆ ಕಾರಣ ಹೀಗಿರಬಹುದು. ಅವಳಿಗೆ ತನ್ನ ಗಂಡನಲ್ಲಿ ಒಂದು ಬಗೆಯ ತಾತ್ಸಾರ ಮೂಡಿದ್ದಿರಬಹುದು. ಏಕೆಂದರೆ ತನ್ನ ಅಕ್ಕಂದಿರೆಲ್ಲ ಶ್ರೀಮಂತ ಗಂಡಂದಿರನ್ನು ಹೊಂದಿರುವಾಗ ತನ್ನ ಗಂಡ ಓರ್ವ ಉಪಾಧ್ಯಾಯನಾಗಿಯೇ ಇದ್ದಾನಲ್ಲಾ ಎಂದು ಅವರಲ್ಲಿ ತಾತ್ಸಾರ ಮೂಡಿರಬಹುದು. ಅದಕ್ಕಾಗಿ ತನ್ನ ಗಂಡನನ್ನು ಮೂದಲಿಸುತ್ತಿದ್ದಿರಬಹುದು. ಇದರಿಂದ ಅವನಲ್ಲಿ ರೋಷದ ಕಿಡಿ ಹತ್ತಿ ಧನ ಪಿಶಾಚಿ ಹಿಡಿದು ತಾನೊಬ್ಬ ಶ್ರೀಮಂತನಾಗಬೇಕೆಂಬ ಬಯಕೆ ಹುಟ್ಟಿರಬಹುದು. ಮಾವನ ಆಸ್ತಿಯನ್ನೆಲ್ಲಾ ತಾನೇ ಹೊಂದಿ ತಾನೊಬ್ಬ ದೊಡ್ಡ ಶ್ರೀಮಂತನಾಗಬೇಕೆಂದು ಈ 'ಸಾಯುವ ಉಪಾಯ'ವನ್ನು ಕಂಡು ಹಿಡಿದಿರಲಿಕ್ಕೂ ಸಾಕು.

'ನೀವು ಹೇಳುವ ಮಾತು ನಿಜವೇ ಆದರೂ ಆ ನರಸಿಂಹನ ಈಗಿನ ವರ್ತನೆ ಸರಿಯಾದ್ದಲ್ಲ. ಯಾವ ಮಾವ ತಾನೇ ತನ್ನ ಅಳಿಯನಿಗೆ ಇಷ್ಟೆಲ್ಲ ಸಹಾಯ ಮಾಡುತ್ತಾನೆ. ನೀವೇ ಹೇಳಿ ಸ್ವಲ್ಪ ಆಸ್ತಿಪಾಸ್ತಿಗಳನ್ನು ಕೊಟ್ಟಿದ್ದಾರೆ, ಒಂದು ಹೊಸ ಮನೆ ಕಟ್ಟಿಸಿ ಕೊಟ್ಟಿದ್ದಾರೆ ಇನ್ನೇನು ತಾನೇ ಬೇಕು ಅವನಿಗೆ. ಹೆಂಡತಿ ಮಕ್ಕಳೊಂದಿಗೆ ಸುಖವಾಗಿರುವುದನ್ನು ಬಿಟ್ಟು, ಹೀಗೆಲ್ಲಾ ರಾದ್ಧಾಂತ ಮಾಡುವುದೇ? ಸಿಕ್ಕಾಬಟ್ಟೆ ಹೆಂಡತಿಗೆ ಹೊಡೆಯುವುದೇ? ಎಲ್ಲ ಆಸ್ತಿಯನ್ನೂ ತನ್ನ ಹೆಸರಿಗೇ ಬರೆದುಕೊಡುವಂತೆ ಕೇಳುವುದೇ?'

ನನಗೇಕೋ ತಲೆಕೆಡಿಸಿಕೊಳ್ಳಬೇಕೆನಿ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.



REGD. No. B. G. 176
LICENCE No. 31
Licensed to Post without Prepayment

ಸಿತು ಒಬ್ಬ ವ್ಯಕ್ತಿ ಇಷ್ಟು ಮಾತ್ರಕ್ಕೆ ಹೀಗೆಲ್ಲಾ ವರ್ತಿಸಲು ಕಾರಣವೇ ಇಲ್ಲ ಅವನಿಗೆ ಜೀವನದಲ್ಲಿ ಯಾವುದೋ ಒಂದು ಕೊರತೆ ಇದೆ. ಅಥವಾ ತನಗೆ ಯಾರಿಂದಲೋ ಅವಮಾನವಾದಂತಾಗಿದೆ ಆದದ್ದಕ್ಕಾಗಿ ಯಾರ ಮೇಲೋ ಸೇಡು ತೀರಿಸಿಕೊಳ್ಳಲು ಹೀಗೆ ಗಲಾಟೆ ಮಾಡುತ್ತಿರಬಹುದೆಂದುಕೊಂಡೆ.

ಕತ್ತಲೆಯಾಗಿದ್ದುದರಿಂದ ಅಲ್ಲೇ ಹೆಚ್ಚು ಹೊತ್ತು ನಿಲ್ಲುವ ಮನಸ್ಸಾಗಲಿಲ್ಲ

ವಸತಿಯಂಗಳಕ್ಕೆ ಕಾಲಿಟ್ಟಾಗಲೇ ಅಮ್ಮ ಕೇಳಿದರು–ಎಲ್ಲಿಗೆ ಹೋಗಿದ್ದೀ ಇಷ್ಟೊತ್ತು –ಎಂದು,

ನಡೆದ ವಿಚಾರಗಳನ್ನೆಲ್ಲ ತಿಳಿಸಿದೆ, ಈ ಘಟನೆಯಲ್ಲಿ ಯಾರದ್ದು ತಪ್ಪು-ಆ ಮಾವನದೇ, ಆ ಅಳಿಯನದೇ ಅಲ್ಲ ಆ ಹೆಂಡತಿಯದೇ?'— ಎಂದು ಕೇಳಿದೆ ನಾನು.

"ಎಲ್ಲರದ್ದೂ ತಪ್ಪೇ. ಆ ಮಾವ ತುಂಬಾ ಮೆರೆಯುತ್ತಿದ್ದರು, ತಾನೊಬ್ಬ ದೊಡ್ಡ ಮನುಷ್ಯ ಎಂದು. ಅವರ ಸೊಕ್ಕನ್ನು ಅಡಗಿಸಲು ಆ ಅಳಿಯ ಒಂದುಪಾಯ ಹೂಡಿದ ಅದರಂತೆ ಅವರನ್ನು ಹೆದರಿಸಿದ, ಈಗ ಅವರು ಗಪ್ಪಾಗಿದ್ದಾರೆ. ಹೆಂಡತಿ ಕೂಡಾ ಗಂಡನನ್ನು ಸಸಾರ ಮಾಡುತ್ತಿದ್ದಳು. ಇನ್ನು ಸಸಾರ ಮಾಡಿದರೆ ಗಂಡನನ್ನೇ ಕಳೆದುಕೊಳ್ಳಬೇಕಾದೀತು. ಈ ಘಟನೆಯಿಂದ ಅವಳೂ ಸ್ವಲ್ಪ ಬುದ್ಧಿ ಕಲಿತಂತಾಗಬಹುದು. ಇನ್ನು ಆ ಅಳಿಯ, ಆತ ಎಲ್ಲರ ಕಣ್ಣಿಗೂ ಹುಚ್ಚನಾದ. ಈ ಘಟನೆಯಿಂದ. ಅವನಿಗೂ ಇನ್ನು ತಲೆ ಎತ್ತಿ ಓಡಾಡುವಂತಿಲ್ಲ. ಇನ್ನು ನೋಡಬೇಕು ಮುಂದಿನ ಪ್ರತಿಕ್ರಿಯೆಯನ್ನು.

ಈ ಘಟನೆ ನಡೆದು ಆಗಲೇ ಎಂಟು ಹತ್ತು ತಿಂಗಳಾಗಿರಬೇಕು, ಮೊನ್ನೆ ಒಂದು ದಿನ ನನ್ನ ತಮ್ಮನಿಂದ ಒಂದು ಪತ್ರ ಬಂತು. ಅವನು ಆ ಘಟನೆಯ ವಿಚಾರವನ್ನೇ ಬರೆದಿದ್ದ—"ಈಗ ಆ ಮಾವ ದೀಕ್ಷೆ ತೊಟ್ಟಿದ್ದಾರೆ, ಗಡ್ಡ ಬಿಟ್ಟಿದ್ದಾರೆ, ಎರಡು ದಿವಸಕ್ಕೊಂದು ಊಟ, ಮನೆಬಿಟ್ಟು ಎಲ್ಲಿಗೂ ಹೋಗುತ್ತಿಲ್ಲ, ತುಂಬಾ ಕೃಶವಾಗಿದ್ದಾರೆ, ಅಳಿಯ ಮಾಡಿದ ಅಪಮಾನಕ್ಕಾಗಿ ಈ ದೀಕ್ಷೆ ತೊಟ್ಟಿದ್ದಾರಂತೆ. ಇನ್ನು ಅದೇ ಅಳಿಯ ಬಂದು ಕ್ಷಮೆಯಾಚಿಸುವವರೆಗೂ ಇವರು ದೀಕ್ಷೆ ಬಿಡುವುದಿಲ್ಲವಂತೆ ಆ ಅಳಿಯನೂ ದೊಡ್ಡ ಹಠವನ್ನೇ ಸಾಧಿಸುತ್ತಿದ್ದಾರೆ. ಹೆಂಡತಿಯನ್ನು ಮನೆಯಿಂದ ಎಲ್ಲಿಗೂ ಹೋಗಕೂಡದೆಂದು ಆಜ್ಞಾಪಿಸಿದ್ದಾರೆ, ಮಾವನ ಆಸ್ತಿಯೆಲ್ಲವೂ ತನ್ನ ಹೆಸರಿಗೇ ಬರಬೇಕೆಂದು ಹಟ್ಟು ಹಿಡಿದಿದ್ದಾರೆ. ಇದರ ಮಧ್ಯೆ ಇನ್ನೊಂದು ತಮಾಷೆ ನಡೆಯುತ್ತಿದೆ. ಉಳಿದ ಅಳಿಯಂದಿರೆಲ್ಲಾ ಆ ಮಾವನ ಆಸ್ತಿಯಲ್ಲಿ ತಮಗೂ ಪಾಲಿದೆ. ಎಂದು ಹೇಳಿಕೊಳ್ಳುತ್ತಿದ್ದಾರೆ. ಅಂತೂ ಈ ಮಾವ ಅಳಿಯರ ಜಗಳದಲ್ಲಿ ಯಾರು ಉಳಿಯುತ್ತಾರೋ, ಯಾರು ಅಳಿಯುತ್ತಾರೋ ಎಂದು ಕಾದುನೋಡ ಬೇಕಾಗಿದೆ. ಅಂತೂ ಇದೊಂದು ದೊಡ್ಡ ಕಥೆಯಾಗಿದೆ. ಅಂದು ಸಾಯ ಹೊರಟ ಆ ಅಳಿಯ-ನರಸಿಂಹ- ಇಂದು ಗಟ್ಟಿಮುಟ್ಟಾಗಿದ್ದಾರೆ. ಉಳಿದವರೆಲ್ಲರೂ ತಲೆ ಕೆರೆದುಕೊಳ್ಳುವಂತಾಗಿದೆ ಈ ಘಟನೆ"—ಎಂದ.-

"ಇದೂ ಒಂದು ವಿಚಿತ್ರ ಕಥೆ" ಎಂದುಕೊಂಡೆ ನಾನು ಪತ್ರವನ್ನು ಓದುತ್ತಿದ್ದಂತೆಯೇ.

— ಕುಸುಮ ಗೋಪಾಲ.

ಆದರ್ಶ ಚರಿತೆಗಳು - ೧೮

ಶ್ರೀ ಕೇಶವ ಚಂದ್ರ ಸೇನ್

— ಶ್ರೀ ಎಸ್. ಎಂ. ಶೆಟ್ಟಿ,
ಶಿವಮುಂಜೆಪುರಂ.

ಕಲಕತ್ತೆಯ "ಸೇನ್" ವಂಶಜರು ಒಂದು ಕಾಲದಲ್ಲಿ ಬಂಗಾಲದ ರಾಜಕರ್ತರಾಗಿದ್ದರು. ಇತಿಹಾಸ ಪ್ರಸಿದ್ಧ ಬಲ್ಲಾಳ ಸೇನ್‌ನ ವಂಶದಲ್ಲಿ ಕಲಕತ್ತೆಯ "ಕೊಲೂಟೋಲಾ" ಮೊಹಲ್ಲಾದಲ್ಲಿ ಶ್ರೀ ಕೇಶವ ಚಂದ್ರರು ೧೯ನೇ ನವಂಬರ ೧೮೩೮ರಂದು ಜನಿಸಿದರು. ಇವರ ಪಿತಾಮಹರಾದ ಕಮಲ ಸೇನ್ ಅವರು ಕಲಕತ್ತೆಯ ಪ್ರತಿಷ್ಠಿತ ವಿದ್ವಾಂಸರಾಗಿದ್ದರು. ರೋಯಲ್ ಏಶ್ಯಾಟಿಕ್ ಸೊಸಾಯಿಟಿಯ ಪ್ರಥಮ ಭಾರತೀಯ ಕಾರ್ಯದರ್ಶಿಯಾಗುವ ಗೌರವ ಅವರಿಗೆ ದೊರೆತಿತ್ತು. ಕೇಶವ ಚಂದ್ರರ ತಂದೆ ಶ್ರೀ ಪ್ಯಾರೀ ಮೋಹನ್ ಸೇನ್‌ರವರೂ ಬಹು ಮಧುರ ಭಾಷಿಗಳಾಗಿದ್ದರು. ಕೇಶವ ಚಂದ್ರರು ಬಾಲ್ಯದಲ್ಲಿಯೇ ಬುದ್ಧಿವಂತರೂ, ಓಜಸ್ವಿಯೂ ಆಗಿದ್ದರು. ತನ್ನ ಮೊಹಲ್ಲಾದಲ್ಲಿ ಹಾಗೂ ಶಾಲೆಯಲ್ಲಿ ಕೂಡಾ ಅವರು ತನ್ನ ಗೆಳೆಯರ ಬಳಗಕ್ಕೆ ಮುಂದಾಳಾಗಿಯೇ ಇದ್ದರು. ಅವರಿನ್ನೂ ಚಿಕ್ಕವರಿರುವಾಗಲೇ ಪಿತ, ಪಿತಾಮಹರಿಬ್ಬರೂ ದೈವಾಧೀನರಾದರು. ಹದಿನೆಂಟರ ಹರೆಯದಲ್ಲಿ ಇವರ ವಿವಾಹವಾಯಿತು, ಆದರೆ ಇವರ ಅಂತರಾಳದಲ್ಲಿ ಜ್ಞಾನ ಪಿಪಾಸೆಯು ಬೆಳೆಯುತ್ತಾ ಹೋಗುತ್ತಿತ್ತು. ಮೊತ್ತ ಮೊದಲು ಇವರು ಕ್ರೈಸ್ತ ಧರ್ಮದತ್ತ ಆಕರ್ಷಿತರಾದರು. ಏಕೆಂದರೆ ಅವರು ಕ್ರೈಸ್ತ ಶಾಲೆಯಲ್ಲಿಯೇ ಅಧ್ಯಯನ ಗೈದಿದ್ದರಲ್ಲದೆ, ಒಬ್ಬ ಆಂಗ್ಲ ಅಧ್ಯಾಪಕನಿಂದಾಗಿಯೇ ಇವರಲ್ಲಿ ಧಾರ್ಮಿಕ ಭಾವನೆಯು ಜಾಗೃತವಾಗಿತ್ತು. ಆದರೆ, ಮಹರ್ಷಿ ದೇವೇಂದ್ರನಾಥ ಠಾಕೂರ್ ಅವರ ಸಂಪರ್ಕಕ್ಕೆ ಬರುತ್ತಲೇ ಅವರು ಬ್ರಹ್ಮ ಸಮಾಜದ ದೀಕ್ಷೆಯನ್ನು ಪಡೆದರು.

ಬ್ರಹ್ಮ ಸಮಾಜದ ಪ್ರಚಾರಕ್ಕಾಗಿ ಇವರು ದೇಶ ವಿದೇಶಗಳಲ್ಲಿ ತುಂಬಾ ಸಂಚರಿಸಿದರು ಮುಂದೆ ಮಹರ್ಷಿ ದೇವೇಂದ್ರನಾಥರಲ್ಲಿ ಹಾಗೂ ಇವರಲ್ಲಿ ಮತಭೇದವಾಯಿತು. ಫಲ ಸ್ವರೂಪವಾಗಿ ಬ್ರಹ್ಮ ಸಮಾಜದಲ್ಲಿ ಎರಡು ಬಣಗಳಾದವು. ಆ ಸಮಯದಲ್ಲಿ ದೇವೇಂದ್ರನಾಥರು ಏಕಾಂತ ಸೇವನೆಯಲ್ಲಿ ತೊಡಗಿದುದರಿಂದ ಸಮಾಜದ ತರುಣ ವರ್ಗದ ಮುಂದಾಳುತನವನ್ನು ಕೇಶವ ಚಂದ್ರರೇ ಸ್ವೀಕರಿಸಬೇಕಾಯಿತು. ಇವರು "ನವ ವಿಧಾನ"ಎಂಬ ತತ್ವ ಸಿದ್ಧಾಂತಗಳನ್ನು ನಿರ್ಮಾಣಗೈದರು.

ಶ್ರೀ ಕೇಶವ ಚಂದ್ರಸೇನ್‌ರವರು ಒಬ್ಬ ಭಾವಕ ವ್ಯಕ್ತಿ ತರ್ಕ ಪ್ರಧಾನ ಬ್ರಹ್ಮ ಸಮಾಜದ ಸಭೆಗಳಲ್ಲಿ, ಎಲ್ಲಿ ಉಪನಿಷತ್ತುಗಳ ಜ್ಞಾನ ಚರ್ಚೆಯಾಗುತ್ತಿತ್ತೋ, ಉಪಾಸನೆಯನ್ನು ಖಂಡಿಸಲಾಗುತ್ತಿತ್ತೊ ಅಲ್ಲಿ, ಮೃದಂಗ ತಾಳಗಳು ಗುಂಜಾರಗೊಳ್ಳುವಂತೆ ಮಾಡಿದ ಶ್ರೇಯಸ್ಸು ಶ್ರೀ ಕೇಶವ ಚಂದ್ರರದ್ದು. ವೈಷ್ಣವ ಭಕ್ತಿಪೂರ್ಣ ಕವಿತೆಗಳ ಗಾಯನವೂ ಇಲ್ಲಿ ನಡೆಯ ತೊಡಗಿತು ಕ್ರಿಸ್ತಧರ್ಮದಿಂದ ಅಧಿಕ ಪ್ರಭಾವಿತರಾಗಿದ್ದ ಕಾರಣ, ಈ ಭಕ್ತಿಯ ಭಾವದಲ್ಲಿ ಲೀನರಾಗಿ ಕ್ರಿಸ್ತನಿಗೆ ಆತ್ಮನಿವೇದನೆ ಮಾಡಿರಿ ಎಂದು ಬೋಧಿಸಲಾಯಿತು! ಆದರೆ ಬ್ರಹ್ಮ ಸಮಾಜದಲ್ಲಿಯೇ ಇದಕ್ಕೆ ವಿರೋಧ ತೋರಿ ಬಂತು. ನಿಜವಾಗಿ ಕೇಶವ ಚಂದ್ರರ ಮನಸ್ಸು ಭಕ್ತಿಯ ಚುಂಬಕವಾಗಿತ್ತು, ಕ್ರಿಸ್ತನು ಬರೇ ನಿಮಿತ್ತ ಮಾತ್ರನಾಗಿದ್ದನು. ಭಗವಂತನ ದಯೆಯಾಳು ತನದ ಮೇಲೆ ಅವರಿಗೆ ದೃಢ ವಿಶ್ವಾಸವಿತ್ತು. ಆದುದರಿಂದಲೇ ಅವರು ಪ್ರಾರ್ಥನೆ ಮತ್ತು ಭಕ್ತಿಯ ಸಮರ್ಥನೆ ಗೈಯುತ್ತಿದ್ದರು.

ಎಲ್ಲಾ ಧರ್ಮಗಳ ಬಗ್ಗೆ ಅವರಿಗೆ ಸಮಾನ ಆದರವಿತ್ತು. ತನ್ನ ನಾಲ್ವರು ಶಿಷ್ಯರಿಗೆ ಅವರು ಹಿಂದೂ, ಬೌದ್ಧ, ಇಸ್ಲಾಮೀ, ಕ್ರೈಸ್ತ ಧರ್ಮಗಳ ಆಳವಾದ ಅಧ್ಯಯನ ಗೈಯಲು ಅಪ್ಪಣೆಯಿತ್ತರು. ಎಲ್ಲಾ ಧರ್ಮಗಳ ತತ್ವಸಾರಗಳನ್ನು ಸಂಗ್ರಹಿಸುವುದೇ ಅವರ ಉದ್ದೇಶವಾಗಿತ್ತು.

ಇಂತಹ ಉತ್ಸಾಹೀ ಧರ್ಮ ಪ್ರಚಾರಕ ಉದಾರ ವ್ಯಕ್ತಿ ತನ್ನ ಕೇವಲ ೪೬ನೇ ವಯಸ್ಸಿನಲ್ಲಿ ಅಂದರೆ, ೧೮ನೇ ಜನವರಿ ೧೮೮೪ರಂದು ಕಣ್ಮರೆಯಾದರು. ಜೀವನದ ಅಂತಿಮ ದಿನದ ವರೆಗೂ ಅವರು ಧರ್ಮ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದರು.

ಮೂಲ: ಠಾಕುರ್ ಸುದರ್ಶನಸಿಂಹ

ನಮ್ಮ ನಮ್ಮವರು

(೧ನೇ ಪುಟದಿಂದ)

ಸಂಪಾದಕರೆಂದೂ ಅವರು ಹೆಸರು ಪಡೆದರು.

ಮುಂದೆ ಕಾಂಗ್ರೆಸಿನ ಹಲವಾರು ಚಳವಳಿಗಳಲ್ಲಿ ಭಾಗವಹಿಸಿದ ಅವರು, ಕಾಂಗ್ರೆಸ್ ತತ್ವಗಳಲ್ಲಿ ಪ್ರದರ್ಶಿಸಿದ ನಿಷ್ಠೆ ಇಂದಿಗೂ ಉಳಿದುಬಂದಿದೆ. ವೈಯಕ್ತಿಕ ಸತ್ಯಾಗ್ರಹದಲ್ಲಿ ಸೆರೆಮನೆ ಸೇರಿದ ಶೆಟ್ಟರು ಸಾಹಸಿಗಳು, ಸಾಹಿತಿಗಳು. ಅವರು ಬರೆದ ಗ್ರಂಥಗಳಲ್ಲಿ ಕೆಲವು ಪ್ರೌಢ ಶಾಲೆಯ ಉಪಪಠ್ಯ ಪುಸ್ತಕವಾಗುವ ಗೌರವವನ್ನೂ ಪಡೆದವು.

ಕಾಂಗ್ರೆಸ್ ತತ್ವಗಳಲ್ಲಿ ಅಚಲನಿಷ್ಠೆಯುಳ್ಳ ಕೆ. ಕೆ. ಶೆಟ್ಟಿ ಇವರದು ಸುಲಭದಲ್ಲಿ ವಿಶ್ವಾಸವಿಡುವ ಮತ್ತು ಅಷ್ಟೇ ಸುಲಭದಲ್ಲಿ ದ್ವೇಷ ಕಟ್ಟಿಕೊಳ್ಳುವ ಸ್ವಭಾವ. ಉನ್ನತ ವಾಗ್ಮಿಗಳೂ, ಉಜ್ವಲ ರಾಜಕಾರಣಿಗಳೂ ಆದ ಇವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಮೊದಲ ಬಾರಿ ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷರಾದಾಗ, ಮಂಡಲ ಕಾಂಗ್ರೆಸ್ ಗಳ ರಚನೆಯಲ್ಲಿ ಆಸಕ್ತಿ ವಹಿಸಿದ ಇವರು ಈಗ ಮಂಗಳೂರಲ್ಲಿ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಪರಿಷತ್ತು ಮತ್ತು ಅಖಿಲ ಭಾರತ ವಸ್ತು ಪ್ರದರ್ಶನವನ್ನು ಸಂಯೋಜಿಸುವಲ್ಲಿ ಕಾರ್ಯಶೀಲರಾಗಿದ್ದಾರೆ. ದಿ| ಎಸ್.ಎಸ್. ಕಿಲ್ಲೆಯವರೊಡನೆ ಕೂಡಿ "ಸರ್ವೋದಯ" ವೆಂಬ ಪತ್ರಿಕವನ್ನು ನಡೆಸುತ್ತಿದ್ದ ಇವರೀಗ "ರಾಷ್ಟ್ರಜ್ಯೋತಿ" ಎಂಬ ವಾರ ಪತ್ರಿಕೆಯನ್ನು ಸಂಪಾದಿಸುತಿದ್ದಾರೆ, ಹೀಗೆ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠೆ, ರಾಜಕಾರಣದಲ್ಲಿ ಕ್ರಿಯಾಪಟುತ್ವ ಸಾಹಿತ್ಯದಲ್ಲಿ ಆಸಕ್ತಿ ಮತ್ತು ಪ್ರತಿಕಾರಂಗದಲ್ಲಿ ಸೇವಾಬುದ್ಧಿಗಳಿಗೆ ಹೆಸರಾದ ಕೆ.ಕಾಂತಪ್ಪ ಶೆಟ್ಟಿಯವರದು ಬಹುಮುಖ ಪ್ರತಿಭೆ. ಅವರ ಪ್ರತಿಭೆಯು ಪ್ರಯೋಜನ ನಮ್ಮ ಜಿಲ್ಲೆಗ ಮಾತ್ರವಲ್ಲ, ರಾಜ್ಯಕ್ಕೂ ದೇಶಕ್ಕೂ ದೊರೆಯಬೇಕು.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇದೀಗ ಮೂರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಹೆಚ್ಚು ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್ ಸಿ.ಯವರ
ಕ್ರಾಂತಿಕಾರಿ ಲೇಖನಿಯ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ!	0=25
ಪುರುಷನಥು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ_
ಭಾರತ ಪುಸ್ತಕ ಭಂಡಾರ, ಉಡುಪಿ ನಟಾ

Edited, Printed & Published by K. H.Shetty, at the Navayuga Press, Udipi, S. India.

ನವಯುಗ

NAVAYUGA

REPUBLIC DAY SPECIAL 1964

ಬೆಲೆ:
೫೦
ನಯಾಪೈಸೆ

Greetings on the

From **REPUBLIC DAY**

SRI M. MADHVARAJ, *M. L. A.*

ANCHOR BRAND

Manufacturers and Exporters of Fresh Frozen Shrimp, Lobstertails, Froglegs and Canned Seafood.

Always insist on:-

[illegible]

CANNED FISH

It is Ocean fresh, Delicious and Nutritious "Anchor Brand" Canned Mackerels, Sardines, Tunameat, Seerfish and Prawns/Shrimp. Anchor Brand Flat Sardine Cans is Our Speciality.

CORONET

CANNING COMPANY

MALPE, SOUTH KANARA.

Telegrams CORONET MALPE   Telephone 33 MALPE

Proprietor. KARNATAKA FISHERIES CORPORATION

(Approved Contractors to the Government of India Department of Food, Army purchase organisation)

AND

CANTEEN STORES DEPARTMENT (INDIA)

ಪ್ರಜಾರಾಜ್ಯ ವಿಶೇಷಾಂಕ ೧೯೬೪

ಸಂಪುಟ ೪೩ ಸಂಚಿಕೆ ೨೧ & ೨೨



ನವಯುಗದ ಸ್ಥಾಪಕ
ಡಾ| ಎ. ಬಿ. ಶೆಟ್ಟರು
ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ
ಮಂತ್ರಿಗಳಾಗಿದ್ದರು.

NAVAYUGA
REPUBLIC DAY SPECIAL 1964



ಸಂಚಾಲಕ-ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

ಕರ್ತವ್ಯಶೀಲರಾಗೋಣ!

ಶ್ರೀ

ಪ್ರಪಂಚದಲ್ಲಿ ಅತ್ಯಂತ ಹಿರಿಯ ಪ್ರಜಾರಾಜ್ಯಗಳಲ್ಲಿ ಭಾರತದ ಸ್ಥಾನಮಾನಗಳೂ ಒಂದು. ದೇಶವನ್ನು ಕಾಡುತ್ತಿರುವ ಆರ್ಥಿಕ ಅಸಮಾನತೆಯನ್ನು, ಬಡತನವನ್ನು ದೂರಮಾಡಲು ಸಾಮ್ಯವಾದವೊಂದೇ ತಾರಕೋಪಾಯವೆಂದು ತಿಳಿದು ಅದರತ್ತ ಕೆಲವು ದೇಶಗಳು ಒಲಿಯುತ್ತಿರುವ ಸಂಕ್ರಾಂತಿ ಕಾಲದಲ್ಲಿ ಪ್ರಜಾತಂತ್ರಾತ್ಮಕವಾಗಿಯೂ ಸುಖೀ ರಾಜ್ಯ ಸ್ಥಾಪಿಸಬಹುದೆಂಬುದನ್ನು ತೋರಿಸುವ ಎಂಟೆದೆಯ ಭಾರತವು ವಿಶ್ವರಾಜಕಾರಣದಲ್ಲಿ ಉಜ್ವಲವೂ ತೇಜಸ್ವಿಯೂ ಆದ ತಾರೆಯಂತೆ ಕಂಗೊಳಿಸುತ್ತಿದೆ. ನಮ್ಮ ಭಾರತದಲ್ಲಿ ಪ್ರಜಾಸತ್ತೆಯು ಯಶಸ್ವಿಯಾಗಬೇಕು; ಅದಕ್ಕಾಗಿ ಎಲ್ಲರೂ ಸರ್ವಪ್ರಕಾರವಾಗಿ ದುಡಿಯಬೇಕು; ದುಡಿಮೆಯೇ ದೇವರು; ಕಾಯಕವೇ ಕೈಲಾಸವೆಂಬುದನ್ನು ಕಾರ್ಯಗತಗೊಳಿಸಬೇಕು.

ಭಾರತದ ಪ್ರಶಾಸನ ಸೂತ್ರ ಗ್ರಹಣ ಮಾಡಿದ ಕಾಂಗ್ರೆಸ್ಸು ಪ್ರಜಾಪ್ರಭುತ್ವದಲ್ಲಿ ತನಗಿರುವ ಅಚಲ ವಿಶ್ವಾಸವನ್ನು ಮತ್ತೊಮ್ಮೆ ದೃಢಪಡಿಸಿದೆ. ತನ್ನ ಭುವನೇಶ್ವರದ ಅಧಿವೇಶನದಲ್ಲಿ ಅದು ಪ್ರಜಾತಂತ್ರಾತ್ಮಕ ಸಮಾಜವಾದದ ಅಮರ ತತ್ತ್ವವನ್ನು ಸ್ವೀಕರಿಸಿದೆ. ಪ್ರಜಾತಂತ್ರವೇನೂ ಪರಿಪೂರ್ಣವಲ್ಲ, ಆದರೆ ಉಳಿದೆಲ್ಲವು ಅಧಿಕ ದೋಷಯುತವೆಂಬುದರಿಂದ ಇದನ್ನು ಪುರಸ್ಕರಿಸಬೇಕು. ಕೆಲವೆಡೆಯಲ್ಲಿ ಈ ತಂತ್ರವು ಯಶಸ್ವಿಯಾಗದ ಕಾರಣ ಅಲ್ಲಿ ಸರ್ವಾಧಿಕಾರವು ಕಾಲಿಟ್ಟುಕೊಂಡಿದೆ. ನಮ್ಮ ದೇಶದ ಸುತ್ತಮುತ್ತಲೂ ಸೈನಿಕ ಆಡಳಿತ, ನಾಮಪ್ರಜ್ಞವಾದ ಸರ್ವಾಧಿಕಾರಗಳ ಭೂತ ಗೋಚರವಾಗುವುದನ್ನು ಗಮನಿಸುವಾಗ, ನಾವು ಬಹಳಷ್ಟು ಎಚ್ಚರಿಕೆಯಿಂದ ಮುನ್ನಡೆಯಬೇಕು.

ಪಂಚವಾರ್ಷಿಕ ಯೋಜನೆಗಳಿಂದ ದೇಶದ ಪುನಾರಚನೆಯ ಕಾರ್ಯದಲ್ಲಿ ವ್ಯಸ್ತರಾದ ನಾವೀಗ ಮೂರನೆಯ ಯೋಜನೆಯ ಮಧ್ಯಾವಧಿಯಲ್ಲಿ ನಡೆಯುತ್ತಿದ್ದೇವೆ. ನಡೆಯುವಲ್ಲಿ ನಾವು ಕೆಲವೆಡೆ ಮುಗ್ಗರಿಸಿದ್ದೇವೆ, ನಿಜ; ಆದರೂ ಮತ್ತೆ ಎದ್ದು ನಡೆಯುವ ಪ್ರಯತ್ನ ನಡೆಸಿದ್ದೇವೆಂಬುದನ್ನು ಮರೆಯಬಾರದು. ನಮ್ಮ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜ್ಯಕೀಯ ಉನ್ನತಿಯನ್ನು ನಾವು ಸಾಧಿಸುತ್ತ ನಡೆದಿದ್ದೇವೆ. ಅಲ್ಪಾವಧಿಯಲ್ಲಿ ಮಹತ್ಸಾಧನೆಗಳಿಗಾಗಿ ನಾವು ಹೆಮ್ಮೆಪಡಬೇಕು; ಇದರಿಂದ ಉತ್ಸಾಹ ತಳೆಯಬೇಕು. ನಮ್ಮ ಮುಂದಿನ ಅಭಿವೃದ್ಧಿ ಕಾರ್ಯಗಳಿಗೆ ಈ ಉತ್ಸಾಹವು ದಾರಿದೀಪವಾಗಬೇಕು. ಯಾವ ಪಕ್ಷ, ಪಂಗಡ ಭೇದವನ್ನೆಣಿಸದೆ ಏಕ ಮನದಿಂದ ಏಕ ಗುರಿಯತ್ತ ನಾವು ನಡೆಯಬೇಕು.

ಪ್ರಜಾತಂತ್ರದ ನಮ್ಮ ಕಳೆದ ವರ್ಷವು ಹಲವು ಕಾರಣಗಳಿಂದ ಮಹತ್ವದ್ದು. ಶತ್ರು ಚೀನೀಯರ ವಂಚನೆ ಮತ್ತು ಪಾಕಿಸ್ತಾನದ ಕಣ್ಣುಮುಚ್ಚಾಲೆಗಳಿಂದ ನಮ್ಮ ಕಣ್ಣುಗಳು ಸರಿಯಾಗಿ ತೆರೆದಿವೆ. ಸ್ವಾತಂತ್ರ್ಯದ ಬೆಲೆಯನ್ನು ನಾವಿಂದು ಸಂಪೂರ್ಣವಾಗಿ ಅರಿತುಕೊಂಡಿದ್ದೇವೆ. ಅದಕ್ಕೆಂದೇ ದೇಶರಕ್ಷಣೆಯ ಆದ್ಯ ಕರ್ತವ್ಯದಲ್ಲಿ ನಾವಿಂದು ಮುಂದಾಗಿದ್ದೇವೆ. ಸ್ವಾತಂತ್ರ್ಯಾಪಹಾರಕರನ್ನು ಸದೆಬಡಿಯುವ ಧೈರ್ಯ ಸಾಹಸಗಳು ನಮ್ಮಲ್ಲಿವೆ—ಇದೂ ನಮ್ಮ ಅಪಾರ ಸಾಧನೆಯಲ್ಲದೆ ಮತ್ತೇನು?

ಕಾಂಗ್ರೆಸ್ಸು ತನ್ನ ಶುದ್ಧೀಕರಣದ ಹೆಸರಿನಲ್ಲಿ ಕಾಮರಾಜ ಸೂತ್ರವನ್ನು ಅನುಷ್ಠಾನಕ್ಕೆ ತಂದುಕೊಂಡಿತು, ಸ್ವಾರ್ಥ ತ್ಯಾಗದ ಪಾಠವನ್ನು ಕಲಿತುಕೊಂಡಿತು. ಇತರರಿಗೆ ಮಾರ್ಗದರ್ಶಕವಾಯಿತು. ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರ ಧೀರೋಕ್ತಿ ಜನಜನದ ಕಿವಿಗಳಲ್ಲಿಯೂ ಪ್ರತಿಧ್ವನಿಸುತ್ತಿದೆ. ದೇಶದಲ್ಲಿ [illegible] ವಿಷಮ ಪರಿಸ್ಥಿತಿಯಲ್ಲಿಯೂ ನಾವಿಂದು ಕಂಗೆಟ್ಟಿಲ್ಲ. ನಿರ್ಧಾರಿತ ಗುರಿಯತ್ತ ಇವರ ಮಾರ್ಗದರ್ಶನದಲ್ಲಿ ನಡೆಯುತ್ತಲೇ ಇದ್ದೇವೆ.

ಭಾರತದ ಸನ್ಮಿತ್ರ ಅಮೆರಿಕೆಯ ಅಧ್ಯಕ್ಷ ಜಾನ್ ಎಫ್ ಕೆನೆಡಿಯವರು ತಮ್ಮ ಸಮಾನತೆಯ ಗುರಿಗಾಗಿಯೇ ಗುಂಡಿನೇಟಿಗೆ ಗುರಿಯಾದರು. ಇದು ಪ್ರಜಾತಂತ್ರ ಭಾರತಕ್ಕಾದ ಬಹುದೊಡ್ಡ ನಷ್ಟ. ಆದರೆ, ಅವರ ಉತ್ತರಾಧಿಕಾರಿ ಲಿಂಡನ್ ಜಾನ್ಸನರು ಕೂಡಾ ಅದೇ ಸಮಾನತೆಯ ತತ್ವಗಳಲ್ಲಿ ವಿಶ್ವಾಸವಿಟ್ಟಿರುವುದು ಆದ ಗಾಯದ ಮೇಲೆ ಔಷಧ ಲೇಪನ. ಸ್ವತಂತ್ರತೆ, ಸಮಾನತೆ ಮತ್ತು ಸಹೋದರತೆಗಳನ್ನು ಮುಪ್ಪುರಿಗೊಳಿಸುವಲ್ಲಿ ಹೋರಾಡುವ ಭಾರತದೊಡನೆ ಇವರ ಸಹಾನುಭೂತಿಯಿರುವುದೆಂಬುದು ಸ್ಫೂರ್ತಿಗೊಂಡ ಸಮಾಧಾನ.

ನಮ್ಮ ಪ್ರಧಾನ ಮಂತ್ರಿ ಜವಾಹರಲಾಲರ ಇತ್ತೀಚಿನ ಅನಾರೋಗ್ಯವು ದೇಶದ ಪ್ರಜೆಗಳಲ್ಲಿ ವಿಷಣ್ಣತೆಯನ್ನುಂಟುಮಾಡಿದೆ. ನೆಹರು ಇಂದೊಂದು ಪಕ್ಷದ ವ್ಯಕ್ತಿಯಾಗಿಲ್ಲ; ಅವರು ವಿಶ್ವದ ಶಕ್ತಿ. ಅವರ ಮಾರ್ಗದರ್ಶನವನ್ನು ಭಾರತವೂ ಜಗತ್ತೂ ಇನ್ನು ಬಹುಕಾಲ ಬಯಸುತ್ತದೆ. ಇದಕ್ಕಾಗಿ ಅವರನ್ನು [illegible] ಹೊಣೆಯಿಂದು ನಮ್ಮ ಮೇಲಿದೆ. ಅವರ ಮೇಲಿನ ಕಾರ್ಯಭಾರವನ್ನು ಕಡಿಮೆ ಮಾಡುವುದು ಅಗತ್ಯವಿದೆ. ಭಾರತ ಪ್ರಜಾತಂತ್ರ ಭಾಸ್ಕರನ ಆರೋಗ್ಯವನ್ನು ವಿಶ್ವಕ್ಕೆ ವಿಶ್ವವೇ ಬಯಸುತ್ತದೆ. ಇಂದಿನ ಅಮರದಿನದಂದು ಜವಾಹರರ ಆರೋಗ್ಯಕ್ಕಾಗಿ ಪ್ರಾರ್ಥಿಸುವುದು ನಮ್ಮ ಪರಮ ಕರ್ತವ್ಯ. ನಾವೆಲ್ಲರೂ ಕರ್ತವ್ಯಶೀಲರಾಗೋಣ.

ಪ್ರಜಾರಾಜ್ಯ ದಿನದಂದು ನಮ್ಮ ಆತ್ಮವನ್ನು ನಾವೊಮ್ಮೆ ಪರಿಶೀಲಿಸೋಣ. ಅದರಲ್ಲಿ ಹುದುಗಿದ ಕೊಳಚೆಯನ್ನು ಉಜ್ಜಿ ತೊಳೆಯೋಣ. ಸ್ವತಂತ್ರ ಪ್ರಜಾಸತ್ತೆಯ ಆದರ್ಶ ಪ್ರಜೆಯಾಗಿ ಬಾಳುವುದಕ್ಕಾಗಿ ನಮ್ಮ ದುರ್ಬಲತೆಗಳೆಲ್ಲವನ್ನೂ ದೂರೀಕರಿಸಿ ಸಬಲರಾಗಿ ಧೈರ್ಯದಿಂದ ದುಡಿಯೋಣ; ಯಶಸ್ವಿ ಪಡೆಯೋಣ.

|| ಜೈ ಹಿಂದ್ ||

ಹತ್ತು ಹಲವು ವಾಣಿಜ್ಯ ಸಂಘಸಂಸ್ಥೆಗಳ
ಸ್ಥಾಪನೆ ಮತ್ತು ಬೆಳವಣಿಗೆಗಳಿಗೆ
ಕಾರಣಪುರುಷರಾಗಿ, ಶಿಕ್ಷಣ ಸಂಸ್ಥೆಗಳನ್ನು
ಕಟ್ಟಿ ಬೆಳೆಸುವುದರಲ್ಲಿಯೇ
ಹಗಲಿರುಳು ದುಡಿಯುತ್ತಿರುವ
ಭಾರತಿಯ ವರಪುತ್ರ ಸಾಹಸಿ ಉತ್ಸಾಹಿ

ಡಾ| ಟಿ. ಮಾಧವ ಪೈ

ಎಂ. ಬಿ., ಬಿ. ಎಸ್.,
(ರಿಜಿಸ್ಟ್ರಾರ್, ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್)
ಇವರ ಅಡಿದಾವರೆಗಳಲ್ಲಿ
ಅಭಿಮಾನದ ಕುರುಹೆಂದು
'ನವಯುಗ'ದ 'ಪ್ರಜಾರಾಜ್ಯ ಸಂಚಿಕೆ'ಯು
ವಿನೀತ ಸಮರ್ಪಿತ.

ಕಾಯಿದೆಗಳ ಬಾಹುಲ್ಯ ದೇಶಕ್ಕೆ ಮಾರಕ

ಲೇಖಕರು:
ಶ್ರೀ ಹನುಮಂತರಾವ್ ಮಾಂಜರೇಕರ, ಕಾರವಾರ.

'ಒಂದಾನೊಂದು ಕಾಲದಲ್ಲಿ ಒಬ್ಬ ದೊಡ್ಡ ಅರಸನಿದ್ದನು, ಅವನು ಬುದ್ಧಿವಂತನೂ ಆಗಿದ್ದನು ತನ್ನ ಪ್ರಜೆಗಳಿಗಾಗಿ ಕಾಯಿದೆಗಳನ್ನು ಮಾಡಬೇಕೆಂದು ಅವನು ಬಯಸಿದನು.

ಸಾವಿರ ಭಿನ್ನ ಭಿನ್ನ ಕೋಮುವಾರಗಳಲ್ಲಿಯ ಸಾವಿರ ಬುದ್ಧಿವಂತರು ಓಲಗಕ್ಕೆ ಬಂದು, ಅವರು ಕಾಯಿದೆಗಳನ್ನು ಮಾಡಬೇಕೆಂದು ರಾಜನು ವಿಧಿಸಿದನು

ಮತ್ತು ಇದೆಲ್ಲವೂ ನಡೆಯಿತು.

ತೊಗಲಿನ ಕಾಗದದ ಮೇಲೆ ಬರೆಯಲ್ಪಟ್ಟ ಈ ಸಾವಿರ ಕಾಯಿದೆಗಳು ಅರಸನ ಮುಂದೆ ಇಡಲ್ಪಟ್ಟವು, ಅವನು ಇವುಗಳನ್ನೋದಿ ಗೋಳೋ ಎಂದು ಅತ್ತನು ಅವನಿಗೆ ತನ್ನ ರಾಜ್ಯದಲ್ಲಿ ಸಾವಿರ ತರದ ಅಪರಾಧಗಳಿವೆಯೆಂಬ ಕಲ್ಪನೆಯೂ ಇರಲಿಲ್ಲ.

ಇದರಿಂದ ನಿರಾಶನಾದ ಅರಸನು ತನ್ನ ಕರಣಿಕನನ್ನು ಕರೆದು, ಪ್ರಸನ್ನ ಚಿತ್ತದಿಂದ ತಾನು ಹೇಳುವ ಕಾಯಿದೆಗಳನ್ನು ಬರೆದುಕೊಳ್ಳಲು ಆಜ್ಞಾಪಿಸಿದನು. ಅವನ ಕಾಯಿದೆಯು ಬರೀ ಏಳು ಕಲಮುಗಳುಳ್ಳದಾಗಿತ್ತು.

ಇದರಿಂದಾಗಿ ಆ ಸಾವಿರ ಬುದ್ಧಿವಂತರು ರೇಗಿ ಹೊರಟು ಹೋದರು. ತಾವು ರಚಿಸಿದ ಕಾನೂನುಗಳನ್ನು ತೆಗೆದುಕೊಂಡು ಅವರು ತಮ್ಮ ತಮ್ಮ ಜಾತಿಯ ಕಡೆಗೆ ಹೋದರು. ಮತ್ತು ಪ್ರತಿಯೊಂದು ಪಂಗಡವೂ ತನ್ನ ಬುದ್ಧಿವಂತರ ಕಾಯಿದೆಗಳನ್ನು ಅನುಸರಿಸತೊಡಗಿತು.

ಆದುದರಿಂದ ಇಂದಿಗೂ ಅವರಲ್ಲಿ ಸಾವಿರ ಕಾನೂನುಗಳು ಅಸ್ತಿತ್ವದಲ್ಲಿವೆ.

ಅದು ವಿಶಾಲವಾದ ದೇಶ. ಅಲ್ಲಿ ಸಾವಿರ ಕಾರಾಗೃಹಗಳಿವೆ. ಸಾವಿರ ಕಾಯಿದೆಗಳನ್ನು ಮುರಿದ ಸ್ತ್ರೀ ಪುರುಷರಿಂದ ಆ ಸೆರೆಮನೆಗಳು ತುಂಬಿವೆ.

ಅದು ನಿಜವಾಗಿಯೂ ದೊಡ್ಡ ದೇಶ, ಆದರೆ ಅಲ್ಲಿಯ ಜನರು ಈ ಕಾನೂನುಗಳನ್ನು ಮಾಡಿದ ಸಾವಿರ ಕಾಯಿದೆ ಪಂಡಿತರ ಮತ್ತು ಜಾಣನಾದ ಒಬ್ಬನೇ ಅರಸನ ಸಂತತಿಯವರಿರುತ್ತಾರೆ."

ಇದೊಂದು ಸುಪ್ರಸಿದ್ಧ ಪ್ರಸಾದಿ-ಸಾಹಿತಿಯಾದ ಖಲೀಲಜಿಬ್ರಾನನು ಬರೆದ ಕತೆ. ಕಾಯಿದೆಗಳ ಸಂಖ್ಯೆಯು ಅಧಿಕವಾಗುತ್ತ ನಡೆದಂತೆ ರಾಷ್ಟ್ರದಲ್ಲಿ ಅಪರಾಧಿಗಳ ಸಂಖ್ಯೆಯೂ ಹೆಚ್ಚುಗುತ್ತ ಹೋಗುತ್ತದೆಂದು ಜಿಬ್ರಾನನು ಈ ಕತೆಯಲ್ಲಿ ಸೂಚ್ಯವಾಗಿ ತೋರಿಸುವನು. ಇದಕ್ಕೆ ಉತ್ತಮವಾದ ಉದಾಹರಣೆ ಇಂದು ನಮ್ಮ ಭಾರತ. ದೇಶದ ಲೋಕಸಭೆ–ಮತ್ತು ರಾಜ್ಯಗಳಲ್ಲಿಯ ಹದಿನಾರು ವಿಧಾನ ಸಭೆಗಳು ಪ್ರತಿದಿನವೂ ಒಂದೋ ಎರಡೋ ಎಂಬಂತೆ ಕಾಯಿದೆಗಳನ್ನು ಪಾಸು ಮಾಡುತ್ತಲಿವೆ ಈ ಕ್ರಮವು ಅವ್ಯಾಹತವಾಗಿ ನಡೆದಿರುತ್ತದೆ, ಮುಂದೆಯೂ ನಡೆಯಲಿದೆ. ವಿಧಾನ ಸಭೆಗಳಿಗೆ ಆರಿಸಿ ಹೋದ ನಮ್ಮ ಪ್ರತಿನಿಧಿಗಳು ಈ ನಾಡನ್ನು ಅಪರಾಧಿಗಳ ಜನಾಂಗವನ್ನಾಗಿ ಪರಿವರ್ತಿಸಲು ಹೊರಟಿದ್ದಾರೋ ಏನೋ ಎಂಬ ವಿಚಾರ ದಿಗ್ಮೂಢನಾದ ಸಾಮಾನ್ಯ ಮಾನವನಿಗೆ ಹೊಳೆಯುವುದು ಸಹಜ ವ್ಯಕ್ತಿ ವಿಕಾಸದ ಮಾತುಗಳನ್ನು ನಮ್ಮ ಧುರೀಣರು ಆಡುತ್ತಿದ್ದರೂ, ಪ್ರತ್ಯಕ್ಷವಾಗಿ ಕೃತಿಯಲ್ಲಿ ಇಂದು ವ್ಯಕ್ತಿಗೆ ಬೆಲೆಯು ಇಲ್ಲ ಜನತೆಗಾಗಿ ಸರಕಾರವೋ ಸರಕಾರಕ್ಕಾಗಿ ಜನತೆಯೋ ಎಂಬುದೇ ಇಂದಿನ ಪ್ರಶ್ನೆ. ಇದಕ್ಕೆ ಸರಕಾರಕ್ಕಾಗಿ ಜನತೆ ಎಂಬುದೇ ಉತ್ತರ,

"Ignorance of law is no excuse" ಕಾಯಿದೆ ಗೊತ್ತಿಲ್ಲವೆಂಬ ಕಾರಣವನ್ನು ನ್ಯಾಯಾಲಯವು ಮನ್ನಿಸಲಾರದು ಎಂಬುದೊಂದು ಸೂತ್ರವಿದೆ ಪ್ರತಿಯೊಬ್ಬ ನಾಗರಿಕನಿಗೂ ತನ್ನ ನಾಡಿನ ಕಾಯಿದೆಗಳು ಗೊತ್ತಿವೆಯೆಂದು ನ್ಯಾಯಾಲಯವು ಗೃಹೀತ ಹಿಡಿಯುತ್ತದೆ. ಆದರೆ ಪರಿಸ್ಥಿತಿಯು ಮಾತ್ರ ಇದರ ವಿರುದ್ಧವಾಗಿರುತ್ತದೆ ನಮ್ಮ ದೇಶದಲ್ಲಿ ನೂರಕ್ಕೆ ಎಂಬತ್ತು ಜನರು ನಿರಕ್ಷರಿಗಳು; ಅಂದ ಮೇಲೆ ಕಾಲಕಾಲಕ್ಕೆ ಹೇರಳವಾಗಿ ಹೊರಬೀಳುತ್ತಿರುವ ಈ ಕಾಯಿದೆಗಳನ್ನು ಈ ನಿರಕ್ಷರಿಗಳು ತಿಳಿದುಕೊಳ್ಳುವ ಬಗೆ ಹೇಗೆ? ಜನರಷ್ಟೇ ವಕೀಲರಿದ್ದರೂ ಈ ಕಾರ್ಯ ಅವರಿಂದ ಅಶಕ್ಯ. ಜನತೆಯಿಂದ ತಿಳಿದುಕೊಳ್ಳಲು ಶಕ್ಯವಾಗದ ಈ ಕಾಯಿದೆಗಳು ಯಾರಿಗಾಗಿ?

ನಮ್ಮ ಸರಕಾರ ಹೊಸದಾಗಿ ಹಿಂದು ವಾರಸಾ ಕಾಯಿದೆಯನ್ನು ಮಾಡಿದೆ, ವಕೀಲ ವರ್ಗವನ್ನು ಬಿಟ್ಟರೆ, ಸುಶಿಕ್ಷಿತರೆಂದು ಹೇಳಿಕೊಳ್ಳುವವರಿಗೂ ಇದನ್ನು ಪರಿಚಯ ಮಾಡಿಕೊಳ್ಳುವುದು ಕಷ್ಟ. ಮೈಸೂರು ಕರ್ನಾಟಕದ ಕಾಯಿದೆಯಂತೂ ಸುಶಿಕ್ಷಿತ ವ್ಯಾಪಾರಿಗಳಿಗೂ ಒಂದು ಸಮಸ್ಯೆಯಾಗಿದೆ, ಹೀಗಾಗಿ ಎಲ್ಲ ಕಡೆಗೂ ಗೊಂದಲವೇ ಗೊಂದಲ. ಹೀಗೆ ಅನೇಕಾನೇಕ ಉದಾಹರಣೆಗಳನ್ನು ಕೊಡಬಹುದು

ಮುಂಬಾಯಿ ರಾಜ್ಯದ ನ್ಯಾಯಾಂಗ ಶಾಖೆಯ ನಿವೃತ್ತ ಉಪ ಕಾರ್ಯದರ್ಶಿಗಳಾದ ಶ್ರೀ ಆರ್. ಟಿ ಕಾತರಕಿ ಅವರು ಒಂದು ಭಾಷಣದಲ್ಲಿ ಹೀಗೆ ಹೇಳಿರುವರು: 'ಕಡಿಮೆ ಕಾಯಿದೆಯುಳ್ಳ ರಾಜ್ಯವೇ ಉತ್ತಮ ರಾಜ್ಯ ಯಾವುದೇ ಕಾಯಿದೆ ಮಾಡಬೇಕಾದರೆ ಪೂರ್ಣ ವಿಚಾರ ವಿನಿಮಯವಾಗಬೇಕು. ಆದರೆ ಈಗ ವಿಚಾರ ಬಂಗಾಡದೆ ಕಾಯಿದೆಯಾಗುತ್ತಾಗಿದೆ ದಡುಕಿನಿಂದ ಹೀಗೆ ಕಾಯಿದೆ ಮಾಡುವುದರಿಂದ ಪ್ರಜೆಗಳ ಅರ್ಥಾತ್ ರಾಜ್ಯದ ಅಹಿತವೇ ಆಗುತ್ತದೆ ಉತ್ತಮ ಪರಂಪರೆಗಳೇ ಚಿರಕಾಲ ಬಾಳಬಲ್ಲವು"

ಕಾಯಿದೆಗಳ ಬಾಹುಲ್ಯದಿಂದ ದೇಶಕ್ಕೆ ಕ್ಷೇಮವಿಲ್ಲ ನಮ್ಮ ಕಾಯಿದೆ ಪ್ರಣಾಲಿಯನ್ನು ಸುಲಭಗೊಳಿಸಿ, ಅದು ಆದಷ್ಟು ಹೆಚ್ಚು ಜನತೆಗೆ ಅರ್ಥವಾಗುವಂತೆ ರೂಪಿತವಾಗುವುದು ಅವಶ್ಯವಿದೆ ನಿರಕ್ಷರಿಗಳ ಸಾಮ್ರಾಜ್ಯವಾದ ನಮ್ಮ ನಾಡಿನಲ್ಲಿ, ಕಾಯಿದೆಗಳ ಸಾಮ್ರಾಜ್ಯದಿಂದ ದೇವರೇ ಜನತೆಯನ್ನು ರಕ್ಷಿಸಬೇಕು ಇಲ್ಲದಿದ್ದರೆ ನಮ್ಮ ದೇಶ ಅಪರಾಧಿಗಳ ಕಾರಾಗೃಹವಾಗುವುದು.

ವಂದನೆ–ಕಾಮನೆ

ನವಿನ್ನ ವಿಶೇಷ ಸಂಚಿಕೆಯ ರಚನಾ ಕಾರ್ಯದಲ್ಲಿ ಆಸಕ್ತಿಯಿಂದ ಸಹಕರಿಸಿದ ಲೇಖಕರು, ಜಾಹೀರಾತುದಾರರು, ಮುದ್ರಣಾಲಯದ ಕೆಲಸಗಾರರು ಎಲ್ಲರನ್ನೂ ಅಭಿನಂದಿಸುತ್ತೇವೆ ಇವರೆಲ್ಲರ ಸಹಕಾರ ಮುಂದೆಯೂ ಲಭಿಸಲೆಂದು ಅಪೇಕ್ಷಿಸುತ್ತೇವೆ **ಸಂ. ಸ.**

ಈ ವಾರ ಇಂದಿನ ಸಂಚಿಕೆ ಪ್ರತ್ಯೇಕ ಹೊರಡುವುದಿಲ್ಲ. —ಮ್ಯಾನೇಜರ್.

ದಾಸ ಕೀರ್ತನ ಸುಮಾವಳಿ

ರಾಗ ಮುಖಾರಿ ತಾಳ ಅಟ

ಹ್ಯಾಂಗಿರಬೇಕು ಸಂಸಾರದಲ್ಲಿ
ಹೀಂಗೆ ಬರೆದಿರಲು ಪ್ರಾಚೀನದಲ್ಲಿ || ಪಲ್ಲ ||
ಆಡುವ ಮಕ್ಕಳು ಮನೆಯ ಕಟ್ಟಿದರು
ಆಟ ಸಾಕೆಂದು ಮುರಿದು ಓಡಿದರು ||
ಸಂತೆ ನೆರೆಯಿತು ನಾನಾ ಪರಿಯಲ್ಲಿ
ಪಂಥಸ್ಥರೆಲ್ಲೋದರು ತಮ್ಮ ದಾರಿಯಲಿ ||
ಹಕ್ಕಿ ಬಂದಿತ್ತು ಅಂಗಳದಲ್ಲಿ
ಆಕ್ಷಣ ಹಾರಿಯೆ ಹೋಯಿತ್ತು ಅಲ್ಲಿ ||
ವಸ್ತಿಕಾರನು ತಾ ವಸತಿಗೆ ಬಂದ
ಹೊತ್ತಾರೆ ಎದ್ದು ತಾ ಹೊರಟೇ ಹೋದ ||
ಸಂಸಾರವೆಂಬೂ ಪಾಶಾ ನೀ ಬಿಡಿಸೊ
ಸಂಹಾರಿ ಪುರಂದರ ವಿಟ್ಠಲ ಶ್ರೀಶಾ ||

— ಪುರಂದರದಾಸ

ರಾಗ ಪೂರ್ವಿ ತಾಳ ಆದಿ

ಧನ್ಯನಾದೆ ವಿಠಲನ ಕಂಡು ||
ಧನ್ಯನಾದೆ ಕಾಮನ್ನ ಪಿತನಲಾ
ವರ್ಣ್ಯ ಮೂರುತಿಯ ಕಣ್ಣಲಿ ಕಂಡು ||
ದೇವವರೇಣ್ಯ ಸದಾ ವಿನೋದಿ ವೃಂ
ದಾವನ ಸಂಚಾರಿ ಓವನ ಕಂಡು ||
ಮಂಗಳಾಂಗ ಕಾಳಿಂಗ ಮಥನ ಮಾ
ತಂಗ ಮರದ ವರ ರಂಗನ ಕಂಡು ||
ಹಾಟಕಾಂಬರ ಕಿರೀಟಿ ಸಾರಥಿ
ತಾಟಕಾರಿ ವೈರಾಟನ ಕಂಡು ||
ಚಿಂತಿತ ಫಲದ ಕೃತಾಂತನಾತ್ಮಜಾ
ದ್ಯಂತ ರಹಿತ ನಿಶ್ಚಿಂತನ ಕಂಡು ||
ಮಾತುಳಾಂಧಕ ವಿಧಾತಪಿತಜಗ
ನ್ನಾಥ ವಿಠಲ ವಿಖ್ಯಾತನ ಕಂಡು ||

— ಜಗನ್ನಾಥದಾಸ

ರಾಗ ಕಾಂಬೋಧಿ ತಾಳ ಝಂಪೆ

ಏನ ಬೇಡಲೊ ನಿನ್ನ ದೇವಾಧಿ ದೇವಾ
ಏನಹುದೊ ನಿನ್ನೊಳಗೆ ಮಹಾನುಭಾವಾ ||
ಮನೆಯ ಬೇಡಲೆ ವಸತಿ ಹಾಸಿಗೆಯು ವಟಪತ್ರ
ವನಿತೆಯರ ಬೇಡಲೆ ಬ್ರಹ್ಮಚಾರಿ
ಧನ ಸಖ್ಯವನು ಬಯಸೆ ನೆನೆಯುವರ ಮನದಲಿಹೆ
ತಿನುವುದಕೆ ಕೇಳುವೆ ನವನೀತ ಚೋರಾ ||
ಒಡವೆಗಳ ಬೇಡುವೆನೆ ಶಿಖಿಪಿಂಛ ತುಳಸೀ ಪತ್ರ
ಕಡುಸೈನ್ಯವನೆ ಬಯಸೆ ಗೋಪಾಲಕು
ಬಡಿದ ರೂಪವ ಬಯಸೆ ನೀಲಮೇಘಶ್ಯಾಮ
ಉಡುವುದಕೆ ಕೇಳುವೆನೆ ಸ್ತ್ರೀವಸನ ಚೋರ ||
ಶಕ್ತಿಯನು ಗೋಪಿಕಾಸ್ತ್ರೀಯರಲಿ ನ್ಯಾಯಗಂಡೆ
ಭಕ್ತಿಯನು ಸತ್ಯವಂತರಗಿತ್ತಿಹೆ
ಭಕ್ತರನು ವಂಚಿಸುತ ನೀನು ಬಚ್ಚಿಟ್ಟಿರುವ
ಮುಕ್ತಿಕಾಂತೆಯ ಕೊಡು ಸುಮಿಷೆ ಶ್ರೀಕೃಷ್ಣ ||

— ಶ್ರೀಪಾದದಾಸ

ರಾಗ ಶಂಕರಾಭರಣ ತಾಳ ತ್ರಿಪುಟ

ಎನಗು ಆಣೆ ರಂಗ ನಿನಗು ಆಣೆ
ಎನಗು ನಿನಗು ಇಬ್ಬರಿಗು ಭಕ್ತರಾಣೆ ||
ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ ರಂಗ
ಎನ್ನ ನೀ ಕೈ ಬಿಟ್ಟುಪೋದರೆ ನಿನಗೆ ಆಣೆ |
ತನುಮನ ಧನದಲಿ ವಂಚಕನಾದರೆ ಎನಗೆ ಆಣೆ ರಂಗ
ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ ||
ಕಾಕು ಮನುಜರ ಸಂಗವ ಮಾಡಿದರೆನಗೆ ಆಣೆ ರಂಗ
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ ||
ಶಿಷ್ಟರ ಸಂಗವ ಮಾಡದೆ ಹೋದರೆ ಎನಗೆ ಆಣೆ ರಂಗ
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ ||
ಹರಿನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ ರಂಗ
ಪುರಂದರ ವಿಟ್ಠಲ ಒಲಿಯದಿದ್ದರೆ ನಿನಗೆ ಆಣೆ ||

— ಪುರಂದರದಾಸ

ರಾಗ ಕಾಂಬೋಧಿ ತಾಳ ಝಂಪೆ

ಶಕ್ತನಾದರೆ ನೆಂಟರೆಲ್ಲ ಹಿತರು ಅ
ಶಕ್ತನಾದರೆ ಆಪ್ತ ಜನರೆ ವೈರಿಗಳು ||
ಕಮಲಾರ್ಕನಿಗೆ ನಿರುತ ಕಡು ನಂಟತನದಿಂದ
ಕಮಲ ಜಲದೊಳಗೆ ತಾನಾಡುತಿರಲು ||
ಕ್ರಮಗೆಟ್ಟು ನೀರಿಂದ ತಡಿಗೆ ಬೀಳಲುರವಿಯು
ಅಮಿತ ಕಿರಣಗಳಿಂದ ಕಂದಿ ಹೋಗುವುದು ||
ವನವ ಸುಡುವಾಗ ಅಗ್ನಿಗೆ ವಾಯು ತಾ ಸೊಂಕೆ
ಘನ ಪ್ರಜ್ವಲಿಸುತಿಹುದು ಗಗನಕಡರಿ
ಮನೆಯ ಒಳ ದೀಪಕೆ ವಾಯು ತಾನು ಸೋಂಕಲು
ಘನ ಶಕ್ತಿ ಕುಂದಿ ಗೊಂಡು ಕಂದಿ ಹೋಗುವುದು ||
ಜಗ[illegible] ಪುರಂದರ ವಿಠಲ ಒಲಿದಿರಲು
ಭಜಿಸಂಗೆ ಸರ್ವ ಜನರೆಲ್ಲ ಹಿತರು
ಗಜವ ಕಾಯ್ದ ಸ್ವಾಮಿಯು ಕರುಣ ತಪ್ಪಿದ ಮೇಲೆ
ಮೂಜಗದ [illegible] ಕಾಯ್ವರಾರು?

— ಪುರಂದರದಾಸ

ರಾಗ ಕೇದರ ಗೌಳ ತಾಳ ಅಟ

ಕುಲಕುಲ ಕುಲವೆನ್ನುತಿಹರು
ಕುಲಯಾವುದು ಸತ್ಯ ಸಜ್ಜನರಿಗೆ ||
ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗೆ ಅರ್ಪಿಸಲಿಲ್ಲವೆ?
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣಲಿಲ್ಲವೆ? ||
ಮೃಗಗಳ ಮೈಯಲ್ಲಿ ಪುಟ್ಟಿದ ಕಸ್ತೂರಿ
ತೆಗೆದು ಪೂಸುವರು ಭೂಸುರರೆಲ್ಲರು
ಬಗೆಯಿಂದ ನಾರಾಯಣ ನ್ಯಾವ ಕುಲದವ
ಅಗಜೆವಲ್ಲಭನ್ಯಾತರ ಕುಲದವನು ||
ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವ ಪಂಚೇಂದ್ರಿಯ ಕುಲ ಯಾವುದು?
ಆತ್ಮಾಂತರಾತ್ಮ ನೆಲೆಯಾದಿ ಕೇಶವನ
ಆತನೊಲಿದಮೇಲೆ ಯಾತರ ಕುಲವೋ ||

— ಕನಕದಾಸ

REPUBLIC DAY PLEDGE

ON THIS FOURTEENTH YEAR OF OUR COUNTRY'S REPUBLIC

CHANDARANAS'

PLEDGE TO SERVE YOU BETTER

WITH THEIR

MANY-FOLD POLICIES

CHANDARANA BROTHERS

HAMPANKATTA—MANGALORE

Always A Picture Of Your Praise.....................

At The Theatre Of Your Choice.....................

JYOTHI TALKIES

MANGALORE

Equipped With The Latest Developments In Showmanship.

"ಜನತೆಯ ಕನಸುಗಳು ಬದಲಾಗಿ, ಪುನರ್ಜನ್ಮ ಹೊಂದಿದಂತಾದರೆ ಮಾತ್ರವೇ ಹೊಸ ರಾಜ್ಯಘಟನೆಯು ಜೀವಂತವೆನಿಸುವುದು." ಪ್ರಜಾರಾಜ್ಯದ ಜನ್ಮ ಜಯಂತಿಯ ದಿನ ಜವಾಬ್ದಾರಿಯುಳ್ಳ ಎಲ್ಲ ಸ್ತ್ರೀ ಪುರುಷರೂ ನಮ್ಮ ರಾಷ್ಟ್ರಪತಿಗಳ ಈ ಮೇಲಣ ಮಾತಿನ ಬಗ್ಗೆ ಆಳವಾಗಿ ವಿಚಾರ ಮಾಡಬೇಕು. ಅಹಿಂಸೆಯಿಂದಲೇ ಸ್ವರಾಜ್ಯ ಗಳಿಸಿ ನಾವೊಂದು ಹೊಸ ಹಾದಿ ತೆರೆದು ತೋರಿದೆವು; ಹಾಗೆಯೇ, ಪರಸ್ಪರ ಘರ್ಷಣೆಯಿಲ್ಲದೆ ೫೦೦ಕ್ಕಿಂತ ಹೆಚ್ಚಿನ "ದೇಶೀ ಸಂಸ್ಥಾನ"ಗಳನ್ನೆಲ್ಲ ಕರಗಿಸಿ ಏಕಭಾರತ ರಾಷ್ಟ್ರವಾಗಿ ಎರಕ ಹೊಯ್ದೆವು. ಅದೂ ಒಂದು ಅದ್ಭುತ ಘಟನೆಯೇ ಸರಿ. ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ, ಪ್ರಾಯಕ್ಕೆ ಬಂದ ಎಲ್ಲ ವ್ಯಕ್ತಿಗಳಿಗೂ ಮತಾಧಿಕಾರ ನೀಡುವ "ಪ್ರೌಢ ಮತಾಧಿಕಾರ"ವನ್ನು ಜಾರಿಗೆ ತಂದೆವು. ಇಷ್ಟೆಲ್ಲ ಪೂರ್ವಸಿದ್ಧತೆ ಮಾಡಿಕೊಂಡು, ಪಂಚವಾರ್ಷಿಕ ಯೋಜನೆಗಳ ಮೂಲಕವಾಗಿ ದೇಶದ ಜನಬಲಕ್ಕೊಂದು ಹೊಸ ಕ್ರಿಯಾಶಕ್ತಿಯನ್ನುಂಟು ಮಾಡಿ ಕೊಟ್ಟೆವು; ಹಾಗೂ ೧೭ ಸಾವಿರ ಕೋಟಿಗೂ ಮಿಕ್ಕಿದ ದೊಡ್ಡ ಭಂಡವಳವನ್ನು ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗಾಗಿ ಸೂರೆಗೈದೆವು. ಇಷ್ಟು ಮಾಡಿದರೂ, ದೇಶದ ಮೂಲಾಧಾರವಾದ ಅನ್ನಾಹಾರ ಧಾನ್ಯಗಳಲ್ಲಿ ಶೇಕಡಾ ಎರಡಕ್ಕಿಂತ ಹೆಚ್ಚು ಹುಟ್ಟುವಳಿ ಏರಲಿಲ್ಲ! ಸಾಮಾನ್ಯ ಜನರ ಸರಾಸರಿ ದಿನದ ಉತ್ಪನ್ನವು ಆರು ಆಣೆಗಿಂತ ಹೆಚ್ಚಾಗಲಿಲ್ಲ!

ಭಾರತ ಸರಕಾರದ ಆಂತರಿಕ ಸಾಲವು ಏರುತ್ತಲೇ ಬಂದಿದೆ. ಇದರ ಬಡ್ಡಿಯನ್ನು ಹುಟ್ಟಿಸಿ ಕೊಡಬಲ್ಲ ವಿಶಿಷ್ಟವಾದ ಉತ್ಪನ್ನದ ಮೂಲಗಳು ಇಲ್ಲವಾಗಿವೆ.

ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. 39/62. R. I. A. 341/63

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ —ವಾದಿ,

ಮತ್ತು

H. ಸದಾಶಿವ ಹೆಗ್ಡೆ ಕೂಡಾ —ಎದ್ರಿರು.
2ನೇ ಎದ್ರಿ ಸುಂದರಿ ಹೆಗ್ಗಡ್ತಿ— ದೇವಮ್ಮ ಹೆಗ್ಗಡ್ತಿರ ಮಗಳು— ಉಡ್ಪಿ ತಾಲ್ಲೂಕು ಹಿರೇಬೆಟ್ಟು ಗ್ರಾಮ—ಇವರಿಗೆ

ಸದ್ರಿ ಮೇಲ್ಕಂಡ O. S. 39/62ನೇ ವ್ಯಾಜ್ಯದಲ್ಲಿ ತಾರೀಕು. 19-1-1963ರಲ್ಲಿ ಆದ ಪ್ರಿಲಿಮಿನರಿ ಡಿಕ್ರಿಯಿಂದ ಕಾಣುವ ಡಿಕ್ರಿ ಹಣಕ್ಕೆ ಜವಾಬ್ದಾರಿಯಿರುವ ಸ್ಥಿರಾಸ್ತಿ ಮಾರಾಟದ ಬಗ್ಗೆ ಫೈನಲ್ ಡಿಕ್ರಿ ಅಪೇಕ್ಷಿಸಿ ಅರ್ಜಿದಾರರು ಅರ್ಜಿ ಮಾಡಿದ್ದಾರೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದಲ್ಲಿ ನೀವು ತಾ. 30-1-1964ನೇ ದಿನ್ನ ಬೆಳಿಗ್ಗೆ 11 ಗಂಟೆಗೆ ನೀವು ಸ್ವತಃ ಯಾ ವಕೀಲರ ಮುಖಾಂತ್ರವಾಗಲೀ ಹಾಜರಾಗಿ ಉದಾಹರಿಸಿಕೊಳ್ಳಬಹುದು ಆ ದಿನ ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ನಿಮಗೆ ಈ ಮೂಲಕ ತಿಳಿಯಪಡಿಸೋಣವಾಗಿಯದೆ.

M. D. Kamath,
Advacate for Patitioner.
ತಾ. 14-1-64.

ಹೊಣೆಗಾರರ ಇಂದಿನ ಚಿಂತನೆ

ದೇಶದಲ್ಲಿ ನೈತಿಕತೆಯ ಅಭಾವ ಪರಿಸ್ಥಿತಿಯು ಹರಡಿ ನಮ್ಮನ್ನು ಚಿಂತೆಗೆ ಗುರಿಮಾಡಿದೆ. ಇದರಿಂದಾಗಿ ನಮ್ಮ ಹೊಣೆಗಾರ ಮುಖಂಡರು ಅಂತರ್ಮುಖಿಗಳಾಗಿ ಹುಟ್ಟಿಕೊಂಡಿರುವ ಗಂಭೀರ ಪರಿಸ್ಥಿತಿಯನ್ನು ದೂರಮಾಡುವ ಬಗ್ಗೆ ಚಿಂತನೆ ನಡೆಸಬೇಕಾಗಿದೆ.

ಲೇಖಕರು:
ಶ್ರೀ ಜಿ. ಆರ್. ಪಾಂಡೇಶ್ವರ.
ಸಂಪಾದಕ: "ಜನತಾ", ಹೊನ್ನಾವರ.

●

ಹೀಗೆ ನಮ್ಮ ಪರಿಸ್ಥಿತಿಯು ಒಂದು ಬಗೆಯ ನಿರಾಶಾದಾಯಕ ಸ್ಥಿತಿಯಾಗಿದೆ.

ನೈತಿಕತೆಯ ಅಧಃಪತನ

ಯಾವ ದಿನ ನಾವು ಪೂರ್ಣ ಸ್ವರಾಜ್ಯ ಪಡೆದೆವೋ ಆ ದಿನವೇ ನಾವು ಹೊಸದೊಂದು ಆಂತರಿಕ ಕ್ರಾಂತಿಗೆ ಕಾಲಿಟ್ಟೆವು. ನಮ್ಮ ಆಸ್ತಿ ನಮ್ಮ ಕೈಗೆ ಬಂತೇನೋ ನಿಜ; ಅದನ್ನು ಸರಿಪಡಿಸಿ, ಉತ್ತಮ ಸ್ಥಿತಿಗೆ ತಂದರೇನೇ ನಮಗದರಿಂದ ಪ್ರಯೋಜನವಾಗುವುದು. ಆದರೆ, ನಾವು ಅದನ್ನೆಲ್ಲ ಮರೆತೆವು. "ಯಾರೋ ಗಳಿಸಿ ಕೊಟ್ಟ ಹಣ. ಹೇಗೆ ಬೇಕಾದರೂ ಖರ್ಚು ಮಾಡಿಬಿಡೋಣ" ಎಂಬ ಬೇಜವಾಬ್ದಾರಿಕೆಯು ತುಂಬಿದಂತಾಗಿದೆ. ದೇಶದ ಅಭಿವೃದ್ಧಿಗಾಗಿ ನಡೆಸಿದ ದೊಡ್ಡದೊಡ್ಡ (ಕೆರೆ, ಕಾಲುವೆ, ಅಣೆಕಟ್ಟು, ರಸ್ತೆ, ಸೇತುವೆ ಮೊದಲಾದ) ಕಾಮಗಾರಿಗಳ ಕಂಟ್ರಾಕ್ಟುಗಳಲ್ಲಿ, ಶಿಕ್ಷಣ ಪ್ರಸಾರದ ಕ್ಷೇತ್ರದಲ್ಲಿ, ನ್ಯಾಯನೀತಿಯನ್ನು ಸುರಕ್ಷಿತವಾಗಿರಿಸುವ ಪೋಲೀಸು ಖಾತೆ, ನ್ಯಾಯದಾನ ಖಾತೆಗಳಲ್ಲಿ, ಸಹಕಾರೀ ಚಳವಳಿ ಖಾತೆಯಲ್ಲಿ— ಹೀಗೆ ಎಲ್ಲ ಖಾತೆಗಳ ನಿತ್ಯ ನಡಾವಳಿಯಲ್ಲಿ ಸಂಬಂಧಪಟ್ಟ ಎಲ್ಲ ಜನರೂ, ಯೇನಕೇನ ಪ್ರಕಾರೇಣ ಆದಷ್ಟು ಬೇಗ ಆದಷ್ಟು ಹೆಚ್ಚು ಗಳಿಸುವ ದುರಾಶೆಗೆ ಬಿದ್ದರು; ಲಂಚ, ವಶೀಲಿ, ಸ್ವಜನ ಮತ್ತು ಸ್ವಜಾತಿ ಪಕ್ಷಪಾತತೆ, ಮೊದಲಾದ ದುರಾಚಾರಗಳನ್ನು ಸ್ವೇಚ್ಛೆಯಿಂದ ಮಾಡಿದರು. ಪಾಪ-ಪುಣ್ಯ, ನ್ಯಾಯಾನ್ಯಾಯ, ರಾಷ್ಟ್ರದ ಹಿತಾಹಿತ— ಎಂಬ ಸತ್ಯ ದೃಷ್ಟಿಯನ್ನು ಕುರುಡು ಮಾಡಿಕೊಂಡರು. "ಮನುಷ್ಯ ರೂಪೇಣ ಮೃಗಾಶ್ಚರಂತಿ" (ಮನುಷ್ಯ ರೂಪದಿಂದ ಚರಿಸುವ ಮೃಗಗಳಂತೆ) ಎಂದಂತೆ, ಕಾರು, ವಿಮಾನ, ವಿದೇಶ ಪ್ರವಾಸ, ಮೊದಲಾದವುಗಳ ದಂಭದರ್ಪದ ಮೃಗಗಳಂತಾದರು! ಮತಾಧಿಕಾರದ ಮಹತ್ವ ಅರಿಯದ ಜನರನ್ನು ಬಗೆಬಗೆಯ ಪ್ರಲೋಭನಗಳಿಂದ ವಂಚಿಸಿದರು. ಪ್ರಜಾಸತ್ತೆಯಲ್ಲಿ ಪ್ರಜೆಯ ಸತ್ತೆ ಇರುವುದು ಆತನ ಮತಾಧಿಕಾರದಲ್ಲಿ. ಅದನ್ನು ಜನರು ತಮ್ಮ ಅಜ್ಞಾನ, ಬಡತನ, ದುರ್ಬಲತೆಗಳಿಂದಾಗಿ ದುಡ್ಡಿದ್ದವರಿಗೆ ಮಾರಿಕೊಳ್ಳುವಂತೆ ಮಾಡಿದೆವು! ಯಾವ ದ್ರವ್ಯಾಧಿಕಾರ ಲಂಪಟರ ಪಾಪಕೃತ್ಯಗಳು ರಾಷ್ಟ್ರವನ್ನಿಂದಿನ ಅಪವಿತ್ರ ಸ್ಥಿತಿಗೆ ತಂದು ಮುಟ್ಟಿಸಿದೆಯೋ ಅವರು ಈಗ "ಮುಳುಗುವವನು ಹುಲ್ಲು ಕಡ್ಡಿ ಹಿಡಿಯುವಂತೆ" ಬ್ಯಾಂಕುಗಳ ರಾಷ್ಟ್ರೀಕರಣ, ಅಕ್ಕಿ ಗಿರಣಿಗಳ ರಾಷ್ಟ್ರೀಕರಣ, ತೋಟ (ಪ್ಲಾಂಟೇಶನ್ಸ್)ಗಳ ರಾಷ್ಟ್ರೀಕರಣ ಎಂದು, ರಾಷ್ಟ್ರೀಕರಣ ಮಂತ್ರ ಜಪಿಸಲು ತೊಡಗಿದ್ದಾರೆ! ರೋಗವೊಂದಾದಾದರೆ, ಮದ್ದು ಮತ್ತೊಂದು ಎಂಬಂತಾಗಿದೆ, ಅವರ ಈ ರಾಷ್ಟ್ರೀಕರಣ ತತ್ತ್ವ.

ಮುಖಂಡರೇ ಕಾರಣ

ಇಷ್ಟೆಲ್ಲ ಅನಾಹುತಕ್ಕೆ ನಮ್ಮ ಮುಖಂಡರೆಂಬವರಲ್ಲುಂಟಾದ ನೈತಿಕ ಅಧಃಪತನವೇ ಕಾರಣ. ಗಾಂಧಿಯವರು ಬೋಧಿಸಿದ್ದ (೧) ಸತ್ಯ (೨) ನಿಷ್ಕಪಟತೆ (೩) ದೀನದಲಿತರಲ್ಲೂ ದೇವರಿದ್ದಾನೆಂಬ ಭಾವ (೪) ವಿಶಾಲ ಮತ್ತು (೫) ದುರ್ಬಲರ ದುಃಖ ನಿವಾರಣೆ ಮಾಡುವ ಛಲ— ಈ ಸದ್ಗುಣಗಳ ಬಗ್ಗೆ ಇಂದಿನ ಪುಢಾರಿಗಳಿಗೆ ಅಂತಃಕರಣ ಪೂರ್ವಕವಾದ ಗೌರವವಿಲ್ಲ, ಅಹಂಕಾರ, ದಂಭ, ದರ್ಪ, ಅಜ್ಞರ ಶೋಷಣೆ, ದ್ರವ್ಯಾಧಿಕಾರ ದಾಹ ಎಂಬೀ ಪಂಚ ವ್ಯಾಧಿಗಳು ಇವರಲ್ಲಿ ತುಂಬಿಕೊಂಡಿವೆ. ಸಾದಾ ಜೀವನವನ್ನು ನಡೆಸುವವರನ್ನು ಕಂಡರೆ ಅವರಿಗೆ ತಮಾಷೆಯಾಗುತ್ತದೆ. ನಿಜವಾದ ಸಭ್ಯತೆ, ಸಂಸ್ಕೃತಿ, ಸತ್ಯ ಇವರಿಗೆ ಹಳೆಯ ಗೊಡ್ಡು ವೇದಾಂತವಾಗಿ ತೋರುತ್ತಿದೆ. "ಎಲ್ಲಿ ಸತ್ಯ, ಸಭ್ಯತೆ, ವಿನಯ ಇಲ್ಲವೋ ಅಲ್ಲಿ ಶೀಲ ಇರುವುದಿಲ್ಲ" ಎಂದು ಗಾಂಧೀಜಿ ಹೇಳಿದ ಮಾತು ನೆನಪಿಗೆ ಬರುವಂತಾಗುವುದು. ಈ ಶೀಲರಾಹಿತ್ಯ ಇಂದು ನಮ್ಮ ರಾಷ್ಟ್ರೀಯ ವ್ಯಾಧಿಯಾಗಿ ಬಿಟ್ಟಿದೆ. ಅಧರ್ಮವು ಧರ್ಮದ ಹೆಸರಿನಲ್ಲಿ ಕುಣಿದಾಡುತ್ತಿದೆ. ಎಲ್ಲ ಧರ್ಮಗಳಿಗೂ ಪ್ರಾಣಶಕ್ತಿಯಾದ ಸತ್ಯಧರ್ಮ (ನಿಷ್ಕಪಟತೆ)ವನ್ನು ಉಳಿಸಿಕೊಳ್ಳುವುದೇ ಇಂದಿನ ಮಹತ್ಕಾರ್ಯವಾಗಬೇಕು. ಪ್ರತಿಯೊಂದು ವೃತ್ತಿ, ವ್ಯವಸಾಯ, ಕಲೆ, ಕೈಗಾರಿಕೆಯವರಲ್ಲಿಯೂ ಪರವಂಚನೆ ಮಾಡಬಾರದೆಂಬ ಸತ್ಯ (ನಿಷ್ಕಪಟತೆ) ದೃಷ್ಟಿ ಅರಳಬೇಕು. ಆ ಸತ್ಯಧರ್ಮವಿಲ್ಲದ ಸಕಲ ಧರ್ಮಗಳೂ, ಕರ್ಮಗಳೂ ಕಾಗದದ ಹೂವುಗಳಂತೆ, ಜೀವವಿಲ್ಲದ ದೇಹಗಳಂತೆ. ವ್ಯರ್ಥವೇ ಸರಿ. ಆ ಧರ್ಮ ರಹಿತವಾಗಿ ಪಡೆಯುವ ಹೆಸರು, ಹಣ, ಆಸ್ತಿಪಾಸ್ತಿ ಮೊದಲಾದವುಗಳೆಲ್ಲ ಹೆಣಗಳಿಗೆ ತೊಡಿಸಿದ ಆಭರಣದಷ್ಟೇ ಅಸಹ್ಯವಾಗುವುವು. ಹಾಗೆ ಗಳಿಸುವವರು ಹೇಡಿಗಳು! ಅದರಲ್ಲಿ ಯಾವ ಶೂರತ್ವವಾಗಲೀ ಧೀರತ್ವವಾಗಲೀ ಇರುವುದಿಲ್ಲ. ನಮ್ಮ ಜನಾಂಗದ ಜವಾಬ್ದಾರಿಯ ಅರಿವುಳ್ಳ ಜನರು ಈ ಪ್ರಜಾರಾಜ್ಯೋದಯ ದಿನದಂದು ಅಂತರ್ಮುಖಿಗಳಾಗಿ, ವಿಚಾರಿಗಳಾಗಿ ಆಚರಿಸಬೇಕು. ಈ ಜೀವನದ ಸಿದ್ಧಿ ಯಾವುದು? ರಾಷ್ಟ್ರ ಸ್ವಾತಂತ್ರ್ಯದ ಉದ್ದೇಶವೇನು? ಜನ ಜೀವನದ ಏಳಿಗೆ ಎಂದರೇನು? ಪ್ರತಿಯೊಬ್ಬ ಜವಾಬ್ದಾರಿ ಮನುಷ್ಯನು ನಿಜವಾದ ರಾಷ್ಟ್ರೋದ್ಧಾರಕ್ಕೆ ಏನು ಮಾಡಬೇಕು? ಎಂಬುದನ್ನು ನಾವಿಂದು ಯೋಚಿಸಬೇಕು. ಅಂತಹ ಪ್ರಾರ್ಥನಾಮಯ ಬುದ್ಧಿ ಉಂಟಾಗಬೇಕು. ಸತ್ಯ ಮತ್ತು ನೀತಿಯಿಂದ ಕಸಿದುಕೊಂಡ ಸ್ಥಾನಮಾನಗಳನ್ನು ಅವುಗಳಿಗೇ ಹಿಂದಿರುಗಿಕೊಡಬೇಕು. ಇಲ್ಲವಾದರೆ ಪಾಂಡವರನ್ನು ಹೀಯಾಳಿಸಿದ ಕೌರವನ ಪರಿಸ್ಥಿತಿಯನ್ನು ನಮ್ಮಿಂದಿನ ಮುಖಂಡರು ಇದಿರಿಸಬೇಕಾಗುವುದು.

ದೈವಜ್ಞ ಬ್ರಾಹ್ಮಣ ಸಮಾಜದ ಸೇವೆ — ತಾ. 16-1-64ರಂದು ಶ್ರೀ ಸೋದೆ ವಾದಿರಾಜ ಮಠದ ಮುಖ್ಯ ಶಿಷ್ಯರಾದ ಮಂಗಳೂರು, ಉಡುಪಿ ಮತ್ತು ಕುಂದಾಪುರ ದೈವಜ್ಞ ಬ್ರಾಹ್ಮಣ ಸಮಾಜದವರು ಪರ್ಯಾಯ ಪೀಠವನ್ನೇರಲಿರುವ ಶ್ರೀ ಸೋದೆ ಮಠದ ಶ್ರೀಗಳವರಿಗೆ ವಿಶೇಷ ಪರ್ಯಾಯ ಹೊರೆಯನ್ನರ್ಪಿಸಿದರು. ವಸಂತ ಮಹಾಲಿನಲ್ಲಿ ಪರ್ಯಾಯಕೂತುಕೊಳ್ಳುವ ಮತ್ತು ಪರ್ಯಾಯ ಇಳಿಲಿರುವ ಶ್ರೀಗಳವರ ಸಮಕ್ಷಮದಲ್ಲಿ ಜರಗಿದ ಸಭೆಯಲ್ಲಿ ಪರ್ಯಾಯ ಸೋದೆ ಮಠದ ಪರವಾಗಿ ಡಾ| ಪಿ. ಜಿ. ಆಚಾರ್ಯರು ದೈವಜ್ಞ ಬ್ರಾಹ್ಮಣರಿಗೆ ಸ್ವಾಗತವನ್ನು ಬಯಸಿದರು.

ಶ್ರೀ ಸೋದೆ ಮಠಾಧೀಶರು ಮುಖ್ಯ ಶಿಷ್ಯ ವೃಂದಕ್ಕೆ ಆಶೀರ್ವದಿಸುತ್ತಾ—"ದೈವಜ್ಞ ಬ್ರಾಹ್ಮಣರ ಹಿರಿಯರೊಬ್ಬರು ಉತ್ತಮ ಶಿಲ್ಪಿಗಳು. ಅವರು ಗಣಪತಿ ವಿಗ್ರಹವನ್ನು ಮೂಡಲಿಕ್ಕೆ ಸಿದಾಗ ಆ ವಿಗ್ರಹವು ಸುಂದರ ಹಯಗ್ರೀವ ದೇವರ ಪ್ರತಿಮೆಯಾಗಿ ಪರಿಣಮಿಸಿತು. ಅವರು ಶ್ರೀ ಹಯಗ್ರೀವ ದೇವರ ಪ್ರೇರಣೆಯಂತೆ ಶ್ರೀ ಗುರುರಾಜರಿಗೆ ಆ ವಿಗ್ರಹವನ್ನು ಅರ್ಪಿಸಿ ಅಂದಿನಿಂದ ಶ್ರೀ ದೈವಜ್ಞ ಬ್ರಾಹ್ಮಣರೆಲ್ಲರೂ ಶ್ರೀ ಗುರುರಾಜರ ಸಂಸ್ಥಾನದ ಶಿಷ್ಯರಾದರು. ಅಂದಿನಿಂದಲೂ ಶ್ರೀ ಗುರುರಾಜರ ಸಂಸ್ಥಾನಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ, ಇಂದು ಪರ್ಯಾಯೋತ್ಸವಕ್ಕೆ ಉಪಯೋಗವಾಗುವಂತೆ ವಿವಿಧ ವಸ್ತುಗಳ ಹೊರೆಯನ್ನರ್ಪಿಸಿದ್ದೀರಿ. ಶ್ರೀ ಗುರುರಾಜರು ಕಾಮಧೇನುವಿನಂತೆ ಭಕ್ತರಿಗೆ ಇಷ್ಟಾರ್ಥವನ್ನು ದಯಪಾಲಿಸಿ ನೀವೆಲ್ಲರೂ ಉತ್ತಮ ಸ್ಥಿತಿಗೆ ಬರುವಂತಾಗಲೆಂದು ಹಾರೈಸಿ ದೈವಜ್ಞ ಬ್ರಾಹ್ಮಣರ ಮುಖಂಡರಾದ ಶ್ರೀ ಎಸ್. ಎಲ್. ಶೇಟ್, ಶ್ರೀ ಕೆ. ಕೆ. ಆರ್. ಶೇಟ್, ಶ್ರೀ ಯು. ಪಿ. ಎಸ್. ರಾಯಕರ್, ಶ್ರೀ ಯು. ರಾಯಪ್ಪ ಶೇಟ್, ಮತ್ತು ಶ್ರೀ ಶಿವಶೇಟ್ ಇವರುಗಳಿಗೆ ಶಾಲುಗಳನ್ನು ಹೊದಿಸಿ ಫಲ ಮಂತ್ರಾಕ್ಷತೆಗಳನ್ನು ದಯಪಾಲಿಸಿದರು. ಸಮಾಜದ ಪರವಾಗಿ ಶ್ರೀ ಕೃಷ್ಣ ನಾರಾಯಣ ಶೇಟರು ಶ್ರೀ ಶ್ರೀಗಳವರಿಬ್ಬರಿಗೂ ವಂದನಾರ್ಪಣೆ ಮೂಲಕ ಸಭಿಕರಿಗೆ ಧನ್ಯವಾದಗಳನ್ನರ್ಪಿಸಿದರು.

ತಾ. 18-1-64ರಂದು ಉಡುಪಿ ಸೋದೆ ವಾದಿರಾಜ ಮಠಾಧೀಶರಾದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು ದ್ವಿತೀಯ ಪರ್ಯಾಯ ಪೀಠಾರೋಹಣ ಮಾಡಿದ ಶುಭ ಸಂದರ್ಭದಲ್ಲಿ ದೈವಜ್ಞ ಬ್ರಾಹ್ಮಣ ಸಮಾಜ ಬಾಂಧವರು ಸಮಸ್ತ ದೈವಜ್ಞ ಬ್ರಾಹ್ಮಣರ ಪರವಾಗಿ ಶ್ರೀ ಶ್ರೀ ಯವರಿಗೆ ಅಭಿನಂದನಾ ಪತ್ರವನ್ನು ಮಂಗಳೂರು ದೈವಜ್ಞ ಬ್ರಾಹ್ಮಣರ ಸಂಘದ ಅಧ್ಯಕ್ಷ ಶ್ರೀ. ಎಸ್. ಎಲ್. ಶೇಟರು ಓದಿ ಸಮರ್ಪಿಸಿದರು.

ಹಿಂಸಾರಹಿತ ರಾಜಕೀಯ

ಪ್ರಜಾಸತ್ತೆಯ ರಾಜಕೀಯದಲ್ಲಿ ಹಿಂಸೆಗೆ ಸ್ಥಾನವೇ ಇಲ್ಲ ಆದರೆ, ಪ್ರಪಂಚದ ಅನೇಕ ಪ್ರಜಾಪ್ರಭುತ್ವಗಳಲ್ಲಿ ರಾಜಕೀಯ ಕೊಲೆಗಳು ನಡೆಯುತ್ತಲೇ ಇವೆ. ನಮ್ಮ ಭಾರತದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗುತ್ತಿದ್ದರೂ ಇಲ್ಲಿ ಈ ಬಗೆಯ ಹಿಂಸೆ ನಡೆದಿಲ್ಲ ನಡೆಯುವ ಲಕ್ಷಣಗಳೂ ಇಲ್ಲ ನಮ್ಮ ರಾಜಕೀಯ ಪ್ರಜ್ಞೆ ಮತ್ತು ಶ್ರದ್ಧೆಗಳೇ ಇಂತಹ ಹಿಂಸಾರಹಿತ ರಾಜಕೀಯಕ್ಕೆ ಕಾರಣ.

ಲೇಖಕರು: ಶ್ರೀ ಸೇನ ನಮಿರಾಜ ಮಲ್ಲ.

ಅಗೊಮ್ಮೆ ಈಗೊಮ್ಮೆ ಆಗುವ ರಾಜಕೀಯ ಕೊಲೆಗಳು ರಾಜಕಾರಣ ಪಂಡಿತರಿಗೆ ದಿಗ್ಭ್ರಾಂತಿಯನ್ನುಂಟು ಮಾಡುತ್ತವೆ. ರಾಜಸತ್ತೆ, ಕುಲೀನ ವರ್ಗದ ಆಡಳಿತೆ, ಪ್ರಜಾಸತ್ತೆ, ಸರ್ವಾಧಿಕಾರ ಮುಂತಾದ ರಾಜಕೀಯ ಆಡಳಿತೆಯ ಪದ್ಧತಿಗಳು ಕಾಲಾಂತರದಲ್ಲಿ ರೂಪುಗೊಂಡು ಬಂದಿವೆಯಲ್ಲವೆ, ಬರೀ ಒಂದು ದಿನ ಇಲ್ಲವೇ, ಬರೀ ಒಂದು ವರ್ಷದಲ್ಲಲ್ಲ. ಆದರೆ ಈ ರಾಜಕೀಯ ತತ್ವಗಳೊಡನೆ ರಾಜಕೀಯ ಕೊಲೆಗಳೂ ಹಾಸು ಹೊಕ್ಕಾಗಿ ಬಂದಂತೆ ಕಾಣುತ್ತದೆ.

ಕೊಲೆಯು ಯಾವ ರೂಪದಲ್ಲಿ ನಡೆದರೂ ಮನುಷ್ಯನ ವಿವೇಕಕ್ಕೆ ಅಗ್ರಾಹ್ಯವಾದ ಕೃತಿಯೇ ಆಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಕೊಲೆಗಾರನು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಇಲ್ಲವೇ ಕಾಯಿದೆಯ ಅಪಾದನೆಯನ್ನು ಎದುರಿಸಲು ತನ್ನ ಕೃತಿಯನ್ನು ಒಪ್ಪಿಕೊಳ್ಳದಿರಬಹುದು ಇಲ್ಲವೇ ಅದನ್ನು ಸಮರ್ಥಿಸಬಹುದ, ಆದರೆ ಅದು ಅವನ ಮನಸ್ಸಿನೊಳಗೆ ಪಶ್ಚಾತ್ತಾಪದ ಪರಿಣಾಮವನ್ನುಂಟು ಮಾಡದಿರುವುದಿಲ್ಲ. ತಾನು ಮಾಡಿದುದು ಅಕೃತ್ಯ ಅಥವಾ ದುಷ್ಕೃತ್ಯ ಎಂದು ಅವನಿಗೆ ತೋರದಿರುವುದಿಲ್ಲ. ಆದರೂ ಈ ಕೃತ್ಯ ಮನೋದೌರ್ಬಲ್ಯದ ಘಳಿಗೆಯಲ್ಲೋ, ಮನೋವಿಕಾರದ ಸಂಧಿಕಾಲದಲ್ಲೋ ನಡೆದು ಹೋಗುತ್ತದೆ.

ರಾಜಕೀಯ ಕೊಲೆಯ ಪರಿಣಾಮ ಕೇವಲ ಒಬ್ಬ ವ್ಯಕ್ತಿಯ ಮರಣ ಮಾತ್ರವಲ್ಲ. ಆ ವ್ಯಕ್ತಿಯು ಪ್ರತಿನಿಧೀಕರಿಸುವ ಎಲ್ಲ ಆದರ್ಶಗಳ ಮೇಲೂ ಧಕ್ಕೆ ತಗಲುತ್ತದೆ. ಜಾತಸ್ಯ ಮರಣಂ ಧ್ರುವಂ ಎಂಬಂತೆ ಬರೀ ಮರಣ ಯಾರಿಗೂ ಅಪರಿಚಿತವಾದುದಲ್ಲ. ಸ್ವಾಭಾವಿಕ ಕಾರಣಗಳಿಂದಲ್ಲದೆ, ಯುದ್ಧಗಳಿಂದಾಗಿ ಕೋಟ್ಯಾಂತರ ಜನರ ಮರಣಗಳಾಗುತ್ತವೆ. ಸೈನ್ಯದಲ್ಲಿ ಸೇರಿ ಹೋರಾಟದಲ್ಲಿ ಮರಣ ಹೊಂದುವುದು ರಾಜಕೀಯ ಕೊಲೆಯಾಗಿರದೆ, ಅದು ವೀರ ಸ್ವರ್ಗವೆಂದೆನ್ನಿಸಿಕೊಳ್ಳುವುದು. ಯುದ್ಧರಂಗದಲ್ಲಿ ರಾಜಕೀಯವಿಲ್ಲ. ಅರಸೊತ್ತಿಗೆಯಾಗಲೀ, ಪ್ರಜಾಸತ್ತೆಯಾಗಲೀ, ಯುದ್ಧರಂಗದಲ್ಲಿ ತನ್ನ ಎದುರಾಳಿಯನ್ನು ಸದೆಬಡಿಯುವುದೊಂದೇ ಸೈನಿಕ ನೀತಿಯಾಗಿದೆ.

ಹತ್ಯೆಗೆ ಪ್ರೇರಕವಾದ ಕ್ರೋಧವು ಮಾನವನ ಮೂಲಗುಣಗಳಲ್ಲೊಂದು. ಆದರೆ ಬರೀ ಕ್ರೋಧ ಗುಣವೊಂದರಲ್ಲೇ ಜೀವಿಸುವ ಪ್ರಾಣಿ ಕೂಡಾ ಜಗತ್ತಿನಲ್ಲಿಲ್ಲ ಮನುಷ್ಯ ಸುಸಂಸ್ಕೃತನಾದಂತೆ ಈ ಕ್ರೋಧ ಗುಣವನ್ನು ಜಗ್ಗಿಹಿಡಿಯಲು ಯತ್ನಿಸುತ್ತಾನೆ ತಾನು ಕ್ರೋಧವನ್ನು ಬಯಸಿದೆನೆಂದು ಬಹಿರಂಗ ಪಡಿಸಲು ಸದಾ ಹೆಣಗಾಡುತ್ತಾನೆ ಆದರೆ ನಾವು ಸಪ್ತಧಾತುಗಳಿಂದ ಅಗ್ನಿಯನ್ನು ಹೇಗೆ ಉಚ್ಚಾಟನೆ ಮಾಡಲು ಸಾಧ್ಯವಿಲ್ಲವೋ ಅಂತೆಯೇ ಈ ಕ್ರೋಧವನ್ನೂ ನಮ್ಮ ಗುಣದಿಂದ ಬೇರ್ಪಡಿಸಿ ನಾಶ ಮಾಡಲು ಸಾಧ್ಯವಿಲ್ಲವೆಂಬುದು ಒಪ್ಪತಕ್ಕ ಮಾತು ಕ್ರೋಧ ಇರುವವರೆಗೆ ಹತ್ಯೆಯ ಸಂಪೂರ್ಣಬಹಿಷ್ಕಾರವೂ ಅಸಾಧ್ಯ ರಾಜಕೀಯವೂ ಮನುಷ್ಯನ ವ್ಯವಹಾರಗಳಲ್ಲೊಂದು ಆದ್ದರಿಂದ ಅದು ಎಷ್ಟೇ ಉದಾತ್ತವಾದ ಶಾಸ್ತ್ರ ಅಥವಾ ವಿಜ್ಞಾನವೆಂದು ಪರಿಗಣಿಸಲ್ಪಟ್ಟರೂ ಅದರಿಂದ ಕ್ರೋಧದದ್ಯೋತಕವಾದ ಹಿಂಸೆ ವಿಮುಕ್ತನಾಗದಿರುವುದು ಶೋಚನೀಯ ಸಂಗತಿ

ಸಾಧಾರಣ ಪರಿಸ್ಥಿತಿಯಲ್ಲಿ ರಾಜಕಾರಣವು ಅಹಿಂಸಾತ್ಮಕವಾಗಿಯೇ ಉಳಿಯುತ್ತದೆ. ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ತಾತ್ವಿಕವಾಗಿ ರಾಜಕೀಯ ಕೊಲೆಗೆ ಅವಕಾಶವೇ ಇಲ್ಲವೆನ್ನಬಹುದು. ಆದರೆ ಪ್ರಜಾಸತ್ತಾತ್ಮಕ ದೇಶವಾದ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲೇ ನೂರು ವರ್ಷಗಳಲ್ಲಿ ನಾಲ್ಕು ಮಂದಿ ಅಧ್ಯಕ್ಷರುಗಳ ಕೊಲೆಯಾಯಿತು ಎಂದ ಮೇಲೆ ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಪ್ರಜಾರಾಜ್ಯಗಳ ಸ್ಥಿತಿ ಹೇಳುವುದು ಬೇಡ. ಭಾರತದಲ್ಲಿ ನಡೆದ ಕೊಲೆಗಳಲ್ಲಿ ಗಾಂಧಿಜೀಯ ಕೊಲೆ ಅತ್ಯಂತ ಅಮಾನುಷವಾದುದು. ಇದನ್ನು ರಾಜಕೀಯ ಕೊಲೆ ಎನ್ನುವುದು ಕಷ್ಟ: ಏಕೆಂದರೆ ಸದಸ್ಯತನದ ದೃಷ್ಟಿಯಿಂದ ಅವರು ಯಾವ ಪಕ್ಷಕ್ಕೂ ಸೇರದವರು ಆದರೆ ಸ್ವಾತಂತ್ರ್ಯ ದೊರಕುವ ವರೆಗಾದರೂ ಕಾಂಗ್ರೆಸಿನ ಸ್ವಾತಂತ್ರ್ಯ ಚಳವಳದ ಅನಭಿಷಿಕ್ತ ದೊರೆಯಾಗಿದ್ದರು. ಸ್ವಾತಂತ್ರ್ಯ ದೊರೆತ ನಂತರ ಅವರ ಅನುಯಾಯಿಗಳಾದ ರಾಜಗೋಪಾಲಾಚಾರಿ, ನೆಹರೂ, ಪಟೇಲ್ ಮುಂತಾದವರು ಅಧಿಕಾರ ಪದವಿಗೇರಿದರು ವಿನಃ ಗಾಂಧಿಜಿಯು ರಾಜಕೀಯ ಸ್ಥಾನಮಾನ ಬಯಸಲಿಲ್ಲ. ಮರಣ ಹೊಂದುವ ವೇಳೆಗೆ ಅವರು ಕಾಂಗ್ರೆಸ್ ಪಕ್ಷದ ರಾಜಕೀಯದ ಬಗ್ಗೆ ತಮ್ಮ ತೀಕ್ಷ್ಣ ಅತೃಪ್ತಿಯನ್ನು ವ್ಯಕ್ತಪಡಿಸಿದ್ದರಲ್ಲದೆ ಅದನ್ನು ಬರಖಾಸ್ತು ಮಾಡಬೇಕೆಂಬ ಅಭಿಪ್ರಾಯವನ್ನು ಬಹಿರಂಗವಾಗಿ ಸಾರಿದ್ದರು. ಈ ದೃಷ್ಟಿಯಿಂದ ಅವರ ಕೊಲೆ ಧಾರ್ಮಿಕ ಕೊಲೆಯೆನ್ನಬಹುದು. ಆದರೆ ಈ ಧಾರ್ಮಿಕ ಕೊಲೆಯು ಪರಧರ್ಮೀಯನಿಂದ ನಡೆಯದೆ ಸ್ವಧರ್ಮೀಯನಿಂದಲೇ ನಡೆಯಿತೆಂಬುದು ಗಮನಾರ್ಹ ಸ್ವಧರ್ಮೇ ನಿಧನಂ ಶ್ರೇಯಂ ಎಂಬ ನೀತಿ ವಾಕ್ಯವನ್ನವರು ಅವಲಂಬಿಸಿದ್ದರೂ, ಪರಧರ್ಮೋ ಭಯಾವಹಃ ಎಂಬ ಗೀತಾ ತತ್ವವನ್ನು ಅವರು ಅಲ್ಲಗಳೆಯಲು ಪ್ರಯತ್ನಿಸಿದ್ದರು. ಪರಧರ್ಮ ಸಹಿಷ್ಣುತೆಯೂ ಸ್ವಧರ್ಮದ ಅಂತರಿಕ ಅಂಶವೆಂಬುದನ್ನು ಅವರು ಪ್ರತಿಪಾದಿಸಿದುದೇ ಅವರಿಗೆ ಮಾರಕವಾಯಿತು. ಒಬ್ಬನನ್ನು ಅನ್ಯ ಧರ್ಮೀಯನು ದ್ವೇಷದಿಂದ ಕೊಲ್ಲುವುದು ಭಾರತಕ್ಕೆ ಹೊಸದಲ್ಲ. ಧರ್ಮ ದ್ವೇಷದ ದಾವಾಗ್ನಿ ಭಾರತದ ಮಾರಿಗಳಿಗೂ ಇತಿಹಾಸದುದ್ದಕ್ಕೂ ಹರಡಿರುವ ಸಂಗತಿ ಸರ್ವಶ್ರುತ, ಆದರೆ ಹೀಗೆ ಧರ್ಮದ್ವೇಷದಿಂದ ಒಬ್ಬನನ್ನು ಸ್ವಧರ್ಮೀಯನೇ ಕೊಲೆ ಮಾಡಿದ ಸಂದರ್ಭಗಳು ಇಲ್ಲವೇ ಇಲ್ಲವೆನ್ನಬಹುದು

ಅಮೇರಿಕದ ಅಧ್ಯಕ್ಷ ಕೆನೆಡಿಯವರ ಕೊಲೆಗೂ ಗಾಂಧೀಜೀ ಕೊಲೆಗೂ ಇದೇ ಸಾಮ್ಯವೆನ್ನಬಹುದು. ಕೆನೆಡಿಯವರು ಶ್ವೇತವರ್ಣೀಯರಾಗಿದ್ದರೂ ನೀಗ್ರೋಗಳಿಗೆ ಶ್ವೇತವರ್ಣೀಯರಷ್ಟೇ ನಾಗರಿಕ ಹಕ್ಕುಗಳನ್ನೀಯಬೇಕೆಂದು ಪ್ರತಿಪಾದಿಸಿದುದು ಬಿಳಿಯರಿಗೇ ಹಿಡಿಸಲಿಲ್ಲ. ಅವರನ್ನು ಸ್ವವರ್ಣೀಯನೇ ಕೊಲೆಮಾಡಿದ.

ಫ್ರಾನ್ಸಿನ ಸೆಸ್ರಿಗೂ ಮತ್ತು ಫ್ರಾನ್ಸಿನ ಡಿಗಾಲೆಯವರ ಕೊಲೆಗೆ ಮಾಡಿದ ಪ್ರಯತ್ನಗಳ ಸುದ್ದಿಗಳನ್ನು ನಮಗೆ ಕೇಳಿ ಕೇಳಿ ಸಾಕಾಗಿದೆ. ಕೆನೆಡಿಯವರ ನಂತರ ಅವರ ಪಟ್ಟಕ್ಕೇರಿದ ಜಾನ್ಸನರ ಕೊಲೆಯ ಯತ್ನವೂ ನಡೆದಿದೆ. ಇವಲ್ಲದೆ ಇಂಡೋನೇಸಿಯಾದ ಸಂಕರ್ನೋರವರು ಈ ರಾಜಕೀಯ ಕೊಲೆಯ ಬೆದರಿಕೆಯನ್ನು ಮುಂದೊಡ್ಡಿಯೇ ತಮ್ಮ ಅಧಿಕಾರವನ್ನು ಪಟ್ಟ ಭದ್ರರನ್ನಾಗಿ ಮಾಡಿಕೊಂಡಿದ್ದಾರೆನ್ನಬಹುದು. ದಕ್ಷಿಣ ವಿಯೆಟ್ನಾಮಿನಲ್ಲಿ ಡಿಯೆಮರ ಅಧಿಕಾರಾಪಹರಣದೊಡನೆಯೇ ರಾಜಕೀಯ ಕೊಲೆಯೂ ನಡೆಯಿತು ಬರ್ಮಾದ ನೆವಿನ್‌ರೂ ರಾಜಕೀಯ ಕೊಲೆಯ ಯತ್ನದಿಂದ ಹೆಚ್ಚು ದೂರಾಗಿಲ್ಲ ನಮ್ಮ ಇನ್ನೊಂದು ನೆರೆಯ ರಾಜ್ಯವಾದ ಪಾಕಿಸ್ಥಾನದಲ್ಲಿ ಲಿಯಾಕತ್ ಅಲಿಖಾನರ ರಾಜಕೀಯ ಕೊಲೆ ನಡೆಯಿತು ಮತ್ತೊಂದು ನೆರೆ ರಾಜ್ಯವಾದ ಸಿಂಹಳದಲ್ಲಿ ಬಂಡಾರ ನಾಯಿಕೆಯವರ ರಾಜಕೀಯ ಕೊಲೆಯಾಯಿತು. ದಕ್ಷಿಣ ಅಮೇರಿಕದ ಮತ್ತು ಕೆರಿಬಿಯನ್ ದ್ವೀಪಸ್ತೋಮದ ಪ್ರಜಾರಾಜ್ಯಗಳಲ್ಲಂತೂ ಕ್ರಾಂತಿ, ಅಧಿಕಾ

With the Season's Greetings

To all our Patrons & Well-wishers

From.—

K. VASUDEVA KINI

Proprietor

SHARADA INDUSTRIES

RICE, OIL, FLOUR & SAW MILLS

KATAPADI, S. KANARA.

Phone 132.

ರಾಪಹರಣ ಮತ್ತು ರಾಜಕೀಯ ಕೊಲೆಗಳು ದೈನಂದಿನ ಘಟನೆಗಳು: ಮಧ್ಯಪೂರ್ವದ ಅರಬ್ ರಾಷ್ಟ್ರಗಳ ರಾಜಕೀಯದಲ್ಲೂ ಕೊಲೆಗೆ ಮಹತ್ವದ ಸ್ಥಾನವಿರುವಂತೆ ತೋರುತ್ತದೆ. ಇತ್ತೀಚಿಗೆ ಸ್ವತಂತ್ರವಾದ ಆಫ್ರಿಕಾದ ಇತರ ರಾಜ್ಯಗಳಲ್ಲೂ ನಾಯಕರು ರಾಜಕೀಯ ಮಾರಕಾಸ್ತ್ರದಿಂದ ಹೆಚ್ಚು ದೂರಾಗಿದ್ದಾರೆಂದು ಹೇಳಲಾಗದು. ಎಲ್ಲ ಬಿಟ್ಟು ನಮ್ಮ ಸ್ವತಂತ್ರ ಭಾರತದಲ್ಲೂ ಗಾಂಧಿಜೀ ನಂತರ ಪ್ರಧಾನಿ ನೆಹರೂರನ್ನು ಕೊಲೆಮಾಡಲು ಒಬ್ಬ ದಿಕ್ಕಿಲ್ಲದ ತಲೆತಿರುಕನು ಯತ್ನಿಸಿದುದು ಉಲ್ಲೇಖನೀಯವಾಗಿದೆ.

ಆದರೂ ಕೂಡಾ ಸರ್ವ ಸಾಮಾನ್ಯವಾಗಿ ನಮ್ಮ ಪ್ರಜಾರಾಜ್ಯದಲ್ಲಿ ರಾಜಕೀಯ ಕೊಲೆಯ ಪ್ರವೃತ್ತಿಯು ಅಭಾವವಿರುವುದು ನಿಜವಾಗಿಯೂ ಹೆಗ್ಗಳಿಕೆಯ ಸಂಗತಿಯೆನ್ನಬೇಕು. ನಮ್ಮಲ್ಲಿಯೂ ಹಿಂಸೆಗೆ ಹೇಸದ ಧ್ಯೇಯವನ್ನೊಳಗೊಂಡ ರಾಜಕೀಯ ಪಕ್ಷಗಳಿವೆಯೆನ್ನದೆ ವಿಧಿಯಿಲ್ಲ. ಕಾರ್ಯಕರ್ತರ ಮಟ್ಟದಲ್ಲಿ ರಾಜಕೀಯ ಕೊಲೆಗಳಾಗುತ್ತಿವೆಯೆಂಬ ಆಪಾದನೆಗಳು ಉತ್ತರ ಪ್ರದೇಶದಿಂದ ಇತ್ತೀಚೆಗೆ ಕೇಳಿ ಬರುತ್ತಿವೆಯೆನ್ನೋಣ. ಆದರೆ ಇಂಥ ಆಪಾದನೆಗಳು ಸಾಕಷ್ಟು ಸಿದ್ಧವಾಗಿಲ್ಲ. ಮತ್ತೆ ಕೆಲವೆಡೆ ರಾಜಕೀಯದೊಡನೆ ವ್ಯಕ್ತಿದ್ವೇಷ, ಧರ್ಮದ್ವೇಷಗಳು ಕೂಡಿ ಕೊಲೆಗಳಾಗಿದ್ದಿರಬಹುದು. ಕೇವಲ ರಾಜಕೀಯ ದ್ವೇಷದಿಂದಲೇ ನಮ್ಮಲ್ಲಿ ರಾಷ್ಟ್ರೀಯ ಇಲ್ಲವೇ ರಾಜ್ಯಮಟ್ಟದಲ್ಲಿ ಕೊಲೆಗಳು ನಡೆದಿಲ್ಲವೆನ್ನಬಹುದು.

ನಮ್ಮಲ್ಲಿ ಮೂರು ಮಹಾ ಚುನಾವಣೆಗಳು ನಡೆದುವು. ಹೆಚ್ಚಿನ ಸ್ಥಾನಗಳಲ್ಲಿ ಅತ್ಯಂತ ಬಿರುಸಾಗಿಯೇ ಪ್ರಚಾರ-ಅಪಪ್ರಚಾರಗಳ ಸ್ಪರ್ಧೆ ನಡೆದಿತ್ತು. ಪ್ರತಿಯೊಬ್ಬ ಸ್ಪರ್ಧಾಳುವೂ ಗಣನೀಯ ಪ್ರಮಾಣದಲ್ಲಿ ಹಣವನ್ನು ವೆಚ್ಚ ಮಾಡಿದ್ದಾನೆ. ಹಿಂಸೆಗೆ ಕೈಯಿಕ್ಕುವುದಾದರೆ ನಮ್ಮಲ್ಲಿ ಅದಕ್ಕೆ ಅನುಕೂಲಿಸುವ ಗೂಂಡಾ ಪ್ರವೃತ್ತಿಯವರಿಗೂ ಕಡಿಮೆಯಿಲ್ಲ. ಆದರೂ ಅಲ್ಲೊಂದು ಇಲ್ಲೊಂದು ಏನೋ ಅಲ್ಪ ಪ್ರಮಾಣದ ಹಿಂಸೆ ನಡೆದ ಘಟನೆಗಳಿರಬಹುದು ವಿನಃ ಮಾರಕ ರೂಪದ ದುಷ್ಕೃತ್ಯಗಳು ನಡೆಯಲಿಲ್ಲವೆನ್ನುವುದನ್ನು ನಾವು ಒಪ್ಪಲೇ ಬೇಕಾಗಿದೆ. ನಮ್ಮ ಕಮ್ಯುನಿಸ್ಟ ಪಕ್ಷವಂತೂ ದೇಶವು ಸ್ವಾತಂತ್ರ್ಯಗಳಿಸಿದ ಬಳಿಕವೂ ಹೈದರಾಬಾದಿನ ತೆಲಂಗಾಣದಲ್ಲಿ ಎರಡು ಮೂರುವರ್ಷ ಹಿಂಸಾಚರಣೆಯಲ್ಲಿ ಮುಗ್ನವಾಗಿತ್ತು. ಆದರೆ ವೈಧಾನಿಕ ರಾಜಕೀಯದಲ್ಲಿ ಭಾಗವಹಿಸುವಾಗ ಅದು ಕೂಡ ತನ್ನ ಹಿಂಸಾ ಪ್ರವೃತ್ತಿಯನ್ನು ಬಹಿಷ್ಕರಿಸುವುದರಲ್ಲಿ ಯಶಸ್ವಿಯಾಗಿದೆ. ಹೀಗೆ ಮತ ಪೆಟ್ಟಿಗೆಯ ಶಕ್ತಿಗೆ ನಮ್ಮಲ್ಲಿ ಅಗ್ರಸ್ಥಾನ ದೊರಕಲು ಸಾಧ್ಯವಾಗಿದೆ. ಬಾಯಲ್ಲೇನೋ ಪ್ರಧಾನಿಯವರು ಕೂಡಾ ಒಮ್ಮೊಮ್ಮೆ ಆರ್ಥಿಕ ಸುಧಾರಣೆಯು ಕ್ಷಿಪ್ರದಲ್ಲಿ ಆಗದಿದ್ದರೆ ಜನರು ದಂಗೆಯೇಳ್ದಾರು ಎಂದು ಉದ್ಗರಿಸುತ್ತಾರೆ. ಆದರೆ ಈ ಮಾತು ನಿಜವಾಗುವ ಲಕ್ಷಣ

ಈ ವರೆಗೆ ತೋರಿಬಾರದಿರುವುದು ನಮ್ಮ ಪ್ರಜಾರಾಜ್ಯದ ಪ್ರಜಾಸತ್ತಾತ್ಮಕ ತತ್ವಗಳ ಯಶಸ್ಸಿನ ದ್ಯೋತಕವೆನ್ನುವುದರಲ್ಲಿ ಸಂಶಯವಿಲ್ಲ. ನಮ್ಮಲ್ಲಿ ಎಷ್ಟೋ ಹಕ್ಕು ಬಾಧ್ಯತೆಗಳು ಶಾಸನ ಯುಕ್ತವಾಗಿ ಸ್ಥಿತ್ಯಂತರವಾಗುತ್ತಿವೆ, ಪಟ್ಟಭದ್ರಶಕ್ತಿಗಳ ಪ್ರಭಾವಕ್ಕೆ ಧಕ್ಕೆ ಬರುವಂಥ ಕ್ರಾಂತಿಕಾರಿ ಶಾಸನಗಳು ಬಂದಿವೆ, ಬರುತ್ತಿವೆ. ಆದರೂ ಯಾರೂ ರಾಜಕೀಯ ಹಿಂಸೆಯನ್ನು ಪ್ರಯೋಗಿಸಿ ಪ್ರತಿಭಟನೆಯನು ವ್ಯಕ್ತ ಮಾಡುವ ಹಮ್ಮಿಗೆ ತೊಡಗದಿರುವುದು ನಮ್ಮ ರಾಜಕೀಯ ಪ್ರಜ್ಞೆ ಮತ್ತು ಶ್ರದ್ಧೆಗಳ ಆಳವನ್ನು ವಿಶದೀಕರಿಸುತ್ತದೆನ್ನಲಡ್ಡಿಯಿಲ್ಲ.

ವೀರ ಸಂಕಲ್ಪ

೧

ಹೊಸ ವರುಷ ಬಂದಿಹುದು
ಹೊಸ ಹರುಷ ತಂದಿಹುದು
ಬಿಸಗೆಯನು ಹೊಂದಿಹುದು ಆದರೇನು?
ಮಸಗಿ ನಮ್ಮಯ ನೆಲವ
ವಶಗೈದು ತಾ ಗೆಲವ
ಪಸರಿಸನ ಛಲಬಲವ ನೋಡಲೇನು?

೨

ಚೀನಿ ರಕ್ಕಸ ಧೂರ್ತ
ಮಾನಗೇಡಿಯು ಸ್ವಾರ್ಥ
ಮಾನವನು ತನುವ್ಯರ್ಥ ಬಗೆದು ದ್ರೋಹ.
ತಾನೆ ಕೂಡುತ ಪಡೆಯ
ಹಾನಿ ಮಾಡುತ ಗಡಿಯ
ಕಾಣಿಸಿಹ ತನ್ನೊಡೆಯ ರಾಜದಾಹ.

೩

ಗಣರಾಜ್ಯ ನಮ್ಮದಿರೆ
ಗಣನೀಯ ರಾಷ್ಟ್ರವಿರೆ
ಕೆಣಕುತ್ತ ವೈರಿಬರೆ ಭೀರುತನದಿ
ಮಣಿಯುವುದು ತರವಲ್ಲ
ಮಣಿದೆವಾದರೆ ಸಲ್ಲ
ಗಣಿಸುವುದು ಈ ಸೊಲ್ಲ ಶೂರತನದಿ.

೪

ಭಾರತಾಂಬೆಯ ನೋವು
ಧೀರ ಯೋಧರ ನಾವು
ವೀರರಾಗಿಹ ನಾವು ಸಹಿಸೆವೈಸೆ.
ಸೇರುತೊಂದಾಗುತಲಿ
ತೂರಿಬಹ ವೈರಿಯಲಿ
ಹೋರಾಡಿ ಶೌರ್ಯದಲಿ ಗೆಲುವೆವೈಸೆ.

೫

ಜನನ ದೇಶವು ಹಿರಿದು
ತನುವಿನಾಸೆಯು ಕಿರಿದು
ನೆನಸಿ ನೆರೆಯುನಿರಿಸು ಗೆಲುವಪಣವ
ಅನುಮಾನಿಸನೆ ಮಾಡಿ,
ಜನನಿ ಋಣ ಹೋಗಾಡಿ
ಅನುವರದಿ ಹೋರಾಡಿ ದುಡಿದು ದಣಿವ.

— ಕೆ. ರಘುರಾಮ ಶೆಟ್ಟಿ

INSIST ON

WATERFALLS–GLENDALE–BROOKLANDS

TEAS

POPULAR EVERYWHERE

You can book your orders through:—

PUNJA & CO., MULKI,

Phone No. Off: 26, Res: 36.

KOTHARI & SONS, MADRAS.

MODERN GARAGE

UDIPI

(ESTD: 1950)

Offers

The Car owners, the service of a well equipped

SERVICE STATION

Supervision by

Technically Qualified Staff

Phone: 65.

Greetings on the

REPUBLIC DAY

From:-

NAVA-JEEVAN TILE WORKS

PUTTUR, KALLIANPUR P. O., S. K.

ಪ್ರಜಾರಾಜ್ಯದಿನದ ಶುಭಾಶಯಗಳು!

ಭಾರತ ಪ್ರಜಾರಾಜ್ಯ. ಅದನ್ನು ಸುಭದ್ರ
ಗೊಳಿಸುವುದು ನಮ್ಮ ಕರ್ತವ್ಯ. ಅದಕ್ಕಾಗಿ
ಅತ್ಯಧಿಕವಾಗಿ ಉತ್ಪತ್ತಿ ಮಾಡೋಣ!
ಕೈಗಾರಿಕೆ ಮತ್ತು ಕೃಷಿ ಎಲ್ಲ ಕ್ಷೇತ್ರ
ಗಳಲ್ಲೂ ತ್ವರಿತ ಪ್ರಗತಿ ಸಾಧಿಸೋಣ!

ದೀರ್ಘ ಕಾಲದ ಅನುಭವದ ಫಲವಾಗಿ ತಯಾರಾಗುತ್ತಿರುವ ಉತ್ತಮ ಹಂಚುಗಳನ್ನು ಎಲ್ಲಿಡೆಗೂ ನಾವು ಶೀಘ್ರವಾಗಿ ಪೂರೈಸುತ್ತೇವೆ.

ನವಜೀವನ ಟೈಲ್ ವರ್ಕ್ಸ್

ಪುತ್ತೂರು, ಕಲ್ಯಾಣಪುರ (ಉಡುಪಿ)

ಬಿ. ಜಗಜ್ಜೀವನದಾಸ ಶೆಟ್ಟಿ, L. M. E.,
ಮ್ಯಾಲಕರು.

INDIA'S MOST DURABLE & ECONOMICAL

DIESEL TRUCK & BUS CHASSIS.....

TATA - MERCEDES - BENZ

DIESEL TRUCKS & BUS CHASSIS

Rs. 250

GETS YOU A NEW 1963

himalux

By a HIMALUX the refrigerator— you can afford

HIMALUX is the registered trade mark of Himalux Private Limited

Manufactured by
VINAR LTD
Calcutta-16

ON HIRE-PURCHASE

Himalux, the quality refrigerator, can be yours now for a down payment of only Rs 250 (plus local taxes). Pay the balance in 12 monthly instalments of Rs. 87·50 nP. Lose no time – check with your nearest Himalux dealer today.

Telephone **362 & 186** Telegram **"ARVIND"**

ARVIND MOTORS

BALMATTA ROAD : : MANGALORE-1.

ವಿವೇಕಸ್ಮೃತಿ ‡

ಓಂ ಭೂಮಿಗೆ ಓಂ ಸ್ವಾಮಿಗೆ ಓಂ ಸತ್ಯಕೆ ಜಯತು
ಓಂ ಕರ್ಮಕೆ ಓಂ ಧರ್ಮಕೆ ಓಂ ಶಾಂತಿಗೆ ಜಯತು
ಓಂ ಶಾಂತಿಃ ಶಾಂತಿಃ ಶಾಂತಿಃ

o o o o

ಸತ್ಯಲೋಕದಲಿ ಪದ್ಮ ಪೀಠದಲಿ
ಧ್ಯಾನಲೀನನಿರೆ ಬ್ರಹ್ಮ;
ದಿವ್ಯದೃಷ್ಟಿಯಿಂ ನವ್ಯ ಸೃಷ್ಟಿಯಂ
ಗೈವ ಚಿಂತನವೆ ಕರ್ಮ.
ಮಹಿಮ ಹಿಮಗಿರಿಯ ಗಹನಗಹ್ವರದಿ
ದನಿಯು ಮೊರ್ದನಿಸಿ ಬಂತು;
ವೇದ ಮಾತೆಯರು ರೋದಿಸುತ್ತಿಹರು
ಕರ್ಣಕುಹರ ಕೀಲಿಸಿತು.
"ಧರ್ಮ ಕೆಟ್ಟಿತೋ ಕರ್ಮ ಬಿಟ್ಟಿತೋ
ದೇವರಿಳಿದ ನೆಲದಲ್ಲಿ;
ಭೂತನರ್ತನವು ಪ್ರೇತವರ್ತನವು
ರಕ್ತಬೀಜ ಕುಲವಿಲ್ಲಿ!
ಸಾಮಗಾನದಲಿ ಸೋಮಪಾನದಲಿ
ಹಿಗ್ಗಿ ಬಾಳ್ದ ಜೀವನದಿ;
ಅಡಿಮೆ ಆತ್ಮನೆಗೆ ಮಡಿಮೆ ದೀನತೆಗೆ
ಬತ್ತಿತಯ್ಯೊ ಜೀವನದಿ.
ಯ ಏಷ ಸುಪ್ತೇಷು ಜಾಗರ್ತಿ ಕಾಮಂಕಾಮಂ
ಪುರುಷೋ ನಿರ್ಮಿಮಾಣಃ
ತದೇವ ಶುಕ್ರಂ ತದ್ ಬ್ರಹ್ಮ ತದೇವಾಮೃತ
ಮುಚ್ಯತೇ |
ತಸ್ಮಿನ್ ಲೋಕಾಃ ಶ್ರಿತಾಃ ಸರ್ವೇ ತದು
ನಾತ್ಯೇತಿ ಕಶ್ಚನ |
ಏತದ್ ವೈ ತತ್ ||

—ಇತಿ ಶ್ರುತಿಯ ಘೋಷದಲಿ, ಸಾವಿತ್ರಿ ಗಾಯತ್ರಿ,
ಪುತ್ರಿಯರು ರೋದಿಸೆ, ಪಿತಾಮಹಂ ಕೇಳ್ದಃ
ಪಾಪಲೇಪದಲಿ ಕಂಪಿಸಿತೆ ಪುಣ್ಯ ಧರಿತ್ರಿ?
ಅಭಯ ಶಿಶುವಂ ರೂಪಿಸಿದ ಮುದವತಾಳ್ದು
ಅಷ್ಟವಸುಗಳ ಭಾಗ್ಯ; ಸಪ್ತರ್ಷಿಗಳ ತಪಸು
ನಾರದನ ತುಂಬುರನ ಗಾನ ಶಕ್ತಿಃ
ಚಂದ್ರಮ ಕಲಾ ಪುಂಜ, ರವಿರಾಜ ತೇಜಸ್ಸು
ರಮೆಯ ರೂಪವು, ಶಾರದೆಯ ವಚೋಯುಕ್ತಿ.
ಮೂರು ಲೋಕಗಳ ಸರ್ವಸ್ವಗಳ ಸಾರಗಳ
ಸಂಗ್ರಹಿಸಿ ಚಿತ್ರಿಸಿದ ಮೂರ್ತಿಯಿಂತು;
ನೂರು ವರ್ಷಗಳ ಹಿಂದಿನ ಕಾಲ, ಬಂಗಾಳ
ಭುವನೇಶ್ವರಿಯ ಗರ್ಭಕಿಳಿದು ಬಂತು.
ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮ ಧರ್ಮಸ್ಯ ತದಾತ್ಮಾನಂ ಸೃಜಾ
ಮ್ಯಹಂ.

II

ದಕ್ಷಿಣೇಶ್ವರದಿ ಪರಮಹಂಸನಿಹ
ರಾಮಕೃಷ್ಣ ಗುರುವರ್ಯ;
ಕಾಳಿ ಕರುಣೆಯನ್ನುಂಡು ಮೈಗೊಂಡು
ಕಂಡು ದೇವ ಹಿತಕಾರ್ಯ;
ಅರಸುತಿದ್ದನೋ ಹರಸುತಿದ್ದನೋ
ತಾಯಿ ಮಗುವನೆಂತಂತೆ;
ಗುರುವೆ ನಿನ್ನಡಿಗೆ ಬರುವೆನೆಂದನು
ಯುವ ನರೇಂದ್ರಗೆ ಚಿಂತೆ:

ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ
ಅಸ್ತೀತ್ಯೇಕೇ ನಾಯ ಮಸ್ತೀತಿ ಚೈಕೇ |
ಏತದ್ ವಿದ್ಯಾ ಮನು ಶಿಷ್ಟ ಸ್ತ್ವಯಾಹಂ
ವರಾಣಾ ಮೇಷ ವರ ಸ್ತೃತೀಯಃ
ಹಿಂದೆ ಯಮನಿಂದ ಪಡೆದ ವರದಿಂದ
ಪ್ರೀತ ನಚಿಕೇತನಂತು;
ಪರಮಹಂಸ ಗುರು ಪಾದಕಮಲ ಮಧು
ಭ್ರಮರನಾದನವನಂತು.
ಗಿರಿಯನೇರಿದನು ಸಿಂಹ ಧೈರ್ಯದಲಿ
ಭೀರು ಹೃದಯ ಬೆರಗಾಗೆ;
ಕಡಲ ದಾಂಟಿದನು ವಜ್ರ ವೀರ್ಯದಲಿ
ಗರುಡ ಪವನಜರ ರಾಗೆ.
ಧೀರರಾಗಿ ಶ್ರದ್ಧೆಯಲಿ ಸಾಗಿ ಮುನ್
ನುಗ್ಗಿ ಹೋಗಿ ಜಯ ಮುಂದೆ;
ಮಾನವನ ಶಕ್ತಿ ದೇವರಲಿ ಭಕ್ತಿ
ಕೂಡಿರಲು ಶಕ್ತಿ ನಿಜವೆಂದೆ.
ಅಂಜದಡಿಯ ನಿಡು, ಪಾಪ ಭೀತಿ ಬಿಡು,
ನೋಡು ಮುಂದಿಹುದು ಲಕ್ಷ್ಯ;
ದೇವತತ್ವದಂಶ ಮಾನವನ ವಂಶ
ಸೋಮ್ಯಿಗದುವೆ ಭಾಷ್ಯ.
ಉತ್ತಿಷ್ಠತ ಜಾಗ್ರತ
ಪ್ರಾಪ್ಯವರಾನ್ನಿ ಬೋಧತ
ಕ್ಷುರಸ್ಯಧಾರಾ ನಿಶಿತಾ ದುರತ್ಯಯಾ
ದುರ್ಗಂ ಪಥ ಸ್ತತ್ ಕವಯೋ ವದಂತಿ.
ಇದು ಯುಗ ಯುಗದ ವಾಣಿ, ಶ್ರೀ ವಿವೇಕಾನಂದ
ಗುರು ಘೋಷಿಸಿದ ಚಿರ ನವೀನ ತತ್ವ;
ವೇದ ವೇದಾಂತ ಸಿದ್ಧಾಂತ ಋಷಿ ಗೀರ್ವಾಣಿ
ಭಾರತ ನವೋದಯದ ವಿಜಯ ಸತ್ವ.

III

ಬಂಗಾರದ ಬಂಗಾಳದಿ
ಜಾಜ್ವಲಿಸಿದ ಜ್ಯೋತಿ.
ಮೂಡಲು ಪಡುವಲು ಹಬ್ಬಿತು
ರವಿ ಚಂದ್ರಮ ಕಾಂತಿ.
ಈ ಬೆಳಕನು ಹೊಂಬೆಳಕನು
ಕಂಡುಂಡವರಾವು:
ಶತಮಾನದ ಸ್ಮೃತಿಗಾನದಿ
ಕವಿ ಕಾಣ್ಕೆಯ ಹೂವು.
ದೀನರು ದಲಿತ ದರಿದ್ರರು
ದೇವರದೇ ರೂಪು;
ತಳಿರೇ ಹೂವೇ ಹಣ್ಣೇ
ಅರ್ಪಿಸಲದೆ ಸಾಕು.
ಮೇಲುಂಟೇ ಕೀಳುಂಟೇ
ಹಂಲೀಲಾರಂಗ;
ಪೆರ್ದೆರೆಯೋ ಕಿರುದೆರೆಯೋ
ಸುರಸಿಂಧು ತರಂಗ,
ಕರಿಜನರದು ಬಿಳಿಜನರದು
ಕೆನ್ನೆತ್ತರುವೊಂದು;
ಒಂದೇ ಜಗ, ಒಂದೇ ಜನ
ಪರಮಾತ್ಮನ ಬಿಂದು.
ಅಧ್ಯಾತ್ಮದ ಲೌಕಿಕದಲಿ
ಬಿಂಬಿಸಿದೈ ಗುರುವೆ;
ಶಿಲೆಯೆಡೆಯಲಿ ಹೊನ್ನಿನ ಹುಡಿ
ತುಂಬಿಸಿ ತೋರಿರುವೆ.
ಜಾಗ್ರತ್ ಸ್ವಪ್ನಸುಷುಪ್ತಿಷು ಸ್ಫುಟತರಾಯಾ
ಸಂವಿದುಜ್ಜೃಂಭತೇ
ಯಾ ಬ್ರಹ್ಮಾದಿ ಪಿಪೀಲಿಕಾಂತ ತನುಷು
ಪ್ರೋತಾಜಗತ್ಸಾಕ್ಷಿಣೀ
ಸೈವಾಹಂ ನಚದೃಶ್ಯವಸ್ತ್ವಿತಿ ದೃಢ ಪ್ರಜ್ಞಾಪಿ
ಯಸ್ಯಾಪಿಚೇತ್
ಚಾಂಡಾಲೋಸ್ತು ಸತು ದ್ವಿಜೋಸ್ತು
ಗುರುರಿತ್ಯೇಷಾ ಮನೀಷಾ ಮಮ.

ಕವಿ:
ಶ್ರೀ ಕಂಯ್ಯಾರ ಕಿಞ್ಞಣ್ಣ ರೈ. ಎಂ. ಎ.

IV

ಬಾಳಿಲ್ಲವು ಬೆಳಕಾಯಿತು
ರವಿತೇಜನ ಕಿರಣ;
ಲೋಕದಿ ನಾಕವು ನಲಿಯಿತು
ಯತಿರಾಜನ ಕರುಣ.
ಎದೆಯೆದೆಯೂ ಗಂಡೆದೆಯೆನೆ
ಭೀರುತೆ ಬೆದರಿತ್ತು;
ಜನ ಜನವೂ ಭೀಮಾರ್ಜುನ
ಪೌರುಷ ಮಸಗಿತ್ತು.
ಪಾಷಾಣದಿ ಪೂವರಳಿತು
ನಿನ್ನ ಮೃತಸ್ಪರ್ಶ;
ಮೂರ್ಖತೆ ವಿನಯವನಪ್ಪಿತು
ಜಯಸತ್ಯಕೆ ಹರ್ಷ.
ನೀ ಹಚ್ಚಿದ ಬೆಂಕಿಯ ಕಿಡಿ
ಸ್ವಾತಂತ್ರ್ಯಜ್ವಾಲೆ;
ನೀ ಬಿಚ್ಚಿದ ನಾಡಿನ ಗುಡಿ
ಜಾನೆತ್ತರ ಲೀಲೆ
ಹೊರ ಹೊರಗೆಯೆ ಹಿರಿ ಹಿಗ್ಗುತ
ಪ್ರೇಯವ ಮೆಚ್ಚಿಹೆವು;
ಒಳವೊಳಗೆಯೆ ಕೊಳೆ ತುಂಬುತ
ಶ್ರೇಯವ ಮುಚ್ಚಿಹೆವು!
ಹಿರಣ್ಮಯೇನ ಪಾತ್ರೇಣ
ಸತ್ಯ ಸ್ಯಾಪಿ ಹಿತಂ ಮುಖಂ
ತತ್ತ್ವಂ ಪೂಷನ್ನಪ ವಾವೃಣು
ಸತ್ಯ ಧರ್ಮಾಯ ದೃಷ್ಟಯೇ.
ಶತಮಾನದ ಸ್ಮೃತಿಗಾನದಿ
ಮುನಿವರ್ಯನ ಕರೆವೆ;
ಎನ್ನಾತ್ಮಕೆ ನಿನ್ನಾತ್ಮದ
ಪುಣ್ಯವನೆರೆ ಗುರುವೆ!
ಬಿದ್ದಿಹೆ ತಳ ಪಾತಳಕೆ
ಉದ್ಧರಿಸೆನ್ನರೆಯ!
ನೋವಿಲ್ಲದ ಸಾವಿಲ್ಲದ
ಜೀವಾಮೃತವೆರೆಯ.

ಶರಣಂ ಶಿವ ಚರಣಂ ಶ್ರೀ ಹರಿ ಹರ ಬ್ರಹ್ಮಾದ್ಯರಿಗೆ.
ಶರಣಂ ಗುರು ಚರಣಂ ಶ್ರೀ ರಾಮಕೃಷ್ಣ ಯತಿ
ಪತಿಗೆ.
ಶರಣಂ ಶುಭ ಚರಣಂ ಶ್ರೀ ಶಾಶ್ವತ ವಿಶ್ರುತ ಕೀರ್ತಿಗೆ.
ಶರಣಂ ಶತ ಚರಣಂ ಶ್ರೀ ಶತಮಾನದ ಸನ್ಮೂರ್ತಿಗೆ.

o o o o

ಓಂ ಭೂಮಿಗೆ–ಓಂ ಸ್ವಾಮಿಗೆ– ಓಂ ಸತ್ಯಕೆ ಜಯತು;
ಓಂ ಕರ್ಮಕೆ– ಓಂ ಧರ್ಮಕೆ ಓಂ ಶಾಂತಿಗೆ ಜಯತು.
ಓಂ ಶಾಂತಿಃ ಶಾಂತಿಃ ಶಾಂತಿಃ

---

‡ ಸ್ವಾಮಿ ವಿವೇಕಾನಂದ ಶತಮಾನೋತ್ಸವ ಸ್ಮಾರಕವಾಗಿ ದಿನಾಂಕ ೨೯-೧೨-೬೨ರಂದು ಮಂಗಳೂರಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ ಜರಗಿದ ಕವಿ ಸಮ್ಮೇಳನದಲ್ಲಿ ಹಾಡಿದುದು.

ಮೌರ್ಯ ಚಂದ್ರಗುಪ್ತನ ಕಾಲದ ಭವ್ಯ ಭಾರತ

ಲೇಖಕರು:
ಶ್ರೀ ಯು. ನಾ. ಉಡುಪ,
ವಿದ್ವಾನ್,
ಕೋಟೇಶ್ವರ.

ರಾಜ್ಯಶಾಸ್ತ್ರ ಪರಿಣತಮತಿ ಚಾಣಕ್ಯನ ಸಹಾಯದಿಂದ ಸಾರ್ವಭೌಮತ್ವಗಳಿಸಿದ ಮೌರ್ಯ ಚಂದ್ರಗುಪ್ತನ ಆಡಳಿತೆಯು ಭಾರತೀಯ ಇತಿಹಾಸ ಪ್ರಸಿದ್ಧವಾದುದು. ಇಂದು ನಾವು ಬಯಸುವ ಸುಖೀರಾಜ್ಯ ಸ್ಥಾಪನಾ ಕಾರ್ಯಕ್ಕೆ ಆ ಭಾರತದ ಮತ್ತು ಅಂದಿನ ರಾಜಕಾರಣಿಗಳ ಮನನ ಮತ್ತು ಚಿಂತನಗಳು ಅನಿವಾರ್ಯ.

ಭಾರತೀಯರಿಗೆ ಪಾಶ್ಚಾತ್ಯ ಸಂಸ್ಕೃತಿಯ ಗಂಧಗಾಳಿಯು ಸೋಕುವ ಮೊದಲೇ, ಅಂದರೆ ಸು. ಎರಡು ಸಾವಿರ ವರ್ಷಗಳಿಗಿಂತಲೂ ಹಿಂದಿನ ಭಾರತೀಯರ ನಾಗರಿಕತೆಯ ಭವ್ಯತೆಯನ್ನು ತಿಳಿಯಬೇಕಾದರೆ ಕೌಟಿಲ್ಯನ ಅರ್ಥಶಾಸ್ತ್ರ, ಮೇಗಾಸ್ತನೀಸನ ಬರಹಗಳು, ಭಾಗವತ ಮತ್ತು ವಿಷ್ಣು ಪುರಾಣ ಮೊದಲಾದ ಕೆಲವು ಪುರಾಣಗಳಿಗೆ ಶರಣು ಹೋಗದೆ ಮಾರ್ಗವೇ ಇಲ್ಲ. ಮೌರ್ಯ ಚಂದ್ರಗುಪ್ತನು ಓದಿ ಮರೆಯುವ ಸಾಮಾನ್ಯ ರಾಜನಲ್ಲ; ಅಸಾಮಾನ್ಯ ರಾಜ ರಾಜ; ಅನುಪಮ ಚಕ್ರವರ್ತಿ. ಮುಂದಿನ ಹಲವು ರಾಜಮನೆತನಗಳಿಗೆ ರಾಜ್ಯಭಾರಕ್ಕೆ ಇವನೇ ಮೇಲ್ಪಂಕ್ತಿ ಹಾಕಿದವನು. ಗುಪ್ತರಾಜರ ಸಮುದ್ರಗುಪ್ತ, ಚಂದ್ರಗುಪ್ತರ ಸಮರ್ಪಕವಾದ ರಾಜ್ಯಾಡಳಿತೆಗೂ ಚಾಣಕ್ಯ ಚಂದ್ರಗುಪ್ತರ ನೀತಿ ಸೂತ್ರಗಳೇ ತಳಹದಿ. ಅವರ ರಾಜ್ಯಭಾರದ ದಿನಗಳ ಸುಖ ಶಾಂತಿಗಳಿಗೆ ಇವರೇ ಮಾರ್ಗ ಸೂಚಕರು. ಅವರ ರಾಜ್ಯಭಾರದ ಕಾಲವು ಭಾರತದ ಸುವರ್ಣ ಯುಗವೆನಿಸಲು ಪ್ರಾತಃಸ್ಮರಣೀಯರಾದ ಚಾಣಕ್ಯ ಚಂದ್ರಗುಪ್ತರೇ ಕಾರಣರೆನ್ನಲು ಏನೇನೂ ಸಂದೇಹವಿಲ್ಲ. ಈ ಇಬ್ಬರು ಮಹಾಪುರುಷರ ರಾಜನೀತಿಯನ್ನು ನಮ್ಮ ಪ್ರಾಚೀನ ರಾಜ ಮಹಾರಾಜರು ಮೆಚ್ಚಿದುದಿರಲಿ! ಪಾಶ್ಚಾತ್ಯ ದೇಶದ ಅನೇಕ ರಾಜಕಾರಣ ಪಟುಗಳು ಹಿಂದೂ ಇಂದೂ ಅವನ್ನು ಬಹಳ ಆಸಕ್ತಿಯಿಂದ ಓದಿ ಅವುಗಳಿಂದ ಉಪಯೋಗ ಪಡೆದಿದ್ದರು—ಪಡೆಯುತ್ತಿದ್ದಾರೆ! ಹಿಟ್ಲರ್ ಮುಸಲೋನಿಗಳಂತಹ ಸರ್ವಾಧಿಕಾರಿಗಳೂ ಚಾಣಕ್ಯ ಚಂದ್ರಗುಪ್ತರ ರಾಜನೀತಿಗೆ ಮೆಚ್ಚಿ ತಲೆದೂಗಿದ್ದರಂತೆ! ಅಂದ ಮೇಲೆ ಅಂದಿನ ನೀತಿಗಳ—ಅರ್ಥಶಾಸ್ತ್ರದ—ಕೆಲವು ರೀತಿಗಳನ್ನಾದರೂ ಭಾರತೀಯರಾದ ನಾವು ತಿಳಿದುಕೊಳ್ಳುವುದು ಬೇಡವೆ? ನಮ್ಮ ಮುಖಂಡರಿಗೆ ಹೃದ್ಗತವಾಗುವುದು ಬೇಡವೆ? ಭಾರತೀಯರ ಇಂದಿನ ಅರ್ಥಶಾಸ್ತ್ರವು ಕೌಟಿಲ್ಯನ ಅರ್ಥಶಾಸ್ತ್ರದ ಕುಲುಮೆಯಲ್ಲಿ ಒಮ್ಮೆ ಶುದ್ಧಿ ಹೊಂದಿದರಾಗದೆ?

ಚಾಣಕ್ಯ ಚಂದ್ರಗುಪ್ತರು ಕಲಿಯುಗದ ಕೃಷ್ಣಾರ್ಜುನರು, ಚಾಣಕ್ಯನ ಅರ್ಥಶಾಸ್ತ್ರವು ಅವನು ಬೋಧಿಸಿದ ಭಗವದ್ಗೀತೆ! ಈ ಮಹಾವ್ಯಕ್ತಿಗಳ ಇತಿಹಾಸವನ್ನು ಕ್ರಿ. ಶ. ಸು. ೪೦೦ರಲ್ಲಿ ಬಾಳಿದ್ದ ವಿಶಾಖದತ್ತನೆಂಬ ಕವಿಯು ಮುದ್ರಾರಾಕ್ಷಸವೆಂಬ ನಾಟಕದಲ್ಲಿ ಚಿತ್ರಿಸಿ ಈ ವಿಭೂತಿ ಪುರುಷದ್ವಯರ ಯಶಸ್ಸನ್ನು ಅಜರಾಮರಗೊಳಿಸಿರುವನು. ಚಾಣಕ್ಯನೆಂಬ ಅಪೂರ್ವ ವ್ಯಕ್ತಿ! ಅದ್ವಿತೀಯ ಶಕ್ತಿ! ಶ್ರೀ ಭುವನ ಚಂದ್ರದತ್ತರ ಅಭಿಪ್ರಾಯದಂತೆ ಚಾಣಕ್ಯನು ರಾಜಕಾರಣಗಳಲ್ಲಿ ಮುಳುಗಿ ಮೀಯುತ್ತಿದ್ದರೂ ಮಹಾ ಜಿತೇಂದ್ರಿಯನು! ರಾಜಗುರುವಾಗಿದ್ದರೂ ಸರ್ವಸಂಗ ಪರಿತ್ಯಾಗ ಮಾಡಿದ ವಾನಪ್ರಸ್ಥ! ಸಾರ್ವಭೌಮಾಧಿಕಾರೈಶ್ವರ್ಯಗಳು ತನ್ನನ್ನು ಹಿಂಬಾಲಿಸುತ್ತಿದ್ದರೂ ತಾನು ಅವುಗಳ ಕಡೆಗೆ ದೃಷ್ಟಿ ಹಾಯಿಸದ ವೀತರಾಗ! ನೈಷ್ಠಿಕ ಬ್ರಹ್ಮಚಾರಿ; ಮಹಾ ಮೇಧಾವಿ! ಇವನ ಕೌಟಿಲ್ಯದ ಎದುರು ಸೀಸರ್, ಬಾಬರ, ಕ್ಲೈವ, ನೆಪೋಲಿಯನರ ಕೌಟಿಲ್ಯಗಳು ಮಕ್ಕಳಾಟ! ಅರಿಸ್ಟಾಟಲ್, ಅಲೆಗ್ಝಾಂಡರರೂ ಚಾಣಕ್ಯ ಚಂದ್ರಗುಪ್ತರನ್ನು ನೀತಿ ಪೌರುಷಗಳಲ್ಲಿ ಸರಿಗಟ್ಟಲಾರರು. ಭೇದೋಪಾಯ ಸಾಧನೆಗೆ ಬೇಕಾದ ಸೂಕ್ಷ್ಮ ಬುದ್ಧಿ, ಕಾರ್ಯನಿರ್ವಹಣದ ಅಪ್ರತಿಮ ಶಕ್ತಿ, ಇವುಗಳ ನಡುವೆ ಎಂದೂ ಮಾಸದ ಅಚಲ ವೈರಾಗ್ಯ—ಇವೇ ಚಾಣಕ್ಯನ ಅನುಪಮ ವೈಶಿಷ್ಟ್ಯ. ಅವನ ಇದಿರಾಳಿಯಾದ ಮಹಾ ಅಮಾತ್ಯ ರಾಕ್ಷಸನ ಬುದ್ಧಿ ವೈಭವವೂ ಅವನ ಮುಂದೆ ಪ್ರೇರಾಮುಂಕಾಗಿ ಮಾಯವಾಗುತ್ತಿತ್ತು. ಅವನು ಯುದ್ಧದ ಕಷ್ಟನಷ್ಟಗಳಿಗೆ ಹೋಗದೆ ಕುಳಿತಲ್ಲಿಂದಲೇ ರಾಕ್ಷಸನ ಮೇಲೆ ಬಲೆ ಬೀಸಿ ಅವನನ್ನು ಹಿಡಿದು ಜಯ ಸಂಪಾದಿಸಿದುದೇನೂ ಸಾಮಾನ್ಯ ವಿಷಯವಲ್ಲ. ಅಂದಿನ ಭಾರತೀಯರ ಬುದ್ಧಿಮತ್ತೆಗೆ ಇದೊಂದೇ ದೃಷ್ಟಾಂತ ಸಾಲದೆ? ಚಾಣಕ್ಯನ ನೀತಿ ಬೀಜವೆಲ್ಲಾ ಸಣ್ಣವು; ಅವು ಮಾತ್ರ ವಿಶಾಲ ಫಲ ಕೊಡುವುದೇ ಪರಮಾಶ್ಚರ್ಯ. ಅವನ ಯಾವ ಯುಕ್ತಿಯೂ ಹುಸಿಯಾದುದಿಲ್ಲ. ಭಾರತದ ಇಂದಿನ ವಿಷಮ ಸನ್ನಿವೇಶಗಳಲ್ಲಿ ಚಾಣಕ್ಯನಂತಹ ಒಬ್ಬ ಮಹಾ ವ್ಯಕ್ತಿಯಾದರೂ ಭಾರತದಲ್ಲಿ ಇದ್ದಿದ್ದರೆ ಭಾರತದ ಸೌಭಾಗ್ಯಕ್ಕೆ ಎಣೆ ಇರುತ್ತಿತ್ತೆ?

ಚಂದ್ರಗುಪ್ತನ ಕಾಲದ ಶಾಸನ ಪದ್ಧತಿಯನ್ನು ನೋಡಿದರೆ ಅವನದು ಸುಸಂಘಟಿತ ರಾಜ್ಯ ಪದ್ಧತಿಯಾಗಿತ್ತೆಂಬುದಕ್ಕೆ ಸಾಕಾದಷ್ಟು ಆಧಾರಗಳು ದೊರೆಯುವುವು. ಆ ಕಾಲದ ಶಾಸನ ಪದ್ಧತಿಯಲ್ಲಿ ತ್ಯಾಗ ಭೋಗಗಳೂ, ಶಾಂತಿದಾಂತಿಗಳೂ ಮನೆ ಮಾಡಿದ್ದುವು. ಅಂದಿನ ಜನರು ಸೃಷ್ಟಿದೇವಿಯ ಚೇತನ ಶಕ್ತಿಯನ್ನು ಮನನ ಮಾಡಿದರು. ಅಂದಿನ ರಾಜ ಮಹಾರಾಜರ ಶ್ವಾಸೋಚ್ಛ್ವಾಸವೇ ರಾಜ್ಯಾಡಳಿತೆಯ ಸುಸ್ವರೂಪವಾಗಿತ್ತು. 'ರಾಜ್ಯದಾಡಳಿತೆಯು ಸರಿಯಾಗಿಲ್ಲದ ಜನಾಂಗದ ಸಂಖ್ಯೆಯು ಕ್ರಮವಾಗಿ ವೃದ್ಧಿ ಹೊಂದಲಾರದೆಂ'ದು ರಾಜ್ಯನೀತಿ ಸಿದ್ಧಾಂತದ ಪುರಸ್ಕರ್ತನಾದ ಎಡ್ಮಂಡ್ ಬರ್ಕನ ನುಡಿಯು ಸು. ಎರಡು ಸಾವಿರ ವರ್ಷಗಳ ಮೊದಲೇ ಭಾರತೀಯರು ಅರಿತಿದ್ದರು!

ಆಯಾ ಕಾಲದ ರಾಜ್ಯ ಪದ್ಧತಿಯು ಆ ಆ ಜನಾಂಗದ ಶೀಲ, ಸಾಮಾಜಿಕ ಪದ್ಧತಿ ಮತ್ತು ಜೀವನ ಕ್ರಮಗಳ ಮೂಲತತ್ವವನ್ನವಲಂಬಿಸಿತ್ತು. ಸ್ಥೂಲ ದೃಷ್ಟಿಯಿಂದ ನೋಡಿದರೂ ಜನರಲ್ಲಿ ಸಚ್ಛೀಲ, ಸದ್ಗುಣ, ಸದ್ಬುದ್ಧಿ, ಸಮೃದ್ಧಿ, ಸತ್ಕ್ರಮಗಳುಂಟಾಗಿ ದೇಶದಲ್ಲಿ ಸುಭಿಕ್ಷೆ ತಲೆ ಎತ್ತಲು ಆಸ್ಪದ ಕೊಡುವುದೇ ಉತ್ತಮ ರಾಜ್ಯ ಪದ್ಧತಿ. ಹರ್ಬರ್ಟ್ ಸ್ಪೆನ್ಸರನ ಅಭಿಪ್ರಾಯದಂತೆ ರಾಷ್ಟ್ರ ಸಂರಕ್ಷಣೆ ಮತ್ತು ವ್ಯಕ್ತಿ ಸಂರಕ್ಷಣೆಯೇ ಉತ್ತಮ ರಾಜ್ಯಭಾರದ ಲಕ್ಷಣ. ಮನುಷ್ಯನ ಸ್ವಭಾವದಲ್ಲಿ ನೀತಿಯ ಸ್ನಿಗ್ಧತೆ ಹೆಚ್ಚಿದಷ್ಟು ಜನಜೀವನವು ಸುಖಮಯವಾಗುವುದೆಂಬುದಕ್ಕೆ ಅಂದಿನ ಮತ್ತು ಇಂದಿನ ಜನ ಜೀವನವೇ ಉತ್ತಮ ನಿದರ್ಶನ. ಪ್ರತಿಯೊಬ್ಬನೂ ತನ್ನನ್ನು ಆಳಿಕೊಳ್ಳಲು ಸಮರ್ಥನಾಗುವಂತೆ ಪ್ರಚೋದಿಸುವುದೇ ರಾಜ್ಯಭಾರದ ತಿರುಳು!

ಚಂದ್ರಗುಪ್ತ ಮೌರ್ಯನು ಚಕ್ರವರ್ತಿಯಾಗಿದ್ದರೂ ಸರ್ವಾಧಿಕಾರಿಯಾಗಿರಲಿಲ್ಲ. ಅವನಿಗೆ ಸಲಹೆ ಕೊಡಲು ಮಂತ್ರಿ ಪರಿಷತ್ತು ಇತ್ತು. ಈ ಪರಿಷತ್ತಿನಲ್ಲಿ ೧೨ ಅಥವಾ ೧೮ ಮಂದಿ ಅಮಾತ್ಯರಿದ್ದರು. ಇವರು ಕುಲಕ್ರಮಾಗತರಾಗಿ ಬಾರದಿದ್ದು ಬುದ್ಧಿಕೌಶಲ, ಶೌರ್ಯ, ಸ್ವಾಮಿಭಕ್ತಿ ಮೊದಲಾದ ಸದ್ಗುಣಗಳಿಂದ ಕೂಡಿದ್ದರು. ರಾಜನು ಈ ಅಮಾತ್ಯರೊಡನೆ ವಿಮರ್ಶಿಸಿ ಕಾರ್ಯಗಳನ್ನು ಅನುಷ್ಠಾನಕ್ಕೆ ತರುತ್ತಿದ್ದನು. ದೇವೇಂದ್ರನಿಗೆ ಸಾವಿರ ಮಂತ್ರಿಗಳ ಪರಿಷತ್ತು ಇತ್ತಂತೆ! ಇದರಿಂದಲೇ ಅವನಿಗೆ ಸಹಸ್ರಾಕ್ಷನೆಂಬ ಹೆಸರು ಬಂತೆಂದು ಚಾಣಕ್ಯನ ಅಭಿಪ್ರಾಯ. ಆಗ ಕುಲಕ್ಕಿಂತ ಗುಣಕ್ಕೇ ಹೆಚ್ಚಿನ ಮನ್ನಣೆ ಇತ್ತು. ಆಗ ಮುಖ್ಯ ಮಂತ್ರಿಗೆ ಮಾತ್ರ ಮಂತ್ರಿ ಎಂಬ ಹೆಸರಿದ್ದು ಉಳಿದವರನ್ನು ಅಮಾತ್ಯರೆನ್ನುತ್ತಿದ್ದರು. ಗೂಢಚರರೇ ಅಂದಿನ ರಾಜನ ರಾಜ್ಯಭಾರದ ಮುಖವಾಗಿದ್ದರು. ಅವರು ಜನರ ಹೊಟ್ಟೆಯಿಂದ ಹೊರ ಹೊರಡುತ್ತಿದ್ದರೂ ಜನರು ಅವರ ವಿಚಾರ ತಿಳಿಯುವುದು ಅಸಾಧ್ಯವಾಗಿತ್ತು. ಇವರಲ್ಲಿ ಕಾಪಟಿಕ, ಉದಾಸ್ಥಿತ, ಗೃಹಪತಿ ಮೊದಲಾದ ಹಲವು ಭೇದಗಳಿದ್ದುವು.

ಅಂದಿನ ರಾಜನ ಜೀವನವು ಕ್ರಮಬದ್ಧವಾಗಿತ್ತು. ಆಗ ಹಗಲು ರಾತ್ರಿಗಳನ್ನು ಎಂಟೆಂಟು ಭಾಗಗಳಾಗಿ ವಿಭಾಗಿಸಿ ರಾಜನು ಹಗಲಿನ ಮೊದಲನೆಯ ಭಾಗದಲ್ಲಿ ರಾಜ್ಯದ ರಕ್ಷಾ ವಿಧಾನ, ರಾಜ್ಯದ ಆಯವ್ಯಯಗಳನ್ನೂ, ಎರಡನೆಯದರಲ್ಲಿ ಪ್ರಜೆಗಳ ದೂರು ಮತ್ತು ಮಹಾರಗಳನ್ನೂ, ಮೂರನೆಯದರಲ್ಲಿ ಸ್ನಾನ ಭೋಜನ ವೇದಾಧ್ಯಯನಗಳನ್ನೂ, ನಾಲ್ಕನೆಯದರಲ್ಲಿ ಹಿಂದಿನ ದಿನ ಸಂಗ್ರಹಿಸಿದ ಧನದ ವಿಚಾರವನ್ನೂ, ಆಯಾ ವಿಭಾಗದ ಅಧ್ಯಕ್ಷರ ಯೋಜನೆಯನ್ನೂ, ಐದನೆಯದರಲ್ಲಿ ಮಂತ್ರಿ ಪರಿಷತ್ತಿನೊಡನೆ ಪತ್ರ ವ್ಯವಹಾರವನ್ನೂ, ಸೇವಕರು ಸಂಗ್ರಹಿಸಿದ ವಿಚಾರ ಶ್ರವಣವನ್ನೂ ಮಾಡಿ, ಆರನೆಯ ಭಾಗದಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದನು. ಈ ಸಮಯದಲ್ಲೇ ಆಗತ್ಯವಿದ್ದರೆ ಮಂತ್ರಾಲೋಚನೆಯೂ ನಡೆಯುತ್ತಿತ್ತು. ಆಗ ಚಂದ್ರಗುಪ್ತನಿಗೆ ವೈರಿಗಳೂ ಪ್ರತಿಸ್ಪರ್ಧಿಗಳಿಗೂ ತುಂಬಾ ಇದ್ದುದರಿಂದ ಅವನು ಹಗಲು ನಿದ್ರೆ ಮಾಡುತ್ತಿರಲಿಲ್ಲ; ಅಲ್ಲದೆ ರಾತ್ರಿಯಲ್ಲಿ ಎರಡು ದಿನಗಳ ವರೆಗೆ ಅವನು ಒಂದೇ ಕೋಣೆಯಲ್ಲೂ ಮಲಗುತ್ತಿದ್ದಿಲ್ಲವಂತೆ! ಏಳನೆಯ ಭಾಗದಲ್ಲಿ ಚತುರಂಗ ಸೇನೆಯ ಪರಾಮರ್ಶೆ ಮತ್ತು ಹೇಳಿಕೆಗಳನ್ನು ಕೇಳುತ್ತಿದ್ದನು. ಎಂಟನೆಯ ಭಾಗವು ಸೇನಾಪತಿಯೊಡನೆ ಆಲೋಚಿಸುವುದರಲ್ಲೇ ಕಳೆಯುತ್ತಿತ್ತು. ಹಗಲಿನಂತೆಯೇ ರಾತ್ರಿಯೂ ರಾಜನು ಕ್ರಮ ತಪ್ಪುತ್ತಿರಲಿಲ್ಲ. ರಾತ್ರಿಯ ಮೊದಲನೆಯ ಭಾಗದಲ್ಲಿ ರಾಜನು

ಶ್ರೀ ಜಯಲಕ್ಷ್ಮೀ ಕ್ಲಾತ್ ಹೌಸ್

ಜವುಳಿ ವ್ಯಾಪಾರಿಗಳು, ತೀರ್ಥಹಳ್ಳಿ

ನಿಮಗೆ ಬೇಕಾದ ನಿತ್ಯೋಪಯೋಗದ ಹಾಗೂ ಶುಭ ಸಮಾರಂಭಗಳಿಗೆ ಅವಶ್ಯವಿರುವ ಯಾವತ್ತೂ ತರದ ಬಟ್ಟೆಬರೆಗಳು, ಉಡುಗೆ ತೊಡುಗೆಗಳು ನವನವೀನ ಆಕರ್ಷಕ ಡಿಸೈನುಗಳಲ್ಲಿ ಸದಾ ದೊರೆಯುತ್ತವೆ.

ಮಿತ ದರ — ವಿಶೇಷ ಸೌಲಭ್ಯ

ಯು. ಶೀನಪ್ಪ ಶೆಟ್ಟಿ,
ಪ್ರೊಪ್ರೈಟರ್.

ಗೂಢಚರರೊಡನೆ ಸಂಭಾಷಿಸುತ್ತಿದ್ದನು. ಏಳನೆಯ ಭಾಗದಲ್ಲಿ ಸ್ನಾನ ಭೋಜನ ವೇದಾಧ್ಯಯನವು ನಡೆದು ಮೂರರಲ್ಲಿ ವಾದ್ಯ ಘೋಷದೊಡನೆ ನಿದ್ರೆಗೆ ಆರಂಭಿಸಿ ನಾಲ್ಕು ಐದನೆಯ ಭಾಗವನ್ನೇ ನಿದ್ರೆಯಲ್ಲೇ ಕಳೆದು, ಆರನೆಯ ಭಾಗದಲ್ಲಿ ವಾದ್ಯಘೋಷವನ್ನು ಆಲಿಸುತ್ತಾ ಎದ್ದು ಪ್ರಾಭಾತಿಕ ಕಾರ್ಯಗಳನ್ನು ಮುಗಿಸಿ, ಅರ್ಥ ಶಾಸ್ತ್ರವನ್ನು ಮನನ ಮಾಡುತ್ತಾ ರಾಜಕಾರ್ಯ ಸಮಸ್ಯೆಗಳನ್ನು ನಿರ್ಧರಿಸುತ್ತಿದ್ದನು. ಆಗಲೇ ಗೂಢಚರರನ್ನು ಆಯಾ ಕಾರ್ಯಗಳಿಗೆ ಕಳುಹಿಸುತ್ತಿದ್ದನು. ಎಂಟನೆಯ ವಿಭಾಗದಲ್ಲಿ ಪುರೋಹಿತ ಮತ್ತು ಆಚಾರ್ಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದು, ಕರುವಿನಿಂದ ಕೂಡಿದ ದನ ಮತ್ತು ಎತ್ತುಗಳಿಗೆ ಪ್ರದಕ್ಷಿಣೆ ಬಂದು ಆಸ್ಥಾನ ಮಂಡಪಕ್ಕೆ ಹೊರಡುತ್ತಿದ್ದನು. ಉದ್ಯಮವೇ ಅರ್ಥಸಿದ್ಧಿಯ ಮೂಲವೆಂಬ ತಿಳಿವು ಅಂದಿನ ರಾಜನಿಗಿತ್ತು. ಅಂದಿನ ರಾಜನ ಜೀವನವು ಸುಪ್ಪತ್ತಿಗೆಯ ಶಯನವಾಗಿರಲಿಲ್ಲ; ಅವರು ರಾಜರು ಮಾತ್ರವಲ್ಲ; ರಾಜರ್ಷಿಗಳಾಗಿದ್ದರು.

ಆಗ ದೂರ ಪ್ರಾಂತ್ಯಗಳನ್ನಾಳುವ ರಾಜಪ್ರತಿನಿಧಿಗಳು ರಾಜವಂಶೀಯರೇ ಆಗಿದ್ದರು. ಪಾಟಲಿಪುತ್ರದಿಂದ ಪಶ್ಚಿಮದಲ್ಲಿ ಸು. ಸಾವಿರ ಮೈಲು ದೂರದಲ್ಲಿದ್ದ ಗಿರ್ನಾರ್ ಎಂಬ ಪ್ರಾಂತವನ್ನು ಪುಷ್ಯಗುಪ್ತನೆಂಬ ರಾಜಪ್ರತಿನಿಧಿಯು ಆಳುತ್ತಿದ್ದನು. ಅವನು ತನ್ನ ಪ್ರಾಂತದಲ್ಲಿ ಕೃಷಿಕರ ಸೌಕರ್ಯಕ್ಕಾಗಿ ನದಿಗೆ ಅಣೆಕಟ್ಟನ್ನು ಕಟ್ಟಿಸಿ ಕಾಲುವೆ ತೋಡಿಸಿದ್ದನು. ಆಗ ಕೃಷಿಕರು ವಿಶೇಷವಾಗಿ ಶೂದ್ರರಾಗಿದ್ದರು. ವರ್ಣಾಶ್ರಮ ಧರ್ಮಗಳು ಚೆನ್ನಾಗಿ ಪಾಲಿಸಲ್ಪಡುತ್ತಿದ್ದುವು. ಒಕ್ಕಲತನವು ಅವ್ಯಾಹತವಾಗಿ ಸಾಗಬೇಕೆಂಬುದೇ ಚಂದ್ರಗುಪ್ತನ ಧ್ಯೇಯವಾಗಿತ್ತು. ಒಕ್ಕಲಿಗರು ಸೈನ್ಯದಲ್ಲಿ ಸೇರ್ಪಡೆಯಾಗಬೇಕೆಂಬ ನಿರ್ಬಂಧ ಆಗ ಇರಲಿಲ್ಲ. ಅವರು ಸಂರಕ್ಷಣೆಗೆ ಪ್ರತಿಯಾಗಿ ರಾಜನಿಗೆ ಉತ್ಪತ್ತಿಯ ಕಾಲಂಶವನ್ನು ಸಲ್ಲಿಸುತ್ತಿದ್ದರು. ಕೃಷಿಗೆ ತಡೆಯನ್ನುಂಟುಮಾಡುವ ವಿಪತ್ತುಗಳು ಬಂದರೆ ಆಗ ರಾಜನಿಗೆ ತೆರಿಗೆ ಕೊಡಬೇಕಾದ ಅಗತ್ಯವಿರಲಿಲ್ಲ. ರಾಜನೇ ದುರ್ಭಿಕ್ಷ ಕಾಲದಲ್ಲಿ ರೈತರಿಗೆ ಅನುಗ್ರಹ (ಸ್ಥಿತಿ ಉತ್ತಮವಾಗುವುದಕ್ಕೆ ಕೊಡುವ ಸಹಾಯ) ಮತ್ತು ಪರಿಹಾರ (ಕಷ್ಟಗಳನ್ನು ನೀಗಲಾಡಿಸಲು ಮಾಡುವ ಸಹಾಯ)ಗಳನ್ನು ನೀಡುತ್ತಿದ್ದನು. ಆಗ ಕೆಲವು ಭೂಮಿಗಳಿಗೆ ಉತ್ಪತ್ತಿಯ ಕಾಲಂಶಕ್ಕಿಂತ ಹೆಚ್ಚು ತೀರ್ವೆ ಎತ್ತುತ್ತಿದ್ದರು. ಅಂದು ಹದಿನಾರು ದ್ರೋಣ (ಈಗಿನ ಇಂಚಿನಂತಹ ಮಳೆಯನ್ನು ಅಳೆಯುವ ಸಾಧನ) ಮಳೆ ಬಂದರೆ ಮರುಭೂಮಿಯಲ್ಲೂ ಕೃಷಿಯಾಗುತ್ತಿತ್ತು. ಆಗ ಇಪ್ಪತ್ತನಾಲ್ಕು ದ್ರೋಣದ ವರೆಗೆ ಭಾರತ ಭೂಮಿಯಲ್ಲಿ ಮಳೆ ಬೀಳುತ್ತಿತ್ತು.

ಅಂದು ಕೃಷಿಕರಾದ ಶೂದ್ರರು ನೂರಕ್ಕಿಂತ ಕಡಿಮೆಯಾಗದ ಐನೂರಕ್ಕಿಂತ ಹೆಚ್ಚಾಗದ ಕುಟುಂಬಗಳನ್ನು ಒಂದು ಗ್ರಾಮವೆಂದು ಪರಿಗಣಿಸುತ್ತಿದ್ದರು. ಆಗ ಒಂದು ಗ್ರಾಮದಿಂದ ಇನ್ನೊಂದಕ್ಕೆ ಎರಡು ಮೈಲಿಗಿಂತ ಹೆಚ್ಚು ದೂರವಿರುತ್ತಿರಲಿಲ್ಲ. ಈ ಗ್ರಾಮಗಳಿಗೆ ಗಡಿಯಾಗಿ ನದಿ, ಪರ್ವತ, ಕಾಡು, ಗುಹೆ, ಸೇತುವೆ, ಹೆಚ್ಚು ಕಾಲ ಬಾಳುವ ಶಾಲ್ಮಲೀ ಶಮೀ ವಟವೃಕ್ಷಗಳು—ಇವುಗಳಲ್ಲೊಂದಾಗಿರುತ್ತಿತ್ತು. ಆಗ ಎಂಟು ನೂರು ಗ್ರಾಮಗಳ ಮಧ್ಯದಲ್ಲಿ ಸ್ಥಾನೀಯವೆಂಬ, ನಾನೂರು ಗ್ರಾಮಗಳಿಗೆ ದ್ರೋಣ ಮುಖವೆಂಬ, ಇನ್ನೂರು ಗ್ರಾಮಗಳಿಗೆ ಕಾರ್ವಟಿಕವೆಂಬ, ಹತ್ತಕ್ಕೆ ಸಂಗ್ರಹಣವೆಂಬ ರಮಣೀಯ ಗ್ರಾಮಗಳನ್ನು ಕೇಂದ್ರವಾಗಿ ಸ್ಥಾಪಿಸಿ ವ್ಯಾಪಾರ ವಹಿವಾಟುಗಳನ್ನು ನಡೆಸಲು ಅನುಕೂಲಮಾಡಿದ್ದರು.

ಆಗ ಶುಲ್ಕಾಧ್ಯಕ್ಷನು ಸುಂಕ ಮತ್ತು ದಂಡವನ್ನು ವಸೂಲು ಮಾಡುತ್ತಿದ್ದನು. ಆಗ ವಿವಾಹ ಮೊದಲಾದ ಶುಭಕಾರ್ಯದ ವಸ್ತುಗಳಿಗೆ, ಸ್ತ್ರೀಯರಿಗೆ ಬಳುವಳಿಯಾಗಿತ್ತ ವಸ್ತುಗಳಿಗೆ, ಯಾಗ ಮತ್ತು ದೇವ ಪೂಜೆಗೆ ಬೇಕಾದ ವಸ್ತುಗಳಿಗೆ, ಧರ್ಮಕಾರ್ಯದ ಸಾಮಗ್ರಿಗಳಿಗೆ ಶುಲ್ಕವಿರಲಿಲ್ಲ. ಪರದೇಶದ ತರಕಾರಿಗಳಿಗೆ ಬೆಲೆಯ ಆರನೆಯ ಒಂದಂಶ ತೆರಿಗೆ ಇತ್ತು. ಆಗ ಒಣಗಿದ ಮಾಂಸ ಮತ್ತು ಮೀನು ತರಕಾರಿ ವರ್ಗಕ್ಕೆ ಸೇರಿತ್ತು. ರೇಶ್ಮೆ ಮತ್ತು ಹತ್ತಿ ಬಟ್ಟೆಗಳಿಗೆ ಬೆಲೆಯ ಹದಿನೈದರಲ್ಲಿ ಒಂದಂಶವು ತೆರಿಗೆಯಾಗಿತ್ತು. ಆಗ ವಿವಿಧ ವರ್ಗದ ಬಟ್ಟೆ ನೇಯಿಸುವ ಮೇಲಧಿಕಾರಿಯೇ ಸೂತ್ರಾಧ್ಯಕ್ಷ, ಕೃಷಿಯ ಮೇಲ್ವಿಚಾರಕನೇ ಸೀತಾಧ್ಯಕ್ಷ, ಮದ್ಯವ್ಯವಹಾರದ ಮೇಲಧಿಕಾರಿಯೇ ಸುರಾಧ್ಯಕ್ಷ, ಮಾಂಸದಂಗಡಿಗಳ ಮೇಲಧಿಕಾರಿಯೇ ಸೂನಾಧ್ಯಕ್ಷ, ನದಿಯ ಕಡವಿನ ತೆರಿಗೆ ವಸೂಲು ಮಾಡುವ ಮುಖ್ಯಸ್ಥನೇ ನಾವಾಧ್ಯಕ್ಷ, ಹೀಗೆಯೇ ಗವಾಧ್ಯಕ್ಷ, ಗಣಿಕಾಧ್ಯಕ್ಷ ಮೊದಲಾದ ಹಲವು ಇಲಾಖೆಗಳ ಮೇಲಧಿಕಾರಿಗಳು ತಮ್ಮ ಕಾರ್ಯಗಳನ್ನು ಪ್ರಾಮಾಣಿಕತೆಯಿಂದ ನಡೆಸುತ್ತಿದ್ದುದರಿಂದ ರಾಜ್ಯಭಾರದಲ್ಲಿ ಒಂದು ಬಿಗಿಪು ಇತ್ತು. ರಾಜಭಂಡಾರವು ಸದಾ ಸಮೃದ್ಧಿಯಾಗಿರುತ್ತಿತ್ತು. ಆಗ ನಿರ್ಮಲ ಚರಿತರು ಒಂದು ಕುಡತೆ ಅಥವಾ ಒಂದು ಪ್ರಸದಷ್ಟು ಮದ್ಯ ಸೇವಿಸಿದರೆ ಅಪರಾಧಿಗಳಾಗುತ್ತಿರಲಿಲ್ಲ. ಆಗ ಅಪರೂಪವಾಗಿ ಗೋಹತ್ಯೆಯೂ ನಡೆಯುತ್ತಿತ್ತು.

ಆ ಕಾಲದಲ್ಲಿ ಒಂದು ಎಕ್ರೆಗೆ ದಶಕುಲಿ ಎಂಬ ಹೆಸರಿತ್ತು. ಅಂದು ಜೂಜುಗಾರರಿಗೆ, ವಂಚಕರಿಗೆ, ನಟನರ್ತಕರಿಗೆ, ಪಟ್ಟಣದೊಳಗೆ ವಾಸ್ತವ್ಯ ಮಾಡಲು ಅನುಮತಿ ಇರಲಿಲ್ಲ. ಅವರು ಜನಪದದ ಗಡಿಯಲ್ಲಿ ವಾಸಮಾಡಬಹುದಿತ್ತು. ಆಗ ಬಿಟ್ಟಿ ಕೆಲಸವೂ ಪ್ರಚಾರದಲ್ಲಿತ್ತು. ಅಂದು ದಂಡಗಳಲ್ಲಿ ಸಾವಿರ ಹಣ ದಂಡನೆಗೆ ಉತ್ತಮ ಸಾಹಸವೆಂದೂ, ಐನೂರು ಹಣ ದಂಡನೆ ಮಧ್ಯಮ ಸಾಹಸವೆಂದೂ, ಇನ್ನೂರೈವತ್ತು ಹಣ ದಂಡನೆಗೆ ಪ್ರಥಮ ಸಾಹಸವೆಂದೂ ಹೆಸರಿತ್ತು. ಆಗ ಅನೇಕ ವಿಧದ ಅನಾಚಾರ ಮತ್ತು ಕಾಯಿದೆ ಭಂಗಗಳಿಗೆ ಅನೇಕ ವಿಧದಲ್ಲಿ ಹಣ ರೂಪದ ದಂಡ ವಿಧಿಸುತ್ತಿದ್ದರು. ಆಗ ಕಳವು ಮಾಡಿದವರನ್ನೂ ಅಧಿಕಾರಿಗಳ ಮುಂದೆ ಸುಳ್ಳು ಹೇಳಿದವರನ್ನೂ ಅಂಗಹೀನರನ್ನಾಗಿ ಮಾಡುತ್ತಿದ್ದರು. ಮರಣ ದಂಡನೆಯೂ ಅಪರೂಪವಾಗಿತ್ತು. ಆಗ ಗುಲಾಮ ವ್ಯಾಪಾರವು ಅಪರೂಪವಾಗಿದ್ದರೂ, ಅವರನ್ನು ದಯಾಪೂರ್ಣ ದೃಷ್ಟಿಯಿಂದ ನೋಡುತ್ತಿದ್ದರು. ಗೃಹಿಣಿಯರೆಲ್ಲ ಅಂದು ಪತಿವ್ರತೆಯರಾಗಿಯೇ ಇದ್ದರು. ಆಗ ವಿಲಾಸದ ಸ್ತ್ರೀಯರ ವರ್ಗವೇ ಬೇರಿತ್ತು. ಪುರುಷರೆಲ್ಲಾ ಆಗ ಪೌರುಷ ಪ್ರಿಯರಾಗಿದ್ದರು. ಹಳ್ಳಿಗಳೊಳಗೆ ಜನರ ಸಹಕಾರದಿಂದಲೇ ಕೆರೆ ಕಾಲುವೆ ಬಾವಿಗಳನ್ನು ತೋಡಿಸಿಕೊಂಡು ಮಾರ್ಗಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಆಗ ನಾಣ್ಯಗಳ ಬಳಕೆ ವಿಶೇಷವಿರದುದರಿಂದ ವ್ಯಾಪಾರವು ವಿನಿಮಯ ಪದ್ಧತಿಯನ್ನವಲಂಬಿಸಿತ್ತು. ನಾಣ್ಯಗಳೆಲ್ಲಾ ಅಕ್ಷಶಾಲೆ (ಅಕ್ಕಸಾಲೆ) ಮತ್ತು ಶ್ರೇಣಿ (Guild)ಯ ಜನದಿಂದ ಹೊರಬರುತ್ತಿದ್ದುವು. ಸರಕಾರವು ಇದರಲ್ಲಿ ಕೈಹಾಕುತ್ತಿರಲಿಲ್ಲ. ಆಗಿನ ಮನೆಗಳನ್ನೆಲ್ಲಾ ವಿಶೇಷವಾಗಿ ಮರಗಳಿಂದಲೇ ನಿರ್ಮಿಸುತ್ತಿದ್ದರು.

ಭಾರತೀಯರು ಆಗ ಬಟ್ಟೆಯ ಮೇಲೆ ಪುಸ್ತಕಗಳನ್ನು ಬರೆಯುತ್ತಿದ್ದರು. ತತ್ವಜ್ಞಾನಿಗಳು ಮಾಂಸಾಹಾರ ಮಾಡುತ್ತಿದ್ದಿಲ್ಲ. ಕಾಯಿದೆಗಳೆಲ್ಲಾ ನ್ಯಾಯಾಧೀಶರ ನೆನಪನ್ನೇ ಅವಲಂಬಿಸಿದ್ದುವು. ಆಗ ಔಷಧಕ್ಕಿಂತ ಪಥ್ಯಕ್ಕೇ ಹೆಚ್ಚು ಪ್ರಾಮುಖ್ಯತೆ ಇತ್ತು. ಜನರೆಲ್ಲ ಮಿತವ್ಯಯಿಗಳೂ, ಮಿತವ್ಯವಹಾರಿಗಳೂ ಆಗಿದ್ದರು. ಆಗ ವಿದ್ಯೆಯನ್ನು ಆನ್ವೀಕ್ಷಿಕಿ (ಸಾಂಖ್ಯ ನ್ಯಾಯ, ಯೋಗಶಾಸ್ತ್ರ), ತ್ರಯೀ (ಋಗ್ಯಜುಸ್ಸಾಮಗಳು), ವಾರ್ತಾ (ಕೃಷಿ, ಪಶುಪಾಲನೆ, ವಾಣಿಜ್ಯ), ದಂಡನೀತಿ (ರಾಜನೀತಿ)ಗಳೆಂದು ನಾಲ್ಕು ವಿಧವಾಗಿ ವಿಭಾಗಿಸಿದ್ದರು. ಉಳಿದ ಇಲಾಖೆಗಳಂತೆ ಆಗ ವಿದ್ಯಾ ಇಲಾಖೆಯೊಂದು ಪ್ರತ್ಯೇಕವಿದ್ದಂತೆ ತೋರುವುದಿಲ್ಲ; ವಿದ್ಯಾಧ್ಯಕ್ಷನ ಕುರಿತು ಚಾಣಕ್ಯನೇನೂ ಹೇಳಿಲ್ಲ. ಆಗ ವಿದ್ಯೆಯು ಬಹುಶಃ ಜನತೆಯ—ವಿದ್ವಾಂಸರ ಸೊತ್ತಾಗಿದ್ದು, ತಕ್ಷಶಿಲೆಯಂತಹ ವಿದ್ಯಾಲಯದಿಂದ ಧರ್ಮಾರ್ಥವಾಗಿ ಪ್ರಸಾರವಾಗುತ್ತಿತ್ತು. ಈ ವಿದ್ಯಾಮಂದಿರಗಳಿಗೆ ಜನತೆಯ ಮತ್ತು ರಾಜನ ತುಂಬಾ ಪ್ರೋತ್ಸಾಹವಿತ್ತು. ಆಗ ಈ ವಿಶ್ವವಿದ್ಯಾಲಯಗಳಲ್ಲಿ ಆರು ವೇದಾಂಗಗಳನ್ನು ಕಲಿಸುತ್ತಿದ್ದರು. ಒಪ್ಪೊಬ್ಬ ವಿದ್ವಾಂಸನು ಆಗ ಒಂದೊಂದು ದೊಡ್ಡ ಪುಸ್ತಕ ಭಂಡಾರವಾಗಿದ್ದು ವಿನಯ ಭೂಷಿತನಾಗಿದ್ದನು. ಸ್ವಧರ್ಮಕ್ಕೆ ತುಂಬಾ ಪ್ರಾಶಸ್ತ್ಯವಿತ್ತು. ರಾಜನು ಉಗ್ರದಂಡನೂ, ಮೃದುದಂಡನೂ ಆಗಿರದೆ ದೇಶ ಕಾಲ ಅಪರಾಧಗಳಿಗೆ ಅನುರೂಪವಾದ ದಂಡವನ್ನು ಉಪಯೋಗಿಸುವವನಾಗಬೇಕೆಂದು ಕೌಟಿಲ್ಯನು ಹೇಳುತ್ತಾನೆ. ಅಂದು ತಾಯಿಯ ಹೊರತು ಉಳಿದವರು ಪತಿತರಾಗಿದ್ದರೆ, ಅವರನ್ನು ಮಕ್ಕಳು ಕಾಪಾಡುವುದು ಬೇಡವಿತ್ತು. ತಾಯಿಯು ಆ ಯುಗದ ಪ್ರತ್ಯಕ್ಷ ದೇವರು!

ಗಣಿಕೆಯರಿಗೆ ಅವರ ಎರಡು ದಿನದ ಸಂಪಾದನೆಯೇ ಅವರ ತಿಂಗಳ ತೆರಿಗೆ

ನಿಮ್ಮ ಆಯ್ಕೆಯ ಆಧುನಿಕ ಜವುಳಿ ಮಳಿಗೆ!

ಶ್ರೀಮಂಜುನಾಥಾ ಹಾಲ್

ಜವುಳಿ ವ್ಯಾಪಾರಿಗಳು

ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.

ಮದುವೆ, ಮುಂಜಿ, ಹಬ್ಬ ಮೊದಲಾದ ಶುಭ ಸಮಾರಂಭಗಳಿಗೂ ದಿನನಿತ್ಯದ ಉಡುಗೆ ತೊಡುಗೆಗಳಿಗೂ ಅಗತ್ಯವಿರುವ ವಿಧವಿಧದ ನವನವೀನ ಸೀರೆಗಳು, ಮಿಲ್ಲಿನ ಮತ್ತು ಕೈಮಗ್ಗದ ಪಾತ್ರಿ ಸೀರೆಗಳು, ಕೋಟಿಂಗ್, ಶರ್ಟಿಂಗ್ ಮೊದಲಾದ ಯಾವತ್ತೂ ಬಟ್ಟೆಗಳು ಹೊಸ ಫ್ಯಾಶನ್ನಿನಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಾಮಾಣಿಕ ವ್ಯವಹಾರದ ವೈವಿಧ್ಯತೆಯ ಪ್ರಖ್ಯಾತ ಜವುಳಿ ಅಂಗಡಿ

ವೈ. ವಾಸು ಶೆಟ್ಟಿ
ಪ್ರೊಪ್ರೈಟರ್

ಸರ್ವರಿಗೂ
ಪ್ರಜಾರಾಜ್ಯದಿನದ
ಶುಭಾಶಯಗಳು

ಯಾಗಿತ್ತು. ಗೋಗಳನ್ನು ವರ್ಷ, ಶರತ್, ಹೇಮಂತ ಋತುಗಳಲ್ಲಿ ದಿನಕ್ಕೆರಡೆರಡು ಸಲವೂ, ಶಿಶಿರ, ವಸಂತ, ಗ್ರೀಷ್ಮಋತುಗಳಲ್ಲಿ ಒಂದೊಂದು ಸಲವೂ ಕರೆಯಬೇಕಿತ್ತು. ಇದನ್ನು ಮೀರಿ ಹೆಚ್ಚು ಸಾರಿ ಕರೆಯುವವನ ಅಂಗುಷ್ಟವನ್ನು ತುಂಡರಿಸುತ್ತಿದ್ದರು. ಆಗ ಧರ್ಮಶಾಸ್ತ್ರಕ್ಕೆ ವಿಹಿತವಾದ ಬ್ರಾಹ್ಮ, ಪ್ರಜಾಪ್ರತ್ಯ, ಆರ್ಷ, ದೈವ ವಿವಾಹಗಳು ಗೌರವಸ್ಥರ ಮನೆತನದಲ್ಲಿ ರೂಢಿಯಾಗಿದ್ದುವು. ಗಾಂಧರ್ವ ವಿವಾಹವು ಅಪರೂಪವಾಗಿತ್ತು. ಕನ್ಯಾ ಶುಲ್ಕವನ್ನು ವರನು ವಧುವಿಗೆ ಕೊಟ್ಟು ಆಗ ವಿವಾಹವಾಗುತ್ತಿದ್ದನು. ವರದಕ್ಷಿಣೆಯ ವಿಚಾರವೇ ಯಾರಿಗೂ ಗೊತ್ತಿರಲಿಲ್ಲ. ಅಂದು ಗಂಡನು ಮೃತನಾದರೆ ಸ್ತ್ರೀಯು ತಾನು ಧರಿಸಿದ ಆಭರಣಗಳನ್ನೆಲ್ಲಾ ಕಳೆಚಿಡುತ್ತಿದ್ದಳು. ಅವಳು ಪುನರ್ವಿವಾಹವಾಗುವದಿದ್ದರೆ ಹಿಂದಿನ ಗಂಡನಿಂದ ಪಡೆದ ಶುಲ್ಕವನ್ನು ಆವನ ಸಂಬಂಧಿಕರಿಗೆ ಹಿಂದಿರುಗಿಸಬೇಕಿತ್ತು. ಗಂಡನು ಸಂತಾನೋತ್ಪಾದನೆಗೆ ಅಸಮರ್ಥನಾಗಿದ್ದರೆ ಅವನ ಸೋದರನೊಡನೆ ಸ್ತ್ರೀಯು ಬೆರೆಯಬಹುದಿತ್ತು. ಒಬ್ಬಳಿಗೆ ಅನೇಕ ಗಂಡಂದಿರಿದ್ದರೆ ಅವರವರಿಂದ ಪಡೆದ ಶುಲ್ಕವನ್ನು ಅವರವರ ಮಕ್ಕಳಿಗೆ ಕೊಡಬೇಕಿತ್ತು. ಮನುವಿನ ಹೆಚ್ಚಿನ ಸಮಾಜ ಪದ್ಧತಿಗಳು ಆಗಿನ ಜನರಿಗೆ ಮಾನ್ಯವಾಗಿದ್ದುವು.

ಆಗ ಪುತ್ರರಲ್ಲಿ ಔರಸ (ವಿವಾಹಿತ ಪತ್ನಿಯಲ್ಲಿ ಹುಟ್ಟಿದವ) ಪುತ್ರಿಕಾಪುತ್ರ (ಔರಸನಿಗೆ ಸಮಾನನಾದವ), ಕ್ಷೇತ್ರಜ (ಬೇರೆಯವರ ಪತ್ನಿಯಲ್ಲಿ ಹುಟ್ಟಿದವ) ಕಾನೀನ (ಕನ್ಯೆಯಲ್ಲಿ ಜನಿಸಿದವ), ದತ್ತಪುತ್ರ (ತಂದೆ ತಾಯಿಗಳಿಂದ ಉದಕಪೂರ್ವಕ ದಾನ ಮಾಡಲ್ಪಟ್ಟವ), ಮೊದಲಾದ ಹನ್ನೆರಡು ವಿಧ ಇದ್ದವು. ಈ ಮಕ್ಕಳಲ್ಲಿ ಔರಸಪುತ್ರ ಮತ್ತು ಪುತ್ರಿಕಾಪುತ್ರರು ತಂದೆಯ ಎಲ್ಲಾ ವಿಧದ ವಸ್ತು ಮತ್ತು ಆಸ್ತಿಗಳಿಗೆ ಅಧಿಕಾರಿಗಳಾಗಿದ್ದರು. ಕ್ಷೇತ್ರಜಾದಿ ಮಕ್ಕಳು ತಂದೆಯ ಧನಕ್ಕೆ ಮಾತ್ರ ಹಕ್ಕುದಾರರಾಗಿದ್ದರು.

ಆಗ ಬಡ್ಡಿ ವ್ಯವಹಾರವಿದ್ದರೂ ಅತಿರೇಕವಾಗಿರಲಿಲ್ಲ. ನೂರು ಹಣಕ್ಕೆ ವರ್ಷಕ್ಕೆ ಐದು ಹಣ ಬಡ್ಡಿಯಾಗಿತ್ತು; ಅಡವಿಟ್ಟ ವಸ್ತುಗಳಿಗೆ ಆಗ ಒಂದೂಕಾಲು ಹಣವೂ ಬಡ್ಡಿಯಾಗಿತ್ತು. ಆಗ ಧಾನ್ಯವನ್ನೂ ಹೊಲಿಗೆ ಕೊಡುವ ಕ್ರಮವಿತ್ತು. ಧಾನ್ಯವನ್ನು ಬಡ್ಡಿಗೆ ಕೊಟ್ಟವರಿಗೆ ಬೆಳೆಯ ಕೊಯಿಲಿನ ಕಾಲದಲ್ಲಿ ಅದಕ್ಕೆ ಅರ್ಧಪಾಲು ಹೆಚ್ಚಿಗೆ ಕೂಡಿಸಿ ಕೊಡಬೇಕಿತ್ತು. ಆಗ ಸಾಲ ಕೊಟ್ಟವನು ಹತ್ತು ವರ್ಷಗಳಿಗೆ ಸಾಲದ ಹಣವನ್ನು ಹಿಂದೆ ಪಡೆಯದಿದ್ದರೆ ಅವನು ಮುಂದೆ ಸಾಲವನ್ನು ಹಿಂದೆ ಪಡೆಯುವ ಅಧಿಕಾರವನ್ನೇ ಕಳೆದುಕೊಳ್ಳುತ್ತಿದ್ದನು.

ಪಾಟಲಿಪುತ್ರವು ಮೌರ್ಯ ಚಂದ್ರಗುಪ್ತನ ರಾಜಧಾನಿಯಾಗಿತ್ತು. ಇದು ಶೋಣಾ ನದಿಯ ಉತ್ತರ ದಡದಲ್ಲಿತ್ತು. ಮೆಗೆಸ್ಥನೀಸನ ವರ್ಣನೆಯಂತೆ ಈ ಪಟ್ಟಣವು ಇಪ್ಪತ್ತೈದು ಮೈಲು ಸುತ್ತಳತೆಯುಳ್ಳದ್ದಿದ್ದು, ಇದರ ಕೋಟೆಗೆ ೫೭೦ ಬುರುಜುಗಳೂ, ೬೪ ಹೆಬ್ಬಾಗಿಲುಗಳೂ ಇದ್ದುವು. ಈ ನಗರದ ವ್ಯವಸ್ಥೆಯು ಮೂವತ್ತು ಜನ ಪಂಚರ (ಮುನಿಸಿಪಾಲಿಟಿ) ಸ್ವಾಧೀನದಲ್ಲಿತ್ತು. ಆಗ ಚಂದ್ರಗುಪ್ತನ ವಶದಲ್ಲಿ ಆರು ಲಕ್ಷ ಕಾಲಾಳುಗಳೂ, ೩೦ ಸಾವಿರ ಅಶ್ವಾರೋಹಿಗಳೂ, ಒಂಭತ್ತು ಸಾವಿರ ಆನೆಗಳೂ, ಎಂಟು ಸಾವಿರ ರಥಗಳೂ ಇದ್ದವು. ಈ ಸೇನೆಯು ಆಹಾರ ಸಿಬಂಧಿ ಮತ್ತು ಸಕಲ ಶಸ್ತ್ರಗಳಿಂದ ಸುಸಜ್ಜಿತವಿದ್ದು ಬೇಕಾದಾಗ ಯುದ್ಧಭೂಮಿಯಲ್ಲಿ ಬಂದು ನಿಂತು ಶತ್ರುಗಳ ಹೃದಯಕ್ಕೆ ಕಂಪನವನ್ನುಂಟು ಮಾಡುತ್ತಿತ್ತು. ಈ ಚಕ್ರವರ್ತಿಯು ಒಂದು ನಾವಾ ಬಲವನ್ನೂ ಇಟ್ಟು ಕೊಂಡಿದ್ದನು. ಆಗ ಯುದ್ಧರಂಗದಲ್ಲಿ ಆಯುಧಗಳನ್ನು ಬಿಸುಟವರನ್ನೂ, ಕೈಜೋಡಿಸಿ ಶರಣು ಬಂದವರನ್ನೂ ಹಿಂಸಿಸುವ ಕ್ರಮವಿದ್ದಿಲ್ಲ. ಸಂಹೃತರಾದ ಯೋಧರ ಕುಟುಂಬವನ್ನು ರಾಜನೇ ಕಾಪಾಡುತ್ತಿದ್ದನು. ಆಗ ಹಳ್ಳಿಗಳ ಪಕ್ಕಗಳಲ್ಲಿ ಭೀಕರ ಸಂಗ್ರಾಮ ನಡೆಯುತ್ತಿದ್ದರೂ ಒಕ್ಕಲಿಗರು ನಿರ್ಭೀತ ನಿರಪಾಯರಾಗಿ ತಮ್ಮ ವ್ಯವಹಾರಗಳನ್ನು ನಡೆಸುತ್ತಿದ್ದರು. ಅಂದು ಧರ್ಮಕ್ಕೆ ಪ್ರಾಮುಖ್ಯತೆ ಇತ್ತು.

ಇಂದಿನಂತೆ ಅಂದೂ ಜನಗಣತಿಇತ್ತು. ಇದನ್ನು ನಾಗರಿಕ ಮತ್ತು ಗೋಪರೆಂಬ ಅಧಿಕಾರಿಗಳು ನಡೆಸುತ್ತಿದ್ದರು. ಅಂದಿನ ರಾಜಮಾರ್ಗಗಳು ಮೂವತ್ತೆರಡು ಅಡಿ ಅಗಲವಿದ್ದುವು; ಚಿಕ್ಕ ಮಾರ್ಗಗಳು ನಾಲ್ಕಡಿ ಅಗಲವಿದ್ದುವು. ಆಗ ಸರ್ವ ವೈದ್ಯ ವಿಶಾರದರಿಗೆ ಭಿಷಜರೆಂಬ ಹೆಸರಿತ್ತು. ಅಂದಿನ ಮೌರ್ಯ ಸಾಮ್ರಾಜ್ಯದ ಸಮಸ್ತ ವೈಭವಕ್ಕೂ ಭಾವೀ ಭಾರತದ ರಾಜಮನೆತನಗಳ ಯಶಸ್ಸಿಗೂ ಕೌಟಿಲ್ಯನ ಅರ್ಥಶಾಸ್ತ್ರವೇ ಪ್ರಧಾನ ಕಾರಣವಾಗಿತ್ತು. ಈ ಮಹಾ ಪುರುಷನನ್ನೇ ನೀತಿಶಾಸ್ತ್ರದಲ್ಲಿ ಚಾಣಕ್ಯನೆಂದೂ, ಅರ್ಥಶಾಸ್ತ್ರದಲ್ಲಿ ಕೌಟಿಲ್ಯನೆಂದೂ, ನ್ಯಾಯಶಾಸ್ತ್ರದಲ್ಲಿ ಪಕ್ಷಿಲನೆಂದೂ, ಜ್ಯೋತಿಷ್ಯಶಾಸ್ತ್ರದಲ್ಲಿ ವಿಷ್ಣುಗುಪ್ತನೆಂದೂ, ಕಾಮಶಾಸ್ತ್ರದಲ್ಲಿ ವಾತ್ಸ್ಯಾಯನನೆಂದೂ, ಗಣಿತಶಾಸ್ತ್ರದಲ್ಲಿ ಅಂಗುಲನೆಂದೂ ಕರೆದಿದ್ದಾರೆ. ಇವನು ಸಂಸ್ಕೃತ ಮಹಾವೈಯಾಕರಣಿಯಾದ ಪಾಣಿನಿಯ ಸಹಪಾಠಿ; ಇವನು ತಕ್ಷಶಿಲೆಯ ಮಹಾ ವಿದ್ಯಾಲಯದ ವಿದ್ಯಾರ್ಥಿ. ಇವನು ಯುದ್ಧವೀರನಾದುದರಿಂದ ಮಲ್ಲನಾಗ, ದ್ರಾವಿಲ, ವಿಶಾಲಭುಜನೆಂದೂ ಕರೆಯಲ್ಪಡುತ್ತಿದ್ದನು. ವಿದ್ಯೆ ಮತ್ತು ತಪಃಶಕ್ತಿಗಳು ಸಮ್ಮಿಳಿತವಾದರೆ ಏನಾಗಬಹುದೆಂಬುದಕ್ಕೆ ಕೌಟಿಲ್ಯನೇ ಉತ್ತಮ ನಿದರ್ಶನ! ಭಾರತದ ರಾಜ್ಯ ಪದ್ಧತಿಗೆ ಸುಸ್ವರೂಪವನ್ನಿತ್ತ ಚಾಣಕ್ಯ ದೇವನು ನಿಜವಾಗಿಯೂ ಪ್ರಾತಃ ಸ್ಮರಣೀಯನೇ ಸೈ. ಅವನು ಭಾರತದ ಪವಿತ್ರ ಸಂಸ್ಕೃತಿಯ ಜಂಗಮ ಮೂರ್ತಿ! 'ಧಿಗ್ಬಲಂ ಕ್ಷತ್ರಿಯ ಬಲಂ ಬ್ರಹ್ಮತೇಜೋ ಬಲಂ ಬಲಂ' ಇದು ವಸಿಷ್ಠನಿಗೆ ಮಾತ್ರವಲ್ಲ; ಚಾಣಕ್ಯನಿಗೂ ಹೊಂದಿಕೆಯಾದ ಮಾತು.

೦ ೦ ೦

ಸು. ಎರಡು ಸಾವಿರ ವರ್ಷಗಳ ಹಿಂದೆ ಬಾಳಿ ಆ ಚಂದ್ರಾರ್ಕ ಕೀರ್ತಿ ಶಾಲಿಯಾದ ಚಾಣಕ್ಯನು ಭಾರತೀಯರ ಆರಾಧ್ಯದೈವವಾಗಿದ್ದು ಅವರ ಹೃದಯ ಮಂದಿರದಲ್ಲಿ ಸದಾ ವಿರಾಜಿಸುತ್ತಿರಲಿ! ಭಾರತೀಯರು ಸಮಗ್ರ ಭಾರತದಲ್ಲಿ ಚಾಣಕ್ಯದೇವನ ಜಯಂತಿಯನ್ನು ಆಚರಿಸಬಲ್ಲರೆ?

ದೈತ್ಯನಿದ್ದ

ದೇವ ದಾನವ ಯುದ್ಧ
ದೇವ ಬಿದ್ದ
ನಾನು ದಾನವನೆಂದ
ದೈತ್ಯನಿದ್ದ.
ವಿಶ್ವ ಚೇತನ ಜ್ಯೋತಿ
ರ್ಝಗಿಸುತಿತ್ತು
ಕ್ಷುದ್ರ 'ಬರ್ಬರ' ರಾಹು
ದೃಷ್ಟಿ ಬಿತ್ತು.
ಶಾಂತಿ ಸೋದರ ಭಾವ
ಪುಣ್ಯಚಿತ್ತ
ದಕ್ಷ ಧೀರಾಧ್ಯಕ್ಷ
ಕನೆದಿ ಸತ್ತ.
ತೆತ್ತ ರುದ್ರಾತ್ಮನಿಗೆ
ಶ್ರದ್ಧಾಂಜಲಿ
ಸ್ಮೃತಿಯ ಸ್ವರ್ಣಾಕ್ಷರದ
ರಂಗವಲ್ಲಿ.

—"ಸಾಗರ್"

ಮನುಜ—ದೇವ

ಅರಿತವರು ಆಡುವುದು ಕಡಿಮೆ
ನುಡಿವವರಿಗಿಲ್ಲ ಸ್ವಜದ ಅರಿವು.
ನಾಲಿಗೆಯ ಹಿಡಿದಿಡುವುದೊಳಿತು.
ಅದ ಹರಿಯ ಬಿಡೆ ಬಂತು ಹೊಲಸು.
ಎಲ್ಲರಲಿ ಒಳ್ಳಿತನು ಕಾಣ ಬೇಕು—
ಒಳ್ಳಿತನೆ ಮನದಿ ಬಯಸ ಬೇಕು—
ಒದುಕಿನಲಿ ಈ ಭಾವ ಬರಲೆ ಬೇಕು—
ಚಿತ್ತ ಸಮತೆಯ ಹೊದ್ದ ಬೇಕು—
ನೋವು—ನಲವುಗಳನ್ನ
ತಾಗು—ಬಾಗುಗಳನ್ನ
ಹೊಗಳಿಯ—ತೆಗಳಿಕೆಯ
ಸಮವೆಂದು ಬಗೆಯ ಬೇಕು.
ಆ ಮನುಜ, ಮನುಜರೊಳು ಮನುಜ,
ದೇವ ಸಹಜ!

— ಬಿ. ಕೃಷ್ಣ ಭಟ್ಟ.

ಜೈ ಭಾರತ್ ಮಿಲ್ಸ್ ಪ್ರೈವೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಪೇಂದ್ರ ಭಾಗ್,
ಉಡುಪಿ.

ಫೋನ್ ನಂಬ್ರ: 11A 22 ಟೆಲಿಗ್ರಾಮ್: ಪ್ರೊಟೆಕ್ಷನ್

ಶುದ್ಧ ಮತ್ತು ತಾಜಾ • ಎಳ್ಳೆಣ್ಣೆ • ತೆಂಗಿನೆಣ್ಣೆ ಮತ್ತು • ಹಿಂಡಿ

ಪ್ರಸಿದ್ಧ • ಕೆಲಗೂರು ಚಾ

ಡಿಪೋಗಳು:

1) ಚಿತ್ತರಂಜನ ಬಿಲ್ಡಿಂಗ್ಸ್, ಉಡುಪಿ. 2) ಸಿಂಡಿಕೇಟ್ ಬ್ಯಾಂಕ್ ಬಿಲ್ಡಿಂಗ್ಸ್, ಮಂಗಳೂರು—1.

ಪ್ರಿ. ಕು.ಶಿ. ಹರಿದಾಸ ಭಟ್ಟ, ಎಂ.ಎ.,
ಅವರ ನವೀನ ಪುಸ್ತಕಗಳು

	ರೂ.ನ.
ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟನಾದ	2=00
ಏಸ್ಯದ ಸಂಪತ್ತು	2=00
ಅಮೇರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಚೇತನಗಳು	0=37

ಅಂಚೆವೆಚ್ಚ ಪ್ರತ್ಯೇಕ, ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಲೇಖಕರು
ಶ್ರೀ ಕೃಷ್ಣಾನಂದ ಹೆಗ್ಡೆ, ಹೊಸದಿಲ್ಲಿ.

ನಾಳಿನ ಚರಿತ್ರಕಾರ ಬರೆವ ಹೊಸಪುಟ

೧೯೬೨ರ ಅಕ್ಟೋಬರದಲ್ಲಿ ನಮ್ಮ ಮೇಲಾದ ಕ್ರೂರ ಚೀನೀಯಾಕ್ರಮಣದ ಗಳಿಗೆಯ ವರೆಗೆ ಸ್ವತಂತ್ರ ಭಾರತದ ಇತಿಹಾಸದ ಒಂದು ಪುಟ—ಪ್ರಾಯಃ ಅದು ತನ್ನಂತೆ ಪರರ ಬಗೆವ ಅತ್ಯುದಾರ ನೀತಿ ಪ್ರೇರಿತ, ಆದರೆ, ಈ ಆಕ್ರಮಣಾನಂತರ ನಾವು ಆತ್ಮರಕ್ಷಣೆಗಾಗಿ ಶಕ್ತಿಸಂಚಯಕ್ಕೆ ತೊಡಗಿದ್ದೇವೆ; ನಮ್ಮ ನೂರಾರು ಸಹೋದರರು ಹೆಪ್ಪುಗಟ್ಟಿಸುವ ಹಿಮಾಲಯದ ಕೊರೆಯುವ ಚಳಿಯಲ್ಲಿ ನಮಗಾಗಿ ಪ್ರಾಣಾರ್ಪಣೆಗೈದಿದ್ದಾರೆ; ವೀರ ಸ್ವರ್ಗವನ್ನಪ್ಪಿದ್ದಾರೆ. ನಾವು ಹೊಲದಲ್ಲಿ ಉದ್ದಿಮೆಯಲ್ಲಿ ಎಲ್ಲಿ ದುಡಿಯುತ್ತಿರಲಿ, ಕರ್ತವ್ಯ ಪಾಲನೆಯಲ್ಲಿ ಆಲಸಿಗಳಾಗದೆ ದುಡಿಯುತ್ತೇವೆ; ಇದೇ ಸನ್ನದ್ಧ ಭಾರತದ ಹೊಸ ಪುಟ. ನಾಳಿನ ಇತಿಹಾಸಕಾರರು ಇದನ್ನು ಹೆಮ್ಮೆಯಿಂದ ಬರೆಯದೆ ಇರುತ್ತಾರೆಯೆ?

ಇದೊಂದು ಚಿತ್ರ. ಸ್ಥಳ ಭಾರತದ ಉತ್ತರ ಗಡಿ. ಸಮಯ ೧೯೬೨ ನೇ ಅಕ್ಟೋಬರ ೨೦.

ಒರಟು ಬೆಟ್ಟಗಳ ಸಾಲೆ-ದಿಗಂತದ ಉದ್ದಕ್ಕೂ ಹಂಚಿದೆ ಕಾಡುಮರಗಳ ಹಾಸಿಗೆ ಇಲ್ಲೊಂದೆಡೆ ದಟ್ಟವಾಗಿ, ಅಲ್ಲೊಂದೆಡೆ ವಿರಳವಾಗಿ ಹಾಸಿದೆ. ಮೋಡ ಕವಿದಿರುವ ಆಕಾಶದಲ್ಲಿ ಕಿರಿಚಿಕೊಂಡು ಹಾರಿ ಹೋಗುತ್ತಿರುವ ಹಕ್ಕಿಗಳು. ಜನಶೂನ್ಯತೆಯನ್ನು ಸಾರಿ ಹೇಳುವ ಅಸಹನೀಯ ಮೌನ, ಈ ಮೌನವನ್ನು ಸೀಳಿಕೊಂಡು ಆಗಾಗ್ಗೆ ಬರುವ ಪ್ರಾಣಿಗಳ ಕೂಗು.

ಆಗೊಂದು, ಕರ್ಣ ಕಠೋರ ಶಬ್ದ. ಕಾಡು ಮೃಗಗಳ ಅರ್ಭಟವಲ್ಲ, ಭೂಮಿ ಬಿರಿತದ ಆಕ್ರೋಶವಲ್ಲ. ಸಾಲುಗುಂಡುಗಳ ಘರ್ಜನೆ.

೦ ೦ ೦

ಹಟಾತ್ತನೆ ಯೋಧರ ಉಕ್ಕಿನ ಟೋಪಿಗಳು ಕಾಣುತ್ತವೆ. ಟ್ರಕ್ಕುಗಳು, ಲಾರಿಗಳು, ಜೀಪುಗಳು, ಹೆಲಿಕಾಪ್ಟರುಗಳು.... ಭಾರೀ ಗನ್ನುಗಳು, ಮೆಶಿನ್ ಗನ್ನುಗಳು, ಸಬ್ ಮೆಶಿನ್ ಗನ್‌ಗಳು, ಆಟೋಮ್ಯಾಟಿಕ್ ರೈಫಲ್ಲುಗಳು, ಸೆಮಿ ಆಟೋಮ್ಯಾಟಿಕ್ ರೈಫಲ್ಲುಗಳು, ಕೈಗುಂಡುಗಳು, ಸಿಡಿಗುಂಡುಗಳು...... ಬೆಂಕಿ.

ಹೆಣಬೀಳುತ್ತವೆ, ಸಾಲು ಹೆಣಗಳು,

೦ ೦ ೦

ಎರಡುದಿನಗಳ ನಂತರ ದಿಲ್ಲಿ ಆಕಾಶವಾಣಿ ಕೇಂದ್ರದ ಒಂದು ಸ್ಟುಡಿಯೋದಿಂದ ಪ್ರಧಾನ ಮಂತ್ರಿ ನೆಹರೂ ರಾಷ್ಟ್ರಕ್ಕೆ ಕರೆಗೊಡುತ್ತಾರೆ:

"ನಮ್ಮ ಜನತೆಯ ಮತ್ತು ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಿರುವ ಈ ಗಂಡಾಂತರವನ್ನು ನಾವು ಚೆನ್ನಾಗಿ ತಿಳಿದುಕೊಳ್ಳ ಬೇಕಾದ ಕಾಲವೀಗ ಬಂದಿದೆ. ನಮ್ಮ ಸ್ವಾತಂತ್ರ್ಯ ಹಾಗೂ ನಮ್ಮ ನಾಡಿನ ಸಮಗ್ರತೆಯನ್ನು ರಕ್ಷಿಸಲಿಕ್ಕಾಗಿ ನಾವು ಕಟಿಬದ್ಧರಾಗಿ ಈ ವಿಪತ್ತನ್ನು ಎದುರಿಸ ಬೇಕು. ಇದು ಸ್ವಾತಂತ್ರ್ಯಾನಂತರ ನಮಗೆ ಎದುರಾದ ಎಲ್ಲಾ ವಿಪತ್ತುಗಳಿಗಿಂತಲೂ ದೊಡ್ಡದು...."

ದೇಶದ ಉದ್ದಗಲಗಳಲ್ಲಿ ರಾಷ್ಟ್ರದ ಕರೆ ಮರುಧ್ವನಿಸುತ್ತದೆ:

ದೇಶಕ್ಕಾಗಿ ದಾನ ನೀಡಿ
ಆಯುಧಗಳಿಗಾಗಿ ಆಭರಣ
ಬಂದೂಕಗಳಿಗಾಗಿ ಬಂಗಾರ....
ಕೋಟೆಗಟ್ಟಲೆ ಜನ ರಾಷ್ಟ್ರ ರಕ್ಷಣೆಗೆ ಧನಕನಕಗಳ ಕಾಣಿಕೆ ಸಲ್ಲಿಸುತ್ತಾರೆ.

ರಾಷ್ಟ್ರಪತಿ ರಾಧಾಕೃಷ್ಣನ್ ಅವರ ಧ್ವನಿ:

"ಇಂದಿನ ಗಂಭೀರ ಪರಿಸ್ಥಿತಿಯಲ್ಲಿ ನಮ್ಮ ಜನ ಒಗ್ಗಟ್ಟಾಗಿ ನಿಲ್ಲುವರೆಂಬ ವಿಷಯದಲ್ಲಿ ನನಗೇನೂ ಸಂದೇಹವಿಲ್ಲ."

ವಿದೇಶೀ ಗಂಡಾಂತರದ ಎದುರು, ಹಿಂದೆಂದೂ ಕಾಣದಂತಹ ರೀತಿಯಲ್ಲಿ ರಾಷ್ಟ್ರ ತಾನೇ ತಾನಾಗಿ ಭಾವೈಕ್ಯ ಹೊಂದಿತ್ತು. [ಹೀಗಾಗಿ ರಾಷ್ಟ್ರೀಯ ಏಕಾತ್ಮ ಸಮಿತಿ ತನ್ನ ಕೆಲಸ ನಿಲ್ಲಿಸುವುದು ಸ್ವಾಭಾವಿಕವಾಗಿತ್ತು.]

೧೯೬೨ನೇ ನವಂಬರ ೩.

ರಾಷ್ಟ್ರದ ರಾಜಧಾನಿಯಲ್ಲಿ ಸೇರಿದ ಮಾಲಕರ ಮತ್ತು ಕಾರ್ಮಿಕರ ರಾಷ್ಟ್ರೀಯ ಪರಿಷತ್ತಿನಲ್ಲಿ ಮಹತ್ವದ ನಿರ್ಣಯವೊಂದು ಮಂಜೂರಾಗುತ್ತದೆ.

"ಉತ್ಪಾದನೆಯನ್ನು ಅಧಿಕಗೊಳಿಸಲು ಸರ್ವ ಪ್ರಯತ್ನಗಳನ್ನು ಕೈಗೊಳ್ಳಲಾಗುವುದೆಂದೂ, ಮಾಲಕರು ಮತ್ತು ಕೆಲಸಗಾರರು ಪರಸ್ಪರ ಸಹಕಾರದಿಂದ ಸಾಧ್ಯವಿರುವ ಎಲ್ಲಾ ರೀತಿಗಳಿಂದಲೂ ನಮ್ಮ ರಕ್ಷಣಾ ಶಕ್ತಿಯನ್ನು ಬಲಗೊಳಿಸಲು ವಿಶೇಷವಾಗಿ ದುಡಿಯುವರೆಂದೂ ರಾಷ್ಟ್ರದ ಬಗೆಗಿರುವ ತಮ್ಮ ಅಚಲ ನಿಷ್ಠೆ ಮತ್ತು ಶ್ರದ್ಧೆಯನ್ನು ದೃಢೀಕರಿಸುವರೆಂದೂ ಈ ಸಭೆ ನಿರ್ಣಯಿಸುತ್ತದೆ." ["ರಾಷ್ಟ್ರ ರಕ್ಷಣೆಗೆ ಅಧಿಕ ಉತ್ಪಾದನೆ ನಮ್ಮ ಘೋಷಣೆ"]

ಹನ್ನೊಂದು ದಿನಗಳ ನಂತರ ಪಾರ್ಲಿಮೆಂಟಿನಲ್ಲಿ ಈ ನಿರ್ಣಯ:

"ಹೋರಾಟ ಎಷ್ಟೇ ದೀರ್ಘ ಹಾಗೂ ಕಠಿಣವಾಗಿದ್ದರೂ, ಭಾರತದ ಪವಿತ್ರಭೂಮಿಯಿಂದ ಆಕ್ರಮಣಕಾರರನ್ನು ಹೊರಗೋಡಿಸಲು ಭಾರತದ ಜನತೆ ತಾಳಿರುವ ಧೃಡನಿರ್ಧಾರವನ್ನು ಈ ಸಭೆ ಆಶೆ ಹಾಗೂ ವಿಶ್ವಾಸದಿಂದ ದೃಢೀಕರಿಸುತ್ತದೆ."

೦ ೦ ೦

ಗೃಹರಂಗದಲ್ಲಿ ಅಭೂತಪೂರ್ವ ಚಟುವಟಿಕೆ ನಡೆಯುತ್ತದೆ. ಹೊಲ ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ ಉತ್ಪಾದನೆ ಹೆಚ್ಚಿಸಲು ರಾಷ್ಟ್ರ ಪಣ ತೊಡುತ್ತದೆ. ["ಹೊಲದ ಬೆಳೆ ಹೆಚ್ಚಿಸಿ ರಾಷ್ಟ್ರದ ಬಲ ಹೆಚ್ಚಿಸಿ"]

ಅಂದಿನ ಯೋಜನಾ ಮಂತ್ರಿ ಗುಲಜಾರಿಲಾಲ ನಂದಾ ಅನ್ನುತ್ತಾರೆ.

"ಇಂದಿನ ಸಂದಿಗ್ಧ ಪರಿಸ್ಥಿತಿ ಒಂದು ಅಪೂರ್ವ ಸುಸಂಧಿಯೂ ಹೌದು. ರಾಷ್ಟ್ರವೀಗ ಏಕ ಪುರುಷನಂತೆ ಎದ್ದು ನಿಂತಿದೆ. ನಾಡಿನಾದ್ಯಂತ ಐಕ್ಯತೆಯ ರಕ್ತ ಸಂಚಾರವಾಗುತ್ತಿದೆ. ರಾಷ್ಟ್ರದ ಸಿದ್ಧತೆಯ ಈ ಹೊತ್ತಿನಲ್ಲಿ ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಕ್ರಾಂತಿಯನ್ನೂ ಪೂರ್ಣಗೊಳಿಸುತ್ತೇವೆ ಎಂಬುದಾಗಿ ನಾವು ಪ್ರತಿಜ್ಞೆ ಮಾಡೋಣ."

೦ ೦ ೦

ಕವಿಗಳ ರಣಕಹಳೆ.

"ಮುಗಿಲೆ ಮದ್ದಳೆಯಾಗಿ ಮೊರೆದಿ
ಹುದು ಘೋರ
ಯುದ್ಧವೋ ಉದ್ಯಮವೊ ನೀಳ್ಗೈ
ವನು ಕೊಳ್ಳಿರಿ"
(ನಾರಾಯಣ ಸಂಗಮ)

"ಪಣ ತೊಟ್ಟೆವು ನಾವೆಲ್ಲರು ರಣ
ಗೆಲ್ಲುವೆವೆಂದು
ರಣ ಗೆದ್ದೇ ವಿಶ್ರಮಿಸುವೆವು ಉನ್ನ
ತ್ತರ ಕೊಂದು"
(ಸಿದ್ಧಯ್ಯ ಪುರಾಣಿಕ)

"ಅಡಿ ಮುಂದಡೆ ಸ್ವರ್ಗದ ಸಿರಿ, ಮರ
ಣವೆ ಮಾನವಮಿ
ನಡೆ ಮುಂದಕೆ ರಿಪು ದಮನಕೆ, ಒಲಿ
ವಳು ಜಯಲಕ್ಷ್ಮಿ."
(ಗಂಗಪ್ಪಾ ವಾಲಿ)

ಇನ್ನೊಮ್ಮೆ ರಾಷ್ಟ್ರಪತಿಯವರು:

"ಯುದ್ಧವಾದರೂ ಆಗದಿದ್ದರೂ, ಆಕ್ರಮಣ ನಡೆದರೂ ನಡೆಯದಿದ್ದರೂ ಸಿದ್ಧತೆಯಿಲ್ಲದೆ ಇನ್ನೊಮ್ಮೆ ನಾವು ಸಿಕ್ಕಿ ಬೀಳಕೂಡದು. ನಮ್ಮ ಶಕ್ತಿಯನ್ನು ನಾವು ಬೆಳೆಸಿಕೊಳ್ಳಬೇಕು."

ದೇಶದಲ್ಲಿ ಸುಮಾರು ಏಳುನೂರು ಪತ್ರಿಕೆಗಳು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಸ್ಥಳದಾನ ಕೊಟ್ಟು ರಾಷ್ಟ್ರೀಯ ಸಿದ್ಧತೆಯ ಸಾಹಿತ್ಯ ಪ್ರಕಟಿಸುತ್ತವೆ.

"ಬಂಗಾರವಿಲ್ಲದೆ ಬದುಕಬಹುದು
ಸ್ವಾತಂತ್ರ್ಯವಿಲ್ಲದೆ ಬಾಳಲಾಗದು"
"ನಿಮ್ಮ ಹೊಲ ಹೆಚ್ಚು ಫಲಕೊಡಲಿ
ಈ ಸಲ"
"ಹಿಮಾಲಯದ ಯುದ್ಧಕ್ಕೆ ಹೊಲಗಳಲ್ಲಿ ಸಿದ್ಧತೆ"
"ಅಸತ್ಯದ ವಿರುದ್ಧ ನಿಮ್ಮ ಯುದ್ಧ"
"ವದಂತಿ ಆಲಿಸಬೇಡಿ ವದಂತಿ ಹಬ್ಬಿಸ ಬೇಡಿ"
"ಮಾತು ಕಡಿಮೆ ಹೆಚ್ಚು ದುಡಿಮೆ"

೦ ೦ ೦

ರಿಕ್ರೂಟಿಂಗ್ ಆಫೀಸುಗಳಲ್ಲಿ ಸೈನ್ಯಕ್ಕೆ ಸೇರಲು ಆತುರರಾಗಿ ನಿಂತ ಸಹಸ್ರಾರು ತರುಣರ ಸಾಲುಗಳು ಕಾಣುತ್ತವೆ. [ಸೈನ್ಯವನ್ನು ಮೂರು ಡಿವಿಜನ್‌ಗಳಷ್ಟು ಹೆಚ್ಚಿಸಲಾಯಿತು] ಆಯುಧಗಳ ಉತ್ಪಾದನೆ ಇಮ್ಮಡಿಯಿತು.

ಆಸಾಕಟ್ಟಿನ ಪ್ರದೇಶಗಳಲ್ಲಿ, ಕೆಲವೆಡೆ ಇಪ್ಪತ್ತು ಸಾವಿರ ಅಡಿ ಎತ್ತರದಲ್ಲಿ ರಸ್ತೆಗಳ ನಿರ್ಮಾಣ. ವಾಯು ದಳದಲ್ಲಿ ಸಾಗಾಟ ಮತ್ತು ಹೆಲಿಕಪ್ಟರ್ ದಳಗಳ ವಿಸ್ತರಣೆ. ಜಂಟಿ ಸಮರಾಭ್ಯಾಸ ತಂಬೀತಿ—ಶಿಕ್ಷಾ. [ಹಾಕರ್, ಹಂಟರ್, ಮಿಸ್ಟೀರ್, ಒರೆಗಾನ್, ಗ್ನೇಟ್, ಮತ್ತು ವ್ಯಾಂಪೈರ್ ಯುದ್ಧ ವಿಮಾನಗಳ ಜೊತೆಗೆ ಮಿಗ್ ೨೧ ಕೂಡಾ?]

[೧೬ನೇ ಪುಟ ನೋಡಿರಿ]

Mangalore Roofs the World

For strength and durability

Use always

T. N. HEGDE TILES

Contact—

THE SATYANARAYANA
TILE WORKS LTD.

Manufacturers of : T. N HEGDE TILES

KUDROLI, MANGALORE-3.

ಶ್ರೀ ಪುರಂದರ ದಾಸರ ಕೀರ್ತನೆಗಳಲ್ಲಿ ಹಿತೋಪದೇಶಗಳು

೧

ಲೇಖಕರು: ವಿದ್ವಾನ್ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು.

ದಾಸವರ್ಯ ಶ್ರೀ ಪುರಂದರದಾಸರು ತಮ್ಮ ಅನಂತ ಕೀರ್ತನೆಗಳಲ್ಲಿ ಉಪದೇಶಾಮೃತವನ್ನು ಕೋಡಿ ಹರಿಸಿದ್ದಾರೆ. ಈ ಹಿತೋಪದೇಶಗಳನ್ನು ಅರಿತು ಅವನ್ನು ಮನವರಿಕೆ ಮಾಡಿಕೊಂಡು ಅನುಷ್ಠಾನಕ್ಕೆ ತಂದು ಸಾಂಸ್ಕೃತಿಕ ಗುಣ ಸಂಪನ್ನರಾಗಬೇಕು. ಇದರಿಂದಲೇ ನಮ್ಮ ಅಂತರಂಗ ಬಹಿರಂಗ ಶುದ್ಧಿಯಾಗುವುದು; ಶಕ್ತಿ ಸಂವರ್ಧನೆಯೂ ಆಗುವುದು; ದೇಶ ಕಲ್ಯಾಣವೂ ಸಾಧ್ಯವಾಗುವುದು.

ಶ್ರೀಹರಿಯ ದಾಸರ ವರ್ಗದಲ್ಲಿ 'ಕನ್ನಡ ಭಾಷೆಯಲ್ಲಿ ಮೊತ್ತಮೊದಲು ಕೀರ್ತನೆಗಳನ್ನು ರಚಿಸಿದವರು ಯಾರು' ಎಂಬೀ ವಿಚಾರದಲ್ಲಿ ಚರ್ಚೆಯಿದ್ದರೂ, ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರೂ ಕಲಿಂಗ ದೇಶದಲ್ಲಿ ರಾಜಪ್ರತಿನಿಧಿಯೂಗಿದ್ದವರೂ ಆದ ಶ್ರೀ ನರಹರಿತೀರ್ಥರೆಂದು ಹೇಳಬಹುದಾಗಿದೆ. ಶ್ರೀ ಮಧ್ವಾಚಾರ್ಯರು (ಇಸ್ವಿ ೧೨೦೦-೭೮) ಶ್ರೀ ಹರಿಯೇ ಸರ್ವೋತ್ತಮನು, ವಾಯುವೇ ಜೀವೋತ್ತಮನು, ಶ್ರೀ ಹರಿಯ ದಾಸನಾಗಿ, ಭಕ್ತಿಯಿಂದ-ಇದ್ದರೆ ಮುಕ್ತಿಯು ಸುಲಭವಾಗುವುದು, ಇತ್ಯಾದಿ ಶ್ರೀ ಹರಿ ಭಕ್ತಿಯ ಪ್ರಾಧಾನ್ಯವನ್ನು ಹರಹಿದ್ದರು. ಇವರು ದ್ವಾದಶ ಸ್ತೋತ್ರದಲ್ಲಿ ಹರಿಭಕ್ತಿಯು ಆವಶ್ಯಕ ವಿಚಾರವೇಕೆಂದು ಚುರುಕಾಗಿ ಸಾರಿದ್ದಾರೆ. ಆ ಮೇರೆಗೆ ಇವರ ಶಿಷ್ಯರಾದ(೧೨೬೪-೯೪) ಶ್ರೀ ನರಹರಿತೀರ್ಥರು ಆ ಹರಿಭಕ್ತಿ ಪಾರಮ್ಯವನ್ನು ಕನ್ನಡ ಭಾಷೆಯಲ್ಲಿ ಬರೆದು ಪಸರಿಸಿದರೆಂದರೆ ಸಹಜವಾದ ವಿಷಯವಾಗಿದೆ!

ಶ್ರೀ ನರಹರಿತೀರ್ಥರು. ಬರೆದ ಪದ್ಯಗಳೆರಡು ಮಾತ್ರ ದೊರೆಯುತ್ತವೆ. ಅವುಗಳಲ್ಲಿ ಮೌಲಿಕ ವಿಚಾರಗಳ ಪೋಳಕೆಯು ನಮಗೆಲ್ಲಾ ಕಾಣದಿಲ್ಲವೆಂದರೆ ಸುಳ್ಳಲ್ಲ! ಆದರೆ, ಈ ತರದ ಹರಿಕೀರ್ತನೆಗಳ ಕನ್ನಡ ಭಾಷೆಯ ರಚನಾ ಕ್ರಮವು ಅನಂತರ ಸಾಗಿ ಬಂದಿಲ್ಲ! ಸಂಸ್ಕೃತದಲ್ಲಿಯೇ ತಾತ್ತ್ವಿಕ-ಧಾರ್ಮಿಕ ಗ್ರಂಥಗಳನ್ನು ಬರೆದರೆ, ಪ್ರಾದೇಶಿಕ ಭೇದವಿಲ್ಲದೆ ಸರ್ವತ್ರ ಸುಪ್ರಸಾರವಾಗುವ ಸದುದ್ದೇಶದಿಂದ ಹಲವು ಮಂದಿ ಸ್ವಾಮಿಗಳು ಹಾಗೂ ವಿದ್ವಾಂಸರು ಸಾಗಿದ್ದಾರೆಂಬುದು ಗಮನೀಯವಾಗಿದೆ! ಸಾಧಾರಣ ಎರಡು ನೂರು ವರ್ಷದ ತರುವಾಯ ಕನ್ನಡದಲ್ಲಿಯೂ ಹರಿಕೀರ್ತನೆಗಳನ್ನು ಅನೂಚಾನವಾಗಿ ಹರಿಯಿಸಿದ ಸಂಗತಿ ವಿವೇಚಿಸಿದರೆ, ಆ ತನಕ ಈ ಪದ್ಧತಿ ಗುಪ್ತಗಾಮಿಯಾಗಿ ಮಂದಗತಿಯಿಂದ-ಸಾಗುತ್ತಿದ್ದಿರ ಬೇಕೆಂದು ಹೇಳಬರುತ್ತದೆ.

೧೫-೧೬ನೆಯ ಶತಕದಲ್ಲಿ ಶ್ರೀ ಪಾದರಾಯರು, ಇವರ ಶಿಷ್ಯರಾದ ಶ್ರೀ ವ್ಯಾಸರಾಯರು ಸ್ವಯಮೇವ ಕನ್ನಡದಲ್ಲಿ ಹರಿಕೀರ್ತನೆಗಳನ್ನು ರಚಿಸಿ, ದೇವರ ಮುಂದೆ ಸಂಸ್ಕೃತ ಸ್ತೋತ್ರಗಳಂತೆ ಹಾಡಲು ಅವಕಾಶವೊದಗಿಸಿದುದು ಒಕ್ಕೊರಲಿಂದ ಹೊಗಳ ತಕ್ಕುದಾಗಿದೆ. ಏತತ್ಸಮಕಾಲಿಕರಾದ, ತತ್ ಶಿಷ್ಯರಾದ, ಶ್ರೀ ವಾದಿರಾಜ ಸ್ವಾಮಿಗಳೂ ಇದೇ ರಹದಾರಿಯನ್ನು ಪ್ರಚುರವಾಗಿ ಮುನ್ನಡೆಸಿದರು. ಈ ಕಾಲದ ಈ ಮಹಾ ಮುನಿತ್ರಯರ ಮುಂದಾಳ್ತನದಲ್ಲಿ ಕನ್ನಡದಲ್ಲಿ ಸಾಗಿದ ಹರಿಕೀರ್ತನ ರಚನಾ ಕ್ರಮವು ಶ್ರೀ ಪುರಂದರದಾಸ ಶ್ರೀ ಕನಕದಾಸರುಗಳಿಂದ ಮಹತ್ವದ ಸ್ಥಾನವನ್ನು ಹೊಂದಿದ್ದೆಂದು ಹೇಳಲಡ್ಡಿಯಿಲ್ಲ!

ಶ್ರೀ ವಿದ್ಯಾರಣ್ಯರು, ಶಾರ್ಙ್ಗದೇವ, ಪುಂಡರೀಕ ವಿಠಲ ಮೊದಲಾದವರು ಕರ್ನಾಟಕ ಸಂಗೀತ ಹಾಗೂ ವಾದ್ಯ ಮತ್ತು ನೃತ್ಯಾದಿಗಳ ವಿಷಯವನ್ನು ಕುರಿತು ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದಿದ್ದಾರೆ ಆದರೆ, ಕನ್ನಡದಲ್ಲಿ ಅಂತಹ ಲಕ್ಷಣಗಳನ್ನೊಳಗೊಂಡ ಲಕ್ಷ್ಯ ಗ್ರಂಥಗಳನ್ನು — ಕೃತಿಗಳನ್ನು - ರಚಿಸಿದವರು ಈ ಮೇಲಿಂದ ಮುನಿತ್ರಯರು ಹಾಗೂ ದಾಸವರ್ಯರೆಂದುತಿಳಿಯುತ್ತದೆ. ಪ್ರಕೃತ ಪುರಂದರವಿಠಲನೆಂಬ ಮುದ್ರಿಕೆಯುಳ್ಳ ಕೀರ್ತನೆಗಳನ್ನು— ಉಗಾಭೋಗ ಸುಳಾದಿ, ಇತ್ಯಾದಿ ಕೃತಿಗಳನ್ನು—ರಚಿಸಿದ ಶ್ರೀ ಪುರಂದರದಾಸರ ನಾಲ್ಕುನೂರನೆಯ ಪುಣ್ಯದಿನದಸಮಾರಂಭವು ಎಲ್ಲೆಡೆ ನಡೆಯುತ್ತದೆ. ಆದುದರಿಂದ ಇವರ ಉಗಭೋಗಗಳಲ್ಲಿ ಕೆಲವನ್ನು ಆಧರಿಸಿ,ಹಿತೋಪದೇಶದ ಕಿಂಚಿತ್ಪರಿಚಯ ರೂಪಲೇಖನ ಬರೆಯಲಾಗಿದೆ (ಸುಬೋಧ ಪ್ರಕಟನಾಲಯ, ಬೆಂಗಳೂರು, ಇವರ ಪ್ರತಿಯಿಂದ ಉಗಾಭೋಗಗಳು ಎತ್ತಿ ಬರೆಯಲಾಗಿವೆ).

ಮನಸ್ಸಿನ ಶುದ್ಧೀಕರಣ:— "ಮನ ಶುದ್ಧಿಯಿಲ್ಲದವಗೆ ಮಂತ್ರದ ಫಲವೇನ | ತನು ಶುದ್ಧಿಯಿಲ್ಲದವಗೆ ತೀರ್ಥದ ಫಲವೇನು| ನಿಂದಲ್ಲಿ ಫಲವೇನು ಶ್ರೀ ಶೈಲದ ಕಾಗೆಯಂತೆ|ಹೊರಗೆ ಮಿಂದು, ಒಳಗೆ ಮೀಯದವರ ಕಂಡು|ಬೆರಗಾಗಿ ನಗುತಿದ್ದ ಪುರಂದರ ವಿಠಲ||"(I೫)

"ಮನಚಂಚಲದಿ ತಪವ ಮಾಡಲಶಕ್ಯವು| ಘನ ಅಜ್ಞಾನದಿ ಹಲವು ಕರ್ಮ ಹತ್ತವು| ಧನಶುದ್ಧಿಯಿಲ್ಲದ ದಾನವು ವ್ಯಥಾ ಇವು | ಇಸಿತಾದ್ದರಿಂದ ಪುರಂದರವಿಠಲ ಈಯುಗದಿ| ತನ್ನ ನಾಮ ಸ್ಮರಣೆ ಲೇಸೆಂದನು ||" (I೬)

'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ': ಎಂಬ ಆರ್ಯೋಕ್ತಿಯಿದೆ ಮನೋ ವಾಕ್ಕಾಯಗಳೆಂಬ ತ್ರಿಕರಣಗಳಲ್ಲಿ ಮೊತ್ತ ಮೊದಲನೆಯ ಮನಸ್ಸೇ ಎಲ್ಲಾ ಒಳಿತಿಗೂ ಕೆಡುಕಿಗೂ,ಮೂಲ ಸ್ಥಾನವಾಗಿದೆ. ಮನಸ್ಸಿಗೆ ಮೊದಲ ಸ್ಥಾನವು ಇದ್ದುದರಿಂದ ಅದನ್ನು ನಿಮ್ರಲಿಸಿದರೆ ಸ್ವಾಯತ್ತೀಕರಿಸಿದರೆ ದಮಿಸಿದರೆ ವಿಕೃತಿಗಳಿಂದ ಆಬಾಲ್ಯವಾರ್ಧಕ್ಯಕಾಲದಲ್ಲೂ ಅದೇನೂ ತೊಂದರೆಯಿಲ್ಲ ಅವ್ಯೊಂದು ಸುಖಾತಿರೇಕ ಹಾಗೂ ದುಃಖಾತಿರೇಕ ಒದಗಿದರೆ, ಮನಸ್ಸನ್ನು ಬಿಗಿಹಿಡಿದು ಯೋಚಿಸಿದರೆ, ನಿರಪೇಕ್ಷನಾಗಿದ್ದು ಬಾಳಿ, ಮುಂದೆ ಕೀರ್ತಿಶಾಲಿಯಾಗುವುದಕ್ಕೆಡೆಯಿದೆ. ಇಂದಿನ ಯುಗದಲ್ಲಿ-೨೦ನೆಯ ಶತಕದಲ್ಲಿ—ಭಾರತದಲ್ಲಿ ಮಾತ್ರವಲ್ಲ, ವಿದೇಶಗಳಲ್ಲೂ ಮನಸ್ಸಿನ ಚಾಂಚಲ್ಯದಿಂದಲೇ ಹಲವಾರು ವಿಗಡಗಳು (ರಾಜಕೀಯ ಹಾಗೂ ಸಾಮಾಜಿಕಗಳು) ಆಗುತ್ತವೆಯೆಂದು ಕುಶ ವಿವೇಚಿಸಿದರೆ ತಿಳಿಯಬರುವುದು. ಅಂದ ಮೇಲೆ, ಕೇವಲ ಧಾರ್ಮಿಕ ರಂಗದಲ್ಲಿ ಮಾತ್ರವಲ್ಲ. ನಿತ್ಯ ಜೀವನದಲ್ಲೂ ಮನೋದಾರ್ಢ್ಯವೇ ಆರೋಗ್ಯ-ಸೌಭಾಗ್ಯ ಸೌಖ್ಯಗಳ ನಿಧಿ ಯೆಂದು ಹೇಳಬಹುದು.'ಸಂತೋಷವೇ ಯೌವನ, ಚಿಂತೆಯೇ ಮುಪ್ಪು"ಎಂಬ ಸೂಕ್ತಿಯೂ ಇದನ್ನುಸೂಚಿಸುತ್ತದೆ! ಇದಕ್ಕೊಂದು ಉಪಾಯವನ್ನು ಹರಿದಾಸರು ಸೂಚಿಸಿದ್ದಾರೆ: "ಮನದಭಿಮಾನಿ ಮಹಾರುದ್ರನ ಭಜಿಸಲು:| ಅನವರತ ಶ್ರೀ ಹರಿಯ ಆರಾಧಿಸುವುದಕ್ಕೆ| ಮನಶುದ್ಧಿಯನೇವ ಮಾತಿ ಕೊಡುವ|ಮುನಿಜೋತ್ತಮರುಕೇಳಿ ಮನಕೆ ಪ್ರೇರಕನವನು | ವನಜಾಕ್ಷ ಪುರಂದರ ವಿಠಲನ ಒಲುಮೆಗೆ| ಮನಸು ಕಾರಣವಲ್ಲದೆ ಮಿಗಿಲಾವುದು ||" (II೩೦)ಈ ತಾತ್ತ್ವಿಕ ವಿಚಾರವು ಮಾಧ್ವಸಂಪ್ರದಾಯವನ್ನು ಅಧರಿಸಿಯದೆ. ಮುಕುತಿಪಥಕೀವ ಮಾನವುಹರುದ್ರದೇವರು ಎಂದು ಪುರಂದರರಉಗಾಭೋಗದಲ್ಲಿದೆ. ಚಂದ್ರಮಾ ಮನಸೋಜಾತಃ(ಋಗ್ವೇದ)ಎಂಬಂತೆ,ಚಂದ್ರನ ಬಲಾಬಲಿಕೆಯಂತೆ ಮನಸ್ಸಿನ ದಾರ್ಢ್ಯ ಚಾಂಚಲ್ಯಗಳು ಸೂಚಿಸಲಾಗುವುದೆಂಬ ಜ್ಯೋತಿಷ್ಯವಿಷಯವೂ ಗಮನೀಯವಿದೆ!

೨) ಸುಖವೆಂದರೆ ಇಹ ಜೀವನದಲ್ಲಿದ್ದಂತೆ ಪರಲೋಕದಲ್ಲಿರುವುದೇ? ಎಂಬ ಜಿಜ್ಞಾಸೆಗೊಂದು ಉತ್ತರವಿದು; ಇಹಕ್ಕಿಂತಲೂ ಪರತ್ರ ಸುಖದಲ್ಲಿ ಮೇಲ್ಮೆಯೇನೆಂದೂ ಇಲ್ಲಿ ಬಿತ್ತರಿಸಿಯದೆ.

"ಇಲ್ಲೆಂಥಾ ಸುಖಗಳುಂಟೋ ಅಲ್ಲಂಥಾ ಸುಖಗಳುಂಟು | ದುಃಖಮಿಶ್ರವಾದ ಸುಖ ಇಹಲೋಕದಲ್ಲಿಪ್ಪುದು | ನಾಶವುಂಟು, ದಿನಕೊಂದು ಬಗೆಬಗೆಯಾದಂತ ಸುಖವಾಗಿ | ನಾಶವಿಲ್ಲದ ಅಪ್ರಾಕೃತವಾದ ಸುಖವನ ಭವಿಸುತ್ತ ಕ್ರಮದಿ ತಿರು

Telegrams TAJWALLA
Phone Office: 134
Res. 445

Indian National Tile Works
HOIGE BAZAAR,
MANGALORE-1.
MANUFACTURERS OF
BEST QUALITY
B. M.
Monappa's Taj Double Bawta
TRAM BRAND
FEROKE MODEL
DOLLAR BRAND
TILES
AND
RIDGES

ಗುವರು | ಆಂದೋಳಿಕ ಛತ್ರ ಚಾಮರ ಸದಾ ಪೀತಾಂಬರ ಶಂಖ ಚಕ್ರಂ ಗಳಿಂದೊಪ್ಪುತ! ಗುರುಪುರಂದರ ವಿಠಲನ ಭಜಿಸು ಜೀವ ||" (I ೪೧)

ಈ ಲೋಕದಲ್ಲಿ "ಸುಖಸ್ಯಾನಂತರಂ ದುಃಖಂ, ದುಃಖಸ್ಯಾನಂತರಂ ಸುಖಂ" ಎಂಬಂತೆ, ಸುಖ ದುಃಖಗಳು ಅನೂಚಾನವಾಗಿರುತ್ತವೆ, ಪರಿವರ್ತನ ಶೀಲಗಳಾಗಿವೆ. ಪರಲೋಕದ ಸುಖವೆಂದರೆ, "ನಾಶವಿಲ್ಲದ, ಅಪ್ರಾಕೃತವಾದ" ಸುಖವೆಂದು— ಶಾಶ್ವತ ಸೌಖ್ಯವಿರುವ ಸ್ಥಿತಿಯೆಂದರ್ಥವಾಗುತ್ತದೆ. ಇಲ್ಲಿ "ಆಂದೋಳಿಕಾ"ದಿಗಳಿಂದ ಶ್ರೀ ಹರಿಯ ಸಾರೂಪ್ಯವು ಸೂಚಿಸಿಯದೆ. (ಅಂತೆ, ಸಾಲೋಕ್ಯ ಸಾಯುಜ್ಯ, ಸಾಮಿಪ್ಯ, ಸಾರ್ಷ್ಟಿಗಳೆಂಬ ಮುಕ್ತಿಯ ವಿಧಗಳು ಇಲ್ಲಿ ಹೇಳತಕ್ಕವುಗಳಾಗಿವೆ) ಅರ್ಥಾತ್, ಉನ್ನತ ಸ್ಥಾನ ಪ್ರಾಪ್ತಿ ಯೆಷ್ಟಾದರೂ ಮಾನಸಿಕ ಸೌಖ್ಯ (ಶಾಂತಿ) ಇಲ್ಲದಿರುವಲ್ಲಿ ಅಂತಃಕಲಹ, ಗೂಢ ಹತ್ಯೆ ಮೊದಲಾದವು ನಡೆಯುತ್ತವೆ. ಸಾರ್ವಾಧಿಪತ್ಯವೊದಗಿದರೂ ಒಂದಾನೊಂದು ಬಾರಿ ವಿಗಡವು ಕಟ್ಟಿಟ್ಟ ಬುತ್ತಿಯಾಗಿದೆಯೆಂಬುದು ದಿನವಹಿ— ಆಗಾಗ-ತಿಳಿದು ಬರುತ್ತಿದೆ ಅಂದ ಮೇಲೆ ಈ ವಿಕೃತ ಅಶಾಶ್ವತ ಸುಖಕ್ಕೆಳಸುವುದು ಬುದ್ಧಿವಂತರ ಲಕ್ಷಣವಾಗಿಲ್ಲೆಂದು ತಾನೇ ಇಲ್ಲಿ ತಿಳಿಯಬೇಕು! ನಶ್ವರಕ್ಕಿಂತ ಶಾಶ್ವತದತ್ತ ಮನಸುಗೊಡುವುದು ಅವಶ್ಯ —ಸೂಕ್ತವಾಗಿದೆಯಲ್ಲವೆ?

೩) ಶ್ರೀ ಪುರಂದರ ದಾಸರು ಹುಟ್ಟಿನಿಂದ ಅದ್ವೈತಿಗಳಾಗಿದ್ದರು—ಎಂದು ಕೆಲವರು ಹೇಳುತ್ತಾರೆ. ಹಾಗಿದ್ದರೆ, ಅವರು ಶ್ರೀ ವ್ಯಾಸರಾಯರಿಂದ ಹರಿದಾಸರಾಗಿ ಪರಿವರ್ತನೆಗೊಂಡುದು ಮಾತ್ರವಲ್ಲ, ಶ್ರೀ ಮಾಧ್ವ ಸಂಪ್ರದಾಯದಂತೆ ಕೆಲವು ವಿಚಾರಾಂಶಗಳನ್ನು ಹೇಳಲು ತೊಡಗುವ ಅವಕಾಶವಿದ್ದಿಲ್ಲ. ಹಾಗಾಗಿ, ಶ್ರೀ ಪುರಂದರ ದಾಸರು ಹುಟ್ಟಿನಿಂದಲೂ ಮಾಧ್ವ ಸಂಪ್ರದಾಯದ ಶ್ರೀ ವ್ಯಾಸರಾಯ ಮಠದ ಶಿಷ್ಯರಲ್ಲೊಬ್ಬರಾಗಿದ್ದರೆಂದು ತಿಳಿಯುವುದು ಸಾಧುವಾಗುತ್ತದೆ. ಆ ನೇರಿಗೆ ಹೇಳಿದ ಒಂದು ನುಡಿಯಿದು

"ಜೀವ ಜೀವಕೆ ಭೇದ, ಜಡ ಜಡಕೆ ಭೇದ| ಜೀವ ಜಡ ಪರಮಾತ್ಮನಿಗೆ ಭೇದ ಜೀವಾ ಜೀವ ಮುಕ್ತಾ ಮುಕ್ತರ ಭೇದ| ಸಂಸಾರದೊಳು ಭೇದ| ಮುಕ್ತರೊಡೆಯರು ಭಕ್ತರಾಧೀನ| ಜಗತ್ಕರ್ತೃ ನೀಸಲಹುವ್ಯ ಪುರಂದರ ವಿಠಲ||" (II ೬೬)

ಈ ಭೇದಪ್ರಪಂಚದ ವಿಚಾರವು ಲೌಕಿಕವಾಗಿ ಅವಶ್ಯವಾಗಿ ನಾವು ತಿಳಿಯಬೇಕು,

"ಜೀವೇಶ್ವರ ಭೇದ, ಪರಸ್ಪರ ಜೀವ ಭೇದ, ಜಡೇಶ್ವರ ಭೇದ, ಜಡ ಜೀವ ಭೇದ, ಪರಸ್ಪರ ಜಡ ಭೇದ ಎಂದು ಪ್ರಪಂಚವು ಪಂಚ ಪ್ರಕಾರವಾದ ಭೇದ ರೂಪವಾಗಿರುವುದು. ಹೀಗೆ ಭೇದ ನಿರೂಪಣಕ್ಕೆ ಪ್ರಯೋಜನವೇನೆಂದರೆ, ಇಲ್ಲಿ ಜೀವೇಶ್ವರ ಜ್ಞಾನವಿಲ್ಲದೆ, ತಾನೇ ಈಶ್ವರನೆಂಬ ಜ್ಞಾನ ಬಂದರೆ, ಮಹಾರಾಜ ಭೃತ್ಯನು ತಾನೇ ಮಹಾರಾಜನೆಂದು ತಿಳಿದುಕೊಂಡು ರಾಜನ ವೇಷವನ್ನು ಧರಿಸಿ ವ್ಯಾಪಾರಗಳನ್ನು ಮಾಡತೊಡಗಿದರೆ, ಅವನಿಗೆ ಆಗ ತಕ್ಕ ಗತಿಯೇ ಇವನಿಗೂ ಆಗುವುದು. ತಾನು ದಾಸನೆಂದು ರಾಜ ಭೃತ್ಯನು ತಿಳಿದು ಸ್ವಾಮಿ ಭಕ್ತನಾಗಿ ರಾಜ ಸೇವಾಸಕ್ತನಾಗಿದ್ದರೆ, ರಾಜಾನುಗ್ರಹಕ್ಕೆ ಪಾತ್ರನಾಗಿ ಸಕಲ ಭೋಗವನ್ನೂ ಅನುಭವಿಸುವನು; ಹೀಗೆ ಪರಮಾತ್ಮನ ಭೃತ್ಯನೆಂದು ಭಾವಿಸಿ ಅವನ ಆರಾಧನೆಯಲ್ಲಿ ಸಕಲ ಸಂಪತ್ತನ್ನು ಅನುಭವಿಸುವುದಕ್ಕೆ ಈ ಭೇದ ಜ್ಞಾನವು ಮೂಲ ಕಾರಣ" (ಹಿಂದೂ ದರ್ಶನಸಾರ. ಪುಟ. 271)

"ಮುಖ್ಯವಾಗಿ ಈ ಸಿದ್ಧಾಂತದಲ್ಲಿರುವ ಅಂಶವು ತಾರತಮ್ಯವು, ಅಂದರೆ ಉಚ್ಚ ನೀಚಭಾವವು. ಇದು ಜೀವಾತ್ಮರೆಂಬ ವಸ್ತುಗಳಿಗೆ ಶಾಶ್ವತವಾಗಿ ವ್ಯತ್ಯಾಸವಾಗದೆ ಇರುವುದು. ಈ ನಿಷ್ಕರ್ಷೆ ಬಂದರೆ, ಪ್ರತಿ ಜೀವನೂ ತನ್ನ ಯೋಗ್ಯತೆಯಿಷ್ಟೇ ಎಂದು ತಿಳಿದು ಅದರಲ್ಲೇ ತೃಪ್ತನಾಗಿ, ದುರಾಶೆಯಿಲ್ಲದೆ, ಅಸೂಯೆಯಿಲ್ಲದೆ, ಕಾಮಕ್ರೋಧಗಳಿಗೆ ಅವಕಾಶವಿಲ್ಲದೆ, ಶಾಂತನಾಗಿರುವುದಕ್ಕೆ ಮೂಲ ಕಾರಣವಾಗಿರುವುದೆಂದು ತಾತ್ಪರ್ಯ."(ಪು 274)

ಈ ವಿವರಣದಂತೆ, ನಮ್ಮ ಇಹ ಜೀವನದಲ್ಲಿ ಮಾನಸಿಕ ಶಾಂತನಾಗಿದ್ದರೆ, ಲೌಕಿಕ ದುಃಖ ಲೇಶವೂ ಇಲ್ಲದೆ, ಪಾರಲೌಕಿಕ ಶಾಶ್ವತ ಸೌಖ್ಯವೂ ದೊರೆಯದಿರಲಾರದು. ಇದಕ್ಕೆ ಈ ಬರೆಹದ ಮೊದಲಲ್ಲಿ ಹೇಳಿದ ಮನಸ್ಸು ಮಾಡುವುದೇ ಅತ್ಯವಶ್ಯ ವಿಷಯವಾಗಿದೆಯಲ್ಲವೇ?

ಕೊನೆಮಾತು:— "ನವಯುಗ"ದ ಪ್ರಜಾರಾಜ್ಯ ದಿನಾಚರಣೆಯ ಈ ಶುಭ ಸಂದರ್ಭದಲ್ಲಿ ಇಂತಹ ರೀತಿಯ ಸಾಂಸ್ಕೃತಿಕ ಗುಣ ಸಂಪನ್ನರಾಗಲು ನಾವು ಹವಣಿಸಬೇಕು. ಇಷ್ಟು ಮಾತ್ರವಲ್ಲ, ಅಂತಃ ಕಲಹಾದಿಗಳನ್ನು (ಅಂತರ್ಯಶತ್ರು ಭೂತ ರೂಪಗಳನ್ನು) ದಮಿಸುತ್ತಾ, ಬಾಹ್ಯ ಶತ್ರು ಭೂತ ರೂಪಗಳನ್ನು ಬಡಿದಟ್ಟಲು ಸಹಕರಿಸಲು ಕೂಡಾ ಪ್ರತಿಜ್ಞಾ ವಿಧಾನವನ್ನು ಪ್ರತಿಯೊಬ್ಬ ಪ್ರಜೆ— ಜನತೆಯು ಕೈಗೊಳ್ಳಬೇಕು.

ಸಂಸ್ಕೃತಿಯ ಸುಡುಗಾಡು

ಕವಿ: ಶ್ರೀ ಅ. ಗೌ. ಕಿನ್ನಿಗೋಳಿ.

ಮೊಗದಿರುಹಿ ಹೀಗಳೆಯದಿರು ಗೆಳೆಯ, ನೀನಿಲ್ಲಿ
ಹೇಗೇಕೆ ಬಂದೆಯೋ ತಿಳಿದು ನೋಡು !
ಹೆಗಲೆಲುಬು, ತಲೆಯೋಡು, ಬೆಂಗೋಲ ಮುರುಕುಗಳು—
ಕಾಗೆ ನರಿಗಳ ನಡುವೆ ಸುಳಿದು ನೋಡು !
ಕಾಣಲ್ಲಿ ಸಿದಿಗೆಯಲಿ ಸೌಮನದ ಸುಡುವ ಹೊಗೆ,
ಎದೆಯೊಲವು ಬೇಪ ಬೇಗೆ,
ವಾತ್ಸಲ್ಯ ವಲ್ಲರಿಗೆ ಉರಿಹತ್ತಿ, ಕನಿಕರಕೆ
ಕರ್ಬೊಗೆಯು ಕವಿದಿಹ ಬಗೆ!
ಬತ್ತಲೆಯ ಕಾಮದೈವಗಳ ಕುಣಿತ,
ಲಾಲಸೆಯ ಶುನಿ ಬೊಗಳುತಿರುವ ರಣಿತ,
ಬಂಟಿಕೆಯ ಬಳ್ಳುಗಳು ಊಳಿಡುವವು,
ಗರ್ವ ಘೂಕಗಳಲ್ಲಿ ಸಾಲಿಡುವವು.

ಹೇಡಿತನದಾ ಹುತ್ತಗಳ ಹೊಕ್ಕು ಬುಸುಗುಡುವ
ಸ್ವಾರ್ಥ ಸರ್ಪಗಳುಸಿರ ಕೇಳಬಹುದಿಲ್ಲಿ.
ಮಾನವ್ಯ ಮಹಿಮೆಯನು ತುಳಿವ ತಾಂಡವ ಕಂಡು
ದೈತ್ಯಮಾನಸ ಮೋದ ತಾಳಬಹುದಿಲ್ಲಿ.
ಹೀನತೆಯ ಹಾರೆಗುದ್ದಲಿ ತೋಡುತಿವೆ ಕುಳಿಯ
ಮಾನವನು ಹುಗಿಯಲೆಂದು.
ಹಗೆತನದ ಗರಗಸವು ಹಲ್ಕಿಸಿದು ಕಾದಿಹುದು
ಸಮತೆಯನು ಸಿಗಿಯಲೆಂದು.
ನಂಬಿಕೆಯು ನರಳುತಿದೆ—ವಂಚನೆಯ ವಿಷವುಂಡು
ಹಂಬಲವೆ ಹೊತ್ತುತ್ತಿದೆ.
ತುಂಬುನೇಹದ ನೇಣು ಉರುಳಾಗುವುದ ಕಾಣು !
ಕಂಬನಿಯೆ ಕತ್ತುತ್ತಿದೆ.

ಇಸ್ಸಿ, ಥೂ ಥೂ ಎಂದು ಉಗುಳದಿರು, ತೆಗಳದಿರು
ದುರ್ವಾಸನೆಗೆ ಹೇಸಿ ಓಕರಿಸುತ.
ಇಂದಿನೀ ನಾಗರಿಕ ನಾಕದಲಿ—ಲೋಕದಲಿ—
ಹೊಂದಿಕೊಳಲೇಬೇಕು ಸ್ವೀಕರಿಸುತ.
ವೇದರ್ಷಿಗಳು ಬುದ್ಧ ಕ್ರಿಸ್ತಾದಿ ಮರುಹುಟ್ಟಿ
ಬಾನಾಲಿಯ ಬೋಧನೆಯ ಒಗೆದರೂನು,
ಚಾಣಕ್ಯ ಪ್ಲೇಟೊ ಅರಿಸ್ಟಾಟ್‍ಲರು ಸಾಕ್ರಟೀಸ್
ಬೀದಿಯಲಿ ಭಾಷಣವ ಬಿಗಿದರೂನು
ನಂದದೀ ಸುಡುಗಾಡು; ನಿಲ್ಲದೀ ದುರ್ಗಂಧ.
ಇಂದಿನೀ ಲೋಕಾನುಬಂಧ.
ರಾಜಕಾರಣ ಮಾರಣದ ಗುಪ್ತ ನರಬಲಿಯ
ವೇದಿಕೆಯ ಬಳಿಯಲ್ಲು ಇರದ,
ನಗರದಂಚಿನ ತಿಪ್ಪೆ ಗುಂಡಿಯಲಿ ಗುಂಯ್ಗುಡುವ
ಕೊಳೆಯಲ್ಲು ಸಿಗದಂಥ ಗಂಧ!

ದಶಶಿರಾನುಜೆ ಇಲ್ಲೆ ದುರ್ಗಂಧ ಸಹಿಸದೆನೆ
ನಾಸ ಛೇದಿಸಿಕೊಂಡಳಂತೆ!
ಶೂದ್ರ ಶಂಭೂಕನಿಲ್ಲೆ ಶೂಲಕ್ಕೆ ತಲೆ ಜಪ್ಪಿ
ತಾನಾಗಿ ಮಡಿದನಂತೆ!
ತಾಳಲಾರದೆ ಕರ್ಣ ತನ್ನೆದೆಯನೇ ತರಿದು
ತೀರಿದುದೂ ಎಲ್ಲಿ ಮತ್ತೆ?
ನೆಲಮಾಳಿಗೆಯ ರಚಿಸಿ ಬಲಿರಾಜ ಬದುಕಿದುದು
ಈಯೆಡೆಯೊಳಿಲ್ಲೆಯಂತೆ.

ಉಸಿರ ಬಿಗಿ ಹಿಡಿ ಮೂಗು ಮುಚ್ಚು-
ಥೂ, ನಿನಗೆ ಹುಚ್ಚು;
ಮುಚ್ಚದಿರು ದುರ್ಗಂಧ ಕುಡಿದು ಸಾಯಿ!
ನಿರ್ಗತಿಕ ಬಡಸಾಯಿ!
ಮದುವೆ ಮನೆಯಲ್ಲವಿದು ಬರಿಯ ಸುಡುಗಾಡು—
ಸಾವುದೊಂದೇ ಇಲ್ಲಿ ಕಟ್ಟುಪಾಡು.
ಆ ವರೆಗೆ ಸುತ್ತಲೂ ಕಣ್ಣಾರೆ ನೋಡು--
ಏನ ಕಾಂಬೆಯೋ ಅದನೆ ಚೆಲುವೆಂದುಕೊಳ್ಳು!
ನೋವಿನ ನೆಗ್ಗಿಲಮುಳ್ಳು,
ನಿಂದೆಯ ನಾತಗಿಡ,
ಪೀಡನೆಯ ಊದುಸೋಗೆ,
ರೋಗಾಟದ ಕಾಡು ಸೀಗೆ,
ಸೊಕ್ಕಿನ ಕರ್ಕಟ ಬಳ್ಳಿ
ಬಡಿವಾರದ ಜಡೆಕಳ್ಳಿ— ಬೆಳೆವಿಲ್ಲವೆ ಇಲ್ಲಿ?
ವನಮಹೋತ್ಸವವಿರದೆ ಯಾರು ಬೆಳೆಸಿದುದನು?
ಸಂದೇಹವೇ ನಿನಗೆ ನಾಗರಿಕನೆ?
ಇಂಥ ಸಾಹಸವನ್ನರಿಂದ ಸಾಧ್ಯವೆ ಸಖನೆ?
ಮತ್ತಾರು--ಬೆಳೆಸಿದವ ನೀನೆ, ನೀನೆ!

ನಗುತಿರುವನೊಬ್ಬ ಮುದುಕ

ಕೈಮುಗಿದು ನಗುತಿರುವನೊಬ್ಬ ಮುದುಕ
ಅಮೃತ ಚೆಲ್ಲಿದ ಹಾಗೆ ಕಂಡಿತೋ ಮರ್ತ್ಯ ಲೋಕ

೧ ದ್ವೇಷ ದೌರ್ಜನ್ಯಗಳ ದುಃಖದಾಸ್ಯದ ಹೊರೆಯು
ಹೊತ್ತ ಭಾರಕೆ ಬೆನ್ನು ಮುರಿದು ಮಣ್ಣಿನ ಮೇಲೆ
ಹೊರಳುತಿಹ ನಿಸ್ಸಹಾಯಕ ಜನರ ಮಗ್ಗುಲಲಿ
ನಗುತಿರುವನೊಬ್ಬ ಮುದುಕ!
ಕೈಗೋಲನೂರಿ ನಿಮ್ಮಾ ಸರಕೆ ಬಂದಿರುವೆ
ನೆಂದು ನಿರ್ವ್ಯಾಜ ನಿರ್ಮಲ ಚಿತ್ತದೊಲವಿನಲಿ
ಮಂದಹಾಸವ ಬೀರಿ ಕೈಮುಗಿದು ನಿಂತಾಗ
ಸ್ವರ್ಗವಾಯಿತು ನಿತ್ಯ ನರಕ!

೨ ಕೊಲೆ ಕಿತವ ಹಾದರದ ಹಲಹಲವು ದೋಷಗಳ
ಕಿಲ್ಬಿಷದ ಕೈಗಳಲಿ ಹೂವು ಹೊರೆಯನು ಹೊತ್ತು
ರಾಜಘಾಟಿನ ಮೇಲೆ ಸುರಿಪ ಜನಜನಕಾಗಿ
ನಗುತಿರುವನೊಬ್ಬ ಮುದುಕ!
ತಲೆಯ ಮೇಲಿದೆ ಗಾಂಧಿಟೊಪ್ಪಿ ನಾಲಗೆಯ ತುದಿ
ತುದಿಯಲ್ಲಿ ನಲಿಯುತಿದೆ ಗಾಂಧಿವಾದದ ತತ್ತ್ವ
ಮೊಸಳೆ ಕಣ್ಣೀರ ಮಾರಾಯ ನಡೆ ತಂದಾಗ
ನಗುತಿರುವನೊಬ್ಬ ಮುದುಕ!

೩ ದೇಶದೇಶದ ಮೂಲೆ ಮೂಲೆಯಲಿ ರಣ ಕಹಳೆ
ಮೊಳಗುತಿರೆ ಹೊಟ್ಟೆ ನೋವೆಂದು ತಲೆ ಮರೆಸಿರುವ
ಪುಣ್ಯಾತ್ಮನೀಗ ಬಟ್ಟಲ ಮುಂದೆ ಕುಳಿತಾಗ
ನಗುತಿರುವನೊಬ್ಬ ಮುದುಕ!
ದೇಶ ಸೇವೆಯು ತಮ್ಮ ಹಕ್ಕೆಂದು ಕೇರಿಯಲಿ
ಕಾರಿಳಿದು ಕೈ ಮುಗಿದು ತಲೆಬಾಗಿ ಹುಸಿ ನಗೆಯ
ಮಂಕು ಬೂದಿಯ ಸುರಿವ ಮರಿ ಮುಖಂಡರ ಕಂಡು
ನಗುತಿರುವನೊಬ್ಬ ಮುದುಕ!

೪ ಕಳ್ಳ ಸಂತೆ ಕದೀಮ ಕತ್ತಲಿಂದೈತಂದು
ಡೊಳ್ಳು ತುಂಬಿದ ಹೊಟ್ಟೆ ಹಿಗ್ಗಿನಲಿ ಮುಗ್ಗರಿಸಿ
ನನ್ನದೂ ಕಾಂಗ್ರೆಸ್ಸು ವಂತಿಗೆಯಿದೆಂದಾಗ
ನಗುತಿರುವನೊಬ್ಬ ಮುದುಕ!
ಸತ್ತವರು ಸತ್ತಿಹರು ಸಾಯದವರತ್ತಿಹರು
ಸತ್ತ ಗೋರಿಯ ಮೇಲೆ ಸೌಭಾಗ್ಯ ಸೌಧವನು
ಕಟ್ಟುತಿಹ ಪಾಪಿ ಪಾವನನು ತಾನೆಂದಾಗ
ನಗುತಿರುವನೊಬ್ಬ ಮುದುಕ!

ಕವಿ:
ಶ್ರೀ ಯಸ್. ವೆಂಕಟರಾಜ

೫ ನೆರೆಬರಲು ಬರಬರಲು ಪರಿಹಾರ ಸಮಿತಿಗಳ
ಲೆರಡು ಲಕ್ಷವ ಕೂಡಿ ಬೆಣ್ಣೆಯನು ತಿಂದು ಕೈ
ಯೊರಸಿರುವ ಮಂಗ ಮಹನೀಯರಾಡಂಬರಕೆ
ನಗುತಿರುವನೊಬ್ಬ ಮುದುಕ!
ಮುಂದೆ ಹೋಗಲಿಕೆಂದು ಜೋಡೆತ್ತು ಕಟ್ಟಿಹುದು,
ಕುಳಿತಿಹರು ಸಾಹುಕಾರರು,ಹಸಿದ ಹೊಟ್ಟೆಯಲಿ
ಹಿಂದೆ ಹೆಗಲೊಡ್ಡಿ ನೂಕುವ ಮಂದಿ ಗೊಂದಲಕೆ
ನಗುತಿರುವನೊಬ್ಬ ಮುದುಕ!

೬ ಜಾತಿ ಜಾತೀಯ ಭೂತೋಚ್ಚಾಟನೆಗೆ ಹಲವು
ಹಿಂದುಳಿದ ಮುಂದುಳಿದ ನರಬಲಿಯ ಕೊಟ್ಟು ತಾ
ವೆಂದಿಗೂ ನಿರ್ಲಿಪ್ತರೆಂದಾಡುವರ ಮುಖಕೆ
ನಗುತಿರುವನೊಬ್ಬ ಮುದುಕ!
ಮಾತು ಮಾತಿಗೆ ನೀತಿ ನಿಯಮಗಳನುಚ್ಚರಿಸಿ
ಹಲವು ಹೊದೋಟದಲಿ ಹೋತನಂತೆರಗುತಿಹ
ಕೋತಿಗಳ ಕಲ್ಯಾಣ ರಾಜ್ಯದಾಯೋಜನೆಗೆ
ನಗುತಿರುವನೊಬ್ಬ ಮುದುಕ!

೭ ಪಂಚ ಶೀಲತೆಯು ಪಂಚಾಮೃತದ ಸೇವೆಯಲಿ
ಪಾಂಚಜನ್ಯವನೂದಿ ಕೊಳುಗುಳಕೆ ಕರೆಗೊಡುವ
ಪಂಚಮಹಾಪಾತಕಿಗಳಟ್ಟಹಾಸವ ಕಂಡು
ನಗುತಿರುವನೊಬ್ಬ ಮುದುಕ!
ಲಂಚರುಸುವತ್ತುಗಳ ಸಂಚಿತದ ಕೋಟೆಯಲಿ
ಹೊಂಚುತಿಹ ದೇಶ ದುರ್ದ್ರೋಹಿಗಳ ಮಿಥ್ಯಾಪ್ರ—
ಪಂಚದಲಿ ಬಾಳದಿಹ ಭಾಗ್ಯ ಶೀಲತೆಗಾಗಿ
ನಗುತಿರುವನೊಬ್ಬ ಮುದುಕ!

[೧೩ನೇ ಪುಟದಿಂದ]

ನೌಕಾದಳದ ಯುದ್ಧ ಹಡಗುಗಳಿಂದ ವ್ಯಾಪಾರೋದ್ಯಮದ ಜೀವನಾಡಿಯಂತಿರುವ ರೇವುಗಳ ರಕ್ಷಣೆ...

ದೇಶದಾದ್ಯಂತ ವಿಶ್ವವಿದ್ಯಾಲಯದ ಮಟ್ಟದಲ್ಲಿ ಎನ್. ಸಿ. ಸಿ. ಕಡ್ಡಾಯವಾಯಿತು. ಟೆರಿಟೋರಿಯಲ್ ಆರ್ಮಿ ಬಲ ಸಂಖ್ಯೆ ಅಧಿಕಗೊಂಡಿತು. ["ನಿಮ್ಮ ಟೆರಿಟೋರಿಯಲ್ ಆರ್ಮಿಯನ್ನು ಸೇರಿ ರಾಷ್ಟ್ರವನ್ನು ರಕ್ಷಿಸಿ"]

೦ ೦ ೦

ಸ್ವಾತಂತ್ರ್ಯ ದಿನ, ೧೯೬೩ ಸ್ಥಳ ಕೆಂಪು ಕೋಟೆ. ಹೊತ್ತು ಮುಂಜಾವು

ಸಹಸ್ರಾರು ಸಂಖ್ಯೆಯಲ್ಲಿ ನೆರೆದ ಜನರೆದುರು ರಾಷ್ಟ್ರಧ್ವಜವನ್ನರಳಿಸಿದ ಬಳಿಕ ನೆಹರೂ ಅವರ ಗಂಡು ಧ್ವನಿ:

"ಎಷ್ಟೇ ಸಮಯವಾದರೂ, ಎಷ್ಟೇ ತ್ಯಾಗ ಮಾಡಬೇಕಾಗಿ ಬಂದರೂ, ಚೀನಾದ ಸವಾಲನ್ನು ನಾವು ಎದುರಿಸುತ್ತೇವೆ ಹಾಗೂ ನಮ್ಮ ರಕ್ಷಣಾ ಬಲವನ್ನು ಹೆಚ್ಚಿಸಿಕೊಂಡು, ನಮ್ಮ ಮೇಲೆ ಕೆಟ್ಟ ದೃಷ್ಟಿ ಬೀರಲು ಯಾರಿಗಾದರೂ ಅಸಾಧ್ಯವೆನಿಸುವಂತೆ ಮಾಡುತ್ತೇವೆ ಎಂದು ನಾನಿಲ್ಲಿ ಘೋಷಿಸ ಬಯಸುತ್ತೇನೆ."

೦ ೦ ೦ ೦

[ಯುದ್ಧ ಕಥೆ ರಮ್ಯ ಕಥೆ.]

೧೯೬೨ನೇ ಅಕ್ಟೋಬರ.

ಲಡಾಖಿನಲ್ಲಿ ಮುಂಚೂಣಿ ಠಾಣ್ಯವೊಂದು. ವೈರಿಗಳು ಬಲವಾದ ಧಾಳಿ ನಡೆಸಿದಾಗ ಎರಡು ಬಾರಿ ಅವರನ್ನು ಹಿಮ್ಮೆಟ್ಟಿಸಿ, ಕೈ ಕೈ ಹೋರಾಟದಲ್ಲಿ ಹಲವರನ್ನು ಕೊಂದು, ಕೊನೆಗೆ ಶತ್ರುಗಳ ಪ್ರಾಬಲ್ಯಕ್ಕೀಡಾಗಿ ಅವರ ಕೈಗೆ ಸೆರೆ ಸಿಕ್ಕುತ್ತಾರೆ- ಮೇಜರ್ ಧನಸಿಂಗ್ ಥಾಪಾ.

ನೇಫಾದಲ್ಲಿ ಸುಬೇದಾರ್ ಜೋಗಿಂದರ್ ಸಿಂಗ್ ಮತ್ತು ಆತನ ದಂಡು ಶತ್ರುವಿನ ಧಾಳಿಗೀಡಾದಾಗ ಧೃತಿಗೆಡದೆ, ಪ್ರಾಣ ಹೋಗುವ ತನಕವೂ ಹೋರಾಡುತ್ತಾರೆ.

ಲಡಾಖಿನ ಕಿಜಾಂಗ್‌ಲಾದಲ್ಲಿ ಹಿಮ್ಮೆಟ್ಟಲೊಪ್ಪದೆ ಹೋರಾಡುತ್ತ ಸಾವನ್ನಪ್ಪುತ್ತಾರೆ, ಮೇಜರ್ ಶೈತಾನ್ ಸಿಂಗ್.

ರಣರಂಗದಲ್ಲಿ ಅಸಾಧಾರಣ ಹೋರಾಡಿದ ಇವರನ್ನೂ ರಾಷ್ಟ್ರ ಮರೆಯುವಂತಿಲ್ಲ:

ನಾಯಕ ರಬಿಲಾಲ ಥಾಪಾ [ಪಾಂಗೊಂಗ್ ಸರೋವರದ ಬಳಿ], ಮೇಜರ್ ಬ್ರಹಂ ಸಿಂಗ್ [ತವಾಂಗ್ ಬಳಿ], ಸಿಪಾಯಿ ಕೇವಲ ಸಿಂಗ್ [ವಾಲಾಂಗ್ ಬಳಿ], ಮೇ. ಗೋಸ್ವಾಮಿ [ಗುರುಂಗ್ ಬೆಟ್ಟದ ಬಳಿ], ಮೇಜರ್ ಶ್ರೀಕಾಂತ್ [ನೇಫಾದಲ್ಲಿ], ಮೇಜರ್ ಅಜಿತ್ ಸಿಂಗ್ [ಹಾಟ್‌ಸ್ಪ್ರಿಂಗ್ಸ್ ಬಳಿ] ಮೇ. ರಣದಾವಾ [ದೌಲತ್‌ಓಲ್ಡಿ ಬಳಿ] ಬ್ರಿಗೆಡಿಯರ್ ರೈನಾ [ಚುಶೂಲ್ ಬಳಿ], ಹವಾಲ್ದಾರ್ ಸರೂಪ್ ಸಿಂಗ್ [ಲಡಾಖಿನಲ್ಲಿ], ಮೇಜರ್ ಗುರುದಯಾಳ್ ಸಿಂಗ್ [ನೇಫಾದಲ್ಲಿ], ನಾಯಕ ಚೈನ್ ಸಿಂಗ್ [ತ್ಸೆಂಗ್ ಜಾಂಗ್ ಬಳಿ], ಸಿಪಾಯಿ ಕಾಂಶಿರಾಮ್ [ತ್ಸೆಂಗ್ ಜಾಂಗ್ ಬಳಿ], ಕ್ಯಾಪ್ಟನ್ ಮಹಾವೀರ ಪ್ರಸಾದ್ [ಖಿನ್ಜೆಮಾನ್ ಬಳಿ], ಜಮೇದಾರ ಇಶೆ ಥಂಡಪ್ [ಚಾಂಗ್ಲಾ ಬಳಿ], ಹವಾಲ್ದಾರ ಸ್ಯಾಂಜೆನ್ ಫುಂಚೋಕ್ [ಚಾಂಗ್ಲಾ ಬಳಿ].

ಅಂದು ರಾಷ್ಟ್ರ ಸೇವೆಗೂ ಹೋರಾಡಿ ರಕ್ತ ಹರಿಸಿದ ಧೀರೋದಾತ್ತ ಯೋಧರಲ್ಲಿ ಸತ್ತವರು ಎಷ್ಟೋ ಜನ.

"How can a man die better
Than facing fearful odds
For the ashes of his fathers
And the temples of his
gods."

೦ ೦ ೦

ಈಗ ಇನ್ನೊಂದು ಚಿತ್ರ. ಸ್ಥಳ ಭಾರತದ ಉತ್ತರ ತುದಿಯಲ್ಲಿನ ಲಡಾಖ್ ಸಮಯ: ಇದೀಗ.

ಹಿಮಾಚ್ಛಾದಿತ ಬೋಳು ಬೆಟ್ಟಗಳಿಂದ ತುಂಬಿದ ನಿರ್ಜನ ಪ್ರೇತವನ. ಎಲುಬು ಕೊರೆಯುವ ಮಂಜುಧಾರೆ, ರಕ್ತ ಹೆಪ್ಪುಗಟ್ಟಿಸುವ ಚಳಿ, ಉಸಿರಾಡಲು ಪ್ರಯಾಸ ಪಡಬೇಕಾದ,ಎತ್ತರ ಭೂಭಾಗ ನಾಗರೀಕತೆ ಈ ಎತ್ತರಕ್ಕೆ ಇನ್ನೂ ಏರಿಲ್ಲ.

ಈ ಹಿಮಗಾಡಿನಲ್ಲಿ ಹಗಲಿರುಳು ಗಡಿಗಳನ್ನು ಕಾಯುತ್ತಿದ್ದಾರೆ, ನಮ್ಮ ವೀರ ಜವಾನರು ಆಗಾಗ್ಯೆ ಈ ವಾಯುದಳದ ವಿಮಾನಗಳು ಆಹಾರದ ಪ್ಯಾಕೆಟ್ಟುಗಳನ್ನು ಮೇಲಿನಿಂದ ಇವರಿದ್ದಲ್ಲಿಗೆ ಎಸೆಯುತ್ತವೆ.ಇವರನ್ನುಆಗಿಂದಾಗ್ಗೆಕಾಣಲು ಬರುವವರೆಂದರೆ ವಾಯುದಳದ ವೈದ್ಯರು ಮಾತ್ರ. (ರಾಷ್ಟ್ರ ರಕ್ಷಕರ ಆರೋಗ್ಯ ರಕ್ಷಣೆ ಮಾಡಲೆಂದು)

ಗಡಿಗಳಲ್ಲಿ ಗುಂಡಿನ ಘರ್ಜನೆ ನಿಂತಿದೆ. ಆಕ್ರಮಣದ ಬೆದರಿಕೆ ಇನ್ನೂ ನಿಂತಿಲ್ಲ.

ಆದರೆ ಇಂದಿನ ಭಾರತ ಹಿಂದಿನ ಭಾರತವಲ್ಲ. ಇದೀಗ ಸನ್ನದ್ಧ ಭಾರತ.

(ವಿವಿಧ ಆಧಾರ ಸಾಮಗ್ರಿಗಳಿಂದ)

ಸಮಾಜ ಧರ್ಮ

ಲೇಖಕರು:
ಶ್ರೀ ಬಿ. ಎಚ್. ಶ್ರೀಧರ, ಎಂ. ಎ.
ಸಿರಸಿ.

ನೀತಿವಂತ ಸಮಾಜವನ್ನು ಆಧರಿಸಿ ನಿಲ್ಲುತ್ತದೆ ಪ್ರಜಾಸತ್ತೆ. ನೀತಿಜ್ಞ ಪ್ರಚಾರಕರನ್ನು ಗುರುತಿಸಲಾಗದ ಸಮಾಜ ಸ್ವಾತಂತ್ರ್ಯವನ್ನೂ ಉಳಿಸಿಕೊಳ್ಳಲಾರದು. ಶಾಶ್ವತ ನೀತಿಯನ್ನು ಅಲಕ್ಷಿಸುವ ನಿರ್ಲಜ್ಜ ಪ್ರವೃತ್ತಿ ಸರ್ವತ್ರ ಅಪಾಯಕಾರಿ. ಅದುದರಿಂದ ಜನಶಕ್ತಿ ಇಲ್ಲವೇ ಪ್ರಜಾಸತ್ತೆಯನ್ನು ಉಳಿಸಬೇಕಾದರೆ, ಸಮಾಜ ಮನಃಶಾಸ್ತ್ರವನ್ನು ಕೂಲಂಕುಷ ಜ್ಞಾನದಿಂದ ಅಭಿವೃದ್ಧಿ ಸಾಧನದ ನ್ಯಾಯತೆಯನ್ನು ನಿರ್ಧರಿಸುವ ನಾಯಕರು ಬೇಕು; ಬಾಹ್ಯ ಶೌಚದೊಡನೆ ನ್ಯಾಯ, ನಿರ್ಮಲಾಂತಃಕರಣ, ಪಾವಿತ್ರ್ಯ, ಆಚಾರ ಬುದ್ಧಿ, ಅರಿಷಡ್ವರ್ಗವಿಮುಖತೆಯ ಅಂತಃಸ್ವಚ್ಛತೆಯನ್ನು ಮುಂದಾಳುಗಳು ಆಚಾರಕ್ಕೆ ತರಬೇಕು; ಆಗಲೇ ಸಮಾಜವೂ ಅವನ್ನು ಅನುಷ್ಠಾನಕ್ಕೆ ತರುವುದು.

●

ಮತಧಾರ್ಮಿಕ, ಆರ್ಥಿಕ, ನೈತಿಕ ಮತ್ತು ರಕ್ತಸಂಬಂಧಿಕ ನಿಯಮಾವಳಿಗಳು ಆಚರಣೆಯಲ್ಲಿರುವುದನ್ನು ಇಂದಿನ ರಾಷ್ಟ್ರೀಯ ಸಮಾಜದ ಸೀಮಾರೇಖೆ ಎಂಬ ರೂಢಿಯು ವ್ಯಕ್ತಮಾಡುತ್ತದೆ. ರಾಜಕೀಯ ಗುಂಪನ್ನೊಂದು ನಾವು ಸಮಾಜ ಎನ್ನುವುದಿಲ್ಲ. ಶೈಕ್ಷಣಿಕ ಗುಂಪನ್ನೂ ಐತಿಹಾಸಿಕ ಗುಂಪನ್ನೂ ಭೌಗೋಲಿಕ ಗುಂಪನ್ನೂ ಅದೇ ವೇರಿಗೆ ನಾವು ಸಮಾಜವೆಂದು ತಿಳಿದುಕೊಂಡಿಲ್ಲ. ಆದರೆ ಕೇವಲ ಮತಧರ್ಮ, ಜಾತಿ, ಅರ್ಥಾರ್ಜನೆಯ ಉದ್ಯೋಗ,ನೈತಿಕ ಪ್ರಣಾಳಿ ಅಥವಾ ಕೇವಲ ರಕ್ತಸಂಬಂಧಿಗಳ ಬಳಗ ಸಮಾಜ ಪದದ ಅರ್ಥವನ್ನು ಪರಿಚ್ಛೇದಿಸಿ ಹೇಳಲಾರದು. ಜಗತ್ತಿಂದು ರಾಷ್ಟ್ರಗಳಾಗಿ ವಿಭಕ್ತವಾಗಿರುವುದು ರಾಜಕೀಯ ಸಾರ್ವಭೌಮ ಆಡಳಿತ ವ್ಯವಸ್ಥೆಯ ದೆಸೆಯಿಂದ ಎಂಬುದನ್ನು ಗಮನಿಸಿದರೆ, ರಾಜಕೀಯವಾದ ವ್ಯವಹಾರ ನಿಯಮಗಳೂ ಸಮಾಜದ ರಾಷ್ಟ್ರೀಯತೆಗೆ ಗಡಿಗೆರೆಯನ್ನು ಎಳೆದಿವೆ ಎಂದು ತಿಳಿದು ಬರುತ್ತದೆ. ಆದುದರಿಂದ ಧಾರ್ಮಿಕ, ಆರ್ಥಿಕ, ನೈತಿಕ, ಸಂಬಂಧಿಕ ಮತ್ತು ರಾಜಕೀಯ ಮೂಲತತ್ವಗಳು ಆಧುನಿಕ ಸಮಾಜದ ಪಂಚಮಹಾ ಸ್ತಂಭಗಳೆಂದು ಹೇಳಬಹುದು. ಈ ಸ್ತಂಭಗಳಲ್ಲಿ ಒಂದನ್ನು ಕಳೆದರೆ ಅಥವಾ ಇವಕ್ಕೆ ಇನ್ನೊಂದನ್ನು ಸೇರಿಸಿದರೆ ಸಮಾಜದ ಸಮಾಜತ್ವವು ವ್ಯತ್ಯಸ್ತವಾಗುತ್ತದೆ.

ಭಾರತದಂಥ ಸಂಮಿಶ್ರ ಸಾಂಸ್ಕೃತಿಕ ಭೂಭಾಗದಲ್ಲಿ ಇಂದು ರಾಷ್ಟ್ರೀಯತೆಯ (ರಾಜಕೀಯ) ಸ್ತಂಭವೊಂದೇ ಸಮಾಜದ ಸಮಾಜತ್ವವನ್ನು ಹಿಡಿದು ನಿಲ್ಲಿಸಿದೆ. ಆರ್ಥಿಕ ಹಾಗೂ ರಕ್ತಸಂಬಂಧಿಕ ಗುಂಪುಗಳು ಅದಕ್ಕೆ ಬಾಧಕವಾಗಬಾರದೆಂದು ಅರ್ಥಸಾಮ್ಯವನ್ನು ಸಾಧಿಸಿ, ಬಂಧುವ್ಯಾಮೋಹವನ್ನು ಇಲ್ಲದಂತೆ ಮಾಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಮತಧಾರ್ಮಿಕ ಮತ್ತು ನೈತಿಕ ಆಚಾರ ನಿಯಮಗಳನ್ನು ಆಯಾ ವ್ಯಕ್ತಿಯ ಅಥವಾ ಗುಂಪಿನ ಸ್ವಾತಂತ್ರ್ಯಕ್ಕೆ ಬಿಡಲಾಗಿದೆ. **ಈ ಸ್ವಾತಂತ್ರ್ಯದ ಬಳಕೆಯು ರಾಷ್ಟ್ರೀಯತೆಗೂ ಏಕ ಸಾಂಸ್ಕೃತಿಕ ಸಮಾಜ ಸಿದ್ಧಿಗೂ ಬಾಧಕವಾಗಿರುವುದು ಜನರಲ್ಲಿ ಕಂಡುಬಂದುದರಿಂದ ಜಾತೀಯತೆಯ ಖಂಡನೆ ಮತ್ತು ಅಶ್ಲೀಲತೆಯ ದಮನಗಳ ಪ್ರಯತ್ನ ಅಲ್ಲಲ್ಲಿ ನಡೆಯುತ್ತಿರುವ ಹಾಗೆ ತೋರುತ್ತದೆ; ಆದರೆ ಆ ಪ್ರಯತ್ನದ ಮಹತ್ವವನ್ನು ಬಹಳ ಜನರು ತಿಳಿದಿಲ್ಲ.**

ಒಂದು ಸಮಾಜವು ಇಡಿಯಾಗಿ ಕೂಡಿ ತನ್ನ ಅತ್ಯುನ್ನತ ಲೌಕಿಕ ಧ್ಯೇಯವನ್ನು ಏಕಮುಖವಾಗಿ ನಿಷ್ಠೆಯಿಂದ ಸಾಧಿಸಲು ಶಕ್ತವಾಗಬೇಕಾದರೆ ಅದರ ಸದಸ್ಯರ ಮನಸ್ಸುಗಳಿಗೆ ಇತರ ಗುಂಪುಗಳ ಸದಸ್ಯರ ಮತಧಾರ್ಮಿಕ ಹಾಗೂ ನೈತಿಕ ಕಲ್ಪನೆಗಳೂ ಆಚಾರ ನಿಯಮಗಳೂ ನ್ಯಾಯವೆಂದು ತೋರುವ ಶೈಕ್ಷಣಿಕ ಸಂಸ್ಕಾರ ದೊರಕುವುದು ಅತ್ಯಂತ ಅನಿವಾರ್ಯವಾದುದು. ಇಂಥ ನ್ಯಾಯ ಸಿದ್ಧಿಯು ಭಾರತದಲ್ಲಿರುವ ಹಿಂದು, ಮುಸಲಮಾನ, ಕ್ರೈಸ್ತ, ಪಾರಸಿಕ, ಜೈನ, ಬೌದ್ಧ ವೀರಶೈವ ಎಂಬ ಮತಗಳ ಬಹುಸಂಖ್ಯೆ ಅನುಯಾಯಿಗಳಲ್ಲಿ ಉಂಟಾಗಿಲ್ಲ. ಇಂಥ ನ್ಯಾಯ, ಸಿದ್ಧಿ ಅಥವಾ ಗೌರವಾರ್ಹವೆಂಬ ವಿಚಾರಯುಕ್ತವಾದ ಸಮಾಧಾನ ಉಂಟಾಗುವುದು ಒಂದು ರಾಷ್ಟ್ರದ (ದೇಶದ) ಅತಿ ಪ್ರಾಚೀನ ಶಾಸ್ತ್ರ—ಸಾಹಿತ್ಯ ಗ್ರಂಥಗಳು ಹೇಳುವ ಸಾಮಾನ್ಯ ನೀತಿ ತತ್ವಗಳ ವಿಮರ್ಶೆ, ಸಂಸ್ಕಾರ ಮತ್ತು ಸ್ವೀಕಾರಗಳಿಂದ ಮಾತ್ರ ಸಾಧ್ಯ. ಸಾಮಾನ್ಯ ಮಾನವ ನೀತಿ ತತ್ವಗಳು ಆಯಾ ದೇಶದ ನಾಗರಿಕತೆಯ ಮೂಲಾಧಾರ, ಸಂಸ್ಕೃತಿಯ ಪ್ರಾಣವಾಯು. ಈ ಅಂಶವನ್ನು ವೈಜ್ಞಾನಿಕತೆಯ ಅಭ್ಯಾಸದಿಂದ ಮೋಸಹೋದ ನಮ್ಮ ವಿದ್ಯಾವಂತ ಮುಖಂಡರನೇಕರು ಕಡೆಗಣಿಸಿದ್ದು ತೀರ ಅವೈಜ್ಞಾನಿಕ ಎಂಬುದಕ್ಕೆ ನಿರ್ಲಜ್ಜವಾದ ಭ್ರಷ್ಟಾಚಾರಗಳು ಸಮಾಜದ ಎಲ್ಲ ಸ್ತರಗಳಲ್ಲೂ ಹೆಚ್ಚು ಹೆಚ್ಚಾಗಿ ಹಬ್ಬುತ್ತ ಹೋಗಿರುವುದೇ ಸಾಕ್ಷಿ. ನಿರ್ಲಜ್ಜ ಭ್ರಷ್ಟಾಚಾರವು ಸಮಾಜವನ್ನು ತೋರಿಕೆಗೆ ಮಾತ್ರ ಇಡಿಯಾಗಿ ಇಟ್ಟೀತಲ್ಲದೆ ನಿಜವಾಗಿ ಇಲ್ಲ; ಅದು ಸಮಾಜದ ತೇಜಸ್ಸನ್ನು ಕುಂದಿಸಿ, ನಿರ್ವೀರ್ಯಗೊಳಿಸಿ ಪರಸಮಾಜದ ಆಕ್ರಮಣಕ್ಕೆ ತುತ್ತಾಗಿ ನಾಶ ಹೊಂದುವಂತೆ ಮಾಡುತ್ತದೆ.

ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರಿಯ ನಿಗ್ರಹಗಳು ಭಾರತೀಯ ನಾಗರಿಕತೆಯ ಪಂಚ ಮಹಾಶೀಲಗಳು. ಇವು ಕೇವಲ ಹಿಂದು ಧರ್ಮದ ತತ್ವಗಳೆಂದು ಇತರ ಧರ್ಮದವರು ತಿಳಿಯುವುದು ಐತಿಹಾಸಿಕ ಅಪರಾಧ ಎಂಬುವನ್ನು ಈ ತತ್ವಗಳನ್ನೇ ಆಧರಿಸಿ ನಮ್ಮ ಇಡಿ ರಾಷ್ಟ್ರದ ನಾಯಕರು ಇತರ ರಾಷ್ಟ್ರದವರೊಡನೆ ನಡೆದುಕೊಳ್ಳುತ್ತಿರುವುದು ತಿಳಿಸಿಕೊಡುತ್ತದೆ. ಇವು ಭಾರತೀಯ ಸಮಾಜದ ಒಳಹೊರ ವ್ಯವಹಾರಗಳೆಲ್ಲವುಗಳನ್ನೂ ನಿಯಂತ್ರಿಸುವ ಸಾಮಾನ್ಯ, ಸಾಧಾರಣ ಮತ್ತು ಶಾಶ್ವತ ತತ್ವಗಳು. ಇವುಗಳನ್ನು ಒಪ್ಪದವನು ಭಾರತೀಯನೆನ್ನಿಸಲಾರ. ಸರಕಾರದವರ ಆಡಳಿತದಲ್ಲೂ ಜನರ ವ್ಯವಹಾರಗಳಲ್ಲೂ ಈ ತತ್ವಗಳು ಕಂಡು ಬರುವುದು ಕಡಿಮೆಯಾದಾಗ ಭ್ರಷ್ಟಾಚಾರ ಹೆಬ್ಬುತ್ತಿದೆಯೆಂದು ನಾವು ತಿಳಿದುಕೊಳ್ಳುತ್ತೇವೆ. ಸಹ ಜೀವಿಗಳೊಡನೆ, ಸಾಮಾಜಿಕರೊಡನೆ ನಡೆದುಕೊಳ್ಳುವಾಗ ಮನಸ್ಸು, ಮಾತು ಮತ್ತು ಕಾರ್ಯಗಳಲ್ಲಿ ಹಿಂಸೆ, ಅಸತ್ಯ ಕಳ್ಳತನ—ಅನ್ಯಾಯ—ಅನಾರೋಗ್ಯ ಮತ್ತು ಅತಿಭೋಗ ಪ್ರವೃತ್ತಿಗಳು ಕಂಡು ಬರುವುದೇ ಭ್ರಷ್ಟಾಚಾರ; ಅದು ಶಿಷ್ಟಾಚಾರವಲ್ಲ.

ಲಾಭ ಬಡಕತನವು ಇಂದ್ರಿಯ ನಿಗ್ರಹವಿಲ್ಲದುದರ ಒಂದು ಗುರುತು. ಅತಿಕಾಮ, ಅತಿಕ್ರೋಧ, ಅತಿಲೋಭ, ಅತಿಮೋಹ, ಅತಿಮದ, ಅತಿಮಾತ್ಸರ್ಯ ಎಂಬೀ ಆರರಲ್ಲಿ ಅತಿಯೆಂಬ ಪದವನ್ನು ಸೇರಿಸದೆಯೇ ಅವು ಇಂದ್ರಿಯ ಚಾಪಲಗಳೆಂದು ತಿಳಿದುಕೊಳ್ಳುತ್ತ ಬಂದುದು ಹಿಂದಿನ ರೂಢಿ. ಗಾಂಧಿಯವರು (ಸಂಯಮವನ್ನು) ಪಾವಿತ್ರ್ಯವನ್ನು ಜೀವನದ ಸೌಂದರ್ಯವೆಂದು ಅಭಿಪ್ರಾಯಪಟ್ಟದ್ದಿಲ್ಲಿ ಸ್ಮರಣೀಯ. ಇಂದ್ರಿಯದ ಸ್ವಾಚ್ಛಂದ್ಯವು ಹಿಂಸೆ, ಅಸತ್ಯ, ಸ್ತೇಯ, ಅಶೌಚಗಳಿಗೆ ಕಾರಣ.

"ಕಣ್ಣು, ಮನ, ನಾಲಗೆಯು
ತನ್ನದೆಂದೆನಬೇಡ
ಅನ್ಯರುಂ ಕೊಂಡರೆನಬೇಡ—ಇವು ಮೂರು
ತನ್ನ ಕೊಲ್ಲುವುವು ಸರ್ವಜ್ಞ"

ಎಂಬ ಸರ್ವಜ್ಞವಚನವೂ ಇಂದ್ರಿಯ ನಿಗ್ರಹವನ್ನೇ ಎತ್ತಿ ಹೇಳಿದೆ. ಸುಖದ ಆತ್ಮಾಶೆಯುಂಟಾಗುವುದು ಸರ್ವಧರ್ಮಗಳಿಗೂ ಮಾರಕ; ಸಮಾಜದ ಧರ್ಮಕ್ಕೆ ಅಥವಾ ಇರವಿಗೆ ಅದು ಕುಠಾರ ಪ್ರಾಯವಾದುದು. ದೈಹಿಕ—ಮಾನಸಿಕ ಸುಖಗಳೆರಡರಲ್ಲೂ ಸಂವಿಭಾಗ ಬುದ್ಧಿಯುಂಟಾಗಲು "ಮನುಷ್ಯನು ಸಮಾಜ ಜೀವಿ. ಒಂಟಿ ಗೂಳಿ ಸುಂಟರಗಾಳಿಯಲ್ಲ" ಎಂಬ ತಿಳಿವಳಿಕೆಯಿಂದ ಲಬ್ಧವಾಗುವ ಸಂಯಮಶೀಲವು ಅಗತ್ಯ.

ಹೊರಗಿನ ಸ್ವಚ್ಛತೆಯು ಶೌಚವೆಂಬುದು ಸ್ಪಷ್ಟ. ಒಳಗಿನ ಸ್ವಚ್ಛತೆಯನ್ನು ನ್ಯಾಯ, ನಿರ್ಮಲಾಂತಃಕರಣ, ಪಾವಿತ್ರ್ಯ, ಅಪಾಪ ಬುದ್ಧಿ, ಅರಿಷಡ್ವರ್ಗವಿಮುಖತೆ ಎಂದು ಹೇಳುವುದರಲ್ಲಿ ದುರುದ್ದೇಶದ ಅಭಾವವು ಸೂಚಿತವಾಗಿದೆ. ದುರುದ್ದೇಶವು ಅನ್ಯಾಯ, ಸಂವಿಭಾಗ ಶೀಲಕ್ಕೆ ವಿರುದ್ಧವಾದುದು— ಸ್ವಾರ್ಥೈಕಪರಾಯಣವಾದುದು. ಸಮಷ್ಟಿಹಿತದ ದೃಷ್ಟಿ ಅಥವಾ ಸರ್ವೋದಯ ಧೋರಣೆ ಎಂಬುದು ಸಮಾಜ ಧರ್ಮವಾದುದರಿಂದ ಅದಕ್ಕೆ ವಿರುದ್ಧವಾದ ಪರಿಣಾಮವನ್ನುಂಟು ಮಾಡುವ ವರ್ತನೆಗಳೆಲ್ಲ ಅಸ್ಪೃಶ್ಯ. ಸಂಕುಚಿತ ಸ್ವಾರ್ಥಪರತೆಯು ಸಾಮಾಜಿಕ ಬಾಂಧವ್ಯಭಾವಕ್ಕೆ ಶತ್ರು. ಆತ್ಮ ವಿಮರ್ಶೆ, ತತ್ವ ವಿಮರ್ಶೆ, ಸಂದರ್ಭ ವಿಮರ್ಶೆಗಳಿಲ್ಲದವರಿಗೆ ಈ ನೈರ್ಮಲ್ಯ ಅಥವಾ ಅಂತಃಶುದ್ಧಿ ಇಲ್ಲವೆ ನ್ಯಾಯಾನ್ಯಾಯ ವಿವೇಕವಿರುವುದಿಲ್ಲ. ಅಂಥವರು ಹಠವನ್ನು ನ್ಯಾಯವೆಂದು ಸಾಧಿಸುತ್ತ ಸಹಜೀವಿಗಳಲ್ಲಿ ಭೇದಬುದ್ಧಿಯನ್ನು ಬಿತ್ತಿ ಸಮಾಜದಲ್ಲಿ ಸಹಕಾರ—ಸಾಮೂಹಿಕ ಅಭಿವೃದ್ಧಿ ಪ್ರಯತ್ನಗಳು ಯಶಸ್ವಿಯಾಗದಂತೆ ಮಾಡುತ್ತಾರೆ. ಸಹಕಾರಿ ಅಭಿವೃದ್ಧಿ ಕ್ಷೇತ್ರಗಳಲ್ಲಾದ ಎಲ್ಲ ಅಪಯಶಸ್ಸಿಗೂ ಇಂಥ ಮಾನವ ಮೂರ್ತಿಗಳೇ ಕಾರಣ. ಇಂಥವರನ್ನು ಸಾಮಾಜಿಕರು ಹಿಡಿತದಲ್ಲಿ ತಾರದೆ ಹೋದರೆ ಅವರು ಉಧ್ವಸ್ತರಾಗುತ್ತಾರೆ—ಮೊದಲು ಇತರರನ್ನು, ಸಮಾಜವನ್ನು ಉಧ್ವಸ್ತಗೊಳಿಸಿ!

ಜಾತೀಯತೆ, ಬಂಧುವ್ಯಾಮೋಹ, ಮತಾಂಧತೆ ಮುಂತಾದವು ಅಂತಃಶುಚಿಯಿಲ್ಲದುದರ ಕೆಲ ಗುರುತುಗಳು. ಮತಧಾರ್ಮಿಕ, ನೈತಿಕ ಮತ್ತು ರಕ್ತಸಂಬಂಧಿಕ ವಿಚಾರಗಳಲ್ಲಿ ಸಮಾಜಹಿತಕರವಾದ ನ್ಯಾಯಸಿದ್ಧಿಯನ್ನು ಸ್ಪಷ್ಟವಾಗಿಯೂ ಪೂರ್ಣವಾಗಿಯೂ ಪಡೆಯದಿರುವ ಅಶಿಕ್ಷಣ ಅಥವಾ ಅಶೌಚ ಎಂದು ಭಾರತೀಯ ಸಮಾಜದ ಬೇರನ್ನೇ ಅಲುಗಾಡಿಸಲಾರಂಭಿಸಿದೆ. ಈ ಅಶಿಕ್ಷಣಕ್ಕೆ ರಾಜಕೀಯ ಚುನಾವಣೆಯ ವ್ಯವಹಾರಗಳ ಅಶಿಷ್ಟಾಚಾರಗಳು ಪ್ರೇರಕವಾಗಿವೆ. ಸಮಾಜದಲ್ಲಿ ಒಬ್ಬರನ್ನೊಬ್ಬರು ಅಲಕ್ಷ್ಯ - ಅಗೌರವ - ಅಪ್ರೀತಿಗಳಿಂದ ನೋಡುವ ಪ್ರವೃತ್ತಿ ಹೆಚ್ಚುತ್ತ ಹೋದುದಿಂದು ಸ್ಪಷ್ಟ. ಈ ಅಶೌಚವು ನಮ್ಮ ರಾಷ್ಟ್ರೀಯ ರೋಗವಾಗಿದೆ. ಜೀವನವನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸುವ ಶಕ್ತಿಯನ್ನು ಸಂಪಾದಿಸದ ವಿದ್ಯಾವಂತ—ಅವಿದ್ಯಾವಂತ ಪ್ರಜೆಗಳ ಈ ಅಶೌಚದ ದೆಸೆಯಿಂದಲೇ ನಮ್ಮ ಪ್ರಜಾಸತ್ತೆಯ ಬೆಳವಣಿಗೆಯಲ್ಲಿ ಹೆಜ್ಜೆಹೆಜ್ಜೆಗೂ ಮುಳ್ಳು ಚುಚ್ಚುವಂತಾಗಿದೆ. ಭಾರತೀಯ ಶಾಶ್ವತ ಧರ್ಮಗಳಿಗೆ ಅವಿರುದ್ಧವಾಗಿ ತರ್ಕ ಮಾಡಿ ಪರಿಸ್ಥಿತಿಯನ್ನಳೆದು ನಿರ್ಣಯಿಸುವ ಹೃದ್ಬುದ್ಧಿ—ಸಂಸ್ಕಾರಗಳು ನಮ್ಮ ಸಾಮಾಜಿಕರಿಗನ್ನೂ ಅಗದೇಕಾಗಿದೆ. ಪರಸ್ಪರರನ್ನು ಸತ್ಯವಾದ ಸಮಾನಸ್ಕಂಧತೆಯಿಂದ ನೋಡಿ ವ್ಯವಹರಿಸುವ ಅಭ್ಯಾಸವು ಶಿಕ್ಷಿತರಲ್ಲೂ ಸಾಕಷ್ಟು ಕಡೆ ಕಂಡುಬರುತ್ತಿಲ್ಲ. ಐಶ್ವರ್ಯ, ಅಧಿಕಾರ,ಪ್ರಭಾವ ಮುಂತಾದವುಗಳಿಂದ ಉಂಟಾದ ಅಹಂ

ಕಾರವೆಂಬ ಅರುಚಿ ಅಂಥ ಸರಳತನಕ್ಕೆ ಆಡ್ಡಿಯನ್ನೊಡ್ಡುತ್ತಿಸೆ. ವ್ಯಕ್ತಿ ಸ್ವಾತಂತ್ರ್ಯದ ಉತ್ಕರ್ಷ ಸಂಹರವು ಸಮಾಜದ ಘಾತಕವಾಗುವಂತೆಯೇ ಸಮಾಜದ ಹೆಸರಿನಲ್ಲಿ ಸ್ವೇಚ್ಛೆಯನ್ನು ಅಗ್ರಹದಿಂದ ಹೇರುವ ಔದ್ಧತ್ಯವೂ ಸಮಾಜದ ಅಸ್ವಾಸ್ಥ್ಯಕ್ಕೆ ಕಾರಣವಾಗುತ್ತದೆ. ಅಸ್ವಸ್ಥ ಸಮಾಜವು ಅಶಾಂತ, ಅತೃಪ್ತ, ಅರಕ್ತ.

ಲಂಚ-ವಂಚನೆಗಳಿಂದ ಗಳಿಸುವುದು ಸ್ತೇಯ. ಧನವನ್ನಷ್ಟೆ ಅಲ್ಲ—ಸ್ಥಾನ, ಮಾನ, ಅಧಿಕಾರ, ಸ ಸಿದ್ಧಿಗಳನ್ನು ಅನ್ಯರಿಗೇ ಸಲ್ಲಬೇಕಾಗಿದ್ದಾಗ ತಾನು ಅಪಹರಿಸಲು ಯೋಜನೆ ಮಾಡುವುದು ಸ್ತೇಯವೇ. ದಂಡಿಯ ಭಾಷೆಯಲ್ಲಿ ಇಂಥವರು ಅಪಹಾರ ವರ್ಮರು. ಅವರ ವ್ಯಕ್ತಿತ್ವದ ವರ್ಮ ಅಥವಾ ಕವಚವು ಅಪಹಾರ ಲಬ್ಧವಾದದ್ದು; ಇನ್ನೊಬ್ಬನ ಕಾಲು ಕದಿದು ತಾನು ಎತ್ತರವಾದವನೆಂದು ತೋರಿಸಲು ಯತ್ನಿಸಿ ಜಯವಂತನಾದದ್ದು! ಅಪಹರಣಶೀಲನೆನ್ನಿಸುವ ಭ್ರಷ್ಟಾಚಾರವು ಅನಾರೋಗಕರ ಸ್ಪರ್ಧೆಗಳಲ್ಲಿ ಎದ್ದು ಕಾಣುತ್ತದೆ. "ಪೂಜ್ಯ ಪೂಜಾ ವ್ಯತಿಕ್ರಮ"ವೆಂದು ಕಾಳಿದಾಸ ಹೇಳಿರುವುದು ಈ ಅಪಾತ್ರ ಪುರಸ್ಕಾರ—ಪಾತ್ರ ತಿರಸ್ಕಾರಗಳನ್ನು ಕುರಿತೇ. Wrong man in the right place ಯೋಗ್ಯ ಸ್ಥಳವನ್ನು ಅಯೋಗ್ಯನು ಆಕ್ರಮಿಸಿರುವ ಪರಿಸ್ಥಿತಿ ಇಂದು ವಿವಿಧ ಕಾರ್ಯಕ್ಷೇತ್ರಗಳಲ್ಲಿ ಕಂಡುಬರುವಂತಾಗಿರುವುದು ಸಮಾಜ ಶಕ್ತಿಯನ್ನು ದುರ್ಬಲಗೊಳಿಸಲು ಕಾರಣವಾಗಿದೆ ಎಂಬುದನ್ನು ರಾಜಕೀಯ ಮುಖಂಡರು ಸಂಸ್ಥಾಧೀಶರೂ ಚೆನ್ನಾಗಿ ಎಲ್ಲೆಡೆ ಅರಿತಂತಿಲ್ಲ. ಈ ಅಧರ್ಮವು ಸ್ವರಾಜ್ಯದ ಮೇಲಿನ ಭಕ್ತಿಯನ್ನೂ ನಿಷ್ಠೆಯನ್ನೂ ಗೌರವವನ್ನೂ ಕೆಡಿಸುತ್ತದೆ; ಸ್ವಸಮಾಜದ ಬಗ್ಗೆ ಪ್ರಾಮಾಣಿಕನಲ್ಲಿ ಜುಗುಪ್ಸೆಯುಂಟಾಗುವಂತೆ ಮಾಡುತ್ತದೆ. ಅಧಿಕಾರವಂತರ ವರ್ಗವೇ ಇಂದು ಈ ಪಾಪ್ಪೆಯ ಪ್ರಕಾರ ಹೆಚ್ಚು ದ್ರೋಹಿಗಳಿಂದ ಕೂಡಿದೆಯೇ? ಸಾರ್ವಜನಿಕ ದೃಷ್ಟಿಯಿಂದ ಲೌಕಿಕ ಹಿತಾಹಿತಗಳನ್ನು ಸಾಧಿಸುವ ಅನುಕೂಲ ಅಧಿಕಾರಿಗಳಿಗೆ ಇಂದಿನ ಕಾಲದಲ್ಲಿ ಹೆಚ್ಚಾಗಿರುವುದರಿಂದ, ಅವರಲ್ಲಿಯ ಉಚ್ಚಾಚ್ಚರು ಸ್ಥಾನ—ಮಾನ—ಧನ ದಾನಗಳ ಪ್ರತ್ಯಕ್ಷ ಪ್ರತ್ಯಕ್ಷ ಕರ್ತರಾಗುವುದರಿಂದ ಅವರ ತಪ್ಪಿನ ಅಥವಾ ಸರಿಯ ಪಾಲು ಯಾರಾಗಲೂ ಎಲ್ಲಾ ಹೆಚ್ಚು ಎಂಬುದು ಸುಸ್ಪಷ್ಟ.

ಸುಳ್ಳು ಸಾಕ್ಷಿ ಹೇಳುವುದು, ಸುಳ್ಳು ಸಹಿ ಹಾಕುವುದು, ವಚನಭಂಗ ಮಾಡುವುದು ಅಥವಾ ಪೊಳ್ಳು ಆಶ್ವಾಸನೆಗಳನ್ನು ನೀಡುವುದು, ಸುಳ್ಳುಕಾಹಿಲೆ ಇಲ್ಲವೇ ಮರೆವನ್ನು ನಿವರಮಾಡುವುದು, ಸುಳ್ಳುಸ್ತುತಿನಿಂದೆಗಳನ್ನು ಮಾಡುವುದು ಮುಂತಾದ ಅನೇಕ ಅನಾರೋಗ್ಯ ವರ್ತನೆಗಳಿಂದ ನಿರ್ಲಜ್ಜವಾಗಿ ದೊಡ್ಡತನವನ್ನು ಸಿಕೊಳ್ಳುವ ಬಯಕೆಯುಳ್ಳವರಲ್ಲಿ ಹೆಚ್ಚುತ್ತಿರುವುದು ಸಮಾಜ ಶೋಷಕ—ಅಸ್ವಸ್ಥ ರಾಷ್ಟ್ರದ ಐಕ್ಯಭಾವನೆಗೆ ಕರಾರ ಪ್ರಾಯ. ಹೇಳುವುದು ಶಾಸ್ತ್ರ, ಹಾಕುವುದು ಗಾಳ ಎಂಬುದು ಇಂದಿನ ಪ್ರಚಾರ ಯು-

ಗದಲ್ಲಿ ಹೆಚ್ಚುವುದು ನಿಲ್ಲದೆ ಹೋದರೆ ನಿಜವಾದ ಪರಸ್ಪರ ವಿಶ್ವಾಸವು ಜನರಲ್ಲಿ ನೆಲೆನಿಲ್ಲದೆ ಹೋಗಿ, ಸಮಾಜವು ಕೇವಲ ಸಮುದಾಯವಾಗಿ, ಸ್ವಾತಂತ್ರ್ಯ ರಕ್ಷಣೆಯ ಶಕ್ತಿಯನ್ನು ಕಳೆದು ಕೊಳ್ಳುತ್ತದೆ ಎಂಬುದನ್ನು ಒಂದು ರಾಷ್ಟ್ರದ ಹಿರಿಯರೂ ಅರಿಯದಿದ್ದರೆ ಅಥವಾ ಅರಿತೂ ಅಲಕ್ಷಿಸಿದರೆ, ಅದರ ಭವಿಷ್ಯವು ದುರ್ದೈವಕ್ಕೆ ತುತ್ತಾಗದೆ ಉಳಿದುದಕ್ಕೆ ಇತಿಹಾಸವು ನಿದರ್ಶನವನ್ನೀಯಲಾರದು. ಸಮಾಜದ ಅಂತರಿಕ ಶಿಥಿಲತೆಯನ್ನು ಗುರುತಿಸದ ಮುಖಂಡರೂ ಅವರನ್ನೆತ್ತಿ ಹಿಡಿಯುವ ಅನುಯಾಯಿಗಳೂ ರಾಷ್ಟ್ರದ ದೃಷ್ಟಿಯಿಂದ ಅತ್ಯಂತ ಅಜ್ಞಾನಿಗಳು ಅಥವಾ ಸ್ವಾರ್ಥಿಗಳು. ಮಾನವ ಸಂಬಂಧವು ಶಿಥಿಲವಾಗಲು ಅಸತ್ಯ ಮೊತ್ತಮೊದಲನೆಯ ಕಾರಣ; ಅದು ಅನಾಚಾರಗಳಲ್ಲಿ ಅಗ್ರಗಣ್ಯ.

ಕಾಯಿದೆ ಬದ್ಧವಾದ ನ್ಯಾಯ ಮತ್ತು ಸಂಸ್ಕೃತಿ ಸಹಜವಾದ ನೀತಿಗಳಿಗೆ ವಿರುದ್ಧವಾಗಿ ದುರುದ್ದೇಶದಿಂದ ಅನ್ಯರ ದೇಹೇಂದ್ರಿಯ ಮನಸ್ಸುಗಳನ್ನು ನೋಯಿಸುವಂಥ ವಿಚಾರ,ವಾದ, ವ್ಯವಹಾರಗಳು ಹಿಂಸಾತ್ಮಕವಾದಂಥವು ವಾಕ್ಪಾರುಷ್ಯ, ದಂಡಪಾರುಷ್ಯ ಮತ್ತು ಅರ್ಥದೂಷಣಗಳು ಸಂದರ್ಭಕ್ಕೆ ಅನುಚಿತ ಪ್ರಮಾಣದಲ್ಲಿ ನಿಂದಿಸುವ, ಶಿಕ್ಷೆಗಳನ್ನು ವಿಧಿಸುವ ಮತ್ತು ದಂಡಗಳನ್ನು ಹಾಕುವ ಪ್ರಕರಣಗಳಲ್ಲಿ ಹಿಂಸೆಗೆ ಉದಾಹರಣೆಗಳಾಗುತ್ತವೆ. ಔಚಿತ್ಯವಿರುವುದು ಸಪ್ರಮಾಣತೆಯಲ್ಲಿ, ಅನ್ಯೂನತೆ—ಅನತಿ-

ರಿಕ್ತತೆಗಳಲ್ಲಿ ಈ ಔಚಿತ್ಯವನ್ನು ರಾಷ್ಟ್ರದ ಸಂವಿಧಾನವೂ ನೀತಿಯೂ ನಿರ್ಣಯಿಸುತ್ತವೆ. ದೇಶ, ಕಾಲ, ಸಂದರ್ಭ, ಪಾತ್ರಗಳನ್ನು ಗಣಿಸದೆ ಪ್ರಕಟಿಸುವ ಉಗ್ರಾನುಗ್ರ ವರ್ತನೆಗಳು ಹಿಂಸಾತ್ಮಕ, ಸಮಾಜದ ಅಸ್ತಿತ್ವಕ್ಕೆ ಘಾತಕ. ಈ ಔಚಿತ್ಯಜ್ಞರನ್ನು ಹಿಂದೆ ಧರ್ಮಜ್ಞರೆಂದು ಕರೆಯುತ್ತಿದ್ದರು. ಆ ಸದ್ಧರ್ಮ—ನಿತ್ಯ ಧರ್ಮಗಳನ್ನು ಅವರೇ ನಿರ್ಣಯಿಸ ಬಲ್ಲರು. ಇಂಥ ರಾಜಗುರುತ್ವವನ್ನಿಂದು ನಾಡಿನ ನೀತಿಜ್ಞ ವಕ್ತಾರರು ನಿರ್ವಹಿಸಬಲ್ಲರು. ವಕ್ತೃ—ಅವಕ್ತಾರರನ್ನು ವಿಂಗಡಿಸಿ ತಿಳಿದುಕೊಳ್ಳುವಷ್ಟು ಸೂಕ್ಷ್ಮಜ್ಞತೆ ಜನರಲ್ಲಿ ಬೆಳೆಯದೆ ಹೋದರೆ, ಜನಶಕ್ತಿ ಅಥವಾ ಪ್ರಜಾಶಕ್ತಿ ಉಳಿಯಲಾರದು. ಪ್ರಜಾಶಕ್ತಿ ನಿಂತಿರುವುದು ನೀತಿವಂತ ಸಮಾಜವನ್ನು ಅವಲಂಬಿಸಿಯೇ ಎಂಬುದನ್ನು ಇತ್ತೀಚೆಗೆ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ಸೋದಾಹರಣವಾಗಿ ವಿವರಿಸಿ ನಿರ್ಧರಿಸಿ ಹೇಳಿದ್ದಲ್ಲಿ ಗಮನಾರ್ಹ. ಶಾಶ್ವತ ನೀತಿಯನ್ನು ಅಲಕ್ಷಿಸುವ ನಿರ್ಲಜ್ಜತೆಯ ಪ್ರವೃತ್ತಿಯು ಸರ್ವತ್ರ ಅಪಾಯಕರ ವೆಂಬುದರ ಮಹತ್ವವನ್ನು ರಾಷ್ಟ್ರೀಯ ಸಮಾಜವನ್ನು ರೂಪಿಸಲು ಬಯಸುವ ಭಾರತೀಯರು ಆಳವಾಗಿ ಅಭ್ಯಾಸಿಸಬೇಕಾಗಿದೆ. ಆಧುನಿಕತೆ, ವೈಜ್ಞಾನಿಕತೆ, ಆರ್ಥಿಕ ಯೋಜನಾಸಂಮುಖತೆ, ಔದ್ಯಮೀಕರಣಪರತೆಗಳಲ್ಲಿ ಪ್ರತಿಯೊಂದೂ ದೀರ್ಘಕಾಲಿಕ ಸರ್ವೋದಯದ ದೃಷ್ಟಿಯಿಂದ ವ್ಯವಹಾರೋನ್ಮುಖವಾಗದೆ ಹೋಗು-

ವುದೆಲ್ಲ ಹಿಂಸೆ, ಶೋಷಣೆ. ಹಿಂಸೆಯು ಸಮಾಜವನ್ನು ಅಧ್ವಗೊಳಿಸುತ್ತದೆ. ಅಭಿವೃದ್ಧಿಯ ಸಾಧನದ ನ್ಯಾಯತೆಯನ್ನು ವರ್ತಮಾನ ಕಾಲದ ಸಮಾಜ ಪ್ರಾಶಸ್ತ್ಯದ ಕೂಲಂಕಷ ಜ್ಞಾನದಿಂದ ನಿರ್ಧರಿಸಿ ಕೈಗೊಳ್ಳದೆ ಹೋದ ಸಂದರ್ಭಗಳಲ್ಲೇ ಉನ್ನತ ಸ್ಥಾನವಂತರು ಬಲವಾದ ಜನನಿಂದೆಗೆ ಗುರಿಯಾಗಿದ್ದಾರೆ. ಈ ಜನನಿಂದೆ—ಜನಸ್ತುತಿಗಳೇ ಸಾರ್ವಜನಿಕ ಅಭಿಪ್ರಾಯಗಳು. ಇವುಗಳ ನಿಜಸ್ವರೂಪ—ಅಭಾಸಿಕತೆಗಳನ್ನು ಅರಿಯುವ ಸೂಕ್ಷ್ಮಜ್ಞತೆಯು ಮುಂದಾಳುಗಳಲ್ಲಿ ಕಡಿಮೆಯಾಗುತ್ತ ಹೋದಾಗ ಹಿಂಸಾಶೀಲ ಅವರಲ್ಲಿ ಹೆಚ್ಚಿ, ಸಮಾಜವು ಒಡೆದು ಹೋಗುತ್ತದೆ. ಒಡೆದ ಸಮಾಜ, ಅತೃಪ್ತಸಮಾಜ ಎಂದೂ ಐಕ್ಯ ಶಕ್ತಿಯಿಂದ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರದು.

ರಾಷ್ಟ್ರೀಯ ಸಮಾಜದ ಮೂಲಭೂತ ಪಂಚಶೀಲ ಅಥವಾ ಪಂಚ ಮಹಾಧರ್ಮ ಇಲ್ಲವೆ ಶಾಶ್ವತ ಧರ್ಮ ಎಂಬುದು ಅಚಲಾಧಾರ. ಯಾವ ಅಚಲಾಧಾರವನ್ನೂ ಅವಲಂಬಿಸದೆ ಬಾಳಿದ ನಾಗರಿಕತೆ ಜಗತ್ತಿನಲ್ಲಿ ದೊರಕಲಾರದು. ಈ ಅಚಲಾಧಾರದ ಧ್ರುವತಾರೆಗೆ ಅವಿದ್ದವಾಗಿಯೇ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಸಾಮಾಜಿಕ ಗುಣಗಳೂ ಆ ಗುಣಗಳನ್ನು ಸಾಧಿಸಲು ಬೇಕಾದ ಸಾಧನಸೂತ್ರಗಳೂ ವ್ಯವಹಾರ ನಿಯಮಗಳೂ ಬಳಕೆಗೆ ಬರುವಂತೆ ನೋಡಿಕೊಳ್ಳುವುದು ನಿಜವಾದ ವಿದ್ಯಾವಂತರ ಹೊಣೆ. ಅವರು ತಪ್ಪಿದಲ್ಲಿ ಸಂಖ್ಯೆಯಿಂದ ಹಿಂಜರಿದು ಕುಳಿತರೆ ಸಮಾಜದ ಧರ್ಮ ನಶಿಸಿಹೋಗುವುದು. ಇಂದಿನ Lovers of ease and comfort ಐಷಾರಾಮ ಪ್ರಿಯರ ಕಾಲದಲ್ಲಿ ಅತ್ಯಂತ ಸಹಜ. ಭಾರತೀಯರಲ್ಲಿಂದು ಶಾಶ್ವತ ಧರ್ಮವನ್ನು ಕಡೆಗಣಿಸಿದ ವೈಯಕ್ತಿಕ ದೃಷ್ಟಿ ಜನಪರತೆ ಬೆಳೆಯುವ ಅವರಣವು ನಿರ್ಮಿತವಾಗಿರುವುದು ಸಮಾಜ ಸಂಘಟನೆಗೆ ಕಂಟಕಪ್ರಾಯ. ಈ ಅವರಣ ನಿರ್ಮಾಣಕ್ಕೆ ಹೇತುಗಳನೇಕವೆ. ಅವುಗಳಲ್ಲಿ ಗಣ್ಯವಾದ ಚುನಾವಣೆಯ ದ್ರವ್ಯ ವ್ಯಯ ಪದ್ಧತಿಯು ಹಾಳಾಗಲವಾಗಿದೆ. ಈ ಪದ್ಧತಿಯನ್ನು ಸುದಾರಿಸಿ, ಶುದ್ಧೀಕರಿಸಿ, ಕಟ್ಟುನಿಟ್ಟಾಗಿ ಜಾರಿ ತರುವ ವ್ಯವಸ್ಥೆಯನ್ನು ಆಳುವವರು ಮಾಡದೆ ಹೋದರೆ ವಿಶ್ವ ಸುಧಾರಣಾ ಪ್ರಯತ್ನವೆಲ್ಲ ನೀರ ಮೇಲಣ ಹೋಮವಾಗುವುದು ನಿಶ್ಚಿತ. "ರಾಜಾ ಕಾಲಸ್ಯ ಕಾರಣಂ" ಎಂಬುದಿಲ್ಲಿ ಸ್ಮರಣೀಯ.

Phone: 19

ನೆಲ್ಲಿ ಪ್ರಕಾಶ್

ಮನೋಹರ ಕೆಫೆ

ಅತ್ಯಾಧುನಿಕ ಮಾದರಿಯ
ಬೋರ್ಡಿಂಗ್ ಮತ್ತು ಲೋಜಿಂಗ್

ಶಿವಮೊಗ್ಗ

ನೂತನವಾಗಿ ನಿರ್ಮಿಸಿದ ಏಯರ್ ಕಂಡೀಶನ್ಡ್ ರೂಮುಗಳು
ಬಾತ್ ರೂಮ್ ಲಗ್ತೀಕರಿಸಿದೆ.
ನಯನ ಮನೋಹರ ಹಾಗೂ ಆಹ್ಲಾದಕರ
ರೂಫ್ ಗಾರ್ಡನ್ಸ್ ಇತ್ಯಾದಿ
ಸಕಲ ಆಧುನಿಕ ಸೌಕರ್ಯಗಳಿಂದೊಡಗೂಡಿದೆ.

ಪಿ. ಕೆ. ಜನಾರ್ದನ ನೆಲ್ಲಿ
ಪ್ರೊಪ್ರೈಟರ್.

NELLI PRAKASH
MANOHARA CAFE
BOARDING & LODGING
SHIMOGA

Prop: **P. K Janardana Nelli**

ಹಾಲು ತುಪ್ಪ

ಹಾಲಿನಿಂದ ಆಯುಷ್ಯ ತುಪ್ಪದಿಂದ ಬುದ್ಧಿಶಕ್ತಿ ವರ್ಧಿಸುತ್ತವೆಯೆಂಬುದು ಹಳೆಯ ಮಾತು. ಇಂದು ಅಷ್ಟು ಹಾಲೂ ಇಲ್ಲ; ತುಪ್ಪದ ರುಚಿಯನ್ನೇ ಜನ ಅರಿಯರು. ಹಾಗಾದರೆ, ಆಯುರ್ವೃದ್ಧಿಯ ರಹಸ್ಯವೇನು? ಅಮೆರಿಕನ್ ವಿಜ್ಞಾನಿ ಹೇಳುವಂತೆ ಆಳವೇ ಆಯುರ್ವೃದ್ಧಿಗೆ ಪ್ರೇರಕ ಶಕ್ತಿ: ನಾವು ಅಳುವುದರಿಂದಲೇ ಮತ್ತೆ ಬದುಕುತ್ತದೆ; ಅತ್ತು ಸತ್ತವರೇ ಮರುಜನ್ಮ ಪಡೆಯಬಲ್ಲರು. ಆದುದರಿಂದಲೇ ಶೋಕಾಮೃತವು ಸದಾ ನಮ್ಮೊಂದಿಗಿರಲಿ ಎನ್ನುತ್ತಾರೆ, ಲೇಖಕರು.

ಹರಟೆಗಾರರು:
"ನವಗಿರಿನಂದ", ಮದ್ರಾಸು

ನಂಬುಗೆಗೆ ಆಧಾರ

"ತುಪ್ಪದಿಂದ ವರ್ಧತೇ ಬುದ್ಧಿ, ಹಾಲಿನಿಂದ ಆಯುಃ ಪ್ರವರ್ಧತೇ" ಅಂತ ಹಳೇ ಕಾಲದವರು ಹೇಳಿಟ್ಟಿದ್ದಾರೆ. ಆಗೇನೋ ಹಾಲೂ ಹೈನೂ ಧಂಡಿಯಾಗಿದ್ದ ಕಾಲ. ದನಗಳೂ ಎಮ್ಮೆಗಳೂ ದನವಂತರ ಲಕ್ಷಣವಾಗಿತ್ತು. ಊರೂರಿನಲ್ಲೂ ಹಾಲಿನ ಕಾಲುವೆ ಓಡಿತ್ತು; ತುಪ್ಪದ ಕೊಪ್ಪರಿಗೆ ತೇಲಿತ್ತು, ಬೆಣ್ಣೆಯ ಗುಡ್ಡ ಆಡಾಡಿತ್ತು. ತುಪ್ಪದ ಪರಿಮಳದಿಂದ ಹೋಮ ಧೂಮಗಳಿದ್ದು, ಆಕಾಶದ ದೇವತೆಗಳೆಲ್ಲಾ ತೃಪ್ತರಾಗಿ, ಕಾಲೇ ವರ್ಷತು ಪರ್ಜನ್ಯ ಸುರಿಸಿದರು. ಪೃಥಿವೀ ಸಸ್ಯಶಾಲಿನಿಯಾದಳು. ಧನಧಾನ್ಯ ..

ಆ! ಅದೆಲ್ಲಾ ಶ್ಲೋಕಗಳ ಪುಣ್ಯಯುಗದ ಮಾತು. ಆ ಕಾಲದ ವಚನಗಳ ಮೇಲೆ ನಂಬುಗೆ ಇಟ್ಟಿದ್ದೇವೆ ನಾವು "ನಂಬುಗೆಯೇ ದೇವರು, ನಂಬುಗೆಯೇ ಬಲ; ನಂಬುಗೆಯೇ ಔಷಧಿ" ಎಂದೆಲ್ಲ ಹೇಳುತ್ತಾರಲ್ಲ? "ಅಪ್ಪನೆಟ್ಟ ಗೋಳಿ ಮರವೆಂದು ನೇಣು ಹಾಕಿಕೊಳ್ಳುವಷ್ಟು" ನಂಬುಗೆಯವರು ನಾವು — ನಾವೆಂದರೆ ನಾವು ನೀವಲ್ಲ, ನಮ್ಮ ಸಮುದಾಯ ಅಂದೆ. ಹಿಂದೆ ಯಾರೋ ಒಬ್ಬ ಅಪ್ಪರ ಮಟ್ಟಿನ ನಂಬುಗೆಯಿಂದ ಹಾಗೆ ನೇಣು ಹಾಕಿಕೊಳ್ಳದಿರುತ್ತಿದ್ದರೆ ಆ ನಾಮತಿ ಹುಟ್ಟುತಿತ್ತೆ? "ಅತಿ ಸರ್ವತ್ರ ವರ್ಜಯೇತ್" ಎಂಬ ಹಾಗೆ ಆಷ್ಟೊಂದು ಗಾಢವಾದ ನಂಬುಗೆ ಒಳ್ಳೆಯದೋ ಕೆಟ್ಟದೋ, ನಂಬಲಿಕ್ಕೊಂದು ಗೋಳಿಮರವಾದರೂ ಬೇಕಲ್ಲ?

ಹಾಲಿನಿಂದ ಆಯುಷ್ಯವರ್ಧಿಸಲಿಕ್ಕೂ, ತುಪ್ಪದಿಂದ ಬುದ್ಧಿ ವರ್ಧಿಸಲಿಕ್ಕೂ, ಹಾಲು ತುಪ್ಪ ಅಂತ ಏನಾದರೊಂದು ಬೇಕೇ ಬೇಕು ನೋಡಿ.

ಹಾಲಿನ ಬೃಹಸ್ಪತಿ

. ಮೊದಲಿನ ಕಾಲದಲ್ಲಾದರೆ ಹಾಲೆಂದರೆ ಒಂದೇ ಬಗೆಯ ಹಾಲೇ ಗೊತ್ತು. ಈಗ ಪುಡಿಹಾಲುಗಳಿವೆ. ಬಾವಿಯ ಪರಿಶುದ್ಧವಾದ ಗಂಗಾಮೃತಕ್ಷೀರಗಳಿವೆ. ನಮ್ಮ ಕಣ್ಣಿಗೆ ಕಾಣಿಸದೆ ಇರುವ ರೀತಿಯಲ್ಲಿ ನೀರೋ, ಮೈದಾಹಿಟ್ಟೋ ಪುಡಿಯೋ ಕಲಕಿ, ಹಾಲು ಹಾಲೆಂದು ಹೆಸರು ಪಡೆದುದನ್ನೆಲ್ಲಾ, ಅಶ್ವತ್ಥಾಮನು ಕುಡಿದ ಹಾಲಿನ ಹಾಗೆ ನಾವೂ ನಂಬುತ್ತಿದ್ದೆವು; ನಂಬುಗೆಯ ಮಹಿಮೆಯಿಂದ ಕಲ್ಲೂ ದೇವರಾಗುವ ಹಾಗೆ ಎಂತಹ ಹಾಲಾದರೂ ನಂಬಿದರೆ ನಿಜವಾದ ಅಪ್ಪಟ ಹಾಲಿನ ಫಲವೇ ಸಿಗಬೇಕಿತ್ತು.

ಆದರೆ ಹಾಲಿನ ತಂತ್ರವೆಲ್ಲಾ ನಮ್ಮೆದಿರೇ ಢಾಣಾಡಂಗುರವಾಗಿಯೇ, ಕಾಣಿಸುತ್ತಿದೆಯಲ್ಲಾ! ಪ್ರತ್ಯಕ್ಷ ನಮ್ಮ ಮುಂದೆಯೇ, ಅಸಲು ನಾವೇ ನಮ್ಮ ಹಾಲನ್ನೆಲ್ಲಾ ಕಾಫಿಯೋ ಟೀಯೋ, ಓವಲ್ಟೀ ಮಾಡುವಂಥವರಾದೆವು. ಅಥವಾ ಅದನ್ನು ಮಾಡುವ ಹೋಟೆಲ್ ಕಾರ್ಖಾನೆಗಳಿಗೆ ಸರಬರಾಜುಮಾಡುವವರಾದೆವು.

ಹಾಲು ಕುಡಿಯುವುದೆ? ಅದು ಹಸುಳೆಗಳ, ರೋಗಿಗಳ ಔಷಧ. ನಿಜವಾಗಿ ನೋಡಿದರೆ ಹಾಲಿನ ಮಹಿಮೆ ಸಾರಿದ ನಮ್ಮ ದೇಶದಲ್ಲಿ "ಹಾಲ್‌ಪಾರ್ಟಿ" ಎಂಬ ಬಿರುದು ಅದಕ್ಕೆ ಬರಬೇಕಿತ್ತು. ಚಾಣಾಕ್ಷ ಟೀ ಕಾಫಿಗಳು ಹಾಲನ್ನು ಮಸಲಾಯಿಸಿಕೊಂಡು, "ಟೀ ಪಾರ್ಟಿ" ಬಿರುದು ಪಡೆದುವು. ಅದರೊಳಗೆ ಟೀ, ಕಾಫಿಗಳ ಮೇಲಾಟ ಬೇರೆ; ಹೆಸರು ಟೀಪಾರ್ಟಿಯಾದರೂ ಮೆರೆದಾಡುವುದು ಕಾಫಿ. ಅದು ಬಿಡಿ.

ನಾವೀಗ ಪಾಪ, ಮೋಸ ಹೋದ ಆ ಹಾಲು ನೀರಿಗೇ ಇಳಿಯೋಣ "ಹಾಲನ್ನು ಇನ್ನೊಬ್ಬರಿಗೆ ಕೊಡುವಾಗ ಅದಕ್ಕೆ ಚೂರಾದರೂ ನೀರನ್ನು ಸಿಂಪಡಿಸಲೇ ಬೇಕು; ಇಲ್ಲದಿದ್ದರೆ ದೃಷ್ಟಿಯಾಗಿ ಹಸುವಿನ ಕೆಚ್ಚಲು ಕೊಳೆತು ಹೋದೀತು" ಎಂಬ ಅಜ್ಜೀ ಶಾಸ್ತ್ರ ಊರೊಳಗೆಲ್ಲ ವಾಡಿಕೇಲುಂಟು. ಬಹಳ ಒಳ್ಳೇದೇ ಆಯಿತಲ್ಲ. ನೀರನ್ನು ಸಿಂಪಡಿಸುವ ಬದಲಿಗೆ ಸುರಿಯುವುದೆಷ್ಟು ಸುಲಭ! ಹೋಟಲಿಗೆ ಹೋದ ಮೇಲೆ ಅದಕ್ಕೆ ವಸ್ತ್ರಷ್ಟು ಸುರಿದು ದೀರ್ಘ ಮಾಡುತ್ತಾರೆ ಅದೆಲ್ಲ ಏಕೆಂದು ಗೊತ್ತಾಯಿತೆ? ಹಣಕ್ಕೆ.

ಕಲಿ ಮೈಮೆಯಿಂದಲೋ, ಮತ್ತಾವುದರಿಂದಲೋ ಮನುಷ್ಯನಿಗೆ ದುಡ್ಡಿನ ಆಸೆ ಹೆಚ್ಚಾಗುತ್ತಾ ಬಂದ ಹಾಗೆ, ವಸ್ತುಗಳ ಆಶೆ ಕಡಿಮೆಯಾಯಿತು. ಗಂಟು ಹೊರುವುದು ಕಷ್ಟ; ನೋಟು ಹೊರುವುದು ಹಗುರ. ಹಾಲಿಗೆ ನೀರು ಹೆಚ್ಚು ಹೆಚ್ಚಾಗಿ ಬೀಳತೊಡಗಿದಂತೆ ಹಣ ಹೆಚ್ಚು ಹೆಚ್ಚಾಗಿ ಕೂಡತೊಡಗಿತು. ಮತ್ತೆ ತೆಗೊಳ್ಳಿ, ಹಣ, ಹಣ, ಹಣದ ರಾಶಿ! ಇನ್ನೂ ಏರುತ್ತಾ ಇದೆ ಹಣದ ಉಬ್ಬರ!

ವಸ್ತು ಸಾಮಗ್ರಿಗಳೋ! ಪಾಪ, ಅವೆಲ್ಲಾ ಕರೀ ಸಂತೆಯೊಳಗೆ ಅಡಗಿಕೊಂಡಿದ್ದಾವೆ ಅವುಗಳಿಗೂ ಹಣದ ಆಸೆ; ಇತರರಿಗೂ ಹಣದ ಆಸೆ. ಅದೇ ನೋಡಿ ಹಣದ ಉಬ್ಬರ. "ಮನಸ್ಸಿನಂತೆ ಮಹಾದೇವ" ಅಂದರೆ ಇದೇ ತಾನೆ?

ಸ್ವರಾಜ್ಯ ಬಂದರೆ ನಮ್ಮ ದೇಶದಲ್ಲಿ ಹಾಲು ಜೇನುಗಳ ಹೊಳೆಯೇ ಹರಿಯುತ್ತದೆಂದು ಹಿಂದೆ ಯಾರೋ ಹೇಳಿದ ನೆನಪು; ಈಗ ಹಾಲು, ನೀರಿನಂತೆ ವೇಗವಾಗಿ ತುಂಬಿ ಹರಿಯುವ ರೀತಿಯನ್ನು ನೋಡಿದರೆ ಅದು ನಿಜವೆನಿಸುತ್ತದೆ. ಇನ್ನು ಕಾಶ್ಮೀರದ ಸಮಸ್ಯೆ ಬಗೆ ಹರಿದಾಗ ಜೇನೂ ಹರಿದು ಬಂದೀತು ಕಾಯೋಣ.

ಇದೊಂದು ಆಶ್ಚರ್ಯ

ಸಾಧು ಗೋಮಾತೆಯ ಹಾಲು ಪಾಪ, ನಮ್ಮ ಕಣ್ಣೆದಿರೇ ಅಕ್ಷಯ ರೂಪ ತಾಳುತ್ತಾ ಇರುವಾಗ, ಹಾಲೇನಾಯು — ಅಲ್ಲ ಕ್ಷೀರೇಣಾಯುಃ ಪ್ರವರ್ಧತೇ ಎಂಬ ಮಾತನ್ನು ನಂಬಲಿಕ್ಕೇ ನಮಗಾಗುವುದಿಲ್ಲ. ನಂಬುಗೆ ತಪ್ಪಿದ ಮೇಲೆ ನಾವು ಕುಡಿಯುವ ಹಾಲೆಂಬ ನೀರೇ ಯ, ಅಲ್ಲ— ಪಾನೀಯದಲ್ಲಿ ನಂಬುಗೆಯಾದರೂ ಹೇಗೆ ಬಂದೀತು, ನಂಬುಗೆಯ ಫಲಿತವಾದರೂ ಹೇಗೆ ಗಿಟ್ಟೀತು?

ಅಂತೆಯೇ ನಮ್ಮ ಆಯುಷ್ಯ ಕಡಿಮೆಯಾಗಬೇಕಿತ್ತು. ಪೂರ್ಣಾಯು, ಚಿರಾಯು ಎಂಬ, "ವರುಷ ನೂರಾಯುಷ್ಯ" ಅಂತ ಇದ್ದರೂ, ನಮ್ಮಂಥವರ ದೇವರ ದಯದಿಂದ ಏನೊಂದೂ ರೋಗ ರುಜಿನೆಗಳಿಲ್ಲದಿದ್ದರೆ, ದೀರ್ಘಾಯುಷ್ಯದ ಲೆಕ್ಕ ೬೦, ಹೆಚ್ಚಾದರೆ ೭೦ ಏ೫. ಆನರೆ ಕೋಟಿ ಸಂಖ್ಯೆಯ ಲೆಕ್ಕ ತೆಗೆದವರು ಸರಾಸರಿ ಮಾಡಿ ೩೦ ಅಂಕ ಹಿಂದೆಂದೋ ಹೇಳಿದ್ದರಂತೆ. ೨೦ ಅಂತಲೂ ಇತ್ತು.

ಆದರೆ ಇತ್ತೀಚಿನ ಲೆಕ್ಕದಲ್ಲಿ ಮಧ್ಯಕಾಲದ ಲೆಕ್ಕಕ್ಕಿಂತ ಸರಾಸರಿ ನಮ್ಮ ಆಯುಷ್ಯದ ಮಿತಿ ಹೆಚ್ಚಾಗಿದೆಯಂತೆ — ಸುಮಾರು ೪೦ರ ವರೆಗೆ!

ಇದೊಂದು ಆಶ್ಚರ್ಯವಲ್ಲವೆ? ನಮ್ಮ ದೇಶದಲ್ಲಿ ಈಗೀಗ ಆಯುಷ್ಯದ ಮಿತಿ ಏರುವುದೆಂದರೆ ಇದೇನು, ಹಾಲಿನ ಮಹಿಮೆಯಂತೂ ಅಲ್ಲ; ಹಾಗಾದರೇನು ತುಪ್ಪದ ಮಹಿಮೆಯೆ? ತುಪ್ಪದಿಂದ ಆಯುಷ್ಯ ವೃದ್ಧಿಯಾಗುವುದೆಂದು ಹೇಳಿಲ್ಲವಲ್ಲಾ? "ಘೃತೇಣ ವರ್ಧತೇ ಬುದ್ಧಿ" ಅಂತ ತಾನೇ ಹೇಳಿದ್ದಾರೆ?

ತುಪ್ಪದ ಫಲ

ಓಹ್! ಅದು ಮಾತ್ರ ನಿಜವಾಗಿದೆ ಕಾಣ್ರೀ ಈಗಿನವರಿಗೆ ಬುದ್ಧಿಗೇನೂ ಕಡಿಮೆ ಇಲ್ಲ. ಬಟ್ಟೆ ತಲೆಯ ರೂಪದಲ್ಲಿ, ಮಂಡೆಗಳು ದೊಡ್ಡದಾಗಿ ದೇಹಗಳು ಕೃಶವಾಗುತ್ತಾ, ಕೈ ಕಾಲುಗಳಾಡಿಸದೆ, ಎಲ್ಲದಕ್ಕೂ ಯಂತ್ರಗಳನ್ನುಪಯೋಗಿಸುವಂಥ, ಬುದ್ಧಿ ಪ್ರಧಾನ ಯುಗವಿದು, ವಿಜ್ಞಾನ ಯುಗ. ವಿಜ್ಞಾನ ಅಂದರೆ ಬುದ್ಧಿವಂತಿಕೆ ತಾನೆ?

ಅಂಥಾ ಬುದ್ಧಿ ಮನುಷ್ಯರಿಗೆಲ್ಲಾ ಹೇಗೆ ಬಂತು? ತುಪ್ಪದಿಂದಲೇ ಬಂತೆ? ಹಾಗಾದರೆ ಈಗ ತುಪ್ಪ ಮಾತ್ರ ಶ್ಲೋಕ ಯುಗದಷ್ಟು ಶುದ್ಧವಾದ್ದೇ, ಅಪ್ಪಟವಾದ್ದೇ ಸಿಕ್ಕುತ್ತದೇನು? ಓಹೋ ತಿಳಿಯಿತು. ಅದರೊಳಗೊಂದು ಸೂಕ್ಷ್ಮವುಂಟು, ನಂಬುಗೆಯ ಸೂಕ್ಷ್ಮ. ಅದೆಂತೆನ್ನಿ.

ತುಪ್ಪದ ವ್ಯವಹಾರವೆಲ್ಲ ಹಾಲಿನಷ್ಟು ಢಾಣಾಡಂಗುರವಾಗಿ ನಮ್ಮ ಕಣ್ಣೆದಿರಿನಲ್ಲೇ ನಡೆಯುವುದಿಲ್ಲ. ತುಪ್ಪದ ಗುಣ ಅಮೋಘವಾಗಿರುವುದೆಂದು ಪ್ರಚಾರಿಸಲಾದಂತಹ ಬೇರೆಸ್ಟೋ ತುಪ್ಪಗಳನ್ನು ಒಳ್ಳೆಯ ನಂಬುಗೆಯಿಂದಲೇ ನಾವು ಸೇವಿಸುತ್ತೇವೆ. ಇದರಲ್ಲಿ ತುಪ್ಪದ ಗುಣವಿದೆ ಅಂತ ವಿಜ್ಞಾನವು ನಂಬುಗೆ ಹುಟ್ಟಿಸಿ, ಬೇರೆ ಏನು ಏನನ್ನೋ ನಮಗೆ ತಿನ್ನಿಸುತ್ತಾ ಇದೆ. ಇತ್ತೀಚಿನವರಿಗೆಲ್ಲ ನಿಜವಾದ ತುಪ್ಪದ ವಾಸನೆ ಗೊತ್ತಿದ್ದರೆ ತಾನೆ? ಅಂತೆಯೇ ತುಪ್ಪದ ಮೇಲೆ ನಮ್ಮ ನಂಬುಗೆ ಕೆಟ್ಟಿಲ್ಲ. ತುಪ್ಪವೇ ಇಲ್ಲದಿದ್ದರೂ ತುಪ್ಪದಂತಹ ಹೆಸರಿನ ವಸ್ತುಗಳನ್ನು ನಂಬುಗೆಯಿಂದ ನಾವು ತಿನ್ನುವಷ್ಟು ಕಾಲವೂ ನಮ್ಮ ಬುದ್ಧಿಗೆ ಯಾವ ಬಗೆಯ ನಷ್ಟವೂ ಇಲ್ಲ. ಬುದ್ಧಿ ಬೆಳೆಯುತ್ತಾ ಇದೆ.

ಬುದ್ಧಿಯ ಮಹಿಮೆ

ಮನುಷ್ಯರು ತುಂಬ ಇಷ್ಟದಿಂದ ತಾಪತ್ರಯ ಪಡುವುದೆಲ್ಲ ಬುದ್ಧಿಯನ್ನು ಬೆಳೆಸಿಕೊಳ್ಳಲಿಕ್ಕೆ ತಾನೆ? ಬುದ್ಧಿ ಬೆಳೆದರೆ ಏನಾಗತ್ತೆ? ಈ ಪ್ರಶ್ನೆಗೆ ನನ್ನನ್ನೇ ಬುದ್ಧಿಯಿಲ್ಲದವ ಅಂದೀರಿ! ನನಗೆ ಗೊತ್ತಿದೆ. ಬುದ್ಧಿವಂತ, ಮೇಧಾವಿ, ಪಂಡಿತ ಇತ್ಯಾದಿ ಬಿರುದುಗಳೆಲ್ಲ ಬುದ್ಧಿಯ ನೈವೇದ್ಯ ತಾನೆ? ವೈದ್ಯ ಅಂತ ನಾಮ ಮೇಲೆ ಮಾಡಿಕೊಂಡು ತಿರುಗುವವರೆಲ್ಲ ಬುದ್ಧಿವಂತರೇ.

ಆದರೆ ಯಾರೋ ಶ್ಲೋಕ ಕಾಲದವರು ಹೇಳಿದ್ದರು ನೋಡಿ "ಬುದ್ಧಿ ಬೆಳೆದರೆ ಮನುಷ್ಯ ದುರ್ವಿದಗ್ಧನಾಗುತ್ತಾನೆ. ಮನುಷ್ಯ ನಿಜವಾದ ಮುಮುಕ್ಷುವಾಗಬೇಕಾದರೆ ಜ್ಞಾನ ಬೆಳೆಯಬೇಕು ಬುದ್ಧಿ ಬೇರೆ ಜ್ಞಾನ ಬೇರೆ" ಅಂತ. ಹಾಗಂದವ ಯಾವನೋ ಮೂಲೇಲಿ ಕುಳಿತ ಶಾಂತಸ್ವಿಯ ಋಷಿಯಾಗಿರಬೇಕು. ಅವನಿಗೇನು ಗೊತ್ತು ಬುದ್ಧಿವಂತಿಕೆಯ ಮಜಾ!

ಬುದ್ಧಿವಂತಿಕೆಯಿದ್ದರೆ ಪಾಪಿಷ್ಠರನ್ನು ಮೆಟ್ಟಿಸಬಹುದು. ತಂತ್ರೋಪಾಯಗಳನ್ನು ಹೂಡಿ ಸುಖ ಶೃಂಗಾರಗಳನ್ನು ಸೂರೆಮಾಡಿಕೊಳ್ಳಬಹುದು.

ಜ್ಞಾನಿಯಾಗಿ ಬಿಟ್ಟರೆ ಏನುಂಟು? ಜ್ವರ ಬಂದು ಮೂಲೆ ಸೇರಿದ ರೋಗಿಯೂ ಸಮ, ಜ್ಞಾನಿಯೂ ಸಮ. ಯಾರಿಗೆ ಬೇಕಪ್ಪ ಜ್ಞಾನ?

ಉಂ, ತುಪ್ಪದ ಫಲವಾದ ಬುದ್ಧಿವಂತಿಕೆಗೆ ಒಂದು, ಹಾಲಿನ ಫಲಿತವೆಂದ ಆಯುರ್ವೃದ್ಧೀ ವಿಷಯವನ್ನು ಅಲ್ಲಿಗೇ ಬಿಟ್ಟಿನಲ್ಲವೆ? ಅದೇನೂ ಹೆಚ್ಚಿಗಿಲ್ಲ ಬಿಡಿ ನಮ್ಮ ಸರಾಸರಿ ಆಯುಷ್ಯ ಇತ್ತೀಚೆಗೆ ಹೇಗೆ ವೃದ್ಧಿಯಾಗುತ್ತಾ ಬಂದಿತು, ಬರುತ್ತಿದೆ ಎಂಬುದು ತಾನೇ ಪ್ರಶ್ನೆ?

ಅದರ ಗುಟ್ಟನ್ನೀಗ ಬುದ್ಧಿಯಿಂದಲೇ ಕಂಡು ಹಿಡಿದಾಯಿತು. ಇತ್ತೀಚೆಗೆ ಅಮೇರಿಕದ ಬುದ್ಧಿನೂನ್'ಗಳಿಂದ ಒಂದು ಸಮಾಚಾರ ಬಂದದ್ದು ಗೊತ್ತಿಲ್ಲವೇ ನಿಮಗೆ? "ಅಳುವುದರಿಂದ ಆಯುಷ್ಯವು ಅಭಿವೃದ್ಧಿಯಾಗುತ್ತದೆ' ಅಂತ ಅವರು ಹೇಳಿಬಿಟ್ಟಿರಲ್ಲ!

ಅಳುವಿನ ಪ್ರಭಾವ

ಈಗ ಸಮಸ್ಯೆ ಬಗೆಹರಿಯಿತು. ಸ್ವರಾಜ್ಯೋದಯವಾದ ಮೇಲೆ ನಮ್ಮ ದೇಶದಲ್ಲಿ ಪುಣ್ಯವಶಾತ್ ನಗುವಿನ ತರಂಗಗಳು ಹೆಚ್ಚಾಗಿ ಏಳಲಿಲ್ಲ ಎದ್ದಿರುತ್ತಿದ್ದರೆ ಇಷ್ಟರಲ್ಲಿ ನಮ್ಮ ಸರಾಸರಿ ಆಯುಷ್ಯ ಎಷ್ಟೋ ಕಮ್ಮಿಯಾಗಿ ಹೋಗಿರುತ್ತಿತ್ತು. ಹೆಚ್ಚಿಸಲು ಕಾಲೂ ಇಲ್ಲವಷ್ಟೆ? ಪುಣ್ಯವಂತರು ನಮ್ಮವೀ ಭಾರತೀಯರು! ಈ ಹತ್ತು ಹದಿನೈದು ವರ್ಷಗಳಲ್ಲಿ ನಮ್ಮ ಅಳುವೇ ಹೆಚ್ಚಿಕೊಂಡು ಬಂತೇ ಹೊರತು, ನಗೆ ಹೆಚ್ಚಲಿಲ್ಲ, ಅದು ಹೇಗೆ ಏನೆಂಬ ವಿವರಣೆಗಳೆಲ್ಲಾ, ಎಲ್ಲರಿಗೂ ಗೊತ್ತಿದೆ ಎಲ್ಲರೂ ದಿನಾ ತಂತಮ್ಮ ಕೊರತೆಗಳನ್ನು ಕುರಿತು, ವೈಯಕ್ತಿಕವಾಗಿ, ಸಾಂಘಿಕವಾಗಿ ಹಾಡಿ ಹಾಡಿ ಅಳುತ್ತಲೇ ಇದ್ದಾರೆ ಇಲ್ಲಿಯೂ ಹೇಳುವುದು ತಲೆ ಬೇಸರ ಬಿಡಿ.

ಹೀಗೆ ಅಳುತ್ತಾ ಇರುವವರು ಹೇಗೆ ಬದುಕಿರುತ್ತಾರಪ್ಪಾ ಅಂತ ನನಗೆ ಆಶ್ಚರ್ಯವಾಗುತಿತ್ತು. ಅತ್ತು ಅತ್ತು ಜೀವನದ ಮೇಲೆ ಜಿಗುಪ್ಸೆ ಹುಟ್ಟಿ, ತನ್ನಂತೆ ಸಾಯಲು ಸಾಧ್ಯವಾಗದೆ, ಆತ್ಮಹತ್ಯವನ್ನೋ ಮಾಡಿಕೊಳ್ಳುತ್ತಾರೆ ಜನರು!

ಛೆ ಛೆ! ಆತ್ಮಹತ್ಯೆ ಮಾಡಿಕೊಳ್ಳಲೇ ಬಾರದಪ್ಪ, ಮಹಾ ಪಾಪ; ಪರಮಾಪರಾಧ. ಯಾರಿಗೂ ಆ ಬುದ್ಧಿ ಬಾರದಿರಲಿ, ಅಂತ ಬೇಡಿಕೊಳ್ಳುತ್ತ ಎಲ್ಲರೂ ದೀರ್ಘಾಯುಷಿಗಳಾಗಿರಲಿಕ್ಕೆ ನನ್ನ ಹಾರೈಕೆಯಿದೆ ಒಲವಿದೆ, ಆಶೀರ್ವಾದವಿದೆ. "ಈಸ ಬೇಕು, ಇದ್ದು ಜೈಸ ಬೇಕು' ಹೇಳಿಲ್ಲವೇ ದಾಸರು?

"ಆಗುವುದಲ್ಲಾ ಒಳ್ಳೆಯದಕ್ಕೆ' ಅಂತ ಹೇಳುತ್ತಾರಲ್ಲ, ಅದರ ಸತ್ಯ ಈಗ ಗೊತ್ತಾಯ್ತು. ನಮಗೆ ನಾನಾ ತಾಪತ್ರಯಗಳು ಬಂದು, ನಾವು ಅತ್ತಷ್ಟೂ ನಮಗೆ ಆಗುತ್ತಿರುವುದು ಆಯುರ್ವೃದ್ಧಿಯೇ. ಹೆಂಡತಿ ಯಾವುದೋ ಕಾರಣ ಹುಡುಕಿ ಹುಡುಕಿ, ಗಂಡನನ್ನು ಅಳಿಸಿದಷ್ಟೂ ಅವಳ ಮಾಂಗಲ್ಯ ಬಲ ಭದ್ರವಾದೀತ ಗಂಡನೋ—ಛೇ ಬೇಡ, ಅತ್ತೆಯೋ ನಾದಿನಿಗಳೋ ಆ ಹೆಂಡತಿ ಎಂಬವಳನ್ನು ಅಳಿಸುತ್ತಿರಲಿ. ಕುಟುಂಬ ಬೆಳಗೀತು ಅಂದ ಹಾಗೆ ಅಮೇರಿಕದವರು ಕಂಡುಹಿಡಿದು ಹೇಳಿದ ಆ ಮಾತಿಗೆ ಇನ್ನು ಒಂದು ಸಾಕ್ಷಿ ಬೇಕೇ ನಿಮಗೆ?

ಮಗು ಹುಟ್ಟಿದ ಕೂಡಲೇ ಅಳುತ್ತದೆ, ಅಳಬೇಕು. ಅಳದಿದ್ದರೆ ಆ ಮಗು ಸಾಯುತ್ತದಂತಲೇ ಅರ್ಥ. ಆ ಮೇಲೆ ಮಕ್ಕಳು ಅಳುವುದನ್ನೇ ಪ್ರಬಲ ಅಸ್ತ್ರವಾಗಿ, ಜೀವನಾಧಾರವಾಗಿ ಹಿಡಿದಿರುತ್ತವೆಂಬುದು ಅನುಭವಸಿದ್ಧ ಸಾಕ್ಷ್ಯ; ಏಕೆ? ಆಯುರ್ವೃದ್ಧಿಗಾಗಿ'

ಬೆಳೆಯುತ್ತಾ ಬಂದ ಮೇಲೆ ಅಳುವುದು ಅವಮಾನವೆಂಬ ತಪ್ಪು ಕಲ್ಪನೆಯನ್ನು ಯಾರೋ ಹೊಗಿಸಿಬಿಟ್ಟರು, ಚಾಂಡಾಲರು. ಅಂತೆಯೇ ದೊಡ್ಡವರು ತಾಪತ್ರಯಗಳಿಂದ ಅಳುವುದಾದರೂ, ಬಹಳ ಗುಟ್ಟಾಗಿ, ಕತ್ತಲೆಯಲ್ಲಿ ತಮ್ಮ ಹೆಂಡತಿಗೂ ತಿಳಿಯದ ಹಾಗೆ ಅಳುತ್ತಾರೆ.

ಇಂಥ ವಿಪರೀತ ಹೆಂಗಸರಿಗಿಲ್ಲ ಅವರು ಪುಣ್ಯಾತ್ಮರು ಆಭರಣಗಳು ಹೇಗೆ ಹೆಂಗಸರಿಗೆ ಭೂಷಣವೋ, ಅಳುವೂ ಹಾಗೆಯೇ ಅವರಿಗೆ ಭೂಷಣವೆನಿಸಿದೆ ಅಂತೆಯೇ ಹೆಂಗಸರು ಢಣಾಡಂಗುರವಾಗಿ, ಸ್ವಲ್ಪವೂ ಭಯ, ಅಳುಕು ಇಲ್ಲದೆ ಅಳುವುದರಿಂದಲೇ ಗಂಡಸರಿಗಿಂತಲೂ ಹೆಂಗಸರ ಆಯುಷ್ಯವೇ ಹೆಚ್ಚೆಂದು ಲೆಕ್ಕಹಾಕಿ ಕಂಡು ಹಿಡಿದಿದ್ದಾರಂತೆ' ಪಾಪ, ಗಂಡಸರು ಎಂಥ ಮೋಸ ಹೋದರು!

ಇನ್ನು ಮೇಲೆ ಅಳುವಿಗೇನೂ ಭಯವಿಲ್ಲ. ಗಂಡಸರು ಅಳುವಿನಿಂದ ಬ್ರಹ್ಮಾಸ್ತ್ರವನ್ನೂ ತಮ್ಮ ಆಯುರ್ವೃದ್ಧಿಗೂ ಇತರ ಸೌಕರ್ಯಗಳಿಗೂ ಪ್ರತ್ಯಕ್ಷವಾಗಿಯೇ ಉಪಯೋಗಿಸಿಕೊಳ್ಳ ಬಹುದು ಸೇವಕರು ಯಜಮಾನರ ಮುಂದೆ ಅತ್ತು, ಗುಮಾಸ್ತರು ಮೇಲಾಧಿಕಾರಿಗಳ ಮುಂದೆ ಕಣ್ಣೀರಿಳಿಸಿ, ಪಂಗಡದ ನಾಯಕರು ಮಂತ್ರಿಗಳ ಮುಂದ ಧಾರಧಾರೆಯಾಗಿ ಕಂಬನಿ ಸುರಿಸಿಕೊಂಡು, ಫೋಟೋದಲ್ಲಿ ಕೂಡಾ ಬೀಳುವ ಹಾಗೆ ಅತ್ತು ತಂತಮ್ಮ ಅಭೀಷ್ಟ ಸಿದ್ಧಿಗಳನ್ನು ಮಾಡಿಕೊಳ್ಳ ಬಹುದು.

ಸಂತೋಷಕ್ಕಿಂತಲೂ ಅಳುವಿಗೇ ಮಹತ್ವ ಹೆಚ್ಚು. ಹುಟ್ಟಿದಾಗಲೂ ಅಳು, ಸಾಯುವಾಗಲೂ ಅಳು, ಬದುಕುವ ಮಧ್ಯಕಾಲದಲ್ಲೂ ಅಳು. ಅಳುವೆಂಬುದೆಷ್ಟು ಪವಿತ್ರವಾದ ವಸ್ತು!

ದೀರ್ಘಾಯುರ್ದಾಯಿನಿಯಾದ ಶೋಕಧಾರಾಮೃತವು ಯಾವಾಗಲೂ ನಮ್ಮೊಳಗಿರಲಿ. ಅಳು ಸಂಜೀವಿನಿಯಾಗಲಿ!

ನಾವು ಪ್ರತಿಯೊಂದರಲ್ಲಿ ಕೂಡಿಕೊಂಡಿರುವ ಒಳ್ಳೆಯ ವಿಚಾರವನ್ನು ತಿಳಿಯಲು ಯತ್ನ ಮಾಡಬೇಕು ನಮ್ಮ ಶರೀರದ ಮತ್ತು ಜ್ಞಾನದ ಅಸ್ಥಿರತೆಯನ್ನು ಹೋಗಲಾಡಿಸಬೇಕು ನಮಗೆ ವಿರೋಧವಾದ ಪರಿಸ್ಥಿತಿ ಇದ್ದರೂ ಕೂಡ ಅದನ್ನು ಸಾಧುವಾಗಿ ಮಾಡಿಕೊಳ್ಳುವುದೇ ನಮ್ಮ ಜಾಣತನವಾಗಿದೆ

—ಸ್ವಾಮಿ ವಿವೇಕಾನಂದ

ಅಹಿಂಸೆಯನ್ನು ಸಂದೇಶ ರೂಪವಾಗಿ ಮಾನವ ಕುಲಕ್ಕೆ ಬೀರುವುದು ಭಾರತದ ಪವಿತ್ರಕಾರ್ಯವೆಂದು ನನ್ನ ದೃಢವಾದ ವಿಶ್ವಾಸ ಅದು ನೆರವೇರಲು ಕಾಲಾಂತರವಾಗಬಹುದು. ಆದರೆ ಈ ಮಹತ್ಕಾರ್ಯವನ್ನು ಈ ದೇಶವು ಮಾಡುವ ಪೂರ್ವದಲ್ಲಿ ಇನ್ನಾರೂ ಮಾಡಲಾರರೆಂದು ನನಗೆ ಕಾಣುತ್ತದೆ.

—ಮಹಾತ್ಮಾ ಗಾಂಧಿ

In the tradition of the famous "CANARA" Springs now another excellent product:

CANARA BRAKE DRUMS

for all popular vehicles:

They are made from quality material, modern machines and with rigid quality control under watchful eyes of a modern laboratory. These drums matching the best of the International makes are made to suit Indian Road Conditions incorporating experience gained by lengthy practical road tests.

THE CANARA WORKSHOPS LIMITED

MANGALORE—3.

ರಾಜನಿತ್ತ ವಿಗ್ರಹ

ಕಥೆಗಾರ್ತಿ:
ಶ್ರೀಮತಿ ಜಿ. ಎಂ. ಲೀಲಾಂಬಿಕೆ,
ಬುಕ್ಕಸಾಗರ

●

ತಾಯಿನಾಡ ರಕ್ಷಣೆಗಾಗಿ ಜೀವದ ಹಂಗು ತೊರೆದು ಹೊರಟಿದ್ದ ರಾಜ! ಹೋಗುವ ಮುನ್ನ ಆತ ಬುದ್ಧನ ವಿಗ್ರಹವನ್ನು ಪತ್ನಿಯ ಕೈಗಿಡುತ್ತಾ ಹೇಳಿದ್ದ.

'ಸಹನಾ, ನಿನ್ನನ್ನು ಮಗು ಛಾಯಳನ್ನು ಅಗಲಿ ಹೋಗುತ್ತಿರುವುದಕ್ಕಾಗಿ ನನ್ನ ಹೃದಯ ದುಃಖದಿಂದ ಭಾರವಾಗಿದೆ. ಆದರೆ ನನ್ನ ತಾಯಿಯನ್ನು ರಕ್ಷಿಸಬೇಕಾದದ್ದು ನನ್ನ ಕರ್ತವ್ಯ ಈ ಸೇವೆಯ ಭಾಗ್ಯಕ್ಕಿಂತ ಹೆಚ್ಚಿನದು ಪ್ರಾಯಶಃ, ನನ್ನ ಪಾಲಿಗೆ ಬೇರೆ ಇರಲಾರದು ನನಗಾಗಿ ನೀನೆಂದೂ ದುಃಖಪಡಬೇಡ. ಭಗವಾನ್ ಬುದ್ಧದೇವನ ಅಮರವಾಣಿಯನ್ನು ಹೆಜ್ಜೆ ಹೆಜ್ಜೆಗೂ ನೆನಪುಮಾಡಿಕೊಂಡು ನಡೆ. ನನ್ನಂತೆ ನಿನ್ನ ಮಗು ಛಾಯಳನ್ನು ತಾಯಿನಾಡ ರಕ್ಷಣೆಗಾಗಿ ವೀರ ಯೋಧೆಯನ್ನಾಗಿ ಮಾಡು ನಾಡರಕ್ಷಣೆಗಾಗಿ ನಿಧಿ ಸಂಗ್ರಹಿಸು. "ಮಾನವ ಬದುಕಲಿಕ್ಕಾಗಿ ತಿನ್ನಬೇಕು, ಆದರೆ ತಿನ್ನಲಿಕ್ಕಾಗಿ ಬದುಕಬಾರದು". ನಿನ್ನಿಂದ ಎಷ್ಟುರೀತಿಯಲ್ಲಿ ನಾಡಿಗೆ ಸೇವೆಸಲ್ಲಿಸಲು ಸಾಧ್ಯವೋ, ಅಷ್ಟು ರೀತಿಯಲ್ಲೂ ಸಲ್ಲಿಸು'.

ಸಹನಾ ಮೆಲ್ಲಗೆ ತನ್ನ ಕತ್ತನ್ನೆತ್ತಿ ಗಂಡನ ಮುಖವನ್ನೊಮ್ಮೆ ನೋಡಿದಳು ನಿಷ್ಕಲವಾದ ರಾಜನ ಕಣ್ಣುಗಳಲ್ಲಿ ಕ್ರಾಂತಿಯ ಕಿಡಿಹಾರುತ್ತಿತ್ತು. ಮಣ್ಣಿನ ಮಗುವಾಗಿ, ಹುಟ್ಟಿದ ರಾಜ, ಇಂದು ಮಣ್ಣಿಗಾಗಿ ಮಡಿಯಲು ಹೋಗುತ್ತಿದ್ದಾನೇನೋ' ಎಂದು, ಕ್ಷಣಕಾಲ ಸಹನಾ ಭಯದಿಂದ ನಡುಗಿದಳು. ಪತಿಯ ಪಾದಗಳನ್ನೊಮ್ಮೆ ಸ್ಪರ್ಶಿಸಿ, 'ಹೇ ಭಾರತಿ, ನಿನ್ನ ಕಂದನನ್ನು ರಕ್ಷಿಸು' ಎಂದು ಮನಸ್ಸಿನಲ್ಲೇ ದೇವರನ್ನು ಪ್ರಾರ್ಥಿಸಿದಳು. ಆ ಮೌನ ಪ್ರಾರ್ಥನೆಯೊಂದಿಗೆ ತನ್ನ ಪತಿಯನ್ನು ಬೀಳ್ಕೊಟ್ಟಳು.

ಮಗಳು ಕಾಣದೆ ಇದ್ದದ್ದನ್ನು ನೋಡಿ 'ಸಹನಾ, ಛಾಯ ಎಲ್ಲಿ ಕಾಣುವುದೇ ಇಲ್ಲ' ಎಂದು ರಾಜ ಕೇಳಿದ.

ದೇವರ ಮನೆಯಲ್ಲಿ ಛಾಯಳ ರಾಗ ಕೇಳುತ್ತಿದ್ದರಿಂದ ಅವರಿಬ್ಬರು ಅಲ್ಲಿಗೆ ಹೋದರು.

'ಮಗು ಛಾಯ'! ರಾಜ ಕೂಗಿದ.

ಛಾಯ ದೇವರ ಮುಂದೆ ಕುಳಿತು ಮೆಲ್ಲಗೆ ಹಾಡುತ್ತಿದ್ದಳು ಇಂಪಾದ ರಾಗದಲ್ಲಿ.

ಹೇ ಭಾರತಿ, ರಕ್ಷಿಸು ನನ್ನ ತಾಯಿನಾಡ.
ನಿನ್ನ ಸೇವೆಗಾಗಿ ಹೊರಟಿಹ ನನ್ನ ಬಾಬ;
ಅವನ ವೀರ ಘರ್ಜನೆಯು
ತಾಯಿನಾಡ ರಕ್ಷಣೆಯ ಕುರುವಾಗಲಿ!
ಬಾಬನ ನಿಷ್ಕಲ ಸೇವೆ ಅಮರವಾಗಲಿ,
ಭಾರತೀಯ ಮಕ್ಕಳು, ತಿವಿಯಲಿ ಚೂರಿಯಿಂದ!
ಚೀನಿ ಭೂತವನ್ನು, ಒಂದೇ ಏಟಿಗೆ ನಾಟುವಂತೆ'!
ಮತ್ತೇಳದಿರಲಿ ಆ ಕೆಂಪು ಚೀಣಾ
ರಕ್ಷಿಸು ನನ್ನ ಬಾಬನ ಅದೆನ್ನ ಭಿಕ್ಷೆ ನಿನ್ನಲ್ಲಿ;

ಆ ಪುಟ್ಟ ಮಗಳ ಪ್ರಾರ್ಥನೆಯನ್ನು ಕೇಳಿ ರಾಜನ ಕಣ್ಣಿನಲ್ಲಿ ಅಶ್ರುಗಳು ಧಾರೆಧಾರೆಯಾಗಿ ಉದುರಿದವು. ಆವನ ಹೃದಯ ತುಂಬಿ ಬಂದಿತು. ಭಾವನೆಯ ಭರದಲ್ಲಿ ಓಡಿಹೋಗಿ ಮಗಳನ್ನು ಅಪ್ಪಿಕೊಂಡ

"ಮಗು ಛಾಯ, ನಿನಗೆ ಇಂತಹ ಪ್ರಾರ್ಥನೆ ಯನ್ನು ಯಾರು ಹೇಳಿಕೊಟ್ಟದ್ದರು"?

'ಬಾಬ ....ನೀನು ವೀರಯೋಧನಾದ ಮೇಲೆ ನಾನು ಇಂತಹ ಪ್ರಾರ್ಥನೆಯನ್ನು ಮಾಡಬಾರದೇ........? ನಾನೇ ಹೇಳಿದೆ'

ಐದು ವರ್ಷದ ಆ ಪುಟ್ಟ ಮಗಳ ಬಾಯಲ್ಲಿ ಹೊರಟ ಆ ವೀರ ನುಡಿಯನ್ನು ಕೇಳಿ ರಾಜ ಕ್ಷಣಕಾಲ ಸ್ತಬ್ಧನಾದ ಛಾಯಳ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದ, ನಿನ್ನಂತಹ ವೀರ ಕಂದನನ್ನು ಪಡೆದ ನಾನು ಧನ್ಯ ಎಂದುಕೊಂಡ. ಅವನಿಗಾಗಿ ಕರ್ತವ್ಯ ಕೈಬೀಸಿ ಕರೆಯುತ್ತಿರುವಾಗ ಆವನಿಂದು ಎಲ್ಲರನ್ನು ತೊರೆದು ಹೋಗಬೇಕಿತ್ತು. ಅಂಜುಬುರುಕನಾಗಿ ಹೋಗದೆ ವೀರಯೋಧನಾಗಿ ಹೊರಬಿದ್ದ ರಾಜ ಪತಿಯ ಮಾತು ಸಹನೆಗೆ ಹೆಜ್ಜೆ ಹೆಜ್ಜೆಗೂ ನೆನಪಾಗುತಿತ್ತು ರಾಜ ಹೋದ ದಿನದಿಂದಲೇ ನಿಧಿ ಸಂಗ್ರಹಿಸತೊಡಗಿದಳು.

ಸಮಾಜದಲ್ಲಿ ಗಣ್ಯ ವ್ಯಕ್ತಿಗಳೆನಿಸಿಕೊಂಡ ಸಾಹುಕಾರರು ರಕ್ಷಣಾ ನಿಧಿಗಾಗಿ, ಸಹನಾ ಕೈಯೊಡ್ಡಿದಾಗ ನಾಲ್ಕಾಣೆ, ನೀಡದಾದರು. ತ್ಯಾಗದ ಪಾಠಹೇಳುವ ಅಗ್ರಗಣ್ಯ ರಾಜಕಾರಣಿಗಳು, ಛತ್ರ ಶಾಲೆಗಳನ್ನು ಕಟ್ಟಿಸಿ ದೇಶಸೇವಾಸಕ್ತರಾದ ಸಾಹುಕಾರರು, ಶ್ರೀಮಂತರು, ಮಠಾಧಿಪತಿಗಳು ದುಡ್ಡಿನವರ ಜಾತಿಗೆ ಸೇರಿದವರೆಲ್ಲರ ಪಾಡೂ ಒಂದೇ ಆಗಿತ್ತು. ತಮ್ಮ ಹಾಗೂ ತಮ್ಮ ಪರಿವಾರದ ಚಿಂತೆಯಿಂದಲೇ ಕಂಗೆಟ್ಟ ಅವರಿಗೆ ದೇಶದ ಬಗ್ಗೆ ಚಿಂತಿಸಲು ಸಮಯಾವಕಾಶವೇ ಇರಲಿಲ್ಲ.

'ರಕ್ಷಣೆ ಬೇಕಾಗಿರುವುದು ತಮ್ಮ ರಕ್ಷಣೆ ಮಾಡಿಕೊಳ್ಳಲಾರದ ಬಡವರಿಗೆ ಮಾತ್ರ; ಸಂಪನ್ನರು ಸ್ವಯಂ ರಕ್ಷಕರು; ಹಾಗಿರುವಾಗ, ಅವರಿಗೆ ಯಾರ ರಕ್ಷಣೆ ಬೇಕು?' ಎಂದಿತು ಸಹನೆಯ ಅಸಹನಾ ಮನಸ್ಸು.

ಸಂಜೆ ರಾಷ್ಟ್ರದ ತುರ್ತು ಪರಿಸ್ಥಿತಿಯ ಬಗ್ಗೆ ಸಭೆಯೊಂದು ನಡೆದಿತು. ಅಲ್ಲಿದ್ದ ಗಣ್ಯ ವ್ಯಕ್ತಿಗಳೆಲ್ಲಾ ಗಂಟೆಗಟ್ಟಲೆ ಭಾಷಣ ಬಿಗಿಯುತ್ತಿದ್ದರು. "ರಾಷ್ಟ್ರದ ರಕ್ಷಣೆಗಾಗಿ ಬಂಗಾರ ಕೊಡಿ, ನಿಧಿ ನೀಡಿ, ಉದಾರತೆಯಿಂದ ದಾನಮಾಡಿ", ಎಂದು ಗಂಟಲು ಕಟ್ಟುವವರೆಗೆ ಕೂಗುತಿದ್ದರು.

ಅವರ ಭಾಷಣ ಕೇಳಿ ಸಹನೆಗೆ ಅಳು ಬಂದಿತ್ತು. ಅಲ್ಲಿ ನೆರೆದಿದ್ದ, ಗಂಟೆಗಟ್ಟಲೆ ಭಾಷಣ ಬಿಗಿಯುತ್ತಿದ್ದ, ಆ ರಾಜಕಾರಣಿಗಳೆಲ್ಲರ ಮನೆಯ ಸತ್ಯವನ್ನು ಅವಳು ಕಂಡಿದ್ದಳು. ಈ ಸೋಗಲಾಡಿಗಳ ಯೋಗ್ಯತೆಯನ್ನು ಅವಳು ಕಾಣದವಳಾಗಿರಲಿಲ್ಲ. ಅಷ್ಟರಲ್ಲೇ ಅವಳಿಗೆ ಛಾಯಳ ನೆನಪಾಗಿದ್ದರಿಂದ ಮನೆಗೆ ಹಿಂದಿರುಗಿದಳು.

'ಅಮ್ಮಾ ಈವರೆಗೂ ಎಲ್ಲಿಗೆ ಹೋಗಿದ್ದೆ? ನೀನು ಬಾಬನಂತೆ ನನ್ನನ್ನು ಬಿಟ್ಟು ಹೋಗುವುದಿಲ್ಲ ತಾನೆ?" ಛಾಯ ತಾಯಿಯನ್ನು ಕೇಳಿದಳು.

"ಇಲ್ಲಾ ಮಗು, ನಾನೆಂದೂ ನಿನ್ನನ್ನು ಬಿಟ್ಟುಹೋಗುವುದಿಲ್ಲ".

ಛಾಯ ದಿನಕ್ಕೊಮ್ಮೆಯಾದರೂ ತಂದೆಯನ್ನು ನೆನಸಿಕೊಂಡು ಅಳುತಿದ್ದಳು.

"ಅಮ್ಮಾ"........

"ಏನು ಮಗು?"

"ಬಾಬ ಯಾವಾಗ ಬರುತ್ತಾರಮ್ಮ? ಬಾಬ ಹೋದಾಗಿನಿಂದ ಪತ್ರವನ್ನೇ ಬರೆದಿಲ್ಲ, ಅವರಿಗೆ ನನ್ನ ನೆನಪಾಗುವುದಿಲ್ಲವೆ?"

"ನೆನಪಾಗದೆ ಇರುತ್ತದೆಯೇ? ಮಗು. ಅವರಿಗೆ ಪತ್ರಬರೆಯುವಷ್ಟು ಸಮಯ ಇದೆಯೋ ಇಲ್ಲವೋ .. ನಮ್ಮ ನಾಡಿಗೆ ಜಯದೊರೆತಾಗ, ನಿನ್ನ ಬಾಬ ಬಂದಾರು ಮಲಗು ಮಗು ಅದೆಲ್ಲಾ ಯೋಚಿಸಬಾರದು."

ಹೆಚ್ಚು ಪ್ರಶ್ನೆಯಿಂದ ತಾಯಿಯನ್ನು ನೋಯಿಸದೆ ಛಾಯ ಮಲಗಿದಳು.

ರಾಜನ ನೆನಪಾಗಿ ಸಹನೆಗೆ ರಾತ್ರಿ ನಿದ್ದೆ ಬರಲಿಲ್ಲ ಆವಳಿಗೆ ನಿದ್ದೆ ಬಾರದಿದ್ದನ್ನು ಯೋಚಿಸದೆಯೇ ರಾತ್ರಿ ಕಳೆದು ಬೆಳಗಾಗ ತೊಡಗಿತು. ಸಹನಾ ಎದ್ದು ಸ್ನಾನಮಾಡಿ ಬಂದಿಷ್ಟು ರೊಟ್ಟಿ ಸುಟ್ಟು ಛಾಯಳನ್ನ ಎಬ್ಬಿಸಿದಳು.

ತಾಯಿ ಯಾವಾಗಲೂ ಮನೆಯಲ್ಲಿರುವುದನ್ನು ನೋಡಿ ಛಾಯಗೆ ಆಶ್ಚರ್ಯವಾಯಿತು.

'ಅಮ್ಮ, ನೀನೇಕೆ ಎಲ್ಲಿಗೂ ಹೋಗುವುದಿಲ್ಲಾ?' ಎಂದು ಕೇಳಿದರೆ ಅದಕ್ಕೆ ಸರಿಯಾಗಿ ಉತ್ತರಹೇಳದೆ, 'ಮಗು ಈ ಜಗತ್ತು ತುಂಬಾ ಕೆಟ್ಟದ್ದು. ಎಲ್ಲಿ ಹೋದರಲ್ಲಿ ಅನ್ಯಾಯ, ಕಾಲಬಂದಾಗ ನಿನಗೆ ಎಲ್ಲಾ ತಿಳಿಸುವೆ ಆಟ ಆಡಿಕೋ" ಎಂದು ಕಳಿಸಿಬಿಡುತ್ತಿದ್ದಳು.

ಒಂದು ದಿನ ರಾಜನಿಂದ ಸಹನಾಗೆ ಒಂದು ಪತ್ರ ಬಂದಿತು.

"ಪ್ರೀತಿಯ ಸಹನಾ".

ನಾನು ಪತ್ರ ಬರೆದಿಲ್ಲವೆಂದು ಕೋಪವಿಲ್ಲ ತಾನೆ? ಭಾರತ ಮಾತೆಯು ಅವ್ಯಕ್ತವಾದ ನೋವಿನಿಂದ ನರಳುತ್ತಿರುವಾಗ ನಿನಗೆ ಪತ್ರವನ್ನೇಗೆ ಬರೆಯಲಿ? ಭಾರತಿಯನ್ನು ಬಂಧನ ವಿಮುಕ್ತಳಾಗಿ ಮಾಡಲು ಪ್ರಚಂಡ ಹೋರಾಟವೆ ನಡೆಯುತ್ತಿದೆ. ನಾವು ನೋವುಗಳಿಗೆ ಜಗ್ಗದೆ ಕುಗ್ಗದೆ ಧೈರ್ಯದಿಂದ ನಾವು ಚೀನಿಯರನ್ನು ಎದುರಿಸುತ್ತಿದ್ದೇವೆ ಮೋಸ, ವಂಚನೆ ಎಂಬ ಹಾರಗಳಿಂದ ಚೀನಿಯರು ನಮ್ಮ ಮೇಲೆ ದಬ್ಬಾಳಿಕೆ ನಡೆಸಲು ಹೊರಟಿದ್ದಾರೆ ಭಾರತ ಮಾತೆಯ ಮಕ್ಕಳಾದ ನಾವಿಲ್ಲಿ ನಿದ್ರಿಸುತ್ತಿಲ್ಲ ಸಹನಾ.

ವೀರ ಯೋಧರಾಗಿ ಜಾಗೃತಗೊಳ್ಳುತ್ತಿದ್ದೇವೆ. ಕತ್ತಿ, ಗುರಾಣಿ, ತೋಪು. ತುಪಾಕಿಗಳ ಸುರಿಮಳೆಯಲ್ಲಿ ನಮಗೆ ಹಗಲುರಾತ್ರಿಗಳು ತಿಳಿಯಬಾಗಿವೆ ನಮ್ಮ ಪಾಲಿಗಿನ್ನು ಪೂರ್ಣ ಬೆಳಕು ಹರಿದಿಲ್ಲ, ಬೆಳಗಾದೀತು ಒಂದು ದಿನ ಆ ಕಾಲವಿನ್ನು ದೂರವಿಲ್ಲ. "ಜೈ ಭಾರತ ಮಾತೆ". ಎಂಬ ಹರ್ಷದ ಕೂಗು ನಮಗೆ ಸಧ್ಯದಲ್ಲೇ ಕೇಳಲಿದೆ

"ನಡೆಮುಂದೆ ನಡೆಮುಂದೆ ನುಗ್ಗಿ ನಡೆಮುಂದೆ", ಎಂಬ ಭಾರತಮಾತೆಯ ನುಡಿಗೆ ಓಗೊಟ್ಟು ನಾವೆಲ್ಲ ಮುನ್ನಡೆಯುತ್ತಿದ್ದೇವೆ. ಅದರಲ್ಲಿ ಹಲವು ಸಹೋದರರು ಮಡಿದರು, ಅವರ ಸಾವಿನಿಂದ ಇತರರಿಗೆ ಜೀವಕೊಟ್ಟರು. "ನಶ್ವರವಾದ ಅವರ ದೇಹಗಳು ಮಡಿದವೆ ಹೊರತು, ಅವರ ಅಮರ ಆತ್ಮಗಳಲ್ಲ" ಇಂದು ಅವರೆಲ್ಲರ ಸ್ಥಿರಸೇವೆ ನಮ್ಮ ಹೃದಯದಲಿ ಚಿರಸ್ಥಾಯಿಯಾಗಿದ್ದು ಹೊಸಶಕ್ತಿಯನ್ನೀಯುತ್ತಿದೆ.

ನಮ್ಮ ಪಾಲಿನ ಸುದೀರ್ಘರಾತ್ರಿ ಇನ್ನು ಕೊನೆಗಂಡಿಲ್ಲ ಸಹನಾ, ನಮ್ಮ ಪುಣ್ಯಭೂಮಿಯನ್ನು ನಿದ್ದೆಯಿಂದ ಜಾಗ್ರತಗೊಳಿಸಲೆಂದು ಇದುವರೆಗೆ ಶವದಂತೆ ಇದ್ದ ನಮ್ಮ ಶರೀರ ಇಂದು ಸಚೇತನವಾಗುತ್ತಿದೆ ಅಳಿದ ನಮ್ಮ ಸೋದರರ ನುಡಿಯಂತೆ ನಡೆಯುವುದು ನಮ್ಮ ಕರ್ತವ್ಯವಾಗಿದೆ. ನಾವಿಂದು ನಮ್ಮ ಕರ್ತವ್ಯದ ಕರೆಗೆ ಓಗೊಡಲೆ ಬೇಕಾಗಿದೆ.

ಛಾಯ ಹೇಗಿರುವಳೋ? ಪ್ರತಿಕ್ಷಣದಲ್ಲೂ ನನಗೆ ಛಾಯಳ ಮುದ್ದು ಮುಖ ಎದುರು ಬಂದು ನಿಲ್ಲುತ್ತದೆ. ನನ್ನ ಮಗಳ ನೆನಪಾದಾಗಲೆಲ್ಲ ಈ ಜಗತ್ತು ಶೂನ್ಯವೆನಿಸುತ್ತದೆ. ನನ್ನ ಸಹನೆ, ಛಾಯಳ ಹಿರಿದಾದ ಹಾರೈಕೆಯಿಂದಲೆ ನಾನೀವರೆಗೂ ಜೀವದಿಂದ ಇದ್ದೇನೇನೋ ಎನ್ನಿಸುತ್ತೆ. ಎಲ್ಲಾ ಸಿಪಾಯಿಗಳ ಮನೆಯಲ್ಲೂ ನನ್ನ ಛಾಯಳಂತಹ ಮಕ್ಕಳೇ ಹುಟ್ಟಲೆಂದು ತಾಯಿ ಭಾರತಿಯಲ್ಲಿ ಬೇಡುತ್ತಿರುತ್ತೇನೆ. ಛಾಯಳ ಮುಂದೆ ಈ ಪತ್ರ ಓದಬೇಡ ಅವಳ ಮನಸ್ಸಿನಲ್ಲಿ ಇಷ್ಟು ಬೇಗ ಕ್ರಾಂತಿ

●

ಮಾತೃಭೂಮಿಯ ರಕ್ಷಣೆಗೆ ಕಂಕಣ ಕಟ್ಟಿ ಹೊರಟ ರಾಜನನ್ನು ಸಹನೆ ಪ್ರಾರ್ಥನೆಯೊಡನೆ ಬೀಳ್ಕೊಟ್ಟಳು. ಆದರೆ, ಆಕೆಯ ಪ್ರಾರ್ಥನೆಯನ್ನು ಭಗವಂತನು ಕೇಳಿದನೋ ಕೇಳಿಯೂ ಸುಮ್ಮನಿದ್ದನೋ! ಪತಿ ರಾಜ ಮತ್ತು ಮಗಳು ಛಾಯೆಯಿಂದ ತ್ಯಾಗದ ದಾರಿ ದೊರೆತರೆ, ರಾಜನಿತ್ತ ಬುದ್ಧನ ವಿಗ್ರಹದಿಂದ ಸತ್ಯದ ಅನಂತ ದಾರಿ ಆಕೆಗೆ ಲಭಿಸಿತು.

ಯ ಕಿಡಿ ಹಾರುವುದು, ನನಗೆ ಇಷ್ಟವಿಲ್ಲ. ಇಲ್ಲಿನ ನನ್ನ ಮಿತ್ರರೆಲ್ಲಾ ಒಳ್ಳೆಯವರು. ಛಾಯಗೆ ನನ್ನ ಬಹುದೂರದ ಚುಂಬನಗಳು. ನಿಧಿ ಸಂಗ್ರಹದಲ್ಲಿ ತೊಡಗಿರುವೆಯೆಂದು ನಂಬಲಿ? ನನ್ನ ಪತ್ರಕ್ಕಾಗಿ ನಿರೀಕ್ಷಿಸ ಬೇಡ. ನಮಗಿರುವ ಸಮಯ ಅತ್ಯಲ್ಪ; ಮತ್ತೆ ಬರೆಯುವೆ.

ನಿನ್ನ ನೆಚ್ಚಿನ,
"ರಾಜ."

ಪತ್ರ ಓದಿದ ಸಹನಾ ಅಂದುಕೊಂಡಳು "ರಾಜ, ಈ ಜಗತ್ತು ಕೆಟ್ಟಿದ್ದು. ನಮ್ಮಂತವರಿಗೆ ಇಲ್ಲಿ ಸ್ಥಳವಿಲ್ಲ. ಅದಕ್ಕಾಗಿ ನಾನು ನಿಧಿ ಸಂಗ್ರಹಿಸುತ್ತಿಲ್ಲ. ನನ್ನ ಜೀವನದಲ್ಲಿ ನಿಮ್ಮ ಮಾತನ್ನು ನಾನು ಇದೇ ಮೊದಲ ಬಾರಿಗೆ ಮೀರುತ್ತಿದ್ದೇನೆ. ನನ್ನನ್ನು ಕ್ಷಮಿಸಿ". ಪತ್ರ ಬಂದ ಸುದ್ದಿಯನ್ನು ರಾಜನ ಇಚ್ಛೆಯಂತೆ ಛಾಯಗೆ ತಿಳಿಸಲಿಲ್ಲ.

ಒಂದು ಸಂಜೆ ಓಡಿ ಬಂದ ಛಾಯ "ಅಮ್ಮ ನನ್ನ ರಕ್ತಾನ ಯೋಧರಿಗೇಕೆ ಕೊಡಬಾರದು". ಎಂದು ಛಾಯ ತಾಯಿಯನ್ನು ಕೇಳಿದಳು

"ಮಗು, ಛಾಯ, ನೀನಿನ್ನು ಚಿಕ್ಕವಳು ದೊಡ್ಡವಳಾದ ನಂತರ ರಕ್ತ ಕೊಡುವಿಯಂತೆ ಎಂದು ಸಮಾಧಾನ ಮಾಡಿದಳು.

"ನಮ್ಮ ಬಾಬ ದೊಡ್ಡ ವೀರ ಯೋಧ ಅಂತ ಬರೆದಿದೆ ಪತ್ರಿಕೆ. ವೀರನ ಮಗಳಾಗಿ ಒಂದಿಷ್ಟು ರಕ್ತಕೊಡಲು ಏನು ತಪ್ಪೇ, ಹೇಳಿ" ಎಂದು ಛಾಯಳ ಗೆಳತಿಯರೆಲ್ಲಾ ಅಣಕಿಸಿದರು.

ಅವರೆಲ್ಲರ ಅಣಕದ ನುಡಿಯಿಂದ ಛಾಯಳ ಆತ್ಮಗೌರವಕ್ಕೆ ಧಕ್ಕೆಬಂದಿತು ಏನು ಮಾಡಬೇಕೆಂದು ಅವಳಿಗೆ ತೋಚದು. ತಾಯಿಯನ್ನು ಕೇಳಿದರೆ ಡಾಕ್ಟರ್‌ನನ್ನು ಕೇಳಿದರೆ, "ನೀನಿನ್ನು ಸಣ್ಣ ಮಗು ದೊಡ್ಡವಳಾದ ಮೇಲೆ ರಕ್ತ ಕೊಡುವಿಯಂತೆ" ಎಂದು ಹೇಳುವರು. ಯೋಚಿಸಿ ಯೋಚಿಸಿ ಛಾಯ ಒಂದು ನಿರ್ಧಾರಕ್ಕೆ ಬಂದಳು.

ಛಾಯ ಏನೋ ಬರೆಯುತ್ತಿರ ಬೇಕೆಂದು ಸಹನಾ ಗೆಳತಿ ಲತಾಳ ಮನೆಗೆ ಹೋದಳು

ಸಹನಾ, ಲತಾಳ ಮನೆಗೆ ಬಂದ ಸ್ವಲ್ಪ ಸಮಯಕ್ಕೆ ತನ್ನ ಮನೆಯ ಮುಂದೆ ಟೆಲಿಗ್ರಾಮ್ ಎಂದ ಕೂಗಿದ ಪೋಸ್ಟ್‌ಮ್ಯಾನ ಧ್ವನಿ ಕೇಳಿ ಸಹನಾ ಓಡಿ ಬಂದಳು

ಆತುರ ಭಯಗಳಿಂದ ಸೈನ್ ಮಾಡಿ ಕವರ್ ತೆಗೆದು ಒಡೆದಳು.

ಅದರಲ್ಲಿ ರಾಜನ ಮರಣ ಸುದ್ದಿಯನ್ನು ಓದಿದಾಕ್ಷಣ ಸಹನಾ ಕುಸಿದು ಬಿದ್ದಳು.

ಎಷ್ಟೋ ಸಮಯದ ನಂತರ ಸಹನೆಗೆ ಬಾಹ್ಯ ಜಗತ್ತಿನ ಅರಿವಾಯಿತು ಆದಷ್ಟು ಧೈರ್ಯ ತಂದುಕೊಂಡು, "ಛಾಯ" ಎಂದು ಕೂಗಿದಳು ಛಾಯ ಮಾತಾಡದೆ ಇರಲು ಭಾರವಾದ ತನ್ನ ಕಾಲುಗಳನ್ನು ಎಳೆದುಕೊಂಡು ಒಳಗೆ ಹೋದಳು.

ಒಂದು ಅಗಲವಾದ ಪಾತ್ರೆಯಲ್ಲಿ ತನ್ನ ಕುತ್ತಿಗೆಯನ್ನಿಟ್ಟು "ಛಾಯ" ಚೂರಿಯಿಂದ ಇರಿದು ಕೊಂಡಿದ್ದಳು. ತನ್ನ ರಕ್ತ ಯೋಧರಿಗೆ ಸಲ್ಲ ಬೇಕೆಂದು.

ಛಾಯಳ ಭೀಕರವಾದ ಕೊಲೆಯನ್ನು ಕಂಡ ಸಹನಾಗೆ, ಕಣ್ಣು ಕತ್ತಲೆಗೂಡಿಸಿದಂತಾಯಿತು.

"ಅಯ್ಯೋ ನನ ಛಾಯ, ಏನು ಮಾಡಿದೆಯೆ ಕಂದ, ನಾನು ಮಾಡಿದ ಯಾವ ಪಾಪಕ್ಕೆ ಈ ಶಿಕ್ಷೆ ಮಗು" ದಿಕ್ಕೆಟ್ಟಳು ಸಹನಾ.

ಛಾಯಳ ಪಕ್ಕದಲ್ಲಿದ್ದ ಪತ್ರವನ್ನು, ಸಹನಾ ನಡುಗುವ ಕೈಗಳಿಂದ ಬಿಚ್ಚಿದಳು.

ಪ್ರೀತಿಯ ಅಮ್ಮ,

ನಾನು ಬಾಬನಂತೆ ತಾಯಿನಾಡಿನಲ್ಲಿ ಹೋರಾಡಲಾಗದೆ ಸಾಯುತ್ತಿದ್ದೇನೆ ನನ್ನ ರಕ್ತ ಯೋಧರಿಗೆ ಸಲ್ಲಬೇಕೆಂದು ಪಾತ್ರೆಯಲ್ಲಿ ತಲೆ ಕಡಿದುಕೊಳ್ಳುತ್ತಿದ್ದೇನೆ.

ಅಮ್ಮ, ನೀನು ಒಂದುದಿನ ಹೇಳಿದೆಯಲ್ಲಾ "ಈ ಜಗತ್ತು ತುಂಬಾ ಕೆಟ್ಟದು ಮಗು" ಎಂದು, ಇಂತ ಜಗತ್ತಿನಲ್ಲಿ ನಾವೇಕೆ ಇರಬೇಕು? ಬಾಬ ಒಮ್ಮೆಯೂ ನನ್ನನ್ನು ನೋಡಲು ಬರಲಿಲ್ಲಾ. ಅಳಬೇಡ ಅಮ್ಮ ನೀನು, ಬಾಬ ನಾನಿರುವಲ್ಲಿಗೆ ಬೇಗ ಬಂದುಬಿಡಿ. ನಿಮಗಾಗಿ ಕಾಯುವೆ.

ನಿನ್ನ ಮಗಳು,
"ಛಾಯ".

ಯಾವ ಯೋಧರಿಗೆ ರಕ್ತದಾನ ಮಾಡಲೆಂದು ಛಾಯ ಸಾವನ್ನಪ್ಪಿದ್ದಳೋ ಆ ರಕ್ತ ಹೆಪ್ಪು ಗಟ್ಟಿತು.

ರಾಜ....!
ಛಾಯ....!

ಸಹನಾ ಮೆಲ್ಲ ಹೇಳಿ ಕೊಂಡಳು.

ಸಹನಾ ಅಂದು ಬುದ್ಧನ ವಿಗ್ರಹವನ್ನು ನಿಟ್ಟಿಸಿ ನೋಡಿದಂತೆ ಈ ಹಿಂದೆ ಎಂದೂ ನೋಡಿರಲಿಲ್ಲ. ಹಾಗೆ ನೋಡುತ್ತಿರುವಾಗ ಆವಳ ನೋವೆಲ್ಲಾ ರಾಗವಾಗಿ ಹೊರಬೀಳ್ಮ ತೊಡಗಿತು:

ಸತ್ಯವ ಕಂಡೆನೋ ಗುರುದೇವ
ನಿನ್ನ ಕಣ್ಗಳ ಕಾಂತಿಯಲಿ;
ನನ್ನ ಬಾಳಿಗೆ ದಾರಿ ತೋರುವ
ದಿವ್ಯ ಶಕ್ತಿಯು ನೀನಾಗು!
ನೊಂದಿಹೆ ನನ್ನ ಮನ ಅದಕಿಲ್ಲವು
ಶಾಂತಿಯ ದಿನ;
ಶರಣು ನಿನಗೆ ನಿತ್ಯ ನಿರಂಜನ!
ಕಡಿದುರುಳಿಸು ಈ ನಶ್ವರ ಬಾಳಿನ
ಭವಬಂಧನವ?

"ಬದುಕು ನಶ್ವರ, ಆಸೆ ದುಃಖಕ್ಕೆ ಮೂಲ" ಎಂದು ಸಾರಿದ ಭಗವಾನ್ ಬುದ್ಧದೇವನ ಪ್ರಶಾಂತವಾದ ನಯನಗಳಲ್ಲಿ ಕಂಡ ಸತ್ಯವನ್ನು ಮಾತ್ರ ಅರಲ್ಲೂ ಸಹನಾ ಕಾಣಲಿಲ್ಲ!

' ಒಂದು ವರ್ಷ ಚರಿತ್ರಹೀನನಾಗಿ ಬದುಕುವುದಕ್ಕಿಂತ ಒಂದೇ ಒಂದು ದಿನ ಸದಾಚಾರಿಯಾಗಿ, ಜ್ಞಾನಿಯಾಗಿ ಬದುಕುವುದು ಎಷ್ಟೋ ಮೇಲು. —**ಬುದ್ಧ**

ಈಗ ಕರ್ನಾಟಕದ ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುತ್ತವೆ.

ಕನ್ನಡಿಗರ ಹೆಮ್ಮೆಯ ಸುದರ್ಶನ ಪ್ರಕಟಣೆಗಳು

ಬೀCHIಯವರ- ಆಗಿಷ್ಟು ಈಗಿಷ್ಟು ೨-೫೦ • ಖಾದಿ ಸೀರೆ ೨-೫೦ • ತಿಂಮನ ತಲೆ ೧-೨೫ • ಹುಲಿಯ ಬೆನ್ನ ಮೇಲಿಂದ ೨ ೫೦

ಕೃಷ್ಣಮೂರ್ತಿ ಪುರಾಣಿಕರ— ಮಧುರವೀಣೆ ೨-೫೦ • ಹೆಣ್ಣು ಸಂತಾನ ೨-೦೦ • ಗಯ್ಯಾಳಿ ಗರತಿ ೨-೦೦

ಸ್ವೈರಂಧ್ರಿ ಹಾಗು ಮಗನ ಗೆಲವು ೧-೫೦ • ಮಂಗಲಾಕ್ಷತೆ ೨-೫೦

ಅಚ್ಚಿನಲ್ಲಿ— ಅ. ನ. ಕೃ.ರವರ ಮಿಯಾ ಮಲ್ಹಾರ್

ಉಮಾಪತಿಯವರ— ಮದುವೆಯ ಮೊದಲ ವರ್ಷ ೨.೦೦
(ಪ್ರೀತಿಯ ಕಾಣಿಕೆಯಾಗಿ ಕೊಡಲು ಯೋಗ್ಯ ಆಯ್ಕೆ)
• ಆಣಿಮುತ್ತು ಭಾಗ ೧ ೪-೦೦ ಭಾಗ ೨ ೪-೦೦

ಇತರ ಹೊಸ ಪ್ರಕಟಣೆಗಳು— ಗೊರೂರು ರಾಮಸ್ವಾಮಿಯವರ ಸಾಹಿತ್ಯ ರತ್ನಿ
ರಾಜ್ಯ ಸರಕಾರದ ಬಹುಮಾನಿತ ಗ್ರಂಥ ೬-೫೦
• ಎ. ಎಸ್. ಮೂರ್ತಿಯವರ ನಗೆನಾಟಕ ಗಂಡಸ್ತನ ೧ ೫೦

ಅಶ್ವತ್ಥರವರ ಮೂಗಿನ ಮೇಲೆ ೩. ೦೦ • ಶರತ್ ಕಾದಂಬರಿ ಸೌದಾಮಿನಿ ೧-೫೦

ಶಾಲೆಗಳಿಗೆ, ಪುಸ್ತಕ ಭಂಡಾರಗಳಿಗೆ, ಪಂಚಾಯ್ತಿಗಳಿಗೆ ಬೇಕಾದ ಎಲ್ಲಾ ಬಗೆಯ ಪುಸ್ತಕ, ಸಾಹಿತ್ಯದ ಎಲ್ಲ ಪ್ರಾಕಾರಗಳು,
ನಾಡಿನ ಜನಪ್ರಿಯ ಲೇಖಕರ ಎಲ್ಲ ಕೃತಿಗಳೂ ಸಿದ್ಧ ದಾಸ್ತಾನಿನಿಂದ ದೊರೆಯುತ್ತವೆ.

ಸುದರ್ಶನ ಪ್ರಕಾಶನ • ತಾರಾನಿವಾಸ • ತಿಪಟೂರು

ಕನ್ನಡನಾಡು - ಕನ್ನಡಿಗರು

ಲೇಖಕರು:
ಶ್ರೀ ಸುಬೋಧ ಎಂ. ರಾಮ ರಾವ್,
ಬೆಂಗಳೂರು-೪

ooooo

ಅಖಿಲ ಕನ್ನಡ ನಾಡು ಒಂದಾಗಿ ಏಕಾಡಳಿತಕ್ಕೊಳಪಟ್ಟು ಕನ್ನಡಿಗರು ತಮ್ಮ ತಾಯ್ನಾಡಿನ ಪ್ರಭುತ್ವ ವಿಷಯದಲ್ಲಿ ಪ್ರಾಂತೀಯ ಸ್ವಾತಂತ್ರ್ಯವನ್ನು ಗಳಿಸಿರುವ ಈ ಶುಭ ಸಂದರ್ಭದ ಸವಿ ನೆನಪು ನಮ್ಮ ಮನೋನೇತ್ರಗಳೆದುರಿಗೆ ಆಗಾಗ ಬರುತ್ತಿರಬೇಕಾದುದು ಆವಶ್ಯಕ. ಇದರಿಂದ ನಮ್ಮ ಹಿಂದಿನ ಸ್ಥಿತಿ ಗತಿ-ಕಷ್ಟಸುಖಗಳ ಅನುಭವದಿಂದ, ಮುಂದಿನ ಅಭಿವೃದ್ಧಿ ಮಾರ್ಗ ಕಲ್ಪನೆಗೆ ಒಂದು ಪಥದರ್ಶನವಾಗುವುದು. ಸ್ಫೂರ್ತಿ ಉತ್ಸಾಹಗಳುಂಟಾಗಲು ಅವಕಾಶವುಂಟಾಗುವುದು.

ಬ್ರಿಟಿಷ್ ಆಳರಸರ ಕಾಲದಲ್ಲಿ ಅವರು ತಮ್ಮ ಆಡಳಿತ ಸೌಕರ್ಯಕ್ಕಾಗಿ ಭೇದನೀತಿಯನ್ನವಲಂಬಿಸಿ ಕನ್ನಡ ನಾಡನ್ನು ನಾಲ್ಕೈದು ಪ್ರಾಂತ್ಯಗಳಲ್ಲಿ ಹಂಚಿಹಾಕಿ ಛಿದ್ರ ಛಿದ್ರವನ್ನಾಗಿ ಮಾಡಿಟ್ಟಿದ್ದರು. ಒಂದೇ ಮನೆಯು ಒಡೆದು ನಾಲ್ಕಾರು ಮನೆಗಳಾದಂತಾಗಿತ್ತು ಅಂದಿನ ಸ್ಥಿತಿ. ಒಬ್ಬಳೇ ತಾಯಿಯ ಮಕ್ಕಳು ಒಬ್ಬರೊಂದಿಗೆ ಒಬ್ಬರು —ಸ್ನೇಹ ಸಂಪರ್ಕ ಹೊಂದಲೂ, ಪರಸ್ಪರ ಕಷ್ಟ ಸುಖಗಳಲ್ಲಿ ಭಾಗವಹಿಸಲೂ ಸಾಧ್ಯವಿಲ್ಲದೆ— ಒಬ್ಬೊಬ್ಬರ ಮುಖ ಒಂದೊಂದು ದಿಕ್ಕಿಗೆ ಇದ್ದ ಅಂದಿನ ಪರಿಸ್ಥಿತಿಯಲ್ಲಿ—ಅಖಿಲ ಕನ್ನಡ ನಾಡಿನ ಅಭಿವೃದ್ಧಿಯನ್ನು ಕುರಿತು ಯೋಚಿಸಲೂ ವಿಚಾರ ವಿನಿಮಯ ಮಾಡಿಕೊಳ್ಳಲೂ ಸಾಧ್ಯವೇ ಇರಲಿಲ್ಲ.

ಭಾರತ ದೇಶದ ಇತರ ಯಾವ ಪ್ರಾಂತ್ಯಕ್ಕೂ ಸಂಭವಿಸಿರದ ಈ ಸಂಭವ ಪರಿಸ್ಥಿತಿ ದುರ್ದೈವಿ ಕನ್ನಡ ನಾಡಿಗೊದಗಿ-- ಹಲವಾರು ತಲೆಮಾರುಗಳ ಕಾಲ ಬಾಧಿಸಿತ್ತು. ಬಂಗಾಳ ದೇಶಕ್ಕೆ ಈ ಇಪ್ಪತ್ತನೆಯ ಶತಮಾನದ ಪ್ರಥಮ ದಶಕದಲ್ಲಿ ಲಾರ್ಡ್ ಕರ್ಜನ್‌ನ ವೈಸರಾಯಿಗಿರಿಯಲ್ಲಿ ಆದ ದೇಶ ವಿಭಾಗದ ಕ್ಷೋಭೆ ಪರಮದಾರುಣವಾದುದು. ಅದನ್ನೆದುರಿಸಿ, ಆ ದೇಶೀಯರು ರಾಷ್ಟ್ರಾದ್ಯಂತ ಅಗಾಧ ಆಂದೋಲನವನ್ನೆಬ್ಬಿಸಿ, ಹೋರಾಡಿ ಅದು ಪುನಃ ಒಂದಾಗುವವರೆಗೂ ಶಾಂತಿಗೊಳ್ಳದೆ ಹೋರಾಟವನ್ನು ಮುಂದುವರಿಸಿದರು. ಅವರ ಆ ಆಂದೋಳನದಲ್ಲಿ ಅನೇಕ ಅಮೂಲ್ಯ ಜೀವಿತಗಳು ಬಲಿವೇದಿಕೆಯಲ್ಲಿ ಆಹುತಿಯಾದುವು. ರಾಜ್ಯಾಧಿಕಾರಿಗಳಿಗೆ ಅದೊಂದು ದೊಡ್ಡ ಅಸಹನೀಯ ಶಿರೋವೇದನೆಯಾಗಿ ಪರಿಣಮಿಸಿ,-ಮುಂದೊಂದು ದಿನ ಆ ತಪ್ಪನ್ನು ತಿದ್ದಿಕೊಂಡರು. ವಿಭಾಗವಾಗಿದ್ದ ಬಂಗಾಳ ಒಂದಾಯಿತು. ಆದರೆ ಕನ್ನಡ ರಾಜ್ಯ ನಾಲ್ಕಾರು ಪ್ರಾಂತ್ಯಾಡಳಿತಗಳಿಗೆ ಒಳಪಟ್ಟು ಹಂಚಿಹೋಗಿದ್ದಾಗ ಆಬಗೆಯ ಯಾವ ಆಂದೋಳನ ನಡೆಯಲೂ ಅವಕಾಶವಿರಲಿಲ್ಲ. ಅಂದು ಕನ್ನಡಿಗರಲ್ಲಿ ಲೋಕಜಾಗ್ರತೆಯೇ ಇರಲಿಲ್ಲ. ಪರಸ್ಪರ ಸಂಪರ್ಕವಿಲ್ಲ. ವಿಚಾರ ವಿನಿಮಯಕ್ಕೆ ಅವಕಾಶವಿಲ್ಲ. ಕನ್ನಡಿಗರಾದ ನಾವೆಲ್ಲ ಒಂದಾಗಿರಬೇಕು ಎಂಬ ಭಾವನೆಯು ರೂಪುಗೊಳ್ಳಲು ಅವಕಾಶವೇ ಇರಲಿಲ್ಲ, ಹೀಗಾಗಿ ವಿಭಾಗಗೊಂಡಿದ್ದ ಕನ್ನಡ ನಾಡು, ಒಂದಾಗಿ ಸೇರಲು ಬಹುಕಾಲ— ಆ ಸಂಬಂಧ ಸೊಲ್ಲೂ ಇರಲಿಲ್ಲ.

ಈ ಸಂದರ್ಭದಲ್ಲಿ ನಾಡು ಮತ್ತು ನುಡಿ, ಎಂದರೆ ದೇಶ ಮತ್ತು ಭಾಷೆ ಇವುಗಳಿಗಿರುವ ಪರಸ್ಪರ ಸಂಬಂಧವನ್ನು ಕುರಿತು ವಿಚಾರ ಮಾಡುವುದು ಯುಕ್ತ, ನಮ್ಮ ಈ ರಾಜ್ಯವನ್ನು ಕನ್ನಡ ರಾಜ್ಯ—ಕರ್ನಾಟಕ ಎಂದು ಕರೆಯುತ್ತೇವೆ. ಹಾಗೆಂದರೇನು.? ಕನ್ನಡಿಗರ ರಾಜ್ಯ. ಕನ್ನಡ ಭಾಷೆಯನ್ನು ಮಾತನಾಡುವ ಜನತೆಯೆಲ್ಲ ಒಂದೆಡೆ ಕಲೆತಿರುವ ರಾಜ್ಯ. ಕರ್ನಾಟಕ ಭಾಷೆಯನ್ನು ಮಾತೃ ಭಾಷೆಯನ್ನಾಗಿ ಬಳಸುವ ಜನತೆ ಒಂದಾಗಿ ನೆರೆದಿರುವ ರಾಜ್ಯ ಕರ್ನಾಟಕ. ಹೀಗೆ ಒಂದು ಭಾಷೆಯು ಯಾವ ಜನತೆಯ ಬಳಕೆಯಲ್ಲಿದೆಯೋ ಆ ಜನತೆ ವಾಸಿಸುವ ದೇಶಕ್ಕೆ ಆ ಹೆಸರು ಬರುವುದು. ಆಂಧ್ರ ಭಾಷೆಯನ್ನಾಡುವ ಜನತೆ ನೆಲೆಸಿದ್ದ ನಾಡು ಆಂಧ್ರದೇಶ. ತಮಿಳು ಭಾಷೆಯನ್ನು ಮಾತೃ ಭಾಷೆಯನ್ನಾಗಿ ಉಳ್ಳವರಿರುವ ನಾಡು ತಮಿಳುನಾಡು. ಹೀಗೆಯೇ ಮಹಾರಾಷ್ಟ್ರ ಗುಜರಾತ್ ಮಾರ್ವಾಡಿ--ಬಂಗಾಳಿ ಮುಂತಾಗಿ. ಇದರಿಂದ ಸ್ಥೂಲವಾದ— ಜಡವಾದ ನೆಲಕ್ಕಿಂತಲೂ ಅಲ್ಲಿ ಚೈತನ್ಯಮಯ ವ್ಯಕ್ತಿಗಳು ನೆಲಸಿ; ಪರಮ ಚೈತನ್ಯಮಯ ಪರಬ್ರಹ್ಮನ ವ್ಯಕ್ತ ಸ್ವರೂಪವೆನ್ನಬಹುದಾದ ವಾಣಿಯನ್ನು ಉಪಯೋಗಿಸಿ, ವ್ಯವಹರಿಸುವ ಜನತೆಯುಳ್ಳ ನಾಡೇ. ಆಯಾದೇಶವೆಂದು ಹೆಸರುಗೊಂಡಿರುವುದು. ಕನ್ನಡ, ತೆಲುಗು, ತಮಿಳು ಮಹಾರಾಷ್ಟ್ರ ಮುಂತಾದ ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಜನತೆಯ ವಿಚಾರವನ್ನು ಕ್ಷಣಕಾಲ—ಮರೆತು, ಮನಸ್ಸಿನಲ್ಲೇ ವಿಚಾರ ಮಾಡೋಣ! ಸ್ತಬ್ಧಗೊಂಡ ಆಯಾ ನಾಡುಗಳೆಲ್ಲವೂ ಆಗ ಈ ಭೇದಗಳನ್ನರಿಯದ ನದಿ, ಬೆಟ್ಟ ಕಾಡು ಮೈದಾನಗಳಿಂದು ಮಾತ್ರ ತೋರಿಬರುವುವಲ್ಲದೆ, ಬೇರೆ ಬೇರೆ ಹೆಸರಿನ ದೇಶಗಳೆಂಬ ವಿಭಾಗ ಹೊಂದಿ ಕರೆಯಲ್ಪಡಲು ಸಾಧ್ಯವಿರುವುದೇ? ಈ ದೃಷ್ಟಿಯಿಂದ ವಿಚಾರ ನಡೆಸಿ ನೋಡಿದರೆ ಜಡ ನೆಲವಲ್ಲ. ಮರಗಿಡ ಮುಂತಾದ ವನಸ್ಪತಿ ವರ್ಗವಲ್ಲ—ಪಶು-ಪಕ್ಷಿ ಮೃಗಾದಿ ಪ್ರಾಣಿ ವರ್ಗಗಳೂ ಅಲ್ಲ, ಕೇವಲ ಜನತೆಯ ಬೆಳೆಯಿಂದ ಮಾತ್ರವೇ ಒಂದಾನೊಂದು ದೇಶವು ಆಯಾ ಹೆಸರಿನಿಂದ ಕರೆಯಲ್ಪಡುವುದು ಎಂಬುದು ಸಿದ್ಧವಾಗುವುದು. ಇಂಗ್ಲಿಷ್ ಭಾಷೆಯನ್ನಾಡುವವರದು ಇಂಗ್ಲೆಂಡು, ಫ್ರೆಂಚ್ ಭಾಷೆಯವರದು ಫ್ರಾನ್ಸು, ರಷ್ಯಾ ಭಾಷೆಯನ್ನಾಡುವವರದು ರಷ್ಯಾ ಇತ್ಯಾದಿ. ಒಟ್ಟಿನಲ್ಲಿ ದೇಶದಿಂದ ಭಾಷೆಯಲ್ಲ— ಭಾಷೆಯೇ ದೇಶ ಸ್ವರೂಪವನ್ನು ಹೆಸರಿಸುವ — ಅದಕ್ಕೊಂದು ವ್ಯಕ್ತಿತ್ವವನ್ನು ತಂದು ಕೊಡುವ ಪರಮಸಾಧಕ ಎಂಬುದು ವ್ಯಕ್ತವಾಗುವುದು.

ಇದುದರಿಂದ ಹರಿದು ಹಂಚಿ ಹೋಗಿದ್ದ ಕನ್ನಡನಾಡು, ಒಂದಾಗ ಬೇಕಾದ ಕಾರ್ಯವೂ ಸಹ, ಭಗವತ್ಸಂಕಲ್ಪಕ್ಕೆ ಬಂದು, ಕಾರ್ಯರೂಪ ಹೊಂದಿತೋ ಎಂಬಂತೆ ಈ ಸ್ವೈಸರ್ಗಿಕ ಮಾರ್ಗದಿಂದಲೇ ಪ್ರಾರಂಭವಾಯಿತು. ವಿವಿಧ ದೇಶ ಭಾಗಗಳು— ರಾಜಕೀಯವಾಗಿ ಒಂದಾಗುವುದಕ್ಕೆ ಮೊದಲು—ವಿವಿಧ ಕನ್ನಡಪ್ರಾಂತಗಳ ಭಾಷೆಗಳು ಒಂದಾಗಲಿ. ಆ ಭಾಷಾ ಬಳಕೆಯಿಂದ ಬೆಳೆದು ಬಂದ ಸಂಸ್ಕೃತಿ ಒಂದಾಗಲಿ, ಸಂಸ್ಕೃತಿ ಫಲವಾಗಿ ಬೆಳೆದು ಬಂದ ಜನತೆಯ ಸಂಪ್ರದಾಯಗಳ ಪರಸ್ಪರ ಪರಿಚಯವಾಗಲಿ ಎಂಬ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಪರಿಷತ್ತು ೧೯೧೫ನೆಯ ಸಂವತ್ಸರದಲ್ಲಿ, ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ವಾಸಿಸಿದ್ದ ಭಾಷಾಬಾಂಧವರಿಂದ ಪ್ರಾರಂಭಿಸಲ್ಪಟ್ಟಿತು. ಕಳೆದ ನಾಲ್ವತ್ತೆಂಟು ವರ್ಷಗಳಲ್ಲಿ—ಕನ್ನಡ ಜನತೆಯ ಏಕಮಾತ್ರ ಪ್ರತಿನಿಧಿಯಾದ ಈ ಸಂಸ್ಥೆಯು—ನಾಡಿನ ವಿವಿಧ ಪ್ರದೇಶಗಳಲ್ಲಿ ಸಮ್ಮೇಳನಗಳನ್ನು ನಡೆಯಿಸಿ ಜನಜಾಗೃತಿಯನ್ನುಂಟು ಮಾಡಿತು. ಹೀಗೆ ಭಾಷಾ ಮೂಲಕವಾಗಿ ಜಾಗೃತಿಗೊಂಡ ಜನತೆ, ತಾವೂ ಬಂಗಾಳಿಗಳಂತೆ, ಮಹಾರಾಷ್ಟ್ರೀಯರಂತೆ, ಗುಜರಾತಿಗಳಂತೆ, ಆಂಧ್ರರಂತೆ ಒಂದಾಗಿ ಕನ್ನಡಿಗ ಜನಾಂಗಕ್ಕೆ ಒಂದು ವ್ಯಕ್ತಿತ್ವವನ್ನು ಗಳಿಸಬೇಕು ಎಂಬ ಮನೋಭಾವವನ್ನು ಹೊಂದಿತು.

ಹೀಗೆ ಕನ್ನಡ ಜನತೆಯು ಭಾಷಾ ಸಂಸ್ಕೃತಿಗಳ ಮೂಲಕ ಏಕೀಕರಣಗೊಳ್ಳಲು ಸಿದ್ಧಗೊಳ್ಳುವ ಕಾರ್ಯ ಸುಮಾರು ಕಾಲು ಶತಮಾನ—ಇಪ್ಪತ್ತೈದು ವರ್ಷಗಳ ಕಾಲ ಸಾವಧಾನವಾಗಿ ನಡೆಯಿತು. ಕೋಟ್ಯಂತರ ಪ್ರಜೆಗಳಿಗೆ ಆವಾಸಸ್ಥಾನವಾದ ಒಂದು ನಾಡಿಗೆ ಸಂಬಂಧಿಸಿದ ಕಾರ್ಯ ಒಂದೆರಡು ದಿನಗಳಲ್ಲಿ — ಒಂದೆರಡು ವರ್ಷಗಳಲ್ಲಿ ಆದೀತೆ? ಇತ್ತ ಇದು ಹೀಗೆ ನಡೆಯುತ್ತಿರಲು. ಅತ್ತ ಅದ್ಯಂತ ಭಾರತ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ಗಳಿಸಬೇಕು ಎಂಬ ಮಹೋದ್ದೇಶದಿಂದ ಪ್ರೇರಿತವಾದ ಕಾಂಗ್ರೆಸ್ ಮಹಾ ಸಂಸ್ಥೆಯು, ಮಹಾತ್ಮಾಗಾಂಧಿಜೀ ಅವರ ಮುಂದಾಳ್ತನದಲ್ಲಿ ಅಗಾಧ ಚಳವಳಿಯನ್ನು ನಡೆಯಿಸಿತು. ಆ ಚಳವಳಿಯಲ್ಲಿ ಭಾರತದ ಸಕಲ ಪ್ರಾಂತಗಳವರೂ ಭಾಗವಹಿಸಿ ಹೋರಾಡುವ ಅವಕಾಶವುಂಟಾಯಿತು. ಸ್ವಾತಂತ್ರ್ಯ ಪ್ರಾಪ್ತವಾದನಂತರ, ಆಯಾ ಭಾಷೆಯನ್ನಾಡುವವರಿಗೆ ಅವರವರ ಪ್ರಾಂತವು ದೊರೆಯುವುದು ಎಂಬ ಕಾಂಗ್ರೆಸ್ ಸಂಸ್ಥೆಯ ಭರವಸೆಯು ಕನ್ನಡಿಗರಬಾಯಲ್ಲೂ ನೀರೂರಿಸಿತು. ಭಾರತಕ್ಕೆ ಸ್ವರಾಜ್ಯ ಲಭಿಸಿತೆಂದರೆ ಕನ್ನಡನಾಡು ನಮ್ಮದಾಗುವುದು ಎಂಬ ಕನಸು ಕನ್ನಡಿಗರ ಕಣ್ಣೆದುರಿಗೆ ಕಟ್ಟಿ ನಿಂತಿತು. ಈ ಆಸೆ—ಭರವಸೆಗಳು ಅಸಹಕಾರ ಚಳುವಳಿ, ಕರನಿರಾಕರಣ ಚಳುವಳಿ, ಮುಂತಾದ ಸ್ವರಾಜ್ಯಾಂದೋಲನದಲ್ಲಿ ನುಗ್ಗಿ ಹೋರಾಡಲು ಕನ್ನಡಿಗರಲ್ಲೂ ಸ್ಫೂರ್ತಿಯನ್ನುಂಟುಮಾಡಿತು. ಇತರ ಪ್ರಾಂತಗಳವರಂತೆಯೇ ಕನ್ನಡಿಗರೂ ತರುಣರೆನ್ನದೆ, ವೃದ್ಧರೆನ್ನದೆ, ಸ್ತ್ರೀಪುರುಷರಾದಿಯಾಗಿ ಹುರುಪುಗೊಂಡು ನುಗ್ಗಿದರು, ಸೆರೆಮನೆಗಳನ್ನು ಸೇರಿದರು. ಪೆಟ್ಟುಏಟು ಗುಂಡಿನೇಟುಗಳನ್ನು ತಿಂದರು. ಅನೇಕರು ಧನಮಾನಪ್ರಾಣಗಳು, ಆಸ್ತಿಪಾಸ್ತಿ ವೃತ್ತಿ ವ್ಯವಹಾರಗಳನ್ನು ಕಳೆದುಕೊಂಡು ನಿರ್ಗತಿಕರಾದರು. ಕೊನೆಗೆ ೧೯೪೭ರಲ್ಲಿ ಭಾರತ ರಾಷ್ಟ್ರಕ್ಕೆ ಸ್ವರಾಜ್ಯ ಲಭಿಸಿತು. ಕನ್ನಡಿಗರ ಆಶಾತರವೂ ಫಲವಂತವಾಗುವ ಸುಸಮಯ ಒದಗಿತು.—

ಭಾರತಕ್ಕೆ ಸ್ವರಾಜ್ಯ ಪ್ರಾಪ್ತವಾಗಿ—ಕೇಂದ್ರದಲ್ಲಿ ಸ್ವಯಮಾಡಳಿತ ವ್ಯವಸ್ಥೆಯು ಏರ್ಪಡಲು, ಕರ್ನಾಟಕವೂ ತನ್ನ ಬೇಡಿಕೆಯನ್ನು ಮುಂದಿಟ್ಟು, ಅಖಿಲ ಕರ್ನಾಟಕವೂ ಒಂದೇ ಆಡಳಿತದಲ್ಲಿ ಬರುವಂತೆ ಅನುಗೊಳಿಸ ಬೇಕೆಂದು ಕೇಂದ್ರ ಸರಕಾರದವರನ್ನು ಪ್ರಾರ್ಥಿಸಿತು. ನ್ಯಾಯವಾದ ಈ ಬೇಡಿಕೆಯನ್ನು ಸಲ್ಲಿಸಲು ಯಾವ ಪ್ರತಿಬಂಧಕವೂ ಇರಲಿಲ್ಲವಾಗಿ ಮದರಾಸು, ಬೊಂಬಾಯಿ, ಕೊಡಗು ಮುಂತಾಗಿ ಬೇರೆಬೇರೆ ಪ್ರಾಂತ್ಯಗಳ ಆಡಳಿತಕ್ಕೆ ಒಳಪಟ್ಟಿದ್ದ ಕನ್ನಡನಾಡಿನ ಭಾಗಗಳನ್ನೆಲ್ಲ—ವಿಜಯನಗರ ಸಾಮ್ರಾಜ್ಯದ, ತರುವಾಯ ಏಕಮಾತ್ರ ಯಶಸ್ವಿ ಕನ್ನಡ ರಾಜ್ಯವಾಗಿ ಉಳಿದಿದ್ದ ಮೈಸೂರಿಗೆ ಸೇರಿಸಿ ಅಖಂಡಕನ್ನಡ ನಾಡನ್ನು ಮೈಸೂರು ದೇಶವೆಂದೇ ಸಂಬೋಧಿಸತಕ್ಕದ್ದೆಂದು ನಿರ್ಣಯ ಮಾಡಿತು. ಮೈಸೂರಿನ ಪ್ರಾಚೀನ ರತ್ನ ಸಿಂಹಾಸನಾಧೀಶರಾಗಿ ಅವರಿಗೆ ಮಹಾರಾಜರೆಂದು ಕರೆಯಲ್ಪಡುತ್ತಿದ್ದ ರಾಜವಂಶೀಯ ಪ್ರಮುಖ

೧೦

ಸ್ವತಂತ್ರ ಭಾರತದ ಮೇಲೆ ತಾಮಸ ಪ್ರವೃತ್ತಿಯ ಚೀನಾ ಮತ್ತು ಪಾಕಿಸ್ತಾನಗಳು ಕಿಡಿಕಾರುತ್ತಿವೆ; ಆಕ್ರಮಣಶೀಲವಾಗಿವೆ. ಭಾರತೀಯರಲ್ಲಿ ಮನೆಮಾಡಿದ ಅನೈಕ್ಯ, ಸ್ವಾರ್ಥ ಭಾವನೆ ಮೊದಲಾದ ವ್ಯಾಧಿಗೆ ಒಂದು ಚಿಕಿತ್ಸೆ ಕಲ್ಪಿಸಲೆಂದೇ ಇಂತಹ ಗಂಡಾಂತರ ನಮಗೆ ಬಂದಿರಬಹುದೆನಿಸುವುದು ಸಹಜ. ಅನೇಕಾನೇಕ ಮಠಾಚಾರ್ಯರ ಸಾಧುಸಂತರ ಲೀಲಾ ಕ್ಷೇತ್ರವಾದ ಕನ್ನಡ ನಾಡು, ಅವರ ಕುಲಜರಾದ ಕನ್ನಡಿಗರು ಈ ಚಿಕಿತ್ಸಾ ಕಾರ್ಯದಲ್ಲಿ ಹಿಂದುಳಿಯಬಾರದು.

ರೇ ಮುಂದೆ ರಾಜ್ಯ ಪಾಲರೆಂದು ಸಂಬೋಧಿಸಲ್ಪಟ್ಟರು. ಹಳೆಯ ಮೈಸೂರಿನ ಹೊಸದಾಗಿ ಸೇರಿಸಲ್ಪಟ್ಟ ಪ್ರಾಂತಗಳ ಪ್ರಜಾಪ್ರಮುಖರೆಲ್ಲ ಏಕವಾಕ್ಯತೆಯಿಂದ ಈ ಆಡಳಿತ ವ್ಯವಸ್ಥೆಯನ್ನು ಅನುಮೋದಿಸಿ ಸಂತುಷ್ಟಿಗೊಂಡರು

ರಾಜ್ಯ ಶಾಸನದ ನಿರ್ಬಂಧನೆಗಳನ್ನನುಸರಿಸಿ, ಪ್ರಜಾಜನರಿಂದ ಆರಿಸಿಬಂದ ಪ್ರತಿನಿಧಿಗಳು — ಬಹುಮತದಿಂದ ಚುನಾಯಿಸಿದ ಮಹನೀಯರು ಸಚಿವ ಪದವಿಗಳನ್ನು ವಹಿಸಿದಾಗ, ಸಭೆಗಳಲ್ಲಿ ನಡೆದ ವ್ಯವಹಾರಗಳನ್ನು ಕುರಿತು — ಬಹುಮತವನ್ನನುಸರಿಸಿ ತೀರ್ಮಾನಗೊಳ್ಳಬೇಕಾದುದು ಅನಿವಾರ್ಯವಾಗುತ್ತದೆ. ಹೀಗೆ ನಡೆದ ರಾಜ್ಯಾಡಳಿತದಲ್ಲಿ ಕಾಲಕ್ರಮದಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ರಾಜ್ಯದ ಹೆಸರ ಮೈಸೂರೆಂದಿರಬೇಕೇ ಕರ್ನಾಟಕವೆಂದಾಗಬೇಕೇ ಎಂಬ ಪ್ರಶ್ನೆ ಪುನಃ ಉದ್ಭೂತವಾಗಿ ನಾಯಕರ ಮತ್ತು ರಾಜ್ಯಾಧಿಕಾರಿಗಳ ಮಧ್ಯೆ ಘರ್ಷಣೆ ಪ್ರಾರಂಭವಾಯಿತು. ಜಾತಿ ಮತಗಳು, ಕೋಮುವಾರು ಹಿತಾಸಕ್ತಿಗಳು ಮುಂತಾದುವುವೆಲ್ಲ ಜನತೆಯ ಮನಸ್ಸನ್ನು ಕಲುಷಿತವನ್ನಾಗಿಸಲು ಕಾರಣವಾಗಿ ಕೆಲಕಾಲ ಪರಸ್ಪರ ಘರ್ಷಣೆಗಳು ನಡೆದುವು — ಆದರೆ ಇಂದು ಎಲ್ಲ ವಿಚಾರಗಳಿಗಿಂತಲೂ ಪ್ರಮುಖವಾಗಿ ಪರಕೀಯರ ಶತ್ರುಧಾಳಿಯನ್ನು ಸರ್ವಶಕ್ತಿಯಿಂದಲೂ ಎದುರಿಸಿ, ದೇಶರಕ್ಷಣೆಯನ್ನು ಕುರಿತು ಗಮನಿಸಬೇಕಾದ ಅತ್ಯಾವಶ್ಯಕ ಪ್ರಶ್ನೆಯೊಂದು ಮುಂದಾಗಿ, ರಾಷ್ಟ್ರದ — ಜನತೆಯ ಲಕ್ಷ್ಯವನ್ನೆಲ್ಲ ಆಕರ್ಷಿಸಿರುವುದರಿಂದ, ಮಿಕ್ಕ ವಿಚಾರಗಳೆಲ್ಲ ಸಧ್ಯಕ್ಕೆ ಕಣ್ಮರೆಯಾಗಿ ಅಡಗಿ ಕುಳಿತಿರ ಬೇಕಾಗಿವೆ.

ಬಹುಕಾಲವಾಗಿ ಪರಾಧೀನತೆಯಲ್ಲಿದ್ದು ನರಳಿದ ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಗಿ ಇನ್ನೂ ಕೇವಲ ಇಪ್ಪತ್ತು ವರ್ಷಗಳೂ ಸಂದಿಲ್ಲ. ದೇಶವನ್ನು ವಿವಿಧ ರೀತಿಗಳಿಂದ ಪುಷ್ಟಿಗೊಳಿಸಿ, ಜನತೆಯ ಸುಖಶಾಂತಿಗಳನ್ನು ಸಾಧಿಸುವ ಕಾರ್ಯ ಭರದಿಂದ ಸಾಗುತ್ತಿದೆ. ದೇಶ ನಾಯಕರು — ದೇಶ ದೇಶಾಂತರಗಳವರ ಪ್ರೀತಿ ವಿಶ್ವಾಸಗಳನ್ನು ಗಳಿಸಿ, ಧನ ಸಹಾಯ ಜನ ಸಹಾಯಗಳನ್ನು ಪಡೆದು, ವಿವಿಧ ಯೋಜನೆಗಳ ಮೂಲಕ ದೇಶಾಭಿವೃದ್ಧಿ ಕಾರ್ಯವನ್ನು ಕೈಗೊಂಡು ಪರಿಶ್ರಮ ಪಡುತ್ತಿದ್ದಾರೆ. ಇಂತಹ ಸಂಧಿಕಾಲದಲ್ಲಿ ದೇಶಕ್ಕೆ ನೆರೆಹೊರೆಯವರಿಂದ — ಚೀನಾ ಪಾಕಿಸ್ಥಾನಗಳವರಿಂದ ಒದಗಿ ಕೊಂಡರೆ ಪ್ರಾಪ್ತವಾದುದು ತುಂಬಾ ಶೋಚನೀಯ — ಅನಿರೀಕ್ಷಿತ! —

ಈ ಸಂದರ್ಭದಲ್ಲಿ — ಈ ತೊಂದರೆಯು ನಮ್ಮ ದೇಶಕ್ಕೆ ಅಕಾರಣವಾಗಿ ಬಂದೊದಗಿತೇ ಎಂದೂ ಯೋಚಿಸ ಬೇಕಾಗಿದೆ. ಲೋಕದಲ್ಲಿ ರಾಜಸ ತಾಮಸ ಮನೋಭಾವಗಳನ್ನುಂಟಾಗಿ, ಆಯಾ ಗುಣಗಳು ಉಲ್ಬಣವಾದಂತೆಲ್ಲ ಕಾಮ ಕ್ರೋಧಾದಿ ದುರ್ವ್ಯಸನಗಳಿಗೀಡಾಗಿ ಜೀವಿಸುವ ಪ್ರಜಾ ಸಂಖ್ಯೆಯೇ ನೂರಕ್ಕೆ ತೊಂಬತ್ತೊಂಬತ್ತರಷ್ಟು ಆ ಅಂಶಗಳಿಂದ ತುಂಬಿದ್ದಾರೆ. ಸಾತ್ವಿಕ ಮನೋಭಾವದವರು ಎಲ್ಲೋ ಒಬ್ಬಬ್ಬರು. ರಾಜ್ಯಾಧಿಕಾರ ವಾಹಕರು, ಇಂತಹ ರಾಜಸ ತಾಮಸ ಮನೋವೃತ್ತಿಯವರೊಂದಿಗೆ ವ್ಯವಹರಿಸುವಾಗ — ರಾಜನೀತಿಗೆ ಅತ್ಯಾವಶ್ಯಕ ಸಾಮಗ್ರಿಗಳಂತಿರುವ ಸಾಮ ದಾನ ಭೇದ ಮತ್ತು ದಂಡ ಎಂಬ ಚತುರುಪಾಯಗಳನ್ನೂ ಬಳಕೆಯಲ್ಲಿ ಇಟ್ಟುಕೊಂಡಿರಬೇಕಾದುದು ಅತ್ಯಾವಶ್ಯಕ. ಆದರೆ ನಮ್ಮವರು ಪ್ರಪಂಚದಲ್ಲಿ ಇನ್ನೂ ಧರ್ಮಯುಗವೇ ನಡೆದು ಬರುತ್ತಿದೆ ಎಂದು ತಿಳಿದು ಮೋಸ ಹೋದರು. ನಾವು ಆ ಅಹಿಂಸಾ ಧರ್ಮವನ್ನು ಅವಲಂಬಿಸಿ ನಡೆದರೆ, ನಮ್ಮನ್ನು ನಿರುಪದ್ರವಿಗಳೆಂದು ತಿಳಿದು, ಮಿಕ್ಕವರೂ ನಮ್ಮ ಗೋಜಿಗೆ ಬರದೆ, ತಮ್ಮ ಪಾಟ್ಟಿಗೆ ತಾವಿರುವರು ಎಂದು ಬಗೆದರು. ಅವರು ಅಪೇಕ್ಷಿಸಿದ ಪದಾರ್ಥಗಳನ್ನು ಕೊಟ್ಟುಬಿಟ್ಟರಾಯಿತು — ಅಷ್ಟರಿಂದ ಅವರು ತೃಪ್ತಿಗೊಳ್ಳುವರು ಎಂದು ಯೋಚಿಸಿದರು. ದುರ್ವೃತ್ತರಲ್ಲಿ ಸೌಜನ್ಯ ರೀತಿಯಿಂದ ವ್ಯವಹರಿಸಿದ್ದು ಒಂದು ಪ್ರಮಾದವಾಗಿ ಪರಿಣಮಿಸಿತು. ನಮ್ಮ ಮಹಾ ಪ್ರಧಾನಿಗಳ ಈ ಸೌಜನ್ಯ-ಸೌಮ್ಯ ಪ್ರವೃತ್ತಿಗಳು ಆ ಧೂರ್ತರಿಗೆ ಅಶಕ್ತತೆಗಳೆಂದು ಅರ್ಥವಾದುವು. ಲೋಕದಲ್ಲಿ ಇಂತಹ ಧೂರ್ತ ಮನೋವೃತ್ತಿಯ ಜನ ತುಂಬಿ ತುಳುಕುತ್ತಿರುವಾಗ, ಅಹಿಂಸಾ ಧರ್ಮಪಾಲನೆ ಮಾಡಬೇಕೆಂದು ಬಯಸುವ ಸಾತ್ವಿಕರು, ಲೋಕ ವ್ಯವಹಾರಕ್ಕೆ ಕೈಮುಗಿದು, ತಪೋವನಕ್ಕೆ ಹೋಗಿ, ಅಲ್ಲಿ ಶಾಂತರಾಗಿ ಕಾಲಯಾಪನೆ ಮಾಡಬೇಕಲ್ಲದೆ — ರಾಜ್ಯಾಧಿಕಾರ ಸೂತ್ರಗಳನ್ನು ಹಿಡಿದು ನಡಸುತ್ತಿರುವ ವರೆಗೆ — ರಾಜನೀತಿಯ ಸಕಲ ಪ್ರಯೋಗಗಳನ್ನು ಕೈಕೊಳ್ಳಲು — ಸದಾ ಸಿದ್ಧರಾಗಿರಬೇಕಾದುದು ಅನಿವಾರ್ಯ!

ಇಂದು ಉಗ್ರರೀತಿಯಿಂದ ದೇಶವನ್ನು ಎದುರಿಸುತ್ತಿರುವ ಪೀಡೆಗೆ ಇದೊಂದೇ ಕಾರಣವಲ್ಲ. ಮಹಾತ್ಮ ಗಾಂಧಿಯವರು ಮುಂದಾಳಾಗಿ ದೇಶವನ್ನು ಸ್ವರಾಜ್ಯ ಪ್ರಾಪ್ತಿಗಾಗಿ ಮುನ್ನಡೆಸುತ್ತಿದ್ದಾಗ — ಮಹಾ ಸಂಯಮಿಗಳಾಗಿದ್ದ ಅವರ ಜೀವನಾದರ್ಶನವು ಜನತೆಯ ಕಣ್ಣೆದುರಿನಲ್ಲಿತ್ತು. ಅಂದು ಅವರನ್ನು ಅನುಸರಿಸಿ ಜನರೂ ಕಷ್ಟ ಸಹಿಷ್ಣುಗಳಾಗಿದ್ದರು. ದೇಶಕ್ಕಾಗಿ ವಿವಿಧ ರೀತಿಗಳಿಂದ ತಮ್ಮಿಂದ ಸಾಧ್ಯವಿದ್ದಷ್ಟು ತ್ಯಾಗಮಾಡಲು ಸಿದ್ಧರಿದ್ದರು. ಧ್ಯೇಯ ಸಾಧನೆಗಾಗಿ ಸೆರೆಮನೆಗಾಗಲಿ, ಮೃತ್ಯು ಮಂದಿರಕ್ಕಾಗಲಿ ಮುನ್ನುಗ್ಗಲು ಹಿಂದುಮುಂದು ನೋಡದಂತಹ ಸ್ಫೂರ್ತಿ ನಿಸ್ವಾರ್ಥತೆಗಳು ಅಂದು ಕಂಡು ಬರುತ್ತಿದ್ದುವು. ಆದರೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ, ಸುಖಾಭಿಲಾಷೆ, ಸ್ವಾರ್ಥ ಮನೋಭಾವ, ಅಧಿಕಾರಾಕಾಂಕ್ಷೆ ಮುಂತಾದುವು ಬೆಳೆದುವು. ಅಂದು ಭಾರತೀಯರೆಲ್ಲ ಒಬ್ಬಳೇ ತಾಯಿಯ ಮಕ್ಕಳು ಎಂದಿದ್ದ ಭಾವನೆ ಇಂದು ಸ್ವಲ್ಪ ಕಣ್ಮರೆಯಾಯಿತು. ಪ್ರಾಂತ್ಯಾಭಿಮಾನವು ಬೆಳೆಯ ಲಾಗಿತು. ಕನ್ನಡಿಗರು, ಮಹಾರಾಷ್ಟ್ರೀಯರು, ಆಂಧ್ರರು, ತಮಿಳರು ಹೀಗೆ ಒಬ್ಬೊಬ್ಬರೂ ತಮ್ಮ ತಮ್ಮ ಹಿತಸಾಧನೆಗಳನ್ನು ಬೆಳೆಸಿಕೊಂಡು ಸುಖಪಡಬೇಕು ಎಂಬ ಮನೋಭಾವವೂ ಬೆಳೆಯಿತು. ನಮ್ಮದು ಅಭಿವೃದ್ಧಿಗೆ ಬರಬೇಕೆಂದು ಇಷ್ಟಪಟ್ಟಾಗ — ಪರಕೀಯರದು ಕ್ಷೀಣಿಸಲಿ ಎಂದು ಬಾಯಿಯಿಂದ ಹೇಳದಿದ್ದರೂ — ಮನಸ್ಸಿನ ಅಂತರಾಳದಲ್ಲಿ ಅಡಗಿ ಕುಳಿತ ಭಾವನೆಯಾಗಿರುವುದು ಸ್ವಾಭಾವಿಕವಲ್ಲವೆ? ಹೀಗಾಗಿ ಅಂದು ಅಖಂಡವಾಗಿದ್ದ ಭಾರತ ದೇಶೀಯರ ಮನೋವೃತ್ತಿ — ಇಂದಿನ ಈ ಪ್ರಜಾತಂತ್ರ ಯುಗದಲ್ಲಿ, ಭಿನ್ನಭಿನ್ನ ಭಾವನಾವಶವಾಗಿ, ಸ್ವಾರ್ಥ ಸಾಧನೋದ್ದೇಶದಿಂದ ಬೇರೆ ಬೇರೆಯಾಯಿತು. ಜಾತಿ ಜಾತಿಗಳ, ಮತ ಮತಗಳ ಸ್ವಹಿತ ಚಿಂತನೆಗಳೂ ಹೆಚ್ಚಿದುವು. ಇವುಗಳೆಲ್ಲ ದೇಶದ ಅಭಿವೃದ್ಧಿಗೆ ಪ್ರತಿಬಂಧಕ ಸಾಮಗ್ರಿಗಳು. ಇವುಗಳನ್ನೆಲ್ಲ ಸಾವಧಾನ ಚಿತ್ತದಿಂದ ಪರೀಕ್ಷಿಸಿ ನೋಡಿದರೆ, ಸರ್ವಸಾಕ್ಷಿಯಾಗಿ ಭಾರತದ ಭಾಗ್ಯ ವಿಧಾತನಾದ ಸರ್ವೇಶ್ವರನು, ಭಾರತೀಯರಲ್ಲಿ ಹುಟ್ಟಿ ಬೆಳೆದಿರುವ ಈ ವ್ಯಾಧಿಗೆ, ಒಂದು ಚಿಕಿತ್ಸೆಯನ್ನು ಕಲ್ಪಿಸಿ, ನಮ್ಮವರಲ್ಲಿ ಪುನಃ ಐಕ್ಯಮತ್ಯ, ಸ್ವಜನಾಭಿಮಾನ, ನಿಸ್ವಾರ್ಥತೆ, ತ್ಯಾಗ ಮನೋಭಾವ, ಕಷ್ಟ ಸಹಿಷ್ಣುತೆ, ಅಧಿಕಾರಾದಿಗಳಲ್ಲಿ ನಿರ್ಮಮತೆ ಮುಂತಾದ ಗುಣಗಳನ್ನು ಮೂಡಿಸಲು — ದೈತ್ಯರೂಪೀ ಚೈನಾವನ್ನು ಪ್ರೇರಿಸಿ ಭಾರತದ ಮೇಲೆ ನುಗ್ಗಿಸಿರಬಹುದೇ — ಎಂದು ನನ್ನ ಮನಸ್ಸಿಗೆ ಭೋಧವಾಗುತ್ತಿದೆ.

ಪ್ರಜಾರಾಜ್ಯ ದಿನೋತ್ಸವದ ಸವಿನೆನಪನ್ನು ಕನ್ನಡಿಗರಾದ ನಾವು ಇಂದು ಸ್ಮರಿಸಿಕೊಳ್ಳಲು ಮತ್ತೊಂದು ಕಾರಣವೂ ಉಂಟು. ಕನ್ನಡ ನಾಡು ಇತರ ದೇಶಗಳಂತಲ್ಲ. ಇದು ಪುಣ್ಯ ಭೂಮಿ. ಆದ್ಯಂತ ದೇಶಕ್ಕೆ ಜ್ಞಾನಾಂಜನವನ್ನಿತ್ತು. ಭೂಲೋಕದಿಂದ ಪರಲೋಕಕ್ಕೆ ಸೋಪಾನವನ್ನು ರಚಿಸಿದರೋ ಎಂಬಂತಿರುವ ದಿವ್ಯ ಶಾಸ್ತ್ರ ಪುರಾಣಗಳು, ಕೀರ್ತನೆಗಳು, ಅಮೂಲ್ಯ ವಚನ ಭಂಡಾರ ಮುಂತಾದುವುಗಳನ್ನಿತ್ತ, ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀ ಮಧ್ವಾಚಾರ್ಯ, ಶ್ರೀ ಬಸವೇಶ್ವರರೇ ಮುಂತಾದ ಆಚಾರ್ಯ ಪುರುಷರನ್ನೂ ಶ್ರೀ ಪುರಂದರದಾಸರು, ಶ್ರೀ ಕನಕದಾಸರು ಮುಂತಾದ ಸಾಧುಪುಂಗವರನ್ನೂ, ಅಕ್ಕ ಮಹಾದೇವಿಯೇ ಮುಂತಾದ ವಚನಕಾರರನ್ನೂ ಹೆತ್ತು ಆದ್ಯಂತ ಭಾರತದಲ್ಲೇ ಧರ್ಮಬೀಜಗಳನ್ನು ಬಿತ್ತಿದ ಮಹಾ ಪುರುಷರಿಗೆ ಜನ್ಮವಿತ್ತ ಮಹಾಸಫಲವಂತ ಕ್ಷೇತ್ರವಿದು. ಇದರ ಹಿರಿಮೆಯು ನಮ್ಮ ಕನ್ನಡಿಗರ ಕಣ್ಣೆದುರಿಗೆ ಬಂದು ನಾನು ನನ್ನದು ಎಂಬ ಕ್ಷುದ್ರಭಾವಗಳು ಕಣ್ಮರೆಯಾಗಬೇಕಾದುದೂ ಇಂದಿನ ಪರಿಸ್ಥಿತಿಯಲ್ಲಿ ಅತ್ಯಾವಶ್ಯಕವಾಗಿದೆ —

For Your

Motor Transport Needs
in South Kanara

Remember

The Hanuman Transport
Co. P. Ltd.

Mail contractors & Service owners

UDIPI

Estd: 1930

Telephone
Managing Director 19
Director in charge of works 19A

Telegram
"Hanumanco"



ಲೇಖಕರು:

ಶ್ರೀ ಮು. ರಾಜೀವ, ಎಂ. ಎ., ಬಿ. ಟಿ., ಮಂಗಳೂರು.

ಬಡವರು ಬಡವರಾಗುತ್ತಿದ್ದಾರೆಯೆ?

ಭಾರತದಲ್ಲಿ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾರೆ, ಬಡವರು ಮತ್ತಷ್ಟು ಬಡವರಾಗುತ್ತಾರೆ ಎಂಬ ದೂರು ನಮ್ಮ ಯೋಜನೆಗಳ ಮೇಲಿದೆ. ಇದು ಎಷ್ಟರ ಮಟ್ಟಿಗೆ ನಿಜವೆಂಬುದರ ವಿವೇಚನೆಯನ್ನು ನಾವಿಂದು ಅವಶ್ಯ ಮಾಡಬೇಕಾಗಿದೆ. ಭಾರತೀಯನ ವಾರ್ಷಿಕ ಆದಾಯದೊಡನೆ ನಮ್ಮಂತೆಯೇ ಹಿಂದುಳಿದ ಹಲವು ದೇಶಗಳವರ ಪ್ರಜೆಗಳ ವಾರ್ಷಿಕ ಆದಾಯವನ್ನು ಹೋಲಿಸುವುದಾದರೆ, ನಾವು ತೀರ ಹಿಂದುಳಿದಿದ್ದೇವೆಂದು ಮನವರಿಕೆಯಾಗುತ್ತದು.

ಭಾರತದ ರಾಷ್ಟ್ರೀಯ ಆದಾಯವನ್ನು ಅಧಿಕಗೊಳಿಸುವುದು ಪಂಚವಾರ್ಷಿಕ ಯೋಜನೆಯ ಉದ್ದೇಶಗಳಲ್ಲೊಂದಾಗಿದೆ. ಆದರೆ ರಾಷ್ಟ್ರೀಯ ಸಂಪತ್ತು ಅಧಿಕಗೊಂಡಿದೆಯೇ? ಪ್ರಜೆಯ ತಲಾ ವರಮಾನವು ಹೆಚ್ಚಿದೆಯೇ? ಈ ಪ್ರಾಮುಖ್ಯದ ಪ್ರಶ್ನೆಗಳು ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ದೇಶದ ಗಮನ ಸೆಳೆದಿವೆ.

ಭಾರತೀಯ ಪ್ರಜೆಯ ವರಮಾನವು ಜಗತ್ತಿನ ಹಿಂದುಳಿದ ದೇಶಗಳ ಪ್ರಜೆಗಳ ವರಮಾನಗಳ ಸಾಲಿನ ಕೊನೆಯ ಹಂತಗಳಲ್ಲಿದೆ. ಅದು ಅತ್ಯಂತ ಕಡಿಮೆಯಾಗಿರುವುದು ಆಶ್ಚರ್ಯವಲ್ಲ, ಆದರೆ ಇಂದೀಗ ಯೋಜನಾಬದ್ಧ ಅಭಿವೃದ್ಧಿಯ ಒಂದು ದಶಕದ ಬಳಿಕವೂ ಭಾರತೀಯ ಪ್ರಜೆಯ ವರಮಾನದಲ್ಲಿ ಹೆಚ್ಚಳವಾಗದಿರುವುದು ಗಮನಾರ್ಹ ಸಂಗತಿಯಾಗಿದೆ. ಒಂದೇ ನಮ್ಮ ಯೋಜನಾ ಧೋರಣೆ ಧ್ಯೇಯಗಳು ದೋಷಯುಕ್ತ ಆರ್ಥಿಕ ನೀತಿಗಳಿಂದ ನಿರೂಪಿಸಲ್ಪಟ್ಟಿವೆ ಅಥವಾ ಅವುಗಳನ್ನು ಕಾರ್ಯರೂಪಕ್ಕೆ ತಂದಿರುವಲ್ಲಿ ತಪ್ಪುಗಳುಂಟಾಗಿವೆ. ಅದೂ ಅಲ್ಲದಿದ್ದರೆ ಯೋಜನೆಗಳ ಪ್ರಯೋಜನಗಳು ಕೇವಲ ಕೆಲವೇ ವರ್ಗಗಳ ಕೈಗಳಲ್ಲಿ ಕೇಂದ್ರೀಕರಣಗೊಳ್ಳುತ್ತಿವೆ ಎಂಬುದು ಸತ್ಯವಾಗಿರಬೇಕು.

ಒಂದು ದಶಕದ ದಿಟ್ಟತನದ ಯೋಜನಾ ಕಾರ್ಯದ ಬಳಿಕವೂ ಭಾರತೀಯ ಪ್ರಜೆಯ ತಲಾ ದೈನಿಕ ಆದಾಯವು ಕೇವಲ ಮೂರಾಣೆಯಾಗಿದೆ ಎಂದು ಆರೋಪಿಸಲಾಗಿದೆ. ದೇಶದ ಜನ ಸಂಖ್ಯೆಯಲ್ಲಿ ಶೇಕಡಾ ಅರ್ವತ್ತರಷ್ಟು ಮಂದಿಯ ತಲಾ ದೈನಿಕ ಆದಾಯವು ಈ ಕನಿಷ್ಟ ಮಿತಿಯನ್ನು ಮೀರಿಲ್ಲ. ದೇಶದ ಜನ ಸಂಖ್ಯೆಯಲ್ಲಿ ಸುಮಾರು ೨೭ ಕೋಟಿ ಮಂದಿಯ ದೈನಿಕ ಆದಾಯವು ಈ ಮಟ್ಟದಲ್ಲಿಯೇ ಇದೆ. ದೇಶದ ಬಹು ಸಂಖ್ಯಾತ ಕೃಷಿಕರ ಒಟ್ಟು ರಾಷ್ಟ್ರೀಯ ಆದಾಯವು ೬,೬೦೦ ಕೋಟಿ ರೂಪಾಯಿಯಷ್ಟಾಗಿದೆ, ಇದರಲ್ಲಿಯೂ ಹಳ್ಳಿಗಳಲ್ಲಿರುವ ಶ್ರೀಮಂತ ವರ್ಗಗಳು ಈ ಆದಾಯದ ಸಿಂಹಪಾಲನ್ನು ಅಂದರೆ ಸುಮಾರು ಶೇಕಡಾ ೭೦ ಯೂ ಅಂಶವನ್ನು ಪಡೆಯುತ್ತಿದ್ದಾರೆ ಎಂದು ಯೋಜನಾ ಆಯೋಗದ ವರದಿಗಳೇ ಸ್ಪಷ್ಟಪಡಿಸಿವೆ. ಆದುದರಿಂದ ಕೃಷಿಕರಲ್ಲಿ ಸುಮಾರು ಮುಕ್ಕಾಲು ಪಾಲು ಮಂದಿ ದಿನಾ ಮೂರಾಣೆ ಆದಾಯವನ್ನೇ ಹೊಂದಿ ಜೀವನ ನಡೆಸುತ್ತಿದ್ದಾರೆ. ರಾಷ್ಟ್ರೀಯ ಆದಾಯ ಅಧಿಕವಾಗುತ್ತಿದೆ ಎಂಬುದು ನಿಜವಾದರೂ ಅದು ಯಾವ ವರ್ಗಗಳಿಂದ ಹೆಚ್ಚುತ್ತಿದೆ, ಯಾವ ಯಾವ ವರ್ಗಗಳಿಗೆ ಯಾವ ಪ್ರಮಾಣದಲ್ಲಿ ರಾಷ್ಟ್ರೀಯ ಆದಾಯ ವಿತರಣೆಯಾಗುತ್ತಿದೆಯೆಂಬುದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ೧೯೪೮—೪೯ ಮತ್ತು ೧೯೬೦—೬೧ರ ಅವಧಿಯಲ್ಲಿ ಕೃಷಿಯಿಂದ ಬರುವ ರಾಷ್ಟ್ರೀಯ ಆದಾಯವು ರೂಪಾಯಿ ೪,೫೫೦ ಕೋಟಿಯಿಂದ ರೂಪಾಯಿ ೬,೮೬೦ ಕೋಟಿಗೆ ಹೆಚ್ಚಿರುತ್ತದೆ. ಕೈಗಾರಿಕೆಯಿಂದ ಬರುವ ಆದಾಯವು ರೂಪಾಯಿ ೧,೪೮೦ ಕೋಟಿಯಿಂದ ರೂಪಾಯಿ ೨,೩೪೦ ಕೋಟಿಗೂ ವ್ಯಾಪಾರದಿಂದಾಗುವ ಆದಾಯವು ರೂಪಾಯಿ ೧,೬೦೦ ಕೋಟಿಯಿಂದ ರೂಪಾಯಿ ೨,೩೬೦ ಕೋಟಿಗೂ ಹೆಚ್ಚಿರುತ್ತದೆ. ಅದೇ ಸಮಯದಲ್ಲಿ ಇತರ ಸರ್ವಿಸುಗಳಿಂದುಂಟಾಗುವ ಆದಾಯವು ರೂಪಾಯಿ ೧,೩೪೦ ಕೋಟಿಯಿಂದ ರೂಪಾಯಿ ೨,೩೪೦ ಕೋಟಿಗೆ ಹೆಚ್ಚಿರುತ್ತದೆ. ಆದರೆ ದೇಶದ ಜನಸಂಖ್ಯೆಯಲ್ಲಿ ಶೇಕಡಾ ೭೪ ಮಂದಿ ಹೊಂದಿಕೊಂಡಿರುವ ಕೃಷಿ ವಿಭಾಗದಲ್ಲಾದ ಆದಾಯ ಹೆಚ್ಚಳದ ಶೇಕಡಾ ಅತ್ಯಂತ ಕಡಿಮೆಯಾಗಿದೆ. ಈ ಆದಾಯ ಹೆಚ್ಚಳವು ಅದೇ ಅವಧಿಯಲ್ಲಾದ ಬೆಲೆಗಳಯೇರಿಕೆಯನ್ನು ಗಮನಿಸಿದಲ್ಲಿ ನಿಜವಾದ ಹೆಚ್ಚಳವೇ ಅಲ್ಲ. ಆದಾಯದ ಹೆಚ್ಚಳವು—ಭೂಮಿಯಲ್ಲಿ ಕೇವಲ ಕೃಷಿಕರಾಗಿರುವ ವರ್ಗಗಳಿಗೆ ಯಾವ ಹೆಚ್ಚಿನ ಆದಾಯವನ್ನೂ ತಂದಿಲ್ಲ. ಅದೇ ಅವಧಿಯಲ್ಲಿ ಕೃಷಿಯಾಗುವ ಭೂ ಪ್ರದೇಶದ ವಿಸ್ತೀರ್ಣವು ೩೫೫ ಮಿಲಿಯ ಎಕ್ರೆಗಳಿಂದ ೩೭೭ ಮಿಲಿಯ ಎಕ್ರೆಗಳಿಗೇರಿದೆಯಾದರೂ ವಾರ್ಷಿಕ ಉತ್ಪನ್ನವು ಶೇಕಡಾ ೧೪ರಷ್ಟು ಅಧಿಕಗೊಂಡಿದೆಯಾದರೂ ಸರಕಾರಿ ವರದಿಗಳ ಪ್ರಕಾರ ಕೃಷಿಕರ ಆದಾಯದಲ್ಲಿ ಶೇಕಡಾ ೩೨ರಷ್ಟು ಆದಾಯ ಹೆಚ್ಚಳವಾಗಿದ್ದರೂ— ಅದು ಬಹು ಮಟ್ಟಿಗೆ ಕೃಷಿ ಕ್ಷೇತ್ರದ ಶ್ರೀಮಂತ ರೈತವರ್ಗಗಳಿಗೆ ಹೋಗಿರುವುದು. ಕೃಷಿ ಕ್ಷೇತ್ರದ ಅತ್ಯಂತ ಬಡವರ್ಗಗಳಿಗೆ ಅದರ ಪ್ರಯೋಜನವು ಸಿಕ್ಕಿರುವುದಿಲ್ಲ. ಉದಾಹರಣೆಗಾಗಿ ಕೃಷಿ ವಿಭಾಗದ ಭೂ ರಹಿತ ವರ್ಗವು— ಸುಮಾರು ೩೩ ಮಿಲಿಯ ಮಂದಿ ಇದರ ಪ್ರತಿಫಲವನ್ನು ಪಡೆದಿಲ್ಲ. ಅಷ್ಟೇ ಅಲ್ಲ, ಅವರ ಆದಾಯವು ಇನ್ನಷ್ಟು ಕಡಿಮೆಯಾಗಿದೆ. ೧೯೫೧ ಮತ್ತು ೧೯೫೭ರ ಅವಧಿಯಲ್ಲಿ ಭೂ ರಹಿತ ಕೂಲಿಯಾಳು ಕೃಷಿಕರ ಆದಾಯವು ಶೇಕಡಾ ೧೧ರಷ್ಟು ಇಳಿ ಮುಖಗೊಂಡಿದೆ. ಗಂಡಸು ಕೂಲಿಯಾಳಿನ ದಿನ ಕೂಲಿ ೧೦೯ ನಯೇ ಪೈಸೆಯಿಂದ ೯೬ ನಯೇ ಪೈಸೆಗೂ ಹೆಂಗಸು ಕೂಲಿಯಾಳುವಿನ ದಿನ ಕೂಲಿ ೬೮ ನಯೇ ಪೈಸೆಯಿಂದ ೫೯ ನಯೇ ಪೈಸೆಗೂ ಇಳಿದಿರುತ್ತದೆ. ಇದು ಗಮನಾರ್ಹ ವಿಷಯವಾಗಿದೆ. ನಮ್ಮ ನೆರೆಕರೆಯ ರಾಜ್ಯಗಳಲ್ಲಿ ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಲ್ಲದಿದ್ದರೂ; ಆ ರಾಷ್ಟ್ರಗಳಿಗಿಂತ ನಮ್ಮ ರಾಷ್ಟ್ರೀಯ ಆದಾಯ ಕಡಿಮೆಯಾಗಿರುತ್ತದೆ. ಉದಾಹರಣೆಗಾಗಿ ಪಾಕಿಸ್ಥಾನದ ಪ್ರಜೆಯ ತಲಾ ಆದಾಯವು ೩೩೩ ರೂಪಾಯಿಯಾಗಿರುವಾಗ, ಸಿಂಹಳದ ಪ್ರಜೆಯ ಆದಾಯವು ೫೬೦ ರೂಪಾಯಿಯಾಗಿರುವಾಗ ಫಿಲಿಪೀನ್ ಪ್ರಜೆಯ ಆದಾಯವು ೭೧೪ ಹಾಗೂ ಜಪಾನಿನ ಪ್ರಜೆಯ ಆದಾಯವು ೧,೪೫೫ ರೂಪಾಯಿಯಾಗಿರುವಾಗ ಭಾರತೀಯ ಪ್ರಜೆಯ ರಾಷ್ಟ್ರೀಯ ಆದಾಯ (೧೯೫೯)ವು ಕೇವಲ ೨೦೭ ರೂಪಾಯಿಯಾಗಿತ್ತು. ಅದೇ ವರ್ಷದ ಅಂದಾಜಿನ ಮೇರೆಗೆ ಬ್ರಿಟನಿನ ಪ್ರಜೆಯ ತಲಾ ಆದಾಯವು ೪,೯೦೭ ರೂಪಾಯಿ ಸಂಯುಕ್ತ ಅಮೇರಿಕಾದ ನಾಗರಿಕನ ತಲಾ ಆದಾಯವು ೧೦,೭೦೮ ರೂಪಾಯಿ, ಕೆನಡಾದ ಪ್ರಜೆಯ ಆದಾಯವು ೭,೬೫೧ ರೂಪಾಯಿ ಆಗಿತ್ತು. ಮುಂದುವರಿದ ಸಂಯುಕ್ತ ಅಮೇರಿಕಾದ ಪ್ರಜೆಯ ಬ್ರಿಟನ್ ಹಾಗೂ ಕೆನಡಾ ಪ್ರಜೆಗಳ ಆದಾಯದೊಂದಿಗೆ ಭಾರತೀಯನ ಆದಾಯವನ್ನು ಹೋಲಿಸುವುದು ಸಮಂಜಸವಲ್ಲದಿದ್ದರೂ, ನಮ್ಮ ನೆರೆಕರೆಗಳು, ನಮ್ಮಂತೆಯೇ ಬಹುಕಾಲ ಬೇರೆಯವರ ಆಳ್ವಿಕೆಯೊಳಗಾಗಿದ್ದ, ಹಿಂದುಳಿದ ದೇಶಗಳಾದ ಪಾಕಿಸ್ತಾನ ಮಲಯ ಹಾಗೂ ಸಿಂಹಳಗಳೊಂದಿಗೆ ನಮ್ಮನ್ನು ಹೋಲಿಸಿ ಕೊಳ್ಳುವುದು ತಪ್ಪಾಗಲಾರದು. ಈ ದೃಷ್ಟಿಯಲ್ಲಿ ಭಾರತೀಯ ಪ್ರಜೆಯ ಆದಾಯ ಬಹಳ ಕಡಿಮೆಯಾಗಿರುತ್ತದೆ.

ಈ ಗಮನಾರ್ಹ ಸಮಸ್ಯೆಯು ಯೋಜನೆಯ ಬಗ್ಗೆ ಸಂಶಯವನ್ನುಂಟು ಮಾಡುತ್ತದೆ. ಬಹು ಮಂದಿಯ ಮನಸ್ಸಿನಲ್ಲಿಯೂ ಇದೇ ಪ್ರಶ್ನೆ ಮುಣುಕು ಹಾಕುತ್ತಿದೆ. ಇತ್ತೀಚೆಗೆ ಡಾ| ಡಿ. ಆರ್. ಗಾಡ್ಗೀಲ್ ಮತ್ತು ಈ. ಎಸ್. ಶುಮಾಶರ್‌ರವರು ಭಾರತ ಸರಕಾರಕ್ಕೆ ಒಪ್ಪಿಸಿದ ವರದಿಗಳು ಈ ಸಮಸ್ಯೆಗೆ ಅಪರೋಕ್ಷವಾಗಿ ಉತ್ತರವಿತ್ತಿವೆ. ಅವರ ಅಭಿಪ್ರಾಯದಲ್ಲಿ ನಮ್ಮ ಯೋಜನೆಯ ದೃಷ್ಟಿಕೋನದಲ್ಲಿಯೇ ನ್ಯೂನತೆಯಿದೆ. ಧ್ಯೇಯದಲ್ಲಿಯೇ ದೋಷವಿದೆ. ಆದರ್ಶದಲ್ಲಿಯೇ ಕೊರತೆಯಿದೆ. ಅವರಿಬ್ಬರ ಅಭಿಪ್ರಾಯದಲ್ಲಿ ನಮ್ಮ ಯೋಜನೆಯು ನಗರ ದೃಷ್ಟಿಕೋನದ್ದಾಗಿದೆ. ಅದರ ದೃಷ್ಟಿ ದೇಶದ ಬಹು ಸಂಖ್ಯಾತ ಹಳ್ಳಿಗಳ ಸಮಸ್ಯೆಗಳನ್ನು ಸರಿಪಡಿಸುವ ಪ್ರೇರಣೆಯನ್ನು ಪಡೆದಿಲ್ಲ. ಶುಮಾಶರರ ಅಭಿಪ್ರಾಯದಲ್ಲಿ ನಮ್ಮಲ್ಲಾಗುವ "ಕೈಗಾರಿಕೆಯ ಬೆಳವಣಿಗೆಯು" ದೇಶದ ಬಹುಸಂಖ್ಯಾತ ಕೃಷಿಕರ ಕಲ್ಯಾಣಕ್ಕೆ ಅಪಾಯಕಾರಿ ಪರಿಸ್ಥಿತಿಯನ್ನುಂಟುಮಾಡಿದೆ. ಭಾರತದ ಈ ಅಸಂಖ್ಯಾತ ಮಂದಿಗೆ ಮುಂಬರುವ ವರ್ಷಗಳಲ್ಲಿ ಜೀವನ ಮಟ್ಟವನ್ನೇರಿಸುವ ಭವಿಷ್ಯತ್ತೇ ಇರುವುದಿಲ್ಲ. ನಗರಗಳ ಅಭಿಪ್ರಾಯ ದೃಷ್ಟಿಕೋನದ ಧೋರಣೆಯು ದುರಂತದಲ್ಲಿ ಕೊನೆಗೊಳ್ಳಬಹುದೆಂಬ ಭಯವನ್ನು ಫೋರ್ಡ್ ಫೌಂಡೇಶನಿನ ಈ ತಜ್ಞರು ವ್ಯಕ್ತಪಡಿಸಿದ್ದಾರೆ. ಬಡವರು ಬಡವರಾಗಿಯೇ ಇದ್ದಾರೆ. ಬಡತನವು ಕಡಿಮೆಯಾಗುವ ಬದಲು ಹೆಚ್ಚುತ್ತಿದೆ ಎಂಬ ಸಾಮಾನ್ಯ ಹೇಳಿಕೆಯನ್ನು ಸಾಧಾರವಾಗಿ ಅವರ ವರದಿಗಳು; ಸಮರ್ಥಿಸುತ್ತಿವೆ.

ಬಡವರು ಬಡವರಾಗುತ್ತಾರೆ. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ಎಂಬ ಆರೋಪವನ್ನು ಸಾಮಾನ್ಯವಾಗಿ ಹೇಳುವ ಪರಿವಾರವಿದೆ. ಯೋಜನೆಗಳ ಪ್ರಯೋಜನಗಳ ಅಧ್ಯಯನ ಆಯೋಗಗಳೂ ಈ ಹೇಳಿಕೆಯ ಸತ್ಯವನ್ನು ಸರಿಯೆಂದು ವರದಿ ಮಾಡಿವೆ. ಭಾರತದ ಬಡವರು ಎಷ್ಟು ಬಡವರಾಗಿದ್ದಾರೆ ಎಂಬುದನ್ನು ಅವರ ತಿಂಗಳ ಸರಾಸರಿ ವೆಚ್ಚದಿಂದ ತಿಳಿಯಬಹುದು. ಸರಕಾರದ ವರದಿಗಳ ಪ್ರಕಾರವೇ ಭಾರತದಲ್ಲಿ ಅತಿ ಬಡವರಾಗಿರುವವರು ಜನಸಂಖ್ಯೆಯ ಶೇಕಡಾ ೧೦ರಷ್ಟು ಮಂದಿಗಳು, ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಬಡವರ ತಲಾ ತಿಂಗಳ ಸರಾಸರಿ ವೆಚ್ಚವು ೮ ರೂಪಾಯಿಯೂ ನಗರ ಪ್ರದೇಶಗಳಲ್ಲಿ ಅವರ ತಲಾ ತಿಂಗಳ ಸರಾಸರಿ ವೆಚ್ಚವು ೧೦ ರೂಪಾಯಿಯೂ ಆಗಿರುತ್ತದೆ. ಅಂದರೆ ತಲಾ ಒಬ್ಬನ ವೆಚ್ಚವು ನಾಲ್ಕೈದು ಆಣೆಗಳಷ್ಟಾಗಿದೆ! ಅತ್ಯಂತ ಕನಿಷ್ಟ ಮಟ್ಟದ, ಬಹಳ ಸೂಕ್ಷ್ಮ ವೆಚ್ಚದ ಜೀವನ ಮಾಡಲು ಒಬ್ಬನಿಗೆ ಅತಿ ಕಡಿಮೆಯೆಂದರೆ ೩೫ ರೂಪಾಯಿಯ ಆದಾಯವಿರಬೇಕೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಇದು ಅತ್ಯಂತ ಕಡಿಮೆ ಮಟ್ಟದ ಆದಾಯವೆಂದು ಪರಿಗಣಿಸಲಾಗಿದೆ ಆದರೆ ಭಾರತದಲ್ಲಿರುವ ಅತ್ಯಂತ ಬಡ ವರ್ಗವು —ಸುಮಾರು ೪೦ ಮಿಲಿಯ ಮಂದಿ—ಅಂತಹ ಕನಿಷ್ಠ ಮಟ್ಟಕ್ಕಿಂತಲೂ ಕೆಳಗಿನ ಮಟ್ಟದ ಜೀವನ ಮಾಡುತ್ತಿದ್ದಾರೆ. ತಲಾ ಒಬ್ಬನ ತಿಂಗಳ ಆದಾಯ. ಆ ಮೂವತ್ತೈದು ರೂಪಾಯಿಗಳ ಮಟ್ಟವನ್ನು ೧೯೭೬ರಲ್ಲಿ ಅಂದರೆ ಐದನೇ ಪಂಚವಾರ್ಷಿಕ ಯೋಜನಾಂತ್ಯದಲ್ಲಿ ಕೂಡಾ ಪಡೆಯುವುದು ಅಸಾಧ್ಯವಾಗಿದೆ! ಅದರ ಕಾರಣವಿಷ್ಟೆ. ಅದು ಸಾಧ್ಯವಾಗಲು ನಮ್ಮ ತಲಾ ವಾರ್ಷಿಕ ಆದಾಯದ ಪ್ರಮಾಣವು ಶೇಕಡಾ ೧೨ರಷ್ಟು ಅಧಿಕಗೊಳ್ಳಬೇಕು. ಆದರೆ ನಮ್ಮ ಇಂದಿನ ಗುರಿಯು ಕೇವಲ ಶೇಕಡಾ ೪ರಷ್ಟು ತಲಾ ಆದಾಯ ಹೆಚ್ಚುವರಿಯಾಗಿರುತ್ತದೆ. ತೃತೀಯ ಯೋಜನೆಯ ಅವಧಿಯಲ್ಲಿ ಮೊದಲ ಎರಡು ಯೋಜನೆಗಳ ಕಾಲದಲ್ಲಿ ಪಡೆದ ಪ್ರಗತಿಯನ್ನು ಪಡೆಯುವುದೇ ಕಷ್ಟವೆಂದು ಈಗ ತೋರುತ್ತಿದೆ. ಸರಕಾರದ ಎಲ್ಲಾ ಅಂಕೆ ಸಂಖ್ಯೆಗಳನ್ನು ಬದಿಗಿರಿಸಿ ಸಮಸ್ಯೆಯನ್ನು ಪರಿಶೀಲಿಸಿದರೆ ಬಾರತದ ಅತ್ಯಂತ ಅಸಹಾಯಕ ವರ್ಗಗಳು— ಕೃಷಿಕ ವರ್ಗದ ಕೂಲಿಯಾಳುಗಳು ಹಾಗೂ ನಿರುದ್ಯೋಗಿಗಳು—ಯೋಜನಾವಧಿಯಲ್ಲಿ ತಮ್ಮ ಇದ್ದ ಆದಾಯವನ್ನು ಕಳಕೊಂಡಿದ್ದಾರೆ. ದ್ವಿತೀಯ ಕೃಷಿಕ ಕೂಲಿಯಾಳುಗಳ ಜೀವನ ಪರಿಸ್ಥಿತಿಯ ಕುರಿತಾಗಿ ಸರಕಾರ ನಡೆಸಿದ ಪರಿಶೀಲನೆಯು ಇದನ್ನು ಸ್ಪಷ್ಟಪಡಿಸಿದೆ. ಕೃಷಿಕ ಕೂಲಿಯಾಳುಗಳ ಆದಾಯವು ಕಡಿಮೆಯಾದುದು ಮಾತ್ರ ಗಮನಾರ್ಹ ವಿಷಯವಲ್ಲ. ೧೯೫೧ - ೫೭ರ ಅವಧಿಯಲ್ಲಿ ಸರಕಾರವು

ಕೃಷಿ ಕ್ಷೇತ್ರದಲ್ಲಿ ಈ ಅಸಹಾಯಕ ವರ್ಗಗಳ ಅಭಿವೃದ್ಧಿಗಾಗಿ ಸುಮಾರು ೩೦೦ ಕೋಟಿ ರೂಪಾಯಿ ವೆಚ್ಚದ ಸಮಾಜಾಭಿವೃದ್ಧಿ ಹಾಗೂ ಕೃಷಿ ಕಾರ್ಯಕ್ರಮಗಳನ್ನು ಕೈಗೊಂಡುದು ಗಮನಾರ್ಹ ವಿಷಯವಾಗಿದೆ. ಇಷ್ಟು ಕೋಟಿ ವೆಚ್ಚ ಮಾಡಿದ ಬಳಿಕವೂ ಈ ಅತ್ಯಂತ ಬಡ ವರ್ಗಗಳ ಜೀವನ ಪರಿಸ್ಥಿತಿಯೇಕೆ ಉತ್ತಮಗೊಳ್ಳಲಿಲ್ಲ? ಅವರ ಆದಾಯವೇಕೆ ಅಧಿಕಗೊಳ್ಳಲಿಲ್ಲ? ಅಷ್ಟೇ ಅಲ್ಲ. ಈ ವರ್ಗಗಳು ಯೋಜನೆಯ ಅಭಿವೃದ್ಧಿ ಕಾರ್ಯಕ್ರಮ ಪ್ರಾರಂಭವಾಗುವ ಒಂದು ದಶಕದಲ್ಲಿದ್ದುದಕ್ಕಿಂತ ಇಂದು ಹೆಚ್ಚು ಬಡವರಾಗಿದ್ದಾರೆ! ಅದರ ಅರ್ಥವೇನು? ಯೋಜನೆಗಳ ಪ್ರಯೋಜನಗಳು ಅವರ ಪಾಲಿಗೆ ಸೇರಲಿಲ್ಲ. ಕೋಟಿಗಟ್ಟಲೆ ಯಾರ ಅಭಿವೃದ್ಧಿಗಾಗಿ ವಿನಿಯೋಗ ಮಾಡಲ್ಪಟ್ಟಿದೆಯೋ ಅವರು ಪ್ರಯೋಜನ ಪಡದಿಲ್ಲ. ಹಾಗಾದರೆ ಆ ಹಣ ಆರ್ಥಿಕವಾಗಿ ಮುಂದುವರಿದ ಶ್ರೀಮಂತ ವರ್ಗಗಳಿಗೆ ಹೋಗಿರಬೇಕು. ಒಟ್ಟಿನಲ್ಲಿ ಶ್ರೀಮಂತರು ಈ ಯೋಜನೆಗಳ ಪ್ರಯೋಜನಗಳನ್ನು ಪಡೆದು ಮತ್ತೂ ಶ್ರೀಮಂತರಾಗಿದ್ದಾರೆ, ಈ ಯೋಜನೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಬಳಿಕವೂ ಬಡವರು ಬಡವರಾಗಿಯೇ ಉಳಿದಿದ್ದಾರೆ, ಅವರು ಮತ್ತೂ ಬಡವರಾಗಿದ್ದಾರೆ ಎಂಬುದು ಸತ್ಯ ಸಂಗತಿಯಾಗಿದೆ. ಇದಕ್ಕೆ ಸಂಬಂಧಿಸಿದ ಇನ್ನೊಂದು ಗಂಭೀರ ಪರಿಸ್ಥಿತಿಯು ನಿರುದ್ಯೋಗದ ಸಮಸ್ಯೆಯಾಗಿದೆ.

ಪ್ರತಿ ಯೋಜನಾವಧಿಯ ಅಂತ್ಯದಲ್ಲಿಯೂ ಉದ್ಯೋಗ ಅವಕಾಶಗಳು ಇರದೆ ಉಳಿಯುವ ಉದ್ಯೋಗಾಕಾಂಕ್ಷಿಗಳ ಸಂಖ್ಯೆಯು ಹೆಚ್ಚುವುದು ಕಂಡು ಬಂದಿದೆ. ಉದಾಹರಣೆಗಾಗಿ ದ್ವಿತೀಯ ಯೋಜನಾವಧಿಯಲ್ಲಿ ಉದ್ಯೋಗಗಳನ್ನು ಪಡೆಯಬೇಕಾಗಿದ್ದ ಸುಮಾರು ಒಂಭತ್ತು ಮಿಲಿಯ ಮಂದಿ ತೃತೀಯ ಯೋಜನೆಯ ಕಾಲದಲ್ಲಿಯೂ ನಿರುದ್ಯೋಗಿಗಳಾಗಿಯೇ ಉಳಿದಿದ್ದರು. ಕೃಷಿಕ ಕೂಲಿಯಾಳುಗಳಂತೆಯೇ ಈ ಬೃಹತ್ ವರ್ಗವು ಭಾರತದ ಅತ್ಯಂತ ಕನಿಷ್ಠ ಆದಾಯದ ಅತೃಪ್ತ ವರ್ಗವಾಗಿದೆ. ಆದಾಯ ಹೆಚ್ಚಳದ ಹಾಗೂ ಉದ್ಯೋಗಾವಕಾಶಗಳ ಆದರ್ಶಗಳನ್ನಿಟ್ಟು ಕೊಂಡಿರುವ ಪಂಚವಾರ್ಷಿಕ ಯೋಜನೆಗಳು ಈ ವರ್ಗಗಳ ಜೀವನ ಸ್ಥಿತಿಯನ್ನು ಸುಧಾರಿಸಲು ಅಸಮರ್ಥವಾಗಿವೆ.

ಇಂದು ಯೋಜನೆಗಳು ಮಹಾ ಪವಾಡಗಳನ್ನು ಮಾಡುವಂತೆ ಪ್ರಚಾರವಾಗುತ್ತಿದೆ. ಆದರೆ ಅವುಗಳ ಪರಿಶೀಲನೆಗಳು ಪ್ರತ್ಯಕ್ಷಪಡಿಸುವ ಪರಿಸ್ಥಿತಿಯೇ ಬೇರೆಯಾಗಿದೆ. ಇಂದೀಗ ನಮ್ಮ ರಾಷ್ಟ್ರೀಯ ಆದಾಯವು ೧೫,೦೦೦ ಕೋಟಿ ರೂಪಾಯಿಯಾಗಿದೆ ಎಂದು ಹೇಳಲಾಗುತ್ತಿದೆ. ಅದು ೧೯೫೧—೫೨ರಲ್ಲಿ ಯೋಜನೆಯು ಪ್ರಾರಂಭವಾಗುವ ವರ್ಷದಲ್ಲಿ ೯,೧೦೦ ಕೋಟಿಯಾಗಿತ್ತೇನೋ ನಿಜ, ನಮ್ಮ ರಾಷ್ಟ್ರೀಯ ಆದಾಯದ ಪಟ್ಟಿ ಇಂತಿದೆ

ವರ್ಷ	ರಾಷ್ಟ್ರೀಯ ಆದಾಯ	ತಲಾ ಆದಾಯ
೧೯೫೧—೫೨	೯,೧೦೦	೨೫೦.೩
೧೯೫೨—೫೩	೯,೪೬೦	೨೫೭.೭
೧೯೫೩—೫೪	೧೦,೩೮೦	೨೬೬.೨
೧೯೫೪—೫೫	೧೦,೨೮೦	೨೬೭.೮
೧೯೫೫—೫೬	೧೦.೪೮೦	೨೬೭.೮
೧೯೫೬—೫೭	೧೦,೮೯೦	೨೬೨.೮
೧೯೫೭—೫೮	೧೧,೬೫೦	೨೮೦.೧
೧೯೫೯—೬೦	೧೨,೮೬೦	೨೭೯.೨
೧೯೬೦—೬೧	೧೨ ೭೫೦	೨೯೩.೭
೧೯೬೧—೬೨	೧೩.೦೨೦	೨೯೩.೪

ಇಲ್ಲಿ ಹೇಳಲಾಗಿರುವ ತಲಾ ಆದಾಯವನ್ನು ಜನಸಂಖ್ಯೆಯ ಹೆಚ್ಚಳದ ಪ್ರಮಾಣಕ್ಕೆ ಸರಿಪಡಿಸಿ ಕೊಡಲಾಗಿದೆ. ಭಾರತೀಯ ಪ್ರಜೆಯ ತಲಾ ಆದಾಯವು ಇಂದು ೩೦೦ ರೂಪಾಯಿಗೆ ಮುಟ್ಟಿದರೂ ಅದು ಪಾಕಿಸ್ಥಾನ, ಸಿಂಹಳಗಳ ಪ್ರಜೆಗಳ ಆದಾಯಗಳಿಗಿಂತ ಕಡಿಮೆಯಾಗಿದೆ. ಇಂದು ಭಾರತದ ರಾಷ್ಟ್ರೀಯ ಆದಾಯವು ೧೫೦೦೦ ಕೋಟಿ ರೂಪಾಯಿಯಾಗಿರುವುದಾದರೂ ಅದು ಸುಮಾರು ೩೦೦೦ ದಿಂದ ೭೦೦೦ ಕೋಟಿ ರೂಪಾಯಿಯ ಮೌಲ್ಯದ "ಕಪ್ಪುಹಣ"ವನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ಹೇಳಲಾಗಿದೆ. ಇದೇ ಅವಧಿಯಲ್ಲಿ ಭಾರತದ ರಾಷ್ಟ್ರೀಯ ಸಾಲ ಬೃಹತ್ ರಾಕ್ಷಸ ರೂಪವನ್ನು ತಾಳಿದೆ. ೧೯೬೨ರಲ್ಲಿ ಈ ಸಾಲವು ೨,೩೩ ೨೯೬ ಲಕ್ಷ ರೂಪಾಯಿಯಾಗಿತ್ತು. ಈ ಮೌಲ್ಯಕ್ಕೆ ಭಾರತ ಸರಕಾರವು ವಿದೇಶಗಳಿಂದ ಪಡೆದಿದ್ದ ಸಾಲದ ಮೌಲ್ಯ ೩೦,೨೫೦ ಲಕ್ಷ ರೂಪಾಯಿಗಳನ್ನು ಕೂಡಿಸಿದರೆ ಭಾರತದ ಪ್ರತಿಯೊಬ್ಬ ಪ್ರಾಯಸ್ಥನ ತಲಾ ಸಾಲವು ೮೦ ರೂಪಾಯಿಯಷ್ಟಾಗುವುದು! ಈ ಎಲ್ಲಾ ಸಾಲ ವಿದೇಶಿ ಸಹಾಯದ ಬಳಿಕವೂ ನಮ್ಮ ಮಾಲು ಹೆಚ್ಚಾಗಿಲ್ಲ ಮಾತ್ರವಲ್ಲ, ಸಾಲ ಹೆಚ್ಚುತ್ತಿರುವುದು ಭಯಾನಕ ಭವಿಷತ್ತಿನ ಸರಳನ್ನು ನಮ್ಮ ಮೇಲೆ ನೀಡಿದಂತಿದೆ. ನಮ್ಮ ದೃಷ್ಟಿ ಧ್ಯೇಯ ಧೋರಣೆಗಳು ಪರಿಸ್ಥಿತಿಯನ್ನು ಅಲಕ್ಷಿಸಿ ಆದರ್ಶಗಳ ಮೇಲೆ ನಿಲ್ಲಲು ಸಾಧ್ಯವಿಲ್ಲ. ನಮ್ಮ ತಪ್ಪು ಕಲ್ಪನೆಗಳಿಂದ ನಮಗೆ ಹೆಚ್ಚು ಹಾನಿಯಾಗ ಬಹುದು. ನಮ್ಮ ಸಂಕುಚಿತ ಬುದ್ಧಿಯಿಂದ ನಮಗೆ ಬಹಳನಾದ ಅನ್ಯಾಯವಾಗ ಬಹುದು. ಇದೇ ನೀತಿ ರಾಷ್ಟ್ರಕ್ಕೂ ಅನ್ವಯವಾಗುತ್ತದೆ.

ಈ ದೃಷ್ಟಿಕೋನದಿಂದ ನಾವು ದೇಶದ ಪ್ರಗತಿಯನ್ನು ಅಳೆಯಬೇಕು. ಇದರಿಂದ ನಮ್ಮ ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಹಾಯವಿದೆ. ಜನರಿಗೆ ಸುಖವಿದೆ. ಯೋಜನೆಗಳು ಸರಕಾರದ, ಅದರ ಮಂಡಳಿಗಳ ಅಥವಾ ಸರಕಾರದ ಖಾತೆಗಳ ಪ್ರತಿಷ್ಠೆಗಳಗಲ್ಲ ಅಧಿಕಾರ ಪ್ರದರ್ಶನ ಕೃತ್ಯಲ್ಲ; ಅವುಗಳು ಇಂದಿರುವ ಜನರ ಜೀವನಾಭಿವೃದ್ಧಿಗಾಗಿ ಸಮೃದ್ಧಿಗಾಗಿ ಎಂದು ನಾವು ತಿಳಿಯುವುದು ಅಗತ್ಯವಿದೆ.

ನಮ್ಮ ಗ್ರಾಹಕರಿಗೆ — ಹಿತೈಷಿಗಳಿಗೆ

ಪ್ರಜಾರಾಜ್ಯ ದಿನದ ಹಾರ್ದಿಕ ಶುಭಾಶಯಗಳು

ಬೆಂಗಳೂರು ನಗರದ ಕೇಂದ್ರದಲ್ಲಿ

ಟೆಲಿಫೋನ್: 2968 ಎನ್. ಎಮ್. ಸಿ. **N. M. C.** ತಂತಿ: 'MYCAFE'

ನಿಯೋ ಮೈಸೂರು ಕೆಫೆ,

(ರಿಜಿಸ್ಟರ್ಡ್)

ಸಮರ್ಥರಾದ ಹೊಸ ಮ್ಯಾನೇಜರರ ಉತ್ಸಾಹೀ ಮೇಲ್ವಿಚಾರಣೆಯಲ್ಲಿ ನಡೆಯುವ ಅತ್ಯುತ್ತಮ ತರಗತಿಯ

ರೆಸ್ಟೋರೆಂಟ್, ಬೋರ್ಡಿಂಗ್ ಮತ್ತು ಲಾಜಿಂಗ್

ಕೆಂಪೇಗೌಡ ರೋಡ್ : : ಬೆಂಗಳೂರು—2.

ತುಪ್ಪದ ತಿಂಡಿತಿನಸುಗಳು, ಮಧುರವಾದ ಕಾಫಿ-ಟೀ, ಇತರ ಪಾನೀಯಗಳು, ಶುಚಿರುಚಿಯಾದ ಊಟ

ಮೆನೇಜಿಂಗ್ ಪಾರ್ಟ್‌ನರ್ — ಎ. ವಾಸುದೇವ ರಾವ್

VISIT: **NEO MYSORE CAFE** (REGD)

RESTAURANT, BOARDING & LODGING

KEMPEGOWDA ROAD : : BANGALORE-2

॥ ಅರಗು ॥

ಲೇಖಕರು:
ಶ್ರೀ ಎಂ. ಎಸ್. ಎಸ್. ರಾವ್, ಎಂ ಎಸ್‌ಸಿ, ಬಾಗಲಕೋಟೆ.

ಮಹತ್ವದ ಹಾಗೂ ಗೌಪ್ಯ ಕಾಯ್ದಿಡ ಬೇಕಾದ, ಮತ್ತು ನಿರ್ದಿಷ್ಟ ವ್ಯಕ್ತಿ ಮತ್ತು ಉದ್ದೇಶಗಳಿಗಷ್ಟೇ ಲಭ್ಯವಾಗ ಬೇಕೆನ್ನುವ ನೂರಾರು ಸಹಸ್ರಾರು ಸರಕಾರಿ ಅಥವಾ ಖಾಸಗೀ ಕಾಗದ ಪತ್ರಗಳನ್ನೂ ಸಣ್ಣ ಪುಟ್ಟ ವಸ್ತುಗಳನ್ನೂ ಅರಗಿನಿಂದ ಮೊಹರು ಒಂದು ಮಾಡಿ, ಅಂಚೆ ಮೂಲಕ ರವಾನಿಸುವಾಗ ಬಳಸುವ ವಿವಿಧ ಬಣ್ಣದ ಅರಗಿನ ಉತ್ಪಾದನೆಯ ಕಥೆ ಇಲ್ಲಿದೆ.

ಭಾರತದಲ್ಲಿ ಅರಗಿನ ವ್ಯವಸಾಯು ಬಹು ಪ್ರಾಚೀನವಾದುದು. ಇದಕ್ಕೆ ಸಂಬಂಧಿಸಿದ ಸೂಚನೆಗಳು ಅಥರ್ವವೇದದಲ್ಲಿಯೂ ಕಂಡುಬರುತ್ತವೆ. ಅದರಲ್ಲಿ ಅರಗಿಗೆ 'ಲಾಕ್ಷ' ಎಂಬ ಹೆಸರು ಸೂಚಿತವಾಗಿದೆ. ಪಾಶ್ಚಾತ್ಯ ಜಗತ್ತಿನೊಂದಿಗೆ ಇದರ ವ್ಯಾಪಾರ ೧೯ನೇ ಶತಮಾನದ ಆದಿ ಭಾಗದಿಂದಲೂ ನಡೆದು ಬಂದಿದೆ. ಭಾರತದಿಂದ 'ಶೆಲ್ಲಾಕ್' (Shellac) ಎಂಬ ಹೆಸರಿನಿಂದ ಅರಗಿನ ರಫ್ತು ವ್ಯಾಪಾರ ಕಳೆದ ಶತಮಾನದ ಅಂತ್ಯ ಭಾಗದಿಂದ ವಿಪರೀತವಾಗಿ ಊರ್ಜಿತವಾಯಿತು; ಏಕೆಂದರೆ, ಈ ಅರಗನ್ನು ಗ್ರಾಮೋಫೋನ್ ರಿಕಾರ್ಡುಗಳು, ಫ್ರೆಂಚ್ ಪಾಲಿಶ್ ವಿದ್ಯುಚ್ಛಕ್ತಿ ಸೈಗಾರಿಕೆ ಇತ್ಯಾದಿಗಳಲ್ಲಿ ವಿಶೇಷವಾಗಿ ಬಳಸಲಾಗುತ್ತದೆ. "ಶೆಲ್ಲಾಕ್" ಎಂಬುದು ವಿವಿಧೋದ್ದೇಶದ ರಾಳವಾಗಿದ್ದು ವಿಜ್ಞಾನ ಮತ್ತು ಉದ್ದಿಮೆಗಳಿಗೆ ಸಾಕಷ್ಟು ಮಹತ್ವದ ಮೂಲ ವಸ್ತುವಾಗಿ ಪ್ರಯೋಜನಕ್ಕೊಟ್ಟಿದೆ. ಅಷ್ಟೇ ಅಲ್ಲದೆ ಎರಕ ಹೊಯ್ಯುವ ಸಂಯುಕ್ತ ಘಟಕಗಳಲ್ಲಿ ವಾರ್ನಿಷ್‌ಗಳಲ್ಲಿ ಬಣ್ಣ, ಅಂಟಿನ ಸಂಬಂಧದ ವಸ್ತುಗಳು, ಸಿಮೆಂಟ್ ಮುಂತಾದುವುಗಳ ಉತ್ಪಾದನೆಯಲ್ಲಿ ಬಹು ವ್ಯಾಪಕವಾಗಿಯೂ ಬಳಸಲ್ಪಡುತ್ತಿದೆ. ಇತ್ತೀಚಿನ ವರೆಗೆ ರಫ್ತು ಮಾಡಲಾಗುವ ವಸ್ತುಗಳ ಯಾದಿಯಲ್ಲಿ ಅರಗಿಗೆ ಹತ್ತನೆಯ ಸ್ಥಾನ ದೊರತಿತ್ತು. ಮೇಲಾಗಿ ದೇಶಕ್ಕೆ ವರ್ಷಂಪ್ರತಿ ಸುಮಾರು ೧೧ ಕೋಟಿ ರೂಪಾಯಿಗಳನ್ನು ವಿದೇಶ ವಿನಿಮಯ ರೂಪದಲ್ಲಿ ಒದಗಿಸುತ್ತದೆ. ಅದೂ ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಅರಗಿನ ಉತ್ಪಾದನೆ ಒಂದು ಮುಖ್ಯ ಪೂರಕ ಉತ್ಪಾದನೆಯ ಮೂಲವೂ ಹೌದು!

ಈ ಅರಗು "ಲಾಕ್ಸಿಫೆರ್ ಲ್ಯಾಕ್ಕ" ಎಂಬ ಒಂದು ತಿಗಣೆಯಂತಹ ಕೀಟದ ಗ್ರಂಥಿಗಳಿಂದ ಸ್ರವಿಸಲ್ಪಟ್ಟ ಒಂದು ಬಗೆಯ ರಾಳದಂತಹ ವಸ್ತು. ಈ ಕೀಟವು ಅರಗುಗಳ ತವರು ಮನೆಯೆನಿಸಿಕೊಂಡ ಮತ್ತು ಅವುಗಳ ರಸವೇ ಕೀಟಗಳ ಆಹಾರವಾಗಿರುವ ಕೆಲವು ಬಗೆಯ ಸಸ್ಯಗಳ ಮೇಲೆ ಒಂದು ಪರೋಪ ಜೀವಿಯಂತೆ ಜೀವಿಸುತ್ತದೆ. ಇಂತಹ ಕೀಟವು ತಾನು ಇನ್ನೂ ಮರಿಯ ಅವಸ್ಥೆ (larva)ಯಲ್ಲಿ ಇರುವಾಗಿನಿಂದಲೇ ತನಗೆ ಆಶ್ರಯ ಕೊಡುವ ಮರದ ತೊಗಟೆಯೊಳಗೆ ತನ್ನ ಸೂಂಡಿಯನ್ನು (Proboscis) ಒಳನುಗಿಸಿ, ಆ ಮರದ ರಸವನ್ನು ಹೀರಿಕೊಳ್ಳುತ್ತಲೇ ಹಾಗಿ ತನ್ನ ದೇಹದ ಸುತ್ತಲೂ ತಾನು ಸಾಯುವವರೆಗೂ ಅರಗನ್ನು ಸ್ರವಿಸುತ್ತಲೇ ಇರುತ್ತದೆ. ಇಂತಹ ಅರಗು ಆ ಕೀಟಕ್ಕೆ ನಿಜವಾಗಿಯೂ ಒಂದು ಬಗೆಯ ರಕ್ಷಣೆಯ ಸ್ನೀವ ಕವಚವೇ ಆಗುತ್ತದೆ. ತನ್ನ ಆಯುಷ್ಯದ ಕಡೆಯ ಭಾಗವನ್ನು ಪ್ರಜನನ ಕಾರ್ಯಕ್ಕೇ ಮೀಸಲಾಗಿರಿಸುವ ಗಂಡು ಜಾತಿಯ ಕೀಟವನ್ನು ಹೊರತುಪಡಿಸಿ ಉಳಿದೆಲ್ಲ ಕೀಟವು ಚಲನ ರಹಿತವಾಗಿದ್ದು ತನ್ನ ಪ್ರಸ್ರವಣದಿಂದಲೇ (ರಸದಿಂದಲೇ) ರೂಪುಗೊಂಡ ಅರಗಿನ ಕೋಶದಲ್ಲಿ ಏಕಾಂಗಿಯಾಗಿ ತನ್ನ ಜೀವನದ ಇಡೀ ಭಾಗವನ್ನೇ ಕಳೆಯುತ್ತದೆ. ಆ ಕೋಶಗಳಾದರೋ ಒಂದಕ್ಕೊಂದು ಅತಿ ಸಮೀಪದಲ್ಲಿದ್ದು, ಕ್ರಮೇಣ ಒಂದು ಮತ್ತೊಂದರೊಡನೆ ಅಂಟಿಕೊಳ್ಳುತ್ತ, ಒಂದು ಸುದೀರ್ಘವಾದ ಅರಗಿನ ಕವಚದಂತೆ (ಹೊದಿಕೆ) ತೋರಿಕೆಗೆ ಕಂಡು ಬರುತ್ತದೆ; ಅಂದ ಮೇಲೆ ಅರಗಿನ ಉತ್ಪಾದನೆ ಅಥವಾ ವ್ಯವಸಾಯವೆಂಬುದು ಇಂತಹ ಅರಗಿನ ಹುಳುಗಳನ್ನು ಪೀಳಿಗೆಯಿಂದ ಪೀಳಿಗೆಗೆ ಬೆಳೆಸುವುದೇ ಎನ್ನುವುದು ಸ್ಪಷ್ಟವಿದೆ.

ಪ್ರಾಯೋಗಿಕ ಉದ್ದೇಶಗಳ ದೃಷ್ಟಿಯಿಂದ 'ಕುಸುಮಿ' ಮತ್ತು 'ರಂಗೀಣಿ' ಎಂಬ ೨ ಜಾತಿಯ ಅರಗಿನ ಹುಳುಗಳನ್ನು ನಾವು ನೋಡಬಹುದು. "ಕುಸುಮಿ" ಎಂಬ ಜಾತಿಯ ಅರಗಿನ ಹುಳು "ಕುಸುಮ್" ಎಂಬ ಗಿಡದಲ್ಲಿಯೇ ವಾಸಿಸುತ್ತ ವೃದ್ಧಿಯಾಗುತ್ತದೆ. "ರಂಗೀಣಿ" ಎಂಬ ಜಾತಿಯ ಹುಳು "ಕುಸುಮ" ಎಂಬ ಗಿಡವನ್ನು ಬಿಟ್ಟು—ಬಾರಿ, ತೊಗರಿ, ಜಾಲಿ, ಬೋರಿ ಇತ್ಯಾದಿ ಗಿಡಗಳ ಮೇಲೆ ಬೆಳೆಯುತ್ತದೆ.

ಈ ಎರಡೂ ಜಾತಿಯ ಅರಗಿನ ಹುಳುಗಳು ವರ್ಷಕ್ಕೆ ಎರಡು ಬಾರಿ ತಮ್ಮ ಜೀವನ ಚಕ್ರವನ್ನು ಮುಗಿಸುತ್ತವೆ ಅಂತೆಯೇ ಒಂದೊಂದು ಸಾರಿಯೂ ಜೀವನ ಚಕ್ರದಲ್ಲಿ ಒಂದು ನಿರ್ದಿಷ್ಟ ಮೊತ್ತದ ಅರಗು ಉತ್ಪಾದನೆಗೊಳ್ಳುತ್ತದೆ. ಆದ್ದರಿಂದ ಒಟ್ಟಿನಲ್ಲಿ ವರ್ಷಕ್ಕೆ ೪ ಸಲ ಅರಗಿನ ಉತ್ಪಾ

ದಿ ಶಂಕರ್ ಟ್ರಾನ್ಸ್‌ಪೋರ್ಟ್ ಕಂ. (ಪ್ರೈ) ಲಿಮಿಟೆಡ್
ಕೊಪ್ಪ - ಕಡೂರು
(ಚಿಕ್ಕಮಗಳೂರು ಜಿಲ್ಲೆ)

ಹದಿನೈದನೆಯ ಗಣರಾಜ್ಯ ದಿನದಂದು
ನಾವು ನಮ್ಮೆಲ್ಲರ ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ,
ಪ್ರಯಾಣಿಕರಿಗೂ ಮತ್ತು ನಾಗರಿಕರಿಗೂ ಸಹ
ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನರ್ಪಿಸಲು
ಸಂತೋಷ ಪಡುತ್ತೇವೆ.

ಎ. ರಮೇಶ ರಾವ್
ಡೈರೆಕ್ಟರ್ ಇನ್-ಚಾರ್ಜ್.

ದನೆಯಾಗಬಲ್ಲದೆಂದು ಹೇಳಿದ ಹಾಗಾಯಿತು—ಎರಡು ಸಲ "ಕುಸುಮಿ" ಮತ್ತು ಎರಡು ಸಲ "ರಂಗೀಣಿ" ಎಂಬ ಹುಳುಗಳಿಂದ. ಮೇಲಾಗಿ "ಕುಸುಮಿ" ಎಂಬ ಹುಳುಗಳಲ್ಲಿ ೨ ಜೀವನ ಚಕ್ರಗಳು ಸುಮಾರು ಒಂದೇ ಅವಧಿಯುಳ್ಳದ್ದಾಗಿರುತ್ತವೆ. ರಂಗೀಣಿ ಎಂಬ ಹುಳುಗಳಲ್ಲಿ ಈ ಅವಧಿಯು ತೀರ ಭಿನ್ನವಾಗಿದ್ದು ಒಂದು ಅಲ್ಪ ಕಾಲದ್ದಾದರೆ, ಇನ್ನೊಂದು ಅದರ ಎರಡರಷ್ಟು ದೀರ್ಘ ಕಾಲದ್ದಾಗಿರುತ್ತದೆ. ಕುಸುಮಿ ಹುಳುಗಳಿಂದ ಅರಗಿನ ಉತ್ಪಾದನೆ ೨ ಸಲ ಆಗುತ್ತದೆ. ಜನವರಿ-ಫೆಬ್ರುವರಿಯಿಂದ ಜೂನ್-ಜುಲಾಯಿ ವರೆಗೆ ಒಂದು ಸಾರೆ; ಜೂನ್-ಜುಲೈನಿಂದ ಜನವರಿ-ಫೆಬ್ರುವರಿ ವರೆಗೆ ಇನ್ನೊಂದು ಸಾರೆ. ಇದೇ ರೀತಿ ರಂಗೀಣಿ ಹುಳುಗಳಿಂದ ಬರುವ ಉತ್ಪಾದನೆ ಅಕ್ಟೋಬರ್-ನವೆಂಬರ್‌ನಿಂದ ಜೂನ್-ಜುಲೈ ವರೆಗೆ ಒಂದು ಸಾರೆ ಮತ್ತು ಜೂನ್-ಜುಲೈನಿಂದ ಅಕ್ಟೋಬರ್-ನವೆಂಬರ್ ವರೆಗೆ ಇನ್ನೊಂದು ಸಾರೆ.

ಈ ಅರಗಿನ ಯಶಸ್ವೀ ಉತ್ಪಾದನೆಗೆ ಸಾಕಷ್ಟು ಪರಿಶೀಲನೆ ಹಾಗೂ ಲಕ್ಷ್ಯ ಅವಶ್ಯವಿರುವುದೆಂಬುದು ಸ್ಪಷ್ಟವೇ ಇದೆ. ಅದರ ಬಗ್ಗೆ ವಹಿಸಬೇಕಾದ ಕೆಲವು ಕ್ರಮಗಳು ಇಂತಿರುತ್ತವೆ:—

೧) ಕೀಟಗಳನ್ನು ಆರೋಗ್ಯ ಸನ್ನಿವೇಶಗಳಲ್ಲಿ ಸಾಕುವುದು.

೨) ಆಹಾರ ಹಾಗೂ ಆಶ್ರಯ ನೀಡಲು ಅವಶ್ಯವಿರುವ ಮರಗಳನ್ನು ಅಭಿವೃದ್ಧಿಗೊಳಿಸುವುದು.

೩) ಈ ಅರಗಿನ ಹುಳುಗಳಿಗೆ ಕಂಟಕಪ್ರಾಯವಾದ ಇತರ ಕೀಟಗಳನ್ನು ನಾಶಪಡಿಸುವುದು.

೪) ಅರಗಿನ ಹುಳುಗಳಿಗೆ ಯೋಗ್ಯವಾದ ವಾಯುಗುಣ ಮತ್ತು ವಾತಾವರಣವನ್ನು ನಿರ್ಮಿಸಿ ಅವನ್ನು ಸಲಹುವುದು ಇತ್ಯಾದಿ.

ಅರಗಿನ ವ್ಯವಸಾಯ

ಪ್ರತಿಯೊಂದು ಹೆಣ್ಣು ಅರಗಿನ ಹುಳು ಒಂದೊಂದು ಜೀವಕೋಶದಲ್ಲಿದ್ದುಕೊಂಡು ದೊಡ್ಡವಾದ ಮೇಲಿ ತತ್ತಿಗಳನ್ನು ಇಡಲಾರಂಭಿಸುತ್ತದೆ. ಈ ತತ್ತಿಗಳು ಮುಂದೆ "ಲಾರ್ವ" ಎಂಬ ಮರಿಗಳಾಗುತ್ತವೆ. ಇಂತಹ ಮರಿಗಳು (Larvae) ತತ್ತಿಗಳಿಂದ ಹೊರಬಂದು ಸ್ವಲ್ಪ ವೇಳೆಯಲ್ಲಿಯೇ ಹೆಣ್ಣು ಹುಳುವಿನ ದೇಹದ ಒಂದು ರಂಧ್ರದಿಂದ ಒಂದೊಂದಾಗಿ ಹೊರ ಬರಲಾರಂಭಿಸುತ್ತವೆ. ಒಂದೊಂದು ಹೆಣ್ಣು ಹುಳುವೂ ಸುಮಾರು ಒಂದೊಂದು ಸಾವಿರ ಮರಿಗಳಿಗೆ ಜನ್ಮ ಕೊಡಬಹುದು. ಆದರೆ ಸಾಮಾನ್ಯವಾಗಿ ಒಂದೊಂದು ಹೆಣ್ಣು ಹುಳುವು ಸರಾಸರಿ ೨೫೦ರಿಂದ ೫೦೦ ಮರಿಗಳಿಗೆ ಎಡೆಮಾಡಿಕೊಡುತ್ತವೆ. ಆದ್ದರಿಂದ ಅರಗಿನಿಂದ ಆಚ್ಛಾದಿತವಾದ ಸಸ್ಯದ ಕಡ್ಡಿಯು ಕೆಲವೇ ಅಂಗುಲಗಳಷ್ಟು ಉದ್ದವಾಗಿದ್ದರೂ ಅದರಲ್ಲಿ ಅಸಂಖ್ಯಾತ ಜೀವ ಕೋಶಗಳಿರುತ್ತವೆ; ಅಂತೆಯೇ ಹೊರ ಬರುವ ಮರಿಗಳ ಸಂಖ್ಯೆಯೂ ಅಪಾರ. ಇವು ಕಡ್ಡಿಯ ಮೇಲೆ ಚಂದ್ರ ಬಣ್ಣದ ಹುಡಿಯ ಗಂಟು ಗಂಟಿನಂತೆ ಹಾಗೂ ಕವಚದಂತೆ ಸಿದ್ಧವಾಗಿರುತ್ತವೆ. ಈ ಕವಚವು ಸೂಕ್ಷ್ಮ ಹಾಗೂ ಮೃದು ಶರೀರವುಳ್ಳ ಜೀವಿಗಳಿಂದಾಗಿ, ಅವು ಹೊಸ ಹೊಸ ಸನ್ನಿವೇಶಗಳನ್ನು ಹುಡುಕುತ್ತ, ಅತ್ತಿತ್ತ, ಚಲಿಸಲಾರಂಭಿಸುತ್ತವೆ. ಹೀಗೆ ಅರಗಿನ ಕಡ್ಡಿಗಳಿಂದ ದೊಡ್ಡ ಪ್ರಮಾಣದಲ್ಲಿ ಹೊರ ಬರುವ ಮರಿಗಳು (ಸಮುದಾಯಗಳಲ್ಲಿ) ಅಥವಾ ಹಿಂಡು ಹಿಂಡಾಗಿ ಹರಿದಾಡುತ್ತವೆ. ಹೀಗೆ ಮರಿಗಳು ಗುಂಪು ಗುಂಪಾಗಿ ಚಲಿಸುತ್ತಿರುವ ಅಥವಾ ಚಲಿಸುವುದರಲ್ಲಿರುವ ಅರಗಿನ ಕಡ್ಡಿಗೆ "ಬ್ರೂಡ್‌ಲ್ಯಾಕ್" (Brood Lac) ಎಂದು ಹೆಸರು.

ಇಂತಹ "ಬ್ರೂಡ್ ಲ್ಯಾಕ್" ಗಳ ತುಂಡುಗಳನ್ನು ಇತರ ಆಶ್ರಯವನ್ನೀವ ಮರಗಳ ಕೊಂಬೆಗಳ ಮೇಲೆ ಇಟ್ಟಾಗ ಆ ಮರದ ಮೇಲೆ ತಾಯಿ ಕೋಶಗಳಿಂದ ಹೊರಬರುವ ಮರಿಗಳು ಕೂತು ಕ್ರಮೇಣ ತನ್ನದೇ ಆದ ಹೊಸ ಸಂತತಿಯನ್ನು ಉತ್ಪಾದಿಸುವುದು. ಇವನ್ನೆಲ್ಲ ಕೈಕೊಳ್ಳುವುದು ಅರಗಿನ ವ್ಯವಸಾಯದಲ್ಲಿ ಇರುವ ಕೆಲವು ಮುಖ್ಯ ವಿಧಿ ವಿಧಾನಗಳು. ಈ ರೀತಿ "ಬ್ರೂಡ್ ಲ್ಯಾಕ್"ಗಳನ್ನು ಹೊಸ ಆಶ್ರಯದಾತ ಮರಗಳಿಗೆ ಅಂಟಿಸುವುದಕ್ಕೆ "ಸೋಂಕಿಸುವದು" (Infection) ಎಂದು ಹೆಸರು. ಅರಗಿನ ವ್ಯವಸಾಯದಲ್ಲಿ ಈ "ಬ್ರೂಡ್ ಲ್ಯಾಕ್" ಎಂಬುದೇ ಅತ್ಯಂತ ಮಹತ್ವದ್ದಾಗಿರುತ್ತದೆ. ಮೇಲಾಗಿ ಅದು ಪೂರ್ಣ ಬೆಳವಣಿಗೆ ಹೊಂದಿ ಆರೋಗ್ಯವಾಗಿದ್ದರೇನೇ ಸರಿ; ಇಲ್ಲದಿದ್ದರೆ ಮುಂದಿನ ಸಂತತಿಗಳು ನಿಸ್ಸತ್ವವೂ ಮತ್ತು ಶಕ್ತಿ ಹೀನವೂ ಆಗಿ, ಕ್ರಮೇಣ ಆವಲ್ಲ ನಿರ್ನಾಮದ ಹಾದಿಯನ್ನು ತುಳಿಯುತ್ತವೆ; ಇಲ್ಲವೇ ಅತ್ಯಲ್ಪ ಅರಗನ್ನು ಉತ್ಪಾದಿಸುತ್ತವೆ.

ಈ "ಬ್ರೂಡ್ ಲ್ಯಾಕ್" ನ್ನು ಸಂಗ್ರಹಿಸುವಾಗ ಸಾಕಷ್ಟು ಯೋಗ್ಯ ಲಕ್ಷ್ಯ ವಹಿಸುವುದು ಅವಶ್ಯ. ಅವನ್ನು ಸಾಕಷ್ಟು ಗಾಳಿ, ಬೆಳಕು ಇರುವ ಕಡೆ ಮತ್ತು ತಂಪಾದ ಅಥವಾ ನೆರಳಿರುವ ಜಾಗದಲ್ಲಿಡಬೇಕು. ಮಳೆ ಅಥವಾ ನೀರಿಗೆ ಒಡ್ಡಬಾರದು. ಮುಚ್ಚಿದ ಬುಟ್ಟಿ ಅಥವಾ ಚೀಲಗಳಲ್ಲಿ ಇಡಬಾರದು; ಏಕೆಂದರೆ, ಆ ಹುಳುಗಳ ಅತಿಸೂಕ್ತ ವಿಸರ್ಜನಾ ದ್ವಾರದಿಂದ ಹೊರ ಬರುವ ಮರಿಗಳು ಸುಖವಾಗಿ ಬರದಂತೆ, ಇವು ಕಡಿಯೊಡ್ಡಿ ಅಲ್ಲಿ ಕೆಲವು ಬಗೆಯ ಬೂಷ್ಟುಗಳು ಉತ್ಪತ್ತಿಯಾಗುತ್ತವೆ.

"ರಂಗೀಣಿ"ಯಲ್ಲಿ ಬೇಸಿಗೆಯ ಬೆಳೆಗಳಿಂದ ಜೂನ್—ಜುಲೈ ತಿಂಗಳುಗಳಲ್ಲಿ ಪಕ್ವವಾಗುವ 'ಬ್ರೂಡ್ ಲ್ಯಾಕ"ನ್ನು ದೊರಕಿಸುವುದು ಕಷ್ಟಸಾಧ್ಯವೇ ಸರಿ! ಅಂತಹ ಹುಳುಗಳಿಗೆ ಸಂಬಂಧಿಸಿದ ಆಶ್ರಯದಾತ ಮರಗಳಲ್ಲಿ, ಮೇಲೆ ಹೇಳಿದ ಅವಧಿಯಲ್ಲಿ ಸಾಮಾನ್ಯವಾಗಿ ಬೇಸಿಗೆಯಲ್ಲಿ ಎಲೆಗಳು ಉದುರಿ ಹೋಗುತ್ತವೆ. ಈ ವೇಳೆಯಲ್ಲಿ ಅರಗು ಬೇಸಿಗೆಯ ಉಷ್ಣತೆಯ ಪ್ರಖರಕ್ಕೆ ಎರವಾಗುವುದರಿಂದ ಕೀಟಗಳು ಅತಿ ದೊಡ್ಡ ಸಂಖ್ಯೆಯಲ್ಲಿ ಸಾವನ್ನಪ್ಪುತ್ತವೆ. ಇದರಿಂದಲೇ ಈ ಅರಗನ್ನು ವಿಶೇಷವಾಗಿ ಎಪ್ರಿಲ್—ಮೇ ತಿಂಗಳುಗಳಲ್ಲಿಯೇ (ಜೂನ್—ಜುಲೈ ತಿಂಗಳುಗಳಲ್ಲಿ) ಕಲೆ ಹಾಕುವರು. ಬ್ರೂಡ್ ಅರಗಿನ ಕ್ಷೀಣತೆ ಹೆಚ್ಚಾಗಿ, ಕಾತಕಿ ಬೆಳೆಯ ಕ್ಷೀಣತೆ ಮತ್ತು ಅನೇಕ ವೇಳೆ ಅದರ ಸಂಪೂರ್ಣ ಅಭಾವದಿಂದಾಗುತ್ತದೆ; ಏಕೆಂದರೆ ಪೂರ್ಣ ಬೆಳವಣಿಗೆ ಹೊಂದದ ಅರಗಿನಿಂದ ಬ್ರೂಡ್ ಅರಗಿನ ತಯಾರಿಕೆ ಸಾಧ್ಯವಿಲ್ಲ. ಇಂತಹ ಒಂದು ಸಮಸ್ಯೆಯನ್ನು ಅನೇಕ ವಿಧವಾಗಿ ಬಗೆ ಹರಿಸಲಾಗುತ್ತಿದೆ.

೧. ಬಾರಿ ಗಿಡದಂತಹ ಆಶ್ರಯ ಗಿಡವನ್ನು ಕತ್ತರಿಯಿಂದ ಅರ್ಧಮರ್ಧ ತಲೆ ಸವರುವುದು; ಅರಗಿನ ಹುಳುಗಳು ಕೂಡುವುದಕ್ಕಿಂತ ಸ್ವಲ್ಪ ಮುಂಚೆಯೇ (ಅಂದರೆ ಅಕ್ಟೋಬರ್ ತಿಂಗಳಲ್ಲಿ) ಅಥವಾ ಹುಳುಗಳು ಕೂತ ಮೇಲೆ (ಅಂದರೆ, ಡಿಸೆಂಬರ್ ತಿಂಗಳಲ್ಲಿ), ಅರ್ಧಮರ್ಧ ಗಿಡವನ್ನು ಕತ್ತರಿಸುವುದರಿಂದ ಬೇಸಿಗೆಯಲ್ಲಿ ಹೊಸ ಎಲೆಗಳು ಸ್ವಲ್ಪ ಪೂರ್ವ ಯೋಜಿತವಾಗಿಯೇ ಉತ್ಪತ್ತಿಯಾಗುತ್ತವೆ. ಇದರಿಂದ ಅರಗಿನ ಉತ್ಪಾದನೆಗೆ, ಅಂದರೆ ಹುಳುಗಳು ಬೆಳವಣಿಗೆಗೆ ಸಾಕಷ್ಟು ರಕ್ಷಣೆ ದೊರೆಯುತ್ತದೆ.

೨. ಕೃತಕ ವಿಧಾನಗಳಿಂದ ಅರ್ಧಮರ್ಧ ಎಲೆಗಳನ್ನು ಕೀಳುವುದು; ಅಕ್ಟೋಬರ್—ನವೆಂಬರ್ ತಿಂಗಳೊಳಗೆ ಹುಳುಗಳು ಕೂಡುವ ಮೊದಲೇ ಗಿಡದ ಎಲೆಗಳನ್ನು ಅರ್ಧಮರ್ಧ ಕಿತ್ತಿ ಹಾಕಿದರೆ ಬೇಸಿಗೆ ಪ್ರಾರಂಭವಾಗುವುದರೊಳಗೇ ಹೊಸ ಎಲೆಗಳು ಹುಟ್ಟುತ್ತವೆ. ಇದರಿಂದ ಅರಗಿನ ಹುಳುಗಳಿಗೆ ಸೂರ್ಯನ ಪ್ರಖರ ಕಿರಣಗಳು ಮತ್ತು ಬಿಸಿಗಾಳಿ ಇವೆರಡರಿಂದಲೂ ರಕ್ಷಣೆ ದೊರೆಯುತ್ತದೆ.

"ಕುಸುಮ್" ಎಂಬುದು ಸದಾ ಹಸುರೆಲೆಯುಳ್ಳ ಮರವಾದ್ದರಿಂದ ಬೇಸಿಗೆಯ ಸಮಸ್ಯೆ ಅದರಲ್ಲಿ ಅಷ್ಟಾಗಿ ಎದ್ದು ಕಾಣುದಿಲ್ಲ. ಆದರೆ ಕೆಲವು ವೇಳೆ ಮಾತ್ರ ಅಸಾಧಾರಣವಾದ ಶೈತ್ಯಗಾಳಿ ಮತ್ತು ಅದರ ಜತೆಗೆ ಸತತ ಚಳಿಗಾಲದ ಮಳೆ ಅರಗಿನ ಹುಳುಗಳ ಮರಿಗಳು ಹೊರ ಬರುವುದನು ತಪ್ಪಿಸುತ್ತವೆ. ಹೀಗಾಗಿ ಆ ಮರಿಗಳು ತಮ್ಮ ತಾಯಿಕೋಶಗಳಲ್ಲಿಯೇ ಸತ್ತು ಹೋಗುತ್ತವೆ. ಇಂತಹ ಒಂದು ಅನನುಕೂಲತೆಯನ್ನು ತಪ್ಪಿಸಲು ಬ್ರೂಡ್ ಅರಗಿನ ತುಂಡುಗಳನ್ನು ರಾತ್ರಿ ವೇಳೆ ಬೆಚ್ಚನೆಯ ಪ್ರದೇಶಗಳಲ್ಲಿ ಅಂದರೆ ಒಲೆಯ ಹತ್ತಿರ ಇಡಲಾಗುತ್ತದೆ. ಆಗ ಮರಿಗಳು ಹೊರಬರುತ್ತವೆ. ಆನಂತರ ಇಂತಹ ತುಂಡುಗಳನ್ನು ಮರಗಳಿಗೆ ಕಟ್ಟಲಾಗುತ್ತದೆ. ಇದರಿಂದ ಮರಿಗಳು ಯಥಾ ರೀತಿ ಬೆಳೆದು ಹೆಚ್ಚೆಚ್ಚು ಅರಗನ್ನು ಉತ್ಪಾದಿಸಬಲ್ಲವು.

ಅರಗಿನ ಹುಳುಗಳಿಗೆ ಆಹಾರ ಪೂರೈಕೆಯು ಸಮರ್ಪಕವಾಗಿರಬೇಕಾದರೆ—ಅವುಗಳಿಗೆ ಆಶ್ರಯ ನೀಡುವ ಮರಗಳು ಆರೋಗ್ಯವಾಗಿದ್ದು, ಸಾಕಷ್ಟು ಮೃದು ಹಾಗೂ ರಸಭರಿತವಾದ ಕಾಂಡವನ್ನೂ ಪಡೆದಿರಬೇಕು. ಯೋಗ್ಯರೀತಿ ಮತ್ತು ನಿರ್ದಿಷ್ಟ ಅವಧಿಯಲ್ಲಿ ಗಿಡವನ್ನು ಕಸಿಮಾಡುವುದರಿಂದ ಮೇಲಿನ ಉದ್ದೇಶವನ್ನು ಸಾಧಿಸಬಹುದು. ಮೊದಲ ಬಾರಿಗೆ ಗಿಡಗಳ ಮೇಲೆ ಅರಗಿನ ಹುಳುಗಳನ್ನು ಉತ್ಪಾದಿಸುವಾಗ ಆ ಗಿಡಗಳನ್ನು ಕಸಿ ಮಾಡುವುದು ಬಹಳ ಅವಶ್ಯವಿದೆ.

ಅರಗಿನ ಉತ್ಪಾದನೆಯು ಶೇಕಡ ೪೦-೫೦ ರಷ್ಟು ಕಡಿಮೆಯಾಗಲು ಅವುಗಳಿಗೆ ಮಾರಕವಾದ ಕೆಲವು ಹುಳುಗಳೇ ಬಹುಮಟ್ಟಿಗೆ ಕಾರಣವಾಗಿರುತ್ತವೆ. ಈ ಶತ್ರುಗಳು ಎರಡು ವಿಧ; ೧) ಪರೋಪ ಜೀವಿಗಳು ಮತ್ತು ೨) ಧಾಳಿಕಾರರು. ಪರೋಪ ಜೀವಿಗಳು ಅರಗಿನ ಹುಳುಗಳ ದೇಹದಲ್ಲಿ ತಮ್ಮ ತತ್ತಿಗಳನ್ನು ಇಡುತ್ತವೆ. ಆ ತತ್ತಿಗಳಿಂದ ಹೊರಬರುವ ಮರಿಗಳು ಅರಗಿನ ಹುಳುಗಳ ದೇಹದಲ್ಲಿರುವ ಆಹಾರ ವಸ್ತುವನ್ನು ಸೇವಿಸುತ್ತ ಕಡೆಗೆ ಅರಗಿನ ಹುಳುಗಳನ್ನೇ ನಿರ್ನಾಮ ಮಾಡುತ್ತವೆ. ಧಾಳಿಕಾರ ಕೀಟಗಳು ಬಿಳಿ ಮತ್ತು ಕಪ್ಪು ಮಿಶ್ರಿತ ಬೂದುಬಣ್ಣವುಳ್ಳದ್ದಾಗಿರುತ್ತದೆ.

ಇಂತಹ ಪಿಡುಗು ಕೀಟಗಳನ್ನು ನಿಯಂತ್ರಿಸಲು ಕೆಲವು ಕೃತಕ ಹಾಗೂ ಸುಧಾರಿತ ಉತ್ಪಾದಕ ವಿಧಾನಗಳನ್ನು ಬಳಕೆಗೆ ತರಲಾಗುತ್ತದೆ.

(ಸಾಧಾರ)

ಪರರ ಬಗೆಗೆ
ಅನಗತ್ಯವಾದ
ಟೀಕೆಗಳು ಸಾಕು.
ಎಲ್ಲರೂ ಜತೆಗೂಡಿ
ವಿಶ್ವಾಸ, ಅಭಿಮಾನ
ಬೆಳೆಸಿಕೊಳ್ಳೋಣ.
ಆದೇ ದೇಶದ
ರಕ್ಷಣೆಗೆ ಬುನಾದಿ.

ಪೋಸ್ಟ್ ಬಾಕ್ಸ್ ನಂಬ್ರ 41 ಫೋನ್ 112

ನಿಮಗೆ ಬೇಕಿರುವ ಕಾರು, ವ್ಯಾನು, ಟ್ರಕ್ಕ್ ಮತ್ತು ಬಸ್ಸುಗಳ ಹೊಸ ಟೈರುಗಳು ಅತ್ಯಂತ ಪೈಪೋಟಿ ದರದಲ್ಲಿ ದೊರೆಯುತ್ತೆ.

ಅಲ್ಲದೆ ಹಳೆ ಟೈರುಗಳನ್ನು ಖಾತ್ರಿಯಾಗಿ ರಿಬಿಲ್ಡ್ ಮಾಡಿ ಕೊಡಲಾಗುವುದು.

ಮಾತ್ರವಲ್ಲದೆ ಲ್ಯಾಂಬ್ರಟ್ಟ, ಸ್ಕೂಟರ್ ಸರ್ವಿಸಿಂಗ್ ಮತ್ತು ರಿಪೇರಿಂಗ್ ಮಾಡಿಕೊಡಲಾಗುವುದು.

ಕರ್ನಾಟಕ ಟೈರ್ಸ್ ಅಂಡ್ ಆಟೊಮೋಬಾಯಿಲ್ಸ್

ಶಿವಮೊಗ್ಗ

"ಪ್ರಜಾಪ್ರಭುತ್ವ ದಿನ"ದ ಸಲುವಾಗಿ

ನಮ್ಮ ಎಲ್ಲ ಗ್ರಾಹಕರಿಗೂ ಶುಭಾಶಯುಗಳು

ನಮ್ಮ ಶಾಖೆಗಳು:-

ಮೈಸೂರು ರಾಜ್ಯದಲ್ಲಿ—		ಬೆಂಗಳೂರು—(ಕೆ. ಜಿ. ಎಕ್ಸ್‌ಟೆನ್ಶನ್), ಕೆ. ಜಿ.ರೋಡ್ ಮತ್ತು ಅಲ್ಸೂರು. ಮಂಗಳೂರು-3, ಮಂಗಳೂರು-ಸಿಟಿ, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಭಟ್ಕಳ, ಕಾರ್ಕಳ, ಪುತ್ತೂರು, ಮಡಿಕೇರಿ, ಗೋಣಿಕೊಪ್ಪಲ, ಮೂಡಿಗೆರೆ, ಚಾಮರಾಜನಗರ, ಮೈಸೂರು ಸಿಟಿ, ನಂಜನಗೂಡು, ಕೃಷ್ಣರಾಜಪೇಟೆ, ಕೊಳ್ಳೆಗಾಲ್, ಕೋಲಾರ ಮತ್ತು ದೊಡ್ಡಬಳ್ಳಾಪುರ.
ಮಹಾರಾಷ್ಟ್ರ	—	ಪಾರಸೀ ಬಜಾರ್ ಸ್ಟ್ರೀಟ್, ಮುಂಬಾಯಿ-1.
ಕೇರಳ	—	ಕಾಸರಗೋಡು ಮತ್ತು ಕಾಂಞಂಗಾಡು.

ಸದ್ಯದಲ್ಲಿಯೇ ಮೈಸೂರು ರಾಜ್ಯದ ಹುಬ್ಬಳ್ಳಿ, ಧಾರವಾಡ, ಗದಗ, ನೆಲಮಂಗಲ, ಮದ್ದೂರು, ಮಾಗಡಿ, ಮಳವಳ್ಳಿ, ಪಾಂಡವಪುರ ಮತ್ತು ಸಿದ್ದಾಪುರಗಳಲ್ಲಿ ಕೂಡಾ ನಮ್ಮ ಶಾಖೆಗಳು ತೆರೆಯಲ್ಪಡುವುವು ಎಂದು ತಿಳಿಸಲು ಸಂತೋಷಪಡುತ್ತೇವೆ.

ಡೈರೆಕ್ಟರರ ಮಂಡಳಿ:-

1. ಶ್ರೀ ಯಮ್. ಸುಂದರ್‌ರಾಮ ಶೆಟ್ಟಿ, ಬೆಂಗಳೂರು-1. (ಚೆಯರ್‌ಮೇನ್)
2. „ ಬಿ. ಮಂಜಯ್ಯ ಹೆಗ್ಡೆ, ಮಂಗಳೂರು.
3. „ ಕೆ. ಸುಂದರ್ ರಾಮ ಶೆಟ್ಟಿ, ಮಂಗಳೂರು.
4. „ ಬಿ. ರಾಜೀವ ಶೆಟ್ಟಿ, ಮಂಗಳೂರು.
5. „ ಕೆ. ಯಲ್. ಭಂಡಾರಿ, ಮೈಸೂರು.
6. „ ಕೆ. ಪಿ. ಭವಾನಿ ಶಂಕರ ಶೆಟ್ಟಿ, ಮಂಗಳೂರು.
7. ಶ್ರೀ ರಿ. ರತ್ನವರ್ಮ ಹೆಗ್ಗಡೆ, ಧರ್ಮಸ್ಥಳ.
8. „ ಡಾ. ಕೆ. ವಿಟ್ಟಲ್ ಶೆಟ್ಟಿ, ಕಾಪು.
9. „ ಡಾ. ಕೆ. ಬಾಲಪ್ಪ ಶೆಟ್ಟಿ, ಮಂಗಳೂರು.
10. „ ಬಿ. ಟಿ ರವೀಂದ್ರನಾಥ ಪೂಂಜ, ಬೆಂಗಳೂರು.
11. „ ಬಿ ಜಿ ವೀರಣ್ಣ, ಬೆಂಗಳೂರು.
12. „ ಕೆ. ಸಿ ಪುಟ್ಟಯ್ಯ, ದೊಡ್ಡಬಳ್ಳಾಪುರ.

ಆಡಿಟರ್:-
ಶ್ರೀ. ಪಿ. ಯಂ. ಹೆಗ್ಡೆ, ಮಂಗಳೂರು.

ಸೆಕ್ರೆಟರಿ:-
ಶ್ರೀ ಪಿ ಜಯರಾಮ ಶೆಟ್ಟಿ.

ಡಿಪ್ಯುಟಿ ಸೆಕ್ರೆಟರಿ:-
ಶ್ರೀ ಯಸ್. ವಿಟ್ಟಲ್ ಶೆಟ್ಟಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3

ಸ್ಥಾಪನೆ:- 1931
ಫೋನ್ ನಂಬ್ರ:- 240

ಪ್ರಜಾರಾಜ್ಯಕ್ಕೆ ನೈಸರ್ಗಿಕ ಪಾಠ

ಲೇಖಕರು:
ಶ್ರೀ ಶಿವಶಂಕರ,
ಮದ್ರಾಸು.

ಪಡಿಪಡಿಯಾಗಿ ಕೆಳಗಿಳಿದು ಬರುತ್ತಿದ್ದೆ, ಆಗಲೇ ಅಂಚೆಯವ ದಡಬಡ ಮೇಲೆ ಬರುತ್ತಿರುವ ಸದ್ದಿನ ಹಿಂದೆಯೇ ಪ್ರತ್ಯಕ್ಷನಾದನು, ಪತ್ರ ಕೈಗಿತ್ತು ಅದೇ ವೇಗದಲ್ಲಿ ಅದೃಶ್ಯನಾದನು. ಯಾವದಾದರೂ ಕೆಲಸಕಾರ್ಯಕ್ಕೆ ಎಂದಾದರೂ ಹೋಗುವಾಗ ಯಾರಾದರೂ, ಎಲ್ಲಾದರೂ, ಹೇಗಾದರೂ ಎದುರು ಬಂದಲ್ಲಿ [ಅಡ್ಡ ಬಂದಲ್ಲಿ!] ಹಿಂತಿರುಗಿ ಹೋಗುವ ಹಿರಿಯ ಸಂಪ್ರದಾಯವಾದಿ ಕುಲದ ಶಿರೋಮಣಿ ನಾನಲ್ಲವಾದ್ದರಿಂದ ಅಲ್ಲೇ ಆ ಪತ್ರದತ್ತ ದೃಷ್ಟಿ ಹಾಯಿಸಿದೆ. ರಾಜಕೀಯ ಹಾಗೂ ಸಾಂಸ್ಕೃತಿಕ ಮೌಲ್ಯವಿರುವ ಲೇಖನಗಳಿಂದ ಕೂಡಿದ ಪ್ರಜಾರಾಜ್ಯ ವಿಶೇಷ ಸಂಚಿಕೆಗೆ ಲೇಖನವನ್ನು ಬೇಗನೇ ಕಳಿಸಿ ಕೊಡಲು "ನವಯುಗ" ಸಂಪಾದಕ ಸಹಾಯಕರು ಕಳಿಸಿದ್ದ ಪತ್ರವದು. ಕೆಳಗಿಳಿಯುತ್ತಿರುವುದನ್ನು ಎವೆಯಿಕ್ಕದೆ ನೋಡುತ್ತ ನಿಂತಿದ್ದ ನನ್ನ ನಾರಿಯ ಅವ್ಯಕ್ತ ಆಜ್ಞೆಯಲ್ಲಿ ಅದಕ್ಕೆ ಆಶ್ರಯವಿತ್ತು ಗುರಿ ಮುಟ್ಟಿಸುವ ತನಕವೂ ನಿಲ್ಲಕೂಡದೆಂದು ಕೆಳಗಿಳಿದೆನು. ಅಷ್ಟರವರೆಗೂ ಕೆನಡಿಯವರ ಆಕಾಲಿಕ ಮರಣದ ಕುರಿತು ಯೋಚಿಸುತ್ತಿದ್ದ ಮಿದುಳಿಗೆ [ಅಥವಾ ಅದರ ಸ್ಥಾನದಲ್ಲಿರುವ ಅಂತಹದೇ ಏನಾದರೂ ಇರುವುದಕ್ಕೆ] ಕಡಿವಾಣ ಹಾಕಿದಂತಾಗಿ ಪಕ್ಕನೆ ಅದು ಬರುವ ಪ್ರಜಾರಾಜ್ಯದ ಕುರಿತು ಯೋಚಿಸುವಂತೆ ನಟಿಸಲಾರಂಭಿಸಿತು.

ಕೆನಡಿಯವರ ದುಃಖಕರ ಸಾವಿನ ಪುನರ್ ಜ್ಞಾಪಕಕ್ಕಾಗಿಯೋ ಎಂಬಂತೆ ಶವಯಾತ್ರೆಯಂದು [ನವಂಬರ ೨೫] ಕಾರ್ಯಾಲಯಗಳಿಗೆ ಬಿಡುವು ಕೊಡಲಾಗಿತ್ತಾದುದರಿಂದ ಬೇರೆ ಕೆಲಸಕ್ಕೆ ಹೊರಟಿದ್ದೆ. ಹಾಗೆ ಯೋಚಿಸುತ್ತ, ಹಾಗೆ ಯೋಚಿಸುತ್ತಿದ್ದುದರ ಮೇಲೆ ಹಸನಾಗಿ ಬೆಳೆದಿರುವದನ್ನು [ನೀರಾ ಪ್ರದೇಶ ಅಲ್ಲವಾದ್ದರಿಂದ ಹಾಗೆ ಬೆಳೆದಿರ ಬಹುದು.] ಕತ್ತರಿಸಿಕೊಳ್ಳಬೇಕೆಂದು ಪಾದ ಬೆಳೆಸಿದ್ದೆ. ಅದಕ್ಕೆ ಅಂತಹ ವಿಶೇಷ ದಿನಗಳೇ ಒಳ್ಳೆಯವು. ಕಲ್ಪಿಸಿಕೊಂಡಿದ್ದಂತೆ, ಅಥವಾ ಅದಕ್ಕಿಂತಲೂ, ಯೋಜನೆಯ ಪ್ರಕಾರವೇ ಅಲ್ಲಿ ಸಾಲು ಕಾದುಕೊಂಡಿರಲಿಲ್ಲ; ಕ್ಷೌರಿಕನೇ ಕಾಯುತ್ತಿದ್ದ. ಕೋಳಿ ಸಿಕ್ಕಿತೆಂಬ ಸಂತೋಷದಿಂದ, ಮುಖವರಳಿಸಿ ನಗುವಂತೆ ಚರ್ಯೆಮಾಡಿ. ಸ್ವಾಗತಿಸಿ ಆಸನದಲ್ಲಿ ಕುಳ್ಳಿರಿಸಿದ. ಇನ್ನೊಂದಾಸನದಲ್ಲಿ ಇನ್ನೊಬ್ಬರಿಗೆ ಹಜಾಮತ್ ನಡೆಯುತ್ತಿತ್ತು. ಪಕ್ಕನೆ [ಚೈನೀಯಂಗಡಿಗೆ ಹೋರಿ ಹೊಕ್ಕಂತೆ ಅಲ್ಲ] ನುಗ್ಗಿದುದರಿಂದ ಆತನು ಸ್ವಾಗತಿಸಿದನಾದರೂ, ಅವರ ಮಾತುಕತೆಗೆ ಅಡ್ಡಿಯಾಯಿತು. ಎಲ್ಲಾ ಸಜ್ಜುಗೊಳಿಸಿದ ಮೇಲೆ, ಅವನ ಕೈ ಕೆಲಸದಲ್ಲಿ ಮಗ್ನವಾದೊಡನೆ, ಬಾಯಿ ಮತ್ತೆ ಹಿಂದಿನ ಕೆಲಸವನ್ನು ಕೈಗೊಂಡಿತು.

ನವಯುಗ...,,ಪ್ರಜಾರಾಜ್ಯ... ಯೋಚಿಸುತ್ತ ಒಳ ನುಗ್ಗಿದವ ಕರ್ನಾಟಕದವ, ಬಾಚಣಿಗೆ—ಕತ್ತರಿಧರ ಕೇರಳದವ, (ಅವನು ಯಾರೇ ಆಗಿದ್ದರೂ ಎಲ್ಲರೂ ಅವನನ್ನು ನಾಯರ್ ಎಂದೇ ಕರೆಯುವದು ರೂಢಿ) ಇನ್ನೊಂದಾಸನದಲ್ಲಿ ಕುಳಿತುಕೊಂಡು ತಲೆ ತಗ್ಗಿಸಿದ್ದವನು ತಮಿಳುನಾಡಿನಲ್ಲೇ ತಂಗಿರುವವನಾದರೂ ತೆಲುಗು ಭಾಷೆಯನ್ನಾಡುವವ ಆದರೆ ಅವನ ತಲೆಯ ಮೇಲೆ ಕೈ ಇಟ್ಟಿದ್ದವ ತಮಿಳನವನೇ. ಮಾತುಕತೆ ಅದೊಂದು ರೀತಿಯ ತಮಿಳಿನಲ್ಲೇ ನಡೆಯುತ್ತಿತ್ತು, ಮೇಲೆ ಮೂಲೆಯಲ್ಲಿದ್ದ ಆಕಾಶವಾಣಿ ಹಿಂದಿ ಹಾಡನ್ನು ಗೊಣಗುತ್ತಿತ್ತು. (ಯಾರೂ ಕಿವಿಗೊಡದಿದ್ದಲ್ಲಿ ಹೇಗೆಂದು ಹೇಳುವದು?)

ಕೆನಡಿಯ ಆತ್ಮಕ್ಕೆ ಶಾಂತಿ ಸಿಗಬೇಕೆಂದು ಅವನ ಅಂಗಡಿಯ ಬಾಗಿಲು ಹಾಕಿರಲಿಲ್ಲ. ಅಲ್ಲದೆ ಅವರ ಮಾತುಕತೆಯಲ್ಲೂ ಕೆನಡಿ ಇರಲಿಲ್ಲ; ಅಥವಾ ಆಗಲೇ ಅಂತ್ಯವಾಗಿರಬಹುದು. ಹೋದೊಡನೆ ಆರಂಭವಾದರೂ ಅಲ್ಲಿಂದ ಮುಂದರಿಯಲಿಲ್ಲ. ಕೆನಡಿಯವರ ಆಕಾಲಿಕ ಮೃತ್ಯುವಿನಿಂದಾಗಿ ಕಛೇರಿ—ಕಾರ್ಯಾಲಯಗಳಿಗೆ ರಜೆ ಎಂಬುದವರಿಗೆ ಮುಂಚೆಯೇ ತಿಳಿದಿತ್ತಾದುದರಿಂದ (ಆಕಾಶವಾಣಿ ಆಗಲೇ ಬಿತ್ತರಿಸಿತ್ತು.) ಹಾಗೆಯೇ ಬಿಟ್ಟು, ಮತ್ತೆ, ಅವರು ತಮ್ಮ ಮಾತುಕತೆಯನ್ನೇ ಮುಂದರಿಸಿದರು. ತಲೆ ತಗ್ಗಿಸಿದ್ದವರೂ ಉದ್ಯೋಗಸ್ಥರೇ ಆಗಿದ್ದರೂ ಅವರಿಗೆ ಆವಾರ ರಾತ್ರಿ ಕೆಲಸದ ಸರದಿಯಾಗಿತ್ತು. ಒಂದು ವೇಳೆ ಅವರಿಗೂ ರಜೆ ಇದ್ದಲ್ಲಿ ಕಾರ್ಯಾಲಯದ ವರೆಗೆ ಅನಾವಶ್ಯಕವಾಗಿ ಹೋಗಿ ಬರಬೇಕಾಗಿತ್ತು. ಕಾರ್ಯಾಲಯಗಳ ಕೆಲಸಗಳಿಗಿಂತಲೂ ಹೋಗಿ ಬರುವ ಪ್ರಯಾಣವೇ ಪರಮ ಪ್ರಯಾಸಕರವೆಂಬುದು ಅವರ ಆಗಿನ ಅಭಿಪ್ರಾಯ. ಬಸ್ಸಿನಲ್ಲೇ ಆಗಲೀ, ಅಥವಾ ಇನ್ನಿತರ ಬಂಡಿಯಲ್ಲೇ ಆಗಲಿ, ಪ್ರಯಾಣ ಮಾಡುವದೆಂದರೆ ಸಾಕೋ ಸಾಕಾಗಿ ಹೋಗುತ್ತಿತ್ತು. ಆದಕ್ಕಾಗಿ ಸಾಲಿನಲ್ಲಿ ನಿಲ್ಲಬೇಕು, ಬಂಡಿಯಲ್ಲಿ ನಿಲ್ಲಬೇಕು....ಇದರಿಂದ ಪ್ರಜಾಸಂಖ್ಯೆ ಪ್ರವರ್ಧಿಸಿದೆಂಬುದನ್ನವರಾಗಲೇ ತೀರ್ಮಾನಿಸಿ ಬಿಟ್ಟರು. ಪ್ರಜಾಪ್ರತಿನಿಧಿ ಸಭೆಯಲ್ಲಿ ನಾಲ್ಕು ಎದುರು ಪಕ್ಷದವರಿಗೆ ಒಂದಾಗಲು ಸಾಧ್ಯವಾಗದಿದ್ದರಿಂದ ನಾಲ್ಕು ಜನರು ಆಗ ಒಂದು ನಿರ್ಣಯಕ್ಕೆ ಬಂದೇ ಬಿಟ್ಟರು. (ಒಂದಾಗಲು ಸಾಧ್ಯವಿಲ್ಲವೆಂಬ ನಿರ್ಣಯಕ್ಕೆ ಪ್ರಜಾಪ್ರತಿನಿಧಿಗಳೂ ಬಂದಿದ್ದರು. ಆದರೆ ನಮ್ಮ ಹಾಗಲ್ಲ—ಅವರಷ್ಟು ಬಿಕ್ಕಟ್ಟು, ನಮ್ಮದು ಒಕ್ಕಟ್ಟು) ಈಗಿರುವ ಪ್ರಜಾಸಂಖ್ಯೆ ಸಾಲದಕ್ಕೋ ಎಂಬಂತೆ ಲಂಕೆ, ಬ್ರಹ್ಮದೇಶ, ಸಿಂಗಪುರ, ಮಲಯ ಮೊದಲಾದೆಡೆಗಳಿಂದ ಭಾರತೀಯರು ಇತ್ತ ಬರುತ್ತಿದ್ದಾರೆ. ಅದರಲ್ಲಿ ಹೆಚ್ಚಿನವರು ತಮಿಳಿಯನರು ಹಾಗೂ ಮಲೆಯಾಳಿಗಳಿರುವದರಿಂದ ಅವರಿಗೆ ಆಶ್ರಯವೀಯುವ ಜವಾಬ್ದಾರಿ ತಮಿಳು ಪ್ರಾಂತ್ಯದ್ದಾಗಿರುತ್ತದೆ. ಕೇರಳದಲ್ಲಿ ಹೇರಳ ಕಾರ್ಖಾನೆ ವಗೈರೆ ಇಲ್ಲದ ಕಾರಣ ಮಲೆಯಾಳಿಗಳು ಮನೆಬಿಟ್ಟು ಪಕ್ಕದ ಮಹಾನಗರ ಮದರಾಸಿಗೆ ಬರಬೇಕಾಗಿರುತ್ತದೆ....

ಕೆನೆಡಿಯವರ ಕೊಲೆ, ಭಾರತದಲ್ಲಿ ಪ್ರಜಾಸಂಖ್ಯೆಯ ಬೆಳವಣಿಗೆ, ಸಿಲೋನಿನಲ್ಲಿ ಭಾರತೀಯರನ್ನು ಬೇಟೆಯಾಡುವಿಕೆ....ಒಂದೆಡೆ, ತಮ್ಮ ದೇಶದಿಂದ ಹೊರಹೋಗಿ ರಷ್ಯದಲ್ಲಿ ತಂಗಿದ್ದು, ಅಲ್ಲಿಯ ಅಂಗನೆಯೊಂದಿಗೆ ಸಂಸಾರ ನಡೆಸಿಕೊಂಡಿದ್ದು ಮರಳಿ ಬಂದವನಿಗೂ ಎಡೆಕೊಟ್ಟ ಅಮೇರಿಕ...ಇನ್ನೊಂದೆಡೆ, ಹೊಟ್ಟೆಪಾಡು ಹಾಗೂ ಇತರ ಕೆಲ ಕಾರಣಗಳಿಂದಾಗಿ ಲಂಕೆಗೆ [ಹಾಗೂ ಇತರ ದೇಶಗಳಿಗೆ] ಹೋಗಿ ತಂಗಿದ್ದು ಅಲ್ಲಿಂದ ಓಡಿಸಲ್ಪಟ್ಟವರಿಗೆ ಎಡೆಕೊಡುತ್ತಿರುವ ಭಾರತ.......ಮತ್ತೊಂದೆಡೆ ಲಂಕೆಯನ್ನು ಸಿಂಹಲಂಕೆಯನ್ನಾಗಿ ಮಾಡಿರುವವರಿಗೆನೇ ಅರ್ಧಚಂದ್ರ ಪ್ರಯೋಗ ನಡೆಸುತ್ತಿರುವ ಸಿಂಹಳ....ಈಗ ಇವು ಮೂರೂ ಸ್ವತಂತ್ರ ರಾಷ್ಟ್ರಗಳು, ಮಾತ್ರವಲ್ಲದೆ, ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಿವೆ. [ಅವುಗಳ ಪ್ರಜಾಪ್ರಭುತ್ವವಾದದಲ್ಲಿ ವ್ಯತ್ಯಾಸ ಇರಬಹುದು]. ಇವು ಮೂರೂ ತಮ್ಮ ಕತ್ತುಗಳನ್ನು ಅದುಮಿ ಹಿಡಿದುಕೊಂಡಿದ್ದ ಪಾಶವೀ ಶಕ್ತಿಯಿಂದ ಕೊಡವಿಕೊಂಡಿರುವ ರಾಷ್ಟ್ರಗಳಿವೆ. ಅಮೇರಿಕದಲ್ಲಿ ಆಶ್ರಯ ಪಡೆದಿರುವವರು ಬಹುಪಾಲು ಇಂಗ್ಲೀಷರೇ ಆದರೂ ಅವರೇ, ಇಂಗ್ಲೀಷಿನ ಇಂಗಿತಕ್ಕೆ ಸರಿಯಾಗಿ ತಲೆ ತಗ್ಗಿಸಿಕೊಂಡಿರಲೊಪ್ಪದೆ ಸ್ವಾತಂತ್ರ್ಯವನ್ನು ಬಯಸಿ, ಪಡೆದರು. ಹಾಗೆ ಇರುವಾಗ, ಪರಕೀಯರ ಅನ್ಯ ರಾಷ್ಟ್ರೀಯ ಆಕ್ರಮಣವನ್ನು ಸಹಿಸಿಕೊಳ್ಳಲು ಧೀರ ಭಾರತೀಯರೊಪ್ಪಿಯಾರೇ? ಸಿಂಹಳದವರಾದರೂ ಭಾರತವನ್ನು ಅನುಸರಿಸದೇ ಇರಲು ಸಾಧ್ಯವೇನು? ಸ್ವಾತಂತ್ರ್ಯ ಸೂರ್ಯನನ್ನು ಕಂಡ ಅಮೇರಿಕವೂ ವಿಭಜನೆಯ ಗ್ರಹಣ ಬಾಧೆಗೊಳಗಾಗುವ ಪ್ರಸಂಗವನ್ನು ಎದುರಿಸಬೇಕಾಯಿತ.. ವಿಭಜನೆಯ ಕೇತುವನ್ನೆದುರಿಸಿ ಅವರು ಸ್ವಾತಂತ್ರ್ಯ ವಿಜಯ ಕೇತುವನ್ನು ಹಾರಿಸಿದರು. ಭಾರತದಲ್ಲಿ ಪುನರಪಿ ಉದಯಿಸಿದ ಸ್ವಾತಂತ್ರ್ಯ ಸೂರ್ಯ ರಾಹುಕೇತುಗಳನ್ನಿಮ್ಮೆಲೆ ಎದುರಿಸಬೇಕಾಯಿತು. ವಿಭಜನಾ ಅಗ್ನಿಯಲ್ಲಿ ಬಿದ್ದ ಅಮೇರಿಕ ಅಪ್ಪಟ ಚಿನ್ನದಂತೆ ಹೊರ ಬಂದಲ್ಲಿ, ಭಾರತ, ದುರಾದೃಷ್ಟಾವಶಾತ್, ಮಯರಾರ್ಜ ಬಂಗಾರವಾಗಿ ಹೊರಬಂತು. ಲಂಕೆಗೆ ಇದುವರೆಗೂ ಅಂತಹ ಸಮಸ್ಯೆ ತಲೆದೋರಿಲ್ಲವಾದರೂ ತಮಿಳರು—ಸಿಂಹಳೀಯರೆಂಬ ವಾದ ಹೆಡೆ ಎತ್ತಿದೆ. ಶ್ರೀ ಲಂಕೆಯಾದರೋ ಪವಿತ್ರ ಭಾರತಾಂಬೆಯ ಮಂದಿರದ ಗಡಿಕಾಯುವ ಸ್ಥಳವಾಗಿತ್ತೆಂದ ಮೇಲೆ ಅಲ್ಲಿರುವವರೂ ನಮ್ಮ ಭ್ರಾತೃ ಭಾರತೀಯರೇ ಇದ್ದಾರೆ. ಭಾರತದ ಇತರ ಕೆಲ ಗಡಿರಕ್ಷಕ ಪ್ರದೇಶಗಳು ಇಂದು ಸ್ವತಂತ್ರ ರಾಷ್ಟ್ರಗಳಾಗಿ ಪ್ರತ್ಯೇಕವಾಗಿರುವಂತೆ ಸಿಂಹಳವೂ ಸಿಡಿದು ನಿಂತಿದೆ. ಪಂಚ ಕನ್ಯೆಯರಲ್ಲೋರ್ವಳ ಪವಿತ್ರ ಪ್ರದೇಶವನ್ನು ಮರೆತು ಬಿಡಲು ಸಾಧ್ಯವೆ? ರಾಮಾಯಣವನ್ನು ಮರೆಯಲು ಸಾಧ್ಯವೇನು? ಅಂದರೆ, ಸಾಂಸ್ಕೃತಿಕ ಅಥವಾ ಕಲಾಚಾರ-ನಾಗರಿಕತೆಯ ದೃಷ್ಟಿಯಲ್ಲಿ ನಾವು ಒಂದೇ ಇದ್ದೇವೆ ಹಾಗಿರುವಾಗ ಸಹಸ್ರಾರು ಸಹೋದರರನ್ನು ಸಾಗರದಾಚೆ ಕಳುಹಿಸಲು ಕಾರಣವೇನು? ಅದಕ್ಕೆ ಭಾಷಾ ಸಮಸ್ಯೆಯೂ ಒಂದು ಕಾರಣವಿದೆ. ಭಯಪಡಬೇಕಾಗಿರುವ ಕಾರಣ ಅಮೇರಿಕ ಕಂಡ ಕಹಿ,ತಾಯ್ನಾಡು ಪ್ರಿಯ ಭಾರತ ಅನುಭವಿಸಿರುವ (ಈಗಲೂ)ಚಿತ್ರಹಿಂಸೆ. ಇದು ಯಾವ ವಿಚಾರವಂತ ರಾಷ್ಟ್ರಕ್ಕೂ ಕಣ್ತೆರೆಸುವಂತಹ ವಿಷಯವಿದೆ. ಅಷ್ಟೇ ಅಲ್ಲ, ಬಂಗಾಲ ವಿಭಜನೆಯನ್ನೆದುರಿಸಿ ಒಂದಾಗಿ ಎದ್ದು ನಿಂತ ಶೂರ ಭಾರತೀಯರು ಬ್ರಿಟಿಷರ ಮುಯ್ಯಿಗೆ ಮುಯ್ಯಿಯನ್ನೆದುರಿಸ ಬೇಕಾಯಿತು. ಬಂಗಾಲ ಎರಡಾಯಿತು— ದಿಲ್ಲಿಯಿಂದ ಬಹುದೂರ ಜಾರಿತು. ಉಳಿದ ಪ್ರದೇಶದಲ್ಲಾದರೂ ನಡೆಯುತ್ತಿರುವುದೇನು? ಮದ್ರಾಸಿನಿಂದ ಆಂಧ್ರ— ಕೇರಳಗಳು ಹೊರ ಬಂದುವು. ಮಹಾರಾಷ್ಟ್ರ—ಗುಜರಾಥಗಳೂ ಎರಡು ಹೋರಿಗಳಂತಿದ್ದು ಏಕತೆಯ ನೊಗದಿಂದ ತಲೆತಪ್ಪಿಸಿಕೊಂಡವು. ವಿಚಿತ್ರ ರೀತಿಯಲ್ಲಿ ಗುಡ್ಡಗಾಡು ರಾಜ್ಯ, ಸಿಖ್ಖಿಸ್ಥಾನ, ದ್ರಾವಿಡನಾಡಿನ ಗುಡುಗು ಕೇಳ ಬರುತ್ತದೆ. ಇದನ್ನೆಲ್ಲಾ ಕಂಡೂ ಜಾಗ್ರತಿಯಲ್ಲಿರ ಬೇಕೆನ್ನುವವರಾದರೂ ಕಣ್ಣು ಮುಚ್ಚಿಕೊಳ್ಳುವದುಂಟೇ? ತಮಿಳು, ಮಲೆಯಾಳಂ, ಕನ್ನಡ.. ಎಲ್ಲಾ ನಮ್ಮವೇ— ಭಾರತೀಯರವೇ—ಭಾಷೆಗಳೆಂಬ ರಾಷ್ಟ್ರೀಯ ದೃಷ್ಟಿಯನ್ನು ಸ್ವಲ್ಪ ಮರೆಮಾಡಿ ಪ್ರದೇಶ ದೃಷ್ಟಿಯಿಂದ ನೋಡುವಾಗ ಕಾಸರಗೋಡು ಏನಾಗಿದೆ? ನೀಲಗಿರಿ ಏನಾಗಿದೆ...?

> ಭಾರತದ ಪ್ರಜಾರಾಜ್ಯ ಬಹು ದೊಡ್ಡದು. ಅದು ಅಮೇರಿಕೆಯಿಂದ ಇಲ್ಲವೇ ಸಿಂಹಳದಿಂದ ಪಾಠ ಕಲಿಯುವ ಅಗತ್ಯವಿಲ್ಲ. ಭಾರತದ ಕಣಕಣದಲ್ಲಿ ಹರಡಿ ಮೆರೆಯುತ್ತಿರುವ ನಿಸರ್ಗವೇ ಯಶಸ್ವೀ ಪ್ರಜಾರಾಜ್ಯದ ಪಾಠವನ್ನು ಮನವರಿಕೆ ಮಾಡಿಕೊಳ್ಳುವುದು ಇಂದು ಜನತೆಯ ಕರ್ತವ್ಯ, ಜನತಾ ಸರಕಾರದ ಪರಮ ಕರ್ತವ್ಯ.

ಹೀಗೆ ಇನ್ನು ಕೆಲವಾರು ಸ್ಥಳಗಳನ್ನು ಉದಾಹರಿಸಬಹುದು. ನಮಗಿದು ಚಿಲ್ಲರೆ ವಿಷಯವಾದರೂ ಪ್ರಚಲಿತ ಪರಿಸ್ಥಿತಿಯಲ್ಲಿ ಪಕ್ಕದ ರಾಷ್ಟ್ರಗಳಿಗೆ ಅವು ಮುಖ್ಯ ವಿಷಯವೇ ಇವೆ. ಅದರಲ್ಲೂ ಈಗಿನ ಮದ್ರಾಸು ಪ್ರಾಂತ್ಯ ಹಾಗೂ ಅಕ್ಕಪಕ್ಕದ ಪ್ರದೇಶಗಳೊಂದಿಗೆ ಸಿಲೋನಿನ ಉತ್ತರಾರ್ಧವೂ ಸೇರಿ ವಿಶಾಲ ಪ್ರತ್ಯೇಕ ತಮಿಳು ನಾಡು ಆಗಬೇಕೆನ್ನುವ ಅಪಸ್ವರ ಮೊಳಗಿರುವಾಗ ಸಂಬಂಧಪಟ್ಟವರು ಸಹಿಸಿ ಸುಮ್ಮಗಿರಲು ಸಾಧ್ಯವೇನು? ಇವು ನಮ್ಮ ಸುತ್ತುಮುತ್ತಲಿನ ಸಾಧಾರಣ ಸಂಗತಿಗಳಾಗಿದ್ದಲ್ಲಿ ಸ್ವಲ್ಪ ದೂರ ಉತ್ತರದಲ್ಲಿ ಸಂಭವಿಸುತ್ತಿರುವುದಾದರೂ ಏನು? ಸರಸ್ವತಿಯ ತವರೂರೆನಿಸಿಕೊಂಡಿರುವ ಕಾಶ್ಮೀರ ಇಂದು ರಾಜಕೀಯ ಕತ್ತರಿ ಪ್ರಯೋಗಕ್ಕೊಳಗಾಗಬೇಕಾಗಿರುತ್ತದೆ. ವೀರರ ವಾಸಸ್ಥಾನವೆನಿಸಿಕೊಂಡಿರುವ ರಾಜಸ್ಥಾನ, ಅಖಿಲ ಭಾರತವನ್ನೇ ಆಕ್ರಮಣಗಾರರಿಂದ ರಕ್ಷಿಸಲು ದೀಕ್ಷೆತೆಗೆದುಕೊಂಡಿರುವವರ ಪ್ರದೇಶವೆನಿಸಿಕೊಂಡಿರುವ ಪಂಜಾಬ, ಅದೆಂತಹ ಕಾಡು ಮೇಡುಗಳಲ್ಲೂ ಸುಂದರ ನಗರವನ್ನು ನಿರ್ಮಿಸಲು ಸಾಧ್ಯವೆಂದು ತೋರಿಸಿಕೊಟ್ಟಿರುವ ಪುರತ್ರೀಚದ, ಅಸಾಮಾನ್ಯ ಮೋಡಿ-ಜಾದುಗಳನ್ನೂ ಮಾಡಲು ಸಾಧ್ಯವೆಂಬುದನ್ನು ತೋರಿಸಿರುವ ಅಸ್ಸಾಂ, ಕ್ರಾಂತಿಕಾರಿಗಳ ಬಡಬಾಗ್ನಿಯೆನಿಸಿಕೊಂಡಿದ್ದ ಬಂಗಾಲಗಳಲ್ಲಿ ನಡೆಯುತ್ತಿರುವುದಾದರೂ ಏನು?—ಹಿಟ್ಲರ್ ನೀತಿ. ತಮ್ಮ ಮತ-ಪಂಗಡದವರನ್ನು ಇತರ ಪಕ್ಕದ ಪ್ರದೇಶಗಳಲ್ಲಿ ನೆಲಸಲು ಕಳುಹಿಸಿ, ಏರ್ಪಾಡುಮಾಡಿಕೊಟ್ಟು, ಕ್ರಮೇಣ ಅವರಿಂದ ಗಲಾಟೆ ಮಾಡಿಸಿ ಆ ಪ್ರದೇಶಗಳನ್ನು ತಮ್ಮ ರಾಷ್ಟ್ರಗಳೊಂದಿಗೆ ಸೇರಿಸಿಕೊಳ್ಳುವ ರೀತಿ ಇಂದು ಸಾಮಾನ್ಯ ಸಂಗತಿಯಾಗಿ ಬಿಟ್ಟಿರುತ್ತದೆ. ಸಣ್ಣ ಪುಟ್ಟ ವಿಷಯಗಳಲ್ಲೇ ಆಗಲಿ, ಅಪಾಯಕಾರಿ ರಾಷ್ಟ್ರೀಯ ಕುತ್ತಿನ ವಿಷಯದಲ್ಲೇ ಆಗಲಿ, ಅದನ್ನೇ ಕಾಣಬಹುದು. ಅದೂ ಅಲ್ಲದೆ, ಅರ್ಧ ಸಿಲೋನ್ ಸಹಿತ ವಿಶಾಲ ತಮಿಳ್ನಾಡಿನ ಅಪಸ್ವರ ಎದ್ದೊಡನೆ ಸರಕಾರೀ ಸರ್ಪ, ಆ ಅಪಸ್ವರಕ್ಕೆ ತಲೆ ತೂಗದೆ, ಕಚ್ಚುವದು ಸ್ವಾಭಾವಿಕವಿದೆ. ಸ್ಥಳೀಯ ಭಾಷೆಗಳಲ್ಲಿ ಬರೆದಿರುವ ನಾಮಫಲಕಗಳನ್ನುಜ್ಜಿದಲ್ಲಿ, ವಾಹನಗಳಲ್ಲಿ ತಮ್ಮ ಭಾಷೆಯನ್ನೂ ಬರೆಯಬೇಕೆಂದು ಬೊಬ್ಬೆ ಹಾಕಿದಾಗ ಸರಕಾರೀ ದಂಡ ಸುಮ್ಮಗಿದ್ದೀತೆ? ಕಣ್ಣಾರೆ ಕಂಡಿರುವ ವಿಷಯಗಳಿಂದ ಭಯಗೊಟ್ಟಿರುವ ಸಿಂಹಳ ಎಚ್ಚರಿಕೆಗಾಗಿ ಪ್ರಯತ್ನಪಡುವದರಲ್ಲಿ ಆಶ್ಚರ್ಯವಿರುವದಿಲ್ಲ. ಆದರೆ, ಈಗಲೇ ದೇಶವಿಭಜನೆಯ ಮಹಾಪಾತಕದಿಂದಾಗಿ ಅನುಭವಿಸಬೇಕಾಗಿರುವ ಕಷ್ಟಪರಂಪರೆ, ನಿರುದ್ಯೋಗಿಗಳ ಸದಳಾಟ....ಇವುಗಳೊಂದಿಗೆ ಲಂಕೆಯಿಂದ ಇನಷ್ಟು ಭಾರತೀಯರು 'ನಿರಾಶ್ರಿತ'ರಾಗಿ ಬಂದಲ್ಲಿ ಬೆಂಕಿಗೆ ಎಣ್ಣೆ ಸುರಿದಂತಾಗಲಿಕ್ಕಿಲ್ಲವೇ? ಸಿಲೋನ್ ಸರಕಾರದೊಂದಿಗೆ ದಿಲ್ಲಿ ಧೀರರು ಉಪಾಯದಿಂದ ಮಾತುಕತೆಯಾಡಿ ಸಂಧಾನ ನಡೆಸಿಕೊಳ್ಳುವವರೇ ಈಗ ಉಳಿದಿರುವ ರಾಜಮಾರ್ಗ.

ಪ್ರಬಲ ರಾಷ್ಟ್ರವೆನಿಸಿಕೊಂಡಿರುವ ಅಮೇರಿಕದಲ್ಲಿ ಎಲ್ಲಾ ಜನರನ್ನೂ ಒಂದೇ ದೃಷ್ಟಿಯಿಂದ ಕಾಣಲೊಪ್ಪದ ಹಾಗೂ ವಿಷಮ ರಾಜಕೀಯ ಪ್ರಲೋಭನೆಗಳಿಗೆ ತುತ್ತಾಗಿರುವ ಪ್ರಜೆಗಳಿದ್ದಲ್ಲಿ ಚಿಕ್ಕ ಸ್ವತಂತ್ರ ರಾಷ್ಟ್ರವೆನಿಸಿಕೊಂಡಿರುವ ಸಿಂಹಳದಲ್ಲಿ ಸಹೋದರರನ್ನೇ ಸಾಗರದಾಚೆ ಸಾಗಿಸಲು ಸಾಹಸಪಡುತ್ತಿರುವ ಪ್ರಜೆಗಳಿದ್ದಲ್ಲಿ, ಇಲ್ಲಿ ಚೆಲುವ ಭಾರತ ನಾಡಿನಲ್ಲಿ ಮೊಗಲರೋ—ಕ್ರಿಸ್ತೀಯರೋ—ಯವನರೋ—ಹೂಣರೋ—ಪಾರಸಿಕರೋ—ಯಹೂದಿಗಳೋ—ಕಮ್ಯೂನಿಸ್ಟರೋ—ಸೋಷ್ಯಲಿಸ್ಟರೋ ...ಎಲ್ಲರಿಗೂ ಆಶ್ರಯವೀಯುತ್ತಿರುವ ಸರ್ವ ಜನರೂ ಸುಖವನ್ನನುಭವಿಸಲೆನ್ನುವ—ಆಕಾಶ ಮನಸ್ಸಿನ ಪ್ರಜೆಗಳಿರುವರು. (ಅವರು ಆರಿಸಿ ಕಳುಹಿಸಲ್ಪಟ್ಟವರಿಂದ ನಡೆಸಲ್ಪಡುವ ಸರಕಾರವೂ ಅಂತೆಯೇ ಆಗಸಮನಸ್ಸಿನದ್ದೇ ಇರುತ್ತದೆ ಅಲ್ಲಿ ಗುಡುಗು ಮಿಂಚು, ಸಿಡಿಲು ಮುಂತಾದುವಿರುವದು ಸ್ವಾಭಾವಿಕವೇ ಸರಿ.) ನೀಗ್ರೋಗಳೊಂದಿಗೆ (ಹಿಂದಿನಿಂದ ಆ ದೇಶದಲ್ಲಿರುವ ನಿಜ ಪ್ರಜೆಗಳೊಂದಿಗೆ) ಒಂದಾಗಿರಲು ಸಾಧ್ಯವಿಲ್ಲವೆನ್ನುವ ಆಂಗ್ಲೇಯರ ಕುಟುಂಬದವರು ಒಂದೆಡೆ, ಲಂಕೆಯನ್ನು ಸಿರಿಲಂಕೆಯನ್ನಾಗಿ ಮಾಡಿರುವ ತಮಿಳರೊಂದಿಗೆ ಒಂದಾಗಿರಲು ಅಸಾಧ್ಯವೆನ್ನುವ ಸಿಂಹಳೀಯರು ಇನ್ನೊಂದೆಡೆಯಾದಲ್ಲಿ, ಜಗದ್ಗುರು ಭಾರತ ಎಲ್ಲರನ್ನೂ ಏಕ ದೃಷ್ಟಿಯಿಂದ ಕಾಣುತ್ತಿದೆ. ಅಂತೆಯೇ ಅವರ ಸರಕಾರ ಸರ್ವರನ್ನೂ ಏಕ ದೃಷ್ಟಿಯಲ್ಲಿ ಕಾಣುತ್ತಿದೆ. ಇದು ಕ್ಷೌರಿಕನಂಗಡಿಯ ಒಕ್ಕಟ್ಟು ಮಾತ್ರವಲ್ಲ ಇಂಥದೂ ದೇಶದಾದ್ಯಂತ ಕಂಡು ಬರುತ್ತಿರುವ ಸತ್ಯಚಿತ್ರ. ಅಂದರೆ, ಇಲ್ಲಿಯ ಜನರು ಜಗಳ ಮಾಡಿಕೊಳ್ಳುವದಿಲ್ಲ, ಸಂಪೂರ್ಣ ಸಂಘಟನಾ ಸೂತ್ರದಲ್ಲಿ ಪೋಣಿಸಲ್ಪಟ್ಟಿದ್ದಾರೆಂದಲ್ಲ. ಅಲ್ಲಿ ಇಲ್ಲಿ ಪ್ರತ್ಯೇಕ ದ್ರಾವಿಡ ನಾಡಿಗೋ, ಸಿಖ್ಖಿಸ್ತಾನಕ್ಕೋ, ಪ್ರತ್ಯೇಕತೆಯ ಅಪಸ್ವರ ಎಬ್ಬಿಸುತ್ತಿರಬಹುದು. ಪ್ರಾಂತ್ಯ (ರಾಜ್ಯ) ಭೇದ, ಭಾಷಾಭಿನ್ನತೆ, ಜಾತಿ ಜಂಜಾಟ...... ಇರಬಹುದು. ಆದರೆ ಇವೆಲ್ಲವನ್ನೂ ಅನ್ಯ ದೇಶಗಳೊಂದಿಗೆ ಹೋಲಿಸಿ ನೋಡುವಾಗ ಕ್ಷುಲ್ಲಕವಾಗಿ ಕಂಡು ಬರುತ್ತದೆ. ಪ್ರಜೆಗಳು ಹೀಗಿರುವಾಗ ಪ್ರಜಾಸರಕಾರವೂ ಹಾಗೆಯೇ ಇರುವದರಲ್ಲಿ ಆಶ್ಚರ್ಯಪಡಲಿಕ್ಕೇನೂ ಇರುವದಿಲ್ಲ. ಇದೀಗ ಸಾಧಾರಣ ಶೇಕಡಾ ಮೂವತ್ತರಷ್ಟು ಪಾಕಿಸ್ತಾನಿಗಳು ಹೆಚ್ಚಾಗಿರುವರೆಂಬುದು, ಈಶಾನ್ಯ ಪ್ರದೇಶದಲ್ಲಿ (ನೇಫಾ) ಸೈನ್ಯಕ್ಕೆ ಬೇಕಾಗುವ ರಸ್ತೆ ರಚಿಸುವಾಗ ಕಮ್ಯುನಿಸ್ಟ್ ಚೈನಿಯರಿಗೂ ಕೆಲಸ ಕೊಟ್ಟಿರುವದು ಮಾತ್ರವಲ್ಲ, ಗಡಿಪ್ರದೇಶದಲ್ಲಿ ಮಾರ್ಗ ಮಾಡುವ ಕೆಲಸವನ್ನು ಪಾಕಿಸ್ತಾನಿಗಳಿಗೆ, ಗುತ್ತಿಗೆ ಕೊಟ್ಟಿರುವದು, ಪಾಲ್ಕಾಟ್ ಸುಯ್ಯಂನೆ ವಿಮಾನವನ್ನೇರಿಕೊಂಡು ಅದೃಶ್ಯನಾಗುವದು, ಭಾರತದ ವಿಮಾನಗಳು ಸೇನಾ ಅಧಿಕಾರಿಗಳೇ ಇರುವಾಗ ಹಣ್ಣಾದುರುವಂತೆ ಬೀಳುತ್ತಿರುವದು, ಪಾಕಿಸ್ತಾನಿ ಗೂಢಚಾರ ಅಧಿಕಾರಿ ದಿಲ್ಲಿಯಲ್ಲಿ ಬಂದು ತಂಗಿದ್ದು ಕೆಲಸ ಮುಗಿಸಿಕೊಂಡು (?) ಹಿಂದಕ್ಕೆ ಸುರಕ್ಷಿತವಾಗಿ ಹೋಗುವದು—ಇವೆಲ್ಲಾ ಏನನ್ನು ಸೂಚಿಸುತ್ತವೆ? —ಸರಕಾರದ ವಿಶಾಲ ಮನಸ್ಸನ್ನು.

ವಿಶಾಲ ಮನಸ್ಸು ಪ್ರಜೆಗಳಲ್ಲಿರುವಾಗ ಪ್ರಜಾಸತ್ತಾತ್ಮಕ ಸರಕಾರದಲ್ಲೂ ಇರುವದು ಸಹಜವೇ ಸರಿ. ಆದರೆ ಅದಕ್ಕೊಂದು ಮಿತಿ ಇರಬೇಡವೇ? ಮಿತಿ ಇಲ್ಲದಿದ್ದಲ್ಲಿ ಅದು ಪ್ರಜಾಸತ್ತೆಗೆ ಮಾರಕವಾಗದಿದ್ದೀತೆ?—ಪ್ರಜಾಸತ್ತೆಗೆ ಮಾತ್ರವಲ್ಲ, ಸ್ವಾತಂತ್ರ್ಯಕ್ಕೇನೇ ಸಂಚಕಾರ ತಂದೀತು. ಕ್ಷೌರಿಕನಂಗಡಿಯಲ್ಲಿ ಎಲ್ಲರೂ ಸಮಾನತೆ, ಏಕತೆಯ ಮಾತು ಆಡುತ್ತಾರೆ ಸರಿ; ಅವನೂ ಎಲ್ಲರಿಗೂ ಕ್ಷೌರ ಮಾಡುತ್ತಾನೆ, ವಾಸ್ತವ. ಆದರೆ ಅದರಲ್ಲಾದರೂ ಅಪ್ಪಿತಪ್ಪಿ ಮಾತನಾಡಿದಲ್ಲಿ ಪರಿಸ್ಥಿತಿ ಏನಾದೀತು? ನಾಲಗೆಗಿಂತ ಕ್ಷೌರಿಕನ ಕತ್ತಿ ಹರಿತವಿದೆ ಎಂಬುದರಲ್ಲಿ ಸಂದೇಹವಿದೆ ಏನು? ಕ್ಷೌರಿಕನಾದರೂ ನಮ್ಮವರಲ್ಲೇ ಒಬ್ಬನು. ಯಾವಾತ್ಮನ ತಲೆಗೆ ಯಾವ್ಯಾವ ಆಕಾರ ಕೊಡಬೇಕೆಂಬುದು ಅವನಿಗೆ ಚೆನ್ನಾಗಿ ಗೊತ್ತು. ಹಾಗೆಯೇ ಸರಕಾರವಾದರೂ ನಮ್ಮದೇ ಇದೆಯಾದ ಆ ಸರಕಾರಕ್ಕೆ ಯಾರ್ಯಾರ ಬಳಿ ಹೇಗೆ ವರ್ತಿಸಬೇಕೆಂಬುದು ತಿಳಿದಿರಬೇಕು. ಪ್ರಜೆಗಳಿಗೆ ಹಿತವಾಗುವ ರೀತಿಯಲ್ಲಿ ಅದು ಆಳಬೇಕು. ಆಗ ನಿಜವಾದ ಪ್ರಜೆಗಳು ಯಾರೆಂಬ ಪ್ರಜ್ಞೆ ಸರಕಾರಕ್ಕಿರಲೇಬೇಕಾಗುತ್ತದೆ. ನಿಜವಾದ ಪ್ರಜೆಗಳಿಗೆ ತಾನೇ ಪ್ರಜಾಸತ್ತೆಯಲ್ಲಿ ಮನಸ್ಸು, ರಾಷ್ಟ್ರದ ಮೇಲೆ ಭಕ್ತಿ, ಪ್ರೇಮ, ಇತ್ಯಾದಿ?

ಇದರಿಂದ, ಇಲ್ಲಿಯ ಪ್ರಜೆಗಳು ಅಮೇರಿಕದಂತಹ ಪ್ರಬಲ ರಾಷ್ಟ್ರದವರಿಗಿಂತಲೂ, ಸಿಂಹಳದಂತಹ ಚಿಕ್ಕ ಪುಟ್ಟ ದೇಶದವರಿಗಿಂತಲೂ ಸಹನಶೀಲರು, ವಿನಯಶೀಲರು, ಶಾಂತಿಯ ಮೂರ್ತಿಗಳೆಂಬುದು [ಗೋಮುಟ] ಸ್ಪಷ್ಟವಾಗುತ್ತದೆ. ಅವರಿಂದ ಆರಿಸಲ್ಪಟ್ಟ ಸರಕಾರವೂ ಹಾಗೆಯೇ ಇದ್ದೀತೆಂಬುದು ಸಾಧಾರಣ ಭಾವನೆ ಇದೆ. ನೀರು, ಆವಿ, ಇಬ್ಬನಿ ಹಿಮ ಅಥವಾ ಮೇಘ....ಇವೆಲ್ಲಾ ಒಂದೇಯಾದರೂ, ನೀರಿನಿಂದಲೇ ಅಥವಾ ಜಲಜನಕ ಮತ್ತು ಆಮ್ಲಜನಕಗಳಿಂದಲೇ ಉಂಟಾಗಿವೆಯಾದರೂ ಅದೆಷ್ಟು ಅಂತರ! ನೀರು ಅದು ಅಮೀಬಕ್ಕೂ ಆನೆಗೂ ಮೀನಿಗೂ ಮೊಸಳೆಗೂ ಆಶ್ರಯಕೊಡುತ್ತದೆ. ಯಂತ್ರಗಳನ್ನು ನಡೆಸಲು ಉಗಿ ಸಹಾಯ ಮಾಡುತ್ತದೆ. ಇಬ್ಬನಿಯು ಧೂಳು-ಹೊಗೆಯನ್ನು ಕೆಳಕ್ಕೆ ತಂದು ವಾತಾವರಣವನ್ನು ನಿರ್ಮಲಗೊಳಿಸುತ್ತದೆ. ಹಿಮವೂ ಹಾಗೆಯೇ ಅದೂ ಅದೆಷ್ಟು ಶುಭ್ರ! ಮೇಘಗಳಾದರೋ ಒಂದರೊಡನೆ ಇನ್ನೊಂದು ಸೇರಿ ಆಕಾಶವನ್ನೇ ಮಾಡಿದೆಯಾದರೋ, ಒಂದರೊಡನೊಂದು ಢಿಕ್ಕಿ ಹೊಡೆಯಲೂ ಹೆದರುವದಿಲ್ಲ ಹೀಗೆ ಶಾಂತ, ಸರಳ, ವಿನಮ್ರ....ಪ್ರಜೆಗಳಿಂದಲೇ ಆರಿಸಲ್ಪಟ್ಟ ಸರಕಾರ ಸಹ ಬಹಳ ಹಾಗೂ ರಕ್ಷಣಾ ಯಂತ್ರಗಳನ್ನು ಉತ್ತಮ ರೀತಿಯಲ್ಲಿ ನಡೆಸುತ್ತಿರಬೇಕು. ಸಮಾಜದಲ್ಲಿ ಅಂದರೆ ಪ್ರಜಾಕೋಟಿಯಲ್ಲಿರು

(೪೪ ನೇ ಪುಟ ನೋಡಿರಿ)

TELEPHONE: 23240 GRAMS: "ENKEBEE"

NEW KRISHNA BHAVAN

RESTAURANT, BOARDING & LODGING

MALLESWARAM,

BANGALORE-20

ಸಂದರ್ಶಿಸಿರಿ! ಸಂತೃಪ್ತರಾಗಿರಿ!!

ಬೆಂಗಳೂರಲ್ಲಿ

ಸಕಲ ಸೌಕರ್ಯಗಳಿಂದೊಡಗೂಡಿ

ಹಾರ್ದಿಕ ಸೇವೆ ಸಲ್ಲಿಸುವ

ನ್ಯೂ ಕೃಷ್ಣ ಭವನ

ಆಧುನಿಕ ಮಾದರಿಯ

ಉಪಾಹಾರ, ಊಟ ಮತ್ತು ವಸತಿ ಗೃಹ—

ಮಲ್ಲೇಶ್ವರಂ, ಬೆಂಗಳೂರು-20

ರವ

ಸರ್ವರಿಗೂ ಪ್ರಜಾರಾಜ್ಯ ದಿನದ ಶುಭಾಶಯಗಳು

Again
1963 Mysore Dasara Gold Medal
for Mangalore
P. V. S. BEEDIES.....

A product enjoying patronage of millions of our people for the best quality maintained ever since 1906 and now Exported to Middle East Countries too.

With Seasons Greetings to all---

From:

P. V. S. BEEDIES
PRIVATE LIMITED

Regd. Office -

KODIYALBAIL — MANGALORE-3.

Phone 83, 83A,
Res: 593, 593A.

Post - Box
707

Telegrams—
"puthubidis"

ಭಾರತದಲ್ಲಿ ರಾಷ್ಟ್ರೀಯತೆ

ನಮ್ಮ ಭಾರತದಲ್ಲಿ ರಾಷ್ಟ್ರೀಯತೆಯೀಗ ಮರಳಿ ಜಾಗೃತವಾಗತೊಡಗಿದೆ. ಶತ್ರು ಚೀನೀಯರ ಆಕ್ರಮಣ ಮತ್ತು ಪಾಕಿಸ್ತಾನದ ಮಿತ್ರಭೇದತನಗಳಿಂದಾಗಿ ಈ ರಾಷ್ಟ್ರೀಯ ಮನೋಭಾವ ಹೊನಲಾಗಿ ಕಡಲಾಗಿ ಹರಿಯ ಬೇಕಾಗಿದೆ. ರಾಷ್ಟ್ರೀಯತೆಯ ಅಭಾವದಿಂದ ಸಾವುಂಡ ಬವಣೆಯನ್ನು ನಾವು ನೆನಪಿಸಿ, ಅದು ಹುಟ್ಟಿ ಬೆಳೆದು ಬಂದ ವಿಧಾನವನ್ನು ಅರಿತು ರಾಷ್ಟ್ರೀಯತೆಯಿಂದಲೇ ಪಡೆದ ಸ್ವಾತಂತ್ರ್ಯವನ್ನು ಅದರ ಸಹಾಯದಿಂದಲೇ ಉಳಿಸುವ ದೃಢ ಪ್ರತಿಜ್ಞೆಗೈಯ ಬೇಕು.

ಲೇಖಕರು:
ಶ್ರೀ ಶಿರ್ವಾಡಿ ವಿಲಿಯಂ ಪಿಂಟೊ,
ಬಿ. ಎ., ಎಲ್. ಎಲ್. ಬಿ.
ಉಡುಪಿ,

೧೮೫೭ರಲ್ಲಿ ನಡೆದ ಸಿಪಾಯಿ ದಂಗೆ ಯಶಸ್ವಿಯಾಗದಿರಲು ಭಾರತದ ಜನರಲ್ಲಿ 'ರಾಷ್ಟ್ರೀಯ ಭಾವನೆ' ಸಾಕಷ್ಟಿಲ್ಲದಿದ್ದುದ್ದೇ ಮುಖ್ಯ ಕಾರಣವಾಗಿತ್ತು. ಈ ದಂಗೆಯು ಪ್ರಥಮದಲ್ಲಿ ಮೀರತ್, ದಿಲ್ಲಿ, ಝಾನ್ಸಿ ಮೊದಲಾದ ಚಿಕ್ಕ ಪಟ್ಟಣದ ಸೈನಿಕ ಠಾಣ್ಯಗಳಲ್ಲಿಯೇ ಪ್ರಾರಂಭವಾಯಿತು. ಸಿಪಾಯಿ ದಂಗೆ ಅಸಂತೃಪ್ತ, ನೊಂದ ಸಿಪಾಯಿಗಳ ಆಂದೋಲನವಾಗಿತ್ತು. ಅದು ಸಿಪಾಯಿಗಳಿಂದಲೇ ಪ್ರಾರಂಭವಾಗಿ ಸಿಪಾಯಿಗಳಿಂದಲೇ ನಡೆಸಲ್ಪಟ್ಟ ದಂಗೆಯಾಗಿತ್ತು. ಭಾರತದ ಪ್ರಜೆಗಳು ಇದರಲ್ಲಿ ಉತ್ಸಾಹ ತಾಳಲಿಲ್ಲ, ಸಹಾಯವನ್ನೂ ಮಾಡಲಿಲ್ಲ. ಅದರ ಬದಲಾಗಿ ಆ ಸಿಪಾಯಿ ದಂಗೆಯನ್ನು ಅಡಗಿಸಲು ಮಹಾರಾಜರುಗಳೊಡನೆ, ಬ್ರಿಟಿಷರೊಡನೆ ಅವರು ಸೇರಿದರೆಂದರೆ ಅದೊಂದು ಅದ್ಭುತ ವಿಷಯವಾಗಿದೆ. ಬ್ರಿಟಿಷ್ ಸಾರ್ವಭೌಮತೆ ಭಾರತದಲ್ಲಿಡೀ ಹಬ್ಬಿ, ಬ್ರಿಟಿಷರು ನಿರಾತಂಕವಾಗಿ ರಾಜ್ಯವಾಳುತ್ತಿದ್ದರೂ ಜನತೆ 'ಸಿಪಾಯಿ ದಂಗೆ'ಯಲ್ಲಿ ಭಾಗ ವಹಿಸದಿರಲು 'ರಾಷ್ಟ್ರೀಯತೆಯ" ಅಭಾವವೇ ಮುಖ್ಯ ಕಾರಣವಾಗಿತ್ತು.

ಭಾರತದಲ್ಲಿ 'ರಾಷ್ಟ್ರೀಯತೆ'ಯ ಬೀಜವನ್ನು ಬ್ರಿಟಿಷರೇ ತಮ್ಮ ದುಷ್ಕೃತ್ಯ ದುಂಡಳಿತೆ, ಜನರೊಡನೆ ತೋರಿಸಿದ ಭೇದಭಾವಗಳಿಂದ ಬಿತ್ತಿದರು. ಬಿಳಿಯರು ಜಂಭದ ಕೋಳಿಗಳಂತೆ ಆಡಳಿತ ಯಂತ್ರವನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸುವುದನ್ನು ನೋಡಿದ ಭಾರತದ ಜನತೆ ರೊಚ್ಚಿಗೆದ್ದಿತು. ಅವರ ಹೃದಯದಲ್ಲಿ ನಮ್ಮ ರಾಷ್ಟ್ರದಲ್ಲಿ ಆಡಳಿತೆ ಮಾಡುವ ಹಕ್ಕು ಬ್ರಿಟಿಷರಿಗೆ ಹೇಗೆ ಬಂತು? ಅದು ನ್ಯಾಯವೇ ಎಂಬ ಪ್ರಶ್ನೆಗಳುದಿಸಿದವು. ಇಂಗ್ಲಿಷನ್ನು ಹರಡಲು ಅವರು ಕೈಕೊಂಡ ಕ್ರಮ, ಇಂಗ್ಲಿಷ್ ಸಾಹಿತ್ಯ ಪ್ರಚಾರ, ನಿಮಿಷ ನಿಮಿಷಕ್ಕೆ ಕಪ್ಪಿನವರೊಡನೆ ಅವರು ತೋರಿಸುವ ಭೇದಭಾವ ಜನರಿಂದ ತಡೆಯಲು ಅಸಾಧ್ಯವಾಯಿತು.

೧೯೦೫ರಲ್ಲಿ ನಡೆದ ಭೀಕರ ಯುದ್ಧದಲ್ಲಿ ಚಿಕ್ಕ ರಾಷ್ಟ್ರವಾದ ಜಪಾನು, ವಿಸ್ತೀರ್ಣ ಹಾಗೂ ಸಂಪತ್ತಿನಲ್ಲಿ ಹಿರಿದಾದ ರಷ್ಯಾವನ್ನು ಸೋಲಿಸಿತು. ಈ ಗೆಲುವಿನಿಂದ ಏಶಿಯಾ ಖಂಡದ ಜನರಿಗೆಲ್ಲ ರೋಮಾಂಚನವಾಯಿತು. ಜನತೆಯ ಹೃದಯಗಳು ಕಂಪಿಸಲಾರಂಭಿಸಿದವು. ಕಾಡ್ಗಿಚ್ಚಿನಂತೆ 'ರಾಷ್ಟ್ರೀಯ ಭಾವನೆ" ಏಶಿಯವಿಡೀ ಹರಡಿತು. 'ಏಶಿಯವು ಏಶಿಯನರಿಗಾಗಿ" ಎಂಬ ಕೂಗು ಎಲ್ಲೆಲ್ಲೂ ಪ್ರತಿಧ್ವನಿಸ ತೊಡಗಿತು. ಭಾರತದಲ್ಲಿ ಜನರು ಕೂಡಾ ಜಪಾನಿನ ವಿಜಯದ ವರೆಗೆ ಪಾಶ್ಚಾತ್ಯರು ಎಲ್ಲ ವಿಧಗಳಿಂದಲೂ ಪೌರಾತ್ಯರಿಗಿಂತ ಮೇಲು ಎಂಬ ಭಾವನೆ ಬಲವಾಗಿತ್ತು. ಭಾರತೀಯರಂತೂ ಬಿಳಿಯರ ಎದುರಿನಲ್ಲಿ ತಾವು ಕ್ಷುಲ್ಲಕರೆಂದೇ ಭಾವಿಸುತ್ತಿದ್ದರು. ಜಪಾನಿನ ಜಯದ ಪರಿಣಾಮವಾಗಿ ಭಾರತೀಯರು ಕೂಡಾ ಬ್ರಿಟಿಷರ ಸರಿಸಾಟಿ ಎಂಬುದಾಗಿ ಆಲೋಚಿಸತೊಡಗಿದರು.

ಭಾರತದಲ್ಲಿಡೀ 'ರಾಷ್ಟ್ರೀಯತೆ'ಯ ಸಸಿಗಳು ಹುಲುಸಾಗಿ ಬೆಳೆಯುವಾಗಲೇ ಇಂಗ್ಲೆಂಡ್ ಬಂಗಾಳವನ್ನು ಎರಡು ತುಂಡುಗಳನ್ನಾಗಿ ವಿಭಾಗಿಸಲು ನಿಶ್ಚಯಿಸಿ ಗಾಯದ ಮೇಲೆ ಉಪ್ಪು ಹಾಕಿತು. ಈ ನಿರ್ಧಾರದಿಂದ ಬಂಗಾಳದ ಜನರು ರೊಚ್ಚಿಗೆದ್ದರು. ಭಾರತದಲ್ಲಿಡೀ ಬ್ರಿಟಿಷ್ ಆಡಳಿತದ ವಿರುದ್ಧ ಕೂಗೆದ್ದಿತು. "ಜೀವ ಹೋದರೂ ಸರಿಯೇ ಬಂಗಾಳ ವಿಭಜಿಸಲು ಒಪ್ಪುವಂತಿಲ್ಲ ಎಂಬ ಘೋರ ಪ್ರತಿಜ್ಞೆಯನ್ನು ಜನತೆ ಸ್ವೀಕರಿಸಿತು ಈ 'ರಾಷ್ಟ್ರೀಯ ಚಳುವಳಿಯ' ನಾಯಕತ್ವವನ್ನು ರಾಷ್ಟ್ರೀಯ ಮುಖಂಡರಾದ ಅರವಿಂದ ಘೋಷ್', ಬಿ. ಸಿ. ಪಾಲ್, ತಿಲಕ ಮೊದಲಾದವರೇ ವಹಿಸಿದ್ದರು. ಜನರಲ್ಲಿ ತುಂಬಿ ತುಳುಕುತ್ತಿದ್ದ 'ರಾಷ್ಟ್ರೀಯ ಭಾವನೆ' ಕೆಲವು ಸಂದರ್ಭಗಳಲ್ಲಿ ರಕ್ತ ಚೆಲ್ಲುವಂತೆ ಮಾಡಿತು.

೧೯೧೪ರಲ್ಲಿ ನಡೆದ ಪ್ರಥಮ ಮಹಾಯುದ್ಧದ ನಂತರವೇ ಭಾರತದಲ್ಲಿ 'ರಾಷ್ಟ್ರೀಯತೆಯ' ದ್ವಿತೀಯ ಅಧ್ಯಾಯ

ಪ್ರಜಾರಾಜ್ಯಕ್ಕೆ ನೈಸರ್ಗಿಕ ಪಾಠ

(೩೧ನೇ ಪುಟದಿಂದ)

ನ ಸಮಾಜ ಘಾತಕರನ್ನು, ಜಯಚಂದ ಸಂತಾನವನ್ನು...ತಿದ್ದಬೇಕು, ಸಾಧ್ಯವಾಗದಿದ್ದಲ್ಲಿ ನೆಲಸಮ ಮಾಡಿ ಸಮಾಜದ ವಾತಾವರಣವನ್ನು ನಿರ್ಮಲಗೊಳಿಸಬೇಕು. ಹಿಮದಂತೆ ಸರಕಾರ ಶುಭ್ರವಾಗಿಯೂ ಇರತಕ್ಕದ್ದು. ಲಂಚ, ಪಕ್ಷಪಾತತನ ವೈರಿಗಳ ಗಂಧಗಾಳಿಯೂ ಸೋಂಕಬಾರದು. ಅನ್ಯ ದೇಶಗಳೊಂದಿಗೆ ಸಮಾನ ದೃಷ್ಟಿಯಿಂದ ಪ್ರೀತಿಯಿಂದ ಇರಬೇಕು, ವಾಸ್ತವ; ಆದರೆ ಆಕ್ರಮಣಗಾರರನ್ನೆದುರಿಸಲೂ ಅದು ಸಿದ್ಧವಾಗಿರತಕ್ಕದ್ದು. ಅದನ್ನು ಬಿಟ್ಟು ತಾನೀಗ ಪ್ರಜೆಗಳ ಸಾಲಿಗೆ ಸೇರದೆ ಅಧಿಕಾರದಾಗಸದಲ್ಲಿ ಸ್ವೇಚ್ಛೆಯಿಂದ ವಿಹರಿಸಬೇಕೆಂಬ ಭಾವನೆಯೂ ಬರಬಾರದು ಹಾಗೆಯೇ, ನೀರು ಜೀವನಾಧಾರವಾಗಿರುವಂತೆ ಪ್ರಜಾ ಸರ್ಕಾರವೂ ಪ್ರಜೆಗಳಿಗೆ ಜೀವನಾಧಾರವಾಗಿರಬೇಕು; ಪ್ರಜೆಗಳ ಶೋಷಣೆ ನಡೆಸುತ್ತಿರ ಕೂಡದು.

ಆದನ್ನು ಸೂಚಿಸಲೆಂದೇ ಭಾರತಂನಿ ತನ್ನ ಪಾದಪದ್ಮಗಳನ್ನು ಸಾಗರದಲ್ಲಿಟ್ಟಿರುವಳು; ರಾಜಸ್ಥಾನದಂತಹ ಕುದಿಯುತ್ತಿರುವ ಅಥವಾ ಉಗಿಯ ಪ್ರದೇಶವನ್ನು ಮಮತೆಯ ಮಡಿಲಲ್ಲಿಟ್ಟುಕೊಂಡಿರುವಳು; ಹಿಮ ಮಂಡಿತ ಕೈಲಾಸ ಶಿಖರವಿರುವ ಧವಳ ಯಶಸ್ಸಿನ ಹಿಮಾಲಯವನ್ನು ಕಿರೀಟವನ್ನಾಗಿಟ್ಟುಕೊಂಡಿದ್ದಾಳೆ. ಕಾಶ್ಮೀರವನ್ನು ಮಕುಟಮಣಿಯನ್ನಲಾಗುತ್ತಿದೆ. ಹಿಮಾಲಯದ ಉತ್ತಮ ಶೃಂಗಗಳೋ ಮುಗಿಲನ್ನು ಹಿಡಿದು ನಿಲ್ಲಿಸುತ್ತವೆ. ಇವುಗಳಿಂದ ನೈಸರ್ಗಿಕ ಪಾಠವನ್ನು ಕಲಿತುಕೊಂಡು ಅದಕ್ಕನುಸಾರವಾಗಿ ನಡೆಯುವ ಸರ್ಕಾರವೇ ಉತ್ತಮ ಪ್ರಜಾ ಪ್ರತಿನಿಧಿಗಳಿಂದ ನಡೆಸಲ್ಪಡುವ ಸರಕಾರವಿರುತ್ತದೆ. ಓಹೋ! ಕಲ್ಲು, ಮಣ್ಣು, ನೀನೇ ನನಗೆ ಪಾಠ ಹೇಳಿಕೊಡುತ್ತೀಯಾ? ಕಲಿಸುತ್ತೇನೆ ನಿನಗೆ ಬುದ್ಧಿ ಎಂದು ಸಾಗರವನ್ನು ಇಂಡೋನೇಶ್ಯಾ [ದ್ವೀಪಾಂತರ]ವಾಗಿಯೋ; ರಾಜಸ್ಥಾನವನ್ನು ಪಾಕಿಸ್ತಾನಕ್ಕೋ, ಹಿಮಗಿರಿಯನ್ನು ಚೈನಾಕ್ಕೋ ಬಿಟ್ಟುಕೊಟ್ಟು ಕೈತೊಳೆದು ಕೊಳ್ಳುವುದು ಧೀರ-ಬುದ್ಧಿವಂತರ ಲಕ್ಷಣವೇನು? ಈ ಭೂಮಿಯನ್ನು ನಾವು ಜನ್ಮಭೂಮಿ, ಮಾತೃಭೂಮಿ ಎಂದು ಕರೆಯುತ್ತಿದ್ದೇವೆ ಆ ಭೂಮಿಯ ಜನರಿಗೆ ಪ್ರಜಾಪ್ರಭುತ್ವ ಹೊಸದೇನೂ ಇರುವುದಿಲ್ಲ. ತಾವು ಅತಿ ಬುದ್ಧಿವಂತರೆಂಬ ಹೆಮ್ಮೆಯನ್ನು ಬಿಟ್ಟು ರಾಷ್ಟ್ರಾಭಿಮಾನದಿಂದ ನೈಸರ್ಗಿಕ ಪಾಠಗಳನ್ನು ಕಲಿತು ತದನುಸಾರವಾಗಿ ನಡೆಯುವವರೇ ಇಂದು ಗದ್ದುಗೆಯಲ್ಲಿರುವುದು ಸರ್ವರಿಗೂ ಸರ್ವ ವಿಧದಲ್ಲಿ ಹಿತಕಾರಿಯಾಗಿರುತ್ತದೆ.

USE ALWAYS

SPB

Quality Papers

Manufactured by

M s Seshasayee Paper & Boards Ltd.,

PALLIPALAYAM. (Salem Dt.)

Distributors for Mysore State:

SRINIVAS BROTHERS

CAR STREET MANGALORE 1.

Phone. 449 Grams: "ACTIVE"

ಪ್ರಾರಂಭವಾದುದು. ಯುದ್ಧದ ಕಾಲದಲ್ಲಿ ಭಾರತ ಶುದ್ಧ ಮನಸ್ಸಿನಿಂದ ಬ್ರಿಟಿಷರೊಡನೆ ಸಹಕರಿಸಿತು. ಸಹಕರಿಸಿದ ಭಾರತದೊಡನೆ ಇಂಗ್ಲೆಂಡ್ ಯುದ್ಧಾನಂತರ ನಿರ್ದಯವಾಗಿ ವರ್ತಿಸಿತು. ಯುದ್ಧದ ತರುವಾಯ ತಮ್ಮ ಕೂಗುಗಳನ್ನು ನಿಕ್ಲಿಸಿಬಾರು ಎಂದು ಭಾರತದ ಜನತೆ ಇಂಗ್ಲಿಷರ ಮೇಲೆ ಇಟ್ಟಿದ್ದ ಭಾವನೆ ಚೂರು ಚೂರಾಯಿತು. ಭಾರತ ಮಾಡಿದ ಪ್ರತ್ಯುಪಕಾರಕ್ಕೆ ಪ್ರತ್ಯುಪಕಾರವಾಗಿ ಸಿಕ್ಕಿದುದು ರೌಲೆಟ್ ಕಾನೂನು, ಜಲಿಯನ್‌ವಾಲ್‌ಬಾಗ್ ಅಮೃತಸರದ ಕಗ್ಗೊಲೆ ಕಣ್ಣಿನಲ್ಲಿ ನೆತ್ತರಿಲ್ಲದ ಇಂತಹ ಬ್ರಿಟಿಷರ ಕಾರ್ಯಗಳಿಂದ "ರಾಷ್ಟ್ರೀಯತೆ" ಎಂಬ ದೀವಟಿಗೆ ಎಣ್ಣೆ ಹಾಕಿದಂತೆ" ಬ್ರಿಟಿಷ್ ಸರಕಾರದ ಮೇಲಿನ ಕ್ರೋಧ ನೂರ್ಮಡಿಯಾಗಿ ೧೯೨೦ರಲ್ಲಿ "ಅಸಹಕಾರ ಚಳುವಳಿಯು" ರೂಪ ತಾಳಿತು.

ಮಹಾತ್ಮಾ ಗಾಂಧಿಯವರೇ "ಅಸಹಕಾರ ಚಳವಳಿ"ಯ ಮುಖಂಡತ್ವವನ್ನು ವಹಿಸಿದ್ದರು. ಈ ಚಳವಳಿಯೇ ಬ್ರಿಟಿಷ್ ಸಾರ್ವಭೌಮತೆಯ ವಿರುದ್ಧ ಭಾರತೀಯ ಜನರ ಪ್ರಥಮ ಸಮರವಾಗಿತ್ತು. ಅಹಿಂಸಾ ತತ್ವದ ಆಧಾರದ ಮೇಲೆ ನಡೆದ ಈ ಚಳವಳಿ ಭಾರತದ ಮೂಲೆಮೂಲೆಗಳಲ್ಲಿ ಪಡೆದ. ಪ್ರಥಮವಾಗಿ ಭೂಲೋಕದ ಲಕ್ಷ್ಯವನ್ನು ತನ್ನೆಡೆಗೆ ಸೆಳೆಯಿತು, "ನಾಗರಿಕ ಅವಿಧೇಯತನದ ಚಳವಳಿ" ೧೯೩೦ರಲ್ಲಿ ನಡೆದು ಭಾರತದ ಜನತೆಯಲ್ಲಿ ರಾಷ್ಟ್ರೀಯತೆ ಎಲ್ಲಿಯ ವರೆಗೆ ಬೆಳೆಯಿತು ಎಂಬುದನ್ನು ಎತ್ತಿ ತೋರಿಸಿತು ಭಾರತದ ಹಳ್ಳಿಗಳ ಲಕ್ಷೋಪಲಕ್ಷ ಅವಿದ್ಯಾವಂತ, ಬಡ ಜನತೆ ಕೂಡಾ ಈ ಚಳವಳಿಯಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ ಬ್ರಿಟಿಷರ ಕಪಿಮುಷ್ಟಿಯಿಂದ ತಮ್ಮ ಬಿಡುಗಡೆ ಬೇಗಆದೀತೆಂದು ದೃಢವಾಗಿ ನಂಬಿತ್ತು. ಮಾತೃಭೂಮಿಯನ್ನು ಪರಾಧೀನತೆಯ ನೊಗದಿಂದ ಬಿಡಿಸಲು ಜನಸಾಮಾನ್ಯರು ಕೂಡಾ ಮುಂದೆ ಬಂದಿದ್ದರು.

೧೯೩೫ರ ಕಾನೂನು ಮತ್ತು ಅದರ ಪರಿಣಾಮವಾಗಿ ಏಳು ಪ್ರಾಂತ್ಯಗಳಲ್ಲಿ "ಕಾಂಗ್ರೆಸ್" ಮಂತ್ರಿ ಮಂಡಲಗಳ ಸ್ಥಾಪನೆ ಜನರ ಅತಿರೇಕ ವರ್ತನೆಯನ್ನು ಸಾಂತ್ವನಗೊಳಿಸಿತು. ಈ ಮಧ್ಯಮ ಕಾಲದಲ್ಲಿ ರಾಷ್ಟ್ರೀಯತೆ ಸತ್ತುಹೋದಂತೆ ಭಾಸವಾಗತೊಡಗಿತು. ಆಗಲೇ ೧೯೩೯ರ ದ್ವಿತೀಯ ಮಹಾಯುದ್ಧ ಪ್ರಾರಂಭವಾಯಿತು. ಭಾರತ ಕೂಡಾ ಯುದ್ಧದಲ್ಲಿ ಭಾಗವಹಿಸುವುದೆಂದು ವೈಸರಾಯರು, ಮಂತ್ರಿಮಂಡಲಗಳೊಡನೆ ವಿಚಾರಿಸದೆ ಘೋಷಿಸಿ ಬಿಟ್ಟರು. ಅನ್ಯಾಯದ ವಿರುದ್ಧವಾಗಿ ಕಾಂಗ್ರೆಸ್ ಮಂತ್ರಿ ಮಂಡಲಗಳು ರಾಜೀನಾಮೆಯನ್ನಿತ್ತವು. "ಪ್ರಜಾಪ್ರಭುತ್ವದ ರಕ್ಷಣೆಗಾಗಿ" ತಾವು ಯುದ್ಧ ಹೂಡುತ್ತೇವೆಂದು ಬ್ರಿಟನ್ ಹೆಗ್ಗಳಿಕೆ ಕೊಚ್ಚಿಕೊಂಡರೂ ಭಾರತಕ್ಕೆ ಸ್ವಾತಂತ್ರ್ಯ ಎಂದರೆ ಏನು? ಎಂಬುದನ್ನು ಕೂಡಾ ತಿಳಿಯಲು ಅವಕಾಶ ಕೊಡಲಿಲ್ಲ. ಇದೇ ಸಂದರ್ಭದಲ್ಲಿ "ಪರ್ಲ್ ಹಾರ್ಬರ್ ದುರ್ಘಟನೆ" ಆಶ್ಚರ್ಯಕರವಾದ ರೀತಿಯಲ್ಲಿ ಸಂಭವಿಸಿ ಬಿಳಿ ಚರ್ಮದವರು ಎಲ್ಲರಿಗಿಂತಲೂ ಮೇಲೆಂಬ ವಾದ ಸುಳ್ಳಾಯಿತು.

ಭಾರತದಲ್ಲಿ "ರಾಷ್ಟ್ರೀಯತೆಯ" ಪ್ರವಾಹ ಹರಿಯ ತೊಡಗಿತು. ಬ್ರಿಟಿಶರನ್ನು ಗಂಟು ಮೂಟೆಯೊಡನೆ ಓಡಿಸ ಬೇಕೆಂಬ ಕೂಗಿಗೆ ಎಲ್ಲೆಲ್ಲೂ ಪ್ರೋತ್ಸಾಹ ದೊರಕಿತು. ಇದರ ಪರಿಣಾಮವಾಗಿ ೧೯೪೨ರಲ್ಲಿ "ಕ್ವಿಟ್ ಇಂಡಿಯಾ" ಚಳವಳಿಯು ಭಾರತದ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿತು. "ಕ್ವಿಟ್ ಇಂಡಿಯಾ"ಚಳವಳಿಯಿಂದ ಭಾರತದ ಜನತೆ 'ಜಾಗೃತರಾಗಿದ್ದಾರೆ' 'ನಿದ್ದೆಯಲ್ಲಿಲ್ಲ, ಎಚ್ಚರವಾಗಿದ್ದಾರೆ' ಎಂಬ ವಿಚಾರ ಜಗಜ್ಜಾಹೀರವಾಯಿತು. ಭಾರತದಲ್ಲಿ ರಾಷ್ಟ್ರೀಯತೆ ಬೆಳೆಯಲು ಇನ್ನಿತರ ಕಾರಣಗಳು ಕೂಡಾ ಇದ್ದುವು. ಇತರ ರಾಷ್ಟ್ರಗಳೊಡನೆ ಭಾರತವನ್ನು ಹೋಲಿಸಿ ನೋಡುವಾಗ್ಯೆ ಬಡತನ, ಅವಿದ್ಯೆ, ಅಜ್ಞಾನ, ರೋಗರುಜೆ ಹೆಚ್ಚಾಗಿದ್ದಿತ್ತು. ಬ್ರಿಟಿಷರು ತಮ್ಮ ಆಡಳಿತೆಯಲ್ಲಿ ಭಾರತೀಯರ ರಕ್ತವನ್ನು ಹೀರಿ ಕೊಬ್ಬುತ್ತಿದ್ದರೆ ವಿನಃ ಅವುಗಳ ನಿವಾರಣೆಗೆ ಎಳ್ಳಷ್ಟೂ ಪ್ರಯತ್ನ ಮಾಡುತ್ತಿದ್ದಿಲ್ಲ. ಈ ಅವ್ಯವಸ್ಥೆಯನ್ನು ನೋಡಿದ ಮಹಾತ್ಮಾ ಗಾಂಧೀಜಿಯವರಂತಹ ನಾಯಕರು ರಾಷ್ಟ್ರೀಯ ಭಾವನೆ ಬೆಳೆಸಲು ಹೆಣಗಾಡಿದರು.

ಭಾರತಕ್ಕೆ ೧೯೪೭ರಲ್ಲಿ ಸ್ವಾತಂತ್ರ್ಯ ಸಿಕ್ಕಿದರೆ ಅದು "ರಾಷ್ಟ್ರೀಯತೆ"ಯಿಂದ ಮಾತ್ರ. ಪಡೆದ ಸ್ವಾತಂತ್ರ್ಯದ ರಕ್ಷಣೆ ಆಗಬೇಕಾದಲ್ಲಿ, ನಮ್ಮ ಹೃದಯದಲ್ಲಿ, ಮಕ್ಕಳು ಮರಿಮಕ್ಕಳಲ್ಲಿ ಈ ಉತ್ತಮ ಗುಣವನ್ನು ಬೆಳೆಸಬೇಕು. ಈ ಗುಣವನ್ನು ಬೆಳೆಸದೆ, ಇತರ ಬೆಳವಣಿಗೆಗೆ ಕಂಟಕ ಪ್ರಾಯರಾದ ನಾಗರಿಕರು "ದೇಶದ್ರೋಹಿ"ಗಳಾಗುತ್ತಾರೆ. ಆ ಪಂಗಡಕ್ಕೆ ನಮ್ಮ ಸೇರ್ಪಡೆಯಾಗ ಕೂಡದು. ಬುಸುಗುಟ್ಟುವ ಸರ್ಪದಂತೆ, ಹೆಡೆ ಎತ್ತಿ ಬೆಳೆದು ಬರುವ "ದ್ರಾವಿಡ" ಮುನ್ನೇತ್ರ ಕಜಗಂನಂತಹ ದೇಶದ್ರೋಹಿ ಪಕ್ಷಗಳಿಗೆ ಮುಟ್ಟುಗೋಲು ಹಾಕಬೇಕು.

ಚೈನಾ ಆಕ್ರಮಣದಿಂದ ಜಾಗೃತವಾದ 'ರಾಷ್ಟ್ರೀಯತೆ' ಸತ್ತು ಶವವಾಗದಂತೆ ನಮ್ಮ ಮುಖಂಡರು, ಕವಿಗಳು, ಲೇಖಕರು ಬುದ್ಧಿವಂತ ವರ್ಗ ಜಾಗೃತೆ ವಹಿಸಬೇಕು. ನಮ್ಮ ಮಂತ್ರಿಗಳು ಜನತೆಗೆ 'ಉಪದೇಶ' ಮಾಡುವುದಕ್ಕಿಂತ ಆ ಉಪದೇಶವನ್ನು ತಾವು ಪ್ರಥಮ ಕಾರ್ಯಾಚರಣೆಗೆ ತಂದು ಜನತೆಗೆ ಆದರ್ಶಪ್ರಾಯರಾಗಬೇಕು. ಭಾರತದ ಉಳಿದ ಸಮಸ್ಯೆಗಳು ಕೂಡಾ 'ರಾಷ್ಟ್ರೀಯತೆ' 'ಸಹೋದರತೆ' ಬಂಧುತ್ವ ಬೆಳೆದಂತೆ ನಶಿಸಿ ಹೋಗುವುವು. 'ರಾಷ್ಟ್ರೀಯತೆ'ಯ ವಿರುದ್ಧ ಹೋರಾಡುವ ಶಕ್ತಿಗಳ ವಿರುದ್ಧ ಹೋರಾಡಲು ನಾವು ಒಗ್ಗಟ್ಟಾಗ ಬೇಕಾಗಿದೆ, ರಾಷ್ಟ್ರೀಯತೆ ಸತ್ತರೆ ನಾವು ಕಷ್ಟದಿಂದ ಪಡೆದ ಸ್ವಾತಂತ್ರ್ಯದ ಸಮಾಧಿಯಾದೀತು ಆದುದರಿಂದ 'ರಾಷ್ಟ್ರೀಯ ಭಾವ"ವನ್ನು ಜೀವಂತವಾಗಿಡಲು ನಾವು ಒಗ್ಗಟ್ಟಾಗಿ ಪ್ರಯತ್ನಿಸುವ.

ನಿಮ್ಮ ಹಣವನ್ನು
ಶೇಕಡಾ 6.1 ಬಡ್ಡಿ ಗಳಿಸ ಬೇಕಾದರೆ
ಕರ್ನಾಟಕ ಬ್ಯಾಂಕಿನ
ಕೇಶ್ ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸಿರಿ.

KARNATAKA BANK LIMITED,
Regd. Office: MANGALORE-3.

30 REGD.

"ಭಾರತದ ಪ್ರಜೋತ್ಸವದ"

ಇಂದಿನ ಶುಭದಿನದಲ್ಲಿ

ದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ನಮ್ಮ ಅಂಶದಾನವನ್ನು ಸಲ್ಲಿಸುವೆವೆಂಬ ಪ್ರತಿಜ್ಞೆಯ ನವೀಕರಣದಿಂದ ದೇಶದ ಜನತೆಗೆ ಮುಂದಕ್ಕೂ ಹೆಚ್ಚಿನ ಸೇವೆ ಸಲ್ಲಿಸುವೆವೆಂದು ಸರ್ವರಿಗೂ ಹೃತ್ಪೂರ್ವಕ ಶುಭ-ಸಂತೋಷವನ್ನು ಬಯಸುವೆವು.

ಮಿಲಿಯಾಂತರ ಜನರ ಮೆಚ್ಚುಗೆಯ
ಸೇವನೆಯಿಂದಲೇ ದಕ್ಷಿಣ ಭಾರತದ
ಗುಡಿಕೈಗಾರಿಕೆಗಳಲ್ಲಿ ಅಗ್ರಸ್ಥಾನವನ್ನು
ಪಡೆದಿರುವ ಸಂಸ್ಥೆ

KARKALA.
Tele { Phone: 30 & 37. Gram: "DAMODAR"

MANGALORE.
Tele { Phone: 391 & 930. Gram: "THIRTYBEEDI"

ಭಾರತ ಬೀಡಿ ವರ್ಕ್ಸ್ (ರಿಜಿಸ್ಟರ್ಡ್)

ಪೋಸ್ಟ ಬೋಕ್ಸ್ ನಂ. 30

ಕಾರ್ಕಳ. ದ. ಕ. ಮೈಸೂರು ರಾಜ್ಯ—

—: ಕರುನಾಡ ಕೀರ್ತಿ: —

— ೧ —

ಕನ್ನಡದ ಚನ್ನುಡಿಯು ಕನ್ನಡದ ಪೊನ್ನುಡಿಯು
ತೋರುತಿವೆ ಕನ್ನಡಮ್ಮನ ಮೂರುತಿ!
ಕನ್ನಡದ ರನ್ನುಡಿಯು ಕನ್ನಡದ ಜೇನ್ನುಡಿಯು
ಸಾರುತಿವೆ ಕನ್ನಡಾಂಬೆಯ ಕೀರುತಿ!

— ೨ —

ಚಾಳುಕ್ಯ ಹೊಯ್ಸಳರು ವಿಜಯನಗರಾಧಿಪರು
ನಾಡ ನುಡಿ ರಕ್ಷೆಯಲಿ ದೇಹ ತೆಯ್ದಿಹರು,
ಪಂಪ ಹರಿಹರ ರನ್ನ ಪೊನ್ನ ಕುವರವ್ಯಾಸ
ಮಧುರ ಕಾವ್ಯವ ರಚಿಸಿ ಸೇವೆ ಗೈಯ್ದಿಹರು.

— ೩ —

ಶರಣ ಬಸವ ದಾಸವಿಜಯ ಸಂತ ಶ್ರೇಷ್ಠರು
ಭಕ್ತಿಗೀತೆ ಹಾಡಿ ದೇವನೊಲುಮೆ ಪಡೆದರು
ಮಾಧವಾರ್ಯ ಸಾಯಣಾರ್ಯ ವ್ಯಾಸರಾಯರು
ವೇದ ಧರ್ಮ ರಕ್ಷೆಯಲ್ಲಿ ಪಾಲುಗಾರರು.

— ೪ —

ಶೈವ ವೀರಶೈವ ವೈಷ್ಣವಾದಿ ಜೈನ ಮತಗಳು
ಸಾಜ-ರಾಜ-ನೈಜ ಪ್ರೇಮದಿಂದ ಬೆಳೆದವು,
ಕೃಷ್ಣೆ ಭೀಮೆ ತುಂಗಭದ್ರೆ ಪುಣ್ಯ ನದಿಗಳು
ಹರುಷದಿಂದೆ ನೆಗೆದು ನಲಿದು ಹರಿಯುತಿರುವವು.

— ೫ —

ಪಶ್ಚಿಮಾದ್ರಿ ನೀಲಗಿರಿಯು ಪೂರ್ವಘಟ್ಟ ನಂದಿಬೆಟ್ಟ
ಗಗನಕೇರಿ ಕೀರ್ತಿವೊಗಳ್ವ ನಾಡು ನಮ್ಮದು!
ಶೃಂಗಗಿರಿಯು ಮೇಲುಕೋಟೆ ಉಡುಪಿ ಬೆಳ್ಗೊಳ
ಪುಣ್ಯ ಕ್ಷೇತ್ರ ಪಡೆದ ಭಾಗ್ಯ ನಾಡು ನಮ್ಮದು

— ೬ —

[illegible] ಕರ್ಮಭೂಮಿ ಮಾತೃ ಭೂಮಿ ಕನ್ನಡ
[illegible] ಗವ ಬೀಡು ಜನದ ಹಾಡು ಕನ್ನಡ!
ದೇವವಾಣಿ ಧರ್ಮವಾಣಿ ಸಂತವಾಣಿ ಕನ್ನಡ
ನಾದ ನುಡಿಯು ತಾಯ ನುಡಿಯು ನಮ್ಮ ನುಡಿಯು ಕನ್ನಡ!

—ದಿಗಂಬರ ಜೋಶಿ, ಬೆಳಗಾವಿ.

ಕಾಲ ಬಂದಿದೆ

ಕಾಲ ಬಂದಿದೆ ಭಾರತದ ಗಡಿ ಕಾವ ಕಾಲವು ಬಂದಿದೆ
ಕಾಲ ಕೆರೆದೆಬ್ಬಿಸುವ ಚೀನಕೆ ಸಾವ ಕಾಲವು ತಂದಿದೆ

ಪುರುಷ ಸಿಂಹನು ಮಲಗಿ ನಿದ್ರಿಸೆ ಕುರಿಯಾದೆನ್ನುತ ತಿಳಿದುದೇ
ಚೀನಿ ಮದಕರಿಯದನು ಕೇಸರಿ ಕೆರಳ್ದು ಕೊಲ್ಲದೆ ಬಿಡುವುದೇ

ಶಾಂತಿ ನೆಲಸಿದ ಪುಣ್ಯ ಭಾರತ ರುದ್ರ ಭೂಮಿಯದಾಗಿದೆ
ಕಾಲರುದ್ರನ ಪ್ರಳಯ ನಾಟ್ಯಕೆ ಚೀನಿ ಪುಡಿ ಪುಡಿಯಾಗದೆ?

ಯುಗಯುಗಾಂತರದಿಂದ ಭಾರತ ವೈರಿಗಳ ಬಡಿದಟ್ಟಿದೆ,
ಮುಗಿಲಿನೆತ್ತರಕುತ್ತರದಿ ಹಿಮಗಿರಿಯ ಕೋಟೆಯ ಕಟ್ಟಿದೆ

ಗಗನ ಚುಂಬಿ ತ್ರಿವರ್ಣರಂಜಿತ ಸ್ವತಂತ್ರ ಕೇತನ ನೆಟ್ಟಿದೆ
ಹಗೆಗೆ ಮಣಿಯದೆ ಮೆಟ್ಟಿಗೆಲ್ಲುವ ವೀರ ಶಪಥವ ತೊಟ್ಟಿದೆ,

ಚೀನ ಬಂದರೆ ಬರಲಿ ಪಾಕಿಸ್ತಾನ ಕದನಕೆ ನಿಲ್ಲಲಿ
ಏನೆಯಾಗಲಿ ಹಗೆಯ ಗೆಲ್ಲುವ ಕಲಿತನದ ಕೆಚ್ಚುರಿಯಲಿ.
ಛಲ ಬಲಿದ ಸಾಹಸದ ಶೌರ್ಯದ ಗಾಳಿ ಸುತ್ತಲು ಬೀಸಲಿ
ಜಡತೆ ತೊಲಗುತ ಭಾರತೀಯರ ಹೃದಯ ಚೇತನ ಚಿಮ್ಮಲಿ!

ಭಾರತದ ಸ್ವಾತಂತ್ರ್ಯ ಹರಣಕೆ ನಡೆದಿರಲು ಸನ್ನದ್ಧತೆ
ವೀರರಾಗುತ ನಾವು ಮಾಡುವ ರಕ್ಷಣೆಗೆ ಕಟಿ ಬದ್ಧತೆ
ಭೂರಿ ಭೇದಗಳನ್ನು ಬಿಡುತೊಗ್ಗಟ್ಟಿನಿಂದಲೆ ಸಾಧ್ಯತೆ

ಗುಲ್ಲು ನಿಂತರೆ ಎಲ್ಲ ನಿಂತಂತೆಯೇ

ನಾಯಕರು ನುಡಿವ ನುಡಿಗೊಂದು ತಡೆಯಿರಲಿ.
ಕೈಯಿಡುವ ಕೆಲಸಗಳಿಗೊಂದು ಮಿತಿಯಿರಲಿ.
ಅಂತಿರಲು ಜನರೆಷ್ಟು ಸುಖಿಗಳಯ್ಯ
ಬಗೆಗೆ ಬಂದಂತವರು ನುಡಿಯ ಬಯಸೆ—
ಜನಕೆ ಬಂದಪ್ಪುದು ಬೇಸರಿಕೆ ಚಿಂತೆ
ತೋರಿಕೆಗೆ ಸುಖವೆನುವುದದೆ ಅಸುಖ.
ಅಸುಖ ಎಂದೆಂಬುದದೆ ನಿಜಕು ಸುಖ.
ಕೆಲರು ಹೇಳುವರಿಂತು
ಹಲರ ಅನುಭವವಂತು
ಇದು ಬಲ್ಲರೆಲ್ಲರ ಬೆಲ್ಲದಂತಹ ಸೊಲ್ಲು.
ಪ್ಯೆಗೆ ಹಿತವೆನಿಸುವುದೆ
ಮನಕೆ ಹಿತವಾಗದಿರೆ,
ಅವ್ವದಿಪೆ, ಅದು ಬರಿ ಮಾಯೆ, ಮುಸುಕಿರಲೆ ಬೇಕು–
ಅವನ ಚೇತನದ ಹೊಗರೊಂದು ತೊಳಗಿ
ಕಣ್ಣ ಕುಕ್ಕಿಪ ಬದಲು ತೋರೆ ದಾರಿ.
ಮುಂದುವರಿವೆವು ನಾವು –ನಂಬು ನಿಜವ

—ಬಡೆಕ್ಕಿಲ ಕೃಷ್ಣ ಭಟ್

ಭಾರತೀಯರೆ ಬೇಗ ಮಾಡಿರಿ ವೈರಿನಾಶಕೆ ಸಿದ್ಧತೆ.
ಹಣೆಗೆ ರಣತಿಲಕವನು ಹಚ್ಚುತ ವೀರ ಕಂಕಣ ಕಟ್ಟುತ
ಮನೆ ಮನೆಯ ನಾರಿಯರ ಕೈಯಿಂ ರಣಕಣಕೆ ಬೀಳ್ಕೊಳ್ಳುತ
'ಅಡಿಯ ಮುಂದಿಡೆ ಸ್ವರ್ಗ, ಹಿಂದಡಿಯಿಡಲು ನರಕವು' ಎನ್ನುತ
ಬಿಡದೆ ಸಾಗಲು ದೇಶ ಕಾಯಲು ಗೆಲವು ನಮ್ಮದು ನಿಶ್ಚಿತ

ಸ್ವಾತಂತ್ರ್ಯ ಉಳಿಸಲು ಶಾಶ್ವತ
ನಮ್ಮ ಸರ್ವಸ್ವಾರ್ಪಿತ!

— ಎಸ್. ತಿರುಮಲೇಶ್ವರ ಭಟ್,
ಮಂಗಳೂರು

ಉಡುಪಿಯ ವೈಭವಕ್ಕೊಂದು ಕಿರೀಟ . . .

WHEN YOU ARE AT UDIPI

"ಕುಂಜ ವಿಹಾರ"
ಶಿರಿಬೀಡು,
ಉಡುಪಿ.



VISIT
HOTEL
"KUNJA VIHAR"

• ನುರಿತ ಬ್ರಾಹ್ಮಣರ ವ್ಯವಸ್ಥೆಯ
• ಸುವ್ಯವಸ್ಥಿತ ಅದ್ವಿತೀಯ,
• ಊಟ, ಉಪಹಾರ
• ಮತ್ತು ವಸತಿಗೃಹ.

HIGH CLASS BOARDING
& LODGING
SHIRIBEEDU,
UDIPI, S. K.

— ಬಸ್ ನಿಲ್ದಾಣ, ದೇವಸ್ಥಾನಗಳಿಗೆ ಸಮೀಪ —

Very Near the Bus Stand and Temple.

ಫೋನ್: 170

Phone: 170

Telegrams: "Bhuvanendra" Phone: Office 86, Mg Director 136

'ತದೇವ ಯುಕ್ತಂ ಭೈಷಜಂ ಯದಾರೋಗ್ಯಾಯ ಕಲ್ಪತೇ'
'ಸ ಏವ ಭಿಷಜಾಂ ಶ್ರೇಷ್ಠಃ ರೋಗೇಭ್ಯಃ ಯಃ ಪ್ರಮೋಚಯೇತ್'

ರೋಗನಿವಾರಣಾ ದ್ವಾರಾ ಆರೋಗ್ಯ ಉಂಟುಮಾಡುವುದೇ ಯೋಗ್ಯ ಔಷಧಿ........
ರೋಗದ ಸಮ್ಯಕ್ ಪರಿಜ್ಞಾನದ್ವಾರಾ ಸಿದ್ಧೌಷಧಿಗಳಿಂದ ರೋಗವನ್ನು
ಗುಣಪಡಿಸುವವನೇ ಶ್ರೇಷ್ಠ ವೈದ್ಯ........

"ಭುವನೇಂದ್ರ"

ಆಯುರ್ವೇದ ಸಿದ್ಧೌಷಧಿಗಳು—
ಕುಶಲ ವೈದ್ಯರಿಗೆ ವಿಶ್ವಸನೀಯ ಆಧಾರ.

ದಕ್ಷಿಣಾಪಥದಲ್ಲೇ ಅದ್ವಿತೀಯವೆನಿಸಿದ ಶಾಸ್ತ್ರೋಕ್ತ
ಆಯುರ್ವೇದ ಔಷಧಿಗಳ ಬೃಹನ್ನಿರ್ಮಾಣ ಕೇಂದ್ರ.

BHUVANENDRA PRODUCTS PRIVATE LIMITED

Registered Office: KATAPADI, S. Kanara.

ಮನೆ, ಆಫೀಸು, ದವಾಖಾನೆ ಇವುಗಳನ್ನು

ಖೀರಾ ಉಕ್ಕಿನ ಫರ್ನಿಚರುಗಳಿಂದ ಸುಸಜ್ಜಿಸಿರಿ!

ಎಲ್ಲಾ ತರದ ಚಿತ್ತ್ರದ ಫರ್ನಿಚರುಗಳು.



ವಿವಿಧ ರೀತಿಯ ಕಪಾಟುಗಳು.

ಅಲ್ಲದೆ, ● ಸೋಫಾ-ಕಂ-ಬೆಡ್, ● Folding Chairs and Furnitures,
● ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ರೋಲಿಂಗ್ ಶಟ್ಟರ್ಸ್, ● ಉಕ್ಕಿನ ಗೇಟುಗಳು, ● ಉಕ್ಕಿನ ಕಿಟಿಕಿ ಬಾಗಿಲುಗಳು ಇತ್ಯಾದಿ

ಮಕ್ಕಳಿಗಾಗಿ ನವೀನ

BABY WALKER



ವಿವರಗಳಿಗೆ:

ಶಾಸ್ತ್ರಿ ಎಂಡ್ ಕೊ

ಹಂಪನಕಟ್ಟಾ,
ಮಂಗಳೂರು.

Phone: 788

For Bumper Crops
USE
KIRLOSKAR
Pumping Sets
Distributors:
KERKARA SONS & CO.,
MACHINERY DEALERS,
"KERKARA MANSION",
MAIDAN WEST ROAD, **MANGALORE–1.**

ಸಮೃದ್ಧ ಫಸಲಿಗಾಗಿ
ಕಿರ್ಲೋಸ್ಕರ
ಪಂಪು ಸೆಟ್‌ಗಳನ್ನು
ಉಪಯೋಗಿಸಿರಿ.
ವಿತರಣೆಗಾರರು:
ಕರ್ಕೇರ ಸನ್ಸ್ ಮತ್ತು ಕಂಪೆನಿ,
ಮೆಶಿನರಿ ವ್ಯಾಪಾರಿಗಳು
'ಕರ್ಕೇರ ಮೇನ್ಶನ್'
ಮೈದಾನ್ ವೆಸ್ಟ್ ರೋಡು, ಮಂಗಳೂರು–1.

ಮಕ್ಕಳ ಮಮತೆಯ
"ಬಿಕ್ಕೊ"ರವರ
ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು— ರುಚಿಕರ ಸೇವನೆಗೆ ಪ್ರಸಿದ್ಧಿಪಟ್ಟಿವೆ.
ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.
ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ.
ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,
ಕಾಪು, ದ. ಕ.

With Best Compliments from:

The United Trading Corporation & Workshop (Private) Limited,
Attavar, Nandigudde Road,
MANGALORE.

Dealers for
Hindustan Ambassador Cars.

ನಡೆಯು ಮುನ್ನಡೆಯೆಲ್ಲಿ?

— ೧ —

ಚಂದ್ರನ ತಂಪು ಬೆಳಕಿನಲಿ ಪುಷ್ಟಿಗೊಂಡು
ಅಮೃತಶಕ್ತಿಯು ಪಡೆದು
ಬೆಳೆದು ಬಂದಿರುವ ಔಷಧಿಯ ವೀರ್ಯ ಹರಿದಿದೆ
ಕಣಕಣವಾಗಿ ಆರಕ್ತವಾಗಿ ರಕ್ತದಲಿ ಶುದ್ಧ ಸತ್ವಶಕ್ತಿ!
ಇಂಬುಗೊಟ್ಟು ಬೆಳೆಸಿದರೆ ಚಿತ್‌ಶಕ್ತಿ
ನಾವಾಗಬಹುದು ಬೆಳಕಿನ ಶುಕ್ತಿ!

ಬಾನ ದೇಗುಲದಿಂದ ಬೆಳಕಿನ ಗಂಗಾವತರಣ
ನೆಲಜಲಕೆ ಮಲೆಗೆಲ್ಲ ಚೇತನಾವರಣ!
ಕೈಬಾಚಿ ತಪ್ಪಿ ವಜ್ರಕಿರಣ ವಿಕೀರ್ಣ
ಉತ್ಥಾನಕೇ ಪತನ!
ಆಗು ಅಂತರ್ಮುಖಿ!
ಗಾಳಿದೇರಿನ ಮೇಲೆ ವಾಣಿಯಾಸನದಲ್ಲಿ
ಉನ್ಮನದ ಧ್ಯಾನ
ನೀನು ನೀನ ಗಳಲ್ಲಿ ಅಡಗಿ ನಾನು ಉದಯಿಸಿತು
ಬಾನು!

ಗಿರಿವನಗಳಲ್ಲೆಲ್ಲ ಗಿಡಮರಗಳಿಂದ
ಪರ್ಣಶಾಲೆಯ ಅರಣಿ ಗರ್ಭದಿಂದ
ಪ್ರತಿಧ್ವನಿ ಮೂಡಿ ಬಂತು ಮಂಗಳ ಗಾನ:
"ಸರ್ವೇ ಜನಾಃ ಸುಖಿನೋ ಭವಂತು"
ಆದರೂ ಆದರೂ ಎಲ್ಲಿ ಸುಖ ಬಂತು?

— ೨ —

ದಿನ ಬೆಳಗಾದರೆ ದಿನಪತ್ರಿಕೆಯ ಕೂಗಿನ ಸದ್ದು!
ಹಸಿಬಿಸಿಯ ಕೊರಸಿಯ ದೊಡ್ಡ ಬರಹದ ಸುದ್ದಿ
ಅಂತರಂಗ ಅಶುದ್ಧಿ! ಮಂದಿ ಪಾಬಂದಿ!
ಶೃಂಖಲಾಬದ್ಧ, ಸಂತಾಪ ಸಂಬಂಧಿ,
ನೆರೆಯುವರ ಹಾಲಿಗೆ ಹುಳಿಯ ಹಿಂಡಿ ಕುಡಿದ
ಬಾಸುಂದಿ!

ಏನು ಬುದ್ಧಿ! ನಮಗಿಲ್ಲ ನಿಜಕೂ ಬುದ್ಧಿ
ಶಾಂತ ಸಾಗರದ ಮೇಲೆ ಹಾರಿತ್ತು ಪಾರಿವಾಳ ನಿರಾಳ
ಈ ಹಿಂದೆಯೂ ಹೀಗೆ ಗರಿಗೆದರಿ ಹಾರಿತ್ತು
ಯಾವ ಬೇಡನ ಯಾವ ಸ್ವಾರ್ಥದ ಕೇಡೊ
ಹೃದಯವೇ ಒಡೆದು ನೆತ್ತರು ಸೋರಿ
ಶಾಂತ ಸಾಗರದಲ್ಲಿ ಉರುಳಿ ಬಿದ್ದಿತ್ತು.
ರಕ್ತದ ಬಿಂದು ಸಿಂಧುವಿನಲ್ಲಿ ಲೀನವಾಗಿತ್ತು.
ನಿನ್ನ ಮೈಯನು ಕೆರೆದು ನನ್ನ ಕೈತುರಿಕೆಯನು
ತೆಗೆಯಬೇಕು,

ನಿನ್ನ ಹೆಗಲ ಮೇಲೆ ನನ್ನ ಕಾಲನು ಹಾಕಿ
ರಸ ಕವಳವನು ಮೆಲ್ಲ ಮೆಲ್ಲಬೇಕು!
ಇಲ್ಲಿಯ ಮಣ್ಣೆ, ಇನ್ನು ಹದವಾಗಿಲ್ಲ
ಈ ಗಟ್ಟಿ ನೆಲ ಮಿದಿಯಲಿತ್ತು ಕೇಳುವದಿಲ್ಲ.
ಈ ಹೊಲವನುತ್ತು ಹೊನ್ನನೆತ್ತಲು
ಮಿದುವಾಗುವೊಲು ತುಳಿದು ಎತ್ತು ಸುತ್ತಲು
ಆಸಕ್ತಿ ಕೆರಳಿಸುವ ಮನಮುಟ್ಟಿ ತಟ್ಟಿ ಎಚ್ಚರಿಸುವ
ಹಾಡು ಬೇಕು!
ಇಲ್ಲ ಯಾರಾದರೂ ಗಾರುಡಿಗರು ಬರಬೇಕು
ವಿಶ್ವದಾಶ್ವಾಸದಲೆ ಫೂತ್ಕರಿಸಿ ಪಣಿಯ ವಿಷದ ಶ್ವಾಸ!
ಕಾಳಿಂಗ ಮರ್ದನಕೆ ಬಹಿರಂಗ ಆಹ್ವಾನದೊಂದು
ವಿಲಾಸ

ನೋಡ ಮುಸುಕಿದ ದಿನ!
ಆಕಾರವೇ ಆಗುತಿಹುದು ವಿಕಾರ!
ಕತ್ತಿಯೋ, ಕೊಡಲಿಯೋ, ಕೋವಿಯೋ
ಸುಡು ಬಾಂಬೊ
ಅದಕದಕೆ ಇದೆಯಲ್ಲಿ ಅದರದೇ ಸ್ಥಾನ!
ಚಂದ್ರ ಲೋಕದವರೆಗು ವಿಜ್ಞಾನದ ಮಹಾಯಾನ!
ಕಾಲ ಕೆಳಗಿನ ಗುಂಡಿ ಒತ್ತಿದರು ಸಾಕು ಮಹಾ
ಪ್ರಸ್ಥಾನ!
ಮುಂದರಿದ ಭೂಖಂಡದಲು ಖಂಡತುಂಡ ಮನಸ್ಸು
ಯಜ್ಞರೆಲ್ಲ ಹವಿಸ್ಸು. ಮಂಗ ಹುಮ್ಮಸ್ಸು!
ನೋಡವೊಡಗೂಡಿ ಗುಡುಗಿ ಸಿಡಿಯಲು ನೆಲದೆದೆಗೆ
ಕಳವಳ ತಳಮಳ!

ಸಿಡಿಲು ಸುಡದೆಯೆ ಕರುಣೆ ಜಲವಾಗಿ ಹಿಂದು
ಹಸುರನುಣಿಸಲು ಕರೆವ ಕುತೂಹಲ!
ಭಯದ ಗರ್ಭದಲಿ ಭವಿಷ್ಯದಾಶಾ ಕಿರಣ!
ಅಂಕೆಗೊಗ್ಗೀತೆ ಈ ಮದವಾರಣ?
ಬೆಳಕಿನ ಪಾದದಡಿಯಲ್ಲಿ ಕತ್ತಲೆಯ ಸಂತಾನ!
ಪುರೋಹಿತರು ಆಯೋಕ್ತಿ ನುಡಿಯುತ್ತ ಬಂದಿಹರು:
"ಸಮಸ್ತ ಸನ್ಮಂಗಳಾನಿ ಭವಂತು"
ನಾವು ದನಿ ಸೇರಿಸುವ "ಭವಂತು, ಭವಂತು"
ಲೋಕ ಕಟ್ಟೀತಿಲ್ಲಿ ಗುಡಿ ತೋರಣ!

— ಯು. ಕೆ. ವಿ. ಆಚಾರ್ಯ.

ನವಯುಗ ನಿಮ್ಮ ಪತ್ರಿಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ!
ವಾರ್ಷಿಕ ಚಂದಾ ರೂ. 10=00

Read & Advertise in
NAVAYUGA Weekly

ತಂತಿ: "ಸಹಕಾರಿ" ಸ್ಥಾಪನೆ: 1919 ಫೋನ್: 237.

THE
S.K.A.C.M. SOCIETY LIMITED.
MANGALORE—1.

ದ. ಕ.
ಕೃಷಿಕರ ಸಹಕಾರ ಮಾರಾಟ ಸಂಘ ಲಿ.,
ಸಹಕಾರಿ ಮಹಲ್, ಮಂಗಳೂರು-೧.

ಅಡಿಕೆ, ಯಾಲಕ್ಕಿ, ಕಾಳು ಮೆಣಸು, ತೆಂಗಿನಕಾಯಿ, ಬಾಳೆಕಾಯಿ, ವಗೈರೆ ವ್ಯವಸಾಯದ ಎಲ್ಲಾ (ಅಕ್ಕಿ ಭತ್ತ ಹೊರತು) ಉತ್ಪತ್ತಿಗಳನ್ನು ಕಮಿಶನ್ ವ್ಯಾಪಾರಕ್ಕೆ ಪಡಕೊಂಡು ಯೋಗ್ಯ ಬೆಲೆಗೆ ವಿಕ್ರಯಿಸುವ
ಜಿಲ್ಲೆಯ ಏಕಮಾತ್ರ ಸಹಕಾರಿ ಮಾರಾಟ ಸಂಘ.
ಮೆಂಬರರಿಗೆ ಇಂಡೆಂಟು ಮೂಲಕ ಗೃಹಕೃತ್ಯದ
ಸಾಮಾನುಗಳನ್ನು ಒದಗಿಸುವ ಏರ್ಪಾಡಿದೆ

ಜಿಲ್ಲೆಯ ಎಲ್ಲಾ ಕೃಷಿಕರ ಸಹಾಯವನ್ನು
ಸಂಘವು ಅಪೇಕ್ಷಿಸುತ್ತದೆ.

ಬಿ. ಪ್ರಭಾಕರ ರಾವ್, *M. A., B. L.,* ಅಧ್ಯಕ್ಷ.
ಕೆ. ಬಿ ಜಿನರಾಜ ಹೆಗ್ಡೆ, *B. Sc., LL. B.,* ಉಪಾಧ್ಯಕ್ಷ

ಮನದ ಆಂದೋಲನ ಹೇಗಿದ್ದರೂ
ಕಾಫಿ ತೃಪ್ತಿ ನೀಡುತ್ತದೆ

ಕಾಫಿ ಬೋರ್ಡ್
ಬೆಂಗಳೂರು

ಸ್ಥಾಪನೆ: 1923 ಟೆಲಿಫೋನು ನಂಬ್ರ: **94**

ಜಯಲಕ್ಷ್ಮಿ ಬ್ಯಾಂಕ್ ಲಿ.,

(ಶೆಡ್ಯೂಲ್ಡ್ ಬ್ಯಾಂಕ್)

ರಿಜಿಸ್ಟರ್ಡ್ ಮತ್ತು ಹೆಡ್ ಆಫೀಸು: ಗಣಪತಿ ಹ್ಯಾಸ್ಕೂಲು ರಸ್ತೆ,

ಮಂಗಳೂರು.

ಹೊಸ ವರ್ಷದ ನವೀನ ಆಕರ್ಷಣೆ **ಲಕ್ಷ್ಮೀ ಡಿಪಾಸಿಟ್** ದೈನಂದಿನ ಉಳಿತಾಯ ಯೋಜನೆ

—: ಶಾಖೆಗಳು :—

ಮೈಸೂರು:— 1) ಮಂಗಳೂರು, 2) ಅಶೋಕನಗರ ಮಂಗಳೂರು, 3) ಪುತ್ತೂರು, 4) ಮೂಡಿಗೆರೆ, 5) ಚಿಕ್ಕಮಗಳೂರು, 6) ಬೀರೂರು, 7) ಹೊಳಲ್ಕೆರೆ, 8) ಶಿರಾಲಿ, 9) ಬೆಂಗಳೂರು.

ಕೇರಳ:— 1) ಮಂಜೇಶ್ವರ, 2) ಕುಂಬ್ಳಾ 3) ಕಾಸರಗೋಡು, 4) ಕಣ್ಣಾನೂರು, 5) ಕುಂಡೊಟ್ಟಿ, 6) ಮಲ್ಲಪುರಂ.

ಚಲಾವಣಾ ಬಂಡವಾಳ ರೂ. 1 ಕೋಟಿಗೂ ಮಿಕ್ಕಿದೆ.

ಆಕರ್ಷಣೀಯ ಬಡ್ಡಿ ದರಗಳು.

ಹೆಚ್ಚಿನ ಮಾಹಿತಿಗೆ ಮೇಲೆ ಕಂಡ ಶಾಖೆಗಳಲ್ಲಿ ವಿಚಾರಿಸಿರಿ

ದಕ್ಷ ಮತ್ತು ತೀವ್ರ ಸೇವೆಯೇ ನಮ್ಮ ಧ್ಯೇಯ.

JAYALAXMI BANK LTD.

(SCHEDULED BANK)

ಸ್ಥಾಪನೆ: 1902

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಹೆಡ್ ಆಫೀಸು: ಕೋಟ್ಟಕಲ್ ಫೋನ್ ನಂ. **44** ತಿರೂರು (**Exchange**)

—: ಶಾಖೆಗಳು :—

1. ಕೋಝಿಕೋಡ್ (ಫೋನ್ ನಂ. 2155) ಕಲ್ಲಾಯಿ ರೋಡ್.
2. ತಿರೂರು (ಫೋನ್ ನಂ. 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್ ನಂ. 104) ಪಕ್ಕಂತರ.
4. ಪಾಲ್ಘಾಟ್ ಸೇಲ್ಸ್ ಡಿಪೋ, ಜಿ. ಬಿ. ರೋಡ್.
5. ಎರ್ನಾಕುಳಂ (ಫೋನ್ ನಂ 3026) ಮಹಾತ್ಮಾಗಾಂಧೀ ರೋಡ್.
   " ವೈದ್ಯರ ನಿವಾಸ (ಫೋನ್ ನಂ. 674)
6. ತ್ರಿವೆಂಡ್ರಮ್ (ಫೋನ್ ನಂ. 3924) ಸ್ಟೇಚು ರೋಡ್.
7. ಈರೋಡು (ಫೋನ್ ನಂ. 172) 45, ಕಾವೇರಿ ರೋಡ್.
8. ಆಳ್ವಾಯಿ ಸೇಲ್ಸ್ ಡಿಪೊ, ಬ್ಯಾಂಕ್ ರೋಡ್.

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಖಾತ್ರಿಯಾದ ಸುಪ್ರಸಿದ್ಧ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳು

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್‌ನಲ್ಲಿ

ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಸಲ್ಪಡುತ್ತವೆ.

ಪಿ. ಎಸ್. ವಿ. ನಾಟ್ಯ ಸಂಘಂ

ಆರ್ಯವೈದ್ಯ ಶಾಲೆಯ ನೇತೃತ್ವದಲ್ಲಿ ನಡೆಸಲ್ಪಡುವ ನಾಟ್ಯ ಸಂಘವು ಕೃಷ್ಣನ್ ಕುಟ್ಟಿ, ಶಂಕರನ್ ನಾಯರ್ ಮೊದಲಾದ ಪ್ರಖ್ಯಾತ ಕಲಾವಿದರಿಂದೊಡಗೂಡಿದ ಕಥಕ್ಕಳಿ, ಪ್ರದರ್ಶನಗಳನ್ನು ಕೈಕೊಳ್ಳುತ್ತದೆ. ಇವರು ಪಟ್ಟಿಕ್ಕಂ ತೋಡಿ ರಾಮುಣ್ಣಿ ಮೆನನ್ ಮತ್ತು ಪಜಂಕಡ ಕುಂಞ ನಾಯರ್ ಇವರಿಂದ ವಿಶಿಷ್ಟ ತರಬೇತಿಯನ್ನು ಪಡೆದವರಿರುತ್ತಾರೆ. ಕೊಟ್ಟಕಲ್ ವಾಸು ನೆಡುಂಗಾಡಿ ಮೊದಲಾದ ಸಂಗೀತಗಾರರಿಂದಲೂ ಕೊಟ್ಟಕಲ್ ಕುಟ್ಟನ್ ಮಾರಾರ್ ಮತ್ತು ಪಾಲೂರು ಅಚ್ಯುತನ್ ನಾಯರ್ ಮೊದಲಾದ ಮೃದಂಗ ವಾದಕರಿಂದಲೂ ಹಾಗೂ ಆಕರ್ಷಣೀಯ ಸಲಕರಣೆಗಳಿಂದಲೂ ಕೂಡಿದ್ದು ಮಿತ ದರದಲ್ಲಿ ಪ್ರದರ್ಶನಗಳು ನಡೆಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ದಯವಮಾಡಿ ಬರೆಯಿರಿ:—

ಮೆನೇಜಿಂಗ್ ಟ್ರಸ್ಟಿ, ಆರ್ಯ ವೈದ್ಯ ಶಾಲಾ, ಕೋಟ್ಟಕಲ್.

ನಿಸರ್ಗಸುಂದರ ಶ್ರೀ ಸುಬ್ರಹ್ಮಣ್ಯ ಕ್ಷೇತ್ರ



ತುಳುನಾಡೆಂಬ ಹೆಸರು ಪಡೆದ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಗಟ್ಟಗಳ ಬುಡದಲ್ಲಿ ಪ್ರಕೃತಿ ಮಾತೆಯ ಮಡಿಲಲ್ಲಿ ನಿಂತಿದೆ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರ ಬಹು ದೀರ್ಘಕಾಲದಿಂದಲೂ ಇದು ಸುಪ್ರಸಿದ್ಧ ಯಾತ್ರಾಸ್ಥಳವೆಂದು ಮೆರೆದು ಬಂದಿದೆ ಅಸಂಖ್ಯಾತ ಭಕ್ತ ಮಹಾಜನರ ಪ್ರವಾಹವನ್ನು ಸಂಪ್ರತಿ ಆಕರ್ಷಿಸುವ ಈ ತೀರ್ಥ ಕ್ಷೇತ್ರ ನಿಸರ್ಗ ಸುಂದರವಾಗಿದೆ; ಮಲೆ-ಕರೆಗಳ ಕೇಂದ್ರ ಬಿಂದುವಾಗಿದೆ; ಯಾತ್ರಾರ್ಥಿಗಳ ದಣಿವು ನೋವುಗಳನ್ನೂ ಮಾನಸಿಕ ಅಶಾಂತಿ ಅತೃಪ್ತಿಗಳನ್ನೂ ನೀಗಿಸುವ ಶ್ರೀ ಸುಬ್ರಹ್ಮಣ್ಯನ ಆವಾಸಸ್ಥಾನವಾಗಿದೆ ಇದರಿಂದಾಗಿಯೇ ಕರ್ನಾಟಕದಲ್ಲಿ ಮಾತ್ರವಲ್ಲ ಇಡಿಯ ದಕ್ಷಿಣ ಭಾರತದಲ್ಲಿಯೇ ಅದ್ವಿತೀಯ ಪುಣ್ಯ ತೀರ್ಥಕ್ಷೇತ್ರವೆಂದು ಹೆಸರು ಗಳಿಸಿದೆ. ಪ್ರಕೃತಿ ಶುಭಗವಾದ ಶ್ರೀ ಕ್ಷೇತ್ರದ ಸಂದರ್ಶನ ಮಾಡಿ ಅಧಿದೇವತೆ ಸುಬ್ರಹ್ಮಣ್ಯ ದೇವನ ಸಾನ್ನಿಧ್ಯವನ್ನು ಪಡೆದು ತಮ್ಮ ಜನ್ಮವನ್ನು ಸಾರ್ಥಕ ಮಾಡಿಕೊಂಡ ಮತ್ತು ಸಾರ್ಥಕಗೊಳಿಸುತ್ತಿರುವ ಭಗವದ್ಭಕ್ತರ ಅನಂತ ಸಂಖ್ಯೆಯೇ ಇದಕ್ಕೆ ಸಾಕ್ಷಿ.

ಕುಮಾರಸ್ವಾಮಿಯ ಸಾನ್ನಿಧ್ಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಮೂಲ ಹೆಸರು ಕುಕ್ಕೆ ಪಟ್ಟಣ ಈ ಪ್ರದೇಶದಲ್ಲಿ ಹಿಂದೆ ಅನೇಕಾನೇಕ ದೇವರ್ಷಿಗಳು ಶಿವಲಿಂಗಗಳನ್ನು ಪ್ರತಿಷ್ಠಿಸಿದ್ದರು ಸರ್ಪರಾಜನಾದ ವಾಸುಕಿಯು ಕಶ್ಯಪ ಪ್ರೇರಿತನಾಗಿ ಗರುಡ ಬಾಧೆಯಿಂದ ಉಳಿದುಕೊಳ್ಳಲು ಈ ಕ್ಷೇತ್ರಕ್ಕೆ ಬಂದು ಅಲ್ಲಿ ಶಿವನನ್ನು ಕುರಿತು ತಪಸ್ಸು ಮಾಡುತ್ತಿದ್ದನು ಆತನ ನಿಷ್ಠೆಗೆ ಮತ್ತು ತಪಸ್ಸಿಗೆ ಮೆಚ್ಚಿ ಶಿವನು ಪ್ರತ್ಯಕ್ಷನಾಗಿ ಜಗ ಕಂಟಕ ತಾರಕಾಸುರನನ್ನು ವಧಿಸಿ ಕುಮಾರನು ಈ ಕ್ಷೇತ್ರಕ್ಕೆ ಬರುವನೆಂದೂ ಆಗ ಆತನ ಕಲಾಂಶಭೂತನಾಗಿ ಲೋಕಪೂಜ್ಯನಾಗುವೆಯೆಂದೂ ಆತನನ್ನು ಅನುಗ್ರಹಿಸಿದನು. ಅದರಂತೆ ಲೋಕಕ್ಕೆ ಅಹಿತಕೇತುವಾದ ತಾರಕಾಸುರನನ್ನು ನಿಗ್ರಹಿಸಿದ ಕುಮಾರ ಸ್ವಾಮಿಯು ಕುಕ್ಕೆ ಪಟ್ಟಣಕ್ಕೆ ಬಂದಾಗ ವಾಸುಕಿಯ ಅಪೇಕ್ಷೆಯಂತೆ ಒಂದಂಶದಿಂದ ದೇವಸೇನಾಸಮೇತನಾಗಿ ಆತನಲ್ಲಿ ನಿತ್ಯ ಸನ್ನಿಹಿತನಾಗಿ ಅಲ್ಲಿಯೇ ವಾಸ ಮಾಡಿಕೊಂಡಿರುವನು.

ಬಲ್ಲಾಳರ ಆಡಳಿತೆ

ಸುಮಾರು ೧೧ನೆ ಶತಮಾನದಿಂದ ೧೫ನೆ ಶತಮಾನದ ವರೆಗೆ ಹೊಯ್ಸಳ ಬಲ್ಲಾಳರು ಆಳಿಕೆ ನಡೆಸಿದ್ದರು ಅನಂತರ ಇಕ್ಕೇರಿ ನಾಯಕರ ವೇಳೆ ಸುಬ್ರಹ್ಮಣ್ಯ ಸೀಮೆಯ ಆಡಳಿತೆ ನಡೆಸುತ್ತಿದ್ದ ಬಲ್ಲಾಳರಾಯನ ಅರಮನೆಯು ಸುಬ್ರಹ್ಮಣ್ಯಕ್ಕೆ ಎರಡು ಮೈಲು ದೂರದ ಕುಳುಕುಂದದಲ್ಲಿತ್ತು. ಪ್ರತಿ ರಾತ್ರಿಯೂ ದೇವಾಲಯದಲ್ಲಿ ಮಂಗಳಾರತಿಯು ನಡೆದ ವೇಳೆ ದೇಗುಲದಿದಿರಿರುವ ಬಲ್ಲಾಳರಾಯನ ವಿಗ್ರಹದ ಬಳಿ ಅದನ್ನು ಒಪ್ಪಿಸುವ ಸಂಪ್ರದಾಯವಿದೆ

ಧಾರಾತೀರ್ಥ

ಸುಬ್ರಹ್ಮಣ್ಯದ ಮೂಡಲಲ್ಲಿ ಕುಮಾರ ಪರ್ವತವಿದೆ. ಇಲ್ಲಿಯೇ ಕುಮಾರಸ್ವಾಮಿಯು ತಾರಕಾಸುರನನ್ನು ಸಂಹರಿಸಿದನು. ತನ್ನ ಶಕ್ತ್ಯಾಯುಧದ ಧಾರೆಯನ್ನು ಇಲ್ಲಿಯೇ ತೊಳೆದನು ಹೀಗೆ ತೊಳೆದ ಪ್ರವಾಹವೇ ಧಾರಾತೀರ್ಥ ಆತನಿಗೆ ಪಟ್ಟಾಭಿಷೇಕ ಮಾಡಿದ ನೀರು ಎರಡು ಕವಲುಗಳಾಗಿ ಹರಿದು ಮುಂದೆ ಸುಬ್ರಹ್ಮಣ್ಯ ಕ್ಷೇತ್ರದಿಂದ ಪಡುವಲಲ್ಲಿ ಮರಳಿ ಒಂದಾಗುತ್ತವೆ. ಈ ಎರಡು ಪುಣ್ಯವಾಹಿನಿಗಳ ನಡುವಣ ತಪೋಭೂಮಿಯೇ ಸುಬ್ರಹ್ಮಣ್ಯ ಕ್ಷೇತ್ರ. ಕುಮಾರ ಧಾರೆಯು ಮುಂದೆ ಉಪ್ಪಿನಂಗಡಿಯಲ್ಲಿ ಸುಂಜ ನಾವನ ದನುಂಸ್ಥಳದಿಂದ ಹರಿದು ಬರುವ ನೇತ್ರಾವತಿಯನ್ನು ಸಂಗಮವಾಗುತ್ತದೆ.

ಸಕಲ ರೋಗನಾಶಕ ಪ್ರಸಾದ

ಶ್ರೀ ಸುಬ್ರಹ್ಮಣ್ಯದ ಪ್ರಸಾದವು ಎಲ್ಲಾ ತರದ ಸರ್ಪದೋಷ ವಿಷಬಾಧೆ, ಅಪಸ್ಮಾರ, ಚರ್ಮವ್ಯಾಧಿ ಮತ್ತಿತರ ಮಹಾವ್ಯಾಧಿಗಳಿಗೂ ದಿವ್ಯ ಮತ್ತು ಸಿದ್ಧೌಷಧವೆಂಬ ವಿಶ್ವಾಸ ಭಕ್ತರಲ್ಲಿದೆ ತ್ರೇತಾಯುಗದಲ್ಲಿ ಪರಶುರಾಮನು ಇಲ್ಲಿನ ಧಾರಾತೀರ್ಥದಲ್ಲಿ ಮಿಂದು ತನ್ನ ಮಾತೃಹತ್ಯಾ ದೋಷದಿಂದ ಮುಕ್ತನಾದನು. ದ್ವಾಪರ ಯುಗದಲ್ಲಿ ಮುನಿಶಾಪದಿಂದ ಕುಷ್ಠರೋಗಕ್ಕೆ ಗುರಿಯಾದ ಶ್ರೀ ಕೃಷ್ಣನ ಪುತ್ರ ಸಾಂಬನೂ ಇದೇ ತೀರ್ಥದಲ್ಲಿ ಮಿಂದು "ಮಡೆಸ್ನಾನ"ವನ್ನು ಮಾಡಿ ಶಾಪ ವಿಮೋಚನೆ ಹೊಂದಿದನು. ಇದರಿಂದಾಗಿಯೇ ಮಡೆಸ್ನಾನವು ಇಲ್ಲಿ ಸಲ್ಲಿಸುವ ಅತ್ಯಪೂರ್ವದ ಸೇವೆ ಇಲ್ಲಿ ದೊರೆಯುವ ಅಮೂಲ್ಯವಾದ ಮೂಲ ಮೃತ್ತಿಕೆಯನ್ನು ಮೈಗೆ ಲೇಪಿಸಿ ತಮ್ಮ ರೋಗರುಜಿನಗಳಿಂದ ಪಾರಾದ ನೂರಾರು ಭಕ್ತರಿದ್ದಾರೆ ಅಸಿತ ಮಹಾಮುನಿಯ ಮುನಿಸಿನಿಂದಾಗಿ ರಾಕ್ಷಸಿಯಾಗಿ ಹುಟ್ಟಿದ ಅದಿತಿಯು ಕೂಡ ಕುಮಾರಧಾರಾತೀರ್ಥದಲ್ಲಿ ಸ್ನಾನ ಮಾಡಿ, ಕ್ಷೇತ್ರಪತಿ ಸುಬ್ರಹ್ಮಣ್ಯೇಶ್ವರನ ದರ್ಶನ ಮಾಡಿದೊಡನೆಯೇ ಜನ್ಮಾಂತರ ಸಂಸ್ಕಾರ ಮಹಿಮೆಯಿಂದ ರಾಕ್ಷಸ ದೇಹವನ್ನು ಬಿಟ್ಟು ಪತಿ ಕಶ್ಯಪರನ್ನ ಸೇರಿದಳು ಎನ್ನುವಾಗ ಇದು ಭೂಕೈಲಾಸವೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿ ಅನೇಕರು ಮಂತ್ರಸಿದ್ಧಿ, ತಪಸ್ಸಿದ್ಧಿಗಳನ್ನು ಹೊಂದಿರುವರು, ಕ್ಷೇತ್ರ ದರ್ಶನದಿಂದಲೇ ಅಸಾಧ್ಯ ರೋಗ ಪೀಡಿತರು ದೃಢಕಾಯರಾಗಿರುವರು, ಶ್ರೀ ಕುಮಾರ ಸ್ವಾಮಿಯ ಸೇವೆಯಿಂದ ಸಕಲಾಭೀಷ್ಟ ಸಿದ್ಧಿಯನ್ನು ಹೊಂದಿರುವರು, ಶಾಪ ಪೀಡಿತರಾದವರು ಕ್ಷೇತ್ರ ಯಾತ್ರೆಯಿಂದ ಮುಕ್ತಿಶಾಪರಾಗಿರುವರು

ಇಂತಹ ಅತ್ಯಪೂರ್ವ ಪುಣ್ಯ ಪ್ರದವಾದ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಮಾರ್ಗಶಿರ ಶುದ್ಧ ಷಷ್ಠಿಯ ಶುಭದಿನದಂದು ವರ್ಷಾವಧಿ ಮಹೋತ್ಸವವು ನಡೆಯುವುದು ಈ ದಿನದ ಹಿಂದೆ ಮುಂದೆಯೂ ಹಲವು ದಿನಗಳ ಉತ್ಸವದ ಕಾರ್ಯಕ್ರಮಗಳಿದ್ದು, ಈ ಸಮಯದಲ್ಲಿ ಸಹಸ್ರಾರು ಭಕ್ತ ಜನರು ಇಲ್ಲಿ ಸೇರಿ 'ಅನ್ನದಾನ ಶ್ರೀ ಸುಬ್ರಹ್ಮಣ್ಯೇಶ್ವರನ ಪಾದಕ್ಕೆ ಗೋವಿಂದಾ.' ಎಂದು ದೇವರ ನಾಮದ ಪಾವನ ಸ್ಮರಣೆಯನ್ನು ಮಾಡುತ್ತಿರುತ್ತಾರೆ.

ಆದುದರಿಂದಲೇ ಜೀವಮಾನದಲ್ಲಿ ಒಮ್ಮೆಯಾದರೂ ಶ್ರೀ ಸುಬ್ರಹ್ಮಣ್ಯನ ದರ್ಶನ ಭಾಗ್ಯವನ್ನು ಪಡೆಯ ಬೇಕು; ಮನಸ್ಸಿನ ಕಲ್ಮಷಗಳನ್ನು ದೂರಮಾಡಿ, ಭಕ್ತಿ ಸಂಧಿಯೆನಿಸ ಬೇಕು.

ಸುಬ್ರಹ್ಮಣ್ಯದ ಪ್ರೇಕ್ಷಣೀಯ ಸ್ಥಳಗಳು

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಹಲವಾರು ಪ್ರೇಕ್ಷಣೀಯ ಸ್ಥಳಗಳಿವೆ. ಸುಬ್ರಹ್ಮಣ್ಯನ ದರ್ಶನಭಾಗ್ಯ ಪಡೆದ ಮಾತ್ರಕ್ಕೆ ಕ್ಷೇತ್ರಯಾತ್ರಾಪುಣ್ಯವು ಲಭಿಸುವುದು ನಿಜವಾದರೂ ಶ್ರೀ ಕ್ಷೇತ್ರಕ್ಕೆ ಸಂಬಂಧಿಸಿದ ಮತ್ತಿತರ ಪುಣ್ಯ ಮತ್ತು ನೋಡತಕ್ಕ ಸ್ಥಳಗಳನ್ನು ಕಾಣದೆ ಮರಳಬಾರದು. ಆದಕ್ಕಾಗಿ ಕೆಲವು ಪ್ರಮುಖ ಸ್ಥಾನಗಳ ಪರಿಚಯವನ್ನು ಚುಟುಕಿನಲ್ಲಿ ಕೊಡಬಹುದು.

ಶ್ರೀ ಸುಬ್ರಹ್ಮಣ್ಯನ ದೇವಾಲಯ

ವಾಸುಕಿಯ ಕಲಾಂಶಭೂತ ಕುಮಾರ ಸ್ವಾಮಿಯ ಪವಿತ್ರ ದೇಗುಲವಿದು. ಇದರ ಮುಖದ್ವಾರ ಮೂಡಲಲ್ಲಿದೆ ವಾಸುಕಿಯ ಉಸಿರಾಟದ ವಿಷಜ್ವಾಲೆಯ ಪ್ರಭಾವ ಭಕ್ತರಿಗಾಗದಂತೆ ಗರುಡ ಕಂಭವೊಂದನ್ನು ಗರ್ಭ ಗೃಹದ ಮುಂದೆ ಸ್ಥಾಪಿಸಲಾಗಿದೆ. ಗರ್ಭಗೃಹದ ಮಧ್ಯದಲ್ಲಿನ ಪೀಠದಲ್ಲಿ ಮೇಲ್ಗಡೆ ಕುಮಾರಸ್ವಾಮಿ, ನಡುವೆ ವಾಸುಕಿ ಮತ್ತು ಕೆಳಗಡೆ ಶೇಷನ ವಿಗ್ರಹಗಳಿವೆ.

ಕುಕ್ಕೆಲಿಂಗ

ಗರ್ಭಗೃಹದ ಪಶ್ಚಿಮ ಭಾಗದಲ್ಲಿ ಕುಕ್ಕೆಯಲ್ಲಿಟ್ಟು ಪೂಜಿಸುವ ಕೆಲವು ಲಿಂಗಗಳಿವೆ. ಇವನ್ನು ಕುಕ್ಕೆಲಿಂಗಗಳೆನ್ನುತ್ತಾರೆ ವಾಸುಕಿಯು ಪೂಜಿಸಿದ ಲಿಂಗಗಳಿವು ಎಂದು ಹೇಳುತ್ತಾರೆ. ಕುಕ್ಕೇ ಪಟ್ಟಣವೆಂದು ಈ ಕ್ಷೇತ್ರಕ್ಕೆ ಹೆಸರು ಬರಲು ಕಾರಣವಾದ ಈ ದೇವರಿಗೆ ಮಕರ ಸಂಕ್ರಮಣದ ದಿನ ರಥೋತ್ಸವಾದಿಗಳು ನಡೆಯುತ್ತವೆ. ಈ ಲಿಂಗಗಳನ್ನೀಗ ಗರ್ಭಗೃಹದ ಹಿಂಭಾಗದಲ್ಲಿ ಸ್ಥಾಪಿಸಿ ಪೂಜಾದಿಗಳನ್ನು ಆರ್ಪಿಸಲಾಗುತ್ತಿವೆ.

ಭೈರವ ದೇವರು

ಷಣ್ಮುಖನು ತಾರಕನನ್ನು ಸಂಹರಿಸಿದ ಉತ್ಸಾಹದಲ್ಲಿ ಸ್ಥಾಪಿಸಿದ ಕಪಾಲೇಶ್ವರ ಅಥವಾ ಭೈರವ ದೇವರ ಗುಡಿ ಒಳ ಪ್ರಾಕಾರದ ದಕ್ಷಿಣ ದಿಕ್ಕಿನಲ್ಲಿದೆ.

ಉಮಾ ಮಹೇಶ್ವರ

ಒಳ ಪ್ರಾಕಾರದ ಈಶಾನ್ಯ ಭಾಗದಲ್ಲಿರುವ ಗುಡಿಯಲ್ಲಿ ಈ ದೇವರನ್ನು ಪ್ರತಿಷ್ಠಿಸಲಾಗಿದೆ ಇಲ್ಲಿ ನಾರದರಿಂದ ಸ್ಥಾಪಿತವಾದ ಸೂರ್ಯ ಮತ್ತು ಅಂಬಿಕೆಯರ ವಿಗ್ರಹಗಳೂ ವಿಷ್ಣು ಮತ್ತು ಗಣನಾಥ ಮೂರ್ತಿಗಳೂ ಇವೆ ಇವು ಅನಾದಿಕಾಲದವು ಮಹಾ ಮಹಿಮೆಯುಳ್ಳವು. ಅಂಬಿಕೆಗೆ ನವರಾತ್ರಿಯಲ್ಲಿ ಉಮಾ ಮಹೇಶ್ವರನಿಗೆ ಶಿವರಾತ್ರಿಯಲ್ಲಿ ಸೂರ್ಯನಿಗೆ ರಥಸಪ್ತಮಿಯಲ್ಲಿ ಉತ್ಸವಾದಿಗಳು ನಡೆಯುತ್ತವೆ.

ಸಂಪುಟ ನರಸಿಂಹ ದೇವರು

ಶ್ರೀ ಸುಬ್ರಹ್ಮಣ್ಯ ದೇವಾಲಯದ ಒಳ ಅಂಗಣದ ಆಗ್ನೇಯ ದಿಕ್ಕಿನಲ್ಲಿ ಒಂದು ಗುಡಿಯಿದೆ. ಇದರಲ್ಲಿ ಶ್ರೀ ಸುಬ್ರಹ್ಮಣ್ಯ ಮಠದ ಸ್ವಾಮಿಯವರು ತನ್ನದಾದ ಈ ದೇವರನ್ನಿಟ್ಟು ಪ್ರತ್ಯೇಕ ಪೂಜಾದಿಗಳನ್ನು ನಡೆಸುತ್ತಿದ್ದಾರೆ.

ಬಲ್ಲಾಳರಾಯನ ವಿಗ್ರಹ

ಶ್ರೀ ಸುಬ್ರಹ್ಮಣ್ಯ ದೇವರ ಮುಂಭಾಗದ ಮಹಾದ್ವಾರದ ಬಳಿ ಬಲ್ಲಾಳರಾಯನ ವಿಗ್ರಹವಿರುವುದು. ರಾತ್ರೆ ಮಂಗಳಾರತಿಯಾದ ಬಳಿಕ ಅದನ್ನು ಈ ವಿಗ್ರಹದ ಬಳಿ ಒಪ್ಪಿಸುವ ಸಂಪ್ರದಾಯವಿದೆ. ಚಂಪಾಷಷ್ಠಿಯ ಮಹೋತ್ಸವದ ದಿನ ದೇವರು ಉತ್ಸವ ಹೊರಡುವಾಗ, ಮೊದಲಿಗೆ ಈ ಬಲ್ಲಾಳರಾಯನ ಕಾಣಿಕೆ ಸ್ವೀಕರಿಸಬೇಕು.

ಸುಬ್ರಹ್ಮಣ್ಯ ಮಠ

ಇದು ಮಧ್ವ ಸಂಪ್ರದಾಯ ಸ್ವಾಮಿಯವರ ಮಠ. ಶ್ರೀ ಮಧ್ವಾಚಾರ್ಯರು ತನ್ನ ತಮ್ಮ ವಿಷ್ಣುತೀರ್ಥರಿಗೆ ಈ ಮಠವನ್ನು ಕೊಟ್ಟರೆಂದು ಹೇಳುತ್ತಾರೆ. ಈ ಮಠದ ಸ್ವಾಮಿಯವರು ಸಂಪುಟ ನರಸಿಂಹ ದೇವರ ಪೂಜೆಯ ವ್ಯವಸ್ಥೆ ಮಾಡುತ್ತಾರೆ.

ಶೃಂಗೇರಿ ಮಠ

ಹೊರಾಂಗಣದ ಈಶಾನ್ಯದಲ್ಲಿರುವ ಈ ಮಠದ ಚಂದ್ರಮೌಳೀಶ್ವರ ದೇವರಿಗೆ ಕ್ರಮವಾದ ಪಂಚಪರ್ವ ಮತ್ತು ನಂದಾದೀಪಗಳು ದೇವಸ್ಥಾನದಿಂದಲೇ ನಡೆಯುತ್ತವೆ.

ಹೊಸಳಿಗಮ್ಮ

ಹೊರ ಪ್ರಾಕಾರದ ದಕ್ಷಿಣದಲ್ಲಿ ಹೊಸಳಿಗಮ್ಮ ಮತ್ತು ಪುರುಷರಾಯರೆಂಬ ಎರಡು ದೈವಗಳ ಗುಡಿಯಿದೆ. ಶ್ರೀ ದೇವರಿಗೆ ಇವು ಅಂಗರಕ್ಷಕರಂತೆ ಇವೆ. ಇಲ್ಲಿ ಕುಂಕುಮಾರ್ಚನೆ, ಮಂಗಳಾರತಿ ಹಣ್ಣುಕಾಯಿ ಮೊದಲಾದ ಸೇವೆಗಳು ನಡೆಯುವುವು.

ದರ್ಪಣತೀರ್ಥ

ದೇಗುಲದ ಮುಂಭಾಗದಲ್ಲಿ ಹರಿಯುವ ಹೊಳೆಯಿದು. ಮುಂದೆ ಮತ್ಸ್ಯತೀರ್ಥದಲ್ಲಿ ಅದು ಧಾರೆಯನ್ನು ಕೂಡುತ್ತದೆ. ಹಿಂದೆ ದರ್ಪಣ ಮತ್ತು ರಜತ ಆರ್ಘ್ಯ ಪಾತ್ರೆ ಹರಿದು ಬಂದ ನದಿಯಿದು. ಮಡೆಸ್ನಾನದ ಸೇವೆ ಮುಗಿದ ಬಳಿಕ ಇಲ್ಲಿ ಸ್ನಾನಮಾಡಿ ಪುಣ್ಯ ಭಾಜನರಾಗುವರು.

ಆದಿ ಸುಬ್ರಹ್ಮಣ್ಯ

ದೇವಾಲಯದ ಬಡಗು ದಿಕ್ಕಿನ ಮಾರ್ಗದಲ್ಲಿ ಒಂದೆರಡು ಫರ್ಲಾಂಗು ದೂರದಲ್ಲಿ ದರ್ಪಣ ತೀರ್ಥದ ದಡದಲ್ಲಿ ಆದಿ ಸುಬ್ರಹ್ಮಣ್ಯ ಗುಡಿಯಿದೆ. ಇದರ ದರ್ಶನ ಮಾಡದೆ ಹೋದರೆ, ಸುಬ್ರಹ್ಮಣ್ಯನ ದರ್ಶನ ಅಪೂರ್ಣ. ಇಲ್ಲಿ ಬ್ರಹ್ಮಪ್ರತಿಷ್ಠಿತ ಶಿವಲಿಂಗ ಇದೆಯೆಂದೂ ಷಣ್ಮುಖನು ಇಲ್ಲಿಯೂ ಅಂಶಿಕವಾಗಿ ನೆಲಸಿದ್ದಾನೆಂದೂ ವಿಶ್ವಾಸ. ಇಲ್ಲಿನ ಮೃತ್ತಿಕೆ ಸರ್ಪಬಾಧೆಗೆ ರಾಮಬಾಣ.

ಉತ್ತರಾದಿ ಮಠ

ಇಲ್ಲಿ ಆಂಜನೇಯ ವಿಗ್ರಹವಿದ್ದು ನಿತ್ಯ ಪೂಜಾದಿಗಳು ನೆರವೇರುತ್ತವೆ.

ರುದ್ರಪಾದ

ದರ್ಪಣ ತೀರ್ಥದ ಪಕ್ಕದಲ್ಲಿಯೇ ದೇವಾಲಯದಿಂದ ಅರ್ಧಮೈಲು ದೂರದಲ್ಲಿರುವುದು ಇದು. ಶಿಲೆಯ ಮೇಲೆ ಎರಡು ರುದ್ರಪಾದಗಳೂ ಇತರ ಲೇಖಗಳೂ ಇವೆ. ಕ್ಷೇತ್ರವಿಧಿಯನ್ನು ಇಲ್ಲಿ ನೆರವೇರಿಸುತ್ತಾರೆ.



ಬ್ರಹ್ಮೋತ್ಸವದ ಒಂದು ದೃಶ್ಯ.

ಪಾಲಕಿ ಉತ್ಸವ



ನೌಕಾ ವಿಹಾರ

ಕಾಶಿಕಟ್ಟೆ

ಪಡುಬದಿಯಲ್ಲಿ ದೇವಸ್ಥಾನದಿಂದ ೨ ಫರ್ಲಾಂಗು ದೂರದಲ್ಲಿರುವುದು, ಆಂಜನೇಯ ಮತ್ತು ಗಣಪತಿ ವಿಗ್ರಹಗಳಿಲ್ಲಿವೆ. ನಾರದರು ಇಲ್ಲಿಯೇ ಸಿದ್ಧಿವಿನಾಯಕನನ್ನು ಪ್ರತಿಷ್ಠಿಸಿದ್ದರು. ಕ್ಷೇತ್ರದ ಮಹಾದ್ವಾರವೇ ಈ ಕಟ್ಟೆ. ಇಲ್ಲಿ ಭಕ್ತರ ಪ್ರಾರ್ಥನೆ ಕ್ಷಿಪ್ರಫಲಪ್ರದ.

ಬಿಲದ್ವಾರ

ಕುಮಾರಧಾರೆಗೆ ಹೋಗುವ ದಾರಿಯಲ್ಲಿ ಮಾರ್ಗದ ತೆಂಕು ದಿಕ್ಕಿನಲ್ಲಿ ಅರ್ಧಮೈಲಿ ದೂರದಲ್ಲಿ ಬಿಲದ್ವಾರವಿದೆ. ಇಲ್ಲಿ ವಾಸುಕಿ ಅಡಗಿದ್ದನೆನ್ನುತ್ತಾರೆ. ಗೋಗರ್ಭವೂ ಒಂದು ತೀರ್ಥವೂ ಇಲ್ಲಿವೆ, ಇಲ್ಲಿನ ತೀರ್ಥಪ್ರಾಶನವು ಕೃತಾರ್ಥಕಾರಿಯೆಂದು ಹೇಳುತ್ತಾರೆ.

ಕುಮಾರ ಧಾರೆ

ಇದು ಸಮಸ್ತ ತೀರ್ಥಗಳ ಸಾರ. ಮೊದಲು ಮಹೀನದಿಯೆಂದು, ಮುಂದೆ ಧಾರಾ ನದಿಯೆಂದು, ಈಗ ಕುಮಾರ ಧಾರೆಯೆಂದು ಇದು ವಿಖ್ಯಾತವಾಗಿದೆ. ಇಲ್ಲಿ ಸ್ನಾನ ಮಾಡುವುದರಿಂದ ಸಕಲ ಚರ್ಮವ್ಯಾಧಿಗಳೂ ಪರಿಹಾರಗೊಳ್ಳುತ್ತವೆ.

ಮತ್ಸ್ಯ ತೀರ್ಥ

ಕುಮಾರಧಾರೆಯ ಸ್ಥಳ ವಿಶೇಷವಿದು. ಕುಮಾರ ಸ್ವಾಮಿಯ ಅವಭೃಥ ಸ್ನಾನ, ನೌಕಾವಿಹಾರ ಇಲ್ಲಿಯೇ. ದರ್ಪಣತೀರ್ಥ ಸಂಗಮವಾಗುವುದೂ ಇದೇ ಪವಿತ್ರ ಸ್ಥಳದಲ್ಲಿ. ಇಲ್ಲಿ ಬಂದು ದೇಗುಲದವರೆಗೆ (ಸುಮಾರು ೧|| ಮೈಲಿ) ಅಂಗ ಪ್ರದಕ್ಷಿಣೆ ಮಾಡುತ್ತ ದೇವರಿಗೆ ಸುತ್ತು ಬಂದು ದರ್ಪಣ ತೀರ್ಥದಲ್ಲಿ ಮರಳಿ ಸ್ನಾನ ಮಾಡಿ ದೇವರೆದುರು ಕೃಷ್ಣಾರ್ಪಣ ಬಿಟ್ಟರೆ ಈ ಸೇವೆಯು ಪೂರೈಸಿದಂತಾಗುತ್ತದೆ.

ಸೋಮನಾಥ ದೇವಸ್ಥಾನ

ಸುಬ್ರಹ್ಮಣ್ಯ ದೇವಾಲಯದಿಂದ ಒಂದು ಮೈಲು ದೂರದಲ್ಲಿ ಪಂಚಮಿತೀರ್ಥ ಅಥವಾ ಅಗ್ರಹಾರ ಸೋಮನಾಥ ದೇವ

ಸ್ಥಾನವಿದೆ. ಇದರ ಸಮೀಪ ಸುಬ್ರಹ್ಮಣ್ಯ ಮಠದ ಸ್ವಾಮಿಯವರ ವೃಂದಾವನವಿರುತ್ತದೆ. ಮುಂದುಗಡೆ ಕುಮಾರಧಾರಾ ನದಿಯೂ ಸುತ್ತಮುತ್ತ ಪ್ರಕೃತಿಮಾತೆಯ ದಿವ್ಯ ಸನ್ನಿವೇಶಗಳೂ ಇದ್ದು ಇದು ನೇತ್ರಾನಂದಕರವಾಗಿದೆ.

ಕುಮಾರ ಪರ್ವತ

ಇದು ಪಶ್ಚಿಮ ಗಟ್ಟಗಳ ೪,೦೦೦ ಅಡಿ ಎತ್ತರದ ಒಂದು ಪರ್ವತ. ದೇವಸ್ಥಾನದಿಂದ ಇಲ್ಲಿಗೆ ಸುಮಾರು ೧೨ ಮೈಲಿ ದೂರ. ದಾರಿಯು ದುರ್ಗಮವಿರುವುದರಿಂದ ಇದನ್ನು ಹತ್ತುವವರು ಅಪರೂಪ. ಈ ದಾರಿಯ ಅಕ್ಕಪಕ್ಕಗಳಲ್ಲಿ ಹಿಂದೆ ಈ ಪ್ರದೇಶವು ಸಮೃದ್ಧಿ ಹೊಂದಿದ್ದ ಕುರುಹುಗಳು ಗೋಚರವಾಗುತ್ತವೆ. ಕುಮಾರ ಪರ್ವತವು ನೋಟಕ್ಕೆ ಒಂದೇ ಶಿಖರದಂತೆ ಕಂಡರೂ ಇದರಲ್ಲಿ ಮೂರು ಶಿಖರಗಳಿವೆ. ಏಳು ಹೆಡೆಗಳ ಸರ್ಪದಂತಿರುವ ಶೇಷ ಪರ್ವತವೊಂದು, ಸಿದ್ಧ ಪರ್ವತವೊಂದು, ಇನ್ನೊಂದು ಕುಮಾರ ಪರ್ವತ. ಸಿದ್ಧ ಪರ್ವತವು ಅತೀವ ದುರ್ಗಮವಿದೆ. ಶೇಷ ಪರ್ವತವನ್ನು ದಾಟಿ ಕುಮಾರ ಪರ್ವತಕ್ಕೆ ಹೋಗಬೇಕಾಗುತ್ತದೆ. ಇದೇ ಪರ್ವತದಲ್ಲಿ ಕುಮಾರಸ್ವಾಮಿಗೆ ಪಟ್ಟಾಭಿಷೇಕ ನಡೆಯಿತು. ಆ ಅಭಿಷೇಕದ ನೀರೇ ಶುಭ್ರ ಕುಮಾರಧಾರೆಯಾಗಿ ಹರಿಯಿತು. ಆರು ಮುಖಗಳುಳ್ಳ ಕುಮಾರ ಲಿಂಗಗಳು ಇಲ್ಲಿ ಎಲ್ಲೆಡೆಯಲ್ಲಿ ದೊರೆಯುತ್ತವೆ. ಪ್ರಕೃತಿ ಮನೋಹರವಾದ ದೃಶ್ಯವನ್ನು ನಾವು ಈ ಪರ್ವತದ ಮೇಲಿನಿಂದ ವೀಕ್ಷಿಸಬಹುದು.



ಚಂಪಾಷಷ್ಠಿಯ ಬ್ರಹ್ಮೋತ್ಸವ



ಹುಲಿಯ ತೇರಿನ ಉತ್ಸವ

ವಿಶೇಷ ಉತ್ಸವಗಳು

ಜ್ಯೇಷ್ಠ ಮಾಸದಿಂದ ಭಾದ್ರಪದ ಮಾಸದ ವರೆಗೂ ಅಲ್ಪ ಕಾಲವನ್ನು ಬಿಟ್ಟರೆ, ಉಳಿದೆಲ್ಲಾ ಸಮಯದಲ್ಲಿಯೂ ಶ್ರೀ ಸುಬ್ರಹ್ಮಣ್ಯದಲ್ಲಿ ಒಂದಲ್ಲ ಒಂದು ವಿಷದ ಉತ್ಸವವು ನಡೆಯುತ್ತಲೇ ಇರುತ್ತವೆ. ಆದುದರಿಂದಲೇ ಸಾಮಾನ್ಯವಾಗಿ ಮಳೆಗಾಲದ ನಾಲ್ಕು ತಿಂಗಳುಗಳನ್ನುಳಿದು ಉಳಿದ ಎಂಟು ಮಾಸಗಳಲ್ಲಿ ತಮಗನುಕೂಲವಾದ ದಿನ ಯಾತ್ರಾರ್ಥಿಗಳು ಶ್ರೀ ಸುಬ್ರಹ್ಮಣ್ಯನ ದರ್ಶನಾಕಾಂಕ್ಷಿಗಳಾಗಿ ಬರುತ್ತಿರುತ್ತಾರೆ. ಪ್ರತಿನಿತ್ಯವೂ ನಿರ್ಮಾಲ್ಯ ವಿಸರ್ಜನಾದಿ ಪೂಜೆಯಿಂದ ತೊಡಗಿ ರಾತ್ರಿಯ ಮಂಗಳ ಪೂಜೆಯವರೆಗೂ ತ್ರಿಕಾಲ ಪೂಜೆಗಳು ನಡೆಯುತ್ತಲೇ ಇರುತ್ತವೆ, ಮಧ್ಯಾಹ್ನದ ಪೂಜೆಯು ೧೨ ಘಂಟೆಗೆ ಸರಿಯಾಗಿ ನಡೆಯುವುದು ಇಲ್ಲಿ ನಾವು ಕಾಣುವ ವೈಶಿಷ್ಟ್ಯ.

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ನಡೆಯುವ ವಿವಿಧ ಉತ್ಸವಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಕೊಟ್ಟಿವೆ.

ಚೈತ್ರ ಶು ೧ ವಸಂತ ಪೂಜಾರಂಭ.
" " ೯ ರಾಮನವಮಿ.
ವೈಶಾಖ ಶು ೩ ಅಕ್ಷಯತದಿಗೆ.
ಜ್ಯೇಷ್ಠ ಶು ೬ ವಸಂತ ಪೂಜಾಂತ್ಯ.
ಕಾರ್ತೀಕ ಶು ೧ ನವ ವರ್ಷ ಪ್ರಾರಂಭೋತ್ಸವ.
" ೬ ೧೨ ಮಹೋತ್ಸವ ಪ್ರಾರಂಭ.
" " ೩೦ ಲಕ್ಷದೀಪ.
ಮಾ| ಶು. ೫ ಪಂಚಮೀ ಮಹೋತ್ಸವ
" ಶು. ೬ ಚಂಪಾಷಷ್ಠಿ
" " ೭ ಅವಭೃಥ
ಪುಷ್ಯ " ೬ ಕಿರುಷಷ್ಠಿ
ಮಾಘ ಶು ೭ ರಥ ಸಪ್ತಮಿ

ಅಲಂಕರಿಸಿದ ರಥೋತ್ಸವಗಳು ಮಾತ್ರವಲ್ಲದೆ ಶೇಷವಾಹನ, ಅಶ್ವವಾಹನ, ಮಯೂರವಾಹನ, ಪುಷ್ಪರಥ, ಭಂಡಿ ಮತ್ತು ಪಾಲಕಿಗಳಲ್ಲಿಯೂ ಬೇರೆ ಬೇರೆ ದಿವಸಗಳಲ್ಲಿ ಉತ್ಸವವು ಅತೀವ ವಿಜೃಂಭಣೆಯಿಂದ ನೆರವೇರುತ್ತದೆ. ನಿರ್ಧಾರಿತ ವಿಶಿಷ್ಟ ಸ್ಥಾನಗಳಲ್ಲಿ ಪೂಜೆಪುರಸ್ಕಾರಗಳೂ ನಡೆಯುತ್ತವೆ.

ಸೌರಮಾನ ವರ್ಷದ ಮಕರ ಮತ್ತು ಮೇಷ ಸಂಕ್ರಮಣಗಳ ದಿನಗಳಲ್ಲಿಯೂ ವಿಶೇಷ ಪೂಜೆ-ಉತ್ಸವಗಳು ಶ್ರೀ ಸುಬ್ರಹ್ಮಣ್ಯನಿಗೆ ಸಲ್ಲಿಸಲ್ಪಡುತ್ತವೆ.

ಭಕ್ತಾದಿಗಳು ಅಪೇಕ್ಷಿಸುವುದಾದರೆ ಆಯಾಯ ಸೇವೆಗಳಿಗೆ ಗೊತ್ತುಪಡಿಸಿದ ಮೌಲ್ಯವನ್ನು ತೆತ್ತಲ್ಲಿ ಕಾರ್ತಿಕ ಶುದ್ಧ ೧ ರಿಂದ ಜ್ಯೇಷ್ಠ ಶುದ್ಧ ೬ರ ವರೆಗೆ ಯಾವ ದಿವಸದಲ್ಲೂ ಯಾವ ಉತ್ಸವವನ್ನು ಬೇಕಾದರೂ ನಡೆಸುವ ಏರ್ಪಾಡನ್ನು ಮಾಡಲಾಗಿರುತ್ತದೆ. ನೂರಾರು ಭಕ್ತ ಮಹಾಶಯರು ಈ ರೀತಿ ಉತ್ಸವಗಳನ್ನು ನಡೆಸಿ, ತಮ್ಮ ಭಕ್ತಿಶ್ರದ್ಧೆಗಳನ್ನು ಪ್ರದರ್ಶಿಸುವುದು ಮಾತ್ರವಲ್ಲ, ತಮ್ಮ ಇಷ್ಟಾರ್ಥಗಳನ್ನೂ ಸಿದ್ಧಿಸಿಕೊಳ್ಳುತ್ತಾರೆ

ಪಕ್ಕದ ಚಿತ್ರ
ಭಂಡಿ ಉತ್ಸವದ ರಥ

ಕೆಳಗಣ ಚಿತ್ರ
ಕ್ಷೇತ್ರದ ಛತ್ರಗಳ ಸಾಲು



ಸುಧಾರಣಾ ಪಥದಲ್ಲಿ ಶ್ರೀ ಸುಬ್ರಹ್ಮಣ್ಯ ಕ್ಷೇತ್ರ

ಶ್ರೀ ಸುಬ್ರಹ್ಮಣ್ಯ ದೇವಾಲಯವು ಹೊಯ್ಸಳ ಬಲ್ಲಾಳ ಅರಸರ ಆಡಳಿತೆಯಲ್ಲಿತ್ತು. ಆಗ ಇದು ಅತೀವ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆದರೆ, ಈ ರಾಜ ಮನೆತನದ ಅವನತಿಯೊಂದಿಗೆ ದೇಗುಲದ ಅವನತಿಯೂ ಪ್ರಾರಂಭವಾಯ್ತು. ಹೀಗೆ

ಕೆ. ಸುಬ್ರಹ್ಮಣ್ಯಗೌಡ,
ಎಡ್ವೋಕೇಟ್, ಪುತ್ತೂರು.
ಚೇರ್‌ಮೇನ್

ಪತನದ ದಾರಿಯಲ್ಲಿದ್ದ ದೇವಾಲಯವು ೧೮೧೦ರಿಂದ ೧೮೬೫ರ ವರೆಗೆ ಕಂಪೆನಿಯ ಸರಕಾರದ ನೇರ ಆಡಳಿತೆಗೆ ಬಂತು ಆದರೆ ಹಲವಾರು ಕಾರಣಗಳಿಂದ ದೇವಾಲಯದ ಉದ್ಧಾರದ ಕಾರ್ಯಗಳು ನಡೆಯಲಿಲ್ಲ ಮತ್ತು ಕೆಟ್ಟ ಹವೆಯಿಂದಾಗಿ ಜನಸಂಖ್ಯೆ ಇಳಿಯಿತು; ಒಂದು ಹಳ್ಳಿಯಾಗಿ ಉಳಿಯಿತು. ಮುಂದೆ ಧರ್ಮದರ್ಶಿಗಳ ಮೂಲಕ ದೇವಾಲಯದ ಆಡಳಿತೆ ನಡೆಯುವ ಕ್ರಮವು ಬಂತು. ಆದರೆ, ಸುಬ್ರ



ಬಿ. ನಾರಾಯಣ ಶೇಕ, ನಾವೂರು,
ಟ್ರಸ್ಟಿ.

ಹ್ಮಣ್ಯ ಮಠದ ಸ್ವಾಮಿ ಮತ್ತವರ ಪರಿವಾರದವರಿಂದಾಗಿ ದೇಗುಲದ ಒಡವೆ ವಸ್ತು, ಆಸ್ತಿಪಾಸ್ತಿಗಳಿಗೇನೇ ಅಭದ್ರ ಪರಿಸ್ಥಿತಿಯು ಕಾಣಿಸಿಕೊಂಡಿತು. ಹೀಗೆ ಸರ್ವ ರೀತಿಯಿಂದಲೂ ಅಧಃಪತನದ ದಾರಿಗಿಳಿದಿದ್ದ ದೇವಾಲಯವನ್ನು ಸಂರಕ್ಷಿಸಿ, ಅದರ ಏಳಿಗೆಗಾಗಿ ಪರಿಶ್ರಮಿಸಲು ತೊಡಗಿದವರು ಬಾಗ್ಲೋಡಿ ಮನೆತನದ ರಾಮಕೃಷ್ಣಯ್ಯನವರು ಇವರ ನಂತರ ಭೋಜರಾಯರು ಕ್ಷೇತ್ರಾಭಿವೃದ್ಧಿಯ ಕಾರ್ಯದಲ್ಲಿ ನಿರತರಾದರು ಇವರೂ ಇವರ ನಂತರ ಅಧಿಕಾರಪಡೆದ ಅನಂತರಾಮಯ್ಯನವರೂ ದೇಗುಲಕ್ಕೆ ಆಸ್ತಿಪಾಸ್ತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದರು.

ಶ್ರೀ ಕ್ಷೇತ್ರದ ನಿಜವಾದ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾದುದು ೧೯೩೩ನೆ ಇಸವಿಯಿಂದ ಎಂದು ಹೇಳಬಹುದು ಅಂದಿನಿಂದ ಈ ಮೂವತ್ತು ವರ್ಷಗಳ ಅವಧಿಯಲ್ಲಿ ಅಧಿಕಾರಕ್ಕೆ ಬಂದ ಧರ್ಮದರ್ಶಿಗಳು ವಿಶೇಷ ಆಸಕ್ತಿಯಿಂದ ದೇವಸ್ಥಾನದ ಸ್ಥಿರಚರ ಸೊತ್ತುಗಳನ್ನು ಹೆಚ್ಚಿಸುತ್ತ ಬಂದಿದ್ದಾರೆ. ಶ್ರೀ ಸುಬ್ರಹ್ಮಣ್ಯ ಕ್ಷೇತ್ರವನ್ನು ಸರ್ವಪ್ರಕಾರದಲ್ಲಿಯೂ ಒಂದು ಆಕರ್ಷಕ ಮತ್ತು ಪವಿತ್ರತಮವಾದ ಕ್ಷೇತ್ರವನ್ನಾಗಿ ರೂಪಿಸುವ ಉದ್ದೇಶದಿಂದ ಮುತುವರ್ಜಿಯಿಂದ ದುಡಿಯುತ್ತ ಬಂದಿದ್ದಾರೆ. ದೇವಾಲಯಕ್ಕೆ ಹೊಸ ಹೊಸ ಜಮೀನುಗಳನ್ನು ಕೊಳ್ಳುವುದು ಮತ್ತು ಜ

ಎಚ್. ಎಸ್. ಎ. ಗೌಡ, ರಿಟ್ಯಾರ್ಡ್
ಡಿ. ಎಸ್. ಪಿ., ಪುತ್ತೂರು. ಟ್ರಸ್ಟಿ.

ಮೀನಲ್ಲಿ ತೋಟವೇ ಮೊದಲಾದ ಕೃಷಿ ಕೆಲಸಗಳಿಂದ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವುದು; ಯಾತ್ರಿಕರ ಸೌಲಭ್ಯಗಳಿಗಾಗಿ ಉತ್ತಮ ಮಾದರಿಯ ಛತ್ರಗಳನ್ನು ಕಟ್ಟಿಸುವುದು; ದೇಗುಲದ ಪ್ರೇಕ್ಷಣೀಯ ಮತ್ತು ಪವಿತ್ರ ಸ್ಥಾನಗಳನ್ನು ದುರಸ್ತಿಗೊಳಿಸಿ ಅವನ್ನು ಆಕರ್ಷಕವಾಗಿ ರೂಪಿಸುವುದು, ದೇವರ ಪೂಜೆ, ಆರಾಧನೆ, ಉತ್ಸವ ಮೊದಲಾದುವುಗಳಿಗೆ ಆವಶ್ಯಕವಾದ ಸಲಕರಣೆಗಳನ್ನು ಮಾಡಿಸುವುದು ಇತ್ಯಾದಿ ಕರ್ತವ್ಯಗಳನ್ನು ಯಶಸ್ವಿಯಾಗಿ ಮಾಡುತ್ತ ಬಂದಿದ್ದಾರೆ.

ಶ್ರೀ ಸುಬ್ರಹ್ಮಣ್ಯ ದೇವಾಲಯದ ಆಕರ್ಷಣೀಯತೆ, ಆದಿ ಸುಬ್ರಹ್ಮಣ್ಯದ ಪುನಾರಚನೆ, ಅದರ ಮುಂದಿರುವ ಉದ್ಯಾನವನ, ಸುತ್ತಲಿನ ಅಡಿಕೆ—ಬಾಳೆ ತೋಟಗಳು, ಕಾಶಿಕಟ್ಟೆಯ ಪುನಾರಚನೆ, ಮತ್ಸ್ಯತೀರ್ಥದಿಂದ ದರ್ಪಣ ತೀರ್ಥದ ವರೆಗಿನ ಮಾರ್ಗವನ್ನು ವಿಶಾಲಗೊಳಿಸುವುದು, ಆರೋಗ್ಯಕ್ಕಾಗಿ ಆಸ್ಪತ್ರೆಯ ಸ್ಥಾಪನೆ, ಮಕ್ಕಳ ಶಿಕ್ಷಣಕ್ಕಾಗಿ ಶಾಲೆ ವ ಹೈಸ್ಕೂಲು ಮೊದಲಾದುವು ಧರ್ಮದರ್ಶಿಗಳು ಮಾಡಿಸಿದ ಅಮೂಲ್ಯ ಸೇವೆಗಳು.

ಪುರಾಣ ಪ್ರಸಿದ್ಧವಾದ ಈ ಪುಣ್ಯಕ್ಷೇತ್ರಕ್ಕೆ ಮೂಲೆ ಮೂಲೆಗಳಿಂದ ಯಾತ್ರಾರ್ಥಿಗಳು ಬರುವುದು ಸ್ವಾಭಾವಿಕ. ಇಂತಹ ಭಗವದ್ಭಕ್ತರಿಗೆ ಉಳಕೊಳ್ಳುವ ವ್ಯವಸ್ಥೆಯು ಆವಶ್ಯಕ. ಇದಕ್ಕಾಗಿ ದೇವಾಲಯದ ಧರ್ಮದರ್ಶಿಗಳು ಭಕ್ತಮಹಾಶಯರ ಉದಾರ ಸಹಾಯದಿಂದ ಛತ್ರಗಳನ್ನು ಅಧಿಕ ಸಂಖ್ಯೆಯಲ್ಲಿ ಕಟ್ಟಿಸುವ ದೊಡ್ಡ ಯೋಜನೆಯೊಂದನ್ನು ಇಟ್ಟುಕೊಂಡಿದ್ದಾರೆ ಇದರಂತೆ ಈಗಾಗಲೇ ಹಲವಾರು ಕಟ್ಟಡಗಳು ಎದ್ದು ನಿಂತಿವೆ ಈ ವರ್ಷ ಪ್ರಾರಂಭವಾದ ಹೈಸ್ಕೂಲಿಗೆ ಹೊಸ ಕಟ್ಟಡದ ರಚನೆಗೆ ಯೋಜನೆಯು ಸಿದ್ಧವಾಗಿದೆ. ಕಂಬಳಿ ವ್ಯಾಪಾರಸ್ಥರು ಮತ್ತು ಹಣ್ಣುಕಾಯಿ ಅಂಗಡಿಗಾರರಿಗಾಗಿ ಉತ್ತಮ ಕಟ್ಟೋಣಗಳೀಗ ಕಟ್ಟಲ್ಪಟ್ಟಿವೆ

ಶ್ರೀ ಕ್ಷೇತ್ರಕ್ಕೆ ಕುಡಿಯುವ ನೀರಿನ ಪೂರೈಕೆಯ ಯೋಜನೆಯೊಂದು ಅಗತ್ಯ



ಬಿ. ಬಾಲಕೃಷ್ಣ ರೈ, ತಾಲೂಕು
ಬೋರ್ಡ್ ಸದಸ್ಯ, ಉಪ್ಪಿನಂಗಡಿ.
ಟ್ರಸ್ಟಿ.

ವಿದೆ ತೇರು-ಬೀದಿಯಿಂದ ದೇವಸ್ಥಾನವನ್ನು ಪ್ರವೇಶಿಸುವಲ್ಲಿ ಶಾಶ್ವತ ಗೋಪುರ ಮತ್ತು ಕುಮಾರ ಪರ್ವತಕ್ಕೆ ಹೋಗುವ ಮಾರ್ಗಗಳೂ ಅಷ್ಟೇ ಮುಖ್ಯವಾಗಿವೆ. ದೇವಳದ ಬ್ರಹ್ಮರಥವು ಅತೀವ ಜೀರ್ಣಾವಸ್ಥೆಯಲ್ಲಿರುವುದರಿಂದ ೧೫೦ ವರ್ಷ ಹಳೆಯದಾದ ಅದರ ಸ್ಥಾನದಲ್ಲಿ ಹೊಸರಥವೊಂದರ ನಿರ್ಮಾಣ ಕಾರ್ಯವು ಈಗಾಗಲೇ ಪ್ರಾರಂಭವಾಗಿದ್ದು ಇದು ಆದಷ್ಟು ಬೇಗನೇ ಪೂರ್ತಿಗೊಳ್ಳಬೇಕಾಗಿದೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಯಾತ್ರಾರ್ಥಿಗಳ ಅನುಕೂಲ ಮತ್ತು ಸೌಕರ್ಯಗಳಿಗಾಗಿ ಇನ್ನೂ ಅಧಿಕ ಸಂಖ್ಯೆಯ ಛತ್ರಗಳ ನಿರ್ಮಾಣವಾಗಬೇಕಾಗಿದೆ. ಶ್ರೀ ಕ್ಷೇತ್ರದ ಘನಸ್ತಿಕೆ ಮತ್ತು ಗೌರವಗಳಿಗೆ ತಕ್ಕಂತೆ ಸುವ್ಯವಸ್ಥಿತ ರೀತಿಯಲ್ಲಿ ಶ್ರೀ ಕ್ಷೇತ್ರದ ಸಕಲ ಕಾರ್ಯಕಲಾಪಗಳೂ ನೆರವೇರುವುದಕ್ಕೆ ಧರ್ಮದರ್ಶಿ ಮತ್ತು ಮೆನೇಜರರೊಡನೆ ಭಕ್ತ ಮಹನೀಯರು ಈಗಾಗಲೇ ಉದಾರರಾಗಿ ಸಹಕರಿಸಿದ್ದಾರೆ ಇಂತಹ ಸಹಕಾರವಿನ್ನೂ ಅಧಿಕಾಧಿಕವಾಗಿ ದೊರೆಯಬೇಕು. ಇಷ್ಟಸಿದ್ಧಿಕಾರಕನಾದ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಆವಾಸಸ್ಥಾನವಾದ ಶ್ರೀ ಕ್ಷೇತ್ರ ಇಡಿಯ ಭಾರತದಲ್ಲಿಯೇ ಅದ್ವಿತೀಯವೆನಿಸಿ ಕೀರ್ತಿಭಾಜನವಾಗಬೇಕು ಇದಕ್ಕಾಗಿ ಭಕ್ತ ಮಹಾಶಯರು ತನುಮನಧನಗಳಿಂದ ನೆರವಾಗಬೇಕು.

ಸಕಲ ಸಿದ್ಧಿದಾಯಕನಾದ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ದೇವ ಮಂದಿರವಿರುವ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಬೇರೆ ಬೇರೆ ದಾರಿಗಳಿಂದ ಬರಬಹುದು. ಈಗಾಗಲೇ ನಿರ್ಮಾಣಗೊಂಡಿರುವ ಎಲ್ಲ ಮಾರ್ಗ ಸೇತುವೆಗಳು ಅತ್ಯುತ್ತಮ ಸ್ಥಿತಿಯಲ್ಲಿವೆ.



ಡಿ. ಕೆ. ಹೆಬ್ಬಾರ್, ಟಿಂಬರ್ ಕಂಟ್ರಾಕ್ಟರ್, ಪುತ್ತೂರು. ಟ್ರಸ್ಟಿ

ಹೊಸ ಮಾರ್ಗಗಳ ನಿರ್ಮಾಣವೂ ಆಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಹಾಸನ ಜಿಲ್ಲೆಯ ಹಾಸನವು ಇಲ್ಲಿಗೆ ಸಮೀಪದ ರೇಲ್ವೆ ನಿಲ್ದಾಣಗಳು. ಮಂಗಳೂರಿನಿಂದ ಮಾಣಿಗಾಗಿಯೂ ಪುತ್ತೂರು ದರ್ಬೆಗಳಾಗಿಯೂ ಪುತ್ತೂರು ಬೆಳ್ಳಾರೆಗಳಿಗಾಗಿಯೂ ಬಸ್ಸುಗಳು ಯಾವಾಗಲೂ ಓಡುತ್ತಿರುತ್ತವೆ. ಈ ದಾರಿಯ ದೂರ ಸುಮಾರು ೭೦ ಮೈಲಿಗಳು.

ಎಸ್. ರಾಮಕೃಷ್ಣ ಭಟ್,
ಮೆನೇಜರ್.

ಹಾಸನದಿಂದ ಬರುವವರು ಸಕಲೇಶಪುರ ಬಿಸಲೆ ಮಾರ್ಗವಾಗಿ ಬರಬಹುದು. ಈ ದಾರಿಯ ದೂರ ಸುಮಾರು ೭೫ ಮೈಲಿ. ಆದರೆ, ಸಕಲೇಶಪುರ—ಉಪ್ಪಿನಂಗಡಿ ದಾರಿಯಲ್ಲಿ ಬಸ್ಸುಗಳ ಓಡಾಟ ಯಾವಾಗಲೂ ಇರುವುದರಿಂದ, ೧೧೦ ಮೈಲಿಗಳ ಈ ದಾರಿಯಲ್ಲಿ ಬರುವುದೇ ಯಾತ್ರಿಕರಿಗೆ ಸುಖಕರ. ಮೈಸೂರು ಕಡೆಯಿಂದ ಬರುವವರು ಮಡಿಕೇರಿ ಪುತ್ತೂರುಗಳನ್ನು ಹಾದು ಬಸ್ಸಿನಲ್ಲಿ ಸುಬ್ರಹ್ಮಣ್ಯ ಸೇರಬಹುದು ಹಾಸನ ಮಂಗಳೂರು ರೇಲ್ವೆಯು ಪೂರ್ಣಗೊಂಡಾಗ, ಸುಬ್ರಹ್ಮಣ್ಯದಿಂದ ೨ ಮೈಲು ದೂರದ ಜಾನುವಾರು ಜಾತ್ರೆಗೆ ಹೆಸರಾದ ಕುಳುಕುಂದದಲ್ಲಿಯೇ ನಿಲ್ದಾಣವು ಸ್ಥಾಪಿತವಾಗುವುದು.

ಪಂಚಶೂಲ (ವಕ್ರೋಕ್ತಿ)

ಪರಿಸ್ಥಿತಿ

ಪ್ರತಿಯೊಂದು ಕೆಲಸಕ್ಕು ಆಗುತಿದೆ ಸಂಸ್ಥೆ.
ಆದರೂ ಬೆಳೆದಿಲ್ಲ ಜನಗಳಲಿ ಆಸ್ಥೆ.
ಇದರ ಶೋಧನೆಗಾಗಿ ನಮ್ಮೂರ ಸುಮತಿ
ರಚಿಸಿ ಬಿಟ್ಟನು ಬೇಗ ಮತ್ತೊಂದು ಸಮಿತಿ.

ಪ್ರಭಾವ

ಒಂದೊಂದು ಕೆಲಸಕ್ಕೆ ನೂರಾರು ಅರ್ಜಿ,
ನಿತ್ಯವೂ ಕಾಯ್ಬೇಕು ಅಧಿಕಾರಿ ಮರ್ಜಿ,
ಜೊತೆಯಲ್ಲೆ ಇರಬೇಕು ನೋಟುಗಳ ಕಟ್ಟು
ಅಂದರೇ ಸಿಗ್ಗುಹುದು ಬೇಕಾದ ಪರ್ಮಿಟ್ಟು.

ಪ್ರತಿಷ್ಠೆ

ಉದ್ಯೋಗ ಬಿಟ್ಟಿರುವ ನಮ್ಮೂರ ವೈದ್ಯ
ಕವಿಯಾಗಬೇಕೆಂದು ಬರೆದ ನವಪದ್ಯ
ಅಲ್ಲಿಂದ ಇಲ್ಲಿಂದ ಕೂಡಿಸಿದ ಜೋಡಿ
ಆದರಿಂದ ಬಗಿಹುದು ಬಹು ದೊಡ್ಡ ರಾಡಿ.

ಪ್ರತಿಕೂಲ

'ಹೋಮ ಮಾಡಲು ಬರದ ನಮ್ಮೂರ ಭಟ್ಟ
ತಾನುಟ್ಟ ಮಡಿಯನ್ನೆ ಬಹುಬೇಗ ಸುಟ್ಟ.
ಆಶ್ರಮವನಾಶ್ರಯಿಸಿ ಹೊರಟಿದ್ದ ಶೆಟ್ಟಿ
ಹಾದಿಯಲ್ಲೇ ಕುಡಿದುಬಿಟ್ಟಿದ್ದ ಕಳ್ಳಭಟ್ಟಿ.

ಪ್ರಪಂಚ

ಮನೆಯೊಳಗೆ ಮಾಡಿರುವ ಬಿಸಿದೋಸೆ ಬಿಟ್ಟು
ಹೋಟೇಲ ಪ್ರೀತಿಸಿದ ನಮ್ಮೂರ ಕಿಟ್ಟು
ಮನೆಯಾಕೆ ಸರಿಯಲ್ಲ ಪೋಹಿಸಲು ಎಂದು
ಮುದುಕಿಯಾದರು ಸರಿಯೇ ಯೋಚಿಸಿದ
ಅಂದು.

—ತವ್ವಲಸೆ ವಿಶ್ವೇಶ್ವರ ಶರ್ಮ, ಶಿರಸಿ

ಕಾಂಗ್ರೆಸ ಕಾಮದಹನ

ನೀನೇಕೆ ಪೋದಿಯ್ಯ ಗುಂಡಿಗೆದೆಯೊಡ್ಡಿ ?
ದೀನದಲಿತರ ಜೀವ ಅಂದೆ ಹುಲುಕಡ್ಡಿ !
ಮಾನಹಾನಿಯು ರಥವ ಕಾಂಗ್ರೆಸ್ಸು ಹತ್ತಿ
ತಾಣವಿಲ್ಲದ ದಿಸೆಗೆ ಸರಿಯುತಿದೆ ಒತ್ತಿ !

ಆಶೆ ಲಾಲಸೆ ಲಂಚ ಮರೆಮೋಸಕಂತೆ—
ದೇಶ ತುಂಬಿಹುದಲ್ಲ ವಂಚನೆಯು ಸಂತೆ
ವೇಶ ಖಾದಿಯದೆಂದು ಗಾಂಧಿ ಭಾಷಣವೆಂದು;
ಮೋಸಗೊಂಡಿದೆ ದೇಶ ನೋಡೊಮ್ಮೆ ಬಂದು !

ಸತ್ಯ ಶಾಂತಿಯ ಬೀಡು ಕಾಂಗ್ರೇಸ ನಾಡು—
ನಿತ್ಯ ಸಮಜೀವನದ ಗುರಿಯು ಈ ಬೀಡು—
ಸುತ್ತುತಿದೆ ಅಧಿಕಾರ ಮತ್ಸರದ ಸೇಡು
ಎತ್ತೆತ್ತ ನೋಡಿದರು ಸ್ವಾರ್ಥದಾ ಕಾಡು !

ಹಳ್ಳಿದಿಲ್ಲಿಗಳೆಲ್ಲ ಕುದಿಯುತಿಹ ವೇಳೆ;
ಸುಳ್ಳು ಸುಲಿಗೆಗಳಿಂದ ದಹಿಸುತಿದೆ ಜ್ವಾಲೆ.
ಮಲ್ಲಯುದ್ಧದ ಮದನರಾಟದಾ ಲೀಲೆ
ಝಲ್ಲೆನ್ನುತಿದೆ ಎದೆಯು ! ಹೇಗಿರಲಿ ನಾಳೆ ?

ಕಾಮನಾಡರ ಸೂತ್ರ ದೇಶಕದೆ ದೀಪ -
ವಾಮಮಾರ್ಗವನೆಲ್ಲ ಹಾರಿಸಿದ ಭೂಪ !
ನೇಮನಿಷ್ಠೆಗಳಿಲ್ಲದವರಿಗಿದೆ ಶಾಪ
ರಾಮರಾಜ್ಯದ ಮಂತ್ರ ! ಕಳೆಯಲಿದೆ ಪಾಪ.

ಕಾಂಗ್ರೇಸ ಕಾಮಣ್ಣಗಳ ಹುಚ್ಚಾಟ —
ಕಂಗಾಲ ಮನದೆಳಸ ಪ್ರೇತ ಚೀರಾಟ —
ಬೆಂಗಾಲ ಕುಹಕಿಗಳ ವಿವಿಧ ಚಲ್ಲಾಟ —
ಸಂಗಾತಿ ಜನಯುದ್ಧ ಹೇಸಿ ಹೋರಾಟ

ದಾರಿಗಾಣದ ಪಥಿಕ ಗತಿ ಕಂಡ ಸಿರಿಯೂ—
ಧೀರ ಮುಂದಾಳುಗಳು ಹೊರಬಿದ್ದ ಪರಿಯೂ.
ವೇರಿಪಟ್ಟಿದ ಹರ್ಷ ಸಾಧಾರ ಸದನ –
ಸಾರುತಿದೆ ಜಗವೆಲ್ಲ ಜಯ ಕಾಮದಹನ !

–ಡಾ| ಎಂ. ಎಸ್. ಹೆಗಡೆ, ಸೇಗಿನಹಾಳ, ಬೆಳಗಾವಿ

ದಿ| ಶ್ರೀಮತಿ ಲಕ್ಷ್ಮಿ ಶೆಟ್ಟಿಯವರು

ಜನನ 8—9—1903 ನಿಧನ 11—12—1963

ನನ್ನ ಧರ್ಮಪತ್ನಿ ಶ್ರೀಮತಿ ಲಕ್ಷ್ಮಿ ಶೆಟ್ಟಿಯು ತಾ. 11—12—1963ರಲ್ಲಿ ಸ್ವರ್ಗಸ್ಥಳಾದ ವಾರ್ತೆಯನ್ನು ತಿಳಿದು ಸ್ವತಹ ಆಗಮಿಸಿಯೂ, ತಂತಿಯ ಪತ್ರಗಳನ್ನು ಕಳುಹಿಸಿಯೂ ನಮ್ಮ ಅಪಾರ ಶೋಕದಲ್ಲಿ ಸಹಭಾಗಿಗಳಾಗಿ ಸಹಾನುಭೂತಿಯನ್ನು ತೋರಿದ ಬಂಧುಬಳಗಕ್ಕೂ, ಆಪ್ತೇಷ್ಟರಿಗೂ ಹಿತೈಷಿಗಳಿಗೂ ನಾನೂ ನನ್ನ ಮಕ್ಕಳೂ ಹಾರ್ದಿಕ ಕೃತಜ್ಞತೆಗಳನ್ನು ಈ ಮೂಲಕ ಸಮರ್ಪಿಸುತ್ತೇವೆ.

— ಕುರುಕಾಲು ಗಣಪಯ್ಯ ಶೆಟ್ಟಿ

ನಮ್ಮ ಗ್ರಾಹಕರಿಗೂ, ಹಿತಚಿಂತಕರಿಗೂ
ಪ್ರಜಾರಾಜ್ಯ ದಿನದ ಹಾರ್ದಿಕ ಅಭಿನಂದನೆಗಳು
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್
ತೆಂಕಪೇಟೆ — ಉಡುಪಿ

Sri Gajanana Cloth Stores
TENKAPET, UDIPI.
THE FASHION CREATORS IN THE TOWN
& WHERE ALWAYS SOME THING IS NEW

FIRST IN FASHION! BEST IN SELECTION
GUNDU NAYAK'S
FASHION EMPORIUM
TENKAPET UDIPI (S Kanara)
ನವೀನ ಫೇಶನಿನ ಮದುವೆಯ ಎಲ್ಲಾ ಬಗೆಯ
ರೇಶ್ಮೆ ಶೀರೆ, ಚೋಳಿ ಪೀಸುಗಳ
—: ಅಧಿಕ ಪ್ರಮಾಣದ ದಾಸ್ತಾನುಗಾರರು :—
ಧರ್ಮಾವರಂ, ಕಾಂಜೀವರಂ, ಕುಂಭಕೋಣಂ, ತಂಜಾವೂರು, ಆರ್ನಿ
ಕೊಳ್ಳೆಗಾಲ್, ಕಾಶ್ಮೀರ್, ಬನಾರಸ್, ಬೆಂಗಳೂರು ರೇಶ್ಮೆ ಶೀರೆಗಳು
ಅತೀ ಕಡಿಮೆ ಬೆಲೆಗೆ ಮಾರಲ್ಪಡುತ್ತವೆ
ಎಲ್ಲಾ ತರದ ಅತ್ಯಾಧುನಿಕ ಆಕರ್ಷಣೀಯ ಜವುಳಿ ಬಂದಿರುತ್ತದೆ
ಗುಂಡು ನಾಯಕ್ಸ್
ಫೇಶನ್ ಎಂಪೋರಿಯಮ್
ತೆಂಕಪೇಟೆ, ಉಡುಪಿ
ಪ್ರೊಪ್ರೈಟರ್: ಕೆ. ಗುಂಡು ನಾಯಕ್



Phone 66
Greetings from
SRI KRISHNA
JEWELLERY MART
Ready Made Jewellery Dept.
Commission Agents
TENKAPET, UDIPI, S. KANARA.



Propr.
U Raghavendra Krishna Bhat

Phone: 191 Tel: GOLDKING

ಸಂದರ್ಶಿಸಿರಿ:—

ತಾಜಾ ಬ್ಲೂ ಜಾಗರ್ ವಜ್ರಗಳಿಗೂ ಮತ್ತು ಅತ್ಯಾಧುನಿಕ ಫೇಶನಿನ ಚಿನ್ನಾಭರಣಗಳಿಗೂ
ಬೆಳ್ಳಿಯ ಉಡುಗೊರೆ ವಸ್ತುಗಳಿಗೂ ಪ್ರಖ್ಯಾತಿಯೊದ

ಎಸ್. ಎಲ್. ಶೇಟ್ ಡಯಮಂಡ್ ಹೌಸ್

ಮನೆಯ ನಿತ್ಯೋಪಯೋಗದ ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು
ಫೇನ್ಸಿ ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲ್ ಸೆಂಟರ್

ಮತ್ತು ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ

ಐಡಿಯಲ್ ಫೊಟೋ ಹೌಸ್

ಆಗ್ಫಾ ಕೋಡಕ್ ಮತ್ತು ಇಲ್‌ಫೋರ್ಡ್ ಇವುಗಳ ಡೀಲರ್ಸ್

ಕಾರ್ನಾಡ್ ಸದಾಶಿವರಾವ್ ರೋಡ್,

ಹಂಪನಕಟ್ಟಾ, ಮಂಗಳೂರು—1.

Prop:
S L. SHET

ಭಾರತದ ಭವ್ಯ ಸೌಭಾಗ್ಯ ಸಾಧನೆಗಾಗಿ—
ಸ್ವಾತಂತ್ರ್ಯ ರಕ್ಷಣೆಗಾಗಿ ಮುನ್ನಡೆದು ದುಡಿಯೋಣ—
ಎಂಬ ಸದಾಶಯದೊಡನೆ

ಪ್ರಜಾರಾಜ್ಯ ದಿನದ ಶುಭಾಶಯಗಳು!

ಅಲಂಕಾರ್ ಥಿಯೇಟರ್
ಎಸ್. ಆರ್. ಬಿಲ್ಡಿಂಗ್ಸ್

ಮತ್ತು

ಕಲ್ಪನಾ ಥಿಯೇಟರ್
ಉಪೇಂದ್ರ ಭಾಗ್

ಉಡುಪಿ

ಮನೋರಂಜನೆಗೆ ಉತ್ತಮ ಚಲಚ್ಚಿತ್ರ ಮಂದಿರಗಳು

ವ್ಯಾಲಕರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್,

ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ, ದ. ಕನ್ನಡ.

ಸ್ವಾಮಿ ದಯಾನಂದ ಸರಸ್ವತಿ

ಭಾರತದ ಸಾಮಾಜಿಕ ಸುಧಾರಣೆಯಲ್ಲಿ ದಯಾನಂದರ ಆರ್ಯ ಸಮಾಜದ ಕಾರ್ಯಭಾರವು ಗಮನೀಯ. ಇಂತಹ ಸುಧಾರಕರನ್ನು ವಿಷವಿಕ್ಕಿ ನಮ್ಮ ಸಮಾಜಿಕರೊಬ್ಬರೇ ಕೊಲ್ಲಿಸಿದರು. ಈ ಬಗೆಯ ಹೀನಕೃತ್ಯ ನಡೆಯದಂತೆ ಎಲ್ಲರೂ ಎಚ್ಚರಾಗಿರ ಬೇಕು.



ಅನುವಾದಕರು
ಶ್ರೀ ಎಸ್. ಎಂ. ಶೆಟ್ಟಿ,
ಶಿವಮುಂಜೆ ಪರಾರಿ, ಬೊಂಬಾಯಿ.

ಕಾಠಿಯಾವಾಡದ, ಮೋರವೀ ರಾಜ್ಯದಲ್ಲಿ ಟಂಕಾರಾ ಒಂದು ಸಣ್ಣ ಹಳ್ಳಿ. ಅಲ್ಲಿ ಅಂಬಾಶಂಕರ ಎಂಬ ಔಧಿಚ್ಯ ಬ್ರಾಹ್ಮಣರೊಬ್ಬರು ಇರುತ್ತಿದ್ದರು ೧೮೨೪ರಲ್ಲಿ ಇವರಿಗೆ ಪುತ್ರೋತ್ಸವ ನಾಯಿತು. ಈ ಬಾಲಕನಿಗೆ ಮೂಲಾ ಶಂಕರನೆಂದು ನಾಮಕರಣಗೈಯಲಾಯಿತು. ಶ್ರೀ ಅಂಬಾ ಶಂಕರರು ಮೋರವೀ ರಾಜ್ಯದ ಒಬ್ಬ ಸನ್ಮಾನೀಯ ರಾಜ್ಯಕರ್ಮಚಾರಿಯಾಗಿದ್ದರು—ತನ್ನ ಪುತ್ರನಿಗೆ ಎಲ್ಲಾ ವಿಧಿಗಳನ್ನವರು ವಿಧಿವತ್ತಾಗಿ ಮಾಡಿಸಿದರು. ಐದನೇ ಪ್ರಾಯದಲ್ಲಿ ಮೂಲಾ ಶಂಕರನಿಗೆ ಯಜ್ಞೋಪವೀತ ಧಾರಣೆಯಾಯ್ತು, ಅನಂತರ ಅವರ ಶಿಕ್ಷಣವು ಪ್ರಾರಂಭವಾಯ್ತು.

ಮೂಲಾಶಂಕರರು ಬಾಲ್ಯದಿಂದಲೂ ವಿರಕ್ತ ಸ್ವಭಾವದವರಿದ್ದರು. ಪಾರಮಾರ್ಥ ಸಿದ್ಧಿಯೇ ಅವರ ಉದ್ದೇಶವಾಗಿತ್ತು, ಅವರಿಗಿನ್ನೂ ಹದಿನಾಲ್ಕು ವರ್ಷ ನಡೆಯುತ್ತಿರುವಾಗಲೇ ಮಾತಾಪಿತರು ಅವರಿಗೆ ವಿವಾಹಗೈಯಲು ನಿಶ್ಚಯಿಸಿದರು. ಮದುವೆಗೆ ಇನ್ನೂ ಒಂದು ವಾರ ಇದೆ ಎಂದೆನ್ನುವಷ್ಟರಲ್ಲಿ ಮೂಲಾಶಂಕರರು ಮನೆಯಿಂದ ಮಾಯವಾದರು. ನರ್ಮದಾ ನದೀ ತೀರದಲ್ಲಿ ಶ್ರೀ ಪೂರ್ಣಾನಂದ ಸ್ವಾಮಿಯವರಿಂದ ಅವರು ಸನ್ಯಾಸ ದೀಕ್ಷೆಯನ್ನು ಪಡೆದರು. ಅಲ್ಲಿಯೇ ಅವರಿಗೆ ಶ್ರೀ ದಯಾನಂದ ಸರಸ್ವತಿ ಎಂಬ ನವೀನ ನಾಮಕರಣವಾಯ್ತು.

ತೀರ್ಥಯಾತ್ರೆಗಾಗಿ ಗುರುಗಳ ಆಶ್ರಮದಿಂದ ಹೊರಬಿದ್ದ ದಯಾನಂದರಿಗೆ ವೃಂದಾವನದಲ್ಲಿ, ಶ್ರೀ ವಿರಜಾನಂದರು ಭೇಟಿಯಾದರು. ಅವರಿಂದಲೇ ದಯಾನಂದ ಸರಸ್ವತಿಯವರು ವೇದ, ವ್ಯಾಕರಣ ಮೊದಲಾದುವುಗಳ ಶಿಕ್ಷಣ ಪಡೆದರು. ವಸ್ತುತಃ ಸ್ವಾಮಿ ವಿರಜಾನಂದರೇ ಅವರ ಶಿಕ್ಷಾಗುರುಗಳಾದರು. ಈ ಗುರುದೇವನ ಅಪ್ಪಣೆಯಂತೆ ಇವರು ವೈದಿಕ ಧರ್ಮಸ್ಥಾಪನೆಗೆ ಮುಂದಾದರು.

ಸನ್ ೧೮೬೭ರಲ್ಲಿ, ಹರಿದ್ವಾರದ ಕುಂಭದಲ್ಲಿ ಮೊತ್ತ ಮೊದಲಿಗೆ ದಯಾನಂದ ಸರಸ್ವತಿಯವರು ತನ್ನ ಮತದ ಪ್ರಚಾರಗೈದರು. ತನ್ನದೇ ಆದ ಶೈಲಿಯಲ್ಲಿ ಅವರು ವೇದಗಳಿಗೆ ಭಾಷ್ಯವನ್ನು ಬರೆದರು. ಸರ್ವ ಪ್ರಥಮವಾಗಿ ಇವರು ಮುಂಬೈ ಮತ್ತು ಲಾಹೋರದಲ್ಲಿ ಆರ್ಯ ಸಮಾಜದ ಸ್ಥಾಪನೆಗೈದರು.

ಸ್ವಾಮಿ ದಯಾನಂದರು 'ಥಿಯಾಸೋಫಿಸ್ಟ' ಮತ ಪ್ರಚಾರಕರೊಂದಿಗೆ ಸೇರಿ, ಸಮಾಜ ಸುಧಾರಣೆಯ ಕಾರ್ಯವನ್ನು ಮೊದಲು ಮಾಡಬಯಸಿದ್ದರು. ಆದರೆ "ಥಿಯಾಸೋಫಿಸ್ಟ" ಮತದವರು ವೇದವನ್ನು ಈಶ್ವರೀಯ ವಾಣಿ, ಮತ್ತು ಪರಮಾನ್ಯ ಎಂದು ಒಪ್ಪಲು ಸಿದ್ಧರಾಗದಿದ್ದುದರಿಂದ, ಇವರು ಬೇರೆಯಾಗಿಯೇ ನಿಂತು ಆರ್ಯ ಸಮಾಜದ ಸ್ಥಾಪನೆಗೈದರು.

ಸ್ವಾಮಿ ದಯಾನಂದರಲ್ಲಿ ಅದ್ಭುತ ಪ್ರತಿಭೆಯಿತ್ತು. ಅವರಲ್ಲಿ ಅನರ್ಘನೀಯ ತ್ಯಾಗವಿತ್ತು, ವಾಣಿಯಲ್ಲಿ ಅದ್ಭುತ ಶಕ್ತಿಯಿತ್ತು. ಅವರ ಸಂಯಮ, ತ್ಯಾಗ, ಸತ್ವದ ಅದ್ಭುತ ಪ್ರಭಾವ ಜನತೆಯ ಮೇಲೆ ಆಯ್ತು. ಅವರು ಬಹಳೇ ಸ್ಪಷ್ಟ ಅಂತೆಯೇ ನಿರ್ಭೀಕ ವಕ್ತಾರಾಗಿದ್ದರು. ವೇದಗಳ ಮೇಲೆ ಹಾಗೂ ಭಾರತೀಯ ಪ್ರಾಚೀನ ಸಂಸ್ಕೃತಿಯ ಮೇಲೆ ಅವರಿಗೆ ಅಗಾಧ ಭಕ್ತಿಯಿತ್ತು. ಹಿಂದೂ ಧರ್ಮ ರಕ್ಷೆಗಾಗಿ ಅವರು ಅನನ್ಯ ಕಾರ್ಯಗೈದರು.

ಅನುಚಿತ ಆಚರಣೆಯನ್ನು ನಿಂದಿಸುವುದರಲ್ಲಿ ಅವರು ಎಲ್ಲರಿಗಿಂತಲೂ ಮುಂದಿರುತ್ತಿದ್ದರು. ಜೋಧಪುರದ ಮಹಾರಾಜರ ಅಸಂಯಮಿತ ಆಚರಣೆಯನ್ನವರು ಬಹಿರಂಗವಾಗಿ ನಿಂದಿಸಿದರು; ಸಿಟ್ಟುಗೊಂಡ ಮಹಾರಾಜರು ಮೋಸದಿಂದ ತನ್ನ ದಾಸಿಯ ಕೈಯಲ್ಲಿ ಅವರಿಗೆ ವಿಷವನ್ನು ಕೊಡಿಸಿ ಕೊಲ್ಲಿಸಿದರು.

(ಮೂಲ: ಠಾಕೂರ್ ಸುದರ್ಶನ ಸಿಂಹ)

ಪ್ರಜಾರಾಜ್ಯೋತ್ಸವದ
ಶುಭಾಶಯಗಳು—

ರೋಯಲ್ ಮಹಾಲ್
ಉಡುಪಿ

ಮೇಲ್ತರಗತಿಯ
ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್,
ವ್ಯಾಪಾರಿಗಳು.

ನಂಬಿಕೆಗೆ ಅರ್ಹತೆ
ಉತ್ಕೃಷ್ಟತಮ ಬೀಡಿಗಳಲ್ಲಿ
ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲಾ
ಎಸ್. ಆರ್.
ಬೀಡಿಗಳಲ್ಲಿ ಇರುವವು ಎಂದು ಖಚಿತವಾಗಿ
ಹೇಳುತ್ತೇವೆ.
★
ಎಲ್ಲಾ ಕಡೆಗಳಲ್ಲಿಯೂ ದೊರಕುತ್ತವೆ.
S. R. Beedi Works UDIPI S.K.

ಸರ್ವರಿಗೂ ಪ್ರಜಾಪ್ರಭುತ್ವ ದಿನದ ಶುಭಾಶಯಗಳು

Tel: 'BLUEYAGAR'. Phone: 374.

ಚಿನ್ನ ಮುತ್ತು ವಜ್ರಗಳ ಆಧುನಿಕ ತವರುಮನೆ

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್,

ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು
(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)
ಮಂಗಳೂರು

ಸ್ಥಾಪನೆ: 1919]
[ಮಾಲಿಕ ಕೆ. ಕೆ. ಆರ್. ಶೇಟ್.

Telegrams: "FOOD" Telephone: 12.

THE SOUTH KANARA CENTRAL CO-OPERATIVE WHOLESALE STORES LTD.,

POST BOX No. 124,

"SAHAKARI MAHAL",

MANGALORE-1.

DEALERS IN

RICE, WHEAT & WHEAT PRODUCTS, MILL CLOTH, HANDLOOM CLOTH, GRAINS & PROVISIONS ETC. OIL AND OIL CAKES, CATTLE FEED, MANURES AND INSECTICIDES, CONSUMERS GOODS, KEROSENE, IRON & STEEL etc.

WholesaleCloth Depot at

MARUTHI VITHIKA, UDIPI—

Telephone: **172.**

We ensure supply of quality goods at reasonable prices.

K. B Jinaraja Hegde, *B. Sc., LL. B.,* Vice-President.

Sri S Narsapaya, *B. A., B. L., M. L. C.,* President.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ: ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್. ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಜಾಪ್ರಭುತ್ವ ದಿನದ ಶುಭಾಶಯಗಳು.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.,

(ಶೆಡ್ಯೂಲ್ಡ್ ಬ್ಯಾಂಕ್)

ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ಮಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣೆ ಮಾಡಿರಿ;

ಬಡ್ಡಿ ಸೇಕಡ 5ರಂತೆ;

ರೂ. 87-00, 3ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು

ಕರೆ, ಚಿಕ್ಕ ಮಾಯಿದೆ, ನಿರಖುಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಶೇಕಡ **5½**ರ ವರೆಗೆ

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಬಡ್ಡಿ ಶೇಕಡ **3**ರಂತೆ.

ರೂ. **1.50** ಕೋಟಿಗೂ ಮಿಕ್ಕಿದ ಠೇವಣಾತಿಗಳು.

THE PANGAL NAYAK BANK LIMITED

Estd: 1920

HEAD OFFICE: **UDIPI,** S. KANARA.

There is no Rival to

MYSORE SANDAL SOAP

FOR SKIN CARE

THE SANDAL OIL IN THIS LUXURY TOILET SOAP

Keeps your SKIN HEALTHY

And

gives it a YOUTHFUL LOOK

THE SOAP FOR THE DISCRIMINATING

GOVERNMENT SOAP FACTORY

BANGALORE - 12

NAVAYUGA 23 & 30-1-1964

Regd. No. B. G. 576

LICENCE NO. 31
Lincensed to Post without Prepayment

ನಿಮ್ಮ ಉಳಿತಾಯದ ಪ್ರತಿಯೊಂದು ಕಾಸೂ

ತಾಯಿನೆಲವನ್ನು ಆಕ್ರಮಣದಿಂದ ಕಾಪಾಡಲು ಕಾದುವ ಯೋಧರಲ್ಲಿ ಹೊಸ ಕೆಚ್ಚನ್ನು ಕೆರಳಿಸಬಲ್ಲುದು.

ನಿಮ್ಮ ಉಳಿತಾಯ ರಾಷ್ಟ್ರದ ರಕ್ಷಣೆಯ ಅಡಿಪಾಯ

ರಿಜಿಸ್ಟರ್ಡ್ ಆಫೀಸು: **ಮಣಿಪಾಲ**

Edited, Printed & Published by K. H. Shetty at the Navayuga Press, Udipi, S India.

THE

VOL. 43 No. 23 ಸಂಪುಟ ೪೩ ಸಂಚಿಕೆ ೨೩

NAVAYUGA—Nationalist Weekly ಉಡುಪಿ 6-2-1964 ಗುರುವಾರ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ



ಕೆ. ಹನುಮಂತಯ್ಯ

ಮೈಸೂರಿನ ಮುಖ್ಯ ಮಂತ್ರಿಯಾಗಿದ್ದ, ವಿಧಾನ ಸೌಧದಂತಹ ಭವ್ಯ ಸರಕಾರಿ ಭವನ ನಿರ್ಮಾಣದ ಪ್ರಕರಣದಿಂದಾಗಿ ಅವಿಶ್ವಾಸ ಪಾತ್ರರಾದ ಕೆಂಗಲ್ ಹನುಮಂತಯ್ಯ ಎದೆಗಾರಿಕೆಯುಳ್ಳ ವ್ಯಕ್ತಿ. ತನಗೆ ಕಂಡದ್ದನ್ನು ಮರೆಮಾಚದೆ ಸಾರ್ವಜನಿಕರ ಮುಂದೆ ಇಡುವುದು ಇವರ ಹುಟ್ಟುಗುಣ. ಬಹುಶಃ ಈ ಗುಣದಿಂದಾಗಿಯೇ ಹನುಮಂತಯ್ಯ ಇನ್ನೂ ಹೀಗೆಯೇ ಉಳಿದಿದ್ದಾರೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಲ್ಲಿ ಕೆಲವರನ್ನಾದರೂ ನೇರ ಚುನಾವಣೆಯಿಂದ ಆಯ್ದುಕೊಳ್ಳುವುದು ಪಕ್ಷದ ಸಂಘಟನೆಯ ದೃಷ್ಟಿಯಿಂದ ಆವಶ್ಯಕವೆಂದು ಇವರು ಮುಂದಿಟ್ಟ ಸೂಚನೆಯು ಬಹಳ ಪ್ರಯಾಸದಿಂದಲೇ ಮಾನ್ಯವಾಯಿತು. ಆದರೆ, ಈ ಬಾರಿ ಭುವನೇಶ್ವರದಲ್ಲಿ ನಡೆದ ಈ ಚುನಾವಣೆಯಲ್ಲಿ ಶ್ರೀಯುತರು ಸ್ಪರ್ಧಿಸಿದವರಲ್ಲಿ ಅತ್ಯಲ್ಪ ಮತಗಳನ್ನು ಪಡೆದು ಸೋಲಬೇಕಾಯಿತು. ಸ್ವಯಂ ಪ್ರಧಾನ ಮಂತ್ರಿ ನೆಹರೂರವರು ಇವರ ಹುರಿಯಾಳುತನವನ್ನು ಸಮರ್ಥಿಸಿದರೂ ಇವರು ಸೋಲುವಂತಾದುದು ವಿಸ್ಮಯವೆನ್ನಲೇ ಬೇಕು.

ಸ್ಪಷ್ಟವಾದಿತನಕ್ಕೆ, ನಿರ್ದಾಕ್ಷಿಣ್ಯ ಟೀಕೆ ಟಿಪ್ಪಣಿಗಳಿಗೆ ಹೆಸರಾದ ಹನುಮಂತಯ್ಯನವರು ಪ್ರಧಾನ ಮಂತ್ರಿ ನೆಹರು ನಿವೃತ್ತರಾಗುವ ಕಾಲವೀಗ ಸನ್ನಿಹಿತವಾಗಿದೆಯೆಂದು ಹೊಸ ಸುದ್ದಿಗೆ ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ. ನೆಹರೂರವರ ಮಂತ್ರಿ ಮಂಡಳದ ಸದಸ್ಯರಿಗೆ ಹೊಸ ವಿಚಾರಧಾರೆಯ ಪರಿಚಯವಿಲ್ಲವೆಂದೂ ಅವರಿಂದ ಸ್ವಪ್ರತಿಷ್ಠೆ ಹೆಚ್ಚಿಸ ಬಯಸುವವರು ಮಾತ್ರ ಜವಹರ ನಿವೃತ್ತರಾಗಬಾರದೆಂದು ಬಯಸುತ್ತಾರೆ ಎಂದೂ ಎನ್ನುತ್ತಾರೆ. ಇಂತಹ ಅಭಿಪ್ರಾಯ ಪ್ರಕಟವಾಗುವುದನ್ನು ಒಪ್ಪುವವರೂ ಒಪ್ಪದಿರುವವರೂ ಇದ್ದಾರೆ. ಆದರೆ, ಕಾರ್ಯಕುಶಲತೆಗೆ ಮತ್ತು ಚಾಣಾಕ್ಷತನಕ್ಕೆ ಹೆಸರಾದ ಹನುಮಂತಯ್ಯ ಇದಕ್ಕೂ ಮುಂದುವರಿದು, ಶಾಸ್ತ್ರಿ, ದೇಸಾಯಿ, ಜಗಜ್ಜೀವನ ರಾಮ ಮೊದಲಾದವರು ಯಶಸ್ವಿ ಪ್ರಧಾನ ಮಂತ್ರಿಯಾಗಬಲ್ಲರು ಎಂದು ಭವಿಷ್ಯ ನುಡಿದಿದ್ದಾರೆ.

ಮಾಜಿ ಮಂತ್ರಿ ಸುಬ್ರಹ್ಮಣ್ಯಂ, ಮಾಜಿ ಮೈಸೂರಿನ ಹುಲಿ ಸಾಹುಕಾರ್ ಚೆನ್ನಯ್ಯ ಮೊದಲಾದ ಕಾಂಗ್ರೆಸ್ ನಾಯಕರು ಕಾಂಗ್ರೆಸ್ಸಿನ ಲೋಪದೋಷಗಳನ್ನು ಕಳೆಯಲು ಹೊಸ ವಿರೋಧಿ ಪಕ್ಷವನ್ನು ಕಟ್ಟುವ ಕನಸನ್ನು ಮೆಲುಕು ಹಾಕುತ್ತಿರುವಾಗ ಹನುಮಂತಯ್ಯನವರ ನಿಲುವು ಏನೆಂದು ಸಂದೇಹಕ್ಕೆ ಆಸ್ಪದ ನೀಡಬಹುದು. ಆದರೆ, ಕಾಂಗ್ರೆಸ್ ತತ್ವಗಳಲ್ಲಿ ನಿಷ್ಠೆಯಿರುವ ಶ್ರೀಯುತರು ಕಾಂಗ್ರೆಸ್ಸಿನಲ್ಲಿಯೇ ಇದ್ದು ಅದರ ಕೊಳೆಯನ್ನು ತೊಳೆಯುವ ಸಾಹಸ ಮಾಡುವರು ಎಂದು ಕಾಂಗ್ರೆಸಿಗರು ನಂಬಿದ್ದಾರೆ. ಹನುಮಂತಯ್ಯನವರ ರಚನಾತ್ಮಕ ಸಲಹೆಗಳಿಂದ ರಾಜ್ಯವೂ ಕೇಂದ್ರವೂ ಲಾಭಗಳಿಸಬೇಕು. ಆದರೆ, ಅಂತಹ ಕಾಲ ಎಂದು ಬಂದೀತು ಹೇಳಲಾಗುವುದಿಲ್ಲ.

ಡಾ| ಪಿ. ಆರ್. ನಾಯಕ್

ಡಾ| ಪಿ. ರಾಘವೇಂದ್ರ ನಾಯ್ಕರು ಎಲ್ಲರಿಗೂ ಸಿಲುಕದ ಕೆಲವೇ ಮಂದಿ ಡಾಕ್ಟರರಲ್ಲಿ ಒಬ್ಬರು. ಪಾಂಗಾಳದಲ್ಲಿ ಜನಿಸಿದ ನಾಯಕರು ವೈದ್ಯಕೀಯವನ್ನು ಅಭ್ಯಸಿಸಿ, ಉಡುಪಿಯಲ್ಲಿ ಚಿಕಿತ್ಸಾಲಯವನ್ನು ತೆರೆದು ವರ್ಷಗಳೇ ಹಲವು ಸಂದುವು. ಸದಾ ನಗುನಗುತ್ತಲೇ ಇರುವ ನಾಯಕರು ತಮ್ಮ ನಗೆಯಿಂದಲೇ ರೋಗಿಯ ರೋಗದ ಬಹಳಂಶವನ್ನು ದೂರ ಮಾಡುತ್ತಾರೆ. ಇವರ ಮಾತು ಹಾಸ್ಯರಸದಿಂದ ತುಂಬಿರುತ್ತದೆ. ಇವರು ನೀಡುವ ಭಾಷಣವಾದರೂ ಅತೀವ ಹ್ರಸ್ವ. ಆದರೆ, ಅಷ್ಟೇ ಮಧುರ. ಮೃದು ಹೃದಯದ ಡಾ| ನಾಯಕರು ಎಲ್ಲರ ಹೃದಯವನ್ನೂ ಅರಿಯಬಲ್ಲವರು, ಉದಾರಹೃದಯರು, ಉದಾರ ಚರಿತರು.

ಉಡುಪಿಯ ಸರಕಾರಿ ಆಸ್ಪತ್ರೆಯಲ್ಲಿ ಗೌರವ ಮೆಡಿಕಲ್ ಸರ್ಜನರಾಗಿ ಇವರು ನಾಡಿಗೆ ನೀಡಿದ ಸೇವೆ ಅತ್ಯಂತ ಪ್ರಶಂಸನೀಯ. ಇವರ ನಂತರ ಹಲವಾರು ಗೌರವ ಸರ್ಜನರು ಬಂದರು, ಬಂದಂತೆಯೇ ಹೋದರು. ಆದರೆ, ಡಾ| ನಾಯಕರು ಇಂದಿಗೂ ತಮ್ಮ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಜನತಾ ಸೇವೆಯಲ್ಲಿ ತಮ್ಮ ಕೆಲವು ಸಮಯವನ್ನು ಕೇವಲ ಸೇವಾ ಭಾವನೆಯಿಂದಲೇ ಇವರು ವಿನಿಯೋಗಿಸುತ್ತ ಬರುತ್ತಿದ್ದಾರೆ. ಇದರಿಂದಾಗಿಯೇ ಡಾ| ನಾಯಕರು ಇಡಿಯ ತಾಲೂಕಿನಲ್ಲಿ ಹೆಸರುವಾಸಿಯಾಗಿದ್ದಾರೆ, ಮನೆ ಮಾತಾಗಿದ್ದಾರೆ. ಉಡುಪಿಯ ಪಾಂಗಾಳ ನಾಯಕ್ ಬ್ಯಾಂಕಿನ ಡೈರೆಕ್ಟರರಲ್ಲಿ ಡಾ| ನಾಯಕರೂ ಒಬ್ಬರು. ಬ್ಯಾಂಕಿನ ಅಭಿವೃದ್ಧಿ ಕಾರ್ಯದಲ್ಲಿ ದುಡಿದವರಲ್ಲಿ ಇವರೂ ಒಬ್ಬರಾಗಿದ್ದಾರೆ. ಉಡುಪಿಯ ಶ್ರೀ ಲಕ್ಷ್ಮೀವೆಂಕಟರಮಣ ದೇವಾಲಯದ ಮ್ಯಾನೇಜಿಂಗ್ ಟ್ರಸ್ಟಿಯಾಗಿ ಅವರು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕಲಾಪಗಳಲ್ಲಿಯೂ ಆಸಕ್ತಿಯನ್ನು ಪ್ರದರ್ಶಿಸುತ್ತಿದ್ದಾರೆ. ಡಾ| ನಾಯಕರು ರೋಟರಿ ಕ್ಲಬ್ಬಿನ ಸದಸ್ಯರು. ರೋಟರಿ ತತ್ವಗಳನ್ನು ಅರಿತು ಅದನ್ನು ಅನುಷ್ಠಾನಕ್ಕೆ ತರುವವರು.

ಡಾ| ರಾಘವೇಂದ್ರ ನಾಯಕರು ರಾಘವನ ನೆನಪು ತರುತ್ತಾರೆ. ಸರಳ ವ್ಯಕ್ತಿತ್ವ, ಕರ್ತವ್ಯ ಪಾಲನೆಯಲ್ಲಿ ಆಸಕ್ತಿ, ದೃಢ ಆಸಕ್ತಿ, ನ್ಯಾಯವಾದ ನಿಲುವು, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅಭಿರುಚಿ—ಡಾ| ನಾಯಕರಲ್ಲಿದೆ. ಯಾವ ಗಂಪು ಗಾರಿಕೆಯೂ ಇಲ್ಲದೆ ಎಲ್ಲರಿಗೂ ಬೇಕಾದವರಾಗಿರುವ ಕೆಲವೇ ಜನರ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಇವರಿಂದ ಉಡುಪಿ ಹಾಗೂ ಆಸುಪಾಸಿನ ಜನತೆ ಇನ್ನೂ ಉಪಕೃತವಾಗಬೇಕು.

ಶ್ರೀಮತಿ ಜಲಜಾಕ್ಷಮ್ಮ

ಉಡುಪಿಯ ವಿಖ್ಯಾತ ವಕೀಲ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಧರ್ಮಪತ್ನಿ ಶ್ರೀಮತಿ ಎ. ಜಲಜಾಕ್ಷಮ್ಮನವರು ಮೊದಲಿನಿಂದಲೂ ತಮ್ಮ ಪತಿಯೊಂದಿಗೆ ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಶ್ರದ್ಧೆ ತೋರಿಸುತ್ತಿದ್ದ ಶ್ರೀಮತಿಯವರು ಉಡುಪಿಯ ಮಹಿಳಾ ಸಮಾಜದ ಅಧ್ಯಕ್ಷೆಯಾಗಿದ್ದಾರೆ. ಅಜ್ಜರಕಾಡಿನಲ್ಲಿ ಸಮಾಜದ ಮಂದಿರಕ್ಕೆ ಒಂದು ಸ್ಥಳವನ್ನು ದಾನವಾಗಿ ಇವರು ನೀಡಿ, ಮಂದಿರದ ಕೋಣೆಯನ್ನು ಕಟ್ಟಿಸಿದ್ದಾರೆ. ಇದಕ್ಕಾಗಿ ತಾವೇ ಸ್ವತಃ ರೂ ... ಹಣವನ್ನು ದಾನವಾಗಿ ನೀಡಿ ಉಳಿದುದನ್ನು ಸಾರ್ವಜನಿಕರಿಂದ ಸಹಾಯರೂಪದಲ್ಲಿ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾರೆ. ಉಡುಪಿ ತಾಲೂಕಿಗೆ ಸೇರಿದ ಬ್ರಹ್ಮಾವರ ಮತದಾರ ಕ್ಷೇತ್ರದಿಂದ ತಾಲೂಕು ಅಭಿವೃದ್ಧಿ ಮಂಡಳದ ಸದಸ್ಯರಾಗಿ ಆಯ್ಕೆಗೊಂಡ ಜಲಜಾಕ್ಷಮ್ಮನವರು ತಮ್ಮ ಕ್ಷೇತ್ರದ ಹಾಗೂ ಇಡಿಯ ತಾಲೂಕಿನ ಹಿತಚಿಂತನೆಯನ್ನು ಮಾಡುತ್ತಿದ್ದಾರೆ. ಸಾರ್ವಜನಿಕ ಸೇವಾಸಕ್ತರಾದ ತಮ್ಮ ಪತಿಯನ್ನು ಬೆಂಬಲಿಸುತ್ತ ಅವರ ಸೇವಾಕಾರ್ಯದಲ್ಲಿಯೂ ತಾನೂ ನೆರವೀಯುತ್ತಿದ್ದಾರೆ.

ಶ್ರೀಮತಿ ಜಲಜಾಕ್ಷಮ್ಮನವರು ಕಾರ್ಯ ಕಳೆದ ೧೯೬೨ರ ಅಕ್ಟೋಬರದಲ್ಲಿ ನಮ್ಮ ಪವಿತ್ರ ಭೂಮಿಯ ಮೇಲೆ ಶತ್ರು ಚೀನೀಯರು ಆಕ್ರಮಣ ಮಾಡಿದಾಗ, ದೇಶವನ್ನುಳಿಸಬೇಕಾಗಿ ಒಂದು ಬನ್ನವನ್ನು ದೂರೀಕರಿಸಲು ಚಿನ್ನ ಬೇಕಾದಾಗ, ಇವರು ತಮ್ಮ ಸಹಚರಿಯರೊಂದಿಗೆ ಅಲ್ಲಲ್ಲಿ ಸಂಚರಿಸಿ ಚಿನ್ನ ಸಂಗ್ರಹ ಮಾಡತೊಡಗಿದರು. ಹೀಗೆ ಸುಮಾರು ರೂ. ೧೦

(೧೦ನೇ ಪುಟ ನೋಡಿರಿ)

ವಾರದ ಕಥೆ—

ಅವಳೇ ನನ್ನ ಮಗಳು!

ದಿನೇಶ್ 10ನೇ ಸ್ಟ್ಯಾಂಡರ್ಡ್‌ನಲ್ಲಿ ಕಲಿಯುತ್ತಾ ಇದ್ದ. ಪ್ರತಿಯೊಂದು ವಿಷಯದಲ್ಲೂ ಆತ ಬಹಳ ಚುರುಕು. ಹೈಸ್ಕೂಲಿಗೆ ಸೇರಿ ಆತ ೬ ವರ್ಷಗಳು ಕಳೆದಿದ್ದುವು. ಕಳೆದ ೬ ವರ್ಷಗಳಿಂದಲೂ ಅವನೇ ಎಲ್ಲಾ ವಿಷಯಗಳಲ್ಲೂ ಪ್ರಥಮ ಸ್ಥಾನವನ್ನು ಗಳಿಸಿ ಬಹುಮಾನ ಪಡೆದಿದ್ದ. ಆ ಸಮಯದಲ್ಲಿ ಶಾಲೆಯಲ್ಲಿ ಹುಡುಗರಿಗೂ, ಹುಡುಗಿಯರಿಗೂ ಕಲಿಯುವುದರಲ್ಲಿ ಸ್ಪರ್ಧೆಯೇ ನಡೆದಿತ್ತು. ಹುಡುಗರ ಮಟ್ಟಕ್ಕೆ ಬರಬೇಕೆಂದು ಹುಡುಗಿಯರೂ, ಹುಡುಗಿಯರಿಂದ ತಾವು ಮೇಲಿರಬೇಕೆಂದು ಹುಡುಗರೂ ಭಗೀರಥ ಪ್ರಯತ್ನದಲ್ಲಿದ್ದರು. ಹುಡುಗರ ಪಾರ್ಟಿಗೆ ದಿನೇಶನೇ ಜೀವಕಳೆಯಾಗಿದ್ದ. ಅಂತೆಯೇ ಹುಡುಗಿಯರಲ್ಲಿ ಭಾರತಿ, ತುಂಬ ಪ್ರಯಾಸಪಟ್ಟು ದಿನೇಶನಿಗೆ ಸರಿಸಾಟಿಯೆನಿಸಿದ್ದಳು. ಹೀಗಾಗಿ ಸ್ಪರ್ಧೆಯು ಕ್ರಮೇಣ, ಹುಡುಗರು ಮತ್ತು ಹುಡುಗಿಯರಲ್ಲಿರದೆ ದಿನೇಶ್ ಮತ್ತು ಭಾರತಿಯಲ್ಲಿ ಮಾತ್ರ ಮುಂದುವರಿದಿತ್ತು. ಒಬ್ಬರೂ ಸೋಲನ್ನೊಪ್ಪಿಕೊಳ್ಳಲು ಸಿದ್ಧರಿರಲಿಲ್ಲ.

ದಿನೇಶ್ ಯಾವಾಗಲೂ ಶಾಲೆಗೆ ಬರುವುದು ಸೈಕಲಿನಲ್ಲೇ. ಅವನ ಮನೆ ಶಾಲೆಯಿಂದ 5 ಮೈಲುಗಳ ದೂರವಲ್ಲಿತ್ತು. ಭಾರತಿಯ ಮನೆಯೂ, ದಿನೇಶನ ಮನೆಯ ಕಡೆಗೇ ಶಾಲೆಯಿಂದ ಸ್ವಲ್ಪ ದೂರದಲ್ಲಿತ್ತು. ಹೀಗಾಗಿ ಬೆಳಗ್ಗೆ ಶಾಲೆಗೆ ಯಾವಾಗಲೂ, ಸಂಜೆ ಶಾಲೆಯಿಂದ ಮನೆಗೆ ಹಿಂದಿರುಗುವಾಗಲೂ ಅವರಿಬ್ಬರ ಭೇಟಿ ಆಗುತ್ತಿತ್ತು. ಒಬ್ಬರೂ ಮಾತಾಡುತ್ತಿರಲಿಲ್ಲ.

ಯಾವುದೋ ಕಾರಣದಿಂದಾಗಿ ಅಂದು ಶಾಲೆಯಿಂದ ಹೊರಡುವುದು ಸ್ವಲ್ಪ ತಡವಾಯಿತು. ದಿನೇಶನಿಗೆ ಮಾರ್ಗ ಸರಿಯಾಗಿ ಕಾಣುತ್ತಿರಲಿಲ್ಲವಾದುದರಿಂದ ದಿನೇಶ್ ಡೈನಮೋ ಹಾಕಿದ್ದ. ತುಂಬಾ ಹೊತ್ತಾದ ಕಾರಣ ಬೇಗನೇ ಮನೆ ಸೇರ ಬಯಸಿದ ದಿನೇಶ್ ಸ್ಪೀಡಿನಿಂದಲೇ ತುಳಿಯುತ್ತಿದ್ದ ಸೈಕಲನ್ನು. ಚಿಕ್ಕ ಟರ್ನ್ ಒಂದು ಬಂದಾಗ, ದಿನೇಶ್ 2—3 ಬಾರಿ ಬೆಲ್ ಹೊಡೆದ. ಸ್ಪೀಡಿನಿಂದಲೇ ಮುಂದುವರಿದ. ಆಗಲೇ ಒಬ್ಬಳು ಹುಡುಗಿ ಎಡ ಬದಿಯಿಂದ [illegible] ದಾಟಲೆಳಸಿದಳು. ದಿನೇಶ್, ಓಡುತ್ತಿದ್ದ ಸೈಕಲಿಗೆ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಬ್ರೇಕ್ ಹಾಕಿದ. ಆದರೆ ಸ್ಪೀಡಿನಲ್ಲಿದ್ದ ಸೈಕಲ್ ಕೂಡಲೇ ನಿಲ್ಲಲು ಕೇಳಲಿಲ್ಲ. ಅಡ್ಡ ದಾಟುತ್ತಿದ್ದ ಹುಡುಗಿಯ ಮೈಮೇಲೆ ಸೈಕಲ್ ಹಾಯ್ದೇ ಬಿಟ್ಟಿತು. ದಿನೇಶ್ ಹಲ್ಲು ಮುಡಿದು ಕೆಳಗೆ ಬಿದ್ದ. ಸೈಕಲ್ ಹುಡುಗಿಯ ಮೈಮೇಲೆ ಬಿದ್ದಿತು. ಅವಳು ಅರಚುತ್ತಿದ್ದಳು. ದಿನೇಶ್ ತನಗಾದ ಪೆಟ್ಟನ್ನು ಲೆಕ್ಕಿಸದೆ, ಎದ್ದು ಓಡಿ ಬಂದು, ಹುಡುಗಿಯ ಮೇಲಿಂದ ಸೈಕಲ್ ತೆಗೆದು ಸ್ಟ್ಯಾಂಡ್ ಹಾಕಿ ನಿಲ್ಲಿಸಿದ. ಅವಳು ಮೂರ್ಛೆ ತಪ್ಪಿದ್ದಳು. ಅವಳನ್ನೆತ್ತಿ ಮಾರ್ಗದ ಬದಿಗೆ ಕೊಂಡೊಯ್ದು, ತನ್ನ ತೊಡೆಯ ಮೇಲೆ ಮಲಗಿಸಿ ಗಾಳಿ ಹಾಕಲಾರಂಭಿಸಿದ ದಿನೇಶ್.

ಅಸ್ಪಷ್ಟವಾದ ಮಬ್ಬು ಬೆಳಕಿನಲ್ಲಿ ಹುಡುಗಿಯ ಮುಖ ಸ್ವಲ್ಪ ಸ್ವಲ್ಪ ಕಾಣುತ್ತಿತ್ತು. ಅದರಿಂದಲೇ ದಿನೇಶ್ ಅವಳನ್ನು ಗುರುತಿಸಿದ. ಅವಳು ಬೇರೆ ಯಾರೂ ಆಗಿರದೆ ಭಾರತಿಯೇ ಆಗಿದ್ದಳು. ದಿನೇಶ್‌ನಿಗೊಮ್ಮೆ ಚೇಳು ಕುಟುಕಿದಂತಾಯಿತು. ಆದರೆ ಅವಳನ್ನಲ್ಲಿಯೇ ಬಿಟ್ಟು ಹೋಗುವುದು ದಿನೇಶನ ಕೋಮಲ ಮನಸ್ಸಿಗೆ ಸರಿ ಬರಲಿಲ್ಲ. ಹೇಗೂ ಇರಲಿ, ಎಂದುಕೊಂಡ, ಅವಳ ಮುಖದ ಮೇಲೆ ಸ್ವಲ್ಪ ನೀರು ಚಿಮುಕಿಸಿ ಅವಳ ಶುಶ್ರೂಷೆ ಮಾಡಲಾರಂಭಿಸಿದ.

ಭಾರತಿಗೆ ವಿಶೇಷ ಪೆಟ್ಟೇನೂ ಆಗಿರಲಿಲ್ಲ. ಹೆದರಿ ಮೂರ್ಛೆ ಹೋಗಿದ್ದಳಷ್ಟೇ! ಸ್ವಲ್ಪ ಹೊತ್ತಿನ ನಂತರ ಕಣ್ಣು ತೆರೆದಾಗ ಮಾತ್ರ, ತಾನು ಯಾರ ತೊಡೆಯ ಮೇಲೋ ಮಲಗಿರುವುದು ಅವಳಿಗೆ ಭಾಸವಾಯ್ತು. ಕೂಡಲೇ ಸ್ಪ್ರಿಂಗಿನಂತೆ ಮೇಲಕ್ಕೆ ನೆಗೆದಳು! ಭಾರತಿ!

"ಭಾರತಿ ..." ದಿನೇಶನೇ ಮೆಲ್ಲಗೆ ಕೇಳಿದ. "ತುಂಬ ಪೆಟ್ಟಾಯಿತೇ?" ಭಾರತಿಗೆ ಸ್ವರದ ಪರಿಚಯ ಹತ್ತಿತ್ತು. "ಓಹೋ...ದಿನೇಶ್....ನೀನು!" ಭಾರತಿ ಸಂಕೋಚದಿಂದ ತಲೆತಗ್ಗಿಸಿದಳು.

"ಭಾರತಿ, ಸಂಕೋಚ ಪಡಬೇಡ... ತುಂಬ ಪೆಟ್ಟಾಯಿತೇ?"

"ಇಲ್ಲ ದಿನೇಶ್...ತುಂಬ ಹೆದರಿ ಬಿಟ್ಟೆ ಅಷ್ಟೆ" ಭಾರತಿ ಉತ್ತರಿಸಿದಳು.

"ಕ್ಷಮಿಸು ಭಾರತಿ,....ತುಂಬ ವೇಗದಿಂದ ಬರುತ್ತಾ ಇದ್ದೆ....ನೀನು ಥಕ್ಕನೆ ಅಡ್ಡ ದಾಟುವಾಗ ಬ್ರೇಕ್ ಹಾಕಿದರೂ ಸೈಕಲು ನಿಲ್ಲಲಿಲ್ಲ....ನಿನಗೆ....ತುಂಬ ಪೆಟ್ಟಾಯಿತೇನೋ?"

"ಇಲ್ಲ ದಿನೇಶ್, ವಿಶೇಷ ಪೆಟ್ಟೇನೂ ಆಗಲಿಲ್ಲ. ಮಾರ್ಗದಲ್ಲಿ ಅಡ್ಡ ದಾಟಿದುದು ನನ್ನದೇ ತಪ್ಪು! ನೀನೇನೂ ನೊಂದುಕೊಳ್ಳಬೇಡ, ದಿನೇಶ್!"

"ನಿನಗೇನೂ ಬೇಜಾರಿಲ್ಲತಾನೇ? ನಾನೇನೇನೂ—ಬೇಕೆಂದು ಹಾಯಿಸಿದ್ದಲ್ಲ!" "ದಿನೇಶ್ ಅನುಮಾನಿಸುತ್ತಲೇ ಕೇಳಿದ.

"ನಿನ್ನ ತಪ್ಪೇ ಇಲ್ಲದಾಗ ಬೇಜಾರೆಲ್ಲಿಂದ ಬಂತು ದಿನೇಶ್? ನೀನೇನೂ ನೊಂದುಕೊಳ್ಳುವ ಕಾರಣವಿಲ್ಲ!" ಭಾರತಿ ಸಮಾಧಾನದಿಂದಲೇ ಉತ್ತರಿಸಿದಳು. ಅವಳ ಉತ್ತರದಿಂದ "ಬಚಾವಾದೆ" ಎಂದು ಧೈರ್ಯಗೊಂಡ ದಿನೇಶ್ ಹೇಳಿದ, "ಸರಿ, ನಡಿ ಹಾಗಿದ್ದರೆ, ನಿನ್ನನ್ನು ಮನೆತನಕ ಬಿಟ್ಟು ನಾನು ಹೋಗುತ್ತೇನೆ. ದಿನೇಶ್ ಸೈಕಲನ್ನು ದೂಡಿಕೊಂಡು ಭಾರತಿಯೊಡನೆ ಹೆಜ್ಜೆ ಹಾಕಿದ. ಭಾರತಿಯ ಮನೆ ಬಂದೊಡನೆ ದಿನೇಶ್ ಹೇಳಿದ, "ಬರುತ್ತೇನೆ ಭಾರತಿ, ತುಂಬ ರಾತ್ರಿಯಾಗಿ ಹೋಯಿತು. ಗುಡ್ ನೈಟ್"

"ಇಷ್ಟು ರಾತ್ರಿಯಲ್ಲಿ ನೀನೊಬ್ಬನೇ ಹೋಗುತ್ತೀಯಾ ದಿನೇಶ್? ಈ ರಾತ್ರಿ ನಮ್ಮಲ್ಲೇ ಇದ್ದು ಬಿಡು. ನಾಳೆ ಹೋಗುವಿಯಂತೆ!" ಭಾರತಿ ಮಮತೆಯಿಂದಲೇ ಹೇಳಿದಳು.

"ಇಲ್ಲ ಭಾರತಿ, ಇಂದು ಮನೆಗೆ ಹೋಗಲೇ ಬೇಕು. ಸಿಟ್ಟು ಮಾಡಿಕೊಳ್ಳಬೇಡ! ಬರ್ತೇನೆ..."

"ಸರಿ ಹಾಗಿದ್ದರೆ, ನಿನ್ನಿಂದ ತುಂಬ ಉಪಕಾರವಾಯ್ತು ದಿನೇಶ್! ಪ್ರೀತಿಯಿರಲಿ, ಗುಡ್‌ನೈಟ್"

ದಿನೇಶ್ "ಗುಡ್‌ನೈಟ್" ಹೇಳಿ ಸೈಕಲು ಹತ್ತಿದ. ಆತ ಸೈಕಲ್‌ನಲ್ಲಿ ಮುಂದೆ ಹೋಗುತಿದ್ದರೂ, ಅವನ ಚಿತ್ತ ಮಾತ್ರ ಇನ್ನೂ ಬಹಳ ಹಿಂದೆಯೇ ಉಳಿದಿತ್ತು! ಭಾರತಿಯ 'ಪ್ರೀತಿಯಿರಲಿ' ಎಂಬ ವಾಕ್ಯವೇ ಅವನ ಕಿವಿಗಳಲ್ಲಿ ಗುಂಯ್‌ಗುಡುತ್ತಿತ್ತು!

○ ○ ○

ದಿನೇಶ್ ಮದ್ರಾಸಿನ ಕಾಲೇಜೊಂದರಲ್ಲಿ ಬಿ. ಎಸ್‌ಸಿ. ಮೂರನೆ ವರ್ಷದಲ್ಲಿದ್ದ. ಅಲ್ಲಿಯೂ ಆತ ಹೈಸ್ಕೂಲಿನಂತೆಯೇ ಕಲಿಯುವುದರಲ್ಲಿ ಪ್ರವೀಣನಾಗಿ ಎಲ್ಲ ಪ್ರಾಧ್ಯಾಪಕರುಗಳ ಪ್ರೀತಿಗೂ ಪಾತ್ರನಾಗಿದ್ದ. ತನ್ನ ಸೈಕಲನ್ನು ಮಾತ್ರ ತ[illegible] ನಿನ್ನೂ ಬಿಟ್ಟಿರಲಿಲ್ಲ. ಅದೊಂದು ಅವ[illegible] ಜೀವದ ಗೆಳೆಯನಂತಿತ್ತು. ಹೈಸ್ಕೂಲಿ[illegible] ಸೇರಿದಂದೇ ಅವನ್ನಾತ ಕೊಂಡುಕೊಂಡಿದ್ದ. ಅಂದಿನಿಂದ ಇಂದಿನವರೆಗೂ ಆ ಸೈ[illegible]ಲ್ ಅವನ ಸೇವೆ ಸಲ್ಲಿಸುತ್ತ ಬಂದಿತ್ತು!

ಅಂದು ದಿನೇಶನು ಕಾಲೇಜನ್ನು [illegible]ಡುವ ದಿನ ಪರೀಕ್ಷೆ ಪಾಸ್ ಮಾಡಿಕೊಂ[illegible]ಡು ಕಾಲೇಜಿನ ಜೀವನವನ್ನು ಮುಗಿಸ[illegible]ವ ದಿನವಾಗಿತ್ತದು! ಅದೇ ದಿನ ಬೆಳ[illegible] ಕಾಲೇಜಿನ ಸೈಕಲ್ ರೇಸ್ ಒಂದರ[illegible] ಭಾಗವಹಿಸಿದ್ದ ದಿನೇಶ್ ಪ್ರಥಮನಾ[illegible] ಬಂದಿದ್ದ. ಅದನಂತರ ಭಾರೀ "ಟೀ ಪಾರ್ಟಿ"ಯೊಂದನ್ನು ಏರ್ಪಡಿಸಿದ್ದರು. ಅ[illegible]ನ ದಿನೇಶನಿಗೆ ಎಲ್ಲಿಲ್ಲದ ಉತ್ಸಾಹ; ಆ[illegible]ರೊಂದಿಗೇ ಹೇಳಿ ತೀರದ ದುಃಖ [illegible]ದ! ತನ್ನ ಅಚ್ಚುಮೆಚ್ಚಿನ ಪ್ರಾಧ್ಯಾಪ[illegible]ರುಗಳನ್ನು, ತನ್ನ ಆತ್ಮೀಯ ಗೆಳೆಯರನ್ನು ಎಷ್ಟೋ ವರ್ಷಗಳ ಅನುಭವದಿಂದ ಪ[illegible]ದ ಜ್ಞಾನವನ್ನು ಧಾರೆಯೆರೆದು, ತನಗೊಂದು ಆಶ್ರಯ ಕೊಟ್ಟು ಪೋಷಿಸಿ ತನ್ನನ್ನು ಗ್ರೇಜುಯೇಟನ್ನಾಗಿ ಮಾಡಿದ [illegible]ಲೇಜನ್ನು ಬಿಟ್ಟು ಮುಂದಿನ ಭವಿಷ್ಯದತ್ತ ಸಾಗಬೇಕಾಗಿದ್ದ ದಿನವಾಗಿತ್ತ[illegible]

ದಿನೇಶನ ಹೃದಯ ಭಾರವಾಗಿತ್ತು [illegible] ಚಿಕ್ಕ ಭಾಷಣವನ್ನು ಮಾಡಲೆಂದು [illegible]ನೇಶ್, ತುಂಬಿದ ಸಭೆಯ ಮುಂದೆ [illegible]ದಿಕೆಯ ಮೇಲೆ ಬಂದು ನಿಂತ. ಹಿ[illegible] ಬಹುಮಾನಗಳನ್ನು ಪಡೆದಾಗ ಅವನ [illegible]ನಸ್ಸು ಎಷ್ಟು ಪ್ರಫುಲ್ಲಿತವಾಗಿತ್ತೋ, [illegible]ಷ್ಟೇ ದುಃಖಪೂರಿತವಾಗಿತ್ತು ಈಗ! ಅ[illegible]ನ ಕಂಠ ಗದ್ಗದವಾಗಿ ಶಬ್ದಗಳೇ ಹೊ[illegible]

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ



ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2 00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಪ್ರತಿಗಾಮಿ ಗುಣಕ್ಕೊಲಿದ

ಚೀನೀಯ ಕಮ್ಯುನಿಸ್ಟರು

ತಮ್ಮ ಕೈಯಾರೆ ತಾವೇ ತಮ್ಮ ಕೈಗಳಿಗೆ ಬೇಡಿಯ ತೊಡಿಸಿಕೊಂಡಿರುವೆವೆಂಬುದರ ಅರಿವು ಕೆಂಪು ಚೈನಾದ ಜನತೆಗಾಗಿರುವದರ ಕುರಿತು ಕಳೆದ ವಾರ ಕಂಡಿರುವೆವು. ಸ್ವರ್ಗದ ಬಯಕೆ ಈ ನರಕವಪಡೆದೆವೇ ಎಂದು ಜನತೆ ಒಂದೆಡೆ ಹಲುಬುತ್ತಿದ್ದಲ್ಲಿ, ಕಮ್ಯುನಿಸ್ಟ್ ಅಧಿಕಾರಿಗಳು ಇನ್ನೊಂದೆಡೆ, ಅಹಾ! ಮುಟ್ಟಿದ್ದೆಲ್ಲವೂ ಚಿನ್ನವಾಗುತ್ತದೆಂದು ಬಗೆದಲ್ಲಿ ಈ ರೀತಿ ಮಣ್ಣೇ ಆಗಬೇಕೆ ಎಂದು ತಲೆ ಕೆರೆದುಕೊಳ್ಳುತ್ತಿದ್ದಾರೆ. ಅವರು ತಲೆಬಿಸಿ ಕಮ್ಮಿ ಮಾಡಿಕೊಳ್ಳಲು ಜನತೆಯ ಗಮನವನ್ನು ಬೇರೆಡೆಗೆ ಹರಿಯುವಂತಾಗಲು ಅತ್ತ ಕೈ ತೋರಿಸುತ್ತಿದ್ದಾರೆ. ಅದಕ್ಕಾಗಿಯೇ ಗುರುವಿನ ಸ್ಥಾನದಲ್ಲಿರುವ ಭಾರತದ ಬಾಗಿಲನ್ನೂ ಅಪವಿತ್ರಗೊಳಿಸಲು ಅವರು ಹೇಸಿರುವದಿಲ್ಲ. ಜನತೆ ಅದೆಷ್ಟು ಸಮಯ ಹಾಗೆ ಮೋಸಹೋದೀತು? ಒಂದೆಡೆ ಈ ರೀತಿ ತಮ್ಮ ಜನತೆಯಿಂದಲೇ ಒದೆ ಸಿಗುತ್ತಿದ್ದಲ್ಲಿ, ಇನ್ನೊಂದೆಡೆ ತಾವು ಹಾಕಿರುವ ಯೋಜನೆಗಳೆಲ್ಲ ತಲೆಕೆಳಗೆ ಕಾಲು ಮೇಲಾಗುತ್ತಿರುವುದರಿಂದ ಅವರೂ ಪೇಚಿನಲ್ಲಿ ಸಿಕ್ಕಿಕೊಂಡಿದ್ದಾರೆ. ಹಾಗಾದರೂ ಬುದ್ಧಿ ಬರುತ್ತದೇನು? ಅಧಿಕಾರದ ಅಮಲು ಕೆಳಗಿಳಿಯದೆ ಬುದ್ಧಿ ಬರುವುದಾದರೂ ಅದೆಂತು? ಅಂತೆಯೇ ತಮ್ಮ ಯೋಜನೆಗಳಲ್ಲಿ ಅವರೀಗ ಸ್ವಲ್ಪ ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆ. ಅದರ ವಿವರಣೆಯನ್ನಿಲ್ಲಿ ಕಾಣಬಹುದು:—

ಚೈನಿ ಕಮ್ಯುನಿಸ್ಟರು ರಷ್ಯನ್ ಕಮ್ಯುನಿಸ್ಟರನ್ನು ಸಂಪ್ರದಾಯಸ್ಥ ಮಾರ್ಕ್ಸ್-ಲೆನಿನ್ ವಾದವನ್ನು ಕೈಬಿಟ್ಟಿರುವ ಪ್ರತಿಗಾಮಿಗಳೆಂದು ಮೂದಲಿಸುತ್ತಿರುವಂತಾದರೂ ಚೈನೀಯರಿಂದು ತಮ್ಮ ಮೂಲ ಧೋರಣೆಯನ್ನೇ ಬಹಳವಾಗಿ ತಿದ್ದಿಕೊಂಡಿದ್ದಾರೆ. ಇತರ ಆರ್ಥಿಕ ವಲಯಗಳ ಖರ್ಚಿನಿಂದ ಭಾರಿ ಕಾರ್ಖಾನೆಗಳನ್ನು ಕಟ್ಟುವದೇ ಅವರ ಮೂಲ ದೃಢ ಧೋರಣೆಯಾಗಿತ್ತು.

ಪೆಕಿಂಗ್‌ನಲ್ಲಿ ಚೈನೀ ಕಮ್ಯುನಿಸ್ಟ್ ಪಕ್ಷದ ಕೇಂದ್ರೀಯ ಮಂಡಳಿಯ ಸದಸ್ಯರು ನಾಲ್ಕು ದಿನ ೧೯೬೧ರ ಜನವರಿ ಆರಂಭದಲ್ಲಿ ಸೇರಿದ್ದರು. ಅವರಂದು ಚೈನಾದ ಆರ್ಥಿಕ ನಿಲುವನ್ನು ಬದಲಾಯಿಸಲು ಒಂದಾಗಿದ್ದರು. ಕೊನೆಯಲ್ಲಿ ಅವರು ಭಾರೀ ಕಾರ್ಖಾನೆಗಳ ಜನನ ನಿಯಂತ್ರಣವನ್ನು ಕೈಗೊಳ್ಳುವ ನಿಶ್ಚಯಕ್ಕೆ ಬಂದರು. ಭಾರೀ ಕಾರ್ಖಾನೆಗಳಿಗೆ ಬೇಕಾಗುವ ಸಂಪತ್ತನ್ನು ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ ಹಾಗೂ ಕೃಷಿಗೆ ಕೊಡಲು ಅವರು ತೀರ್ಮಾನಿಸಿಕೊಂಡರು. ಈ ಭಾರೀ ಪ್ರಮಾಣದ ಬದಲಾವಣೆಗಳಿಗೆ ಕಾರಣವೇನೆಂದರೆ ಕೃಷಿಯತ್ತ ಅವರು ಹಾಕಿಕೊಂಡಿದ್ದ ತಪ್ಪು ಲೆಕ್ಕಾಚಾರ ಹಾಗೂ ಅದರಿಂದುಂಟಾಗಿದ್ದ ಫಲಿತಾಂಶ, ಕೃಷಿಯನ್ನೂ ಕಡೆಗಣಿಸಿ ಕಾರ್ಖಾನೆಗಳಿಗೆ ಪ್ರಥಮ ಸ್ಥಾನವಿತ್ತದ್ದೇ ಅವರ ಸೋಲಿಗೆ ಕಾರಣವಾಗಿಬಿಟ್ಟಿತು. ಹೀಗೆ ಒಂದೆಡೆಯಿಂದ ಕೃಷಿರಂಗದಲ್ಲಿ ಭಾರೀ ಆಘಾತವಾಗಿದ್ದಲ್ಲಿ, ಮತ್ತೆ ಇನ್ನೊಂದು ಬದಿಯಿಂದ ಕಾರ್ಖಾನೆ ವಲಯದಿಂದಲೂ ಆಘಾತವಾಯಿತು.

ಇಂದು ಚೈನಾದ ಭಾರೀ ಕಾರ್ಖಾನೆಗಳ ಮುಖ್ಯ ಕೆಲಸವೆಂದರೆ ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ ಬೇಕಾಗುವ ವಸ್ತುಗಳನ್ನೊದಗಿಸಿಕೊಟ್ಟು, ಅವುಗಳನ್ನು ಪೋಷಿಸುವದಿದೆ. ಕಮ್ಯುನಿಸ್ಟ್ ಚೈನಾವು ೧೯೬೦ರಿಂದ ತನ್ನ ಆಯ-ವ್ಯಯ ಪಟ್ಟಿಯನ್ನು ಪ್ರಕಟಿಸಿರುವದಿಲ್ಲ. ಅವರದನ್ನು ಪ್ರಕಟಿಸುತ್ತಿದ್ದಲ್ಲಿ ಯಾವ ಕೈಗಾರಿಕೆಯಿಂದ ಎಷ್ಟು ಲಾಭ ಬಂದಿದೆ, ಯಾವದಕ್ಕೆ ಹೆಚ್ಚು ಖರ್ಚಾಗಿದೆಂಬುದನ್ನು ತಿಳಿದುಕೊಳ್ಳಲು ಸುಲಭದಲ್ಲೇ ಸಾಧ್ಯವಾಗುತ್ತಿತ್ತು.

ಭಾರೀ ಕಾರ್ಖಾನೆಗಳಿಗಾಗಿ ತಾದಿರಿಸಿದ್ದ ಕಾಸನ್ನೀಗ ಕೃಷಿಗಾಗಿ ಉಪಯೋಗಿಸಲಾಗುತ್ತಿದೆ. ಅಲ್ಲಿ ಈಗ ಚಿಕ್ಕ ಬಂಡಿ, ಊದು ಕೊಳವೆ, ಕಮ್ಮಿ ಅಶ್ವಶಕ್ತಿಯ ಬಹು ಉದ್ದೇಶಗಳ ಯಂತ್ರ ಹಾಗೂ ಕೃಷಿಗೆ ಬೇಕಾಗುವ ಇತರ ಯಂತ್ರೋಪಕರಣಗಳ ತಯಾರಿಕೆಗೆ ಪ್ರಾಧಾನ್ಯತೆಯನ್ನೀಯಲಾಗುತ್ತಿದೆ. ಈ ರೀತಿ ಸಾಗಿದಲ್ಲಿ ಗುರಿ ಮುಟ್ಟಲು ಬಹಳ ಸಮಯ ಬೇಕಾಗುತ್ತದೆ, ಕನಿಷ್ಟಪಕ್ಷ ೨೦-೨೫ ವರ್ಷಗಳಾದರೂ ಬೇಕಾದೀತೆಂಬುದು ಕೆಲವು ಆರ್ಥಿಕ ಶಾಸ್ತ್ರಜ್ಞರ ಅಭಿಪ್ರಾಯವಿದೆ.

ಭಾರೀ ಕಾರ್ಖಾನೆಗಳ ಮೇಲಣ ಹತೋಟಿ ಬಲಪಡಿಸಿದ್ದರ ಪರಿಣಾಮ ಉಕ್ಕು ಉತ್ಪಾದನೆಯ ಮೇಲೆ ಹೇಗಾಯಿತೆಂಬುದನ್ನು ಚೀನೀ ಕಮ್ಯುನಿಸ್ಟರಿತ್ತಿರುವ ಅಂಕೆ-ಸಂಖ್ಯೆಗಳೇ ಸಾರುತ್ತವೆ. ೧೯೬೦ರಲ್ಲಿ ೧,೮೪,೫೦,೦೦೦ ಟನ್‌ಗಳು, ೧೯೬೧ರಲ್ಲಿ ೧,೨೦,೦೦,೦೦೦ ಟನ್ನುಗಳು ಮತ್ತು ೧೯೬೨ರಲ್ಲಿ ೮೦,೦೦,೦೦೦ ಟನ್ನುಗಳಿಗಿಂತಲೂ ಬಹಳ ಕಮ್ಮಿ ಉಕ್ಕು ಉತ್ಪಾದನೆಯಾಗಿರುತ್ತದೆ. ಇದಕ್ಕೆ ಕಾರಣವೆಂದರೆ, ಬೇಕಾದಷ್ಟು ಅದುರು ಸಿಗದಿದ್ದದ್ದು ಮತ್ತು ಹಲವಾರು ರೀತಿಯ ಯಂತ್ರಗಳನ್ನು ಉಪಯೋಗಿಸದೆ ಬಿಟ್ಟದ್ದೇ ಕಾರಣವಿದೆ ಹೀಗಿದ್ದರೂ ಚೈನಾದಲ್ಲಿಂದೂ ಉತ್ತಮ ರೀತಿಯ ಉಕ್ಕು ಉತ್ಪಾದನೆಯಾಗುತ್ತಿರುವದಿಲ್ಲ.

ಕಮ್ಯೂನಿಸ್ಟ್ ಚೈನಾದಲ್ಲಿ ಇಂಧನ ಸಮಸ್ಯೆಯೂ ಭಾರೀ ಸಮಸ್ಯೆ ಇದೆ. ಕಬ್ಬಿಣ ಪಡೆಯುವಂತೆಯೇ ಇಂಧನ ಉತ್ಪಾದನೆಯ ರೀತಿ ಬಹಳ ಹಿಂದಿನ ಕಾಲದ್ದು, ಆದರಿಂದ ಭಾರೀ ಪ್ರಮಾಣದಲ್ಲಿ ಪಡೆಯಲು ಸಾಧ್ಯ ಇರುವದಿಲ್ಲ. ಆಧುನಿಕ ರೀತಿಯತ್ತ ಹೆಚ್ಚು ಹಣ ಅವರು ಸರಿಸುವದಿಲ್ಲ. ೧೯೬೨ರಲ್ಲಿ ಲಿಗ್ನೈಟ್ ಸಹಿತ ಇಂಧನ ಉತ್ಪಾದನೆಯು ೨೪,೦೦,೦೦,೦೦೦ ಟನ್ನುಗಳೆಂದು ಅಂದಾಜು ಮಾಡಲಾಗಿತ್ತು.

೧೯೬೨ರಲ್ಲಿ ತೈಲ ಉತ್ಪಾದನೆಯು ಚೈನಾದಲ್ಲಿ ೬೦,೦೦,೦೦೦ ಟನ್ನುಗಳೆಂದು ಅಂದಾಜು ಮಾಡಲಾಗಿತ್ತು, ಅಂದರೆ ಅವರ ಆವಶ್ಯಕತೆಯ ೨/೩ ಅಂಶ. ಕೃಷಿಗೆ ಬೇಕಾಗುವ ಚಿಕ್ಕ ಚಲನ ಯಂತ್ರ ಹಾಗೂ ಊದು ಸಲಕರಣೆಗಳಿಗೆ ಈಗ ಹೆಚ್ಚು ಎಣ್ಣೆಯ ಆವಶ್ಯಕತೆ ಇದೆ.

ತಮ್ಮ ಪ್ರಗತಿಯನ್ನು ಪ್ರದರ್ಶಿಸಲು ಕೆಂಪು ಚೈನಾ ಪ್ರಕಟಿಸಿರುವ ಮಹತ್ವಪೂರ್ಣ ಹತ್ತು ವರ್ಷಗಳ ಅಂಕೆ-ಸಂಖ್ಯೆಯಲ್ಲಿ ೧೯೫೮ರಲ್ಲಿ ಎಷ್ಟು ವಿದ್ಯುಚ್ಛಕ್ತಿಯನ್ನು ತಯಾರಿಸಿದ್ದೇವೆಂಬುವರ ಅಂಕೆ ಇದೆಯೇ ವಿನಾ ತಮ್ಮ ಸಾಮರ್ಥ್ಯದ ಕುರಿತು ಅದರಲ್ಲಿ ಉಲ್ಲೇಖ ಇರುವದಿಲ್ಲ.

೧೯೬೧ರಲ್ಲಿ ತಾವು ರಾಸಾಯನಿಕ ಉತ್ಪಾದನೆಯ ರಂಗದಲ್ಲಿ ಶೇಕಡಾ ಐವತ್ತರಷ್ಟು ಜಾಸ್ತಿ ಮುಂದುವರಿದ್ದೇವೆಂದು ಕಮ್ಯೂನಿಸ್ಟ್ ಚೈನಾ ಹೆಮ್ಮೆಯಿಂದ ಪ್ರಕಟಿಸಿರುತ್ತದೆ. ೧೯೬೨ರಲ್ಲಿ ಸಾಧಾರಣ ೨೧,೫೦,೦೦೦ ಟನ್ನು ರಾಸಾಯನಿಕ ಪದಾರ್ಥಗಳನ್ನು ಚೈನಾ ಉತ್ಪಾದಿಸಿರುವದಾಗಿ ಅಂದಾಜಿನಿಂದ ಹೇಳಬಹುದು. ಇತ್ತೀಚೆಗೆ ಹೊಸ ರಾಸಾಯನಿಕ ಕೈಗಾರಿಕೆಯತ್ತ ಬಂಡವಾಳ ಹಾಕಿರುವದರ ಕುರಿತು ಚೈನಾ ಆದೇನನ್ನೂ ತಿಳಿಸಿರುವದಿಲ್ಲ.

ಒಂದೇ ಸಲ ಉತ್ಪಾದನೆಯಲ್ಲಿ ಭಂಗನೆ ಗಗನಕ್ಕನೇ ನೆಗೆಯಬೇಕೆಂದು ಚೈನಾವು ಉಕ್ಕು, ಇಂಧನ, ಧಾನ್ಯ ಮತ್ತು ಹತ್ತಿ ಕೈಗಾರಿಕೆಯತ್ತ ಬಹಳಷ್ಟು ಲಕ್ಷ್ಯಕೊಟ್ಟಿತ್ತು. ನಮ್ಮ ಆರ್ಥಿಕ ನಿಲುವಿಗೆ ಅವು ಬೆನ್ನೆಲುಬೆಂದು ಅವರು ಭಾವಿಸಿಕೊಂಡಿದ್ದರು. ಅತ್ಯಲ್ಪ ಕಾಲದಲ್ಲಿ ತಾವು ಕೈಗಾರಿಕಾ ಪ್ರಪಂಚದಲ್ಲಿ ಅದ್ವಿತೀಯ ನಾಡಾಗಬೇಕೆಂದು ಅವರು ಆಶೆಕಟ್ಟಿಕೊಂಡಿದ್ದರು. ೧೯೫೯ರಲ್ಲೇ ಆ ಉತ್ಪಾದನಾ ಯೋಜನೆಯನ್ನು ಕೆಳಮುಖಗೊಳಿಸಿದ್ದಲ್ಲಿ, ಇದೀಗ, ಸಾಧಾರಣ ಅರ್ಧದಷ್ಟಕ್ಕೆ ಕತ್ತರಿ ಪ್ರಯೋಗ ನಡೆದಿದೆ.

ಹೀಗೆ ಭಾರೀ ಪ್ರಮಾಣದ ಕಾರ್ಖಾನೆಯ ತಾತ್ವಿಕ ಬಂಡದಿಂದ ಆರ್ಥಿಕ ಕಳಹೆನಿ ಕುಸಿಯಲಾರಂಭವಾಗಿರುವದು ಚೈನಿ ಕಮ್ಯೂನಿಸ್ಟರಿಗೆನೇ ಸ್ಪಷ್ಟವಾಗಿರುತ್ತದೆ.

ಸಂಪ್ರದಾಯವಾದಿ ಕಮ್ಯೂನಿಸ್ಟರ ಊಹೆಯು, ಒಮ್ಮೆ ಭಾರೀ ಪ್ರಮಾಣದ ಕಾರ್ಖಾನೆಯನ್ನು ಕಟ್ಟಿಬಿಟ್ಟೆವೆಂದರೆ,ನಂತರದ್ದೆಲ್ಲಾ ತಾನಾಗಿಯೇ ಅವರನ್ನು ಹುಡುಕಿಕೊಂಡು ಬರುತ್ತದೆಂಬುದು. ಅದರಂತೆ ಅಧಿಕಾರದ ಕಡಿವಾಣವನ್ನು ಕೈಗೆತೆಗೆದುಕೊಳ್ಳುವಾಗಲೇ ಭಾರೀ ಪ್ರಮಾಣದ ಕೈಗಾರಿಕೆಯ ಕುರಿತು ಭಾರೀ ಪ್ರಮಾಣದಲ್ಲಿ ಪ್ರಕಟಿಸಲಾಗಿತ್ತು. ಅದಕ್ಕೆ ಬೇಕಾಗುವ ಕಚ್ಚಾವಸ್ತು ಹಾಗೂ ಮಾನವ ಶಕ್ತಿಯ ನಾಶದತ್ತ ಅವರು ಲಕ್ಷ್ಯವೊಟ್ಟಿರುವದಿಲ್ಲ. ಯೋಜನಾ ನಿರ್ಮಾಪಕರು ಯೋಜನೆಗಳ ಪಟ್ಟಿಯನ್ನಿತ್ತರು, ಅಧಿಕಾರಿ ವರ್ಗ ಆಜ್ಞೆ ಇತ್ತಿತು, ಬಡ ಜನತೆ ಅದಕ್ಕಾಗಿ ಜೀವ ತೆರಬೇಕಾಯಿತು. ಆಯಾಸ ಹಾಗೂ ಹಸಿವಿನಿಂದ ಜನತೆ ದುರ್ಘರಿತವಾಯಿತು. ಅನಿಷ್ಟದ ಅಂಗಳದಲ್ಲೇ ಆಸರೆ ಪಡೆದಿರುವೆವೆಂಬುದರ ಅರಿವಾಗುವ ವರೆಗೂ ಅವರಕ್ಷಿಂದ ಅಲುಗಾಡಲಿಲ್ಲ. ಅದರ ಅನುಭವ ಆದಾಗಲೇ ಆಗಿದ್ದರೂ ತಾತ್ವಿಕ ಮೂಢ ನಂಬಿಕೆಯಿಂದಾಗಿ ಅವರು ಅಂಗಳದಿಂದ ಅತ್ತ ಅಡಿಯಿಡಲಿಲ್ಲ. ಅತ್ತ ಅಡಿಯಿಡಲು ಅವರಿಗೆ ಅಂಜಿಕೆಯಾಗುತ್ತಿದೆ. ತಾವು ಬೀಜ ಹಾಕಿರುವದಕ್ಕೆ ತಾವೇ ನೀರು ಸುರಿಯದಿದ್ದಲ್ಲಿ ಹೇಗೆ?

ಹೀಗೆ ಕಮ್ಯೂನಿಸ್ಟ್ ಚೈನಾದ ಉತ್ಪಾದನಾ ರಂಗ ಹಾಗೂ ಚೈನಿ ಕಮ್ಯೂನಿಸ್ಟರಲ್ಲಿ ತಲೆದೋರಿರುವ ಪ್ರತಿಗಾಮಿ ಗುಣದ ಪರಿಚಯವನ್ನು ಶ್ರೀ ನೆನೊಪ್ಪ ಎಂಬವರು ಮದ್ರಾಸಿನ ಮೆಯಿಲ್ ಪತ್ರಿಕೆಯ ಮೂಲಕ ಮಾಡಿಸಿ ಕೊಟ್ಟಿದ್ದಾರೆ.

ಕಲ್ಪನೆಯ ಕಾಯಿ ಕೈಗೆಟಕಿದಾಗ ಕಸಿ ಅದೇನು ಮಾಡೀತು? ಅದು ಪರಾಪರ ಯೋಚಿಸದೆ ಕಲ್ಪನೆಯ ಕಾಯಿಯತ್ತ ಹಾರಿ ಬಿಡುತ್ತದೆ. ಆಗ ನೆಲದ ಮೇಲೆ ಬಿದ್ದು ಸೊಂಟ ಮುರಿದುಕೊಂಡರೆ ಆಶ್ಚರ್ಯವೇನಿರುವದಿಲ್ಲ. ಚೈನಿ ಕಮ್ಯೂನಿಸ್ಟರ ಪಾಡು ಹಾಗೆಯೇ ಆಗಿದೆ. ಸೋವಿಯಟ್

(೧೦ನೇ ಪುಟ ನೋಡಿರಿ).

ಕಾರ್ಕಳ

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O.P. No. 2/1964.

1. ರತಿ ಶೆಡ್ತಿ. ಭೋಜರಾಮ ಶೆಟ್ರ ವಿಧವೆ—ಭೋಜರಾಮ ಶೆಟ್ರ ವಿಧವೆ,
2. ಚಿದಂಬರ.

ಮ್ಯಾನರ ರಕ್ಷಕರು ತಾ 1ನೆಯವರು ಮಂಗ್ಳೂರು ತಾಲ್ಲೂಕು ತಾಳಿಪಾಡಿ ಗ್ರಾಮದ ಅಡ್ರಗುತ್ತಿನಲ್ಲಿರುತ್ತಾರೆ.

—ಅರ್ಜಿದಾರರು.

ಈ ಮೂಲಕ ಸಮಸ್ತರಿಗೂ ತಿಳಿಸುವುದೇನೆಂದ್ರೆ:-

ತಾಳಿಪಾಡಿ ಗ್ರಾಮದಲ್ಲಿದ್ದು ಮೃತರಾದ ಭೋಜರಾಮ ಶೆಟ್ರ ಸೊತ್ತುಗಳಿಗೆ ವಾರಿಸ ಸರ್ಟಿಫಿಕೇಟು ಕೊಡಬೇಕೆ ಅರ್ಜಿದಾರರು ದಾಕ್ಲು ಮಾಡಿದ ಮೇಲಿನ ಅರ್ಜಿ ತಾರೀಕು 21-2-1964ಕ್ಕೆ ಇಟ್ಟಿದೆ.

ಆಕ್ಷೇಪವುಳ್ಳವರು ಸದ್ರಿ ದಿನ ಬೆಳಿಗ್ಗೆ 10.30 ಗಂಟೆಗೆ ಮೇಲ್ಕಂಡ ಕೋರ್ಟು ಮುಂಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ಅರ್ಜಿ ಯೋಗ್ಯಪಕ್ಷವಾಗಿ ತೀರ್ಮಾನಿಸಲಾದೀತು.

By order of the Court.

N. B. Shetty,

Advocate for Petitioners.

Karkala. 23-1-1964.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಆವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಗೇಹ ರಾಜ್ಯದಲ್ಲಿ

ಸೋಡ್ತಿಗೊಂದು ಬಹುಮಾನ

"ಏನು, ಇಂದು ಬರುವಾಗ ತಡವಾಯ್ತು?"

"ಏನೋ ಸ್ವಲ್ಪ ಕೆಲಸವಿತ್ತು. ಅದ್ರಿಂದ..."

"ಅದು ಗೊತ್ತಾಯ್ತು. ಕೆಲಸವಿದ್ದೇ ಆಗೋದು ತಡ. ಅದಿಲ್ಲಾಂತಾದ್ರೆ ಏಕೆ ಆಗುತ್ತೆ?"

"ಅದೆಲ್ಲಾ ಏನು ತಿಳಿಯುತ್ತೆ ನಿನಗೆ?"

"ಅಂದ್ರೆ ಅದನ್ನೆಲ್ಲಾ ನಾನು ಕೇಳ್ಬಾರ್ದು ಅಲ್ವೆ?"

"ಹ್ಞಾಂ....ಹಾಂಗೇನ್ನು!"

"ಅದ್ರೆ ಈ ನಿಯಮ ನಿಮಗೆ ಮಾತ್ರಾಂತ ತೋರುತ್ತೆ."

"ನೋಡು, ಅವರವರ ಕೆಲ್ಸದ ವಿಷ್ಯ ಯೋಚ್ನೆ ಅವರವರಿಗಲ್ದೆ ಮತ್ಯಾರಿಗೆ ಇರುತ್ತೆ?"

"ಯಾರಿಗಿಲ್ಲಾಂತಂದ್ರು ಶಾಲಾ ಮಾಸ್ತರ್ರಿಗೆ ಇರುತ್ತೆ ನೋಡಿ"

"ಏನೇ ಇದು? ಹೀಗೆಲ್ಲಾ ಮಾತಾಡ್ತಿ? ಅಲ್ಲಾ....ಅವರಿಗಾದ್ರೂ ಯಾಕೆ ಇರ್ಬೇಕೂಂತ...."

"ಯಾಕೇಂತಂದ್ರೆ.......ಅವ್ರನ್ನೆ ಕೇಳ್ಬೇಕು."

"ನಾನು ಮಾರೂಂತಂದ್ರೆ ನೀನು ಮೂವತ್ತೂಂತಿ."

"ಹಾಗಂದ್ರೆ....?"

"ಅದೇ, ಅಲ್ಲಾ, ಊರಲ್ಲಿ ಏನೇ ಆದ್ರೂ ಅದ್ರ ಕತೆ ಮಾಸ್ತರ್ರಿಗೆ ಯಾಕೇಂತ ಕೇಳಿದ್ರೆ...."

"ಅದೆಲ್ಲಾ ನಂಗೊತ್ತಿಲ್ಲ, ಮೊನ್ನೆ ನೋಡಿ, ನಾವು ಉಪನಯನಕ್ಕೆ ಹೋದೆವಲ್ಲಾ...."

"ಮೊನ್ನೇಂತೇನು, ಯಾವಾಗ್ಲೂ ಅಲ್ಲಿ ಇಲ್ಲಿ ಹೋಗ್ತಾ ಇರ್ತೇವೆ. ನಮ್ಮನೆಗೆ ಬೇರೆಯವ್ರು ಬರ್ಬೇಕಾದ್ರೆ ನಾವೂ ಅವ್ರ ಮನೆಗೆ ಹೋಗಬೇಕು ನೋಡು."

"ಅದೆಲ್ಲಾ ಯಾರು ಕೇಳಿದ್ರು ನಿಮ್ಮ ಹತ್ರ? ನಾನು ಹೇಳೋದನ್ನ ಕೇಳೋದಾದ್ರೆ ಕೇಳಿ."

"ಸರಿ ಮಹಾರಾಯ್ತಿ....ಸರಿ, ಎಲ್ಲಾ ನೀನಂದ ಹಾಗೇ ಆಗ್ಲಿ."

"ಉಪ್ನಯನದ ದಿನ ನಮ್ಮ ಗಣೇಶ ಶಾಲೆಗೆ ಹೋಗ್ಲಿಲ್ಲ ನೋಡಿ."

"ಹ್ಞಾಂ...."

"ಮರುದಿನ ಶಾಲೆಯಲ್ಲಿ ಕೇಳಿದ್ರಂತೆ ಯಾಕೆ ಬರ್ಲಿಲ್ಲಾಂತ."

ಹ್ಞಾಂ"

"ಇವನಂದ್ನಂತೆ ಕೆಲಸವಿತ್ತೂಂತ."

"ಹ್ಞಾಂ."

"ಅಲ್ಲಿಗೆ ಮುಗೀಲಿಲ್ಲ ನೋಡಿ ..."

"ಮತ್ತೆ...."

"ಯಾವ ಕೆಲ್ಸಾಂತ ಪ್ರಶ್ನೆ. ಅದ್ಕೆ ಉಪ್ನಯನಕ್ಕೆ ಹೋಗಿದ್ದೇಂತ ಉತ್ರ..."

"ಸರಿಯಾಗೇ ಅಂದಾನ್ನ."

"ಹೌದಾದು, ಮತ್ತೆ ಕೇಳಿದ್ರಂತೆ ಎಲ್ಲೀಂತ...."

ಹೋ....ಸರಿ...ತಿಳೀತು ಬಿಡು ಇನ್ನು ಅವ್ರು ಅವ್ರ ಕೆಲ್ಸನ ಸರಿಯಾಗೇ ಮಾಡ್ತಾರೆ. ಎಲ್ಲಾದ್ರೂ ಮಕ್ಳು ಸುಮ್ಮಸುಮ್ಮಗೆ ಶಾಲೆ ತಪ್ಪಿಸ್ತಾರೇಂತ ವಿಚಾರ್ಸೋದು ಅವ್ರ ಕರ್ತವ್ಯಲ್ವೆ?"

"ಅದು ಸರೀನ್ನಿ. ಹಾಗೇ ನೀವು ತಡವಾಗಿ ಬಂದಿರೋದು ಯಾಕೇಂತ ನಾನು...."

"ಓ ಓ....ಜಾಣೆ ಕಣೆ ನೀನು, ಜಾಣೆ. ನಿನಗೇ ಶಿಫಾರಸು ಮಾಡ್ಬೇಕಿತ್ತು ಭಾರತ ರತ್ನವೋ ಪದ್ಮಭೂಷಣವೋ....ಪದವಿ ಪಡೆಯೋಕೆ."

"ಸಾಕು ಬಿಡೀಂದ್ರೆ....ನಿಮ್ಗೊಂದು ಸುರುವಾಯ್ತು."

"ನಿನ್ನ ಮೊದ್ಲಿಗೆ ಸುರುವಾಯ್ತು ಆ ಮೇಲೆ ತಾನೇ ನನ್ದು...."

"ನಿಮ್ಮೊಡನೆ ವಾದ ಮಾಡೋಕೆ ಸುರ್ಶೊತ್ತಿಲ್ಲ."

"ಅಂತ ಕೆಲಸದಿಂದೇನು ಹರ್ಕತ್ತಾಗಿದೇಂತ?"

"ನೋಡಿ ಈಗ ನೀವೇ ಹೇಳಿದ್ರಿ ಅವ್ರವ್ರ ಕೆಲ್ಸದ ಚಿಂತೆ ಯೋಚನೆಯೆಲ್ಲಾ ಅವ್ರವ್ರಿಗೇಂತ. ಮತ್ತೆ ಈಗ .."

"ಪರ್ವಾಯಿಲ್ಲ ಕಣೆ ನೀನು. ನಿಜವಾಗಿಯೂ ನಿನಗೆ ಪ್ರಶಸ್ತಿ ನೀಡಬೇಕು."

"ಬಿಡೀಂದ್ರೆ.... ನಾನು ಹೋಗ್ತೇನೆ ಹಾಗಾದ್ರೆ...."

"ಎಲ್ಲಿಗೆ ಹೋಗ್ತಿಯೊ.... ನಿಲ್ಲು ಸ್ವಲ್ಪ ತಾಳು."

"ತಾಳೋದಂತೆ ತಾಳೋದು. ಒಂದು ಮಾತು ಅನ್ಬೇಕಾದ್ರೆ ಅದೆಷ್ಟು ತಾಳೋದೂಂತ."

"ತಾಳಿದವ ಬಾಳಿಯಾನೂಂತಾರೆ."

"ಎಲ್ಲಾ ಅಂತಾರೆ. ಯಾರು ಅಲ್ಲಾಂತಾರೆ? ತಾಳುವಿಗೂ ಒಂದು ಮಿತಿಯಿದೆಯೆಂದೂ ಅಂತಾರೆ."

"ಮಾತಿಗೆ ಮಾತು ಕೊಡೋದ್ರಲ್ಲಿ ನೀನು ಹ ಷಾರೂಂತಂದ್ನಲ್ಲಾ...."

"ನಿಮ್ಮ ಹೊಗಳಿಕೆ ಬೇಕಾದ್ರೂ ಯಾರಿಗೆ?"

"ನಾನೇನು ಹೊಗ[illegible]ನ್ನಿ? ಇದ್ದದ್ದನ್ನ ಇದ್ದಂತೆ ಹೇಳಿದ್ರೆ...."

"ಸಾಕೂಂತಂದ್ನಲ್ಲಾ! ಇದ್ಲಿ ಆದೆಲ್ಲಾ ನಿಮ್ಮೊಡನೆ. ಈಗ ಇನ್ನಾದ್ರೂ ಕೇಳಿದ ಪ್ರಶ್ನೆಗೆ ಉತ್ರ ಹೇಳ್ತೀರಾದ್ರೆ ಹೇಳಿ ಇಲ್ಲಾದ್ರೆ ಹೋಗ್ಬಿಡ್ತೇನೆ"

"ನಿಲ್ಲೂಂತಂದ್ನಲ್ಲಾ ...ಹಾಗೆ ಸಟಕ್ಕನೆ ಓಡಬೇಡ. ಮೊದ್ಲು ಎಲ್ಲಿ ಹೋಗ್ತೀಂತ ಹೇಳಿ ಆ ಮೇಲೆ ಬೇಕಾದ್ರೆ ಹೋಗು"

"....ಸರಿ....ಅಲ್ಲಾ, ಹೋಗೋರೆಲ್ಲಾ ಹೇಳಿಯೇ ಹೋಗ್ತಾರೇನ?"

"ಯಾರ್ಯಾರ ಕತೆ ಬಿಡು; ನಾನಂತೂ ಹೇಳದೆ ಹೋಗೋನಲ್ಲ. ಹಾಗೇ ನೀನೂ ಆಗ್ಬೇಕೂಂತ..."

"ಪಾಪ, ಭಾರಿ ದೊಡ್ಡ ಗಾಂಧಿಯವರು ನೀವು"

"ನಾನು ಗಾಂಧಿಯಾದ್ರೆ ನೀನು..."

"ಛಿ ...ಹಾಗೆಲ್ಲಾ ಅನ್ಬೇಡಿ. ಪಾಪ ಆ ಪತಿವ್ರತೆಯ ಹೆಸರಿಗೆ ಕಪ್ಪು ಹಚ್ಚಬೇಡಿ."

"ಹಾಗಾದರೆ ನೀನು ಪತಿ..."

"ಅಯ್ಯೋ ನಿಮ್ಮ ಏನನ್ನ ಬೇಕು? ನಾನೊಂದಂದ್ರೆ ನೀವು ಬೇರೊಂದು ತಿಳ್ಕೊಳ್ಬೇಡ್ರಿ. ದಮ್ಮಯ್ಯ ನಿಮ್ಮ... ಖಂಡಿತಕ್ಕೂ...."

"...ಏನೇ ಇದು? ಯಾಕೆ ನೀರು ಸುರ್ಸುತ್ತೀಯಾ....ಇಲ್ಲ ಕಣೇ ಇಲ್ಲ....ತಮಾಷೆಗೇಂತ ಅಂದ್ರೆ ಅದನ್ನ ನಿಜವೆಂದು ತಿಳಿಯೋದೆ?"

"..................."

"ಎತ್ತೆ....ತಲೆಯೆತ್ತೆ...ಇಲ್ಲ.....ಬೇಸರ ಮಾಡ್ಬೇಡ ಕಣೇ....ಅಯ್ಯೊ...ಪಾಪ ನನ್ನ ಕಸ್ತೂರಿ ಕರಟ ಕಾಡಿಗೆಯಾಯ್ತಲ್ಲ.... ಎಲ್ಲಿ, ನೋಡೋಣ, ಮುಖ...ಹಾಗೆ.... ಹಾಗೆ...ಹ್ಞಾಂ....ನೋಡು ಹೇಗೆ ಕಾಣುತ್ತಿ ಈಗ..."

"ಬಿಡೀಂದ್ರೆ...ನಾನು ಹೋಗ್ತೇನೆ..."

"ಕೋಪಿಸ್ಕೋ ಬೇಡ್ವೆ....ನೋಡು ಒಂದು ವಿಶೇಷ ಸುದ್ದಿ ತಂದೀನಿ. ಅಷ್ಕೇ ತಡವಾಯ್ತೂಂತೆ...."

"ನನ್ಗೊತ್ತಿತ್ತು. ಅದಿಲ್ದೆ ಇರುತಿದ್ರೆ ನೀವು ಇಷ್ಟು ತಡಮಾಡೋದಿಲ್ಲಾಂತ."

"ಏನದು ಹೇಳು ನೋಡೋಣ...."

"ನಾನೇನು ಹೇಳೋದು? ತಂದವ್ರು ಕೊಡ್ಬೇಕು."

"ಅದು ಸರೀನ್ನಿ. ಅದ್ರೂ......"

"ನಿಜಲಿಂಗಪ್ಪನವ್ರು ಸೋಡ್ತಿ ತೆಗೆದರು..."

"ಛಿ ..ಛೆ....ಏನಂತೀಯ ನೀನು? ಅವ್ರೇನು ಸೋಡ್ತಿ ತೆಗೆಯೋದು? ರಾಜ್ಯದ ರಕ್ಷಣಾ ನಿಧಿಯು ಟ್ರೈಫಲ್‌ನ ಸೋಡ್ತಿ ತಿಳೀತೆ?

"ಏನೇ ಇಲ್ಲಿ ಸೋಡ್ತಿ ಅಲ್ವೆ? ಏನಂತೆ ಅದ್ರ ಕತೆ?"

(೧೨ನೇ ಪುಟ ನೋಡಿರಿ)

Working Results of the Canara Bank Ltd. for the year 1963

"In keeping with the general trend, the working results of Canara Bank Limited, show an improvement over the previous year.

Deposits have registered an impressive increase of over 41% during the year and stand at over 72 Crores. Reflecting the higher level of economic activity the advances too increased to over Rs. 42 Crores as against Rs. 29·63 Crores at the end of last year. The total investments at the year end are around Rs. 20·64 Crores against Rs 17.80 Crores last year.

After provision for bonus to staff and taxation etc. the net profits exceed Rs. 24 lakhs. Directors are recommending a payment of dividend at the rate of 15% on Equity Capital as enlarged by the issue of shares in 1962.

Capital Increase: Capital at the end of 1963 is Rs. 1 Crore (as against Rs. 75 Lakhs in 1962).

Reserves strengthened: After the additions made during the year, reserves would amount Rs. 1 Crore (as against Rs. 76 lakhs in 1962).

All figures stated above are subject to audit.

ಬದಲಾವಣೆಗೆಂದು ಒಮ್ಮೆ ಎಸ್. ಆರ್. ಬೀಡಿಯನ್ನು ಬಳಸಿ ನೋಡಿರಿ, ಅಂದರೆ ನೀವು ತಪ್ಪದೆ ಅದನ್ನೇ ಎಂದೆಂದಿಗೂ ಕೊಂಡು ಕೊಳ್ಳುವಿರಿ.

S.R. BEEDI WORKS,
UDIPI, S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

In the Court of the Subordinate Judge of S. K. Mangalore.

S. C. No. 291 of 1963.

Between:—

P. Mohan Rao By G. P. Attorney B. V. Krishnayya —Plaintiff.

and

1. Poova Poojari. 2. Mammu —Defendants.

Notice to Mammu,
C/o Major A. V. K. Rao,
A. M. C. No. 15 Ord.
Department Lines,
Vanouri Road, POONA - 1.

Please take notice that the suit is posted to 10-30 A. M. on 12—2—1964 for your appearance. On your default to appear on that day, you will be declared exparte and the suit will be heard and decided in your absence.

K.P. Gopalakrishna Shetty,
Advocate for Plaintiff.

Mangalore, 27-1-1964.

ಚೀನಿ ಬುಟ್ಟಿಗೆ ಹಣ್ಣು

ಡಿಗಾಲೆಯವರು ಆವಸರ ಮಾಡಿದರೆ?

ಕೆಂಪು ಚೀನಾದ ಪ್ರಧಾನಿ ಚೌ-ಎನ್ ಲಾಯ್ ಅವರು ಕೈಗೊಂಡ ಆಫ್ರಿಕೆ–ಯುರೋಪ ಸಂದರ್ಶನದಲ್ಲಿ ದೊಡ್ಡ ಹಣ್ಣೊಂದನ್ನು ತನ್ನ ಬುಟ್ಟಿಗೆ ಹಾಕಿಕೊಂಡಿರುವರೆಂದು ಹೇಳಬೇಕು. ಫ್ರೆಂಚ ಸರಕಾರವು ತನ್ನ ಕೆಂಪು ಸರಕಾರವನ್ನು ಮನ್ನಿಸುವಂತೆ ಅದರ ಮನವೊಲಿಸುವಲ್ಲಿ ಅವರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಉಕ್ಕಿನ ಮನುಷ್ಯ ಡಿಗಾಲೆಯವರು ಲಾಯರ ವಾದಜಾಲಕ್ಕೆ ಸಿಲುಕಿ ಬಿದ್ದುದು ಆಶ್ಚರ್ಯದಲ್ಲಿ ಆಶ್ಚರ್ಯವೆನ್ನಲೇ ಬೇಕಾಗುತ್ತದೆ.

ಪೀಕಿಂಗನ್ನು ಪ್ಯಾರಿಸ್ ಮಾನ್ಯಮಾಡಿದುದು ನಿರೀಕ್ಷೆಗೂ ನಿಕಟವಾದುದನ್ನು ನಾವು ಗಮನಿಸುವುದಾದರೆ, ಇವೆರಡು ಸರಕಾರಗಳ ನಡುವೆ ಇದಕ್ಕೆ ಮೊದಲೇ ಗುಪ್ತ ಮಾತುಕತೆಗಳು ಈ ವಿಷಯದಲ್ಲಿ ನಡೆದಿರಬೇಕೆನಿಸುತ್ತದೆ. ಪಾಶ್ಚಾತ್ಯ ಬಣಕ್ಕೆ ಸೇರಿದ ಬ್ರಿಟನ್ ಮತ್ತು ಅಮೇರಿಕೆಗಳು ಇದರಿಂದ ನೊಂದುಕೊಂಡಿರುವುದರಿಂದ ಈ ಮಾತುಕತೆಗಳಲ್ಲಿ ಅವು ಸೇರಿಕೊಂಡಿಲ್ಲವೆಂದು ಹೇಳಬೇಕಾಗುತ್ತದೆ. ಅಮೇರಿಕೆಯು ಈ ಘಟನೆಯನ್ನು ದುರದೃಷ್ಟಕಾರಕ ಹೆಜ್ಜೆಯೆಂದು ಕರೆದಿದೆ. ಬೆಲ್ಜಿಯಂನ ಮುಖಂಡರೊಂದಿಗೆ ಟೋಕಿಯೋವಿಗೆ ಸಂದರ್ಶನಾರ್ಥ ತೆರಳಿದ ಅಲ್ಲಿನ ವಿದೇಶ ಮಂತ್ರಿಯವರು ಫ್ರಾನ್ಸವಿಟ್ಟ ಹೆಜ್ಜೆಯಿಂದ ಅಟ್ಲಾಂಟಿಕ್ ಒಡಂಬಡಿಕೆಯ ಮೇಲೆ ದುಷ್ಪರಿಣಾಮ ಬೀರುವುದೆಂದೂ ಪೂರ್ವ ಪಶ್ಚಿಮ ಸಂಬಂಧವು ತಿಳಿಗೊಳ್ಳುವ ಸದಾಶಯವಿಟ್ಟುಕೊಂಡವರನ್ನು ಗೊಂದಲಕ್ಕೆ ತಳ್ಳುವುದೆಂದೂ ಉದ್ಗರಿಸುವರು. ಫ್ರಾನ್ಸಿನ ಮಾಜಿ ಪ್ರಧಾನ ಮಂತ್ರಿ ಎಂ. ಎಡ್ಗರ್ ಫಾರ್‌ರವರು ಒಂದು ಲೇಖನದಲ್ಲಿ ಫ್ರಾನ್ಸವು ಕಮ್ಯುನಿಸ್ಟ ಚೀನಕ್ಕೆ ಮನ್ನಣೆ ನೀಡಿರುವುದನ್ನು ಸಮರ್ಥಿಸಿದ್ದಾರೆ. ಈ ಮಹನೀಯರು ಇತ್ತೀಚೆಗೆ ಪೀಕಿಂಗಿಗೆ ಭೆಟ್ಟಿಯನ್ನೂ ನೀಡಿರುವರು. "ಫಾರ್ಮೋಸಾದ ರಾಷ್ಟ್ರೀಯ ಸರಕಾರವು ಚೀನಾವನ್ನು ಆಳುತ್ತಿದೆಯೆಂದು ಅಧಿಕಾರ ವಾಣಿಯಿಂದ ಹೇಳುವುದು ಸಾಧ್ಯವಿಲ್ಲ. ಫಾರ್ಮೋಸಾವು ಫ್ರಾನ್ಸದೊಡನೆ ಸಂಬಂಧವನ್ನು ಕಡಿದುಕೊಂಡರೆ, ಅದು ಫ್ರಾನ್ಸದ ಅಪರಾಧವೆನಿಸುವುದಿಲ್ಲ. ಫ್ರಾನ್ಸವು ಏಶ್ಯಾದೊಡನೆ ಸಾಂಸ್ಕೃತಿಕ ಸಂಬಂಧವನ್ನು ಹೊಂದಿದೆ, ಇದಕ್ಕೀಗ ಏಶ್ಯಾದಲ್ಲಿ ವಸಾಹತುಗಳಿರುವುದಿಲ್ಲ. ಆದುದರಿಂದ ತನ್ನ ಆಡಳಿತೆಯ ಅನುಭವ ಮತ್ತು ಜ್ಞಾನದಿಂದ ಚೀನಾವು ಪಶ್ಚಿಮದತ್ತ ನೋಡಲು ಬಾಗಿಲು ತೆರೆಯಲು ಉಳಿದೆಲ್ಲ ದೇಶಗಳಿಗಿಂತ ಫ್ರಾನ್ಸವು ಉತ್ತಮ ಪರಿಸ್ಥಿತಿಯಂವ ಕೊಡಿಸ" ಎಂದವರು ಹೇಳುತ್ತಾರೆ

ಕಮ್ಯುನಿಸ್ಟ ಚೀನಾ ಸರಕಾರವನ್ನು ಮನ್ನಿಸುವ ಯಾವುದೇ ಸರಕಾರದೊಡನೆ ಫಾರ್ಮೋಸಾವು ರಾಜತಾಂತ್ರಿಕ ಸಂಬಂಧವನ್ನು ಕಡಿದುಕೊಳ್ಳುವುದು ಸಂಪ್ರದಾಯವಾಗಿ ಬಂದಿದೆ. ಆದರೆ, ಫ್ರಾನ್ಸಿನ ವಿಚಾರದಲ್ಲಿ ಮಾತ್ರ ಹೀಗಾಗಲಾರದು. ಏಕೆಂದರೆ, ಅಮೇರಿಕೆಯ ಒತ್ತಡವನ್ನು ಫಾರ್ಮೋಸಾ ಹೊರಲೇ ಬೇಕಾಗುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯನಾಗಿರುವ ಫಾರ್ಮೋಸಾವು ಅಲ್ಲಿ ತನ್ನ ಸ್ಥಾನಕ್ಕೆ ಚ್ಯುತಿ ತಂದುಕೊಳ್ಳಬಾರದು ಎಂದು ಅಮೇರಿಕೆಯ ಆಶಯ. ಇದಕ್ಕಾಗಿ ಸಂಘದ ಯಾವ ಸದಸ್ಯ ರಾಷ್ಟ್ರದೊಡನೆಯೂ ಫಾರ್ಮೋಸಾ ರಾಜತಾಂತ್ರಿಕ ಸಂಬಂಧವನ್ನು ಕಡಿದುಕೊಳ್ಳಬಾರದು ಎಂದು ಅದು ಬಯಸುತ್ತದೆ. ಫ್ರಾನ್ಸ್ ತೋರಿಸಿದ ದಿಟ್ಟತನದಿಂದ ಪ್ರೇರಿತರಾಗಿ ಅದು ತುಳಿದ ದಾರಿಯನ್ನೇ ಹಲವಾರು ರಾಷ್ಟ್ರಗಳು ತುಳಿಯುವ ನಿರೀಕ್ಷೆಯಿದೆ ಫ್ರಾನ್ಸು ಎರಡೂ ಚೀನಾ ದೇಶಗಳನ್ನು ಮನ್ನಿಸಲು ಸಿದ್ಧವಿದೆ; ಮತ್ತು ಇದು ಕೆಲವು ಬ್ರಿಟಿಷ್ ನಾಯಕರು ಮಂಡಿಸುವ "ದ್ವಿಚೀನನೀತಿ"ಯನ್ನು ಹೋಲುತ್ತದೆ. ಆದರೆ, ಎರಡೂ ಸರಕಾರಗಳು ಸಮಾನ ಮಾನ್ಯತೆಯವೆಂದು ಇದರ ಅರ್ಥವಲ್ಲ ಏಕೆಂದರೆ, ಚೀನಾದ ನಿಜವಾದ ಸರಕಾರವು ಪೀಕಿಂಗಿನದೆಂದೂ ರಾಷ್ಟ್ರೀಯರು ಕೇವಲ ಫಾರ್ಮೋಸಾದ ಮೇಲೆ ಮಾತ್ರ ನಿಯಂತ್ರಣ ಇರಿಸಿಕೊಂಡಿರುವರೆಂದೂ ಪ್ಯಾರಿಸಿನ ಅಭಿಪ್ರಾಯವಿರುವುದು. ಫ್ರೆಂಚ ಸರಕಾರವು ಇನ್ನು ಮೂರು ತಿಂಗಳ ಒಳಗೆ ಪೀಕಿಂಗಿಗೆ ತನ್ನ ರಾಯಭಾರಿಯನ್ನು ಕಳಿಸುವುದು ಎಂಬ ವಾರ್ತೆಯು ಅದರ ಈ ನೀತಿಯ ಅರ್ಥವನ್ನು ಸ್ಪಷ್ಟವಾಗಿ ವಿವರಿಸುತ್ತದೆ; ಸಮರ್ಥಿಸುತ್ತದೆ. ಬ್ರಿಟನ್ನಿನ ರಾಯಭಾರಿಯೊಬ್ಬನು ಪೀಕಿಂಗಿನಲ್ಲಿರುವನಾದರೂ ಆತನು ಮಾಡಬೇಕಾದ ಕೆಲಸಗಳು ಬಹಳ ಕಡಿಮೆ. ಟಿಬೇಟು ಮತ್ತು ಲಡಖಗಳಲ್ಲಿ ಇತ್ತೀಚೆಗೆ ಉಂಟಾದ ವಿವಾದಗಳಿಗೆ ಮೊದಲು ಭಾರತೀಯ ರಾಯಭಾರ ಕಚೇರಿಯು ಪೀಕಿಂಗ್‌ನ ವಿದೇಶೀ ಸಂಬಂಧದಲ್ಲಿ ಅಗ್ರಗಣ್ಯ ಪಾತ್ರವಹಿಸುತಿತ್ತು. ೧೯೬೦ರಲ್ಲಾದ ತಾತ್ತ್ವಿಕ ಜಗಳಗಳಿಗೆ ಮೊದಲು ರಶ್ಯನ್ ರಾಜದೂತನ ಸ್ಥಾನಮಾನಗಳೂ ಅದೇ ರೀತಿಯಲ್ಲಿದ್ದುವು. ಆದರೆ, ಇಂದು ಭಾರತ ಮತ್ತು ರಶ್ಯಗಳೆರಡೂ ಚೀನಾದಲ್ಲಿ ಅಪ್ರಿಯವಾಗಿವೆ; ಇವುಗಳ ನಡುವೆ ದೊಡ್ಡದಾದರೂ ತುಂಬ ಬಹುದಾದ ಬಿರುಕಿದೆ. ಇಂಡೋಚೀನಾ, ಲಾವೋಸ್ ಮತ್ತು ಕಂಬೋಡಿಯಗಳ ವ್ಯವಹಾರದಲ್ಲಿ ಸ್ವಾಭಾವಿಕವಾಗಿ ಫ್ರಾನ್ಸಿಗೆ ಆಸಕ್ತಿಯಿದೆ; ತಟಸ್ಥ ಇಂಡೋ-ಚೀನಾವನ್ನು ಕಾಣುವ ಆತುರ ವ್ಯಕ್ತಪಡಿಸಿ ಅದು ಈ ಆಸಕ್ತಿಯನ್ನು ಮತ್ತಷ್ಟು ಹೆಚ್ಚಿಸುತ್ತಲೇ ಬರುತ್ತಿದೆ. ಫ್ರಾನ್ಸದ ಈ ನೀತಿಯು ಸುತ್ತಮುತ್ತ ಅನೇಕರ ಪ್ರಭಾವದಿಂದ ಪಡೆಯುತ್ತಿರುವ ಕೆಂಪು ಚೀನಕ್ಕೆ ಅನುಕೂಲವಾಗಿಯೇ ಇದೆ

ಪೀಕಿಂಗಿನೊಡನೆ ರಾಜತಾಂತ್ರಿಕ ಸಂಬಂಧದೊಡನೆ ಆ ಸರಕಾರವನ್ನು ಮನ್ನಿಸುವ ಫ್ರಾನ್ಸದ ಮುಂದಿನ ನೀತಿಯೇನು ಎಂಬುದಿನ್ನೂ ಅಸ್ಪಷ್ಟವಿದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅದಕ್ಕೆ ಸ್ಥಾನವನ್ನು ಕಲ್ಪಿಸಿ ಕೊಡಲು ಅದು ಪ್ರಯತ್ನಿಸುವುದೆ? ಆದರೆ, ಅದು ತನ್ನ ಪಾಶ್ಚಾತ್ಯ ಮಿತ್ರರನ್ನು ಬದಿಗಿಟ್ಟು ಏಕಪಕ್ಷೀಯವಾಗಿ ಇಂತಹ ಸಾಹಸಕ್ಕೆ ಕೈ ಹಾಕುವುದು ಎಂದು ಹೇಳುವಂತಿಲ್ಲ. ಹಾಗಿದ್ದರೂ ಪೀಕಿಂಗಿಗೆ ಇಂದು ತನ್ನ "ಸಂಭಾವಿತಗಿರಿಯನ್ನು" ಜಗಜ್ಜಾಹೀರು ಮಾಡುವ ಇರಾದೆಯಿರುವದರಿಂದ ಸಂಯುಕ್ತ ರಾಷ್ಟ್ರ ಸಂಘದಲ್ಲಿಯೂ ಪ್ರವೇಶ ಬಯಸುತ್ತಿದೆ. ಇದಕ್ಕೆಂದೇ ಅದು ಡಿಗಾಲೆಯವರಿಗೆ ಹಣ ತೋರಲೂ ಬಹುದು; ಅವರು ಅಭಯ ನೀಡಿರಲೂ ಬಹುದು. ಅಮೇರಿಕೆ ಬ್ರಿಟನ್ನುಗಳನ್ನು ಮುಂದೆ ಹಾಕಿಕೊಂಡು ಡಿಗಾಲೆ ಇಂತಹ ಮಹಾ ಸಾಹಸಕ್ಕೆ ಕೈಹಾಕುವರೆಂದು ಹೇಳುವಂತಿಲ್ಲ. ಅದೇನಿದ್ದರೂ ಚೀನಾದ ಮುಂದೆ ಗೆಳೆತನದ ಹಸ್ತಲಾಘವ ನೀಡಿದ ಡಿಗಾಲೆ ಆಚ್ಚರಿಯ ಅನಿರೀಕ್ಷಿತ ಕಾರ್ಯವೊಂದನ್ನು ಮಾಡಿ, ಉಳಿದವರನ್ನು ವಿಚಾರ ಕೋಲಾಹಲಕ್ಕೆ ಕೆಡಹಿದರು, ಇದು ಖಂಡಿತ.

ಪೀಕಿಂಗ್ ತನಗೆ ಇಷ್ಟಬಂದಂತೆ ನಡೆದುಕೊಳ್ಳಲು ಸ್ವತಂತ್ರವಿದೆ; ನಿಜ. ಆದರೂ ತಟಸ್ಥ ರಾಷ್ಟ್ರ ಭಾರತದ ಮೇಲೆ ಆಕ್ರಮಣ ಮಾಡಿ, ತನ್ನ ಸಾಮ್ರಾಜ್ಯವಾದವನ್ನು ಪ್ರದರ್ಶಿಸುತ್ತಿರುವ ಕೆಂಪು ಚೀನಾದ ವಿಷಯವಾಗಿ ಅದು ಸ್ವೀಕರಿಸಿದ ನೀತಿ ಮಾತ್ರ ಸಂದರ್ಭೋಚಿತವಲ್ಲ, ದುರದೃಷ್ಟಕರ ಘಟನೆಯೆಂಬುದರಲ್ಲಿ ಸಾಕಷ್ಟು ಅರ್ಥ ಹುದುಗಿದೆ ಈ ಅರ್ಥ ಸ್ಫೋಟವಾಗಲು ಹೆಚ್ಚು ಸಮಯಾವಕಾಶವು ಬೇಕಾಗಲಾರದು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 318/63.

ಗೋಪಾಲಯ್ಯ — ವಾದಿ

ಮತ್ತು

ತುಂಗು ಪೂಜಾರ್ತಿ ಕೂಡಾ — ಪ್ರತಿವಾದಿಯು.

ಇವರೊಳಗೆ

—ಉಡುಪಿ ತಾಲೂಕು ಕೋಟ ಗ್ರಾಮದ ಅಂಬಾಡಿಯಲ್ಲಿರುವ ಮೃತ ತುಂಬೆ ಪೂಜಾರ್ತಿಯ ಗಂಡ ಕುದುಕ ಪೂಜಾರಿ — 11ನೇ ಪ್ರತಿವಾದಿ — ಇವರಿಗೆ ತಿಳಿಸುವುದೇನೆಂದರೆ:—

ವಾದಿಯು ನಿಮ್ಮ ಮೇಲೆ ಕೂಡಾ ಗೇಣಿ ಬಾಕಿ ಕೇಳಿ ಮಾಡಿದ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾ 21—2—64ರಂದು ಇಡಲ್ಪಟ್ಟಿದೆ. ಆ ದಿನ ನೀವು ಹಾಜರಾಗಿ ಉದಹರಿಸಿಕೊಳ್ಳಲು ತಪ್ಪಿದಲ್ಲಿ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ.

P.N. Krishnamoorthy Rao.

Advocate for Plaintiff.

Udipi, S. K. Dated 28-1-64.

ಪರಿಷ್ಕಾರಕ್ಕಾಗಿ ಪುರಸ್ಕಾರ ನೀಡಿರಿ!

ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾಗಿ ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರು ಸಂಪಾದಕರಾಗಿದ್ದ ವಿಚಾರಶೀಲರ ಮೆಚ್ಚಿನ ವಾರಪತ್ರಿಕೆ

ನವಯುಗ

ಉಡುಪಿ

ನೂತನ ಪರಿಷ್ಕರಣ ಹೊಂದಲಿದೆ

ಪ್ರೋತ್ಸಾಹಿಸಿ ಸಹಕರಿಸಿರಿ

ವಾರ್ಷಿಕ ಚಂದಾ ರೂ. ೧೦-೦೦

ಹೊಸ ಚಂದಾದಾರರಿಗೆ ಈಗತಾನೆ ಪ್ರಕಟವಾದ ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನೂ ಕಳಿಸಲಾಗುವುದು.

ಸಂಚಾಲಕ-ಸಂಪಾದಕ— ಕೆ. ಹೊನ್ನಯ್ಯ ಶೆಟ್ಟಿ.



'ನಾಯಕ್ಸ್'

ಬಿಂಬ್ ಬಾಂಬ್

ಗೋಡೆ ಗಡಿಯಾರಗಳು

ಸಮಯ ಸೂಚಿಸುವುದರಲ್ಲಿ ಅತ್ಯುತ್ತಮ.

BIM BAM hour and half-hour Striking

3 Rod gong

Size 23" × 12" Dial 8"

M. No. 116 Rs. 150/-

ಎಂ. ವಾಮನ್ ನಾಯಕ್ ಎಂಡ್ ಸನ್ಸ್

ಕೆ. ಎಸ್. ರಾವ್ ರೋಡ್,

ಮಂಗಳೂರು-1

ನವಯುಗ

ವರುಷ ೪೩ | ಉಡುಪಿ ೬-೨-೧೯೬೪ | ವಾರ ೨೩

ದಾನವತೆಯೆದುರು ಮಾನವೀಯತೆ

ಲಂಚಾಸುರನ ಹಾವಳಿಯು ಬಹು ತಡವಾಗಿಯಾದರೂ ನಮ್ಮ ಕೇಂದ್ರ ಸರಕಾರಕ್ಕೆ ಮನವರಿಕೆಯಾದುದು ನಿಜಕ್ಕೂ ಸಂತೋಷ. ಕೇಂದ್ರ ಗೃಹ ಸಚಿವ ಶ್ರೀ ಗುಲ್ಜಾರೀಲಾಲ ನಂದಾ ಅವರು ಎರಡು ವರ್ಷಗಳ ಒಂದು ಯೋಜನೆಯನ್ನು ಹಾಕಿಕೊಂಡು, ಅದರೊಳಗೆ ಭ್ರಷ್ಟಾಚಾರವನ್ನು ಪರಿಣಾಮಕರವಾಗಿ ತಡೆಯುವ ಹೇರಾಸೆಯನ್ನಿಟ್ಟುಕೊಂಡಿದ್ದಾರೆ. ತನ್ನ ಯೋಜನೆಯನ್ನು ಕಟ್ಟುನಿಟ್ಟಾಗಿ ವ್ಯವಹೃತಗೊಳಿಸುವ ಉದ್ದೇಶದಿಂದ ಭಾರತ ಸರಕಾರವು ವಿಚಕ್ಷಕ ಆಯೋಗವೊಂದನ್ನು ನೇಮಿಸಿ ಅದರ ಅಧ್ಯಕ್ಷರನ್ನಾಗಿ ಕರ್ನಾಟಕದ ಹಿರಿಷ್ಟ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶ ಶ್ರೀ ನಿಟ್ಟೂರು ಶ್ರೀನಿವಾಸ ರಾಯರನ್ನು ನೇಮಿಸಿದೆ. ಶ್ರೀಯುತ ನಿಟ್ಟೂರರು ಈಗಾಗಲೇ ತನ್ನ ಹೊಸ ಹುದ್ದೆಯನ್ನು ಸ್ವೀಕರಿಸಿದ್ದಾರೆ.

ಶ್ರೀ ಶ್ರೀನಿವಾಸರಾಯರು ರಾಷ್ಟ್ರೀಯವಾದಿಗಳು. ಅವರು ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿ ಕೊನೆಗೆ ಹಿರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನಿಷ್ಪಕ್ಷಪಾತ ನ್ಯಾಯದಾನಕ್ಕೆ ಹೆಸರಾದವರು. ಈ ಹುದ್ದೆಯಿಂದ ನಿವೃತ್ತರಾಗುವುದಕ್ಕೆ ಮೊದಲು ರಾಜ್ಯದ ರಾಜ್ಯಪಾಲರಾಗಿಯೂ ಎರಡು ತಿಂಗಳ ಕಾಲ ನೇಮಿತರಾಗಿದ್ದವರು. ತನ್ನ ಸೇವಾವಧಿಯಲ್ಲಿ ಸರಳತೆಗೆ ಮತ್ತು ಸಮರ್ಥತೆಗೆ ಹೆಸರಾದ ಇವರು ತಮಗೆ ಒದಗಿದ ಹೊಸ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಶಕ್ತರೆಂದು ಎಲ್ಲರೂ ನಂಬಿದ್ದಾರೆ. ಆದರೆ, ಅವರ ಹೊಸ ಕೆಲಸವು ಸುಲಭದ್ದೆಂದು ಯಾರಾದರೂ ಹೇಳಬಹುದು. ಲಂಚ ನಿರ್ಮೂಲನದ ಕಾರ್ಯವು ಯಶಸ್ವಿಯಾಗಬೇಕಾದರೆ, ಈ ಯೋಜನೆಗೆ ಎಲ್ಲರ ಸಹಕಾರವು ಅತ್ಯಗತ್ಯ. ಭ್ರಷ್ಟಾಚಾರವು ವಿಶಾಲವಾಗಿ ಹರಡಿರುವುದು ಸರಕಾರಿ ವಲಯದಲ್ಲಿ. ಹಾಗೆಂದು ಸರಕಾರಿ ಅಧಿಕಾರಿಗಳೇ ಮೂಲ ಕಾರಣರು ಎಂದು ಹೇಳಬೇಕಾಗುತ್ತದೆ. ನಾಗರಿಕರು ಲಂಚ ನೀಡಲು ಹಿಂಜರಿಯುತ್ತಾರೆ ನಿಜ. ಆದರೆ, ಅವರು ಏಕೆ ಹಾಗೆ ಒಪ್ಪುತ್ತಾರೆ? ಸರಕಾರಿ ಕಛೇರಿಯಿಂದ ತಮಗೆ ಅನುಕೂಲವಾಗುವಂತೆ ಕಾರ್ಯ ನಡೆಯಬೇಕಾದರೆ ಮಾತ್ರ. ಸರಕಾರಿ ಅಧಿಕಾರಿಗಳಲ್ಲಿ ನಿಷ್ಪಕ್ಷಪಾತತನವಿರುವುದಾದರೆ, ಅವರು ಭ್ರಷ್ಟಾಚಾರಿಗಳಾಗಬೇಕಾಗಿಲ್ಲ. ನಾಗರಿಕರು ತಾವು ಮಾಡಿಕೊಂಡ ಮನವಿ, ಹಾಕಿಕೊಂಡ ಅರ್ಜಿ ಇತ್ಯಾದಿಗಳಿಗೆ ತ್ವರಿತ ಉತ್ತರ ಬಯಸುತ್ತೇವೆಂದಾದರೆ, ಅದು ಅನುಕೂಲವೇ ಆಗಿರಬೇಕು ಎಂದು ಪ್ರತ್ಯೇಕ ಹೇಳುವುದು ಅನಗತ್ಯ. ಅಧಿಕಾರಿಗಳನ್ನೂ ನೌಕರರನ್ನೂ ಒಲಿಸಿಕೊಳ್ಳಬೇಕಾಗುತ್ತದೆ. ಸರಕಾರಿ ವಲಯದಲ್ಲಿ ಶೀಘ್ರ ಕಾರ್ಯವು ನಡೆಯುವುದಾದರೆ, ಇಂತಹ ಪ್ರಮೇಯ ಬರುವುದಿಲ್ಲ. ಪ್ರತಿಯೊಂದಕ್ಕೂ ಪರವಾನಿಗೆ ಪಡೆಯಲೇ ಬೇಕಾಗುವ ಇಂದಿನ ರಾಜ್ಯಭಾರದಲ್ಲಿ ನಾಗರಿಕರು ಬೇಡವೆಂದರೂ ಸರಕಾರಿ ಕಛೇರಿಯೊಂದಿಗೆ ಒಂದಲ್ಲ ಒಂದು ವಿಧದಲ್ಲಿ ಸಂಪರ್ಕವಿರಿಸಿಕೊಳ್ಳಬೇಕಾಗುತ್ತದೆ. ತನ್ನ ಕಾರ್ಯವು ಬೇಗನೇ ನಡೆಯುವುದಾದರೆ, ಅದಕ್ಕಾಗಿ ಸ್ವಲ್ಪ ಹಣ ವೆಚ್ಚ ಮಾಡುವುದಕ್ಕೂ ನಾಗರಿಕರು ಹಿಂಜರಿಯದಿರುವುದು ಅನುಕೂಲತೆಯ ದ್ಯೋತಕ. ಹತ್ತು ಕಿಲೋ ಸಕ್ಕರೆ ಪಡೆಯಲು ಪರವಾನಿಗೆಗೆಂದು ತನ್ನ ಉದರ ಪೋಷಣೆಯ ಕಾರ್ಯಭಾರವನ್ನು ತ್ಯಜಿಸಿ ಹತ್ತು ಸಾರಿ ಸಂಬಂಧಪಟ್ಟ ಕಛೇರಿಗೆ ಹೋದರೂ ನಿರಾಶನಾಗುವ ನಾಗರಿಕ ಒಂದೆರಡು ರೂಪಾಯಿಗಳಷ್ಟು ವೆಚ್ಚಮಾಡಬಲ್ಲನಾದರೆ, ಮೊದಲ ಭೆಟ್ಟಿಯಲ್ಲೇ ತನ್ನ ಕಾರ್ಯಸಿದ್ಧಿ ಸಿಕೊಳ್ಳಬಲ್ಲ ಕಾಲವಿದು. ಹಾಗಿರುವಾಗ, ಭ್ರಷ್ಟಾಚಾರದ ನಿರ್ಮೂಲನದ ಕಾರ್ಯವು ಯಶಸ್ವಿಯಾಗಬೇಕಾದರೆ, ಸರಕಾರಿ ಕಚೇರಿಗಳಲ್ಲಿ ವ್ಯವಹಾರ ತೀವ್ರಗೊಳ್ಳಬೇಕು. ದಿನನಿತ್ಯದ ವ್ಯವಹಾರದಲ್ಲಿ ಸರಕಾರದ ಕೈವಾಡ ಕಡಿಮೆಯಾಗಬೇಕು. ಅಧಿಕಾರಿಗಳಲ್ಲಿ ಭ್ರಷ್ಟಾಚಾರದ ಬಗ್ಗೆ ಜುಗುಪ್ಸೆ ಮೂಡುವಂತಾಗಬೇಕು; ನೌಕರರಾದರೂ ನಾಗರಿಕರ ಸೇವಕರು ತಾವೆಂಬ ಭಾವನೆಯನ್ನು ತಳೆಯಬೇಕು. ನಾಗರಿಕರು ತಮ್ಮ ಉದ್ದೇಶ ಸಾಧನೆಗಾಗಿ ಅನ್ಯಾಯದ ಮಾರ್ಗವನ್ನು ಹಿಡಿಯಬಾರದು. ಆದರೆ, ಇವೆಲ್ಲಾ ಆದರ್ಶ ಭಾವನೆಗಳು. ಇಂತಹ ಆದರ್ಶ ನಮ್ಮ ಬದುಕಿನಲ್ಲಿ ರಕ್ತಗತವಾಗಬೇಕಾದರೆ, ಅದೆಷ್ಟು ದಶಕಗಳು ಕಳೆಯಬೇಕೋ ಏನೊ? ಆದುದರಿಂದ ಇಂದು ಭ್ರಷ್ಟಾಚಾರದ ಶೀಘ್ರ ಉಪಶಮನಕ್ಕೆ ದಂಡೋಪಾಯವೊಂದೇ ಸಾಧನವೆಂಬ ನಿರ್ಣಯಕ್ಕೆ ಹೆಚ್ಚಿನವರು ಬರುವುದು ಸ್ವಾಭಾವಿಕ. ಇದನ್ನು ಅನ್ಯಗಳೆಯುವುದೂ ಕಷ್ಟ.

ಹಿಂದೆ ಲಂಚವೆಂಬುದಿದ್ದಿತಾದರೂ ಅದು ಈಗಿನಂತೆ ವಿಶಾಲವಾಗಿ ಹರಡಿರಲಿಲ್ಲ. ಲಂಚಖೋರರು ದೂರಿತರೆಂದಾದಲ್ಲಿ ಅವರಿಗೆ ಕಠಿನ ಶಿಕ್ಷೆ ವಿಧಿಸಲಾಗುತಿತ್ತು. ಮೂಗು ಕತ್ತರಿಸುವುದು, ಕೈ ತುಂಡರಿಸುವುದು—ಇವೇ ಮೊದಲಾದುವು ಅಂದಿನ ಬರ್ಬರ ಶಿಕ್ಷೆಯಾಗಿತ್ತು. ಇಂದು ಪ್ರಜಾಪ್ರಭುತ್ವ ಯುಗದಲ್ಲಿ, ಮಾನವತೆಯ ರಾಜ್ಯಭಾರದಲ್ಲಿ ದಂಡ ನೀತಿಯಲ್ಲೂ ಮಾನವತೆಯು ಕಾಣಿಸಿಕೊಂಡಿದೆ. ಆದುದರಿಂದಲೇ ಸುಲಿದ ತಿನ್ನುವ, ತಿನ್ನಲು ಪ್ರೇರೇಪಿಸುವ ಬರ್ಬರ ಸ್ವಭಾವದ ಮೇಲೆ ಈ ಮಾನವೀಯತೆಯು ಯಾವ ಪರಿಣಾಮವನ್ನೂ ಬೀರುವುದಿಲ್ಲವೆನ್ನಬಹುದು. ಅದಕ್ಕಾಗಿ ಜನತೆಯಲ್ಲಿ ನೈತಿಕ ಮಟ್ಟವು ಏರುವ ವರೆಗಾದರೂ ಭ್ರಷ್ಟಾಚಾರದ ನಿರ್ಮೂಲನಕ್ಕೆ ಸರಕಾರವು ಉಗ್ರ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅಪರಾಧಿತರನ್ನು ಅವರೆಷ್ಟು ದೊಡ್ಡವರೇ ಇರಲಿ ಕಠಿಣ ದಂಡನೆಗೆ ಗುರಿ ಮಾಡಲೇ ಬೇಕಾಗುತ್ತದೆ. ಇದಕ್ಕೆ ಅನುಕೂಲವಾದ ನೀತಿಯನ್ನು ಸರಕಾರವು ಅನುಸರಿಸಬೇಕಾಗುತ್ತದೆ. ಶ್ರೀ ನಿಟ್ಟೂರ ಶ್ರೀನಿವಾಸ ರಾಯರು ನೈತಿಕ ವಾತಾವರಣ ಉಂಟಾಗದೆ ಭ್ರಷ್ಟಾಚಾರ ನಿರ್ಮೂಲನ ಸಾಧ್ಯವಿಲ್ಲವೆಂದಿರುವುದನ್ನು ಅವಶ್ಯ ಒಪ್ಪಲೇಬೇಕಾದರೂ, ದಂಡನೀತಿಯಿಂದ ಇದನ್ನು ಪರಿಣಾಮಕಾರಿಯಾಗಿ ತಡೆಯುವುದು ಅಸಾಧ್ಯವಾದುದಲ್ಲ.

ಜಗತ್ಪರ್ಯಟನ

ಪಿ. ಟಿ ಚಾಕೋ

ಕೇರಳದ ಗೃಹಮಂತ್ರಿ ಶ್ರೀ ಪಿ ಟಿ ಚಾಕೋ ಇಂದು ಇಡಿಯ ದೇಶದ ಗಮನವನ್ನು ತನ್ನತ್ತ ಸೆಳೆದುಕೊಂಡಿದ್ದಾರೆ. ೪೯ ವರ್ಷ ಪ್ರಾಯದ ಚಾಕೋ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದವರು. ಎ ಐ ಸಿ ಸಿ, ಕೆ. ಪಿ. ಸಿ. ಸಿ ಯಲ್ಲಿ ಸದಸ್ಯರಾಗಿದ್ದವರು. ೧೯೬೦ರ ವರೆಗೆ ಕಾಂಗ್ರೆಸ್ ಕೇರಳದಲ್ಲಿ ವಿರೋಧಿ ಪಕ್ಷವಾಗಿದ್ದಾಗ ಅದರ ನಾಯಕರಾಗಿದ್ದವರು. ೧೯೬೦ರಿಂದಲೂ ಗೃಹ ಮಂತ್ರಿಯಾಗಿರುವವರು. ಇವರು ಮಾಡಿದ ಮಹಾಪರಾಧವೇನು ಎಂಬುದೆಲ್ಲರಿಗೂ ತಿಳಿದಿಲ್ಲವಾದರೂ ಅವರನ್ನು ಮಂತ್ರಿ ಮಂಡಳಿಯಿಂದ ಕೀಳುವ ಪ್ರಯತ್ನ ನಡೆದಿರುವುದನ್ನಂತೂ ಎಲ್ಲರೂ ಬಲ್ಲರು. ಇತ್ತೀಚೆಗೆ ಬಂದ ಸುದ್ದಿಯಂತೆ ಚಾಕೋ ರಾಜೀನಾಮೆ ನೀಡಲು ನಿರಾಕರಿಸಿದ ಕಾರಣದಿಂದ, ಅವರನ್ನು ಹೊರತಳ್ಳುವುದು ಅತ್ಯಗತ್ಯವಾದುದರಿಂದ, ಮುಖ್ಯ ಮಂತ್ರಿ ಆರ್ ಶಂಕರರೇ ರಾಜೀನಾಮೆಯಿತ್ತು ಸಮಸ್ಯೆಯನ್ನು ಮುಕ್ತಾಯಗೊಳಿಸುವ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ, ಈ ರಾಜೀನಾಮೆಯು ಹೊಸ ಸಮಸ್ಯೆಯೊಂದಕ್ಕೆ ನಾಂದಿಯಾಗಲಾರದೆ?

ಪ್ರಥಮ ಕರ್ತವ್ಯ

ದುಃಖ್ಯವಲ್ಲಾದ ಜಾತೀಯ ಗೊಂದಲದ ಪರಿಣಾಮ ಭಾರತದ ಮೇಲೆ ಪ್ರತ್ಯಕ್ಷವಾಗಿಯೇ ಬೀರಿತು. ಕಲಕತ್ತೆಯಲ್ಲಿಯೂ ಜಾತೀಯತೆಯು ಹೆಡೆಯೆತ್ತಿ ವಾತಾವರಣವನ್ನು ಕಲುಷಿತಗೊಳಿಸಿದುದು ಒಂದಾದರೆ ಪೂರ್ವ ಪಾಕಿಸ್ತಾನದಿಂದ ಅಲ್ಪ ಸಂಖ್ಯಾತರು ಭಾರತಕ್ಕೆ ಧಾವಿಸಿ ಬರತ್ತಿರುವುದು ಇನ್ನೊಂದು. ಹೀಗೆ ನಿರಾಶ್ರಿತರಾಗಿ ಬಂದವರ ಸಂಖ್ಯೆ ಈಗಾಗಲೇ ೩೦ ಸಾವಿರದ ಗಡಿಯನ್ನೂ ಮೀರಿದೆ. ರಾಜನೀತಿ ವಿಚಕ್ಷಣರ ಅಭಿಪ್ರಾಯದಂತೆ ಸುಮಾರು ೧೦ ಲಕ್ಷ ನಿರಾಶ್ರಿತರು ಭಾರತಕ್ಕೆ ಬರಬಹುದು. ಇವರೆಲ್ಲರೂ ಭಾರತದಲ್ಲಿ ಶಾಶ್ವತವಾಗಿ ನೆಲೆನಿಲ್ಲಲು ಬಯಸುವುದಾದರೆ, ಅವರಿಗೆ ಆಶ್ರಯ ನೀಡುವ ಜವಾಬುದಾರಿಯಿಂದ ಭಾರತವು ಕೈತೊಳೆದುಕೊಳ್ಳುವುದು ಸಾಧ್ಯವಿಲ್ಲ. ಇದಕ್ಕೆಂದೇ ಪುನರ್ನಿವೇಶನದ ಕುರಿತು ಉಚ್ಚ ವಲಯದಲ್ಲಿ ಈಗಾಗಲೇ ಪರ್ಯಾಲೋಚನೆ ನಡೆದಿದೆ. ಆದರೆ, ದಂಡಕಾರಣ್ಯದಲ್ಲಿ ಮೊದಲೇ ಭಾರತಕ್ಕೆ ನಿರಾಶ್ರಿತರಾಗಿ ಬಂದವರ ನಿವೇಶನದ ವ್ಯವಸ್ಥೆಯು ಬಹಳ ನಿಧಾನವಾಗುತ್ತ ಬಂದಿದೆ. ಈ ನಿಧಾನಕೆಲಿಯಿಂದಾಗಿ ಅಂತಹರಲ್ಲಿ ಅನೈತಿಕ ವ್ಯವಹಾರವು ಮನೆ ಮಾಡುವಂತಾಗಿದೆ. ಇಂತಹ ಅನೀತಿಯು ನಾಗರಿಕರಿಗೂ ದೇಶಕ್ಕೂ ಶೋಭೆಯನ್ನು ತಂದೀಯುವುದಿಲ್ಲವೆಂಬುದನ್ನು ಮರೆಯಬಾರದು. ಅದಕ್ಕಾಗಿ ದಂಡಕಾರಣ್ಯ ಇಲ್ಲವೇ ಅಂಡಮಾನಗಳಲ್ಲಿ ಅವನ್ನು ತೀವ್ರಗತಿಯಿಂದ ನಿರಾಶ್ರಿತರಾಗಿ ಬಂಗದ ಪುನರ್ನಿವೇಶನದ ವ್ಯವಸ್ಥೆ ಮಾಡುವುದು ಅತ್ಯಗತ್ಯವಿದೆ. ಅನಿರೀಕ್ಷಿತ ಮತ್ತು ಅನಪೇಕ್ಷಿತವಾಗಿ ಮರಳಿ ಕಾಣಿಸಿಕೊಂಡಿರುವ ನಿರಾಶ್ರಿತರ ಸಮಸ್ಯೆಯನ್ನು ಕೆಚ್ಚೆದೆಯಿಂದ ಎದುರಿಸಿ ಶೀಘ್ರದಲ್ಲಿ ಪರಿಹರಿಸುವುದು ಭಾರತ ಸರಕಾರದ ಪ್ರಥಮ ಕರ್ತವ್ಯವಾಗಿದೆ.

ಲಿಂಡನ್ ಜಾನ್ಸನ್

ಫ್ರಾನ್ಸಿನ ಜನರಲ್ ಚಾರ್ಲ್ಸ್ ಡಿಗಾಲೆಯವರು ಕಮ್ಯೂನಿಸ್ಟ್ ಚೀನಾಕ್ಕೆ ಮನ್ನಣೆಯಿತ್ತು ಅದರೊಡನೆ ರಾಜತಾಂತ್ರಿಕ ಸಂಬಂಧವನ್ನು ಬೆಳೆಸಲು ನಿರ್ಧರಿಸಿರುವುದರಿಂದ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವ ಪಡೆಯಲು ಚೀನಾ ಪರವಾಗಿ ವಾದಿಸುವರೆಂದು ಊಹಾಪೋಹವೆದ್ದಿದೆ. ಅಮೆರಿಕೆಯ ಅಧ್ಯಕ್ಷ ಲಿಂಡನ್ ಜಾನ್ಸನರು ತಮ್ಮ ರಾಷ್ಟ್ರದ ಮುಂದೆ ಕೆಂಪು ಚೀನವನ್ನು ಮನ್ನಿಸುವ ಇಚ್ಛೆಯೇ ಅದಕ್ಕೆ ಸಂಬಂಧ ಸಂಪದಲ್ಲಿ ಪ್ರವೇಶ ನೀಡುವ ವಿಚಾರವೇ ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಫ್ರಾನ್ಸಿನ ಮನ್ನಣೆಯಿಂದ ವಿಶ್ವಶಾಂತಿ ಸುವ್ಯವಸ್ಥೆಯನ್ನು ಕಡೆಗಣಿಸುತ್ತಿರುವ ಕೆಂಪು ಚೀನಕ್ಕೆ ಮನ್ನಣೆ ನೀಡುವ ಅವಿವೇಕಕ್ಕೊಳಗಾಗಬಾರದೆಂದು ಅವರು ಏಷ್ಯದ ಸ್ವತಂತ್ರ ದೇಶಗಳನ್ನು ಕೇಳಿಕೊಳ್ಳಲಿದ್ದಾರೆ.

ಎಂ. ಜಿ ಎಂ. ಕಾಲೇಜಿನ ವಾರ್ಷಿಕೋತ್ಸವ— ರಾಜ್ಯದ ವಿದ್ಯಾ ಸಚಿವ ಶ್ರೀ ಎಸ್ ಆರ್ ಕಂಠಿಯವರ ಅಧ್ಯಕ್ಷತೆಯಲ್ಲಿ ಕಳೆದ ತಾ 25ರಂದು ಉಡುಪಿ ಎಂ ಜಿ ಎಂ ಕಾಲೇಜಿನ ವಾರ್ಷಿಕೋತ್ಸವವು ನೆರವೇರಿತು. ಆರಂಭದಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಅತಿಥಿಗಳನ್ನು ಸ್ವಾಗತಿಸಿದರು. ಪ್ರಿನ್ಸಿಪಾಲ್ ಕು. ಶಿ ಹರಿದಾಸ ಭಟ್ಟರು ವಾರ್ಷಿಕವರದಿಯನ್ನೋದಿದರು. ಅಧ್ಯಕ್ಷರು ಸಂಸ್ಥೆಯ ಪ್ರಗತಿಯನ್ನು ಶ್ಲಾಘಿಸಿ, ಮಣಿಪಾಲದಲ್ಲೊಂದು ಯುನಿವರ್ಸಿಟಿಯಾಗುವ ಡಾ। ಪೈಗಳ ಕನಸು ನೆರವೇರುವ ಸಮಯ ದೂರವೇನು ಇರಲಾರದು ಎಂದರು. ವಿವಿಧ ಮನೋರಂಜನೆಗಳೊಂದಿಗೆ ಸಭಾಂತ್ಯವಾಯಿತು

ವಂದನಾರ್ಪಣೆ

ನಾನು ಕಳೆದ ವಾರ ಶ್ರೀಗಳಾದ ಬಿ. ನಾರಾಯಣ ಶೇಕ, ಎನ್. ಮಾರಪ್ಪ ಶೆಟ್ಟಿ ಮೊದಲಾದವರೊಂದಿಗೆ ಬೆಳ್ತಂಗಡಿ, ಪುತ್ತೂರು, ಬೆಳ್ಳಾರೆ ಮೊದಲಾದ ಕಡೆಗಳಿಗೆ ಹೋದಾಗ ನವಯುಗದ ಪರಿಷ್ಕರಣಕ್ಕಾಗಿ ಪ್ರೋತ್ಸಾಹಿಸಿದವರಿಗೂ ಬೇರೆ ಬೇರೆ ವಿಧದಲ್ಲಿ ನೆರವಾದವರಿಗೂ ಅಲ್ಲಲ್ಲಿ ಸಹಕರಿಸಿದ ಡಾ। ಎನ್. ವಿ ಶೆಟ್ಟಿ, ಶ್ರೀ ಬಿ ವಿಠಲ ರೈ ಮೊದಲಾದವರಿಗೂ ಈ ಮೂಲಕ ಕೃತಜ್ಞತೆಗಳನ್ನರ್ಪಿಸುತ್ತೇನೆ

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ ಸಂಪಾದಕ ನವಯುಗ

ಲೋಕಯ್ಯ ನಾಯ್ಕರ ನಿಧನ—ಕಳೆದ 25–1–64ರಂದು ಶ್ರೀ ಮೂಲ್ಕಿ ಚಿತ್ರಾಪುರಗರಡಿ ಲೋಕಯ್ಯ ನಾಯ್ಕರು ತಮ್ಮ ಬೆಂಗಳೂರು ನಿವಾಸದಲ್ಲಿ ಸ್ವರ್ಗಸ್ಥರಾಗಿರುತ್ತಾರೆ. ದಿವಂಗತರು ಸುಮಾರು ೩೦ ವರ್ಷಗಳಿಂದ ಬೆಂಗಳೂರಲ್ಲಿ ದಕ್ಷ ಕೈಗಾರಿಕೋದ್ಯಮಿಗಳಾಗಿದ್ದು ಪ್ರ ಮಾರ್ಗ ಕಾರ್ಖಾನೆಯನ್ನು ನಡೆಸುತ್ತಿದ್ದರು. ಪೆಂಪುಸೆಟ್, ರೇಡಿಯೋ ಮತ್ತು ವಾಹನಗಳ ಬಿಡಿ ಭಾಗಗಳನ್ನು ತಯಾರಿಸುವ ಫೇಕ್ಟರಿಯನ್ನು ಸ್ಥಾಪಿಸಿಯುವ ಜನಾಂಗಕ್ಕೆ ಮೇಲ್ಪಂಕ್ತಿಯಾಗಿದ್ದಲ್ಲದೆ ಜನಪ್ರಿಯರೂ ಉದಾರಿಗಳೂ ಆಗಿದ್ದರು.

ಅಲ್ಲಲ್ಲಿಯ ಸುದ್ದಿ ಸಾರ

ಡಾ| ರಘುರಾಮ ಶೆಟ್ಟಿ ಭಾಷಣ— ಸ್ವತಃ ಕಷ್ಟಪಟ್ಟು ಪ್ರಗತಿ ಸಾಧಿಸುವ ಅಮೇರಿಕನ್ನರ ದೊಡ್ಡ ಗುಣ ಭಾರತೀಯರಿಗೆ ಹಾಗೂ ಇತರ ಜನರಿಗೆ ಅನುಕರಣೀಯವಾಗಿದೆ ಎಂದು ಅಮೇರಿಕದಲ್ಲಿ ಸಂಶೋಧನೆ ನಡೆಸುತ್ತಿರುವ ಡಾ|| ಕೆ. ರಘುರಾಮ ಶೆಟ್ಟಿಯವರು ತಾ. 28-1-1964ರಂದು ಮಣಿಪಾಲದಲ್ಲಿ ಸೇರಿದ್ದ ಉಡುಪಿ ರೋಟರಿ ಕ್ಲಬ್ಬಿನ ಸಭೆಯಲ್ಲಿ ತಿಳಿಸಿದರು.

ಅಮೇರಿಕದಲ್ಲಿ ಪ್ರತಿಯೊಬ್ಬನೂ ಪ್ರಗತಿ ಸಾಧಿಸಲು ಅವಕಾಶವಿದೆ. ಅಂತಹ ಕೆಲವರು ಆ ದೇಶದ ಆಗುಹೋಗುಗಳ ಮೇಲೆ ಭಾರಿ ಪ್ರಭಾವ ಹೊಂದಿದ್ದಾರೆ. ಅವರು ಎಂತಹ ಪ್ರಸಂಗವನ್ನಾದರೂ ಧೈರ್ಯದಿಂದ ಎದುರಿಸುತ್ತಾರೆ ದೇಶಕ್ಕಾಗಿ ಸರ್ವತ್ಯಾಗ ಮಾಡುವುದಕ್ಕೂ ಸಿದ್ಧರಿರುತ್ತಾರೆ ಇಂತಹ ವಿಷಯಗಳಲ್ಲಿ ಭಾರತವು ಅಮೇರಿಕಕ್ಕಿಂತ ಬಹಳ ಹಿಂದಿದೆ ಎಂದು ತನ್ನ ಅನುಭವಗಳನ್ನು ಕುರಿತು ಮಾತನಾಡುತ್ತ ಅವರು ಹೇಳಿದರು.

ವಿದ್ಯಾಭ್ಯಾಸಕ್ಕಾಗಿ ಹಣ ಕೊಡಬೇಕೆಂದು ಅಮೇರಿಕನ್ನರು ನಂಬುತ್ತಾರೆ. ಅಗತ್ಯವಿದ್ದಲ್ಲಿ ಸರಕಾರ ವಿದ್ಯಾರ್ಥಿವೇತನಗಳನ್ನು ಕೊಡುತ್ತದೆ ಹೊರತು ವಿದ್ಯಾಭ್ಯಾಸವನ್ನು ಉಚಿತವನ್ನಾಗಿ ಮಾಡುವುದಿಲ್ಲ ಎಂದರು.

ಚೆನ್ನಾಗಿ ಕೆಲಸ ಮಾಡುವ ಖಾಸಗಿ ಸಂಸ್ಥೆಗಳಿಗೆ ಅಮೇರಿಕನ್ನರು ಮುಕ್ತ ಹಸ್ತದಿಂದ ಸಹಾಯ ಮಾಡುತ್ತಾರೆಂದು ಡಾ| ಶೆಟ್ಟಿ ತಿಳಿಸಿದರು. ಸರಕಾರವು ಬೊಕಾರೊ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವುದು ಅವರಿಗೆ ಇಷ್ಟವಿರಲಿಲ್ಲವಾದ್ದರಿಂದ ಅಮೇರಿಕನ್ನರು ಅದಕ್ಕೆ ನೆರವು ಕೊಡಲಿಲ್ಲವೆಂದು ಅವರು ಅಭಿಪ್ರಾಯಪಟ್ಟರು.

ಕ್ಲಬ್ಬಿನ ಉಪಾಧ್ಯಕ್ಷ ಶ್ರೀ ಕೆ. ಕೆ. ಪೈಯವರು ಅಧ್ಯಕ್ಷತೆ ವಹಿಸಿದ್ದರು. ಡಾ| ಟಿ. ಎಂ. ಎ ಪೈಯವರು ವಂದನಾರ್ಪಣೆ ಮಾಡಿದರು. ಜನವರಿ 30ರಂದು ನಡೆಯುವ ಕುಷ್ಠರೋಗ ದಿನಾಚರಣೆಯ ಬಗ್ಗೆ ಡಾ| (ಶ್ರೀಮತಿ) ಪದ್ಮಾ ರಾವ್‌ರವರು ಮಾತನಾಡಿದರು.

ರೋಟರಿ ಕ್ಲಬ್ ಆರಂಭಿಸಿರುವ ನಾಟ್ಯ ಕ್ಲಬ್ಬಿನ ಆಶ್ರಯದಲ್ಲಿ ಆಂಗ್ಲ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳನ್ನು ಸಭೆಯಲ್ಲಿ ಗೌರವಿಸಲಾಯಿತು.

ಉಡುಪಿ ಡಿ. ಮ್ರು. ಕೋರ್ಟಿನಲ್ಲಿ

O. S. 350/ 1963.

ಶೃಂಗಾರಿ ಅಮ್ಮ— ವಾದಿಳು.

ಮತ್ತು

P ಹಿರಿಯಣ್ಣ ಶೆಟ್ಟಿ —ಪ್ರತಿವಾದಿ.

ಇವರೊಳಗೆ—

ಸದ್ರಿ ಪ್ರತಿವಾದಿ:—P. ಹಿರಿಯಣ್ಣ ಶೆಟ್ಟಿ— ಕೆಳಮನೆ ದೇವಪ್ಪ ಶೆಟ್ಟಿ ಮಗ— ಉಡುಪಿ ತಾಲ್ಲೂಕು ಉಪ್ಪೂರು ಗ್ರಾಮದ ಅಬ್ಬಣ್ಣ ಕುದ್ರು— ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ವಾದಿಗೆ ನಿಮ್ಮಿಂದ ತಾರೀಕು 20-11-1965ನೇ ರ. ನಿಶಿಂ ಮೂಲಗೇಣಿ ಚೀಟಿಗೆ ಕಾರಣವಾದ ಆಸ್ತಿ ಬಾಬ್ತು ಕಳೆದ ಫಲ ಮತ್ತು ಕುಚೆಕ್ಕತು ಸಂವತ್ಸರಗಳಿಗೆ ಬರಬೇಕಾದ ಗೇಣಿಯನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 14-2-1964ಕ್ಕೆ ಇಟ್ಟಿರುತ್ತದೆ — ಉದಾಹರಿಸುವಂತಾದ್ದರೆ ಆ ದಿವ್ಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Balachandra Rao.
Vakil for plaintiff.

Udipi. 29-1-1964.

ಡೋನ್ ಬೋಸ್ಕೋ ಕ್ಲಬ್— ಉಡುಪಿ ಡೋನ್ ಬೋಸ್ಕೋ ಕ್ಲಬ್ಬಿನ ವಾರ್ಷಿಕ ಮಹಾಸಭೆಯು ಕಳೆದ ತಾ. 26ರಂದು ಕ್ಲಬ್ಬಿನ ಮಂದಿರದಲ್ಲಿ ಜರಗಿ—ಕಾರ್ಯಕಾರಿ ಸಮಿತಿಗೆ ರೆ. ಫಾ. ಸಿಲ್ವೆಸ್ಟರ್ ಡಿ'ಸೋಜ ಅಧ್ಯಕ್ಷ; ಶ್ರೀ ಗಳಾದ ನಿಕೋಲಸ್ ಫೆರ್ನಾಂಡಿಸ್ ಉಪಾಧ್ಯಕ್ಷ, ವಿಲಿಯಂ ಪಿಂಟೊ, ಎಡ್ವೊಕೇಟ್ ಪ್ರಧಾನ ಕಾರ್ಯದರ್ಶಿ, ಬಿ. ಆರ್. ಫೆರ್ನಾಂಡಿಸ್ ಖಜಾಂಚಿ, ಮತ್ತು 11 ಸದಸ್ಯರುಳ್ಳ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು

ಸಭಾರಂಭದಲ್ಲಿ ಕ್ಲಬ್ಬಿನ ಡೈರೆಕ್ಟರ್ ರೆ. ಫಾ. ನೋರೊನ್ಹರವರು ಸ್ವಾಗತ ಭಾಷಣ ಮಾಡಿದರು. ಈ ಮಹಾ ಸಭೆಯಲ್ಲಿ ಹಲವು ಮಹತ್ವ ಪೂರ್ಣ ನಿರ್ಣಯಗಳನ್ನು ಅಂಗೀಕರಿಸಿದ ತರುವಾಯ ಹಿಂದಿನ ಕಾರ್ಯದರ್ಶಿ ಶ್ರೀ ಮೌರಿಸ್ ಡಿ'ಸೋಜರು ಧನ್ಯವಾದ ಸಮರ್ಪಿಸಿದರು.

ಮಣಿಪಾಲ— ಇಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಗಣರಾಜ್ಯ ದಿನೋತ್ಸವದಂದು ಡಾ| ಟಿ. ಎಂ ಎ ಪೈಯವರು ಧ್ವಜಾರೋಹಣ ಮಾಡಿ ಎನ್. ಸಿ. ಸಿ ಕ್ಯಾಡೆಟ್ಟುಗಳ ವಂದನೆಗಳನ್ನು ಸ್ವೀಕರಿಸಿದರು. ಈ ಕಾಲೇಜಿನ ಇತಿಹಾಸದಲ್ಲೇ ಪ್ರಥಮ ಬಾರಿಗೆ ಕಾಲೇಜಿನ ಎನ್. ಸಿ. ಸಿ, ಕ್ಯಾಡೆಟ್‌ಗಳಿಂದ ಧ್ವಜವಂದನೆ, ಪಥಚಲನ ಮತ್ತು ಆಕರ್ಷಕ ಪೆರೇಡ್ ನಡೆಯಿತು. ಪೆರೇಡಿನಲ್ಲಿ ಮುಂದಾಳುತ್ವ ವಹಿಸಿದ್ದ ಶ್ರೀ ಎ. ಜೋಗವರು ಕಾಲೇಜಿನ "ಅತ್ಯುತ್ತಮ ಕ್ಯಾಡೆಟ್" ಪ್ರಶಸ್ತಿಯನ್ನು ಗಳಿಸಿದರು. ಪ್ಲಟೂನ್ ಡ್ರಿಲ್ ಸ್ಪರ್ಧೆಯಲ್ಲಿ ರೋಲಿಂಗ್ ಶೀಲ್ಡ್ ಗಳಿಸಿದ ೧೦/೬೮ ಕಂ. ಯು ನಂ. ೧ ಪ್ಲಟೂನಿಗೂ, ಇತರ ಸ್ಪರ್ಧೆಗಳಲ್ಲಿ ಗೆದ್ದವರಿಗೂ ಡಾ|| ಪೈ ಬಹುಮಾನ ವಿತರಣೆ ಮಾಡಿದರು. ಕಾಲೇಜಿನ ಡೀನ್ ಡಾ| ಎ. ಕೃಷ್ಣ ರಾವ್, ಎನ್. ಸಿ. ಸಿ. ಅಧಿಕಾರಿಗಳಾದ ೨/ಲೆ. ಬಿ. ರಮೇಶಚಂದ್ರ ರಾವ್ ಹಾಗೂ ೨/ಲೆ ಜಿ. ಆರ್. ಬೈರಿಯವರು ಈ ಸಮಾರಂಭವನ್ನು ವ್ಯವಸ್ಥೆಗೊಳಿಸಿದ್ದರು.

ಶಿಲಾನ್ಯಾಸ— ತಾ.16-1-64ರಂದು ಅಖಿಲ ಭಾರತ ಮಾಧ್ವ ಮಹಾ ಮಂಡಳದ ಉಡುಪಿ ವಿದ್ಯಾರ್ಥಿನಿಲಯದ ಶಿಲಾನ್ಯಾಸ ಸಮಾರಂಭವು ಶ್ರೀ ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಕೆ. ಕೆ. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಶಾರದಾ ಕ್ಲಿನಿಕಿನ ಪ್ರಾರಂಭೋತ್ಸವ— ಚಿಕ್ಕಮಗಳೂರು ಜಿಲ್ಲೆಯ ಅಳ್ವೂರು ಎಂಬಲ್ಲಿ ಡಾ| ಕೆ. ರಾಜಾರಾಮ ಶೆಟ್ಟರ ಶಾರದಾ ಕ್ಲಿನಿಕಿನ ಪ್ರಾರಂಭೋತ್ಸವವು ತಾ. 20-1-64ರಂದು ಪಾರ್ಲಿಮೆಂಟ್ ಸದಸ್ಯ ಶ್ರೀ ಬಿ ಪಿ. ಬಸಪ್ಪ ಸೆಟ್ಟಿಯವರಿಂದ ಶ್ರೀ ಸಿ. ಪಿ. ಚಂದ್ರ ಗೌಡರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಎಂ. ಬಿ. ಗಣಿಯವರು ಸ್ವಾಗತಿಸಿದರು ಉದ್ಘಾಟಕ ಬಸಪ್ಪ ಸೆಟ್ಟಿಯವರು ಅಳ್ವೂರಿನ ಪ್ರಗತಿಯನ್ನು ತಿಳಿಸಿ ಡಾ. ಶೆಟ್ಟರಿಗೆ ಉಜ್ವಲ ಭವಿಷ್ಯ ಕೋರಿದರು ಶ್ರೀಗಳಾದ ರಾಮಪ್ಪ ಬೋರಿಂಟ್ರ, ಡಾ, ಐ ಡಿ, ಕಾಮತ್, ರತ್ನಾಕರ ಪ್ರಭು, ಎ. ಎಂ, ಅಬ್ದೇ ಗೌಡ, ಜಿ. ಎ. ಗಫರ್, ತಿಮ್ಮಶೆಟ್ಟಿ ಮೊದಲಾದವರು ಮಾತನಾಡಿದರು ಡಾ. ರಾಜಾರಾಮ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಕನ್ನಿಗೋಳಿ— ಹಲವಾರು ವರ್ಷಗಳ ಕಾಲ ಸರಕಾರೀ ಹುದ್ದೆಯಲ್ಲಿ ನಿಷ್ಠಾವಂತರಾಗಿ ದುಡಿದು ನಿವೃತ್ತರಾಗಿದ್ದ ಮೂಲ್ಕಿ ಅಕ್ಕಸಾಲಿ ಶೀನ ಶೆಟ್ರು ತನ್ನ 77ನೇ ವರ್ಷ ಪ್ರಾಯದಲ್ಲಿ ಇಲ್ಲಿ ತಾ. 24ರಂದು ನಿಧನರಾದರು. ಇವರು ತುಂಬಾ ಸಹೃದಯತೆಯುಳ್ಳವರಾಗಿದ್ದು ಅತೀ ಸರಳ ಜೀವನ ನಡೆಸಿ ಎಲ್ಲರ ಗೌರವ, ಪ್ರೀತಿಗಳಿಗೆ ಪಾತ್ರರಾಗಿದ್ದರು.

ಶ್ರೀ ಗೋಕರ್ಣನಾಥ ಕ್ಷೇತ್ರ— ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಮಹಾ ಶಿವರಾತ್ರಿ ಉತ್ಸವವು ತಾ. 6-2-64ರಿಂದ 13-2-64ರ ವರೆಗೆ ಆಚರಿಸಲ್ಪಡುವುದು. ಉತ್ಸವದ ಪ್ರತಿ ದಿನಗಳಲ್ಲಿಯೂ ಪೂಜೆ, ಹೋಮ, ರಾತ್ರಿ ಉತ್ಸವಗಳು ನೆರವೇರುವವು, ತಾ 12-2-64ರಲ್ಲು ಸಮಾರಾಧನೆಯು ನಡೆಯುವುದು. ತಾ. 27-2-64ರಿಂದ 24-2-64ರ ವರೆಗೆ ಶ್ರೀ ನಾರಾಯಣ ಗುರು ಸ್ವಾಮಿಯವರ ಪಟ್ಟಶಿಷ್ಯರಾದ ಶಿವಗಿರಿ ಮಠಾಧೀಶರಾದ ಬ್ರಹ್ಮಶ್ರೀ ಶಂಕರಾನಂದ ಸ್ವಾಮಿಯವರ ಹಸ್ತದಿಂದ ಕ್ಷೇತ್ರದ ಅಷ್ಟಬಂಧ ನವೀಕರಣ ಕಲಶ ಕರ್ಮ ಸಮಾರಂಭವು ಜರಗುವುದು.

ತರಬೇತಿ ಶಿಬಿರ— ಬ್ರಹ್ಮಾವರ ರಾಷ್ಟ್ರೀಯ ವಿಸ್ತರಣಾ ಕ್ಷೇತ್ರದ ಆಶ್ರಯದಲ್ಲಿ ಪೆರ್ಡೂರು ಮತ್ತು ಕುಕ್ಕೆಹಳ್ಳಿ ಪಂಚಾಯತುಗಳ ಗ್ರಾಮ ಸಹಾಯಕ ತರಬೇತಿ ಶಿಬಿರವು ಪೆರ್ಡೂರಲ್ಲಿ ತಾ. 11ರಿಂದ 13ರ ತನಕ ಯಶಸ್ವಿಯಾಗಿ ನಡೆಯಿತು. ಈ ಶಿಬಿರದ ಉದ್ಘಾಟನೆಯು ಶ್ರೀ ಯಸ್. ಧರ್ಮಸಾಮ್ರಾಜ್ಯ ಎಂ ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಡಾ| ಟಿ. ಎಂ. ಎ ಪೈಯವರಿಂದ ನೆರವೇರಿತು. ಎರಡನೆ ದಿನ ಪೂರ್ವಾಹ್ನ ಉಡುಪಿ ನಗರಸಭಾಧ್ಯಕ್ಷ ಶ್ರೀ ಪಿ ರಂಗನಾಥಶೆಣೈಯವರೂ ಅಪರಾಹ್ನ ತಾಲೂಕು ಬೋರ್ಡ್ ಮೆಂಬರ್ ಶ್ರೀ ಪಿ. ಶಿವಾಜಿ ಶೆಟ್ಟರೂ ಅಧ್ಯಕ್ಷತೆ ವಹಿಸಿದ್ದರು. ಮುಕ್ತಾಯ ಸಮಾರಂಭವು ಜಿಲ್ಲಾಧಿಕಾರಿ ಶ್ರೀ ಕೆ, ಆರ್, ರಾಮಚಂದ್ರನ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಎಂ, ಮಧ್ವರಾಜ್ ಎಂ. ಎಲ್. ಎಯವರು ಸಮಾರೋಪ ಭಾಷಣ ಮಾಡಿದರು. ಪೆರ್ಡೂರು ಮತ್ತು ಕುಕ್ಕೆಹಳ್ಳಿ ಪಂಚಾಯತುಗಳ ಅಧ್ಯಕ್ಷರಾದ ಶ್ರೀ ಬಿ. ಭುಜಂಗ ಹೆಗ್ಡೆ ಮತ್ತು ಕೆ. ಸುಬ್ಬಣ್ಣ ಹೆಗ್ಡೆಯವರು ಸ್ಥಳೀಯ ದೇವಸ್ಥಾನ, ವಿದ್ಯಾಸಂಸ್ಥೆಗಳ ಮತ್ತು ನಾಗರಿಕರ ಸಹಕಾರದಿಂದ ಈ ಶಿಬಿರವನ್ನು ಬಹು ಯಶಸ್ವಿಯಾಗಿ ನೆರವೇರಿಸಿಕೊಟ್ಟರು."

ಶಿರ್ವ— ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಪರವಾಗಿ ಡಾ| ಯು. ಕೆ. ಆಚಾರ್, ಡಾ| ಕೆ. ಆರ್. ವೆಂಕಟಕೃಷ್ಣ, ಸರ್ವಶ್ರೀಗಳಾದ ಕೆ. ಆರ್. ಹೆಗ್ಡೆ, ಯಲ್. ವೆಂಡೆಸೇನ್, ಕೆ. ಯಂ. ಹೊಳ್ಳ ಮತ್ತು ಯನ್. ಬಜೋಜರವರು ಶಿರ್ವ ಲೋಕಲ್ ಫಂಡ್ ಆಸ್ಪತ್ರೆಗೆ ಎಕ್ಸ್-ರೇ ಉಪಕರಣ ಮತ್ತು ಕ್ಷಯರೋಗದ ವಾರ್ಡ್ ಕಟ್ಟಿಸುವರೇ ಮೈಸೂರು, ಬೆಂಗಳೂರಿಗಾಗಿ ಬೊಂಬಾಯಿಗೆ ಸಂಚಾರ ಕೈಕೊಂಡಲ್ಲಿ ಸುಮಾರು ರೂಪಾಯಿ 25000ಕ್ಕೂ ಮಿಕ್ಕಿ ನಿಧಿ ಸಂಗ್ರಹಿಸಿದರು. ಈ ಸಂದರ್ಭದಲ್ಲಿ ಸರ್ವಶ್ರೀಗಳಾದ ಯಸ್, ಜಿ. ಕೆ ಶೆಟ್ಟಿ, ಕಳತ್ತೂರು ರಾಜು ಶಿದ್ದು ಶೆಟ್ಟಿ, ಯನ್. ಯಶ್ ಶೆಟ್ಟಿ, ಯನ್. ಸದಾಶಿವ ಹೆಗ್ಡೆ. ಕುತ್ಯಾರು ಗುತ್ತು ಸದಾಶಿವ ಶೆಟ್ಟಿ, ಕೆ. ಪ್ರೇಮಾನಂದ ಶೆಟ್ಟಿ, ಯಸ್. ಬಿ. ರಾವ್, ಮತ್ತು ಜೇಮ್ಸ್ ಬಜೋಜರು ಪ್ರೋತ್ಸಾಹವನ್ನಿತ್ತು ನಿಧಿ ಸಂಗ್ರಹಕ್ಕೆ ಸಹಕಾರವನ್ನಿತ್ತರು. ಇವರಿಗೂ ಧನ ಸಹಾಯವನ್ನಿತ್ತ ಜನತೆಗೂ ಕಮಿಟಿಯ ಪರವಾಗಿ ಕಾರ್ಯದರ್ಶಿ ಡಾ| ಕೆ. ಆರ್. ವೆಂಕಟಕೃಷ್ಣನವರು ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ.

ಆರಂಭೋತ್ಸವ— ಮಣಿಪಾಲ ಹೈಯರ್ ಸೆಕೆಂಡರಿ ಶಾಲೆಯ ನೂತನ ಕಟ್ಟಡದ ಆರಂಭೋತ್ಸವವನ್ನು, ಕಳೆದ ತಾ. 21ರಂದು ಕೇಂದ್ರ ಉಪ ವಿದ್ಯಾ ಮಂತ್ರಿ ಡಾ| ಶ್ರೀಮತಿ ಟಿ. ಎಸ್. ಸೌಂದರಂ ರಾಮಚಂದ್ರನ್‌ರವರು ನೆರವೇರಿಸಿದರು.

ಆರಂಭದಲ್ಲಿ ಡಾ| ಟಿ. ಎಂ. ಎ. ಪೈಗಳ ಸ್ವಾಗತಿಸಿದರು ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಬಿ. ಆರ್. ಹೆಗ್ಡೆಯವರು ಸಂದೇಶಗಳನ್ನೋದಿ ವರದಿಯನ್ನೊಪ್ಪಿಸಿದರು, ಅಂತ್ಯದಲ್ಲಿ ಶ್ರೀ ಟಿ. ರಮೇಶ ಪೈಗಳು ವಂದನಾರ್ಪಣೆಗೈದರು.

ವಿಶ್ವಬ್ರಾಹ್ಮಣ ಮಹಾಸಭೆ— ಉಡುಪಿ ಶ್ರೀ ವಿಶ್ವಬ್ರಾಹ್ಮಣ ಸಮಾಜಾಭ್ಯುದಯ ಸಭೆಯ ಮಹಾಸಭೆಯೊಂದು ಕಳೆದ ತಾ. 18 ರಂದು ಶ್ರೀ ಬಿ. ಭಾಸ್ಕರ ಶೆಟ್ಟಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷ ಶ್ರೀ ಎಚ್. ವೆಂಕಟರಮಣಾಚಾರ್ಯರು ಸ್ವಾಗತಿಸಿ, ವರದಿಯನ್ನೋದಿದರು. ಸಭಿಕರಲ್ಲಿ ಹಲವರು ಸಂಘದ ಅವಶ್ಯಕತೆ ಹಾಗೂ ಸ್ವರ್ಣ ನಿಯಂತ್ರಣದಿಂದ ಆದ ದುಷ್ಪರಿಣಾಮಗಳ ಕುರಿತು ಮಾತಾಡಿದರು. ಅಧ್ಯಕ್ಷರು ಈ ಕುರಿತು ಮಾತನಾಡಿದ ಬಳಿಕ, ಸರ್ಕಾರಿ ಖಾಲಿ ಸ್ಥಳಗಳನ್ನು ಸಂತ್ರಸ್ತ ಚಿನ್ನದ ಕೆಲಸಗಾರರಿಗೆ ಪರಕಾಸ್ತು ಕೊಡಿಸುವಂತೆ ವಿನಂತಿಸುವುದು, ವಿದ್ಯಾರ್ಥಿಗಳಿಗೂ ಶುಲ್ಕ ವಿನಾಯತಿ ದೊರಕುವಂತೆ ಕೇಳಿಕೊಳ್ಳುವುದು, ನಿರಕ್ಷರಸ್ಥ ಕಾರ್ಮಿಕರಿಗೆ ಕೆಲವೊಂದು ವಿನಾಯತಿ ದೊರಕುವಂತೆ ಕೇಳಿಕೊಳ್ಳುವುದೇ ಮೊದಲಾದ ಠರಾವುಗಳು ಮಂಜೂರಾದವು.

ಸುರತ್ಕಲ್ ಇಂಜನಿಯರಿಂಗ್ ಕಾಲೇಜಿಗೆ ಬುಕ್‌ಬ್ಯಾಂಕ್ ಕೊಡುಗೆ— ಸಿಂಡಿಕೇಟ್ ಬೇಂಕಿನವರು ದಾನವಾಗಿತ್ತ ಬುಕ್ ಬ್ಯಾಂಕನ್ನು ಸುರತ್ಕಲಿನ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿಗೆ ಕೊಡುವ ಸಮಾರಂಭವು ಕಳೆದ ತಾ. 22ರಂದು ರಾಜ್ಯದ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಬುಕ್ ಬ್ಯಾಂಕಿಗೆ ಸಿಂಡಿಕೇಟ್ ಬ್ಯಾಂಕು ರೂ. 2500 ದಾನ ಕೊಟ್ಟಿದೆ ಕಾಲೇಜಿನ ಪ್ರಿನ್ಸಿಪಾಲ್ ಡಾ ಎ. ಎಸ್. ಅಡ್ಕೆಯವರು ಸ್ವಾಗತಿಸಿ ಸಿಂಡಿಕೇಟ್ ಬ್ಯಾಂಕಿಗೆ ಕೃತಜ್ಞತೆ ಸೂಚಿಸಿದರು. ಸಿಂಡಿಕೇಟಿನ ಪರವಾಗಿ ಡಿವಿಜನಲ್ ಮೆನೇಜರ್ ಶ್ರೀ ಎಚ್. ಎಸ್. ರಾಯರು ಬುಕ್ ಬ್ಯಾಂಕನ್ನು ಮುಖ್ಯ ಮಂತ್ರಿಗಳ ಮುಖಾಂತರ ದಾನವಾಗಿ ಕೊಟ್ಟರು ಈ ಸಂದರ್ಭದಲ್ಲಿ ಅವರು ಸಿಂಡಿಕೇಟ್ ಬ್ಯಾಂಕು ವಿದ್ಯಾಸಂಸ್ಥೆಗಳಿಗೆ ಕೊಡುವ ದಾನ ಸೌಲಭ್ಯಗಳನ್ನು ವಿವರಿಸಿದರು. ಮುಖ್ಯ ಮಂತ್ರಿಗಳು ಸಿಂಡಿಕೇಟ್ ಬ್ಯಾಂಕಿನ ಪ್ರಗತಿಪರ ಧೋರಣೆ ಮತ್ತು ಸೇವೆಯನ್ನು ಶ್ಲಾಘಿಸಿ ಕಾಲೇಜಿನ ಉನ್ನತಿಗಾಗಿ ಸಂತೋಷ ವ್ಯಕ್ತಗೊಳಿಸಿ ಕಾಲೇಜಿನಲ್ಲಿ ಬೇಗನೇ ಮ್ಯಾರಿನ್ ಇಂಜಿನಿಯರಿಂಗ್ ಕೋರ್ಸು ಪ್ರಾರಂಭವಾಗುವಂತಾಗಲೆಂದು ಹಾರೈಸಿದರು.

ಸಿಂಡಿಕೇಟ್ ಬೇಂಕಿನಲ್ಲಿ ದುಃಖಸೂಚಕ ಸಭೆ— 1915ರಿಂದ ಅವಿರತ ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರಾಗಿದ್ದ ವಕೀಲ ಶ್ರೀ ಪಿ. ಪದ್ಮನಾಭಯ್ಯರ ನಿಧನಕ್ಕಾಗಿ ಆಫೀಸರರ ಮತ್ತು ಸಿಬ್ಬಂದಿಯವರ ದುಃಖಸೂಚಕ ಸಭೆಯೊಂದು ಉಡುಪಿ ಎಡ್ಮಿನಿಸ್ಟ್ರೇಟಿವ್ ಆಫೀಸಿನಲ್ಲಿ ತಾ. 17-1-64ರಂದು ಜರಗಿತು. ಡಿಪ್ಟಿ ಚೀಫ್ ಆಫೀಸರ್ ಶ್ರೀ ಕೆ. ಕೆ, ಪೈಯವರು, ಸಿಬ್ಬಂದಿಯವರ ಸಂತಾಪವನ್ನು ವಿವರಿಸಿದ ಬಳಿಕ ದುಃಖಸೂಚಕ ನಿರ್ಣಯ ಮಾಡಲಾಯಿತು.

ಮೈಂಟೆನೆನ್ಸ್ ಗ್ರಾಂಟಿನ ಕುರಿತು ವಿದ್ಯಾಸಚಿವರಿಗೆ ಮನವಿ — ಜನವರಿ ತಾ. 24, 25ರಲ್ಲು ಜರಗಿದ ಜಿಲ್ಲಾ ಶೈಕ್ಷಣಿಕ ಪರಿಷತ್ತಿನ ಉದ್ಘಾಟಕರಾಗಿ ದಯಮಾಡಿಸಿದ್ದ ವಿದ್ಯಾಸಚಿವ ಶ್ರೀ ಯಸ್. ಆರ್. ಕಂಠಿಯವರ ಬಳಿಗೆ, ಶ್ರೀಗಳಾದ ಯಂ. ಶ್ರೀನಿವಾಸನಾಯಕ್, ಎಂ ಎಲ್ ಎ., ಕೆ. ಕೆ. ಶೆಟ್ಟಿ, ಎಂ. ಎಲ್. ಸಿ ಯವರ ಮುಂದಾಳುತನದಲ್ಲಿ, ಕುರ್ಕಾಲು ಗಣಪಯ್ಯ ಶೆಟ್ಟಿ ರೆ. ಫಾ. ಪಿ. ಎಸ್. ಡಿ'ಸೋಜ, ಕೆ ರಮೇಶರಾವ್, ಬಿ ಸುಬ್ರಾಯ ಹೆಗ್ಡೆ, ಎನ್. ಮಾರಪ್ಪ ಸೆಟ್ಟಿ ಕೂಡಾ ನಿಯೋಗವು ಹೋಗಿ ಸಂಪೂರ್ಣ ಮೈಂಟೆನೆನ್ಸ್ ಗ್ರಾಂಟು ಕೊಡಿಸಬೇಕೆಂದೂ ವಗೈರೆ ಕಾಣಿಸಿದ ಮನವಿಯನ್ನು ಅರ್ಪಿಸಿ ಚರ್ಚಿಸಲಾಯಿತು, ಮಾನ್ಯ ಮಂತ್ರಿಗಳು ಫೆಬ್ರವರಿಯಲ್ಲಿ ಜರಗತಕ್ಕ ಬಜೆಟು ಸೆಶ್ಶನಿನ ಕಾಲದಲ್ಲಿ ಸಂಘದ ಪ್ರತಿನಿಧಿಗಳು ಬೆಂಗಳೂರಿಗೆ ಬರಬೇಕೆಂದೂ, ಅಲ್ಲಿ ಮುಂದಿನ ಕ್ರಮ ವಿಮರ್ಶಿಸಿ ಗ್ರಾಂಟು ಕೊಡಿಸುವಂತೆ ಪ್ರಯತ್ನಿಸುತ್ತೇನೆಂತಲೂ ಆಶ್ವಾಸನೆಯನ್ನಿತ್ತರು.

ಇದೇ ಪ್ರಕಾರ ಡೈರೆಕ್ಟರ್ ಶ್ರೀ ವಾಸುದೇವಯ್ಯನವರೂ ಭರವಸೆಯನ್ನಿತ್ತರು.

ವಾರ್ತೆ-ಪ್ರತಿವಾರ್ತೆ

ಬಸ್ಸು ಸಾರಿಗೆ ರಾಷ್ಟ್ರೀಕರಣದ ವಿಷಯದಲ್ಲಿ ವರಿಷ್ಠ ನ್ಯಾಯಾಲಯದ ತೀರ್ಪಿನ ಪರಿಣಾಮವಾಗಿ ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ಸಂಜೀವ ರೆಡ್ಡಿಯವರು ರಾಜಿನಾಮೆ ನೀಡುವ ನಿರ್ಧಾರಕ್ಕೆ ಬಂದಿದ್ದಾರೆ.

—ಹಿಂದುಳಿಯುವಿಕೆಯನ್ನು ನಿರ್ಧರಿಸುವ ಸೂತ್ರದ ಕುರಿತು ವರಿಷ್ಠ ನ್ಯಾಯಾಲಯವಿತ್ತ ತೀರ್ಪಿನ ಪರಿಣಾಮವನ್ನು ಮೈಸೂರು ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಗಂಭೀರವಾಗಿ ಪರಿಶೀಲಿಸಲಿದ್ದಾರೆ.

o o o

ಖಾತೆರಹಿತ ಮಂತ್ರಿ ಲಾಲಬಹದೂರ ಶಾಸ್ತ್ರಿಯವರು ಕಾಶ್ಮೀರದ ಆಡಳಿತೆಯ ಪರಿಶೀಲನೆ— ವಿಚಾರ ವಿಮರ್ಶೆಗೆಂದು ಶ್ರೀನಗರಕ್ಕೆ ತೆರಳಿದರು.

—ಪ್ರಧಾನಿ ನೆಹರುರವರು ಆರೋಗ್ಯವಂತರಾಗಿರುತ್ತಿದ್ದರೆ, ಅವರೇ ಹಾರುತ್ತಿದ್ದರು.

o o o

ಕೇಂದ್ರ ಶಿಕ್ಷಣ ಸಚಿವಾಲಯದಲ್ಲಿದ್ದ ಹಲವಾರು ಹುದ್ದೆಗಳನ್ನು ಉಚ್ಚಾಟಿಸಲು ಶಿಕ್ಷಣ ಮಂತ್ರಿ ಎಂ. ಸಿ. ಛಾಗ್ಲಾ ನಿರ್ಧರಿಸಿದ್ದಾರೆ

—ಜತೆಗೆ ಅವರ ಉಚ್ಚಾಟನೆಗೂ ಸಮಿತಿ ನಿಯುಕ್ತವಾಗಿದ್ದರೆ, ಅದು ದೇಶದ ಪುಣ್ಯ.

o o o

ಕಾಶ್ಮೀರಕ್ಕೆ ಸಂಬಂಧಿಸಿದಂತೆ ಭದ್ರತಾ ಮಂಡಳಿಯು ಸ್ವೀಕರಿಸಿದ್ದ ಮೊದಲಿನ ಎಲ್ಲಾ ಗೊತ್ತುವಳಿಗಳೂ ರದ್ದಾಗಿವೆಯೆಂದು ಭಾರತ ಸರಕಾರದ ಇಂದಿನ ದೃಢ ನಿಲುವು.

—ಮತ್ತೇನಾದರೂ ಆಗಲಿ, ಕಾಶ್ಮೀರ ನಮ್ಮ ಬಾಯಿಗೆಂಬ ನಿರ್ಧಾರ ರವಾಗಲಿಯೆನ್ನುತ್ತಾರೆ ಭುಟ್ಟೋ.

o o o

ಕೇರಳದಲ್ಲಿ ಚಾಕೋ ಪ್ರಕರಣದ ಪರಿಶೀಲನೆಗೆಂದು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ತಿರುವನಂತಪುರಕ್ಕೆ ಹೋದರು

—ಹೊಸ ಅಧ್ಯಕ್ಷರಿಗೆ ಹೊಸತನದಲ್ಲಿಯೇ ಹೊಸ ಪರೀಕ್ಷೆ ಎದುರಾಯಿತು; ಅವರು ಉತ್ತೀರ್ಣರೂ ಆದರು.

o o o

ಅಧಿಕಾರ ವಿಕೇಂದ್ರೀಕರಣದ ಮಹತ್ ಕ್ರಾಂತಿಕಾರಿ ವಿಧೇಯಕವು ಜನರನ್ನು ಸಂಘಟನೆಮಾಡಿ ಮುಖಂಡತ್ವನಿರ್ಮಿಸದಿದ್ದಲ್ಲಿ ಕ್ರಾಂತಿಕಾರಿಯೆನಿಸಲಾರದು.

— ಎಸ್. ಕೆ. ಡೇ.

—ಮುಖಂಡತ್ವದಲ್ಲಿ ಕೇಂದ್ರೀಕರಣವಾಗುವುದಿಲ್ಲವೆಂಬುದು ತ್ರಿಕಾಲಾಬಾಧಿತಸತ್ಯ

o o o

ಅಂತಾರಾಷ್ಟ್ರೀಯ ಶ್ವೇತ ಶಮನದ ಕಾರ್ಯಕ್ಕೆ ಚೀನವು ಆತಂಕವೊಡ್ಡಿ, ನಡೆಯುವ ಪ್ರಯತ್ನಗಳನ್ನು ಅದು ವ್ಯರ್ಥಗೊಳಿಸುತ್ತಿದೆ— ಪ್ರಾವ್ಡಾದ ಟೀಕೆ.

— ಕ್ರಾಂತಿಯನ್ನೇ ಶಾಂತಿಯೆನ್ನುವ ಪೀಕಿಂಗ್ ನಾಯಕರು ಇದನ್ನು ಒಪ್ಪಿಕೊಳ್ಳುವುದು ಸುತರಾಂ ಸಾಧ್ಯವಿಲ್ಲ.

o o o

ಧನ ಚಿಂತೆ, ಸೋದರ ಪಯಣ, ದೊಡ್ಡವರಿಂದ ಖರ್ಚು— ಭವಿಷ್ಯ ವಾಣಿ.

—ಮೊದಲನೆಯದು ಮಾಮೂಲು, ಎರಡನೆಯದು ಸ್ವಾಭಾವಿಕ, ಮೂರನೆಯದು ನಿತ್ಯ ಸತ್ಯ.— ಇದು ಗವಿಷ್ಯ ವಾಣಿ.

o o o

ಕಳೆದು ದೊರೆತ ಪವಿತ್ರ ಕೇಶದ ಗುರುತು ಹಿಡಿಯಬೇಕು— ಕೆಲ ಕಾಶ್ಮೀರಿಗಳ ಬೇಡಿಕೆ.

- ಕಳವುಗಾರನ ಸ್ಪರ್ಶದಿಂದ ಅದು ಅಪವಿತ್ರವಾಗಿರಬಹುದೆಂಬ ಸಂದೇಹವಲ್ಲವೆ?

ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. 84/63

ಮಹಾರಾಷ್ಟ್ರ ಎಪೆಕ್ಸ್ ಕೊರ್ಪೊರೇಶನ್ ಲಿಮಿಟೆಡ್ ಉಡುಪಿ — ವಾದಿ

ಮತ್ತು

ಬಿ. ಮೋಹನ ರಾವ್ ಕೊಡಾ—ಪ್ರತಿವಾದಿರು

ಇವರೊಳಗೆ

1ನೇ ಪ್ರತಿವಾದಿ—

ಬಿ ಮೋಹನ ರಾವ್— ಬಿ ವೆಂಕಟ್ರಾಯರ ಮಗ, ಮೊದಲು Karkera Mansions. Maidan West Road. Mangalore ನಲ್ಲಿದ್ದು ಈಗ ಮಂಗಳೂರು ಕಸಬೆ-ಶಿವಮೊಗ್ಗದಲ್ಲಿರುವವರು. ಇವರಿಗೆ

ವಾದಿ ಕಂಪೆನಿ ತಾರೀಕು 28-9-60 ರಂದು ನೀವು hirer ಆಗಿಯೂ, 2ನೇ ಪ್ರತಿವಾದಿ guarantor ಆಗಿಯೂ ಸಹಾ ಬರೆಕೊಟ್ಟ ಬಸ್ಸಿನ ರೋಲಿಂಗ್ ಜವಾಬ್ದಾರಿ ರುಪಾಯಿ 17,400=00ಕ್ಕೆ ಬರೆಕೊಟ್ಟ ಪ್ರೋಮಿಸರಿ ನೋಟಿನ ಬಾಕಿ ಅಸಲು ಬಡ್ಡಿ ಕೂಡಾ ರುಪಾಯಿ 8846=61ಕ್ಕೆ ವಾದಿರು ನಿಮ್ಮ ಕೂಡಾ 2 ಜನರ ಮೇಲೆ ದಾವಾ ಮಾಡಿದ್ದಾರೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಸ್ವತಹಾ ಯಾ ವಕೀಲರ ಮುಖಾಂತ್ರವಾಗಲೀ ತಾರೀಕು 27-2-64 ರಲ್ಲು ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳಬಹುದು. ಆ ದಿವಸ ನಿಮ್ಮ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು ಎಂತ ನಿಮಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. D Kamath,
Advocate for Plaintiff.

ತಾರೀಕು 28—1—64.

ವಿವಾಹ ಸಮಾರಂಭಗಳು

ಮಾಜಿ ಎಂ. ಎಲ್. ಎ. ಗಳಾದ ಮುತ್ತೂರು ಮನೆ ದಿ. ಜಗಜ್ಜೀವನದಾಸ ಶೆಟ್ಟರ ಪುತ್ರಿ ಕುಮಾರಿ ಶಾಲಿನಿ ಮತ್ತು ದಿ| ಚೆಕ್ರೋಡಿ ಹೆಗ್ಡೆಯವರ ಪುತ್ರ ಡಾ. ಕೆ. ರಘುರಾಮ ಶೆಟ್ಟರ ವಿವಾಹ ಸಮಾರಂಭವು ತಾ. 26—1—64ರಂದು ಉಡುಪಿ ಕಲ್ಪನಾ ಥಿಯೇಟರಿನಲ್ಲಿ ವಿಜೃಂಭಣೆಯಿಂದ ನೆರವೇರಿತು

ಶ್ರೀ ಅಂಬಾಡಿ ಬೀಡು ಸಂಕಪ್ಪ ಶೆಟ್ಟರ ಪುತ್ರಿ ಕುಮಾರಿ ಅಂಬಾ ಮತ್ತು ಶ್ರೀ ಏಮಾರ್ಳು ಎಲ್ಕದಡಿ ತಟ್ರ ಶೆಟ್ಟರ ಪುತ್ರ ಶ್ರೀ ಸಂಜೀವ ಶೆಟ್ಟರು ತಾ. 26—1—64 ರಂದು ಉಡುಪಿ ಕಲ್ಪನಾ ಥಿಯೇಟರಿನಲ್ಲಿ ವೈಭವದಿಂದ ವಿವಾಹವಾದರು.

ಡಾ ಕೊರಡ್ಕಲ್ ವೆಂಕಟ್ರಾಯರ ಪುತ್ರಿ ಸೌ| ಸುಮತಿಯನ್ನು ಶ್ರೀ ಎ. ಟಿ. ಗೋಪಾಲಕೃಷ್ಣ ರಾಯರ ಪುತ್ರ ಶ್ರೀ ಶ್ರೀನಿವಾಸ ರಾಯರು ತಾ. 16—1—64ರಂದು ಉಡುಪಿ ಕಲ್ಯಾಣ ಮಂಟಪದಲ್ಲಿ ವಿವಾಹ ಮಾಡಿಗೊಂಡರು,

ಹೈದರಾಬಾದ ವಸಂತ ವಿಹಾರದ ಮಾಲಕ ಶ್ರೀ ಶಿವ್ರ ಪುಟ್ಟಣ್ಣಯ್ಯನವರ ಪುತ್ರ ಶ್ರೀ ಕೃಷ್ಣಮೂರ್ತಿ ರಾಯರು ಶ್ರೀ ಪಡುಕುದುರು ರಾಮರಾಯರ ಪುತ್ರಿ ಕುಮಾರಿ ಲಲಿತ ಇವರನ್ನು ತಾ. 20-1-64ರಲ್ಲಿ ವಧುವಿನ ಮನೆಯಲ್ಲಿ ವಿವಾಹವಾದರು.

ಶ್ರೀ ಪಿ. ಎನ್. ಭೋಜರಾಯರ ಪುತ್ರಿ ಸೌ| ಸುನಂದ ಇವರನ್ನು ಶ್ರೀ ಬಿ. ವಾಸುದೇವ ರಾಯರ ಪುತ್ರ ಶ್ರೀ ಬಿ. ಕೇಶವ ರಾಯರು ತಾ. 26—1—64ರಂದು ಉಡುಪಿ ಕಲ್ಯಾಣ ಮಂಟಪದಲ್ಲಿ ವಿವಾಹವಾದರು.

ಶ್ರೀ ಆರ್. ಎಂ. ಅಂದ್ರಾದೆಯವರ ಪುತ್ರಿ ರೀನಾ ಮೇರಿಯನ್ನು ದಿ| ಡಯಾಗೊ ಡಿಸೋಜರ ಪುತ್ರ ಸ್ಟನಿಸ್ಲಾಸ್ ಪೆರಿಯವರ ತಾ. 12-1-64ರಂದು ಬೊಂಬಾಯಿಯಲ್ಲಿ ವಿವಾಹವಾದರು.

ಶ್ರೀ ಎಸ್. ಯು. ನಾಯ್ಕರ ಪುತ್ರಿ ಸುಚರಿತ ವಿವಾಹವು ಶ್ರೀ ಬಿ. ಗೋವಿಂದ ಕುಡ್ವ ಪುತ್ರ ಶ್ರೀ ವಿಟ್ಠಲದಾಸ ಕುಡ್ವರೊಂದಿ ತಾ. 20—1—64ರಂದು ಉಡುಪಿ ವರದೇವ ಕಲಾಮಂದಿರದಲ್ಲಿ ನೆರವೇರಿತು. ಈ ಸಂಬಂಧ ತಾ. 23ನೇ ಸಂಜೆ ಕಿನ್ನಿಮೂಲ್ಕಿ ಶ್ರೀನಿವಾಸದಲ್ಲಿ ಉಪಾಹಾರ ಸಮಾರಂಭವಿತ್ತು.

— — —

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 320/1956
R. E. P. 408/1963

ಕೆ. ಆನಂದನ್ — ಅರ್ಜಿದಾ

ಮತ್ತು

ಬಿ. ಶೀತಾರಾಮ ಹೆಗಡೆ - ಬಿ. ಕೃಷ್ಣ ಹೆಗಡೆಯವರ ಮಗ - ಉಡ್ಪಿ ತಾಲೂ ಮೂಡುತೋನ್ಸೆ ಗ್ರಾಮದ ಕಲ್ಯಾಣಪುರ — ಎದ್ರಿ

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದ್ರೆ ಮೇಲ್ಕಂಡ ಡಿಕ್ರಿ ಅಮಲ್ದಾರಿಯ ಜವಾಬ್ದಾರಿ ಸ್ಥಿರಾಸ್ತಿ ಏಲಂ ಯಿಸ್ತಾರು ಶರ್ತ ನಿರ್ಣಯಿಸುವರೆ ತಾರೀಕ 21.2.1964ಕ್ಕೆ ಯಿಡೋಣವಾಗಿಯದೆ. ಕುರಿತು ಯೆದ್ರಿಗೆ ಆಕ್ಷೇಪ ಹೇಳತಕ್ಕದಿದ್ರೆ ಸದ್ರಿ ದಿವಸ ಪೂರ್ವಾಹ್ನ 11ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಃ ಅಗಿ ಹಾಜರಾಗಿ ಮಾಡಿಕೊಳ್ಳತಕ್ಕದೆಂಬ ಸಂಗ್ತಿ ತಿಳಿಸೋಣಾಗಿಯದೆ.

N. V. Kamath.
Advocate for Petitioner.

ಉಡ್ಪಿ
29.1.64.

ನವಲು ದಾರಿ—ಕೆಂಪು ದೀಪ

ನಾವು ಅಭಿಮಾನಧನರು!

ಮಳೆ ಬರುತ್ತದೆ ಹೋಗುತ್ತದೆ.

ಬಿರು ಬಿರಿಯಾಗಿಯೋ, ಧಾರಾಕಾರವಾಗಿಯೋ, ಮಳೆ ಬರುತ್ತದೆ; ಹೋಗುತ್ತದೆ. ದನ್ನು ಯಾರೂ ತಡೆಗಟ್ಟುವದಿಲ್ಲ; ತಡೆಗಟ್ಟಲಾಗುವದಿಲ್ಲ.

ವರ್ಷಕ್ಕೊಮ್ಮೆ ಸಾಹಿತ್ಯ ಸಮ್ಮೇಳನ ನಡೆಯಬೇಕೆಂಬ ವಿಧಿಯೂ ನಮ್ಮಲ್ಲಿ ಇದೆ. ಅದು ವರ್ಷಕ್ಕೊಮ್ಮೆ ನಡೆಯಬೇಕೆಂಬುದಕ್ಕೇನೂ ಇಲ್ಲ! ತುರ್ತು ಪರಿಸ್ಥಿತಿ ನಮ್ಮ ಸಮ್ಮೇಳನಗಳಿಗೂ ಬರುವದೆಂದಿದೆ.

ಅದೇನಿದ್ದರೂ ಈ ಬಾರಿ ಕುಮಟಾರಿ ಸಮ್ಮೇಳನ ಚೆನ್ನಾಗಿಯೇ ನಡೆಯಿತು. ಚೆನ್ನಾಗಿಯೇ ನಡೆಯಿತು ಎಂದರೆ ವಿಶೇಷ ಗದ್ದಲ ಗಲಾಟೆಯೇನೂ ಇರಲಿಲ್ಲ ಎಂಬ ಕಾರಣದಿಂದಲೇ ಚೆನ್ನಾಗಿ ನಡೆಯಿತು, ಎಂದು ಅನ್ನಬಹುದು.

ಪ್ರಮುಖ ಸಾಹಿತಿಗಳು ಭಾಗವಹಿಸದೆ ನಮ್ಮ ಸಾಹಿತ್ಯ ಸಮ್ಮೇಳನ ನಡೆಯುತ್ತದೆ ಎಂದು ಅನ್ನುವವರೂ ಈ ರೀತಿ ದೋಷದೋಷಗಳನ್ನು ಎತ್ತಿ ಆಕ್ಷೇಪಿಸುವವರೂ ಇದ್ದಾರೆ. ಅವರು ಇದೀಗ ಕಣ್ಣು ತೆರೆದುದು ಸಂತೋಷದ ಸಂಗತಿ.

ಸಾಹಿತಿಗಳು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸದಿದ್ದರೂ ಸಮ್ಮೇಳನ ನಡೆಯುತ್ತದೆ, ಆದರಲ್ಲಿ ಸಮ್ಮೇಳನದ ವ್ಯವಸ್ಥಾಪಕರ ತಪ್ಪೇನೂ ಇಲ್ಲ.

ಸಾಹಿತಿಗಳಿಗೆ ಆಮಂತ್ರಣವಿತ್ತಾಗ ಅವರು ಬಾರದೆ ಉಳಿಯುವದು ಚೆನ್ನಾಗಿರುವದಿಲ್ಲ.

ಆದರೆ ಸಾಹಿತಿಗಳಿಗಿಂತ ರಾಜಕಾರಣಿಗಳಿಗೆ ಅವರಿಗಿಂತ ಒಂದು ಮಟಕ್ಕೆ ಅಂಟಿಕೊಂಡ ಪ್ರಾಮಾಣಿಕ ಜೀವಿಗಳಿಗೆ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವದೆಂದರೆ ಹೆಚ್ಚು ಮೆಚ್ಚಿನ ವಿಷಯ. ಇದಕ್ಕೇನಾದರೂ ಕಾರಣವಿರಬಹುದೇ?

ಇರಬಹುದೋ ಏನೋ?

ಅಂತೂ ನಮ್ಮ ಸಾಹಿತ್ಯ ಪರಿಷತ್ತಿನ ಸಮ್ಮೇಳನವು ಪ್ರಮುಖ ಸಾಹಿತಿಗಳು ಭಾಗವಹಿಸದಿದ್ದರೂ ನಡೆಯುತ್ತದೆ. ಇದೂ ಸಂತೋಷದ ಸಂಗತಿ!

ಕರ್ನಾಟಕದ ವಿಶೇಷ ಗುಣ ಈ ಬಗೆಯುಳ್ಳದ್ದಾಗಿದ್ದರೆ, ಭಾರತದ ವಿಶೇಷ ಗುಣ ಇನ್ನೊಂದು ಬಗೆಯಲ್ಲಿದೆ.

ನಮ್ಮನ್ನು ನಾವೇ ಆಳುತ್ತೇವೆ; ನಮ್ಮ ಪರವಾಗಿ ಕಾಂಗ್ರೆಸ್ಸು ಆಳುತ್ತದೆ; ಇದು ಪ್ರಜಾಪ್ರಭುತ್ವ.

ಕಾಂಗ್ರೆಸ್ ಇನ್ನು ಹೆಚ್ಚು ಕಾಲ ಆಡಳಿತ ನಡೆಸುವದಿಲ್ಲ ಎಂಬ ಕೂಗು, ಕೆಲವು ವರ್ಷಗಳಿಂದ ಕೇಳಿಸುತ್ತಿದೆ. ಕಾಂಗ್ರೆಸ್ಸಿನಲ್ಲಿ ನಿಷ್ಠಾವಂತರ ಅಭಾವವಿದೆ; ವಂಚಕರು, ಭ್ರಷ್ಟರು ಇದರಲ್ಲಿ ತುಂಬಿದ್ದಾರೆ ಎಂದು ಸ್ವತಃ ನೆಹರೂ ಅವರು ಕೂಡಾ ಒಪ್ಪಿಕೊಂಡಿದ್ದಾರೆ. ಅಂತೂ ಕಾಂಗ್ರೆಸ್ ತನ್ನ ಧ್ಯೇಯ ಧೋರಣೆಯ ದಾರಿಯಿಂದ ಜಾರಿದೆಯೆಂದು ಕಾಂಗ್ರೆಸ್ ವಿರೋಧಿಗಳು ಆಡುತ್ತಿರುವದು ಸತ್ಯಕ್ಕೆ ದೂರವಾಗಿಲ್ಲ.

ಆಳುವ ಪಕ್ಷದ ಮುಖಂಡರೆಲ್ಲ ಜೈಲಿಗೆ ಹೋಗಿ ಬಂದವರೇ ಆಗಿದ್ದಾರೆ. ಅವರಲ್ಲಿ ಅನುಭವ ಹೆಚ್ಚು ಇದೆ. ಆ ಅನುಭವವನ್ನೇ ಅವರು ಸದುಪಯೋಗಪಡಿಸಿಕೊಂಡಿದ್ದರೂ ಕೂಡಾ ನಮಗೆ ರಾಮರಾಜ್ಯವೂ ಬರಲಿಲ್ಲ, ರಾಮ ರಾಜ್ಯವೂ ಬರಲಿಲ್ಲ ಎಂದು, ಮಂದಿ ಆಡಿಕೊಳ್ಳುತ್ತಾರೆ.

ಮಂದಿ ಏನೇ ಆಡಿ ಕೊಂಡರೂ ಅದು ಮುಖ್ಯವಲ್ಲ?

ರಾಮರಾಜ್ಯ ಅಲ್ಲದಿದ್ದರೂ ಕಾಮರಾಜ್ಯವಾದರೂ ಬರುತ್ತಿದ್ದರೆ, ಎಂಬುದು ಕೆಲವು ಮಂದಿಯ ಬಯಕೆ; ಆ ಬಯಕೆಗೆ ಪ್ರೋತ್ಸಾಹ ಸಿಗಬಹುದೇ ಎಂಬುದು ಒಂದು ಸಂಶಯದ ಪ್ರಶ್ನೆ.

ಅದಲ್ಲದೆ, ಈ ಕಾಂಗ್ರೆಸು ಮಂದಿ ಬಲು ಘಾಟೀ ಜನ, ಎಂದೂ ಕೈಬಿಡಿಕೊಳ್ಳುವವರೇ ಏಕೆ ಈಗ ಹೆಚ್ಚಾಗಿದ್ದಾರೆ?

ಕಾಂಗ್ರೆಸ್ಸಿನ ಒಳಗಿರುವ ಕೊಳಚೆ ತೆಗೆದು ಶುಚೀಕರಣದ ಕಾರ್ಯ ನಡೆಯಬೇಕೆಂದು ಇತ್ತೀಚೆಗೆ ಜೋರು ಜೋರಾಗಿ ಮಾತು ನಡೆದಿತ್ತಲ್ಲ? ಪತ್ರಿಕೆಗಳಿಗೆ, ವಿರೋಧೀ ಪಕ್ಷಗಳಿಗೆ, ಈ ಮಾತು ಭಾರೀ ಪ್ರಮಾಣದ ಆಹಾರವಾಗಿತ್ತಲ್ಲ?

ಈ ಶುಚೀಕರಣ ಕಾರ್ಯದ ಸೂತ್ರಧಾರಿಗಳಾಗಿ ಕಾಮರಾಜ ನಾಡಾರರು ನಿಂತರು.

ಕಾಂಗ್ರೆಸ್ಸಿನ ಮಹಾಧಿವೇಶನಗಳು ನಡೆದರೆ ಅಲ್ಲಿ ರಾಜಕಾರಣಿಗಳಿಗಿಂತ ಸಿನೆಮಾ ನಟರು ಹೆಚ್ಚು ಕಾಣಿಸಿಕೊಳ್ಳುತ್ತಾರೆ ಎಂದು ಕೆಲವರ ಅಭಿಪ್ರಾಯ.

ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿಗಳೇ ಭಾಗ ವಹಿಸಿದರೆ ಹೇಗೆ ಸಾಹಿತ್ಯ ಸಮ್ಮೇಳನವು ಸಪ್ಪೆಯಾಗುತ್ತದೆ ಎಂಬುದು ಕೆಲವರ ಎಣಿಕೆಯಾಗಿದೆಯೋ, ಹಾಗೆಯೇ ಕಾಂಗ್ರೆಸ್ ಅಧಿವೇಶನದಲ್ಲಿ ರಾಜಕಾರಣಿಗಳೇ ಕಾಣಿಸಿಕೊಂಡರೆ, ಆಗ ಅದೂ ಸಪ್ಪೆಯಾಗಿ ಕಾಣುತ್ತದೆ. ಅದಕ್ಕಾಗಿ ನಮ್ಮ ಚಲಚಿತ್ರ ನಟ-ನಟಿಯರನ್ನು ಆಮಂತ್ರಿಸುತ್ತಿದ್ದರೂ ಇರಬಹುದು.

ಈ ಬಾರಿ ಅಧಿವೇಶನ— ೬೮ನೆಯ ಕಾಂಗ್ರೆಸ್ ಮಹಾಧಿವೇಶನ— ನಡೆದುದು ಭುವನೇಶ್ವರದಲ್ಲಿ; ಕಾಂಗ್ರೆಸ್ ಸುಧಾರಕ ಕಾಮರಾಜ ನಾಡಾರರ ಅಧ್ಯಕ್ಷತೆಯಲ್ಲಿ.

ಅಧ್ಯಕ್ಷರು ಗಾಂಧೀ ಟೊಪ್ಪಿಯುಳ್ಳವರಾಗಿರಬೇಕು; ಆಗ ಪೀಠಕ್ಕೆ ಕಳೆ ಬರುತ್ತದೆ. ಅವರು ಹಿಂದಿಯಲ್ಲೇ ಭಾಷಣ ಮಾಡಬೇಕು; ಆಗ ಶ್ರೋತೃಗಣಕ್ಕೇ ಸಂತೋಷವಾಗುತ್ತದೆ.

ಕಾಮರಾಜ ನಾಡಾರರು ಕಾಂಗ್ರೆಸ್ಸಿಗರಾಗಿದ್ದರೂ ಟೋಪೀಧಾರಿಗಳಲ್ಲ. ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದು ಕಾಂಗ್ರೆಸ್ ಶ್ರಮಿಸುತ್ತಿದ್ದರೂ ನಾಡಾರರಿಗೆ ಹಿಂದಿ ಬರುವದಿಲ್ಲ

ತಮ್ಮ ಅಧ್ಯಕ್ಷೀಯ ಭಾಷಣವನ್ನು ಇಂಗ್ಲೀಷಿನಲ್ಲಾದರೂ ಮಾಡಬಾರದಿತ್ತೇ ಎಂದು ಆಕ್ಷೇಪವೆತ್ತಿದವರೂ ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇದ್ದರು.

ನಾಡಾರರು ಕೆಲಸವನ್ನು ಬಲ್ಲರು, ಭಾಷೆಯನ್ನಲ್ಲ; ಎಂಬ ದೃಷ್ಟಿಯಿಂದ ನೋಡಿದವರಿಗೆ ಮಾತ್ರ ಅವರು ತಮಿಳು ಭಾಷೆಯಲ್ಲಿ ಅಧ್ಯಕ್ಷ ಭಾಷಣವನ್ನು ಆಡಿದುದು ಮೆಚ್ಚುಗೆಯಾಗಿರಬಹುದು. ಆದರೆ ಇತರ ಮಂದಿಗೆ?

ಕಾಮರಾಜನಾಡಾರರು ತಮಿಳಿನಲ್ಲೇ ಆಡಿಕೊಂಡರೂ ಅವರು ತಮಿಳು ನಾಡಿನ ಸ್ಥಿತಿಯನ್ನು ಹೆಚ್ಚು ಬಲ್ಲರು. ಹಿಂದಿಗಿಂತ ಭಾರತದ ಸ್ಥಿತಿಯನ್ನು ಹೆಚ್ಚು ತಿಳಿದವರು. ಇಂಗ್ಲೀಷ್‌ಗಿಂತ ಕಾಂಗ್ರೆಸ್ಸಿನ ಹೊಲಸನ್ನು ಹೆಚ್ಚು ಅರ್ಥಮಾಡಿಕೊಂಡವರು.

ಅಂತೆಯೇ ಇವೆಲ್ಲವನ್ನೂ ಒಂದು ನಿಶ್ಚಿತ ರೂಪದಿಂದ ಅವರು ಅರ್ಥಮಾಡಿಕೊಂಡು, ತಮ್ಮ ಕೆಲಸವನ್ನು ಫಲಾಪೇಕ್ಷೆಯಿಲ್ಲದೆ ಮಾಡುತ್ತಿದ್ದಾರೆ.

ಅಂತೆಯೇ ಈ ಬಾರಿ ನಡೆದ ಕಾಂಗ್ರೆಸ್ ಅಧಿವೇಶನ ಹೆಚ್ಚು ಗಂಭೀರವಾಗುವ ಸಂಕೇತದಿಂದ, ಕಾಂಗ್ರೆಸ್ಸಿನ, ಹಿಂದಿ ಭಾಷೆಯ, ಭಾರತದ, ಭವಿಷ್ಯವನ್ನು ಸೂಚಿಸುತ್ತದೆ, ಎಂದು ಒಬ್ಬರು ಅಭಿಪ್ರಾಯ ಪಡುತ್ತಾರೆ. ಇದು ನನ್ನ ಅಭಿಪ್ರಾಯ ನಿಜಕ್ಕೂ ಅಲ್ಲ—ಕಾಂಗ್ರೆಸ್ ಹಿತೈಷಿಗಳೊಬ್ಬರ ಅಭಿಪ್ರಾಯ.

ಕಾಂಗ್ರೆಸ್ ಚಿರಾಯುವಾಗಲಿ—ನೆಹರೂ ಸರ್ಕಾರ ದೀರ್ಘಕಾಲ ಉಳಿಯಲಿ—ಬೇಕಾಗಿದ್ದರೆ.

ಇನ್ನು ನನ್ನ ಅಭಿಪ್ರಾಯವೇ? ಮಿತವ್ಯಯ ಪದಗಳನ್ನು ಧಾರಾಳವಾಗಿ ಬಳಸುವ ನಾವು—ನಮ್ಮವರು ಆ ಕುರಿತು ಏಕೆ ಹೆಚ್ಚು ಚಿಂತಿಸಬಾರದು? ಜನವರಿ ಇಪ್ಪತ್ತಾರನ್ನು ನಿರಾಡಂಬರವಾಗಿ ಆಚರಿಸ ಬೇಕೆನ್ನುವವರು ಅಧಿವೇಶನವನ್ನೂ ಮಿತ ಖರ್ಚಿನಲ್ಲಿ ಏಕೆ ವ್ಯವಸ್ಥಿತಗೊಳಿಸಬಾರದು?

ಏನಿದ್ದರೂ ಇದು ಸ್ವಂತದ ಅಭಿಪ್ರಾಯ. ಇದಕ್ಕಾಗಿ ನಿಷ್ಠಾವಂತ ಕಾಂಗ್ರೆಸಿಗರು ರೇಗಿ ಬೀಳುವ ಅಗತ್ಯವಿಲ್ಲ.

ನಮ್ಮ ತುರ್ತು ಪರಿಸ್ಥಿತಿ, ಮಿತವ್ಯಯದ ಉಪದೇಶ, ಜನರು ದಿನದಿನ ದಾರಿದ್ರ್ಯದತ್ತ ಒಲಿಯುತ್ತಿರುವ ಶೋಚನೀಯ ಸ್ಥಿತಿ, ಬೆಲೆಗಳ ಏರಿಕೆ, ಇವನ್ನೆಲ್ಲಾ ಅರ್ಥ ಮಾಡಿಕೊಳ್ಳಲು ಸಮರ್ಥರಾದರೆ, ಆಗ ನಿರಾಡಂಬರಕ್ಕೆ ಹೆಚ್ಚು ಬೆಲೆ ಬರುತ್ತೆ; ಆ ಮಾತು ಹೆಚ್ಚುಕಾಲ ಉಳಿಯುತ್ತೆ; ಅದಕ್ಕೆ ತೂಕವೂ ಇರುತ್ತೆ; ಇಲ್ಲದಿದ್ದರೆ ಗಾಳಿಗೆ ಹಾರಿ ಹೋಗುತ್ತೆ; ಎಂದು ನಾನು ತಿಳಿಯುವೆ.

ಈ ಮಾತು ನಿಮಗೆ ಸರಿಯೆನಿಸುತ್ತದೆಯೆ? ಅಥವಾ ನಿಮ್ಮದೇ ಪ್ರತ್ಯೇಕ ಅಭಿಪ್ರಾಯ ನೀವು ತಿಳಿಸುತ್ತೀರೇನು? ನನಗಂತೂ ನಿಮ್ಮ ಮೇಲೆ ಭರವಸೆಯಿದೆ. ಯಾಕೆನ್ನುತ್ತೀರೇನು? ನಿಮ್ಮನ್ನೇ ನೀವು ಕೇಳಿಕೊಳ್ಳಿ!

—ಸುದಾಸ.

In the Court of the District Munsif, Mangalore.

R.C.O.P. 242/1963.

B. Babu Shetty —Petitioner
B Abbu Saheb —Respondent.

To
B. Abbu Saheb, S/o Asane Beary, C/o B. S. Mohammed, Basant Beedi Factory, Bolar Ferry Road, Mangalore.

Whereas the Petitioner has filed the above case for eviction of premises Door No. 22-738, Arkere, Ferry Road, Bolar, Mangalore town, and the same stands posted to 12—2—1964. If you fail to appear that date at 11 A. M. and file your objections, if any, you will be declared exparte and decided accordingly.

(By order)

U. Ramanath Kini,
Advocate.

Mangalore, 24-1-1964.

Syndicate Bank Reports Good Progress

The Syndicate Bank Ltd. (Formerly The Canara Industrial & Banking Syndicate Ltd.) Registered Office: Manipal, South Kanara has made very considerable progress in the year 1963, the deposits having risen from Rs. 32 65 Crores in 1952 to Rs. 45·11 Crores and advances from Rs. 18 27 Crores to Rs. 27·83 Crores. Investments on approved securities have risen from Rs. 12·03 Crores to Rs. 16·47 Crores. The net profit before providing for tax is Rs. 40 Lakhs (last year Rs. 30 Lakhs).

The Directors propose to transfer Rs. 9 Lakhs to the General Reserve, raising it to Rs. 75 Lakhs as against a Paid-up Capital of Rs 80 Lakhs, set apart Rs. 14 Lakhs for taxation and Rs. 5 Lakhs for Bonus to staff. The Dividend will be maintained at 20% (less tax) on Equity Shares

The Resources of the Bank stand at Rs. 57 Crores as on 31—12—1963 as against Rs. 39 Crores last year.

These figures are subject to to audit.

ಚೀನೀಯ ಕಮ್ಯೂನಿಸ್ಟರು

(೩ನೇ ಪುಟದಿಂದ)

ರಷ್ಯಾ, ಅಮೇರಿಕಾ ಮುಂತಾದ ಪ್ರಬಲ ರಾಷ್ಟ್ರಗಳನ್ನು ಅಧಿಕಾರಕ್ಕೆ ಬಂದೊಡನೆ ಕೈಗಾರಿಕೆಯ ಕಣದಲ್ಲಿ ಸೋಲಿಸಿಬಿಡಬೇಕೆಂದು ಅವರು ಅತ್ಯವಸರಪಟ್ಟುಕೊಂಡರು

ಕೃಷಿ ಕಳದಲ್ಲಿ ಸೋಲಾಗಲು ಕಾರಣ ಕ್ಷಾಮವೆಂದು ಚೈನಿ ಕಮ್ಯೂನಿಸ್ಟ್ ಅಧಿಕಾರಿಗಳು ಹೇಳಲಾರಂಭಿಸಿದರು. ಆದರೂ ಹೊಟ್ಟೆ ಕೇಳಬೇಕಲ್ಲ? ಅಲ್ಲಿ ಇಲ್ಲಿ ಕೆಲ ತಪ್ಪುಗಳಾಗಿರಬಹುದು, ಅವುಗಳನ್ನು ತಿದ್ದಿಕೊಂಡಲ್ಲಿ ಎಲ್ಲಾ ಸರಿ ಹೋಗುತ್ತದೆಂದವರು ಅಣ್ಣೊರಿಸಲು ಪ್ರಯತ್ನಪಟ್ಟರು. ಆಹಾರ ಧಾನ್ಯಗಳ ಅಭಾವ ಚೈನಾದಲ್ಲಿ ಮಾತ್ರವಲ್ಲ, ರಷ್ಯಾದಲ್ಲೂ ಇದೆ. ಕ್ರುಶ್ಚೇವರಾದರೋ ಅಮೇರಿಕದಿಂದ ಆಹಾರಧಾನ್ಯ ತರಿಸಿ ಜನತೆಗಿತ್ತರು. ಮಾನಾಪಮಾನದ ಪ್ರಶ್ನೆಯನ್ನು ಬದಿಗೆ ಸರಿಸಿ ರಷ್ಯಾವು ಜನತೆಯ ಹೊಟ್ಟೆಯನ್ನು ತಣ್ಣಗಿರಿಸಲು ಪ್ರಯತ್ನಿಸಿತು. ಚೈನಾ ಹಾಗಲ್ಲ. ಜನತೆಯೇ ಆಯಾಸ—ಹಸಿವಿನಿಂದ ಹಣ್ಣೆಲೆ ಉದುರುವಂತೆ ಕಾರ್ಖಾನೆಗಳಲ್ಲಿ; ಕಮ್ಯೂನ್‌ಗಳಲ್ಲಿ ಬಿದ್ದು ಸಾಯುತ್ತಿದ್ದಲ್ಲೂ ಆಹಾರ ಬೆಳವಣಿಗೆಗೆ ಅಷ್ಟು ಮಹತ್ವಕೊಡದೆ ಬೆಳೆದದ್ದನ್ನು ಅನ್ಯ ರಾಷ್ಟ್ರಗಳನ್ನು ತಮ್ಮ ಬಲೆಯೊಳಗೆ ಹಾಕಿಕೊಳ್ಳಲಿಕ್ಕಾಗಿ ಅವರಿಗೆ ರಫ್ತು ಮಾಡಿತು! ಆಶ್ವಾಸನೆಯ ಪಾಲನೆಯನ್ನು ಮಾಡಲು ಒಂದೆಡೆ ಸಾಧ್ಯವಾಗಲಿಲ್ಲ, ಇನ್ನೊಂದೆಡೆ ಜನತೆಯನ್ನೂ ತೃಪ್ತಿಪಡಿಸಲಿಕ್ಕಾಗಲಿಲ್ಲ. ಆಹಾರ ಅಭಾವಕ್ಕೆ ಮುಖ್ಯ ಕಾರಣವೆಂದರೆ ಅತ್ತ ಅಲಕ್ಷ್ಯ ತೋರಿಸಿದ್ದೇ ಇದೆ. ಮಧುಚಂದ್ರಕ್ಕೆ ಚಂದ್ರಲೋಕಕ್ಕೆನೇ ಹೋದರೂ ಏನು ಪ್ರಯೋಜನ—ಹೊಟ್ಟೆ ಚುರ್ ಎನ್ನುತ್ತಿರುವಾಗ? ಕೃಷಿಯೇ ಪ್ರಧಾನವಾಗಿರುವ ರಾಷ್ಟ್ರಗಳು ಅದನ್ನು ಮರೆತು ಆಕಾಶದಲ್ಲಿ ಹಾರಾಡಲು, ಕೈಗಾರಿಕಾ ಪ್ರಪಂಚದಲ್ಲಿ ಮೆರೆದಾಡಲು ಪ್ರಯತ್ನಿಸಿದ್ದಲ್ಲಿ ಫಲಿತಾಂಶ ಹೀಗೆಯೇ ಆದೀತೆಂಬುದಕ್ಕೆ ಚೈನಾ ಉತ್ತಮ ಉದಾಹರಣೆ. ಮೂಲವನ್ನು ಮರೆಯುತ್ತಿರುವ ರಾಷ್ಟ್ರಗಳಿಗೆ ಇದೊಂದು ಉತ್ತಮ ಪಾಠ.

ಚೈನಾದಲ್ಲಿ ತೈಲ ಸಂಪತ್ತಿನ ಅಭಾವವೂ ಮುಖ್ಯ ವಿಷಯವಿದೆ. ಆದುದರಿಂದಲೇ ಅವರು ಈಶಾನ್ಯ ಪ್ರದೇಶ ಅಲ್ಲದೆ ಅಸ್ಸಾಮಿನತ್ತ ಅವಸರದಿಂದ ಧಾವಿಸಿ ಬಂದಿದ್ದರು. ಭಾರತೀಯ ಜನತೆಯು ಎದೆಯಲ್ಲಿ ಶಬ್ದ ಜೋರಾಗಿ ಕೇಳಿ ಬರುತ್ತಿತ್ತು. ಅಲ್ಲಿರುವ ಪ್ರಜೆಗಳು, ಅದಕ್ಕಿಂತಲೂ ಮುಂಚೆ ಪ್ರಮುಖರೆಂದು ಮೆರೆಯುತ್ತಿದ್ದರು—ಮಂತ್ರಿಗಳು, ಅಧಿಕಾರಿಗಳು, ಅತ್ಯಮೂಲ್ಯ ವಸ್ತುಗಳೊಂದಿಗೆ ತಮ್ಮ ತಮ್ಮ ವಾಹನದಲ್ಲಿ ಫರಾರಿಯಾದರು. ಜನತೆಗೆ ವಿಷಯ ತಿಳಿಸುವವರ್ಯಾರು? "ಪ್ರಮುಖ"ರು ಓಡುವುದನ್ನು ಕಂಡ ಜನತೆ ಸುಮ್ಮಗಿರುವದಾದರೂ ಹೇಗೆ? ವೀರ ಸ್ವಯಂ ಸೇವಕರು, ಸೈನಿಕ ತಂಡ ತಮ್ಮಿಂದಾದಷ್ಟು ಪ್ರಯತ್ನಿಸಿದರು. ಈ ಅಪಮಾನಕರ ದುರ್ಘಟನೆಯ ಕುರಿತು ಹಿಂದೆಯೇ ಈ ಪತ್ರಿಕೆಯಲ್ಲೇ ಓದಿರುವೆವು. ಪಾಕಿಸ್ಥಾನ—ಚೈನಾ ಮೈತ್ರಿ ಕತೆ ನಡೆಸಿಕೊಂಡು ಪಾಕಿಸ್ಥಾನಕ್ಕೆ ಪಕ್ಕದಲ್ಲಿರುವ ಪ್ರದೇಶ ಪಾಕಿಸ್ಥಾನಕ್ಕು ಇತರ ಪ್ರದೇಶ ಚೈನಾಕ್ಕೆಂದೂ ಅವರು ಮುಂಪಡಿಯಿಟ್ಟಿದ್ದರು. ಈ ನಡುವೆ ಕಮ್ಯೂನಿಸ್ಟರು ಇನ್ನೊಂದು ಕುತಂತ್ರವನ್ನು ಆಡಿದ್ದರು. ಪಕ್ಕದ ಪ್ರಾಂತ್ಯ ಬಂಗಾಲದಲ್ಲಿ ಕಮ್ಯೂನಿಸ್ಟರೆಲ್ಲಾ ಸೇರಿ ದಂಗೆ ಏಳುವಂತೆ ಸೂಚನೆಯೀಯಲಾಗಿತ್ತು. ಅಲ್ಲಿ ದಂಗೆ ಎದ್ದು, ಗಲಾಟೆ ನಡೆಸಿ, ಚೈನಿ ಕೆಂಪು ಸೈನ್ಯಕ್ಕೆ ಸಹಾಯ ಸಲ್ಲಿಸಬೇಕೆನ್ನುವ ಸೂಚನೆಯನ್ನು ಮುಂಚೆನೇ ಕೊಡಲಾಗಿತ್ತು. ದೇಶದ ಕಣಕಣದ ಮೇಲೂ ಅಭಿಮಾನ ಇರುವ ರಾಷ್ಟ್ರೀಯರು ಇದೆಲ್ಲಾವನ್ನು ಗೌಪ್ಯವಾಗಿ ತಿಳಿದುಕೊಂಡು ಕಮ್ಯೂನಿಸ್ಟ್ ರಾಜಸ್ತಾನ ಫಲಕಾರಿಯಾಗದಂತೆ ನೋಡಿಕೊಂಡರು. ಬಂಗಾಲದ ಸರಕಾರ ಅದಕ್ಕಿಂತಲೂ ಹಿಂದೆಯೇ, ಅಥವಾ ಅನಂತರವಾದರೂ ಚೆನ್ನಾಗಿ ಕಣ್ಣು ಬಿಟ್ಟು ಧೈರ್ಯದಿಂದ ವರ್ತಿಸುತ್ತಿದ್ದಲ್ಲಿ ವಿಷಬೀಜದ ಹುಟ್ಟನ್ನೇ ಅಡಗಿಸಬಹುದಾಗಿತ್ತು. ಅವರಾದರೋ ಕೇಂದ್ರ ಮಂತ್ರಿಮಂಡಲದ ಕೆಲ 'ಮಹಾನುಭಾವರ' ಕೋಪ ದೃಷ್ಟಿಗೆ ತುತ್ತಾಗಲು ಇಷ್ಟಪಡದೆ ಕೇವಲ ದಿವಸ ದೂಡಲು ನೋಡುತ್ತಿದ್ದಾರೆ. ಇದೀಗ ನಡೆದ ಉಪಚುನಾವಣೆಗಳಲ್ಲಿ ಕಮ್ಯೂನಿಸ್ಟರು ಆರಿಸಿ ಬಂದದ್ದೇ ಅದಕ್ಕೆ ಸಾಕ್ಷಿ. ಕೇಂದ್ರದಲ್ಲಾಗಲೀ ಕೇರಳದಲ್ಲಾಗಲೀ, ಮಧ್ಯಪ್ರದೇಶದಲ್ಲಾಗಲೀ ಮದ್ರಾಸಿನಲ್ಲೇ ಆಗಲಿ ಕಾಂಗ್ರೆಸ್ ಆಸನದಲ್ಲಿ ಕಮ್ಯೂನಿಸ್ಟರಿಗೂ ಪಾಲು ಸಿಗುತ್ತಿರುವದರಿಂದ ಬಂಗಾಲದ ಮುಖ್ಯಮಂತ್ರಿಯವರು ಬಗ್ಗದೆ ಇರುವದಾದರೂ ಹೇಗೆ? ಆದರೆ ಅವರ ಆಸಕ್ತಿ ಹಾಗೂ ದುಷ್ಪರಿಣಾಮವನ್ನು ಮೂವತ್ತು ಕೋಟಿ ಭಾರತೀಯರು ಅನುಭವಿಸಬೇಕಾಗುತ್ತದೆ.

ತೈಲ ಸಂಪತ್ತು ಮಾತ್ರವಲ್ಲ ಇತರ ಖನಿಜ ಸಂಪತ್ತಿಗೂ ಅಲ್ಲಿ ಅಭಾವ ಇರುವದರಿಂದಲೇ ಅವು ಭಾರತದ ಯಾವ ಪ್ರದೇಶದಲ್ಲಿ ಹೇರಳವಾಗಿ ಸಿಗುತ್ತದೆಂಬುದನ್ನು ನೋಡಿಕೊಂಡೇ ಚೈನಾ ಗೃಧ್ರದೃಷ್ಟಿಯಿಂದ ಇತ್ತ ಬಂದಿರುತ್ತದೆ. ಭಾರತೀಯ... ಏಕಲವ್ಯ—ಅರ್ಜುನರ ಹೆಸರು ... ಜ್ಞಾಪಕದಲ್ಲಿದೆಂಬುದನ್ನು ಚೈನಾ ... ತುಕೊಂಡಿ.

ರಾಸಾಯನಿಕ ರಂಗದಲ್ಲಿ ಕಮ್ಯೂನಿಸ್ಟ್ ಚೈನಾ ಮುಂದರಿದಿರುವದು ಗ... ನೀಯ ವಿಷಯವಿದೆ. ಚೈನಾದಲ್ಲಿ ... ಗುಂಡು ತಯಾರಾಗುತ್ತಿದೆಯೇ? ಎ... ದರ ಕುರಿತು ಈ ಪತ್ರಿಕೆ ಹಿಂದೆಯೇ ... ಸಿರುತ್ತದೆ. ರಾಸಾಯನಿಕ ರಂಗದಲ್ಲಿ ... ರು ರಚನಾತ್ಮಕ ದೃಷ್ಟಿಯಲ್ಲಿ ಮುನ್ನ... ಯದೆ ನಾಶಗೈಯ್ಯುವ ದೃಷ್ಟಿಯಲ್ಲೇ ... ರು ಮುಂದುವರಿದಿದ್ದಾರೆ. ರಾಸಾಯ... ಗೊಬ್ಬರಾದಿಗಳನ್ನು ತಯಾರಿಸಿ 'ಕಮ್ಯೂ... ನ್'ಗಳಿಗೆ ಕಳುಹಿಸಿದ್ದಲ್ಲಿ 'ಬಂಧ... ತೋಳಗಾದರೂ ಬಲ ಬರುತ್ತಿತ್ತು, ... ರ ಬದಲು ಅನ್ಯ ರಾಷ್ಟ್ರಗಳನ್ನು ... ಪಡಿಸುವ ಹಾಗೂ ಅಮೇರಿಕ—ರಷ್ಯ... ಸಾಲಿನಲ್ಲಿ ಸೇರಲು ವಿಚಿತ್ರ ಗುಂಡು... ನ್ನು ಸಿದ್ಧಗೊಳಿಸುವ ಸಾಹಸಕಾರ್ಯ... ದಲ್ಲಿ ಅದು ಮಗ್ನವಾಗಿದೆ—ವಿನಾಶ... ದಲ್ಲಿ ವಿಪರೀತ ಬುದ್ಧಿ ಎಂಬಂತೆ.

ಅಮೇರಿಕದ ರಾಜಕಾರಣಿ—ಅಧಿ... ರೋಗರ್ ಹಿಲ್ಸ್‌ಮೇನ್‌ರವರು ... ಫ್ರಾನ್ಸಿಸ್ಕೋವಿನಲ್ಲಿ ತಮ್ಮ ಅಭಿಪ್ರಾ... ವನ್ನು ವ್ಯಕ್ತಪಡಿಸುತ್ತ ಚೈನಾದ ಸೋ... ಗೆ ಕಾರಣ ಅಲ್ಲಿರುವ ಧುರೀಣರಿಗೆ ... ಮೇಲಿರುವ ಅಪಾಯಕರ ಹಾಗೂ ... ಸ್ತಿ ಸ್ವ-ಧೈರ್ಯ ಹಾಗೂ ಹಳೆಯ ರೀತಿ... ಮಂತ್ರ ಸಾಧನಗಳೆಂದು ಹೇಳಿರು... ಈ ಕ್ರಮಗಳೆಲ್ಲಾ ಕ್ರಮಶಃ ಕಮ್ಮಿಯ... ಅಲ್ಲಿ ಹೊಸ ಜೀವನ ಆರಂಭವಾಗಿ... ದೂ ಅವರು ಆಶೆಯನ್ನು ವ್ಯಕ್ತಪ... ದ್ದಾರೆ.

—ಶಿವಶಂಕ...

ಕಾರ್ಕಳ ಡಿ. ಮು. ಕೋರ್ಟನಲ್ಲಿ

O. S. No. 603/1963

ರಂಗಪ್ಪಯ್ಯ —ವಾದಿ.

ನಾಗ್ರಾಜ ಬುಣ್ಣು ಕೂಡಾ —ಪ್ರತಿವಾದಿರು.

6ನೇ ಪ್ರತಿವಾದಿಳು—ವೀರಮ್ಮ ಯಾನೆ ನೀಲಮ್ಮ—ಚಿಕ್ಕಮ್ಮನ ಮಗಳು ಬೆಳ್ತಂಗಡಿ ತಾಲೂಕು ಕುಕ್ಕಳ್ಳರು ಗ್ರಾಮದ ಚಂಡನಾಲೆ ಇವರಿಗೆ ತಿಳಿಯಪಡಿಸುವುದೇನೆಂದ್ರೆ

ನಿಮ್ಮ ಕುಟುಂಬದ ಸ್ವಾಯ ದ ಆಗತ್ಯ ದಾದ ಗಜೆಸ ಬಗ್ಗೆ ವಾದಿಯಿಂದ ರುಪ್ಯಾ 2500 ...ಸಾಲವಾಗಿ ಪಡೆದು ಮೇಲ್ಕಂಡ ದಾವೆಯು 1962 3.9ಮತ್ತು 10ನೇ ಪ್ರತಿವಾದಿಯು ವಾದಿಗೆ ಸದ್ರಿ ರುಪ್ಯಾ 2300/-ಕ್ಕೆ ಬರೆಕೊಟ್ಟ ತಾರೀಕು 25—5—1950ರ ಅಡವು ದಸ್ತೈವಜಿನ ಬಾಬ್ತು ಅಸಲು ಬಡ್ಡಿ ವಗೈರೆ ಒಟ್ಟು ರುಪ್ಯಾ 2732—84 ಬರ ಮಾಡಿಕೊಳ್ಳುವರೆ ನಿಮ್ಮ ವಗೈರೆರ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 14—2—1964ಕ್ಕೆ ನಿಮ್ಮ ಹಾಜ್ರಾತಿ ಬಗ್ಗೆ ಇಡೋಣಾಗಿಯದೆ. ಆ ಕುರಿತು ನಿಮಗೆ ಆಕ್ಷೇಪಣೆಗಳು ಇದ್ದಲ್ಲಿ ಮೇಲ್ಕಂಡ ಕೋರ್ಟನಲ್ಲಿ ತಾ. 14—2—1964ಕ್ಕೆ ಪೂರ್ವಾಹ್ನ ಘಂಟೆ 10ಕ್ಕೆ ನೀವು ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜ್ರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು ಕೋರ್ಟು ಹುಕುಂ ಪ್ರಕಾರ ಈ ನೋಟಿಸು ಪ್ರಕಟಿಸಿಯದೆ.

D. Venkatesh Bhat
ವಾದಿಕಡೆ ವಕೀಲ್.

ಕಾರ್ಕಳ
... ... 1964

ನಿಮ್ಮಷ್ಟಕ್ಕೆ; ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದ
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನಲ್ಲಿ

O. P. 1/61

ಅರ್ಜಿದಾರರು— 1. ಸೀತು ನ್ಯಾ... 2. ಪುಟ್ಟಮ್ಮ 3. ಬಾಬಣ್ಣ.

ಈ ಮೂಲ್ಯ ಸರ್ವರಿಗೂ ತಿಳಿಯಪ... ಪುದೇನಂದ್ರೆ—ಅರ್ಜಿದಾರರು ವ... ನಾಯ್ಕನ ವಾರಿಸ್ದಾರರು ತಾವು ಮಾತ್ರ... ತಲೂ ಸಗ್ರಿ ಶಿವನಾಯ್ಕನು ಮೃತ... ಮುಂಚೆ ಶಂಕ ನಾರಾಯಣ ಕೋ-ಆ... ಎಗ್ರಿಕಲ್ಚರಲ್ ಬೇಂಕ್ ಲಿ. ಇದರಲ್ಲಿ ... 500ನ್ನು fixed deposit ಇ... ತ್ತಿನಾಗಿಯೂ ಆ ಕುರಿತು ತಮ್ಮ ... 9ನೇಯವನ ವಾರಿಸು ಸರ್ಟಿಫಿಕೇಟು ... ಬೇಕಾಗಿಯೂ ಪ್ರಾರ್ಥಿಸಿ ಅರ್ಜಿ ... ಮಾಡಿರುತ್ತಾರೆ. ಸದ್ರಿ ಅರ್ಜಿ ತಾ.17.2... ಕ್ಕೆ ತನ್ಖಿಗೆ ಇದೆ. ಆಕ್ಷೇಪ ಇರುವವರು ... ವ್ವ ಕೋರ್ಟು ಮುಂದೆ ಹಾಜ್ರಾಗಿ ... ರು ಮಾಡಿಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

Sd. Laxminarayanay...
Adovcate for petit...
coondapoor, 18-1-64,

ವರ್ಗ—ಊಳಿಗ...

ಮೊದಲಾದ ಯಾಸತ್ತೂ ತರ...
ಎಕೌಂಟ್ ಪುಸ್ತಕಗ...
ಶಾಲಾ ರಿಜಿಸ್ತ್ರಿಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ಅವಳೇ ನನ್ನ ಮಗಳು!

(೨ನೇ ಪುಟದಿಂದ)

ಡಲಿಲ್ಲ. ಕಡೆಗೂ, ಅಲ್ಲಿ ಹೋಗಿ ನಿಂತು ದಶಕ್ಕಾಗಿ ೨ ನಿಮಿಷ ಏನೇನೋ ಮಾತನಾಡಿ ಈಚೆಗೆ ಬಂದುಬಿಟ್ಟ. ಅವನ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಲೇ ಇತ್ತು. ಸಭೆ ಮುಗಿದ ನಂತರ, ಎಲ್ಲಾ ಲೆಕ್ಚರರ್‌ಗಳಿಗೂ ವಂದಿಸಿ, ಗೆಳೆಯರೆಲ್ಲರಿಗೂ "ಶೇಕ್ ಹೇಂಡ್" ಕೊಟ್ಟು ಸೈಕಲ್ ಹತ್ತಿ ಹೊರಟು ಬಿಟ್ಟ ದಿನೇಶ್!

ಸಂಜೆ ಭಾರವಾಗಿದ್ದ ಹೃದಯವನ್ನು ಸ್ವಲ್ಪ ಹಗುರಗೊಳಿಸಲು ದಿನೇಶ್ ಪಾರ್ಕ್‌ಗೆ ಹೋಗಿ ಕುಳಿತ. ಗಂಟೆ ೮ ಆಯಿತು. ದಿನೇಶ್ ಮೆಲ್ಲನೆದ್ದು ಹಾಗೇ ಪುನಃ ಹೊರಟ, ಎಲ್ಲಿಗೋ ಅವನಿಗೇ ಗೊತ್ತು! ಸೈಕಲ್ ಮೇಲೆ ಕುಳಿತ, ಆವೇಶಬಂದವನಂತೆ, ಇಡೀ ಮಾರ್ಗವನ್ನೇ ಆಕ್ರಮಿಸುತ್ತ ರೈಡ್ ಮಾಡಿಕೊಂಡು ಹೋಗುತ್ತಿದ್ದ. ಹಾವಿನಂತೆ ಸುತ್ತುತ್ತ ಬರುತ್ತಿದ್ದ ದಿನೇಶನ ಸೈಕಲ್, ಹೇಗೋ ಪಕ್ಕದ ಚರಂಡಿಗಿಳಿಯಿತು! ಆದರೆ ದಿನೇಶನಿಗೆ ಇದರ ಪರಿವೆಯೇ ಇರಲಿಲ್ಲ! ಸೈಕಲಿನೊಡನೆ ಆತನೂ ಧೊಪ್ಪನೆ ಉರುಳಿ ಬಿದ್ದಾಗಲೇ ಆತನಿಗೆ ತಿಳಿದುದು; ತಾನು ಬಿದ್ದೆನೆಂದು! ಆತ ಕುಂಟುತ್ತ ಏಳುವಾಗ ಭಾರತಿ ಆ ಮಾರ್ಗವಾಗಿ ಬರುತ್ತಿದ್ದವಳು, ಬೀದಿ ದೀಪದ ಬೆಳಕಿನಲ್ಲಿ ದಿನೇಶನನ್ನು ಗುರುತಿಸಿ, ಆತನು ಬಿದ್ದುದನ್ನರಿತು, ಮರುಕ ಪಟ್ಟು ಸಹಕಾರ ನೀಡಲು ಮುಂದೆ ಬಂದಳು.

ದಿನೇಶ್ ಮೆಲ್ಲನೆದ್ದು ಅತ್ತಿತ್ತ ನೋಡಿದ. ಪುಣ್ಯಕ್ಕೆ ಭಾರತಿಯು ಹೊರತು ಮತ್ತಾರೂ ರಸ್ತೆಯ ಮೇಲೆ ಓಡಾಡುತ್ತಿರಲಿಲ್ಲ! "ಏನ್ರೀ ..., ಸೈಕಲ್ ಮೇಲೆ ಹೋಗ್ತಾ ಇರುವಾಗ... ನಿಮಗೆ ರಸ್ತೆ ಕಾಣುತ್ತೋ, ಇಲ್ವೋ?" ಭಾರತಿ ಹಾಸ್ಯಗೈಯುತ್ತ ಹೇಳಿದಳು. ದಿನೇಶನಿಗೆ ಈ ಸ್ವರವನ್ನೆಲ್ಲಿಯೋ ಕೇಳಿದಂತಿತ್ತು. ಒಂದು ನಿಮಿಷ ತಲೆ ಕೆರೆದ ಕೊಂಡ. ಮರುಕ್ಷಣವೇ ಅವನಿಗೆ ಗೊತ್ತಾಯಿತು. ಸ್ಟ್ರೀಟ್ ಲೈಟಿನ ಬೆಳಕಿನಲ್ಲಿ ಭಾರತಿಯ ಮುಖ ಸ್ಪಷ್ಟವಾಗಿ ಕಾಣಿಸಿತು ದಿನೇಶನಿಗೆ.

"ಭಾರತಿ .... ನೀನು.... ಇಲ್ಲಿ... ! " ಬೆರಗಾದ ದಿನೇಶ್ ಕೇಳಿದ.

"ದಿನೇಶ್, ಹೆಚ್ಚು.... ಪೆಟ್ಟಾಗಿಲ್ಲವಲ್ಲ?" ಭಾರತಿ ಪ್ರೀತಿಯಿಂದ ಕೇಳಿದಳು.

"ಅಂತ.... ......! " ದಿನೇಶನಿಗೆ ಏನು ಉತ್ತರ ಕೊಡಬೇಕೋ ತಿಳಿಯಲಿಲ್ಲ.

"ಅದೆಲ್ಲ ಇರಲಿ, ದಿನೇಶ್, ... ನೀನು ಇಲ್ಲೇನು ಮಾಡುತ್ತಿರುವೆ?" ಭಾರತಿಯೇ ಪ್ರಶ್ನಿಸಿದಳು.

"ಕಾಲೇಜಿಗೆ ಹೋಗುತ್ತಿದ್ದೆ ಭಾರತಿ. ಇದೀಗ B. Sc ಪಾಸ್ ಮಾಡಿಕೊಂಡು ಹೊರಟಿದ್ದೇನೆ, ಇವತ್ತು, ಕಾಲೇಜಿನ ಕಡೆಯ ದಿನ. ತುಂಬಾ ಬೇಜಾರಾಗಿತ್ತು. ಹಾಗೇ ಪಾರ್ಕಿಗೆ ಬಂದಿದ್ದೆ!....ನೀನೂ ಇಲ್ಲಿ.... ಏನು ಮಾಡಿಕೊಂಡಿದ್ದೀ?" ದಿನೇಶ ಉತ್ತರಿಸಿದ.

"ನಾನು ಇಲ್ಲಿಯ ಹೈಸ್ಕೂಲ್ ಒಂದರಲ್ಲಿ 'ಹಿಂದಿ ಪಂಡಿತ್' ಆಗಿದ್ದೇನೆ! ಪ್ರೈವೇಟ್‌ನಲ್ಲಿ B. A.ಗೆ ಕುಳಿತಿದ್ದೇನೆ ಮುಂದೆ, ಕಾಲೇಜಿನಲ್ಲಿ ಲೆಕ್ಚರರ್ ಆಗೋದು ಅಂತ! ನಿನ್ನ ಆಲೋಚನೆಯೇನು ದಿನೇಶ್?"

"ನಿನ್ನದು ಒಳ್ಳೆ ಯೋಚನೆ, ಭಾರತಿ! ನಾನೂ M. Sc. ಮಾಡಬೇಕೆಂದಿದ್ದೇನೆ!"

"ಎಲ್ಲಿ?" ಭಾರತಿ ಮರುಪ್ರಶ್ನಿಸಿದಳು.

"ಬೊಂಬಾಯಲ್ಲಿ!" ದಿನೇಶ್ ಉತ್ತರಿಸಿದ

"ಸರಿ ಹಾಗಾದರೆ, ಈಗ ಬರ್‍ತೇನೆ! ಗುಡ್ ನೈಟ್, ಪ್ರೀತಿ ಇರಲಿ." ಭಾರತಿ ಸರಸರನೆ ಹೋಗಿಯೇ ಬಿಟ್ಟಳು.

ದಿನೇಶ್ ದಿಗ್ಮೂಢನಾಗಿ ನಿಂತಿದ್ದ! ಭಾರತಿಯ ವರ್ತನೆಯೇಕೋ ಬಲು ವಿಚಿತ್ರವಾಗಿ ಕಂಡಿತವನಿಗೆ! ಇದೀಗ ಎರಡನೇ ಬಾರಿ ಆತ "ಪ್ರೀತಿ ಇರಲಿ"ಯನ್ನು ಭಾರತಿಯ ಬಾಯಿಂದ ಕೇಳಿದ್ದ!

೦ ೦ ೦

ದಿನೇಶ್ ಬೊಂಬಾಯಲ್ಲಿ M. Sc.ಗೆ ಓದುತ್ತಾ ಇದ್ದ. ಹಿಂದಿನ ವರ್ಷಗಳಂತೆಯೇ ಆತ ಇಲ್ಲಿ ಕೂಡ ಎಲ್ಲ ವಿಷಯಗಳಲ್ಲೂ ಮುಂದೆ ಇದ್ದು, ತನ್ನ ಪ್ರಭಾವವನ್ನು ಎಲ್ಲರ ಮೇಲೂ ಬೀರಿದ್ದ. ಪ್ರಿನ್ಸಿಪಾಲರಿಗೆ ದಿನೇಶನೆಂದರೆ ಪ್ರಾಣ!

ಅಂತೂ ದಿನೇಶ್ M, Sc ಪಾಸ್ ಮಾಡಿ ಮನೆಗೆ ಬಂದ. ಒಂದು ವರ್ಷ ಮನೆಯಲ್ಲೇ ಕುಳಿತ ದಿನೇಶ್ ನೂರಾರು ಕಡೆಗಳಿಗೆ ಅರ್ಜಿ ಹಾಕಿದ, ಕೆಲಸಕ್ಕಾಗಿ. ಆದರೆ ಅವನ ದುರದೃಷ್ಟಕ್ಕೆ ಅರ್ಜಿ ಬರೆಯುವುದಕ್ಕಾಗಿ ಕಾಗದ ಮತ್ತು ಪೆನ್ನು ಸವೆಸಿದ್ದೇ ಬಂತಲ್ಲದೆ ಕೆಲಸ ಸಿಗಲಿಲ್ಲ.

ಒಂದು ದಿನ ಅವನ ಹೆಸರಿಗೆ ಟೆಲಿಗ್ರಾಂ ಒಂದು ಬಂತು. ಬೊಂಬಾಯಿಯ ಅವನ ನೆಚ್ಚಿನ ಪ್ರಿನ್ಸಿಪಾಲರು ತಂತಿ ಕಳುಹಿಸಿದ್ದರು. ಅದರಲ್ಲಿದ್ದ ವಿಷಯವಿಷ್ಟೇ, "ನಾನೀಗ ಕೆಲಸದಿಂದ ನಿವೃತ್ತನಾಗಿ, ಕಲ್ಕತ್ತಾದ ನನ್ನ ಮನೆಯಲ್ಲಿದ್ದೇನೆ ಈ ತಂತಿ ಸಿಕ್ಕಿದೊಡನೆಯೇ ಕೂಡಲೇ ಹೊರಟು ಬಾ. ನಿನಗೆ ಇಲ್ಲಿಯ ಕಾಲೇಜ್ ಒಂದರಲ್ಲಿ ಲೆಕ್ಚರರ್ ಕೆಲಸ ಕೊಡಿಸುತ್ತೇನೆ."

ತಂತಿ ಸಿಕ್ಕಿದೊಡನೆಯೇ ಕಲ್ಕತ್ತಕ್ಕೆ ಹೋದ ದಿನೇಶ್. ಪ್ರಿನ್ಸಿಪಾಲರು ಅವನನ್ನು ಆದರದಿಂದಲೇ ಬರಮಾಡಿಕೊಂಡರು. ಕೆಲವೇ ದಿನಗಳಲ್ಲಿ ಅವರ ಶಿಫಾರಸ್ಸಿನಿಂದಾಗಿ, ಅಲ್ಲಿಯ ಕಾಲೇಜೊಂದರಲ್ಲಿ ಕೆಲಸ ಸಿಕ್ಕಿತು ದಿನೇಶನಿಗೆ. ಅವನು ಒಂದು ರೂಂ ಮಾಡಿಕೊಂಡು ಅಲ್ಲಿಯೇ ಇರತೊಡಗಿದ. ೧೫ ದಿನಗಳು ಕಳೆದ ನಂತರ ಅದೇ ಕಾಲೇಜಿಗೆ ಲೇಡಿ ಲೆಕ್ಚರರ್ ಒಬ್ಬರು ಬಂದರು. ದಿನೇಶನಿಗೆ ಅವರನ್ನು ನೋಡಿ ಬಹಳ ಆಶ್ಚರ್ಯ. ನಮ್ಮ ಭಾರತಿಯೇ ಲೆಕ್ಚರರ್ ಆಗಿ ಬಂದಿದ್ದಳು. ಬಾಲ್ಯದಲ್ಲಿ ಸಹಪಾಠಿಗಳಾದ ದಿನೇಶ್ ಮತ್ತು ಭಾರತಿಯರಿಗೆ ಈಗ ಸಹೋದ್ಯೋಗಿಗಳಾದುದರಿಂದ ತುಂಬ ಸಂತೋಷವಾಯಿತು. ಅವರ ಮೈತ್ರಿ ದಿನೇ ದಿನೇ ಬೆಳೆಯತೊಡಗಿತು.

ಒಂದು ದಿನ ಸಂಜೆ, ದಿನೇಶ್ ಮತ್ತು ಭಾರತಿ ಅಡ್ಡಾಡಲೆಂದು ಪಾರ್ಕಿಗೆ ಹೋಗಿ ಬೆಂಚೊಂದರಲ್ಲಿ ಕುಳಿತರು, ಸಂಧ್ಯಾ ಸಮಯ, ಏಕಾಂತ ವಾತಾವರಣ, ಭಾರತಿಯ ಸಾಮೀಪ್ಯ ದಿನೇಶನಿಗೆ ಸ್ವರ್ಗದಲ್ಲಿದ್ದಂತೆಯೇ ಭಾಸವಾಗಿತ್ತು. ಅವನೇ ಮೌನವನ್ನು ಮುರಿದ— "...ಭಾರತಿ, ಅಂತೂ ನೀನು...ನನ್ನ ಬೆನ್ನು ಬಿಡಲೇ ಇಲ್ಲವಲ್ಲ!" "ನಾನೇನು ಮಾಡಲಿ ದಿನೇಶ್? ವಿಧಿಯೆಳೆದತ್ತ ಬಂದುಬಿಟ್ಟೆ, ಅಷ್ಟೇ! ಅದು ನನ್ನ ತಪ್ಪೇ?" ಭಾರತಿ ಕೇಳಿದಳು.

"ತಪ್ಪಲ್ಲ ಭಾರತಿ, ನೀನು ಬಂದುದು ಬಹಳ ಸಂತೋಷವೇ!...ನಮ್ಮ ಬಾಲ್ಯದ ದಿನಗಳು ನಿನಗೆ ನೆನಪಿಗೆ ಬರುತ್ತಿಲ್ಲವೇ?"

"ದಿನೇಶ್, ನಮ್ಮದು ಮರೆಯಲಾಗದ ಬಾಲ್ಯ....ಅದರಲ್ಲೂ...ಆ ಒಂದು ಸೈಕಲ್ ಘಟನೆ, ಅದು ಇಡೀ ಜನ್ಮದಲ್ಲಿಯೇ ಮರೆಯುವಂತಹುದಲ್ಲ!"

"ನಾವೀರ್ವರೂ ಎಲ್ಲಾ ಕಡೆಗಳಲ್ಲೂ ಜತೆಯಾಗಿದ್ದುದು ಮತ್ತೂ ವಿಶೇಷವೇ! ಅಲ್ಲವೇ ಭಾರತಿ?"

"................"

"ಇಂದಿನ ವರೆಗೂ, ಜತೆಯಾಗಿಯೇ ಇದ್ದೆವು.... ...ಭಾರತಿ, ಮುಂದಕ್ಕೂ ಜತೆಯಾಗಿದ್ದರೆ ಹೇಗೆ?"

"..............."

"ಭಾರತಿ, ಏಕೆ ಮಾತಾಡುತ್ತಿಲ್ಲ?"

"ಏನು ಮಾತಾಡಲಿ, ದಿನೇಶ್?"

"ಭಾರತಿ,...ನೀನು....ನನ್ನನ್ನು ಪ್ರೀತಿಸ್ತೀಯಾ? "ದಿನೇಶ್ ಧೈರ್ಯದಿಂದಲೇ ಕೇಳಿದ.

ಭಾರತಿ ಒಮ್ಮೆ ತನ್ನ ಕಣ್ಣುಗಳನು ಮೇಲೆತ್ತಿ, ದಿನೇಶನ ಕಣ್ಣುಗಳೊಡನೆ ಕೂಡಿಸಿ, ತತ್‌ಕ್ಷಣವೇ ನಾಚಿಕೆಯಿಂದ ತಲೆ ತಗ್ಗಿಸಿದಳು!

೦ ೦ ೦

ಪ್ರಿನ್ಸಿಪಾಲರಿಂದ, ದಿನೇಶ್‌ನಿಗೆ ಒಂದು ದಿನ ಅರ್ಜೆಂಟ್ ಕರೆಯೊಂದು ಬಂತು. ದಿನೇಶ್ ಓಡಿಕೊಂಡೇ ಹೋದ "ಓಹೋ ಹೊ....! ದಿನೇಶ್!" ಪ್ರಿನ್ಸಿಪಾಲರು ನಗುತ್ತ ಕರೆದರು ಏದುಸಿರುಬಿಡುತ್ತಿದ್ದವನನ್ನು. "ಸರ್, ಅರ್ಜೆಂಟ್ ಬರಬೇಕೆಂದು ಹೇಳಿದಿರಂತೆ! ಓಡಿಕೊಂಡೇ ಬಂದುಬಿಟ್ಟೆ! ಏನು ವಿಶೇಷ ಸರ್?" ದಿನೇಶ್ ಒಂದೇ ಉಸಿರಿನಲ್ಲಿ ಕೇಳಿದ.

"ಸ್ವಲ್ಪ ರೆಸ್ಟ್ ತೆಕೋ ಮಹಾರಾಯ ಅನಂತರ .. ಎಲ್ಲ ಮಾತನಾಡೋಣ!"

ಕಾಫಿ, ಟಿಫಿನ್ ಮುಗಿದ ನಂತರ ಪ್ರಿನ್ಸಿಪಾಲರೇ ಪ್ರಶ್ನಿಸಿದರು. "ದಿನೇಶ್, ನಿನ್ನನ್ನು ಬರಹೇಳಿದ್ದು ಯಾಕೆ ಗೊತ್ತೆ?"

"ಗೊತ್ತಿದ್ದರೆ—ನಾನ್ಯಾಕೆ ಬರ್‍ತೇನೆ ಸರ್?" ದಿನೇಶ್ ಯಾವ ರೀತಿ ಮಾತನಾಡಿದರೂ ಪ್ರಿನ್ಸಿಪಾಲರಿಗೆ ಅವನ ಮೇಲೆ ಅಭಿಮಾನ ಹೆಚ್ಚುತ್ತಿತ್ತಲ್ಲದೆ ಸಿಟ್ಟು ಬರುತ್ತಿರಲಿಲ್ಲ. ಅಷ್ಟು ಸಲುಗೆ ಬೆಳೆದಿತ್ತು, ದಿನೇಶನಿಗೆ ಅವರಲ್ಲಿ!

"ದಿನೇಶ್,....ನಿನ್ನಲ್ಲಿ ಕೆಲವು ವಿಷಯ ಮಾತನಾಡುವುದಿದೆ!" ಪ್ರಿನ್ಸಿಪಾಲರೆಂದರು.

"... .."

"ನೀನು ಇಲ್ಲಿಗೆ ಬಂದಂದಿನಿಂದಲೂ ನಿನ್ನ ಗುಣ ನಡತೆಗಳನ್ನೆಲ್ಲ ನೋಡಿ ನಾನು ತುಂಬಾ ಮೆಚ್ಚಿದ್ದೇನೆ! ಅದಕ್ಕೆ ನಿನಗೆ ಒಂದು ಪ್ರೈಜ್ ಕೊಡಬೇಕು, ಅಂತ ನನ್ನಾಸೆ!'

"......"

"ದಿನೇಶ್, ನನಗೊಬ್ಬಳು ಮಗಳಿದ್ದಾಳೆ....ಅವಳನ್ನು ನಿನಗೆ...."

"ಸರ್," ಪ್ರಿನ್ಸಿಪಾಲರ ಮಾತನ್ನು ನಡುವೆಯೇ ತುಂಡರಿಸಿ ಹೇಳಿದ ದಿನೇಶ್, 'ಈ ಒಂದು ವಿಷಯಕ್ಕೆ ನನ್ನನ್ನು ಕ್ಷಮಿಸಿ ಸರ್; ನಾನು ಇಂದಿನ ವರೆಗೆ ನಿಮ್ಮಲ್ಲೊಂದು ವಿಷಯವನ್ನು ಅಡಗಿಸಿಟ್ಟಿದ್ದೆ! ...ನನ್ನ ಬಾಲ್ಯ ಸ್ನೇಹಿತೆಯೊಬ್ಬಳು ಇದ್ದಾಳೆ, ಭಾರತಿ ಅಂತ ಅವಳ ಹೆಸರು. ಒಳ್ಳೆ ರೂಪವತಿಯಾದ ಹುಡುಗಿಯವಳು! ಈಗ ನಮ್ಮ ಕಾಲೇಜಿನಲ್ಲೇ ಹಿಂದಿ ಲೆಕ್ಚರರ್ ಆಗಿದ್ದಾಳೆ. ನಾನು ಅವಳನ್ನು... .. ಪ್ರೀತಿಸಿದ್ದೇನೆ ಸರ್!"

ಪ್ರಿನ್ಸಿಪಾಲರು ದೂರದಲ್ಲಿ, ತನ್ನ ಮನೆಯ ಕಡೆಗೆ ಬರುತ್ತಿದ್ದ ಭಾರತಿಯ ಕಡೆಗೆ ಬೆರಳು ತೋರಿಸುತ್ತ, ಕೇಳಿದರು, "ಅವಳೇ ತಾನೇ....ನೀನು ಹೇಳುತ್ತಿರುವುದು?"

"ಹೌದು ಸರ್....!" ದಿನೇಶ್ ಆಶ್ಚರ್ಯದಿಂದ ಉತ್ತರಿಸಿದ.

ಪ್ರಿನ್ಸಿಪಾಲರು ನಗುತ್ತ ಹೇಳಿದರು, "ಅವಳೇ ಮಹಾರಾಯ, ನನ್ನ ಮಗಳು!"

—ವೀರೇಶ್ವರ ಭಟ್ಕೆ, ಮುಂಡಾಜೆ.



ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ,

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ,

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦.

RECD. No. B G. 176
LICENCE No. 31
Licensed to Post without Prepayment

ಸೋಡಿಗೊಂದು ಬಹುಮಾನ

(೧ನೇ ಪುಟದಿಂದ)

"ಅದ್ರ ಕತೆ? ಯಾರಿಗೆ ಗೊತ್ತು? ಈವತ್ತಂತೂ ತಿಳೀಲಿಲ್ಲ ನಾಳೆ ಪೇಪ್ರಿಗೆಲ್ಲಾ ರಜೆ ಇನ್ನು ನಾಳದ್ದು ನೋಡಬೇಕು"

"ಹಾಗಾದ್ರೆ ಅದಲ್ಲಾಂತಾಯ್ತು. ಮತ್ತೆ... ಹ್ಞಾಂ... ದೇಶದಲ್ಲಿ ಸರಳ ಆದರೂ ವಿಜೃಂಭಣೆಯಿಂದ ಗಣರಾಜ್ಯ ದಿನವನ್ನು ಆಚರಿಸಲಾಯ್ತು .."

"ಅಯ್ಯೋ ಇದೇನು ಮಹಾ ಯಾವಾಗ್ಲೂ ಅದು ನಡೆದೇ ಇರುತ್ತೆ."

".. ಮತ್ತೆ....ಮತ್ತೆ .. ಊಲ ಬಹದೂರರು ಮತ್ತೆ ಮಂತ್ರಿ...."

"ಅಯ್ಯಯ್ಯ.... ಅದು ನಿನ್ನೆಯ ಸುದ್ದಿ ಕಣೆ..."

"ಆದೂ ಅಲ್ಲ.. ಹಾಗಾದ್ರೆ ಇಂಗ್ಲೆಂಡು-- ಇಂಡಿಯಾ ಮ್ಯಾಚು ಡ್ರಾ ದಲ್ಲಿ"

"ಛೆ ಛೆ ...ಅದರಲ್ಲೇನು ವಿಶೇಷವೆ?"

"ಮತ್ತೇನಪ್ಪಾ ಅದು .."

'ಹೇಳು....ಹೇಳು.'

'ನೋಡು.. ಸರಿಯಾಗಿ ಯೋಚಿಸು ..

ಹ್ಞಾಂ ...ಸರಿ ಸರಿ ...."

"ಏನು?"

'..ಅಲ್ಲ.ಅದೂಅಲ್ಲ. ಹ್ಞಾಂ ನೋಡಿ, ಜವಹರರ ಆರೋಗ್ಯ ಸುಧಾರಿಸುತ್ತಾ ಇದೆ ."

"....ಇದು...ಇದೂ ಅಲ್ಲ..."

"ಮತ್ತೇನಂತಂದ್ರೆ? ಯಾವುದು ಹೇಳಿದ್ರೂ ಅಲ್ಲಾಂತೀರಿ.."

"ನೋಡುವ ...ಕೊನೆಯಸಾರಿ ....ಸರಿಯಾಗಿ ಆಲೋಚನೆ ಮಾಡಿ ಹೇಳು...."

"ಹೇಳ್ತೀನೆ, ನಾನು ಗೆದ್ರೆ ಏನು ಕೊಡ್ತೀರಿ?"

"ನೀನೂ ಸೋಡಿ ತೆಗೆಯೋಕೆ ಶುರು ಮಾಡಿದ್ಯಾ?'

"ಅದೆಲ್ಲಾ ಹಾಗಿರ್ಲಿ. ಏನು ಕೊಡ್ತೀರಿ ಹೇಳಿ"

"ಕೊಡ್ಲೇ ಬೇಕಾದ್ರೆ ಕೊಡೋಣ"

"ಏನು ಕೊಡ್ತೀರೀಂತ ಹೇಳಿ.'

"ಹೇಳ್ಲೇ ಬೇಕೇನು? ಹ್ಞಾಂ ...... ನೀನು ಏನು ಕೇಳ್ತೀಯೋ ಅದನ್ನ ಕೊಡ್ತೇನೆ"

"ಖಂಡಿತ ತಾನೆ?"

"ಖಂಡಿತ"

".. ಹ್ಞೂ. ಕೇಳ್ತೇನೆ ಬಿಡಿ .. ಊ ಹ್ಞಾಂ...ಅದಲ್ಲ ..ಹ್ಞಾಂ ನಮ್ಮ ಜವಹರಲಾಲರು ಗಣರಾಜ್ಯ ದಿನದ ಪರೇಡನ್ನು..."

"ಬೇಷ್....ಬೇಷ್ ಇದಕ್ಕಿಂತ ದೊಡ್ಡ ಸಂಗ್ತಿಯೇನು ಅಲ್ವೇ"

"ಆರೋಗ್ಯ ಹೊಂದುತ್ತ ಬರುತಿದ್ದಾರಲ್ಲ, ಭಾರತ ರಕ್ಷಾ . ಇದೇ ದೊಡ್ಡ ಸುದ್ದಿ."

"ಸರಿಯಾಗೇ ಅಂದೆ ಬಿಡು ನೀನೆನ್ನಿದ ಸೋಡಿ ಪರಿಣಾಮವಾದ್ರೂ ಪ್ರಕಟವಾಯ್ತಲ್ಲ..."

"ಕೊಡಿ ಈಗ ಹಾಗಾದ್ರೆ ಬಹುಮಾನ ."

"ಏನು ಬೇಕು ಕೇಳು ..."

"ನಿಮ್ಮ ಮನಸ್ಸಿಗೆ ಬಂದದ್ದನ್ನ ಕೊಡಿ"

"ಮತ್ತೆ ನಾನು ಕೇಳ್ಲಿಲ್ಲಾಂತನ್ಬೇಡ."

"ಇಕ್ಕಿ ಕೊಡಿ."

"ಹ್ಞಾಂ ಇಲ್ಲಿ ಬಾ....ಇಕೋ ..ಇದೇ ತಾನೇ ನೀನು ಕೇಳಿದ್ದೋದು..."

"ನೀವು ನಿಜಕ್ಕೂ ಮಹಾತ್ಮರು...."

"ಹೌದು ನಿನ್ನ ಪಾಲಿಗೆ. ನನ್ನ ಪಾಲಿಗೆ ನೀನು."

" ಬಾ ...ಅಲ್ವೆ?"

"ಹ್ಹ ಹ್ಹ...ಹ್ಹ ...ಸರಿ ಕಣೇ ಸರಿ.."

— ಗೋರಾ,

ಯಶಸ್ವಿತೆಯ ದಾರಿಯಲ್ಲಿ

ರೈತರು ಇನ್ನು ಮರುಗಬೇಕಿಲ್ಲ

ಈ ವರ್ಷದ ಬೆಳೆಯನ್ನು ಕಂಡು ರಾಮು ಮತ್ತು ಭೀಮು ಇಬ್ಬರೂ ಪ್ರಸನ್ನರಾಗಿದ್ದಾರೆ. ಬೆಳೆಯನ್ನು ಕಣ್ತುಂಬ ನೋಡಿ ಹಿಗ್ಗುತ್ತ ನಿಂತಿದ್ದಾರೆ. ಅವರ ದುಡಿಮೆಗೆ ತಕ್ಕ ಪ್ರತಿಫಲ ಈ ವರ್ಷ ನಿಜಕ್ಕೂ ದೊರಕಿತ್ತು. ಪೈರು ಹಸನೇ ತಾನಾಗಿ ಬೆಳೆದು ನಿಂತಿತ್ತು. ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಿದ ಕಾರಣದಿಂದಾಗಿಯೇ ಅವರ ಬೆಳೆ ಹುಲುಸಾಗಿತ್ತು.

ರಾಸಾಯನಿಕ ಗೊಬ್ಬರವನ್ನು ಬಳಸಿದ ಎಲ್ಲ ರೈತರ ಅನುಭವವೂ ಇದೇ ರೀತಿ ಕೃಷಿಯ ರಂಗದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನಿದು ಸಾಧಿಸಿದೆ. ಎಂತಲೇ ನಾಡಿನಲ್ಲಿ ರಾಸಾಯನಿಕ ಗೊಬ್ಬರಕ್ಕೆ ಬೇಡಿಕೆ ಅಧಿಕಾಧಿಕವಾಗುತ್ತ ಬರುತ್ತಿದೆ.

ರೂರ್ಕೇಲಾದಲ್ಲಿ (ಒಡಿಸ್ಸ ರಾಜ್ಯ) ಆರಂಭವಾಗಿರುವ ಮೂರನೆಯ ಅತಿ ದೊಡ್ಡ ಗೊಬ್ಬರದ ಕಾರ್ಖಾನೆಯು ನಮ್ಮದೊಂದ ಮಹಾ ಸಾಧನೆ. ಮೂರನೆಯ ಯೋಜನಾಂತ್ಯದಲ್ಲಿ ನಮ್ಮ ರೈತರು ಸೇವಿಂರಷ್ಟು ಉತ್ಪಾದನೆಯನ್ನು ಹೆಚ್ಚಿಸಲು ಬೇಕಾಗುವ ರಾಸಾಯನಿಕ ಗೊಬ್ಬರವನ್ನು ಈ ಕಾರ್ಖಾನೆ ಪೂರೈಸುತ್ತದೆ.

ಇಂದು ಭಾರತೀಯ ರೈತನು ಗೊಬ್ಬರಗಳ ಉಪಯೋಗವನ್ನರಿತು ಕೊಂಡಿದ್ದಾನೆ ರಾಸಾಯನಿಕ ಗೊಬ್ಬರದ ಮಹತ್ವವನ್ನವನು ತಿಳಿದುಕೊಂಡಿದ್ದಾನೆ. ಇದರಿಂದ ಆತನ ಸಂಪಾದನೆಯು ಹೆಚ್ಚಿರುವುದಲ್ಲದೆ, ದೇಶದ ವ್ಯವಸಾಯೋತ್ಪನ್ನ ಪ್ರಮಾಣವೂ ಹೆಚ್ಚಿದ.

ರೂರ್ಕೇಲಾದ ಗೊಬ್ಬರದ ಕಾರಖಾನೆಯು ಪ್ರತಿವರ್ಷ ಆರು ಲಕ್ಷ ಟನ್ ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್ ರಾಯನಿಕ ಗೊಬ್ಬರವನ್ನು ತಯಾರಿಸುತ್ತದೆ. ಈ ಕಾರಖಾನೆಯ ಸ್ಥಾಪನೆ ಮತ್ತು ಕಾರ್ಯಾರಂಭವು ನಾವು ಹೆಮ್ಮೆಪಡಬಹುದಾದ ಮಹತ್ಸಾಧನೆ. ಇದನ್ನು ಭಾರತೀಯ ಇಂಜಿನೀಯರರೇ ನಿರ್ಮಿಸಿದ್ದಾರೆ. ಎದುರಿಸುವ ಹಲವಾರು ಮಹಾಪ್ರಶ್ನೆಗಳ ಮುಂದೆ ದಿಟ್ಟತನದಿಂದ ನಿಂತು ಅವೆಲ್ಲವನ್ನೂ ಸಮುಚಿತವಾಗಿಯೇ ಉತ್ತರಿಸಿದ್ದಾರೆ ಅವರು. ಕಾರಖಾನೆಯ ಯಂತ್ರೋಪಕರಣಗಳಲ್ಲಿ ಸೇ ೭೦ರಷ್ಟು ಭಾರತ ನಿರ್ಮಿತವೆಂದರೆ ನಾವು ಅಭಿಮಾನ ಪಡಬೇಕು. ಪ್ರಾರಂಭದಲ್ಲಿ ನಿರೀಕ್ಷಿಸಿದ ರೂ. ೯ಕೋಟಿ ವೆಚ್ಚವು ನಮ್ಮ ಇಂಜಿನಿಯರರ ಕುಶಲತೆಯಿಂದ ನೇ. ೩೦ರಷ್ಟು ಇಳಿಯಿತ.

ದೇಶ ಪುನಾರಚನೆಯಲ್ಲಿ ನಾವು ಹಿಂದೆ ಬೀಳಲ್ಲ; ಮುಂದುವರಿಯುತ್ತೇವೆ. ಉತ್ಪಾದನೆಯಲ್ಲಿ ತೀವ್ರಗತಿ, ವ್ಯಯದಲ್ಲಿ ಮಿತನೀತಿಯಿಂದಲೇ ನಮ್ಮ ಪ್ರಜಾಪ್ರಭುತ್ವವು ಯಶಸ್ವಿಯಾಗುತ್ತದು.

ರೂರ್ಕೇಲಾ ಗೊಬ್ಬರ ಕಾರಖಾನೆಯ ಒಂದು ನೋಟ.

ನಮ್ಮ-ನಮ್ಮವರು

(೧ನೇ ಪುಟದಿಂದ)

ಸಾವಿರ ಬೆಲೆಬಾಳುವಷ್ಟು ಚಿನ್ನವನ್ನು ಒಟ್ಟುಗೂಡಿಸಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಇತ್ತರು ಇವರು

ಶ್ರೀಮತಿಯವರು ವೀರ ಪತ್ನಿ, ವೀರ ಮಾತೆಯೆಂದರೂ ತಪ್ಪಲ್ಲ. ಇವರ ಪತಿ ಸುಪ್ರಸಿದ್ಧ ವಕೀಲರು; ಕಾರ್ಯಶೀಲರು, ಸಮಾಜ ಹಿತಚಿಂತಕರು, ಇವರ ಮಕ್ಕಳಾದರೂ ಉದ್ದಿಮೆಯರಂಗದಲ್ಲಿ ವೀರತನದಿಂದ ದುಡಿಯುತ್ತಿರುವವರು. ಇಂತಹ ವೀರರ ಪತ್ನಿಯಾಗಿ ವೀರ ಕುಮಾರರ ಮಾತೆಯಾಗಿ ಸಮಾಜ ಸೇವಾ ಕರ್ತೆಯಾದ ಶ್ರೀಮತಿ ಜಲಜಾಕ್ಷಮ್ಮ ಆದರ್ಶ ಗೃಹಿಣಿ ಇಂದಿನ ಮಕ್ಕಳಿಗೆ ಮನೆಯೇ ಜಗತ್ತಾಗಿ ಉಳಿದಿಲ್ಲ, ಜಗತ್ತೇ ಮನೆಯಾಗಿದೆ ಎಂಬ ದನ್ನು ಪ್ರತ್ಯಕ್ಷವಾಗಿ ತೋರಿಸುತ್ತ ಸೇವಾನಿರತರಾದ ಶ್ರೀಮತಿಯವರು ಕವಯಿತ್ರಿ ಹೊನ್ನಮ್ಮನ ಕನಸನ್ನು ನನಸುಮಾಡಿದ್ದಾರೆ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ

360 ಪುಟಗಳಿಗೂ ಮಿಕ್ಕಿದ

ಪಾಕೆಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ. ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಲುಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ

Edited, Printed & Published by K. H.Shetty, at the Navayuga Press, Udipi, S. India.

ನವಯುಗ

VOL. 43 No. 24 ಸಂಪುಟ ೪೩ ಸಂಚಿಕೆ ೨೪

NAVAYUGA—Nationalist Weekly ‡‡ ಉಡುಪಿ 13-2-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವಿಶ್ವ ವಿಖ್ಯಾತರು

ಡಾ| ಪರಮೇಶ್ವರ

ಮೈಸೂರು ರಾಜ್ಯದ ಶೃಂಗೇರಿಯವರಾದ ಡಾ| ಪರಮೇಶ್ವರ ಅವರು ಬೆಂಗಳೂರಿನ ವಿಕ್ಟೋರಿಯಾ ಗವರ್ನಮೆಂಟ್ ಆಸ್ಪತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನರಾಗಿದ್ದರು. ಒಂದು ವರ್ಷಕ್ಕೆ ಮೊದಲು ಇವರು ಉನ್ನತ ವ್ಯಾಸಂಗಕ್ಕಾಗಿ ಲಂಡನ್ನಿಗೆ ತೆರಳಿದ್ದರು. ಮೊನ್ನೆ ಜನವರಿಯಲ್ಲಿ ನಡೆದಿದ್ದ ಎಂ. ಆರ್. ಸಿ. ಪಿ. ಪರೀಕ್ಷೆಯಲ್ಲಿ ಮೊತ್ತಮೊದಲ ಪ್ರಯತ್ನದಲ್ಲಿಯೇ ಉತ್ತೀರ್ಣರಾಗಿ ನಮ್ಮ ರಾಜ್ಯಕ್ಕೆ ಗೌರವವನ್ನು ತಂದಿದ್ದಾರೆ. ಅಷ್ಟು ಮಾತ್ರವಲ್ಲದೆ, ಈ ಬಾರಿ ಈ ಉಚ್ಚ ವ್ಯಾಸಂಗದ ಪದವೀ ಪರೀಕ್ಷೆಗೆ ಕುಳಿತ ಭಾರತೀಯರಲ್ಲಿ ಇವರೊಬ್ಬರೇ ತೇರ್ಗಡೆ ಹೊಂದಿರುವುದರಿಂದ, ದೇಶದಲ್ಲಿಯೇ ಹೊಸ ದಾಖಲೆಯನ್ನು ನಿರ್ಮಿಸಿದ್ದಾರೆ. ಇದು ಶ್ಲಾಘನೀಯ; ಡಾ| ಪರಮೇಶ್ವರರ ಪ್ರತಿಭೆಗೊಂದು ನಿದರ್ಶನ.

ಬರ್ಮಿಂಗ್ಹಾಮಿನ ಲಿಟ್ಲ್ ಬ್ರೂಮಿಚ್ ಹಾಸ್ಪಿಟಲಿನಲ್ಲಿ ಡಾಕ್ಟರರಾಗಿ ಸೇವೆ ಸಲ್ಲಿಸುತ್ತಿರುವ ಡಾ| ಪರಮೇಶ್ವರರು ಇನ್ನೊಂದು ತಿಂಗಳಲ್ಲಿಯೇ ಸ್ವದೇಶಕ್ಕೆ ಆಗಮಿಸಲಿರುವರು. ತಮ್ಮ ಗಳಿಸಿದ ಜ್ಞಾನ ಮತ್ತು ಅನುಭವಗಳ ಪ್ರಯೋಜನವನ್ನು ನಮ್ಮ ಜನತೆಗೆ ನೀಡಲಿರುವರು. ಇವರಿಂದ ರಾಜ್ಯವೂ ದೇಶವೂ ತುಂಬ ಉಪಕೃತವಾಗುವುದೆಂದು ನಂಬಬಹುದು. ಮೈಸೂರು ರಾಜ್ಯದಲ್ಲಿ ಎಂ. ಆರ್. ಸಿ. ಪಿ. (ಲಂಡನ್) ವೈದ್ಯಕೀಯ ಪದವಿ ಪಡೆದವರು ಕೆಲವೇ ಮಂದಿ. ಇವರಲ್ಲಿ ಡಾ| ಪರಮೇಶ್ವರರೂ ಒಬ್ಬರಾಗಿದ್ದಾರೆ.

ಉಡುಪಿಯ ಪ್ರಸಿದ್ಧ ಲಾಯರ್ ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್ ಇವರ ತೃತೀಯ ಪುತ್ರಿ ಡಾ| ನಳಿನಿ ರಾವ್, ಎಂ. ಬಿ. ಬಿ. ಎಸ್., ಡಿ ಜಿ ಓ. ಇವರ ಪತಿಯವರಾದ ಡಾ| ಪರಮೇಶ್ವರರ ಯಶಸ್ಸು ದೇಶಕ್ಕೆ ಸಂತೋಷದ ಸುದ್ದಿಯಾಗಿ ಪರಿಣಮಿಸಿದೆ. ಡಾ| ದಂಪತಿಗಳಿಂದ ವೈದ್ಯಕೀಯ ರಂಗವು ಬಹಳಷ್ಟು ಉಪಕಾರ ಹೊಂದುವುದೆಂಬುದರಲ್ಲಿ ಸಂದೇಹವಿಲ್ಲ.

ಎಂ. ಸುಂದರರಾಮ ಶೆಟ್ಟಿ

ದಕ್ಷಿಣ ಕನ್ನಡದಲ್ಲಿ ಜೀವವಿಮೆ ಮತ್ತು ಇತರ ಸಾಮಾನ್ಯವಿಮೆಯ ಬಗ್ಗೆ ಸದಭಿಪ್ರಾಯ ಹುಟ್ಟಿಸಿದ ಕೆಲವೇ ಅಗ್ರಗಣ್ಯ ವ್ಯಕ್ತಿಗಳಲ್ಲಿ ಶ್ರೀ ಎಂ. ಸುಂದರರಾಮ ಶೆಟ್ಟರೂ ಒಬ್ಬರು. ಬಹಳ ಎಳೆಯ ಪ್ರಾಯದಲ್ಲಿಯೇ ಏಜಂಟರಾಗಿ ವಿಮಾರಂಗಕ್ಕೆ ಇಳಿದವರು ಶ್ರೀ ಶೆಟ್ಟರು. ಅವರು ಬೇರೆ ಬೇರೆ ವಿಮಾಕಂಪೆನಿಗಳೊಡನೆ ಸಂಪರ್ಕವಿರಿಸಿ

ಕೊಂಡು, ನಮ್ಮ ಜಿಲ್ಲೆಯಲ್ಲಿ ವಿಮಾ ಮನೋವೃತ್ತಿಯನ್ನು ಹುಟ್ಟಿಸಿದರು; ಅದನ್ನು ಬೆಳೆಸಿದರು. ವಿಮಾ ಪ್ರಚಾರ ರಂಗದಲ್ಲಿ ಇವರ ಸೇವೆ ಅದ್ವಿತೀಯವೆಂದರೂ ಅತಿಶಯೋಕ್ತಿಯಾಗದು. ತಮ್ಮ ಕರ್ತವ್ಯ ದಕ್ಷತೆಯ ಪರಿಣಾಮವಾಗಿ ಕಂಪೆನಿಯೊಂದರ ಶಾಖಾ ಮೆನೇಜರರಾಗಿ ಮತ್ತೆ ಮೆನೇಜಿಂಗ್ ಡೈರೆಕ್ಟರರಾಗಿ ಉಚ್ಚ ಪದವಿಯನ್ನೂ ಅಲಂಕರಿಸಿ, ಪರಿಶ್ರಮದ ಫಲವೇನೆಂಬುದನ್ನು ತೋರಿಸಿಕೊಟ್ಟರು.

ಜೀವ ವಿಮಾಕಂಪೆನಿಗಳು ರಾಷ್ಟ್ರೀಕರಣಗೊಂಡ ಬಳಿಕ ಶ್ರೀ ಶೆಟ್ಟರು ಜೀವವಿಮಾ ರಂಗದಿಂದ ಸಾಮಾನ್ಯ ವಿಮೆಯತ್ತ ಮನ ಹರಿಸಿದರು. ಸದ್ಯ ಅವರು ಟ್ರೈಟನ್ ಇನ್ಶೂರೆನ್ಸ್ ಕಂಪೆನಿಯ ಬೆಂಗಳೂರು ಶಾಖೆಯ ರೆಸಿಡೆಂಟ್ ಮೆನೇಜರರಾಗಿ ದುಡಿಯುತ್ತಿದ್ದಾರೆ. ಮಾಡುವ ಕೆಲಸದಲ್ಲಿ ಉದಾಸೀನ, ಆಲಸ್ಯ, ಅಪರಿಪೂರ್ಣತೆಯನ್ನು ಅವರು ಮೆಚ್ಚುವುದಿಲ್ಲ. ತಮ್ಮ ಸರ್ವಶಕ್ತಿಯನ್ನು ಕೇಂದ್ರೀಕರಿಸಿ ಕರ್ತವ್ಯ ದಕ್ಷತೆಯನ್ನು ತೋರಿಸಬೇಕೆನ್ನುತ್ತಾರೆ ಇವರು. ಇದರಿಂದಾಗಿಯೇ ಅವರು ಇಂದು ಉನ್ನತ ಪದವಿಗೇರಿದ್ದಾರೆ. ಭಾರತದಾದ್ಯಂತ ಸಂಚರಿಸಿ ವ್ಯವಹಾರ ರಂಗದಲ್ಲಿ ಪ್ರಾವೀಣ್ಯ ಗಳಿಸಿದ ಶ್ರೀಯುತರು ವ್ಯವಹಾರ ಕುಶಲರು; ಮಾತಿನಿಂದಲೇ ಎಲ್ಲರನ್ನೂ ಒಲಿಸಿಕೊಳ್ಳುವ ಚತುರರು.

ಶ್ರೀ ಸುಂದರರಾಮ ಶೆಟ್ಟರು ಕಳೆದೆರಡು ವರ್ಷಗಳಿಂದ ಮಂಗಳೂರಿನ ವಿಜಯಾ ಬ್ಯಾಂಕ್, ಲಿಮಿಟೆಡ್‌ನ ಡೈರೆಕ್ಟರ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ವಿಚಾರಶೀಲರಾದ ಇವರು ಇದಕ್ಕೆ ಮೊದಲೇ ಬ್ಯಾಂಕಿನ ಡೈರೆಕ್ಟರರಾಗಿದ್ದರು. ಆದರೆ, ಇವರು ಅಧ್ಯಕ್ಷರಾದ ಬಳಿಕ ವಿಶಾಲ ಮನೋಭಾವನೆಯಿಂದ, ಬ್ಯಾಂಕಿಗೊಂದು ಹೊಸ ಚಾಲನೆಯನ್ನೇ ಕೊಟ್ಟಿದ್ದಾರೆ ಎಂದರೆ, ಅತಿಶಯವೆನಿಸದು. ಬೆಂಗಳೂರಿನ ದೇವಾಂಗ ಬ್ಯಾಂಕು ವಿಜಯಾ ಬ್ಯಾಂಕಿನೊಂದಿಗೆ ವಿಲೀನಗೊಳ್ಳುವುದಕ್ಕೆ ಇವರೇ ಕಾರಣ ಪುರುಷರು. ಇನ್ನೂ ಒಂದೆರಡು ಬ್ಯಾಂಕುಗಳು ಇದರೊಂದಿಗೆ ಸೇರ್ಪಡೆಗೊಳ್ಳುವ ವ್ಯವಸ್ಥೆಗಳು ಈಗಾಗಲೇ ಪೂರ್ಣಗೊಳ್ಳುತ್ತಲಿವೆ. ಸದ್ಯದಲ್ಲಿಯೇ ಎಲ್ಲಾ ಏರ್ಪಾಡುಗಳು ಕೊನೆಗೊಂಡು ವಿಲೀನೀಕರಣವು ಕಾರ್ಯರೂಪಕ್ಕೆ ಬರುವ ನಿರೀಕ್ಷೆಯಿದೆ. ಶ್ರೀಯುತ ಶೆಟ್ಟರಿಂದ ಬ್ಯಾಂಕು, ವಿಮಾ ಕಂಪೆನಿ ತನ್ಮೂಲಕ ನಾಡು ಹೆಚ್ಚಿನ ಶ್ರೇಯಸ್ಸು ಪಡೆಯುವುದೆಂದು ವಿಶ್ವಾಸಪಡಬಹುದು.

ಕಾಮರಾಜ ನಾಡಾರ್

ಮದ್ರಾಸಿನ ಯಶಸ್ವಿ ಮುಖ್ಯ ಮಂತ್ರಿಯೆನಿಸಿದ್ದ ಕಾಮರಾಜ ನಾಡಾರರು ಅಖಿ

ಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷಪದವನ್ನು ಸ್ವೀಕರಿಸಲೇ ಬೇಕಾಯಿತು. ಅವರು ಅಧಿಕಾರಗ್ರಹಣ ಮಾಡಲಿದ್ದ ಮಹಾಸಭೆ ನಡೆಯುತ್ತಿರುವಾಗಲೇ ಪ್ರಧಾನಿ ನೆಹರೂರವರು ಅನಾರೋಗ್ಯಕ್ಕೆ ಗುರಿಯಾದರು. ಇದರ ಪರಿಣಾಮವಾಗಿ ಅವರು ಹೊಸದೊಂದು ಸಮಸ್ಯೆಯನ್ನು ಎದುರಿಸಬೇಕಾಯ್ತು. ಅವರ ಸೂತ್ರದನ್ವಯ ಕೇಂದ್ರ ಸಚಿವ ಸಂಪುಟದಿಂದ ಹೊರಬಂದಿದ್ದ ಲಾಲಬಹದೂರರ ಸಹಾಯವು ಪ್ರಧಾನಿಯವರಿಗೆ ಅತ್ಯವಶ್ಯವೆಂದು ವರಿಷ್ಠ ವರ್ಗವು ಅಭಿಪ್ರಾಯ ಪಟ್ಟಂತೆ, ಶಾಸ್ತ್ರಿಯವರ ಪುನರ್ನೇಮಕದ ಬಗ್ಗೆ ಅನುಮತಿಯನ್ನು ಕಾಮರಾಜರು ಇತ್ತೇ ಬಿಟ್ಟರು. ರಾಷ್ಟ್ರೀಯ ನಾಯಕರ ಕೆಲಸಗಳನ್ನು ಕಡಿಮೆ ಮಾಡುವ ಉದ್ದೇಶವೇ ಈ ಅನುಮತಿಯ ಹಿಂದೆ ಇತ್ತು ಎಂದು ಎಲ್ಲರೂ ತಿಳಿದಿದ್ದಾರೆ.

ಆಂಧ್ರದ ಮುಖ್ಯ ಮಂತ್ರಿ ನೀಲಂ ಸಂಜೀವ ರೆಡ್ಡಿಯವರು ಕರ್ನೂಲು ಜಿಲ್ಲೆಯ ಕೆಲವೊಂದು ಸಾರಿಗೆ ಮಾರ್ಗಗಳನ್ನು ರಾಜಕೀಯ ದುರುದ್ದೇಶದಿಂದ ರಾಷ್ಟ್ರೀಕರಿಸಿದರೆಂಬ ಅಪವಾದ ಕೇಳಿ ಬಂತು; ಸರ್ವೋಚ್ಚ ನ್ಯಾಯಾಲಯವಿತ್ತ ತೀರ್ಪಿನಂತೆ ತನ್ನ ನೈತಿಕ ಸೋಲಿನಿಂದ ಅವರು ರಾಜೀನಾಮೆಯೀಯಲು ನಿರ್ಧರಿಸಿದರು. ಕಾಮರಾಜರು ಸತ್ ಪರಂಪರೆಯನ್ನು ಹಾಕಿ ಕೊಡುವ ಸಂಪ್ರದಾಯದವರು. ರೆಡ್ಡಿಯವರ ರಾಜೀನಾಮೆಯ ಪ್ರಸಂಗವನ್ನು ತಾನೊಬ್ಬನೇ ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರಬಹುದಿತ್ತು. ಆದರೂ ವರಿಷ್ಠ ಮಂಡಳಿಯ ಸಭೆಯ ಮುಂದೆ ಅದನ್ನು ಎತ್ತುವ ನಿರ್ಧಾರವನ್ನವರು ಮಾಡಿ, ಪ್ರಜಾಪ್ರಭುತ್ವಕ್ಕೊಂದು ಸಂಪ್ರದಾಯವನ್ನು ಹಾಕಿ ಕೊಟ್ಟರು. ಮೊತ್ತಮೊದಲು ರೆಡ್ಡಿಯವರು ರಾಜೀನಾಮೆ ನೀಡುವುದಕ್ಕೆ ಸಮ್ಮತಿಯನ್ನು ನೀಡಿ ಉನ್ನತ ಪರಿಪಾಠವೊಂದನ್ನು ಮಾಡುತ್ತಿದರಲ್ಲಿ ಹಿಂದುಳಿಯಲಾರರು. ಕೇರಳದ ಚಾಕೋ ಪ್ರಕರಣವನ್ನೂ ಕಾಮರಾಜರು ಯೋಗ್ಯ ರೀತಿಯಲ್ಲಿ ಬಗೆಹರಿಸುವ ಪ್ರಯತ್ನ ಮಾಡಿದರು.

(ಮುಂದಿನ ಪುಟ ನೋಡಿರಿ)

ಧಾರಾವಾಹಿ ಕಥೆ

ಆ ಹೆಂಗಸು...

ಬರೆದವರು: ಶ್ರೀಮತಿ ದೇವಕಿ ಡಾ| ಎಂ. ಶೆಟ್ಟಿ, ಬೀರೂರು.

ನಾಲ್ಕು ವರ್ಷಗಳ ಕೆಳಗಿನ ಮಾತು. ಅಂದರೆ ೧೯೫೭ರಲ್ಲಿ ನಡೆದ ಘಟನೆ. ನಾನು ಮದ್ರಾಸಿಗೆ ಹೋಗಿದ್ದೆ. ಒಂದು ತಿಂಗಳು ಅಲ್ಲಿ ಮಾವನ ಮನೆಯಲ್ಲಿ ಮಜವಾಗಿ ಕಳೆದು ಮತ್ತೆ ಊರಿಗೆ ಹೊರಡುವ ದಿನ ಸಮೀಪಕ್ಕೆ ಬಂದಿತ್ತು. ನಮ್ಮೂರಿಗೆ ಹೊರಡುವ ೪-೫ ದಿನಗಳಿಗೆ ಮೊದಲು ನಾನು ಅತ್ತೆಯೊಂದಿಗೆ ಶೋಪಿಂಗಿಗೆ ಹೊರಟೆ. ಯಾಕೆಂದರೆ ನಾನಿರುವ ಊರಲ್ಲಿ ಬೇಕಾದ ಯಾವ ಸಾಮಾನೂ ಸಿಗುವುದು ಕಷ್ಟ. ಮತ್ತು ನಮ್ಮೂರಿನಲ್ಲಿ ಸ್ವಲ್ಪ ಘೋಷಾ ಪದ್ಧತಿಯೂ ಜಾರಿಯಲ್ಲಿತ್ತು. ಅದಕ್ಕಾಗಿ ಬೇಕಾದ ಬೇಕಾದ ಸಾಮಾನುಗಳೆಲ್ಲ ನಮ್ಮ [illegible] ಬೇಕಾದಾಗಲೂ ಬೇಡವಾದವರಿಗೂ [illegible] ಕೊಂಡಿರ ಬೇಕಾಗುತ್ತಿತ್ತು.

ಮಕ್ಕಳಿಗೆ ಅಂದವಾದ [illegible] ಮತ್ತು ಅತ್ಯಾಧುನಿಕ [illegible] ಅಂಗಿಗಳನ್ನು ಕೊಂಡುಕೊಳ್ಳಬೇಕೆಂದು [illegible] ಮನಸ್ಸಾಯಿತು. ನನ್ನ ಅತ್ತೆಗೆ [illegible] ಅಂಗಡಿಯೊಂದಿತ್ತು. [illegible] ಹೆಸರಾದದ್ದೇ. ಇಡೀ ಮದ್ರಾಸಿನಲ್ಲಿ [illegible] ರೆಡಿಮೇಡ್ ಅಂಗಿಗಳನ್ನು ತೆಗೆದುಕೊಳ್ಳುತ್ತಲೇ ಇರಲಿಲ್ಲ. ಅದೂ ಹೆಸರುವಾಸಿಯಾದ "ಸಾಮ್ಸನ್ಸ್" ಯಲ್ಲೇ ಆಗಲಿ ತಮ್ಮನ್ನು ಬಿಟ್ಟರೆ ಗತಿಯಿಲ್ಲ ಇವರಿಗೆ ಎಂದು ತಿಳಿದುಕೊಂಡರೆ, ರೂಪಾಯಿಗೆ ಎರಡಾಣೆ ಟೋಪಿ ಹಾಕಿದರೆ ತಪ್ಪೇನು? ಅಂಗಡಿಯೂ ಮುಖ್ಯ ಬೀದಿಯಲ್ಲಿಯೇ ಇತ್ತು. ಇಡೀ ಮದ್ರಾಸಿನಲ್ಲಿ ಅತೀ ಜನಸಂದಣಿಯ ಮತ್ತು ವಾಹನಗಳು ಓಡಾಡುವ ಜಾಗವೇ "ರೌಂಡ್ ಥಾನಾ" ಅಲ್ಲಿ ವಾಹನಗಳನ್ನು ನಡೆಸುವುದು ಬಹಳ ಅಪಾಯ. ತಿಂಗಳಿಗೆ ೨-೩ ಜೀವಗಳನ್ನಾದರೂ ಆ ಜಾಗ ಬಲಿ ತೆಗೆದುಕೊಳ್ಳುತ್ತಿರುತ್ತದೆ. ಅದರಲ್ಲೂ ೮ ಗಂಟೆಯ ನಂತರ ವಾಹನಗಳು ಇರುವೆ ಸಾಲಿನಂತೆಯೇ ಚಲಿಸುತ್ತಿರುತ್ತವೆ. ಒಂದೇ ಕಾರುಗಳು ಬಸ್ಸುಗಳು [illegible] ನಡೆಸಬೇಕು [illegible] ಸ್ಕೂಟರ್ [illegible] ತಮ್ಮ ಸ್ವಶಕ್ತಿಯಿಂದಲೇ ನೂಕುವ ದೊಡ್ಡ ಗಾಡಿಗಳನ್ನು ಎಳೆಯುವ ಕೈ ಗಾಡಿಯವರು. ಅವರ ಬಾಯಿಗಳಲ್ಲಂತೂ ಕಾರಿನವರಿಗೂ ಬಸ್ಸಿನವರಿಗೂ ಅವಿರತವಾಗಿ ಶಾಪಗಳು ಬೀಳುತ್ತಲೇ ಇರುವುವು. ನಾಲ್ಕು ಮುಖ್ಯ ಬೀದಿಗಳು ಕೂಡುವುದು ಅಲ್ಲಿ ನಾಲ್ಕು ಬೀದಿಗಳು ಕೂಡುವ ಆ ಜಾಗದಲ್ಲಿ ದೊಡ್ಡದೊಂದು ಸರ್ಕಲ್ ಇದೆ. ಅಲ್ಲಿಯ ಸುತ್ತುಮುತ್ತಲಿನ ಅಂಗಡಿಗಳಿಗೆ ಹೋಗಬೇಕಾದರೆ ಕಾರುಗಳು, ಸೈಕಲ್ಲುಗಳು, ಓಟೋರಿಕ್ಷಾಗಳು, ಯಾವ ವಾಹನವೇ ಆದರೂ ಅದರೊಳಗೆ ನಿಲ್ಲಿಸಿ ಇಳಿದು ಮತ್ತೆ ಸುತ್ತುಮುತ್ತಲಿನ ಅಪಘಾತಗಳಿಂದ ಜಾಗರೂಕತೆಯಿಂದ ಪಾರಾಗಿ ತಮಗೆ ಬೇಕಾದ ಜಾಗಕ್ಕೆ ಹೋಗಬೇಕು. ಆ ಸರ್ಕಲ್‌ಗೆ "ನೈವೇರ್ ಪೇ ಸರ್ಕಲ್" ಎಂದೂ ಕೇಳುತ್ತಾರೆ. ನಾವು ಹೋಗಬೇಕಾಗಿದ್ದ ಅಂಗಡಿ ಟೀಕ್ಸ್ ಸ್ಟೇಷನ್‌ನಿಂದ ಮೌಂಟ್ ರೋಡ್‌ನಲ್ಲಿ ಹೋಗುವಾಗ ರೌಂಡ್ ಥಾನಾದ ಬಲದ ಮುಖ್ಯ ಬೀದಿಯಲ್ಲಿ ಸಿಗುತ್ತವೆ. ನಾವು ಸರ್ಕಲ್‌ನಲ್ಲಿ ಕಾರ ನಿಲ್ಲಿಸಿದೆವು ನಾನು ದೊಡ್ಡ ಪಟ್ಟಣದಲ್ಲಿ ಅದರಲ್ಲೂ ಅಂತಹ ಜಾಗಗಳಲ್ಲಿ ಹೆಚ್ಚು ತಿರುಗದವಳಾಗಿದ್ದುದರಿಂದ ನನ್ನ ಅತ್ತೆಯವರು ನನ್ನ ರಟ್ಟೆಯನ್ನು ಹಿಡಿದುಕೊಂಡು ಬಹಳ ಹಿಕ್ಮತ್ತಿನಿಂದ ಬೀದಿ ದಾಟಿ ಬಿಟ್ಟರು.

ಅಲ್ಲಿ ಯಾರ ಮಾತಿಗೂ, ಯಾವ ಮಾತಿಗೂ ತೂಕ; ಬೆಲೆ ಇದ್ದುವೇ ಇಲ್ಲ. ಎಷ್ಟು ಜಾಗ್ರತೆಯಿಂದ ದಾಟುವಾಗಲೂ, ಕಾರಿನವರ, ಸೈಕಲ್ ಮತ್ತು ಅವಸರದ ಗಾಡಿಯವರ ಅವಿರತವಾದ ಬೈಗಳನ್ನು ಕೇಳಿಸಿಯೂ ಕೇಳಿಸದವರಂತೆ ಹೋಗಬೇಕಾಗುತ್ತಿತ್ತು.

ಇನ್ನೂರು ಜಾಸ್ತಿ ಮಾಡಿದ್ದಾರೆ, ಇವರಿಗೆಲ್ಲ ತಿರುಗಾಡಲು ಬೇರೆ ಹೊತ್ತೇ ಇಲ್ಲಾಂತ ಕಾಣುತ್ತದೆ. ತಿಂದು, ಕೊಬ್ಬಿದ್ದಾರೆ, ಇವರ ಮೇಲೇನೇ ಗಾಡಿ ಓಡಿಸಬೇಕು ನೋಡು, ಆಗ ಬುದ್ಧಿ ಬರ್‍ತದೆ. ಒಂದೇ ಎರಡೇ, ನಮ್ಮೂರಿನಲ್ಲಾದರೆ ಒಂದೊಂದು ಮಾತಿಗೂ ದೊಂಬಿಯಾಗಬೇಕಾಗಿತ್ತು. ಊಹುಂ, ಅಲ್ಲಿ ಅಂತದಕ್ಕೆಲ್ಲ ತಲೆ ಕೆಡಿಸಿಕೊಳ್ಳುವವರೇ ಇಲ್ಲ.

ನಮ್ಮತ್ತೆದ್ದೇ ಒಂದು ರೀತಿ. ಅಲ್ಲಿ ಆ ಬೀದಿಯಲ್ಲಿ ಬೇಕಾದಷ್ಟು ಅಂಗಡಿಗಳಿದ್ದರೂ ಯಾವ ಅಂಗಡಿಯೊಳಗೂ ಕಣ್ಣು ಕೂಡಾ ಹಾಯಿಸದೆ ಸೀದಾ ಆ ಅವರ ಮಾಮೂಲು ಅಂಗಡಿಗೇ ನುಗ್ಗಿದರು. ನಾನು ಅಂತಹ ಅವಸರದಲ್ಲೂ ಇಲ್ಲಿ ಎಷ್ಟು ನೋಡಿದರೆ ಅಷ್ಟೇ ಲಾಭ ಎಂದುಕೊಂಡು ಎಲ್ಲ ಕಡೆಗೂ ಅವಸರವಸರದಿಂದ ನೋಡಿಕೊಂಡು ಹೋಗುತ್ತಿದ್ದೆ. ಅತ್ತೆ ಅವರ ಮಾಮೂಲಿನ ಅಂಗಡಿಗೆ ಹೋದರೂ, ನಾನು ಹೊರಗೇ ನಿಂತು ಆ ಅಂಗಡಿಗಿಂತ ಮೂರು ಅಂಗಡಿಗಳಾಚೆ ಇರುವ ಆ ಚಿಕ್ಕ ಅಂಗಡಿಯಲ್ಲೇ ದೃಷ್ಟಿ ಇಟ್ಟಿದ್ದೆ. "ಪಂಜಾಬಿ ಡ್ರೆಸ್ಸಸ್" ಎಂದು ಬೋರ್ಡು ತೂಗ ಹಾಕಿತ್ತು. ಅಲ್ಲಿಯೂ ಕೆಲವು ಜನ ವ್ಯಾಪಾರ ಮಾಡುತ್ತಾ ಇದ್ದರು

"ಬಾ, ಬಾ, ಬೇಕಾದ್ದನ್ನು ಆರಿಸು. ಹೊತ್ತಾಗುತ್ತದೆ."

"ಅಲ್ಲತ್ತೆ ನಾವು ಸ್ವಲ್ಪ ಆ ಕಡೆಗೆ ಹೋಗಿ ಬಂದರೇನು?"

"ಸುಮ್ಮನೆ, ಇಲ್ಲೇ ತೆಗೆದುಕೊಳ್ಳಬಾರದೆ? ಇವರು ಬಹಳ ಹಿಂದಿನಿಂದ ಪರಿಚಯಸ್ಥರು, ನಮಗೆಂದರೆ ಬಹಳ ರೀಸನೇಬಲ್ ಆಗಿ ಕೊಡುತ್ತಾರೆ.'

"ಹೌದು ತಾಯಿ, ಈ ಅಮ್ಮ ಹದಿನೈದು ಇಪ್ಪತ್ತು ವರ್ಷಗಳಿಂದಲೂ ಇಲ್ಲೇ ವ್ಯಾಪಾರ ಮಾಡುವುದು. ನಾವು ನಿಮಗೆ ಅಸಲು ಬೆಲೆಗೇ ಕೊಡುತ್ತೇವೆ. ನಮಗೇನೂ ಲಾಭ ಬೇಡ. ಬನ್ನಿಯಮ್ಮ ಒಳಗೆ."

ಸರಿ, ಏನೂ ಮಾಡಬಾರದೆ ಒಳಗೆ ಹೋದೆ. ಬಹಳ ಸತ್ಕಾರವೂ ನಡೆಯಿತಲ್ಲ. Cold drink, ಬೇಕೇ ಕಾಫಿ ಯಾದೀತೇ, ice cream ತಿನ್ನೀರಾ ಎಂದ ಕೊಂಡೇ ೫೦ ರೂಪಾಯಿಯ ಬಿಲ್‌ನೊಂದಿಗೆ ಒಂದು ಚಿಕ್ಕ ಕಟ್ಟನ್ನು ನಮ್ಮ ಕೈಯಲ್ಲಿಟ್ಟು Cold drink ನಲ್ಲೇ ಸತ್ಕಾರವೂ ಆಯಿತು.

ಅಂಗಡಿಯಿಂದ ಹೊರಗೆ ಬಂದಾಗ,

"ಸ್ವಲ್ಪ ಅದರೊಳಗೆ ನೋಡಿ ಬರೋಣ ಅತ್ತೆ," ಎಂದೆ ಗೋಗರೆವ ಸ್ವರದಲ್ಲಿ.

"ಸರಿ, ನಿನ್ನದು ಹಿಡಿದದ್ದೇ ಹಠ, ನಾಲ್ಕಾಣೆಯ ಸಾಮಾನಿಗೆ ನಾಲ್ಕು ಗೆಲನ್ ಪೆಟ್ರೋಲ್ ಮುಗಿಸುವ ವ್ಯಾಪಾರ."

ಆದರೂ ಆ ಅಂಗಡಿಗೆ ಹೋದೆವು.

ಅದು ಆ ಮೊದಲಿನ ಅಂಗಡಿಯ ಕಾಲು ಭಾಗದಷ್ಟು ಇರಲಿಲ್ಲ. ಅಗಲ ಬಲು ಕಿರಿದು. ಉದ್ದ ಮಾತ್ರ ೧೮-೨೦ ಅಡಿಯಷ್ಟಿತ್ತು ಆದರೂ ಅಚ್ಚುಕಟ್ಟಾಗಿತ್ತು. ಪ್ರತಿಯೊಂದು ತೂಗುಹಾಕಿದ್ದ ತೊಡಿಗೆಯು ನನ್ನ ಕಡೆಗೆ ನೋಡು ನನ್ನ ಕಡೆಗೆ ನೋಡು ಎಂಬಂತೆ ಮನಸೆಳೆಯುತ್ತಿದ್ದುವು. ನಾನಂತೂ ೮-೧೦ ಹೆಣ್ಣು ಮಕ್ಕಳ ಅಂಗಿಗಳನ್ನು ಆರಿಸಿದೆ. ನನ್ನ ಅತ್ತೆಯೂ ೫-೬ ಅಂಗಿಗಳನ್ನು ಬಿಡಲಾರದೆ ಕಟ್ಟಿಸಿದರು. ಕೆಲವು ರವಕೆಯ ಬಟ್ಟೆಗಳನ್ನೂ ಕೊಂಡದ್ದಾಯಿತು. ಬಿಲ್ ನೋಡಿದಾಗ ನಮಗೆ ನಿಜಕ್ಕೂ ಆಶ್ಚರ್ಯವೇ ಆಯಿತು. ನಾವು ಅಂದಾಜು ಹಾಕಿದ್ದುದಕ್ಕಿಂತಲೂ ೧೮-೨೦ ರೂಪಾಯಿಯೇ ಕಮ್ಮಿ ಬಿದ್ದಿತ್ತು. ಬಿಲ್ ಸರಿಯಿದೆಯೇ ಎಂದು ಮತ್ತೊಮ್ಮೆ ಪರಿಶೀಲಿಸಲು ಹೇಳಿದೆವು. ಮ್ಯಾನೇಜರ್ ಮತ್ತೊಮ್ಮೆ ನೋಡಿ, "ಸರಿಯಾಗಿದೆಯಮ್ಮ" ಎಂದ.

ಬಿಲ್‌ನಲ್ಲಿದ್ದಷ್ಟು ಹಣ ಅಲ್ಲಿ ಕೊಟ್ಟೆವು. ಆದರೆ ರವಕೆ ಹೊಲಿಯಲು ಹಾಕಬೇಕಾಗಿತ್ತು. ಅದೇ ಅಂಗಡಿಯಲ್ಲಿ ಒಂದು ಮೂಲೆಯಲ್ಲಿ ಒಂದು ಚಿಕ್ಕ ಬೋರ್ಡಿತ್ತು "ಲೇಡೀಸ್ ಟೈಲರ್". ಆ ಚಿಕ್ಕ ಬೋರ್ಡಿನ ಹಿಂದೆಯೇ ಒಂದು ಹೆಂಗಸಿನ ಪ್ರತಿಮೆ ನಿಲ್ಲಿಸಿದಂತಿತ್ತು. ಅಲ್ಲಿಗೆ ಹೆಚ್ಚಾಗಿ ಬೆಳಕು ಬೀಳುತ್ತಿರಲಿಲ್ಲವಾದರೂ ದೊಡ್ಡದೊಂದು ಮೂರ್ತಿಯನ್ನು ನಿಲ್ಲಿಸಿದ್ದು ಅಸ್ಪಷ್ಟವಾಗಿ ಕಾಣಿಸುತ್ತಿತ್ತು, ಕಾರ್ಕಳದ ಗೋಕರ್ಣದ ಮೇಲೆ ನಿಶ್ಚಲವಾಗಿ ನಿಂತ ಗೋಮಟೇಶನ ಮೂರ್ತಿಯಂ

(೧೧ನೇ ಪುಟ ನೋಡಿರಿ)



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920.   ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರ್ಯಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮಾವ್ರೋನ ಮೆರವಣಿಗೆಯಲ್ಲಿ

ಚೀನೀಯರ ಚೀರಾಟ

ಬರೆದವರು: ಶ್ರೀ ಶಿವಶಂಕರ, ಮದ್ರಾಸು.

ಅನ್ನ-ಬಟ್ಟೆಗಳಿಗಾಗಿ ಚೈನೀ ಜನತೆ ಹೋರಾಡುತ್ತಿದ್ದಲ್ಲಿ, ಮಾವೋ ಹಿಂಬಾಲಕರು ಅಂತರ್ರಾಷ್ಟ್ರೀಯ ಅಂಗಳದಲ್ಲಿ ತಮ್ಮ ಹೆಸರು ಹೆಚ್ಚಿಸಿಕೊಳ್ಳಲು ಹೋರಾಡುತ್ತಿದ್ದಾರೆ, ಮೆರೆದಾಡುತ್ತಿದ್ದಾರೆ. ಊಣಲು ಅನ್ನ ಇಲ್ಲದಿದ್ದರೂ ನವನಾಗರೀಕತೆಯ ಅಮಲಿನಲ್ಲಿ ಬಾಹ್ಯಾಡಂಭರ ಬೆಳೆಸಿಕೊಳ್ಳಲು ಪ್ರಯತ್ನಿಸುವದು ಇಂದು ಆಶ್ಚರ್ಯದ ವಿಷಯವಲ್ಲ. ಬಾಹ್ಯಾಡಂಭರದಿಂದ ಸಮಾಜದಲ್ಲಿ ಪ್ರತಿಷ್ಠೆಯ ಸ್ಥಾನವನ್ನು ಗಿಟ್ಟಿಸಿಕೊಳ್ಳಬಹುದೆಂಬುದು ಆಧುನಿಕತೆಯ ಆಸರೆ ಪಡೆದಿರುವವರ ಆಶೆ. ಹೇಟ್-ಬೂಟು, ಕೋಟು ಸೂಟುಗಳಿಂದಲೇ ವ್ಯಕ್ತಿ ಆಸನ ಗಿಟ್ಟಿಸಿಕೊಳ್ಳುವದು ಇಂದು ಸಾಮಾನ್ಯ ವಿಷಯವಾಗಿರುತ್ತದೆ. ಚಳಿ ಇಲ್ಲದಿದ್ದರೂ—ಬಿಸಿಲು ಬಿಸಿ ಹುಟ್ಟಿಸುತ್ತಿದ್ದರೂ ಕುತ್ತಿಗೆ-ಪಟ್ಟಿಯ "ಆವಶ್ಯಕತೆ" ಸಮಾಜದ ಗಣ್ಯವ್ಯಕ್ತಿಗಳಿಗೆ ಇರುತ್ತದೆ. ಓದು ಬರಹ ಪ್ರಚಾರದಲ್ಲಿರುವದೆಲ್ಲಾ ಹಿಂದಿನ ಕಾಲದ್ದಿರುವದರಿಂದ ಅದರ ಗೋಜಿಗೇ ಹೋಗದಿರುವ ಅತ್ಯಾಧುನಿಕ ಮಾನವನಿಗೆ ವರ್ತಮಾನ ಪತ್ರಿಕೆಗಳ ಆವಶ್ಯಕತೆ ಇರುತ್ತದೆ.... .. ಹೀಗೆ ಹಬ್ಬುತ್ತಿರುವ ವಿಷಯ ರುಚಿ, ಅಥವಾ ಆಧುನಿಕತೆ, ನಾಗರೀಕತೆ, ಆದಕ್ಕಿಂತಲೂ, ಫೇಶನ್ ಗಾಳಿಯಲ್ಲಿ ವ್ಯಕ್ತಿ ಜಿಲುಗಾಡುತ್ತಿದ್ದಾನೆ. ಹೊಟ್ಟೆಯ ಒಳಗೆ ಹೋಗಿ ಯಾರಾದರೂ ನೋಡುತ್ತಾರೇನ? ಇಸ್ತ್ರಿಯ ಬಟ್ಟೆ ಮೇಲೆ ಹಾಕಿಕೊಂಡರಾಯಿತು ಒಳಗಿನ ವಿಷಯದತ್ತ ಯಾರ ಗಮನವೂ ಇರುವದಿಲ್ಲ. ಹಾಗೆಯೇ ಕೈಗಡಿಯಾರದ ವಿಷಯವೂ ಇದೆ. ಅಂದರೆ ದಿವಸ ಹೋಗುತ್ತಿರುವಂತೆ ಬಾಹ್ಯ ವೇಷದತ್ತ ವ್ಯಕ್ತಿಯ ಗಮನ ಜಾಸ್ತಿಯಾಗುತ್ತಿದೆ. ಅದು ಇಲ್ಲಿ ಮಾತ್ರವಲ್ಲ, ಲಂಡನಿನಲ್ಲಿ ಮಾತ್ರವಲ್ಲ, ಅಮೇರಿಕದಲ್ಲಷ್ಟೇ ಅಲ್ಲ; ಮಾನವೀಯತೆಯನ್ನೇ ಮಣ್ಣುಪಾಲಾಗಿಸಿರುವ ಕೆಂಪು ಚೈನಾದಲ್ಲೂ ಅಷ್ಟೆ. ಅಲ್ಲಿ ನಿಯಂತ್ರಣ ನಿರತ ವರ್ತಿಸುತ್ತಿದೆ. ಹಾಗಿದ್ದರೂ ಮನುಷ್ಯನಾಗಿ ಹುಟ್ಟಿರುವವನಿಗೆ ಆಶೆಯೆಂಬುದೊಂದಿರದೆ ಹೋಗುತ್ತದೆಯೇ? ನಿಯಂತ್ರಣವಿರುವದರಿಂದ ಚೆನ್ನಾದ ಬಟ್ಟೆ ಒಬ್ಬ ಹಾಕಿಕೊಂಡರೆ ತೀರಿತು, ಕೈಗೋ ಕುತ್ತಿಗೆಗೋ ಏನನ್ನಾದರೂ ಹಾಕಿಕೊಂಡರೆ ಮುಗಿಯಿತು, ಅವನ ಪಾಡು. ಅನಂತರ ಪಕ್ಷದ ಬೇಹುಗಾರರು ಅವನ ಹಿಂದು ಮುಂದೆ ತಿರುಗಾಡುತ್ತಿದ್ದರೆ ಅವನನ್ನು ಬೋರ್ಜ್ವಾ, ಆ ಮೇಲೆ......ಆರೋಪದ ಮೇಲೆ ಕಠಿಣ ನರಕ ಯಾತನೆಗೆ ಬಲಿಗೊಡಲಾಗುತ್ತದೆ. ಹಾಗೆ ಆದುವಿದರೂ ಆಶಾ ಅನಿಲವನ್ನು ಬಂದಿಳಿಡಲು ಸಾಧ್ಯವೇನ.?—ಸಾಧ್ಯವಿಲ್ಲವೆನ್ನುತ್ತಾರೆ, ಜೇಮ್ಸ್ ಯೆನ:—

ಚೈನಾದ ಎಪ್ಪತ್ತು ಕೋಟಿ ಜನರಲ್ಲಿ

ಬಂಡವಾಳಶಾಹಿ ಹಾಗೂ ನಾಗರೀಕ ಅಥವಾ ಬೋರ್ಜ್ವಾ ಯೋಚನೆಗಳ ಪುನರುಜ್ಜೀವನವಾಗುತ್ತಿದೆಯೆಂಬ ಭಯ ಚೈನೀ ಕಮ್ಯೂನಿಸ್ಟ್ ಧುರೀಣರಲ್ಲಿ ಹುಟ್ಟಿಕೊಂಡಿದೆ. ಕಳೆದ ವರ್ಷವೇ ಅದರ ಅನುಭವವಾಗಿತ್ತು. ಅದರಿಂದಾಗಿ ಅಲ್ಲಿ "ವರ್ಗಹೋರಾಟ" ಚಳವಳಿ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯಿತು- ಅದುವೇ ಇಂದಿನ ಚೈನಾದ ಮಹತ್ವಪೂರ್ಣ ಬೆಳವಣಿಗೆ ಇದೆ.

ಕಮ್ಯೂನಿಸ್ಟರು ಅಧಿಕಾರ ಕಡಿವಾಣವನ್ನು ಕೈಯಲ್ಲಿ ತೆಗೆದುಕೊಂಡಂದಿನಿಂದಲೂ ಚೈನಾ ಜನತೆಯಲ್ಲಿ ವಂಶಪಾರಂಪರ್ಯವಾಗಿ ಬಂದಿರುವ ವೈಯುಕ್ತಿಕ ಸ್ವಾಭಿಮಾನವನ್ನು ತುಳಿದುಬಿಡುವ ಬಿಗು ಸಮಸ್ಯೆಯನ್ನೆದುರಿಸಿಕೊಂಡು ಬರಬೇಕಾಗಿರುತ್ತದೆ. ಇಂದು ಹೇಳಲಾಗುತ್ತಿರುವ ಚೈನಿ-ಸೋವಿಯಟ್ ಚಕಮಕಿಯಿಂದಾಗಿ ಈ ಸಮಸ್ಯೆ ಬಹಳ ತುರ್ತಿನದ್ದಾಗಿರುತ್ತದೆ.

"ಆಧುನಿಕ ಪುನರುಜ್ಜೀವನತೆ"ಯು ಸೋವಿಯಟ್ ಒಕ್ಕೂಟದಿಂದ ಹಬ್ಬಿ, ಚೈನಾದಲ್ಲಿ ಬೇರೂರಿ, ಪಕ್ಷವನ್ನು ಮೇಲ್ಮಟ್ಟದಿಂದ ಕೆಳಮಟ್ಟದವರೆಗೂ ಒಡೆದು ಬಿಡಬಹುದೆಂಬ ಭಯ ಪೆಕಿಂಗ್ ಪ್ರಮುಖರನ್ನು ಪೀಡಿಸುತ್ತಿದೆ. "ವರ್ಗಹೋರಾಟ"ಕ್ಕೆ ಮೀಸಲಿಟ್ಟಿದ್ದ ಭಾರೀ ಒತ್ತಡದ ಪ್ರತಿಫಲವಾಗಿ ಇಂದು ಅವರಲ್ಲಿ ದಿಗಿಲು ಹಾಗೂ ನಿರಾಶೆ ಮನೆ ಮಾಡಿಕೊಂಡಿರುತ್ತದೆ.

ಪಕ್ಷವು ಇಂದು ದೊಡ್ಡ ಕೆಲಸವನ್ನೆದುರಿಸುತ್ತಿದೆಂಬುದಕ್ಕೆ ಅವರು ನಿಯಂತ್ರಣಗಳ ಮೇಲಿನ ಬಿಗುವನ್ನು ಸ್ವಲ್ಪ ಸಡಿಲಿಸಿರುವುದೇ ಉತ್ತಮ ಸಾಕ್ಷಿ. ಇದು ಪಕ್ಷಪ್ರವಾಹಪಥ ಬದಲಾಯಿಸುತ್ತಿದೆಂಬುದಕ್ಕೆ ಪರಿಚಯಪತ್ರ.

ಇಂದು ಕೇಂದ್ರ ಚೈನಾದಲ್ಲೆಲ್ಲೂ "ವರ್ಗಹೋರಾಟ" "ಸಮಾಜವಾದಿ ವಿದ್ಯಾಭ್ಯಾಸ" "ಯೋಚನಾ ಶಿಕ್ಷಣ" ಮುಂತಾದ ಶಬ್ದಗಳ ಪ್ರತಿಧ್ವನಿ ಕೇಳಬರುತ್ತಿದೆ. ಬಂಡವಾಳಶಾಹಿ ಯೋಜನೆಯ ವಿರುದ್ಧ ಜಾಗರೂಕತೆಯನ್ನು ಜಾಸ್ತಿಗೊಳಿಸಿರೆಂದು ನಾನ್‌ಕಿಂಗ್ ಮತ್ತು ವುಹಾನ್ ಆಕಾಶವಾಣಿ ನಿಲಯಗಳು ಎಚ್ಚರಿಕೆಯನ್ನೀಯುತ್ತಿವೆ. "ವರ್ಗಕಲಹ"ದಲ್ಲಿ ಭಾಗವಹಿಸುವದಿಲ್ಲವೆಂಬ ಆರೋಪವನ್ನು ನಾನ್‌ಕಿಂಗ್ ಆಕಾಶವಾಣಿಯು ಪಕ್ಷದ ಸದಸ್ಯರ ಮೇಲೂ ಹೊರಿಸುತ್ತಿದೆ.

ಪಕ್ಷದ ಪ್ರಮುಖರಲ್ಲೂ, ಸದಸ್ಯರಲ್ಲೂ ಮುಂಚಿನಂತೆ ಈಗ ಕ್ರಾಂತಿಯ ಉತ್ಸಾಹವಿಲ್ಲವೆಂಬ ಚಿಂತೆ ಚೈನಾ ಕಮ್ಯೂನಿಸ್ಟ್ ಧುರೀಣರನ್ನು ಕಾಡುತ್ತಿದೆ. ಉದಯಿಸುತ್ತಿರುವ ಪೀಳಿಗೆ ಪ್ರಚಲಿತ ಜನಾಂಗದಷ್ಟು ಮಣಿಯುವವರಲ್ಲವೆಂಬ ತೀವ್ರ ಆತುರತೆ ಅವರಲ್ಲಿದೆ. ಈಗಿನ ಜನಾಂಗವಾದರೋ ಕ್ರಾಂತಿಕಾರಿ ಹೆಬ್ಬುಲಿಗಳ ಕಣ್ಣೋಟದಲ್ಲೇ ಇದ್ದಾರೆ. ನಾಳೆ ಈ ಹೆಬ್ಬುಲಿಗಳು ಬಿದ್ದು ಹೋಗುವುದು ಸ್ವಾಭಾವಿಕತೆ ಇದೆ. ಅನಂತರ? ಪ್ರಶ್ನಾರ್ಥಕ ಚಿಹ್ನೆ ಪ್ರತ್ಯಕ್ಷವಾಗುತ್ತದೆ. ಈಗಿನ ಕಮ್ಯೂನಿಸ್ಟ್ ಧುರೀಣರ ಸ್ಥಾನದಲ್ಲಿ ಬರುವ ಮುಂದಾಳುಗಳು ಸಂಪ್ರದಾಯವಾದೀ—ಮಾರ್ಕ್ಸ್-ಲೆನಿನ್ ವಾದ ಅಲ್ಲದೆ ಮಾವೋ ವಾದವನ್ನೂ ಚೈನಾ ಹಡಗಿನಿಂದ ಸಮುದ್ರಕ್ಕೆಸೆದು ಬಿಟ್ಟಾರೆಂಬ ಅಪಾಯದ ಮುನ್ಸೂಚನೆಯೂ ಈಗಿನ ಧುರೀಣರನ್ನು ಪೀಡಿಸುತ್ತಿದೆ.

ತರುಣ ಪೀಳಿಗೆಗೆ ತಕ್ಕುದಾದ ಹಾಗೂ ಪ್ರವರ್ಧಮಾನ ತಾತ್ವಿಕ ಬೋಧನೆಯನ್ನು ಕೊಡದಿದ್ದಲ್ಲಿ ಮುಂದಕ್ಕೆ ಏನಾದೀತೆಂಬ ಸಮಂಜಸ ಭಯವು ಪೆಕಿಂಗಿನ ಜನತಾ ದೈನಿಕದ (ಪೀಪಲ್ಸ್ ಡೈಲಿ) ಸಂಪಾದಕೀಯ ಲೇಖನದಲ್ಲಿ ಪ್ರಕಟವಾಗಿರುತ್ತದೆ:— ಕೆಡವಲ್ಪಟ್ಟಿರುವ ಪ್ರತಿಗಾಮಿ ಆಡಳಿತ ವರ್ಗವು.... ... ಈಗಿನ ಬಾಲ ಜನಾಂಗವು ಬೆಳೆದು ರಾಜಕೀಯ ರಂಗದಲ್ಲಿ ಕಾಲಿಟ್ಟಾಗ ಪುನಃ ಅಧಿಕಾರ ಗದ್ದುಗೆಯನ್ನೇರಿ ಅಧಿಕಾರ ಕಡಿವಾಣವನ್ನು ಕಸಿದುಕೊಳ್ಳಬಹುದೆಂಬ ಆಶೆಯಿಂದ ಸಾಮಾನ್ಯ ಶ್ರಮಜೀವಿಗಳ ಬಾಲ ಜನಾಂಗವನ್ನು ಬುಟ್ಟಿಯಲ್ಲಿ ಹಾಕಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಪಕ್ಷದ ಸಮಾಚಾರ ಪತ್ರಿಕೆಯು ತನ್ನ ಸಂಪಾದಕೀಯದಲ್ಲಿ ವಿವರಣೆಯನ್ನು ಕೊಟ್ಟಿರುತ್ತದೆ:— ಸಾಮಾನ್ಯ ಬೋರ್ಜ್ವಾ ಗುಣವಾಗಿರುವ ವೈಯುಕ್ತಿಕ ಅಭಿವೃದ್ಧಿಯ ಉತ್ಸಾಹವು ಅದೆಂದೆಂದಿಗೂ ನವೀನ ಬೋರ್ಜ್ವಾ ಶಕ್ತಿಗಳನ್ನುಂಟುಮಾಡುತ್ತದೆ." ಅದೇ ಸಮಯದಲ್ಲಿ ಈ ಪತ್ರಿಕೆಯು ಬೋರ್ಜ್ವಾಗಳ ಮೇಲೆ ಆರೋಪ ಹೊರಿಸುತ್ತ ಸಾಮಾನ್ಯ ಶ್ರಮಜೀವಿಗಳಲ್ಲಿರುವ ಕ್ರಾಂತಿಕಾರಕ ಮನೋಭಾವನೆಯನ್ನು ಕೆಡಿಸಲು ಪ್ರಯತ್ನಿಸುತ್ತಿದ್ದಾರೆಂದು ಹೇಳಿರುತ್ತದೆ.

ಹಳೆಯ ಕಾರ್ಯಕರ್ತರಿಗೂ ಎಡೆಬಿಡದೆ ಶಿಕ್ಷಣ ಕೊಡಬೇಕಾಗಿರುತ್ತದೆಂದೂ, ಅದರಲ್ಲೂ "ವರ್ಗ ಹೋರಾಟ"ದ ಕುರಿತು ವಿಶೇಷ ಗಮನ ಸಲ್ಲಿಸಬೇಕಾಗುತ್ತದೆಂದೂ. ಅಂತಹ ಇಕ್ಕಟ್ಟಿನ ಪರಿಸ್ಥಿತಿ ಬಂದೊದಗಿರುತ್ತದೆಂದೂ ಪಕ್ಷದ ಸಮಾಚಾರ ಪತ್ರಿಕೆ ಪ್ರಕಟಿಸಿರುತ್ತದೆ. ಹಾಗಿದ್ದರೂ, ಇಂದು ತರುಣ ಕಾರ್ಯಕರ್ತರತ್ತ ಬಹಳ ಜಾಗ್ರತೆಯಿಂದ, ಅವರ ಮನೋಪಟಲದ ಮೇಲೆ ಬೋರ್ಜ್ವಾ ಬಾಧೆ ಬೆಳೆಯದಂತೆ ನೋಡಿಕೊಳ್ಳಬೇಕಾಗಿರುತ್ತದೆಂದೂ ಆ ಪತ್ರಿಕೆ ಸೂಚಿಸಿರುತ್ತದೆ.

ವೈಯುಕ್ತಿಕ ಆಸ್ತಿಯ ಮೇಲಿರುವ ವಿಶಿಷ್ಟ ದೃಷ್ಟಿಯೇ ಪಕ್ಷದ ತಾತ್ವಿಕ ಕಾರ್ಯನಿರ್ವಾಹಕರಿಗೆ ಮುಖ್ಯ ತೊಂದರೆಯ ಮೂಲಕಾರಣಗಳಲ್ಲಿ ಒಂದಾಗಿರುತ್ತದೆ. ಸು ಪೋ ಷ ಯೋ ಗಿ ಸಾ ಮಾ ಗ್ರಿ ಗಳ ಉ ತ್ಪಾ ದ ನೆ ಯ ತ್ತ ಚೈನಾ ಅಷ್ಟು ಗಮನ ಕೊಡುತ್ತಿರುವದಿಲ್ಲ. ಇದರಿಂದ ಏನಾಗುತ್ತದೆಂದರೆ, ಒಬ್ಬನ ಬಳಿ ಕೈಗಡಿಯಾರವಿದ್ದಲ್ಲಿ, ತನ್ನನ್ನ ಇತರರು ಪಕ್ಷದ ಮೇಲೆ ತಾತ್ವಿಕ ಶ್ರದ್ಧೆಯಿಲ್ಲದವನೆಂದು ಹೇಳ್ಯಾರೆಂದು ಭಯಭೀತನಾಗಿರುತ್ತಾನೆ.

ಹಾಗಿದ್ದರೂ, ಕಾರ್ಖಾನೆಗಳಲ್ಲಿ ಹಾಗೂ ಕೃಷಿಕರಲ್ಲಿ ಹೇಗಾದರೂ, ಏನನ್ನಾದರೂ ಉಳಿಸಿಕೊಂಡು ಒಂದು ಲೇಖನಿಯನ್ನೋ; ಕಡಿಮೆ ಕ್ರಯದ ಕೈಗಡಿಯಾರವನ್ನೋ, ಅಥವಾ ಛಾಯಾಚಿತ್ರ ತೆಗೆಯುವ ಪೆಟ್ಟಿಗೆಯನ್ನಾಗಲೀ ಪಡೆದುಕೊಳ್ಳಬೇಕೆನ್ನುವವರ ಸಂಖ್ಯೆ ಹೆಚ್ಚಾಗುತ್ತಿದೆನ್ನುವದೂ ಒಂದು ಸಮಸ್ಯೆ ಇದೆ. ಇತ್ತ ಧುರೀಣರು ಗಮನಕೊಡಬೇಕಾಗಿರುತ್ತದೆ. ಅವರು ಮಾವೋವಾದವನ್ನು ಎದುರಿಸುತ್ತಿರುವ ಅಡೆತಡೆಗಳನ್ನು ಕಿತ್ತೊಗೆಯುವ ಕಾರ್ಯದಲ್ಲಿ ಭಾಗಿಗಳಾಗಬೇಕಾಗುತ್ತದೆ. ಜನತೆಯಲ್ಲಿರುವ ಇಂತಹ ಭೌತಿಕ ಆಶೆ-ಆಮಿಷೆಗಳನ್ನು ತೊಡೆದು ಹಾಕಲು ಅವರು ಹೆಣಗಬೇಕಾಗುತ್ತದೆ. ಹಾಗೆ ಮಾಡದಿದ್ದಲ್ಲಿ ಮುಂದಕ್ಕೆ ಮಾವೋವಾದಕ್ಕೇನೇ ಅಪಾಯ ಬಂದೊದಗೀತೆಂಬ ಭಯ ಅವರಲ್ಲಿದೆ.

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಆವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ
ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಮಣಿ ಯಾತ್ರೆ
ಇದೀಗ ಪ್ರಕಟವಾಗಿದೆ
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1 25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಎಲ್ಲರೂ ಬಯಸುತ್ತಾರೆ

ಜನಜೀವನದಲ್ಲಿ ಹಾಸ್ಯ

ಬರೆದವರು: "ರಂಜನೆ", ಬೆಂಗಳೂರು.

ಹಾಸ್ಯ ನಗೆಯೊಡನೆ ಸಮಾಪ್ತಿಗೊಳ್ಳುತ್ತದೆ. ಕೆಲವೊಮ್ಮೆ ನಗೆಯೊಡನೆ ಅಂತ್ಯಗೊಳ್ಳುವ ಎಷ್ಟೋ ವಿಷಯಗಳು ಹಾಸ್ಯವಾಗಿರುವುದಿಲ್ಲ.

ಮನೋವಿಕಾರದ ನಗೆ, ಉದ್ವೇಗದ, ಎಳೆತನದ ಸಹಜ ನಗೆ, ಇವುಗಳ ಹಿಂದೆ ಯಾವೊಂದು ಹಾಸ್ಯವೂ ಅಡಗಿಲ್ಲದಿರಬಹುದು.

ಎಂತಹ ಗಡಸು ಮನುಷ್ಯನಾದರೂ ಒಮ್ಮೆಯಲ್ಲ ಒಮ್ಮೆ ಹಾಸ್ಯದಿಂದ ನಕ್ಕಿರುತ್ತಾನೆ. ಹಾಸ್ಯ ಎಲ್ಲ ಮನುಷ್ಯನಲ್ಲೂ, ಎಲ್ಲ ಜನಾಂಗಗಳಲ್ಲೂ, ಎಲ್ಲ ಕಾಲಗಳಲ್ಲೂ ಉಂಟು.

ಹಾಸ್ಯದ ನಗುವಿನಿಂದ ಲೆಕ್ಕವಿಲ್ಲದಷ್ಟು ಒಳ್ಳೆಯ ಹಾಗೂ ಕೆಟ್ಟ ಕಾರ್ಯಗಳು ನಡೆದಿವೆ.

ಹಾಸ್ಯದಿಂದ ಚಿಮ್ಮಿದ ನಗುವು, ಆರೋಗ್ಯವನ್ನೂ ಮುಖಕ್ಕೆ ಕಾಂತಿಯನ್ನೂ ನೀಡಬಹುದು.

ಅತಿ ನಕ್ಕಾಗ ಮುಖ ಕೆಂಪೇರುತ್ತದೆ, ನಾಡಿಯ ಬಡಿತವೂ ಹೆಚ್ಚುತ್ತದೆ. ಕೆಲವೊಮ್ಮೆ ಹೊಟ್ಟೆ ಹಾಗೂ ಪಕ್ಕೆಗಳೂ ನೋಯಲೂ ತೊಡಗುತ್ತವೆ.

ಕಾಲವರಿತು, ಗೂಢಾರ್ಥವೊಳಗೊಂಡು ಹದವರಿತು ಪ್ರಯೋಗಿಸಿದ ಲೆಕ್ಕವಿಲ್ಲದಷ್ಟು ಮಾತುಗಳು ವಿಶ್ವ ಸಾಹಿತ್ಯದಲ್ಲಿ ಮರೆಯಲಾಗದ ಹಾಸ್ಯರತ್ನಗಳಾಗಿವೆ.

ಮೂರನೆಯವರನ್ನು ಅಣಕದ ರೀತಿಯಲ್ಲಿ ವರ್ಣಿಸಿ ನಗಿಸಿ—ನಗುವವರದೊಂದು ಪಂಗಡವಾದರೆ, ಎದುರಿನಲ್ಲಿನ—ಎದುರಿನವನ ವಿಕಾರವನ್ನು ಎತ್ತಾಡಿ ಎದೆಗಾರಿಕೆಯಿಂದ ನಗಿಸಿ — ನಗುವವರದಿನ್ನೊಂದು ಪಂಗಡ. ಇವೆರಡಕ್ಕೂ ಹೊರತಾದ ಮತ್ತೊಂದು ಪಂಗಡ, ಯಾರನ್ನೂ ಉದ್ರೇಕಿಸಿ, ಹಾಸ್ಯಮಾಡದೆ, ಯಾರನ್ನೂ ಹಾಸ್ಯಕ್ಕೀಡು ಮಾಡದೆ ಹಾಸ್ಯರಸವನ್ನು ಉಣಿಸುವವರು. ಇಂತಹವರು ಸಿಗುವುದು ಸಮಾಜದಲ್ಲಿ ದುರ್ಲಭವೇ ಆದರೂ ಇಲ್ಲವೇ ಇಲ್ಲವೆಂದು ಹೇಳುವಂತಿಲ್ಲ.

ನಗುವಿನ ಹಲವಾರು ಮುಖಗಳನ್ನು ಹೇಳುವುದಾದರೆ—

ಪ್ರಸಿದ್ಧ ಆಂಗ್ಲ ಕವಿ 'ಸರ್ ವಿಲಿಯಂ ಡಾವೆನಂಟ್" ಒಮ್ಮೆ ಹೋಗುತ್ತಿದ್ದಾಗ ಅವನನ್ನು ಹಿಂಬಾಲಿಸಿದ ಭಿಕ್ಷುಕಿಯೊಬ್ಬಳು.

"ದೇವರು ನಿಮ್ಮ ದೃಷ್ಟಿ ಸರಿಯಾಗಿಟ್ಟಿರಲಿ, ದೇವರು ನಿಮ್ಮ ಕಣ್ಣಿನ ದೃಷ್ಟಿ ಚಿರಕಾಲವಿಟ್ಟಿರಲಿ".

ಎಂದು ಹೇಳುತ್ತಾ ಬೆನ್ನು ಹತ್ತಿದ್ದಳು.

ತನ್ನ ಕಣ್ಣುಗಳ ಬಗ್ಗೆ ಅಷ್ಟು ಆಸ್ಥೆ ವಹಿಸಿದ ಕಾರಣವನ್ನು ತಿಳಿಯಲು ಡಾವೆನಂಟ್ ಕೇಳಿದ.

"ಏಕೆ ತಾಯಿ, ನನ್ನ ಕಣ್ಣಿನ ಉತ್ತಮ ದೃಷ್ಟಿಗಾಗಿ ನೀನು ಸತತ ಪ್ರಾರ್ಥಿಸುತ್ತಿರುವೆ."

"ಸ್ವಾಮೀ" ಆಕೆ ಹೇಳಿದಳು "ನಿಮ್ಮ ದೃಷ್ಟಿ ಕಡಮೆಯಾದರೆ ಕನ್ನಡಕ ಕೊಳ್ಳಲು ಜಾಗವೇ ನಿಮ್ಮಲ್ಲಿಲ್ಲ."

ಕವಿ ನಕ್ಕು ನಡೆದಿದ್ದ. ವಾಸ್ತವವಾಗಿ ಅವನಿಗೆ ಮೂಗೇ ಇರಲಿಲ್ಲ.

ಇಂಗ್ಲೇಂಡಿನ ಪ್ರಸಿದ್ಧ ನ್ಯಾಯಾಧೀಶ ಜೆಫ್ರೀಸ್ ಬಹಳ ಗಂಭೀರದಿಂದ ವಿಚಾರಣೆ ನಡೆಸುತ್ತಿದ್ದ ನ್ಯಾಯಾಲಯ ನಿಶ್ಶಬ್ದದಿಂದ ಆಲಿಸುತ್ತಿತ್ತು. ವಿಚಾರಣೆಗೊಳಪಟ್ಟಿದ್ದ ಅಪಾದಿತನನ್ನು ತನ್ನ ಕೋಲಿನಿಂದ ಜೆಫ್ರೀಸ್ ತೋರಿಸುತ್ತಾ,

"ನನ್ನ ಕೋಲಿನ ತುದಿಯಲ್ಲಿ ಇಂಗ್ಲೇಂಡದ ಪ್ರಸಿದ್ಧ ದಗಾಕೋರನಿದ್ದಾನೆ"—ಎಂದ.

ಕೂಡಲೆ ಆ ಅಪರಾಧಿ ಅಷ್ಟೆ ಗಂಭೀರವಾಗಿ ಪ್ರಶ್ನಿಸಿದ.

"ಯಾವ ತುದಿಯಲ್ಲಿ ನನ್ನ ಸ್ವಾಮೀ"

ಸಭಾಂಗಣ ನಗೆಯಲ್ಲಿ ತೇಲಾಡಿತೆಂದು ಹೇಳಬೇಕಾಗಿಲ್ಲ.

ಫ್ರಾನ್ಸಿನ ಪ್ರಸಿದ್ಧ ಸರದಾರರಾಗಿದ್ದ ಡಿ ಲ್ಯಾಂಗರೀ ಮತ್ತು ಡೀ ಮಾಂಟ್ರೋಡೆ ಕಮ್ಮ ಕುರೂಪತನಕ್ಕೆ ಹೆಸರಾಗಿದ್ದರು. ಒಮ್ಮೆ ಇವರಿಬ್ಬ ಭಿನ್ನಾಭಿಪ್ರಾಯ ಬಂದು ಕತ್ತಿಯ ದ್ವಂದ್ವಕ್ಕೆನಿಂತರು.

ಊರ ಹೊರಗಿನ ಬಯಲಿನಲ್ಲಿ ಸೇರಿದ ಅವರಿಬ್ಬರೂ ಒಬ್ಬರನ್ನೊಬ್ಬರು ಕ್ಷಣಕಾಲ ದೃಷ್ಟಿಸಿದರು. ಇದ್ದಕ್ಕಿದ್ದಂತೆ ಲ್ಯಾಂಗರೀ ಕತ್ತಿಯನ್ನು ಒರೆಗೆ ಸೇರಿಸುತ್ತಾ

"ನಾನು ಹಿಂತಿರುಗುತ್ತೇನೆ, ನಿನ್ನೊಡನೆ ಯುದ್ಧ ಮಾಡ ಬಯಸುವುದಿಲ್ಲ."

"ಏನು ಹಾಗಂದರೆ" ಎದುರಾಳಿ ಬಿರುಸಿನಿಂದ ಕೇಳಿದ "ನನ್ನನ್ನು ಅಣಕಿಸುತ್ತಿದ್ದೀಯೊ? ನಿನ್ನನ್ನು ಕೊಲ್ಲುವ ಸಂತಸ ಕೊಡಲು ನಿರಾಕರಿಸುವೆಯಾ? ಇದನ್ನು ನಾನು ಒಪ್ಪುವುದಿಲ್ಲ" ಮಾಂಟ್ರೋಡೆ ಹಾರಿ ಹೇಳಿದ.

"ನಾನು ನಿನ್ನನ್ನು ಅಣಕಿಸಿದ್ದರೆ ಸಾವಿರ ಕ್ಷಮೆ ಕೇಳಿಕೊಳ್ಳುತ್ತೇನೆ. ಆದರೆ ಯುದ್ಧ ಮಾಡದಿರಲು ಅತೀ ಮಹತ್ವದ ಕಾರಣವಿದೆ."

"ಅದನ್ನು ನಾನು ತಿಳಿಯ ಬಹುದೇ?" ಆಸಕ್ತಿಯಿಂದ ಮಾಂಟ್ರೋಡೆಕೇಳಿದ.

"ಒಳ್ಳೆಯದು" ಲ್ಯಾಂಗರೀ ಗಂಭೀರವಾಗಿ ಉತ್ತರಿಸಿದ "ಹೊಡೆದಾಡಿದರೆ ನಾನು ನಿನ್ನನ್ನು ಕೊಲ್ಲುವುದು ಖಂಡಿತ, ಆಗ ಈ ಸಾಮ್ರಾಜ್ಯಕ್ಕೇ ನಾನೊಬ್ಬನೇ ಅತೀ ಕುರೂಪಿ ಉಳಿದುಕೊಳ್ಳುವೆನು"

ಎದುರಾಳಿ ನಗುವುದನ್ನು ನಿಲ್ಲಿಸಲಾಗಲಿಲ್ಲ. ಅವರಿಬ್ಬರೂ ಮಿತ್ರರಾಗಿ ಊರಿಗೆ ಹಿಂತಿರುಗಿದ್ದನ್ನು ಕಂಡು ಊರವರು ಆಶ್ಚರ್ಯಪಟ್ಟರು.

ಫ್ರೆಡರಿಕ್ ಮಹಾಶಯನು ತನ್ನ ಸೈನಿಕರಲ್ಲಿ ಬಹು ಆಸ್ಥೆವಹಿಸಿದ್ದ. ಎಲ್ಲ ಸೈನಿಕರೂ ಆತನಿಗೆ ಪರಿಚಯಸ್ಥರಿದ್ದರು. ತನಗೆ ಹೊಸಬರೆಂದು ಕಂಡವರನ್ನು ಕೂಡಲೆ ಆತ ಪರಿಚಯ ಮಾಡಿಕೊಳ್ಳುತ್ತಿದ್ದ,

"ನಿನಗೆಷ್ಟು ವಯಸ್ಸು?

ಎಷ್ಟು ವರ್ಷಗಳಿಂದ ಕೆಲಸದಲ್ಲಿದ್ದೀಯೆ?

ನಿನ್ನ ವೇತನ ಹಾಗೂ ಇಲ್ಲಿನ ಸೌಕರ್ಯಗಳ ಬಗ್ಗೆ ನಿನಗೆ ತೃಪ್ತಿಯಿದೆಯೆ?

ಈ ಮೂರು ಆತ ಪರಿಚಯಕ್ಕಾಗಿ ಬಳಸುತ್ತಿದ್ದ ಪ್ರಶ್ನೆಗಳಾಗಿದ್ದವು.

ಒಮ್ಮೆ ಜರ್ಮನ್ ಭಾಷೆಯರಿಯದ ಫ್ರೆಂಚನೊಬ್ಬ ಸೈನ್ಯಕ್ಕೆ ಸೇರಿದ. ಫ್ರೆಡರಿಕ್‌ನ ವಿಷಯ ತಿಳಿದು ಆ ಸೈನಿಕ ಆತನ ಪ್ರಶ್ನೆಗಳಿಗೆ ಉತ್ತರಗಳನ್ನು ಕ್ರಮವಾಗಿ ಬಾಯಿಪಾಠ ಮಾಡಿಕೊಂಡು. ಒಂದು ದಿನ ಹೊಸಬನಂತೆ ಕಂಡ ಈ ಸೈನಿಕನನ್ನು ಫ್ರೆಡರಿಕ್ ಎಂದಿನಂತೆ ಜರ್ಮನ್ ಭಾಷೆಯಲ್ಲಿ ಪ್ರಶ್ನಿಸಿದ. ಆದರೆ ಪ್ರಶ್ನೆಗಳು ಪ್ರಕ್ರಮಲಬದ್ಧವಾಗಿರದೆ ಸ್ವಲ್ಪ ಅದಲು ಬದಲಾಗಿತ್ತು.

"ನೀನು ಎಷ್ಟು ವರ್ಷಗಳಿಂದ ಕೆಲಸದಲ್ಲಿದ್ದೀಯೇ? ಫ್ರೆಡರಿಕ್ ಕೇಳಿದ.

"೨೧ವರ್ಷಗಳು" ಬಾಯಿಪಾಠ ಮಾಡಿದ್ದ ಸೈನಿಕ ಹೇಳಿದ.

"ಏನು? ಹಾಗಾದರೆ ನಿನಗೆಷ್ಟು ವಯಸ್ಸು" ಫ್ರೆಡರಿಕ್ ಆಶ್ಚರ್ಯದಿಂದ ಕೇಳಿದ

"ಒಂದು ವರುಷ" ಸೈನಿಕ ಉತ್ತರಿಸಿದ

"ಓ!" ಫ್ರೆಡರಿಕ್ ಹೇಳಿದ "ನೀನು ಇಲ್ಲ ನಾನು ಇಬ್ಬರಲೊಬ್ಬರು ಹುಚ್ಚರಿರಬೇಕು.

"ಇಬ್ಬರೂ"(Both)

ಸೈನಿಕ ನಿರ್ವಿಕಾರನಾಗಿ ಹೇಳಿದ.

"ಸರಿ!" ದೊರೆಹೇಳಿದ "ನನ್ನ ಜೀವಮಾನದಲ್ಲಿ ನನ್ನ ಸೈನಿಕನಿಂದ ಇದೇ ಮೊದಲ ಸಲ ಹುಚ್ಚನೆನಿಸಿಕೊಂಡದ್ದು. ಇದರರ್ಥವೇನು?

ದೊರೆ ಕೋಪಗೊಂಡುದನ್ನು ಕಂಡು ಪಾಪ ಆ ಬಡ ಸೈನಿಕ ಫ್ರೆಂಚಿನಲ್ಲಿ ತನಗೆ ಜರ್ಮನ್‌ನ ಒಂದು ಪದವೂ ಅರ್ಥವಾಗುವುದಿಲ್ಲೆಂದ.

"ಓ ಹಾಗೇನು! ಅಂತಿದ್ದರೆ ಬೇಗನೇ ಕಲಿತುಕೋ ನೀನು ಉತ್ತಮ ಸೈನಿಕನಾಗುವೆಯೆಂದು ನಾನು ಬಲ್ಲೆ"

ನಗುತ್ತಾ ಫ್ರೆಡರಿಕ್ ಮುಂದೆ ನಡೆದ.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ

ಪಾಕೆಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಬಹುಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್. ಉಡುಪಿ, ದ. ಕ

ಸುಖೀ ಜೀವನಕ್ಕೆ

ಅಂಗಸಾಧನೆಗೆ ಪ್ರಾಶಸ್ತ್ಯ

'ಅಮೇರಿಕಾದಲ್ಲಿ ಕಛೇರಿಗಳಲ್ಲಿ ಕುಳಿತೇ ಕೆಲಸ ಮಾಡುವ ನೌಕರರಿಗೆ ವ್ಯಾಯಾಮವೆಂಬುದೇ ಇಲ್ಲವಾಗಿ ಹೋಗಿದೆ' ಎಂದು ಅಮೇರಿಕಾದ ಅಧ್ಯಕ್ಷರಾಗಿದ್ದ ಕೆನ್ನೆಡಿಯವರು ನುಡಿದಿದ್ದುಂಟು. ಅವರು ನುಡಿದದ್ದು ಕೇವಲ ಅಮೇರಿಕಾದವರಿಗೆ ಮಾತ್ರ ಸಂಬಂಧಿಸಿದುದಲ್ಲವೆಂದೂ, ಸಾಮೂಹಿಕವಾಗಿ ಎಲ್ಲರಿಗೂ ಅನ್ವಯಿಸುವುದೆಂದೂ ಜಗತ್ತಿನ ಎಲ್ಲಾ ದೇಶಗಳ ಪ್ರಜೆಗಳೂ ಅರ್ಥ ಮಾಡಿಕೊಂಡರು.

ನಡೆಯುವುದೆಂದರೆ ಬೇಜಾರು ಎಂದು ಭಾವಿಸಿ ಅಷ್ಟಿಷ್ಟು ದೂರಗಳಿಗೂ ವಾಹನಗಳನ್ನು ಉಪಯೋಗಿಸುತ್ತಿದ್ದವರು ಈಗ 'ಕೆನ್ನೆಡಿ ಆದೇಶ"ವನ್ನು ಅನುಸರಿಸಿ ನಡೆಯ ತೊಡಗಿರುವುದರಿಂದ, ಅಂತವರ ಆರೋಗ್ಯವು ಯಾವ ಪ್ರಮಾಣದಲ್ಲಿ ಸುಧಾರಿಸಿದೆಯೆಂದು ತಿಳಿಯಬೇಕಾದುದಗತ್ಯ, ಈ ಬಗ್ಗೆ ನೆದರ್‌ಲೇಂಡ್ಸಿನ ಪರಿಣಾತರಾದ ಡಾ| ಜಿ. ಎ. ಹಾರ್ಟೀನ್‌ರವರು ಪರೀಕ್ಷೆಯನ್ನು ನಡೆಸುತ್ತಿದ್ದಾರೆ.

ಜನರಲ್ಲಿ ಕ್ರೀಡೆಗಳಲ್ಲಿ ಅಭಿರುಚಿಯು ಹೆಚ್ಚುತ್ತಿವೆ. ಹಣಕೊಟ್ಟು ಕ್ರೀಡಾಂಗಣಗಳಿಗೂ ವ್ಯಾಯಾಮ ಶಾಲೆಗಳಿಗೂ ಸೇರಲು ಎಷ್ಟೋ ಮಂದಿ ತಯಾರಾಗಿದ್ದಾರೆ. ಅಂತಹ ಕಡೆಗಳಲ್ಲಿ, ತಾವು ಮಾಡುತ್ತಿರುವುದನ್ನು ನೋಡಿ ಯಾರಾದರೂ ನಗುವರೇನೋ ಎಂಬ ಯೋಚನೆಯು ಯಾರಿಗೂ ಇರುವುದಿಲ್ಲ. ಆದರೆ ಕ್ರೀಡೆಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಕೇಳುವವರೇ ಇಲ್ಲದಾಗಿದೆ.

ಮನುಷ್ಯನು ಆಟದಲ್ಲಿ ತೊಡಗಿರುವಾಗ ತನ್ನ ದೇಹಬಲ, ಬುದ್ಧಿಬಲಗಳನ್ನು ತೋರಿಸುವಂತೆ, ಕಛೇರಿಯಲ್ಲಿ ತನ್ನ ನೌಕರಿಯಲ್ಲಿ ತೊಡಗಿರುವಾಗ ತೋರುವುದಿಲ್ಲ ಕ್ರೀಡಾನಿರತ ಮನುಷ್ಯನ ಶರೀರದಲ್ಲಾಗುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದಾರೆ ಡಾ|| ಹಾರ್ಟೀನ್.

ಈಚೆಗೆ ಕೆಲ ಗುಂಪಗರನ್ನು ಕರೆಸಿ, ಪರೀಕ್ಷಿಸಲಾಯಿತು. ದೋಣಿಗೆ ಹುಟ್ಟು ಹಾಕುವುದರಲ್ಲಿ ಅವರಿಗೆ ಒಳ್ಳೆಯ ವ್ಯಾಯಾಮವು ದೊರಕುತ್ತಿದ್ದರೂ, ಅವರು ಕೂತಲ್ಲಿಯೇ ಕೂತಿರುವುದರಿಂದ ಅವರ ದೇಹದ ಎಲ್ಲಾ ಭಾಗಗಳಿಗೂ ಸಾಕಷ್ಟು ವ್ಯಾಯಾಮವು ದೊರಕಿರುವುದಿಲ್ಲ. ಅವರನ್ನು ಕೆಲವು ವಾರಗಳ ವರೆಗೆ ಸೈಕಲ್ ಸವಾರಿ ಮಾಡಲು ಹೇಳಲಾಯಿತು. ಸೈಕಲ್ಲಿನ ಹಿಂದೆ ವಾರವಾರಕ್ಕೂ ಬೇರೆ ಬೇರೆ ತೂಕದ ಭಾರವನ್ನು ಕಟ್ಟಿರಲಾಗುತ್ತಿತ್ತು. ನಿರ್ದಿಷ್ಟ ಕಾಲದ ನಂತರ, ಅವರ ಶರೀರದಲ್ಲಾಗಿದ್ದ ಬದಲಾವಣೆಗಳನ್ನು ಹಾರ್ಟೀನ್ನರು ಸೂಕ್ಷ್ಮವಾಗಿ ಅವಲೋಕಿಸಿದರು. ಅವರ ನಾಡಿಯ ಬಡಿತವು ಮೊದಲಿಗಿಂತ ಎಷ್ಟೋ ಕಡಿಮೆಯಾಗಿತ್ತು. ಈ ಸಂಶೋಧನೆಯು ಹೊಸದೇನೂ ಅಲ್ಲವೆಂದರು. ಒಬ್ಬ ಮನುಷ್ಯನ ದೇಹಸ್ಥಿತಿಯನ್ನು ತೋ

(ಕಡೇ ಪುಟ ನೋಡಿ)

ಗೇಪರಾಜ್ಯದಲ್ಲಿ

ಮೊದ್ಲು ಯಾರ್ಯಾರು ನೋಡ್ಬೇಕು?

"ಇಲ್ಲಿ ಬನ್ರಿ ಸ್ವಲ್ಪ...."

"ಏನೇ ಅಂತಾ ಜೀವ ಹೋಗೋ ಹಂಗ್ರಿ?"

"ಜೀವಗೀವ ಹೋಗೋದೂ ಇಲ್ಲ ಬ ಟೋವೂ ಇಲ್ಲ."

"ಅಂದ್ರೆ ಅದು ಇದ್ದಲ್ಲೇ ಇರುತ್ತೇಂ ತಾಯ್ತು ಸದ್ಯ."

"ಸದ್ಯಾಂತೀಸೂ, ಯೂನಾಗ್ಲೂ ಹಾ ಗೇ ಅಲ್ಲ, ಹೋಗೋ ಜೀವ ಹೇಳಿ ಹೋ ಗುತ್ಯೆ?"

"ಅಯ್ಯೋ, ಏನನ್ಬೇಕೇ ನಿನ್ನ? ಇ ಷ್ಟೋ ತಿಳಿಯೋದಿಲ್ವೆ?"

"ಏನು, ಏನನ್ನೋದು ನೀವು?"

"ನೋಡು, ನಾಟಕ ಸಿನೆಮಾಗಳಲ್ಲಿ ಹೇಳಿಯೇ ಸಾಯ್ತಾರೆ ನೋಡು"

"ಅಲ್ಲಿ, ನಾಟಕ ಸಿನೆಮಾ ಎಲ್ಲಾ ಸತ್ಯ ಅಂತ ನಿಮ್ಮಂತವರೂ ನಂಬೋದ?"

"ಅಂದ್ರೆ, ನಿಮ್ಮಂತವ್ರ ನಂಬಬಹು ದೂಂತ ಅಲ್ವೆ?

"ಸಾಕು ಬಿಡೀಂದ್ರೆ...ಇದ್ದದ್ದನ್ನ ಇ ದ್ದಂತೆ ಹೇಳಿದ್ರೆ ಅದರಲ್ಲಿ ಸ್ವಾರಸ್ಯವಿ ಲ್ಲಾಂತ ನೀವೇ, ಹಿಂದೊಮ್ಮೆ ಅಂದಿ ದ್ರಲ್ಲಾ...."

"ಅದು ಸರೀನ್ನು. ಆದ್ರೆ, ಹಾಗೆ ಉ ಪ್ಪುಕಾರ ಹಚ್ಚಿ ನುಡಿದದ್ದನ್ನೇ ಸತ್ಯಾಂತ ನಂಬದೋರು ಎಷ್ಟು ಜನ?...."

"ತಿಳೀತು ಬಿಡಿ ನೀವು. ಅಲ್ಲಾ, ಯಾ ರ ವಿಷ್ಯ ನೀವು ಮಾತಾಡ್ತಾ ಇ ದ್ದೀರಾ..?"

"ಯಾರ್ಯಾರ ವಿಷ್ಯ ಮತ್ತೆ ನಾನಾದ್ರೂ ಯಾಕೆ ಎತ್ಬೇಕು?"

"ಅಂದ್ರೆ...."

"ಅಂದ್ರೆ ಏನಿಲ್ಲ. ನೋಡು; ಸ್ವಲ್ಪ, ನಿ ನ್ನ ಮುಖಾನ ಸ್ವಲ್ಪ ನೋಡ್ಕೊಂಡು ಬಾ ಕನ್ನಡಿಯಲ್ಲಿ."

"ಅಯ್ಯಯ್ಯ, ಏನಾಗಿದೇರಿ ನನ್ಮುಖ ಕ್ಕೆ...ಸ್ವಲ್ಪ ಹೇಳಬಾರದೆ? ಅದಕ್ಕಾಗಿ ನಾನು ಪುನಃ ಒಳಗೆ ಹೋಗ್ಬೇಕೆ?"

"ಅದ್ಕೆ ಉದಾಸೀನವಾದ್ರೆ ಬಿಟ್ಬಿಡು. ಈಗ, ನನ್ನ ಕರೆದದ್ದು ಯಾಕೇಂತ ತಿಳ್ಸಿದ್ರೆ...."

"ಹೇಳ್ತ್ರಲಾ ಮತ್ತೆ.... ಏನಾಗಿದೇ ಮುಖಕ್ಕೆ?"

"ಹೇಳಿದ್ನಲ್ಲಾ, ನೋಡಿಬಾಂತ...."

"ಶುರುವಾಯ್ತು ಇವ್ರದ್ದೊಂದು. ಅ ಲ್ಲಾ, ನನ್ಮುಖಕ್ಕೆ ಆಗೋದಾದ್ರೂ ಏ ನು? ಎಲ್ಲೋ ಒಲೆ ಊದುವಾಗ ಬೂ ದಿ ಹಾರಿರ್ಬಹುದು."

"ನಿನ್ನ ಬುದ್ಧಿ ಓಡೋದು ಅಲ್ಲಿವರೆಗೆ ಮಾತ್ರ."

"ಅದೆಲ್ಲಾ ಇರ್ಲಿ, ಹೇಳೋದಿದ್ರೆ ಹೇ ಳಿ, ಇಲ್ಲಾದ್ರೆ ನಾನು ಒಳಹೋಗ್ಬಿಡ್ತೇ ನೆ. ಮಾಡೋಕೆ ತುಂಬ ಕೆಲ್ಸ ಇದೆ."

"ಅಲ್ಲ! ಕೆಲ್ಸ ಇರೋದು ನಿನ್ಗೆ ಮಾ ತ್ರ ಅಂತಿಯ? ನನ್ಗೂ ಇದೆ. ಹೇಳೋ ದಾ ದ್ರೆ ಹೇಳು ಯಾಕೆನನ್ನ ಕರೆದದ್ದೂಂತ..."

"ಯಾಕೆ ಅಂದ್ರೆ.... ಯಾಕೇಂದ್ರೆ.... ಹ್ಞಾಂ ತಿಳೀತು ಬಿಡಿ. ನನ್ಮುಖದಲ್ಲಿ ಏನಿದೇಂತ ಹೇಳಿದ್ರಿ?...."

"ಅಬ್ಬಬ್ಬ....ಬಲು ಜಾಣೆಕಣೆ ನೀನು.. ಬುದ್ಧಿವಂತೆ. ರಾಜಕಾರಣಕ್ಕೆ ಇಳೀತಿದ್ರೆ ಇಷ್ಟ್ರಲ್ಲೇ ಏನಾದ್ರೂ ಆಗ್ತಿದ್ದೆ ಕಣೆ; ಖಂಡಿತಕ್ಕೂ ಹೌದು."

"ಹೆಂಗಸ್ರಿಗ್ಯಾಕಪ್ಪ ರಾಜಕಾರಣ?"

"ಅದೇ ನೋಡು ನಿನ್ನ ತಪ್ಪು. ಇದು ಸಮಾನತೆಯ ಯುಗ, ಹೆಚ್ಚು ಕಡಿಮೆ ಮೇಲುಕೀಳು ಎನ್ನೋದ್ರ ಗಂಧಗಾಳಿಯೇ ಬೀಸೋಲ್ಲ."

"ಅಯ್ಯೋ ಪಾಪ, ಗಂಧ ಇದ್ರೆ ತಾನೇ ಗಂಧಗಾಳಿ ಬೀಸೋದು?"

"ಅಂದ್ರೆ....?"

"ಅಂದ್ರೆ ಏನು ಹೇಳಿ ನೋಡೋಣ...' ಏನೇ ಎಂದು ಹೇಳು...."

"ಹೆಂಗಸ್ರ ಬುದ್ಧಿ ಮೊಣಕಾಲಕೆಳ ಗೇಂತ ಹೆಂಗಿಸ್ತಾ ಇದ್ರಲ್ಲಾ ನೀವು? ಈಗ ಹೇಳಿ, ನಿಮ್ಮ ಬುದ್ಧಿ ಎಲ್ಲೀಂತು."

"ನನ್ನ ಬುದ್ಧಿ ಎಲ್ಲೀಂತಂದ್ರೆ...ತಲೆ ಯೊಳಗೆ ಕಣೇ ತಲೆ ಬುರುಡೆಯೊಳಗೆ,"

"ಏನಂತೀರಾ ನೀವು? ಸ್ವಲ್ಪ ಸರಿಯಾ ಗಿ ಯೋಚ್ಸಿ ಹೇಳಿ ನಿಮ್ಮ ಬುದ್ಧಿ ಎಲ್ಲಿ ದೇಂತ?

"ನೀನು ಹೇಳಿದ್ದು ಸರಿಕಣೇ. ನನ್ನ ಬುದ್ಧಿ ನನ್ನ....ಕೈಯೊಳಗಿದೆ..."

"ಅದೂ ಸರಿಯಾಗಿಲ್ಲ..."

"ಸರಿಯಾಗ್ಲಿಲ್ಲಾದ್ರೆ ಹೋಗ್ಲಿ. ಈಗ ನೀನು ಹೇಳೋದಾದ್ರೂ ಏನು? ಅದನ್ನ ತಿಳ್ಸಿಬಿಡು. ಯಾಕೆ ಕುಂಕುಮ್ನ ಹೊತ್ತ ನ್ನ ಕೊಯ್ದು ತಿನ್ನಿಸುತ್ತೀಯ?"

"ಹೊತ್ತನ್ನ ಏನದು ಕೊಯ್ಯೋದು!"

"ಮತ್ತೇನನ್ನ....?"

"ಕಣ್ಣನ್ನ ಕೊಯ್ಯೋದು..."

"ಏ, ಯಾರದ್ದೆ ಕಣ್ಣು ಯಾರು ಕೊ ಯ್ಯೋದು, ಯಾಕೆ ಕೊಯ್ಯೋದು? ಹ್ಞಾಂ ತಿಳೀತು ನಿನ್ನ ಬುದ್ಧಿವಂತಿಕೆ. ನನ್ನ ಕಣ್ಣ ನ್ನು ಒಪರೇಶನ್ ಮಾಡ್ಸಬೇಕೂಂತ ತಾ ನೇ ನಿನ್ನ ಸಲಹೆ...."

"ಸಾಕು ಬಿಡೀಂದ್ರೆ. ಪಾಪ, ನಿಮ್ಮ ಕಣ್ಣನ್ನು ದೇವ್ರು ಹೀಗೆ ಕಡೆಗಾಲ್ದ ತನಕ ಇರಿಸ್ಲಿ..."

"ಅಯ್ಯಬ್ಬ...ಸದ್ಯ ಬದುಕಿದೆ ಬಡಜೀ ವವೇ....ಇಲ್ಲ ಏನೇನನ್ನೋ ಹೇಳ್ತಾ ಇ ಲ್ಲೆಲ್ಲಿಗೋ ಬಂದುಬಿಟ್ಟೆಯಲ್ಲ... ಅಲ್ಲಾ, ಹೇಳೋದಾದ್ರೆ ಹೇಳು, ಯಾರ ಕಣ್ಣು ಕೊಯ್ಯೋದು?...."

"ಅಯ್ಯೋ, ಪಾಪರಿ, ನೀವು ಪಾಪರಿ ಮತ್ತೆಹೇಳ್ತಾ ರೈಬುದ್ಧಿ ಮುಷ್ಟಿಯೊಳಗೇ ಇದೆಂತ,"

"ನಿನ್ನ ರಾಮಾಯಣದೊಳಗಿನ ಪಿಟ ಕಾಯನ ನನಗೆ ಹೇಗೆ ಗೊತ್ತಾಗ್ಬೇಕು? ಸರಿಯಾಗಿ ಬಿಡ್ಸಿ ಹೇಳೋದಾದ್ರೆ...."

ಅಲ್ಲಾ, ಇನ್ನೂ ನಿಂತ್ಕೊಂಡೇ ಇದ್ದೀ ರಲ್ಲಾ...."

"ಅಂದ್ರೆ ಈಗ ಮಹಾಭಾರತ ವಾಚ ನವಿದೇಂತಾಯ್ತು...."

"ಸಾಕು ಬಿಡೀಂದ್ರೆ...ನಿಮ್ಗೆ ಯಾವಾ ಗ್ಲೂ ತಮಾಷೆ . ."

"ಏನೋ ನಿನ್ನ ಮುಖವನ್ನ ಕಂಡು ತಮಾಷೆಯೆನಿಸ್ತಾ ಇದೆ."

"ನನ್ನ ಬೇರ್ಯಾರ ಮುಖ ನೋಡಿ ಅಲ್ಲ ತಾನೆ?"

"ಛಿ. ಛಿ...ಶಾಂತಂ ಪಾಪಂ ಶಾಂತಂ ಪಾಪಂ."

"ಶಾಂತವಾದ್ರೆ ಪಾಪ ತಾನಾಗಿಯೇ ಬರುತ್ತೆಂತ ಎಲ್ಲಿಗೂ ಗೊತ್ತು."

"ಗೊತ್ತಿರ್ಲಿ ಬಿಡು. ಈಗ ನೀನು ಹೇ ಳೋದಾದ್ರೂ ಏನೂಂತ...."

"ಹೇಳೋದೇ ಮತ್ತೇನಿಲ್ಲಾ. ಇಂದು ಇಂದು ನಮ್ಮ ಕಿಟ್ಟಣ್ಣ ಬಂದಿದ್ದ. ಅವ ನೊಂದು ಸುದ್ದಿ ಹೇಳಿದ."

"ಏನಂತೆ, ಪಟಾಕಿ ಸದ್ದು ಜೋರಾ ಗಿತ್ತೊ?"

"ಜೋರೋ ಪೊಳ್ಳೋಂತ ನೀವೇ ತಿ ಳ್ಕೋಬೇಕು. ರಾತ್ರೆ ಹಗಲು ಪೇಪರು ಓದೋ ರು ನೀವಲ್ಲವೆ?"

"ಅಂದ್ರೆ ವಿಷ್ಯ ಬಹಳ ಗಹನವಿದ್ದಿರ ಬೇಕು."

"ಅದನ್ನೂ ತಿಳಿಸಬೇಕು ನೀವೇ."

"ಎಲ್ಲಾ ಜವಾಬ್ದಾರಿಯನ್ನೂ ನನ್ಗೆ ಹೊರಿಸಿ ನೀನು ಕೈತೊಳೆದು ಕೊಳ್ಳೋ ಯೋಚನೆಯಂತ ತೋರುತ್ತೆ. ಇರ್ಲಿ ಬಿಡು ಡು, ಏನಾಯ್ತಂತೆ?"

"ಮತ್ತೇನಿಲ್ಲಾ ನಮ್ಮ ರಾಷ್ಟ್ರಪತಿ ಡಾ| ರಾಧಾಕೃಷ್ಣನ್...."

"ಹೌದು, ಸದ್ಯ ಕಣ್ಣಿನ ಪರೆಯ ಆಪ ರೇಶನ್ ಮಾಡ್ಸಿದ್ದಾರೆ."

"ಹಾಗಾದ್ರೆ ಅದು ನಿಜಾನ್ನಿ. ಅಲ್ಲಅ, ವ್ರ ಪಾರ್ಲಿಮೆಂಟಿನಲ್ಲಿ ಮಾಡುವ ಭಾಷ ಣದ ವಿಚಾರದಲ್ಲಿ ಏನೋ ಗಲಾಟೆಯಿ ತ್ತಂತಲ್ಲಾ...?"

"ಎಂಥಾ ಗಲಾಟೆಯಂತೆ?"

"ಏನೋ ಇಂಗ್ಲಿಷ್-ಹಿಂದಿ..."

"ಅದೆ? ಆಟೇನು ಮಹಾ? ಆ ರಾಮ ಮನೋಹರ ಲೋಹಿಯಾರಿಗೆ ಏನಾದೂ ಬೇಕಲ್ಲ, ನಿನ್ನ ಹಾಗೆ ಮಾತಾಡೋಕೆ!"

"ಎಳ್ಕೊಂಡ್ಬಿಟ್ರೆ ನನ್ನನ್ನ ಅವ್ರ ಸಾಲಿ ಗೆ. ಪಾಪ ನೀವು ಮಾತ್ರ ಸುಭಾಷಿತರು. ಎಷ್ಟಾದ್ರೂ ಟೋಪಿಯವರಲ್ವೆ?"

"ನೋಡು, ನೀನು ಹಾಗೆಲ್ಲಾ ಹೇ ಳ್ಬಾರ್ದು."

"ನೀತಿನಡಾವಳಿಗಳೆಲ್ಲಾ ನನಗೆ. ನೀ

(ಆನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕು

ತನ್ನ **39**ನೇ ವರ್ಷದ ಪ್ರಗತಿಪಥದಲ್ಲಿ:-

ತೆತ್ತ ಬಂಡವಾಳ	ರೂ.	80 ಲಕ್ಷ
ಖಾಯಂ ನಿಧಿ	ರೂ.	75 ಲಕ್ಷ
ಠೇವಣಾತಿ	ರೂ.	45 ಕೋಟಿಗೂ ಮಿಕ್ಕಿ
ಚಲಾವಣಾ ನಿಧಿ	ರೂ.	57 ,, ,,
ಶಾಖೆಗಳು		190

ನಮ್ಮ ಸೇವೆಗಳು—

ಪಿಗ್ಮಿ-ಕ್ಯುಮಲೇಟಿವ್ ಡಿಪಾಸಿಟ್— ಇನ್ವೆಸ್ಟರ್ಸ್ ಏಜನ್ಸಿ— ಎಕ್ಸಿಕ್ಯೂಟರ್ಸ್ ಮತ್ತು ಟ್ರಸ್ಟೀ ಸೇವೆ— ಉದ್ದಿಮೆಗಳಿಗೆ ಹಣ ಸಹಾಯ— ಇಕನಾಮಿಕ್ ಇಂಟೆಲಿಜೆನ್ಸ್ ಮತ್ತು ಕ್ರೆಡಿಟ್ ಇನ್‌ಫಾರ್ಮೇಶನ್— ವಿದೇಶಗಳಲ್ಲಿ ವಿದ್ಯಾಭ್ಯಾಸ— ವೃತ್ತಿಪರ ಶಿಕ್ಷಣ— ಮತ್ತು ಸಣ್ಣ ಉದ್ದಿಮೆದಾರರಿಗೆ ವೈಯಕ್ತಿಕ ಸಾಲಗಳು— ಸೇಫ್ ಡಿಪಾಸಿಟ್ ಲೋಕರ್ಸ್— ವಿದ್ಯಾರ್ಥಿಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ವಿಶೇಷ ಸವಲತ್ತುಗಳು— ಕರೆಸ್ಪೊಂಡೆನ್ಸ್ ಮತ್ತು ಗೈಡೆನ್ಸ್ ಸೇವೆ— ಹೊಸ ಷೇರುಗಳ ಕೊಡುವಿಕೆಯ ಆಡಳಿತೆ.

ಬೇರೆ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು.......

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

.......ಜಗತ್ತಿನ ಎಲ್ಲೆಡೆಯ ಬ್ಯಾಂಕು ವ್ಯವಹಾರ ಗಳಿಗೆ.......

NOTICE

THE VIJAYA BANK. Ltd.

To whomsoever it may concern

Whereas Shares numbered 1945 to 1954, 3276 to 3280 and 9362 standing in the name of Sri Babu Basappa Shetty, Krishna Vijaya Hindu Hotel, Mapila Mahal, Girgaum, Bombay-4, have been sold by the Deputy Commissioner, South Kanara, Mangalore, and whereas the relative Share Certificates have not been produced in-spite of Registered Notice sent to the said Babu Basappa Shetty.

Notice is hereby given that duplicate Share Certificates will be issued in lieu of the original, and the Share will be transferred to the name of the auction purchaser, if no objection is filed within 15 days from this date with the undersigned.

(Sd) P. Jayarama Shetty,
Secretary.

Head Office of the Bank,
Light House Hill Road,
Mangalore-3.
Date, 6-2-1964.

ನವಯುಗ

ವರುಷ	ಉಡುಪಿ	ವಾರ
೪೩	೧೩-೨-೧೯೬೪	೨೪

ಕಟ್ಟಡಗಳ ವೈಶಾಲ್ಯ ತೆರಿಗೆ

ಹತ್ತು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ನಗರ ಇಲ್ಲವೇ ಪಂಚಾಯತಗಳಲ್ಲಿರುವ ಕಟ್ಟಡಗಳಿಗೆ ಅವುಗಳ ವಿಸ್ತಾರವನ್ನು ಹೊಂದಿಕೊಂಡು ತೆರಿಗೆ ವಿಧಿಸುವ ಕಾಯಿದೆಯೊಂದು ಈ ವರ್ಷದಿಂದ ಕರ್ನಾಟಕ ರಾಜ್ಯದಲ್ಲಿ ಜ್ಯಾರಿಗೆ ಬಂದಿದೆ. ೧,೦೦೦ ಚದರ ಅಡಿಗಳಿಗಿಂತ ಕಡಿಮೆ ವಿಸ್ತಾರದ ಕಟ್ಟಡಗಳಿಗೆ ತೆರಿಗೆ ವಿನಾಯತಿಯು ಇದೆ. ಇದಕ್ಕಾಗಿ ಮನೆಗಳ ಮಾಲಿಕರು ಇದೇ ಎಪ್ರಿಲ್ ತಿಂಗಳ ಕೊನೆಯೊಳಗೆ ಸರಕಾರಕ್ಕೆ ತಮ್ಮ ಕಟ್ಟಡಗಳ ವಿಶಾಲತೆಯ ವಿವರಗಳನ್ನು ಕೊಡಬೇಕಾಗಿದೆ. ವೈಶಾಲ್ಯವನ್ನು ಪರಿಗಣಿಸುವಾಗ, ಬಚ್ಚಲು ಮನೆ, ಕೊಟ್ಟಿಗೆಗಳನ್ನೂ ಗಣನೆಗೆ ತೆಗೆದುಗೊಳ್ಳಲಾಗುವುದು ಎಂಬುದೂ ಒಂದು ಪರಿಶೀಲನಾರ್ಹ ಸಂಗತಿ.

ಈ ಸಂಬಂಧದ ವಿಧೇಯಕದ ಕರಡಿನಲ್ಲಿ ತೆರಿಗೆಗಳನ್ನು ತೆರಲು ತಪ್ಪಿಸಿ ಭವನ ನಿರ್ಮಾಣದಲ್ಲಿ ಸಂಪತ್ತನ್ನು ಶೇಖರಿಸುವವರಿಂದ ತೆರಿಗೆ ವಸೂಲು ಮಾಡುವುದು ಮತ್ತು ಯೋಜನಾ ಪೂರ್ತಿಗಾಗಿ ಧನ ಸಂಗ್ರಹಿಸುವುದು ಇದರ ಉದ್ದೇಶವೆಂದು ಹೇಳಲಾಗಿತ್ತು. ಹಾಗೆಯೇ ರಾಜ್ಯ ಪುನರ್ಘಟನಾ ನಂತರ ಕಟ್ಟಲ್ಪಟ್ಟ ಕಟ್ಟಡಗಳಿಗೆ ಮಾತ್ರ ಇದನ್ನು ಅನ್ವಯಿಸಲಾಗುವುದೆಂದು ತಿಳಿಸಲಾಗಿತ್ತು. ದೊಡ್ಡ ದೊಡ್ಡ ನಗರಗಳಲ್ಲಿರುವ ಅಧಿಕ ಬಾಡಿಗೆ ಬರುವಂತಹ ಕಟ್ಟಡಗಳಿಗೆ ಮಾತ್ರ ಈ ಕಾನೂನು ಅನ್ವಯವಾಗುವುದೆಂದು ಜನತೆ ಆಗ ತಿಳಿದಿತ್ತು. ಆದರೆ, ಇಂವನು ತಿರುವು ಮುರುವಾಗಿದೆ. ನಿರ್ದಿಷ್ಟ ಪ್ರದೇಶಕ್ಕೆ ಒಳಪಡುವ ೧,೦೦೦ ಚದರಡಿಗೆ ಮೀರಿ ವೈಶಾಲ್ಯದ ಎಲ್ಲ ಕಟ್ಟಡಗಳಿಗೂ ಈ ಕಾನೂನು ಈಗ ಅನ್ವಯವಾಗುವಂತಾಗಿದೆ. ಇದರಿಂದ ಸಾಮಾನ್ಯ ರೂಪದ ನಗರ ಮತ್ತು ಪಂಚಾಯತು ಪ್ರದೇಶದ ಮಧ್ಯಮ ವರ್ಗದ ಜನರಿಗೆ ಬೇಕೆಂಬಷ್ಟು ಅನನುಕೂಲವಾಗುವುದು ಎಂಬುದು ವಿವೇಚನೆಗೆ ನಿಲುಕದ ಸಂಗತಿಯಲ್ಲ. ಪೂರ್ವಜರು ಹಲವಾರು ಕಾರಣಗಳಿಂದ ಕಟ್ಟಿಸಿದ್ದ ದೊಡ್ಡ ದೊಡ್ಡ ಮನೆಗಳು ಇರುವುದುಂಟು. ಇವೆಲ್ಲವೂ ತೆರಿಗೆ ತಪ್ಪಿಸಿ ಮಾಡಿದ ಹಣವಾಗಿರಲಾರದು. ಅಥವಾ ಇತ್ತೀಚಿಗೆ ಕಟ್ಟಿಸಲಾದ ಮನೆಗಳಾದರೂ ಸರಕಾರಕ್ಕೆ ಎರಡು ಬಗೆದು ಕೂಡಿಸಿದ 'ಅನ್ಯಾಯ'ದ ಹಣದಿಂದಿರಲಾರದು. ಅಷ್ಟುಮಾತ್ರವಲ್ಲ. ತೆರಿಗೆ ತಪ್ಪಿಸಿ ಮನೆಕಟ್ಟುತ್ತಾರೆ ಎಂದು ಸರಕಾರವು ಹೇಳುವುದೆಂದರೆ, ತನ್ನ ತೆರಿಗೆ ವಸೂಲಿಯ ಕ್ರಮವು ದೋಷಯುಕ್ತವಾಗಿದೆಯೆಂದು ಡಣಾಡಂಗುರವಾಗಿ ಸಾರಿದಂತೆ. ಇದಕ್ಕೆ ಅಧಿಕ ಸಂಖ್ಯಾತರಿಗೆ ಅನನುಕೂಲ ಮತ್ತು ಅನ್ಯಾಯ ಮಾಡುವುದಕ್ಕಿಂತ, ತೆರಿಗೆ ವಸೂಲಿಯ ಕಾರ್ಯದತ್ತ ಅಧಿಕ ದೃಷ್ಟಿ ಹರಿಸಿ, ಆ ವಿಭಾಗದಲ್ಲಿ ದಕ್ಷತೆಯನ್ನು ತೋರಿಸುವುದು ಅವಶ್ಯವಲ್ಲವೆ? ಇನ್ನು ಒಂದು ಸಾವಿರ ಚದರ ಅಡಿಯ ವೈಶಾಲ್ಯವಾದರೂ ಹುಟ್ಟಿನದೆಂದು ಹೇಳುವಂತಿಲ್ಲ. ನಮ್ಮೆಲ್ಲ ನೀತಿ-ನಿಯಮಗಳೂ ಗಳಿಕೆಯನ್ನಷ್ಟೇ ಎಣಿಸುತವೆ ಹೊರತು ಅದನ್ನೇ ಆಧರಿಸಿರುವ ಕುಟುಂಬದ ಸದಸ್ಯರ ಸಂಖ್ಯೆಯನ್ನು ಗಮನಿಸುವುದಿಲ್ಲ. ಹಾಗೆಯೇ ಮನೆಯ ಕಟ್ಟಡ ವಿಸ್ತಾರವನ್ನು ಲೆಕ್ಕ ಹಾಕುವಾಗಲಾದರೂ ಆ ಮನೆಯಲ್ಲಿ ನೆಲಸಿರುವವರ ಸಂಖ್ಯೆಯನ್ನು ತೆಗೆದುಕೊಳ್ಳುವುದಿಲ್ಲ ಇದು ನ್ಯಾಯವೆ? ಸರಕಾರವು ಮೊದಲು ತಿಳಿಸಿದಂತೆ ೧-೧೧-೧೯೫೬ರ ನಂತರ ನಿರ್ಮಾಣಗೊಂಡ ಮನೆಗಳಿಗೆ ಮಾತ್ರ ಅನ್ವಯಿಸದೆ ಎಲ್ಲ ಮನೆಗಳ ಈ ಕಾಯಿದೆಯ ವ್ಯಾಪ್ತಿಗೆ ಒಳಪಡುವಂತಾದುದಕ್ಕೆ ಕಾರಣವೂ ಸ್ಪಷ್ಟವಾಗಿ ಗೋಚರವಾಗುವುದಿಲ್ಲ. ಜನತೆಗೆ ಈ ಕಾನೂನಿನ ಪರಿಣಾಮ ಮನವರಿಕೆಯಾಗಲಿಲ್ಲ ನಿಜ; ವಿಧೇಯಕವನ್ನು ಸ್ವೀಕರಿಸಿದ ಶಾಸಕರಾದರೂ ಕೂಲಂಕುಷವಾಗಿ ವಿವೇಚಿಸಿದ್ದರೆ, ಇದರಿಂದ ಆಗುತಿದ್ದ ಲಾಭ-ಹಾನಿಗಳತ್ತ ಗಮನಿಸುತಿದ್ದರೆ, ಇಂತಹ ಅನಾಹುತ ಸಂಭವಿಸುತ್ತಿರಲಿಲ್ಲವೆಂದು ಹೇಳಬಹುದು. ಮನೆಯ ವೈಶಾಲ್ಯದ ವಿವರಣೆ ನೀಡುವುದೆಂದರೆ, ಅದಷ್ಟು ಸರಳವಾದ ಕೆಲಸವೆನಿಸುವುದಿಲ್ಲ. ಇನ್ನು, ಸರಕಾರದ ಕೊರತೆಯನ್ನು ತುಂಬಿಸಿಕೊಳ್ಳಲು ಒಂದಲ್ಲ ಒಂದು ವಿಧದ ತೆರಿಗೆಯನ್ನು ವಿಹೊರಿಸಬೇಕಾದುದು ನ್ಯಾಯ. ತೆರಿಗೆಗಳ ಭಾರದಿಂದ ವಸ್ತುವಸ್ತುವೂ ಇಮ್ಮಡಿ, ಮೂರ್ಮಡಿ ಭಾರವಾಗಿರುವಾಗ ತೆರುವ ತೆರಿಗೆದಾರನಿಗಿಂತ ವಸ್ತುವೇ ಭಾರವಾಗಿ ಪರಿಣಮಿಸಿರುವಾಗ, ಸರಕಾರದ ಗಮನ ಕಟ್ಟಡಗಳತ್ತ ಹರಿದುದು ಸ್ವಾಭಾವಿಕ. ಆದರೆ, ಇವುಗಳ ಮೇಲೆ ತೆರಿಗೆ ವಿಧಿಸುವಾಗ, ಆವಶ್ಯವ ವಿಧಾನಗಳನ್ನು ಅನುಸರಿಸುವ ಆಗತ್ಯವಿಂಲಿಲ್ಲವೆನಿಸುತ್ತದೆ. ಮನೆಯ ಬಾಡಿಗೆಯನ್ನು ಅನುಲಕ್ಷಿಸಿ, ಅದರ ಒಂದಂಶವನ್ನು ಸರಕಾರ ತೆರಿಗೆಯಾಗಿ ವಿಧಿಸಿದ್ದರೆ, ನಾಗರಿಕರಿಗೂ ಕಷ್ಟ ತಪ್ಪುತಿತ್ತು. ಮಾಲಿಕರಿಂದಲೂ ಹಣ ವಸೂಲು ಆಗುತಿತ್ತು. ಆದರೆ, ತೆರಿಗೆಯ ಭಾರವು ಬಾಡಿಗೆದಾರರ ಮೇಲೆ ಬೀಳದಂತೆ ಸ್ಪಷ್ಟ ಎಚ್ಚರಿಕೆ ವಹಿಸುವುದು ಆಗತ್ಯವಿತ್ತು.

ಇಂದು ಕಾನೂನಿನಲ್ಲಿ ತಿದ್ದುಪಡಿ ಮಾಡುವುದು ಅಸಾಧ್ಯವೆಂದು ಹೇಳುವಂತಿಲ್ಲ. ನಮ್ಮ ಕಾನೂನುಗಳು ಆಟದ ಚೆಂಡಿನಂತೆ ನೆಗೆಯುತ್ತಲೇ ಇವೆ. ಆದುದರಿಂದ ಇಡೀ ಪ್ರಸಂಗವನ್ನು ಸಂಪೂರ್ಣವಾಗಿ ಪುನರ್ವಿಮರ್ಶೆಗೊಳಿಸಿ, ಸಾಮಾನ್ಯ ನಾಗರಿಕರಿಗೆ ಪರಿಹಾರ ಸಿಗುವಂತಹ ರೀತಿಯಲ್ಲಿ ಸರಕಾರ ಕಾನೂನನ್ನೇ ತಿದ್ದಬೇಕು. ಅದು ವರೆಗೆ ಸಧ್ಯದ ಕಾನೂನು ತನಗಿತ್ತಿರುವ ಅಧಿಕಾರ ಬಲದಿಂದ ಕೆಲವೊಂದು ವಿನಾಯತಿಯನ್ನು ಸರಕಾರ ಹೆಚ್ಚಿಸಬೇಕು; ಪ್ರತಿ ವ್ಯಕ್ತಿಗೆ ಇಂತಿಷ್ಟು ಅತ್ಯಧಿಕ ಸ್ಥಳಾವಕಾಶವೆಂದು ಗೊತ್ತುಮಾಡಿ, ಮನೆಯಲ್ಲಿರುವ ಸದಸ್ಯರ ಸಂಖ್ಯೆಗನುವಾಗಿ ವಿನಾಯತಿಯನ್ನು ಕೊಡುವುದು. ಒಂದು ಕ್ಷಣ ಕೂತು ಮನೆಗೆ ಮರಳುವ ಪಾಠಶಾಲೆಯ ಹುಡುಗನಿಗೆ ೨೧ ಚದರ ಅಡಿ ನೆಲ ಬೇಕೆಂದು ಮೂಲ ಶಿಕ್ಷಣವು ಸಾರುವಾಗ, ಒಬ್ಬ ಮನುಷ್ಯನಿಗೆ ೫೦೦ ಚದರ ಅಡಿಯಾದರೂ ಬೇಡವೆ ಮನೆಯಲ್ಲಿ? ವಸತಿಯ ಪ್ರಶ್ನೆಯು ಉಲ್ಬಣಿಸುತ್ತ ಬಂದು, ಕೋಳಿ ಮರಿಗಳಂತೆ ಮನೆಯಲ್ಲಿ ಬದುಕುವುದೇ ಪ್ರಜಾಪ್ರಭುತ್ವದ ಉದ್ದೇಶವಾಗಬಾರದು. ಹಾಗೆಯೇ ಕಾಯಿದೆಯ ಮಿತಿಯನ್ನು ಇಡಿಯ ರಾಜ್ಯಕ್ಕೆ ಅನ್ವಯಿಸಬೇಕು, ಇಲ್ಲವಾದರೆ, ವಿನಾಯತಿ ಹೊಂದಿದೆಡೆಗಳಲ್ಲಿ "ತೆರಿಗೆ ತಪ್ಪಿಸಿದ" ಮಹಾನುಭಾವರು ಅರಮನೆಗಳನ್ನೇ ಕಟ್ಟಿಸುವುದಿಲ್ಲವೆ? ಮೂಲ ವಿಧೇಯಕದಲ್ಲಿ ಹೇಳಿದಂತೆ ೧-೧೧-೫೬ರಿಂದ ಕಟ್ಟಲಾದ ಕಟ್ಟಡಗಳನ್ನು ಮಾತ್ರ ಈ ಕಾನೂನಿನ ಕಕ್ಷೆಯೊಳಗೆ ತರುವುದರಿಂದ ತುಂಬ ಉಪಕಾರವಾದೀತು. ಸರಕಾರ ಈಗ ಪ್ರಕಟಿಸಿರುವಂತೆಯೇ ಕಾನೂನನ್ನು ಜ್ಯಾರಿ ಮಾಡ ಹೋದರೆ, ಸದಾಕಾಲ ಕಾನೂನಿನ ಪಂಜಿಯೆದುರು ನಿಲ್ಲಲೇ ಬೇಕಾದ ಮಧ್ಯಮ ವರ್ಗದವರು ಅತಿ ಶೀಘ್ರದಲ್ಲಿಯೇ ನಮ್ಮ ವರ್ಗಕ್ಕೆ ಸೇರುತ್ತಾರೆ ಅದಾಯಿತೆಂದರೆ, ನಮ್ಮ ವಿಶಾಲ ಪ್ರಜಾಪ್ರಭುತ್ವವು ಗೋರಿಯೊಳಗಡೆ ಜಾರಿಬಿದ್ದಂತೆಯೇ ಸರಿ. ಆದುದರಿಂದ ಕೊನೆಯಗಳಿಗೆಯಲ್ಲಾದರೂ ಜನತೆ ಎಚ್ಚರವಾಗಬೇಕು; ಸರಕಾರದ ಗಮನವನ್ನು ಕಾನೂನಿನ ದುಷ್ಪರಿಣಾಮಗಳತ್ತ ಸೆಳೆಯಬೇಕು ಸರಕಾರವಾದರೂ ಜನತೆಯನ್ನು ತುಳಿಯುವ ನೀತಿಯಿಂದ ದೂರವಿರಬೇಕು.

ಹೊಣೆಯ ನಿರ್ವಹಣೆ

ತಾತ್ಕಾಲಿಕವಾಗಿ ಅಧ್ಯಕ್ಷರ ಕಾರ್ಯಭಾರಗಳನ್ನು ನಿರ್ವಹಿಸುತ್ತಿರುವ ಉಪರಾಷ್ಟ್ರಪತಿ ಡಾ| ಝಾಕೀರ ಹುಸೇನರು ಸಂಸತ್ತಿನ ಉಭಯ ಸಭೆಗಳನ್ನು ದ್ದೇಶಿಸಿ ಮಾಡಿದ ಭಾಷಣವು ವಿಶ್ವಪ್ರತಿಕ್ರಿಯೆಗೆ ಗುರಿಯಾಗುವುದು. ಪ್ರಜಾಪ್ರಭುತ್ವದ ತಳಹದಿಯಲ್ಲಿ ಸಮಾಜವಾದವನ್ನು ರೂಢಿಸಿಕೊಳ್ಳುವ ನಿರ್ಧಾರದಿಂದ ಮುಂದಡಿಯಿಡುತ್ತಿರುವ ಭಾರತವು ವಿದೇಶೀಯರೆಲ್ಲರ ಅಭಿಪ್ರಾಯದಂತೆ ಸಾಕಷ್ಟು ಪ್ರಗತಿಕಂಡಿದೆ ನಿಜ. ಆದರೆ, ಇಷ್ಟರಿಂದಲೇ ನಮ್ಮ ಪರಿಸ್ಥಿತಿ ಸುಧಾರಿಸಿಲ್ಲ. ಪ್ರತಿಕುಟುಂಬಕ್ಕೂ ತನ್ನ ಆಯ-ವ್ಯಯಗಳಲ್ಲಿ ಸಮತೂಕವನ್ನುಳಿಸಿಕೊಳ್ಳುವುದು ಸಾಧ್ಯವೆನಿಸಿದಂದೇ ಪ್ರಜಾ ಪ್ರಭುತ್ವವು ಸಫಲವಾಗುವುದು. ಆದರೆ, ನಮ್ಮ ಯೋಜನೆಗಳು ನಿರೀಕ್ಷಿತ ಫಲವನ್ನು ನೀಡಲಿಲ್ಲ. ಒಟ್ಟಿನಲ್ಲಿ ದೇಶವು ಸರ್ವ ರೀತಿಯಲ್ಲೂ ಪ್ರಗತಿಪಥಗಾಮಿಯಾಗುತ್ತಿರುವುದು ನಿಜವಾದರೂ ನಮ್ಮ ಸವಸ್ಯೆಗಳು ಸಮಸ್ಯೆಗಳಾಗಿಯೇ ಉಳಿಯುವಂತಾಗಿವೆ. ಸರಕಾರಗಳು ಮಿತವ್ಯಯದ ಉಪದೇಶವನ್ನು ಸಾರುತ್ತವೆಯೇ ಹೊರತು ತಾವು ಮಿತವ್ಯಯವನ್ನು ಅನುಷ್ಠಾನಕ್ಕೆ ತರುವುದರಲ್ಲಿ ಬಹಳಷ್ಟು ಹಿಂದಿವೆ. ನೆರೆಯ ಚೀನಾದ ಕುತಂತ್ರವನ್ನೂ ನಡೆಯುತ್ತಲೇ ಇದೆ; ಪಾಕಿಸ್ತಾನವು ಜಾತೀಯತೆಯ ಕಾಳಸರ್ಪವನ್ನೇ ಭಾರತದ ಗಡಿಗೀಚೆ ಎಳೆಯಲು ಹವಣಿಸುತ್ತಿದೆ. ಇದಕ್ಕಾಗಿಯೇ ದೇಶರಕ್ಷಣೆಯ, ದೇಶ ಸಂಮೃದ್ಧಿಯ ಕಾರ್ಯಗಳಲ್ಲಿ ಅತೀವವಾಗಿ ಆಸಕ್ತಿ ವಹಿಸುವಲ್ಲಿ ಸರಕಾರ ಮುಂದಾಗಬೇಕು; ನಾಗರೀಕ ಸಹಕಾರ ಅದಕ್ಕೆ ಸದಾ ಸಿದ್ಧವಿರಬೇಕು ಎಂಬ ಅಭಿಪ್ರಾಯವನ್ನು ಹುಸೇನರು ಹೊರಗೆಡಹಿದ್ದಾರೆ; ಇದು ಸ್ವಾಗತಾರ್ಹ. ಸರಕಾರದಂತೆಯೇ ಜನತೆಯು ತನ್ನ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳದೆ ಯಥೋಚಿತವಾಗಿ ನಿರ್ವಹಿಸುತ್ತದೆ ಎಂದು ನಂಬಬಹುದು.

ರಾಜ್ಯ ಸಭಾಸದೆಯಾಗಿದ್ದ ರಾಜಕುಮಾರಿ ಅಮೃತ ಕೌರ್ ಅವರು ತಾ. ೬ ರಂದು ತನ್ನ ೭೪ ವಯಸ್ಸಿನಲ್ಲಿ ದಿವಂಗತೆಯಾದರು. ಮಹಾತ್ಮಾ ಗಾಂಧಿಯವರ ನಿಕಟವರ್ತಿಗಳಾಗಿದ್ದ ಅವರು ಸ್ವತಂತ್ರ ಭಾರತದ ಪ್ರಥಮ ಆರೋಗ್ಯ ಸಚಿವೆಯಾಗಿದ್ದರು; ಹಲವಾರು ಆರೋಗ್ಯ ಮತ್ತು ಸೇವಾ ಸಂಘಗಳಲ್ಲಿ ಇವರು ಕೊನೆಯತನಕವೂ ದುಡಿದಿದ್ದರು. ಮೃತೆಯರ ಆತ್ಮಕ್ಕೆ ಚಿರಶಾಂತಿಯಿರಲಿ.

ಜನನ ೨-೨-೧೮೮೯ ಮರಣ ೬-೨-೧೯೬೪

ವಾರ್ತೆ—ಪ್ರತಿವಾರ್ತೆ

ತಾನಿನ್ನು ಮುಂದೆ ತಂಟೆ ಮಾಡುವದಿಲ್ಲವೆಂದು ಸಂಸತ್ ಸದಸ್ಯ ಮಹಾವೀರ ತ್ಯಾಗಿಯವರು ನೆಹರೂರ ಮುಂದೆ ಪ್ರತಿಜ್ಞೆ ಮಾಡಿದ್ದಾರೆ.

—ಪ್ರತಿಜ್ಞಾ ವಿಧಿಯೇನೋ ನಡೆಯಿತು. ಮುಂದೆ ತ್ಯಾಗಿಯವರೂ ಮಂತ್ರಿಗಳನ್ನೇ ಹಿಂಬಾಲಿಸಿದರೆ?

o o o o

ಕೇಂದ್ರ ನೌಕರರ ತುಟ್ಟಿಭತ್ತೆಯಲ್ಲಿ ಮಾಡಿದ ಹೆಚ್ಚಳದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಲಾಗುತ್ತಿದೆ.

—ಅಪಸ್ವರದಲ್ಲಿಯೇ ಆತ್ಯಾಶೆ ಎಂಬುದನ್ನು ನೌಕರರು ಮರಳಿ ಸಮರ್ಥಿಸಿದುದು ಅನ್ಯಾಯವೆ?

o o o o

ಭಾರತದ ಕಾಶ್ಮೀರ ನೀತಿಯನ್ನು ಪಾಕಿಸ್ತಾನದ ದುರುದ್ದೇಶವನ್ನು ಶಿಕ್ಷಣ ಮಂತ್ರಿ ಛಾಗ್ಲಾ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಬಲವಾಗಿ ಪ್ರತಿಪಾದಿಸಿದ್ದಾರೆ

—ಕೃಷ್ಣಮೆನನ್ನರಿಗೂ ಮೀರಿದವರೊಬ್ಬರು ಇದ್ದಾರೆ ಎಂಬುದಕ್ಕೆ ಮತ್ತೊಂದು ನಿದರ್ಶನ ದೊರೆತಂತಾಯ್ತು.

o o o o

ಆಸ್ತಿಯ ಬಗ್ಗೆ ಇದ್ದ ವಿವಾದದ ಪರಿಣಾಮವಾಗಿ ತನ್ನ ಕುಟುಂಬದ ಜನರಿಂದಲೇ ಒಬ್ಬ ನೇಕಾರನು ಕೊಲೆಗಿಡಾದನಂತೆ.

—ಭೂ ಸುಧಾರಣೆ ಬರುವುದಿಲ್ಲವೆಂದು ಈ ಕುಟುಂಬದ ಜನರಿಗೆ ಭಾರಿ

ವಿಶ್ವಾಸವಿರಬೇಕು.

೦ ೦ ೦ ೦

ಗೋವೆಯ ಇತಿಹಾಸವು ಕ್ರಾಂತಿಕಾರಿಯೂ ಭವ್ಯವೂ ಆಗಿದೆ.-(ಭಾಷಣ)

—ಗೋವೆ ಹಣ್ಣಿನ ಇತಿಹಾಸ ಕ್ರಾಂತಿಕಾರಿ ಮಾತ್ರವಲ್ಲ ರೋಮಾಂಚಕಾರಿಯೂ ಇಲ್ಲವೆ?

೦ ೦ ೦ ೦

ಮುಜಾಹಿದ್ ಎಂಬ ಗೆರಿಲ್ಲಾ ಪಡೆಯವರು ಭಾರತೀಯರನ್ನು ಬಯ್ಯುವುದರಲ್ಲಿ, ಬೆದರಿಸುವಲ್ಲಿ ವಿದೇಶ ಮಂತ್ರಿ ಭುಟ್ಟೋರವರಿಗೆ ನೆರವಾಗುವರು ಮಾತ್ರವಲ್ಲ, ಸಮಯಬಂದರೆ, ಯುದ್ಧವನ್ನೂ ಮಾಡುವರು.

— ಪಾಕ್ ಅಧ್ಯಕ್ಷ ಆಯೂಬಖಾನರ ಅತಿ ವಿಶ್ವಾಸ ವಿಶ್ವಾಸಘೂತಕವಾಗಿ ಪರಿಣಮಿಸುವುದಿಲ್ಲವೆಂದು ಅವರಿಗೆ ನಂಬುಗೆಯಿದೆಯೆಂದಾಯಿತು.

೦ ೦ ೦ ೦

ಕನ್ನಡದಲ್ಲಿ ಮಹಾಕವಿಗಳ ಮಹಾಕಾವ್ಯಗಳು ಹೇರಳವಾಗಿವೆ. ಅವು ಬೆಳಕಿಗೆ ಬರಬೇಕು —(ಆಶಯ)

—ಬೆಳಕೆಂದರಾಗದ ಗೂಗೆಗಳಿಗೆ ಅದರಿಂದ ಯಾವ ಲಾಭವಾದೀತು?

೦ ೦ ೦ ೦

ಪಾನಪ್ರತಿಬಂಧವನ್ನು ಹಗುರವೆಂದು ಭಾವಿಸಿದರೆ ಕಾಂಗ್ರೆಸ್ಸಿನ ಅಸ್ತಿತ್ವಕ್ಕೇನೆ ಕೊಡಲಿ ಬೀಳುವುದು. (ಅಭಿಪ್ರಾಯ.)

—ಪ್ರತಿಬಂಧವನ್ನು ಇನ್ನೂ ಹಗುರಗೊಳಿಸದೆ ಹೋದರೆ ಕಾಂಗ್ರೆಸ್ಸಿನ ಅಧಿಕಾರಕ್ಕೆ ಕೊಡಲಿ ಬೀಳುದಿಲ್ಲವೆ? ಎಂದು ಚಿಂತೆ.

ಜಗತ್ಪರ್ಯಟನ

ಚೌ ಎನ್ ಲಾಯ್

ಆಫ್ರಿಕೆ ಮತ್ತು ಯುರೋಪಿನ ಕೆಲವಾರು ದೇಶಗಳನ್ನು ಸಂದರ್ಶಿಸಿದ ಕೆಂಪು ಚೀನಾದ ಪ್ರಧಾನಿ ಚೌ ಎನ್ ಲಾಯರು ಸರ್ವ ಸಾಮಾನ್ಯವಾಗಿ ಎಲ್ಲೆಲ್ಲಿಯೂ ಭಂಗಮುಖರಾಗಿಯೇ ಮರಳಿದ್ದಾರೆ. ಇದರಿಂದ ತನ್ನ ಇಂದಿನ ಸ್ಥಾನಮಾನಗಳಿಗೆ ಚ್ಯುತಿಯೊದಗದಂತೆ ಭಾರತದೊಡನೆ ಗಡಿ ಒಪ್ಪಂದದನ್ನು ಮಾಡಿಕೊಳ್ಳುವುದು ಅವರಿಗೆ ಪಥ್ಯವಾಗ ತೊಡಗಿರಬೇಕು. ಬ್ರಹ್ಮದೇಶದೊಡನೆ ಸೀಮಾಸಂಧಿಯನ್ನು ಸಾಧಿಸಬಯಸುವಲಾಯ್‌ಗೆ ಚೀನಾ-ಭಾರತ—ಬ್ರಹ್ಮಗಳ ತ್ರಿವೇಣಿಯಲ್ಲಿ ನೆಗೆಯುವುದು ಅಷ್ಟು ಸುಲಭವಲ್ಲ. ಆದಕ್ಕೆಂದೇ ಅವರು ಬ್ರಹ್ಮದ ನೇವಿನ್ನರ ಮರೆ ಹೊಕ್ಕರೆ. ಅದರಲ್ಲಿ ಆಶ್ಚರ್ಯವಿಲ್ಲ.

ಜನರಲ್ ನೇವಿನ್

ಬ್ರಹ್ಮದೇಶದ ವಿ.ಲಿಟರಿ ಅಧ್ಯಕ್ಷ ಜನರಲ್ ನೇವಿನ್ನರು ಭಾರತೀಯ ಪ್ರಧಾನಿ ನೆಹರೂರವರ ಆರೋಗ್ಯ ವಿಚಾರಿಸುವ ನೆವನದಿಂದ ಡಿಲ್ಲಿಗೆ ಹಾರಿ ಬಂದು ಹೋದರು. ಇವರ ಆಗಮನಕ್ಕೂ ಮುಂದಿನವಾರ ನಡೆಯಲಿರುವ ಲಾಯರ ಬ್ರಹ್ಮದರ್ಶನಕ್ಕೂ ಪರಸ್ಪರ ಸಂಬಂಧ ಕಲ್ಪಿಸಿದರೆ ಅತ್ಯುಕ್ತಿಯಾಗದು. ಭಾರತವು ಚೀನವನ್ನ ಚೀನೀಯರನ್ನು ದ್ವೇಷಿಸುವುದಿಲ್ಲ. ಅದು ನ್ಯಾಯೋಚಿತ ಸೀಮಾ ಒಡಂಬಡಿಕೆಗೆ ಸಿದ್ಧವಿದೆ. ಆದಕ್ಕೆಂದೇ ಕೊಲಂಬೋ ಸಲಹೆಯನ್ನದು ಒಪ್ಪಿತು. ಲಾಯರೂ ಅವನ್ನು ಒಪ್ಪುವಂತೆ ನೇವಿನ್ನರು ಮಾಡಿದರೆಂದರೆ, ಮುಂದೆ ಯಾರ ಗೌರವ ಪ್ರತಿಷ್ಠೆಗಳಿಗೂ ಹಾನಿಯೊದಗದಂತೆ ಸಂಧಿ ಸಾಧಿಸಬಹುದು. ನೇವಿನ್ನರ ದಿಲ್ಲಿ ದರ್ಶನ ಇದನ್ನು ಸಾಧಿಸೀತೆ?

ಜಯಪ್ರಕಾಶ

ಜಯಪ್ರಕಾಶ ನಾರಾಯಣರು ರಾಜಕೀಯವನ್ನು ಬಿಟ್ಟರೂ ರಾಜಕೀಯವು ಅವರನ್ನು ಬಿಡುವುದಿಲ್ಲ. ಸರ್ವಸಂಘ ಪರಿತ್ಯಾಗಮಾಡಿ ಸರ್ವೋದಯ ಕಾರ್ಯಕರ್ತರಾದರೂ ಆಗೊಮ್ಮೆ ಈಗೊಮ್ಮೆ ಅವರು ರಾಜಕೀಯಕ್ಕೆ ಒಗ್ಗರಣೆ ಹಾಕುವರು. ಪ್ರಧಾನಿ ನೆಹರೂರವರ ಅನಾರೋಗ್ಯ ಮತ್ತು ಕಾಂಗ್ರೆಸಿನ ಪ್ರಜಾತಂತ್ರಾತ್ಮಕ ಸಮಾಜವಾದದ ನೀತಿಯ ಪ್ರಭಾವ ಇವರ ಮೇಲೆಯೂ ಸಾಕಷ್ಟು ಬಿದ್ದಿದೆ. ಪ್ರಸವಾವ ಅರ್ಯೋಕ ಮೆಹತರನ್ನು ಯೋಜನಾ ಆಯೋಗದಲ್ಲಿ ಕಟ್ಟಿ ಹಾಕಿದಂತೆಯೇ ಜಯಪ್ರಕಾಶರ ಮೇಲೂ ಜಾಲಬೀಸತೊಡಗಿದೆ; ಅವರು ಸದ್ಯದಲ್ಲೇ ಕಾಂಗ್ರೆಸ್ ಸೇರುವ ಸಂದರ್ಭವಿದೆಯೆನ್ನುವುದನ್ನು ಸಂಪೂರ್ಣ ಅಲ್ಲಗಳೆಯಲಾಗುವುದಿಲ್ಲ.

ಅಲ್ಲಲ್ಲಿಯ ಸುದ್ದಿಸಾರ

ಜನ್ಮದಿನದಂದು ಅನ್ನದಾನ— ಉಡುಪಿಯ ಜನಪ್ರಿಯ ಎಂ. ಎಲ್. ಎ. ಗಳಾದ ಶ್ರೀ ಮಧ್ವರಾಜ್ ಇವರು ತಾ. 28-1-64 ತಮ್ಮ ಹುಟ್ಟುಹಬ್ಬದಂದು ಸುಮಾರು 4,600 ಮಂದಿಗೆ ಅನ್ನದಾನ ಮಾಡಿದ್ದಾರೆ 1600 ಮಂದಿಗೆ ತಲಾ ಎರಡು ಪಾವು ಅಕ್ಕಿ ಮತ್ತು ನಾಲ್ಕಾಣೆಯಂತೆಯೂ, 2,400 ಮಂದಿ ಮಕ್ಕಳಿಗೆ ತಲಾ ಒಂದು ಪಾವು ಅಕ್ಕಿ ಮತ್ತು ಎರಡಾಣೆಯಂತೆಯೂ, ಒಟ್ಟಿಗೆ 50 ಮುಡಿ ಅಕ್ಕಿ ಮತ್ತು ಸುಮಾರು 2,000 ರೂಪಾಯಿ ವಿತರಣೆ ಮಾಡಿದ್ದಾರೆ. ಕೋರೋನೆಟ್ ಕಂಪೆನಿಯ ಸುಮಾರು 200 ಮಂದಿ ಕೆಲಸಗಾರರಿಗೂ ಉಡುಗೆ ತೊಡಿಗೆಗಳನ್ನು ಉಚಿತವಾಗಿ ಕೊಟ್ಟಿರುವುದು ಶ್ಲಾಘನೀಯವಾಗಿದೆ.

ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದ ದಿನಾಚರಣೆಯು. ತಾ. 2-2-64ರಂದು ಡಾ| ಪಿ. ಡಿ. ಪೇಲಿಯತ್‌ರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಸುಪರಿಂಡೆಂಟ್ ಶ್ರೀ ಪಿ.ಎಸ್. ತಿಮ್ಮಪ್ಪ ಶೆಟ್ಟರು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಶ್ರೀ ಕೆ. ಕೆ. ರೈಗಳು ವರದಿಯನ್ನೋದಿದರು. ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಎಜುಕೇಶನಲ್ ಆಫೀಸರ್ ಶ್ರೀ ಕೆ. ಎಸ್. ಶೆಟ್ಟರು ನೀಡಿದ ಸ್ವಸ್ತಿವಾಚನಕ್ಕೆ ಜತೆಕಾರ್ಯದರ್ಶಿ ಶ್ರೀ ಎಚ್ ಸುಧಾಕರ ಇವರು ಉತ್ತರವಿತ್ತರು. ಅಧ್ಯಕ್ಷರು ಬಹುಮಾನ ಹಂಚಿ ಭಾಷಣ ಮಾಡಿದ ಬಳಿಕ ಧನ್ಯವಾದ ಸಮರ್ಪಣೆಯಾಯಿತು. ಬಳಿಕ ವಿವಿಧವಿನೋದಾವಳಿ ಕಾರ್ಯಕ್ರಮಗಳಾದವು. ಶ್ರೀ ಕೆ. ಎನ್ ಮಹಾಬಲ ಶೆಟ್ಟರು ರಚಿಸಿದ 'ಪೂತೆ ಲಾಸ್ ಒಂಜೇ' ಎಂಬ ತುಳುನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು

ಪುತ್ತೂರು— ಎಸ್. ಆರ್. ಎಸ್. ಹೋಮಿನ ವಾರ್ಷಿಕೋತ್ಸವವು ತಾರೀಕು 1-2-64ರಂದು ಡಾ| ಕೋಟಿಶಿವರಾಮಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಎಡ್ವಕೇಟ್ ಶ್ರೀ ಎ. ಅಮ್ಮು ಶೆಟ್ಟರಿಂದ ಸ್ವಾಗತ ಭಾಷಣ, ಡಾ. ಎಸ್. ಎನ್. ರೈಯವರಿಂದ ವರದಿ ವಾಚನ, ಶ್ರೀ ಎಂ. ಮಹಾಬಲ ಶೆಟ್ಟರಿಂದ ಸ್ವಸ್ತಿವಾಚನಗಳಾದವು ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಭಾಷಣ ಮಾಡಿದ ಬಳಿಕ ವಿವಿಧ ವಿನೋದಾವಳಿಗಳಾದವು.

ಲೋಕಸೇವಾ ವಿದ್ಯಾಸಂಸ್ಥೆಗಳ ವರ್ಧಂತ್ಯುತ್ಸವ — ತಾ 2-2-64ರಂದು, ಅಳಿಕೆ ಲೋಕಸೇವಾ ವಿದ್ಯಾಸಂಸ್ಥೆಗಳ ವರ್ಧಂತ್ಯುತ್ಸವವು, ಜಿಲ್ಲಾಧಿಕಾರಿ ಶ್ರೀ. ಕೆ. ಆರ್ ರಾಮಚಂದ್ರನ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಮುಖ್ಯೋಪಾಧ್ಯಾಯ ಶ್ರೀ ಎ. ನಾರಾಯಣ ಭಟ್ಟರು ಸ್ವಾಗತಿಸಿ ಅಧ್ಯಕ್ಷರ ಪರಿಚಯ ಮಾಡಿತ್ತರು. ಶ್ರೀ. ಕೆ. ಎಸ್ ಕೃಷ್ಣ ಭಟ್ಟರು ಸಂದೇಶಗಳನ್ನೋದಿ ವರದಿವಾಚನ ಗೈದರು. ಹಾ ಎ. ಶಾಲೆಯ ವರದಿಯನ್ನು ಮುಖ್ಯೋಪಾಧ್ಯಾಯಶ್ರೀ ಜಿ.ನಾರಾಯಣರಾಯರು ಓದಿದರು. ಅತಿಥಿಗಳಾಗಿದ್ದ ಶ್ರೀ ಎಲ್. ಸುಬ್ರಹ್ಮಣ್ಯ ಐಯರ್ ಮತ್ತು ಡಾ| ಜಿ. ಜಯರಾಮ ಶಾಸ್ತ್ರಿಯವರು ವಿದ್ಯಾಸಂಸ್ಥೆಯ ಕಾರ್ಯಗಳನ್ನು ಶ್ಲಾಘಿಸಿ, ಜನತೆಯ ಬೆಂಬಲ ಕೋರಿದರು. ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರು ಮಾತಾಡುತ್ತಾ, ವಿದ್ಯಾರ್ಥಿಗಳು ತಮ್ಮಲ್ಲಿ ಬೆಳೆಸಿಕೊಳ್ಳಬೇಕಾದ ಉತ್ತಮ ಗುಣಗಳನ್ನು ತಿಳಿಸಿ, ಈ ವಿದ್ಯಾ ಸಂಸ್ಥೆಗೆ ಉನ್ನತಿಕೋರಿದರು. ವಂದನಾರ್ಪಣೆಯಾದ ಬಳಿಕ ವಿವಿಧ ವಿನೋದಾವಳಿಗಳು ಜರಗಿದವು.

ಮಣಿಪಾಲ— ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರರೂ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರೂ ಆಗಿರುವ ಶ್ರೀ ಟಿ ಎ.ಪೈಯವರು ಈಚೆಗೆ ಭುವನೇಶ್ವರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಬಗ್ಗೆ ರೋಟರಿ ಕ್ಲಬ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಜಪಾನಿನಲ್ಲಿ ನಮ್ಮ ದೇಶದಲ್ಲಿರುವ ಹಾಗೆಯೇ ಸಣ್ಣ ಹಿಡುವಳಿದಾರರಿದ್ದಾರೆಂದೂ, ಆದರೆ ಅಲ್ಲಿ ನಮ್ಮ ದೇಶದಲ್ಲಿ ಆಗುವುದಕ್ಕಿಂತ ಹೆಚ್ಚು ಉತ್ಪಾದನೆ ಆಗುತ್ತಿದೆ ಎಂದೂ ಹೇಳಿದರು. ಜನರು ಶ್ರಮಪಡದಿದ್ದರೆ ದೇಶದ ಪ್ರಗತಿ ಕುಂಠಿತವಾಗುತ್ತದೆಂದರು.

ಇದೇ ಸಂದರ್ಭದಲ್ಲಿ ಕಸ್ತೂರ್ಬಾ ಹೆರಿಗೆ ಆಸ್ಪತ್ರೆಯ ನರ್ಸಿಂಗ್ ಸೂಪರಿಂಟೆಂಡೆಂಟರಾಗಿದ್ದು ನಿವೃತ್ತರಾದ ಶ್ರೀಮತಿ ಗಟ್ರೂಡ್ ಕರ್ಣಡಾರವರನ್ನು ಗೌರವಿಸಲಾಯಿತು. ಅವರು ಸಮಾಜಕ್ಕೆ ಸೇವೆ ಸಲ್ಲಿಸಿರುವುದನ್ನು ಕ್ಲಬ್ಬಿನ ಮಾಜಿ ಅಧ್ಯಕ್ಷ ಡಾ|| ಟಿ. ಎಂ. ಎ. ಪೈಯವರು ಪ್ರಸಂಶಿಸಿ, ಗಂಧದ ಕರಂಡವನ್ನು ಅರ್ಪಿಸಿದರು. ಅಮೇರಿಕದ ದಾನಿಯೊಬ್ಬರು ರೋಟರಿ ಸಂಸ್ಥೆಯ ಮೂಲಕ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ಒಂದು ಕ್ಷ-ಕಿರಣಯಂತ್ರವನ್ನು ಒದಗಿಸಲು ಒಪ್ಪಿದ್ದಾರೆಂದು ಕ್ಲಬ್ಬಿನ ಅಧ್ಯಕ್ಷ ರಮೇಶ ಪೈ ತಿಳಿಸಿದರು. ಕಾರ್ಯದರ್ಶಿ ಶ್ರೀ ಎ ಜೆ. ಆಲ್ವೆಯವರು ವಂದನೆಗಳನ್ನು ಅರ್ಪಿಸಿದರು.

ಕುಂಬಳೆ— ಇಚ್ಲಂಪಾಡಿ ಹಿರಿಯ ಬುನಾದಿ ಶಾಲಾ ಹಳೆ ಕಟ್ಟಡವು ಕಳೆದ ವರ್ಷ ಅಗ್ನಿಗಾಹುತಿಯಾಗಿ, ಅಲ್ಲೇ ಹೊಸತಾಗಿ ನಿರ್ಮಿಸಿದ ಕಟ್ಟಡದ ಉದ್ಘಾಟನೆಯು ಶ್ರೀ ಇಚ್ಲಂಪಾಡಿ ರಾಮಯ್ಯ ರೈಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಡಾ| ಎಂ. ಶಂಭಟ್ಟರು ತಾ. 1ರಂದು ನೆರವೇರಿಸಿದರು.

ಕಾಸರಗೋಡು ತಾಲೂಕು ಆಲಂಬಾಡಿಯಲ್ಲಿ ತಾ. 1ರಂದು ಶಾಖಾ ಅಂಚೆಕಟ್ಟೆಯನ್ನೂ, ಮುಳಿಯೂರು ಸಬ್ ಪೋಸ್ಟಾಫೀಸನ್ನು ತಾ. 6ರಂದೂ ಅಂಚೆಕಚೇರಿಗಳ ಇನ್‌ಸ್ಪೆಕ್ಟರ್ ಶ್ರೀ ಎನ್.ಡಿ. ಭಕ್ತರು ಉದ್ಘಾಟಿಸಿದರು

ಅಂತರ್ ಶಾಲಾ ಕಬಡಿ ಪಂದ್ಯದಲ್ಲಿ ಕುಂಬಳೆ ಜೆ ಯು ಬಿ. ಶಾಲೆಯವರು ಎಡನೀರು ಶಾಲೆಯವರನ್ನು ಸೋಲಿಸಿ ಕಪೇಟಿನಲ್ಲಿ ಭಾಗವಹಿಸುವ ಯೋಗ್ಯತೆಪಡೆದರು

ಪೆರ್ಲದಿಂದ ಕಾಟುಕುಕ್ಕೆಯತನಕ 3 ಮೈಲು ರಸ್ತೆಯನ್ನು 5 ದಿನಗಳ ಶ್ರಮದಾನದಿಂದ ನಿರ್ಮಿಸಲಾಗಿದೆಯೆಂದು ತಿಳಿದಿದೆ. ಶ್ರೀ ಬಿ. ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಮತದಾನದ ಮಹತ್ವವನ್ನು ಗ್ರಾಮ ಸೇವಕ ಬಾಸ್ಕರನ್ ಮುಂತಾದವರು ವಿವರಿಸಿದರು.

ಎಡನೀರು— ಶ್ರೀ ವಿಷ್ಣುಮಂಗಲ ದೇವಸ್ಥಾನ ಮತ್ತು ಎಡನೀರು ಮಠದಲ್ಲಿ ವಾರ್ಷಿಕ ಉತ್ಸವಗಳು ಊರಿನಿಯ ಶೀರೂರು ಮಠದ ಶ್ರೀ ಲಕ್ಷ್ಮೀ ಮನೋಜ್ಞ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ತಾರೀಕು 12-2-64ರಿಂದ 16-2-64ರ ತನಕ ಜರಗಲಿರುವುದು, ಬೇರೆ ಬೇರೆ ದಿನಗಳಲ್ಲಿ ಸಂಗೀತ ಕಚೇರಿ, ನಾಟಕ, ಯಕ್ಷಗಾನ, ನಾಗಸ್ವರ ವಾದನ ಮೊದಲಾದ ಕಾರ್ಯಕ್ರಮಗಳೂ ನೆರವೇರಲಿರುವವು ಪುಷ್ಪ ರಥೋತ್ಸವ, ಮತ್ತು ನೀಲೇಶ್ವರ ಜ್ಯಾತಿಯ ಬೆಡಿ ಉತ್ಸವ ನೂತನ ಆಕರ್ಷಣೆಗಳಾಗಿವೆ.

ಉಚ್ಚಿಲ— ಯು. ಬಿ. ಯಂ. ಸಿ. ಜ್ಯೂನಿಯರ್ ಎಲಿಮೆಂಟರಿ ಶಾಲಾ ಪಠಾರದಲ್ಲಿ ಶ್ರೀ ಟಿ ಯಂ. ಸೋನ್ಸರ ತೀರ್ಥರೂಪರ ಸ್ಮಾರಕಾರ್ಥವಾಗಿ ರಚಿಸಲ್ಪಟ್ಟ ನೂತನ ಧ್ವಜಸ್ತಂಭದ ಉದ್ಘಾಟನಾ ಸಮಾರಂಭವು ಪ್ರಜಾಪ್ರಭುತ್ವದಿನದಂದು ವಿಜೃಂಭಣೆಯಿಂದ ನೆರವೇರಿತು.

ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಸ್ಥಳೀಯ ಕ್ರೈಸ್ತ ಸಭಾ ಪಾಲಕರಾದ ಶ್ರೀ ಯಂ. ಆರ್. ಟಿ. ಪಾಲರು ವಹಿಸಿದ್ದರು. ಉದ್ಘಾಟನಾ ಕಾರ್ಯವು ಶ್ರೀ ಬೆರ್ಮಯ್ಯ ಶೆಟ್ಟರವರ ದಿವ್ಯ ಹಸ್ತದಿಂದ ಉದ್ಘಾಟಿಸಲ್ಪಟ್ಟಿತು. ಸದ್ರಿ ಶಾಲಾ ಮುಖ್ಯೋಪಾಧ್ಯಾಯಿನಿಯವರಾದ ಶ್ರೀಮತಿ ಡಿ ಆರ್. ಸಾಲಿನ್ಸರವರು ಸ್ವಾಗತ ಭಾಷಣ ಮಾಡಿದರು.

ಸಭಾಧ್ಯಕ್ಷರು ಮತ್ತು ಶ್ರೀ ಸೀತಾರಾಮ್ ಬಿ. ಎ. ಬಿ. ಎಲ್. ಇವರೂ ಮತ್ತು ಬಿ. ಕರುಣಾಕರ ಶೆಟ್ಟರವರೂ ಸಭೆಗೆ ಭಾಷಣದಲ್ಲಿ ಪ್ರಜಾಪ್ರಭುತ್ವದ ದಿನದಮಹತ್ವವನ್ನೂ ಶ್ರೀ ಟಿ. ಯಂ ಸೋನ್ಸರ ತೀರ್ಥರೂಪರಾದ ದಿವಂಗತ ಜೆ. ಜಿ ಸೋನ್ಸರ ಜೀವನ ಮತ್ತು ಅವರು ಗೈದ ಸಮಾಜ ಸೇವೆಯ ಕುರಿತು ಭಾಷಣವಿತ್ತರು.

ಶಾಲಾ ಮುಖ್ಯೋಪಾಧ್ಯಾಯರಿಂದ ಧನ್ಯವಾದ ಸಮರ್ಪಣೆಯಾದ ಬಳಿಕ 'ಜನ ಗಣ ಮನ' ದೊಂದಿಗೆ ಸಭೆ ಮುಕ್ತಾಯಗೊಂಡಿತು.

ಅಚ್ಲಾಡಿ — ಅಚ್ಲಾಡಿ ಮಧುವನ ಸರಕಾರಿ ಪಾಠಶಾಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಶ್ರೀ ಎ. ತೇಜಪ್ಪ ಶೆಟ್ಟಿ ಪಟೇಲ್, ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಎ. ಮಹಾಬಲ ಶೆಟ್ಟಿ ಇವರ ಧ್ವಜಾರೋಹಣ ಗೈದರು.

ನಂತರ ಶಾಲೆಗೆ ಹೆಚ್ಚಿನ ಧನಸಹಾಯವಿತ್ತು ಪ್ರೋತ್ಸಾಹಿಸಿದವರನ್ನು ಸತ್ಕರಿಸುವ ಸಮಾರಂಭವು ನೆರವೇರಿತು. ಸತ್ಕಾರ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎ. ಸುಬ್ಬಣ್ಣ ಶೆಟ್ಟಿ ಇವರು ವಹಿಸಿದ್ದರು. ಶ್ರೀ ಬಿ. ಭೋಜ ಶೆಟ್ಟಿ ಇವರು ಶಾಲೆಗೆ ಸಹಾಯವಿತ್ತವರನ್ನು ಅಭಿನಂದಿಸಿ ಭಾಷಣವಿತ್ತರು. ಶ್ರೀ ಎ. ಚಂದ್ರಶೇಖರ ಶೆಟ್ಟಿ ಇವರು ಶಾಲೆಗೊಂದು ಕಟ್ಟಡವನ್ನು ಕಟ್ಟಿಸುವರೆ ಜನರ ಸಹಾಯ ಕೋರಿದರು ಅಧ್ಯಕ್ಷರ ಭಾಷಣದ ತರುವಾಯ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಭೋಜ ಶೆಟ್ಟಿ ಇವರು ಧನ್ಯವಾದವಿತ್ತರು.

ಕೃತಜ್ಞತೆಗಳು – ನಾನೂ ಎಡ್ವಕೇಟ್ ಕೆ. ನಾರಾಯಣ ರೈಗಳೂ ಇತ್ತೀಚೆಗೆ ಬೆಂಗಳೂರಿಗೆ ಹೋದಾಗ 'ನವಯುಗ'ದ ಪರಿಷ್ಕರಣಕ್ಕಾಗಿ ಬೇರೆ ಬೇರೆ ವಿಧದಿಂದ ಸಹಕರಿಸಿ ಪ್ರೋತ್ಸಾಹಿಸಿದ ಡಾ| ಕೆ. ಎಸ್. ಶೆಟ್ಟಿ, ಎಡ್ವಕೇಟ್ ಬಿ ತಿಲಕ ಹೆಗ್ಡೆ, ಎಂ. ಸುಂದರರಾಮಶೆಟ್ಟಿ, ಡಾ| ಸಿ ಎಸ್ ರೈ, ಎಂ. ಎನ್. ರಾಮನ್, ಎಡ್ವಕೇಟ್ ಕೆ. ಜಗನ್ನಾಥ ಶೆಟ್ಟಿ, ಡಾ| ಬಿ.ಕೆ. ಮೂರ್ತಿ ಮೊದಲಾದವರಿಗೂ ಆಭಾರ ಸೂಚಿಸುತ್ತೇನೆ.

ಅಂತೆಯೇ ಕಳೆದ ವಾರ ನಾನು ಎನ್. ಮಾರಪ್ಪಶೆಟ್ಟರೊಂದಿಗೆ ವಿಟ್ಲ, ಪೆರಡಾಲ, ಕಾಸರಗೋಡು ಮೊದಲಾದೆಡೆ ಸಂಚರಿಸಿದಾಗ ಸಹಕಾರವಿತ್ತು. ನೆರವಾದ ಎಂ. ತಿಮ್ಮಣ್ಣ ಭಟ್, ಕೆ. ವೈ. ನಾರಾಯಣ ರೈ, ನೀರಂಪಾಡಿ ವಿಶ್ವನಾಥ ರೈ, ಶ್ರೀ ಕೇಶವಾನಂದಭಾರತಿ ಶ್ರೀಪಾದಂಗಳವರು ಎಡನೀರು, ಕೆ. ಉಗ್ಗಪ್ಪ ಶೆಟ್ಟಿ, ಡಾ| ಶ್ಯಾಮಭಂಡಾರಿ, ಕೆ ಮಹಾಬಲಭಂಡಾರಿ, ಎಂ ಎಲ್. ಎ. ಮುಂಡಿಗೆ ಶ್ಯಾಮಭಟ್, ಬಿ. ತಿಮ್ಮಆಳ್ವ, ಇಚ್ಲಂಪಾಡಿ ರಾಮ ರೈ, ಎಸ್. ಕೃಷ್ಣಭಟ್ ಟಿ. ವೆಂಕಟೇಶಪ್ಪ, ಕೆ ಲೀಲಾವತಿ ರೈ, ಕಯ್ಯಾರ ಕಿಞ್ಞಣ್ಣರೈ, ಡಾ| ಕೆ. ಚಿತ್ತಪ್ಪ ರೈ ಮೊದಲಾದವರಿಗೂ ಕೃತಜ್ಞತನಾಗಿದ್ದೇನೆ.

ಕೆ. ಹೊನ್ನಯ್ಯ ಶೆಟ್ಟಿ.
ಸಂಚಾಲಕ ಸಂಪಾದಕ.

ನೊಮ್ನ ಯಾಕ್ಮಾ ಖಾ ನೋಡ್ಬೇಕು?

(೫ನೇ ಪುಟದಿಂದ)

ವು ಏನು ಮಾತಾಡಿದ್ರೂ, ನಾನು ಕೇಳ್ಕೊಂಡು ಬಿದ್ದಿರ್ಬೇಕು."

"ನೋಡು, ಏಂತಲ್ಲಾ ಉಂಗುಷ್ಟದಿಂದ ನೆತ್ತಿಗೆ..."

"ಏರಡೆ ಮತ್ತೆ...ನೀವು ಹಾಗೆಲ್ಲಾ ಅಂದ್ರೆ......"

"ಇಲ್ಲಮ್ಮ ಇಲ್ಲ, ಇನ್ನು ಹೇಳೊಲ್ಲ ಸರಿ ಆಯ್ತಲ್ಲಾ."

"ಹೌದು, ಬೂಟುಗಾಲಿಂದ ಒದಿಯೋದು; ಮತ್ತೆ ಸಾರಿ ಅನ್ನೋದ ; ಯಾರೊಡನೆ ಆಡ್ತೀರಿ ನಿಮ್ಮ ನಾಟಕಾನ?"

"ಅಯ್ಯೋ ಮಹರಾಯ್ತಿ.. ಇಷ್ಟೆಲ್ಲ ಚಿಕ್ಕ ವಿಷಯಕ್ಕೆ ಇಷ್ಟೆಲ್ಲಾ ರಂಪಾಟ ಮಾಡ್ತೀಯಲ್ಲ?"

"ಮಾದ್ರೆ ಮತ್ತೆ....'

"ಆದ್ರೇ ನೋಡು, ಲೋಹಿಯಾ ನಿನ್ನಂತೆ ಅಂದದ್ದು."

"ನೋಡಿ, ಈಗ ನೀವು ಹೇಳ್ಲೇಬೇಕು, ಯಾಕೆ ಹಾಗೇಂತ."

"....ಸರಿ. ರಾಷ್ಟ್ರಪತಿಯವರು ಇಂಗ್ಲಿಷಿನಲ್ಲಿ ಪಾರ್ಲಿಮೆಂಟಿನ ಉಭಯ ಸಭೆಗಳನ್ನು ಉದ್ದೇಶಿಸಿ ಮಾತಾಡಲಿದ್ದರು. ಅದನ್ನು ವಿರೋಧಿಸಿ ಅವ್ರು ಹಿಂದಿಯಲ್ಲೇ ಮಾಡಬೇಕು ಇಲ್ವೆ ತೆಲುಗಿನಲ್ಲಿ ಭಾಷಣ ಮಾಡೇಕೊಂತಂದ್ರು ಇವರು. ಇಲ್ದಿದ್ರೆ' ತಾನು ಮತ ಪ್ರದರ್ಶನ ಮಾಡುವುದಾಗಿ ಬೆದರಿಕೇನೂ ಹಾಕಿದ್ರು. ತಿಳೀತು ತಾನೆ?'

"ಓ,ಹಾಗೆ ಹಾಂಗಾದ್ರೆ. ಆದ್ರೆ ಈಗ ಏನಾಯ್ತು ನೋಡಿ. ಅವ್ರುಅಧಿಕಾರವನ್ನ ಉಪರಾಷ್ಟ್ರಪತಿಗೆ ಕೊಟ್ಟಿದ್ರಲ್ಲಾ....ಇನ್ನು ಅವರ ಭಾಷಣ ..."

"ಅದನ್ನ ಝಾಕೀರ ಹುಸೇನರೇ ಓದುತ್ತಾರೆ"

"ಅದು ಯಾವ ಭಾಷೆಯಲ್ಲಿರುತ್ತೆ?"

"ಅದು ರಾಷ್ಟ್ರಪತಿಯವರದ್ದು; ಇಂಗ್ಲಿಷಿನಲ್ಲೇ ಇರುತ್ತೆ".

"ಹಾಗಾದ್ರೆ ಲೋಹಿಯಾ..."

"ನೋಡ್ಬೇಕು ಅಲ್ವೆ....ಇರ್ಲಿ ನೋಡೋಣ ಮುಂದೆ...."

"ನೋಡು, ಮೊದ್ಲು ನಿನ್ನ ಮುಖ ನೋಡಿಕೊ ಮತ್ತೆ ಬೇರೆಯವರನ್ನ ತಿಳೀತಾ...."

"ಹ್ಞಾಂ .... ಮೊದ್ಲೇ ಅಂದಿದ್ರಲ್ಲ, ಮುಖ ನೋಡೋಕೆ. ಈಗ್ಲಾದ್ರೂ ನೀವೇ ಹೇಳಿ ಏನಿದೇಂತ"

"ಇರೋದೇನು? ಏನೂ ಇಲ್ಲ...."

"ಹಾಗಾದ್ರೆ ಸುಳ್ಳು ಅಂದಿರಾ ನೀವು?"

"ನಾನೇನಂದೆ? ನೋಡೋಕೆ ಅಂದೆ ಅಷ್ಟೆ."

"ಬಹಳ ಬುದ್ಧಿವಂತರು ನೀವು. ರಾಷ್ಟ್ರಪತಿಯವರು ಆಪರೇಶನ್‌ನ ಹೆಸರಿನಲ್ಲಿ ತಪ್ಪಿಸಿಕೊಂಡ್ರು....ನೀವು..."

"ಅದು ಆಕಸ್ಮಾತಾಗಿಯು ನೋಡು, ಅದನ್ನೆಲ್ಲಾ ಹಿಡಿದುಕೊಂಡು ಹೊಡೆದಾಡುವುದು ಸರಿಯಲ್ಲ."

"ನೀವು ಹೀಗೇ, ಏನಿದೇಂತ ನನ್ನ ಮುಖದಲ್ಲಿ...."

"ಇಲ್ಲಿ ಹತ್ತಿರ ಬಾ ತೋರಿಸುತ್ತೀನೆ... ನೋಡು....ಇದೇ ಇದೇ ತಿಳೀತೆ?"

"ಅಬ್ಬಬ್ಬಾ ನೀವೆ....?"

"ನೀನು...."

"ನಿಮ್ಮ ಹಾಗೇ..."

"ಹ್ಹ ಹ್ಹ ಹ್ಹ..."

— ಗೋರಾ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 366/1963.

ದುಗ್ಗಪ್ಪ ಪೂಜಾರಿ ... . ವಾದಿ.

ಮತ್ತು

ಸಂಕ್ರ ಪೂಜಾರಿ ಕೂಸ —ಪ್ರತಿವಾದಿರು,

ಇವರಿಗೆ

ಉಡುಪಿ ತಾಲ್ಲೂಕು [illegible] ಗ್ರಾಮದಲ್ಲಿ [illegible] ಕೃಷ್ಣ ಪೂಜಾರಿ [illegible] 1ನೆ ಪ್ರತಿವಾದಿ ಸಂಕ್ರ ಪೂಜಾರಿ 2ನೆ ಪ್ರತಿವಾದಿ ಮಂಜುನಾಥ ಪೂಜಾರಿ ಕೂಸ ಇವರಿಗೆ ಈ ನೋಟೀಸಿನ ಮೂಲಕ ತಿಳಿಯಪಡಿಸುವದು—

ನೀವು ವಾದಿಗೆ ತಾ. 22-11-1948 ರಲ್ಲಿ ರೂ. 250|-ಕ್ಕೆ ಬರೆದುಕೊಟ್ಟ ಉದಿಸ-ಅಸಲು ಬಡ್ಡಿ ಐವೇಜು ವಸೂಲು ಮಾಡುವರೆ ವಾದಿಯು ಮಾಡಿದ ದಾವೆಯು ನಿಮ್ಮ ನೋಟೀಸಿನ ಬಗ್ಗೆ ತಾ. 28-2-64ಕ್ಕೆ ಈ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವದರಿಂದ ನಿಮ್ಮ ಆಕ್ಷೇಪ ವಗೈರೆ ಇದ್ರೆ ಜಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(ಕೋರ್ಟು ಹುಕುಂ ಪ್ರಕಾರ)

P. Ramachandra Rao
Advocate for Plaintiff.

Udipi, 6—2—64.

ಆದರ್ಶ ಚರಿತೆಗಳು—೨೦

ಮಹಾದೇವ ಗೋವಿಂದ ರಾನಡೆ

—ಶ್ರೀ ಎಸ್. ಎಂ. ಶೆಟ್ಟಿ,
ಶಿಮುಂಜೆ ಪರಾರಿ.

ಮಹಾರಾಷ್ಟ್ರದಲ್ಲಿ ಸಮಾಜ ಸುಧಾರಣಾ ಪ್ರವರ್ತನೆಯು ಜಸ್ಟಿಸ್ ರಾನಡೇಯವರಿಂದಲೇ ಆಯ್ತು. ಪೂಜ್ಯ ಗಾಂಧೀಜಿಯವರಿಗೆ ಇವರು ನೈತಿಕ ಗುರುಗಳಾಗಿದ್ದರು ಶ್ರೀ ಗೋಪಾಲಕೃಷ್ಣ ಗೋಖಲೇಯವರು ಇವರ ಪ್ರೀತಿಯ ಶಿಷ್ಯರಾಗಿದ್ದರು. ಗಾಂಧೀಜಿಯವರು ಬಹಳಷ್ಟು ಪ್ರೇರಣೆಯನ್ನು ಗೋಖಲೇಯವರಿಂದಲೇ ಪಡೆದರು.

ಇವರು ಮುಂಬೈ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರಾದುದರಿಂದ, ಕಾಂಗ್ರೆಸಿನ ಸದಸ್ಯರಾಗಿದ್ದಿಲ್ಲವಾದರೂ, ಕಾಂಗ್ರೆಸಿನ ಸೂತ್ರ ಸಂಚಾಲಕರಲ್ಲಿ ಇವರೂ ಒಬ್ಬರಾಗಿದ್ದರು. ಅವರು ನ್ಯಾಯಾಧೀಶರಾಗಿದ್ದಂತೆಯೇ ಗಂಭೀರ ಅರ್ಥಶಾಸ್ತ್ರಜ್ಞ, ಹಾಗೂ ಇತಿಹಾಸತಜ್ಞರಾಗಿದ್ದರು. "ಮಹಾರಾಷ್ಟ್ರ ಸತ್ತೆಯ ಉತ್ಥಾನ" ಮತ್ತು "ಭಾರತೀಯ ಅರ್ಥಶಾಸ್ತ್ರದ ನಿಬಂಧ"ಎಂಬೆರಡು ಮಹಾನ್‌ಗ್ರಂಥಗಳು ಅವರ ಇತಿಹಾಸ, ಅರ್ಥಶಾಸ್ತ್ರದ ಆಳವಾದ ಅನುಭವದ ಎರಡು ಅನೂಲ್ಯ ಫಲಗಳು.

ಸಮಾಜ ಸುಧಾರಣಾ ಸಂಮೇಲನವು ಜಸ್ಟಿಸ್ ರಾನಡೇಯವರ ಪ್ರೇರಣೆಯಿಂದಲೇ ಜನ್ಮತಾಳಿ ಕಾಂಗ್ರೆಸಿನ ಒಂದು ಅಂಗವಾಗಿ ಪರ್ಯಾಪ್ತ ಸಮಯದ ವರೆಗೆ ದುಡಿಯಿತು. ೧೮೯೫ರಲ್ಲಿ ಪೂನಾ ಅಧಿವೇಶನವು ಜರುಗಿದಾಗ, ಕಾಂಗ್ರೆಸು ಸಮಾಜ ಸುಧಾರಣಾ ಕಾರ್ಯ ಗೈಯಬೇಕೋ, ಬೇಡವೋ? ಮತ್ತು ಸಮಾಜ ಸುಧಾರಣಾ ಆಂದೋಲನದಲ್ಲಿ ಭಾಗ ವಹಿಸಬೇಕೋ, ಬೇಡವೋ? ಎಂಬ ವಿವಾದವೆದ್ದಿತು; ಈ ಇತ್ತಂಡ ಪರಿಸ್ಥಿತಿಯಿಂದ ಕಲಕಿದ ಮನಸ್ಥಿತಿಯನ್ನು ರಾನಡೇಯವರು ಬಹು ವಿಚಕ್ಷಣ ಬುದ್ಧಿ ಮಾತ್ರೆಯಿಂದ ಪುನಃ ತಿಳಿಯಾಗಿರಿಸಿದರು.

ರಾಷ್ಟ್ರದ ವಿಭಿನ್ನ ಭಾಗಗಳಲ್ಲಿ ಪ್ಲೇಗು ಹಬ್ಬಿದಾಗ ಇವರು ದಿನರಾತ್ರಿಯೆನ್ನದೆ ಪೀಡಿತರ ಸಹಾಯಕ್ಕೆ ಮುಂದಾದರು. ರೋಗಕ್ಕೆ ಚಿಕಿತ್ಸೆ,ಪೀಡಿತರಿಗೆ ಆಶ್ವಾಸನೆ, ಮತ್ತು ಪೂರ್ಣ ಸಹಾಯವನ್ನೀಯುವುದರಲ್ಲಿ ಅವರು ವ್ಯಸ್ತರಾಗಿದ್ದರು. ಸುಮಾರು ೧೫ ವರ್ಷಗಳ ಕಾಲ ಇವರು ಸಮಾಜ ಸುಧಾರಣೆಯ ಕಾರ್ಯಗೈದರು. ಸ್ವಾತಂತ್ರ್ಯಪ್ರಾಪ್ತಿಗಾಗಿ ಸಹಯೋಗ ವನ್ನಿತ್ತರು ಸನ್ ೧೯೦೧ರಲ್ಲು ಅವರು ಸ್ವರ್ಗಸ್ಥರಾದಾಗ ಸರಕಾರ; ಕಾಂಗ್ರೆಸು, ಜನತೆ ಎಲ್ಲರೂ ಶೋಕಗ್ರಸ್ತರಾದರು.

ಜಸ್ಟಿಸ್ ರಾನಡೇಯವರಲ್ಲಿದ್ದ ಸಹನೆ ಮತ್ತು ಕ್ಷಮಾಭಾವ ಅತಿ ಅದ್ಭುತವಾದುದು. ಒಮ್ಮೆ ಒಬ್ಬ ಮರಣೋನ್ಮುಖ ರೈತನು ತನ್ನ ಮಗನನ್ನು ಅವರಿಗೊಪ್ಪಿಸಿ ನಿಶ್ಚಿಂತೆಯಿಂದ ಪ್ರಾಣತ್ಯಾಗ ಗೈದನು. ಅವರು ಆ ಹುಡುಗನನ್ನು ಬಹಳ ಪ್ರೀತಿಯಿಂದ ಸಲಹಿದರು. ಆದರೆ ಆ ಹುಡುಗನು ಮೂರ್ಖನಿದ್ದನು. ಒಂದು ಕೊಲೆಯ ತೀರ್ಮಾನವನ್ನವರು ಕಾಗದದಲ್ಲಿ ಬರೆದು ಕವರಿನಲ್ಲಿ ತುಂಬಿಸಿ ಪೋಸ್ಟಿನಲ್ಲಿ ಹಾಕಿ ಬರಲು, ಹುಡುಗನ ಕೈಯಲ್ಲಿ ಕೊಟ್ಟರು. ಆತನು ಅದನ್ನು ಕೊಲೆಗಡುಕನ ಪಕ್ಷಪಾತಿಗಳಿಗೆ ಕೊಟ್ಟುಬಿಟ್ಟನು. ಸಮಯಕ್ಕೆ ಮುಂಚಿತವಾಗಿಯೇ ಅಂತಿಮ ತೀರ್ಮಾನವು ಪ್ರಕಟವಾಯ್ತು. ಇದು ಪತ್ರಿಕೆಗಳಲ್ಲೆಲ್ಲಾ ಪ್ರಸರಣವಾಗಿಬಿಟ್ಟಿತು, ರಾನಡೇಯವರು ತುಂಬಾ ಅಪಮಾನವನ್ನು ಸಹಿಸಬೇಕಾಯ್ತು. ಆದರೂ ಅವರು ಆ ಹುಡುಗನ್ನು ಮನೆಯಿಂದ ಹೊರಗೆ ಹಾಕಲಿಲ್ಲ; ಮಾತ್ರವಲ್ಲ ಅವನನ್ನು ಆ ವಿಷಯವಾಗಿ ಅವರು ಏನೂ ಕೇಳಿಲ್ಲವಂತೆ!

ಒಮ್ಮೆ ಅವರು ರೇಲ್ವೆಯಲ್ಲಿ ಪ್ರವಾಸ ಮಾಡುತ್ತಿದ್ದರು. ಒಬ್ಬ ಆಂಗ್ಲನು ಅದೇ ಭೋಗಿಯನ್ನು ಪ್ರವೇಶಿಸಿದನು. ರಾನಡೇಯವರು ಆಗ ಅಲ್ಲಿರಲಿಲ್ಲ; ಅವರು ಬೇರೊಂದು ಭೋಗಿಯಲ್ಲಿ ಮಿತ್ರನೊಬ್ಬನೊಬ್ಬನೊಡನೆ ಮಾತಾಡುತ್ತಾ ಕುಳಿತಿದ್ದರು. ಫಸ್ಟ್ ಕ್ಲಾಸಿನಲ್ಲಿ ಭಾರತಿಯನೊಬ್ಬನ ಸಾಮಾನನ್ನು ಕಂಡು ಆ ಆಂಗ್ಲನು ಸಿಟ್ಟಿನಿಂದ, ಅವುಗಳನ್ನು ತೆಗೆದು ಹೊರಗೆ ಬಿಸಾಡಿಬಿಟ್ಟನು. ರಾನಡೇಯವರಿಗೆ ಈ ವಿಷಯ ತಿಳಿದರೂ ಅವರು ಶಾಂತರಾಗಿ ಕುಳಿತಿದ್ದರಂತೆ!— ಬೇರೆಯವರು ಅಸಭ್ಯತೆ, ಅಸಜ್ಜನಿಕೆ ತೋರಿಸಿದರೆಂದು ನಾವೇಕೆ ನಮ್ಮ ಸಭ್ಯತೆಯನ್ನು ಬಿಟ್ಟುಬಿಡಬೇಕು? ಎಂದರಂತೆ ಅವರು. ಆ ಆಂಗ್ಲನು ಪೂನಾದ ಅಸಿಸ್ಟೆಂಟ್ ಜಡ್ಜನಾಗಿದ್ದನು. ರಾನಡೇಯವರು ಅವನಿಗೂ ಮೇಲಾಧಿಕಾರಿಯಾಗಿದ್ದರು. ಅವರು. ಬೇಕಿದ್ದರೆ ಅವನನ್ನು ಶಿಕ್ಷಿಸಬಹುದಿತ್ತು. ಈ ವಿಷಯ ತಿಳಿದ ಆಂಗ್ಲನು ಗಾಬರಿಯಾದನು. ಆವನು ಕ್ಷಮೆಯಾಚಿಸಲು ರಾನಡೇಯವರ ಬಳಿ ಬಂದಾಗ, ಅವರು ಅವನತ್ತ ಬೆನ್ನು ಹಾಕಿ ತಿರುಗಿ ನಿಂತು ತಮ್ಮ ಮಿತ್ರರೊಡನೆ ಮಾತಾಡತೊಡಗಿದರು. ಅವನಿಗೆ ಕ್ಷಮೆ ಯಾಚಿಸಲು ಅವರು ಆಸ್ಪದವನ್ನೇ ಕೊಡಲಿಲ್ಲವಂತೆ!

ಅವರ ಇಡೀ ಜೀವನವು ಇದೇ ರೀತಿ ರೋಮಾಂಚನ ಉದಾರತೆ, ಕ್ಷಮೆ; ಪರೋಪಕಾರಗಳಿಂದ ತುಂಬಿದೆ.

(ಠಾಕುರ್ ಸುದರ್ಶನ ಸಿಂಹ)

ವಿವಾಹ ಸಮಾರಂಭಗಳು

ದಿ| ಮೂಂಬೆಟ್ಟು ಭೋಜರಾಜ ಹೆಗ್ಡೆಯವರ ಪುತ್ರ ಶ್ರೀ ದಿವಾಕರ ಹೆಗ್ಡೆಯವರು ಶ್ರೀ ಎನ್. ಪದ್ಮನಾಭ ಶೆಟ್ರ ಪುತ್ರಿ ಸೌ| ಶಾಂತಿಯನ್ನು ತಾ. 6—2—64ರಂದು ಉಡುಪಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಶ್ರೀ ಹಾರಾಡಿ ದಾಸಪ್ಪಶೆಟ್ರ ಪುತ್ರ ಶ್ರೀ ಬಾಲಕೃಷ್ಣಶೆಟ್ಟರು ದಿ|ಮೂಂಬೆಟ್ಟು ಭೋಜರಾಜ ಹೆಗ್ಡೆಯವರ ಪುತ್ರಿ ಸೌ| ಹೇಮಲತಾಳನ ತಾ. 6—2—64ರಂದು ಶ್ರೀ ವರದೇಂದ್ರ ಕಲಾಮಂದಿರದಲ್ಲಿ ವಿವಾಹಮಾಡಿಕೊಂಡರು

ಮದ್ರಾಸಿನ ದಾಸಪ್ರಕಾಶದ ಮ್ಹಾಲಕ ಶ್ರೀ ಕೆ. ಸೀತಾರಾಮರಾಯರ ಪುತ್ರಿ ಸೌ| ಗೀತಾ ಮತ್ತು ವುಡ್‌ಲೇಂಡ್ಸಿನ ಮ್ಹಾಲಕ ಶ್ರೀ ಕೆ. ಕೃಷ್ಣರಾಯರ ಪುತ್ರ ಶ್ರೀ ಕೆ. ವಾಸುದೇವರಾವ್ ಇವರ ವಿವಾಹ ಸಮಾರಂಭವು ಮದ್ರಾಸಿನ ವಧೂಗೃಹದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: **ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.**

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

READ & ADVERTISE IN NVAYUGA WEEKLY

ಜನಪದ ಸಾಹಿತ್ಯದಲ್ಲಿ

ಒಗಟಿನ ಮಾಲೆ

ನಗು, ಅಳು, ಆಶೆ, ಆವೇಶ, ರೋಷ ಹೇಗೆ ಹೃದಯಾವಸ್ಥೆಗಳೋ ಹಾಗೆಯೇ ಜನಪದ ಗೀತೆಗಳು ಕೂಡಾ, ಹಳ್ಳಿಗಾಡಿನ ಮುಗ್ಧ ಹೆಂಗಳೆಯರ ಹೃದಯಾಂತರಾಳದಿಂದ ಉಕ್ಕಿ ಬಂದ ಕಾರಂಜಿಯೇ ಜನಪದ ಸಾಹಿತ್ಯ. ಅದು ಗ್ರಾಮ್ಯವೆಂದು, ಕೀಳುಜನರ ಅಭಿರುಚಿಯ ಗೀತೆಗಳೆಂದು ಹಿಂದೆ ಅರಮನೆಯ ನೆರವು ಸಿಗಲಿಲ್ಲ. ವಿಚಾರ ಯುಗವಾದ ಇಂದು ಅದಕ್ಕೆ ಬೆಲೆಸಿಕ್ಕರೂ, ಯಂತ್ರಯುಗ ನಾಗರಿಕತೆಯಿಂದಾಗಿ, ಜನಪದ ಸಾಹಿತ್ಯ, ಬೆಚ್ಚಿಬಿಟ್ಟಿತು. ಇಂದಿನ ವೈಜ್ಞಾನಿಕ ಯುಗದ ನಾಗಾಲೋಟದ ಕಾಲ್ಕೆಳಗೆ ತುಳಿಯಲ್ಪಟ್ಟು ಸಿಗುವ ಬೆಲೆ, ಕಾಲನ ತೆಕ್ಕೆಗೆ ಸಿಕ್ಕುದಕ್ಕಾಗಿದೆ.

ಜಾನಪದ ನೃತ್ಯ, ಜಾನಪದ ಕಥೆಗಳು, ಜಾನಪದ ಉಡುಪು ನಮ್ಮ ಪ್ರಾಚೀನ ಸಂಸ್ಕೃತಿಯನ್ನು, ನಮ್ಮ ಪೂರ್ವಜರ, ಶೌರ್ಯ, ತ್ಯಾಗ, ಕಷ್ಟ ಸಹಿಷ್ಣುತೆ, ವಿಶ್ವಾಸ, ಪ್ರೀತಿ, ಸತ್ಯ ಪ್ರಿಯತೆಯನ್ನು, ಅವರ ಜೀವನದ ಇರುವನ್ನು ಹೇಗೆ ಬಿಂಬಿಸಬಲ್ಲವೋ, ಅಷ್ಟೇ ಸೊಗಸಾಗಿ ಜನಪದ ನೀತಿಗಳು ಬಿಂಬಿಸಬಲ್ಲವು.

ಎಲ್ಲಾ ವಿಧವಾದ ಹಾಡುಗಳು ಇದರಲ್ಲಿ ಉಂಟು.

ಯುದ್ಧದ ಹಾಡುಗಳಿವೆ, ಮದುವೆಯ ಸೋಬಾನ ಗೀತೆಗಳಿವೆ ಸುಗ್ಗಿಯ ಹಾಡುಗಳಿವೆ, ಬೆಳದಿಂಗಳ ಹಾಡುಗಳಿವೆ, ಹಬ್ಬದಹಾಡುಗಳಿವೆ, ಒಗ್ಗಟ್ಟಿನ ಹಾಡುಗಳಿವೆ, ಅಷ್ಟೆಏಕೆ? ಚಾರಿತ್ರಿಕಭಾಗೋಲದಂತಹ ವಿಷಯಗಳನ್ನೂ ತಿಳಿಯಪಡಿಸುವ ಹಾಡುಗಳೂ ಇವೆ. "ಸಕಲ ಹೂಗಳ ಮಧುರಸವೇ ಜಾನಪದ ಸಾಹಿತ್ಯ" "ಆ ಜೇನ ಕೊಡವೆ ನಮ್ಮ ಹಳ್ಳಿಯ ಸಾಹಿತ್ಯ".

ಹಳ್ಳಿಯ ಗಂಡು, ಹೆಣ್ಣು ಹೊಲದಲ್ಲಿ ಕೆಲಸಮಾಡುವಾಗ, ಕಣದಲ್ಲಿ ಒಕ್ಕುವಾಗ, ಮನೆಯಲ್ಲಿ ಕುಟ್ಟುವಾಗ, ಬೀಸುವಾಗ, ನೀರನ್ನು ತರುವಾಗ, ತಮ್ಮ ಜೀವನದ ದುಃಖಗಳನ್ನು, ದುಃಖದುಮ್ಮಾನಗಳನ್ನು, ಬೇಸರಿಗೆ, ಓಸರಿಕೆಗಳನ್ನು ಜನಪ್ರಿಯಗೀತೆಗಳ ಮೂಲಕ ಹಾಡುವುದು ವಾಡಿಕೆ. ಮದುವೆ, ಮುಂಜಿ, ಹಬ್ಬ, ಹರಿದಿನಗಳಂತಹ ಮಂಗಲ ಸಮಯದಲ್ಲೂ ಹಾಡುತ್ತಾರೆ. "ಹೃದಯಗಂಗೆ ಉಕ್ಕಿ ಹರಿದ ಆ ಗೀತೆಗಳೇ ಜನಪದಸಾಹಿತ್ಯ." "ಅದೇ ಹಳ್ಳಿಯ ಸಾಹಿತ್ಯ ಸಂಪತ್ತು".

ಇದರ ಮೂಲ ಎಲ್ಲಿ? ಏನು? ಯಾವಾಗ? ಹೇಗೆ, ಎಂದು ಕಾಲ ಮಾನದಂದ ಅಳೆಯಲು ಸಾಧ್ಯವಿಲ್ಲ. ಮಾನವ ಪ್ರಪಂಚಕ್ಕೆ ಕಾಲಿಟ್ಟಾಗಿನಿಂದ 'ಬಸವನ ಹಿಂದೆ ಬಾಲವೆಂಬಂತೆ', ಅವನ ಬಾಳಲ್ಲಿ ಹಾಸು ಹೊಕ್ಕಾಗಿದೆ. ಯಾವ ಭಾಷೆಗೂ ಕಡಿಮೆ ಇಲ್ಲದಂತೆ, ಸರಿದೊರೆಯಾಗಿ ನಿಲ್ಲುವ ಸ್ಥಾನ ಕನ್ನಡ ಜನಪದ ಸಾಹಿತ್ಯಕ್ಕೂ ಇದೆ ಎಂದರೆ ಅಚ್ಚರಿಯ ಸಂಗತಿಯಲ್ಲ. ಈ ಯಾಂತ್ರಿಕ ಯುಗದ ನವನಾಗರಿಕತೆಯಲ್ಲಿ ಸಿಕ್ಕಿ ಹೇಳ ಹೆಸರಿಲ್ಲದಂತಾಗುತ್ತಿರುವ ನಮ್ಮ ಜಾನಪದ ಸಾಹಿತ್ಯವನ್ನು ಉಳಿಸುವುದು ಪ್ರತಿಯೊಬ್ಬರ ಕರ್ತವ್ಯ. ಅಳಿದು ಹೋಗುವ ಮುನ್ನ ಉಳಿಸೋಣ, ಉಳಿಸಿ ಬೆಳಸೋಣ.

ಹತ್ತಿ ಹೂವಿನ ಸೀರಿ
ಮುತ್ತಿನ ಉಡಿ ಅಕ್ಕಿ
ಎತ್ತಿನ ಮ್ಯಾಲೆ ಹತ್ತಿ ಬರುವಾಗ
ಬಸವ್ವ ಎತ್ತೀರ ಮಗನ ಹೆಸರೇನ?
ಮಗನ ಹೆಸರು ಮಲ್ಲಿಗಿ
ನನ್ನ ಹೆಸರು ಕೇದಿಗೆ
ಸತಿಪುರುಷರ ಹೆಸರು ನವರತ್ನ.

ಮದುವೆ ಮುಂತಾದ ಸಮಯದಲ್ಲಿ ಮಾರಗಿತ್ತಿಯರು ಗಂಡನ ಹೆಸರನ್ನು ಕೇಳುವದು ರೂಢಿ, ಗಂಡನ ಹೆಸರನ್ನು ನೇರವಾಗಿ ಹೇಳದೆ ಒಗಟಿನ ಮೂಲಕ ಹೇಳುವದು ನಿತ್ಯ ಸಂಪ್ರದಾಯ. ಇದನ್ನು ಇಂದಿಗೂ ಹಳ್ಳಿಯಲ್ಲೂ ನಾವು ಕಾಣಬಹುದು. ಪ್ರಶ್ನೋತ್ತರಗಳೆರಡನ್ನೂ ಈ ಮೇಲಿನ ಪದ್ಯ ಒಳಗೊಂಡಿದೆ.

ಎರಡು ಕಾಲಿರುವದು ಹೆಂಗಳಸಿ
ನೋಡುವದು
ತಂಗಿ ಮಕ್ಕಳಸೆಲ್ಲಿ ಅಂಗಳಕೆ ಕರೆವದು
ನಾರೀ ನೀ ಬಲ್ಲರೆ ಹೇಳ ಈ ಒಗಟ
ಪೋರಿ ನೀ ತಿಳಿದರೆ ಹೇಳ ||
ದೇವರ ದೇವ ಕೋಳಿಯ ಪಿಳ್ಳಿಲ್ಲೇನ
ದೇವರ ದೇವ ಕೋಳಿಯ ಹುಂಜಲ್ಲೇನ.

ಮೂರ ಕಾಲಿದುವದು ಒಣ ಮರ
ಸುತ್ತುವದು
ಬಾಯಿ ಆರಿದಾಂಗೆ ತಾ ನೀರ
ಕುಡಿವದು
ನಾರೀ ನೀ ಬಲ್ಲರೆ ಹೇಳ ಈ ಒಗಟ
ಪೋರಿ ನೀ ತಿಳಿದರೆ ಹೇಳ ||
ದೇವರ ದೇವ ಸಾಣಿಯ ಕಲ್ಲಲ್ಲೇನ

ಹಾದಿಗೆ ಹುಟ್ಟುವದು ಹಾದಿಗೆ
ಬೆಳೆವದು
ಹಾದಿ ಕಾರಣನ ಸೆರೆ ಹಿಡಿದು
ಜಗ್ಗುವದು
ನಾರೀ ನೀ ಬಲ್ಲರೆ ಹೇಳ ಈ ಒಗಟ
ಪೋರಿ ನೀ ತಿಳಿದರೆ ಹೇಳ ||
ದೇವರ ದೇವ ಕಿನ್ನರಿನಿಷ್ಟ ವಲ್ಲೇನ.

ತೋಟದಾಗ ಹುಟ್ಟುವುದು ತೋಟದಾಗ ಬೆಳೆವದು
ಮೈಯಲ್ಲಾ ರುದ್ರಾಕ್ಷಿ ತಾ, ಧರಿಸುವದು
ನಾರೀ ನೀಬಲ್ಲರೆ ಹೇಳ ಈ ಒಗಟ
ಪೋರಿನೀ ತಿಳಿದರೆ ಹೇಳ
ದೇವರ ದೇವ ಜೋಡಲ ಗಿಡವಲ್ಲೇನ.

(ನನ್ನ ತಾಯಿಯ ಕೃಪೆಯಿಂದ)

ಸವಾಲುಹಾಕಿ ಒಗಟನ್ನು ಬಿಡಿಸಿರುವ ಸೋಬಗನು ಓದಿ ಓದಿ ಸವಿಯಬೇಕಾಗಲಿ ಅದಕ್ಕೆ ಅರ್ಥ ಬಿಡಿಸಿ ವಿಶ್ಲೇಷಿಸಿ ಮೆಲುಕು ಹಾಕಬಾರದು.

— ಶ್ರೀ ಬಸವರಾಜ ಕುಂಚೂರ.

ಅಂಗಸಾಧನೆಗೆ ಪ್ರಾಶಸ್ತ್ಯ

(೬ನೇ ಪುಟದಿಂದ)

ರಿಸಲು ನಾಡಿಯು ಹೇಗೆ ಸಹಾಯಕವಾದೀತೆಂಬುದನ್ನು ಇದು ರುಜುವಾತುಮಾಡಿ ತೋರಿಸುವುದರಲ್ಲಿ ಸಹಾಯಕವಾಗಿದೆ

ಹಾರ್ಟಿನ್ನರಿಗಂತೂ ಇಂತಹ ಪ್ರಯೋಗಗಳನ್ನು ಎಷ್ಟು ನಡೆಸಿದರೂ ತೃಪ್ತಿ ಕಾಣುಬಂದಿಲ್ಲ. ಯಾವ ರೀತಿಯ ದೇಹ ಶಿಕ್ಷಣವು ಎಲ್ಲಕ್ಕಿಂತ ಉತ್ತಮ, ದೇಹ ಶಿಕ್ಷಣವನ್ನು ನೀಡಲು ಯಾವ ಕಾಲವು ಉತ್ತಮವಾದದ್ದು, ಒಬ್ಬ ವ್ಯಕ್ತಿಗೆ ನೀಡಲಾದ ದೇಹಶಿಕ್ಷಣವು ಮಿತಿಯನ್ನು ಮೀರಿತೆಂದು ತಿಳಿಯುವುದೆಂತು, ಒಬ್ಬ ವ್ಯಕ್ತಿಯ ಶಕ್ತಿಯನ್ನು ಅಳೆಯುವುದೆಂತು ಎಂಬೆಲ್ಲಾ ವಿಷಯಗಳಲ್ಲಿ ಹಾರ್ಟಿನ್ ನಿರಂತರ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಪ್ರತಿಯೊಬ್ಬ ವೈದ್ಯನೂ ತನ್ನಲ್ಲಿಗೆ ಬರುವ ರೋಗಿಗಳಿಗೆ ಅವರ ಆರೋಗ್ಯ ಮತ್ತು ಶಕ್ತಿಗಳ ವರ್ಧನೆಗೆ ಆಟಗಳು ಎಂತಹ ಮುಖ್ಯ ಸಾಧನವೆಂಬುದನ್ನು ಮನಗಾಣಿಸಲು ಯತ್ನಿಸಬೇಕು ಎಂಬುದು ಹಾರ್ಟಿನ್ನರ ಅಭಿಮತ. ಆದರೆ ವೈದ್ಯರು ತಮ್ಮ ಕರ್ತವ್ಯವನ್ನು ಸರಿಯಾಗಿ ಪಾಲಿಸಿಲ್ಲವೆಂದು ಹಾರ್ಟಿನ್ ತಿಳಿಸಿದ್ದಾರೆ.

ಹೃದಯ ಸಂಬಂಧದ ವ್ಯಾಧಿಗಳನ್ನು ಗುಣಪಡಿಸಲು ವ್ಯಾಯಾಮವು ಅತ್ಯಾವಶ್ಯಕವೆಂದು ಹಿಂದಿನಿಂದಲೂ ಒತ್ತಿ ಹೇಳಲ್ಪಡುತ್ತಿದ್ದುದು ಇಂದು ವೈದ್ಯರ ಗಮನಕ್ಕೆ ಬಂದಿದೆಯೆನ್ನಬಹುದು. ಮನುಷ್ಯನ ಆರೋಗ್ಯವು ಸಮತೂಕದಲ್ಲಿರಬೇಕೆಂದರೆ ಅವನಿಗೆ ಸಾಕಷ್ಟು ದೇಹಶ್ರಮವಿದ್ದೇ ತೀರಬೇಕೆಂದು ಹಾಲೆಂಡಿನ ಔದ್ಯೋಗಿಕ ಇಲಾಖೆಯ ವೈದ್ಯರಾದ ಪ್ರೊಫೆಸರ್ ಜಿ. ಸಿ. ಎಫ್. ಬರ್ಗರು ಈಚೆಗೆ ಒಪ್ಪಿಕೊಂಡಿದ್ದಾರೆಂದು ತಿಳಿದು ಬಂದಿದೆ.

ಪೆಟ್ರೋಲಿನಿಂದ ಓಡುವ ಗಾಡಿಗಳಿಗೆ ನಾವು ದಾಸರಾಗಬಾರದು. ಹಾಗೆ ಮಾಡುವುದರಿಂದ ನಾವು ಜನಿಸುವಾಗಲೇ ನಮಗೆ ನೀಡಲ್ಪಟ್ಟ ಅಂಗಗಳನ್ನು ನಿಷ್ಕ್ರಿಯೆಗೆ ನಾವೇ ಬಲಪಡಿಸಿದಂತಾಗುವುದು ಎಂದು ಹೇಳಿದ ಹಾರ್ಟಿನ್ನರು ಮನುಷ್ಯನು ನಡೆಯುವುದನ್ನೋ ಓಡುವುದನ್ನೋ ಸೈಕಲ್ ಸವಾರಿಯನ್ನೋ, ಅಂತೂ ಯಾವುದಾದರೊಂದರ ಪರಿಪಾಠವನ್ನಿಟ್ಟುಕೊಳ್ಳಬೇಕೆಂದು ತಿಳಿಸಿದರು. ಮನುಷ್ಯನ ಅಂಗಾಂಗಗಳಿಗೆ ಚಲನೆಯು ಮುಖ್ಯ ಚಲನೆಯಿಲ್ಲವಾದಾಗ ಮರಣ ಸಂಭವಿಸಿದೆ ಎಂದೆನ್ನಬಹುದು ಎನ್ನುತ್ತಾರೆ ಹಾರ್ಟಿನ್.

ಮಾಂಸಖಂಡಗಳಿಗೆ ಹೆಚ್ಚು ವ್ಯಾಯಾಮವನ್ನು ನೀಡುವುದರಿಂದ ರಕ್ತಪರಿಚಲನೆಯು ಶೀಘ್ರಗೊಳ್ಳುವುದು; ರಕ್ತದ ಒತ್ತಡವು ವ್ಯತ್ಯಸ್ತವಾಗುವುದು. ರಕ್ತಾಶಯಗಳು ವಿಕಸನಗೊಳ್ಳುವುವು. ಹೀಗಾಗಿ ಕಲುಷಿತ ವಸ್ತುಗಳು ಶೀಘ್ರವಾಗಿ ವರ್ಜಿಸಲ್ಪಡುವುವು. ಇವೆಲ್ಲಾ ಕಾರಣಗಳನ್ನು ತಿಳಿದವರು ಅಂಗಸಾಧನೆಗೆ ಆದ್ಯಗಮನ ನೀಡುವರೆಂಬುದಂತೂ ಖಂಡಿತ!

ಜಯ ಭಾರತ ಜನನಿ!

ಜಯ ಜನನಿ ಭಾರತಿಯೆ, ಜಯದಿವ್ಯ !
ಮೂರುತಿಯೆ
ವಿಶ್ವಮಯ ಕೀರುತಿಯೆ! ಒಲಿದು
ತೋರಾ! ||
ಸಸ್ಯ ಶ್ಯಾಮಲೆ ತಾಯೆ, ಸುಜಲೆ
ಸುಫಲೆಯೆ, ಕಾಯೆ
ಕಂದನು ನೀನಿಂದು ನಲಿದು ಬಾರಾ ||
|| ಜಯಜನನಿ ||

ಅರಿಶಿಣ ಕುಂಕುಮ ಸಿಂಧೂರವನೆ
ಫಾಲದೊಳಗಿಟ್ಟು
ಹಸುರು ಸೀರೆಯನುಟ್ಟು,
ಮುಂಗುರುಳ ಬಿಟ್ಟು!
ಗಂಗ ಯಮುನಾ ಪುಣ್ಯ ಪನ್ನೀರ
ನೀತಳೆದು
ತಂಪು ಕಂಪಿನ ಮಲಯ ಮಾರುತದಿ
ಮೈದೊಳೆದು ||
|| ಜಯಜನನಿ ||

ಸಿಂಹವಾಹಿನಿಯಾಗಿ ಶೂಲ ಪಾಣಿನಿಯಾಗಿ
ನಸು ನಗುತ ನೀ ಬರಲು ಕಾಣಬೇಕು!
ಶಾಂತಿಯಿಂದಲೆ ಜಗವ ಗೆಲ್ವ ನಿನ್ನನೆ
ಕಂಡು
ರಕ್ತಪಿಪಾಸು ತಾನಾಗಿ ಬಾಗಬೇಕು!
|| ಜಯಜನನಿ ||

ಗಣಗಣಾವಿ, ಗಣರಾಜ ದಿನವೆಂಬ
ಉತ್ಸವದಿ
ದಣಿವಿಸುದು, ಮನಕುಣಿದು
ಸಂತಸದ ಭರದಿ ||
ಎಣೆಸಿದೊಡೆ ಶತ್ರುವಿನ ಅಳುಕಿನ
ಬುದ್ಧಿಯನು
ಮನನೋವು; ಕ್ಷಣಮಾತ್ರ ತೋರಿ
ಹರಿಸಮ್ಮ || ಜಯಜನನಿ ||

— ಭಾಸ್ಕರ ಭಂಡಾರಿ, ಮಂಜೈಲು.

ಪರಿಷ್ಕಾರಕ್ಕಾಗಿ ಪುರಸ್ಕಾರ ನೀಡಿರಿ!

ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾಗಿ
ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರು ಸಂಪಾದಕರಾಗಿದ್ದ
ವಿಚಾರಶೀಲರ ಮೆಚ್ಚಿನ ವಾರಪತ್ರಿಕೆ

ನವಯುಗ

ಉಡುಪಿ

ನೂತನ ಪರಿಷ್ಕರಣ ಹೊಂದಲಿದೆ

ಪ್ರೋತ್ಸಾಹಿಸಿ ಸಹಕರಿಸಿರಿ

ವಾರ್ಷಿಕ ಚಂದಾ ರೂ. ೧೦–೦೦

ಹೊಸ ಚಂದಾದಾರರಿಗೆ ಈಗತಾನೆ ಪ್ರಕಟವಾದ ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನೂ ಕಳಿಸಲಾಗುವುದು.

ಸಂಚಾಲಕ-ಸಂಪಾದಕ— ಬಿ. ಜೊನ್ನಯ್ಯ ಶೆಟ್ಟಿ.

ಚೀನೀಯರ ಚೀರಾಟ

(೯ನೇ ಪುಟದಿಂದ)

ಆ ರೀತಿ ಉತ್ಪತ್ತಿಯಾಗುತ್ತಿರುವ ಭಯವನ್ನು ಅವರು ಆಗಾಗ ಅಲ್ಲಲ್ಲಿ ವ್ಯಕ್ತಪಡಿಸಿದ್ದಾರೆ, ಪ್ರಕಟಪಡಿಸಿದ್ದಾರೆ. ಉದಾಹರಣೆ:— ದಕ್ಷಿಣ ಚೈನಾದಲ್ಲಿರುವ ಪಕ್ಷದ ಪತ್ರಿಕೆ 'ಸದರ್ನ್ ಡೈಲಿ'ಯು (ದಕ್ಷಿಣ ದೈನಿಕ) ಇತ್ತೀಚೆಗೆ ವಸ್ತುಗಳ ದೊಡ್ಡ ಪಟ್ಟಿಯನ್ನಿತ್ತು ಸುಖೋಪಭೋಗಿ ಬಳಕೆಯ ಸಾಮಾಗ್ರಿಗಳ ಮೇಲೆ ಟೀಕೆಯ ಮಳೆ ಸುರಿಸಿರುತ್ತದೆ,

ಪಕ್ಷದ ಓರ್ವ ತತ್ವಶಾಸ್ತ್ರಜ್ಞನು ಈ ರೀತಿ ಬರೆದಿದ್ದಾನೆ:— ಕೇವಲ ಒಂದು ಕೈಗಡಿಯಾರದ ಮೇಲಣ ಆಸೆಯಿಂದ ಕ್ರಾಂತಿಕಾರನು ಕ್ರಮಶಃ ಕ್ಷೀಣದೆಶೆಗೆ ಜಾರಿರುವದು ತನಗೆ ಗೊತ್ತು. ಅಂತರ್ರಾಷ್ಟ್ರೀಯದಿಂದ ಮೊದಲು ಆತನು ತೃಪ್ತಿಪಟ್ಟುಕೊಂಡನು. (ಅಂತರ್ರಾಷ್ಟ್ರೀಯತೆಯೆಂದರೆ ಹಲವಾರು ರೀತಿಯ ಹಳೆಯ ಗಡಿಯಾರಗಳ ಕೆಲವಾರು ಭಾಗಗಳನ್ನು ಜೋಡಿಸಿ ರಚಿಸಿದ ಕೈಗಡಿಯಾರವಿದೆ) ಆದಾದ ಮೇಲೆ ಆತನು 'ಅರ್ನೆಸ್ಟ್ ಬೊರೆಲ್" ಕೈಗಡಿಯಾರವನ್ನು ಪಡೆದುಕೊಂಡನು. ಹಾಗೆ ಬದಲಾಗುತ್ತ, ಕೊನೆಯಲ್ಲೀಗ ಆತನ ಬಳಿ 'ಓಮೆಗಾ" ಕೈಗಡಿಯಾರವಿದೆ.

ಆ ಲೇಖನವು ಮುಂದರಿದು, ಯಾವಾಗಲೂ ಈ ರೀತಿ ಭೌತಿಕ ಸುಖದತ್ತ ಹಾಗೂ ಬೋಜ್ವಾ ಜೀವನದತ್ತ ಗಮನ ಹರಿಸಿದಲ್ಲಿ ಕ್ರಾಂತಿಕಾರ ವರ್ಗವು ಕ್ಷೀಣದೆಸೆಗೆ ಜಾರಲು ಸಾಧ್ಯವಿದೆ. ಇದರ ಫಲಿತಾಂಶ ಅವರು ತತ್ವಕ್ಕೆ ಎದುರಾಗಿ ನಿಲ್ಲುತ್ತಾರೆಂದು ತಿಳಿಸಿರುತ್ತದೆ,

ಮದ್ರಾಸಿನ ಮೆಯಿಲ್ ಆಂಗ್ಲ ದೈನಿಕವು ಮೇಲಿನ ಶ್ರೀ ಜೇಮ್ಸ್ ಯೆಹರವರ ಲೇಖನವನ್ನು ಪ್ರಕಟಿಸಿರುತ್ತದೆ.

"ಆಧುನಿಕ ಪುನರುಜ್ಜೀವನತೆ"ಯು ಚೈನಿ ಕಮ್ಯೂನಿಸ್ಟ್ ಪಕ್ಷವನ್ನು ಮೇಲ್ಪಟ್ಟದಿಂದ ಕೆಳಮಟ್ಟದವರೆಗೂ ಒಡೆದು ಬಿಡಬಹುದೆಂಬ ಭಯ ಪೆಕಿಂಗ್ ಪ್ರಮುಖರನ್ನು ಪೀಡಿಸುತ್ತಿವೆಯಾದಲ್ಲಿ ಇತರರೂ ಅದನ್ನೇ ಎದುರು ನೋಡುತ್ತಿದ್ದಾರೆ. ದಕ್ಷಿಣ ಚೈನಾದ ಹಳ್ಳಿಗರಲ್ಲಿ ಭವಿಷ್ಯತ್ತವನ್ನು ಸೂಚಿಸುವ ನಿಧಾನವೊಂದಿದೆ. ಆದರಲ್ಲಿ ಈಗಿನ ಕಮ್ಯೂನಿಸ್ಟ್ ಅಧಿಕಾರವು ೭೦೦೦ ದಿನಗಳಿಗಿಂತ ಅಂದರೆ ಕ್ರಿ. ಶ. ೧೯೬೬ರ ನಂತರ ಉಳಿಯುವದಿಲ್ಲವೆಂದು ಕಂಡುಹಿಡಿಯಲಾಗಿರುತ್ತದೆ. ಚೈನಾದಿಂದ ಓಡಿಹೋದ ಪ್ರವಾಸಿಗನೊಬ್ಬನು ಇದನ್ನು ಬಹಿರಂಗಪಡಿಸಿರುವನು. ಪ್ರಯಾಣಿಕನಿಗೆ ಭವಿಷ್ಯತ್ತ ಹೇಳುವದರಲ್ಲಿ ನಂಬಿಕೆಯಿಲ್ಲದ ಕಾರಣ ಆತನು ಅದು ಹಳ್ಳಿಗರಿಗೆ ಕಮ್ಯೂನಿಸ್ಟ್ ಸರಕಾರದ ಮೇಲಿರುವ "ಪ್ರೀತಿ"ಯನ್ನು ಸೂಚಿಸುತ್ತದೆಂದು ಹೇಳಿರುವನು. ಹೌದು, ಇದು ಚೈನಾದ ಹಳ್ಳಿಗರ ಹೃದಯವಿದೆ. ಅಮೇರಿಕದ ರಾಜಕಾರಣಿಯೊಬ್ಬರು ಇತ್ತೀಚೆಗೆ ಸಾನ್‌ಫ್ರಾನ್ಸಿಸ್ಕೋವಿನಲ್ಲಿ ತಮ್ಮ ಅಭಿಪ್ರಾಯವನ್ನೂ ತಿಳಿಸಿದ್ದಾರೆ. ಅವರೂ ಚೈನಾದಲ್ಲಿ ಒಂದು ರೀತಿಯ ವಿಕಾಸ ನಡೆಯುತ್ತಿದೆಯೆಂದೂ ಮುಂದಕ್ಕೆ ಮುಂದಾಳುಗಳ ಬದಲಾವಣೆ ಸಾಧ್ಯವೆಂದೂ ಆಗ ಚಕಮಕಿ ಕಮ್ಮಿಯಾದೀತೆಂದೂ ಅವರು ಹೇಳಿರುವರು. ಅಮೇರಿಕದ ರಾಜಕಾರಣಿ ಅಧಿಕಾರಿ ರೋಗರ್ ಹಿಲ್ಸ್‌ಮೇನ್‌ರವರು ಅವನ್ನು ಚಿಯಾಂಗ್ ಕೈಶಿಯರಾದರೋ ಕಮ್ಯೂನಿಸ್ಟರ ತನ್ನ ಜೀವನಮಾನದೊಳಗೆ ನಾಶಮಾಡಿಯೇ ತೀರುವೆನೆಂದು ಹೇಳುವರು. ಹೀಗೆ ಚೈನಾಕ್ಕೆ ಕಮ್ಯೂನಿಸ್ಟರಿಂದಾಗಿ ಶಾಂತಿ ಎಂಬುದು ಸದ್ಯಕ್ಕೆ ದೂರದ ಬೆಟ್ಟವೇ ಸರಿ

ಪಕ್ಷದ ಸದಸ್ಯರಲ್ಲಿ ಮಾತ್ರವಲ್ಲ ಕೆಲ ಪ್ರಮುಖರಲ್ಲೂ ಕ್ರಾಂತಿಯ ಕಾವು ಈಗ ಕಡಿಮೆಯಾಗಿದೆಯೆಂಬುದು ಅಧಿಕಾರಸ್ಥರಿಗೆ ಅರಿವಾಗಿದೆ. ಅದನ್ನು ತೊಡೆದು ಹಾಕಲು ಅವರು ಅನೇಕ ವೇಷಗಳನ್ನು ಹಾಕುತ್ತಿದ್ದಾರೆ. ಹಿಂದಿನ ಸಂಚಿಕೆಯೊಂದರಲ್ಲಿ ಚೈನಿ ಕಮ್ಯೂನಿಸ್ಟ್ ಪಕ್ಷಕ್ಕಾಗಿ ದುಡಿದು ಹಿಂಗುತಿಂದ ಮಂಗನಂತಾದ ಉಪಾಧ್ಯಾಯರೊಬ್ಬರ ಅನುಭವ ಪ್ರಕಟವಾಗಿರುತ್ತದೆ. ಹೀಗೆ ಅನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಈ ಕೆಳಮುಖ "ಪ್ರಗತಿ" ಕ್ಷಿಪ್ರಗತಿಯಲ್ಲಿ ಮುಂದರಿಯುವದರಲ್ಲಿ ಸಂದೇಹವಿಲ್ಲ. ಬರುವ ಜನಾಂಗದಲ್ಲಿ ಇಷ್ಟೂ ಕಾವಿರಲಿಕ್ಕಿಲ್ಲವೆಂಬುದೂ ಸತ್ಯ ಸಂಗತಿ ಇದೆ ಅವರೆಲ್ಲರ ಮನಸ್ಸನ್ನು ಬೇರೆಡೆಗೆ ತಿರುಗಿಸಲು ಅಧಿನಾಥರೂ ಪ್ರಯತ್ನಿಸುತ್ತಿದ್ದಾರೆ. ನೇಪಾಲದಲ್ಲಿ ಅದಕ್ಕಾಗಿ ಸ್ಥಳವನ್ನು ಹುಡುಕಿರುವರು; ಇನ್ನು ಹತ್ತಿರದಲ್ಲಿ ಸಾಕೆಂದು ಈಗ ಮಧ್ಯ ಏಷ್ಯಾ-ಆಫ್ರಿಕಾಗಳಲ್ಲಿ ಪ್ರಯತ್ನಿಸುತ್ತಿದ್ದಾರೆ.

ಹೊಟ್ಟೆಗೊಂದಿಷ್ಟು ಅನ್ನ, ಮೈಗೊಂದಿಷ್ಟು ಬಟ್ಟೆಯೂ ಇಲ್ಲ. ಪ್ರೀತಿಯ ವಸ್ತುವನ್ನಾಗಿ ಏನನ್ನಾದರೂ ಇಟ್ಟುಕೊಳ್ಳುವ ಎಂದರೆ ಅವಕಾಶ ಕೊಡದ ಸಮಾಜವಾದ ಅಥವಾ ಸಮತಾವಾದವನ್ನು ಯಾರಾದರೂ ಇಚ್ಛಿಸಿಯಾರೇ? ಬಾಹ್ಯ ಘೋಷಣೆಗಳಿಗೆ ಮರುಳಾದ ಬಿಸಿರಕ್ತದ ಹಾಗೂ ಖಾಲಿ ಹೊಟ್ಟೆಯ ತರುಣರು ಬಯಸಿ ಮುಂದೆ ಬಂದರೂ ನಂತರ ತಾನಾಗಿಯೇ ತಮ್ಮ ಕುತ್ತಿಗೆಗೆ ಕಮ್ಯೂನಿಸ್ಟ್ ಕುಡುಗೋಲನ್ನಿಟ್ಟುಕೊಂಡಿರುವೆವೆಂದು ಮಮ್ಮಲ ಮರುಗುವುದರಲ್ಲಿ ಆಶ್ಚರ್ಯವಿಲ್ಲ. ಅಧಿಕಾರ ಸುತ್ತಿಗೆ ಅವೆಷ್ಟು ಜನತೆಯ ತಲೆಯನ್ನು ಹುಡಿಮಾಡಿದರೂ ಉಳಿದ ಜನಾಂಗ ಹಾಗೂ ನವೀನ ಪೀಳಿಗೆ ಅದನ್ನು ಸಹಿಸಲಾರದು

ಮಾವೋ ಅಧಿಕಾರ ಭದ್ರತೆಗಾಗಿ ನಾನಾ ವೇಷಗಳಿಂದ ಮೆರೆದಾಡುತ್ತಿರುವಂತೆ ಚೀರಾಡುತ್ತಿರುವ ಜನತೆ ನವೀನ ಕ್ರಾಂತಿಯ ಬೆಳಕಿನ ಅಲೆಯಿಂದ ಅದಕ್ಕಾಗಿ ದಾರಿಯನ್ನು ಸುಗಮಗೊಳಿಸುತ್ತಿದೆ.

ವಿಪನ್ನನಾದರೂ ಕಂಗೆಡದ

೯೦ರಲ್ಲಿ ವಿನ್‌ಸ್ಟನ್ ಚರ್ಚಿಲ್

ಅನುವಾದಕರು: ಶ್ರೀ ಕೆ. ನಾರಾಯಣ ಆಚಾರ್,
"ಶಿರೋಮಣಿ, ವಿದ್ವಾನ್", ಕಣ್ವತೀರ್ಥ.

೧೯೬೪ನೇ ನವೆಂಬರ ತಾ. ೩೦ರಲ್ಲಿ ತನ್ನ ೯೦ನೇ ವರ್ಷವನ್ನು ಮುಟ್ಟಿದ ಸರ್. ವಿನ್‌ಸ್ಟನ್ ಸ್ಪೆನ್ಸರ್ ಚರ್ಚಿಲ್ಲರಿಗೆ ನಮ್ಮ ಅಭಿನಂದನೆಗಳು. ಇದು ಇಂಗ್ಲೀಷರಿಗೆ ಮತ್ತು ಇಂಗ್ಲಿಷು ಮಾತನಾಡುವ ಜನರಿಗೆ ಮಾತ್ರವಲ್ಲ, ಪಾರ್ಲಿಮೆಂಟರೀ ಪ್ರಜಾಧಿಪತ್ಯವನ್ನೂ, ವ್ಯಕ್ತಿಯ ಘನತೆಯನ್ನೂ ಸಮರ್ಥಿಸುವ ಯಾವತ್ತು ಪ್ರಪಂಚದ ಎಲ್ಲಾ ಜನರಿಗೆ ಅತಿ ಸಂತೋಷದ ಸಂದರ್ಭವಾಗಿದೆ.

ಎಂತಹ ಮನುಷ್ಯ! ಎಂತಹ ಜೀವನ! ವಿದ್ವಾಂಸ, ಪತ್ರಿಕೋದ್ಯಮಿ, ಗ್ರಂಥಕಾರ, ಪಾರ್ಲಿಮೆಂಟು ತಜ್ಞ, ವಾಗ್ಮಿ, ಚಿತ್ರಕಾರ, ಕವಿ, ಆಡಳಿತಗಾರ ಮತ್ತು ರಾಜಕಾರಣಿ. ರಾಜನೀತಿಯನ್ನೂ ಮಿಕ್ಕಿರುವ ಮನುಷ್ಯರ ಹೃದಯನಾಡಿಗಳನ್ನು ಮುಟ್ಟುವ ವಿಶೇಷ ಗುಣದಿಂದ ಸಂಪನ್ನರೂ, ವೈಭವದ ಉತ್ತಮ ಜೀವನದ ಅಭಿರುಚಿಯುಳ್ಳವರೂ, ಸಾಮಾನ್ಯ ಸಂಬಂಧವನ್ನಿಟ್ಟುಕೊಂಡಿರುವ ಅಷ್ಟು ಮಹನೀಯರೂ ಆದ ಚರ್ಚಿಲ್ಲರು, ಉನ್ನತಕಲ್ಪನೆ, ಸಾಹಸದ ಅದಮ್ಯನಿರ್ಧಾರ, ಅಸಾಧಾರಣಸ್ಥಿರತೆ, ಊಹಾತೀತವಾದ ಮತ್ತು ಬೆರಗುಗೊಳಿಸುವ ಸಂದರ್ಭಗಳಲ್ಲೂ ಕೂಡಾ ದಕ್ಷತೆ ಇವುಗಳ ಮೂರ್ತ ಸ್ವರೂಪರಾಗಿರುತ್ತಾರೆ. ಚರ್ಚಿಲ್ಲರ ಸಮಗ್ರ ಜೀವನವು ಗಂಡಾಂತರಗಳನ್ನು ಹೊಡೆದೋಡಿಸುವ ಹೋರಾಟವಾಗಿದೆಯೆಂದು ನಿಜವಾಗಿ ಹೇಳಲ್ಪಡುತ್ತಿದೆ, ತನ್ನ ದೀರ್ಘವಾದ ಚರಿತ್ರೆಯಲ್ಲೇ ಅತ್ಯಂತ ಅಪಾಯದ ಪರಿಸ್ಥಿತಿಯಲ್ಲಿದ್ದಾಗ ಬ್ರಿಟಿಷ್ ಜನಾಂಗವನ್ನು ನೋಡಿಕೊಂಡುದು ಅತ್ಯುತ್ತಮವಾದ ಮತ್ತು ಅಸಾಮಾನ್ಯವಾದ ವಿಷಯ. ವಿಜಯಶಾಲಿಯಾದ ನಾಜೀತತ್ವವು ತನ್ನ ಸರ್ವಶಕ್ತಿಯಿಂದಲೂ ಕೋಪದಿಂದಲೂ ಬ್ರಿಟಿಷ್ ದ್ವೀಪಗಳನ್ನು ಆಕ್ರಮಿಸಲು ಕೈಯೆತ್ತಿನಿಂತಿತ್ತು. ಆದು ಪೋಲೆಂಡ್, ಡೆನ್ಮಾರ್ಕ್, ನಾರ್ವೆ, ಯುಗೋಸ್ಲೇವಿಯಾ ಬೆಲ್ಜಿಯಂ ಫ್ರಾನ್ಸು—ಹೀಗೆ ಸಮಗ್ರ ಯುರೋಪು ಖಂಡವನ್ನು ಮೆಟ್ಟಿ ತುಳಿದಿತ್ತು. ಅಕ್ಷಕೂಟದ ಪಾಲುಗಾರರು ತಮ್ಮ ಪ್ರಾರಂಭಿಕವಾದ. ಹೆಚ್ಚಾಗಿ ಯತ್ನವಿಲ್ಲದ ಪೂರ್ವತನ ವಿಜಯಗಳಿಂದ ಮದೋನ್ಮತ್ತರಾಗಿ "ಬ್ರಿಟಿಷ್ ಹೇಟೆಯ ಕುತ್ತಿಗೆಯನ್ನು ಹಿಚುಕುವೆ"ವೆಂದು ಕೊಚ್ಚಿಕೊಳ್ಳುತ್ತಿದ್ದರು. ಆಗ ರಷ್ಯವು ನಾಝೀ ಜರ್ಮನಿಯೊಡನೆ ಕೂಡಿಕೊಂಡಿತ್ತು. ಅಮೇರಿಕದ ಸಂಯುಕ್ತ ಸಂಸ್ಥಾನಗಳು ಇನ್ನೂ ಯುದ್ಧಕ್ಕೆ ಸೇರಿರಲಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಬ್ರಿಟನು ಏಕಾಕಿಯಾಗಿ ಹೆಚ್ಚಿನ ಮಟ್ಟಿಗೆ ನಿರಾಯುಧನಾಗಿ ಯುದ್ಧ ಮಾಡುತ್ತಿತ್ತು. ಆಗ ಚರ್ಚಿಲ್ಲರು ಆ ಸಾಮ್ರಾಜ್ಯದ ಮುಖ್ಯಮಂತ್ರಿಯಾದರು. ಅಂತಹ ಅಪಾಯಕರವಾದ—ಅಂಧಕಾರಮಯವಾದ ಕಾಲಗಳಲ್ಲೂ ಅವರ ನರನಾಡಿಗಳು ಸೋತು ಹೋಗಲಿಲ್ಲ. ಅತಿ ಮಹತ್ವಾದ ಗಂಡಾಂತರಗಳೂ ಅವರ ನಿದ್ದೆಯನ್ನೂ ಹಸಿವನ್ನೂ ಆತಂಕಪಡಿಸಲಿಲ್ಲ. "ಸಂಕಟಗಳ ಮಹಾ ತರಂಗಗಳು ಮೇಲೆ ಮೇಲೆ ಏರುತ್ತಿದ್ದಂತೆ ಅವರ ಧೈರ್ಯವೂ ಮೇಲೆ ಏರುತ್ತಿತ್ತು" ಎಂದು ಆ ಸಮಯದ ಅವರ ನಿಕಟವರ್ತಿಗಳು ಹೇಳುತ್ತಾರೆ.

ಚರ್ಚಿಲ್ಲರು ನಿಜವಾಗಿ ಈ ಶತಮಾನದ ಬಹು ದೊಡ್ಡ ಮನುಷ್ಯರಲ್ಲಿ ಒಬ್ಬರಾಗಿರುತ್ತಾರೆ, ಮತ್ತು ಈ ಭೂಗೋಳದಲ್ಲಿ ಸ್ವಾತಂತ್ರ್ಯ ಮತ್ತು ಪ್ರಜಾಧಿಪತ್ಯದ ಆದರ್ಶಗಳನ್ನು ಮೆಚ್ಚುವ ಗಂಡಸರೂ, ಹೆಂಗಸರೂ ಬದುಕಿರುವ ತನಕ ನಾಜಿಸಂ ಮತ್ತು ಫೇಸಿಸಂಗಳ ಅಭಿಶಾಪಗಳನ್ನು ನಿರ್ನಾಮಗೊಳಿಸಿ ಹೊಸ ಅಂಧಕಾರಯುಗವೆಂಬ ಪಾತಾಳದಲ್ಲಿ ಪ್ರಪಂಚವು ಮುಳುಗದಂತೆ ಅದನ್ನು ಉದ್ಧರಿಸುವುದಕ್ಕೆ ಅವರು ಮಾಡಿದ ಸೇವೆಗಳು ಕೃತಜ್ಞತೆಯಿಂದ ಸ್ಮರಿಸಲ್ಪಡುವವು. ಅವರಿಗೆ ಸುಶಿಕ್ಷಿತೆಯೂ, ಬುದ್ಧಿವಂತೆಯೂ ನಿಷ್ಠಾವಂತೆಯೂ ಆದ ಲೇಡೀ ಕ್ಲೆಮ್ಮಿ ಚರ್ಚಿಲ್ ಎಂಬ ಸಹಧರ್ಮಿಣಿ ಇದ್ದಾರೆ. ಅವರು ಘನವಾದ ಮತ್ತು ಉದ್ದೇಶಪೂರ್ಣವಾದ ದೃಢ ನಿರ್ಧಾರ, ಅಚಲವಾದ ಧೈರ್ಯ, ಸಂಪತ್ತು ಮತ್ತು ಸರ್ವಕಾರ್ಯ ಚಾತುರ್ಯ ಇವುಗಳಿಗೆ ಹೆಸರುವಾಸಿಯಾದ ಚರ್ಚಿಲ್ಲರ ಜೀವನದಲ್ಲಿ ಮಹತ್ವಾದ ಪಾತ್ರವನ್ನು ನಿರ್ವಹಿಸಿದ್ದಾರೆ.

ಸರ್ವೋತ್ತಮನು ಈ ಮಹನೀಯರಿಗೂ ಅವರ ಸುಶೀಲೆಯಾದ ಸಹಧರ್ಮಿಣಿಗೂ ಅನೇಕ ವರ್ಷಗಳ ಆಯುಷ್ಯವನ್ನು ಕರುಣಿಸಿ, ಅವರಿಬ್ಬರೂ ತಮ್ಮಲ್ಲಿ ಇನ್ನೊಬ್ಬರು ಶತಮಾನ ಮುಟ್ಟುವುದನ್ನು ನೋಡುವಂತೆ ಬದುಕಿರುವುದಕ್ಕೆ ಅನುಗ್ರಹ ಮಾಡಲಿ.

(ಭವನ್ಸ್ ಜರ್ನಲ್ ಪತ್ರಿಕೆಯಿಂದ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ $58\frac{1}{3}\%$ ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆದುಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦।

ಆ ಹೆಂಗಸು.......

(೩ನೇ ಪುಟದಿಂದ)

ತೆ. ಸ್ವಲ್ಪ ಬೆಳ್ಳಗಿದ್ದರೂ ಅಷ್ಟೇ ಸುಂದರ. ಸಾದಾ ಸೀರೆಯೊಂದು ಅದೂ ಕೊಳಕಾದ್ದೇ ಉಡಿಸಿದ್ದರು ನಾವು ಆ ಅಂಗಡಿ ಹೊಕ್ಕ ಒಂದು ಗಂಟೆಯಿಂದಲೂ ಅದು ಅಲ್ಲಿ ಹಾಗೆಯೇ ನಿಲ್ಲಿಸಲ್ಪಟ್ಟಿತ್ತು. ಇದು ಯಾಕಿರಬಹುದ? ಬೀದಿಯಲ್ಲಿ ಹೋಗುವ ಜನರನ್ನು ಆಕರ್ಷಿಸಲೆಂದು ಕೆಲವೊಂದು ಬಟ್ಟೆಯ ಅಂಗಡಿಗಳಲ್ಲಿ, ಅದೂ ಎದುರಿಗೆ, ಬೀದಿಯ ಜನರನ್ನು ತನ್ನ ಕಡೆಗೆ ಆಕರ್ಷಿಸುವ ರೀತಿಯಲ್ಲಿ, ಅತ್ಯಂತ ಸುಂದರವಾದ ಪ್ರತಿಮೆಗಳಿಗೆ, ಗೊಂಬೆಗಳಿಗೆ, ಅಥವಾ ಸುಂದರ ತರುಣಿಯರಿಗೇ ಅತೀ ನಾಜೂಕಾದ ಮತ್ತು ಫ್ಯಾಶನಿನ ಬಟ್ಟೆ ಉಡಿಸುವುದನ್ನು, ದೊಡ್ಡ ದೊಡ್ಡ ಕನ್ನಡಿಗಳ ಬೀರುಗಳಲ್ಲಿ ಅವುಗಳನ್ನು ನಿಲ್ಲಿಸುವುದನ್ನು ಎಲ್ಲರೂ ಕಂಡದ್ದೇ ಇದೆ. ಆದರೆ ಇಲ್ಲಿಯೋ, ಆ ಮೂರ್ತಿಯನ್ನು ನೋಡಿಯೇ ವ್ಯಾಪಾರ ಮಾಡುವ ಹಾಗಿದ್ದರೆ ಆ ಅಂಗಡಿಯೊಳಗೆ ಹೋಗಬೇಕಾದ್ದೇ ಇರಲಿಲ್ಲ. ನಾನು ಹೀಗೆಲ್ಲ ಯೋಚಿಸುತ್ತಿದ್ದಂತೆ ಅತ್ತೆಯೆಂದರು.

"ನಮ್ಮ ಬಟ್ಟೆಗಳನ್ನು ಇಲ್ಲಿಯೇ ಹೊಲಿಸಿ ಕೊಡಬಹುದೇ?" ಎಂದು.

"ಓಹೋ ಅದಕ್ಕೇನು? ನಿಮಗೆ ಯಾವ ನಮೂನೆ ಬೇಕಾದರೂ ಹೊಲಿಸಿ ಕೊಡುತ್ತೇವೆ" ಎಂದು ಆ ಕಡೆಗೆ ತಿರುಗಿ "ಆ ಚಲ್ಲಾ, ಇವರ ಅಳತೆ ತೆಗೆಯಮ್ಮ" ಎಂದು ನಾನಾ ತರದ ಕಟ್ಟಿಂಗ್‌ಗಳಿರುವ ಪುಸ್ತಕವನ್ನು ನಮ್ಮೆದುರಿಗಿಟ್ಟರು.

ನಾನು ಯೋಚಿಸುತ್ತಿದ್ದೆ. ಇರುವ ಈ ಸಣ್ಣ ಜಾಗದಲ್ಲಿ ನಮ್ಮ ಕಣ್ಣಿಗೆ ಕಾಣಿಸದಂತೆ ಈ ಚಲ್ಲಾ ಎಂಬವಳು ನಿಂತಿರುವುದಾದರೂ ಎಲ್ಲಿ ಎಂದು. ಆಶ್ಚರ್ಯವೆಂದರೆ ಆ ಗೋಮಟೇಶನಂತೆ ನಿಂತಿದ್ದ ಮೂರ್ತಿ ಚಲಿಸಿದ್ದು. ಅಬ್ಬ! ಅದು ಹೆಂಗಸು!! ಓಹ್ ಅವಳು ಒಂದು ಗಂಟೆಯಿಂದಲೂ ಒಂದಿರುವೆಯಷ್ಟಾದರೂ ಚಲಿಸಿದರೆ? ನಾವು ಅಲ್ಲಿದ್ದ ಒಂದು ಗಂಟೆಯಲ್ಲಿ ೫೦ ಸಲ ಕೂತು, ೫೦ ಸಲ ಚಲಿಸಿ, ೫೦ ಸಲ ನಿಂತು ನಮ್ಮ ಕಾಲುಗಳ ನರಗಳು ಹಿಡಿದುಕೊಳ್ಳದಂತೆ ಜಾಗ್ರತೆ ವಹಿಸಿಕೊಂಡಿದ್ದೆವು. ಆದರೆ ಆ ಹೆಂಗಸಿನ ಸ್ನಾಯುಗಳು ಗತಿಯೇನಿರಬಹುದು.

ನಾನು ಯೋಚಿಸಿದೆ, ಧಿಮಾಕಿನ ಹೆಂಗಸು, ಹೆಂಗಸರಾದ ನಾವು ಹೋದರೂ, ನಮ್ಮನ್ನು ನೋಡಿ ಒಂದು ಮುಗುಳ್ನಗೆ ಸೂಸದ ಈಕೆ ಹೆಂಗಸೇ ಎಂದು ಹೇಳುವುದಾದರೂ ಹೇಗೆ? ಆ ಮುಖವೋ ಸಿಡಿಸಿಡಿಯಾಗಿತ್ತು — ಯಾರ ಮೇಲೋ ಸಿಟ್ಟುಗೊಂಡವರಂತೆ. ಮನೆಯಲ್ಲಿ ದೊಡ್ಡ ರಾದ್ಧಾಂತವಾಗಿದ್ದವರಂತೆ ಮುಖ ಧುಸು ಧುಸು ಗುಟ್ಟುತ್ತಲೇ ಇತ್ತು. ಬಟ್ಟ ಕಣ್ಣು ಬಿಟ್ಟಂತೆ, ಕಣ್ಣಿನ ರೆಪ್ಪೆಯೂ ಅಲುಗದಂತೆ ನಿಂತಿದ್ದಳಲ್ಲ! ಅವಳ ಮುಖ ನೋಡಿಯೇ ಬಟ್ಟೆ ಹೊಲಿಸುವುದೂ ಬೇಡ ಎಂಬಷ್ಟು ಜಿಗುಪ್ಸೆಯಾಯಿತು ನನಗೆ. ಆದರೆ ಅತ್ತೆಗೆ ತಿಳಿಸಿದರೆ ಅವರು ಕೇಳುವುದು ಬಿಡಿ, ಎರಡು ಬೈಗಳನ್ನು ನಾನೇ ಕೇಳ ಬೇಕಷ್ಟೆ.

ಆ ಹೆಂಗಸು ತಾನು ನಿಂತಲ್ಲೇ ಆದರ ತಲೆಯ ಮೇಲ್ಗಡೆಯಿಂದ ಅಳತೆ ತೆಗೆಯುವ ಟೇಪ್ ತೆಗೆದುಕೊಂಡು ಮತ್ತೇ ಹಾಗೆಯೇ ನಿಂತಳು ಮೂಕಿಯಂತೆ. ಕಣ್ಣು ನನ್ನೆಯಿಂದ ಆದರೂ ಕರೆಯುವ ಗೋಜಿಗೇ ಹೋಗಲಿಲ್ಲ. ನಾವೇನು ಹಣವನ್ನು ಕೊಡದೆಯೇ ಅವಳ ಹತ್ತಿರ ಹೊಲಿಸಿಕೊಳ್ಳುವುದಕ್ಕೆ ಬಂದಿದ್ದೇನೆಯೋ ಎಂಬಂತೆ.

ಆ ಪ್ರಾಲಿಕ ಮುದುಕರೇ ಮತ್ತೆ ಅಂದರು.

"ಹೋಗೀ ಅಮ್ಮ ಅಳತೆ ತೆಗೆಸಿಕೊಳ್ಳಿ"

ನಾನೇ ಮೊದಲು ಹೋದೆ. ನಾನೂ ಮಂದಹಾಸದಿಂದ ಅವಳ ಬಳಿಗೆ ಹೋಗಲಿಲ್ಲ ದುರ್ಮುಖಿಯಂತೆ ಹೋದೆ. ಸಿಡಿಸಿಡಿಯೆಂದು ಅವಳ ಮುಖವನ್ನು ನೋಡಿದೆ ನನಗೆ ಸಿಟ್ಟು ಬಂದಿದೆ. ಅದೂ ಭಾರೀ ಭಯಂಕರ ಸಿಟ್ಟು ಎಂಬುದನ್ನು ತೋರಿಸಿಕೊಳ್ಳಬೇಕೆಂಬ ನನ್ನ ತವಕ ನನ್ನಲ್ಲೇ ಉಳಿಯಿತ. ಅವಳು ನನ್ನ ಮುಖ ನೋಡಿದ್ದರೆ ತಾನೇ. ಅವಳಿಗೆ ಬೇಕಾದ್ದು, ನನ್ನ ತೋಳು, ಬೆನ್ನು, ಎದೆಯ ಅಳತೆ. ಅಷ್ಟನ್ನು ನನ್ನನ್ನು ನೋವಾಗುವ ರೀತಿಯಲ್ಲಿ ತಿರುಗಿಸಿ ತಿರುಗಿಸಿ ತೆಗೆದುಕೊಂಡಳು. ಮತ್ತೆ ಹಾಗೆಯೇ ನಿಂತಳು. ನಾನೇ ಈ ಕಡೆಗೆ ಬಂದು ಅತ್ತೆಗಂದೆ.

"ಬೇಡ ಅತ್ತೆ, ನನ್ನ ಮಾತು ಕೇಳಿ".

ಆದರೆ ಅತ್ತೆಗೆ ಬೇಕಾದ್ದು ತನ್ನ ಹೊರ ಬಿದ್ದ ಮಾತನ್ನು ಉಳಿಸಿಕೊಳ್ಳುವುದು ಅಷ್ಟೆ. ಅವರೂ ಹೋಗಿ ನನ್ನಷ್ಟೇ ಗೌರವದಿಂದ ಅಳತೆ ತೆಗೆಸಿಕೊಂಡು ಕೈ, ತೋಳುಗಳನ್ನು ಸವರುತ್ತಾ ಈ ಕಡೆಬಂದು ಮುದುಕನನ್ನು ವಿಚಾರಿಸಿದರು.

"ಅವರು ತಮಗೇನಾಗಬೇಕು?"

"ಅವಳು ನನ್ನ ಮಗಳಮ್ಮ. ನಾವು ಪಾಕಿಸ್ಥಾನದಿಂದ ಓಡಿ ಬಂದ ನಿರಾಶ್ರಿತರು"

"ನಮ್ಮ ಬಟ್ಟೆ ಯಾವಾಗ ಕೊಡುವಿರಿ." "ಬುಧವಾರ ೧೧|| ಗಂಟೆಗೆ ನನ್ನ ಮೊಮ್ಮಗಳೊಂದಿಗೆ ಕಳುಹಿಸಿ ಕೊಡುತ್ತೇನಮ್ಮ. ನಿಮ್ಮ ಎಡ್ರೆಸ್ ಕೊಡಿ" ಎಂದರು ಮುದುಕ. ಎಷ್ಟು ನಯವಾದ, ನಮ್ರತೆಯ ಮಾತುಗಳು. ಆದರೆ ಆ ಹೆಂಗಸಿಗೇನು ಧಾಡಿ.

ನಾವು ಹೊರಗೆ ಬಂದು ಮತ್ತೆ ಹಿಂತಿರುಗಿ ನೋಡಿದಾಗ ಅದೇ ಪ್ರತಿಮೆ. ಹಾಗೇ ನಿಂತಿತ್ತು.

ನಿರಾಶ್ರಿತರಾದರೂ ಧಿಮಾಕೆಷ್ಟು. ಆದರೆ ಒಂದು ಮಾತು ನಿಜ ಬೇರೆದಲಿನ ಅಂಗಡಿಗಳಿಗಿಂತ ೧೮-೨೦ ರೂಪಾಯಿಯಾದರೂ ನನಗೆ ಉಳಿತಾಯ ಕಂಡಿತು. ಈ ಮಾತನ್ನು ಅತ್ತೆಯೂ ಒಪ್ಪಿಕೊಂಡರು. ಆ ಪ್ರಾಲಿಕನದ್ದೊಂದು ದೊಡ್ಡ ತರದ ಮರ್ಜಿ. ನಾವು ಬರುವಾಗ ಮತ್ತೊಮ್ಮೆ ಇಲ್ಲಿಗೆ ಬನ್ನಿ ಎಂದು ಅಂಗಡಿಯವರಂತೆ ಗೋಗರೆಯಲಿಲ್ಲ. ಒಂದೇ ಬೆಲೆ. ಹೆಚ್ಚು ಕಡಿಮೆಯ ಪ್ರಶ್ನೆಯೇ ಇಲ್ಲ. ರಕ್ಕು, ಪುರಿ, ಮೋಸ, ಏನೇನೂ ಕೇಳಬೇಡಿ. ಇಷ್ಟು ಗಿರಾಕಿಯು ಮನಸ್ಸಿಗೆ ಹಿಡಿಸಿದರೆ ಸಾಲದೆ? ಪ್ರಾಮಾಣಿಕತೆಯೇ ಹೆಚ್ಚು ಗಿರಾಕಿಗಳನ್ನು ಒದಗಿಸಿಕೊಡುತ್ತದೆಂದು ಜಾಕೀಸುವವರು ಯಾಕೆ ತಿಳಕೊಳ್ಳುವುದಿಲ್ಲ ಅಂತ? ಹೊಸಹೊಸ ಮುಖ ಕಂಡರೆ, ಅದರಲ್ಲೂ ಪರಪೂರಿನವರಿಗೆ ಚೆನ್ನಾಗಿ ಟೋಪಿ ಹಾಕಿ, ಸಿಕ್ಕಿದ್ದೇ ಲಾಭ, ಇನ್ನೊಮ್ಮೆ ಇವರೆಲ್ಲ ನಮ್ಮ ಅಂಗಡಿಗೆ ಬಾರದಿದ್ದರೂ ಚಿಂತಿಲ್ಲ ಇಷ್ಟು ದೊಡ್ಡ ಪಟ್ಟಣದಲ್ಲಿ ದಿನಕ್ಕೆ ಯಾರಾದರೂ ೪-೫ ಗಿರಾಕಿಗಳಂತೂ ನಮ್ಮ ಬಲೆಗೆ ಬಿದ್ದೇ ಬೀಳುತ್ತಾರೆ ಎನ್ನುವ ಟೋಪಿವಾಲರು ಮದ್ರಾಸಿನಂತಹ ಪಟ್ಟಣದಲ್ಲಿ ಗಂಟಕ್ಕೆ ಸಾವಿರಂತೆ ಸಿಕ್ಕಿಯೇ ಸಿಗುತ್ತಾರೆ. ಅವರ ಕೈಯಲ್ಲಿ ಯಾವಾಗಲೂ ಉಮ್ಮರ್ ಕೈಯಾಂಸ ಒಸಗೆಯೊಂದು ಇದ್ದೇ ಇರುತ್ತದಂತ ಕಾಣುತ್ತದೆ. ಬೇರೆ ದಾರಿಯಲ್ಲಿ ನಡೆಯುದಂತೆ ದಾರಿದೀಪವಾಗಿ, ಬೀಸುವ ಮುಂಡಿಗೆ ಮುಕ್ಕಿದ್ದೇ ಲಾಭವಂತ ಕೇಳಲ್ಲಿವೆ ಹಾಗೆ, ಹಳ್ಳಿಯ ಬೆಸ್ತುಗಳಿಗೆ ಗಿಲೀಟ್ ಮಾಡಿ ಸಿಕ್ಕಿನಷ್ಟು ದೋಚಿ ಬಿಟ್ಟರಾಯಿತು. ಮತ್ತೆ ಮೊದಲಿನಂತೆ ಜೀವ ಕೈಯಲ್ಲಿಟ್ಟುಕೊಂಡು ಮೂರು ಬೀದಿತಿರುವು ಮಾಡಿ ಕಾರಿನ ಹತ್ತಿರ ಬರುವಾಗ ಗಂಟೆ ಎಂಟು.

ನನಗೆ ಮಾತ್ರ ಆ ಹೆಂಗಸಿನದೇ, ಹೆಂಸೇನು ಆ ಕಲ್ಲು ಕಂಬದ ಸುದ್ದಿಯೇ ತಲೆಯಲ್ಲಿ ತಿರುಗುತ್ತಿತ್ತು. ಅಲ್ಲದೆ ಅವಳು ನನ್ನನ್ನು ಅಸಡ್ಡೆ ಮಾಡಿದಳಲ್ಲಾ. ನಾಲಕ್ಕೆ ನಮ್ಮ ನಾಜೂಕಾದ ಮೈಗೆ ನೋವು ಮಾಡಿ (ಅವಳ ಲಾಭಕ್ಕೆ ಆದರೂ) ಅಳತೆ ತೆಗೆದಳಲ್ಲ. ನನ್ನನ್ನು ನೋಡಿ ಮುಗುಳ್ನಗೆಯೂ ನಗಲಿಲ್ಲವಲ್ಲ. ಬಟ್ಟೆನಲ್ಲಿ ಒಗ್ಗಾದ ಕಲ್ಲುಗೊಂಬೆ ಅವಳು ಎಂಬ ಜಿಗುಪ್ಸೆಯೇ ಮತ್ತೆ ಮತ್ತೆ ಮನಸ್ಸಿನಲ್ಲಿ ಸುಳಿಯುತ್ತಿತ್ತು. ಹೆಣ್ಣಿನ ಮನಸ್ಸಿನಲ್ಲಿ ಗಟ್ಟಿಯಷ್ಟು ಹೊತ್ತು ನಿಲ್ಲುತ್ತದೆ? ಹಾಗೇ ನನಗೂ ಹೊಟ್ಟೆ ಉಬ್ಬರ ತಡೆಯದೆ. ಅತ್ತೆಯ ಬೈಗಳು ಇದೆ ಅಂದುಕೊಂಡರೂ ಅಂದೆ: "ಥೂತ್ ಇದೊಂದು ಹೆಂಗಸೆ? ತಿಮಿಂಡಿಯೋ ಏನೋ. ನೀವಾದ್ದಕ್ಕೆ ಬಾಯಿ ಮುಚ್ಚಿಕೊಂಡು ಎಂದಿರಿ. ಏನೂಂತ ತಲೆಯಲ್ಲಿ ದೆಯೋ ಆ ಹೆಂಗಸೂಂತ ಅನ್ನುವ ಕಲ್ಲು ಗುಂಡಿಗೆ? ಇನ್ನು ಏನೇನು ಹೇಳುತ್ತಿದ್ದೆನೋ. ಅಷ್ಟರಲ್ಲಿ ಅತ್ತೆ ಅಂದರು—

"ನೀನು ಓದಿಸ್ತೊಂದು ದಂಡ. ಪಂಜಾಬಿನ ನಿರಾಶ್ರಿತರೆಂದು ಹೇಳಿದ್ದು ಕೇಳಲಿಲ್ಲವೇ? ಆವನು ಹಾಗಿರಲು ಕಾರಣ ಎಷ್ಟು ಭಯಾನಕ ಮತ್ತು ದುಃಖಮಯವಾದ ಸನ್ನಿವೇಶವನ್ನು ಅನುಭವಿಸಿ ಬಂದಿರುವಳೋ."

ಈಗ ಮಾತ್ರ ನನ್ನ ಮೆದುಳು ಕೆಲಸ ಮಾಡಿತು "ಹೌದು, ಹೌದು, ಹಾಗಿರಲೇ ಬೇಕು. ಹಾಗೇನಾದರೂ ಆಗಿದ್ದ ಪಕ್ಷದಲ್ಲಿ ದೇವರಾಣೆ ನಾನು ಆವಳ ಬಗ್ಗೆ ನೆನಸಿದ್ದು ನುಡಿದದ್ದು ಶುದ್ಧ ಅನ್ಯಾಯ ಎಂದಿತು ಮನ.

(ಮುಂದುವರಿಯುವುದು)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದ
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA 13—2—1964

REGD. No. B. G. 176
LICENCE No. 31
Licensed to Post without Prepayment

ವೀರನಾರಿ

"ಸ್ವಧರ್ಮರಕ್ಷಣೆಗಾಗಿ ಸ್ವಹಸ್ತದಿಂದ ತನ್ನ ಪತಿಯನ್ನು ಕೊಂದು, ತನ್ನನ್ನೂ ಕೊನೆಗಾಣಿಸಿಕೊಂಡ ವೀರ ನಾರಿಯ ರೋಮಾಂಚಕಾರೀ ಕಥೆಯಿದು".

ಲೇಖಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್, ಕದಿರುದ್ಯಾವರ.

ರಾಜಾಛತ್ರ ಸಾಲನ ಮಾತೆ, ಬುಂದೇಲ ಖಂಡದ ಅರಸನಾಗಿದ್ದ, ಚಂಪತರಾಯನ ಪತ್ನಿ ರಾಣಿ ಸಾರಂಧಾ ಪರಾಕ್ರಮಿಯಾದ ಸ್ತ್ರೀಯಾಗಿದ್ದಳು. ರಾಜಾ ಚಂಪತರಾಯನು ಮಹಾ ವಿಲಾಸಿಯಾಗಿದ್ದನು. ಆತನಿಗೆ ರಾಣಿ ಸಾರಂಧಾಳ ಜೊತೆ ಮತ್ತೂ ಕೆಲವು ಮಂದಿ ರಾಣಿಯರಿದ್ದರು. ಆದರೆ ಸಾರಂಧಾ ಸುಗುಣ ಸಂಪನ್ನೆಯೂ ಚತುರೆಯೂ ಆಗಿದ್ದುದರಿಂದ ಚಂಪತರಾಯನು ಈಕೆಯನ್ನು ತುಂಬಾ ಮೆಚ್ಚಿಕೊಂಡಿದ್ದನು. ರಾಜನ ವಿಲಾಸೀ ಜೀವನವು ಸಾರಂಧಾ ರಾಣಿಗೆ ಬೇಸರವನ್ನುಂಟು ಮಾಡುತ್ತಿತ್ತು.

ವಿಲಾಸೀ ಪ್ರವೃತ್ತಿಯ ರಾಜಾ ಚಂಪತರಾಯನು ಬಾದಶಹನ ಆಶ್ರಿತನಾಗಿ ದಿಲ್ಲಿಯಲ್ಲಿಯೇ ಇರುತ್ತಿದ್ದನು. ತನ್ನ ಸ್ವತಂತ್ರವಾಗಿದ್ದ ರಾಷ್ಟ್ರದ ಅಭಿವೃದ್ಧಿಯನ್ನು ಬಿಟ್ಟು ಪಾರತಂತ್ರ್ಯದಲ್ಲಿ ಜೀವನ ನಡೆಸುವುದು ರಾಣಿಯ ಮನಸ್ಸಿಗೆ ಸ್ವಲ್ಪವೂ ಸಮಾಧಾನವೀಯಲಿಲ್ಲ. ರಾಣಿಯು ತನ್ನ ಪತಿಯನ್ನು ಈ ವಿಚಾರದ ಕುರಿತಾಗಿ ಆಗಾಗ ಎಚ್ಚರಿಸುತ್ತ ಇರುತ್ತಿದ್ದಳು. ಕೊನೆಗೆ ರಾಜನಿಗೆ ರಾಣಿಯ ಸೂಚನೆ ಸರಿಯೆಂದು ಕಂಡು ಬಂದಿತು. ಆ ಬಳಿಕ ಆತನು—'ತಾನು ಸ್ವತಂತ್ರ ರಾಜ'ನೆಂದು ಘೋಷಣೆ ಹೊರಡಿಸಿ ತನ್ನ ರಾಜ್ಯವಾಗಿ ಬುಂದೇಲ ಖಂಡವನ್ನು ಸ್ವತಂತ್ರವಾಗಿ ಆಳ ತೊಡಗಿದನು. ರಾಣಿ ಸಾರಂಧಾ ರಾಜ್ಯ ಸೂತ್ರಗಳ ಕುರಿತು ಸಲಹೆ ಸೂಚನೆಗಳನ್ನೀಯುತ್ತಿದ್ದಳು. ಇಂತು ಸಮರ್ಪಕವಾಗಿ ರಾಜ್ಯ ಭಾರ ನಡೆಯುತ್ತಿತ್ತು.

ಸುಮಾರು ಸನ್ ೧೬೫೮ರಲ್ಲಿ ಔರಂಗಜೇಬನಿಗೆ ದಾರಾನೊಡನೆ ಯುದ್ಧಮಾಡಬೇಕಾದ ಸಂದರ್ಭ ಬಂದೊದಗಿತು. ಆ ಸಮಯದಲ್ಲಿ ಔರಂಗಜೇಬನು ರಾಜಾ ಚಂಪತರಾಯನಿಂದ—ಸಹಾಯವನ್ನು ಅಪೇಕ್ಷಿಸಿದನು. ಈ ಯುದ್ಧದಲ್ಲಿ ರಾಜನೊಡನೆ ರಾಣಿ ಸಾರಂಧಾ ಕೂಡಾ ಭಾಗವಹಿಸಿದ್ದಳು. ರಾಣಿಯ ಮತ್ತು ರಾಜನ ಸಾಹಸ, ಚಾತುರ್ಯಗಳಿಗೆ ಮೆಚ್ಚಿದ ಔರಂಗಜೇಬನು ಒಂದು ಜಹಗೀರನ್ನೂ ಮತ್ತೊಂದು ಕುದುರೆಯನ್ನೂ ಕೊಟ್ಟು, ರಾಣಿ ಸಾರಂಧಾ ಮತ್ತು ರಾಜಾ ಚಂಪತರಾಯನನ್ನು ಗೌರವಿಸಿದನು.

ಆದರೆ ಕೆಲವು ಕಾಲದ ಬಳಿಕ ಔರಂಗಜೇಬನ ದೂರದೃಷ್ಟಿ ರಾಣಿ ಸಾರಂಧಾಳನ್ನು ಉಳಿಸಬಾರದೆಂದು ಕಂಡುಕೊಂಡಿತು. ಸಜ್ಜನರು ಉಪಕಾರಮಾಡಿದವರಿಗೆ ಎಂದೂ ಅಪಕಾರ ಮಾಡಲಾರರು. ಆದರೆ ದುರ್ಜನರಿಗೆ ಉಪಕಾರ ಮಾಡಿದಷ್ಟೂ ಅವರ ಉಪಟಳ ಹೆಚ್ಚುತ್ತದೆ. ದುರ್ಜನರು ಅಪಕಾರಕ್ಕೆ ಬಗ್ಗಿ ನಡೆಯುವರೇ ಹೊರತು, ಉಪಕಾರಕ್ಕಲ್ಲ! ಎಂಬುದನ್ನು ದೃಢಪಡಿಸುವಂತೆ ಔರಂಗಜೇಬನು ರಾಜಾ ಚಂಪತರಾಯನನ್ನೂ ರಾಣಿಯನ್ನೂ ಮುರಿದಿಕ್ಕಬೇಕೆಂದು ನಿಶ್ಚಯಿಸಿ, ಯಾವುದೋ ಒಂದು ನೆಪ ಹೂಡಿ ತನ್ನ ದೊಡ್ಡ ಸೇನೆಯನ್ನ ಬುಂದೇಲ ಖಂಡಕ್ಕೆ ಕಳಿಸಿಕೊಟ್ಟನು.

ರಾಣಿ ಸಾರಂಧಾ, ರಾಷ್ಟ್ರರಕ್ಷಣೆಗಾಗಿ ತನ್ನ ಪ್ರಭುವಿನೊಡನೆ ಯುದ್ಧರಂಗಕ್ಕಿಳಿದಳು. ಭಾರೀ ಸಂಗ್ರಾಮ ನಡೆಯಿತು ರಾಣಿಯ ಚಾತುರ್ಯದಿಂದಾಗಿಯೂ ರಾಜನ ಪರಾಕ್ರಮದಿಂದಾಗಿ ಶತ್ರುಸೇನೆ ಹಿಮ್ಮೆಟ್ಟಿತು. ರಾಜಾ ಚಂಪತರಾಯನು ವಿಜಯಿಯಾದನು.

ತನ್ನ ಸೇನೆ ಪರಾಜಿತವಾದುದನ್ನು ತಿಳಿದ ಔರಂಗಜೇಬನ ತಲೆ ಬಿಸಿಯಾಗಿ ಕಣ್ಣು ಕೆಂಪಾಯಿತು. ಕೂಡಲೇ ಆತನು ಮತ್ತೊಂದು ದೊಡ್ಡ ಸೇನೆಯನ್ನು ಬುಂದೇಲ ಖಂಡಕ್ಕೆ ಕಳುಹಿಸಿದನು. ಹೊಸ ಉತ್ಸಾಹ ಶಕ್ತಿಗಳಿಂದ ಕೂಡಿದ ಆ ಸೈನ್ಯದ ಮುಂದೆ ಚಂಪತರಾಯನ ಸೈನ್ಯದ ಸರ್ವ ಶಕ್ತಿಯೂ ಕುಗ್ಗಿತು. ಬುಂದೇಲ ಖಂಡದ ಸಿಪಾಯಿಗಳೆಲ್ಲರೂ ಮಡಿದರು! ರಾಜಾ ಚಂಪತರಾಯನಿಗೆ ವಿಶೇಷಗಾಯಗಳಾದುವು. ಇನ್ನು ಉಳಿಗಾಲವಿಲ್ಲವೆಂದರಿತ ರಾಜನು ಹಗೆಗಳ ಕಣ್ಣಿಗೆ ಮಣ್ಣೆರಚಿ ರಾಣಿಯ ಸಮೇತ ಹೇಗೋ ಅರಣ್ಯದ ದಾರಿ ಹಿಡಿದು ಹೊರಟುಹೋದನು. ಆದರೆ ಆತನನ್ನೇ ಅರಸುತ್ತಿದ್ದ ವೈರಿಗಳು ಬೆನ್ನಟ್ಟಿ ಹೋದರು. ರಾಜನೂ ರಾಣಿಯೂ ಬಹು ಬೇಗನೆ ಸಿಕ್ಕಿ ಬೀಳುವುದರಲ್ಲಿದ್ದರು

ಮೊದಲೇ ಗಾಯಗೊಂಡು ಶಕ್ತಿಹೀನನಾಗಿದ್ದ ರಾಜನಿಂದ ಹೆಚ್ಚು ದೂರ ಓಡಲಾಗಲಿಲ್ಲ. ಬಹುದೂರ ಓಡಿ ಬಂದ ಬಳಿಕ ಪುನಃ ವೈರಿಗಳ ಸೆರೆಸಿಕ್ಕಿ ಹಿಂಸೆಗೊಳಗಾಗಿ ಪ್ರಾಣ ಬಿಡುವುದಕ್ಕಿಂತ ವೈರಿಗಳು ಹಿಡಿಯುವ ಮುನ್ನ ಸ್ವತಂತ್ರವಾಗಿ ಸಾಯುವುದೇ ಲೇಸೆಂದು ಬಗೆದ ರಾಜಾ ಚಂಪತರಾಯನು ತಡ ಮಾಡದೆ ತನ್ನ ಪ್ರಿಯ ಪತ್ನಿ ಸಾರಂಧಾಳೊಡನೆ ಹೇಳಿದನು—"ಪ್ರಿಯೆ! ಅದೋ ನೋಡು! ವೈರಿಗಳು ಬರುತ್ತಿರುವರು—ಇನ್ನು ಅವರ ಕೈಗೆ ಸಿಕ್ಕಿ ಹಿಂಸೆಗೊಳಗಾಗಿ—ಸಾಯುವುದಕ್ಕಿಂತ ಸ್ವತಂತ್ರವಾಗಿ ಈ ಪ್ರಾಣಪಕ್ಷಿಯನ್ನು ಹಾರಿಸಬೇಕೆಂದಿರುವೆನು! ಈ ಗಾಯಗಳ ನೋವನ್ನು ತಡೆಯಲಾರೆ! ನೀನು ಈಕ್ಷಣವೇ ಹಿಂದು ಮುಂದು ನೋಡದೆ ಇದು ನನ್ನ ಅಂತಿಮ ಇಚ್ಛೆಯೆಂದು ತಿಳಿದು, ಆಪದ್ಧರ್ಮವೆಂದು ಭಾವಿಸಿ ನಿನ್ನ ಖಡ್ಗದಿಂದಲೇ ನನ್ನನ್ನು ತುಂಡರಿಸಿ ತೀರಿಸಿಬಿಡಬೇಕು! ಅದೋ ವೈರಿಗಳು ಹತ್ತಿರ....ಹತ್ತಿರ ಬಂದೇ ಬಿಟ್ಟರು! ಯೋಚಿಸಲು ಸಮಯವಿಲ್ಲ! "ಹೂಂ! ಬೇಗ! ಬೇಗ!" ಎನ್ನುತ್ತ ಗಾಬರಿಗೊಳ್ಳುತ್ತಿರುವ ತನ್ನ ಪತಿದೇವನನ್ನು ಕಂಡಾಗ ಪತಿಭಕ್ತೆಯಾದ ರಾಣಿಗೆ ಎದೆಯೊಡೆದಂತೆ ಭಾಸವಾಯಿತು! ಆಕೆಯ ಮುಖ ಕಪ್ಪಿಟ್ಟಿತು! 'ತನ್ನ ಸಮಸ್ತ ಸೌಭಾಗ್ಯದ ನಿಧಿಯಂತಿರುವ ಆರಾಧ್ಯ ದೇವನನ್ನು ತನ್ನ ಹಸ್ತದಿಂದಲೇ ಕೊಲ್ಲಬೇಕಾಯ್ತಲ್ಲ—ದೌರ್ಭಾಗ್ಯ, ಒಂದೆಡೆಯಿಂದಲಾದರೆ ಮತ್ತೊಂದೆಡೆಯಿಂದ ತನ್ನ ಪತಿಯ ಆಜ್ಞೆ' ಸ್ವಾಮಿಯ ಅಂತಿಮ ಇಚ್ಛೆ' ರಾಣಿ ಸಾರಂಧಾ ಆಕ್ಷಣವೇ ಮರುಮರುಗಿ ಜೀವನ್ಮೃತಳಾದಳು! ಆದರೆ ಉಪಾಯವೇನ? ವೈರಿಗಳು ಆಗಲೇ ತೀರ ಸಮೀಪಕ್ಕೆ—ಬರುತ್ತಿರಲು ಚಂಪತರಾಯನು ಗಾಬರಿಗೊಂಡು ತನ್ನ ಪ್ರಿಯತಮೆಯೊಡನೆ, ಅಂಗಲಾಚಿ ಬೇಡಿಕೊಳ್ಳುತ್ತಿರಲು. ಅಂತಹ ಸನ್ನಿವೇಶದಲ್ಲಿ ಕಲ್ಲಾದರೂ ಕರಗಿ ಹೋಗಬಹುದ! ಆದರೆ ಪತಿಯಾಜ್ಞೆಯಿಂದ ಕಟ್ಟಲ್ಪಟ್ಟ ರಾಣಿ—'ಪತಿದೇವಾ! ಇದು ನಿನ್ನ ಸೇವೆ! ಆ ಪತ್ನಿಧರ್ಮದ ಪರಮಾವಧಿ!' ಎಂದು ಹೇಳುತ್ತ ಪತಿದೇವನ ಚರಣಕಮಲಗಳನ್ನು ಕಣ್ಣೀರಿನಿಂದ ತೊಳೆದು ಕೊನೆಯ ಬಾರಿ ವಂದಿಸಿ—"ಸ್ವಾಮೀ! ಇಗೋ! ಎನ್ನುತ್ತ ತನ್ನ ಖಡ್ಗದಿಂದ ಕ್ಷಣಮಾತ್ರದಲ್ಲಿ ತನ್ನ ಪತಿಯ ಕೊರಳನ್ನು ಕಡಿದು ಉರುಳಿಸಿ ಕಣ್ಣು ಮುಚ್ಚಿ ತೆರೆಯುವಷ್ಟರಲ್ಲೇ ಅದೇ ಖಡ್ಗದಿಂದ ತನ್ನ ಕೊರಳನ್ನೂ ಕಡಿದುಕೊಂಡು "ಹಾಯ್!" ಎನ್ನುತ್ತ ತನ್ನ ಸ್ವಾಮಿಯ ದೇಹದ ಮೇಲೆ ಬಿದ್ದುಬಿಟ್ಟಳು!

ಮೊಗಲ್ ಸೈನಿಕರು ಹತ್ತಿರಬಂದು ನೋಡುತ್ತಾರೆ! ಅಲ್ಲಿ ಬಿಸಿರಕ್ತ ಹರಿಯುತ್ತಿದೆ! ರಾಣಿ ಸಾರಂಧಾ ಮತ್ತು ಆವಳ ಪತಿ ಆಗತಾನೆ ಶಿರಚ್ಛೇದ ಮಾಡಿಕೊಂಡು ರಕ್ತದ ಮಡುವಿನಲ್ಲಿ ಹೊರಳಾಡುತ್ತಿದ್ದಾರೆ! ಭಾರತೀಯರ ಈ ಅದ್ಭುತ ಶಕ್ತಿ ಧೈರ್ಯಗಳನ್ನು ಕಣ್ಣಾರೆ ಕಂಡ ಆ ಮೊಗಲ್ ಸೈನಿಕರು ಒಂದು ಕ್ಷಣ ಕಬ್ಬಿಬ್ಬಾಗಿ ನೋಡುತ್ತ ನಿಂತುಬಿಟ್ಟರು!

ಸ್ವಧರ್ಮ ರಕ್ಷಣೆಗಾಗಿ ಸ್ವಹಸ್ತದಿಂದ ಪತಿಯನ್ನು ಕೊಂದು ತನ್ನನ್ನೂ ಕೊನೆಗಾಣಿಸಿಕೊಂಡ ವೀರ ನಾರಿ ಸಾರಂಧಾ ಇತಿಹಾಸದಲ್ಲಿ ಧೀರನಾರಿಯಾಗಿ ಶೋಭಿಸುತ್ತಿರುವಳು!

"ಮಮತಾಮಹಿಮೆಯಿಂದಿರಲ್ಕೆ ಭುವಿ
ಯೊಳ್ ಸ್ತ್ರೀರೂಪದಿಂ ಬಂದಿಹಳ್
ಸಮತಾಭಾವದೆ ಮಾತೆ, ಪತ್ನಿ, ಸುತೆ
ಯೆಂಬೀ ರೂಪದಿಂ ರಂಜಿಪಳ್
ಸಮವೆಂದುಂ ಸುಖ ದುಃಖದೊಳ್ ಪ್ರಪ
ಪರಾ ಬೆಂಗಾವಲಂತಿರ್ದು[illegible]
ನಮಿತಾನಂದವನೀವಳಲ್ತೆ, ಧರೆಯೊಳ್
ಶ್ರೀ ಶೀಲ ಶಾರೀಶ್ವರೀ॥"

ನಮ್ಮ-ನಮ್ಮವರು

(೧ನೇ ಪುಟದಿಂದ)

ಗೃಹಮಂತ್ರಿ ಚಾಕೋರವರ ಮೇಲಿನ ಅಪವಾದವೇನೆಂದು ಹೆಚ್ಚಿನವರು ಅರಿತಿಲ್ಲ. ಮುಖ್ಯಮಂತ್ರಿ ಆರ್. ಶಂಕರರು ಬಿಟ್ಟುಕೊಡಲು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದರೂ ಚಾಕೋರವರು ರಾಜೀನಾಮೆ ನೀಡುವುದಕ್ಕೆ ಸಮ್ಮತಿಸಲಿಲ್ಲ ಇದಕ್ಕಾಗಿ ಮುಖ್ಯಮಂತ್ರಿಯವರೇ ರಾಜೀನಾಮೆನೀಡಿ, ಮಂತ್ರಿಮಂಡಳಿಯನ್ನು ಪುನರ್ಘಟಿಸುವುದನ್ನೂ ಯೋಚಿಸಿದರು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಈ ಜಟಿಲ ಸಮಸ್ಯೆಯನ್ನು ಬಗೆಹರಿಸುವುದಕ್ಕೆಂದು ತಿರುವನಂತಪುರಕ್ಕೆ ಹೋಗಿ ಬಂದರು. ಅಲ್ಲಿ ಅವರು ಯಾವ ಸೂತ್ರವನ್ನು ಮುಂದಿಟ್ಟರೋ ತಿಳಿಯದು. ಅವಶ್ಯಕಂಡರೆ, ತಾನು ಇನ್ನೊಮ್ಮೆ ಅಲ್ಲಿಗೆ ಹೋಗುವುದಾಗಿ ಹೇಳಿದ್ದಾರೆ. ಅಧ್ಯಕ್ಷತನದ ಎಳೆತನದಲ್ಲಿಯೇ ಹಲವಾರು ಸಮಸ್ಯೆಗಳನ್ನು ಎದುರಿಸುವಲ್ಲಿ ಎದೆಗಾರಿಕೆಯನ್ನು ತೋರಿಸಿದ ಕಾಮರಾಜರು ಯಶಸ್ವೀ ಅಧ್ಯಕ್ಷರಾಗಬಲ್ಲರೆಯುವರೆ?

ದ. ಕ. ಮಂಗ್ಳೂರು ಸಬ್ ಜಡ್ಜರ ಕೋರ್ಟಿನಲ್ಲಿ (I Additional)

R. I. A. 1306/63- O.S. 83/57.

ಶಂಭಾ ಹೆಂಗಸು ಕೂಡಾ —ಅರ್ಜಿದಾರರು
ಆನಂದ ಅಜಿಲ ಕೂಡಾ—ಪ್ರತಿವಾದಿಗಳು

1ನೇ ಪ್ರತಿವಾದಿ ಆನಂದ ಅಜಿಲ, 2ನೇ ಶ್ರೀಧರ ಅಜಿಲ ಇವರ ಮಗಂದಿರು 3ನೇ ಬಾಲ ಅಜಿಲ ಇವರುಗಳಿಗೆ [illegible]

[illegible] ತಾ. [illegible] O.S. 83/57ರಲ್ಲಿ [illegible] ಕೊಟ್ಟ [illegible] ನ್ಯಾಯಾಲಯದಲ್ಲಿ ದಾಖಲು ಮಾಡಿದ ಅರ್ಜಿಯು ತಾ. 29-2-64ಕ್ಕೆ ಇಟ್ಟಿರುತ್ತದೆ ಸದ್ರಿ ದಿನ ಬೆಳಿಗ್ಗೆ ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಖುದ್ದಾಗಲಿ ವಕೀಲರ ಮೂಲಕವಾಗಲಿ ನೀವು ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ ಹಾಜರಿಯಾಗಿ ಮಾಡಿ ತನಿಖೆ ಮುಂದರಿಸಲಾದೀತು ಎಂತ ಈ ಮೂಲಕ ತಿಳಿಸಿರುತ್ತದೆ.

(By order of court)

K. Vyasa Rao
ಅರ್ಜಿದಾರರ ವಕೀಲರು.

ಮಂಗ್ಳೂರು
4-2-1964.

ಪುತ್ತೂರು ಡಿ ಮು ಕೋರ್ಟಿನಲ್ಲಿ

S. E. A. 59/64, S E. P. 313/63,
S. C. 25/62.

M. Sanjiva Shetty —ಅರ್ಜಿದಾರ
V.
Dharmaraja Bonnu —ಎದ್ರಿ

ಅರ್ಜಿದಾರನು ಎದ್ರಿಯ ಮೇಲೆ ಮಾಡಿದ ಅಮಲ್ದಾರಿಯು ತಾ. 24-2-64ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಣೆ ಇದ್ದರೆ ನೀವು ಆದಿನ ಬೆಳಿಗ್ಗೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉಜರ್ಪಡಿಸದಿದ್ರೆ ನಿಮ್ಮನ್ನು ಗೈರು ಹಾಜರಿ ಎಂತ ಮಾಡಿ ಈ ವ್ಯವಹರಣೆಯನ್ನು ಮುಂದರಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿಯದೆ.

K. Ramachandra Shenoy
Advocate for Petr

ಪುತ್ತೂರು, 29-1-64.

Edited, Printed & Published by K. H.Shetty, at the Navayuga Press, Udipi, S. India.

ನವಯುಗ

VOL. 43 No. 25

NAVAYUGA—Nationalist Weekly ‡‡ ಉಡುಪಿ 20-2-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ನಮ್ಮ ನಮ್ಮವರು



ಡಾ| ಯು. ಎಲ್. ನಾರಾಯಣ ರಾವ್

ತಾನು ಹುಟ್ಟಿದ, ಬೆಳೆದ ಊರುಗಳನ್ನು ಮರೆತು ಇರುವ ಊರನ್ನೇ ಮೆಚ್ಚುವುದು ಸಂಪ್ರದಾಯ. ಆದರೆ, ಉಡುಪಿಯವರಾಗಿದ್ದು ಮದ್ರಾಸಿನಲ್ಲಿಯೇ ನೆಲೆನಿಂತ ಡಾ| ಯು. ಎಲ್. ನಾರಾಯಣ ರಾವ್ ಇವರು ಇದಕ್ಕೊಂದು ಅಪವಾದ. ಡಾ ರಾಯರು ಮತ್ತು ಅವರ ಮಕ್ಕಳು ಮದ್ರಾಸಿನಲ್ಲಿ ಉತ್ತಮ ಡಾಕ್ಟರೆಂದು ಹೆಸರುಗಳಿಸಿದ್ದಾರೆ. ಇದು ದಕ್ಷಿಣಕನ್ನಡ ಜಿಲ್ಲೆಗೊಂದು ಭೂಷಣ. ದಿವಂಗತ ಯು. ರಾಮರಾವ್ ಅವರಂತೆಯೇ ಶ್ರೀ ನಾರಾಯಣರಾಯರು ತಮ್ಮ ಹುಟ್ಟೂರಿಗೆ ಊರಿನ ಜನರಿಗೆ ತನ್ನಿಂದ ಶಕ್ಯವಾದ ಸಹಾಯವನ್ನು ಉಪಕಾರವನ್ನು ಮಾಡುತ್ತಲೇ ಇದ್ದಾರೆ. ಪುಣ್ಯಾತ್ಮನು ತನಗಿರುವ ಸಂಪತ್ತನ್ನು ಪರೋಪಕಾರಕ್ಕಾಗಿ ವಿನಿಯೋಗಿಸುವುದು ಡಾ| ರಾಯರ ಒಂದು ಆದರ್ಶ ಗುಣ.

ಉಡುಪಿಯ ನಾಗರಿಕರಿಗೊಂದು ಅಜ್ಜರಕಾಡಿನಲ್ಲಿ ಉಪವನವನ್ನು ಕಟ್ಟಿಸಿಕೊಟ್ಟವರು ಅವರು. ಇಂದು ನಗರದ ಸಂಧ್ಯಾವಿಹಾರದಿಂದ ಇಲ್ಲಿ ಮನಮೆಚ್ಚುತ್ತಾರೆ. ಶ್ರೀ ಕೃಷ್ಣ ಮಠದ ವಿದ್ಯುತ್ತೀಕರಣದ ಕಾರ್ಯದಲ್ಲಿಯೂ ಇವರ ಉದಾರಹಸ್ತದ ಕೈವಾಡವಿದೆ. ಬೈಲೂರಿನ ಹೈಸ್ಕೂಲಿಗೂ ಇವರು ಧನಸಹಾಯ ನೀಡಿದ್ದಾರೆ. ಇವರಲ್ಲಿಂದ ಸಹಾಯ ಪಡೆಯಲೆಂದು ಹೋದವರು ಬರಿಗೈಯಿಂದ ಮರಳಿದುದೆಂಬುದಿಲ್ಲ.

ಮನೋವಾಕ್ಕಾಯಗಳಿಗೆ ಹೊಂದಿಕೊಳ್ಳುವ ಪತ್ನಿಯು ಕಮಲಾಬಾಯಿಯವರು ಡಾ| ರಾಯರ ಹೃನ್ಮನಗಳನ್ನು ಸೂರೆಗೊಂಡಿದ್ದರು. ಎರಡು ವರ್ಷಗಳಿಗೆ ಮೊದಲು ತಮ್ಮ ಪತ್ನಿ ದಿವಂಗತರಾದ ಬಳಿಕ ಅವರ ಸವಿ ನೆನಪಿನ ಹೆಸರಿನಲ್ಲಿ ಉಡುಪಿಯ ಬಗ್ಗೆ ಅವರು ತೋರಿಸಿದ ಉದಾರತೆಯು ಡಾ| ರಾಯರ ದಾಂಪತ್ಯ ಪ್ರೇಮವನ್ನು ಅಚ್ಚೊತ್ತುತ್ತಿದೆ. ಯು. ಕಮಲಾಬಾಯಿಯವರ ಸ್ಮಾರಕವಾಗಿ ದಿವಂಗತೆಯರು ಬಾಲ್ಯದಲ್ಲಿ ಕಲಿಯುತ್ತಿದ್ದ ಉಡುಪಿಯ ಕಡಿಯಾಳಿ ಗರ್ಲ್ಸ್ ಎಲಿಮೆಂಟರಿ ಶಾಲೆಗೆ ಸುಮಾರು ರೂ ೩,೦೦೦ಕ್ಕು ಮಿಕ್ಕಿದ ವೆಚ್ಚದಿಂದ ಕಮಲಾ ಬಾಯಿ ಹಾಲ್‌ನ್ನು ನಿರ್ಮಿಸಿ ಕೊಟ್ಟರು. ಕಳೆದ ಜೂನಿನಲ್ಲಿ ರೂ ೩೦,೦೦೦ಗಳಷ್ಟು ದಾನವಾಗಿತ್ತು ಕಡಿಯಾಳಿಯಲ್ಲಿಯೇ ಯು. ಕಮಲಾ ಬಾಯಿ ಹೈಸ್ಕೂಲಿನ ರಚನೆಗೆ ಆಧಾರಸ್ತಂಭವೆನಿಸಿದರು. ಪರಮ ಸಾಧ್ವೀಮಣಿ ಕಮಲಾ ಬಾಯಿಯ ಮರಣದಿಂದ ಡಾ| ರಾಯರು ತುಂಬ ವ್ಯಥೆಗೀಡಾಗಿದ್ದಾರೆ.

ಸರಳ ಹೃದಯರಾದ ರಾಯರು ಆಡಂಬರಪ್ರಿಯರಲ್ಲ, ಪ್ರಶಂಸಾಭಿಲಾಷಿಯಲ್ಲ. ಎಲೆಮರೆಯ ಕಾಯಿಯಂತೆ ಅವರು ಎಂದರೆ ಅದು ಸತ್ಯಕ್ಕಿಂತ ಹೊರಗಲ್ಲ. ಜನಾನುರಾಗಿಗಳಾದ ರಾಯರು ಅಷ್ಟೇ ಧಾರ್ಮಿಕರು, ಸಾತ್ವಿಕ ಜೀವನಕ್ಕೆ [illegible]ಗವರು. ಅವರು ತಮಿಳುನಾಡಿನಲ್ಲಿ ಹೊಳೆಯುವ ಕನ್ನಡದ ಅಮರ ರತ್ನವೆಂದು ಹೇಳಬೇಕು.

ಡಾ| ಟಿ. ಮಾಧವ ಪೈ

ಉಡುಪಿಯ ಪ್ರಗತಿಪಥ ಗಮನದಲ್ಲಿ ಅಭಿನಂದನೀಯ ಪಾತ್ರ ವಹಿಸಿದ ಡಾ| ಟಿ. ಮಾಧವ ಪೈಯವರ ಹೆಸರನ್ನು ಪ್ರತಿಯೊಬ್ಬರೂ ಕೇಳಿದ್ದಾರೆ. ಅವರು ಎಲ್ಲ ಕಾಲೇಜುಗಳನ್ನೂ ಇನ್ನಿತರ ಅಪ್ಪಟ ವಿದ್ಯಾ ಹಾಗೂ ಆರೋಗ್ಯ ಸಂಸ್ಥೆಗಳನ್ನೂ ಸ್ಥಾಪಿಸಿ ಅವನ್ನು ಸಮರ್ಥ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರುವ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನ ರಿಜಿಸ್ಟ್ರಾರರೂ, ನಮ್ಮ ದೇಶದ ಅತಿ ದೊಡ್ಡ ಬ್ಯಾಂಕುಗಳಲ್ಲಿ ಒಂದಾದ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನ ಅಧ್ಯಕ್ಷರೂ ಆಗಿದ್ದಾರೆ. ಡಾ| ಪೈಯವರು [illegible]ರಲ್ಲಿ ಉಡುಪಿ ರೋಟರಿ ಕ್ಲಬ್ಬನ್ನು ಸ್ಥಾಪಿಸಿ ಅದರ ಮೊದಲ ಅಧ್ಯಕ್ಷರಾಗುವ ಗೌರವ ಪಡೆದರು. ಅಂದಿನಿಂದಲೂ ಈ ಕ್ಲಬ್ ಸಮಾಜಕ್ಕೆ ನಾನಾ ಪ್ರಕಾರವಾಗಿ ಗಣನೀಯ ಸೇವೆಯನ್ನು ಸಲ್ಲಿಸುತ್ತ ಇದೆ.

ಡಾ| ಮಾಧವ ಪೈಯವರು ಇತ್ತೀಚೆಗೆ ಮೈಸೂರಿನಲ್ಲಿ ಸಮಾವೇಶಗೊಂಡ ರೋಟರಿ ಜಿಲ್ಲಾ ಸಮ್ಮೇಳನದಲ್ಲಿ ೧೯೬೪-೬೫ನೆಯ ಸಾಲಿಗೆ ಅಂತಾರಾಷ್ಟ್ರೀಯ ರೋಟರಿ ಸಂಸ್ಥೆಯ ೩೨೦ನ ಜಿಲ್ಲೆಯ ಗವರ್ನರರಾಗಿ ಚುನಾಯಿತರಾಗಿದ್ದಾರೆ. ಇದುವರೆಗೆ ಕೇವಲ ಉಡುಪಿಯ ಮಟ್ಟಿಗೆ ಪರಿಮಿತವಾದ ಡಾ| ಪೈಯವರ ರೋಟರಿ ಚಟುವಟಿಕೆಗಳ ಪ್ರಭಾವ ಇನ್ನು ಇಡಿಯ ರೋಟರಿ ಜಿಲ್ಲೆಯ ಮೇಲೆ ಬೀಳುವುದು. ಹೋದಲ್ಲಿ ಒಂದಲ್ಲಿ ನವ ಪ್ರಾಣ ಪ್ರತಿಷ್ಠೆ ಮಾಡುವ ಗಾರುಡಿಗರಂತಿರುವ ಡಾ| ಪೈಯವರು ಮುಂದಿನ ಜುಲೈ ತಿಂಗಳಲ್ಲಿ ತಮ್ಮ ಹೊಸ ಹುದ್ದೆಯನ್ನು ಶ್ರೀ ಫರಬ್ ಇರಾನಿಯವರಿಂದ ವಹಿಸಿಕೊಳ್ಳಲಿರುವವರು.

ಡಾ| ಪೈಯವರು ಹೊಸ ಹುದ್ದೆಯಲ್ಲಿ ಪರಿಪೂರ್ಣ ಯಶಸ್ವಿಯಾಗುವರು, ಅವರ ಗವರ್ನರ್ ಅವಧಿಯಲ್ಲಿ ರೋಟರಿಯಲ್ಲಿ ಹೊಸ ಪ್ರಾಣ ಸಂಚಾರವಾದರೆ ಆತಿಶಯವಲ್ಲ.

ಶ್ರೀ ರೋಕ್ ಫೆರ್ನಾಂಡೀಸ್

ಉಡುಪಿಯ ಬೋರ್ಡು ಹೈಸ್ಕೂಲಿನಲ್ಲಿ ಬಹಳ ದೀರ್ಘ ಕಾಲ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ರೋಕ್ ಫೆರ್ನಾಂಡೀಸರು ಆದರ್ಶ ಶಿಕ್ಷಕರು, ಕ್ರಿಯಾಪಟುಗಳು, ಕಾರ್ಯಕುಶಲರು. ಅವರು ನಿವೃತ್ತರಾಗಿ ವರ್ಷಗಳು ಹದಿನೈದು ಕಳೆಯುತ್ತ ಬಂದರೂ ಅವರನ್ನು ಶಾಲೆ ಮರೆಯಲಿಲ್ಲ, ಶಾಲೆಯನ್ನು ಅವರೂ ಮರೆತಿಲ್ಲ. ಹೈಸ್ಕೂಲಿನ ಆವರಣದಲ್ಲಿರುವ ಭವ್ಯವಾದ "ಜನತಾ ಭವನ"ವನ್ನು ಜನತೆಯ ಸಹಾಯದಿಂದ ಕಟ್ಟಿಸಲು ಅಧ್ವರ್ಯವಾಗಿ ನಿಂತ ಧೀರ ಸೇನಾನಿ ಶ್ರೀ ಫೆರ್ನಾಂಡೀಸರು. ಈ ಭವನವೇ ಸದಾ ಇವರ ಹೆಸರನ್ನು ಸಾರಿ ಹೇಳಬಲ್ಲುದು. ಇಂತಹ ಆದರ್ಶ ಮಾರ್ಗದರ್ಶಕ ಅಧ್ಯಾಪಕರ ತೈಲ ಚಿತ್ರವನ್ನು ಹಳೆಯ ವಿದ್ಯಾರ್ಥಿ ಸಂಘದವರು ಅನಾವರಣಗೊಳಿಸಿದುದು ನ್ಯಾಯೋಚಿತ.

ಶ್ರೀ ರೋಕ್ ಫೆರ್ನಾಂಡಿಸರದು ದೀರ್ಘ ಆದರೆ ಕೃಶ ಶರೀರ. ವೃದ್ಧಾಪ್ಯವು ಅವರನ್ನು ಆಕ್ರಮಿಸಿದೆಯಾದರೂ ಅವರ ಕಾರ್ಯಚಟುವಟಿಕೆಗಳಿಗೆ ಆತಂಕವೊಡ್ಡಲು ಸಮರ್ಥವಾಗಿಲ್ಲ. ಮುಪ್ಪು ೪೦ ಎಲ್ಲ.

ಉಡುಗೆತೊಡುಗೆಯಲ್ಲಿ ಸರಳರಾದ ಶ್ರೀ ಫೆರ್ನಾಂಡೀಸರದು ಸರಳ ಹೃದಯವೂ ಹೌದು. ಅಧ್ಯಾಪಕರಿಗೆ ಸಹಜ, ಆದರೆ ಅನಿವಾರ್ಯವಾಗಿ ಬೇಕಾದ ಎಲ್ಲ ಗುಣಗಳೂ ಇವರಲ್ಲಿ ಪರಿಪೂರ್ಣವಾಗಿವೆ. ಕೋಪ ಬಂದಾಗ ಗದರಿಸುವುದು, ಮುಂದೆ ಬೆನ್ನು ತಟ್ಟಿ ಸಮಾಧಾನ ಪಡಿಸುವುದು ಇವರ ಉತ್ತಮ ಗುಣ. ತಾನು ಮುಖ್ಯೋಪಾಧ್ಯಾಯರಾಗಿದ್ದಾಗ, ತನ್ನ ವಿದ್ಯಾರ್ಥಿಗಳಿಗೂ ಅವರ ಹೆತ್ತವರಿಗೂ, ನಾಗರಿಕರಿಗೂ ಬೇಕಾದವರಾಗಿದ್ದ ಇವರು ಇಂದಿಗೂ ಅದೇ ರೀತಿಯಲ್ಲಿದ್ದಾರೆ. ಸಾರ್ವಜನಿಕ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸುವ ಶ್ರೀ ಫೆರ್ನಾಂಡೀಸರು ಆದರೆ [illegible] ಮುಂಗಾಣುವುದಿಲ್ಲ. ತನ್ನಿಂದ ಸಾಧ್ಯವಾದ ಎಲ್ಲ ಕಾರ್ಯಗಳನ್ನೂ ಇವರು ಮಾಡುತ್ತಾರೆ, ಶಿಕ್ಷಣರಂಗದಲ್ಲಿ ಇ

(೧೧ನೇ ಪುಟ ನೋಡಿರಿ)

ಧಾರಾವಾಹಿ ಕಥೆ

ಆ ಹೆಂಗಸು....

ಬರೆದವರು: ಶ್ರೀಮತಿ ದೇವಕಿ ಡಾ| ಎಂ. ಶೆಟ್ಟಿ, ಬೀರೂರು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

೨

ಬುಧವಾರ ಹನ್ನೊಂದು ಘಂಟೆಗೆ ಬೆಲ್ ಶಬ್ದ ಕೇಳಿ ನಾನೂ ಅತ್ತೆಯೂ ಹೊರಗೆ ಬಂದೆವು.

೨೦ ವರುಷದ ತರುಣಿ ನಿಂತಿದ್ದಳು ಕೈಯ್ಯಲ್ಲಿ ಒಂದು ಕೈಚೀಲದೊಡನೆ ಹೇಳಿಕೊಳ್ಳುವಂತಹ ರೂಪವಲ್ಲದಿದ್ದರೂ ನೋಡಿದವರಿಗೆ ಮತ್ತೊಮ್ಮೆ ನೋಡೋಣ ಎಂಬಂತಿದ್ದಳು. ಅದಕ್ಕೆ ಕಾರಣ ಅವಳ ಜಿಂಕೆಯ ಕಣ್ಣಿನಂತಹ ಕಣ್ಣುಗಳು ಮಾತ್ರ..

"ನಮಸ್ತೆ, ಮೇಡಂ."

"ನಮಸ್ತೆ, ನೀನ್ಯಾರಮ್ಮ?"

"ನೀವು "ಪಂಜಾಬಿ ಡ್ರೆಸಸ್" ನಲ್ಲಿ ಹೊಲಿಯಲು ಕೊಟ್ಟ ಬ್ಲೌಸ್‌ಗಳನ್ನು ತಂದಿದ್ದೇನೆ. ಏನಾದರೂ ದೋಷ ಇದ್ದರೆ ಈಗಲೇ ತೊಟ್ಟು ನೋಡಿ ಹೇಳಿ. ನಿಮ್ಮ ಮನಸ್ಸಿಗೆ ಒಪ್ಪುವಂತಹ ರೀತಿಯಲ್ಲಿ ಮತ್ತೆ ಸರಿಪಡಿಸಿ ತರುತ್ತೇನೆ" ಎಂದು "and here is the bill" ಎಂದು ಬಿಲ್ಲೂ ಕೊಟ್ಟಳು. ಅವಳನ್ನು ಕುಳ್ಳಿರಿಸಿ ನಾವಿಬ್ಬರೂ ನಮ್ಮ ನಮ್ಮ ಬ್ಲೌಸ್‌ಗಳನ್ನು ತೊಟ್ಟು ಏನಾದರೂ ತಪ್ಪು ಇದೆಯೋ ಎಂದು ನೋಡಿದೆವು. ಅವು ಸರಿಯಾಗಿದ್ದುವು.

ಅತ್ತೆ ಅವಳಿಗೆ ಕಾಫಿ ಕೊಟ್ಟರು. ಬಿಲ್ಲಿನ ಹಣವನ್ನು ಕೊಟ್ಟರು. ಅಷ್ಟರಲ್ಲಿ ಗೊತ್ತೇ ಇದೆಯಲ್ಲ ಮದ್ರಾಸಿನ ಮಳೆಯ ಹುಚ್ಚುತನ. ಹಾಗೇ ಪ್ರಖರವಾದ ಬಿಸಿಲಿದ್ದಂತೆಯೇ ಒಮ್ಮೆಗೇ ಬಿಸಿಲಡಗಿ ಭೋರೆಂದು ಮಳೆ ಬಂತು. ಆ ಹುಡುಗಿ ಹೋಗುವುದಾದರೂ ಹೇಗೆ? ಅತ್ತೆಯ ಮನಸ್ಸಿನಲ್ಲಿಯೂ ಅವಳಲ್ಲಿ 'ಆ ಹೆಂಗಸಿನ' ಬಗ್ಗೆ ಕೇಳಬೇಕೆಂದು ಆಸೆಯಾಗುತ್ತಿತ್ತು.

ನಾಜೂಕಾಗಿಯೇ ಶುರು ಮಾಡಿದರು.

"ಮಗೂ, ನೀನೇನೂ ತಿಳಕೊಳ್ಳದಿದ್ದರೆ ನಿನ್ನಲ್ಲಿ ಒಂದು ವಿಷಯ ಕೇಳೋಣಾಂತ ಇದ್ದೇನೆ."

"ಏನಮ್ಮ ಅದು?"

"ಪಂಜಾಬಿ ಡ್ರೆಸಸ್"ನಲ್ಲಿ ಒಬ್ಬರು ಹೆಂಗಸು ಇದ್ದಾರಲ್ಲ, ಅವರು ಯಾರು? ಅವರು ಯಾಕೆ ಬಹಳ ಚಿಂತೆಯಲ್ಲಿದ್ದಂತೆ ಕಾಣುತ್ತಾರೆ?"

ಅವಳು ಸ್ವಲ್ಪ ಹೊತ್ತು ಸುಮ್ಮನಿದ್ದಳು. ಮತ್ತೆ ಅಂದಳು.

"ಯಾವ ಸುದ್ದಿಯೂ ಕೇಳಬೇಡಿ ಅಮ್ಮ ೬-೭ ವರುಷಗಳ ಹಿಂದಿನ ಘಟನೆಯಾದರೂ ನಾವು ಸಾಯುವ ತನಕವೂ ಆದರಿಂದ ಎಳ್ಳು ಕಾಳಿನಷ್ಟು ಅನುಭವವನ್ನೂ ಮರೆತು ಜೀವಿಸುವಂತಿಲ್ಲ."

"ಹೌದು ಮಗು, ಅಂತಹ ಘೋರ ಪ್ರಸಂಗಗಳು, ಮನಸ್ಸಿನ ಮೇಲೆ ಅಳಿಸಲಾರದ ಬರೆಗಳು ಬಿದ್ದರೆ ಯಾರಿಗೆ ತಾನೇ ಸಹಿಸಲು, ಮರೆಯಲು ಬರುತ್ತದೆ ಹೇಳು. ನಿನ್ನ ಮನಸ್ಸಿಗೆ ನೋವಾದರೆ ಹೇಳಬೇಡ ಬಿಡು" ಎಂದರು ಅತ್ತೆ. ಆ ಹುಡುಗಿಯ ಕಣ್ಣು ಆಗಲೇ ತುಂಬಿ ನಿಂತಿತ್ತು. ಮಳೆ ಭೋರೆಂದು ಸುರಿಯುತ್ತಲೇ ಇತ್ತು!!

ಸ್ವಲ್ಪ ಹೊತ್ತು ಸುಮ್ಮನಿದ್ದವಳು ಮತ್ತೆ ಹೇಳಿದ ಸಂಗತಿ ಇದು. "Panjab dresses"ನಲ್ಲಿ ನಿಂತಿದ್ದ "ಆ ಹೆಂಗಸು" ಅವಳ ತಾಯಿ. ಆ ಹೆಂಗಸು ಯಾವ ತರಹ ಬೇಕಾದರೂ ಹೊಲಿಯುತ್ತಿದ್ದಳು ಆದರೂ ಅದಕ್ಕೆ ಚಿತ್ತ ಭ್ರಮೆ. ಮನೆಯಲ್ಲಿ, ಹೊರಗೆ ಎಲ್ಲಿಯೂ ಯಾರೊಡನೆಯೂ ಮಾತಿಲ್ಲ. ಆದರೂ ಯಂತ್ರದಂತೆ ಒಂದಿಷ್ಟೂ ಕುಂದಿಲ್ಲದಂತೇ ಒಂದೇ ಸಮನೆ ಹೊಲಿಯುತ್ತಾಳೆ. ಅಲ್ಲಿ ಇದ್ದ ಸಿದ್ಧ ಅಂಗಿಗಳಲ್ಲಿ ಅರ್ಧದಷ್ಟು ಅವಳೇ ನನಗೆ ತಿಳಿದ ಒಂದೊಂದು ತರದ ಮಾದರಿಯಲ್ಲಿ ಹೊಲಿದಿದ್ದಳು. ಆದರೂ ಕೆಲವೊಮ್ಮೆ ಬಟ್ಟೆಗಳನ್ನೆಲ್ಲ ಹೊಲಿಯುತ್ತಿದ್ದಂತೆ ಚೂರು, ಚೂರಾಗಿ ಹರಿದು ಬಿಸಾಡಿ ತಲೆಯನ್ನು ಹೊಲಿಗೆ ಯಂತ್ರಕ್ಕೆ ಘಟ್ಟಿಸಿಕೊಳ್ಳುತ್ತಿದ್ದಳು, ಆಕೆಯ ಕಡೆಗೇ ಗಮನವಿಡುತ್ತಿದ್ದ ಕಂಡೆ ಬೇಗ ಹೋಗಿ ಎರಡೂ ಕೈ ಹಿಡಿದು ಅಲ್ಲೇ ಮಲಗಿಸಿ ಬಿಡುತ್ತಿದ್ದರು. ಆಗ ಮಾತ್ರ ಊಟತಿಂಡಿ ಯಾವುದೂ ಇಲ್ಲದೆ ಮೌನವಾಗಿ ಕಣ್ಣೀರು ಹರಿಸುವುದೊಂದೇ ಆಕೆಗೆ ತೃಪ್ತಿಯನ್ನು ಕೊಡುತ್ತಿತ್ತು. ಮತ್ತೆ ೨-೩ ದಿನ ಬಿಟ್ಟು ಮೊದಲಿನಂತೆ ಕೆಲಸಕ್ಕೆ ಗಮನ ಕೊಡುತ್ತಿದ್ದಳು.

ಕಾರಣ?!

ಅವರು ಮುಲ್ತಾನದವರು. ಮುಲ್ತಾನದಲ್ಲಿ ದೊಡ್ಡ ಶ್ರೀಮಂತರು ದೊಡ್ಡದೊಂದು ಹಳ್ಳಿಯೇ ಅವರ ಜಮೀನು. ಕಾಲದ್ದಕ್ಕೆ ಮಾವನೂ ಅಳಿಯನೂ ಸೇರಿ ಹೋಲ್‌ಸೇಲ್ ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಲಕ್ಷ್ಮಿ ಅವರ ಮನೆಯಲ್ಲಿ ಕಾಲು ಮುರಿದು ಬಿದ್ದಿದ್ದಳು.

• ಈ ಹುಡುಗಿಯ ಹೆಸರು ಅಮೃತ, ಇವಳಿಗೆ ಇಬ್ಬರು ತಮ್ಮಂದಿರು, ಒಬ್ಬ ಅಣ್ಣ. ಅವನು ಆಗ ಅಂದರೆ ೧೯೪೭ನೇ ಇಸವಿಯಲ್ಲಿ ೨೩ ವರುಷದ ಸುಂದರ ವಿದ್ಯಾವಂತ ತರುಣ, ಲಾಹೋರ್ ಮೆಡಿಕಲ್ ಕೋಲೇಜಿನಲ್ಲಿ ಕಲಿಯುತ್ತಿದ್ದ. ಅವನ ಹೆಸರು ವಿಮಲ್. ಮನೆಯಲ್ಲಿ, ಮನೆಯೇನು? ಮುಲ್ತಾನದಲ್ಲಿ ಇವರದ್ದೊಂದು ಚಿಕ್ಕ ಅರಮನೆಯೇ, ಅಲ್ಲಿ ಹಣ ಹೊಳೆಯಂತೆ ಹರಿಯುತ್ತಿದ್ದರೂ ಸುಮ್ಮನೆ ಕುಳಿತು ತಿನ್ನಲಾರದೆ ವ್ಯಾಪಾರ ಮಾಡುತ್ತಿದ್ದರು ಅದರಲ್ಲೂ ಬೇಕು ಬೇಡ ಎಂಬಂತೆ ಮಾಡಿದರೂ ಇವರಿಗೆ ನಷ್ಟ ಎಂದೂ ಆಗಿಲ್ಲ. ಅಮೃತನ ತಂದೆ, ಅವಳ ತಾತನ ಅಕ್ಕನ ಮಗನೇ. ಅವರಿಗೂ ತಂದೆಯಿಂದ ಬಹಳಷ್ಟು ಐಶ್ವರ್ಯ ಸಿಕ್ಕಿತ್ತು. ತಾತನಿಗೆ ಇದ್ದ ಇಬ್ಬರು ಹಿರಿಯ ಗಂಡು ಮಕ್ಕಳು ರಾವಲ್ಪಿಂಡಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದರು. ಇಬ್ಬರೂ ಪರದೇಶದಲ್ಲಿ ಓದಿ ಬಂದವರು ಅವರಿಗೂ ಸಂಸಾರ, ಹಿರಿಯವನಿಗೆ ೨ ಮಕ್ಕಳು, ಕಿರಿಯವನಿಗೆ ಒಬ್ಬಳೇ ಮಗಳು. ಅಮೃತನ ಅಜ್ಜಿ ಮಾತ್ರ ಜೀವಿಸಿರಲಿಲ್ಲ. ಇಲ್ಲವಾದರೂ ಅದು ತುಂಬಿನಿಂತ ಸುಖೀ ಸಂಸಾರವಾಗಿತ್ತು.

ಯಾವುದಕ್ಕೆ ಕೊರತೆ?

ಆಳು ಕಾಳೇ?! ಕೈಗೊಂದು ಕಾಲಿಗೊಂದು.!!

ಹಣ? ನೀರಿನಂತೆ ಖರ್ಚು ಮಾಡಿದರೂ ಟ್ರೆಜರಿ ತುಂಬಿಯೇ ಇರುತ್ತಿತ್ತು. ಮುಲ್ತಾನದ ಪ್ರತಿ ಒಂದು ಕಾರ್ಯರಂಗದಲ್ಲೂ ಅವಳ ಅಜ್ಜ ಭಾಗವಹಿಸುತ್ತಿದ್ದರು. ಮತ್ತು ಅನಾಥರಿಗಾಗಿ ಧರ್ಮಕಾರ್ಯಕ್ಕಾಗಿ ಮಿತಿಮೀರಿ ಹಣ ಸಹಾಯ ಮಾಡುತ್ತಿದ್ದರು. ಒಟ್ಟಿನಲ್ಲಿ ಅಲ್ಲಿ ಜೀವಿಸಿದ್ದ ಈ ಕುಟುಂಬವಲ್ಲದೆ, ಆಳು ಕಾಳುಗಳಿ
ಗೂ ಬಡತನದ ಬಿಸಿ ತಟ್ಟಿರಲಿಲ್ಲವೆಂದ
ಸಲ್ಲುವುದು. ಅಮೃತನ ತಾಯಿ ಚೆಲು
ಯೆ!? ಗೌರವರ್ಣದವರಾಗಿದ್ದರು. ನೋ
ಡಲು ಅಮೃತನಿಗಿಂತಲೂ ಚೆಲುವೆ
ಟ್ಟದಂದಿನಿಂದಲೂ ದುಃಖವರಿಯ
ಜೀವ.

ಅವರಿಗೆ ಅಂದರೆ ಅಚಲಾದೇವಿಗೆ ಕ
ಯಬೇಕೆಂಬ ಹುಚ್ಚು. ಮನೆಯಲ್ಲಿ ಮ
ಡಲು ಕೆಲಸವೇ ಇಲ್ಲದಾಗ ಹೊತ್ತು ಕ
ಯುವುದು ಹೇಗೆ? ಪದವೀಧರಳಾದ ಮೇ
ಲೆ, ಅಲ್ಲಿಯೇ ಕಟ್ಟಿಂಗ್, ಎಂಬ್ರೊಯ್ಡ
ಇನ್ನೂ ಅನೇಕ ತರದ ನಾಜೂಕು ಕೆಲ
ಗಳನ್ನು ಅಭ್ಯಾಸಿಸಿದರು, ಅದೇ ಇಂದ
ಜೀವನೋಪಾಯ. ಅಮೃತನಿಗೆ ಅವ
ಮುಲ್ತಾನ ಬಿಡುವಾಗ ೧೩-೧೪ ವಯ
ಇರಬಹುದು. ಹೈಸ್ಕೂಲು ಓದುವ ಹ
ಡುಗಿ. ಇನ್ನುಳಿದ ಚಿಕ್ಕವರು ಸ್ಕೂಲಿ
ಹೋಗುತ್ತಿದ್ದರು. ತಂದೆಯೂ ಗಟ್ಟಿಮ
ಟ್ಟಾಗಿದ್ದರು. ಅವಳ ತಾಯಿಯೋ ಎ
ದೂ ತಂದೆಯನ್ನು ಅಗಲಿದವರಲ್ಲ. ಅಷ
ಅನ್ಯೋನ್ಯ ಸಂಸಾರ. ಅಚಲಾ ದೇವಿ
ಹು ಸುಖಿಯಾಗಿದ್ದರು ಅಲ್ಲದೆ ಬ
ಹಾಸ್ಯ ಪ್ರಿಯೆ. ಯಾವಾಗಲೂ ಹಸನ
ಮುಖಿಯಾಗಿದ್ದರು,

ಆದರೆ?!!! ನೂರಾರು ವರ್ಷಗಳಿಂ
ಹಾತೊರೆಯುತ್ತಿದ್ದ, ಅದಕ್ಕಾಗಿ ಎಷ್ಟೋ
ದೇಶ ಭಕ್ತರ ರಕ್ತ ಹರಿಯಿಸಿದ ಸ್ವಾತ
ತ್ರ್ಯ ಬಂದಾಗ ಪಶ್ಚಿಮ ಪಂಜಾಬಿನ ಹಿ
ದುಗಳೂ ನಕ್ಕು ನಲಿಯಬೇಕೆಂದ, ಹಾ
ತೊರೆಯುತ್ತಿದ್ದಾಗ, ಅವಾಗಿನ ಕಾದಿದ್ದ
ಭೀಕರತೆ ಎಂತಹದು? ಅಂದು ಮಿಲಿ
ಯಾಧಿಪತಿಗಳು, ಕೋಟ್ಯಾಧಿಪತಿಗಳಾ

(೧೧ನೇ ಪುಟ ನೋಡಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¼ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಪಾಶ್ಚಾತ್ಯ ದೇಶಗಳಲ್ಲಿ

ವಿವೇಕಾನಂದರ ದಿಗ್ವಿಜಯ

ಅನುವಾದಕರು: ಶ್ರೀ ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್.

ಇಂಡಿಯಾ ಮತ್ತು ಪಶ್ಚಿಮ ದೇಶಗಳೊಳಗೆ ಪ್ರಬಲವಾದ ಸಂಬಂಧವನ್ನುಂಟುಮಾಡಿದವರಲ್ಲಿ ಸ್ವಾಮಿ ವಿವೇಕಾನಂದರು ಒಂದು ವಿಶಿಷ್ಟವಾದ ಸ್ಥಾನವನ್ನು ಪಡೆದಿರುತ್ತಾರೆ. ತಮ್ಮ ದೇಶದ ಜನರ ತತ್ವಶಾಸ್ತ್ರ ಮತ್ತು ಆಕಾಂಕ್ಷೆಗಳನ್ನು ಪಾಶ್ಚಾತ್ಯರ ಮುಂದಿಡುವ ಕಾರ್ಯವನ್ನು ಅವರು ವಹಿಸಿಕೊಂಡ ಆ ಸಂದರ್ಭವು ಸರ್ವಥಾ ಪ್ರೋತ್ಸಾಹದಾಯಕವಾಗಿರಲಿಲ್ಲ. ಆದರೆ ದೃಢನಿರ್ಣಯ, ಧೈರ್ಯ ಮತ್ತು ಅವಿರತವಾದ ಪರಿಶ್ರಮ ಇವುಗಳಿಂದ ಪ್ರೇರಿತರಾಗಿ, ತಾನು ವಿಶ್ವಧರ್ಮದ ಉದ್ಧಾರಕನಾಗಿ ಮತ್ತು ವೇದಾಂತ ತತ್ವಶಾಸ್ತ್ರದ ದೈವಪ್ರಚೋದಿತ ಪ್ರಸಾರಕನಾಗಿ ಮೆರೆಯುವುದಕ್ಕೆ ಆತಂಕವಾದ ಎಲ್ಲಾ ವಿರೋಧಗಳ ಮಹಾ ತರಂಗಗಳನ್ನು ಅವರು ಪ್ರತಿಭಟಿಸಿ ತಡೆದರು. ಅವರು ಅನಧಿಕೃತ ಪ್ರತಿನಿಧಿಯಾಗಿ ನಮ್ಮ ದೇಶದ ಪ್ರಾತಿನಿಧ್ಯವನ್ನು ಮೆರೆಯಿಸಿದ 1888ರಲ್ಲಿ ಚಿಕಾಗೋ ನಗರದಲ್ಲಿ ನಡೆದ ಸರ್ವಧರ್ಮಸಮ್ಮೇಳನವು ಅವರ ಅದ್ಭುತ ಮೇಧಾಶಕ್ತಿಯನ್ನು ಮೊದಲಾಗಿ ತಿಳಿಸಿತು. ಈ ತನಕ ಹೆಸರು ಕೇಳದಿದ್ದ ಈ ಸನ್ಯಾಸಿ ವಿವೇಕಾನಂದರು ವಿದ್ಯುದ್ವೇಗದಿಂದ ಉತ್ಕೃಷ್ಟವಾದ ಕೀರ್ತಿಯನ್ನು ಪಡೆದರು. ಅದ್ವೈತ ವೇದಾಂತವು ಪ್ರತಿಪಾದಿಸಿದಂತೆ ವಿಶ್ವಧರ್ಮದ ತಳಹದಿಯನ್ನಿಡಲು ಅವರು ಆ ಧರ್ಮಸಮ್ಮೇಳನದಲ್ಲಿ ಮಾಡಿದ ಸ್ಫೂರ್ತಿದಾಯಕವಾದ ಭಾಷಣಗಳು—ಪ್ರತಿಗಂಡಸರು ಮತ್ತು ಹೆಂಗಸರಲ್ಲಿರತಕ್ಕ ದೈವಿಕತೆಯನ್ನು ಮನಗಾಣಲು ಆ ಮಹಾ ಸಮ್ಮೇಳನದವರ ಅಂತರಾತ್ಮವನ್ನು ಜಾಗೃತಗೊಳಿಸಿದವು. ಅವರ ಸಂದೇಶದಿಂದ ಆ ಕಾಲದ ಪ್ರಸಿದ್ಧರಾದ ಎಲ್ಲಾ ಪ್ರಾಜ್ಞರು ಆಕರ್ಷಿತರಾದರು. ಇದು ಕೆಲವು ಸ್ಮರಣೀಯವಾದ ಸಂದರ್ಶನಗಳಿಗೆ ಕಾರಣವಾಯಿತು. ಅವರು ಸಂದರ್ಶಿಸಿದವರಲ್ಲಿ ಪ್ರಸಿದ್ಧರಾದವರು, ರೆವರೆಂಡ್ ಮೇಕ್ಸ್ ಮುಲ್ಲರ್, ಡಾ. ಪಾಲ್ ಡ್ಯುಸ್ಸೀನ್ ಮತ್ತು ಪ್ರೊಫೆಸರ್ ವಿಲ್ಲಿಯಂ ಜೇಮ್ಸ್ ಎಂಬವರು. ಸ್ವಾಮಿ ವಿವೇಕಾನಂದರು ತಾವು ಕಲಿಸುವ ತತ್ವಗಳಿಗೆ ಜೀವಂತ ಉದಾಹರಣೆಯಾಗಿಯೂ, ಶ್ರೋತೃಗಳ ಮನಸ್ಸಿಗೆ ವಿಶ್ವಾಸ ಹುಟ್ಟಿಸುವ ಉಪದೇಶಕರಾಗಿಯೂ, ಕೇವಲ ತಮ್ಮ ಸಾನ್ನಿಧ್ಯದಿಂದ ಪ್ರಭಾವ ಬೀರಬಲ್ಲ ಮಹಾ ವ್ಯಕ್ತಿಗಳಾಗಿಯೂ, ಎಲ್ಲಕ್ಕಿಂತಲೂ ಹೆಚ್ಚಾಗಿ, ಪಾಶ್ಚಾತ್ಯರ ಅಭಿಪ್ರಾಯಗಳನ್ನು ಹಿಂದೂ ಸಮಾಜದ ರಚನೆಯೊಡನೆ ಬೆಳೆಸಿಕೊಳ್ಳುವಂತೆ ಅವರಿಂದ ತಿಳಿಯಬೇಕಾದುದನ್ನು ತಿಳಿಯುವ ಮನಸ್ಸುಳ್ಳವರಾಗಿಯೂ ಇದ್ದರು. ಬುದ್ಧಿಶಕ್ತಿ ಮತ್ತು ಹೃದಯ ಇವುಗಳ ಈ ಗುಣಗಳೇ ಅವರನ್ನು ಒಬ್ಬ ವಿಶಿಷ್ಟ ಸನ್ಯಾಸಿಗಳನ್ನಾಗಿಯೂ, ಆ ಕಾಲದ ಪ್ರಚಂಡ ವಿದ್ವಾಂಸರು ಕೂಡಾ ತಮಗೆ ಪ್ರಬಲ ಪ್ರತಿಸ್ಪರ್ಧಿಯಾಗಿ ತಿಳಿಯುವಷ್ಟು ಒಬ್ಬ ಅಸಾಮಾನ್ಯ ಧರ್ಮಪ್ರಸಾರಕರನ್ನಾಗಿಯೂ ಮಾಡಿದವು.

ರೆವರೆಂಡ್ ಮೇಕ್ಸ್ ಮುಲ್ಲರ್.

ವಿವೇಕಾನಂದರು ದೊಡ್ಡ ಸಂಸ್ಕೃತ ವಿದ್ವಾಂಸರೂ ಮತ್ತು ಭಾಷಾಶಾಸ್ತ್ರಭಿಜ್ಞರೂ ಆದ ರೆವರೆಂಡ್ ಮೇಕ್ಸ್ ಮುಲ್ಲರನ್ನು ಲಂಡನಿನಲ್ಲಿ ಕಂಡುದು 1896ನೇ ಇಸ್ವಿ ಮೇ 28ನೆಯ ದಿನದಲ್ಲಿ. ಆ ಭೇಟಿಯು ಇಬ್ಬರು ದೊಡ್ಡ ಮನುಷ್ಯರ ಭೇಟಿ ಮಾತ್ರವಾಗಿರಲಿಲ್ಲ. ಮತ್ತೇನೆಂದರೆ ಒಬ್ಬರು ಇನ್ನೊಬ್ಬರ ಆಂತರಿಕ ಜೀವನವನ್ನು ತಿಳಿದುಕೊಂಡಿರುವ ಇಬ್ಬರ ಭೇಟಿಯಾಗಿತ್ತು. ಮೇಕ್ಸ್ ಮುಲ್ಲರರ, ಸಂಸ್ಕೃತ ಮತ್ತು ಹಿಂದೂ ತತ್ವಶಾಸ್ತ್ರದ ಮೇಲಣ ಅತ್ಯಾತುರದ ಪ್ರೇಮವು ಪ್ರಪಂಚದಲ್ಲೆಲ್ಲಾ ವಿಖ್ಯಾತವಾದುದು. ಅವರು "ಹಿಂದೂ ತತ್ವಶಾಸ್ತ್ರ ಮತ್ತು ಗೋಪ್ಯವಾದ ಬುದ್ಧತತ್ವ ಮತ್ತು ಉಳಿದೆಲ್ಲಾ ಶಾಸ್ತ್ರಗಳು ಎಂಬೀ ಅಪೂರ್ವವಾದ ಹೆಸರುಗಳ ಹಿಂದೆ ನಿಜವಾದ ಒಂದು ತತ್ವವಿದೆ, ತಿಳಿಯಬೇಕಾದುದಿದೆ. ಯುರೋಪಿನ ಪ್ಲೇಟೋ ಮತ್ತು ಅರಿಸ್ಟೋಟಲ್ ಮತ್ತು ಕಾಂಟ್ ಮತ್ತು ಹೆಗೆಲ್ ಇವರ ಶಿಷ್ಯಂದಿರಾದ ನಮಗೂ ತಿಳಿಯಲು ಯೋಗ್ಯವಾದ ತತ್ವವಿದೆ" ಎಂದು ಪಾಶ್ಚಾತ್ಯರಿಗೆ ತಿಳಿಸುವ ಛಂದದಲ್ಲಿ (1896) 19ನೇ ಶತಮಾನದಲ್ಲಿ "ರಿಯಲ್ ಮಹಾತ್ಮನ್" ಎಂಬೊಂದು ಲೇಖನದಲ್ಲಿ ಶ್ರೀ ರಾಮಕೃಷ್ಣ ಪರಮ ಹಂಸರನ್ನು ಪರಿಚಯಪಡಿಸಿದರು. ಈ ಲೇಖನವು ಬಹಳ ವಿವಾದಗಳನ್ನು ಹುಟ್ಟಿಸಿತು. ಆದರೂ ಧೈರ್ಯಗೆಡದೆ ಮೇಕ್ಸ್ ಮುಲ್ಲರರು ಶ್ರೀ ರಾಮಕೃಷ್ಣರ ಜೀವನ ಮತ್ತು ವಚನಗಳ ಕುರಿತು ಒಂದು ದೊಡ್ಡ ಗ್ರಂಥವನ್ನು ಬರೆಯುವ ಆಲೋಚನೆಯನ್ನು ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಶ್ರೀ ವಿವೇಕಾನಂದರೂ ಮೇಕ್ಸ್ ಮುಲ್ಲರರೂ ಭೇಟಿಯಾದರು. ಇದಕ್ಕಿಂತ ಉತ್ತಮವಾದ ಸಂದರ್ಭವು ಈ ಭೇಟಿಗೆ ಇದ್ದಿರಲಾರದು. ಶ್ರೀ ರಾಮಕೃಷ್ಣ ಪಂಥದ ಪ್ರದರ್ಶಕರೂ ಅದರ ಅತ್ಯುತ್ತಮ ಶಿಷ್ಯರೂ ಆದ ವಿವೇಕಾನಂದರ ಈ ಭೇಟಿಯಿಂದ ಅತಿ ಸಂತೋಷಗೊಂಡ ಮೇಕ್ಸ್ ಮುಲ್ಲರರು "ಶ್ರೀ ರಾಮಕೃಷ್ಣರ ಶಿಷ್ಯರನ್ನು ಯಾವಾಗಲೂ ಭೇಟಿಮಾಡಲು ಸಾಧ್ಯವಿಲ್ಲ"ವೆಂದು ಹೇಳಿದರು. ಇಂಡಿಯದ ಕೃತಜ್ಞಪೂರ್ವಕ ಸೇವೆಗೆ ತಮ್ಮ ಜೀವನವನ್ನು ಅರ್ಪಿಸಿದ ಈ ಇಬ್ಬರು ಮಹಾಶಯರ ಭೇಟಿಯು ಅದು ಪೂರ್ಣಕವೂ, ಹೃದಯಸ್ಪರ್ಶಿಯೂ, ವಿನೋದಮಯವೂ ಆಗಿತ್ತು: ಅದು ಶ್ರೀ ಸ್ವಾಮಿಯವರ ಲೇಖನಿಯಿಂದ ಅವರು ಹೇಳಿದ ಮಾತುಗಳಲ್ಲೆಲ್ಲಾ ಅತಿ ಚಲೋದಾದ ಮತ್ತು ಅತಿ ಉತ್ತೇಜಕವಾದ ಮಾತುಗಳನ್ನು ಹೊರಡಿಸಿತು. "ಈ ಭೇಟಿಯಿಂದ ನನಗೆ ನಿಜವಾದ ಜ್ಞಾನೋದಯವಾಯಿತು. ನಾನು ನೋಡಿದ್ದು ಭಾಷಾ ಶಾಸ್ತ್ರಾಭಿಜ್ಞರನ್ನೂ ವಿದ್ವಾಂಸರನ್ನೂ ಅಲ್ಲ, ಆದರೆ ಬ್ರಹ್ಮತಾದಾತ್ಮ್ಯವನ್ನು ಪ್ರತಿದಿನವೂ ಸಾಕ್ಷಾತ್ಕರಿಸುವ ಒಂದು ಆತ್ಮವನ್ನು ನಾನು ನೋಡಿದೆನು. ವಿಶ್ವದೊಡನೆ ಏಕೀಭಾವವನ್ನು ಪಡೆಯಲು ಪ್ರತಿಕ್ಷಣವೂ ಉಬ್ಬುತ್ತಿರುವ ಒಂದು ಹೃದಯವನ್ನು ನಾನು ಕಂಡೆನು. ಇತರರು ಶುಷ್ಕವಸ್ತುಗಳ ಮರುಭೂಮಿಯಲ್ಲಿ ತೊಳಲುತ್ತಿರುವಾಗ ಅವರು ಜೀವನದ ಬಾವಿಯ ಬುಗ್ಗೆಯನ್ನು ಬಡಿಯುತ್ತಾರೆ. ನಿಜವಾಗಿ ಅವರ ಹೃದಯದ ಬಡಿತಗಳು ಉಪನಿಷತ್ತುಗಳ ತಾಳವನ್ನು ಹಿಡಕೊಂಡಿವೆ. ಮೇಕ್ಸ್ ಮುಲ್ಲರರು ವೇದಾಂತಿಗಳಲ್ಲಿ ವೇದಾಂತಿಗಳಾಗಿರುತ್ತಾರೆ." ಹೀಗೆ ಸ್ವಾಮಿಗಳು ಬರೆಯುತ್ತಾರೆ. ಮೇಕ್ಸ್ ಮುಲ್ಲರರು ಇಂಡಿಯಾದ ವಿಚಾರ ಮತ್ತು ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು ವಿವೇಕಾನಂದರಿಗೆ ಚಿರಸ್ಥಾಯಿಯಾದ ಶಕ್ತಿಯ ಮೂಲಸ್ಥಾನವಾಗಿತ್ತು. ಅವರು ಆಗಾಗ್ಗೆ ಆ ಭಾಷಾ ಶಾಸ್ತ್ರಾಭಿಜ್ಞರ ಹೃತ್ಪೂರ್ವಕತೆ ಮತ್ತು ಕಾರ್ಯನಿಷ್ಠೆಯನ್ನು ಅನುಕರಿಸಲು ತನ್ನ ಶಿಷ್ಯರಿಗೆ ಎಚ್ಚರ ಕೊಡುತ್ತಿದ್ದರು.

ಡಾ| ಪಾಲ್ ಡ್ಯುಸ್ಸೀನ್.

ಸ್ವಾಮಿ ವಿವೇಕಾನಂದರು ತಮ್ಮ ಪಶ್ಚಿಮ ದೇಶದ ಸಂದರ್ಶನದ ಸಮಯ ಭೇಟಿ ಮಾಡಿದ ಮತ್ತೊಬ್ಬ ವಿದ್ವಾಂಸರು ಡಾ| ಪಾಲ್ ಡ್ಯುಸೀನರಾಗಿದ್ದರು. 1896ರಲ್ಲಿ "ಬ್ರಹ್ಮವಾದಿನ್" ಪತ್ರಿಕೆಯಲ್ಲಿ ಬರೆಯುತ್ತಾ ವಿವೇಕಾನಂದರು ಪ್ರಾಚೀನ ಭಾರತದ ಆಧ್ಯಾತ್ಮಿಕ ಸಂಪತ್ತಿನ ಪುನರುಜ್ಜೀವನ ಮತ್ತು ಅವುಗಳನ್ನು ಪಶ್ಚಿಮ ಜನತೆಗೆ ಅರ್ಥಮಾಡಿಕೊಡುವ ಮಾರ್ಗದಲ್ಲಿ ಯುವಕರಾದ ಮುಂದಾಳುಗಳಲ್ಲಿ ಇವರೊಬ್ಬರೆಂದು ಅವರನ್ನು ವರ್ಣಿಸುತ್ತಾರೆ. ಡಾ| ಡ್ಯುಸ್ಸೀನರು ಉಪನಿಷತ್ತುಗಳ ತತ್ವಜ್ಞಾನವು ಎಲ್ಲಾ ಆಧ್ಯಾತ್ಮಿಕತೆಯ ಉಗಮಸ್ಥಾನವೆಂದು ನಂಬಿದವರಾಗಿಯೂ ಮತ್ತು ಅದರ ಉಚ್ಚಧ್ಯೇಯದಿಂದ ಮೋಹಿತರಾಗಿಯೂ ಇದ್ದುದರಿಂದ, ವೇದಾಂತವನ್ನು ಭಾಷಾಂತರಿಸಿ ಅರ್ಥ ಮಾಡಿಕೊಡುವ ಕಾರ್ಯದಲ್ಲಿ ತೊಡಗಿದ್ದರು. ಅವರು ಸಂಸ್ಕೃತಭಾಷಾಧ್ಯಯನದ ತಮ್ಮ ಆಸಕ್ತಿಯನ್ನು ಅನುಸರಿಸಿ ನಡೆದುದು, ತಮ್ಮ ಕುಟುಂಬದ ಮತ್ತು ಸಮಾಜದ ಅಸಂತುಷ್ಟಿ ಮತ್ತು ನಿರುತ್ಸಾಹಗಳಿಂದ ವಿಚಲಿತವಾಗಿರಲಿಲ್ಲ. ಆದರೂ ಇವರು ಬಹುವರ್ಷ ಪ್ರಯಾಸಕರವಾದ ಅಭ್ಯಾಸ ಮಾಡಿದ ಮೇಲೆ ಹೊಸ ಕಾಲದ ಅತ್ಯುತ್ತಮ ಪ್ರಾಚ್ಯವಿದ್ಯಾಭಿಜ್ಞರಾಗಿ ಮೇಲೆ ಬಂದರು. ಇಂಡಿಯದ ಮೇಲೆ ಅವರಿಗಿದ್ದ ಪ್ರೀತಿಯು ಚಿರಸ್ಥಾಯಿಯೂ, ಹಿಂದೂತತ್ವ ಶಾಸ್ತ್ರದ ಅವರ ಜ್ಞಾನವು ಅಗಾಧವೂ ಆಗಿತ್ತು. ವೇದಾಂತ ವಿಷಯವನ್ನು ಚರ್ಚಿಸಲು ಕೀಲ್ ಪಟ್ಟಣದಲ್ಲಿ

(೧೨ನೇ ಪುಟ ನೋಡಿರಿ)

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ

ಈದೀಗ ಮಾರಾಟಕ್ಕೆ ಸಿದ್ಧವಾಗಿದೆ.

160 ಪುಟಗಳಿಗೂ ಮಿಕ್ಕಿದ

ಪಾಕೆಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಸಂಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......

ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—೧.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೊತ್ತಿ ಗಂಡನಾದರೆ?	0=25
ಪುರುಷನಧು	0=25
ಸನ್ಯಾಸಿಯು ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುರಲವ	0=50
ಚಿತ್ರಾಂಗದೆ	0=60

ಬೆಳ್ಳಲು ಖರ್ಚು ಪ್ರತ್ಯೇಕ, ವಿವರವಾದ ಕೆಟಲಾಗ ಮತ್ತು ಸ್ಪೆ. ಸ್ವಾಂಪಿನೊಡನೆ ಬರೆಯಿರಿ—

ಧಾರಕ ಬುಕ್ಸ್ ಭಂಡಾರ, ಉಡುಪಿ ನಟಾ

ಪಾಕಿಸ್ತಾನದಿಂದ

ಆಕ್ರಮಣದ ಗುರುಗಾಟವೆ?

ಪಾಕಿಸ್ತಾನದಿಂದ ಭಾರತವನ್ನು ಅನ್ಯಾಯವಾಗಿ ಪ್ರವೇಶಿಸುತ್ತಿರುವ ನಿರಾಶ್ರಿತರಂತೆಯೇ ಬರ್ಮಾದ ಗಡಿಯೊಳಗೆ ಬರುತ್ತಿರುವ ಮುಸ್ಲಿಮರ ಪ್ರಶ್ನೆಯು ಕಾಲಕ್ರಮದಲ್ಲಿ ಜಟಿಲವಾಗಬಹುದು. ಪಾಕಿಸ್ತಾನಿ ನಿರಾಶ್ರಿತರು ಅಸ್ಸಾಮು ತ್ರಿಪುರ, ಮತ್ತು ಪಶ್ಚಿಮ ಬಂಗಾಳಗಳನ್ನು ಮೊದಲು ಒಕ್ಕಲುತನದ ಕೂಲಿಗಳಾಗಿ ನುಗ್ಗಿದರು ಆದರೆ, ಕಾಲಕ್ರಮದಲ್ಲಿ ಇವರು ಅಲ್ಲಿಯೇ ಶಾಶ್ವತವಾಗಿ ನೆಲೆನಿಲ್ಲುವುದಕ್ಕೆ ತೊಡಗಿದರು. ಹೀಗೆ ಅನುಚಿತ ವಿಧಾನದಲ್ಲಿ ಬಂದಿರುವ ಪಾಕಿಸ್ತಾನಿಗಳು ಇಂದು ಭೂಮಾಲಕರಾಗಿದ್ದಾರೆ; ವ್ಯಾಪಾರಸ್ಥರಾಗಿದ್ದಾರೆ. ಇದು ಬರ್ಮಾದ ಸಮಾಚಾರ ಸಂಗ್ರಹಕಾರರೊಬ್ಬರ ಉದ್ಗಾರ. ಹಾಗೆಯೇ ಬರ್ಮಾದ ಗಾರ್ಡಿಯನ್ ಎಂಬ ಪತ್ರಿಕೆಯು ಈ ಕುರಿತು ಬರೆಯುತ್ತ "ಪೂರ್ವ ಪಾಕಿಸ್ತಾನವು ತನ್ನಲ್ಲಿರುವ ಜನಸಂಖ್ಯೆಯ ದಟ್ಟಣೆಯಿಂದಾಗಿ ಜನರನ್ನು ಹೊರಗೆ ಕಳಿಸುವಂತಾಗಿದೆಯೆಂಬುದು ಎಲ್ಲರೂ ಅರಿತಿರುವ ಸಂಗತಿ. ಹೀಗೆ ಬರ್ಮಾವನ್ನು ಪ್ರವೇಶಿಸಿದ ಪಾಕಿಸ್ತಾನಿಗಳೇ ಸುಮಾರು ೨|| ಲಕ್ಷವಾಗಬಹುದು" ಎಂದು ಹೇಳಿದೆ.

ಭಾರತದೊಡನೆ ನಿರಾಶ್ರಿತರ ವಿಷಯದಲ್ಲಿ ಅಥವಾ ಭಾರತ—ಪಾಕಿಸ್ತಾನಗಳ ನಡುವಣ ವಿವಾದದಲ್ಲಿ ಯಾವ ಆಸಕ್ತಿಯೂ ಇಲ್ಲದ ಬರ್ಮಾದ ಈ ಹೇಳಿಕೆಯಿಂದ ಪಾಕ್ ಕೂಟನೀತಿಯ ಮೇಲೆ ಬೆಳಕು ಬೀಳುವುದು. ಕಾಶ್ಮೀರದಲ್ಲಿ ಸಂಭವಿಸಿದ ಪವಿತ್ರ ಕೇಶದ ದುರ್ಘಟನೆಯು ಒಂದೂವರೆ ಸಾವಿರ ಮೈಲಿ ದೂರದ ಢಾಕ್ಕಾದಲ್ಲಿ ಹಿಂಸಾಕೃತ್ಯ, ಜಾತೀಯ ಗಲಭೆಗೆ ಪ್ರೇರಕವಾಗುವುದು ಮಾತ್ರ ವಿಸ್ಮಯವಲ್ಲ; ಅದನ್ನು ಹತೋಟಿಗೆ ತರುವಲ್ಲಿ ಪಾಕ್ ಸರಕಾರವು ಅಸಮರ್ಥವಾದುದು ಅದ್ಭುತದಲ್ಲಿ ಅದ್ಭುತವೆನ್ನಬೇಕು. ಕಳೆದ ದಶಕದ ಜನಗಣನೆಯ ಅಂಕೆಸಂಖ್ಯೆ ಪರಿಶೀಲಿಸುವಾಗ, ಭಾರತದ ಗಡಿ ಪ್ರದೇಶದಲ್ಲಿ ಅಕ್ರಮವಾಗಿ ವಲಸೆ ಬಂದ ಮುಸ್ಲಿಮರ ಸಂಖ್ಯೆಯು ಯಥೇಚ್ಛವಾಗಿ ಹೆಚ್ಚಿರುವುದಾದರೂ ಪಾಕಿಸ್ತಾನ, ಭಾರತದಿಂದಲೇ ಅನ್ಯಾಯ ವಲಸೆಗಾರರು ಬರುತ್ತಿದ್ದಾರೆಂದು ದೂರುತ್ತಿದೆ. ಆದರೆ ಆದರ ಅಂಕೆ ಸಂಖ್ಯೆಗಳನ್ನು ಅವಲೋಕಿಸುವಾಗ, ಇದು ದೃಢವಾಗುವುದಿಲ್ಲ ಬದಲು ಸಡಿಲುತ್ತದೆ ಅಂದರೆ, ಭಾರತವನ್ನು ಆರೋಪಿಸುವುದಷ್ಟೇ ಪಾಕಿಸ್ತಾನದ ಉದ್ದೇಶವೆಂದು ಬೇರೆ ಹೇಳಬೇಕಾಗಿಲ್ಲ.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾರತದ ಪ್ರತಿನಿಧಿ ಮಂಡಳದ ನಾಯಕ ಛಾಗ್ಲರವರು ಸತ್ಯ ಸಂಗತಿಯನ್ನು ಮುಂದಿಟ್ಟರು. ಭಾರತದ ಯಾವುದೇ ಹೇಳಿಕೆಯನ್ನು ಅಲ್ಲಗಳೆಯುವುದನ್ನೇ ಉದ್ದೇಶವಾಗಿಟ್ಟುಕೊಂಡ ಪಾಕ್ ನಿಯೋಗ ನಾಯಕ ಭುಟ್ಟೋ ತನ್ನ ಹಳೆಯ ರಾಗವನ್ನೇ ಮತ್ತೆ ಹಾಡಿದರು. ಆದರೆ, ಸತ್ಯ ಸಂಗತಿಯನ್ನು ಎಷ್ಟು ದಿನಗಳ ತನಕ ತಡೆಹಿಡಿಯುವುದು ಸಾಧ್ಯ? ಪಾಕಿಸ್ತಾನವು ಓತ್ತಾಯದಿಂದಲೇ ಗಡಿಪ್ರದೇಶದ ಜನರಲ್ಲಿ ಬೆದರಿಕೆಯನ್ನು ಹುಟ್ಟಿಸಿ ಅವರು ಎಲ್ಲಿಂದರಲ್ಲಿ ಇತರ ದೇಶಗಳನ್ನು ನುಗ್ಗುವುದಕ್ಕೆ ಪ್ರೋತ್ಸಾಹ ಕೊಡುತ್ತಿದೆ ಎಂದು ಹೇಳಲೇ ಬೇಕಾಗುತ್ತದೆ. ಇಸ್ಲಾಮನ್ನೇ ರಾಷ್ಟ್ರೀಯ ಧರ್ಮವೆಂದು ಸಾರಿದ ಪಾಕಿಸ್ತಾನ ಇಸ್ಲಾಮೇತರಲ್ಲಿ ಮಾತ್ರವಲ್ಲ ಇಸ್ಲಾಮಿಗಳಲ್ಲಿಯೂ ಅಸಭ್ಯತೆಯ ಭಾವನೆಯನ್ನು ಹುಟ್ಟಿಸುವ ಕಾರ್ಯದಲ್ಲಿ ನಿರತವಾಗಿದೆ. ಇದಕ್ಕೆ ಪಾಕ್ ಆಡಳಿತ ನೀತಿಯಲ್ಲಿ ಕಂಡುಬರುವ ನ್ಯೂನಾತಿರೇಕತೆಯೇ ಕಾರಣವಲ್ಲದೆ ಮತ್ತಿನ್ನೇನು?

ಪೂರ್ವ ಪಾಕಿಸ್ತಾನದಿಂದ ಪಶ್ಚಿಮ ಬಂಗಾಲದತ್ತ ನುಗ್ಗಿ ಬರುವ ನಿರಾಶ್ರಿತರನ್ನು ಭಾರತವು ಮಾನವೀಯ ದೃಷ್ಟಿಯಿಂದ ಕಾಣುತ್ತಿದೆ. ಇದಕ್ಕೆಂದೇ ಅದು ವಲಸೆ ಬರುವ ನಿಯಮಗಳನ್ನು ಸಾಕಷ್ಟು ಸಡಿಲು ಮಾಡಿದೆ. ಈಗಾಗಲೇ ಸುಮಾರು ಅರ್ಧ ಲಕ್ಷಕ್ಕೂ ಮಿಕ್ಕಿದ ನಿರಾಶ್ರಿತರು ಬಂದಿದ್ದಾರೆ. ಇನ್ನೂ ಒಂದು—ಒಂದೂವರೆ ಲಕ್ಷದಷ್ಟಾದರೂ ಬಂದಾರೆಂದು ಅಂದಾಜು ಮಾಡಲಾಗಿದೆ, ಇವರೆಲ್ಲರನ್ನೂ ಯೋಗ್ಯ ರೀತಿಯಲ್ಲಿ ನೆಲಸುವಂತೆ ಮಾಡುವುದೇ ಮಹಾ ಪ್ರಶ್ನೆ. ಈ ಕರ್ತವ್ಯದಲ್ಲಿ ವಿಳಂಬ ಮಾಡಿದರೆ, ನಿರಾಶ್ರಿತರು ಅಮಾನುಷರಾಗಿ ವರ್ತಿಸುವುದೂ ಅಸಂಭವವಲ್ಲ; ಇದಕ್ಕೆಂದೇ ದಂಡಕಾರಣ್ಯ ಯೋಜನೆಯನ್ನು ವಿಸ್ತರಿಸಿ ಅವರೆಲ್ಲರಿಗೆ ಆಶ್ರಯ ನೀಡುವುದರತ್ತ ಭಾರತ ಸರಕಾರ ಗಮನ ಹರಿಸಿದೆ.

ತನ್ನ ಇಷ್ಟಾರ್ಥದನ್ನು ಸಾಧಿಸುವುದಕ್ಕಾಗಿ ಪಾಕಿಸ್ತಾನವು ಅನ್ಯಾಯದ ದಾರಿಯಲ್ಲೇ ನಡೆಯುತ್ತಿರುವುದು ಸರಿಯಲ್ಲ. ಭಾರತದೊಡನೆ ಸ್ನೇಹದಿಂದಿರಲು ಅದು ಬಯಸುವುದಾದರೆ, ಉಭಯ ರಾಷ್ಟ್ರಗಳಲ್ಲಿ ತಿಳಿಮನಸ್ಸಿನ ವಾತಾವರಣ ಬೆಳೆದಲು ನೋಡಬೇಕು. ಆಕ್ರಮಣ—ಗದರಿಕೆ—ಬಲಾತ್ಕಾರಗಳ ಗುಡುಗಾಟದ ನಡುವೆ ಇಂತಹ ಸನ್ನಿವೇಶವೆಂದಿಗೂ ನಿರ್ಮಾಣಗೊಳ್ಳುವುದಿಲ್ಲ. ಆದಕ್ಕಾಗಿ ಭಾರತವು ಕರೆ ನೀಡಿದಂತೆ ಪಾಕ್ ಅನಾಕ್ರಮಣ ಒಪ್ಪಂದವನ್ನು ಮಾಡಿಕೊಳ್ಳಲು ಮುಂದೆ ಬರಬೇಕು. ಆದರೆ, ಇದಕ್ಕೆ ಒಪ್ಪದಿರುವ ಭುಟ್ಟೋರವರ ಮಧಿತಾರ್ಥವೇನು ಎಂದು ಪ್ರತ್ಯೇಕ ಹೇಳುವುದು ಅನಗತ್ಯ. ಹಾಗಿರುವಾಗ, ಆಕ್ರಮಣ ಭೀತಿಯಿಂದ ಭಾರತವು ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡರೆ, ಅದಕ್ಕೇಕೆ ಅವರು ಮರುಗಬೇಕು?

ಉಭಯತರರಿಗೂ ಗೌರವಯುತವಾದ ಒಡಂಬಡಿಕೆಯಾಗುವುದು ಪಾಕಿಸ್ತಾನಕ್ಕೆ ಬೇಕಾಗಿಲ್ಲ. ಅದು ಬಯಸುವುದು ಇಂದು ಕಾಶ್ಮೀರವನ್ನು, ನಾಳೆ ತ್ರಿಪುರಾವನ್ನು ನಾಳಿದು ಪಶ್ಚಿಮ ಬಂಗಾಳವನ್ನು ಆದರೆ ಈ ತೆರದ ರಾವಣ ಹೊಟ್ಟೆಯನ್ನು ತಣಿಸುವುದು ಭಾರತಕ್ಕೆ ಅಸಿಷ್ಟ. ತನ್ನ ಸಾರ್ವಭೌಮತೆಯನ್ನು ಉಳಿಸಿಕೊಳ್ಳಲು ಭಾರತ ಸದಾ ಸಿದ್ಧವಿದೆ. ಚೀನೀಯರಿರಲಿ, ಪಾಕಿಸ್ತಾನಿಗಳಿರಲಿ, ಅನ್ಯಾಯಕಾರರನ್ನು ನ್ಯಾಯೋಚಿತವಾಗಿಯೇ ಎದುರಿಸುವ ಎದೆಗಾರಿಗೆ ನಮ್ಮಲ್ಲಿಲ್ಲವೆ? ಚೀನೀ ಸಾಮ್ರಾಜ್ಯವಾದದ ಜಾಡನ್ನೇ ಪಾಕಿಸ್ತಾನ ಮೆಟ್ಟಿದರೆ, ಅದರಿಂದ ಅದರ ನಾಶವಾದೀತೇ ಹೊರತು, ಭಾರತದ ಕೂದಲು ಕೊಂಕಲಾರದು.

ತುಂಡು ಕತೆಗಳು

ವ್ಯಾಪಾರ

ಒಬ್ಬಾತ ಹೊಲಿಗೆ ಯಂತ್ರದ ಏಜಂಟನಿದ್ದ. ಒಮ್ಮೆ ಆವನಿಗೆ ಆಪರೇಶನ್ ಮಾಡಿಸಲೇ ಬೇಕಾದ ಖಾಯಿಲೆ ಕಾಣಿಸಿಕೊಂಡಿತು. ಅಂತೂ ತನ್ನ ಉದ್ಯೋಗಕ್ಕೆ ವಿರಾಮವಿತ್ತು ಆತ ಆಸ್ಪತ್ರೆ ಸೇರಿದ. ಚಿಕಿತ್ಸೆಯೂ ನಡೆಯಿತು. ಒಂದು ತಿಂಗಳು ಹಾಸಿಗೆಯಿಂದ ಏಳಬಾರದು ಎಂಬ ಆದೇಶವೂ ಬಂತು. ಅತನ ಮಡದಿ ಮನೆ-ಆಸ್ಪತ್ರೆಯೆಂದು ತಿರುಗಾಡುತ್ತಿದ್ದಳು.

ಒಂದು ದಿನ ಮಡದಿಯು ಆಸ್ಪತ್ರೆಯತ್ತ ಹೊರಡುವುದರಲ್ಲಿದ್ದಳು. ಅಷ್ಟರಲ್ಲಿ ಒಂದು ಟೆಲಿಫೋನಿನ ಕರೆ ಬಂತು. ಆಕೆ 'ಹಲೋ' ಎಂದೊಡನೆಯೇ ತನ್ನ ಪತಿಯ ಸ್ವರವನ್ನು ಕೇಳಿ ಬೆಚ್ಚಿಬಿದ್ದಳು ಏಕೆಂದರೆ, ಅವನು ಮಲಗಿದ್ದ ಕೋಣೆಯಲ್ಲಿ ಫೋನು ಇರಲಿಲ್ಲ. ವೈದ್ಯರು ಎದ್ದು ಕೂಡ್ರಲೂ ಬಾರದೆಂದಿರುವಾಗ ಅಷ್ಟು ಅನಿವಾರ್ಯ ಪ್ರಸಂಗವೇನು ಬಂತು? ಆಕೆ ಕೇಳಿದಳು:

"ನಿಮಗೆ ಏಳಲು ಅನುಮತಿ ದೊರೆಯಿತೆ?"

"ಇಲ್ಲ, ಕಣ್ಣು ತಪ್ಪಿಸಿ ಬಂದಿದ್ದೇನೆ" ಆತನ ನಗುಮುಖದ ಉತ್ತರವಿರಬೇಕು.

"ಅಂತಹ ಗಂಡಾಂತರವೇನು ಬಂತು?"

"ಮತ್ತೇನೂ ಇಲ್ಲ. ಮೇಜಿನ ಡ್ರಾವರಿನಲ್ಲಿ ನನ್ನ ಆರ್ಡರ್ ಬುಕ್ ಮತ್ತು ಪೆನ್ಸಿಲುಗಳಿವೆ. ಅವನ್ನು ಬರುವಾಗ ಹಿಡಿದುಕೊಂಡು ಬಾ. ಇಲ್ಲಿಯೇ ಪಕ್ಕದ ಹಾಸಿಗೆಯಲ್ಲಿರುವವನು ಒಂದು ಮೆಶಿನ್ ಕೊಂಡುಕೊಳ್ಳಲು ಒಪ್ಪಿದ್ದಾನೆ."

ಕೃತಜ್ಞತೆ

೧೯೬೦ರಲ್ಲಿ ಒಬ್ಬ ಫ್ರೆಂಚ ವ್ಯಾಪಾರಿಯು ಮೃತ್ಯುಮುಖನಾದನು ಆತನು ಬ್ರಹ್ಮಚಾರಿ, ಅವನ ಮೃತ್ಯುಪತ್ರವನ್ನು ಓದಿ ನೋಡಿದಾಗ, ತನ್ನನ್ನು ಇಪ್ಪತ್ತು ವರ್ಷಗಳ ಹಿಂದೆ ವಿವಾಹವಾಗಲು ನಿರಾಕರಿಸಿದ ಒಬ್ಬಾಕೆ ಮಹಿಳೆಗೆ ಒಂದು ದೊಡ್ಡ ಮೊತ್ತವನ್ನು ಕೊಡುವಂತೆ ಅದರಲ್ಲಿ ನಿರ್ದೇಶವಿತ್ತು. ತನ್ನ ಈ ವಿಚಿತ್ರ ವ್ಯವಹಾರವನ್ನು ಸಮರ್ಥಿಸಿಕೊಳ್ಳಲು ಆತ ಈ ರೀತಿಯಾದ ಸ್ಪಷ್ಟೀಕರಣವನ್ನೂ ನೀಡಿದ್ದನು. "ಸ್ವಚ್ಛಂದ ಮತ್ತು ಸ್ವತಂತ್ರನಾಗಿ ಕೌಮಾರ್ಯ ಜೀವನವನ್ನು ಬದುಕಲು ನನಗೆ ಅವಕಾಶ ಮಾಡಿಕೊಟ್ಟ ಆ ಮಹಿಳೆಗೆ ನಾನು ಸದಾ ಕಾಲ ಕೃತಜ್ಞನಾಗಿರಲೇ ಬೇಕು."

ರೊಟ್ಟಿಯಿಂದಲ್ಲ

ಸ್ಪೇನಿನ ಯುದ್ಧದಲ್ಲಿ ಫ್ಯಾಸಿಸ್ಟ ಸೇನೆಗಳ ಮೆಡ್ರಿಡನ್ನು ಮುತ್ತಿದ್ದುವು. ಒಂದು ದಿನ ಅವು ವಿಮಾನದ ಮೂಲಕ ನಗರದ ಮೇಲೆ ಬಹಳ ದಪ್ಪಗಾದ ರೊಟ್ಟಿಗಳ ಮಳೆಯನ್ನೇ ಕರೆದುವು. ರೊಟ್ಟಿಗಾಗಿ ಜನರೂ ನಾಯಿಗಳೂ ಕಚ್ಚಾಡಿಕೊಳ್ಳುತಿದ್ದ ಸಮಯವದು. ನಗರದ ಮಕ್ಕಳೆಲ್ಲರೂ ಆ ರೊಟ್ಟಿಗಳನ್ನು ಪೋಲೀಸರಿಗೆ ಕೂಡಿಸಿ ಕೊಟ್ಟರು. ಎರಡನೆಯ ದಿನ ರೊಟ್ಟಿಗಳನ್ನು ಕಾಗದದಲ್ಲಿ ಸುತ್ತಿ ಅವನ್ನು ಫ್ಯಾಸಿಸ್ಟರು ಅಡಗಿದ್ದ ಖಂದಕಗಳಿಗೆ ಎಸೆದರು. ಆ ಕಾಗದ ಮೇಲೆ ಬರೆಯಲ್ಪಟ್ಟಿತ್ತು; ಮೆಡ್ರಿಡ್ಡನ್ನು ಫ್ಯಾಸಿಸ್ಟರು ರೊಟ್ಟಿಗಳಿಂದ ಗೆಲ್ಲಲಾರರು; ಅವರು ತನ್ನ ಇಚ್ಛೆ ಕೈಗೂಡಿಸಲು ಕತ್ತಿ ಎತ್ತಲೇ ಬೇಕಾಗುವುದು.

'ರುದ್ರಕರೆ'

— ೧ —

ಉತ್ತಮರ ಆಯುಷ್ಯ ಬಹುಕಾಲ ವಿರಳ,
ಪರ್ಯಾಯ ಪಥದಲ್ಲಿ ಅಡ್ಡಾದ ಅಗಳ,
ಉಪ್ಪರಿಗೆಯಿಂ ಸಿಡಿಯೆ 'ಢಂ ಢಂ'ಕರಾಳ
ವಾರ್ತೆ ಬಂದಿತು ಹಾಯ್! ಕಹಿ
ಅಂದಿಸಿರುಳ,

— ೨ —

ಶಾಂತಿದೂತ ಮಹಾತ್ಮ 'ಜಾನ್'
ನಿನ್ನಿಲ್ಲ!
ಭಾರತದ ಬಲಗೈಯ ಮಿತ್ರನಿನ್ನಿಲ್ಲ!
ಲೋಕ ಬವಣೆಗೆ ಸಹಕರಿಪ
ಸಂತನಿಲ್ಲ!
'ಒಸ್ವಾಲ್ಡ'ನ ವಿವೇಕ ಬನ ಶಪಿಸಿತೆಲ್ಲ!

— ೩ —

ಆದರ್ಶ ಸೇಹದಿಚ್ಛೆ ಲೋಕ ಕಲ್ಯಾಣ,
ಸಾಧಿಸಿದ ಮೇಲ್-ಅವನ ಕರೆಗೆ
ಉಡ್ಡಯನ,
ಜಗದ ನಿಯಮವಿದು ಗತಕಾಲದಿಂ
ಮನನ,
'ರೇಸನೆಯು ಎಳೆಯಾಗ ಹುಳದ ಅಸು
ಹರಣ'

— ೪ —

ಮಾನವತೆ ದಾನವತೆಗಳೊಳು
ಹೋರಾಟ,
ಕಾಲ ಸೈಶಾನನೊಳು
ಸಮದಂಡಿ ಸಮರ,
ವಾಸ್ತವಿಕ ರೂಪವಿದು ವಿಶ್ವದ
ವಿರಾಟ,
ತ್ಯಾಗ ಬಲಿದಾನ ಖ್ಯಾತಿಯುಳವರು
ಅಮರ,

— ೫ —

ವಿಸ್ಮೃತಾಂಧಕ್ಷದಲಿ ಆದರ್ಶವಾದಿ,
ನಿಕಟ ಸಗ್ರಾಮದಲಿ ಆ ಶಾಂತಿವಾದಿ,
ವಿಶ್ವನಾಶಕ-ದಸ್ಯುಕೆ ಬಹಿಷ್ಕಾರಿ,
ಯುಗದ ಕರೆಗೋಟ್ಟಳದ ಧೀರಪ್ರಹರಿ.

— ೬ —

ದೇವ ಯೇಸುಕ್ರಿಸ್ತನಲ್ಲದೆ ಜ್ಞಾನಿ
ಸಾಕ್ರೆಟೀಸನೂ,
ಗತವಿಭೂತಿ ಲಿಂಕನನೂ, ರಾಷ್ಟ್ರಪಿತ
ಗಾಂಧಿಯೂ,
ಅಳಿದ ದಿನವಾ ಶುಕ್ರವಾರವು
ಕೆನಡಿಯನು ಕೊಂಡೊಯ್ದಿತೂ,
ಶುಕ್ರವಾರದ ರುದ್ರ ಕರೆ ಸಾವಿನ್ನು
ಯುಗಯುಗದಲ್ಲಿಯೂ.

—ಸಿರಿಪತಿ.

ಗೇಹರಾಜ್ಯದಲ್ಲಿ

ನಮಗೂ ಆತ್ಮಗೌರವವಿದೆ

"ಸ್ವಲ್ಪ ಇಲ್ಲಿ ಕೇಳೀಂದ್ರೆ..."

"ಕೇಳ್ತಾನೇ ಇದ್ದೇನಲ್ಲಾ...."

"ಇದ್ದೀರಿ ನಿಜ; ಆದ್ರೆ ಇಲ್ಲಿ ಕೇಳೀಂದ್ರೆ..."

"ಹೇಳಪ್ಪಾ, ಹೇಳು ..."

"ನಾನು ಹೇಳ್ತಾ ಇದ್ರೆ ಕೇಳೋದು ಯಾರು?"

"ನಾನೇಂತ ಅಂದೆಯಲ್ಲಾ ನೀನು."

"ನಾನು ಅಂದೇನ್ನಿ. ನೀವು ಕೇಳ್ತಾ ಇದ್ದೀರಾ...ಅಥವಾ...."

"ಹೇಳೂಂತಂದ್ನೆಲ್ಲಾ...."

"ವತ್ತ್ರಿಕೆ ಪೇಪ್ರಿಂದ ಕಣ್ಣು ಹರಿಸೋದಿಲ್ಲಾ..."

"ಹ್ಞಾ . . ಹೇಳ್ತೀನೆ. ನಾನು ಕೇಳಿದ್ರೆ ಸರಿಯಲ್ಲಾ ನಿನ್ಗೆ..."

"ಅಲ್ಲಾ, ಅಷ್ಟೊಂದು ಧ್ಯಾನದಿಂದ ಏನದು ಓದೋದೂಂತ ..."

"ಓಹೋ . . ಅಷ್ಟೇನೇ ಈಗ ನಿಂಗೆ ಹೇಳ್ಬೇಕಾಗಿರೋದು?"

"ಅದೂ ಒಂದೂಂತನ್ನಿ...."

"ಮತ್ತೆ ಎರಡನೆಯದಾಗಿ...."

"ಮೊದಲನೆಯದಾಗಿ ತಾನೆ ಎರಡನೆಯದು?"

"ಮಾತು ಸರಿ ಕಲ್ತಿದ್ದಿ ಕಣೆ ನೀನು...."

"ಅಲ್ಲಾ, ನಿನ್ಗೆ ಇದನ್ನೆಲ್ಲಾ ಕಲಿಸಿರೊ ಮಹಾ ಗುರು ಯಾರು...."

"ಸಾಕು ಬಿಡೀಂದ್ರೆ....ಖುಶೀ ಇದ್ರೆ ಹೇಳಿ..ಇಲ್ಲಾಂದ್ರೆ..."

"ಬೇಡ ಅಲ್ವೆ? ಬೇಡಾ ಹಾಗಾದ್ರೆ..."

"ಅಯ್ಯಯ್ಯೋ ....ನೀವೊಬ್ರು... ಹೇಳೀಂತಂದ್ರೆ ಮತ್ತೆ ಶುರು ಮಾಡಿದ್ರಿ ಇವರೊಂದು ..."

"ಇವರು ಒಂದಲ್ದೆ ಎರಡಾಗಿರೋದು ಸಾಧ್ಯವಿಲ್ಲ ನೋಡು..."

"ಇಲ್ದಿದ್ರೆ ಬೇಡ. ಏನದು. ಅಷ್ಟು ನಿನ್ಗೆ ಸಿಟ್ಟು ಬರೋದು"

"ಸ್ವಾರಸ್ಯವಾದ ವಿಚಾರ ಓದೋವಾಗ ನಡ್ವೆ ತಡೆದ್ರೆ ಮತ್ತೇನು ಬರ್ಬೇಕೂಂತ?"

"ನಾನು ಕೇಳಿದ್ದು ಕೂಡಾ ಅದನ್ನೇ ಕಣೆ. ಏನದು ಸ್ವಾರಸ್ಯಾಂತ...."

"ನಾನು ಓದುತ್ತಿರೋದೇನೂಂತ ನಿಂಗೆ ಬೇಕಾಗಿದೆ ಅಲ್ವೆ?"

"ನಾನು ಮತ್ತೆ ಕೇಳಿದ್ದು ಏನೂಂತ?"

"ಕೇಳಿದ್ದು ಏನೂಂತ ಕೇಳಿದವರಿಗೆ ಗೊತ್ತು"

"ಅಂದ್ರೆ ನಿಮ್ಗೆ ಗೊತ್ತಿಲ್ಲಾನ್ನಿ..."

"ಹೌದು ನಂಗೊತ್ತಿಲ್ಲ . . ."

"ಬಿಡಿ ಹಾಂಗಾದ್ರೆ .... ಎಲ್ಲಾ ತಿಳೀತು...."

"ಏನೇ ಏನದು ತಿಳಿಯೋದು?"

"ನೀವು ಕೇಳ್ತಿರೋದು ಎಲ್ಲಾ ಸುಳ್ಳು"

"ಸರಿಹೋಯ್ತು ಬಿಡು. ನಿನ್ನ ಮಾತಿಗೆ ಮಾತು ಕೊಡ್ತಾ ಇದ್ದೇನೆ, ಮತ್ತೆ ಕೇಳಿದ್ದು ಸುಳ್ಳೂಂತ ಅಂತೀಯಲ್ಲಾ, ಅಬ್ಬಾ ..ಹೆಣ್ಣಿನ ಮನಸ್ಸೆ?"

"ಹೆಣ್ಣಿನ ಮನಸ್ಸು ಎಷ್ಟಾದ್ರೂ ಗಂಡಿನದಕ್ಕಿಂತ ಮೃದು."

"ಬಾಯಿಯೂ ಅಷ್ಟೇ ಸಡಿಲ...."

"ಅದೆಲ್ಲಾ ಇರ್ಲಿ. ಮಾತಿಗೆ ಮಾತು ಕೊಡೋಕೆ ನೀವೊಬ್ರು ಬಿರ್ದರು. ಈಗ ವಿಷಯಕ್ಕೆ ಬನ್ನಿ ..."

"ವಿಷಯದಲ್ಲೇ ಇದ್ದೇನಲ್ಲಾ ನಾನು?"

"ಅದ್ಯಾವ ವಿಷಯಾಂತ...."

"ಅದೆಲ್ಲಾ ನಿಂಗೆ ಹೇಗೆ ಗೊತ್ತಾಗ್ಬೇಕು?"

"ಆಗದೆ ಎಲ್ಲಿ ಹೋಗುತ್ತೆ? ಏನದೂಂತ ನಾನೂ ಸ್ವಲ್ಪ ತಿಳ್ಕೊಳ್ತೀನೆ."

"ನೀನು ಹೇಳೋದು ಸರಿಯೆನ್ನು. ಈ ಸಮಾನತೆಯುಗದಲ್ಲಿ ನಿನ್ನಲ್ಲೂ ತಿಳ್ಕೊಳ್ಳೋ ಶಕ್ತಿ ಇಲ್ಲಾಂತಂದ್ರೆ...."

"ಅದೆಲ್ಲಾ ನಿಮ್ಮ ರಂಗೀಟಿನ ಮಾತು. ಕಟ್ಟಿಡಿ. ಏನು ಅಂತಾ ವಿಷ್ಯಾಂತ ತಿಳ್ಸಿ"

"ಮಹಾರಾಣಿಯವರ ಅಪ್ಪಣೆ".

"ಶಿರಸಾವಹಿಸಿ ಮಹಾರಾಜ...."

"ಆಜ್ಞಾಪಾಲಕನಾಗಿದ್ದೇನೆ ತಮ್ಮ ಚರಣ ದಾಸ"

"ವಿಧೇಯರಾಗಿ..."

"ಮನೋ ಸಾಮ್ರಾಜ್ಞಿಯವರ ಮನೋಭಿಲಾಷೆಯೇನಿರ ಬಹುದು?"

"ಇಂದಿನ ವಾರ್ತಾವಿಶೇಷವಾದರೂ ಇರುವುದೇನೂಂತ ವಿಜ್ಞಾಪಿಸಿಕೊಳ್ಳ ಬಹುದೆ?"

"ಬಹಳಷ್ಟು ಇರುವುದು ಪ್ರಾಣ ಪ್ರಿಯೆ"

"ಏನದು ಪ್ರಾಣಪ್ರಿಯ?"

"ಸಂಯುಕ್ತ ರಾಷ್ಟ್ರ ಸಂಘದ ಭದ್ರತಾಸಮಿತಿಯ ಸಭೆಯು ಸೇರಿದ್ದ ವಿಚಾರ ಮಹಾರಾಣಿಯವರಿಂದ ಬಚ್ಚಿಡಲ್ಪಟ್ಟಿಲ್ಲ..."

"ಅದೇ ಕಾಶ್ಮೀರದ ಕುರಿತು ಚರ್ಚೆ ನಡೆಸಲು ತಾನೆ?"

"ಅಹುದು ರಾಣಿ, ಅಲ್ಲಿ ಭಾರತದ ಪ್ರತಿನಿಧಿ ಮಂಡಳದ ನಾಯಕ ಛಾಗ್ಲರವರು ಕಾಶ್ಮೀರ ಸಂಬಂಧದ ಹಳೆಯ ಗೊತ್ತುವಳಿಗಳೆಲ್ಲವೂ ಇಂದು ಕಾಲವಿಲ್ಲದವುಗಳೆಂದೂ ಭಾರತ ಒಕ್ಕೂಟದಲ್ಲಿ ಕಾಶ್ಮೀರ ಸೇರ್ಪಡೆಯು ಅವಿಭಾಜ್ಯವೆಂದೂ ಸ್ಪಷ್ಟ ಪಡಿಸಿದ ವಿಚಾರ ಸನ್ನಿಧಿಗೆ ಮನವರಿಕೆಯಾಗಿರ ಬೇಕು."

"ಇದಕ್ಕುತ್ತರವಾಗಿ ಪಾಕ್ ವಿದೇಶ ಮಂತ್ರಿ ಭುಟ್ಟೋರವರ ಕುತರ್ಕವನ್ನೂ ನಿನ್ನೆ ತಾನೇ ಅರಿಕೆ ಮಾಡಿಕೊಂಡಿದ್ದಿರಿ."

"ಶಹಬಾಸ್, ಮಹಾರಾಣಿಯವರ ಜ್ಞಾಪಕಶಕ್ತಿಯು ಮೆಚ್ಚುವಂತಾದ್ದು."

"ಅದು ಹಾಗೇ ಇರಲಿ. ಬ್ರಿಟಿಷ ಪ್ರತಿನಿಧಿ ಪೆಟ್ರಿಕ್ ಡೀನರು ತಮ್ಮ ಭಾಷಣದಲ್ಲಿ ಪಾಕಿಸ್ತಾನದ ಬಾಲಹಿಡಿದಂತೆ ತೋರುವ ವಿಚಾರವನ್ನೂ ಅಡಗಿಸಿಡಲಿಲ್ಲ."

"ಭಲೆ ಭಲೆ....ದಾಸನ ಬುದ್ದಿಗಿಂದೇನೋ ಮಂಕು ಕವಿದಂತಿದೆ ಇಲ್ಲವಾದರೆ..."

"ಇಲ್ಲವಾದರೆ ....? ಏನು . . ?"

"ಇಲ್ಲವಾದರೆ, ಸಂತೋಷ ವಾಹಕವನ್ನಿಗೇನೇ ಮರೆತ ಸುದ್ದಿ ತಮಗೆ..."

"ಸಾಕು ಬಿಡಿ ಮಹಾರಾಜ, ಡೀನರ ಭಾಷಣದ ಕುರಿತು ಯಾರಾದರೂ ಏನಾದರೂ ಅಂದರೆ?"

"ಅದೇ ಬಹುಸ್ವಾರಸ್ಯದ ಸುದ್ದಿ..."

"ಏನದು?"

"ಭದ್ರತಾ ಮಂಡಳದ ಸದಸ್ಯರಲ್ಲೇ ಅದು ಕಳವಳವನ್ನುಂಟು ಮಾಡಿದೆ. ಸಮಿತಿಯು ಯಾವ ನಿರ್ಧಾರಕ್ಕೆ ಬರಬೇಕಾದರೂ ಭಾರತ– ಪಾಕಿಸ್ತಾನಗಳಿಗೆ ಒಪ್ಪಿಗೆಯಾಗುವಂತೆ ಗೊತ್ತುವಳಿ ಸ್ವೀಕರಿಸಬೇಕು."

"ಯಾಕೆ?"

"ಕಾಶ್ಮೀರದ ವಿಷಯದಲ್ಲಿ ಮಹಾರಾಷ್ಟ್ರ ರಕ್ಷ್ಯದ ವೃಥಾ ನಿಲುವೆಯಿಂದಾಗಿ ಪಾಶ್ಚಾತ್ಯರು ಹೆದರುತ್ತಾರೆ"

"ರಶ್ಯಾವು ಭಾರತದ ಪರವಾಗಿಯೇ ಉಳಿದಿದೆಯಲ್ಲಾ..."

"ಆದರಿಂದಲೇ 'ವಿಟೋ' ಭಯ."

"ಓ. ಅಂದ್ರೆ ನೋಡಿ, ವಿಟೋ ಅಧಿಕಾರದಿಂದ ಭಾರತಕ್ಕೆ ಒಳ್ಳೇದಾಗುತ್ತೆ ಅಲ್ವೆ?"

"ಹೌದು..."

"ಒಂದು ವೇಳೆ ಅದು ಇಲ್ಲದೆ ಇರುತಿದ್ರೆ..."

"ಬಹುಮತದಿಂದ ಏನಾದ್ರೂ ನಿರ್ಣಯ ವಾಗುತಿತ್ತು."

"ಅಂದ್ರೆ ನಮಗೆ ಗಂಡಾಂತರವೊದಗುತಿತ್ತು."

"ಆಗ ಬಹುದಿತ್ತು. ಆದರೆ, ಸದ್ಯ ಅಂತಹುದೇನೂ ನಡೆಯಲಿಲ್ಲ. ಹಿಂದೊಮ್ಮೆ ಇದೇ ಪ್ರತಿಷೇಧ ಮತಾಧಿಕಾರವು ನಮಗೆ ಉಪಕಾರಮಾಡಿತ್ತು. ಅದಕ್ಕೆಂದೇ ಈಗ ಸಭೆಯನ್ನು ಮುಂದುವರಿಸಿದ್ದಾರೆ. ಡೀನರ ಭಾಷಣದಿಂದ ಭಾರತದಲ್ಲಿಯೂ ತೀವ್ರ ಕಳವಳ ಹುಟ್ಟಿದೆ."

"ಯಾರು ಏನಂತಾರೆ?"

"ಯಾರೆಂದೇನು! ಮಾಜಿ ರಕ್ಷಣಾ ಮಂತ್ರಿ ಮೆನನ್ನರು ಕಾಶ್ಮೀರಿಗಳ ಅಭಿಪ್ರಾಯ ತಿಳಿದುಕೊಂಡೇ ಕಾಶ್ಮೀರದ ಸೇರ್ಪಡೆ ಭಾರತದಲ್ಲಾಗಿದೆ ಎಂದು ಘೋಷಿಸಿದ್ದಾರೆ."

"ನಿಜವಾದುದೇ. ಮತ್ತೆ ಏನೆಂದರು"

"ಈ ದೇಶವನ್ನು ನೂರೈವತ್ತು ವರ್ಷಗಳವರೆಗೆ ದುಷ್ಟ ರೀತಿಯಿಂದ ಆಳಿದ ನಂತರ ಬ್ರಿಟಿಷ ಸರಕಾರವು ಭಾರತ ಸರಿಯಾಗಿ ನಡೆದುಕೊಳ್ಳಬೇಕೆಂದು ಉಪದೇಶಿಸುವುದು ಹುಚ್ಚು ಸಾಹಸವೆಂದು ಅವರು ಹೇಳಿ, ಇಂತಹ ಧೋರಣೆಯು ತನ್ನದಾಗಿದ್ದ ಸಾಮ್ರಾಜ್ಯವನ್ನು ಹಿಂದಿನ ಬಾಗಿಲಿನಿಂದ ಪುನಃ ಪಡೆಯುವ ಪ್ರಯತ್ನವೆಂದು ಟೀಕಿಸಿದರು."

"ಇದ್ದರೂ ಇರಬಹುದು...."

"ಅವರೂ ಇನ್ನೂ ಒಂದು ಮಾತು ಅಂದರು: ಜಮ್ಮು ಕಾಶ್ಮೀರದ ಜನತೆ ಭಾರತದಲ್ಲಿ ಸೇರ್ಪಡೆ ಹೊಂದಿದ್ದು ಸಂತಸಯೋಗ್ಯವಾದರೆ, ಭಾರತದ ೩೬ ಕೋಟಿ ಜನರು ಭಾರತ ಒಕ್ಕೂಟದಲ್ಲಿ ಸೇರ್ಪಡೆ ಹೊಂದಿದ್ದೂ ಸಂಶಯಾಸ್ಪದವೆಂದೆನ್ನ ಬೇಕಾಗುತ್ತದೆ"

"ಸತ್ಯ ಸತ್ಯ. ಖಂಡಿತಕ್ಕೂ ಸತ್ಯ."

"ಭಾರತದಲ್ಲಿ ಕಾಶ್ಮೀರದ ಸೇರ್ಪಡೆಯನ್ನು ರದ್ದುಪಡಿಸುವ ಅಧಿಕಾರ ಭಾರತದ ಸಂಸತ್ತಿಗೂ ಇಲ್ಲವಾಗಿರುವಾಗ ಅದು ಮತ್ತಾರಿಗಿದೆ? ಎಂದವರು ಸವಾಲು ಹಾಕಿದ್ದಾರೆ."

"ಮೆನನ್ನರ ಮಾತು ಎಂದರೆ ಮಾತು. ಎಷ್ಟಾದರೂ ತಾಸುಗಟ್ಟಲೆ ಅದೇ ಸಭೆ ಸಂ

(ಆನೇ ಪುಟ ನೋಡಿರಿ)

ಪರಿಷ್ಕಾರಕ್ಕಾಗಿ ಪುರಸ್ಕಾರ ನೀಡಿರಿ!
ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾಗಿ
ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ ಯವರು ಸಂಪಾದಕರಾಗಿದ್ದ
ವಿಚಾರಶೀಲರ ಮೆಚ್ಚಿನ ವಾರಪತ್ರಿಕೆ
ನವಯುಗ
ಉಡುಪಿ
ನೂತನ ಪರಿಷ್ಕರಣ ಹೊಂದಲಿದೆ
ಪ್ರೋತ್ಸಾಹಿಸಿ ಸಹಕರಿಸಿರಿ
ವಾರ್ಷಿಕ ಚಂದಾ ರೂ. ೧೦-೦೦
ಹೊಸ ಚಂದಾದಾರರಿಗೆ ಈಗತಾನೆ ಪ್ರಕಟವಾದ ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನೂ ಕಳಿಸಲಾಗುವುದು.
ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ವಿನಂತಿ.
ಸಂಚಾಲಕ-ಸಂಪಾದಕ— ಕೆ. ಹೊನ್ನಯ್ಯ ಶೆಟ್ಟಿ.

ಮುದ್ರಣ
ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ:
ನವಯುಗ ಪ್ರೆಸ್
ಸಂತೆಕಟ್ಟೆ
ಉಡುಪಿ

ನವಯುಗ

ವರುಷ	ಉಡುಪಿ	ವಾರ
೪೩	೨೦-೨-೧೯೬೪	೨೫

ಪಾಕ್‌ನ ಅರಸಿನರೋಗ

ಭಾರತದ ಮೇಲೆ ಉರಿಕಾರುತ್ತಿರುವ ಪಾಕಿಸ್ತಾನವು ಒಂದು ದೊಡ್ಡ ಅಪವಾದವನ್ನು ಹೊರಿಸುತ್ತಿದೆ. ಭಾರತದಲ್ಲಿ ಅಲ್ಪ ಸಂಖ್ಯಾಕರಾಗಿರುವ ಮುಸ್ಲಿಮರನ್ನು ಹಿಂಸಿಸಲಾಗುತ್ತಿದೆಯೆಂದವರ ಆರೋಪ. ಇದು ನಿಜವಾಗಿಯೂ ಗಂಭೀರ ಪರಿಶೀಲನೆಗೆ ಅರ್ಹವಾಗಿದೆ. ಲೋಕದ ಮುಂದೆ ಭಾರತವನ್ನು ಬೀಳುಗಳೆಯಲು ಪಾಕ್ ರಾಜಕಾರಣಿಗಳು ನೇಯುತ್ತಿರುವ ಈ ಕಪಟ ಜಾಲವನ್ನು ಭಾರತದ ಗೃಹ ಮಂತ್ರಿಯವರು ಕಡಿದೊಗೆದಿದ್ದಾರೆ. ಭಾರತವು ಇಸ್ಲಾಂಧರ್ಮೀಯರನ್ನು ಯಾವ ಪಕ್ಷಪಾತವೂ ಇಲ್ಲದೆ ನೋಡಿಕೊಂಡು ಬರುತ್ತಿದೆ; ಅವರೂ ಇತರರಂತೆಯೇ ಸಮಸ್ತ ನಾಗರೀಕಾಧಿಕಾರಗಳನ್ನು ಅನುಭವಿಸುತ್ತಿದ್ದಾರೆ. ಜಾತ್ಯತೀತ ಪ್ರಜಾಪ್ರಭುತ್ವ ಭಾರತದಲ್ಲಿ ಯಾವ ಪಂಗಡವೂ ಹೆಚ್ಚಲ್ಲ, ಕಡಿಮೆಯಲ್ಲವೆಂದು ಕಳೆದ ೧೬ ವರ್ಷಗಳಿಂದಲೂ ಅದು ತೋರಿಸಿಕೊಟ್ಟಿದೆ. ಭಾರತದಲ್ಲಿಯೇ ಸುಮಾರು ೫ ಕೋಟಿ ಮುಸ್ಲಿಮರಿದ್ದಾರೆ; ಜಗತ್ತಿನಲ್ಲಿ ಮುಸ್ಲಿಮರು ಅಧಿಕಸಂಖ್ಯೆಯಲ್ಲಿರುವ ಇಸ್ಲಾಮೇತರ ದೇಶಗಳಲ್ಲಿ ಭಾರತದ ಸ್ಥಾನವು ಹಿರಿದು. ಗೃಹಮಂತ್ರಿ ಗುಲ್ಜಾರೀಲಾಲನಂದಾರು ಕಳೆದವಾರ ಲೋಕಸಭೆಯಲ್ಲಿತ್ತ ಹೇಳಿಕೆಯೊಂದರಲ್ಲಿ ದೇಶದಲ್ಲಿ ಅಲ್ಪ ಸಂಖ್ಯಾಕರಿಗೆ ಉಚಿತ ರಕ್ಷಣೆಯನ್ನು ನೀಡುವಲ್ಲಿ ಭಾರತವು ಹಿಂದುಳಿಯುವುದಿಲ್ಲವೆಂಬ ಆಶ್ವಾಸನೆಯನ್ನಿತ್ತಿದ್ದಾರೆ. ಈಗಾಗಲೇ ನೆಮ್ಮದಿಯಿಂದ ಇಲ್ಲಿ ನೆಲಸಿಕೊಂಡಿರುವ ಮುಸ್ಲಿಮರು ಮಾತ್ರವಲ್ಲ ಇತರರು ಕೂಡ ಈ ಹೇಳಿಕೆಯಿಂದ ತೃಪ್ತರಾಗುವುದು ಸಹಜ.

ಕಾಶ್ಮೀರದಲ್ಲಿ ಪವಿತ್ರಕೇಶದ ದುರ್ಘಟನೆಯನ್ನು ಹಿಂಬಾಲಿಸಿ ಢಾಕ್ಕಾದಲ್ಲಿ ಜಾತೀಯ ಗಲಭೆ ನಡೆಯಿತು. ಸುಮಾರು ಒಂದೂವರೆ ಸಾವಿರ ಮೈಲು ದೂರದ ಢಾಕ್ಕಾ ಮತ್ತದರ ಆಸುಪಾಸಿನಲ್ಲಿ ಗಲಭೆ ನಡೆಯಬೇಕಾದ ಸಂದರ್ಭ ಅಥವಾ ಪರಿಸ್ಥಿತಿಗಳು ಹೇಗೆ ಉಂಟಾದುವು ಎಂಬುದೇ ತಿಳುವಳಿಕೆಗೆ ನಿಲುಕದ ವಿಷಯ. ಅಂತೂ ಢಾಕ್ಕಾದಲ್ಲಿ ಅಲ್ಪಸಂಖ್ಯಾಕ ಹಿಂದುಗಳ ಮೇಲೆ ಹಲ್ಲೆ ನಡೆಯಿತು; ಲೂಟಿ ದರೋಡೆ, ಕೊಲೆ ಸುಲಿಗೆಗಳು ಕಾಣಿಸಿಕೊಂಡುವು. ಇದರ ಪ್ರತೀಕಾರವೆಂಬಂತೆ ಕಲಕತ್ತೆಯಲ್ಲೂ ಗಲಭೆಯೆದ್ದಿತು. ಆದರೆ, ಭಾರತ ಸರಕಾರವು ಉಪಯುಕ್ತ ಕಾರ್ಯಕ್ರಮಗಳನ್ನು ಕೈಗೊಂಡು ಪರಿಸ್ಥಿತಿಯನ್ನು ಹತೋಟಿಗೆ ತಂದುಕೊಂಡರೆ, ಪೂರ್ವ ಪಾಕ್ ಸರಕಾರವು ದೊಂಬಿಯನ್ನು ನಿಲ್ಲಿಸಲು ಉಚಿತ ಕ್ರಮ ಕೈಗೊಳ್ಳಲಿಲ್ಲ. ಇದರಿಂದಾಗಿ, ಪಾಕಿಸ್ತಾನದಿಂದ ತಮ್ಮ ಆಸ್ತಿಪಾಸ್ತಿಗಳನ್ನೂ ಮನೆಮಾರುಗಳನ್ನೂ ಕಳೆದುಕೊಂಡ ನಿರಾಶ್ರಿತರು ಅಸ್ಸಾಮು ಮತ್ತು ಪಶ್ಚಿಮ ಬಂಗಾಳಗಳಿಗೆ ನುಗ್ಗುತ್ತಿದ್ದಾರೆ. ಈಗಾಗಲೇ ಸುಮಾರು ಅರ್ಧ ಲಕ್ಷದಷ್ಟು ಜನರು ವಲಸೆ ಬಂದಿದ್ದಾರೆಂಬುದನ್ನೂ ಢಾಕ್ಕಾ ಮತ್ತು ನಾರಾಯಣಗಂಜ್‌ಗಳ ಭಾರತೀಯ ಪ್ರತಿನಿಧಿ ಕಛೇರಿಯಲ್ಲಿ ವಲಸೆಗೆ ಅನುಮತಿ ಪಡೆಯಬಯಸುವವರ ಸಂಖ್ಯೆ ದಟ್ಟಣಿಸುತ್ತಿದೆ ಎಂಬುದನ್ನೂ ನಾವು ಮರೆಯಬಾರದು. ಕಲಕತ್ತೆಯ ಗೊಂದಲದ ಸಮಯದಲ್ಲಿ ಸುಮಾರು ೭೦ ಸಾವಿರ ನಾಗರಿಕರು ತಮ್ಮ ಮನೆಮಾರುಗಳನ್ನು ತೊರೆದು ದೂರವೋಡಿದ್ದರೆ, ಅವರಲ್ಲಿ ಸುಮಾರು ೫೯ ಸಾವಿರ ಜನರು ಮರಳಿ ತಮ್ಮ ಮೊದಲ ನಿವಾಸಗಳಲ್ಲಿ ನೆಲೆಗೊಂಡಿದ್ದಾರೆ ಎನ್ನುವಾಗ, ಪಾಕಿಸ್ತಾನವು ಗೊಂದಲವನ್ನು ತಡೆಯಲು ಯಾವ ಕ್ರಮವನ್ನೂ ಕೈಗೊಳ್ಳುವಲ್ಲಿ ಉತ್ಸಾಹ ವಹಿಸುತ್ತಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಭಾರತ ಸರಕಾರವು ಅನ್ಯಾಯವಾಗಿ ವಲಸೆಬರುವ ಪಾಕಿಸ್ತಾನಿಗಳನ್ನೂ ತಡೆಯಲು ಮನಸ್ಸು ಮಾಡಲಿಲ್ಲ ಎನ್ನುವಾಗ, ನಿರಾಶ್ರಿತರ ಪುನರ್ನಿವೇಶದಲ್ಲಿ ಅದರ ಆಸಕ್ತಿ ಎಷ್ಟು ಎಂದು ಊಹಿಸ ಬಹುದು.

ಇನ್ನೂ ಒಂದು ಮಾತನ್ನು ಸ್ಪಷ್ಟಪಡಿಸ ಬೇಕಾಗುತ್ತದೆ. ಭಾರತ ಸರಕಾರದ ಆಶಯದಂತೆ ದಂಡಕಾರಣ್ಯ ಯೋಜನೆ ಮತ್ತಷ್ಟು ಚಾಲನೆಯಿತ್ತು ನಿರಾಶ್ರಿತರೆಲ್ಲರಿಗೂ ಆಶ್ರಯವನ್ನು ಕಲ್ಪಿಸುವ ಪ್ರಯತ್ನವನ್ನು ಮಾಡಲು ಸಂಬಂಧಿಸಿದ ಭಾರತೀಯ ರಾಜ್ಯ ಸರಕಾರಗಳು ಮುಂದೆಬಂದಿವೆ. ಭಾರತದಲ್ಲಿರುವ ಪಾಕ್ ಹೈಕಮಿಶನರಾಗಲಿ, ಇತರಯಾರೇ ಆಗಲಿ ಭಾರತ ಸರಕಾರದ ನಿರಾಶ್ರಿತ ಪುನರ್ನಿವೇಶನದ ಕಾರ್ಯಯೋಜನೆಯನ್ನು ಪರಿಶೀಲಿಸಲು, ನೋಡಲು ಶಕ್ತರಾಗಿದ್ದಾರೆ. ಆದರೆ, ಪಾಕಿಸ್ತಾನದಲ್ಲಿ ಪರಿಸ್ಥಿತಿಯು ಹೀಗಿರುವುದಿಲ್ಲ. ಇಷ್ಟರಿಂದಲೇ ಭಾರತದ ಮೇಲೆ ಪಾಕ್ ರಾಜಕಾರಣಿಗಳು ಹೊರಿಸುತ್ತಿರುವ ಆರೋಪಗಳು ವ್ಯರ್ಥವಾದುವುಗಳೆಂದೂ ದುರುದ್ದೇಶಪೂರಿತವಾದುವೆಂದೂ ಯಾರಾದರೂ ಹೇಳಬಹುದು. ಪಾಕಿಸ್ತಾನವು ತಿರುಬೊಬ್ಬೆಯಿಂದ ಜಗತ್ತನ್ನು ವಂಚಿಸಬಹುದೆಂದು ನಂಬಿದೆ; ಕಾಶ್ಮೀರದಲ್ಲಿ ಮುಸ್ಲಿಮರು ಅಧಿಕ ಸಂಖ್ಯಾಕರಾಗಿರುವುದರಿಂದ ಅದು ತನಗೆ ಸೇರಬೇಕೆಂದು ವಿಚಿತ್ರ ವಾದವನ್ನು ಮುಂದೂಡುತ್ತಿದೆ; ಭಾರತದ ಮುಸ್ಲಿಮರು ನಾಗರಿಕ ಅಧಿಕಾರದಿಂದ ವಂಚಿತರಾಗಿದ್ದಾರೆಂದು ವ್ಯಥಾರೋಪ ಹೊರಿಸುತ್ತಿದೆ. ಆದರೆ, ಅದರ ಈಯೆಲ್ಲ ವಾದಗಳೂ ಮೂಲವಿಲ್ಲದವು; ಗಾಳಿಗೋಪುರಗಳು; ಸ್ವಪ್ನಲೋಕಕಲ್ಪಿತವಾದವುಗಳು. ಯಾರು ಏನೇ ಅನ್ನಲಿ ಭಾರತದ ಮುಸ್ಲಿಮರು ಪಾಕಿಸ್ತಾನದ ಹಿಂದುಗಳಿಗಿಂತಲ್ಲ ಮುಸ್ಲಿಮರಿಗಿಂತಲೇ ಉತ್ತಮ ಜೀವನವನ್ನು ನಡೆಸುತ್ತಿದ್ದಾರೆ—ಇದನ್ನು ಯಾರೊಬ್ಬರೂ ಮುಚ್ಚಿಡಲಾರರು. ಜಗತ್ತಿನ ಎಲ್ಲ ಪ್ರಜಾತಂತ್ರ ಪ್ರೇಮಿಯೂ ಭಾರತದ ಈ ನೀತಿಯನ್ನು ಪುರಸ್ಕರಿಸದೆ ಇರಲಾರನು. ಅರಸಿನರೋಗದಿಂದ ಪೀಡಿತವಾದ ಪಾಕ್ ಸರ್ವಾಧಿಕಾರಿಗಳಿಗೆ ಲೋಕವೇ ಅರಸಿನವಾಗಿ ಕಂಡರೆ, ಅದಕ್ಕೆ ಇತರರನ್ನು ಯಾಕೆ ದೂರಬೇಕು?

ಜಗತ್ಪರ್ಯಟನ

ಎಚ್. ಸಿ ದಾಸಪ್ಪ

ಕರ್ನಾಟಕದ ಕರಾವಳಿಯಿಂದ ಕಬ್ಬಿಣದ ಅದುರಿನ ರಪ್ತನ್ನು ತ್ವರಿತಗೊಳಿಸುವುದು ಅಗತ್ಯವೆಂದು ಮನಗಂಡ ಕೇಂದ್ರ ಸರಕಾರವು ಹಾಸನ - ಮಂಗಳೂರು ರೈಲು ಮಾರ್ಗ ನಿರ್ಮಿಸುವ ಯೋಜನೆಯನ್ನು ತೃತೀಯ ಯೋಜನೆಯಲ್ಲಿ ಅಳವಡಿಸಿ ಕೊಂಡಿದೆ. ಈಗಾಗಲೇ ಮಂಗಳೂರು ರೈಲು ನಿಲ್ದಾಣದಿಂದ ಪಣಂಬೂರಿನವರೆಗೆ ಬ್ರಾಡ್‌ಗೇಜ್ ಮತ್ತು ಮೀಟರ್‌ಗೇಜ್ ರೈಲು ಸಂಪರ್ಕವನ್ನು ಕಲ್ಪಿಸುವ ಕಾರ್ಯಕ್ರಮಕ್ಕೆ ಮಂಜೂರಾತಿ ನೀಡಿದೆ. ಮೂರನೆಯ ಯೋಜನೆಯಲ್ಲಿ ಉಳಿದಿರುವ ಎಲ್ಲಾ ಅವಧಿಯನ್ನು ನೋಡುವಾಗ, ಮಂಗಳೂರು-ಹಾಸನ ರೈಲ್ವೆಯು ನಾಲ್ಕನೆ ಯೋಜನಾವಧಿಯಲ್ಲಾದರೂ ಕೊನೆಗೊಳ್ಳಬೇಕೆಂದು ನಾಗರಿಕರು ಬಯಸುವಂತಾಗಿದೆ. ರೇಲ್ವೆ ಮಂತ್ರಿ ದಾಸಪ್ಪನವರ ಆಸಕ್ತಿ ಹೇಗಿದೆಯೋ?

ಚೆಸ್ಟರ್ ಬೌಲ್ಸ್

ಇದ್ದದ್ದನ್ನು ಇದ್ದಂತೆ ಹೇಳುವವರೂ ಹಾಗೆ ಹೇಳಿದ್ದರಿಂದ ಸಂತುಷ್ಟರಾಗುವವರೂ ಅತಿ ವಿರಳ. ವಂಚಕ ಸ್ತುತಿಯನ್ನೇ ಹೆಚ್ಚಾಗಿ ಮೆಚ್ಚುವ ಬಾಹ್ಯಾಡಂಬರದ ಯುಗವಿದು. ಆದರೂ ಭಾರತದಲ್ಲಿ ಅಮೇರಿಕೆಯ ರಾಯಭಾರಿಯಾಗಿರುವ ಶ್ರೀ ಚೆಸ್ಟರ್ ಬೌಲ್ಸರು ಸತ್ಯವನ್ನು ಎಂದಿಗೂ ಮರೆ ಮಾಚುವವರಲ್ಲ. ಭಾರತೀಯ ಪತ್ರಿಕೋದ್ಯಮದ ಕುರಿತು ಅವರ ಉದ್ಗಾರವೀ ರೀತಿಯಿದೆ: "ಭಾರತೀಯ ಪತ್ರಿಕೋದ್ಯಮವು ಬಹಳ ಉತ್ತಮ ವಾಗಿದೆ; ಸ್ವತಂತ್ರವಾಗಿದೆ. ಭಾರತೀಯ ವರದಿಗಾರರು ಸಮರ್ಪಕ ವಿಧಾನವನ್ನು ಅನುಸರಿಸುತ್ತಿರುವುದನ್ನು ನಾನು ಕಂಡು ಕೊಂಡಿದ್ದೇನೆ. ಭಾರತದಲ್ಲಿ ಪತ್ರಿಕೋದ್ಯಮವು ಪ್ರಜಾಪ್ರಭುತ್ವದ ಪ್ರಬಲ ಶಕ್ತಿಯಾಗಿ ಪರಿಣಾಮಿಸಿದೆ." ಈ ಉದ್ಗಾರ ನಮ್ಮ ಶತ್ರುಗಳ ಕೆನ್ನೆಗೊಂದು ಚಾಟಿಯೇಟು ಅಲ್ಲವೆ?

ವಿ. ಟಿ. ಕೆ.

ಸ್ಪಷ್ಟ ವಿವೇಚನೆ ಮತ್ತು ಸರಳ ಅಭಿವ್ಯಕ್ತಿಗಳಿಗೆ ಹೆಸರಾದ ವ್ಯಕ್ತಿ ವಿ. ಟಿ. ಕೃಷ್ಣಮಾಚಾರಿಯವರು ತಾ. ೧೩ರಂದು ನಿಧನರಾದರು. ಆ ವೇಳೆ ಅವರ ಪ್ರಾಯ ೮೩ ಆಗಿತ್ತು. ಅವರ ವ್ಯವಹಾರಗಳು ಅತಿ ಮೃದುಲವಾಗಿದ್ದುವು. ತನ್ನಲ್ಲಿಗೆ ಬಂದ ಪ್ರತಿಯೊಬ್ಬರೊಡನೆಯೂ ಅವರು ಸಹಾನುಭೂತಿಯನ್ನು ತೋರಿಸುತ್ತಿದ್ದರು. ಸರ್ವ ವಿಷಯಗಳಲ್ಲಿಯೂ ದೊಡ್ಡ ಪಂಡಿತರಾದವರು ಇವರು; ಸಹಕಾರ ಚಳುವಳಿ, ಸಾರ್ವಜನಿಕ ಆಡಳಿತೆ, ಅರ್ಥಶಾಸ್ತ್ರ, ಶಿಲ್ಪಶಾಸ್ತ್ರ, ಸಂಗೀತ, ಕಲೆ, ಸಾಹಿತ್ಯ ಮೊದಲಾದುವುಗಳಲ್ಲಿ ಅವರಿಗೆ ಆಸಕ್ತಿ ಅತ್ಯಧಿಕವಾಗಿತ್ತು. ಸ್ವಾತಂತ್ರ್ಯ ಪ್ರಾಪ್ತಿಯಾದೊಡನೆಯೇ ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಉಪಾಧ್ಯಕ್ಷರಾಗಿ ಕೃಷ್ಣಮಾಚಾರ್ಯರು ದೇಶ ಸೇವೆಗೆ ತೊಡಗಿದರು. ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಇವರು ಸಲ್ಲಿಸಿದ ಸೇವೆಯು ಅತ್ಯಮೋಘವಾದುದು. ಆಡಳಿತಾತ್ಮಕ ಮತ್ತು ಯೋಜನಾ ರೂಪಣೆಯಲ್ಲಿರುವ ಅವರ ಜ್ಞಾನದ ಉಪಯೋಗವು ದೇಶಕ್ಕೆ ಇನ್ನು ಮುಂದೆಯೂ ದೊರೆಯಬೇಕೆಂಬ ಆಶಯದಿಂದ ೧೯೬೦ರಲ್ಲಿ ಅವರನ್ನು ರಾಜ್ಯಸಭೆಯ ಸದಸ್ಯರನ್ನಾಗಿ ನಾಮಕರಣ ಮಾಡಲಾಗಿತ್ತು. ವಿ.ಟಿ.ಕೃಷ್ಣಮಾಚಾರಿಯವರ ಮಾರ್ಗದರ್ಶನದಲ್ಲಿಯೇ ಭಾರತದ ಮೊದಲ ಎರಡು ಯೋಜನೆಗಳ ಸಂಪೂರ್ಣ ರೂಪವು ಕಾರ್ಯಾಚರಣೆಗೆ ಇಳಿಯಿತು ಎಂದರೆ, ಅತಿಶಯೋಕ್ತಿಯಲ್ಲ. ಕೃಷ್ಣಮಾಚಾರಿಯವರಲ್ಲಿದ್ದ ಆಡಳಿತ ಸಾಮರ್ಥ್ಯ ಮತ್ತು ಪರಿಪಕ್ವ ಅನುಭವಗಳು ಪ್ರತಿಯೊಬ್ಬ ಮುಂದಾಳುವಿಗೂ ಆದರ್ಶವಿರುತ್ತವೆ. ದಿವಂಗತರ ಆತ್ಮವು ಚಿರಶಾಂತಿ ಹೊಂದಲೆಂದೂ, ಅವರ ಆದರ್ಶವನ್ನು ಭಾರತೀಯರು ಅನುಸರಿಸಲೆಂದೂ ಹಾರೈಸುತ್ತೇವೆ.

ಆರ್. ಶಂಕರ್

ಮೊದಲು ರಾಜಿನಾಮೆ ನೀಡಲು ನಿರಾಕರಿಸಿದ್ದ ಕೇರಳದ ಗೃಹಮಂತ್ರಿಯಾಗಿದ್ದು ಸದ್ಯ ಕಂದಾಯ ಮಂತ್ರಿಯಾಗಿ ಉಳಿದಿರುವ ಪಿ.ಟಿ ಚಾಕೋ ತನ್ನ ರಾಜಿನಾಮೆ ನೀಡಲು ಸಮ್ಮತಿಸಿರುವರೆಂದು ಹೇಳುತ್ತಾರೆ. ಮುಖ್ಯ ಮಂತ್ರಿ ಆರ್. ಶಂಕರರು ಚಾಕೊರ ಒಂದು ಹೇಳಿಕೆಯ ಪರಿಣಾಮವಾಗಿ ನನಗೆ ಅವರಲ್ಲಿ ವಿಶ್ವಾಸವುಳಿದಿಲ್ಲವೆಂದು ಹೇಳಿದ್ದೇ ಅವರ ನಿಲುಮೆಯ ಕಾರಣವೆನ್ನಲಾಗಿದೆ. ಕಾಂಗ್ರೆಸ್ ಅಧ್ಯಕ್ಷರೊಡನೆ ವಿಚಾರ ವಿನಿಮಯ ಮಾಡಿ, ಅವರ ಅನುಮತಿಯನ್ನು ಗಳಿಸಿ ತಾನು ರಾಜಿನಾಮೆ ನೀಡುವುದಾಗಿ ಚಾಕೋ ಬಹಿರಂಗ ಪಡಿಸಿದ್ದಾರೆ. ಇದು ಕಾರ್ಯಗತವಾಯಿತೆಂದರೆ, ಕೇರಳದ ಒಂದು ಪ್ರಶ್ನೆ ಸದ್ಯಕ್ಕೆ ಬಗೆಹರಿದಂತಾಯಿತು; ಚಾಕೋ—ಶಂಕರರ ವ್ಯಕ್ತಿತ್ವಕ್ಕು ಹೆಚ್ಚಿನ ಕಳಂಕ ತಟ್ಟದಂತಾಯಿತು.

ಪ್ರತಾಪಸಿಂಹ ಕೈರಾನ್

ನ್ಯಾಯಾಲಯದ ತೀರ್ಪನ್ನು ಅನುಲಕ್ಷಿಸಿ ರಾಜಿನಾಮೆಯೀಯಲು ಆಂಧ್ರದ ಮುಖ್ಯಮಂತ್ರಿ ಸಂಜೀವ ರೆಡ್ಡಿಯವರು ಅನುಮತಿ ಪಡೆದುಕೊಂಡಿದ್ದಾರೆ. ರಾಜಿನಾಮೆ ನೀಡಬೇಕೆಂದು ಜನತೆ ಬಲಾತ್ಕಾರ ಹೇರುತ್ತಿರುವರಾದರೂ ಪಂಜಾಬದ ಪ್ರತಾಪಸಿಂಹ ಕೈರಾನರ ಪ್ರಕಾಶವಿನ್ನೂ ಅಣಗಿಲ್ಲ. ಬೆದರಿಕೆಗೆ ಬಗ್ಗಿ ನಾನು ಅಧಿಕಾರ ತ್ಯಜಿಸಲಾರನೆಂದು ಅವರದು ದೃಢನಿಲುಮೆ. ಹೋರಾಟ- ಸಾಹಸಪ್ರಿಯರಾದ ಕೈರಾನರಿಗೆ ಮುಳ್ಳಿನ ಅಧಿಕಾರ ಪೀಠದ ಮೇಲೆ ಕುಳಿತಿರುವುದೇ ಸುಪ್ಪತ್ತಿಗೆಯ ಸಿಂಹಾಸನಕ್ಕಿಂತ ಪ್ರಿಯತರವೆಂದು ತೋರುತ್ತದೆ. ಪ್ರತಾಪಸಿಂಹರ ಮೇಲಿನ ಆರೋಪ ವಿಚಾರಣೆ ಮಾಡಲಿರುವ ದಾಸಗುಪ್ತಾರ ವರದಿ ಪ್ರಕಟವಾದ ಮೇಲೆಯೂ ಅವರು ಅಧಿಕಾರ ಉಳಿಸಿಕೊಳ್ಳುವ ಧೈರ್ಯದಿಂದಿದ್ದಾರೆ

ಎಚ್. ವಿ ಕಾಮತ್

ಲೋಕಸಭೆಯ ಸದಸ್ಯ ಹರಿ ವಿಷ್ಣು ಕಾಮತರು ವಿರೋಧಿ ಪಕ್ಷಕ್ಕೆ ಸೇರಿದವರಾದರೂ ಅವರ ಅರ್ಥಪೂರ್ಣ ವಿರೋಧವು ಸಭೆಗೆ ಭೂಷಣಪ್ರಾಯವಾಗಿದೆ. ಪ್ರಧಾನಿ ನೆಹರೂರವರು ಶೀಘ್ರ ಗುಣಮುಖವಾಗಬೇಕೆಂದು ಪ್ರಾರ್ಥಿಸಿದ ಅವ

ಅಲ್ಲಲ್ಲಿಯ ಸುದ್ದಿಸಾರ

ಹೆಜಮಾಡಿ ಬೋರ್ಡು ವಿವಿಧೋದ್ದೇಶ ಹೈಸ್ಕೂಲ್ ವಾರ್ಷಿಕೋತ್ಸವವು — ತಾ. 7-2-1964ರಂದು ಜಿಲ್ಲಾ ಡೆಪ್ಯುಟಿ ಕಮಿಶನರ್ ಶ್ರೀ ಕೆ. ಆರ್. ರಾಮಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಅಂದು ಬೆಳಿಗ್ಗೆ ರಾಷ್ಟ್ರಧ್ವಜವನ್ನು ನಿವೃತ್ತ ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಆಫೀಸರ್ ಶ್ರೀ ಎಚ್. ಮುದ್ದಣ್ಣ ಶೆಟ್ಟರು ನೆರವೇರಿಸಿದರು. ಸಂಜೆ ಆರಂಭದಲ್ಲಿ ಶ್ರೀ ಸೀತಾರಾಮ ಶೆಟ್ಟಿಯವರು ಅಧ್ಯಕ್ಷರನ್ನೂ, ಅತಿಥಿಗಳನ್ನೂ, ಸಭಿಕರನ್ನೂ ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಪಿ. ತಿಮ್ಮಪ್ಪಯ್ಯನವರು ಶಾಲಾ ವರದಿಯನ್ನೋದಿದರು. ಶ್ರೀ

ರು, ನೆಹರು ಪ್ರಧಾನಿಯ ಜವಾಬ್ದಾರಿಯ ಕೆಲಸಗಳಿಂದ ತುಸು ದೂರವಿರಬೇಕೆಂದು ಸಲಹೆಯಿತ್ತಿದ್ದಾರೆ. ಇದಕ್ಕವರು ಎರಡು ಸೂಚನೆಗಳನ್ನು ಮುಂದಿಟ್ಟಿದ್ದಾರೆ. ಮೊದಲನೆಯದಾಗಿ, ಆಡಳಿತ ಪಕ್ಷವು ಹೊಸ ನಾಯಕನನ್ನು ಆರಿಸಿಕೊಳ್ಳುವುದು. ಇದು ಸಾಧ್ಯವಿಲ್ಲವಾದರೆ, ಉಪ ಪ್ರಧಾನ ಮಂತ್ರಿಯೊಬ್ಬನನ್ನು ನೇಮಿಸುವುದು. ಈ ಸೂಚನೆಯ ಪ್ರಾಮುಖ್ಯ ಎಲ್ಲರಿಗೂ ಗೊತ್ತು. ಆದರೆ, ಇದನ್ನು ಅನುಷ್ಠಾನಕ್ಕೆ ತರುವಾಗ ನಡೆಯಬಹುದಾದ ತಿಕ್ಕಾಟಗಳನ್ನು ತಡೆಯುವವರು ಯಾರು?

ಹೆರಾಲ್ಡ್ ಮೆಕ್ಮಿಲನ್

"ಕಣ್ಣಾರಂಡರೆ ಹೆಣವೂ ಬಾಯಿಬಿಡುವುದು" ಎಂಬುದು ನಮ್ಮದೇಶದಲ್ಲಿ ಮಾತ್ರವಲ್ಲ ಇಗ್ಲೆಂಡಿನಲ್ಲಿಯೂ ಸತ್ಯವಾಗಿದೆ. ಬ್ರಿಟಿಷ್ ಮಾಜಿ ಪ್ರಧಾನ ಮಂತ್ರಿ ಹೆರಾಲ್ಡ್ ಮೆಕ್ಮಿಲನರು ರಾಜ್ಯದ ವೃದ್ಧಾಪ್ಯ ವೇತನಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಪ್ರಧಾನ ಮಂತ್ರಿಯಾಗವರ್ಷಕ್ಕೆ ೧೦,೦೦೦ ಪೌಂಡು ಪಡೆಯುತ್ತಿದ್ದ ಅವರಿಂದು ವಾರ್ಷಿಕ ೨,೦೦೦ ಪೌಂಡು ನಿವೃತ್ತಿ ವೇತನ ಪಡೆಯುತ್ತಿದ್ದಾರೆ. ಇದಲ್ಲದೆ' ೬೦ ವರ್ಷ ವಯಸ್ಸಿನ, ಪತ್ನಿಯುತರಾದ ಇವರು ವರ್ಷವೊಂದರ ೩೬೫ ಪೌಂಡು ೬ ಶಿಲ್ಲಿಂಗ್‌ಗಳು ವೃದ್ಧಾಪ್ಯವೇತನ ಪಡೆಯಬಲ್ಲರು. ಮೆಕ್ಮಿಲನ್ ಬುಕ್ ಕಂಪೆನಿಯ ಅಧ್ಯಕ್ಷರಾದ ಇವರು ವೃದ್ಧಾಪ್ಯ ವೇತನವನ್ನು ಪಡೆಯುವ ಸೌಲಭ್ಯವನ್ನು ಕಳೆದುಕೊಳ್ಳಲಿಲ್ಲವೆನ್ನುವಾಗ, ಸಾಮಾನ್ಯ ಭಾರತೀಯನ ಕತೆಯೇನು?

ನಿಜಲಿಂಗಪ್ಪ

ಬಚ್ಚಲುಮನೆಯಲ್ಲಿ ಸ್ನಾನ ಮಾಡುತ್ತಿರುವಾಗ ಜಾರಿಬಿದ್ದ ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರು ಸಾಮ್ಯರಣಪದಲ್ಲಿ ಗಾಯಗೊಂಡ ಕಾರಣ ಹತ್ತು ದಿನಗಳ ವಿಶ್ರಾಂತಿ ಅನುಭವಿಸುತ್ತಿದ್ದಾರೆ. ಅವರ ಎಡ ಮುಂಗೈಯ ಎಲುಬು ಸ್ವಲ್ಪ ಮುರಿದಿದೆಯೆಂದೂ ಗೊತ್ತಾಗಿದೆ. ಎಲುಬು ಮುರಿದುಕೊಂಡವರು ಅನೇಕ ಜನರಿದ್ದಾರೆ; ಆದರೆ, ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾದುದರಿಂದ ಇದಕ್ಕೆ ಪ್ರಸಿದ್ಧಿ ದೊರೆತಿದೆ. ರಾಜ್ಯದ ಸೂತ್ರಧಾರರಾದ ಇವರು ಶೀಘ್ರದಲ್ಲಿಯೇ ಗುಣಮುಖ ಹೊಂದಿ, ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಂತಾಗಲಿ ಎಂದು ಎಲ್ಲರೂ ಬಯಸುತ್ತಾರೆ. ಆಡಳಿತದಲ್ಲಿ ಜಾರಿಬೀಳಬಾರದು ಎಂಬುದು ಈ ಪುಟ್ಟ ಅಪಘಾತದ ಸೂಚನೆಯಾಗಬಹುದೆ?

ಎ. ಕೆ. ನರ್ಸ ಶೆಟ್ಟರು ಸಂದೇಶಗಳನ್ನು ಓದಿದರು. ಶಾಲಾ ಸ್ವಸ್ತಿ ವಾಚನವನ್ನು ಶ್ರೀ ಕೆ. ದೇವಪ್ಪ ರೈಯವರು ಮಾಡಿದರು. ಡಾ. ಸಂಜೀವನಾಥ್, ಎಂ. ಎಲ್. ಎ ಯವರು ಬಹುಮಾನವಿತರಣೆಗೈದರು. ಶ್ರೀ ಹೆಜಮಾಡಿ ಮುಕುಂದ ನಾರಾಯಣ ಗಡಿಯಾರರು ಶಾಲೆಗೆ ದಾನವಾಗಿತ್ತ ಟೈಪ್‌ರೈಟರನ್ನು ಉಡುಪಿ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಅಧ್ಯಕ್ಷ ಶ್ರೀ ಎಂ. ಮಧ್ವರಾಜ್, ಎಂ. ಎಲ್. ಎ.ಯವರು ಶಾಲೆಯ ಪರವಾಗಿ ಸ್ವೀಕರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪರೀಕ್ಷೆಗಳನ್ನು ಪಾಸುಮಾಡಿ ಹೆಚ್ಚು ಫಲಿತಾಂಶಗಳನ್ನು ಪಡೆಯುವುದೇ ಶಿಕ್ಷಣದ ಗುರಿಯಲ್ಲ. ಪಾಠ ಆಟ, ಮತ್ತು ಪಾಠೇತರ ಚಟುವಟಿಕೆಗಳಲ್ಲಿ ಭಾಗ ವಹಿಸಿ, ಜೀವನ ಪರೀಕ್ಷೆಯನ್ನು ಗೆಲ್ಲಲು ಬೇಕಾದ ಉತ್ತಮ ನಡತೆ, ಶಿಸ್ತು, ಪ್ರಾಮಾಣಿಕತೆ, ಶ್ರದ್ಧೆ, ತೃಪ್ತಿ, ದೇಶಪ್ರೇಮ ಸೌಜನ್ಯತೆ, ಮಕ್ಕಳಲ್ಲಿರುವ ಸುಪ್ತ ಚೇತನಗಳನ್ನು ವಿಕಸನಗೊಳಿಸುವುದು ಇತ್ಯಾದಿ ಗುಣಗಳನ್ನು ಪಡೆಯುವುದೇ ಶಿಕ್ಷಣದ ಉದ್ದೇಶವೆಂದರು. ವಿವಿಧ ವಿನೋದಾವಳಿಯ ಅಂಗವಾಗಿ ಇಂಗ್ಲಿಷ್, ಕನ್ನಡ, ಹಿಂದಿ, ಮತ್ತು ತುಳು ನಾಟಕಗಳು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರದರ್ಶಿಸಲ್ಪಟ್ಟುವು. ನಾಟಕಗಳಿಗೂ ಬಹುಮಾನಗಳನ್ನು ಶ್ರೀ ಮುಕುಂದ ನಾರಾಯಣ ಗಡಿಯಾರರು ವಿತರಣೆಗೈದರು. ಶ್ರೀ ಪಿ ಎಲ್ ರಾಘುವೇಂದ್ರರಾಯರು ಧನ್ಯವಾದವಿತ್ತರು.

ಉಡುಪಿಯ ಕ್ರಿಶ್ಚನ್ ಹೈಸ್ಕೂಲಿನ ಬೆನಿಫಿಟ್ ಟ್ರಸ್ಟ್ ಫಂಡಿಗೆ ಸಹಾಯಧನ — ಉಡುಪಿ ಕ್ರಿಶ್ಚನ್ ಹೈಸ್ಕೂಲು ಬೆನಿಫಿಟ್ ಟ್ರಸ್ಟ್ ಫಂಡಿಗೆ ಅವರ ಪ್ರಾಕ್ತನ ವಿದ್ಯಾರ್ಥಿಯಾಗಿದ್ದು ಈಗ ಶಿವಮೊಗ್ಗೆಯಲ್ಲಿರುವ ಡಾ। ಪೈ. ಆರ್. ಶೆಟ್ಟಿ. ಯಂ. ಬಿ. ಬಿ ಎಸ್. ಇವರು ತಮ್ಮ ತೀರ್ಥರೂಪ ದಿ. ಕಲ್ಲುಗುಡ್ಡೆ ಶ್ರೀ ವೆಂಕಯ್ಯ ಶೆಟ್ಟಿ, ಸ್ಮಾರಕಾರ್ಥ ಪ್ರತಿವರ್ಷವೂ ಶಾಲೆಯ 10ನೇ ತರಗತಿಯಲ್ಲಿ ರಸಾಯನ ಶಾಸ್ತ್ರದಲ್ಲಿ ಉತ್ತಮವಾಗಿ ತೇರ್ಗಡೆ ಹೊಂದುವ ವಿದ್ಯಾರ್ಥಿಗೆ ಬಹುಮಾನಕೊಡುವರೇ ರೂಪಾ 100 ನ್ನು ಇದೇ ತಿಂಗಳ ತಾ. 7-2-1964ರಲ್ಲು ಅರ್ಪಿಸಿರುವರೆಂದು ತಿಳಿದುಬರುತ್ತದೆ.

ಹಲವು ವರ್ಷಗಳ ಕಾಲ ಬಾಸೆಲ್ ಮಿಶನ್ ಎಲಿಮೆಂಟರಿ ಶಾಲೆಯಲ್ಲಿ ದಕ್ಷ ಅಧ್ಯಾಪಕರಾಗಿ ದುಡಿದು, ನಿವೃತ್ತಿಯ ನಂತರ ಯಕ್ಷಗಾನ ಕಲಾಭಿವೃದ್ಧಿಗಾಗಿ ಶ್ರಮಿಸಿ ಖ್ಯಾತಿಪಡೆದ ದಿವಂಗತರ ಆತ್ಮಕ್ಕೆ ಕೊಡುಗೆಯು ಶಾಂತಿ ಸಮಾಧಾನವನ್ನೀಯುವುದಲ್ಲದೆ, ಅವರ ಶಿಷ್ಯವೃಂದಕ್ಕೂ ಬಂಧು ಬಳಗಕ್ಕೂ ವಿಶೇಷ ಸಂತೃಪ್ತಿಯನ್ನು ಕೊಡಬಹುದೆಂದು ನಂಬಲಾಗಿದೆ.

ಉಡುಪಿ ಬೋರ್ಡು ಹೈಸ್ಕೂಲಿನ ವರ್ಧಂತ್ಯುತ್ಸವವು—ತಾ 16ರಂದು ಸಬೋರ್ಡಿನೇಟ್ ಜಡ್ಜ್ ಶ್ರೀ ಜಿ ಆರ್. ದೇಸಾಯಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ವರ್ಧಂತ್ಯುತ್ಸವ ಸಮಿತಿಯ ಅಧ್ಯಕ್ಷ ಶ್ರೀ ಕೆ.ಕೆ. ಪೈಗಳು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಕೆ ವಿಟ್ಠಪ್ಪನವರು ಸವಿವರವಾದ ವರದಿ ವಾಚನ ಮಾಡಿದರು. ದೇವದಾಸ್ ಸ್ಮಾರಕ ಸಮಿತಿಯವರು ದಾನವಾಗಿತ್ತ ಶಾಲೆಯ ಸ್ವರ್ಗಸ್ಥ ಅಧ್ಯಾಪಕರಾದ ಕೆ .ಎ. ದೇವದಾಸರ ತೈಲಚಿತ್ರವನ್ನು ಶೀರೂರು ಮಠದ ಶ್ರೀ ಲಕ್ಷ್ಮೀಮನೋಜ್ಞತೀರ್ಥ ಶ್ರೀ ಪಾದಂಗಳವರು ಅನಾವರಣ ಮಾಡಿದರು. ಶ್ರೀ ಕೆ. ಶ್ರೀಪತಿ ಉಪಾಧ್ಯರು ಸ್ವಸ್ತಿ ವಾಚನಗೈದರು. ಅಧ್ಯಕ್ಷರು ಬಹುಮಾನ ವಿತರಣೆಮಾಡಿ ಶಾಲೆಯ ಪ್ರಗತಿಗಾಗಿ ಮೆಚ್ಚುಗೆ ಸೂಚಿಸಿ ಮಾತಾಡಿದರು. ರಾತ್ರಿ ಮನರಂಜನಾ ಕಾರ್ಯಕ್ರಮಗಳಾದವು.

ಮರುದಿನ ಬೋರ್ಡು ಹೈಸ್ಕೂಲು ಹಳೆ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಅಧ್ಯಕ್ಷ ಕೆ.ಪಿ. ಹರಿದಾಸ ಭಟ್ಟರು ಸ್ವಾಗತಿಸಿದರು. ಕಾರ್ಯದರ್ಶಿ ಯು. ದಾಮೋದರ ಇವರು ವರದಿಯನ್ನೋದಿದರು. ಅಧ್ಯಕ್ಷರು ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ರೋಶ್ ಫೆರ್ನಾಂಡಿಸರ ತೈಲಚಿತ್ರವನ್ನು ಅನಾವರಣ ಮಾಡಿದ ಮೇಲೆ ಡಾ। ಟಿ. ಎಂ ಎ ಪೈ, ಬಿ. ಶಾಮರಾಯ ಶೆಟ್ಟಿ, ಬಿ. ಜೆ. ಕೆದ್ಲಾಯ, ರೈಮಂಡ್ ಪಟ್ರಿಕ್ ಇವರು ಶ್ರೀ ಫೆರ್ನಾಂಡಿಸರ ದಕ್ಷತೆ ಆವರು ಗಳಿಸಿದ ಜನ ಪ್ರಿಯತೆಗಳನ್ನು ಕೊಂಡಾಡಿ ಭಾಷಣ ಮಾಡಿದರು. ಅಧ್ಯಕ್ಷ ಶ್ರೀ ರಾಯರು ಹಳೆ ವಿದ್ಯಾರ್ಥಿ ಸಂಘದ ಚಟುವಟಿಕೆಗಳನ್ನು ಫೆರ್ನಾಂಡಿಸರ ವ್ಯಕ್ತಿತ್ವವನ್ನು ಪ್ರಶಂಸಿಸಿ ಮಾತನಾಡಿದರು. ಶ್ರೀ ಫೆರ್ನಾಂಡಿಸರು ತಮ್ಮನ್ನು ಈ ರೀತಿ ಗೌರವಿಸಿದುದಕ್ಕಾಗಿ ಕೃತಜ್ಞತೆಗಳನ್ನು ಸೂಚಿಸಿ ಮಾತನಾಡಿದರು. ತೈಲಚಿತ್ರವನ್ನು ರಚಿಸಿದ ಶ್ರೀ ಕೆ. ವಿಟ್ಠಪ್ಪನವರ. ಸ್ವೀಕರಿಸಿ ಫೆರ್ನಾಂಡಿಸರು ಶಾಲೆಗೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು. ಧನ್ಯವಾದ ಸಮರ್ಪಣೆಯ ಬಳಿಕ ಭೋಜನ, ನಾಟಕಾದಿ ಕಾರ್ಯಕ್ರಮಗಳಾದವು.

ಪುರಂದರದಾಸರ ಚತುಃಶತಮಾನೋತ್ಸವ— ಉಡುಪಿಯ ಎಲ್. ಐ. ಸಿ ಯ ಸ್ಪೋರ್ಟ್ಸ್ ಮತ್ತು ರಿಕ್ರಿಯೇಶನ್ ಕ್ಲಬ್ಬಿನ ಆಶ್ರಯದಲ್ಲಿ ತಾ. 16ನೇ ಸಂಜೆ, ಪುರಂದರದಾಸರ ನಾಲ್ಕನೇ ಶತಮಾನೋತ್ಸವ, ಶ್ರೀ ಸ್ವಾಮಿ ವಿವೇಕಾನಂದರ ಶತಮಾನೋತ್ಸವ ಮತ್ತು ಭಗವಾನ್ ಶ್ರೀ ಸ್ವಾಮಿ ರಾಮಕೃಷ್ಣ ಪರಮಹಂಸರ 129ನೇ ಜನ್ಮದಿನೋತ್ಸವಗಳನ್ನು ಮಂಗಳೂರು ರಾಮಕೃಷ್ಣಾಶ್ರಮದ ಅಧ್ಯಕ್ಷ ಸ್ವಾಮಿ ಆದಿದೇವಾನಂದ ಜೀ ಮಹಾರಾಜರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು

ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ. ಆರ್. ಪೈಗಳು ಸ್ವಾಗತಿಸಿದರು. ಶ್ರೀ ಎ. ಸುಬ್ರಹ್ಮಣ್ಯಾಚಾರ್ಯರು ಪುರಂದರದಾಸರ ಜೀವನದ ಕುರಿತು ಮಾತನಾಡುತ್ತಾ, ಜನಮನದ ಕನ್ನಡಿಯಂತೆ ಹೇಗೆ ಅವರ ಪದಗಳು ಬಹುಕಾಲ ಬಾಳಿ, ಬೆಳಕನ್ನು ಕೊಡಬಲ್ಲವು ಎಂಬುದನ್ನು ವಿವರಿಸಿದರು.

ಮಂಗಳೂರು ರಾಮಕೃಷ್ಣಾಶ್ರಮದ ಸ್ವಾಮಿ ಶಂಕರಾನಂದಜೀಯವರು ವಿವೇಕಾನಂದರ ಜೀವನ ದರ್ಶನವನ್ನು ಮಾಡಿಸುತ್ತಾ, ಅವರ ಜೀವನದಲ್ಲಿ ಜ್ಞಾನವಾಸದ ಸುಲಭವಾಹಕವಾದ ಸಂಗೀತ ಯಾವ ಸ್ಥಾನ ಪಡೆದಿತ್ತು ಎಂಬುದನ್ನು ವಿಷದೀಕರಿಸಿದರು.

ಅಧ್ಯಕ್ಷರು, ಶ್ರೀ ರಾಮಕೃಷ್ಣ ಪರಮಹಂಸರ ಅವತಾರವಾಗದಿದ್ದರೆ, ಜನಸಾಮಾನ್ಯರಿಗೆ ಆಧ್ಯಾತ್ಮದ ತಿರುಳನ್ನು, ಅನುಭವಪೂರ್ಣವಾಗಿಯೂ, ಸುಲಭ ಗ್ರಾಹ್ಯವಾಗಿಯೂ ಬೋಧಿಸಿದ ದಿವ್ಯ ಪುರುಷರೊಬ್ಬರು ಇಲ್ಲದಂತೆ ಆಗುತ್ತಿತ್ತು ಎಂಬುದನ್ನು ವಿವರಿಸುತ್ತಾ, ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಆಧ್ಯಾತ್ಮದ ಅರಿವನ್ನು ಮಾಡಿಕೊಳ್ಳಬೇಕಾದ ಅಗತ್ಯವನ್ನು ಸ್ಪಷ್ಟೀಕರಿಸಿದರು. ಅಲ್ಲದೆ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಂಡು ಲೋಕ ಕಲ್ಯಾಣಕ್ಕಾಗಿ ದುಡಿದ ಈ ಮೂವರು ಮಹಾ ಪುರುಷರ ಸ್ಮರಣೆಯನ್ನು ಏಕಕಾಲದಲ್ಲಿ ಮಾಡಿಕೊಂಡುದರ ಔಚಿತ್ಯವನ್ನು ಪ್ರಶಂಸಿಸಿದರು.

ಶ್ರೀಗಳಾದ ಕೆ. ಆರ್. ಚಡಗರು ಯು. ದ್ವಾರಕಾನಾಥ ಆಚಾರ್ಯರು ಮತ್ತು ಕುಮಾರಿ ಎಸ್. ಮನೋರಮಾ ರಾವ್ ಇವರು ಶ್ರೀ ಯು. ಉಮೇಶ ಶರ್ಮ ಮತ್ತು ಕೆ ನಾರಾಯಣ ಭಟ್ ಹಿಮ್ಮೇಳದೊಂದಿಗೆ ದಾಸರುಗಳ ಭಕ್ತಿ ಗೀತೆಗಳನ್ನು ಹಾಡಿದರು. ಶ್ರೀ ಪಿ. ಪರಿದಾಸ ಆಚಾರ್ಯರು ಧನ್ಯವಾದ ಸಮರ್ಪಿಸಿದರು.

ಉಡುಪಿ ತಾಲೂಕು ಗಿರಿಜನರ ಸಮ್ಮೇಳನವು — ತಾ. 16ರಂದು ಕಟಪಾಡಿ ಎಸ್. ವಿ. ಎಸ್ ಹೈಸ್ಕೂಲಿನ ಆಲಾಮಂದಿರದಲ್ಲಿ ಉಡುಪಿನಗರ ಸಭಾಪತಿ ಪಿ ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಶ್ರೀ ಕೆ ಆರ್. ರಾಮಚಂದ್ರನ್ ಇವರಿಂದ ಉದ್ಘಾಟಿಸಲ್ಪಟ್ಟಿತು ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಕೆ ವಾಸುದೇವ ಕಿಣಿಯವರು ಸ್ವಾಗತ ಭಾಷಣ ಗೈದರು. ಎ. ಜೆ. ಆಲ್ವ, ಡಾ॥ ಕೆ. ಜೆ. ಕಿಣಿ ಶ್ರೀನಿವಾಸ ಮಲ್ಯ ಬಾಳಿಗಾ ಇವರು ನಿಯೋಜಿತ ಭಾಷಣಗಾರರಾಗಿದ್ದರು. ಅಧ್ಯಕ್ಷರ ಭಾಷಣವಾದ ಮೇಲೆ ಪಿ. ದಯಾನಂದ ನಾಯಕರು ವಂದನೆ ಸಲ್ಲಿಸಿದರು. ಅಪರಾಹ್ನ ವಿಚಾರ ವಿನಿಮಯ, ನಿರ್ಣಯಗಳ ಅಂಗೀಕಾರದೊಂದಿಗೆ [illegible] ಶ್ರೀ [illegible] ಭಾಸ್ಕರ ಶೆಟ್ಟಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ [illegible] ಸಮಾರೋಪ ಸಮಾರಂಭ ನೆರವೇರಿತು. ಬಹುಮಾನ ವಿತರಣೆಯ ಬಳಿಕ ಶ್ರೀ ಎ. [illegible] ಧನ್ಯವಾದ ಸಮರ್ಪಿಸಿದರು.

ವಿವಾಹ ಸಮಾರಂಭ

[illegible] ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ್ ಎಸ್. ಸುಂದರ ರಾಯರ ಪುತ್ರಿ [illegible] ಮತ್ತು ಶ್ರೀ [illegible] ಸುಂದರ ರಾಯರ ಪುತ್ರ ಶ್ರೀ [illegible] ರಾವ್ ಇವರ ವಿವಾಹ ಸಮಾರಂಭವು ಇದೇ ತಾ 16ರಂದು ಉಡುಪಿ ಶ್ರೀ ಶಂಕರ ನಾರಾಯಣ ದೇವಸ್ಥಾನದಲ್ಲಿ ಜರಗಿತು.

ಶ್ರೀ ಬಿ. ಕೆ. ಶೇಷಗಿರಿ ರಾಯರ ಪುತ್ರಿ ಕುಮಾರಿ ಮಾಲತಿಯನ್ನು ಬೊಂಬಾಯಿಯ ಡಾ। ಯು. ಆರ್. ರಾಯರ ಪುತ್ರ ಮೋಹನ ರಾಯರು ತಾ. 17-2-64ರಂದು ಉಡುಪಿ ಅಜ್ಜರಕಾಡಿನ ಪಥ್ರ ಗೃಹದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಕುಂಬಳೆ— ಶಿವರಾತ್ರಿ ಉತ್ಸವದ ಸಲುವಾಗಿ ಶಿವೂರು ದೇವಸ್ಥಾನದಲ್ಲಿ ತಾ. 11ರಂದು ನಡೆದ ಜಾತ್ರೆಯ ಸಂಬಂಧವಾಗಿ ಶ್ರೀ ಪೈಕಂ ವಾಮನ ಪ್ರಭುರವರ ಸಂಗೀತ ಕಚೇರಿಯು, ಶ್ರೀ ಕೆ. ಬಾಬು ರೈ ಪದ್ಮನಾಭಾಚಾರ್ಯ ಇವರ ಹಿಮ್ಮೇಳದೊಂದಿಗೆ ನೆರವೇರಿತು.

ತಾ. 10ರಂದು ಅಂತರ್ ಉಪ ಜಿಲ್ಲಾ ಪಂದ್ಯಾಟಗಳ ಕಬಡಿ ಪಂದ್ಯಾಟದ ಫೈನಲ್ನಲ್ಲಿ ಕುಂಬಳೆ ಬಿ ಯು ಪಿ. ಶಾಲೆಯವರು ಗೆದ್ದು ಚಾಂಪಿಯನ್ ಶಿಪ್ಪಿಗೆ ಅರ್ಹತೆ ಪಡೆದರು.

ತಾ. 6ರಂದು ಪಚ್ಚಕ್ಕಾನದಲ್ಲೂ, ತಾ. 10ರಂದು ಕೇಮೋತ್ತ್ ಎಂಬಲ್ಲಿಯೂ ಬ್ರಾಂಚ್ ಪೋಸ್ಟಾಫೀಸುಗಳನ್ನು ತೆರೆಯಲಾಗಿದೆ.

ಕುಂಬಳೆ ಸರಕಾರಿ ಸೆಕೆಂಡರಿ ಶಾಲಾ ವರ್ಧಂತ್ಯುತ್ಸವವು ತಾ 15ರಂದು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಂ ಕಣ್ಣಾರನವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಿತು.

ಮಂಜೇಶ್ವರ ಬ್ಲೋಕ್ ಅಭಿವೃದ್ಧಿ ಸಮಿತಿ ಸಭೆಯು ತಾ. 15ರಂದು ಜರಗಿದೆ. ವಿವಿಧ ಅಭಿವೃದ್ಧಿ ಕೆಲಸಗಳ ಚರ್ಚೆ ನಡೆಯಿತು.

ನವಯುಗ

ಕೃತಜ್ಞತಾ ವಂದನೆಗಳು

ಶ್ರೀಗಳಾದ ಬಿ. ನಾರಾಯಣ ಶೇಟ ಮತ್ತು ಎಸ್ ಮೂರಪ್ಪ ಶೆಟ್ಟರೊಂದಿಗೆ ನಾನು ಪುತ್ತೂರು ಬೆಳ್ಳಾರೆ ಮೊದಲಾದ ಕಡೆಗಳಿಗೆ ಇತ್ತೀಚೆಗೆ ಸಂಚರಿಸಿದಾಗ ನವಯುಗದ ಪುರಸ್ಕರಣಕ್ಕಾಗಿ ವಿವಿಧ ರೀತಿಯಿಂದ ಸಹಕಾರವಿತ್ತ ಶ್ರೀಗಳಾದ ಡಿ. ಕೆ. ಹೆಬ್ಬಾರ್, ಎಕ್ಸಕ್ಯೂಟಿವ್ ಸುಬ್ರಮಣ್ಯ ಗೌಡ, ಪಿ. ಚೆನ್ನಯ್ಯ ಶೆಟ್ಟಿ, ಎ ಕೆ. ನಾರಾಯಣ ಭಂಡಾರಿ, ಪೆರ್ಣ ಸಂಜೀವ ರೈ, ಆಚಿಲಾಡಿ ಸುಬ್ಬಯ್ಯ ಪಕ್ಕಳ, ಸೊರ್ಕೆ ಕರಿಯಪ್ಪ ರೈ, ಎ. ಸೋಮಪ್ಪ ರೈ, ಎಂ. ಸುಬ್ಬಣ್ಣ ರೈ, ಪಿ. ನಾರಾಯಣ ರೈ, ಪಿ. ದೇವಪ್ಪ ರೈ, ಕೆ ಸುಬ್ರಮಣ್ಯ ಭಟ್, ಎನ್. ಎಂ ಬಾಲಕೃಷ್ಣ, ಎ. ದೇರಣ್ಣ ಶೆಟ್ಟಿ, ಪಿ. ರಾಘವರಾವ್, ಕೆ. ಬಿ ವಿಠಲ್ ರೈ ಬಿ ವಿಠಲ್ ರೈ ಮೊದಲಾದವರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಇದೇ ರೀತಿ ಕಳೆದವಾರ ಶ್ರೀ ಬಿ ವಿಠಲ ರೈಗಳೊಂದಿಗೆ ಕೊಪ್ಪ ಕುದುಮುರ್ಡಿಗೆ, ಸಾಗರ ಮೊದಲಾದ ಕಡೆಗಳಿಗೆ ಹೋದಾಗ ಸಹಕಾರವಿತ್ತ ಡಾ। ಎ ಪಿ. ಶೆಟ್ಟಿ, ಬಿ ಎಸ್ ಶೆಟ್ಟಿ ಡಾ। ಚೆನ್ನಕೇಶವ ಮೊದಲಾದವರಿಗೂ ಕೃತಜ್ಞತೆಗಳು.

ಬೀದರಿನಲ್ಲಿ ಸ್ವಯಂಸ್ಫೂರ್ತಿಯಿಂದ ಸುಮಾರು 30ಜನ ಚಂದಾದಾರರನ್ನು ಒದಗಿಸಿಕೊಟ್ಟು ಸಹಕರಿಸಿದ ಡಾ। ಎ. ಎಂ. ಶೆಟ್ಟಿ ರಿಗೆ ಪ್ರತ್ಯೇಕ ಧನ್ಯವಾದವನ್ನು ಅರ್ಪಿಸುತ್ತೇನೆ.

ಸಂಚಾಲಕ-ಸಂಪಾದಕ

ಚಿತ್ರಾಪುರ ಮಠದ
ಶ್ರೀ ವಿದ್ಯಾಪೂರ್ಣ ತೀರ್ಥಸ್ವಾಮಿಯವರು

ಬರೆದವರು:— "ಜಯಂತ" ಸುರತ್ಕಲ್.

ಮಂಗಳೂರಿಂದ ಉಡುಪಿಗೆ ಸಾಗುವ ಪಡುಕರಾವಳಿ ಮಾರ್ಗದಲ್ಲಿ ೭॥ ಮೈಲು ಉತ್ತರಕ್ಕೆ ಸಾಗಿ ಪಡುಗಡೆ ನೋಡಿದರೆ, ವಿಶಾಲವಾದ ಬಯಲುಗದ್ದೆಗಳ ನಡುಬದಿಯಲ್ಲಿ— ಪಡುಕಡಲಿನ ದಂಡೆಯಲ್ಲಿ — ತಲೆಯೆತ್ತಿ ನಿಂತುಕೊಂಡ ಶ್ರೀ ದುರ್ಗಾಪರಮೇಶ್ವರಿ ದೇವಿಯ ಗುಡಿಯೂ, ಅದರ ಪಕ್ಕದಲ್ಲಿ ಸ್ವಾಮಿಗಳು ವಾಸಿಸುವ ಮಠವೂ ಕಂಗೊಳಿಸುತ್ತವೆ. ಇದೇ ಚಿತ್ರಾಪುರವೆಂದು — ಚಿತ್ರಪುರವೆಂದು ಹೆಸರಿಸುವ ಸ್ಥಳವಾಗಿದೆ. ಇಲ್ಲಿಗೆ ಈ ಹೆಸರು ಬರಲು ಕಾರಣವೇನೆಂದು ವಿಚಾರಿಸುವಲ್ಲಿ ಹೀಗೆ ತಿಳಿಯುತ್ತದೆ. ಈ ಸ್ಥಳಕ್ಕೆ 'ಪುಳುಪಿನ' ಎಂದು ಶಿಲಾಶಾಸನಗಳಲ್ಲಿ ಹೆಸರಿದೆ. ಸುಗ್ಗಿ ಕೊಳಕೆ ಬೆಳೆಯನ್ನು ಹಾಳು ಮಾಡುವ ಹುಳುಗಳ ಬಾಧೆಯನ್ನು ಪರಿಹರಿಸಲು ಇಲ್ಲಿನ ರೈತರು ವರ್ಷಕ್ಕೊಮ್ಮೆ ಇಲ್ಲಿಯ ದೇವೀ ಮಂದಿರದಲ್ಲಿ ಸೇರಿ ಹರಕೆಯೊಪ್ಪಿಸುತ್ತಾರೆ. ಆ ವೇಳೆಗೆ ನೋಂಪು ಆನುಕಪ್ರತಿ)ನಿಸ ಇಲ್ಲಿಂದ ಮೂಡುಗಡೆಯ ಬೈಲ, ಕೆಮ್ಮಾರ..ನೇಜ ಪದ, ಮುಂತಾದ ಗ್ರಾಮಗಳ ರೈತರು ಹರಕೆಯನ್ನು ಒಪ್ಪಿಸಲು ಬರುತ್ತಾರೆ ಅಂದರೆ, ಹುಳುಗಳ ಬಾಧೆಯ ಪರಿಹಾರಕ್ಕೆ ಸೇರುವ ಸ್ಥಳವಾದುದರಿಂದ 'ಪುಳುಪಿನ' ಎಂದು ಶಾಸನಗಳಲ್ಲಿ ಹೇಳಿರಬಹುದು. ಈ ಶಬ್ದವು ರೂಪಾಂತರವಾಗಿ, 'ಮೊಳಪು' ಎಂದು ಈಗಲೂ ಜನರ ಬಳಕೆಯಲ್ಲಿದೆ.

ಚಿತ್ರಾಪುರ ಮಠವು ದೇವಾಲಯದ ಆಡಳಿತೆಗಾಗಿರುವ ಸ್ವಾಮಿಗಳ ನೆಲೆಯೂ ಇದೆ. ಆ ಮೇರೆಗೆ ಶ್ರೀ ಮಠಕ್ಕೆ ಪ್ರತ್ಯೇಕ ಆಸ್ತಿಗಳಾಗಲೀ ಶಿಷ್ಯಾವಳಿಯಾಗಲೀ ಇಲ್ಲದೆ, ಶ್ರೀ ದೇವಿಯ ಹೆಸರಲ್ಲೇ ಆಸ್ತಿಗಳಿರುವುದನ್ನು ಗಮನಿಸಬೇಕು.

ಬೋಳೂರು, ತಣ್ಣೀರುಬಾವಿ, ಪಣಂಬೂರು, ಬೈಕಂಪಾಡಿ, ಕುಳಾಯಿ, ಹೊಸಬೆಟ್ಟು, ಇತ್ಯಾದಿ ಗ್ರಾಮಗಳ ಮಂದಿ ಈ ದೇವಿಯ ಆರಾಧನೆ ಹಾಗೂ ಶ್ರೀಮಠದ ಸ್ವಾಮಿಗಳ ಸೇವೆಯಲ್ಲಿ ನಿರತರಾಗಿದ್ದಾರೆಂಬುದೂ ಉಲ್ಲೇಖನೀಯವಾಗಿದೆ. ಈ ದೇವಾಲಯದಲ್ಲಿ 'ಮಂಜನಾಥ ದೇವರಿಗೆ' ಕೂಡಾ ವಿನಿಯೋಗಗಳಾಗುವಂತೆ ೧೪—೧೫ನೆ ಶತಕದ ಶಾಸನದಲ್ಲಿ ಹೇಳಿರುತ್ತದೆ ಇಲ್ಲಿರುವ ಆದೊಂದು ಸವೆದ ಶಾಸನದ ಅಕ್ಷರಗಳು ೧೦—೧೧ನೆಯ ಶತಕದವುಗಳೆಂದು ತಿಳಿದು ಬಂದಿವೆ. ಅಂದ ಮೇಲೆ, ದ. ಕ ಜಿಲ್ಲೆಯ ಪ್ರಾಚೀನ ದುರ್ಗಾಲಯಗಳು ಬೌದ್ಧ ಕಾಲೀನ ತಾರಾದೇವೀ ಮಂದಿರಗಳಾಗಿರಬೇಕೆಂದು ಚಾರಿತ್ರಿಕರು ಹೇಳುವಂತೆ (ಡಾ. ಬಿ ಎ. ಸಾಲೆತ್ತೂರರ ಗ್ರಂಥ), ಈ ದೇವಾಲಯವೂ ೧೦—೧೧ನೆಯ ಶತಕಕ್ಕಿಂತ ಹಿಂದಿನದಿರಬೇಕು.

ಶ್ರೀ ಸುಬ್ರಹ್ಮಣ್ಯ ಮಠ, ಶ್ರೀ ಭಂಡಾರಕೇರಿ ಮಠಗಳು ಮಧ್ವಾಚಾರ್ಯರಿಗಿಂತಲೂ (ಇಸ್ವಿ ೧೨೨೦—೬೮) ಹಿಂದೆ ಇದ್ದವೆಂದು ತಿಳಿಯುತ್ತದೆ. ಅಂತೆ, ಶ್ರೀ ಚಿತ್ರಾಪುರ ಮಠವೂ ೧೦—೧೧ನೆಯ ಶತಕಕ್ಕಿಂತ ಹಿಂದಿನದಾಗಿದ್ದು, ಅವುಗಳಂತೆ ಇದೂ ಆಗ ಭಟ್ಟಪಾದಾಚಾರ್ಯರ ಸಂಪ್ರದಾಯಕ್ಕೆ ಸೇರಿದುದಿರಬೇಕು. ಮಧ್ವಾಚಾರ್ಯರ ಕಾಲದಲ್ಲಿ ಆ ಮಠದ್ವಯಗಳಂತೆ ಈ ಚಿತ್ರಾಪುರ ಮಠವೂ ದ್ವೈತ ಪದ್ಧತಿಯ ಮಠವಾಗಿ ಪರಿವರ್ತನೆಗೊಂಡಿತೆಂದು ಹೇಳಬಹುದು.

ಚಿತ್ರಾಪುರದಿಂದ ಮೂರು ನಾಲ್ಕು ಮೈಲು ಮೂಡಲಲ್ಲಿ ಪೇಜಾವರ ಗ್ರಾಮದಲ್ಲಿ ಉಡುಪಿನ ಅಷ್ಟ ಮಠಗಳಲ್ಲೊಂದಾದ ಶ್ರೀ ಪೇಜಾವರ ಮಠವಿದೆ. ಈ ಮಠದಲ್ಲಿ ೧೪ನೆಯ ಶತಕದಲ್ಲಿ ಬಾಳಿಬೆಳಗಿದ ಶ್ರೀ ವಿಜಯಧ್ವಜಾಚಾರ್ಯರು ವ್ಯಾಸಭಾಗವತಕ್ಕೆ ದ್ವೈತ ಸಿದ್ಧಾಂತ ರೀತಿಯಲ್ಲಿ ಸುವಿಸ್ತಾರವಾದ ವ್ಯಾಖ್ಯೆಯನ್ನು ಬರೆದಿದ್ದಾರೆ, ಈ ವ್ಯಾಖ್ಯಾನವು ಶ್ರೀ ಚಿತ್ರಾಪುರದ ದುರ್ಗಾಲಯದಲ್ಲಿ ಕುಳಿತು ಶ್ರೀ ವಿಜಯಧ್ವಜಾಚಾರ್ಯರಿಂದ ಬರೆಯಲ್ಪಟ್ಟಿತೆಂದು ತಿಳಿಯಲಾಗಿದೆ. ಅಂದಿನಿಂದ ಶ್ರೀ ಚಿತ್ರಾಪುರ ಸ್ವಾಮಿಗಳ ಬಿರುದಾವಳಿಗಳಲ್ಲಿ 'ಶ್ರೀ ವಿಜಯಧ್ವಜಾಚಾರ್ಯ ಸಂಪ್ರದಾಯ ಪ್ರವರ್ತಕ' ರೆಂಬ ವಾಚಕವೂ ಸೇರಿಕೊಂಡಿದೆ.

ಇದೇ ಕಳೆದ ಶತಮಾನದಲ್ಲಿ ಶ್ರೀ ಚಿತ್ರಾಪುರದಲ್ಲಿ ಬಾಳಿ ಬೆಳಗಿದ ಶ್ರೀ ವಿದ್ಯಾಸಾಗರ ತೀರ್ಥರು ದಕ್ಷಿಣೋತ್ತರ ಭಾರತವನ್ನು ಸಂಚರಿಸಿದ್ದರು. ಶ್ರೀ ಮಠದಲ್ಲಿರುವ 'ಹರಿವಂಶ' ಗ್ರಂಥದ ಹಸ್ತಪ್ರತಿ ಹಾಗೂ 'ವಿಜಯ ನಗರದ' ಸಂಸ್ಥಾನದವನೊಬ್ಬನ ಕೈಬರೆಹದ ಪತ್ರ ಮತ್ತು ಜನಜನಿತ ವಾರ್ತೆಗಳಿಂದ ಈ ವಿಚಾರ ಸತ್ಯಪೂರ್ಣವಾಗಿ ತಿಳಿಯಲಾಗುತ್ತದೆ. ಇವರು ೨ ೧೮೫೮ರಲ್ಲಿ ಸಿದ್ಧಿ ಹೊಂದಿದ್ದರು.

ಅನಂತರ ಶ್ರೀ ವಿದ್ಯಾಪೂರ್ಣ ತೀರ್ಥರು ಇಲ್ಲಿನ ಸ್ವಾಮಿಗಳಾಗಿ ಆಶ್ರಮ ಗೊಂಡು, ೮೦ ವರ್ಷ ಜೀವಿಸಿ, ಇದೇ ಕಳೆದ ತಾ. ೪-೧೨ ೬೩ರಲ್ಲಿ ನಿರ್ಯಾಣರಾದರು. ಇವರು ಅಖಂಡವಾದ ಬ್ರಹ್ಮಚರ್ಯ, ಭಕ್ತಿ, ಜ್ಞಾನ, ವೈರಾಗ್ಯಗಳೇ ಮೊದಲಾದ ಆಶ್ರಮೋಚಿತ ಸದ್ಗುಣಗಳಿಂದ ರಾರಾಜಿಸಿ, ಈ ಶತಕದಲ್ಲಿ ಆದರ್ಶ ಸ್ವಾಮಿಗಳೊಬ್ಬರೆಂದು ಪ್ರಖ್ಯಾತರಾಗಿದ್ದರು. ಇವರು ೧೯೩೭-೩೯ರ ಮೂರು ವರ್ಷಗಳ ಚಾತುರ್ಮಾಸ್ಯ ಕಾಲದಲ್ಲಿ ದಿನಕ್ಕೆ ೨ ಕುಡುತೆ ಹಾಲು (ಮೊಸರ) ಕುಡಿದು, ನೈಷ್ಠಿಕ ಉಪವಾಸ ವ್ರತವನ್ನು ಆಚರಿಸಿದ್ದರು ಆಗಣ ಇವರ ದೇಹವು ಕೇವಲ ಅಸ್ಥಿಪಂಜರದಷ್ಟು ಕೃಶವಾಗಿತ್ತೆಂದು ಪ್ರತ್ಯಕ್ಷ ಕಂಡವರಿಗೆ ಮರೆಯಲಾಗದು, ಆಗಣ ಭಾವ ಚಿತ್ರವೊಂದು ಶ್ರೀಮಠದಲ್ಲಿದ್ದು ಇನ್ನು ಪ್ರತ್ಯಕ್ಷೀಕರಿಸುತ್ತದೆ.

೧೯೩೩ ರಲ್ಲಿ ಮತ್ತು ೧೯೫೫ ರಲ್ಲಿ ಶ್ರೀ ದುರ್ಗಾ ದೇವಿಯ ಮಂದಿರದಲ್ಲಿ ಅಷ್ಟಗಂಧ—ಬ್ರಹ್ಮಕಲಶಾದಿಗಳನ್ನು ಇವರು ನೆರವೇರಿಸಿದ್ದರು. ೧೯೩೯ ಹಾಗೂ ೧೯೪೫ರಲ್ಲಿ ಶ್ರೀಗಳವರು ಮೈಸೂರು, ಮೊದಲಾದ ಕನ್ನಡದ ಹಲವೆಡೆ ಸಂಚರಿಸಿದರು. ಇಲ್ಲಿಯ ಸ್ವಾಮಿಗಳೆಂದರೆ ಶ್ರೀ ದುರ್ಗಾಂಬಿಕೆಯ ಬಾಹ್ಯಚರ ಮೂರ್ತಿಸ್ವರೂಪರೆಂದು ಜನರು ಭಾವಿಸುತ್ತಿರುವುದಕ್ಕೆ ಇವರು ಇತ್ತೀಚಿನ ಸ್ಪಷ್ಟ ಸಾಕ್ಷಿಯಾಗಿದ್ದರು. ಕಣ್ಣಿಂದ ದೂರವಾದರೂ ಮನಸ್ಸಿಂದ ಎಂದೂ ದೂರವಾಗಲಾರದು ಶ್ರೀ ಸ್ವಾಮಿಗಳ ವೃಂದಾವನಾರಾಧನೆಯು ಇದೇ ಕಳೆದ ೨೪-೧-೬೪ರಲ್ಲು ನೆರವೇರಿತ್ತು. ಇದೇ ಬರುವ ಫಾಲ್ಗುನ ಹುಣ್ಣಿಮೆಗೆ ಇಲ್ಲಿಯ ಜಾತ್ರೆ ನಡೆಯುತ್ತದೆ; ಈಗಿನ ಸ್ವಾಮಿಗಳಾದ ಶ್ರೀವಿದ್ಯಾವಲ್ಲಭತೀರ್ಥರು ಹಿಂದಿನ ಸ್ವಾಮಿಗಳಂತೆ ಆದರ್ಶರಾಗಿ ಬಾಳಿ ಬೆಳಗಲೆಂದು ಹಾರೈಕೆ.

ದ.ಕ ಜಿಲ್ಲೆಯ ಪ್ರಾಚೀನ ದೇವಾಲಯಗಳಲ್ಲಿ ಒಂದಾದ ಚಿತ್ರಾಪುರ ಮಠ ಹಾಗೂ ಚಿತ್ರಾಪುರ ದುರ್ಗಾಲಯವು ಎಲೆಮರೆಯ ಕಾಯಿಯಂತೆ ಬಾಳಿದೆ. ಇಂತಹ ಪ್ರಾಚೀನ ಮಂದಿರಗಳ ವಿಚಾರ ತಿಳಿದರೆ, ಪ್ರಾಚೀನ ಸಾಹಿತ್ಯ ಸಂಸ್ಕೃತಿಗಳ ಪರಿಚಯಕ್ಕೆ ಸಹಕಾರಿಯಾಗುತ್ತದೆ.

ನಮಗೂ ಆತ್ಮ ಗೌರವವಿದೆ

(೫ನೇ ಪುಟದಿಂದ)

(೫ನೇ ಪುಟದಿಂದ)

ಲ್ಲಿ ಕಾಶ್ಮೀರ ನೀತಿಯನ್ನು ಸಮರ್ಥಿಸಿದ ಬುದ್ಧಿವಂತರಲ್ಲವೇ ಅವರ ಮಾತಿಗೆ ಲೋಕದಲ್ಲೇ ಒಂದು ಬೆಲೆ ಇದೆ. ಮತ್ತೇನೆಂದರು ಅವರು?"

"ಬ್ರಿಟಿಷ ಧೋರಣೆಯು ಸಂ. ರಾ. ಸಂಘದ ಶಾಸನಪಟವನ್ನು ಉಲ್ಲಂಘಿಸಿದೆ, ಭಾರತದ ಸ್ವಾತಂತ್ರ್ಯ ಸಂದರ್ಭದಲ್ಲಿ ಆದ ತ್ರಿಪಕ್ಷ ಒಪ್ಪಂದದ ಉಲ್ಲಂಘನೆಯನ್ನು ಮಾಡಿದೆ ಎಂದರವರು."

"ಅಂದರೆ/"

"ಭಾರತ ಸ್ವತಂತ್ರವಾದಾಗ, ಮುಸ್ಲಿಂ ಲೀಗು, ಭಾರತ ಮತ್ತು ಬ್ರಿಟಿಷ ಸರಕಾರಗಳ ನಡುವೆ ಒಂದು ಒಡಂಬಡಿಕೆಯಾಗಿತ್ತಲ್ಲ…"

"ಅದೇ ಸ್ವಾತಂತ್ರ್ಯ ನೀಡುವ ವಿಚಾರದಲ್ಲಿ…."

"ಹೌದು, ಹೌದು ಅದೇ ತ್ರಿಪಕ್ಷ ಒಡಂಬಡಿಕೆ."

"ಭಲೆ, ಭಲೆ, ಇನ್ನಾದರೂ ಬ್ರಿಟನ್ನು ತನ್ನ ಒಪ್ಪಂದವನ್ನು ತಾನೇ ಮೀರದಿರಲಿ "

"ಏನಾಗುವುದೋ ನೋಡಬೇಕು. ಹಿಂದೆ ಆಟ್ಲಿ ಬ್ರಿಟಿಷ ಪ್ರತಿನಿಧಿಯಾಗಿರುವಾಗ, ಕಾಶ್ಮೀರ ವಿಲೀನವನ್ನು ಅಕ್ರಮವೆಂದು ಹೇಳಲಿಲ್ಲ."

"ಮತ್ತೆ ಈಗ…"

"ಅದೇ ಬ್ರಿಟಿಷರ ತಂತ್ರ "

"ಅದೇನು ತಂತ್ರವೋ ಶುದ್ಧ ಕುತಂತ್ರ! ಅವರೀಗ ಏನನ್ನುತ್ತದೆಯಂತೆ?"

"ಅನ್ನುವುದೇನು? ಉಭಯತರಿಗೂ ಒಪ್ಪಿಗೆಯಾಗುವ ನಿರ್ಣಯ ಅಗತ್ಯವೆಂದು ಹೇಳುತ್ತದೆ."

"ಮತ್ತೆ ಅಲ್ಲಿ ಛಾಗ್ಲಾ ಏನೋ ಮಾಡಿದ್ರಂತಲ್ಲಾ. ."

"ಯಾರ? ಛಾಗ್ಲಾರೇ? ಹೌದು ಹೌದು. ಬ್ರಿಟಿಷ ವಿದೇಶ ಮಂತ್ರಿಯ ಸತ್ಕಾರಕೂಟಕ್ಕೆ ಬಹಿಷ್ಕಾರ ಹಾಕಿದ್ರು.."

"ಸರಿಯಾದುದನ್ನೇ ಮಾಡಿದ್ರೂನ್ನಿ, ಭಾರತಕ್ಕೂ ಆತ್ಮ ಗೌರವವಿದೆಯೆಂದು ಎಲ್ಲರೂ ತಿಳಿಯುವಂತಾಗಲಿ"

"ಅದು ಚೀನೀಯರ ಆಕ್ರಮಣದ ವೇಳೆಯೇ ಗೊತ್ತಾಗಿದೆ ಬಿಡು"

"ಇರಬಹುದು. ಈಗ ಮತ್ತೊಮ್ಮೆ ಕಂಡುಕೊಳ್ಳಲಿ "

"ನೋಡು ನೋಡು, ಒಳಗಡೆ ಏನೋ ಸದ್ದು ಕೇಳುತ್ತೆ. ಯಾರೂಂತ ಕಂಡು…"

"ಓ….ಮರ್ತೇ ಹೋಯ್ತು. ಹಾಲು ಆಗಲು ಇಟ್ಟಿದ್ದೆ. ಬೆಕ್ಕು ಗಿಕ್ಕು ಬಂದಿತೋ ಏನೋ…."

"ಅಂದ್ರೆ ಇಂದಿನ ಹಾಲಿಗೆ ಬಿತ್ತು ಸೊನ್ನೆ . ."

"ಇಲ್ಲ . ಇಲ್ಲ . . ಬನ್ನಿ, ಒಳಗೇನೇ ಹಾಲು ಕುಡಿದು ನಮ್ಮ ಗೌರವವನ್ನು ದೃಢ ಉಳಿಸೋಣ…"

"ಹಷ್ಟಿಂ…. ಆಗ್ಲೇ ಗಂಟೆ ಹತ್ತು ಬಡೆಯಿತು ನಾಳೆ ಬೆಳಗ್ಗೆ ಹೇಗೂ ಇದೆಯಲ್ಲ…"

"ಇದ್ದೇ ಇದೆ. ಏಳಿ, ಬನ್ನಿ. . ಬನ್ನಿ…"

"ಹಷ್ಟಿ…"

— ಗೋರಾ.

ಉಡುಪಿ ಡಿ. ಮು ಕೋರ್ಟಿನಲ್ಲಿ

O. S. 355/63

ಬಿ. ಮುತ್ತಯ ಹೆಗ್ಡೆ —ವಾದಿ.

ಮತ್ತು

ಬಿ. ಹಿರಿಯಣ್ಣ ಹೆಗ್ಡೆ ಕೂಡಾ —ಪ್ರತಿವಾದಿರು

ಇವರೊಳಗೆ

೩ನೇ ಪ್ರತಿವಾದಿ ಬಿ ಮೋಹನದಾಸ ಹೆಗ್ಡೆ, ಕೇಶವ ಹೆಗ್ಡೆಯವರ ಮಗ—ಉಡುಪಿ ತಾಲ್ಲೂಕು ಮೂಡುತೋನ್ಸೆ ಗ್ರಾಮದ ಕಲ್ಯಾಣಪುರ ಈಗ ವಾಲಿಸರೂ ಬಂಗ್ಲೆ, ಗೋರೆ ಬಂದರ್ ರೋಡ್ Opposit Kadi Kora Kendra, Borville, Bombay.

3ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ:—

ವಾದಿರು ಹಿರಿ ವಗೈರೆ ನಿವೃತ್ತಿ ಕೇಳಿ ನೀವು ಕೂಡಾ ಪ್ರತಿವಾದಿರ ಮೇರೆ ದಾಖಲು ಮಾಡಿದ ಮೇಲಿನ ದಾವೆಯು ತಾ 4—3—64 ಕ್ಕೆ ನಿಂಮ ಹಾಜರಿ ಬಗ್ಗೆಯಿಟ್ಟಿರುವುದರಿಂದ ಅದರಲ್ಲಿ ಉದಾಹರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Y. C. S. Hegde
Advocate for Plff

ಉಡುಪಿ, ತಾ. 19-2-64

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಆದರ್ಶ ಚರಿತೆಗಳು—೨೧

ಶ್ರೀ ಶ್ರದ್ಧಾನಂದ ಸ್ವಾಮಿ

—ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ.

ಜಲಂಧರ ಜಿಲ್ಲೆಯ ತಲವನ ಎಂಬ ಊರಿನಲ್ಲಿ ಕಳೆದ ಶತಮಾನದ ಕೊನೆಯಲ್ಲಿ ಶ್ರೀ ಶ್ರದ್ಧಾನಂದ ಸ್ವಾಮೀಜೀಯವರ ಜನನವಾಯಿತು. 'ಮುಂಶೀರಾಮ' ಎಂದು ಅವರ ಮನೆ ಹೆಸರು. ಇವರ ತಂದೆ ಲಾಲಾ ನಾನಕ್‌ಚಂದ್ ಅವರು ಸಂಯುಕ್ತ ಪ್ರಾಂತದಲ್ಲಿ ಪೋಲೀಸು ಕರ್ಮಚಾರಿಯಾಗಿದ್ದರು. ಮುಂಶೀರಾಮರು ತನ್ನ ನಾಲ್ವರು ಸೋದರರಲ್ಲಿ ಎಲ್ಲರಿಗಿಂತ ಚಿಕ್ಕವರು. ಅವರಿಗೆ ವಿದ್ಯಾಭ್ಯಾಸದಲ್ಲಿ ತುಂಬಾ ರುಚಿಯಿತ್ತು. ಅವರು ಹೆಚ್ಚಾಗಿ ತಂದೆಯೊಡನೆ ಇರುತ್ತಿದ್ದರು. ತಂದೆಗೆ ಬೇರೆ ಊರಿಗೆ ತಬದಲಿಯಾದಾಗ ಮುಂಶೀರಾಮರು ಕೂಡಾ ಅವರೊಡನೆಯೇ ಹೋಗುತ್ತಿದ್ದರು.

ಮುಂಶೀರಾಮರ ತಾಯಿ ತುಂಬಾ ಸುಶೀಲಳೂ, ಧರ್ಮಪರಾಯಣೆಯೂ ಆಗಿದ್ದಳು. ಇವರ ತಂದೆಯವರು ತುಂಬಾ ಧರ್ಮಾಸಕ್ತರಾಗಿದ್ದರು. ಪೋಲೀಸು ಕರ್ಮಚಾರಿಯಾಗಿದ್ದರೂ ಅವರು ಮುಂಜಾನೆ ರಾಮಾಯಣ ಓದದೆ, ನೀರು ಕುಡಿಯುತ್ತಿರಲಿಲ್ಲ. ಮಾತಾಪಿತರ ಧಾರ್ಮಿಕತೆಯೂ ಬಾಲಕ ಮುಂಶೀರಾಮರ ಮೇಲೆ ಬಹು ಪ್ರಭಾವ ಬೀರಿತ್ತು. ಬಾಲ್ಯದಲ್ಲಿಯೇ ಇವರು ಸಿದ್ಧಹಸ್ತ ಅರ್ಚಕರಾಗಿದ್ದರು. ದಿನಂಪ್ರತಿ ದೇವಾಲಯಕ್ಕೆ ಹೋಗಿ, ಶಿವ ದರ್ಶನಮಾಡಿ, ಪೂಜಾವಿಧಿಗಳನ್ನು ಕಂಡು ಬರುತ್ತಿದ್ದರು.

ಮುಂಶೀರಾಮರ ಅಧಿಕಾಂಶ ಶಿಕ್ಷಣ ಶ್ರೀ ಕಾಶಿಯಲ್ಲಿಯೇ ನಡೆಯಿತು. ಇವರ ತಂದೆಯವರು ಅಲ್ಲಿಯೇ ಕೋತುವಾಲ (ನಗರ ರಕ್ಷಕ)ರಾಗಿದ್ದರು. ಶಿಕ್ಷಣದ ಸಮಯ ಮುಂಶೀರಾಮರಿಗೆ ಸತ್ಸಂಗವು ದೊರೆಯಲಿಲ್ಲ, ಕುಸಂಗದ ಪರಿಣಾಮವಾಗಿ ಅವರಿಗೆ ಹಲವಾರು ದುರ್ವ್ಯಸನಗಳು ಅಂಟಿದುವು; ಶರೀರವು ರೋಗ ಪೀಡಿತವಾಯಿತು. ಬಹಳಷ್ಟು ಕಷ್ಟ ಅನುಭವಿಸಿದ ನಂತರವೇ ಅವರು ರೋಗದಿಂದ ಮುಕ್ತರಾದರು. ಪೂಜಾಪಾಠದಿಂದ ಮನಸ್ಸು ಹಾರಿ ಹೋಯಿತು, ಮನದಲ್ಲಿ ಕುತರ್ಕವು ಮನೆಮಾಡಿತು. ಇದೇ ಸಮಯ ಅವರು ಕ್ರಿಸ್ತ ಧರ್ಮದತ್ತ ಆಕರ್ಷಿತರಾದರು. ಆದರೆ ಅದು ಬರೇ ಅಲ್ಪ ಸಮಯದ ವರೆಗೆ ಅವರ ಮನದಲ್ಲುಳಿಯಿತು. ಬರೇಲಿಯೆಂಬ ಊರಲ್ಲಿ ಅವರಿಗೆ ಸ್ವಾಮಿ ದಯಾನಂದರ ದರ್ಶನವಾಯಿತು. ಹಾಗೂ, ಅವರ ಸತ್ಸಂಗವು ಮುಂಶೀರಾಮರ ಮೇಲೆ ಬಹು ಪ್ರಭಾವ ಬೀರಿತು.

ಜಲಂಧರದ ಪ್ರತಿಷ್ಠಿತ ಕುಲ ಒಂದರೊಡನೆ ಇವರ ವಿವಾಹ ಸಂಬಂಧವಾಗಿತ್ತು. ಶಿಕ್ಷಣವು ಮುಗಿದ ಬಳಿಕ ಅವರಿಗೆ ತಹಸೀಲ್ದಾರನ ಕೆಲಸ ದೊರಕಿತು; ಆದರೆ ಮುಂಶೀರಾಮರು ತುಂಬಾ ಸ್ವಾಭಿಮಾನಿಯಾಗಿದ್ದರು. ಒಂದು ದಿನ ಕಮಿಶನರನ್ನು ಭೇಟಿಯಾಗಲು ಹೋದಾಗ, ಇವರು ಕಾಯ್ದುಕೊಂಡು ಹೊರಗೆ ಕುಳಿತಿರ ಬೇಕಾಯಿತು. ಅದೇ ದಿನ ಅವರು ನೌಕರಿಗೆ ತ್ಯಾಗಪತ್ರವನ್ನಿತ್ತು ಬಿಟ್ಟರು. ಅನಂತರ ವಕೀಲಿ ಪರೀಕ್ಷೆ ಪಾಸು ಮಾಡಿ ಅವರು ಜಲಂಧರದಲ್ಲಿ ವಕೀಲರಾದರು. ಅವರ ಪ್ರಾಕ್ಟೀಸು ತುಂಬಾ ಚೆನ್ನಾಗಿ ನಡೆಯುತ್ತಿತ್ತು. ಇದೇ ಸಮಯ ಇವರ ಪತ್ನಿಯ ದೇಹಾವಸಾನವಾಯಿತು. ಮತ್ತೊಂದು ವಿವಾಹವಾಗಲು ಸಂಬಂಧಿಕರು ಒತ್ತಾಯಿಸಿದರಾದರೂ, ಇವರು ಒಪ್ಪಲಿಲ್ಲ.

ಮುಂಶೀರಾಮರು ವಕೀಲರಾಗಿದ್ದಾಗಲೇ ಆರ್ಯಸಮಾಜದ ಸೇವೆಯನ್ನು ಪ್ರಾರಂಭಿಸಿದ್ದರು. ಇವರ ಸೇವಾಕಾರ್ಯ ಹೆಚ್ಚುತ್ತಾ ಹೋದಂತೆ, ವಕಾಲತ್ತನ್ನು ಬಿಡುತ್ತ ಬಂದರು. ಆ ಸಮಯ ಆರ್ಯ ಸಮಾಜದಲ್ಲಿ ಎರಡು ಕವಲು ಹರಿದಿತ್ತು. ಒಂದು ವಿಭಾಗ ಸಂಸ್ಕೃತಕ್ಕೆ ಇನ್ನೊಂದು ಇಂಗ್ಲೀಷಿಗೆ ಪ್ರಾಧಾನ್ಯತೆಯನ್ನಿತ್ತಿತ್ತು. ಆಹಾರದ ವಿಷಯದಲ್ಲೂ ಭಿನ್ನಾಭಿಪ್ರಾಯವಿತ್ತು; ಒಂದು ಮಾಂಸಾಹಾರವನ್ನು ವಿರೋಧಿಸಿದರೆ ಇನ್ನೊಂದು ಅದನ್ನು ಸಮರ್ಥಿಸುತ್ತಿತ್ತು. ಮುಂಶೀರಾಮರು ಸಂಸ್ಕೃತ ಪ್ರಾಧಾನ್ಯತೆಯ ಪಂಗಡದಲ್ಲಿದ್ದರು ಹಾಗೂ ಮಾಂಸಾಹಾರದ ತೀವ್ರ ವಿರೋಧಿಯಾಗಿದ್ದರು. ಕೊನೆಗೆ ಅವರೇ ಈ ದಳದ ಮುಖ್ಯ ಮುಂದಾಳು ಆಗಿಬಿಟ್ಟರು. ಆರ್ಯ ಪ್ರತಿನಿಧಿ ಸಭೆಯ ಮುಖ್ಯ ಸಂಚಾಲಕರೂ ಶ್ರೀ ಮುಂಶೀರಾಮರೇ ಆಗಿದ್ದರು.

ಜಲಂಧರ ಕನ್ಯಾಮಹಾ ವಿದ್ಯಾಲಯದ ಸ್ಥಾಪನೆಗೆ ಅವರೂ ಕಾರಣರಾಗಿದ್ದಾರೆ. ಬ್ರಹ್ಮಚರ್ಯ ಆಶ್ರಮದ ಸ್ಥಾಪನೆಯ ವಿನಃ ಭಾರತದ ಪ್ರಾಚೀನ ಸಂಸ್ಕೃತಿಯ ಉದ್ಧಾರ ಅಸಾಧ್ಯ ಎಂದು ಅವರು ಬಲವಾಗಿ ನಂಬಿದ್ದರು. ಇದಕ್ಕಾಗಿಯೇ ಒಂದು ಗುರುಕುಲವನ್ನು ತೆರೆದರು.

೧೯೧೭ರಲ್ಲಿ ಸನ್ಯಾಸಸ್ವೀಕರಿಸಿದ ಬಳಿಕ ಮುಂಶೀರಾಮರು "ಶ್ರೀ ಶ್ರದ್ಧಾನಂದ"ರಾದರು. ತನ್ನ ಸರ್ವಸ್ವವನ್ನವರು ಈ ಗುರುಕುಲಕ್ಕೆ ಅರ್ಪಿಸಿದರು. ವಿಲಾಯತೀ ಫೇಶನುಗಳನ್ನು ಹಾಗೂ ರೀತಿಗಳನ್ನಿವರು ಸದಾ ವಿರೋಧಿಸುತ್ತಿದ್ದರು. ಮಾರ್ಶಲ್‌ಲಾ ದಿಂದ ಪೀಡಿತ ಜನತೆಯ ಸಹಾಯಕ್ಕಾಗಿ ಇವರು ತ್ರಿಕರಣ ಪೂರ್ವಕವಾಗಿ ಹೆಣಗಿದರು.

ಯಾರು ಯಾವುದೋ ಕಾರಣ ವಶರಾಗಿ ಇಚ್ಛೆಗೆ ವಿರೋಧವಾಗಿ ವಿಧರ್ಮಗಳಿಗೆ ಸೇರಿರುವರೋ ಅಂತವರನ್ನು ಹಿಂದೂ ಧರ್ಮಕ್ಕೆ ಪುನಃ ಸೇರಿಸಬೇಕು ಎಂದು ಶ್ರದ್ಧಾನಂದರು ಅಭಿಪ್ರಾಯಪಡುತ್ತಿದ್ದರು. ಈ ವಿಚಾರವನ್ನು ಕಾರ್ಯರೂಪಕ್ಕೆ ತರಲೆಂದಾಗಿಯೇ ಇವರು ಶುದ್ಧಿ ಸಂಘಟನೆಯನ್ನು ಮಾಡಿ ಶುದ್ಧೀ ಆಂದೋಲನ ನಡೆಸಿದರು. ಅವರು ಇಸ್ಲಾಮಿಯರನ್ನು ದ್ವೇಷಿಸುತ್ತಿದ್ದಿಲ್ಲ. ಯಾರನ್ನೂ ಬಲತ್ಕಾರವಾಗಿ ಹಿಂದೂ ಧರ್ಮಕ್ಕೆ ಸೇರಿಸಬಾರದು ಎಂಬುದು ಅವರ ನಿಯಮವಾಗಿತ್ತು. ಆದರೆ ಅವರ ಶುದ್ಧೀ ಆಂದೋಲನದ ಅಪಾರ್ಥಗೈದ ಮುಸಲ್ಮಾನನೊಬ್ಬನು ಅವರಿಗೆ ಗುಂಡಿಕ್ಕಿದನು. ಈ ರೀತಿಯಲ್ಲಿ ವಯೋವೃದ್ಧನಾಗಿದ್ದರೂ, ರೋಗಿಯಾಗಿದ್ದರೂ, ಧರ್ಮ ಮತ್ತು ದೇಶದ ಎಲ್ಲಾ ಪೂರ್ಣ ಸೇವೆಗೈಯುತ್ತಿದ್ದ ಮಹಾ ಪುರುಷರೊಬ್ಬರು ಧರ್ಮದ ವೇದಿಕೆಯಲ್ಲಿ ಬಲಿಯಾದರು.

(ಮೂಲ:- ಠಾಕುರ್ ಸುದರ್ಶನ ಸಿಂಹ)

ಕವಲುದಾರಿ—ಕೆಂಪು ದೀಪ

ನಾವು-ನಮ್ಮ ಸಾಹಿತ್ಯ

ಸುಮಾರು ಹತ್ತು-ಹನ್ನೆರಡು ವರ್ಷಗಳ ಹಿಂದಿನ ಮಾತು: ಕನ್ನಡ ಸಾಹಿತ್ಯವು ಹುಲುಸಾಗಿ ಬೆಳೆಯುತ್ತಿದೆ ಎಂದು ಸಾಹಿತ್ಯಾರಾಧಕರು ಸಂತೋಷಸೂಚಿಸಿದ್ದರು. ಅಂತೂ ನಮ್ಮ ಸಾಹಿತ್ಯವು ಕೂಡಾ, ಹುಲುಸಾಗಿಯೇ ಬೆಳೆಯುತ್ತಿದೆಯಲ್ಲವೆಂಬ ಸಂತೋಷ ಅಂದು ಎಲ್ಲರಿಗೂ ಆಗಿತ್ತು.

ಸಂತೋಷ ಇಂದು ಕೂಡಾ ಆಗುತ್ತದೆ.

ಇವತ್ತು ನಮ್ಮ ಸಾಹಿತ್ಯ ಹುಲುಸಾಗಿ ಬೆಳೆದಿದೆ; ಬೆಳೆಯುತ್ತಲೂ ಇದೆ.

ಆದರೆ ಹಲವು ಮಂದಿ ನಮ್ಮ ಸಾಹಿತ್ಯ ಹೊಲಸಾಗಿ ಬೆಳೆಯುತ್ತಿದೆ ಎಂದು ವಿಷಾದ ಸೂಚಿಸುತ್ತಿದ್ದಾರೆ.

ನಮ್ಮ ಸಾಹಿತ್ಯ ಹುಲುಸಾಗಿ ಬೆಳೆಯುತ್ತಿದೆಯೋ ಹೊಲಸಾಗಿ ಬೆಳೆಯುತ್ತಿದೆಯೋ ಎಂಬ ಪ್ರಶ್ನೆ ಪ್ರತಿಯೊಬ್ಬರಲ್ಲಿ ಮೂಡಿನಿಂತರೆ, ಅದಕ್ಕೆ ಹುಲುಸಾಗಿ ಬೆಳೆಯುತ್ತಿರುವ ಸಾಹಿತ್ಯ, ಹೊಲಸಾಗಿ ಹರಿಯುತ್ತಿದೆ ಎಂದು ಉತ್ತರಿಸಬಹುದು.

ಸಂದರ್ಭಕ್ಕನುಗುಣವಾಗಿ ಒಂದು ಮಾತು:

ಜನತಾ ಮಾನಸರ ಮೇಲೆ ಪರಿಣಾಮ ಬೀರಬಲ್ಲಂಥ ಕೃತಿರಚಿಸುವ ಲೇಖಕನೊಬ್ಬ, ಜನರ ಮನಸ್ಸನ್ನು ಕೆಡಿಸುವ ಕಾರ್ಯಕ್ಕಿಳಿದರೆ, ಅವನ ಸಾಹಿತ್ಯದಲ್ಲಿ ಭೋಗ ಸುಖವೊಂದನ್ನೇ ಆತ ತೋರಿಕೊಳ್ಳಬಲ್ಲವನಾದರೆ, ಅವನು ತನ್ನ ಜೊತೆಯಲ್ಲೇ ಸಾಮಾನ್ಯ ಓದುಗರನ್ನು ಪತನದ ದರಿಗೊಯ್ಯುತ್ತಾನೆ ಎಂಬುದು ಹಿಂದೊಮ್ಮೆ ಶೀಲಾಶ್ಲೀಲದ ದಾಳಿ ನಡೆದಾಗ ಚರ್ಚೆಗೊಳಪಟ್ಟ ವಿಷಯ.

ಲೇಖಕನು ಹೊಲಸು ಕೃತಿಯನ್ನು ಕೊಡಬಾರದು. ತನ್ನಲ್ಲಿರುವ ಲೈಂಗಿಕ ವಿಕಾರಗಳನ್ನು ಆತ ಬರಹದಲ್ಲಿ ಮೂಡಿಸಿ ಜನಸಾಮಾನ್ಯರನ್ನು ಕೆಡಿಸಿ, ಸರಸ್ವತೀ ವ್ಯಭಿಚಾರಕ್ಕೆ ಕಾರಣನಾಗಬಂದು ಅಂತಹ ಲೇಖಕನ ಕೃತಿಗಳನ್ನು ಸರಕಾರವೂ, ಜನರೂ ಕೂಡಿಕೊಂಡು ತಡೆಹಾಕಬೇಕು.

ಎಂದು ಹಿಂದೊಮ್ಮೆ ಚರ್ಚೆಗೊಳಪಟ್ಟಿತು.

ಈಗ ಇನ್ನೊಂದು ವಿಷಯ:

ನಮ್ಮ ಕಿರಿಯರು ಹಿರಿಯರಿಗೇ ಕಲಿಸಿ ಕೊಡುವಷ್ಟು ತಿಳಿದವರಿದ್ದಾರೆ. ಲೈಂಗಿಕ ವಿಷಯಗಳ ಮೇಲೆ ನಮ್ಮ ಕಿರಿಯರು ಹಿರಿಯರಿಗೇ ತಿಳಿಸಿ ಹೇಳಬಲ್ಲಷ್ಟು ಜಾಣರಿದ್ದಾರೆ.

ಎಂಬುದಾಗಿ ಇತ್ತೀಚೆಗೆ ಮಾತುಗಳು ಕೇಳಬರುತ್ತಿವೆ.

ಹಿಂದೆ ಪ್ರಾಯಶಃ ನಮ್ಮ ಸಾಮಾನ್ಯ ಓದುಗರು ಲೈಂಗಿಕ ವಿಷಯಗಳನ್ನು ತಿಳಿದಿರಲಿಕ್ಕಿಲ್ಲ. ತಿಳಿದಿದ್ದರೂ ಇನ್ನೊಬ್ಬರಿಗೆ ಕಲಿಸಿಕೊಡುವಷ್ಟು ತಿಳಿದಿರಲಿಕ್ಕಿಲ್ಲ.

ಅಂತೆಯೇ ನಮ್ಮ ಪ್ರಗತಿಶೀಲ ಲೇಖಕರು ಅಂದಿನ ಸಾಹಿತ್ಯ ಸೃಷ್ಟಿಯಾಗಿ ಜನಸಾಮಾನ್ಯರು ಲೈಂಗಿಕ ವಿಕಾರಗಳ [illegible] ಎಂದು ಅದಕ್ಕೆ ತಡೆ [illegible] ನಡೆಸಿ, ಒಂದು [illegible]



ವಿವೇಕಾನಂದರ ದಿಗ್ವಿಜಯ

(೩ನೇ ಪುಟದಿಂದ)

(೩ನೇ ಪುಟದಿಂದ)

ಅವರು ವಿವೇಕಾನಂದರನ್ನು ಆಮಂತ್ರಿಸಿದರು. ತತ್ವಬೋಧಕವಾದ ಸಂಭಾಷಣೆಗಳಲ್ಲಿ ಅವರು ಅನೇಕ ಮನೋರಂಜಕವಾದ ದಿನಗಳನ್ನು ಕಳೆದರು. ಸ್ವಾಮಿಯವರು ವೇದ ಮತ್ತು ಉಪನಿಷತ್ತುಗಳಲ್ಲಿ ಬರುವ ಅನೇಕ ದುರ್ಬೋಧವಾದ ವಾಕ್ಯಗಳ ಗೂಢಾರ್ಥವನ್ನು ಆನಂದದಿಂದ ಸುಲಭವಾಗಿ ವಿವರಿಸುತ್ತಿದ್ದರು. ಡಾಕ್ಟರರ ಮರ್ಮಸ್ಪರ್ಶಿಯೂ ವಿದ್ವತ್ಪೂರ್ಣವೂ ಆದ ವಾದಗಳು ಅವರ ಸಂಭಾಷಣೆಯ ಗತಿಗೆ ಕಳೆಕೊಟ್ಟವು.

ಸ್ವಾಮಿ ವಿವೇಕಾನಂದರು ಡ್ಯುಸ್ಸೇನರ ಮನೆಯಲ್ಲಿದ್ದಾಗ ಒಂದು ಬಹು ಚಮತ್ಕಾರದ ಘಟನೆಯು ನಡೆಯಿತು. ವಿವೇಕಾನಂದರು ಡಾ|| ಡ್ಯುಸ್ಸೇನರ ಖಾಸಗಿ ಲೈಬ್ರರಿಯಲ್ಲಿ ಒಂದು ಪದ್ಯ ಸಂಗ್ರಹದ ಪುಸ್ತಕದಲ್ಲಿ ಅಲ್ಲಲ್ಲಿ ಓದಿಕೊಳ್ಳುತ್ತಿದ್ದರು. ಆಗ ಡಾಕ್ಟರರು ಅವರನ್ನು ಮೂರು ಬಾರಿ ಕರೆದರು. ಆದರೆ ಉತ್ತರ ಸಿಗಲಿಲ್ಲ. ಡಾ|| ಡ್ಯುಸ್ಸೇನರು ಮನನೊಂದವರಾಗಿ ಹೊರಟು ಹೋದರು. ಆದರೆ ಅದೇದಿನ ಸಾಯಂಕಾಲ ತಮ್ಮ ಸಂಭಾಷಣೆಯ ಕಾಲದಲ್ಲಿ ಸ್ವಾಮಿ ವಿವೇಕಾನಂದರು ತಾನು ಅದಿನ ಬೆಳಿಗ್ಗೆ ಓದಿದ ಅದೇ ಪುಸ್ತಕದಿಂದ ಅನೇಕ ಪದ್ಯಗಳನ್ನು ಧಾರಾಳವಾಗಿ ಕಂಠಪಾಠವಾಗಿ ಉದ್ಧರಿಸಿ ಹೇಳಿದರು. ಡಾ|| ಡ್ಯುಸ್ಸೇನರಿಗೆ ಆತ್ಯಾಶ್ಚರ್ಯವಾಯಿತು, ಅಂತಹ ಒಂದು ಸ್ಮರಣಶಕ್ತಿಯ ಅಸಾಮಾನ್ಯ ಸಾಹಸವನ್ನು ಸಾಧಿಸಲು ತಾವು ಹೇಗೆ ಶಕ್ತರಾದಿರೆಂದು ಕೇಳಿದಾಗ ಅವರೊಳಗೆ ಯೋಗ ಮಾರ್ಗದ ಏಕಾಗ್ರ ಧ್ಯಾನ ಮತ್ತು ಸ್ಮರಣಶಕ್ತಿಯ ವಿಷಯದಲ್ಲಿ ಬಹುಮನೋರಂಜಕವಾದಮಾತುಗಳು ನಡೆದವು. ಆಗ ಡಾ|| ಡ್ಯುಸ್ಸೇನರು, ಆ ಪದ್ಯ ಸಂಗ್ರಹವನ್ನು ಓದುತ್ತಾ ಸ್ವಾಮಿಯವರು ಎಷ್ಟರ ಮಟ್ಟಿಗೆ ಧ್ಯಾನಮಗ್ನರಾಗಿದ್ದರೆಂದು ತಿಳಿದರು. ಕೀಲ್ ನಗರದ ಆ ಭೇಟಿಯನ್ನು ಸ್ಮರಿಸಿಕೊಂಡು ಸ್ವಾಮಿ ವಿವೇಕಾನಂದರು "ಅದು ತನ್ನ ಜೀವನದಲ್ಲಿ ನಡೆದ ಅತಿ ಸಂತೋಷಕರವಾದ ಘಟನೆಗಳಲ್ಲೊಂದು" ಎಂದು ವರ್ಣಿಸುತ್ತಾರೆ. ಮತ್ತು ಡಾ|| ಡ್ಯುಸ್ಸೇನರು ಇಂಡಿಯಾಕ್ಕಾಗಿ ಮಾಡಿದ ಕೆಲಸದ ಕುರಿತು ಅವರು "ನಮ್ಮಲ್ಲಿ ಯಾರೂ ಮಾಡು[illegible]ದಕ್ಕಿಂತ [illegible] ಹೆಚ್ಚಾಗಿ ಈ ಒಬ್ಬ ಮ[illegible] ನಮ್ಮ ಪೂರ್ವಜರ ಸಾಹಿತ್ಯ ರಕ್ಷಣೆ, ಪ್ರಗತಿ ಮತ್ತು ಅಭಿನಂದನೆಗಳಿಗಾಗಿ ಕೆಲಸ ಮಾಡುತ್ತಾರೆ ಮತ್ತು ಅವರು ಅದನ್ನು ಪ್ರೇಮಾದರಗಳ ಮಧುರ ಲೇಪನದಿಂದ ತುಂಬಿದ ಹೃದಯದಿಂದ ಮಾಡಿರುತ್ತಾರೆ" ಎಂದು ಹೇಳುತ್ತಾರೆ.

ಪ್ರೊ|| ವಿಲ್ಲಿಯಂ ಜೇಮ್ಸರು.

ರಾಜಯೋಗದ ಕುರಿತು ಸ್ವಾಮಿ ವಿವೇಕಾನಂದರು ಬರೆದ ಗ್ರಂಥವು ಅದರ ಪ್ರಾಮಾಣ್ಯ ಮತ್ತು ಸ್ಪಷ್ಟತೆಗೆ ಪ್ರಸಿದ್ಧವಾಗಿದೆ. ಸಾಮಾನ್ಯ ಜನರೂ ವಿದ್ವಾಂಸರೂ ಅದನ್ನು ಹೆಚ್ಚಾಗಿ ಸ್ವೀಕರಿಸುತ್ತಾರೆ. ಪ್ರಖ್ಯಾತ ತತ್ವಜ್ಞಾನಿಯಾದ ಪ್ರೊ|| ವಿಲ್ಲಿಯಂ ಜೇಮ್ಸರು ಆ ವಿವರಣೆಯಿಂದ ಅತ್ಯಂತ ಆಕರ್ಷಿತರಾಗಿ ಸ್ವಾಮಿ ವಿವೇಕಾನಂದರ ಪ್ರತ್ಯಕ್ಷ ಉಪದೇಶದಿಂದಲೇ ಅವರಲ್ಲಿರುವ ಸ್ವಲ್ಪ ಭಾಗವನ್ನು ಅಭ್ಯಾಸಮಾಡಿದರು. ಈ ಇಬ್ಬರು ವಿಖ್ಯಾತ ಮಹರ್ಷಿಯರು ಮೊದಲು ಭೇಟಿಯಾದುದು ಶ್ರೀಮತಿ ಓಲೆ ಬೆಲ್ಲರ ಮನೆಯಲ್ಲಿ ನಡೆದ ಒಂದು ಭೋಜನ ಸಮಾರಂಭದಲ್ಲಿ ಇಬ್ಬರೂ ಪರಸ್ಪರರನ್ನು ಆದರ ಗೌರವಗಳಿಂದ ಕಾಣುತ್ತಾ ಮುಂದಂದರು. ವಿಲ್ಲಿಯಂ ಜೇಮ್ಸರು ತಾವು ಬರೆದ (The Varieties of Religious Experience) 'ದಿ ವೆರೈಟೀಸ್ ಆಫ್ ರಿಲಿಜಿಯಸ್ ಎಕ್ಸ್‌ಪೀರಿಯೆನ್ಸ್' ಎಂಬ ಗ್ರಂಥದ ಕೊನೆಯ ಅಧ್ಯಾಯದಲ್ಲಿ ಸ್ವಾಮಿ ವಿವೇಕಾನಂದರ ಮಾತುಗಳನ್ನು ಉದ್ಧರಿಸುತ್ತಾರೆ. ವಿವೇಕಾನಂದರು ಅಪ್ರತ್ಯಕ್ಷವಾಗಿ ಆ ಗ್ರಂಥಕ್ಕೆ ವಿಷಯಗಳನ್ನು ಪೂರೈಸಿಕೊಟ್ಟಿರುತ್ತಾರೆಂಬುದರಲ್ಲಿ ಸಂಶಯವಿಲ್ಲವೆಂದು ರೋಮನ್ ರೋಲೆಂಡರು ಸೂಚಿಸುತ್ತಾರೆ. ನಿಜವಾದ ಪ್ರಭಾವವನ್ನು ನಿರ್ಣಯಿಸುವುದು ಕಷ್ಟವಾದರೂ ವಿಲ್ಲಿಯಂ ಜೇಮ್ಸರು ವಿವೇಕಾನಂದರನ್ನು ಆದರ್ಶ ವೇದಾಂತಿ ಮತ್ತು ಯೋಗಿ ಎಂದು ಭಾವಿಸಿದ್ದಾರೆಂಬುದರಲ್ಲಿ ಸಂಶಯವಿಲ್ಲ.

ಸ್ವಾಮಿ ವಿವೇಕಾನಂದರು ಇತರ ಅನೇಕ ಪ್ರಸಿದ್ಧ ವಿಚಾರವಂತರನ್ನೂ ಭೇಟಿ ಮಾಡಿದರು. ನಾಸ್ತಿಕರಾದ ರೋಬರ್ಟ್ ಇಂಗರ್‌ಸೋಲರು—ಅವರು ಅಮೇರಿಕದಲ್ಲಿ ವೇದಾಂತವನ್ನು ಪ್ರಚಾರ ಮಾಡುವಾಗ ಜಾಗ್ರತೆಯಿಂದಿರಬೇಕೆಂದು ಸಲಹೆ ಇತ್ತರು. ಎಡ್ವರ್ಡ್ ಕಾರ್ಪೆಂಟರರು ಅವರ ಕ್ರಿಶ್ಚಿಯನ್ ತತ್ವಬೋಧೆಗಳನ್ನು ಬಿಟ್ಟು ಇಂಡಿಯದ ತತ್ವಜ್ಞಾನಕ್ಕೆ ಒಲಿದರು. ಮತ್ತು, ಹಾರ್ವರ್ಡ್ ವಿಶ್ವವಿದ್ಯಾಲಯದ ಗ್ರೀಕ್ ಪ್ರಾಧ್ಯಾಪಕರಾದ ಜೆ. ಎಚ್. ರೈಟ್ ಎಂಬವರು ಅವರು ಇವರ ಅದ್ಭುತ ಜ್ಞಾನವನ್ನು ಕಂಡು ಧರ್ಮ ಸಮ್ಮೇಳನದಲ್ಲಿ ಸ್ವದೇಶದ ಪ್ರಾತಿನಿಧ್ಯವನ್ನು ಪಡೆಯಲು ಇವರಿಗೆ ಸಹಾಯ ಮಾಡಿದರು. ಅವರ ಈ ಎಲ್ಲಾ ಮಹನೀಯರ ಮತ್ತು ಇನ್ನೂ ಇತರ ಅನೇಕರ ಭೇಟಿಗಳು ಆದರ ಮತ್ತು ಅಭಿಪ್ರಾಯ ವಿನಿಮಯಗಳ ಸಮೃದ್ಧಿಯಿಂದ ಕೂಡಿದ್ದವು. ಪಶ್ಚಿಮ ದೇಶದಲ್ಲಿ ಇವರು ಎಷ್ಟು ಅತಿಶಯಿಕ ಗೌರವದಿಂದ ಕಾಣಲ್ಪಟ್ಟರು ಎಂಬುದಕ್ಕೆ ಇವುಗಳೇ ಸ್ಪಷ್ಟ ಪ್ರಬಲ ಸಾಕ್ಷಿಗಳಾಗಿವೆ. ವೇದಾಂತ ತತ್ವಶಾಸ್ತ್ರವನ್ನು ಪಶ್ಚಿಮ ದೇಶದಲ್ಲಿ ಪ್ರಚಾರ ಮಾಡುವಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಪ್ರಾಥಮಿಕ ಪ್ರಯತ್ನಗಳನ್ನು ತುಲನಾತ್ಮಕ ಧರ್ಮದ ಯಾವ ಅಭ್ಯಾಸಿಯೂ ಗಮನಿಸದೆ ಇರಲಾರನು. ಆ ಕಾಲದ ಪ್ರಮುಖ ವಿಚಾರವಂತರೊಡನೆ ಅವರು ವಿದ್ವತ್ಪೂರ್ಣವಾಗಿ ಮಾಡಿದ ಸಂದರ್ಶನಗಳು ಅವರ ಧ್ಯೇಯಕ್ಕೆ ವಿಶೇಷವಾದ ಜ್ಞಾನಪ್ರಯುಕ್ತ ಗೌರವ ಮತ್ತು ಉನ್ನತ ಸ್ಥಿತಿಯನ್ನು ತಂದುಕೊಟ್ಟವು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ವೇದಾಂತ ತತ್ವಶಾಸ್ತ್ರವು ಪಶ್ಚಿಮದೇಶದವರ ವಿಚಾರ ಮತ್ತು ಧ್ಯಾನಗಳ, ಮೂಲ ಮತ್ತು ನರನಾಡಿಗಳ ಒಳಗೆ ನುಗ್ಗುತ್ತಿದೆಯೆಂಬುದು ಅಮೇರಿಕದಲ್ಲಿ ವೇದಾಂತ ಕೇಂದ್ರಗಳು ಹೆಚ್ಚಾಗಿ ಜನಪ್ರಿಯವಾಗುವುದರಿಂದಲೂ. ಆಲ್ಡಸ್ ಹಕ್ಸ್ಲೇ, ಮತ್ತು ಕ್ರಿಸ್ಟೋಫರ್ ಈಶರ್‌ವುಡ್ ಇವರಂತಹ ದೊಡ್ಡ ವಿಚಾರವಂತರು ಅದರ ಅಧ್ಯಯನಕ್ಕಾಗಿ ಮಾಡಿರುವ ಸಹಾಯಗಳಿಂದಲೂ ಸ್ಪಷ್ಟವಾಗಿ ಕಾಣುತ್ತಿದೆ.

(ಭವನ್ಸ್ ಜರ್ನಲ್ ಪತ್ರಿಕೆಯಿಂದ)

ಸಾಲದಾ ದೇವರಿಗೆ!

ಸಾಲದಾ ದೇವರಿಗೆ ಸೋತೆನಲ್ಲಾ—
ಸೋಲನರಿಯದ ನನಗೆ ಬಂದಿತಲ್ಲಾ!
ದೇವರೂ ಸಾಲನೂ ಈ ಕಾಲ ದೂತರಿಗೆ
ಭಾವ ಭಕ್ತಿಯನರಿಯದಾ ಯುವನ ಮಕ್ಕಳಿಗೆ,
ಜಾರಿಕೊಳ್ಳುವೆನೆಂಬ ಧೈರ್ಯವಿಲ್ಲ—
ಊರಿಬಾಳುವ ಶಕ್ತಿ ಕುಂದಿತಲ್ಲ.
ಮನ ತುಂಬ ಗುಣವಿದ್ದಡೇನು ಬಂತ?
ಹಣೆತುಂಬ ನೆರಿಗೆ ಎದ್ದೇನು ಬಂತು?
ತಿನಿಸೆಲ್ಲ! ಮುನಿಸೆಲ್ಲ! ಜಗಳಾಡು ತಿಪೆಯಲ್ಲ
ಕನಸೆಲ್ಲ ಗಗನ ಗೋಪುರವಾಯಿತಲ್ಲ!
ಸಾವೆನೆಂದರು ಬಿಡದ ಬಂಧುವರ್ಗ-
ಕೋಪಿ ತಿರುಗಿಸಿ ತಿವಿತ! ನರಕ ಮಾರ್ಗ!
ದುಡಿದುಂಡು ಕೊಟ್ಟರೂ ಸಾಲದಿಹುದೂ
ಮುಡುಪಾಗಿ ಮುಂದಿಡಲು ಕಾಣದಿಹುದೂ
"ಬಡವನಲ್ಲದ ಧೂರ್ತ ಸೀಡಿಸಿರಿ ಬಿಡದೆ-
ಕಡು ಮದಾಂಧನು ಸಿಕ್ಕ— ಬಿಡಬೇಡಿ ಕೆಡದೆ
ನಿಜವು ಈ ನುಡಿ ಮತ್ತು ಸತ್ಯವಯ್ಯ-
ಭಜಿಸುವೆನು ಉಪಕಾರ ನಿಮ್ಮದಯ್ಯಾ!
ಕಾಲಗಂಜದ ಮೇಲೆ ನೋಲೆಲ್ಲಿ ಬಂತು
ನೀಳಿಯೂ ಬಣ್ಣಿಸಲು ಸಾಧ್ಯವಿದೆಯೆಂತು
ದುಡಿದುಂಬ ತತ್ವವಿದೆ ಎನ್ನೊಡಲ ಸೀಳಿ
ಮಡಿದರೂ ತಲೆಬಾಗಿ ಹಣಕಾಗಿ ಬಾಳಿ!
ಸೇವೆ ತ್ಯಾಗದ ಮುಂದೆ ಮಾಲೋಗಿ ಹಿಂದೆ
ಭಾವೈಕ್ಯದಲಿ ನಡೆಯೋ ಕೀರ್ತಿಯಿದೆ ಮುಂದೆ
ದೇವರಾದೇವ ನಿವ ಸಾಲನೀವ—
ಮಾವನವ—ಮಹದೇವ ಜಗದಜೀವ.
ಆದಿಶೇಷನ ತೊಡೆ ಹೊರ ಮೆಯ್ಯ ತಂಪು
ಕಾದು ಕಡಿಯದೆ ಬಿಡನು ಅವನಿಗಿದೆ ಇಂಪು
ಸಾಲದಾ ದೇವರೇ ಎಲ್ಲರಾಧಾರಾ —
ಸಾಲವಕೆ ಜೀವನವು ಬರಿದೆ ನಿಸ್ಸಾರ!

ಡಾ|| ಎಂ. ಎಸ್. ಹೆಗ್ಡೆ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದ
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ಕಾನಪಹುಪತ್ರವದಿರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಪಥ್ಯದ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ಆ ಹೆಂಗಸು.......

(೨ನೇ ಪುಟದಿಂದ)

ಕ್ಷಾಧಿಪತಿಗಳಾಗುವರೆಂದು ಕನಸಿನಲ್ಲಾದರೂ ನೆನಸುವುದು ಸಾಧ್ಯವಿತ್ತೇ?

ರಾವಲ್‌ಪಿಂಡಿಯಲ್ಲಿ ಗಲಾಟೆಯಾಗುವ (ಹಿಂದೂ-ಮುಸ್ಲಿಮರೊಳಗೆ) ಮುನ್ಸೂಚನೆಯೇನೋ ಸ್ವಾತಂತ್ರ್ಯ ದಿನಕ್ಕೆ ೭-೮ ದಿನಕ್ಕೆ ಮೊದಲೇ ಹರಡಿತ್ತು. ಆದರೂ ಅದು ಹಿಂದೂಗಳಿಗೆ ಪ್ರತ್ಯಕ್ಷರೂಪವಾಗಬಹುದೆಂದು ಯಾರು ಕಂಡಿದ್ದರು? ಶ್ರೀಮಂತರು ತಮ್ಮ ಸೊತ್ತುಗಳನ್ನು ಇದ್ದಕ್ಕಿದ್ದಂತೆ ಬಿಟ್ಟುಹೋದರೆ ಮುಂದಿನ ಜೀವನದ ಪ್ರಶ್ನೆ ಏನೆಂದು ಯೋಚಿಸುತ್ತಿದ್ದರು

ಬಡವರು ನಡೆದು ಹೋಗುವುದು ಕಷ್ಟ. ಬದುಕಿದರೆ ಬದುಕುತ್ತೇನೆ ಎಂದು ಅಲ್ಲೇ ಉಳಿದರು. ಕೆಲವರು ಕೆಲವು ಗುಂಪುಗಳೊಂದಿಗೆ ಸೇರಿಕೊಂಡರು. ಮಧ್ಯಮ ತರಗತಿಯ ಜನರಲ್ಲಿ ಹೆಚ್ಚಿನವರು ಗಲಾಟೆಯಾಗುವ ಸೂಚನೆ ಕಂಡದ್ದೇ ಹೊರಟು ಬಿಟ್ಟರು. ಯಾಕೆಂದರೆ ಅವರು ಸಂಪಾದನೆ ಮಾಡಿಟ್ಟದ್ದು ಅಷ್ಟರಲ್ಲೇ ಇತ್ತು. ಏನೋ ಕೆಲವು ಚಿಲ್ಲರೆ ಸಾಮಾನುಗಳನ್ನು ರುಪಾಯಿಗೆರಡಾಣೆಯಂತೆ ಮಾರಿಬಿಟ್ಟು ರೈಲು, ತಿಂಡಿ ಖರ್ಚು ಸಿಕ್ಕರಾಯಿತೆಂದು ಮೊದಲೇ ಸಿಕ್ಕಷ್ಟು ಮಾರಿ ಉಳಿದುದನ್ನು ಬಿಟ್ಟು ಹೊಂಟರು.

ಬಾಕೂಜಿ ಇರುವಾಗ ಗಲಭೆಯೆಂದರೇನು, ಕೊಲೆ, ಸುಲಿಗೆಯೆಂದರೇನು, ನಾಳೆಯೇ ನಮ್ಮ ರಕ್ಷಣೆಗೆ ಬಾಪೂ ಬರಬಹುದೆಂಬ ದೂರದ ಆಶೆಯನ್ನಿಟ್ಟುಕೊಂಡು ಜಮೀನುದಾರರೂ, ವ್ಯಾಪಾರಸ್ಥರೂ ಧೈರ್ಯದಿಂದ ಕೆಲವರು ನಿಂತವರು ನಿಂತರು.

ಅಮೃತನ ಮನೆಯವರಂತೂ ಅಲ್ಲಿ ಬಿಟ್ಟು ಬರುವಂತೆಯೇ ಇರಲಿಲ್ಲ. ಯಾಕೆಂದರೆ ಅವರ ಐಶ್ವರ್ಯದ ದೊಡ್ಡ ಭಾಗ ಭೂಮಿಯ ರೂಪದಲ್ಲಿತ್ತು. ಬಟ್ಟೆಯ ದಾಸ್ತಾನಿನ ಅಂಗಡಿಯೂ ಸುಮಾರು ಮೂರು ಲಕ್ಷ ಬೆಲೆಬಾಳುವುದಿತ್ತು. ಅವರ ಒಕ್ಕಲುಗಳಲ್ಲಿ ಹೆಚ್ಚಿಗೆ ಮುಸ್ಲಿಮರು. ಮುಸಲ್ಮಾನರಿಗೆ ಪಾಕಿಸ್ತಾನದಲ್ಲಿ ಮೊದಲು ಕಣ್ಣಿಗೆ ಬೀಳುವಂತೆಯೇ ಇತ್ತು ಇವರ ಮನೆ ಮತ್ತು ಆಸ್ತಿ.

ರಾವಲ್ಪಿಂಡಿಯಲ್ಲಿ ಗಲಾಟೆ ಶುರುವಾಗಿದ್ದೇ ಅಮೃತನ ಸೋದರ ಮಾವಂದಿರಿಬ್ಬರೂ ತಮ್ಮ ಕುಟುಂಬದೊಡನೆ ಪಾಕಿಸ್ತಾನ ಸೇರಿಕೊಂಡರು. ಲಾಹೋರಿನಲ್ಲಿದ್ದ ಬಿಮಲ್ ಮಾತ್ರ ಬಂದಿರಲಿಲ್ಲ. ಆದಿನಗಳಲ್ಲಿ ಕಾಲೇಜು ಮೇಲೆ ಕಾಲೇಜಂತಿಯಾಗಿತ್ತು. ಗಲಾಟೆ ಜಾಸ್ತಿಯಾದರೆ ಅವನು ಬಂದ ಮೇಲೆ ಅದಷ್ಟು ಐಶ್ವರ್ಯವನ್ನು ಹಿಂದೂಸ್ಥಾನಕ್ಕೆ ಸಾಗಿಸಿ ಗಲಾಟೆ ಕಡಿಮೆಯಾಗುವ ತನಕ ಅಲ್ಲಿಯೇ ಇದ್ದು ಬರುವುದೆಂದು. ಆದರೆ ಬಿಮಲ್ ಬರಲೂ ಇಲ್ಲ, ಅವನಿಂದ ಸುದ್ದಿಯೂ ಇಲ್ಲ.

ಎಲ್ಲರಿಗೂ ಗಾಬರಿ ಅವನ ಬಗ್ಗೆ. ಏನು ಮಾಡುವುದು ಏನು ಮಾಡುವುದು ಎನ್ನುವುದರೊಳಗೆ ಸ್ವಾತಂತ್ರ್ಯ ದಿನ ಬಂದೇ ಬಿಟ್ಟಿತು. ಅಲ್ಲಿತನಕ ಹೇಳಿಕೊಳ್ಳುವಂತಹ ಗಲಾಟೆಗಳಾಗದಿದ್ದರೂ ಅವರ ಜಮೀನಿನಿಂದ ಹಿಂದೂ ಒಕ್ಕಲುಗಳೆಲ್ಲ ಓಡಿಸಲ್ಪಟ್ಟಿದ್ದರು. ಆಸ್ತಿಯನ್ನೆಲ್ಲ ಮುಸಲ್ಮಾನರೇ ಆಕ್ರಮಿಸಿಬಿಟ್ಟಿದ್ದರು.

ಅದರ ಚಿಂತೆ ಮುದಕನಿಗಿರಲಿಲ್ಲ. ಹೋದರೆ ಒಂದು ವರ್ಷದ ಆದಾಯವು ಮಾತ್ರ ಇಷ್ಟು ಜನರ ಜೀವಗಳ ಪ್ರಶ್ನೆಯೊಂದಿದೆಯಲ್ಲ. ಅವುಗಳನ್ನಷ್ಟು ಉಳಿಸಿಕೊಳ್ಳಬೇಕು. ಪ್ರೀತಿಯ ಮೊಮ್ಮಗ ಬಿಮಲ್ ಬಾರದೆ ಹೋಗುವುದಾದರೂ ಹೇಗೆ? ಅಥವಾ ಅವರು ಇತ್ತ ಹೊರಟ ಮೇಲೆ ಅವನು ಅಲ್ಲಿಗೇ ಬಂದರೆ? ಎದೆಯಲ್ಲಿ ಗಾಬರಿ, ಭಯ ತುಂಬಿಕೊಂಡೇ, ಕೈಯಲ್ಲಿ ಜೀವ ಇಟ್ಟುಕೊಂಡೇ ಬಿಮಲ್‌ನ ದಾರಿ ಕಾಯುತ್ತಿದ್ದರು. ಗಲಾಟೆ ಜಾಸ್ತಿಯಾಗುವುದನ್ನು ನೋಡಿ ಇನ್ನು ತಡೆದರೆ ಎಲ್ಲರ ಪ್ರಾಣ, ಮಾನಗಳನ್ನು ಕಳಕೊಳ್ಳುವ ಮೂರ್ಖತನವಾಗುವುದೆಂದು ಬಿಮಲ್‌ನ ತಂದೆ ಲಾಹೋರಿಗೆ ಹೊರಟೇ ಬಿಟ್ಟರು. ಮನೆಯಲ್ಲಿದ್ದವರೆಲ್ಲರೂ ಆಗಿಂದಾಗಲೇ ಹೊರಟು ಡೆಲ್ಲಿ ಸೇರಬೇಕು ಮತ್ತು ಅಲ್ಲಿ ಹಿಂದೂಸ್ಥಾನ್ ಹೋಟಲಲ್ಲಿಯೇ 'ಇಳಿದುಕೊಳ್ಳಬೇಕು', ಯಾರೇ ಆದರೂ ತಪ್ಪಿಸಿಕೊಂಡವರೂ, ಬದುಕಿ ಉಳಿದವರೂ ಅದೇ ಹೋಟಲ್ಲಿಗೆ ಜೀವವಿದ್ದರೆ ಹೋಗಿ ಕೂಡಿಕೊಳ್ಳಬೇಕು ಎಂದು ತೀರ್ಮಾನವಾಯಿತು. ಗಂಡ ಹೋಗಿದ್ದನ್ನು ನೋಡಿಯೇ ಅಚಲಾ ದೇವಿ ಎಲ್ಲವನ್ನೂ ಕಳಕೊಂಡವರಂತೆ ಜ್ಞಾನ ತಪ್ಪಿದರು. ಮತ್ತೆ ಅನರ್ಥವನ್ನೇ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಆಗಾಗ ಬೆಚ್ಚಿ ಬೀಳುತ್ತಿದ್ದರು. ಮರುದಿನವೇ ಸ್ವಾತಂತ್ರ್ಯದ ಶುಭ ದಿನ!

ಹಿಂದೂಸ್ಥಾನದ ಪ್ರತಿ ಒಬ್ಬ ಹಿಂದೂ-ಮುಸ್ಲಿಂ ಬಯಸಿ ಬಯಸಿ ಸಿಕ್ಕಿದ ಸ್ವಾತಂತ್ರ್ಯದ ದಿನ! ಪಶ್ಚಿಮ ಪಂಜಾಬಿನಲ್ಲಿ ಅಖಂಡ ನರಹತ್ಯೆಯು ಹಿಂದುಗಳ ರಕ್ತದಲ್ಲಿ ಓಕುಳಿಯಾಡಿದ ಮಹಾಪ್ರಳಯದ ದಿನ !!. ಪಶ್ಚಿಮ ಪಂಜಾಬಿನ ಹಿಂದೂಗಳೆಲ್ಲರೂ ಕಟುಕನ ಮನೆಯಲ್ಲಿ ಕಟ್ಟಿಹಾಕಿದ ಕುರಿಗಳಂತೆ ತಮ್ಮ ಜೀವನದ ಕೊನೆ ಯಾವಾಗ ಆಗುವುದೋ ಎಂದು ಬೆದರಿ ಕಂಗಾಲಾದ ದುರ್ದಿನವೇ ಆ ದಿನ!!!.

ಅಲ್ಲಿನ ರಾಷ್ಟ್ರ ನಾಯಕರಾದರೂ ಬೇಕೆಂದೇ ತಮ್ಮ ಪ್ರಜೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳದೆ ಹಿಂದೂಗಳನ್ನು ಅಲ್ಲಿಂದ ಓಡಿಸುವ ಆಟ ಹೂಡಿದ್ದರು. "ಸಾಯುವವನಿಗೆ ದೇವರಿಲ್ಲ ಸೋತವರಿಗೆ ನೆಂಟರಿಲ್ಲ ಎಂಬಂತೆ" ಅವರವರ ಜೀವ ಸಂಪತ್ತನ್ನು ಅವರೇ ಕಾಪಾಡಿಕೊಳ್ಳಬೇಕಾಗಿತ್ತು. ಗಲಾಟೆ ಜೋರಾಗುತ್ತಲೇ ಇತ್ತು. ಅಲ್ಲಿ ಕೊಲೆಯಾಯಿತು. ಇಲ್ಲಿ ಮಾನಭಂಗವಾಯಿತು. ಅಲ್ಲಿ ಮನೆ ಸುಟ್ಟರು. ಇಲ್ಲಿ ಮಕ್ಕಳನ್ನು ಕಡಿದರು, ಅಬ್ಬಬ್ಬ! ಅದೆಲ್ಲ ಕಿವಿಯಿಂದ ಕೇಳಲೂ ಕಠೋರವಾಗಿರುವಾಗ ಇನ್ನು ನೋಡಲು ಸಾಧ್ಯವೇ?

ಸಿರಿ ಅಮೂಲ್ಯ ರತ್ನಾಭರಣ, ಒಡವೆಗಳು, ಹಣದ ಗಂಟುಗಳು, ಚಿಕ್ಕ ಚಿಕ್ಕ ಗಂಟುಗಳಾಗಿ ಎರಡು ಕಾರುಗಳ ಸಂದಿ ಮೂಲೆ ಸೇರಿಕೊಂಡವು. ಇಷ್ಟು ಹೊತ್ತಿಗೆ ಅವರ ಆಪ್ತ ಗೆಳೆಯರಾದ ಇಮಾಮ್ ಸಾಬ್‌ರವರು ಅವರ ಕಾರಿನಲ್ಲಿ ಬಂದು ಇವರೆಲ್ಲರನ್ನೂ ಇನ್ನು ಕಿದ್ದಂತೆ ಹೊರಡಲು ಒತ್ತಾಯಪಡಿಸಿದರು. ಅಂತಹ ಗಲಭೆಯ ಆ ಹೊತ್ತಿನಲ್ಲೂ ಗೋಧಿ ರೊಟ್ಟಿಯನ್ನೂ, ಚಟ್ನಿ ಪುಡಿಯನ್ನೂ ತಂದಿದ್ದರು, ಅವು ೩-೪ ದಿನಗಳಿಗೆ ಸಾಕಾಗುವಷ್ಟಿದ್ದವು. ಜಾತಿಯ ಪ್ರಶ್ನೆಯೇ ಆ ಪರಿಸ್ಥಿತಿಯಲ್ಲಿ ಯಾರಿಗೂ ಇದ್ದಂತಿರಲಿಲ್ಲ ಸಂಪತ್ತು ಸೌಲಭ್ಯಗಳು ಆಗ ಅವು ಯಾರ ಗಂಟಲಲ್ಲೂ ಇಳಿಯಲಿಕ್ಕಿಲ್ಲ. ಆದರೆ ಸಂದರ್ಭ ಯಾವ ತರಹ ಬರಬಹುದೆಂದು ಯಾರಿಗೆ ಗೊತ್ತು? ಒಣಕಲು ರೊಟ್ಟಿ ಬೇಕಾಗಬಹುದಾದ ದಿನವೂ ಬರಬಹುದು. ಅವೂ ಅಲ್ಲದೆ ಕೆಲವು ಬಿಸ್ಕಿಟಿನ ಕಟ್ಟುಗಳೂ, ಬ್ರೆಡ್ಡುಗಳನ್ನು ತೆಗೆದು ಇವರ ಕಾರಿನೊಳಗಿಟ್ಟರು. ನೀರು ತುಂಬಿಸಿದ್ದ ಬಾಟ್ಲಿಗಳು, ಪ್ಲಾಸ್ಟಿಕಿನ ಸೀಸೆಗಳನ್ನೂ ಕಾರಿನಲ್ಲಿಡಿಸಿದರು. ಇಷ್ಟೆಲ್ಲ ಆಗಿ ಎರಡೂ ಕಾರುಗಳಲ್ಲಿ ಅವರೆಲ್ಲರನ್ನೂ ೩-೪ ಆಳುಗಳನ್ನೂ ತುಂಬಿಸಿದರು ಮತ್ತೆ ಕಣ್ಣೀರಿಡುತ್ತಾ "ನಮ್ಮ ಮನೆಯಲ್ಲಿಯಾದರೂ ಬಚ್ಚಿಡೋಣವೆಂದರೆ ಅದೂ ಸುರಕ್ಷಿತ ಜಾಗವಲ್ಲ. ಈ ಹೊತ್ತಿನಲ್ಲಿ ನಿಮ್ಮನ್ನು ನೀವು ರಕ್ಷಿಸಿಕೊಳ್ಳಬೇಕಾದರೆ ಜೀವವನ್ನು ಕೈಯಲ್ಲಿಟ್ಟುಕೊಂಡು ಓಡುವುದೇ ಒಂದು ದಾರಿ ಇರುವುದು. ಬಂಧುಗಳಿಗಿಂತ ಹೆಚ್ಚಾಗಿರುವ ನಿಮ್ಮನ್ನು ಅಗಲುವುದೇ ಒಂದು ದುಃಖದ ದುರಂತದ ಘಟನೆ. ಅದರೆ ಈ ರೀತಿಯಿಂದ ನೀವು ನಿಮ್ಮದೇ ಆದ ಈ ನೆಲದಿಂದ ಓಡಿಸಲ್ಪಡುವುದು ನನ್ನ ಹೃದಯದಲ್ಲಿ ಮಾಯಲಾರದ ಆಘಾತವಾಗಿ ಉಳಿಯುವುದು ನನ್ನ ಹೃದಯದ ವೇದನೆ ನನಗೇ ಗೊತ್ತು. ಆ ದಯಾಮಯನಾದ ಅಲ್ಲಾ ನಿಮ್ಮನ್ನು ಸುರಕ್ಷಿತವಾಗಿ ಗಡಿ ದಾಟಿಸಲಿ ಎಂದು ಬೇಡಿಕೊಳ್ಳುವುದು ಅಷ್ಟೆ" ಎಂದು ಬಿಕ್ಕಿ ಬಿಕ್ಕಿ ಅತ್ತೇ ಬಿಟ್ಟರು. ಕಾರಿನಲ್ಲಿದ್ದವರ ಅವಸ್ಥೆ ಹೇಳುವುದೇ ಬೇಡ.

ಕಾರು ಹೊರಡುತ್ತಿದ್ದಂತೆ ಮತ್ತೆ ತಡೆದು ಹೇಳಿದರು.

"ದಯವಿಟ್ಟು ನೀವು ನಮ್ಮ ಜಾತಿಯ ಯಾವ ಆಪ್ತ ಗೆಳೆಯನೇ ಆದರೂ ಅವನ ಮನೆಯಲ್ಲಿ ಇಳಿದುಕೊಳ್ಳುವ ಸಾಹಸ ಮಾಡುವುದು ಬೇಡ. ಒಳ್ಳೆಯ ಗೆಳೆಯನೇ ಆಗಿದ್ದರೂ ಈ ಪರಿಸ್ಥಿತಿಯಲ್ಲಿ ಯಾರನ್ನು ನಂಬುವುದೂ ಕಷ್ಟ. ನಂಬಿಗಸ್ಥನೂ, ದಯಾಳುವೂ ಕೊಲೆಗಡುಕನಾಗುವ ಹೊತ್ತಿದು ನೀರಡಿಕೆಯಿಂದ ಬಾಯಾರಿದರೂ, ಹಸಿವಿನಿಂದ ಕಂಗೆಟ್ಟರೂ, ಪ್ರಾಣವೇ ಹೋಗುವ ಪರಿಸ್ಥಿತಿ ಒದಗಿದರೂ ನೀವು ಯಾರೊಬ್ಬನ ಮನೆಗೆ ಹೋಗಿ ಏನೂ ಕೇಳುವ ಸಾಹಸ ಮಾತ್ರ ಮಾಡಬೇಡಿ" ಎಂದು ಎಚ್ಚರಿಕೆ ಕೊಟ್ಟರು. ಕಾರುಗಳೆರಡೂ ಒಂದನ್ನೊಂದು ಹಿಂಬಾಲಿಸಿ ಹೊರಟವು. ಮೊದಲು ಹೊರಟ ಕಾರಲ್ಲಿ ಅಮೃತ ಅವಳ ತಾಯಿ, ಸೋದರಮಾವ; ತಾತ, ಮತ್ತೆ ಕಿರಿಯ ಮಕ್ಕಳಿಬ್ಬರು ಸೋದರ ಮಾವನ ಹೆಂಡತಿ. ಅವರ ಮಗಳು ಇನ್ನೊಂದರಲ್ಲಿ ಇನ್ನೊಬ್ಬ ಸೋದರ ಮಾವ ಅವರ ಕುಟುಂಬ ಮತ್ತೆ ಆಳುಕಾಳುಗಳು. ಎರಡೂ ಕಾರುಗಳಲ್ಲಿ ಸಾಧ್ಯವಿದ್ದಷ್ಟು ಅಮೂಲ್ಯ ರತ್ನಾಭರಣಗಳು ಚಿನ್ನ ಬೆಳ್ಳಿಗಳನ್ನೂ ತುಂಬಿಸಲಾಗಿತ್ತು. ಇಮಾಮ್ ಸಾಬ್‌ರವರು ಬಗಿದ ಕಂಠದಿಂದ ಹೋಗುತ್ತಿದ್ದ ಕಾರನ್ನೇ ನೋಡುತ್ತಾ ನಿಂತಿದ್ದು ಹಿಂದೆ ನೋಡಿದಾಗ ಇವರಿಗೂ ಸ್ವಲ್ಪ ದೂರದ ವರೆಗೆ ಕಾಣಿಸಿತು.

(ಮುಂದುವರಿಯುವುದು)



ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1 25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

REGD. No. B. G. 176
LICENCE No. 31
Licensed to Post without Prepayment

ವಾರ್ತೆ ಪ್ರತಿವಾರ್ತೆ

ಮಂತ್ರಿಗಳು ಕಾಲ ಕಾಲಕ್ಕೆ ತಮ್ಮ ಆಸ್ತಿಪಾಸ್ತಿಗಳನ್ನು ಬಹಿರಂಗ ಪಡಿಸಬೇಕೆಂದು ಕೇಳಿಕೊಳ್ಳುವ ಖಾಸಗಿ ಗೊತ್ತುವಳಿಯೊಂದು ಸಂಸತ್ತಿನಲ್ಲಿ ತಿರಸ್ಕೃತವಾಯ್ತು.

— ಕಟ್ಟಡಗಳ ವೈಶಾಲ್ಯದ ಮೇಲಿನ ತೆರಿಗೆಯನ್ನು ನೀಡಲು ಕರ್ನಾಟಕದ ಜನತೆಯೂ ತಿರಸ್ಕಾರ ತೋರಿಸ ಬೇಕಾಗ ಬಹುದೋ ಹೇಳ ಬರುವುದಿಲ್ಲ.

o o o

ರಾಜ್ಯದಲ್ಲಿ ಸಹಕಾರದ ಚಳುವಳಿಯು ಜನಪ್ರಿಯವಾಗಿದೆ ಎಂದು ಸಹಕಾರ ಇಲಾಖೆಯ ಮುಖ್ಯಾಧಿಕಾರಿ ಶ್ರೀ ಭರಣಯ್ಯನವರ ಅಭಿಪ್ರಾಯ.

—ಸಹಕಾರದಿಂದಲೇ ಉದರ ಭರಣ ಮಾಡುವುದು ಸರಳ ವಿಧಾನವೆಂದು ಇಂದು ಎಲ್ಲರೂ ಮನಗಂಡಿರುವರು ಎಂಬುದು ಇನ್ನೂ ಅಧಿಕೃತವಾಗಿಲ್ಲ.

o o o

ಭಾರತ— ಪಾಕಿಸ್ತಾನಗಳ ನಡುವೆ ಸಂಧಾನ ನಡೆಯಬೇಕಾಗಿದೆ. ಭದ್ರತಾ ಮಂಡಳದ ಹಿಂದಿನ ಗೊತ್ತುವಳಿಗಳನ್ನು ಪುನರುಚ್ಚರಿಸ ಬೇಕು ಎಂದು ಪಾಕಿಸ್ತಾನ ಹಟತೊಟ್ಟಿದೆ.

—ರೊಟ್ಟಿ ತುಪ್ಪಕ್ಕೆ ಬೀಳಬೇಕೆಂದು ಎಲ್ಲರೂ ಬಯಸುವುದಲ್ಲವೆ? ಆದುದರಿಂದ ಇದರಲ್ಲಿ ತಪ್ಪಿಲ್ಲವೆಂದ. ಬ್ರಿಟನ್ನು ನುಡಿದರ ಬಹುದೆ?

o o o o

ಸರಕಾರವು ಗಂಡಾಂತರ ಪರಿಸ್ಥಿತಿಯನ್ನು ದುರುಪಯೋಗ ಪಡಿಸುತ್ತಿದೆ ಎಂದು ರಾಜ್ಯ ಸಭೆಯಲ್ಲಿ ವಿರೋಧಿ ಪಕ್ಷಗಳ ಸದಸ್ಯರು ಟೀಕಿಸಿದರು.

—ಹಾಗಲ್ಲ, ಸದುಪಯೋಗ ಪಡಿಸಿಕೊಳ್ಳುತ್ತಿದೆಯೆಂದು ಗೃಹಮಂತ್ರಿ ಗುಲ್ಜಾರೀಲಾಲನಂದಾರು ಪ್ರತ್ಯೇಕ ನುಡಿಯ ಬೇಕಾದ ಅಗತ್ಯವಿಲ್ಲ.

o o o o

ಅಶೋಕ ಮೆಹತಾರವರ ಪ್ರಸವಾ ಪಕ್ಷದ ಸದಸ್ಯತ್ವವು ರದ್ದಾಯಿತು.

—ಕಾಂಗ್ರೆಸಿಗರ ಗಾಳ ಸಾರ್ಥಕವಾಯ್ತು.

o o o

ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ವಿ. ಟಿ. ಕೃಷ್ಣಮಾಚಾರಿಯವರ ನಿಧನದಿಂದ ದೇಶದ ಆಧಾರಸ್ತಂಭವೊಂದು ಕಳಚಿ ಹೋಯಿತು.

— ದೇಶದಲ್ಲಿ ಇನ್ನೆಷ್ಟು ಆಧಾರಸ್ತಂಭಗಳವೆಯೆಂಬುದರ ಬಗ್ಗೆ ಶಾನೇಶುಮಾರಿ ಮಾಡುವುದು ಅಗತ್ಯವೆನಿಸೀತೆ?

o o o

ತಾಲೂಕು ಬೋರ್ಡ್ ಮತ್ತು ಪಂಚಾಯತುಗಳ ಚುನಾವಣೆಯನ್ನು ರಾಜ್ಯ ಸರಕಾರವು ಒಂದು ವರ್ಷ ಮುಂದೂಡಿತು.

—ಅಷ್ಟರಲ್ಲೇ ಸಾರ್ವತ್ರಿಕ ಚುನಾವಣೆಗಳ ಕಾಲವೂ ಸಮೀಪವಾಯಿತು.

o o o

ಪೂರ್ವ ಪಾಕಿಸ್ತಾನದಿಂದ ನಿರಾಶ್ರಿತರು ದೊಡ್ಡ ಸಂಖ್ಯೆಯಲ್ಲಿ ಭಾರತಕ್ಕೆ ನುಗ್ಗುತಿದ್ದಾರೆ.

— ಆಶ್ರಯ ಬೇಡಿ ಬಂದವರಿಗೆ ನೀಡುವುದು ಭಾರತೀಯರ ಪರಮಧರ್ಮವಲ್ಲವೆ?.

o o o

ಅರ್ಥ ಮಂತ್ರಿಗಳು ಸಂಚಾರ ಕಾರ್ಯಕ್ರಮ ಮನ್ನಿಟ್ಟು ಕೊಂಡರು.

— ಮುಂಗಡ ಪತ್ರದಲ್ಲಿ ನೌಕರರ ವೇತನ ನೀಡಲು ಆದಾಯದ ಬಾಬಿನ ಲೆಕ್ಕಾಚಾರಕ್ಕೆ ಎಂಬುದು ಕಾರಣ ವಿರಲಾರದಲ್ಲವೆ?

o o o

ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದಲೇ ಕಲಿಗಳಲ್ಲಿ ಆಸಕ್ತಿ ವಹಿಸಬೇಕಲ್ಲದೆ ಅಧ್ಯಾಪಕರ ಒತ್ತಾಯದಿಂದಲ್ಲ—ಉಪದೇಶ.

— ಸ್ವಯಂಪ್ರೇರಣೆಯಿಲ್ಲವಾದುದರಿಂದಲೇ ಪರಪ್ರೇರಣೆಬೇಕಾಯಿತಲ್ಲವೆ?

—ಗಿಪದೇಶ.

ನಾವು—ನಮ್ಮ ಸಾಹಿತ್ಯ

೯ನೇ ಪುಟದಿಂದ

ಪಕಾರದ ಮಹಾ ಕಾರ್ಯ ಸಾಧಿಸಿದ್ದರು.

ಸಾಹಿತ್ಯವು ಶುಚಿಯಾಗಿರಬೇಕು ಗಂಗೆಯಷ್ಟು ಪವಿತ್ರವಾಗಿರಬೇಕು, ಎಂದು ಹಾರೈಸಿ ನಮ್ಮ ಪ್ರಗತಿಶೀಲ ಲೇಖಕರು, ಪುರೋಗಾಮಿ ಸಾಹಿತ್ಯ ಬ್ರಹ್ಮರು ಕೆಲವೊಮ್ಮೆ ಆಡಿಕೊಳ್ಳ ಬಾರದಂತಹದನ್ನು ಆಡಿಕೊಳ್ಳುತ್ತಾರೆ. ಮಾಡಿಕೊಳ್ಳ ಬಾರದಂತಹದನ್ನು ಮಾಡಿಕೊಳ್ಳುತ್ತಾರೆ.

ಎಂತೋ ಒಂದು ರೀತಿಯಲ್ಲಿ ನಮ್ಮ ಸಾಹಿತ್ಯವು ಬೆಳೆಯತೊಡಗಿದೆ. ನಮ್ಮ ಮನಸ್ಸು ಶುಚಿ ಅಶುಚಿಯ ಯಾವ ಕಡೆಗೆ ಬೇಕಾಗಿದ್ದರೂ ಒಲಿದಿರಲಿ ಮುಡಿ ವ್ಯಕ್ತಿಗೆಯ ಯಾವ ದೃಷ್ಟಿಕೋನಕ್ಕೆ ಒಳಪಟ್ಟು ಬೇಕಾದರೂ ಲೇಖಕರನ್ನು ನೋಡಲಿ.

ಆದರೆ ವಯಸ್ಕರಿಗೆ ಮಾತ್ರ ಎಂದು ಹಲಗೆ ತೂಗಿಸಿ, ಕಾದಂಬರಿಗಳ ಮಾರಾಟಕ್ಕೆ ಹೆಚ್ಚು ಮಹತ್ವಕೊಡಲು ಪ್ರಯತ್ನಿಸಿರುವ ನಮ್ಮ ಪ್ರಕಾಶಕರುಗಳ ಪ್ರಯತ್ನವನ್ನಂತೂ ಕೊಂಡಾಡಲೇ ಬೇಕು.

ಈ ವಯಸ್ಕರು ಯಾರು? ಪ್ರಕಾಶಕರ ದೃಷ್ಟಿಯಲ್ಲಿ ವಯಸ್ಸಾದವರು ಎಂದೇ? (ನಾವು ಹೇಳುತ್ತೇವಲ್ಲ, ಪಾಪ ಅವನಿಗೆ ವಯಸ್ಸಾಯಿತು ಎಂದು) ಇಲ್ಲವೆ ಕಾದಂಬರಿ ಓದುವಷ್ಟರ ವಯಸ್ಸಾದವರು ಎಂದೇ? ಇಲ್ಲವೇ ಈ ಮಾದರಿಯ ಕಾದಂಬರಿಗಳನ್ನು ಓದುತ್ತಲಿರುವ ಒಂದು ಗುಂಪನ್ನು ಸೂಚಿಸಿ, ವಯಸ್ಕರಿಗೆ ಮಾತ್ರ ಎಂದು ಆ ಗುಂಪಿಗೇ ಇರಿಸಿರುವ ಸಂಕೇತ ಪದವೇ?

ಇವೆಲ್ಲವುಗಳಲ್ಲಿ ಯಾವುದೋ ಒಂದು ಇರಬಹುದು, ಅಥವಾ ಎಲ್ಲವೂ ಸೇರಿಕೊಂಡು ಒಂದು ವಿಶೇಷ ಸಂಕೇತ ಆಕರ್ಷಕ ಸಂಕೇತಪದವಾಗಿದ್ದಿರಲೂ ಬಹುದು.

ಒಂದು ವಿಷಯ—

ಈಗ ಈ ಮಾದರಿಯ ಕೃತಿಗಳೇ ಹೆಚ್ಚು ಮಾರಾಟವಾಗುತ್ತಿವೆಯಂತೆ! ಆ ಲೇಖಕರೇ ಹೆಚ್ಚು ಪುಣ್ಯಶಾಲಿಗಳು!

ಇನ್ನು ನನ್ನಂತಹ ಓದುಗನ ಪುಣ್ಯ-ಪಾಪದ ಮಾತೇ?

ಇದೆ. ಆ ಮಾತೂ ಇದೆ

ಈ ಮಾದರಿಯ ಕೃತಿಗಳನ್ನು ಬರೆದು ಸೂಳೆಯರ ಪಬ್ಲಿಸಿಟಿ ಏಜೆನ್ಸಿಯ (ಲಿಮಿಟೆಡ್ ಅಲ್ಲ) ಕಮಿಷನ್ (ಇಲ್ಲವೆ ನಾನ್ ಕಮಿಷನ್)ಏಜೆಂಟರುಗಳಾಗಿ ದುಡಿಯುತ್ತಿರುವ ಲೇಖಕರ ಕೃತಿಗಳು ಪುಲುಸಾಗಿಯೂ, ಹೊಲಸಾಗಿಯೂ ಬೀದಿ ಬೀದಿಗಳಲ್ಲಿ ಕಾಣುತ್ತಿರುವನು ಕಾಣುವಭಾಗ್ಯ ನಮ್ಮ ಪಾಲಿಗಿದೆ.

ಈ ಭಾಗ್ಯವನ್ನು ಕಂಡು ಕರುಬಬೇಕೋ, ಸಂತೋಷ ವ್ಯಕ್ತ ಪಡಿಸಬೇಕೋ, ಎಂಬುದು, ಸಂಶಯದ ಮಾತೇ.

ಅಂತೂ ನಮ್ಮ ಸಾಹಿತ್ಯವು ಶೀಲಾಶ್ಲೀಲದ ಗಡಿದಾಟಿ, ನಿಂತಿದೆ ಎಂಬುದು ಸಂತೋಷದ ವಿಷಯ.

ಹುಲುಸಾಗಿ ಬೆಳೆಯುತ್ತಿರುವ ಸಾಹಿತ್ಯವು ಹೊಲಸಾಗಿ ಬೆಳೆಯುತ್ತಿದೆ ಶುದ್ಧ ನೀರು, ಹರಿಯುವ ಕೊಚ್ಚೆಯನ್ನೂ ತನ್ನೊಡನೆ ಕೂಡಿಸಿ ಕೊಂಡು, ಸ್ವಚ್ಛಗೊಳಿಸುವ ಕಾರ್ಯ ಮಾಡುತ್ತಿದೆ ಆದರೆ ಕೊಳಚೆತುಂಬಿದ ನೀರೇ ಹೆಚ್ಚಾಗಿದ್ದರೆ, ಶುದ್ಧ ನೀರಾದರೂ ಎಲ್ಲಿ ಉಳಿಯುತ್ತದೆ, ಎಂದೇ! ಒಪ್ಪ ತಕ್ಕದ್ದೆ ನಿಮ್ಮಮಾತು.

ಸರಾಗವಾಗಿ, ಸಲೀಲವಾಗಿ, ಸರಳವಾಗಿ ಹರಿದು ಬರುತ್ತಿರುವ ನಮ್ಮ ಇಂದಿನ ಮಾದರಿ ಸಾಹಿತ್ಯವು ಬೆಳೆಯುತ್ತಿದೆ ಶೀಘ್ರಗತಿಯಿಂದ ಬೆಳೆಯುತ್ತಿದೆ.

ಇದನ್ನು ಪ್ರೋತ್ಸಾಹಿಸುವುದೂ, ತಡೆಹಾಕುವುದೂ, ನಮ್ಮಿಂದ ಆಗದಷ್ಟು ವಿಚಿತ್ರವಾಗಿ ಇದು ಬೆಳೆಯುತ್ತಿದೆ.

ಈ ಮಾದರಿಯ ಸಾಹಿತ್ಯ ರಚಿಸುವವರೇ ಅನ್ನುವಂತೆ, ಈ ಕುರಿತು ಆಡುವವರ ಮನಸ್ಸೇ ಅಶ್ಲೀಲವಾಗಿರಲೂ ಬಹುದು. ಇದೂ ಸಾಧ್ಯ—ಸಾಧ್ಯ

ಶೀಲ ಮತ್ತು ಅಶ್ಲೀಲದಮಾತೇ?

ಅವರ ಸಾಹಿತ್ಯವೆಲ್ಲ ಅವರೇ ಹೇಳುವಂತೆ ಶೀಲಮಯವಾಗಿರುವಾಗ, ಅಶ್ಲೀಲವೆಲ್ಲ ಓದುಗನ ಮನಸ್ಸಿನಲ್ಲೇ ಮನೆಮಾಡಿರುತ್ತದೆ.

ಇಲ್ಲಿ 'ಶೀಲ'ಕ್ಕೇ ಪ್ರಧಾನ ಸ್ಥಾನ. ಅಶ್ಲೀಲದ ಮಾತೇ ಇಲ್ಲ, ಇಲ್ಲ.?

— ಸುದಾಸ

ನಮ್ಮ—ನಮ್ಮವರು

(೧ನೇ ಪುಟದಿಂದ)

ವರಿಗೆ ಇನ್ನೂ ಆಸಕ್ತಿ ಅಳಿದಿಲ್ಲ. ಸದ್ಯಕ್ಕೆ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಟ್ರಸ್ಟಿಗಳಲ್ಲಿ ಒಬ್ಬರಾಗಿ ಅತ್ಯಮೂಲ್ಯ ಸೇವೆಯನ್ನ ಸಲ್ಲಿಸುತಿದ್ದಾರೆ. ಶ್ರೀ ಫೆರ್ನಾಂಡೀಸರ ಮಕ್ಕಳೆಲ್ಲರೂ ಉತ್ತಮ ಉದ್ಯೋಗಗಳಲ್ಲಿದ್ದಾರೆ; ಇವರು ವಿದೇಶಯಾತ್ರೆ ಮಾಡುವ ಸುಯೋಗವನ್ನೂ ಪಡೆದಿದ್ದಾರೆ.

— —

ಸಿಂಡಿಕೇಟ್ ಬ್ಯಾಂಕು

ತನ್ನ 39ನೇ ವರ್ಷದ ಪ್ರಗತಿಪಥದಲ್ಲಿ:-

ತೆತ್ತ ಬಂಡವಾಳ	ರೂ. 80	ಲಕ್ಷ
ಖಾಯಂ ನಿಧಿ	ರೂ. 75	ಲಕ್ಷ
ಠೇವಣಾತಿ	ರೂ. 45	ಕೋಟಿಗೂ ಮಿಕ್ಕಿ
ಚಲಾವಣಾ ನಿಧಿ	ರೂ. 57	,, ,,
ಶಾಖೆಗಳು	190	

ನಮ್ಮ ಸೇವೆಗಳು—

ಪಿಗ್ಮಿ ಕ್ಯುಮುಲೇಟಿವ್ ಡಿಪಾಸಿಟ್— ಇನ್ವೆಸ್ಟರ್ಸ್ ಏಜನ್ಸಿ— ಎಕ್ಸಿಕ್ಯೂಟರ್ಸ್ ಮತ್ತು ಟ್ರಸ್ಟೀ ಸೇವೆ— ಉದ್ದಿಮೆಗಳಿಗೆ ಹಣ ಸಹಾಯ— ಇಕನಾಮಿಕ್ ಇಂಟೆಲಿಜೆನ್ಸ್ ಮತ್ತು ಕ್ರೆಡಿಟ್ ಇನ್‌ಫಾರ್ಮೇಶನ್— ವಿದೇಶಗಳಲ್ಲಿ ವಿದ್ಯಾಭ್ಯಾಸ— ವೃತ್ತಿಪರ ಶಿಕ್ಷಣ— ಮತ್ತು ಸಣ್ಣ ಉದ್ದಿಮೆದಾರರಿಗೆ ವೈಯಕ್ತಿಕ ಸಾಲಗಳು— ಸೇಫ್ ಡಿಪಾಸಿಟ್ ಲೋಕರ್ಸ್— ವಿದ್ಯಾರ್ಥಿಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ವಿಶೇಷ ಸವಲತ್ತುಗಳು— ಕರೆಸ್ಪೊಂಡೆನ್ಸ್ ಮತ್ತು ಗೈಡೆನ್ಸ್ ಸೇವೆ— ಹೊಸ ಷೇರುಗಳ ಕೊಡುವಿಕೆಯ ಆಡಳಿತೆ.

ಬೇರೆ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು.......

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

........ಜಗತ್ತಿನ ಎಲ್ಲೆಡೆಯ ಬ್ಯಾಂಕು ವ್ಯವಹಾರಗಳಿಗೆ........

Edited, Printed & Published by K. H.Shetty. at the Navayuga Press, Udipi, S. India.

VOL. 43 No. 26

ಸಂಪುಟ ೪೩ ಸಂಚಿಕೆ ೨೬

NAVAYUGA—Nationalist Weekly ‡‡ ಉಡುಪಿ 27-2-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಜಯಚಾಮರಾಜ

"ಆಧ್ಯಾತ್ಮವನ್ನು ತೊರೆದು ಕೇವಲ ರಾಜಕೀಯದ ಅಸ್ತಿತ್ವವೇ ಇರಲಾರದು" ಎಂದು ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಖಚಿತಾಭಿಪ್ರಾಯ. ಕರ್ನಾಟಕದ ರಾಜ್ಯಪಾಲ ಶ್ರೀ ಮನ್ಮಹಾರಾಜ ಜಯಚಾಮರಾಜ ಒಡೆಯರು ಆಧ್ಯಾತ್ಮ ಮತ್ತು ರಾಜಕೀಯಗಳ ನಡುವೆ ಸಮರಸವನ್ನುಂಟು ಮಾಡುತ್ತಿರುವ ಒಬ್ಬ ಮಹಾಪುರುಷರು. ಮಹಾರಾಜರಾಗಿ ಮೈಸೂರಿನ ಜನಾದರಣೆಗೆ ಪಾತ್ರರಾದವರು ರಾಜ್ಯಪಾಲರಾಗಿ ದೇಶದ ಮೆಚ್ಚುಗೆಯನ್ನು ಪಡೆದಿದ್ದಾರೆ; ದೇಶದ ತತ್ವಜ್ಞಾನದ ವಕ್ತಾರರಾಗಿ ವಿದೇಶಗಳಲ್ಲಿಯೂ ಗೌರವಾನ್ವಿತರಾಗಿದ್ದಾರೆ. ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರು ಹೇಳುವಂತೆ ಜಯಚಾಮರಾಜರು ತತ್ವಜ್ಞಾನದ ಅಭ್ಯಾಸಿ ಮಾತ್ರವಲ್ಲ; ಅದರ ಸಾಧಕರೂ ಆಗಿದ್ದಾರೆ. ಈ ಕಾರಣದಿಂದಲೇ ಉಳಿದ ರಾಜ ಮಹಾರಾಜರು ಪ್ರಜಾಪ್ರಭುತ್ವದ ಇಂದಿನ ಯುಗದಲ್ಲಿ ಅಜ್ಞಾತವಾಸವನ್ನು ಅನುಭವಿಸುತ್ತಿದ್ದರೆ, ಇವರು ಪ್ರಜಾಸತ್ತೆಯಲ್ಲೂ ಉನ್ನತ ಪದದಲ್ಲಿ ಶೋಭಿಸುತ್ತಿದ್ದಾರೆ.

ಭಾರತದ ರಾಜ ಮಹಾರಾಜರ ಬಗ್ಗೆ ಪಾಶ್ಚಾತ್ಯರಲ್ಲಿದ್ದ ದುರ್ಭಾವನೆಯನ್ನು ಜಯಚಾಮರಾಜರು ತಮ್ಮ ಸಾತ್ವಿಕ ಜೀವನಶೈಲಿಯಿಂದ ದೂರೀಕರಿಸಿದರು. ದೇಶದ ಒಳಗೆ ಯಶಸ್ವೀ ರಾಜ್ಯಪಾಲರೆಂದು ಕೀರ್ತಿಗಳಿಸಿದರು. ಅವರ ಉನ್ನತ ಮಾರ್ಗದರ್ಶನದಲ್ಲಿ ಮೈಸೂರು ಪ್ರಜಾಪ್ರಭುತ್ವ ಭಾರತ ಒಕ್ಕೂಟದಲ್ಲಿ ಲೀನವಾಯಿತು; ರಾಜಪ್ರಮುಖರಾಗಿ ಅವರು ಪ್ರಜಾಸತ್ತೆಗೆ ಹೊಂದಿಕೊಂಡು ಹೋಗುವ ತಮ್ಮ ಅಸಾಧಾರಣ ಪ್ರತಿಭೆಯನ್ನು ಪ್ರದರ್ಶಿಸಿದರು; ಈ ಕಾರಣದಿಂದಾಗಿಯೇ ಕರ್ನಾಟಕ ರಾಜ್ಯಸ್ಥಾಪನೆಗೊಂಡನಂತರ ಅದರ ರಾಜ್ಯಪಾಲರಾಗಿಯೂ ನಿಯುಕ್ತಿ ಹೊಂದಿರು. ಸಾಹಿತ್ಯ ಕಲೆ, ಧರ್ಮ, ಸಂಸ್ಕೃತಿ ಮೊದಲಾದ ಉಚ್ಚ ವಿಷಯಗಳಲ್ಲಿ ಅತ್ಯಂತಾಸಕ್ತರಾದ ಜಯಚಾಮರಾಜರ ಜಯಭೇರಿ ಇಡಿಯ ವಿಶ್ವದಲ್ಲಿಯೇ ಪ್ರತಿಧ್ವನಿತವಾಗಿದೆ. ಇವರ ಪಥಪ್ರದರ್ಶನವನ್ನು ಕನ್ನಡಿಗರೂ, ಭಾರತೀಯರೂ ಇನ್ನೂ ಬಹುಕಾಲ ಬಯಸುತ್ತಾರೆ.

ಮೈಸೂರಿನ ಮಹಾರಾಜರ ಪರಂಪರೆಯೇ ಭವ್ಯವೂ ದಿವ್ಯವೂ ಆದುದು. ಕಲಾರಾಧಕರಿಗೆ ಆಶ್ರಯದಾಯಕರು. ಸ್ವಯಂ ಮಹಾರಾಜರುಗಳೇ ಕೆಲವೊಂದು ಸಾಹಿತ್ಯ ಕೃತಿಗಳನ್ನು ರಚಿಸುತಿದ್ದರು. ಶ್ರೀ ಜಯಚಾಮರಾಜರೂ ತಮ್ಮ ಆರಾಧ್ಯ ದೇವತೆಯ ಮೇಲೆ 'ದತ್ತೋಪಾಸನೆ'ಯೆಂಬ ಅಮರಗ್ರಂಥವನ್ನೂ ರಚಿಸಿದ್ದಾರೆ. ತತ್ವಜ್ಞಾನದ ಭಂಡಾರವನ್ನಿಲ್ಲ ಇವರು ಕಡೆದಿದ್ದಾರೆ. ಭೌತಿಕತೆಯಲ್ಲೇ ಪರಮಸುಖವನ್ನು ಸವಿಯುತ್ತಿರುವ ಪಾಶ್ಚಾತ್ಯರ ಮುಂದೆ ಅದಕ್ಕೂ ಮಿಗಿಲಾದುದು ತತ್ವಜ್ಞಾನವೆಂಬುದನ್ನು ತಿಳಿಹೇಳಿ ಬೆಳಕು ಹರಿಸಿ ಅವರ ಕಣ್ಣನ್ನೂ ತೆರೆಯಿಸಿದ ವಿಭೂತಿ ಪುರುಷರು ಇವರು ಎಂದರೆ ಅದು ಯಥೋಕ್ತಿ. ಜಯಚಾಮರಾಜರು ನೂರುಕಾಲ ಬಾಳಬೇಕು; ಅವರ ಮಾರ್ಗದರ್ಶನ ರಾಜ್ಯಕ್ಕೂ ದೇಶಕ್ಕೂ ಲೋಕಕ್ಕೂ ದೊರಕಿಯಬೇಕು— ಇದು ಎಲ್ಲರ ಎದೆಯೊಳದ ಹಾರಾಸೆ.

ಟಿ. ಅನಂತ ಪೈ

ಉಡುಪಿಯ ಹೆಸರು ತಿಳಿದವರು ಶ್ರೀ ಟಿ. ಅನಂತ ಪೈಯವರನ್ನೂ ಅರಿತಿದ್ದಾರೆ. ಭಾರತದ ದೊಡ್ಡ ಹಾಗೂ ಪ್ರಸಿದ್ಧ ಬ್ಯಾಂಕುಗಳಲ್ಲಿ ಒಂದಾದ ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರೆಂದು ಮಾತ್ರ ಇವರು ಪ್ರಸಿದ್ಧರಲ್ಲ; ಶೈಕ್ಷಣಿಕ ಸಂಸ್ಥೆಗಳಲ್ಲಿ, ರಾಜಕೀಯದಲ್ಲಿ ಎಲ್ಲೆಂದರಲ್ಲಿ ಇವರದು ಎತ್ತಿದ ಕೈ. ಎಳೆ ಹರೆಯದಲ್ಲಿಯೇ ಮದ್ರಾಸಿನ ವಿಧಾನ ಸಭೆಯ ಸದಸ್ಯರಾದ ಇವರು ಜನತೆಯ ಸಮಸ್ಯೆಗಳನ್ನು ಮನನ ಮಾಡಿ, ಅವನ್ನು ಪರಿಹರಿಸುವಲ್ಲಿ ಆಸಕ್ತಿ ತಳೆದವರು. ಅವರು ಜನಪ್ರತಿನಿಧಿಯಾಗಿ ದುಡಿಯುತ್ತಿರುವಾಗಲೇ ನಮ್ಮ ಜಿಲ್ಲೆಯಲ್ಲಿ ಬೇಕಾಬಷ್ಟು ಸುಧಾರಣೆಗಳಾದುವು ಎಂಬುದನ್ನು ಯಾರೂ ಮರೆಯಲಾರರು. ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸಿನ ಅಧ್ಯಕ್ಷರಾಗಿ ಪೈಯವರು ಕಾಂಗ್ರೆಸ್ ಸಂಸ್ಥೆಯ ಸಂಘಟನೆಗಾಗಿ ಶಕ್ತಿಮೀರಿ ದುಡಿದಿದ್ದಾರೆ ನಿಷ್ಠಾವಂತ ಕಾಂಗ್ರೆಸಿಗರಾಗಿ ಪಕ್ಷದ ಉನ್ನತಿಯನ್ನೂ ಜನರ ಸಂಕಟ ಪರಿಹಾರವನ್ನೂ ಹಾರೈಸುತಿದ್ದಾರೆ. ಯಾವ ರೀತಿಯಿಂದ ಜನಕಲ್ಯಾಣವಾಗಬಹುದೆಂಬುದನ್ನು ಅಭ್ಯಸಿಸಿ, ಅದನ್ನು ವ್ಯವಹೃತಗೊಳಿಸುವ ಶಕ್ತಿ ಇವರಲ್ಲಿದೆ.

ಉದಾರರೂ ಸರಳರೂ ಆದ ಅನಂತ ಪೈಯವರು ಕಾರ್ಯಕುಶಲರು. ಎಲ್ಲರನ್ನೂ ಹೊಂದಿಸಿಕೊಂಡು ಒಳ್ಳೆಯ ಕಾರ್ಯಗಳನ್ನು ಸಾಧಿಸುತ್ತಿರುವ ಸಮಾಜಸೇವಕರು. ಬ್ಯಾಂಕಿಂಗ್ ದ್ದಿನೆಯಲ್ಲಿ ಇವರದು ಎತ್ತಿದ ಕೈ. ಸಣ್ಣ ಚಿಕ್ಕದೊಡ್ಡ ಬ್ಯಾಂಕುಗಳನ್ನು ಸಿಂಡಿಕೇಟಿನೊಂದಿಗೆ ವಿಲೀನಗೊಳಿಸಿ ವಿಶಾಲ ಬ್ಯಾಂಕಿಂಗ್ ಸೌಕರ್ಯವನ್ನು ಜನಕೋಟಿಗೊದಗಿಸಿದ ಕಾರ್ಯಕರ್ತರು ಇವರು. ಒಳ್ಳೆಯದನ್ನು ಆಲೋಚಿಸಿ, ಒಳ್ಳೆಯದನ್ನು ಸಾಧಿಸುವ ಒಳ್ಳೆಯಾತನೆ ಪೈಯವರಲ್ಲಿ ಮಾತ್ರ ವಿಡಿಯೆಂದರೆ ತಪ್ಪಾಗಲಾರದು. ಸದಾ ನಗುಮೊಗದವರಾದ ಇವರು ತಮ್ಮ ನಗುವಿನಿಂದಲೇ ಎಲ್ಲರನ್ನೂ ಸ್ವಾಗತಿಸುತ್ತಾರೆ; ಮತ್ತು ಅದೇ ನಗುವಿನಿಂದ ಮಾತಾಡುತ್ತಾರೆ, ಬೀಳ್ಕೊಳ್ಳುತ್ತಾರೆ. ಒಂದು ವಿಶೇಷವೆಂದರೆ, ಆ ನಗು ಸ್ವಾಭಾವಿಕ ಮತ್ತು ಮುಗ್ಧ ಮನೋಹರ. ನಗುವೇ ಸಹಜದ ಧರ್ಮ ನಗಿಸುವುದು ಸದ್ಧರ್ಮ' ವೆಂಬುದನ್ನು ಇವರು ಕಾರ್ಯ ರೂಪಕ್ಕಿಳಿಸುತ್ತಾರೆ.

ಶ್ರೀ ಅನಂತ ಪೈಯವರಲ್ಲಿ ಅಪಾರ ಯೋಗ್ಯತೆಯಿದೆ; ಕ್ರಿಯಾಪಟುತ್ವವಿದೆ ಪ್ರಜಾಪ್ರಭುತ್ವದಲ್ಲಿ ಇಂತಹ ಸಮಾಜ ಹಿತಚಿಂತಕರು ಪ್ರಶಾಸನದಲ್ಲಿ ಕೈ ಹಾಕಿದರೆ, ದೇಶದ ಆರೋಗ್ಯಕ್ಕೆ ಉತ್ತಮ. ವಿಧಾನ ಸಭೆಯ ಸದಸ್ಯರಾಗಿ ಅವರು ಜನತೆಯ ಆಶೆ ಆಕಾಂಕ್ಷೆಗಳನ್ನು ಪೂರೈಸುವಲ್ಲಿ ಕೆಲವು ವರ್ಷಗಳಿಗೆ ಮೊದಲು ದುಡಿದಿದ್ದಾರೆ. ಕೆಲಸ ಮಾಡುವವರಿಗೆ ಅಧಿಕಾರ ಇಲ್ಲವೇ ಪದವಿಯ ಅಗತ್ಯವಿಲ್ಲ ನಿಜ; ಶ್ರೀ ಪೈಗಳೂ ಅದನ್ನು ಬಯಸುವುದಿಲ್ಲ. ಆದರೆ ಇವರಂತಹ ಆದರ್ಶ ವ್ಯಕ್ತಿಗಳಿಗೆ ರಾಜಕೀಯ ಪದವಿಯೂ ದೊರೆಯಿತೆಂದರೆ, ಬಂಗಾರಕ್ಕೆ ಪರಿಮಳ ಬಂದಂತಾಗುವುದು. ಆದುದರಿಂದ ಶ್ರೀ ಪೈಯವರು ಭಾರತದ ಸಂಸತ್ತಿನ ಯಾವುದಾದರೊಂದು ಸಭೆಯ ಸದಸ್ಯರಾದರೆಂದರೆ, ಜನತೆಗೆ ತುಂಬ ಅನುಕೂಲವಿದೆ. ನಮ್ಮ ಜಿಲ್ಲೆಯ ಜನತೆ ಇದನ್ನು ಬಯಸುತ್ತದೆ; ರಾಜ್ಯದ ಜನರಾಶಿ ಇದನ್ನು ಬೆಂಬಲಿಸುತ್ತದೆ.

ಬಿ. ಜಗಜ್ಜೀವನದಾಸ ಶೆಟ್ಟಿ

ಕಲ್ಯಾಣಪುರ ಮತ್ತು ಮಾಬುಕಳ ನದಿಗಳಿಗೆ ಸೇತುವೆಯಾಗುವುದರಿಂದ ಇಂದು ಮಂಗಳೂರಿನಿಂದ ಕುಂದಾಪುರದವರೆ

(ಆನೇ ಪುಟ ನೋಡಿರಿ)

ಧಾರಾವಾಹಿ ಕಥೆ

ಆ ಹೆಂಗಸು....

ಬರೆದವರು: ಶ್ರೀಮತಿ ದೇವಕಿ ಡಾ| ಎಂ. ಶೆಟ್ಟಿ, ಬೀರೂರು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಅಲ್ಲಿಂದ ಮತ್ತೆ ಅವ್ವತನ ಮಾತಿನಲ್ಲೇ ಬರೆಯುತ್ತೇನೆ.

"ನಾವು ನಮ್ಮ ಮನೆಬಿಟ್ಟು ಅರ್ಧ ಮೈಲು ಬಂದಿರಬೇಕು. ಅಬ್ಬಾ ಅಲ್ಲಿಯ ದೃಶ್ಯ ಕಣ್ಣಿಂದ ನೋಡುವಂತಹದೇ ಅಲ್ಲ. ಜನ ಸಾಲು ಸಾಲಾಗಿ ದೊಂಬಿಗಳೊಂದಿಗೆ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದರು. ಕೆಲವು ಮನೆಗಳು ಹೊತ್ತಿಕೊಂಡು ಉರಿಯುತ್ತಿದ್ದವು. ಜನಗಳ ಓಡಾಟ, ಚೀರಾಟ, ಗಲಭೆ, ಗದ್ದಲ, ಅಂದಿನ ತನಕ ಏನೊಂದನ್ನೂ ನೋಡದ ನನಗೆ ಹೃದಯ ಕ್ರಿಯೆಯನ್ನು ನಿಲ್ಲಿಸುವಂತಿತ್ತು. ಹಿಂದೂಗಳದಾಗಿದ್ದ ಅಂಗಡಿಗಳನ್ನೆಲ್ಲ ಮುಸಲ್ಮಾನರು ಆಕ್ರಮಿಸಿದ್ದರು. ವಿರೋಧಿಸಿದವರ ಮನೆ, ಮಠ ಪ್ರಾಣಗಳಿಗೆ ಆ ಕೂಡಲೇ [illegible] ತ್ತು. [illegible] ಜನಗಳು [illegible] ನರಕ [illegible] ನೋಡಿದ್ದೇ ನಮ್ಮ ತಾಯಿ ತಂದೆಯ ಮತ್ತು ನನ್ನ ಅಜ್ಜನ ಬಗ್ಗೆ ಆತಂಕದಿಂದ [illegible] ತಪ್ಪಿದರು.

"ನಮ್ಮ ಕಾರುಗಳನ್ನು ಯಾರೋ ಗುರುತಿಸಿರಬೇಕು. ಮುಂದಿದ್ದ ನಮ್ಮ ಕಾರಿಗೆ ಯಾರೋ ಗುರಿಯಿಟ್ಟು ಹೊಡೆದಿರಬೇಕು. ಆ ಗುರಿ ತಪ್ಪಿ ನಮ್ಮ ಹಿಂದುಗಡೆಯಿಂದಲೇ ಬರುತಿದ್ದ ನಮ್ಮ ಚಿಕ್ಕಪ್ಪನ ಸೋದರ ಮಾವನ ಕಾರಿನ ಟಯರಿಗೆ ತಾಗಿರಬೇಕು. ನಮಗೆ ಟಯರ್ ಒಡೆದ ಸದ್ದು ಕೇಳಿಸಿತು. ಮಾವ ಕಾರು ಫಕ್ಕನೆ ನಿಲ್ಲಿಸಿದರು. ಹಿಂದೆ ನೋಡಿದರು. ನಮ್ಮ ಮಾವನ ಕಾರು ನಿಂತಿತ್ತು. ನನ್ನ ಚಿಕ್ಕ ತಮ್ಮ ಆತುರದಲ್ಲಿ ಹೊರಗಿಣುಕಿದಾಗ ಎಲ್ಲಿಂದಲೋ ಒಂದು ಗುಂಡು ಅವನ ತಲೆಗೆ ಬಡಿಯಿತು.

ಹಿಂದಿನ ಕಾರಿನಲ್ಲಿದ್ದವರ ಪೈಕಿ ಯಾರು ಉಳಿದರೋ, ಅಳಿದರೋ, ಅಂತೂ ಮುಂದಿನ ಕಾರಿನಲ್ಲಿದ್ದ ನನ್ನ ತಮ್ಮ ತಲೆಯಿಂದ ರಕ್ತ ಸುರಿಸುತ್ತಾ ಒಂದು ಗಡೆ [illegible]. ನಾವೆಲ್ಲ ಒಮ್ಮೆಲೇ ಕಿರುಚಿದೆವು.

ನಮ್ಮ ಚಿಕ್ಕ ಮಾವನಿಗೇನಾಯಿತೋ ಏನೋ, ಅವರು ಹಿಂದುಮುಂದಿನದನ್ನು ಯೋಚಿಸದೆ, ಒಂದುಕ್ಷಣ ಒಟ್ಟಿಯಿಂದ ಕಣ್ಣುಗಳನ್ನು ಒತ್ತಿಹಿಡಿದ, ಕಾರನ್ನು ಗಂಟೆಗೆ 50—60 ಮೈಲು ವೇಗದಿಂದ ಓಡಿಸಿದರು. ಅಮ್ಮ ಮತ್ತು ತಾತನಿಗೆ ಪ್ರಜ್ಞೆಯೇ ಇರಲಿಲ್ಲ.

ಹದಿಮೂರು ತುಂಬಿದ ನಾನು ಗಾಬರಿ ಭಯದಿಂದ ಜೋರಾಗಿ ಅಳುತ್ತಿದ್ದೆ. ನನ್ನ ಚಿಕ್ಕ ತಮ್ಮ ಎರಡು ವರ್ಷದವನು ಏನೊಂದೂ ತಿಳಿಯದೆ, ಕಾರಿನೊಳಗಿನ ಇಕ್ಕಟ್ಟಿಗೂ, ರೋದನಕ್ಕೂ ನಮ್ಮೆಲ್ಲರಿಗಿಂತ ಜೋರಾಗಿ ದನಿ ಎತ್ತಿದ್ದ. ನಮ್ಮತ್ತೆಯೂ, ಅವರ ಮಗಳೂ ಒಂದು ಕಡೆ ಅಳುತ್ತಿದ್ದರು

ಮಾವ ಕಾರನ್ನು ಯಾವ ಕಾರಣಕ್ಕಾಗಿಯೂ ನಿಲ್ಲಿಸುವಂತಿರಲಿಲ್ಲ. ಅದನ್ನು ಜೋರಾಗಿ ಓಡಿಸುತ್ತಲೇ ಮಾವ ಅಂದರು

"ಯಾಕೆ ಕಿರಿಚಿಕೊಳ್ತಾ ಇದ್ದೀರಾ? ಈಗಿರುವ ನಾವು ಇನ್ನೊಂದು ಗಳಿಗೆಗೆ ಜೀವಂತ ಸಮಾಧಿಯಾಗುತ್ತೇವೆ."

ಆದರೆ ದೂರದಲ್ಲಿರುವ ಅಪ್ಪ ಅಣ್ಣನ ಮಾತಂತಿರಲಿ. ಕಣ್ಣೆದುರಿಗೇ ತಲೆಯಿಂದ ರಕ್ತ ಸುರಿಸುತ್ತಾ ಪ್ರಾಣ ನೀಗಿದ ತಮ್ಮನ ದೇಹವನ್ನು ನೋಡು ನೋಡುತ್ತಾ ಕಿರುಚಿಕೊಳ್ಳದೆ ಇರಲು ಸಾಧ್ಯವೆ? ಅಂತಹ ಪರಿಸ್ಥಿತಿಯಲ್ಲಿಯೂ ನಮ್ಮ ಎದೆ ಒಡೆದು ಹೋಗದೆ ಯಾಕಾದರೂ ಉಳಿಯಿತು? ಅದು ಹೇಗೆ ನಾವು ಜೀವ ಇಟ್ಟುಕೊಂಡಿದ್ದೆವೊ! ಆರು ವರ್ಷಗಳಿಂದಲೂ ಅವನ ಜತೆಗೆ ಆಟ ನಾಟಗಳಲ್ಲಿ ನಕ್ಕು ನಲಿವುದರಲ್ಲಿ ಪಾಲುಗಾರಳಾಗಿದ್ದ ನಾನೇ. ನನ್ನನ್ನು ಅವನೂ ಅವನನ್ನು ನಾನೂ ಒಂದು ದಿನವೂ ಅಗಲಿ ಇದ್ದವರಲ್ಲ. ನಮ್ಮ ಪ್ರೀತಿಯನ್ನು ನೋಡಿಯೇ ಆ ಭಗವಂತನು ನಮ್ಮೆಲ್ಲರ ಒಗ್ಗೆಯೂ ಕಣ್ಣುಗಳನ್ನು ಕುರುಡಾಗಿಸಿಕೊಂಡಿರುವ ಆತ ನನ್ನನ್ನು, ನಮ್ಮ ದುಃಖ ಸಾಲದೆಂಬಂತೆ ಅಗಲಿಸಿದನು"

ಮಾತು ಅಷ್ಟಕ್ಕೆ ನಿಲ್ಲಿಸಿ ಆಕೆ ಬಿಕ್ಕಿ ಬಿಕ್ಕಿ ಅತ್ತಳು. ನಾವೂ ಕಣ್ಣಿಗೆ ಸೆರಗು ಒತ್ತಿ ಹಿಡಿದೆವು. ಸ್ವಲ್ಪ ಸುಧಾರಿಸಿಕೊಂಡು ಆಕೆ ಮುಂದುವರಿಸಿದಳು:

"ನನ್ನ ಮಾವ ಜೀವದ ಹಂಗು ತೊರೆದು ಕಾರನ್ನು ವೇಗವಾಗಿ ಓಡಿಸುತ್ತಿದ್ದರು ಅವರ ಪ್ರಾಣದ ಯೋಚನೆಯೂ ಅವರಿಗಿದ್ದಂತಿರಲಿಲ್ಲ. ಮತ್ತೆ ಇನ್ನುಳಿದವರು ಬದುಕುವುದರಲ್ಲೂ ಅವರಿಗೆ ಯೋಚನೆ ಇದ್ದಂತಿರಲಿಲ್ಲ. ಕಾರನ್ನು ಬೇಕೆಂದೇ ಯಾವುದಾದರೂ ಮರಕ್ಕೆ ಢಿಕ್ಕಿ ಹೊಡೆದೋ, ಯಾವುದಾದರೂ ಪ್ರಪಾತದಲ್ಲಿ ಕೆಡವಿಯೋ, ಯಾವುದಾದರೂ ನದಿಯಲ್ಲಿ ಮುಳುಗಿಸಿಯೋ ಕಾರಿನಲ್ಲಿದ್ದ ನಮ್ಮೆಲ್ಲರೊಂದಿಗೆ ಪ್ರಾಣ ನೀಗಿ, ಇಷ್ಟು ದಿನ ನಡೆದ ಇಂತಹ ಖೂನಿ, ಕೊಲೆಗಳಲ್ಲಿ ಪ್ರೇತವಾದವರೊಂದಿಗೆ ಪ್ರೇತವಾಗಿ, ಭಯಂಕರ ಪಿಶಾಚಿಯಾಗಿ, ಪೆಡಂಭೂತವಾಗಿ ಈ ಪಂಜಾಬಿನ ದುಷ್ಟ ನರ ರಕ್ಕಸರನ್ನು ಚಿತ್ರಹಿಂಸೆಯಿಂದ ಕಾಡಿಸಿ ಪೀಡಿಸಿ ರಕ್ತ ಹೀರಬೇಕು ಎಂಬಂತಿತ್ತು ಅವರ ವರ್ತನೆ. ನಮ್ಮ ತಾತನೆಂದರು

"ನಿನ್ನ ಮನಸ್ಸಂತೂ ಸರಿಯಿಲ್ಲ. ಆಗುವುದಂತೂ ಆಗಿಯೇ ಹೋಗುತ್ತದೆ. ನಮ್ಮವರು ಎಲ್ಲೆಲ್ಲಿ ಏನಾದರೋ, ಆದರೆ ಈಗ ನಾವಾದರೂ ಏನು ಮಾಡಲು ಸಾಧ್ಯ ಹೇಳು. ಹೇಗೂ ಬಹವಾಲ್‌ಪುರ ದಾಟಿ ಬಂದಿದ್ದೇವೆ. ಹಿಂದೂಸ್ತಾನ—ಪಾಕಿಸ್ತಾನಗಳ ಗಡಿಯಲ್ಲಿ ಘರ್ಷಣೆ ಹೇಗಿದೆಯೋ. ಮಕ್ಕಳು ಹೆಂಗಸರೆಲ್ಲ ಸೋತಿದ್ದಾರೆ. ಇಲ್ಲಿ ನಮ್ಮ ಅಪ್ಪ ಗೆಳೆಯರಾದ ದಿಲೇರ್‌ಖಾನರ ಮನೆಯಿದೆ. ಅಲ್ಲಿ ಎರಡು ಗಂಟೆ ಆಶ್ರಯ ಪಡೆದು ಅವರ ಸಹಾಯದಿಂದ ಯಾರಾದರೊಬ್ಬ ಹಿಂದೂ ಡ್ರೈವರ್‌ನನ್ನು ಕರಕೊಂಡು ಹೋಗೋಣಪ್ಪ. ನಿನ್ನಿಂದಂತೂ ಈ ಪರಿಸ್ಥಿತಿಯಲ್ಲಿ ದಿಲ್ಲಿಯನ್ನು ಅಪಾಯವಿಲ್ಲದೆ ಸೇರುವದು ಸಾಧ್ಯವೆನಿಸುವುದಿಲ್ಲ. ನೀನು ಕಾರು ಓಡಿಸುವುದನ್ನು ನೋಡಿದರೆ ನಾವು ಮುಸಲ್ಮಾನರ ಕೈಗೆ ಸಿಕ್ಕಿ ಸಾಯುವುದಕ್ಕಿಂತಲೂ ಭಯಂಕರವಾದ ಸಾವನ್ನು ನೋಡಲಿದೆಯೋ ಏನೋ" ಎಂದರು ದುಃಖದಿಂದ. ಆಗ ಮಾವ ಒಮ್ಮೆಗೇ ಕಾರು ನಿಲ್ಲಿಸಿ,

"ಏನೇನು? ಇನ್ನೂ ಮುಸ್ಲಿಂ ಗೆಳೆಯನೇ? ಆಹಾ, ನಿಮ್ಮ ಯೋಚನೆಯೇ. ಉಳಿದಿರುವ ನಾವು ಎಂತಹ ಭಯಂಕರ ಸಾವನ್ನಪ್ಪಿದರೂ ಚಿಂತಿಲ್ಲ. ಆದರೆ ಮುಸ್ಲಿಂರ ಆಶ್ರಯಕ್ಕೆ ಹೋಗುವುದೂ ಒಂದೇ, ಹಸಿದ ಹುಲಿಯ ಬೋನಿನೊಳಗೆ ನುಗ್ಗುವುದೂ ಒಂದೇ. ನಮ್ಮ ಪರಿಸ್ಥಿತಿಯ ಅರಿವು ನಿನಗೆ ಮರೆತೇ ಹೋಯಿತೇ. ನಾವು ದೇವರನ್ನು ನೋಡಲು ದೇವಸ್ಥಾನ ಹೊಕ್ಕರೆ ದೇವಸ್ಥಾನವೇ ನಮ್ಮ ಮೇಲೆ ಹಂದು ಬಿದ್ದೀತು. ದೇವರೂ ಈಗ ನಮ್ಮ ಪಾಲಿಗೆ ಇಲ್ಲವಾಗಿದ್ದಾನೆ. ಈಗ ನಮ್ಮ ದೇವರು ಬೇಡುವುದು ರಕ್ತವನ್ನು, ನಾವಷ್ಟು ದುರ್ದೈವಿಗಳಾಗಿದ್ದೇವೆ. ರೊಚ್ಚಿಗೆದ್ದಿರುವ ಪಿಶಾಚಿಗಳಾಗಿರುವ, ರಕ್ಕಸರಂತಿರುವ ಯಾವ ಮುಸಲ್ಮಾನ ಈಗ ನಮ್ಮನ್ನು ನೋಡಿದರೂ ಒಂದು ನರಪಿಳ್ಳೆಯೂ ಉಳಿಯದಂತೆ ನಮ್ಮ ಬಲಿಯನ್ನು ತೆಗೆದುಕೊಳ್ಳುತ್ತಾನೆ. ನಮ್ಮ ಹೆಂಗಸರ ಮತ್ತು ನಮ್ಮ ಮಾನ, ಪ್ರಾಣಗಳೆರಡನ್ನೂ ಕಳಕೊಳ್ಳುವ ಬದಲು, ನಮ್ಮ ಪ್ರಾಣಗಳೇ ಹೋಗಲಿ. ಯಾವುದಾದರೂ ಪರ್ವತ ಮಾರ್ಗವಾಗಿ ಹೋಗಬೇಕೆಂದೇ ಕಾರನ್ನು ಕೆಳಗೆ ತಳ್ಳಿ ದೇವರ ಹೆಸರಿನಿಂದಲೇ ಸಾಯೋಣ. ಇಲ್ಲದಿದ್ದರೆ ನಾನೇನಾದರೂ ಜೀವಂತ ಗಡಿ ದಾಟಿದರೆ, ನನ್ನ ಜೀವ ಹೋಗುವ ತನಕ ಕೈಗೆ ಸಿಕ್ಕಿದ ಈ ರಾಕ್ಷಸ ಜಾತಿಯವರನ್ನು ತುಂಡರಿಸುತ್ತಲೇ ಇರುತ್ತೇನೆ. ಅಯ್ಯೋ ಭಗವಾನ್ ನನ್ನ..." ಆಗ ಸ್ವಲ್ಪ ಹೊತ್ತು ಕಾರು ನಿಲ್ಲಿಸಿ ಸ್ಟಿಯರಿಂಗ್‌ನ ಮೇಲೆ ತಲೆ ಇಟ್ಟು ಬಿಕ್ಕಿ ಬಿಕ್ಕಿ ಅತ್ತರು ನನ್ನ ಮಾವ. ಆಗ ಕಾಡು ಮಾರ್ಗದಲ್ಲಿದ್ದೆವು ಸ್ವಲ್ಪ ಹೊತ್ತು ಬಿಟ್ಟು ಕಾರನ್ನು ಜೋರಾಗಿ ಓಡಿಸಿದರು. ನಮಗಾದರೂ ಜೀವದ ಮೇಲೆ ಇದ್ದ ಆಶೆ ಆಗ ಅಷ್ಟಕಷ್ಟೇ.

ಅಷ್ಟು ಹೊತ್ತಿಗೆ ನನ್ನ ಅತ್ತೆ ಒಂದೇ ಸಮನೆ ನಡುಗುತ್ತಿದ್ದರು, ತೊಡೆಯ ಮೇಲೆ ಮಲಗಿದ್ದ ಅವರ ಮಗಳ ಅರಿವೂ ಅವರಿಗಿದ್ದಂತಿರಲಿಲ್ಲ. ಅವರು ಅಳುತ್ತ ಇರಲಿಲ್ಲ. ಆಗ ಅವರ ಸ್ಥಿತಿಯನ್ನು ಗಮನಿಸಿದ ನನ್ನ ತಾತ ನನ್ನ ಅತ್ತೆಯ ತಲೆಯನ್ನು ಮುಟ್ಟಿ ನೋಡಿದರೆ ಅದು ಕೆಂಡದಂತೆ ಸುಡುತ್ತಿತ್ತು. ಆಗ ಏನೂ ಮಾಡುವಂತಿರಲಿಲ್ಲ. ಸುಮ್ಮನೇ ಇರುವುದೊಂದೇ ದಾರಿಯಾಗಿತ್ತು. ಅವರ ಮಗಳನ್ನು ತಾತ ತಮ್ಮ ಕಾಲ ಮೇಲೆ ತೆಗೆದುಕೊಂಡರು. ತಮ್ಮ ಬಳಿಯಿದ್ದ ರಗ್ಗೊಂದನ್ನು ನಮ್ಮ ಅತ್ತೆಯ ಮೇಲೆ ಹೊದಿಸಿದರು. ಸ್ವಲ್ಪ ಇದ್ದಲ್ಲೇ ಒತ್ತಿಕುಳಿತು ಅವರನ್ನು ಇದ್ದುದರಲ್ಲೇ ಸ್ವಲ್ಪ ಸುಖವೆನಿಸುವಂತೆ ಮಲಗಿಸಿದೆವು. ನನ್ನ ತಾಯಿಯಂತೂ ಅವಳ ಇಚ್ಛೆಗೆ ಬೇಕಾದಂತೆ ಒಂದು ಕಡೆ ಒರಗಿಕೊಂಡಿದ್ದಳು. ಒರಗಿದ್ದೇನು ಬಿದ್ದುಕೊಂಡಿದ್ದಳು.

"ಅಬ್ಬಾ! ನಮ್ಮ ಆಗಿನ ಅವಸ್ಥೆಯೇ! ನೆನಸಿಕೊಂಡರೆ ಮೈ ಜುಂ ಎನ್ನು

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುತ್ತದೆ.

ಲಘು ಪ್ರಬಂಧ

ನನ್ನ ಪುಸ್ತಕ ಭಂಡಾರ

ಬರೆದವರು: ಶ್ರೀ ಕೃಷ್ಣ ಭಟ್, ಬಿ. ಎಸ್‌ಸಿ.

ಪುಸ್ತಕ ಭಂಡಾರ ಅಥವಾ ಪುಸ್ತಕಾಲಯ ಎಂದರೆ ಎಲ್ಲರಿಗೂ ಗೊತ್ತು ನಿಜ. ಆದರೆ ನಾನೀಗ ಬರೆಯುತ್ತಿರುವುದು ಹಾಗೆ ಎಲ್ಲರಿಗೂ ಗೊತ್ತಿರುವ ಪುಸ್ತಕಾಲಯದ ಕುರಿತು ಖಂಡಿತವಾಗಿಯೂ ಅಲ್ಲ. ನಾನು ಬರೆಯುವುದು ನನ್ನ ಸ್ವಂತ ಪುಸ್ತಕಾಲಯದ ಕುರಿತು.

ನನ್ನ ಪುಸ್ತಕ ಭಂಡಾರವು ಒಂದು ಕಡೆಯಿಂದ ಬೆಳೆಯುತ್ತಿದ್ದರೆ ಮತ್ತೊಂದು ಕಡೆಯಿಂದ ಕ್ಷೀಣವಾಗುತ್ತಿದೆ. ದಿನ ಹೋದಂತೆ ಅದು ಬತ್ತಿ ಬಡಕಲಾಗುತ್ತಿದೆ. ಅದರ ರೋಗ ತಿಳಿದಿದೆ; ಮದ್ದು ಮಾತ್ರ ತುಸು ಕಷ್ಟದ್ದು. ನನ್ನ ತಿಳುವಳಿಕೆಯಂತೆ ಹೇಳುವುದಾದರೆ, ಇದರ ಪರಿಣಾಮವಾಗಿ ಬೇರೆಯವರ ಪುಸ್ತಕ ಭಂಡಾರ ಬೆಳೆಯುತ್ತಿದೆ--ಸಾಹುಕಾರರ ಹೊಟ್ಟೆ ಬೆಳೆದಂತೆ.

ಬಹುಶಃ ಬರ್ನಾರ್ಡ್ ಶಾರ ಕುರಿತು ಎಂದು ಕಾಣುತ್ತದೆ. ಹೀಗೊಂದು ಕತೆ ಇದೆ. ಶಾರಲ್ಲಿ ನೂರಾರು ಪುಸ್ತಕಗಳು ಅಸ್ತವ್ಯಸ್ತವಾಗಿ ಬಿದ್ದಿದ್ದವಂತೆ. ಗೆಳೆಯರು ಒಮ್ಮೆ ಬಂದವರು ಇದನ್ನು ನೋಡಿ ಹೇಳಿದರಂತೆ "ಅಯ್ಯಾ, ಇಷ್ಟೆಲ್ಲ ಪುಸ್ತಕಗಳನ್ನು ಇದೇಕೆ ಹೀಗೆ ಸಿಕ್ಕಾಬಟ್ಟೆ ಎಸೆದಿರುವೆ? ಒಂದು ಕಪಾಟು ತಂದು ಅದರಲ್ಲಿ ಚಂದವಾಗಿ ಇರಿಸಬಾರದೇ?" ಎಂದು. ಆಗ ಶಾರು ನಕ್ಕು ನುಡಿದರು: "ಅಹುದು, ನೀವು ಹೇಳುವುದು ಸರಿ. ಆದರೆ, ಪುಸ್ತಕಗಳನ್ನು ಕೈಗಡ ಕೊಡುತ್ತಾರೆಯೇ ಹೊರತು ಕಪಾಟನ್ನು ಯಾರೂ ಕೈಗಡವಾಗಿ ಕೊಡುವುದಿಲ್ಲ!

ನನ್ನ ಪುಸ್ತಕ ಭಂಡಾರಕ್ಕೂ ಇದೇ ರೀತಿಯ "ಎರವಲು" ರೋಗ ತಗಲಿದೆ. ಆದರೆ ಅದೀಗ ಉಲ್ಬಣಿಸಿ, "ಸೀರಿಯಸ್ ಕೇಸ್" ಆಗಿಬಿಟ್ಟಿದೆ. ನನ್ನಿಂದ ಪುಸ್ತಕ ಎರವಲು ಕೊಂಡುಹೋದವರು ಎಷ್ಟೋ ಮಂದಿ. ಆದರೆ ಹಿಂದೆಕೊಟ್ಟವರ ಸಂಖ್ಯೆ ಮಾತ್ರ ತುಂಬ ಕಡಿಮೆ. ಇಷ್ಟೆಲ್ಲಾ ಜನರಿಗೆ ಪುಸ್ತಕ ಎರವಲು ಕೊಟ್ಟರೂ ಕಪಾಟನ್ನು ಇದುವರೆಗೆ ನಾನು ಯಾರಿಗೂ ಎರವಲು ಕೊಟ್ಟಿಲ್ಲ. ಯಾರೂ ಅದನ್ನು ಕೇಳಿಲ್ಲ ಕೂಡ. ಇದನ್ನು ಓದುತ್ತಿರುವ ನೀವು ಇಷ್ಟರಲ್ಲೇ ಎಣಿಸಿರಬಹುದು—ಈತನ ಸುತ್ತ ಹಲವಾರು ಮಂದಿ ಬರ್ನಾರ್ಡ್ ಶಾರು (ಪುಸ್ತಕ ಕೊಂಡು ಹೋಗುವುದರಲ್ಲಿ ಮಾತ್ರ) ಸೇರಿಕೊಂಡಿದ್ದಾರೆ ಎಂದು. ನನಗೂ ಹಾಗೆಯೇ ಎನಿಸುತ್ತದೆ. ಶಾರು ಆ ಪುಸ್ತಕಗಳನ್ನು ಮತ್ತೆ ಹಿಂದೆ ಕೊಟ್ಟಿರಲೂ ಬಹುದು. ಆದರೆ ನನ್ನ ಸುತ್ತಲಿನ ಶಾರು ಇದುವರೆಗೂ ಹಾಗೆ ಮಾಡಿಲ್ಲ. ಅವರು ಹಾಗೆ ಮಾಡಿದಂದು ನನಗೆ ಪುಸ್ತಕ ಬಂದೀತು, ಅವರಿಗೂ ಪುಣ್ಯ ಬಂದೀತು.

ಹಾಗೆಂದು ನಾನು ಕೊಟ್ಟ ಪುಸ್ತಕಗಳು ಹಿಂದಿರುಗುವುದೇ ಇಲ್ಲ—ಎಂದು ನಾನು ಹೇಳಲಾರೆ. ಎಷ್ಟೋ ಜನರು ತಾವು ಕೊಂಡು ಹೋದ ಪುಸ್ತಕಗಳನ್ನು ಓದಿ ಜಾಗ್ರತೆಯಾಗಿ ಹಿಂದಿರುಗಿಸುತ್ತಾರೆ. ಅಂತಹವರಿಗೆ ಪುಸ್ತಕ ಕೊಡಬೇಕಾದುದು ನಮ್ಮ ಕರ್ತವ್ಯ ಎಂದರೂ ತಪ್ಪಲ್ಲ. ನಾನೂ ನನ್ನಲ್ಲಿಲ್ಲದ ಎಷ್ಟೋ ಪುಸ್ತಕಗಳನ್ನು ಆ ರೀತಿ ತಂದುದುಂಟು. ಅಂತಹವರ ಕುರಿತು ನಾನು ಈ ಪ್ರಬಂಧವನ್ನು ಬರೆದುದಲ್ಲ. ಪುಸ್ತಕ ಹಿಂದಿರುಗಿಸದವರು ಮತ್ತು ಅವುಗಳನ್ನು ಪ್ರಾಣಾಪಾಯಕ್ಕೆ ಗುರಿಮಾಡಿ ಹಿಂದಿರುಗಿಸುವವರು__ ಈ ಎರಡು ವರ್ಗದವರೇ ನಾನು ಈ ಪ್ರಬಂಧವನ್ನು ಬರೆಯುವಂತೆ ಮಾಡಿದವರು

ಪ್ರಾಣಾಪಾಯಕ್ಕೆ ಗುರಿಯಾಗಿ ಹಿಂತಿರುಗುವ ಪುಸ್ತಕಗಳನ್ನು ಕಾಣುವಾಗ ಯುದ್ಧರಂಗದಿಂದ ಮರಳಿದ ಸೈನಿಕರ ನೆನಪಾಗುತ್ತದೆ. ಬರುವಾಗ ಒಂದು ಕೈ ಅಥವಾ ಕಾಲು ಊನ ಇಲ್ಲವಾದರೆ ಅಲ್ಲಲ್ಲಿ ಪೆಟ್ಟುಗಳೂ, ಗಾಯಗಳೂ. ಅಂತೂ ರಣರಂಗದಿಂದ ಮರಳಿದ ಯೋಧರ ನೆನಪು ಆಗಿಯೇ ಆಗುತ್ತದೆ. ಇವರನ್ನು ಕಂಡು ನನ್ನ ಕಣ್ಣು ತೇವವಾದುದೂ ಉಂಟು. ಹೇಗೂ ಜೀವ ಸಹಿತ ಬಂದುವಲ್ಲ ಎಂದುಕೊಂಡು ಅವುಗಳಿಗೆ ಶುಶ್ರೂಷೆ ಮಾಡುವುದು, ಬ್ಯಾಂಡೇಜು ಮಾಡಿಸುವುದು-ಸಣ್ಣಪುಟ್ಟ ಗಾಯಗಳಾದರೆ ನಾನೇ ಸ್ವತಃ ಕುಳಿತು ಬ್ಯಾಂಡೇಜು ಮಾಡುವುದು—ಇತ್ಯಾದಿ ಕೆಲಸಗಳೆಲ್ಲ ನನ್ನ ಪಾಲಿಗೆ. ಅವುಗಳೆಲ್ಲ ಆದ ನಂತರ ಅವುಗಳನ್ನು ಪುನಃ ತಮ್ಮ ಮೊದಲಿನ ಸ್ಥಾನಕ್ಕೆ ಸೇರಿಸುವುದು. ಹೀಗೆ ನನ್ನ ಎಷ್ಟೋ ಸಮಯವೂ ಹೋಗಿದೆ, ಹಣವೂ ಹೋಗಿದೆ.

ಪುಸ್ತಕ ಎರವಲು ಕೊಂಡು ಹೋಗಿ ಈ ರೀತಿ ಮಾಡುವವರಲ್ಲಿ ನಾನಾ ರೀತಿಯ ಜನರಿದ್ದಾರೆ.

ಕೆಲವರು ಸ್ಕೂಲು ಕಾಲೇಜುಗಳಲ್ಲಿ ನನ್ನ ಜೂನಿಯರ್‌ಗಳು. ನಾನು ಓದಿದ ಪುಸ್ತಕಗಳನ್ನು ಇವರು ಕೇಳುವರು. ಓದಿದ ಪುಸ್ತಗಳನ್ನು ಮಾರುವ ಪದ್ಧತಿ ನಾನು ಇಟ್ಟುಕೊಂಡಿಲ್ಲ. ಇದೇ ನನ್ನ ಕೊರತೆ. ನನ್ನ ಹಲವಾರು ಜೂನಿಯರ್‌ಗಳಿಗೆ ಇಲ್ಲಿಯೇ ತಮ್ಮ ಲಾಭದ ಗುಟ್ಟು ಅಡಗಿದೆ ಎನ್ನುವುದು ಗೊತ್ತು. ಈತನಿಗೆ ಹೇಗೂ ಪುಸ್ತಕಕ್ಕೆ ಕ್ರಯ ಕೊಡುವುದು ಬೇಡ, ಇತರರಿಗಾದರೆ ಕನಿಷ್ಟಪಕ್ಷ ಅರ್ಧಾಂಶ ಹಣವನ್ನಾದರೂ ಕೊಡಬೇಕು. ಇವನಿಗೆ ಓದಿ ಹಿಂದೆ—ಕೊಟ್ಟರಾಯಿತು. ಒಂದು ವೇಳೆ ಕೊಡದಿದ್ದರೂ ಏನೂ ಪ್ರಾಣ ತೆಗೆಯುವುದಿಲ್ಲ ಎಂದು ಕೊಂಡಿರಬೇಕು ಅವರು.

ಈ ರೀತಿ ಜೂನಿಯರ್‌ಗಳಾದರೆ ಮತ್ತೆ ನನ್ನ ಕ್ಲಾಸುಮೇಟುಗಳು ಹಲವರಿಗೂ ಈಗ ಇದೇ ಗುಟ್ಟು ಗೊತ್ತಾಗಿ ಬಿಟ್ಟಿದೆ ಎಂದು ಕಾಣುತ್ತದೆ. ಮಾರ್ಚ್ ಪರೀಕ್ಷೆಯಲ್ಲಿ ಮಾರ್ಚ್ ಮಾಡಲಾರದೆ ಸಪ್ಟಂಬರ್‌ಕ್ಕೆ ಸಂದವರು ಅವರು. "ನಿಮ್ಮ ಪರೀಕ್ಷೆ ಪಾಸು ಮಾಡಿದ ಮೇಲೆ ಹಿಂದೆ ಕೊಡಿ" ಎಂದು ನಾನು ಅವರಿಗೆ ಪುಸ್ತಕ ಕೊಡುತ್ತೇನೆ. ಅವರಲ್ಲಿ ಬಹಳಷ್ಟು ಮಂದಿ ಪರೀಕ್ಷೆ ಪಾಸು ಮಾಡುವುದೇ ಇಲ್ಲ. ಮತ್ತೆ ಹೇಗೆ ಅಥವಾ ಯಾಕೆ ಅವರು ಪುಸ್ತಕ ಹಿಂದೆ ಕೊಡಬೇಕು?

ಇಲ್ಲಿ ನನಗೆ ನನ್ನ ಒಂದು ಹಳೆಯ ಅನುಭವದ ನೆನಪೂ ಆಗುತ್ತದೆ. ಆಗ ಒಂದು ಪಾಠ್ಯ ಪುಸ್ತಕ ಲಭ್ಯವಿರಲಿಲ್ಲ. ಅದು "ಅವುಟ್ ಆಫ್ ಪ್ರಿಂಟ್" ಆಗಿತ್ತು. ಇದು ನಮ್ಮ ಜೂನಿಯರ್‌ಗಳಿಗೆ. ನಮ್ಮ ಕಾಲಕ್ಕೆ ಒಂದಕ್ಕೆ ಒಂದೂವರೆ ಬೆಲೆ ತೆತ್ತು ನಾವೆಲ್ಲ ಒಂದೊಂದು ಪ್ರತಿ ದೊರಕಿಸಿಕೊಂಡಿದ್ದೆವು. ನನ್ನ ಪರೀಕ್ಷೆ ಮುಗಿದ ದಿನವೇ ನನ್ನ ಜೂನಿಯರ್ ಒಬ್ಬ ನನ್ನ ಪುಸ್ತಕ ಬೇಕೆಂದು ಕೇಳಿದ. ಕ್ರಯಕ್ಕೇ ಕೊಡಿ ಎಂದು ಹಟಹಿಡಿದ. ಒತ್ತಾಯಕ್ಕೆ ಕಟ್ಟುಬಿದ್ದು ಅದನ್ನು ಅರ್ಧಕ್ರಯಕ್ಕೆ ಅವನಿಗೆ ಕೊಡಲು ಒಪ್ಪಿಕೊಂಡೆ. ಆದರೆ ಆಗ ಆ ಪುಸ್ತಕ ನನ್ನ ಕೈಯಲ್ಲಿರದೆ ಮನೆಯಲ್ಲಿತ್ತು. ಮಾರನೆಯ ದಿನ ನನ್ನ ಕ್ಲಾಸು ಮೇಟ್-ನನ್ನ ಜೂನಿಯರ್ ನೆರೆಮನೆ—ಯುವ ನನ್ನ ಮನೆಗೆ ಬಂದ. ನಿಮ್ಮ ಪುಸ್ತಕ ಏನು ಮಾಡಿದಿರಿ? ಎಂದು ವಿಚಾರಿಸಿದ —ನಾನು ಇಂತಹವನಿಗೆ ಕೊಡಲು ಒಪ್ಪಿದ್ದೇನೆ ಎಂದೆ. ನನ್ನೊಡನೆ ಕೊಟ್ಟು ಬಿಡಿ, ನಾನೇ ಕೊಡುತ್ತೇನೆ ಎಂದ. ನಾನು ನಂಬಿ ಕೊಂಡು ಪುಸ್ತಕಕೊಟ್ಟೆ. ಅವನು ಆ ಇನ್ನೊಬ್ಬನ ಪರವಾಗಿ ಎಂದರೆ ತಾನು ಆತನಿಂದ ಆ ಬೆಲೆಯನ್ನು ಪಡೆದು ಕೊಳ್ಳುತ್ತೇನೆ ಎಂದು ಹೇಳಿ ಅರ್ಧಾಂಶ ಬೆಲೆಕೊಟ್ಟು ಪುಸ್ತಕ ಹಿಡಿದು ಹೊರಟು ಹೋದ. ಆದರೆ ಈತನು ಅದನ್ನು ಅವನಿಗೇ ಪೂರ್ಣ ಕ್ರಯಕ್ಕೆ ಮಾರಿದ. ನನಗೆ ಹಿಂದಿನಿಂದ ತಿಳಿಯಿತು ಈ ವ್ಯಾಪಾರ. ಅದೇ ನಾನು ಮಾರಿದ ಮೊದಲನೆಯ (ಬಹುಶಃ ಕೊನೆಯ ಕೂಡ) ಪುಸ್ತಕ.

ಇನ್ನು ಕೆಲವು ಜನ "ಫ್ರೆಂಡ್ಸ್" ಗಳು ನನ್ನ ಪುಸ್ತಕಗಳಿಗೆ "ಕೈಕೊಡು"ತ್ತಾರೆ. ಇದು ಸತ್ಯ ಪುಸ್ತಕಗಳಿಗಲ್ಲ. ಇತರ ಗ್ರಂಥಗಳಿಗೆ. ಒಮ್ಮೊಮ್ಮೆ ಬಂದವರು ನಾಲ್ಕೈದು ಪುಸ್ತಕಗಳನ್ನು ಹಿಡಿದು ಕೊಂಡು ಹೋಗುತ್ತಾರೆ. ನಾನೇನು ಲೈಬ್ರರಿಯಲ್ಲಿ ಇಡುವಂತೆ ಇಶ್ಯೂರಿಸೀಟ್ ಇಡುತ್ತೇನೆಯೇ? ನಾನಂತೂ ಇಲ್ಲ. ಅರು ಪುಸ್ತಕ ಕೊಂಡು ಹೋದವರು ಕೆಲವೊಮ್ಮೆ "ಮರವೆ"ಯಿಂದ ಮೂರೇ ಪುಸ್ತಕ ತರುತ್ತಾರೆ. ಕೆಲವು ಬಾರಿ ಇನ್ನುಳಿದ ಪುಸ್ತಕ ಗಳನ್ನು ಓದಿ ಆಗಿಲ್ಲ, ನಾಲ್ಕುದಿನ ಕಳೆದು ಕೊಡುತ್ತೇನೆ ಎನ್ನುತ್ತಾರೆ. ಅಂತಹ ಪುಸ್ತಕಗಳು ಬಂದರೆ ಬಂದುವು. ಇಲ್ಲವಾದರೆ ಇಲ್ಲ.

ನನಗೆ ಮೊನ್ನೆ ಮೊನ್ನೆ ಇದೇ ರೀತಿ ಒಂದು ವಿಚಿತ್ರ "ಮೋಸ" ಆಗಿದೆ. ಕುಮಾರ ವ್ಯಾಸ ಭಾರತವನ್ನು ಮೈಸೂರು ಸರಕಾರದವರು ಮುದ್ರಿಸಿ ಸಾಹಿತ್ಯ ಪ್ರಚಾರ ಉದ್ದೇಶದಿಂದ ಕೇವಲ ಎರಡು ರೂಪಾಯಿಗೆ ಮಾರಿದರು. ಆ ಬೃಹತ್ ಗ್ರಂಥವನ್ನು ಅಷ್ಟು ಅಗ್ಗವಾಗಿ ಮಾರುತ್ತಾರೆಂದೇ ಕೆಲವರು ಅದನ್ನು ಕೊಂಡುಕೊಂಡರು. ಮತ್ತೆ ಕೆಲವರು ಮುಂದೆ ಅದನ್ನು ಮಾರಿ ಹೆಚ್ಚು ಲಾಭ ಪಡೆಯುವ 'ದೂ (ದು) ರಾಲೋಚನೆ' ಯಿಂದ ಹಲವು ಪ್ರತಿಗಳನ್ನು ಗಿಟ್ಟಿಸಿಕೊಂಡರು. ನನಗೆ ಹೇಗೋ ಒಂದು ಪ್ರತಿ ಲಾಭವಾಗಿತ್ತು. ನಾನು ಅದನ್ನು ಓದಿ ಮುಗಿಸಿದ್ದೆನಷ್ಟೆ. ನನ್ನ ಪರಿಚಿತನೊಬ್ಬ ತಯಾರು. ಅವನಿಗೂ ಓದಲು ಕೊಡಬೇಕಾಯಿತು. ಆ ಪುಸ್ತಕವನ್ನು. ಒಂದು ತಿಂಗಳ ನಂತರ ಆ ಮಹಾರಾಯನ ಭೆಟ್ಟಿಯಾಯಿತು. "ಪುಸ್ತಕ ಓದಿದಿರಾ?" ಎಂದು ಕೇಳಿದೆ. "ನಿನ್ನ ಪುಸ್ತಕ, ಹೌದು. ಓದಿದೆ, ಆದರೆ.. ಹೇಳಲು ನನಗೆ ಬೇಸರವಾಗುತ್ತದೆ. ಅದು ಮೊನ್ನೆ ಮೊನ್ನೆ ಕಳೆದು ಹೋಯಿತು. ನಿಮಗೆ ವ್ಯಥಾ ಎರಡು ರೂಪಾಯಿ ನಷ್ಟ ಮಾಡಿದೆ" ಎಂದು ಶುದ್ಧ ಸುಳ್ಳೊಂದನ್ನು ಹೇಳಿ, "ದಯವಿಟ್ಟು ಈ ಹಣ ತೆಗೆದುಕೊಳ್ಳಿ" ಎಂದು ಎರಡು ರೂಪಾಯಿ ಮುಂದೆ ಮಾಡಿದ ಭೂಪ. ನನಗೆ ಪುಸ್ತಕದ ಬೆಲೆಗಿಂತ ಪುಸ್ತಕ ಹೋದ ಬೇಸರವೇ ಹೆಚ್ಚಾಗಿತ್ತು.

ನನ್ನ ಈ ಪುಸ್ತಕ ಭಂಡಾರವನ್ನು ಕಂಡಾಗ ನನಗೆ ಒಂದು ಶ್ಲೋಕ ನೆನಪಿಗೆ ಬಂದೇ ಬರುತ್ತದೆ. "ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಃ | ಅಥವಾ ಪುನರಾಯಾತಿ ಜೀರ್ಣಂ ಭ್ರಷ್ಟಾಚ ಖಂಡಶಃ ||" ಪುಸ್ತಕ, ವನಿತೆ ಮತ್ತು ಐಶ್ವರ್ಯ ಬೇರೆಯವರ ಕೈಗೆ ಹೋದರೆ ಹೋದಂತೆಯೇ ಸರಿ. ಪುನಃ ಸಿಕ್ಕಲಾರದು. ಒಂದು ವೇಳೆ ಹಿಂದೆ ಬೊ

(೧೦ನೇ ಪುಟ ನೋಡಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.



ವಿವೇಚನೆ

ಶಿಕ್ಷಣರಂಗಕ್ಕೆ ತುರ್ತು ಪರಿಸ್ಥಿತಿ

ಬರೆದವರು
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ

ನಾಡ ಕಲ್ಯಾಣವನ್ನು ಹಾರೈಸುವವರೆಲ್ಲರೂ, ನಾಡಿನ ಭವ್ಯ ಭವಿಷ್ಯದ ಬಗ್ಗೆ ಉಜ್ವಲ ಕಲ್ಪನೆ ಕಟ್ಟುವವರೆಲ್ಲರೂ ನಾಳಿನ ಜನಾಂಗವನ್ನು ರೂಪಿಸುವ ಶಿಕ್ಷಣ ಪದ್ಧತಿಯತ್ತ ಗಮನ ಹರಿಸುವುದು ಅನಿವಾರ್ಯ.

ಸರಿಯಾದ ಶಿಲ್ಪಿಯ ಕೈಗೆ ಸಿಲುಕಿದ ಕಾಡುಕಲ್ಲು ಕಲಾಕೃತಿಯಾಗಬಲ್ಲದು. ಸರಿಯಾದ ಶಿಕ್ಷಣ ಪದ್ಧತಿಯಿಂದ ತರಬೇತಾದ ನಾಡಿನ ಮಕ್ಕಳು ಉತ್ತಮ ಪ್ರಜೆಗಳಾಗುವರು.

ಆದರೆ ಇಂದು ಶಿಕ್ಷಣರಂಗದಲ್ಲಿರುವಷ್ಟು ಅವ್ಯವಸ್ಥೆ ಹಾಗೂ ಅರೆಮನಸ್ಸಿನ ಅನೇಕ ಪ್ರಯೋಗಗಳು ಬೇರೆಲ್ಲೂ ಕಾಣಸಿಗವು. ಶಿಕ್ಷಣ ಕ್ರಮದಲ್ಲಿ ಮಾಡುವ ಪ್ರತಿ ಬದಲಾವಣೆಯೂ (ಪ್ರಯೋಗವೂ) ಲಕ್ಷಾಂತರ ಮಕ್ಕಳ ಭವಿಷ್ಯದ ಮೇಲೆ ಪ್ರಭಾವ ಬೀರುವುದೆಂಬುದನ್ನು ಮರೆಯಲಾಗದು. ಶಿಕ್ಷಣದ ಬಗ್ಗೆ ಆದ್ಯ ಗಮನ ಕೊಡಬೇಕಾದುದು ಅತ್ಯಗತ್ಯ.

ಆದರ್ಶ ಶಿಕ್ಷಣವು ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೆ ನೆರವಾಗಿ, ವ್ಯಕ್ತಿ ವ್ಯಕ್ತಿಯಲ್ಲಿಯೂ ಸುಪ್ತವಾಗಿರುವ ಪ್ರತಿಭೆಯನ್ನು ಪ್ರಚೋದಿಸಿ, ವ್ಯಕ್ತಿಯ ಜೀವನವನ್ನು ಸರ್ವಾಂಗ ಸುಂದರವಾಗುವಂತೆ ರೂಪಿಸುತ್ತದೆ. ವ್ಯಕ್ತಿಯ ಸಾಮಾಜಿಕ, ನೈತಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ವಿಕಾಸವೇ ಶಿಕ್ಷಣದ ಮುಖ್ಯ ಗುರಿ. ಆದರೆ "ಆಧುನಿಕ" ಶಿಕ್ಷಣ ಕ್ರಮದಲ್ಲಿ ಆಧ್ಯಾತ್ಮಿಕ ಹಾಗೂ ನೈತಿಕ ಮೌಲ್ಯಗಳ ಕೈಬಿಡಲಾಗಿದೆ. ಏನಿದ್ದರೂ ಬೌದ್ಧಿಕ ವಿಕಾಸವೊಂದೇ ಇಂದಿನ ಶಿಕ್ಷಣ ಕ್ರಮದ ಮೂಲ ಗುರಿ.

ಹೋಗಲಿ, ಬೌದ್ಧಿಕ ವಿಕಾಸಕ್ಕಾದರೂ ಅನುವಿದೆಯೇ? ಇಂದಿನ ಶಿಕ್ಷಣ ಸರಿಯಾದ ಕ್ರಮದಿಂದ ವಿಚಾರ ಶಕ್ತಿ ಪ್ರಚೋದಿತವಾಗಿ, ಬೌದ್ಧಿಕ ವಿಕಾಸವಾಗುವಂತೆ ಕಾರ್ಯಕ್ರಮಗಳನ್ನು ಕೈಗೊಂಡಿರುವರೇ?

ಎಲ್ಲ ಮಕ್ಕಳನ್ನೂ ಸುಶಿಕ್ಷಿತರನ್ನಾಗಿ ಮಾಡಬೇಕೆಂದು ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ ಸನ್ನಾಹ ಒಂದೆಡೆ—ಶಿಕ್ಷಣದ ಮಟ್ಟ ಇಳಿಮುಖವಾಗುತ್ತ ನಡೆದು ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾಗದಿರುವ ಬಗ್ಗೆ ಜಿಜ್ಞಾಸೆ ಒಂದೆಡೆ ಅಧ್ಯಾಪಕರಿಲ್ಲದ ಶಾಲೆಗಳು ಒಂದೆಡೆ— ಅಧ್ಯಾಪಕ ವೃತ್ತಿಗಾಗಿ ಅರ್ಜಿ ಸಲ್ಲಿಸಿ ಚಾತಕ ಪಕ್ಷಿಗಳಂತೆ ಕೆಲಸದ ಆಜ್ಞೆಗಾಗಿ ಕಾದು ಕಾದು ನಿರಾಶರಾಗುತ್ತಿರುವ ವಿದ್ಯಾವಂತ ನಿರುದ್ಯೋಗಿಗಳು ಮತ್ತೊಂದೆಡೆ- ಹೀಗೆ ಹತ್ತಾರು ವಿರೋಧಾಭಾಸಗಳನ್ನು ನಾವು ಗುರುತಿಸಬಹುದು.

ಕೆಲವೊಮ್ಮೆ, ಆಳವಾಗಿ ವಿವೇಚಿಸದೆ 'ಎತ್ತಿಗೆ ರೋಗವೆಂದರೆ ಎಮ್ಮೆಗೆ ಬರೆ' ಎಂಬ ಗಾದೆಗೆ ಅನುಸಾರವಾಗಿ ಯಾರದ ತಪ್ಪಿಗೆ ಯಾರಿಗೋ ಶಿಕ್ಷೆ ಕೊಡುವ 'ಸುಧಾರಣೆ' ಗಳೂ ಕಂಡುಬರುತ್ತವೆ. ವಿದ್ಯಾರ್ಥಿಗಳು ತೇರ್ಗಡೆಯಾಗದಿದ್ದರೆ ಅಧ್ಯಾಪಕರಿಗೆ 'ಶಿಕ್ಷೆ' ವಿಧಿಸುವ ಯೋಚನೆಯೂ ಇಂತಹ ಒಂದು 'ಸುಧಾರಣೆ' ತರಗತಿಯಲ್ಲಿ ವಿದ್ಯಾರ್ಥಿಗಳ ಕನಿಷ್ಠ ಮಿತಿ (35 ಅಥವಾ 40) ಇಷ್ಟೇ ಇರಬೇಕೆಂಬ ನಿಯಮ ಇಂದು ಗಾಳಿ ಪಾಲಾಗಿದೆ. ತರಗತಿಯಲ್ಲಿ ಕಿಕ್ಕಿರಿದು ತುಂಬಿರುವ ವಿದ್ಯಾರ್ಥಿಗಳಿಗೆ ವೈಯುಕ್ತಿಕ ಗಮನ ಕೊಡುವುದು ಅಸಾಧ್ಯ. ಕೆಲವೊಮ್ಮೆ ಅಧ್ಯಾಪಕರಿಗೇ ಪಠ್ಯವಿಷಯದ ಬಗ್ಗೆ ಸರಿಯಾದ ತಿಳಿವಿರುವುದಿಲ್ಲ. ಇನ್ನು ಕೆಲವರಿಗೆ ತಮಗೆ ವಿಷಯ ತಿಳಿದಿದ್ದರೂ ಅದನ್ನು ಸುಲಭಗ್ರಾಹ್ಯವಾದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಲು ಬರುವುದಿಲ್ಲ.

ಇನ್ನು ವಿದ್ಯಾರ್ಥಿಗಳಿಗೋ ಕಲಿಕೆ ಸಂತೋಷದ ವಿಷಯವಲ್ಲ. ಮನೋವಿಕಾಸಕ್ಕೆ ಅನುವಾಗಿ ಮೊಗ್ಗರಳಿ ಹೂವಾಗುವಾಗಿನ ಹಿತಭಾವದಂತೆ ಶಿಕ್ಷಣ ಅವರ ಮನಸ್ಸನ್ನು ಮಿಡಿಯುವುದಿಲ್ಲ. ಪರೀಕ್ಷೆಗಾಗಿ ಓದು ಎಂಬ ಭಾವನೆ ಬಹುಮಂದಿ ವಿದ್ಯಾರ್ಥಿಗಳಲ್ಲಿವೆ. ಅಧ್ಯಾಪಕ ವಿದ್ಯಾರ್ಥಿಗಳಿಗೆ ನೇರ ಸಂಪರ್ಕವಾಗಲೀ, ಆತ್ಮೀಯ ಭಾವನೆಯಾಗಲೀ ಇರಲು ಸಾಧ್ಯವಿಲ್ಲ. ವಿದ್ಯಾರ್ಥಿಗಳ ಸಂಶಯಗಳಿಗೆ ಸಮಾಧಾನ ಹೇಳುವಷ್ಟು ಕಾಲವಾಗಲೀ ತಾಳ್ಮೆಯಾಗಲೀ ಅಧ್ಯಾಪಕರಿಗಿಲ್ಲ. ಅಸಂಬದ್ಧವೂ ಅಸ್ಪಷ್ಟವೂ ವಿವಾದಾತ್ಮಕವೂ ಆದ ತುಣುಕು ತುಣುಕು ವಿಷಯಗಳನ್ನು ವಿದ್ಯಾರ್ಥಿಯು ಸಂಗ್ರಹಿಸಿ ನಂತರ ಕಷ್ಟಪಡುತ್ತಾನೆ. ಬಹುಸಾಮಾನ್ಯವಾದ ಉದಾಹರಣೆಯನ್ನು ಕೊಡುವುದಾದರೆ ತ್ರೈರಾಶಿಯ ಲೆಕ್ಕ. ಮೂಲ ನಿಯಮವನ್ನು ತಿಳಿದುಕೊಳ್ಳದ ವಿದ್ಯಾರ್ಥಿ ಸರಿಯುತ್ತರವನ್ನು ಪಡೆಯಲು ಅಂಕೆಗಳನ್ನು ಕೆಳಗೆ ಮೇಲೆ ಹಾಕಿ ಕಸರತ್ತು ಮಾಡಿಸಿ ಅಂತೂ ಉತ್ತರ ಪಡೆಯುತ್ತಾನೆ. ಕೆಲವು ವೇಳೆ ಅಧ್ಯಾಪಕರಿಗೇ ಈ ಮೂಲ ನಿಯಮಗಳು ಅರ್ಥವಾಗುವುದಿಲ್ಲ. ಭಾಷೆಯ ವಿಷಯದಲ್ಲಿಯೂ ಅಷ್ಟೇ. ಅಧ್ಯಾಪಕರಿಗೇ ವ್ಯಾಕರಣ ಶುದ್ಧವಾದ ಭಾಷೆಯನ್ನು ಬರೆಯಲು ತಿಳಿಯದಿದ್ದರೆ, ವಿದ್ಯಾರ್ಥಿಗಳ ತಪ್ಪನ್ನು ಹೇಗೆ ತಿದ್ದಿಯಾರು? ಹೀಗೆ ಅರೆ-ಬರೆ ಜ್ಞಾನಾರ್ಜನೆ ಮಾಡಿದ ವಿದ್ಯಾರ್ಥಿಗಳು ತೇರ್ಗಡೆ ಹೊಂದಿ (ಕನಿಷ್ಟ ಶೇಕಡಾವಾರು ಮಂದಿಯನ್ನಾದರೂ ತೇರ್ಗಡೆ ಮಾಡಲೇ ಬೇಕಷ್ಟೆ!) ನಂತರ ಅಧ್ಯಾಪಕರಾಗಿ ಬಂದರೆ ಅವರ ವಿದ್ಯಾರ್ಥಿಗಳ ಶಿಕ್ಷಣ ಮಟ್ಟ ಇನ್ನಷ್ಟು ಇಳಿಮುಖವಾಗುವುದರಲ್ಲಿ ಸಂದೇಹವೇನು?

ಅಧ್ಯಾಪಕರ ತಿಳುವಿನ ಮಟ್ಟ ಹೆಚ್ಚಿಸುವಂತೆ ಕಾರ್ಯಕ್ರಮ ಕೈಗೊಂಡರೆ ಮಾತ್ರ ಶಿಕ್ಷಣ ಮಟ್ಟ ಇಳಿಮುಖವಾಗುವುದನ್ನು ತಡೆಗಟ್ಟಲು ಸಾಧ್ಯ.

ಇಂದು, ತಂದೆತಾಯಿಯರಿಗೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ಬಗ್ಗೆ ತುಂಬಾ ಆಸಕ್ತಿಯಿದೆ. ಆದರೆ ಶಾಲೆಗಳಲ್ಲಿ ಶಿಕ್ಷಣಕ್ಕೆ ಯಾವ ಸೌಕರ್ಯಗಳಿವೆಯೆಂಬ ಬಗ್ಗೆ ಅವರು ಸಾಮಾನ್ಯವಾಗಿ ಆಸಕ್ತಿ ವಹಿಸುವುದಿಲ್ಲ. ಶಾಲೆಯಲ್ಲಿ 'ಸೀಟ'ನ್ನು ಮಕ್ಕಳಿಗೆ ಕೊಡಿಸಿಬಿಟ್ಟರೆ, ತಮ್ಮ ಕರ್ತವ್ಯವಾಯಿತು; ಮುಂದಿನ ಶಿಕ್ಷಣದ ಹೊಣೆಗಾರಿಕೆ ಶಿಕ್ಷಕ—ಎಂದು ಬಗೆಯುತ್ತಾರೆ.

ಆದರೆ ಬಹುತೇಕ ಶಾಲೆಗಳಲ್ಲಿ ಇಂದು ಯಾವ ತರದ ಸೌಕರ್ಯಗಳಿವೆ? ಕೂರಲು ಜಾಗವಿಲ್ಲ; ಓದಲು ಸರಿಯಾದ ಪುಸ್ತಕಗಳಿರುವ ಪುಸ್ತಕ ಭಂಡಾರಗಳಿಲ್ಲ. ಶಾಲೆ ತೆರೆದು ಎರಡು-ಮೂರು ತಿಂಗಳು ಕಳೆದರೂ ಗೊತ್ತಾದ ಪಠ್ಯ ಪುಸ್ತಕಗಳು ಮಾರುಕಟ್ಟೆಗೆ ಬಂದಿರುವುದಿಲ್ಲ. ದೊಡ್ಡಿಯಲ್ಲಿ ದನಗಳನ್ನು ತುರುಕುವಂತೆ; ತರಗತಿಯಲ್ಲಿ ಕೂಡಿಕೊಂಡರೆ ಬೆಳಗಿನಿಂದ ಸಂಜೆಯ ವರೆಗೂ ಮನೆಯಲ್ಲಿನ ಅವರ ಗಲಾಟೆಯನ್ನು ತಡೆಗಟ್ಟುವ ಒಂದು ಉದ್ದೇಶ ಮಾತ್ರ ನೆರವೇರಿದಂತಾಗುತ್ತದೆ! ಹಲವು ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಕೂರಲು ಹಲಗೆಗಳು ಸಹ ಇಲ್ಲ. ಚಳಿಗಾಲದಲ್ಲಿ ಕೊರೆಯುವ ಬರಿಯ ನೆಲದ ಮೇಲೆ ಗಂಟೆಗಟ್ಟಲೆ ಚಿಕ್ಕ ಮಕ್ಕಳು ಕಡ್ಡಾಯವಾಗಿ ಕೂರಬೇಕು. ಇದು ಶಿಕ್ಷಣದ ಕುರುಹೋ ಅಥವಾ ಕಠಿಣ ಶಿಕ್ಷೆಯ ಗುರುತೋ? ಧಗೆ ಹೆಚ್ಚಾಗಿರುವ ಊರುಗಳಲ್ಲಿ ಮಧ್ಯಾಹ್ನದ ಸಮಯದಲ್ಲಿ ಗಾಳಿಯಾಡಲೂ ಸ್ಥಳವಿಲ್ಲದಂತೆ ತರಗತಿಯಲ್ಲಿ ಕಿಕ್ಕಿರಿದು ತುಂಬಿರುವ ಆ ಮಕ್ಕಳ ಪಾಡು ಶೋಚನೀಯ. ಉಸಿರು ಕಟ್ಟಿಸುವ ಆ ವಾತಾವರಣದಲ್ಲಿ ವಿದ್ಯಾರ್ಥಿಗಳು ಪಾಠಗಳನ್ನು ಗ್ರಹಿಸಲಾಗದಿದ್ದರೆ ಅಚ್ಚರಿಯೇನು? ಆ ಧಗೆಯ ತಾಪವನ್ನು ತಡೆಯಲಾರದೆ ವಿದ್ಯಾರ್ಥಿನಿಗಳು ಮೂರ್ಛೆ ಹೋದ ಉದಾಹರಣೆಗಳೂ ಉಂಟು.

ವಿಜ್ಞಾನ ಜೀವನದ ಎಲ್ಲ ರಂಗಗಳಲ್ಲೂ ಅದ್ಭುತ ಬದಲಾವಣೆಯನ್ನು ಮಾಡಿದ್ದರೂ ಶಿಕ್ಷಣ ರಂಗದಲ್ಲಿ ಅದರ ಪ್ರಭಾವ ಅಷ್ಟಾಗಿಲ್ಲ. ಇಂದು "ಆಧುನಿಕ" ಎಂದು ನಾವು ಕರೆಯುವ ಶಿಕ್ಷಣ ಪದ್ಧತಿಯ ಅವೈಜ್ಞಾನಿಕವಾದ ಹಳೆಯ ಪದ್ಧತಿಯೇ. ಶಿಕ್ಷಣ ಕ್ರಮದಲ್ಲಿ ಅನೇಕ ಸುಧಾರಣೆಗಳನ್ನು ತರುತ್ತಿರುವುದೇನೋ ನಿಜ. ಆದರೆ ಈ ಸುಧಾರಣೆಗಳ ಪ್ರತಿಕ್ರಿಯೆಗಳೇನು ಎಂಬ ಪೂರ್ವಭಾವಿ ಪ್ರಯೋಗ ನಡೆಸದೆ ಸಾರ್ವತ್ರಿಕವಾಗಿ ಸಾಮೂಹಿಕವಾಗಿ ಸುಧಾರಣೆಗಳ ಪ್ರಯೋಗ ನಡೆಯುತ್ತಿದೆ. ಈ ಸುಧಾರಣೆಗಳನ್ನು

(೧೧ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

R. E. A. 71/64. in R. E. P. 640/63 in O. S. 439/57

U. ವಾಸುದೇವ ಮಯ್ಯ— ಅರ್ಜಿದಾರ
ಮತ್ತು
ನಾಗಿ ಸೆಟ್ಟಿ ಕೊಡಾ— ಯೆದ್ರಿರು

[illegible]

1, 2, 3 ನೇ ಎದ್ರಿದಾರ— ಉಡುಪಿ [illegible] ಗ್ರಾಮದಲ್ಲಿ [illegible] 3 ಜನರಿಗೆ ಈ ಮೂಲಕ ತಿಳಿಯಪಡಿಸುವುದು—

ಅರ್ಜಿದಾರನು ಪಡೆದ ಮೇಲ್ಕಂಡ ಡಿಕ್ರಿ ಮೇಲೆ ಮಾಡಿದ ಈ ಅಮಲ್ದಾರಿ ತಾರೀಕು 16-3-64ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪವಿದ್ರೆ ಸದ್ರಿ ದಿವಸ 11 ಗಂಟೆಗೆ ಹಾಜರು ಮಾಡಿಕೊಳ್ಳಬೇಕು. ಇಲ್ಲವಾದ್ರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

(Sd) B. Y. Holla,
Advocote for Petitioner

Udipi
20-2-64

ಪರಿಷ್ಕಾರಕ್ಕಾಗಿ ಪುರಸ್ಕಾರ ನೀಡಿರಿ!

ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾಗಿ
ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರು ಸಂಪಾದಕರಾಗಿದ್ದ
ವಿಚಾರಶೀಲರ ಮೆಚ್ಚಿನ ವಾರಪತ್ರಿಕೆ

ನವಯುಗ
ಉಡುಪಿ

ನೂತನ ಪರಿಷ್ಕರಣ ಹೊಂದಲಿದೆ

ಪ್ರೋತ್ಸಾಹಿಸಿ ಸಹಕರಿಸಿರಿ

ವಾರ್ಷಿಕ ಚಂದಾ ರೂ. ೧೧-೦೦

ಹೊಸ ಚಂದಾದಾರರಿಗೆ ಈಗತಾನೆ ಪ್ರಕಟವಾದ ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನೂ ಕಳಿಸಲಾಗುವುದು.

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಕೂಡಲೇ ಕಳಿಸಿಕೊಡಬೇಕಾಗಿ ವಿನಂತಿ.

-ಸಂಚಾಲಕ-ಸಂಪಾದಕ— ಕೆ. ಹೊನ್ನಯ್ಯ ಶೆಟ್ಟಿ

ಪ್ರೊ. ಕು.ಶಿ. ಹರಿದಾಸ ಭಟ್ಟ, ಎಂ.ಎ.,

ಅವರ ನವೀನ ಪುಸ್ತಕಗಳು	ರೂ.ನ.
ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಾ	2=00
ಏಶ್ಯದ ಸಂಪತ್ತು	2=00
ಅಮೇರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕ್ಯಾಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಗೇಹರಾಜ್ಯದಲ್ಲಿ

ದೇವರ ಭಕ್ತಿಯೂ ಪಾಪಕಾರ್ಯ

"ಏನಂತೆ ಅಮ್ಮಾವ್ರು ಇವತ್ತು ಸರ್ಕೀಟು ಹೊರಟದ್ದು?"

"ಓ, ನೀವೇ? ಆವಾಗ್ಲೇ ಬಂದ್ಬಿಟ್ರಲ್ಲ?"

"ಅಲ್ವೇ, ನಾನು ಯಾವಾಗ್ಲೇ ಬರ್ಲಿ, ನಿನ್ಗೇನೂಂತ? ಎತ್ತ ಹೋಗಿದ್ದಿ, ಯಾರಿದ್ರು ಜತೆಯಲ್ಲಿ?"

"ಸಾಕು ಬಿಡೀಂದ್ರೆ ನಾನು ಹೋಗೋದಾದ್ರೂ ಎಲ್ಲಿಗೆ? ಅಮ್ಮಾವ್ರು ಗುಡಿಗ ಶುಕ್ರವಾರಾಂತ ಹೋದೆ ಜತೆಗೆ ನಮ್ಮ ಸರಸೂನು ಇದ್ಲೂನ್ನಿ."

"ಸರ್ಸೀ.. ಆಂ, ಸರಿ ಹೋಯ್ತು ಹಂಗಂದ್ರೆ."

"ಯಾಕ್ರಿ, ಏನಾಯ್ತು? ಇವತ್ತೊಂತೇನೂ, ನಾನು ಹೊರ ಹೋಗುವಾಗ ಯಾವಾಗ್ಲೂ ಅವ್ಳು ಜತೇಲಿರ್ತಾಳೆ"

"ಅದು ಸರೀನ್ನು ಯಾರೀಗ ತಪ್ಪೊಂತೀರಿ?"

"ಮತ್ತೆ ಇಂದೇನೋ ಒಂದು ಥರಾ ಮಾತಾಡ್ತೀರಲ್ಲ?"

"ಥರಾನೂ ಇಲ್ಲ ಬರಾನೂ ಇಲ್ಲ.."

"ಬರ ಅಲ್ದೆ ಮತ್ತೇನಂತೆ ಈಗ? ನಿಮ್ಮ ಟೋಪಿ ಸರಕಾರ ಬಂದದ್ದೇ ಬಂದದ್ದು ಎಲ್ಲಿ ನೋಡಿದ್ರೂ."

"ಸಾಕು ಬಿಡೇ ನೀನು ಆ ಸರ್ಸೂ ಜತೆ ಹೋದ ದಿವ್ಸವೇ ಹೀಗೇ ಏನೇನು ಉಪದೇಶವಾಗ್ತಿತ್ತೊ ಕಿವಿಗೆ ಗುರುಗಳಿಂದ."

"ಅಲ್ಲ, ಪಾಪ ಅವ್ರನ್ನೇಕೆ ದೂರ್ತೀರಿ? ಗಡಿಗೆ ಹೊಗ್ಬೇಕು, ಬರ್ತೀಯೋಂತಂದೆ. ಅವ್ಳು ಒಪ್ಪಿದ್ಳು.."

"ಮತ್ತೆ ಸುರುವಾಯ್ತು ಕಂಬಿ ಇಲ್ದೆ ರೈಲು ಬಿಡೋಕೆ."

"ಪಾಪ, ಅವ್ರೇನ್ರಿ ರೈಲು ಬಿಡೋದು? ಒಂದ್ವೇಳೆ ಬಿಟ್ರೂಂತಾಂದ್ರೂ ಅಷ್ಟೆ, ಆದ್ರೆ ಕಂಬಿ ಇಲ್ದೆ ರೈಲು ಬಿಡೋದ್ರಲ್ಲಿ ನಿಮ್ಮ ಟೋಪಿ ಸರ್ಕಾರದ ಮಂತ್ರಿಗಳನ್ನ ಮೀರಿಸೋರು ಯಾರಿದ್ದಾರೇಂತ..."

"ಸುಮ್ನಿರು. ಅಂದ್ಮೇಲ್ಲಾ ನಾನು.."

"ಯಾಕ ಇರ್ಬೇಕೂಂತ..?"

"ಸುಮ್ನಿರ್ಬೇಕೂಂತಂದ್ರೆ ಹಾಂಗಿರ್ಬೇಕು ತಿಳೀತೆ? ...

"ಎಲ್ಲಾ ತಿಳೀತು ಬಿಡಿ ನಿಮ್ಮ ಸರ್ಕಾರ ಉಣ್ಣೋಕೆ ಉಡೋಕೆ ಬಿಡೋಲ್ಲ, ಇನ್ನು ಮಾತಾಡೋಕೇ ಲಗಾಮು ಹಾಕಿದ್ರೆ ಸರಿಯಾಗುತ್ತೆ ..."

"ಸಾಕೇ ಸುಮ್ನಿರೂಂತಂದ್ಮೇಲ್ಲಾ..."

"ನೋಡಿ, ನಿಮ್ಮ ಟೋಪಿ ಸರ್ಕಾರದಿಂದ-ಹೆಣ್ಣು ಸಮಾನಂತ ಹೇಳಿದೆಯಲ್ಲ ಮತ್ತೆ ನೀವು ಆಡೋವಾಗ, ನಾನು ಸುಮ್ನೇಕಿರ್ಬೇಕೂಂತ"

"........"

"ಹೇಳೀಂದ್ರೆ, ಯಾಕೆ ಕೂತ್ಬಿಟ್ರಿ ಭೂತ ಹಿಡಿದ್ಹಾಂಗೆ"

"... .. .."

"ಸ್ವಲ್ಪ ಹೇಳೀಂದ್ರೆ."

"..........."

"ಏನಪ್ಪಾ ಇದು? ಯಾಕೆ ತೆಪ್ಪಗಾದ್ರಿ? ಹೇಳಿ, ಮಾತಾಡಿ"

"ಮತ್ತೆ ನೀನು ಅಡ್ಡತಿಡ್ಡ ಅನ್ಬಾರ್ದು."

"ಇಲ್ಲ, ಹೇಳೀಂದ್ರೆ"

"ನಾ ಆಡ್ದೇಂತ ತಾನೇ ನೀನಾಡೋದು? ನಾನು ತೆಪ್ಗೆ ಕೂತಿರೋದನ್ನ ಕಂಡೂ ನೀನು ಸುಮ್ನಿರ್ಲಿಲ್ಲಾಂತಂದ್ಮೇಲೆ'

"..ಓ ..ಸಮಾನತೆ ಎಲ್ಲಿಂದ್ಬಂತೂಂತ ತಾನೇ ನೀವು ಕೇಳೋದು? __ಸರಿ ಬಿಟ್ಬಿಡಿ ಅದನ್ನ"

"ನೋಡು ...ನಿನ್ಗೆ ಹಲವು ಬಾರಿ ಹೇಳಿದ್ದೇನೆ.. ಸರ್ಕಾರ ಸರ್ಕಾರಾಂತ ಮಾಡೋದು ಬರೇ ಅರ್ಜಿ ರಚಿಸೋ ಸರ್ಕಾರ ಜನ್ರ ಹಾಗೇ ಇರುತ್ತೆ"

"ಅದು ಸರೀನ್ರಿ ನೀವೇ ಒಂದ್ಸಲ ಹೇಳಿದ್ರಲ್ಲಾ ...ಜನತೆಯಂತೆ ಸರಕಾರಾಂತ.

"ಎಂಥಹ .ನಿನ್ನ ಬುದ್ಧಿಗಿದ್ದಿ ಎಲ್ಲಾ ನೆಟ್ಟಗೇ ಇವೆ ..."

"ಏನಂತೆ ಅವ್ರೇಂತ ಮಾತ್ನ ನಿಲ್ಸಿಬಿಟ್ರಲ್ಲಾ .."

"ಹೇಳ್ಲೇ ಬೇಕೇನ?"

"ಹೇಳೊ ದಿಲ್ವಾದ್ರೆ ಸುರುಮಾಡಿದ್ದಾದ್ರು ಯಾಕೆ"

"ನೀನೇ ಹೇಳು . ನಿನ್ನ ವಿಷಯ ನಿನ್ಗೆ ಗೊತ್ತಿರೋದಕ್ಕಿಂತ ಹೆಚ್ಗೆ ನನಗೇನು ಗೊತ್ತು...?"

"ಅಂದ್ರೆ ನಾನೇ ಹೇಳ್ಬೇಕು..."

"ಹ್ಞೂಂ.."

"ವೈಕ್ಕೆ ಚೆನ್ನಾಗಿಲ್ಲ.."

"ಛೆ ಛೆ . ಹಾಗೆಲ್ಲಾ ಅನ್ಬೇಡ. ನೀನೇ ನನ್ನ ರತಿಯಲ್ವೇ"

"..ಹಾಗಾದ್ರೆ ..ಮುಖ ಸ್ವಲ್ಪ."

"ಊಹ್ಞೂಂ ಅದೂ ಅಲ್ಲ ಅಲ್ಲ ಮುಖಕ್ಕೇನಾಗಿದೆಯಂತೆ? ಥೇಟು ಚಂದ್ರ ..."

"ಇನ್ನಪ್ಪ . ನಾಚಿಗೆ ಆಗೊಲ್ವೆ ನಿಮ್ಗೆ

"ನಿನ್ಗೇನೇ ಇಲ್ಲಾಂತಾದ್ಮೇಲೆ ಮತ್ತೆ ನನ್ಗೆ ಗಂಡ್ಸಿಗೆ ಎಲ್ಲಿಂದ್ಬರ್ಬೇಕೇ ಅದು."

"ಅಬ್ಬ ನೀವೆ? ಇದನ್ನೇ ನೀವು ಹೇಳೋಕನ್ನೋದೆ? ಸರಿಯಾಯ್ತು ಬಿಡಿ ಇನ್ನೇನಾದ್ರೂ ಇದ್ರೆ .."

"ಕೋಪಿಸ್ಕೊ ಬೇಡ ಕಣೆ ..."

"ಸಾಕು ಬಿಡೀಂದ್ರು ..ನಿಮ್ಗೆಲ್ಲಾ ಗೊತ್ತು ..."

"ಇಲ್ಲಿ ಬಿಡು, ನನ್ನು ನಿನ್ಗೆ ಗೊತ್ತಿದ್ರೆ ಏನಂತೆ ದೋಷ"

"ಅಂತೂ ನೀವು ಏನು ಹೇಳಿದ್ರೂ ಕಿವೀಲಿ ಹಾಕಿಕೊಳ್ಬೇಡಿ. ಅದೇ ನಿಮ್ಮ ಸರ್ಕಾರ್ದ ಬುದ್ಧಿನೇ ನಿಮ್ಗೆ."

"ಏನೇ ಯಾಕೆ ಹಾಗಂತೀಯ? ನಮ್ಮ ಬುದ್ಧಿ ನಮ್ಮಸರ್ಕಾರಕ್ಕೇಂತನ್ನು."

"ನಾನು ಹಾಗೆ ಅನ್ನೋವಾಕೆಯಲ್ಲ...."

"ನೋಡು ಆಗ್ಲೆ ಹಾಗೆಂದೆ ನೀನು ... ನಮ್ಮಂತೆ ನಮ್ಮಸರ್ಕಾರಾಂತ."

"ಅಬ್ಬಬ್ಬ- ನಿಮ್ಮ ಜ್ಞಾಪಕ ಶಕ್ತಿಯೆ?....ಆಗ್ಲಿ ...ಆದ್ರೆ ಅದನ್ನ ನೀವೇ ತಾನೇ ಕಲ್ಸಿಕೊಟ್ಟೋರು.."

"ಕಲ್ಸಿಕೊಟ್ರೆ ಏನಂತೆ? ಕಲ್ತು ಹೇಳೋ ಆಕೆಗೂ ಬುದ್ಧಿ ಇದೆಯಲ್ಲಾ."

"ಸಿಕ್ಕಿ ಬಿದ್ರಿ ಇವತ್ತು ನೀವು"

"..ಏನು ಏನಾಯ್ತು"

"ಅಂದ್ರಲ್ಲಾ ನೀವು . ಬುದ್ಧಿ ಗಿದಿ ಎಲ್ಲಾ ನೆಟ್ಗೆ ಇದೇಂತ.."

"ಅಯ್ಯೋ ನಿನ್ನ ಕಾಲಿಗೆ ನೀನೇ ಕೊಡಲಿ ಹಾಯ್ಕೊಂಡೆ"

". ಛೆ . ಛೆ... ಹೌದ್ರಿ... ಸೋತೆ ಸೋತೆ. ನಂ ಅಯ್ಯಲ್ಲ ನಿಮ್ಗೆ ಕೃಷ್ಟಿ. ಇನ್ನಾದ್ರೂ ನನ್ನ ಪ್ರಶ್ನೆಗೆ ಉತ್ರ ಕೊಡಿ .."

"ಏನಂತೆ ಅದು?"

"ನೋಡಿ, ಸರ್ಸೂ ಅಣ್ಣ ಆದೇಕೋ ಅನ್ನ ಸತ್ಯಾಗ್ರಹ ಮಾಡ್ತಾನಂತೆ ..'.

"ಅದ್ಕೇ ನೋಡು ಹೇಳಿದ್ದು. ಹಾಗೆಲ್ಲಾ ಹೇಗ್ಬಿದ್ರೋಂತ"

"ಹೋದ್ರೆ ಏನಾಯ್ತು?"

"ಆಗೋದೇನು? ಸುಂಸುಮ್ನೆ ಅಂಥವ್ರ ಸಹವಾಸ"

'ಅದು ಹೋಗ್ಲಿ ಮುಂದೆ ನೋಡೋಣ ಅಲ್ಲ . ಸತ್ಯಾಗ್ರಹ ಯಾಕೇಂತ"

"ಅದೇ ಹೇಳ್ಲಿಲ್ಲ ಅಣ್ಣ"

"ಏನೋ ಬೆಲೆಯೇರಿಕೆ ವಿರುದ್ಧಾಂತಂದ್ಳು. ನ್ಯಾಯಾಂತಕಂಡ್ತು ನನ್ಗೆ. ಗುಡೀಗೂ ಹೋದ್ದಾಗಾಯ್ತು,ಅದನ್ನ ನೋಡಿದ್ಹಾಗೂ ಆಯ್ತೂಂತ.."

"ಸರ್ಸೂ ಅನ್ನುತ್ಲೆ ನನ್ಗೆ ಗೊತ್ತಾಯ್ತು ಬಿಡ.

"ಏನು ಹಾಗೆ ಹೊದ್ರೆ ಏನಾದ್ರೂ"

"ಪರ್ವಾಯಿಲ್ಲ ಬಿಡು ಆದ್ರೆ ನೀನು ನ್ಯಾಯಾಂತಂದೆಯಲ್ಲ ಅದು ಮಾತ್ರ."

"ಸರಿಯಲ್ವೆ?"

"ಸರಿಯಲ್ಲಾಂತ ಯಾರಂತಾರೆ? ಆದ್ರೆ ಅದ್ಕೆಸತ್ಯಾಗ್ರಹ ಮಾಡಿದ್ರೆ ಬೆಲೆಯಿಳಿಯುತ್ಯೆ"

"ಸರ್ಕಾರ ಕ್ರಮ ಕೈಗೊಳ್ಬೇಕು"

"ಏನು ಮಾಡ್ಬೇಕೂಂತ"

"ಸಂಬ್ರ ನಿರ್ಧರಿಸಿದ ಹಾಗೆ ಯೆಲ್ಲಾ ವಸ್ತುಗಳ ಬೆಲೆಯನ್ನು ಗೊತ್ತುಮಾಡಬೇಕು.."

"ಮಾಡ್ಬಹುದು ಆಗಸಾಮಾನೇ ಸಿಗ್ದಿದ್ರೆ ನೋಡು ಸಕ್ರೆ ಸಿಮೆಂಟ ಗಳಮೇಲೆ ಸರ್ಕಾರ ಬೆಲೆ ನಿರ್ಧರಿಸಿತ,ಅದರ ವಿತರಣೆಯು ಹಂಚಿಕೆ ಮಾಡ್ತು ಏನಾಯ್ತು? ಅಧಿಕೃತ ವ್ಯಾಪರಸ್ಥರೆಲ್ಲ ಕಾಪೋರ್ ಮಾಡಿ ಟ್ರ್ಯಸ್ಟ್ ಹಿಡಿಸ್ಕೊಂಡು ಸುತ್ತಿದ್ರೆ ಮಾಲು ಸ್ಟಾಕ್ ಇಲ್ಲ, ಅದೇ ಬ್ಲ್ಯಾಕ್ ರೇಟಿನಲ್ಲಿ ಎಲ್ಲೆಲ್ಲಿಯೂ ಸಿಗುತ್ತೆ."

"ಅಂದ್ರೆ ಸರ್ಕಾರ ಕೈಹಾಕಿದ್ರೆ ಹೀಗೇ ಅಂತೀರಾ?'

"ಮತ್ತಾ ನೋಡು, ನಿನ್ನ ಬಳಿ ನೂರು ಮುಡಿ ಅಕ್ಕಿ ಇದೆನ್ನು ಸರ್ಕಾರ ಬಂದು ಇಷ್ಟಕ್ಕಿಲ್ಲಿ ಕೊಡೂಂತ ನೀನು ಕೇಳ್ತೀಯ? ಹೆಚ್ಚ ಬರ್ಬೇಕೂಂತಂತ ಆಗ ನೀನೂ ಸತ್ಯಾಗ್ರಹ ಹೂಡಬಹುದೂನ್ನು ಇಲ್ಲ, ಸುಳ್ಳು ಲೆಕ್ಕ ಕೊಟ್ಟು.

"..ಹೌದು ಹೌದು.."

"ನೋಡು ಇನ್ನೂ ಒಂದು ಇದೆ ಮೊನ್ನೆ ಸುಬ್ರಹ್ಮಣ್ಯಕ್ಕೆ ಹೋಗುವಾಗ ನೋಡಿದೆವಲ್ಲಾ ನಾವು, ಭತ್ತ ಬೆಳೆಯೋ ಗದ್ದೆಯಲ್ಲಿ ಅಡಿಕೆ ತೋಟ ಬೆಳ್ಸಿದ್ದಾರೆ ಲಾಭ ಒಂದೇ ಕೆಲ್ಸವನೂ ಮಾಡ್ತಿ..."

"ಅದು ನ್ಯಾಯ ಅಲ್ವೆ? ಅದ್ರಿಂದ ದೇಶದ ಸಂಪತ್ತೂ ಹೆಚ್ಚುತ್ತೆ.."

"ಆದ್ರೆ ಉಣ್ಣೋದು?"

"ಅಂದ್ರೆ ಈಗ ಅವಶ್ಯಕ ವಸ್ತುಗಳ ಬೆಲೆ ತಾನಾಗಿಯೇ ಏರುತ್ತೇಂತ ನೀವನ್ನೋದು"

"ಹೌದು .. ಬೆಲೆಯೇರಿಕೆಯನ್ನು ನಿಲ್ಲಿಸ್ಬೇಕಾದ್ರೆ ಅನ್ನ ಸತ್ಯಾಗ್ರಹದಿಂದ ಸಾಧ್ಯವಿಲ್ಲ ಬಿಡು. ಇನ್ನು ಸರಕಾರ ಕೈ ಹಾಕಿದ್ರೆ ಕೃತಕ ಅಭಾವ ಹುಟ್ಟುತ್ತೆ, ಬೆಲೆ ಮತ್ತಷ್ಟು ಏರತ್ತ"

"ಮತ್ತೆ ಏನು ಮಾಡ್ಬೇಕೂಂತೀರಾ?"

"ನಾನನ್ನೋದೇನು? ಉತ್ಪನ್ನವನ್ನು ಹೆಚ್ಚು ಮಾಡೋದೊಂದೇ ಇದಕ್ಕೆ ಪರಿಹಾರ. ನೋಡು ನಿನ್ನ ಸರ್ಸೂ ಅಣ್ಣ ಮೂರು ದಿನ ಕೆಲ್ಸ ಮಾಡಲಿಲ್ಲ ಏನಾಯ್ತು ಅದ್ರ ಲಾಭ? ಸಂಪಾದ್ನೆ ಹೋಯ್ತು, ಹೋಗ್ಲಿ ಬಿಡು, ದೇಶದ ಸಂಪಾದ್ನೆಯೇ ಹೋಯ್ತು."

"ಅದು ಸರಿಯನ್ನಿ ..."

'ಒಂದು ಮಗ್ಗದಲ್ಲಿ ಒಂದು ದಿನ ಹತ್ತು ಸೀರೆಗೆ ಇಪ್ಪತ್ತು ರೂಪಾಯಿ ಬೆಲೆ ಬರತ್ತೆ, ಒಂದು ದಿನ ಮಗ್ಗ ಕೆಲ್ಸ ಮಾಡ್ದಿದ್ರೆ ಅಷ್ಟು ಹಣಾನು ನಷ್ಟವಲ್ವೆ?"

ಹೌದು . ಮತ್ತೆ ."

'ಹಾಗೇ ನೋಡು, ನಮ್ಮ ಕೇಂದ್ರದ ಅರ್ಥಮಂತ್ರಿ ಕೃಷ್ಣಮಾಚಾರಿ ."

"ಅವ್ರು ಯಾರು, ಸತ್ತು ಹೋದ್ರೂಂತ."

"ಏನೆನ್ನೀಯೋ? ಸತ್ತುಹೋದವ್ರು ವಿ.ಟಿ ಕೃಷ್ಣಮಾಚಾರಿ, ಇದು ಟಿ. ಟಿ ಕೃಷ್ಣಮಾಚಾರಿ."

'ತಪ್ಪಿದೆ ಟೀಟೀ ಅನ್ನುತ್ಲೂ ನೆನ್ಪಿ

(ಆನೇ ಪುಟ ನೋಡಿ)

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ
ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನ ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ ಹರಿದಾಸ ಭಟ್ಟ, ಎಂ ಎ.

ಪ್ರಕಾಶಕರು
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ ರೂ 1=75, ಬಿಳಿ ಕಾಗದ
ರೂ. 2ನ್ನು M O ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವ ಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೩	೨೭-೨-೧೯೬೪	೨೬

ಬೆಲೆಯೇರಿಕೆ

ಸ್ವಾತಂತ್ರ್ಯಾನಂತರ ಭಾರತೀಯರು ಎದುರಿಸುತ್ತಿರುವ ಹತ್ತಾರು ಸಮಸ್ಯೆಗಳಲ್ಲಿ ಬೆಲೆಯೇರಿಕೆಯು ಅಗ್ರಗಣ್ಯವಾಗಿದೆ. ಆವಶ್ಯಕ ಪದಾರ್ಥಗಳ ಬೆಲೆಯು ನೆರೆಯ ನೀರಿನಂತೆಯೇ ಏರುತ್ತಿರುವುದು ಸರ್ವತ್ರ ಗೋಚರ. ಪುನಾರಚನಾ ಯೋಜನೆಗಳಲ್ಲಿ ನಾವು ವ್ಯಸ್ತರಾಗಿರುವಾಗ, ಬೆಲೆಯೇರಿಕೆಯು ಅಭಿವೃದ್ಧಿಯ ಕುರುಹು ಎಂದು ಹೇಳುವುದರಲ್ಲಿ ಅರ್ಥವಿಲ್ಲದಿಲ್ಲ. ಆದರೆ, ವ್ಯಕ್ತಿಯ ಆದಾಯದಲ್ಲಿಯೂ ಅದೇ ಪ್ರಮಾಣದ ಏರಿಕೆಯೂ ಗೋಚರಿಸಿದ್ದರೆ, ಪ್ರಾಯಃ ಇದನ್ನು ಹೆಚ್ಚಿನವರು ಗಮನಿಸುತ್ತಿರಲಿಲ್ಲ. ಮಾತ್ರವಲ್ಲದೆ, ಇಂದು ಲಭ್ಯವಿರುವ ಸಕಲ ಸೌಕರ್ಯಗಳೂ ಆವಶ್ಯಕ ವಸ್ತುಗಳ ಸಾಲಿನಲ್ಲಿಯೇ ಸೇರಿಕೊಂಡಂತಿರುವುದರಿಂದ ವ್ಯಕ್ತಿಯ ವ್ಯಯದ ಖಾತೆಯೂ ದೊಡ್ಡದಾಗಿದೆ. ಹಾಗಾಗಿ ಬೆಲೆಯೇರಿಕೆಯ ಬಗ್ಗೆ ಎಲ್ಲೆಲ್ಲೂ ವಿವಂಚನೆಯನ್ನು ವ್ಯಕ್ತಪಡಿಸಲಾಗುತ್ತಿದೆ; ಸರಕಾರವಾದರೂ ಇದನ್ನು ತಡೆಹಿಡಿಯುವ ಹಲವು ಉಪಾಯಗಳನ್ನು ಕೈಗೊಂಡಿದೆ. ಹೀಗೆಂದ ಮಾತ್ರಕ್ಕೆ ಸರಕಾರ ಇದರಲ್ಲಿ ಯಶಸ್ವಿಯಾಗಿದೆಯೆಂದರ್ಥವಲ್ಲ. ಸಾಧ್ಯವಿದ್ದ ಹಲವಾರು ಕ್ರಮಗಳನ್ನು ಅದು ಕಾರ್ಯರೂಪಕ್ಕೆ ತಂದಿದೆ; ಇನ್ನು ಹಲವನ್ನು ಅದು ಯೋಜಿಸುತ್ತಿದೆ.

ಈ ನಡುವೆ ಅಖಿಲ ಭಾರತೀಯ ಟ್ರೇಡ್ ಯೂನಿಯನ್ ಕಾಂಗ್ರೆಸಿನ ನಾಯಕತ್ವದಲ್ಲಿ ನವದೆಹಲಿಯಲ್ಲಿ ಮೊತ್ತಮೊದಲಿಗೆ ಇದೇ ತಾ. ೨೦ ರಿಂದ ಮೂರು ದಿನಗಳ ತನಕ ಬೆಲೆಯೇರಿಕೆಯ ವಿರುದ್ಧವಾಗಿ ಅನ್ನ ಸತ್ಯಾಗ್ರಹವನ್ನು ಅವರ ಸದಸ್ಯರು ಪ್ರಾರಂಭಿಸಿದರು. ದೇಶದ ಎಲ್ಲೆಡೆಯೂ ಈ ಸತ್ಯಾಗ್ರಹದ ಗಾಳಿಯು ಬೀಸಿತು. ಈ ಅನ್ನ ತ್ಯಾಗವು ಅದು ಹೂಡುವ ಸತ್ಯಾಗ್ರಹದ ಮೊದಲ ಹೆಜ್ಜೆ ಮಾತ್ರ. ಎರಡನೇ ಹಂತವಾಗಿ ಮಾರ್ಚ್ ೯ ನೆ ತಾರೀಕಿನಿಂದ ಔದ್ಯಮಿಕ ಕೇಂದ್ರಗಳಲ್ಲಿ ಸಾಮೂಹಿಕ ಪ್ರದರ್ಶನ ಮಾಡಬೇಕೆಂದೂ ಏಪ್ರಿಲ್ ೬ನೆ ದಿನಾಂಕದಿಂದ ಪಾರ್ಲಿಮೆಂಟ್ ಭವನದ ಮುಂದೆ ಸತ್ಯಾಗ್ರಹವನ್ನು ಹೂಡಬೇಕೆಂದೂ ಅದು ನಿರ್ಧರಿಸಿದೆ. ಮುಖ್ಯವಾಗಿ ಈ ಆಂದೋಲನವು ಬೆಲೆಯೇರಿಕೆಯ ಪ್ರತಿಭಟನಾರ್ಥವಾಗಿರುವುದಾದರೂ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಮೇಲೆ ಕಮ್ಯೂನಿಸ್ಟರ ಪ್ರಭಾವ ಬಹಳ ಆಳವಾಗಿ ಬೇರಿದೆಯೆನ್ನಬೇಕಾಗುತ್ತದೆ. ಕಡಿಮೆ ಪಕ್ಷ ಸೇಕಡಾ ೨೫ರಷ್ಟಾದರೂ ಜೀವನಾವಶ್ಯಕ ಪದಾರ್ಥಗಳ ಬೆಲೆಯಲ್ಲಿ ಇಳುವರಿಯಾಗಬೇಕು; ಜೀವನ ಮಟ್ಟದ ಇಂಡೆಕ್ಸಿನ ಪುನರ್ವಿಮರ್ಶೆ ಮಾಡಬೇಕು ಎಂದದು ಹೇಳುತ್ತದೆ. ಬ್ಯಾಂಕುಗಳ ರಾಷ್ಟ್ರೀಕರಣ, ಬೋನಸ್ ಕಮಿಶನಿನ ವರದಿಯ ಕಾರ್ಯಾಚರಣೆ ರಾಜ್ಯ ಸರಕಾರದ ಆಹಾರ ಧಾನ್ಯ ವ್ಯಾಪಾರಗಳ ಪ್ರಶ್ನೆಗಳನ್ನೂ ಅದು ಅಸ್ತ್ರವನ್ನಾಗಿ ತೆಗೆದುಕೊಂಡಿದೆ. ಇದನ್ನೆಲ್ಲಾ ನಾವು ಗಮನಿಸುವುದಾದರೆ, ಕಮ್ಯೂನಿಸ್ಟರ ಧುರೀಣತ್ವದಲ್ಲಿ ಪ್ರಾರಂಭವಾದ ಈ ಆಂದೋಲನವು ಜನತೆಯ ಮೇಲೆ ಕಮ್ಯೂನಿಜಂನ ತಂತ್ರಜಾಲವನ್ನು ಬೀಸುವ ಕುತಂತ್ರವೇ ಯಾರಾದರೂ ಹೇಳಬಹುದು. ಸತ್ಯಾಗ್ರಹವೆಂಬುದು ಪವಿತ್ರವಾದ ಅಸ್ತ್ರ. ದೇಶದ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಳ್ಳಲು ಸಂಶೋಧಿಸಿದ ರಕ್ತ ಬಯಸದ ಮಹಾ ಪವಿತ್ರಾಸ್ತ್ರವದು. ಮಹಾತ್ಮಾ ಗಾಂಧಿಯವರು ಒಂದಲ್ಲ ಹಲವು ಬಾರಿ ಸತ್ಯಾಗ್ರಹ ಹೂಡಿದ್ದರು ನಿಜ; ಆದರೆ, ಸತ್ಯಾಗ್ರಹವು ದುರಾಗ್ರಹವಾಗದಂತೆ ಅವರು ಎಚ್ಚರ ವಹಿಸಿದ್ದರು. ಅದು ದುರಾಗ್ರಹವಾಗುವುದೆಂಬ ಸಂದೇಹ ಹುಟ್ಟಿತೆಂದರೆ ಅವರು ಸತ್ಯಾಗ್ರಹವನ್ನೇ ಹೂಡುತ್ತಿರಲಿಲ್ಲ. ಸತ್ಯಾಗ್ರಹವನ್ನು ಹಗುರವಾಗಿ ಅಲ್ಪ ವಿಷಯವೆಂದು ತಿಳಿಯಬಾರದೆಂದವರು ಸದಾ ತನ್ನ ಅನುಯಾಯಿಗಳಿಗೆ ಎಚ್ಚರಿಸುತ್ತಿದ್ದರು. ಉಚಿತ ಉದ್ದೇಶಕ್ಕಾಗಿ ಉಚಿತ ರೀತಿಯಲ್ಲಿ ಅದು ಉಪಯೋಗಿಸಲ್ಪಡದೆ ಹೋದರೆ, ಸತ್ಯಾಗ್ರಹದ ಹೆಸರಿಗೆ ಕಲಂಕ ಬಡಿದು ಅದು ಹಿಂಸಾ ಪ್ರಚೋದಕ ಶಕ್ತಿಯಾಗುವುದೆಂದವರು ಹೇಳುತ್ತಿದ್ದರು. ಇಂದು ಹೂಡಲಾದ ಈ ಸತ್ಯಾಗ್ರಹವು ಯಾವ ರೀತಿಯಲ್ಲಿ ನಡೆದಿದೆಯೆಂದು ಪ್ರತಿಯೊಬ್ಬರೂ ಊಹಿಸಬಲ್ಲರು. ಕಮ್ಯುನಿಸ್ಟರ ಕೆಂಪು ಕ್ರಾಂತಿಯಾಗಬೇಕು ಎಂಬುದೇ ಇದರ ಹಿಂದಿರುವ ಗುಟ್ಟು.

ಟ್ರೇಡ್ ಯೂನಿಯನು ತೊಡಗಿದ್ದ ಈ ಬಗೆಯ ಆಂದೋಲನವು ಯಾವ ರೀತಿಯಲ್ಲಿ ಯಶಸ್ವಿಯಾದೀತು ಎಂದು ಅದಕ್ಕೂ ತಿಳಿಯಲಾರದು. ತಮ್ಮ ಉದ್ದೇಶ ಸಾಧನೆಗಿಂತಲೂ ಜನತೆಯನ್ನು ಗೊಂದಲಮಯವಾತಾವರಣಕ್ಕೆಳೆಯುವ ಚಾಲವಿದು ಎಂದರೆ ತಪ್ಪಾಗದು. ಪಾರ್ಲಿಮೆಂಟರಿ ಪ್ರಜಾ ಪ್ರಭುತ್ವದಲ್ಲಿ ವಿಶ್ವಾಸವಿಟ್ಟಿದ್ದೇವೆಯೆನ್ನುವ ಕಮ್ಯುನಿಸ್ಟರು ಈ ಬಗೆಯ ಆಂದೋಲನವನ್ನು ಹೂಡಬೇಕಾದ ಅಗತ್ಯವಿರಲಿಲ್ಲ. ಬೆಲೆಯೇರಿಕೆಯೆಂಬುದು ಕಮ್ಯೂನಿಸ್ಟರಿಗೆ ಮಾತ್ರ ಹೊಡೆದ ಭೂತವಲ್ಲ; ಅದನ್ನು ತಡೆಹಿಡಿಬೇಕೆಂಬ ಆಶಯ ಇರುವುದು ಅವರಿಗೆ ಮಾತ್ರವಲ್ಲ; ವಿರೋಧಿ ಪಕ್ಷಗಳಂತೆಯೇ ಆಳುವ ಪಕ್ಷ ಕೂಡಾ ಬೆಲೆಯೇರಿಕೆಯನ್ನು ತಡೆಯಲು ತೀವ್ರಾಸಕ್ತಿ ತಾಳಿದೆ. ಅರ್ಥಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ಈ ಸಂಬಂಧದಲ್ಲಿ ಹೊಸ ಯೋಜನೆಯೊಂದನ್ನು ರೂಪಿಸುವ ಸಾಧ್ಯತೆಯಿದೆ; ಗೃಹಮಂತ್ರಿ ನಂದಾರವರು ಅವರೊಡನೆ ಸಹಕರಿಸಲಿದ್ದಾರೆ. ಉತ್ಪಾದನೆಯನ್ನು ಹೆಚ್ಚಿಸಿ, ಅನುಭೋಗವನ್ನು ಕಡಿಮೆ ಮಾಡದೆ ಹೋದರೆ, ಬೆಲೆಯೇರಿಕೆಯನ್ನು ಹತೋಟಿಗೆ ತರುವುದು ಕಠಿನವಾಗಬಹುದು. ಹಾಗಿದ್ದರೂ ತನ್ನ ಕೈಲಾದ ಆವಶ್ಯಕ ಕ್ರಮಗಳನ್ನು ಸರಕಾರ ಕೈಗೊಳ್ಳಲು ಆಸಕ್ತವಾಗಿರುವಾಗ, ಕಮ್ಯೂನಿಸ್ಟರ ಈ ನಾಟಕವು ನಿಜಕ್ಕೂ ಅನಪೇಕ್ಷಣೀಯ; ಮಾತ್ರವಲ್ಲ ಖಂಡನಾರ್ಹವೂ ಆಗಿದೆಯೆಂದರೆ ತಪ್ಪಾಗಲಾರದು. ರಾಜಕೀಯ ಗಿಮಿಕ್ಕುಗಳಿಗಾಗಿ ಜನತೆಯನ್ನು

ಜಗತ್ಪರ್ಯಟನ

ಲಾಲ ಬಹಾದೂರ್

ಕಾಶ್ಮೀರದಲ್ಲಿ ನಡೆದ ರಾಜಕೀಯ ಅಶಾಂತಿಯನ್ನು ಕೊನೆಗಾಣಿಸಲು ಖಾತೆಯಿಲ್ಲದ ಮಂತ್ರಿ, ಲಾಲ ಬಹದೂರ ಶಾಸ್ತ್ರಿಯವರು ಒಂದಲ್ಲ ಹಲವುಬಾರಿ ಶ್ರೀನಗರಕ್ಕೆ ಹೋದರು. ಕೇರಳದ ಪ್ರಶ್ನೆಯು ಜಟಿಲವಾದಾಗ ಅದನ್ನು ಸರಿಗೊಳಿಸಲು ಪಟ್ಟಂಥಾನು ಪಿಳ್ಳೆಯವರನ್ನು ಪಂಜಾಬದ ರಾಜ್ಯಪಾಲರೆಂದು ನೇಮಿಸಿ ಅಸಾಧಾರ ಬುದ್ಧಿ ಶಕ್ತಿಯನ್ನು ತೋರಿಸಿದರು. ಈಗ, ಕಂಠುದ್ದೀನರ ನಾಯಕತ್ವ ಸರ್ವಜನಾದ ಪ್ರದರ್ಶಿಸಿ, ಜನತೆಯ ಮನಃಶಾಂತಿಯನ್ನು ಕೆಡಿಸುವ ಉದ್ದೇಶದಿಂದ ಪ್ರಾರಂಭವಾದ ಈ ಆಂದೋಲನದ ನಾಟಕದ ಬಗ್ಗೆ ಪ್ರಾಜ್ಞರಾಗವರು ಅನುಕಂಪ ಪಡಲಾರರು. ವಿಧಾಯಕ ಕ್ರಮಗಳಿಂದಲೇ ಬೆಲೆಯಿಳಿಕೆ ಸಾಧ್ಯವೆಂದವರು ನಂಬಿದ್ದಾರೆ; ಅದಕ್ಕಾಗಿ ದುಡಿಯುತ್ತಾರೆ.

ಶಾಂತತೆಯತ್ತ

ಭಾರಿ ಚರ್ಚೆ–ಗೊಂದಲಗಳ ನಂತರವಾದರೂ ಕೇರಳ ಸಚಿವ ಸಂಪುಟದಿಂದ ಶ್ರೀ ಪಿ. ಟಿ ಚಾಕೊ ಅವರು ಹೊರಬಂದರು ಎನ್ನುವುದಕ್ಕಿಂತ ದಬ್ಬಿಸಿ ಹೊರಬೀಳುವುದನ್ನು ತಪ್ಪಿಸಿಕೊಂಡರು ಎನ್ನಬಹುದು. ಇದು ಮುಖ್ಯಮಂತ್ರಿ ಶ್ರೀ ಆರ್ ಶಂಕರರ ವಿಜಯವೆನ್ನುವುದಕ್ಕಿಂತ ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ನಾಡಾರರ ವಿಜಯವೆನ್ನುವುದು ಸೂಕ್ತ. ಪ್ರಜಾಪ್ರಭುತ್ವದಲ್ಲಿ ಅಪ್ರಿಯನಾದವನು ಅಧಿಕಾರದಲ್ಲಿ, ಆತನೆಷ್ಟೇ ಜಾಣನಿರಲಿ, ನಿಲ್ಲಬಾರದು ಎಂಬ ಕಾಮರಾಜರ ನೀತಿಯ ನೈತಿಕ ವಿಜಯವಿದು. ಚಾಕೋರವರು ರಾಜಿನಾಮೆ ನೀಡದೆ ಹೋದರೆ, ಆರ್. ಶಂಕರರೇ ತನ್ನ ಸಂಪುಟದ ರಾಜಿನಾಮೆ ನೀಡಿ, ಮತ್ತೆ ಚಾಕೋರನ್ನು ಬಿಟ್ಟು ಮಂತ್ರಿ ಮಂಡಳಿ ರಚಿಸುವ ಯೋಚನೆಯನ್ನೂ ಮಾಡಿದ್ದರು. ಒಂದು ವೇಳೆ ಹೀಗಾಗುತ್ತಿದ್ದರೆ, ಪಕ್ಷದ ಶಿಸ್ತು ಬಹಳ ಅಸ್ತವ್ಯಸ್ತವಾಗುತ್ತಿತ್ತು. ಆದರೆ, ಚಾಕೋ ಮೊದಲು ತಾತ್ಕಾಲಿಕ ವ್ಯವಸ್ಥೆಯೆಂದು ಗೃಹ ಖಾತೆಯನ್ನು ಬಿಟ್ಟುಕೊಟ್ಟರೂ ಮುಂದೆ ನಿರ್ವಂಚಕ ಮನಸ್ಸಿನಿಂದ ವಿವೇಚಿಸಿ ನ್ಯಾಯವಾದ ದಾರಿಯನ್ನೇ ಹಿಡಿದುದರಿಂದ ವೈಗೆ ಬರಲಿದ್ದ ಆಘಾತ ಕೂದಲಲ್ಲಿ ಹೋಯಿತೆನ್ನಬೇಕು. ಇಂತಹ ವಾತಾವರಣವನ್ನು ನಿರ್ಮಿಸಲು ಶಕ್ತರಾದ ಕಾಮರಾಜರನ್ನು ಅವಶ್ಯ ಅಭಿನಂದಿಸಲೇ ಬೇಕು. ಆರ್. ಶಂಕರರು ತನ್ನ ಮಂತ್ರಿಮಂಡಳಿಯಲ್ಲಿ ಒಬ್ಬರು ಹೊಸಬರನ್ನು ಸೇರಿಸಿ, ಹಂಚುವ ಖಾತೆಗಳಲ್ಲಿ ಹೆಚ್ಚಿನ ಬದಲಾವಣೆ ಮಾಡದೇನೇ ಮುಂದುವರಿಯುವರೆಂದು ಗೊತ್ತಾಗಿದೆ. ನಿಷ್ಠಾವಂತ ಕಾಂಗ್ರೆಸಿಗನಂತೆ ತಾನು ನಡೆಯುವೆನೆಂದು ಮಾತಿತ್ತ ಮಾಜಿ ಮಂತ್ರಿ ಚಾಕೊ ಈ ಅವಧಿಯ ವರೆಗೆ ಮಾತ್ರವಲ್ಲ ಕೊನೆಯ ವರೆಗೂ ಹಾಗೆಯೇ ಮುಂದುವರಿಯಬೇಕು; ಇದರಿಂದ ಅವರ ವ್ಯಕ್ತಿತ್ವದ ತೂಕವೂ ಹೆಚ್ಚುವುದು; ಕೇರಳಕ್ಕೂ ಶುಭವಾಗುವುದು.

ರಣೀಯವಲ್ಲವೆಂದು ತಿಳಿದ ಅವರು ಪ್ರಿಲ್ಲಿಯೂನಾಯಕತ್ವದಲ್ಲಿ ಪರಿವರ್ತನೆ ಸಾಧಿಸಿದ್ದಾರೆ ಮಾಜಿ ಪ್ರಧಾನಿ ಬಕ್ಷಿ ಗುಲಾಂ ಮಹಮ್ಮದರ ಮಂತ್ರಿಮಂಡಳಿಯ ಸದಸ್ಯರಾಗಿದ್ದ ಶ್ರೀ ಸಾದಿಕ್ ಆಲಿಯವರು ಮುಂಗಿನ ನಾಯಕರಾಗುವರು. ಬಕ್ಷಿಯವರ ಪ್ರಭಾವದಿಂದ ದೂರವಿರದ ಹೊಸ ಸರಕಾರವು ಜನಪ್ರಿಯತೆಯನ್ನು ಪಡೆಯಲಾರದೆಂದೂ ಆದಕ್ಕಾಗಿ ಅವರು ಕೆಲಸಮಯದ ವರೆಗಾದರೂ ರಾಜಕೀಯದಿಂದ ದೂರವಿರಬೇಕೆಂದೂ ಅವರ ಅಭಿಮತ. ಕಾಶ್ಮೀರದಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಈ ಕ್ರಮವಲ್ಲಿ ಅತ್ಯಗತ್ಯ.

ಟಿ. ಟಿ. ಕೆ.

ಇದೀಗ ಎಲ್ಲರೂ ನೋಡುತ್ತಿರುವ ವ್ಯಕ್ತಿ ಕೇಂದ್ರವಿತ್ತ ಸಚಿವ ಟಿ. ಟಿ. ಕೃಷ್ಣಮಾಚಾರಿಯವರನ್ನು. ಮುಂಗಡಪತ್ರವನ್ನು ಇಷ್ಟರಲ್ಲಿಯೇ ಮಂಡಿಸಲಿರುವುದರಿಂದಲೇ ಅವರಿಗೀಗ ಮಹತ್ವ. ಹಿನ್ನ ವರ್ಗದವರಿಗೆ ವಿಶೇಷ ಸೌಕರ್ಯಗಳನ್ನು ಕಲ್ಪಿಸಿ ಕೊಡುವುದು ಮತ್ತು ದೇಶದ ಆರ್ಥಿಕ ಪುನಾರಚನೆಯ ಯೋಜನೆಯು ಕುಂಠಿತವಾಗದಂತೆ ನೋಡಿಕೊಳ್ಳುವುದು ಅವರು ತನ್ನ ಮುಂದಿಟ್ಟುಕೊಂಡಿರುವ ಮುಖ್ಯ ಉದ್ದೇಶಗಳು. ಪಾರ್ಲಿಮೆಂಟರಿ ಕಾಂಗ್ರೆಸ್ ಪಕ್ಷದಲ್ಲಿ ಅವರೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರಿಂದ, ಮುಂಗಡಪತ್ರ ರಚನೆಯಲ್ಲವರನುಸರಿಸಿದ ನೀತಿಯು ಇದಕ್ಕೆ ವ್ಯತಿರೇಕವಿರಲಾರದೆಂದು ನಂಬಬಹುದು. ಕಡಿಮೆ ಆದಾಯದವರಿಗೆ ಯಾವ ಬಗೆಯ ಸವಲತ್ತುಗಳನ್ನು ಇವರು ನೀಡಲಿರುವರು, ಹಾಗೂ ಅಧಿಕ ಆದಾಯವಂತರನ್ನು ಹೇಗೆ ಹೊಡೆಯುವರು ಎಂದೀಗ ಎಲ್ಲರೂ ಆಸಕ್ತರಾಗಿದ್ದಾರೆ.

ರೆಡ್ಡಿದ್ವಯರು

ಕರ್ನೂಲು ಬಸ್ಸು ಸಾರಿಗೆಯ ರಾಷ್ಟ್ರೀಕರಣದ ಪ್ರಕರಣದಲ್ಲಿ ವರಿಷ್ಠ ನ್ಯಾಯಾಲಯವಿತ್ತ ತೀರ್ಪಿನಿಂದಾಗಿ ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ನೀಲಂ ಸಂಜೀವ ರೆಡ್ಡಿಯವರು ರಾಜಿನಾಮೆಯಿತ್ತಿದ್ದು ಅವರ ಸ್ಥಾನದಲ್ಲಿ ಸದ್ಯ ಅರ್ಥ, ಸಹಕಾರ ಮತ್ತು ವಾರ್ತಾ ಖಾತೆಗಳ ಮಂತ್ರಿಗಳಾದ ಕಾಸು ಬ್ರಹ್ಮಾನಂದ ರೆಡ್ಡಿಯವರು ಬರಲಿದ್ದಾರೆ. ದೀರ್ಘ ಅನುಭವವಿರುವ ನೂತನ ಮುಖ್ಯಮಂತ್ರಿಯವರು ಇದೇ ತಿಂಗಳ ಕೊನೆಯ ದಿನ ಅಧಿಕಾರ ವಹಿಸುವರೆಂದು ತಿಳಿದಿದೆ. ನಿವೃತ್ತರಾಗಲಿರುವ ನೀಲಂ ಅವರು ಕಾಂಗ್ರೆಸ್ ಪಕ್ಷದ ನಾಯಕರಾಗಿ ಮುಂದುವರಿಯಲು ಒಪ್ಪಿಗೆಯನ್ನಿತ್ತಿದ್ದಾರೆ. ಹಾಗಾಗಿ ಆಂಧ್ರದಲ್ಲಿ ದ್ವಿನಾಯಕತ್ವದ ಯೋಜನೆಯೊಂದು ರೂಪಿತವಾಗುವಂತೆ ಭಾಸವಾದರೂ ಅದರಿಂದ ಯಾವ ಆತಂಕವೂ ಹುಟ್ಟಲಾರದು ಎಂಬ ಕಾಮರಾಜರ ಹಾರೈಕೆಯು ಸಿದ್ಧಿಸಲೆಂದು ಎಲ್ಲರ ಅಭಿಲಾಷೆ.

ಟಿ. ಸುಬ್ರಹ್ಮಣ್ಯಂ

ಮಾಜಿ ಮಂತ್ರಿಗಳಾಗಿರುವ ಮೈಸೂರಿನ ಶ್ರೀ ಸುಬ್ರಹ್ಮಣ್ಯಂ ಇತ್ತೀಚೆಗೆ ಕಾಂಗ್ರೆಸಿನ ಬಗ್ಗೆ ಅಸಂತೃಪ್ತಿಯನ್ನು ವ್ಯಕ್ತಪಡಿಸಿ ಆಪಾದನೆಗಳನ್ನು ಹೊರಿಸಿದುದರಿಂದ ಕಾಂಗ್ರೆಸ್ಸಿನಿಂದ ಹೊರಹೋಗಬೇಕಾದ ಸ

ಅಲ್ಲಲ್ಲಿಯ ಸುದ್ದಿ ಸಾರ

ದಾಸ ಪ್ರಸಾದದಲ್ಲಿ ಮಧ್ವನವಮಿ ಉತ್ಸವ— ಮದ್ರಾಸಿನ ಶ್ರೀ ಮಧ್ವ ಸಂಘವು ಈ ವರ್ಷದ ಮಧ್ವನವಮಿಯ ಉತ್ಸವವನ್ನು ಶ್ರೀ ಕೆ. ಸೀತಾರಾಮ ರಾಯರ ಸ್ವಗೃಹವಾದ ದಾಸಪ್ರಸಾದದಲ್ಲಿ ಜನವರಿ ತಾ. 23, 24ರಂದು ವಿಜೃಂಭಣೆಯಿಂದ ನಡೆಸಿತು.

ದೇಶದ ಬೇರೆ ಬೇರೆ ಭಾಗಗಳಿಂದ ಹಲವಾರು ವಿದ್ವಾಂಸರು ಆಗಮಿಸಿದ್ದರು. ತಾ. 23ರಂದು ವಿದ್ವಾನ್ ಗಲಗಲಿ ಪಂಢರೀನಾಥಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಸೇರಿ, ವಿದ್ವಾನ್ ಬನ್ನಂಜೆ ಅನಂತಕೃಷ್ಣಾಚಾರ್ಯರು "ಗುರುಭಕ್ತಿ" ಎಂಬ ವಿಚಾರವಾಗಿ ರಸವತ್ತಾಗಿ ಮಾತಾಡಿದರು. ಸಂಜೆ ಅಲಂಕೃತ ಶ್ರೀ ಮಧ್ವಾಚಾರ್ಯರ ತೈಲಚಿತ್ರದ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು.

ತಾ. 24ರಂದು ಶ್ರೀ ಭಕ್ತ ಗೋವಿಂದ ದಾಸರವರ ಸ್ಮಾರಕವಾಗಿ ಉತ್ತರಾಧನೆಯನ್ನು ಉತ್ಕೃಷ್ಟ ರೀತಿಯಲ್ಲಿ ನಡೆಸಲಾಯಿತು. ವಿದ್ವಾನ್ ಅನಂತಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಸೇರಿ, ವಿದ್ವಾನ್ ಪಂಢರೀನಾಥಾಚಾರ್ಯರು ಧರ್ಮಪ್ರಕಾಶ ಮುದ್ರಣಾಲಯದಲ್ಲಿ ಮುದ್ರಿತವಾದ ಭಕ್ತ ಶ್ರೀ ಗೋವಿಂದ ದಾಸರ ಭಜನ ಪದ್ಧತಿಯ ಪುಸ್ತಕದ ಪ್ರಕಾಶನವಾಯಿತು. ತಾ. 25ರಂದು ಬಡಬಗ್ಗರಿಗೆ ಅನ್ನದಾನ ಮಾಡಲಾಯಿತು.

ಬಂಟರ ಯೂನೆ ನಾಡವರ ಸಂಘ, ಮುಂಬಯಿ— ಈ ಸಂಘದ ಧರ್ಮಾರ್ಥ ಪುಸ್ತಕ ಭಂಡಾರ ಮತ್ತು ವಾಚನಾಲಯದ ಉದ್ಘಾಟನಾ ಸಮಾರಂಭವು ತಾರೀಕು 9—2 64ಕ್ಕೆ ಡಾ. (ಶ್ರೀಮತಿ) ಬಿ. ಶಾರದ ಶೆಟ್ಟಿ, M A, M Ed., Ph. D. ಯವರಿಂದ ಬಹು ವಿಜೃಂಭಣೆಯಿಂದ ನೆರವೇರಿತು.

ಕುಮಾರಿ ಶಶಿಕಲಾ, ಸುರೇಖಾ, ಕಲ್ಪನಾ ಮತ್ತು ಪ್ರೇಮ ಶೆಟ್ಟಿಯವರು ಪ್ರಾರ್ಥನೆ ಮಾಡಲು ಸಂಘದ ಅಧ್ಯಕ್ಷ ಡಾ ಯಚ್. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಅತಿಥಿಯವರು ಪುಸ್ತಕ ಭಂಡಾರದ ಉದ್ಘಾಟನೆ ಮಾಡಿ ಭಾಷಣವಿತ್ತ ನಂತರ ಸಭಿಕರ ಪೈಕಿ ಕೆಳವಾರು ಶ್ಯಾಮ ಶೆಟ್ಟಿ, ಶ್ಯಾಮ ಬಿ. ಶೆಟ್ಟಿ, ಡಾ| ಹರಿದಾಸ ಶೆಟ್ಟಿ ಮತ್ತು ರಾಮಣ್ಣ ಶೆಟ್ಟಿ ಭಾಷಣವನ್ನಿತ್ತರು. ಸಂಘದ ಕಾರ್ಯದರ್ಶಿ ಕಳತ್ತೂರು ಕರುಣಾಕರ ಶೆಟ್ಟಿ ಪುಸ್ತಕ ಭಂಡಾರದ ಕಟ್ಟು ನಿಬಂಧನೆಗಳನ್ನು ವಿವರಿಸಿ ಸರ್ವರಿಗೂ ಉಪಕಾರ ಸ್ಮರಣೆ ಮಾಡಿದರು.

ಮಯ ಬಂದಿದೆ ಕೆಲವು ವಾರಗಳಿಗೆ ಮೊದಲು ಅವರು ಕಾಂಗ್ರೆಸಿನ ಲೋಪದೋಷಗಳ ಬಗ್ಗೆ ಬಹಳಷ್ಟನ್ನು ಬಹಿರಂಗವಾಗಿ ಮಾತಾಡಿದ್ದುದನ್ನು ನೆನಪಿಸಿಕೊಳ್ಳಬಹುದು. ಕಾಂಗ್ರೆಸ್ಸು ತನ್ನ ನೀತಿಯನ್ನು ವಿರುದ್ಧಗೊಳಿಸದೆ ಹೋದರೆ, ಅದಕ್ಕೆ ವಿರುದ್ಧವಾದ ಹೊಸ ಪಕ್ಷವೊಂದನ್ನು ಕಟ್ಟಬೇಕಾಗುವುದೆನ್ನುವಷ್ಟು ಅವರು ಮುಂದುವರಿದಿದ್ದರು. ಪ್ರಾದೇಶಿಕ ಕಾಂಗ್ರೆಸ್ಸು ಇತ್ತ ನೋಟೀಸಿಗೆ ಉತ್ತರವಿಯುವಾಗಲೂ ಅವರು ತಮ್ಮ ವಾದಕ್ಕೆ ಅಂಟಿಕೊಂಡುದರಿಂದ ಕಾಂಗ್ರೆಸ್ಸು ಆರು ವರುಷಗಳಕಾಲ ಪಕ್ಷದಿಂದ ಅವರನು ಹೊರಗಿಡಲು ನಿರ್ಧರಿಸಿದೆ. ಇದರಿಂದ ಲಾಭ ಯಾರಿಗೆ?

ವಿವಾಹ ಸಮಾರಂಭ

ಮೂಡುಗೆರೆಯ ಡಾ| ಪಿ. ಅನಂತರಾಮ ಅಯ್ಯಂಗಾರರ ಪುತ್ರ ಶ್ರೀ ರಾಜಾರಾಮ ಸೋಹನನು ದಿ| ಅಂಜಾರು ಮೂಂಬೆಟ್ಟು ನಾಗಣ್ಣ ಹೆಗ್ಡೆಯವರ ಪುತ್ರಿ ಕುಮಾರಿ ಶಶಿಕಲಾ ಳನ್ನು ತಾ 21—2 64ರಂದು ಮಂಗಳೂರಿನ ಡಾನ್‌ಬೋಸ್ಕೊ ಹಾಲಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಪುತ್ರ ಶ್ರೀ ಕೆ. ಶಂಕರ ಹೆಗ್ಡೆಯವರು ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಇನ್ನಾ ಆನಂದ ಶೆಟ್ಟರ ಪುತ್ರಿ ಕುಮಾರಿ ಸರೋಜಳನ್ನು ತಾ. 21_2_64 ರಂದು ಪಟ್ಲಂಡ್ ಪೇಟೆಯಲ್ಲಿರುವ ಅಲ್‌ಸ್ಟ ಎಂಬ ವಧೂಗೃಹದಲ್ಲಿ ವೈಭವದಿಂದ ವಿವಾಹ ಮಾಡಿಕೊಂಡರು.

ವಜ್ರಮಹೋತ್ಸವ— ಮುಂಬಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿಯು ಇದೇ ಬರುವ ಮಾರ್ಚಿ ತಾರೀಕು 6, 7 ಮತ್ತು 8ರಂದು ವಜ್ರ ಮಹೋತ್ಸವವನ್ನು ಮುಂಬಯಿಯ ಸರ್. ಸಿ. ಜಿ. ಹೋಲಿನಲ್ಲಿ ನೆರವೇರಿಸಲಿರುವುದು. ಕಳೆದ 60 ವರ್ಷಗಳಿಂದ ಮುಂಬಯಿಯ ನಗರದಲ್ಲಿ ಮೊಗವೀರ ರಾತ್ರಿ ಪ್ರೌಢ ಶಾಲೆಯ ಮೂಲಕ ಜಾತಿ ಮತ ಭೇದವಿಲ್ಲದೆ ವಿದ್ಯಾ ದಾನ ಮಾಡಿ ಸರ್ವರ ಪ್ರೀತ್ಯಾದರಗಳನ್ನು ಗಳಿಸಿರುವ ಈ ಸಂಘವು ಕನ್ನಡನಾಡು ಮತ್ತು ಭಾಷೆಯ ಸೇವೆಯನ್ನು ಮಾಡಿರುವುದು.

ಈ ವಜ್ರ ಮಹೋತ್ಸವದ ಉದ್ಘಾಟನೆಯನ್ನು ಮಹಾ ರಾಷ್ಟ್ರದ ರಾಜ್ಯಪಾಲರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತಾ 6_3_64ರಂದು ಮಾಡಲಿರುವರು.

ಕನ್ನಡ ಪ್ರೇಮಿ ಮಂಡಳಿ— ಮುಂಬಯಿಯ ಖಾಲ್ಸಾ ಕೋಲೇಜಿನ ಈ ಮಂಡಳಿಯ ವಾರ್ಷಿಕೋತ್ಸವವು ತಾ 9-2-64ರಂದು ಪ್ರಮುಖ ಚಿತ್ರ ನಿರ್ಮಾಪಕರೂ ನಿರ್ದೇಶಕರೂ ಆದ ಶ್ರೀ ಸದಾಶಿವ ಜೆ. ರಾವ್, ಕವಿ ಇವರ ಮುಖ್ಯ ಅತಿಥ್ಯದಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಲ್. ಜಿ. ಪೇಠೇಕರರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯಾಧ್ಯಕ್ಷ ಪ್ರೊ| ಜಿ. ವಿ. ಕುಲಕರ್ಣಿ ಇವರು ಸ್ವಾಗತಿಸಿದರು. ಜತೆ ಕಾರ್ಯದರ್ಶಿ ವಿ ಬಿ ಅಮೀನರು ವರದಿಯನ್ನೊಪ್ಪಿಸಿದರು. ಮುಖ್ಯ ಅತಿಥಿಗಳು ಮಾತನಾಡುತ್ತಾ ಇಂದಿನ ಚಿತ್ರೋದ್ಯಮದ ಸಂಕಷ್ಟಗಳನ್ನೂ ಕನ್ನಡ ಚಿತ್ರ ತಯಾರಿಕೆಗಿರುವ ತೊಂದರೆಗಳನ್ನು ವಿವರಿಸಿದರು. ಅಧ್ಯಕ್ಷರ ಭಾಷಣವಾದ ಬಳಿಕ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರ ಪಕ್ಕಳರು ವಂದನಾರ್ಪಣೆಗೈದರು.

ಧರ್ಮ ಛತ್ರದ ಉದ್ಘಾಟನೆ— ತಾ 21_2_64ರಂದು ಉಡುಪಿ ಅದಮಾರು ಮಠದ ನವೀನ ಛತ್ರದ ಉದ್ಘಾಟನಾ ಸಮಾರಂಭವು ರಾಜ್ಯಪಾಲ ಶ್ರೀ ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರಿಂದ ನೆರವೇರಿತು, ಇದೇ ಸಂದರ್ಭದಲ್ಲಿ ಉಡುಪಿ ಅಷ್ಟ ಮಠಗಳ ಸಂಯುಕ್ತ ಪ್ರಯತ್ನದಿಂದ ನಿರ್ಮಾಣಗೊಳ್ಳಲಿರುವ ಏಳು ಲಕ್ಷ ರೂ. ಗಳ ವೆಚ್ಚದ ಧರ್ಮ ಛತ್ರಕ್ಕೂ ಶ್ರೀ ಒಡೆಯರವರಿಂದ ಶಿಲಾನ್ಯಾಸವಾಯಿತು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯದ ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರು ವಹಿಸಿದರು.

ಪ್ರಾರಂಭದಲ್ಲಿ ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಸ್ವಾಮಿಗಳವರು ಸ್ವಾಗತಿಸಿದರು. ಉಡುಪಿ ನಗರಸಭೆಯ ಪರವಾಗಿ ಶ್ರೀ ರಂಗನಾಥ ಶೆಣೈಯವರೂ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಪರವಾಗಿ ಪ್ರಿನ್ಸಿಪಾಲ್ ಶ್ರೀ ಇವಂದಾರೆಯೂ ರಾಜ್ಯಪಾಲರಿಗೆ ಸನ್ಮಾನ ಪತ್ರಗಳನ್ನರ್ಪಿಸಿದರು.

ಶಿಲಾನ್ಯಾಸ ಸಮಾರಂಭದ ಆದಿಯಲ್ಲಿ ಶೀರೂರು ಮಠದ ಸ್ವಾಮಿಯವರು ಸ್ವಾಗತಿಸಿದರು ಪರ್ಯಾಯದ ಶ್ರೀ ಸೋದೆ ವಾದಿರಾಜ ಮಠದ ಸ್ವಾಮೀಜಿಯವರು ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸಿಂಡಿಕೇಟ್ ಬ್ಯಾಂಕಿನ ಹೊಸ ಡೈರೆಕ್ಟರರು— ಮದ್ರಾಸು ವಿಧಾನ ಸಭೆಯ ಸದಸ್ಯರೂ, ಅದರ ಅಂದಾಜು ಸಮಿತಿಯ ಅಧ್ಯಕ್ಷರೂ, ಕೆ ಪಿ. ವಿ ಶೇಖ್ ಮಹಮ್ಮದ್ ರೋವ್‌ತರ್ ಎಂಡ್ ಕೊ (ಇಂಡಿಯ ಸ್ಟೀಮ್ ನೇವಿಗೇಶನ್ ಎಂಡ್ ಶಿಪ್ಪಿಂಗ್ ಕೋರ್ಪರೇಶನ್ ಆಫ್ ಇಂಡಿಯಾ ಲಿಮಿಟೆಡ್, ಮದ್ರಾಸ್, ಇವರ ಏಜಂಟರು) ಇದರ ಪಾಲುಗಾರರೂ ಆಗಿರುವ ಶ್ರೀ ಕೆ. ಎಸ್. ಜಿ. ಹಾಜಾಶರೀಫ್ ಇವರು ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರ್ ಮಂಡಳಿಯನ್ನು ಸೇರಿರುವರೆಂದು ಗೊತ್ತಾಗಿದೆ.

ಮುಲ್ಕಿ— ಸ್ಥಳೀಯ ಬಿಲ್ಲವರ ಸೇವಾ ಸಂಘದ ಶ್ರೀ ವಿಠೋಬ ಭಜನಾ ಮಂದಿರದ ದಿ| ಕಿದಿಯೂರು ಬಾಬ ಪೂಜಾರಿಯವರ ಸ್ಮಾರಕಾರ್ಥವಾಗಿ ಅವರ ಉತ್ತರಾಧಿಕಾರಿಗಳಿಂದ ರಚಿಸಲ್ಪಟ್ಟ ಬ್ರಹ್ಮ ಶ್ರೀ ನಾರಾಯಣ ಗುರುದೇವರ ಗೃಹಪೀಠವನ್ನು ಶಿವಗಿರಿ ಮಠಾಧಿಪತಿ ಬ್ರಹ್ಮ ಶ್ರೀ ಶಂಕರಾನಂದ ಸ್ವಾಮೀಜೀಯವರು ತಾ 21ರಂದು ಉದ್ಘಾಟಿಸಿದರು. ಸ್ವಾಮಿ ಗೀತಾನಂದರು ಗುರುದೇವರ ದಿವ್ಯ ಸಂದೇಶವನ್ನು ವಿವರಿಸಿದರು. ಆರಂಭದಲ್ಲಿ ಸಮಿತಿ ಅಧ್ಯಕ್ಷ ಶ್ರೀ ಯಂ. ರಾಘುವೇಂದ್ರ ಮುಲ್ಯೆಯವರು ಸ್ವಾಗತ ಭಾಷಣವಿತ್ತರು. ಉಡುಪಿ ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ದಿ| ಅಣ್ಣಯ್ಯ ಪೂಜಾರಿಯವರ ಭಾವಚಿತ್ರವನ್ನೂ, ಶ್ರೀ ಎ. ಜೆ ಆಳ್ವರು ದಿ| ಕೆ. ಬಾಬ ಪೂಜಾರಿಯವರ ಭಾವಚಿತ್ರವನ್ನೂ ಅನಾವರಣಗೈದರು. ಶ್ರೀ ಟಿ. ಎ. ವಾಸುದೇವನ್‌ರವರು ಸಭಾಧ್ಯಕ್ಷತೆ ವಹಿಸಿದ್ದರು ಕಾರ್ಯದರ್ಶಿ ಶ್ರೀ ವೈ. ಸದಾನಂದರು ಧನ್ಯವಾದವಿತ್ತರು.

ಮಣಿಪಾಲ— ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್‌ರವರು ತಾ. 21ರಂದು ಕಸ್ತೂರಬಾ ಮೆಡಿಕಲ್ ಕಾಲೇಜಿನ ಎನಾಟಮಿ ಮ್ಯೂಜಿಯಮಿಗೆ ಭೇಟಿಯಿತ್ತರು ಅನಂತರ ಅವರು ಕಾಲೇಜಿನಲ್ಲಿ ಕಲಿಕೆಯ ಇತರ ಸಂಸ್ಥೆಗಳನ್ನು ನೋಡಿದರು.

ಅಮೆರಿಕದ ಮಸ್ಯಾಚೂಸೆಟ್ಸ್ ಜನರಲ್ ಆಸ್ಪತ್ರೆಯ ಮಕ್ಕಳ ಶಸ್ತ್ರ ಚಿಕಿತ್ಸಾ ತಜ್ಞರಾದ ಡಾ| ರಾಲ್ಫ್ ಎಲ್. ಗೊರ್ಡೆಲ್‌ರವರು ತಾ 21ರಲ್ಲಿ ಕಸ್ತೂರಬಾ ಮೆಡಿಕಲ್ ಕಾಲೇಜಿನ ಅಧ್ಯಾಪಕರನ್ನು ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣಮಾಡಿ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ಭೇಟಿಯಿತ್ತ ಬಳಿಕ ಬೆಂಗಳೂರಿಗೆ ಪ್ರಯಾಣ ಮಾಡಿದರು.

ಮದ್ರಾಸಿನಲ್ಲಿ ಅಮೇರಿಕದ ಕಾನ್ಸಲ್ ಜನರಲ್ ಆಗಿರುವ ಡ| ಆಲ್ಬರ್ಟ ಬಿ. ಫ್ರಾಂಕಿನ್‌ರವರ ಗೌರವಾರ್ಥವಾಗಿ ತಾ. 23ರಂದು ಮಣಿಪಾಲ ಲಾ ಶಾಂಗ್ರಿಲಾ ಗಾರ್ಡನಿನಲ್ಲಿ ಭೋಜನ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಡಾ| ಟಿ ಎಂ ಎ. ಪೈಗಳು ಸ್ವಾಗತಿಸಿ ಭಾರತ ಅಮೇರಿಕದ ಮೈತ್ರಿಯನ್ನು ವಿವರಿಸಿದರು. ಡಾ| ಫ್ರಾಂಕಿನ್‌ರವರು ಅಮೇರಿಕದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಅಂತ್ಯದಲ್ಲಿ ಶ್ರೀ ಟಿ. ಎ ಪೈಗಳು ವಂದನಾರ್ಪಣೆಗೈದರು.

ಉಡುಪಿ ಬಾರ್ ಎಸೊಸಿಯೇಶನ್— ಇದೇ ತಾ. 19ರಂದು ಉಡುಪಿ ಬಾರ್ ಎಸೋಸಿಯೇಶನ್‌ನ ಅಧ್ಯಕ್ಷರಾಗಿ ಪ್ರಮುಖ ಹಾಗೂ ಜನಪ್ರಿಯ ನ್ಯಾಯವಾದಿ ಶ್ರೀ ಟಿ. ಸಿ. ರೇಗೋರವರು ಅವಿರೋಧ ಆಯ್ಕೆಗೊಂಡರು. ವಕೀಲ್ ಶ್ರೀ ಪಿ, ಎನ್ ಮಾಧವರಾಯರು ಅಧ್ಯಕ್ಷತೆ ವಹಿಸಿದರು. ತರುಣೋತ್ಸಾಹಿ ಎಡ್ವಕೇಟ್ ಶ್ರೀ ವೈ. ಸಿ. ಯಸ್. ಹೆಗ್ಡೆಯವರು ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಕುಂಜಾರುಗಿರಿ— ಇಲ್ಲಿಯ ಸಾಧನಾ ಮಿತ್ರಮಂಡಳಿಯ ವಾರ್ಷಿಕೋತ್ಸವವು ತಾ. 15ರಂದು ಶ್ರೀ ಯಸ್. ವಿ. ಪೆಜತ್ತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ ವಿಟ್ಠಲ ಶೆಣೈಯವರಿಂದ ಸ್ವಾಗತ, ಬಿ. ಎಸ್ ಕುರುಕಾಲರಿಂದ ವರದಿವಾಚನಗಳಾದವು. ವಿವಿಧ ಪಂದ್ಯಾಟಗಳಲ್ಲಿ ವಿಜಯಿಗಳಾದವರಿಗೆ ಶ್ರೀಮತಿ ರತ್ನಾ ಪೆಜತ್ತಾಯರು ಬಹುಮಾನ ವಿತರಣೆ ಮಾಡಿದರು. ಕೊನೆಗೆ 'ಛಾಯಾ' ಎಂಬ ಐತಿಹಾಸಿಕ ನಾಟಕ ಅಭಿನಯಿಸಲ್ಪಟ್ಟಿತು.

ಭಂಡಾರ್ಕಾರ್ಸ್ ಕಾಲೇಜಿನ ಹೊಸ ಕಟ್ಟಡದ ಉದ್ಘಾಟನೆ— ತಾರೀಕು 20—2—64ರಂದು ಕುಂದಾಪುರ ಭಂಡಾರ್ಕಾರ್ಸ್ ಕಾಲೇಜಿನ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ರಾಜ್ಯಪಾಲರಾದ ಶ್ರೀ ಮಹಾರಾಜ ಜಯಚಾಮರಾಜ ಒಡೆಯರ್‌ರವರಿಂದ, ರಾಜ್ಯದ ಸ್ಪೀಕರ್ ಶ್ರೀ ಬಿ ವೈಕುಂಠ ಬಾಳಿಗಾರವರ ಅಧ್ಯಕ್ಷತೆಯಲ್ಲಿ ನೆರವೇರಿತು. ರಾಜ್ಯಪಾಲರು ಮಾತಾಡುತ್ತಾ ದ. ಕ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಅದರಲ್ಲೂ ಶೈಕ್ಷಣಿಕ ರಂಗದಲ್ಲಿನ ಪ್ರಗತಿಯನ್ನು ಶ್ಲಾಘಿಸಿ, ಡಾ| ಟಿ. ಎಂ. ಎ. ಪೈಗಳ ಕಾರ್ಯ ಆದರ್ಶನೀಯವಾದುದೆಂದರು. ಪ್ರಾರಂಭದಲ್ಲಿ ಡಾ| ಟಿ. ಎಂ. ಎ. ಪೈಗಳು ಸ್ವಾಗತಿಸಿದರು, ಪ್ರಿನ್ಸಿಪಾಲ್ ಶ್ರೀ ಕೆ ಜಿ. ಶೆಣೈಯವರು ಸಂದೇಶಗಳನ್ನೋದಿದರು. ಅಂತ್ಯದಲ್ಲಿ ಡಾ| ಎ ಎಸ್. ಭಂಡಾರ್ಕಾರರವರು ವಂದನೆಗಳನ್ನರ್ಪಿಸಿದರು.

ಕುಂದಾಪುರ— ಹೋಟೆಲ್ ಶಿವ ಪ್ರಸಾದ ಎಂಬ ಅತ್ಯಾಧುನಿಕ ನೂತನ ಭೋಜನ ಉಪಾಹಾರ ಹಾಗೂ ವಸತಿಗೃಹವು ತಾ. 21—2—'64ರಂದು ವಿಜೃಂಭಣೆಯಿಂದ ಪ್ರಾರಂಭಿಸಲ್ಪಟ್ಟರುವುದು.

ಮೆಡಿಕಲ್ ಕಾಲೇಜಿನ ವಾರ್ಷಿಕೋತ್ಸವ— ಮಂಗಳೂರು ಕಸ್ತೂರಬಾ ಮೆಡಿಕಲ್ ಕಾಲೇಜಿನ ವಾರ್ಷಿಕೋತ್ಸವವು ತಾ. 17ರಂದು ರಾಜ್ಯದ ಆರೋಗ್ಯ ಸಚಿವ ಡಾ, ಕೆ ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಟಿ. ಎಂ. ಎ. ಪೈಗಳು ಸ್ವಾಗತಿಸಿದರು. ಪ್ರಿನ್ಸಿಪಾಲ್ ಡಾ| ಬಿ. ಡಿ. ಪಲಿಮಾರರವರು ವರದಿಸನ್ನೋದಿದರು. ಶ್ರೀಮತಿ ಕಲ್ಯಾಣಿ ಎನ್. ಆಳ್ವರವರು ಬಹುಮಾನ ವಿತರಣೆ ಮಾಡಿದರು.

ಅಧ್ಯಕ್ಷರು ಮಾತಾಡುತ್ತಾ, ಕಾಲೇಜಿನ ಆಡಳಿತ ವರ್ಗ ಮತ್ತು ಸರಕಾರಗಳೊಳಗಿನ ಸಹಕಾರವೇ ಈ ಕಾಲೇಜಿನ ಬೆಳವಣಿಗೆಗೆ ಕಾರಣವೆಂದರು. ಡೀನ್ ಡಾ ಕೃಷ್ಣ ರಾವ್‌ರವರು ವಂದನಾರ್ಪಣೆಗೈದರು.

ಪ್ರಿನ್ಸಿಪಲ್ ಸುಂದರರಾಯರಿಗೆ ವಿದಾಯ ಸತ್ಕಾರ— ನಿವೃತ್ತರಾದ ಎಂ. ಜಿ ಎಂ. ಕಾಲೇಜಿನ ಪ್ರಿನ್ಸಿಪಲ್ ಎಚ್. ಸುಂದರರಾಯರಿಗೆ ವಿದಾಯ ಕೊಡುವ ಸಮಾರಂಭವು ತಾ 25. 2 64ರಂದು ರಾಮಕೃಷ್ಣ ಮಿಶನ್‌ನ ಸ್ವಾಮಿ ಆದಿದೇವಾನಂದಜಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಕರೆಸ್ಪಾಂಡೆಂಟ್ ಶ್ರೀ ಟಿ. ಎ. ಪೈಯವರು ಸ್ವಾಗತ ಭಾಷಣಮಾಡುತ್ತಾ 1949ರಲ್ಲಿ ಕಾಲೇಜು ಪ್ರಾರಂಭವಾದಂದಿನಿಂದಲೂ, ಶ್ರೀ ಸುಂದರ ರಾಯರು ಪ್ರಿನ್ಸಿಪಾಲರಾಗಿದ್ದು ಕಾಲೇಜಿಗೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು. ಕಾಲೇಜಿನ ವಿದ್ಯಾರ್ಥಿಗಳ ಪರವಾಗಿ ಶ್ರೀ ಕೃಷ್ಣ ಕೆ ಸುಧೀರ, ಹಳೆ ವಿದ್ಯಾರ್ಥಿ ಸಂಘದ ಪರವಾಗಿ ಎನ್. ಎಸ್. ಪ್ರಭು ಇವರು ಮಾನಪತ್ರಗಳನ್ನರ್ಪಿಸಿದರು. ವಿದ್ಯಾರ್ಥಿಗಳು ಸಂಗ್ರಹಿಸಿದ 2601ರ ನಿಧಿಯನ್ನು ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ಸುಂದರ ರಾಯರಿಗೊಪ್ಪಿಸಿದ್ದು, ಡಾ| ಕೆ ಬಿ. ರಾಮಕೃಷ್ಣರಾವ್, ಕುಮಾರಿ ವಸಂತ ಕುಮಾರಿ ಹೆಗ್ಡೆ, ಪ್ರೊ| ಪಿ. ಗುರುರಾಜ ಭಟ್, ಡಾ| ಪಿ ಆರ್ ನಾಯಕ್ ಇವರು ಸುಂದರರಾಯರ ಸೇವೆಯ ಕುರಿತು ಮಾತಾಡಿ ಅಭಿನಂದನೆಗಳನ್ನು ಸಲ್ಲಿಸಿದರು. ಸುಂದರರಾಯರು ತನಗಿತ್ತ ಸತ್ಕಾರಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸಿ ಸಂಸ್ಥೆಯ ಬೆಳವಣಿಗೆಗೆ ಪರಸ್ಪರ ಸಹಕಾರ ಅಗತ್ಯವೆಂದರಲ್ಲದೆ ತನಗಿತ್ತ ನಿಧಿಯನ್ನು ಕಾಲೇಜಿಗೆ ರೈಬ್ರರಿ ಪುಸ್ತಕಕೊಳ್ಳುವ ಬಗ್ಗೆ ಒಪ್ಪಿಸಿದರು. ಅಧ್ಯಕ್ಷ ಸ್ವಾಮೀಜಿಯವರು ಮಾತನಾಡಿದ ಬಳಿಕ ಪ್ರಿನ್ಸಿಪಾಲ್ ರು. ಶಿ. ಹರಿದಾಸ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಸುರತ್ಕಲ್— ಚಿತ್ರಾಪುರ ಶ್ರೀ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ತಾ 26ರಿಂದ 7 ದಿನಗಳ ವರೆಗೆ ನಡೆಯಲಿರುವ ಜಾತ್ರೆಯ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳೂ ಜರಗಲಿವೆ.

ಕೃತಜ್ಞತೆಗಳು—

ನವಯುಗದ ಪುನಸ್ಸ್ಮರಣಕ್ಕಾಗಿ ಶಿರ್ವದಲ್ಲಿ ಡಾ| ವೈ ಆರ್. ಶೆಟ್ಟಿ, ಡಾ| ಕೆ ಆರ್. ವೆಂಕಟಕೃಷ್ಣ, ಡಾ| ಎಂ ಆರ್. ಎಸ್. ಹೆಗ್ಡೆ, ಡಾ| ಯು. ಕೆ. ಆಚಾರ್, ಮಂಗಳೂರಲ್ಲಿ ಶ್ರೀ ಕೆ ಟಿ ಆಳ್ವ (ನಿವೃತ್ತ ಡೈರೆಕ್ಟರ್, ಆಫ್ ಅಗ್ರಿಕಲ್ಚರ್) ಉಡುಪಿಯಲ್ಲಿ ಶ್ರೀ ಎನ್ ಕೃಷ್ಣ ಎ ಶೆಟ್ಟಿ (ಕೃಷ್ಣ ಕುಂಜ) ಮೊದಲಾದವರು ಸಹಕರಿಸಿ ಪ್ರೋತ್ಸಾಹಿಸಿದುದಕ್ಕಾಗಿ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಕೆ. ಹೊನ್ನಯ್ಯ ಶೆಟ್ಟಿ

ಸ್ಥಾಪಕ-ಸಂಪಾದಕ.

ನಮ್ಮ–ನಮ್ಮವರು

(೧ನೇ ಪುಟದಿಂದ)

ಗೂ ನೇರವಾಗಿ ಸಾರಿಗೆ ಸಂಪರ್ಕವು ಸಾಧಿತವಾಗಿದೆ. ಬ್ರಹ್ಮಾವರ ಮತದಾರ ಕ್ಷೇತ್ರಕ್ಕೊಳಪಟ್ಟ ಈ ಸೇತುವೆಗಳು ಈ ಪರ್ವ ಸಂಚಾರಕ್ಕೆ ತೆರೆಯಲ್ಪಟ್ಟವು ನಿಜ, ಆದರೆ ಇವುಗಳ ಕಾರ್ಯ ಪ್ರಾರಂಭವಾದುದು ಶ್ರೀ ಬಿ. ಜಗಜ್ಜೀವನ ದಾಸ ಶೆಟ್ಟರು ವಿಧಾನಸಭಾಸದಸ್ಯರಾಗಿದ್ದಾಗ. ಒಬ್ಬ ವಿಧಾನಸಭಾ ಸದಸ್ಯನು ತನ್ನ ಮತದಾರಕ್ಷೇತ್ರಕ್ಕೆ ಯಾವ ರೀತಿಯ ಸೇವೆ ಸಲ್ಲಿಸಬಹುದು ಎಂಬುದಕ್ಕೆ ಶ್ರೀ ಶೆಟ್ಟರೂ ಒಬ್ಬ ಸಾಕ್ಷಿ ಪುರುಷರು. ಪಾರಂಪರ್ಯವಾಗಿ ಬಂದ ಸಾಹಸೀಗುಣ, ಕ್ರಿಯಾಪಟುತ್ವಗಳು ಶ್ರೀ ಶೆಟ್ಟರಲ್ಲೂ ಮನೆ ಮಾಡಿವೆ. ಇದರಿಂದಾಗಿಯೇ ಇವರು ಹಂಚಿನ ಕಾರಖಾನೆಗಳನ್ನು ಸ್ಥಾಪಿಸಿದ್ದಾರೆ; ನಡೆಸಿಕೊಂಡು ಬರುತಿದ್ದಾರೆ. ಉದಾರ ಮನಸ್ಸು ಮತ್ತು ಕಾರ್ಯದಕ್ಷತೆಗಳಿಂದ ಎಲ್ಲರ ಮನಸ್ಸನ್ನೂ ಅಪಹರಿಸಿದ್ದಾರೆ.

ಚೇರ್ಕಾಡಿಯಲ್ಲಿ ಪಾಟ್ಕರ್ ಕೆಮ್ಮಣ್ಣಿನಲ್ಲಿ ಫಿಷರೀಸ್ ಹೈಸ್ಕೂಲಿಗೆ ಸರಕಾರದ ಮಂಜೂರಾತಿಯನ್ನು ದೊರಕಿಸುವಲ್ಲಿ ಇವರ ಪಾತ್ರ ಹಿರಿದಾಗಿತ್ತು. ಮಾಬುಕಳ, ಕಲ್ಯಾಣಪುರ, ಕೊಕ್ಕರ್ಣೆ, ಕೆಮ್ಮಣ್ಣುಗಳ ಸಂಕಗಳ ರಚನೆ; ನೀಲಾವರ, ಆರೂರುಗಳ ಅಣೆಕಟ್ಟುಗಳು; ಸೀತಾನದಿ—ಬ್ರಹ್ಮಾವರ, ಬ್ರಹ್ಮಾವರ—ಜನ್ನಾಡಿ, ಪೆಡ್ಡೂರು—ಕುಕ್ಕೆಹಳ್ಳಿ—ಉಪ್ಪೂರು, ಕೋಟ—ಗೋಳಿ ಅಂಗಡಿ, ಬ್ರಹ್ಮಾವರ—ಬಾರ್ಕೂರು—ಮಂದರ್ತಿ, ಸಂತೆಕಟ್ಟೆ–ಕೊಕ್ಕರ್ಣೆ ಮೊದಲಾದ ಮಾರ್ಗಗಳನ್ನು ರಾಜ್ಯ ಸರಕಾರದ ನೇರ ಆಡಳಿತೆಗೆ ತಂದ ಸಾಧನೆ, ಇನ್ನಿತರ ಹಲವು ಗ್ರಾಮೀಣ ಮಾರ್ಗಗಳ ರಚನೆ; ಬ್ರಹ್ಮಾವರದಲ್ಲಿ ಕೃತಕ ಗರ್ಭಧಾರಣೆ ನಡೆಸುವ ಜಾನುವಾರು ಆಸ್ಪತ್ರೆ; ಬ್ರಹ್ಮಾವರದ ಲೋಕಲ್ ಫಂಡ್ ಆಸ್ಪತ್ರೆಗೆ ಸರಕಾರದ ಮಂಜೂರಾತಿ, ಅಲ್ಲಿಗೇನೇ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲೋಕ್ ಮೊದಲಾದುವೆಲ್ಲವೂ ಶ್ರೀ ಜಗಜ್ಜೀವನದಾಸ ಶೆಟ್ಟರ ಸಾಧನೆ ಮತ್ತು ಕ್ರಿಯಾಶೀಲತೆಯ ಪ್ರತೀಕಗಳು.

ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವ್ಯಾಪಾರ ಸಾಧ್ಯವಾದ ಆಗುಂಬೆ-ಸೋಮೇಶ್ವರ ಘಾಟಿ ರಸ್ತೆಯನ್ನು ವಿಸ್ತರಿಸಬೇಕು ಎಂಬುದಿವರ ಆಶಯ. ಇದರಿಂದ ಜನ ಸಂಚಾರ ಸುಗಮವಾಗುವುದು ಮಾತ್ರವಲ್ಲ, ವ್ಯಾಪಾರ ವಹಿವಾಟುಗಳೂ ಉತ್ತಮಗೊಳ್ಳುವುದು. ಬ್ರಹ್ಮಾವರ ಮತದಾರ ಕ್ಷೇತ್ರದಲ್ಲಿ ಕರಾವಳಿ ಮತ್ತು ಒಳನಾಡುಗಳಿಗೆ ಸಂಪರ್ಕ ಬೆಳೆಸಲು ಮೂರು ಫಿಷರೀಸ್ ಮಾರ್ಗ ರಚನೆ ಮಾಡಬೇಕೆಂದು ಇವರು ಹೇಳಿದರು. ಹೀಗೆ ಹತ್ತಾರು ವಿಧಾನಗಳಿಂದ ತನ್ನ ವಿಧಾಯಕ ಕ್ರಮಗಳಿಂದ ಮತದಾರ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಇವರನ್ನು ಎಲ್ಲರೂ ಗೌರವಿಸುತ್ತಾರೆ.

ಗೌರವಸ್ಥ ಮನೆತನದಲ್ಲಿ ಹುಟ್ಟಿದ ಶ್ರೀ ಶೆಟ್ಟರು ತನ್ನಗೌರವವನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಮೃದು ಭಾಷಿಯೂದ ಇವರು ಹೆಚ್ಚಿನ ಮಾತುಗಾರರಲ್ಲ; ಕ್ರಿಯಾಶೀಲರು. ಸದ್ಯಕ್ಕೆ ಕೊಕ್ಕರ್ಣೆ ಮಂಡಲ ಕಾಂಗ್ರೆಸಿನ ಅಧ್ಯಕ್ಷರಾಗಿರುವ ಇವರು ಹಂಗಾರಕಟ್ಟೆಯ ಚೇತನಾ ಹೈಸ್ಕೂಲನ್ನು ನಡೆಸಿಕೊಂಡು ಬರುತ್ತಿರುವ ಕಲ್ಚರಲ್ ಮತ್ತು ಎಜ್ಯುಕೇಶನಲ್ ಸಮಿತಿಯಧ್ಯಕ್ಷರೂ ಆಗಿದ್ದಾರೆ. ಶ್ರೀಯುತರಿಂದ ಬ್ರಹ್ಮಾವರ ಕ್ಷೇತ್ರ ಮಾತ್ರವಲ್ಲ, ಇಡಿಯ ಜಿಲ್ಲೆಯೂ ಒಳಿತನ್ನು ಬಯಸುತ್ತದೆ.

— — —

ವಿಚಾರ ಕಿಡಿಗಳು

ಲೇಖಕ: ಕೆ. ಜಿ. ಶೆಟ್ಟಿ, ಕಡಂದಲೆ.

ಮುಖಕ್ಕೆ ಬೀಳುವುದೆಂದು ಗೊತ್ತಿದ್ದರೂ ಮೇಲೆ ನೋಡಿ ಉಗುಳಿದರೆ ಹೇಗೆ?—ತನಗೇ ತಿರುಗಿ ಹೊಡೆಯುವವನ ಕೈಗೆ ಬೆತ್ತವನ್ನು ಹುಡುಕಿ ತಂದು ಕೊಟ್ಟ ಹಾಗೆ!

o o o

ಮನೆಯಲ್ಲಿ ದವಸಧಾನ್ಯ ಹೆಚ್ಚಿದಂತೆ ಇಲಿಗಳ ಕಾಟವು ಹೆಚ್ಚುತ್ತದೆ. ನಮ್ಮಲ್ಲಿ ದುರ್ಗುಣಗಳು ಹಚ್ಚಾದಂತೆ ದುಷ್ಟರ ಸಹವಾಸವೂ ಹೆಚ್ಚೆಚ್ಚು ಲಭ್ಯವಾಗುತ್ತದೆ!

o o o

ಬೆಳೆಯುವ ಮುನ್ನವೇ ಫಲವನ್ನು ಕೊಯ್ದರೆ ಲಾಭವಿಲ್ಲ—ನಾವೆಣಿಸಿದಷ್ಟು ಪ್ರಯೋಜನ ಸಿಗಲಾರದು—ಬೇಯುವ ಮೊದಲೇ ಬೇಳೆಯನ್ನು ಬಳಸಿ ತಿನ್ನುವುದರಿಂದ ಹಿತವಿಲ್ಲ—ನಾವು ಬಯಸಿದಷ್ಟು ರುಚಿಸಿಗಲಾರದು!

o o o

ಅನೀತಿಪಂತರ ಆಡಂಬರದ ಮಾತು ಅಧಿಕಾರವಿಲ್ಲದವರ ಅಬ್ಬರದ ನುಡಿ, ಇವೆರಡೂ ನಿಷ್ಪ್ರಯೋಜನ.

o o o

ಮತ್ತೂ ಮತ್ತೂ ಕೀವು ಬರುತ್ತಾ ಇರಬೇಕಾದರೆ ಗಾಯ ಸರಿಯಾಗಿ ಗುಣವಾಗಿಲ್ಲವೆಂದೇ ತಿಳಿಯ ಬೇಕು. ಪುನಃ ಪುನಃ ವಿವಾದಾತ್ಮಕವಾಗಿ ಮಾತಿಗೆ ಮಾತು ಬೆಳೆಸುತ್ತಾ ಹೋದರೆ ಸಂಗ್ರಾಮವಲ್ಲದೆ ಸಂಧಾನವಾಗಲಾರದೆಂದೇ ನಿರ್ಧರಿಸಬೇಕು.

o o o

ಸಾಕಷ್ಟು ಬಿಸಿ ತಾಗಿದಾಗ ಬೆಣ್ಣೆ ಮಾತ್ರವಲ್ಲ, ಕಬ್ಬಿಣವೂ ಕಾದು ಮೃದುವಾಗುತ್ತದೆ. ಮತ್ತೂ ಮತ್ತೂ ಸಾಧನೆಮಾಡಿ ಶ್ರಮಪಡಿಸಿ ದುಡಿದರೆ ಊಟಕ್ಕೆ ಮಾತ್ರವಲ್ಲ ಒಟ್ಟುಕೂಡಿಸಿಡಲು ಐಶ್ವರ್ಯವೂ ಬರುತ್ತದೆ!

o o o

ಬಲೆಯ ಬಂಧನದಲ್ಲಿ ಬಿದ್ದ ಇಲಿ, ಅದನ್ನು ಕಡಿದು, ಚೂರು ಚೂರು ಮಾಡುತ್ತದೆ ಆದಕ್ಕೆ ಬಲೆಯ ಬೆಲೆ ಗೊತ್ತಿರುವುದಿಲ್ಲ ಸಂಕಷ್ಟದಲ್ಲಿ ಸಿಲುಕಿದ ಮನುಷ್ಯ ಹೇಗಾದರೂ ಅದರಿಂದೊಮ್ಮೆ ಪಾರಾಗಲು ಯತ್ನಿಸುತ್ತಾನೆ—ಅದರಿಂದ ಇನ್ನೊಬ್ಬಂಗೆ ಹಾನಿಯಾದೀತೆಂಬ ಯೋಚನೆ ಅವನಿಗಿರುವುದಿಲ್ಲ!

o o o

ಜಗತ್ತಿಗೇ ಬೆಳಕನ್ನೀಯುವ ಸೂರ್ಯನು ಪ್ರಕಾಶಿಸುತ್ತಿರುವಾಗಲೇ ಕಣ್ಣು ಮುಚ್ಚಿಕೊಂಡು, 'ಅಯ್ಯೊ ಕತ್ತಲೆ' ಯೆಂದು ಕಿರುಚಾಡಿದರೆ ಹೇಗೆ?—ಕೈಯಲ್ಲಿದ್ದ ತುತ್ತನ್ನು ಕಾಲಡಿಗೆ ಹಾಕಿ ತುಳಿದು 'ಅಯ್ಯೊ ನನಗಾರೂ ಗತಿ ಇಲ್ಲ'ವೆಂದು ಗೋಳಾಡಿದ ಹಾಗೆ!

ದೇವರ ಭಕ್ತಿಯೂ ಪಾಪಕಾರ್ಯ

(೫ನೇ ಪುಟದಿಂದ)

ಗೆ ಬಂತು ಅವ್ರ ಹೆಸ್ರು ಕೇಳುವಾಗ ಟೀಟೀಂತ ದರ್ಶನ ಬರುತ್ತೆ...."

"ಯಾಕೆ ಏನ್ಮಾಡ್ತಾರೆ ಅವ್ರು?"

"ಸರ್ರು ಹೇಳ್ತಿದ್ಲು, ಅದೇ ಟೀ ಟೀ ನಮ್ಮನ್ನ ಇರೋಕೂ ಬಿಡೋಲ್ಲ ಸಾಯೋಕೂ ಬಿಡೋಲ್ಲ ಮತ್ತೂ ಟ್ಯಾಕ್ಸ್ ಹಾಕ್ತಾರೇತ..."

"ಹಾಗಾದ್ರೆ ಸರಿ ಉಪದೇಶ ಕಿವಿಯೊಳಗೆ ಹೋಗಿದೇಂತಾಯ್ತು. ಇನ್ನು ಹೀಗೆ ಯಾರ್‍ಯಾರ ಕಿವಿಗೆ ಹೊಕ್ಕಿದೆಯೋ? ಪರ್ವಾಗಿಲ್ಲ ಬಿಡು. ಹಾಗೆಲ್ಲಾ ಯಾರ್‍ಯಾರೋ ಅಂದ ಮಾತನ್ನ ಸತ್ಯಾಂತ ನಂಬಬೇಡ ಮತ್ತೆ.."

"ಇಲ್ಲಪ್ಪ ...ನನಗೇನು ಬುದ್ಧಿಯಿಲ್ವೆ"

"ಇದೇಂತ ಮೊದ್ಲೇ ಒಪ್ಪಿಕೊಂಡ ಮೇಲೆ ಈಗ ಇಲ್ಲಾಂತನ್ನೋಕಾಗುತ್ಯೆ?

"ಅಲ್ಲಾ ಅಟೀಟೀ ಏನೋ ಅಂತಾರೇಂದ್ರಲ್ಲ..."

"ಉತ್ಪಾದನೆಯನ್ನು ಹೆಚ್ಚಿಸ್ಕೋಬೇಕು, ಬಳಕೇನ ಕಡಮೆ ಮಾಡ್ಬೇಕು, ವಿತರಣೆಯ ದಾರಿ ಸರಿಯಾಗ್ಬೇಕೂಂತ...."

"ಇಷ್ಟು ಆದ್ರೆ ಆಗ ರಾಮರಾಜ್ಯವಾಯ್ತು."

"ಅದೇ ಗುರಿ ನೋಡು ನಮ್ದು...."

"ಗುರಿ ಸರಿ, ಅದ್ರ ಸೇರೋದಾಂ..."

"ಮೋಸದ ಮಾತುಗಳಿಗೆ ಕಿವಿಗೊಡದೆ ನಮ್ಮ ಕರ್ತವ್ಯವನ್ನು ಮನಃಪೂರ್ವಕ ಮಾಡೋದು."

"ಹೌದಪ್ಪ. ವಿನೋಬಾ ಹೇಳ್ತಾರಂತೆ ಕರ್ತವ್ಯ ಮಾಡದೆ ದೇವ್ರ ಭಕ್ತಿ ಮಾಡಿದ್ರೆ ಅದೂ ಪಾಪಾಂತ."

"ಸರಿ.... ಸರಿ....ಅಷ್ಟು ತಿಳಿದೋಳು ನೀನೂ ಸರ್ರೂ ಮಾತಿಗೆ ಕಿವಿಗೊಟ್ಟು..."

"ಏನಂತೀರ ನೀವು....ಅವ್ರೇನೊ ಅನ್ನುತಿದ್ರು, ನಾನು ಹ್ಞೂಂಗುಟ್ಟಿದೆ. ಅಲ್ಲಾಂತಂದ್ರೆ ಅವ್ರು...."

"ಕೇಳೋದಿಲ್ಲಾ ಅಲ್ವೆ? ನಾನು ಹೇಳಿದ್ದೂ ಹಾಗೇನೆ...."

"ಇಲ್ಲ ಏನಂತೀ ನೀವು? ನೀವೆಂದದ್ದು ಕಿವಿಯೊಳಗೆ ಹೊಕ್ಕು ಬುದ್ಧಿಯಲ್ಲಿ ಅಚ್ಚೊತ್ತಿತು ...."

"ಜಾಣೆ ಕಣೇ ನೀನು...."

"ಹೌದ, ನಿಮ್ಮ ಹಾಗೇನೇ...."

—ಗೋರಾ.

ಗಾಂಧೀ ವಚನಗಳು

"ಪ್ರತಿಯೊಬ್ಬರೂ ತಮ್ಮ ಹಕ್ಕುಗಳ ಬಗ್ಗೆ ಆಗ್ರಹ ಪಟ್ಟು ಕರ್ತವ್ಯ ಮರೆತರೆ ಸಂಪೂರ್ಣಗೊಂದಲ ಮತ್ತು ಅವ್ಯವಸ್ಥೆಯ ಪರಿಸ್ಥಿತಿ ಯುಂಟಾಗುವುದು."

o o o

ರಾಷ್ಟ್ರೀಯ ಶಬ್ದ ಕೋಶದಲ್ಲಿ ಹೇಡಿಶಬ್ದಕ್ಕೆ ಸ್ಥಾನವೇ ಇಲ್ಲ—ನಮ್ಮ ಅಸ್ತಿತ್ವದ ವಿಷಯದಲ್ಲಿ ನಾವು ಹೇಗೆ ವಾದ ವಿವಾದ ಮಾಡುವುದಿಲ್ಲವೋ ಹಾಗೆಯೇ ದೇವರ ಅಸ್ತಿತ್ವದ ವಿಷಯದಲ್ಲು ವಾದ ವಿವಾದ ಮಾಡಬೇಡಿರೆಂದು ನನ್ನ ಸೂಚನೆ. –

o o o

ವಸ್ತುಗಳ ವಿಷಯವಾಗಿಯಷ್ಟೆ ಅಲ್ಲದೆ ವಿಚಾರಗಳಲ್ಲಿ ಸಹ ಅಪರಿಗ್ರಹವನ್ನು ಪಾಲಿಸ ಬೇಕು."

o o o

"ಹಿಂದೂಧರ್ಮವು ಬೆಲೆಯಿಲ್ಲದ ರತ್ನಗಳಿಂದ ತುಂಬಿದ ಅಪಾರ ಸಾಗರದಂತಿದೆ

o o o

"ಭೀತಿಯಿರುವಲ್ಲಿ ಧರ್ಮವಿಲ್ಲ"

o o o

"ಪೂಜೆ ಅಥವಾ ಪ್ರಾರ್ಥನೆಯು ವಾಕ್ ಸಾಮರ್ಥ್ಯದ ದ್ಯೋತಕವಾಗಿರದೆ, ಒಡಗೂಡುವ ಗೌರವವಾಗಿರದೆ; ಹೃದಯದಿಂದ ಹುಟ್ಟಿ ಬರುವಂತಾದ್ದಾಗಿರಬೇಕು."

"ದೇವರಲ್ಲಿ ವಿಶ್ವಾಸವಿಡುವುದೇ ಎಲ್ಲಾ ಧರ್ಮಗಳ ಮೂಲವಾಗಿದೆ."

o o o

"ಹೆಂಡತಿಯು ಗಂಡನ ಗುಲಾಮಳಲ್ಲ ಸಂಗಾತಿ, ಸಹಕಾರಿಣಿ, ಅವನ ಸುಖ ದುಃಖಗಳ ಸಮಭಾಗಿನಿ. ತನಗೆ ಬೇಕಾದ ಮಾರ್ಗವನ್ನು ಕ್ರಮಿಸಲು ಗಂಡನಷ್ಟೇ ಆಕೆ ಸ್ವತಂತ್ರಳಿದ್ದಾಳೆ."

"ನಾನು ಪರಿಪೂರ್ಣನೆಂದು ಹೇಳಿಕೊಳ್ಳುವುದಿಲ್ಲ. ಆದರೆ ದೇವರಿಗೆ ಇನ್ನೊಂದು ಹೆಸರಿನಂತಿರುವ ಸತ್ಯದ ನಿಸ್ಸೀಮಯ ನಿಷ್ಠೆಯುಳ್ಳ ಉಪಾಸಕನೆಂದು ಮಾತ್ರ ಹೇಳಬಲ್ಲೆನು"

ಗಾಂಧೀಜಿ

ಸಂಗ್ರಾಹ

ಕೆ. ಯಂ. ಕೃಷ್ಣ ಭಟ್, ಬಿ. ಎಸ್. ಸಿ

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಶಿಕ್ಷಣರಂಗಕ್ಕೆ ತುರ್ತು ಪರಿಸ್ಥಿತಿ

(೪ನೇ ಪುಟದಿಂದ)

ರೂಪಿಸುವ ತಜ್ಞರು ಕಲಿಯುವ ಮಕ್ಕಳ ಮನೋಭಾವನೆಯನ್ನು ಅಭ್ಯಸಿಸಿ, ಅದಕ್ಕೆ ಅರ್ಹತೆ ಕೊಡಬೇಕಾದುದು ಅತ್ಯಗತ್ಯ. ಮಕ್ಕಳನ್ನು ಅಕ್ಷರಸ್ಥರನ್ನಾಗಿ ಮಾಡುವುದಷ್ಟೇ ಎಂದಿಗೂ ಶಿಕ್ಷಣದ ಗುರಿಯಾಗಲಾರದು.

ಜಲ ಸಂಪತ್ತು, ಖನಿಜ ಸಂಪತ್ತು ಹಾಗೂ ಸಸ್ಯ ಸಂಪತ್ತುಗಳನ್ನು ಸರಿಯಾಗಿ ದುಡಿಸಿಗೊಂಡರೆ ಮಾತ್ರ ನಾಡಿನ ಸಂಪದಭಿವೃದ್ಧಿ ಸಾಧ್ಯವೆಂದು ಮನಗಂಡ ನೀರಾವರಿ ಹಾಗೂ ಕೈಗಾರಿಕಾಭಿವೃದ್ಧಿಗಾಗಿ ಕೋಟ್ಯಂತರ ರೂಪಾಯಿಗಳನ್ನು ವ್ಯಯ ಮಾಡುತ್ತಿರುವುದು ಸರಿಯಷ್ಟೇ. ಇವೆಲ್ಲಕ್ಕಿಂತಲೂ ಅಮೂಲ್ಯವಾದ ಜನಸಂಪತ್ತನ್ನು ಉತ್ತಮ ಶಿಕ್ಷಣದಿಂದ ರೂಢಿಸಿ ಮಾತ್ರ ನಾಡ ಭವಿಷ್ಯದ ಆಸ್ತಿಭಾರ ಭದ್ರವಾದೀತು. ಉತ್ತಮ ಶಿಕ್ಷಣದ ಪದ್ಧತಿಯನ್ನೂ ರೂಪಿಸಿ, ಅದಕ್ಕಾಗಿ ಹಣವನ್ನು ವೆಚ್ಚಮಾಡುವುದು ಹಣವನ್ನು ಸಾರ್ಥಕವಾಗಿ ವ್ಯಯಮಾಡುವವಿಧಾನ. ಸುಶಿಕ್ಷಿತ ಮಕ್ಕಳೇ ದೇಶದ ಸಂಪತ್ತು; ಅಶಿಕ್ಷಿತ ಮಕ್ಕಳಿಂದ ದೇಶಕ್ಕೆ ವಿಪತ್ತು.

ಇದನ್ನು ಪ್ರಯೋಗಹಂತದಲ್ಲಿರುವಾಗಲೇ ಅದ್ಭುತಯಶಗಳಿಸುತ್ತಿರುವ ಪೂರ್ವ ನಿಯೋಜಿತ ಪಾಠಕ್ರಮವು (Programmed Learning) ಪಾಶ್ಚಾತ್ಯ ದೇಶಗಳಲ್ಲಿ ಜನಪ್ರಿಯವಾಗುತ್ತಿದೆ. ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನಿ, ಡಾ। ಸ್ಕಿನ್ನರ್‌ರವರಿಂದ ಪರಿಷ್ಕರಿಸಲ್ಪಟ್ಟ ಈ ಕ್ರಮದಿಂದ ವಿದ್ಯಾರ್ಥಿಗಳು ಕಠಿಣ ವಿಷಯಗಳನ್ನು ಸಹ ಹಂತಹಂತವಾಗಿ ಸುಲಭವಾಗಿ ಗ್ರಹಿಸಬಹುದು. ಗ್ರಹಣಶಕ್ತಿ ಚೆನ್ನಾಗಿರುವವರು ಬೇಗ ಮುಂದುವರಿದರೆ ಗ್ರಹಿಕೆಯಿಂದ ಮಂದಗಾಮಿಗಳಾದವರು (ದಡ್ಡರೆನ್ನಿಸಿಕೊಳ್ಳುವವರು) ನಿಧಾನವಾಗಿ ಮುಂದುವರಿಯಬಹುದು. ಪ್ರತಿ ಹಂತದಲ್ಲಿಯೂ ತಾವು ಗ್ರಹಿಸಿರುವ ವಿಷಯ ಸರಿಯೋ ತಪ್ಪೋ ಎಂದು ತಿಳಿದೇ ವಿದ್ಯಾರ್ಥಿ ಮುಂದಿನ ಹಂತಕ್ಕೆ ಹೋಗುತ್ತಾನೆ.

ಈ ಹೊಸ ಕ್ರಮದಲ್ಲಿ ಪಾಠ ಕಲಿತ ವಿದ್ಯಾರ್ಥಿಗಳ ಜ್ಞಾನದ ಮಟ್ಟ ಸಂಪ್ರದಾಯದ ರೀತಿಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳ ಜ್ಞಾನದ ಮಟ್ಟಕ್ಕಿಂತಲೂ ಉತ್ತಮವೆಂದು ಪ್ರಯೋಗಗಳಿಂದ ಸಿದ್ಧಪಡಿಸಿದ್ದಾರೆ.

ಮೊಂಟೆಸ್ಸೋರಿ ಸಿಸ್ಟಮ್ ಶಿಶುವಿಹಾರದ ಮವಸ್ಥೆಯಲ್ಲಿಯೇ ಕ್ರಾಂತಿ ಮಾಡಿಸಿದಂತೆ, ಈ ಹೊಸ ಶೋಧವು ಶಿಕ್ಷಣ ಕ್ರಮದಲ್ಲಿಯೇ ಅನತಿ ಕಾಲದಲ್ಲಿ ಕ್ರಾಂತಿ ಮಾಡಿಸುವ ಸಾಧ್ಯತೆಯಿದೆ.

ಇದು ವರೆಗೂ ವ್ಯಾಕರಣ, ಗಣಿತ, ವಿಜ್ಞಾನ ಶಾಸ್ತ್ರಗಳು, ಯಾಂತ್ರಿಕ ಜ್ಞಾನ, ವಿದೇಶಿ ಭಾಷೆ ಇತ್ಯಾದಿಗಳನ್ನು ಕಲಿಸಲು ಈ ಕ್ರಮವನ್ನು ಯಶಸ್ವಿಯಾಗಿ ಬಳಸಲಾಗಿದೆ.

ಇಂದು ಶಿಕ್ಷಣ ಸಮಸ್ಯೆ ಬೃಹತ್ ಸ್ವರೂಪವನ್ನು ತಾಳಿದೆ. ಬೃಹತ್ ಯೋಜನೆಯೊಂದನ್ನು ಸಿದ್ಧಪಡಿಸಿ ತ್ವರಿತವಾಗಿ ಅದನ್ನು ಕಾರ್ಯಗತ ಮಾಡುವುದರಿಂದ ಮಾತ್ರ ಈ ಸಮಸ್ಯೆಯನ್ನು ಬಿಡಿಸಲು ಸಾಧ್ಯ. ಶಿಕ್ಷಣ ತಜ್ಞರೂ, ನಾಡಿನ, ಸಮಸ್ಯೆ ಗೆನಾಯಕರೂ ಸಾರ್ವಜನಿಕರೂ ಈ ಉದ್ಯಮಕ್ಕೆ ಕೊಡಬೇಕು. ಶಿಕ್ಷಣ ಕ್ಷೇತ್ರದಲ್ಲಿ ತುರ್ತುಪರಿಸ್ಥಿತಿ ಉದ್ಭವಿಸಿದೆ ಯೆಂಬ ಸತ್ಯ ಸಂಗತಿ ಎಲ್ಲರಿಗೂ ಮನದಟ್ಟಾಗಬೇಕು. ಆಗ ಮಾತ್ರ ಈ ಬೃಹತ್ ಸಮಸ್ಯೆಗೆ ಶೀಘ್ರ ಪರಿಹಾರ ದೊರಕೀತು.

ವಾರ್ತೆ—ಪ್ರತಿವಾರ್ತೆ

ಚೀನಾ - ಭಾರತ ಗಡಿತಂಟೆಯನ್ನು ಶಾಂತರೀತಿಯ ವಿಚಾರವಿನಿಮಯದಿಂದ ಬಗೆಹರಿಸಬಹುದುಎಂದು ಪಾಕ್ ಅಧ್ಯಕ್ಷ ಅಯ್ಯೂಬಖಾನರು ಲಾಯರಿಗಿತ್ತ ಭೋಜನಕೂಟದಲ್ಲಿ ಹೇಳಿದರು ಅಧಿಕೃತವರದಿ.

—ಕಾಶ್ಮೀರ ಸಮಸ್ಯೆಯನ್ನು ಅದೇ ರೀತಿಯಲ್ಲಿ ಬಗೆಹರಿಸುವುದು ಸಾಧ್ಯವೆಂದು ಚ—ಎನ್--ಲಾಯರು ಮರುನುಡಿದಿರಲಾರರೆ?

o o o

ಪಾಕಿಸ್ತಾನದಿಂದ ಬರುವ ನಿರಾಶ್ರಿತರಿಗೆ ಭಾರತದ ಬಾಗಿಲು ತೆರೆದಿದೆ–ನೆಹರು.

—ಆಕ್ರಮಣಕಾರರಿಗೇನೇ ತೆರೆದು ನಿಂತ ಬಾಗಿಲು ಆಶ್ರಯ ಬಯಸುವವರಿಗೆ ಮುಚ್ಚೀತೆ?

o o o

ಬೆಲೆಯೇರಿಕೆಯ ವಿರುದ್ಧ ಮಜದೂರರು ಅಲ್ಲಲ್ಲಿ ಅನ್ನ ಸತ್ಯಾಗ್ರಹವನ್ನಾರಂಭಿಸಿದರು.

—ಬಳಕೆಯನ್ನು ಕಡಿಮೆ ಮಾಡುವುದಕ್ಕಾಗಿ ಸತ್ಯಾಗ್ರಹ ಮಾಡಿದ್ದರೆ ಬೆಲೆಯೇರುತ್ತಲೇ ಇರಲಿಲ್ಲವೆನ್ನುತ್ತಾರೆ ಕೆಲವರು.

o o o o

ಆಂತರಿಕ ಸಂಪನ್ಮೂಲಗಳ ಅಭಾವದಿಂದಾಗಿ ಮೂರನೆಯ ಯೋಜನೆಯನ್ನು ಯಾವ ಅಭಿವೃದ್ಧಿ ಯೋಜನೆಯನ್ನೂ ಮುಂದೂಡಿಲ್ಲ— ಟಿ. ಟಿ. ಕೆ.

—ಬಾಹ್ಯ ಸಂಪತ್ತು ಬರುವುದೆಂಬ ಭರವಸೆ ಈಗಲೇ ಅವರಲ್ಲಿದ್ದಂತಿದೆ. ಅಥವಾ ಮುಂಗಡ ಪತ್ರದ ಕರ ಸೂಚನೆಯ ಪೂರ್ವ ಸೂಚನೆಯಿದಿರಬಹುದೆ?

o o o o

ಮಂತ್ರಿ ವೀರೇಂದ್ರ ಪಾಟಿಲರು ಪ್ರವಾಸಿಕರ ಕೇಂದ್ರದ ಶಂಕುಸ್ಥಾಪನೆ ಮಾಡುತ್ತ ಕಾರವಾರವು ಕರ್ನಾಟಕದ ಹೆಬ್ಬಾಗಿಲು ಎಂದ ವರ್ಣಿಸಿದಂತೆ!

ಮೈಸೂರಿನ ಹೆಬ್ಬಾಗಿಲಾಗಿ ಮಂಗಳೂರು ಈಗಾಗಲೇ ರೂಪಿತವಾಗುತ್ತಿದೆ ಎಂದು ಮತ್ತೊಬ್ಬ ಮಂತ್ರಿ ಹೇಳಿದರೂ ಕೇಳಬಹುದು.

o o o

ರಾಯಚೂರಿನ ಬಳಿ ಮನೆಗಳಿಗೆ ಬೆಂಕಿಯಿಟ್ಟು ೧೬ ಜನರನ್ನು ಕೊಲ್ಲಲಾಯಿತು–ದುರ್ಘಟನೆಯೊಂದರ ವರದಿ.

— ಮನೆಗಳಿಗೆ ಬೆಂಕಿ ಬಿದ್ದು ಇವರು ಸೀರಿಹೋದರು ಎಂಬ ವರದಿ ಬರಲಾರದೆಂದು ನಂಬಬಹುದೆ?

ಕೇರಳದ ಕಂದಾಯ ಮಂತ್ರಿ ಶ್ರೀ ಪಿ. ಟಿ. ಚಾಕೋ ರಾಜಿನಾಮೆಯಿತ್ತು ಮುಂದಿನ ಸಾರ್ವತ್ರಿಕ ಚುನಾವಣೆಯ ವರೆಗೆ ಕಾಂಗ್ರೆಸಿಗೆ ನಿಷ್ಠಾವಂತ ಕಾಂಗ್ರೆಸಿಗನಂತೆ ಸಹಕಾರ ನೀಡಲು ಒಪ್ಪಿದ್ದಾರೆ.

—ಮುಂದಿನ ಚುನಾವಣೆಯಲ್ಲಿ ...ಪಕ್ಷವಹಿಸುವರೆಂಬುದರಲ್ಲಿ ಕುಹಕವಿದ್ದರೂ ಇರಬಹುದಲ್ಲವೆ?

o o o

೯ಜನ ವೈಮಾನಿಕ ಅಧಿಕಾರಿಗಳು ಸಂಚರಿಸಿದ ವಿಮಾನವೊಂದು ಕಾಣೆಯಾಗಿದೆ—

—ಅಂದು ಐದು, ಇಂದು ಒಂಬತ್ತು, ಮುಂದೆ....?

o o o

ಸಂಯುಕ್ತರಾಷ್ಟ್ರ ಸಂಘವನ್ನು ಸೇರದಿರುವುದರಿಂದ ಕೆಂಪು ಚೀನದೊಡನೆ ಹೆಚ್ಚಿನ ಸಂಪರ್ಕವಿರಿಸಿಕೊಳ್ಳ ಜಪಾನು ನಿರಾಕರಿಸಿದೆ.

—ಲಾಯರ ಗುಟ್ಟು ಈಗ ರಟ್ಟಾಯಿತು!

ನಗೆಗಡಲು

ಲೇಖಕಿ:

ಶ್ರೀಮತಿ ಪಿ. ಇಂದಿರಾ ಪಾಲಂಬಿ.

ಅ ಪ್ರತಿಮ ಚಿತ್ರಗಾರ!

ರಾಮು— ನೋಡಯ್ಯಾ, ದಾಮು! ತಿಮ್ಮನು ಮಾಡಿದ ಈ ಚಿತ್ರ ಎಷ್ಟು ಸೊಗಸಾಗಿದೆ! ಚಿತ್ರದಲ್ಲಿರುವ ವ್ಯಕ್ತಿ ನಗು ನಗುತ್ತಾ ಎದ್ದು ಬರುವ ಹಾಗಿದೆ!

ತಿಮ್ಮ— ಓಹೋ ಹೋ ಹ್ಹೋ, ಇದೆಂಥಾ ದೊಡ್ಡ ಅದ್ಭುತದ ಚಿತ್ರವೆಂದು ಹೊಗಳುತ್ತೀ ಇದರ ಅಪ್ಪನಂಥ ಚಿತ್ರವನ್ನು ನಾನು ಮಾಡಬಲ್ಲೆ! ಅದೂ ಕೂಡಾ ಒಂದು ಕ್ಷಣದೊಳಗೆ!

ರಾಮು— ನೋಡುವ ಹಾಗಾದರೆ ಮಾಡಿಬಿಡು ನಿನ್ನ ಚಿತ್ರ. ಇಗೋ ಕಾಗದ, ಪೆನ್ಸಿಲ್ಲು. (ತಿಮ್ಮನು ಕ್ಷಣದೊಳಗೆ ದುಂಡು ದುಂಡಗಿನ ಎರಡು ವೃತ್ತಗಳನ್ನು ಮಾಡಿ ಅವಕ್ಕೆರಡು ಕಡ್ಡಿ ಸುರಿದ ಹಾಗೆ ಎರಡು ಕಾಲುಗಳನ್ನೂ ಕೈಗಳನ್ನೂ ಮಾಡಿ ಕಣ್ಣುಗಳೆರಡನ್ನು ಗುರುತು ಮಾಡಿ ರಾಮುನ ಕೈಗೆ ಕೊಡುತ್ತಾನೆ.)

ರಾಮು.... (ಚಿತ್ರ ನೋಡಿ ಬಿದ್ದು ಬಿದ್ದು ನಗುತ್ತಾ) ಬಹಳ ಚೆನ್ನಾಗಿದೆಯಯ್ಯಾ! ದಾಮುವಿಗಿಂತ ಸೊಗಸಾಗಿ ಚಿತ್ರ ಮಾಡುತ್ತೇನೆಂದು ಹೇಳಿ ಈ ಮುನ್ನಾಥ ಮೂರ್ತಿಯನ್ನು ಬಿಡಿಸಿಬಿಟ್ಟೆ!

ತಿಮ್ಮ—ನಾನು ದಾಮುವಿಗಿಂತ ಸೊಗಸಾದ ಚಿತ್ರ ಮಾಡುತ್ತೇನೆಂದು ಯಾವಾಗ್ಗೆ ಹೇಳಿದ್ದು! ಆ ಚಿತ್ರದ ಅಪ್ಪನಂಥ ಚಿತ್ರವನ್ನು ಮಾಡುತ್ತೇನೆಂದೆ. ಹಾಗೇ ಮಾಡಿದೆ. ಆ ಚಿತ್ರದ ವ್ಯಕ್ತಿ ಸುಂದರನಾಗಿದ್ದ ಮಾತ್ರಕ್ಕೆ ಅದರ ಅಪ್ಪನೂ ಸುಂದರನಾಗಿದ್ದಿರಬೇಕೆಂದು ಕಾನೂನಿದೆಯೋ. ಕುರೂಪಿಗಳಿಗೆ ರೂಪವಂತ ಮಕ್ಕಳು ಇರುವುದಿಲ್ಲವೇ; ಆ ಚಿತ್ರದ ಅಪ್ಪನು ಇದ್ದದ್ದೇ ಹೀಗೆ. ಇದಕ್ಕೇನು ಹೇಳುತ್ತೀ?.

ರಾಮು— ಹಸ್ತಹಾಸ್ತಾ. ನಿನ್ನ ಪಾಂಡಿತ್ಯಕ್ಕೆ ಸೋತೆನಪ್ಪಾ ನಾನು ಎಷ್ಟಾದರೂ ನೀನು ತಿಮ್ಮನಲ್ಲವೆ?

ಪ್ರೇಮದ ಗುರಿ.

ಅತ.— (ಆಕಸ್ಮಿಕವಾಗಿ ಪರಿಚಯವಾಗಿ ಪರಿಚಯವಾದೊಡನೆ ಪ್ರೇಮ ಉದ್ಭವಿಸಿ ಪ್ರೇಮಲಾಪದಲ್ಲಿ ಸ್ವಮರೆತಾಗ) ಲಿಲ್ಲಿ! ನನ್ನ ಸರ್ವಸ್ವವೂ ನಿನ್ನದೇ. ನನ್ನ ಹೃದಯ, ಮನಸ್ಸು, ದೇಹ, ಎಲ್ಲವೂ ನಿನ್ನದಾಗಿದೆ

ಆಕೆ: — (ತನ್ನೊಳಗೆ) ಛೀ! ಛೀ! ಅಷ್ಟೆಲ್ಲಾ ನನಗೇಕೆ? ನಿನ್ನ ಜೇಬಿನಲ್ಲಿರುವ ಪರ್ಸೊಂದು ನನ್ನದಾದರೆ ಸಾಕು!

ಮಂಗ್ಳೂರು ಡಿ ಮು. ಕೋರ್ಟಿನಲ್ಲಿ

O. S. 433 /63

ಲಕ್ಷ್ಮೀ ಹೆಂಗಸು— ವಾದಿ

ಮೋನಪ್ಪ ಕೂಡಾ— ಪ್ರತಿವಾದಿರು.

3ನೇ ಪ್ರತಿವಾದಿ ರಾಮದಾಸ— ಸುಂದರಿ ಹೆಂಗಸಿನ ಮಗ, ಮಂಗ್ಳೂರು ಕೋಟೆ ಗ್ರಾಮದಲ್ಲಿರುವವ, ಮಂಗ್ಳೂರು ತಾಲೂಕು.

ಸದ್ರಿ 3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ— ವಾದಿಯು ನಿಮ್ಮ ಮೇಲೆ ಕೂಡಾ ಸದ್ರಿಯವರಿಗೆ ತಾರೀಕು ೩.೫.1949ರಲ್ಲು ರೂಪಾಯಿ 1000(ರೂ.ಸಾವಿರಕ್ಕೆ ಬರಕೊಟ್ಟ ಅಡವುದಸ್ತಾವೇಜಿನ ಬಾಬ್ತು ಬಾಕಿ ಹಣವಸೂಲಾದ ಬಗ್ಗೆ ದಾಖ್ಲೆ ಮಾಡಿದ ಮೇಲಿನ ದಾವೆಯು ತಾ. 10-3-1964ನೇ ದಿನಕ್ಕೆ 11 ಗಂಟೆಗೆ ಮೇಲಿನ ಕೋರ್ಟಿನಿಂದ ನಿಮ್ಮ ಹಾಜರಾತಿ ಬಗ್ಗೆ ಯಿಟ್ಟಿರುತ್ತದೆ. ಆ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷೆ ಮಾಡಿ ಮುಕ್ತ ಕಂಡಂತೆ ತೀರ್ಮಾನಿಸಲಾಗುವುದು.

H Dasanna Alva B. A. B. L

Vakil for Plaintiff,

ಮಂಗ್ಳೂರು
19-2-64.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೫—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನನ್ನ ಪುಸ್ತಕ ಭಂಡಾರ

(೩ನೇ ಪುಟದಿಂದ)

ರೆಯುವುದಿದ್ದರೂ (ಅನುಕ್ರಮವಾಗಿ) ಜೀರ್ಣವಾಗಿ, ಪತಿತಳಾಗಿ ಅಥವಾ ಸ್ವಲ್ಪ ಸ್ವಲ್ಪವಾಗಿ. ಯಾವ ಮಹಾನುಭಾವ ಹೇಳಿದನೋ ಈ ರತ್ನದಂತಹ ಶ್ಲೋಕವನ್ನು. ಬಹುಶಃ ಅವನ ಪುಸ್ತಕಭಂಡಾರಕ್ಕೂ ಇದೇ ರೋಗ ತಗಲಿರಬೇಕು. ಇಲ್ಲದಿದ್ದರೆ ಅವನು ಖಂಡಿತವಾಗಿಯೂ ಇಷ್ಟು ಚೆನ್ನಾಗಿ ಬರೆಯಲಾರನೆಂದೇ ನನ್ನ ನಂಬಿಕೆ

ಇದುವರೆಗೆ ಹೇಳಿದುದರಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಬಿಟ್ಟರೆ, ಇವುಗಳೆಲ್ಲ ನಡೆದ, ನಡೆಯುವ ಸಂಗತಿಗಳೇ ಆದುದರಿಂದ ನಾನು ಎಲ್ಲರ ಹೇರನ್ನೂ ಮುಟ್ಟಿಬಿಟ್ಟಿದ್ದೇನೆ—ನೀರು ಕೆಸರನ್ನು ಮುಟ್ಟಿದಂತೆ.

ಇದಿಷ್ಟು ನನ್ನ ಪುಸ್ತಕ ಭಂಡಾರ ಕರಗಿದ—ಕರಗುವ ಸುದ್ದಿಯಾಯಿತು. ಈಗ ಅದು ಹೇಗೆ ಬೆಳೆಯಿತು ಎಂಬ ಕುರಿತೂ ಎರಡು ಮಾತು ಅದರಲ್ಲಿ ಕೆಲವು ಪುಸ್ತಕಗಳು ನನಗೆ ಬಹುಮಾನ ದೊರೆತವುಗಳು. ಆ ಪುಸ್ತಕಗಳ ಮೇಲೆ ನನಗೆ ಎಲ್ಲಿಲ್ಲದ ಮಮತೆ ನಾನು ಸಣ್ಣ ವಿದ್ಯಾರ್ಥಿಯಾಗಿರುವಾಗಲೂ ಹಾಗೆಯೇ. ಬಹುಮಾನವಾಗಿ ನೋಟುಬುಕ್ಕು ಕನ್ನಡಿ, ಶಾಯಿಬಾಟಲಿ ಇಂತಹವುಗಳು ದೊರೆತರೆ ನನಗೆ ಏನೇನೂ ಸಂತೋಷವಿಲ್ಲ. ಪುಸ್ತಕ ದೊರೆತರೇ ಸಂತೋಷ. ಅಂದೇ ಅದಕ್ಕೆ ಹೊದಿಕೆ ಹಾಕಿ ಆನಂತರ ಓದುವುದು. ಆದರ ನಂತರ ಕಪಾಟಿಗೆ ಸೇರಿಸುವುದು ಇನ್ನು ಕೆಲವೊಮ್ಮೆ ಹಣವನ್ನೂ ಬಹುಮಾನವಾಗಿ ಹಂಚುತ್ತಾರೆ. ಆಗ ನಾನು ಪುಸ್ತಕದ ಅಂಗಡಿಗೆ ನುಗ್ಗಿ ಸಾಧ್ಯವಿದ್ದಷ್ಟು ಪುಸ್ತಕಗಳನ್ನು ತರುವುದು ರೂಢಿ ಮತ್ತೆ ಕೆಲವು ನನ್ನ ಮಿತ್ರರು ನನಗೆ ಕೊಟ್ಟ ಸ್ನೇಹದ ಕಾಣಿಕೆಗಳು. ಉಳಿದ ಪುಸ್ತಕಗಳೆಲ್ಲ ನಾನೇ ಹಣಕೊಟ್ಟು ಕೊಂಡುಕೊಂಡವುಗಳು.

ನನ್ನ ಪುಸ್ತಕಗಳ ಓರಣವೂ ಹಾಗೆಯೇ. "ಮಿಲಿಟರಿ ಶಿಸ್ತು" ಬೇಕು. ಎಲ್ಲ ಪುಸ್ತಕಗಳೂ ಒಂದೇ ಸಾಲಿನಲ್ಲಿ ನಿಲ್ಲಬೇಕು. ಇಲ್ಲದಿದ್ದರೆ ಹಿಂದೆ ಮುಂದೆ ಇರುವವುಗಳ ಹೊಟ್ಟೆಗೆ, ಬೆನ್ನಿಗೆ ತಟ್ಟಿ ಬುಕವನ್ನುಗಳ ನಾಲಿಗ ಅಂಗಗಳನ್ನು ಕೂಂದಿಬೇಕು. ನನ್ನ ಈ ಸೈನಿಕರ ಪೈಕಿ ಹೆಚ್ಚು ಎತ್ತರದವನು ಸಾಲಿನ ಹಿಂದೆ, ಗಿಡ್ಡದವನು ಮುಂದೆ ಇದೇ ಕ್ರಮ.

ಇಷ್ಟೆಲ್ಲಾ ಶಿಸ್ತಿನ ಮಧ್ಯೆ ಅವುಗಳ ವಿಭಾಗೀಕರಣವೂ ಹಾಗೆಯೇ ಕತೆ, ಕಾದಂಬರಿ, ಕಥೆ, ಕಾವ್ಯ ಎಂದು ನಾನು ಅವುಗಳನ್ನು ವಿಭಾಗಿಸಿಲ್ಲ ಇವರಿಗೆಲ್ಲಾ ಭಾಷಾವಾರು ಪ್ರಾಂತಗಳನ್ನೂ ನಾನು ಇದುವರೆಗೆ ಕೊಟ್ಟಿಲ್ಲ. ಇನ್ನು ಕೊಡುವುದೂ ಇಲ್ಲ. ಅದು ನನ್ನ ಆಡಳಿತೆಯ ಧೋರಣೆಗೇ ವಿರುದ್ಧ. ಒಂದೊಂದು ಪ್ರಾಂತದಲ್ಲೂ ಎಲ್ಲ ಭಾಷೆಗಳವರೂ ಸೋದರರಂತೆ ಒಂದೇ ಮನಸ್ಸಿನಿಂದ, ಒಮ್ಮತದಿಂದ ಇದ್ದಾರೆ. ಅವುಗಳಿಗೂ ಈ ಕ್ರಮ ಒಗ್ಗಿದೆ ಎಂದು ಕಾಣುತ್ತದೆ. ಇದು ವರೆಗೆ ಅವು ನಿರಶನ ವ್ರತ ಕೈಗೊಂಡಿಲ್ಲ, ಸತ್ಯಾಗ್ರಹ ಹೂಡಿಲ್ಲ. ನನ್ನ ಮೇಲೆ ಬೇಸರಗೊಂಡು ಬೆಳ್ಳಿ ಮೀನು, ಬಿಳಿ ಇರುವೆಗಳಂತಹ ಶತ್ರುಗಳಿಗೆ ಪ್ರವೇಶ ಕೊಟ್ಟಿಲ್ಲ. ಅವುಗಳ ಹೃದಯವನ್ನರಿತು ನಾನು ಅವುಗಳನ್ನು ವಿಭಾಗಿಸಿದ್ದೇನೆ. ಓದಿ ಜೀರ್ಣಿಸಿಕೊಳ್ಳತಕ್ಕ ಪುಸ್ತಕಗಳೆಲ್ಲ ಕಪಾಟಿನ ಮೇಲಿನ ಅಂತಸ್ತಿನಲ್ಲಿ. ಪುನಃ ಪುನಃ ಓದತಕ್ಕ ಪುಸ್ತಕಗಳು ಅದಕ್ಕಿಂತ ಕೆಳಗಿನ ಅಂತಸ್ತಿನಲ್ಲಿ ಇದೇ ರೀತಿ ಸ್ಥಾನಮಾನಗಳಿಗನುಗುಣವಾಗಿ ಅವುಗಳಿಗೆ "ಸೀಟಿಂಗ್ ಎರೇಂಜ್‌ಮೆಂಟ್".

ನನ್ನ ಪುಸ್ತಕಗಳ ಇನ್ನೊಂದು ವೈಶಿಷ್ಟ್ಯವೂ ಕೇಳತಕ್ಕದ್ದೇ. ಓದುವಾಗ ನನಗೆ ಕೈಯಲ್ಲೊಂದು ಪೆನ್ಸಿಲು ಬೇಕೇಬೇಕು. ಪುಸ್ತಕದಲ್ಲಿ ಒಳ್ಳೆಯ ವಾಕ್ಯ, ಪ್ರಯೋಗ, ಪ್ರಾಮುಖ್ಯ ಸಂಗತಿಗಳು ಬಂದಲ್ಲಿ ಅವುಗಳ ಬೆನ್ನಿಗೆ ಬರೆ ಎಳೆಯಲೇಬೇಕು ಹೀಗೆ ನನ್ನ ಪುಸ್ತಕಗಳಲ್ಲಿ ಅಲ್ಲಲ್ಲಿ ಸೀಸದ ಕಡ್ಡಿಯ ಗುರುತು ಇದ್ದೇ ಇರುವುದು ಇದು ಅಷ್ಟೇನೂ ಒಳ್ಳೆಯ ಅಭ್ಯಾಸವಲ್ಲವೆಂದು ಕೆಲವರು ನನ್ನೊಡನೆ ಹೇಳಿಯೂ ಇದ್ದಾರೆ. ಆದರೆ ಅದು ನನ್ನ ಪುಸ್ತಕವಾದರೆ, ಅದರ ಮೇಲೆ ನನ್ನದೇ ಸರ್ವಾಧಿಕಾರ. ಎಲ್ಲ ಹಕ್ಕುಗಳೂ ಲೇಖಕರ ವಶ. ಎಲ್ಲ ಹಕ್ಕೂ ಪ್ರಕಾಶಕರದು ಎಂದು ಕೆಲವು ಪುಸ್ತಕಗಳಲ್ಲಿ ಬರೆದಿರುತ್ತದೆ. ಆದರೆ ಓದುವ ಹಕ್ಕು ನಮ್ಮಂತಹ ಓದುಗರದು ಎಂದು ನಾನು ತಿಳಿದಿದ್ದೇನೆ. ಹಲವು ಪುಸ್ತಕಗಳನ್ನು ಓದಿದಾಗಲಂತೂ ಓದುವ ಹಕ್ಕೂ ಅವರಿಗೇ ಇರಲಿ ಎಂದು ಎನಿಸುವುದೂ ಉಂಟು. ಆದರೆ ಅಂತಹವುಗಳಿಗೆ ನನ್ನ ಪುಸ್ತಕ ಭಂಡಾರದಲ್ಲಿ ಸ್ಥಳ ಕೊಟ್ಟಿಲ್ಲ. ಬೆನ್ನಿಗೆ ಬರೆ ಎಳೆಯುವ ಅಧಿಕಾರದ ಕುರಿತು ಈ ಮಾತು ಬಂತು. ಹವ್ಯಾಸವನ್ನು ಬಿಟ್ಟು ಓದಿದರೆ ನನಗೆ ಓದಿದಂತೆಯೇ ಎನಿಸದು. ಆದರೆ ಹೀಗೆ ಬೆನ್ನಿಗೆ ಬರೆ ಎಳೆದ ನಂತರ ಅವುಗಳನ್ನು ನಾನು ಎಷ್ಟು ಪ್ರೀತಿಯಿಂದ, ಎಷ್ಟು ಮುದ್ದಾಗಿ ಇಟ್ಟುಕೊಂಡಿದ್ದೇನೆ. ನೋಡಿ ಕನ್ನಡಿ ಹಾಕಿದ ಕಪಾಟಿನಲ್ಲಿ ನಾಲ್ಕು ಸಾಲಾಗಿ, ಎದೆ ಮುಂದೆ ಮಾಡಿ, ಬೆನ್ನಿನ ಕಡೆಗೆ ನೆಳಬಾಗಿ, ಎತ್ತರಕ್ಕನು ಗುಣವಾಗಿ, ಯಾವ ಮಿಲಿಟರಿ ಶಿಸ್ತಿನಲ್ಲಿ, ಧೀ ಸೈನಿಕರಂತೆ ನಿಂತಿವೆ ನೋಡಿ

ನನ್ನ ಪ್ರೀತಿಯ ವಸ್ತುಗಳಲ್ಲಿ ಈ ನನ ಪುಸ್ತಕ ಭಂಡಾರವೇ ಅತಿ ಹೆಚ್ಚಿನದು ನನ್ನ ಮೆಚ್ಚಿಗೆಯದು.

ಹಲವರಿಗೆ ಬಹುಶಃ ಇನ್ನೂ ಎಳೆ ರದ ಒಂದು ಪಾಠವನ್ನು ಈ ಪುಸ್ತಕ ಭಂ ಡಾರದಿಂದ ನಾನು ಕಲಿತಿದ್ದೇನೆ. ಅದೇ ದರೆ ಇತರರಿಗೆ ಪುಸ್ತಕ ಎರವಲು ಕೊ ಡುವಾಗ ಜನ ನೋಡಿ ಅಥವಾ ಮುಖ ನೋಡಿ ಕೊಡ ಬೇಕು. ಇಲ್ಲವಾದರೆ ಪು ಸ್ತಕಗಳು ಹಿಂದಿರುಗುವ ಆಸೆ ಬಿಡಬೇ ಕು. ಈ ಮೊದಲೇ ಹೇಳಿದ ಶ್ಲೋಕ ನೆ ನಪಿಡದೆ ಇದ್ದರೆ ಶೋಕಕ್ಕೆ ಗುರಿಯಾಗು ವುದು ನಿಶ್ಚಿತ. ಪುಸ್ತಕ ಭಂಡಾರವು ಅಥ ವಾ ಪುಸ್ತಕಾಲಯವು—ಪುಸ್ತಕ ಆಲ ಯ ಎಂಬುದರ ಬದಲಾಗಿ— ಪುಸ್ತ ಲಯ ಎಂದಾಗ ಬಹುದು ನೆನಪಿರಲಿ.

ಸ್ವರ್ಗೀಯ ಶಾಂತಿ ವೀರನಿಗೆ ಶ್ರದ್ಧಾಂಜಲಿ !

ಶಾಂತಿದೂತನೆ ವಿಶ್ವಪ್ರಿಯನೇ ವೀರಯೋಧನೆ ಕೆನಡಿಯೇ !
ನಿನ್ನ ನಗಲಿದ ಭಾರತವು ಕಡು ಶೋಕ ಪಡುತಿದೆ ಧೀರನೇ !
"ಕೆನಡಿ"ಯೆನ್ನುವ ನಾಮದಂತೆಯೆ ನಿನ್ನ ಹೃದಯವು ಕನ್ನಡಿ !
ಒಳಗು ಹೊರಗೂ ಏಕ ಭಾವವ ತೋರುತಿಹ ಸಿಲುಗನ್ನಡಿ ‖ ೧ ‖

ಭಾರತದ ಸನ್ಮಿತ್ರ ಮಮತಾ ಹಸ್ತ ದಾನವ ನೀಡಿಕೆ !
ಭಾರತದ ಹಿತಕಾಗಿ ದುಡಿದಿಹೆ ಉಭಯ ಸಂಕಟ ಸಮಯದಿ !
ಭಾರತದ ಅಭಿವೃದ್ಧಿ ಯಾದುದೇ ತನ್ನ ಧ್ಯೇಯವದೆನ್ನುತಾ
ಭಾರತದ ಸಂಚಾರ ಮಾಡಿದ ವಿಶ್ವಪ್ರೇಮಿಯೆ ಕೆನೆಡಿಯೇ ‖ ೨ ‖

ಉಂಡ ಮನೆಗೇ ಗಂಡನೆಸಗುವ ಕೃತ್ಯ ಗೈದನು ಹಂತಕ !
ಗುಂಡು ಹಾರಿಸಿ ಹೇಯಕೃತ್ಯವ ಮಾಡಿದ ಡಿಪಸು ವಂಚಕ !
ಸಿಡಿಲಿನಂದದಿ ಬಂದ ವಾರ್ತೆಯು ಹೃದಯವೇಧಕವಾಯಿತು !
ರಾಷ್ಟ್ರಪಿತ ಗಾಂಧೀಜಿಯ ಕೊಲೆ, ಮರಳಿ ಮನೆನೆನವಾಯಿತು ‖ ೩ ‖

ಮೂರು ಮಕ್ಕಳ ಮಾತೆ ಕೆನಡಿಯು ಹೃದಯ ದುಃಖದಿ ಬಿರಿದಿದೆ !
ವೃದ್ಧ ಪಿತನಾ ಪುತ್ರ ಶೋಕದಿ ಹೃದಯ ಧಗ ಧಗ ದಹಿಸಿದೆ !
ಕೋಟಿ ಕೋಟಿ ಜನಾಂಗವೆಲ್ಲವು ದುಃಖವಿಂಬಿಸುತ್ತಿದೆ !
ಭಾರತದ ನವಕೋಟಿ ಮಕ್ಕಳ ಹೃದಯ ಶೋಕದಿ ತುಂಬಿದೆ! ‖ ೪ ‖

ವಿಶ್ವಪ್ರೇಮದ ಜ್ಯೋತಿ ನಂದಾದೀಪವಾರಿತು ! ಹಾರಿತು !
ಭಾರತೀಯ ಜನಾಂಗ ರಂಗವ ಘೋರಕತ್ತಲು ಕವಿಯಿತು !
ಅರಿಯಬೇಕಿದ ವಿಧಿಯ ಲೀಲೆಯೊಳೆಲ್ಲ ನಶ್ವರ ನಿತ್ಯವು !
"ಕೆನಡಿ"ಯಾತ್ಮಕೆ ವಿಶ್ವಪ್ರೇಮಿಗೆ ಪ್ರೇಮ-ಶ್ರದ್ಧಾಂಜಲಿಯಿದು ‖ ೫ ‖

ಕೆ. ಎನ್. ಭಟ್, ಶಿರಾಡಿಪಾಲ್.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ಕ್ರಾಂತಿಕಾರಿ ಲೇಖನಿಯ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂಡಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ಭಾರತ ಪುಸ್ತಕ ಭಂಡಾರ, ಉಡುಪಿ ನಟಾ

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58½% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಕಾದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ವರ್ಕ್ಸ್

ರಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

READ &
ADVERTISE IN
NAVAYUGA WEEKLY

ಆ ಹೆಂಗಸು.........

(೨ನೇ ಪುಟದಿಂದ)

ತ್ತಿದೆ. ಕೂಗುಮಂಚದ ಮೇಲೆ, ದಪ್ಪವಾದ ಕುಶನ್‌ನಲ್ಲಿ ಮಲಗಿದರೂ ನಿದ್ದೆ ಬರುವವರೆಗೆ ಫ್ಯಾನಿನ ಗಾಳಿ, ಆಳುಗಳ ಮಸಾಜ್, ಸೊಳ್ಳೆ ಪರದೆಗಳ ವೈಭವ ಎಲ್ಲವೂ ಬೇಕಿತ್ತು. ಮಕ್ಕಳು ಮಂಗಳ ಅಳು ಕೇಳಿದರೆ ರಾತ್ರಿ ಎಚ್ಚರವಾಗುವುದೆಂದು ಅವರಿಗೆಲ್ಲ ಬೇರೆಯೇ ವ್ಯವಸ್ಥೆ, ಒಬ್ಬೊಬ್ಬರಿಗೆ ಒಂದೊಂದು ಆಯ. ನಕ್ಕು ನಲಿಯುವ ಮಕ್ಕಳನ್ನು ಮಾತನಾಡಿಸಿಯೇ ಗೊತ್ತಿತ್ತು ನಮಗೆ. ಅಳುವ ಮಗುವನ್ನು ಸಮಾಧಾನ ಪಡಿಸಬೇಕಾದರೆ ದಾದಿಯೊಬ್ಬಳಿಂದಲೇ ಸಾಧ್ಯವಾಗಿತ್ತು. ಆಗ ಕಷ್ಟವೇನೆಂದು ಅನುಭವಿಸಿಯೂ ಗೊತ್ತಿರಲಿಲ್ಲ. ಕೇಳಿಯೂ ತಿಳಿದಿರಲಿಲ್ಲ ನಮಗೆ.

"ಇನ್ನು ಕಾರಿನಲ್ಲಿ ಎಷ್ಟೋ ಮೈಲುಗಳವರೆಗೆ ಜೀವವನ್ನು ಕೈಯಲ್ಲಿ ಹಿಡಿದು ಓಡಿ ಬಂದ ನಮಗೆ ಎಂತಹ ಕಷ್ಟಜೀವಿಯೂ ಸಹಿಸಲಾಗದ ಒದ್ದಾಟವಾಗಿತ್ತು. ಒಂದು ಕಡೆ ಅತ್ತೆ ಜ್ವರದ ತಾಪದಿಂದ ನರಳುತ್ತಾ ಬಿದ್ದಿದ್ದರೆ, ಅವರ ಸೇವೆಯೇ ಅರ್ಧಭಾಗಿ ನನ್ನ ತಾಯಿ ಇಹಲೋಕದ ಪರಿವೆಯಿಲ್ಲದವರಂತೆ ಬಿದ್ದಿದ್ದರು. ಮಕ್ಕಳು, ನಾನು, ಆಳು ಒಟ್ಟು ನಮ್ಮ ತಾತ, ಎಲ್ಲರೂ ಜಾಗ ಇದ್ದಲ್ಲಿ ಬಿದ್ದುಕೊಂಡಿರ ಬೇಕಾಗಿತ್ತು."

"ಒಂದು ನಿರ್ಜನವಾದ ಜಾಗದಲ್ಲಿ ನನ್ನ ಮಾವ ಕಾರು ನಿಲ್ಲಿಸಿ, ನನ್ನ ತಮ್ಮನ ದೇಹವನ್ನು ಇಳಿಸಿದರು. ಏನೂ ಅರಿವೂ ಇಲ್ಲದಂತಿದ್ದ ನನ್ನ ತಾಯಿಗೆ ಏನು ಮಿಂಚಿತೋ ಏನೋ! ದಬಕ್ಕನೆ ಹೊರಗೆ ಹಾರಿದರು. ಆಳು ಮತ್ತು ಮಾವ ಅವರನ್ನು ಬಲವಂತವಾಗಿ ಹಿಡಿದು ಕಾರಿನೊಳಗೆ ಕೂರಿಸಿದರು. ಮತ್ತೆ ರೋದನ. ಕರ್ತವ್ಯ ಪೂರೈಸುವಂತೆ ಇದ್ದೊಂದು ಹೊಂಡದೊಳಗೆ ನನ್ನ ತಮ್ಮನ ದೇಹವನ್ನು ಹಾಕಿ ಆಳು, ಮಾವ ಸೇರಿಕೊಂಡು ಸ್ವಲ್ಪ ಮಣ್ಣು, ಮತ್ತು ಕಸ, ಎಲೆಗಳನ್ನು ತುಂಬಿಸಿ, ಬೇಗಬೇಗನೇ ಕಾರು ಹತ್ತಿದರು. ನಮಗೆ ಅಂತ್ಯದ ಪ್ರೀತಿಯ ಜೀವವೊಂದನ್ನು ಜೀವಂತ ಹೂಳಿದಷ್ಟು ಕಠೋರವೆನಿಸುತಿತ್ತು. ಆ ದೃಶ್ಯ- ಆ ದೇಹವನ್ನು ಹೂಳಿದ ರೀತಿಯಾದರೂ ನರಿ ನಾಯಿಗಳಿಗೆ ಹದ್ದುಗಳಿಗೆ ಕಷ್ಟವಿಲ್ಲದೆ ಎಳೆದು ತಿನ್ನುವಷ್ಟು ಅನುಕೂಲವಾಗಿಯೇ ಇತ್ತು. ಆದರೂ ಕಾರಿನಲ್ಲಿರುವ ನಮ್ಮ ತಾಯಿಯ ಒದ್ದಾಟ, ಹಿಂದುಗಡೆಯಿಂದ ಯಾರಾದರೂ ಹಿಂಬಾಲಿಸುತ್ತಿದ್ದಾರೋ ಎಂಬ ಭಯ ಒಂದೆರಡು ನಿಮಿಷದಲ್ಲೇ ಕೆಲಸ ಪೂರೈಸಿ ಬಿಡುವಂತೆ ಮಾಡಿತ್ತು.

ಜೀವವಿಲ್ಲದ ಯಂತ್ರದಂತೆ ಮಾವ ಮತ್ತೆ ಕಾರೋಡಿಸಿದರು.

"ಬಹವಾಲ್‌ಪುರಕ್ಕೂ ಗಂಗ ನಗರಕ್ಕೂ ಮಧ್ಯದಲ್ಲಿ ಸಣ್ಣದೊಂದು ಊರು ಅದೇ ಹಿಂದುಸ್ಥಾನಕ್ಕೂ ಪಾಕಿಸ್ತಾನಕ್ಕೂ ಇರುವ ಗಡಿಯಾಗಿತ್ತು - ಅಲ್ಲಿಗೆ ತಲಪುವಾಗ ನಮಗೆಲ್ಲ ಜೀವದ ಮೇಲೆ ಭರವಸೆ ಸಿಕ್ಕಿದಂತಾಯಿತು. ಆದರೆ ಅಲ್ಲಿಯೂ ಭೂತದರ್ಶನದ ಗವೆ ಬಿಡಲಿಲ್ಲ. ಅಲ್ಲಿ ಹಿಂದೂ—ಮುಸ್ಲಿಂ ಜನ ಸರಿಸಾಟಿಯಾಗಿ ಜಗಳ, ದರೋಡೆಗೆ ನಿಂತಂತಿತ್ತು. ಕೊಲೆ ಸುಲಿಗೆ, ರಕ್ತ ಸ್ನಾನದ ಜಾಗಗಳು ಅಲ್ಲಲ್ಲಿ ಕಾಣಬರುತ್ತಿತ್ತು.

ನಾವು ಭಗವಂತನೊಬ್ಬ ಇಲ್ಲನೇ ಇಲ್ಲ ಎಂಬ ಗುರಿಗೆ ಬಂದು ಮುಟ್ಟಿದೆವಾಗ. ಪುರಾಣ ಕಥೆಗಳಲ್ಲಿ ಭಗವಂತ ದೇವತೆಗಳನ್ನುದ್ಧರಿಸಲು ಮೋಹಿನೀ ರೂಪದಲ್ಲಿ ರಕ್ಕಸರನ್ನು ನಿರ್ನಾಮ ಮಾಡಿದ್ದನಂತೆ. ಈಗ ಅದೇ ಭಗವಂತ ರಾಕ್ಷಸೀ ರೂಪ ತಾಳಿ ರಕ್ಕಸರ ನೆರವಿಗೆ ನಿಂತಿದ್ದಾನೆ, ಎಂಬ ಭಾವನೆ ನಮಗೆಲ್ಲರಿಗೂ ಬಂದಿತ್ತು. ಅಬ್ಬಾ! ಆ ದಿನ ಆ ಕಟು ಅನುಭವಗಳನ್ನು ನೆನಸಿದಾಗಲೆಲ್ಲ ಸರ್ಪವನ್ನು ತುಳಿದಂತೆ ಭಯದಿಂದ ನಮ್ಮ ದೇಹಗಳು ಇಂದಿಗೂ ನಡುಗುತ್ತವೆ.

"ಆ ಹಳ್ಳಿಯಲ್ಲಿ ಸ್ವಲ್ಪ ಆಯಾಸ ಪರಿಹಾರ ಮಾಡಿಕೊಳ್ಳೋಣವೆಂದು ಮನಸ್ಸಿದ್ದರೂ ಯಾರೂ ಬಾಯಿ ಬಿಡಲಿಲ್ಲ. ಮಾವ ಮಾತಿಲ್ಲದೆ ಕಾರು ಓಡಿಸುತ್ತಲೇ ಇದ್ದರು. ಕಡೆಗೆ ಆ ಹಳ್ಳಿಯನ್ನು ದಾಟಿ ೨೫ ಮೈಲುಗಳ ಮೇಲೆ ಬಂದು ನಿರ್ಜನ ಪ್ರದೇಶದಲ್ಲಿ ಕಾರನ್ನು ನಿಲ್ಲಿಸಿ ಅಲ್ಲಿಯೇ ಹರಿಯುತ್ತಿದ್ದ ಸಣ್ಣ ಹೊಳೆಯಲ್ಲಿ ಎಲ್ಲರೂ ಮುಖ ಕಾಲುಗಳನ್ನು ತೊಳೆದು ಹೊಟ್ಟೆತುಂಬ ನೀರು ಕುಡಿದೆವು. ನನ್ನ ತಾಯಿ, ಮತ್ತು ಅತ್ತೆ ಇಬ್ಬರಿಗೂ ಕಾರಿಗೇ ನೀರು ತಂದು ಕುಡಿಸಿದೆವು, ನಾನು ಮತ್ತು ಮಕ್ಕಳು ಹಸಿದು ಕಂಗೆಟ್ಟುದರಿಂದ ಅಲ್ಲಿ ಹೊಟ್ಟೆ ತುಂಬ ಊಟ ಮಾಡಿದೆವು.(ಅದೇ ರೊಟ್ಟಿ ಬ್ರೆಡ್ಡುಗಳು) ಅಷ್ಟು ಹೊತ್ತಿಗೆ ನಾವು ಒಂದೂವರೆ ದಿನದ ಪ್ರಯಾಣವನ್ನು ಮಾಡಿಯಾಗಿತ್ತು.

"ಮತ್ತೆ ೩—೪ ಗಂಟೆಯೊಳಗೆ ಗಂಗ ನಗರ ತಲಪಿದೆವು. ಅಲ್ಲಿನ್ನೂ ದೂರದ ಸಂಬಂಧಿಕರೊಬ್ಬರು ಇದ್ದರು. ನಾವೆಂದೂ ಅವರಲ್ಲಿ ಹೋಗಿರಲಿಲ್ಲ. ಅವರ ಊರನ್ನು ಹತ್ತಾರು ಸಲ ದಾಟಿ ಎಷ್ಟೋ ಸಲ ಡೆಲ್ಲಿ, ಕಲ್ಕತ್ತೆಗಳಲ್ಲಿ ರಜಾ ದಿನಗಳಲ್ಲಿ ಹೋಗುತ್ತಲೇ ಇದ್ದೆವು. ಅವರು ತಕ್ಕ ಮಟ್ಟಿಗಿದ್ದವರು. ನಮಗೆ ಅಲ್ಲಿ ಇಳಿಯಲು ಒಗ್ಗುತ್ತಲೂ ಇರಲಿಲ್ಲ. ಹಾಗೆಂತ ಅವರು ಯಾವಾಗ ನಮ್ಮಲ್ಲಿಗೆ ಬಂದರೂ ನಮ್ಮ ತಾತ ಅವರನ್ನು ಆದರದಿಂದ ಕಂಡು, ಏನಾದರೂ ಸಹಾಯವಿತ್ತೇ ಕಳುಹಿಸುತ್ತಿದ್ದರು

"ಆದರೆ ಇಂದು ಅವರ ಮನೆಗೆ ದೀನರಂತೆ, ಅನಾಥರಂತೆ, ನಿರಾಶ್ರಿತರಾಗಿ ಹೋದೆವು. ಅವರನ್ನು ನಾನು ಮಾವನೆಂದು ಕರೆಯುತ್ತಿದ್ದೆ. ಆ ಮಾವ ಅತ್ತೆ ಅವರ ಮಕ್ಕಳೆಲ್ಲ ನಮ್ಮನ್ನು ನೋಡಿ ಜೋರಾಗಿ ಅತ್ತೇ ಬಿಟ್ಟರು ಮತ್ತೆ ಸಮಾಧಾನಿಸಿಕೊಂಡು ನಮ್ಮನ್ನು ಉಪಚರಿಸಿದರು. ಉಪಚಾರ ಬೇಕಾಗಿತ್ತು ಯಾರಿಗೆ? ನನ್ನ ಅತ್ತೆ ಮತ್ತು ನನ್ನ ತಾಯಿ ಅಷ್ಟು ಒಂದಷ್ಟು ನಿದ್ದೆ ಮಾಡಿದರು. ನನ್ನ ಮಾವ, ತಾತ, ಮತ್ತು ನಾವೆಲ್ಲರೂ ಒಂದಿಷ್ಟು ಊಟ ಮಾಡಿ ಕೋಣಗಳಂತೆ ಮಲಗಿಬಿಟ್ಟೆವು. ಆಯಾಸ, ಮೈನೋವಿನ ಅತಿಯಾದ ಬಾಧೆಯಿದ್ದರೂ ನಿದ್ದೆ ಬಂದಿತ್ತು."

"ನಮ್ಮ ಆ ದೂರದ ಸಂಬಂಧಿಕರು ಯಾರೋ ಒಬ್ಬ ವೈದ್ಯರನ್ನು ರಾತ್ರಿಯೇ ಕರೆತಂದು ನನ್ನ ಅತ್ತೆಗೆ ಒಂದಿಷ್ಟು ಮಾತ್ರೆಗಳನ್ನೂ ಮದ್ದನ್ನೂ ಕೊಡಿಸಿದರು ಜ್ವರ ಮಾತ್ರ ಏರುತ್ತಲೇ ಹೋಯಿತು."

"ಮರುದಿನ ಅವರೆಷ್ಟು ತಡೆದರೂ ನಾವಲ್ಲಿ ನಿಲ್ಲಲಿಲ್ಲ ನನ್ನ ತಂದೆ, ಅಣ್ಣ ಏನಾದರೂ ಉಳಿದು ಬಂದರೆ, ಹಿಂದುಗಡೆಯಿಂದ ಬರುತ್ತಿದ್ದ ನನ್ನ ಇನ್ನೊಬ್ಬ ಮಾವನ ಕಾರಿನವರೂ ತಪ್ಪಿಸಿಕೊಂಡು ಬಂದಿದ್ದರೆ ಡೆಲ್ಲಿ ಸೇರಿದ ಮೇಲೆ ನಾವಿಲ್ಲದನ್ನು ಕಂಡು ಗಾಬರಿಯಾದಾರು; ಅಲ್ಲದೆ ಅತ್ತೆಯ ಜೀವವಂತೂ, ಕಡೆಯ ಹಂತಕ್ಕೆ ಬರುತ್ತಿತ್ತು. ಡೆಲ್ಲಿಯಲ್ಲಿ ಒಳ್ಳೆಯ ಡಾಕ್ಟರಿಂದ ಅವರನ್ನು ಬದುಕಿಸಲು ಸಾಧ್ಯವಾಗುವುದೋ ಎಂಬ ಒಂದು ಆಶಾಕಿರಣ ನಮ್ಮಲ್ಲಿತ್ತು. ಹಾಗಾಗಿ ಯಾರಿಗಾ ಪ್ರಯಾಣ ಬೇಡವಾಗಿದ್ದರೂ ಅನಿವಾರ್ಯವಾಗಿ ಹೊರಡಲೇ ಬೇಕಾಯಿತು. ಕಷ್ಟವಾದರೂ ಬೇರೇನೂ ಎಡರು, ತೊಡರಿಲ್ಲದೆ, ಮುಸ್ಲಿಂ ಜನರ ಭಯವೂ ಇಲ್ಲದೆ ಒಂದಿಷ್ಟು ನೆಮ್ಮದಿಯಿಂದಲೇ ಡೆಲ್ಲಿ ಸೇರಿದೆವು."

"ಹಿಂದ ಸ್ಥಾನ್ ಹೋಟೆಲ್‌ನಲ್ಲಿ ರೂಮು ದೊರಕಲೇ ಇಲ್ಲ. ಕಡೆಗೆ ನನ್ನ ಮಾವರು ಬರೆಹ ಟೆಂಟು ಒಂದೇ ದೂರದ ಆಚೆ ಇಟ್ಟುಕೊಂಡರು. ಅಲ್ಲಿಯೇ ಏನೇನೂ ಅನುಕೂಲವಿಲ್ಲದ ದೇಶವಾಗಿದ್ದ ಒಂದು ರೂಮನ್ನು ಹಿಡಿದೆವು."

"ಹೆಸರುವಾಸಿಯಾದ ಡಾಕ್ಟರೊಬ್ಬರು ನನ್ನ ಅತ್ತೆಯನ್ನು ನೋಡಿ "ನ್ಯುಮೋನಿಯಾ" ಎಂದರು ಹಾಗಾಗಿ ಆಸ್ಪತ್ರೆಯಲ್ಲಿ ಸ್ಪೆಶಲ್ ವಾರ್ಡಿಗೆ ಸೇರಿಸಿದೆವು ಆದರೂ ನಮ್ಮತ್ತೆ ನಮ್ಮ ದುಃಖ ಸಾಲದೆಂಬಂತೆ ನಮ್ಮನ್ನು ತೊಲಗಿ ಹೋದರು." ಮತ್ತೆ ಮೌನ! ಸಣ್ಣದಾಗಿ ಅತ್ತಳು,

(ಮುಂದುವರಿಯುವುದು)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಎ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹಿಂಗಿ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ರಖಂ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ.

ಧಾರಾವಾಹಿ ಕಥೆ

ಆ ಹೆಂಗಸು....

ಬರೆದವರು: ಶ್ರೀಮತಿ ನೇನಕಿ ನಾ। ಎಂ. ಶೆಟ್ಟಿ, ಬೀರೂರು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ನನ್ನ ಬೇಗುದಿ ಹೇಳತೀರದು. ತಪ್ಪಿತಸ್ಥಳಂತೆ ಪಶ್ಚಾತ್ತಾಪ ಪಡುತ್ತಿದ್ದೆ. ನನ್ನ ಕಣ್ಣುಗಳಲ್ಲೂ ನೀರು ನಿಂತು ಹರಿಯಿತು, ನನ್ನ ತಪ್ಪು ತಿಳುವಳಿಕೆಯ ನೆನಪಾಗಿ, ಮತ್ತೆ ಆಕೆಯೇ ಮುಂದುವರಿಸಿದಳು.

"ಉಳಿದ ನನ್ನ ತಾಯಿ ನಮ್ಮೆಲ್ಲರ ಆರೈಕೆಗೆ ಗಮನ ಕೊಡಬೇಕಾಗಿತ್ತು. ಆದರೆ ಅವರು ಜೀವವಿದ್ದೂ ಮರದ ಕೊರಡು. ನಿಲ್ಲೆಂದರೆ ನಿಲ್ಲುವುದು, ನಡೆಯೆಂದರೆ ನಡೆಯುವುದು. ಬಾಯಿಗಿಟ್ಟದ್ದನ್ನು, ತಟ್ಟೆಗಿಟ್ಟಿದ್ದನ್ನು ತಿನ್ನುವುದು. ಅಬ್ಬಾ! ನಮ್ಮ ತಾತ ಆಗ ಪಟ್ಟ ಬವಣೆ, ... ನನ್ನ ತಾಯಿ ... ಗತಿ ಎಂಬ ... 'ದೇವರೆ ಈ ... ನಿನ್ನ ... ಸೇರಿಸಿಕೋ, ... ಅಗಲಿ ... ಕೊಡುವ ... ನಾನು ಇದನ್ನು ಸಂತಸದಿಂದಲೇ ಸ್ವೀಕರಿಸುತ್ತೇನೆ' ಎಂದು ನಮ್ಮ ತಾತ ತಡೆಯದೆ ಗಟ್ಟಿಯಾಗೇ ದೇವರಲ್ಲಿ ಮೊರೆ ಇಡುತ್ತಿದ್ದರು. ಮುಲ್ತಾನದ ನಮ್ಮ ಮನೆ ಬಿಡುವಾಗ ಮೂಕಿಯಾದ ನನ್ನ ತಾಯಿ ಮತ್ತೆ ಮಾತೇ ಆಡಿಲ್ಲ. ತಲೆ ಕೆಟ್ಟಿದೆಯೆಂದು ಹೇಳುವಂತಿಲ್ಲ. ಯಾಕೆಂದರೆ ಒಮ್ಮೊಮ್ಮೆ ಎಲ್ಲವೂ ತಿಳಿಯುವಂತೆ ಅವಳ ವರ್ತನೆಯಿರುತ್ತಿತ್ತು. ಆದರೆ ಅವಳಿಂದ ನಾವೆಲ್ಲ ಸುಖ ಕಾಣುವ ಬದಲು ಬಹಳ ಕಷ್ಟ, ತೊಂದರೆಯನ್ನೇ ಅನುಭವಿಸ ಬೇಕಾಯಿತು. ಮಾವ, ಅಥವಾ ತಾತ ಇಷ್ಟರಲ್ಲಿ ಯಾರಾದರೊಬ್ಬರು ಅವಳನ್ನು ಕಾಯುತ್ತಿರ ಬೇಕಾಗಿತ್ತು.

ಒಮ್ಮೆ ಮಾವ, ಒಮ್ಮೆ ತಾತ ಹೀಗೆ ಸರದಿ ಮೇಲೆ ಪಾಣಿಪತದಲ್ಲಿ ಹಾಕಿದ್ದ ಶಿಬಿರಗಳಲ್ಲಿ, ಹಲವಾರು ಮಸೀದಿ, ದೇವಸ್ಥಾನಗಳು, ಧರ್ಮಶಾಲೆಗಳು, ದಿಲ್ಲಿಯ ಸಂಧಿ ಗೊಂದಿಗಳು, ದಿಲ್ಲಿಯ ಹಲವಾರು ಹಲವಾರು ದೊಡ್ಡ, ಸಣ್ಣ ಹೋಟೇಲುಗಳಲ್ಲಿ ಹಾಕಿದ್ದ ... ಮತ್ತೆ ... ದೊಡ್ಡದಾದ ... ಅಲ್ಲಿ ಇಲ್ಲಿ ಎಂದಲ್ಲ, ... ನಮ್ಮವರಿಗಾಗಿ ... ಹುಡುಕುತ್ತಿದ್ದರು.

ಅಂತೂ ಇಂತಹ ಸಂದಿಗ್ಧ ಸ್ಥಿತಿಯಲ್ಲಿಯೇ ನಾವು ಹಾಗೂ ಹೀಗೂ ೬ ತಿಂಗಳು ಆ ಹೋಟೇಲಿನ ಒಂದು ರೂಮಿನಲ್ಲೇ ಕಾಲ ದೂಡಿದೆವು. ನಾವು ಮನಸ್ಸು ಮಾಡಿದ್ದರೆ ಒಂದು ಮನೆಮಾಡಿ ಸ್ವಲ್ಪ ಕೈ ಕಾಲು ಬಿಟ್ಟು ಓಡಾಡಿಕೊಂಡು, ನೆಮ್ಮದಿಯಿಂದ ಇರಬಹುದಾಗಿದ್ದರೂ, ನಮ್ಮವರ ಪೈಕಿ ಯಾರಾದರೊಬ್ಬರು ಬಂದಾರೆಂಬ ದೂರದ ಆಶೆ ನಮ್ಮನ್ನು ಅಲ್ಲಿಯೇ ಇರುವಂತೆ ಮಾಡಿತ್ತು.

ಆದರೆ ಆರು ತಿಂಗಳ ನಂತರ ನಾವು ಅಲ್ಲಿಯೇ ಇದ್ದರೆ ಇಲ್ಲದ ಕಷ್ಟಕ್ಕೆ ಗುರಿಯಾಗುವುದು ಖಂಡಿತವೆಂದು ದಿಲ್ಲಿಯಲ್ಲೇ ಒಂದು ಮನೆ ಬಾಡಿಗೆ ಹಿಡಿದೆವು. ಹೋಟೇಲಿನಲ್ಲಿ ನಮ್ಮೆಲ್ಲರ ಆರೋಗ್ಯವೂ ಕೆಟ್ಟಿತು. ... ನನ್ನ ಚಿಕ್ಕ ತಮ್ಮ ... ಲೂ, ಭೇದಿ ಜ್ವರ, ಶೀತದಿಂದ ನರಳುತ್ತಲೇ ಇರುತ್ತಿದ್ದರು. ನಾವೆಲ್ಲರೂ ಬಹಳ ಇಳಿದು ಬಿಟ್ಟಿದ್ದೆವು. ಊಟ, ತಿಂಡಿ ಯಾರೀಗೂ ರುಚಿಸುತ್ತಲೂ ಇರಲಿಲ್ಲ, ಹಿಡಿಸುತ್ತಲೂ ಇರಲಿಲ್ಲ. ಬೇರೆ ಕಡೆಯಿಂದಲೇ ತರುತ್ತಿದ್ದ ಹಾಲು ನಮ್ಮೆಲ್ಲರ ಜೀವವನ್ನು ಕಾಪಾಡಿತಷ್ಟೆ.

ಹಾಗೂ ಹೀಗೂ ಮತ್ತೆ ಒಂದೂವರೆ ವರ್ಷ ದಿಲ್ಲಿಯ ಬಾಡಿಗೆ ಮನೆಯಲ್ಲಿ ಕಾಲಕಳೆದೆವು. ಅಳಿದುಳಿದ ನಮ್ಮ ಪ್ರಾಣಕ್ಕೆ ಏನೂ ಸಂಚಕಾರ ಬರಲಿಲ್ಲವಾದರೂ, ಬದುಕಿ ದಿನಕಳೆಯುತ್ತಿದ್ದು ಮಾತ್ರ ಜೀವವಿದ್ದ ಪ್ರೇತಗಳಂತೆ. ಅಷ್ಟು ಚಿಕ್ಕ ವಯಸ್ಸಿನ ನಾನು ಯೋಚನೆಯ ಗುಂಡಿನಲ್ಲಿ ಮೂಲೆಹಿಡಿದು ಕುಳಿತಿರುತ್ತಿದ್ದೆ. ಆಗಾಗ ಮಾವ ಮತ್ತು ತಾತನ ಆಜ್ಞೆಯತೆ ಕೆಲವು ಕೆಲಸಗಳನ್ನು ಮನಸ್ಸಿಲ್ಲದಿದ್ದರೂ ಮಾಡಲೇ ಬೇಕಾಗುತ್ತಿತ್ತು.

ತಾಯಿಗೆ ಹಿಡಿದ ಚಿತ್ತಭ್ರಮೆ ತೊಲಗಲೇ ಇಲ್ಲ. ಹಣವಿತ್ತು ನಮ್ಮ ಕೈಯಲ್ಲಿ ಹಾಗಾಗಿ ಒಳ್ಳೊಳ್ಳೆಯ ಡಾಕ್ಟರುಗಳಿಂದ ಔಷಧೋಪಚಾರ ಮಾಡಿಸುತ್ತಲೇ ಇದ್ದರು. ಏನಾದರೂ ಅವರ ಹೃದಯಕ್ಕಾಗಿದ್ದ ಆಘಾತದ ಪೆಟ್ಟು ಮಾಯಲೇ ಇಲ್ಲ. ನಮ್ಮೆಲ್ಲರನ್ನು ಅವರು ಕುರುಡಿಯಂತೆ ಯೇ ನೋಡುತ್ತಿದ್ದರು. ನನ್ನ ತಮ್ಮನ ಆಟಪಾಟಗಳು ರಾಣಿಯ ಮಾವನ ಮಗಳ ಮುಗ್ಧ ಮಾತುಗಳೊಂದೂ ಅವರ ಮೇಲೆ ಪರಿಣಾಮವನ್ನುಂಟು ಮಾಡಲಿಲ್ಲ. ಒಂದು ವಿಧದಿಂದ ಅವರ ಹಾಗಿದ್ದುದೂ ಆ ಹೊತ್ತಿನಲ್ಲಿ ಒಳ್ಳೆಯದೇ ಆಗಿತ್ತು ಎಂದು ತಾತ ಹೇಳುತ್ತಾ ಇದ್ದರು. ಹೊರಗಿನ ಜ್ಞಾನ ಇರುತ್ತಿದ್ದರೆ ಅವರ ದುಃಖ, ರೋದನವನ್ನು ಯಾರೂ ನೋಡುವಂತಿರಲಿಲ್ಲ. ಅಲ್ಲ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಮೇಯವೇ ಇತ್ತಾಗ.

ಎರಡೇ ವರ್ಷಗಳಲ್ಲಿ ನನ್ನ ಮಾವ ಮತ್ತು ತಾತ ಭವಿಷ್ಯದ ಬಗ್ಗೆ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದರು. ಯಾವ ಯಾವದೊ ಊರುಗಳನ್ನು ನೋಡಿಕೊಂಡು ಬಂದ ಅವರಿಗೆ ಮದ್ರಾಸೇ ವ್ಯಾಪಾರಕ್ಕೆ ಒಳ್ಳೆಯ ಜಾಗವೆಂದು ಮನಸ್ಸಿಗೆ ಬಂದಿರಬೇಕು.

೧೯೫೦ನೇ ಇಸವಿಯಲ್ಲಿ ನಾವೆಲ್ಲ ಮದ್ರಾಸಿನಲ್ಲಿ ಬಂದು ನೆಲಸಿದೆವು. ಮೊದಲು ಮೈಲಾಪುರದಲ್ಲಿ ಚಿಕ್ಕದಾದ ಒಂದು ... ಅಂಗಡಿಯನ್ನು ತೆರೆದೆವು. ಕೆಲವು ರೆಡಿಮೇಡ್ ಅಂಗಿಗಳನ್ನು ತರಿಸಿ ಮಾರಾಟಕ್ಕಿಟ್ಟೆವು. ಅಲ್ಲಿಂದ ದಿನ ದಿನಕ್ಕೆ ನಮ್ಮ ವ್ಯಾಪಾರ ಕುದುರಿತೇ ಹೊರತು ಇಳಿ ಮುಖವಾಗಲಿಲ್ಲ.

ಈ ಮಧ್ಯೆ ನಮ್ಮ ತಾಯಿಗೆ ಶುಶ್ರೂಷೆ ನಡೆಯುತ್ತಲೇ ಇತ್ತು. ಅವಳೂ ಒಂದು ಸ್ಥಿತಿಕ್ಕೆ ಬರುತ್ತಿದ್ದಳು. ಅವಳಿಗೆ ಸ್ವಲ್ಪ ಸ್ವಲ್ಪವಾಗಿ ತನ್ನಿರುವಿನ ಅರಿವಾಗುತ್ತಾ ಬರುವಾಗ ಎಲ್ಲರನ್ನು ವಿಚಾರಿಸ ತೊಡಗಿದಳು. ಒಂದೊಂದಾಗಿ ಎಲ್ಲ ಕತೆಯೂ ಅವಳಿಗೆ ನಿವೇದಿಸಲ್ಪಟ್ಟಿತ್ತು. ಎಷ್ಟು ಸಮಾಧಾನ ಹೇಳುತ್ತಿದ್ದರೂ ಅವಳಿಂದ ಆ ದಾರುಣವಾದ ದುರಂತವನ್ನು ಮರೆಯಲು ಇಂದಿಗೂ ಸಾಧ್ಯವಾಕಿಲ್ಲ.

ನನ್ನ ತಾತ, ಮಾವ ನನ್ನನ್ನು ಅವಳಿಗೆ ಹಿಡಿದು,

"ಈ ಮೂರು ಕಂದಮ್ಮಗಳಿಗಾಗಿಯಾದರೂ ಆದ ಅನಾಹುತವನ್ನು ಮರೆತು ಬಾಳು ತಾಯಿ. ನಿನ್ನಿಂದ ನಮ್ಮೆಲ್ಲರ ಅಳಿವೂ, ಉಳಿವೂ ಆಗಲಿದೆ. ನಿನ್ನ ಮನಸ್ಸಿಗೆ ಬಂದ ಯಾವ ಕೆಲಸವನ್ನಾದರೂ ಮಾಡು. ಅಂಗಡಿಯಲ್ಲಾದರೂ ಬಂದು ಇರು. ಮನೆಯಲ್ಲಾದರೂ ಇರು" ಎಂದು ಹೇಳುತ್ತಾ ಇದ್ದರು.

ಆಗ ತಾಯಿ ಏನೂ ಅನ್ನದೆ ಅಳುತ್ತಿದ್ದರು.

ನಂದನ ವನದಂತಿದ್ದ ಅವಳ ಸುಖೀ ಸಂಸಾರದ ಅಮೂಲ್ಯ ಜೀವ ರತ್ನಗಳನ್ನೆಲ್ಲ ಕಳಕೊಂಡ ಆ ದುರ್ದೈವಿ ಹೇಗೆ ಮರೆತಾಳು ತನ್ನ ದಾರುಣ ದುರಂತ ಕತೆಯನ್ನು

ಆದರೆ ಕಡೆಕಡೆಗೆ ಅಂಗಡಿಗೂ ಹೋಗಿ ಬರತೊಡಗಿದಳು. ಸ್ವತಃ ತಾನೇ ಎಲ್ಲ ಕಟ್ಟಿಂಗ್‌ಗಳನ್ನು ಮಾಡಿ ಸಾಧ್ಯವಾದಷ್ಟೂ ಹೊಲಿದು ಹಾಕುತ್ತಿದ್ದಳು. ವ್ಯಾಪಾರ ಚೆನ್ನಾಗಿ ಕುದುರಿತು. ಜಾಗ ಸಾಲದೆಂದು ನಾವು ಈಗಿನ ಅಂಗಡಿಯನ್ನು ತೆರೆದೆವು. ಅಲ್ಲಿಗಿಂತ ಇಲ್ಲಿ ನಾಲ್ಕು ಪಟ್ಟು ವ್ಯಾಪಾರವೂ ಚೆನ್ನಾಗಿದೆ. ಆದರೆ ಏನಿದ್ದರೇನಮ್ಮ. ನಮ್ಮ ಹೃದಯಕ್ಕಾದ ಆಘಾತ ಮರೆಯುವಂತಹದಲ್ಲ, ನಮ್ಮ ತಾಯಿಗೆ ಈಗಲೂ ಒಮ್ಮೊಮ್ಮೆ ಚಿತ್ತ ಕಲಕಿದರೆ ಎಲ್ಲಿದ್ದರಲ್ಲಿ ಕತ್ತರಿಯನ್ನು ಹೊಲಿಗೆ ಯಂತ್ರಕ್ಕಾಗಿಯಾಗಲೀ ಗೋಡೆಗಾಗಲೀ ಚುಚ್ಚಿಕೊಳ್ಳುತ್ತಾರೆ. ಅವರ ಕಡೆಗೇ ಲಕ್ಷವಿಡುತ್ತಿರುವ ತಾತ ಅವರನ್ನು ಹಿಡಿದು ಮಲಗಿಸುತ್ತಾರೆ. ಹಾಗಾದರೆ ಮತ್ತೆ ೧-೨ ತಿಂಗಳು ಮಂಕಾಗಿ ಮಲಗಿ ಬಿಡುತ್ತಾರೆ. ಮತ್ತೆ ಸ್ಥಿಮಿತಕ್ಕೆ ಬಂದಾಗ ಕೆಲಸ"

ಆಕೆ ತನ್ನ ದುರಂತ ಕತೆಗೆ ಮುಕ್ತಾಯ ಹಾಕಿ. ಬಿಕ್ಕಿ ಬಿಕ್ಕಿ ಅತ್ತಳು. ನನ್ನ ಅತ್ತೆಯ ಕಣ್ಣುಗಳಲ್ಲೂ ನೀರು ತುಂಬಿತ್ತು. ನನ್ನ ಮನಸ್ಸಿಗೆ ಎರಡು ತರಹದ ವೇದನೆಯಾಗುತ್ತಿತ್ತು. ಅವರ ದುರಂತ ಕತೆಯನ್ನು ಕೇಳಿ ಅಳು ಬರುವುದಕ್ಕಿಂತ ಹೆಚ್ಚಾಗಿ, ಏನೇನೂ

(೩ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರ್ಯಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¾ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯಯುತ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ



ರಾಜಕೀಯ

ಮೋಡ ಮತ್ತೆ ದಟ್ಟೈಸುವುದೆ?

ಕಾರ್ಮೋಡಗಳು ಕವಿದವು; ಗುಡುಗು ಗುಡುಗಿತು; ಸಿಡಿಲು ಸಿಡಿಯಿತು; ಮಿಂಚು ಮಿಂಚಿತು. ಏನಾದರೇನಂತೆ, ಬಿರುಗಾಳಿಯೊಂದು ಬೀಸಿ ಮೋಡಗಳನ್ನೆಲ್ಲಾ ಎಲ್ಲೆಂದರಲ್ಲಿ ಓಡಿಸಿಬಿಟ್ಟಿತು.

ಚೀನೀಯ ಪ್ರಧಾನಿ ಚೌ-ಎನ್-ಲಾಯ್‌ಯವರ ಪಾಕಿಸ್ತಾನ ಸಂದರ್ಶನಕ್ಕೆ ಪೂರ್ವಭಾವಿಯಾಗಿ ನಡೆದ ಭದ್ರತಾ ಮಂಡಳದ ಸಭೆಯಲ್ಲಿ ಕಾಶ್ಮೀರದ ವಿಚಾರವಾಗಿ ಚರ್ಚಿಸಲಾಯಿತು. ಮಳೆ ಸುರಿಸದೆ ತೇಲಿಹೋದ ಮೋಡದಂತಾಯಿತು ಪಾಕಿಸ್ತಾನದ ವಿದೇಶ ಮಂತ್ರಿ ಭುಟ್ಟೋರವರ ಪರಿಸ್ಥಿತಿ. ಆದರೂ ಅವರು ಎದೆಗುಂದಲಿಲ್ಲ; ಮತ್ತೊಮ್ಮೆ ದಟ್ಟೈಸಿ ಮಳೆ ಸುರಿಸಿಯೇ ಬಿಡುವೆನೆಂಬ ದೃಢ ವಿಶ್ವಾಸ ತಳೆದಿದ್ದಾರೆ, ಅವರು.

ಭುಟ್ಟೋರಿಗಿಂತಲೂ ಹೆಚ್ಚಿನ ಆತ್ಮವಿಶ್ವಾಸ ಭಾರತಕ್ಕಿದೆ. ಅದರ ಪರವಾಗಿ ಎಂ. ಸಿ. ಛಾಗ್ಲ ಹೇಳುತ್ತಾರೆ; ಕಾಶ್ಮೀರದ ಸೇರ್ಪಡೆಯು ಶಾಶ್ವತವಾಗಿ ಆಗಿದೆ. ಭಾರತದಲ್ಲಿ. ಅದನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇಲ್ಲವೆಂದು. ರಷ್ಯ ಇದನ್ನು ಪೂರ್ಣ ಮನಸ್ಸಿನಿಂದ ಅನುಮೋದಿಸುತ್ತದೆ ಫ್ರಾನ್ಸ್, ಜರ್ಮನಿ, ಫಾರ್ಮೋಸಾಗಳು ತಲೆದೂಗಿಸುತ್ತವೆ, ಮೊರಕ್ಕೊ, ಐವರಿಕೋಸ್ಟ್ ಮೊದಲಾದ ಚಿಕ್ಕವರು ತಟಸ್ಥರಂತೆ ಸುಮ್ಮನಿದ್ದಾರೆ ಆದರೆ, ಬ್ರಿಟನ್ ಮಾತ್ರ ಇದನ್ನು ಒಪ್ಪುವಂತಿಲ್ಲ; ಅಮೆರಿಕೆಯ ಅವ್ಯಕ್ತಸಾನುಭೂತಿ ಅದಕ್ಕಿದೆ.

ಆ ಹೆಂಗಸು....

(೫ನೇ ಪುಟದಿಂದ)

ಮಾದಳು ಉಪಯೋಗಿಸದೆ ಆ ತಾಯಿಯು (ಹೆಂಗಳು ಎಂದು ಹೇಳಲೂ ನಾಲಗೆ ಏಳದಾಗಿದೆ)ಬಗ್ಗೆ ಠೀಕಿಸದೆ ಮತ್ತು ಅಪಮಾನದ ಮಾತುಗಳನ್ನು ಹಿಂದಿನಿಂದಾದರೂ ಆಡಿದೆನಲ್ಲ ಎಂದು ನನ್ನ ಮೇಲೆ ನನಗೇ ಸಿಟ್ಟು ಬಂದಿತ್ತು. ಯಾವಾಗಲೂ ಆತುರದಿಂದ ಇದೇ ಸರಿ ಎಂದು ತೀರ್ಮಾನಿಸುವುದು ಹೆಂಗಸರ ಬುದ್ಧಿ. ನನಗೆ ಬಿಕ್ಕಿ ಬಿಕ್ಕಿ ಅಳುವಷ್ಟು ದುಃಖವಾದರೂ ಅಳಲಾರದೆ ಸೆರಗಿನ ತುದಿಯನ್ನು ಮಾತ್ರ ಚೆನ್ನಾಗಿ ನೆನೆಯಿಸಿದ್ದೆ ಅಷ್ಟರಲ್ಲಿ...ಮಳೆ ನಿಂತಿತ್ತು.

ಕಾರೂ ಹೊರಗಿನಿಂದ ಬಂದು ಅರಾಮ ಪಡೆಯುತ್ತಿತ್ತು.

ಅಮೃತ ಹೋಟೆ ನಿಂತಾಗ ನನ್ನ ಅತ್ತೆಯೆಂದರು:

"ನೋಡಮ್ಮ, ನಾನಿನ್ನು ಎಂದಿಗೂ ನಿಮ್ಮ ಅಂಗಡಿಯ ಗಿರಾಕಿಗಳೇ"

"ಬಹಳ ಉಪಕಾರ ಬರುತ್ತೀನಮ್ಮ"

. ಅವಳೇನೋ ಹೊರಟು ಹೋದಳು. ಆದರೆ ನಾನು ಅತ್ತೆಯ ಪ್ರಶ್ನೆಗಳು ಮತ್ತು ಬುದ್ಧಿವಾದಗಳನ್ನು ಕೇಳಿ ಜೀರ್ಣಿಸಿಕೊಳ್ಳುವುದು ಹೇಗೆಂದು ಅವರು ನನ್ನ ಕಡೆಗೆ ನೋಡುವ ಮೊದಲೇ ಊಹಿಸಿದ್ದೆ.

(ಮುಗಿದುದು)

ಭಾರತದ ವಿರುದ್ಧ ನಿಲ್ಲುವ ಮನಸ್ಸಿಲ್ಲದೆ ಹೋದರೂ ಪಾಕಿಸ್ತಾನದ ಸಮರ್ಥನೆ ಮಾಡುವುದು ಬ್ರಿಟನ್ ಮತ್ತು ಅಮೆರಿಕೆಗಳಿಗೆ ಬೇಕಾಯ್ತು. ಅದೇಕೆ? ಚೀನೀಯರ ಆಕ್ರಮಣದಿಂದ ಸ್ವರಕ್ಷಣೆಗೆಂದು ಶಸ್ತ್ರಾಸ್ತ್ರಾದಿ ಹಲವು ರೀತಿಗಳಿಂದ ಭಾರತಕ್ಕೆ ನೆರವು ನೀಡಿದ, ದೇಶದ ಪುನಾರಚನೆಯ ಮಹಾ ಸಾಹಸದಲ್ಲಿ ಭಾರತಕ್ಕೆ ಸಹಾಯವೀಯುತ್ತಿರುವ ಈ ಎರಡು ಮಹಾ ರಾಷ್ಟ್ರಗಳು ಏಕೆ ಹೀಗೆ ಮಾಡಿರುವು? ಬೆನ್ನ ಹಿಂದೆ ಒಡೆದು ಆಳುವ ನೀತಿಯಂತೆ, ಉನ್ನತ ಗತಿಯ ಉದ್ದೇಶದ ಭಾರತವನ್ನು ಆಕ್ರಮಣಕಾರಿ ಜಾತೀಯತೆಯ ವೈರಿ ಪಾಕಿಸ್ತಾನದ ಸಮಾನ ನಿಲ್ಲಿಸಿಟ್ಟ ದುಷ್ಟ ಸಾಹಸವನ್ನವು ಏಕೆ ತೋರಿಸಿದುವು? ಪಾಕಿಸ್ತಾನವು ಕೆಂಪು ಚೀನಾದ ಕಡೆಯೂ ಹೋಗುತ್ತಿದೆಯೆಂಬುದನ್ನರಿತೂ ಅವೇಕೆ ಹಾಗೆ ಮಾಡಿದವು? ಭಾರತೀಯ ಸಂಸತ್ತಿಗೆ ಸಂಸತ್ತೇ ಅವುಗಳ ದೋರಣೆಯಿಂದ ಅಸಮಾಧಾನ ಪಟ್ಟು, ತೀವ್ರ ಅಳವಳವನ್ನು ಪ್ರದರ್ಶಿಸಿತು ನಿಜ; ಇದರ ಪರಿಣಾಮವೂ ಅವುಗಳ ಮೇಲೆ ಬೀರದಿರಲಿಲ್ಲ. ಸಭೆಯನ್ನು ಮುಂದುವರಿಸುವ ಬದಲು ಅನಿರ್ದಿಷ್ಟಾವಧಿಯವರೆಗೆ ಮುಂದೂಡಿದಾಗ ಅವು ಮೌನವಾಗಿದ್ದುದೇ ಇದಕ್ಕೆ ಸೂಕ್ತ ಪ್ರತಿಕ್ರಿಯೆ.

ದೇಶಕ್ಕೆ ಬರುವ ತನ್ನ ನೂತನ ನಿಕಟ ಮಿತ್ರ ಲಾಯರನ್ನು 'ಕಾಶ್ಮೀರ'ದ ಹೊಸ ಕೊಡುಗೆಯೊಡನೆ ಕಂಡೇನು ಎಂಬ ಹೇರಾಸೆಯಿತ್ತು ಭುಟ್ಟೋರಲ್ಲಿ. ಆದರೆ, ಅವರು ಮರಳಬೇಕಾಯ್ತು ಬರಿಗೈಯಲ್ಲಿ. ತನ್ನ ಸರಕಾರದೊಡನೆ ಹೆಚ್ಚಿನ ಅಭಿಪ್ರಾಯ ತಿಳಿಯಲು ಕಾಲಾವಕಾಶ ಬೇಡಿದ ಅವರು ಲಾಯರನ್ನು ಜೋಲು ಮೋರೆಯಿಂದಲೇ ಕಂಡು ಸಲಹೆ ಕೇಳಬೇಕಾಗಿ ಬಂತು.

ಜಾತೀಯತೆಯ ಹೆಸರಿನಲ್ಲಿ ರಕ್ತ ಹರಿಸಲು ಭಾರತ ಅವಕಾಶ ನೀಡದು; ವಸ್ತುಸ್ಥಿತಿಯನ್ನು ಕಡೆಗಣಿಸಲು ಅದು ಎಂದಿಗೂ ಒಪ್ಪದು; ತನ್ನದಾಗಿರುವ ಕಾಶ್ಮೀರವನ್ನು ಸೌಹಾರ್ದ ಸಖ್ಯದ ಹೆಸರಿನಲ್ಲಿ ಪಾಕಿಸ್ತಾನಕ್ಕೆ ಧಾರೆಯೆರೆಯಲು ಅದು ಎಂದೆಂದಿಗೂ ಮನಸ್ಸು ಮಾಡದು. ಅನ್ಯಾಯದ ಮುಂದದು ತಲೆಬಾಗದು. ಹೆಚ್ಚೆಂದರೆ, ಇಂದಿರುವ ಕದನ ವಿರಾಮ ರೇಖೆಯನ್ನೇ ತುಸು ಹೊಂದಿಸಿಕೊಂಡು, ಉಭಯತರದ ಗೌರವ ಪ್ರತಿಷ್ಠೆಗಳಿಗೆ ಹೊಂದಿಕೊಳ್ಳುವ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅದು ಸಿದ್ಧವಾದೀತು; ಅಷ್ಟೆ. ಆದರೆ, ಈ ವಿಷಯದಲ್ಲಿ ಯಾವ ಮಧ್ಯಸ್ಥರ ಪ್ರವೇಶವನ್ನೂ ಅದು ಸಹಿಸದು—ಭಾರತದ ಈ ದೃಢ ನಿಲುಮೆಯನ್ನು ಛಾಗ್ಲ ಮರಳಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಇದರಿಂದ ಭಾರತ ವಿಚಲಿತವಾಗುವ ಲಕ್ಷಣಗಳಿಲ್ಲವೆಂಬುದನ್ನು ಭದ್ರತಾ ಮಂಡಳದ ಸದಸ್ಯರು ಇಂದು ಮತ್ತೊಮ್ಮೆ ಅರಿತುಕೊಂಡಿದ್ದಾರೆ.

ಬ್ರಿಟನ್ನು ಮತ್ತು ಪಾಕಿಸ್ತಾನಗಳು ಸೀಟೊ ಒಡಂಬಡಿಕೆಯ ರಾಷ್ಟ್ರವ್ಯೂಹಕ್ಕೆ ಸೇರಿದುವು. ಅಮೆರಿಕೆಯು ಪಾಕಿಸ್ತಾನಕ್ಕೆ ಕಮ್ಯೂನಿಸ್ಟ್ ಆಕ್ರಮಣದ ವಿರುದ್ಧ ಸೈನಿಕ ಸಹಾಯವನ್ನು ನೀಡುತ್ತಿದೆ ಈ ಕಾರಣದಿಂದಲೇ ಅವು ಭಾರತ ಉಪಖಂಡದ ರಾಷ್ಟ್ರಗಳಲ್ಲಿ ಸಾಕಷ್ಟು ತಿಳುವಳಿಕೆ, ಸೌಹಾರ್ದಗಳು ಬೇಕು ಎಂಬ ಅಭಿಪ್ರಾಯವನ್ನು ಹೊಂದಿವೆ, ಪ್ರಕಟಿಸಿವೆ. ಇದರಂತೆ ಭಾರತ-ಪಾಕಿಸ್ತಾನಗಳ ನಡುವೆ ಹಲವು ಸುತ್ತುಗಳ ಮಾತುಕತೆ ನಡೆದು ಮುರಿದು ಬಿತ್ತು. ಜಾತೀಯತೆಯ ತಳಹದಿಯ ಸನಾತನ ಮಾರ್ಗವನ್ನೇ ಮೆಟ್ಟುತ್ತಿರುವ 'ಇವು ಜಾತೀಯ ಕರಾಳ ರೂಪವನ್ನು ಅರಿಯದಿರುವುದು ಶೋಚನೀಯ. ಅನಿವಾರ್ಯವಾಗಿಯೆಂಬಂತೆ ಅವು ಪಾಕಿಸ್ತಾನದ ಪಕ್ಷ ವಹಿಸಿದುದು ಭಾರತಕ್ಕೆ ಬಗೆದ ದ್ರೋಹವೆಂಬ ಭಾವನೆಯನ್ನು ನಿರಾಕರಿಸುವುದು ಸಾಧ್ಯವಿಲ್ಲ.

ಚೌ-ಎನ್ ಲಾಯಿಯವರ ಕರಾಚಿ ಸಂದರ್ಶನ ಸೌಹಾರ್ದ ಮತ್ತು ವಾಣಿಜ್ಯ ಪ್ರೇರಿತವೆಂದು ಡಂಗುರ ಸಾರಲಾಗಿದೆ. ಇದು ನಿಜವಿದ್ದರೂ ಇರಬಹುದು. ಆದರೆ, ಸದಾ ಎರಡು ನಾಲಿಗೆಯವರಾದ ಲಾಯರು ಭುಟ್ಟೋರಿಗೆ ಕಾಶ್ಮೀರ ವಿಷಯದಲ್ಲಿ ಯಾವ ಸಲಹೆಯನ್ನು ನೀಡುವ ಪರಿಸ್ಥಿತಿಯಲ್ಲಿರಲಾರರು. ಅವರೊಡನೆ ಸೀಮಾ ಒಡಂಬಡಿಕೆ ಸಾಧಿಸಿ ಕಾಶ್ಮೀರದ ಒಂದಂಶವನ್ನೂ ನುಂಗಿದ ಲಾಯರು ಸದ್ಯ ತನ್ನ ಕಳೆದುಕೊಂಡ ಪ್ರತಿಷ್ಠೆಯನ್ನು ಮರಳಿ ಪಡೆಯುವುದರಲ್ಲೇ ತತ್ಪರರಾಗಿದ್ದಾರೆ. ಬ್ರಹ್ಮದೇಶ ಸಂದರ್ಶನಾನಂತರ ಹೊರಡಿಸಿದ ಜಂಟಿ ಪ್ರಕಟಣೆಯೆಂದು ಭಾರತ-ಚೀನಾ ಸೀಮೆಯಲ್ಲಿ ಇಂದು ನೆಲೆಸಿದ ಶಾಂತತೆಯ ಬಗ್ಗೆ ಸಮಾಧಾನವನ್ನೂ ತೋರಿಸಲಾಗಿ ಸೀಮೆಗಳ ತಕರಾರಿಯಲ್ಲಿ ಸರಕಾರದ ಆಕ್ರಮಣವನ್ನೂ ವ್ಯಕ್ತಪಡಿಸಲಾಗಿದೆ. ಮೊದಲನೆಯ ಉಲ್ಲೇಖ ಸಾಧ್ಯವಾದರೂ ಎರಡನೆಯದು ಹೇಗೆ? ಹಿಂದೊಮ್ಮೆ ಇದೇ ಸೂಚನೆಗಳನ್ನು ಒಪ್ಪಿ ಮುಂದೆ ನಿರಾಕರಿಸಿದ ಲಾಯರು ಮರಳಿ ಅದನ್ನು ಸ್ವೀಕರಿಸಿಯಾರೆ? ಅಥವಾ ಭಾರತದೊಡನೆ ಪಂಚಶೀಲ ನಾಟಕವಾಡಿದಂತೆ, ಅಂದು ತಲೆದೂಗಿದಂತೆ ಇಂದು ಮರಳಿ ಸೈಗುಟ್ಟಿದರೆ? ಅಥವಾ ಮುಂದೆ ಒಪ್ಪಿ ಹಿಂದೆ ನಿರಾಕರಿಸುವ ತನ್ನ ನೀತಿಯನ್ನೇ ಇನ್ನೊಮ್ಮೆ ನೆಮ್ಮಿ ಹಿಡಿದರೆ?

ಕಾಶ್ಮೀರವನ್ನು ನುಂಗುವ ಪಾಕಿಸ್ತಾನ, ನೇಫಾ—ಲಡಾಖ ಕಬಳಿಸುವ ಚೀನಾ—ಇವೆರಡರ ಸಮಾಗಮದ ಫಲಶ್ರುತಿಯನ್ನು ಭಾರತೀಯರು ಎಚ್ಚರದಿಂದ ಕಾಯಿರಬೇಕಾಗುತ್ತದೆ. ಕಾಶ್ಮೀರದ ವಿಷಯ ಪ್ರಸ್ತಾಪವಿದ್ದ ಮಾನಪತ್ರವೊಂದನ್ನು ಉತ್ತರಿಸುವಾಗ ಲಾಯರು ಆಫ್ರೋ ಏಷ್ಯಾ ರಾಷ್ಟ್ರ ಸಮ್ಮೇಳನ ಸೇರಬೇಕೆಂಬುದನ್ನೇ ಪ್ರತಿಪಾದಿಸಿದರಲ್ಲದೆ ಕಾಶ್ಮೀರದ ಬಗ್ಗೆ ಚಕಾರವನ್ನೂ ಎತ್ತಲಿಲ್ಲ. ಇಷ್ಟರಿಂದಲೇ ಲಾಯರ ಆಸ್ತೆಯು ಇದರಲ್ಲಿಲ್ಲ ಎಂದು ಯಾರೂ ತಿಳಿದುಕೊಳ್ಳಬಹುದು. ಅನ್ಯಾಯವನ್ನೇ ನ್ಯಾಯದ ಮುಂದೆ ಎತ್ತಿಕಟ್ಟುವ ಈ ರಾಷ್ಟ್ರಗಳು ಭಾರತದ ಬಗ್ಗೆ ಮತ್ಸರ ಮತ್ತು ದ್ವೇಷ ಭಾವನೆಯುಳ್ಳವೆಂಬುದು ಸಮಾನ ಗುಣ. ಹಾಗಾಗಿ ಇವುಗಳು ಏನೇನು ಪಿತೂರಿ ಹೂಡಲಿರುವವೆಂಬುದು ಅಗೋಚರವಿದೆ. ಚೀನಾದೊಡನೆ ಯಾವ ಒಡಂಬಡಿಕೆ ಮಾಡಿಕೊಂಡರೂ ಅದು ತನ್ನ ನೆರವಿಗೆ ಎತ್ತ ಬರುವುದೆಂದು ಪಾಕಿಸ್ತಾನಕ್ಕೆ ಅಮೆರಿಕೆ ಎಚ್ಚರವಿತ್ತಿದೆ.

ಲಾಯರು ಏನೇ ಹೇಳಲಿ. ಭಾರತವು ನೇರ ಮಾತುಕತೆಗಳಿಂದ, ಸೌಹಾರ್ದ ವಾತಾವರಣದಲ್ಲಿಯೇ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಅಚಲ ನಿರ್ಧಾರದಲ್ಲಿದೆ. ಯಾವುದೇ ಒಪ್ಪಂದವು ಉಭಯ ಪಕ್ಷದ ಗೌರವ ಮತ್ತು ಪ್ರತಿಷ್ಠೆಗಳನ್ನು ಮನ್ನಿಸುವಂತಿರಬೇಕೆಂದು ಬಯಸುತ್ತದೆ. ಹಾಗೆಂದು, ಒಂದು ಸಮಸ್ಯೆಯನ್ನು ಕೊನೆಯ ತನಕವೂ ಅದೇ ರೂಪದಲ್ಲಿಡುವುದು ಅದಕ್ಕೆ ಬೇಕಾಗಿಲ್ಲ. ಅದಕ್ಕಾಗಿ ಶಾಂತ ವಿಧಾನದ ದಾರಿಯಲ್ಲಿ ಮುಟ್ಟಿದರೆ ಸುತ್ತ ಆಕ್ರಮಣಕಾರರನ್ನು ಹೊರತಳ್ಳಲು ಶಕ್ತಿಯನ್ನೇ ಪ್ರಯೋಗಿಸಬೇಕಾಗಬಹುದು. ಇದಕ್ಕೆ ಭಾರತವೆಂದಿಗೂ ಹಿಂಜರಿಯುವುದಿಲ್ಲ. ಅದಕ್ಕೆಂದೇ ಸಂರಕ್ಷಣಾ ಮಂತ್ರಿ ವೈ. ಬಿ. ಚವಾಣರು ಪ್ರತಿ ಕುಟುಂಬದಿಂದಲೂ ಒಬ್ಬೊಬ್ಬ ಸೈನ್ಯ ಸೇವೆಗೆ ಸೇರಬೇಕೆಂದು ಕರೆಯಿತ್ತಿದ್ದಾರೆ. ಇದು ವಾಸ್ತವಿಕ. ಸ್ವದೇಶ ಮತ್ತು ಸ್ವಾತಂತ್ರ್ಯ ರಕ್ಷಣೆಗೆ ಪ್ರತಿ ಭಾರತೀಯನೂ ಸೈನಿಕನಾಗಬೇಕು; ತನ್ನ ದವನಕ್ಕೆ ಕಟಿಬದ್ಧನಾಗಬೇಕು.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦.

ಚೀನೀಯರ ಪೇಚಾಟ

ಕತ್ತಿನಲ್ಲಿ ಕತ್ತಿ, ತಲೆಯ ಮೇಲೆ ಸುತ್ತಿಗೆ!

ಬರೆದವರು: ಶ್ರೀ ಶಿವಶಂಕರ, ಮದ್ರಾಸು

ದಿನಾಂಕ ೧೩-೨-೬೪ರ ಸಂಚಿಕೆಯಲ್ಲಿ' ಮಾವೋನ ಮೆರವಣಿಗೆಯಲ್ಲಿ ಚೀನಿಯರ ಚೀರಾಟ' ಲೇಖನವನ್ನು ಕಂಡಾಗ ಕೆಲ ಕಮ್ಯೂನಿಸ್ಟರು 'ಸುಳ್ಳು ಕರಗತವಾಗಿರುವದು (?) ಕಾಂಗ್ರೆಸ್ಸಿಗರಿಗಾದಲ್ಲಿ ಕಾಂಗ್ರೆಸ್ಸಿನ ಪತ್ರಿಕೆಗಳೂ ಅಷ್ಟೇ; ಗಾಂಧೀವಾದಿ ಕಾಂಗ್ರೆಸ್ಸಿಗರಂತೂ ಕಮ್ಯೂನಿಸ್ಟರ ಮೇಲೆ ಕೆಂಡಕಾರುತ್ತಿದ್ದಾರೆ, ಅಂತೆಯೇ 'ನವಯುಗ'ವೂ ಸತ್ಯಸಂಗತಿಯನ್ನು ಮರೆಮಾಡಿ ಕಮ್ಯೂನಿಸ್ಟ್ ವಿರೋಧ ಮನೋಭಾವನೆ ಬೆಳೆಯುವ ಲೇಖನಗಳನ್ನೇ ಪ್ರಕಟಿಸುತ್ತದೆ ಎಂಬುದು ಕಮ್ಯೂನಿಸ್ಟರ ವಾದ. ಅದಕ್ಕೆ ಅವರು ಕೊಡುತ್ತಿರುವ ಕಾರಣಗಳು ಎರಡು- ಮೊದಲನೆಯದಾಗಿ ಚೈನಾದಲ್ಲಿ ಚೀರಾಟ ಜಾಸ್ತಿಯಾಗುತ್ತ ಹೋಗುತ್ತಿರುವದು ನಿಜವಾದಲ್ಲಿ ಫ್ರಾನ್ಸ್ ಅವರೊಂದಿಗೆ ಅದೇಕೆ ಸಂಧಾನಕ್ಕೆ ಬರುತ್ತಿತ್ತು?, ಅದನ್ನು ಮಾನ್ಯಮಾಡುತ್ತಿತ್ತು? ಇದು ಎಲ್ಲರ ಕಣ್ಣೆದುರಿನಲ್ಲೇ ನಡೆದಿರುವ ಘಟನೆ. ಚೈನಾ ಕಷ್ಟಸಾಗರದಲ್ಲಿ ಮುಳುಗಾಡುತ್ತಿದ್ದಲ್ಲಿ ಫ್ರಾನ್ಸಿಗೆ ತನ್ನ ಪ್ರಾಣರಕ್ಷಕ ಬುಟ್ಟಿಗಳನ್ನು ಮಾರಲು ಅದು ಸುಸಂದರ್ಭವೇ ಸರಿ. ಫ್ರಾನ್ಸಿಗೂ ಚೈನಾಕ್ಕೂ ಒಪ್ಪಂದ ನಡೆದ ಮೇಲೆ ಫ್ರಾನ್ಸಿನ ಅಂಗಡಿಗಳಲ್ಲಿ ಚೈನಿ ವಸ್ತುಗಳು ಬಹಳಷ್ಟು ಕಂಡುಬರುತ್ತಿವೆಯೆನ್ನುವದನ್ನು ಕಮ್ಯೂನಿಸ್ಟರು ಗಟ್ಟಿಯಾಗಿ ಹೇಳುತ್ತಿದ್ದಾರೆ. ಕಮ್ಯೂನಿಸ್ಟ್ ರಾಷ್ಟ್ರಗಳು ಏನನ್ನಾದರೂ ರಫ್ತು ಮಾಡುತ್ತಿವೆಯೆಂದಲ್ಲಿ ನಿಜವಾಗಿ ಆ ರಾಷ್ಟ್ರಗಳಲ್ಲಿ ಆ ವಸ್ತುಗಳು ಹೇರಳವಾಗಿರಬೇಕೆಂದೇನಿಲ್ಲ. ಅವು ಸರ್ವಾಧಿಕಾರತ್ವಕ್ಕೆ ಒಳಗಾಗಿರುವ ರಾಷ್ಟ್ರಗಳಿವೆ. ಅಲ್ಲಿ ಪ್ರಜೆಗಳ ಸ್ವರಕ್ಕೆ ಬೆಲೆಯೇ ಇರುವುದಿಲ್ಲ. ಆದರೆ, ಹಿಂದಿನ ಸಂಚಿಕೆಗಳಲ್ಲಿ ಚೈನಾದೊಳಗೆ ಅಣುಗುಂಡು ತಯಾರಾಗುತ್ತಿರುವ ವಿಷಯಗಳನ್ನು ಓದಿರುವೆವು. ಅಣುಗುಂಡು ತಯಾರಿಕೆಗೆ ಬೇಕಾಗುವ ವಸ್ತು-ಪದಾರ್ಥಗಳನ್ನು ಪಡೆದುಕೊಳ್ಳಲು ಹಣ ಬೇಕು, ಅಲ್ಲದೆ, ಕೆಲವು ವಸ್ತುಗಳು ಕೆಲವೇ ರಾಷ್ಟ್ರಗಳಲ್ಲಿ ಸಿಗುತ್ತವೆ. ಹಾಗೆ ಚೈನಾವು ದ್ರಾಕ್ಷಾರಸವನ್ನು ಮಾರಿ ರಂಜಕವನ್ನೋ ಗಂಧಕವನ್ನೋ, ಅಥವಾ ಸ್ಫೋಟಕ ವಸ್ತುಗಳನ್ನೂ ಪಡೆದುಕೊಂಡಲ್ಲಿ ಆಶ್ಚರ್ಯಪಡಲಿಕ್ಕೇನೂ ಇರುವುದಿಲ್ಲ, ವ್ಯಾಪಾರದ ಹೊಸತಿನಲ್ಲಿ ಕೆಲ ಉತ್ತಮ ವಸ್ತುಗಳನ್ನು ಅವರು ಮಾರುಕಟ್ಟೆಗೆ ಕಳುಹಿಸಬಹುದು. ನಿರಂತರವೂ ಹಾಗೆಯೇ ಕಳುಹಿಸುವರೆಂಬುದಕ್ಕೆ ಸಾಕ್ಷ್ಯಗಳೇನೂ ಇಲ್ಲ. ನೇಪಾಲದಲ್ಲಿ ಅವರು ಮಾಡಿದ್ದೇನು? ಹಾಗೆಯೇ ಫ್ರಾನ್ಸಿನಲ್ಲೂ ಮಾಡುವದಿಲ್ಲವೆನ್ನುವದಕ್ಕೆ ಸಾಕ್ಷ್ಯವೇನು? ನೇಪಾಲದಲ್ಲೂ ಇತ್ತೀಚಿಗೆ ಬೇಕಾದಷ್ಟು ವಸ್ತುಗಳನ್ನು ಚೈನೀಯರು ಮಾರಿದ್ದಾರೆಂದು ಕೆಲವು ಕಮ್ಯೂನಿಸ್ಟರು ಹೇಳಬಹುದು. ಆದರೆ ಆಹಾರ ಸಾಮಾಗ್ರಿಗಳು ಅದೆಷ್ಟು ನೇಪಾಲಕ್ಕೆ ಬಂದಿವೆ?

ಎರಡನೆಯದಾಗಿ, ಚೈನಾದಲ್ಲಿ ಪ್ರಕಟವಾಗಿರುವ ಕೆಲ ಸಮಾಚಾರಗಳ ಪಟ್ಟಿಯತ್ತ ನಮ್ಮ ಗಮನವನ್ನು ಸೆಳೆಯಲು ಕಮ್ಯೂನಿಸ್ಟರು ಪ್ರಯತ್ನಿಸಬಹುದು. ಚೈನಾದ ಮಾರುಕಟ್ಟೆಗಳಲ್ಲಿ ಹೇರಳ ಆಹಾರ ಪದಾರ್ಥಗಳು ದೊರಕುವದಾಗಿ ಕಮ್ಯೂನಿಸ್ಟರು ಪ್ರಚಾರಮಾಡುತ್ತಿದ್ದಾರೆ. ವಾಸ್ತವ್ಯಸ್ಥಿತಿ ಹಾಗಿದೆಯೇ? ಇದನ್ನು ನಾವು ಗಮನಿಸಬೇಕಾಗಿರುತ್ತದೆ, ಅದಕ್ಕಾಗಿ ಪುನಃ ಚೈನಾದ ಅಂತರಿಕ ಸ್ಥಿತಿಗತಿಯತ್ತ ನಾವು ಗಮನ ಹರಿಸೋಣ.

ಕೇವಲ ನಾಲ್ಕೈದು ತಿಂಗಳುಗಳ ಹಿಂದೆ ಶ್ರೀ ಚಾರ್ಲ್ಸ್ ಯಫ್. ನೋತೊಂಬ್ ಚೈನಾಕ್ಕೆ ಹೋಗಿ ಬಂದಿರುವರು ಅವರು ಸಾಧಾರಣ ನಾಲ್ಕು ವಾರ ಕಮ್ಯೂನಿಸ್ಟ್ ಚೈನಾದಲ್ಲಿ ಪ್ರಯಾಣಮಾಡಿ ಬಂದ ಮೇಲೆ ತಮ್ಮ ಅನುಭವಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿರುವರು. ಮದ್ರಾಸಿನ ಮೆಯಿಲ್ ಪತ್ರಿಕೆಯು ಅವರ ಅನುಭವಗಳನ್ನು ಪ್ರಕಟಿಸಿರುತ್ತದೆ. ಆದರಿಂದ ಕೆಲ ವಿಷಯಗಳನ್ನು ಇಲ್ಲಿ ಕೊಡಲಾಗಿರುತ್ತದೆ. ಒಂದು ವಿಷಯವನ್ನು ಓದುಗರು ಮರೆಯಬಾರದು—ದಿಲ್ಲಿಯ ಮಹಾಬೀದಿಗಳಂತೆ ಹಳ್ಳಿಯ ನೆಲ ಇರುವದಿಲ್ಲ, ಹಾಗೆಯೇ ಪೆಕಿಂಗ್ ಪಟ್ಟಣದಂತೆ ಉರುವಿಷ್ಟು ಇರುವದಿಲ್ಲ ನೋತೊಂಬ್ ಕೊಟ್ಟಿರುವ ವಿವರಣೆ ಪೆಕಿಂಗಿನದ್ದಿದೆ. ಪೆಕಿಂಗಿನಲ್ಲಿ ಜನಜೀವನ ಕಳಕು ಬೆಳಕಿನದ್ದಾಗಿರುವದು ಆಶ್ಚರ್ಯದ ವಿಷಯವಲ್ಲ. ನಾಲ್ಕೈದು ರಾಷ್ಟ್ರಗಳ ರಾಯಭಾರಗಳು ಸುತ್ತಾಡುವ ಸ್ಥಳ ಯಾವಾಗಲೂ ಜನವಸತಿ ಇಲ್ಲದ ಸ್ಥಳಗಳಿಗಿಂತ ಮಾಯಾ ನಗರವಾಗಿರುತ್ತದೆ. ಪೆಕಿಂಗಿನ ಪ್ರಜೆಗಳೇ ಹೇಗಿದ್ದಾರೆಂಬುದರ ವಿವರಣೆ ಇಲ್ಲಿದೆ:—

ಆಕಾಶದಿಂದ ಅವಲೋಕಿಸಿದರೆ ಪೆಕಿಂಗ್ ಪಟ್ಟಣವು ಅತಿ ವಿಶಾಲ ಹಾಗೂ ರಹಸ್ಯಮಯ ನಗರದಂತೆ ಕಂಡು ಬರುತ್ತದೆ. ಭಂಡವಾಳಶಾಹಿಗಳ ರಾಜ್ಯದಲ್ಲಿರುವ ವೈಭವ ಆಡಂಭರ ಸೂಚಕ ದೀಪಗಳಿಗೆ ಇಲ್ಲಿ ಎಡೆಯೇ ಇಲ್ಲ.

ವಿಮಾನ ನಿಲ್ದಾಣದಲ್ಲಿ ನಿಶ್ಶಬ್ದತೆ ನೆಲೆಸಿಕೊಂಡಿದ್ದರೂ ಅದು ಚೆನ್ನಾಗಿಯೇ ಇದೆ. ಝೆಕೊಸ್ಲೋವೇಕಿಯಾದ ವಾಹನವು ಅನ್ಯ ರಾಷ್ಟ್ರದ ಆಗಂತುಕರನ್ನೂ ಉತ್ತಮ ರಸ್ತೆಗಳ ಮೂಲಕ ಪಟ್ಟಣದ ಹೃದಯಕ್ಕೆ ಕರೆದುಕೊಂಡು ಹೋಗುತ್ತದೆ. ಅಲ್ಲಿ ಅವರಿಗಾಗಿ ಖಾನಾವಳಿಯ ಏರ್ಪಾಡು ಹಾಗೂ ಇತರ ಸೌಕರ್ಯ ಸಿದ್ಧವಾಗಿದೆ. ಅನ್ಯ ರಾಷ್ಟ್ರದ ಅಪರಿಚಿತರು ಅತ್ತಿತ್ತ ಹೋಗುವಾಗ ಅವರತ್ತ ಅದ್ಯಾವ ಚೈನಿಯನೂ ನೋಟ ಬೀರುವದಿಲ್ಲ. ಒಂದು ಶನಿವಾರ ಬಹಳ ಮಂದಿ ರಸ್ತೆಯ ಪಕ್ಕದಲ್ಲಿ ಕಲೆತಿದ್ದರು ಅಲ್ಲಲ್ಲಿ ಮಕ್ಕಳು ಗುಂಪುಗುಂಪಾಗಿ ಸೇರಿದ್ದರು. ಹೆಚ್ಚಿನ ಜನರು ಸಾಧಾರಣ ಉಡುಪಿನಲ್ಲೇ ಇದ್ದರು. ತರುಣಿಯರು ಮಾತ್ರ ತಮ್ಮಲ್ಲಿದ್ದ ಉತ್ತಮ ತೊಡುಗೆಗಳನ್ನು ತೊಟ್ಟುಕೊಂಡಿದ್ದರು. ಬಾಲಕ—ಬಾಲಕಿಯರು ಅರೆಬತ್ತಲೆಯಾಗಿದ್ದರು ಮಕ್ಕಳ ಮೈಮೇಲೆ ಬಟ್ಟೆಯೇ ಇರಲಿಲ್ಲ.

ಈ ರೀತಿಯ ಗುಂಪುಗೂಡಲು ಕಾರಣವೇನು? ಕಮ್ಯೂನಿಸ್ಟ್ ಚೈನಾದಲ್ಲಿರುವ ಹೊಸ ಕೋಣೆಗಳನ್ನು ಕಂಡಿರುವವರಿಗೆ ಕಾರಣ ತಟ್ಟನೆ ಹೊಳೆದೀತು ಐದು ಜನರು ರಾತ್ರಿ ಮಲಗುವಂತಹ ಕೋಣೆ ಕೂತುಕೊಂಡು ಕಾಲ ಕಳೆಯಲು ಯೋಗ್ಯವಾಗಿರುವದಿಲ್ಲ. ಅದುದರಿಂದಲೇ ಗುಂಪಿಗೆ ಬೀದಿ ಆಸರೆ ಇತ್ತಿದೆ. ಬೀದಿ ಅಲ್ಲದಿದ್ದಲ್ಲಿ ಬೇರಿನ್ನಾವ ವಿನೋದಕರ ವಿಶ್ರಾಮಧಾಮವು ಅವರಿಗಿದೆ?

ಬೆಳಗ್ಗೆ ಎದ್ದು ನಗರದತ್ತ ನೋಟ ಬೀರಿದಲ್ಲಿ ಅಲ್ಲಿ ಅದ್ಯಾವ ಎತ್ತರದ ಕಟ್ಟಡವೂ ಕಂಡು ಬರುವದಿಲ್ಲ. ಇರುವದರಲ್ಲಿ ಎತ್ತರದ ಕಟ್ಟಡವೆಂದರೆ ರಾಷ್ಟ್ರೀಯ ಅಲ್ಪ ಸಂಖ್ಯಾತರ ಅರಮನೆ" ನಗರದಲ್ಲೆಲ್ಲೂ ನಗೆಯ ನೋಟ ಅದ್ಯಾರ ಕಣ್ಣಿಗೂ ಬೀಳುವಂತಿಲ್ಲ.

ನಗರದ ಒಂದು ತುದಿಯಿಂದ ಇನ್ನೊಂದು ತುದಿಯ ಉದ್ದಗಲ್ಕೂ ಸಾಲು ಮರಗಳು ನಿಂತುಕೊಂಡಿವೆ. ಅದುವೇ ನಗರದ ಹೆಮ್ಮೆ. ರಸ್ತೆಯಲ್ಲಿ ಅಲ್ಲಲ್ಲಿ ನಗರ ರಕ್ಷಕರನ್ನು ಕಾಣಬಹುದು. ಅವರು ಬಹಳ ಚುರುಕಾಗಿದ್ದಾರೆ. ವಾಹನಗಳನ್ನು ನಿಯಂತ್ರಿಸುವ ಅವಿರತ ಕಾರ್ಯ ಅವರಿಗೇನೂ ಇರುವುದಿಲ್ಲ. ಬೀದಿಗಳಲ್ಲಿ ಆ ರೀತಿ ಬಂಡಿಗಳು ಓಡಾಡುತ್ತಿರುವದಿಲ್ಲ. ಅಲ್ಲಲ್ಲಿ ರಿಕ್ಷಾಗಳನ್ನು ಮಾತ್ರ ಕಾಣಬಹುದು, ಅವರು ದಾರಿ ತಪ್ಪಿದಾಗ ರಕ್ಷಕರು ನಾದವಾಹಕ ಊದು ಕೊಳವೆಗಳ ಮೂಲಕ ಎಚ್ಚರಿಕೆ ಕೊಡುತ್ತಿರುತ್ತಾರೆ. ಕೆಲ ರಸ್ತೆಗಳನ್ನು ಬಿಟ್ಟಲ್ಲಿ ಉಳಿದವುಗಳೆಲ್ಲಾ ಬಹಳ ಚಿಕ್ಕವು. ಇನ್ನೊಂದು ಹಾಸ್ಯಕರ ವಿಷಯವೆಂದರೆ, ಚೈನಿ ಸಂಪ್ರದಾಯದ ಪ್ರಕಾರ, ರಸ್ತೆಗಳತ್ತ ಮನೆಯ ಕಿಟಕಿಗಳಿಲ್ಲದಿರುವದು.

ಕಳೆದ ಆಗೋಸ್ತಿನಲ್ಲಿ ಪೆಕಿಂಗಿನಲ್ಲಿ ಎರಡು ಮುಖ್ಯ ಘಟನೆಗಳು ನಡೆದಿವೆ. ಅದರಲ್ಲಿ ಒಂದು ಆಶೆಯನ್ನು ಕೆರಳಿಸಿದಲ್ಲಿ, ಇನ್ನೊಂದು ವ್ಯಾಕುಲತೆಯನ್ನು ವರ್ಧಿಸಿರುತ್ತದೆ.

ಆಶೆಯನ್ನು ಕೆರಳಿಸಿದ್ದು ಆಹಾರಕ್ಕೆ ಸಂಬಂಧಪಟ್ಟ ವಿಷಯ. ಆಗೋಸ್ತು ತಿಂಗಳಲ್ಲಿ ತರಕಾರಿಯು ಎಲ್ಲರ ಕಣ್ಣಿಗೂ ಕಾಣುವಂತೆ ಅಂಗಡಿಗಳಲ್ಲಿದ್ದುವು. ಬಹಳ ಸಮಯದ ನಂತರ ಪೆಕಿಂಗ್ ಪ್ರಜೆಗಳು ಆ ರೀತಿ ತರಕಾರಿಗಳನ್ನು ಕಂಡದ್ದು. ಅದನ್ನು ಹಂಚಲಿಕ್ಕೂ ಅಧಿಕಾರಿಗಳಿಗೆ ಅಧಿಕ ಶ್ರಮವಾಯಿತು. ಪೆಕಿಂಗಿನಲ್ಲಿ ಸಾಧಾರಣ ೪೦,೦೦,೦೦೦ ಜನರಿದ್ದಾರೆ. ಆಗೋಸ್ತಿನಲ್ಲಿ ಅವರಿಗಾಗಿ ಅನುದಿನವೂ ೪,೦೦೦ ಟನ್ನು ತರಕಾರಿಗಳು ಬರುತ್ತಿದ್ದುವು. ಈ ಸುಖ ಕ್ಷಣಿಕವಾದರೂ ಜನತೆಗೆ ಅದು ಮರೆಸಲಾಗದಂತಹ ಸುದ್ದಿಯ ದಿನಗಳವೆ.

ಅದನ್ನು ಅರಗಿಸಿಕೊಳ್ಳುವಾಗ ಹಾಹಾಕಾರ ಕೇಳಬರಲಾರಂಭವಾಯಿತು. ಬೀದಿ ಬೀದಿಗಳಲ್ಲೆಲ್ಲಾ ನೀರಿನದ್ದೇ ಸುದ್ದಿ, ಅಷ್ಟು ಮಳೆ ಸುರಿದಿತ್ತು. ಪೆಕಿಂಗ್ ಪಟ್ಟಣಕ್ಕೂ ಇತರೆಡೆಗಳಿಗೂ ಸಂಪರ್ಕ ನಿಂತು ಹೋಗುವಷ್ಟು ಮಳೆ ಬಂದಿತ್ತು.

ಅಷ್ಟು ಮಳೆ ಇಲ್ಲದೆ ಸಾಧಾರಣ ಎಂಟು ತಿಂಗಳಿಂದ ಜನತೆಯ ನಾಲಗೆ ಒಣಗಿ ಹೋಗಿತ್ತು- ಚಾತಕ ಪಕ್ಷಿಯಂತೆ ಅವರು ಮಳೆಗಾಗಿ ಎದುರು ನೋಡುತ್ತಿದ್ದರು.

ಇತರ ಪಟ್ಟಣಗಳಿಗಿಂತ ಪೆಕಿಂಗಿನತ್ತ ಸರಕಾರ ಹೆಚ್ಚು ಗಮನ ಕೊಡುತ್ತಿದೆ.

(೧೫ನೇ ಪುಟ ನೋಡಿರಿ)

ನೋಟೀಸು

ಬೆಳ್ತಂಗಡಿ ಡಿ. ಮು. ಕೋರ್ಟಿನಲ್ಲಿ

S. C. 30/64

ಪಾಲ್ ಪಿಂಟೊ — ವಾದಿ.

ಚನಿಯ ಪೂಜಾರಿ, ತನಿಯ ಪೂಜಾರಿಯ ಮಗ, ನಲ್ಲೂರಬೆಟ್ಟು, ಕಾಶಿಪಟ್ಣ ಗ್ರಾಮ, ಬೆಳ್ತಂಗಡಿ ತಾಲೂಕು — ಪ್ರತಿವಾದಿ.

ವಾದಿಯು ನಿಮ್ಮ ಮೇಲೆ ಡಿ. ಪ್ರೊ. ನೋಟಿನ ಅಸಲು ಮತ್ತು ಬಡ್ಡಿಗೆ ಮಾಡಿದ ಮೇಲಿನ ದಾವೆಯು ತಾ. 16-3-1964ಕ್ಕೆ ಇರುವುದರಿಂದ ನೀವು ಆ ದಿನ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸಿಕೊಳ್ಳದಿದ್ದಲ್ಲಿ, ನಿಮ್ಮನ್ನು ಶಿವ್ಯಾ ಮಾಡಿ ತೀರ್ಮಾನಿಸಲಾದೀತೆಂದು ಈ ಮೂಲಕ ತಿಳಿಸಿಯದೆ.

(By order of Court)

U. M. Raveendra,
Advocate for Plaintiff.

ಬೆಳ್ತಂಗಡಿ, 26-2-1964.

ಗೇಹರಾಜ್ಯದಲ್ಲಿ

ತಪ್ಪು ಯಾರದು, ಶಿಕ್ಷೆ ಯಾರಿಗೆ?

"ಏನೇ ಇದು? ಮನೆಗೆಲ್ಲಾ ಬೀಗ ಮುದ್ರೆ ಬಡಿದು ಈ ಅಪರಾತ್ರಿಯಲ್ಲಿ ಹೋದದ್ದಾದ್ರೂ...."

"ಯಾಕೆ ಹೀಗೆಲ್ಲಾ ಮಾತಾಡ್ತೀರಾ?...."

"ಕೇಳಿದ್ದಕ್ಕೆ ಕೊಡು ಮೊದ್ಲ ಉತ್ರ...."

"ಮತ್ತೆ ನಡುವೆ ಎದ್ದು ನಿಂತು ಗದರಿಸಿ ಮಾತಾಡ್ತೀರಲ್ಲಾ ..."

"ಕೇಳಿದ ಪ್ರಶ್ನೆಗೆ ನೇರವಾಗಿ ಉತ್ರ ಕೊಡೋಂತಂದ್ರೆ ಶುರು ಮಾಡಿದ್ಳು ಇವಳೊಂದು...."

"ಸಾಕು ಬಿಡೀಂದ್ರೆ... ನಾನೇನೂ ಶುರು ಮಾಡ್ಲಿಲ್ಲ. ಇವತ್ತು ನೀವೇನು ರುದ್ರಾವತಾರ ಆಗಿದ್ದೀರೀಂತ..."

"ನಾನು ರುದ್ರಾವತಾರ ತಾಳಿದ್ರೇಂತ ನೀನು ಮಹಾಕಾಳಿಯಾದದ್ದೆ ಹಾಗಾದ್ರೆ?"

"ಅದೆಲ್ಲಾ ಇರ್‍ಲಿ ಬಿಡಿ. ಈಗ ಏನಾಗ್ಬೇಕು ನಿಮ್ಗೆ ಹೇಳಿ ಮೊದ್ಲು .."

"ಅದೇ ನಾ ಕೇಳಿದ್ದು..."

"ಏನೂಂತ?"

"ಮತ್ತೇನು ನಿನ್ನ ಕರ್ಮ, ಈ ನಡು ರಾತ್ರಿ ಹೊತ್ತೀಲಿ ನಡೆದದ್ದಾದ್ರೂ ಎಲ್ಲಿಗೇಂತ? ಅದೂ ಬಾಗಿಲಿಗೆ ಬೀಗ ಜಡಿದು..."

"ಇಷ್ಟೇನೆ? ಪಾಪ. ನಿಮ್ಗೆ ಹೇಗೆ ಗೊತ್ತಾಗ್ಬೇಕು? ಇಂದು ನಮ್ಮ ಶಾಲೆಯ ಸ್ಕೂಲ್‌ಡೇ ಅಲ್ವೆ?"

"ಸ್ಕೂಲ್‌ಡೇ ಅಂತೆ ಸ್ಕೂಲ್‌ಡೇ. ಮನೆ ಮುರುಕ್ರು ಎಲ್ಲ ..."

"ಯಾಕೆ ಹಾಗಂತೀರಾ?"

"ಮತ್ತೆ ನಿನ್ನ ಬುದ್ಧಿಗೆ ಹೇಳ್ಬೇಕಾದ್ರೂ ಏನ? ಅಲ್ಲಾ, ಮನೇನೆಲ್ಲಾ ಹೀಗೆ ಬಿಟ್ಬಿಟ್ಟು ಅದೂ ನಡು ರಾತ್ರೆ ಹೊತ್ತು ಸ್ಕೂಲ್‌ಡೇ ಗೀಲ್ಡೇಂತ ಸುತ್ತಾಡೋಕೆ ಹೊರಟ್ರೆ...."

"ಸಾಕು ಬಿಡೀಂದ್ರೆ . . ನಿಮ್ಗೇನು ಗಂಡಸ್ರಿಗೆ? ಹಗ್ಲೂ ರಾತ್ರೆ ಎಲ್ಲಾ ಇರೋದು ನಮ್ಗೆ. ನೀವು ಮಾತ್ರ ಎಷ್ಟು ಹೊತ್ತಿಗೆ ಬಂದ್ರೂ ನಾವು ಕಾಯ್ತಿರ್ಬೇಕು...."

"ಅದ್ಕೇ ತೋರುತ್ತೆ ಇಂದು ನನ್ನ ಕಾಯ್ಸಿದ್ದು"

"ಅಲ್ಲಾ, ಆಗ್ಲೆ ಬಂದ್ಬಿಟ್ರಾ ಮತ್ತೆ?"

"ಇಲ್ಲ ಇಲ್ಲ ಈಗ್ತಾನೇ ಬಂದಿರೋದು...."

"ಯಾಕೆ ಹೀಗೆಲ್ಲಾ ಕೋಪ ಮಾಡ್ಕೋತೀರಾ? ಅಂತೂ ನೀವ್ಬರುವಾಗ ನಾನಿಲ್ಲದ್ದು ತಪ್ಪಾಯ್ತು ಅಲ್ವೆ. ಹೋಗ್ಲಿ ಬಿಡಿ. ಇನ್ನು ನಾನೆಲ್ಲೂ ಹೋಗಲ್ಲ. ಆಯ್ತಲ್ಲಾ? ಆಗ್ಲಿ ನಿಮ್ಕೋಪ ಕೊಂಚ ಉಪಶಮನ."

"ಇನ್ನು ಹೋಗೋಲ್ಲಾಂತ. ಇನ್ನೆಲ್ಲಿ ಹೋಗೋದಿದೆ? ಇರೋದೊಂದು ಊರಿಗೆ ಶಾಲೆ. ಅಲ್ಲಿ ಇನ್ನಾಗೋದು ಮುಂದಿನ್ವರ್ಷ. ಆಗ್ಲಿ, ಅಲ್ಲಾ ಹೋಗೇನಾದ್ರೂ ಮೊದ್ಲೇ ಹೇಳಿಹೋದಾದ್ರೂ ಬೇಡ್ವೇಂತ?"

"..............."

"ಏನೇ, ಅಯ್ಯೋ ಮಂಕೆ? ಯಾಕೆ ಮರುಗುತ್ತೀಯ?

"............"

"ಅಳ್ಬೇಡ ಕಣೇ ಅಳ್ಬೇಡ. ತುಸ ಸಮಾಧಾನವಿರ್‍ಲಿ ಹೇಗಿತ್ತು ಸ್ಕೂಲ್‌ಡೇ ..."

"............."

"ಹೇಗಿತ್ತೂಂತ ಕೇಳಿದ್ರೆ..."

"ಇತ್ತು ಇದ್ದ ಹಾಗೆ... "

"ಅದು ಗೊತ್ತಿದೆ ಬಿಡು. ನಾಟ್ಕ ಚೆನ್ನಾಗಿತ್ತೆ?"

"ಎಲ್ಲಾ ಚೆನ್ನಾಗಿತ್ತು. ಬಿಡ್ರಿ, ಬೇಗಾದ್ರೂ ತೆಗೀತೇನೆ."

"ಅಬ್ಬಾ ಹುಡುಗೀನೆ? ಎಷ್ಟೊಂದು ಕೋಪಪ್ಪ!"

"ಮತ್ತೆ ಕೋಪತಾಪ ಇರೋದು ನಿಮ್ಗೊಬ್ರಿಗೆ ಮಾತ್ರಾಂತ ತೋರುತ್ತೆ..."

"ಅಲ್ವ ಮೊದ್ಲೇ ಸಿದ್ಧವಾಗಿದೆಯಲ್ಲಾ...."

"ಏನೂಂತ?"

"ನಾನು ರುದ್ರನಾದ್ರೆ ನೀನು ಮಾಂಕಾಳೀಂತ..."

"ಹ್ಹಹ್ಹಹ್ಹ.....ಸರೀ ಹೋಯ್ತು ಬಿಡಿ.. ಯಾಕೆ ನೀವು ಬರ್‍ಲಿಲ್ಲ.. "

"ನನ್ಗೆ ನೆನಪ್ಪೇ ಹೋಗಿತ್ತು ನೋಡು. ನೀನಾದ್ರೂ ಹೇಳ್ಲಿಲ್ಲ."

"ಸರಿ ತಿಳೀತು ಬಿಡಿ. ಅದ್ಕೆ ಇಷ್ಟೊಂದು ಕೋಪ ಮಾಡ್ಕೊಂಡದ್ದು..."

"ಅಲ್ಲ ಕಣೆ ...ದಾರೀಲೇ ಸಿಟ್ಟು ಏರಿತ್ತು ಇವತ್ತು .."

"ಅದು ಮನೆ ಸೇರಿದಾಗ ಮತ್ತೂ ಹೆಚ್ಚು ಅಲ್ವೆ? ..."

ಅಲ್ಲಾ, ಬೀಗ ಕಂಡವನಿಗೆ ಮತ್ತೇನಾಗ್ಬೇಕೆ?"

"ನಾನು ಇದ್ದಿದ್ರೆ ನನ್ಮೇಲೆಲ್ಲಾ ಕಾರ್‍ತಿದ್ರಿ ಅದ್ನ. ಪಾಪ, ಈ ಬೀಗ ಬಾಗಿಲುಗಳ ಮೇಲೆ ಸೇಡು ತೀರ್‍ಸಿಕೊಂಡ್ರಲ್ಲಾ ಸದ್ಯ....ಅದಿರ್‍ಲಿ, ದಾರೀಲಿ ಸಿಟ್ಟು ಯಾಕಪ್ಪ ಬಂದದ್ದು? ಯಾರ್ಮೇಲೆ ಏನು ಕಾರಣ...."

"ಏನೋ ಬಂತ್ಬಿಡತ್ತನ್ನ..."

"ಅದು ತಿಳೀತಲ್ಲ......ಯಾಕೇಂತ ಕೇಳ್ದೆ..."

"ಅದೆಲ್ಲಾ ಕಟ್ಕೊಂಡು ನಿಮಗೇನ್ಬೇಕೂಂತ..."

"ನೋಡಿ, ಇದನ್ನೇ ಹೇಳೋದು ಗಂಡಸ್ರ ಸ್ವಾರ್ಥಾಂತ"

"ಸ್ವಾರ್ಥ ಪರಾರ್ಥ ಏನು ಬಂತೇ ಇದ್ರಲ್ಲಿ?"

"ಮತ್ತೆ ಹೇಳ್ಬಾರ್ದೇ ಹಾಗಾದ್ರೆ..."

"ಯಾಕೆ ಹೇಳ್ಬೇಕೂಂತ. ಹೇಳಿದ್ರೆ ಲಾಭವೇನೂಂತ"

"ಲಾಭ ಇಲ್ದಿದ್ರೂ ನಿಮ್ಗೆ ಹಾನಿಯಿಲ್ಲ ತಾನೆ?

"ಅಂದ್ರೆ ಹೇಳೀ ಹೇಳ್ಬೇಕೂಂತ ನಿನ್ನ ಛಲ ತಾನೆ? ಆಯ್ತು, ನೋಡು, ಒಂದು ಒಳ್ಳೆ ಸುದ್ದೀನ ಕೇಳ್ದೆ ಇವತ್ತು..."

"ಒಳ್ಳೆ ಸುದ್ದಿ ಕೇಳಿದ್ರೆ ಸಂತೋಷ ಪಡೋದು ಬಿಟ್ಟು ಸಿಟ್ಟು ಬರುತ್ತೆ ಯಾರಿಗಾದ್ರೂ...."

"ನನ್ಗೆ ಮಾತಾಡೋಕೆ ಬಿಡ ..."

"ಹ್ಹೂಂ....ಸರಿ. ಸುರುವಾಗ್ಲಿ ಭಾರತ ಕಥೆ .."

"ಭಾರತ ಕಥೆಯೇ ಇದು..."

"ಕಥೆಗಿತೆ ಅಂತಾ ಇದ್ದೀರಿ ಇನ್ನೂ ಕಥಾ ಆರಂಭವಿಲ್ಲ..."

"ಕೇಳು, ಸ್ವಾರಸ್ಯದ ಸುದ್ದಿ ಇದು. ಪಂಜಾಬ ರಾಜ್ಯಯಿದೆಯಲ್ಲಾ...."

"ಪಂಜಾಬಾಂತಂದ್ರೆ... ಮೇಲೆ.... ದಿಲ್ಲಿ ಹತ್ರ....ಅದೇ ಆ ಲಂಚದ ಮಂತ್ರಿ ಇರೋ ರಾಜ್ಯ...."

"ಲಂಚದ ಮಂತ್ರಿ ಅಲ್ವೆ; ಲಂಚದ ಆರೋಪ ಹೊತ್ತ ಮುಖ್ಯಮಂತ್ರಿ.. ಕೈರಾನ್‌ನ ರಾಜ್ಯ..."

"ಸರಿ ಸರಿ, ಪ್ರತಾಪಸಿಂಹ ಕೈರಾನ್.."

"ಹೌದು ಹೌದು. ಅದೇ. ಅಲ್ಲಿ ೯೦೦ ಅಧ್ಯಾಪಕರನ್ನು ದಂಡಿಸಿದ್ರಂತೆ ..."

"ಅಷ್ಟು ಜನ? ಅಲ್ಲಾ ಅವ್ರು ಮಾಡಿದ ತಪ್ಪು? ಅವ್ರು ಲಂಚ ಕೊಡ್ಲಿಲ್ವಂತೇನು?"

"ಏನು ಮಾತಾಡ್ತಾ ಇದ್ದೀಯಾ ನೀನು?...."

"ಮತ್ತೆ ಪಾಪದ ಮಾಸ್ತರ್ರನ್ನ ದಂಡಿಸೋದು ಯಾಕೇಂತ?..."

"ಅವ್ರ ಶಾಲೆ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಚೆನ್ನಾಗಿ ಪಾಸಾಗ್ಲಿಲ್ವಂತೆ. ."

"ವಿದ್ಯಾರ್ಥಿಗಳು ಪಾಸಾಗದಿದ್ರೆ ಮಾಸ್ತ್ರಿಗೆ ಶಿಕ್ಷೆಯೇ? ಇದು ಯಾವ ನ್ಯಾಯಾಂತ?"

"ಉಪಾಧ್ಯಾಯರು ಸರಿಯಾಗಿ ಕಲಿಸ್ತಿದ್ರೆ ಅವ್ರು ಪಾಸಾಗ್ತಿದ್ರು; ಅವ್ರು ಕಲಿಸ್ಲಿಲ್ಲ; ಇವ್ರು ಪಾಸಾಗ್ಲಿಲ್ಲ."

"ಇದು ಒಳ್ಳೇ ನೀತಿ ನಿಮ್ಮ ಟೋಪಿ ಸರ್ಕಾರದ್ದು, ಪರೀಕ್ಷೇಲಿ ಉಪಾಧ್ಯಾಯರನ್ನ ಕೂರಿಸೋದೆ? ವಿದ್ಯಾರ್ಥಿಗಳನ್ನ?

"ಹುಡುಗ್ರನ್ನ...."

"ಹಾಗಾದ್ರೆ ಯಾರದು ತಪ್ಪು? ಮಾಸ್ತರ್ರು ಕಲಿಸ್ತಾರೋ ಇಲ್ವೋಂತ ನೋಡೋಕೆ ಅಧಿಕಾರಿಗಳಿದ್ದಾರಲ್ಲ..."

"ಇದ್ದಾರೆ...."

"ಅವ್ರನ್ನ ಮೊದ್ಲು ದಂಡಿಸ್ಬೇಕು.."

"ಅವ್ರನ್ನ ನೇಮಿಸೋ ಸರ್ಕಾರ ಬೇರೆ ಇದೆ..."

"ಅಂದ್ರೆ ಮಂತ್ರಿಗಳನ್ನ ಹಿಡ್ದು ದಂಡಿಸ್ಬೇಕು ಮತ್ತೆ..."

"ಸರಿ ಹೇಳ್ದೆ ಬಿಡು..."

"ಮತ್ತೆ ಇದೆಂತ ನ್ಯಾಯಾಂತ? ಮಾಸ್ತ್ರು ಕಲಿಸಿದ್ದನ್ನ ಹುಡುಗ್ರು ಪರೀಕ್ಷೇಲಿ ಬರೀದಿದ್ರೆ ಯಾರನ್ನ ದೂರ್ಬೇಕೂಂತ?"

"ಅವ್ರು ಕಲಿಸ್ತಿದ್ರೆ ಇವ್ರು ಬರೀತಿದ್ರು..'

"ಯಾಕೆ ಬರೀಬೇಕೂಂತ? ಸಾಗರ ತುಂಬ ನೀರಿದೆ ನಿಜ. ಆದ್ರೆ ಯಾರ್‍ಯಾರ ಕೊಡ ಎಷ್ಟೆಷ್ಟು ದೊಡ್ಡದಿದೆಯೋ ಅಷ್ಟಷ್ಟೇ ನೀರು ತರಬಲ್ರು ನೋಡಿ. ಅದೂ ಈಗ ಖಡ್ಡಾಯ ಜಾರಿ. ಬುದ್ಧಿ ಇದ್ರೂ ಕಲೀಬೇಕ., ಇಲ್ದಿದ್ರೂ ಶಾಲೆಗೆ ಹೋಗ್ಬೇಕು "

"ರಾಜಕಾರಣಿಗೂ ತಿಳೀದ ಸತ್ಯ ನೀವು ತಿಳ್ಕೊಬಿಟ್ರಿ ಕಣೆ. ನಿಜವಾಗ್ಲೂ ನಿನ್ನನ್ನೇ ಮಂತ್ರಿ ಮಾಡ್ಬೇಕಿತ್ತು."

"ಆದ್ರೆ ನೋಡಿ, ಅದ್ರಿಂದ ಲಾಭವಾದ್ರೂ ಏನೂಂತ?"

"ಯಾಕೆ? ಏನೂ ಇಲ್ವೆ?"

"ಪಾಪ, ಆ ಕೈರಾನರ ಪಚೀತಿ ನೋಡಿ. ಯಾರಿಗೆ ಬೇಕು ಅಂತಹ ಪಟ್ಟ?"

"ಅದು ನಿಜ ಕಣೆ"

"ಅಂದ ಹಾಗೆ, ಏನೋ ನಿಮ್ಮ ಮಹಿಶೂರ ಸರ್ಕಾರನೂ ಅಂಥದೇ ಒಂದು ನೀತಿ ಮಾಡ್ತಿದೆಯಂತೆ...."

"ಅಹ, ವಿದ್ಯಾರ್ಥಿಗಳು ಪಾಸಾದ ಪ್ರಮಾಣ ಕಡಿಮೆಯಾದ್ರೆ ಗ್ರಾಂಟು ಕಟ್ಟು...

"ಅಂದ್ರೆ ಉಪಾಧ್ಯಾಯರ ಸಂಬಳಕ್ಕೆ ಮೋಸ..."

"ಸದ್ಯ ಎಯ್ಡೆಡ್ ಹೈಸ್ಕೂಲ್‌ಗಳಿಗೆ ಮಾತ್ರ."

"ಅದೀಗ ಸರಿ. ಕೆಲಸ ಮಾಡದವ್ರ ಹೇಗೂ ಮಾಡೋಲ್ಲ, ಮಾಡೋಳಿಗೇನು ಮಾರೀಂತಾರೆ ಹಾಗೆ."

"ಅಂದ್ರೆ?

"ಅಂದ್ರೆ ಏನ? ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಸರಿಯಾಗಿ ನಡಿಯೋಲ್ಲಾಂತ ಮಂತ್ರಿಮಹೋದಯರಿಗೆ ಗೊತ್ತು. ಅದ್ಕೆ .."

"ಹಾಗಲ್ಲ ಕಣೆ, ಅವ್ರಿಗೂ ಮುಂದೆ ಬಂದೀತು ಕತ್ವಾರ...."

"ನೋಡಿ, ನೀವು ಏನೇ ಹೇಳಿ ಇದ್ರಿಂದ ಒಂದು ಸಿದ್ಧವಾಗುತ್ತೆ...."

"ಏನು?..."

"ಉಪಾಧ್ಯಯರ ಮೇಲೆ ಸೇಡು ತೀರ್‍ಸೋಕೆ ಮಕ್ಕಳಿಗೆ ಒಳ್ಳೆ ಅವಕಾಶ ಬಂತು"

(೮ನೇ ಪುಟ ನೋಡಿರಿ)

ಪರಿಷ್ಕಾರಕ್ಕಾಗಿ ಪುರಸ್ಕಾರ ನೀಡಿರಿ!
ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾಗಿ
ಶ್ರೀ ಕೆ. ಕೆ ಶೆಟ್ಟಿ, ಎಂ. ಎಲ್. ಸಿ ಯವರು ಸಂಪಾದಕರಾಗಿದ್ದ
ವಿಚಾರಶೀಲರ ಮೆಚ್ಚಿನ ವಾರಪತ್ರಿಕೆ
ನವಯುಗ
ಉಡುಪಿ
ನೂತನ ಪರಿಷ್ಕರಣ ಹೊಂದಲಿದೆ
ಪ್ರೋತ್ಸಾಹಿಸಿ ಸಹಕರಿಸಿರಿ
ವಾರ್ಷಿಕ ಚಂದಾ ರೂ. ೧೦–೦೦
ಹೊಸ ಚಂದಾದಾರರಿಗೆ ಈಗತಾನೆ ಪ್ರಕಟವಾದ ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನೂ ಕಳಿಸಲಾಗುವುದು.
ಚಂದಾಹಣ ಬಾಕಿ ಇರುವ ಚಂದಾದಾರರು ದಯವಿಟ್ಟು ಕೂಡಲೇ ಕಳಿಸಿಕೊಡು ವಂತೆ ವಿನಂತಿ.
ಕಾರ್ಯಾಲಯ ಸಂಪಾದಕ— ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ವರುಷ	ಉಡುಪಿ	ವಾರ
೪೩	೫-೩-೧೯೬೪	೨೭

ಸಮತೋಲನ

ವಿತ್ತಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ತನ್ನ ಚಾಣಾಕ್ಷತನದಿಂದ ಲೋಕ ಸಭೆಯ ಮುಂದಿಟ್ಟ ಮುಂಗಡ ಪತ್ರವು ದೇಶದಲ್ಲಿ ಆರ್ಥಿಕ ಸಮತೋಲನೆಯನ್ನು ಕಾಯ್ದುಕೊಳ್ಳಲು ಯಶಸ್ವಿಯಾಗಿದೆಯೆಂದು ಹೇಳಬೇಕು. ಹಿಂದಿನ ವರ್ಷ ಮುರಾರ್ಜಿ ದೇಸಾಯಿಯವರು ದೇಶದಲ್ಲಿ ಹರಡಿದ್ದ ಸಮರ ಪರಿಸ್ಥಿತಿಯ ಒತ್ತಡದಿಂದಾಗಿ ನಾನಾ ಕರಗಳನ್ನು ಹೇರಿ ಆದಾಯದ ಮೂಲಗಳನ್ನು ಕಟ್ಟಿಸಿಕೊಂಡಿದ್ದಾರೆ; ಕಳೆದ ವರ್ಷ ೮೬೭ ಕೋಟಿ ರೂಪಾಯಿಗಳನ್ನು ಸಂರಕ್ಷಣಾ ಬಾಬಿಗೇ ಪ್ರತ್ಯೇಕಿಸಿದ್ದಾಗಿತ್ತು; ಆದರೆ, ಈ ವರ್ಷದ ಅಂದಾಜಿನಂತೆ ಈ ಮೊತ್ತವು ೭೧೪ ಕೋಟಿ ಕೋಟಿ ರೂಪಾಯಿಗಳಾಗಿವೆ. ಈ ಒಂದು ಬಾಬಿನಲ್ಲಿಯೇ ರೂ. ೧೪೭ ಕೋಟಿಗಳ ಉಳಿತಾಯವಾಗಿದೆ. ಮುಖ್ಯವಾಗಿ ಇದರಿಂದಾಗಿಯೇ ಟಿ. ಟಿ. ಕೆ. ಯವರ ಮುಂಗಡ ಪತ್ರವು ಭದ್ರವಾಗಿದೆಯೆಂದರೆ ಅತಿಶಯ ವಾಗದು. ಇತ್ತೀಚೆಗಿನ ಹಲವು ವರ್ಷಗಳಿಂದ ರೂ ೩೪ ಕೋಟಿಗಳ ಲವಿನಷ್ಟು ಉಳಿತಾಯವನ್ನು ಸಾಧಿಸುವುದು ಯಾವ ಅರ್ಥ ಮಂತ್ರಿಯವರಿಗೂ ಸಾಧ್ಯವಾಗಲಿಲ್ಲ. ಟಿ. ಟಿ. ಕೆ. ಯವರೊಬ್ಬರೇ ಇದರಲ್ಲಿ ಯಶಸ್ವಿಯಾಗಿರುವುದು ಅಭಿನಂದನೀಯ.

ಮುಂಗಡ ಪತ್ರದ ಒಟ್ಟು ಆದಾಯ ರೂ. ೨೦೯೫.೧೩ ಕೋಟಿಯೆಂದೂ ವ್ಯಯವು ರೂ. ೨೦೪೬.೩೧ ಕೋಟಿಯೆಂದೂ ತೋರಿಸಲಾಗಿದ್ದು, ಈ ಅಂಕೆಸಂಖ್ಯೆಗಳು ಹಿಂದಿನ ವರ್ಷದವುಗಳಿಂದ ದೊಡ್ಡವಾಗಿವೆ. ಮುಂಗಡ ಪತ್ರದಲ್ಲಿ ಟಿ. ಟಿ. ಕೆ. ಯವರು ಕೆಲವೊಂದು ಸೂಚನೆಗಳನ್ನು ಮಾಡಿದ್ದಾರೆ, ಕೆಲವೊಂದು ರಿಯಾಯತಿಯನ್ನು ತೋರಿಸಿದ್ದಾರೆ. ಮುಖ್ಯವಾಗಿ ಹೇಳುವುದಾದರೆ, ಯಾವ ಹೆಚ್ಚಿನ ಕರಭಾರವನ್ನೂ ಹೊರಿಸದಿರುವುದು ಸದ್ಯ ಸಮಾಧಾನದ ಸಂಗತಿ. ಉದ್ದಿಮೆಗಳಿಗೆ ಉತ್ತೇಜನವೀಯುವುದು, ವಿದೇಶೀಯ ಭಂಡವಾಳವನ್ನು ಆಕರ್ಷಿಸುವುದು ಮುಂಗಡ ಪತ್ರದ ಉದ್ದೇಶವಿದ್ದಂತೆ ವ್ಯಕ್ತವಾಗುತ್ತದೆ. ಶ್ರೀಮಂತರ ಮೇಲೆ ಹೆಚ್ಚಿನ ಕರ ಭಾರವು ಬೀಳುವಂತೆ ಮತ್ತು ಬಡವರ ಜೀವನ ಮಟ್ಟವು ಉನ್ನತ ವಾಗುವಂತೆ ತಾವು ಪ್ರಯತ್ನಿಸುವುದಾಗಿ ಅರ್ಥಮಂತ್ರಿಯವರು ಹಿಂದೆ ಅಂದಿದ್ದರು ಇದರಂತೆ ಆದಾಯಕರ ಪ್ರಮಾಣದಲ್ಲಿ ಬದಲಾವಣೆಯಾಗಲಿರುವುದು ನಿಜವಾದರೂ ಸಾಮಾನ್ಯ ಜನತೆಗೆ ಹೆಚ್ಚಿನ ಲಾಭದೊರೆತಂತಾಗಲಿಲ್ಲ. ಹೆಚ್ಚಿನ ಕರಭಾರ ಬೀಳದೆ ಇರುವುದರಿಂದ ಜೀವನಾವಶ್ಯಕ ಪದಾರ್ಥಗಳ ಬೆಲೆಯೇರುವ ಸಂಭವವು ಕಡಿಮೆಯಾದರೂ ಈಗಾಗಲೇ ಏರುವ ಧಾರಣೆಗಳನ್ನು ಇಳಿಸಲು ಸೂತ್ರವು ಕೈಗೊಳ್ಳಬೇಕಾಗಿತ್ತು. ಖಾಸಗಿ ಉದ್ಯಮ ಇತ್ಯಾದಿ ಉತ್ಪಾದನಾ ರಂಗಗಳಿಗೆ ಅನಗತ್ಯ ಅವಕಾಶ ಕಲ್ಪಿಸಿಕೊಟ್ಟುದರಿಂದ ಸಾಕಷ್ಟು ಉತ್ಪಾದನೆಯಾಗಿ, ಬೇಡಿಕೆಯನ್ನು ಪೂರೈಸಲು ಸಾಧ್ಯವಾಯಿತೆಂದರೆ, ಆಗ ಬೆಲೆಯೇರಿಕೆಯನ್ನು ತಡೆಯುವುದು ಸಾಧ್ಯವೆನಿಸುವುದೆಂಬ ದೂರದರ್ಶಿತನವನ್ನು ಅವರು ತೋರಿಸಿದ್ದರೂ ಇರಬಹುದು ಸಂರಕ್ಷಣಾ ವೆಚ್ಚದಲ್ಲಾಗುವ ಇಳಿಮರಿಯು ಹೆಚ್ಚಿನವರಿಗೆ ಸಂತೋಷವನ್ನುಂಟು ಮಾಡಿದೆ ಇಂದು ಸಮರ ಭೀತಿಯು ಕಳೆದ ವರ್ಷದಷ್ಟಿಲ್ಲವೆಂದು ಇದು ಮನವರಿಕೆ ಮಾಡಿಕೊಡ ಬಹುದು, ಆದರೆ, ಗತವರ್ಷದಲ್ಲಿ ಸ್ವದೇಶ ರಕ್ಷಣೆಗಾಗಿ ಆವಶ್ಯಕ ಕ್ರಮಗಳೆಲ್ಲವನ್ನೂ ಒಂದೇ ಸಲ ಕೈಗೊಳ್ಳಬೇಕಾಗಿ ಬಂದುದರಿಂದ ವೆಚ್ಚವು ಹೆಚ್ಚುವುದು ಅನಿವಾರ್ಯವಾಯಿತು ಎಂದು ತಿಳಿಯಬಹುದು. ಶತ್ರುಗಳ ಆಕ್ರಮಣದ ಭೀತಿಯನ್ನೂ ತೊಲಗಿಲ್ಲವಾದರೂ ಅದನ್ನು ಎದುರಿಸುವ ಶಕ್ತಿಯನ್ನು ನಾವೀಗ ಕೂಡಿಸಿ ಕೊಂಡಿದ್ದೇವೆ; ಈ ಕೂಡಿಕೆಯನ್ನು ಅವ್ಯಾಹತವಾಗಿ ಹೆಚ್ಚಿಸುವುದು ಮತ್ತು ಉಳಿಸಿಕೊಳ್ಳುವುದು ಮಾತ್ರ ಅಗತ್ಯವಿದೆ.

ಮುಂಗಡ ಪತ್ರದೊಡನೆ ಸರಕಾರಿಯ ನೌಕರರಿಗೆ ಹೊಸ ವೇತನ ನೀಡುವ ಹಂಚಿಕೆಯನ್ನೂ ಟಿ. ಟಿ. ಕೆ. ಮಾಡಿರುವುದು ಶ್ಲಾಘನೀಯ. ತೆರಿಗೆ ತಪ್ಪಿಸುವವರು ಲಂಚ ಸ್ವೀಕಾರದಂತೆಯೇ ಒಂದು ಚಿಕ್ಕ ಉದ್ದಿಮೆಯಾದುದನ್ನೇ ತಳೆದಿವೆ. ಎಲ್ಲ ತೆರಿಗೆದಾರರು ತಾವು ನ್ಯಾಯೋಚಿತವಾಗಿ ಸಲ್ಲಿಸಬೇಕಾದ ಕರಗಳನ್ನು ನ್ಯಾಯ ವಿಧಾನದಲ್ಲಿಯೇ ತೆರುತ್ತ ಬಂದರೆ ಆರ್ಥಿಕ ಸ್ತಂಭವು ನೇರವಾಗುವುದು ನಿಸ್ಸಂದೇಹ ಆದರೆ, ಈ ವಿಧಾನವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುವುದು ಮಾತ್ರ ಬಹಳ ಆವಶ್ಯವಾಗಿದೆ. ಬಹಳಷ್ಟು ಟೀಕೆ ಟಿಪ್ಪಣಿಗಳಿಗೆ ಅವಕಾಶ ಕಲ್ಪಿಸಿಕೊಟ್ಟ ಕಡ್ಡಾಯ ಉಳಿತಾಯ ಯೋಜನೆಯನ್ನು ಕೈ ಬಿಟ್ಟು ವಾರ್ಷಿಕ ೧೫ ಸಾವಿರ ರೂಪಾಯಿಗಳಷ್ಟು ಆದಾಯವಿರುವವರಿಗೆ ಮಾತ್ರ ಉಳಿತಾಯಯೋಜನೆಯನ್ನು ತೊಡಗಿಸಿರುವುದರಿಂದ ಮಧ್ಯಮ ವರ್ಗದವರಿಗೊಂದು ಪರಿಹಾರ ನೀಡಿದಂತಾಯಿತು ನಾಟಕ, ಕಾಗದ ಮೊದಲಾದುವುಗಳ ಮೇಲಿನ ಕರಭಾರವನ್ನು ತುಸು ಇಳಿಸಿದುದರಿಂದ ಸ್ವಲ್ಪವಾದರೂ ರಕ್ಷಣೆದೊರೆಯಿತು. ಮಂಡಿಸಿದ ಮುಂಗಡ ಪತ್ರದಲ್ಲಿ ಪಂಚ ವಾರ್ಷಿಕ ಯೋಜನೆಯ ಕಾರ್ಯ ಕ್ರಮಗಳನ್ನು ತ್ವರಿತಗತಿಯಲ್ಲಿ ಮುಂದುವರಿಸಲು ಅವಕಾಶ ಕಲ್ಪಿಸಲಾಗಿದ್ದು ಇದು ಉಲ್ಲೇಖನೀಯವೆಂದೇ ಹೇಳಬೇಕು. ಯೋಜನೆಯ ಅರ್ಧ ಕಾಲಾವಕಾಶವು ಈಗಾಗಲೇ ಗತಿಸಿರುವುದಾದರೂ ಯೋಜನೆಯ ಗುರಿಯನ್ನು ಮುಟ್ಟುವುದು ಸಾಧ್ಯವಾಗಿಲ್ಲವೆಂಬುದನ್ನು ನಾವು ಗಮನಿಸುವುದು ಅಗತ್ಯ. ದೇಶದ ಆರ್ಥಿಕ ಸುಸ್ಥಿತಿಗೆಂದು ಆಡಿಪಾಯವೆನಿಸಿದ ಯೋಜನೆಗಳನ್ನು ತುಂಬು ಆಸಕ್ತಿಯಿಂದ ನಾವು ಪರಿಪೂರ್ಣಗೊಳಿಸಬೇಕು. ತನ್ಮೂಲಕ ಸುಭದ್ರ ದೇಶ ಕಟ್ಟಬೇಕು. ಇದಕ್ಕೆ ಪೂರಕ ವೆನಿಸಿದ ಅತ್ಯ ಭಾರವಿಲ್ಲದ ಅತ್ಯ ಹಗುರವೂ ಅಲ್ಲದ ಮುಂಗಡ ಪತ್ರವನ್ನು ತಯಾರಿಸಲು ಟಿ. ಟಿ. ಕೆ. ತುಂಬ ಶ್ರಮಗಿದ್ದಾರೆ, ಇದಕ್ಕಾಗಿ ದೇಶವು ಅವರಿಗೆ ಕೃತಜ್ಞವಾಗಿದೆ.

ಜಗತ್ಪರ್ಯಟನ

ಕುಲಪುರೋಹಿತ

ಕರ್ನಾಟಕ ಕುಲಪುರೋಹಿತರೆಂದು ಹೆಸರಾದ ಆಲೂರು ವೆಂಕಟರಾಯರು ಕನ್ನಡ ನಾಡಿಗಾಗಿ, ಸಂಸ್ಕೃತಿಗಾಗಿ, ಸಾಹಿತ್ಯಕ್ಕಾಗಿ ತನ್ನ ಜೀವನವನ್ನೇ ಗಂಧದಂತೆ ತೇಯ್ದವರು. ಅವರಂತಹ ಹಿರಿಯರ ಅವಿರತ ಪರಿಶ್ರಮದ ಫಲವಾಗಿಯೇ ಕರ್ನಾಟಕವು ಸ್ಥಾಪಿತವಾಗುವುದು ಸಾಧ್ಯವಾಯಿತು. ಕನ್ನಡಿಗರ ಇತಿಹಾಸವನ್ನು ವೀರವಾಣಿಯಿಂದ ಕನ್ನಡಿಗರಿಗೆ ತಿಳಿಯ ಹೇಳಿ ಹರಿಹಂಚಾಗಿ ಹೋಗಿ ಹತವೀರ್ಯರಾಗಿದ್ದ ಕನ್ನಡಿಗರ ಹೃದಯ ಹೃದಯಗಳಲ್ಲಿ ಕೆಚ್ಚಿನ ಬೀಜವನ್ನು ಬಿತ್ತಿದ ಮಹಾ ಸಾಹಸಿಗಳವರು. ನಾಡನುಡಿಯನ್ನು ಬೆಳೆಸುವುದು ನಾಡಿಗರನ್ನು ಉನ್ನತೀಕರಿಸುವುದು ನಾಡ ಗುಡಿಯನ್ನು ಬಾನೆತ್ತರಕ್ಕೆ ಏರಿಸುವುದು ಅವರ ಉದ್ದೇಶವಿತ್ತು. ಅವರು ಈ ದಿಸೆಯಲ್ಲಿಟ್ಟ ಹೆಜ್ಜೆಯನ್ನು ಮುಂದಿನವರು ಮುಂದಿಡಬೇಕು. ಆಗಲೇ ಮೃತರ ಆತ್ಮಕ್ಕೆ ಶಾಂತಿ ದೊರೆಯುತ್ತದೆ.

ಸಿರಿಮಾವೋ

ದೂರದೂರದ ದೇಶಗಳಲ್ಲಿ ತನ್ನ ಮೋಲಿಕ ಅಭಿಪ್ರಾಯ ಮೂಡಿಸಲು ಆನ್ವರ್ಥವಾಗಿ ಮರಳಿ ಬಂದ ಚೀನದ ಛಾಯು ರನ್ನು ಪಾಕಿಸ್ತಾನದ ಅಯ್ಯೂಬ ಖಾನ್, ಬ್ರಹ್ಮ ದೇಶದ ನೇವಿನ್, ಸಿಂಹಳದ ಭಂಡಾರನಾಯಿಕೆಯವರು ಕಾಣಬೇಕಾಯಿತು. ಅಯ್ಯೂಬ ಖಾನರು ಮುಳ್ಳಿಡುವ ಮಾತಿಗೆ ತಕ್ಕೆ ಹಾಕಲು ಮುಂದೆ ಹೋದವರು. ನೇವಿನ್ನರು ಅಸಹಾಯಕರಾಗಿ ಎಂತಾದರೂ ವಿವಾದ ಬಗೆಹರಿಯಲಿ ಮುಂದೆ ತನ್ನ ಮೇಲೂ ಗದಾ ಪ್ರಹಾರವಾಗದಿರಲಿ ಎಂದು ತಿಳಿದವರು. ಆದರೆ ಚೀನಾ—ಭಾರತಗಳ ವಿವಾದವು ಬಗೆಹರಿಯಬೇಕು—ಇದು ಆಫ್ರೋ‌ಏಶ್ಯಾದ ದೇಶಗಳಿಗೆ ಸಹಾಯಕವಾಗಬೇಕು ಎಂಬುದು ಭಂಡಾರನಾಯಿಕೆಯವರ ಅಂತರಾಳದ ಆಸೆ ಆವರ ಆಶೆಯ ಕುಡಿಯು ಇದುವರೆಗೆ ಒಣಗಿರುವುದಿಲ್ಲ. ಆದರೆ, ಬುಡಕ್ಕೆ ನೀರು ಎರೆಯುವವರೂ ಇಲ್ಲ.

ತತ್ವವಾದಿ ಲಾಯ್

ತನ್ನ ಗಾಯವನ್ನುಳಿಸಿಕೊಳ್ಳುವ ಸಲುವಾಗಿ ಚೀನೀಯ ಪ್ರಧಾನಿ ಚೌ-ಎನ್-ಲಾಯ್‌ಯವರು ತುಸು ಬಗ್ಗುವಂತೆ ಕಾಣುತ್ತಾರೆ ಭಾರತ—ಚೀನ ಗಡಿ ತಂಟೆಯನ್ನು ಶಾಂತ ವಿಧಾನಗಳಿಂದ ಬಗೆಹರಿಸಲು ಅವರು ಸಿದ್ಧರಾಗಿದ್ದಾರೆ. ಇದಕ್ಕೋಸ್ಕರವಾದರೂ ಕೊಲಂಬೊ ಸೂಚನೆಗಳ ತಳಹದಿಯ ಮೇಲೆ ನೇರ ಸಂಧಾನದ ಮಾತುಕತೆಗೆ ಇದೀಗ ಮರಳಿ ತಯಾರಾಗಿದ್ದಾರೆ ಲಾಯ್‌ಯವರು ಪಾಕಿಸ್ತಾನವನ್ನು ಸಂದರ್ಶಿಸಿದ ಸಂದರ್ಭದಲ್ಲಿಯೂ ಇದೇ ಅರ್ಥದ ಪ್ರಕಟಣೆ ಹೊರಬಿತ್ತು. ಆದರೆ ಒಂದು ವಿಷಯ. ಕೊಲಂಬೊ ಸಲಹೆಗಳನ್ನು ಈ ಮೊದಲೆಂದಿಗೂ ಅವರು ನಿರಾಕರಿಸಲಿಲ್ಲ; ಅವುಗಳನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದರು. ಇಂದಿಗಾದರೂ ತಾತ್ವಿಕವಾದ ತಳಹದಿಯ ಮೇಲೆಯೇ ಅವರು ಭಾರತದೊಡನೆ ನೇರ ಮಾತುಕತೆಗಳಿಗೆ ಬರುವೆನೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರೂ ಇರಬಹುದು.

ಕಾಶ್ಮೀರದಲ್ಲಿ ಶಾಂತತೆ

ಭಕ್ಷಿ ಗುಲಾಂ ಮಹಮ್ಮದರ ರಾಜೀನಾಮೆಯ ನಂತರ ಅವರ ಸ್ಥಾನಾಪನ್ನರಾದ ಶಂಸುದ್ದೀನರು ತಮ್ಮ ಪ್ರಧಾನಿ ಪಟ್ಟವನ್ನು ಯಶಸ್ವಿಯಾಗಿ ಕಾಶ್ಮೀರದಲ್ಲಿ ಏರುವುದು ಸಾಧ್ಯವಾಗಲಿಲ್ಲ. ರಾಜಕಾರಣದಲ್ಲಿ ಮಹತ್ವದ ಸ್ಥಾನ ಪಡೆಯುತ್ತಿರುವ ಇಲ್ಲಿ ಇಂದು ಎಂದಿಗಿಂತ ಹೆಚ್ಚಿನ ಶಾಂತತೆಯು ನೆಲಸುವುದು ಅತ್ಯಗತ್ಯವಾಗಿದೆ. ಸದಾಕಾಲ ತನ್ನ ಗೃಧ್ರದೃಷ್ಟಿಯಿಂದ ವೀಕ್ಷಿಸುತ್ತಿರುವ ಪಾಕಿಸ್ತಾನದ ಕುತಂತ್ರ ಜಾಲಕ್ಕೆ ಎಂದಿಗೂ ಅವಕಾಶಕೊಡದೆ ಸಂವಿಧಾನಾತ್ಮಕವಾದ ರೀತಿಯಲ್ಲಿ ಪ್ರಗತಿಗಳಿಸಬೇಕಾಗಿದೆ. ಪ್ರಧಾನ ಮಂತ್ರಿಯವರು ಕಾಶ್ಮೀರ ವಿಷಯದಲ್ಲಿ ಇಟ್ಟುಕೊಂಡಿರುವ ದೃಢ ನಿಲುವೆಯನ್ನು ಸಮಾಗಗಿಸಿಕೊಂಡು ಏಕ ಗುರಿಯಿಂದ ಮುಂದುವರಿಯಬೇಕಾಗಿದೆ. ಇದಕ್ಕೆಂದೇ ಸಮರ್ಥ ಆಡಳಿತೆಯನ್ನು ಸ್ಥಾಪಿಸುವ ಸದುದ್ದೇಶದಿಂದ ಶ್ರೀ ಲಾಲಬಹದೂರ ಶಾಸ್ತ್ರಿಯವರು ವಿಚಾರ ವಿನಿಮಯಗೈಯ್ದು ಒಂದು ನಿರ್ಧಾರಕ್ಕೆ ಬಂದರು ಕಾಶ್ಮೀರದ ಜನತೆಯಲ್ಲಿ ಏಕಾಭಿಪ್ರಾಯ ಮೂಡಿಸಲನುಕೂಲವಾಗುವಂತೆ ಸಾದಿಕ್‌ರವರ ನೇತೃತ್ವದಲ್ಲಿ ಹೊಸ ಸರಕಾರದ ರಚನೆಯಾಯಿತು. ಮಾಜಿ ಪ್ರಧಾನಿ ಭಕ್ಷಿ ಗುಲಾಮ ಮಹಮ್ಮದರ ಕೃಪಾಕಟಾಕ್ಷವೂ ಇದರ ಕಡೆಗೆ ಹರಿಯುವುದರಿಂದ ಇಷ್ಟರ ವರೆಗೆ ತುಸು ಸಮಸ್ಯಾತ್ಮಕ ಪ್ರಶ್ನೆಯಂತೆ ಕಂಡು ಬಂದರೂ ಮುಂದೆ ಕಾಶ್ಮೀರದ ಆಡಳಿತೆ ಭದ್ರವಾಗುವುದೆಂದು ನಂಬಬಹುದಾಗಿದೆ; ಹಾಗೇ ಆಗಲೆಂದು ಎಲ್ಲರ ಹರಕೆ.

ಚಾಮರಾಜ

ಕೆಲವು ವಾರಗಳಿಗೆ ಮೊದಲು ಕರ್ನಾಟಕದ ವಿತ್ತಮಂತ್ರಿ ಜತ್ತಿಯವರು ಒಂದೆರಡು ವರ್ಷಗಳ ನಂತರ ಸರಕಾರಿ ನೌಕರರಿಗೆ ವೇತನ ಕೊಡುವುದೂ ಸರಕಾರಕ್ಕೆ ದುಸ್ತರವಾಗಬಹುದೆಂಬ ಭೀತಿಯನ್ನು ವ್ಯಕ್ತಪಡಿಸಿದ್ದದನ್ನು ಯಾರೂ ಮರೆತಿರಲಾರರು. ರಾಜ್ಯಪಾಲರು ವಿಧಾನ ಸಭೆಗಳನ್ನು ಉದ್ಘಾಟಿಸುತ್ತ ಮಾಡಿದ ಭಾಷಣದಲ್ಲೂ ಸರ್ವಸಾಮಾನ್ಯವಾಗಿ ಇದೇ ಅಭಿಪ್ರಾಯವನ್ನು ಮೂಡಿಸಿದ್ದಾರೆ. ಮುಂದಿನೆರಡು ವರ್ಷಗಳಲ್ಲಿ ರಾಜ್ಯದ ಸಾಂಪತ್ತಿಕ ಸ್ಥಿತಿಯು ತೀರ ಹದಗೆಡುವ ಪ್ರಸಂಗ ಬಂದರೂ ಬರಬಹುದು. ಶರಾವತಿಯಂತಹ ಬೃಹತ್ ವೆಚ್ಚದ ಯೋಜನೆಯ ಫಲ ನಾಲ್ಕೈದು ವರ್ಷಗಳಲ್ಲಿ ಲಭಿಸತೊಡಗಿದರೆ, ತುಸು ಹಗುರವಾದೀತೋ ಏನೋ! ಭಂಡವಳವನ್ನು ತೀವ್ರ ಫಲದಾಯಕ ಯೋಜನೆಯಲ್ಲಿ ತೊಡಗಿಸುವುದು ಮತ್ತು ಉಳಿತಾಯ ಯೋಜನೆಗಳಿಂ ಈ ಸ್ಥಿತಿ ಸುಧಾರಿಸಲು ಶಕ್ಯವಾಗುವವು.

ಅಲ್ಲಲ್ಲಿಯ ಸುದ್ದಿಸಾರ

ಎಲ್. ಐ. ಸಿ. ಚೆಯರ್‌ಮೇನರ ಸಂದರ್ಶನೆ - ಲೈಫ್ ಇನ್‌ಶೂರೆನ್ಸ್ ಕಾರ್ಪೋರೇಶನ್ ಆಫ್ ಇಂಡಿಯಾದ ಚೆಯರ್‌ಮೇನ್ ಶ್ರೀ ಬಿ. ಕೆ. ಕೌಲರು ತಾ. ೨೬ರಂದು ಮಂಗಳೂರಿಗೆ ಆಗಮಿಸಿ, ಅಲ್ಲಿಯ ಜೀವ ವಿಮಾ ಕಚೇರಿಗೆ ಸಂದರ್ಶನವಿತ್ತು ಡೆವಲಪ್‌ಮೆಂಟ್ ಆಫೀಸರರನ್ನು ಉದ್ದೇಶಿಸಿ ಭಾಷಣ ವಿತ್ತರು. ಅನಂತರ ಒರಿಯಂಟಲ್ ಫಯರ್ ಎಂಡ್ ಜನರಲ್ ಇನ್ಸೂರೆನ್ಸ್ ಕಂಪೆನಿಗೆ ಭೇಟಿ ನೀಡಿದರು. ರಾತ್ರಿ ಸಿಂಡಿಕೇಟ್ ಬೇಂಕಿನವರು ಮಣಿಪಾಲದಲ್ಲಿತ್ತ ಭೋಜನ ಕೂಟದಲ್ಲಿ ಭಾಗವಹಿಸಿದರು. ಡಾ| ಟಿ. ಎಂ. ಎ. ಪೈಗಳು ಸ್ವಾಗತಿಸಿದರು. ಬೇಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಗಳು ಮೂತನಾಡಿ ಸಿಂಡಿಕೇಟಿನ ಅಭಿವೃದ್ಧಿಯನ್ನು ವಿವರಿಸಿದರಲ್ಲದೆ ಜೀವವಿಮಾ ಕಾರ್ಪೋರೇಶನು ನಗರ ಸಭೆಗಳು ಎತ್ತುವ ಸಾಲಕ್ಕೆ ಸಹಾಯವಿತ್ತು, ನಳ್ಳಿ ನೀರಿನ ಯೋಜನೆ, ಒಳ ಚರಂಡಿ ವ್ಯವಸ್ಥೆ ಮುಂತಾದುವುಗಳನ್ನು ಕಾರ್ಯಗತಗೊಳಿಸಲು ಸಹಕರಿಸಿ ಆನೆ ಕಾಲಿನಂತಹ ರೋಗದ ನಿರ್ಮೂಲನೆಗೆ ಪ್ರಯತ್ನಿಸಬೇಕೆಂದರು. ಕಾರ್ಪೋರೇಶನಿನ "ಸ್ವಂತ ಮನೆ ಕಟ್ಟಿಕೊಳ್ಳಿರಿ" ಯೋಜನೆಯನ್ನು ಉಡುಪಿನ ಮಾತ್ರವಲ್ಲ ಮಂಗಳೂರು ಮಣಿಪಾಲದಂತಹ ನಗರಗಳಿಗೆ ಸಹ ವಿಸ್ತರಿಸಬೇಕೆಂದರು. ಶ್ರೀ ಕೌಲರು ತಮ್ಮ ಉತ್ತರದಲ್ಲಿ ಈ ಸಲಹೆಗಳನ್ನು ಪರ್ಯಾಲೋಚಿಸುವುದಾಗಿ ಹೇಳಿ ಡಾ. ಪೈಯವರ ಮೇಧಾವಿ ಮುಂದಾಳ್ತನವನ್ನು ಕೊಂಡಾಡಿದರು. ಮರುದಿನ ಅವರು ಮಣಿಪಾಲದ ವಿವಿಧ ವಿದ್ಯಾಸಂಸ್ಥೆಗಳನ್ನು ವೀಕ್ಷಿಸಿ, ಉಡುಪಿಯಲ್ಲಿರುವ ಜೀವ ವಿಮಾ ಕಛೇರಿ ಶಾಖೆಗೆ ಸಂದರ್ಶನವಿತ್ತರು. ಶಾಖಾಧಿಕಾರಿಗಳಾದ ಶ್ರೀ ಟಿ ಸಿ. ಎಸ್. ನಂಬಿಯಾರ್, ಉಪಶಾಖಾಧಿಕಾರಿ ಶ್ರೀ ಎಸ್. ಅಣ್ಣಯ್ಯ ಹೆಗ್ಡೆ ಮುಂತಾದವರು ಶ್ರೀ ಕೌಲರನ್ನು ಸ್ವಾಗತಿಸಿ ಸ್ಥಳೀಯ ಡೆವಲಪ್‌ಮೆಂಟ್ ಆಫೀಸರರ ಪರಿಚಯ ಮಾಡಿಸಿದರು. ಉಡುಪಿ ಡಿವಿಜನಲ್ ಆಫೀಸಿಗೆ ಸಹ ಶ್ರೀ ಕೌಲರು ಭೇಟಿ ನೀಡಿ, ಅಲ್ಲಿಯ ಅಧಿಕಾರಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಉಡುಪಿ ವಿಭಾಗದ ಅಭಿವೃದ್ಧಿಯ ಚಿತ್ರವನ್ನು ಶ್ರೀ ಟಿ. ಆರ್. ಎ. ಪೈಗಳು ರೇಖಿಸಿ, ಶ್ರೀ ಕೌಲರಿಗೆ ಸ್ವಾಗತ ಕೋರಿದರು. ತಮ್ಮ ಭಾಷಣದಲ್ಲಿ ಶ್ರೀ ಕೌಲರು ಇಲ್ಲಿಯ ಕಛೇರಿಯ ಕಾರ್ಯದಕ್ಷತೆಯನ್ನು ಪ್ರಶಂಸಿಸಿ, ಕಾರ್ಯವಿಧಾನವನ್ನು ಇನ್ನಷ್ಟು ಚೊಕ್ಕಗೊಳಿಸಲು ತಕ್ಕ ಮಾರ್ಗದರ್ಶನ ಮಾಡಿದರು. ಆಸಿಸ್ಟೆಂಟ್ ಡಿವಿಜನಲ್ ಮೆನೇಜರ್ ಶ್ರೀ ಎಲ್. ಎಫ್. ಸಿ. ಪಾಜರು ಧನ್ಯವಾದ ಸಮರ್ಪಿಸಿದರು.

ಸಂಜೆ ಸ್ಥಳೀಯ ಸಂಬಂಧಿಯವರು ನೀಡಿದ ಸತ್ಕಾರ ಸಮಾರಂಭದಲ್ಲಿ ಶ್ರೀ ಕೌಲರು ಭಾಗವಹಿಸಿ, ಉಡುಪಿ ಇನ್‌ಶೂರೆನ್ಸ್ ಇನ್‌ಸ್ಟಿಟ್ಯೂಟಿನ ವತಿಯಿಂದ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಜಯಶೀಲರಾದ ಶ್ರೀ ಎನ್. ಗೋಪಾಲಕೃಷ್ಣ ರಾವ್, ಶ್ರೀ ವೈ ಶ್ರೀಧರ ಭಟ್ ಮತ್ತು ಶ್ರೀಮತಿ ಪ್ರೇಮಾ ಆಚಾರ್ಯರಿಗೆ ಪಾರಿತೋಷಕಗಳನ್ನು ನೀಡಿದರು. ಮೊದಲು ಇನ್‌ಸ್ಟಿಟ್ಯೂಟಿನ ಅಧ್ಯಕ್ಷ ಶ್ರೀ ಟಿ. ಆರ್. ಎ ಪೈಗಳು ಸ್ವಾಗತಿಸಿ ಕೊನೆಗೆ ಇನ್‌ಸ್ಟಿಟ್ಯೂಟಿನ ಉಪಾಧ್ಯಕ್ಷ ಶ್ರೀ ಬಿ. ವೆಂಕಟ ಸುಬ್ಬಯ್ಯನವರು ಧನ್ಯವಾದವಿತ್ತರು. ಅಂದು ರಾತ್ರಿ ಎಲ್. ಐ. ಸಿ ಅಧಿಕಾರಿ ವರ್ಗದವರಿತ್ತ ಭೋಜನ ಕೂಟದಲ್ಲಿ ಭಾಗವಹಿಸಿದ ಶ್ರೀ ಕೌಲರು ತಾ. ೨೮ರಂದು ಹಿಂತೆರಳಿದರು. ತಮ್ಮ ಜಿಲ್ಲಾ ಪ್ರವಾಸದಲ್ಲಿ ಶ್ರೀ ಕೌಲರು ಬಜ್ಪೆ, ಕಟೀಲು, ಮೂಲ್ಕಿ, ಪಡುಬಿದ್ರಿ, ಶಿರಿಯಾರ್ಯ, ಕಾರ್ಕಳ ಮತ್ತು ಮೂಡಬಿದ್ರೆಗಳಲ್ಲಿರುವ ಜೀವ ವಿಮಾ ಕಾರ್ಯಕರ್ತರನ್ನು ಸಹ ಭೇಟಿಯಾದರು.

ಉಡುಪಿ ಕಡಿಯಾಳಿಯ ಸೈಂಟ್ ಸಿಸಿಲಿ ಬಾಲಿಕಾ ಹೈಸ್ಕೂಲಿನ— ವರ್ಧಂತ್ಯುತ್ಸವವು ತಾ. ೨೪ರಂದು ಡಾ| ಟಿ. ಮಾಧವ ಪೈಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುದ್ರಾಸಿನಲ್ಲಿರುವ ಡಾ| ಯು ಎಲ್. ನಾರಾಯಣ ರಾವ್‌ರವರ ಉದಾರತೆಯಿಂದ ಅವರ ಸಹೋದರಿ ದಿ| ಯು ಕಮಲಾ ಬಾಯಿಯವರ ಸ್ಮಾರಕವಾಗಿ ಈ ಹೈಸ್ಕೂಲ್ ಕಳೆದ ಜೂನಿನಲ್ಲಿ ಪ್ರಾರಂಭಿಸಲಾಗಿತ್ತು. ಆಡಳಿತದಾರ ಶ್ರೀ ಕೆ. ಕೆ. ಪೈಯವರು ಈ ವಿಚಾರವನ್ನು ತಿಳಿಸುತ್ತ ಸಭೆಯನ್ನು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಎಮ್. ಅನಂತಯ್ಯ ಹಂದೆಯವರು ವರದಿಯೋದಿದರು. ಅಧ್ಯಕ್ಷರು ಮಾತನಾಡುತ್ತಾ, ಕಮಲಾ ಬಾಯಿಯವರ ಆದರ್ಶ ಗುಣಗಳನ್ನು ಈ ಶಾಲೆಯ ವಿದ್ಯಾರ್ಥಿಗಳು ಅನುಸರಿಸ ಬೇಕೆಂದು ಒತ್ತಿ ಹೇಳಿದರು. ವಿವಿಧ ಮನರಂಜನೆಯ ಕಾರ್ಯಕ್ರಮಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿಯನ್ನು ತಾ. ೨೦ರಂದು ಶ್ರೀ ಎಸ್. ಡಿ. ಪೆಜತ್ತಾಯರ ಹಿರಿತನದಲ್ಲಿ ಆಚರಿಸಲಾಯಿತು. ಶಾಲೆಯ ಪ್ರಗತಿಯನ್ನೂ ಚಟುವಟಿಕೆಗಳನ್ನೂ ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಪರಿಚಯ ಮಾಡಿಕೊಟ್ಟರು. ಡಾ| ಕೆ. ವೇದವ್ಯಾಸ ಆಚಾರ್ಯರು ಸ್ವಸ್ತಿ ವಚನವಿತ್ತರು. ವಿವೇಕಾನಂದರಂತೆ ನಾವು ಭಾರತೀಯರು ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳ ಬೇಕೆಂದರು ಅಧ್ಯಕ್ಷರು. ವಿದ್ಯಾರ್ಥಿಗಳು ಕೊನೆಯಲ್ಲಿ ಸತ್ಯ ಹರಿಶ್ಚಂದ್ರ ನಾಟಕವನ್ನು ಅಭಿನಯಿಸಿದರು.

ಕಡಿಯಾಳಿ ಹಾ. ಎ. ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ— ವಾರ್ಷಿಕೋತ್ಸವವು ತಾ. ೧ರಂದು ನೆರವೇರಿತು. ಎಡ್ವೊಕೇಟ್ ವಿ. ಜಿ. ಕೆದ್ಲಾಯರು ಸಂಘದ ಸಾಧನೆಗಳನ್ನು ಮೆಚ್ಚಿ ಈ ಸಂಘವು ಉಳಿದೆಲ್ಲ ಸಂಘಗಳಿಗೆ ಮಾರ್ಗದರ್ಶಕವಾಗಿದೆಯೆಂದು ತನ್ನ ಅಧ್ಯಕ್ಷ ಭಾಷಣದಲ್ಲಿ ಹೇಳಿದರು. ಸಂಘದ ಅಧ್ಯಕ್ಷ ಕೆ. ಜೆ. ಪೈ ಅವರು ಸ್ವಾಗತ ಭಾಷಣ ಮಾಡಿ ಸಂಘದ ಸಾಧನೆಗಳನ್ನು ವಿವರಿಸಿದರು. 'ಟಿಪ್ಪುಸುಲ್ತಾನ್' ಎಂಬ ನಾಟಕವನ್ನು ಹಳೆಯ ವಿದ್ಯಾರ್ಥಿಗಳು ಯಶಸ್ವಿಯಾಗಿ ಅಭಿನಯಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪಿಚಂದ ರಾವ್ ಧನ್ಯವಾದಾರ್ಪಣೆ ಮಾಡಿದರು. ಸಂಘದ ವಾರ್ಷಿಕ ಮಹಾಧಿವೇಶನವು ಅದಿನ ಬೆಳಿಗ್ಗೆ ನಡೆದು ಗತ ವರ್ಷದ ವರದಿ, ಆಯವ್ಯಯ ಪಟ್ಟಿಗಳನ್ನು ಮಂಜೂರು ಮಾಡಿತು; ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಆರಿಸಿತು. ಶ್ರೀ ಎಂ. ವಿ. ಹಡಿಯಾರರನ್ನು ಲೆಕ್ಕ ಪತ್ರ ಪರಿಶೋಧಕರಾಗಿ ಆಯ್ಕೆ ಮಾಡಿತು.

ಪೆರ್ಡೂರು ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. ೨೫ರಂದು ನೆರವೇರಿತು. ಉಡುಪಿಯ ಎ. ಇ. ಒ. ಶ್ರೀ ಜಿ. ವಿ. ಹಿರ್ಗಿಬೈರ ಇವರು ಅಧ್ಯಕ್ಷತೆ ವಹಿಸಿದ್ದರು. ಉತ್ತಮ ಆಡಳಿತೆ ಮತ್ತು ಅಧ್ಯಾಪಕರನ್ನು ಹೊಂದಿದ್ದ ಈ ಶಾಲೆಯು ಉತ್ತಮವಾಗಿಯೇ ಬೆಳೆದು ಬರುವುದೆಂಬ ಆಶಯವನ್ನವರು ವ್ಯಕ್ತಪಡಿಸಿದರು. ಆಡಳಿತದಾರ ಶ್ರೀ ಕೆ. ಕೆ. ಪೈಯವರು ಸ್ವಾಗತಿಸಿದ ಮೇಲೆ ಮುಖ್ಯೋಪಾಧ್ಯಾಯ ಶ್ರೀ ಕೆ. ಗೋಪಾಲಕೃಷ್ಣ ಉಪಾಧ್ಯಾಯರು ವರದಿಯೋದಿದರು. ರಾತ್ರಿಯಲ್ಲಿ "ಭಗವಾನ್ ಬುದ್ಧ" ಮತ್ತು "ಕಂಸ ವಧ" ವೆಂಬ ನಾಟಕಗಳನ್ನು ಅಭಿನಯಿಸಲಾಯಿತು.

ವಿಶ್ವಕರ್ಮ ಕಾರ್ಯಾಲಯದ ಉದ್ಘಾಟನೆ— ಉಡುಪಿಯ ವಿಶ್ವ ಬ್ರಾಹ್ಮಣ ಸಮಾಜಾಭ್ಯುದಯ ಸಭೆಯ ಆಶ್ರಯದಲ್ಲಿ ಶ್ರೀ ವಿಶ್ವಕರ್ಮ ಸೇವಾ ಕಾರ್ಯಾಲಯದ ಉದ್ಘಾಟನೆಯು ತಾ. ೨೩-೨-೬೪ರಂದು ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಬಿ ಲಕ್ಷ್ಮಣಾಚಾರ್ಯರಿಂದ ನೆರವೇರಿತು. ಶ್ರೀ ಬಿ. ಕೇಶವಾಚಾರ್ಯರು ಸ್ವಾಗತಿಸಿದರು. ಶ್ರೀ ಬಿ. ಸಂಜೀವಾಚಾರ್ಯರು ಸೇವಾ ಮಂಡಳಿಯ ಸಾಧನೆಗಳನ್ನು ವಿವರಿಸಿದರು. ಶ್ರೀ ಬಾಸ್ಕರಾಚಾರ್ಯರು ಮಾತನಾಡಿ ಎಲ್ಲೆಲ್ಲೂ ಇಂತಹ ಮಂಡಳಿಗಳು ಸ್ಥಾಪನೆಯಾಗಬೇಕೆಂದರು.

ವಾರ್ಷಿಕೋತ್ಸವ ಹಾಗೂ ಯಕ್ಷಿ ಜೋಡುಕೋತ್ಸವ— ವರ್ಷದ ನಿಯಮದ ಜ್ಞಾನವನ್ನು ಸಾಧಿಸಿ ಆಧ್ಯಾತ್ಮಿಕ ಸಾಮಾಜಿಕ ಹಾಗೂ ದೇಶದ ಅಭಿವೃದ್ಧಿಗಾಗಿ ಮಹರ್ಷಿ ದಯಾನಂದರಂತೆ ಸರ್ವರೂ ಐಕ್ಯದಿಂದ ದುಡಿಯ ಬೇಕೆಂದು ಜಿಲ್ಲಾಧಿಕಾರಿ ಶ್ರೀ ಕೆ. ಆರ್. ರಾಜೇಂದ್ರನ್‌ರವರು ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವದ ಹಾಗೂ ಆರ್ಯ ಸಮಾಜದ ಕಡೆಯಿಂದ ಜರಗಿದ ಋಷಿ ಬೋಧೋತ್ಸವದ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತಾ ಜನತೆಗೆ ಕರೆ ಇತ್ತರು. ಡಾ. ಕೆ. ಬಿ ಶೆಟ್ಟರು ಸ್ವಾಗತ ಭಾಷಣ ಮಾಡಿದರು ಶ್ರೀಮತಿ ಕೆ. ಆರ್ ರಾಮಚಂದ್ರನ್ ರವರು ಬಹುಮಾನ ವಿತರಣೆಗೈದರು. ವೈದ್ಯ ಗುರು ಯಂ. ಆರ್. ಶೆಟ್ಟರೂ ಶ್ರೀ ಸಂಜೀವ ಶಾಸ್ತ್ರಿಗಳೂ ಶ್ರೀ ಎಚ್. ಕೃಷ್ಣ ಶೆಟ್ಟರೂ ಭಾಷಣವಿತ್ತರು. ಶ್ರೀ ಆತ್ಮಾನಂದ ರಾಮಸ್ವಾಮಿಯವರ ಶಿಷ್ಯರಿಂದ ಸಂಗೀತ ಕಾರ್ಯಕ್ರಮವಾದ ಬಳಿಕ ಡಾ| ಕೆ. ಬಿ. ಶೆಟ್ಟರು ಧನ್ಯವಾದವನ್ನರ್ಪಿಸಿದರು.

ಮಣಿಪಾಲ — ತಾ. ೧೬-೨-೬೪ರಲ್ಲಿ ಮಣಿಪಾಲ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಉಡುಪಿ ತಾಲೂಕು ಬೋರ್ಡು ಸದಸ್ಯ ವಕೀಲ್ ಶ್ರೀ ಪಿ. ಶಿವರಾಮ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಶ್ರೀಮತಿ ಜಯಂತಿ ಎಸ್ ಶೆಟ್ಟಿಯವರಿಂದ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ಹಳೆ ವಿದ್ಯಾರ್ಥಿ ಸಂಘ ಮತ್ತು ಹೈಸ್ಕೂಲ್ ಹೊಂದಿದ ಪ್ರಗತಿಯನ್ನು ಪ್ರಶಂಸಿಸಿದಲ್ಲದೆ ದೇಶದ ಪ್ರಗತಿಗೆ ಇಂಥ ಸಂಘಗಳು ಅಗತ್ಯವೆಂದರು.

ಸಾಸ್ತಾನ- ತಾ. ೨೩-೨-೬೪ರಲ್ಲಿ ಪಾಂಡೇಶ್ವರ, ಐರೋಡಿ, ಬಾಳೆಕುದುರು ಮತ್ತು ಕೋಡಿ ಪಂಚಾಯತುಗಳ ವತಿಯಿಂದ ಜರಗಿದ ಗ್ರಾಮ ಸಹಾಯಕ ಶಿಕ್ಷಣ ಶಿಬಿರದಲ್ಲಿ ವಿಚಾರ ಗೋಷ್ಠಿಯು ಉಡುಪಿ ತಾ. ಬೋ. ಸದಸ್ಯ ವಕೀಲ ಪಿ. ಶಿವರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವಕೀಲ ಶ್ರೀ ಎಸ್. ಎಮ್ ಹೆಗ್ಡೆಯವರು ಸಮಾರೋಪ ಭಾಷಣ ಮಾಡಿದರು. ಶ್ರೀ ರಘುರಾಮ ಶೆಟ್ಟಿ, ಪಿ. ಸೇಲ್ ಚಂದಗ ದಿಣ್ಣೆ ಬಿ. ಡಿ. ಒ. ನಾರಾಯಣ ನಾಯ್ಕ, ಶ್ರೀ ಸಂಜೀವ ಶೆಟ್ಟಿ ಮೊದಲಾದವರು ಭಾಷಣವಿತ್ತರು.

ಮೆಡಿಕಲ್ ರಿಲೀಫ್ ಎಸೋಸಿಯೇಶನ್, ಶಿರ್ವ— ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಶನನ್ನು ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯಾಧಿಕಾರಿಗಳಾದ ಡಾ. ಎಚ್. ಎಸ್. ನಾಯಕ್ ಅವರ ಅಧ್ಯಕ್ಷತೆಯಲ್ಲಿ ಶಂಕರ್ ವಿಠಲ್ ಮೋಟರ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಆಗಿರುವ ಶ್ರೀ ಕೆ. ಆರ್. ಆರೂರು ಅವರು ಉದ್ಘಾಟಿಸಿದರು. ಆರಂಭದಲ್ಲಿ ಎಸೋಸಿಯೇಶನಿನ ಉಪಾಧ್ಯಕ್ಷ ಡಾ| ಯು. ಕೆ. ಆಚಾರ್ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಡಾ| ಕೆ. ಆರ್. ಪಿ ಕೃಷ್ಣ ಅವರು ಸಮಾರಂಭಕ್ಕೆ ಯಶಸ್ಸನ್ನು ಕೋರಿ ಬಂದ ಸಂದೇಶಗಳನ್ನು ವಾಚಿಸಿದರು. ಶ್ರೀ ಆರೂರ್ ಅವರು ಶಿರ್ವದ ಧಾರಾಳಿಗರು ಒಕ್ಕಟ್ಟಿನಿಂದ ಒಟ್ಟುಸೇರಿ ಜನಸೇವೆಗಾಗಿ ಸ್ಥಾಪಿಸಿದ ಈ ಮೆಡಿಕಲ್ ರಿಲೀಫ್ ಎಸೋಸಿಯೇಶನಿಗೆ ಉಜ್ವಲ ಯಶಸ್ಸನ್ನು ಬಯಸಿ ಮೆಡಿಕಲ್ ರಿಲೀಫ್ ಎಸೋಸಿಯೇಶನನ್ನು ಉದ್ಘಾಟಿಸಿದರು.

ಶಿಶು ಪ್ರದರ್ಶನವನ್ನು ಉದ್ಘಾಟಿಸಿದ ಕಟಪಾಡಿಯ ರೋಟೆರಿಯನ್ ಸದಸ್ಯರಾದ ಶ್ರೀ ವಾಸುದೇವ ಶೆಣೈಯವರು ಇಂದಿನ ಮಕ್ಕಳೇ ಭಾವೀ ಜನಾಂಗದವರಾಗುವುದರಿಂದ ಮೆಡಿಕಲ್ ರಿಲೀಫ್ ಎಸೋಸಿಯೇಶನ್ ತನ್ನ ಆರಂಭದ ಚಟುವಟಿಕೆಯಾಗಿ ಶಿಶು ಪ್ರದರ್ಶನವನ್ನು ಏರ್ಪಡಿಸಿದ ವಿಚಾರವನ್ನು ಕೊಂಡಾಡಿದರು ಅಧ್ಯಕ್ಷ ಡಾ| ಎಚ್. ಎಸ್. ನಾಯಕ್‌ರು ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯ ವೈದ್ಯಾಧಿಕಾರಿಯೂ ಶಿಬ್ಬಂದಿಯವರೂ ಸಾರ್ವಜನಿಕರ ಒಡನೆ ಇಟ್ಟ ಸಂಪರ್ಕವನ್ನು ಶ್ಲಾಘಿಸಿ ಸಭೆಯಲ್ಲಿದ್ದ ಉಡುಪಿ ತಾಲೂಕು ಹೆಲ್ತ್ ಕಮಿಟಿ ಉಪಾಧ್ಯಕ್ಷರಾದ ಡಾ| ಸ ಜಾರ್ ಅವರ ಸಹಕಾರವನ್ನು ಕೊಂಡಾಡಿದರು

ಶಿಶು ಪ್ರದರ್ಶನದಲ್ಲಿ ಭಾಗವಹಿಸಿದ ಸುಮಾರು ೪೦೦ ಮಕ್ಕಳನ್ನು ೧ ವರ್ಷದ ಕೆಳಗಿನ, ೧ರಿಂದ ೨ ವರ್ಷದ ಒಳಗಿನ, ೨ ವರ್ಷದಿಂದ ೫ ವರ್ಷದವರೆಗಿನ ಎಂಬ ಮೂರು ಗುಂಪುಗಳಾಗಿ ವಿಂಗಡಿಸಿ ಪ್ರದರ್ಶಿಸಲಾಗಿತ್ತು. ಶ್ರೀ ವಾಸುದೇವ ಶೆಣೈ, ಡಾ| ಯಂ. ಬಿ. ಬಿ. ಶೆಟ್ಟಿ, ಶ್ರೀ ಓ. ಯನ್. ರಾವ್, ಈ ಮೂವರು ಪ್ರದರ್ಶನದ ನ್ಯಾಯ ಮೂರ್ತಿಗಳಾಗಿದ್ದರು. ಪ್ರತಿ ಗುಂಪಿನಲ್ಲಿ ಪ್ರಥಮ ದ್ವಿತೀಯ ಬಹುಮಾನಗಳನ್ನು ಪಡೆದ ಮಕ್ಕಳಿಗೆ ಶ್ರೀ ಶೆಣೈಯವರು ಬಹುಮಾನಗಳನ್ನು ಇತ್ತರು.

ಕೊನೆಗೆ ಶ್ರೀ ಕೆ ಯಂ. ಮೊಳ್ಯರು ಮಾರ್ಚ ತಿಂಗಳ ೧೫ನೇ ತಾರೀಕು ಆದಿತ್ಯವಾರ ಎಸೋಸಿಯೇಶನಿನ ಆಶ್ರಯದಲ್ಲಿ ಏರ್ಪಡಿಸಲಿರುವ ಶರೀರ ಪರೀಕ್ಷಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಡಾ. ಯಂ. ಓ. ಪೈ, ಡಾ. ಯಂ. ವಿ. ಚಾರಿ, ಡಾ. ಫಿಲಿಪ್ ಮೊಡೈಲ್, ಡಾ ಪದ್ಮರಾವ್, ಡಾ. ಯಚ್. ಯಸ್. ನಾಯಕ್, ಡಾ. ಸತ್ಯಶಂಕರ್, ಆರು ಜನ ತಜ್ಞ ವೈದ್ಯರ ಪರಿಚಯಗಳನ್ನು ಹೇಳಿ ಸಾರ್ವಜನಿಕರು ಸಹಕರಿಸಬೇಕೆಂದು ಕೇಳಿಕೊಂಡರು.

ಕೃತಜ್ಞತೆಗಳು

ಕಳೆದವಾರ ಕಡಬ, ಉಪ್ಪಿನಂಗಡಿ, ವಿಟ್ಲ ಮೊದಲಾದ ಕಡೆಗಳಿಗೆ ಹೋದಾಗ ಬೇರೆ ಬೇರೆ ವಿಧಗಳಿಂದ 'ನವಯುಗ'ಕ್ಕೆ ಸಹಕಾರವಿತ್ತ ಶ್ರೀಗಳಾದ ಕೆ. ಪ್ರಫುಲ್ಲಚಂದ್ರ ರೈ, ಕೆ. ವಿಟ್ಠಲದಾಸ ಶೆಟ್ಟಿ, ಕಡಂಬು ಎ ಮಹಾಬಲ ಶೆಟ್ಟಿ, ಎಂ. ಕೆಂಗಪ್ಪ ರೈ, ಮುರ್ಡಾಳ; ಶ್ರೀಮತಿ ಶಾಂಭವಿ ಬಿ. ಬಾಲಕೃಷ್ಣ ರೈ, ಉಪ್ಪಿನಂಗಡಿ; ಎಂ. ದಾಸ ರೈ, ಮಾಣಿಗ; ಶ್ರೀಮತಿ ಪಿ. ದೇವಕಿ ಅಮ್ಮ, ವಿಟ್ಲ ಪಟ್ಟೂರ್ ಮೊದಲಾದವರಿಗೆ ಈ ಮೂಲಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ

ಕೆ ಹೊನ್ನಯ್ಯ ಶೆಟ್ಟಿ.
ಸಂಚಾಲಕ-ಸಂಪಾದಕ.

ಧನ್ಯವಾದ ಸಮರ್ಪಣೆ— ತಾರೀಕು. ೨೭-೨-೬೪ನೇ ದಿನ ಉಡುಪಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ನನ್ನ ಪುತ್ರ ಶ್ರೀ ಜಯರಾಮನು ಕಾಪು ಉಳಿಯಾರಗೋಳಿ ಕುಡ್ವ ಶೆಟ್ರ ಪುತ್ರಿ, ಕುಮಾರಿ ಜಯಂತಿಯನ್ನು ಮತ್ತು ನನ್ನ ಪುತ್ರಿ ಕುಮಾರಿ ಸುಮತಿಯನ್ನು ಪಡುಬಿದ್ರಿ ಸಂಕದ ಬಾಗಿಲು ಹಿರಿಯಣ್ಣ ಶೆಟ್ರ ಪುತ್ರ ಶ್ರೀ ರಾಜೀವನು ವಿವಾಹವಾದ ಸಂದರ್ಭದಲ್ಲಿ ನನ್ನ ಆಮಂತ್ರಣವನ್ನು ಸ್ವೀಕರಿಸಿ, ಬಂದು ವಧೂವರರನ್ನು ಆಶೀರ್ವದಿಸಿದ, ಮತ್ತು ಉಚಿತ ಉಡುಗೊರೆಗಳನ್ನಿತ್ತ ಎಲ್ಲಾ ಮಹನೀಯರುಗಳಿಗೂ ನಾನು ಈ ಮೂಲಕ ಹೃತ್ಪೂರ್ವಕ ಅಭಿವಂದನೆಗಳನ್ನೂ ಸಲ್ಲಿಸುವೆನು.

ಹೆರ್ಗ ವಿಟ್ಠಲ ಶೆಟ್ಟಿ.

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್, ನವಯುಗ.

ಹೊಸ ಪುಸ್ತಕ—
'ನವಿಲೇಖ'ರ
ನವೀನ ಕಾದಂಬರಿ—
ಹಸುರು ಹಂಸ
ಇಂದೇ ಪ್ರಕಟವಾಗಿದೆ
ಬೆಲೆ: ರೂ. ಎರಡು.
ನವಯುಗ ಪ್ರೆಸ್, ಉಡುಪಿ.

ತಪ್ಪು ಯಾರದು, ಶಿಕ್ಷೆ ಯಾರಿಗೆ?

(೫ನೇ ಪುಟದಿಂದ)

ಛೆ....ಛೆ.... ಎಲ್ಲಾದ್ರೂ ಉಂಟೆ? ತ ಮ್ಮ ಭವಿಷ್ಯ ಹಾಳ್ಮಾಡ್ಕೊಂಡು...."

"ಭವಿಷ್ಯದ ಚಿಂತೆ ಇದ್ರೆ ಅವ್ರು ಓ ದೋದಿಲ್ವೆ? ಚಿಂತೆಯಿರೋದು ಮಕ್ಕ ಗಲ್ಲ; ಅವ್ರ ಹೆತ್ತೋರಿಗೆ...."

"ಅದೂ ಸರಿಯನ್ನು..."

"ನೋಡಿ, ನಿಮ್ಮ ಟೋಪಿ ಸಂಸ್ಕಾರ ಒಂದ್ಕೆಲ್ಸ ಮಾಡ್ಬೇಕು."

"ಏನು?"

"ಈ ಬಾರಿ ಮಂತ್ರಿಯಾಗಿರೋರು ಮುಂದಿನ್ಸಾರಿ ಎಲೆಕ್ಷನ್ನಿಗೆ ನಿಲ್ಲುವುದಾ ದ್ರೆ ಅವ್ರ ಮತದಾರ ಕ್ಷೇತ್ರದ ಒಟ್ಟು ಮತಗಳಲ್ಲಿ ನೂರಕ್ಕೆ ೩೫ರಷ್ಟಾದ್ರೂ ಪಡೆ ಯದೆ ಇದ್ರೆ...."

"ಏನು...."

"ಮತ್ತೇನೂ ಇಲ್ಲ, ಅವ್ರ ಆಸ್ತಿಪಾಸ್ತಿ ಗಳನ್ನ ಸಂಸ್ಕಾರಕ್ಕೆ ಬಿಟ್ಟುಕೊಡ ಬೇ ಕಾಂತ..."

"ಒಳ್ಳೇ ಸಲಹೆಯಿದು. ಹೀಗಾದ್ರೆ ... ನಿಲ್ಬೋಲ್ಲ, ಮತ್ತೆ ನೋಡು ... ಮತದಾನಾನೇ ಮಾಡ್ತಿದ್ರೆ..

"... ಬೇಕು ಇ ಷ್ಟು. ಮಕ್ಳು ಕಲೀದಿದ್ರೆ ಮಾಸ್ತರ್ರದ್ದು ತಪ್ಪು ಅಲ್ವೆ? ಹಾಗೇನೇ ಮತದಾನ ಮಾಡ್ದಿದ್ರೆ ಮಿನಿಸ್ಟರ್ದು ತ ಪ್ಪಾಗ್ಬೇಕು...."

"ಸಾಕು, ಸಾಕು.. ಇಲ್ಲಿ ಅವಿಷ್ಟ ಹಾಗೇ. ಈಗ ನೋಡು ನಮ್ವಿಷಯಕ್ಕೆ ಬರೋಣ. ತಾಸು ಹನ್ನೆರಡೂ ದಾಟಿತು ಇವತ್ತು..."

"ತಯಾರಿದೆಯಲ್ಲಾ ಬೇಯಿಸಿದ್ದು"

"ನಮ್ಮ ಮಾತೇ ಹಾಗೇ. ಮಾತಿಗೆ ಕೂತ್ರೆ...."

"ಬನ್ನಿ ಬನ್ನಿ.. ಬೇಗ ತೆಗೆಯಿರಿ ಇ ಕೊಳ್ಳಿ ಕೈ.. ಈಗ ಕಾಲ್ತೊಳ್ಕೊಂಡು ಬಂದೆ...."

"ಇದೂ ಒಂದು ದಂಡನೆ...ನಿನ್ನ ಕೈ ಹಿಡ್ದ ತಪ್ಪಿಗೆ.."

ಪಾಪ, ಅಪರಾಧ ಮಾಡ್ದ ಮಾಸ್ತ್ರ ದಂಡನೆಗೂ ಮಿಗಿಲು ಇದು ಅಲ್ವೆ?"

"ಅಲ್ಲ ಮಹಾರಾಣಿ ಅಲ್ಲಾ.. ಬೇಗ ಬಾ ಮತ್ತೆ.."

ಬಂದೆ ಮಹಾರಾಜಾ ಇಗೋಬಂದ್ಬಿಟ್ಟೆ

— ಗೋರಾ.

In the Court of the Subordinate Judge Udipi.

S. C. No. 161/1963

Thungamma Shedthi — Plaintiff

v.

Thimmappa Hegde — son of Subbu Hegadthi, Uliyargoli village — — Defendant.

The above suit filed by the Plaintiff against the defendant is posted to 12—3—64. The defendant is directed to appear before this Court on that day at 11 a. m. failing which the suit will be decided in his absence.

K. L. Aithal,
Vakil for Plaintiff.

Udipi, 29—2—64.

ನಗೆಗವಲು

ಸೂಕ್ತ ಪರಿಹಾರ

ಒಬ್ಬ ಇಂಜಿನಿಯರನ ಮೇಲ್ವಿಚಾರ ಣೆಯಲ್ಲಿ ನೀರಾವರಿಯ ಉದ್ದೇಶದಿಂದ ಟ್ಯೂಬ್ ಬಾವಿಯೊಂದನ್ನು ತೋಡುವ ಕಾರ್ಯ ನಡೆಯಿತು. ಒಂದು ದೊಡ್ಡ ಹೊಂಡವನ್ನು ಅಗೆದರು. ಅದರ ನಿರೀಕ್ಷ ಣೆ ಮಾಡಿದ ಇಂಜಿನಿಯರ್ ಸಾಹೇಬ ರು ಹೊಂಡ ತೋಡಲು ಅದು ಸರಿಯಾ ದ ಸ್ಥಾನವಲ್ಲವೆಂಬ ನಿರ್ಧಾರಕ್ಕೆ ಬಂ ದರು. ಆದುದರಿಂದ ಅದನ್ನು ಮುಚ್ಚಿ ಬಿಡುವ ನಿರೂಪವನ್ನು ನೀಡಿ ಹೋದರು.

ಕೂಲಿಗಾರ ಆಳುಗಳು ತೋಡಿದ ಮ ಣ್ಣನ್ನು ಗುಳಿಗೆ ತುಂಬಿಸ ತೊಡಗಿದರು. ಹೊಂಡ ತುಂಬಿತು ಆದರೆ, ಇನ್ನೂ ಬ ಹಳಷ್ಟು ಮಣ್ಣು ಮೇಲೆ ಉಳಿದಿತ್ತು. ಓ ವರ್ ಸಿಯರ್ ಮಹಾಶಯರಿಗೆ ಈ ಸಂ ಗತಿಯನ್ನು ತಿಳಿಸಲಾಯಿತು. ಅವರಲ್ಲಿಗೆ ಬಂದು ಪರಿಸ್ಥಿತಿಯನ್ನು ವೀಕ್ಷಿಸಿದರು. ಸ ಮಸ್ಯೆ ಬಗೆ ಹರಿಸಲಾಗಲಿಲ್ಲ ಅವರಿಂದ ಅದಕ್ಕಾಗಿ ತಲೆಕೆರೆಯುತ್ತ ಇಂಜಿನಿಯರ್ ಸಾಹೇಬರ ಮಹಲಿಗೆ ಬಂದರು.

ಇಂಜಿನಿಯರರು ತಮ್ಮ ಭೋಜನ ಶಾಲೆಯಲ್ಲಿ ಉಪಹಾರ ಸ್ವೀಕರಿಸುತ್ತಿದ್ದರು. ಟೋ ಸ್ಟಿನ ತುಣುಕನ್ನು ನುಂಗುತ್ತ ಅವರೆಂ ದರು: "ನೀವೂ ಬೇಜವಾಬ್ದಾರಿತನವ ನ್ನು ತೋರಿಸುತ್ತಿರುವಿರಿ ಓವರ್ ಸಿಯ ರ್! ಈಗ ನನ್ನ ಬಳಿಗೆ ಬಂದರೆ ನಾ ನು ಮಾಡುವುದಾದರೂ ಏನು? ಈ ವಿ ಷಯ ನಿಮಗೆ ಮೊದಲೇ ಗೊತ್ತಿರಬೇ ಕಿತ್ತು. ಆರಂಭದಲ್ಲಿಯೇ ಹೊಂಡವನ್ನು ಸ್ವಲ್ಪ ದೊಡ್ಡದಾಗಿ ಅಗೆಸಿದ್ದ, ಎಲ್ಲಾ ಮಣ್ಣು ಅದರಲ್ಲಿ ತುಂಬಿ ಹೋಗು ತ್ತಿತ್ತು!"

ಓವರ್ ಸಿಯರ್ ತಲೆಕೆರೆಯುತ್ತಲೇ ನಿಂತು ಕೊಂಡಿದ್ದ! ಇಂಜಿನಿಯರರು ಟೋಸ್ಟು ನುಂಗುತ್ತಲೇ ಇದ್ದರು!!

ಒಳ್ಳೆಯ ವ್ಯಾಪಾರ

ಒಬ್ಬ ಅಮೇರಿಕನ್ ಪ್ರವಾಸಿಯು ಲಂಡನ್ ನಗರದಲ್ಲಿ ಸಂಚರಿಸುತ್ತಿದ್ದ. ಉಡುಪುಗಳ ಅಂಗಡಿಗಳ ಬೀದಿ ಯಲ್ಲಿ ಆತನು ತಿರುಗುತ್ತಿರುವಾಗ ಉತ್ತಮೋತ್ತಮವಾದ ಕೋಟುಗಳು ಗೋಚರಿಸಿದುವು; ಅವನು ಅವುಗಳಿಂದ ಆ ಕರ್ಷಿತನಾಗಿ ೧೫೦ ಡಾಲರ್ ತೆತ್ತು ತನ್ನ ತಾಯಿಗೆಂದು ಒಂದನ್ನು ತೆಗೆದುಕೊಂಡ ಅಮೇರಿಕೆಯಿಂದ ತನ್ನ ಮುದಿ ತಾಯಿಗೆ ಅದನ್ನು ಕಳಿಸಿದ. ತಾಯಿಯು ಲೋಭಿ ಯಾದುದರಿಂದ ಕೋಟಿನ ಬೆಲೆ ಕೇಳಿ ದಿ ಗಿಲುಗೊಳ್ಳುವಳೆಂದು ತಿಳಿದು ಆತ ಬರೆ ದ: "ಕಳಿಸಿದ ಕೋಟಿನ ಬೆಲೆ ೧೫ ಡಾ ಲರ್‌ಗಳು. ನಿನಗಿರಲಿಯೆಂದು ರವಾನಿಸಿ ದ್ದೇನೆ.

ಮರು ವಾರದಲ್ಲಿ ಆತನ ತಾಯಿಯಿಂ ದೊಂದು ಪತ್ರ ಬಂತು: "ಕೋಟನ್ನು ೧೫ ಡಾಲರ್ ಲಾಭವಿಟ್ಟು ಮಾರಿದ್ದೇನೆ; ಇ ನ್ನೂ ಹತ್ತು ಕೂಡಲೇ ಕಳುಹಿಸು." ಓದಿ ದ ಮಗ ಹಾಗೆಯೇ ನಿಂತುಕೊಂಡಿದ್ದ!

ನಿಷ್ಪಕ್ಷಪಾತ

ನ್ಯಾಯ ಮತ್ತು ಪ್ರಾಮಾಣಿಕತೆಯ ಉದಾಹರಣೆಯನ್ನು ನೀಡುತ್ತ ಒಬ್ಬ ನ್ಯಾಯಾಧೀಶರು ತನ್ನ ಮತದಾರ

ಅಭಿಪ್ರಾಯ ಮಂಡನೆ

ವಿದ್ಯಾರ್ಥಿಗಳನ್ನು ಎಳೆಯಬಾರದು

ಸ್ವತಂತ್ರ ಪಕ್ಷದ ನಾಯಕ ರಾಜಾ ಜಿಯವರು ವಿದ್ಯಾರ್ಥಿಗಳು ರಾಜಕೀಯ ದಲ್ಲಿ ಭಾಗವಹಿಸ ಬೇಕೆಂದು ಉಪದೇ ಶ ನೀಡತೊಡಗಿದ್ದಾರೆ. ಬಹುಶಃ ವಿ ದ್ಯಾರ್ಥಿಗಳನ್ನು ರಾಜಕೀಯಕ್ಕೆ ಎಳೆ ಯಲು ಮುಂದಾದವರಲ್ಲಿ ಇವರು ಪ್ರ ಥಮ ಭಾರತೀಯರೆನ್ನಬಹುದು. ತಮ್ಮ ಅಧ್ಯಯನವನ್ನು ಸಮರ್ಪಕವಾಗಿ ನಡೆ ಸಿ ದೇಶದ ಉನ್ನತಿಗಾಗಿ ದೊಡ್ಡವರಾ ದ ಮೇಲೆ ದುಡಿಯ ಬೇಕಾದವರ ದಾ ರಿಯಲ್ಲಿ ಹೊಂಡ ತೋಡುವುದು ಸರಿ ಯಲ್ಲ. ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚಿ ದೆಯೆನ್ನುವ ಈ ಸಮಯದಲ್ಲಿ ಇವರ ನ್ನು ರಾಜಕಾರಣಕ್ಕೆ ಇಳಿಸಿದರೆ, ಅಶಾಂ ತಿಯು ತಾನೇ ತಾನಾಗಿ ಹರಡೀತು; ಬಿಸಿ ರಕ್ತದ ತರುಣರು ಬೇಗನೇ ಉದ್ರಿ ಕ್ತಗೊಳ್ಳುವುದು ಅವರ ತಪ್ಪಲ್ಲ. ಆದು ದರಿಂದ ಹಿರಿಯರೆಂದ ಮಾತನ್ನೇ ಕಿರಿ ಯರೂ ಮೆಲುಕು ಹಾಕುವ ಸಂಪ್ರದಾ ಯವಿರುವ ನಮ್ಮಲ್ಲಿ ಇಂತಹ ಕರೆಗಳು ಮತ್ತೊಮ್ಮೆ ಬರದಿರಲಿ.

ಸ್ವಯಂ ರಾಜಾಜಿಯವರೇ ಹಿಂದೆ ವಿದ್ಯಾ ರ್ಥಿಗಳು ರಾಜಕೀಯದಲ್ಲಿ ಭಾಗವಹಿಸು ವುದನ್ನು ವಿರೋಧಿಸುತ್ತಿದ್ದರು ಎಂಬು ದನ್ನು ಮರೆಯಬಾರದು. ಸಮಯ ಸಮ ಯಕ್ಕೆ ಅಭಿಪ್ರಾಯ ಬದಲಿಸುವ ಸ್ವಾತಂ ತ್ರ್ಯ ಅಭಿಪ್ರಾಯ ಪ್ರಕಟಣಾ ಸ್ವಾತಂ ತ್ರ್ಯದ ಇಂದಿನ ದಿನಗಳಲ್ಲಿ ತಪ್ಪೆಂದು ಹೇ ಳುವುದು ಸರಿಯಲ್ಲ; ಆದರೆ, ವಿದ್ಯಾರ್ಥಿ ಗಳಿಗೆ ರಾಜಕಾರಣದ ಗುಂಗು ತಾಗಿತೆಂ ದರೆ, ಅದರ ಭೀಕರ ಪರಿಣಾಮ ರುದ್ರ ಭಯಾನಕವಾಗುವುದೆಂಬುದನ್ನು ನೆನಪಿ ಟ್ಟುಕೊಳ್ಳುವುದು ಅಗತ್ಯವಲ್ಲವೆ?

ಪೆರ್ಡೂರು. — ವಿದ್ಯಾರ್ಥಿ ಹಿತೈಷಿ.

ಅಭಿನಂದನೀಯ

ಈ ವರೆವಿಗೂ ನಮ್ಮ ನಿಮ್ಮ ಪಂಚ

ಕ್ಷೇತ್ರದ ಎಂ ಎಲ್. ಎ ಗೆ ಹೀಗೆ ಉಪದೇಶಿಸಿದರು: ನೋಡಿ, ನನಗೂ ಹ ಲವಾರು ಬಾರಿ ಕಠಿನ ಪ್ರಸಂಗಗಳ ನ್ನು ಎದುರಿಸ ಬೇಕಾಗಿ ಬರುತ್ತದೆ. ಆದ ರೆ, ನಾನು ದುರ್ಬಲತೆಗಳಿಗೆ ಅವಕಾಶವೀ ಯಲಿಲ್ಲ. ಒಮ್ಮೆ ನನ್ನ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆ ನಡೆದಿತ್ತು. ವಾದಿ ಯು ಹತ್ತು ಸಾವಿರ ರೂಪಾಯಿಯ ಡ್ರಾ ಫ್ಟೊಂದನ್ನು ಕಳಿಸಿದ್ದ. ಪ್ರತಿವಾದಿಯು ಹದಿನೈದು ಸಾವಿರ! ಮೊದಲಿಗೆ ಎಲ್ಲವ ನ್ನೂ ತೆಗೆದುಕೊಳ್ಳುವ ಎಂದು ತೋರಿ ತು. ಆದರೆ, ನಾನು ಕೂತುಕೊಳ್ಳುವುದು ನ್ಯಾಯಾಸನದಲ್ಲಿ! ಅದು ನನ್ನನ್ನು ತಡೆ ಯಿತು. ನನ್ನ ಅಂತಃಕರಣವು ನನಗೆ ಧಿ ಕ್ಕಾರವೆಂದಿತು. ಇದು ಅನ್ಯಾಯವೆಂದು ಸಾರಿತು. ಕೂಡಲೆ ನಾನೊಂದು ಉಪಾ ಯ ಹೂಡಿದೆ. ಪ್ರತಿವಾದಿಗೆ ಐದು ಸಾವಿ ರ ರೂಪಾಯಿಗಳನ್ನು ಕೂಡಲೇ ಮರಳಿ ಸಿದೆ. ಇದರಿಂದ ನಾನು ವಾದಿ ಮತ್ತು ಪ್ರತಿವಾದಿಗಳನ್ನು ಏಕದೃಷ್ಟಿಯಿಂದ ಕಂಡಿರುವೆನೆ. ದೂ ಯಾರೆಡನೆಯು ಪಕ್ಷ ಪಾತ ತೋರಿಸಲಿಲ್ಲವೆಂದೂ ನನಗೆ ಸಮಾ ಧಾನವಾಯಿತು."

ಯ ಅಷ್ಟಾಗಿ ಇಲ್ಲ ಎಂದು ಪ್ರತ್ಯೇಕ ಪ್ರ ಸ್ತಾಪಿಸಬೇಕಾದ ಆವಶ್ಯಕತೆಯೇ ಇಲ್ಲ. ಕನ್ನಡ ನಾಡು ನುಡಿಗಳ ಉದ್ಧಾರ ಉನ್ನ ತ ಸಾಹಿತ್ಯ ಸೃಷ್ಟಿಯನ್ನು ಹಾರೈ ಸುವವರಲ್ಲಿ ನಾನೂ ಒಬ್ಬ. ನಾನು ನಿಮಗೆ ಅಪರಿಚಿತನಾದರೂ ನನಗೆ ನಿ ಮ್ಮ ವಾರಪತ್ರಿಕೆಯ ಪರಿಚಯವಿಲ್ಲದಿ ಲ್ಲ. ಈ ಬಗೆಯ ಪತ್ರಿಕೆಗಳ ಏಳಿಗೆ ಯನ್ನು ಹಾರೈಸುವವರಲ್ಲಿ ನಾನೂ ಒ ಬ್ಬನಷ್ಟೆ.

"ನವಯುಗ" ಪತ್ರಿಕೆ ಹಲವಾರು ವ ರ್ಷಗಳಿಂದ ತನ್ನ ನೀತಿ ಧ್ಯೇಯ ಧೋ ರಣೆಗಳನ್ನು ಬದಲಿಸದೆ ಶಕ್ತಿ ಮೀರಿ ದು ಡಿಯುತ್ತಿದೆ. ನಿಮ್ಮ ಮತ್ತು ಪತ್ರಿಕೆಯ ಕಾರ್ಯ ಸ್ತುತ್ಯಾರ್ಹ ಹಾಗೂ ಅಭಿನಂ ದನೀಯ........

ಚಿತ್ರದುರ್ಗ.

— ಟಿ. ಎಸ್. ಸತ್ಯನಾರಾಯಣ ರಾವ್.

[ನಿಮ್ಮ ಸದಭಿಪ್ರಾಯ, ಸದ್ಭಾವನೆಗ ಳಿಗಾಗಿ ನಾವು ಕೃತಜ್ಞರು. — ಸಂ. ನ.]

ಕನ್ನಡದ ಬೆಲೆ?

೧೯೬೩ರ ಸಾಲಿನಲ್ಲಿ ಪ್ರಕಾಶಗೊಂಡ ವಿವಿಧ ಭಾರತೀಯ ಭಾಷಾ ಪುಸ್ತಕಗ ಳಲ್ಲಿ ೧೧ನ್ನು ಸಾಹಿತ್ಯ ಎಕಡೆಮಿಯು ಪುರಸ್ಕಾರಾರ್ಹವೆಂದು ಸ್ವೀಕರಿಸಿದೆ. ಸ್ವೀ ಕೃತ ಪುಸ್ತಕಗಳಲ್ಲಿ ದಕ್ಷಿಣಭಾರತದ ಮಲೆ ಯಾಳ, ತಮಿಳು ಮತ್ತು ತೆಲುಗು ಭಾ ಷೆಗಳ ಹೊತ್ತಗೆಗಳು ಸೇರಿರುವುವು. ಆದ ರೆ, ವಿಪುಲ ಸಾಹಿತ್ಯ ಕೃತಿಗಳು ಹೊರ ಬೀಳುವ ಕನ್ನಡ ಭಾಷೆಯ ಪುಸ್ತಕವಿಲ್ಲ ದಿರುವುದ ಶೋಚನೀಯ. ಕನ್ನಡ ಭಾ ಷೆಯ ಸಾಹಿತ್ಯವು ಕೀಳು ಮಟ್ಟಕ್ಕಿಳಿ ಯುತ್ತಿದೆಯೆಂಬ ಅಭಿಪ್ರಾಯವನ್ನು ಈ ಎಕೆಡೆಮಿಯ ಆಯ್ಕೆಯು ಸಮರ್ಥಿಸು ವಂತಿದೆಯಲ್ಲವೆ? ಇದು ಹಾಗಾದರೆ, ನ ಮ್ಮ ಸಾಹಿತಿಗಳು ಉತ್ತಮ ಆದರ್ಶ ಕೃ ತಿಗಳ ರಚನೆಗೆ ಇನ್ನಾದರೂ ಕಟಿಬದ್ಧ ರಾಗುವುದು ಅಗತ್ಯವೆನಿಸುವುದಿಲ್ಲವೆ?

ಉಡುಪಿ. — ರಾಶಿ.

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ
ಆರು ಕತೆಗಳು

ಅಮೆರಿಕದ ಗ್ರಾಮ ಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರ ಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1-75; ಬಿಳಿ ಕಾಗದ
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿ ಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು
ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕತ್ತಿನಲ್ಲಿ ಕತ್ತಿ, ತಲೆಯ ಮೇಲೆ ಸುತ್ತಿಗೆ

(೩ನೇ ಪುಟದಿಂದ)

ಯೆಕಂದರೆ ಅದು ರಾಜಧಾನಿ ಇದೆ. ಅಲ್ಲಿ ಅನ್ಯ ರಾಷ್ಟ್ರಗಳ ದೂತನಿವಾಸಗಳಿವೆ. ಅದರ ಮೇಲೆ ಪ್ರಭಾವ ಬೀರಲು ಪ್ರದರ್ಶನದ ಪ್ರದೇಶದಂತೆ ಪೆಕಿಂಗನ್ನು ಪಾಲಿಸುತ್ತಿದ್ದಾರೆ. ಇತರೆಡೆಗಳಿಗಿಂತ ಇಲ್ಲಿಯ ನಿವಾಸಿಗಳಿಗೆ ಹೆಚ್ಚಿನ ಸೌಕರ್ಯ ಆಹಾರಗಳನ್ನು ಕೊಡಲಾಗುತ್ತಿದೆ. ಅಲ್ಲದೆ ಅವರಿಗಾಗಿ ಅಲ್ಲಲ್ಲಿ ವಿರಾಮ ಕೇಂದ್ರಗಳೂ ಇವೆ. ಚಲಚಿತ್ರ ಪ್ರದರ್ಶನಾಲಯಗಳು ಚೈನಾದಲ್ಲಿ ಬಹಳ ಕಮ್ಮಿ. ಅಲ್ಲಿ ಆಸನಗಳಾದರೋ ಬಹಳ ಕಮ್ಮಿ ಬೆಲೆಯವೇ ಇವೆ.

ಈ ರೀತಿ ಶ್ರೀ ನೊತೊಂಬ್ ಅನುಭವವನ್ನು ವ್ಯಕ್ತಪಡಿಸಿದಾರೆ. ಅವರ ಅನುಭವ ಪೆಕಿಂಗ್ ಪಟ್ಟಣದ್ದಿದೆ. ಪೆಕಿಂಗ್ ಪಟ್ಟಣದಲ್ಲಿರುವ ಸೌಕರ್ಯಗಳನ್ನು ಕಂಡು ಸಾಮಾನ್ಯ ಜೀವಿಗೂ ಅಂತಹ ಅನುಕೂಲತೆಗಳಿವೆ ಎನ್ನುವದು ನ್ಯಾಯಕ್ಕೆ ವಿರೋಧವಾದ ಮಾತಿದೆ. ನಾಲ್ಕು ಜನ ಓಡಾಡುವ ಮಾರ್ಗವನ್ನು ಸ್ವಚ್ಛ—ಆಕರ್ಷಕವಾಗಿಡಲು ಪ್ರಯತ್ನಿಸುವದು ಸ್ವಾಭಾವಿಕ, ಆದರೆ, ಗಲ್ಲಿ-ಸಂದುಗಳ ಅವಸ್ಥೆ—ತೀರಾ ಕೆಳಮಟ್ಟದ್ದಿರುತ್ತದೆ. ಚೈನಾ ಅದಕ್ಕೆ ಅಪವಾದವಾಗಿರುವದಿಲ್ಲ.

ಬಹಳ ವರ್ಷಗಳ ನಂತರ ಕಳೆದ ಆಗೋಸ್ಟಿನಲ್ಲಿ ಚೈನಾದ ಪ್ರಜೆಗಳಿಗೆ ಆಹಾರ ಹಾಗೂ ನೀರು ದೊರಕಿರುವದು ಮಾನವೀಯತೆಯ ದೃಷ್ಟಿಯಿಂದ ಸಂತಸದ ಸಂಗತಿಯೇ ಇದೆ. ದೇವರು ಕೊಟ್ಟರೂ ಪೂಜಾರಿ ಬಿಡಬೇಕಲ್ಲ! ಹಾಗಾಗಿದೆ ಕೆಂಪು ಸರಕಾರದ ಕುಡುಗೋಲು ಪೆಟ್ಟಿಗೆ ಒಳಗಾಗಿರುವ ಚೈನೀಯರ ಪಾಡು, ಮಳೆ ಬಂದಿದೆ. ಆಹಾರ ಬೆಳೆದಿದೆ ವಾಸ್ತವ ಆದರೆ ಏನು ಫಲ? ಅದೆಲ್ಲವೂ ಗಗನ ಕುಸುಮ! ಅವರ ಪಾಲಿಗೆ ಕನಸಿನ ಮಂಡಿಗೆಯೇ ಸರಿ. ಕಮ್ಯೂನಿಸ್ಟ್ ಚೈನಾ ಪೆಕಿಂಗಿನಲ್ಲಿ ತನ್ನ ಆಹಾರ ಸಂಪತ್ತನ್ನು ಅನ್ಯ ರಾಷ್ಟ್ರಗಳ ದೂತರೆದುರಿಗೆ ಒಮ್ಮೆ ಪ್ರಕಟಿಸಿತು. ಅಲ್ಲಿಗೆ ಮುಗಿಯಿತು ಆ ನಾಟಕ, ಕೊನೆಯ ಪರದೆ ಎಳೆದಾಯಿತು. ಆಹಾರ ಪದಾರ್ಥಗಳನ್ನು ಕೆಡದಂತೆ ಜಾಗ್ರತೆಯಾಗಿ ಡಬ್ಬಿಗಳಲ್ಲಿ ತುಂಬಿಸಲಾಯಿತು. ಅವನ್ನು ಇಷ್ಟೀಗ ಫ್ರಾನ್ಸಿಗೆ ಕಳುಹಿಸುತ್ತಿದ್ದಾರೆ. ಕಮ್ಯೂನಿಸ್ಟ್ ಚೈನಾದ ಗಡಿಗೆ ತಾಗಿಯೇ ಇರುವ ಕಮ್ಯೂನಿಸ್ಟ್ ರಷ್ಯಕ್ಕೂ ಆಹಾರವನ್ನು ಕೊಡದೆ ಫ್ರಾನ್ಸಿಗೆ ಅವನ್ನು ಕಳುಹಿಸಲಾಗುತ್ತಿದೆ. ರಷ್ಯಾ ಅಮೇರಿಕದಿಂದ ಗೋಧಿಯನ್ನು ಕರಿಸುತ್ತಿದೆ. ಅದನ್ನು ಸರ್ಗಾವಲಿನ ಕಣ್ಣು ತಪ್ಪಿಸಿ ಚೈನಾ ಕಳ್ಳತನದಿಂದ ಎಳೆದುಕೊಳ್ಳುತ್ತಿದೆ. ಹಾಗೆಯೇ ಭಾರತದಿಂದ ತ್ರಿವಿಷ್ಟಪದ ಮೂಲಕ ಹಾಗೂ ಪಾಕಿಸ್ತಾನದ ಮೂಲಕ ಆಹಾರ ಪದಾರ್ಥಗಳು ಕಳ್ಳತನದಲ್ಲಿ ಚೈನಾಕ್ಕೆ ಹೋಗುತ್ತಿದ್ದು ಇದಕ್ಕಾಗಿ ಇಲ್ಲಿಯ ಕಮ್ಯೂನಿಸ್ಟರು ಸಹಾಯ ಮಾಡುತ್ತಿದ್ದಾರೆನ್ನುವದು ಪತ್ರಿಕೆಗಳಲ್ಲಿ ಆದಾಗಲೇ ಪ್ರಕಟವಾಗಿರುವ ಸುದ್ದಿಗಳಿವೆ.

ಭಾರತದ ಮೇಲೆ ಚೈನಾ ಆಕ್ರಮಣ ನಡೆಸಿದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಕಮ್ಯೂನಿಸ್ಟ್ ಧುರೀಣ ಶ್ರೀ ರಾಮ [illegible] ತಾಡುತ್ತ ಆಕ್ರಮಣವೇ ನಡೆದಿಲ್ಲ, ಅಲ್ಲಿ ನಡೆದಿರುವದು ಕೇವಲ ಗಡಿ ವಿವಾದವೆಂದಿದ್ದಾರೆ. ಆಕ್ರಮಣ ನಡೆದಿಲ್ಲವೆನ್ನುವದಕ್ಕೆ ಅವರಿತ್ತ ಕಾರಣವೆಂದರೆ, ಚೈನಾವು ಆ ಪ್ರದೇಶಗಳನ್ನೂ ತನ್ನದೆಂದು ಹೇಳಿಕೊಳ್ಳುತ್ತಿದೆಯಂತೆ, ಅಂದರೆ, ಇವರಿಂದ ಕಮ್ಯೂನಿಸ್ಟರಿಗೆ ನಿಜವಾಗಿ ಚೈನಾದತ್ತ ಒಲವಿದೆನ್ನುವದರಲ್ಲಿ ಸಂದೇಹವಿಲ್ಲ. ಹಾಗಿರುವಾಗ ಅವರು ಆಹಾರ ಪದಾರ್ಥಗಳನ್ನು ಚೈನಾಕ್ಕೆ ಕಳುಹಿಸಲು ಏರ್ಪಾಡು ಮಾಡಿದ್ದಾರೆನ್ನುವದರಲ್ಲಿ ಸುಳ್ಳೆನಂತ ಎಲ್ಲಿದೆ?

ಈ ರೀತಿ ಇಲ್ಲಿಂದ ಆಹಾರ ಧಾನ್ಯಾದಿಗಳನ್ನು ಕಳುಹಿಸಿದರೂ ಚೈನಾ ಪ್ರಜೆಗಳಿಗೆ ಅದು ಸಿಗುತ್ತಿದೆಯೇ?--ಇದು ಮುಖ್ಯ ಪ್ರಶ್ನೆ ಇದೆ ಅವರಿಗದು ಸಿಗುತ್ತಿರುವುದಿಲ್ಲ. ಅವರ ಹೊಟ್ಟೆಯ ಮೇಲೆ ಬರೆ ಎಳೆದೂ, ಆಹಾರ ಧಾನ್ಯಗಳನ್ನು ಫ್ರಾನ್ಸಿಗೆ ಮಾರಿ ವಿನಾಶಕಾರೀ ಆಯುಧಗಳನ್ನು ಅವರು ಸಿದ್ಧಪಡಿಸಿಕೊಳ್ಳಬೇಕು! ಅವರಿಗೆ ಇಲ್ಲಿರುವ ದೇಶದ್ರೋಹಿ ಕಮ್ಯೂನಿಸ್ಟರು ಸಹಾಯ ಮಾಡುತ್ತಿರಬೇಕು! ಅಲ್ಲಿಯ ಜನತೆ ಮಾತ್ರ ಮೂಕ ನಿರೀಕ್ಷಕರಾಗಿ ಬಿಟ್ಟಿದ್ದಾರೆ. ಈ ದೈತ್ಯ ಸರಕಾರ ಎಂದು ಕೊನೆಗೊಂಡೀತೆಂದು ಅವರು ಎದುರು ನೋಡುತ್ತಿದ್ದಾರೆ. ನಾವು ಬೆಳೆಸಿದ್ದು ನಮಗೆ—ನಮ್ಮ ರಾಷ್ಟ್ರದವರಿಗೆ—ಸಿಗದೆ ಮಾನವ ನಾಶಕ ಅಸ್ತ್ರಗಳಿಗಾಗಿ ವಿನಿಯೋಗವಾಗುವದನ್ನು ಮಾನವನ್ಯಾರಾದರೂ ಸಹಿಸಿಯಾರೆ ಆದರೆ ಅವರೇನು ಮಾಡುವರು? ಕತ್ತಿನಲ್ಲಿ ಕತ್ತಿ ಇದೆ, ತಲೆಯ ಮೇಲೆ ಸುತ್ತಿಗೆ ಇದೆ.

ಒಂದು ವಿವೇಚನೆ

ದೇಶೋದ್ಧಾರಕನ ಮನೆ

ಬರೆದವರು: ಕೆ. ಜಿ. ಶೆಟ್ಟಿ, ಕಡಂದಲೆ,

ಆತನಿಗೆ ಸಾರ್ವಜನಿಕ ಸೇವೆ ಮಾಡಬೇಕೆಂಬ ಮನಸ್ಸಾಯಿತು. ತಾನು ಸ್ವದೇಶಾಭಿಮಾನಿ ಎಂದು ತೋರಿಸಿಕೊಳ್ಳಲು ಕೂಡಲೇ ತನ್ನ ಮಿಲ್ ಬಟ್ಟೆಗಳನ್ನೆಲ್ಲ ತೆಗೆದಿಟ್ಟು ಖಾದಿಯನ್ನು ಧರಿಸಲು ಪ್ರಾರಂಭಿಸಿದ. ತ್ಯಾಗದ, ಸೇವೆಯ ಸಂಕೇತವಾಗಿ ಗಾಂಧೀ ಟೊಪ್ಪಿಯನ್ನೂ ಇಟ್ಟುಕೊಂಡ.

ಅದೊಂದು ದಿನ ಮೂರು ಮಾರ್ಗ ಕೂಡುವಲ್ಲಿ ನಿಂತು "ಮಹಾತ್ಮಾ ಗಾಂಧೀಕಿ ಜೈ" ಎಂದು ಕೂಗಿದ. ಸರಿ, ಪೋಲೀಸರು ಕೈದು ಮಾಡಿ ಜೈಲಿಗೆ ಕೊಂಡು ಹೋದರು. ಜೈಲಿಂದ ಹೊರಗೆ ಬಂದ, ದೊಡ್ಡ ಗಾಂಧೀ ಭಕ್ತನೆನ್ನಿಸಿಕೊಂಡ. ನಾಲ್ಕು ಜನರ ಬಾಯಿಂದ ದೇಶೋದ್ಧಾರಕನೆನ್ನಿಸಿಕೊಳ್ಳಲು ಜೈಲಿಗೆ ಹೋಗಿ ಬಂದುದೇ ಸಾಕಾಯ್ತು. ಜನತಾ ಮುಂದಾಳುವೆನ್ನಿಸಿಕೊಳ್ಳಲು ಇದೊಂದೇ ಬಲವಾದ ಸರ್ಟಿಫಿಕೇಟು ಸಾಕಾಗುತ್ತದೆ!

ದೇಶ ಸೇವೆ ಮಾಡಬೇಕೆಂದು ಹೊರಟ ಈತ ಹುಟ್ಟಿದ ಮತ್ತು ಬೆಳೆದ ತನ್ನ ಹಳ್ಳಿಯ ಮೂಲೆಯಲ್ಲಿದ್ದ ಸ್ವಂತ ಮನೆಯನ್ನು ಬಿಟ್ಟ. ಆವನ ಭಾಷೆಯಲ್ಲೇ ಹೇಳುವುದಿದ್ದರೆ ಗೃಹ ತ್ಯಾಗಮಾಡಿದ.

ಊರಲ್ಲಿ- ನೆರೆಯಲ್ಲಿ ಜನರನ್ನು ಸಂಘಟಿಸಿ ಸಾರ್ವಜನಿಕ ಕೆಲಸದಲ್ಲಿ ದುಡಿಯ ತೊಡಗಿದ. ಈತನ ಕಾರ್ಯಕ್ಷೇತ್ರ ದಿನದಿಂದ ದಿನಕ್ಕೆ ದೊಡ್ಡದಾಗುತ್ತಾ ಬಂತು. ಹಳ್ಳಿಯನ್ನು ಬಿಟ್ಟ ಈತ ಪಟ್ಟಣ ಸೇರಿದ ಹುಟ್ಟಿದ ಮನೆಯನ್ನು ತ್ಯಾಗ ಮಾಡಿದ, ಪೇಟೆಯ ಮಧ್ಯದಲ್ಲಿ ಗಾಜಿನ ಮನೆಯನ್ನು ಬಾಡಿಗೆಗೆ ಪಡಕೊಂಡು ವಾಸಮಾಡಿದ.

"ಬಡತನ ನಿರ್ಮೂಲನವಾಗಬೇಕು. ಜಾತೀಯತೆ ದೂರವಾಗಬೇಕು. ಮನೆ ಇಲ್ಲದವರಿಗೆ ಮನೆ. ಕಾರ್ಮಿಕರಿಗೆ ಜೀವನಕ್ಕೆ ಬೇಕಾದಷ್ಟು ವೇತನ. ರೈತರಿಗೆ ನ್ಯಾಯಗೇಣಿ. ನಿರಾಶ್ರಿತರಿಗೆ ಆಶ್ರಯ...' ಎಲ್ಲವೂ ಆಗಬೇಕೆಂದ, ಹೋದಲ್ಲಿ ಬಂದಲ್ಲಿ ಭಾಷಣ ಹೊಡೆದ.

ಸರಿ. ಈತ ಈಗ ಜನಪ್ರೀತ ಮುಂದಾಳುವೆನ್ನಿಸಿದ. ಹೋದಲ್ಲಿ ಬಂದಲ್ಲಿ ಈತನಿಗೆ ಭಾರೀ ಸ್ಥಾನ-ಮಾನ ದೊರೆಯಿತು.

ಕಲ್ಲಿಗೂ ಕೈ ಮುಗಿಯುವ ಜನ ಇಂಥ ಜೀವಂತ ವ್ಯಕ್ತಿಗಳನ್ನು ಪೂಜಿಸುವುದರಲ್ಲಿ ವಿಶೇಷವೇನು?

ಸಮಾಜದಲ್ಲಿ—ಊರ ಜನರಿಂದ ಸಾಕಷ್ಟು ಮಾನ ಮರ್ಯಾದೆ ಸಿಗುತ್ತಾ ಬಂದಂತೆ ಈತನಿಗೆ ತನ್ನ ಹುಟ್ಟಿದ ಮನೆಯ ನೆನಪೂ ಮರೆತು ಹೋಯಿತು. ತಾನು ಬಾಡಿಗೆಗೆ ಪಡೆದ ಗಾಜಿನ ಮನೆಯನ್ನೇ ತಿರುಗಿ ರಿಪೇರಿ ಮಾಡಿಸಿ ಬಣ್ಣ ಬಳಿದ. ಕಾರು ಬಚ್ಚಲು ಮನೆಗೇ ಬರುವಂತಾಯ್ತು.

○ ○ ○

ಸರಿ; ಅಂದು ಮಳೆಗಾಲ. ಮೂರು ದಿನವೂ ರಾತ್ರಿಹಗಲು ಎಡೆಬಿಡದೆ ಮಳೆ ಧಾರಾಕಾರವಾಗಿ ಸುರಿಯುತ್ತಲೇ ಇತ್ತು. ನದಿಗಳಲ್ಲೆಲ್ಲಾ ನೆರೆನೀರು ತುಂಬ ಹರಿಯಿತು. ದೊಡ್ಡ ನದಿಗಳ ಸುತ್ತುಮುತ್ತಲಿದ್ದ ನೂರಾರು ಗ್ರಾಮಗಳು ನೆರೆನೀರಲ್ಲಿ ಮುಳುಗಿ ಹೋದವು; ಸಾವಿರಾರು ಜನರು ಮನೆ ಮಾರು ಕಳಕೊಂಡು ನಿರಾಶ್ರಿತರಾದರು.

ಅದೇ ಸಮಯಕ್ಕೆ ಈ ದೇಶೋದ್ಧಾರನು ಹುಟ್ಟಿದ ಮನೆಯ ಮಾಡು ಸುಳಿಗಾಳಿಗೆ ಸಿಕ್ಕಿ ಬಿದ್ದುಹೋಯಿತು. ಯುರೋಪಿಯರು ಕಟ್ಟಿಸಿದ ಹಳೇಮನೆ. ಮತ್ತೆ ಸ್ವಲ್ಪ ಸಮಯ ಉಳಿದೀತು ಮನೆಯವರಿಂದ ಈತನಿಗೆ ಹತ್ತಾರು ಪತ್ರಗಳು ಬಂದವು:- ಆಕಡೆಗೆ ಸುಳಿಯಲೆ ಇಲ್ಲ ಈತ.

ಅದೇ ನೆರೆಹಾವಳಿಯ ಸಮಯ, ಸಾರ್ವಜನಿಕ ಸೇವಕ, ದೇಶೋದ್ಧಾರಕನಾದ ಈತ ಸುಮ್ಮನಿರುವುದಕ್ಕಾಗುತ್ತದೆಯೇ? ಕೂಡಲೇ ಹೊರಟು ಬಂದ. ಈ ನಿರಾಶ್ರಿತ ಜನರನ್ನು ಕಂಡು ಸಂತಾಪ ಸೂಚಿಸಿದ. ಸಹಾನುಭೂತಿಪರ ಸಹಕಾರವನ್ನು ನೀಡುವುದಾಗಿ ಹೇಳಿಯೂ ಬಿಟ್ಟ!

ಆ ನಿರಾಶ್ರಿತರನ್ನೆಲ್ಲ ಕೂಡಿಹಾಕಿ ಭಾಷಣ ಬಿಗಿದ. "ನಿಮ್ಮ ಕಷ್ಟವನ್ನು ಕಂಡು ನನ್ನ ಎದೆ ಕರಗುತ್ತದೆ:-- ಸರಕಾರದಿಂದ ನಿಮಗೆ ಸಾಧ್ಯವಿದ್ದಷ್ಟು ಸಹಾಯ, ತೆಗೆಸಿಕೊಡುತ್ತೇನೆ, ನೀವು ಯಾರೂ ಕಂಗೆಡಬಾರದು. ಭಯಪಡಬಾರದು!....ನಿಮ್ಮ ಕಷ್ಟವೇ ನನ್ನ ಕಷ್ಟ!...."

ಎಂದೆಲ್ಲಾ ಹೇಳಿ ಕಾರು ಹತ್ತಿ ಹೊರಟು ಹೋದ.

ಸಭೆ ಚದರಿತು. ಗತಿಕೆಟ್ಟ ಈ ಜನರಿಗೆಲ್ಲಾ ಒಂದಿಷ್ಟು ಉಲ್ಲಾಸ ಬಂದಂತಾಯಿತು. ಈ ಮನೆಮಾರು ಕಳಕೊಂಡ ಜನರೆಲ್ಲ ಒಟ್ಟಾಗಿ ಬರುತ್ತಿದ್ದರು. ದೂರದಲ್ಲೇ ಕಂಡಿತು ಈ ಮಾಡು ಮುರಿದು ಬಿದ್ದ ಮನೆ. ಅದನ್ನು ನೋಡಿ ಒಬ್ಬ ಕೇಳಿದ.

"ಅದು ಯಾರದಯ್ಯಾ ಮನೆ?"

"ಅದು, ಅದೇ ಈಗ ಭಾಷಣ ಮಾಡಿದ್ರಲ್ಲ--ಅವರದ್ದೇ!"

"ಅದು ಯಾವಾಗ ಮುರಿದು ಬಿದ್ದದ್ದು?"

"ಅದು ಬಿದ್ದು ವರುಷವಾಯಿತು!...." ಎಂದ ಇನ್ನೊಬ್ಬ

ಎಲ್ಲರೂ ಆ ಮುರಿದ ಮನೆಯನ್ನೇ ನೋಡುತ್ತಾ ಮೌನವಾದರು.

ಹಿಂದಿನಿಂದ ಬರುತ್ತಿದ್ದವನೊಬ್ಬ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು ಹೇಳಿದ—

"ಅವನ ಮನೆಯೊಳಗೆ ಕಾಗೆ ಹಾರು ಹಾರುತ್ತಿದೆ! ಈತ ನಮ್ಮನ್ನೇನು ಉದ್ಧಾರ ಮಾಡಿಯಾನು?...."

ಎಲ್ಲರೂ ಮುಖ ಮುಖ ನೋಡಿಕೊಂಡರು. ಆ ದೇಶೋದ್ಧಾರಕನ ಆಡಂಬರದ ಮಾತು ಕೇಳಿ ಅವರ ಮನಸ್ಸಿನಲ್ಲಿ ಮೊಳೆತಿದ್ದ ಆಸೆಯ ಕುಡಿ ಈ ಮುರಿದ ಮನೆಯನ್ನು ಕಂಡಾಗ ಮುರಿದು ಬಿತ್ತು.

— — —

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

READ & ADVERTISE IN NAVAYUGA WEEKLY

REGD. No. B. G. 176
LICENCE No. 31
Licensed to Post without Prepayment

ಕೃಷಿಕರಿಗೆ ಸಲಹೆ

ಮಾರ್ಚ್ ತಿಂಗಳ ಕರ್ತವ್ಯ

ಮಾರ್ಚ್ ತಿಂಗಳು ರೈತರಿಗೆ ತುಸು ಬಿಡುವಿನ ಕಾಲ; ಆದರೆ ಫಸಲು ಮಾರುವ ಸಡಗರ. ಫಸಲನ್ನು ಮಾರುವಾಗ ಆತುರ ಬಿದ್ದು ಹೋದಷ್ಟಕ್ಕೆ ಮಾರಬಾರದು. ಸಹಕಾರ ಸಂಘಗಳ ಸಹಾಯವನ್ನವರು ಪಡೆಯಬೇಕು. ರೈತರು ಕೊಡಕೊಳ್ಳುವ ವ್ಯವಹಾರವನ್ನು ಈ ಸಂಘಗಳ ಮೂಲಕ ನಡೆಸಿದರೆ, ಕಾಳುಗಳ ಏರಿದ ಬೆಲೆಯ ಪ್ರಯೋಜನವನ್ನು ಅವರೇ ಪಡೆಯಬಲ್ಲರು

ಬೇಸಗೆಯ ಬೆಳೆ

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮೂರನೆಯ ಬೆಳೆ ಅಂದರೆ, ಕೊಳಕೆ ಬೆಳೆಗೆ ಈಗ ನಾಟಿ ಮಾಡುವ ಕಾಲ. ಇದು ಕಡಿಮೆ ಅವಧಿಯ ಬೆಳೆಯಾದುದರಿಂದ ಕಡಿಮೆ ಬಂಡವನ್ನು ಕೊಡುತ್ತವೆ.

ನಾಟಿದ ಸ್ವಲ್ಪ ಕಾಲದ ಬಳಿಕ ತಿನ್ನುವ ಹುಳುಗಳಿಂದ ರೈತರು ರಕ್ಷಿಸಲು ಗಮನ ಕೊಡಬೇಕು. ಹುಳಗಳು ಪೈರನ್ನು ಕೊರೆದು, ಮಧ್ಯದ ಸುಳಿಯನ್ನು ನಾಶ ಮಾಡುತ್ತವೆ. ಪೈರು ಚಿಕ್ಕದಿದ್ದಾಗ ಇವು ಬುಡಕೊರೆದು ಕಾಂಡದೊಳಗಡೆ ಸೇರುತ್ತವೆ. ಹೀಗೆ ಕೊರೆಯುವುದರಿಂದ ಸುಳಿಯು ಮುರುಟಿ ಸಾಯುವುದು. ಪೆಟ್ರೋಮ್ಯಾಕ್ಸ್ ದೀಪದ ಟ್ರ್ಯಾಪನ್ನು ಏರ್ಪಡಿಸಿದರೆ ಅದರಿಂದ ಆಕರ್ಷಿತವಾದ ಚಿಟ್ಟೆಗಳು ಸೀಮೆಎಣ್ಣೆ ಬೆರೆತ ನೀರಿರುವ ಬಾಣಲೆಯಲ್ಲಿ ಬಿದ್ದು ಸಾಯುವುವು. ಸುಳಿ ಸತ್ತ ಪೈರು ಕಂಡರೆ ಅಂತಹ ಸಸ್ಯಗಳನ್ನು ಬೇರು ಸಹಿತ ಕಿತ್ತುಹಾಕಿ ಫೋಲಿಡಾಲ್ ದ್ರಾವಕವನ್ನು ಸೇಕಡಾ ೦.೦೫ರಂತೆ ಮಾಡಿ ಸಿಂಪಡಿಸಬೇಕು.

ಕಬ್ಬು

ಈ ತಿಂಗಳಲ್ಲಿ ಆಲೆಮನೆಯ ಕೆಲಸಕ್ಕೆ ಚುರುಕು ಹೆಚ್ಚು. ಫೆಬ್ರವರಿಯಲ್ಲಿ ಹೊಸ ಕಬ್ಬನ್ನು ನಾಟಿರದಿದ್ದರೆ, ತಡಮಾಡದೆ ಈ ತಿಂಗಳಲ್ಲಿ ನಾಟಿ ಮುಗಿಸಬೇಕು. ಬಿತ್ತನೆಗೆ ೮–೧೦ ತಿಂಗಳು ಮಾತ್ರ ಆಗಿರುವ ಹೊರವಾದ ಎಳೆಯ ಕಬ್ಬನ್ನು ಆರಿಸಿ ಕತ್ತರಿಸಿಕೊಳ್ಳಬೇಕು ಒಂದು ತುಂಡಿಗೆ ಮೂರು ಕಣ್ಣಿರಬೇಕು. ೧೨ ತಿಂಗಳುಗಳಿಗೆ ಮೀರಿದ ಅಥವಾ ಸೊನಂಗಿ ಬಿಟ್ಟ ಕಬ್ಬಿನಿಂದ ಒಳ್ಳೆಯ ಬಿತ್ತನೆಯಾಗುವುದಿಲ್ಲ. ಆ ತುಂಡುಗಳನ್ನು ಕತ್ತರಿಸಿಕೊಳ್ಳುವಾಗ ಹುಳ ಹೊಡೆದ ಅಥವಾ ಕೆಂಪು ರೋಗ ಹತ್ತಿದ ಕಬ್ಬುಗಳನ್ನು ಬಿಟ್ಟು ಬಿಡಬೇಕು. ತುಂಡುಗಳನ್ನು ೪೮ ಗಂಟೆ ಕಾಲ ನೀರಿನಲ್ಲಿ ನೆನೆಹಾಕಿ ಒಂದು ನೀರುಗಾಲುವೆಯಲ್ಲಿಟ್ಟು ಎರಡೂ ಕಡೆ ಮಣ್ಣು ಕಟ್ಟಿ ನೀರು ನಿಲ್ಲಿಸಿದರೆ ಒಳ್ಳೆಯದು ಬಿತ್ತನೆಯಲ್ಲಿ ಸಕ್ಕರೆಯಂಶ ಕಡಿಮೆಯಾಗಬೇಕು. ಸಾಧಾರಣ ಸೂಪರ್ ಫಾಸ್ಫೇಟು ಗೊಬ್ಬರ ಒಂದು ಎಕ್ರೆಗೆ ೧೦೦ ಕಿಲೋಗ್ರಾಮು ಅಮೋನಿಯಂಸಲ್ಫೇಟು ಹಾಕಿ ಹಗುರವಾಗಿ ಮಣ್ಣಿನಲ್ಲಿ ಬೆರಸಬೇಕು. ಕಣ್ಣುಗಳು ತಳಕ್ಕೆ ಸಿಕ್ಕಿಕೊಳ್ಳದ ಹಾಗೆ ತುಂಡುಗಳ ಎರಡೂ ಕಡೆ ಬರುವಂತೆ ಇಡಬೇಕು.

ಹಸುರು ಗೊಬ್ಬರ

ಮಾರ್ಚ್ ತಿಂಗಳಲ್ಲಿ ಹುರುಳಿ,— ಅಲಸಂಡೆ, ಅಪ್ಸೆಣಬು ಮುಂತಾದುವನ್ನು ಬೆಳೆದು ಭೂಮಿಗೆ ಸೇರಿಸಿ ಮುಖ್ಯ ಬೆಳೆಗೆ ಉತ್ತಮ ಹಸುರುಗೊಬ್ಬರವನ್ನಾಗಿಸುವುದು ಸಾಮಾನ್ಯ ವಾಡಿಕೆ. ಈ ಹಸುರು ಗೊಬ್ಬರಕ್ಕೆ ಗ್ಲಿರಿಸೀಡಿಯಾ ಗಿಡ ಬಹಳ ಯುಕ್ತವಾದದು. ಗ್ಲಿರಿಸೀಡಿಯಾ ಹುರುಪಾಗಿ ಬೆಳೆದು ಮುಂದೆ ಸೌದೆಗೂ ಉಪಯೋಗವಾಗುತ್ತದೆ. ಮುಂಗಾರು ಮಳೆ ಸಮಯದಲ್ಲಿ ತುಂಡುಗಳನ್ನು ಇಲ್ಲವೆ ಸಸಿಗಳನ್ನು ನಟ್ಟರೆ ಮಳೆಗಾಲ ಮುಗಿಯುವುದರಲ್ಲಿ ಗಿಡವಾಗಿ ಮುಂದಿನ ಬೆಳವಣಿಗೆಗೆ ಅನುಕೂಲ. ಭತ್ತದ ಗದ್ದೆಗೆ ಸೊಪ್ಪನ್ನೊದಗಿಸಲು ಇದು ಬಹಳ ಸಹಕಾರಿ. ಗೊಬ್ಬರ ಮತ್ತು ಸೌದೆಗಳೆರಡಕ್ಕೂ ಉಪಯುಕ್ತವಾದ ಗ್ಲಿರಿಸೀಡಿಯಾ ಗಿಡವನ್ನು ಬದುವಿನ ಮೇಲೆ ಅಥವಾ ತೋಟದ ಅಂಚುಗಳಲ್ಲಿ ಬೆಳೆಸಬಹುದು,

ತರಕಾರಿ ತೋಟ

ತರಕಾರಿ ತೋಟಗಳಿಗೆ ಹೆಚ್ಚು ನೀರನ್ನೊದಗಿಸುವುದು ಸಾಧ್ಯವಾಗದೆ ಹೋದರೆ, ಸೊಪ್ಪುಗಳು, ಪಡುವಲ, ಹಾಗಲ, ಬೂದುಗುಂಬಳಗಳನ್ನು ಬಿತ್ತಬಹುದ. ಇವಕ್ಕೆ ಇತರ ತರಕಾರಿಗಳಂತೆ ಅಧಿಕ ನೀರಿನ ಅವಶ್ಯಕತೆಯಿರುವುದಿಲ್ಲ.

ಮುನ್ನೆಚ್ಚರಿಕೆ

ಮುಂಗಾರಿನಲ್ಲಿ ಬಿತ್ತನೆ ಮಾಡುವವರು ಈಗಲೇ ಒಂದು ಸಾರಿ ಗದ್ದೆಯನ್ನು ಉಳಬೇಕು ಮಣ್ಣು ಗಟ್ಟಿಯಾಗಿದ್ದಲ್ಲಿ ಭಾರವಾದ ಕುಂಟೆಯನ್ನುಪಯೋಗಿಸಬಹುದು ಇದರಿಂದ ಮುಂದೆ ಮಳೆಬಂದೊಡನೆಯೇ ಉಳುವುದು ಸುಲಭವಾಗುತ್ತದೆ.

ಕಾರ್ತಿ ಬೆಳೆಗಾಗಿ ಸುಧಾರಿತ ತಳಿಯ ಬೀಜಗಳನ್ನು ಈಗಲೇ ವ್ಯವಸಾಯ ಇಲಾಖೆಯವರಿಂದ ತೆಗೆದಿಟ್ಟು ಕೊಳ್ಳಿರಿ. ಮುಂಚಿತವಾಗಿ ಶೇಖರಿಸಿಡದಿದ್ದರೆ ಕೊನೆಯ ಗಳಿಗೆಯಲ್ಲಿ ಕಷ್ಟ ಪಡ ಬೇಕಾದೀತು. ಹಾಗೆಯೇ ನಿಮಗೆ ಅಗತ್ಯವಾದ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ವಸ್ತುವೆಲ್ಲವನ್ನೂ ಈಗಿಂದೀಗಲೇ ಸಿದ್ಧಮಾಡಿಟ್ಟುಕೊಳ್ಳುವುದು ಅಗತ್ಯ.

ನಮ್ಮ—ನಮ್ಮವರು

(೧ನೇ ಪುಟದಿಂದ)

ಉತ್ತೀರ್ಣರಾದವರಿಗೆ ನೀಡುವ ಸುವರ್ಣ ಪದಕವನ್ನು ಐದು ವರ್ಷಗಳಿಂದ ಯಾರಿಗೂ ನೀಡಲಿಲ್ಲ. ಆದರೆ, ಪ್ರಥಮ ಸ್ಥಾನ ಗಳಿಸಿದ ಶ್ರೀ ಕೆ. ರಾಧಾಕೃಷ್ಣ ಶೆಟ್ಟಿ ಇವರಿಗೆ ಈ ಪದಕವನ್ನು ನೀಡಿ ಅವರನ್ನು ಸನ್ಮಾನಿಸಿತು. ಆರಂಭದಿಂದಲೂ ಪರಿಶ್ರಮಿ ವಿದ್ಯಾರ್ಥಿಯಾಗಿದ್ದ ಡಾ| ಶೆಟ್ಟರು ಎಂ.ಬಿ.ಬಿ.ಎಸ್. ಪದವಿಗಳಿಸಿದ ಬಳಿಕ ಎಂ. ಡಿ.ಯನ್ನೂ ಅಭ್ಯಸಿಸಿ ಯಶಸ್ವಿಯಾಗಿ ಉತ್ತೀರ್ಣರಾದರು. ಯಾವುದೇ ಕೆಲಸದಲ್ಲಿ ಅಪರಿಮಿತ ಆಸ್ಥೆಯಿಂದ ದುಡಿಯುವುದು ಇವರ ಅಭ್ಯಾಸಗುಣ, ರಕ್ತಗುಣ.

ಡಾ| ರಾಧಾಕೃಷ್ಣ ಶೆಟ್ಟಿಯವರು ನಮ್ಮ ಜಿಲ್ಲೆಯ ಸುಪ್ರಸಿದ್ಧ ಮನೆತನಕ್ಕೆಸೇರಿದವರು ಇವರ ತೀರ್ಥರೂಪರಾದ ಶ್ರೀ ದಿ| ಕಾಪು ಮುದ್ದಣ ಶೆಟ್ಟಿಯವರು ತಮ್ಮ ಕಿನಾರಾ ನರ್ಸರಿಯ ಮೂಲಕ ಕೃಷಿ ಮತ್ತು ತೋಟಗಾರಿಕೆಯ ಕ್ಷೇತ್ರದಲ್ಲಿ ಅವಿರತವಾಗಿ ಶ್ರಮಿಸಿದವರು; ಮತ್ತು ಅದರಲ್ಲಿ ಯಶಸ್ಸನ್ನೂ ಗಳಿಸಿದವರು. ಇಂದಿಗೂ ಕಿನಾರಾ ನರ್ಸರಿಯು ನಮ್ಮ ಜಿಲ್ಲೆಯ ನರ್ಸರಿಗಳಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿ ಕೊಂಡಿದೆ.

ಡಾ| ಶೆಟ್ಟರು ಇನ್ನೂ ಎಳೆ ಹರೆಯದವರು. ಇತ್ತೀಚೆಗೆ ಮಂಗಳೂರಿನಲ್ಲಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಜನರಲ್ ಮೆಡಿಸಿನ್ ವಿಭಾಗದ ಪ್ರೊಫೆಸರಾಗಿ ನಿಯುಕ್ತರಾಗಿದ್ದಾರೆ. ಸಂಪೂರ್ಣ ಅಭ್ಯಾಸದ ಪರಿಣಾಮವಾಗಿ ತಾನು ಗಳಿಸಿದ ಉನ್ನತ ಜ್ಞಾನದ ಲಾಭವನ್ನು ತನ್ನ ವಿದ್ಯಾರ್ಥಿಗಳಿಗೆ ಒದಗಿಸಿ ಅವರನ್ನೂ ತನ್ನಂತೆಯೇ ಲೋಕಕ್ಕೆ ಉಪಕೃತರನ್ನಾಗಿ ಮಾಡುವ ಚೈತನ್ಯ ಇವರಲ್ಲಿದೆ. ಡಾ| ಶೆಟ್ಟಿ ವೈದ್ಯಕೀಯ ಅಧ್ಯಾಪಕರಲ್ಲಿ ಅಗ್ರಗಣ್ಯರೆಂದು ಹೆಸರು ಪಡೆಯುವುದರಲ್ಲಿ ಸಂದೇಹವಿಲ್ಲ; ಇದುವರೆಗಿನ ಅವರ ಯಶಸ್ಸು ಇದನ್ನು ಸಮರ್ಥಿಸುತ್ತದೆ

ಇವರು ಉಚ್ಚ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳುವ ಸಿದ್ಧತೆಯಲ್ಲಿದ್ದಾರೆಂದು ತಿಳಿದು ಬರುತ್ತದೆ.

ಮತ್ತೊಂದು ಆಕರ್ಷಕ
ಉಳಿತಾಯ ಯೋಜನೆ

ಜಯೆಂಟ್ ಕ್ಯಾಷ್ ಸರ್ಟಿಫಿಕೇಟ್ಸ್

ವಿಶಿಷ್ಟ ಅನುಕೂಲತೆಗಳು –

- ರೂ. 100/- ಮತ್ತು ರೂ. 1,000/- ದ ಮೊತ್ತಗಳಲ್ಲಿ ದೊರಕುತ್ತವೆ.
- ಆರು ತಿಂಗಳ ನಂತರ ಏಳು ದಿವಸಗಳ ನೋಟೀಸಿನ ಮೂಲಕ ಪರಿಷ್ಕರಿಸಿದ ಬಡ್ಡಿ ಸಹಿತ ವಟಾಯಿಸಬಹುದು.
- ನಿಮ್ಮ ವಿನಿಯೋಗವು ಆರು ತಿಂಗಳ ನಂತರ ಬೆಳೆಯ ತೊಡಗುತ್ತದೆ. ಹಾಗೂ ನೀವಿಂದು ವಿನಿಯೋಗಿಸಿದ ರೂ. 100/- 60 ತಿಂಗಳುಗಳಲ್ಲಿ ರೂ. 126-10 ಆಗಿ ಬೆಳೆಯುತ್ತದೆ.

ವಿವರಗಳಿಗೆ ದಯವಿಟ್ಟು ನಿಮ್ಮ ಸಮೀಪದ ಶಾಖೆಯ ಸಂಪರ್ಕ ಬೆಳೆಸಿರಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

……………ಜಗತ್ತಿನಾದ್ಯಂತ ಬ್ಯಾಂಕಿಂಗಿಗಾಗಿ

ಬೆಳ್ತಂಗಡಿ ಡಿ. ಮು. ಕೋರ್ಟಿನಲ್ಲಿ

O. S. 82/1964

1. ಪುಷ್ಪಾವತಿ,
2. ಶಾಂಭವತಿ,
3. ವಿಮಲ,
4. ಕೃಷ್ಣಪ್ಪ

} ಪ್ರಾಯಸ್ಥರು ಕ್ಷೇಮಚಿಂತಕಳು ತಾಯಿ 1ನೇ ವಾದಿಳು— ವಾದಿರು.

ಮತ್ತು

ಚಿಕ್ಕಮ್ಮ ಕೂಡಾ 2ಜನರು—

ಪ್ರತಿವಾದಿರು

2. ರಾಮಯ್ಯ ಪೂಜಾರಿ, ತಿಮ್ಮಪ್ಪ ಹೆಂಗ್ಸಿನ ಮಗ. ಬೆಳ್ತಂಗಡಿ ತಾಲ್ಲೂಕು ಮುಡುಕೋಡಿ ಗ್ರಾಮದ ಹಲೆಕ್ಕ ಎಂಬಲ್ಲಿರುವವ—

2ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವುದೇನೆಂದ್ರೆ—

ಕುಟುಂಬಾರ್ಥದ ಆಸ್ತಿಗಳ ಉತ್ಪತ್ತಿಯಿಂದ ಗತ 3ವರುಷಗಳ ಅಶನಾರ್ಥದ ಬಗ್ಗೆ ರೂ 383.00 ಕ್ಕೆ ವಾದಿರು ನಿಮ್ಮ ಮೇಲೆ ಕೊಡಾ ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 10—3—64ಕ್ಕೆ ನಿಮಗೆ ಆಕ್ರೆ ನೋಟೀಸಿನ ಬಗ್ಗೆ ಇಟ್ಟದೆ ಆಕ್ಷೇಪ ಇದ್ರೆ ಸದ್ರಿ ಕೋರ್ಟಿನ ಮುಂದೆ ಬೆಳಿಗ್ಗೆ 10 ಘಂಟೆಗೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ತಾರೀಖು ತೀರ್ಮಾನವಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ

K S Kamath
Advocate for plaintiffs
ಕಾರ್ಕಳ
26—2—64

Edited, Printed & Published by K. H.Shetty. at the Navayuga Press, Udipi, S. India.

ನವಯುಗ

VOL. 43 No. 28 ಸಂಪುಟ ೪೩ ಸಂಚಿಕೆ ೨೮

NAVAYUGA—Nationalist Weekly ‡‡ ಉಡುಪಿ 12-3-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಬಿ. ಡಿ. ಜತ್ತಿ

ಕರ್ನಾಟಕದ ಮುಖ್ಯ ಮಂತ್ರಿಯಾಗಿದ್ದು ಕಾಂಗ್ರೆಸ್ ಹೈಕಮಾಂಡಿನ ಆಶೀರ್ವಾದ ಬಲದಿಂದಲೇ ಎಲ್ಲ ವಿಘ್ನ ವಿಡ್ಡೂರಗಳಿಂದಲೂ ಪಾರಾಗಿ ಮರಳಿ, ಅರ್ಥ ಶಾಖೆಯಂತಹ ಮುಖ್ಯ ಇಲಾಖೆಯನ್ನೇ ತನ್ನ ಕೈಗಳಿಗೆ ತೆಗೆದುಕೊಂಡ ಚಾಣಾಕ್ಷರು ಬಿ. ಡಿ. ಜತ್ತಿಯವರು. ಭಾರತ ಮತ್ತಿತರ ರಾಜ್ಯ ಸರಕಾರಗಳಂತೆಯೇ ಕಳೆದ ವರ್ಷ ಜನತೆಯ ಮೇಲೆ ಕರಭಾರವನ್ನು ಹೇರಿದ್ದ ಜತ್ತಿಯವರು, ಇದು ಇವರ ತಪ್ಪೆನ್ನುವುದು ಸಾಧ್ಯವಿಲ್ಲ, ೧೯೬೪-೬೫ರ ಮುಂಗಡ ಪತ್ರದಲ್ಲಿ ಹೊಸ ತೆರಿಗೆಗಳಾವುವನ್ನೂ ಹೇರಲಿಲ್ಲ. ಹಿಂದಿನ ವರ್ಷದಲ್ಲಿ ದೇಶಕ್ಕೆ ದೇಶವೇ ಆಕ್ರಮಣವನ್ನೆದುರಿಸುವ ಸಕಲ ಸಿದ್ಧತೆಗಳನ್ನು ಮಾಡಬೇಕಾಗಿತ್ತೆಂಬುದನ್ನು ಯಾರೂ ಮರೆಯಬಾರದು. ಈ ವರ್ಷದಲ್ಲಿ ನಮ್ಮ ಕೇಂದ್ರೀಕೃತ ಶಕ್ತಿಯನ್ನು ಉಳಿಸಿಕೊಳ್ಳುವುದು ಮಾತ್ರ ಅಗತ್ಯವಿದೆ.

ಮುಂಗಡ ಪತ್ರ ಮಂಡನೆಗೆ ಕೆಲವು ವಾರಗಳಿಗೆ ಮೊದಲು ಇನ್ನು ಕೆಲವು ವರ್ಷಗಳ ನಂತರ ಸರಕಾರಿ ನೌಕರರಿಗೆ ವೇತನ ನೀಡುವುದಕ್ಕೆ ಬೊಕ್ಕಸದಲ್ಲಿ ಹಣ ವುಳಿಯುವುದಿಲ್ಲವೆಂಬ ಉದ್ಗಾರ ಹೊರಡಿಸಿ ದಂಗು ಬಡಿಸಿದ್ದರು, ಜತ್ತಿ. ಆದರೆ, ಮುಂಗಡ ಪತ್ರದಲ್ಲಿ ನಾನ್‌ಗಜೆಟೆಡ್ ಸರಕಾರಿ ನೌಕರರಿಗೆ ತುಟ್ಟಿ ಭತ್ತೆಯಲ್ಲಿ ಐದು ರೂಪಾಯಿಗಳ ಹೆಚ್ಚಳವನ್ನು ಘೋಷಿಸಿದ್ದಾರೆ. ೭೦ ವರ್ಷ ಮೀರಿದ ಅನಾಥ ವೃದ್ಧರಿಗೆ ಮಾಸಿಕ ರೂ. ೧೫ರ ವೃದ್ಧಾಪ್ಯ ವೇತನವನ್ನು ನೀಡುವ ನಿರ್ಧಾರ ಮಾಡಿದ್ದಾರೆ, ಈ ಎರಡು ಕೊಡುಗೆಗಳು ಸಮಯೋಚಿತವಾಗಿಯೇ ಇವೆಯೆಂದು ಯಾರೊಬ್ಬನಾದರೂ ಹೇಳಬಹುದು. ಈ ಹೆಚ್ಚಿನ ವೆಚ್ಚವು ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಮುಟ್ಟುವುದು. ಇದಕ್ಕೆ ಬೇಕಾದ ಸಂಪನ್ಮೂಲಗಳನು. ಮುಂಗಡ ಪತ್ರದಲಿ ಕಂಡುಕೊಂಡಿಲ್ಲವೆಂಬುದನ್ನೂ ದಾನಪ್ಪ ಜತ್ತಿಯವರು ಉಲ್ಲೇಖಿಸಿದ್ದಾರೆ. ರಾಜ್ಯದ ಯೋಜನೆಗಳಿಗೆ ಕೇಂದ್ರ ಸರಕಾರದ ಉದಾರ ಸಹಾಯವನ್ನು ನಿರೀಕ್ಷಿಸಿಕೊಂಡಿರುವ ಜತ್ತಿಯವರು ಅದಕ್ಕೂ ಮೂಲಗಳನ್ನು ಕಂಡುಕೊಳ್ಳಲು ಹಿಂಜರಿಯಲಾರರು.

ರಾಜ್ಯದಲ್ಲಿ ವಿವಿಧ ಬೃಹದ್ಯೋಜನೆಗಳಲ್ಲಿ ತೊಡಗಿರುವ ಹಣವಿನ್ನೂ ಫಲವನ್ನು ನೀಡಲು ತೊಡಗಿರುವುದಿಲ್ಲವಾದುದರಿಂದ ಆರ್ಥಿಕ ಪರಿಸ್ಥಿತಿಯು ವಿಷಮವಾಗಿರುವುದು ನ್ಯಾಯೋಚಿತ. ಕೇವಲ ರಾಜ್ಯದ ಮಾತ್ರವಲ್ಲ, ಕೇಂದ್ರದ ಸಾಂಪತ್ತಿಕ ಸ್ಥಿತಿಯು ಆರೋಗ್ಯದಿಂದಿರ ಬೇಕಾದರೆ, ಯೋಜನೆಗಳಲ್ಲಿ ಅಲ್ಪಕಾಲದಲ್ಲಿಯೇ ಪ್ರತಿಫಲ ನೀಡುವ ಯೋಜನೆಗಳೂ ಅವಶ್ಯವಾಗಿವೆ. ಕೇವಲ ದೊಡ್ಡ ದೊಡ್ಡ ಯೋಜನೆಗಳನ್ನೇ ಅನುಷ್ಠಾನಕ್ಕೆ ತಂದರೆ, ಅದರಿಂದ ತಂಗೆಡಬೇಕಾಗಿ ಬರಬಹುದು. ಬಸಪ್ಪ ದಾನಪ್ಪ ಜತ್ತಿಯವರು ಇಂದು ದೊಡ್ಡ ಹೊಣೆಗಾರಿಕೆಯನ್ನು ಹೊರಬೇಕಾಗಿದೆ. ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಆರ್ಥಿಕ ಸ್ಥಿತಿಗತಿಯನ್ನು ಎತ್ತರದಲ್ಲಿಯೇ ನಿಲ್ಲಿಸುವುದು ಅಗತ್ಯವಿದೆ. ಮಿತವ್ಯಯವನ್ನೂ ತೆರಿಗೆ ವಸೂಲಿಯನ್ನೂ ತ್ವರಿತಗೊಳಿಸಿದರೆ, ಅವರೀ ಕಾರ್ಯದಲ್ಲಿ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಡಾ| ಯು. ಕುಪ್ಪಣ್ಣಾಚಾರ್

ಶಿರ್ವ ಮತ್ತದರ ಆಸುಪಾಸಿನಲ್ಲಿ ಡಾ| ಯು. ಕುಪ್ಪಣ್ಣಾಚಾರ್ಯರ ಹೆಸರು ಕೇಳದಿರುವವರು ಇಲ್ಲವೇ ಇಲ್ಲ. ೧೯೩೯ರಲ್ಲಿ ಶಿರ್ವದಲ್ಲಿ ವೈದ್ಯಕೀಯ ವೃತ್ತಿಯಲ್ಲಿ ತೊಡಗಿ ಈ ಕಾಲುಶತಮಾನದಿಂದಲೂ ಜನತೆಗೆ ಆರೋಗ್ಯದಾನ ಮಾಡುತ್ತಿರುವ ಆಚಾರ್ಯರು ಅಲ್ಲಿನ ಮನೆಮಾತಾಗಿದ್ದಾರೆ ಎಂದರೆ ಸತ್ಯದಿಂದ ದೂರವಾಗುವುದಿಲ್ಲ. ಉತ್ತಮ ವೈದ್ಯರೆಂದು ಹೆಸರುಗಳಿಸಿದ ಇವರು ಅಲ್ಲಿನ ಜನಜೀವನದಲ್ಲಿಯೂ ಹಾಸು ಹೊಕ್ಕಾಗಿದ್ದಾರೆ; ಹಲವಾರು ಸಾಮಾಜಿಕ ಮತು ಸಂಘ, ಸಂಸ್ಥೆ ಕಾರ್ಯಕ್ರಮಗಳ ಆ

ಧ್ಯಯರ್ಗಳಾಗಿ ಇವರ, ಜನತೆಗೆ ಬೇಕಾಗಿದ್ದಾರೆ. ಶಿರ್ವ ಪಂಚಾಯತ ಬೋರ್ಡಿನ ಅಧ್ಯಕ್ಷರಾಗಿ ಇವರು ತಮ್ಮ ಸಾರ್ವಜನಿಕ ಸೇವೆಗೆ ತೊಡಗಿದ್ದರು. ಇಂದವರು ಉಡುಪಿ ತಾಲೂಕು ಅಭಿವೃದ್ಧಿ ಮಂಡಳದ ಸದಸ್ಯರಾಗಿ ಶಿರ್ವ ಮಹಬಾರ ಕ್ಷೇತ್ರದಿಂದ ಆಯ್ಕೆಗೊಂಡು, ಬೋರ್ಡಿನ ಉಪಾಧ್ಯಕ್ಷರಾಗಿ ಜೊತೆಗಾರ ಸ್ಥಾನದಲ್ಲಿ ವಿರಾಜಿಸುತ್ತಿದ್ದಾರೆ. ಬೋರ್ಡಿನ ಆರೋಗ್ಯ ಸಮಿತಿಯ ಅಧ್ಯಕ್ಷರಾಗಿ ದಕ್ಷ ಸೇವೆಯನ್ನೂ ಸಲ್ಲಿಸುತ್ತಿದ್ದಾರೆ.

ದಿನದಿಂದ ದಿನಕ್ಕೆ ಬೆಳೆದು ಬರುತ್ತಿರುವ ಶಿರ್ವದಲ್ಲಿ ಸಾರ್ವಜನಿಕ ಸಂಘ ಸಂಸ್ಥೆಗಳು ಹಲವಿವೆ. ಅಲ್ಲಿ ರಿಕ್ರಿಯೇಶನ್ ಕ್ಲಬ್ ಇದೆ; ಇದರ ಉಪಾಧ್ಯಕ್ಷರು ಡಾ| ಆಚಾರ್ಯರು. ಶಿರ್ವದ ಲೋಕಲ್ ಫಂಡ್ ಆಸ್ಪತ್ರೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಮೆಡಿಕಲ್ ರಿಲೀಫ್ ಎಸೋಸಿಯೇಶನ್ನಿನ ಉಪಾಧ್ಯಕ್ಷರಾಗಿ ಡಾ| ಆಚಾರ್ಯರು ಉತ್ಸಾಹದಿಂದ ಕಾರ್ಯ ಪ್ರವೃತ್ತರಾಗಿದ್ದಾರೆ. ಆರಂಭದಿಂದಲೂ ಕಾಂಗ್ರೆಸ್ ತತ್ವಗಳಲ್ಲಿ ನಿಷ್ಠೆ ತೋರಿಸುತ್ತಿರುವ ಇವರು ಅಲ್ಲಿನ ಮಂಡಳ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿದ್ದಾರೆ. ಹೀಗೆ ಮೊದಲಿನಿಂದಲೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿಯೂ ಮುಂಚೂಣಿ ತೋರಿಸುತ್ತಿರುವ ಡಾ| ಯು. ಕುಪ್ಪಣ್ಣಾಚಾರ್ಯರು ಕುಲೀನ ವಂಶಕ್ಕೆ ಸೇರಿದವರು; ಉನ್ನತ ಮಟ್ಟದ ಕಾರ್ಯಶೀಲರು.

ಕ್ರಿಯಾಪಟುಗಳಾದ ಡಾ| ಆಚಾರ್ಯರು ತುಂಬಿದ ಉತ್ಸಾಹಿಗಳು, ಮಹಾ ಉಪಕಾರಿಗಳು. ಅವರ ಈ ಗುಣಗಳಿಂದ ಪ್ರಯೋಜನ ಪಡೆಯದವರು ತೀರ ವಿರಳ. ತನ್ನ ಕೆಲಸವನ್ನು ಕರ್ತವ್ಯ ಭಾವನೆಯಿಂದ ನಿರ್ವಹಿಸುತ್ತಿರುವ ಕೆಲವೇ ಮಂದಿಯಲ್ಲಿ ಇವರೂ ಒಬ್ಬರು. ತಮ್ಮ ಎಡೆಯಿಲ್ಲದ ಕಾರ್ಯಕ್ರಮಗಳ ನಡುವೆಯೂ ಡಾ| ಆಚಾರ್ಯರು ಗೊತ್ತಾದ ಕೆಲಸವನ್ನು ಗೊತ್ತಾದ ಹೊತ್ತಿನಲ್ಲಿಯೇ ಮಾಡುವ ಪರಿಪಾಠವಿಟ್ಟುಕೊಂಡಿದ್ದಾರೆ ಸಮಾಜದಲ್ಲಿ ಡಾಕ್ಟರರ ಸ್ಥಾನಮಾನಗಳು ಹೆಚ್ಚಿನವು. ನಿಜವಾದ ಡಾಕ್ಟರರು ತಮ್ಮ ವೃತ್ತಿಯಲ್ಲಿ ಬಹು ಬೇಗನೇ ಯಶಸ್ಸು ಪಡೆಯಬಲ್ಲರು. ರೋಗಿಗಳ ಮನಸ್ಸಿನಲ್ಲಿ ವಿಶ್ವಾಸವನ್ನು ಹುಟ್ಟಿಸುವುದೇ ಈ ವೃತ್ತಿಯ ಪ್ರಥಮ ಚಿಕಿತ್ಸೆ ಡಾ|ಆಚಾರ್ಯರಲ್ಲಿ ಜನ ವಿಶ್ವಾಸವಿಟ್ಟುದರ ಕಾರಣವೂ ಇದೇ ಡಾ| ಆಚಾರ್ಯರ ಸೇವಾ-ಸತ್ಯ ಯೋಗಗಳು ಬಹುಕಾಲ ಜನತೆಗೆ ದೊರೆಯುವಂತಾಗಲಿ.

ಶ್ರೀ ಕಾಪು ಸರ್ವೋತ್ತಮ ಶೆಟ್ಟಿ

ದೊಡ್ಡ ದೊಡ್ಡ ಪದವಿಗಳಲ್ಲಿರುವವರು ದೇಶ-ವಿದೇಶ ಸಂಚಾರ ಮಾಡಬಹುದು; ರಾಜಕಾರಣಿಗಳು ಪ್ರಪಂಚವನ್ನು ಸುತ್ತಾಡಿ ಬರಬಲ್ಲರು. ಆದರೆ, ಯಾವ ಪದವಿಯೂ ಇಲ್ಲದೆ ಯಾವ ರಾಜಕಾರಣಕ್ಕೂ ಒಳಗಾಗದೆ ಸುಪ್ರಸಿದ್ಧ ದೇಶಗಳನ್ನು ತಿರುಗಾಡಿ, ವಿಜಯ ಪತಾಕೆಯನ್ನು ಹಾರಿಸಿ ಬಂದವರೂ ಇದ್ದಾರೆ ಎಂದರೆ ಯಾರಾದರೂ ಅಚ್ಚರಿಪಡಬಹುದು. ಶ್ರೀ ಕಾಪು ಸರ್ವೋತ್ತಮ ಶೆಟ್ಟರು ಈ ಬಗೆಯ ಸಂಚಾರವನ್ನು ಮಾಡಿ ಖ್ಯಾತಿಯನ್ನಿಸಿಕೊಂಡವರು. ಇವರ ಸಂಚಾರಕ್ಕೆ ಪ್ರೇರಕ ಶಕ್ತಿಯಾದವರು ಸುಮಾರು ಹನ್ನೆರಡು ವರ್ಷಗಳಿಗೆ ಮೊದಲು ನಿಧನ

(೧೨ನೇ ಪುಟ ನೋಡಿರಿ)

ನಾರದ ಕಥೆ

ಮರೆಯದ ನಗೆ

ಶ್ರೀ ಭದ್ರಿನಾಥ್, ಉಡುಪಿ.

ತಣ್ಣನೆ ಬೀಸಿ ಬಂದ ಬೆಳಗಿನ ಗಾಳಿಯ ಮಾಧುರ್ಯವನ್ನು ಪೂರ್ಣವಾಗಿ ಅನುಭವಿಸಿದಂತೆ ಹುಲ್ಲಿನ ಸಮೂಹ ತಲೆ ತೂಗುತಿತ್ತು. ಮಳೆಗಾಲದ ಭೋರ್ಗರೆಯುವ ನೀರಿನ ಮೇಲೆ ಸಂಪೂರ್ಣ ಸ್ವಾತಂತ್ರ್ಯ ಪಡೆದು ಮಸ್ತಕವಾಗಿ ಬೆಳೆದು, ತನ್ನ ಸಂತಾನ ವೃದ್ಧಿಕಾರ್ಯದಲ್ಲಿ ಲೋಪ ತಲೆ ದೋರದಂತೆ ಪೂರೈಸಿ, ಕರ್ತವ್ಯ ಪರಾಯಣನಾಗಿ ಬಾಳುವ ಮಾನವ ಜೀವಿಗಳನ್ನು ನೋಡಿ ಕಿರುನಗೆ ಸೂಸುವಂತಿದ್ದುವು.

ಈ ಬಾರಿ ಇನ್ನೊಮ್ಮೆ ಸಿರಿ ಶ್ರೀಮಂತರ ಘಂಗದಂತೆ ಗಾಳಿ ತನ್ನ ಮಾಂದ್ಯವನ್ನು ಮರೆತು ಬಿರುಸಾಗಿ ಬೀಸಿತು. ಗಾಳಿಯ ಸುಯ್ಲ ಶಬ್ದವನ್ನು ಅಣಕಿಸುವಂತೆ ಬೆಳಗಿನ "ಕಿಂಗ್ಸವೇ" ಯೊಂದು ತನ್ನ ದಾರಿಯನ್ನು ನೇರವಾಗಿಸಿಕೊಂಡು ಮುಂದುವರೆಯಿತು. ಬೆಳಗಿನ ಕುಳಿರ್ಗಾಳಿಗೆ ಮೈಯೊಡ್ಡಿ ತಿರುಗುತಿದ್ದ ಆ ಜೀವರಾಶಿಗಳ ಮೇಲೆ "ಕಿಂಗ್ಸ್‌ವೇ" ತನ್ನ ರಾಜಮಾರ್ಗವನ್ನು ನಯವಾಗಿಯೇ ಸಾಧಿಸಿತ್ತು!– ಒಂದು ಕ್ಷಣದ ಹಿಂದೆ ನಗ ತಿದ್ದ ಜೀವರಾಶಿಗಳು ರಾಜಮಾರ್ಗದಲ್ಲಿ ಸಿಟ್ಟನ್ನಡೆ ಅಂಗವಿಕಲವಾಗಿ ಸಾಯುತ್ತಾ ಬಿದ್ದಿದ್ದುವು.

ನಿಷ್ಠ ಸೇವಕನಂತೆ ಸೂರ್ಯ ಮುಗುಳು ನಗುತ್ತಾ ಮೇಲೇರಿದ. ಹಸನಾದ ಕೆಂಪು ಕಿರಣ ಪುಂಜಗಳು ಆಡುತ್ತಾಡುತ್ತಾ ಲೋಕದ ಮೇಲೆಲ್ಲ ಪಸರಿಸಿದವು. ಪುನಃ ತಂಗಾಳಿ ಹಿತವಾಗಿ ಉಳಿದ ಳಿದುವುಗಳ ಮೇಲೆ ಬೀಸತೊಡಗಿತು. ಅರ್ಧ ಸತ್ತಿದ್ದ ಹುಲ್ಲಿನ ಕುಪ್ಪೆಯನ್ನು ಎತ್ತಿ ಅಪ್ಪಳಿಸಿತು.

"ಕರ್‌....ಕಾಕಾ ...ಕಾ....ಕಾಕಾ...."

ಅನತಿ ದೂರದಲ್ಲಿದ್ದ ಜಳೆ ಪಿಘನೆಯಂತಹ ಬೂರುಗದ ಮರದ ಮೇಲೆ ಕಾಗೆಗಳ ಸೈನ್ಯವೊಂದು ಉದುರಿ ಬೋಳಾದ ಎಲೆಗಳ ಸ್ಥಳವನ್ನು ಸರಿ ಹೊಂದಿಸುವ ಪ್ರಯತ್ನದಲ್ಲಿದ್ದಂತೆ ತೋರಿತು. ಶೀತ ತುಂಬಿದ ಕಾಲನ್ನು ಎತ್ತಿ ಕುಟ್ಟುತ್ತಾ ಎದ್ದುನಿಂತೆ, ಅಳಿದುಳಿದ ಕುತೂಹಲದಿಂದ—

ಪಂಚೆಗಂಟಿದ ಮಣ್ಣು, ಕಲ್ಲು, ಧೂಳು ಇತ್ಯಾದಿ, ಕೊಂಚ ಕೋಲಾಹಲವನ್ನು ಮಾಡಿದುವು.

ಕತ್ತೆತ್ತಿ ಬೋಳು ಮರದ ಬಡವನ್ನು ನೋಡಿದೆ. ಕೊಕ್ಕು ಅಗಲಿಸಿ ಮುಂದಿರಿಬಿದ್ದ ಒಂದು ಕಾಗೆಯ ಹೆಣ ತನ್ನನ್ನೇ ತಾನು ಮರೆತಂತೆ ಮಲಗಿತ್ತು. ಮೇಲಿದ್ದ ಕಾಗೆಗಳ ಗುಂಪು ದೊಡ್ಡ ದನಿ ತೆಗೆದು ಅಳುತಿತ್ತು. ಅವುಗಳ ಗುಂಪಿನಲ್ಲಿ ವಿಧವೆ ಮಗ ತನ್ನ ಬೋಳು ತಲೆಯ ಸಹಾನುಭೂತಿ ತೋರಿಸುವಂತೆ ಬೀಳುತಿದ್ದ ಸವಿ ಬಿಸಿಲನ್ನು ಅಲಕ್ಷಿಸಿ ನಿಂತಿತ್ತು.

ತಲೆಯೆತ್ತಿ ಕವಾಗಿ ಹುಲ್ಲಿನ ಸಮೂಹದ ಕಡೆ ತಿರುಗಿತು. ಕೊಂಪೆಯಲ್ಲಿದ್ದ ಕಣ್ಣುಗಳು ಅವುಗಳನ್ನು ದಿಟ್ಟಿಸಿದುವು. ತಲೆ ತಿರುಗಿತು. ಎರಡು ಮುಖಗಳು—ಒಂದು ನಗ ತಿದೆ; ಇನ್ನೊಂದು ಅಳುತಿದೆ ಒಂದು ಚಿಟ್ಟನೆ ಚೀರುತ್ತಿದೆ. ಇನ್ನೊಂದು ಅದಕ್ಕೆ ತಾಳ ಹಾಕುವಂತೆ ಗಹಗಹಿಸಿ ನಗುತಿದೆ. ಎರಡು ಕಣ್ಣುಗಳಲ್ಲೂ ನೀರು-ಪ್ರವಾಹವಾಗಿ. ದುಃಖ—ಆನಂದ. ಒಂದು ಮುಖದ ಎರಡು ವೃಥವಾದ ಕಣ್ಣುಗಳು ಎರಡರಲ್ಲು ನೀರಿನ ಸೆರೆಯಿದೆ—ಒಂದರಲ್ಲಿ ದುಃಖ ಕರಗಿ ಬಂದರೆ ಇನ್ನೊಂದರಲ್ಲಿ ಆನಂದ ಇಳಿದು ಬರುತ್ತಿದೆ.

ಕರ್ಕಶವಾಗಿ ಕೂಗಿ, ಎಲ್ಲರಿಂದ ಬಯ್ಸಿಕೊಂಡು, ಎಲ್ಲರ ಎಂಜಲನ್ನು ಉಂಡು ಟೀಕೆ, ನಗೆ ಹೊಡೆತಕ್ಕೆ ಕಾರಣವಾಗಿ ಅವರೆಲ್ಲಾ ಮಾಡಿದ ಹೇಸಿಕೆಯನ್ನು ನಿರ್ಮಲಗೊಳಿಸಿ, ಅವರ ಗುಂಡಿಗೆ ಆಹುತಿಯಾಗುವ ಬಡ ಜೀವಿ—ಕಪ್ಪಾದ ಕಾಗೆ. ನೊಗನಿರುದ ಮಳೆ ನೀರನ್ನು ಯಥೇಷ್ಟವಾಗಿ ಪಾನಮಾಡಿ, ಪ್ರಣಯಿಗಳ ರಸ್ನಗಂಬಳಿಯಾಗಿ ಕವಿ ವರ್ಣನೆಯಲ್ಲಿ ಮಿಂದು, ತಿಳಿಗಾಳಿಯೊಡನೆ ಬಂಗಾರದ ಹನಿಯಂತಿರುವ ಬಿಸಿಲನ್ನು ಬೆರಸಿ, ತೂಗುವ ಹುಲ್ಲಿನ ಸಮೂಹ ತನ್ನ ಸಹಜೀವಿಗಳು ಸಾಯುತ್ತಾ ಬಿದ್ದಿರಲು ಯಾವುದರ ಪರಿವೆಯಿಲ್ಲದಂತೆ ಎಳೆ ಸೂರ್ಯನ ಹಿತವಾದ ಬೆಳಕಿಗೆ ಮೈಯೊಡ್ಡಿ ಕಳಕಳಿಸಿ ನಗುತಿದ್ದವು. ಕರ್ಕಶವಾದ ಕರುಣೆಯ ಧನಿಗೆ ಕಿಪ್ರವಾಗಿ ಸಾವಿನೊಡನೆ ಸರಸವಾಡುವ ಜೀವಿಗಳ ಮುಖ ಸೌಂದರ್ಯವನ್ನು ನೋಡಲು 'ಕಿಂಗ್ಸ್‌ವೇ'ಯಲ್ಲಿ ತೇಲಿ ಬರುತ್ತಾರೆ—ರಸಿಕರು!

ಹಿಂದೆ ಕುಳಿತಲ್ಲಿಂದಲೇ ನಿಂತಿದ್ದೆ, ಈಗ ನಿಂತಲ್ಲಿಂದಲೇ ಕುಳಿತೆ. ಕುಳಿತೆ ನಿಂತೆ-ನಿಂತು ಕುಳಿತೆ. ಕೈ ಕಾಲಿನ ಮೂಳೆಗಳು ನೊಂದುವೇ ವಿನಹ ನೆಮ್ಮದಿ ದೊರಕುವಂತೆ ಕಾಣಲಿಲ್ಲ. ತೆರೆದ ಕಣ್ಣು ಮುಚ್ಚಲಿಲ್ಲ, ನೇರವಾಗಿ 'ರಾಜರಸ್ತೆ'ಗೆ ಬಂತು. ನಗುವ ಮುಖಗಳ ಹಸೀ ಕಳೇಬರ ಕಂಡಿ, ಕರಟಿ ಹಿಪ್ಪೆಯಾಗಿ ಬಿದ್ದಿತ್ತು.

ಅದರ ಮಧ್ಯದಲ್ಲೇ ಮಸುಕಾಗಿ ತೇಲಿ ಬಂತು—ಧೈನ್ಯತೆಯಿಂದ ಕೂಡಿದ ಮುಖ—ಕಾಂತಿಯಿರದ ಕಣ್ಣುಗಳು ನೆಂಗೆ ಬಿದ್ದ ಚಪ್ಪಟೆಯಾದ ಹಣೆ, ಸುಕ್ಕು ಕಟ್ಟಿದ್ದ ಕೈಕಾಲುಗಳು ಬಿಳಿಚಿಕೊಂಡ ಮುಖ.

ಕಟ್ಟಿಗೆಯಂತಹ ಕೈಯೊಂದು ಉದ್ದವಾಗಿ ಚಾಚಿತು—ಎಲುಬಿನ ಬೆರಳುಗಳು.

'ಇಲ್ಲ'ವೆಂದು ಗೋಣು ಆಡಿಸಿದೆ ನಾನು. ಎಂದಿನಂತೆ ಅಭ್ಯಾಸ ಬಲದಿಂದ. ಬರೇ ಗುಸು ಗುಸು ಸದ್ದು ಕೇಳಿಸಿತು. ಜೀವಿ ಇನ್ನೂ ನಿಂತೇ ಇತ್ತು—ಜೀವವಿರುವ ತಪ್ಪಿಗಾಗಿ. ಕಣ್ಣೆನ್ನುವ ಹೊಂಡದಿಂದ ಧಾರೆಯಾಗಿ ಹರಿಯುತಿದ್ದ ನೀರು ಮುಖದ ಮೇಲೆ ನಿರ್ಭಯವಾಗಿ ದಾರಿ ಮಾಡಿತ್ತು ಆ ಕೈಯ ಎಲುಬುಗಳು ಪಕ್ಕದಲ್ಲಿದ್ದ ನನ್ನ ಸ್ನೇಹಿತನ ಕಡೆಗೆ ಚಲಿಸಿದುವು.

"ಹೋಗೋ ಮುಂಡೇದೆ. ಧನಿಗಳ ದ್ವಾರ ಹತ್ತಿರದಲ್ಲಿ. ಸುಮ್ಮನೆ ಬಾಯಿ ಹೊಲಿದಂತೆ ನಿಲ್ಲಬೇಡ. ಅವರನ್ನು ಕೇಳು"—ನನ್ನನ್ನು ತೋರಿಸಿ ಗೇಲಿ ಮಾಡಿದ ನನ್ನ ಗೆಳೆಯ.

"ಕೊಡೊಧಣಿ" ಇನ್ನೊಮ್ಮೆ ಗೇಲಿ ಮಾಡಿ, ವ್ಯಂಗ್ಯವಾಗಿ ಕೈಯನ್ನು ನಿಧಾನವಾಗಿ ಚೀಲಕ್ಕೆ ಇಳಬಿಟ್ಟ ನಾಲ್ಕಾಣೆ, ಎಂಟಾಣೆ, ಹತ್ತು ಐದು ನಯೇ ಪೈಸೆಗಳು ಬೆರಳುಗಳ ಮಧ್ಯೆ ತಾಕಲಾಟವಾಡಿದುವು ಇದರ ಒಂದು ನಾಣ್ಯವನ್ನು ನಿರುಪಾಯನಾಗಿ ಎಸೆದೆ—ಆ ಎಲುಬುಗಳ ಮೇಲೆ.

"ಸ್ವಾಮಿ...."

—ಗುಹೆಯ ಆಳದಲ್ಲಿ ವಿಕಾರವಾಗಿ ಮಾರ್ದನಿಸಿದಂತಹ ಧ್ವನಿಯೊಂದು ಹೊರಬಂತು. ಬತ್ತಿದ್ದ ಕಂಗಳಿಂದ ನೀರಿನ ಕೋಡಿ ಪ್ರಾರಂಭವಾಯ್ತು.

"ಅಯ್ಯೋ ಪ್ರಾರಬ್ಧವೇ, ಇನ್ನು ಅತ್ತ ಸಾಯುವುದಿಲ್ಲ ಇದು"—ಸ್ನೇಹಿತ ಗದರಿಸಿದ.

"ಸ್ವಾಮಿ.........ಽ...."

ಮೊದಲಿನದನ್ನು ಮೀರಿಸುವ ಆಳದ ಬಂದಿತು. ಈಗನದು. ಬೇಸರದಿಂದ ನೋಡಿದೆ. ಆ ಮೂಳೆಗಳ ಗೂಡಿನ ಮುಖದಲ್ಲಿದ್ದ ರಕ್ತ ಬತ್ತಿದ್ದರೂ ಕಣ್ಣೀರು ಕಾಲುವೆಯಾಗಿ ಹರಿಯುತಿತ್ತು.

"ಎಲ್ಡು ರೂಪಾಯಿ ಒಡೆಯ್ರೆ, ನನಗೆ ವ್ಯಾಧಿ ಹತ್ತೈತೆ ಸ್ವಾಮಿ, ಚಜ ಮದ್ದು ಇಲ್ದಿದ್ರೆ, ಬದುಕಾಕಿಲ್ಲ ಅ ಹೇಳವ್ರೆ ದಾಕ್ಟ್ರರಪ್ಪ. ದಯಮಾಡಿ ದೇವ್ರಾ.......ಽಽ"

ನೂತನವಾದುದಾತ್ತಾ ಶಂಖದಂತಹ ದನಿ ಬೇರೆ ಹೊರಡಿಸಿದ ಆತ.

"ಇವರೊಂದು, ಹೊಸ ಉಪಾಯ ಹುಡುಕಿದ್ದಾನೆ. ಬುದ್ಧಿವಂತ! ಹ ಹ .. ಎರಡು ರುಪಾಯಿ....ಮತ್ತೆ .. ನಡೆ . ನಡೆ ಹುಂ"

"ಇಲ್ಲನಡೆ,—ನಾನು ಉಸುರಿದೆ—ಇದು ಹೊಸ ದಾಟಿಯಲ್ಲಿ ಹಾಡುವ ಭಿಕ್ಷೆ ಸತ್ಯವಿರಬಹುದೆಂದು ಎಣಿಸುತ್ತಾ. ನಡೆಯಿತು—ಎಲುಬು ಎಲುಬು ತಿಕ್ಕುತ್ತಾ.

"ಕಿರ್‌ರ್...." ರಭಸದಿಂದ ಬಂದ ಕಾರಿನಿಂದ ಸದ್ದಿನೊದಿಗೆ "ಅಯ್ಯೋ" ಎಂಬ ಆರ್ತನಾದ ನನ್ನ ಕರ್ಣ ತಮ್ಮಟೆಯನ್ನು ಅಲುಗಿಸಿತು ಎಲ್ಲಾ ಕಡೆಗೆ ಅವಸರವಾಗಿ ಕಣ್ಣೋಡಿಸಿದೆ ರಸ್ತೆಬಲಬಾಗದಲ್ಲಿ ಜನರ ದೊಡ್ಡದೊಂದು ಗಂಪು ಕಾಣಿಸಿತು. ವೇಗವಾಗಿ ಕಡೆ ನುಗ್ಗಿದೆ, ಮುರಿದ ಕಾಲು ತೊಟ್ಟು ರಕ್ತವಿಲ್ಲದ ಬಿಳಿ ಮೂಳೆ ಮಾತ್ರ ಎದ್ದೊ ಕಾಣಿಸುತಿತ್ತು. ದೂರದಲ್ಲೇ ನಿಂತ 'ಕಿಂಗ್ಸ್‌ವೇ' ನನಗಿಲ್ಲವನ್ನು ಕ್ಷಣಾರ್ಧದಲ್ಲಿ ಗ್ರಹಿಸಲವಕಾಶ ನೀಡಿತು.

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ

ಮರಾಠಿ ಕಾದಂಬರಿ ಜನಕ

ಹರಿ ನಾರಾಯಣ ಆಪ್ಟೆ

ಕಳೆದ ಶತಮಾನದ ಕೊನೆಯ ದಶಕಗಳಲ್ಲಿ ಭಾರತೀಯ ಕಲಾ ಸಾಹಿತ್ಯಗಳ ಪುನರುಜ್ಜೀವನವಾಯಿತು. ಇದಕ್ಕೆ ರಾಜಕೀಯ ತತ್ವಜ್ಞಾನಿಗಳು, ರಾಜನೀತಿ ವಿಶಾರದರು, ಹಾಗೂ ಸಮಾಜ ಸೇವಕರು ಮಾತ್ರ ಕಾರಣರಲ್ಲ. ಬಂಕಿಮಚಂದ್ರ, ರವೀಂದ್ರನಾಥರಂತಹ ಅನೇಕ ಸಾಹಿತಿಗಳೂ ಕಾರಣರು. ಇವರೆಲ್ಲ ಈ ಪುನರುಜ್ಜೀವನದ ಕಲ್ಪನೆಯ ಪ್ರಸಾರದಲ್ಲಿ ದೇಶದ ವಿಚಾರ ವಿಧಾನವನ್ನು ತಿದ್ದಿ ಹೊಸತಗೊಳಿಸುವುದರಲ್ಲಿ ಪ್ರಮುಖ ಹಾಗೂ ಶಾಶ್ವತವಾದ ಪಾತ್ರ ವಹಿಸಿದ್ದಾರೆ. ಇವರಲ್ಲಿ ಮರಾಠಿ ಕಾದಂಬರಿಕಾರರೂ ಸಮಾಜ ಸುಧಾರಕರೂ ಆದ ಆಪ್ಟೆಯವರಿಗೂ, ಸ್ತ್ರೀಯರ ಹಕ್ಕು ಬಾಧ್ಯತೆಗಳ ಪಕ್ಷಪಾತಿಗಳೆಂದೂ, ಸ್ವತಂತ್ರ ವಿಚಾರಿಗಳೆಂದೂ ಅಗ್ರಸ್ಥಾನಸಲ್ಲಬೇಕು. ೧೯೬೪ನೇ ಮಾರ್ಚ್ ೮ರಂದು ಇವರ ಜನ್ಮ ಶತಮಾನವನ್ನು ಮಹಾರಾಷ್ಟ್ರದ ಎಲ್ಲೆಡೆಗಳಲ್ಲಿಯೂ ಆಚರಿಸಲಾಯಿತು

ಹರಿನಾರಾಯಣ ಆಪ್ಟೆಯವರನ್ನು ಹರಿಭಾವು ಎಂದೂ ಕರೆಯುತ್ತಿದ್ದರು. ಇವರು ಕವಿತೆ, ನಾಟಕ, ಸಣ್ಣ ಕತೆ, ಕಾದಂಬರಿಯೆಂದು ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ಹೊರ ಹೊಮ್ಮಿಸಿದ್ದಾರೆ. ಆದರೂ ಕಾದಂಬರಿಕಾರರೆಂದೇ ಇವರು ಪ್ರಖ್ಯಾತರಾಗಿದ್ದಾರೆ. ಆದುದರಿಂದ ಇವರನ್ನು ಮರಾಠಿ ಕಾದಂಬರಿಗಳ ಜನಕನೆಂದುದು ಸರಿಯಾಗಿದೆ. ಸಾಹಿತ್ಯಿಕ ಅಥವಾ ಚಾರಿತ್ರಿಕವಾಗಿ ಹೇಳುವುದಾದರೆ, ಆಪ್ಟೆಯವರು ಮರಾಠಿಯಲ್ಲಿ ಮೊತ್ತಮೊದಲ ಕಾದಂಬರಿಯನ್ನು ಬರೆದವರಲ್ಲ. ಆದರೂ ಕಾದಂಬರಿ ರಚನಾ ಕಲೆಯನ್ನು ತಾತ್ವಿಕ ದೃಷ್ಟಿಯಿಂದ ಅಭ್ಯಾಸ ಮಾಡಿದವರಲ್ಲಿ ಇವರೇ ಮೊದಲಿಗರು. ಇದಕ್ಕೆ ವಿಶಾಲವಾದ ತಳಹದಿಯನ್ನಿರಿಸಿ, ಇದರ ಪ್ರಗತಿಯ ಹಾದಿಯನ್ನು ನಿರ್ಧರಿಸುವುದರಲ್ಲಿಯೂ ಇವರೇ ಹೊಣೆಗಾರರು.

ಇವರು ಕಾದಂಬರಿಯನ್ನು ಕಟ್ಟುಕತೆಗಳ ಹಾಗೂ ದೃಷ್ಟಾಂತ ಕತೆಗಳ ಸಾಮ್ರಾಜ್ಯದಿಂದ ಹೊರತಂದು ಒಂದು ನಿರ್ದಿಷ್ಟವಾದ ಸಾಮಾಜಿಕ ಗುರಿಯುಳ್ಳದ್ದನ್ನಾಗಿ ಮಾಡಿದರು. ಇದರ ಸಂದೇಶವನ್ನು ವಿಸ್ತಾರವಾಗಿ ಹಬ್ಬುವಂತೆ ಮಾಡಿ, ತನ್ನ ತಲೆಮಾರಿನ ಜನತೆಯ ವಿಚಾರಗಳ ಮೇಲೆ ಪ್ರಭಾವ ಬೀರುವ ಒಂದು ಶಕ್ತಿಯನ್ನಾಗಿರಿಸಿದರು. ತನ್ನ ಜೀವನದ ಆರಂಭದಲ್ಲೇ ಸ್ತ್ರೀಯರಿಗೂ ಪುರುಷರಷ್ಟೇ ಸಮಾನ ಸ್ಥಾನಮಾನಗಳುಳ್ಳ ಸಮಾಜ ಇವರ ದೃಷ್ಟಿಯಲ್ಲಿತ್ತು. ಇದರ ಸಾಧನೆಗಾಗಿ ಬರೆಯ ತೊಡಗಿದರು. ಕೇವಲ ಮನೋರಂಜನೆಗಾಗಿ ಇವರು ಒಂದು ಕೃತಿಯನ್ನೂ ಬರೆದಿಲ್ಲ. ಓದುಗರಿಗೆ ಇವರ ಕೃತಿಗಳು ಬೋಧಪ್ರದವಾಗಿದ್ದವು. ಮನಸ್ಸನ್ನು ಉನ್ನತ ಸ್ಥಿತಿಗೇರಿಸಲು ಸಹಾಯಕಾರಿಗಳಾಗಿದ್ದವು. ಇವರು ತಮ್ಮ ಸಮಕಾಲೀನ ಮಹಾರಾಷ್ಟ್ರದ ಮಧ್ಯಮ ವರ್ಗದ ಸಮಸ್ಯೆಗಳನ್ನು ಕುರಿತು ಬರೆದಿದ್ದಾರೆ. ಇವುಗಳ ಹಿಂದಿರುವ ಸ್ಫೂರ್ತಿಯ ಮುಖ್ಯ ಸೂತ್ರವೆಂದರೆ ಸ್ತ್ರೀ ಸ್ವಾತಂತ್ರ್ಯ. ಇವರ ಕಲೆಗೆ ಸಮಾಜ ಸುಧಾರಣೆಯೇ ಮಾರ್ಗದರ್ಶಕ. ಆದಕಾರಣ ಇವರ ಕಾದಂಬರಿಗಳಲ್ಲಿ ಸಂಪೂರ್ಣ ಕಲಾತ್ಮಕವಾದ ಮೌಲ್ಯವನ್ನು ಕಂಡು ಹಿಡಿಯುವುದು ತುಂಬಾ ಕಷ್ಟ. ಮನೋರಂಜನೆ ಮಾತ್ರ ಕಲೆಯ ಉದ್ದೇಶವಲ್ಲವೆಂಬುದು ಇವರ ಸಿದ್ಧಾಂತ. ಆ ಕಾರಣ ಇವರು ಕಾದಂಬರಿಯನ್ನು ಜನ ಹೃದಯಕ್ಕೆ ಸಮಾಜ ಸುಧಾರಣೆಯನ್ನು ನಾಟಿಸುವ ಸಾಧನವನ್ನಾಗಿ ಬಳಸಿಕೊಂಡರು. ಈ ಸಾಹಸದಲ್ಲಿ ಆಪ್ಟೆಯವರು ತುಂಬಾ ಯಶಸ್ವಿಗಳು. ಜನರ ಸಹಾನುಭೂತಿಯನ್ನು ಹೆಚ್ಚಿಸುವುದರಲ್ಲಿ ಡಿ. ಕೆ. ಕರ್ವೆಯವರಂತಹ ಸಮಾಜ ಸುಧಾರಕರ ಕೆಲಸಕ್ಕೆ ಬೇಕಾದ ಮಾನಸಿಕ ವಾತಾವರಣವನ್ನು ಸಿದ್ಧಗೊಳಿಸುವುದರಲ್ಲಿ ಹಾಗೂ ಸಂಪ್ರದಾಯಿಕ ಕಲ್ಪನೆಗಳ ವಿರೋಧವನ್ನು ತಡೆಯುವುದರಲ್ಲಿ ಇವರ ಕಾದಂಬರಿಗಳ ಸಹಾಯ ಶ್ಲಾಘನೀಯವಾಗಿದೆ.

ಇದು ಆಪ್ಟೆಯವರ ಸಾಮಾಜಿಕ ಕಾದಂಬರಿಗಳಲ್ಲಿ ಥಕ್ಕನೆ ಎದ್ದು ಕಾಣುವ ಬಲ ದೌರ್ಬಲ್ಯಗಳು. ಆದರೂ ಇವುಗಳಲ್ಲಿ ಗಾಢವಾದ ಚಿತ್ತೈಕಾಗ್ರತೆ ಇದೆ. ಇವರು ನಿರ್ನಾಮಗೊಳಿಸಬೇಕೆಂದು ಉದ್ದೇಶಿಸಿದ ಸಾಮಾಜಿಕ ಕುಂದುಕೊರತೆಗಳನ್ನೆಲ್ಲ ಈ ಕಾದಂಬರಿಗಳು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತವೆ.

ಆಪ್ಟೆಯರ ಕಥನ ಕಲೆಯಲ್ಲಿರುವ ತೀವ್ರವಾದ ಉಪದೇಶಪರತೆ ಎಂದೂ ಮೇಲಕ್ಕೆ ಕಾಣುತ್ತಿದ್ದಿಲ್ಲ. ಇದು ವ್ಯಂಗ್ಯವಾಗಿದ್ದು, ಕಲಾತ್ಮಕ ಗುರಿಗೆ ಅಡ್ಡಿಯಾಗುತ್ತಿದ್ದಿಲ್ಲ. ಒಮ್ಮೆ ಕತೆಗೆ ಮೊದಲಿಟ್ಟರೆ, ಅದರಲ್ಲಿ ಸಂಪೂರ್ಣ ತನ್ಮಯರಾಗುತ್ತಾರೆ. ಇವರ ಭಾವನಾ ಶಕ್ತಿ ಹಾಗೂ ಆತ್ಮಶಕ್ತಿ ಇವು ಹೊರಗಿನ ಯಾವ ಸಂಗತಿಯನ್ನೂ ಒಳಗೆ ಬಿಡದಂತೆ ಕಾವಲಾಗಿರುತ್ತವೆ. ಆದರೆ ಇದೇ ಸಮಯದಲ್ಲಿ ಇವರ ಕಾದಂಬರಿಗಳು ಸ್ವಯಂನಿರ್ದಿಷ್ಟವಾದ ಮಿತಿಯನ್ನು ಮೀರದೆ ಒಮ್ಮೊಮ್ಮೆ ಕಲಾಂತರಿಕ್ಷಗಳನ್ನು ದಾಟಿ ಮಾನವ ಹಿತವನ್ನು ಸಾಧಿಸುತ್ತವೆ; ಇಲ್ಲವೆ ವಿಶಿಷ್ಟ ವಿಷಯಗಳಿಂದ ದೂರವಾಗಿದ್ದು, ಮೂಲಭೂತವಾದ ಮಾನವ ಮನೋವಿಕಾರಗಳನ್ನು ಬಣ್ಣಿಸುತ್ತವೆ

ಇವರ ಅತಿಶ್ರೇಷ್ಠವಾದ ಕಾದಂಬರಿ "ಪಾನ್ ಲಕ್ಷ್ಯಾಂತ್ ಕೋಣ್ ಘೇತೊ" (ಯಾರು ಲಕ್ಷಿಸುವರು?) ಎಂಬ ಮಹಾಕೃತಿ. ಇದರಲ್ಲಿ ಆಂಗ್ಲ ಕಾದಂಬರಿಕಾರ ಥಾಮಸ್ ಹಾರ್ಡಿಯ "ಟೆಸ್ ಡ ಉಬರ್ ವಿಲೆಸ್" ಎಂಬ ಕಾದಂಬರಿಯಲ್ಲಿದ್ದಂತೆ ಕಲ್ಪನಾ ಶಕ್ತಿಯ ಅತಿ ಸೂಕ್ಷ್ಮತೆ ಇದೆ. ನಿರೀಕ್ಷಣೆಯ ತೀವ್ರತೆ ಇದೆ. ಸಂಕಟದ ಮನೋವೇಧಕತೆ ಇದೆ. ಆದರೂ ಇದರಲ್ಲಿ ವೈಧಾಂತಿಕ ದೃಷ್ಟಿಕೋನದ ಅಗತ್ಯ ಬೇಕಾಗಿದ್ದಿಲ್ಲವಾದರೂ ಸಾಮಾನ್ಯ ದೃಷ್ಟಿಕೋನದ ಅಗತ್ಯ ಇನ್ನೂ ಹೆಚ್ಚಿಗೆ ಬೇಕಾಗಿತ್ತು. ಆದಕಾರಣವೇ ಹಾರ್ಡಿಯ ಕಾದಂಬರಿಯಷ್ಟು ವಿಸ್ತರಂಜನ ಇದರಲ್ಲಿ ಕಾಣುವದಿಲ್ಲ. ಈ ಕಾದಂಬರಿ ಒಬ್ಬ ಬ್ರಾಹ್ಮಣ ಕನ್ಯೆಯ ಯಮುನೆ ಎಂಬವಳ ಆತ್ಮಕಥೆಯ ರೀತಿಯಲ್ಲಿದೆ. ಇಲ್ಲಿ ಯಮುನೆ ಮಧ್ಯಮ ವರ್ಗದ ಕನ್ಯೆಯರ ಪ್ರತಿನಿಧಿಯಾಗಿದ್ದಾಳೆ. ಅವಿಭಕ್ತ ಕುಟುಂಬದ ಸ್ತ್ರೀಯರು. ಆ ಕಾಲದಲ್ಲಿ ಕೇವಲ ವಸ್ತುಗಳಂತೆ. ಅವರಿಗೆ ಏನೂ ಸ್ವಾತಂತ್ರ್ಯವಿದ್ದಿಲ್ಲ. ಅವರ ಸಂಕಷ್ಟಗಳ ಬಗ್ಗೆ ಯಾರೂ ಗಮನ ಕೊಡುತ್ತಿದ್ದಿಲ್ಲ. ಈ ಕಾದಂಬರಿಯಲ್ಲಿ ಪಾತ್ರ ರಚನೆ ಅತ್ಯುತ್ತಮವಾಗಿದೆ. ಇದರಲ್ಲಿ ಬರುವ ಸ್ತ್ರೀ ಪುರುಷರು ಸಮಾಜದ ಕಟ್ಟುಕಟ್ಟಳೆಗಳ ಚೌಕಟ್ಟಿನಿಂದ ಹೊರಬಂದು ತಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ಬಾಳಬಲ್ಲವರು. ಇವರ ಚಲನವಲನಗಳ ಮೇಲೆ ಯಾರೂ ಕಣ್ಣಿಟ್ಟಿದ್ದಿಲ್ಲ. ಇದು ಇಂದಿನ ಓದುಗನಿಗೆ ನೀರಸವೆಂದು ಕಾಣಬಹುದಾದರೂ ನಮಗೆ ಜೀವನದ ಒಂದು ಭಾಗವನ್ನು ತೋರಿಸಿಕೊಡುತ್ತದೆ.

ಆಪ್ಟೆಯವರ ಕಾದಂಬರಿಗಳ ಹಿನ್ನೆಲೆ ಅತಿ ವಿಸ್ತಾರವಾಗಿದೆ. ಇವರು ವಿಸ್ತಾರವಾದ ಪರದೆಯ ಮೇಲೆ ಚಿತ್ರಬಿಡಿಸುವ ವರ್ಣ ಚಿತ್ರಗಾರನಂತೆ ತಮ್ಮ ಪಾತ್ರಗಳನ್ನು ಚಿತ್ರಿಸಿದ್ದಾರೆ. ತನ್ನ ಕಾರ್ಯಕ್ಷೇತ್ರವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಬದಲಾಯಿಸುತ್ತಿರುತ್ತಾರೆ. ತನ್ನ ಕಾಲದ ಸಾಮಾಜಿಕ ಚೈತನ್ಯದ ನವ ಪ್ರೇರಣೆಯನ್ನು ಕಟ್ಟುಕಟ್ಟಳೆಗಳಿಂದ ತುಂಬಿದ ಪ್ರಾಚೀನ ಸಂಪ್ರದಾಯದ ಎದುರಿಗೆ ಯಶಸ್ವಿಯಾಗಿ ನಿರೂಪಿಸುತ್ತಾರೆ. ಇವರ ಕಾದಂಬರಿಯ ಯಮುನೆ, ಳವಳದಿಂದ ಮನಮುಟ್ಟುವಂತೆ ಮಾತನಾಡುತ್ತಾಳೆ. ಆಕೆಯ ಮಾತು ನೀತಿ ಪಿಶಾಚಿ ಎನಿಸಿದ್ದ ಆಕೆಯ ಮಾವ "ಶಂಕರ ಮಾಮಾಜಿ"ಯ ಹೃದಯವನ್ನು ಕರಗಿಸಲಾರದಿದ್ದರೂ ಎಂತಹ ಕಲ್ಲೆದೆಯನ್ನು ಕರಗಿ ನೀರಾಗಿಸುವ ಶಕ್ತಿಯಿಂದ ತುಳುಕಿರುತ್ತದೆ.

ಮಾನವ ನೀತಿ ರಾಕ್ಷಸನಾದ ಶಂಕರ ಮಾಮಾಜಿಯ ಪಾತ್ರ ಮರಾಠಿ ಸಾಹಿತ್ಯದಲ್ಲಿ ಅಮರವಾಗಿದೆ. ಆಗ ತಾನೇ ವಿಧವೆಯಾದ ತನ್ನ ಸೊಸೆಯ ಸಂಕಷ್ಟಗಳ ಬಗ್ಗೆ ಇವನ ಕಣ್ಣುಗಳು ಕುರುಡಾದುವು. ಈತ ಆಕೆಯ ಸ್ತ್ರೀ ಸಾಮಾನ್ಯವಾದ ಹಕ್ಕು ಬಾಧ್ಯತೆಗಳ ತಿಳಿವಳಿಕೆಗೇ ಅವಮಾನ ಮಾಡಿದ. ಆಕೆಗೆ ಮುಂಡನ ಮಾಡಿಸಿ ಇನ್ನಷ್ಟು ಮನನೋಯಿಸಿದ. ಆದರೆ ಸಂಪ್ರದಾಯ ಶರಣರಾದ ಈ ಹಿಂಸಾ ವಿನೋದಿಗಳಿಗೆ ಇದಾವುದೂ ಗಣ್ಯವಲ್ಲ. ಇಂತಹರು ಕೆಲ ಕಾಲದ ಹಿಂದೆ ಕುರುಡು ನಂಬಿಕೆಯಿಂದ ಬಾಲ ವಿಧವೆಯರನ್ನು ಕೂಡ ತಮ್ಮ ಪತಿಗಳ ಚಿತೆಗಳಲ್ಲಿ ಸುಟ್ಟು ಬಿಡುವುದಕ್ಕೆ ಒತ್ತಾಯಿಸುತ್ತಿದ್ದರು.

ಆಪ್ಟೆಯವರ ಲೇಖನ ಕಲೆಯಲ್ಲಿ ಸಿದ್ಧಹಸ್ತರು. ಇದಾದ ಒಟ್ಟೊಟ್ಟಿಗೇ ಒಂದಕ್ಕಿಂತ ಹೆಚ್ಚು ಕಾದಂಬರಿಗಳನ್ನು ಸುಲಭವಾಗಿ ಬರೆಯ ತೊಡಗಿದರು. ಅವರ ಮರಣ ಕಾಲದಲ್ಲಿ ಅನೇಕ ಕಾದಂಬರಿಗಳು ಪೂರ್ಣವಾಗದೆ ಉಳಿದಿರುವುದೇ ಇದಕ್ಕೆ ಸಾಕ್ಷಿ. ಸರ್ ವಾಲ್ಟರ್ ಸ್ಕಾಟ್ ಆಪ್ಟೆಯವರ ಆದರ್ಶ ಕಾದಂಬರಿಕಾರ. ಇವನೇ ಇವರಿಗೆ ಸ್ಫೂರ್ತಿ ಕೊಟ್ಟಾತ. ಇವನಂತೆ ಆಪ್ಟೆಯವರು ಗುಪ್ತನಾಮದಿಂದ ಕಾದಂಬರಿಗಳನ್ನು ಬರೆಯುತ್ತಿದ್ದರು. ಇವರ ಮೊದಲನೆಯ ಕಾದಂಬರಿ ಪ್ರಕಟವಾದಾಗ ಜನರು ಯಾರು ಬರೆದವರೆಂದು ತಿಳಿಯಲು ಕುತೂಹಲಪಡುತ್ತಿದ್ದರು. ಇದನ್ನು ನೋಡಿ ಆಪ್ಟೆಯವರು ಆನಂದ ಪಡುತ್ತಿದ್ದರು.

ಆಪ್ಟೆಯವರು ತಮ್ಮ ಕಾಲದ ಸಾಮಾಜಿಕ ಜೀವನ ಮತ್ತು ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ತಮ್ಮ ಆದರ್ಶ ವ್ಯಕ್ತಿಯಾದ ಸ್ಕಾಟನನ್ನು ಅತಿ ನಿಕಟವಾಗಿ ಅನುಸರಿಸುತ್ತಾ ಮರಾಠಿಯಲ್ಲಿ ಐತಿಹಾಸಿಕ ಕಾದಂಬರಿಗಳ ಮೂಲಪುರುಷರಾದರು. ವೇವರ್ಲಿ ಕಾದಂಬರಿಗಳಿಂದ ಸ್ಫೂರ್ತಿಗೊಂಡ ಆಪ್ಟೆಯವರು, ಸ್ಕಾಟ್, ಗಡಿನಾಡುಗಳ ಚರಿತ್ರೆಯ ಕುರಿತು ಬರೆದಂತೆ ಮರಾಠರ ಚರಿತ್ರೆಯ ಕುರಿತು ಬರೆಯ ತೊಡಗಿದರು. ಇವರಿಗೆ ಶಿವಾಜಿ, ತಾನಾಜಿ, ಹೈದರಾಲಿಯವರಂತಹ ಅರ್ವಾಚೀನ ವೀರರ, ಹಾಗೂ ಭಾರತದ ಪ್ರಾಚೀನ ಐತಿಹಾಸಿಕ ಮಹಾಪುರುಷರ ಶೌರ್ಯ ಸಾಹಸಗಳ ಮಹಾ ವೈಭವವೇ ತಮ್ಮ ಕಾದಂಬರಿಗಳ ಹಿನ್ನೆಲೆಯಾಗಿತ್ತು.

ಆಪ್ಟೆಯವರ ಕಾದಂಬರಿಗಳು ವರ್ಣನೆಗಳಿಂದ ತುಂಬಿ ತುಳುಕಿವೆ. ಇವು ಕೆಲವು ಸಾರ್ಥಕವಾಗಿದ್ದರೆ, ಅನೇಕ ಬಲ ಅಲಂಕಾರಕ್ಕಾಗಿವೆ. ಅವಿಭಕ್ತ ಕುಟುಂಬದ ಮನಸ್ತಾಪಗಳನ್ನು ಒತ್ತಿಸುವುದರಲ್ಲಿ ಆಪ್ಟೆಯವರ ಗ್ರಹಣಾಶಕ್ತಿ ತುತ್ತತುದಿ

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ......
ಇಂದೇ ಪ್ರಾರಂಭಿಸಿರಿ— ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ

ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಮಿ ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸನಿಹದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಕವಲು ದಾರಿ—ಕೆಂಪು ದೀಪ

ಇದು ನಮ್ಮ ಭಾರತದ ಕಥೆ

ನಮ್ಮ ಯೋಜನೆಗಳೆಲ್ಲ ಪ್ರಯೋಜನವಿಲ್ಲದಂತೆ ನೀರುಪಾಲಾಗುತ್ತಿವೆ ಎಂದು ಒಬ್ಬರು ಹೇಳುತ್ತಾರೆ.

ರಾಜಕಾರಣಿಗಳೋ, ಪುಢಾರಿಗಳೋ, ಮಂತ್ರಿಗಳು ಇಲ್ಲವೆ ಅವರ ಸಂಬಂಧಿಕರೋ ಇದರ ಪ್ರಯೋಜನ ಪಡೆಯುತ್ತಾರೆಯೇ ವಿನಃ ಜನಸಾಮಾನ್ಯರಿಗೆ ಏನೇನೂ ಪ್ರಯೋಜನ ಸಿಗುತ್ತಿಲ್ಲ ಎಂದು,ವರು ವಾದಿಸುತ್ತಾರೆ.

ಪಂಜಾಬದ ಕೈರಾನ್ ಪ್ರಕರಣವನ್ನೂ ಅವರು ಉದಾಹರಣೆಯಾಗಿ ತೆಗೆದುಕೊಳ್ಳುತ್ತ—

—ಪ್ರತಾಪ್ ಸಿಂಗ್ ಕೈರಾನರು ಮಂತ್ರಿಗಳಾಗುವ ಮೊದಲು, ಅವರ ಕುಟುಂಬದ ಆಸ್ತಿ ಒಂದು ಲಕ್ಷಕ್ಕೆ ಮೀರಿ ಇರಲಿಲ್ಲ; ಅವರ ಆಸ್ತಿ ಈಗ ಐವತ್ತು ಲಕ್ಷ ರೂಪಾಯಿಗಳಷ್ಟು ಇವೆ; ಸಾವಿರದೊಂಬೈನೂರ ಐವತ್ತೇಳರಿಂದ ಸಾವಿರದೊಂಬೈನೂರ ಅರ್ವತ್ತನಾಲ್ಕರ ಒಳಗೆ ಅಂದರೆ ಏಳು ವರ್ಷಗಳಲ್ಲಿ ಅವರ ಆಸ್ತಿ ಐವತ್ತು ಪಟ್ಟು ಹೆಚ್ಚಿತಾದರೂ ಹೇಗೆ?—

—ಎಂದು ಅವರು ಪ್ರಶ್ನಿಸುತ್ತಾರೆ.

—ಈ ಪ್ರಶ್ನೆಗೆ ನಮ್ಮಲ್ಲಿ ಉತ್ತರವಿಲ್ಲ; ಬಹುಶಃ ದಾನೂನು ಒಂದು ಇತ್ಯರ್ಥಕ್ಕೆ ಬಂದರೂ ಬರಬಹುದು. ನಮ್ಮಲ್ಲಿ ಮಾತ್ರ ಈ ಪ್ರಶ್ನೆಗೆ ಉತ್ತರವಿಲ್ಲ.

ಒಬ್ಬ ಮಾಡಿದ ಅಪರಾಧದ ಫಲವನ್ನು ಕುಟುಂಬದ ಜನರೆಲ್ಲಾ ಅನುಭವಿಸುವದನ್ನು ನಾವು ಕಾಣುತ್ತೇವೆ.

ಕೆಲವು ಮಂದಿಯ ಸ್ವಾರ್ಥವು ಇಡಿಯ ಮಂತ್ರಿಮಂಡಲವನ್ನು ಸಂದೇಹದ ನಿಲುವಿಗೆ ತರುತ್ತಿರುವ ವಿಷಯ, ಅಲ್ಲಿಗೆ ಮುಗಿಯುವುದಿಲ್ಲ.

ಅದರ ಜೊತೆಯಲ್ಲೇ ನಾವು ಆಡಳಿತ ಪಕ್ಷವನ್ನೂ ಎಳೆದುತರ ಬೇಕಾಗುತ್ತದೆ.

ಹೀಗೆ ಎಳೆದು ತಂದು ಪಕ್ಷದ ಮೇಲೂ ಅವಿಶ್ವಾಸದ ಆರೋಪವನ್ನು ಹೊರಿಸುವುದು ತಪ್ಪೇನೂ ಅಲ್ಲ. ಅದಕೆ ಬಹುಮಟ್ಟಿಗೆ ಆಡಳಿತ ಪಕ್ಷದಲ್ಲಿ ನಡೆಯುತ್ತಿರುವ ಮುಚ್ಚುಮರೆ ಕಾರಣವಾಗಿದೆ.

ಒಂದು ಸಂದೇಹದ ಪ್ರಶ್ನೆ ಇವತ್ತು ಹೆಚ್ಚು ಮಂದಿಯಲ್ಲಿ ಮನೆ ಮಾಡಿದೆ.

ಭಾರತವಿಂದು ಎತ್ತ ಸಾಗಿದೆ?

ಈ ಪ್ರಶ್ನೆಯನ್ನು ಉತ್ತರಿಸುವಾಗ ರಾಜಕಾರಣಿಗಳು ಕಿಂಚಿತ್ತೂ ತಡವರಿಸದೆ ಉತ್ತರಿಸುತ್ತಾರೆ.

ಅದಕ್ಕೆ ಕಾರಣವಿಷ್ಟೆ:

ಆಡಿದಂತೆ ನಡೆಯಬೇಕೆನ್ನುವ ನಿಯತ್ತು—ನಿಯಮ ಇಂದಿಗೆ ಉಳಿದಿರುವದಿಲ್ಲ.

ಆಡಿದ ಮಾತು ಆಚರಣೆಯಲ್ಲಿ ಬರಬಹುದು; ಬಾರದೆ ಉಳಿಯ ಬಹುದು.

ಜನತೆಯ ಬೇಡಿಕೆಯ ಬಗ್ಗೆ ಉತ್ತರಿಸುತ್ತ ನಮ್ಮ ಮಂತ್ರಿಗಳು ಆಗಲಿ—ಆಗುತ್ತದೆ—ಆಗುತ್ತಾ ಇದೆ, ಎಂಬ ಮಾತುಗಳನ್ನು ಕಂಠಪಾಠ ಮಾಡಿಕೊಂಡಿದ್ದು, ಅದರ ಪುನರುಚ್ಚಾರಣೆ ಮಾಡಿಬಿಡುತ್ತಾರೆ.

ಕಳೆದ ವರ್ಷ ಮುರಾರ್ಜಿ ದೇಸಾಯಿಯವರು ಸುವರ್ಣಾಕ್ಷರಗಳಲ್ಲಿ (ಹದಿನಾಲ್ಕು ಕ್ಯಾರೆಟ್ ಅಲ್ಲ) ಕೆತ್ತಿಡಬೇಕಾದಂತಹ ಮಾತನ್ನು ಆಡಿದ್ದರು.

ಆದರೆ ಆ ಮಾತನ್ನು ಕೆತ್ತಿಡಬೇಕಾಗಿದ್ದ ಹೊತ್ತಿಗೇ ಬಂಗಾರ ನಿಯಂತ್ರಣದ ವ್ಯವಸ್ಥೆ ನಡೆಯುತ್ತಿದ್ದ ಕಾರಣ ಸಾಧ್ಯವಾಗಿಲ್ಲ.

ಭಾರತದಲ್ಲಿ ಶ್ರೀಮಂತರು ಬಡವರಾಗುತ್ತಿದ್ದಾರೆ; ಬಡವರು ಶ್ರೀಮಂತರಾಗುತ್ತಿದ್ದಾರೆ—

—ಎಂದು ದೇಸಾಯಿಯವರು ಆಡಿದ್ದರು.

ಮುರಾರ್ಜಿಯವರು ಆಡಿದ ಮಾತಿನ ಮೇಲೆ ದೋಷಾರೋಪ ಹೊರಿಸಬೇಕೆಂದು ನಾನು ಇಚ್ಛಿಸುವದಿಲ್ಲ.

ಅವರು ಕಾಲೋಚಿತವಾದ ಮಾತನ್ನೇ ಆಡಿದ್ದರು.

ಭಾರತದಲ್ಲಿ ಮಾನಸಿಕ ದೃಷ್ಟಿಯಿಂದ ಔದಾರ್ಯತೆವನ್ನು ಶ್ರೀಮಂತರು ಕಳೆದುಕೊಳ್ಳುತ್ತ ದಿನದಿನಕ್ಕೆ ಬಡವರಾಗುತ್ತಿದ್ದಾರೆ ಎಂದೇ ದೇಸಾಯಿಯವರು ಅಂದಿರಬೇಕು!

ರಾಮರಾಜ್ಯವಾಗಿಸುವ ಭಾರತೀಯ ಕನಸು ಇದೀಗ ರಾಕ್ಷಸರಾಜ್ಯದ ಕನಸಿನ ಚಿತ್ರವನ್ನೇಕೆ ಮೂಡಿಸುತ್ತಿದೆ?

ಈ ಕುರಿತು ಆಡಳಿತ ವರ್ಗವು ಹೇಗೆ ಚಿಂತಿಸಬೇಕೋ ಹಾಗೆಯೇ ಪಕ್ಷವೂ ಚಿಂತಿಸಬೇಕು. ಪಕ್ಷದ ಚಿಂತನೆಯ ಜೊತೆಯಲ್ಲೇ ಜನತೆಯೂ ಚಿಂತಿಸಬೇಕು.

ಇವತ್ತು ಎಲ್ಲಾ ವಸ್ತುಗಳ ಬೆಲೆ ಏರಿದೆ. ಆದರೆ ಮನುಷ್ಯ ಪ್ರಾಣಿಯ ಬೆಲೆ ದಿನದಿನಕ್ಕೆ ಇಳಿಮುಖವಾಗುತ್ತಿದೆ.

ದೇಶದ ಎಲ್ಲಾ ಕಡೆಗಳಲ್ಲಿ ಕಳ್ಳತನ, ದರೋಡೆ, ಸುಲಿಗೆ ಅತ್ಯಾಚಾರ, ನಡೆಯುತ್ತಿದೆ. ರಾತ್ರಿಯಾಗುವುದನ್ನೂ ಕಾಯದೆ, ಹಗಲಿನಲ್ಲೇ ಕೊಲೆ ಸುಲಿಗೆಗಳು ನಡೆಯುತ್ತಿವೆ.

ಇದರರ್ಥ, ಜನರು ದಿನದಿನಕ್ಕೆ ಆಡಳಿತ ಪಕ್ಷದ ಅಹಿಂಸಾ ಪರಮೋ ಧರ್ಮದ ನೀತಿಯನ್ನು ಉಲ್ಲಂಘನೆ ಮಾಡುತ್ತಿರ ಬಹುದು ಎಂದೇ?

ವಾರ್ತೆ—ಪ್ರತಿವಾರ್ತೆ

ರಾಜ್ಯ ವಿಧಾನ ಮಂಡಳದ ಇತಿಹಾಸದಲ್ಲಿಯೇ ಮೊತ್ತ ಮೊದಲನೆಯ ಬಾರಿಗೆ ಕರ್ನಾಟಕದ ರಾಜ್ಯಪಾಲ ಜಯಚಾಮರಾಜರು ಕನ್ನಡದಲ್ಲಿ ಉದ್ಘಾಟನಾ ಭಾಷಣ ಮಾಡಿದರು

—ಹೀಗಾಗಬಾರದೆಂದೇ ಒಂದು ರಾಜ್ಯದವರು ಅದೇ ರಾಜ್ಯದಲ್ಲಿ ರಾಜ್ಯಪಾಲರಾಗಬಾರದೆಂಬ “ಹೊಸ ಸಂಪ್ರದಾಯ” ಹಾಕಿ ಕೊಡಬೇಕಾದೀತೆ?

o o o

ಕೋರಿಕೆಗೆ ಹಾಗನ್ನಿಸಲೂ ಬಹುದು.

ಆದರೆ ಸಿಗುವ ಸಂಬಳ ಕುಟುಂಬ ಪೋಷಣೆಗೆ ಸಾಲುವದಿಲ್ಲ ಎಂಬ ಮಾತು ಕೆಲ ವರ್ತುಲದಿಂದ ಕೇಳಿಬರುತ್ತಿದ್ದರೆ, ನಿರುದ್ಯೋಗವೇ ತಮ್ಮನ್ನು ಈ ಹೀನ ಕಾರ್ಯ ಮಾಡಲು ಪ್ರೇರೇಪಿಸುತ್ತಿದೆ ಎಂಬ ಮಾತು ಕೆಲ ವರ್ತುಲದಿಂದ ಕೇಳಿ ಬರುತ್ತಿದೆ

ತಮ್ಮ ವಿಲಾಸಜೀವನ ದ.ಬಾರೀ ಖರ್ಚು, ಅತಿಥಿ ಅಭ್ಯಾಗತರ ಸತ್ಕಾರ, ಅತೀ ಅವಶ್ಯಕವೆನಿಸಿರುವ ಮೋಜಿನ ಬದುಕು, ಇವೆಲ್ಲವುಗಳಲ್ಲಿ ವೈಮರಿಕು ಜನಸಾಮಾನ್ಯರಿಂದಲೇ ಬೆಳೆದು ಬಂದರೂ, ದೂರಸಿಡಿದು ಕುಳಿತಿರುವ ಒಂದು ವರ್ಗ [ಜನಸಾಮಾನ್ಯರ ಕೂಗನ್ನು ಕೇಳಿಸಿಕೊಳ್ಳುವಷ್ಟರ ವ್ಯವಧಾನವನ್ನು ಎಲ್ಲಿ ಪಡೆದಿದೆ!

ನಮ್ಮೀ ಭಾರತವು ಎತ್ತ ಸಾಗಿದೆ ಎಂಬ ಪ್ರಶ್ನೆಯನ್ನು ಕೇಳಿಕೊಂಡು, ಅದಕ್ಕೆ ಸರಿಯಾದ ಉತ್ತರವನ್ನು ಹುಡುಕಿ ತೆಗೆದು, ಸೂಕ್ತ ಕ್ರಮವನ್ನು ಕೈಕೊಳ್ಳ ಬಹುದಲ್ಲ?

ನಮ್ಮ ರಾಜಕೀಯ ಮುಖಂಡರು, ಅವರ ಛಾಯೆ ಛತ್ರದಡಿ ಬೆಳೆಯುತ್ತಿರುವ ಶ್ರೀಮಂತರು ಜನಸಾಮಾನ್ಯರ ಏಳಿಗೆಗಾಗಿ, ಶ್ರಮಿಸಬಹುದಲ್ಲ?

ಈ ಕಾರ್ಯವನ್ನು ಅವರು ಮಾಡಿಯೂ ಇದ್ದಾರೆ.

ಆದರೆ ಅದು ಮಾತಿನಲ್ಲಿ ಮಾತ್ರ ಕೃತಿಯಲ್ಲಿ?

ಆ ಕುರಿತು ನಾವು ಆಡಿಕೊಳ್ಳಬಾರದು.

ಅದು ವೈಯಕ್ತಿಕ ವಿಷಯ.

ಒಂದು ಶ್ರುತಿ—ಈ ಫಲವಾಗಿ.

ಜೈ ಭಾರತ! ಜನಸಾಮಾನ್ಯರು ಜಿಂದಾ ಬಾದ್!

ಸುಧಾಕ

ಹಾಸನ—ಮಂಗಳೂರುಗಳ ನಡುವೆ ಸದ್ಯಕ್ಕೆ ಮೀಟರಗೇಜ ಮಾರ್ಗ ರಚಿಸಲಾಗುವುದೆಂದು ರೇಲು ಮಂತ್ರಿ ದಾಸಪ್ಪನವರು ಹೇಳಿದ್ದಾರೆ.

—ಗೊತ್ತೇ ಇದೆಯಲ್ಲ, ಪತ್ರಂ ಪುಷ್ಪಂ ಫಲಂ ತೋಯಂ ಯೇನ ದದಾತಿ ಮಂತ್ರಿಷು ಕೇನ ತೃಪ್ತಾ ಸಂತಿ ಹತವಿರ್ಯಕನ್ನಡಿಗಾಃ ।

o o o

ಬೆಲೆಯೇರಿಕೆ ತಡೆಯಲು ಕ್ರಮ ಕೈಗೊಳ್ಳಬೇಕು.

—ಕೈಗೊಳ್ಳುತ್ತಲೇ ಇದ್ದೇವಲ್ಲಾ!

o o o

ಕರಭಾರ ವಿಶೇಷವಿಲ್ಲದ ಮುಂಗಡ ಪತ್ರವನ್ನು ಮಂಡಿಸಲು ನಾವು ಇಂದು ಶಕ್ತರಾಗಿದ್ದೇವೆ-ಸರಭಿಪ್ರಾಯವೊಂದು.

—ತುಂಬಿದ ಗಾಡಿಗೆ ಮೊರವು ಭಾರವೆ? ಎಂದು ಸದ್ಯ ಪ್ರಶ್ನಿಸಲಿಲ್ಲ. ಅಷ್ಟೇ ಸಮಾಧಾನ.

o o o

ಶಿಕ್ಷಣ ಶಾಖೆಯು ಅವ್ಯವಸ್ಥೆಯ ಬೀಡಾಗಿದೆ ಎಂಬ ಆರೋಪ ರಾಜ್ಯ ಸರಕಾರದ ಮೇಲೆ.

—ಅವ್ಯವಸ್ಥೆಯೇ ವ್ಯವಸ್ಥೆಗೆ ಮೂಲವಲ್ಲವೆ?

o o o

ವಿದೇಶೀ ಸಹಾಯವನ್ನು ಸ್ವೀಕರಿಸಬಾರದೆಂದು ಚೀನಾದ ಲಾಯರು ಪಾಕಿಸ್ಥಾನಕ್ಕೆ ಸಲಹೆ ನೀಡಿದ್ದಾರೆಂದು ದಟ್ಟ ವದಂತಿ.

—ಆರ್ಥಿಕೇತರ ವಿಭಾಗದಲ್ಲಿ ತನ್ನ ಸಲಹೆ ಮಾತ್ರ ಸ್ವೀಕರಿಸಿ’ ಎಂಬುದರ ಅರ್ಥವಿದು ಇದ್ದರೂ ಇರಬಹುದು.

o o o

ಕಾಶ್ಮೀರದಲ್ಲಿ ಸುವ್ಯವಸ್ಥಿತ ಸುಭದ್ರ ಸರಕಾರ ರಚಿಸುವಲ್ಲಿ ಶಾಖಾರಹಿತ ಮಂತ್ರಿ ಶಾಸ್ತ್ರಿಯವರು ಯಶಸ್ವಿಯಾದರು.

—ಅವರ ಹೆಸರೇ ಹೇಳುತ್ತದೆ, ಶಾಸ್ತ್ರಗಳು ಅದರ ಮೇಲೆ ಬಹದೂರರು! ಖಾತೆಯೂ ಇಲ್ಲ.

o o o

ಪಾಕಿಸ್ತಾನದಿಂದ ಅಧಿಕ ಸಂಖ್ಯೆಯಲ್ಲಿ ಕ್ರೈಸ್ತರು ನಿರಾಶ್ರಿತರಾಗಿ ಭಾರತದತ್ತ ಧಾವಿಸುತಿದ್ದಾರೆ.

—ನ್ಯಾಯೋಚಿತ. ಇಸ್ಲಾಮರಾಷ್ಟ್ರದಲ್ಲಿ ಅವರಿಗಿರಲು ಅಧಿಕಾರವಿಲ್ಲ; ಜಾತ್ಯತೀತ ದೇಶದಲ್ಲಿ ಅವರಿಗೆ ಸ್ವಾಗತ ಕಾದಿದೆ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥೀ ಚಿನ್ನ ಇರುತ್ತವೆ.

ಬೇಕಾದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸೆನ್ಸು ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ವರ್ಕ್ಸ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

“ನಚಿಕೇತ”ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಗೇಹರಾಜ್ಯದಲ್ಲಿ

ಹುಚ್ಚು ನಾಯಿಯ ಕಾಟ

"ಕೇಳಿದ್ರಾ, ಮತ್ತೆ ಸುರುವಾಯ್ತಲ್ಲ?"

"ಯಾವ ವಿಚಾರ ಹೇಳ್ತೀದೇ ನೀನು?"

"ಮತ್ತೇನು, ಪಾಕಿಸ್ತಾನದ ಭಟ್ಟ್ಯೇ ಅಪಲಾಪ!"

"ಅದೇನೂ ಹೊಸತಲ್ಲ ಬಿಡ"

"ಬಿಡೋದು ಹಿಡಿಯೋದು ಏನು ಬಂತು? ಅಂತೂ ಪುನಃ ಜಗಳಾಟಕ್ಕೆ ಸುರು ಮಾಡಿದ್ರೆ ಸರಿ."

"ಸುರು ಮಾಡೋದೆಲ್ಲಿ ಬಂತೆ?"

"ಮತ್ತೆ ಏನಂತೆ?"

"ಅಲ್ಲ, ಒಂದು ಸಲ ಮುಗಿದ್ರೆ ತಾನೇ ಮತ್ತೆ ಆರಂಭವಾಗೋದು?"

"ಅದೂ ಸರಿಯನ್ನಿ. ಆದ್ರೂ ಕಾಶ್ಮೀರ ಪ್ರಶ್ನೆ ಎಂದೋ ಮುಗಿದಿದೆ ಎಂದು ಹೇಳುವವರೇ ಮತ್ತೊಮ್ಮೆ ಮಾತಿಗೆ ತೊಡಗ್ತಾ ಇದ್ದಾರಲ್ಲಾಂತ?"

"ಮುಗೀತು ನಮಗಿಲ್ಲಿಗೆ. ಆದಿನ್ನೂ ಇದೆ ಅಂತಾರೆ ಪಾಕಿಸ್ತಾನಿಗಳು."

"ಅವ್ರದ್ದು ನ್ಯಾಯಾನ್ನಿ,"

"ಏನೇ, ಏನೇ ಅವ್ರದ್ದು ನ್ಯಾಯ?"

"ಹಸಿದಿರೋವವ್ರು ಊಟ ಆಗಿಲ್ಲಾಂತ ಬೊಗಳೋದು ತಪ್ಪೇನು?"

"ಓ, ಹಾಗೆ! ಸರಿ, ಅದು ಸರಿಯೆನ್ನು"

"ನೋಡ್ರಿ, ಇಂದು ಮಧ್ಯಾಹ್ನ ಒಂದು ಗಲಾಟೆ ನಡೆಯಿತು"

"ಗಲಾಟೆ ಇಂತೇ ಎಂದೇನು? ಯಾವಾಗ್ಲೂ ನಡೆದೇ ಇರುತ್ತೆ. ಅದ. ನಿನ್ನ ಕಿವಿಗೆ ಇಷ್ಟ ಬೇಗ್ನೇ ಬಿದ್ದದ್ದಾದ್ರೂ ಹೇಗೇಂತ..."

"ಅಯ್ಯಯ್ಯ, ಇಪ್ರೊಬ್ರು, ನಮ್ಮ ಮನೇಲಿ ಚಕಮಕಿಯಾಯ್ತನ್ನಿ."

"ಎಲಾ ಇವಳಾ, ಏನಂತಿಯಾ ನೀನು?..."

"ಗಾಬ್ರಿ ಗೀಬ್ರಿ ಆಗ್ಬೇಡಿ...."

"ಮತ್ತೆ ಆದದ್ದಾದ್ರೂ ಏನೂಂತ..."

"ಹೇಳ್ತೀನಿ ಕೇಳಿ. ನೀವು ಊಟ ಮಾಡ್ಕೊಂಡು ಹೋದ್ರಲ್ಲಾ...."

"ಮತ್ತೆ ಮಾಡ್ದೇ ಹೋಗ್ಬೇಕಾಗಿತ್ತೇನು?"

"ಅಯ್ಯೋ ದೇವ್ರೇ ಏನಿದು ಹೀಗೆ ರೇಗಾಡ್ತೀರೀಂತ?"

"ರೇಗೋದೇನು ಬಂತೆ?"

"ನೋಡ್ಕೊಳ್ಳಿ ನಿಮ್ಮಯ ಕಣ್ಣಾಗನ್ನ..."

"ನೋಡ್ಲು ನಡೆದದ್ದಾದ್ರೂ ಏನೂಂತ ಹೇಳು. ನತ್ತೆ ಎಲ್ಲ ನೋಡ್ಕೊಳ್ಳೋಣವಂತೆ. ಅದ್ರಿಂದ ಏನೀಗ ಬಾಕಿ ಉಳಿದಿರೋದು?"

"ಅಯ್ತು ಹಾಗಾದ್ರೆ ಹೇಳೋಕೆ ಮೊದ್ಲ ಮಾಡ್ಸಾಗ್ಲೇ ಅಡ್ಡಿಅಡ್ಡ ಮಾಡ್ತೋರು ನೀವೇ ತಾನೆ?"

"ಆಯ್ತು ಮಹಾರಾಯ್ತಿ, ಕಥೆ ಏನಾಯ್ತೂಂತ ಹೇಳಿ ಬಿಡು."

"ಹಸ್ಲಾ...ಕೇಳಿ ಹಾಂಗಾದ್ರೆ. ನೀವು ಹೋದ್ಮೇಲೆ ಬಂದ ಒಬ್ಬ ಜೇಡುವವ. ಊಟಮಾಡ್ದೆ ದಿನಾ ಮೂರಾಯ್ತು; ಏನಾದ್ರೂ ಬಡ್ಸಿ ಅಂದ."

"ಏನೂ ಇಲ್ಲ. ಎಲ್ಲಾ ಮುಗಿದಿದೆ ಅಂದಿಯಲ್ಲೋ ನೀನು?"

"ಸರಿಯಾಗೇ ಹೇಳಿದ್ರಿ. ಆದ್ರೆ ಅವ ಕೇಳ್ಬೇಕಲ್ಲಾ....ಇಲ್ಲಾ ಸುಳ್ಳು ಹೇಳ್ಬೇಡಿ. ಬಡವನಿಗೆ ಮುಷ್ಟಿ ಅನ್ನ ನೀಡಿದ್ರೆ ಪುಣ್ಯ ಬರುತ್ತೆ ಅಂತ ಉಪದೇಶ ಸುರು ಮಾಡ್ದ"

"ಅದು ಸರಿಯೆನ್ನು. ಉಪದೇಶ ಮಾಡೋದಷ್ಟು ಮತ್ತೇನನ್ನು ಮಾಡಬಹುದ.?"

"ನಾನಂದೆ. ಒಳಗೆ ಇದೆಯೋ ಇಲ್ವೇಂತ ನಿನ್ನಲ್ಲಿ ಗೊತ್ತಿರೋದು ನನಗೇಂತ, ಆದ್ರೂ ಅವ ಹೇಳ್ದ ಹುಂಬುಮ್ಮೆ ಅನ್ಬೇಡಿ ಅಮ್ಮಾ. ಇದ್ದ್ರೆ ಇಲ್ಲಾಂತಾಂದ್ರೆ ಇದ್ದದ್ದೂ ಇಲ್ಲವಾದೀತೂಂತ."

"ಹೌದೆ, ಒಳ್ಳೆ ಭಗವಂತ ಗಂಟು ಬಿದ್ದ ಕಥೆ ನಿನಗೆ, ಶ್ರೀಕೃಷ್ಣ ದ್ರೌಪದಿಗೂ ಹೀಗೇ ಅಂದಿದ್ನಂತೆ."

"ಅವನನ್ನ ಸಮಾಧಾನ ಮಾಡಿ ಕಳ್ಸೋಬೇಕಾದ್ರೆ ಸಾಕೋಬೇಕಾಯ್ತು ನನಗೆ"

ಅಂತೂ ಅವನನ್ನ ದೂರ ಕಳ್ಸಿಬಿಟ್ಟೆ ಕಣೇ ನೀನು. ಅಲ್ಲ, ಯಾವ ಉಪಾಯವನ್ನ ಹೂಡಿದ್ಯಾ ನೀನು?"

"ಮತ್ತೇನು ಮಾಡೋದೂಂತ ಅಡಿಗೆ ಪಾತ್ರೆ ಪರಡಗಳನ್ನೇ ತೋರಿಸಬೇಕಾಯ್ತು ಅವನಿಗೆ.'

"ಅಂತೂ ಪ್ರತ್ಯಕ್ಷ ದರ್ಶನವನ್ನೇ ಮಾಡ್ಸಿದೆಹಾಗಾದ್ರೆ...."

"ಮನೆಗೆ ಬಂದ ಶನಿ ತೊಲಗ್ಬೇಕಾದ್ರೆ ಏನಾದ್ರೂ ಮಾಡ್ಲೇ ಬೇಕಲ್ಲ?"

"ಅಲ್ಲ, ಅವ ಅದನ್ನ ನೋಡಿದೊಡನೆಯೇ ಹೋದಾಂತೀಯ?"

"ಅದೆಲ್ಲೀಂತೀರಾ? ನಾಲ್ಕೈದು ನಾಯಿಗಳು ಓಡಿ ಬಂದು ಬೊಗಳತೊಡಗಿದವು. ಹುಚ್ಚು ನಾಯಿಗಳ ಕಾಟ ಬೇರೆ ಇದೆ ನೋಡಿ ಹುಚ್ಚು ನಾಯಿ ಬಂತೂಂತ ಒಳಗೆ ಹೋಗಿ ಬಾಗಿಲಿಕ್ಕಿದೆ. ಮತ್ತೆ ನೋಡಿ ಬಂದಾಗ ಅವನಿರಲಿಲ್ಲ."

"ಅಂದ್ರೆ ಅವನನ್ನ ಓಡ್ಸಿದವು ನಾಯಿಗಳೂಂತಾಯ್ತು."

"ಯಾರೇ ಇರ್ಲಿ, ಅವನ ಕಾಟದಿಂದ ಮುಕ್ತಿಯಾಯ್ತಲ್ಲಾಂತ ನಿಟ್ಟುಸಿರು ಬಿಟ್ಟೆ."

"ಹೌದು, ನಿನ್ನ ಬುದ್ಧಿವಂತಿಕೆಗೆ ನಿಜವಾಗ್ಲೂ ತಲೆದೂಗ್ಬೇಕು."

"ಅಲ್ಲ, ನನ್ನ ತಲೆಗೆ ನಿಮ್ಮ ತಲೆ ತೂಗೋದೇನು ಮಹಾಂತ"

"ಅಂದ್ರೆ ನನ್ನ ತಲೇ ಬೆಲೇನ ಅಷ್ಟು ಕಡಿಮೆ ಮಾಡ್ದೆ ಅಲ್ವೆ? ಅಬ್ಬಾ ನಿನ್ನ ಸೊಕ್ಕೇ"

"ಹಾಗನ್ನ ಬೇಡಿ ಮತ್ತೆ. ಹೀಗೇ ಕುಶಾಲಿಗೆ ಅಂದೆ ಬಿಡಿ. ಅದನ್ನೆಲ್ಲಾ ಕಟ್ಕೊಳ್ಬೇಡಿ...."

"ಕಟ್ಕೋದೇನು? ಬಿಡೋದೇನು? ಅಲ್ಲಾ, ನಿನ್ನ ಬುದ್ಧಿ ಶಕ್ತಿಗೆ ನಿಜಕ್ಕೂ ತಲೆ ದೂಗ್ಬೇಕೇ...."

"ಏಕೆ ಏನಾಯ್ತು? ಏನಾದ್ರೂ ತಪ್ಪಾಗಿದ್ರೆ...."

"ತಪ್ಪು! ಅದೂ ನಿನ್ನಿಂದ! ಇಲ್ಲವಣೇ ಎಲ್ಲಾ ಸರಿಯಾಯ್ತು."

"ಏನು, ಸರಿಯಾಯ್ತೂಂತೀರಿ?"

"ಅದೇ ಆಗ ಕೇಳಿದೆಯಲ್ಲಾ...?"

"ಏನು?.. ಹಸ್ಲಾಂ.... ಹೌದು, ಕಾಶ್ಮೀರದ ಕಣ್ಣೀರ ಕತೆ ..."

"ಛೆ, ಛೆ... ಹಾಗೆಲ್ಲಾ ಅನ್ಬೇಡ ಮತ್ತೆ?..."

"ಇಲ್ಲಾನ್ನಿ...."

"ಕಾಶ್ಮೀರದ ಕಥೆಯೇನು...."

'ಹೌದು ಹೌದು ಕಾಶ್ಮೀರದ ಕಥೆ.."

"ಅದೇ ಆವೆಲ್ಲಾ ಮುಗಿದಿದೆ ಅಂತೇವಲ್ಲಾ ನಾವು?"

"ಮತ್ತೆ ಪಾಕಿಸ್ತಾನ ಇದೇ ಅಂತಿದೆಯಲ್ಲ?"

"ಕಾಶ್ಮೀರದ ಜನರೇ ತಮ್ಮ ರಾಜ್ಯವನ್ನ ಭಾರತದಲ್ಲಿ ವಿಲೀನಗೊಳಿಸಿರುವಾಗ ಪಾಕಿಸ್ತಾನ ಏನಂದ್ರೆ ಏನಂತೆ? ಕಾಶ್ಮೀರಿಗಳು ಹಿಂದೆಯೂ ಇಂದೂ ಮುಂದೆಯೂ ಅನ್ನುತ್ತ ಇದ್ದಾರೆ; ನಮ್ಮದು ಭಾರತದ ಅವಿಚ್ಛಿನ್ನ ಅಂಗವೆಂದು."

"ಮತ್ತೆ ಪಾಕಿಸ್ತಾನ ಯಾಕೆ ಹಾರಾಡ್ತಿದೆ?"

"ಹಾರಾಡೋದಕ್ಕೇನಂತೆ? ಕಾಶ್ಮೀರ ಸ್ಥಾನಮಾನಗಳಿಗೆ ನಮ್ಮ ಸಂವಿಧಾನದಲ್ಲಿ ವಿಶೇಷ ಏರ್ಪಾಡು ಮಾಡಿದೆ. ಅದಕ್ಕೇನೇ ಆ ಪ್ರಶ್ನೆ ಮುಗಿದಿಲ್ಲಾಂತ ಅವ್ರು ತಿರುಬೋಕ್ಸಿಗೆ ತೊಡಗಿದ್ದಾರೆಂತ ತೋರುತ್ತೆ."

"ಇದಕ್ಕೆ ಏನು ಮಾಡೋದಂತೆ ನಿಮ್ಮ ಟೋಪಿ ಸರ್ಕಾರ?"

ಏ, ಹಾಗೆಲ್ಲಾ ಅನ್ಬಾರ್ದು ನೋಡು. ನನ್ದೂ ನಿನ್ನೂ ಎಲ್ರದ್ದೂ ಸರ್ಕಾರ ಒಂದೇ. ಅದ..."

"ಟೋಪಿ ಸರ್ಕಾರ ಅನ್ನೋದು ತಾನೇ ನೀವು? ಅದನ್ನ ಒಪ್ಪೋಕೆ ನಾನು ತಯಾರಿಲ್ಲ...."

"ಅಯ್ಯೋ, ಏನನ್ನೋದೆ ನಿನ್ನ? ನಮ್ಮೆಲ್ಲರದ್ದೂ ಭಾರತ ಸರ್ಕಾರಾಂತಂದ್ರೆ..."

"ಆದು ಸರಿ ಅನ್ನಿ. ಆದ್ರೂ ಅದನ್ನ ನಡೆಸೋರು ಟೋಪಿಯವರಲ್ವೆ?"

"ಏನಾಯ್ತೀಗ? ಸದ್ಯ ನೀನೆನ್ನ ಎವರೇ ಇದ್ದಾರೇನ್ನು. ಅದ್ರೆ ಸರಕಾರ ಯಾರು ಬಂದ್ರೂ ಭಾರತದ್ದು ಅಲ್ವೆ?"

"ಅದು ಹೇಗಾಗುತ್ತೆ?"

"ಯಾಕೆ?...."

"ನೋಡಿ, ಲಿಯಾಖತ ಆಲಿಖಾನರು ಪಾಕ್ ಪ್ರಧಾನಿಯಾಗಿದ್ದಾಗ ನೆಹ್ರೂರೊಡನೆ ಒಪ್ಪಂದವಾಯ್ತಂತೆ, ನಿರಾಶ್ರಿತರ ವಿಚಾರದಲ್ಲಿ.."

"ಹೌದು, ಆದ್ರೆ ಅದನ್ನ ಈಗ ಪಾಕಿಸ್ತಾನ ಕರಕರ ಮುರಿದಿದೆ..."

"ಅದ್ರಿಂದ್ಲೇ ನಾನು ಹಾಗಂದದ್ದು.."

"ಅಲ್ವೆ, ಒಂದು ನಾಯಿಗೆ ಹುಚ್ಚು ತಗಲಿದ್ರೆ ಉಳಿದವೆಲ್ಲಾ ಅದ್ರಿಂದ ಕಚ್ಚಿಸ್ಕೋ ಬೇಕೆ?"

"ಅದೇ ಬಂದು ಕಚ್ಚೋವಾಗ...."

"ಅದ್ರ ಕೈಗೆ ಸಿಕ್ಕಿದ್ದು'

"ಅಂದ್ರೆ ಪಾಕಿಸ್ತಾನ ಹುಚ್ಚುನಾಯಿಯಂತೆ ಭಾರತಕ್ಕೆ ಕಚ್ಚಲು ಬರುತ್ತಿದೆ ಅಂದ ಹಾಗಾಯ್ತು"

"ಹೌದು. ಆದ್ರೆ ನಾವೂ ಧೈರ್ಯದಿಂದಿರ ಬೇಕು. ಕಾಶ್ಮೀರದ ಸ್ಥಾನಮಾನಗಳನ್ನ ನಮ್ಮ ಇತರ ರಾಜ್ಯಗಳವೃಕ್ಕೆ ತಂದ್ರೆ ಎಲ್ಲವೂ ಸರಿಯಾಗುತ್ತೆ. ಅದಕ್ಕಾಗಿಯೇ ಎಲ್ಲಾ ಸಮಾಲೋಚನೆ ನಡೆಯುತ್ತಿದೆ"

"ಅದ್ಯಾಕೆ ಅಷ್ಟು ತಡ ಮಾಡ್ತಿದ್ದಾರೆ?"

"ಒಂದು ಕಾರ್ಯ ಮಾಡೋದಂದ್ರೆ ಹೇಳೋವಷ್ಟು ಸರಳವಲ್ಲ ನೋಡು. ನೀನೇ ಅಂದಿ ಈಗ, ಆ ಜೇಡವವನನ್ನ ಬಡಿದ್ಯಾಕೆ ಬಹಳ ಕಷ್ಟಪಟ್ಟೆಯಂತ"

"ಅಲ್ವೆ ಮತ್ತೆ? ಅಲ್ಲಾ, ಸಮಸ್ಯೆ ಇಲ್ಲಾಂತಿರೋವಾಗ, ಅಮೇರಿಕೆ ಬ್ರಿಟನ್ನಗಳು ಏಕೆ ಉಂಟೆಂತ ಹೇಳ್ತಿವೆ?"

"ಅಲ್ವೆ, ಇದೆಯೇ ಇಲ್ವೇಂತ ಅವ್ರಿಗೆ ಏನು ಗೊತ್ತು? ಹೇಳ್ತಿದ್ದಾವೆ. ಒಮ್ಮೆ ಹಾಗಂತಾವೆ; ಇನ್ನೊಮ್ಮೆ ಹೀಗಂತಾವೆ"

"ಹೌದು ಸರೀನ್ನಿ....ಒಮ್ಮೆ ಪಾಕಿಗೆ ಸಬ್‌ಮೇರಿನ್ ಕೊಡ್ತೇವೇಂತಾರೆ; ಇನ್ನೊಮ್ಮೆ ಇಲ್ಲಾಂತಾರೆ...."

"ಅದೇ ನೋಡು ರಾಜಕಾರಣ...."

"ರಾಜಕಾರಣಾಂತಂದ್ರೆ ಒಂದು ಹುಚ್ಚುನಾಯಿಗಳ ಜಾತ್ರೆ ಅಲ್ವೆ?"

"ಹಾಗೂ ಅಂತಾರೆ"

"ಮತ್ತೇನೂಂತಾರೆ?"

"ಬುದ್ಧಿವಂತ್ರ ಸಂತೇಂತ ಕರೆದ್ರೆ ಸರಿಯಾಗುತ್ತೆ."

"ಏನು ಬುದ್ಧಿವಂತಿಕೇರಿ ಇದು?"

"ನೋಡು. ಒಬ್ರಿಗೆ ಸರಿಕಾಣೋದು ಮತ್ತೊಬ್ರಿಗೆ ಸರಿಯಾಗಿರೋದಿಲ್ಲಾ...ಅದೇ ಅವ್ರು ಆಡೋದು ಚದುರಂಗದಾಟಾಂತ ಕೆಲವ್ರು..."

"ಎಲ್ರೂ ಅಂತಿದ್ದಾರೆ..."

"ಅವ್ರೆ ಅನ್ನುತ್ತಿರೋವಾಗ್ಲೇ ಓಡಿ ಬರುತ್ತೆ ಹುಚ್ಚ ನಾಯಿ.."

"ಹುಚ್ಚ ನಾಯಿ....!"

"ಹೌದು, ಅದರೊಡನೆ ಪಾಕ್ ಬೊಗಳೋ ನಾಯಿ ಸ್ನೇಹಾಚಾರ ಮಾಡ್ತಾ ಇದೆ. ಒಂದಿನ ಅದನ್ನ ಕಚ್ಚುತ್ತೆ, ಆಗ... ಆ ನಾಯಿನೂ ಹುಚ್ಚು ಹೋಗುತ್ತೆ...."

"ಹೋಗ್ಲಿ ಬಿಡಿ, ಒಳ್ಳೇ ದಿನಾ ನೋಡಿ ಸಾಯ್ಲಿ ಮತ್ತೆ. ಹೋಗ, ಊಟಕ್ಕೆ ತಯಾರಾಗಿ, ಏನೋ ಕಣ್ಣಲ್ಲಿ ನಿದ್ದೆ ತೂಗಿದೆ. ಬೇಗ ಒಂದ್ಸಾಕ್ಷಿ ತಿಂದು...."

"ಆಯ್ತು...ಸರಿ ಬಿಡು. ಆದ್ರೇನಂತೆ? ಇದೋ ಈಗ್ಲೇ ಬಂದ್ಬಿಟ್ಟೆ...."

— ಗೋರಾ.

In the Court of the Dt. Munsiff Udipi

Visvanathacharya —Petr.

Vs

Ramakrishna Bhatta, son of Punache Venkatakrishna Bhatta — Karamballi of Shivalli village, Udipi Taluk — — Respondent.

Whereas the above named Petitioner has applied to this Court for the sale of your immovable properties and the Petition is posted to 25—3—64 for settlement of the terms of proclamation, you are hereby directed to appear before this Court on that day at 11 A.M. either in person or by Pleader and file your objections if any. In default, the matter will be decided in your absence.

K. L. Aithal,
Vakil for Petitioner.

Udipi, 7-3-64.

ನವಯುಗ

ವರುಷ	ಉಡುಪಿ	ವಾರ
೪೩	೧೨-೩-೧೯೬೪	೨೮

ಭಾರತದ ಆಶಯ

ಕುರುಡನೂ ಕುಂಟನೂ ಸ್ನೇಹಿತರಾದಂತೆ ಭಾರತದೊಡನೆ ಶತ್ರುತ್ವವನ್ನೇ ತಮ್ಮ ಗುರಿಯನ್ನಾಗಿಸಿಕೊಂಡ ಕಮ್ಯೂನಿಸ್ಟ್ ಚೀನಾ ಮತ್ತು ಪಾಕಿಸ್ತಾನಗಳು ಒಂದಗೂಡಿ ಭಾರತ ವಿರೋಧಿ ಚಟುವಟಿಕೆಗಳಲ್ಲಿ ನಿರಂತರ ವ್ಯಸ್ತವಾಗಿವೆ. ಕಮ್ಯೂನಿಸ್ಟರೊಡನೆ ಪೆಟ್ಟಿಗೆ ಸಲುಗೆಯನ್ನು ತೋರಿಸಬಾರದೆಂದು ಪಾಕಿಸ್ತಾನಕ್ಕೆ ಎಚ್ಚರಿಕೆಯಿತ್ತ ಪಾಶ್ಚಾತ್ಯ ಮಿತ್ರರಾಷ್ಟ್ರಗಳು ಅವರ ಚಟುವಟಿಕೆಗಳನ್ನು ನೋಡುತ್ತಲೇ ಕುಳಿತಿವೆ. ಚೀನ ಮತ್ತು ಪಾಕಿಸ್ತಾನಗಳು ಸಂಚು ಹೂಡಿಕೊಂಡು ಭಾರತದ ಮೇಲೆ ಸೈನಿಕ ಮತ್ತು ರಾಜಕೀಯ ಒತ್ತಡವನ್ನು ತರುತ್ತಿವೆ. ಆದರೆ, ಆ ಸಂಬಂಧದಲ್ಲಿ ಬ್ರಿಟನ್ ಮತ್ತು ಅಮೆರಿಕೆಗಳು ಕಟ್ಟಿನ ಆಸಕ್ತಿ ವಹಿಸಿದಂತೆ ತೋರುವುದಿಲ್ಲ. ಕಾಶ್ಮೀರದ "ಸಮಸ್ಯೆ"ಯ ಸಂಬಂಧದಲ್ಲಿಯೂ ಅವು ಪ್ರಸಕ್ತವಾಗಿ ಕಾಣಿಸಿಕೊಂಡಂತೆ ಗೋಚರವಾಗುವುದರಿಂದ ಸಂಯುಕ್ತ ರಾಷ್ಟ್ರ ಸಂಘವನ್ನು ತನ್ನ ಪ್ರಚಾರ ವೇದಿಕೆಯನ್ನಾಗಿ ಮಾಡಿಕೊಳ್ಳುತ್ತಿರುವ ಪಾಕಿಸ್ತಾನಕ್ಕೆ ಸಹಾನುಭೂತಿ ತೋರುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಏನು ಕಾರಣವೆಂಬುದು ಅವರಿಗೆ ಮಾತ್ರ ಗೊತ್ತು.

ಇತ್ತೀಚೆಗೆ, ಅಂದರೆ ಕಳೆದ ತಿಂಗಳ ಕೊನೆಯಲ್ಲಿ ಭದ್ರತಾ ಮಂಡಳದಲ್ಲಿ ಚರ್ಚಿತವಾದ 'ಕಾಶ್ಮೀರ' ವಿಷಯವು ಅರ್ಧದಲ್ಲೇ ನಿಂತುದು, ಅಲ್ಲಿ ಬ್ರಿಟನ್ ಮತ್ತು ಅಮೆರಿಕೆಗಳ ಪ್ರತಿನಿಧಿಗಳು ಪಾಕಿಸ್ತಾನದ ಅರ್ಥಹೀನ ವಾದದೊಂದಿಗೆ ತಮ್ಮ ಸ್ವರವನ್ನೂ ಕೂಡಿಸಿ ಭಾರತಕ್ಕೆ ವಿಶ್ವಾಸಘಾತ ಮಾಡಿದುದು, ಮತ್ತೆ ಈಗ, ಕಾಶ್ಮೀರ ಚರ್ಚೆ ನಡೆಸಲು ಭದ್ರತಾ ಸಮಿತಿಗೆ ಪಾಕಿಸ್ತಾನ ಕರೆಯಿತ್ತುದು— ಈ ಸನ್ನಿವೇಶದಲ್ಲಿ ಅಮೆರಿಕೆಯ ಉಪವಿದೇಶ ಮಂತ್ರಿ ಶ್ರೀ ಫಿಲಿಪ್ಸ್ ಟಾಲ್‌ಬೋಟರು ನವದೆಹಲಿಗೆ ಭೆಟ್ಟಿ ಇತ್ತದ್ದು—ಎಲ್ಲವೂ ಅರ್ಥಯುಕ್ತವಿದ್ದರೂ ಇರಬಹುದು. ಕಾಶ್ಮೀರದ ವಿವಾದ ಪರಿಹಾರಕ್ಕೆ ಯಾವುದೇ ಸಲಹೆಗಳನ್ನು ಟಾಲ್‌ಬೋಟ್ ಹೊತ್ತು ತಂದಿಲ್ಲ; ಆದರೂ ವಿವಾದವು ಉಭಯತರರಿಗೂ ತೃಪ್ತಿಯಾಗುವಂತೆ ಪರಿಹೃತವಾಗಬೇಕೆಂಬುದು ಅವರ ಮನೀಷೆಯಿತ್ತು ಹಿಂದೆ. ಇಂದು ಅವರು ಬಂದ ಮುಖ್ಯ ಕಾರಣ ಕಮ್ಯೂನಿಸ್ಟರಿಂದ ಸಂರಕ್ಷಿಸಿಕೊಳ್ಳಲು ಬೇಕಾದ ರಕ್ಷಣಾ ವ್ಯವಸ್ಥೆಯ ಕುರಿತು ವಿಚಾರ ವಿನಿಮಯ ವಿದ್ದರೂ, ತಾವು ಭದ್ರತಾ ಮಂಡಳಿಯಲ್ಲಿ ಅನುಸರಿಸಿದ ನೀತಿಗೆ ಭಾರತದಲ್ಲಿ ತಲೆದೋರಿದ ತೀವ್ರ ವಿವೇಚನೆಯೂ ಒಂದು ಕಾರಣವೆನ್ನಬಹುದು. ಈ ಸಂದರ್ಭದಲ್ಲಿ ಭಾರತ ಸರಕಾರದ ಪರವಾಗಿ ಶಾಖಾರಹಿತಮಂತ್ರಿಗಳವರು ಭಾರತದ ನಿಲುಮೆಯನ್ನು ಸ್ಪಷ್ಟಪಡಿಸಿದ್ದಾರೆ. ಪಾಶ್ಚಾತ್ಯ ಮಿತ್ರರು ಅನುಸರಿಸಿದ ನೀತಿಯಿಂದ ಭಾರತಕ್ಕೆ ಗಂಡಾಂತರ ಪ್ರಾಪ್ತವಾಗಿದೆಯೆಂಬ ದನ್ನವರು ಮನವರಿಕೆಮಾಡಿದ್ದಾರೆ. ಕಾಶ್ಮೀರದಲ್ಲಿ ಮತ್ತು ಗಡಿಗುಂಟ ಪಾಕಿಸ್ತಾನವು ಕೀಟಲೆಗಳನ್ನೂ ಅಪಪ್ರಚಾರವನ್ನೂ ಹೆಚ್ಚಿಸಿ ಭಾರತದೊಡನೆ ಶತ್ರುತ್ವನ್ನೇ ಬೆಳೆಸಬರುವಂತಹ ಅನಿಶ್ಚಿಯ ವಾತಾವರಣವನ್ನು ಸೃಷ್ಟಿಮಾಡುತ್ತಿರುವಾಗ, ಕಾಶ್ಮೀರದ ಇತ್ಯರ್ಥದಲ್ಲಿ ಅಮೆರಿಕೆ—ಬ್ರಿಟನ್ನುಗಳು ಆಸಕ್ತಿ ವಹಿಸದೆ ಹೋದರೂ ಪಾಕಿಸ್ತಾನದ ಪರವಾಗಿ ಪಕ್ಷಪಾತತನವನ್ನು ತೋರಿಸಿ ಅದಕ್ಕೆ ಉತ್ತೇಜನವೀಯುತ್ತಿರುವುದು ಹಿತವಲ್ಲ, ಆದುದರಿಂದ ಕಾಶ್ಮೀರದ ಬಗ್ಗೆ ಮರಳಿ ಚರ್ಚೆ ನಡೆಯಬೇಕೆಂಬ ಪಾಕ್ ಪ್ರಯತ್ನಕ್ಕೆ ಅಮೆರಿಕೆ ಬೆಂಬಲ ಕೊಡಬಾರದು ಎಂಬದಾಗಿ ಶಾಸ್ತ್ರಿಯವರು ತಿಳಿಸಿ ಹೇಳಿದ್ದಾರೆ. ಕಾಶ್ಮೀರದ ಸಂಬಂಧದ ವಿವಾದವನ್ನು ಬಗೆಹರಿಸುವುದು ಭಾರತಕ್ಕೂ ಬೇಕಾಗಿದೆ; ಆದರೆ ಅದರ ಹೆಸರಿನಲ್ಲಿ ಅನ್ಯಾಯ ಅತ್ಯಾಚಾರ ಅಪಪ್ರಚಾರ ಅನಾಚಾರಗಳಿಗೆ ಅವಕಾಶ ಕಲ್ಪಿಸದ ಶಾಂತ ಪರಿಸ್ಥಿತಿಯನ್ನು ನಿರ್ಮಿಸುವುದು ಅಗತ್ಯವಾಗಿದೆ. ಉದ್ರಿಕ್ತ ವಾತಾವರಣದಲ್ಲಿ ಯಾವ ಇತ್ಯರ್ಥವೂ ಆಗದು. ಪಾಕಿಸ್ತಾನವು ಭಾರತದೊಡನೆ ಅನಾಕ್ರಮಣ ಒಪ್ಪಂದವನ್ನು ಮಾಡಿಕೊಳ್ಳಲು ಮುಂದೆ ಬಂದರೆ ಶಾಂತ ವಾತಾವರಣವು ನಿರ್ಮಾಣಗೊಳ್ಳುವುದು ಸಾಧ್ಯವಾಗಬಹುದು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ಭಾರತ ವಿರೋಧಿ ನೀತಿಗೆ ಅಂಟಿಕೊಂಡಿರುವುದು ಮಾತ್ರವಲ್ಲದೆ ಭಾರತದ ಮೇಲೆ ಆಕ್ರಮಣದ ಭೀತಿಯನ್ನೂ ಹುಟ್ಟಿಸುತ್ತಿದೆ. ಗಡಿಯನ್ನು ಮೀರಿ ನಿರಪರಾಧಿಗಳನ್ನು ಕೊಲೆ ಮಾಡುತ್ತಿದೆ. ಚೀನಾವನ್ನೆ ತನ್ನ ನಾಗರಿಕರಿಗೆ ಗೆರಿಲ್ಲಾ ಕದನದಲ್ಲಿ ತರಬೇತಿ ನೀಡುವ ಹವಣಿಕೆಯಲ್ಲಿದೆ. ಜಮ್ಮೂ-ಕಾಶ್ಮೀರವನ್ನು ಅಕ್ರಮವಾಗಿ ನುಗ್ಗಿ ಅಲ್ಲಿ ಕೊಲೆಗಳಿಗೆ ಕಾರಣೀಭೂತವಾಗಿದೆ, ಗುಪ್ತ ರೇಡಿಯೋಗಳ ಮೂಲಕ ಭಾರತೀಯ ವಿರೋಧಿಗಳಿಗೆ ತಪ್ಪು ಮಾರ್ಗದರ್ಶನಗಳನ್ನು ನೀಡುತ್ತಿದೆ. ಆಜಾದ ಕಾಶ್ಮೀರದ ಅಧ್ಯಕ್ಷರು ಇಚಕನ್ನು ಮುಂದುವರಿದು ಸಮರಸಿದ್ಧವಾಗಬೇಕೆಂದು ನಾಗರಿಕರಿಗೆ ಕರೆಯಿತ್ತಿದ್ದಾರೆ. ಕಲಕತ್ತಾ ಮೊದಲಾದೆಡೆಯಲ್ಲಿರುವ 'ಪಾಕ್ ಪರರಲ್ಲಿ'ಯೂ ಇದೇ ಭಾವನೆಯು ಹುಟ್ಟುವಂತೆ ಪಾಕಿಸ್ತಾನ ಯೋಜಿಸಿಯದೆ ಈ ಬಗೆಯ ಕಪಟ ಕಾರಸ್ಥಾನಗಳೆಲ್ಲವೂ ಬೆಳಕಿಗೆ ಬಂದಿದೆಯೆಂದು ಹೇಳುವಂತಿಲ್ಲ. ಚೌ-ಎನ್-ಲಾಯ್ ಮತ್ತು ಅಯೂಬಖಾನರ ತಂತ್ರಜಾಲ ಎಲ್ಲಿಯವರೆಗೆ ಹರಡಿದೆಯೆಂಬುದು ಊಹನೆಗೂ ನಿಲುಕದ ವಿಷಯ.

ಇಂತಹ ಪರಿಸ್ಥಿತಿಯಲ್ಲಿ ಭಾರತದ ಹಿತೈಷಿಯೆಂದು ಹೇಳಿಕೊಳ್ಳುವ ಪಾಶ್ಚಾತ್ಯ ದೇಶಗಳು ಭಾರತಕ್ಕೆ ದ್ರೋಹ ಬಗೆಯುವುದು ವಿವೇಕವಲ್ಲ. ಒಂದು ವೇಳೆ ಭಾರತಕ್ಕೆ ಬೆಂಬಲ ನೀಡುವುದು ಅವುಗಳಿಗೆ ಸಾಧ್ಯವಾಗದೆ ಹೋದರೆ ಸುಮ್ಮಗಾದರೂ ಕೂತುಕೊಳ್ಳುವುದು ಅಗತ್ಯವಾಗಿದೆ. ಇವೆಲ್ಲಾ ವಿಷಯಗಳು ಶ್ರೀ ಟಾಲ್‌ಬೋಟರಿಗೆ ಮನವರಿಕೆಯಾಗಬಹುದು. ಭದ್ರತಾ ಮಂಡಳಿಯಲ್ಲಿ ಬ್ರಿಟನ್—ಅಮೆರಿಕೆಗಳ ಭಾಷಣಕ್ಕೆ ಭಾರತದಾದ್ಯಂತ ಹುಟ್ಟಿದ ಪ್ರತಿಕ್ರಿಯೆಯನ್ನು ರಾಯಭಾರಿ ಚೆಸ್ಟರ್ ಬೌಲ್ಸರೂ ಅವರಿಗೆ ವಿವರಿಸದಿರಲಾರರು, ಶ್ರೀ ಟಾಲ್‌ಬೋಟರು ತನ್ನ ಮನವರಿಕೆಯಾದ ವಿಚಾರಗಳನ್ನು ತನ್ನ ಸರಕಾರಕ್ಕೆ ವರದಿ ಮಾಡುವರಲ್ಲದೆ, ಇದಕ್ಕೆ ಯಾವ ನಿರ್ದಿಷ್ಟ ಉತ್ತರವನ್ನು ನೀಡುವುದು ಅವರ ಅಧಿಕಾರಕ್ಕೆ ಮೀರಿದ್ದೆಂಬುದನ್ನು ಎಲ್ಲರೂ ಬಲ್ಲರು. ಆದರೂ ಭಾರತದ ಸ್ಪಷ್ಟಾಭಿಪ್ರಾಯವನ್ನು ಅವರು ತನ್ನ ಸರಕಾರದ ಮುಂದಿಟ್ಟು, ಭಾರತಕ್ಕೆ ದ್ರೋಹವಾಗದಂತೆ ನಿಷ್ಪಕ್ಷ ನೀತಿಯನ್ನು ಅನುಸರಿಸುವಂತೆ ಪ್ರಯತ್ನಿಸುವರೆಂದು ಭಾರತೀಯರ ಆಶಯ. ಇದರ ಸಿದ್ಧಿ—ಅಸಿದ್ಧಿಗಳಿಗೆ ಭವಿಷ್ಯವೇ ಉತ್ತರ ಹೇಳಬೇಕಾಗಿದೆ.

ಜಗತ್ಪರ್ಯಟನ

ಜಯಚಾಮರಾಜ

ಕರ್ನಾಟಕದ ಸಿಂಹಾಸನಾಧೀಶ್ವರರೆಂಬ ಬಿರುದು ಪಡೆದ, ಕಳೆದ ಎಂಟು ವರ್ಷಗಳಿಂದಲೂ ನಮ್ಮ ರಾಜ್ಯದ ರಾಜ್ಯಪಾಲರಾಗಿ ಸೇವೆಸಲ್ಲಿಸಿದ ಶ್ರೀ ಜಯಚಾಮರಾಜ ಒಡೆಯರವರು ತಮಿಳುನಾಡಿಗೆ ಹೋಗಲಿರುವರು ಎಂಬ ವರ್ತಮಾನ ಬಂದು ಕೆಲವು ಸಮಯವಾಯಿತು. ಅವರನ್ನು ಇಲ್ಲಿಯೇ ಉಳಿಸಿಕೊಳ್ಳಬೇಕು ಎನ್ನುವ ಪ್ರಯತ್ನ ಕೊನೆಗೂ ಸಿದ್ಧಿಸದೆ ಬಹುಮಟ್ಟಿಗೆ ಈ ಮಾಸಾಂತ್ಯದೊಳಗೆ ತಮ್ಮ ಅಧಿಕಾರವನ್ನು ಬಿಟ್ಟು ಮದ್ರಾಸದ ರಾಜ್ಯಪಾಲರೆಂದು ಅಧಿಕಾರ ವಹಿಸುವರು. ಉತ್ತಮ ದಾರ್ಶನಿಕರೆಂದು ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ ಜಯಚಾಮರಾಜರು ಪ್ರಜಾಸತ್ತೆಯಲ್ಲೂ ಯಶಸ್ವೀ ರಾಜ್ಯಪಾಲರೆಂದು ಕೀರ್ತಿಪಡೆದಿದ್ದಾರೆ. ಒಂದು ರಾಜ್ಯದವರು ಅದೇ ರಾಜ್ಯದಲ್ಲಿ ರಾಜ್ಯಪಾಲರಾಗಿರಬಾರದು ಎಂಬ ಆಂದೋಲನವೆದ್ದ ಕಾಲವೊಂದಿತ್ತು; ಆಗಲಿ, ಆ ಆಂದೋಲನ ಇದೀಗ ಇಲ್ಲವೆಂದಾದ ನಂತರವೇ ಜಯಚಾಮರಾಜರು ಮದ್ರಾಸಿಗೆ ಹೋದರು ಅವರ ಯಶಸ್ಸಿನಪ್ರತೀಕ, ಕನ್ನಡನಾಡಿನ ಕೀರ್ತಿಪ್ರತೀಕ.

ಜನರಲ್ ನಾಗೇಶ್

ಮಿಲಿಟರಿ ಅಧಿಕಾರದಿಂದ ನಿವೃತ್ತರಾದ ಬಳಿಕ ನಾಗಾ ಬಂಡುಗಾರರ ಹಾವಳಿಯಿಂದ ಕೋಟಲೆಗೊಳಗಾಗಿದ್ದ ಅಸ್ಸಾಮದ ರಾಜ್ಯಪಾಲರೆಂದು ಶ್ರೀ ನಾಗೇಶರು ನಿಯುಕ್ತರಾದರು. ಅವರಿಂದ ನಿರೀಕ್ಷಿತವಾದ ಕಾರ್ಯ ಮುಗಿಯುವ ಹೊತ್ತಿಗೆ ಬಂದಾಗ ಅವರನ್ನು ಆಂಧ್ರ ಪ್ರದೇಶಕ್ಕೆ ವರ್ಗಾಯಿಸಲಾಯಿತು. ಇದೀಗ ಅವರು ಕರ್ನಾಟಕಕ್ಕೆ ಬರಲಿದ್ದಾರೆ. ಅವರಿಗಾಗಿ 'ರಾಜಭವನ' ನಿರ್ಮಾಣವಾಗಬೇಕಾಗಿದೆ. ಅವರೊಂದು ಸಡುಸ್ಸೆಯನ್ನೇ ಹೊತ್ತು ತಂದಿದ್ದಾರೆ. ಸಮಸ್ಯಾತ್ಮಕ ರಾಜ್ಯವಾದ ಕರ್ನಾಟಕದ ಸಮಸ್ಯೆಗಳನ್ನು ನಾಗೇಶರು ಹೇಗೆ ಬಗೆಹರಿಸುವರೆಂದು ಗೊತ್ತಿಲ್ಲ. ಈ ನಿವೃತ್ತ ಮಿಲಿಟರಿ ಅಧಿಕಾರಿಯ ಆಡಳಿತೆಯು ರಾಜಕೀಯ ಸುಧಾರಣೆಯತ್ತ ಸರಿಯುವಂತೆ ಪ್ರೇರಕ ಶಕ್ತಿಯಾದೀತೆ?

ಎಂ. ಸಿ. ಚಗ್ಲಾ

ಕೇಂದ್ರ ಶಿಕ್ಷಣ ಸಚಿವ ಎಂ. ಸಿ. ಚಗ್ಲಾರವರು ಅಟರ್ನಿಜನರಲ್ ಆಗಿದ್ದವರಾದರೂ ಅವರು ಪ್ರಜಾಪ್ರಭುತ್ವವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ. ಭಾರತವು ತನ್ನನ್ನು ಜಾತ್ಯತೀತ ರಾಷ್ಟ್ರವೆಂದು ಕರೆಸಿಕೊಂಡಿರುವುದರಿಂದ ಇಲ್ಲಿ ಜಾತೀಯ ಪಕ್ಷಗಳಿಗೆ ಸ್ಥಾನವಿಲ್ಲವೆಂಬುದಿವರ ಅಭಿಪ್ರಾಯ. ಮುಖ್ಯವಾಗಿ ಮುಸ್ಲಿಂಲೀಗನ್ನು ಉಲ್ಲೇಖಿಸುವ ಇವರು ಲೀಗನ್ನು ಬರ್ಖಾಸ್ತುಗೊಳಿಸಿ, ಅದರ ಸದಸ್ಯರು ತಮಗಿಷ್ಟ ಬಂದ ಜಾತ್ಯತೀತ ರಾಜಕೀಯ ಪಕ್ಷಗಳಲ್ಲಿ ಸೇರಿಕೊಳ್ಳುವುದು ಹಿತಕರವೆಂದಿದ್ದಾರೆ ಅವರು. ಎಂ. ಸಿ. ಚಾಗ್ಲಾ ಅವರ ವಿಚಾರಸರಣಿ ಉನ್ನತವಾಗಿರುವುದರಿಂದಲೇ ಪ್ರಧಾನಿ ನೆಹರೂ ಅವರನ್ನು ಕರೆದುಕೊಂಡರು, ಶಿಕ್ಷಣದಂತಹ ಅಮೂಲ್ಯ ಮಂತ್ರಿಶಾಖೆಯನ್ನೇ ಅವರ ಕೈಗಳಿಗೊಪ್ಪಿಸಿದರು.

ಶಿಕ್ಷಣ ಮಂತ್ರಿ ಶಾಖೆ

ಭಾರತ ಒಕ್ಕೂಟವಾದುದರಿಂದ ಇಡಿಯ ದೇಶದಲ್ಲಿ ಏಕರೂಪದ ಶಿಕ್ಷಣ ಪ್ರಣಾಲಿಯಿರುವುದು ಅವಶ್ಯಕವೆಂಬ ಅಭಿಪ್ರಾಯಕ್ಕೆ ಈಗ ಎಲ್ಲೆಲ್ಲಿಯೂ ಪುರಸ್ಕಾರ ದೊರೆಯುತ್ತಿದೆ. ಇದಕ್ಕೆಂದೇ ಕೆಲವೊಂದು ಸಲಹಾ ಸಮಿತಿಗಳು ನಿಯುಕ್ತವಾಗಿದ್ದು ಅವುಗಳು ತಮ್ಮ ಅಭಿಪ್ರಾಯವನ್ನು ನೀಡಿದ್ದುವು. ಆದರೆ, ಈ ಏಕರೂಪವನ್ನು ದೇಶದ ಎಲ್ಲ ರಾಜ್ಯಗಳೂ ಇದ್ದಕ್ಕಿದ್ದಂತೆ ಒಪ್ಪಿಕೊಳ್ಳುವುದಿಲ್ಲವೆಂಬುದಕ್ಕೆ ಪ್ರತ್ಯಕ್ಷವೇ ನಿದರ್ಶನ. ಮುಖ್ಯವಾಗಿ ಹಾಯರ್ ಸೆಕೆಂಡರಿ ಶಿಕ್ಷಣ ಕ್ರಮದ ಬಗ್ಗೆ ರಾಜ್ಯ ರಾಜ್ಯಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಮೂಡಿರುವುದು ದೃಷ್ಟಿಗೋಚರ. ಕೆಲವೆಡೆ ಪಾರಪಟ್ಟ ಮತ್ತು ಅಧ್ಯಯನದ ವಿಷಯಗಳಲ್ಲೂ ಸಾಮ್ಯವಿರುವುದಿಲ್ಲ. ಈ ಬಗೆಯ ವ್ಯತಿರೇಕತೆಯಿಂದ ಒಂದು ರಾಜ್ಯದಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸುವುದು ಅಸಾಧ್ಯವಾಗಿದೆ. ನಮ್ಮ ಮೈಸೂರು ರಾಜ್ಯದ ಎರಡು ವಿಶ್ವವಿದ್ಯಾಲಯಗಳಲ್ಲಿಯೂ ಸಾಮ್ಯತೆ ಕಡಿಮೆಯೇ. ಇದರಿಂದಾಗಿ ಬವಣೆ ಪಡಬೇಕಾದವರು ನಮ್ಮ ಮಕ್ಕಳು ಮತ್ತು ತರುಣರು. ಈ ಲೋಪದೋಷಗಳನ್ನು ಕಿತ್ತು ತೆಗೆಯ ಬೇಕಾದರೆ ಶಿಕ್ಷಣ ಶಾಖೆಯನ್ನು ಕೇಂದ್ರ ಸರಕಾರದ ಅಧೀನವಿಡುವುದೇ ಸೂಕ್ತವೆನಿಸುವುದು. ಕೇಂದ್ರ ಶಿಕ್ಷಣ ಮಂತ್ರಿ ಶ್ರೀ ಎಂ. ಸಿ. ಚಗ್ಲಾ ಅವರ ಈ ನಿಟ್ಟಿನಲ್ಲಿ ಆಸಕ್ತಿ ವಹಿಸಿರುವರು. ಆದರೆ, ರಾಜ್ಯ ಸರಕಾರಗಳಲ್ಲಿ ಹೆಚ್ಚಿನವು ತಮ್ಮ ಅಂಕಿತದಲ್ಲಿರುವ ಈ ಶಾಖೆಯನ್ನು ಬಿಟ್ಟುಕೊಡಲು ಒಪ್ಪುವಂತೆ ತೋರುವುದಿಲ್ಲ. ಹಾಗಿದ್ದರೂ ಶಿಕ್ಷಣಕ್ಕಾಗಿ ರಾಜ್ಯ ಸರಕಾರಗಳು ಬಹು ವೆಚ್ಚ ಮಾಡಬೇಕಾಗಿದೆಯೆಂಬುದನ್ನೂ ಇದರಿಂದಲೇ ಅವು ಕೇಂದ್ರದ ಸಹಾಯವನ್ನು ಬಯಸುತ್ತಿರುವುವೆಂಬುದನ್ನೂ ನಾವು ಗಮನಿಸಿದರೆ, ಈ ಶಾಖೆಯನ್ನು ಕೇಂದ್ರಕ್ಕೇನೇ ವರ್ಗಾಯಿಸುವುದರಿಂದ ರಾಜ್ಯಗಳ ಕೆಲಸವೂ ಹಗುರವಾದೀತು; ಇಡಿಯ ಭಾರತದಲ್ಲಿಯೇ ಏಕರೂಪದ ಶಿಕ್ಷಣ ದೊರೆತು ವಿದ್ಯಾರ್ಥಿಗಳ ಬವಣೆ ದೂರವಾಗಿ ಐಕ್ಯಭಾವ ಮೊಳೆಯಲು ಸಾಧ್ಯವೆನಿಸೀತು.

ಅಲ್ಲಲ್ಲಿಯ ಸುದ್ದಿಸಾರ

ವಿವಾಹ ಸಮಾರಂಭ— ತಾರೀಕು 5-3-64ರಂದು ದಿ| ಯೋಗೀಂದ್ರ ಆಚಾರ್ಯರವರ ಪುತ್ರ ಶ್ರೀ ಬಿ. ವೆಂಕಟರಮಣ ಆಚಾರ್ಯರು ಶಾಸ್ತ್ರಿ ಎಂಡ್ ಕೋದ ಶ್ರೀ ಕೆ. ವಿ. ಶಾಸ್ತ್ರಿಯವರ ಪುತ್ರಿ ಬಿ. ಸೌ| ವಸಂತ ಕುಮಾರಿಯನ್ನು ಮಂಗಳೂರು ಪಳ್ನೀರ್‌ನಲ್ಲಿರುವ ವಧೂಗೃಹದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಶ್ರೀ ಪಡು ಬೆಟ್ಟು ನಾರಾಯಣ ಶೆಟ್ರ ಪುತ್ರ ವ ಬಜ್ಜಾಲು ಸಂಜೀವ ಶೆಟ್ರ ಸೊಸೆ ಕುಮಾರಿ ಮೀನಾಕ್ಷಿಯನ್ನು, ಮುಂಡ್ಕೂರು ರೆಂಜಗುತ್ತು ಮುತ್ತಪ್ಪ ಶೆಟ್ರ ಪುತ್ರ ಶ್ರೀ ಶ್ರೀಧರ ಶೆಟ್ಟರು ತಾ. 5-3-64ರಂದು ಉಡುಪಿ ಕಲ್ಪನಾ ಥಿಯೇಟರಿನಲ್ಲಿ ವೈಭವದಿಂದ ವಿವಾಹವಾದರು.

ಉಡುಪಿಗೆ ಗೋಕರ್ಣ ಮಠಾಧೀಶರ ಆಗಮನ— ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಶ್ರೀಮದ್ ದ್ವಾರಕಾನಾಥ ತೀರ್ಥ ಶ್ರೀಪಾದಂಗಳವರು ತಾ. 8-3-64ರಂದು ಮಂಗಳೂರಿನಿಂದ ಉಡುಪಿಗೆ ಆಗಮಿಸಿದರು. ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದ ಟ್ರಸ್ಟಿ ಡಾ| ಪಿ. ರಾಘವೇಂದ್ರ ನಾಯಕರು ಸ್ವಾಗತಿಸಿ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಕರೆದೊಯ್ದರು. ದೇವದರ್ಶನ, ಯಥೋಚಿತ ಸತ್ಕಾರದ ಬಳಿಕ ಶ್ರೀಗಳವರು ಭಾಷಣ ಮಾಡುತ್ತ ಶ್ರದ್ಧೆ ಭಕ್ತಿಪೂರ್ವಕ ಧರ್ಮವನ್ನು ಆಚರಿಸಬೇಕೆಂದು ಆಶೀರ್ವಚನಿಸಿದರು. ಶ್ರೀಗಳವರ ಮೊಕ್ಕಾಂ ಇರುವ ತನಕ ಪ್ರತಿನಿತ್ಯ ಪ್ರವಚನ ನಡೆಯಲಿದೆ.

ಕ್ರೀಡಾಕೂಟ— ಮಣಿಪಾಲ ಕಸ್ತೂರಬಾ ಮೆಡಿಕಲ್ ಕಾಲೇಜಿನ ವಾರ್ಷಿಕ ಕ್ರೀಡಾ ಕೂಟವು ತಾ 4-3-64ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಶ್ರೀ ಕೆ. ಆರ್. ರಾಮಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿನ ಡೀನ್ ಡಾ| ಎ. ಕೃಷ್ಣರಾವ್‌ರವರು ಎಲ್ಲರನ್ನೂ ಸ್ವಾಗತಿಸಿ ಭಾಷಣ ಮಾಡಿದ ಬಳಿಕ ಕ್ರೀಡಾ ಸಮಿತಿಯ ಉಪಾಧ್ಯಕ್ಷ ಡಾ| ಆರ್. ವಿ. ರಾವ್ ವರದಿ ಓದಿದರು. ಶ್ರೀಮತಿ ಕೆ. ಆರ್. ರಾಮಚಂದ್ರನ್ ಬಹುಮಾನಗಳನ್ನು ವಿತರಣೆ ಮಾಡಿದರು. ಕ್ರೀಡಾ ಕಾರ್ಯದರ್ಶಿ ಎಚ್. ಆರ್. ರಾವ್ ವಂದನೆಗಳನ್ನು ಅರ್ಪಿಸಿದರು.

ವಿದ್ಯಾರ್ಥಿ ಭವನದ ದಿನಾಚರಣೆ— ಬಂಟರ ಯಾನೆ ನಾಡವರ ಸಂಘ, ಮುಲ್ಕಿ, ಇದರ ಆಶ್ರಯದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ಭವನದ ಪ್ರಥಮ ದಿನಾಚರಣೆಯು ತಾ 2-3-1964ರಂದು ವಿಜಯಾ ಕಾಲೇಜಿನ ಪ್ರಿನ್ಸಿಪಾಲ ಡಾ| ಕೆ. ಬಿ. ರಾಮಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಭವನ ನಿವಾಸಿಗಳಾದ ಶ್ರೀ ಅತೀಶ ಕುಮಾರ್ ಮತ್ತು ವಗಾರ್ ಪರವಾದ ವೈಗರಿಂದ ಪ್ರಾರ್ಥನೆಯಾದ ನಂತರ ಡಾ| ಕೆ. ಬಿ. ಬಿ. ಶೆಟ್ಟರವರು ಸ್ವಾಗತ ಭಾಷಣವನ್ನು ಮಾಡಿದರು. ವಿದ್ಯಾರ್ಥಿ ಭವನದ ಗೌ. ಕಾರ್ಯದರ್ಶಿ ಶ್ರೀ ಕೆ. ಜಿ. ಮಂಜಯ್ಯನವರು ವರದಿಯನ್ನು ಓದಿದರು. ಸಭಿಕರಿಗೆ ಲಘೂಪಹಾರದ ಏರ್ಪಾಡನ್ನು ಮಾಡಲಾಗಿತ್ತು. ಭವನದ ನಿವಾಸಿಗಳು ಭವನಕ್ಕೆ ಒಂದು ಗಡಿಯಾರವನ್ನು ದಾನವಾಗಿ ಇತ್ತುದನ್ನು ಶ್ರೀ ಯಮ್. ಆರ್. ಯಚ್. ಪೂಂಜರು ಸ್ವೀಕರಿಸಿದರು. ಭವನದ ನಿವಾಸಿಗಳಿಗೂ ಊರ ಪ್ರಮುಖರಿಗೂ ಲಕ್ಕೀಡಿಪ್‌ನ ಮೂಲಕ ಯೋಗ್ಯ ಬಹುಮಾನಗಳನ್ನು ಕೊಡುವ ಏರ್ಪಾಡನ್ನು ಭವನ ನಿವಾಸಿಗಳಾದ ಶ್ರೀ ಯಮ್. ಬಾಲಕೃಷ್ಣ ಶೆಟ್ಟಿ ಮತ್ತು ಶ್ರೀ ಯಸ್. ಧನಪಾಲ ಶೆಟ್ಟರು ಮಾಡಿದ್ದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ವಿದ್ಯಾರ್ಥಿ ಭವನದ ಆವಶ್ಯಕತೆಯನ್ನು ವಿವರಿಸಿ, ಸಂಘದ ಕೆಲಸವು ವಿದ್ಯೆಯನ್ನು ಪ್ರೋತ್ಸಾಹಿಸಲು ಸಹಾಯವಾಗಿದೆಯೆಂದರು. ವಿವಿಧ ವಿನೋದಾವಳಿಗಳಲ್ಲಿ ಭವನದ ನಿವಾಸಿಗಳಲ್ಲದೆ ಶ್ರೀ ಬಿ. ಪ್ರೇಮನಾಥ ಶೆಟ್ಟಿ, ರತ್ನಾಕರ, ಕೆ. ಜಗನ್ನಾಥ ರೈ, ಕುಮಾರಿಯರಾದ ಕೆ. ಉಷಾಕಿರಣ, ಯಮ್. ಯಚ್. ಆನಂದಾ, ಯಮ್. ಯಚ್. ಅನಿತಾ, ಕೆ. ಶಶಿಕಲಾ ಮೊದಲಾದವರು ಭಾಗವಹಿಸಿದ್ದರು. ಶ್ರೀ ಕೆ. ಜಿ. ಮಂಜಯ್ಯನವರು ಧನ್ಯವಾದ ಸಮರ್ಪಿಸಿದರು.

ಶ್ರೀ ಕೆ. ವಿ. ಪೈಯವರ ಭಾಷಣ- ಭಾರತೀಯರು ಹಾಗೂ ಆಗ್ನೇಯ ಏಷ್ಯಾದ ರಾಷ್ಟ್ರಗಳ ಜನರ ನಡುವೆ ಬಾಂಧವ್ಯ ಬೆಳೆಯಬೇಕೆಂದು, ಆಗ್ನೇಯ ಏಷ್ಯಾದಲ್ಲಿ ಇಂಡಿಯ ಸಾಧನಗಳ ಇತ್ಯಾದಿ ಕೆಲಸಗಾರರಾಗಿರುವ ಶ್ರೀ ಕೆ. ವಿ. ಪೈರವರು ತಾ. 3ರಂದು ಮಣಿಪಾಲದಲ್ಲಿ ತಿಳಿಸಿದರು. ಬರ್ಮಾ, ಥೈಲೆಂಡ, ಇಂಡೋನೇಶಿಯಾ ಮತ್ತು ಮಲೇಶಿಯಾ ನಮ್ಮಂತೆಯೇ ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಾಗಿದ್ದು, ಭಾರತೀಯ ವಿದ್ಯಾರ್ಥಿಗಳಿಗೆ ಅಲ್ಲಿ ಧಾರಾಳ ಅವಕಾಶವಿದೆ ಎಂದು ರೋಟರಿ ಕ್ಲಬ್ಬಿನಲ್ಲಿ ಭಾರತ ಮತ್ತು ಆಗ್ನೇಯ ಏಷ್ಯಾ ಕುರಿತು ಭಾಷಣ ಮಾಡುತ್ತಾ ಅವರು ಹೇಳಿದರು.

ತಮ್ಮ ಕೇಂದ್ರ ಸ್ಥಳವಾಗಿರುವ ಬ್ಯಾಂಕಾಕ್ ನಗರವು ಬೆಂಗಳೂರಿಗಿಂತ ಸ್ವಲ್ಪ ದೊಡ್ಡದಾಗಿದ್ದರೂ ಬಹಳವಾಗಿ ಪ್ರಗತಿ ಹೊಂದಿದೆ. ಬೌದ್ಧ ಧರ್ಮವು ಥೈಲೆಂಡಿನ ಜನರಿಗೆ ಸುಖ ಸಂತೋಷಗಳನ್ನು ಕೊಟ್ಟಿದ್ದು, ಭಾರತದ ಪ್ರಾಚೀನ ಸಂಸ್ಕೃತಿಯ ಬಗ್ಗೆ ಅವರಿಗೆ ಬಹಳ ಗೌರವವಿದೆ. ಅವರು ಅನೇಕ ರೀತಿಗಳಲ್ಲಿ ವಾಸ್ತವಿಕ ದೃಷ್ಟಿಯವರಾಗಿದ್ದು, ಕೇಂದ್ರೀಕೃತ ಆಡಳಿತ ದಕ್ಷವಾಗಿದೆ ಎಂದು ಅವರು ತಿಳಿಸಿದರು.

ಇತ್ತೀಚೆಯ ಸಲಹೆಗಾರರಾಗಿ ಬ್ಯಾಂಕಾಕ್‌ಗೆ ಹೋಗುವ ಮುನ್ನ ಶ್ರೀ ಕೆ. ವಿ. ಪೈಯವರು ಅಂಚೆ ಇಲಾಖೆಯ ಡೈರೆಕ್ಟರ್ ಹಾಗೂ ಮೈಸೂರು ಸರ್ಕಲಿನ ಪ್ರಥಮ ಪೋಸ್ಟ್‌ಮಾಸ್ಟರ್ ಜನರಲ್ ಆಗಿ ಉದ್ಯೋಗ ಸೇವೆ ಸಲ್ಲಿಸಿದ್ದನ್ನು ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ರಮೇಶ ಪೈಯವರು ಸ್ಮರಿಸಿದರು. ಡಾ| ಎಂ. ಆರ್. ಭಟ್ಟರವರು ಅಮೇರಿಕದ ಮತ್ತು ಐರೋಪ್ಯ ದೇಶಗಳ ಪ್ರವಾಸದ ವೇಳೆ ಸಂಗ್ರಹಿಸಿದ ಚಿತ್ರಗಳನ್ನು ಪ್ರದರ್ಶಿಸಿದರು. ಕಾರ್ಯದರ್ಶಿ ಶ್ರೀ ಎ. ಜಿ. ಆಳ್ವರವರು ವಂದನಾರ್ಪಣೆ ಮಾಡಿದರು.

ವಾರ್ಷಿಕ ಮಹಾ ಸಭೆ— ತಾರೀಕು 8ರಂದು ಎಂ. ಜಿ. ಎಂ. ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯು ಕಾಲೇಜಿನ 'ರಿಕ್ರಿಯೇಶನ್ ಹಾಲ್'ನಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಎಸ್. ಎಸ್. ಪ್ರಭು, ಎಂ. ಎ. ಇವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಆರ್ಥರ್ ಫೆರ್ನಾಂಡಿಸ್ ಇವರು 1963ನೇ ವರ್ಷದ ಸಂಘದ ವರದಿಯನ್ನೋದಿ ಸಂಘದ ಪ್ರಗತಿಯನ್ನು ವಿವರಿಸಿದರು. ಕೋಶಾಧಿಕಾರಿ ಶ್ರೀ ರಘುಪತಿ ಪೈ ಇವರು ಸಂಘದ 1963ನೇ ವರ್ಷದ ಆಯವ್ಯಯದ ಪಟ್ಟಿಯನ್ನು ಸಭೆಯ ಮುಂದಿಟ್ಟರು. ವರದಿಯನ್ನೂ ಆಯವ್ಯಯದ ಪಟ್ಟಿಯನ್ನೂ ಸಭೆಯು ಅಂಗೀಕರಿಸಿತು. 1964ನೇ ವರ್ಷಕ್ಕೆ ಸಂಘದ ಆಡಳಿತ ಮಂಡಳಿಗೆ ಶ್ರೀ ಎಸ್. ಎಸ್. ಪ್ರಭುಗಳು ಅಧ್ಯಕ್ಷರಾಗಿ ಉಳಿದವರು ಆರಿಸಲ್ಪಟ್ಟರು. ಸದಸ್ಯರು ಸಂಘದ ಮುಂದಿನ ಅಭಿವೃದ್ಧಿಯ ಬಗ್ಗೆ ಕೆಲವು ಸೂಚನೆಗಳನ್ನಿತ್ತರು. ಬಳಿಕ ಕುಮಾರಿ ಪ್ರಭಾ, ಶ್ರೀ ಕೆ. ಜಿ. ಶ್ಯಾನುಭೋಗ್, ಅಲ್ಫ್ರೆಡ್ ಫೆರ್ನಾಂಡಿಸ್ ಮತ್ತು ಮಿಸ್ ಮೇರಿ ಫೆರ್ನಾಂಡಿಸ್ ಇವರು ಕೆಲವು ಗೀತೆಗಳನ್ನು ಹಾಡಿದರು. ಕೊನೆಗೆ ಭೋಜನಕೂಟ ನಡೆಯಿತು.

ಇಂಜನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ— ಶಿಸ್ತಿಗೆ ಹೆಚ್ಚು ಗಮನ ಕೊಡುವಂತೆ ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ್ ಹಾಗೂ ಅಧ್ಯಕ್ಷರಾದ ಶ್ರೀ ಎಂ. ಬಿ. ಶಿವನಂಜಪ್ಪನವರು ತಾ 24-2-64ರಂದು ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಏಳನೇ ವಾರ್ಷಿಕೋತ್ಸವದ ಅಧ್ಯಕ್ಷ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಮನವಿ ಮಾಡಿಕೊಂಡರು. ಪಂಚವಾರ್ಷಿಕ ಯೋಜನೆಗಳಲ್ಲಿನ ಅಭಿವೃದ್ಧಿ ಹಾಗೂ ದೇಶದ ಔದ್ಯಮಿಕ ಪ್ರಗತಿಯಲ್ಲಿ ಇಂಜಿನಿಯರುಗಳು ಹೆಚ್ಚು ಪ್ರಯೋಜನಕಾರಿಗಳಾಗುವ ಹಾಗೆ ತಾಂತ್ರಿಕ ಶಿಕ್ಷಣವನ್ನು ಪುನರ್ರೂಪಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ಡಾ. ಟಿ. ಎಂ. ಎ. ಪೈಗಳು ಸ್ವಾಗತಿಸಿದರು. ಪ್ರಿನ್ಸಿಪಾಲ್ ಶ್ರೀ ಎ. ವೆಂಕಟರಮಣ ಭಟ್ಟರು ವರದಿಯನ್ನು ಓದಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ಸೂರ್ಯನಾರಾಯಣರವರು ವಂದನಾರ್ಪಣೆ ಮಾಡಿದರು.

ಪಡುಕಳತ್ತೂರು— ತಾ. 1-3-64ರಂದು ಪಡುಕಳತ್ತೂರು ಶಾಲೆಯ ವಾರ್ಷಿಕೋತ್ಸವವು ಜರಗಿತು. ಬೆಳಿಗ್ಗೆ ಶ್ರೀ ಡಾ| ಯಂ. ಬಿ. ಶೆಟ್ಟಿ, ಕಾಪು ಇವರಿಂದ ಧ್ವಜವಂದನಾ ಕಾರ್ಯಕ್ರಮವು ನೆರವೇರಿತು. ನಂತರ ಸರ್ವ ಶ್ರೀ ದೇವದಾಸ ಪ್ರಭುಗಳ ನೇತೃತ್ವದಲ್ಲಿ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ಸಾಯಂಕಾಲ ಶ್ರೀ ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸ್ವಾಗತ ಭಾಷಣವನ್ನು ಶಾಲಾ ಮೆನೇಜರ್ ಶ್ರೀ ಅಯ್ಯಣ್ಣ ಯಾನೆ ವೆಂಕಪ್ಪಯ್ಯನವರು ಮಾಡಿದರು. ಶಾಲಾ ನೂತನ ಕಟ್ಟಡದ ಉದ್ಘಾಟನೆಯನ್ನು ಶಿರ್ವದ ಡಾ| ಯು. ಕೆ. ಆಚಾರ್ಯರು ನೆರವೇರಿಸಿದರು. ಶಾಲಾ ವರದಿ ವಾಚನವನ್ನು ಮುಖ್ಯೋಪಾಧ್ಯಾಯ ಶ್ರೀ ಕೆ. ವೇಣಪ್ಪಯ್ಯನವರು ಓದಿದರು. ಶಾಲಾ ಮೆನೇಜರ ಭಾವಚಿತ್ರ ಅನಾವರಣವನ್ನು ಶ್ರೀ ಎಲ್. ಮೆಂಡೋನ್ಸರವರು ನೆರವೇರಿಸಿದರು. ಬಹುಮಾನ ವಿತರಣೆಯು ವಿದ್ಯಾಧಿಕಾರಿ ಸಾಹಿಂಡಯ್ಯನವರಿಂದ ನೆರವೇರಿತು. ಹಳೆ ವಿದ್ಯಾರ್ಥಿ ಶ್ರೀ ರಾಘವೇಂದ್ರ ರಾವ್ ಇವರಿಂದ ಸ್ವಸ್ತಿವಾಚನವಾಯಿತು. ಅಧ್ಯಕ್ಷರ ಭಾಷಣದ ನಂತರ ಶ್ರೀ ಜಿ. ಸೋಮನಾಥನವರಿಂದ ವಂದನಾರ್ಪಣೆಯಾಯಿತು. ವಿವಿಧ ಮನೋರಂಜನೆಗಳೊಂದಿಗೆ ಸಭಾಂತ್ಯವಾಯಿತು.

ಸಸ್ತಾರ— ಶ್ರೀ ಕೆ. ಶ್ಯಾಮರಾವ್, ಬಿ. ಶ್ಯಾನುಭೋಗ್ ಇವರ ರಚನಾದಿ ಹೋಟೆಲಿನ ಹೊಸ ಕಟ್ಟಡದ ಉದ್ಘಾಟನೆಯು ತಾ. 11-3-64ರಂದು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ವಿನಾಯಕ ರಾವ್‌ಜಿ ಪಾಟೀಲ್ ಇವರ ಶುಭ ಹಸ್ತಗಳಿಂದ ನಡೆಯಿತು.

ಪೆರಡಾಲ— ಸರಕಾರಿ ಕಿರಿಯ ಬುನಾದಿ ಶಾಲೆಯ ವಾರ್ಷಿಕೋತ್ಸವವು ತಾರೀಕು 29-2-64ರಂದು ವಿದ್ವಾನ್ ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಇವರ ಅಧ್ಯಕ್ಷತೆಯಲ್ಲಿ, ಶ್ರೀ ಯಂ. ನಾರಾಯಣ ಭಟ್ ಇವರಿಂದ ಉದ್ಘಾಟಿಸಲ್ಪಟ್ಟಿತು. ದಿವಂಗತ ರಾಷ್ಟ್ರಕವಿ ಗೋವಿಂದ ಪೈಯವರ ಭಾವಚಿತ್ರ ಅನಾವರಣವು ಮಧೂರು ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಶ್ಯಾಮ ಭಟ್ ಇವರಿಂದ, ಬು. ಶಾಲೆಗಳ ಸರ್ಕಲ್ ಅಧಿಕಾರಿಗಳಾದ ಡಿ. ವಿ. ತಿಮ್ಮಪ್ಪ ಶೆಟ್ಟಿರ ಭಾವಚಿತ್ರ ಅನಾವರಣ ಅಸಿಸ್ಟೆಂಟ್ ಎಜ್ಯುಕೇಶನಲ್ ಆಫೀಸರ್ ಶ್ರೀ ಯಂ. ಶಿವರಾಮ ಆಚಾರ್ ಇವರಿಂದಲೂ ನೆರವೇರಿತು.

ಶಿರ್ವ— ತಾ 8ರಂದು ಸ್ಥಳೀಯ ಆಸ್ಪತ್ರೆಯಲ್ಲಿ ಬೊಂಬಾಯಿಯ ಪ್ರಸಿದ್ಧ ವ್ಯಾಪಾರಿ ಕೇಂದ್ರಸ್ಥಮಿಗಳಾದ ಶ್ರೀ ಕರ್ತನ್ಯಾರ ಆರ್. ಯಸ್. ಶೆಟ್ಟಿಯವರಿಗೆ ಡಾ| ವೈ. ಆರ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಯಿತು. ಕಾರ್ಯದರ್ಶಿಗಳಾದ ಡಾ| ಕೆ. ಆರ್. ಎ. ಕೃಷ್ಣನವರು ಮುಖ್ಯ ಅತಿಥಿಗಳಿಗೆ ಸನ್ಮಾನ ಪತ್ರವನ್ನು ನೀಡಿದರು. ಶ್ರೀ ಯಲ್. ಮೆಂಡೋನ್ಸರೂ ಡಾ| ಎಂ. ಕೆ. ಆಚಾರ್ ಅವರೂ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಸದಸ್ಯರಿಗೆ ನಿಧಿ ಸಂಗ್ರಹ ಕಾರ್ಯದಲ್ಲಿ ಸಹಕರಿಸಿದ ಶ್ರೀ ಶೆಟ್ಟರ ಸೇವೆಯನ್ನು ಪ್ರಶಂಸಿಸಿದರು. ಮೈ. ರೀ. ಫಾ. ಗೆ ನೀಡ್ಲಿಸರು ಮತ್ತು ಅತಿಥಿಗಳನ್ನು ಕೊಂಡಾಡಿದರು.

ಮುಖ್ಯ ಅತಿಥಿಗಳು ಮೆಡಿಕಲ್ ರಿಲೀಫ್ ಎಸೋಸಿಯೇಶನ್ ಕೈಗೊಂಡ ಸಾಹಸವನ್ನು ಪ್ರಶಂಸಿಸಿದರು. ಶ್ರೀ ಕೆ. ಯಂ. ಹೊಳ್ಳರು ಧನ್ಯವಾದಗಳನ್ನಿತ್ತರು.

ಡಾ| ಶ್ರೀ ಮಾಲಿ

ಕೇಂದ್ರದಲ್ಲಿ ಶಿಕ್ಷಣಸಚಿವರಾಗಿದ್ದ ಡಾ| ಶ್ರೀಮಾಲಿಯವರನ್ನು ಮೈಸೂರ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಬೇಕೆಂದು ಕೇಳಿಕೊಂಡಾಗ ಮೊದಲವರು ಸ್ವೀಕರಿಸಲಿಲ್ಲವೆಂಬ ವಾರ್ತೆ ಹಬ್ಬಿತ್ತು. ಸ್ವೀಕರಿಸದಿರಲು ಅವರ ಮನಸ್ಸನ್ನು ಈ ಪದವಿಗೇರಬಾರದೆಂಬ ಅಭಿಪ್ರಾಯವೂ ಅಲ್ಲಲ್ಲಿ ವ್ಯಕ್ತವಾಗಿತ್ತು. ಆದರೆ, ಈ ದಿನಗಳ ವರ್ತಮಾನಪತ್ರಿಕೆಯೇ ಶ್ರೀ ಮಾಲಿಯವರು ತಮ್ಮ ಹೊಸ ಹುದ್ದೆಯನ್ನು ಸ್ವೀಕರಿಸುವರು ಎಂದು ತಿಳಿಯುತ್ತದೆ. ಉತ್ತರ ಪ್ರದೇಶದ ಅಜಿತ ಪ್ರಸಾದ ಜೈನರಿಗೆ ಲೋಕಸಭೆಯಲ್ಲಿ ಸ್ಥಾನ ದೊರಕಿಸಿಕೊಟ್ಟ ಉದಾರ ಕರ್ನಾಟಕವೀಗ ಅಲ್ಲಿನವರನ್ನೇ ವಿಶ್ವವಿದ್ಯಾಲಯದ ಉಪಕುಲಪತಿಯೆಂದು ನೇಮಿಸಿದೆ. ಅಂದು ಔದಾರ್ಯದ ಕುರುಹೆಂದು ಹೊಗಳಿದ ಜನ ಅದೇ ಮಾತನ್ನೀಗ ಮರಳಿ ಹಾಡಬಹುದು.

ಉಡುಪಿ ಡಿ. ಮು ಕೋರ್ಟಿನಲ್ಲಿ

R I A 182/ 64 O. S 264/ 62

1. ಶೀನಪ್ಪ ಸೆಟ್ಟಿ
2. ಸಂಜೀವ ಸೆಟ್ಟಿ
3. ಸದಾನಂದ ಸೆಟ್ಟಿ

} ಅರ್ಜಿದಾರರು ಪ್ರತಿವಾದಿರು

ಮತ್ತು

1. ಸಂಕಪ್ಪ ಸೆಟ್ಟಿ (ಈಗ ಮೃತ)
2. ಸುಂದರಿ ಸೆಟ್ಟಿ } ರೆಸ್ಪಾಂಡೆಂಟ್ (ವಾದಿರು)

ಇವರೊಳಗೆ

ಮೇಲ್ಕಂಡ ಸಂಬಂಧದಲ್ಲಿ ಪ್ರತಿವಾದಿರಾದ ಅರ್ಜಿದಾರರ ಸಾಧನೆ ನಿಜವೆಂತ ತೀರ್ಮಾನಿಸಿಯುದೆ ಈ ಬಾಬಿನಲ್ಲಿ ರಿಸೀವರ್ ಕೆ. ನಾರಾಯಣ ರಾಯರು ವಸೂಲು ಮಾಡಿ ಕೋರ್ಟು ಡಿಪೋಜಿಟಿನಲ್ಲಿಟ್ಟ ರೂ. 210-00 ಪ್ರತಿವಾದಿರು ಕೋರ್ಟಿಗೆ ಕಟ್ಟಿದ ರೂಪಾಯಿ 71-75 ಕೂಡಿ ರೂಪಾಯಿ 281-75 ಪ್ರತಿವಾದಿರಾದ ಅರ್ಜಿದಾರ್ರಿಗೆ ಕೊಡಿಸಬೇಕಾಗಿ ಅರ್ಜಿ ಕೊಟ್ಟಿರುವದಲ್ಲದೆ ವ್ಯಾಜ್ಯಕ್ಕೆ ಕಾರಣವಾದ ಆಸ್ತಿಗೆ ನೇಮಕವಾದ ರಿಸೀವರ್ ಡಿಸ್ಚಾರ್ಜ್ ಮಾಡಬೇಕಾಗಿ ಕೂಡಾ ಅರ್ಜಿದಾರ್ರು ಅರ್ಜಿ ಕೊಟ್ಟ ಬಾಬಿನಲ್ಲಿ— ಸಂಕಪ್ಪ ಸೆಟ್ರು ಮೃತರಾಗಿರುವದರಿಂದ ಯಾರಾದರೂ ಅನ್ಯ ಜನರು ಆಕ್ಷೇಪಿಸುವವರಿದ್ದರೆ ತಾರೀಕು 0-4-64ಕ್ಕೆ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಯಪಡಿಸಲಾಗಿದೆ.

(as per order of the court)

B Y. Holla.

Advocate for Petitioner

Udipi
8-3-64

ಆಭಾರ ಮನ್ನಣೆ

ಕಳೆದ ವಾರ, ನವಯುಗದ ಪರಿಷ್ಕರಣಕ್ಕಾಗಿ ನೆರವಾದ ಶ್ರೀಮತಿ ಗಿರಿಜಾ ಎಂ. ಶೆಟ್ಟಿ, ಕಾಪು, ಡಾ| ಕೆ. ರಘುರಾಮ ಶೆಟ್ಟಿ, ಸುರತ್ಕಲ್, ಶ್ರೀ ಎಂ. ವಾಸುದೇವ ರಾವ್, ಸುರತ್ಕಲ್, ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ, ಮಂಗಳೂರು, ಶ್ರೀ ಬಿ. ಮಂಜಯ್ಯ ಹೆಗ್ಡೆ, ಎತ್ತಕೇರಿ, ಮಂಗಳೂರು, ಶ್ರೀ ಎಸ್. ಸದಾ ಶೆಟ್ಟಿ, ಪವ್ರ ನಿವಾಸ, ಕಿನ್ನಿಗೋಳಿ, ಶ್ರೀ ಪಾಂಡುರಂಗ ಮಹಾಬಲ ರೈ, ಬಿಜಕ್ಕರ್ ಇವರೇ ಮೊದಲಾದವರಿಗೂ ಹೊಸ ಚಂದಾದಾರರನ್ನು ಒದಗಿಸಿ ಕೊಟ್ಟ ಡಾ| ಯು. ಚಂದ್ರಶೇಖರ, ಕುಚುತಲ್ಲಿಗೆ ಇವರಿಗೂ ಈ ಮೂಲಕ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ.

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯವಿಟ್ಟು ತಮ್ಮ ಬಾಕಿಯನ್ನು ಆದಷ್ಟು ತ್ವರೆಯಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್, ನವಯುಗ.

ಅಭಿಪ್ರಾಯ ಮಂಡನೆ

ತುರ್ತು ಪರಿಸ್ಥಿತಿ ಯಾರಿಗೆ?

ಡಿಸೆಂಬರ್--ದಿನಾಂಕ 22-1963 ರಂದು, ಬೆಂಗಳೂರು ನಗರದ "ರವೀಂದ್ರ ಕಲಾಕ್ಷೇತ್ರ"ವೆಂಬ ಭವ್ಯವಾದ ಕಟ್ಟಡದಲ್ಲಿ ರಾಜ್ಯ ಸರಕಾರದ ಸಂಗೀತ ನಾಟಕ ಎಕಾಡಮಿಯ ಕಡೆಯಿಂದ ಏಳು ಮಂದಿ, ಸಂಗೀತ, ನಾಟಕ ಕಲಾಕೋವಿದರನ್ನು ಸನ್ಮಾನಿಸುವ ಸಮಾರಂಭ ಏರ್ಪಾಡಾದಗಿತ್ತು. ಈ ಸಮಾರಂಭದ ಅಧ್ಯಕ್ಷ ಪೀಠದಲ್ಲಿ ಮುಖ್ಯ ಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರು ವಿರಾಜಮಾನರಾಗಿದ್ದರು. ಶ್ರೀ ನಿಟ್ಟೂರು ಶ್ರೀನಿವಾಸರಾಯರು ಉದ್ಘಾಟಕರಾಗಿಯೂ ಶ್ರೀ ವೆಂಕಟಾಚಲಂ ಅವರು ಸನ್ಮಾನ ನೀಡುವವರಾಗಿಯೂ ಇದ್ದು, ಕಲಾವಿದರ ಪರವಾಗಿ ಅಂದು ಸನ್ಮಾನಿತರಾದ ಶ್ರೀರಂಗರು ಧನ್ಯವಾದ ಸಮರ್ಪಣೆ ಮಾಡುವವರಾಗಿದ್ದರು.

ಸನ್ಮಾನ ಹೊಂದಿದ ಕಲಾವಿದರಲ್ಲಿ, ಯಕ್ಷಗಾನ ಮತ್ತು ನಾಟಕಾಭಿನಯಕ್ಕೆ, ಶ್ರೀ ಬಲಿಪ ನಾರಾಯಣ ಭಾಗವತರು, ಹಾಗೂ ಮುಂಡಾಜೆಯ, ನಾಟ್ಯಕಲಾ ವಿಶಾರದ, ಅಭಿನಯ ವಿಭೂಷಣ. ಶ್ರೀ ಎಂ. ರಂಗನಾಥ ಭಟ್ಟರು, ಇವರೀರ್ವರು ನಮ್ಮ ಜಿಲ್ಲೆಯವರಾಗಿದ್ದರು. ಬೇರೆ ಐವರಲ್ಲಿ ನಾಟಕ ರಚನೆ, ನೃತ್ಯ ಅಭಿನಯ, ದಕ್ಷಿಣಾದಿ, ಮತ್ತು ಉತ್ತರಾದಿ ಸಂಗೀತದ ವಿದ್ವಾಂಸರು ಕ್ರಮವಾಗಿ, ಶ್ರೀರಂಗ, ದೇಜಮ್ಮ, ಜಟಪ್ಪ, ಸುಬ್ಬರಾಮಯ್ಯ ಹಾಗೂ ಬಸವರಾಜ ಮನ್ಸೂರ್ ಇವರಿಲ್ಲ ಅಂದಿನ ಸನ್ಮಾನಿತ ವಿದ್ವಾಂಸರಾಗಿದ್ದರು. ಸನ್ಮಾನ ಪಡೆದವರ ವಿದ್ಯಾಪಾಂಡಿತ್ಯದ ಪ್ರದರ್ಶನವನ್ನೂ ಏರ್ಪಡಿಸಲಾಗಿದ್ದುದರಿಂದ, ಆ ಸುಂದರ—ವಾದ ಸೌಧದಲ್ಲಿ ನಗರದ ನೂರಾರು ಮಂದಿ ನಾಗರಿಕರು, ಸುಖದಾಯಕವಾದ ಆಸನಗಳ ಮೇಲೆ ಸುಖಾಸೀನರಾಗಿ, ಅಂದಿನ ಸಮಾರಂಭಕ್ಕೆ ಶೋಭಾಯಮಾನರಾಗಿದ್ದರು.

ಉದ್ಘಾಟನಾ ಭಾಷಣದಲ್ಲಿ ಶ್ರೀ ನಿಟ್ಟೂರು ಶ್ರೀನಿವಾಸರಾಯರು, ಸ್ವತಂತ್ರ ಭಾರತದ, ಕಲಾವಿದರನ್ನು ಗೌರವಿಸುತ್ತಿರುವ ಈ ಕಾರ್ಯವನ್ನು ಪ್ರಶಂಸಿಸುತ್ತ, "ಹೀಗೆ ಸನ್ಮಾನಿಸುವ ರೀತಿ—ಸನ್ಮಾನ ಪಡೆದವರಲ್ಲಿ ಈ ಸನ್ಮಾನವು ತಮಗಿತ್ತ ಸಹಾಯ ರೂಪೀ ಸಹಕಾರವೆಂಬ ಭಾವನೆ ಅಂಕುರಿಸುವಂತಿರಬೇಕು" ಎಂಬುದಾಗಿ ಸೂಚಿಸಿದರು. ಶ್ರೀ ಅ. ನ. ಕೃ. ಅವರು ಸಹ, ಸಾಹಿತ್ಯ—ನಾಟಕದ ಕುರಿತಾಗಿ ಉದ್ಬೋಧಕ ಭಾಷಣ ಮಾಡಿದರು. ಕಲಾವಿದರ ಪರವಾಗಿ ಧನ್ಯವಾದ ಸಮರ್ಪಣೆ ಮಾಡುತ್ತ ಕೊನೆಗೆ ಶ್ರೀ ರಂಗರು "ತುರ್ತು ಪರಿಸ್ಥಿತಿಯಿಂದಾಗಿ ಸಾಹಿತ್ಯ ಸಂಸ್ಕೃತಿ ವಿಭಾಗವನ್ನು ಮುಚ್ಚಲಾಗಿದ್ದು, ಪುಸ್ತಕಗಳಿಗೆ ಬಹುಮಾನ ನೀಡುವುದನ್ನು ತಡೆಹಿಡಿದಿರುವ ಸರಕಾರದ ಧೋರಣೆಯನ್ನು ಕಟುವಾಗಿ ಟೀಕಿಸುತ್ತ ಈ ತುರ್ತು ಪರಿಸ್ಥಿತಿ ಕೇವಲ ಸಾಹಿತ್ಯಕ್ಕೆ ಪುರಸ್ಕಾರ ನೀಡುವ ಯೋಜನೆಗೆ ಮಾತ್ರವೇ ಅನ್ವಯಿಸುತ್ತಿರುವಂತೆ ತೋರುತ್ತಿರುವುದಿದು, ಅತ್ಯಂತ ಖೇದದಾಯಕವಾಗಿದೆ!' ಎಂದು ನುಡಿದರು. ಶ್ರೀ ರಂಗರ ಈ ಮಾತು ಮಂಗಿಯುವುದರೊಳಗಾಗಿಯೇ ಜನರ ಪ್ರಚಂಡಕರ ತಾಡನವಾಯಿತು. ಕೊನೆಗೆ ಶ್ರೀ ರಂಗರು ಅಂದಿನ ಸಮಾರಂಭದ ಕುರಿತು ಸಂತೋಷವನ್ನು ವ್ಯಕ್ತಪಡಿಸುತ್ತ ಸಾಹಿತ್ಯಕ್ಕೆ ಪುರಸ್ಕಾರ ನೀಡಲೇ ಬೇಕಾಗಿರುವ ಕುರಿತು, ಮುಖ್ಯ ಮಂತ್ರಿಗಳು, ಸವಿವರವಾಗಿ ತಿಳಿಸಬೇಕು, ಎಂದು ಕೇಳಿಕೊಂಡು ತಮ್ಮ ಧನ್ಯವಾದಾರ್ಪಣೆಯನ್ನು ಕೊನೆಗೊಳಿಸಿದರು.

ಶ್ರೀ ರಂಗರ ಮಾತಿಗೆ ಉತ್ತರವೆಂಬತೆ ಮುಖ್ಯ ಮಂತ್ರಿ ನಿಜಲಿಂಗಪ್ಪನವರು— ಬಹುಜಾತ ಧ್ವನಿಯಿಂದ ಮಾತನಾಡಿದರು— 'ಶ್ರೀ ರಂಗರು ಸ್ವಲ್ಪವಾದರೂ ಸಂತೋಷಗೊಂಡಿರುವುದೇ ತಮಗೆ ಸಂತೋಷವೆನ್ನುತ ಮುಖ್ಯಮಂತ್ರಿಯಾದವನು ಎಲ್ಲವನ್ನೂ ಕೇಳಬೇಕಾಗುತ್ತದೆ.' ಎಂಬ ಪೀಠಿಕೆಯೊಡನೆ, ಆ ದಿನದ ತಮ್ಮ ಸ್ವಂತ ಕಾರ್ಯಕ್ರಮಗಳ ಎಡೆಯಲ್ಲಿ ಕಂಡುಬಂದ ಕೆಲವು ಸ್ವಾರಸ್ಯವಾದ ಸಂಗತಿಗಳನ್ನು ವಿವರಿಸುತ್ತ, ಎಲ್ಲರೂ ಎಲ್ಲವನ್ನೂ ಮಾಡಲು ಆಗುವುದಿಲ್ಲವೆಂಬ ಅಂಶವನ್ನು ಸೂಕ್ಷ್ಮವಾಗಿ ಸೂಚಿಸಿದರು. ಅವರು ಹೇಳಿದ ಸ್ವಾರಸ್ಯಗಳಲ್ಲಿ- ಅಂದು ಕಾರಿನಲ್ಲಿ ಕುಳಿತು ಬರುವಾಗ ಅವರು ನೋಡಿದ ಒಡ್ಡರ ಶ್ರಮಜೀವಿ ಹೆಣ್ಣುಮಗಳೊಬ್ಬಳ ವಿಚಾರ ಮಾರ್ಮಿಕವಾಗಿತ್ತು.

ರಸ್ತೆಯ ಬದಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದ ಆ ಜವ್ವನಾಂಗಿಯನ್ನು ಅವರು ಎರಡು ನಿಮಿಷಗಳಕಾಲ ಎವೆಯಿಕ್ಕದೆ ನೋಡಿದರಂತೆ! ಆ ಹುಡುಗಿ ಅಚ್ಚಕಪ್ಪು ಎಂದರೆ- ತೊಳೆದ ಕೆಂಡದಂತಿದ್ದಳಾದರೂ, ಆಕೆಯ ಹೃಷ್ಟ, ಪುಷ್ಟವಾದ ಅಂಗ ಸೌಷ್ಠವ, ಆರೋಗ್ಯದ ಕಾಂತಿ, ಹಾಗೂ ಸೌಂದರ್ಯವು ಮಂತ್ರಿಗಳನ್ನು ಮಂತ್ರಮುಗ್ಧರನ್ನಾಗಿಸಿತಂತೆ! 'ಶ್ರಮ ಜೀವಿಗಳಲ್ಲಿ ತಾನು ಇದುವರೆಗೆ ಅಂತಹ ಆರೋಗ್ಯವಂತೆಯನ್ನು ಕಂಡಿಲ್ಲವೆನ್ನುತ್ತ, ಮಂತ್ರಿಗಳು- 'ಅಂತಹ ಹುಡುಗಿ ನನ್ನ ಮಗಳಾಗಬೇಕಿತ್ತು! ಎಂದು ಹೇಳಿದರು. ಮತ್ತು ತಾನು ಚಿತ್ರಗಾರನಾಗಿದ್ದರೆ, ಆಕೆಯ ಚಿತ್ರವನ್ನು ಬರೆದು ತೋರಿಸುತ್ತಿದ್ದೆ! ಎಂದೆನ್ನುತ್ತ ಸಾಹಿತ್ಯ- ನಾಟಕ, ಕವಿತೆ, ಕಲೆ ಇದೆಲ್ಲವೂ ಸಮಾಜದಿಂದಲೇ ಸೃಷ್ಟಿಯಾಗುತ್ತವೆ, ಆದರೆ, ಅವನ್ನು ಚಿತ್ರಿಸುವ ಶಕ್ತಿ- ಪ್ರತಿಭೆ ಕೆಲವರಿಗೆ ಮಾತ್ರ ಇರುವುದು! ಎನ್ನುತ್ತ ಕಲಾವಿದರಿಗೆ ಶುಭವನ್ನು ಕೋರಿ ತಮ್ಮ ಭಾಷಣವನ್ನು ಮುಗಿಸಿದಾಗ ಕರತಾಡನಗಳ ಸುರಿಮಳೆಯೇ ಆಯಿತು.

ಆ ಬಳಿಕ ಅಂದು ಸನ್ಮಾನ ಪಡೆದವರ ಸಂಗೀತ ಯಕ್ಷಗಾನ--ನೃತ್ಯ, ನಡೆಯಿತು. ಅರವತ್ತು ತುಂಬಿದ ದೇಜಮ್ಮನವರು — ಇಪ್ಪತ್ತರ ಯುವತಿಯಂತೆ ಹಾಡಿದರಲ್ಲದೆ, ತಮ್ಮ ಶಿಷ್ಯೆಯರ ಭರತನಾಟ್ಯವನ್ನು ಬಹಳ ಚೆನ್ನಾಗಿ ಪ್ರದರ್ಶನ ಮಾಡಿಸಿದರು. ಶ್ರೀ ಬಲಿಪನ ನಾರಾಯಣ ಭಾಗವತರು ತಮ್ಮ ತೀಕ್ಷ್ಣವಾದರೂ ಮಧುರ ಸ್ವರದಿಂದ "ಮಾದದಿಂದಾ ನಿನಾ....", ಪದ್ಯವನ್ನು ಆರಂಭಿಸಿ ಚಂಡೆ ಮದ್ದಳೆಗಳು ಅದಕ್ಕೆ ಮೇಳೈಸಿದಾಗ ನನ್ನ ಪಕ್ಕದಲ್ಲಿ ಕುಳಿತವರೊಬ್ಬರು—'ಅದು ಅದ್ಭುತವಾಗಿದೆ!' ಎಂದರು. ಬಳಿಕ ದಕ್ಷಿಣಾದಿ ಸಂಗೀತವೂ ಚೆನ್ನಾಗಿತ್ತು ಶ್ರೀ ಬಸವರಾಜ ಮನ್ಸೂರರ ಉತ್ತರಾದಿ ಸಂಗೀತವು ಎಲ್ಲರನ್ನೂ ಮುಗ್ಧಗೊಳಿಸಿತು. ಅವರ ಉತ್ತರಾದಿ ಸಂಗೀತ ಹಾಗೂ ವಿದ್ವತ್ತನ್ನು ಕಂಡ ಉತ್ತರದವರೊಬ್ಬರು, ಅವರ ಪರಿಚಯ ಕೇಳಿದಾಗ ಅವರು ಶುದ್ಧ ಕರ್ನಾಟಕೀ ಮನುಷ್ಯ ಎಂದು ನಾನು ಪರಿಚಯ ಹೇಳಿದಾಗ ಅವರು ಆಶ್ಚರ್ಯಚಕಿತರಾದರು!

ಸುರಲೋಕದ ದೇವೇಂದ್ರನಸಭೆಯ ಕಲ್ಪನೆಯನ್ನು ಹುಟ್ಟಿಸುತ್ತಿದ್ದ ರವೀಂದ್ರ ಕಲಾಕ್ಷೇತ್ರದ ವೇದಿಕೆಯಮೇಲೆ, ಅಂದು ಸನ್ಮಾನಿತರಾದ ಕಲಾವಿದರು ಶಾಲು ಜೋಡಿ, ನಟರಾಜ ವಿಗ್ರಹ ಹಾಗೂ ಸಂಭಾವನೆಯನ್ನು ಪಡೆಯುತ್ತಿದ್ದಾಗ ಕೋಲ್ ಮಿಂಚು ಮಿಂಚುವಂತೆ ಕೆಮರಾದಾಬಲ್ಬುಗಳು ಮಿಂಚುತ್ತಿರಲು ಧ್ವನಿವರ್ಧಕದ 'ಗುಡು ಗುಡು' ಶಬ್ದವು ಗುಡುಗಿನೋಪಾದಿಯಲ್ಲಿ ಕೇಳಿಸುತ್ತ, ವರ್ಷಾಕಾಲದ ಆರಂಭದ ಕಲ್ಪನೆಯನ್ನು ಮಾಡಿಸುತ್ತಿತ್ತೆಂದರೆ, ಇನ್ನೇನೂ ಅತಿಶಯೋಕ್ತಿಯಿಲ್ಲ. ಇಂತು ಈ ಸಮಾರಂಭವು ಪೂರ್ಣಗೊಂಡಿತು.

ಮಾನ್ಯ ಶ್ರೀರಂಗ, ವೆಂಕಟಾಚಲಂ— ಹಾಗೂ ಅ. ನ. ಕೃ. ಅವರು ಹೇಳಿದಂತೆ, ಕವಿ ಸಾಹಿತಿಗಳನ್ನು ಪ್ರೋತ್ಸಾಹಿಸಿ ಸನ್ಮಾನಿಸುವ ಪರಂಪರೆ ಸ್ಥಗಿತವಾಗದೆ, ಎಂದಿಗಿಂತಲೂ ಹೆಚ್ಚಾಗಿ ವಿಕಾಸಗೊಳ್ಳಬೇಕಾದುದು, ಅತಿ ಪ್ರಾಮುಖ್ಯವಾಗಿದೆ. ಸಾಹಿತ್ಯವಿಲ್ಲದೆ ಸಂಗೀತ ಉಪ್ಪಿಲ್ಲದ ಊಟದಂತೆ ಎನಿಸುವುದಿಲ್ಲವೇ? "ಸಾಹಿತ್ಯ ಮಪಿ ಸಂಗೀತಂ ಸರಸ್ವತ್ಯಾಸ್ತನದ್ವಯಂ" ಎಂದು ಹೇಳಿಲ್ಲವೇ? ಹಾಗಿರುವಾಗ—ಕವಿ-ಸಾಹಿತಿಗಳನ್ನೂ ಸಹ, ಸಂಗೀತ-ನೃತ್ಯ ಕಲಾವಿದರಂತೆಯೇ, ಸನ್ಮಾನಿಸಬೇಕಾದುದು ಮುಖ್ಯ ಕರ್ತವ್ಯವಾಗಿದೆ. ಸಾಹಿತ್ಯಕ್ಕೆ ಪುರಸ್ಕಾರ ನೀಡುವ ಯೋಜನೆಗೆ, ಆಕಸ್ಮಾತ್ತಾಗಿ ಅಂಟಿಕೊಂಡ "ತುರ್ತು ಪರಿಸ್ಥಿತಿ"ಯು ತೊಲಗಿ, ಸಮಾಜ ಶಿಕ್ಷಕರಾದ ಕವಿ, ಸಾಹಿತಿಗಳೂ ಸನ್ಮಾನಿಸಲ್ಪಡಲಿ, ಎಂದು ಹಾರೈಸುತ್ತೇನೆ.

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

R. E. P. No. 40/1963.

(ಮಂಗಳೂರು ಸಬ್ ಕೋರ್ಟಿನ O. S. 172/1961)

ಅನ್ನಪೂರ್ಣವತಿ ಕೂಡಾ —ಅರ್ಜಿದಾರರು,

ಮತ್ತು

ಸರಸ್ವತಿ ಕೂಡಾ —ಎದುರು.

3ನೇ ಎದು:— ನಾಭಿರಾಜ ಪಡಿವಾಳ, ಸರಸ್ವತಿಯ ಮಗ, C/O ಲಕ್ಷ್ಮೀ ನಿವಾಸ ಬುಧವಾರಪೇಟೆ, ಪೂನಾ.

4ನೇ ಎದು:—ಧರ್ಮರಾಜ ಪಡಿವಾಳ, ಸರಸ್ವತಿಯ ಮಗ, C/O ರಾಜಲಕ್ಷ್ಮಿ ಪಿಕ್ಚರ್ಸ್, ವಿಜಯವಾಡಾ, ಆಂಧ್ರ ಪ್ರದೇಶ ಇವರಿಗೆ ತಿಳಿಸುವುದೇನೆಂದರೆ:—

ಈ ಮೇಲ್ಕಾಣಿಸಿದ ಅಮಲ್ಜಾರಿಯಲ್ಲಿ, ನಿಮ್ಮ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ಅರ್ಜಿದಾರರು ಕೋರ್ಟಿಗೆ ದಾಖಲು ಮಾಡಿರುವ ಏಲಂ ಇಸ್ತಿಹಾರಿನ ಷರತ್ತುಗಳನ್ನು ನಿರ್ಣಯಿಸಲಿಕ್ಕೆ 1964ನೇ ಇಸ್ವಿ ಮಾರ್ಚ ತಿಂಗಳು 25ನೇ ತಾರೀಕು ನಿಶ್ಚಯಿಸೋಣಾಗಿರುವುದರಿಂದ, ಸದ್ರಿ ಇಸ್ತಿಹಾರಿಗೆ ನಿಮ್ಮದೇನಾದರೂ ಆಕ್ಷೇಪಗಳಿದ್ದಲ್ಲಿ ಸದ್ರಿ ದಿವಸ ಬೆಳಿಗ್ಗೆ 11 ಘಂಟೆಗೆ ಈ ಮೇಲೆ ಹೇಳಲಾದ ಕೋರ್ಟಿನ ಮುಂದೆ ಹಾಜ್ರಾಗಿ ನಿವೇದಿಸಿಕೊಳ್ಳತಕ್ಕದ್ದು.

(ಕೋರ್ಟಿನ ಹುಕುಂ ಪ್ರಕಾರ)

Viswanatha Hegde K.
ಅರ್ಜಿದಾರರ ಕಡೆ ಎಡ್ವೊಕೇಟ್.

ಉಡುಪಿ, ತಾ. 9-3-64.

ಪುತ್ತೂರು ಡಿ. ಮು ಕೋರ್ಟಿನಲ್ಲಿ

R I A 1137/63 O S 383/62.

ಚೊಲ್ಲ ಗೌಡ —ವಾದಿ

ವೀರಮ್ಮ ಕೂಡಾ —ಪ್ರತಿವಾದಿರು.

2ನೇ ಪ್ರತಿವಾದಿ:

ಕೊರಗಪ್ಪ ಗೌಡ. ಮ್ಯಾಲ ಗೌಡ್ರ ಮಗ ಕಡಬ ಗ್ರಾಮ, ಪುತ್ತೂರು ತಾಲೂಕು. P. O ಕಡಬ ದ. ಕ—ರೀಗೆ.

ಪ್ರಿಲಿಮಿನರಿ ಡಿಕ್ರಿ ಪ್ರಕಾರದ ಐವಜು ದಾವಾ ಆಸ್ತಿಯ ಮಾರಾಟದಿಂದ ಭರಮಾಡಿಕೊಳ್ಳುವರೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿ ಅರ್ಜಿ ಮಾಡಿರುವದ್ರಿಂದ ನಿಮಗೇನಾದರೂ ಆಕ್ಷೇಪಣೆಯಿದ್ದರೆ ನೀವು ತಾ. 20—3 64ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸದೆಯಿದ್ದಲ್ಲಿ ನಿಮ್ಮನ್ನು ಬಿಟ್ಟು ಏಕಪಕ್ಷವಾಗಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ—

Sd) B. Sripati Rao
Advocate for petr.

ಬೆಳ್ತಂಗಡಿ ಡಿ ಮು. ಕಂ. ಮೇಜಿಸ್ಟ್ರೇಟ್ ಕೋರ್ಟಿನಲ್ಲಿ

O. S. No. 89/64

ಹೇಮಾವತಿ ಹೆಗ್ಗಡ್ತಿ —ವಾದಿಳು,

ನೀಲು ಹೆಂಗ್ಸು ವಗೈರೆರು —ಪ್ರತಿವಾದಿರು

ಬೆಳ್ತಂಗಡಿ ತಾಲೂಕು ವೇಣೂರು ಗ್ರಾಮದ ಮಾರ್ಗದ ಮನೆ ಎಂಬಲ್ಲಿರುವ ಪಂಕು ಹೆಂಗ್ಸಿನ ಮಕ್ಕಳು ನೀಲು ಹೆಂಗಸು 1, ಅಣ್ಣು ಮ್ಯಾಲಿ 1, ಮಂಜಮ್ಮ ಹೆಂಗಸು 1, ದಾರಮ್ಮ ಹೆಂಗ್ಸಿನ ಮಕ್ಕಳು ಅಪ್ಪು ಮ್ಯಾಲಿ 1, ಅಂಬು ಮ್ಯಾಲಿ 1, ಗಿರಿಜ ಹೆಂಗಸು 1, ನೀಲು ಹೆಂಗ್ಸಿನ ಮಗಳು ಯುಕ್ರು ಹೆಂಗಸು 1, ಟೀಕು ಹೆಂಗಸಿನ ಮಗ ಚೆನ್ನಪ್ಪ ಮ್ಯಾಲಿ 1, ಮಂಜಮ್ಮ ಹೆಂಗಸಿನ ಮಕ್ಕಳು ಅಂಮು ಮ್ಯಾಲಿ 1, ಕಾಳಿ ಹೆಂಗಸು 1, ಸೀತು ಹೆಂಗಸಿನ ಮಕ್ಕಳು ಚಣ್ಣು ಹೆಂಗಸು 1, ಮುತ್ತು ಹೆಂಗಸು 1, ನಾರಾಯಣ ಮ್ಯಾಲಿ 1, ಎಲಮ್ಮಪ್ಪೆ ಹೆಂಗಸಿನ ಮಕ್ಕಳು ನಾಗು ಹೆಂಗಸು 1, ಅಂಮು ಮ್ಯಾಲಿ 1, ಮಂಜಮ್ಮ ಹೆಂಗಸಿನ ಮಗ ಬಾಬು 1, ದರ್ಣು ಹೆಂಗಸಿನ ಮಕ್ಕಳು ಅಂಣು ಮ್ಯಾಲಿ 1, ಸೀಲಮ್ಮ 1, ಗಿರಿಜ 1, ಮುತ್ತು ಹೆಂಗಸಿನ ಮಗಳು ಅಪ್ಪಿ ಹೆಂಗಸು 1, ಕೂಡಾ— ಸದ್ರಿ ದಾವೆಯ 1, 3, 4, 6ರಿಂದ 8, 10, 11, 14ರಿಂದ 21, 31ರಿಂದ 33 ವ 36ನೇ ಪ್ರತಿವಾದಿರಿಗೆ—

ನೀವು ಕೂಡಾ ಪ್ರತಿವಾದಿರು ವಾದಿಳಿಗೆ ತಾ. 10—9—1958ರಲ್ಲು ರಿಜಿಸ್ಟ್ರಿ ಸಿ ರೂ. 2200/=ಕ್ಕೆ ಬರಕೊಟ್ಟ ತೋಟದವು ದಸ್ತಾವೇಜಿನ ಬಾಬ್ತು ತಾ. 9—9—63ಕ್ಕೆ ಅಂತ್ಯವಾಗುವ 5 ವರ್ಷಗಳ ಬಡ್ಡಿ ರೂ. 687=50 ಬರಮಾಡಿಕೊಳ್ಳುವರೆ ವಾದಿಳು ದಾಖಲು ಮಾಡಿದ ಮೇಲ್ಕಂಡ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾ. 23-3-64ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟದೆ. ಆದ್ದರಿಂದ ಸದ್ರಿ ತಾ. 23-3-1964ರಲ್ಲು ಬೆಳಿಗ್ಗೆ ಗಂಟೆ 10ಕ್ಕೆ ಹಾಜರಾಗಿ ಉದಹರಿಸತಕ್ಕದ್ದು, ತಪ್ಪಿದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು.

(By Order of the Court)

ಬಿ. ಕೆ. ಸೂರ್ಯನಾರಾಯಣರಾವ್
ಎಡ್ವೊಕೇಟ್, ಬೆಳ್ತಂಗಡಿ.
Advocate for plff.
Belthangady, 6-3-1964

ಮನಶ್ಶಾಸ್ತ್ರ

ನೀವು ಮತ್ತು ನಿಮ್ಮ ಯೋಜನೆಗಳು

ಈ ಜಗತ್ತಿನಲ್ಲಿ ನಾವು ಸುಗಮವಾಗಿ ಸರಾಗವಾಗಿ ಒಳ್ಳೆ ಹೆಸರಿನಿಂದ ಬಾಳಬೇಕೆಂದರೆ ನಾವು ನಮ್ಮ ಯೋಚನಾ ಕಾರ್ಯಗಳಲ್ಲಿ ಸರಿಯಾಗಿ ಆಲೋಚಿಸಬೇಕು ಹಾಗೂ ಅದರಲ್ಲಿ ದೃಢ ಮನಸ್ಕರಾಗಬೇಕು.

ನಮ್ಮಲ್ಲನೇಕರು "ಯೋಚಿಸು" ಕ್ರಿಯೆಯನ್ನು "ಚಿಂತಿಸು" ಕ್ರಿಯೆಗೆ ಅಪಾರ್ಥ ಕಲ್ಪಿಸಿಕೊಂಡಿದ್ದಾರೆ. ಅಂತೆಯೇ ಕನಸಿನ-ಮನೆ ಕಟ್ಟುವುದು, ಒಳೊಳ್ಳೆಯ—ಕೈಗೆ ಸಿಗಲಾಗದ ಆಲೋಚನೆ--ಅಂತಸ್ತುಗಳನ್ನು ಕಲ್ಪಿಸಿಕೊಳ್ಳುತ್ತಾ ಕಾಲಹರಣ ಮಾಡುತ್ತಾರೆ.

ಸರಿಯಾದ ಯೋಚನೆಯೆಂದರೆ ಸತ್ಯಸ್ಥಿತಿಯ ಬಗ್ಗೆ ಯೋಚನೆ ಹಾಗೂ ನಿರ್ವಹಿಸಲು ಸಾಧ್ಯವಾದ ಕರ್ತವ್ಯದ ಬಗ್ಗೆ ಆಲೋಚನೆ. ನಾವು ಜೀವನವನ್ನು ಅದು ಒದಗಿ ಬಂದಂತೆ ತೆಗೆದುಕೊಳ್ಳಬೇಕು ಅಲ್ಲದೇ ನಮ್ಮ ಬುದ್ಧಿ ಶಕ್ತಿಯನ್ನು ಪ್ರಸ್ತುತ ಜೀವನದ ಉನ್ನತಿಗಾಗಿ ಉಪಯೋಗವಾಗುವಂತೆ ಅಳವಡಿಸಿಕೊಳ್ಳಬೇಕು.

ಸರಿಯಾದ- ನಿರ್ದಿಷ್ಟ ಯೋಚನೆಯ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾದರೆ ನೀವು ಕೆಲಸ ಮಾಡಿ ಮುಗಿಸುವುದರಲ್ಲಿ ಉತ್ಸಾಹಿಗಳಿರಬೇಕು-- ನಿಷ್ಣಾತರಿರಬೇಕು. ನಿರ್ದಿಷ್ಟ ಯೋಚನೆಕಾರನಾಗುವುದರಿಂದ "ಜಗತ್ತು ಬದಲಾದರೆ ಆನಂದವೆಂದುಕೊಳ್ಳುವುದರ ಬದಲಾಗಿ ಆನಂದ ಕೊಡುವ ಜಗತ್ತನ್ನಾಗಿಸಿ ಕೊಳ್ಳಬಹುದು"

ಆಲೋಚನಾ ಸುಳಿಯಲ್ಲಿ ಸರಿಯಾಗಿ ಸಿಕ್ಕದೇ ಎಷ್ಟೋ ಕೆಲಸಗಳು ಪ್ರಾರಂಭವಾಗದೆ ಉಳಿದರೆ, ಆಲೋಚನೆಯ ಮಧ್ಯದಲ್ಲಿ ಸರಿಯಾಗಿ ಯೋಚಿಸದೆ ಉಳಿಯುವ ಕೆಲಸಗಳೂ ಬಹಳವಿವೆ. ಪ್ರಾರಂಭದಿಂದ ಸರಿಯಾಗಿ ಆಲೋಚಿಸಿ ಯೋಜಿಸಿದ ಗುರಿಯನ್ನು ಸಾಧಿಸಿ ಮುಗಿಸಲ್ಪಡುವ ಕೆಲಸಗಳು ಶೇ. ೨೦ರಷ್ಟು ಸಿಗುವುದು ದುರ್ಲಭ.

ಯಾವೊಂದು ಕಾರ್ಯವೇ ಆಗಲಿ ಪ್ರಥಮತಃ ತಲೆಗೆ ಹೊಳೆದಾಗ ಅನ್ನಿಸುತ್ತದೆ "ಈ ರೀತಿ ಪ್ರಾರಂಭಿಸಿ ಆ ರೀತಿ ಮುಂದುವರಿದು ಹೀಗೆ ಮುಗಿಸಿದರೆ ಈ ಕಾರ್ಯ ಬಹಳ ಅದ್ಭುತವಿರುತ್ತದೆ. ಸುಲಭವೂ ಇರುತ್ತದೆ --ಎಂದು.

ಆದರೆ ಕಾರ್ಯತಃ ಅದಕ್ಕೆ ಕೈ ಹಚ್ಚಿದಾಗ ಪ್ರಥಮದಲ್ಲೇ ಪ್ರಾರಂಭವಾಗದೇ ಉಳಿಯುವ ಕೆಲಸಗಳು ಬಹಳ, ಆ ರೀತಿ ಪ್ರಾರಂಭವಾದರೂ ಮುಂದುವರಿಯುವುದು ವಿರಳ. ಆಕಸ್ಮಾತ್ ಮುಂದುವರಿದರೂ ಮೊದಲಿಗೇ ಆಸೆ ಪಟ್ಟಂತೆ—ನೆನೆಸಿದಂತೆ ನಡೆಯುವುದಂತೂ ಬಹು ವಿರಳ.

ಮುಂದುವರಿದ ಕಾರ್ಯ ಅಪೂರ್ಣದಲ್ಲೇ ನಿಲ್ಲುವುದು ಲೆಕ್ಕವಿಲ್ಲದಷ್ಟು. ಕಾರಣ ಸರಿಯಾದ-ಯೋಚನೆ-ಸಮಂಜಸಯೋಜನೆಗೆ ಕ್ರಮವಾದ ಬುನಾದಿ ಇಲ್ಲದೆ ತತ್ವಾನುಷ್ಠಾನ ವಿವೇಕ ವಿಚಕ್ಷಣೆ ಹಾಗೂ ಸಮಯಸ್ಫೂರ್ತಿ ಇವುಗಳ ಅಪರಿಪಕ್ವತೆಯೇ ಆಗಿದೆ.

ನಾವು ಮಾಡಬೇಕೆನ್ನುವ--ಮಾಡುವ ಎಲ್ಲ ಕೆಲಸಗಳಲ್ಲೂ, ಪ್ರತಿ ಹಂತದಲ್ಲೂ ಒಮ್ಮೆ ನಿಂತು ಹಿಂದಿರುಗಿ ನೋಡಿ ನಾವು ನಡೆದು ಬಂದಿರುವ ದಾರಿ—ಮುಗಿಸಿ ಬಂದಿರುವ ಕೆಲಸ ಇವುಗಳು ಕ್ರಮವಾಗಿ ಸಾಗಿ ಬಂದಿದೆಯೇ ದೋಷಗಳಿಲ್ಲದೇ ಬೆಳೆದು ಬಂದಿದೆಯೇ ಎಂದು ಒಮ್ಮೆ ಈಕ್ಷಿಸಿ ದೃಢಪಟ್ಟು ಮುಂದರಿದರೆ ಅಪೂರ್ಣ ಕೆಲಸವಾಯಿತೆಂದು ಗೊಣಗಬಹುದಾದ ಶೇ. ೮೦ರಷ್ಟು ಕಾರ್ಯಗಳ ಸರಾಸರಿ ಒಮ್ಮೆಗೇ ಕುಸಿಯುತ್ತವೆ. ಮನಸ್ಸು ತಿಳಿಯಾಗುತ್ತದೆ. ಮಾನಸಿಕ—ದೈಹಿಕ ಹಾಗೂ ಆರ್ಥಿಕ ಶಕ್ತಿ ಬಲಗೊಳ್ಳುತ್ತದೆ—ವಜ್ರವಾಗುತ್ತದೆ.

ಪ್ರಥಮತಃ ಸಮಂಜಸ ಯೋಜನೆ ಏಕೆ ಪ್ರಮುಖ ಸ್ಥಾನವನ್ನಲಂಕರಿಸುತ್ತದೆ? ಎನ್ನುವುದು ಸರಿಯಾದ ಪ್ರಶ್ನೆಯೇ ಅಹುದು. ಅದಕ್ಕೆ ಉತ್ತರಿಸುವುದಾದರೆ ಕೈಗೊಂಡ ಕೆಲಸ ಪೂರ್ಣಗೊಂಡು ಜಯಭೇರಿ ಬಾರಿಸಲು ಮಾನವನ ಎರಡು ಮೂಲ ಮಾನಸಿಕ ತತ್ವಗಳ ಮೇಲೆ ಇದು ಕ್ರಮಶಃ ಪರಿಣಾಮಕಾರೀ ಕೆಲಸ ಮಾಡುವುದೇ ಆಗಿದೆ.

ಮೊದಲನೆಯದು ನೀವು ಸರಿಯಲ್ಲದ ಯೋಚನೆಯನ್ನು ಬಿಡಲು ಹಾಗೂ ಸಿಕ್ಕುಸಿಕ್ಕಾದ ಚಿತ್ತ ಕ್ಷೋಭೆ, ಮನೋವಿಕಾರಗಳಿಂದ ತಪ್ಪಿಸಿಕೊಳ್ಳಲು ಸರಿಯಾದ ಯೋಚನೆ- ಯೋಜನೆಯನ್ನು ಅದರ ಸ್ಥಾನದಲ್ಲಿ ಸ್ಥಾಪಿಸಿದಾಗ ಮಾತ್ರ ಸಾಧ್ಯವಿದೆ.

ಎರಡನೆಯದು ಮಾಡುವ ಕಾರ್ಯದಲ್ಲಿ ವಸ್ತುಸ್ಥಿತಿಗಿಂತ ಮನಸ್ಥೈರ್ಯಕ್ಕೇ ಅವಶ್ಯ ಪ್ರಾಮುಖ್ಯತೆ ಇರುವುದಾಗಿದೆ.

ಸರಿಯಾಗಿ—ಸಮಂಜಸವಾಗಿ

ಯೋಜಿಸಲು— ಯೋಚಿಸಲು ನಿರ್ದಿಷ್ಟ ಗುರಿಯಿರಬೇಕು. ಆ ಕೆಲಸ ಕಾರ್ಯತಃ ಕೈಗೊಳ್ಳುವ ಮುಂಚೆ ಅದರ ಬಗ್ಗೆ ಸಿಗುವ ಸಕಲ ಅಂಕೆ ಅಂಶಗಳ ಮಾಹಿತಿಯನ್ನು ಸಂಗ್ರಹಿಸುವುದೇ ಅಲ್ಲದೆ, ಅದರಲ್ಲಿ ಕೆಲಸಕ್ಕೆ ಬರುವ 'ಬೇಕು' 'ಬೇಡ' ಗಳನ್ನು ಸರಿಯಾಗಿ ವಿಭಾಗಿಸಿ ಒಂದು ನಿರ್ಣಯಕ್ಕೆ ಬರುವವರಿರಬೇಕು.

ಪ್ರಾರಂಭದಲ್ಲಿ ನಿಮ್ಮ ಯೋಜನೆಯನ್ನು ಮಾತಿನಲ್ಲಿ ಹಾಗೂ ಬರವಣಿಗೆಯಲ್ಲಿ ನಿಮ್ಮ ಸಮಾನಸ್ಕತರು ಹಾಗೂ ಹಿರಿಯರಲ್ಲಿ ಸಂಪೂರ್ಣ ತಿಳುವಳಿಕೆಯಲ್ಲಿ ತಿಳಿಸುವುದೇ ಅಲ್ಲದೆ ಅವರಿಂದ ಉತ್ತಮ ವಿಮರ್ಶೆಗಳನ್ನು ಪಡೆದು ಅದನ್ನು ಸಂತೋಷದಿಂದ ನಿಮ್ಮ ಕಾರ್ಯದಲ್ಲಿ ಅಳವಡಿಸಿಕೊಳ್ಳಬಹುದಾದರೆ ಉಪಯೋಗಿಸಿ ಕೊಳ್ಳುವುದೇ ಅಲ್ಲದೇ ಕೆಲಸಕ್ಕೆ ಸಾಧಕವಾಗದ ವಿಮರ್ಶೆ ಹಾಗೂ ಟೀಕೆಗಳನ್ನು ಸಾಧ್ಯವಾದಷ್ಟು ನಿಧಾನದಿಂದ ಕೇಳಿಕೊಂಡು ನಿಮ್ಮ ಸರದಿ ಬಂದಾಗ ನಿಮ್ಮ ಮಾತು ಹಾಗೂ ಯೋಜನಾ ಅಂಶಗಳಿಂದ ವಿಮರ್ಶಕರ ಒಲವನ್ನು ಪಡೆಯುವವರಾಗಬೇಕು. ನೀವು ಯಾವೊಬ್ಬ ವಿಮರ್ಶಕನನ್ನೂ ನಿಮ್ಮ ಸಂಪೂರ್ಣ ಚತುರತೆಯಿಂದ ತೃಪ್ತಿ ಪಡಿಸಲು ಅಸಮರ್ಥರಾದಲ್ಲಿ ನಿಮ್ಮ ಯೋಜನೆಯು ಯಾವುದೋ ಸ್ಥಳದಲ್ಲಿ ಬಿರುಕಿರಲೇ ಬೇಕು. ಅಂತಹವುಗಳನ್ನು ಮತ್ತೊಮ್ಮೆ ತಲೆಹಾಕೆದಕಿ ನೋಡುವುದು ಉತ್ತಮ. ಆ ರೀತಿ ಮಾಡದಿದ್ದರೆ ಕ್ರಮವಾದ ಬುನಾದಿಯಲ್ಲಿ ಲೋಪ ಬರುತ್ತದೆ.

ತತ್ವಾನುಷ್ಠಾನದ ಪ್ರಥಮ ಹಂತದಲ್ಲಿ ನೀವು ಹೊಣೆಗಾರಿಕೆಯನ್ನು ತೆಗೆದುಕೊಳ್ಳಲೇ ಬೇಕಾಗುವುದು. ಅಲ್ಲದೇ ಮಾಡಬೇಕಾದ ಕರ್ತವ್ಯದ ಬಗ್ಗೆ ನಿಶ್ಚಿತವಾದ ವ್ಯವಹಾರಿಗಳೇ ಬೇಕಾಗುವುದು. ಬೇಕಾದವುಗಳನ್ನು ಶೀಘ್ರ ಗ್ರಹಿಸುವವರಿದ್ದು ಪ್ರಾಯೋಗಿಕವಾಗಿ ನಡೆದ ಕಾರ್ಯಗಳಲ್ಲಿ ಗುರಿಯನ್ನು ಮುಟ್ಟಲು ಶಕ್ತಿಶಃ ಪ್ರಯತ್ನಿಸುವವರಿರಬೇಕು.

ಕ್ಲಿಷ್ಟವಾದ ಯೋಜನೆಗಳನ್ನು ಬಿಡಿಸುವ ಪ್ರಯತ್ನದಲ್ಲಿ ನೀವು ಹೆಚ್ಚು ಆಸಕ್ತಿಯುಳ್ಳವರೇ, ಅಲ್ಲದೆ ಮಾಡಬೇಕಾದ ಕೆಲಸಗಳನ್ನು ಮಾಡಿ ಮುಗಿಸುವುದರಲ್ಲಿ ಉತ್ಸಾಹಿತರೂ ಇದ್ದಲ್ಲಿ ನಿಮ್ಮ ಯಾವೊಂದು ಸಾಧಾರಣ ಕೆಲಸಗಳು ನಿಲ್ಲುವ ಸಂಭವಗಳು ಬಹು ಕಡಿಮೆಯಿರುವುದು.

ತತ್ವಾನುಷ್ಠಾನದ ಕಾಲದಲ್ಲಿ

ವಿವೇಕ-ವಿಚಕ್ಷಣೆಗಳ ಪಾತ್ರ ಹಿರಿದಾದುದು. ಒಬ್ಬ ಮನುಷ್ಯನ ವಿವೇಕ-ವಿಚಕ್ಷಣೆಯ ಬೆಳವಣಿಗೆಗೆ ಪ್ರಾಸಂಗಿಕ ಸಂಬಂಧ ಹಾಗೂ ಜ್ಞಾನದ ಆವಶ್ಯಕತೆ ಬಹಳ ನೀವು ಇತರರೊಡನೆ ಕಲೆಯುವ-ಸಾಹಚರ್ಯ ಕಲ್ಪಿಸುವ, ನಿಮ್ಮ ಸುತ್ತಮುತ್ತಲ ಎಲ್ಲಾ ಚಟುವಟಿಕೆಗಳಲ್ಲೂ ಹೆಚ್ಚು ಆಸಕ್ತಿ ಇರುವವರಿರಬೇಕು. ಇತರರೊಡನೆ ಸ್ಪರ್ಧಿಸುವ ಕೆಲಸಗಳನ್ನು ಮಾಡುವುದರಲ್ಲಿ ಉತ್ಸಾಹಿಗಳೂ ಇರಬೇಕು.

ವಿವೇಕ—ವಿಚಕ್ಷಣೆಗಳ ವಿಚಾರದಲ್ಲಿ ಮಾನಸಿಕ ಶಕ್ತಿ ದೃಢವಿರಬೇಕು. ಚರ್ಚೆ ಹಾಗೂ ವಾದ-ವಿವಾದಗಳ ನೂಕು ನುಗ್ಗಲನ್ನು ಸೇರುವವರಿದ್ದು ಅವುಗಳಿಂದ ತಪ್ಪಿಸಿಕೊಳ್ಳಲೂ ಬಲ್ಲವರಿರಬೇಕು. ಮಾನಸಿಕ ದೃಢತೆಗೆ ದೈಹಿಕ ದೃಢತೆಯೂ ಸ್ವಲ್ಪ ನೆರವೀಯುವುದು.

ನಿಮ್ಮ ವಿರಾಮದ ವೇಳೆಯಲ್ಲಿ ಏನು ಮಾಡಬೇಕೆಂಬುದನ್ನು ನಿಶ್ಚಯವಾಗಿ ಬಲ್ಲವರಿದ್ದು ನಿಮ್ಮ ಜೀವನದಲ್ಲಿ ಹಾಳಾಗುವ ಕಾಲವನ್ನು ಸ್ವಲ್ಪವೇ ಬಿಟ್ಟು ಬೇಸರವಿಲ್ಲದಂತೇ ಬದುಕು ನಡೆಸಲು ಯೋಜಿಸಿಕೊಳ್ಳಬೇಕು.

ಕೊನೆಯದಾಗಿ ಸಮಯ ಸ್ಫೂರ್ತಿ ಪ್ರಸಿದ್ಧ ಭಾರತೀಯ ಗಣಿತಜ್ಞ ರಾಮಾನುಜಂಗೆ ಕನಸಿನಲ್ಲಿ ಕ್ಲಿಷ್ಟವಾದ ಲೆಕ್ಕಗಳ ಸಿಕ್ಕುಗಳು ಕಳಚಿದವಂತೆ ಲೆಕ್ಕವಿಲ್ಲದಷ್ಟು ವೈಜ್ಞಾನಿಕ ಸಾಧನೆಗಳು ಈ ರೀತಿ ಸಮಯ ಸ್ಫೂರ್ತಿಯಿಂದಲೇ ರೂಪುಗೊಂಡದ್ದಾಗಿವೆ. ಯಾವುದೋ ಪ್ರಯೋಗಗಳು ನಡೆಯುತ್ತಿರುವಾಗ ಒಂದಕ್ಕೊಂದು ಸಂಬಂಧವಿಲ್ಲದ ಲೆಕ್ಕವಿಲ್ಲದಷ್ಟು ಹೊಸ—ಹೊಸ ಶೋಧನೆಗಳು ಹೊರಬಿದ್ದಿವೆ.

ಸಮಯ ಸ್ಫೂರ್ತಿ ಪ್ರತಿಯೊಬ್ಬ ಮಾನವನಲ್ಲೂ ಮಾಡವುದುಂಟು. ಅದು ದೈವಿಕವೋ? ಇಲ್ಲ ಸ್ವಯಂಶಕ್ತಿಯೋ ಹೇಳಲಿಕ್ಕೆ ಬಾರದಿದ್ದರೂ ಅದರಿಂದ ಒಂದಿಲ್ಲೊಂದು ವಿಧದಲ್ಲಿ ಉಪಯೋಗ ಪಡೆಯದ ಮಾನವ ನಿಲ್ಲ.

—'ರಂಜನೆ' ಬೆಂಗಳೂರು.

ಪಾಲಿಸಿದಾರರಿಗೆ ಹಿಂದಿಗಿಂತ ಅಧಿಕ ಬೋನಸ್

ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾದ ಮಾರ್ಚ ೧೯೬೩ರ ಕೊನೆಯ ವರೆಗಿನ ಸಾಲ ಮತ್ತು ಮೂಲಗಳ ಬಗ್ಗೆ ಮಾಡಿದ ನಾಲ್ಕನೆಯ ಮೌಲ್ಯ ಮಾಪನದ ಪರಿಣಾಮವಾಗಿ ಪಾಲಿಸಿದಾರರಿಗೆ ಅಧಿಕ ಬೋನಸ್ಸನ್ನು ಘೋಷಿಸಲು ಸಾಧ್ಯವಾಗಿದೆ. ಲಾಭದಲ್ಲಿ ಭಾಗವಹಿಸಲು ಹಕ್ಕಿರುವ ಪಾಲಿಸಿಗಳಿಗೆ ರೂ. ೨೫.೫೮ ಕೋಟಿಗಳನ್ನು ಹೋಲ್ ಲೈಫ್ ಎಶುರೆನ್ಸ್‌ನ ಪ್ರತಿ ಸಾವಿರಕ್ಕೆ ವರ್ಷವೊಂದಕ್ಕೆ ರೂ. ೧೭=೫೦ರಂತೆಯೂ ಎಂಡೊಮೆಂಟ್ ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೇ ವರ್ಷವೊಂದಕ್ಕೆ ರೂ. ೧೪ ರಂತೆಯೂ ಬೋನಸ್ಸನ್ನು ಘೋಷಿಸಲಾಗಿದೆ. ಹಿಂದಿನ ಮೂರು ಮೌಲ್ಯಮಾಪನಗಳ ಪರಿಣಾಮವಾಗಿ ಹೋಲ್ ಲೈಫ್ ಪಾಲಿಸಿಗಳ ಮೇಲೆ ಪ್ರತಿ ಸಾವಿರಕ್ಕೆ ಪ್ರತಿ ವರ್ಷಕ್ಕೆ ರೂ. ೧೬ ಮತ್ತು ಎಂಡೊಮೆಂಟ್ ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ಪ್ರತಿ ವರ್ಷಕ್ಕೆ ರೂ. ೧೨=೫೦ರಂತೆ ಬೋನಸ್ ಹಂಚಲಾಗಿತ್ತು.

ಮೌಲ್ಯ ಮಾಪನದ ದಿನದಂದು ಜ್ಯಾರಿಯಲ್ಲಿರುವ ಒಟ್ಟು ಪಾಲಿಸಿಗಳು ೪೪.೯೩ ಲಕ್ಷಗಳಿದ್ದುವು. ಇವುಗಳ ವಿಮಾ ಮೊಬಲಗು ರೂ ೩,೧೬೬ ಕೋಟಿಗಳಾಗಿದ್ದುವು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಹರಿ ನಾರಾಯಣ ಆಪ್ಟೆ

(೩ನೇ ಪುಟದಿಂದ)

ಗೇರಿವೆ. ಇವರಿಗೆ ವ್ಯಕ್ತಿತ್ವದಲ್ಲಿ ಸೂಕ್ಷ್ಮ ದೃಷ್ಟಿಯಿದೆ, ಇವರ ಕಾದಂಬರಿಯಲ್ಲಿ ಬರುವ ವ್ಯಕ್ತಿಗಳು ತಮ್ಮ ಮಾತಿನ ಸರಣಿ, ನಡಿಗೆಯ ನೋಡಿ ಇವುಗಳಿಂದಲೇ ವಿಶಿಷ್ಟ ವ್ಯಕ್ತಿಗಳಾಗಿ ಪ್ರೋಷಿತರಾಗುತ್ತಾರೆ. ಈ ವ್ಯಕ್ತಿಗಳಿಗೆ ತಮ್ಮದೇ ಆದ ಮಾತಿನ ಧನಿಯಿದೆ. ಯಮುನೆಯಂತಹ ಪ್ರಮುಖ ವ್ಯಕ್ತಿ ಓದುಗರ ಕಣ್ಮುಂದೆ ಪದೇ ಪದೇ ಸುಳಿದಾಡುತ್ತಾಳೆ. ಆಕೆ ವಿರಾಗಿಣಿಯ ಸ್ಥೈರ್ಯದಿಂದ ತನ್ನ ಕಷ್ಟ ನಿಷ್ಠುರಗಳನ್ನು ಸಹಿಸಿ ಕೊಳ್ಳುತ್ತಾಳೆ ಆಕೆಯ ನಡೆನುಡಿಗಳ ಪ್ರಕಾಶ ಮಾಧುರ್ಯಗಳು ಆಕೆಯ ಸುತ್ತ ಮುತ್ತಲಿನ ಜಗತ್ತನ್ನು ತೋರಿಸಿ ಕೊಡುತ್ತವೆ. ಇತರ ಪಾತ್ರಗಳು, ವಿಶಿಷ್ಟವಾದ ಯೋಗ್ಯತೆಯವರೂ, ಅವಳ ಮೂಲಕ ಅವಳ ಸಂಬಂಧದಿಂದಲೇ ಬಾಳಬದುಕಿದಂತೆ ಕಾಣುತ್ತವೆ ಹೀಗಿದೆ ಆಪ್ಟೆಯವರ ಕಾದಂಬರಿಗಳಲ್ಲಿ ಬರುವ ವ್ಯಕ್ತಿಗಳ ಸಂಬಂಧ ಇದು ಕಚ್ಚುಗಳುಳ್ಳ ಚಕ್ರಗಳಂತೆ ಸರಿಯಾಗಿ ಹೊಂದಿಕೊಂಡು ಕಾದಂಬರಿ ಎಂಬ ಯಂತ್ರವನ್ನು ಸರಾಗವಾಗಿ ತಿರುಗುವಂತೆ ಮಾಡುತ್ತದೆ. ಇಂತಹ ಅಸ್ಖಲಿತವಾದ ಪಾತ್ರ ಪರಿಜ್ಞಾನವೇ ಆಪ್ಟೆಯವರ ಕಾದಂಬರಿಗಳ ಮಹಾಶಕ್ತಿ. ಇವರು ಹುಟ್ಟು ಕತೆಗಾರರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಇವರ ನೀಳ್ಗತೆಗಳು ಉಪಕತೆಗಳಿಗಿಂತ ಜಟಿಲವಾಗಿ ಓದುಗರ ಮನಸ್ಸಿಗೆ ದಣಿವನ್ನುಂಟು ಮಾಡುತ್ತಿದ್ದರೂ. ಅವುಗಳಲ್ಲಿ ಕಂಡುಬರುವ ಸ್ತ್ರೀ ಪುರುಷರು ಓದುಗರ ಒಡನಾಡಿಗಳಾಗಿದ್ದು ದಣಿವನ್ನು ನಿವಾರಿಸುತ್ತಾರೆ

ಆಪ್ಟೆಯವರು ತಮ್ಮ ಸಹಜವಾದ ಪಾತ್ರ ಪರಿಜ್ಞಾನವನ್ನು ಐತಿಹಾಸಿಕ ಕಾದಂಬರಿಗಳಲ್ಲೂ ತೋರಿಸಿದ್ದಾರೆ. ಇದಕ್ಕೆ ಇವರ "ಚಂದ್ರಗುಪ್ತ" ಕಾದಂಬರಿಯೇ ಉದಾಹರಣೆ ಇದರಲ್ಲಿ ಮೌರ್ಯರ ಕಾಲದ ರಾಜನೀತಿ ಪ್ರತಿಪಾದಿತವಾಗಿದೆ. ಇಲ್ಲಿ ಚಾಣಕ್ಯನೇ ಇತಿಹಾಸವನ್ನು ಮುಂದೆ ಸಾಗಿಸುವಂತೆ ಕಾಣುತ್ತದೆ. ಇದರ ಪಾತ್ರಗಳು ಜೀವಂತವಾಗಿ, ಓದುಗರ ಮುಂದೆ ಸುಳಿದಾಡುತ್ತಿದ್ದಂತೆ ಭಾಸವಾಗುತ್ತದೆ. ಇಲ್ಲಿ ಯಾವ ಕಟ್ಟು ಕಟ್ಟಳೆಗಳ ಬಂಧನಕ್ಕೂ ಅವಕಾಶವಿಲ್ಲ. ಪುಧಾರಣೆಯ ದೃಢ ವಿಶ್ವಾಸದ ಬಂಧನಕ್ಕೂ ಇಲ್ಲಿ ಎಡೆಯಿಲ್ಲ. "ಚಂದ್ರಗುಪ್ತ" ಐತಿಹಾಸಿಕ ಕಲ್ಪನೆಯ ಒಂದು ಮಹಾ ಸಾಹಸದ ಪ್ರತೀಕ. ಇತಿಹಾಸ ಸಂಬಂಧವಾದ ವಿಷಯಗಳ ಸಂಶೋಧನೆ ಇನ್ನೂ ಶೈಶವಾವಸ್ಥೆಯಲ್ಲಿದ್ದ ಕಾಲ. ಆದರೂ ಆಪ್ಟೆಯವರು ತಾವು ಸೃಷ್ಟಿಕಾರಕ ಕಲ್ಪನೆಗೆ ಎಷ್ಟು ಸಮರ್ಥರೆಂದು ಇಲ್ಲಿ ಸರಿಯಾಗಿ ತೋರಿಸಿಕೊಟ್ಟಿದ್ದಾರೆ. ಈ ಕಾದಂಬರಿಯನ್ನು ಓದುತ್ತ ಹೋಗುವಾಗ ನಂದರ ರಾಜಧಾನಿಯಾದ ಪಾಟಲಿಪುತ್ರದ ರಾಜಮಾರ್ಗಗಳಲ್ಲಿ ಸಂಚರಿಸುತ್ತಿರುವಂತೆ ಭಾಸವಾಗುತ್ತದೆ ರಾಜ ರಾಣಿಯರು, ಮಂತ್ರಿ ಸೇನಾನಿಗಳು, ಬೌದ್ಧ ಸನ್ಯಾಸಿಗಳು, ರಾಜಕುಮಾರಿಯರು ಹಾಗೂ ರಾಜಕೀಯ ಕುಹಕ ಕುತಂತ್ರಿಗಳು ನಮ್ಮ ಮುಂದೆ ಸುಳಿಯುತ್ತಿದ್ದಂತೆ ಕಾಣುತ್ತದೆ ಹೆಚ್ಚೇಕೆ ಪ್ರಾಚೀನ ಭಾರತದ ಐತಿಹಾಸಿಕ ವ್ಯಕ್ತಿಗಳೆಲ್ಲ ನಮ್ಮ ದೃಷ್ಟಿಗೆ ಸಿಲುಕುತ್ತಾರೆ, ಆಪ್ಟೆಯವರ ಚಾಣಕ್ಯ ಕುಟಿಲ ಬ್ರಾಹ್ಮಣ. ರಾಜ ಮನೆತನದಿಂದ ಬಹಿಷ್ಕೃತನಾದ ಕುಮಾರ ಚಂದ್ರಗುಪ್ತನನ್ನು ಮಗಧ ರಾಜ್ಯದ ಚಕ್ರವರ್ತಿಯನ್ನಾಗಿ ಸಿಂಹಾಸನವೇರಿಸಲು ಪ್ರತಿಜ್ಞೆ ಮಾಡಿದ ಮಹಾ ಹಟವಾದಿ ಹಾಗೂ ಮೇಧಾವಿ. ಪ್ರಯೋಗ ನಿಷ್ಣಾತನಾದ ಮಹಾ ನಿಪುಣ, ಚೈತನ್ಯ ಮೂರ್ತಿ.

"ಉಷಃಕಾಲ" ಆಪ್ಟೆಯವರ ಇನ್ನೊಂದು ಸುಪ್ರಸಿದ್ಧ ಕಾದಂಬರಿ. ಇದರಲ್ಲಿ ವಾಸ್ತವಿಕ ವಿಷಯಗಳು ಹಿಂದಿನ ಕಾದಂಬರಿಗಿಂತ ಹೆಚ್ಚಿಗೆ ದೊರೆಯುತ್ತಿದ್ದರೂ, ಮರಾಠರ ಇತಿಹಾಸವೇ ಇದಕ್ಕೆ ನಿಶ್ಚಿತವಾದ ಆಧಾರ. ವಿದ್ವಾಂಸರು ಇತಿಹಾಸ ಸಂಶೋಧನೆಯಲ್ಲಿ ಆಸಕ್ತರಾಗಿದ್ದರು, ವಿಪುಲವಾದ ವಾಸ್ತವಿಕ ವಿಚಾರಗಳು ಇನ್ನೂ ಬೆಳಕಿಗೆ ಬಂದಿಲ್ಲ. ಇಂತಹ ಕಾಲದಲ್ಲಿ ಆಪ್ಟೆಯವರು ಕಲ್ಪನಾ ಶಕ್ತಿಯಿಂದ, ಅಭಿರುಚಿ ಹುಟ್ಟಿಸುವಂತೆ ಮಾಡಿದ ಬಖಾರಗಳ ಹಾಗೂ ಪವಾಡಗಳ ಆಧಾರದಿಂದಲೇ ಇತಿಹಾಸವನ್ನು ಹೆಣೆದಿದ್ದರು. ಇವು ಅಷ್ಟೊಂದು ನಂಬತಕ್ಕ ಆಧಾರಗಳಲ್ಲದಿದ್ದರೂ ಈ ಅಲ್ಪ ಸ್ವಲ್ಪ ಆಧಾರಗಳನ್ನೇ ಉಪಯೋಗಿಸಿ ಇಡೀ ಯುಗವನ್ನೇ ವಾಸ್ತವಿಕವಾಗಿ ಜೀವಕಳೆಯಿಂದ ತುಂಬಿದ ಶಿವಾಜಿಯ ಜನನ ಕಾಲದ ಸ್ಥಿತಿಗತಿಗಳನ್ನು ಬಣ್ಣಿಸುವ "ಉಷಃಕಾಲ" ಮರಾಠರ ಅದ್ಭುತ ಸಾಹಸದ ಅತ್ಯುತ್ಕೃಷ್ಟವಾದ ಕಾಲ್ಪನಿಕ ಚಿತ್ರವನ್ನು ನಮ್ಮ ಮುಂದಿಡುತ್ತದ. ಈ ಕಾದಂಬರಿಯ ಬಳಿಕ ಇವರು ಬರೆದ ಕಾದಂಬರಿಗಳಲ್ಲಿ ಶಿವಾಜಿಯ ಜೀವನ ಯಾತ್ರೆಗಳನ್ನೆಲ್ಲಾ ಹೇಳಿ ಮುಗಿಸಿದರು. ಆ ಮೇಲೆ "ಮೈಸೂರೇ ಚಾ ವಾಘ್" (ಮೈಸೂರಿನ ಹುಲಿ) ಎಂಬ ಕಾದಂಬರಿಯಲ್ಲಿ ಹೈದರಾಲಿಯ ಕಡೆಗೆ ಗಮನವಿತ್ತರಲ್ಲದೆ "ವಜ್ರಾಘಾತ" ಎಂಬ ಕಾದಂಬರಿಯಲ್ಲಿ ವಿಜಯನಗರ ಸಾಮ್ರಾಜ್ಯದ ಪತನವನ್ನು ಬಣ್ಣಿಸಿದ್ದಾರೆ, ಇವುಗಳಲ್ಲಿ ನೆಲದಡಿಯ ಸುರಂಗಗಳು, ಅದ್ಭುತ ಘಟನೆಗಳು, ವಿಪರೀತಿಯಾದ ಶೌರ್ಯ ಸಾಹಸಗಳ ಚರ್ವಿತ ಚರ್ವಣ ಇವೆಲ್ಲ ಹೆಚ್ಚಾಗಿವೆ. ಆಪ್ಟೆಯವರೇ ಇದನ್ನೆಲ್ಲ ಹೇಗೆ ಪೂರ್ತಿಗೊಳಿಸಲೆಂದು ಕಂಗೆಟ್ಟಂತೆ ಕಾಣುತ್ತದೆ. ಅಲ್ಲದೆ ಇಂತಹ ಕಾದಂಬರಿಗಳು ಒಂದೇ ದಾರಿಯಲ್ಲಿ ಸಾಗುವ ಅಪಾಯಕ್ಕೆ ಸಿಕ್ಕುವುವು. ಐತಿಹಾಸಿಕ ಕಾದಂಬರಿಗಳಾಗಿ ಬಾಳಲಾರವು. ಇನ್ನೊಂದು ದೃಷ್ಟಿಯಿಂದ ನೋಡಿದರೆ ಇವು ಕಾದಂಬರಿಗಳೇ ಆಗುವುದಿಲ್ಲ.

ಆಪ್ಟೆಯವರು ಕೆಲವು ಸಲ ಆ ಮೇಲಿನ ಕಾದಂಬರಿಗಳಲ್ಲಿ ತಮ್ಮ ಓದುಗರನ್ನು ಸುಲಭವಾಗಿ ನಂಬುವಂತೆ ಒತ್ತಾಯಿಸಿದಂತೆ ಕಾಣುತ್ತದೆ 'ಚಂದ್ರಗುಪ್ತ' ಕಾದಂಬರಿಯಲ್ಲಿ ಐಂದ್ರಜಾಲಿಕತೆ ಕಾಣುವಂತೆ ಇವುಗಳಲ್ಲಿ ಕಾಣುವುದಿಲ್ಲ. ಆದರೂ ಇವರ ಇನ್ನೊಂದು ಐತಿಹಾಸಿಕ ಕಾದಂಬರಿಯ ಹೆಸರನ್ನು ಎಂದೂ ಮರೆಯಲಾರೆವು ಇದೇ "ಗಢ ಆಲಾ ಪಣ್ ಸಿಂಹ ಗೇಲಾ" (ಕೋಟೆಯನ್ನು ಗೆದ್ದಾಯಿತು; ಆದರೆ ಅಯ್ಯೋ! ನಮ್ಮ ವೀರಕೇಸರಿ ಮಡಿದನಲ್ಲ) ಎಂಬ ಕಾದಂಬರಿ. ಇದು ಆಪ್ಟೆಯವರ ಕಾದಂಬರಿಗಳೆಲ್ಲಾ ಅತಿ ಚಿಕ್ಕದು, ಸಮಗ್ರವಾದುದು. ಇದರಲ್ಲಿ ದೀರ್ಘವಾದ ವರ್ಣನೆಗಳಿಲ್ಲ. ಉಪಕತೆಗಳು ಗುಣಿತವಾಗಿಲ್ಲ. ಇದು ಕಾದಂಬರಿ ರಚನಾ ಚಾತುರ್ಯಕ್ಕೆ ಮಾದರಿಯಂತಿದೆ. ಇದರಲ್ಲಿ ಉದಯಭಾನು ಎಂಬಾತ ಖಳನಾಯಕ ಇವನು ಸೆರೆ ಹಿಡಿದ ಇಬ್ಬರು ರಜಪೂತ ಕನ್ನಿಕೆಯರ ವಿಷಯವೇ ಇದರ ಉಪಕಥಾವಸ್ತು. ಇದನ್ನು ಅತ್ಯದ್ಭುತ ಸಾಹಸಿ ಎನಿಸಿದ ತಾನಾಜಿ ಮಾಲುಸರೆ ಎಂಬವನು ಕೊಂಡಣವನ್ನು ಜಯಿಸಿದ ಮುಖ್ಯ ಕಥಾವಸ್ತುವಿನೊಡನೆ ಚಮತ್ಕಾರವಾಗಿ ಪೋಣಿಸಲಾಗಿದೆ. ಇದರ ಶೈಲಿಯಲ್ಲಿರುವ ಪ್ರಾಮಾಣಿಕತೆ, ಘಟನೆಗಳ ಕ್ರಿಯಾವೇಗ ಇವು ಓದುಗರ ಆಸಕ್ತಿಯನ್ನು ದಣಿಯಬಿಡುವುದಿಲ್ಲ. ಈ ಕೃತಿರತ್ನ ತನ್ನ ಕೇಂದ್ರೀಕೃತ ಪ್ರಕಾಶದಿಂದ ದೈನಂದಿನದ ಜೀವನವನ್ನು ಚಿತ್ರಿಸುವ ಇತರ ವಿಸ್ತಾರವಾದ ಕೃತಿರತ್ನಗಳಿಂತ ಹೆಚ್ಚು ಪ್ರಕಾಶಮಾನವಾಗಿ ಕಂಗೊಳಿಸುತ್ತದೆ.

ಆಪ್ಟೆಯವರ ಕಾದಂಬರಿಗಳು ಚಿರಕಾಲ ಬಾಳತಕ್ಕವೆಂದು ಇವರ ಸಲೆಮೊರೆಯವರಾದ ಸುಪ್ರಸಿದ್ಧ ರಾಜನೀತಿಜ್ಞ ಗೋಖಲೆಯಂತವರಿಗೆ ತಿಳಿದಿತ್ತು, ಒಮ್ಮೆ ಚುನಾವಣೆಯಲ್ಲಿ ಸೋತಾಗ ನಿಮ್ಮ ಕಾದಂಬರಿಗಳು ಶಾಸನ ಸಭೆಗಳ ಹಾಗೂ ಸಲಹಾ ಮಂಡಳಿಗಳ ಕಾರ್ಯಕಲಾಪಗಳಿಗಿಂತ ಹೆಚ್ಚು ಕಾಲ ಬಾಳತಕ್ಕವೆಂದು ಸಮಾಧಾನ ಪಡಿಸಿದರು. ಇವರ ಈ ಮಹಾ ಕೃತಿಗಳಲ್ಲಿರುವ ಚಿರಂಜೀವಿತ್ವ, ಅವು ಪ್ರತಿಪಾದಿಸುವ ಅನುಭವ ಘಟನೆಗಳಿಂದ ಅಥವಾ ಅವುಗಳಲ್ಲಿ ಅಡಕವಾದ ಸಾಮಾಜಿಕ ನೋಟಗಳಿಂದ ಸಂಪೂರ್ಣ ಬೇರೆಯಾಗಿದೆ. ಇವರ ಕಾದಂಬರಿಗಳಲ್ಲಿರುವ ವ್ಯಕ್ತಿಗಳನ್ನು ಹುರಿದುಂಬಿಸುವ ಕ್ರಿಯಾಮೂಲಗಳು ಸಮಾಜದ ಚೈತನ್ಯ ಸ್ವರೂಪದ ಕೆಳಗಿರುವುವು. ಇವು ಗಂಗಾಮೂಲದಂತೆ ಸಕಲ ಋತುಗಳಲ್ಲೂ ಎಡೆಬಿಡದೆ ಉಕ್ಕಿ ಹರಿಯುವುವು. ಇವು ತಾವು ಹರಿದು ಹೋಗುವ ಭೂಮಿಯ ಸ್ವಭಾವ ಲಕ್ಷಣಗಳು ಹೇಳಿದ್ದರೂ ಮಾನವ ಹೃದಯಗಳಿಂದ ಉಕ್ಕಿ ಹರಿಯುವುವೆಂಬುದನ್ನು ಮರೆಯಲಾರೆವು.

ಆಪ್ಟೆಯವರು ಮಹಾರಾಷ್ಟ್ರದಲ್ಲಿ ಮಾತ್ರವಲ್ಲ, ಭಾರತದ ಇತರ ಭಾಗಗಳಲ್ಲೂ ಪ್ರಖ್ಯಾತರಾಗುವಷ್ಟು ಯೋಗ್ಯತೆಯುಳ್ಳ ಉತ್ತಮ ಕಾದಂಬರಿಕಾರರು ಇವರ ಕಾದಂಬರಿಗಳು ಮಹಾಕೃತಿಗಳು. ಅಪೂರ್ವವಾದ ಯೋಗ್ಯತೆಗಳಿಂದ ತುಂಬಿದವು. ಇವುಗಳ ಗೂಢಾರ್ಥಗಳನ್ನು ಕಷ್ಟ ಪಟ್ಟು ತಿಳಿದುಕೊಳ್ಳುವಷ್ಟು ಸಮಯವಿಲ್ಲದ ಇಂದಿನ ಓದುಗರಿಗೆ ಇವು ಅಷ್ಟು ಸುಲಭವಾಗಿ ತಿಳಿಯತಕ್ಕವಲ್ಲ ಆದರೆ ಇವನ್ನೆಲ್ಲ ಕಷ್ಟಪಟ್ಟು ತಿಳಿದುಕೊಂಡರೆ ತುಂಬಾ ಲಾಭವಿದೆ. ಇವುಗಳ ಕುರಿತು ಹೇಳಬೇಕಾದ ಯಾವ ಆಶ್ಚರ್ಯಕರವಾದ ಸಂಗತಿಗಳೂ ಇರುವುದಿಲ್ಲ. ಇವು ತಮ್ಮ ಕರ್ತೃವಿನ ನೈಪುಣ್ಯ, ಕಲ್ಪನಾ ಶಕ್ತಿಯ, ಕಲಾಕೌಶಲ್ಯದ ಮಹಾ ಸ್ಮಾರಕಗಳು. ಪ್ರಾಚೀನ ಕಾಲದ ಸ್ಫೂರ್ತಿ, ಪ್ರತಿಭೆಗಳನ್ನು ಪ್ರತಿಬಿಂಬಿಸುವ ಶಿಲ್ಪಿಗಳ ಕೈವಾಡದ ಶಿಲಾ ದೇವಾಲಯಗಳಂತೆ ಅಚ್ಚಳಿಯದೆ ನೆಲೆನಿಂತ ಅಮರ ಕೃತಿರತ್ನಗಳು.

—'ರಂಜಿತ'

ಗಾಂಧೀ ವಚನಗಳು

'ಸ್ವರ್ಗದಿಂದ ಖಾದಿಯ ಮಳೆಗೈದರೆ ಇದೊಂದು ಅನಾಹುತವೇ ಸೈ. ಖಾದಿಯಲ್ಲಿ ಸ್ವಯಂ ಪ್ರೇರಣೆಯಿದೆ. ಅದು ಸಕಲ ಭಾರತಕ್ಕೂ ಅನ್ವಯಿಸುವದು, ಅಂತೆಯೇ ಅದಕ್ಕೆ ಮಹತ್ವವಿದೆ.

"ಪ್ರೀತಿಯು ಎಂದೂ ಬೇಡುವುದಿಲ್ಲ, ನೀಡುತ್ತದೆ; ಪ್ರೀತಿಯಿದ್ದಲ್ಲಿಯೇ ದೇವರ ಸಾನಿಧ್ಯ."

"ಹೋರಾಟವಿಲ್ಲದ ಜೀವನವು ನೀರಸ. ಇಂತಹ ಅಪೇಕ್ಷೆಯನ್ನೇ ಮಾಡಬಾರದು. ಜೀವನದ ವಿಷಮತೆಗಳನ್ನು ಸಹಿಸಿಕೊಳ್ಳುವುದರಲ್ಲಿಯೇ ಜಾಣತನವಿದೆ."

—ಗಾಂಧೀಜಿ.

ಶ್ರೀ ಕೆ ಕೆ ಶೆಟ್ಟಿ, ಎಂ.ಎಲ್ ಸಿ.ಯವರ

ಕ್ರಾಂತಿಕಾರಿ ಲೇಖನಿಯ

ಸಮಕಾಲಿಕಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮ ಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ

ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮರೆಯದ ನಗೆ

(೨ನೇ ಪುಟದಿಂದ)

ಕಾರಿನ ಮಾಲಿಕ ತನ್ನ ಕಾರಿಗೇನೂ ಅಪಾಯವಾಗಿಲ್ಲವೆಂದು ಖಚಿತಪಡಿಸಿಕೊಂಡು ನಿಧಾನವಾಗಿ ಹೆಜ್ಜೆ ಹಾಕುತ್ತಾ ಬಂದ—ತನ್ನ 'ರಾಜ ರಸ್ತೆ'ಗೆ ಅಡ್ಡ ಬಿದ್ದ ಪ್ರಾಣಿಯನ್ನು ತಾತ್ಸಾರವಾಗಿ ನೋಡಿದ. ನೆರೆದ ಜನರಲ್ಲಿ ಕೆಲವರು ಆತನ ಕಡೆ ನೋಡಿ, ಅಂಜುತಂಜುತ್ತಾ ಅಂದರು,

"ಬೇಗ ಆಸ್ಪತ್ರೆಗೆ ಸಾಗಿಸಿ, ಸ್ವಲ್ಪ ಅಪಾಯವಾಗಿದೆ."

"ಎಲ್ಲಾದರೂ ಸಾಯಬಾರದಾ(ಅದಂತೂ ಖಂಡಿತ!) ನಡು ರಸ್ತೆಗೆ ಬಂದ. ಈ ಶನಿ ಗಂಟು ಬೀಳ್ತದೆ" (ರಸ್ತೆಯಲ್ಲಿ ಯಾರೂ ಇಲ್ಲದಿದ್ದರೆ ಬೇರೆ ಈಗ....?"

"ಹೇ, ಟ್ಯಾಕ್ಸೀ..." ಕರೆದ ಭೂಪ, 'ರಾಜಮಾರ್ಗ'ದಲ್ಲೇ ಕೇಳಿತು.

"ಕೀರರ್...." ಟ್ಯಾಕ್ಸಿ ಬಂತು (ತನ್ನ ರಾಜಮಾರ್ಗ ಕೋರಿಕಾರರಿಗೆ ಗತಿ? ಅದಲ್ಲದೇ.... ಅದು ಬೇರೆ ಇದೆ ಈಗ....)

ನೋಡು ಆ ಗ್ರಹಚಾರ (ಯಾರಿಗೆ....?)ವನ್ನು ಗವರ್ನಮೆಂಟ್ ಆಸ್ಪತ್ರೆಗೆ ಸಾಗಿಸು (ಧರ್ಮಾರ್ಥ ಇದೆ?) ಎಷ್ಟು? (ಈಗಲೇ ನಿರ್ಧಾರವಾಗಲಿ— ಗ್ರಹಚಾರದ ಬೆಲೆ!)

ಚೌಕಾಸಿ ಮುಗಿದ ಮೇಲೆ ಟ್ಯಾಕ್ಸಿ ಬಂತು. ಯಾರೋ ಕೂಲಿಯಾಳುಗಳು ಆ 'ಗ್ರಹಚಾರ'ವನ್ನೆತ್ತಿ ಟ್ಯಾಕ್ಸಿಯಲ್ಲಿ ಕುಕ್ಕಿದರು (ಅವರಿಗೆ...?)

'ಬುರ್ರ್' ಧೂಳೆಬ್ಬಿಸಿ ಟ್ಯಾಕ್ಸಿ ಓಡಿತು. ಯಾವಾಗಲೋ ಶಾಂತವಾಗಿತ್ತು 'ರಾಜರಸ್ತೆ'

ನಾನು ಕಾಯುತ್ತಿದ್ದ ಸಿಟಿಬಸ್ಸು ಬಂತು. ಜನರ ಹೊಳೆಯೋ ಹರಿದು ಬಸ್ಸು ನಿಲ್ಲುವ ಮೊದಲೇ ದಾಳಿ ಮಾಡಿತು ಅದರ ಮೇಲೆ—ಯಾವುದೋ 'ಇಂಗ್ಲೀಷ್ ಪಿಕ್ಚರ್'ನಲ್ಲಿ (ನಾಗರಿಕರು ನಾವು!) ರೆಡ್ ಇಂಡಿಯನ್'ರು ಬಂದು ಉಗಿಯಂತ್ರದ ಮೇಲೆ ದಾಳಿಮಾಡಿದ ಚಿತ್ರ ನನ್ನ ಕಣ್ಣಿಗೆ ಕಟ್ಟಿತು.

ಬಸ್ಸಿನ 'ಫೂಟ್ ಬೋರ್ಡ್'ನ ಮೇಲೆ ನನಗೂ ಒಂದು 'ಫೂಟ್' ಇಡುವಷ್ಟು ಸೀಟು ದೊರಕಿತು— ಕಂಡಕ್ಟರನ ಹಳೇ ಪರಿಚಯದಿಂದ ಡ್ರೈವರ್ ಮಹಾಶಯ ದುಸು ದುಸು ಮಾಡಿಕೊಂಡು ಬಂದು 'ಇಂಜಿನು ಚಾಲೂ'ಮಾಡಿ 'ಗೇರು' ಎಳೆದು ಮುಂದಿನ ಸೀಟಿನಲ್ಲಿ ಸೂಟು ಧರಿಸಿ ಆರಾಮವಾಗಿದ್ದ ವ್ಯಕ್ತಿಯನ್ನು ನೋಡಿದ. ನಿರುಪಾಯವಾಗಿ ತೆಗೆದುಕೊಂಡಿತು ಆ ನಾಗರಿಕ ಪ್ರಾಣಿ— 'ಗೇರ್‌ಲಿವರ್' ಹಿಡಿಯುವ ತನ್ನ ಕಣ್ಣೆ ಬರಹವನ್ನು ಹಳಿದು ಕೊಳ್ಳುತ್ತಾ, ಬಸ್ಸು ಕುಲುಕುತ್ತಾ ಮುಂದೆ ಸಾಗಿತು. ಡ್ರೈವರ್ ಮತ್ತು ಆ 'ಸೂಟಿಗ'ನ ಕುಸ್ತಿ ಮಧ್ಯೆ ಮಧ್ಯೆ ನಡೆಯುತ್ತಲೇ ಇತ್ತು. ಬಸ್ಸು ಕಾಲೇಜಿನ ಮುಂದೆ ಅಳುತ್ತಾ ನಿಂತಂತೆ ನಾನು ನನ್ನ ಸ್ನೇಹಿತ ಇಳಿದು 'ಕಲಾಶಾಲೆ' (ಯಾಕೆ ಆ ಹೆಸರು?...)ಯ ಮಹಾದ್ವಾರವನ್ನು ಪ್ರವೇಶಿಸಿದೆವು—ನೂರಾರು ಸೈಕಲುಗಳ ಮಧ್ಯದಾರಿಮಾಡಿಕೊಂಡು—

ನನ್ನದು ಹೇಳಿ ಕೇಳಿ ಸಾಯನ್ಸ್ ಸಬ್ಜೆಕ್ಟ್ ಕಾಂಬಿನೇಶನ್ ಒಪ್ಪನಲಾ ಎಲ್ಲ —(ಕಲಾ ಶಾಲೆಯ ಛಾಪೆ!)

ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, (ಪಾಠಶಾಸ್ತ್ರ....?) ಹೀಗೆ ಪಿಟಪಿಟಿ ಅಂತ ಇಪ್ಪತ್ನಾಲ್ಕು ಗಂಟೆ ಮುಂಗಾರು ಮಳೆಯ ಹಾಗೆ ನಡೆಯುತ್ತಿರುತ್ತದೆ ಪಾಠ. ಅದೇ ಪಾಠ; ಅದೇ ಆಟ.

"ಬೆಕ್ಟೀರಿಯಾ ಎಂಬುದೊಂದು ಸಸ್ಯ, ಪ್ರಾಣಿ ಅಲ್ಲ! ಬಹಳ ಜನ ಅದನ್ನು ಪ್ರಾಣಿ ಶಾಸ್ತ್ರಕ್ಕೆ ಸೇರಿಸುವ ಮಸಲತ್ತು ಮಾಡಿದರು. ಕೊನೆಗೆ ಸಪ್ಪೆಯಾಗಿ ಈಗ ಸಸ್ಯ ಅದು (ಯಾವುದಾದರೇನು ನಮಗೆ ...?) ಅದು ಏನು ತಿನ್ನದೆ ಯಾರಿಗೂ ಕಾಣದಂತೆ ಜೀವಿಸುವ ಪ್ರಾಣಿ ಗಾಳಿ ಇಲ್ಲದೆಯೇ ಜೀವಿಸುತ್ತದೆ."— ಬಾಟನಿ ಲೆಕ್ಚರರ್ ತಮ್ಮ ಕರ್ತವ್ಯಕ್ಕೆ ಓಗೊಡುತ್ತಲೇ ಇದ್ದರು

ಪ್ರಾಣಿ ಶಾಸ್ತ್ರ...ಸಸ್ಯ ಶಾಸ್ತ್ರ... ಪ್ರಾಣಿ....ಸಸ್ಯ... (ನಾವು...?) ಒಂದು ....ಎರಡು.... ಮೂರು...ಪಿರೇಡಿನ ಮೇಲೆ ಪಿರೇಡು. ಪಾಠದ ಮೇಲೆ ಪಾಠ....ಕಾಲೇಜು ಜೀವನ...ಬರೀ ಸಪ್ಪೆ!

ಕಾಲೇಜು ಬಿಟ್ಟು ಬಸ್‌ಸ್ಟಾಪಿಗೆ ಬಂದೆ. ಯಾವುದೋ ಒಂದು ಬಸ್ಸು ಬಂತು ಹತ್ತಿದೆ. ಬಸವನ ಹಿಂದೆ ಬಾಲ...ಸ್ನೇಹಿತ ಹಿಂದೆಯೇ ಬಂದ, ಕಾಲೇಜು ತರುಣಿಯರು ಬೇರೆ...ಹಿಂಡು ಹಿಂಡಾಗಿ. ಬಸ್ಸಿನ ಕಂಡಕ್ಟರನಿಗಂತೂ ಆದ ಆನಂದ ಅಷ್ಟಿಷ್ಟಲ್ಲ. ಒಬ್ಬ ಅಲ್ಲ....ಐದು ಆರು ಮಂದಿ. ಕೆಲವರು ಕಂಡಕ್ಟರ್, ಕೆಲವರು ನಾನ್ ಕಂಡಕ್ಟರ್....ಮತ್ತು ಕೆಲವರು 'ಬಂಡ ಆಕ್ಟರು'ಗಳು ಅಂತೂ ಅವನಿಗೆ ಹಬ್ಬ ಸುಗ್ಗಿ ಮದ್ದಿನ ಟಿಕೇಟು ಬೇಕೆಂದರೆ ಕೊಡುವ ಜನವೇ ಇಲ್ಲ ಕಂಡಕ್ಟರ್, ನಾನ್ ಕಂಡಕ್ಟರ್ ಎಲ್ಲಾ, ಸಕ್ಕರೆಗೆ ಬಿದ್ದ ಇರವೆ.. (ಸಕ್ಕರೆ ಕಂಟ್ರೋಲಿನ ಕಾಲದಲ್ಲಿ ಸಕ್ಕರೆ ಎಲ್ಲಿಂದ —?) ....ಅಲ್ಲ ಕೆಸರಿಗೆ ಮುತ್ತಿದ ನೊಣದ ಹಾಗೆ...ಗುಯಿಂ ... ಗುಯಿಂ....ಅಲ್ಲ ಟಿಕೇಟ್...ಟಿಕೆಟ್ಸ್ ಅಂತ ಕೂಗುತ್ತಾ, ಯುವತಿಯರು, ಕಾಲೇಜ್ ತರುಣಿಯರು ಸುಸಂಸ್ಕೃತ ನಾಗರಿಕರ, ಅದು ಧ್ವನಿ...ಬೆನ್ನನ್ನು ತಟ್ಟುತ್ತಾ 'ಟಿಕೆಟ್, ಟಿಕೆಟ್ಸ್' ಎಂಬ ಅಷ್ಟು ಪರದೆಯನ್ನು ಮುಂದು ಮಾಡಿ ಆನಂದಿಸುತ್ತಿದ್ದಂತೆ ಕಂಡಿತು. ಅಂತೂ ಅವರ ಕೃಪೆಯಿಂದ ಧರ್ಮಾರ್ಥವಾಗಿ ನಮ್ಮ ಗುರಿಗೆ ಬಂದು ತಲುಪಿದೆವು. ಬಸ್ಸಿಳಿದು ಕಂಡಕ್ಟರ್‌ನನ್ನು ಹುಡುಕುತ್ತಾ ಹೊಂಟೆ—ಇನ್ನೂ ಟಿಕೇಟು ಕೊಟ್ಟು ಮುಗಿಸಿರಲಿಲ್ಲ. ಹಣ ನೀಡಿದೆ ನಸು ಅವಸರದಲ್ಲಿ ಒದರಿದ ನಾಳೆ ಕೊಡಿ ಸ್ವಾಮಿ ಈಗ ತುಂಬಾ 'ರಷ್' ಇದೆ"(!!)

ನಾಲ್ಕು ಕಾಲು ಹಾಕಿಕೊಂಡು ಬಂದೆವು—ನಾನು ನನ್ನ ಸ್ನೇಹಿತ. ಸರಕಾರಿ ಆಸ್ಪತ್ರೆಯ ಮುಂದೆ ಹಾದು ಹೋಗುತ್ತಿದ್ದಂತೆಯೇ ಬೆಳಗಿನ ನೆನಪಾಯಿತು.

'ಬುರ್ರ್' ಸದ್ದು ಮಾಡುತ್ತಾ ಯಮನ 'ಅಸಿಸ್ಟೆಂಟ್' ಶವ ಸಾಗಿಸುವ 'ಅಂಬ್ಯುಲೆನ್ಸ್' ಬಂದು ಆಸ್ಪತ್ರೆಯ ಮುಖ್ಯ ದ್ವಾರವನ್ನು ಪ್ರವೇಶಿಸಿತು. ನನ್ನ ತಲೆಗೆ ಹೊಡೆದ ಹಾಗಾಯಿತು, ತಿರುಗಿದೆ.

'ಸ್ಟ್ರೆಚರ್'ನಿಂದ 'ಅಂಬ್ಯುಲೆನ್ಸ್'ಗೆ ವರ್ಗಾಯಿಸುತ್ತಿದ್ದರು 'ಕಿಂಗ್ಸ್‌ವೇ'ಯವನ ಗ್ರಹಚಾರವನ್ನು,———ಪ್ರಾಣಶಕ್ತಿಯ ಗಾಣಪನ ನಡೆದ ಎಷ್ಟೋ ಹೊತ್ತಿನ ನಂತರ, ಮುಸುಕು ತೆಗೆದಾಗ ನನ್ನ ಕರುಳನ್ನೇ ಕತ್ತರಿಸಿದ ಪ್ರಮಾಣ ಹರಿದಂತಾಯಿತು. ಅದೇ ಮುಖ ಅದೇ ನಿರ್ಲಿಪ್ತ ಮುಖ ಭಾವ ತುಂಬಿ ಬಂದ ದೈನತೆ. ಇದೇ ಎಲುಬಿನ ಕೈಗಳು ನಿಂತಿಲ್ಲ ಮಲಗಿದೆ. ಕೈ ನೀಡಿಲ್ಲ, ನೀಡುವಂತೆಯೂ ಇಲ್ಲ ಎಲ್ಲಾ ಅದೇ; ಈಗ ಸತ್ತ ಶವ, ಮೊದಲು ಜೀವಂತ ಶವ—ಅಷ್ಟೆ.

ಹಿಂದಿನಿಂದ ಇನ್ನೊಂದು ಶವವನ್ನು ಅದೇ ಗಾಡಿಯಲ್ಲಿ ಹಾಕಲಾಯಿತು. ಅದೊಂದು ಚಿಕ್ಕ ಜೀವವಾಗಿದ್ದಿರಬೇಕು ಹಿಂದೆ. ಈಗ ಅದು ಮಗುವಿನ ಶವ.

'ಅಂಬ್ಯುಲೆನ್ಸ್' ಹೊರಟೇ ಬಿಟ್ಟಿತು, ಆಳೆತ್ತರದ ಧೂಳೆಬ್ಬಿಸುತ್ತಾ. ಹಿಂದಿನಿಂದ ಯಾರೋ ಔಷಧಿಗಾಗಿ ಬಂದವರು ಮಾತನಾಡುತ್ತಾ ಹೋಗುತ್ತಿದ್ದರು.

"ಆ ಮಗುವಿಗೆ ಕಾಲರಾ ಆಗಿತ್ತಂತೆ ಪಾಪ, ಆ ತಂದೆ ಕೂಲಿ ಕೆಲಸಗಾರ. ಬೆಳಗ್ಗೆ ಕಾರಿನ ಅಡಿಗೆ ಬಿದ್ದು ತೀರಿಕೊಂಡನಂತೆ. ಮಗು ಮಧ್ಯಾಹ್ನವೇ ಖಾಲಿಯಾಗಿತ್ತಂತೆ"

"ಹಾಪೇ, ಪಾಪ" ಎಂದಿತೊಂದು ನೊಂದ ದನಿ. "ಹಾಗೆ ಹೇಳಬಾರದಮ್ಮ ಎಲ್ಲಾ ದೇವರ ಆಟ ಅಷ್ಟೆ" ಯಾರಿಲ್ಲದವನ್ನು ದೇವರ ಹೆಗಲ ಮೇಲೇರಿಸಿ ನಿಶ್ಚಿಂತರಾಗುವ ಎಷ್ಟು ದಾಟಿ ಇತ್ತು ಆ ದನಿಯಲ್ಲಿ. ಮುಂದೆ ಕೇಳಲಿಲ್ಲ ಅವರ.

ಹಿಂದೆಯೇ ಹರಿದು ಹೋಯಿತು, ಒಂದು 'ಮೋನಾರ್ಕ್' ಅದೇ ವ್ಯಕ್ತಿ ಬದಿಯಲ್ಲೊಂದು ಹೆಣ್ಣು ವ್ಯಕ್ತಿ. ಕಿಸಕ್ಕನೆ ನಕ್ಕ ಸದ್ದಾಯಿತು. ಕಾರು ಹಾದು ಹೋದಂತೆಯೇ.

ಬೆಳಗ್ಗೆ 'ರಾಜರಸ್ತೆ', ಸಂಜೆ 'ರಾಜ', ಈಗ....ರಾಣಿ ಅದೇ "ರಾಜರಸ್ತೆ".. "ಕಿಂಗ್ಸ್‌ವೇ" ಬಿಸಿಯ ಉಸಿರೊಂದು ಅರಿವಿಲ್ಲದಂತೆ ಹೊರಬಿತ್ತು ಅಷ್ಟೆ—ನನ್ನ ಸ್ವಕೃತಕ್ಕಾಗಿ!

ಸತ್ತ ಹುಳ್ಳಿನ ಮಧ್ಯೆ ಮಾಡಿದ್ದ ಮ್ಯುಬಿ ಪಂಜರ ತಾನೂ ಕಿಸಕ್ಕನೆ ನಕ್ಕಂತಾಯಿತು.

—ಹಿಂದಿನ ಸಂಜೆಯ ನಗುವಿನಂತೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದ
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿವೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

REGD. No. B. G. 176
LICENCE No. 31
Licensed to Post without Prepayment

ನಮ್ಮ-ನಮ್ಮವರು

(೧ನೇ ಪುಟದಿಂದ)

ಗೊಂಡ ಗಂಗಮ್ಮ-ಗೌರಮ್ಮರೆಂಬ ಅವಳಿ ಜವಳಿ ಮಕ್ಕಳು.

ಗಂಗಮ್ಮ-ಗೌರಮ್ಮರವರು ಒಬ್ಬರೊಡನೊಬ್ಬರು ಕೂಡಿಕೊಂಡ ಅವಳಿ ಸಹೋದರಿಯರು. ಇವರನ್ನು ಕಟ್ಟಿಕೊಂಡು ಶ್ರೀ ಸರ್ವೋತ್ತಮ ಶೆಟ್ಟರು ೧೯೩೫ರಿಂದ ೧೯೩೭ರ ವರೆಗೆ ಅಖಿಲ ಭಾರತದಲ್ಲಿ ಸಂಚರಿಸಿ ಎಲ್ಲೆಂದರಲ್ಲಿ ಪ್ರದರ್ಶನಗಳನ್ನು ಏರ್ಪಡಿಸಿದ್ದರು. ಕಲ್ಕತ್ತ, ಡಿಲ್ಲಿ, ಗಡಿನಾಡು, ಮದ್ರಾಸು, ಲಾಹೋರು, ಕರಾಚಿ, ಲಕ್ನೋ, ಖಾನಪುರ, ನಾಗಪುರ, ರಾವಲ್ಪಿಂಡಿ ಮೊದಲಾದ ಅಂದಿನ ಭಾರತದ ಮಹಾನಗರಗಳಲ್ಲಿ ಇವರ ಪ್ರದರ್ಶನ ಮೆಚ್ಚುಗೆ ಪಡೆದಿತ್ತು. ಬ್ರಹ್ಮದೇಶ ಮತ್ತು ಸಿಂಹಳಗಳನ್ನೂ ಅವರು ಆ ಕಾಲದಲ್ಲಿಯೇ ಸಂದರ್ಶಿಸಿದ್ದರು. ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ಭಾಗವಹಿಸಿದ ಶ್ರೀ ಶೆಟ್ಟರು ಜವಾಹರಲಾಲ ನೆಹರು, ವಿಜಯಲಕ್ಷ್ಮಿ ಪಂಡಿತ್ ಕಸ್ತೂರಿಬಾ ಮೊದಲಾದ ಕಾಂಗ್ರೆಸ್ ಮುಖಂಡರಿಗೆ ತನ್ನ ಪ್ರದರ್ಶನವನ್ನು ತೋರಿಸಿ ಅವರಿಂದ ಮೆಚ್ಚುಗೆಗಳಿಸಿದ್ದಾರೆ.

೧೯೩೭ನೆಯ ಮಾರ್ಚಿಯಿಂದ ಶ್ರೀ ಶೆಟ್ಟರ ವಿದೇಶ ಸಂಚಾರವು ಆರಂಭವಾಯಿತು. ಐದು ವರ್ಷಗಳ ಅವಧಿಯ ಪಾಸ್‌ಪೋರ್ಟ್ ಇವರಿಗೆ ದೊರಕಿದ್ದರೂ ೧೯೩೯ರಲ್ಲಿ ಪ್ರಾರಂಭದ ದ್ವಿತೀಯ ಜಾಗತಿಕ ಸಮರದ ಕಾರಣದಿಂದ ಎರಡೂವರೆ ವರ್ಷಗಳಲ್ಲಿಯೇ ಇವರು ಸ್ವದೇಶಕ್ಕೆ ಮರಳಬೇಕಾಯಿತು. ಈ ಅಲ್ಪಾವಧಿಯಲ್ಲಿಯೂ ಇವರು ಬ್ರಿಟಿಷ್ ಸಾಮ್ರಾಜ್ಯವನ್ನು ಸುತ್ತಾಡಿದರು. ಈಜಿಪ್ಟ್, ಫ್ರಾನ್ಸ್, ಇಟೆಲಿ, ಜರ್ಮನಿ, ಹಂಗೇರಿ, ಗ್ರೀಸ್, ಸ್ಪೈನ್, ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಹೊಲ್ಲೆಂಡ್, ಸ್ವಿಜರ್‌ಲೇಂಡ್ ಮೊದಲಾದ ದೇಶಗಳನ್ನು ಸಂಚರಿಸಿ, ಅಲ್ಲಿ ತನ್ನ ಪ್ರದರ್ಶನದಿಂದ ಅಂತಾರಾಷ್ಟ್ರೀಯ ವ್ಯಕ್ತಿಯಾಗಿ ಪರಿಣಮಿಸಿದರು.

ಆ ಕಾಲದಲ್ಲಿಯೇ ನಾಲ್ಕಷ್ಟು ಸಾಹಸ ತೋರಿಸಿದ ಏಕೈಕ ದಕ್ಷಿಣ ಕನ್ನಡಿಗರು ಶ್ರೀ ಸರ್ವೋತ್ತಮ ಶೆಟ್ಟರು ಎಂಬುದು ನಮಗೆಲ್ಲ ಅಭಿಮಾನ. ಉದಾರಿಗಳೂ ಸಾಹಸಪ್ರಿಯರೂ ಆದ ಇವರನ್ನು ಯಾರೂ ಮರೆಯುವುದು ಸಾಧ್ಯವಿಲ್ಲ.

In the Court of the District Munsiff Udipi.

Original Suit No. 370/1963.

S Krishnan Pothi — Plaintiff

and

Yenka Poojary — Defendant

Notice to the Defendant: Yenka Poojary, son of Thungi Poojarthi, Koppala, Mattu Village, Udipi Taluk.

You are hereby informed that that the above suit filed by Plaintiff for recovery of the rents justly due by you, stands posted to 26—3-64 for hearing. If you fail to appear before the above Court on that day at 11 A. M. and defend yourself, the suit will be decided in your absence.

Sd. D. P. Kotiankar,
B. A., LL. B.,
Advocate for Plff.

Udipi, 6-3-64.

ನಗೆಗಡಲು

ಅಂದು ತೋಚಿದ್ದರೆ

ಯುರೋಪಿನ ಪುನರ್ಜಾಗರಣ ಯುಗದ ಒರ್ವ ರಾಜ ಮೃತ್ಯುಶಯ್ಯೆಯಲ್ಲಿ ಮಲಗಿದ್ದ. ಆತನ ಅಂತ್ಯ ಸಮಯ ಕಂಡ ಪಾದರಿಯು "ನಿನಗೆ ಜೀವನದಲ್ಲಿ ಯಾವ ಕುರಿತಾದರೂ ಪಶ್ಚಾತ್ತಾಪವಿದೆಯೇ?" ಎಂದು ಪ್ರಶ್ನಿಸಿದ

ಆಗ ರಾಜನು ಹೇಳಿದನು—"ಒಂದು ವಿಷಯದ ಬಗ್ಗೆ ಪಶ್ಚಾತ್ತಾಪಪಡುತಿದ್ದೇನೆ. ಒಂದೊಮ್ಮೆ ಪವಿತ್ರ ರೋಮನ್ ಸಾಮ್ರಾಜ್ಯದ ಸಾಮ್ರಾಟ ಮತ್ತು ರೋಮಿನ ಪೋಪರು ಒಂದಾಗಿ ನನ್ನ ಬಳಿಗೆ ಬಂದಿದ್ದರು. ನಾನವರಿಬ್ಬರನ್ನೂ ನಾಲ್ಕು ದಿಕ್ಕಿನ ನೋಟವನ್ನು ತೋರಿಸುವುದಕ್ಕಾಗಿ ದುರ್ಗದ ಗೋಪುರಕ್ಕೆ ಕರೆದೊಯ್ದೆ. ಕೈಯಲ್ಲಿ ಒಳ್ಳೆಯ ಅವಸರವಿತ್ತು. ಅಂದು ನಾನವರಿಬ್ಬರನ್ನೂ ಗೋಪುರದಿಂದ ಉರುಳಿಸಿ ಬಿಡುತಿದ್ದರೆ ನಾನು ಇತಿಹಾಸದಲ್ಲಿ ಅಮರನಾಗುತಿದ್ದೆ. ಆದರೆ, ಈ ವಿಚಾರ ನನ್ನ ಬುದ್ಧಿಗಂದು ತೋಚಿರಲೇ ಇಲ್ಲ. ಆದುದರಿಂದಾಗಿ ..."

ಓಹೋ, ಅಷ್ಟೇನೆಯೆ?

ಒಬ್ಬ ಹುಡುಗ ಓದುವುದೆಂದರೆ ಹೆದರುತಿದ್ದ. ಆದುದರಿಂದ ಶಾಲೆಗೆ ಹೋಗುವ ನೆವನದಲ್ಲಿ ಮನೆ ಬಿಟ್ಟು ನಡೆದು ಪೊದರುಗಳಲ್ಲಿ ಅಡಗಿರುತಿದ್ದ. ಸಂಜೆಗೆ ಮನೆಗೆ ಮರಳುತಿದ್ದ. ಆದರೆ, ಯಾರಿಗೂ ಇದು ತಿಳಿದಿರಲಿಲ್ಲ ಒಂದುದಿನ ನಿತ್ಯದಂತೆ ಆತ ಪೊದರುಗಳಲ್ಲಿ ಅಡಗಿಕೊಂಡ. ಒಬ್ಬ ಪೋಲೀಸಿನವನು ಒಬ್ಬಾತನನ್ನು ಕೈಗಳಿಗೆ ಸಂಕೋಳೆ ತೊಡಿಸಿ ಕರೆದುಕೊಂಡು ಹೋಗುತಿದ್ದ. ಆದಿನ ಆತನಿಗೆ ಮರಣ ದಂಡನೆ ನೀಡುವುದಿತ್ತು ಇದಕ್ಕಾಗಿ ಆ ಕೈದಿ ಮರುಗುತ್ತಿದ್ದ. ಪೊದರುಗಳೆಡೆಯಿಂದ ಆ ಬಾಲ ಇಣಿಕಿ ನೋಡಿ ಕೇಳಿದ—"ಎಲಾ ಯಾಕೆ ಅಳುತಿದ್ದೀ?"

ಆ ಕೈದಿ ಯಾವ ಉತ್ತರವನ್ನೂ ನೀಡದೆ ಅಳುತ್ತಲೇ ನಡೆದಿದ್ದ.

ಹುಡುಗ ಪೋಲೀಸಿನವನನ್ನು ಪ್ರಶ್ನಿಸಿದ—"ಏನಯ್ಯ, ಇವನು ಯಾಕೆ ಅಳುತ್ತಾನೆ?"

"ಇವನು ಇಂದು ಮರಣ ದಂಡನೆಗೆ ಗುರಿಯಾಗುವವನಿದ್ದಾನೆ. ಆದುದರಿಂದಲೇ ಉಸಿರುಕಟ್ಟಿ ಅಳುತಿದ್ದಾನೆ"—ಪೋಲೀಸಿನವ ಉತ್ತರಿಸಿದ.

ಹುಡುಗ ನಿರುತ್ಸಾಹನಾಗಿಯೇ ಉದ್ಗರಿಸಿದ—"ಓಹೋ, ಇಷ್ಟೆನೆಯೆ? ಇವನು ಶಾಲೆಗೆ ಹೋಗುವುದಕ್ಕಾಗಿ ಅಳುತ್ತಾನೆ ಎಂದುಕೊಂಡಿದ್ದೆ ನಾನು!"

ಇದ್ದಲ್ಲೇ ತೃಪ್ತಿ

ದಾರ್ಶನಿಕ ಚುವಾಂಗ ಜ್ಯೂ ಒಂದು ನದೀತೀರದಲ್ಲಿ ಕುಳಿತು ಮೀನು ಹಿಡಿಯುತ್ತಿದ್ದರು. ಅಷ್ಟರಲ್ಲೇ ಒಬ್ಬ ರಾಜದೂತನು ಬಂದು ಆತನಿಗೆ ಹೇಳಿದ—"ಮಹಾರಾಜರು ತಮ್ಮನ್ನು ಪ್ರಧಾನ ಮಂತ್ರಿಯಾಗಿ ನೇಮಿಸಿದ್ದಾರೆ."

ನದಿಯತ್ತಣಿಂದ ನೋಟ ಹರಿಸದೆ ಚುವಾಂಗರು ಉತ್ತರವಿತ್ತರು—"ಸಾಮ್ರಾಟರು ತನ್ನ ಸಂಗ್ರಹಾಲಯದಲ್ಲಿ ಒಂದು ಉತ್ತಮ ಜಾತಿಯ ಆಮೆಯನ್ನು ಸುರಕ್ಷಿತವಾಗಿ ಇಟ್ಟುಕೊಂಡಿದ್ದಾರಂತೆ. ಆಮೆಯು ಜೀವಿತವಿರುತಿದ್ದರೆ, ಅದು ಮಹಾರಾಜರ ಸಂಗ್ರಹಾಲಯದಲ್ಲಿ ಶೋಭೆಯನ್ನು ಹೆಚ್ಚಿಸುವುದರಿಂದ ತೃಪ್ತವಾದೀತೆ? ಅಥವಾ ತಾನು ಹುಟ್ಟಿದಲ್ಲಿಯೇ ಬಿದ್ದುಕೊಂಡಿರುವುದರಿಂದ ಸಂತಸಗೊಂಡೀತೆ ಹೇಳು."

ದೂತನು ಹೇಳಿದನು—"ಅದು ತನ್ನ ನೆಲೆಯಲ್ಲೇ ಬಿದ್ದುಕೊಂಡು ತೃಪ್ತಿ ಹೊಂದುತಿತ್ತು."

ಚುವಾಂಗರು ನುಡಿದರು—"ನನಗೂ ಇಷ್ಟ ಅದೇ. ಪದವಿಯನ್ನು ಪಡೆದರೆ ವ್ಯಕ್ತಿಯು ತನ್ನ ಮನಶ್ಶಾಂತಿಯನ್ನು ಕಳೆದುಕೊಳ್ಳುತ್ತಾನೆ; ಕೆಲವೊಮ್ಮೆ ತನ್ನ ಜೀವನಕ್ಕೂ ಎರವಾಗುತ್ತಾನೆ. ನೀನು ಮಹಾರಾಜರೊಡನೆ ಹೋಗಿ, ನಾನು ಇದ್ದಲ್ಲೇ ಇದ್ದು ತೃಪ್ತಿಹೊಂದ ಬದುಕುತ್ತೇನೆ ಎಂದು ಹೇಳು."

ನೊಣದ ಹೆಣದ ರುಚಿ

ಒಮ್ಮೆ ಅಮೆರಿಕನನು ಹೋಟಲಲ್ಲಿ ಚಾ ಕುಡಿಯಲು ಹೋದ. ಆತನ ಚಹದಲ್ಲಿ ಒಂದುನೊಣಬಿದ್ದಿತ್ತು. ಆತ ಕಪ್ಪ-ಬಸಿ ಸಮೇತ ಬೀದಿಗೆಸೆದು ಮುಂದೆ ನಡೆದು ಹೋದ.

ಆ ಮೇಲೆ ಅಲ್ಲಿ ಬಂದ ಇಂಗ್ಲಿಷನ ಕಪ್ಪಿನಲ್ಲೂ ನೊಣವಿತ್ತು. ಆತ ಕೂಡಲೇ ಮನೇಜರರನ್ನು ಕರೆದು ಬೇರೆ ಚಹ ತರಿಸಿ ಕುಡಿದು ನಡೆದುಬಿಟ್ಟ.

ಅನಂತರ ಬಂದವನೊಬ್ಬ ಭಾರತೀಯ ಆತನಚಹಾ ಲೋಟದಲ್ಲೂ ನೊಣ ಬಿದ್ದಿತ್ತು. ಆತ ತನ್ನ ಬೆರಳಿನಿಂದ ಅದನ್ನು ಎತ್ತಿ ಬಿಸುಟು ಚಹ ಕುಡಿದು ಹೊರಟುಹೋದ.

ಅವನ ನಂತರ ಚೀನೀಯನೊಬ್ಬ ಬಂದ. ಅವನ ಚಹಕ್ಕೂ ನೊಣ ಬಿದ್ದಿತ್ತು. ಆತನ ದೃಷ್ಟಿಗದುಗೋಚರಿಸುತ್ತಲೇ ಆತ ಪ್ರಸನ್ನನಾದ. ಮೊದಲು ಆ ನೊಣವನ್ನು ಜಗಿದು ನುಂಗಿದ, ಮೇಲೆ ಚಹ ಕುಡಿದ; ತೃಪ್ತ ಹೃದಯದಿಂದ ಹೊರಟ.

ಆದಾಯ ವೆಚ್ಚಗಳ ನಿಗದಿ
ಒಂದು ಒಡಂಬಡಿಕೆಯಾಗಿದೆ:

ಹಣವೊಂದೇ ಸರ್ವಸ್ವವಲ್ಲ, ಆದರೆ ಒಂದು ಕುಟುಂಬವು ಆದರ ಹಣವನ್ನು ಉಪಯೋಗಿಸುವ ದಾರಿಯು ಅದು ಮಾಡುವ ಪ್ರತಿಯೊಂದರ ಮೇಲೆಯೂ ಪರಿಣಾಮವನ್ನುಂಟು ಮಾಡುತ್ತದೆ. ಹಣವು ಯಾವಾಗಲೂ ಬಯಕೆಯು ಫಲಕಾರಿಯಾಗುವುದರಲ್ಲಿ ಪ್ರಮುಖಾಂಗವಾಗಿ ಮುಂದುವರಿಯುತ್ತದೆ. ಒಂದು ಕಾರ್ಯಗತಗೊಳಿಸುವ ಆದಾಯ ವೆಚ್ಚಗಳ ನಿಗದಿಯು ಒಂದು ಒಡಂಬಡಿಕೆಯನ್ನು ಸೂಚಿಸುತ್ತದೆ - - ಒಂದು ಕುಟುಂಬವು ಬಯಸುವುದನ್ನು ಮತ್ತು ಅದು ಸಾಧ್ಯತೆಯೋ ಎಂಬುದನ್ನು.

ಆದಾಯ ವೆಚ್ಚಗಳ ನಿಗದಿಯಲ್ಲಿ ಹಣವನ್ನು ಬೇರೆ ಬೇರೆ ವಿಭಾಗಕ್ಕೆ ವಿಂಗಡಿಸಿಡುವುದಕ್ಕಿಂತ ಆರ್ಥಿಕ ಯೋಜನೆಗೆ ಆಳವಾದ ತಳಹದಿ ಇದೆ. ಕುಟುಂಬದ ಇಂದಿನ ಮತ್ತು ಮುಂದಿನ ಸುಭದ್ರತೆಯಿಂದ ನಿಜವಾದ ಜೀವನ ಮಟ್ಟವು ಅಳೆಯಲ್ಪಡುವುದೆಂಬುದನ್ನು ನಾವು ನೆನಪಿನಲ್ಲಿಡಬೇಕು.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಮಾಡಿರಿ
ಮತ್ತು ಭವಿಷ್ಯತ್ತನ್ನು ಭದ್ರಗೊಳಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
………………ಜಗತ್ತಿನಾದ್ಯಂತ ಬ್ಯಾಂಕಿಂಗಿಗಾಗಿ.

ಶಾಖೆಗಳು 190
ಚಲಾವಣಾ ನಿಧಿ ರೂ. 57 ಕೋಟಿಗೂ ಮಿಕ್ಕಿದೆ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

VOL. 43 No. 29

NAVAYUGA—Nationalist Weekly ‡‡ ಉಡುಪಿ 19-3-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಜವಾಹರಲಾಲ

ಭಾರತವು ಯಾರನ್ನು ಮರೆತರೂ ಮರೆಯಲಾಗದ ವ್ಯಕ್ತಿಯೆಂದರೆ ಜವಾಹರಲಾಲರು. ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ರಾಜಕೀಯ ಉತ್ತರಾಧಿಕಾರಿಯಾಗಿ ಭಾರತದ ರಾಜ್ಯಸೂತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ ಮಹಾ ಶಕ್ತಿ ಇವರು. ಭಾರತದ ಪುನಾರಚನೆಯ ಸೂತ್ರಧಾರರಾದ ನೆಹರೂರವರು ತಮ್ಮ ಪಂಚಶೀಲ ತತ್ವನಿಷ್ಠ ವಿದೇಶ ನೀತಿಯನ್ನು ಜಗತ್ತಿಗೆ ನೀಡಿದವರು. ಈ ವಿದೇಶ ನೀತಿಯು ಇಂದು ಪರೀಕ್ಷೆಗೆ ಗುರಿಯಾದಂತಿದೆ. ಅತ್ತ ಕೆಂಪು ಚೀನ, ಇತ್ತ ಪಾಕಿಸ್ತಾನಗಳ ಆಕ್ರಮಣಕಾರಿ ಮನೋವೃತ್ತಿಯ ನಡುವೆ ಭಾರತವನ್ನು ಯಶಸ್ವಿಯಾಗಿ ಮುನ್ನಡೆಸುವ ಜವಾಬ್ದಾರಿ ಇವರ ಮೇಲಿದೆ. ಆಡಳಿತದ ಪರಿಪಕ್ವ ಅನುಭವವಿರುವ, ಇತಿಹಾಸದ ಪರಿಪೂರ್ಣ ಪ್ರಜ್ಞೆ ಇರುವ ನೆಹರೂರವರು ಇತಿಹಾಸದ ಪುನರಾವೃತ್ತಿ ನಡೆಯಬಾರದು; ಭಾರತವು ಮತ್ತೆ ಪರತಂತ್ರಗೊಳ್ಳಬಾರದು ಎಂದು ಕರೆ ನೀಡುತ್ತಲೇ ಇದ್ದಾರೆ.

ಇದೀಗ ವ್ಯಾಧಿಯಿಂದ ತನ್ನ ಹೊಣೆಯಿಂದ ಸ್ವಲ್ಪ ವಿರಾಮವನ್ನು ಹೊಂದುವುದು ಅಗತ್ಯವೆಂದು ಮನಗಂಡು ತಮ್ಮ ಸಹಾಯಕರೆಂದು ಲಾಲಬಹದೂರ ಶಾಸ್ತ್ರಿಯವರನ್ನು ಕರೆದುಕೊಂಡಿದ್ದಾರೆ. ಇದರಿಂದಾಗಿಯೇ ನೆಹರೂ ನಂತರ ಯಾರು ಎಂಬ ಪ್ರಶ್ನೆಯ ಮೇಲೆ ಮತ್ತೆ ಬೆಳಕು ಚೆಲ್ಲಿದೆ. ನೆಹರು ನಂತರ ಯಾರು ಎಂಬ ನಿರ್ಧಾರಕ್ಕೆ ಬರಬೇಕಾದವರು ಭಾರತೀಯರು ನಿಜ. ಆದರೂ ಭಾರತದ ಅಂತಚಿಂತನೆಯನ್ನೇ ಅಹರ್ನಿಶಿ ಮಾಡುತ್ತಿರುವ ನೆಹರು ಈ ಪ್ರಶ್ನೆಯನ್ನು ಸ್ವಲ್ಪ ಹಸನುಗೊಳಿಸುವುದು ಅಗತ್ಯವಿದೆ. ತನ್ನ ವಿಶ್ವಾಸ ಪಾತ್ರರಾದ ಸಹೋದ್ಯೋಗಿಗಳನ್ನು ಆಡಳಿತದಲ್ಲಿ ಮುಂಪಂಕ್ತಿಗೊಳಿಸುವುದು, ಅದಕ್ಕಾಗಿ ಸೂಕ್ತ ಮಾರ್ಗದರ್ಶನ ಮಾಡುವುದು ಅಪೇಕ್ಷಣೀಯವಿದೆ. ಇಂದು ನೆಹರೂರವರ ಮಾತು ಅಷ್ಟೊಂದು ಕೇಳಿಬರುತ್ತಿಲ್ಲ. ಮಾರ್ಗದರ್ಶನವಿತ್ತು ದೇಶವನ್ನು ಮುನ್ನಡೆಸುವಂತೆ ನೋಡಿಕೊಳ್ಳುವುದರಲ್ಲಿಯೇ ಅವರು ವ್ಯಸ್ತರಾಗಿದ್ದಾರೆ; ಅಗತ್ಯದ ಕಾಗದ ಪತ್ರಗಳನ್ನು ಮಾತ್ರ ತಾವೇ ನೋಡುತ್ತಾರೆ

ನೆಹರು ಇನ್ನು ಬದುಕಿದಷ್ಟು ಕಾಲ ಬದುಕಲಾರರು. ಆದುದರಿಂದ ಅವರಿಂದ ಜನತೆ ಎರಡು ಕಾರ್ಯಗಳನ್ನು ನಿರೀಕ್ಷಿಸುತ್ತದೆ. ಹಳೆಯದಾದ ಕಾಶ್ಮೀರದ ಪ್ರಶ್ನೆಯ ಪರಿಹಾರವೊಂದು, ಸಾಮ್ರಾಜ್ಯವಾದಿ ಚೀನಾದ ಆಕ್ರಮಣ ಭೀತಿ ನಿವಾರಣೆಯಿನ್ನೊಂದು. ಭಾರತದ ಅಂತರ್ಮುಖಿ ಸಾಧನೆಗಳನ್ನು ನಾಶಗೊಳಿಸುವ ಈ ಸಮಸ್ಯೆಗಳನ್ನು ನೆಹರು ಪರಿಹರಿಸಿಬಿಟ್ಟರೆಂದರೆ, ಅವರು ಬಯಸುವಂತೆ ದೇಶದಲ್ಲಿ ಸುಭಿಕ್ಷೆಯನ್ನುಂಟುಮಾಡಲು ಸುಲಭವಾಗುವುದು. ಇದಕ್ಕಾಗಿ ನೆಹರೂ ಇನ್ನೂ ಬಹುಕಾಲ ಬಾಳಬೇಕು; ಶಕ್ತಿವಂತರಾಗಿ ಉಳಿಯಬೇಕು.

ಕೆ. ಆರ್. ಕೆ. ಭಟ್

ಜೀವವಿಮಾ ವ್ಯವಹಾರವನ್ನು ಸರಕಾರವು ರಾಷ್ಟ್ರೀಕರಣಗೊಳಿಸಿದಾಗ ಉಡುಪಿಯಲ್ಲಿ ಡಿವಿಜನಲ್ ಆಫೀಸು ಸ್ಥಾಪನೆಗೊಳ್ಳುವುದೆಂದು ಯಾರೂ ನಂಬಿರಲಿಲ್ಲ; ಅದು ನಿರ್ಧಾರವಾದ ನಂತರ ಶ್ರೀ ಕೆ. ಆರ್. ಕೆ. ಭಟ್ಟರು ಡಿವಿಜನಲ್ ಮೆನೇಜರರಾಗಿ ಬರುವರೆಂದೂ ಯಾರೊಬ್ಬರೂ ಊಹಿಸಲಿಲ್ಲ. ಉಡುಪಿ ಡಿವಿಜನ್ನಿನಲ್ಲಿ ಉಡುಪಿಯವರೇ ಆದ ಶ್ರೀ ಭಟ್ಟರು ಪ್ರಥಮ ಡಿವಿಜನಲ್ ಮೆನೇಜರರಾಗಿ ಬಂದರು; ಕೊನೆಯ ಗಳಿಗೆಯಲ್ಲಿ ಸ್ಥಾಪಿತವಾದ ಈ ಡಿವಿಜನಲ್ ಆಫೀಸನ್ನು ಉಳಿಸುವಲ್ಲಿ ಸಮರ್ಥರಾದರು. ಇಂದು ಉಡುಪಿಯ "ಜೀವನ ಕೃಷ್ಣ"ವು ಶ್ರೀ ಭಟ್ಟರ ಪ್ರಯತ್ನವಾಗಿ ನಿಂತಿದೆಯೆಂದರೆ ತಪ್ಪಾಗಲಾರದು.

ಶ್ರೀ ಕೆ. ಆರ್. ಕೆ. ಭಟ್ಟರು ಎಳೆತನದಲ್ಲಿಯೇ ವಿಮಾರಂಗವನ್ನು ಸೇರಿದವರು. ಓರಿಯಂಟಲ್‌ನ ಏಜಂಟರಾಗಿ ಪ್ರವೇಶ ಮಾಡಿದ ಇವರು ತನ್ನ ವ್ಯವಹಾರ ಚತುರತೆ ಮತ್ತು ಸಾಮರ್ಥ್ಯಗಳಿಂದ ಬ್ರಾಂಚ್ ಮೆನೇಜರರ ಪದವಿಯನ್ನೇರಿದರು. ಅವರ ವ್ಯವಹಾರ ಚಾತುರ್ಯಕ್ಕೆ ಉಡುಪಿಯ ಡಿವಿಜನಲ್ ಮೆನೇಜರರಾದ ಬಳಿಕ ಕಲಶವಿಟ್ಟಂತಾಯಿತು. ತನ್ನ ಕಾಲಾವಧಿಯಲ್ಲಿ ಗುರಿಗಿಂತ ಬಹಳ ಹೆಚ್ಚಿನ ವಿಮಾ ವ್ಯವಹಾರವನ್ನು ಒದಗಿಸಿದ ಶ್ರೀ ಭಟ್ಟರು ಡಿವಿಜನನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಅನಂತರ ಹೈದರಾಬಾದಿಗೆ ವರ್ಗವಾಗಿ ಅಲ್ಲಿಂದ ಮತ್ತೆ ಈಗ ಮಧುರೆ ವಿಭಾಗದ ಮೆನೇಜರರಾಗಿ ದುಡಿಯುತ್ತಿದ್ದಾರೆ, ಇವರು.

ಭಟ್ಟರದು ಉದಾರ ಚಿತ್ತ; ಸರಳವ್ಯಕ್ತಿತ್ವ; ಮೃದು ಮಧುರ ಭಾಷಣ, ಸಾರ್ವಜನಿಕ ಸೇವಾಸಕ್ತಿ. ಉಡುಪಿಯಲ್ಲಿ ರೋಟರಿ ಮನೋವೃತ್ತಿಯ ಪ್ರಚೋದಕರು ಇವರು. ಇಲ್ಲಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಹುಡುಗಿಯರ ಹಾಸ್ಟೆಲಿಗೆಂದು ಸನ್ನದಾದ ಕಟ್ಟಡಗಳನ್ನು ದಾನವಿತ್ತವರು ಇವರು. ಹಲವಾರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಹಾಸುಹೊಕ್ಕಾಗಿದ್ದವರು ಇವರು.

ಶ್ರೀ ಭಟ್ಟರಿಗೆ ಶ್ರೀ ಮದ್ಭಗವದ್ಗೀತೆಯ ಮೇಲೆ ಮಮತೆ ಬಹಳ. ಗೀತಾ ಪಾರಾಯಣ ಮತ್ತು ಅಧ್ಯಯನಗಳು ಅವರ ದೈನಂದಿನ ಕಾರ್ಯಕ್ರಮಗಳಲ್ಲಿ ಅಡಕವಾಗಿರುತ್ತವೆ. ಗೀತೆಯ ತಿರುಳನ್ನು ಜನಜನಕ್ಕೂ ತಿಳಿಸುವ ಸಲುವಾಗಿ ಗೀತಾ ಲಾವಣಿಯೇ ಮೊದಲಾದ ನಾಲ್ಕಾರು ಚಿಕ್ಕ ಪುಸ್ತಕಗಳನ್ನೂ ಇವರು ಬರೆದಿದ್ದಾರೆ; ಅವನ್ನು ಉಚಿತವಾಗಿ ಹಂಚಿದ್ದಾರೆ. ಗೀತೆ ತೋರಿದ ಬೆಳಕಿನಲ್ಲೇ ನಡೆಯುವ ಶ್ರೀ ಕೆ. ಆರ್. ಕೆ. ಭಟ್ಟರಿಗೆ ತಮ್ಮ ಧರ್ಮಪತ್ನಿ ಶ್ರೀಮತಿ ಆಶಾ ಭಟ್ಟರ ಸಹಕಾರ ಸದಾಕಾಲವೂ ಸಿದ್ಧವಾಗಿಯೇ ಇರುತ್ತದೆ. ಇದೇ ಅವರ ಯಶಸ್ಸಿನ ಗುಟ್ಟು ಎನ್ನಬಹುದು.

ಡಾ| ಕೆ. ಕೆ. ಹೆಗ್ಡೆ

ಕರ್ನಾಟಕ ರಾಜ್ಯ ನಿರ್ಮಾಣವಾದ ಬಳಿಕ ನಡೆದ ಸಾರ್ವತ್ರಿಕ ಚುನಾವಣಾ ನಂತರ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಳ ರಾಜಿನಾಮೆಯಿತ್ತ ಮೇಲೆ ಶ್ರೀ ಬಿ. ಡಿ. ಜತ್ತಿಯವರು ಗದ್ದುಗೆಗೇರಿದರು. ಇವರ ಸಂಪುಟದಲ್ಲಿ ಆರೋಗ್ಯ ಖಾತೆಯನ್ನು ನಿರ್ವಹಿಸಲು ಮುಂದಾದವರು ಡಾ| ಕೆ. ಕೆ. ಹೆಗ್ಡೆ ಅವರು. ಮುಂದಿನ ಚುನಾವಣೆಯಲ್ಲಿ ಅವರು ಪರಾಜಿತರಾದರೂ ಅವರು ನಾಡಿಗೆ ಸಲ್ಲಿಸಿದ ಸೇವೆಯನ್ನು ಮರೆಯುವುದು ಸಾಧ್ಯವಿಲ್ಲ. ಡಾ| ಹೆಗ್ಡೆಯವರ ಕಾಲಾವಧಿಯಲ್ಲಿಯೇ ಉಡುಪಿಯ ಸರಕಾರಿ ಆಸ್ಪತ್ರೆಗೆಂದು ಅಜ್ಜರಕಾಡಿನ ವಿಶಾಲ ಸ್ಥಳದಲ್ಲಿ ಕಟ್ಟಡವು ಪ್ರಾರಂಭಗೊಂಡಿತು.

ಡಾ| ಹೆಗ್ಡೆಯವರು ಖಡಾಖಡಿಯ ಮನುಷ್ಯ. ಆದುದರಿಂದಲೇ ಇವರು ಕೆಲವರ ಅಪ್ರಿಯತೆಯನ್ನು ಗಳಿಸಿರಬಹುದು. ಯಾವುದೇ ಸ್ಥಾನಕ್ಕೆ ಅಂಟಿಕೊಳ್ಳುವುದು ಇವರ ಸ್ವಭಾವಕ್ಕೆ ವಿರುದ್ಧ. ಪ್ರಾರಂಭದಿಂದಲೂ ಕಾಂಗ್ರೆಸ್ ಚಿತ್ತರಾದ ಡಾಕ್ಟರ್ ಹೆಗ್ಡೆಯವರು ರಾಜಕೀಯವನ್ನು ಸೇರಿದುದು ಬಹು ತಡವಾಗಿಯೆಂದೇ ಹೇಳಬೇಕು. ವೈದ್ಯಕೀಯ ಪದವಿ ಗಳಿಸಿದ ಬಳಿಕ ಅವರು ವೈದ್ಯಕೀಯ ವೃತ್ತಿಯನ್ನೇ ಅವಲಂಬಿಸಿದರು. ಮುಂದೆ ದಕ್ಷಿಣ ಕನ್ನಡ ಜಿಲ್ಲೆಯ ಬೋರ್ಡಿನ ಸದಸ್ಯಸ್ಥಾನಕ್ಕೆ ಕಾಂಗ್ರೆಸ್ ಹುರಿಯಾಳಾಗಿ ಸ್ಪರ್ಧಿಸಿ ಜಯಶೀಲರಾದರು; ಪ್ರಥಮ ಬಾರಿ ಸದಸ್ಯರಾದಾಗಲೇ ಅವರು ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಆಯ್ಕೆಗೊಂಡರು. ಇವಾದ ಸ್ವಲ್ಪ ಸಮಯದಲ್ಲಿಯೇ ಕಾಂಗ್ರೆಸ್ ಟಿಕೇಟಿನಿಂದ ರಾಜ್ಯದ ವಿಧಾನ ಸಭೆಗೆ ಸ್ಪರ್ಧಿಸಿ ಯಶಸ್ವಿಯಾದರು; ಈ ಅವಧಿಯಲ್ಲಿಯೇ ಮಂತ್ರಿಯೆಂದೂ ನಿಯುಕ್ತರಾದರು. ಡಾ| ಹೆಗ್ಡೆಯವರ ಮಹತ್ವ ಇಲ್ಲಿದೆ.

ನಿರ್ದಾಕ್ಷಿಣ್ಯ ವ್ಯಕ್ತಿ ಡಾ| ಹೆಗ್ಡೆಯ

(೧೨ನೇ ಪುಟ ನೋಡಿರಿ)

ವಿಚಾರಮಥನ

ಪುರಂದರ ವಿಠಲನ ವಿಚಾರಗಳು

(ಲೇಖಾಂಕ ೧)

ಬರೆದವರು: ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್, ಸುರತ್ಕಲ್ಲು.

ಈ ಚರಾಚರ ಪ್ರಪಂಚದ ಹಲವಾರು ಅದ್ಭುತ-ಮನೋಹರ-ಭಯಾನಕ ವಿಷಯಗಳನ್ನು ಕಾಣುವಾಗ, ಇವನ್ನು ನಡೆಯಿಸುವ ಅಪೂರ್ವ ಮಹಾಶಕ್ತಿಯಿದೆಯೆಂಬುದು ಕಲ್ಪನೆಯಾಗಲಾರದು. ಆ ಮಹಾಶಕ್ತಿಯಿಲ್ಲದೆ, ಅದಕ್ಕೂ ನಮ್ಮ ಲೌಕಿಕ ಪ್ರಪಂಚಕ್ಕೂ ಸಂಬಂಧವೇನ, ನಮಗೆ ಅಖಂಡ ಹಾಗೂ ನಿತ್ಯ ಸುಖ-ಶಾಂತಿಗಳು ದೊರೆಯುವಂತೆ ಏನೆಲ್ಲಾ ಮಾಡಬೇಕು, ಇತ್ಯಾದಿ ವಿಚಾರಗಳಿಗೆ ಬುದ್ಧಿಜೀವಿಗಳಲ್ಲಿ ಶ್ರೇಷ್ಠನಾದ ಮಾನವನು ಮೊದಲಾಗಿ ಜಿಜ್ಞಾಸುವಾಗುತ್ತಾನೆ. ಅದನ್ನೇ ಜನತೆ ಗಾದೆಯ ಚಿಕ್ಕನುಡಿಯಲ್ಲಿ ಹೇಳುತ್ತದೆ "ದೇವರ ಭಯವೇ ಜ್ಞಾನದ ಆರಂಭ" ವೆಂದು.

ಜ್ಞಾನವೆಂದರೆ ಆತ್ಮ—ಪರಮಾತ್ಮರ ಸಂಗತಿಗಳನ್ನು ಚರ್ಚಿಸುವುದೆಂದೂ, ಕೇವಲ ಲೌಕಿಕವ್ಯವಹಾರದಲ್ಲಿ ಸುಖಭೋಗಗಳನ್ನು ಅಭಿವರ್ಧಿಸುವಂತೆ ಮಾಡುವುದೇ ವಿಜ್ಞಾನವೆಂದೂ ಹೇಳುತ್ತಾರೆ (ಮೋಕ್ಷೇ ಧೀರ್ಜ್ಞಾನ ಮನ್ಯತ್ರ ವಿಜ್ಞಾನಂ ಶಿಲ್ಪಶಾಸ್ತ್ರಯೋಃ—ಅಮರಕೋಶ) ಇದನ್ನೇ ಉಪನಿಷತ್ತುಗಳಲ್ಲಿ "ಪರಾಪರವಿದ್ಯೆ" "ಪ್ರೇಯಃ ಶ್ರೇಯಃ ಸಾಧನ" ಗಳೆಂದು ವಿವಿಧನಾಮಗಳಲ್ಲಿ ಹೇಳಿದೆ. ಜ್ಞಾನಗ್ರಂಥಗಳೆಂದರೆ, ಜಗತ್ತಿನಲ್ಲೇ ಅತಿಪ್ರಾಚೀನ ಕೃತಿಗಳಾದ ವೇದಗಳೆಂದು ಎಲ್ಲರೂ ಒಪ್ಪುತ್ತಾರೆ. ಪ್ರತಿಯೊಂದು ದೇಶದ ಪ್ರಾಚೀನ ಕೃತಿಯಲ್ಲಿ ದೈವಿಕ— ಆಧ್ಯಾತ್ಮಿಕ ವಿಚಾರ ಕಣಗಳಿವೆಯಾದರೂ, ಭಾರತೀಯ ವೈದಿಕ ಸಾಹಿತ್ಯವೇ ಪರಿಪೂರ್ಣ—ಅತಿಪುರಾತನತಮವೆಂದು ಪಾಶ್ಚಾತ್ಯರ ಹಾಗೂ ಪೌರ್ವಾತ್ಯರ ಅಭಿಮತವಾಗಿದೆ.

ವೇದಗಳು, ಉಪಬ್ರಂಹಣವಾಗಿ ಬ್ರಾಹ್ಮಣ, ಉಪನಿಷತ್ತು, ಸೂತ್ರಗಳು, ಪುರಾಣ-ಉಪಪುರಾಣ ಮೊದಲಾದುವುಗಳ ರಚನೆಯಾಯಿತು. ಈ ಎಲ್ಲಾ ಗ್ರಂಥಗಳಲ್ಲಿ—ಕಾಲಕ್ರಮೇಣ ನಡೆದ ಬೌದ್ಧಿಕ ವಿಕಾಸದ ಪರಿಣಾಮವಾಗಿ—ಜ್ಞಾನ, ಕರ್ಮ, ಭಕ್ತಿ, ರಾಜಯೋಗಗಳು ಹೇಳಿವೆ, ಇವು ನಾಲ್ಕು ಯೋಗಗಳಲ್ಲಿ ಪ್ರತಿಯೊಂದಕ್ಕೂ ಇತರ ತ್ರಿವಿಧಯೋಗಗಳ ಸಾಹಚರ್ಯ, ಹೊಕ್ಕುಬಳಕೆಗಳಿವೆ; ಪ್ರಾಧಾನ್ಯ ವಿಷಯದಿಂದಾಗಿ ಇವು ಪ್ರತ್ಯೇಕಶಃ ಹೆಸರುಗೊಂಡಿವೆ, ಜ್ಞಾನಯೋಗಕ್ಕೆ ಹಲವಾರು ಪ್ರಾಚೀನ ಗ್ರಂಥಗಳ ವಿಚಾರಮಥನದ ಮಹತ್ತಾದ ಹಿನ್ನೆಲೆ ಬೇಕಾಗಿದೆ. ಜನ್ಮಾಂತರಗಳಾದರೂ ಇದರಿಂದ ಸತ್ಫಲ ದೊರೆಯಬಹುದಾದರೂ, ಸರ್ವಜನ ಸುಲಭವಲ್ಲ, ಕರ್ಮಯೋಗವೆಂದರೆ ಮಹಾಯಜ್ಞಾದಿಗಳನ್ನೂ, ತಪೋನುಷ್ಠಾನಗಳನ್ನೂ ವಿಧಿವತ್ತಾಗಿ ಆಚರಿಸುವುದು. ರಾಜಯೋಗವೆಂದರೆ, ಯಮನಿಯಮಾಸನ ಪ್ರತ್ಯಾಹಾರಾದಿ ಅಷ್ಟಾಂಗಗಳ ಸಮಾಪ್ತ ಪದ—ಮಹಾತ್ಮಸಾಧನ ಸಂಪರ್ಕದ—ಸಮಾಕೃತಿಯಾಗಿದೆ. ಇವೆರಡು ಯೋಗಗಳು ಅಪೂರ್ಣವಾದರೆ, ಚ್ಯುತವಾದರೆ, ತುಂಬಾ ತೊಂದರೆಗಳುಂಟಾಗುತ್ತವೆ. ಭಕ್ತಿಯೋಗವಾದರೋ ಇವೆಲ್ಲವುಗಳಷ್ಟು ಕಷ್ಟಸಾಧ್ಯವಲ್ಲ, ಸುಲಭಸಾಧ್ಯವೂ ತೊಂದರೆಯೇನಿಲ್ಲದುದೂ ಆಗಿದೆ. ಭಕ್ತಿಯೆಂದರೇನೆಂದು ಇಲ್ಲಿ ತುಸು ತಿಳಿಯಲೆಳಸುವುದು ಸಾಧುವಾಗಿದೆ.

ತಾಯಿ ತಂದೆ—ಮಕ್ಕಳು, ಅಣ್ಣ-ತಮ್ಮಂದಿರ, ಅಕ್ಕ—ತಂಗಿಯರು, ಗೆಳೆಯ—ಗೆಳತಿಯರು, ಸ್ವಾಮಿ—ಸೇವಕರು, ಗಂಡ—ಹೆಂಡಿರು, ಗುರು—ಶಿಷ್ಯರು, ಇತ್ಯಾದಿ ದ್ವಂದ್ವ ವರ್ಗಗಳಲ್ಲಿ ಲೌಕಿಕ ಸಾಮಾನ್ಯವಾದ, ನಿರ್ನಿಮಿತ್ತಕವಾದ, ಆಸ್ಯಂತಯುಕ್ತವಾದ ಪ್ರೇಮದ ಲೇಶವಿರುವುದು ಸಾಜವಾಗಿದೆ. ಇದು ಕಾಲಾಂತರದಲ್ಲಿ ರೂಪಾಂತರವನ್ನು—ತಾರತಮ್ಯವನ್ನು—ಹೊಂದಬಹುದು. 'ಪರಂತು' ನಿರ್ನಿಮಿತ್ತಕವಾದ, ನಿರಂತರವಾಗ ಪ್ರೇಮವು ಆ ಲೌಕಿಕವಾದ ದೈವೀಕ ತತ್ತ್ವ ತಿರುಗಿರುವುದೇ ಭಕ್ತಿಯೆಂದು ನಾರದ, ಶಾಂಡಿಲ್ಯರ ಭಕ್ತಿಸೂತ್ರಗಳಲ್ಲಿ ಹೇಳಿದೆ, (ಸಾ ತ್ವಸ್ಮಿನ್ ಪರಮ ಪ್ರೇಮರೂಪಾ. ಸ ಪರಾನುರಕ್ತಿ ರೀಶ್ವರೇ, ಇತ್ಯಾದಿ) ಇದನ್ನೇ ವಿವರಿಸುವಲ್ಲಿ, "ಮಾಹಾತ್ಮ್ಯಜ್ಞಾನ ಪೂರ್ವಸ್ತು ಸುದೃಢಃ ಸರ್ವತೋಽಧಿಕಃ ಸ್ನೇಹೋ ಭಕ್ತಿರಿತಿ ಪ್ರೋಕ್ತಃ ತಯಾ ಮುಕ್ತಿರ್ನ ಚಾನ್ಯಥಾ" (ಮಹಾಭಾರತ ತಾತ್ಪರ್ಯ ನಿರ್ಣಯ ೧—೮೫) ಎನ್ನಲಾಗಿದೆ.

ಭಕ್ತಿಯ ಪ್ರಾಚೀನತೆಯ ಕುರುಹುಗಳು ವೇದೋಪನಿಷತ್ತುಗಳಲ್ಲಿವೆ, ಪುರಾಣ ಕಥೆಗಳಲ್ಲಿ ವಿಸ್ತಾರವಾಗಿವೆ. ಶುಕ, ಪ್ರಹ್ಲಾದ, ಧ್ರುವ ಹನುಮ-ಭೀಮ, ಇತ್ಯಾದಿಯರು ಭಕ್ತಿಯ ಪ್ರತೀಕರಾಗಿದ್ದಾರೆ. ಭಕ್ತಿಯ ಪ್ರಾಯೋಗಿಕ ವಿಧಾನವು ಅನೇಕಧಾ ಹೇಳಲಾಗಿವೆ. ಏಕಾಂತಭಾವವೇ ಭಕ್ತಿಯ ಲಕ್ಷಣವೆಂದು (ಶಾಂಡಿಲ್ಯ) ಹೇಳಿದೆ. ಸಾತ್ವಿಕ, ರಾಜಸಿಕ, ತಾಮಸಿಕವೆಂದು ಗುಣಭೇದಗಳೆಂದಲೂ ಆರ್ತ, ಜಿಜ್ಞಾಸು, ಅರ್ಥಾರ್ಥಿಯೆಂದು ಅವಸ್ಥಾಭೇದಗಳೆಂದಲೂ ಗೌಣಭಕ್ತಿಯು ಮೂರುಬಗೆಯಾಗಿ ಹೇಳಿದೆ (ಶಾಂಡಿಲ್ಯ, ಗೀತೆಗಳು). ವಾತ್ಸಲ್ಯ ಶಾಂತ, ದಾಸ್ಯ, ಸಖ್ಯ, ಮಧುರ ಗಳೆಂಬ ಐಯ್ದು ತರಗಳು ಬೇರೆ ಹೇಳಿವೆ, ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದಗಳೆಂದು ಒಂಭತ್ತು ತೆರಗಳು ಹೇಳಿವೆ (ಭಾಗವತ) ಗುಣಮಹಾತ್ಮ್ಯಾಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ಸ್ಮರಣಾಸಕ್ತಿ, ದಾಸ್ಯಾಸಕ್ತಿ, ಸಖ್ಯಾಸಕ್ತಿ, ವಾತ್ಸಲ್ಯಾಸಕ್ತಿ, ಕಾಂತಾಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯಾಸಕ್ತಿ, ಪರಮವಿರಹಾಸಕ್ತಿ ರೂಪಗಳೆಂದು ಹನ್ನೊಂದು ಬಗೆಯಾಗಿ ಬೇರೆಬೇರೆ ಹೇಳಿದೆ (ನಾರದ ಭಕ್ತಿಸೂತ್ರ). ಈ ವಿದಗಳೆಂದರೆ, ಕ್ರಮೇಣ ವಿಸ್ತಾರಗೊಂಡು ಹಸರಿಸುವ ಭಕ್ತಿಯ ಹಂತಗಳಾಗಿವೆ. ಇವುಗಳಲ್ಲಿ, ಭಾಗವತದಲ್ಲಿ ಹೇಳಿದ ಒಂಬತ್ತು ಬಗೆಗಳೇ ಜನತೆಗೆ ಪರಿಚಯವುಳ್ಳವು ಪುರಂದರ ವಿಠಲನ ಕೀರ್ತನೆಗಳಲ್ಲಿ ಕೇಳಿದವುಗಳೆನ್ನಬಹುದು.

ಭಕ್ತಿವಿಚಾರಗಳನ್ನು ತಿಳಿಯಿಸುವ ಕೃತಿಗಳು ಸಂಸ್ಕೃತ ಭಾಷೆಯಲ್ಲಿ ಹೇರಳವಾಗಿವೆ. ಇವನ್ನು ಆಧರಿಸಿ ಪ್ರಾದೇಶಿಕ ಭಾಷೆಗಳಲ್ಲೂ ಅನುವಾದಿಸಿದ ವಿಧಾನವು ಮೊತ್ತಮೊದಲಾಗಿ ತಮಿಳುಪ್ರದೇಶದಲ್ಲಿ ಹುಟ್ಟಿಕೊಂಡಿತು. ಅನಂತರ ಕನ್ನಡದಲ್ಲಿ ಶಿವಶರಣರು ಭಕ್ತಿಗೀತೆಗಳನ್ನು—ವಚನಗಳನ್ನು ರಚಿಸಿದರು. ಅದೇ ಹೊತ್ತಿಗೆ ಮಹಾರಾಷ್ಟ್ರ, ಬಂಗಾಳ, ಅಸ್ಸಾಂ, ಇತ್ಯಾದಿ ಪ್ರದೇಶಗಳಲ್ಲಿ ಸ್ವಭಾಷಾ ಕೃತಿರಚನೆಯ ಕ್ರಮವೂ ಪ್ರಚಾರಕ್ಕೆ ಬಂದಿತು. ಆದರೆ ಕನ್ನಡದಲ್ಲಿ ಹರಿಭಕ್ತಿಯ ಕೀರ್ತನೆಗಳು ಮೊದಲಾಗಿ ಮಾಧ್ವ ಯತಿವರೇಣ್ಯರಾದ ಶ್ರೀ ನರಹರಿ ತೀರ್ಥದಿಂದ ರಚನೆಗೊಂಡುವೆಂದು ತಿಳಿಯುತ್ತದೆ.

ಇಸ್ವಿ 1200ರ ಹೊತ್ತಿಗೆ ಉಡುಪಿನ ಪಾಜಕ ಕ್ಷೇತ್ರದಲ್ಲಿ ಜನಿಸಿದ ಶ್ರೀ ಮಧ್ವಾಚಾರ್ಯರು ಸಂಸ್ಕೃತದಲ್ಲಿ ಹರಿಭಕ್ತಿಗೀತೆಗಳನ್ನು—ದ್ವಾದಶ ಸ್ತೋತ್ರವನ್ನು—ರಚಿಸಿದ್ದರು ಅವರ ಸಾಕ್ಷಾತ್ ಶಿಷ್ಯರಾದ ಶ್ರೀ ನರಹರಿ ತೀರ್ಥರು ಕೆಲವು ಸಂಸ್ಕೃತ ಗ್ರಂಥಗಳನ್ನು ರಚಿಸುವುದರೊಂದಿಗೆ ಕನ್ನಡ ಭಾಷೆಯಲ್ಲೂ ಕೆಲವು ಹಾಡುಗಳನ್ನು ಬರೆದರು. ಇವರು ಗಂಜಾಂ ಜಿಲ್ಲೆಯ ಅಂದಿನ ಮಹಾರಾಜನ ಆಸ್ಥಾನದಲ್ಲಿದ್ದುದು ಮಾತ್ರವಲ್ಲ. ರಾಜಪ್ರತಿನಿಧಿಯಾಗಿದ್ದು, ಕನ್ನಡಕ್ಕೂ ಅಲ್ಲಿನಂತೆ ಸ್ವಭಾಷಾ ಕೀರ್ತನೆಗಳ ರಚನೆಯ ಕ್ರಮವನ್ನು ಹರಡಿಸಿದರು, ಈ ಪದ್ಧತಿ ಮತ್ತೆ ಇನ್ನೂರು ವರ್ಷಗಳ ತನಕ ಸ್ಥಗಿತವಾಯಿತು. ಸಂಸ್ಕೃತದಲ್ಲಿ ಬರೆದರೆ ಪ್ರಾಂತೀಯ ಭೇದವಿಲ್ಲದೆ—ಸಾರ್ವತ್ರಿಕವಾಗಿ—ಪ್ರಸಾರವಾಗುತ್ತದೆ. ಆದುದರಿಂದ ಕನ್ನಡ ಭಾಷೆಯಲ್ಲಿ ಹರಿಕೀರ್ತನೆಗಳ ರಚನೆಗೆ ಆದಾಗ ಬೇರಾರೂ ಕೈ ಹಚ್ಚಿಲ್ಲ, ಮುಂದುಗಾಣಲಿಲ್ಲ. ಪರಂತು, ಈ ವಿಷಯಕ್ಕೆ ಗುರುಮಠದ ಪ್ರಧಾನ ಪಾತ್ರ—ಆವಶ್ಯಕತೆಯಿಲ್ಲವೆಯೆಂದು ಅಂದಿನ ಸಾಮಾಜಿಕ ವಿಚಾರ ತಿಳಿದವರಿಗೆ ಗೊತ್ತಾಗುತ್ತದೆ. ಹಾಗಾಗಿ ಇನ್ನೂರು ವರ್ಷಗಳ ಮೇಲೂ ಈ ವಿಧಾನಕ್ಕೆ ಪುನಃ ಗುರುಮಠವೇ ಪ್ರವರ್ತಿಸುವಂತಾಯಿತು.

ರಾಜಗುರುಗಳಾದ ಶ್ರೀ ಪಾದರಾಯರು 'ರಂಗ ವಿಠಲ'ನೆಂಬ ಮುದ್ರಿಕೆಯಿಂದ ಹಲವಾರು ಕೀರ್ತನೆ, ಸುಳಾದಿ, ವೃತ್ತ

(೧೧ನೇ ಪುಟ ನೋಡಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ **5**
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ **5½** ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ **3**

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



"ಏನೂ ಇಲ್ಲ...ಧೂಳು!"

ಮೂಲ ತಮಿಳು: ಶ್ರೀಮತಿ ರಾಜಂ ಕೃಷ್ಣನ್.
ಕನ್ನಡ ಅನುವಾದ: "ಚಿರಂಜೀವಿ".

[ಮೂಲ ಲೇಖಕಿಯ ಅನುಮತಿ ಪಡೆದುಕೊಂಡೇ ಅನುವಾದಿಸಲಾಗಿದೆ.]

"ಏನಮ್ಮಾ ಮಗೂ! ಯಾರನ್ನೂ ಹಾಗೆ ನೋಡ್ತಾ ಇದ್ದೀಯಾ?"

ಕೆಂಗೂದಲು ಹರಡಿದ್ದ ತಲೆಯಲ್ಲಿ ಎಣ್ಣೆ ತುಂಬಿತ್ತು. ಆರು ವರ್ಷ ಮೀರದ ಹಾರದವಳಿಗೆ—ಲಂಗಕ್ಕೆ ಅಲ್ಲಲ್ಲಿ ಕೆಸರು ಗುಲಿಕೆಯೊಂಡಿತ್ತು. ಚಂಚಲ ನೇತ್ರಗಳು ಸುತ್ತ ಆಡುತ್ತಿದ್ದು, ಅವಳ ಪುಟ್ಟ ತುಟಿಗಳು ಕುಸು ಬಿರಿದಿದ್ದುವು. ಆ ಮಗು ಆಕೆಯ ಪ್ರಶ್ನೆಗೆ ಉತ್ತರಿಸಲಾರದೇ ಅವಳನ್ನೇ ನೋಡುತ್ತಾ ನಿಂತಿತ್ತು.

"ಏನಮ್ಮಾ? ಇಲ್ಲಿ ಯಾರಾದ್ರೂ ನಿನ್ನ ಜೊತೇಲಿ ಆಡೋಕೆ ಇದ್ದಾರಾ ಅಂತ ನೋಡ್ತಾ ಇದ್ದೀಯಾ? ಊಹೂಂ, ಯಾರೂ ಇಲ್ಲ!"

"ಇಲ್ಲಿ ಮತ್ತೆ ನೀವೊಬ್ರೇನೇ ಇದ್ದೀರಾ ಮಾಮಿ"?

"ನಮ್ಮನೇ ಮಾಮ ಆಫೀಸಿಗೆ ಹೊಗ್ತಾರೆ. ಸಾಯಂಕಾಲ ಐದು ಘಂಟೆಗೇನೇ ಅವ್ರು ತಿರುಗಿ ಬರೋದು?"

"ಆಮೇಲೆ ... ಇನ್ಯಾರೂ ಇಲ್ವಾ ಮಾಮಿ?"

"ಊ ಹೂಂ! ಒಬ್ಳು ಅಕ್ಕ ಇದ್ದಾಳೆ. ಅವ್ರು ಈಗ ಬೇರೆ ಮನೇಗೆ ಹೊರಟು ಹೋದ್ರು. ಸ್ಕೂಲಿಗೆ ರಜಾನಾ ನಿಂಗಿವತ್ತು?"

"ಹೌದು ಮಾಮಿ...." ಎಂದು ಹೇಳಿ ಅವಳು ಆ ಮಟಾಣಿ ತನ್ನೆರಡೂ ಕೈಬೆರಳುಗಳನ್ನು ಹೊಸಕುತ್ತಾ ಇವಳನ್ನೇ ಏಕೋ ಹಾಗೆ ನೋಡುತ್ತಿದ್ದಳು. ಅಷ್ಟು ಆಶ್ಚರ್ಯದಿಂದ ನೋಡೋದಂತದು ಏನಿತ್ತು ಇವಳ ಮುಖದಲ್ಲಿ?

"ಒಳಗ್ಬಾಮ್ಮ, ಇಲ್ಲಿ ತುಂಬಾ ಬಿಸಿಲು..."

ಸಂಕೋಚದಿಂದ ಮುದುಡಿಕೊಂಡು ಮೆಟ್ಟಲೇರಿ ಹೊರಬಾಗಿಲ ಬಳಿಯೇ ಇದ್ದ ಬೆಂಚೊಂದರ ಮೇಲೆ ಕುಳಿತುಕೊಂಡಿತು ಆ ಮಗು.

"ನಿನ್ನ ಹೆಸರೇನಮ್ಮಾ?"

"ಬೇಬಿ ......ಬೇಬಿಂತ ಅದ್ರೆ ಅಪ್ಪ ಗೊತ್ತಾ ಸುಂದರಾ ಅಂತ ಕೂಗ್ತಾರೆ!"

"ಓ ಹೋ....?"

"ಇಗೋ ಈ ಸಂದಿ ಕಾಣಿಸ್ತಾ ಇದ್ಯೆ? ನೋಡಿ ಮಾಮಿ? ಅದ್ರೊಳಗಡೇ ಹೋಗ್ಬೇಕು ನಮ್ಮನೇ!"

ಅವಳು ಎದುರು ಸಂದಿಯತ್ತ ನೋಡಿ ಸುಮ್ಮನೇ ನಿಂತಳು. ಆ ಸ್ಥಳ ಇವಳಿಗೆ ತುಂಬಾ ಹೊಸದು. ಅಲ್ಲಿಯ ಆ ವಾತಾವರಣದಲ್ಲಿ ಇವರ ಮನೆಯೇ ಸ್ವಲ್ಪ ನೀಟಾಗಿತ್ತು. ಕುಟ್ಟು ಮುಟ್ಟಾ ಹೂವಿನ ಗಿಡಗಳು. 'ಕಾರುಷೆಡ್ಡು' ಮೊದಲಾದ ದೊಡ್ಡಸ್ತಿಕೆಗಳಿಂದ ಕಂಗೊಳಿಸುತ್ತಿದ್ದ ದೊಡ್ಡ ಮನೆ. ಆ ಸಂದಿಗೆ ನೇರವಾಗೇ ಇದ್ದನಲ್ಲಿಯ ಕೆಳಗೆ ನೆಲ ಒಣಗಿತ್ತು. ಮತ್ತೆ ಕೆಲವಾರು ಕೊಡಗಳು ಅಗ ಲೇ ಸಾಲುಗಟ್ಟಿ ನಿಂತಿದ್ದುವು.

"ಮಾಮಿ...?"

"ಏನಮ್ಮಾ?"

"ನೀವು ..ಮತ್ತೆ....ಕೋಪಿಸ್ಕೊಳ್ಳೋದಿಲ್ಲ ತಾನೇ?....ದೊಡ್ಡೋರ್ಕಿಲ್ಲಾ ಹೀಗೆ ಏನೂ ಕೇಳಬಾರದು ಅಂತ ಅಪ್ಪ ಹೇಳಿದ್ದಾರೆ........ಅದ್ರೂ...ಅದ್ರೂ......ನಿಮ್ಮ ಹೆಸ್ರು....ನಿಮ್ಮ ಹೆಸ್ರು ಸುಂದರಮ್ಮ ತಾನೇ ಮಾಮಿ?"

ಈ ಪ್ರಶ್ನೆ ಅವಳು ಎದಿರು ನೋಡದಿದ್ದುದೇ ಆಗಿದ್ದರೂ ಆಕೆ, ದಿಗ್ಭ್ರಮೆಗೊಂಡು ಸ್ವಲ್ಪ ಹೊತ್ತಿನಲ್ಲಿಯೇ ಸಮಾಳಿಸಿಕೊಂಡಳು.

"ಹೀಗೆಂತ ಯಾರಮ್ಮಾ ಹೇಳಿದ್ರು ನಿಂಗೆ, ಬೇಬಿ?"

"ಇಲ್ಲ ಮಾಮಿ...ನಮ್ಮನೇಲಿ ನಿಮ್ಮ ಹಾಗೇ ..ಥೇಟ್ ನಿಮ್ಹಾಗೇ ಇರೋ ಒಂದು ಬೊಂಬೇನ ಅಪ್ಪ ಮಾಡಿಟ್ಟಿದ್ದಾರೆ. ತುಂಬಾ ತುಂಬಾ...ಚೆನ್ನಾಗಿದೆ....ನಾನು ಮೈಥಿಲಿ ಎಲ್ಲಾ ಹುಟ್ಟೋಕೆ ಮುಂಚೇನೇ....ಅದರ ಹೆಸರು ಸುಂದ್ರಮ್ಮ ಅಂತೆ ಮಾಮಿ...ಅಪ್ಪ ಹೇಳ್ತಾ ಇದ್ರು!"

"ನೀನು ಹೇಳೋದು ಒಂದೂ ನನಗೆ ಅರ್ಥಾನೇ ಆಗ್ತಾ ಇಲ್ವಲ್ಲೇ?"

"ಮಾಮಿ, ನಮ್ಮಪ್ಪ ಎಲ್ಲರ ಹಾಗಲ್ಲ ಮಾಮಿ ನಿಜ್ ನಿಜ್ವಾದ ಮನುಷ್ಯರ ಬೊಂಬೇನೆಲ್ಲಾ ಕೈಯಲ್ಲೇ ಮಾಡ್ತಿದ್ದಾರೆ. ದೊಡ್ ದೊಡ್ ಬೊಂಬೆಗ್ಳು! ನವರಾತ್ರೀಲಿ ಬೊಂಬೇ ಕೂಡಿಸ್ತಾರಲ್ಲ. ಅಂತಾದ್ದಲ್ಲ. ನೀವು ಆ ಪಾರ್ಕಿನಲ್ಲಿ ಇಟ್ಟಿರೋ ಗಾಂಧೀ ತಾತನ ಬೊಂಬೆ ನೋಡಿದ್ರಾ?"

"ಇಲ್ವಲ್ಲಮ್ಮಾ....!"

"ಅದನ್ನೂ ನಮ್ಮಪ್ಪ ಮಾಡಿದ್ದೇ. ನಾನು ಒಂದ್ನೇ ಕ್ಲಾಸು ಓತ್ತಿದ್ದಾಗ ಅಪ್ಪ ಮಾಡಿದ್ರು. ಮಣ್ಣನೆಲ್ಲಾ ಚೆನ್ನಾಗ್ಯೆ ಅಗಿದು ಕೊಡ್ತಾನೆ....ಅಪ್ಪ ಚೆನ್ನಾಗಿ....ಮಾಡ್ತಾರೆ. "ಫ್ಲಾಸ್ಟರ್ ಪ್ಯಾರಿಸ್" ಗೊತ್ತಾ ಮಾಮಿ ನಿಮ್ಗೆ?

"ಗೊತ್ತಿಲ್ವಲ್ಲಮ್ಮಾ?"

"ನೈಸಾಗಿರುತ್ತೆ. ಅದ್ರಿಂದ ಮೇಲೆ ತೆಳ್ಳಗೆ ಹಚ್ಚಿ—ನಮ್ಮಪ್ಪ ನಿಜ್ವಾಗ್ಲೂ ಮಾಡ್ತಿದ್ದಾರೆ. ಅಂತಾದ್ದೇ ಚೆನ್ನಾಗಿ ನಿಮ್ಹಾಗೇ ಇರೋ....ಬೊಂಬೆ ಮಾಡಿದ್ದಾರೆ. ನಿಮ್ಮ ಹೆಸ್ರು ಸುಂದರಮ್ಮ ತಾನೇ?"

"ನಿಮ್ಮಪ್ಪನ್ನ ನಾನು....ನಾನು ನೋಡೇ ಇಲ್ವಲ್ಲಮ್ಮಾ? ನೀನು ಬೇರೆ ಯಾರನ್ನೋ ಹೇಳ್ತಾ ಇರ್ಬೇಕು ನಿಂಗೆ ..ಅಕ್ಕ ಅಣ್ಣ ಎಲ್ಲಾ ಇದ್ದಾರಾ ಬೇಬಿ?"

"ಮೈಥಿಲಿ, ಈಗ ಏಂದೀ ಕ್ಲಾಸಿಗೆ ಹೋಗ್ತಾ ಇದ್ದಾಳ್ಳ? ಅವ್ಳು ..ಈಗ ಒಂಭತ್ನೇ ಕ್ಲಾಸ್ನಲ್ಲಿ ಓದ್ತಿದಾಳೆ. ಆ ಮೇಲೆ ರಾಜಣ್ಣ ಅವ್ನು ಫೈಲಾಗ್ಬಿಟ್ಟ ಮಾಮಿ ಮಾಮ ಇಲ್ವಾ; ಅದೇ ಮೂಗಿನ ಮೇಲೆ ಕನ್ನಡಕ ಹಾಕ್ಕೊಂಡು ಬಂತ್ತಿರಲ್ಲ, ಡಾಕ್ಟರ್ ಮಾಮ...ಅವ್ರು ನಮ್ಮಂಡೇಗೆ "ಬೆಸ್ಟ್ ಫ್ರೆಂಡ್."! ಮಾಮಿ ಅವ್ರು ತುಂಬಾ ಒಳ್ಳೇವ್ರು. ಅವರತ್ರ ರಾಜಣ್ಣ ಔಷಧಿ ಎಲ್ಲಾ ಬೆಂಚಿ ಎಲ್ರಿಗೂ ಕೊಡ್ತಾನೆ!"

"ಓಹೋ ನಿಂಗೆ ತಮ್ಮಂದ್ರು ಯಾರೂ ಇಲ್ವಾ?"

"ಇಲ್ಲಾ.....ಗೊತು....ಇಷ್ಟು ದೊಡ್ಡೋನು. ನನ್ನಂತ ಸ್ವಲ್ಪ ದೊಡ್ಡೋನ್ನು ಅವ್ನೀಗ ಐದ್ನೇ ಕ್ಲಾಸಿಗೆ ಹೋಗ್ತಾನೆ. ನಾನು ಮೂರನೇ ಕ್ಲಾಸು ಪಾಸಾಗ್ಬಿಟ್ಟೆ ನಾಲ್ಕನೇದಕ್ಕೆ ಹೋಗ್ತೀನಿ ಮಾಮಿ. ನಮ್ಮಪ್ಪ ಈಗ ಒಂದು ದೊಡ್'ದಷ್ಟ..ದ್ದಾಗಿ ಒಂದು ಬೊಂಬೆ ಮಾಡ್ತಿದ್ದಾರೆ ನಮ್ಮ ಸ್ಕೂಲನ್ನ ಕಟ್ಟಿದ್ದಾರಲ್ಲ? ರಾಜ ಬಹದ್ದೂರ್? ಅವ್ರನ್ನ ಮಾಡ್ತಿದ್ದಾರೆ. ಏನೆಸೆ ಇಟ್ಕೊಂಡು ಕೋಲು ಹಿಡ್ಕೊಂಡು...ಜಮ್ಮಂತ" ಬೇಬಿ ಉತ್ಸಾಹದಿಂದ ಹೇಳಿದಳು.

"ಇಷ್ಟೆಲ್ಲಾ ಈ ಸಂದೀಲಿ ಇರೋ ಮನೇಲಾ ಬೇಬಿ?"

"ಹೌದು ಮಾಮಿ. ಮೈಥಿಲೀಗೂ ಈ ಮನೆ ಸ್ವಲ್ಪವೂ ಯಾವಾಗ್ಲೂ ಜಗಳ ಇದ್ದೇ ಇರತ್ತೆ. ಅದಕ್ಕೆ ಮೈಥಿಲಿ ಬೊಂಬೇ ಹತ್ರ ಮಲಕ್ಕೋತಾಳೆ. ಅಷ್ಟಂಗೆ, ರಾಜಣ್ಣಂಗೆ ಮಾತ್ರ ಮಳೆ ಬಂದ್ಬಿಟ್ರೇ ಮಲಗೋಕೆ ಜಾಗ ಇರೋಲ್ಲ. ಆಗ ಅವ್ನು ಡಾಕ್ಟರ್ ಮಾಮ ಮನೇಗೆ ಹೋಗಿ ಮಲ್ಕೊಂತಾನೆ ..."

"ಓಹೋ .."

ಸ್ವಲ್ಪ ಹೊತ್ತು ಯೋಚಿಸಿ ಬೇಬಿ—

"ಮಾಮಿ! ಯಾವತ್ತಾದ್ರೂ ಇನ್ನೇಲೆ ಮಳೆ ಬಂದ್ರೇ ರಾಜಣ್ಣನ್ನಾದ್ರೂ, ಅಪ್ಪಂಗಾದ್ರೂ, ಇಲ್ಲಿ ಮಲ್ಕೊಳ್ಳೋಕ್ಕೆ ಜಾಗ ಕೊಡ್ತೀರಾ? ಡಾಕ್ಟರ್ ಮನೆ ತುಂಬಾ ದೂರ ಇದೆ .."ಎಂದು ಕೇಳಿದಳು.

"ಇರಮ್ಮ ಮಗು. ಕಣ್ಣಲ್ಲಿ ಏನೇ.! ಧೂಳು ಬಿದ್ದಹಾಗಾಯ್ತು. ಮುಖ ತೊಳ್ಕೊಂಡು ಬರ್ತೀನಿ!"

ಂ ಂ ಂ

ಹೊರಬಾಗಿಲಲ್ಲೇ ನಿಂತು ಬಾಗಿಲಿಗೆ ಹಾಕಿದ್ದ ಬಣ್ಣದ ಕೊಳವೆಗಳನ್ನೂ ಬಣ್ಣ ಬಣ್ಣದ ನವಿಲುಗಳನ್ನೂ ನೋಡುತ್ತಿದ್ದಳು ಬೇಬಿ.

ಮಾಮಿ ಹಣ್ಣು - ಬಿಸ್ಕತ್ತು ತಂದಾಗ ಅವಳು ಅಲ್ಲಿ ಇಲ್ಲಿಲ್ಲ. ಕೊಳಾಯಿಯಲ್ಲಿ ನೀರು ಬಂತೇನೋ?. ಅಲ್ಲಿಗೆ ಓಡಿಹೋಗಿರಬೇಕು.

ಸಂಜೆ, ಭಯಂಕರ ಗುಡುಗು ಸಿಡಿಲು ಹೊಡೆದು ಮಳೆ ಭೋರೆಂದು ಸುರಿಯಿತು. ಹದ್ದು ಕಿಯಂತೆ 'ಅವರು' ಮನೆಗೆ ಹಿಂತಿರುಗಿದ ಮೇಲೆ ಮನಃ ಎಲ್ಲೂ ಹೋಗಲೇ ಇಲ್ಲ. ಅಸ್ತಮಾ ತೊಂದರೆ ಅನುಭವಿಸುತ್ತಿದ್ದ 'ಅವರು' ರಾತ್ರಿ ಊಟವನ್ನು ಮಾಡುತ್ತಲೇ ಇಲ್ಲಿಲ್ಲ. ಸಾಯಂಕಾಲದ ಆಹಾರದೊಂದಿಗೇ ಅವರ ಊಟ ಮುಗಿದು ಹೋಗುತ್ತಿತ್ತು.

ಕಾಯಿಗಳನ್ನು ತನ್ನ ಮೈತುಂಬಾ ತುಂಬಿ ಕೊಂಡು ಬಾಗದೇ ದೃಢವಾಗಿ ನಿಂತಿರುವ ಮರದಂತೆ, ಸಂಭ್ರಮ, ಚಟುವಟಿಕೆಯೂ ತುಂಬಿಕೊಂಡು, ಭವಿಷ್ಯದ ಬಗ್ಗೆ ಏನೇನೋ ಸವಿಗನಸು ಕಾಣುವ ವಯಸ್ಸೇ ಇದು? ಹಣ್ಣುಗಳನು ಎಲ್ಲಾ ಮುಖಗಳಲ್ಲೂ ಸಮೃದ್ಧಿ ಯಾಗಿ ಧಾರೆಯೆರೆದು ಈಗ ಬರೀ ಎಲೆಗಳೊಂದಿಗೆ ನೆರಳನ್ನು ಮಾತ್ರ ಕೊಡುತ್ತಿದ ಮರದಂತೆ ತಾನೂ..., 'ಅವರು, ಪೇಪರು ಓದುತ್ತಿ. ಒಳನಡೆದಾಗ ಅವಳು ಮಹಡಿಯ ವರಾಂಡದಲ್ಲಿ ನಿಂತು ನೋಡಿದಳು. ಬೀದಿಯ ಪಕ್ಕದಲ್ಲಿ ದನಗಳೂ, ನಾಯಿಗಳೂ, ಜನಗಳೂ ನೆರೆದಿದ್ದರು. ಮುನಿಸಿಪಲ್ ದೀಪಗಳ ಬೆಳಕಿನಲ್ಲಿ ಮಳೆಯ ತುಂತುರುಗಳ ಗಾಳಿಯಲ್ಲಿ ತೇಲುತ್ತಾ, ಜನಜೀವನದಲ್ಲಿ ಹೊಂದಿಕೊಳ್ಳದ ಕಲಾವಿದನಂತೆ, ಮರೆಯಾದವು. ಆ ಸಂದಿನಲ್ಲಿ ನನೆದುಕೊಂಡೋ ಅಥವಾ ನೆನೆಯದೆಯೋ ಯಾರ್ಯಾರೋ ಹೋಗುತ್ತಿದ್ದು; ಬರುತ್ತಿದ್ದರು.

'ಡಾಕ್ಟರ್' ಮಾಮ ಮನೆಗೆ ಮಲಗ ಹೋಗಬೇಕಾಗಿದೆಯೇ ಏನೋ? ಮಾಮಿ, ಮಾಮಿ, ನಮ್ಮಪ್ಪಂಗೂ, ರಾಜಣ್ಣಂಗೂ ಸ್ವಲ್ಪ ಜಾಗಕೊಡ್ತೀರಾ? ಎಂದು ಯಾರೋ ಬಾಗಿಲನ್ನು ಮೆಲ್ಲನೇ ತಟ್ಟಿದಂತೆ ಭಾಸವಾಯಿತು. ಆದರೆ, ಆ ವರಾಂಡದಿಂದ ನೀರಿಲ್ಲದೇ ಒಣಗಿದ್ದ ನಲ್ಲಿಯೂ, ಜನಭರಿತಬೀದಿ, ಮತ್ತು ಪತಂಗಗಳು ಸುತ್ತುವರಿದಿದ್ದ ದೀಪಗಳು ಮಾತ್ರಾ ಅವಳಿಗೆ ಕಾಣಿಸಿದುವು.

ಂ ಂ ಂ

ಮರುದಿವಸ 'ಬೆಳಿಗ್ಗೆ' ಉಂಡು ಅವರು ಆಫೀಸಿಗೆ ಹೋದ ತರುವಾಯ, ಇವಳು ಊಟಮಾಡಿ ಕೈ ತೊಳೆಯಲು ಹೊರಗೆ ಬಂದಾಗಲೇ, ಯಾವುದೋ ಒಂದು ಪುಟ್ಟ ನೆರಳು ಅಲ್ಲಿ ಕಾಣಿಸಿತು.

ಬೇಬಿ ನಿಂತು ಕೊಂಡಿದ್ದಳು

"ಊಟ ಮಾಡೇ ಬೇಬಿ! ಎಂದಿವಳು ಕೂಗಿದಳು.

"ಇಲ್ಲ ಮಾಮಿ. ನೆಂನೂಟ ಈಗ್ತಾನೇ ಆಯ್ತು....ಇಲ್ನೋಡಿ, ಕೈ ಹೇಗೆ ಘಮ್ಮಂತ ವಾಸ್ನೆ ಹೊಡೀತಿದೆ!"

ಮುದುಕವಳನ್ನು ಮೂಗಿನ ಬಳಿಗೆ ತಂದಳು ಬೇಬಿ.

"ಮಾಮಿ ನಾನು ಅಪ್ಪ ಹತ್ರ ಹೇಳ್ದೆ. ಸಿಟ್ಟೋಗೇ ಹೆಚ್ಚಿ. ಆ ಸುಂದ್ರಮ್ಮ ಅಗ್ಲೇ ಸತ್ತೋದ್ಲು. ಇನು ಬೇರೆಯಾರೋ ಇರ್ಬೇಕು' ಅಂದ್ಬಿಟ್ರು. ಅವ್ರು ರಾಜಣ್ಣಂಗೂ, ನಿಮ್ಮೂ ಮಲಗೋಕೆ ಜಾಗ ಕೊ

(ಗಂಣೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ
ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ವೈಚಾರಿಕ ವ್ಯಂಗ್ಯ ಲೇಖ

ಬಡವ-ಧನಿಕ

ಬರೆದವರು: ಶ್ರೀ ಶಂಕ ಐತಾಳ, ಹಾರ್ಯಾಡಿ.

ಬಡವ, ಧನಿಕ! ಛಂದಸ್ಸಿನ ದೃಷ್ಟಿಯಿಂದ ವಿವೇಚಿಸುವುದಾದರೆ ಈ ಎರಡು ಶಬ್ದಗಳಲ್ಲಿ ಇನಿತೂ ವ್ಯತ್ಯಾಸವಿಲ್ಲ. ಎರಡೂ ನಗಣ ಶಬ್ದಗಳು. ಎರಡು ಶಬ್ದಗಳಿಗೂ ಮೂರೇ ಅಕ್ಷರ. ಮಾತ್ರೆಗಳ ಸಂಖ್ಯೆಯಲ್ಲಿ ಎರಡಕ್ಕೂ ಹೋಲಿಕೆಯಿದೆ ನಿಜ, ಆದರೆ ಈ ಶಬ್ದಗಳು ಪರಸ್ಪರ ವಿರೋಧಾರ್ಥವುಳ್ಳವುಗಳಾಗಿವೆ.

ಬಡವ ಧನಿಕರಲ್ಲಿ ಏನು ವ್ಯತ್ಯಾಸ? ಅಂತಹ ವ್ಯತ್ಯಾಸವೇನೂ ಕಾಣಬರುವುದಿಲ್ಲ. ಅದಾವನೋ ಒಬ್ಬ ಆಂಗ್ಲ ಕವಿ ಹೇಳಿದಂತೆ, ದುಡ್ಡುಳ್ಳ ಬಡವನೇ ಧನಿಕ. ಅಷ್ಟೇ ತಾನೇ? ಅಂದರೆ ಬಡವ ಧನಿಕರಲ್ಲಿನ ಮುಖ್ಯ ವ್ಯತ್ಯಾಸಕ್ಕೆ, ಇವರ ಅಂತಸ್ತುಗಳಲ್ಲಿ ತೋರಿಬರುವ ಭಿನ್ನತೆಗೆ ಮುಖ್ಯ ಕಾರಣವೆಂದರೆ ಎರಡಕ್ಷರದ ಹಣ. "ಹಣವೇ ನಿನ್ನಯ ಗುಣವೆಷ್ಟೆಂದು ಬಣ್ಣಿಸಲಿ?" ಹಣಕ್ಕೆ ಪ್ರಾಧಾನ್ಯವಿದ್ದುದರಿಂದಲೇ ಈಗ ಸಮಾಜದಲ್ಲಿ ಬಡವ ಧನಿಕರೆಂಬ ತಾರತಮ್ಯ ಭಾವ ಬೆಳೆಯುತ್ತದೆ

ಸಮಾಜ ಈ ಬಡವ ಧನಿಕರನ್ನು ವಿಭಾಗಿಸಿ ನೋಡುವ, ಅವರ ಯೋಗ್ಯಾಯೋಗ್ಯತೆಯನ್ನೂ ತೂಕ ಮಾಡುವ ರೀತಿ ಮಾತ್ರ ಬಹು ವಿಚಿತ್ರ! ಬಡವನೇನೇ ಮಾಡಲಿ, ಅವನು ಹೇಗೆಯೇ ವರ್ತಿಸಲಿ, ಅದು ಸಮಾಜಕ್ಕೆ ತಿರಸ್ಕೃತವಾಗುತ್ತದೆ. ಲಜ್ಜೆಗೇಡಿನ ವಿಚಾರವಾಗುತ್ತದೆ. ಆದರೆ ಅದೇ ಕಾರ್ಯವನ್ನು ಅದೇ ರೀತಿಯಲ್ಲಿ ದುಡ್ಡಿರುವ ಬಡವ ಅರ್ಥಾತ್ ಧನಿಕ ಮಾಡಿದರೆ--ಸಮಾಜ ಆತನನ್ನು ಆತನ ವರ್ತನೆಗಾಗಿ ಪುರಸ್ಕರಿಸುತ್ತದೆ. ಹೊಗಳುತ್ತದೆ. ಅದಕ್ಕೆ ಪೂರಕವಾಗಿ ಈ ಕೆಳಗಿನ ಒಂದೆರಡು ಉದಾಹರಣೆಗಳನ್ನು ಕಾಣಬಹುದು.

ಮೊದಲು ಉಡಿಗೆ ತೊಡಿಗೆಯ ವಿಚಾರವನ್ನೇ ಪರೀಕ್ಷಿಸೋಣ! ಒಬ್ಬ ಬಡವ ಹರಿದು ಹೋದ, ಕೊಳಕಾದ ಮಾಸಿದ ಬಟ್ಟೆ ಧರಿಸಿದ್ದಾನೆ ಎನ್ನೋಣ. ಆಗ ಜನರು, "ಅಯ್ಯೋ! ಪ್ರಾಣಿ! ಬಡವನಾದರೇನು. ಹೊಟ್ಟೆಗಿಲ್ಲದಿದ್ದರೆ ಹೋಗಲಿ. ಯಾರಿಗೂ ತಿಳಿಯೋಲ್ಲ. ಬಟ್ಟೆಯನ್ನಾದರೂ ಶುಭ್ರವಾದುದನ್ನು ತೊಡಬಾರದೇ?" ಎನ್ನುವರು.

ಅಂತಹುದೇ ಬಟ್ಟೆಯನ್ನು ಧನಿಕ ಧರಿಸಿದ್ದರೆ ಅದೇ ಜನ ಆಗ "ನೋಡಿ, ನೋಡಿ, ಐಶ್ವರ್ಯವಿದ್ದರೇನು. ಅವರಿಗಿನಿತೂ ಜಂಭವಿಲ್ಲ. ಸಾದಾ ಜನರಂತೆ ಸರಳವಾದ ವಸ್ತ್ರಗಳನ್ನೇ ಧರಿಸಿದ್ದಾರೆ. ಜನ ಅಂದ್ರಿಲ್ಲ" ಎಂದು ಹೇಳುತ್ತದೆ.

ಇನ್ನು ಶುಭ್ರ ವಸ್ತ್ರ ವಿಚಾರದಲ್ಲೂ ಹೀಗೇನೇ—ಬಡವನೊಬ್ಬ ಆಕಸ್ಮಾತ್ ಜರೀಪಂಚೆ ರುಮಾಲುಗಳೊಂದಿಗೆ ಬೀದಿಗೆ ಬಂದರೆ ಆಗ ಜನರು "ನೋಡಿದ್ರಾ—ಆ ನಿರ್ಗತಿಕನ ಥಂಬಾಚಾರಾನ! ಅಬ್ಬ ಏನೊಂದು ವೇಷ ಅವನದು? ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಬೇರೆ ಮಲ್ಲಿಗೆ ಹೂ! ತಾನೇ ಅಮಲ್ದಾರನೆಂಬಂತೆ ಮೆರೆಯುತ್ತಾನೆ—ಬಹಿರಂಗದಲ್ಲಿ; ಒಳಗೊಳಗೆ ಮಾತ್ರ ಅರೆಹೊಟ್ಟೆ" ಇತ್ಯಾದಿ, ಇತ್ಯಾದಿ.

ಅದರೆ ಧನಿಕ ಶುಭ್ರ ವಸ್ತ್ರಧಾರಿಯಾಗಿದ್ದರೆ ಜನರು "ಅವರ ಸಿರಿತನಕ್ಕೆ ಸರಿಸಾಟಿಯಾದ ವಸ್ತ್ರವನ್ನೇ ಧರಿಸಿದ್ದಾರೆ ಅವರ ಯೋಗ್ಯತೆಗೆ ಸರಿಯಾದ ಉಡುಗೆ ತೊಡುಗೆ!" ಎಂದು ಮೆಚ್ಚಿ ನುಡಿಯುತ್ತಾರೆ.

ಆದುದರಿಂದಲೇ ಹೇಳಿದೆ—ಸಮಾಜ ಧನಿಕರನ್ನು ನೋಡುವ ದೃಷ್ಟಿಯೇ ಬೇರೆ ಎಂದು!

ಬರೀ ಉಡುಗೆಗಳ ವಿಷಯದಲ್ಲೂ ಹೀಗೇನೇ—ಇದೇ ಮಾತು ಮಾತಿಗೂ ಅನ್ವಯಿಸುತ್ತದೆ. ಬಡವ ಕಂಡಾಪಟ್ಟೆ ಮಾತಾಡಿದರೆ "ಮರುಳು ಮರುಳು ಮಾತನಾಡುತ್ತದೆ! ? ಎನ್ನುವ ಜನ ಧನಿಕ ಸಿಕ್ಕಾಪಟ್ಟೆ ಮಾತನಾಡಿದರೆ 'ಸಿರಿವಂತರಾದರೂ, ಸಹಾ ಇನಿತೂ ಜಂಭವಿಲ್ಲದೆ ಎಲ್ಲರೊಂದಿಗೆ ಬೆರೆತು ಸಂಭಾಷಿಸುತ್ತಾರೆ' ಎಂದು ಹೇಳುತ್ತಾರೆ.

ಬಡವನಲ್ಲಿರುವ ಸಹಕಾರ, ಸದ್ಗುಣ, ಪರರ ಮೇಲೆ ಇರುವ ಅನುಕಂಪ ಮೊದಲಾದುವುಗಳನ್ನು ಧನಿಕನಲ್ಲಿ ನೋಡುವಂತೆಯೇ ಇಲ್ಲ ಧನಿಕರು ದಾನ ಮಾಡುತ್ತಾರೆ. ಯಾರಿಗೆ? ಧನಿಕರಿಗೆ. ಬಡವನೊಬ್ಬ ಬಂದು 'ಸ್ವಾಮೀ ಮೂರು ದಿನಗಳಿಂದ ಊಟವಿಲ್ಲ. ಉಪವಾಸ. ಏನಾದರೂ ಚಿಲ್ಲರೆ ಕೊಡಿ ಸ್ವಾಮೀ" ಎಂದು ಕೇಳಿದರೆ ಧನಿಕ ಆಳನ್ನು ಕರೆದು ಭಿಕ್ಷುಕನನ್ನು ಕತ್ತು ಹಿಡಿದು ದಬ್ಬಿಸುತ್ತಾನೆ. ಎಷ್ಟೊಂದು ಕಠೋರ ವರ್ತನೆಯಿದು? ಅದೇ ಸರಕಾರ ಅಥವಾ ಯಾವುದಾದರೂ ಹೆಸರುವಾಸಿ ಸಂಸ್ಥೆ ಬೇಡಿದರೆ ಆಗ ಅದೇ ಧನಿಕ ಸಾವಿರಾರು ರೂಪಾಯಿಗಳನ್ನು ಈಯುತ್ತಾನೆ. ಅದೇಕೆ? ಅಂತಹ ದಾನಧರ್ಮ ತನಗೆ ಹೆಸರುತರುತ್ತದೆ-ಪತ್ರಿಕೆಗಳಲ್ಲಿ ದೊಡ್ಡಕ್ಷರಗಳಲ್ಲಿ ಅವರ ಹೆಸರು ಚಿತ್ರದೊಂದಿಗೆ ಪ್ರಕಟವಾಗುತ್ತದೆ ಆತ ನಂತರ ಹಲವಾರು ಸಂದರ್ಭಗಳಲ್ಲಿ ತನ್ನ ದೊಡ್ಡತನವನ್ನು ಪ್ರದರ್ಶಿಸಬಹುದು ತಾನೇ? ಆದರೆ ಅದರಿಂದೇನು ಫಲ?

ಅದೇ ನೂರಾರು ರೂಪಾಯಿಗಳ ಬದಲಾಗಿ ಬರೇ ಒಂದು ಐದು ಪೈಸೆ ನಾಣ್ಯವನ್ನೇ ಭಿಕ್ಷುಕನ ಕೈಗಿತ್ತರೆ ಆ ಭಿಕ್ಷುಕ ಸಂತುಷ್ಟನಾಗಿ 'ಯಜಮಾನರಿಗೆ ಒಳಿತಾಗಲಿ' ಎಂದು ಹೃದಯಾಂತರಾಳದಿಂದ ಹಾರೈಸುತ್ತಾನೆ. ನಿಜಕ್ಕೂ ಪರಮಾತ್ಮನ ದೃಷ್ಟಿಯಲ್ಲಿ ಅದು ಅತ್ಯುತ್ತಮ ಫಲದಾಯೀ ದಾನವಾಗಿ ಪರಿಗಣಿಸಲ್ಪಟ್ಟೀತು.

ಇನ್ನೊಂದು ಉದಾಹರಣೆ. ಆತ ಬಡವ. ಮನೆಯಲ್ಲಿ ಹಗಲಿರುಳೆನ್ನದೆ ದುಡಿದು ತರಕಾರಿಗಳನ್ನು ಬೆಳೆಯಿಸಿ ಅದನ್ನು ಸಂತೆಗೆ ಹೊತ್ತುಕೊಂಡು ಹೋಗಿ ಮಾರುವವ. ಒಂದು ದಿನ ಆತ ಸಂತೆಯಲ್ಲಿ ಎರಡಾಣೆ ಬೆಲೆಬಾಳುವ ತರಕಾರಿಯನ್ನು ನಾಲ್ಕಾಣೆಗೆ ಮಾರುತ್ತಾನೆ. ಅದು ತಿಳಿದುಬರುತ್ತದೆ. ಆಗ ಕೊಂಡುಕೊಂಡ ಗಿರಾಕಿ ಅವನಲ್ಲಿಗೆ ಹೋಗಿ 'ನಿನ್ನದು ರಕ್ತಸಿಕತನ! ನಿನ್ನ ಸಾಮಾನು ಬೇಕಿಲ್ಲ. ಇಗೋ, ನಾನು ಕೊಟ್ಟ ಹಣ ವಾಪಾಸು ಕೊಡು!' ಎಂದು ಹೇಳಿಯುತ್ತಾನೆ. ಆದರೆ ಅದೇ ಪ್ರಸಿದ್ಧ ವ್ಯಾಪಾರೀ ಸಂಸ್ಥೆಯೊಂದು ಒಳಗೆ ವ್ಯಾಪಾರ ಯಾ ವ್ಯವಹಾರದಲ್ಲಿ ಮೋಸ ಮಾಡುವುದರ ಮೂಲಕ ಹತ್ತಾರು ಲಕ್ಷ ಸಂಪಾದಿಸಿದರೆ ಅದು ಆಗ ವ್ಯಾಪಾರೀಜಾಣ್ಮೆ ಎಂದೆನಿಸುತ್ತದೆ.

ಬಡವ ಮಾಡಿದರೆ ಅದು 'ರಕ್ತ' ಧನಿಕ ಮಾಡಿದರೆ ಅದೇ 'ಬಿಸಿನೆಸ್ ಟ್ರಿಕ್'

ಅಂದರೆ ಇಷ್ಟೆ, ಜಗತ್ತಿನಲ್ಲಿ ದೊಡ್ಡ ಅಪರಾಧಗಳನ್ನ ಮಾಡಲು ದೊಡ್ಡವರಿಗೆ ಮಾತ್ರ ಅಧಿಕಾರವುಂಟು. ಬಡವನೆಲ್ಲಾದರೂ ಅರಿಯದೆ ಒಂದು ತಪ್ಪೆಸಗಿದರೆ ಸಹ ಅದು ಕಾನೂನ ಬಾಹಿರವೆಂದು ಪರಿಗಣಿಸಲ್ಪಡುತ್ತದೆ.

ಬರೀ ಜನತೆಯೊಂದೇನು; ಸರಕಾರವೂ ಅಷ್ಟೆ! ಅದು ಬಡವರನ್ನು ನೋಡುವ ದೃಷ್ಟಿಯೇ ಬೇರೆ. ಧನಿಕರನ್ನು ನೋಡುವ ದೃಷ್ಟಿಯೇ ಬೇರೆ—ಒಂದು ತಿರಸ್ಕಾರದ ದೃಷ್ಟಿಯಾದರೆ ಇನ್ನೊಂದು ಪುರಸ್ಕಾರದ ನೋಟ.

ಡಾಕ್ಟರರು, ವೈದ್ಯರು, ವ್ಯಾಪಾರಿಗಳು, ಶಾಲೆ, ಕಾಲೇಜು ಎಲ್ಲವೂ ಬಡವನನ್ನು ಮೂಲೆಗೆತಳ್ಳುತ್ತದೆ. ಬಡವನಲ್ಲಿ ಎಷ್ಟೋ ವಿಶೈಬುದ್ಧಿಗಳಿದ್ದರೂ ಅವಕ್ಕೆ ಬೆಲೆಯಿಲ್ಲ. ಏಕೆ? ಏಕೆ? ಯಾರುತಾನೆ ಈ ಪ್ರಶ್ನೆಗೆ ಸೂಕ್ತ ಸಮರ್ಪಕ ಉತ್ತರವನ್ನು ಕೊಡಬಲ್ಲರು?

ಬಡವಧನಿಕರೆನ್ನುತ್ತಲೇ ನಗೆಗಾರ Beechi ಯವರ ಒಂದುಮಾತು ನೆನಪಿಗೆ ಬರುತ್ತದೆ—ಬಡವನಿಗೆ ಎಂದಿಗೂ ಡಯಾಬಿಟೀಸ ಬರುವದಿಲ್ಲವಂತೆ—ಬರುವದಾದರೂ ಅವನಿಗೆ ಬರಿ ಸಿಹಿಮೂತ್ರ ರೋಗ- ಆದರೆ ಧನಿಕನಿಗೆ ಡಯಾಬಿಟೀಸ್ ಬರಬಹುದು. ಆದರೆ ಎಂದಿಗೂ ಸಿಹಿಮೂತ್ರ ರೋಗ ಅವನ ಬಳಿಸುಳಿಯಲಾರದು. ಅಂದರೆ ಸಿರಿವಂತನಿಗೆ ಏನೇಬಂದರೂ ಅದಕೊಂದು ಆಧುನಿಕ ನಾಗರಿಕ ಹೆಸರಿದ್ದು ಆ ಶಬ್ದವೇ ಆತ ಧನಿಕನೆಂಬುದನ್ನು ಸಾರುತ್ತದೆ

ಕೊನೆಯದಾಗಿ ಒಂದು ಮಾತು. ಈ ಬಡವಧನಿಕರೆಂಬ ತಾರತಮ್ಯಭಾವ ಇಲ್ಲವಾಗಬೇಕಾದರೆ ಮೊತ್ತಮೊದಲು ಸರಕಾರ ಈ ಹಾದಿಯಲ್ಲಿ ಹೆಜ್ಜೆಯಿಡಬೇಕು. ಎಲ್ಲೆಲ್ಲೂ ಸಮಾನತೆ ಸೋದರತೆ ಬೆಳೆಯಬೇಕು. ಬಡವರಲ್ಲಿರುವ ಜ್ಞಾನ, ಶಕ್ತಿಗಳು ಹೊರಬರುವ ಅವಕಾಶವನ್ನು ಸರಕಾರ ಅವರಿಗೆ ಶಾಲೆ ಕಾಲೇಜುಗಳಲ್ಲಿ ಕಲ್ಪಿಸಿಕೊಡಬೇಕು. ಬಡವನಿಗೂ ಧನಿಕರಿಗೆ ಸಿಗುವ ಎಲ್ಲ ಸೌಲಭ್ಯಅನುಕೂಲಗಳು ಒದಗಬೇಕು. ಧನಿಕರು ಬಡವನನ್ನು ಕಾಣುವ ದೃಷ್ಟಿ ಬದಲಾಗಬೇಕು. ಹೀಗಾದರೆ ಮಾತ್ರ ಬಡವಧನಿಕರೆಂಬ ವ್ಯತ್ಯಾಸ ಸಮಾಜದಲ್ಲಿ ಇಲ್ಲದಂತಾಗಿ ದೇಶದಲ್ಲಿ ಸಮಾನತೆಯುಂಟಾಗಿ ನಮ್ಮ ರಾಜ್ಯ ರಾಮರಾಜ್ಯವಾದೀತು

ಆದರೆ ಹಾಗಾಗುವುದು ಮಾತ್ರ. ಎಂದು? ಎಂದು?

. ಬದಲಾವಣೆಗೆಂದು ಒದ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI
WORKS,
UDIPI, S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ಹೊಸಕೆರೆ ಚಿದಂಬರಯ್ಯನವರ

ಗೀತೆಯ
ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ರಖಂಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ

ಕಣ್ಮರೆಯಾದ ಕನ್ನಡ ಕುಲಪುರೋಹಿತ

ಆಲೂರ ವೆಂಕಟರಾಯರು

ಬರೆದವರು: ಶ್ರೀ ಎಸ್. ತಿರುಮಲೇಶ್ವರ ಭಟ್, ಮಂಗಳೂರು.

ಸುಮಾರು ಅರ್ಧ ಶತಮಾನದ ಹಿಂದೆಯೇ ಕನ್ನಡ ನಾಡು ನುಡಿಗಳ ಸೇವೆ ಮಾಡಿ 'ಕರ್ನಾಟಕ ಕುಲ ಪುರೋಹಿತ' ಎಂಬ ಬಿರುದು ಪಡೆದ ಆದರ್ಶವಾದಿ ಶ್ರೀ ಆಲೂರ ವೆಂಕಟರಾಯರು ಕ್ರಿ. ಶ. ೧೮೮೦ರಲ್ಲಿ ಹೊಳೆ ಆಲೂರಲ್ಲಿ ಅಚ್ಚಗನ್ನಡ ಕುಟುಂಬವೊಂದರಲ್ಲಿ ಜನ್ಮವೆತ್ತಿದರು. ಇವರ ತಂದೆಯವರ ಹೆಸರು ಭೀಮರಾಯರು. ತನ್ನ ಪ್ರಾಥಮಿಕ ಹಾಗೂ ಪ್ರೌಢ ವಿದ್ಯಾಭ್ಯಾಸವನ್ನು ಹುಟ್ಟೂರಲ್ಲಿ ಮುಗಿಸಿ ೧೮೯೭ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಮುಂದಿನ ಶಿಕ್ಷಣಕ್ಕಾಗಿ ಪುಣೆಗೆ ಹೋಗಬೇಕಾಯಿತು. ಆ ಅವಧಿಯಲ್ಲಿ ಪುಣೆಯಲ್ಲಿ ಪ್ಲೇಗಿನ ಹಾವಳಿಯಿದ್ದುದರಿಂದ ಅಲ್ಲಿಗೆ ಹೋಗದೆ ಆ ವರ್ಷ ನವಿಲುಗುಂದದಲ್ಲಿ ಶಿರಸ್ತೇದಾರರಾಗಿದ್ದ ತನ್ನ ತಂದೆಯವರೊಂದಿಗೆ ಅಲ್ಲಿರಬೇಕಾಯಿತು. ಹೀಗೆ ಅಲ್ಲಿದ್ದಾಗ ತನ್ನ ತಂದೆಯವರು ಸಂಗ್ರಹಿಸಿದ್ದ ಪುಸ್ತಕಗಳನ್ನೆಲ್ಲ ಓದುತ್ತಿರಲು "ಕನ್ನಡದಲ್ಲಿ ಓದಲಿಕ್ಕೆ ಅರ್ಹವಾದ ಉತ್ತಮ ಗ್ರಂಥಗಳೇ ಇಲ್ಲ; ಮರಾಠಿಯಿಂದ ಕನ್ನಡಕ್ಕೆ ಅನುವಾದ ಮಾಡಿದರೆ ಕನ್ನಡದ ಬಗ್ಗೆ ಉತ್ತಮ ಸೇವೆಯನ್ನು ಸಲ್ಲಿಸಿದಂತಾಗುವುದು" ಎಂದು ತಂದೆ ಭೀಮರಾಯರಾಡಿದ ಮಾತಿನಿಂದ ಸ್ಫೂರ್ತಿಗೊಂಡ ಶ್ರೀ ವೆಂಕಟರಾಯರು 'ನೀತಿ ಮೀಮಾಂಸೆ' ಎಂಬ ಮರಾಠಿ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸುವ ಕಾರ್ಯವನ್ನು ಕೈಗೊಂಡರು.

ಆಗ ಶ್ರೀ ವೆಂಕಟರಾಯರಿಗೆ ಕೇವಲ ೧೮ರ ಹರೆಯ, ಕನ್ನಡದ ವಿದ್ವತ್ತೆಯೆಂದರೆ ನಾಲ್ಕನೆಯ ತರಗತಿಯ ವರೆಗೆ ಕನ್ನಡ ಕಲಿತು ಮರೆತು ಬಿಟ್ಟುದು ಮಾತ್ರ. ಹಾಗಿದ್ದರೂ ಅದೇ ವರ್ಷ ಆ ಮರಾಠಿ ಕೃತಿಯನ್ನು ಅರೆವಾಸಿಯಷ್ಟು ಭಾಷಾಂತರಿಸಿದರು. ಮುಂದಿನ ವರ್ಷ ಅವರು ಉಚ್ಚಶಿಕ್ಷಣಕ್ಕಾಗಿ ಪುಣೆಯ "ಫರ್ಗ್ಯುಸನ್" ಕಾಲೇಜು ಸೇರಿದರು. ಕನ್ನಡಿಗರಾದ ವೆಂಕಟರಾಯರಿಗೆ ಮರಾಠಿಗರು ಕನ್ನಡಿಗರನ್ನು ಕುಚೋದ್ಯ ಮಾಡುತ್ತಿದ್ದುದನ್ನು ಕಂಡಾಗ ಇದಕ್ಕೆ ಕನ್ನಡಿಗರಲ್ಲಿ ಐಕ್ಯವಿಲ್ಲದಿದ್ದುದೇ ಕಾರಣವೆಂದು ತಿಳಿದು ಕನ್ನಡಿಗರ ಐಕ್ಯಕ್ಕಾಗಿ ಹೆಣಗಾಡಿದರು. ಇದರಿಂದ ಕನ್ನಡದ ವಿದ್ಯಾರ್ಥಿಗಳಲ್ಲಿ ಹಾಗೂ ಇತರರಲ್ಲಿ ಐಕ್ಯಭಾವನೆ ಮೂಡ ತೊಡಗಿತು. ಇದರ ಪರಿಣಾಮವಾಗಿ ಕನ್ನಡದ ಜಾಗೃತಿಯುಂಟಾಯಿತು.

ಶ್ರೀ ವೆಂಕಟರಾಯರು 'ಫರ್ಗ್ಯುಸನ' ಕಾಲೇಜಿನಲ್ಲಿದ್ದಾಗ ಶ್ರೀ ಗೋಪಾಲಕೃಷ್ಣ ಗೋಖಲೆಯಂಥವರ ಶಿಷ್ಯರಾಗುವ ಭಾಗ್ಯ ಅವರಿಗೊದಗಿತ್ತು. ಲೋಕಮಾನ್ಯ ತಿಲಕ, ವೀರಸಾವರಕಾರ, ಸೇನಾಪತಿ ಬಾಪಟಕರ ಮೊದಲಾದವರು ಅವರ ಸಹಪಾಠಿಗಳೂ ಓರಗೆಯ ಗೆಳೆಯರೂ ಆಗಿದ್ದರು. ಇಂತಹ ಗೆಳೆಯರ ಸಹಪಾಠಿಗಳ ಸಹವಾಸದಿಂದ ವೆಂಕಟರಾಯರಲ್ಲಿ ಆಗಲೇ ರಾಷ್ಟ್ರೀಯ ಮನೋಭಾವ ಬೆಳೆಯತೊಡಗಿತು. ಅದರೊಂದಿಗೆ ಮರಾಠಿಗರಿಗೆ ತಮ್ಮ ತಾಯ್ನುಡಿಯಲ್ಲಿದ್ದ ಅಭಿಮಾನವನ್ನು ಕಂಡಾಗ ನಿರಭಿಮಾನಿಗಳಾದ ಕನ್ನಡಿಗರ ಬಗ್ಗೆ ತುಂಬ ಖೇದ ಉಂಟಾಗಿತ್ತು. ಪರಿಣಾಮವಾಗಿ ಕನ್ನಡ ನಾಡು ನುಡಿಗಳ ಸೇವೆ ಮಾಡಬೇಕೆಂಬ ಉತ್ಕಟೇಚ್ಛೆ ಅವರಿಗುಂಟಾಯಿತು.

ಪದವೀಧರರಾದ ಮೇಲೆ

ಮುಂದೆ ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಎಲ್. ಎಲ್. ಬಿ. ಪದವೀಧರರಾದ ಶ್ರೀ ಆಲೂರರು ೧೯೦೫ರಲ್ಲಿ ಧಾರವಾಡಕ್ಕೆ ಬಂದಾಗ ಅಲ್ಲಿಯ ಸಾರ್ವಜನಿಕ ಜೀವನ ನಿಸ್ಸಾರವಾಗಿತ್ತು, ನಿಶ್ಚೇತನವಾಗಿತ್ತು. ಆಗಿನ ಕಾಲದಲ್ಲಿ ವಕೀಲ ವೃತ್ತಿಯಿಂದ ಧಾರಾಳ ಧನ ಸಂಪಾದನೆ ಮಾಡಿ ಸುಖ ಜೀವನ ಸಾಗಿಸ ಬಹುದಾಗಿತ್ತು. ಆದರೆ ಶ್ರೀ ವೆಂಕಟರಾಯರು ಆತ್ಮ ಸುಖವನ್ನು ಬಯಸದೆ ನಿಸ್ಸ್ವಾರ್ಥ ಮನೋವೃತ್ತಿಯಿಂದ ಅಲ್ಪ ಕಾಲದ ಅವಧಿಯಲ್ಲೇ ತಮ್ಮ ವಕೀಲ ವೃತ್ತಿಗೆ ತಿಲಾಂಜಲಿಯಿತ್ತು ರಾಷ್ಟ್ರೀಯ ಚಳವಳದಲ್ಲಿ ಕಾಲಿಟ್ಟರು. ೧೯೦೬ರಲ್ಲಿ ನಡೆದ ಬಂಗಾಳ ವಿಭಜನೆಯ ಚಳವಳಿಯು ಅವರ ಮನಸ್ಸಿನ ಮೇಲೆ ಬಹಳ ಪರಿಣಾಮವುಂಟು ಮಾಡಿತ್ತು. ಮುಂದೆ ಬಂದ "ಹೋಮ್‌ರೂಲ್ ಚಳವಳ"ವು ಅವರನ್ನು ಆಕರ್ಷಿಸಿತು. ಹೀಗೆ ಅಸಹಕಾರ ಚಳವಳದಲ್ಲಿ ಭಾಗವಹಿಸಿದ ಪರಿಣಾಮವಾಗಿ ಶ್ರೀ ವೆಂಕಟರಾಯರು ಸೆರೆಮನೆಯನ್ನು ಸೇರಬೇಕಾಯಿತು. ರಾಷ್ಟ್ರಾಭಿಮಾನದಿಂದ ಪ್ರೇರಿತರಾದ ಅವರು ಬಂದ ಕಷ್ಟಗಳಗೆಲ್ಲ ಧೈರ್ಯದಿಂದ ಎದೆಗೊಟ್ಟರಲ್ಲದೆ, "ಕಲಘಟಗಿ"ಯ ಸೆರೆಮನೆಯಲ್ಲಿ ಸ್ಥಾನಬದ್ಧರಾಗಿದ್ದಾಗ ಶ್ರೀಮದ್ ಭಗವದ್ಗೀತೆಯನ್ನು ಆಳವಾಗಿ ಆಮೂಲಾಗ್ರ ಅಭ್ಯಾಸ ಮಾಡಿದರು.

ಕರ್ನಾಟಕದ ಬಗ್ಗೆ ಅಭಿಮಾನ

ಶ್ರೀ ವೆಂಕಟರಾಯರ ಕರ್ನಾಟಕದ ಅಭಿಮಾನದ ಫಲವಾಗಿ ರೂಪುಗೊಂಡ ಮೇರು ಕೃತಿ 'ಕರ್ನಾಟಕದ ಗತ ವೈಭವ'. ಒಮ್ಮೆ ಅವರು ೧೯೦೩ರ ಮೇ ತಾರೀಕು ೭ರಂದು ತಮ್ಮ ಆಪ್ತರೊಂದಿಗೆ ಆನೆಗೊಂದಿಗೆ ಪಯಣಿಸಿದ್ದರಂತೆ. ಆಗ ಆನೆಗೊಂದಿ ಹಾಗೂ ಸಮೀಪದ ಹಂಪಿಸೇರಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದಿತ್ತೆಂಬುದನ್ನು ಅವರರಿತಾಗ ಅವರ ಸುಸಂಸ್ಕೃತ ಹೃದಯದಲ್ಲಿ ಕರ್ನಾಟಕದ ಬಗ್ಗೆ ವಿಶೇಷ ಜಾಗೃತಿಯುಂಟಾಯಿತು. ಕರ್ನಾಟಕದ ಬೀಜ ಅಂದೇ ಅವರ ಹೃದಯದಲ್ಲಿ ಅಂಕುರಿಸಿತು. ಅದರ ಪರಿಣಾಮವಾಗಿ ರಚಿಸಿದ ಉದ್ಗ್ರಂಥವಾದ ಕರ್ನಾಟಕದ ಗತವೈಭವವು ಕನ್ನಡಿಗರ ಸುಪ್ತ ಚೇತನವನ್ನು ಹೊಡೆದೆಬ್ಬಿಸುವ ಸ್ಫೂರ್ತಿದಾಯಕ ಕೃತಿಯಾಗಿದೆ.

ಬಂಗಾಳದ ವಿಭಜನೆಯಿಂದಾಗಿ ರಾಷ್ಟ್ರೀಯ ಆಂದೋಳನವೇ ನಡೆದರೆ ಕರ್ನಾಟಕ ಛಿನ್ನವಿಚ್ಛಿನ್ನವಾಗಿ ಹೋದರೂ ಯಾರು ಕೇಳುವವರಿಲ್ಲವೆಂದು ಅವರ ಮನಸ್ಸಿನಲ್ಲಿ ಮಹಾ ಖೇದ ಉಂಟಾಗಿತ್ತು. ಇದರಿಂದಲಾಗಿ ೧೯೦೭ರಲ್ಲಿ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖಪತ್ರವಾದ "ವಾಗ್ಭೂಷಣ" ಪತ್ರಿಕೆಯ ಸಂಪಾದಕತ್ವದಲ್ಲಿದ್ದಾಗ ಕರ್ನಾಟಕದ ಬಗ್ಗೆ ತಾವು ಮಾಡಬೇಕಾದ ಕರ್ತವ್ಯಗಳ ಬಗ್ಗೆ ವಿಚಾರಾತ್ಮಕ ಲೇಖನಗಳನ್ನು ಬರೆದು ಪ್ರಕಟಿಸಿದರು. ಅಲ್ಲದೆ ಕನ್ನಡಿಗರ ಅಭಿಮಾನವನ್ನು ಕೆರಳಿಸುವ ಶ್ರೀ ವಿದ್ಯಾರಣ್ಯ ಚರಿತ್ರೆ ಎಂಬ ಹೊತ್ತಗೆಯನ್ನು ಬರೆದು ಕನ್ನಡಿಗರ ಕೈಗಿತ್ತು ಅವರ ಹೃದಯದಲ್ಲಿ ನವಚೈತನ್ಯವನ್ನು ತುಂಬಿದರು.

ಇತಿಹಾಸ ಸಂಶೋಧನೆ

ಆನೆಗೊಂದಿಯಲ್ಲಾದ ಕರ್ನಾಟಕದೇವಿಯ ದಿವ್ಯ ದರ್ಶನದಿಂದ ಪ್ರೇರಿತರಾದ ಶ್ರೀ ವೆಂಕಟರಾಯರು ಕರ್ನಾಟಕದ ಆದ್ಯಂತ ಸುತ್ತಿ ಶಿಲಾಶಾಸನ, ತಾಮ್ರಶಾಸನಗಳನ್ನು ಸಂಗ್ರಹಿಸಿ ಕರ್ನಾಟಕದ ಇತಿಹಾಸದ ಬಗ್ಗೆ ವಿಶೇಷವಾದ ಸಂಶೋಧನೆ ನಡೆಸುವ ಕಾರ್ಯವನ್ನು ಕೈಕೊಂಡರು. ಹೀಗೆ ಹನ್ನೆರಡು ವರ್ಷಗಳ ಕಾಲ ನಾಡಿನೆಲ್ಲೆಡೆಗಳಲ್ಲಿ ಸುತ್ತಿ ಕರ್ನಾಟಕೇತಿಹಾಸದ ಪ್ರಾಚೀನತೆಯ ಬಗ್ಗೆ ಸಾಕಷ್ಟು ಅರಿತುಕೊಂಡರು. ಈ ದೀರ್ಘತಪಶ್ಚರ್ಯೆಯ ಫಲವೇ ಕನ್ನಡಿಗರನ್ನು ಹುರಿದುಂಬಿಸುವ 'ಕರ್ನಾಟಕದ ಗತ ವೈಭವ.'

ನಿಸ್ಸ್ವಾರ್ಥ ರಾಷ್ಟ್ರೀಯ ಮನೋಭಾವ

ಶ್ರೀ ಆಲೂರರವರು ವಕೀಲ ವೃತ್ತಿಯಲ್ಲಿದ್ದಾಗಲೂ ಅವರ ಮನೋಭಾವ ರಾಷ್ಟ್ರೀಯತೆಯ ಕಡೆಗೆ ಹರಿದಿದ್ದಿತು. ತಮ್ಮ ಆದಾಯದ ಒಂದಂಶವನ್ನು ಸಾರ್ವಜನಿಕ ಹಿತಕ್ಕಾಗಿಯೇ ವಿನಿಯೋಗಿಸುತ್ತಿದ್ದರಂತೆ. ೧೯೨೦ರಲ್ಲೊಮ್ಮೆ ಅವರ ಸಹಕಾರಿಗಳಾಗಿದ್ದ ಶ್ರೀ ಮುದವೀಡಕರ ವೆಂಕಟರಾಯರು ಅವುದೋ ಎರಡು ಚಿಕ್ಕ ಮೊಕದ್ದಮೆಗಳ ವಕಾಲತು ತೆಕ್ಕೊಳ್ಳಲು ಹೇಳಿದರಂತೆ. ಆಗ ಶ್ರೀ ಆಲೂರರು ತಾವು ಅಸಹಕಾರ ಮಾಡಿದ್ದಾಗಿ ಸಾರಿ ಬಿಟ್ಟರಂತೆ. ಅಸಹಕಾರ ಮಾಡಿ ವಕೀಲಿ ವೃತ್ತಿಯನ್ನು ತೊರೆದ ಅವರು ಆರ್ಥಿಕ ಮುಗ್ಗಟ್ಟುಗೊಳಗಾದರೂ ತಮ್ಮ ಧಾರ್ಮಿಕ ನಿಸ್ವಾರ್ಥ ಮನೋವೃತ್ತಿಯನ್ನು ತೊರೆಯಲಿಲ್ಲ. ಅವರ ಮನೋವೃತ್ತಿಗನುಗುಣವಾಗಿ ಅವರ ಪತ್ನಿ ಸೌ| ಲಕ್ಷ್ಮೀಬಾಯಿಯವರು ಬಡತನದ ಕಷ್ಟವನ್ನು ಹೊರತೋರಗೊಡದೆ ಸಮಾಧಾನಚಿತ್ತದಿಂದ ಸರಳ ಜೀವನವನ್ನು ಸಾಗಿಸಿಕೊಂಡು ಹೋದ ಸಾಧ್ವೀಮಣಿ.

ಪತ್ರಿಕಾ ವ್ಯವಸಾಯ

ರಾಷ್ಟ್ರೀಯ ಮನೋವೃತ್ತಿಯವರಾದ ಶ್ರೀ ವೆಂಕಟರಾಯರು ಜನತೆಯಲ್ಲಿ ರಾಷ್ಟ್ರೀಯ ಭಾವನೆಯನ್ನು ಪ್ರಚೋದಿಸುವುದಕ್ಕಾಗಿ ಪತ್ರಿಕಾ ವ್ಯವಸಾಯವನ್ನೂ ಕೈಕೊಂಡಿದ್ದರು. 'ವಾಗ್ಭೂಷಣ' ಪತ್ರಿಕೆಯ ಸಂಪಾದಕತನದಿಂದಲೇ ಅವರ ಪತ್ರಿಕೋದ್ಯಮ ಆರಂಭವಾಯಿತೆನ್ನಬಹುದು. ೧೯೨೧ರಲ್ಲಿ ಧಾರವಾಡದಲ್ಲಿ ಗೋಳಿಬಾರು ನಡೆದಾಗ ಪತ್ರಿಕೆಗಳ ಮೂಲಕ ನಿಜ ಸುದ್ದಿ ಪ್ರಕಟವಾಗದಂತೆ ಸರಕಾರದವರು ಪತ್ರಿಕಾ ಸಂಪಾದಕರನ್ನೆಲ್ಲ ಬಂಧಿಸಿದರು. ಆಗ ಶ್ರೀ ವೆಂಕಟರಾಯರೇ ಆ ಎಲ್ಲ ಪತ್ರಿಕೆಗಳನ್ನು ನಡೆಯಿಸಿಯೇ ತೀರಬೇಕೆಂಬ ದೃಢ ಮನೋವೃತ್ತಿಯಿಂದ ರಾಜಹಂಸ, ವಿಜಯ, ಕರ್ಮವೀರ, ಕರ್ನಾಟಕ ವೃತ್ತ ಈ ಪತ್ರಿಕೆಗಳನ್ನು ಬಿಡದೆ ಕೆಲವು ತಿಂಗಳುಗಳ ತನಕ

(೬ನೇ ಪುಟ ನೋಡಿರಿ)

ರೂ.1ಕ್ಕೆ ರೂ.1,10,000 ಗೆಲ್ಲಿರಿ

"ಬಾರಾಬತಿ ರ್‍ಯಾಫಲ್" (ಒರಿಸ್ಸ ಸರ್ಕಾರದಿಂದ ಮಾನ್ಯತೆ ಪಡೆದಿದೆ)

● ರೂ. 1,10,000 ನ ಎರಡು ಪ್ರಥಮ ಬಹುಮಾನಗಳು.
● ಇತರ 1011 ಬಹುಮಾನಗಳ ಮೂಲಕ ರೂ. 4,31,002 ಹಂಚಿಕೆ.

ಟಿಕೇಟು 1ಕ್ಕೆ ರೂ. 1=00

ಕ್ಲೋಸಿಂಗ್: 1—6—64
ಡ್ರಾಯಿಂಗ್: 12—7—64

18 ಟಿಕೇಟುಗಳ ಪುಸ್ತಕ 1ಕ್ಕೆ ರೂ.12=00

● ಟಿಕೆಟ್‌ನ ಬೆಲೆಯೊಂದಿಗೆ ಟಿಕೆಟ್ ಕಳುಹಿಸಲು ಮತ್ತು ಲಾಟರಿ ನಡೆದ ಮೇಲೆ ಬಹುಮಾನ ಪಟ್ಟಿ ಕಳುಹಿಸಲು ತಗಲುವ ಅಂಚೆ ವೆಚ್ಚದ ಬಗ್ಗೆ 25 ನ ಪೈ. ಹೆಚ್ಚಾಗಿ ಸೇರಿಸಿ ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮುಖಾಂತರ ಹಣ ಕಳುಹಿಸಿ ಟಿಕೆಟ್ ಪಡೆಯಿರಿ. (ನಿಮ್ಮ ಹೆಸರು ಹಾಗೂ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ.)
● ಕಳೆದ ಡ್ರಾಯಿಂಗ್‌ನಲ್ಲಿ (1—3—'64) ಬೆಂಗಳೂರು ಚಿಕ್ಕಮಾವಳ್ಳಿಯ ಶ್ರೀ ಕೆ. ಬಿ ರಂಗನಾಥ ರಾಯರಿಗೆ ನಮ್ಮ ಹಂಚಿಕೆಯಿಂದ ರೂ. 15,750 (ಮೂರನೇ ಬಹುಮಾನ) ಬಂದಿರುತ್ತೆ. (ಪೂರ್ತಿ ಬಹುಮಾನದ ಪಟ್ಟಿಯನ್ನು ಪಡೆಯಲು ಅಪೇಕ್ಷೆ ಪಡುವವರು ತಮ್ಮ ವಿಳಾಸ ಬರೆದ ಅಂಚೆ ಕವರನ್ನು ಅಥವಾ 15 ನ. ಪೈ. ಅಂಚೆ ಚೀಟನ್ನು ಕಳುಹಿಸಿರಿ.)

ನಮ್ಮ ವಿಳಾಸ: ವಿ. ಶಿವರಾಮ ಹೊಳ್ಳ, (ಲಕ್ಕಿ ಡಿಸ್ಟ್ರಿಬ್ಯೂಟರ್)
3, ವೀನಸ್ ಹೋಟೆಲ್, (ಕೆಂಪೇ ಗೌಡ ಸರ್ಕಲ್ ಸಮೀಪ)
ಬೆಂಗಳೂರು-9. ಫೋನ್ ನಂ:—23169.

ಹೊಸ ಪುಸ್ತಕ—
'ನಚಿಕೇತ'ರ
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ನವಯುಗ ಪ್ರೆಸ್, ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೩	೧೯-೩-೧೯೬೪	೨೯

ಒಂದಾಗಲು ಕಲಿಯಿರಿ

ಸ್ವತಂತ್ರ ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯ ಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯಗಳು ಎಲ್ಲ ನಾಗರಿಕರಿಗೂ ಇರುತ್ತವೆ; ಆದರೆ, ಈ ಮೂಲಭೂತ ಸ್ವಾತಂತ್ರ್ಯಗಳ ಹೆಸರಿನಲ್ಲಿ ಕೆಟ್ಟುದನ್ನು ಯೋಜಿಸುವುದು, ಸ್ವಾರ್ಥವನ್ನು ಸಾಧಿಸುವುದು ಮಾತ್ರ ಯಾರಿಗೂ ಭೂಷಣವಲ್ಲ. ಸುಮಾರು ಅರ್ಧ ಶತಮಾನ ಕಾಲದಷ್ಟು ದೀರ್ಘಾವಧಿಯಲ್ಲಿ ನಡೆದ ಆಂದೋಲನದ ಪರಿಣಾಮವಾಗಿ ಭಾಷೆಯ ತಳಹದಿಯಲ್ಲಿ ರಾಜ್ಯಗಳ ವಿಭಜನೆಯಾಯಿತು. ಅದರಂತೆ ೧೯೫೬ರಲ್ಲಿ ಕರ್ನಾಟಕ ರಾಜ್ಯವು ನಿರ್ಮಾಣಗೊಂಡಿತು. ಐದು ಬೇರೆ ಬೇರೆ ರಾಜ್ಯಗಳ ಆಡಳಿತೆಯಲ್ಲಿ ಬೇರೆ ಬೇರೆಯಾಗಿಯೇ ನಡೆದು ಬಂದ ಪ್ರದೇಶಗಳು ಒಂದಾಗಿ ಎಂಟನೆಯ ವರ್ಷವೀಗ ನಡೆಯುತ್ತಿದೆ. ಈ ಅವಧಿಯಲ್ಲಿಯೇ ಒಂದಕ್ಕಿಂತ ಹೆಚ್ಚು ಬಾರಿ ಒಂದಾದ ರಾಜ್ಯವನ್ನು ಮತ್ತೆ ವಿಭಜಿಸುವ ಅಪಶ್ರುತಿ ಕೇಳಿ ಬಂದಿದೆ. ಇದು ಯಾವ ಕನ್ನಡಿಗನಿಗೂ ಶೋಭೆಯನ್ನು ತರುವುದಿಲ್ಲ.

ಕರ್ನಾಟಕ ರಾಜ್ಯದ ಕೆಲವು ಭಾಗಗಳು, ಮುಖ್ಯವಾಗಿ ಹೈದರಾಬಾದ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕದ ಜಿಲ್ಲೆಗಳಲ್ಲಿ ಕೆಲವು ಹಿಂದುಳಿದಿವೆ ನಿಜ. ಅವನ್ನು ಮುಂದಕ್ಕೆ ತಂದು, ಇಡಿಯ ರಾಜ್ಯವನ್ನು ಏಕ ಸಮವಾಗಿ ರೂಪಿಸುವುದು ಅಗತ್ಯವೂ ಹೌದು. ಆದರೆ, ಒಂದು ಮಾತನ್ನು ನಾವು ಅವಶ್ಯ ಗಮನಿಸಬೇಕು. ಹಿಂದುಳಿದವರನ್ನು ಮುಂದೆ ತರುವ ಹೆಸರಿನಲ್ಲಿ ಮುಂದುವರಿದವರನ್ನು ಹಿಂದೆ ಜಗ್ಗುವುದು ಮಾತ್ರ ಅನ್ಯಾಯ. ರಾಜ್ಯದ ವಿಧಾನ ಸಭೆಯಲ್ಲಿ ಸ್ವತಂತ್ರ ಸದಸ್ಯ ಶ್ರೀ ಸಿ. ಜೆ. ಮುಕ್ಕಣ್ಣಪ್ಪನವರು ಉದ್ರಿಕ್ತಭಾವದಿಂದ ಮಾತಾಡುತ್ತ ಹಿಂದುಳಿದ ಏಲೀನಗೊಂಡ ಪ್ರದೇಶಗಳನ್ನು ಮುಂದಕ್ಕೆ ತರುವ ನೆಪದಲ್ಲಿ ಹಳೆಯ ಮೈಸೂರು ರಾಜ್ಯವನ್ನು ತುಂಬ ಅಲಕ್ಷಿಸಿರುವುದನ್ನು ಎತ್ತಿ ಹೇಳಿದರು. ಇದರಿಂದ ಬಡತಿ, ನೇಮಕ, ಧನ ಸಹಾಯ ಮೊದಲಾದ ವಿಷಯಗಳಲ್ಲಿ ಹಳೆಯ ಮೈಸೂರಿಗೆ ಮಹಾ ಅನ್ಯಾಯವಾಗುತ್ತಿದೆಯೆಂದೂ ಉಲ್ಲೇಖಿಸಿದರು. ಇದನ್ನು ಯಾರೊಬ್ಬರೂ ಆಕ್ಷೇಪಿಸುವುದಿಲ್ಲ; ಏಕೆಂದರೆ ಅವರ ಅಭಿಪ್ರಾಯವನ್ನು ಮಂಡಿಸಲು ಅವರು ಸ್ವತಂತ್ರರಿರುವರು. ಆದರೆ, ಅವರು ಇನ್ನೂ ಮುಂದುವರಿದು, ಈ ರಾಜ್ಯವನ್ನು ಒಡೆದು ಎರಡು ರಾಜ್ಯಗಳನ್ನಾಗಿ ಮಾಡದ ಹೊರತು ಬೇರೆ ಗತಿಯೇ ಇಲ್ಲವೆಂಬ ಘೋಷಣೆಯನ್ನು ಮಾಡಿದ್ದು ಮಾತ್ರ ಹುಟ ವಿಚಾರದ ಮಾತು ಎಂದು ಹೇಳಲೇ ಬೇಕಾಗುತ್ತದೆ. ಯಾವ ಪ್ರದೇಶದ ನಾಗರಿಕರನ್ನು ಪ್ರಶ್ನಿಸಿದರೂ ರಾಜ್ಯ ಪುನರ್ಘಟನೆಯಿಂದ ತಮಗೇನೂ ಉಪಕಾರವಾಗಲಿಲ್ಲ ಎಂದು ಅಭಿಮತಪಡುವವರು ದೊರಕಿಯೇ ದೊರಕುತ್ತಾರೆ. ಏಕೆಂದರೆ, ರಾಜ್ಯ ಒಂದಾದೊಡನೆಯೇ ತಮ್ಮ ಹೇರಾಸೆಗಳೆಲ್ಲವೂ ಸಿದ್ಧಿಸುತ್ತವೆಯೆಂದು ನಂಬಿದವರು ತುಂಬ ಮಂದಿ, ದೇಶವೊಂದು ಸ್ವತಂತ್ರವಾದರೆ, ನಮ್ಮ ಕಷ್ಟ ಕಾರ್ಪಣ್ಯಗಳೆಲ್ಲವೂ ದೂರ ಹಾರಿ ಹೋಗುವವೆಂಬ ಆಶಯವಿದ್ದವರು ಭಾರತೀಯರು. ಆದರೆ, ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಯಾದ ಮಾತ್ರಕ್ಕೆ ಆರ್ಥಿಕ ಸ್ಥಿತಿಗತಿ ಮಂದುಗಳಗೆಯಲ್ಲಿಯೇ ಸುಧಾರಿಸಲು ಅಲ್ಲಾವುದ್ದೀನನ ದೀಪವಲ್ಲ. ದೇಶ ಪುನಾರಚನೆಗಾಗಿ ನಾಗರಿಕರು ದುಡಿಯಬೇಕು; ಏಕಭಾವನೆಯಿಂದ ಶ್ರಮಿಸಬೇಕು. ಹಾಗೆಯೇ ಕರ್ನಾಟಕದ ಜನ ಒಂದಾಗಿ ಬಾಳುವುದನ್ನು ಕಲಿಯಬೇಕು; ಕನ್ನಡದ ತಾಯಿಯ ಮಕ್ಕಳೆಲ್ಲರೂ ನಾವು ಎಂಬ ವಿಶಾಲ ಭಾವನೆಯನ್ನು ಬದಿಗಿಟ್ಟು ಹಳೆಯವರು=ಹೊಸಬರು ಎಂದು ಗೊಣಗುವುದರಿಂದ ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗುವುದಿಲ್ಲ. ಹಳೆಯ ಮೈಸೂರು—ಹೊಸ ಮೈಸೂರು ಎಂಬುದು ಇಂದು ಇಲ್ಲ, ಇಂದಿರುವುದು ಒಂದೇ ರಾಜ್ಯ—ಅದು ಕನ್ನಡ ಭಾಷೆಯನ್ನಾಡುವವರ ನೆಲ. ರಾಜ್ಯದ ಒಂದು ಭಾಗ ಹಿಂದುಳಿದರೆ, ಇಡಿಯ ರಾಜ್ಯದ ಮೇಲದರ ಪರಿಣಾಮ ಬಿದ್ದೇ ಬೀಳುವುದು ಎಂಬುದನ್ನು ಶ್ರೀ ಮುಕ್ಕಣ್ಣಪ್ಪನವರು ಅವಶ್ಯ ಕಂಡುಕೊಳ್ಳಬೇಕು; ವಿಭಜನಾ ಪ್ರಿಯರು ಗಮನಿಸಬೇಕು.

ಇಂತಹ ಉಪಾಧ್ವ್ಯಪವನ್ನು ನಾವು ಪದೇ ಪದೇ ಕಾಣುವಾಗ, ಕೇಳುವಾಗ ನಮ್ಮಲ್ಲಿ ಭಾವೈಕ್ಯವಿನ್ನೂ ಮೂಡಿಲ್ಲವೆಂದು ತಿಳಿಯಬೇಕಾಗುತ್ತದೆ. ಎಂದಿನವರೆಗೆ ನಾವೆಲ್ಲ ಒಂದೇ ಎಂಬ ಉಚ್ಚ ಭಾವನೆಯು ಹುಟ್ಟುವುದಿಲ್ಲವೋ ಅಂದಿನವರೆಗೆ ನಾವು ಉನ್ನತರಾಗುವಂತೆ ಇಲ್ಲವೆಂಬುದನ್ನು ಅರಿತುಕೊಳ್ಳಬೇಕು. ನಮ್ಮಲ್ಲಿರುವಷ್ಟು ಜನ, ಧನಧಾನ್ಯ ಪ್ರಕೃತಿ ಸಂಪತ್ತು ಇರುವ ರಾಜ್ಯವು ಬಹಳ ವಿರಳ. ಆದರೆ, ನಮ್ಮ ಉನ್ನತಿಯು— ಸಾಧನೆಯು — ಮಾತ್ರ ನಮ್ಮ ನಿರೀಕ್ಷೆಗೆ ಸರಿಯಾಗಿ ಆಗದಿದ್ದುದೇ ಈ ಬಗೆಯ ಅಪಲಾಪಕ್ಕೆ ಹೇತುವಾಗಿದೆ. ಆದುದರಿಂದ ವಿಭಜನಾವಾದಿಗಳು ಅಸಂಗತವಾದ ಪ್ರತ್ಯೇಕತೆಯ ಸೂತ್ರವನ್ನೇ ಮೆಲುಕು ಹಾಕುವುದರಲ್ಲಿ ತೃಪ್ತಿಪಡದೆ, ರಾಜ್ಯದ ಶ್ರೇಯಸ್ಸಿಗಾಗಿ ರಚನಾತ್ಮಕ ಸಲಹೆಗಳನ್ನು ನೀಡಿ, ಪುನಾರಚನಾ ಕಾರ್ಯದಲ್ಲಿ ಸಹಕರಿಸಿ, ಇಡಿಯ ರಾಜ್ಯವನ್ನು ಒಂದಾಗಿ ಮೇಲ್ಮೆಗೆ ತರಲು ಪ್ರಯತ್ನಿಸಬೇಕು. ಅಸಹ್ಯ ಅಶ್ರಾವ್ಯವಾದ ವಿಭಜನೆಯ ಮರುಧ್ವನಿ ವಿಧಾನ ಸಭೆ—ಮಂಡಳಗಳಲ್ಲಿ ಮಾತ್ರವಲ್ಲ, ಎಲ್ಲೆಲ್ಲಿಯೂ ಮತ್ತೆ ಮರುಕಳಿಸದಂತೆ ಕನ್ನಡಿಗರೆಲ್ಲರೂ ತೀವ್ರ ಎಚ್ಚರಿಕೆ ವಹಿಸಬೇಕು. ಇದೇ ಬಗೆಯ ಅಪಶ್ರುತಿ ಮತ್ತೆ ಮತ್ತೆ ಕೇಳಿ ಬಂದರೆ, ಅದರಿಂದ ರಾಜ್ಯಕ್ಕೆ, ರಾಜ್ಯದ ಹಿತಾಸಕ್ತಿಗಳಿಗೆ ಕುಂದು ಖಂಡಿತ ಇನ್ನಾದರೂ ಒಂದಾಗಿ ಕೂಡಿ ಬಾಳುವುದನ್ನು ನಾವು ಕಲಿತುಕೊಳ್ಳದೆ ಹೋದರೆ, ನಾವು ಮತ್ತೆ ಕಲಿಯುವುದೇನನ್ನು?

ಜಗತ್ಪರ್ಯಟನ

ಡಾ| ಸುಕರ್ಣ

ಹಿಂದೊಮ್ಮೆ ಭಾರತ ಇಂಡೊನೇಶ್ಯ ಬ್ರಹ್ಮ ಮತ್ತು ಸಿಂಹಳಗಳು ಬಾಡುಂಗ ಸಮ್ಮೇಳನದ ಸಂಯೋಜಕರಾಗಿ ದುಡಿದಿದ್ದುವು. ಇಂದು ಈ ಮಾದರಿಯ ಸಮ್ಮೇಳನವೊಂದನ್ನು ಕೇವಲ ಇಂಡೊನೇಶ್ಯವೇ ಕರೆಯಲು ನಿರ್ಧರಿಸಿದೆ. ಹಾಗಿದ್ದರೂ ಪೂರ್ವಸಿದ್ಧತೆಯ ಪರಿಶೀಲನೆಯನ್ನು ವಿದೇಶ ಮಂತ್ರಿ ಮಟ್ಟದ ನೆಲೆಯಲ್ಲಿ ಮಾಡಬೇಕೆನ್ನುವ ಅಧ್ಯಕ್ಷ ಡಾ| ಸುಕರ್ಣರು ಭಾರತದ ಪ್ರಧಾನಿ ಜವಾಹರಲಾಲರಿಗೆ ಆಮಂತ್ರಣವಿತ್ತಿದ್ದಾರೆ. ಆದರೆ, ನೆಹರುರವರು ಜಕಾರ್ತಾಕ್ಕೆ ಹೋಗಲಾರರು. ಬದಲು ಬೇರೊಬ್ಬ ಮಂತ್ರಿ ಹೋಗಬಹುದು. ಭಾರತವು ಬೆಲ್ಗ್ರೇಡ್ ಮಾದರಿಯ ಸಮ್ಮೇಳನ ಇಂದಿನ ಪರಿಸ್ಥಿತಿಯಲ್ಲಿ ಉಪಯುಕ್ತವೆಂದು ಭಾವಿಸಿದೆಯೇ ಹೊರತು ಬಾಡುಂಗ ಸಮ್ಮೇಳನವನ್ನು ವಿರೋಧಿಸಿಲ್ಲ. ಚೀನೀಯ ಲಾಯರ ತಾಳಕ್ಕೆ ಕುಣಿಯುತ್ತಿರುವ ಸುಕರ್ಣರು ಏನು ಯೋಚಿಸಿದ್ದಾರೆಯೋ ಯಾರಿಗೆ ಗೊತ್ತು?

ಪಾಕ್ ಕೈ ಮೇಲೆ?

ಭಾರತದ ತೀವ್ರ ಪ್ರತಿಭಟನೆಯನ್ನೂ ಅನನುಕೂಲಾಭಿಪ್ರಾಯವನ್ನೂ ಕಡೆಗಣಿಸಿ ಭದ್ರತಾಮಂಡಳಿಯ ಸಭೆಯು ಕಾಶ್ಮೀರದ ಚರ್ಚೆಯನ್ನು ಮತ್ತೆ ಎತ್ತಿಕೊಳ್ಳಲು ಕೂಡಿದೆ. ಭಾರತದ ಸಂಸತ್ತು ಮುಂಗಡ ಪತ್ರದ ಚರ್ಚೆಗಾಗಿ ಸಭೆ ಸೇರಿರುವುದರಿಂದ ತನ್ನ ಮಂತ್ರಿ ಮಟ್ಟದ ಪ್ರತಿನಿಧಿಯನ್ನು ಚರ್ಚೆಯಲ್ಲಿ ಭಾಗವಹಿಸಲು ಕಳಿಸುವುದು ಸಾಧ್ಯವಿಲ್ಲವೆಂದು ಭಾರತ ಸರಕಾರವು ಮಂಡಳದ ಅಧ್ಯಕ್ಷರಿಗೆ ತಿಳಿಸಿದೆ. ಎರಡು ದೇಶಗಳಿಗೆ ಸಂಬಂಧಪಟ್ಟ ಯಾವುದೇ ಚರ್ಚೆಯನ್ನು ಎತ್ತಲು ಉಭಯತರರಿಗೂ ಅನುಕೂಲವಾದ ಸಮಯವನ್ನು ಆಯ್ದುಕೊಳ್ಳುವುದು ಅಗತ್ಯವಾದರೂ ಇಂದು ಪಾಕಿಸ್ತಾನದ ಮೇಲ್ಗೈಯೇ ಆಗಿದೆ. ಪಾಶ್ಚಾತ್ಯ ರಾಷ್ಟ್ರಗಳು, ಭಾರತದ ಮೇಲೆ ಒಂದಲ್ಲ ಹಲವು ರೀತಿಯ ಒತ್ತಡವನ್ನು ಹೇರಿಯಾದರೂ ಕಾಶ್ಮೀರದ ಬಗ್ಗೆ ಭಾರತದ ದೃಢನೀತಿಯನ್ನು ಶಿಥಿಲಗೊಳಿಸುವ ಇಚ್ಛೆಯಿಂದ ಕೂಡಿದಂತಿವೆ. ಕೆಲವೊಮ್ಮೆ ಈ ಪ್ರಭಾವಕ್ಕೆ ಕಟ್ಟುಬಿದ್ದ ಭಾರತವು ತನ್ನ ಅಭಿಪ್ರಾಯಕ್ಕೆ ವಿರೋಧವಾಗಿಯೂ ಮೂಕತೆ ನಡೆಸಿತ್ತು. ಇಷ್ಟರಿಂದಲೇ ಅದು ತನ್ನ ಧೋರಣೆಯ ಬಿಗಿತವನ್ನು ಸಡಿಲಿಸಿತು ಎನ್ನುವುದು ಸಾಧ್ಯವಿಲ್ಲ. ಇಂದು ನಡೆಯುವ ಚರ್ಚೆಯಲ್ಲಿ ಭಾರತದ ಯಾವಮಂತ್ರಿಯೂ ಭಾಗವಹಿಸುವುದಿಲ್ಲ. ಕಾಶ್ಮೀರದ ಗಡಿಯಲ್ಲಿ ಪಾಕಿಸ್ತಾನವು ಮಾಡುತ್ತಿರುವ ಉದ್ರಿಕ್ತ ಪ್ರಚೋದನೆ, ಸಮರ ವಿರಾಮರೇಖೆಯ ಉಲ್ಲಂಘನೆಗಳು ಅಡಗಿಸಲ್ಪಟ್ಟಿಲ್ಲ. ಆದರೂ ಪಾಶ್ಚಾತ್ಯರ ಒತ್ತಡದಿಂದಾಗಿಯೇ ಈ ಸಭೆಯು ಸೇರುತ್ತಿರುವುದರಿಂದ, ಸಂ. ರಾ. ಸಂಘದಲ್ಲಿರುವ ಭಾರತೀಯ ಪ್ರತಿನಿಧಿ ಶ್ರೀ ಬಿ. ಎನ್. ಚಕ್ರವರ್ತಿಯವರು ಸಭೆಯನ್ನು ಮುಂದೂಡಿ, ಶ್ರೀ ಛಾಗ್ಲಾರವರಿಗೆ ಬಂದು ಭಾಗವಹಿಸಲು ಅನುಮಾಡಿಕೊಡುವಂತೆ ಕೇಳಿಕೊಳ್ಳುವರೆಂದು ತಿಳಿಯುತ್ತದೆ. ಇದನ್ನು ವಿಚಾರದ ಯಾವಕಾರ್ಯವನ್ನಾದರೂ ಸದ್ಯ ಭಾರತವು ಮಾಡುವುದು ಸಾಧ್ಯವಿಲ್ಲ. ಭಾರತ ಸರಕಾರದ ಈ ಅಭಿಪ್ರಾಯದ ಮೇಲೆ ಭದ್ರತಾಮಂಡಳಿಯು ತಳೆಯುವ ನಿಲುವು ಪಾಶ್ಚಾತ್ಯರ ಕುತೂಹಲವನ್ನು ಎತ್ತಿ ತೋರುತ್ತದೆ. ಭಾರತದ ಕಾಶ್ಮೀರ ನೀತಿಯು ಪೂರ್ಣ ಬಿಗಿಯಾಗಿಯೇ ಇದೆ.

ಗುಲ್ಜಾರೀಲಾಲ

ಕೇಂದ್ರ ಸಚಿವ ಗುಲ್ಜಾರೀಲಾಲನಂದಾರವರು ಗೃಹದಂತಹ ಮಹತ್ವಶಾಖೆಯನ್ನೇ ಹೊತ್ತುಕೊಂಡಿದ್ದಾರೆ. ಪ್ರಧಾನಿಗಳ ಅನಾರೋಗ್ಯದ ನಂತರ ಇವರ ಸ್ಥಾನಮಾನಗಳು ಸಾಕಷ್ಟು ಏರಿವೆ. ಎಂತಲೇ ಇವರು ಕೆಲವೊಂದು ಕಾರುಬಾರುಗಳನ್ನು ಮಾಡಲು ತೊಡಗಿದ್ದಾರೆ. ನಂದಾರ ವ್ಯವಹಾರ ಹಿರಿಯಮಂತ್ರಿಯವರ ಮನಸನ್ನೂ ನೋಯಿಸಿದೆ ಎಂಬುದರಿಂದ ಅವರ ಪಟ್ಟದ ಕಲ್ಲು ಅಲುಗಾಡುತ್ತಿದೆಯೆಂದರೆ ಹೆಚ್ಚಾಗದು. ಮಂತ್ರಿಮಂಡಳದಲ್ಲಿಯೇ ಅತಿ ಹಿರಿಯನಾದ ತನ್ನ ಪ್ರಭಾವಕ್ಕೆ ಎಲ್ಲರೂ ಒಳಗಾಗಬೇಕು ಎಂಬ ಆಶಯ ಅವರದ್ದಿರಬಹುದು. ಆದರೆ, ಅವರು ಈ ಆಶಯವನ್ನಿಟ್ಟುಕೊಂಡು ಮಂತ್ರಿಯಾಗಿ ಉಳಿಸುವುದು ಸಾಧ್ಯವಿಲ್ಲ. ತನ್ನ ಇಚ್ಛೆಗೆ ವಿರುದ್ಧವಾದುದನ್ನು ಪ್ರಧಾನಿ ನೆಹರು ಎಂದೂ ಸಹಿಸುವವರಲ್ಲ.

ಲಿಂಡನ್ ಜಾನ್ಸನ್

ಒಂದು ಸ್ವತಂತ್ರದೇಶಕ್ಕೆ ತನ್ನ ಧ್ಯೇಯ ನೀತಿಗಳನ್ನು ನೇಯುವಾಗ ತನ್ನ ಹಿತೈಚಿಂತಕರನ್ನು ಸಂಪೂರ್ಣ ಕಡೆಗಣಿಸಬಾರದು ಎನ್ನುತ್ತಾರೆ ಅಮೇರಿಕೆಯ ಅಧ್ಯಕ್ಷಶ್ರೀ ಲಿಂಡನ್ ಜಾನ್ಸನ್. ಡಿಗಾಲೆಯವರ ಫ್ರೆಂಚ್ ಸರಕಾರ ಕೆಂಪು ಚೀನೀಯ ಸರಕಾರಕ್ಕೆ ಮನ್ನಣೆಯನ್ನಿತ್ತುದರ ಮೇಲೆ ಮಾತಾಡುತ್ತ ಅವರು ಈ ಕೃತಿಯನ್ನು ಜಾಣತನದ್ದಲ್ಲವೆಂದು ಹೇಳಿದ್ದಾರೆ. ಲಾಯರು ತನ್ನ ಇತ್ತೀಚೆಗಿನ ಆಫ್ರಿಕಾ—ಯುರೋಪ ಸಂದರ್ಶನ ಕಾಲದಲ್ಲಿ ಸಾಧಿಸಿದ ಈ ಸಾಧನೆಯು ತನಗೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಾನ ಸಿಗುವಂತೆ ಮಾಡಬಹುದೆಂದು ನಿರೀಕ್ಷಿಸಿದ್ದಾರೆ. ಆದರೆ, ಅಮೆರಿಕೆಯ ತೀವ್ರ ವಿರೋಧ, ಬ್ರಿಟನ್ನಿನ ಅರ್ಧ ಮನಗಳ, ಈ ಆಶೆಯು ಒತೆಯನ್ನು ತಲೆಯೆತ್ತ ಬಿಡಲಾರವೆಂಬುದು ಸ್ಪಷ್ಟವಿದೆ.

ರೋಟರಿಕ್ಲಬ್ಬಿನ ಹೊಸ ಅಧಿಕಾರಿ ವರ್ಗ—ಡಾ| ಎ. ಕೃಷ್ಣರಾವ್‌ರವರು ೧೯೬೪—೬೫ನೆ ಸಾಲಿಗೆ ಉಡುಪಿ ರೋಟರಿ ಕ್ಲಬ್ಬಿನ ಅಧ್ಯಕ್ಷರಾಗಿಯೂ ಶ್ರೀ. ಕೆ. ಕೆ. ಪೈ ಮತ್ತು ಡಾ. ಕೆ. ಎಲ್. ಐತಾಳ ಉಪಾಧ್ಯಕ್ಷರುಗಳಾಗಿಯೂ, ಶ್ರೀ ಎನ್. ಎಸ್. ಪ್ರಭು ಕಾರ್ಯದರ್ಶಿಯಾಗಿಯೂ, ಶ್ರೀ ವಿ. ಚಂದ್ರಶೇಖರ್ ಜತೆ ಕಾರ್ಯದರ್ಶಿಯಾಗಿಯೂ, ಶ್ರೀ ಎಸ್. ಡಿ. ಪೆಜತ್ತಾಯ ಸಾರ್ಜಂಟ್-ಎಟ್-ಆರ್ಮ್ಸ್ ಆಗಿಯೂ, ಡಾ. ಕೆ. ಕೃಷ್ಣಸ್ವಾಮಿ ಖಜಾಂಚಿಯಾಗಿಯೂ ಆಯ್ಕೆಯಾಗಿದ್ದಾರೆ. ಶ್ರೀ ವಿ. ಚಂದ್ರಶೇಖರ್‌ರವರನ್ನುಳಿದು ಮೇಲ್ಕಂಡವರೆಲ್ಲರೂ, ಶ್ರೀಗಳಾದ ರಮೇಶ ಪೈ, ಎ. ಜೆ. ಆಲ್ಸೆ, ಕೆ. ಎಸ್. ಹರಿದಾಸ ಭಟ್ ಮತ್ತು ಪಿ. ಆರ್. ಶೆಣೈಯವರೂ ಡೈರೆಕ್ಟರುಗಳ ಮಂಡಳಿಗೆ ಅವಿರೋಧವಾಗಿ ನಾಮಕರಣಗೊಂಡಿದ್ದಾರೆ.

ಅಲ್ಲಲ್ಲಿಯ ಸುದ್ದಿಸಾರ

ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ಭಾಷಣ— ತಾ. 9ರಂದು ಎಂ. ಜಿ. ಎಂ. ಕಾಲೇಜಿನ ವಿದ್ಯಾರ್ಥಿಗಳ ಸಭೆಯನ್ನುದ್ದೇಶಿಸಿ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರು ಮಾತನಾಡುತ್ತ ಇಂದಿನ ಜಗತ್ತಿನಲ್ಲಿ ವಿಜ್ಞಾನವು ಬೆಳೆದ ಎತ್ತರಕ್ಕೆ ಮಾನವನ ಮನಸ್ಸು ಏರಿಸಿಲ್ಲದಿರುವುದು ಜಗತ್ತಿಗೆ ಗಂಡಾಂತರಕಾರಿಯೆಂದೂ ವಿಜ್ಞಾನವು ಜಗತ್ತನ್ನು ಭೌತಿಕವಾಗಿ ಒಂದುಗೂಡಿಸಿದ್ದರೂ, ನಮ್ಮ ಮನಸ್ಸಿನ ಸಂಕುಚಿತ ಭಾವನೆ ವಿಶ್ವಮಾನವನನ್ನು ಕಲ್ಪಿಸಲು ಅತಂಕವೊಡ್ಡುತ್ತಿದೆಯೆಂದೂ ನಮ್ಮ ಹೃದಯ ವಿಶಾಲವಾಗಲು ನಮ್ಮ ಸಾಹಿತಿಗಳು, ಕಲಾಕಾರರು ಹಾಗೂ ಇತರ ಚಿಂತಕರು ಪ್ರಯತ್ನಿಸುವುದು ಅವಶ್ಯವೆಂದೂ ಅಭಿಪ್ರಾಯಪಟ್ಟರು.

ಸಭೆಯ ಅಧ್ಯಕ್ಷತೆ ವಹಿಸಿದ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು, ಶ್ರೀ ಕೃಷ್ಣಶರ್ಮರಂತಹ ವಿಚಾರಿಗಳು ಆಗಾಗ ಬಂದು ನಮ್ಮನ್ನು ಎಚ್ಚರಿಸುವುದರಿಂದ ಆಗುವ ಸತ್ಪರಿಣಾಮಗಳನ್ನು ವಿವರಿಸಿದರು. ಪ್ರಾರಂಭದಲ್ಲಿ ಪ್ರಾಧ್ಯಾಪಕ ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರು ಸ್ವಾಗತಿಸಿದ್ದರು. ಕೊನೆಗೆ ವಿದ್ಯಾರ್ಥಿ ಶ್ರೀ ರಾಜಶೇಖರ ಧನ್ಯವಾದಾರ್ಪಣೆ ಮಾಡಿದರು.

ಮುಂಬಾಯಿ ಬಂಟರ ಯಾನೆ ನಾಡವರ ಸಂಘ—ಇದರ ವರ್ಗಣಿ ಔತಣ ಸಮಾರಂಭವು ತಾ.1-3-64ರಲ್ಲಿ ಸೆಂಟ್ರಲ್ ರೈಲ್ವೆ ಇನ್ಸ್ಟಿಟ್ಯೂಟ್ ಹಾಲ್ ಪರೇಲ್ ಇಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಸಿನೇಮಾ ಶೋ ಮತ್ತು ಕಾರಂತರ ಸಂಗೀತ ಕಛೇರಿ ಅಂದಿನ ವಿಶೇಷ ಕಾರ್ಯಕ್ರಮಗಳಾಗಿದ್ದುವು. ಸಂಘದ ಅಧ್ಯಕ್ಷ ಡಾ|| ಯಚ್. ಬಾಲಕೃಷ್ಣ ಶೆಟ್ಟರು ತಮ್ಮ ಸ್ವಾಗತಭಾಷಣದಲ್ಲಿ ಸಂಘದ ಸದಸ್ಯರು ಒಟ್ಟುಗೂಡಿ ಒಬ್ಬರಿಗೊಬ್ಬರು ಪರಿಚಯ ಮಾಡಿಕೊಳ್ಳುವುದಲ್ಲದೆ ಸೌಹಾರ್ದತೆ ಬೆಳೆಸುವಂತೆ ಸಂದರ್ಭವನ್ನು ಕಲ್ಪಿಸಿಕೊಳ್ಳುವರೇ ಇಂತಹ ಔತಣದ ಕೂಟವನ್ನು ಏರ್ಪಡಿಸುವುದಕ್ಕೆ ಬಹು ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸಿದ್ದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು. ಶ್ರೀ ಶ್ಯಾಮ ಬಿ. ಶೆಟ್ರು ತಮ್ಮ ಭಾಷಣದಲ್ಲಿ ಸಂಘದ ಕಾರ್ಯಕಲಾಪಗಳನ್ನು ಒತ್ತಿ ಹೇಳಿದರು. ಕೊನೆಯಲ್ಲಿ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಶ್ರೀಮಾನ್ ಗೋಪಾಲ ಶೆಟ್ರು ಧನ್ಯವಾದಗಳನ್ನರ್ಪಿಸಿದರು.

ಷಷ್ಟ್ಯಬ್ದಿ—ಸವಣೂರು ಗುತ್ತು ಶ್ರೀ ಯಸ್. ವೆಂಕಪ್ಪರೈಗಳ ಷಷ್ಟ್ಯಬ್ದಿ ಸಮಾರಂಭವು ಸವಣೂರು ದೇವಾಲಯದಲ್ಲಿ 8-3-64ರಲ್ಲು ವಿಜೃಂಭಣೆಯಿಂದ ನೆರವೇರಿತು. ಅದರ ಅಂಗವಾಗಿ ಕುಲದೇವತಾರ್ಚನೆ, ಹೋಮಾದಿಗಳು, ನವಗ್ರಹಗಳ ಪೂಜೆ ಹಾಗೂ ವಿಶೇಷತರದ ದಾನ, ದಕ್ಷಿಣೆ ಮತ್ತು ಧರ್ಮಗಳು ನಡೆದು, ಗುರು ಹಿರಿಯರ ಆಶೀರ್ವಾದ ಪಡೆದು, ಪುಣ್ಯ ಗಳಿಸಿಕೊಂಡರು. ಎರಡೂವರೆ ಸಾವಿರಕ್ಕೂ ಮಿಕ್ಕಿದ ಜನಕ್ಕೆ ಸೊಗಸಾದ ಊಟವನ್ನು ನೀಡಿದರು. ಒಕ್ಕೂಟದ ಭೋಜನಕ್ಕೆ ಬಾರದ ಜನಾಂಗಕ್ಕೆ ಪ್ರತ್ಯೇಕ ಊಟದ ಏರ್ಪಾಡು ಮಾಡಿಸಿದ್ದರು. ಶ್ರೀ ರೈಗಳು ಶತಾಯುಷಿಗಳಾಗಿ ಸಮಾಜಕಲ್ಯಾಣಕ್ಕಾಗಿ ದುಡಿಯುವಂತಾಗಲೆಂದು ಎಲ್ಲರೂ ಹಾರೈಸಿದರು.

ಮುಕ್ತಾಯ ಸಮಾರಂಭ— ಮಾರ್ಚ 14ರಲ್ಲು ಉಡುಪಿ ಆಯುರ್ವೇದ ಕಾಲೇಜಿನ ಯೂನಿಯನ್ ಮುಕ್ತಾಯ ಸಮಾರಂಭವು ಯೂನಿಯನ್ನಿನ ಗವರ್ನರರಾದ ಶ್ರೀ ಜಿ. ಬಿ. ಸವಣೂರರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನದ ನಂತರ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಮಯೋಚಿತ ಭಾಷಣ ಮಾಡಿದರು. ಯೂನಿಯನ್ ಪ್ರೆಸಿಡೆಂಟ್ ಶ್ರೀ ಕರುಣಾಕರ ಶೆಟ್ಟಿಯವರು ಯೂನಿಯನ್ನಿನ ಕಾರ್ಯಕಲಾಪಗಳನ್ನು ಒತ್ತಿ ಹೇಳಿದರು. ಕೊನೆಗೆ ಕಾರ್ಯದರ್ಶಿಗಳಾದ ಶ್ರೀ ಗೋಪಾಲಕೃಷ್ಣ ಭಟ್ ಇವರು ಧನ್ಯವಾದ ಸಮರ್ಪಿಸಿದರು.

ಬಂಟರ ಯಾನೆ ನಾಡವರ ಸಂಘ ಮುಲ್ಕಿ—ಈ ಸಂಘದ ಮಹಾ ಸಭೆಯು ತಾ. 8–3–'64ರಂದು ಇದರ ಆಶ್ರಯದಲ್ಲಿ ನಡೆಯಿಸಲ್ಪಡುವ ವಿದ್ಯಾರ್ಥಿ ಭವನ (ಮುಲ್ಕಿ ದೊಡ್ಡಮನೆ) ದಲ್ಲಿ ಶ್ರೀ ಯಂ. ಆರ್. ಯಚ್. ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಗೌ|| ಕಾರ್ಯದರ್ಶಿ ಡಾ|| ಕೆ. ಬಾಬು ಶೆಟ್ಟರು ಸಭೆಯ ಮುಂದೆ ಮಂಡಿಸಿದ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಜೂರು ಮಾಡಲಾಯಿತು. ಸಂಘದ ಘಟನೆಯನ್ನು ಸಭೆಯು ಮಂಜೂರು ಮಾಡಿತು. ಲಘು ಉಪಾಹಾರದ ನಂತರ 1964ನೇ ವರ್ಷದ ಬಗ್ಗೆ ಕಾರ್ಯಕಾರಿ ಸಮಿತಿಯು ಮತ್ತು ಸಂಘದ ಉಪಕೇಂದ್ರಗಳ ಸಮಿತಿಗಳ ಸದಸ್ಯರ ಆಯ್ಕೆ ನಡೆಯಿತು.

ಮುಲ್ಕಿ ಕೇಂದ್ರಕ್ಕೆ— ಡಾ. ಕೆ. ಬಾಬು ಶೆಟ್ಟಿ, ಡಾ. ಬಿ. ಸೀತಾರಾಮ ಶೆಟ್ಟಿ, ಡಾ. ಕೆ ಯಸ್. ಶೆಟ್ಟಿ, ಡಾ. ಯಂ. ಆರ್. ಶೆಟ್ಟಿ, ಶ್ರೀಗಳಾದ ಯಂ. ಶಂಕರ ಶೆಟ್ಟಿ, ಯಂ. ರಾಮಣ್ಣ ಶೆಟ್ಟಿ, ಪಿ. ಮಹಾಲಿಂಗ ಶೆಟ್ಟಿ, ಡಾ. ಸಂಜೀವನಾಥ ಐಕಳ, ಶ್ರೀಗಳಾದ ಯಂ. ಆರ್. ಯಚ್. ಪೂಂಜ, ಯನ್. ರಮಾನಂದ ಶೆಟ್ಟಿ, ಬಿ. ಪ್ರೇಮದಾಸ ಶೆಟ್ಟಿ, ಟಿ. ಬಾಲಕೃಷ್ಣ ಶೆಟ್ಟಿ.

ಕಿನ್ನಿಗೋಳಿ ಕೇಂದ್ರಕ್ಕೆ— ಶ್ರೀಗಳಾದ ಕೆ. ಶ್ರೀಧರ ಶೆಟ್ಟಿ, ಕೆ. ಭೋಜ ಶೆಟ್ಟಿ, ಕಿನ್ನಿಗೋಳಿ ಕೇಂದ್ರಕ್ಕೆ- ಟಿ.ರಮೇಶ ಶೆಟ್ಟಿ, ಎ. ಶ್ರೀಧರ ಶೆಟ್ಟಿ.

ಹಳೆಯಂಗಡಿ ಕೇಂದ್ರಕ್ಕೆ- ಕೆ. ವಾಮನ ಶೆಟ್ಟಿ, ಪಂಜ ಭೋಜ ಶೆಟ್ಟಿ.

ಮುಂಡ್ಕೂರು ಕೇಂದ್ರಕ್ಕೆ- ಯಂ. ಶಿವಣ್ಣ ಶೆಟ್ಟಿ, ಐ. ಯಂ ಶಿವಣ್ಣ ಶೆಟ್ಟಿ.

ಪಡುಬಿದ್ರಿ ಕೇಂದ್ರಕ್ಕೆ-ಡಾ. ಕೆ.ಕೆ ಶೆಟ್ಟಿ

ಸುರತ್ಕಲ್ ಕೇಂದ್ರಕ್ಕೆ- ಡಾ. ಕೆ.ಆರ್. ಶೆಟ್ಟಿ.

ಶ್ರೀ ಜಿ ಮಹಾಬಲ ಶೆಟ್ಟಿ ಮತ್ತು ಶ್ರೀ ಯಚ್. ಶೀನ ಶೆಟ್ಟರನ್ನು ಸಂಘದ ಗೌ. ಲೆಕ್ಕ ಪರಿಶೋಧಕರಾಗಿ ಆರಿಸಲಾಯಿತು

ಬಳಿಕ ಡಾ. ಕೆ. ಬಾಬು ಶೆಟ್ಟರು, ಸ್ವಜಾತಿ ಬಂಧುಗಳಲ್ಲಿ ಪ್ರೇಮಾದರಗಳನ್ನು ಬೆಳೆಯಿಸಿ, ಪರಜಾತಿಯವರಲ್ಲಿ ಪ್ರೀತಿ ವಿಶ್ವಾಸ ಊರ್ಜಿತ ಗೊಳಿಸುವ ವಿಶಾಲ ತಳಹದಿಯ ಸಂಘಟನಾ ಪ್ರಯತ್ನವು ಸಮಾಜ ಬಂಧುಗಳಲ್ಲಿ ನವ ಚೈತನ್ಯ, ಸ್ಫೂರ್ತಿ ಹಾಗೂ ಜಾಗೃತಿಯನ್ನು ಉಂಟುಮಾಡುವುದರೊಂದಿಗೆ, ರಚನಾತ್ಮಕವಾದ ಉದಾತ್ತ ಕಾರ್ಯಗಳಿಗಾಗಿ, ಉತ್ಸಾಹದಿಂದ ಏಕಮನಸ್ಕರಾಗಿ ದುಡಿಯುವ ಹೆಬ್ಬಯಕೆಯು ಅವಿಚ್ಛಿನ್ನವಾಗಿ ಮುಂದರಿದು, ತನ್ಮೂಲಕ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿ ಪಥವನ್ನು ಮುನ್ನಡೆಯುವಂತೆ ಪ್ರಯತ್ನಿಸುವ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಸಾಧಕವಾದ ಸತ್ಕಾರ್ಯಗಳಿಗೆ ಎಲ್ಲರೂ ಸಹೃದಯತೆಯಿಂದ, ಸಹಾನುಭೂತಿಯಿಂದ ಸಹಕರಿಸಬೇಕಾಗಿ ಸಭಿಕರನ್ನು ಕೇಳಿಕೊಂಡು ಉಪಕಾರ ಸ್ಮರಣೆ ಮಾಡಿದರು.

ವಜ್ರಮಹೋತ್ಸವ– ತಾ.16-3-64ರಂದು ಮುಂಬಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ವಜ್ರಮಹೋತ್ಸವವು, ಸರ್ ಕಾವಸ್ಜಿ ಜಹಾಂಗೀರ್ ಸಭಾ ಸದನದಲ್ಲಿ, ಮಹಾರಾಷ್ಟ್ರ ರಾಜ್ಯ ಸರಕಾರದ ಸಿವಿಲ್ ಸಪ್ಲೈಸ್, ಹೌಸಿಂಗ್ ಮತ್ತು ಫಿಶರೀಸ್ ಖಾತೆಗಳ ಮಂತ್ರಿ ಶ್ರೀ ಹೋಮಿ ಜೆ. ಎಚ್. ತಲ್ಯಾರ್ ಖಾನರವರ ಅಧ್ಯಕ್ಷತೆಯಲ್ಲಿ, ಮಹಾ ರಾಷ್ಟ್ರದ ರಾಜ್ಯಪಾಲೆಯರಾದ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರಿಂದ ಉದ್ಘಾಟಿಸಲ್ಪಟ್ಟಿತು. ಮಂಡಳಿಯ ಅಧ್ಯಕ್ಷ ಶ್ರೀ. ಎನ್. ಬಿ. ಬಂಗೇರರು ಸ್ವಾಗತಿಸಿದ ಬಳಿಕ ಶ್ರೀಮತಿ ಪಂಡಿತರು ಮಾತಾಡುತ್ತಾ, ಸಂಸ್ಥೆಯು ವಿದ್ಯಾಕ್ಷೇತ್ರದಲ್ಲಿ ಸಲ್ಲಿಸಿದ ದೀರ್ಘ ಸೇವೆಯನ್ನು ಶ್ಲಾಘಿಸಿ, ಮುಂದಿನ ಅಭಿವೃದ್ಧಿಯನ್ನು ಹಾರೈಸಿ, ಮಂಡಳಿಗೆ ಹಲವು ವಿಧಗಳಲ್ಲಿ ಸೇವೆ ಸಲ್ಲಿಸಿದವರಿಗೂ, ಕ್ರಿಕೆಟರ್ ಶ್ರೀ ಬುಧಿ ಕುಂದರನಿಗೂ ಬಹುಮಾನ ವಿತರಣೆ ಮಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಕೆ. ಪುತ್ರನರು ಶುಭಕೋರಿ ಬಂದ ಸಂದೇಶಗಳನ್ನೋದಿದರು. ಸಭಿಕರ ಪರವಾಗಿ ಶ್ರೀ. ಎ ಕೆ. ಹಫಿಜ ಮತ್ತು ಶ್ರೀ. ಜಿ. ಎಸ್. ವೈದ್ಯ ಇವರು ಮಂಡಳಿಯ 60 ವರುಷಗಳ ಕಾರ್ಯಗಳನ್ನು ವಿವರಿಸಿದರು. ಅಧ್ಯಕ್ಷರೂ ಮಂಡಳಿಯನ್ನು ಶ್ಲಾಘಿಸಿ ಶುಭ ಕೋರಿದರು.

ಅಂತ್ಯದಲ್ಲಿ ಉಪಾಧ್ಯಕ್ಷ ಶ್ರೀ ಬಿ. ಎಸ್. ಸಾಲ್ಯಾನರಿಂದ ವಂದನಾರ್ಪಣೆಯಾದ ಬಳಿಕ ವಿವಿಧ ವಿನೋದಾವಳಿಗಳಾದವು.

ಮರುದಿನ ಕೇಂದ್ರ ಮಂತ್ರಿಗಳಾದ ಶ್ರೀ ಎಚ್. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಮೊಗವೀರ ರಾತ್ರಿ ಪಾಠಶಾಲೆಯ ಬಹುಮಾನ ವಿತರಣ ಸಮಾರಂಭವು ಜರಗಿತು. ಮೂರನೇ ದಿನದ ಸಮಾರಂಭವು ಶ್ರೀ ಆರ್. ಡಿ. ಚಾರ್‌ರವರ ಅಧ್ಯಕ್ಷತೆಯಲ್ಲಿ ವಿವಿಧಕಾರ್ಯಕ್ರಮಗಳಿಂದ ನೆರವೇರಿತು

ಡಾ|| ಭಂಡಾರ್ಕಾರ್‌ರವರಿಗೆ ಶ್ರದ್ಧಾಂಜಲಿ—ತಾ. 12—3—64 ರಂದು ಹೃದಯಸ್ತಂಭನದಿಂದ ನಿಧನರಾದ ಭಂಡಾರ್ಕಾರ್ಸ್ ಕಾಲೇಜಿನ ಟ್ರಸ್ಟಿನ ಅಧ್ಯಕ್ಷ ಡಾ|| ಎ ಎಸ್. ಭಂಡಾರ್ಕಾರ್‌ರವರಿಗೆ ತಾ. 15ರಂದು ಕುಂದಾಪುರದಲ್ಲಿ ಶ್ರೀ ಕೆ. ಎಲ್. ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರದ್ಧಾಂಜಲಿ ಯನ್ನರ್ಪಿಸಲಾಯಿತು. ಅನೇಕರಿಗೆ ಪ್ರೇರಕ ಶಕ್ತಿಯಾಗಿದ್ದ ಡಾ|| ಭಂಡಾರ್ಕಾರರ ನಿಧನದಿಂದ ಅಪಾರ ವ್ಯಸನವಾಗಿದೆಯೆಂದೂ ಅವರಂತಹ ಗಣ್ಯವ್ಯಕ್ತಿಗಳು ಸಮಾಜದ ಆಧಾರಸ್ತಂಭಗಳೆಂದೂ ಡಾ|| ಟಿ. ಎಂ. ಎ. ಪೈಗಳು ನುಡಿದರು. ಶ್ರೀಗಳಾದ ಕೆ ರಘುನಾಥ ಶೆಣೈ, ಎನ್. ಎಸ್. ಪರಮೇಶ್ವರಯ್ಯ, ವೆಂಕಪ್ಪ ಶೆಟ್ಟಿ, ಎಮ್. ಎಮ್. ಹೆಗ್ಡೆ, ಆರ್. ರಾಮದೇವ ಶೆಣೈ, ಮತ್ತು ಶ್ರೀ ಮಲ್ಯ ಮೊದಲಾದವರು ಮೃತರ ಗುಣಾತಿಶಯಗಳನ್ನು ಕೊಂಡಾಡಿದರು. ಪ್ರಿನ್ಸಿಪಾಲ್ ಕೆ. ಜಿ. ಶೆಣೈಯವರು ಓದಿದ ಸಂತಾಪ ಸೂಚಕ ನಿರ್ಣಯವನ್ನು ಸಭೆ ಅಂಗೀಕರಿಸಿದ ಮೇಲೆ ಅಧ್ಯಕ್ಷ ಭಾಷಣವಾಗಿ ಶ್ರೀ ಗಣಪತಿ ಶೆಟ್ಟರಿಂದ ವಂದನಾರ್ಪಣೆಯಾಯಿತು.

ಕು. ಶಿ. ಯವರಿಗೆ ಸತ್ಕಾರ— ಉಡುಪಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಕು. ಶಿ. ಹರಿದಾಸ ಭಟ್ಟರು, ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲರಾದುದರ ಗೌರವಾರ್ಥವಾಗಿ ದಿನಾಂಕ 16ರಂದು ಸಂಘದ ಆಶ್ರಯದಲ್ಲಿ ಶ್ರೀ ವಿ. ಎಂ. ಇನಾಂದಾರರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟ ಜರಗಿತು. ಕಾರ್ಯದರ್ಶಿ ಶ್ರೀ ಎನ್. ನಾರಾಯಣ ಬಲ್ಲಾಳರು ಸ್ವಾಗತಿಸಿದರು. ಶ್ರೀಗಳಾದ ಎಸ್. ಎಸ್. ಪ್ರಭು ಪಿ. ರಂಗನಾಥ ಶೆಣೈ, ಬನ್ನಂಜೆ ರಾಮಾಚಾರ್ಯರು ಅಭಿನಂದನಾ ಭಾಷಣ ಮಾಡಿದ ಬಳಿಕ ಶ್ರೀ. ಕು ಶಿ.ಯವರು ಸತ್ಕಾರಕ್ಕಾಗಿ ತಮ್ಮ ಕೃತಜ್ಞತೆ ವ್ಯಕ್ತಪಡಿಸಿದರು. ಅಧ್ಯಕ್ಷರ ಭಾಷಣದ ಬಳಿಕ ಉಪಾಧ್ಯಕ್ಷ ಶ್ರೀ ಎಸ್. ಡಿ. ಪಡಿಯಾರ್ರವರು ಧನ್ಯವಾದ ಸಮರ್ಪಿಸಿದರು.

ಶ್ರೀ ಗೋಕರ್ಣ ಮಠಾಧೀಶ ದ್ವಾರಕಾನಾಥ ಸ್ವಾಮಿಯವರು

ಶ್ರೀಗಳವರು ತಾ. 8–3–64 ರಿಂದ 15-3-64ರ ವರೆಗೆ ಉಡುಪಿ ವೆಂಕಟ್ರಮಣ ದೇವಸ್ಥಾನದಲ್ಲಿ ಮೊಕ್ಕಾಂ ಮಾಡಿದಾಗ ಅವರ ಸಮ್ಮುಖದಲ್ಲಿ ಪೂಜೆ, ಭಜನೆ, ಸಂಗೀತ, ಫಿಲ್ಮ್ ಪ್ರದರ್ಶನ ನಡೆಯಿತು. ಬೆಳಿಗ್ಗೆ ಶಿಷ್ಯರಿಗೆ ತಪ್ತ ಮುದ್ರಾಧಾರಣೆಯೂ, ರಾತ್ರಿ ಸಂಗೀತಾದಿ ಕಾರ್ಯಕ್ರಮಗಳೂ ನಡೆದುವು. ತಾ 13—6—64ರಂದು ಶ್ರೀ ರಾಘವೇಂದ್ರ ಕೃಷ್ಣ ಭಟ್ಟರ ಸಂಗೀತ ಭಿಕ್ಷೆ, ಪಾದಪೂಜೆ, ನಡೆಯಿತು 11-3-64ರಂದು ಶ್ರೀ ಕೃಷ್ಣ ದರ್ಶನ ಪಡೆದರು. ಅವರನ್ನು ಪರ್ಯಾಯ ಸ್ವಾಮಿಯವರು ಸ್ವಾಗತಿಸಿದರು. ಎಲ್ಲರಿಗೂ ಸ್ವಾಮಿಯವರು ಮಂತ್ರಾಕ್ಷತೆ ಕೊಟ್ಟರು. ತಾ. 14ರಂದು ಗಜಾನನ ಕ್ಲೋತ್ ಸ್ಟೋರಿನವರ, ತಾ. 15ರಂದು ಡಾ. ಪಿ. ಆರ್. ನಾಯಕರ ಭಿಕ್ಷೆ, ಪಾದಪೂಜೆಗಳು ನಡೆದವು. ತಾ. 16ರಂದು ಶ್ರೀಗಳವರು ಗಂಗೊಳ್ಳಿಗೆ ತೆರಳಿದರು.

ಮಣಿಪಾಲ—(ಮಾ. ೧೪) ಭಾರತದ ವೈದ್ಯಕೀಯ ಮಂಡಳಿಯ ಅಧ್ಯಕ್ಷ ಡಾ|| ಸಿ. ಎಸ್. ಪಟೇಲ್ ಇಂದು ಇಲ್ಲಿಯ ಕಸ್ತೂರಬಾ ಮೆಡಿಕಲ್ ಕಾಲೇಜು ಹಾಗೂ ಎಕಾಡೆಮಿ ಆಫ್ ಜನರಲ್ ಎಜುಕೇಶನ್ನಿನ ಇತರ ಸಂಸ್ಥೆಗಳಿಗೆ ಭೇಟಿಯಿತ್ತರು.

ಡಾ|| ಟಿ. ಎಂ. ಎ. ಪೈಯವರು ಡಾ|| ಪಟೇಲ್‌ರವರನ್ನು ಸ್ವಾಗತಿಸುತ್ತಾ, ಇದನ್ನು ಇಡೀ ದೇಶದಲ್ಲೇ ಅತ್ಯುತ್ತಮ ಖಾಸಗಿ ಮೆಡಿಕಲ್ ಕಾಲೇಜೆಂದು ಪರಿಗಣಿಸಲಾಗಿದೆ ಎಂದರು. ಬೆಳಗಾವಿಯ ಕೆ. ಎಲ್. ಇ. ಸೊಸೈಟಿ ಮೆಡಿಕಲ್ ಕಾಲೇಜಿನ ಗೌರವ ಡೀನ್ ಡಾ|| ಬಿ. ಎಸ್. ಜೀರಿಗೆಯವರು ಮಾತನಾಡಿ ಡಾ|| ಟಿ. ಎಂ. ಎ ಪೈಯವರು ಈ ಬರಡು ಭೂಮಿಯನ್ನು ಮಹಾ ಸಂಸ್ಕೃತಿಯ ಕೇಂದ್ರವಾಗಿ ಪರಿವರ್ತಿಸಿದ್ದಾರೆಂದರು.

ತಾ 5-3-64ರ ಸಂಚಿಕೆಯಲ್ಲಿ 'ನಮ್ಮ ನಮ್ಮವರು' ವಿಭಾಗದಲ್ಲಿ ಡಾ|| ರಾಧಾಕೃಷ್ಣ ಶೆಟ್ಟರ ಕುರಿತು ಪ್ರಕಟಿಸಿದ ವಿಷಯದ ಸಂಬಂಧದಲ್ಲಿ ಅವರು ನಮಗೆ ಬರೆದ ಪತ್ರವನ್ನು ಈ ಕೆಳಗೆ ಪ್ರಕಟಿಸಿದ್ದೇವೆ.

"To The Editor, Navayuga

Sir,

I am deeply pained to read the 'ನಮ್ಮ-ನಮ್ಮವರು' column of your paper dated 5th March, 1964 eulogizing my achievements. I feel such practice is unethical as far as a professional man is concerned.

Yours faithfully,

K. R. Shetty.

Dr. K. R. Shetty,
Reader in Medicine,
Kasturba Medical College,
Mangalore."

ನಾವು ಡಾ|| ಶೆಟ್ಟರ ಸಾಧನೆಗಳನ್ನು ಮೆಚ್ಚಿ ಅವರನ್ನು ವಿಚಾರಿಸದೆ ನಾವಾಗಿಯೇ ಪ್ರಕಟಿಸಿದ್ದಾಗಿದೆ. ಅವರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ರೀಡರ್ ಆಗಿದ್ದು ಪ್ರೊಫೆಸರ್ ಆಗಿದ್ದಾರೆಂದು ತಪ್ಪಾಗಿ ಪ್ರಕಟವಾದುದಕ್ಕೆ ವಿಷಾದಿಸುತ್ತೇವೆ.

ಸಂ. ನ.

ನವಯುಗದ ಕೃತಜ್ಞತೆಗಳು

ಕಳೆದ ವಾರಾಂತ್ಯದಲ್ಲಿ ಬಂಟ್ವಾಳ ಮತ್ತು ಕಾಸರಗೋಡಿನ ಕೆಲವು ಭಾಗಗಳಿಗೆ ನವಯುಗದ ನೂತನ ಪರಿಷ್ಕರಣದ ಕಾರ್ಯಾರ್ಥವಾಗಿ ಸಂಚರಿಸಿದಾಗ ಶ್ರೀಗಳಾದ ಕೊಣೆಬೈಲ್ ಸೀತಾರಾಮ ಶೆಟ್ಟಿ, ಕೊಡ್ಲಮೊಗರು; ವಿ. ರಾಮಯ್ಯ ನಾಯ್ಕ, ಮಂಜೇಶ್ವರ; ಕೆ. ಪಿ. ನಂದಪ್ಪ ಶೆಟ್ಟಿ, ಪಟೇಲ್, ಪಾವೂರು; ಅಡೆಕಲ್ ರಾಮಯ್ಯ ನಾಯಕ್, ಕೊಡ್ಲಮೊಗರು; ಪನಿಯಮ್ ಕೃಷ್ಣರಾಜ, ವಿಟ್ಲಲ್; ಬಿ. ರಾಮಕೃಷ್ಣ ರೈ ಪಟೇಲ್ ಅನಂತಾಡಿ; ಕೆ. ಇಂದುಹಾಸ ರೈ; ಪಟೇಲ್, ನೇಗ್ಲಕಟ್ಟೆ; ಎನ್. ಎಂ. ಪಾಂಡುರಂಗ ಕಾಮತ್, ನೆಟ್ಲಮುಡ್ನೂರು; ಕೆ. ಕೃಷ್ಣ ಭಟ್, ಕುಕ್ಕರಬೆಟ್ಟು; ಬಡಕ್ಕಿಲ ವೆಂಕಟ್ರಮಣ ಭಟ್, ಕಟಕ; ಕುಳ ಸಂಕಪ್ಪ ಶೆಟ್ಟಿ, ಕುಳ; ಕೆ. ವೆಂಕಪ್ಪಯ್ಯ ಸಹೋದರರು, ಉರಿಮಜಲು; ಡಾ|| ಬಿ. ಸೀತಾರಾಮ ಶೆಟ್ಟಿ, ಮುಲ್ಕಿ ಇವರು ಸಹಕರಿಸಿ ಪ್ರೋತ್ಸಾಹಿಸಿದಕ್ಕಾಗಿ ತುಂಬಾ ಕೃತಜ್ಞತೆಗಳು, ಅಲ್ಲದೆ ನಮ್ಮ ಸಂಚಾರ ಕಾರ್ಯವು ಸುಸೂತ್ರವಾಗುವಂತೆ ಸಹಕರಿಸಿದ ಶ್ರೀಗಳಾದ ಸಂಜೀವ ಭಂಡಾರಿ, ಮಾಣಿ; ಪಟೇಲ ಕೆ. ಇಂದುಹಾಸ ರೈ; ಇವರೇ ಮೊದಲಾದವರಿಗೂ, ಮುಲ್ಕಿಯಲ್ಲಿ ಸಹಕರಿಸಿದ ಡಾ|| ಎಂ. ಆರ್. ಶೆಟ್ಟಿಗೂ ಪ್ರತ್ಯೇಕ ಧನ್ಯವಾದಗಳು.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ—ಸಂಪಾದಕ

ನಗೆಗಡಲು

ಸೂಕ್ತ ಉಪಾಯ

ಪ್ರಥಮ ಜಾಗತಿಕ ಸಮರದ ಸಮಯ. ಸೇನೆ ಸೇರಿದ ಸೈನಿಕನೊಬ್ಬನಿಗೆ ಆತನ ಪತ್ನಿಯು ಪತ್ರ ಬರೆದಳು: ಹಳ್ಳಿಯಲ್ಲಿ ಒಬ್ಬನೇ ಒಬ್ಬ ಗಂಡಾಳು ಇಲ್ಲ. ಅದುದರಿಂದ ನಾನೇ ಗದ್ದೆ ಉಳಬೇಕಾದ ಪ್ರಸಂಗ ಬಂದಿದೆ.

ಮರು ಟಪಾಲಿನಲ್ಲಿಯೇ ಪತಿ ಉತ್ತರ ಬರೆದ; ಗದ್ದೆಯನ್ನು ಉಳುವುದಕ್ಕೆ ಹೋಗಬೇಡ ಅಲ್ಲಿ ಸಿಡಿ ಮದ್ದುಗಳೂ ಆಯುಧೋಪಕರಣಗಳೂ ಅಡಗಿಸಿಡಲ್ಪಟ್ಟಿರಬಹುದು.

ಸಮರ ಸಿದ್ಧತೆಯ ಕಾಲವದು. ಪತ್ರಗಳೆಲ್ಲವೂ ಪೂರ್ವ ಪರಿಶೀಲನಾನಂತರವೇ ವಿಳಾಸದಾರರ ಕೈ ಸೇರುತಿದ್ದುದು ಸಂಪ್ರದಾಯ. ಸೇನೆಯ ಗುಪ್ತಚರರು ಬಂದರು, ಗದ್ದೆಯೆಲ್ಲವನ್ನು ಅಗೆದು ನೋಡಿದರು ನಿರಾಶರಾಗಿ ಮರಳಿ ಹೋದರು.

ಪತ್ನಿಯು ಈಯೆಲ್ಲ ಸಂಗತಿಯನ್ನು ವಿವರಿಸಿ ಬರೆದಳು ಸೈನಿಕ ಪತಿಗೆ. ಆಕೆಗೆ ಉತ್ತರ ಬಂತು, ತತ್‌ಕ್ಷಣದಲ್ಲಿ—ಹಾಗಾದರೆ ಇನ್ನು ಗೋದಿ ಬಿತ್ತಬಹುದಲ್ಲ?

ಸೂಕ್ಷ್ಮ ಪರೀಕ್ಷೆ

ಟಿಲಿಗ್ರಾಫಿನ ಆವಿಷ್ಕರ್ತ ಸೇಮುವಲ್ ಮೋರ್ಸರು ಮೊದಲು ಚಿತ್ರಗಾರರಾಗಿದ್ದರು ಒಮ್ಮೆ ಆವರು ಮೃತ್ಯುಶಯ್ಯೆಯ ಮೇಲೆ ಬಿದ್ದಿರುವಾಗ ಒಬ್ಬ ರೋಗಿಯ ಚಿತ್ರ ಬಿಡಿಸಿದರು. ಅದನ್ನು ತನ್ನ ಡಾಕ್ಟರ್ ಮಿತ್ರರೊಬ್ಬರಿಗೆ ತೋರಿಸಿದರು ಮತ್ತು ಕೇಳಿದರು: "ನಿಮ್ಮ ಅಭಿಪ್ರಾಯ ವೇನು?

ಡಾಕ್ಟರ್ ಕನ್ನಡಕವನ್ನು ತೆಗೆದು ಕೈಯಲ್ಲಿ ಹಿಡಿದು, ಒಮ್ಮೆ ಸರಿಯಾಗಿ ವೀಕ್ಷಿಸಿದರು. ಮತ್ತು ಬಹಳ ಆತ್ಮವಿಶ್ವಾಸದಿಂದ ನುಡಿದರು: "ಮಲೇರಿಯಾ"

ಕರ್ತನ ಅರಿಯ

• ಪಾದರಿ ಮತ್ತಾತನ ಪತ್ನಿಯರ ನಡುವೆ ವಿವಾದವೆದ್ದಿತ್ತು. ಇಬ್ಬರೂ ತಮ್ಮ ತಮ್ಮ ಪಕ್ಷವನ್ನು ಸರಿಯೆನಿಸಲು ನಿಮಗ್ನರಾಗಿದ್ದರು ಪತ್ನಿ ಹೇಳಿದಳು: "ನನ್ನ ಮಾತೇ ಸರಿ; ನಿನ್ನದು ತಪ್ಪು. ನಾನು ಹೆಂಗಸು, ದೇವರು ಮನುಷ್ಯನನ್ನು ಮೊದಲು. ಅನಂತರ ಹೆಂಗಸನ್ನು ಸೃಷ್ಟಿ ಮಾಡಿದ ಎನ್ನುತ್ತದೆ ಬೈಬಲ್. ಆದುದರಿಂದಲೇ ತನ್ನ ಅನಂತರದ ಸೃಷ್ಟಿಯಲ್ಲಿ ಆತ ತನ್ನ ಹೊಸ ಸುಧಾರಿಸಿದ ಮಾದರಿಯ ಬುದ್ಧಿಶಕ್ತಿಯನ್ನು ಪ್ರಯೋಗಿಸಿದ್ದಾನೆ"

ಪಾದರಿಯು ನುಡಿದನು: "ಹಾಗಲ್ಲ ಪ್ರಿಯೇ, ಭಗವಂತನು ಹೆಂಗಸನ್ನು ಮತ್ತೆ ನಿರ್ಮಿಸಿದ ಕಾರಣ ಬೇರೆಯೇ ಇದೆ "ತಾನು ವಿಶ್ವದಲ್ಲಿ ಅತ್ಯಂತ ತೀಕ್ಷ್ಣಮತಿ ಜೀವಿಯಾದ ಗಂಡಸನ್ನು ಸೃಷ್ಟಿಸುವಾಗ, ಅನಪೇಕ್ಷಿತ ಸಲಹೆಗಾರ್ತಿಯಾಗಿ ಆಬಲೆ ಹೆಂಗಸು ಮುಂದೆ ಬರಬಾರದೆಂಬುದೇ ಆತನ ಆಶಯವಿದ್ದಿತು."

ಸಾಯುವುದಕ್ಕೆ ಮೊದಲು

ಇಬ್ಬರು ಕವಿಗಳು ಬಹು ದಿನಾನಂತರ ಮರಳಿ ಒಂದಾದರು. ಒಬ್ಬನು ತುಸು ದಾರ್ಶನಿಕ ಸ್ವಭಾವದವನು. ಆವನು ತನ್ನ ಮಿತ್ರನನ್ನು ಪ್ರಶ್ನಿಸಿದ. ತಮ್ಮ ಈಗಲೇ ನೀನು ಮೃತ್ಯುವನ್ನಪ್ಪ ಬೇಕಾಗಿ ಬಂದರೆ ಏನು ಮಾಡುತ್ತೀಯ?

ಎರಡನೆಯವ ಬಹಳ ಸರಳವಾಗಿಯೇ ಉತ್ತರಿಸಿದ. ನಾಲ್ಕಾರು ಕವಿತೆ, ಒಂದೆರಡು ಸಂಸ್ಮರಣೆ ಮತ್ತೆ ಕೆಲವು ಲೇಖನಗಳನ್ನು ನಿನ್ನ ಕುರಿತಾಗಿ ಬರೆದು ಮುದ್ರಿಸುತ್ತೇನೆ ಇದರಿಂದ ನೀನೂ ಅಮರನಾಗುವಿ, ನಾನೂ ಕೂಡ.

ರಾಜ್ಯದ ರಹಸ್ಯ

ಸರ್ವಾಧಿಕಾರವಿದ್ದ ದೇಶವೊಂದರ ನ್ಯಾಯಾಲಯದಲ್ಲಿ ಒಬ್ಬ ವಿದ್ರೋಹಿಯನ್ನು ಗುಂಡಿಕ್ಕಿ ಕೊಲ್ಲುವ ಆಜ್ಞೆ ವಿಧಿಸಲ್ಪಟ್ಟಿತ್ತು. ಆತನ ಮೇಲೆ ಹೊರಿಸಲ್ಪಟ್ಟ ಆರೋಪಗಳೆಂದರೆ, ದೇಶದ ಸರ್ವೋತ್ತಮನನ್ನು "ಧೂರ್ತಸೂಕರ" ಮತ್ತು 'ಗಾರ್ದಭ ಬುದ್ಧಿ'ಎಂದು ಕರೆದುದಾಗಿತ್ತು. ಮೃತ್ಯುದಂಡನೆಯೊಡನೆ ಸ್ವಲ್ಪ ಜರುಮಾನೆಯನ್ನೂ ಆತನಿಗೆ ಹೇರಲಾಗಿತ್ತು. ಈ ದಂಡನೆಯನ್ನು ವಿಧಿಸುತ್ತ ನ್ಯಾಯಾಧೀಶನು ಹೇಳಿದನು: ನಮ್ಮ ನಾಯಕನನ್ನು ಅವಾಚ್ಯ ಪದಗಳಿಂದ ನಿಂದಿಸಿರುವುದಕ್ಕಾಗಿ ಜರುಮಾನೆ ಮತ್ತು ರಾಜ್ಯದ ಗುಪ್ತ ರಹಸ್ಯವನ್ನು ಪ್ರಕಟಪಡಿಸಿದ ಮಹಾಪರಾಧಕ್ಕಾಗಿ ಮರಣ ಶಿಕ್ಷೆಯನ್ನು ನೀಡಲಾಗಿದೆ.

ಪುರಸ್ಕಾರ

ಹೊಸತಾಗಿ ವಿವಾಹಿತಳಾಗಲಿರುವ ತನ್ನ ಸ್ನೇಹಿತೆಗೆ ಒಬ್ಬಾಕೆ ಉಡುಗೊರೆ ಕಳುಹಿಸಿ ಅದರ ಮೇಲೆ ಬರೆದಳು: ಮದುವೆಯ ರಾತ್ರಿ ಇದನ್ನು ತೊಡು ; ನಿನ್ನ ಪತಿ ಪ್ರಸನ್ನನಾಗುವನು.

ವಧುವು ಉತ್ಸುಕತೆಯಿಂದ ಪ್ಯಾಕೆಟನ್ನು ತೆರೆದಳು: ಅದರೊಳಗೆ ಏನೂ ಇರಲಿಲ್ಲ!

ವಿಚಾರ ಕಿಡಿಗಳು

ಲೇಖಕರು: ಕೆ. ಜಿ. ಶೆಟ್ಟಿ, ಕಡಂದಲೆ.

ಮನೋನಿಗ್ರಹವಿಲ್ಲದವ ಗಡ್ಡ ಎಷ್ಟು ದ್ದ ಬೆಳೆಸಿದರೇನು? ಆತ ನಿಜವಾದ ಸನ್ಯಾಸಿಯಲ್ಲ!—ಸದ್ವಿನಿಯೋಗ ಮಾಡದವನಲ್ಲಿ ದುಡ್ಡು ಎಷ್ಟಿದ್ದರೇನು? ಅವ ನ್ಯಾಯವಾದ ಧನಿಕನಲ್ಲ ಸರ್ವಥಾ!

o o o

ಕೆಸರಿನ ಗುಣ ಆರಿತವರೇ ಮೊಸರಿನ ರುಚಿ ಕಂಡಾರು!— ಮೋಹಿನಿಬಲೆ ಅರಿತವರೇ ನೀತಿಯ ನುಡಿ ಮಾತಾಡುವವರು!

o o o

ಅಂತರ್ಯ ಅಶುದ್ಧ ವಿದ್ದರೆ ತೋರುವಿಕೆಗೆ ಪ್ರಕಟಿಸುವ ತಾತ್ವಿಕ ವಿಚಾರಗಳೂ ಪೊಳ್ಳಾಗಿರುತ್ತವೆ;—ಒಪ್ಪಕೊಟ್ಟ ಗಿಲೀಟು ಬಂಗಾರದಂತೆಯೇ ಹೊಳೆದರೂ ಒರೆದಾಗ ಬೆಟ್ಟೆ ಎಂಬುದೇ ಸತ್ಯವಾಗುತ್ತದೆ!

o o o

ಅತಿ ಆಸಕ್ತಿಯನ್ನುಂಟುಮಾಡುವ ಪ್ರಚಾರ ಮತ್ತು ಅತಿಶಯೋಕ್ತಿಯಿಂದೊಡಗೂಡಿದ ವಿಚಾರ ಇವನ್ನು ಪೂರ್ಣ ನಂಬಬಾರದು!

o o o

ದೇಹ ಸುಖಕ್ಕಿಲ್ಲದ ಮೋಹದಿಂದ ಸುಖವಾಗುವುದು ಹೇಗೆ? ಊಟಕ್ಕಿಲ್ಲದ ಉಪ್ಪಿನ ಕಾಯಿಯನ್ನು ಕಂಡು ಉಂಡ ಹಾಗೆ!

o o o

ದುಡ್ಡಿರುವವರೆಲ್ಲ ದಾನಮಾಡುವರೆಂದೇ ವಿಶ್ವಾಸವಿಟ್ಟು ಕೊಂಡರೆಹೇಗೆ?—ಬಿಳಿಯಾಗಿರುವುದನ್ನೆಲ್ಲ ಹಾಲೆಂದು ನಂಬಿದ ಹಾಗೆ.

o o o

ಮುತ್ತು ಬಿದ್ದರೆ ಹೆಕ್ಕಬಹುದು. ಮಾತು ಬಂದರೆ ಹೆಕ್ಕಲಾಗದು!—ಕಳೆದು ಹೋದ ಹಣ ತಿರುಗಿಸಿಗಲೂಬಹುದು—ಕಳೆದ ಮಾನ ತಿರುಗಿ ಬಾರದು!

o o o

ಜಾಣರ ವಿವಾದದಿಂದ ಜ್ಞಾನಾರ್ಜನೆಗೆ ಬೇಕಾದ ಅಮೂಲ್ಯ ವಿಚಾರಗಳು ಸಿಗಬಹುದು.—ಕೋಣಗಳ ಕಾದಾಟದಿಂದ ನಿಷ್ಪ್ರಯೋಜಕವಾದ ಗೊಂದಲವಷ್ಟೇ ಆದೀತು!

o o o

ಸುಳ್ಳು ಮಾತನ್ನಾಡುವವರಿಗೆ ದರ್ಮನಿಯಮದ ಗೊಡವೆ ಇರುವುದಿಲ್ಲ!—ಕಳ್ಳು ಕುಡಿದು ನಡೆಯುವವರಿಗೆ ದಾರಿತಪ್ಪಿ ಹೋಗಬಾರದೆನ್ನುವ ಪ್ರಜ್ಞೆ ಇರುವುದಿಲ್ಲ!

ಆಲೂರ ವೆಂಕಟರಾಯರು

(ಹಿಂದಿನ ಪುಟದಿಂದ)

ತಾವೊಬ್ಬರೇ ನಡೆಸಿ ಕರ್ನಾಟಕದ ಪತ್ರಿಕೋದ್ಯಮದಲ್ಲಿ ದಾಖಲೆ ಸ್ಥಾಪಿಸಿದರು.

ಸಾಹಿತ್ಯ ಸೇವೆ

ಶ್ರೀ ವೆಂಕಟರಾಯರು ಪತ್ರಿಕೋದ್ಯಮದಲ್ಲಿ ಎಷ್ಟು ಸೇವೆ ಸಲ್ಲಿಸಿರುವರೋ ಅಷ್ಟೇ ಸಾಹಿತ್ಯ ಸೇವೆಯನ್ನೂ ಮಾಡಿರುವರು. ಅವರು ಆಳವಾದ ಗೀತಾಭ್ಯಾಸದ ಫಲವಾಗಿ ಗೀತಾಸಂದೇಶ, ಗೀತಾಸಾರ, ಗೀತಾಪರಿಮಳ ಮುಂತಾದ ಆಧ್ಯಾತ್ಮಿಕ ಗ್ರಂಥಗಳನ್ನು ಬರೆದರು "ಕರ್ನಾಟಕದ ವೀರರತ್ನಗಳು" ಎಂಬುದು ಅವರ ಒಂದು ಚಾರಿತ್ರಿಕ ಕೃತಿ. ಅವರ ಗದ್ಯ ಶೈಲಿ ವೈಶಿಷ್ಟ್ಯಪೂರ್ಣವಾದ ಗಂಡು ಶೈಲಿ ಅವರ ಅವಿರತವಾದ ಸಾಹಿತ್ಯ ಸೇವೆಯ ಪ್ರಾಢಿಮೆಯ ಗೌರವಕ್ಕಾಗಿ ಕರ್ನಾಟಕ ಸಾಹಿತ್ಯ ಪರಿಷತ್ತು ೧೯೩೦ರಲ್ಲಿ ಮೈಸೂರಲ್ಲಿ ಜರಗಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅವರಿಗಿತ್ತು. ಸನ್ಮಾನಿಸಿತು. ಅವರು ಕರ್ನಾಟಕ ಪ್ರಾಂತ, ಕನ್ನಡ ಭಾಷೆಗಳಿಗಾಗಿ ಸಲ್ಲಿಸಿದ ಅಪಾರ ಸೇವೆಯ ಫಲವಾಗಿ ಅವರಿಗೆ "ಕರ್ನಾಟಕ ಕುಲಪುರೋಹಿತ" ಎಂಬ ಬಿರುದು ಬಂತು.

ಕೊನೆಯ ದಿನಗಳು

ಶ್ರೀ ಆಲೂರ ವೆಂಕಟರಾಯರು ತಮ್ಮ ಕೊನೆಯ ವಯಸ್ಸಿನಲ್ಲಿ ಕಾಂಗ್ರೆಸಿನಿಂದ ದೂರವಾಗಿದ್ದುಕೊಂಡು ಧಾರವಾಡದಲ್ಲಿದ್ದು ಆಧ್ಯಾತ್ಮ ಸಾಧಕರಾಗಿ ಮುನಿವೃತ್ತಿಯನ್ನು ಕೈಕೊಂಡು ಆಧ್ಯಾತ್ಮಿಕ ಗ್ರಂಥಗಳನ್ನು ಬರೆದರು. ಇಂದಿನ ಪೀಳಿಗೆಯ ಬರಹಗಾರರು ಶ್ರೀ ಆಲೂರರಿಂದಲೇ ಸ್ಫೂರ್ತಿಹೊಂದಿದ್ದರೆನ್ನಬಹುದು. ಅವರು ನಡೆಸುತ್ತಿದ್ದ "ಜಯ ಕರ್ನಾಟಕ" ಪತ್ರಿಕೆಯ ಮೂಲಕ ಎಷ್ಟೋ ತರುಣ ಲೇಖಕರನ್ನು ಬೆಳಕಿಗೆ ತಂದಿರುವವರು. ಶ್ರೀ ಆಲೂರ ವೆಂಕಟರಾಯರು ಕರ್ನಾಟಕ ಕುಲಪುರೋಹಿತರಾಗಿ ಕನ್ನಡ ನಾಡು ನುಡಿಗಳ ಏಳಿಗೆಗಾಗಿ ತ್ರಿಕರಣಪೂರ್ವಕ ದುಡಿದ ಮಹಾತಪಸ್ವಿ. ಅವರಿಂದು ತಮ್ಮ ಇಳಿವಯಸ್ಸಿನಲ್ಲಿ ಕನ್ನಡಿಗರನ್ನು ತೊರೆದು ಹೋದರೂ ಅವರ ಉದ್ಗ್ರಂಥಗಳು ಕನ್ನಡಿಗರಿಗೆ ದಾರಿ ಬೆಳಕಾಗಿವೆ. ಅವರ ಹರಕೆ ಕನ್ನಡಿಗರ ರಕ್ಷಾಕವಚವಾಗಿದೆ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ವರ್ಕ್ಸ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ

ಕರ್ನಾಟಕ ಒಪ್ಟಿಕಲ್ ಕಂ.,

[ಶ್ರೀ ಎನ್. ಬಿ. ಶೆಟ್ಟಿ, B. A., I. S. L. C. O., (Lond.) ಅವರ ನೇತೃತ್ವದಿಂದ]

11ಬಿ, ಗಿರ್‌ಗಾಂವ್ ಸ್ಟ್ರೀಟ್, ಮುಂಬೈ-1

ಇದರ ಉದ್ಘಾಟನಾ ಸಮಾರಂಭವು

ತಾ. 22—3—64ನೇ ರವಿವಾರ ಬೆಳಿಗ್ಗೆ ಗಂಟೆ 10-15ಕ್ಕೆ ಸರಿಯಾಗಿ

ಮುಂಬಯಿಯ ಮೇಯರ್ ಮಾನ್ಯ ಇ. ಎ. ಬಂದೂಕ್‌ವಾಲಾ

ಅವರ ದಿವ್ಯ ಹಸ್ತದಿಂದ ನೆರವೇರಲಿರುವುದು.

● **ಸರ್ವರಿಗೂ ಸುಸ್ವಾಗತ** ●

ಕವಲು ದಾರಿ—ಕೆಂಪು ದೀಪ

ಜನ್ಮ ಜನ್ಮದ ಶಾಪ?

—ಸುದಾಸ

ಕರ್ನಾಟಕ ಕುಲಪುರೋಹಿತರು ಒಬ್ಬರಿದ್ದರು.

ಅವರು ಇನ್ನು ಇಲ್ಲ.

೦ ೦ ೦

ನಾವು ಅಭಿಮಾನ ಶೂನ್ಯರಾಗಬಾರದಿತ್ತು. ಈ ಘಟನೆ ಹೀಗೆ ಘಟಿಸಬಾರದಿತ್ತು.

೦ ೦ ೦

ನಾವು ಗಂಡೆದೆಯ ಗಂಡರಾಗಲಿಲ್ಲ. ಕುಲಪುರೋಹಿತರ ಆಶಯವನ್ನು ನಾವು ಪಾಲಿಸಲಿಲ್ಲ

ನಮ್ಮ ನಾಡಿನ ಹೆಸರನ್ನು ಕರ್ನಾಟಕವೆಂದು ನಾವು ಕರೆಯಲಿಲ್ಲ.

ಕರ್ನಾಟಕದ ಪಿತಾಮಹನನ್ನು ನಾವು ಇದೀಗ ಕಳಿಸಿಕೊಟ್ಟೆವು. ಕರ್ನಾಟಕ ಕುಲಪುರೋಹಿತರನ್ನು ನಾವು ಬರಿಗೈಯಿಂದ ಕಳಿಸಿಕೊಟ್ಟೆವು.

ಇದೊಂದು ಜೀವಂತ ಸಾಕ್ಷಿ; ನಮ್ಮ ಅಭಿಮಾನದ ಬಲಿಗೊಟ್ಟೆವೆಂಬುದಕ್ಕೆ ಇದೊಂದು ಜೀವಂತಸಾಕ್ಷಿ.

ಹೀಗಾಗ ಬಾರದಿತ್ತು. ನಿಜ

ಆದರೆ ಹೀಗಾಗಿದೆ. ಉಳಿದೆಡೆಗಳಲ್ಲಿ ಆಗಲು ಸಾಧ್ಯವಿಲ್ಲದ ಘಟನೆಗಳು ನಮ್ಮಲ್ಲಿ ಆಗಿವೆ. ಆ ಘಟನೆಗಳಿಗೆ ಕಳಸವಾಗಲು, ಇದೀಗ ಈ ಘಟನೆಗಳು ಘಟಿಸಿದೆ.

ಏಕಾಯಿತು ಹೀಗೆ? ಏಕಾಗುತ್ತಿದೆ ...ದೆ ಹೀಗೆ?

ಇದು ಜನ್ಮ ಜನ್ಮದ ಶಾಪವಿರಬಹುದು. ಇರಲೇಬೇಕೆಂದು ಈಗ ಅನಿಸುತ್ತಿದೆ.

ಅವರು ಕರ್ನಾಟಕ ರಾಜ್ಯಕ್ಕಾಗಿ ಶ್ರಮಿಸಿದರು. ಕನ್ನಡಿಗರು ಒಂದಾಗಬೇಕೆಂದು ಹಂಬಲಿಸಿ ದುಡಿದರು.

ಕನ್ನಡಕ್ಕಾಗಿ ಅವರು ಸಲ್ಲಿಸಿದ ಸೇವೆ ಅಪಾರ. ಹಿಂದೆ ಈ ಬಗೆಯ ಸೇವೆಯು ಕನ್ನಡಮ್ಮನಿಗೆ ಸಂದುದಿಲ್ಲ. ಇನ್ನು ಸಲ್ಲುವಂತಿಲ್ಲ.

ಆದರೂ ಅವರ ಸೇವೆಯು ಕನ್ನಡಮ್ಮನಿಗೆ ತೃಪ್ತಿಯಿತ್ತಿಲ್ಲವೇನೋ?

ಈಗ ಹಾಗನಿಸುತ್ತದೆ.

ಕನ್ನಡಮ್ಮನು ಅವರ ಸೇವೆಯಿಂದ ಸಂತೃಪ್ತಳಾಗಿರಬಹುದು. ಆದರೆ ಒಲಿದು ಬಾರದವಳಾದಳೇನೋ?

ಈಗ ನಿಜಕ್ಕೂ ಹಾಗನಿಸುತ್ತಿದೆ.

ಅವಳು ಪ್ರಸನ್ನಳಾಗುತ್ತಿದ್ದರೆ ಅಳಿವಿನ ಮಕ್ಕಳಿಗೇಕೆ ಜನ್ಮಕೊಡುತ್ತಿದ್ದಳು?

ಅವರ ಆರಾಧನೆಗೆ ಇಂತಹ ಫಲವೇ ಸಿಗುತಿತ್ತು?

ಇದು ಸಂದೇಹದಮಾತು; ಆದರೂ ಇತ್ತು ಅನಿವಾರ್ಯವಾಗಿ ನಾವು ಇದನ್ನೇ ಒಪ್ಪಿಕೊಳ್ಳಬೇಕಾಗಿದೆ.

ನಮ್ಮಲ್ಲಿ ಎದೆಗಾರಿಕೆ ಇಲ್ಲ ವೆಂಬಲೇ... ಮಾತನ್ನು ನಾವು ಒಪ್ಪಿಕೊಳ್ಳಬೇಕಾಗಿದೆ.

ನಮ್ಮ ... ... ಕರ್ನಾಟಕ

ಎಂಬ ಹೆಸರಿನಿಂದ ಕರೆಯದಿದ್ದರೆ ಬೇರಿನ್ನಾರು ಕರೆಯಬೇಕು?

ಈ ಸವಾಲು ನಮ್ಮ ಮುಂದೆ ಬಂದು ನಿಂತಾಗ ನಾವು ಉತ್ತರಿಸಲಿಲ್ಲ.

ಅವರ ಕೆಚ್ಚಿನ ನುಡಿ ಕೇಳಿಯೇ ನಾವು ಅಂಜಿದೆವು; ಅಂಜಿ ಮೌನವ್ರತವನ್ನು ಚೆನ್ನಾಗಿ ಪಾಲಿಸಿದೆವು,

ಕನ್ನಡಿಗರು ಒಂದಾಗಿ ಬದುಕಬೇಕೆಂಬ ಅವರ ಆಸೆಯೂ ಕೈಗೂಡಲಿಲ್ಲ,

ಅವರ ಆಸೆ—ಅವರ ತಪಸ್ಸು—ಅವರ ಸಾಧನೆ—ಎಲ್ಲವೂ ಬರಿದಾಗಿ ಹೋಯ್ತು.

ಹೇಗೆ ಬೆಲೆ ಕೊಡಬೇಕೆಂದು ನಾವು ತಿಳಿದುಕೊಳ್ಳಲಿಲ್ಲ. ಗೌರವಿಸುವಲ್ಲಿ ಕನ್ನಡಿಗರು ಎಲ್ಲರಿಗಿಂತ ಮುಂದುವರಿದಿದ್ದಾರೆ ಎಂಬುದಕ್ಕೆ ಇದೊಂದು ಅಪವಾದ ಮಾತ್ರವೇ ಅಲ್ಲ; ಕನ್ನಡಿಗರು ಹೇಗೆ ಗೌರವಿಸುತ್ತಾರೆ ಎಂಬುದಕ್ಕೆ ಇನ್ನೊಂದು ಉತ್ತಮ ಉದಾಹರಣೆಕೂಡಾ.

ನಿಜ— ಇದೊಂದು ಅಪವಾದ. ಈ ಅಪವಾದ ತೊಳೆದುಹೋಗುವಂತಹುದಲ್ಲ. ಇದಕ್ಕೆ ಅಳಿವಿಲ್ಲ, ಈ ಬುತ್ತಿಯನ್ನು ಕಟ್ಟಿಕೊಂಡೇ ನಮ್ಮಪೀಳಿಗೆಗಳೂ ನಾವು ಉಣಿಸಬೇಕೇನೊ?

೦ ೦ ೦

ಪುರೋಹಿತರನ್ನು ಬರಿಗೈಯಿಂದ ಕಳಿಸಿಕೊಡಬಾರದು. ಕುಲಪುರೋಹಿತರ ಇಚ್ಛೆಯೇನಿದ್ದರೂ, ಅದನ್ನು ನೆರವೇರಿಸುವುದು ಧರ್ಮನಿಯಮ.

ಅವರನ್ನು ನಾವು ಕರ್ನಾಟಕ ಕುಲಪುರೋಹಿತರೆಂಬ ಹೇಳಿಯೇ ಕರೆದೆವು.

ಕನ್ನಡ ಕುಲಪುರೋಹಿತರೆಂದು ಹೆಮ್ಮೆಯಿಂದ ಅವರತ್ತ ನೋಡಿದೆವು. ಆ ಬೆಳ್ಳಗಿನ ಗಡ್ಡವನ್ನು ಕಂಡು ಖುಷಿ ಪಡುವವರಿಂದೂ ಅಂದೆವು .

ನಿಮ್ಮ ಆಜ್ಞೆಯೇನಿದೆ?

—ಎಂದು ನಾವು ಕೇಳಲಿಲ್ಲ. ಕೇಳಿದರೂ ಅವರ ಆಜ್ಞೆಯನ್ನು ನಡೆಸಿ ಕೊಡಲಿಲ್ಲ

ಕನ್ನಡದ ಸುದಾಮ ಕನ್ನಡದ ಮನೆಮನೆಗೆ ತಿರುಗಿ ನಿರಾಶನಾದ. ಕೃಷ್ಣನ ಮನೆಯೆಲ್ಲಿದೆ ಎಂಬುದನ್ನು ಯಾರೂ ತೋರಿಸಿ ಕೊಡಲಿಲ್ಲ.

ಬಹುಶಃ ಕನ್ನಡ ನಾಡಿನಲ್ಲಿ ಕೃಷ್ಣನ ಮನೆಯೇ ಇರಲಿಲ್ಲವೇನೊ?

ಅಂತೆಯೇ ನಿರಾಶೆಯ ಮಡಿಲಲ್ಲಿ ಕರ್ನಾಟಕವೆಂಬ ಮಂತ್ರವನ್ನು ಪಠಿಸುತ್ತ ಅತ ಕೊನೆಯುಸಿರೆಳೆದ.

೦ ೦ ೦

ಹೆಚ್ಚಿಗೆ ಏನು ಸಾಧ್ಯ? ಎರಡು ಹನಿ ಕಣ್ಣೀರಿಗಿಂತ ಹೆಚ್ಚಿಗೆ ಅರ್ಪಿಸಲು ಏನು ಸಾಧ್ಯ?

ಕನ್ನಡ ಕುಲಪುರೋಹಿತರಲ್ಲಿ ಕೊನೆಯದಾಗಿ ಚಿಕ್ಕ ಅರಿಕೆ ಇದೆ.

ಕನ್ನಡ ಕುಲಪಿತಾಮಹರೇ—

—ನೀವು ಕನ್ನಡಕ್ಕಾಗಿ ದುಡಿದಿದ್ದೀರಿ. ಕನ್ನಡಿಗರು ಒಂದುಗೂಡಲು ಅಪರಿಮಿತ ಸೇವೆ ಸಲ್ಲಿಸಿದ್ದೀರಿ. ಇದಕ್ಕಾಗಿಯೇ ದಾರಿದ್ರ್ಯ ದೀಕ್ಷೆ ತೊಟ್ಟಿದ್ದೀರಿ.

ನಿಮ್ಮ ಹಗಲಿರುಳಿನ ಹಂಬಲವಾಗಿದ್ದ ರಾಜ್ಯದ ಹೆಸರು ಕರ್ನಾಟಕವಾಗಿಲ್ಲ. ಕನ್ನಡಿಗರು ಇನ್ನೂ ಒಂದಾಗಿಲ್ಲ; ಎಂದೆಂದೂ ಒಂದಾಗುವಂತಿಲ್ಲ.

ಕನ್ನಡಿಗರನ್ನು ಬಡಿದೆಬ್ಬಿಸುವ ನಿಮ್ಮ ಶ್ರಮ—ನಿಮ್ಮ ಸಾಧನೆ— ನಿಮ್ಮ ತಪಸ್ಸು—ವಿಫಲವಾಯಿತು

ನೀವು ಮತ್ತೊಮ್ಮೆ ಈ ನಾಡಿನಲ್ಲಿ ಹುಟ್ಟಬೇಡಿ. ಮತ್ತೊಮ್ಮೆ ನಿಮ್ಮಂಥ ಭಾಗ್ಯ ಶಿಲ್ಪಿಯ ಜನ್ಮ ಈ ನಾಡಿನಲ್ಲಾಗದಿರಲಿ.

ಮತ್ತೆ ಕನ್ನಡಿಗರು ತಮ್ಮ ಅಭಿಮಾನ ಶೂನ್ಯತೆಯ ಕಹಳೆ ಊದುವುದು ಬೇಡ.

ಇದಯೇ, ಇವೇ ನಿಮ್ಮಲ್ಲಿ ಬೇಡಿಕೊಳ್ಳುವ ಕೋರಿಕೆ.

೦ ೦ ೦

ಅವರನ್ನು ನಾವು ಬರಿಗೈಯಿಂದ ಕಳಿಸಿಕೊಟ್ಟೆವು. ಪೂಜ್ಯ ಆಲೂರ ವೆಂಕಟರಾಯರನ್ನು ಕಳೆದ ತಿಂಗಳ ತಾರೀಖು ಇಪ್ಪತ್ತೈದರಂದು ಬರಿಗೈಯಿಂದ ಕಳಿಸಿಕೊಟ್ಟೆವು.

೦ ೦ ೦

ಕರ್ನಾಟಕ ಕುಲಪುರೋಹಿತರು ಒಬ್ಬರಿದ್ದರು.

ಅವರು ಇನ್ನು ಇಲ್ಲ.

ಸಿಂಡಿಕೇಟ್ ಬೇಂಕ್ ಲಿಮಿಟೆಡ್, ಕುಲಶೇಕರ, ಮಂಗಳೂರು-5.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಅಸಲು ಮತ್ತು ಅದರ ಮೇಲಣ ಬಡ್ಡಿಯನ್ನು ವಸೂಲು ಕೊಡದೆ ಇದ್ದುದರಿಂದ, ಸದ್ರಿಯವರ ಸಾಲವನ್ನು ಬರಮಾಡಿ ಕೊಳ್ಳುವರೆ ರಿಜಿಸ್ತ್ರಿ ನೋಟೀಸು ಕೊಟ್ಟಲ್ಲಿ ನೋಟೀಸು ಪಡಕೊಂಡು ಪಾವತಿ ಮಾಡದೆ ಇರುವುದರಿಂದಲೂ ಅಥವಾ ನೋಟೀಸು ಇನ್‌ಕಾರ್ ಮಾಡಿ ವಾಪಾಸು ಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು, ಸದ್ರಿ ಸಾಲದ ಅಸಲು ವ ಇನ್ನಿತರ ಖರ್ಚುಗಳನ್ನು ಪಾವತಿ ಮಾಡಿ ಚಿನ್ನಾಭರಣಗಳನ್ನು ತಾ. 26-3-1964ರ ಒಳಗೆ ಬಿಡಿಸಿಕೊಳ್ಳದೆ ಇದ್ದಲ್ಲಿ ಸದ್ರಿ ಈಡಿಟ್ಟ ನಗಗಳನ್ನು ತಾ. 28-3-1964ನೇ ಶನಿವಾರ ಅಪರಾಹ್ನ ಗಂಟೆ 1ಕ್ಕೆ ಸರಿಯಾಗಿ ಯಾ ನಮಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಸಿಂಡಿಕೇಟಿನ ಮಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನಲ್ಲಿ ಹುಟ್ಟಿ ಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆ ಆದಲ್ಲಿ ಸಂಬಂಧಪಟ್ಟವರ ದೇಹ ಜವಾಬ್ದಾರಿಯಿಂದ ಬೇಂಕಿನ ಐವೇಜನ್ನು ವಸೂಲು ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸಲಾಗಿಯದೆ.

ಸಾಲದ ನಂಬ್ರ	ಸಾಲ ಪಡೆದ ತಾರೀಕು	ಹೆಸರು ಮತ್ತು ವಿಳಾಸ	ಮೊಬಲಗು ರೂಪಾಯಿ
97/724	15.4.'61	ಸಂಜೀವ, ಈಶ್ವರ ಮ್ಯೊಲಿಯವರ ಮಗ, ನಡುಮನೆ, ದೇವರ ಪಾಲು, ಕುಶ್ಪು ಪೋಸ್ಟ್.	30/-
154/61	28 10.'61	ಜೆಲ್ಲಿ ಪಿಂಟೊ, ಫ್ರಾನ್ಸಿಸ್ ಪಿಂಟೊರವರ ಹೆಂಡತಿ, ಮಲದಿ ಗುಡ್ಡೆ, ಕಾವೂರು ಪೋಸ್ಟ್.	25/-
292/61	4-12-'61	ನಾರಾಯಣ, ಕೃಷ್ಣ ಬೆಲ್ಚಡಾರ ಮಗ, ಆಗರ್ಜೆಬಳಿ, ಕುಲ್‌ಶೇಕರ ಪೋಸ್ಟ್.	75/-
484/62	4-4-'62	ಮೂರಪ್ಪ ಪೂಜಾರಿ, ಬೆರ್ಮಣ್ಣ ಪೂಜಾರಿಯವರ ಮಗ, ಕಲ್ಪಣೆ, ಕುಲ್‌ಶೇಕರ ಪೋಸ್ಟ್.	40/-
879/62	11-6.'62	ಜೋಕಿಮ್ ಕೋನ್‌ಸೆಸೊ, ಜೋನ್ ಕೋನ್. ಸಿಸ್ಸೊರವರ ಮಗ, ಕೋಟಿಮುರ, ಕುಲ್‌ಶೇಕರ ಪೋಸ್ಟ್.	60/-
1237/62	13.8.'62	ಕನ್ನೂರು ಹುಸೆನ ಬ್ಯಾರಿ, ಪಕೀರ ಬ್ಯಾರಿಯವರ ಮಗ, ಗಾಣದ ಕೊಟ್ಟ, ಕನ್ನೂರು ಪೋಸ್ಟ್	15/-
1249/62	16.8.'62	ಜೋಸೆಫ್ ಮೊನೀಸ್, ಬಸ್ತ್ಯಾಮ್ ಮೊನೀಸರ ಮಗ, ನಂತೂರು ಕ್ರೋಸ್, ಮಂಗಳೂರು-3.	50/-

Office of the Syndicate Bank Ltd.,
Kulshekar, Mangalore-5.
Dated 9—3—1964.

Edwin D'Souza,
Manager.

ಬಂದಿಹೆ ನೀನು ನನ್ನೆಡೆಗೆ

ಬಾಳಿನ ಬಳ್ಳಿಯ ಬಿರುಮುಗುಳಾಗಿ
ಹೃದಯದ ಒಲವಿನ ಕಿರುತೊರೆಯಾಗಿ
ಆಶಾಲತೆಯಾ ಚಿಗುರೆಲೆಯಾಗಿ,
ಬಂದಿಹೆ ನೀನು ನನ್ನೆಡೆಗೆ. ‖ ೧ ‖

ಹುಣ್ಣಿಮೆ ತಿಂಗಳ ಕಾಂತಿಯ ಬೀರಿ
ಕಾಮನ ಬಿಲ್ಲಿನ ಬಣ್ಣವ ತೋರಿ
ಅರಳಿದ ಹೂವಿನ ಕಂಪನು ಬೀರಿ
ಬಂದಿಹೆ ನೀನು ನನ್ನೆಡೆಗೆ. ‖ ೨ ‖

ಗಾನದಿ ಕೋಗಿಲ ಕಂಠವನೊಲಿದು
ಕಡೆಗಣ್ಣೋಟದಿ ಮಿಂಚನು ಸೆಳೆದು
ಉನ್ನತ ರಂಗದಿ ನರ್ತಿಸಲೆಂದು
ಬಂದಿಹೆ ನೀನು ನನ್ನೆಡೆಗೆ. ‖ ೩ ‖

ನಗೆಯಲಿ ಪ್ರೇಮಾಹ್ವಾನವ ನೀಡಿ
ಪ್ರೇಮದ ರಸಪೌತಣವನು ನೀಡಿ
ಅಧರದಿ ಸುಧೆಯಾ ಹನಿಯನು ಕೂಡಿ
ಬಂದಿಹೆ ನೀನು ನನ್ನೆಡೆಗೆ ‖ ೪ ‖

ಎ. ಅಮೀರ್ ಹಸನ್, ಬಿ.ಎಸ್‌ಸಿ.
ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ತ್ರಿಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

"ಏನು ಇಲ್ಲ.......ಧೂಳು!"

(೯ನೇ ಪುಟದಿಂದ)

ಡ್ತಾರಂತೆ' ಅಂದೆ. ಅಪ್ಪ, 'ಹಾಗೆಲ್ಲಾ ಕೇಳ್ಬಾರ್ದು' ಎಂದ್ಬಿಟ್ರು ಮಾಮಿ!

"ರಾಜ ಬಹದ್ದೂರರನ್ನು ಯಾವತ್ತು ಸ್ಕೂಲ್ನಲ್ಲಿ ಕೂಡೀಸ್ತೀರಾ ಬೇಬಿ?"

"ರಾಜ ಬಹುದ್ದೂರ್ ಸ್ಕೂಲ್ಗೆ ಹೊರ್ಟ್ಹೋದ್ರು ಡಾಕ್ಟರ್ ಮಾಮನ ಮನೆಗೆ ಮಲಕ್ಕೊಳ್ಳಕ್ಕೆ ಹೋಗೋದು ಬೇಡ, ಮಳೆ ಬಂದ್ರೂನೂ ಕೂಡಾ ಆದ್ರೆ.

"ಆದ್ರೆ ಏನು ಬೇಬಿ?"

"ಅಪಂಗೆ ತಿಂಗ್ಳಿಗೆ ಇನ್ನೂರು ರೂಪಾಯಿ ಬರತ್ತೇ ಮಾಮಿ. ನಾನು ಮೂರ್ನೇ ಕ್ಲಾಸಿನಲ್ಲಿ ಇದ್ದಾಗ ಅಪ್ಪ ರಾಜ ಬಹದ್ದೂರನ್ನ ಮಾಡೋಕೆ ಶುರುಮಾಡಿದ್ರು ಮಾಮಿ. ಆಗ ಅಪ್ಪ ಯಾವಾಗ್ಲೂ ಏನೂ ಮಾಡ್ತಿಲ್ಲ. ಕಾಸೇ ಇರ್ತಿರ್ಲಿಲ್ಲ. ಆಗ ಮನೆಯ ಯಜಮಾನಿ 'ಹಲ್ಲುಬ್ಬಿ ಅಜ್ಜಿ' ಇಲ್ವಾ?"

"ಹೂಂ........"

ಅವ್ಳು ಬಂದೂ ಬಂದೂ ಗಲಾಟೆ ಮಾಡ್ತಾ ಇರ್ತಿದ್ಳು ಅವ್ಳು ಅಜ್ಜಿ ಅಲ್ಲ ನಾನು ಮಾತ್ರ ಅಜ್ಜೀಂತ ಕೂಗ್ತಿನೀ ಅಷ್ಟೆ! ಅವ್ಳು ನಮ್ಮಪ್ಪನ್ನ ತಾತ ಅಂತಾಳೆ ಮಾಮಿ!...."

ಮಾಗೆ ಹೇಳ ವಾಗಲಂತೂ ಬೇಬಿಗೆ ಅಳು ಉಕ್ಕಿ ಬರುತ್ತಿತ್ತು;

"ಅವಳು ಹಾಳಾದ್ಳು; ನೀನು ಸುಮ್ನಿರಮ್ಮ!"

"ನಮ್ಮಪ್ಪ ಏನೂ ತಾತ ಅಲ್ಲ. ನಮ್ಮ ಕ್ಲಾಸಿನ ರಾಜಿಗೆ ಒಬ್ಬ ತಾತ ಇದಾರೆ. ತಲೆ ಬೋಳಾಗಿ ಬೆನ್ನು ಬಗ್ಗಿ...ನಮ್ಮಪ್ಪ ಹಾಗೆಲ್ಲಾ ಇಲ್ವೇ ಇಲ್ಲ. ಜೋರಾಗಿದ್ದಾರೆ. ನೀವೇ ನೋಡ್ತೀರಲ್ಲ!"

ಮಗು ಮಕ್ತಾ ಮುಂದುವರಿಸಿಳು.

"ನಮ್ಮಪ್ಪ ಶುಂಬಾ ಗಟ್ಟಿಗ್ರು ಮಾಮಿ. ತುಂಬಾ...ತುಂಬಾ! ನಮ್ಮ ಸ್ಕೂಲ್ನಲ್ಲಿ ಅಷ್ಟೊಂದು ಜನ ಹುಡುಗರು ಇದ್ದಾರಲ್ಲ? ಅವ್ರಲ್ಲಿ ಯಾರ ಅಪ್ಪನೂ ನಮ್ಮಪ್ಪನ ಹಾಗೆ ಜೇಡಿ ಮಣ್ಣಲ್ಲಿ "ಫಾಸ್ಟರ್ ಪ್ಯಾರೀಸ್"ನಲ್ಲಿ ನಿಜ್ ನಿಜ್ವಾದ್ ಬೊಂಬೆಗಳ್ನ ಮಾಡ್ತಾರಾ? ಮಾಡೋಕೇ ಬರುತ್ತಾ ಅವ್ರಿಗೆಲ್ಲಾ?. ಎಲ್ರೂ ಬರೀ ಆಫೀಸಿಗೆ ಮಾತ್ರ ಹೋಗ್ತಾರೆ. ಇಲ್ದಿದ್ರೇ ಅಂಗಡಿ ಇಟ್ಟಿರ್ತಾರೆ. ಇಲ್ದಿದ್ರೆ ಇನ್ನೇನಾದ್ರೂ ಮಾಡ್ತಾ ಇದ್ದಾರೆ. ನಿಮ್ಮ ಮಾಮಾನೂ ಆಫೀಸಿಗೆ ತಾನೇ ಮಾಮಿ ಹೋಗೋದು?"

"ಹೌದು ಚಿನ್ನ...."

"ಮಾಮೀ...ನಮ್ಮಪ್ಪಂಗೆ ನನ್ನ ಕಂಡ್ರೆ ತುಂಬಾ ಇಷ್ಟ..."

ಹಿಮಾಲಯದಂಚನ್ನು ಮುಟ್ಟಿದಾಗಾಗುವ ಅತೀವ ಆನಂದ, ಹೆಮ್ಮೆ ಆ ಪುಟ್ಟ ಮಗುವಿನ ಕಣ್ಣುಗಳಿಂದುಬ್ಬುತ್ತಿದ್ದ ಹೊಳಪಿನಿಂದ ಅರಿವಾಗುತ್ತಿತ್ತು.

"ಸುಂದ್ರೂ ಚಿನ್ನ ಅಂತ ನನ್ನ ಅಪ್ಪ ಕೂಗ್ತಾರೆ. ಆ ಬೊಂಬೆಯಿದ್ದಾಳಲ್ಲ ಸುಂದರಮ್ಮ? ಅವಳ ಹೆಸರೇ ನನಗೂ ಅಂತೆ ಅವ್ಳು.... ತುಂಬಾ ಒಳ್ಳೆಯವಳಂತೆ. ಅಪ್ಪಂಜೊತೆ ಕಾಲೇಜ್ನನಲ್ಲಿ ಒಂದೇ ಕ್ಲಾಸಿನಲ್ಲಿ ಓದಿದ್ಲಂತೆ. ಆ ಮೇಲೆ ಅಪ್ಪ, ಬಂದ್ಮು ಜೈಲಿಗೆ ಹೋಗ್ಬಿಟ್ರಂತೆ...."

ಅವಳೇಕೋ 'ಹುಂ' ಎಂದೂ ಸಹಾ ಹೇಳುತ್ತಿರಲಿಲ್ಲ.

"ಜೈಲು ಅಂದ್ರೇ, ಕದ್ದುಬಿಟ್ರು ಅಂಟ್ಕೋಬೇಡಿ ಮಾಮಿ! ಅಲ್ಲ! ಮೊದಲು ನಮ್ಮೂರಿನಲ್ಲಿ ಬರೀ ಬಿಳೀ ಜನರೇ ಇದ್ರಂತೆ. ಅವರನ್ನೆಲ್ಲಾ ಓಡಿಸೋದಕ್ಕೆ ಅಪ್ಪ, ಅವ್ರೇ ಜೆ, ಮಿಕ್ಕೋರೆಲ್ಲಾ ದಿನಾಗ್ಲೂ ಆಫೀಸು ಆಫೀಸಿಗೆಲ್ಲಾ ಹೋಗಿ ಬಾವುಟ ಹಿಡ್ಕೊಂಡು ಕಿರುಚ್ತಾ ಇದ್ರಂತೆ. ಅಪ್ಪನ್ನ ಆಗ ಹಿಡ್ದು ಜೈಲಿಗೆ ಹಾಕಿದ್ರಂತೆ. ಆಗ ಆ ಸುಂದ್ರಮ್ಮ ಇಲ್ವಾ? ಅವ್ಳು ಯಾರ್ಗೂ ಗೊತ್ತಾಗ್ದೇ ಬಂದು ಅಪ್ಪಂಗೆ ಹಣ್ಣು, ಊಟ ಎಲ್ಲಾ ಕೊಡ್ತಾ ಇದ್ಲಂತೆ. ಅವಳು ಒಂದು ಸಮಯ ಹಾಗೆ ಮಾಡ್ದೇ ಇದ್ದಿದ್ರೇ ಅಪ್ಪ, ಪಾಪ, ಸತ್ತೇ ಹೋಗ್ತಾ ಇದ್ರಂತೆ ನಮ್ಮಪ್ಪನ ಮನೇಗೆ ಬಂದು, ಅಮ್ಮನಾಗಿ ಇರ್ತೀನಿ ಅದ್ಲಂತೆ ಸುಂದರಮ್ಮ. ಆ ಮೇಲೊಂದು ದಿವ್ಸ ಅವ್ರಪ್ಪ ಬಂದು ಅವಳಿಗೆ ಚೆನ್ನಾಗಿ ಹೊಡೆದು ಕರ್ಕೊಂಡು ಹೊರ್ಟ್ಹೋದ್ರಂತೆ. ಪಾಪ, ಅವ್ಳು ಸತ್ತೋದ್ಲು ಅಂತ ಅಪ್ಪ ಹೇಳಿದ್ರೂ ಮಾಮಿ, ನಿನ್ನೆ"

"ಧೂಳು ಬಿತ್ತು!" ಎಂದು ಹೇಳದೆಯೇ ಆಕೆ ಎದ್ದು ಹೊರಟುಹೋದಳು

"ಏನು ಮಾಮಿ?" ಎನ್ನುತ್ತಲೇ ಬೇಬಿ ಎದ್ದು ನಿಂತು, ಪಿಳಪಿಳನೇ ಕಣ್ಣು ಬಿಟ್ಟುಕೊಂಡು ನೋಡಿದಳು.

"ಏನೂ ಇಲ್ಲ ಬೇಬಿ ಕಣ್ಣು ತುಂಬಾ ನೋಯ್ತಾ ಇದೆ. ತಣ್ಣೀರು ಬಿಟ್ಕೊಂಡು ತೊಳಕೊಂಡೆ. ಅಷ್ಟೇ!"

—ಎನ್ನುತ್ತಾ ಅವಳು ಹಿಂತಿರುಗಿದಳು.

"ಕಣ್ಣುಜ್ಜಿದ್ರೇ ಇನ್ನೂ ಕಣ್ಣು ನೋವು ಮಾಮಿ. ನಾನು ಎರಡ್ನೇ ಕ್ಲಾಸಲ್ಲಿ ಇದ್ದಾಗ್ಲೇ ನಂಗೆ ಬಂತು. ಡಾಕ್ಟರ್ ಮಾಮ ಉರಿಯೋ ಹಂಗಿರೋ ಔಷಧಿ ಹಾಕ್ತಾ ಇದ್ರು. ನಮ್ಮಮ್ಮಂಗೂ ಬಂದಿತ್ತು. ಅಮ್ಮ ಡಾಕ್ಟರ್ ಮಾಮನ ಮನೇಗೆ ಬರೋದಿಲ್ಲ ಅಂದ್ಬಿಟ್ಲು. ನಮ್ಮಮ್ಮ ಎಲ್ಲೂ ಹೊರಕ್ಕೆ ಹೋಗೋದೇ ಇಲ್ಲ ಮಾಮಿ ಮೊದಲು ಪಾರ್ಕನಲ್ಲಿ ಗಾಂಧಿ ತಾತನ್ನ ಇಡೋವಾಗ್ಲೂ ಅಷ್ಟೆ. ಬರೀ ನಾವು ಮಾತ್ರ ಹೋದ್ವಿ. ಐಸ್‌ಕ್ರೀಂ ಎಲ್ಲಾ ತಿಂದ್ವಿ. ಅಪ್ಪಂಗವತ್ತು ಜರತಾರೀ ಇರೋ ಶಲ್ಯ ಎಲ್ಲಾ ಹೊದ್ಸಿದ್ರು ಮಾಮಿ. ಅವತ್ತೂ ಅಮ್ಮ ಬರ್ಲಿಲ್ಲ ಯಾಕೆಗೊತ್ತಾ ಮಾಮಿ?"

"ಯಾಕೆ?"

"ನಮ್ಮಮ್ಮಂಗೆ ಕಿವಿ ಕೇಳೊಲ್ಲ ಮಾಮಿ. ಆದ್ರೆ ತುಂಬಾ ಚೆನ್ನಾ....ಗಿ ಇದ್ದಾರೆ ಮಾಮಿ. ಆ ಹಲ್ಲುಬ್ಬಜ್ಜಿ ಇಲ್ವಾ? ಅವ್ಳು ನಮ್ಮಮ್ಮನ್ನ ಮಂಕು. ಮೂಳಿ ಅಂತೆಲ್ಲಾ ಹೇಳ್ತಾಳೆ. ನಮ್ಮಮ್ಮ ಏನೂ ಮಂಕಲ್ಲ. ಅಮ್ಮ ಸಾರು ಮಾಡಿದ್ರೇ ಹೇಗೆ ಘಮ್ಮಂತ ವಾಸ್ನೇ ಬರತ್ತೇ ಗೊತ್ತಾ? ಮಾಮಿ. ಇಲ್ನೋಡಿ ನನ್ನಕೈ ವಾಸ್ನೆ ನೋಡಿ!"

"ಘಮ್ಮಂತಿದೆ ಬೇಬಿ!"

"ಈ ತರಹದ ದೊಡ್ಡ ದೊಡ್ಡ ಮನೇಲಿರೋಕೆ ನಮ್ಹತ್ರ ದುಡ್ಡಿಲ್ಲ ಮಾಮಿ. ನಾವೆಲ್ಲಾ ತುಂಬಾ ಬಡವ್ರು!"

"ಹೋಗೇಸ್ಟ್ರಹುಚ್ಚಿ ನೀವ್ಯಾವತ್ತು ಬಡವ್ರಾಗೊಲ್ಲಾ!"

"ನೀವು ಸುಳ್ಳು ಹೇಳ್ತೀರಾ ಮಾಮಿ ನಾವು ಬಡವ್ರಾಗ್ದೇ ಇದ್ದಿದ್ರೇ ಆ ಹಲ್ಲುಬ್ಬಜ್ಜಿ ಬಂದು ನಾವು ಕೊಡಕ್ಕೆ ಕಾಲಿ ಕೊಡ್ಲಿಲ್ಲ ಅಂತ ಕಿರುಚ್ತಾ ಇದ್ಳಾ? ಅಪ್ಪ ಯಾವಾಗ್ಲೂ ಬೊಂಬೇನೇ ಮಾಡ್ತಿರ್ಲಿಲ್ಲ. ಅಮ್ಮ ನಗದೇನೇ ಇರ್ತಿದ್ಳು ಡಾಕ್ಟರ್ ಮಾಮ ಬೇರೇ ಬಂದು ಜಗಳ ಆಡ್ತಾ ಇದ್ರು..."

"ಯಾಕೆ?"

"ಬೊಂಬೆ ಏನಾದ್ರೂ ಮಾಡು ಅಂತಿದ್ರು ಅಪ್ಪ ಮಾತಾಡ್ದೇ ಸುಮ್ನೇ ಇದ್ಬಿಟ್ಟಿದ್ರು!"

"ಯಾಕೆ?"

"ಒಳ್ಳೆಯವರನ್ನ ಇಲ್ದಿದ್ರೇ ದೇವರನ್ನ ಮಾಡಿದ್ರೇ ತಾನೇ ಮಾಮಿ, ಚೆನ್ನಾಗಿರೋದು?"

"ನೀನೇ ಹೇಳು? ನಿಮ್ಮಪ್ಪ ಹಾಗೇನೇ ಮಾಡ್ತಾರೇ!"

"ಹಾಗೇಂತ ಅಪ್ಪ ಹೇಳ್ತಾರೆ. ಆದ್ರೂ.... ನಮ್ಮಪ್ಪ ಏನು ಮಾಡಿದ್ರೂ ಚೆನ್ನಾ...ಗಿರತ್ತೆ ಮುಂಚೆ ಒಂದು ಹಸು ಮಾಡಿದ್ರೂ ಮಾಮಿ....ಅದು ನಿಜ್ವಾದ್ ಹಸು ಹಂಗೇ ಇತ್ತು. ನಂಗೆ ಅದನ್ನ ಇಟ್ಕೊಂಡು ಆಡ್ಕೊಳ್ಳಕ್ಕೆ ಕೊಟ್ರು ಅದನ್ನೇ ಡಾಕ್ಟರ್ ಮಾಮ ಬಂದು ತೊಗೊಂಡು ಹೊರ್ಟ್ಹೋದ್ರು ಇನ್ನೊಂದು ಮಾಡ್ಕೊಡೀ ಅಂದ್ರೇ, ಅಪ್ಪ ಮಾಡ್ಕೊಡೊಲ್ಲಾ ಅಂದ್ಬಿಟ್ರು... ಯಾವಾಗ್ಲೂ ಮಾಡಿದ್ರೇ, ಅದು ಚೆನ್ನಾಗಿ ಬರೊಲ್ವಂತೆ ಹೌದಾ ಮಾಮಿ?"

ಅವಳು ಉತ್ತರಿಸಲಿಲ್ಲ.

ಬೇಬಿಯೂ ಸಹಾ ಯೋಚನೆಯ ಸುಳಿಯಲ್ಲಿ ಸಿಲುಕಿದಂತಿತ್ತು.

ಬೀದಿ ನಲ್ಲಿಯಲ್ಲಿ ನೀರು ಬಂದಾಗಲೇ ಬೇಬಿಗೆ ಕೆಲಸ ಪ್ರಾರಂಭ ಅದುವರೆಗೂ ಆ ಕುಟುಂಬದ ಬೆಳಕಾಗಿ ಮನೆಯವರಲೊಬ್ಬಳಾಗಿ, ಪ್ರೀತಿ ವಿಶ್ವಾಸಗಳ ಬಳ್ಳಿಯನ್ನು ಎಲ್ಲೆಲ್ಲೂ ಹಬ್ಬಿಸಿಬಿಡುತ್ತಿದ್ದಳು.

० ० ०

ಒಂದು ದಿವಸ ಓಡಿ ಬಂದಳವಳು.

"ಮಾಮಿ, ರಾಜಬಹುದ್ದೂರ್‌ನನ್ನು ಸ್ಕೂಲ್ನಲ್ಲಿ ಇಡೋವಾಗ್ಲೂ ನಮ್ಮಪ್ಪಂಗೆ ಜರೀಶಲ್ಯ ಹಾಕ್ತಾರಂತೆ. ಅದ್ರಲ್ಲಿ ನಂಗೂ, ವೈಧಿಲೀಗೂ. ಲಂಗ ಹೊಲಿಸ್ತೀನೀಂತ ಅಮ್ಮ ಹೇಳಿದ್ಲು...." ಎಂದು ಕುಣಿಯುತ್ತಾ, ಹೇಳಿದಳು ಬೇಬಿ.

"ಹಾಗಾ?"

"ಹೌದು ಮಾಮಿ. ಸ್ವಲ್ಪ ಹೊತ್ತಿಗ್ಮುಂಚೆ, ಡಾಕ್ಟರ್ ಮಾಮ ಯಾರ್ಯಾರನ್ನೋ ಕಾರ್ನಲ್ಲಿ ಕರ್ಕೊಂಡು ಬಂದ್ರಲ್ಲಾ? ನೀವು ನೋಡ್ಲಿಲ್ವಾ?

"ಉಂ....?"

"ನೀವು ನಮ್ಮನೇಗೆ ಬಂದು ನೋಡಿ ಮಾಮಿ....ಬರೊಲ್ವಾ"?

"ಬರ್ತೀನಿ ಬೇಬಿ!"

० ० ०

"ಬನ್ನಿ. ಪ್ರತಿ ದಿವಸಾನೂ ನಿಮ್ಮ ಮನೇಲಿ ತಿಂಡಿತೀರ್ಥ ಮುಗಿಸ್ಕೊಂಡು ಬಂದು ನಿಮ್ಮ ವಿಷಯ ಹೇಳ್ತಿರ್ತಾಳೆ. ರಜೆಯಲ್ಲಿ ಬಿಸಿಲ್ನಲ್ಲಿ ಅಲೆದೇ ಇರ್ತಾಳಲ್ಲ ಸದ್ಯ!" ಬೇಬಿಯ ತಾಯಿ ಹೇಳಿದರು. ನಗುತ್ತಿದ್ದ ತುಟಿಗಳು. ಕಳಂಕವಿಲ್ಲದೇ ನಿರ್ಮಲವಾಗಿದ್ದ ನೋಟ.

ಒಳಹೊಕ್ಕೊಡನೇ ಎದುರಿಗೊಂದು ಪುಟ್ಟ ಹಜಾರ್ ಅದಕ್ಕಂಟಿದಂತೆಯೇ ಒಂದು ಕೊಠಡಿ. ಅಡುಗೇ ಮನೆ. ಭಾವನೆ ಎತ್ತರದಲ್ಲಿದ್ದುದರಿಂದಲೇನೋ ಬೆಳಕು ಸಮೃದ್ಧಿಯಾಗಿಯೇ ಬರುತ್ತಿತ್ತು. ಕೊಠಡಿಯಲ್ಲಿ ಗಂಭೀರವಾಗಿ ನಿಂತಿದ್ದ ಒಂದು ಶಿಲ್ಪ; ತನ್ನನ್ನು ನಿರ್ಮಿಸಿರುವವನ ನೈಪುಣ್ಯತೆಯನ್ನು ಸಾರಿ ತೋರುತ್ತಿತ್ತು. ಅದೇ ಕೊಠಡಿಯಲ್ಲಿದ್ದ ಮೂಲೆಯಲ್ಲಿ ಫಳಫಳನೆ ಹೊಳೆಯುತ್ತಿದ್ದ ಚಂದದ ವಿಗ್ರಹವೊಂದು ಅವಳ ಗಮನವನ್ನು ಸೆಳೆಯದಿರಲಿಲ್ಲ.

"ಹತ್ತನೇ ತಾರೀಕು ಇದು ಅಚ್ಚನ ಮನೆಗೆ ಹೋಗತ್ತೆ. ತುಂಬಾ ಚೆನ್ನಾಗಿ ಬಂದಿದೆ ಅಂತ ಎಲ್ರೂ ಹೇಳ್ತಿದಾರೆ. ಜರೀಶಲ್ಯ ಹೊದ್ದಿಸಿ ಇವ್ರಿಗೆ ಸನ್ಮಾನ ಮಾಡ್ತಾರಂತೆ. ಇದಕ್ಕೂ ಮೊದಲೊಂದು ಸರ್ತಿನೂ ಇವ್ರಿಗೆ ಈ ಸನ್ಮಾನ ಆಗಿತ್ತು.... ಅದೆಲ್ಲಾ ಎಲ್ಲಿ...ಆಲೆ ಏಳುವಷ್ಟೇ ಸುಲಭವಾಗಿ ಭೂಮಿಗಿಳಿಯುವಂತೆ....ಎಲ್ಲಾ ಹೋಯ್ತು!"

ದುಃಖದ ಕತೆಯನ್ನು ಹೇಳುವಾಗಲು ಆಕೆಯ ಮುಖ ಮಂದಹಾಸವನ್ನು ಸೂಸುತ್ತಿತ್ತು.

ಮರೆನಾಚಲೂ, ಬಚ್ಚಿಡಲೂ ಅರಿಯದ ಕಲಾವಿದನಿಗೆ ತಕ್ಕ ಹೆಂಡತಿ.

"ಮಾಮಿ ... ಇಗೋ ನೋಡಿ?.... ನಿಮ್ಮ ಹಾಗೇ ಇರೋ ಬೊಂಬೆ!"—ಬೇಬಿ ಆ ಬೊಂಬೆಯನ್ನು ತೋರಿಸುತ್ತಿದ್ದಂತೆಯೇ, ತನ್ನ ಪತಿ ಆ ಬೊಂಬೆಯನ್ನು ಮಾಡಿದ ಕತೆಯನ್ನು ಹೇಳಿದರು ಅವಳ ತಾಯಿ.

ಹೊಸ ಸುದ್ದಿ ಯಾವುದೂ ಇರಲಿಲ್ಲ.

ಅಲೆ ಎದ್ದು ಮರೆಯಿತು; ಅಂತೆಯೇ ಕೆಳಗಿಳಿಯಿತು. ಸನ್ಮಾನ, ಜರಿಗೆ ವಸ್ತ್ರಗಳು, ಕೀರ್ತಿಶಿಖರದ ತುದಿಗೆ ಕೊಂಡೊಯ್ದಿದ್ದುವು. ಗಂಜಿಗಾಗಿ ಪೇಚಾಡುವ ಗೋಳಿನ ಕತೆ ಅದನ್ನು ಹಿಂಬಾಲಿಸಿತ್ತು. ಕಲೆಯ ಸತ್ಯ ಜೀವನದ ಆದರ್ಶಕ್ಕೂ ಮತ್ತೆ ಹಣದ ಪ್ರಪಂಚದ ಅಸತ್ಯದ ಬಾಳಿಗೂ ಘರ್ಷಣೆ. ಆಕೆ ಅಂದು ಎಲೆಅಡಿಕೆಯನ್ನು ಕೈಯಲ್ಲಿ ಹೊಸಕುತ್ತಾ ಮನೆಗೆ ಬಂದಾಗ, ಮುಂಬಾಗಿಲಿನಲ್ಲಿ ಕಾರು ಬಂದು ನಿಂತಿತ್ತು.

ಪತಿದೇವ ಮಹಡಿಯತ್ತ ಹೋಗುತ್ತಿದ್ದುದನ್ನು ಗಮನಿಸಿದರೂ, ಕನ್ನಡಿಯ ಮುಂದೆಯೇ ನಿಂತಿದ್ದಳು ಅವಳು.

"ಹೌದು; ಆ ಸುಂದರಮ್ಮ ಅಲ್ಲ ಅವಳು. ಅಂದು ಜೀವಂತ ಚಿನ್ನೆಯಾಗಿ ಶೋಭಿಸುತ್ತಿದ್ದ ಸುಂದರಮ್ಮ ಅಂದೇ ಇಲ್ಲವಾಗಿ ಬಿಟ್ಟಳು ... ಇವಳು ಅವಳಲ್ಲ...."

ಬಟ್ಟೆ ಬದಲಿಸಿಕೊಂಡು ಅವರು ಬಂದರು.

"ಏನು ಸುಂದರಾ, ಕಣ್ಣಲ್ಲಿ?..ಒದ್ದೆಯಾಗಿದೆ?...ತಿರುಗಿ ಆ ಹುಡುಗೀನ ಜ್ಞಾಪಿಸಿಕೊಂಡ್ಯಾ?"

"ಏನೂ ಇಲ್ಲ....ಧೂಳು!"

ಅಡುಗೆಯ ಮನೆಯತ್ತ ಬಿರ್ರನೇ ನಡೆದಳು ಅವಳು.

—— ——

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್, ನವಯುಗ.

ಊರ ಕಮ್ಮಾರ

ಪತ್ರ ಶಾಖಾಭರಿತ ವೃಕ್ಷ ಛಾಯೆ – ಯೆಡೆಳಾತ
ನಿಂದಿರುವ ನೋಡ ಮನೆ ಊರ ಕಮ್ಮಾರ||
ಬಲುಬಲಿದ ದಿಟ್ಟನವ; ಕಬ್ಬುನದ ದಟ್ಟಿಯವ;
ಒರಟು ಮುಖ ನೆರಿಗೆ ಕೂದಲು ಮುಡಿಮೊಗಾರ ||೧||
ನಂಬಿಕೆಯು ಬೆವರಿಂದ ತುಂಬು ಹಣೆ ತೊಯ್ದಿರಲು!
ಶಕ್ತನಾಗಿರುವಷ್ಟು ಗಳಿಸ ದುಡಿದು ||
'ಹಂಗಾರದೆನಗಿಲ್ಲ' ಎಂದಾತ ಮೊಗವೆತ್ತಿ
ಜಗವ ದಿಟ್ಟಿಸುತಿಹನು ಧೈರ್ಯ ಕಳೆದು ||೨||
ಎತ್ತಿ ಸುತ್ತಿಗೆ ಬಡಿವ, ನಿತ್ತ ದಿನವಿಡ ದುಡಿವ,
ನಿತ್ಯ ತಿದಿಯೂದಿ ತಾ ಬಡಿಯುತಿರುವ,
ಸದ್ದದುವೆ ಊರ ಗಂಟೆಯು ತೆರದಿ ಕೇಳುತಿದೆ
ಕತ್ತಲಲಿ ಕೊತವಾಲ ಹೊಸೆಯುತಿರುವ ||೩||
ಪಾಠಶಾಲೆಯನಗಲಿ ಬರುವ ಚಿಣ್ಣರು ಬರಿದೆ
ನೋಟಕರಿ ರಂಜಿಸುವ ಕುಲುಮೆ ಕಂಡು ||
ಆಟಕಾಗಿಯೆ ಸಿಡಿವ ಕಿಡಿಗಳನು ಹಿಡಿಯೆ ಮನ
ಮಾಡುವರು; ಮಿಂಚಿನಂದದಿ; ಸವಿಯನುಂಡು ||೪||
ನಿತ್ಯರವಿ ವಾರದಲಿ ದೇವನಾಲಯಕಾಗಿ
ಸಾರಿ ಸುತರೊಡನೆ ಬಿಳಿಕಲ್ಲ ಕುಳಿತು ||
ಭಕ್ತಿ ಭಾವದಿ ಗುರುವು ಬೋಧಿಸಿದ ಬೋಧೆಗಳ
ಪ್ರಾರ್ಥನೆಯನಾಲಿಪನು ಲೋಕ ಮರೆತು ! ||೫||
ಐಕ್ಯ ಪ್ರಾರ್ಥನೆಯಲ್ಲಿ ಮಗಳವನ ಹಾಡುತಿರೆ!
ಮಡಿದ ಮಡದಿಯು ನೆನಪು ಬರಲು ಮನಕೆ !
ಮಿಡಿವ ಕಂಬನಿಯನ್ನು ಒರಟು ಗೈಯಲ್ಲಿ ಒರಸಿ
ಸಂತವಿಡುತಿಹ ತಾನೆ ತನ್ನ ಮನಕೆ! ||೬||
ದುಃಖ, ಸಂತಸ; ದುಡಿಮೆ ಎಂಬುದಡೆ ಜೀವನವು
ದಿನವು ಸಾಗುತಲಿಹುದು ಮುಂದೆ ಮುಂದೆ ||
ಅಂದು ತೊಡಗಿದ ದುಡಿಮೆ ಇಂದೆ ಕೊನೆಗೊಳ್ಳುವುದು
ಆ ದಿನವು ಕಳೆಯುಬಹುದಾ ದುಡಿಮೆಯಿಂದೆ|| ||೭||

ಪುರಂದರ ವಿಠಲನ ವಿಚಾರಗಳು

(೨ನೇ ಪುಟದಿಂದ)

ನಾಮ, ಉಗಾಭೋಗ ದಂಡಕಗಳನ್ನು ರಚಿಸಿದರು. ಅದುಕಾರಣ, ಹಂದಾಸ ಪರಂಪರೆಯನ್ನು ಸ್ತುತಿಸುವಲ್ಲಿ ಮೊದಲಾಗಿ ನಮಃ ಶ್ರೀಪಾದರಾಜಾಯ' ಎನ್ನುವರು. ಈ ಪದ್ಧತಿಯನ್ನು ಅನೂಚಾನವಾಗಿ ಸಾಗಿಸಲು, ಅದಕ್ಕೆ ಲೌಕಿಕವಾಗಿ ಮನ್ನಣೆ ಒದಗಲು, ರಾಜಗುರುಗಳಾದ ಶ್ರೀ ವ್ಯಾಸರಾಯರು ಕಾರಣಪುರುಷರಾದರು. ಸಂಸ್ಕೃತದಲ್ಲಿ ಭಕ್ತಿ-ಜ್ಞಾನ-ತತ್ತ್ವ ಕೃತಿಗಳನ್ನು ರಚಿಸಿ ಪ್ರಚುರಿಸುವವರಿಗೆ 'ವ್ಯಾಸಕೂಟ'ದವರೆಂದೂ, ಕನ್ನಡದಲ್ಲಿ ಭಕ್ತಿಗೀತೆಗಳನ್ನು ಕವಯಿಸಿ ಪ್ರಚುರಿಸುವವರಿಗೆ 'ದಾಸಕೂಟ'ವೆಂದೂ ಹೇಳುವರು. ಈ ಹೆಸರು ಈ ಕಾಲದಲ್ಲಿ ಆರಂಭವಾಗಿರಬೇಕು. ಇತದನಂತರ ಶ್ರೀ ವಾದಿರಾಜರು ಇಬ್ಬಗೆಯಲ್ಲೂ— ಸಂಸ್ಕೃತ ಕನ್ನಡಗಳಲ್ಲೂ—ಕೃತಿಗಳನ್ನು ರಚಿಸಿದರು. ಅದು ಕಾರಣ, ಜನತೆಗೆ ಪ್ರಾದೇಶಿಕ ಭಾಷೆಯ ಕೃತಿಗಳ ಮೇಲೆ ಅಭಿಮಾನಾದರಗಳು ಊರ್ಜಿತವಾದುವೆನ್ನಲು ಸಂತೋಷವಾಗುತ್ತದೆ. ಶ್ರೀ ವ್ಯಾಸರಾಯರು 'ಕೃಷ್ಣ'ನೆಂಬ ಮುದ್ರಿಕೆಯಿಂದಲೂ, ಶ್ರೀ ವಾದಿರಾಜರು 'ಹಯವದನ' ಎಂಬ ಮುದ್ರಿಕೆಯಿಂದಲೂ ಹಲವಾರು ಕೀರ್ತನಾದಿಗಳನ್ನು ರಚಿಸಿದ್ದರು, ಇದೇ ಕಾಲಾಂತರದಲ್ಲಿ 'ಪುರಂದರ ವಿಠಲ'ನೆಂಬುದಾಗಿಯೂ 'ಕಾಗಿನೆಲೆಯಾದಿ ಕೇಶವ (ಕನಕದಾಸ)'ನೆಂಬುದಾಗಿಯೂ ಹಲವಾರು ಕೀರ್ತನೆಗಳನ್ನು ದಾಸದ್ವಯರು ರಚಿಸಿದ್ದಾರೆ. ಈ ಹರಿದಾಸರ ಕೀರ್ತನೆಗಳಲ್ಲಿ 'ವಿಠಲ'ನೆಂದು ಮುಪ್ಪರಿಪೇಕೆ, ಆ ವಿಠಲನಾರ್? ಎಂಬ ಪ್ರಶ್ನೆಗಳು ಉಂಟಾಗುತ್ತವೆ. ಈ ಬಗ್ಗೆ ತುಸ ವಿವರಿಸುವುದು ಸಾಧುವಾಗಿದೆ—ವಿಠಲ, ವಿಠ್ಠಲ, ವಿಟ್ಠಲನೆಂದರೆ ಪಂಡರಪುರದ ಪಾಂಡುರಂಗ ವಿಠಲನೆಂದು ತಿಳಿಯುತ್ತದೆ. ವಿಠಲನು ಪಂಡರಪುರದಲ್ಲಿದ್ದರೂ ಕನ್ನಡ ದೇವತೆಯೆಂದು ಹೇಳಲಾಗಿದೆ: "ಕಾನಡಾ ಹೋ ವಿಠಲಾ ಕರ್ನಾಟಕೂ, ತ್ಯಾನೇ ಮಜಲಾ ವಿಲಾವೇಧ." (ಜ್ಞಾನೇಶ್ವರ, 761), "ಕಾಶಿಯೇ ಕನೋಜಾ ದ್ವಾರಕೇ ಗುಜರೂ ಕಾನಡಾ ವಿಠಲು ಪಂಢರಿಯೆ" (ನಾಮದೇವ, 538). "ಕಾನಡಾ ವಿಠಲಾವೋ ಉಭಾಭವರೀಲೇರೀ...." (ನಾಮದೇವ). "ಪಂಢರೀರಾಯನನ ಭಂಗವಿಠಲನಲಂಪಿ ನೋಳಗಿಮುಗಿಪ್ಪಸಿದ್ಧಿಯಂ" (ಚಾಮರಸ)? "ಪಾಂಡುರಂಗಕ್ಷೇತ್ರ ಮಹಾತ್ಮ್ಯೆ" ಎಂಬ ಕೃತಿಯು ಬೇರೆ ಇದೆ!

ಕನ್ನಡದ ಕೃತಿಗಳಲ್ಲೊಂದಾದ 'ಕವಿರಾಜಮಾರ್ಗ'ದಷ್ಟು ಪ್ರಾಚೀನ ಕಾಲದಲ್ಲಿ ಕನ್ನಡವು ಗೋದಾ ನದಿಯ ತನಕ ಹರಡಿತ್ತೆಂದು ಹೇಳಲು ಹೇರಳ ಆಧಾರಗಳಿವೆ (ಕವಿರಾಜಮಾರ್ಗವಿವೇಕ). ಆ ಪ್ರದೇಶಾಂತರಗಳು ರಾಜಕೀಯಾದಿ ಕಾರಣಾಂತರಗಳಿಂದ ಕನ್ನಡದಿಂದ ದೂರವಾಗಿವೆ; ಕಾಸರಗೋಡು ಮೊದಲಾದುವುಗಳಂತೆ ಪಂಡರಪುರವು ಇಂದು ಕನ್ನಡಕ್ಕೊಳಪಟ್ಟಿಲ್ಲವೆಂಬುದು ಖೇದಾತ್ಮಕವಾದ ವಿಚಾರವಾಗಿದೆ ಕನ್ನಡದಲ್ಲಿ ವಿಠಲ ಮೂರ್ತಿಗಳು ಹಲವಿವೆ, ಬಲ್ಲಾಳ ಹದಿನಾರನೆಯ ಶತಕದಿಂದ ಈಚೆಗೆ ಹುಟ್ಟಿದುವು. ಹೊಸಕೋಟೆ ಮುಳಬಾಗಿಲು. ಬಹೋ ಒಲಿತಿರುಪತಿ ಮತ್ತು ವಿಜಯನಗರಗಳಲ್ಲಿ ವಿಠಲ ಮೂರ್ತಿಗಳಿವೆ (ಪ್ರಬೋಧ 1952 ಮತ್ತು ನವಜೀವಿತೆ ನೋಡಿರಿ)' ಶ್ರೀ ಮಧ್ವಾಚಾರ್ಯರು (ಇಸ್ವಿ 1205-78) ತಮ್ಮ ಶಿಷ್ಯರಿಗೆ ಮಠಗಳ ಪೂಜೆಗೆ ಒದಗಿಸಿದ ಮೂಲದೇವರುಗಳಲ್ಲಿ ವಿಠಲ ಮೂರ್ತಿಗಳಿವೆ. ಶ್ರೀ ಪಾದರಾಯರು 'ರಂಗವಿಠಲ'ನೆಂದುದರಲ್ಲಿ ಇರುವ ವಿಠಲನು ಪಾಂಡುರಂಗ—ಪಂಡರಪುರದ—ವಿಠಲನೆಂಬೇ ನಿರ್ಧರಿಸಬಹುದಾಗಿದೆ (ಆ ಭಂಗವಿಠಲನೆಂದರೇನೆಂಬುದು 'ಸಾಹಿತ್ಯದ ಹಿನ್ನೆಲೆಯಲ್ಲಿ', 'ಸೂನಾ ಓರಿಯಂಟಲಿಸ್ಟ್' ಪತ್ರಿಕೆಯಲ್ಲಿ ಬರೆದಿದೆ). ವಿಜಯನಗರದಲ್ಲಿ ವಿಠಲ ಗುಡಿಯು ಹದಿನಾರನೆಯ ಶತಕದಲ್ಲಿ ನಿರ್ಮಿಸಿದುದು; ಇದು ಕೃಷ್ಣದೇವರಾಯನಿಂದ ಇಸ್ವಿ 1513ರಲ್ಲಿ ತೊಡಗಿ, ಅವನ ರಾಣಿಯರು ಮತ್ತು ಅಚ್ಯುತರಾಯ, ಸದಾಶಿವರಾಯರಿಂದ ಮುಂದುವರಿದು ಕಟ್ಟಲ್ಪಟ್ಟು ಇಸ್ವಿ 1565ರಲ್ಲಿ ಪೂರೈಸಲ್ಪಟ್ಟಿರಬೇಕೆಂದು ಆರ್ಕಿಯೋಲಾಜಿಕಲ್ ರಿಪೋರ್ಟಿನಲ್ಲಿದೆ (1922—3). 'ವಿಜಯನಗರ ಷಟ್‌ಶತಮಾನದ ಸ್ಮಾರಕ ಗ್ರಂಥ'ದಲ್ಲಿ ಈ ವಿಜಯ ನಗರದ ವಿಠಲನನ್ನು ಕುರಿತು ವಿವರಿಸಲಾಗಿದೆ. ಹರಿದಾಸರಲ್ಲಿ ಕೆಲವರು 'ವಿಠಲ'ನೆಂಬುದನ್ನು ಬಳಸಿಕೊಂಡಿದ್ದಾರೆ. ಕೆಲವರು ಸ್ವೇಷ್ಟ ದೇವರ ಹೆಸರನ್ನು ಬಳಸಿದ್ದಾರೆ. ಮರಾಠೀ ಸಂತರೂ ಕಂತಮ್ಮ ಹೆಸರನ್ನು ಬಳಸಿದುದನ್ನು ಇಲ್ಲಿ ಹೋಲಿಸಬಹುದು. ಹರಿದಾಸರಿಗೆ ಹೆಚ್ಚಾಗಿ 'ವಿಠಲ' ದೇವನೇ ಪರಮಾರಾಧ್ಯನೆಂದು, ಪಂಡರಪುರವೇ ಹರಿದಾಸರ ಕೇಂದ್ರವೆಂದು ಹೇಳಬೇಕಾಗುತ್ತದೆ.

— —

ನಿನ್ನ ಜೀವನವೆಮಗೆ, ಆದರ್ಶವೆಲೆ! ಕರ್ಮ—
ಜೀವಿ! ನಿನಗಿದೋ ಋಣಿಯು ಬಾರಿ ಬಾರಿ!
ಅವ್ಯಕ್ತವಾಗಿಂದು ನೀನೀವ ಬೋಧನೆಗೆ
ಕರ್ಮ ಧರ್ಮವನಿಂತು ಸಾರಿ ಸಾರಿ!||
ಜೀವನವೆ ತಾನೊಂದು ಕುಲುಮೆ ಯೆದುರೊಳು ನಮ್ಮ
ಭವಿತವ್ಯ ವೆಂಬುದದು ಬೇಯ ಬೇಕು !
ಬೆಂದಾಗ ಅಧಿಕ ಶ್ರಮದಿಂದ ಬುದ್ಧಿಯು ಬಲದಿ
ನಿತ್ಯನವ ರೂಪವನ್ನೀಯ ಬೇಕು ! ||

[H. W. Long fellowನ "The village black smith" ಎಂಬ ಕವನದ ಅನುವಾದ ಈ ಕವಿತೆಯು Govt college Mangaloreನ ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದ ಸ್ಪರ್ಧೆಯಲ್ಲಿ ಬಹುಮಾನ ಪಡೆಯಿತು.]

— ಯಂ. ಭಾಸ್ಕರ ಭಂಡಾರಿ. ಮಂಜಿಜೈಲು.

ನಿಮ್ಮಷ್ಟಕ್ಕೆ! ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-4-0 (1-25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦.

REGD. No. B. G. 176
LICENCE No. 31
Licensed to Post without Prepayment

ವಾರ್ತೆ - ಪ್ರತಿವಾರ್ತೆ

ಪಂಜಾಬದ ಮುಖ್ಯ ಪ್ರತಾಪ ಸಿಂಹ ಕೈರೋನರ ಆರೋಪವಿಚಾರಣಾವರದಿಸಲ್ಲಿಸಲು ಹೆಚ್ಚಿನ ಕಾಲಾವಕಾಶ ಬೇಕೆಂದು ಕೇಳಿಕೊಳ್ಳಲಾಗಿದೆ.

—ಆರೋಪಗಳ ಪರಿಮಾಣ ಮತ್ತು ಪರಿಣಾಮಗಳೂ ಹೆಚ್ಚಬಹುದು. ಆಗಬಹುದು.

○ ○ ○

ಭದ್ರತಾ ಮಂಡಳದ ಸಭೆಯು ಕಾಶ್ಮೀರ ಚರ್ಚೆಯನ್ನು ನಡೆಸಲು ಮತ್ತೆ ಸಭೆಸೇರುವುದು.

—ಮತ್ತೆ ಚರ್ವಿತ ಚರ್ವಣ! ರುಚಿಯೇ ಇಲ್ಲ; ತೀರಾ ಸಪ್ಪೆ—ಎಂದು ಯಾರೂ ಅನ್ನುವುದಿಲ್ಲ; ಇದೇ ವಿಸ್ಮಯ! ಹಾಡಿದ ಹಾಡಿನಲ್ಲೇ ಏನು ರುಚಿಯೋ?

○ ○ ○

ಕಾಶ್ಮೀರದ ಹೊಸ ಪ್ರಧಾನಿ ಸಾದಿಕ್ ಆಲಿಯವರು ಮಾಜಿ ಪ್ರಧಾನಿ ಬಕ್ಷಿ ಪಂಗಡದ ಸದಸ್ಯರನ್ನು ಮಂತ್ರಿ ಮಂಡಳಿಯಲ್ಲಿ ಸೇರಿಸುವರು.

—ಪಕ್ಷದ ಐಕ್ಯಮತ್ಯದ ಗಾಳಿ ಕಾಶ್ಮೀರಕ್ಕೂ ಬೀಸಿದುದರಿಂದ ಅದು ಭಾರತದ ಅವಿಭಾಜ್ಯ ಅಂಗವೆಂಬುದು ಮತ್ತೊಮ್ಮೆ ಸಿದ್ಧವಾಯಿತು.

○ ○ ○

ಶರಾವತಿಯ ಅಕ್ರಮಗಳ ಬಗೆಗೆ ಹೆಚ್ಚಿನ ವಿಚಾರಣೆ ಅಗತ್ಯವಿಲ್ಲವೆಂದು ಕೇಂದ್ರ ನೀರಾವರಿ ಮಂತ್ರಿ ಡಾ| ಕೆ. ಎಲ್. ರಾವ್ ಘೋಷಿಸಿದ್ದಾರೆ.

—ವಿಚಾರಣೆ ನಡೆದರೇನು, ನಡೆಯದಿದ್ದರೇನು? ಬಿದ್ದ ನೋಟಿನ ಕಟ್ಟು ಬಳಿದುಕೊಂಡು ಹೋಯಿತು. ಇನ್ನು ಮುಂದಕ್ಕಾದರೂ....

○ ○ ○

ಕರ್ನಾಟಕದ ೧೯೬೪-೬೫ನೆ ವರ್ಷದ ಮುಂಗಡಪತ್ರ ಕೊರತೆಯದೆಂದು ಮಾಡಿದ ಟೀಕೆಯನ್ನು ಖಂಡಿಸಿ ಶ್ರೀ ಜತ್ತಿಯವರು ಲೆಖ್ಖಲೆಕ್ಕದಲ್ಲಿ ಉಳಿತಾಯವಿದೆಯೆಂದು ಎತ್ತಿ ತೋರಿಸಿದರು.

—ಬಂಡವಾಳ ವೆಚ್ಚದಲ್ಲಿ ಕೊರತೆ ಎಂದವರೇ ಒಪ್ಪಿಕೊಂಡರು.

○ ○ ○

ಉತ್ತಮ ದರ್ಜೆಯ ಪುಸ್ತಕಗಳನ್ನು ಒದಗಿಸುವುದಕ್ಕಾಗಿ ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಿಸುವಲ್ಲಿ ರಾಜ್ಯ ಸರಕಾರವು ತುಂಬ ಕಾಳಜಿ ವಹಿಸುತ್ತಿದೆ.

—ಗೊತ್ತೇ ಇದೆಯಲ್ಲಾ, ಎಸ್. ಟಿ. ಬಸ್ಸು! ಗ್ಯಾಸು ಬಸ್ಸು ಮಾಡಿದಷ್ಟಾದರೂ ಮುಂದುವರಿಯುತ್ತದೆ. ಇದು ಕೆರೆಯ ನೀರು.

○ ○ ○

ಭಾಷಾ ವಿವಾದದ ಪರಿಣಾಮವಾಗಿ ಗೋವಾ ವಿಧಾನ ಸಭೆಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಸಭಾತ್ಯಾಗ ನಡೆಯಿತು.

—ಭಾಷೆಯೇ ಇಲ್ಲದ ಆಡಳಿತ ಬೇಕೆನಿಸುತ್ತಿರಬೇಕು ಅವರ ಸದಸ್ಯರಿಗೆ!

○ ○ ○

ಚಂಡೀಘರದಲ್ಲಿ ಮೂರು ಘಟ್ಟಗಳ ಆಕಾಶ ಬಾಣವನ್ನು ಹಾರಿಸುವಲ್ಲಿ ಭಾರತ ಯಶಸ್ಸು ಪಡೆಯಿತು.

—ಕೈರೋನರ ಪುಗ್ಗೆಯೂ ಹಾರಲು

ಅಭಿಪ್ರಾಯ ಮಂಡನೆ

ವಿಟ್ಲದಿಂದ ಉಲ್ಲಾಳಕ್ಕೆ ಅತಿ ನೇರವಾದ ಮತ್ತು ಸಮೀಪವಾದ ದಾರಿ ಯೆಂದರೆ ವಿಟ್ಲ–ಸಾಲೆತ್ತೂರು-ಉಲ್ಲಾಳ ರಸ್ತೆ. ಇದರ ಉದ್ದ ಕೇವಲ ೨೭ ಮೈಲಿಗಳು. ಈ ರಸ್ತೆಯಲ್ಲಿ ಅವಶ್ಯಕವಾದ ಎಲ್ಲ ಕಲ್ವರ್ಟುಗಳೂ ರಚಿತವಾಗಿ ಬಹು ದಿನಗಳಾದುವು. ಕೊಡಂಗಾಯಿ, ಕಾಡುಮಠ ಮತ್ತು ಕಟ್ಟೆದಿಲ್ಲ ಸಂಕಗಳು ಪೂರ್ಣಗೊಳ್ಳದೆ ಇರುವುದರಿಂದ ಪ್ರಯಾಣಕ್ಕೆ ತೊಂದರೆಯಾಗಿದೆ. ಇವುಗಳಿಗೆ ಮಂಜೂರಾತಿ ದೊರೆತಿದ್ದು ಟೆಂಡರ್ ಮಾತ್ರ ಆಗಿಲ್ಲ. ರಸ್ತೆಯ ರಿಪೇರಿಗೆಂದು ಪಿ. ಡಬ್ಲ್ಯು. ಡಿ. ಯವರು ತಂದು ಹಾಕಿದ ಜಲ್ಲಿಯ ರಾಶಿ ಧೂಳು ತಿನ್ನುತ್ತ ಕುಳಿತಿದೆ ಮಾತ್ರವಲ್ಲ, ಅರ್ಧ ರಸ್ತೆಯನ್ನೂ ಆಕ್ರಮಿಸಿ ಪ್ರಯಾಣಿಕರಿಗೆ ಮತ್ತಷ್ಟು ತೊಂದರೆಯನ್ನುಂಟು ಮಾಡಿದೆ. ರಸ್ತೆಯ ರಿಪೇರಿಯಾಗಬೇಕಾದರೆ, ಸಂಕಗಳ ಕೆಲಸ ಮುಗಿಯಲಿ ಎನ್ನುತ್ತದೆ ಲೋಕೋಪಯೋಗಿ ವಿಭಾಗ. ಹೀಗೆ ರಸ್ತೆ ರಿಪೇರಿಯೂ ಇಲ್ಲ; ಅತ್ತ ಇದ್ದ ರಸ್ತೆಯ ಲಾಭವೂ ಇಲ್ಲವೆಂಬಂತಹ ದುಸ್ಥಿತಿಯನ್ನು ದೂರ ಮಾಡುವುದು ಅವಶ್ಯ. ಸಂಕ ಆಗುವಾಗ ಆಗಲಿ; ತಂದು ಹಾಕಿದ ಜಲ್ಲಿಯನ್ನಾದರೂ ರಸ್ತೆಗೆ ಹಾಕಿ ಪ್ರಯಾಣಿಕರ ಅನನುಕೂಲವನ್ನು ಸರಿಗೊಳಿಸುವುದು ಅಗತ್ಯ.

ವಿಟ್ಲ, —ಪ್ರಯಾಣಿಕ.

ಪಾಕಿಸ್ತಾನವು ತನ್ನ ಜಾತೀಯ ನೀತಿಯನ್ನೇ ದೃಢವಾಗಿ ನಂಬಿ ಮುಂದುವರಿಯುತ್ತಿರುವಂತೆಯೇ ಭಾರತವು ಜಾತ್ಯತೀತ ಧೋರಣೆಯನ್ನೇ ಪರಿಪಾಲಿಸುತ್ತ ಬರುತ್ತಿರುವುದು ಶುದ್ಧ ಗೋಚರ. ಜಾತೀಯ ನೆಲೆಯಲ್ಲಿ ಕಾಶ್ಮೀರದಲ್ಲಿ ಪಾಲುಬಯಸುವ ಪಾಕಿಸ್ತಾನದ ಆಶಯದಂತೆ ಭದ್ರತಾಸಮಿತಿಯ ಸಭೆಸೇರುವಲ್ಲಿ ಉತ್ಸುಕತೆ ತೋರಿಸುವ ಬ್ರಿಟನ್, ಭುಟ್ಟೋ ನೀತಿಯಿಂದ ಸಾವಿರಾರು ಕ್ರೈಸ್ತರು ಪಾಕಿಸ್ತಾನದಿಂದ ನಿರಾಶ್ರಿತರಾಗಿ ಭಾರತಕ್ಕೆ ಧಾವಿಸುತ್ತಿರುವುದನ್ನೂ ಭಾರತ ಸರಕಾರವು ಅವರಿಗೆ ಆಶ್ರಯ ನೀಡುತ್ತಿರುವುದನ್ನೂ ಗಮನಿಸಿದಂತೆ ತೋರುವುದಿಲ್ಲ. ಭಾರತದ ಜಾತ್ಯತೀತ ನಿಲುವಿನ ಮಹತ್ವ ಮತ್ತು ಜಾತೀಯತೆಯ ಕಲಂಕವಿರದ ಪಾಕ್ ಹೃದಯದ ಸತ್ಯ ದರ್ಶನ ರಾಜಕಾರಣ ಪಟುಗಳಾದ ಬ್ರಿಟನರಿಗೆ ಇನ್ನೂ ತಿಳಿಯದೆಹೋದುದರ ಅರ್ಥವೇನು?

ಉಡುಪಿ —ರಾಶಿ

ಉಡುಪಿ ಮುನ್ಸಿಪಲ್ ಆಸ್ಪತ್ರೆಯ ಉಪಯೋಗಕ್ಕೆಂದು ಇರುವ ಭೂಮಿಯ ಸ್ವಲ್ಪಾಂಶವನ್ನು ಹಿಂದೀ ಪ್ರಚಾರ ಸಮಿತಿಗೆ ಬಿಟ್ಟುಕೊಡುವುದರ ಬಗ್ಗೆ ಅಂತಿಮ ನಿರ್ಧಾರವಾಗಿದೆಯೆಂದು ಸುದ್ದಿ. ಇದರ ಹಿಂದೆ ಸ್ಥಳೀಯ ರಾಜಕಾರಣಿಗಳ ಕೈವಾಡವೂ ಇದೆಯೆಂದು ವದಂತಿ. ಆಸ್ಪತ್ರೆಗೆಂದು ವಿಪುಲವಾದ ಕಟ್ಟಡ-ನೆಲಗಳು ಅದಕ್ಕೇ ಉಪಯೋಗವಾಗ ಬೇಕು; ಆಸ್ಪತ್ರೆ ನಡೆಯದೆ ಹೋದರೆ ಅದರ ದಾನಿಗಳ ಇಚ್ಛೆಯಂತೆ ನಗರ ಸಭೆಗೋ ಮತ್ತಾರಿಗೋ ಸೇರಬೇಕು ಇದು ಬಿಟ್ಟು ಮೂರನೆಯವರ ಕೈ ಸೇರುವುದು ಅನ್ಯಾಯ; ಹೀಗಾಗಬಾರದು.

ಉಡುಪಿ —ಗೋಪಾಲಕೃಷ್ಣ

—— ——

ನಮ್ಮ—ನಮ್ಮವರು

(೧ನೇ ಪುಟದಿಂದ)

ವರು. ತನ್ನ ನೀತಿ-ಧೋರಣೆಗಳನ್ನು ಖಡಾ ಖಂಡಿತ ವ್ಯಕ್ತಪಡಿಸುವ ಗಟ್ಟಿ ಎದೆ ಇವರದು. ತನ್ನ ಈ ಗುಣದಿಂದಾಗಿಯೇ ಇವರು ಅಂದು ಅಪ್ರಿಯರಾದಂತೆ ತೋರಿದ್ದರೂ ಇಂದು ಅಂತಹ ಅಭಿಪ್ರಾಯವಿದೆಯೆನ್ನುವಂತಿಲ್ಲ. ಯಾರ ಪ್ರಭಾವಕ್ಕೂ ಒಳಗಾಗದೆ ಇದ್ದುದನ್ನು ಇದ್ದಂತೆ ನುಡಿಯುವುದು ಎಲ್ಲರಿಂದಲೂ ಸಾಧ್ಯವಿಲ್ಲ; ಎಲ್ಲರನ್ನೂ ತೃಪ್ತಿಗೊಳಿಸುವುದಿಲ್ಲ. ಆದುದರಿಂದಲೇ ಇಂದು ಡಾ| ಹೆಗ್ಡೆಯವರ ಖಂಡತುಂಡತೆಯೂ ಬೇಕೆನಿಸುತ್ತದೆ. ಪಾರ್ಕಿಂ" ಪಾಲಿಸಿಯಿಂದ ತೃಪ್ತಿಗಿಂತ ಅತೃಪ್ತಿಯೇ ಹೆಚ್ಚುವುದೆನ್ನುವ ಡಾ| ಹೆಗ್ಡೆ ತನ್ನ ಕಾಲಾವಧಿಯಲ್ಲಿ ರಕ್ತಿವಿರಿ ದುಡಿದಿದ್ದಾರೆ; ಇಂದಾದರೂ ವೈದ್ಯಕೀಯವನ್ನೇ ಅವಲಂಬಿಸಿದ್ದಾರೆ.

READ & ADVERTISE IN NAVAYUGA WEEKLY

ಆದಾಯ ವೆಚ್ಚಗಳ ನಿಗದಿ

ಒಂದು ಒಡಂಬಡಿಕೆಯಾಗಿದೆ:

ಹಣವೊಂದೇ ಸರ್ವಸ್ವವಲ್ಲ, ಆದರೆ ಒಂದು ಕುಟುಂಬವು ಅದರ ಹಣವನ್ನು ಉಪಯೋಗಿಸುವ ದಾರಿಯು ಅದು ಮಾಡುವ ಪ್ರತಿಯೊಂದರ ಮೇಲೆಯೂ ಪರಿಣಾಮವನ್ನುಂಟು ಮಾಡುತ್ತದೆ. ಹಣವು ಯಾವಾಗಲೂ ಬಯಕೆಯು ಫಲಕಾರಿಯಾಗುವುದರಲ್ಲಿ ಪ್ರಮುಖವಾಗಿ ಮುಂದುವರಿಯುತ್ತದೆ. ಒಂದು ಕಾರ್ಯಗತಗೊಳಿಸುವ ಆದಾಯ ವೆಚ್ಚಗಳ ನಿಗದಿಯು ಒಂದು ಒಡಂಬಡಿಕೆಯನ್ನು ಸೂಚಿಸುತ್ತದೆ - - ಒಂದು ಕುಟುಂಬವು ಬಯಸುವುದನ್ನು ಮತ್ತು ಅದು ಸಾಧ್ಯತೆಯೋ ಎಂಬುದನ್ನು.

ಆದಾಯ ವೆಚ್ಚಗಳ ನಿಗದಿಯಲ್ಲಿ ಹಣವನ್ನು ಬೇರೆ ಬೇರೆ ವಿಭಾಗಕ್ಕೆ ವಿಂಗಡಿಸಿಡುವುದಕ್ಕಿಂತ ಆರ್ಥಿಕ ಯೋಜನೆಗೆ ಆಳವಾದ ತಳಹದಿ ಇದೆ. ಕುಟುಂಬದ ಇಂದಿನ ಮತ್ತು ಮುಂದಿನ ಸುಭದ್ರತೆಯಿಂದ ನಿಜವಾದ ಜೀವನ ಮಟ್ಟವು ಅಳೆಯಲ್ಪಡುವುದೆಂಬುದನ್ನು ನಾವು ನೆನಪಿನಲ್ಲಿಡಬೇಕು.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಮಾಡಿರಿ
ಮತ್ತು ಭವಿಷ್ಯತ್ತನ್ನು ಭದ್ರಗೊಳಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

..................ಜಗತ್ತಿನಾದ್ಯಂತ ಬ್ಯಾಂಕಿಂಗಿಗಾಗಿ.

ಶಾಖೆಗಳು 190 | ಚಲಾವಣಾ ನಿಧಿ ರೂ. 57 ಕೋಟಿಗೂ ಮಿಕ್ಕಿದೆ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

VOL. 43 No. 30

NAVAYUGA—Nationalist Weekly ‡‡ ಉಡುಪಿ 26-3-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ನಮ್ಮ - ನಮ್ಮವರು

ಡಾ| ಶ್ರೀಮಾಲಿ

ಡಾ| ಶ್ರೀಮಾಲಿಯವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಪದವಿಯನ್ನು ಕೊನೆಗೂ ಸ್ವೀಕರಿಸಿಯೇ ಬಿಟ್ಟರು. ಭಾರತದ ಶಿಕ್ಷಣ ತಜ್ಞರಲ್ಲಿ ಒಬ್ಬರಾಗಿ ಕೇಂದ್ರ ಸರಕಾರದಲ್ಲಿ ಬಹು ವರ್ಷ ಶಿಕ್ಷಣ ಮಂತ್ರಿಯಾಗಿ ಶಿಕ್ಷಣ ರಂಗದಲ್ಲಿ ಪಳಗಿದವರಾದ ಶ್ರೀಮಾಲಿಯವರು ಕಾಮರಾಜ ಸೂತ್ರದನ್ವಯ ಪಕ್ಷ ಸಂಘಟನೆಗೆಂದು ಹೊರ ಬಂದವರು. ಅವರನ್ನು ಸರಕಾರದಿಂದ ಬಿಡುಗಡೆ ಮಾಡಿದ ಉದ್ದೇಶವಿಂದು ಸಿದ್ಧಿಸದೆ ಹೋದರೂ ಮೈಸೂರು ವಿಶ್ವವಿದ್ಯಾಲಯಕ್ಕೊಂದು ಘನತೆ ಬರುವಂತಾಗಿದೆ. ಶಿಕ್ಷಣ ತಜ್ಞರಾದ ಡಾ| ಪಾಣಿಕ್ಕರರು ನಿಧನಗೊಂಡುದರಿಂದ ತೆರವಾದ ಉಪಕುಲಪತಿ ಪದಕ್ಕೆ ಡಾ| ಶ್ರೀಮಾಲಿ ಬರುವುದೂ ಅರ್ಥವತ್ತಾಗಿದೆ. ಉತ್ತರ ಪ್ರದೇಶಕ್ಕೆ ಸೇರಿದ ಇವರನ್ನು ಕರ್ನಾಟಕವು ಆಮಂತ್ರಿಸಿದುದು ಕನ್ನಡಿಗರ ಉದಾರತೆಯ ದ್ಯೋತಕವೆನ್ನಬೇಕಾಗಿದೆ.

ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಡಾ| ಲಕ್ಷ್ಮಣ ಸ್ವಾಮಿ ಮುದಲಿಯಾರರೂ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಡಾ| ಡಿ. ಸಿ. ಪಾವಟೆಯವರೂ ಯಶಸ್ವಿ ಉಪಕುಲಪತಿಗಳೆಂದು ಹೆಸರು ಪಡೆದಿದ್ದಾರೆ. ನಮ್ಮ ಮೈಸೂರಿನಲ್ಲಿ ಈ ಪದವಿಯಲ್ಲಿ ಒಂದಕ್ಕಿಂತ ಹೆಚ್ಚು ಅವಧಿಯವರೆಗೆ ನಿಂತವರು ಬಹಳ ವಿರಳ. ಅದೇಕೆ ಹೀಗಾಗುತ್ತಿದೆಯೋ ಹೇಳಬರುವುದಿಲ್ಲ. ವಿಶ್ವವಿದ್ಯಾಲಯದ ಮೇಲೆ ಇತ್ತೀಚೆಗೆ ನಡೆದ ವಿಪರೀತ ಟೀಕೆ ಟಿಪ್ಪಣಿಗಳನ್ನು ಗಮನಿಸುವಾಗ, ಇಲ್ಲಿ ಮಾಡಬೇಕಾದ ಕೆಲಸ ರಾಶಿ ಬಿದ್ದಿದೆಯೆಂದು ಯಾರೂ ಊಹಿಸಬಹುದು. ಹಾಗಾಗಿ ಇಂದು ಅಧಿಕಾರ ಸ್ವೀಕರಿಸಿದ ಡಾ| ಶ್ರೀಮಾಲಿಯವರಿಗೆ ಬೆಟ್ಟದಷ್ಟು ಜವಾಬ್ದಾರಿ ಸ್ವಾಗತಿಸುತ್ತಿದೆ. ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಲೋಪದೋಷಗಳನ್ನು ನಿವಾರಿಸಿ ಅದನ್ನು ನಿಜವಾದ ಮಾನಸ ಗಂಗೋತ್ರಿಯನ್ನಾಗಿ ಇವರು ರೂಪಿಸಬೇಕಾಗಿದೆ. ಆಡಳಿತೆಯ ಮೇಲೆ ಬಿಗಿಯಾದ ಹಿಡಿತವನ್ನಿಟ್ಟು ಶೈಕ್ಷಣಿಕ ಮಟ್ಟವನ್ನು ಉನ್ನತೀಕರಿಸಬೇಕಾಗಿದೆ. ಮದ್ರಾಸ ವಿಶ್ವವಿದ್ಯಾಲಯದಂತೆಯೇ ಸುಭದ್ರ ತಳಹದಿಯಲ್ಲಿ ಸರಿಯಾದ ಮಾರ್ಗದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ಮತ್ತದಕ್ಕೆ ಸೇರ್ಪಡೆಯಾದ ಕಾಲೇಜುಗಳ ಕಾರ್ಯಕಲಾಪಗಳನ್ನು ಸಂಯೋಜಿಸಬೇಕಾಗಿದೆ.

ಇದಕ್ಕಿಂತಲೂ ದೊಡ್ಡದಾದ ಕಾರ್ಯವೆಂದರೆ, ಪ್ರಾದೇಶಿಕ ಭಾಷೆಯ ಅಧ್ಯಯನಕ್ಕೆ ಸೂಕ್ತ ಅವಕಾಶವನ್ನು ಕಲ್ಪಿಸಿ ಕೊಡುವುದು; ಮತ್ತು ಬಾಹ್ಯ ಶಿಕ್ಷಣ ಪಡೆಯುವ ಪದವಿ ಗಳಿಸಲು ಉತ್ಸಾಹಿಗಳಿಗೆ ಅವಕಾಶ ಕಲ್ಪಿಸುವುದು. ಕರ್ನಾಟಕ ವಿಶ್ವವಿದ್ಯಾಲಯವು ಪಿ. ಯು. ಸಿ. ಆದವರಿಗೆ ಬಾಹ್ಯ ಪದವಿ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಿದೆ ನಿಜ; ಆದರೆ, ಮೈಸೂರು ವಿಶ್ವವಿದ್ಯಾಲಯವು ಇದಕ್ಕೂ ಒಂದು ಹೆಜ್ಜೆ ಮುಂದಿಟ್ಟು ಖಾಸಗಿಯಾಗಿಯೂ ಪಿ. ಯು. ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಕಲ್ಪಿಸಿ ಕೊಡಬೇಕು. ಶ್ರೀ ಮಾಲಿಯವರು ಈ ಯೆಲ್ಲಾ ಸಾಧನೆಗಳಲ್ಲಿ ಯಶಸ್ವಿಯಾದಾರೆಂದು ನಂಬ ಬಹುದು.

ಶ್ರೀ ಲಾಲಬಹದೂರ್

ಪ್ರಧಾನಿ ನೆಹರೂರವರ ಇತ್ತೀಚಿಗಿನ ಅನಾರೋಗ್ಯದಿಂದಾಗಿ ಪಕ್ಷ ಸಂಘಟನೆಗೆಂದು ಹೊರಬಂದ ಲಾಲಬಹದೂರ ಶಾಸ್ತ್ರಿಯವರ ಸರಕಾರ ಸಂಘಟನೆಗೆ ಮರಳಿ ಸಚಿವ ಸಂಪುಟ ಸೇರಿದರು. ಖಾತೆ ರಹಿತ ಮಂತ್ರಿಯಾಗಿ ಉಳಿದಿರುವ ಈ ಚಾಣಾಕ್ಷ, ಅನುಭವಿಯು ಪ್ರಧಾನಿಯವರ ಎಲ್ಲ ಕಾರ್ಯಗಳಲ್ಲಿಯೂ ಸಹಕಾರ ನೀಡುತ್ತಾರೆ. ಕಾಶ್ಮೀರದ ಸಂಬಂಧದಲ್ಲಿ ಭುಟ್ಟೊ ಹುಲಿಯು ಗರ್ಜಿಸಿ ಅದನ್ನು ನುಂಗಲು ಹವಣಿಸುತ್ತಿರುವಾಗ, ಕಾಶ್ಮೀರಿಗಳಲ್ಲಿಯೇ ಒಡಕನ್ನು ಹುಟ್ಟಿಸಿ ತನ್ನ ಬೇಳೆಯನ್ನು ಬೇಯಿಸಲು ಹವಣಿಸುತ್ತಿರುವಾಗ, ಕಾಶ್ಮೀರದ ಭದ್ರತೆಯೊಡನೆ ಭಾರತದ ಗೌರವವನ್ನೂ ಸಂರಕ್ಷಿಸುವ ಹೊಣೆಗಾರಿಕೆಯನ್ನು ಅವರು ಹೊತ್ತಿದ್ದಾರೆ. ಒಂದು ಬಗೆಹರಿಯುತ್ತ ಬಂತೆಂಬಾಗ ಮತ್ತೆರಡು ಸಮಸ್ಯೆಗಳು ಎದ್ದು ನಿಲ್ಲುತ್ತಿರುವಾಗ, ಅವೆಲ್ಲವನ್ನೂ ಸವ್ಯಸಾಚಿಯಂತೆ ಎದುರಿಸುವ ಎದೆಗಾರಿಗೆ ಅವರಲ್ಲಿದೆ, ಅನುಭವ ಚಾಣಾಕ್ಷತನಗಳೂ ಇವೆ.

ಶಾಸ್ತ್ರಿಯವರು ಪ್ರಧಾನ ಮಂತ್ರಿಯವರ ವಿಶ್ವಾಸಕ್ಕೆ ಪಾತ್ರರಾದವರು; ಅವರ ಕೈಮನಗಳಿಗೆ ಸರಿಯಾಗಿ ನಡೆಯುವ ಅಭ್ಯಾಸವುಳ್ಳವರು. ಹಿಂದೆ ಗೃಹ ಮಂತ್ರಿಯಾಗಿರುವಾಗ ಕೂಡ ಅವರ ಕಾರ್ಯದಕ್ಷತೆಯನ್ನು ಪ್ರಶಂಸಿಸದಿರುವವರು ಅತಿ ವಿರಳ. ಯೋಗ್ಯತೆಯಿದ್ದವರನ್ನು ಪದವಿ ಅರಸಿಕೊಂಡು ಬರುತ್ತಿದೆಯೆಂಬುವದಕ್ಕೆ ಸ್ವಯಂ ಶಾಸ್ತ್ರಿಯವರೇ ಉಜ್ವಲ ನಿದರ್ಶನ.

ಶಾಸ್ತ್ರಿಯವರ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಪ್ರಧಾನಿ ನೆಹರೂರವರ ಉತ್ತರಾಧಿಕಾರಿಗಳೆಂದು ಕೆಲವರು ದೇಶೀಯರೂ ವಿದೇಶಿಯರೂ ಹೆಸರಿಸುತ್ತಾರೆ. ಈ ಮಾತನ್ನು ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲವಾದರೂ ಸಮರ್ಥಿಸುವುದೂ ಸಾಧ್ಯವಿಲ್ಲ. ನೆಹರೂರವರು ತನ್ನ ಶ್ರಮವನ್ನು ಕಡಿಮೆ ಮಾಡಿಕೊಳ್ಳುವುದು ಇಂದು ಅತ್ಯಂತಾವಶ್ಯಕವಾದುದರಿಂದ ಈಗ ನಡೆಯುತ್ತಿರುವ ಮುಂಗಡ ಪತ್ರ ಅಧಿವೇಶನ ಮುಗಿಯುವಷ್ಟರಲ್ಲಿ ಉಪಪ್ರಧಾನ ಮಂತ್ರಿಯೊಬ್ಬನನ್ನು ನೇಮಿಸಿ ತನ್ನ ಕಾರ್ಯಭಾರಗಳಲ್ಲಿ ಹೆಚ್ಚಿನವನ್ನು ಒಪ್ಪಿಸಿಬಿಡುವುದೀಗ ಸಾಮಾನ್ಯ ನಿರ್ಧಾರವಾದಂತಾಗಿದೆ. ಆಗ ಈ ಉಪ ಪ್ರಧಾನಿಯ ಮಾಲೆ ಯಾರ ಕೊರಳಿಗೆ ಎಂಬ ಕುತೂಹಲ ಈಗಾಗಲೇ ಎದ್ದಿದೆ. ಆ ಸಂದರ್ಭದಲ್ಲಿ ನಾಲ್ಕಾರು ಹೆಸರುಗಳು ಮುಂದೆ ಬಂದರೂ ಶಾಸ್ತ್ರಿಯವರದು ಮೊತ್ತ ಮೊದಲಲ್ಲಿದೆ ಎಂದು ಯಾರೂ ಹೇಳಬಹುದು. ದೈವ ಲೀಲೆಯನ್ನು ಮೀರುವುದು ಕಷ್ಟ; ಪ್ರಜಾಜನರ ಲೀಲೆ ಮೀರುವುದು ಮತ್ತಷ್ಟು ಪ್ರಯಾಸವೆಂದು ಹೇಳಬೇಕಾದ ಅಗತ್ಯವಿಲ್ಲ.

ಶ್ರೀ ಅ. ನ. ಕೃಷ್ಣರಾಯರು

ಕನ್ನಡ ಸಾಹಿತ್ಯಾರಾಧಕರು ಮರೆಯಲಾರದ ವ್ಯಕ್ತಿಗಳ ಸಾಲಿನಲ್ಲಿ ನಿಲ್ಲುವ ಶ್ರೀ ಅ. ನ. ಕೃಷ್ಣರಾಯರನ್ನು ಬಲ್ಲವರೆಲ್ಲ; ಅವರನ್ನು ಮುಖಾಮುಖಿ ಕಂಡು ಮೆಚ್ಚಿದವರು ಒಂದು ಕೋಟಿಯಾದರೆ ಕಾಣದೆ ಮೆಚ್ಚಿದವರು ಎರಡು ಕೋಟಿ. ಲೇಖನ ವ್ಯವಸಾಯವನ್ನೇ ತಮ್ಮ ಜೀವಿಕೆಯನ್ನಾಗಿ ಮಾಡಿಕೊಂಡ ಬೆರಳೆಣಿಕೆಯ ಕನ್ನಡ ವ್ಯಕ್ತಿಗಳಲ್ಲಿ ಅ. ನ. ಕೃ. ಒಬ್ಬರು; ಅಗ್ರಗಣ್ಯರು. ಕರ್ನಾಟಕದ ಕನ್ನಡದ ಪರಮ ಭಕ್ತರಾದ ಅ ನ ಕೃ. ಉತ್ತಮ ಕಾದಂಬರಿಕಾರರೆಂದು ಹೆಸರು ಪಡೆದಿದ್ದಾರೆ. ನಾಟಕಗಳನ್ನು ಬರೆದಿದ್ದಾರೆ; ಸಾಹಿತ್ಯ ವಿಮರ್ಶೆಯನ್ನು ಮಾಡಿದ್ದಾರೆ; ಸಣ್ಣ ಕತೆಗಳನ್ನು ಬರೆದು ಕನ್ನಡ ಸಾಹಿತ್ಯದ ವಿವಿಧ ಮಾರ್ಗಗಳನ್ನು ತೆರೆದು ಅವನ್ನು ಶುಚಿಮಾಡಿದ್ದಾರೆ. ಇವರ ಕಣ್ಣೀರು, ಸಂಧ್ಯಾರಾಗ, ಉದಯರಾಗ ಮೊದಲಾದುವು ಇಂದಿಗೆ ಹಳೆಯ ಕೃತಿಗಳಾದರೂ ಸಜೀವಿಯಾಗಿವೆ; ಅಮರ ಕೃತಿಗಳಾಗಿವೆ. ಸ್ವಯಂ ಕಲಾವಿದರೂ ಕಲೋಪಾಸಕರೂ ಆದ ಅನಕೃ ಕಲಾವಿದರನ್ನು ಸನ್ಮಾನಿಸುತ್ತಾರೆ; ಗೌರವಿಸುತ್ತಾರೆ. ಅವರ ಇತಿವೃತ್ತವನ್ನೂ ಸಂಗ್ರಹಿಸುವ ಪ್ರಯತ್ನ ಮಾ

(೧೧ನೇ ಪುಟ ನೋಡಿ)

ನಾರದ ಕಥೆ

ಅಂತಿಮ ನೋಟ

ಲೇಖಕ: ಶ್ರೀ. ಭಾಸ್ಕರಭಂಡಾರಿ, ಮಂಜೆಬೈಲು.

ಪೂರ್ಣಿಮೆಯ ಪೂರ್ಣ ಚಂದ್ರನ ಪ್ರಶಾಂತವಾದ ಬೆಳದಿಂಗಳು ಪ್ರಪಂಚವನ್ನಾವರಿಸಿತ್ತು. ಘೋರ್ಗರೆದು ಮೊರೆವ ಕಡಲ ದಡದಲ್ಲಿ. ಶೀತಲ ಮಂದ ಮಾರುತವು 'ರುಂಯ್' ಎಂದು ಬೀಸುತ್ತಿತ್ತು. ಹತ್ತಿರದ ಬಂಡೆಯ ಮೇಲೆ ಮಾಧವನು ಕುಳಿತಂತೆಯೇ ಅದಾವುದೋ ವಿಸ್ತಾರವಾದ ವಿಚಾರ ಸಾಮ್ರಾಜ್ಯವೊಂದರಲ್ಲಿ ವಿಹರಿಸುತ್ತಿದ್ದನು. ಅಶಾಪೂರಿತವಾಗಿದ್ದ ಆತನ ಅಕ್ಷಿದ್ವಯಗಳು ಆರನೋ ಬರವನ್ನು ಹಾರೈಸುವಂತಿದ್ದುವು. ತುಸು ದೂರದ ಗುಡ್ಡಗಳ ಕಡೆಯಿಂದ ನರಿಗಳ ತಂಡವೊಂದು "ಊಕ್ಕೆ ಊಯ್ಯೋ! ಎಂದು ಕೂಗಿತು. ಮಾಧವ ಕಿವಿಗೊಟ್ಟು ಆಲಿಸಿದ—ಘೋರ್ಗರೆವ ಸಾಗರ, ಚುಕ್ಕಿಗಳನೇಕಗಳೊಡನೆ ನಕ್ಕು ನಲಿಯುವ ಹಿಮಕರ ಎಲ್ಲವೂ ಆತನಿಗೆ ಒಂದಲ್ಲ ಒಂದು ವಿರಹ ವೇದನೆಯಿಂದ ಪೀಡಿತರಾದಂತೆ ತೋರುತ್ತಿತ್ತು. ಮಾಧವನೊಮ್ಮೆ ದೀರ್ಘವಾಗಿ ನಿಟ್ಟುಸಿರೆಳೆದ. ಮತ್ತೊಮ್ಮೆ ದೂರದತ್ತ ದಿಟ್ಟಿಸಿದ. ಈಗ ಆತನ ಸಂತೋಷಕ್ಕೆ ಪಾರವೇ ಇರಲಿಲ್ಲ. ಚಿಕ್ಕ ಮಕ್ಕಳಂತೆ ಕುಣಿದಾಡಿದ. "ಭಗವಂತನನ್ನು ತಾನು ನಿಷ್ಕರುಣಿಯೆಂದರೂ ಆತನು ದಯಾಮಯನೇ" ಎಂದು ಆತನನ್ನು ಕೊಂಡಾಡಿದ. ಮೆಲ್ಲನೆದ್ದು ತನ್ನತ್ತ ಬರುತ್ತಿದ್ದ ಆ ಅವ್ಯಕ್ತ ವ್ಯಕ್ತಿಯನ್ನು ಎದಿರ್ಗೊಳ್ಳಲು ಮುನ್ನಡೆದ. "ಹೌದು! ಆಕೆ ನನ್ನ ಪ್ರೇಮದ ಪ್ರತ್ಯಕ್ಷ ಪ್ರೇಮ! ಅಲ್ಲದೆ ಇನ್ನಾರು? ಎಷ್ಟಾದರೂ ಒಕೆ ವಿಚಾರಶೀಲೆ! ಅದೆಷ್ಟು ಕಾಲದಿಂದ ನಾನಾಕೆಯನ್ನು ಪ್ರೇಮಿಸಿದ್ದೆ! ಅದೆಷ್ಟು ಬಾರಿ ಆಕೆ ತನ್ನ ಪ್ರೇಮದ ಕುರಿತು ನನಗೆ ಭರವಸೆಯಿತ್ತಿದ್ದಳು? ಈಗ ಒಮ್ಮಿಂದೊಮ್ಮೆಗೆ ಬೇರೊಬ್ಬನ ಅಂಗೈ ಅರಗಿಣಿಯಾಗಲು ಅವಳಿಗೆ ಮನಸ್ಸಾದರೂ ಎಲ್ಲಿ ಬರಬೇಕು? ತಂದೆ ಒಪ್ಪದಿದ್ದರೇನಾಯಿತು? ದಾಂಪತ್ಯ ಜೀವನವನ್ನು ನಡೆಸುವವಳಾರು? ತಂದೆಯೆ, ಅವಳೆ? ನನ್ನ ಪತ್ರವನ್ನು ಕಂಡ ಬಳಿಕಂತೂ ನನ್ನನ್ನೇ ನಂಬಿ ಬಂದಿರಬೇಕು ಇರಲಿ ದೇವರ ದಯೆ! ಸಮಾಜವಂತೂ ಎದುರಿಸಿಯೇ ಎದುರಿಸುತ್ತದೆ! ಬಾಹ್ಯಾಡಂಬರ! ವರದಕ್ಷಿಣೆಯ ರಾಶಿಗಳನ್ನು ಸುರಿದು ನಡೆಸುವ ವ್ಯಾಪಾರವೇ ವಿವಾಹ ಹೊರತು ಸ್ವದಯಗಳ ಸಂಸ್ಕೃತಿಬದ್ಧ ಸಮ್ಮಿಲನವೆಂಬುದನ್ನು ಮರೆತ ಸಮಾಜ ಎದುರಿಸಿದರೂ ಏನು ಮಾಡಲು ಸಾಧ್ಯ? ಭಗವಂತನ ವಿಸ್ತಾರವಾದ ಈ ಸೃಷ್ಟಿಯಲ್ಲಿ ಆದರಂಗಗಳಾದ ಈ ಎರಡು ಬಡ ಜೀವಿಗಳಿಗೆ ಸ್ಥಾನವಿರದೇ? ನೋಡೋಣ!" ಎಂಬೀ ವಿಚಾರಗಳು ಮಾಧವನಲ್ಲಿ ತರಂಗ ಮಾಲೆಗಳಂತೆದ್ದು ಶಾಂತವಾಗುವಷ್ಟರಲ್ಲೇ ಆತ ಬಹಳಷ್ಟು ಮುಂದುವರಿದು ಆ ವ್ಯಕ್ತಿಯನ್ನು ಸಮೀಪಿಸಿದ್ದ; ಆದರೆ "ಆದಾರು! ? ಅಯ್ಯೋ!....ಮಾಧವನ ಮನಸ್ಸಿನಲ್ಲೇ ಸವಿದಿದ್ದ ಲಡ್ಡುಗೆಗಳು ಇದೀಗ ಕನಸಿನ ಗಂಟುಗಳಾದವು. ಎದುರಿಗೆ "ನಮಸ್ಕಾರ ಸ್ವಾಮಿ!" ಎನ್ನುತ್ತಾ ಅವರ ಕೆಲಸದಾಳು ಶಂಕರ ನಿಂತಿದ್ದ "ಪ್ರೇಮ?.. ನನ್ನ ಪ್ರೇಮ!. .ಮಾಧವನು ಪ್ರೇಮಾಂಧನಾಗಿಯೇ ಕಿಂಚಿದ "ಹೌದು, ಪ್ರೇಮಮ್ಮನವರೇ ಈ ಪತ್ರವನ್ನು ಕೊಟ್ಟಿದ್ದಾರೆ ಎನ್ನುತ್ತಾ ಶಂಕರನು ತಂದ ಪತ್ರವನ್ನು ಒಪ್ಪಿಸಿದ. ಮಾಧವ ನಡುಗುವ ಕೈಯಲ್ಲಿ ಅದನ್ನೆತ್ತಿದ ಓದುವಷ್ಟು ಚೈತನ್ಯ ವಿರಲಿಲ್ಲ. ಆದರೂ ಓದಿದ.

"ಪ್ರೇಮದ ಮಾ...ಗೆ ಪ್ರೇಮನ ಪ್ರೇಮದ ಪತ್ರ. ಬಡವ ಬಲ್ಲಿದನೆಂಬ ಭೇದಭಾವನೆಯ ಪ್ರಚಂಡ ದಾವನಲದಲ್ಲಿ ನಮ್ಮ ಸಹಜ ಪ್ರೇಮವು ಸುಟ್ಟು ಭಸ್ಮೀಭೂತವಾಯಿತು. ನಿಮ್ಮನ್ನು ನಾನು ಮನಸಾರೆ ಪ್ರೀತಿಸಿದ್ದೇನೆ. ಆದರೆ ಅಷ್ಟೇ ಹೆಚ್ಚಾಗಿ ನಮ್ಮ ತಂದೆಯವರಿಗೆ ಹಿಡಿದ ಧನ ಪಿಶಾಚಿಯ ಪೀಡೆಯನ್ನು ತೊಲಗಿಸುವುದಕ್ಕೂ ಅಸಮರ್ಥಳಾಗಿದ್ದೇನೆ. ಆದರೆ ಅವರೇನೆಂದರೂ ಆ ಹೃದಯಹೀನ ಮದಭರಿತ ರಘುವೀರನನ್ನು ನಾನೆಂದಿಗೂ ವರಿಸಲಾರೆ. ಬದಲಾಗಿ ನನ್ನೀ ಪಾಪಿದೇಹವನ್ನು ಕೊನೆಗಾಣಿಸುವೆ ಆದುದರಿಂದ ದಯಮಾಡಿ ನೀವು ನನಗಾಗಿ ದುಃಖಿಸದೆ ನನ್ನಂತೆಯೇ ಇರುವ ಇನ್ನೊರ್ವಳ ಬಾಳನ್ನು ಬೆಳಗಿಸಿ! ನನ್ನನ್ನು ಸಂಪೂರ್ಣ ಮರೆತುಬಿಡಿ" ಇತಿ ನಿಮ್ಮವಳಾದರೂ ನಿರ್ಭಾಗ್ಯಳಾದ—"ಪ್ರೇಮ".

ಮಾಧನ ಮೂಕನಾದ. ಕಳೆದುಹೋದ ಒಂದೊಂದೇ ದಿನಗಳು ಆತನ ಕಣ್ಣೆದುರು ಕುಣಿದಾಡಿ ವಿಕಟವಾಗಿ ನಕ್ಕಂತೆ ಆತನಿಗೆ ಭಾಸವಾಯಿತು ಚಿಕ್ಕಂದಿನಿಂದಲೇ ತಾನೂ ಪ್ರೇಮೂ ಸಹಪಾಟಿಗಳೂ ಒಡನಾಡಿಗಳೂ ಆಗಿದ್ದುದು, ಬೆಳೆದುಬಂದಂತೆ ಪರಸ್ಪರ ಪ್ರೇಮಿಸಿಕೊಂಡುದು, ಆದರೂ ಕೋಟ್ಯಾಧೀಶನ ಮಗಳಾದ ಆಕೆಯು ಬಡವನಾದ ತನ್ನಲ್ಲಿಟ್ಟ ಪ್ರೇಮದ ಕುರಿತು ತಾನಾಕೆಯಲ್ಲಿ ಪ್ರಶ್ನಿಸಿದುದು ಅದಕ್ಕೆ ಉತ್ತರವಾಗಿ "ಏನಾದರೂ ನಿಮ್ಮನ್ನು ಬಿಟ್ಟು ಬದುಕಲಾರೆ" ಎಂದಾಕೆ ಭರವಸೆಯಿತ್ತುದು. ಅತ್ತ ಆಕೆಯ ತಂದೆಯು ಅವಳ ಮದುವೆಗೆ ಸಿದ್ಧತೆ ನಡೆಸಿದುದು—ತಾನಾಕೆಗೆ ಪತ್ರಬರೆದುದು—ಅಂತೆಯೇ ಇದುತನಕ ದಾರಿನೋಡಿದುದು—ಈಗ ಆಕೆಯ ಉತ್ತರ—ಅದರಂತೆ ಆಕೆಯ ಆತ್ಮಹತ್ಯೆಯ ಯತ್ನ —! ಎಲ್ಲವೂ ಮಾಧವನಿಗೆ ಆಘಾತದ ಮೇಲೆ ಪ್ರತ್ಯಾಘಾತವಾಯಿತು. ಅದಾವ ಸಂಕಟವು ಆತನಿಗುಂಟಾಯಿತೋ ತಿಳಿಯದು. ಸ್ತಂಭೀಭೂತನಾಗಿ ನಿಂತ ಶಂಕರನಿಗೆ ಕೈಯಲ್ಲಿದ್ದ ಕಾಸೆಲ್ಲವನ್ನೂ ಕೊಟ್ಟ. ಅದೆಷ್ಟೋ ಅವನಿಗರಿಯದು. ಹುಚ್ಚನಂತೆ ಅಲ್ಲಿಂದೋಡಿದ.

೦ ೦ ೦

ಇತ್ತ ಪ್ರೇಮನು ಗೈದ ಆತ್ಮಹತ್ಯೆಯ ಯತ್ನಗಳೆಲ್ಲವೂ ನಿಷ್ಫಲವಾದುವು. "ತನ್ನ ಉತ್ತರದ ಪ್ರತಿಕ್ರಿಯೆಯಾಗಿ ಮಾಧವನೇನು ಗೈದನೋ?" ಎಂಬ ಭಯ ಶೋಕಗಳಿಂದ ತತ್ತರಿಸಿದ ಆಕೆ ಹೇಗೂ ಮನೆಯಿಂದ ತಪ್ಪಿಸಿಕೊಂಡು ಕತ್ತಲಲ್ಲೇ ಓಡಿ ಬಂದಳು. ಹಾದಿಯಲ್ಲಿ ಶಂಕರನಿಂದ ಮಾಧವನ ವಿಚಾರ ತಿಳಿದ ಆಕೆಗೆ ಇನ್ನಷ್ಟು ಗಾಬರಿಯಾಯಿತು. ಆದರೂ "ತಾನು ಹೋದ ವಿಚಾರ ಯಾರಿಗೂ ತಿಳಿಸಬಾರದೆಂದು" ಸೂಚಿಸಿ ಓಡ್ಯೋಡಿ ಕಡಲ ದಡಕ್ಕೆ ಬಂದಳು ಅನಂತ ದೂರದಲ್ಲಿ ಅದಾವುದೋ ಅವ್ಯಕ್ತ ವ್ಯಕ್ತಿಯೊಂದು ಕಡಲ್ತೆರೆಗೆ ಧುಮುಕುವುದು ಕಾಣಿಸಿತು! "ಅಯ್ಯೋ! ಅದಾರಿರಬಹುದು!" ಪ್ರೇಮ ಓಡ್ಯೋಡಿ ಸೋತು ಬಂದು ದಿಟ್ಟಿಸಿದಳು! ಹೌದು! ಆತನೇ ಮಾಧವ! ಆತನನ್ನು ಅದಾಗಲೇ ಸಮುದ್ರವು ತನ್ನ ಸಹಸ್ರ ತೆರೆಗಳಿಂದ ಬಿಗಿದಪ್ಪಿಕೊಂಡಿತ್ತು. ಪ್ರೇಮೂ ನಿಟ್ಟುಸಿರೆಳೆದು ನಿಂತಲ್ಲಿ ನಿಂತಳು. ಅನಂತ ದೂರದಲ್ಲಿ ಕಂಡುದೇ ಆಕೆಯ ಅಂತಿಮ ನೋಟವಾಗಿತ್ತು!

———

"ನವ ಭಾವಗೀತ..."

(ಡಾ. ಕೆ. ಎಮ್. ಕೆ. ಭಟ್, ಕುಂಬಳೆ)

ಯುಗ ಯುಗಂಗಳಘೋರ,
ತಪವನಾಚರಿಸಿ,
ತ್ಯಾಗದಾ ಕುಲುಮೆಯಲಿ
ತನುಮನವ ಕುದಿಸಿ,
ದೇಹಬಲಿದಾನವನು,
ತೆತ್ತು ವರಸ್ಮರಿಸಿ,
ಓ ಬಂಧು! ಎದ್ದೇಳು!
ನರನಾಗಿ ಬಾಳು!" ॥ ೧ ॥
"ಕೆಸರಾದ ಕೈಯಣಿಸ-
ದಿರದು ಮೊಸರನ್ನ"
ಗೈಮೆಯೂ ಬೇಗುದಿಗೆ
ಶಾಂತಿ ಸಿಗದಿರದು,
ಪ್ರಕೃತಿಮಾತೆಯು ಕೊಡುಗೆ;
ಜನಕೋಟಿಗೆಲ್ಲ!
ಸಂತೋಷ ಸೌಹಾರ್ದ—
ವೇಂ ನಮ್ಮೊಳಿಲ್ಲ? ॥ ೨ ॥
ಸ್ವಾತಂತ್ರ್ಯ ಸಂಗ್ರಾಮ
ದಿತಿಹಾಸ ಹೊಸತು!
ಜಗವ ಕಣ್ಣೊಡೆಯಿತಿದೊ!
ನವ ಭಾವ ಬೆರೆತು!
ಧರ್ಮ, ನೀತಿ, ಸುಚರಿತೆ—
ಜನರ ಸೆರೆಹಿಡಿದು—
ಚೇತನದ ಚಿಗುರೊಂದು!
ಜಿಗಿದೆದ್ದಿತಿಂದು! ॥ ೩ ॥
ಒಂದು ಬಾವುಟದಡಿಯ
ನೆರಳಲ್ಲಿ ಸೇರಿ,
ಒಂದಾಗಿ ನವ ಭಾವ—
ಗೀತವನು ಹಾಡಿ,
ಎಲ್ಲರು ಒಂದೆಂಬ ನಿಜಗುರಿಯ ಸಾರಿ,
ಬಾಳೋಣ; ಏಳಿನ್ನು!
ನವಶಕ್ತಿ ತೋರಿ! ॥ ೪ ॥

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¼ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಕೆಂಪು ಚೀನಾದ ಪಟ್ಟಣಗಳಲ್ಲಿ ಕುಟುಂಬ ಜೀವನ

ಬರೆದವರು: ಶ್ರೀ ಶಿವಶಂಕರ, ಮದ್ರಾಸು

ಪೆಕಿಂಗ್ ಪಟ್ಟಣದ ಪ್ರಜೆಗಳು ಪಡುತ್ತಿರುವ ಪಾಡು ಹಾಗೂ ಹಳ್ಳಿಗಳವರ ಹಾಹಾಕಾರವನ್ನು ಕ್ರಮಶಃ ಹಿಂದಿನ ಸಂಚಿಕೆಗಳಲ್ಲಿ ಕಂಡಿರುವೆವು. ಪೆಕಿಂಗ್ ಪಟ್ಟಣಕ್ಕೆ ರಿಯಾಯತಿಯಲ್ಲಿ ಪ್ರಥಮ ಸ್ಥಾನ ಸಿಕ್ಕಿದೆಯಾದರೂ ಪ್ರಜೆಗಳು ಭಯಭೀತರಾಗಿ ಕೊಟ್ಟದ್ದನ್ನು ಉಂಡು, ಹೇಳಿದ್ದನ್ನು ಮಾಡಿ ಕಮ್ಯೂನಿಸ್ಟ್ ಯಂತ್ರದ ಮುಖ ನೋಡುತ್ತಿದ್ದಾರೆ. ಉತ್ಪತ್ತಿಯ ನೈಸರ್ಗಿಕ ಕಾರ್ಖಾನೆ ಎನಿಸಿಕೊಂಡಿರುವ ಹಳ್ಳಿಗಳು ಆಹಾರ ಪದಾರ್ಥಗಳನ್ನು ಬೆಳೆಸಿದರೂ ಅಲ್ಲಿಯವರಿಗೆ ಕೈಗೆ ಬಂದು ಬಾಯಿಗೆ ಬರಲಿಲ್ಲವೆಂಬಂತಿದೆ. ಹಳ್ಳಿಗಳಲ್ಲಿಯ ಕರುಣಾಜನಕ ಸ್ಥಿತಿಯನ್ನು ವಾಚಕರ ಮುಂದಿಟ್ಟ ನಂತರ ಇದೀಗ 'ಅಯ್ಯಪ್ಪ' ಅನ್ನುವ ಸುದ್ದಿ ಬಂದಿರುತ್ತದೆ. ಚೈನಾದಲ್ಲಿ ಸ್ವಲ್ಪ ಸ್ಥಳವನ್ನು ಅವರವರಿಗೆ ಬೇಕಾದಂತೆ, ಆದರೆ ಸರಕಾರ ಹೇಳುವ ಆಹಾರ ಧಾನ್ಯಗಳನ್ನು ಬೆಳೆಸಲು ಬಿಟ್ಟುಕೊಡುತ್ತಿದ್ದಾರೆನ್ನುವ ಸಮಾಚಾರ ಪ್ರಕಟವಾಗಿರುತ್ತದೆ. ಆದರೂ ಕಪಿಮುಷ್ಟಿ ಅಷ್ಟು ಬಿಗಿತ ಬಿಟ್ಟಿರುವದು ತಿಳಿದು ಬರುವದಿಲ್ಲ. ಚೈನಿ ಛತ್ರಪತಿಯಲ್ಲಿ ಕಮ್ಯೂನಿಸ್ಟ್ ಕಸಿಯನ್ನು ಕಟ್ಟಿರಿಸಿರುವ ರಷ್ಯವು ನಿಜವಾಗಿ ಚೈನಾಕ್ಕೆ ಆ ದಾರಿಯಲ್ಲಿ ಬೆಳಕು ತೋರಿಸುತ್ತಿದೆ ಕಮ್ಯೂನಿಸಂ, ಕಮ್ಯೂನ್, ಕಮ್ಯೂನಿಸ್ಟ್ ಮುಂತಾದ ಶಬ್ದಗಳಿಗೆ ಪ್ರಚಾರ ಮಾಡಿಕೊಟ್ಟಿರುವ ರಷ್ಯಾ ಇಂದು ಇತರ ವೇಷಗಳಿಗೆ ಸಿದ್ಧವಾಗುತ್ತಿದೆ. ಅಲ್ಲಿ ನೆಲವೆಲ್ಲಾ ರಾಷ್ಟ್ರದ ಅಂದರೆ ಸರಕಾರದ ಸ್ವತ್ತು. ಅಲ್ಲಿಯ ರೈತರು ಸರಕಾರದ ಇಷ್ಟಕ್ಕನುಸಾರವಾಗಿ ಬೆಳೆಸಬೇಕು. ಆದರೆ ಇತ್ತೀಚೆಗೆ ಅವರು ಒಂದು ಉಪಾಯವನ್ನು ಕಂಡುಹಿಡಿದರು. ಒಟ್ಟು ನೆಲದ ಸಾಧಾರಣ ಶೇಕಡಾ ನಲ್ವತ್ತಂಶವನ್ನು ಜನತೆಗೆ ಅವರವರ ಇಚ್ಛೆಯನುಸಾರ, ಆದರೆ ಸರಕಾರದ ಆಜ್ಞೆಗನುಸಾರವಾಗಿ, ಬೆಳೆಸಲು ಬಿಟ್ಟುಕೊಡಲಾಯಿತು. ಉಳಿದ ಅರುವತ್ತಂಶ ಸರಕಾರದ ಅಧೀನದಲ್ಲಿದ್ದು ಅಲ್ಲಿ ಎಲ್ಲರೂ ದುಡಿಯಬೇಕು. ಇದರ ಪರಿಣಾಮವೇ ಕಣ್ಣು ತೆರೆಯಿಸುವಂತಹದ್ದಿದೆ ಆ ನಲ್ವತ್ತಂಶದಲ್ಲಿ ಶೇಕಡಾ ಅರುವತ್ತು ಪಾಲು ಆಹಾರ ಧಾನ್ಯ ಬೆಳೆದಿದೆ ಹಾಗೆಯೇ ಅರುವತ್ತಂಶದಲ್ಲಿ ಶೇಕಡಾ ನಲ್ವತ್ತು ಪಾಲು ಬೆಳೆ ಬಂದಿದೆ. ಇದು ಚೈನಿ ಕಮ್ಯೂನಿಷ್ಟರ ಹಾಗೂ ಭಾರತದಲ್ಲೂ ಸರಕಾರೀಕರಣದ ಒಣ ಶಬ್ದವನ್ನುಂಟುಮಾಡುವವರಿಗೆ ಎಚ್ಚರಿಕೆಯ ಹಲಗೆಯೇ ಸರಿ. ಮದ್ರಾಸಿನಲ್ಲಿ ಒಂದು ಗಾದೆ ಪ್ರಚಾರದಲ್ಲಿದೆ. 'ಚೆಟ್ಟಿಯಾರ್ ಹಾಲು ಸುರಿದಂತೆ" ಎಂದು. ಒಂದು ದೇವಸ್ಥಾನವನ್ನು ಕಟ್ಟಿದ್ದರಂತೆ. ಅದರಲ್ಲಿ ವಿಗ್ರಹ ಪ್ರತಿಷ್ಠಾಪನೆ ಮಾಡಿ ಮುಂಜಾನೆಯೊಳಗೆ ಹಾಲು ಅಭಿಷೇಕ ಎಲ್ಲರೂ ಮಾಡಬೇಕೆಂದು ತೀರ್ಮಾನವಾಗಿತ್ತು. ಪ್ರತಿಯೊಬ್ಬರು ಏನು ಭಾವಿಸಿಕೊಂಡರೆಂದರೆ ಮಿಕ್ಕವರೆಲ್ಲರೂ ಹಾಲು ಸುರಿಯುವಾಗ ತಾನೊಬ್ಬ ನೀರು ಸುರಿದರೆ ಅದೆಲ್ಲಿ ಗೊತ್ತಾಗುತ್ತದೆಂದು. ಬೆಳಗಾಗಬೇಕಾದರೆ ಅವಸರ ಅವಸರವಾಗಿ ಎಲ್ಲರ ಕೆಲಸವೂ ಮುಗಿದಿತ್ತು. ಶೇಖರವಾದದ್ದು ಮಾತ್ರ ಹಾಲಲ್ಲ-ನೀರ. ಈ ಕಥೆ ಬಹುಶಃ ಕಮ್ಯೂನಿಸ್ಟರಿಗಾಗಿ ಇದೆಯೋ ಏನೋ. ಚೈನೀ ಕಮ್ಯೂನಿಸ್ಟರು ಇದನ್ನು ಅರಿತುಕೊಂಡಾದರೂ ತಮ್ಮ ಹಟಮಾರಿತನವನ್ನು ಬಿಟ್ಟು ಯಥಾರ್ಥ ಪ್ರಪಂಚಕ್ಕೆ ಬಂದಲ್ಲಿ ಚೈನಾ ಪ್ರಬಲ ರಾಷ್ಟ್ರವಾಗುವದರಲ್ಲಿ ಸಂದೇಹವಿಲ್ಲ.

ಪೆಕಿಂಗ್ ಪಟ್ಟಣದ ಪ್ರಜೆಗಳ ಪಾಡು ಹಾಗೂ ಹಳ್ಳಿಗರ ಹಾಹಾಕಾರ ಕಂಡ ಮೇಲೆ ಸಾಧಾರಣವಾಗಿ ಪಟ್ಟಣಗಳಲ್ಲಿ ಕೌಟುಂಬಿಕ ಜೀವನ ಹೇಗಿದೆಂಬುದನ್ನು ನೋಡುವ. ಕೆಲವೇ ಕಡೆಗಳಲ್ಲಿ ಕುಟುಂಬ ಜೀವನವನ್ನು ಅಲ್ಲಿ ಕಾಣಬಹುದು. ಕಮ್ಯೂನ್ ಅಥವಾ ಇತರ ಸಾಮೂಹಿಕ ಕಷ್ಟಾಯ ರಂಗಗಳಿರುವಲ್ಲಿ ಕುಟುಂಬದ ಕುರಿತು ಯೋಚನೆ ಮಾಡಲು ಅಲ್ಲಿದೆ ಸಾಧ್ಯ? ನಿಯಮಿತ ಸ್ಥಳಗಳಲ್ಲಿ ಅವರೆಲ್ಲರೂ ಇರಬೇಕು. ಯಾವಾಗಾದರೂ ಬಿಡುವು ದೊರೆತಾಗ ಅವರವರು ಕುಟುಂಬ ಪ್ರಕಾರ ಒಂದಾಗುತ್ತಾರೆ. ಕಮ್ಯೂನಿಸ್ಟರಿಗೆ ಕುಟುಂಬ ಪದವೇ ಸಂಕೋಚ ಅರ್ಥ ಕೊಡುವಂತಹದ್ದಿದೆ. ಆ ಮನೋಭಾವನೆಯನ್ನು ತೊಡೆದು ಹಾಕಲು ಅವರೆಂತು ಚಿಕ್ಕ ಮಕ್ಕಳಿಗೆ ತರಬೇತಿ ಕೊಡುತ್ತಿದ್ದಾರೆಂಬುದನ್ನೂ ಇದೇ ಪತ್ರಿಕೆಯಲ್ಲಿ ಕಂಡಿರುವೆವು. ಆದುದರಿಂದ ಇಂದು ಅಲ್ಲಿ ಕುಟುಂಬ ಜೀವನ ಇದ್ದಲ್ಲಿ ಅದು ಕೇವಲ ಕೆಲವೇ ಪಟ್ಟಣಗಳಲ್ಲಿ ಮಾತ್ರ. ಅಲ್ಲಿ ಕುಟುಂಬದ ಅಗತ್ಯವಾದರೂ ಏನು? ಕೆಲಸ ಹಾಗೂ ಊಟವನ್ನು ಸರಕಾರದ ಆಜ್ಞೆಗನುಸಾರವಾಗಿ ನಡೆಸತಕ್ಕದ್ದು. ಇನ್ನು ವಿಷಯ ಸುಖ! ಯೋಚಿಸಲು ಮದುವೆಗೆ ಸಮಯ ಹಾಗೂ ಅವಕಾಶವಾದರೂ ಎಲ್ಲಿ? ಸರಕಾರ ಇಷ್ಟಪಟ್ಟಾಗ ಅದನ್ನು ಅವರು ಪೂರೈಸಿಕೊಳ್ಳತಕ್ಕದ್ದು. ಗರ್ಭಿಣಿ--ಬಾಣಂತಿ—ಶಿಶುಗಳನ್ನು ನೋಡುವ ಜವಾಬ್ದಾರಿ ವ್ಯಕ್ತಿಗಂತೂ ಇರುವದಿಲ್ಲ. ಅದನ್ನು ಸರಕಾರ ನೋಡಿಕೊಳ್ಳುತ್ತದೆ, ಇದು ಹೆಚ್ಚಾಗಿ ಕೃಷಿ ರಂಗಗಳಲ್ಲಿ. ಪಟ್ಟಣಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಕಾಣಬಹುದು. ಸರಕಾರದ ಇಷ್ಟಕ್ಕನುಸಾರವಾಗಿ ಜನರು ಜರ್ಝರಿತರಾದರೂ ರಾತ್ರಿ ಕುಟುಂಬದೊಂದಿಗಿರುವ ಸೌಕರ್ಯ ಅವರಿಗಿದೆ, ಅಂತಹ ಕುಟುಂಬಗಳು ಅದೆಂತು ಜೀವನ ನಡೆಸುತ್ತಿವೆ? ಚಾರ್ಲ್ಸ್ ಯಫ್. ನೊತೊಂಬ್‌ರವರು ಅಲ್ಲಿ ಏನನ್ನು ನೋಡಿ ಬಂದಿದ್ದಾರೆ?

ಚೈನಿ ನಗರದಲ್ಲಿರುವ ನಾರಿಯರು ಅದೆಂತು ತಮ್ಮ ಕುಟುಂಬಗಳನ್ನು ಸರಿದೂಗಿಸಿಕೊಂಡು ಹೋಗುತ್ತಿದ್ದಾರೆ? ಆಕೆಯ ಪುರುಷನ ಸಂಪಾದನೆ ಹಾಗೂ ಆಕೆಯ ಸಂಪಾದನೆ ಬಹಳಷ್ಟೇನೂ ಇರುವುದಿಲ್ಲ. ಕಾರ್ಖಾನೆಗಳಲ್ಲಿ ಕೊಡಲಾಗುತ್ತಿರುವ ಸರಾಸರಿ ಸಂಬಳವು ತಿಂಗಳೊಂದಕ್ಕೆ ಇಪ್ಪತ್ತನಾಲ್ಕು ಶಿಲ್ಲಿಂಗ್ ಮೇಲ್ಪಟ್ಟದ ಕಾರ್ಮಿಕರಿಗೆ ಮೂವತ್ತನಾಲ್ಕು ಶಿಲ್ಲಿಂಗ್ ಕೊಡಲಾಗುತ್ತದೆ. ಉತ್ತಮ ಶ್ರಮಿಕನಿಗೆ ನಲ್ವತ್ತಮೂರು ಶಿಲ್ಲಿಂಗ್ ದೊರಕುತ್ತದೆ ವ್ಯವಸ್ಥಾಪಕನಿಗೆ ಸಾಧಾರಣವಾಗಿ ಅಷ್ಟು ಸಂಬಳ ಸಿಗುತ್ತದೆ. ಆದರೆ ಇತರ ಕಾರ್ಯಾಲಯದ ಉದ್ಯೋಗಸ್ಥರಿಗೆ ಅಷ್ಟು ಸಂಬಳ ಸಿಗುವಂತಿಲ್ಲ. ತಜ್ಞ ವಾಸ್ತುಶಿಲ್ಪ ವಿಶಾರದರು ಹಾಗೂ ಅನ್ಯ ರಾಷ್ಟ್ರಗಳವರ ಕಾರ್ಯಾಲಯಗಳಲ್ಲಿರುವವರಿಗೆ ಉತ್ತಮ ವೇತನ ದೊರಕುತ್ತದೆ ಕೆಲವೊಮ್ಮೆ ತಿಂಗಳೊಂದಕ್ಕೆ ಅವರಿಗೆ ನೂರಿಪ್ಪತ್ತು ಶಿಲ್ಲಿಂಗ್ ಸಿಗುತ್ತದೆ. ಬಡವೀರರಲ್ಲದ ಉಪಾಧ್ಯಾಯರ ಸ್ಥಿತಿ ಶೋಚನೀಯವಿದೆ. ಅವರಿಗೆ ಸಾಧಾರಣ ಕೂಲಿಗಳಿಗಿಂತಲೂ ಕಮ್ಮಿ ಸಂಬಳ, ಅಂದರೆ, ಕೇವಲ ಹದಿನೆಂಟು ಶಿಲ್ಲಿಂಗ್ ಕೊಡಲಾಗುತ್ತದೆ ಈ ಸಂಬಳದಲ್ಲಿ ಅವರು ತಮ್ಮ ಹೊಟ್ಟೆಯನ್ನು, ತಮ್ಮನ್ನು ನಂಬಿಕೊಂಡಿರುವ ಹೊಟ್ಟೆಗಳನ್ನು ಹಾಯಾಗಿರಿಸಬೇಕು!

ಅಲ್ಲಿಯ ಅಂಗಡಿಗಳಲ್ಲಿ ಎಲ್ಲಾ ವಸ್ತುಗಳೂ ಎಲ್ಲಾ ಕಾಲಗಳಲ್ಲಿ ಅದೇ ಬೆಲೆಗೆ ದೊರಕುತ್ತದೆನ್ನಲು ಸಾಧ್ಯವಿಲ್ಲ, ಇಂದು ದೊರಕುವ ವಸ್ತು ಮತ್ತೆ ವರ್ಷಗಳನಂತರ ಮಾರುಕಟ್ಟೆಗೆ ಬರಬಹುದು. ಬೆಲೆಯೂ ಹಾಗೆಯೇ! ಇಪ್ಪತ್ತನಾಲ್ಕು ತಾಸುಗಳೊಳಗೆ ಮಹದಂತರವನ್ನು ಕಾಣಬಹುದು. ಕಾಫಿಯನ್ನು ರಾತ್ಲಿಗೆ ೪ ಅಂ ಶಿಲ್ಲಿಂಗಿನಿಂದ ೧೬೦ ಶಿಲ್ಲಿಂಗಿನ ವರೆಗೂ ಮಾರಲಾಗಿದೆ. ಹದಿನೆಂಟು ಸೆಂಟಿಗೆ ಮಾರಿಹೋಗುತ್ತಿದ್ದ ಮೊಟ್ಟೆಯನ್ನು ಆರು ಸೆಂಟಿಗೇನೇ ಮಾರುವಂತೆ ಏರ್ಪಾಡಾಗಿರುತ್ತದೆ. ೧-೬೦ ಶಿಲ್ಲಿಂಗಿಗೆ ಮಾರಲಾಗುತ್ತಿದ್ದ ಸಕ್ಕರೆ ಅರುವತ್ತು ಸೆಂಟಿಗೂ ಮಾರಲ್ಪಟ್ಟಿದೆ. ಹಿಂದೆ ಹೇರಳ ಸಾಮಗ್ರಿಗಳು ದೊರಕದೆ ಇದ್ದುದ್ದು ಅಷ್ಟು ಕ್ರಯಕ್ಕೆ ಕಾರಣವೆಂದು ಸಂಬಂಧಪಟ್ಟವರು ಸೂಚಿಸಬಹುದು.

ನಿಯಂತ್ರಣವನ್ನು ಪ್ರಯೋಗಕ್ಕೆ ತರಲು ಕೆಲ ಅಧಿಕಾರಿಗಳು ಒಪ್ಪುವದಿಲ್ಲ. ನಿಯಂತ್ರಣಕ್ಕೊಳಗಾಗಿರುವ ವಸ್ತು ಮಾರುಕಟ್ಟೆಯಲ್ಲಿ ಹೇರಳ ಸಿಗುವಂತಿಲ್ಲವೆಂಬುದೆ ಅರ್ಥವಿದೆ. ಆರೀತಿಯ ನಿಯಂತ್ರಣ ವಿಲ್ಲದಿದ್ದರೂ ಚೈನಾದಲ್ಲಿ ಸರಕಾರದ ತೀವ್ರ ಹತೋಟಿ ಇದೆ. ಬರಗಾಲದ ಸಮಯ ಕಡು ಹತೋಟಿಯಿದ್ದುದರಿಂದಲೇ ಪ್ರತೀಯೊಬ್ಬನಿಗೂ ಕನಿಷ್ಠ ಪಕ್ಷ ಕಾಳಾದರೂ ಸಿಕ್ಕಿರುತ್ತದೆ.

ಅವರ ನಿಯಂತ್ರಣ ನಿಯಮ ಒಂದು ರೀತಿಯಲ್ಲಿದೆ. ಅವರು ಮುಖ್ಯವಾಗಿ ನಿಯಂತ್ರಣಕ್ಕೊಳಗಾಗಿರುವ ವಸ್ತುಗಳನ್ನು ಐದು ಗುಂಪುಗಳನ್ನಾಗಿ ಗುರುತಿಸಿಕೊಂಡಿದ್ದಾರೆ. ಮೊದಲ ಸಾಲಿನಲ್ಲಿ ಅಕ್ಕಿ ಅಲ್ಲದೆ ಗೋದಿಯಂತಹ ಮುಖ್ಯ ಜೀವನಾಧಾರಕ ಪದಾರ್ಥಗಳೇ ಇವೆ. ವ್ಯಕ್ತಿಯ ಪ್ರಾಯ,ಲಿಂಗ ಮತ್ತು ಉದ್ಯೋಗಕ್ಕನುಸಾರವಾಗಿ ಈ ಪದಾರ್ಥಗಳನ್ನು ಕೊಡಲಾಗುತ್ತದೆ ಅದರಲ್ಲಿ ಕಾರ್ಖಾನೆಗಳಲ್ಲಿ ಕಷ್ಟಪಡುವ ಕಾರ್ಮಿಕರಿಗೆ ಸ್ವಲ್ಪ ಹೆಚ್ಚು ವಸ್ತುಗಳನ್ನು ಕೊಡಲಾಗುತ್ತದೆ; ಅವರಿಗೆ ತಿಂಗಳೊಂದಕ್ಕೆ ಅರುವತ್ತು ರಾತ್ಲ ಅಕ್ಕಿ ಹಾಗೂ ಗೋಧಿಯನ್ನು ಕೊಡಲಾಗುತ್ತದೆ. ಅಲ್ಲಿ ಸಾಮಾನ್ಯವಾಗಿ ಒಬ್ಬೊಬ್ಬನಿಗೆ ಇಪ್ಪತ್ತೆಂಟರಿಂದ ಮೂವತ್ತು ರಾತ್ಲ ವರೆಗೆ ಅಕ್ಕಿ ಅಲ್ಲದೆ ಗೋಧಿ ಸಿಗುತ್ತದೆ. ಪ್ರೌಢನಿಗೆ ಸಾಧಾರಣವಾಗಿ ಕಮ್ಮಿಯೆಂದರೆ ಇಪ್ಪತ್ತನಾಲ್ಕು ರಾತ್ಲ ಅಕ್ಕಿ ಹಾಗೂ ಗೋಧಿಯನ್ನು ಕೊಡಲಾಗುತ್ತದೆ.

ಎರಡನೇ ವಿಭಾಗದಲ್ಲಿ ಉಪ—ಆಹಾರಗಳಿದ್ದು, ಎಲ್ಲರಿಗೂ ಅವನ್ನು ಸಮಾನವಾಗಿ ಹಂಚಲಾಗುತ್ತದೆ ಪ್ರತೀಯೊಬ್ಬನಿಗೂ ನಾಲ್ಕು ಮೆಟ್ರಿಕ್ ಔನ್ಸ್ ಮಾಂಸ, ಒಂದುವರೆರಾತ್ಲ ಮೀನು, ಎರಡೂವರೆ ಮೆಟ್ರಿಕ್ ಔನ್ಸ್ ಎಣ್ಣೆ ಪದಾರ್ಥಗಳನ್ನು ಶಾಂಘಾಯಿಯಲ್ಲಿ ಕೊಡುತ್ತಾರೆ. ಇತರ ಪ್ರದೇಶಗಳಿಗಿಂತ ಶಾಂಘಾಯಿಯಲ್ಲಿ ಮೀನು ಅಧಿಕ ಸಿಗುತ್ತದೆ. ಹೀಗೆ; ಶಾಂಘಾಯಿಯಲ್ಲದೆ ಇತರ ಕೆಲ ದೊಡ್ಡ ಪಟ್ಟಣಗಳಿಗೂ ಹೋಲಿಕೆಯ ದೃಷ್ಟಿಯಲ್ಲಿ ಮುದ್ದಿನ ಮಕ್ಕಳಂತೆ ಸರಬರಾಯಿ ಸಿಗುತ್ತದೆ.

ತೃತೀಯ ವಿಭಾಗದಲ್ಲಿ ಬಟ್ಟೆಬರುತ್ತದೆ. ಇದರ ಕಷ್ಟ ಹೇಳತೀರದು ೧೯೬೨ರ ಆಗೋಸ್ತಿನಲ್ಲಿ ಬಟ್ಟೆ ಹಂಚಿರುವರು. ಅನಂತರ....ಎಲ್ಲರೂ ಎದುರುನೋಡುತ್ತಿದ್ದಾರೆ. ಕಳೆದ ವರ್ಷ ಕೊನೆಯ ವರೆಗೂ ಜಾಸ್ತಿ ಬಟ್ಟೆ ಸಿಗುವಂತಿಲ್ಲವೆಂಬುದನ್ನು ಮುಂಚೆಯೇ ತಿಳಿಸಲಾಗಿತ್ತು. ಒಬ್ಬೊಬ್ಬರಿಗೆ ಒಟ್ಟು ಮೂರು ಗಜ ಬಟ್ಟೆಯನ್ನು ಕೊಡಲಾಗಿತ್ತು. ಇದೆಲ್ಲವೂ ಹತ್ತಿ ಬಟ್ಟೆಯ ವಿಷಯವಿದೆ.

ಹತ್ತಿ ಬಟ್ಟೆಗಳಲ್ಲದ ಇತರ ಬಟ್ಟೆಗಳು ನಾಲ್ಕನೇಯ ತರಗತಿಯಲ್ಲಿ ಬರುತ್ತವೆ.

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ವಿಚಾರ ಮಥನ

ಪುರಂದರ ವಿಠಲನ ವಿಚಾರಗಳು

(ಲೇಖಾಂಕ ೨)

ಬರೆದವರು: ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್, ಸುರತ್ಕಲ್ಲು.

ಹರಿದಾಸ ಪಂಥದಲ್ಲಿ 'ಪುರಂದರ ವಿಠಲ'ನು ಹಿರಿಯಾಳು. ಇವನು ಸಂಗೀತ ಕ್ರಮದಲ್ಲಿ ಹಲವು ತರದ ಹರಿಕೀರ್ತನೆಗಳನ್ನು ರಚಿಸಿದ್ದಾನೆ. ಕರ್ನಾಟಕ (ದಾಕ್ಷಿಣಾತ್ಯ) ಸಂಗೀತದ ಆಚಾರ್ಯ ಪುರುಷನಾಗಿದ್ದಾನೆ ಇವನ ಜೀವನ ಚರಿತೆ ಹಾಗೂ ಕೀರ್ತನಾದಿಗಳ ವಿಚಾರ ಕೊಂಚ ಪರಿಚಯಿಸಲಾಗಿದೆ.

ಶ್ರೀನಿವಾಸನಾಯಕನೆಂಬ ಚಿನಿವಾಲನು ಮಹಾ ಧನಿಕನು. ಇವನು ಅತಿಲೋಭಿಯಾಗಿದ್ದನು, ಬೇಡಲು ಬಂದವಗೆ ಕಾಸೊಂದನ್ನು ಕೊಡಲು ಆಶಿಸುತ್ತಿದ್ದಿಲ್ಲ. ಈತನ ಮಡದಿ ಅಷ್ಟು ಲೋಭವುಳ್ಳವಳಲ್ಲ, ಮನೆಗೆ ಬಂದವರಿಗೆ ಒಂದಿಷ್ಟು ಉಪಚಾರ—ಸಹಕಾರನೀಯುತ್ತಿದ್ದಳು. ಶ್ರೀನಿವಾಸನಾಯಕನು ಹುಟ್ಟಿನಿಂದ ಮಾಧ್ವ ಬ್ರಾಹ್ಮಣನು, ಪಾರಂಪರ್ಯವಾದ ವ್ಯಾಪಾರ ವೃತ್ತಿಯನ್ನು ಅವಲಂಬಿಸಿದ್ದರೂ, ಕೆಲವೊಂದು ತಾತ್ವಿಕ ವಿಚಾರಗಳನ್ನು ಅಂತಿದ್ದನು ಆಸೆಯ ಮುಂದೆ ಆದಾವ ಗುಣವೂ ನಿಲ್ಲಲಾರದು!

ಒಮ್ಮೆ ಒಬ್ಬ ಮುದಿ ಬ್ರಾಹ್ಮಣನು ಈತನಲ್ಲಿ ಧನ ಸಹಾಯವನ್ನು ಅಪೇಕ್ಷಿಸಿದರೆ ಕೊಡಲಾರದೆ, ನಾಳೆ ಬಾ ಎಂದು ಹೇಳುತ್ತಾ ಕಾಲ ಕಳೆಯುತ್ತಿದ್ದನು. ಆ ಮುದುಕನು ಕೇವಲ ನಿಮಿತ್ತವಾಗಿ—ಈತನ ಪರೀಕ್ಷಾರ್ಥವಾಗಿ-ಬರುವ ದೇವನೆಂದು ಇವನಿಗೇನು ಗೊತ್ತು? ಕೆಲವು ದಿನಗಳ ಬಳಿಕ, ದಿನಾಲೂ ಬರುವ ಬ್ರಾಹ್ಮಣನ ಕಾಟವನ್ನು ತಪ್ಪಿಸಲೆಂದು, ನವಕಲು ಕಾಸಿನ ರಾಶಿಯಲ್ಲೊಂದನ್ನು ಕೊಳ್ಳುವಂತೆ ಹೇಳಿದನು. ಅದೇನೂ ಕೊಡಲಾರನೆಂಬ ಆಸೆಯ ಗಂಟು ಕುಸು ಸಡಿಲಿತು.ಆ ಬ್ರಾಹ್ಮಣನು ಅದನ್ನೊಲ್ಲದೆ ಮತ್ತೆ ಶ್ರೀನಿವಾಸನಾಯಕನ ಮನೆಗೆ ತೆರಳಿ ಸಹಾಯವನ್ನು ಯಾಚಿಸಿದನು. ಆಕೆಯೂ ದರೋ ತನ್ನ ನಿತ್ಯಾಭರಣಗಳಲ್ಲೊಂದಾದ ಮೂಗುತಿಯನ್ನು ದಾನವಿತ್ತಳು. ಹೆಂಗಸು ನಿತ್ಯಾಭರಣವೊಂದನ್ನು ದಾನವೀಯುವುದೆಂದರೇನು? ಅದು ತನ್ನ ತವರು ಮನೆಯಿಂದ ದೊರೆತುದರಿಂದ ಅದರಲ್ಲಿ ತನಗೆ ಪೂರ್ಣ ಹಕ್ಕುಳ್ಳದೆಂದು, ಅದು ತನ್ನ ಪತಿಗೆ ತಿಳಿಯದೆಂದು ಆಕೆ ಯೋಚಿಸಿರಬಹುದು.

ಆ ದೊರಕಿದ ವಸ್ತುವನ್ನು ಮಾರಲೆಂದು ಶ್ರೀನಿವಾಸನಾಯಕನಲ್ಲಿಗೆ ಆ ಬ್ರಾಹ್ಮಣನು ಬಂದನು ಅದು ತನ್ನ ಮಡದಿಯದೆಂದು ಗುರುತು ಹಚ್ಚಿದ ಶ್ರೀನಿವಾಸನಾಯಕನು ಅದರ ಹಣಕ್ಕೆ ತಡೆದು ಬರುವಂತೆ ಹೇಳಿ, ಕೂಡಲೆ ಮನೆಗೆ ಸಾಗಿ, ಹೆಂಡತಿಯೊಡನೆ ನತ್ತು ತೋರಿಸಲು ಒತ್ತಾಯಿಸಿದನು. ಅವಳಿಗೆ ಈ ವ್ಯಾಪಾರವೇನು ಗೊತ್ತು? ಆದರೆ ಆಕೆ, ನಿಜ ಸಂಗತಿ ಹೇಳಿದರೆ ಪತಿಯು ಭಂಗಿಸುವನು, ನತ್ತು ತೋರಿಸದೆ ಅವನು ಬಿಡಲೊಲ್ಲನು, ಆಕೆ ಉಭಯತಃ ಸಂಕಟದಲ್ಲಿ ಸಿಕ್ಕಿದಳು. ಇದಕ್ಕೆ ಪರಿಹಾರವೆಂದರೆ, "ಆತ್ಮ ಬಲಿದಾನ"ವೆಂದು ಭಾವಿಸಿದ ಆಕೆ ಮನೆಯೊಳಗೆ ಒಟ್ಟಲಲ್ಲಿ ವಿಷವರೆದು ಕುಡಿಯಲೆಂದು ಮೇಲೆತ್ತಿದಾಗ, ಆ ಬಟ್ಟಲಿಗೆ ಅದೇ ಆಕೆಯ ನತ್ತು "ರಣ್" ಎಂದು ಬಿದ್ದಿತು. ದೇವರು ಸಹಕಾರವಿತ್ತವರ ಭಕ್ತರ ಮಾನ ಪ್ರಾಣಗಳ ರಕ್ಷಣೆ ಮಾಡುವನೆಂಬುದು ಇಲ್ಲಿ ಗೋಚರಿಸುತ್ತದೆ.

ಆಕೆ ಅದನ್ನು ಶ್ರೀನಿವಾಸನಾಯಕನಿಗೆ ತೋರಿ ಕೊಟ್ಟಳು. ಅದಾಗ ಮರಳಿ ಅಂಗಡಿಯಲ್ಲಿ ನತ್ತು ಹುಡುಕಲು ಅಲ್ಲಿರಲಿಲ್ಲ ಇದೊಂದು ದೈವೀ ಮಾಯೆಯೆಂದು ಆಗ ಇವನಿಗೆ ಅರಿವಾಯಿತು. ನತ್ತು ಅಂಗಡಿಗೆ ಬಂದ ಕಾರಣ, ಪುನಃ ಮನೆಯಲ್ಲಿ ದೊರಕಿದ ಕಾರಣಗಳನ್ನು ಆಕೆಯಿಂದ ತಿಳಿದು, ತನ್ನೊಳಗೆ ಚಿಂತಿಸ ಹತ್ತಿದನು. ಇದೀಗ ಇವನ ಮನಸ್ಸು ಪರಿವರ್ತನೆಗೊಂಡುದು ಅಭೂತಪೂರ್ವವಲ್ಲಾದರೂ ಆಶ್ಚರ್ಯತಮವಾಗಿದೆ. 'ಅತಿ'ಯಾದ ಗುಣವಾಗಿಲಿ, ದೋಷವಾಗಲಿ, ಪರಿವರ್ತನೆಗೆಡೆಯೆಂಬುದು ಚರಿತೆಯಿಂದ ನಮಗೆ ತಿಳಿಯುತ್ತದೆ:

ರಾಜಭೋಗಗಳನ್ನು ಅನುಭವಿಸುತ್ತಾ ಸುಖದಿಂದ ಇದ್ದ ಶುದ್ಧೋದನನ ಪುತ್ರನು ಆದೊಮ್ಮೆ ತಿರುಗಾಡುತ್ತಾ, ರೋಗಿ ಮೊದಲಾದವರನ್ನು ಕಂಡುದರಿಂದ ಮನಃ ಪರಿವರ್ತನೆಗೊಂಡು ಹೇ, ಳಕೇಳದೆ ರಾತ್ರಿಯಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟು, ಮನೆಯಿಂದ ಹೊರಟು ತಪಸ್ಸು ಗೈದು ಬುದ್ಧನಾದನೆಂದು ಕೇಳುತ್ತೇವೆ. ಅಶೋಕ ಮಹಾರಾಜನು ರಾಜ್ಯ ವಿಸ್ತರಣಾಭಿಲಾಷೆಯಿಂದ ಕಳಿಂಗಕ್ಕೆ ಸೇನೆಯೊಂದಿಗೆ ಸಾಗಿ ಹೋರಾಡಿಗೆದ್ದರೂ, ಉಭಯ ಪಕ್ಷಗಳ ಹಲವಾರು ಮಂದಿ ಸತ್ತು ಬಿದ್ದು-ನರಳುವ-ರಣರಂಗದ ಭೀಕರ-ಕರುಣಾಜನಕ ದೃಶ್ಯವನ್ನು ನೋಡಿ ಮನಃ ಪರಿವರ್ತನೆಗೊಂಡು, ಇನ್ನು ಮುಂದೆ ಯುದ್ಧ ಮಾಡಲಾರೆನೆಂಬ ಪ್ರತಿಜ್ಞೆ ಗೈದನು. ಅದು ಮಾತ್ರವಲ್ಲ, ತನ್ನ ಆಳ್ವಿಕೆಯಡೆಯಲ್ಲಿ ಹಾಗೂ ಪಕ್ಕದ ರಾಜ್ಯಗಳಲ್ಲೂ ವಿದೇಶಗಳಲ್ಲೂ ಧರ್ಮ ಪ್ರಚಾರಕ್ಕೆ ಧರ್ಮ ಮಹಾಮಾತ್ರರನ್ನು ಕಳುಹಿದನೆಂದು ತಿಳಿಯುತ್ತೇವೆ. ತುಳಸೀದಾಸನೆಂಬ ಮಹಾಭಕ್ತ ಕವಿಯು—ಆ ಮೊದಲು—ಒಮ್ಮೆ ಅತಿ ಪ್ರೇಮಾವಸ್ಥೆಯಿಂದ ಹೆಂಡತಿಯನ್ನು ಒಡಗೂಡಲು ಸಾಗುತ್ತಾ, ತೆಪ್ಪವೆಂದು ಹೆಣದ ಮೇಲೆ ಕೂತು ಹೊಳೆಯನ್ನು ದಾಟಿದ್ದು. ಗೋಡೆಯಲ್ಲಿ ಜೋಲುವ ಹಗ್ಗವೆಂದು ಸರ್ಪವನ್ನು ಹಿಡಿದು ಮಹಡಿಗೇರಿದುದು, 'ಈ ತರದ ಅತಿ ಪ್ರೇಮವನ್ನು ದೇವರಲ್ಲಿರಿಸಿದರೆ ಸುಖ-ಶಾಂತಿಗಳು ಒದಗುತ್ತಿದ್ದುವೆಂ'ಬ ಮಡದಿಯ ಮಾತಿನಿಂದ ಮನಸ್ಸು ಪಲ್ಲಟವಾಗಿ ಮಹಾಭಕ್ತ ಕವಿಯಾದನೆಂದು ಪ್ರತೀತಿಯಿದೆ. ಈ ಶ್ರೀನಿವಾಸನಾಯಕನು ಹೆಂಡತಿಯ ನತ್ತಿನ ಮೂಲಕ ದೇವರ ಮಹಿಮೆ ಹಾಗೂ ಅತ್ಯಾಶೆಯ ಫಲಗಳನ್ನು ತಿಳಿದು ಮನಃ ಪರಿವರ್ತನೆಗೊಂಡು, ಸರ್ವಸ್ವವನ್ನೂ ತ್ಯಾಗಮಾಡಿ ಗುರುಗಳನ್ನು ಆಶ್ರಯಿಸಿ ಹರಿದಾಸವರೇಣ್ಯನಾದನೆಂಬುದು ಗಮನೀಯವಾಗಿದೆ ಈತನ ಕತೆಯ ಊಹನೆಗೆ ಕೀರ್ತನೆಗಳಲ್ಲಿ ಅವಕಾಶವಿದೆ, ಇದು ಕಲ್ಪಿತವೆನ್ನಲಾಗುವುದಿಲ್ಲ!

ಶ್ರೀನಿವಾಸನಾಯಕನ ನಾಲ್ವರು ಗಂಡು ಮಕ್ಕಳು, ಒಬ್ಬಳು ಮಗಳು, ಹೆಂಡತಿ ಹಾಗೂ ಒಬ್ಬ ಆಳುಗಳೆಂಬ ಪರಿವಾರವಿತ್ತು. ಇವರೆಲ್ಲರೂ ಹರಿಕೀರ್ತನೆಗಳನ್ನು ರಚಿಸಿದ್ದಾರೆಂದು ಕೀರ್ತನೆಗಳಲ್ಲಿರುವ ವಿವಿಧ ಶಬ್ದಗಳ ಸಂಯುಕ್ತತೆಯ ಮುದ್ರಿಕೆಯಿಂದ ತಿಳಿಯುತ್ತದೆಯೆಂದು ಕೆಲವರು ಹೇಳುತ್ತಾರೆ. ಆದರೆ. ಈ ಮಾತಿಗೆ ಅಷ್ಟು ಆಧಾರಗಳಿಲ್ಲ ಕೀರ್ತನೆಗಳಲ್ಲಿ ಗುರು ಪುರಂದರ, ಸ್ವಾಮಿ ಪುರಂದರ, ತಂದೆ ಪುರಂದರ, ಇತ್ಯಾದಿಶಬ್ದಗಳು ಪ್ರಾಸಾನುಸಾರವಾಗಿ ಹಾಗೂ ಸಂದರ್ಭೋಚಿತವಾಗಿ ಬಳಸಲಾಗಿವೆ. ಅದೊಂದು ಕೀರ್ತನೆಯಲ್ಲಿ ಪುರಂದರವಿಠಲನ ಮಗ ಮಧ್ವಪತಿಯು ಅದೊಮ್ಮೆ ದೇವರ ಪೂಜೆಯನ್ನು ವಿಶೇಷತಃ ಮಾಡಿದನೆಂದು ಹೇಳಿದೆ ಇದೊಂದು ಹೆಸರು ಬೇರೆ ತಾಮ್ರಶಾಸನದಲ್ಲೂ ಹೇಳಲಾಗಿದೆ. ಆ ಮೇರೆಗೆ ಪುರಂದರ ವಿಠಲನು ಸಪರಿವಾರನಾಗಿ ಗುರುಗಳಲ್ಲಿಗೆ ಹೋಗಿ, ಅವರೆಲ್ಲರೊಂದಿಗೆ ಕೀರ್ತನೆಗಳನ್ನು ರಚಿಸಿದನೆಂದು ಹೇಳುವಲ್ಲಿ ಆರೆಂಟು ಮಂದಿಯ ಸಂಪರ್ಕ ಹೇಳಲು ಆಧಾರಗಳಿಲ್ಲ. ಏಕೆಂದರೆ ಪುರಂದರ ವಿಠಲನ ಪುತ್ರರೆಂದು ತಾಮ್ರ ಶಾಸನದಲ್ಲಿ ಹೆಸರಿಸಿದ ಮಂದಿಯೆಲ್ಲರೂ ಕೀರ್ತನೆಗಳನ್ನು ರಚಿಸಿದರೆಂದು ಹೇಳಲು ಅವಕಾಶವೂ ಇಲ್ಲ. ಪ್ರಸ್ತುತವೆಂದು ಆ ಶಾಸನ ವಿಚಾರ ಬರೆಯಲಾಗಿದೆ:

"ಶ್ರೀ ಪುರಂದರದಾಸರ ವಿಚಾರದಲ್ಲಿ ನಿಶ್ಚಿತವಾದ ಚರಿತ್ರಾಂಶಗಳು ಇದುವರೆಗೆ ಉಪಲಬ್ಧವಾಗಿಲ್ಲ, ಕೆಲದಿನಗಳ ಹಿಂದೆ ಒಂದು ತಾಮ್ರಶಾಸನವನ್ನು ಪರಿಶೋಧಿಸುತ್ತಿರುವಾಗ ಈ ದಾಸಶ್ರೇಷ್ಠರಿಗೆ ಸಂಬಂಧಿಸಿದ ಕೆಲವು ಮಹತ್ತ್ವದ ವಿಷಯಗಳು ಬೆಳಕಿಗೆ ಬಂದಿವೆ.

ಈ ಶಾಸನವು ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ದೊರೆಯಿತು. ಇದರ ಕಾಲ ವಿಜಯನಗರದ ಕೃಷ್ಣದೇವರಾಯನ ಆಳಿಕೆಯ ಕ್ರಿ. ಶ. ೧೫೨೬ ಆಗುತ್ತದೆ, ಈ ಶಾಸನದಲ್ಲಿ ಸ್ವತಃ ಕೃಷ್ಣದೇವರಾಯನು ವ್ಯಾಸತೀರ್ಥರಿಗೆ ಎಂದರೆ ವ್ಯಾಸರಾಯರಿಗೆ ಒಂದು ಸಂಪೂರ್ಣಗ್ರಾಮವನ್ನು ದಾನವಾಗಿ ಕೊಟ್ಟ ವಿವರಗಳು ಬರುತ್ತವೆ. ಈ ದಾನವನ್ನು ಸ್ವೀಕರಿಸಿದ ವ್ಯಾಸರಾಯರು ಆ ಗ್ರಾಮದಲ್ಲಿ ಅನೇಕ ವೃತ್ತಿಗಳನ್ನು ಕಲ್ಪಿಸಿ, ಅವುಗಳನ್ನು ಬೇರೆ ಬೇರೆ ಬ್ರಾಹ್ಮಣರಿಗೆ ಹಂಚಿ ಕೊಟ್ಟರು.

ಹೀಗೆ ಹಂಚಿದ ವೃತ್ತಿಗಳನ್ನು ಪಡೆದ ಮೂವರು ಶ್ರೀ ಪುರಂದರದಾಸರ ಪುತ್ರರು, ಇವರ ಹೆಸರುಗಳು ಲಕ್ಷ್ಮಣದಾಸ, ಹೇಬಣ (ಹೆಬ್ಬಣ್ಣ?) ದಾಸ, ಮತ್ತು ಮಧ್ವಪದಾಸ ಇವರ ಕುಲವಿಚಾರವನ್ನು ತಿಳಿಸುವ ಸಂದರ್ಭದಲ್ಲಿ ಇವರು ವಸಿಷ್ಠ ಗೋತ್ರದವರು ಮತ್ತು ಯಜುಸ್ ಶಾಖೆಯವರೆಂದು ಹೇಳಿದೆ. ಇದರಿಂದ ಶ್ರೀ ಪುರಂದರದಾಸರೂ ಇದೇ ಗೋತ್ರ ಮತ್ತು ಶಾಖೆಯವರಾಗಿದ್ದರೆಂಬ ಸಂಗತಿ ಸ್ಫುಟವಾಗುತ್ತದೆ.

"ಶ್ರೀ ಪುರಂದರದಾಸರ ಬಗ್ಗೆ ಶಾಸನಾಧಾರವು ಇದುವರೆಗೆ ದೊರೆತಿರಲಿಲ್ಲ. ಇಂಥ ಒಂದು ಪ್ರಮಾಣವನ್ನು ಈ ಶಾಸನವು ಮೊದಲು ಬಾರಿ ಒದಗಿಸುತ್ತದೆ" (ಕರ್ಮವೀರ. ತಾ. 8—4—೬7) ಈ ಶಾಸನ ಶ್ಲೋಕಗಳನ್ನು ಎತ್ತಿ ಬರೆದ ಬೇರೆ ಲೇಖನವು ಇದೀಗ ಪ್ರಕಟವಾಗಿದೆ (ಕರ್ಮವೀರ, ತಾ. 13—1—64).

ಇಲ್ಲಿ ಚಾರಿತ್ರಿಕ ವಿಚಾರವಾಗಿ ಕುಸು ವಿವಾದಗಳು ಕಾಲಮಾನತಃ—ಕಾಣುವುವಾದರೂ, ವಾಸ್ತವಿಕವಾಗಿ ಇಲ್ಲಿಯ ವಿಷಯಗಳು—ದಾನವಸ್ತು, ವ್ಯಕ್ತಿಗಳು, ಅವರ ಕುಲಗೋತ್ರಾದಿಗಳು—ನಮಗೆ ಪ್ರಾಮಾಣಿಕಗಳಾಗಬಹುದು. ಪ್ರಕೃತ, ಶ್ರೀ ಪುರಂದರದಾಸರ ಪುತ್ರರೆಂದು ಇಲ್ಲಿ ಮೂವರ ಹೆಸರು ಹೇಳಿದೆ, ಇವರ ಮಧ್ವಪದಾಸನ ಹೆಸರು ಮಧ್ವಪತಿಯೆಂದು ಕೀರ್ತನೆಗಳಲ್ಲಿ ಹೇಳಿದುದಿರ ಬೇಕು. ಉಳಿದಿಬ್ಬರ ಹೆಸರು ಕೀರ್ತನೆಗಳಲ್ಲಿ (ದೊರಕಿದವುಗಳಲ್ಲಿ) ಇಲ್ಲ. ಪರಂತು, ಇಲ್ಲಿ ನಾಲ್ಕು ಮಕ್ಕಳ ಹೆಸರಿಲ್ಲವೆಂದು ಮುಖ್ಯ ಗಮನೀಯವಾಗಿದೆ. ಹಾಗಾಗಿ, ಈ ಮೊದಲೆಂದ ಪ್ರವಾದವು ಆಧಾರ ಯುಕ್ತವಾಗಿಲ್ಲ. ಹಾಗೂ ಹರಿದಾಸರ ಮಕ್ಕಳೆಲ್ಲರೂ ಹರಿಕೀರ್ತನ ಕಾರರಾಗಬೇಕೆಂದಿಲ್ಲವೆಂಬ ಲೌಕಿಕ ನ್ಯಾಯದಿಂದ; ಶಾಸನದಲ್ಲಿ ಪ್ರತಿಯೊಬ್ಬನಿಗೆ ದಾಸನೆಂಬ ಪದವಿದ್ದರೂ, ದೊರಕಿದ ಕೀರ್ತನೆಗಳಲ್ಲಿ ಪುರಂದರ ವಿಠಲನ ಪುತ್ರ "ಮಧ್ವಪ(ತಿ)"ಯೊಬ್ಬನ ಹೆಸರಿದೆಯೆಂದು ಸ್ಪಷ್ಟವಾಗುತ್ತದೆ.



ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ ಜೈ ಹಿಂದ್ ಹಂಚು ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ಕಾಶ್ಮೀರದ ಮೇಲೆ

ಪಾಕಾಸುರನ ಕಪ್ಪು ನೆರಳು

ಪಾಕಿಸ್ತಾನದ ಒತ್ತಾಯದಿಂದ ಭಾರತದ ಅನನುಕೂಲವನ್ನೂ ಕಡೆಗಣಿಸಿ ಸೇರಿದ ಭದ್ರತಾಸಮಿತಿಯ ಸಭೆಯು ಕೊನೆಗೂ ಭಾರತದ ಅಪೇಕ್ಷೆಯಂತೆ ಮೇ ತಿಂಗಳ ಎನೆಯ ದಿನಕ್ಕೆ ಮುಂದುವರಿಯಿತು ಇದು ಭಾರತದ ಒಯುಕೆಯನ್ನು ಈಡೇರಿಸಿತೆಂದು ತೃಪ್ತಿಪಡಬಹುದಾದರೂ ವಾಸ್ತವಿಕವಾಗಿ ಪಾಶ್ಚಾತ್ಯ ಬಣದ ಮೇಲೆ ಪಾಕಿಸ್ತಾನವು ಹೇರಿದ ಆಗ್ರಹ ಮತ್ತು ಒತ್ತಡಗಳಿಗೆ ಅವಕಾಶವನ್ನೂ ಕಲ್ಪಿಸಿಕೊಟ್ಟಿತೆಂಬುದು ಸತ್ಯ. ಪಾಶ್ಚಾತ್ಯರು ಭಾರತದ ಪರವಾದ ನೀತಿಯನ್ನು ಬಿಟ್ಟುಕೊಟ್ಟಿರುವುದು ಮೊದಲೇ ವ್ಯಕ್ತವಾಗಿದೆ, ಈ ಘಟನೆಯಿಂದ ಭಾರತಕ್ಕಾದ ವಿವಂಚನೆಗೆ ತಾವೇ ಕಾರಣರಲ್ಲವೆಂಬುದನ್ನವು ಪ್ರಕಟಪಡಿಸುವ ಸಾಹಸವನ್ನೂ ಮಾಡಿದವೆನ್ನಬಹುದು

ಭದ್ರತಾ ಮಂಡಳದ ಸಭೆಯು ಕಳೆದ ತಿಂಗಳು ಅನಿರ್ದಿಷ್ಟಾವಧಿಯ ವರೆಗೆ ಮುಂದುವರಿದ ಮೇಲೆ, ಮತ್ತೀಗ ಕಾಶ್ಮೀರದ ಚರ್ಚೆಯನ್ನು ಎತ್ತಿಕೊಳ್ಳಬೇಕಾದ ಯಾವ ಹೊಸ ಸನ್ನಿವೇಶಗಳೂ ಸಂಭವಿಸದೆ ಇದ್ದರೂ ಪಾಕ್ ಇಚ್ಛೆಯಂತೆ ಅದು ಮರಳಿ ಸಭೆ ಸೇರಿತು ಭಾರತದ ಪರವಾಗಿ ವಾದಿಸಲು ಮಂತ್ರಿ ಮಟ್ಟದ ಪ್ರತಿನಿಧಿಗೆ ಅನುಕೂಲವಾದರೂ ಈ ಆಕ್ಷೇಪವನ್ನು ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ ಆದ ದರಿಂದ ಭಾರತವು ಬೇರೊಂದು ದಾರಿಯನ್ನು ಹಿಡಿಯಲೇ ಬೇಕಾಯಿತು ಆಗಕ್ಕೆಂದೇ ಸಂ ರಾ. ಸಂಘದಲ್ಲಿನ ಭಾರತೀಯ ಪ್ರತಿನಿಧಿ ಶ್ರೀ ಬಿ. ಎನ್ ಚಕ್ರವರ್ತಿಯವರಿಗೆ ತಕ್ಕ ನಿರ್ದೇಶವಿತ್ತಿತು ಭಾರತ ಸರಕಾರ ಸಮಿತಿಯ ಸಭೆಯನ್ನು ಅನುಕೂಲ ದಿನದ ವರೆಗೆ ಮುಂದುವರಿಸಬೇಕೆಂದೂ ಒಂದು ವೇಳೆ ಈ ಕೇಳಿಕೆಯು ಈಡೇರದಿದ್ದರೆ, ಭದ್ರತಾ ಮಂಡಳಿಯ ಸಭೆಯನ್ನು ಬಹಿಷ್ಕರಿಸಬೇಕೆಂದೂ ಭಾರತವು ನಿಲುವು ತಳೆಯಿತು ಇದು ಅನಿವಾರ್ಯ ಪರಿಸ್ಥಿತಿಯ ನೀತಿಯೆಂದು ಹೇಳಲೇಬೇಕು.

ಪಾಕಿಸ್ತಾನದ ಇಚ್ಛೆಯನ್ನು ತಿರಸ್ಕರಿಸಲು ಒಪ್ಪದ ಪಾಶ್ಚಾತ್ಯರು ಭಾರತದ ಅಭಿಪ್ರಾಯಕ್ಕೆ ವಿರುದ್ಧವಾದ ಯಾವಗೊತ್ತುವಳಿಯನ್ನೂ ರಷ್ಯವು ಸಮ್ಮತಿಸುವುದಿಲ್ಲವೆಂದು ಮನವರಿಕೆ ಮಾಡಿಕೊಂಡರು ಮುಂದೆ, ಭಾರತದ ಆಶೆಯಂತೆ ಸಭೆಯನ್ನು ಮುಂದುವರಿಸಲು ಒಪ್ಪಿದುವು. ಆದರೆ, ಈ ಬಾರಿ ಭದ್ರತಾಸಮಿತಿಯೊಂದು ಶರ್ತ ಹಾಕಿರುವುದನ್ನು ಅವಶ್ಯ ಗಮನಿಸಬೇಕು ಇಕ್ಕಡೆಯವರೂ ಕಾಶ್ಮೀರದ ಸ್ಥಿತಿಗತಿಗಳನ್ನೂ ಒದಲಾಯಿಸುವಂತಹ ಯಾವ ಕ್ರಮವನ್ನೂ ಕೈಗೊಳ್ಳಬಾರದು ಎಂದದು ಕೇಳಿಕೊಂಡಿದೆ. ಅಲ್ಲಿ ಶಾಂತಿಯನ್ನು ಕೆಡಿಸುವ, ಭದ್ರತೆಗೆ ಆತಂಕವಾಗುವ ವಸ್ತು ಸ್ಥಿತಿಯನ್ನ ಮತ್ತಷ್ಟು ಗಡಚು ಮಾಡುವ ಕ್ರಮಗಳನ್ನು ಭಾರತ ಮತ್ತು ಪಾಕಿಸ್ತಾನಗಳು ಕೈಗೊಳ್ಳಬಾರದು ಎಂಬು ಇದರ ಆಶಯ.

ಆದರೆ ಕಾಶ್ಮೀರದ ಮೇಲೆ ಭಾರತಕ್ಕೆ ಸಾರ್ವಭೌಮಾಧಿಕಾರವಿರುವುದು ಅದು ಭಾರತ ಒಕ್ಕೂಟದ ಒಂದು ಭಾಗ ಆದ ದರಿಂದ ಪಾಕಿಸ್ತಾನವಾಗಲೀ ಭದ್ರತಾ ಮಂಡಳಿಯಾಗಲೀ ಈ ಸಾರ್ವಭೌಮಾಧಿಕಾರವನ್ನು ಕೆದಕಲು ಅಧಿಕಾರಗೊಂಡಿಲ್ಲವೆಂಬುದನ್ನು ಮರೆಯಬಾರದು ಕಾಶ್ಮೀರದಲ್ಲಿ ಯಾವ ಘಟನಾತ್ಮಕ ಪರಿವರ್ತನೆಯನ್ನೂ ಮಾಡುವುದಕ್ಕೆ ಭಾರತವು ಅಧಿಕಾರ ಹೊಂದಿದೆ—ಇದು ಸೂರ್ಯ ಚಂದ್ರರಂತೆ ಸತ್ಯ ಈ ವಿಷಯವನ್ನು ಶ್ರೀ ಚಕ್ರವರ್ತಿಯವರು ಭದ್ರತಾಮಂಡಳದಲ್ಲಿ ಸ್ಪಷ್ಟಪಡಿಸಿದ್ದಾರೆ.

ಕಾಶ್ಮೀರದಲ್ಲಿರುವ ಸಮರವಿರಾಮರೇಖೆಯ ಉಲ್ಲಂಘನೆಯನ್ನು ಪದೇ ಪದೇ ಮಾಡುತ್ತಿರುವ ಪಾಕಿಸ್ತಾನದ ಪ್ರತಿನಿಧಿ ಶ್ರೀ ಭುಟ್ಟೋರವರು ತನ್ನ ಸರಕಾರದ ಪರವಾಗಿ ತಾವು ವಸ್ತು ಸ್ಥಿತಿಯನ್ನು ಕಾಯ್ದುಕೊಳ್ಳುವ ಭರವಸೆಯೇನೋ ಇತ್ತರು. ಆದರೆ ಅವರ ಭರವಸೆಯು ಎಲ್ಲಿ ಉಳಿದಿದೆಯೆಂಬುದು ನಿಸ್ಸಂಧಿಗ್ಧ ಒಂದಲ್ಲನೂರು ಬಾರಿ ಸಮರವಿರಾಮ ರೇಖೆಯನ್ನು ಹಾದು ಭಾರತೀಯ ಭಾಗದಲ್ಲಿ ಹಿಂಸಾತ್ಮಕ ಉದ್ರೇಕಕಾರಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವ ಪಾಕ್ ನಾಯಕರ ಶಾಂತಿ ಮಂತ್ರವು ಕೇವಲ ಮುಖವಾಡ ಮಾತ್ರ ಗಡಿಯುಲ್ಲಾಗುತ್ತಿರುವ ಗುಂಡಿನ ಸುರಿಮಳೆ, ನಿರಪರಾಧಿ ಭಾರತೀಯ ಕಾಶ್ಮೀರಿಗಳ ಕೊಲೆ, ಗುಪ್ತಚಾರರ ರವಾನೆ—ಇತ್ಯಾದಿಗಳೊಡನೆ ಇದೀಗ ಹೊಸ ವಾರ್ತೆಯೂ ಬಂದಿದೆ. ಸಮರ ವಿರಾಮ ರೇಖೆಯ ಉದ್ದಕ್ಕೂ ಪಾಕಿಸ್ತಾನವು ಸೇನೆಯನ್ನು ಜಮಾಯಿಸುತ್ತ ಇದೆ, ವಿಲಿಟರಿ ಕಾರುಗಳ ಸಂಚಾರ ಅಧಿಕವಾಗುತ್ತಿದೆ; ದೊಡ್ಡ ದೊಡ್ಡ ಟ್ಯಾಂಕರುಗಳನ್ನು ಕೂಡಿಡಲಾಗುತ್ತಿದೆ—ಇದರ ಅರ್ಥವೇನು? ಕಿರುಕುಳವನ್ನು ಹೆಚ್ಚಿಸುತ್ತ ಉದ್ರೇಕಕಾರಿ ಪರಿಸ್ಥಿತಿಯನ್ನು ಹುಟ್ಟಿಸುತ್ತ ಮುಂದುವರಿಯುವುದೇ ಆಗಿದೆ ಆದರೂ ತಾನು ಸಂಭಾವಿತನೆಂದು ಹೇಳಿಕೊಂಡು ಭುಟ್ಟೋ ತಿರುಗುತ್ತಾರೆ

ಭಾರತೀಯ ಪ್ರಧಾನಿ ಪಂಡಿತ ಜವಾಹರಲಾಲರು ಲೋಕಸಭೆಯಲ್ಲಿ ಒಂದು ಮಾತು ಹೇಳಿದರು ಅತ್ಯಂತಾವಶ್ಯಕವೆನಿಸಿದರೆ, ಭಾರತವು ಸಮರ ವಿರಾಮ ರೇಖೆಯನ್ನೂ ಮೀರಿ ಮುಂದುವರಿಯುವುದು ಎಂದು ಆವಶ್ಯಕತೆ ಬೀಳುವುದು ಎಂದರೆ ಏನ? ಪಾಕ್ ಸೇನೆಯು ಈ ರೇಖೆಯನ್ನು ದಾಟಿ ಬಂದಿತೆಂದರೆ ಅದು ಅಂತಾರಾಷ್ಟ್ರೀಯ ಅನ್ಯಾಯವಾಗುವು

(೧೫ನೇ ಪುಟ ನೋಡಿರಿ)



ನವಯುಗ

ವರುಷ	ಉಡುಪಿ	ವಾರ
೪೩	೨೬-೩-೧೯೬೪	೩೦

ತಟಸ್ಥರ ಸಮ್ಮೇಳನ

ಇಂಡೊನೇಶ್ಯದ ಅಧ್ಯಕ್ಷ ಡಾ| ಸುಕರ್ಣರು ದ್ವಿತೀಯ ಬಾಡುಂಗ ಪರಿಷತ್ತಿನ ಕನಸನ್ನು ಚೀನೀಯ ಪ್ರಚೋದನೆಯಿಂದ ನನಸಾಗಿಸುವತ್ತ ಸಾಗಿದ್ದಾರೆ. ಇತ್ತ ಸಿಂಹಳದ ಪ್ರಧಾನಿ ಶ್ರೀಮತಿ ಸಿರಿಮಾವೋ ಭಂಡಾರನಾಯಿಕೆಯವರು ಆಫ್ರೀಕ್ಯಾದ ಹೆಚ್ಚಿನ ರಾಷ್ಟ್ರಗಳ ಬಯಕೆಯಂತೆ ದ್ವಿತೀಯ ಬೆಲ್‌ಗ್ರೇಡ್ ಸಮ್ಮೇಳನದ ಪೂರ್ವಸಿದ್ಧತೆಯಲ್ಲಿ ತೊಡಗಿದ್ದಾರೆ. ಬೆಲ್‌ಗ್ರೇಡ್ ಸಮ್ಮೇಳನವು ತಟಸ್ಥ ರಾಷ್ಟ್ರಗಳ ಪರಿಷತ್ತು. ಜಗತ್ತು ಪೂರ್ವ ಪಶ್ಚಿಮವೆಂದು ಇಬ್ಭಾಗವಾಗಿ ಒಂದರಿಂದ ಇನ್ನೊಂದು ಸ್ವಲ್ಪ ಸ್ವಲ್ಪವೇ ದೂರ ಸರಿಯುತ್ತ ಮುಖಾಮುಖಿಯಾಗದೆ ಇರುವಾಗ ತಟಸ್ಥ ದೇಶಗಳ ಮಹತ್ವವು ಅಷ್ಟಿಷ್ಟಲ್ಲ. ಗುಂಪುಗಾರಿಕೆಯಿಂದ ಯಾವ ಲಾಭವೂ ಇಲ್ಲವೆಂದು ಕಂಡುಕೊಂಡ ಸ್ವತಂತ್ರ ರಾಷ್ಟ್ರಗಳು, ಮುಖ್ಯವಾಗಿ ಅಭಿವೃದ್ಧ ರಾಷ್ಟ್ರಗಳು ತಮ್ಮ ದೇಶದ ಪುನಾರಚನಾ ಕಾರ್ಯಕ್ಕೆ ಶ್ರಮಿಸಬೇಕಾಗಿರುವಾಗ ತಟಸ್ಥ ನೀತಿಯೇ ತಾರಕೋಪಾಯವೆಂದು ಕಂಡುಕೊಂಡಿವೆ. ೧೯೬೧ರಲ್ಲಿ ಮೊದಲಿಗೆ ಬೆಲ್‌ಗ್ರೇಡದಲ್ಲಿ ಈ ತಟಸ್ಥ ರಾಷ್ಟ್ರಗಳ ಮೊದಲ ಸಭೆಯು ಸೇರಿತ್ತು. ಅಂದಿನಿಂದ ಇಂದಿನವರೆಗೆ ಹಲವಾರು ದೇಶಗಳು ಸ್ವತಂತ್ರಗೊಂಡುವು. ಇವುಗಳು ಯಾವ ಬಣ್ಣವನ್ನೂ ಸೇರಿಕೊಳ್ಳದೆ ತಟಸ್ಥ್ಯ ನೀತಿಯನ್ನೇ ಸ್ವೀಕರಿಸಿರುವುದನ್ನು ನಾವು ಮನಗಾಣುವುದಾದರೆ, ಈ ನೀತಿಯ ಮಹತ್ವವನ್ನು ಅರಿತುಕೊಳ್ಳಬಹುದು.

ಇದೀಗ ರಾಯಭಾರಿ ಮಟ್ಟದಲ್ಲಿ ಸೇರಿದ ಸಭೆಯು ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ನಡೆಯಬೇಕಾದ ಸಿದ್ಧತೆಗಳನ್ನು ಮಾಡುವುದು. ಇದರಲ್ಲಿ ಸುಮಾರು ೫೫ ದೇಶಗಳು ಭಾಗವಹಿಸಿವೆ. ಸಮ್ಮೇಳನದಲ್ಲಿ ಸುಮಾರು ೫೦ ತಟಸ್ಥ ರಾಷ್ಟ್ರಗಳಿಗೆ ಭಾಗವಹಿಸುವ ಅವಕಾಶ ಕಲ್ಪಿಸುವ ಗುರಿಯಿದೆ. ಆಫ್ರೀಕ್ಯಾದ ರಾಷ್ಟ್ರಗಳಲ್ಲದೆ ಹೊಸತಾಗಿ ಸ್ವತಂತ್ರವಾಗಿ ತಟಸ್ಥ ನೀತಿಯನ್ನೇ ಸ್ವೀಕರಿಸಿದ ದಕ್ಷಿಣ ಅಮೇರಿಕೆಯ ರಾಷ್ಟ್ರಗಳಿಗೂ ಯೂರೋಪಖಂಡದಲ್ಲಿನ ತಟಸ್ಥ ನೀತಿಯುಳ್ಳ ದೇಶಗಳಿಗೂ ಈ ಸಮ್ಮೇಳನವನ್ನು ವಿಸ್ತರಿಸಬೇಕೆಂಬ ಸಲಹೆಯೂ ಇದೆ. ಈ ವಿಚಾರವಾಗಿ ಸದ್ಯ ಸೇರಿದ ಸಭೆಯು ಪರಿಶೀಲಿಸಿ ಸೂಕ್ತ ನಿರ್ಧಾರಕ್ಕೆ ಬರುವ ಆಶಯವಿದೆ. ಈಗ ಸೇರಿದ ರಾಯಭಾರಿಗಳ ಸಭೆಯನ್ನು ವೀಕ್ಷಿಸಲು ಕೆಂಪು ಚೀನಾದ ರಾಯಭಾರಿಯೂ ಆಗಮಿಸಿದ್ದಾರೆ. ಹಿಂದೊಮ್ಮೆ ಚೀನೀಯ ಪ್ರಧಾನಿ ಚೌ-ಎನ್-ಲಾಯ್ ಅವರು ಆಫ್ರಿಕೆ-ಯುರೋಪದ ಸಂಚಾರ ಕೈಗೊಂಡಾಗ, ತಟಸ್ಥ ದೇಶಗಳ ಸಮ್ಮೇಳನದ ಮಾತು ಎದೇ ಪದೇ ಕಿವಿಗೆ ಬೀಳಲು ತನಗೂ ಅದರಲ್ಲಿ ಅವಕಾಶ ದೊರಕಿಸುವ ಪ್ರಯತ್ನ ಮಾಡಿದ್ದನ್ನು ನಾವು ಮರೆಯಬಾರದು. ಅದನ್ನು ನಡೆಯಗೊಡದಿರುವ ಸಾಹಸವನ್ನು ತೋರಿಸಿದರು. ಹಾಗೆಯೇ ಅತ್ತ ಬಾಡುಂಗ ಸಮ್ಮೇಳನ ಸೇರಲು ಚೀನಾದ ಒತ್ತಾಸೆಯನ್ನೂ ಕಡೆಗಣಿಸಬಾರದು. ಚೀನಾವು ತಟಸ್ಥರ ಸಾಲಿನಲ್ಲಿ ನಿಲ್ಲುವುದು ಎಂದಿಗೂ ಸಾಧ್ಯವಿಲ್ಲ. ಅದು ಆಕ್ರಮಣಶೀಲವೆಂದು ಎಲ್ಲರಿಂದಲೂ ಕರೆಯಲ್ಪಟ್ಟಿದೆ. ಹಾಗಾದುದರಿಂದಲೇ ಅದು ತಟಸ್ಥರ ಸಮ್ಮೇಳನವನ್ನು ಮುಲಗಿಸಿ ಬಾಡುಂಗ ಪರಿಷತ್ತಿಗೆ ಬೆಂಬಲ ದೊರಕಿಸುವ ಸಾಹಸ ಮಾಡಿತು; ಆದರೆ, ಕೈ ಸುಟ್ಟುಕೊಂಡಿತು. ಚೀನಾದೊಡನೆ ಅತಿ ನಿಕಟ ಸಂಪರ್ಕವಿಲ್ಲವೇ ಭಯ ಪೀಡಿತರಾದವರು ಮಾತ್ರ ತಟಸ್ಥರ ಸಮ್ಮೇಳನದಲ್ಲಿ ಭಾಗವಹಿಸದೆ ಇದ್ದಾರು. ಆದರೆ, ಇಂತಹರ ಸಂಖ್ಯೆಯೆಷ್ಟು ಎಂದು ನೋಡಿದರೆ, ಅಷ್ಟು ಕಳೆದರೂ ಸಮ್ಮೇಳನದ ಯಶಸ್ಸಿಗೆ ಕುಂದುಂಟಾಗಲಾರದು.

ನಿರ್ಲಿಪ್ತ ನೀತಿಯೆಂದರೆ, ಅದು ಕೈಲಾಗದವರ ಧೋರಣೆಯೆಂಬ ದುರಭಿಪ್ರಾಯ ಕೆಲವರಲ್ಲಿತ್ತು. ಭಾರತದ ಪ್ರಧಾನ ಮಂತ್ರಿ ಜವಾಹರಲಾಲರು ಮೊತ್ತಮೊದಲು ಪಂಚಶೀಲತತ್ವಗಳ ತಳಹದಿಯಲ್ಲಿ ನಿರ್ಲಿಪ್ತ ವಿದೇಶ ನೀತಿಯನ್ನು ಪ್ರಪಂಚದ ಮುಂದೆ ನೀಡಿದಾಗ ಹಾಸ್ಯಮಾಡಿದವರೂ ಇದ್ದರು. ಆದರೆ, ತನ್ನ ಉತ್ತಮಾದರ್ಶ ಗುಣಗಳಿಂದ ಈ ನೀತಿ ಎಲ್ಲೆಲ್ಲು ಪುರಸ್ಕೃತವಾಯಿತು. ಇಂದು ಇದರ ಮಹತ್ವವನ್ನು ಲೋಕವು ಅರ್ಥ ಮಾಡಿಕೊಂಡಿದೆ. ನಿರ್ಲಿಪ್ತ ದೇಶ ಭಾರತದ ಮೇಲೆ ಸಾಮ್ರಾಜ್ಯಶಾಹಿ ಚೀನಾವು ಆಕ್ರಮಣ ಮಾಡಿತ್ತು. ಇಂದು ಈ ಆಕ್ರಮಣ ಭೀತಿಯು ತುಸು ದೂರವಾಗುತ್ತ ಬರುತ್ತಿದೆ; ಇದಕ್ಕೆ ಭಾರತದ ತಾಟಸ್ಥ್ಯ ನೀತಿಯೇ ಪ್ರೇರಕ ಶಕ್ತಿಯೆನಿಸಿದೆ. ಭಾರತವು ಯಾವುದಾದರೂ ಒಂದು ಗುಂಪನ್ನು ಸೇರಿಕೊಂಡಿದ್ದರೆ, ದೇಶದ ಪುನಾರಚನಾ ಕಾರ್ಯವು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರಲಿಲ್ಲ. ಅಮೇರಿಕೆ-ರಶ್ಯಗಳೆರಡರ ಸದಭಿಪ್ರಾಯವನ್ನು ನಾವು ಪಡೆದಿರುವುದಕ್ಕೆ ಈ ನೀತಿಯೇ ಕಾರಣ. ದೇಶದ ದಾರಿದ್ರ್ಯ—ಅನನುಕೂಲತೆಗಳನ್ನು ಸುಧಾರಿಸಲು ಇಂದು ತಟಸ್ಥ ನೀತಿಯೇ ಸಮರ್ಥ ಉಪಾಯವೆಂದು ಎಲ್ಲರೂ ಕಂಡುಕೊಂಡಿದ್ದಾರೆ. ಇದರಿಂದಾಗಿಯೇ ಇಂತಹ ರಾಷ್ಟ್ರಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸಿಂಹಳದ ರಾಜಧಾನಿ ಕೊಲಂಬೋವಿನಲ್ಲಿ ಸದ್ಯ ಸಮಾವೇಶಗೊಂಡ ಪೂರ್ವಸಿದ್ಧತಾ ಸಭೆಯು ಉಚಿತ ಕಾರ್ಯಕ್ರಮಗಳನ್ನು ರೂಪಿಸಿ ಈ ನೀತಿಯ ಹಿರಿಮೆಯನ್ನೂ ಗರಿಮೆಯನ್ನೂ ಲೋಕಕ್ಕೆ ಮುಂದಟ್ಟು ಮಾಡುವುದರೊಡನೆ ತಾಟಸ್ಥ್ಯದ ಬಗ್ಗೆ ಇರುವ ವಿಪರೀತಾರ್ಥವನ್ನು ಅಲ್ಲಗಳೆಯುವ ನಿರೀಕ್ಷೆಯಿದೆ. ತಾಟಸ್ಥ್ಯವೆಂದರೆ ಕೆರೆಯ ನೀರಲ್ಲ; ಕ್ಷಣಕ್ಷಣದಲ್ಲಿ ಲೋಕ ಬದಲಾಗುತ್ತಿರುವಾಗ, ಪರಿಸ್ಥಿತಿಗಳಿಗೆ ಹೊಂದಿಕೊಂಡು ಅದು ಅವಶ್ಯ ಹೋಗಬೇಕು; ಆದರೆ, ಮೂಲ ತತ್ವಗಳನ್ನುಮಾತ್ರ ಬಿಡಬಾರದು ಎಂಬ ಶ್ರೀಮತಿ ಭಂಡಾರನಾಯಿಕೆಯವರ ಉದ್ಗಾರ ಸಹಜವಾದುದು. ಜಗತ್ತಿನ ಏಕಮಾತ್ರ ಮಹಿಳಾ ಪ್ರಧಾನಿಯ ಈ ಅಭಿಪ್ರಾಯ ಎಲ್ಲರದ್ದೂ ಆಗಿದೆ.

ಜಗತ್ಪರ್ಯಟನ

ಡಾ| ಜಾಕಿರ್ ಹುಸೇನ್

ಉಪರಾಷ್ಟ್ರಪತಿ ಡಾ| ಜಾಕೀರ್ ಹುಸೇನರು ಅಂಡಮಾನ-ನಿಕೋಬಾರ ದ್ವೀಪಗಳಿಗೆ ಭೆಟ್ಟಿಯಿತ್ತರು. ಈಸಮಯದಲ್ಲಿ ಅವರಿಗೆ ಅಭೂತ ಪೂರ್ವ ಸ್ವಾಗತವು ದೊರೆಯಿತು. ಈ ದ್ವೀಪಗಳಿಗೆ ಉಪರಾಷ್ಟ್ರಪತಿಯವರು ಈ ವರೆಗೆ ಭೆಟ್ಟಿಯಿತ್ತಿದ್ದಿಲ್ಲ. ಒಂದುಕಾಲದಲ್ಲಿ ಕೈದಿಗಳ ನಿವಾಸಸ್ಥಾನವಾಗಿದ್ದ ಈ ದ್ವೀಪಗಳಿಂದು ಭಾರತದ ಉಳಿದರಾಜ್ಯಗಳ ಸಮಾನಸ್ಥಿತಿಯನ್ನು ಪಡೆಯುತ್ತಿವೆ. ಪೋರ್ಟ್ ಬ್ಲೇರದಲ್ಲಿ ಹತ್ತು ಲಕ್ಷರೂಪಾಯಿಗಳ ವೆಚ್ಚದಿಂದ ಕಟ್ಟಲಾದ ಗೋವಿಂದವಲ್ಲಭ ಪಂತ ಆಸ್ಪತ್ರೆಯನ್ನು ಡಾ| ಹುಸೇನ್ ಉದ್ಘಾಟಿಸಿದರು. ರೋಗಿಗಳ ವಿಷಯದಲ್ಲಿ ಸಹಾನುಭೂತಿಯನ್ನು ತಳೆದಿರಬೇಕು ಎಂದು ಇವರು ಅಲ್ಲಿನ ಆಸ್ಪತ್ರೆಯ ನರ್ಸ್ ಮತ್ತು ಡಾಕ್ಟರರುಗಳಿಗೆ ನೀಡಿದ ಉಪದೇಶ ಎಲ್ಲ ಆರೋಗ್ಯ ಸಿಬ್ಬಂದಿಗೂ ಅನ್ವಯಿಸುತ್ತದೆ. ರೋಗಿಯ ರೋಗದ ಚಿಕಿತ್ಸೆಯಲ್ಲಿ ಸಹಾನುಭೂತಿಯು ಬಹಳ ಪಾತ್ರ ವಹಿಸುವುದೆಂದು ಡಾ| ಜಾಕೀರರಿಗೆ ಸರಿಯಾಗಿ ಗೊತ್ತು.

ಸುಭಿಕ್ಷೆ—ಸುರಕ್ಷೆ

ಸುಮಾರು ೧|| ಲಕ್ಷ ನಿರಾಶ್ರಿತರು ಇತ್ತೀಚೆಗೆ ಪಾಕಿಸ್ತಾನದಿಂದ ಭಾರತಕ್ಕೆ ನುಗ್ಗಿಬಂದರು. ಇಲ್ಲಿಗೆ ಪ್ರಾರಂಭದಿಂದ ತೊಡಗಿ ಬಂದ ಪಾಕ್ ನಿರಾಶ್ರಿತರ ಸಂಖ್ಯೆ ೫೦ ೩ ಕೋಟಿಯನ್ನು ಮುಟ್ಟಿತು. ಭಾರತ ಸರಕಾರ ಈ ನಿರಾಶ್ರಿತರ ಪುನರ್ವಸತಿಯ ಬಗ್ಗೆ ಸುಮಾರು ನಾಲ್ಕು ನೂರು ಕೋಟಿ ರೂಪಾಯಿಗಳನ್ನು ವ್ಯಯಿಸಿತು. ಈ ವೆಚ್ಚವು ಇನ್ನೂ ಹೆಚ್ಚುತ್ತಲೇ ಹೋಗುವುದು. ಹಿಂದೊಮ್ಮೆ ಇದೇ ಬಗೆಯ ನಿರಾಶ್ರಿತರಿಗೆ ಆಶ್ರಯ ನೀಡುವ ಕುರಿತಾಗಿ ದೇಶದ ಜನರಲ್ಲಿ ಜಾತೀಯ ಸೌಹಾರ್ದದ ಕೀಲು ತಪ್ಪಿ ಹೋಗಿತ್ತು; ಇದೇ ಜಾತೀಯವಾದದ ಪುರಸ್ಕರ್ತರಿಂದಾಗಿಯೇ ರಾಷ್ಟ್ರಪಿತನ ಬಲಿದಾನವಾಯಿತು. ಈಗ ಮರಳಿ ಜಾತೀಯ ಸೌಹಾರ್ದ ಮಾಯವಾಗ ತೊಡಗಿ ಅಲ್ಲಲ್ಲಿ ದೊಂಬಿಯಿದ್ದು ಪ್ರಾಣವಿತ್ತ ಹಾನಿಗಳು ಸಂಭವಿಸ ತೊಡಗಿವೆ. ಇದು ಶುಭಲಕ್ಷಣವಲ್ಲ. ಈ ಬಗೆಯ ದೊಂಬಿ — ಅತ್ಯಾಚಾರಗಳಿಗೆ ಪಾಕಿಸ್ತಾನದ ಪ್ರಚೋದನೆ ಮತ್ತು ಚಾಲನೆಗಳೇ ಕಾರಣವಾದರೂ ಜಾತ್ಯತೀತ ಕಲ್ಯಾಣ ರಾಷ್ಟ್ರದಲ್ಲಿರುವ ನಾವು ಉದ್ರಿಕ್ತರಾಗಬಾರದು; ಜಾತೀಯತೆಯ ಮಾರಿಯನ್ನು ಕೆಣಕಬಾರದು. ಸೌಹಾರ್ದವನ್ನು ಸಾಧಿಸಿ, ದೇಶದ ಸಾಮೂಹಿಕ ಹಿತಕ್ಕಾಗಿ ದುಡಿಯಬೇಕು; ನಾವೆಲ್ಲರೂ ಭಾರತೀಯರು ಎಂಬ ವಿಶಾಲ ಭಾವನೆ ಮೂಡಿ ಬರಬೇಕು. ಜಾತೀಯ ಸೌಹಾರ್ದದಿಂದಲೇ ದೇಶದಲ್ಲಿ ಸುಭಿಕ್ಷೆ ಮತ್ತು ಸುರಕ್ಷೆಗಳನ್ನು ಸಾಧಿಸುವುದು ಸಾಧ್ಯ. ಇದನ್ನು ಯಾವ ಕಾಲಕ್ಕೂ ಮರೆಯದೆ ಮುನ್ನಡೆಯಬೇಕು.

ಯಶವಂತ ಚವನ

ಕೆಂಪು ಚೀನ ಮತ್ತು ಪಾಕಿಸ್ತಾನಗಳು ಕೂಡಿ ಸಂಚು ಹೂಡತೊಡಗಿರುವುದರಿಂದ ಭಾರತದ ಗಡಿ ಪರಿಸ್ಥಿತಿಯು ಸ್ವಲ್ಪ ಕ್ಲಿಷ್ಟವಾಗುತ್ತ ಬರುತ್ತಿದೆ. ಇದನ್ನು ಸಂರಕ್ಷಣ ಮಂತ್ರಿ ಯಶವಂತರಾವ್ ಬಲವಂತರಾವ್ ಚವನರೇ ಒಪ್ಪಿಕೊಂಡಿದ್ದಾರೆ ಇದರಿಂದಾಗಿ ಸಂರಕ್ಷಣಾ ವ್ಯವಸ್ಥೆಯನ್ನು ಮುಂದುವರಿಸುವುದರೊಡನೆ, ದೀರ್ಘಕಾಲಾವಧಿಯ ಯೋಜನೆಗಳ ಅಗತ್ಯವೂ ಇರುವುದರಿಂದ ಪಂಚವಾರ್ಷಿಕ ತಳಹದಿಯ ಮೇಲೆ ಸಂರಕ್ಷಣಾ ಸಿದ್ಧತೆಯನ್ನು ಮಾಡುವ ಗುರಿಯು ಭಾರತ ಸರಕಾರದ್ದಿದೆ. ನಮ್ಮ ವೈಮಾನಿಕ ಪಡೆಯ ಮುಖ್ಯ ಅಧಿಕಾರಿಗಳಲ್ಲಿ ಕೆಲವರು ವಿಮಾನ ಅಪಘಾತಗಳಿಗೆ ಗುರಿಯಾದುದರಿಂದ ನೊಂದ ಭಾರತೀಯರು ವಿಮಾನ ಪಡೆಯನ್ನು ಬಲಗೊಳಿಸಲಾಗುವುದೆಂಬ ಚವನರ ಭರವಸೆಯಿಂದ ತುಸು ಸಮಾಧಾನಗೊಳ್ಳಬಹುದು.

ದಕ್ಷಿಣ ಕನ್ನಡಿಗರ ಸಂಘದ ಮಹಾಸಭೆ – ಬೆಂಗಳೂರಿನ ದಕ್ಷಿಣ ಕನ್ನಡಿಗರ ಸಂಘದ ಐದನೇ ವಾರ್ಷಿಕ ಮಹಾಸಭೆಯು ತಾ. 15ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಜರಗಿತು. ಮುಂದಿನ ವರ್ಷಕ್ಕೆ ಶ್ರೀ ಪಿ. ಸರ್ವೋತ್ತಮ ನಾಯಕ್‌ರವರು ಅಧ್ಯಕ್ಷರಾಗಿಯೂ, ಡಾ| ಪಿ. ಎಸ್. ರೈ ಮತ್ತು ಎನ್. ಕೆ. ಕಾಮತ್‌ರವರು ಉಪಾಧ್ಯಕ್ಷರಾಗಿಯೂ; ಶ್ರೀ ಎಂ ಎಸ್. ರಾಮನ್ ರವರು ಕಾರ್ಯದರ್ಶಿಗಳಾಗಿಯೂ ಶ್ರೀ ಪಿ. ವ್ಯಾಸರಾವ್ ಮತ್ತು ಎ. ವಾಸುದೇವರಾವ್‌ರವರು ಕ್ರಮವಾಗಿ ಜೊತೆಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಎ. ರಾಘವೇಂದ್ರ ರಾವ್, ಯಂ. ಸುಂದರ ರಾಮ ಶೆಟ್ಟಿ, ಬಿ ವಿಠಲ ಶೆಟ್ಟಿ, ಮಂಜುನಾಥಯ್ಯ, ಕೆ. ಬಾಲಕೃಷ್ಣ, ಯಂ. ಕೆ. ಧನಪತಿ, ಕೆ. ರಾಮಕೃಷ್ಣ ಐತಾಳ, ಎಸ್. ತ್ಯಾಗರಾಜ ಮತ್ತು ಶ್ರೀಮತಿ ನಳಿನಿ ಡಿ. ಕೃಷ್ಣರವರನ್ನು ಕಾರ್ಯಕಾರೀ ಸಮಿತಿಯ ಸದಸ್ಯರನ್ನಾಗಿ ಚುನಾಯಿಸಲಾಯಿತು.

ನವಯುಗದ ಕೃತಜ್ಞತೆಗಳು

ತಾ 19-3-64 ರಂದು ಮಂಗಳೂರಲ್ಲಿ ನವಯುಗದ ಪುರಸ್ಕರಣಕ್ಕಾಗಿ ಪ್ರೋತ್ಸಾಯಿಸಿದ ಶ್ರೀಗಳಾದ ಬಿ. ಮಿತ್ರದಾಸ ಹೆಗ್ಡೆ ಸತ್ಯನಾರಾಯಣ ಟೈಲ್ ವರ್ಕ್ಸ್; ಕೆ. ಎಂ. ಮಲ್ಲಿ, ಪ್ರೊಪ್ರೈಟರ್ ಮಲ್ಲಿ ಕನ್ಸ್ಟ್ರಕ್ಷನ್ ಕೊ.; ಬಿ. ರಘುರಾಮ ಶೆಟ್ಟಿ, ಪ್ರೊಪ್ರೈಟರ್ ರಾಜಾ ಟೈಲ್ ವರ್ಕ್ಸ್.; ವಿ. ಕೆ. ಶೆಟ್ಟಿ, ಸಬ್ ಡಿವಿಜನಲ್ ಮೇಜಿಸ್ಟ್ರೇಟ್; ಪಿ. ಎಂ. ಹೆಗ್ಡೆ, ಚಾರ್ಟರ್ಡ್ ಎಕೌಂಟೆಂಟ್, ಇವರೇ ಮೊದಲಾದವರಿಗೆ ಚಿರ ಋಣಿಗಳಾಗಿದ್ದೇವೆ. ಅಲ್ಲದೇ ಮಂಗಳೂರು ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿಗಳು ಸ್ವತಃ ಪ್ರೋತ್ಸಾಹಿಸಿದುದಲ್ಲದೆ ನಮ್ಮ ಸಂಚಾರ ಕಾರ್ಯದಲ್ಲಿ ಭಾಗಿಗಳಾಗಿ ಸಹಕರಿಸಿದುದಕ್ಕೂ ಆಭಾರಿಗಳಾಗಿದ್ದೇವೆ.

ತಾ. 22ರಂದು ಬಂಗಾಡಿ, ಕಿಲ್ಲೂರು ಮೊದಲಾದ ಕಡೆಗಳಲ್ಲಿ ಕೆಲವು ಚಂದಾದಾರರನ್ನು ಒದಗಿಸಿಕೊಟ್ಟ ಶ್ರೀ ಬಿ. ವಿಠಲ ರೈಗಳಿಗೂ ಧನ್ಯವಾದಗಳು.

ಕೆ. ಹೊನ್ನಯ್ಯ ಶೆಟ್ಟಿ.
ಸಂಚಾಲಕ ಸಂಪಾದಕ.

READ & ADVERTISE IN NAVAYUGA WEEKLY

ಅಲ್ಲಲ್ಲಿಯ ಸುದ್ದಿ ಸಾರ

ಸರ್ವೋದಯ ಮಂಡಲದ ಸಭೆ— ತಾ. 14-3-64ರಂದು ಮಂಗಳೂರು ಗಾಂಧೀ ತತ್ವಪ್ರಚಾರ ಕೇಂದ್ರದ ಕಟ್ಟಡದಲ್ಲಿ ನೇರಿದ ದ. ಕ. ಜಿಲ್ಲಾ ಸರ್ವೋದಯ ಮಂಡಲದ ಸಭೆ ಸೇರಿದಾಗ ಈ ಕೆಳಗಿನ ನಿರ್ಣಯವನ್ನು ಕೈಕೊಳ್ಳಲಾಯಿತು:—

ಪಾನ ನಿರೋಧದ ಬಗ್ಗೆ ಶಾಸನವನ್ನು ಸಡಿಲಿಸುವ ಹಾಗೂ ಪಾನ ನಿರೋಧದ ನೀತಿಯನ್ನು ಪುನರ್ವಿಮರ್ಶಿಸುವ ಮಾತನ್ನು ದೇಶದಲ್ಲಿ ಹಲವು ಕಡೆ ಜನನಾಯಕರೂ ಸರಕಾರಗಳೂ ಆಡುತ್ತಿರುವುದನ್ನು ದ. ಕ. ಜಿಲ್ಲಾ ಸರ್ವೋದಯ ಮಂಡಲವು ಗಮನಿಸಿದೆ. ರಾಷ್ಟ್ರಪಿತಾ ಮಹಾತ್ಮಾ ಗಾಂಧೀಜಿಯವರಿಗೆ ರಚನಾತ್ಮಕ ಕಾರ್ಯಗಳಲ್ಲಿ ಮುಖ್ಯವಾಗಿದ್ದು ಸ್ವತಂತ್ರ ಭಾರತದ ರಾಜ್ಯಾಂಗದಲ್ಲಿ ನಿರ್ದೇಶಕ ತತ್ವವಾಗಿ ರೂಪುಗೊಂಡ ಈ ಕಾರ್ಯಕ್ರಮವನ್ನು ಶಿಥಿಲಗೊಳಿಸುವ ಪ್ರಯತ್ನಕ್ಕೆ ಈ ಸಭೆ ತನ್ನ ಪ್ರತಿಭಟನೆಯನ್ನು ಸೂಚಿಸುತ್ತದೆ. ಪಾನ ನಿರೋಧ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಲು ತಕ್ಕ ಏರ್ಪಾಡು ಮಾಡಬೇಕೆಂದೂ ಈ ನೀತಿಯನ್ನು ಕೈಬಿಡಕೂಡದೆಂದೂ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತದೆ.

ಉದ್ಘಾಟನೆ— ಕಾರ್ಮಿಕ ಶಿಕ್ಷಣ ಮಂಡಳಿಯ ನೇತೃತ್ವದಲ್ಲಿ ಉಡುಪಿ ಜೀವ ವಿಮಾ ನೌಕರರಿಗಾಗಿ ಕಾರ್ಮಿಕ ಶಿಕ್ಷಣ ವರ್ಗದ ಉದ್ಘಾಟನಾ ಸಭೆಯು ಸ್ಥಳೀಯ ಕೆನರಾ ಮ್ಯುಚುವಲ್ ಕಟ್ಟಡದಲ್ಲಿ, ಶ್ರೀಯುತ ಜಿ. ಆರ್. ದೇಸಾಯಿ, ಸಬ್ ಜಡ್ಜ್ ಇವರ ಅಧ್ಯಕ್ಷತೆಯಲ್ಲಿ ತಾ. 19—3—64ರಂದು ನೆರವೇರಿತು. ಕಾರ್ಮಿಕರಲ್ಲಿ ಹೆಚ್ಚು ಬಾಧ್ಯತೆಗಳ ಅರಿವನ್ನುಂಟು ಮಾಡಿ ದೇಶದ ಏಳಿಗೆಯನ್ನು ಸಾಧಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಈ ತರಬೇತಿ ವರ್ಗದ ಉದ್ಘಾಟನೆಯು ಜೀವ ವಿಮಾ ಸಂಸ್ಥೆಯ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಯವರಿಂದ ನೆರವೇರಿಸಲ್ಪಟ್ಟಿತು. ಶ್ರೀಯುತರುಗಳಾದ ಬಿ. ಬಿ. ಹೆಗ್ಡೆ, ಕು. ಕಿ. ಹರಿದಾಸ ಭಟ್ ಮತ್ತು ಕುಮಾರಿ ಪದ್ಮಜಾ ಕುಲಕರ್ಣಿಯವರು ಈ ತರಬೇತಿಯ ಅವಶ್ಯಕತೆ ಹಾಗೂ ಪ್ರಯೋಜನಗಳನ್ನು ವಿವರಿಸುತ್ತಾ ಶ್ರೀಯುತ ಯಚ್. ನಾರಾಯಣ ರಾವ್‌ರವರಿಂದ ನಡೆಸಲ್ಪಡುವ ಈ ತರಬೇತಿ ವರ್ಗಕ್ಕೆ ಶುಭವನ್ನು ಕೋರಿದರು. ಎಲ್. ಎಂಟಾಪುರವರ ಧನ್ಯವಾದ ಸಮರ್ಪಿಸಿದರು.

TB SEAL DESIGN

DELHI ARTIST WINS THE PRIZE THIS YEAR.

The Tuberculosis Association of India held its Seal design contest for the 15th TB Seal Sale Campaign. Out of 108 entries, the judges chose a design submitted by Mr. Paul 'Bharti' of Delhi. This year, the TB Seal has for its motive an entirely different subject which depicts a vigorous and colourful traditional Indian dance. mask of Kathakali which is well-known in India and abroad and will be an interesting subject for stamp collectors.

The 15th TB Seal Sale Campaign will commence on October 2, 1964. A TB Seal costs 10 np. only.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

R.I.A. 1519/1963 O.S.347/1962

ಅಕ್ಕು ಹೆಂಗ್ಸು —ಅರ್ಜಿದಾರಳು

ಮತ್ತು

ಸುಬ್ರಾಯ ಕರಾನಡ — ಎದ್ರಿ

ಎದ್ರಿ: ಸುಬ್ರಾಯ ಕರಾನಡ, ರಾಮ ಕರಾನಡರ ಮಗ, ಬೆಳ್ತಂಗಡಿ ತಾಲೂಕು, ಶಿರಾಡಿ ಗ್ರಾಮದ ಬೇಂಗಲ ಎಂಬಲ್ಲಿ— ಇವರಿಗೆ,

ಮೇಲ್ಕಂಡ ದಾವೆಯಲ್ಲಾದ ಪ್ರಿಲಿಮಿನರಿ ಡಿಕ್ರಿ ವಿಧನೋರಿಗೆ ಜವಾಬ್ದಾರಿ ಆಸ್ತಿ ಮಾರಾಟದ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರಳು ಮಾಡಿದ ಮೇಲಿನ ಅರ್ಜಿಯು ತಾ. 28—3—1964ಕ್ಕೆ ವಾಯಿದೆಯಿರುವುದರಿಂದ ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ದಿನ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟ್ ಮುಂದೆ ಹಾಜರಾಗಿ ಉಜುರಿಸಿಕೊಳ್ಳತಕ್ಕದ್ದೆಂತಲೂ, ನಿಮ್ಮನ್ನು ಶಿವಾಯಿ ಡಿಕ್ರಿ ಕೊಡೋಣಾಗುವುದೆಂತಲೂ ಕೋರ್ಟ್ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

(Sd.) N. Subramanyam,
Advocate for Petr.

ಸ್ಥಳ: ಪುತ್ತೂರು, ತಾ 13.3.1964

ರಾಷ್ಟ್ರಕವಿ ಸ್ಮಾರಕ ಗ್ರಂಥ— ಕುಂದಾಪುರ ಭಂಡಾರಕಾರ್ಸ್ ಕಾಲೇಜಿನ ವತಿಯಿಂದ ಇದೇ ಮಾರ್ಚ್ 23ರಂದು ಆಚರಿಸಬೇಕೆಂದಿದ್ದ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕೋತ್ಸವವನ್ನು ರಾಷ್ಟ್ರಕವಿಗಳು ವೈಕುಂಠವಾಸಿಯಾದ ಪುಣ್ಯದಿನದಂದು 1964ನೆ ಸಪ್ಟಂಬರ ತಿಂಗಳಲ್ಲಿ 3 ದಿನಗಳ ಕಾಲ ಜರಗಿಸಬೇಕೆಂದು ನಿಶ್ಚಯಿಸಲಾಗಿದೆ. ಇದೇ ಸಂದರ್ಭದಲ್ಲಿ ಶ್ರೀ ರಂ. ರಾ. ದಿವಾಕರರಿಂದ ಸ್ಮಾರಕ ಗ್ರಂಥದ ಉದ್ಘಾಟನೆಯು ಮಾಡಲ್ಪಡುವುದು. ಸ್ಮಾರಕ ಗ್ರಂಥಕ್ಕೆ ಈಗಾಗಲೇ ಕನ್ನಡ ನಾಡಿನ ಹಿರಿಯ ಸಾಹಿತಿಗಳಿಂದ 50ಕ್ಕೂ ಮಿಕ್ಕಿ ಲೇಖನಗಳು ಬಂದಿದ್ದು ಇನ್ನು ಹಲವಾರು ಸಾಹಿತಿಗಳಿಂದ ಲೇಖನಗಳನ್ನು ನಿರೀಕ್ಷಿಸಲಾಗಿದೆ.

ಆದ್ದರಿಂದ ಮಹಾಜನರು 30 ಜೂನ್ 1964ರ ಒಳಗೆ ಕೋಶಾಧಿಕಾರಿ, ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಮಿತಿ, ಭಂಡಾರ್‌ಕಾರ್ಸ್ ಕಾಲೇಜ್, ಕುಂದಾಪುರ ವಿಳಾಸಕ್ಕೆ ರೂ. 10/-ನ್ನು ಕಳುಹಿಸಿ ಸದಸ್ಯರಾಗಿ ಸೇರಬೇಕೆಂದೂ ಅಂತವರಿಗೆ ಸದಸ್ಯತನದ ಶುಲ್ಕಕ್ಕಿಂತ ಹೆಚ್ಚಿನ ಮೌಲ್ಯದ ಬೃಹದ್ರೂಪದಿಂದ ಹೊರಬೀಳಲಿರುವ ಸ್ಮಾರಕ ಗ್ರಂಥದ ಪ್ರತಿಯೊಂದನ್ನು ಉಚಿತವಾಗಿ ಕೊಡುವುದಲ್ಲದೆ ಅವರ ಹೆಸರುಗಳನ್ನು ಸ್ಮಾರಕೋತ್ಸವ ಸಂಚಿಕೆಯಲ್ಲಿ ಪ್ರಕಟಿಸಲಾಗುವುದೆಂದೂ ತಿಳಿಸಲಾಗಿದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 2/1964

ಆದಪ್ಪ ಶೆಟ್ಟಿ —ಜನರಲ್ ಏಜಂಟ್. ಕೇಜಪ್ಪ ಶೆಟ್ಟಿ — ವಾದಿ

ಮತ್ತು

ಚಿಕ್ಕಯ್ಯ ಶೆಟ್ಟಿ ಕೂಡಾ. ಪ್ರತಿವಾದಿರು.

ಇವರೊಳಗೆ.—

ಪ್ರತಿವಾದಿರು:

3. ಕಮಲು ಶೆಡ್ತಿ
4. ಸಂಜೀವ ಶೆಟ್ಟಿ
5. ರಾಜು ಶೆಟ್ಟಿ
6. ಕುಯಿಂತು ಶೆಟ್ಟಿ } ಮೈನರ್-ಗಾರ್ಡಿ
7. ಭಾಸ್ಕರ ಶೆಟ್ಟಿ } ಯನ್-ತಂದೆ.

1ನೇ ಪ್ರತಿವಾದಿ

ಉಡ್ಪಿ ತಾಲ್ಲು ಹಾವಂಜೆ ಗ್ರಾಮ-ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ತಾರೀಕು 4-4-1939ನೇ ರಿಜಿಸ್ತ್ರಿ ಏಕಿಂ ಮೂಲಗೇಣಿ ಚೀಟಿಗೆ ಕಾರಣವಾದ ಆಸ್ತಿಗಳ ಬಾಬ್ತು ನೀವು ವಗೈರೆರಿಂದ ವಾದಿಗೆ ಕಳೆದ ಶುಭಕೃತು ಸಂವತ್ಸರಕ್ಕೆ ಬಹಾ ಮೂಲಗೇಣಿಯನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲುಮಾಡಿದ ಮೇಲ್ಕಂಡ ದಾವೆಯು ತಾ. ರೀಕು 2-4-1964ಕ್ಕೆ ಇಟ್ಟಿದೆ. ಉವಾಪರಿಸುವ ಧಾದ್ದು ಇದ್ದರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟ್ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳಬಹುದು. ತಪ್ಪಿದರೆ ನಿಮ್ಮಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Balachandra Rao.
Advocate for Plaintiff

Udipi.
24-3-64

ಬೆಂಗಳೂರಿಗೆ ಶಿಷ್ಟಮಂಡಳಿ— ದ. ಕ. ಜಿಲ್ಲಾ ಖಾಸಗೀ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ವತಿಯಿಂದ ಅಧ್ಯಕ್ಷ ಶ್ರೀ ಟಿ. ಎ. ಪೈಯವರ ಮುಂದಾಳುತನದಲ್ಲಿ ಶ್ರೀಗಳಾದ ಕುರುಕಾಲು ·ಗಣಪಯ್ಯ ಶೆಟ್ಟಿ, ರೆ. ಫಾ. ಬಿ. ಎಸ್. ಡಿಸೋಜ, ಕೋಟೆಕಾರ್ ರಮೇಶ ರಾವ್, ಪರ್ಕಳ ರಾಜೀವ ಕೋಟ್ಯಾನ್ ಕೂಡಾ ಐದು ಮಂದಿಯ ನಿಯೋಗವು ಬೆಂಗಳೂರಿಗೆ ಹೋಗಿ ತಾ. 17-3-64ರಲ್ಲು ಸನ್ಮಾನ್ಯ ವಿದ್ಯಾಮಂತ್ರಿ, ಇಲಾಖಾ ಡೈರೆಕ್ಟರ್, ಸೀನಿಯರ್ ಪರ್ಸನಲ್ ಅಸಿಸ್ಟಾಂಟ್, ವಿದ್ಯಾ ಇಲಾಖಾ ಸರಕಾರೀ ಕಾರ್ಯದರ್ಶಿ—ಇವರನ್ನೊಳಗೊಂಡ ಸಭೆ ಜರಗಿಸಿ ಖಾಸಗಿ ಶಾಲಾ ಆಡಳಿತಗಾರರಿಗೆ ಸಿಗತಕ್ಕ ಮೈಂಟೆನೆನ್ಸು ಗ್ರೇಂಟು- ವ- ಕಂಪೆನ್ಸೇಷನ್ ಗ್ರೇಂಟಿನ ವಿಷಯವಾಗಿ ಚರ್ಚಿಸಲಾಯ್ತು. ಆ ಸಮಯದಲ್ಲಿ ವಿದ್ಯಾಮಂತ್ರಿ ವರ್ಯರಿಂದ ಕಳೆದ ವರ್ಷದಂತೆ 1963ನೇ ವರ್ಷದ ಬಗ್ಗೆ ಮೈಂಟೆನೆನ್ಸ್ ಗ್ರೇಂಟನ್ನು ¾ ಅಂಶದಷ್ಟು ಕೊಡಬಹುದಾಗಿ ಅಭಿಪ್ರಾಯ ದೊರೆಯಲು, ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಮೈಂಟೆನೆನ್ಸ್ ಗ್ರೇಂಟಿನಲ್ಲಿ ಈ ರೀತಿ ಕಡಿತ ಮಾಡಿದರೆ ಖಾಸಗಿ ಶಾಲೆಗಳು ನಡೆಯಲಾರವೆಂತಲೂ ಗತ ಎರಡು ವರ್ಷಗಳಲ್ಲಿ ಉಂಟಾದ ಕಡಿತದ ದೆಸೆಯಿಂದ ಸದ್ಯವೇ ಕೆಲವು ಶಾಲೆಗಳು ಮುಚ್ಚಲ್ಪಡಲಿಕ್ಕಿರುವುವವೆಂತಲೂ, ಆದಕಾರಣ ಚಾಲ್ತಿ ವರ್ಷದಲ್ಲಿ ಮೈಂಟನೆನ್ಸ್ ಗ್ರೇಂಟನಲ್ಲಿ ಕಡಿತ ಮಾಡದೆ ಸಂಪೂರ್ಣ ಕೊಡಬೇಕೆಂತಲೂ, ಮಾತ್ರವಲ್ಲದೆ ಬರೇ ಕೆಲವು ಶಾಲೆಗಳಿಗೆ ಸಿಗತಕ್ಕ ಕಂಪೆನ್ಸೇಷನ್ ಗ್ರೇಂಟಿನಲ್ಲಿ ಕೂಡಾ ಚಾಲ್ತಿ ವರ್ಷದಲ್ಲಿ ಕಡಿತ ಮಾಡಿದ್ದರಿಂದ ಆ ಶಾಲೆಗಳಿಗೆ ಕಂಪೆನ್ಸೇಷನ್ ಗ್ರೇಂಟನ್ನು ಸಹ ಸಂಪೂರ್ಣ ಕೊಡಬೇಕೆಂತಲೂ ವಗೈರೆ ನಿವೇದಿಸಿಕೊಂಡರು.

ಈ ವಿಚಾರದಲ್ಲಿ ದೀರ್ಘ ಚರ್ಚೆಯಾದ ಬಳಿಕ ಮೈಂಟೆನೆನ್ಸ್ ಗ್ರೇಂಟನ್ನು ಹೊಂದಿದ ಶಾಲೆಗಳಿಗೆ ಕಳೆದ ವರ್ಷಕ್ಕಿಂತ ಜಾಸ್ತಿ ಎಂದರೆ ಸಂಪೂರ್ಣ ಗ್ರೇಂಟಿನ ಅರೆವಾಸಿ ಕೊಡುವುದಾಗಿಯೂ, ಕಂಪೆನ್ಸೇಷನ್ ಗ್ರೇಂಟನ್ನು ಹೊಂದುವ ಶಾಲೆಗಳಿಗೆ ಪ್ರಕೃತ ತಿಳಿಸಿದ ಗ್ರೇಂಟಿಗಿಂತ ಹೆಚ್ಚಿಗೆ ಕೊಡುವರೇ ಸಾಧ್ಯವಿಲ್ಲವೆಂತಲೂ, ಮುಂದಿನ ವರ್ಷಕ್ಕೆ ಮೈಂಟೆನೆನ್ಸ್ ಗ್ರೇಂಟಿನಂತೆಯೇ ಕಂಪೆನ್ಸೇಷನ್ ಗ್ರೇಂಟನ್ನು ರದ್ದು ಮಾಡಲಾಗಿದೆಯೆಂತಲೂ, ಈ ಎರಡೂ ವಿಧದ ಶಾಲೆಗಳಿಗೂ ಆಯಾಯ ವಾರ್ಷಿಕ ಖರ್ಚನ್ನು ಅನುಸರಿಸಿ ಗ್ರೇಂಟು ಕೊಡುವರೇ ಹೊಸ ರೂಲನ್ನು ತಯಾರಿಸಲಾಗುವುದೆಂತಲೂ ತಿಳಿಸು ಬಂತು. ಈ ಕುರಿತು ಸಂಘದ ಅಧ್ಯಕ್ಷರು ನಿಯೋಗದವರೊಂದಿಗೆ ಮೂರು ದಿನಗಳ ವರೆಗೆ ಬೆಂಗಳೂರಲ್ಲೇ ಇದ್ದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನೂ ಕಂಡು ಪ್ರಯತ್ನಿಸಿದ ಫಲವಾಗಿ 1963ನೇ ವರ್ಷದ ಮೈಂಟೆನೆನ್ಸ್ ಕೊಡುವ ಬಗ್ಗೆ ಸರಕಾರದಿಂದ ರೂ. 75,000/- ಸಂಕ್ಷನ್ ಮಾಡಲ್ಪಟ್ಟಿತು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S 495/63

ನರಸಿಂಹ ಭಟ್ಟ ಕೂಡಾ — ವಾದಿರು.

ಮತ್ತು

S. ಶಂಕರ ಭಟ್ಟ ಕೂಡಾ. ಪ್ರತಿವಾದಿರು.

2ನೇ ಪ್ರತಿವಾದಿ ಶಂಕರ ಭಟ್ಟ, ಮಹಾಲಿಂಗ ಭಟ್ಟರ ಮಗ.

6ನೇ ಪ್ರತಿವಾದಿ ನರಸಿಂಹ ಭಟ್ಟ, ಶಂಕರ ಭಟ್ಟರ ಮಗ—ಇಬ್ಬರೂ ಪುತ್ತೂರು ತಾಲೂಕಿನ ನೆಲಮೂವು ಮಠ ಎಂಬಲ್ಲಿ ಪೋಸ್ಟು ತಿಶಿರ್ (ಉ. ಕನ್ನಡ)

3ನೇ ಪ್ರತಿವಾದಿ ಮಹಾಲಿಂಗ ಭಟ್ಟ.

4ನೇ ಪ್ರತಿವಾದಿ ಸುಬ್ರಾಯ ಭಟ್ಟ.

5ನೇ ಪ್ರತಿವಾದಿ ನಾರಾಯಣ ಭಟ್ಟ—ಶಂಕ್ರರ ಭಟ್ಟರ ಮಕ್ಕಳು.

ಎಲ್ಲರೂ ಬಂಟ್ವಾಳ ತಾಲ್ಕು ವಿಟ್ಲ ಕಸ್ಬ ಗ್ರಾಮದಲ್ಲಿ ಪೋಸ್ಟು ವಿಟ್ಲ, (ದ. ಕ)

ವಾದಿರು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ 15—4—64ಕ್ಕೆ ಇಟ್ಟಿರುತ್ತದೆ. ಆ ದಿವಸ ನೀವು ಖುದ್ದು ಯಾ ವಕೀಲರ ಮುಖಾಂತರ ಉವಾಪರಿಸತಕ್ಕದ್ದು ತಪ್ಪಿದರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತೆಂತ ಈ ಮೂಲಕ ನಿಮಗೆ ತಿಳಿಸೋಣಾಗಿಯದೆ

(By order of the Court)

Pulu Narayana Bhat
Advocate for Plaintiff

ಪುತ್ತೂರು, 21—3—64

ಕಟ್ಟಡ ತೆರಿಗೆ ಪ್ರತಿಭಟನಾ ಸಭೆ ತಾ. 22ರಂದು ಮಂಗಳೂರಿನಲ್ಲಿ, ಶ್ರೀ ನಯಂಪಳ್ಳಿ ರಾಮರಾಯರ ಅಧ್ಯಕ್ಷತೆಯಲ್ಲಿ ಮೈಸೂರು ಕಟ್ಟಡ ತೆರಿಗೆಯನ್ನು ಪ್ರತಿಭಟಿಸಿ ಒಂದು ಸಭೆ ಸೇರಿತು. ಶಾಯಿದೆಯ ಕ್ಷುದ್ರತೆ ಮತ್ತು ಕಠಿಣತೆಯನ್ನೆತ್ತಿ ಹಿಡಿದು ಶ್ರೀಗಳಾದ ಯು. ರಾಮಾರಾವ್ ಮಲ್ಯ, ಎಫ್. ಎಂ. ಲೋಬೋ, ಎಂ. ಸಿ. ಆಹಮ್ಮದ್, ಎ. ಕೆ. ಸೇವಕ್, ತುಕಾರಾಂ ಪೈ, ಎಸ್. ಸಿ. ನಾಯಕ್ ಮುಂತಾದವರು ಮಾತಾಡಿದರು. ಸಭಾಂತ್ಯದಲ್ಲಿ ಶಾಯಿದೆಯ ವಿರುದ್ಧ ಕಾರ್ಯಾಚರಣೆಗೆ ಜಿಲ್ಲಾ ಮಟ್ಟದ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಅಧ್ಯಕ್ಷರಾಗಿರುವ 13 ಮಂದಿ ಸದಸ್ಯರಿರುವ ಸಮಿತಿಯೊಂದರ ರಚನೆಯಾಯಿತು.

ವಿದಾಯ ಸತ್ಕಾರ— ಉಡುಪಿ ಬೋರ್ಡ್ ಹೈ. ಶಾಲಾ 7ನೇ ತರಗತಿಯ ಮಕ್ಕಳನ್ನು ಬೀಳ್ಕೊಡುವ ಸಮಾರಂಭವು ತಾ. 21ರಂದು ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಜಗನ್ನಾಥ ನಾಯ್ಕರು ಸ್ವಾಗತಿಸಿದ ಬಳಿಕ ಶ್ರೀ ದೇವೇಂದ್ರ ಪೆಜತ್ತಾಯರು ಶಾಲಾ 7ನೇ ತರಗತಿಯವರು ಸುಮಾರು 50 ರೂ. ವೆಚ್ಚದಲ್ಲಿ ಒದಗಿಸಿದ ಎಲ್ಲಾ ತರದ ಔಷಧಗಳಿಂದ ಕೂಡಿದ ಪ್ರಥಮ ಚಿಕಿತ್ಸೆ ಕಪಾಟನ್ನು ಉದ್ಘಾಟಿಸಿ ಶಾಲಾ ವ್ಯವಸ್ಥಾಪಕರಿಗೆ ಹಸ್ತಾಂತರಿಸಿದರು. ಬಳಿಕ ಮಕ್ಕಳ ಭಾಷಣ, ಉಪಾಧ್ಯಾಯರ ಹಿತವಚನಾದಿ ಕಾರ್ಯಕ್ರಮಗಳಾದುವು.

ಉಪ್ಪೂರು— ಬೇಕರ್ಾಡಿ ಬಡಾಬೆಟ್ಟು ಹೆಬ್ಬಾಗಿಲು ಮನೆ ರಾಮಣ್ಣ ಸೆಟ್ಟರವರು ತನ್ನ ಶೀರ್ಘರೂಪರವರ ಹಾಗೂ ಪತ್ನಿ ಪುತ್ರರ ಉಪಸ್ಥಿತಿ ಹೊಸಮನೆಯಲ್ಲಿ ಇದೇ ತಾರೀಕು 17-3-1964ರಂದು ತನ್ನ 74ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಸದ್ರಿಯವರು ಉಭಯ ಕುಲೀನ ಮನೆತನದವರಾಗಿ ಬಡಭಗ್ಗರ ಮೇಲೆ ಕುಂಬಾ ಉದಾರಿಗಳಲ್ಲದೆ ಕೆಲವು ಸಂಘ ಸಂಸ್ಥೆಗಳಲ್ಲಿ ನ್ಯಾಯಪರ ದುಡಿಯುತಿದ್ದರು. ಉತ್ತಮ ಕೃಷಿಗಾರರೂ ಸಾತ್ವಿಕ ಗುಣಸಂತರೂ, ದೈವ ಭಕ್ತರೂ ಆಗಿದ್ದರು.

ಶಾಲಾ ವರ್ಧಂತ್ಯುತ್ಸವ— ಬೈಲೂರು ಯಂ. ಯಂ. ಹಿರಿಯ ಬುನಾದಿ ಶಾಲಾ ಮತ್ತು ಹಳೇ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ಉಡುಪಿ ರೇಂಜಿನ ಹಿರಿಯ ಪರೀಕ್ಷಾಧಿಕಾರಿಗಳಾದ ಶ್ರೀ ಎ. ನರಸಿಂಹಯ್ಯ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಡೇವಿಡ್ ಆಂಚನ್ ಇವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ. ದೇವಯ್ಯ ಹೆಗ್ಡೆಯವರು ಬಹುಮಾನ ವಿತರಣೆ ಮಾಡಿದರು. ಕುಮಾರಿ ಜಯಲಕ್ಷ್ಮೀ ಇವರು ಸ್ವಸ್ತಿವಾಚನಗೈದರು. ಶಾಲಾ ಮತ್ತು ಹಳೇ ವಿದ್ಯಾರ್ಥಿ ಸಂಘದ ವರದಿವಾಚನ ವಿವಿಧ ವಿನೋದಾವಳಿ ಮೊದಲಾದ ಕಾರ್ಯಕ್ರಮಗಳಾದುವು.

ಮಣಿಪಾಲ— ತಾ. 17ರಂದು ಸೇರಿದ್ದ ಉಡುಪಿ ರೋಟರಿ ಕ್ಲಬ್ ಸಭೆಯಲ್ಲಿ ವಿಶ್ವ ಅರಿವಿನ ಸಪ್ತಾಹವನ್ನು ವಿದೇಶಿ ವಿದ್ಯಾರ್ಥಿಗಳನ್ನು ಗೌರವಿಸುವುದರ ಮೂಲಕ ಆಚರಿಸಲಾಯಿತು. ಡಾ| ಎ. ಕೃಷ್ಣ ರಾವ್ ರವರು ಅತಿಥಿಗಳಾಗಿ ಬಂದಿದ್ದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಪರಿಚಯ ಮಾಡಿಕೊಟ್ಟರು. ಮಲೇಸಿಯಾದ ಶ್ರೀ ಜಾರ್ಜ್ ತಮ್ಮ ದೇಶದ ಬಗ್ಗೆ ಮಾತನಾಡಿದರು. ಪ್ರೊ| ಕೆ. ಎಸ್. ಹರಿದಾಸ ಭಟ್ಟರವರು ತಮ್ಮ ಇಟೆಲಿ ಸ್ವಿಜರ್‌ಲೇಂಡ್ ಹಾಗೂ ಅಮೇರಿಕ ಪ್ರವಾಸದ ಚಿತ್ರಗಳನ್ನು ಪ್ರದರ್ಶಿಸಿದರು. ಉಪಾಧ್ಯಕ್ಷ ಡಾ|| ಕೆ. ಎಲ್. ಐತಾಳರು ಅಧ್ಯಕ್ಷತೆ ವಹಿಸಿದ್ದರು.

ಅಭಿಪ್ರಾಯ ಮಂಡನೆ

ಪಾಕಿಸ್ತಾನದ ವಿದೇಶ ಮಂತ್ರಿ ಭುಟ್ಟೋರವರು ಭಾರತದ ಮೇಲೆ ವಿಷ ಕಾರುವ ಹೊಸ ವಿಧಾನಗಳನ್ನು ಕಂಡುಕೊಂಡಿದ್ದಾರೆ. ಭದ್ರತಾ ಸಮಿತಿಯ ಸಭೆಯಲ್ಲಿ ಅವರು ಭಾರತೀಯ ಕೇಂದ್ರ ಸರಕಾರದ ಮಂತ್ರಿ ಶ್ರೀ ಮೆಹರಚಂದ ಖನ್ನಾರ ಭಾಷಣದ ತುಣಕೊಂದನ್ನು ಎತ್ತಿದರು. ಶ್ರೀ ಖನ್ನಾರು ಶಿವಾಜಿಯ ಗುರುಗೋವಿಂದರ ಆದರ್ಶವನ್ನು ಅನುಸರಿಸುವಂತೆ ಭಾರತೀಯರಿಗೆ ಕರೆಕೊಟ್ಟಿರುವರೆಂದೂ ಈ ಇರ್ವರು ಮಹನೀಯರೂ ಯುದ್ಧಾಸಕ್ತರೆಂದು ಇತಿಹಾಸ ಪ್ರಸಿದ್ಧರಿರುವರೆಂದೂ ಮುಸ್ಲಿಮರ ವಿರುದ್ಧ ಹೋರಾಡಿಯೇ ಅವರಿಂದ ಪರಾಜಿತರಾದರೆಂದೂ ಅವರು ಅಂದಿದ್ದಾರೆ. ಖನ್ನಾರ ಭಾಷಣದ ಉಳಿದ ಅಂಶ-ಮುಖ್ಯವಾಗಿ ಪಾಕ್ ಕಿರುಕುಳ ಮತ್ತು ನಿರಾಶ್ರಿತರ ಪ್ರಶ್ನೆ—ವನ್ನು ಇವರು ಪ್ರಸ್ತಾಪಿಸಲಿಲ್ಲ; ತೊಂದರೆಯಿಲ್ಲ. ಅವರ ಇಷ್ಟಾರ್ಥ ಸಾಧನೆಗೆ ಬೇಕಾದುದನ್ನು ಅವರು ಎತ್ತಿಕೊಂಡರು ಎನ್ನುವ. ಮುಸ್ಲಿಮರನ್ನು ಎದುರಿಸಿಯೇ ಅವರಿಬ್ಬರು ಭಾರತೀಯ ವೀರರು ಪರಾಜಿತರಾದರು ಎಂಬ ಭುಟ್ಟೋ ಇತಿಹಾಸ ಜ್ಞಾನ ಸರಿಯಲ್ಲ.

ಶಿವಾಜಿ ಅಥವಾ ಗುರುಗೋವಿಂದರು ಮುಸ್ಲಿಮರನ್ನು ಎದುರಿಸಿದರೆಂದು ಹೇಳುವುದಕ್ಕಿಂತ ಅವರ ಅನ್ಯಾಯ ಅತ್ಯಾಚಾರಗಳನ್ನು ಎದುರಿಸಿದವರೆಂದು ಹೇಳಬೇಕು ಅಂದಿನ ಮುಸ್ಲಿಂ ಸಾಮ್ರಾಟರು ತಮ್ಮ ಅನಾಚಾರ—ಹತ್ಯಾಕಾಂಡಗಳಿಗೆ ಹೆಸರಾದವರು. ಇವರ ಅಮಾನುಷತೆಯ ವಿರುದ್ಧ ಹೋರಾಡಿದರು, ಶಿವಾಜಿ ಗುರುಗೋವಿಂದರು. ಶಿವಾಜಿಯು ಪರಾಜಿತನಾಗಲಿಲ್ಲ; ಆತನು ವಿಜಯಿಯಾಗಿಯೇ ಛತ್ರಪತಿಯೆಂಬ ಹೆಸರಾದ. ಗುರುಗೋವಿಂದರು - ವೀರ ಮರಣವನ್ನು ಪಡೆದರು. ಸ್ವಾರ್ಥಕ್ಕಿಂತ ಪರಾರ್ಥವನ್ನು ಹೆಚ್ಚಿನದೆಂದು ತಿಳಿಯುವ ಈ ಭಾರತೀಯ ವೀರ ಪರಾಜಿತನಾದನಲ್ಲ; ಸೋತರೂ ಗೆದ್ದನು. ಇಂತಹ ವೀರ್ಯ ನಮ್ಮಲ್ಲಿ ತುಂಬಿಬರಬೇಕು. ಭುಟ್ಟೋ ಈ ಅರ್ಥವನ್ನು ತಪ್ಪಾಗಿ ಭಾವಿಸಿದರೆ, ಅದು ಅವರ ಅಸ್ಥಿರತೆಯ ಕುರುಡು ಮಾರ್ಗ ದರ್ಶನ ವೆನ್ನಲೇ ಬೇಕು.

ಪುತ್ತೂರು, —ಲಕ್ಷ್ಮೀನಾರಾಯಣ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 17/64

ಸುಬ್ಬಯ್ಯ ಪಕ್ಕಳ— ವಾದಿ,

ಅಂಣಪ್ಪ ಗೌಡ, ಬೆಳ್ಳಿ ಗೌಡರ ಮಗ, ಪುತ್ತೂರು ತಾಲೂಕು ಕುದ್ಮಾರು ಗ್ರಾಮದ ಕೂರ ಎಂಬಲ್ಲಿ. —ಪ್ರತಿವಾದಿರು.

ಪ್ರತಿವಾದಿಗೆ ತಿಳಿಸುವುದೇನೆಂದರೆ—

ನಿಮ್ಮಿಂದ ಬರಬೇಕಾದ ಚಾಲಗೇಣಿಯ ವಸೂಲಿಗೆ ವಾದಿಯು ದಾಖಲು ಮಾಡಿದ ಈ ದಾವೆಯು ತಾ. 30-3-64ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್,
ವಾದಿಯ ವಕೀಲ್

ಪುತ್ತೂರು,
ತಾ. 15-3-64

ಪುತ್ತೂರು ಡಿ. ಮು ಕೋರ್ಟಿನಲ್ಲಿ

R E A 992/63 R E P 568/62
O. S. 436/59

ಐತಪ್ಪ ಗೌಡ ಕೂಡಾ —ಅರ್ಜಿದಾರರು

ಚೆನ್ನಪ್ಪ ಗೌಡ ಕೂಡಾ —ಎದ್ರಿರು.

2ನೇ ಎದ್ರಿ ಕೂಸಪ್ಪ ಗೌಡ, ತುಕ್ಕಪ್ಪ ಗೌಡರ ಮಗ, ಪುತ್ತೂರು ತಾಲೂಕು ಮುಂಡೆಕೋಲು ಗ್ರಾಮದ ಕುತ್ಯಾಡಿಯಲ್ಲಿ

—ಇವರಿಗೆ ತಿಳಿಸುವುದೇನೆಂದರೆ.

ಈ ಅಮಲ್ಜಾರಿಯಲ್ಲಿ ಅದ ಜಪ್ತಿರದ್ದು ಪಡಿಸಬೇಕೆಂತ ಅರ್ಜಿದಾರರು ದಾಖಲು ಮಾಡಿದ ಈ ಅರ್ಜಿಯು ತಾ. 6-4-64ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

ಎ. ರಾಧಾಕೃಷ್ಣ ಗೌಡ
ಅರ್ಜಿದಾರರ ಎಡ್ವಕೇಟ್

ಪುತ್ತೂರು, ತಾ. 11-3-64

ಪಾಕಾಸುರನ ಕಪ್ಪು ನೆರಳು

(೫ನೇ ಪುಟದಿಂದ)

ದು; ಆಗ ಆತ್ಮರಕ್ಷಣೆಗಾಗಿ ಭಾರತವು ಮುಂದುವರಿಯಲೇಬೇಕಾಗುತ್ತದೆ. ಆದರೆ, ಈ ಉದ್ಗಾರವನ್ನು ಭುಟ್ಟೋ ತನ್ನ ಸ್ವಭಾವಕ್ಕನುಸಾರವಾಗಿ ತಪ್ಪಾಗಿ ತಿಳಿದುಕೊಂಡಿದ್ದಾರೆ. ಅವರೇನೆಂದರೂ ತನ್ನ ನಿಲುಮೆಯೇನು ಎಂಬುದನ್ನು ಭಾರತವು ಭದ್ರತಾ ಸಮಿತಿಗೆ ಮುಂದಿಟ್ಟು ಮಾಡಿದೆ.

ಭುಟ್ಟೋರವರ ಹಾರಾಟಕ್ಕೆ ಇನ್ನೊಂದು ಮುಖ್ಯ ಕಾರಣವಿದೆ. ಕಾಶ್ಮೀರಕ್ಕೆ ಭಾರತ ಸಂವಿಧಾನದಲ್ಲಿ ವಿಶಿಷ್ಟ ಸ್ಥಾನಮಾನಗಳನ್ನು ನೀಡಲಾಗಿದೆ. ಇದೀಗ ಅದನ್ನು ಕಿತ್ತು ಹಾಕಿ ಭಾರತದ ಇತರ ರಾಜ್ಯಗಳಂತೆಯೇ ಅದರ ಅಸ್ತಿತ್ವವನ್ನು ಉಳಿಸುವ ಕುರಿತು ತೀವ್ರಕ್ರಮಗಳು ಕೈಗೊಳ್ಳಲ್ಪಡುತ್ತಿವೆ. ಭಾರತಕ್ಕೆ ಕಾಶ್ಮೀರದ ಮೇಲಿರುವ ಅಧಿಕಾರವನ್ನು ಪ್ರಶ್ನಿಸುವುದು ಬೇರೆಯವರ ಅಧಿಕಾರಕಕ್ಷೆಗೂ ಒಳಪಟ್ಟಿಲ್ಲವೆಂಬುದು ಭಾರತದ ನೀತಿ. ಇದರಿಂದ ತಬ್ಬಿಬ್ಬಾದ ಭುಟ್ಟೋರವರು ಬೇಡವೆಂದರೂ ಹರಿಪಾಡಲೇ ಬೇಕು. ಪಾಕಿಸ್ತಾನದ ನಾಯಕರು ಸ್ವದೇಶದ ದುರ್ಗತಿಯನ್ನು ಸುಧಾರಿಸಲು ಅಶಕ್ತರಾದುದರಿಂದ ಜನತೆಯ ಲಕ್ಷ್ಯವನ್ನು ಕಾಶ್ಮೀರದ ಪ್ರಶ್ನೆಯತ್ತ ಕೇಂದ್ರೀಕರಿಸಿ ಮುಷ್ಟಿಯಲ್ಲಿಟ್ಟುಕೊಂಡಿದ್ದಾರೆ, ಇದು ಜಾರಿತೆಂದರೆ, ಮತ್ತೆ ನಾಯಕರಿಗೆ ತಿರುಕತನವೇ ಗತಿ. ಆದಕ್ಕೆಂದೇ ಸತ್ಯವನ್ನು ಸುಳ್ಳನ್ನಾಗಿ ಸುಳ್ಳನ್ನು ಸತ್ಯವಾಗಿ ಮಾಡುವ ಜಾದೂ ವಿದ್ಯೆಯನ್ನು ಪ್ರದರ್ಶಿಸುತ್ತಾರೆ. ಒಂದು ಮಾತನ್ನು ಎಲ್ಲರೂ ನೆನಪಿಟ್ಟುಕೊಳ್ಳಬೇಕು: ಸತ್ಯವನ್ನು ಕೆಲವು ಕಾಲ ಅಡಗಿಸಿಡಬಹುದು; ಸದಾಕಾಲವಲ್ಲ. ಕಾಶ್ಮೀರ ನೀತಿಯನ್ನಾದರೂ ಪಾಕಿಸ್ತಾನ ಸಂಪೂರ್ಣ ಬದಲಾಯಿಸಿ, ಅದು ಭಾರತದ ಅಂಗವೆಂದು ಒಪ್ಪಿಯೇ ಸುಮ್ಮನಿರಬೇಕಾದ ಸಮಯ ಬಂದೇ ಬರುತ್ತದೆ.

ಭಾರತವಿಂದು ವಿಕಟ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಭಾರತ-ಚೀನಾಗಳ ಗಡಿ ವಿವಾದದ ಗೊಂದಲವೊಂದೆಡೆ, ಪಾಕಿಸ್ತಾನದ ಕಿರುಕುಳವಿನ್ನೊಂದೆಡೆ. ವಿಪನ್ನಾವಸ್ಥೆಯಲ್ಲಿ ಧೃತಿಗೆಡುವುದು ವಾಡಿಕೆ. ಆದರೆ, ಧೀರರೂ ಯೋದ್ಧರೂ ಆದ ಭಾರತೀಯರು ಗಂಡಸರು; ಅವರದು ಗಂಡೆದೆ. ಅವರು ತಾಳ್ಮೆಗೆಡದೆ ಭೀರುಗಳಾಗದೆ ದೇಶದ ಸಮಗ್ರತೆಯನ್ನೂ ಸಾರ್ವಭೌಮತೆಯನ್ನೂ ಉಳಿಸಿಕೊಳ್ಳಬೇಕು ನ್ಯಾಯವಾದ ಶಾಂತ ವಿಧಾನಗಳಿಂದಲೇ ಎಲ್ಲ ಸಮಸ್ಯೆಗಳನ್ನು ಬಿಡಿಸಲು ಭಾರತ ಸದಾ ಸಿದ್ಧವಿದೆ ನಿಜ; ಆದರೆ, ಆತ್ಮಪ್ರತ್ಯಯವನ್ನ ಕಳೆದುಕೊಂಡು ಹತವೀರ್ಯರಾಗಿ ಬಲಾತ್ಕಾರದ ಮುಂದೆ ತಲೆ ತಗ್ಗಿಸುವುದು ಭಾರತದ ಸಂಸ್ಕೃತಿಗೆ ವಿರುದ್ಧವಾದುದು. ತಲೆಬಗ್ಗ ಬೇಕು. ನ್ಯಾಯದ ಮುಂದೆ; ಸತ್ಯದ ಸಮ್ಮುಖದಲ್ಲಿ ಅಸತ್ಯ ಮತ್ತು ಅನ್ಯಾಯಗಳನ್ನು ಪುರಸ್ಕರಿಸುವ ಸಂಪ್ರದಾಯ ಉದಾತ್ತವಾದಭಾರತೀಯ ಸಂಸ್ಕೃತಿಗೆ ವಿರುದ್ಧವಾದುದು. ಅನ್ಯಾಯ ಅನೀತಿ-ಅತ್ಯಾಚಾರಗಳನ್ನು ದೇಶಕ್ಕೆ ದೇಶವೇ ಒಂದಾಗಿ ಪ್ರತಿಭಟಿಸಲು ಸದಾ ಸಿದ್ಧವಿದೆ. ತೊಟ್ಟಿಲು ತೂಗುವ ಕೈ ಕತ್ತಿಯನ್ನೂ ಹಿಡಿಯಬಲ್ಲುದು; ಶಾಂತಿಪ್ರಿಯ ರಾಷ್ಟ್ರ ಅಶಾಂತಿ ಪ್ರಸಾರಕರನ್ನು ದಮನಿಸಿಯೂ ದಮನಿಸಬಲ್ಲುದು.

ಜಿಲ್ಲಾ ಮಟ್ಟದಲ್ಲಿ ನಡೆದ ಏಳನೆಯ ತರಗತಿಯ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕೆಲವು ದಿನ ಮೊದಲೇ ಶಾಲಾ ಅಧ್ಯಾಪಕರ ಕೈ ಸೇರುತ್ತವೆ. ಅಲ್ಲಿಂದ ಹಿಡಿದು, ವಿದ್ಯಾರ್ಥಿಗಳ ಪರೀಕ್ಷಾಭವನದ ಮೇಲ್ವಿಚಾರಣೆ, ಉತ್ತರ ಪತ್ರಿಕೆಗಳ ಪರಿಶೀಲನೆ—ಎಂದರೆ, ಉತ್ತೀರ್ಣತೆ—ಅನುತ್ತೀರ್ಣತೆಗಳ ಸಂಪೂರ್ಣ ಜವಾಬ್ದಾರಿಯು ಅದೇ ಶಾಲೆಯ ಅಧ್ಯಾಪಕರ ಮೇಲಿದೆ. ಭಾವಿ ನಾಗರಿಕರಲ್ಲಿ ಜವಾಬ್ದಾರಿ ನಿರ್ವಹಣೆಯ ಪ್ರವೃತ್ತಿ ಹುಟ್ಟಿಸಬೇಕಾದ, ನಾಡಿಗೇನೇ ಆಚಾರದ ಪಾಠ ಹೇಳಿ ಕೊಡಬೇಕಾದ ಈ ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಕೆಲವರು ಬೇಜವಾಬ್ದಾರರಂತೆ ವರ್ತಿಸಿದ ವಾರ್ತೆ ಊರು ಊರು ಗಳಲ್ಲಿ ಕೇಳಿಬರತೊಡಗಿದೆ. ಕೆಲವೆಡೆ ಪ್ರಶ್ನೆ ಪತ್ರಿಕೆಯನ್ನೇ ಬಹಿರಂಗ ಮಾಡಿದ್ದರೆ, ಇನ್ನು ಕೆಲವೆಡೆ ಪರೀಕ್ಷಾ ಭವನದಲ್ಲಿ ವಿದ್ಯಾರ್ಥಿಗಳಿಗೆ ಉತ್ತರ ಹೇಳಿಕೊಡಲಾಗಿತ್ತಂತೆ. ಶಾಲೆಯ ಮಕ್ಕಳೇ ಈ ರೀತಿ ಹೇಳತೊಡಗಿದ್ದಾರೆ.

ಸರಕಾರವು ಸಂಪೂರ್ಣ ವಿಶ್ವಾಸವಿಟ್ಟು ಜವಾಬ್ದಾರಿಯನ್ನು ವಹಿಸಿದಾಗ, ಅದನ್ನು ಹೀಗೆ ಅಕ್ರಮಗೊಳಿಸುವುದರಿಂದ ಅನಾಚಾರ ಶೀಲರಾದ ಕೆಲವು ಅಧ್ಯಾಪಕರಿಂದ ಇಡಿಯ ಸಮಾಜಕ್ಕೆ ಅಪಮಾನ ಬರುತ್ತದೆ; ಸರಕಾರಕ್ಕೂ ಅವಹೇಳನವಾಗುವುದರಿಂದ, ಆದಾದರೂ ಪರೀಕ್ಷಾಕ್ರಮದಲ್ಲಿ ಬೇರೆ ವಿಧಾನಗಳನ್ನು ಅನುಸರಿಸುವುದು ಅಗತ್ಯವಾಗಿದೆ. ಅಧ್ಯಾಪಕರನ್ನು ಅಧ್ಯಾಪಕರೇ ಹೀನತೆಯತ್ತ ಕೊಂಡೊಯ್ಯುತ್ತಾರೆ ಎಂದು ಹೇಳಿದರೆ ತಪ್ಪೇನು? ಇನ್ನಾದರೂ ಹೀಗಾಗದಿರಲಿ.

ಉದ್ಯಾವರ, —ಅಧ್ಯಾಪಕಬಂಧು.

ವಿಚಾರ ಕಿಡಿಗಳು

ಶ್ರೀ. ಕೆ. ಜಿ. ಶೆಟ್ಟಿ. ಕಡಂದಲೆ.

ಹಗೆಸಾಧಿಸುವ ಹಟದಿಂದ ನೆರೆಯವರ ನಾಶಕ್ಕಾಗಿ ಹೋರಾಡಿ ಇಲ್ಲದ ಅನಿಷ್ಟಕ್ಕೆ ತಾವೇ ಗುರಿಯಾಗುವವರ ಗತಿ ಹೇಗೆ?—ಮಗ ಸತ್ತರೂ ಚಿಂತಿಲ್ಲ ಸೊಸೆ ಮೂಗುತಿ ಕಳಕೊಳ್ಳುವುದನ್ನು ನೋಡಬೇಕೆನ್ನುವ ಮತ್ಸರಿ ಅತ್ತೆಯ ಹಾಗೆ!

o o o o

ನೋಡಲು ಚಂದ ವರುಷ ಹಣ್ಣಾದರೂ ಮೂಸಿ ನೋಡಿಯೇ ಸಿಹಿಯೋ ಹುಳಿಯೋ ಎಂದು ಹೇಳ ಲಾಗುವುದಿಲ್ಲ ತಿಂದೇ ತಿಳಿಯಬೇಕು—ನೀತಿಯ ಮಾತುಗಳನ್ನೇ ಆಡುವವರನ್ನಾದರೂ ಯೋಗ್ಯ ಸದ್ಗೃಹಸ್ಥರೆಂದು ನಂಬಲಾವುದಿಲ್ಲ ಆತನ ಸಂಸರ್ಗದಲ್ಲಿದ್ದು ಆಚಾರ ವ್ಯವಹಾರಗಳನ್ನೂ ಪರಾಂಬರಿಸಬೇಕು.

o o o o

ಬೂಟಾಟಿಕೆಯ ಬಡಾಯಿ ಕೊಚ್ಚುವವನಿಗಿಂತ ಬಾಯಿ ಬಿಡದಿರುವವನೇ ಜಾಣ!—ಸುಳ್ಳೇ ಸುದ್ದಿಗಳನ್ನೂ ಸವಿಯಾಗಿ ಹೇಳುವವನಿಗಿಂತ ಏನೂ ತಿಳಿಯದೆಂದು ಸುಮ್ಮನಿರುವವನೇ ಮಾನ್ಯ!

o o o o

ಸಾಕಷ್ಟು ಸಂಪತ್ತಿದ್ದರೂ ಸುಖವಿಲ್ಲವೆಂದು ಪ್ರಾಣ ಕಳ ಕೊಳ್ಳುವವರಿದ್ದಾರೆ ಕೈಯಲ್ಲಿ ಕಾಸಿಲ್ಲವಾದರೂ ಶಾಂತಿಯಿಂದ ಬದುಕುವವರೂ ಇರುತ್ತಾರೆ!

o o o o

ಬುದ್ಧಿಯ ಕೊರತೆಯಿಂದ ಕಷ್ಟಕಡಿಮೆಯಾಗುವುದೂ ಇವೆ, ಬುದ್ಧಿಯ ವೈಪರೀತ್ಯದಿಂದ ವಿಪತ್ತು ವಿಶೇಷವಾಗುವುದೂ ಸಾಧ್ಯ!

o o o o

ಅತ್ಯಾಸೆಗೆ ಅಪೇಕ್ಷೆಪಟ್ಟು ಅನಾಚಾರಗೈದರೆ ಅನಿಷ್ಟವೇ ಸಂಭವ—ನೆಲಬಿಟ್ಟು ಹಾರಾಡುವೆನೆಂದು ನೆಗೆದರೆ ಕೈಕಾಲು ಮುರಿಯುವುದೇ ಸತ್ಯ!

o o o o

ಕಾಣುವ ಗುಂಡುಕಲ್ಲೇ ಬಂಗಾರವಾಗಿ ದೊರೆಯಬೇಕೆಂದು ಆಸೆ ಪಡುವವರು ಕಾಲಡಿಯ ಸಾಲಿಗ್ರಾಮವನ್ನಾದರೂ ಹೆಕ್ಕುವುದುಂಟೇ?—ಹೀಗೆ ಅತಿ ಆಕಾಂಕ್ಷೆ ಅಲ್ಪ ಲಾಭದಿಂದ ತೃಪ್ತಿ ಪಡೆಯಲಾರರು!

o o o o

ಮನಸ್ಸು ಚಿಂತೆಯಿಂದ ವ್ಯಥವಾಗಿದರೆ ಮುಖದಲ್ಲಿ ಸಂತೋಷ ಪ್ರಕಟವಾಗುವುದಿದೆಯೊ?—ಹೊಟ್ಟೆ ತುಂಬದೆ ತೃಪ್ತಿಯ ತೇಗು ಬರುವುದೆಲ್ಲಿಂದ?

ಪುತ್ತೂರು ಡಿ ಮು. ಕೋರ್ಟಿನಲ್ಲಿ

S. C. 521/63

ಲಿಂಗಪ್ಪ ಗೌಡ.— ವಾದಿ.

ಅಬ್ದುಲ್ ಕಾದ್ರಿ ಅಬ್ದುಲ್ಲ ಬ್ಯಾರಿಯ ಮಗ, ಕಾಸರಗೋಡು ತಾಲೂಕು ಚೆಂಗಳ ಗ್ರಾಮದ ಚೆರ್ಕಳ ಮಸೀದಿಯ ಬಳಿಯಲ್ಲಿ

—ಪ್ರತಿವಾದಿ.

ನಿಮ್ಮಿಂದ ಡಿ. ಪ್ರೊ. ನೋಟು ಪ್ರಕಾರ ಬರಬೇಕಾದ ಹಣದ ವಸೂಲಿಗೆ ವಾದಿಯು ದಾಖಲು ಮಾಡಿದ ಈ ದಾವೆಯು ತಾರೀಕು. 15-4-64ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

ಎ ರಾಧಾಕೃಷ್ಣ ಗೌಡ.
ವಾದಿಯ ಎಡ್ವಕೇಟ್

ಪುತ್ತೂರು, ತಾ. 18-3-64

ಕವಲು ದಾರಿ—ಕೆಂಪು ದೀಪ

ನಮಗೆ ಬೇಕಾದ ಕೃತಿ—ಹಸುರು ಹಂಸ

—"ಸುದಾಸ"

ನಚಿಕೇತರು ಬರೆದ ಮೂರನೆಯ ಕೃತಿ ಹಸುರು ಹಂಸ. ಬಿಳಿಯ ಹಾಳೆಯಲ್ಲಿ ನೂರಎಪ್ಪತ್ತನಾಲ್ಕು ಪುಟಗಳಲ್ಲಿ ಮುಕ್ತಾಯಗೊಳ್ಳುವ ಸತೀಶನ ಅಪೂರ್ಣ ಜೀವನದ ಕತೆ, ಒಂದು ಯಶಸ್ವೀ ಪ್ರಯೋಗ.

ಕನ್ನಡ ಸಾಹಿತ್ಯಕ್ಕೆ ನಚಿಕೇತರು ಕೊಟ್ಟಿರುವ ಉತ್ತಮ ಕೊಡುಗೆಯಾಗಿದೆ. ಹಸುರು ಹಂಸ

ಆದರ್ಶದ ಕೂಸಾಗಿ ಬೆಳೆಯುವ ಸತೀಶ, ಅನೇಕ ಬಾರಿ ಓದುಗರನ್ನು ಗೊಂದಲದಲ್ಲಿ ಕೆಡಹುತ್ತಾನೆ. ಓದುಗರನ್ನು ಕೆರಳಿಸುತ್ತಾನೆ; ಸಿಟ್ಟು ಬರಿಸುತ್ತಾನೆ; ಇವನಂತಹ ವ್ಯಕ್ತಿ ಇರಲು ಸಾಧ್ಯವೇ ಎಂಬ ಪ್ರಶ್ನೆಗೆ ಅವಕಾಶ ಮಾಡಿಕೊಡುತ್ತಾನೆ.

ಇಷ್ಟೆಲ್ಲಾ ಆದ ಬಳಿಕವೂ ಓದುಗನು ಅವನನ್ನು ಮರೆಯುವದಿಲ್ಲ! ಓದುಗರ ಮರುಕಕ್ಕೆ ಪಾತ್ರನಾಗುವ ಸತೀಶ, ಓದುಗರ ಹೃದಯದ ಒಂದು ಮೂಲೆಯಲ್ಲಿ ತನ್ನ ಸ್ಥಾನವನ್ನೂ ಭದ್ರಪಡಿಸಿಕೊಳ್ಳುತ್ತಾನೆ!

ಕಾದಂಬರಿಯನ್ನು ಓದಿದ ಬಳಿಕವೂ ಕಾಡಬಹುದಾದ ಒಂದು ಪ್ರಶ್ನೆಯಿದೆ; ಆ ಪ್ರಶ್ನೆಯು ಬಹು ಬೇಗ ಓದುಗರ ಹೃದಯದಲ್ಲಿ ಮೂಡಿ ನಿಲ್ಲುತ್ತದೆ; ಸತೀಶನ ಗುಣಕ್ಕೆ ಓದುಗರು ಮಾರು ಹೋದರೂ ಕೂಡಾ, ಆ ಪ್ರಶ್ನೆಗೆ ಉತ್ತರ ಕೊಡಲು ಅವರು ಬಹು ಬೇಗ ಸಮರ್ಥರಾಗುವದಿಲ್ಲ.

ಸತೀಶನಂತಹ ವ್ಯಕ್ತಿ ನಮ್ಮ ಸಮಾಜದಲ್ಲಿ ಇದ್ದಾನೆಯೇ? ಹಾಗೆ ಇರಲು ಸಾಧ್ಯವೇ?

ಆ ಪ್ರಶ್ನೆಗೆ ಉತ್ತರಿಸಬೇಕಾದ ಅಗತ್ಯವಿರುವದಿಲ್ಲ. ನಚಿಕೇತರೇ ಆ ಮಾತನ್ನು ಆರಂಭದಲ್ಲಿ ಬಿಂಬಿಸಿದ್ದಾರೆ.

ಅಂತಹ ಮಂದಿ ಬೆರಳೆಣಿಕೆಗೆ ಸಿಗಬಹುದೋ ಏನೋ?—ಎಂದೂ ನಾವು ಸಂದೇಹ ಪಡಬಹುದು. ಆದರೆ ವಿಭಿನ್ನ ಪರಿಸ್ಥಿತಿಯ ತುತ್ತುಗಳಾಗಿ ಬದುಕುವ ಜನರೆಡೆಯಲ್ಲಿ ಸತೀಶನಂತಹ ವ್ಯಕ್ತಿಯ ವ್ಯಕ್ತಿತ್ವವನ್ನು ಹುಡುಕಿ ತೆಗೆಯುವದು ಜನಸಾಮಾನ್ಯರಿಗೆ ಸ್ವಲ್ಪ ಕ್ಲಿಷ್ಟಕರವಾದ ಮಾತಾದೀತು.

ಮನುಷ್ಯನ ಬೆಲೆಯನ್ನು ಮನುಷ್ಯನೇ ಕೊಡುತ್ತಾನೆ ಎಂಬ ಮಾತನ್ನೇ ನಾವು ನಂಬಿಕೊಳ್ಳುವುದಕ್ಕಿಂತ, ಮಾನವ ಜೀವನದ ಹಲವು ಘಟ್ಟಗಳನ್ನು ಏರು ಪೇರು ಮಾಡಿ ನೋಡಿದರೆ, ಸತೀಶ ನಮ್ಮ ಕಣ್ಣಿಗೆ ಬೀಳುತ್ತಾನೆ! ಅವನಂತಹ ನೂರಾರು ಮಂದಿ ನಮ್ಮ ಕಣ್ಣೆದುರು ನಿಲ್ಲುತ್ತಾರೆ.

ಸತೀಶನ ಪಾತ್ರವು ಸಹಜ—ಅಸಹಜಗಳ ತೂಗುಯ್ಯಾಲೆಯಲ್ಲಿ ನಮ್ಮನ್ನು ಕೂಡಿಸಿಕೊಂಡು ಕಾದಂಬರಿಯನ್ನು ಓದಿಸಿಕೊಂಡು ಹೋಗುತ್ತಿರುವಂತೆ ನಮ್ಮ ಮನಸ್ಸಿನಲ್ಲಿ ಮಿಂಚಿನಂತೆ ಮೂಡಿ, ಆ ಮಿಂಚಿನ ಬೆಳಕು ಸದಾಕಾಲವುಳಿಯುವಂತೆ ಮೂಡುತ್ತಾಳೆ ಅರುಂಧತಿ.

ನಿಜಕ್ಕೂ ಅರುಂಧತಿಯು ದಕ್ಷಿಣ ಕನ್ನಡದ ಹೆಮ್ಮೆಯ ನಾರೀಮಣಿಯಾಗಿ ನಮ್ಮ ಮುಂದೆ ನಿಲ್ಲುತ್ತಾಳೆ; ಎಂದೆಂದೂ ಮರೆಯದಂತೆ ನಮ್ಮ ನೆನಪಿನಲ್ಲಿ ಉಳಿಯುತ್ತಾಳೆ; ಅರುಂಧತಿ. ಕನ್ನಡ ಸಾಹಿತ್ಯದಲ್ಲಿ ಅತಿ ವಿರಳ ರೂಪದಲ್ಲಿ ಇಂತಹ ಪಾತ್ರ ರಚನೆಯಾಗುತ್ತದೆ. ಆದರೆ ಹೆಚ್ಚು ಮಹತ್ವ ಬೀರುತ್ತ ಆ ಪಾತ್ರ ನಮ್ಮ ಮುಂದೆ ಸದಾಕಾಲ ಸುಳಿಯುತ್ತಿರುತ್ತದೆ.

ಜೀವನವನ್ನು ಕುತೂಹಲದಿಂದ ನಿರೀಕ್ಷಿಸುವ ಸತೀಶ, ವಾಸ್ತವ ಸ್ಥಿತಿಯನ್ನು ಅರಿತುಕೊಳ್ಳುವ ಮನೋಭಾವವುಳ್ಳ ಸತೀಶನ ಅಣ್ಣ ವೆಂಕಟರಮಣ, ಗಂಡುಬೀರಿ ಎನ್ನಿಸಿಕೊಳ್ಳುವ ಸುಮನ, ಜೀವನವು ಸುಖ ಪಡೆಯುವದಕ್ಕಾಗಿ ಎಂದು ತಿಳಿಯುವ ದೇವದಾಸ ಜೀವನವು ತನ್ನಂತೆಯೇ ಸರಳ-ಸುಂದರವಾಗಿದೆ ಎಂದು ತಿಳಿಯುವ ಅರುಂಧತಿ ಇವರಂತಾದವರ ಮೂಲಕ ಕಾದಂಬರಿಯು ಹಂತಹಂತಗಳಲ್ಲಿ ಓದುಗರನ್ನು ಕುತೂಹಲದ ಮೂಲಕವೇ ಓದಿಸುತ್ತದೆ.

ಹೆಚ್ಚಿನ ರಗಳೆಯಿಲ್ಲದೆ, ಸರಳವಾಗಿ, ಬದುಕಿನ ಆಳಕ್ಕಿಳಿದು, ಅಮೂಲ್ಯ ರತ್ನಗಳಿಂದ ಹಸುರು ಹಂಸದ ಸೃಷ್ಟಿ ಮಾಡಿದ್ದಾರೆ ಲೇಖಕ ನಚಿಕೇತ ಅವರು.

ಅವರ ಸಾಹಸದಿಂದ ಕನ್ನಡಕ್ಕೊಂದು ಅಪೂರ್ವ ಕೊಡುಗೆ ಲಭಿಸಿದೆ.

ಕಾದಂಬರಿಯಲ್ಲಿ ಶರತ್ ಸಾಹಿತ್ಯದ ಪ್ರಭಾವ ಇಣಿಕಿಣುಕು ಇದೆ. ಇದರ ವಸ್ತು, ಕನ್ನಡ ನಾಡಿನದ್ದು. ಕನ್ನಡದ ಜನಜೀವನದ್ದು. ಅಲ್ಲಿ ಸ್ವತಂತ್ರ ಮನೋವೃತ್ತಿಯೇ ಕಂಡು ಬರುತ್ತದೆ. ಅನುಕರಣೆಯ ಪ್ರಭಾವ ಇಲ್ಲ. ಶರತ್ ಸಾಹಿತ್ಯದ ಪ್ರೇರೇಪಣೆ ಇದ್ದರೂ, ಅದು ಕಾದಂಬರಿಗೊಂದು ಅಪವಾದವಾಗಿ ನಿಲ್ಲುವದಿಲ್ಲ.

ಈ ಕೃತಿಗೆ ರಾಜ್ಯ ಸರಕಾರದ ಬಹುಮಾನ ಸಿಕ್ಕಿದೆಯೆ? ಸಾವಿರಾರು ಪ್ರತಿಗಳ ಮಾರಾಟವಾಗಿದ್ದೇತೇ? ಬೇಡಿಕೆಗಳ ಮೇಲೆ ಬೇಡಿಕೆ ಬಂದಿರಬಹುದೇ? ನಾಲ್ಕಾರು ಬಾರಿ ಪುನರ್ಮುದ್ರಣ ನಡೆದಿದೆಯೆ?

ಮೇಲ್ಮಟ್ಟದಲ್ಲಿ ಎದ್ದು ಕಾಣಿಸಿಕೊಳ್ಳುವ ಈ ಕೃತಿ ಬಹುಶಃ ರಾಜ್ಯ ಸರಕಾರದ ಸಾಹಿತ್ಯ ಎಕಾಡೆಮಿಯವರ ಕೈಗೆ ಸಿಕ್ಕಿರಲಿಕ್ಕಿಲ್ಲ. ಅವರ ಕಣ್ಣೆದಿರು ಈ ಕೃತಿ ಬಿದ್ದಿರಲಿಕ್ಕಿಲ್ಲ.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್. ಉಡುಪಿ ಇವರು ಈ ಕೃತಿಯನ್ನು ಪ್ರಕಟಿಸಿದ್ದಾರೆ.

ನಚಿಕೇತರ ಹಿಂದಿನ ಎರಡು ಕಾದಂಬರಿಯನ್ನೂ ಅವರೇ ಪ್ರಕಟಿಸಿದ್ದಾರೆ. ಪ್ರಕಟನೆಯ ಕಾರ್ಯವು ಒಂದು ಸಾಹಸೋದ್ಯಮ ಎನ್ನುವದಕ್ಕೆ ಲೇಖಕರ ಮುನ್ನುಡಿಯ ಒಂದು ಮಾತು ಸಾಕಾದೀತು.

ಆ ಮಾತು ಇಲ್ಲಿದೆ:

"ಆರ್ಥಿಕ ದೃಷ್ಟಿಯಿಂದ ಅಷ್ಟೊಂದು ಉತ್ತೇಜಿತವಾಗಿ ಕಾಣಿಸಬಾರದ ಈ ಹೊಣೆಗಾರಿಕೆಗೆ ಅವರು ಕಲಾತ್ಮಕ ದೃಷ್ಟಿಯಿಂದ ಕೊಡುತ್ತಿರುವ ಬೆಲೆ ಹಿರಿದಾದುದೆಂದೇ ನನ್ನ ಅಭಿಪ್ರಾಯ"

ಹಸುರುಹಂಸದ ಮುಖ ಚಿತ್ರಹೊತ್ತ ಸರಳತೆಯ ಪ್ರದರ್ಶನದಿಂದಲೇ ಕಾಣಿಸಿಕೊಂಡು; ಉತ್ತಮಸ್ಥಾನವನ್ನು ಗಳಿಸಿಕೊಂಡ ಈ ಕೃತಿಯನ್ನೂ, ಲೇಖಕರನ್ನೂ, ಪ್ರಕಾಶಕರನ್ನೂ, ಗೌರವಿಸಬೇಕಾದ ಕಾರ್ಯ ನಡೆಯಬೇಕಿತ್ತು.

ವ್ಯಭಿಚಾರದ ಚಿತ್ರಣದ ಒಂದೊಂದೇ ಮುಖಗಳನ್ನು ಅದ್ಭುತವಾಗಿ ಚಿತ್ರಿಸುವ ಕೃತಿಗಳು ಮಾರಾಟದ ದೃಷ್ಟಿಯಿಂದ ಆರ್ಥಿಕ ದೃಷ್ಟಿಯಿಂದ ಆರ್ಥಿಕಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು.

ಮುಖಸ್ತುತಿಯ ವೀಣೆ ಬಾರಿಸಿ, ಗೌರವಕ್ಕೆ ಅರ್ಹವಾಗದಿದ್ದರೂ, ಬಹುಮಾನ ಪಡೆಯುವಲ್ಲಿ ಮುಂದಿನ ಸ್ಥಾನವನ್ನು ಗಳಿಸಿಕೊಳ್ಳುತ್ತವೆ, ನಮ್ಮ ಕೆಲವು ಕೃತಿರತ್ನಗಳು!

ಅಂತಹ ಕೃತಿಗಳನ್ನು ಬೇಕಾದರೆ ಶಾಲಾ ಪಠ್ಯ ಪುಸ್ತಕ ಕಮಿಟಿಯೂ ಆರಿಸಬಹುದು,

ಕನ್ನಡ ಸಾಹಿತ್ಯವು ಎಂತಹ ಕೃತಿಗಳನ್ನಾದರೂ ಪಡೆದು, ತನ್ನ ಭಂಡಾರವನ್ನು ಬೆಳೆಸಿಕೊಳ್ಳಬಹುದು.

ಈ ಕುರಿತು ನಾನೇನೂ ಅಭಿಪ್ರಾಯ ಸೂಚಿಸುವದಿಲ್ಲ. ಆದರೆ, ಕನ್ನಡ ಸಾಹಿತ್ಯದಲ್ಲಿ ಹಸುರು ಹಂಸದಂತಹ ಕೃತಿಗಳು, ಹೆಚ್ಚು ಸ್ಪಷ್ಟವಾಗುವಂತೆ ಕಾಣಿಸಿಕೊಳ್ಳಬೇಕು. ಇಂತಹ ಕೃತಿಗಳಿಗೆ ಪ್ರೋತ್ಸಾಹ ಸಿಗಬೇಕು. ಇಂತಹ ಕೃತಿಗಳನ್ನು ಗೌರವಿಸುವ ಕಾರ್ಯ ನಡೆಯುತ್ತಿರಬೇಕು.

ಕನ್ನಡ ಸಾರಸ್ವತ ಲೋಕದ ಮಹಾಪುಣ್ಯದಿಂದ ಈ ಕೃತಿಗಳಿಗೆ ಸ್ಥಾನವೇ ಇಲ್ಲ

ಇಂದಲ್ಲದಿದ್ದರೆ ಎಂದಾದರೊಮ್ಮೆ ಈ ಕೃತಿಗಳ ಬೆಲೆ ಜನರ ಕಣ್ಣೆದಿರು ಬೀಳುತ್ತದೆ; ಆ ಹೊತ್ತಿನಲ್ಲಿ ಇಂತಹ ಕೃತಿಗಳು ಪುಣ್ಯ ವಿಶೇಷದಿಂದ ತಮ್ಮ ಹಿರಿಮೆಯನ್ನು ಸಾರುತ್ತವೆ ಎಂಬ ಮಾತಿನಲ್ಲಿ ಹುರುಳಿಲ್ಲ.

ಆ ಕಾರ್ಯ ಇವತ್ತು ನಡೆಯಬೇಕು. ಈಗ ನಡೆಯಬೇಕು.

ಅಂದರೆ ಮಾತ್ರ, ಲೇಖಕರಲ್ಲಿ ಹೊಸ ಹುಮ್ಮಸ್ಸು ಮೂಡುತ್ತದೆ. ಅವರು ಇನ್ನೂ ಉತ್ತಮ ಕೃತಿಗಳನ್ನು ಕನ್ನಡ ಸಾಹಿತ್ಯ ಸರಸ್ವತಿಗೆ ಒಪ್ಪಿಸುವ ಕಾರ್ಯವು ಸುಲಭವಾಗಬಹುದು.

ಇಂತಹ ಕೃತಿಗಳಾದರೂ ಕನ್ನಡ ಸಾಹಿತ್ಯದಲ್ಲಿ ಹೊಸ ಪ್ರಾಕಾರದ ನಿರ್ಮಾಣ ಮಾಡಬಹುದು ಅಶ್ಲೀಲವೆನ್ನುವ ಪದವು ಕ್ಷಯಿಸಬಹುದು.

ಅಂತೂ ಮನ್ನಣೆ ಪಡೆಯುವ ಮಾತನ್ನು ಬದಿಗಿಟ್ಟು, ಲೇಖಕರು ಇನ್ನಷ್ಟು ಕೃತಿ ನಿರ್ಮಾಣದ ಸಾಹಸಕ್ಕಿಳಿಯಲಿ, ಪ್ರಕಾಶಕರು ಪ್ರಕಟಣೆಯ ಜವಾಬ್ದಾರಿ ಹೊರಲಿ.

ಕನ್ನಡ ಬಂಧುಗಳು ಈ ಮಾದರಿಯ ಕೃತಿಗಳತ್ತ ಒಮ್ಮೆ ಕಣ್ಣರಳಿಸಿ ನೋಡಲಿ.

ಅಷ್ಟು ಕಾರ್ಯ ನಡೆಯುತ್ತಾ ಇರಲಿ. ಆಗ ಕನ್ನಡ ಸಾಹಿತ್ಯವು ಪರಿಶುಭ್ರವಾಗಿ ಕಂಡರೂ ಕಂಡೀತು, ಅಲ್ಲ?

———

ಮಲೆನಾಡ ಮಲ್ಲಿಗೆ

ಉಯ್ಯಾಲೆ

ಸುಂದರ ಬಾಳಿನ ಹೆಜ್ಜೆಯಲಿ
ಚಂದದ ಚಂದಿರ ನಡುರಾತ್ರಿಯಲಿ
ಮಲೆನಾಡಿನ ಮುಸುಕಿನ ಮಧ್ಯದಲಿ
ಇಂದಿನ ರಾತ್ರಿ, ಕಾತ್ರಿಯ ಪ್ರೇಮದಲಿ
ತೂಗುತಿದೀ ಜೀವನದುಯ್ಯಾಲೆ.

ನಾಳಿನ ಬಾಳಿನ ಚಿಂತೆಯಲಿ
ಹೃದಯದ ಮಂದಿರ ಸಂತೆಯಲಿ
ಜೇನನು ಹಾಲನು ಸವಿಯುತಲಿ
ಬೆಡಗಿನ ಬಾಳನು ಬೆಳಗುತಲಿ
ತೂಗುತಿದೀ ಜೀವನದುಯ್ಯಾಲೆ.

ಕಾಮಿ–ವಧುವರ ಸಂಗದಲಿ
ನೇಸುವ ಬೇರಿದ ಬಾಳಿನಲಿ
ಪ್ರೇಮದ ಗೀತನ ಹಾಡುತಲಿ
ಚಂದದ ಚಂದನ ಸೂಸುತಲಿ
ತೂಗುತಿದೀ ಜೀವನದುಯ್ಯಾಲೆ.

— ಪಿ. ಎನ್. ಹೆಗ್ಡೆ–ಶಂಭು.

ಹೊಸಕೆರೆ ಚಿದಂಬರಯ್ಯನವರ
ಗೀತೆಯ ಕೈಗನ್ನಡಿ
ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಷನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಏಜಂಟರುಗಳ ಷರತ್ತಿಗೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ಕ್ರಾಂತಿಕಾರಿ ಲೇಖನಿಯ
ಸಮಕಾಲಿಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ನೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕ್ಯಾಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಪಟ್ಟಣಗಳಲ್ಲಿ ಕುಟುಂಬ ಜೀವನ

(೩ನೇ ಪುಟದಿಂದ)

ಕಾರ್ಖಾನೆಯಲ್ಲಿ ತಯಾರಾಗುವ ಇತರ ಕೆಲ ವಸ್ತುಗಳೂ ಈ ಪಟ್ಟಿಯಲ್ಲಿ ಬರುತ್ತವೆ, ಅವುಗಳಿಗೆಲ್ಲಾ ನಿಯಂತ್ರಣ ಪತ್ರವನ್ನು ಕೊಡಲಾಗಿರುತ್ತದೆ. ಆದರೂ ಆಕಾಶವಾಣಿ, ಸೈಕಲು, ಟೆಂಕಿಪೆಟ್ಟಿಗೆ, ಶೀತೋಷ್ಣ ರಕ್ಷಕ ಸೀಸೆಗಳು ಹಾಗೂ ಕೆಲ ಕುಪ್ಪಿ ಸಾಮಾನುಗಳಿಗೆ ನಿಯಂತ್ರಣ ಪತ್ರಗಳಿರುವದಿಲ್ಲವೆನ್ನುತ್ತಾರೆ, ನೊತೊಂಬ್. ಅವುಗಳಿಗೆ ನಿಯಂತ್ರಣ ಇದ್ದರೂ ಏನು, ಇಲ್ಲದಿದ್ದರೂ ಏನು? ಸಾಮಾನ್ಯ ಶ್ರಮಿಕರು ಅವುಗಳನ್ನು ಕೊಂಡುಕೊಳ್ಳುವಂತಿಲ್ಲ. ಅದಕ್ಕೆ ಮೊದಲನೆಯ ಕಾರಣ ಅವರ ಹಣದ ಚೀಲವಿದೆ. ಎರಡನೆಯ ಕಾರಣ ಸರಕಾರದ ಸುತ್ತಿದೆ ಇದೆ. ಅವುಗಳನ್ನು ನಿತ್ಯೋಪಯೋಗಿ ವಸ್ತುಗಳನ್ನಾಗಿ ಗ್ರಹಿಸದೆ, ಮುಖ್ಯವಾಗಿ ಆಕಾಶವಾಣಿಯನ್ನು, ಸುಖೋಪಯೋಗಿ ವಸ್ತುಗಳನ್ನಾಗಿ ತಿಳಿದುಕೊಳ್ಳಲಾಗಿರುತ್ತದೆ. ಆಕಾಶವಾಣಿ ಅಥವಾ ಇತರ ಸುಖೋಪಯೋಗಿ ವಸ್ತುಗಳನ್ನಾಗಿ ಕಷ್ಟಪಟ್ಟವರು, ಹಂಬಲಿಸಿದವರು ಅದೆಂತು ತಮ್ಮ ಕುತ್ತಿಗೆಗೆ ತಾವೇ ಕತ್ತಿಯನ್ನು ತಂದುಕೊಂಡಿರುವರೆಂಬುದನ್ನು ಹಿಂದಿನ ಸಂಚಿಕೆಯೊಂದರಲ್ಲಿ ನೋಡಿರುವೆವು. ಅಲ್ಲದೆ ಕಳೆದ ವಾರದ ಸಂಚಿಕೆಯಲ್ಲೂ ವ್ಯಕ್ತಿಗೆ ಪ್ರತ್ಯೇಕ ಆಕಾಶವಾಣಿ ಸೌಕರ್ಯ ಇಲ್ಲದಿರುವುದನ್ನು ಹಾಗೂ ಸರಕಾರ ಅದಕ್ಕೆ ಇಷ್ಟಬಂದಂತೆ ಪ್ರಸರಿಸುವ ಸುದ್ದಿಗಳನ್ನು ಕಾರ್ಮಿಕರು ಕೇಳಬೇಕಾಗಿರುವ ವಿಷಯವನ್ನೂ ನೋಡಿರುವೆವು. ಆದರೆ, ಅದು ಹಳ್ಳಿಯ ಸಂಗತಿ ಇದೆ ಇದು ಪೇಟೆಯದ್ದು ಅಷ್ಟೆ. ಏನಿದ್ದರೂ ಅಂತಹ ಸುಖೋಪಯೋಗಿ ವಸ್ತುಗಳನ್ನು ಪಡೆವವರ ಮೇಲೆ ಗೃಧ್ರ ದೃಷ್ಟಿ ಬೀಳುವುದರಲ್ಲಿ ಸಂದೇಹವಿಲ್ಲ.

ಕೊನೆಯ ಹಾಗೂ ಪಂಚಮ ವಿಭಾಗದಲ್ಲಿ ಸಾಬೂನು ಹಾಗೂ ಸಿಗರೇಟುಗಳ ಹೆಸರುಗಳಿವೆ. ಮೂರು ತಿಂಗಳಿಗೆ ಒಂದು ಕೋಲು ಸಾಬೂನನ್ನು ಕೊಡಲಾಗುತ್ತಿದೆನ್ನುತ್ತಾರೆ ನೊತೊಂಬ್. ಮೂರು ಗಜ ಬಟ್ಟೆಗೆ ಇನ್ನೆಷ್ಟು ಸಾಬೂನಿನ ಆವಶ್ಯಕತೆ ಇದೆ? ಅಲ್ಲದೆ ಸಾಬೂನು ಇತ್ಯಾದಿ ಹಾಕಿ ಒಗೆಯಲು ಪ್ರಜೆಗಳಿಗೆ ಅದೆಲ್ಲಿ ಅವಕಾಶವಿದೆ?

ಸಿಗರೇಟು ಹಂಚುವುದಕ್ಕೆ ಒಂದು ನಿಶ್ಚಿತ ಕ್ರಮವೆಂಬುದಿಲ್ಲ. ತಿಂಗಳೊಂದಕ್ಕೆ ಒಬ್ಬೊಬ್ಬನಿಗೆ ಅತ್ಯಂತ ಅಧಿಕವೆಂದರೆ ನಾನ್ನೂರು ಸಿಗರೇಟನ್ನು ಕೊಡಬಹುದೆಂದಿದೆ. ಆದರೆ ಆ ರೀತಿ ಕೊಟ್ಟಿರುವ ದಾಖಲೆ ಮಾತ್ರ ಇಲ್ಲ. ಇದರಲ್ಲಿ ತಮಾಷೆಯ ವಿಷಯವೂ ಇದೆ. ಸಾಧಾರಣವಾಗಿ ಎಲ್ಲರೂ ತಂಬಾಕು ಸೇದುವವರೇ ಇರುವುದಿಲ್ಲ. ಕೆಲವರು ಸೇದುತ್ತಾರೆ; ಕೆಲವರು ಸೇದುವುದಿಲ್ಲ. ಸೇದದೆ ಇರುವವರು ತಮ್ಮ ಹೆಸರಿನಲ್ಲಿ ಅವುಗಳನ್ನು ಪಡೆದುಕೊಂಡು ಇತರರಿಗೆ ಮಾರಲಿಕ್ಕೆ ಸಾಕೆಂದು ಯಾರಾದರೂ ಹೇಳದಲ್ಲಿ ಅದಕ್ಕೆ ಕಮ್ಯೂನಿಸ್ಟ್ ಚೈನಾದಲ್ಲಿ ಸೀಡೆಯೇ ಇರುವುದಿಲ್ಲ. ಸೇದದೆ ಇರುವವನಿಗೆ ಅಲ್ಲಿ ಸಿಗರೇಟು ಸಿಗುವಂತಿಲ್ಲ. ಅಲ್ಲದೆ ಒಬ್ಬೊಬ್ಬನಿಗೆ ಇಂತಿಷ್ಟು ಸಿಗರೇಟುಗಳನ್ನು ಕೊಡಬೇಕೆಂಬ ನಿಯಮ ಅಲ್ಲಿರುವದಿಲ್ಲ. ಅದಕ್ಕಾಗಿ ಅಲ್ಲಿ ಬೀದಿ ಸಮಿತಿಗಳಿವೆ. ಈ ಬೀದಿ ಸಮಿತಿಗಳ ಕೆಲಸವೆಂದರೆ ವ್ಯಕ್ತಿಯ ಸೇದುವಿಕೆ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಪರಾಮರ್ಶಿಸಿ ಇಂತಿಷ್ಟು ಸಿಗರೇಟುಗಳನ್ನು ಪಡೆದುಕೊಳ್ಳಬಹುದೆಂದು ಅನುಮತಿ ಪತ್ರಗಳನ್ನು ನೀಡುವದಿದೆ.

ನೊತೊಂಬ್‌ರವರ ಮೇಲಿನ ವಿವರಣೆಯನ್ನು ಓದಿದಾಗ "ಅಹ್ಹ! ಅದೆಲ್ಲಾ ಅದೆಂತು ಸಾಧ್ಯ"? ಎಂಬ ರಾಗ ತೆಗೆಯಬಹುದು ಭಾರತದಲ್ಲಿ ಮದ್ಯಪಾನ ಪ್ರತಿಬಂಧಕಾಜ್ಞೆಯ ಅನುಭವ ಇರುವ ಪ್ರಜೆಯು. ಕಮ್ಯೂನಿಸ್ಟ್ ಚೈನಾದಲ್ಲಿ ಅದು ನಡೆಯುವಂತಿಲ್ಲ ಅಲ್ಲಿ ಜೂಜಾಟವೆಂಬುದೀಗ ಇಲ್ಲವೆಂಬುದು ಆಶ್ಚರ್ಯದ ಸಂಗತಿಯಾದರೂ ಸರಕಾರದ ಸುತ್ತಿಗೆಯ ಪೆಟ್ಟಿಗೆ ಜನತೆ ಅದೆಂತು ಜರ್ಝರಿತವಾಗಿದೆ ಎಂಬುದಕ್ಕೆ ಅದು ಉತ್ತಮ ಉದಾಹರಣೆ ಇದೆ. ಕಮ್ಯೂನಿಸ್ಟ್ ಸರಕಾರವೆಂದರೆ ಜನತೆಗೆ ಹೃದಯ ಜಲ್ಲೆನಿಸುತ್ತದೆ; ಅಷ್ಟು ಭಯವಿದೆ.

ನಿಯಮಿತ ಆಹಾರ, ಬಟ್ಟೆ, ವಿನೋದ, ಸೌಕರ್ಯ ಅಲ್ಲದೆ ಪದರಿಕೆ ಇರುವದರಿಂದ ಅನಾವಶ್ಯಕ ಖರ್ಚು ಮಾಡಲು ಚೈನಾದಲ್ಲಿ ಸಾಧ್ಯ ಇರುವದಿಲ್ಲ. ಬಾಡಿಗೆ ಕೂಡಾ ಅಷ್ಟೇನೂ ಇರುವದಿಲ್ಲ. ಇದರಿಂದಾಗಿ ಚೈನಾದ ಚಂಚಲೆಯು ಅತ್ತ ಸಾಯದೆಯೂ ಇತ್ತ ಬದುಕದೆಯೂ ಅದರಲ್ಲಿ ಸಮಾನತೆಯನ್ನು ಕಾಣುತ್ತ ದಿವಸ ಕಳೆಯುತ್ತಿದ್ದಾಳೆ. ಈ ದುರ್ದಿಶೆ ಬದಲಾಗ ಬಹುದೆಂಬುದು ಆಕೆಯ ಮದಾತೆ. ಅವಳಲ್ಲಿ ಹಾಗೆ ಕನಸು ಕಾಣುತ್ತಿರುವಾಗ ಇತ್ತ ಚೌ-ಎನ್ ಲೈಯು ಪ್ರಪಂಚ ಪ್ರದಕ್ಷಿಣೆ ಬರುತ್ತಿದ್ದಾನೆ— ತನ್ನ ಪಾದ ಪೀಠದ ಭದ್ರತೆಗಾಗಿ ಸ್ನೇಹಿತರನ್ನು ಕೂಡಿ ಹಾಕುವುದರಲ್ಲೀಗ ಅವನು ಪೂರ್ಣ ಮಗ್ನನಾಗಿದ್ದಾನೆ. ತಕ್ಕನಿಗೆ ರಿಕ್ತ ಸಾಕ್ಷಿ ಎಂಬಂತೆ ಅವನಿಗೆ ಪಾಕಿಸ್ತಾನದ ಅಯೂಬಖಾನ ಲಭಿಸಿದ್ದಾನೆ. ಕುರುಡನಿಗೆ ಹೆಳವನ ಸಹಾಯ ಅತ್ಯಗತ್ಯವೆಂಬಂತೆ ಕಮ್ಯೂನಿಸಂ ತತ್ವಾಂಧನಿಗೆ ಪಾಕಿಸ್ತಾನ ರಾಜಕೀಯ ಹೆಳವನ ಸಹಾಯ ಬೇಕಾಗಿರುತ್ತದೆ. ಹಾಗೆಯೇ ಪಾಕಿಸ್ತಾನದ ಮತಾಂಧನಿಗೆ ಕಮ್ಯೂನಿಸಂ ಹೆಳವನ ಸಹಾಯ ಬೇಕಾಗಿರುತ್ತದೆ.

ಈ ತಮಾಷೆಯನ್ನು ಕಾಣುತ್ತ ವಿನೋದದಲ್ಲಿ ನಾವು ಕಾಲ ಕಳೆಯುವದು ಸರಿಯೇ? ಕಾಲ ಕಳೆಯುವಂತೆ ಪ್ರೇರೇಪಿಸುತ್ತಿದ್ದಾರೆ ಇಲ್ಲಿಯ ಕಮ್ಯೂನಿಸ್ಟರು. ಚೈನೀ ಕಮ್ಯೂನಿಸ್ಟರು ಎಂದೂ ಆಕ್ರಮಣ ನಡೆಸುವದಿಲ್ಲವೆಂದೇ ಅವರೀಗ ಪುನಃ ಧೈರ್ಯದಿಂದ ಸಾರಲಾರಂಭಿಸಿದ್ದಾರೆ— ನಾಚಿಕೆ ಭಯವಿನಿತೂ ಇಲ್ಲದೆ.

— —

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58½% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ನಗೆಗಡಲು

ವಿಶೇಷವಿಲ್ಲ

ಸಮಾಚಾರ ಪತ್ರವನ್ನು ಓದುತ್ತಿದ್ದ ಪತಿಯೊಬ್ಬ ಪತ್ನಿಯೊಡನೆ ಕೇಳಿದನು: ಕಾರು ದುರ್ಘಟನೆಯಾಗುವಷ್ಟು ರೇಲು ಅಪಘಡಗಳಾಗುವುದಿಲ್ಲವಲ್ಲಾ?

"ಅಯ್ಯೋ ಅದರಲ್ಲೇನು ವಿಶೇಷ? ರೇಲು ಡ್ರೈವರ ಫಯರ್ ಮನ್‌ನೊಂದಿಗೆ ಹಗಲಿಗೆ ಕೈಹಾಕಿ ರೇಲು ಬಿಡುವುದನ್ನು ಕಂಡಿದ್ದೀರಾ?"—ಪತ್ನಿಯು ತತ್‌ಕ್ಷಣ ಉತ್ತರಿಸಿದಳು.

ಆತ್ಮವಿಶ್ವಾಸ

ಶ್ರೀಮತಿಯು ಶ್ರೀಮಾನರೊಡನೆ ಊರ ಜಾತ್ರೆಗೆ ಹೋಗುವ ಅವಕಾಶವನ್ನು ಕಳೆದುಕೊಂಡಳು. ಜಾತ್ರೆಯಿಂದ ಮರಳಿ ಬಂದ ಆತನನ್ನು ಆಕೆ ಪ್ರಶ್ನಿಸಿದಳು: "ಉತ್ಸವಕ್ಕೆ ಬಂದ ಹೆಣ್ಣು ಮಕ್ಕಳು ಹೇಗೆ ಅಲಂಕಾರ ಮಾಡಿಕೊಂಡು ಬಂದಿದ್ದರು?"

ಈ ಬಗೆಯ ಪ್ರಶ್ನೆಗಳಿಂದ ಮೊದಲೇ ನೊಂದಿದ್ದ ಆತ ಕೊನೆಗೆ ಹೇಳಿದ; "ನನಗೆ ತಿಳಿದ ಮಟ್ಟಿಗೆ ಏನನ್ನೂ ತೊಟ್ಟಿರಲಿಲ್ಲ."

"ಅಂದರೆ, ಹೆಂಗಸರು ಬಟ್ಟೆ ಬರೆಗಳನ್ನೇ ಹಾಕಿಕೊಂಡಿರಲಿಲ್ಲವೆಂದು ಹೇಳುತ್ತೀರಾ?" — ಆಕೆಯ ಮರುಸವಾಲು.

"ಮೇಜಿನಿಂದ ಮೇಲೆ ತೋರುವ ತಮ್ಮ ಅಂಗದಲ್ಲಿ ಅವರಾವ ಬಟ್ಟೆಯನ್ನೂ ಹಾಕಿಕೊಂಡಿರಲಿಲ್ಲ; ಮತ್ತೆ ಕೆಳಗೆ ನೋಡುವ ಸಾಹಸ ನನ್ನಲ್ಲಿ ಉದಿಸಲಿಲ್ಲ." ಆತ್ಮವಿಶ್ವಾಸದಿಂದಲೇ ಅವನು ಉತ್ತರಿಸಿದ.

ಸರಿಯಾದ ಕಾರಣ

ಒಬ್ಬಾಕೆ ತನ್ನ ನೆರೆಯವಳನ್ನು ಪ್ರಶ್ನಿಸಿದಳು: "ನೀವು ನಿಮ್ಮ ಮಕ್ಕಳಿಗೆಲ್ಲಾ ಒಂದೇ ಬಣ್ಣದ ಬಟ್ಟೆ ಬರೆಗಳನ್ನು ಹೊಲಿಸಿದ್ದೀರೇನು?"

ನೆರೆಯಾಕೆ ಅಂದಳು: "ನಾಲ್ಕು ಮಕ್ಕಳಿರುವಾಗ ಪೇಟೆಗೆ ಅವನ್ನು ಕರೆದೊಯ್ಯುವಾಗ ತಪ್ಪಿ ಹೋಗಬಾರದೆಂದು ಹೊಲಿಸುತಿದ್ದೆವು. ಈಗ ನಮಗೆ ಹನ್ನೆರಡು ಮಕ್ಕಳಿವೆ ಪೇಟೆಯಿಂದ ಮರಳಿ ಬರುವಾಗ ಮತ್ತೆ ಬೇರ್ಯಾರ ಮಕ್ಕಳು ನಮ್ಮ ಜೊತೆಯಲ್ಲಿ ಬಾರದಿರಲಿ ಎಂಬ ಆಶಯದಿಂದ ಒಂದೇ ಬಣ್ಣದ ಅರಿವೆ ಹೊಲಿಸುತಿದ್ದೇವೆ."

ಜವಾಬ್ದಾರರು ಯಾರು

ವಿಕಾಸವಾದ ಸಿದ್ಧಾಂತದ ಪ್ರವರ್ತಕ ಚಾರ್ಲ್ಸ್ ಡಾರ್ವಿನ್ನರ ಮೊಮ್ಮಗ ಸರ್ ಚಾರ್ಲ್ಸ್ ಡಾರ್ವಿನ್ನನು ಅಮೆರಿಕೆಯ ರಾಷ್ಟ್ರೀಯ ಭೂಗೋಳ ಪರಿಷತ್ತಿನಲ್ಲಿ ಜನಸಂಖ್ಯಾ ಸಮಸ್ಯೆಯ ಮೇಲೆ ಭಾಷಣ ಮಾಡುತಿದ್ದನು. ಸಂತಾನ ನಿಯಂತ್ರಣ ಆವಶ್ಯಕತೆಯನ್ನು ಮಂಡನೆ ಮಾಡುತ್ತ ಅವನು ಹೇಳಿದನು—'ನಾನೀಗ ಮಾತಾಡುತ್ತಿದ್ದೇನೆ; ಇಷ್ಟರಲ್ಲಿಯೇ ಆರು ಸಾವಿರ ಮಕ್ಕಳು ಭೂಮಿಗವತರಿಸಿದರು!'

"ಇಲ್ಲಿ ಕುಳಿತಿರುವ ನಮ್ಮಲ್ಲಿ ಯಾರೊಬ್ಬರೂ ಇದಕ್ಕೆ ಜವಾಬ್ದಾರರಲ್ಲ"—ಯಾರೋ ಒಬ್ಬಾತ ನಗೆಯ ನಡುವೆ ಎಂದ.

ಎಷ್ಟನೆಯವನು?

ಬ್ರಿಟನ್ನಿನ ಪ್ರಧಾನಿಯಾಗಿದ್ದ ಲಾಯ್ಡ್ ಜಾರ್ಜರು ಒಮ್ಮೆ ವೆನಿಸ್ ನಗರವನ್ನು ಸಂದರ್ಶಿಸಿದರು. ಒಂದು ದಿನ ರಾತ್ರೆಯಾಯಿತು; ಅವರು ತಂಗಿದ್ದ ಸ್ಥಳದಲ್ಲಿ ಒಂದೇ ಒಂದು ಹೋಟೇಲು ಇರಲಿಲ್ಲ. ರಾತ್ರೆ ಕಳೆಯುವ ಬಗೆಯನ್ನು ಚಿಂತಿಸುತ್ತ ಅವರು ಹತ್ತಿರವಿದ್ದ ಒಂದು ಭವ್ಯ ಭವನವನ್ನು ಮುಟ್ಟಿ ದ್ವಾರಪಾಲಕನೊಡನೆ ನುಡಿದರು— "ನೋಡಪ್ಪಾ, ನಾನು ಬ್ರಿಟನಿನ ಪ್ರಧಾನ ಮಂತ್ರಿ ಲಾಯ್ಡ್ ಜಾರ್ಜ್. ಈ ಒಂದು ರಾತ್ರೆಯನ್ನು ಇಲ್ಲಿ ಕಳೆಯಲಿಚ್ಛಿಸುವೆ."

ದ್ವಾರಪಾಲಕನು ಬಹಳ ಗಂಭೀರತೆಯಿಂದಲೇ ನುಡಿದನು— "ಸರಿ, ತಾವು ಕೂಡಾ ಲಾಯ್ಡ್ ಜಾರ್ಜರೆ? ಬಹಳ ಒಳ್ಳೆಯದು. ಸಂತೋಷದಿಂದ ಇದ್ದುಕೊಳ್ಳಿ."

ಲಾಯ್ಡ್ ಜಾರ್ಜರು ಆತನ ಮುಖ ನೋಡುತ್ತ ಕೇಳಿದರು-"ನಿನ್ನ ಮಾತಿನ ಅರ್ಥ ನನಗಾಗಲಿಲ್ಲವಲ್ಲ?"

ಆತನೆಂದನು—"ಮತ್ತೇನಿಲ್ಲ ಈಗಾಗಲೇ ಇಲ್ಲಿ ನಾಲ್ವರು ಲಾಯ್ಡ್ ಜಾರ್ಜರು ಕೂಡಿಕೊಂಡಿದ್ದಾರೆ. ಅವರೆಲ್ಲರೂ ತಮ್ಮನ್ನು ಬ್ರಿಟನ್ನಿನ ಪ್ರಧಾನ ಮಂತ್ರಿಯೆಂದುಕೊಂಡಿದ್ದಾರೆ. ನೀವು ಐದನೆಯವರಾಗಿ......"

ವಿಚಾರಿಸಿದಾಗ, ಆ ಕಟ್ಟಡವೊಂದು ಹುಚ್ಚರ ಆಸ್ಪತ್ರೆಯಾಗಿತ್ತು.

ಅಪರಾಧವಲ್ಲ

ನ್ಯಾಯಾಧೀಶ: ನಿನ್ನಲ್ಲಿ ಸಂಪೂರ್ಣ ವಿಶ್ವಾಸವಿಟ್ಟಿದ್ದ ಒಂದು ವ್ಯಕ್ತಿಗೇನೇ ನೀನು ದ್ರೋಹ ಬಗೆದೆ. ಇದು ಅಕ್ಷಮ್ಯ ಅಪರಾಧ.

ಅಪರಾಧಿ: ಇದರಲ್ಲಿ ಅಕ್ಷಮ್ಯವೇನು ಬಂತು ಮಹಾಸ್ವಾಮಿ, ಆತನು ನನ್ನಲ್ಲಿ ಅಂತಹ ವಿಶ್ವಾಸವಿಟ್ಟಿರದಿದ್ದರೆ, ನಾನು ಹೇಗೆ ನನ್ನ ಸಾಧನೆಯಲ್ಲಿ ಸಿದ್ಧಿ ಪಡೆಯುತ್ತಿದ್ದೆ?

— —

ಗೇಹರಾಜ್ಯದಲ್ಲಿ

ಅವಳಿ ಜವಳಿ ಕಣ್ಣುಗಳು

"ಏನೇ, ಮುಖ ಬಹಳ ಬಾಡಿದಂತಿದೆ?"

"...ಏನೂ ಇಲ್ಲ ಬಿಡಿ...."

"ಏನೂ ಇಲ್ಲಾಂದ್ರೆ.... ಮತ್ಯಾಕೆ ತಲೆ ಅಡಿ ಹಾಕ್ಕೊಂಡೆ?"

"ಏನೂ ಇಲ್ಲಾಂತಂದ್ನೆಲ್ಲಾ..."

"ಹಾಂಗಂದ್ರೆ ಏನೇ ಅದು? ಮತ್ತೆ ಕಣ್ಣು ಸವರಿಕೊಳ್ತಿದ್ದೀಯೊ"

"ಏನೂ ಇಲ್ಲ ಕಂಡ್ರಿ...."

"ಅಯ್ಯಯ್ಯೋ ಏನೇ ಏನೇ ಇದು ಕಣ್ಣೆರಡೂ ಕೆಂಪುಕೆಂಪಾಗಿದ್ಯಂದ್ರೆ...."

"......................"

"ಏನೇ ಏನಾಯ್ತು....? ಯಾರಾದ್ರೂ ಏನಾದ್ರೂ ಎಂದ್ರ?"

"ಇಲ್ಲಾನ್ನಿ...."

"ಮತ್ತೆ.. ತವರು ಮನೇ ಜ್ಞಾಪಕ ವಾಯ್ತು?"

ಅಯ್ಯೋ, ಬಿಡೀಂದ್ರೆ..."

"ಮತ್ತೆ ಯಾಕೆ ಹೀಗೆಲ್ಲಾ ಮಾಡ್ತೀಯ?'

"ಏನೋ ಕಣ್ಣಿಗೆ ಕಸ ಬಿತ್ತೂಂತ...."

"ಛೆ...ಛೆ... ಕಣ್ಣಿಗೆ ಕಸ ಬಿದ್ರೆ ಅದನ್ನ ತಿಕ್ಕಿಕೊಳ್ತಾರೇನು?"

"ಮತ್ತೇನು ಮಾಡೋದೂಂತ?"

"ತಿಳಿದವ್ರು ನೀನೂ ಹೀಗೆ ಮಾಡ್ಲಿಕ್ಕೆ ಹತ್ತಿದ್ರೆ..."

"ನಾನೇನೂ ತಿಳಿದೋಳಲ್ಲ...,

"ಅಲ್ಲಿದ್ರೆ ಬಿಡು. ನನಗಂತೂ ನೀನ್ನ ತಿಳಿದೋಳೇ ನಿಜ...."

"ತಿಳ್ಕೊಳ್ಳಿ ಬೇಕಾದ್ರೆ....'

"ಅದೆಲ್ಲಾ ಇರ್ಲಿ... ಕಸ ಬಿದ್ರೆ ಅದನ್ನ ತಿಕ್ಕಿಕೊಂಡ್ರೆ ಹೊರಗೆ ಹೋಗೋ ಬದಲು ಒಳಗೆ ಹೋಗುತ್ತೆ ಕಣೇ..."

"ಮತ್ತೇ ಮಾಡ್ಬೇಕಾದ್ರೂ ಏನೂಂತ?

"ಹಾಗೆ ಕೇಳು ತಿಳಿಯಲೊಲ್ಲ ವಿಚಾರವನ್ನ ತಿಳಿದವ್ರಿಂದ ಕೇಳಿ ತಿಳ್ಕೋಬೇಕು."

"ಸರಿ ಬಿಡಿ; ಸದ್ಯ ನೀವಾದ್ರೂ ಒಬ್ರು ಇದ್ದೀರಲ್ಲ ತಿಳಿದವ್ರು.. ಏನ್ಮಾಡ್ಬೇಕೂಂತ ಹೇಳ್ಬಿಡಿ ಮತ್ತೆ...."

"ಕಣ್ಣಿಗೆ ಕಸ ಬಿತ್ತೂಂತನ್ನುತ್ಲೇ ತಿಳಿ ನೀರುಗುಣಿಯಲ್ಲಿ ತುಂಬ ತಿಳಿನೀರನ್ನಿಟ್ಟು ಅದ್ರಲ್ಲಿ ಕಣ್ಣನ್ನ ಮುಳುಗಿಸಿ ಗೋಚ್ ಕೆತ್ತಿಯಿಂದ ಮೆತ್ತಗಾಗಿ ಒರಸ್ಬೇಕು. ಆಗ ಕಸ ಜಾರಿ ಹೋಗುತ್ತೆ .."

"ಸರಿಯೂಯ್ತೂಂದೆ. ನಿಮ್ಮ ಮುಂದೆ ಎನ್. ಆರ್. ಯಸ್. ಡಾಕ್ಟ್ರನೂ ಬಂದೆ..."

"ಬಿಡು ಹಾಗಾದ್ರೆ... ಅಂತೂ ನಾನೊಬ್ಬ ಚಿಕಿತ್ಸಾ ಸಲಹೆಗಾರಾಂತ ತಾನೇ ನೀವನ್ನೋದು?"

"....ಮತ್ತೇನನ್ಬೇಕೋ ..."

"ಅಂದ್ರೆ ಕನ್‌ಸಲ್ಟಿಂಗ್ ರೂಮ್ ಅಂಬೋರ್ಡು ನೇತು ಹಾಕಿದ್ರೆ ನಾಲ್ಕು ಕಾಸಾದ್ರೂ ಬರಬಹುದೂಂತ...."

"ಭೇಷ್ ಭೇಷ್ ..."

"ಏನಾಯ್ತು? ಈಗ ಅಳ್ತಿರೋಳು ಈಗ ನಗೋಕ್ಕೆ ತೊಡಗಿದ್ಯಾ ಮತ್ತೆ?"

"ನಿಮ್ದು ಮಾತು ಕೇಳೋವಾಗ ನಗು ಬಾರ್ದವ್ರಿಗೂ ನಗು ಬಂದೇ ತೀರ್ಬೇಕು ..'

"ಅಂದ್ರೆ ನಿನ್ಗೆ ನಗು ಬರುತ್ತೇಂತ ನಿನ್ನ ವಾದ..."

"ನನ್ನ ಬಗ್ಗೆ ನನ್ನ ವಾದವನ್ನ ಕೇಳೋರು ಯಾರು?"

"ಯಾರು ಕೇಳ್ದಿದ್ರೂ ನಾನಂತೂ ಒಪ್ಪಿಕೊಳ್ಳಲೇಬೇಕಲ್ಲಾ?"

"ನೀವು ಏನ್ಬೇಕಾದ್ರೂ ಮಾಡಿ. ಯಾರಿಂದ ತಾನೇ ಹನ್ನಕ್ತು ಅದ್ಕೆ? ಆದ್ರೆ ಒಂದು ಪ್ರಶ್ನೆ ಇದೆ...."

"ಪ್ರಶ್ನೇನೆ? ಯಾರು, ನೀನು ಕೇಳೋದೆ?"

"ಹಾದು ... ಉತ್ರ ಹೇಳ್ತೀರಾ?"

"ಅಲ್ಲ, ಪ್ರಶ್ನೆ ಕೇಳ್ಬೇಕು ಜೋಯಿಸ್ರತ್ರ. ನನ್ನನ್ನ ಕೇಳಿದ್ರೆ, ನಾನು ಏನೂಂತ ಉತ್ತರಿಸ್ಲಿ?"

"ಇಷ್ಟೆಲ್ಲಾ ಅವ್ರತ್ರ ಇವ್ರತ್ರ ಯಾಕೆ ಹೋಗ್ಬೇಕು? ಅದೂ ಅಷ್ಟೆ ನಿಮ್ಮಿಂದ ಆಗ್ದೆ ಇದ್ರೆ ತಾನೇ ಇನ್ನೊಬ್ರು ಬಳಿ ಸಾಗ್ಬೇಕು?'

"ಅಂದ್ರೆ, ನೀನು ಕೇಳ್ಬೇಕು; ನಾನು ಅಷ್ಟೆ ಉತ್ರ ಹೇಳ್ಬೇಕೂಂತ ..."

"ಹೇಳ್ತೀರಾ ...?'

"ಬೇಡ-ಅಂದ್ರೆ....'

'ಯಾಕೆ ಬೇಡ?'

'ಅದು ಸರಿಯಾಗ್ದಿದ್ರೆ ಮತ್ತೆ ಸಿಗ್ಗತಿ..."

"ಮತ್ತೆ ಕನ್‌ಸಲ್ಟಿಂಗ್ ರೂಮೊಂತ ಬೋರ್ಡು ಹಾಕಿಸೋಕೆ ಹೊರಟಿದ್ದೀರಿ...'

'ಸಾಕು ಸಾಕೇ ನಿನ್ನ ಮಾತು...'

'ಹಾಗಾದ್ರೆ ಹೇಳಿ ಮತ್ತೆ..'

ಸರಿ, ಏನಮ್ಮಾ ನಿನ್ನ ಯಕ್ಷ... ಅಲ್ಲ ಯಕ್ಷಿಣೀ ಪ್ರಶ್ನೆ....'

'ಯಕ್ಷಿಣಿಯ ಸವಾಲಿಗೆ ಯಕ್ಷನೇ ಜವಾಬು ಕೊಡಬೇಕು....'

'....ಕೊಡ್ತೇನೆ ಅಂದೆನಲ್ಲಾ... ಎಲೇ ರಮಣೀಮಣಿ, ಏನಮ್ಮಾ ನಿನ್ನ ಮಹಾ ಪ್ರಶ್ನೆ?'

'ನೋಡಿ, ಒಂದು ಕಣ್ಣಿಗೆ ಕಸ ಬಿದ್ರೆ ಇನ್ನೊಂದು ಕಣ್ಣೂ ಕೆಂಪಾಗೋದು ಯಾಕೇಂತ?"

'ಓಹೋ ಇದೇನೇ ನಿನ್ನ ಪ್ರಶ್ನೆ? ಎಂತ ಕಠಿಣ ತೃಣ ಸಮಾನವಿದು?'

"ತೃಣವಿರ್ಲಿ, ಘನವಿರ್ಲಿ ... ಇದ್ರ ಉತ್ರ ಮಾತ್ರ ಬೇಗ ಬರ್ಲಿ.'

'ಅಂದ್ರೆ ನಿನಗೆ ಉತ್ರ ಹೇಳ್ಲೇಬೇಕು ಅಲ್ವೆ?'

'ಹೇಳ್ತೀನೇಂತ ಒಪ್ಕೊಂಡಿದ್ದೀರ ಮತ್ತೆ'

"ಸರಿ ಸರಿ, ಒಪ್ಕೊಂಡಿದ್ದೀನಿ ನಿಜ ಆದ್ರೆ ನಿಂಗೆ ಹೇಳ್ಬೇಕೇನು?

'ಮತ್ತೆ ನಾನು ಕೇಳಿದ್ದಾದ್ರೂ ಏಕೇಂತ?'

'ಆ ಉತ್ರವನ್ನ ನೀನು ಒಪ್ಕೋತೀಯ ಇಲ್ಲಾ..."

'ನನಗೆ ಸಮಾಧಾನಾಂತ ಕಂಡ್ರೆ ಒಪ್ಕೋತೀನಿ."

'ಅದು ಸಲ್ಲದು ಅದು ಸಲ್ಲದು..."

'ಮತ್ತೆ. ."

'ನಾನು ನುಡಿಯೋ ನುಡಿಯೊಳಗೆ ನಿನಗೆ ವಿಶ್ವಾಸವಿದ್ದರೆ ಮಾತ್ರ..."

'ನೀವು ಹೇಳೋದು ಅಲ್ವೆ?'

'ಸರಿ ಸರಿ.... ಹಾಗೇ ಸರಿ...."

"ಇದು ಒಳ್ಳೇ ಸಂಚು ಹೂಡಿದ್ರಲ್ಲಾ ಮತ್ತೆ? ಅಭಿಪ್ರಾಯ ಸ್ವಾತಂತ್ರ್ಯವಿರೋ ನಾಡ್ನಲ್ಲಿ ನಿಮ್ಮ ಅಭಿಪ್ರಾಯವನ್ನೇ ನನ್ನ ಮೇಲೆ ಹೇರ್ತೀರಾ ಮತ್ತೆ?"

'ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯ ಸ್ವಾತಂತ್ರ್ಯ ಇದೆ ನಿಜ ಆದ್ರೂ ಹೆಚ್ಚಿನವರ ಅಭಿಪ್ರಾಯವನ್ನ ಒಪ್ಪಿಕೊಳ್ಳೋದೂ ಸಂಪ್ರದಾಯ ಕಣೆ...."

'ಅಂದ್ರೆ' ನಿಮ್ಮ ಉತ್ರವನ್ನ ನಾನು ಒಪ್ಪಿಕೋಬೇಕು. ನಿಮ್ದು ಅಧಿಕ ಸಂಖ್ಯಾಕರ ಅಭಿಪ್ರಾಯ..."

'ಹಾಗಲ್ಲ ... ಅಧಿಕ ಸಂಖ್ಯಾಕ ಉತ್ತರ ಹೇಳುವವರ ಅಭಿಪ್ರಾಯ. ."

'ಹೂಂ . ನೋಡೋಣ .. ಏನದೂಂತ .."

'ಸರಿ ಹಾಗಾದ್ರೆ .. ನಿನ್ನ ನಿಲುವಳಿಯೆಂದ್ರೆ .'

'ಒಂದು ಕಣ್ಣಿಗೆ ಕಸ ಬಿದ್ರೆ ಅದು ಮಾತ್ರ ಕೆಂಪಾಗೋದು ಬಿಟ್ಟು ಇನ್ನೊಂದೂ ಕೆಂಪಾಗುತ್ತೆ. ಇದು ನ್ಯಾಯವೆ?."

"ನ್ಯಾಯ....."

"ಏಕೇಂತ?"

"ಅದು ಆಗುತ್ತೆ. ಆದ್ರಿಂದ ನ್ಯಾಯ."

"ಅದು ಸರಿ; ಯಾಕೆ ಆಗ್ಬೇಕೂಂತ?...."

"ಆಗುತ್ತೆ, ಆಗ್ಬೇಕು; ಆಗ್ಲಿಕ್ಕೇಬೇಕು...."

"ಅಯ್ಯೋ ಇವ್ರಾ....ಯಾಕೆ ಆಗ್ಬೇಕೂಂತ? ಕೇಳ್ತಿದ್ದೇನೆ."

'ಆಗಿಯೇ ತೀರ್ಬೇಕು ಅದ್ನೆಲ್ಲಾ..."

"ನೀವು ಅಂದದ್ದು ನಿಜ. ಆದ್ರೂ ಯಾಕೇಂತ...."

"ಹ್ಞಾಂ. ಹಾಗೆ ಕಾರಣ ಬೇಕು..."

"ಸರಿ ...ನೋಡು ಪೋಸ್ನಿನ ಪೇಪ್ರು ಓದಿದ್ಯಾ?"

"ಊಟಮಾಡಿದ್ಯಾಂತಂದ್ರೆ ಮುಂಡಾಸು ."

'ಅದೆಲ್ಲಾ ನಿಂಗೆ ಬೇಡ. ಅದ್ನ ಸವಾಲಲ್ಲಿ ಕೇಳಿದ್ದಕ್ಕಷ್ಟೆ ಉತ್ರ ಕೊಡೋದು ನಿನ್ನ ಕರ್ತವ್ಯ....'

ಆಯ್ತಪ್ಪ ..ಹ್ಞಾಂ. ನೋಡಿದ್ದೇನೆ."

"ಏನಿತ್ತು ಅದ್ರಲ್ಲಿ ವಿಶೇಷ"

"....ವಿಶೇಷ... ತುಂಬ ಇತ್ತು..."

"....ಅದು ಸರೀನ್ನಿ. ಬಹಳ ವಿಶೇಷವೇನೂಂತ?"

"....ಹ್ಞಾಂ .. ಶಿಕ್ಷಣ ಶಾಖೆ ಕೇಂದ್ರಕ್ಕೆ ಕೊಡ್ಬೇಕೂಂತ ಭಾಗಾನ್ಲಾ..."

"ಅದಕ್ಕೂ ವಿಶೇಷವಾದ್ದು...."

"ವಾಕಿಸ್ತಾನದಲ್ಲಿ..."

"ಸುಡು ಸುಡು ನಿನ್ನ ವಾಕಿಸ್ತಾನವನ್ನು... ಮತ್ತೆ ಇದು ನಿನ್ನ ವೈಸೂರಿಸ್ತಾನವನ್ನು....'

'ಹ್ಞಾಂ ತಿಳೀತು ಬಿಡಿ. ವೈಸೂರಿಸ್ತಾನವನ್ನು ಇಬ್ಭಾಗ ಮಾಡುವ ವಿಚಾರಕ್ಕೆ ಪ್ರಚೋದನೆ .."

"ಸರಿ ಸರಿ ಸರಿ ಯಾರಿಂದದ್ದು?"

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

REGD. No. B. G. 176
LICENCE No. 31
Licensed to Post without Prepayment

"ಅದೇ ಇದ್ದಾರಲ್ಲ ಹಳೆ ಮೈಸೂರಿಗೆ ಪಕ್ಷಪಾತ ಸಂಭವಾತಾಂತ ಬೊಬ್ಬಿಡೋ ಮುಕ್ಕಣ್ಣಪ್ಪ..."

"ಚೆನ್ನಾಗಿಯೇ ನುಡಿದೆ. ಇದನ್ನ ಯಾರುಯಾರ ವಿರೋಧಿಸಿದ್ದರು ಗೊತ್ತೆ...?"

"ನೆನಪಿಸಿ ಹೇಳುತ್ತೇನೆ....ಸರಿ ಸರಿ.. ಆ ಅವ್ರು ಕರ್ನಾಟಕ ಕರ್ನಾಟಕಾಂತ ಬಾಡದಿಂದ್ಲೂ ಕರಕರಿ ಮಾಡೋರು...."

"ಯಾರು? ..."

"....ದೊಡ್ಮೇಟ . . ಅಂಪಾನಪ್ಪ...."

"ಸರಿಯಾಗಿಯೇ ಉತ್ತರಿಸಿದೆ. ಅವರು ಏನೆಂದ್ರು?"

"ಈ ಮುಕ್ಕಣ್ಣಪ್ಪ ಅಲ್ಲಾ ಆ ಮುಕ್ಕಣ್ಣಪ್ಪ ಒಂದ್ ಪ್ರಶ್ನೆ ಕೇಳಿ, ಎರಡು ಕಣ್ಣಿದ್ದ ಮೇಲೆ ..."

"ಅದಬಂದ ನನ್ನ ಪ್ರಶ್ನೆಗೆ ಉತ್ತರಿಸ್ತೇನೆ."

"ಅಯ್ಯೋ, ಏನ ಅರ್ಥ ನೀವು? ಮೈಸೂರಿನವ್ನ ಒಂದಾಗಿರೋದು ಅರ್ಥ ಎರಡಾಗಿರೋದು, ಮತ್ತು ಒಂದು ಕಣ್ಣಿಗೆ ಕಸ ಬೀಳೋದು ಎರಡೂ ಕೆಂಪಾಗೋದು—ಇವುಗಳಿಗೆ ಯಾವ ಸಂಬಂಧ?"

"ಇದೆ ಇದೆ ಅತಿ ನಿಕಟ ಸಂಬಂಧ. . ಬಾದರಾಯಣ ಸಂಬಂಧವಲ್ಲ ರಾಮಕೃಷ್ಣ ಸಂಬಂಧ. ."

"ಏನೋ ಒಗಟನ್ನು ಹೇಳ್ತಾದ್ದೀರಾ?"

"ಒಗಟಲ್ಲ ನಾರೀಮಣಿ, ಇದು ಸೊಗಟು...."

"ಹೇಗೆಂತ"

"ಹೇಳ್ಬೆಬೇಕೆ? ಹಾಗಾದ್ರೆ ಕೇಳು: ರಾಜ್ಯ ಎರಡ್ಯಾಗೇಕೂಂತ ಮುಕ್ಕಪ್ಪ ಕೆಂಪು ಕಣ್ಣಿಂದ ಅಂದ್ರೆ ದೊಡ್ಮೇಟ ಆಗೋಕಿಲ್ಲಾಂತ ಏಕೆ ಕೆಂಪು ಕಣ್ಣು ಮಾಡ್ಬೇಕು? ಹೇಳು...."

"ಅಯ್ಯಯ್ಯ, ಕರ್ನಾಟಕ ಒಂದೇ ಅಲ್ವೆ? ಆದ್ರೀಂದ್ರೆ ಅದು ಎರಡಾಗಲಾರದು"

"ಅಂದ್ರೆ ಅವೆಲ್ಲಾ ಒಂದೇ ನುಡಿಯ ನೆಲ, ಒಂದೇ ಸಂಸ್ಕೃತಿಯ ನೆಲ.... ಒಂದೇ...."

"ಹೌದು ಹೌದು... ಎಲ್ಲಾ ಒಂದೇ. ಹಳೆ ಮೈಸೂರು ಇಲ್ಲ; ವಿಲೀನಗೊಂಡ ಪ್ರದೇಶವೇ ಇಲ್ಲ; ಎರಡೂ ಒಂದೇ ."

"ಹಾಗೆಯೇ ನೋಡ ಮತ್ತೆ, ಎರಡು ಕಣ್ಣುಗಳು ಕ.ಡಾ ಎರಡ-ದ್ರೂ ಅವ್ರು ಒಂದೇ ಅವಳಿ ಜವಳಿ ಎಕ್ಕಗೆ..."

"ಓ, ನೋಡಿ ಅವಳಿ ಜವಳಿ ಅನ್ನೂತ್ಲೆ ನೆನ್ಪಾಯ್ತು. ನಿಮ್ಮ ರಾಮುನ ಹೆಂಡ್ತಿ ಹೆತ್ತಾಂತೆ...."

"ಮಗು... ?"

"ಮಗುವಲ್ಲ; ಮಕ್ಳು..."

"ಅಂದ್ರೆ ಅವಳಿ ಜವಳಿ..."

"ಹೂಂನ್ನಿ...."

"ಆಂದ್ರೆ ನಾಳೆ ಬೆಳಿಗ್ಗೆ ಸರ್ಕೀಟು ತಾನೆ?"

"ಇಲ್ಲದೆ ಉಂಟೆ?....ಆದ್ಕೇ..."

"ಬೇಗ ಹಾಸಿಗೆ ಸೇರಿಕೋ ಬೇಕೂಂತ ತಾನೇ ಸಲಹ? ಅದ್ಕೇನದ್ದಿ ... ಹೊರಟೆ...."

"ಊಟ... "

ವಾರ್ತೆ – ಪ್ರತಿವಾರ್ತೆ

ಕಾಶ್ಮೀರ ವಿಷಯಕ ಚರ್ಚೆಯನ್ನು ಭಾರತದ ಇಚ್ಛೆಯಂತೆ ಭದ್ರತಾ ಮಂಡಳವು ಮೇ ೫ನೆ ದಿನಾಂಕದ ಮೇರೆಗೆ ಮುಂದೆ ಹಾಕಿದೆ

— ಅನಿರ್ಧಿಷ್ಟಾವಧಿಯೇ ಚೆನ್ನಾಗಿತ್ತು ಎಂದು ಭುಟ್ಟೋ ಈಗ ಅಂದುಕೊಳ್ಳುತ್ತಿರುವರು ಎಂಬುದು ಕುಳ್ಳಾಗಿದ್ದರೂ ಇರಬಹುದು.

o o o

ಹಾಸನ — ಮಂಗಳೂರು ರೈಲು ಮಾರ್ಗದ ಬದಲು ಹಾಸನ-ಮಂಗಳೂರು ಮಾರ್ಗದ ಸೇವಾ ಯೋಜನೆಯೆಂದರು

"ಓ ನಿನ್ನ ಮಾತ್ನಿಂದ್ಲೇ ಇಂದ ಹೊಟ್ಟೆ ತುಂಬಿತೂಂತ ಭ ವಿಸ್ಬೆ.... ಊಟ ಅನ್ನುತ್ಲೆ ಹೊಟ್ಟೆ ಹಸಿಯ-ತೊಡಗಿತು."

"ಬನ್ನಿ ಹಾಂಗಾದ್ರೆ ಕೈಕಾಲ್ತೊಳ್ಕೊಂಡು...."

"ಹ್ಞೂಂ.... ತಡ ಬೇಡ....

"ನೀವು ಬರೋದ್ರೊಳ್ಗೆ ನಂದು ತಯಾರು ..."

"ನಿಂದು ತಯಾರಾಗೋದ್ರೊಳ್ಗೇ ನಾನೂ ತಯಾರು..."

— ಗೋರಾ.

ರೇಲು ಮಂತ್ರಿ ದಾಸಪ್ಪನವರು ಮುಂದಿಟ್ಟಿದ್ದಾರೆ.

—ಸ್ವರ್ಣಪ್ಪನಿತ್ತರೂ ದಾಸಪ್ಪ ನೀಡಲೊಲ್ಲ ಎಂದು ಹಾಸನ-ಮಂಗಳೂರು ಬಿಕೋ ಎನ್ನುತ್ತಿರಬಹುದೆ?

o o o

ಸಿಂಹಳದಲ್ಲಿ ಸರ್ವ ಪಕ್ಷ ಪ್ರಾತಿನಿಧ್ಯವಿರುವ ಮಂಡಳ ರಚಿತವಾಗುವುದು.

—ಸರ್ವಾಧಿಕಾರದ ಗಾಳಿಯು ಬದಲು ಹೊಸಗಾಳಿ ಬೀಸತೊಡಗಿದ್ದು ಸಮಾಧಾನ. ಈ ಸುಟ್ಟುರಿಗೆ ಇನ್ನು ಯಾವ ದೇಶಗಳು ಬಲಿಯಾದಾವು?

o o o

ಗೋವಾ ಸರಕಾರದ ಕರಾಕರಣೆಯ ಸಂತಿಗೆ ಸಂಬಂಧಪಟ್ಟ ವಿರೋಧಿ ಪಕ್ಷದ ಕಿದ ಪಡಿಗಳು ಮಂಜೂರಾಗಿ ಸರಕಾರವು ಸೋತು ಹೋಯಿತು.

—ಆದರೆ, ರಾಜನಾಮೆಯ ಆಯುವ ಅಗತ್ಯವೇನೂ ಇಲ್ಲವಷ್ಟೆ?

o o o

ಪಾಕಿಸ್ತಾನಕ್ಕೆ ನೀಡುವ ಸಹಾಯವು ಅಲ್ಪ ಸಂಖ್ಯಾಕರ ಮೇಲೆತ್ತಿದ ಗದಾಪ್ರಹಾರವೆಂದು ಪಾಕ್ ನಿರಾಶ್ರಿತ ಕ್ರೈಸ್ತರು ಹೇಳಿದ್ದಾರೆ.

—ಪ್ರಹಾರ ಗದೆಯಾದರೂ ಆ ಗದೆಯು ಹೂವಿನದು ಎಂದು ಪಾಶ್ಚಾತ್ಯ ಮಿತ್ರರ ಖಚಿತಾಭಿಪ್ರಾಯ.

o o o

ಅವಶ್ಯ ಕಂಡರೆ ಭಾರತವು ಕಾಶ್ಮೀರದ ಯುದ್ಧವಿರಾಮ ರೇಖೆಯನ್ನೂ ದಾಟಲು ಸಿದ್ಧವಿದೆಯೆಂದು ಪ್ರಧಾನಿ ನೆಹರು ಹರ್ಷಧ್ವನಿಗಳ ನಡುವೆ ಘೋಷಿಸಿದರು.

—ನಾವು ಮೊದಲೇ ಮುಂದೆ ಬಂದಿದ್ದೇವೆಯೆಂದು ಅಯೂಬಖಾನ್ ಜನರಳುವಿನ ನಡುವೆ ಕಾರ್ಯವೆಸಗುತ್ತಿದ್ದಾರೆ, ಅಲ್ಲವೆ?

o o o

ಮೂರು ವರ್ಷ ಅಜ್ಞಾತವಾಸವನ್ನನುಭವಿಸಿದ ಕಮಾಂಡರ್ ನಾನಾವತಿ ಬಿಡುಗಡೆಯಾದರು.

—ಮರಳಿ ಕುರುಕ್ಷೇತ್ರ ಪ್ರಾರಂಭವಾಗುವ ಸಾಧ್ಯತೆಯಿಲ್ಲವೆಂದು ಖಾತ್ರಿ ಹೇಳಬಹುದು.

o o o

ಭ್ರಷ್ಟಾಚಾರವನ್ನು ತಡೆಗಟ್ಟಲು ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳು ಸಹಕಾರ ನೀಡಬೇಕೆನ್ನುತ್ತಾರೆ ಗೃಹಮಂತ್ರಿ ನಂದಾ.

—ಅಂದರೆ ಈಗ ಈ ಸಂಸ್ಥೆಗಳು ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುತ್ತವೆಯೆಂದೇ?

31—12—63 ರಲ್ಲಿದ್ದಂತೆ
ನಿಲುವೆಯ ಸಂಯೋಜಿತ ಸ್ಟೇಟ್‌ಮೆಂಟ್

ಹೊಣೆಗಾರಿಕೆ	ರೂ.
1. ತೆತ್ತ ಭಂಡವಾಳ	80,58,467
2. ಕಾದಿಟ್ಟ ನಿಧಿ	75,25,000
3. ಠೇವಣಾತಿಗಳು	45,49,17,001
4. ಬ್ಯಾಂಕರ್ಸಿಗೆ ಸಲ್ಲಬೇಕಾದ್ದು	1,91,08,058
5. ಸಂಗ್ರಹಿಸಲು ಪರಿಗ್ರಹಿಸಿದ ಬಿಲ್ ವಗೈರೆ	5,60,46,280
6. ಇತರ ಹೊಣೆಗಾರಿಕೆಗಳು	2,75,74,260
	57,32,29,066

ಮೂಲಗಳು	ರೂ.
1. ಕೈಯಲ್ಲಿ, ಬ್ಯಾಂಕರರಲ್ಲಿ ಮತ್ತು ಕರೆಯಲ್ಲಿರುವ ನಗದಿ	4,95,58,280
2. ಸರಕಾರಕ್ಕೆ, ಮುನ್ಸಿಪಾಲಿಟಿ ಮತ್ತು ಇತರ ಸಂಸ್ಥೆಗಳಿಗೆ ಕೊಟ್ಟ ಸಾಲಗಳು ಷೇರುಗಳು, ಡಿಬೆಂಚರ್ಸ್ ಇತ್ಯಾದಿಗಳಲ್ಲಿ ವಿನಿಯೋಗಗಳು	16,47,06,697
3. ಸಾಲಗಳು	27,82,93,063
4. ಕಟ್ಟಡ, ಫರ್ನಿಚರ್ ಮತ್ತು ಫಿಟ್ಟಿಂಗ್	54,96,000
5. ಸಂಗ್ರಹಿಸಲು ಪರಿಗ್ರಹಿಸಿದ ಬಿಲ್ ವಗೈರೆ	5,60,46,280
6. ಇತರ ಮೂಲಗಳು	1,91,28,746
	57,32,29,066

ಶಾಖೆಗಳು 190.
7 ಲಕ್ಷಕ್ಕೂ ಮಿಕ್ಕಿದ ಗ್ರಾಹಕರು
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮಣಿಪಾಲ್.

ನಮ್ಮ–ನಮ್ಮವರು

(೧ನೇ ಪುಟದಿಂದ)

ಡಿಪ್ಪಾರೆ. ಉತ್ತಮ ವಾಗ್ಮಿಗಳಾದ ಇವರು ಹೋದಹೋದಲ್ಲಿ ತಮ್ಮ ನಿರರ್ಗಳವಾದ ಮಾತುಗಳಿಂದ ಸಭ್ಯರನ್ನು ಆಕರ್ಷಿಸುವ ವ್ಯಕ್ತಿತ್ವವುಳ್ಳವರು. ಇವರ ಸಾಹಿತ್ಯ ಸೇವೆಯನ್ನು ಮನಗಂಡೇ ಕನ್ನಡಿಗರು ಮಣಿಪಾಲದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನಿತ್ತು ಗೌರವಿಸಿದರು.

ಶ್ರೀ ಕೃಷ್ಣರಾಯರು ನೈಜತೆಯ ಪ್ರತಿಪಾದಕರು; ಆದರ್ಶವನ್ನು ಅವರು ನಂಬುತ್ತಾರಾದರೂ ಅದೇ ಪರವೆಂದು ಅಂಟಿರುವುದಿಲ್ಲ. ಕರ್ನಾಟಕ ಒಂದು ಎಂಬುದನ್ನು ಬಲವಾಗಿ ಸಮರ್ಥಿಸುವ ಅನಕೃ ಕರ್ನಾಟಕವನ್ನು ಎರಡಾಗಿ ಒಡೆಯುವ ಬಗ್ಗೆ ಒಳಗಿಂದೊಳಗೆ ತಂತ್ರ ನಡೆಯುತ್ತಿದೆ-ಇದರ ಬಗ್ಗೆ ಕನ್ನಡಿಗರು ಎಚ್ಚರಿರಬೇಕು. ಎಂದು ಮೂರು ವರ್ಷಗಳಿಗೆ ಮೊದಲೇ ಉದ್ಗರಿಸಿದ್ದರು. ಇತ್ತೀಚೆಗೆ ವಿಧಾನ ಸಭೆಯಲ್ಲಿ ನಡೆದ ವಾಗ್ವಾದಗಳು ಇದೇ ತಂತ್ರದ ಸುಳಿವು ಎಂದರೂ ತಪ್ಪಲ್ಲ. ಕನ್ನಡವನ್ನೇ ಉಸಿರನ್ನಾಗಿಟ್ಟುಕೊಂಡ ಅನಕೃ ಕನ್ನಡದ ಬಸಿರಲ್ಲಿ ಬಂದ ಸಿಂಹವೆಂದರೆ ಸರಿಯಾಗಬಹುದು. ಪತ್ರಿಕೋದ್ಯಮ-ಚಲಚ್ಚಿತ್ರಗಳವರೆಗೂ ಕೈ ಹರಡಿದ ಇವರು ವರ್ತಮಾನ ಕನ್ನಡದ ಉತ್ತಮ ಸಾಹಿತ್ಯಕಾರರೆಂದು ಗೌರವಾನ್ವಿತರು. ಇವರ ಸಾರಸ್ವತ ಸೇವೆಯಿಂದ ಕನ್ನಡತಾಯಿ ಮೆರೆದಿದ್ದಾಳೆ; ಸಂತೋಷಪಟ್ಟಿದ್ದಾಳೆ; ಶೋಭಾಯಮಾನವಾಗಿದ್ದಾಳೆ ಇವರ ಸೇವೆ ಇನ್ನೂ ಮುಂದುವರಿಯಬೇಕು; ಕನ್ನಡದಲ್ಲಿ ಕಸುವನ್ನು ತುಂಬಬೇಕು.

Edited, Printed & Published by K. H.Shetty. at the Navayuga Press, Udipi, S. India.

ನವಯುಗ

VOL. 43 No. 31

NAVAYUGA—Nationalist Weekly ‡‡ ಉಡುಪಿ 2-4-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ನಮ್ಮ-ನಮ್ಮವರು



ಗುಲ್ಜಾರೀಲಾಲ ನಂದಾ

ಗುಲ್ಜಾರೀಲಾಲ ನಂದಾ ಅವರು ಯೋಜನಾ ಶಾಖೆಯನ್ನು ಬಿಟ್ಟು ಗೃಹ ಮಂತ್ರಿ ಶಾಖೆಯನ್ನು ವಹಿಸಿಕೊಂಡಂದಿನಿಂದ ಈ ಶಾಖೆಯಲ್ಲಿ ಬೇಕೆಂಬಷ್ಟು ಗೊಂದಲಗಳು ನಡೆಯ ತೊಡಗಿವೆ. ಕಾಶ್ಮೀರದಲ್ಲಿ ಪವಿತ್ರ ಕೇಶವು ಕಣ್ಮರೆಯಾದ ದುರ್ಘಟನೆಯಿಂದಾಗಿ ದೇಶದಲ್ಲಿ ಜಾತೀಯತೆಯ ಪೆಡಂಭೂತವು ಮರಳಿ ಹಾವಳಿ ಮಾಡತೊಡಗಿದೆ. ಪೂರ್ವ ಪಾಕಿಸ್ತಾನದಿಂದ ಸುಮಾರು ೧|| ಲಕ್ಷದಷ್ಟು ಅಲ್ಪಸಂಖ್ಯಾಕರು ನಿರಾಶ್ರಿತರಾಗಿ ಬಂದು ಭಾರತದಲ್ಲಿ ತುಂಬತೊಡಗಿದ್ದಾರೆ ಇವರಿಗೆ ಪುನರ್ವಸತಿಯ ಸೌಕರ್ಯಗಳನ್ನು ಒದಗಿಸುವ ಕೆಲಸವು ಪುನರ್ನಿವೇಶನ ಮಂತ್ರಿ ಮೆಹರಚಂದ ಖನ್ನಾರದ್ದಾದರೂ ಇದರ ಪರಿಣಾಮವಾಗಿ ಜಮಶೇದಪುರ ಮೊದಲಾದೆಡೆ ನಡೆದ ಜಾತೀಯ ಗಲಭೆ ಕೊಲೆ ಇತ್ಯಾದಿಗಳನ್ನು ತಡೆಗಟ್ಟಬೇಕಾದವರು ನಂದಾರು.

ದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನೆಗೆಂದು ದ್ವಿವಾರ್ಷಿಕ ಯೋಜನೆಯನ್ನು ರೂಪಿಸಿದ ಇವರಿಂದು ಅನ್ಯತ್ರ ಅಧಿಕ ಗಮನ ಹರಿಸ ಬೇಕಾಗಿದೆ. ಭಾರತೀಯ ಪ್ರಧಾನಮಂತ್ರಿಗಳ ಸಲಹೆಯಂತೆ ಪಾಕ್ ಅಧ್ಯಕ್ಷ ಅಯ್ಯೂಬಖಾನರು ಉಭಯ ದೇಶಗಳಲ್ಲಿನ ಯಾವುದೇ ಸಮಸ್ಯೆಗಳು ಬಗೆಹರಿಯ ಬೇಕಾದರೆ, ದೇಶಗಳೊಳಗೆ ನಡೆಯುತ್ತಿರುವ ಜಾತೀಯ ಅಶಾಂತಿಯನ್ನು ನೀಗುವುದು ಅತ್ಯಗತ್ಯವೆಂದು ಒಪ್ಪಿಕೊಂಡಿದ್ದಾರೆ. ಅಲ್ಪಸಂಖ್ಯಾಕರ ಸಂರಕ್ಷಣೆ ಮಾಡುವುದು ಅವಶ್ಯವೆಂದೂ ಅವರು ಮನಗಂಡಿದ್ದಾರೆ. ಇದಕ್ಕಾಗಿಯೇ ಈ ವಿಚಾರವಾಗಿ ಮಾತನಾಡಿ ಶಾಂತತೆಯನ್ನು ಪುನರ್ ಸ್ಥಾಪಿಸಲು ಭಾರತ–ಪಾಕಿಸ್ಥಾನಗಳ ಗೃಹ ಮಂತ್ರಿಗಳು ಸದ್ಯದಲ್ಲಿಯೇ ನವದೆಹಲಿಯಲ್ಲಿ ಭೆಟ್ಟಿಯಾಗುವುದನ್ನು ಸ್ಮರಿಸಿದ್ದಾರೆ.

ಆದುದರಿಂದ ಭಾರತ ಸರಕಾರದ ಪರವಾಗಿ ನಂದಾರು ಈ ಸಭೆಯಲ್ಲಿ ಭಾಗವಹಿಸುತ್ತಾರೆ ಸಭೆಯಿಂದಾಗಿ ರಾಜಕಾರಣಕ್ಕಿಂತ ಮಾನವತೆಯ ದೃಷ್ಟಿಯಿಂದ ಜಾತೀಯ ಸೌಹಾರ್ದ ಬೆಳೆಯಬೇಕು ಎಂಬ ವಿಚಾರ ಮುಂದೆ ಬರಲಿದೆ. ಅದಕ್ಕಾಗಿ ಕೈಗೊಳ್ಳಬೇಕಾದ ನೀತಿ ನಡಾವಳಿಗಳನ್ನು ಈಗಿಂದೀಗಲೇ ನಂದಾರು ರೂಪಿಸುತ್ತಿರಬಹುದು. ಇದರ ಜತೆಯಲ್ಲಿ ಇನ್ನಿತರ ಪ್ರಶ್ನೆಗಳೂ ಇಣುಕಬಹುದು. ಮುಖ್ಯವಾಗಿ ಕಾಶ್ಮೀರದ ವಿಷಯವೂ ತಲೆ ಹಾಕುವಂತೆ ಪಾಕ್ ಗೃಹ ಮಂತ್ರಿಗಳು ಪ್ರಯತ್ನಿಸಬಹುದು. ಅಧ್ಯಕ್ಷ ಅಯ್ಯೂಬ ಖಾನರೂ ಈ ಸಂಗತಿಯನ್ನು ಸೂಚ್ಯವಾಗಿ ಸೂಚಿಸಿದಂತಿದೆ. ಆದರೆ, ಭಾರತದ ಗೌರವ-ಪ್ರತಿಷ್ಠೆಗಳಿಗೆ ಕುಂದುಂಟಾಗದಂತೆ ಎಚ್ಚರಿಗೆಯಿಂದ ವರ್ತಿಸುವುದು ಇಂದು ನಂದಾ ಅವರ ಪರಮ ಕರ್ತವ್ಯವಾಗಿದೆ. ಈ ಕರ್ತವ್ಯವನ್ನವರು ಯಶಸ್ವಿಯಾಗಿ ನಿರ್ವಹಿಸುವರೆಂದು ನಂಬ ಬಹುದು.

ಜಯಚಾಮರಾಜ

ರಾಜ್ಯ ಪುನರ್ಘಟನೆಯಾದನಂತರ ಮೈಸೂರಿನ ಮಹಾರಾಜರೂ ರಾಜಪ್ರಮುಖರೂ ಆಗಿದ್ದ ಜಯಚಾಮರಾಜರು ರಾಜ್ಯಪಾಲರಾಗಿ ಎಂಟು ವರ್ಷಗಳ ಕಾಲ ಉಳಿದರು. ದೇಶದಲ್ಲಿ ಹಲವಾರು ಮಹಾರಾಜರಿದ್ದರೂ ಜಯಚಾಮರಾಜರಂತೆ ಪ್ರಜಾಪ್ರಭುತ್ವಕ್ಕೆ ಒಪ್ಪುವಂತೆ ಉಳಿಯಲಿಲ್ಲ. ಜನವಾಣಿಯನ್ನು ಮನ್ನಿಸಿ ತನ್ನದಾಗಿದ್ದ ರಾಜ್ಯವನ್ನು ಜನತೆಯ ಕೈಗಳಿಗೆ ಸ್ವೇಚ್ಛೆಯಿಂದಲೇ ಒಪ್ಪಿಸಿದವರು ಇವರು. ಉತ್ತಮ ಆಡಳಿತದಾರರೆಂದು ಹೆಸರಾದ ಇವರು ಶ್ರೇಷ್ಠ ಮಟ್ಟದ ತತ್ವಜ್ಞಾನಿಗಳೂ ಹೌದು. ಭಾರತೀಯ ತತ್ವಜ್ಞಾನದ ಮತ್ತು ಸಂಸ್ಕೃತಿಯ ಪ್ರಚೋದಕರಾಗಿ ಇವರು ವಿದೇಶಗಳಲ್ಲೂ ಸಂಚರಿಸಿ ಭಾರತದ ಬಗ್ಗೆ ಸದ್ಭಾವನೆ ಹುಟ್ಟುವಂತೆ ಮಾಡಿದ್ದಾರೆ. ಭಾರತದ ರಾಜ-ಮಹಾರಾಜರ ಸಂಬಂಧದಲ್ಲಿ ಅಕ್ಷಿದ್ದ ದುರ್ಭಾವನೆಯನ್ನು ದೂರ ಮಾಡುವಲ್ಲಿ ಯಶಸ್ಸು ಗಳಿಸಿದ್ದಾರೆ.

ರಾಜ್ಯದಲ್ಲಿ ಮೊದಮೊದಲು ಚಾಮರಾಜರನ್ನು ರಾಜ್ಯಪಾಲರನ್ನಾಗಿ ಮಾಡಬಾರದೆಂದು ಆಂದೋಲನ ನಡೆದಂತಿತ್ತು. ಆದರೆ, ಇದು ಅರ್ಧದಲ್ಲಿಯೇ ನಿಂತು ಹೋದುದು ಸುದೈವ. ಅವರ ಗುಣಶೀಲಗಳ ಪರಿಚಯವಿಲ್ಲದಿದ್ದುದೇ ಆಂದೋಲನಕ್ಕೆ ಕಾರಣವೆನ್ನಬಹುದು. ಮತ್ತೆ ಮಹಾರಾಜರು ಮದ್ರಾಸಿಕ್ಕೆ ವರ್ಗವಾಗಲಿರುವರೆಂಬ ಸುದ್ದಿ ಹರಡಿದಂದಿನಿಂದ ಅವರನ್ನು ಇಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನವೂ ನಡೆಯಿತು, ಆದರೆ, ಇದು ಸಫಲವಾಗಲಿಲ್ಲ. ಜಯಚಾಮರಾಜರೀ ಮದ್ರಾಸದ ರಾಜ್ಯಪಾಲರಾಗಿ ನಿಯುಕ್ತರಾಗಿದ್ದಾರೆ, ಇದೇ ಎಪ್ರಿಲ್ ೫ನೆ ತಾರೀಕಿನಂದು ತಮ್ಮ ಹೊಸ ಅಧಿಕಾರವನ್ನು ವಹಿಸಿಕೊಳ್ಳಲಿದ್ದಾರೆ.

ಆದರ್ಶ ಮಹಾರಾಜರೆಂದು ಕೀರ್ತಿ ಗಳಿಸಿದ ಜಯಚಾಮರಾಜರು ಸಫಲ ರಾಜ್ಯಪಾಲರೆಂದೂ ಹೆಸರು ಗಳಿಸಿದ್ದಾರೆ. ಅವರ ವಿದ್ವತ್ತು, ಪ್ರೌಢಿಮೆ ಮತ್ತು ಅನುಭವಗಳ ಲಾಭ ಇದುವರೆಗೆ ಕರ್ನಾಟಕಕ್ಕೆ ದೊರಕಿತ್ತು; ಮುಂದದು ತಮಿಳುನಾಡಿಗೆ ಅವಶ್ಯ ದೊರೆಯುತ್ತದೆ. ಉತ್ತಮವಾದ ವಸ್ತುವಿನ ಮೇಲೆ ರಾಜನ ಅಧಿಕಾರವಿರುವಂತೆ. ಇದೀಗ ಇದು ನಿಜ. ಇಂದು ಪ್ರಜಾಜನರೇ ರಾಜರಾದುದರಿಂದ ಉತ್ತಮರಾದ ಜಯಚಾಮರಾಜರಿಂದ ಇಡಿಯ ಭಾರತೀಯ ಸಮಾಜವೇ ಲಾಭ ಪಡೆಯುವ ಹೇರಾಸೆಯಿಟ್ಟುಕೊಂಡಿದೆ. ಈ ಆಸೆಯನ್ನು ಪೂರೈಸುವ ಇಚ್ಛೆ, ಶಕ್ತಿಗಳು ಜಯಚಾಮರಾಜರಲ್ಲಿದ್ದೇ ಇವೆ

ಕಲ್ಯಾಣಿ ಡಿ. ಶೆಟ್ಟಿ

ತೊಟ್ಟಿಲು ತೂಗುವ ಕೈ ಕತ್ತಿಯನ್ನೂ ಹಿಡಿಯ ಬಲ್ಲುದೆಂದು ತೋರಿಸಿಕೊಟ್ಟ ವೀರ ನಾರಿಯರು ಹಲವಾರು ನಮ್ಮಲ್ಲಿ ಆಗಿ ಹೋಗಿದ್ದಾರೆ. ಇಂದು ಕತ್ತಿ ಹಿಡಿಯುವುದನ್ನು ಭಾರತ ಬಯಸುವುದಿಲ್ಲ. ಬದಲು ಮಹಿಳೆಯರೂ ಸಮಾಜ ಪುನಾರಚನೆಯ ಕಾರ್ಯದಲ್ಲಿ ಮುಂದುವರಿಯಬೇಕಾಗಿದೆ. ಮಂಗಳೂರಿನ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಇಂತಹ ಸಮಾಜ ಪುನಾರಚನೆಯಲ್ಲಿ ತೊಡಗಿದ ಧೀರ ಮಗಳು ಎನ್ನಬೇಕು ಮುಖ್ಯವಾಗಿ ಮಹಿಳಾ ರಂಗದಲ್ಲಿಯೇ ಕಾರ್ಯಶೀಲೆಯಾದ ಇವರು ಇಂದು ಹಲವಾರು ಸಂಘ ಸಂಸ್ಥೆಗಳಲ್ಲಿ ಯಶಸ್ವಿಯಾಗಿ ಕರ್ತವ್ಯಶೀಲೆಯಾಗಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ.

ಭಗಿನಿ ಸಮಾಜದ ಪ್ರಧಾನ ಕಾರ್ಯದರ್ಶಿಯಾಗಿ ಇವರು ಸೇವೆ ಸಲ್ಲಿಸುತ್ತಿದ್ದಾರೆ. ಮಂಗಳೂರು ವಿಮೆನ್ಸ್ ಕಾಟೇಜ್ ಇಂಡಸ್ಟ್ರೀಸ್ ಕೋ—ಓಪರೇಟಿವ್ ಸೊಸೈಟಿಯ ಅಧ್ಯಕ್ಷೆಯಾಗಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಫೇಮಿಲಿ ಪ್ಲ್ಯಾನಿಂಗ್ ಎಡ್ಯುಕೇಶನ್ನ ದ.ಕ. ನಾಯಿಕೆಯಿವರು, ಮೈಸೂರು ಸರಕಾರದ ಹ್ಯಾಂಡ್‌ಕ್ರಾಫ್ಟ್ ಎಂಪೋರಿಯಂನ ಚೆಯರ್‌ಮನ್ ಆಗುವ ಭಾಗ್ಯವನ್ನೂ ಶ್ರೀಮತಿಯವರು ಪಡೆದಿದ್ದಾರೆ. ಭಾರತ ಸ್ಕೌಟ್ ಮತ್ತು ಗೈಡ್ಸ್‌ನ ಜಿಲ್ಲಾ ಕಮಿಶನರರೂ ಇವರಾಗಿದ್ದಾರೆ. ಹೀಗೆ ಒಂದಲ್ಲ ಹಲವು ಕ್ಷೇತ್ರಗಳಲ್ಲಿ ಆಸಕ್ತಿಯಿಂದ ದುಡಿಯುತ್ತಿರುವ ಶ್ರೀಮತಿ

(೧೨ನೇ ಪುಟ ನೋಡಿರಿ)

ವಾರದ ಕಥೆ—

ನ್ಯಾಯಾಲಯ

ಲೇಖಕಿ: ಶ್ರೀಮತಿ ಯಶೋದಾ ಯನ್. ಜೆನ್ನಿ.

"ಕರಿಯಾ ... ಏ ಕರಿಯಾ ... " ಕರೆಯುತ್ತಿರುವ ಧ್ವನಿ ಕ್ಷಣ ಕ್ಷಣಕ್ಕೂ ಏರುತ್ತಲಿತ್ತು.

"ಯಾರಪ್ಪಾ ಅದು? ಯಾರದು?" ಮಲಗಿದಲ್ಲೇ ಹೊರಳಾಡಿ ಮಾತನಾಡಿದ ಕರಿಯ.

"ಎಷ್ಟು ಸಲ ಕರೆಯಬೇಕೋ ನಿನ್ನನ್ನು? ಭಾರೀ ದೊಡ್ಡವನಾಗಿ ಬಿಟ್ಟಿದ್ದೀಯೋ! ಎರಡು ಸಲ ತಪ್ಪಿಸಿಕೊಂಡೆ ಅದ್ರೂ ನಿನ್ನ ಕಾಯಿಲೆ ಗುಣವಾಗಿಲ್ಲ ಇದು ಮೂರನೇ ಬಾರಿ ಈ ಸಲ ತಪ್ಪಿಸಿಕೊಂಡ್ರೆ ಏನಾದೀತು ಅಂತ ಯೋಚನೆ ಸ್ಯೇ. ನಾಳೆ ನಿನ್ನ ಪಾಲಿನ ಬಿಟ್ಟಿಗೆ ಬರ್ಬೇಕಂತೆ. ಬರಲೇ ಬೇಕಂತೆ. ಅಷ್ಟೆ. ನನ್ನ ಕೆಲಸ ನಾನು ಮಾಡಿದೆ. ಇನ್ನು ನಿನಿಷ್ಟ. ಧನಿಗಳ ಸಿಟ್ಟು ನಿನಗೆ ಗೊತ್ತಿದ್ದದ್ದೇ" ಎಂದು ನುಡಿದ ವ್ಯಕ್ತಿ ಕರಿಯನೇನು ಮಾಡುತ್ತಿರುವನೆಂಬುದನ್ನೂ ನೋಡದೆ ಪ್ರತ್ಯುತ್ತರವನ್ನೂ ನಿರೀಕ್ಷಿಸದೆ ಕಾಲನ್ನು ನೆಲಕ್ಕಪ್ಪಳಿಸಿ ದಡದಡನೆ ನಡೆದು ಬಿಟ್ಟಿತು. ಕರಿಯ ತಲೆಯೆತ್ತಿ ನೋಡಬೇಕೆನಿಸಿದ ವ್ಯಕ್ತಿ ಯಾರೆಂಬುದೂ ತಿಳಿಯಲಿಲ್ಲ.

ಯಾರಾದರೇನು? ಜಮೀನ್ದಾರರ ಆಳುಗಳೆಲ್ಲಬ್ಬ ಅವರೆಲ್ಲರೂ ಧನಿಗಳ ಉಪ್ಪನ್ನ ಉಂಡು ಬೆಳೆದ ವಿಧೇಯ ಆಳುಗಳು. ಅವರ ರೂಪಗಳಲ್ಲಿ ವ್ಯತ್ಯಾಸವಿರಬಹುದಾದರೂ ಸ್ವಭಾವ, ರೀತಿ, ನೀತಿಗಳೆಲ್ಲ ಒಂದೇ ವಿಧದವು. ಅವರ ಮಾತುಗಳಲ್ಲಿ ಜಮೀನ್ದಾರರಿಗಿಂತಲೂ ಹೆಚ್ಚಿನ ದರ್ಪ, ಕ್ರೌರ್ಯ ಪ್ರತಿಧ್ವನಿಸುತ್ತಿತ್ತು ಯಜಮಾನನಿಗಾಗಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಅನ್ಯರ ಪ್ರಾಣಾಪಹರಣ ಮಾಡಲೂ ಸಿದ್ಧರೇ. ಕರಿಯನಿಗೆ ಈ ವಿಷಯವೇನೂ ಗೊತ್ತಿರದಿರಲಿಲ್ಲ. ಆತನ ತಾತ, ಮುತ್ತಾತಂದಿರ ಕಾಲದಿಂದಲೂ ಇದೇ ಗುಡಿಸಲಲ್ಲಿ, ಇದೇ ನೆಲದಲ್ಲಿ ಬಾಳಿ ಬದುಕಿದ್ದರವರು. ತಲೆಮಾರುಗಳಿಂದ ಬಂದ ಜಮೀನ್ದಾರರ ಗುಣಗಳಲ್ಲೂ ವ್ಯತ್ಯಾಸವಿರಲಿಲ್ಲ. ಕರಿಯನೇನೂ ಸೋಮಾರಿಯಲ್ಲ ಮೊದಲಿನಿಂದಲೂ ಧನಿಯರ ನಂಬಿಗಸ್ತ ಒಕ್ಕಲು, ಶ್ರದ್ಧೆಯ ಸೇವಕ. ಧನಿಯೆಂದರೆ ಅವನಿಗೆ ದೇವರಂತಹ ಪೂಜ್ಯ ಭಾವ, ಭಯ, ಭಕ್ತಿ. ಆತ ಧನಿಯರ ಕರೆಗೆ ಓಗೊಟ್ಟು, ತನ್ನ ಶಕ್ತಿ ಮೀರಿ ಸೇವೆಗೈದು ದುಡಿದು ಹಣ್ಣಾಗಿದ್ದ. ಆದರೆ ನಾಲ್ಕೈದು ವರ್ಷಗಳಿಂದೀಚೆಗೆ ನಿಶ್ಶಕ್ತಿ ಹೆಚ್ಚಾಗಿ ಒಂದಲ್ಲ ಒಂದು ಕಾಯಿಲೆಗೆ ಬಲಿಯಾಗುತ್ತಾ ಮೂರು ತಿಂಗಳುಗಳಿಂದ ಚಾಪೆಯನ್ನೇ ಬಿಟ್ಟೇಳದ ಸ್ಥಿತಿಗೆ ಬಂದು ತಲಪಿದ್ದ, ಹಾಗಾಗಿಯೇ ಧನಿಗಳ ಎರಡು ಬಾರಿಯ ಕೆಲಸದ ಕರೆಯನ್ನು ಅನಿವಾರ್ಯವಾಗಿ ನಿರಾಕರಿಸಬೇಕಾಯಿತು. ಕರಿಯನ ಪ್ರಾಮಾಣಿಕತೆಗೆ ಮೆಚ್ಚಿದ್ದ ರಂಗ ರಾಯರು ಆ ಕಾರಣದಿಂದಲೇ ಕರಿಯನನ್ನು ಎರಡು ಬಾರಿ ಕ್ಷಮಿಸಿದ್ದರು. ರಂಗ ರಾಯರಿಗೆ ಒಕ್ಕಲುಗಳ ವಿಷಯದಲ್ಲಿ ಕ್ಷಮೆ, ದಯೆ, ದಾಕ್ಷಿಣ್ಯಗಳೆಂಬುದೇ ಇರಲಿಲ್ಲ. ಏಕೆಂದರೆ ಹಾಗೆ ಅವರಿಗೆ ಸಲಿಗೆ ಕೊಟ್ಟಲ್ಲಿ ಮುಂದೆ ಒಕ್ಕಲುಗಳಿಗೆ ಧನಿಯೆಂಬ ಭಾವನೆಯೇ ಮರೆತು ಹೋಗಿ ತಮ್ಮ ಸ್ಥಾನ, ಮಾನಗಳಿಗೆ ಚ್ಯುತಿ ಬಂದೀತೆಂಬ ದೂರದೃಷ್ಟಿ ಅವರದು. ಹಾಗೆಲ್ಲ ಕರುಣೆ, ಸಹಾನುಭೂತಿ ತೋರುತ್ತಾ ಹೋದಲ್ಲಿ ಕೂಡಿಟ್ಟ ಧನರಾಶಿ ಕರಗುತ್ತಾ ಬಂದು ಜಮೀನ್ದಾರಿಕೆಯೇ ಕೊನೆಗೊಳ್ಳುವ ಪ್ರಸಂಗವೂ ಬಂದೀತೆಂಬ ಭಯವೂ ಇತ್ತವರಿಗೆ

ಕರಿಯ ಚಿಕ್ಕಂದಿನಿಂದಲೂ ಅವರನ್ನು ಚೆನ್ನಾಗಿ ಬಲ್ಲ. ಅಬ್ಬ! ಆತ ಬಾಲಕನಾಗಿರುವಾಗ ನಡೆದೊಂದು ಘಟನೆಯನ್ನು ಯೋಚಿಸಿದರೆ ಈಗಲೂ ಆತನ ಮೈ ನಡುಗುತಿತ್ತು.

ಆಗ ಕರಿಯ ಏಳೆಂಟು ವರ್ಷದ ಹುಡುಗ. ಜಮೀನ್ದಾರರ ಮನೆಯೆದುರು ಏನೋ ಒಂದು ತಮಾಷೆ ನಡೆದಿದೆಯೆಂದು ಯಾರಿಂದಲೋ ಕೇಳಿ ನೋಡಲೆಂದು ಹೋಗಿದ್ದ.

ಜಮೀನ್ದಾರರ ಮನೆಯೆದುರಿನ ಅಂಗಳದ ಉರಿ ಬಿಸಿಲಲ್ಲಿ ಒಂದು ಕಾಲಲ್ಲಿ ನಿಂತು ಶಿಕ್ಷೆಯನ್ನನುಭವಿಸುತ್ತಿದ್ದ ಅರುವತ್ತರ ಮುದುಕನೊಬ್ಬ! ಬರಿಯ ಅಸ್ಥಿಪಂಜರದಂತಿದ್ದ ಆ ವೃದ್ಧನ ದೇಹ ಬಿಸಿಲಿನ ತಾಪದಿಂದಲೂ, ಹಸಿವೆ, ಬಾಯಾರಿಕೆಗಳಿಂದಲೂ ಬಳಲಿ ಕಂಗೆಟ್ಟಿತ್ತು ಯಾತನೆ, ಆಯಾಸ, ನಿಶ್ಶಕ್ತಿಯಿಂದ ಮೈ ನಡುಗುತಿತ್ತು ಅದಕ್ಕಿಂತಲೂ ಹೆಚ್ಚಿನ ಅವಮಾನ, ವ್ಯಥೆಯಿಂದ ತಲೆ ತಗ್ಗಿಸಿದ್ದನಾತ. ಜಮೀನ್ದಾರರ ಕೈಕೆಳಗೆ ಆಯುಷ್ಯವೆಲ್ಲ ದುಡಿದು ಹಣ್ಣಾಗಿ ನೊಂದು ಬೆಂದ ಆ ಹೃದಯ ಹೆಪ್ಪುಗಟ್ಟಿ ಹೋಗಿದ್ದುದರಿಂದ ಕಣ್ಣೀರ ಹನಿಯೊಂದೂ ಆ ಸಂದರ್ಭದಲ್ಲೂ ಕಾಣಲಿಲ್ಲ. ಆ ವೃದ್ಧ ಅಶಕ್ತ ದೇಹ ಒಂಟಿ ಕಾಲಿನ ಶಿಕ್ಷೆಯನ್ನು ಸಹಿಸಲಾಗದೆ ತಪ್ಪೊಪ್ಪಿಗೆಯಿಲ್ಲದೆಯೇ ಉರುಳಿದ ಕಾಲಿಗೆ ಜಮೀನ್ದಾರರ ಆಳುಗಳ ಬೆತ್ತದೇಟುಗಳು ಬಿದ್ದಾಗ ನೋವನ್ನು ಸಹಿಸದೆ ಬೊಬ್ಬಿಡುತ್ತಿದ್ದಾಗ ಜಮೀನ್ದಾರರ ಎಂಜಲನ್ನದ ಆಳುಗಳು ವಿಕಟವಾಗಿ ನಗುತ್ತಿದ್ದರು. ತಮಾಷೆ ನೋಡಲೆಂದು ಹೋದ ಕರಿಯನ ಎಳೆಯ ಹೃದಯ ನಡುಗಿ ತಲ್ಲಣಿಸಿತು.

"ಯಾಕಪ್ಪಾ ಅವನಿಗೆ ಹೊಡೀತಾರೆ?"

"ಶ್ ...ಮಾತಾಡ್ಬೇಡ ಮಗೂ ನಾವು ಅವರ ಒಕ್ಕಲು ಹೇಳಿದ ಮಾತು ಕೇಳದೇ ಇದ್ರೆ, ವಿರೋಧವಾಗಿ ನಿಂತ್ರೆ ಶಿಕ್ಷೆ ಕೊಡ್ತಾರೆ." ಕರಿಯನ ತಂದೆ ಪಿಸುಗುಟ್ಟಿದ್ದ.

ಕರಿಯ ಭಯದಿಂದ ಮುಂದೆ ಮಾತನಾಡಲೇ ಇಲ್ಲ ಮಾತ್ರವಲ್ಲ, ಅಂದಿನಿಂದ ಜಮೀನ್ದಾರರೆಂದರೇ ಮೈ ನಡುಕ ಆರಂಭವಾಗುತಿತ್ತು. ಅದೆಲ್ಲ ಅನೇಕ ವರ್ಷಗಳ ಹಿಂದಿನ ಕತೆ ಈಗ ಮೊದಲಿಗಿಂತ ತುಸು ಸುಧಾರಿಸಿದ ಕಾಲ. ರಂಗ ರಾಯರು, ಮೊದಲಿನ ಧನಿಗಳ ಮಗ, ಅವರ ಗುಣವೂ ತಂದೆಯಷ್ಟು ಕಠೋರವಲ್ಲ. ಆದರೂ.... ಧನಿ ಧನಿಯೇ. ಒಕ್ಕಲು ಒಕ್ಕಲೇ ಉತ್ಪತ್ತಿಗಿಂತ ಹೆಚ್ಚಿನ ಗೇಣಿ ವಸೂಲು ಮಾಡುವ ಆ ಧನಿಗಳ ಬಿಟ್ಟಿ ಚಾಕರಿಗೆ ರೈತರು ಕರೆದಾಗ ಹೋಗಲೇ ಬೇಕು. ರೈತರಿಗೆ ಎಂತಹ ಕೆಲಸವೇ ಇರಲಿ, ಕಾಯಿಲೆಯೇ ಇರಲಿ, ಧನಿಗಳ ಆಜ್ಞೆಯನ್ನು ಪಾಲಿಸಲೇ ಬೇಕು. ಇಲ್ಲವಾದರೆ ಜಾಗ ಬಿಡಬೇಕು. ಅದೆಂದೂ ಬಡ ರೈತರಿಗೆ ಆಗುವ ಮಾತಲ್ಲ. ಹೇಗಾದರೂ ಮಾಡಿ ಧನಿಗಳನ್ನೊಲಿಸಿಕೊಂಡು ಬೇಸಾಯ ಮಾಡಿ ಬದುಕುವುದೊಂದೇ ಅವರಿಗಿರುವ ದಾರಿ ಕರಿಯನೂ ಎಷ್ಟೋ ಸಲ ಯೋಚಿಸಿದ್ದ ಬದುಕಲು ಬೇರೆ ಮಾರ್ಗವೇ ಇಲ್ಲವೇ? ವರ್ಷ ವರ್ಷವೂ ಬೆಳೆಯುತ್ತಿರುವ ಸಾಲದ ಹೊರತು ಹೊರತು ಮತ್ತೇನೂ ಕಾಣದ ಈ ಬೇಸಾಯದ ಕಸುಬಿಗಿಂತ ಬೇರೇನೂ ಕೆಲಸವೇ ಸಿಗದೇ? ಇತ್ತೀಚೆಗಂತೂ ಕೆಲವು ಹುಡುಗರು ಹಿರಿಯರಿಗೆ ಹೇಳದೆಯೇ ಊರು ಬಿಟ್ಟು ಏನೇನೋ ಕೆಲಸ ಮಾಡಿ ಒಂದೆರಡೇ ವರ್ಷಗಳಲ್ಲಿ ವಿಚಿತ್ರ ವೇಷ ಭೂಷಣಗಳಲ್ಲಿ ಊರಿಗೆ ಬಂದಾಗ ಕರಿಯನ ಯೋಚನೆ ಮತ್ತೂ ಬೆಳೆಯುತ್ತಿತ್ತು. ತಮಗಿಂತ ಅವರೆಷ್ಟೋ ಪಾಲಿನ ಭಾಗ್ಯಶಾಲಿಗಳೆಂಬ ಭಾವನೆಯುಂಟಾಗುತಿತ್ತು. ಕಳೆದ ವರ್ಷ ಕರಿಯನ ಒಬ್ಬನೇ ಮಗ ತನಿಯನೂ ಹೇಳದೆ ಕೇಳದೆ ಪರಾರಿಯಾದಾಗ ಕರಿಯ ಕಂಗಾಲಾಗಿ ಬಿಟ್ಟ ಆತನನ್ನು ಅದೆಷ್ಟು ಪ್ರೀತಿಯಿಂದ, ಅಕ್ಕರೆಯಿಂದ, ಜಾಗ್ರತೆಯಿಂದ ಬೆಳೆಸಿದ್ದರವರು. ಕೊನೆಗೂ ಆತ ಹೇಳದೆ ಕೇಳದೆ ಹೋಗಿಬಿಟ್ಟ. ಮೊದಲೇ ಕ್ಷೀಣ ಪ್ರಕೃತಿಯ ಚೆನ್ನಿ ಕೊರಗಿ ಕೊರಗಿ ಇನ್ನಷ್ಟು ಕೃಶಳಾದಳು ಕರಿಯ ಮಲಗಿದಲ್ಲೇ ಹೊರಳಾಡುತ್ತಿದ್ದ. ಚೆನ್ನಿ ಗದ್ದೆಯ ಕಳೆ ಕೀಳಲೆಂದು ಹೋಗಿದವಳು ಇನ್ನೇನು ಬರುವ ಹೊತ್ತಾಯಿತು. ಈಗ ಬರುತ್ತಾಳೆ. ಒಳ್ಳೆಯ ಪ್ರಾಮಾಣಿಕ ವ್ಯಕ್ತಿಯೆಂದು ಹೆಸರು ಪಡೆದ ಕಾರಣದಿಂದಾಗಿ ಕರಿಯ ಎರಡು ಬಾರಿ ಧನಿಯರ ಕೆಲಸಕ್ಕೆ ತಪ್ಪಿಸಿಕೊಂಡಾಗಲೂ ಬಯ್ಗಳಿಂದಲೇ ಶಿಕ್ಷೆ ಮುಗಿದಿತ್ತು, ಅಲ್ಲದೆ ಕೆಲಸಕ್ಕೆ ಬರಲಾಗುವುದಿಲ್ಲವೆಂದು ಹೇಳಿಕೊಳ್ಳಲು ಕರಿಯ ನಡುಗುವ ಹೆಜ್ಜೆಗಳನ್ನಿಡುತ್ತಾ ಹೋಗಿದ್ದ. ಅವನನ್ನು ನೋಡಿಯೇ ಧನಿಯರು ಮೌನ ತಾಳಿದ್ದರು. ಎರಡನೇ ಸಲ ಕರಿಯ ಏಳಲಾರದ ಸ್ಥಿತಿ ತಲಪಿದ್ದರಿಂದ ಅವನ ಪರವಾಗಿ ಕ್ಷಮೆ ಕೇಳಲು ಹೋದವಳು ಚೆನ್ನಿ ಆಗ ಮಾತ್ರ ಧನಿಗಳು ಕೆರಳಿ ಕೆಂಡವಾಗಿ ಬಾಯಿಗೆ ಬಂದುದ್ದನ್ನೆಲ್ಲ ಬಯ್ದುಬಿಟ್ಟಿದ್ದರು

ಆದರೆ ಇಂದು ಪುನಃ ಕರೆದಿದ್ದಾರೆ ಪ್ರಾಯಕ್ಕೆ ಬಂದಿದ್ದ ತನಿಯನನ್ನು ಕರಿಯನೇ ಊರು ಬಿಟ್ಟು ಹೋಗಲು ಹೇಳಿದನೆಂಬ ಸಿಟ್ಟು ಧನಿಯರಿಗಿತ್ತು. ಇಲ್ಲವಾದರೆ ಕರಿಯನ ಪಾಲಿನ ಕೆಲಸವನ್ನು ಅವನು ಮಾಡುತ್ತಿರಲಿಲ್ಲವೇ? ಕರಿಯ ಕೆಮ್ಮತೊಡಗಿದ ಕೆಮ್ಮಿನ ರಭಸದಿಂದ ಆತನ ಮೈಯೆಲ್ಲವೂ ನಡುಗುತಿತ್ತು. ಆ

೧೧ನೇ ಪುಟ ನೋಡಿರಿ

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಸಕಲಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ವಿಚಾರ ಮಥನ

ಪುರಂದರ ವಿಠಲನ ವಿಚಾರಗಳು

(ಲೇಖಾಂಕ ೩)

ಬರೆದವರು: ಶ್ರೀ ಕೆ ವೆಂಕಟರಾಯಾಚಾರ್ಯ ವಿದ್ವಾನ್, ಸುರತ್ಕಲ್ಲು.

ಪುರಂದರ ವಿಠಲನೆಂಬುದು ಶ್ರೀನಿವಾ ನಾಯಕನಿಗೆ ಶ್ರೀ ವ್ಯಾಸರಾಯರು ಅ ಗ್ರಹಿಸಿದ ಮುದ್ರಿಕೆಯು. ಹಾಗಾದರೆ, ನಿವಾಸನಾಯಕನು ತನ್ನ ವಂಶದ ರು ಮಠದ ಸ್ವಾಮಿಯವರಿಂದಲೇ ಹ ದಾಸ ಪದ್ಧತಿಯ ಪ್ರಚಾರ ಕಾರ್ಯವನ್ನು ಂತು ನಿಯುಕ್ತನಾದನೆಂದು ನಿರ್ಧರಿಸ ಹುದು. ಇಸ್ವಿ 1526ರಲ್ಲಿ ಶ್ರೀ ವ್ಯಾಸ ಯರಿಂದ ವೃತ್ತಿಯನ್ನು ಪಡೆದ ಮುಕ್ಕ ರುವ ಕಾರಣ ಪುರಂದರ ವಿಠಲನು ತ ತ್ಪೂರ್ವತಃ ಹರಿದಾಸನಾಗಿದ್ದನೆಂದು ತಿಳಿ ಯುತ್ತದೆ. ಹರಿದಾಸನು ಒಂದೆಡೆಯಲ್ಲೇ ದ್ದು ಹರಿಕೀರ್ತನೆ ರಚಿಸುವುದುಂಟು. ದರೆ, ಪುರಂದರ ವಿಠಲನು ಹಲವೆಡೆ ಂಚರಿಸುತ್ತಾ, ಅಲ್ಲಲ್ಲಿನ ದೇವರ ಸ್ತೋತ್ರ ಚಿಸುತ್ತಾ, ಅಲ್ಲಲ್ಲಿ ಕಾಣಬಂದ ಲೌಕಿ ಾಚರಗಳ ಬಗೆಗೆ ಸ್ವಾಶಯವನ್ನು ಕೀ ರ್ತನೆಗಳಲ್ಲಿ ಪ್ರಕಟಿಸುತ್ತಾ ಇದ್ದನೆಂದು ಳಿಯಬೇಕು. ಹರಿಕೀರ್ತನೆಗಳ ಪ್ರಸಾ ಕ್ಕೆ ಸಂಚರಿಸಬೇಕೆಂದು ಶ್ರೀ ಗುರುಗ ಂದ ನಿರೂಪಿತನಾಗಿರಬಹುದು ಯಾ ೂವರ ವೃತ್ತಿಯಿಂದ ಕೂಡಿದ ಪುರಂದ ವಿಠಲನು ರಚಿಸಿದ ಕೀರ್ತನೆಗಳಲ್ಲಿ ಕೆ ವು ಅಲ್ಲಲ್ಲಿ ಪ್ರಕಾಶಿತವಾದುವು, ಕೆಲವು ಲ್ಲೆಡೆ ಪ್ರಸಾರಿತವಾದುವು. ತಂಜಾವೂ ರ ತುಳಜಾಮಹಾರಾಜನ 'ಸಂಗೀತಸಾ ರಾಮೃತ'ದಲ್ಲಿ ಪುರಂದರ ವಿಠಲನ ಸು ಳಾದಿಯ ಭಾಗವೊಂದು ಹೇಳಿದೆ (ಧಾರ ವಾಡ ಜಯಂತಿ ಪತ್ರಿಕೆ) ಈ ಸುಳಾದಿ ಯು ಇದೀಗ ಅಚ್ಚಾದ—ಬೆಂಗಳೂರು, ಉಡುಪಿ, ಹೈದರಾಬಾದುಗಳಲ್ಲಿ ಪ್ರಕಟವಾ —ಕೀರ್ತನೆಗಳ ಪುಸ್ತಕದಲ್ಲಿ ಕಾಣುವು ಲ್ಲ, ಅಂತೆ, ಕೆಲವು ಕೀರ್ತನೆಗಳು ರ ಭೇದದಿಂದ ಕೂಡಿವೆ, ರಾಗ ಳಗಳು ಬೇರೆ ಹೇಳಿವೆ, ಇವೆಲ್ಲಾ ರಣಗಳಿಂದ, ಪುರಂದರ ವಿಠಲನು ಿದ ಅವೆಲ್ಲಾ ಕೀರ್ತನೆಗಳು ಇದೀಗ ೂರೆತಷ್ಟು ಮಟ್ಟಿಗೆ ಪೂರ್ಣವಾಗಿಲ್ಲ, ಷ್ಟೊ ಸಂಶೋಧನೀಯಗಳಾಗಿವೆ. ಆ , ಬೇರೆ ಹೇಳುವಷ್ಟು ಮಟ್ಟಿಗೆ-ಆ ವಿಸುವ ಮಟ್ಟಿಗೆ- ಅಪರಿಮಿತ ಸಂ ಯಲ್ಲಿ ಪುರಂದರ ವಿಠಲನು ಕೀರ್ತ ದಿ ರಚಿಸಿದನೆನ್ನುವುದು ವಿವೇಚನೀ ವಾಗಿದೆ.

ಪುರಂದರ ವಿಠಲನ ಮಕ್ಕಳಿಗೆ ಮೊ



ರೆತ ವೃತ್ತಿಯ ಶಾಸನಕ್ಕಿಂತ (ಇಸ್ವಿ 1526 ಕ್ಕಿಂತ) ಮೊದಲೇ ಹಂಪೆಯಲ್ಲಿ ವಿಠಲ ಗುಡಿಯ ರಚನಾದಿ ಕಾರ್ಯಗಳು ನಡೆಯುತ್ತಿದ್ದುವು ಹಂಪೆಯ ವಿಠಲ ವಿಗ್ರಹವು ಪಂಡರಪುರದಿಂದ ತಂದಿರಬೇಕೆಂದು ಕೆಲವರು ಬಗೆಯುತ್ತಾರೆ ಅದು ಸರಿಯಲ್ಲ. ಶ್ರೀ ವಾದಿರಾಜ ಸ್ವಾಮಿಗಳು 'ತೀರ್ಥ ಪ್ರಬಂಧದಲ್ಲಿ' (ಉತ್ತ. 6 ಪು. 13) ಇಕ್ಕಡೆಯ ಮೂರ್ತಿಗಳನ್ನು ಸ್ತುತಿಸಿದ್ದಾರೆ ಪಂಡರಪುರದ ಬಗ್ಗೆ ತುಂಗಾ ತೀರದಕ್ಕಿಂತ ಮೊದಲೇ ಹೇಳಿದೆ. ತುಂಗಾ ತೀರದ ವಿಠಲನು "ಅನ್ಯಾಕೃತಿ" ಯೆಂದಿದೆ. ಅಂದರೆ, ಪಂಡರಪುರದ ವಿಠಲ ಮೂರ್ತಿಗಿಂತ ಇದು ಬೇರೆ ತರದಲ್ಲಿದೆ–ಬೇರೆ ಆಗಿದೆ–ಎಂದು ತಿಳಿಯುತ್ತದೆ. (ವಿಜಯ ನಗರ ಪಾರ್ಟ್ ಶತಮಾನದ ಸ್ಮಾರಕ ಗ್ರಂಥ, ಪೂನಾ ಓರಿಯಂಟಲಿಸ್ಟ್ 1963)

ವಿಜಯನಗರದಲ್ಲಿ ವಿಠಲ ಮೂರ್ತಿಯ ಸ್ಥಾಪನೆಗೆ ಗುರು ಪೀಠದ ವ್ಯಾಸರಾಯರು, ಪುರಂದರ ವಿಠಲ, ವಾದಿರಾಜ ಸ್ವಾಮಿಗಳು ಉತ್ತೇಜಕರಾಗಿದ್ದರೆನ್ನುವುದು ಸೂಕ್ತ. ಪಂಡರಪುರವು ಆಗಲೇ ಕನ್ನಡದಲ್ಲಿ ಒಳಪಟ್ಟಿಲ್ಲ, ಕನ್ನಡದ ಕೀರ್ತನಕಾರರು ತಮ್ಮಲ್ಲಿಯ ವಿಠಲನನ್ನೇ ಪ್ರಧಾನವಾಗಿ ಪೂಜಿಸಲು ತೊಡಗಿದ್ದರು. ಅರ್ಥಾತ್, ವಿಜಯ ವಿಠಲ ಗುಡಿಯೇ ಹರಿದಾಸ ಕೂಟದ ಪ್ರಧಾನ ಮಂಟಪವಾಗಿತ್ತೆಂದರೆ ಅತಿಶಯೋಕ್ತಿಯಲ್ಲ! ಇದೀಗ 1964ರಲ್ಲಿ ಆ ಪವಿತ್ರ ಕ್ಷೇತ್ರದಲ್ಲಿ ಪುರಂದರ ವಿಠಲನ ಚತುಶ್ಶತಮಾನ ಪುಣ್ಯದಿನೋತ್ಸವವು ವಿಜೃಂಭಣೆಯಿಂದ ಜರಗುತ್ತದೆಯೆಂಬುದು ಪ್ರಶಂಸಾರ್ಹವು. ಅದು ಮಾತ್ರವಲ್ಲ, ಕನ್ನಡಿಗರಿದ್ದ ಕಡೆಗಳೆಲ್ಲಾ ಈ ಪುಣ್ಯದಿನೋತ್ಸವವು ಜರಗುತ್ತದೆ! ಇಂತಹ ಸತ್ಸಂಧರ್ಭದಲ್ಲಿ ಈ ಪುರಂದರ ವಿಠಲನು ರಚಿಸಿದ ಕೆಲವು ಕೀರ್ತನಾದಿಗಳನ್ನಾದರೂ ಹಾಡುವುದು ಸೂಕ್ತ, ಅಂತೆ ಪ್ರತಿದಿನ ಒಂದೆರಡಾದರೂ ಕೀರ್ತನಾದಿ ನೆನಹುಗೊಂಡರೆ ಈ ಪುಣ್ಯದಿನೋತ್ಸವದ ಸಾರ್ಥಕ್ಯವಾಗಬಲ್ಲುದು!

ಪುರಂದರ ವಿಠಲನ ಕೀರ್ತನೆಗಳಲಿ ತಿಳಿಯಾದ ನುಡಿಗಳಲ್ಲಿ ಗಹನವಾದ ತತ್ವವಿಚಾರಗಳು ಅಡಕವಾಗಿವೆ. ಉಗಾಭೋಗ, ಸುಳಾದಿ, ಪದ, ವೃತ್ತನಾಮ, ಹಾಡುಗಳೆಂಬ ಕೀರ್ತನೆಗಳ ವೈವಿಧ್ಯಗಳು ಸಂಗೀತ ಕ್ರಮದಲ್ಲಿ ಹಾಡತಕ್ಕವುಗಳು. ಅಚ್ಚಾದ ಪ್ರತಿಗಳಲ್ಲಿ ಬೇರೆ ಬೇರೆ ರಾಗ-ತಾಳಗಳು ನಮೂದಿಸಿವೆ. ಆಯಾ ಭಾವಾನುಗತ-ಕಾಲಾನುಗತ ರಾಗಗಳೇನೆಂದು ತಿಳಿದವರು ಪ್ರಚುರಿಸಬೇಕು ಕೇವಲ ಪಾಂಡಿತ್ಯಬಲದಿಂದ ರಾಗಾಂತರ—ತಾಳಾಂತರಗಳ ನಿರ್ದೇಶನ ಚಿನ್ನಲ್ಲ! ಕೆಲವು ಪದಗಳು ಸಂಗೀತ ಕ್ರಮಕ್ಕಿಂತಲೂ ಬೇರೆ ತರದಲ್ಲಿ ಹಾಡತಕ್ಕವುಗಳಿವೆ. ಆ ಪದ್ಧತಿಗೆ ಸಂಕೀರ್ತನ ಪ್ರಕಾರವೆಂದು ಹೇಳುತ್ತಾರೆ ಲೋಕಶಿಕ್ಷಣಕ್ಕೋಸುಗ ಸಂಪ್ರವಚನ ಪ್ರಕಾರವೂ ಪ್ರಚಾರದಲ್ಲಿದೆ. ಪರಂತು, ಈ ಪದ್ಧತಿಗಳಿಗಾಗಿ ಎಷ್ಟೋ ಪದಗಳ ಮೂಲ ಸ್ವರೂಪವೇ ಬದಲಾಗಿದೆಯೆಂದು ಬಲ್ಲವರು ಬರೆಯುತ್ತಾರೆ (ಕರ್ನಾಟಕ ಸಂಗೀತವೂ ಹರಿದಾಸ ಕೂಟವೂ) ಹರಿದಾಸರ ಕೀರ್ತನೆಗಳಲ್ಲಿ ವಸ್ತುಗತವಾಗಿ ಗಂಧರ್ವಗೀತೆಗಳೂ ಯಕ್ಷಗೀತೆಗಳೂ ಎಂದು ವಿಭಾಗಿಸಲ್ಪಡೆಯಿದೆ. ಆದುದರಿಂದ ಪದಗಳನ್ನು ಹೇಳುವಾಗ ಆಯಾ ವಿಭಾಗ ವಿಚಾರಗಳನ್ನು ಪರಿಶೀಲಿಸುವುದು ಆವಶ್ಯವೆಂದು ಬೇರೆ ಹೇಳುತ್ತಾರೆ (ಅದೇ ಪುಟ 111)

ಈ ಮಾತಿನಿಂದ ಇಷ್ಟೊಂದು ವಿಷಯ ತಿಳಿಯಲಾಗುತ್ತದೆ. ಹರಿದಾಸರ ಪದಗಳಲ್ಲಿ ಕೇವಲ ಗಂಧರ್ವಗೀತಗಳಾಗಿ ಬಳಸತಕ್ಕವು ಕೆಲವು, ಬೇರೆ ಕೆಲವು ವರ್ಣನಾತ್ಮಕವಾಗಿ ರಾಗ-ತಾಳಗಳ ವೈವಿಧ್ಯದಿಂದ ಹಾಡತಕ್ಕ ಯಕ್ಷಗೀತೆಗಳಿವೆ. ಈ ಯಕ್ಷಗೀತೆಗಳಿಂದಲೇ 'ಯಕ್ಷಗಾನ' ಪ್ರಬಂಧ ಸಾಹಿತ್ಯದ ರಚನಾ ಪ್ರಕಾರಗಳುಂಟಾಗಿ ಜನಪ್ರೀತಿಗಳಾಗಲು ಕಾರಣವೆಂದು ನಾವು ತಿಳಿಯಬಹುದು ಯಕ್ಷಗಾನವು ದೇಶೀಯ ಪದ್ಧತಿಯೆಂದು ಶಾರ್ಙ್ಗದೇವನ 'ಸಂಗೀತ ಸುಧಾಕರ'ದಿಂದ ತಿಳಿಯುತ್ತದೆ. ಯಕ್ಷಗಾನ ಪ್ರಬಂಧ ರಚನೆ ಹಾಗೂ ಪ್ರಸಾರಗಳಾದರೂ ಹರಿದಾಸರ ಕೀರ್ತನೆಗಳ ಸಮಕಾಲಿಕವಾಗಿ– ಹದಿನಾರನೆಯ ಶತಕದಿಂದ ಹಬ್ಬಿಗೊಂಡವೆಂದು, ಶಾಸನಗಳ ಮೂಲಕ ಪುರಸ್ಕಾರಗೊಂಡುವೆಂದು ತಿಳಿಯುತ್ತದೆ.

ಪುರಂದರ ವಿಠಲನು (ಮಾಯಾ) ಮಾಳವ ಗೌಳ ರಾಗದ ಪುರಸ್ಕರ್ತನು. ಆ ಮೊದಲು ಖರಹರ ಪ್ರಿಯವೇ ಪ್ರಚುರವಾಗಿತ್ತು. ಅಂತೆ, ತೋಡಿ, ಕಲ್ಯಾಣಿ, ಧನ್ಯಾಸಿ, ಬೇಗಡೆ, ಸಹನ, ವರಾಳಿ, ದರ್ಬಾರ್, ಕಾನಡಾ, ಆರಭಿನೇಹನ, ಇತ್ಯಾದಿ ರಾಗಗಳ ಸ್ವರ ಮೊದಲಾದುವನ್ನು ಖಚಿತಗೊಳಿಸಿದನೆಂದೂ ಹೇಳುತ್ತಾರೆ (ತಾ 15-1-64ರ ಪ್ರಜಾವಾಣಿ), ಅರ್ಥಾತ್, ಪುರಂದರ ವಿಠಲ ಬರೆದ ಸಂಗೀತ ಪದ್ಧತಿಯ ಲಕ್ಷಣ ಗ್ರಂಥಗಳೇನೂ ತಿಳಿಯಬಂದಿಲ್ಲವಾದರೂ, ಶಾಸ್ತ್ರಾನುಸಾರವಾಗಿ ಲಕ್ಷ್ಯಗಳೆನಿಸಿದ ಕೀರ್ತನೆಗಳನ್ನು ಇವನು ರಚಿಸಿದ್ದಾನೆಂಬುದು ಅಭಿಮಾನಾಸ್ಪದವಾಗಿದೆ. ಭರತ, ವಿದ್ಯಾರಣ್ಯ, ಶಾರ್ಙ್ಗದೇವ, ಸೋಮೇಶ್ವರ, ಗೋಪಾಲನಾಯಕ, ಪಾರ್ಶ್ವದೇವ, ಉಮಾಪತಿ, ಪುಂಡರೀಕ ವಿಠಲ, ರಾಮಾಮಾತ್ಯ, ಸೋಮನಾಥ ರಘುನಾಥ ಮೊದಲಾದವರು ಬರೆದ ಸಂಗೀತ ಗ್ರಂಥಗಳು ಅನೇಕಶಃ ಇವೆ ಅವರಾದರೂ ಶಾಸ್ತ್ರೀಯ ವಿಷಯಗಳನ್ನು ಆಯಾ ಸಂದರ್ಭೋಚಿತವಾಗಿ ವಿವರಿಸಿ ಕೃತಿಗಳ ಮೂಲಕ ಉದಾಹರಿಸಿದ್ದರು. ಆದರೆ ಅವೆಲ್ಲಾ ಸಂಸ್ಕೃತ ಭಾಷೆಯಲ್ಲಿವೆ, ಜನ ಸಾಮಾನ್ಯರಿಗೆ ಅಭಿರುಚಿಕವಾಗುವಂತೆ ಹೇಳಿಲ್ಲ. ಪುರಂದರ ವಿಠಲನು ಅವರೆಲ್ಲಾ ಹೇಳಿದ ವಿಚಾರಗಳನ್ನು ಕಿರಿತು ಕನ್ನಡ ಕೃತಿಗಳ ಮೂಲಕ ಖಚಿತಗೊಳಿಸಿ ಜನಾದರ ಸಂಗ್ರಹಕ್ಕೆಡೆಮಾಡಿದನೆಂದು ಧಾರಾಳವಾಗಿ ಒಪ್ಪಬಹುದು.

ತಾಳ ಪದ್ಧತಿಯಲ್ಲೂ ಪುರಂದರ ವಿಠಲನು ಒಂದು ವೈಶಿಷ್ಟ್ಯವನ್ನು ಕಂಡುಕೊಂಡನೆಂದೂ ಧ್ರುವ ತಾಳದ ಪ್ರಚಾರವನ್ನು ಕೈಗೊಂಡನೆಂದು ಹೇಳುತ್ತಾರೆ (ಕ. ಸಂ ಹ ದಾ) ಆದಿಕಾಲ ಮೊದಲಾದ ಏಳು ತಾಳಗಳು ಈ ಮೊದಲೇ ಎಲ್ಲೆಡೆ ಪ್ರಚಾರವಾಗಿವೆ ಇವನಿಂದ ಎಂಟನೆಯದಾದ ಧ್ರುವತಾಳ ಪ್ರಚಾರವಾಗಿ, ಇದೀಗ ಎಂಟು ತಾಳಗಳಾಗಿವೆ. ತಾಳಗತಿಗಳು-ಆವರ್ತನಾದಿಗಳಿಂದ ಹೊಸತೆಂದು ಪದ್ಧತಿ— ಹೊಸರು ಕಂಡುಕೊಳ್ಳಲು ಸಾಧ್ಯವಿದೆಯೆಂಬುದು ಸಂಗೀತ ಶಾಸ್ತ್ರಾಭಿಜ್ಞರಿಗೆ ತಿಳಿಯದುದಲ್ಲ ಆದರೆ, ಈ ತರದ ಹೊಸ ನಿರೂಪಣೆಗೆಳಸಿದವರಲ್ಲಿ ಪುರಂದರ ವಿಠಲನೇ ಮೊದಲಿಗನೆಂಬುದು ಕರ್ನಾಟಕ (ದಾಕ್ಷಿಣಾತ್ಯ) ಸಂಗೀತವಿಚಾರದಲ್ಲಿ ಉಲ್ಲೇಖನೀಯವಾಗಿದೆ. ತ್ಯಾಗರಾಜ ಮೊದಲಾದವರೂ ಅನೇಕ ರೀತಿಯಲ್ಲಿ ಸಂಗೀತವನ್ನು ಪ್ರಚುರಿಸಿದ್ದಾರೆ, ಆ ವಿಚಾರಕ್ಕೆ ಪುರಂದರ ವಿಠಲನೇ ಆದರ್ಶನಾಗಿದ್ದಾನೆ. ಆದು ಕಾರಣ ತ್ಯಾಗರಾಜನು 'ಪುರಂದರದಾಸ'ರನ್ನು 'ಪ್ರಹ್ಲಾದ ವಿಜಯಮು' ಕೃತಿಯಲ್ಲಿ ಸ್ಪಷ್ಟವಾಗಿ ಹೊಗಳಿದ್ದಾನೆ, ಹಲವು ಕೃತಿಗಳಲ್ಲಿ ಭಾವ—ಶಬ್ದಾನುವಾದಗಳನ್ನು ಕೈಗೊಂಡಿದ್ದಾನೆ. ಅನ್ನಮಾಚಾರ್ಯನು 'ವಿಠಲನ ಅವತಾರ' ವೆಂದು ಪುರಂದರನನ್ನು ಗೌರವಿಸಿದ್ದಾನೆ. ತುಳಜಾ ಮಹಾರಾಜನ ಸಂಸ್ಕೃತದಲ್ಲಿ ಸಂಗೀ

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ... ...
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦.

ಲೋಕದ ನಡುವೆ

ಪೆಕಿಂಗ್ ಪ್ರಗತಿಶೀಲರ ಪಾಡು

-- ಶಿವಶಂಕರ, ಮದ್ರಾಸು.

ಕಳೆದ ಮೂರು ವಾರಗಳಲ್ಲಿ ಕ್ರಮಶಃ ಪೆಕಿಂಗ್ ಪ್ರಜೆಗಳ ಪರಿತಾಪಕರ ಸ್ಥಿತಿ, ಗ್ರಾಮೀಣ ಜನತೆಯ ಜೀವನ ಹಾಗೂ ಕುಟುಂಬಗಾರ್ತಿ ಪಟ್ಟಣದಲ್ಲಿ ತನ್ನ ಕುಟುಂಬವನ್ನು ಸಲಹೂಗಿಸಿಕೊಂಡು ಹೋಗುತ್ತಿರುವ ಕ್ರಮಗಳನ್ನು ಕಂಡಿದ್ದೇವೆ. ಅಷ್ಟಾಗುವಾಗ ಪರರಾಷ್ಟ್ರಗಳ ಮೇಲೆ ಪ್ರಭಾವ ಬೀರಲು ಹೋಗಿದ್ದ ಕಮ್ಯೂನಿಸ್ಟ್ ಪ್ರಧಾನಿ ಚೌ ಎನ್—ಲೈ ಹಿಂತಿರುಗಿರುವ ಸುದ್ದಿ ಪ್ರಕಟವಾಗಿದೆ. ಪರರಾಷ್ಟ್ರಗಳಲ್ಲಿ ಅವರು ಬೀರಿರುವ ಪ್ರಭಾವವನ್ನು ಮುಂದಿನ ವಾರಗಳಲ್ಲಿ ವಿವರವಾಗಿ ನೋಡೋಣ. ಜನತೆಯ ಕೈಯಲ್ಲಿದ್ದ ತುತ್ತನ್ನು ಕಿತ್ತುಕೊಂಡು ಅನ್ಯ ರಾಷ್ಟ್ರಗಳಿಗೆ ರಫ್ತುಮಾಡುತ್ತಿರುವ ಕಮ್ಯೂನಿಸ್ಟ್ ಚೈನಾ ಏನನ್ನು ಎಲ್ಲಿಗೆ ರಫ್ತುಮಾಡುತ್ತಿದೆ. ಯಾರು ಅವರಿಗೆ ಸಹಾಯಕರಾಗಿದ್ದಾರೆ, ಅದಕ್ಕಾಗಿ ಪ್ರಗತಿಶೀಲರು ಪಡುತ್ತಿರುವ ಪಾಡಿನ ಕುರಿತು ಈ ವಾರ ಆಲೋಚಿಸುವ.

ಚೈನಾದ ಪಕ್ಕದಲ್ಲೇ ರಷ್ಯಾ ಇದೆ. ಎರಡೂ ಕಮ್ಯೂನಿಸ್ಟ್ ರಾಷ್ಟ್ರಗಳು. ಈ ಎರಡು ಪ್ರಬಲ ರಾಷ್ಟ್ರಗಳ ನಡುವೆಗಡಿ—ವಿವಾದ ಭೂತಾಕಾರ ತಾಳಿದೆಂದು ಪತ್ರಿಕೆಗಳು ಪ್ರಕಟಿಸುತ್ತವೆ. ಇದು ಎಷ್ಟರ ಮಟ್ಟಿಗೆ ದಿಟವೆಂಬುದು ಸಂದೇಹಾಸ್ಪದೇ ಇದೆ. ಏನಿದ್ದರೂ ಈ ಎರಡು ರಾಷ್ಟ್ರಗಳಲ್ಲಿ ಬರಗಾಲ ಬೀಡು ಬಿಟ್ಟಿರುವದು ಮಾತ್ರ ವಾಸ್ತವ. ರಷ್ಯಾದರೋ ಅಮೇರಿಕದಿಂದ ಆಹಾರವನ್ನು ಬರಮಾಡಿಕೊಂಡು ಪ್ರಜೆಗಳಿಗೆ ಹಂಚುತ್ತಿದೆ. ಚೈನಾ ಅದಕ್ಕೆ ಸಿದ್ಧವಿಲ್ಲ. ಆದರೂ ಅದು ಕಳ್ಳತನದಿಂದ ಆಹಾರ ಪದಾರ್ಥಗಳನ್ನು ರಷ್ಯಾದಿಂದ ತರಿಸಿಕೊಳ್ಳುತ್ತಿದೆನ್ನುವದು ಆಶ್ಚರ್ಯವಾದರೂ ಯೋಚಿಸಬೇಕಾಗಿರುವ ವಿಷಯವೇ ಇದೆ.

ನೇಪಾಲಕ್ಕೆ ಆಹಾರ ಸಾಮಗ್ರಿಗಳನ್ನು ರಫ್ತುಮಾಡಲು ಚೈನಾ ಮುಂದಕ್ಕೆ ಬಂದಿತ್ತು. ಆದರೆ ಕೊಟ್ಟ ಮಾತಿಗೆ ಅವರು ತಪ್ಪಿನಡೆದುದರಿಂದ ನೇಪಾಲ ಅವರನ್ನೀಗ ನಂಬುವ ಸ್ಥಿತಿಯಲ್ಲಿಲ್ಲವಾದರೂ, ಧೈರ್ಯದಿಂದ ಅದನ್ನು ತಿಳಿಸುವ ಸ್ಥಿತಿಯಲ್ಲೂ ಇಲ್ಲ. ನೇಪಾಲದಲ್ಲಿ ಸಿಮೆಂಟು ಹಾಗೂ ಕಾಗದ ಉತ್ಪಾದನೆಯ ಕಾರ್ಖಾನೆಗಳನ್ನು ತೆರೆಯುವುದಾಗಿ ಕಮ್ಯೂನಿಸ್ಟ್ ಚೈನಾ ಆಶ್ವಾಸನೆ ಇತ್ತಿತ್ತು ಆದರೆ ವಚನಭಂಗ ಖ್ಯಾತರಾಗಿರುವ ಕಮ್ಯೂನಿಸ್ಟರು ಇದೀಗ ಅಲ್ಲಿ ಮಣ್ಣಿನ ಹಾಗೂ ಪಿಂಗಾಣಿ ವಸ್ತುಗಳ ಉತ್ಪಾದನೆಯ ಕಾರ್ಖಾನೆಗಳನ್ನು ತೆರೆಯುತ್ತೇವೆಂದು ಹೇಳುತ್ತಾ ಸ್ಥಳವನ್ನು ಹುಡುಕುತ್ತಿದ್ದಾರೆ. ಇದರಿಂದ ಕಮ್ಯೂನಿಸ್ಟ್ ಚೈನೀಯರು ಅಲ್ಲಿ ನಿಜವಾಗಿ ಸಹಾಯ ಸಲ್ಲಿಸಲು ಹೋಗಿರದೆ ಸ್ಥಳದ ಪರಿಚಯ ಮಾಡಿಕೊಳ್ಳಲು ಹೋಗಿರುವರೆಂಬುದು ಸ್ಪಷ್ಟವಾಗುತ್ತದೆ.

ಕಮ್ಯೂನಿಸ್ಟ್ ಚೈನೀಯರ ದಮನ ನೀತಿಯಿಂದ ಜರ್ಜರಿತರಾಗಿರುವ ತ್ರಿವಿಷ್ಟಪದ (ಟಿಬೇಟಿನ) ಜನರು ಕಣ್ಣು ತಪ್ಪಿಸಿಕೊಂಡು ಭಾರತಕ್ಕೆ ಹಾಗೂ ಭೂತಾನಕ್ಕೆ ಓಡಿಹೋಗುತ್ತಿದ್ದಾರೆ. ಹಾಗೆಯೇ ಸಿಂಕಿಯಾಂಗಿನಿಂದ ರಷ್ಯಾಕ್ಕೆ ಓಡಿಹೋಗುತ್ತಿರುವದರ ವಿವರವನ್ನು ಹಿಂದಿನಸಂಚಿಕೆಗಳಲ್ಲಿ ಓದಿರುವೆವು. ಭೂತಾನ ಬಹಳ ಚಿಕ್ಕ ರಾಷ್ಟ್ರವಾದರೂ ಕಮ್ಯೂನಿಸ್ಟ್ ಕರಾಳ ರಾಕ್ಷಸಿಗೆ ಅವರು ಬೆದರಿರುವದಿಲ್ಲ, ಅವರು ಭಾರತದ ಬಳಿ ಬಹಳ ಸ್ನೇಹದಿಂದಲೇ ಇದ್ದಾರೆ.

ಕೊರಿಯಾದಲ್ಲಿ ಅವರು ನಡೆಸಿರುವ ಕ್ರೂರಕೃತ್ಯಗಳ ಫಲವನ್ನು ಕೊರಿಯನರು ಇಂದೂ ಅನುಭವಿಸಬೇಕಾಗಿರುತ್ತದೆ. ಅಲ್ಲಿ ಭೇದಿಗಳಾಗಿದ್ದ ಚೈನಿ ಕಮ್ಯೂನಿಸ್ಟ್ ಸೈನಿಕರು ಭಾರತೀಯ ಶಾಂತಿ ಸೇನೆಯ ನಾಯಕನ ಕೊಲೆ ಮಾಡಲು ಸಂಚು ಕೂಡಾ ಹೂಡಿದ್ದರು.

ಭಾರತದಿಂದಲೂ ಕಳ್ಳತನದಿಂದ ಅವರು ಆಹಾರ ಸಾಮಗ್ರಿಗಳನ್ನು, ಸಿಮೆಂಟು ವಗೈರೆಗಳನ್ನು ತಮ್ಮ ಕಮ್ಯೂನಿಸ್ಟ್ ಪಕ್ಷದವರ ಮೂಲಕ ತರಿಸಿಕೊಳ್ಳುತ್ತಿರುವುದನ್ನು ಪತ್ರಿಕೆಗಳು ಬಹಿರಂಗಗೊಳಿಸಿರುತ್ತವೆ. ಹಿಂದಿನ ಕಾಲದಲ್ಲಿ ಜ್ಞಾನ ತೃಷೆಯಿದ್ದ ಮೇಧಾವಿಗಳು ಭಾರತಕ್ಕೆ ಬಂದು ವಿದ್ಯೆ ಕಲಿತುಕೊಂಡು ಹೋಗುತ್ತಿದ್ದುದರ ವಿವರಣೆ ಇದೆ. ತನ್ನ ತಲೆಯಲ್ಲಿ ತುಂಬಿಸಿಕೊಂಡಿರುವದರಿಂದಲೂ ಹುಯೆನ್-ತ್ಸಾಂಗನು- ಇಲ್ಲಿಯ ಅನೇಕ ಅಮೂಲ್ಯ ಕೃತಿಗಳನ್ನೂ, ತನ್ನ ಭಾರತೀಯ ಸ್ನೇಹಿತರನ್ನೂ ಕರೆದುಕೊಂಡು ಚೈನಾಕ್ಕೆ ಹೊರಟಿದ್ದನು. ದಾರಿಯಲ್ಲಿ ನದಿಯೊಂದು ಸಿಕ್ಕಿತು. ದೋಣಿಯಲ್ಲಿ ಅಮೂಲ್ಯ ಕೃತಿರತ್ನಗಳನ್ನು ತುಂಬಿಸಿ ಅವರೆಲ್ಲರೂ ಆಸೀನರಾಗಿ ಪ್ರಯಾಣ ಮುಂದರಿಸಿದರು. ದೋಣಿ ಭಾರವನ್ನು ಹೊತ್ತುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಮತ್ತೇನು ಮಾಡುವುದು? ಓಲೆ ರಾಶಿಯನ್ನು ನೀರುಪಾಲು ಮಾಡಿಬಿಡುವುದೇ? ಭಾರತೀಯರು ಅದಕ್ಕೆ ಸಿದ್ಧರಾಗಿಲ್ಲ. ಭಾರತೀಯ ಸ್ನೇಹಿತರನ್ನು ಕಳೆದುಕೊಳ್ಳಲು ಹುಯೆನ್-ತ್ಸಾಂಗನು ಒಪ್ಪುವಂತಿಲ್ಲ. ಮಾತಿನಲ್ಲೇ ಸಮಯ ಕಳೆಯಲೂ ಸಾಧ್ಯವಿಲ್ಲ. ಧುಡುಂ! ಭಾರತೀಯನೊಬ್ಬ ದೋಣಿಯಿಂದ ಹಾರಿ ಬಿಟ್ಟು ಭಾರ ಕಮ್ಮಿ ಮಾಡಿದ್ದ. ದಾರಿಯುದ್ದಕ್ಕೂ ಆವಶ್ಯಕತೆ ಬಂದಾಗ ಒಬ್ಬೊಬ್ಬರೇ ಪ್ರಾಣತೆತ್ತು ಅಮೂಲ್ಯ ಕೃತಿರತ್ನಗಳನ್ನು ಚೈನಾಕ್ಕೆ ತಲಪುವಂತೆ ಅರ್ಪಿಸಿಕೊಂಡರು. ಅಂದು ಚೈನಾಕ್ಕೆ ಜ್ಞಾನೋದಯ ಮಾಡಿಸಲು ಭಾರತೀಯರು ಪ್ರಾಣ ತೆತ್ತಿರುವರಾದಲ್ಲಿ ಇಂದು ಅವರ ಹೃದಯ ಪರಿವರ್ತನೆಗಾಗಿ ಜೀವವನ್ನು ಕೊಡಬೇಕಾಗಿರುತ್ತದೆ. ಅಂದು ಜ್ಞಾನತೃಷೆ! ಇಂದು ರಕ್ತತೃಷೆ! ಸಾಮ್ರಾಜ್ಯ ದಾಹ! ಅಂದು ಅಮೂಲ್ಯ ಕೃತಿಗಳನ್ನು ಕಳುಹಿಸಿದ್ದಲ್ಲಿ ಇಂದು ಇಲ್ಲಿಯ ಕಮ್ಯೂನಿಸ್ಟರು ಇಲ್ಲಿಯ ರಹಸ್ಯಗಳನ್ನು, ಸ್ಥಳದ ಪರಿಚಯವನ್ನು, ಸ್ಥಳದ ಭೂಗೋಲಿಕ ಚಿತ್ರ ಇತ್ಯಾದಿಗಳನ್ನು ಕಳುಹಿಸಿಕೊಡುತ್ತಿದ್ದಾರೆ! ಅಂದು ಅವರು ಜ್ಞಾನತೃಷೆಯನ್ನು ತೀರಿಸಿಕೊಳ್ಳಲು ಬರುತ್ತಿದ್ದಲ್ಲಿ ಇಂದು ಇಲ್ಲಿಯ ಕೆಲ ಸೈನಿಕ ಅಧಿಕಾರಿಗಳ ಕಾಮತೃಷೆಯನ್ನು ತೀರಿಸಲು ಹಳಗಿದ ಚೈನಿ ಚಂಚಲೆಯರನ್ನು ಕಳುಹಿಸಿ ಗಡಿಯಲ್ಲಿ ಮುಂದರಿದು ಬಂದಿರುವಂತಹ ಅಪಮಾನಕರ ಸಂಗತಿಗಳೂ ಪತ್ರಿಕೆಗಳ ಮೂಲಕ ಬೆಳಕು ಕಂಡಿವೆ.

ಅಯೂಬರ ಅಮಾನುಷ ಸ್ವೇಚ್ಛಾ ಆಡಳಿತೆಗೊಳಗಾಗಿರುವ, ಹಾಗೂ ಚೈನಾದ ಚಕ್ರಂದಕ್ಕೊಳಗಾಗಿರುವ ಪಾಕಿಸ್ತಾನಕ್ಕೆ ಕಮ್ಯೂನಿಸ್ಟ್ ಚೈನಾದಿಂದ ಆಹಾರ ಸಾಮಗ್ರಿಗಳು ಬರುವದಿಲ್ಲವಾದರೂ ಅಲ್ಲಿಗೆ ಅಸ್ತ್ರ ಶಸ್ತ್ರಗಳು ಬರುತ್ತಿವೆ, ಚೈನಾಕ್ಕೆ ಸೆಣಬಿನ ನಾರು ಹೋಗುತ್ತಿದೆ. ಪಾಕಿಸ್ಥಾನದಿಂದ ಸೈನಿಕ ತರಬೇತಿಗಾಗಿ ಕಮ್ಯೂನಿಸ್ಟ್ ಚೈನಾಕ್ಕೆ ಅಧಿಕಾರಿಗಳು ಹೋಗುತ್ತಿದ್ದಾರೆ ಇದರ ಫಲವಾಗಿ ಲಡಾಕನ್ನು ಅವರು ಚೈನಾದ್ದೆಂದು ಒಪ್ಪಿಕೊಳ್ಳುತ್ತಾರೆ!

ಇತ್ತೀಚೆಗೆ ಗೆಳೆತನವನ್ನು ಬೆಳೆಸಿಕೊಂಡಿರುವ ಫ್ರಾನ್ಸಿಗೆ ಕೂಡಾ ಅರ್ಭಟ ನಡೆಸಿರುವಂತೆ ಭಾರೀ ಪದಾರ್ಥಗಳನ್ನೇನೂ ಕಮ್ಯೂನಿಸ್ಟ್ ಚೈನಾ ಕಳುಹಿಸಿರುವುದಿಲ್ಲ. ಚೈನಿ ಪಿಂಗಾಣಿ ಮೂರ್ತಿಗಳು ಹಾಗೂ ವಾದ್ಯ ಮಾತ್ರ ಪೆರಿಸಿನಲ್ಲಿ ಕಂಡುಬರುತ್ತಿವೆಯೆಂಬುದು ಇದೀಗ ಪ್ರಕಟವಾಗಿರುತ್ತದೆ. ಒಂದಿಷ್ಟು ಒಣ ಆಹಾರ ಪದಾರ್ಥಗಳನ್ನು ಅವರು ರಫ್ತು ಮಾಡಿರಬಹುದು. ಅದಕ್ಕೆ ಬದಲಾಗಿ ಫ್ರಾನ್ಸಿನಿಂದ ಅವರು ನೂತನ ಕಾಲ ನಾಶಕ್ಕೆ ಮಾರಕಾಸ್ತ್ರಗಳ ಸಿದ್ಧತೆಗೆ ಯಂತ್ರಗಳನ್ನು ಪಡೆದುಕೊಂಡಿರುವರು.

ಅರೇ! ಇಂತಹ ನಾಟಕವನ್ನಾಡಿಯೂ ಪ್ರಪಂಚದಲ್ಲಿ ಚೈನಾ ಮೆರೆದಾಡಲು ಸಾಧ್ಯವೇ? ಎಂದು ಕಮ್ಯೂನಿಸ್ಟರು ವಕ್ರೋಕ್ತಿಯನ್ನಾಡಬಹುದು ಚೈನಿ ಕಮ್ಯೂನಿಸ್ಟರು ಮೊಣ ಕೈಗೆ ಬೆಲ್ಲವನ್ನು ತಾಗಿಸಿಯೋ, ಮೊಣ ಕಾಲು ತೋರಿಸಿಯೋ ಹಗಲು ಮಾಡಿಕೊಳ್ಳುವದೆಂದು ಇರುವ ಮಾತಿನಂತೆ ನಾಟಕವನ್ನು ಚೆನ್ನಾಗಿ ಪ್ರದರ್ಶಿಸಿದ್ದಾರೆ, ಆದರೆ ಇದೆಲ್ಲಾ ಎಷ್ಟು ದಿನ ನಡೆದೀತು? ನೀರ ಮೇಲಣ ಗುಳ್ಳೆ ಒಡೆದೇ ತೀರಬೇಕು ತಾನೇ? ಅಂತೆಯೇ ಈ ಕಮ್ಯೂನಿಸ್ಟ್ ಗುಳ್ಳೆ ಒಡೆದು ಹೋಗುವದರಲ್ಲಿ ಸಂದೇಹವಿಲ್ಲ. ವಿನಾಶಕಾಲೇ ವಿಪರೀತ ಬುದ್ಧಿಃ ಯೆಂಬಂತೆ ಅವರು ನಾಶದ ದವಡೆಯತ್ತ ಸಾಗುತ್ತಿದ್ದಾರೆ. ದಿನಂಪ್ರತಿ ಭಾರತದ ಗಡಿಯಲ್ಲಿ ಸೇನೆಯನ್ನು ಜಾಸ್ತಿ ಮಾಡಿಕೊಳ್ಳುತ್ತಿದ್ದಾರಲ್ಲದೆ, ಪಾಕಿಸ್ತಾನಿ ನೇಪದಲ್ಲೂ ಮುನ್ನಡೆದು ಕಮ್ಯೂನಿಸ್ಟ್ ಪತಂಗ ಭಾರತೀಯ ಬೆಂಕಿಯತ್ತ ಧಾವಿಸಿ ಬರುತ್ತಿದೆ

ಕಮ್ಯೂನಿಸ್ಟ್ ಷಾಹಿ ಚೈನಾವನ್ನು ಹಾಳು ಮಾಡುವೆಯೆನ್ನುವದಕ್ಕೆ ಜಪಾನಿಯರು ಇತ್ತೀಚೆಗೆ ತಳೆದಿರುವ ಘೋರಣೆಯೇ ಸಾಕ್ಷಿ. ಅವರು ಚೈನಾ ಕಮ್ಯೂನಿಸ್ಟ್ ಅಧಿಕಾರವನ್ನು ಒಪ್ಪಿಕೊಂಡಿರುವದಿಲ್ಲ.

ಭಾರತದ ಕಮ್ಯೂನಿಸ್ಟರು ಚೈನಿ ಕಮ್ಯೂನಿಸ್ಟರಿಗೆ ಆಶೆ ತೋರಿಸುತ್ತಿದ್ದಾರೆ; ಮುನ್ನಡೆದು ಬರಲು ಸನ್ನೆ ಮಾಡುತ್ತಿದ್ದಾರೆ ಅದಕ್ಕಾಗಿ ಇಲ್ಲಿ ಅವರು ಅನೇಕ ಆಟಗಳನ್ನು ಆಡುತ್ತಿದ್ದಾರೆ—ತಮ್ಮಲ್ಲಿ ಭಿನ್ನಾಭಿಪ್ರಾಯವಿದೆಯೆಂಬ ನಾಟಕವಾಡುತ್ತಾ ಒಂದು ಬಳಗದವರು ಶ್ರೀಮಾನ್ ಜವಾಹರಲಾಲ ನೆಹ್ರೂಜೀಯವರ ಹಿಂದುಗಡೆ ತಲೆಮರೆಸಿಕೊಳ್ಳುತ್ತಿದ್ದಲ್ಲಿ, ಇನ್ನೊಂದು ಬಂಗಾಳದವರು ಆ ಬಂಡವಾಳದ ಬಲದಿಂದ ಜನತೆಯ ನಡುವೆ ಜಗಳವೆಬ್ಬಿಸುತ್ತಿದ್ದಾರೆ. ಇದೀಗ ಉಪವಾಸದ ನಾಟಕವನ್ನೂ—ಹುಲಿ ಉಪವಾಸ ಮಾಡಿ ಕಾಶೀಯಾತ್ರೆಗೆ ಹೊರಟಂತೆ—ಆಡಿ ಸತ್ಯಾಗ್ರಹದ ದ್ವಿತೀಯ ಮೆಟ್ಟಲಿಗೆ ಬಂದಿರುವರು. ಸೂಜಿಯನ್ನಿಟ್ಟು ಬಾಳೇ ಹಣ್ಣನ್ನು ಆನೆಗೆ ಕೊಟ್ಟವನ ಪಾಡೇನಾಗಿತ್ತೆಂಬುದನ್ನು ಅವರು ಜ್ಞಾಪಿಸಿಕೊಂಡು ಭಾರತಾಂಬೆಯ ಬಳಿ ಹೃದಯಪೂರ್ವಕ ಕ್ಷಮೆ ಬೇಡಿ ಭಾರತೀಯರೊಂದಿಗೆ ಒಂದಾಗಿ ದೇಶದ ಅಭ್ಯುತ್ಥಾನವನ್ನು ಬಯಸಲು ಮುಂದೆಬಂದಲ್ಲಿ ಚೈನಿ ಕಮ್ಯೂನಿಸ್ಟರ ಕಣ್ಣು ತೆರೆದೀತು. ಜಗತ್ತಿನ ಕಲ್ಯಾಣವೇ ಆದೀತು.

— — —

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸು ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

ಮಹಿಳಾ ಮಂಡಳ

ಭಾರತದಲ್ಲಿ ನಾರಿಯರ ಕರ್ತವ್ಯ

ಬರೆದವರು: ಶ್ರೀ ಯಂ. ಎಸ್. ಶೆಟ್ಟಿ.

ಪೆಣ್ಣಲ್ಲವೇ ತಮ್ಮನ್ನೆಲ್ಲ ಪಡೆದ ತಾಯಿ.
ಪೆಣ್ಣಲ್ಲವೇ ಪೊರೆದವಳು.
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು.॥

ಮೇಲೆ ಬರೆದಿರುವ ಹೊನ್ನಮ್ಮನ ಕಾವ್ಯದಿಂದ ಹೆಣ್ಣು ಜನ್ಮದ ನೈಜ ಪರಿಚಯವನ್ನು ನಾವು ಮಾಡಿಕೊಳ್ಳಬಹುದು. ಹೆಣ್ಣಿಗೂ, ಗಂಡಿನಷ್ಟೇ ಸ್ಥಾನ ಮಾನಗಳಿವೆ ಎಂದು ಹೇಳಲಿಕ್ಕೂ ಅಡ್ಡಿಯಿಲ್ಲ. ಆದರೆ ಎಂದಿನತನಕ? ತನ್ನ ಹಕ್ಕಿನ ಸ್ವಾತಂತ್ರ್ಯದ ದುರುಪಯೋಗವನ್ನು ಮಾಡದ ತನಕ. ನಿಜವಾಗಿಯೂ ಸ್ತ್ರೀಯರಿಗೆ ಸ್ವಾತಂತ್ರ್ಯವು ಬೇಕು; ಮತ್ತು ಆ ಸ್ವಾತಂತ್ರ್ಯಕ್ಕೆ ಅವರು ಅರ್ಹರು. ಅದು ಅವರ ಜನ್ಮ ಸಿದ್ಧವಾದ ಹಕ್ಕು. ಅದನ್ನು ಎಂದೂ ಯಾರೂ, ಬಲಾತ್ಕಾರದಿಂದ ಕಸಿದುಕೊಳ್ಳಬಾರದು. ಅಂದ ಮೇಲೆ ಈ ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಕರ್ತವ್ಯವೇನೆಂಬುವದನ್ನು ತಿಳಿಯುವುದು ಅತ್ಯಾವಶ್ಯ.

ಇತಿಹಾಸದ ಪೂರ್ವ ಹಿನ್ನೆಲೆಯಾದ ವೇದ, ಉಪನಿಷತ್ತು, ಪುರಾಣಗಳ ಕಾಲದಿಂದಲೂ, ನಾವು ನೋಡುತ್ತಾ ಬಂದರೆ, ಹಿಂದಿನಿಂದಲೂ ಸ್ತ್ರೀಯರಿಗೆ, ಸ್ವಾತಂತ್ರ್ಯವು ಇತ್ತು, ಮಾತ್ರವಲ್ಲದೆ, ಅದನ್ನು ಉಪಯೋಗಿಸುವ ರೀತಿಯನ್ನೂ ಅವರು ತಿಳಿದಿದ್ದರು. ಪುರುಷರೊಂದಿಗೆ ಅವರಿಗೂ, ಸರಿಸಮಾನತೆಯ ಸ್ಥಾನಮಾನಗಳಿದ್ದವು. ವೇದ ಮಂತ್ರಗಳನ್ನು ಅಭ್ಯಸಿಸುವ ಅಧಿಕಾರವೂ ಅವರಿಗಿತ್ತು. ಶಸ್ತ್ರಾಸ್ತ್ರ ವಿದ್ಯೆಗಳನ್ನೂ ಅವರು ಅಭ್ಯಸಿಸುತ್ತಿದ್ದರಲ್ಲದೆ, ತಮಗೆ ಬೇಕಾದವರನ್ನು ಆರಿಸಿ, ಲಗ್ನ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನೂ ಪಡೆದಿದ್ದರು. ಇಷ್ಟಾದರೂ ಅವರು ತಮ್ಮ ಕರ್ತವ್ಯಗಳನ್ನು ಮಾತ್ರ ಮರೆತಿರಲಿಲ್ಲ. ಗೃಹಿಣಿಯಾಗಿ ಮಾಡತಕ್ಕ ಕರ್ತವ್ಯಗಳ ಅನುಭವವು ಅವರಿಗೆ ಸಂಪೂರ್ಣವಾಗಿತ್ತು. ಆದರೆ ಮುಂದೆ ಭಾರತದ ಮೇಲಾದ ಪರದೇಶದವರ ದಾಳಿಯಿಂದ (ಹೆಚ್ಚಾಗಿ ಮಹಮ್ಮದೀಯರ) ಭಾರತವು ತನ್ನ ಸ್ವಾತಂತ್ರ್ಯವನ್ನು ಕಳಕೊಂಡಿತು. ಅದರೊಂದಿಗೆ ಸ್ತ್ರೀಯರೂ ಕೇವಲ ಅಡಿಗೆ ಮನೆಯ ಗುಲಾಮರಾಗಿ ಉಳಿಯಬೇಕಾಯಿತು.

ಈಗ ಭಾರತವು ಸ್ವತಂತ್ರ್ಯವಾಗಿದೆ. ಭಾರತದ ರಾಜ್ಯಾಂಗದಲ್ಲಿ ಸ್ತ್ರೀಗೆ ಪುರುಷನಷ್ಟೇ ಹಕ್ಕು ಬಾಧ್ಯತೆಗಳು ಕೊಡಲ್ಪಟ್ಟಿರುವುದಲ್ಲದೆ, ಕೆಲವು ವಿಶೇಷ ಸೌಲಭ್ಯಗಳನ್ನೂ ಕೊಡಲಾಗಿದೆ. ಇಂತಹ ಹಕ್ಕುಗಳನ್ನು ಗಳಿಸಿದ ಸ್ತ್ರೀಯರು ಕರ್ತವ್ಯ ನಿಷ್ಠರಾಗಿರಬೇಕಾದುದು ಅತ್ಯಾವಶ್ಯ.

ಸ್ತ್ರೀಯರಲ್ಲಿ ಯಾವಾಗಲೂ ಸದ್ಗುಣಗಳು ತುಂಬಿರುತ್ತವೆ. ಅವರಲ್ಲಿರಬೇಕಾದ ಮುಖ್ಯ ಗುಣಗಳೆಂದರೆ, ಪ್ರೀತಿ, ಅಂತಃಕರಣ; ಜಾಣಕ್ಷತನ; ಮತ್ತು ವಿನಮ್ರತೆ. ಈ ಗುಣಗಳು ಬಾಲಿಕೆಯರಾಗಿರುವಾಗ ಇರದಿದ್ದರೂ, ಸ್ವಾಭಾವಿಕವಾಗಿ, ಲಗ್ನವಾದ ನಂತರ ತೋರಿಬರುವುವು. ಇದರಿಂದಾಗಿ ಗಂಡನು ಎಷ್ಟೇ ಕಠೋರದ ದುಂದುಗಾರನಾಗಿದ್ದರೂ ಅವನ ಸಂಸಾರ ನಾವೆಯು ಸುಗಮವಾಗಿ ಸಾಗುತ್ತಿರುತ್ತದೆ. ಇಂತಹ ಪ್ರಸಂಗದಲ್ಲಿ ಪತ್ನಿಯಾದವಳು ಗಂಡನ ಎಲ್ಲಾ ಕೊರತೆಗಳನ್ನು ತುಂಬಿ, ಅವನಿಗೆ ಹೊಂದಿಕೆಯಾಗುವಂತೆ ನಡೆಯಬೇಕಾಗುವುದು.

ಬಾಲೆಯಾಗಿ ಬೆಳೆದು ಮಾತೆಯಾಗಿ ಮೆರೆಯುವ ಸ್ತ್ರೀಯರ ಹೊಣೆಗಾರಿಕೆಯು ಎಷ್ಟಿದೆಯೆಂಬುದನ್ನು ತಿಳಿಯುವುದು ಅವಶ್ಯ. ಪತ್ನಿಯಾದಾಕೆಯು ಮುಂದಿನ ತಾಯಿಯೂ ಆಗಿರುವುದರಿಂದ, ಜನಾಂಗದ ಉನ್ನತಿಯ ಹೆಚ್ಚಿನ ಜವಾಬ್ದಾರಿಯು ಅವಳ ಮೇಲಿದೆ. ಈ ತಾಯಂದಿರು, ಸಾಧ್ಯವಾದಷ್ಟು ಬಿಡುವು ಮಾಡಿಕೊಂಡು, ದಿನಕ್ಕೆ ಒಂದು ತಾಸಾದರೂ ಭಾರತದ ಸಂಸ್ಕೃತಿಯ ತಿಳುವಳಿಕೆಯನ್ನು ಮಕ್ಕಳಿಗೆ ಮಾಡಿಕೊಡಬೇಕು. ಹಿಂದಕ್ಕೆ ಇವೆಲ್ಲವೂ ರೂಢಿಯಲ್ಲಿದ್ದವು. ರಾಮಾಯಣ ಮಹಾಭಾರತದ ಕತೆಗಳನ್ನು ಹೇಳುವ ಪರಿಪಾಠವನ್ನವರು ಇಟ್ಟುಕೊಂಡಿದ್ದರು. ಅದ್ದರಿಂದಲೇ ನಮ್ಮಲ್ಲಿ ಶಿವಾಜಿಯಂತಹರೂ, ಪುಕ್ಕ ಬುಕ್ಕರಂತಹರೂ, ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನಗಳಿಂದ ಮೆರೆದು, ನಾಡಿನಲ್ಲೇ ನವ ಕ್ರಾಂತಿಯನ್ನುಂಟುಮಾಡಿ, ಸತ್ತರೂ, ಬದುಕಿರುವರು.

ಹಿಂದಿನ ಕಾಲವು ಈಗಿಲ್ಲ ನಮ್ಮ ಈಗಿನ ನವನಾಗರಿಕತೆಯ ಸಂಸ್ಕೃತಿಯು ಬೆಳೆದಂತೆ, ತಮ್ಮ ಹೆಚ್ಚಿನ ಕಾಲವನ್ನು ಮುಖಕ್ಕೆ ಬಣ್ಣಬಳಿದು ಕೃತ್ರಿಮ ಸೌಂದರ್ಯವನ್ನು ಹೆಚ್ಚಿಸುವುದರಲ್ಲೂ, ನೆರೆಹೊರೆಯವರ ನಿಂದಿಸ್ತುತಿಗಳನ್ನು ಕೇಳುವುದರಲ್ಲೂ ಕಳೆಯುತ್ತಿರುವರು. ಇದಾವುದೂ ಸಾಧ್ಯವಾಗದೆ ಹೋದರೆ, ಸುನೀತಿಯ ಸಂಸಾರವನ್ನು ಹಾಳುಮಾಡಿ, ಅದರಲ್ಲಿಯೇ ತೃಪ್ತಿಹೊಂದುವ ಮಂದಿ ಬಹಳ.

ಮಕ್ಕಳಲ್ಲಿ ಕರ್ತವ್ಯಭಾರವನ್ನೂ ಅವರು ಯೋಗ್ಯ ನಾಗರಿಕರಾಗಿರಲು ಅನುಕೂಲತೆಯನ್ನೂ ಉಂಟುಮಾಡುವ ಪೂರ್ಣಭಾರವು ಮಕ್ಕಳ ತಾಯಿಗೆ ಸೇರಿದೆ. ನೈಜ ಸ್ತ್ರೀ ಶಿಕ್ಷಣದ ಉಪಯೋಗವು ಇದರಲ್ಲಿದೆ. ಆದರೆ, ಅದನ್ನು ತಮ್ಮ ದಿನಚರಿಯಲ್ಲಿ ಆಚರಿಸುವರೆಷ್ಟು ಮಂದಿ? ಇದರ ಬದಲು ವಿದ್ಯೆಯ—ಸಂಸ್ಕೃತಿಯ ದುರುಪಯೋಗವಾಗುತ್ತಾ ನಡೆದಿದೆ ಎಂದು ವಿಷಾದದಿಂದ ಬರೆಯಬೇಕಾಗಿದೆ. ಭಕ್ತಿ, ವಿಶ್ವಾಸ, ಪ್ರೇಮಾದಿಗಳು ಅಳಿದು ದ್ವೇಷಾಸೂಯೆಗಳು ಉತ್ಪನ್ನವಾಗಹತ್ತಿದ ಶಿಕ್ಷಣದ ಕಾಲದಲ್ಲಿ ತಾವು ಕಲಿತ ಶಿಸ್ತಿನ ಸದುಪಯೋಗವನ್ನು ಮಾಡದೆ, ತಾವು ಯಾರು? ತಮ್ಮ ಕರ್ತವ್ಯವೇನೆಂಬುದನ್ನು ತಿಳಿಯದೆ, ಸ್ವೇಚ್ಛಾ ವಿಹಾರಂಗಳಾಗಿ ತಿರುಗುವ ಮಂದಿಯೇ ನಮ್ಮಲ್ಲಿ ಬಹಳ. ಸ್ತ್ರೀಯರ ಜೀವನದಲ್ಲಿ ಶಿಸ್ತು, ನಯ, ವಿನಯ, ತಾಳ್ಮೆ, ಸಹನಾಶಕ್ತಿ ಮುಂತಾದ ಗುಣಗಳು ಇಲ್ಲದೆ ಹೋದರೆ, ಮುಂದಿನ ಜನಾಂಗಕ್ಕೆ ಒಂದು ದೊಡ್ಡ ಗಂಡಾಂತರವೇ ಬರಬಹುದಲ್ಲದೆ, ಅದರಿಂದ ದೇಶದ ನಾಶವೂ ಆಗಬಹುದು. ಅವೆಲ್ಲವನ್ನೂ ನಿಲ್ಲಿಸಲು ಸ್ತ್ರೀಯರಿಂದ ಸಾಧ್ಯವಿದೆ. ಎಂದು ನಮ್ಮ ಭಗಿನಿಯರಲ್ಲಿ ಈ ಜಾಗೃತಿಯು ಉಂಟಾಗುವುದೋ, ಅಂದಿಗೆ ಮಾತ್ರ ಭಾರತವು ಜಗತ್ತಿನಲ್ಲೇ ಮಾದರಿಯ ರಾಷ್ಟ್ರವಾಗಿ ಮೆರೆದೀತು.

ಗೃಹಿಣಿಯರು ತಮ್ಮ ಕರ್ತವ್ಯವನ್ನಂತೂ ಇತ್ತೀಚೆಗೆ ಮರೆಯುತ್ತಾ ಬರುತ್ತಿದ್ದಾರೆ. ಗೃಹಿಣಿಯಾಗಿ ಮನೆಯಲ್ಲಿಯ ಉಳಿತಾಯದ ವಿಚಾರಕ್ಕೆ ಇವರು ಹೆಚ್ಚಿನ ಲಕ್ಷ್ಯವನ್ನು ಕೊಡಬೇಕಾಗುವುದು. ಮನೆಯಲ್ಲಿಯ ದುಂದುಗಾರಿಕೆಯಿಂದ ದೇಶಕ್ಕೆ ಕೇಡುಂಟಾಗುವುದೆಂಬುದನ್ನು ಮರೆಯಲಾಗದು. ಅತ್ಯಗತ್ಯವಾದ ಖರ್ಚನ್ನು ಮಾತ್ರ ಮಾಡಬೇಕಲ್ಲದೆ, ಮನಬಂದಂತೆ ಖರ್ಚು ಮಾಡುತ್ತಾ ಮುಂದರಿದರೆ, ಮುಂದಿನ ಪರಿಣಾಮವು ಯಾವ ರೀತಿಯಲ್ಲಿ ನಿಲ್ಲಬಹುದೆಂದು ಹೇಳಬರುವಂತಿಲ್ಲ. ಅವರ ಮಕ್ಕಳಿಗೂ ಇದೇ ಅಭ್ಯಾಸವಾಗಿ, ಹಿಡಿತ ತಪ್ಪಿ, ಅದೇ ಹಾದಿಯಲ್ಲಿ ಮುಂದರಿದು ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುವರು. ಚಾಪೆಯಿದ್ದಷ್ಟೇ ಕಾಲನ್ನು ಚಾಚುವ ಅಭ್ಯಾಸವನ್ನು ಮನೆಯಲ್ಲಿ ಗೃಹಿಣಿಯೇ ಮಾಡಬೇಕಾಗುವುದು. ಗೃಹಕೃತ್ಯದ ಹೆಚ್ಚಿನ ಭಾರವು ಇವರಮೇಲಿರುವದರಿಂದ ಇವರಿಂದಲೇ ಇದು ಸಾಧ್ಯವಾಗುವುದು. ಆದರೆ ಕೆಲವರು ಇವೆಲ್ಲವನ್ನೂ ಮರೆತು ಜನತೆಯ ಮಧ್ಯೆ ಘನತೆಗೇರಬೇಕೆಂಬ ಉದ್ದೇಶದಿಂದ ಪಾತ್ರಾಪಾತ್ರಗಳನ್ನು ನೋಡದೆ, ದಾನ ಮಾಡುವರು ಮೇಲಕ್ಕೇರಿಸಿ ಹೊಗಳಲಾರಂಭಿಸುತ್ತ ತಮ್ಮ ಮನೆಯನ್ನೇ ಬರಿದು ಮಾಡಿಬಿಡುವರು. ಹೊಗಳುವವರು, ತಮ್ಮ ಸ್ವಾರ್ಥವನ್ನು ಸಾಧಿಸುತ್ತಿರುವರೆಂಬುದನ್ನು ಮರೆತೇ ಬಿಡುವರು. ಇದು ಅವರ ಮಾನಸಿಕ ದುರ್ಬಲತೆಯೆಂದರೂ ಅಡ್ಡಿಯಿಲ್ಲ. ಈ ರೀತಿಯ ದುರ್ಬಲತೆಯನ್ನು ಹೋಗಲಾಡಿಸಿ, ಗೃಹಲಕ್ಷ್ಮಿಯಾಗಿದ್ದು, ಗೃಹರಾಜ್ಯದ ಸೂತ್ರವನ್ನು ಕೈಯಲ್ಲಿ ಹಿಡಿದುಕೊಂಡು ಸಾಗಿದರೆ ಮಾತ್ರ ಮನೆಯು ಮಾದರಿಯ ಮನೆಯಾಗಿ ಬಾಳಿ ಬೆಳಗುವುದು.

ನಮ್ಮ ದೇಶದ ಒಂದು ಹೀನ ಸ್ಥಿತಿಯೆಂದರೆ, ಎಲ್ಲಾ ಯುವಕರಿಗೂ ಸರಕಾರೀ ಉದ್ಯೋಗದ ಹಂಬಲ. ಈ ರೀತಿಯ ಸಂಕುಚಿತ ಭಾವದ ಮನೋವೃತ್ತಿಯನ್ನು ಹೋಗಲಾಡಿಸಿ, ತನ್ನ ಕಾಲಮೇಲೆ ತಾನು ನಿಂತು ಸಾರ್ವಜನಿಕ ಸೇವೆಯನ್ನು ಮಾಡುತ್ತಾ ದೇಶದ ಕಲ್ಯಾಣಕ್ಕಾಗಿ ದುಡಿಯುವ ಪಾಠವನ್ನು ಆರಂಭದಿಂದಲೂ ತಾಯಿಯೇ ಕಲಿಸಿಕೊಡಬೇಕಾಗುವುದು. ತಾಯಿಯಾದಾಕೆಯು ತನ್ನ ಮಕ್ಕಳಿಗೆ ಈ ರೀತಿಯ ಪಾಠವನ್ನು ಕಲಿಸಿದರೆ ಮಾತ್ರ, ಮಾತೆಯ ಕರ್ತವ್ಯವನ್ನು ಮಾಡಿದಂತಾಗುವುದಲ್ಲದೆ, ಕಲಿತ ವಿದ್ಯೆಯ ಸದುಪಯೋಗವನ್ನೂ ಮಾಡಿದಂತಾಗುವುದು. ಈ ರೀತಿಯಲ್ಲಿ ಹತ್ತು ಮನೆಗೊಬ್ಬರಾದರೂ ಹೊರಟರೆ, ಖಂಡಿತವಾಗಿಯೂ ಭಾರತದ ಈ ಇಂದಿನ ಸಂಕುಚಿತ ಭಾವದ ರೂಪರೇಷೆಯು ಬದಲಾಗಿ, ಅದೊಂದು ನಕ್ಕು ನಲಿದಾಡುವ ನಂದನವನದಂತೆ ಭಾಸವಾಗುವುದು.

ಇತ್ತೀಚೆಗೆ ಹೆಚ್ಚಿನವರು, ಪಾಶ್ಚಾತ್ಯ ಸಂಸ್ಕೃತಿಯ ಬಲೆಗೆ ಬಿದ್ದು ಸಂಪೂರ್ಣವಾಗಿ, ಅದರ ದಾಸರಾಗಿರುವರು. ಇವೆಲ್ಲವನ್ನೂ ತಡೆಗಟ್ಟಲು ಸ್ತ್ರೀಯರೇ ಸಮರ್ಥರು. ಆಯಾ ದೇಶದ ಪದ್ಧತಿ, ಹವಾಗುಣಕ್ಕನುಕೂಲವಾಗಿ, ಅವರವರು ಮಾಡಿಕೊಳ್ಳುವ ಆಡಂಬರದ ಅಲಂಕಾರಗಳು ಭಾರತಕ್ಕೆ ಒಗ್ಗಮಂತಿಲ್ಲವೆಂಬುದು, ನಿರ್ವಿವಾದ. ಇವೆಲ್ಲವನ್ನೂ ನಿರ್ಧಾರದ ಮನಸ್ಸಿನಿಂದ ತಾಯಿಯು ಮಕ್ಕಳಿಗೆ ತಿಳಿಯ ಹೇಳಿ ಭಾರತದ ನೈಜ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸಭ್ಯರೀತಿಯನ್ನ ಕಲಿಸಿ, ಅವರನ್ನು ನಿಜವಾದ ಭಾರತೀಯರನ್ನಾಗಿ ಮಾಡಬಹುದು. ಇದರ

(ಆನೇ ಪುಟ ನೋಡಿರಿ)

ಉಡುಪಿ ಡಿ ಮು. ಕೋರ್ಟಿನಲ್ಲಿ
R. E. P. No. 9/64 (O. S. No. 60/61)

ಪುಟ್ಟು ಮರಿಮುಂಜ— ಅರ್ಜಿದಾರ
ಮತ್ತು
ಅಬ್ಬಕ್ಕ ಸೆಡ್ತಿ ಕೂಡಾ— ಯೆದುರು ಇವರೊಳಗೆ

ಉಡುಪಿ ತಾಲೂಕು ಹನೆಹಳ್ಳಿ ಗ್ರಾಮದ ಕುಂಬಾಡಿಯಲ್ಲಿರುವ ರುದ್ರಮ್ಮ ಸೆಡ್ತಿ ಮಗಳು 12ನೇ ಯೆದುರಿಯಾದ ಸೀತಮ್ಮ ಎಂಬವಳಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ಮೇಲಿನ ಅಮಲ್‌ಜ್ಯಾರಿಯಲ್ಲಿ ಅರ್ಜಿದಾರನು ಪ್ರಿಲಿಮಿನರಿ ಡಿಕ್ರಿಯಲ್ಲಿ ಜವಾಬುದಾರಿಯಿರುವ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಷರತ್ತುಗಳನ್ನು ನಿರ್ಣಯಿಸಲಿಕ್ಕೆ ತಾ. 4–6–1964ರಂದು ನಿಮ್ಮ ಹಾಜರಾತಿಯ ಬಗ್ಗೆ ಇರಿಸಲಾಗಿದೆ ಎಂಬ ವಿಚಾರ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

By order of the court.

P. N. Krishnamoorthy Rao,
B. A. LL., B. Udipi.
Advocate for Petitioner
Udipi. S. K. Dated 27-3-64.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಹೆಚ್ಚು ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ

ನವಯುಗ

ವರುಷ	ಉಡುಪಿ	ವಾರ
೪೩	೨-೪-೧೯೬೪	೩೧

ಇರಾಕದ ಅರೀಫ್

ಇರಾಕದ ಅಧ್ಯಕ್ಷ ಶ್ರೀ ಎಸ್. ಎ. ಅರೀಫರು ಭಾರತದಲ್ಲಿ ಸದಿಚ್ಛಾ ಸಂಚಾರವನ್ನು ಮಾಡಿದರು. ಆರ್ಥಿಕೋನ್ನತಿಯಲ್ಲಿ ಕೂಲಂಕಷ ಅಭಿರುಚಿ ತೋರಿಸುತ್ತಿರುವ ಇವರು, ನಮ್ಮ ದೇಶದಲ್ಲಿ ಪರ್ವತದಷ್ಟು ತಿಳಿದುಕೊಂಡರು ಎನ್ನಬಹುದು. ಇರಾಕದ ಮೇಲೆ ಕಾಸೀಮರ ಅಧಿಕಾರವಿರುವಾಗ ರಾಷ್ಟ್ರದ ಸಂಬಂಧ ಕೆಟ್ಟಿತ್ತು. ವಿವಾದಗಳು ಹೇರಳವಾಗಿದ್ದುವು. ಆದರೆ, ಅವರ ಸರಕಾರವು ಪತನಗೊಂಡ ನಂತರ ನೆರೆ ರಾಷ್ಟ್ರಗಳೊಳಗೆ ಸುಮಧುರ ಸಂಬಂಧವನ್ನು ಸ್ಥಾಪಿಸಲು ಪ್ರಯತ್ನ ನಡೆದಿದೆ; ವಿವಾದಗಳನ್ನು ಪರಿಹರಿಸಿಕೊಳ್ಳುವಲ್ಲಿಯೂ ಆಸಕ್ತಿ ತೋರಿದೆ. ಮುಖ್ಯವಾಗಿ ಕಾಸೀಮರು ಕುವೈತದ ಮೇಲೆ ತಮ್ಮ ಅಧಿಕಾರವನ್ನೇ ಸ್ಥಾಪಿಸಿ ಒಂದೊಮ್ಮೆ ಯುದ್ಧದ ಭೀತಿಯನ್ನೂ ಹುಟ್ಟಿಸಿದ್ದರು. ಆದರೆ, ಇಂದು ಈ ಬಗೆಯ ವಿವಂಚನೆಗೆ ಕಾರಣವಿಲ್ಲ. ಕಳೆದ ನವಂಬರದಿಂದ ಬಗ್ದಾದವು ಕೈರೊವಿಗೆ ಸಮೀಪಗತವಾಗುತ್ತಿದೆ. ಆದುದರಿಂದಲೇ "ಅರಬ ಐಕ್ಯ ಮತ್ತು ಪರಸ್ಪರ ಸಹಾಯ" ಎಂಬ ಧ್ಯೇಯವಾಕ್ಯದಲ್ಲಿ ತುಸು ಅರ್ಥ ತೋರಿ ಬರುತ್ತಿದೆ.

ಇರಾಕದ ಅರೀಫರ ಸರಕಾರವು ಇತ್ತೀಚೆಗೆ ಮಹಾ ಸಾಧನೆಯೊಂದನ್ನು ಮಾಡಿದೆ ಅಲ್ಲಿನ ಉತ್ತರ ಭಾಗದಲ್ಲಿರುವ ಅಲ್ಪಸಂಖ್ಯಾಕ ಕುರ್ದಿಪರೊದನೆ ಒಡಂಬಡಿಕೆಯೊಂದನ್ನು ಅದು ಕಾರ್ಯ ರೂಪಕ್ಕೆ ತಂದಿವೆ. ಇದರಿಂದಾಗಿ ಆ ಪ್ರದೇಶದ ಅಭಿವೃದ್ಧಿ ಕಾರ್ಯಗಳನ್ನು ಸುಗಮಗೊಳಿಸುವ ಸಾಧ್ಯತೆ ಹೆಚ್ಚಿಗಿವೆ. ಹಿಂದಿನಿಂದಲೂ ಇರಾಕವು ಎಣ್ಣೆಯಿರುವ ದೇಶ; ಇದರಿಂದಲೇ ಇಂದದು ಅದೃಷ್ಟವಂತ ರಾಷ್ಟ್ರ. ಇರಾಕವು ರಾಷ್ಟ್ರೀಯ ತೈಲ ಕಂಪೆನಿಯೊಂದನ್ನು ಸ್ಥಾಪಿಸಿದೆ. ಇದರಲ್ಲಿ ಭಾರತವೂ ಪಾಲುಗೊಳ್ಳುವುದು ಸಾಧ್ಯವೆನಿಸಬಹುದು: ಮಧ್ಯ ಪ್ರಾಚ್ಯದ ಹೆಚ್ಚಿನ ದೇಶಗಳಲ್ಲಿ ವಿಶಿಷ್ಟ ಅಭಿವೃದ್ಧಿ ಯೋಜನೆಗಳೆಂಬುದೇ ಇರುವುದಿಲ್ಲ. ಔದ್ಯಮಿಕ ಪ್ರಗತಿಯ ಕಡೆಗೂ ಇವುಗಳ ಗಮನ ಹರಿದಿಲ್ಲ. ಹೀಗಾಗಿ ಪರದೇಶಗಳ ಸಹಕಾರ-ಸೌಹಾರ್ದಗಳಿಗೆ ಅವಕಾಶದ ದಾರಿಯೂ ನಿಂತು ಹೋಗಿದೆ. ಆದರೆ. ಇರಾಕವು ಹಾಗಿಲ್ಲ. ಇಲ್ಲಿ ಸಂಯುಕ್ತ ಔದ್ಯಮಿಕ ಕ್ಷೇತ್ರಗಳಿವೆ. ಇವುಗಳಲ್ಲಿ ಭಾರತವೂ ಪಾಲುಗೊಳ್ಳುವ ಅವಕಾಶಗಳು ಧಾರಾಳವಾಗಿವೆ. ಭಾರತ ಮತ್ತು ಬಗ್ದಾದಗಳ ನಡುವಣ ಕೊಂಡಿಯು ಇಂದು ನಿನ್ನೆಯದಲ್ಲ; ಅತಿ ಪುರಾತನವಾದುದು. ಇದನ್ನು ಮತ್ತೆ ಸರಿಪಡಿಸುವುದು ಪ್ರಯೋಜನವಾದ ಕೆಲಸವೆಂದು ಹೇಳುವಂತಿಲ್ಲ.

ಅಧ್ಯಕ್ಷ ಅರೀಫರು ಭಾರತಕ್ಕೆ ಬರುವ ಮೊದಲು ಪಾಕಿಸ್ತಾನವನ್ನು ಸಂದರ್ಶಿಸಿದ್ದರು. ಅಲ್ಲಿ ನಡೆದ ಮಾತುಕತೆಗಳ ನಡುವೆ ಕಾಶ್ಮೀರವೂ ತಲೆಯಿಟ್ಟಿತು. ಪಾಕ್ ಸತ್ತಾಧಿಕಾರಿಗಳು ಭಾರತದಲ್ಲಿರುವ ಅಲ್ಪ ಸಂಖ್ಯಾಕ ಮುಸ್ಲಿಮರಿಗೆ ಮೂಲಾಧಿಕಾರಗಳನ್ನು ನೀಡಲಾಗುತ್ತಿಲ್ಲವೆಂಬುದನ್ನು ಮನವರಿಕೆ ಮಾಡುವ ಧೃಷ್ಟ ಸಾಹಸವನ್ನು ಮಾಡಿದ್ದರು. ಯಾರು ಏನನ್ನೇ ಮಾಡಲಿ, ಅರೀಫರು ಭಾರತದಲ್ಲಿ ಪಾದಾರ್ಪಣ ಮಾಡುತ್ತಲೇ ಇಲ್ಲಿನ ಸುವ್ಯವಸ್ಥೆ—ಸುಸೌಕರ್ಯ ಇತ್ಯಾದಿಗಳನ್ನು ಕಂಡುಕೊಂಡರು. ಜಾತ್ಯತೀತ ರಾಷ್ಟ್ರವಾದ ಭಾರತದ ಪುಣ್ಯ ಭೂಮಿಯಲ್ಲಿ ಐದುಕೋಟಿ ಮುಸ್ಲಿಮರು ಮಾತ್ರವಲ್ಲ ಇತರ ಎಲ್ಲಾ ಅಲ್ಪಸಂಖ್ಯಾಕರು ತಮ್ಮ ಮೂಲಭೂತ ಅಧಿಕಾರಗಳನ್ನು ಸಂಪೂರ್ಣವಾಗಿ ಅನುಭವಿಸುತ್ತಿದ್ದಾರೆಂಬುದು ಅವರಿಗೆ ತಿಳಿಯದೆ ಇರದು. ಜಾತಿಯತೆಯನ್ನೇ ಮುಖ್ಯ ವಿಷಯವನ್ನಾಗಿ ಮಾತಾಡುವುದು ಅದನ್ನು ಕೆದಕುವುದು ಉಚಿತ ಕಾರ್ಯವಲ್ಲವೆಂಬುದನ್ನು ಮನಗಾಣದಿರರು. ಭಾರತೀಯ ಮುಸ್ಲಿಮರು ಇಲ್ಲಿ ನಾವು ಸಕಲ ಅಧಿಕಾರಗಳನ್ನೂ ಸೌಕರ್ಯಗಳನ್ನೂ ಪಡೆಯುತ್ತಿರುವುದಾಗಿ ಹೊರಡಿಸಿದ ಪ್ರಕಟಣೆಯು ಪಾಕಿಸ್ತಾನದ ಕುತಂತ್ರವನ್ನು ಬಯಲಿಗೆಳೆಯಲು ಸಮರ್ಥವಾದೀತು. ಅಭಿವೃದ್ಧಿಗೊಳ್ಳುತ್ತಿರುವ ದೇಶಗಳು ತಮ್ಮ ಗುರಿ ಮುಟ್ಟಬೇಕಾದರೆ, ದೇಶದ ಒಳಗೂ ಹೊರಗೂ ಶಾಂತತೆಯನ್ನು ರಕ್ಷಿಸಿಕೊಂಡಿರಬೇಕಾಗುತ್ತದೆ. ಭಾರತ—ಮತ್ತು ಇರಾಕಗಳೆರಡಕ್ಕೂ ಇಂತಹ ಶಾಂತತೆಯು ಅಗತ್ಯವಿದೆ. ಇದಿಲ್ಲದೆ ಹೋದರೆ, ಆರ್ಥಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವುದು ಸಾಧ್ಯವಿಲ್ಲ. ಸಾಮಾಜಿಕ ಸುಧಾರಣೆಗಳನ್ನೂ ಪರಿಣಾಮಕಾರಿಯಾಗಿ ರೂಪಿಸುವುದೂ ಕಷ್ಟಸಾಧ್ಯ. ಭಾರತದ ನೆರೆಯ ರಾಷ್ಟ್ರ ಪಾಕಿಸ್ತಾನವಿಂದು ಯಾವ ದಾರಿ ಮೆಟ್ಟುತ್ತಿದೆ ಆಂತರಿಕ ಸಮಸ್ಯೆಗಳನ್ನು ಸುಧಾರಿಸಲು ಅಸಮರ್ಥರಾದ ಪಾಕ್ ಅಧಿಕಾರಿಗಳು, ವಿದೇಶೀಯ ಪ್ರಶ್ನೆಗಳನ್ನು ಸೃಷ್ಟಿಸಿ, ಅವುಗಳಿಗೇನೇ ಜೋತು ಬಿದ್ದು, ರಾಷ್ಟ್ರೀಯ ಆದಾಯವನ್ನೆಲ್ಲಾ ಮಿಲಿಟರಿ ಸಾಕುವುದಕ್ಕಾಗಿ ವ್ಯಯಿಸಿ, ದೇಶದಲ್ಲಿಯೇ ಒಂದು "ಸ್ಮಶಾನ ಗಂಭೀರ" ಪರಿಸ್ಥಿತಿಯನ್ನು ನಿರ್ಮಿಸಿದೆ. ಹೀಗೆ ಮಾಡುವುದು ಯಾರಿಗೂ ಕಷ್ಟದ ಕೆಲಸವಲ್ಲ. ಇರಾಕವೂ ಮಾಡಬಹುದು; ಭಾರತವೂ ಮಾಡಬಲ್ಲುದು. ಆದರೆ, ಭಾರತ—ಇರಾಕಗಳ ಉದ್ದೇಶವು ಪಾಕಿಸ್ತಾನಕ್ಕಿಂತ ಭಿನ್ನವಾದುದು. ಅಧ್ಯಕ್ಷ ಅರೀಫರು ನೆರೆಯ ದೇಶಗಳೊಡನೆ ಸ್ನೇಹ ಬೆಳೆಸುವಲ್ಲಿ ಯಶಸ್ಸು ಪಡೆದಿದ್ದಾರೆ; ಪಾಕಿಸ್ತಾನದ ಗುರಿಯೇನು ಎಂಬುದನ್ನು ಅವರೂ ತಿಳಿದಿದ್ದಾರೆ, ಭಾರತದಲ್ಲಿ ಜಾತ್ಯತೀತತೆಯ ಪರಿಣಾಮವನ್ನೂ ಅರಿತಿದ್ದಾರೆ. ಹಾಗಾಗಿ ಪಾಕ್ ಸತ್ತಾಧಿಕಾರಿಗಳು ಎಂತಹ ದುಷ್ಟ ಸಾಹಸಕ್ಕೆ ಕೈ ಹಾಕಿದರೂ ಸತ್ಯವನ್ನು ಸದಾಕಾಲ ಮುಚ್ಚಿಡುವುದು ಸಾಧ್ಯವಿಲ್ಲ. ಪಾಕ್‌ವಾದವನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳುವಷ್ಟು ಅಧ್ಯಕ್ಷ ಅರೀಫರು ಹೆಡ್ಡಲ್ಲ. ಎಂತಲೇ ಅವರ ಪ್ರಚಲಿತ ಸಂದರ್ಶನದಿಂದ ಭಾರತ—ಇರಾಕಗಳ ನಡುವಣ ಸ್ನೇಹ ಬಂಧ ಮತ್ತಷ್ಟು ಬಿಗಿಯುವುದೆಂದು ನಂಬಬಹುದು.

ಜಗತ್ಪರ್ಯಟನ

ಜವಾಹರಲಾಲ

ಜವಾಹರರ ಉತ್ತರಾಧಿಕಾರಿ ಯಾರು ಎಂಬ ಪ್ರಶ್ನೆಗೆ ಉಪ ಪ್ರಧಾನ ಮಂತ್ರಿಯ ನೇಮಕವು ಸ್ವಲ್ಪ ಮಟ್ಟಿನ ಉತ್ತರ ನೀಡುವುದೆಂದು ಕೆಲವರ ಆಶೆ ಆದರೆ, ತನ್ನ ಮುಂದೆ ಉಪ ಪ್ರಧಾನಿಯನ್ನು ನೇಮಿಸುವ ಪ್ರಶ್ನೆಯೇ ಇಲ್ಲವೆನ್ನುತ್ತಾರೆ ನೆಹರು. ತಮ್ಮ ಕಾರ್ಯದಲ್ಲಿ ಸಹಕಾರಿಯಾಗಿ ತಮ್ಮ ಪರಿಶ್ರಮವನ್ನು ಕಡಿಮೆ ಮಾಡಲು ಖಾತಾರಹಿತ ಮಂತ್ರಿಯನ್ನು ನೇಮಿಸಿದುದೇ ಸರಿಯಾದುದೆಂದೂ ಸದ್ಯ ಮಂತ್ರಿ ಶ್ರೀ ಲಾಲಬಹದೂರರು ತನ್ನ ಕರ್ತವ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಿರುವರೆಂದೂ ಅವರು ಹೇಳಿದ್ದಾರೆ. ಈ ಬಗೆಯ ಪರಿಣಾಮವಾದೀತೆಂಬ ನಿರೀಕ್ಷೆಯಿಂದಲೇ ಶಾಸ್ತ್ರಿಯವರ ನೇಮಕವಾಗಿತ್ತು. ಅವರು ಜನತೆ ತಮ್ಮ ಮೇಲೆ ಇಟ್ಟಿದ್ದ ವಿಶ್ವಾಸವನ್ನು ಉಳಿಸಿಕೊಂಡಿದ್ದಾರೆ. ಇದಕ್ಕಾಗಿ ನೆಹರು-ಶಾಸ್ತ್ರಿಗಳಿಬ್ಬರೂ ಅಭಿನಂದನಾರ್ಹರು.

ಶರಾವತಿ

ಒಂದೊಮ್ಮೆ ತುಸು ಶಾಂತಗೊಂಡ ಶರಾವತಿಯ ತೆರೆಗಳು ಮರುಕೊಳಿಸುತ್ತಿವೆ. ಕೇಂದ್ರದ ನೀರಾವರಿ ಮಂತ್ರಿ ಡಾ। ಕೆ. ಎಲ್. ರಾವ್‌ರವರ ಪ್ರಶಸ್ತಿ ಪತ್ರವೂ ಶ್ರೀ ನಿಜಲಿಂಗಪ್ಪನವರಿಗೆ ಸಾಕಾಗಲಿಲ್ಲ. ಹಿಂದೊಮ್ಮೆ ಅವರು ಹೇಳಿಕೆಕೊಡುತ್ತ ಶರಾವತಿಯ ಪ್ರಕರಣವನ್ನು ಸಂಪೂರ್ಣ ಪರಿಶೀಲಿಸಿದಾಗ ನ್ಯಾಯಾಂಗ ವಿಚಾರಣೆಯ ಅಗತ್ಯವಿಲ್ಲವೆಂದು ಕಂಡುಕೊಂಡಿರುವರಾಗಿ ಅಂದಿರುವರು. ಆ ಬಳಿಕ ರಾಜ್ಯ ಸರಕಾರ ಹೊರಡಿಸಿದ ಶ್ವೇತ ಪತ್ರವೂ ಎಲ್ಲ ವಲಯಗಳಲ್ಲಿ ಅಸಂತೋಷವನ್ನೂ ಅತೃಪ್ತಿಯನ್ನೂ ಹುಟ್ಟಿಸಿತ್ತು ಎಂಬುದನ್ನು ನಾವು ಗಮನಿಸಬಹುದು. ವಿರೋಧಿ ಪಕ್ಷದ ಸದಸ್ಯರು ಮಾತ್ರವಲ್ಲ ಕೆಲವೊಂದು ಕಾಂಗ್ರೆಸ್ ಪ್ರತಿನಿಧಿಗಳೇ ವಿಧಾನ ಸಭೆಯಲ್ಲಿ ಶರಾವತಿಯ ನ್ಯಾಯ ವಿಚಾರಣೆಯ ಬಗ್ಗೆ ಮೇಲಿಂದ ಮೇಲೆ ಆಗ್ರಹಪಡಿಸುತ್ತಿರುವರು. ಈ ಬಗೆಯ ಆಗ್ರಹದ ಹಿಂದೆ ವೈಯಕ್ತಿಕ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳಿವೆಯೆಂಬುದನ್ನು ಎಲ್ಲರೂ ಬಲ್ಲರು. ಆದರೂ ಶರಾವತಿಯಂತಹ ಬೃಹತ್ ಯೋಜನೆಯಲ್ಲಿ ಅವ್ಯವಹಾರವಾಗುವ ಸಂಭವ ಅತ್ಯಧಿಕವಿರುವುದರಿಂದ ನ್ಯಾಯ ವಿಚಾರಣೆ ಬೇಕೆಂದು ಎಲ್ಲ ವರ್ಗಗಳೂ ಅಭಿಪ್ರಾಯಪಡುವಾಗ ಅನಗತ್ಯವಾದರೂ ಅದು ಪ್ರಜಾಪ್ರಭುತ್ವದಲ್ಲಿ ಅಪ್ರಾಸಂಗಿಕವೆನಿಸಲಾರದು.

ಗಮಾಲ್ ನಸ್ಸೇರ್

ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ಅಬ್ದುಲ್ ಗಮಾಲ್ ನಸ್ಸೇರರು ದ್ವಿತೀಯ ನಿರ್ಲಿಪ್ತ ರಾಷ್ಟ್ರಗಳ ಸಮ್ಮೇಳನದ ತಯಾರಿಗನ್ನು ಹೊರಡುತ್ತಾರೆ. ಕೊಲೊಂಬೊದಲ್ಲಿ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಕೈರೋದಲ್ಲಿಯೇ ಈ ಸಮ್ಮೇಳನ ನಡೆಸಲು ಒಪ್ಪಿಕೊಳ್ಳಲಾಗಿದೆ. ಪ್ರಾರಂಭದಿಂದಲೂ ಯುಗೊಸ್ಲಾವಿಯಾದ ಟಿಟೊ ಮತ್ತು ನಸ್ಸೇರರೇ ಈ ಬಗೆಯ ಸಮ್ಮೇಳನದ ಪುರಸ್ಕರ್ತರಿದ್ದರು. ಸಿರಿಮಾವೊರವರು ಅದರಲ್ಲಿ ಕಾಳಜ ವಹಿಸಿ, ಮುನ್ನಡೆದರು. ಈ ನಡುವೆ ಇಂಡೊನೇಶ್ಯದ ಸುಕರ್ಣರು ಜಕಾರ್ತದಲ್ಲಿ ನಡೆಯುವ ಬಾಂಡುಂಗ ಮಾದರಿಯ ಸಮ್ಮೇಳನದ ಪೂರ್ವಸಿದ್ಧತಾ ಸಭೆಯಲ್ಲಿ ಭಾಗವಹಿಸಲು ನೀಡಿದ ಆಶ್ವಾಸನವನ್ನು ನಸ್ಸೇರ್ ಸ್ವೀಕರಿಸಿದ್ದಾರೆ. ಬಾಂಡುಂಗ ಬೇಡವೆಂದವರು ಹೇಳಲಿಲ್ಲ. ಅದಕ್ಕಿಂತ ಬೆಲ್‌ಗ್ರೇಡ್ ಅವಶ್ಯವೆಂದಿದ್ದರವರು.

ಅಯೂಬಖಾನ್

ಅಧ್ಯಕ್ಷ ಅಯೂಬಖಾನರು ಪ್ರಧಾನಿ ನೆಹರೂರವರ ಸೂಚನೆಯಂತೆ ಜಾತೀಯ ಸೌಹಾರ್ದ ಕಲ್ಪಿಸಲು ಗೃಹಮಂತ್ರಿಗಳ ಸಭೆ ಸೇರಿಯುವುದನ್ನು ಒಪ್ಪಿದಾಗ ಭಾರತವು ಇಷ್ಟು ತೀವ್ರವಾಗಿ ಆಸಕ್ತವಾಗಿದೆಯೆಂದು ನಂಬಿದಂತೆ ತೋರುವುದಿಲ್ಲ. ಅಯೂಬರ ಒಪ್ಪಿಗೆ ಬಂದುದೇ ತಡ, ಎಪ್ರಿಲ್ ಮೂರನೇ ತಾರೀಕನ್ನೇ ಭಾರತ ನಿರ್ಧರಿಸಿ ಬಿಟ್ಟಿತು. ಆದರೆ, ಪಾಕ್ ಅಧಿಕಾರಿಗಳಿಗೆ ಇಷ್ಟೊಂದು ಅಲ್ಪಕಾಲಾವಧಿಯಲ್ಲಿ 'ಸಿದ್ಧತೆ' ಮಾಡಿಕೊಳ್ಳುವ ಅನುಕೂಲಗಳಿಲ್ಲ; ಇದರಲ್ಲಿ ಒಳಗುಟ್ಟು ಇದ್ದರೂ ಇರಬಹದು. ಎಪ್ರಿಲ್ ೧೭ನೆ ದಿನಾಂಕವನ್ನವರು ನಿಯೋಜಿತ ಸಭೆಗೆ ನಿಶ್ಚಯಿಸಿದ್ದಾರೆ. ಅದರೊಳಗೆ ಏನೇನು ಆಗಲಿವೆಯೋ ಕಾದು ನೋಡಬೇಕಷ್ಟೆ.

ಹೆಡ್ಗೊರು ಹೈಸ್ಕೂಲಿನ— ವಿದ್ಯಾರ್ಥಿಸಂಘದ ಸಮಾರೋಪ ಸಮಾರಂಭವನ್ನು ತಾ 30ರಂದು ನಡೆಸಲಾಗಿತ್ತು. ಶ್ರೀ ಸಾದಿಕ್ ರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಕೆ. ಗೋಪಾಲಕೃಷ್ಣ ಉಪಾಧ್ಯಾಯರು ಸ್ವಾಗತ ಭಾಷಣ ಮಾಡಿದರು, ಉಪಕಾರ್ಯದರ್ಶಿ ಶ್ರೀ ಕೆ ಹರ್ಷವರ್ಧನ ಸೂಡ ಅವರು ಸಂಘದ ವರ್ಷದಲ್ಲಿ ಕೈಗೊಂಡ ವಿವಿಧ ಕಾರ್ಯ ಕಲಾಪಗಳ ವರದಿಯನ್ನು ಓದಿದರು ಸಮಾರೋಪ ಭಾಷಣ ಮಾಡುತ್ತ, ಪ್ರೌಢಶಾಲೆಯ ಶ್ರೀ ಕೆ. ಕೇಶವಹೆಗ್ಡೆ ಅವರು ವಿದ್ಯಾರ್ಥಿಗಳ ಬಹುಮುಖ ಅಭಿರುಚಿಯನ್ನು ಅರಿತು ಕಾರ್ಯ ಪ್ರವೃತ್ತವಾಗಿರುವ ಸಂಘದ ಚಟುವಟಿಕೆಗಳು ಇತ್ತೋತ್ಕರ್ಷವಾಗಿ ಬೆಳೆಯಲೆಂದು ಬಯಸಿದರು. ಅಧ್ಯಕ್ಷರು ಮಾತನಾಡಿದ ತರುವಾಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಬಿ. ಶಂಕರ ಹೆಗ್ಡೆಯವರು ಧನ್ಯವಾದಗಳನ್ನು ಅರ್ಪಿಸಿದರು

ಕರಿಮೆಣಸು, ಒಣಶುಂಠಿ

ಬರೆದವರು: ಕಂಸ ಐತಾಳ ಹಾಯ್ಗೋಡಿ.

ಪೂರ್ವ ಪಾಕಿಸ್ತಾನದಿಂದ ದಿನಂಪ್ರತಿ ಹೆಚ್ಚು ಕಡಿಮೆ ನಾಲ್ಕರಿಂದ ಐದು ನೂರು ನಿರಾಶ್ರಿತ ಕುಟುಂಬಗಳು ಗಾರೋ ಗುಡ್ಡಗಳನ್ನು ದಾಟಿ ಭಾರತಕ್ಕೆ ಬರುತ್ತಿರುವರು.

—ಭಾರತ ಅಭಿವೃದ್ಧಿಯತ್ತ ಸಾಗುತ್ತಿದೆಯೆಂಬುದಕ್ಕೆ ಇದು ನಿದರ್ಶನವಿರಬಹುದೆ...?

o o o o

"ದೇಶವನ್ನು ಭದ್ರವಾಗಿ ಮತ್ತು ಸಂಘಟಿತವಾಗಿ ಮುಂದೊಯ್ಯಲು ಮಹಿಳಾ ಸದಸ್ಯರು ಮುಂದೆ ಬರಬೇಕು" — ಕಾಮರಾಜ ನಾಡಾರ್.

—'ಮೂರು ಜಡೆಗಳಿದ್ದಲ್ಲಿ ನಾಲ್ಕು ಪಕ್ಷ' ಎಂಬ ನುಡಿಯನ್ನು ಶ್ರೀ ನಾಡಾರರಿಗೆ ನೆನಪಿಗೆ ತರಲು ಹಳ್ಳಿಯ ಹೈದನೊಬ್ಬನು ಬಯಸುತ್ತಾನೆ.

o o o o

'ರೈಲು ಹಳಿತಪ್ಪಿ ೬ ಮಂದಿಯ ಸಾವು, ೪೮ ಮಂದಿಗೆ ಗಾಯ!....ವಿಮಾನವುರುಳಿ ಹಲವಾರು ಪ್ರಯಾಣಿಕರು ಇನ್ನಿಲ್ಲವಾದರು!"—ವಾರ್ತೆ.

—ಪ್ರಯಾಣಕ್ಕೆ ಹೊರಡುವ ಮುನ್ನ ಜೀವವಿಮೆ ಮಾಡಲೇಬೇಕು!

o o o o

ವಿಧಾನ ಸಭಾಧ್ಯಕ್ಷ ಶ್ರೀ ಮಹೇಂದ್ರ ಮೋಹನ ಚೌಧರಿಯವರು ಮೊನ್ನೆ ವಿಧಾನ ಸಭೆಯಲ್ಲಿ ತಾಂಬೂಲ ಜಗಿಯುವುದನ್ನು ನಿಷೇಧಿಸಿದರಂತೆ.

—"ತಾಂಬೂಲ ಸೇವನೆಯ ಅಭ್ಯಾಸವುಳ್ಳ ವಿಧಾನ ಸಭಾಸದಸ್ಯರೆಲ್ಲರೂ ಒಂದೋ ಆ ಅಭ್ಯಾಸವನ್ನು ನಿಲ್ಲಿಸಬೇಕು, ಇಲ್ಲವೇ ರಾಜೀನಾಮೆಯೀಯಬೇಕು' ಎಂಬ ಹೊಸದೊಂದು ಟೊಬೆಕೋ ಸೂತ್ರ ಜಾರಿಗೆ ಬರಬಹುದೇನೋ...

o o o o

'ರಂಗೂನಿನಲ್ಲಿ ಖಾಸಗಿ ಅಂಗಡಿಗಳ ವ್ಯಾಪಾರ ರಾಷ್ಟ್ರೀಕರಣ!'—ಪತ್ರಿಕೆಯ ಪ್ರಕಟಣೆ.

—ಈ ರಾಷ್ಟ್ರೀಕರಣದ ಅಂಟುರೋಗ ಅಂಗಡಿಗಳಿಗೂ ಬಂತೆ? ಅಯ್ಯೋ ವ್ಯಾಪಾರಿಗಳೇ ಇನ್ನು ಮುಂದೆ ನಿಮ್ಮ ಗತಿಯೇನು? ಹಾಗೂ ನಮ್ಮನ್ನು ಉಪಯೋಗಿಸುವವರಾರು? ಎಂದು ಕಳ್ಳ ತೂಕದ ಕಲ್ಲುಗಳು ಗೋಳಿಡತೊಡಗಿದುವು ಎಂಬುದು ಶುದ್ಧ ಕುಹಕವಂತೆ.

o o o o

ಬಿಹಾರದಲ್ಲಿ ಹಳ್ಳಿಯೊಂದರಲ್ಲಿರುವ ಆಸ್ಪತ್ರೆಯಲ್ಲಿ ನರ್ಸು ಡಾಕ್ಟರುಗಳೇ ಇಲ್ಲವಂತೆ. —ಸುದ್ದಿ.

—ಅಂತೂ ಜನ ಬದುಕಿದರು.

o o o o

ಏರುತ್ತಿರುವ ಜನಸಂಖ್ಯೆ ದೇಶಕ್ಕೆ ಒಂದು ಭಾರೀ ಸಮಸ್ಯೆ ಆಗಿದೆ.

ಮೆಡಿಕಲ್ ಕಾಲೇಜುಗಳನ್ನು ಹೆಚ್ಚು ಹೆಚ್ಚು ಸ್ಥಾಪಿಸುವುದೇ ಈ ಸಮಸ್ಯೆಯನ್ನು ಬಗೆಹರಿಸಲು ಇರುವ ಒಂದೇ ಒಂದು ಯೋಗ್ಯ ದಾರಿ!

o o o o

ಅಲ್ಲಲ್ಲಿಯ ಸುದ್ದಿಸಾರ

ವರ್ಧಂತ್ಯುತ್ಸವ— ಗುಂಡಿಬೈಲು ಕಿರಿಯ ಬುನಾದಿ ಶಾಲಾ ವರ್ಧಂತ್ಯುತ್ಸವವು ತಾ. 21–3–64ರಂದು ಶ್ರೀ ಜಿ. ವಿ. ಸಿದ್ಧೇಶ್ವರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಾದಿರಾಜ ಭಟ್ಟರು ಸ್ವಾಗತಿಸಿದರು. ಶ್ರೀ ಪಿ. ನರಸಿಂಹ ಉಪಾಧ್ಯಾಯರು ವರದಿ ವಾಚನ ಮಾಡಿದರು. ಶ್ರೀ ಕೆ. ಜಿ. ರಾಘವ ರಾವ್ ಅವರು ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆಯ ಬಳಿಕ, ಅಧ್ಯಕ್ಷರು ಸಂದರ್ಭೋಚಿತವಾಗಿ ಮಾತನಾಡಿದರು. ಬಳಿಕ ವಿವಿಧ ಮನರಂಜನಾ ಕಾರ್ಯಕ್ರಮಗಳಾದುವು. ಅಂದು ಪೂರ್ವಾಹ್ನ ನಗರ ಸಭಾ ಸದಸ್ಯ ಶ್ರೀ ಕಾಳಪ್ಪ ಶೆಟ್ಟರು ಧ್ವಜಾರೋಹಣ ಮಾಡಿ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಿದರು.

ವಾರ್ಷಿಕೋತ್ಸವ— ಗುಂಡಿಬೈಲು ಕಿರಿಯ ಬುನಾದಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 12–4–64 ರಂದು, ಕಡಿಯಾಳಿ ಯು. ಕಮಲಾ ಬಾಯಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಅನಂತಯ್ಯ ಹಂದೆ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಜಿ. ವಾಮನ್ ನಾಯಕರು ಸ್ವಾಗತಿಸಿ ವರದಿವಾಚನ ಮಾಡಿದರು. ಸಂಘದ ಅಧ್ಯಕ್ಷ ಶ್ರೀ ಯು. ಬಿ. ಜಯಂತ ರಾವ್ ಇವರು ಸ್ವಾಗತ ಭಾಷಣ ಮಾಡಿದರು. ಶ್ರೀ ಪಿ. ನರಸಿಂಹ ಉಪಾಧ್ಯಾಯರು ಪ್ರಾಸ್ತಾವಿಕ ಭಾಷಣ ಮಾಡಿದರು. ಸಭಿಕರ ಭಾಷಣದಲ್ಲಿ ಶ್ರೀ ಕೆ. ಗೋಪಾಲ ಶೆಟ್ಟಿಗಾರರು ಮಾತನಾಡಿದರು. ಬಹುಮಾನ ವಿತರಣೆಯ ಬಳಿಕ ಅಧ್ಯಕ್ಷರ ಭಾಷಣವಾಯಿತು. ಪೂರ್ವಾಹ್ನ ಶ್ರೀ ಕೆ. ವಾಸುದೇರಿಗಾರರು ಧ್ವಜಾರೋಹಣ ಮಾಡಿದರು

"ಧರ್ಮಪ್ರಚಾರಕನಾಗಿ ಪಕ್ಕಾ ಕಳ್ಳನ ಪರಿವರ್ತನೆ" (ಬಿ.ಎಲ್.)ಯು.ಪಿ ಎಸ್.

—ಪಕ್ಕಾ ಕಳ್ಳರಿಗಲ್ಲದೆ ಉಳಿದವರಿಗೆ ಏಕ್‌ದಮ್ ಧರ್ಮ ಪ್ರಚಾರಕರಾಗಿ ಬದಲಾಯಿಸಲು ಸಾಧ್ಯವೂ ಇಲ್ಲ. ಅರ್ಹತೆಯೂ ಇಲ್ಲ.

o o o o

೧೯೬೪ನೇ ಎಪ್ರಿಲ್‌ನಿಂದ ೧೯೬೫ ಡಿಸೆಂಬರ ತಿಂಗಳ ವರೆಗೆ ಭಾಕ್ರಾ ನಂಗಲ ಯೋಜನೆಗೆ ಸಂಬಂಧಿಸಿದ ಶಂಕುಸ್ಥಾಪನೆಗಳು ಮತ್ತು ಉದ್ಘಾಟನಾ ಸಮಾರಂಭಗಳಿಗಾಗಿ ಸುಮಾರು ೧,೫೫,೫೦೦ರೂಪಾಯಿಗಳ ವೆಚ್ಚವಾಗಿದೆ ಎಂದು ನೀರಾವರೀ ಸಚಿವ ಶ್ರೀ ರಣವೀರ ಸಿಂಗರು ಪಂಜಾಬ್ ವಿಧಾನ ಸಭೆಯಲ್ಲಿ ತಿಳಿಸಿದರು. —(ಪಿ. ಟಿ ಐ)

—"ಜೋಳಿಗೆ ಹಾಕುವುದನ್ನಾದರೂ ಅಳೆದು ಹಾಕಬೇಕಂತೆ ಅಲ್ಲವೇ!

o o o o

ಆರುತಿಂಗಳ ಮೊದಲು ಇದ್ದುದಕ್ಕಿಂತ ಈಗ ಪ್ರಧಾನಿಯವರ ಆರೋಗ್ಯ ಉತ್ತಮವಾಗಿದೆಯೆಂದು ಶ್ರೀಮತಿ ಇಂದಿರಾ ಗಾಂಧಿ ತಿಳಿಸಿದ್ದಾರೆ —ಸುದ್ದಿ.

—ಹಾಗಾದರೆ ನೆಹರೂ ನಂತರ ಯಾರು? ಎನ್ನುವ ಪ್ರಶ್ನೆಗೆ ಇನ್ನು ಬೆಲೆಯೇ ಇಲ್ಲ ಎಂದು ತಿಳಿಯ ಬಹುದೇ?

o o o

"ಪ್ರಾವಿಡೆಂಟ್‌ಫಂಡ್ ಅವಧಿ ಮುಗಿಯುವ ಮೊದಲು ಮೃತರಾದ ಚಂದಾದಾರರ ವಿಧವೆಯರಿಗೆ "ಕುಟುಂಬ ನಿವೃತ್ತಿ ವೇತನ" ಯೋಜನೆ"

—ಕಾರ್ಮಿಕ ಸಚಿವ ಶ್ರೀ ಡಿ. ಸಂಜೀವಯ್ಯರ ಘೋಷಣೆ.

—ಇದರಿಂದ ಪ್ರಾವಿಡೆಂಟ್ ಫಂಡ್ ಚಂದಾದಾರರಿಗೆ ಏನು ತಾನೇ ಪ್ರಯೋಜನವುಂಟಾಯಿತೋ ಅವಗಾಹನೆಗೆಬಂದಿಲ್ಲ—

ಉಡುಪಿ ರೋಟರಿ ಕ್ಲಬ್— ವ್ಯವಸಾಯ ರಂಗದಲ್ಲಿ ನಿಶ್ಚಿತ ಸ್ಥಿತಿಯನ್ನುಂಟು ಮಾಡುವುದು ಬಹಳ ಅಗತ್ಯವಾಗಿದೆ ಎಂದು ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈ ತಾ. 26–3–64 ರಂದು ಉಡುಪಿಯಲ್ಲಿ ಹೇಳಿದರು. ಉಡುಪಿ ರೋಟರಿ ಕ್ಲಬ್ಬಿನಲ್ಲಿ ವ್ಯವಸಾಯೋತ್ಪಾದನೆಯ ಮೇಲೆ ನಡೆದ ಚರ್ಚೆಯ ನಂತರ ಮಾತನಾಡುತ್ತಾ ವ್ಯವಸಾಯವನ್ನು ಸುವ್ಯವಸ್ಥಿತಗೊಳಿಸಬೇಕಾದುದು ಅಗತ್ಯವೆಂದು ಅವರು ಹೇಳಿದರು. ಬರಿ ಶಾಸನದಿಂದ ಏನೂ ಪರಿಣಾಮ ಆಗುವುದಿಲ್ಲವೆಂದೂ, ಜನಾಂಗದಲ್ಲಿರುವಂತೆ ವಿದ್ಯಾವಂತರು ವ್ಯವಸಾಯವನ್ನು ಕೈಗೊಳ್ಳಬೇಕೆಂದೂ, ಒಟ್ಟಿನಲ್ಲಿ ಸಮಗ್ರ ದೃಷ್ಟಿಯಿಂದ ಸಮಸ್ಯೆಯನ್ನು ಬಗೆಹರಿಸಬೇಕೆಂದೂ ತಿಳಿಸಿದರು.

ಸಿಂಡಿಕೇಟ್ ಬ್ಯಾಂಕ್ ಸದ್ಯದಲ್ಲಿಯೇ ವ್ಯವಸಾಯ ಆರ್ಥಿಕ ಇಲಾಖೆಯನ್ನು ಆರಂಭಿಸಿ, ಮೊದಲಿಗೆ ದಕ್ಷಿಣ ಕನ್ನಡ ಮತ್ತು ಕೊಯಮುತ್ತೂರು ಜಿಲ್ಲೆಗಳಲ್ಲಿ ಅದರ ಸೇವೆಯನ್ನು ದೊರಕಿಸುತ್ತದೆಂದು, ಶ್ರೀ ಪೈ ಘೋಷಿಸಿದರು.

ಕ್ಲಬ್ಬಿನ ಅಧ್ಯಕ್ಷ ಶ್ರೀಧರಮೋಹನ ಪೈ ಅಧ್ಯಕ್ಷತೆ ವಹಿಸಿದರು. ಆ ಸಂದರ್ಭದಲ್ಲಿ ನಡೆದ ವಿವಿಧ ಗುಂಪುಗಳ ಚರ್ಚೆ ಕುರಿತು ವರದಿಗಳನ್ನು ರೋಟೇರಿಯನ್ನರುಗಳಾದ ಆಲ್ವ, ಭಂಡಾರ್ ಕಾರ್ ಮತ್ತು ಪ್ರಭುಗಳು ಸಭೆಗೆ ಒಪ್ಪಿಸಿದರು. ಭೂ ವಿಭಜನೆಯನ್ನು ತಡೆಯುವಿಕೆ, ಬ್ರಿಟಿಷ್ ಶಾಸನದ ಮಾದರಿಯಲ್ಲಿ ವ್ಯವಸಾಯ ಶಾಸನದ ರಚನೆ, ಪ್ರಾಯೋಗಿಕ ಕ್ಷೇತ್ರಗಳನ್ನು ಕಟ್ಟಿಸುವುದು, ಕಡಿಮೆ ಬೆಲೆಯ ಬೀಜಗಳು, ಗೊಬ್ಬರಗಳು ಮುಂತಾದುವುಗಳ ಸರಬರಾಜು, ಅಕ್ಕಿಯ ಬೆಲೆ ಏರಿಸಿ ದೃಢಿಸುವುದು ಹಾಗೂ ವ್ಯವಸಾಯ ಇಲಾಖೆಯನ್ನು ಕಂದಾಯ ಇಲಾಖೆಯಲ್ಲಿ ಸೇರಿಸಿ ಪ್ರಗತಿ ಸಾಧಿಸುವುದು ಮುಂತಾದ ಸಲಹೆಗಳನ್ನು ಮಾಡಲಾಯಿತು. ಉಡುಪಿ ರೋಟರಿ ಕ್ಲಬ್ ಆರಂಭಿಸಿದ ಕಾರ್ಕಳದ ಪ್ರೊವಿಜನಲ್ ರೋಟರಿ ಕ್ಲಬ್ಬಿಗೆ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ಮಾನ್ಯತೆ ಸಿಕ್ಕಿದೆ ಎಂದು ಶ್ರೀ ರಮೇಶ ಪೈ ತಿಳಿಸಿದರು. ಕಾರ್ಯದರ್ಶಿ ಶ್ರೀ ಎ. ಜೆ. ಆಲ್ವ, ವಂದನಾರ್ಪಣೆ ಮಾಡಿದರು.

ಸುರತ್ಕಲ್— ಶ್ರೀ ಗೋವಿಂದ ಪೈ ಸ್ಮಾರಕಾರ್ಥ ಪ್ರಬಂಧ ಸ್ಪರ್ಧೆಗಾಗಿ ಆಯ್ದು ಪ್ರಬಂಧಗಳು ಬಂದಿವೆ. ಮೂರು ಬರಹಗಳು ನಿಯಮಕ್ಕೊಳಪಟ್ಟಿಲ್ಲ. ಪುತ್ತೂರು ಸೈಂ. ಫಿ. ಕಾಲೇಜಿನ ವಿದ್ಯಾರ್ಥಿ ಶ್ರೀ ಕೆ. ರಾಮಚಂದ್ರ ಶರ್ಮರು ಮತ್ತು ಮಂಜೇಶ್ವರದ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ ಟಿ. ಅಬ್ದುಲ್ಲರ ಬರೆಹಗಳಿಗೆ ಪ್ರೋತ್ಸಾಹಕ ಬಹುಮಾನವೀಯಲಾಗುತ್ತದೆ. ಶ್ರೀ ಎಂ. ವಾಸುದೇವ ರಾಯರು ಮತ್ತು ಬಿ. ಪದ್ಮನಾಭ ಸೋಮಯಾಜಿಯವರು ಪರಿಶೀಲಕರಾಗಿ ಸಹಕರಿಸಿದ್ದಾರೆಂದು ಸುರತ್ಕಲ್ಲು ವಿಜಯ ಸಾಹಿತ್ಯಮಾಲೆಯ ಪರಿಯಿಂದ ಶ್ರೀ ಕೆ. ವೆಂಕಟರಾಯಾಚಾರ್ಯರು ತಿಳಿಸುತ್ತಾರೆ.

ಅಳಿಕೆ— ತಾ. 16ರಲ್ಲಿ ಲೋಕ ಸೇವಾ ಹಾ. ಎ. ಶಾಲೆಯ 7ನೇ ತರಗತಿಯ ಮಕ್ಕಳ ಬೀಳ್ಕೊಡುವ ಸಮಾರಂಭವು ಶ್ರೀ ಯಂ. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು.

"ನಿಮಗೆ ಸ್ವಂತ ಮನೆ" ಯೋಜನೆ—ಎಲ್. ಐ. ಸಿ. ಯು. ಈಗ ಅವರ 'ನಿಮಗೆ ಸ್ವಂತ ಮನೆ' ಯೋಜನೆಯನ್ನು ಎಪ್ರಿಲ್ 1, 1964ರಿಂದ ಅಧಿಕ 30 ನಗರಗಳಿಗೆ ವಿಸ್ತರಿಸಲು ನಿರ್ಣಯಿಸಿದೆ.

ಪಾಲಿಸಿದಾರರಿಗೆ ಸಾಲಗಳನ್ನು ಕೊಡುವ ನಿಬಂಧನೆಗಳಲ್ಲಿ ಏನೂ ಬದಲಾವಣೆಯಿಲ್ಲ, ಮತ್ತು ಈಗ ಈ ಯೋಜನೆಯು ಮಸೂಲಿಪಟ್ಟಣಂ, ವಿಜಯವಾಡ, ಶಿಲ್ಲಾಂಗ್, ಜಮ್‌ಶೇಡ್‌ಪುರ್, ಮುಝಫರ್‌ಪುರ್, ರಾಜಕೋಟ್, ಶ್ರೀ ನಗರ, ಸೇಲಂ, ತಂಜಾವೂರು, ತಿರುಚಿರಾಪಳ್ಳಿ, ಗ್ವಾಲಿಯರ್, ಜಬ್ಬಲ್‌ಪುರ್, ಹುಬ್ಬಳ್ಳಿ—ಧಾರವಾಡ, ಮೈಸೂರು, ಉಡುಪಿ, ಭುವನೇಶ್ವರ್, ಜಲಂದರ್, ಲುಧಿಯಾನ, ಅಜ್ಮೀರ್, ಜೋಧ್‌ಪುರ್ ಅಲಾಹಬಾದ್, ಆಗ್ರಾ, ಬರೇಲಿ, ಮೀರತ್, ವಾರಣಾಸಿ, ಅಸನ್‌ಸಾಲ್, ಜಲ್‌ಪೈಗುರಿ, ಸತಾರ, ಸೋಲಾಪುರ ಮತ್ತು ನಾಸಿಕ್ ಈ ಸ್ಥಳಗಳಿಗೂ ಅನ್ವಯಿಸುತ್ತದೆ.

ಈ ಯೋಜನೆಯು ಇನ್ನು ಮುಂದೆ ಒಟ್ಟು 50 ಪಟ್ಟಣ ನಗರಗಳಿಗೆ ಅನ್ವಯಿಸುವುದು.

ಈ ಯೋಜನೆಯ ಹೆಚ್ಚಿನ ವಿವರಗಳು ಮೇಲೆ ಸೂಚಿಸಿರುವ ಕಾರ್ಪೋರೇಷನ್ ಆಫೀಸಿನಲ್ಲಿ ದೊರೆಯುತ್ತವೆ. ಅರ್ಜಿದಾರರು ಸಂಬಂಧಪಟ್ಟ ಎಲ್. ಐ. ಸಿ. ಆಫೀಸ್‌ಗಳೊಡನೆ ನೇರವಾಗಿ ವ್ಯವಹರಿಸಲು ಕಾರ್ಪೋರೇಷನ್ ಸೂಚಿಸಿದೆ.

ನಿಧನ:—ಪ್ರಸಿದ್ಧ ಕಲ್ಯಾಡಿ ಮನೆತನಕ್ಕೆ ಸೇರಿದ ಶ್ರೀ ಬಿ. ಕೆ. ಶೇಷಗಿರಿರಾಯರು ತಾ. 25–3–64 ರಂದು ಉಡುಪಿ ಅಜ್ಜರಕಾಡಿನ ತನ್ನ ನಿವಾಸದಲ್ಲಿ ನಿಧನರಾದುದು ವಿಷಾದಕರವಿದೆ. ದಿವಂಗತರು ಕೆಲವರ್ಷಗಳ ಹಿಂದೆ ಮದ್ರಾಸಿನಲ್ಲಿದ್ದು ಸುಮಾರು 20ವರ್ಷಗಳಿಂದ ಉಡುಪಿಯಲ್ಲಿಯೇ ವಾಸಿಸುತ್ತಿದ್ದರು ಅವರು ಇತ್ತೀಚೆಗೆ ಸ್ವಲ್ಪ ಸಮಯದಿಂದ ಅಸ್ವಸ್ಥರಾಗಿದ್ದರು. ಮೃತರು ತನ್ನ ಹಿಂದೆ ಪತ್ನಿ, ನಾಲ್ಕು ಹೆಣ್ಣು ಮಕ್ಕಳು ಮತ್ತು ಮೂರು ಗಂಡು ಮಕ್ಕಳನ್ನು ಬಿಟ್ಟು ಹೋಗಿರುವರು. ಮೃತರ ಆತ್ಮಕ್ಕೆ ಶಾಂತಿಯಿರಲಿ.

ಕೊಡವೂರು—ಸ್ಥಳೀಯ ಬೋರ್ಡ್ ಹಾ. ಪ್ರಾ. ಶಾಲೆಯಲ್ಲಿ ಮಕ್ಕಳಿಗೆ ಸಮವಸ್ತ್ರ ವಿತರಣೆ ಮತ್ತು ಪುಸ್ತಕಾಲಯದ ಉದ್ಘಾಟನಾ ಸಮಾರಂಭವು ಶ್ರೀ ಪೈ. ಗೋಪಾಲ್ ಇವರ ಅಧ್ಯಕ್ಷತೆಯಲ್ಲಿ 26–3–64ರಂದು ಜರಗಿತು. ಶ್ರೀ ಎಮ್. ಮಧ್ವರಾಜ, ಎಂ. ಎಲ್. ಎ. ಯವರು ಸ್ವಾಗತಿಸಿದರು. ಡಾ| ಟಿ ಎಂ. ಎ ಪೈಯವರು ಸಮವಸ್ತ್ರ ವಿತರಣೆಗೈದರು, ಶ್ರೀ ಎ. ಜೆ ಆಲ್ವೆಯವರು ಪುಸ್ತಕಾಲಯದ ಉದ್ಘಾಟಿಸಿದ್ದರು. ಇದೇ ಸಂದರ್ಭದಲ್ಲಿ ಹೊಸ ಬಾವಿಯ ಉದ್ಘಾಟನೆಯನ್ನು ಡಾ| ಕೆ. ಎಲ್. ಐತಾಳರು ನೆರವೇರಿಸಿದರು. ಅನಂತರ ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದುವು ಶ್ರೀ ಗೋಪಾಲಕೃಷ್ಣ ಭಟ್ಟ ಮತ್ತು ಸಹೋದರರ ಸಹಾಯದಿಂದ ಸಿಹಿತಿಂಡಿ ವಿತರಣೆಯಾಯಿತು.

ನವಯುಗದ ಕೃತಜ್ಞತೆಗಳು

ಕಳೆದವಾರ ಸಕಲೇಶಪುರ, ಹಾಸನ, ಬೇಲೂರು, ಮೂಡಿಗೆರೆ, ಮೊದಲಾದ ಕಡೆಗಳಿಗೆ ನವಯುಗದ ಪರಿಷ್ಕರಣ ಕಾರ್ಯಕ್ಕಾಗಿ ಸಂಚರಿಸಿದಾಗ ಸಹಕರಿಸಿ ಪ್ರೋತ್ಸಾಹಿಸಿದ ಡಾ| ಬಿ ಕೆ. ಹೆಗ್ಡೆ, ಹಾಸನ; ಡಾ| ಎಸ್ ಎಸ್. ಶೆಟ್ಟಿ, ಹಾಸನ; ಡಾ| ಎನ್. ಎಸ್. ಶೆಟ್ಟಿ, ಬೇಲೂರು; ಶ್ರೀ ಎಮ್. ಅಚ್ಚಣ್ಣ ಶೆಟ್ಟಿ, ಬಿಕ್ಕೋಡು; ಹಸನ್ ಬ್ಯಾರಿ, ಪಿ. ಬಬ್ಲು ಪಿ. ಕಂಟ್ರಾಕ್ಟರ್, ಬಿಕ್ಕೋಡು; ಕೆ. ರಾಮಣ್ಣ ಶೆಟ್ಟಿ, ಬಿಕ್ಕೋಡು; ಬಿ. ಅಚ್ಯುತ ಪ್ರಭು, ಪ್ಲಾಂಟರ್, ಆಗಲಟ್ಟಿ ಎಸ್ಟೇಟ್; ಹಾಜಿ ಪಿ. ಎಸ್. ಇಬ್ರಾಹಿಮ್, ಪ್ಲಾಂಟರ್, ರಕ್ಷಿದಿ ಎಸ್ಟೇಟ್; ಶ್ರೀ ಎನ್. ಕೆ. ಲಿಂಗೇಗೌಡ, ಕೊಳ್ಳಿಬೈಲ್ ಎಸ್ಟೇಟ್ ಮೊದಲಾದವರಿಗೆ ನಾವು ಆಭಾರಿಗಳಾಗಿದ್ದೇವೆ. ಅಲ್ಲದೆ ನಮ್ಮ ಸಂಚಾರ ಕಾರ್ಯದಲ್ಲಿ ಅಲ್ಲಲ್ಲಿ ಸಹಕರಿಸಿ ನೆರವಾದ ಶ್ರೀಗಳಾದ ಕೆ ಎನ್. ಜೋಗಿ ಶೆಟ್ಟಿ, ಬೆಳಗೋಡು ಎಸ್ಟೇಟ್; ಡಾ. ಎನ್. ಎಸ್. ಶೆಟ್ಟಿ, ಹಾಸನ; ಎನ್. ಎಸ್. ಪೈ, ಎಸ್ಟೇಟ್, ಹಾಸನ; ಕೆ. ಎಸ್. ಶೆಣೈ, ಹಾಸನ; ಡಾ. ಕೆ. ಆರ್. ಮಲ್ಲಿ, ಹೊಸಬಾಳ್; ಕೆ. ರಘುರಾಮ ಅಡ್ಯಂತಾಯ, ಮೂಡಿಗೆರೆ ಮೊದಲಾದವರಿಗೆ ನಾವು ಕೃತಜ್ಞರಾಗಿದ್ದೇವೆ

ತಹಸಿಲ್ದಾರ್ ಶ್ರೀ ಕೆ. ಸಂಜೀವ ಇವರು ಬೇಲೂರು ಶ್ರೀ ಚನ್ನಕೇಶವ ದರ್ಶನಮಾಡಿಸಿ ಅಲ್ಲಿಯ ಪ್ರಮುಖ ಜನರ ಸಂಪರ್ಕ ಒದಗಿಸಿ ಕೊಟ್ಟದಕ್ಕಾಗಿ ನಮ್ಮ ವಂದನೆಗಳು.

ಕೆ. ಹೊನ್ನಯ್ಯ ಶೆಟ್ಟಿ.
ಸಂಚಾಲಕ—ಸಂಪಾದಕ.

ಅನುಭವಾಮೃತ

ಸಮಯಕ್ಕೆ ಬೆಲೆ ಇದೆಯೆ?

ಕೆಲವು ವರ್ಷ ಹಿಂದಿನ ಮಾತು. ನನಗೆ ಬ್ಯಾಂಕಿನಲ್ಲಿ ನೂರು ರೂಪಾಯಿಗಳನ್ನು ಜಮೆ ಮಾಡುವುದಿತ್ತು ದುರ್ದೈವದಿಂದ ಸೈಕಲ್ ಪಂಕ್ಚರ್ ಆದುದರಿಂದ ದೂಡಿಕೊಂಡೇ ಹೋಗಬೇಕಾಯಿತು. ಅಂತೂ ಬ್ಯಾಂಕಿನ ಬಾಗಿಲು ಹೊಕ್ಕಾಗ ಎರಡು ಬಡೆದು ಆಗಲೇ ಐದು ನಿಮಿಷವಾಗಿತ್ತು. "ಇಂದು ಗಂಟೆ ಆಯಿತು; ನಾಳೆ ಬೆಳಿಗ್ಗೆ ಹತ್ತಕ್ಕೆ ಬನ್ನಿ" ಎಂದ ಮುಂದೆ ಕುಳಿತಿದ್ದ ಕ್ಲಾರ್ಕ್. ನನಗೆ ಅವಸರವಾಗಿ ಹಣ ಜಮೆ ಮಾಡಿಯೇ ತೀರಬೇಕಾಗಿತ್ತು. ಕ್ಲಾರ್ಕ್‌ರಿಂದ ತಿರಸ್ಕೃತನಾದ ನಾನು ಕ್ಯಾಶಿಯರರ ಬಳಿ ಹೋದೆ. ಅವರು ತುಸು ಯೋಚಿಸಿದರು; ಮತ್ತೆ ಮೆನೆಜರರ ಅನುಮತಿ ಸಿಂದರೆ ಆದೀತು ಎಂದರು. ನಾನು ಮೆನೆಜರರ ಕೋಣೆ ಹೊಕ್ಕೆ. ವಿಷಯವನ್ನು ನಿವೇದಿಸಿದೆ.

ಮೇನೆಜರರು ಒಂದು ತುಂಡು ಕಾಗದ ತೆಗೆದು ಬರೆದುಕೊಡುವರೆಂದು ನಾನು ದೃಢವಾಗಿ ನಂಬಿದ್ದೆ. ಅದೇನು ಅಷ್ಟು ದೊಡ್ಡ ಕೆಲಸವೇನು? ನನ್ನ ಮಾತನ್ನು ಕೇಳಿದ ಮೆನೇಜರು ಕುರ್ಚಿಯಿಂದ ಎದ್ದರು. ನನ್ನ ಹೆಗಲಿಗೆ ಕೈಹಾಕಿಕೊಂಡು ಹೊರಗೆ ನಡೆದರು. ನಾನು ಯೋಚಿಸಿದೆ: ತಾವೇ ಕ್ಯಾಶಿಯರರಿಗೆ ಮುಖತಃ ಆಜ್ಞೆನೀಡುವರು. ಮೆನೇಜರರು ನನ್ನನ್ನು ಕರೆದುಕೊಂಡು ಹೊರಬಂದರು. ಗಡಿಯಾರದತ್ತ ಬೊಟ್ಟು ಮಾಡಿಕೇಳಿದರು: ಎಷ್ಟು ಘಂಟೆ? ನಾನೆಂದೆ: ಎರಡಾಗಿ ಹತ್ತು ನಿಮಿಷ.

ಮೆನೇಜರರು ಅಂದರು: ಎರಡು ತಾಸಿಗೆ ಹೊರಡುವ ಗಾಡಿ ಓಡಿಯಲು ಹತ್ತು ನಿಮಿಷ ತಡವಾಗಿ ನಿಲ್ದಾಣ ತಲುಪಿದರೆ ಸಾಕಾದೀತೆ?

ನಾನೆಂದೆ: "ಸ್ವಾಮಿ, ಇದು ಗಾಡಿಯೂ ಅಲ್ಲ; ಸ್ಟೇಶನೂ ಅಲ್ಲ; ನಾನು ಹಣ ಕಟ್ಟಲಿದ್ದೇನೆ; ಆದರೆ, ತೆಗೆದುಕೊಳ್ಳುವದಿಲ್ಲ"

ಆಗ ಮೆನೆಜರರು ತುಸು ಕಠಿನವಾಗಿಯೇ ಹೇಳಿದರು: "ಸಮಯವನ್ನು ಮೀರದಿರುವುದು ನಮಗೆ ಅಗತ್ಯವಲ್ಲವೇ"? ನಾನು ನಿರಾಶನಾಗಿ ಮರಳಿದೆ; ಬರಿ ಆ ಕಾಲದಲ್ಲಿ.

ಇದು ಈ ಕಾಲದಲ್ಲಿ — ನಾಗರಿಕರ ಸಭೆಯೊಂದು ಸೇರಿ ಮಂತ್ರಿವರ್ಯರನ್ನು ಸತ್ಕರಿಸುವುದಿತ್ತು. ಐದುಗಂಟೆಗೆ ಕಾರ್ಯಕ್ರಮ ಪ್ರಾರಂಭ ಆದರೆ ಐದಕ್ಕೆ ಐದು ಜನರೂ ಕೂಡಿರಲಿಲ್ಲ. ಐವತ್ತರವರೆಗೆ ಸುಮಾರಿಗೆ ಬೇಕಾದವರಲ್ಲಿ ಹೆಚ್ಚಿನವರು ಬಂದರು; ಆದರೆ ಅತಿಥಿಗಳೇ ನಾಪತ್ತೆ. ಕಾಫಿ ತಿಂಡಿಗಳು ಆರುಗಂಟೆಯಿಂದ ಕಾಯತೊಡಗಿವೆ. ರಾತ್ರಿ ಹತ್ತರ ಸುಮಾರಿಗೆ ಮಂತ್ರಿಗಳ ಆಗಮನವಾಯಿತು. ''ಕ್ಷಮಿಸಿ, ಮಿತಿಮೀರಿದ ಕಾರ್ಯಕ್ರಮದಿಂದ ನಿಮ್ಮೆಲ್ಲರನ್ನೂ ಕಾಣಲು ತಡವಾಯ್ತು. ಕ್ಷಮೆಯಿರಲಿ" ಎನ್ನುತ್ತಲೇ ಕೈ ಮುಗಿದರು. ಅವರು ಒಬ್ಬೊಬ್ಬನ ಐದೈದು ತಾಸಿನ ಸಮಯಕ್ಕೆ ಮಂತ್ರಿವರ್ಯರ ದೃಷ್ಟಿಯಲ್ಲಿ ಬೆಲೆಯೇ ಇಲ್ಲ. ಮಿತಿಮೀರಿದ ಕಾರ್ಯಕ್ರಮವಿರುವುದು ಈ ಮಂತ್ರಿ ಮಾಗಧರಿಗೆ ಮಾತ್ರ; ಅವರನ್ನು ಒಲೈಸುವ ನಾಗರಿಕ ಬಂಧುಗಳು ಕೆಲಸಗಳ್ಳರಲ್ಲವೆ? ಅಲ್ಲವಾದರೆ ಅವರೇಕೆ ಅಷ್ಟು ಸಮಯ ಕೆಲಸವಿಲ್ಲದೆ ಮಂತ್ರಿಗಳನ್ನು ಕಾಯುತ್ತಿದ್ದರು?

—ಗೋ.

ಉಡುಪಿ ಡಿ. ಮು ಕೋರ್ಟಿನಲ್ಲಿ.
O. S. 67/1964.

ರುಕ್ಮಿಣಿಶೆಡ್ತಿ — ವಾದಿಳು,

ಮತ್ತು

ಕೊರತಿಶೆಡ್ತಿ ಕೂಡಾ — ಪ್ರತಿವಾದಿರು

ಇವರೊಳಗೆ

3ನೇ ಪ್ರತಿವಾದಿ. ಮಹಾಲಿಂಗಶೆಟ್ಟಿ — ಕೊರತಿಶೆಡ್ತಿ ಮಗ. ಉಡುಪಿ ತಾಲ್ಕು ಕೆಂಜೂರು ಗ್ರಾಮದ ಕೋಂಟಿ ಮನೆಯಲ್ಲಿರುವವ, ಪ್ರತಿವಾದಿಗೆ ಈ ಮೂಲಕ ತಿಳಿಸುದೇನೆಂದರೆ—

ವಾದಿಳೀಗೆ 1ರಿಂದ9ನೇ ವರೇಗಿನ ಪ್ರತಿವಾದಿರು ತಾರೀಕು 2-4-59ಲ್ಲು ರೂ 800-00 ಕ್ಕೆ ರಿ. ಸಿಕಿಂ ಬರಕೊಟ್ಟ ಸ್ಥಿರಾಸ್ತಿ ಭೋಗ್ಯದ ಸ್ವಾಧೀನು ಮೇರೆಗೆ ಬರತಕ್ಕ ಅಸಲು ಬಡ್ಡಿ ವಗೈರೆಗೆ ವಾದಿಳು ಪ್ರತಿವಾದಿಗಳ ಮೇಲೆ ಮಾಡಿದ ಮೇಲಿನ ದಾವೆಯು ತಾ. 14-4-64 ಕ್ಕೆ 3ನೇ ಪ್ರತಿವಾದಿಯ ಅಪ್ಪೇರು ನೋಟೀಸಿನ ಬಗ್ಗೆಯಿಡಲಾಗಿದೆ. ಎಂಬ ಸಂಗತಿಯನ್ನು ಈ ಮೂಲಕತಿಳಿಸಲಾಗುತ್ತದೆ.

B Ananda Shetty.
Advocate for plaintiff

Udipi. Dated 26-3-64

ಅಭಿಪ್ರಾಯ ಮಂಡನೆ

ಕಟ್ಟಡ ತೆರಿಗೆ

ರಾಜ್ಯದ ಅರ್ಥಮಂತ್ರಿ ಶ್ರೀ ಬಿ ಡಿ. ಜತ್ತಿಯವರು ಹೊಸತೊಂದು ಸಮಸ್ಯೆಯನ್ನು ಎದುರಿಸುವಂತಿದೆ. ಕಟ್ಟಡಗಳ ಮೇಲೆ ತೆರಬೇಕಾದ ತೆರಿಗೆಯ ವಿರುದ್ಧ ಮೈಸೂರು ಪುರಸಭೆಯು ಪ್ರತಿಭಟನೆಯನ್ನು ಸೂಚಿಸಿದೆ. ರಾಜ್ಯದ ಮೂಲೆ ಮೂಲೆಯಲ್ಲಿಯೂ ನಾಗರಿಕರ ಸಭೆಗಳು ನಡೆದು ಈ ತೆರಿಗೆಗೆ ವಿರೋಧವನ್ನು ಪ್ರಕಟಿಸಿವೆ. ಇದರ ಪರಿಣಾಮವಾಗಿಯೋ ಎನ್ನುವಂತೆ ಕಟ್ಟಡದ ತೆರಿಗೆಯು ಒಂದೇ ಸಲ ಕೊಡಬೇಕಾದುದೆಂದೂ ಮತ್ತೆ ವರ್ಷಂಪ್ರತಿ ಇದನ್ನು ವಸೂಲು ಮಾಡಲಾಗುವುದಿಲ್ಲವೆಂದೂ ಜತ್ತಿಯವರು ಸ್ಪಷ್ಟೀಕರಣ ನೀಡಿದರು. ಆದರೂ ಪ್ರತಿಭಟನೆ ನಿಲ್ಲಲಿಲ್ಲ. ಈಗ ಅವರು ಹೇಳುತ್ತಾರೆ; ತೆರಿಗೆ ವಸೂಲು ಮಾಡುವಾಗ ರಿಯಾಯಿತಿಯನ್ನು, ಕಂತುಗಳನ್ನು ಕೊಡಲಾಗುವುದೆಂದು. ಇದು ಸ್ವಾಗತಾರ್ಹವೇ. ಆದರೆ, ಹಿಂದಿನ ಕಾಲದ ನಮ್ಮ ಹಿರಿಯರು ಮನೆಯ ವೈಶಾಲ್ಯದಲ್ಲಿಯೇ ಗೌರವವುಂಟೆಂದು ತಿಳಿದೋ ಏನೋ ಕಟ್ಟಿಸಿದ ಅನೇಕ ಮನೆಗಳು ನೋಡ ಸಿಗುತ್ತವೆ. ಇನ್ನು ಕಾರಖಾನೆ-ಗಿರಣಿ ಮೊದಲಾದುಗಳ ಕಟ್ಟಡಗಳು ಸಾಕಷ್ಟು ವಿಶಾಲವಾಗಿಯೇ ಇರಬೇಕಾಗುತ್ತವೆ. ಹೀಗೆಯೇ ಇನ್ನೂ ಹಲವಾರು ಕಟ್ಟಡಗಳಿವೆ. ಇವೆಲ್ಲವುಗಳ ಮೇಲೆ ತೆರಿಗೆ ತೆರುವವರಿಗೆ ಈಗ ದೊಡ್ಡದೊಂದು ಮೊತ್ತವೇ ಬೇಕಾಗುತ್ತದೆ. ಅದು ಮಾತ್ರವಲ್ಲ; ಈ ತೆರಿಗೆ ಒಂದು ಬಾರಿ ಮಾತ್ರ ತೆತ್ತರೆ ಸರಿಯೆಂದು ಈಗ ಹೇಳಿದರೂ ಮುಂದಿನ ವರ್ಷಗಳಲ್ಲಿ ಮತ್ತಾವ ರೀತಿಯಿಂದ ತೆರಿಗೆ ಬೀಳುವುದೋ ಎಂಬ ಸಂದೇಹ ಬರುತ್ತದೆ.

ಕೆಲವು ವರ್ಷಗಳಿಗೆ ಹಿಂದೆ ವಿದ್ಯುತ್ ಶಕ್ತಿಯು ಎಷ್ಟು ಖರ್ಚಾಯಿತೋ ಅಷ್ಟರ ಬೆಲೆಯನ್ನು ತೆರಬಹುದಾಗಿತ್ತು. ಆಗ ಮನೆಯಲ್ಲಿ ಅಗತ್ಯ ಬೇಕಾದಲ್ಲಿ ಮಾತ್ರವಲ್ಲದೆ ಅಪರೂಪಕ್ಕೆ ಉಪಯೋಗಿಸುವಲ್ಲಿಯೂ ದೀಪಗಳನ್ನು ಹಾಕುತ್ತಿದ್ದರು. ಆದರೆ, ಮುಂದೆ ಒಂದು ಪ್ಲಗ್ಗಿಂಗೆ ಇಂತಿಷ್ಟು ಕಟ್ಟಲೇ ಬೇಕೆಂಬ (ದೀಪ ಉರಿಸಲಿ, ಉರಿಸದೆ ಇರಲಿ) ನಿಯಮ ಬಂದುದರಿಂದ ಹಲವರು ಅಷ್ಟು ಉರಿಸದ ದೀಪಗಳನ್ನೇ ಕಿತ್ತು ಬಿಟ್ಟಿದ್ದರು. ಹಾಗೆಯೇ ಈಗ, ಮನೆಯ ವೈಶಾಲ್ಯದ ಮೇಲೆ ತೆರಿಗೆ ತೆರಬೇಕಾಗುವಾಗ ಉಪಯುಕ್ತವಲ್ಲದ ಮನೆಯ ಭಾಗಗಳನ್ನು ಬೀಳಿಸಬೇಕು ಎಂಬುದೇ ಸರಕಾರದ ಯೋಚನೆ ಇದ್ದಂತಿದೆ. ವಸತಿ ಸೌಕರ್ಯದ ಅಭಾವ ಎಲ್ಲ ನಗರ ಮತ್ತು ಪಟ್ಟಣಗಳಲ್ಲಿ ಕಾಣುತ್ತಿರುವಾಗ, ಕಟ್ಟಡ ರಚನೆಗೆ ಉತ್ತೇಜನ ನೀಡುವ ಬದಲು ವೈಶಾಲ್ಯ ತೆರಿಗೆಯಂತಹ ನಿರ್ಬಂಧ ಹೇರುವುದು ಸೂಕ್ತ ಕ್ರಮವಲ್ಲ. ಹಣ ಬೇಕೆಂದು ಅನುಚಿತ ರೀತಿಯಲ್ಲಿ ಅದನ್ನು ಗಳಿಸುವುದನ್ನು ಸಭ್ಯರು ಒಪ್ಪುವುದಿಲ್ಲ. ಆದುದರಿಂದ ಜತ್ತಿಯವರು ಈ ವಿಚಿತ್ರ ತೆರಿಗೆಯನ್ನು ಹಿಂತೆಗೆದುಕೊಳ್ಳುವುದು ಅಗತ್ಯವಿದೆಯೆಂದು ಎಲ್ಲರ ಅಭಿಪ್ರಾಯ.

ಉಡುಪಿ —ರಾಶಿ

ಭಾರತದಲ್ಲಿ ನಾರಿಯರ ಕರ್ತವ್ಯ

(೫ನೇ ಪುಟದಿಂದ)

ಬದಲು ತುಟಿಗಳಿಗೆ ಬಣ್ಣ ಬಳಿದು, ನೈಸರ್ಗಿಕವಾದ ಕಾಂತಿಯಿಂದ ಶೋಭಿಸುವ ಉಗುರುಗಳಿಗೆ ಕೆಂಪು ಬಣ್ಣವನ್ನು ಹಚ್ಚಿ, ಅದಕ್ಕೆ ಅನೈಸರ್ಗಿಕ ರೂಪವನ್ನು ಕೊಡುವುದು, ಸ್ತ್ರೀಯರ ಧರ್ಮವೂ ಅಲ್ಲ, ಸ್ವತಂತ್ರ ಭಾರತದ ವೀರ ಮಹಿಳೆಯರ ಕರ್ತವ್ಯವೂ ಅಲ್ಲ.

ಇನ್ನು ಸಂತಾನದ ವಿಚಾರ — ಮಿತ ಸಂತಾನದಿಂದ ಸಾಧ್ಯವಾದಷ್ಟು ನಮ್ಮ ಆರ್ಥಿಕ ಅನುಕೂಲತೆಗಳಿಗೆ ಸರಿಯಾಗಿ, ಅವರಿಗೆ ಯೋಗ್ಯ ವಿದ್ಯಾಭ್ಯಾಸವನ್ನು ಕೊಡಲು ಅನುಕೂಲವಾಗುವುದು. ಈ ದೂರದೃಷ್ಟಿಯಿಂದ ತಮ್ಮ ಕೆಲಸ ಕಾರ್ಯಗಳನ್ನು ಮಾಡುತ್ತಾ ಹೋಗಬೇಕೇ ಹೊರತು, ತಮ್ಮ ಸ್ವಂತ ಕ್ಷಣಿಕ ಸುಖದ ಅಭಿಲಾಷೆಯಿಂದ, ಮಕ್ಕಳನ್ನು ಪಡೆದು, ಅವರಿಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಡಲು ಸಮರ್ಥರಾಗದೆ, ದ್ವಿಪಾದ ಪಶುಗಳಂತೆ ಅವರನ್ನಿಡುವುದರಲ್ಲಿ ಅರ್ಥವೇನಿದೆ?

ನಮ್ಮ ದೇಶದ ಸ್ತ್ರೀಯರು ಮೊದಲಿನಿಂದಲೂ ಕರ್ತವ್ಯನಿಷ್ಠರೆಂದು ಜಗತ್ತಿನಲ್ಲಿಯೇ ಹೆಸರನ್ನು ಪಡೆದಿದ್ದಾರೆ. ಆ ಹೆಸರನ್ನು ಅಳಿಸದೆ ಉಳಿಸುವುದು ಸ್ತ್ರೀಯರ ಇಂದಿನ ಮೊದಲನೆಯ ಕರ್ತವ್ಯ. ಇದಕ್ಕೆ ಮೊದಲಿಂದಲೂ ಶಿಸ್ತಿನ ತಳಹದಿಯ ಮೇಲಿಂದ ಸಾಗಬೇಕಾಗುವುದು. ಗುರು-ಹಿರಿಯರ ಮೇಲೆ ನಮ್ರತೆ, ಶ್ರದ್ಧೆ ಭಕ್ತಿ, ವಿಶ್ವಾಸಗಳಿಂದ ನಡೆಯಬೇಕಾಗುವುದು. ಅವೆಲ್ಲವನ್ನೂ ಬಿಟ್ಟು ತಾವೇ ತಾವಾದರೆ ಮಾತ್ರ, ಅವರ ಜೀವನವೂ ನೀರಸವಾಗುವುದಲ್ಲದೆ, ಜನಾಂಗದ ಪ್ರಗತಿಯೂ ಕಡಿಮೆಯಾಗುತ್ತಾ ಹೋಗಿ ಮುಂದೆ ನಿಶ್ಶೇಷವಾಗುವುದು.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ತಾವು ಸುಶಿಕ್ಷಿತರಾಗಿ ಶಿಸ್ತಿನ ಜೀವನವನ್ನು ಸಾಗಿಸುತ್ತಾ, ಉಚ್ಚ ಶಿಕ್ಷಣದ ಸದುಪಯೋಗಗೊಳಿಸಿ, ಮಕ್ಕಳಲ್ಲಿ ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನ ಮುಂತಾದ, ಉಚ್ಚತರ—ಉಚ್ಚತಮವಾದ ಗುಣಗಳನ್ನು ಮೂರ್ತಿಭಾವಿಸಿ, ನಿಲ್ಲಿಸುವ ಕಾರ್ಯ ಇಂದಿನ ಸ್ತ್ರೀಯರದು. ತಮ್ಮ ಮಕ್ಕಳನ್ನು ಸನ್ಮಾರ್ಗದಲ್ಲಿ ಬೆಳೆಸಿ, ಆರ್ಥಿಕ ಮುಗ್ಗಟ್ಟಿನ ನಿವಾರಣೆಯನ್ನು ಮಾಡುತ್ತಾ, ಭಾರತೀಯ ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಎತ್ತಿ ಹಿಡಿದು ಮುಂದಾದರೆ, ಭಾರತವು ಜಗತ್ತಿನ ಸ್ವರ್ಗವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಭಾರತದ ಭಗಿನಿಯರು ಈ ರೀತಿ ತಮ್ಮ ಕರ್ತವ್ಯದ ಹೊಣೆಯನ್ನು ಹೊತ್ತು, ಸ್ವತಂತ್ರ ಭಾರತದಲ್ಲಿ, ತಮ್ಮ ಸ್ವಾತಂತ್ರ್ಯದ ದುರುಪಯೋಗ ಮಾಡದೆ, ಉಳಿದವರ ಸ್ವಾತಂತ್ರ್ಯಕ್ಕೂ ಭಂಗ ಬಾರದಂತೆ ನಡೆದರೆ, ಭಾರತದ ಸ್ವಾತಂತ್ರ್ಯದೊಂದಿಗೆ, ಭಾರತದ ಸಂಸ್ಕೃತಿಯೂ ಅಮರವಾಗಿ ನಿಲ್ಲುವುದರಲ್ಲಿ ಯಾವ ಸಂಶಯವೂ ಇಲ್ಲ. ಪುರುಷರಾದರೂ ಸ್ತ್ರೀಯರಿಗೆ ಈ ವಿಧದ ಸೌಕರ್ಯ ಕಲ್ಪಿಸಿ ಕೊಡುವಲ್ಲಿ ಸಹಾಯಕರಾಗಬೇಕೆಂದು ಸೂಚಿಸಿದರೆ ತಪ್ಪಲ್ಲ.

ಪ. ಕು.ತಿ. ಹರಿದಾಸ ಭಟ್ಟ,ಎಂ.ಎ.

ಅವರ ನವೀನ ಪುಸ್ತಕಗಳು ರೂ.ಪ

ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಾ	2=00
ಏಷ್ಯದ ಸಂಪತ್ತು	2=00
ಅಮೆರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟ್ಯಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಗೆಗಡಲು

ದೂರ ಯಾರಿಗೆ?

ಮಹಾ ಸಭೆಯೊಂದು ನೆರೆದಿತ್ತು. ಸಾವಿರಾರು ಜನರು ಕೂಡಿದ್ದರು. ಮಹಾಶಯರೊಬ್ಬರು ಮೈಕಿನೆದುರು ನಿಂತು ತಮ್ಮ ಗಂಭೀರ ಭಾಷಣವನ್ನು ತೊಡಗಿದ್ದರು. ದುರದೃಷ್ಟವಶದಿಂದ ಮೈಕ್ ಕೆಟ್ಟು ಹೋಯಿತು. ಆಗ ಮಹಾಶಯರು ಕೂಗಿ ಕೇಳಿದರು ನೆರವಿಯನ್ನು: "ಅರ್ಧದಲ್ಲೇ ಮೈಕ್ ಕೆಟ್ಟುಬಿಟ್ಟಿತು. ನನ್ನ ಮಾತು ನಿಮಗೆ ಕೇಳಿಸುತ್ತದೆಯೆ?"

"ಇಲ್ಲ ಸ್ವಾಮಿ"— ಎಂದು ಅರಚಿ ಹೇಳಿದನೊಬ್ಬ ಕೊನೆಯ ಸಾಲಿನಲ್ಲಿ ಕುಳಿತವ

"ಇಲ್ಲ ಎಂದರೆ ಏನು? ನನಗೆ ಸ್ಪಷ್ಟವಾಗಿ ಕೇಳಿಸುತ್ತಿದೆ. ನಿಮಗೆ ಕಿವಿ ದೂರವಾದರೆ, ಇಲ್ಲಿ ಬನ್ನಿ, ನನ್ನ ಕಿವಿ ಸರಿಯಾಗಿದೆ ನಿಮ್ಮ ಸ್ಥಳದಲ್ಲಿ ನಾನು ಕೂತುಕೊಳ್ಳುತ್ತೇನೆ."

ಎರಡೂ ಅಲ್ಲ

ವಿಮಾನದ ಪರಿಚಾರಿಕೆಯು ಯಾತ್ರಾರ್ಥಿಗಳ ಅನುಕೂಲಕ್ಕೆಂದು ಉಚ್ಚಸ್ವರದಿಂದ ಕೂಗುತಿದ್ದಳು; "ಫಸ್ಟ್ ಕ್ಲಾಸ್ ರೈಟ್ ಸೈಡಿನಲ್ಲಿ ಸೆಕೆಂಡ್ ಕ್ಲಾಸ್ ಲೆಫ್ಟ್ ಸೈಡಿನಲ್ಲಿ."

ಒಬ್ಬಾಕೆ ಸುಂದರಿ ಹುಡುಗಿ ಒಂದು ಮಗುವನ್ನು ಮಗ್ಗುಲಲ್ಲಿಟ್ಟುಕೊಂಡು ಬಂದಳು ಒಂದರೆಕ್ಷಣ ಕಂಗಾಲಾದಂತೆ ಅತ್ತಿತ್ತ ಇಣಿಕಿದಳು.

ಪರಿಚಾರಿಕೆ ಆಕೆಯನ್ನು ಕೇಳಿದಳು: "ಫಸ್ಟ್ ಅಥವಾ ಸೆಕೆಂಡ್?"

ಹುಡುಗಿಯ ಮುಖದಲ್ಲಿ ಲಜ್ಜೆಯ ಸೆಲೆ ಕಾಣಿಸಿತು, ಅದು ಕೆಂಬಣ್ಣಕ್ಕೆ ಪರಿವರ್ತಿತವಾಯಿತು. ಆಕೆ ಗದ್ಗದನಿಯಲ್ಲಿ ನುಡಿದಳು: "ಎರಡೂ ಅಲ್ಲ..." ಪರಿಚಾರಿಕೆ ಕಸಿವಿಸಿಯಾದಳು.

ಪತಿ ಪ್ರೇಮ

ಪತಿಯು ದೇಹಾವಸಾನವಾದ ಬಳಿಕ ಆತನ ಪ್ರೀತಿಪಾತ್ರಳಾದ ಪತ್ನಿ ಶ್ರದ್ಧಾವನತಳಾಗಿ ಮೃತ ಶರೀರವನ್ನು ಸಮಾಧಿ ಮಾಡಿದಳು. ಒಬ್ಬ ಕುಶಲ ಶಿಲ್ಪಿಯನ್ನು ಕರೆಸಿ ಸಮಾಧಿಯಲ್ಲಿ ಒಂದು ವಾಕ್ಯವನ್ನು ಕೆತ್ತಿಸಿದಳು: "ನೀನು ಶಾಂತಿಪೂರ್ವಕವಾಗಿ ಸುಖದಿಂದ ಇರು."

ಕೆಲವು ದಿನಗಳು ಕಳೆದ ಬಳಿಕ ಆಕೆಯ ವಕೀಲಿ ಬಂದು ಹೇಳಿದ: "ಪತಿಯ ಆಸ್ತಿಪಾಸ್ತಿಗಳಲ್ಲಿ ನಿಮಗೆ ಚಿಕ್ಕಾಸೂ ಸಿಗಲಾರದು. ಎಲ್ಲವನ್ನೂ ಜೇರಿಯುವರ ಹೆಸರಿಗೆ ಬರೆದು ಹಾಕಿದ್ದಾರೆ."

ಆಕೆಗೆ ದಿಕ್ಕೇ ತೋಚದಾಯಿತು. ಕೊನೆಗೂ ಒಂದು ಯೋಚನೆ ಹೊಳೆಯಿತು. ನಟ್ಟಿಗೆ ಅದೇ ಶಿಲ್ಪಿಯ ಬಳಿಗೆ ಹೋಗಿ ಅದೇ ಸಮಾಧಿಯ ಅದೇ ಕಲ್ಲಿನ ಅದೇ ವಾಕ್ಯದ ಕೆಳಗೆ ಈ ವಾಕ್ಯವನ್ನು ಸೇರಿಸುವಂತೆ ಆದೇಶವಿತ್ತಳು. "ನಾನು ನಿನ್ನನ್ನು ಬಂದು ಸೇರುವ ತನಕ."

ನನಗೂ ತಿಳಿಸಿ

ಯುವಕ ವಿದ್ಯಾರ್ಥಿಯೊಬ್ಬನ ಮೇಲೆ ಷರಾ ಬರೆಯುತ್ತ ಅಧ್ಯಾಪಕರು ಹೆತ್ತವರಿಗೆ ಕಳಿಸುವ ವರದಿಯಲ್ಲಿ ಬರೆದರು: "ರಾಮು ಬಹಳ ತೀಕ್ಷ್ಣಮತಿ, ಯೋಗ್ಯ ಮತ್ತು ಪ್ರತಿಭಾವಂತ ಆದರೆ, ತನ್ನ ಪಟ್ಟಿನ ಸಮಯವನ್ನವನು ಹುಡುಗಿಯರೊನೆ ಚೇಷ್ಟೆಮಾಡುವುದರಲ್ಲಿಯೇ ಕಳೆಯುತ್ತಾನೆ. ಇದು ಒಳ್ಳೆಯದಲ್ಲ. ಆದರೂ ಚಿಂತಿಸಬೇಕಾದ ಪ್ರಮೇಯವಿಲ್ಲ. ನನ್ನೊಡನೊಂದು ಉಪಾಯವಿದೆ. ಇದರಿಂದಾಗಿ ಆತನು ತನ್ನ ಅಭ್ಯಾಸವನ್ನು ಬಿಟ್ಟುಕೊಡಬಲ್ಲನು; ಹುಡುಗಿಯರೊಡನೆ ಚೇಷ್ಟೆಮಾಡುವುದನ್ನು ಖಂಡಿತಕ್ಕೂ ನಿಲ್ಲಿಸುವನು."

ಮರುದಿನ ಆ ಹುಡುಗನ ತಾಯಿಯಿಂದ ಒಂದು ಪತ್ರ ಬಂತು: "ಮಹಾಶಯರೇ, ನಿಮ್ಮೊಡನಿರುವ ಉಪಾಯವನ್ನು ದಯವಿಟ್ಟು ನನಗೆ ತಿಳಿಸಿರಿ. ನನ್ನ ಪತಿಯ ಮೇಲೆ ಅದನ್ನು ಪ್ರಯೋಗಿಸುವ ಇಚ್ಛೆಯಿದೆ."

ಪರಿಹಾರ

ಕಾಫೀ ಹೋಟೇಲೊಂದರಲ್ಲಿ ಕಾಫಿ ಕುಡಿಯಲು ಒಬ್ಬ ಯೂಕ್ಕ ಬೆಂಚಿಯಲ್ಲಿ ಕುಳಿತ. ಆತನ ಪಕ್ಕದಲ್ಲೇ ಇನ್ನೊಬ್ಬ ಅಲ್ಪ ಪರಿಚಿತನಿದ್ದ. ಈತನನ್ನು ಆತ ಪ್ರಶ್ನಿಸಿದ: "ನೋಡಿ ಇವರೆ ನೀವು ಅರ್ಥಶಾಸ್ತ್ರದಲ್ಲಿ ಮಹಾ ಪಂಡಿತರು. ನಿಮ್ಮ ಶಾಸ್ತ್ರದಲ್ಲಿ ಭಾರತದ ಖಜಾನೆಯನ್ನು ತುಂಬುವ ಆದರೆ ಜನಸಾಧಾರಣರ ಮೇಲೆ ಹೊರೆ ಇಳಿಸುವ ಯಾವುದಾದರೂ ಉಪಾಯವಿಲ್ಲವೆ?"

ಈತ ಉತ್ತರಿಸಿದ: ಇಲ್ಲದೆ ಏನಂತೆ? ದೇಶದಲ್ಲಿ ನಡೆಯುತ್ತಿರುವ ರಾಜಕೀಯ ಭಾಷಣಗಳ ಮೇಲೆ ಟೇಕ್ಸ್ ಹೇರಿಬಿಟ್ಟರೆ ಸರಿ; ಸಮಸ್ಯೆ ತಾನಾಗಿಯೇ ಬಗೆಹರಿಯುವುದು."

ಪಶ್ಚಿಮ ಕರಾವಳಿಯ

ಗೋಮಾಂತಕ ನೌಕಾನೆಲೆ

ಗೋವಾ ಭಾರತಕ್ಕೆ ಸೇರಿದ ಕೂಡಲೇ ಮರ್ಮಗೋವಾದಲ್ಲಿ ಸಣ್ಣಪ್ರಮಾಣದ ನೌಕಾನೆಲೆಯೊಂದನ್ನು ವ್ಯವಸ್ಥೆಗೊಳಿಸಲಾಗಿತ್ತು. ಪ್ರಶಾಂತ ಅರಬೀಸಮುದ್ರದ ದಂಡೆಯಲ್ಲಿ ಈ ನೌಕನೆಲೆಯನ್ನು ಈಗ ಭಾರತೀಯ ನೌಕಾಪಡೆಯ ಸುಸಜ್ಜಿತ ನೌಕಾನೆಲೆಯನ್ನಾಗಿ ಮಾಡಲಾಗಿದೆ. ಇದೇ ಮಾರ್ಚ 2 ರಂದು ನೌಕಾಬಲದ ದಂಡನಾಯಕ ವೈ |ಅ| ಬಿ. ಎಸ್. ಸೋಮನ್ "ಐ.ಎನ್ ಎಸ್ ,ಗೋಮಾಂತಕ' ಎಂಬ ಹೆಸರಿನ ಈ ನೂತನ ನೌಕನೆಲೆಯನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು

'ಗೋಮಾಂತಕದ' ಉದ್ಘಾಟನೆಯು ನೈಸರ್ಗಿಕ ಸಂಪತ್ತಿನಿಂದ ಕೂಡಿದ ಈ ಸುಂದರ ಬಂದರಿನ ಅಭಿವೃದ್ಧಿ ಕಾರ್ಯಗಳಲ್ಲಿ ಮಹತ್ವದ ಘಟನೆ ಎಂದೇ ಹೇಳಬಹುದು. ಅಂತೆಯೇ ಈ ನೌಕಾನೆಲೆ ಆಧುನಿಕ ತಾಂತ್ರಿಕ ಸಾಮಗ್ರಿಗಳಿಂದ ಸಜ್ಜುಗೊಂಡ ನಂತರ, ಮುಂಬಾಯಿ ಬಂದರಿನಂತೆಯೇ, ಭಾರತದ ಪಶ್ಚಿಮ ಕರಾವಳಿ ಸಂಪತ್ತಿನ ರಕ್ಷಾ ಕವಚವಾಗುವುದರಲ್ಲಿ ಸಂದೇಹವಿಲ್ಲ. ಭಾರತೀಯ ನೌಕಾಬಲದ ಪಡೆಗಳಿಗಂತೂ ಇದು ಮತ್ತೊಂದು 'ಮನೆ'ಯಾಗವುದು, ಈವರೆಗೂ ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದ ನೌಕಾಪಡೆಗಳು ಎಲ್ಲ ಸೌಲಭ್ಯಗಳಿಗೂ ಮುಂಬಯಿ ನೌಕಾ ನೆಲೆಗೇ ಮರಿಹೋಗಬೇಕಾಗುತ್ತಿತ್ತು,

ಗೋವಾ ಬಂದರಿನ ಅಭಿವೃದ್ಧಿಯೊಂದಿಗೇ 'ದಾಬೋಲಿಮ್' ವಿಮಾನ ನಿಲ್ದಾಣದ ಅಭಿವೃದ್ಧಿಗೂ ಕ್ರಮ ಕೈಕೊಳ್ಳಲಾಗಿದೆ,....ದಾಬೋಲಿಮ್‌ದಲ್ಲಿ ನೌಕಾಬಲದ ವಿಮಾನ ಕೇಂದ್ರವನ್ನು ಸ್ಥಾಪಿಸಲಾಗುವುದು, ವಿಮಾನವನ್ನು ಸಾಗಿಸುವ ಸಾಮರ್ಥ್ಯವುಳ್ಳ ನೌಕಾಬಲದ, 'ಐ. ಎನ್ ಎಸ್ ವಿಕ್ರಾಂತ, ಐ ಎನ್ ಎಸ್ ಹಂಸಾ' ಮತ್ತಿತರ ನೌಕೆಗಳ ವಿಮಾನಗಳಿಗೆ ದುಬೊಲಿಮ್ ನಿಲ್ದಾಣವಾಗುತ್ತದೆ. ದಾಬೋಲಿಮ್ ವಿಮಾನನಿಲ್ದಾಣದ ಕಾರ್ಯಪೂರ್ಣವಾದ ನಂತರ ಕೊಯಮುತ್ತೂರಿನಲ್ಲಿರುವ ನೌಕಾಬಲದ ವಿಮಾನ ಕೇಂದ್ರವನ್ನು ದಾಬೊಲಿಮ್‌ಗೆ ವರ್ಗಾಯಿಸಲಾಗುವುದು.

ಹಡಗುಗಳ ನಿರ್ಮಾಣ

ಪೋರ್ಚುಗೀಸರು ವ್ಯವಸ್ಥೆಗೊಳಿಸಿದ ಗೋವಾದ ನೌಕಾಗಾರವನ್ನು ಅಭಿವೃದ್ಧಿಗೊಳಿಸಿ ಹಡಗುಗಳ ನಿರ್ಮಾಣದಲ್ಲಿನ ಎಲೆಕ್ಟ್ರಿಕಲ್ ಮೆಕ್ಯಾನಿಕಲ್ ಮತ್ತು ಎಂಜಿನಿಯರಿಂಗ್ ಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಿ ಅದನ್ನು ಸಜ್ಜುಗೊಳಿಸಲಾಗಿದೆ. ಹಡಗು ನಿರ್ಮಾಣ ಕಾರ್ಯಕ್ಷೇತ್ರದಲ್ಲಿ ಅಪಾರ ಅನುಭವ ಮತ್ತು ಪರಿಶ್ರಮ ಹೊಂದಿರುತ್ತದೆ ಮುಂಬಯಿಯ ಮ್ಯಾಝಗಾನ್ ಡಾಕ್ಸ್ ಲಿ. ಸಂಸ್ಥೆಯು ಈ ನೌಕಾಗಾರದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದೆ, ಈಗ ಈ ನೌಕಾಗಾರವು ನೌಕೆಗಳ ದುರಸ್ತಿಕಾರ್ಯವನ್ನು ಮಾಡಬಲ್ಲದು.

ಮರ್ಮಗೋವಾ ಬಂದರು ರಾಷ್ಟ್ರದ ಪ್ರಧಾನ ಬಂದರುಗಳಲ್ಲೊಂದೆಂದು ಭಾರತ ಸರ್ಕಾರವು ಈಗಾಗಲೇ ಘೋಷಿಸಿದೆ. ಈ ಬಂದರಿನ ಸರ್ವತೋಮುಖ ಅಭಿವೃದ್ಧಿಯನ್ನು ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಿ ಖಾತೆ ಮತ್ತು ಸಾರಿಗೆ ಮಂತ್ರಿ ಖಾತೆಗಳು ಸಂಯುಕ್ತವಾಗಿ ನಿರ್ವಹಿಸುತ್ತಿವೆ. ನೌಕಾ ಬಲದ ಹಡಗುಗಳಿಗಾಗಿಯೇ ಪ್ರತ್ಯೇಕ ಲಂಗರು ನೆಲೆಯನ್ನು ಸಹಾ ವ್ಯವಸ್ಥೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಸೂಕ್ತ ಸೌಲಭ್ಯಗಳು ದೊರೆತ ನಂತರ ಗೋವಾ ಬಂದರಿನಲ್ಲಿಯೇ ನೌಕಾಬಲದ ಕೆಲವು ನೌಕೆಗಳನ್ನು ಖಾಯಂ ಆಗಿ ಇಡಲು ಸಹಾ ಕ್ರಮ ಕೈಗೊಳ್ಳಲಾಗುವುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ: ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿವೆ. ಹೇರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಪುರಂದರ ವಿಠಲನ ವಿಚಾರಗಳು

(೩ನೇ ಪುಟದಿಂದ)

ತ ಸಾರಾಮೃತ ಬರೆದರೂ ಪುರಂದರ ದಾಸನ ಸುಳಾದಿಯ ಭಾಗವನ್ನು ಉದಾಹರಿಸಿದ್ದಾನೆ ಹಲವೆಡೆ ಹೆಸರಿಸಿದ್ದಾನೆ. ಪುರಂದರನ ವಿದ್ಯಾಗುರುಗಳಾದ ಶ್ರೀ ವ್ಯಾಸರಾಯರು ಸ್ವತಃ ಈತನು ಉತ್ತಮ ಹರಿದಾಸನೆಂದು ಹೇಳಿದ್ದಾರೆ!

ಪುರಂದರನ ಕೃತಿಗಳಲ್ಲಿ ಮಾಧ್ವಪದ್ಧತಿಯ ವಿಚಾರಗಳು ಕಂಗೊಳಿಸುತ್ತಿವೆ; ಮಧ್ವಮತದಂತೆ ಪಂಚ ಭೇದಗಳು ಸೂಚಿಸಲಾಗಿವೆ. ಗುರುಗಳಾದ ಶ್ರೀ ವ್ಯಾಸರಾಯರನ್ನು ಕುರಿತು ಪ್ರತ್ಯೇಕ ಸುಳಾದಿ ಬರೆದಿದೆ, ದೇವತಾ ಪೂಜಾವಿಧಾನದಲ್ಲೂ ತಾರತಮ್ಯಾನುಸಾರವಾಗಿ ಆ ದೇವತೆಗಳು ನೀಡುವ ಫಲ-ಶಕ್ತಿ ವಿಶೇಷಗಳು ಹೇಳಿವೆ. ಮಹಾಭಾರತ ಕತೆಯ ಪ್ರಧಾನ ಘಟ್ಟವಾತ ದ್ರೌಪದೀ ವಸ್ತ್ರಾಪಹರಣವನ್ನು ಕುರಿತು ಎರಡು ಸೀಳವಾದ ಕೀರ್ತನೆಗಳು ಭಾವಪೂರ್ಣವಾಗಿವೆ. ಗಜೇಂದ್ರ ಮೋಕ್ಷದ ಕತೆ ಒಂದು ಪದದಲ್ಲಿ ಹಾಡಿದೆ. ಕುಮಾರವ್ಯಾಸನು ಕನ್ನಡದಲ್ಲಿ ಬರೆದಂತೆ, ಕೌರವನು ಕೃಷ್ಣನಿಂದಾಗಿ ಆಸ್ಥಾನದಲ್ಲಿ ಸಿಂಹಾಸನವುರುಳಿ ಬಿದ್ದ ಸಂಗತಿ ಕೀರ್ತನೆಗಳಲ್ಲಿ ವಿಸ್ತರಿಸಿಯದೆ. ಶ್ರೀ ಕೃಷ್ಣನು ಮಥುರೆಗೆ ಹೋಗುವಂದು ಗೋಪಿಯರು ವಿಲಾಪಿಸುವುದಲ್ಲದೆ, ಕೃಷ್ಣ ಗೋಪೀಯರ ಸರಸ ಸಲ್ಲಾಪಗಳು ಚಿತ್ರಿಸಲಾಗಿವೆ. ಗೋಪಿಯರು ಶ್ರೀ ಕೃಷ್ಣನ ಬಗೆಗೆ ದೂರಿದ ಪದಗಳಿವೆ.

ಲೌಕಿಕಾಚರಗಳು ಹೇಗೆ ತಪ್ಪಾಗಿವೆ, ಹೇಗೆ ಸರಿಯಾಗ ಬೇಕು, ಎಂಬೀ ವಿಚಾರಗಳು ಮಾರ್ಮಿಕವಾಗಿ ಹೇಳಿವೆ ಪುರಂದರ ವಿಠಲನ ಕೃತಿಗಳಲ್ಲಿ ಉದಾತ್ತ ಧ್ಯೇಯ ವಿಚಾರಗಳ ಸಮಾಕಲನವಿದೆ, ವಿಶ್ವಸಂದೇಶವೂ ಒಳಗೊಂಡಿದೆಯೆಂಬುದು ಸುವಿವರಣೀಯವಾಗಿದೆ

ಸಂಗೀತ- ಸಾಹಿತ್ಯ- ಹರಿಭಕ್ತಿಗಳೆಂಬ ಮುಪ್ಪುರಿಗಳಿಂದ ಹೊಸೆದ ಪುರಂದರ ವಿಠಲನ ಕೀರ್ತನೆಗಳು ಸರ್ವದಾ ಆಪ್ಯಾಯಮಾನವಾಗಿವೆ. ಇವನ್ನು ಅನುದಿನವೂ- ಯಥಾ ಶಕ್ತಿಯಾಗಿ- ಕ್ರಮವತ್ತಾಗಿ ಹಾಡುವುದರಿಂದ ಮಾನಸಿಕಾನಂದವೂ ಲೌಕಿಕ ಶಾಂತಿಯೂ ನೆಲಸುವುದಲ್ಲದೆ, ಪಾರಲೌಕಿಕವಾದ ಮುಕ್ತಿಯೂ ದೊರೆಯುವುದರಲ್ಲಿ ಸಂದೇಹವಿಲ್ಲ! "ಜಯ ಜಯ ಪುರಂದರ ವಿಠ!"

॥ಸಮಾಪ್ತ॥

ಕವಲು ದಾರಿ—ಕೆಂಪು ದೀಪ

ನನ್ನದು ಈ ಕನ್ನಡ ನಾಡು

—ಸುದಾಸ.

ಮಹಾರಾಷ್ಟ್ರೀಯರಲ್ಲಿ ಒಂದು ಗುಣವಿದೆ. ಅವರ ನಾಯಕರು ಏನು ಹೇಳುತ್ತಾರೋ, ಅದಕ್ಕೆ "ಸೈ" ಎಂದು ಬಿಡುವ ಒಂದು ಗುಣ ಅವರಲ್ಲಿದೆ. ಅದು ಸರಿಯಾಗಿರಲಿ, ಅಲ್ಲದಿರ, ಆ ಕುರಿತು ಅವರು ಹೆಚ್ಚು ಯೋಚಿಸುವದಿಲ್ಲ.

ಮರಾಠೀ ಬೆಳವಣಿಗೆಯ ಮಾತು ಬರಿದಾಗ ನಾಯಕರ ಮಾತಿಗೆ, ಅವರಲ್ಲಿ ಪ್ರತಿ ಪ್ರಶ್ನೆ ಏಳುವದೇ ಇಲ್ಲ ನಾಯಕರು ಅನ್ನುವದಕ್ಕೆ ಅಸ್ತು ಅಂದುಬಿಡುತ್ತಾರೆ.

ನಮ್ಮ ತುರ್ತುಪರಿಸ್ಥಿತಿಯ ಹೊತ್ತಿನಲ್ಲೂ ಅವರಿಗೆ ಕಾರವಾರ, ಬೆಳಗಾಂವ್ ಗೋವೆ ಪ್ರಾಮುಖ್ಯವಾಗಿತ್ತು.

ಅವರ ಅಭಿಲಾಷೆಗಳಿಗನುಸಾರವಾಗಿ ರಕ್ಷಣಾ ಮಂತ್ರಿ ಯಶವಂತರಾವ್ ಚವ್ಹಾಣರು ಕೂಡಾ ಗೋವೆಯು, ಮರಾಠಿಗರದ್ದಾಗಿಯೇ ಉಳಿಯುತ್ತದೆ ಎಂದರು.

ರಕ್ಷಣಾ ಮಂತ್ರಿಯವರು ಮುಂಬಯಿಯ ಮುಖ್ಯ ಮಂತ್ರಿಗಳಾಗಿ ಈ ವರೆಗೂ ಇರುತ್ತಿದ್ದರೆ, ಕನ್ನಡ ನಾಡಿನ ಹಲವು ಪ್ರದೇಶಗಳು ಮಹಾರಾಷ್ಟ್ರ ರಾಜ್ಯಕ್ಕೆ ಕಾಣಿಕೆಯಾಗಿ ಸಿಗುತ್ತಿತ್ತೋ ಏನೋ?

ಸಧ್ಯ ಆ ಮಾತು ಬೇಡ

ತಮಿಳು ನಾಡಿನ ಜನರಲ್ಲೂ ಒಂದು ಗುಣವಿದೆ ಅವರು ಭಾಷೆಯ ಬಗ್ಗೆಯೂ ಅಭಿಮಾನವುಳ್ಳವರಾಗಿದ್ದಾರೆ. ಜಾತಿಯ ಬಗ್ಗೆಯೂ ಅಭಿಮಾನವುಳ್ಳವರಾಗಿದ್ದಾರೆ. ತಮ್ಮದು ಪ್ರಥಮ ಸ್ಥಾನದಲ್ಲಿರ ಬೇಕು, ಎಂದು ತಮಿಳರು ಪ್ರಯತ್ನಿಸುತ್ತಾರೆ. ಏನೂ ತಿಳಿಯದ ಹುಂಬ ಕೂಡಾ ತನ್ನತನವನ್ನು ಬಿಟ್ಟುಕೊಡಲಾರ. ತಮಿಳು ಭಾಷೆಗೆ, ಅವಮಾನವಾಗುವದನ್ನು ಅವನೆಂದೂ ಸಹಿಸಲಾರ. ಅಂತೆಯೇ ತಮ್ಮ ಸ್ಥಳದಲ್ಲಿ ಇನ್ನೊಬ್ಬನ್ನು ಆಕ್ರಮಣ ಮಾಡಿಕೊಂಡಿರಲು ಅವರು ಬಿಡುವದಿಲ್ಲ ಇದಕ್ಕಾಗಿ ಅವರು ಪ್ರಾಣವನ್ನಾದರೂ ಒಪ್ಪಿಸುತ್ತಾರೆ ಆದರೆ ಸಹಿಸುತ್ತ ಸುಮ್ಮನಿರುವದಿಲ್ಲ.

ಅಭಿಮಾನ ಒಂಗಾಲಿಗಳಿಂದ ಕಲಿತುಕೊಳ್ಳಬೇಕು ಅವರಿಗೆ ಅವರ ಕಲೆ ಸಂಸ್ಕೃತಿ, ಸಾಹಿತ್ಯವನ್ನು ಬಿಟ್ಟರೆ, ಜಗತ್ತಿನ ಎಲ್ಲಾ ಸಾಹಿತ್ಯ, ಸಂಸ್ಕೃತಿ, ಕಲೆ, ಗೌಣವಾಗಿ ಕಾಣಿಸುತ್ತದೆ ತಮ್ಮ ಕಲೆ, ಸಾಹಿತ್ಯ ಸಂಸ್ಕೃತಿಯನ್ನು ಅವರು ಮೇಲೆತ್ತಿ ಹಿಡಿಯುತ್ತಾರೆ, ಅದರ ಕೆಳಗೆ ಜಗತ್ತೇ ಇರಬೇಕೆಂಬಷ್ಟು ಉತ್ಸಾಹ ಅವರಲ್ಲಿರುತ್ತದೆ.

ಅಭಿಮಾನ ಎಲ್ಲರಲ್ಲೂ ಇರುತ್ತದೆ. ಆದರೆ ಕನ್ನಡಿಗರಿಗೆ ಇರುವಷ್ಟು ಅಭಿಮಾನ ಬೇರೆಯಾರಿಗೂ ಇರುವದಿಲ್ಲ, ಎಂಬುದು ಕನ್ನಡಿಗರು ಹೆಮ್ಮೆ ಪಡಬೇಕಾದ ವಿಷಯ.

ಯಾರಲ್ಲೂ ಸಿಗಲಾರದ ಅಭಿಮಾನವನ್ನು ನಾವು ಉಳಿಸಿಕೊಂಡು ಬಂದಿದ್ದೇವೆ, ಬೆಳೆಸಿಕೊಂಡು ಬಂದಿದ್ದೇವೆ. ಅದನ್ನು ಕನ್ನಡಕ್ಕಾಗಿ ಪ್ರತ್ಯೇಕ ಎಂದೂ ಇತರ ಪ್ರಾಂತ್ಯಗಳವರು ಅಡಿಕೊಳ್ಳ ಬಹುದು.

ಕೇರಳದವರಿಗೂ] ನಮಗೂ ಇರುವ ವ್ಯತ್ಯಾಸವನ್ನೇ ಬೇಕಾಗಿದ್ದರೆ ಹೋಲಿಸಿ ನೋಡಿರಲ್ಲ!

ಅಲ್ಲಿರುವ ಅಂತಃಕಲಹವನ್ನು ಕಂಡು ಹೊಟ್ಟೆಗೆ ಹಾಲು ಸರಿದುಕೊಳ್ಳೋಣವೆನಿಸುತ್ತದೆ. ಆದರೆ ಕನ್ನಡದ ಕಾಸರಗೋಡನ್ನು ಅವರು ಸ್ವಾಹಾಮಾಡಲು ಕನ್ನಡಿಗರೇ ಕಾರಣರು, ಎಂದು ಆಡಿಕೊಳ್ಳುವ ಮಂದಿಯೂ ಇದ್ದಾರೆ.

ಇದು ಕನ್ನಡಿಗರ ಮೇಲೆ ಹೊರಿಸುವ ಅಪವಾದವಲ್ಲ. ಅದು ನಮ್ಮ ವೈಶಿಷ್ಟ್ಯವೆಂದು ಹೆಮ್ಮೆ ಪಟ್ಟುಕೊಳ್ಳುತ್ತ, ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಳ್ಳ ಬೇಕಾದ ವಿಷಯ.

ಇರಲಿ, ಈಗ ಇನ್ನೊಂದು ಸುದ್ದಿಯಿದೆ. ಇದು ನಿರಾಧಾರ ಸುದ್ದಿಯೇನೂ ಅಲ್ಲ.

ನಮ್ಮ ರಾಜಧಾನಿಯಲ್ಲಿ- ಸ್ವತಂತ್ರ ಪಕ್ಷದ ಸದಸ್ಯ ಮುಕ್ಕಣ್ಣಪ್ಪನವರು ಮಂಡಿಸಿರುವ ಸ್ವತಂತ್ರ ವಿಚಾರ.

ಅವರ ವಿಚಾರ ಹೀಗಿದೆ. ಪ್ರಸ್ತುತ ಇರುವ ಕನ್ನಡ ನಾಡನ್ನು ವಿಭಜನೆ ಮಾಡಿದರೆ, ಹಳೆ ಮೈಸೂರಿನ ಜನರಿಗೆ ಸೌಲಭ್ಯಗಳು ಸಿಗುತ್ತವೆ. ಆದಕ್ಕಾಗಿ ನಮ್ಮ ಮೈಸೂರು ರಾಜ್ಯವನ್ನು ಎರಡು ಮಾಡ ಬೇಕು ಎಂದು ಅವರು ಸೂಚನೆ ಕೊಡುತ್ತಾರೆ.

ಇದರಿಂದ ಯಾರಿಗೆ ಪ್ರಯೋಜನವಿದೆ? ಈ ಮಾತಿನಿಂದ—ಮಾತುಕೃತಿಯಲ್ಲಿಳಿದಾಗ ಪ್ರಯೋಜನ ಸಿಕ್ಕಬಹುದಾದುದು ಹತ್ತಾರು ಮಂದಿಗೆ ಮಾತ್ರ ಎನ್ನದೆ ವಿಧಿಯಿಲ್ಲ. ಆದರೂ....

ಇದನ್ನು ಕನ್ನಡನಾಡಿನ ಪ್ರಾರಬ್ಧ ಕರ್ಮ ಎನ್ನುವವರೂ ಇದ್ದಾರೆ! ಕನ್ನಡ ನಾಡಿನ ಏಕೀಕರಣಕ್ಕಾಗಿ ಹೋರಾಡಿದ ಮಂದಿಗೆ ಮುಕ್ಕಣ್ಣಪ್ಪನವರು ಸೂಚಿಸಿರುವ ಅಭಿಪ್ರಾಯದಿಂದ ಸಂತೋಷವಾಗಿರಬಹುದು, ಎಂಬುದನ್ನು ಅವರು ತಿಳಿಯುತಿಲ್ಲ ಏಕೋ, ಅದು ನಮಗೆ ತಿಳಿಯುತ್ತಿಲ್ಲ!

ಕನ್ನಡ ನಾಡು—ಕನ್ನಡ ಜನ ಒಂದಾಗ ಬೇಕು ಎಂದು ಹೋರಾಡಿರುವ ಮಂದಿ ಈಗ ಈ ವಿಭಜನೆಯ ಮಾತು ಕೇಳಿ ಸಧ್ಯ ಕನ್ನದ ನಾಡಿನಲ್ಲಿ ಇಂತಹ ಒಂದು ಪವಿತ್ರ ಕಾರ್ಯವಾದರೂ ನಡೆಯುತ್ತಿದೆಯಲ್ಲ, ಎಂದು ಸಮಾಧಾನಪಟ್ಟುಕೊಳ್ಳಬಹುದು.

ಒಳಿತಾದುದನ್ನೋ ಕೆಡುಕೆನಿಸುವದನ್ನೋ ಅಂತೂ ಏನಾದರೊಂದನ್ನು ಮಾಡಬೇಕು ಎಂದು ಎಲ್ಲರೂ ಬಯಸುತ್ತಾರೆ. ಒಳಿತಾದುದನ್ನೇ ಸಾಧಿಸುತ್ತೇವೆ ಎಂದು ಪ್ರತಿಯೊಬ್ಬರೂ ತಿಳಿದಿರುತ್ತಾರೆ. ಯಾರೂ ಸ್ವೇಚ್ಛೆಯಿಂದ ಕೇಡು ಬಗೆಯುವದಿಲ್ಲ. ಕೇಡು ಬಗೆದರೂ, ಅದೂ ಒಳಿತಿಗಾಗಿಯೇ ಎಂದು ಅಂತಹ ಮಂದಿ ಯೋಚಿಸುತ್ತಾರೆ

ಕನ್ನಡ ನಾಡಿನ ಹರಿದು ಹಂಚಿ ಹೋಗಿರುವ ಭಾಗಗಳು ಕನ್ನಡ ನಾಡಿಗೆ ಸೇರಿಕೊಳ್ಳಬೇಕು. ಕನ್ನಡ ಪ್ರದೇಶದ ಒಂದು ಇಂಚು ನೆಲವೂ, ಕನ್ನಡ ನಾಡಿನ ಹೊರಗೆ ಉಳಿಯ ಬಾರದು, ಎಂದು ಶ್ರಮಿಸಬೇಕಾಗಿದ್ದ, ನಮ್ಮ ಮುಖಂಡರು ಕನ್ನಡ ನಾಡಿನ ವಿಭಜನೆಯ ಕಾರ್ಯಕ್ಕಿಳಿಯುತ್ತಿದ್ದಾರೆ, ಎಂದರೆ ಉಳಿದ ಪ್ರಾಂತಗಳವರು ಚಪ್ಪಾಳೆ ತಟ್ಟಿಯಾರು. 'ಭಲೆ, ಭಲೆ' 'ನಿಮ್ಮ ಸಾಹಸಕ್ಕೆ ಮೆಚ್ಚಿದೆ' ಎಂದು ಕೊಂಡಾಡಿಯಾರು.

ಇದು ಕನ್ನಡ ನಾಡಿನ ವೈಶಿಷ್ಟ್ಯ. ಯಾರಿಗೂ ಬೇಡವಾದ ಕಾರ್ಯವನ್ನು ಸಾಧಿಸಲು ನಾವು ಮುಂದುವರಿದಂತೆ ಬೇರೆ ಯಾವ ಭಾಷಾ ಸೋದರರೂ ಮುಂದುವರಿಯುತ್ತಿಲ್ಲ, ಎಂಬುದೇ ಕನ್ನಡ ನಾಡಿನ ನೆಲದ, ಜಲದ ವೈಶಿಷ್ಟ್ಯ?

ಆದಕ್ಕೆ ಕಾರಣವಿದೆ. ನಾವು ಇನ್ನೊಬ್ಬರ ಅನುಕರಣೆ ಮಾಡುವದಿಲ್ಲ. ಅನುಕರಣೆಯೆಂದರೆ ನಮಗೆ ಮೂಗಿನ ಮೇಲೆ ಸಿಟ್ಟೇರುತ್ತದೆ.

ಅಂತೆಯೇ ಉಳಿದೆಲ್ಲ ಪ್ರಾಂತಗಳವರಿಂದ ಆಗಲಾರದ್ದನ್ನು ನಾವು ಸಾಧಿಸುತ್ತಿದ್ದೇವೆ.

ಇದು ತುಂಬಾ ಹೆಮ್ಮೆಯ ವಿಷಯ, ಅಲ್ಲ?

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ನ್ಯಾಯ ಲಯ

(೨ನೇ ಪುಟದಿಂದ)

ವೇದನೆಯ ಭರದಲ್ಲಿ ಯೋಚನೆ ತಡೆಯಿತು. ಆತ ಕ್ಷಣ ಹೊತ್ತು ಸುಮ್ಮನಾದ. ಈಗ ಆತನ ತಲೆಯಲ್ಲಿ ತಿರುಗುತ್ತಿದ್ದುದು ತನ್ನ ಅನಾರೋಗ್ಯದ ವಿಚಾರವೇ. ನಾಲ್ಕು ವರ್ಷಗಳಿಂದ ಕೆಮ್ಮು, ಎದೆನೋವು, ಜ್ವರವೆಂದು ನರಳುತ್ತಲೇ ಕೆಲಸ ಮಾಡುತ್ತಿದ್ದಾತನಿಗೆ ಇತ್ತೀಚೆಗೆ ಏಳಲಾರದಷ್ಟು ನಿಶ್ಶಕ್ತಿ ಬಂದಿತ್ತು. ಹಳ್ಳಿಯ ಔಷಧ, ಕಷಾಯಗಳನ್ನೆಷ್ಟೋ ಕುಡಿದು ಕುಡಿದು ಬೇಸರ ಬಂದಿತ್ತು. ಚೆನ್ನಿ ಬೆಳಗ್ಗಿನಿಂದ ರಾತ್ರಿಯ ವರೆಗೆ ಶಕ್ತಿ ಮೀರಿ ಕೆಲಸ ಮಾಡಿ ಸೋತು ಹೋಗುತ್ತಿದ್ದಳು. ಆದರೆ ಮಾಡುವುದೇನು?

ಪುನಃ ಯೋಚನೆ, ಒಂದರ ಹಿಂದೊಂದರಂತೆ ಮುನ್ನುಗ್ಗುವ ಯೋಚನೆ ನೆಮ್ಮದಿಯನ್ನು ಕೆಡಿಸುತಿತ್ತು, ಹೃದಯವನ್ನು ಹಿಂಡುತಿತ್ತು, ದೇಹವನ್ನು ನಡುಗಿಸುತಿತ್ತು.

ನಾಳೆ ಜಮೀನ್ದಾರರ ಬಿಟ್ಟಿಗೆ ಹೋಗಲೇ ಬೇಕು. ಇದು ಮೂರನೇ ಬಾರಿಯ ಕರೆ. ಈ ಬಾರಿ ತಪ್ಪಿದರೆ ಖಂಡಿತ ಕ್ಷಮೆ ದೊರೆಯದು. ಮಾತ್ರವಲ್ಲ, ಎಷ್ಟೋ ವರ್ಷಗಳಿಂದ ತಲೆತಲಾಂತರದಿಂದ ಬಾಳಿ ಬದುಕಿದ ನೆಲದಾಸೆಯನ್ನೂ ಬಿಡಬೇಕಾದೀತು. ಆದರೆ ಹೋಗುವುದು ಹೇಗೆ? ನಾಲ್ಕು ಹೆಜ್ಜೆ ಸರಿಯಾಗಿ ನಡೆಯಲಾರದ ತಾನು ಅರ್ಧ ಮೈಲು ದೂರದಲ್ಲಿರುವ ಜಮೀನ್ದಾರರ ಮನೆಗೆ ಹೋಗಿ ಅವರು ಹೇಳುವ ಕಠಿಣ ಕೆಲಸಗಳನ್ನು ಪೂರೈಸುವುದು ಸಾಧ್ಯವೇ? ತನ್ನ ಈಗಿನ ಪರಿಸ್ಥಿತಿಯಲ್ಲಿ ಅಷ್ಟು ದೂರ ನಡೆದರೇ ಜೀವ ಸಹಿತ ಹಿಂದಿರುಗುವಂತಿಲ್ಲ. ಇನ್ನು ಕೆಲಸದ ಯೋಚನೆಯಂತೂ ದೂರವೇ.

ಅಷ್ಟರಲ್ಲಿ ಅಂಗಳದಲ್ಲಿ ಹುಲ್ಲಿನ ಹೊರೆ ಹೊತ್ತು ಹಾಕಿದ ಸದ್ದಿನಿಂದ ಚೆನ್ನಿ ಬಂದಳೆಂಬುದು ತಿಳಿಯಿತು. ಚೆನ್ನಿ ಮೆಟ್ಟಿಲೇರುತ್ತಲೇ ಮಲಗಿದ್ದ ಕರಿಯನತ್ತ ದಿಟ್ಟಿಸುತ್ತಾ ಕೇಳಿದಳು.

"ಏನು? ಇವತ್ತು ನಿದ್ದೆಯೂ ಬರ್ಲಿಲ್ವೆ? ಹಸಿವಾಗ್ತಿದೆಯೆ? ಈಗ ಗಂಜಿ ತರ್ತೀನಿ."

"ಹಸಿವೆ ಇಲ್ಲ ಚೆನ್ನೀ. ನೀನು ಕೂತ್ಕೋ. ಗಂಜಿ ಆ ಮೇಲೆ ತಾ." ಎಂದು ನಿಟ್ಟುಸಿರು ಬಿಟ್ಟ ಕರಿಯನ ಹರಕುಚಾಪೆಯ ಬಳಿ ಚೆನ್ನಿ ಕುಳಿತಳು.

"ಯಾಕೆ? ಏನಾಗುತ್ತೆ? ಏನಾಯ್ತು?" ಕಾತರದಿಂದ ಕೇಳಿದಳಾಕೆ.

"ಆಗುವುದೇನು ಹೇಳು. ನಾಳೆ ಜಮೀನ್ದಾರ್ರ ಬಿಟ್ಟಿಗೆ ನಾನು ಬರಲೇ ಬೇಕಂತೆ. ಅಷ್ಟೆ." ಪುನಃ ನಿಟ್ಟುಸಿರು,

"ನಾಳೆ...... ನೀವು! ಯಾರು ಹೇಳಿದ್ರು?" ಅವ್ರಿಗೇನು ಕಣ್ಣು ಕಾಣಿಸೋದಿಲ್ವಾ?"

"ಹೌದು ಚೆನ್ನಿ. ನಾನು ಜೀವದಿಂದಿದ್ದದ್ದು ಕಾಣಿಸೋದ್ರಿಂದಲೇ ಕರೆದ್ರು. ಸಾವಾದ್ರೂ ಬಂದಿದ್ರೆ ಈ ರಗಳೆ ಇರ್ಲಿಲ್ಲ" ಯಾತನೆಯ ಧ್ವನಿಯಿಂದ ನುಡಿದ ಕರಿಯ.

"ಯಾಕೆ ಹಾಗೆಲ್ಲಾ ಮಾತಾಡ್ತೀರಿ?"

"ಮತ್ತೆ ಏನೆನ್ನೋದು ಚೆನ್ನೀ? ನಾಳೆ ಏನ್ಮಾಡೋದು ಹೇಳು. ತಪ್ಪಿಸಿಕೊಂಡ್ರೆ ನಮ್ಮ ಗತಿ ಮುಗಿದೇ ಹೋಗುತ್ತೆ." ಎನ್ನುತ್ತಾ ಕೆಮ್ಮತೊಡಗಿದನಾತ.

"ಆದುದಾಗುತ್ತೆ. ದೇವರಿದ್ದಾನೆ. ನೀವೀಗ ಸ್ವಲ್ಪ ಗಂಜಿ ಕುಡೀರಿ" ಎಂದು ಒಳಗೆ ಹೋದಳು ಚೆನ್ನಿ.

ಆದರೆ ಗಂಟಲೊಣಗಿದ ಕರಿಯನಿಗೆ ಬಾಯಾರಿಕೆಯರಿವು ಇರಲಿಲ್ಲ. ಅವರಿಬ್ಬರ ಮಿದುಳೂ ಯೋಚಿಸಿ ಯೋಚಿಸಿ ದಣಿದಿತ್ತು. ಆದರೂ ನಾಳಿನ ದಾರಿ ಮಾತ್ರ ತೋರಲಿಲ್ಲ.

ಮರುದಿನ ಬೆಳಗ್ಗೆ ಬೇಗನೇ ಎದ್ದು ಕರಿಯನಿಗೆ ಗಂಜಿಯ ನೀರು ಕುಡಿಸಿ ಹೊರಟಳು ಚೆನ್ನಿ.

"ನೀವೇನೂ ಹೆದರ್ಬೇಡಿ ಧನಿಗ್ಳಿಗೆ ಕೈ ಮುಗಿದು ಕೇಳಿಕೊಳ್ತೀನೆ. ನನ್ನಿಂದಾದ ಚಾಕರಿ ಮಾಡ್ತೀನೆ ಅನ್ತೀನೆ." ಎಂದು ಪತಿಯನ್ನು ಸಮಾಧಾನ ಪಡಿಸಿ ಹೊರಟೇ ಬಿಟ್ಟಳಾಕೆ.

"ಊಹ್ಞೂ. ಏನೇನೂ ಪ್ರಯೋಜನವಿಲ್ಲ" ಎಂದು ಗೊಣಗುತ್ತಾ ನಿಟ್ಟುಸಿರು ಬಿಟ್ಟ ಕರಿಯ.

ಜಮೀನ್ದಾರ ರಂಗರಾಯರು ಮುಂಜಾನೆಯ ಚಹಾ ಸೇವಿಸಿ ಸಿಗರೇಟಿನ ಹೊಗೆ ಬಿಡುತ್ತಾ ಆರಾಮಾಸನದಲ್ಲಿ ಒರಗಿದ್ದರು. ಅವರ ಆಪ್ತ ಬಂಟನೊಬ್ಬ ಅಲ್ಲೇ ನೆಲದ ಮೇಲೆ ಕುಳಿತು ವೀಳ್ಯ ಜಗಿಯುತ್ತಲಿದ್ದ.

ಚೆನ್ನಿಗೆ ಜಮೀನ್ದಾರರ ಇದಿರು ಇದಿರು ಬರುವುದೆಂದರೆ ಮೊದಲಿನಿಂದಲೂ ತುಂಬ ಭಯ, ಮೈ ನಡುಕ. ಆಕೆ ನಡುಗುತ್ತಲೇ ಬಂದು ಜಮೀನ್ದಾರರ ಅಂಗಳದಲ್ಲಿ ನಿಂತು ದೀನ ನೇತ್ರಗಳಿಂದ ಜಮೀನ್ದಾರರನ್ನು ದಿಟ್ಟಿಸುತ್ತಿದ್ದಳು.

ಜಮೀನ್ದಾರರು ಕುಳಿತಿದ್ದ ಸೋಮನತ್ತ ನೋಡಿದರು. ಸೋಮಪ್ಪ ಮುಗುಳ್ನಕ್ಕು ಚೆನ್ನಿಯತ್ತ ನೋಡಿದ.

"ಏನು ಬಂದೆ ಚೆನ್ನೀ?" ಎಲ್ಲವನ್ನೂ ತಿಳಿದಿದ್ದರೂ ತಿಳಿಯದವನಂತೆ ಕೇಳಿದ ಸೋಮಪ್ಪ

"ಅವರಿಗೆ ಉಷಾರಿಲ್ಲ. ಏಳಲಿಕ್ಕೂ ಸಾಧ್ಯವಿಲ್ಲದಂತಾಗಿದೆ. ಬಡವರ ಮೇಲೆ ದಯೆ ತೋರಿ." ಸೋಮಪ್ಪ ಧನಿಗಳತ್ತ ಒಮ್ಮೆ ನೋಡಿ ಅವರ ಇಂಗಿತವನ್ನರಿತವನಂತೆ ನುಡಿದ.

"ದಯೆ ತೋರಿದ್ದು ಜಾಸ್ತಿಯಾಯ್ತೂಂತ ಧನಿಗಳು ಹೇಳ್ತಾರೆ ಚೆನ್ನಿ. ಎರಡು ಸಲ ಸುಮ್ಮನಿದ್ರು. ಈ ಸಲ ತಪ್ಪಿಸ್ಕೊಂಡ್ರೆ ಜಾಗ ಬಿಡ್ಬೇಕನ್ತೀನು. ಸುಮ್ನೆ ನಿನ್ನ ಗೋಳುಕೇಳ್ತಾ ಕೂತ್ರೆ ಪ್ರಯೋಜನವಿಲ್ಲ."

"ಅವ್ರ ಬದ್ಲು ನೀವ್ಹೇಳಿದ ಕೆಲ್ಸ ನಾನು ಮಾಡ್ತೀನೆ. ದಮ್ಮಯ್ಯ....ಜಾಗ ಬಿಟ್ರೆ ನಾವು ಬದುಕೋದು ಹೇಗೆ?"

"ಏನಂತೆ ಸೋಮು? ಈ ಮುದ್ಕಿ ಕೆಲಸ ಮಾಡ್ತಾಳಾ? ಹ್ಹ ಹ್ಹ.... ನಡೆ ಹೂಚಿ ಅನಿಷ್ಟಗಳು. ಹಗಲು ರಾತ್ರಿ ನಿಮ್ಮ ಗೋಳು ಕೇಳಿ ಕೇಳಿ ಸಾಕಾಯ್ತು ಇರೋಕೆ ಜಾಗ ಇಲ್ದಿದ್ರೆ, ಗುಡ್ಡೇಲಿ ಬಿದ್ಕೊಳ್ಳಿ. ಯಾರೀಗೇನು? ಕೆಲಸ ಮಾಡಲು ಸಾಧ್ಯವಿಲ್ದಿದ್ರೆ ಎದ್ದು ಹೋಗ್ಬೇಕು. ಅಷ್ಟು ಕಾಲದಕ್ಕೆ ಕಳೆದ ವರ್ಷದ ಗೇಣಿಯೂ ಬಾಕಿ ಇದೆ. ಅದೆಲ್ಲ ತೀರುಸುವುದು ನಿಮ್ಮ ಹಣೇಲಿ ಬರೀಲಿಲ್ಲ. ಹೋಗು. ಕೂಡ್ಲೇ ಜಾಗಬಿಟ್ಟು ಹೋಗ್ಬೇಕು. ರಗಳೆ ಮಾಡ್ಬೇಡ. ಎಂದು ಗರ್ಜಿಸಿದರು ರಂಗರಾಯರು.

"ಒಂದು ಸಲಕ್ಕೆ ನಡುಗುವ ಧ್ವನಿಯಿಂದ ನುಡಿದಳಾಕೆ.

'ಎಷ್ಟು ರಗಳೆ ಮಾಡ್ತಿ ಹೇಳು. ತೊಲಗಾಚೆ. ಹೇಳಿದ್ದು ಕೇಳಿಸಿಲ್ವಾ?"

ಚೆನ್ನಿ — ಮೌನವಾಗಿ ನಿಂತಳು.

"ಧನಿಯರ ಮಾತು ಕೇಳ್ಲಿಲ್ಲ ಚೆನ್ನಿ. ಇನ್ನು ಮರ್ಯಾದೆಯಾಗಿ ಹೊರಟೋಗೋದು ಮೇಲು ಮತ್ತು ಆದಷ್ಟು ಬೇಗನೇ ಗಂಟು ಮೂಟೆಕಟ್ಟಿ" ಸೋಮಪ್ಪ ನಗುತ್ತಾ ನುಡಿದ.

"ಹ್ಞಾಂ...ಮತ್ತೆ...ನಿಮ್ಮ ಹೋರಿ ಜತೆ ಕಳಿಸಿಬಿಡ್ಬೇಕು. ಕಳೆದ ವರ್ಷದ ಗೇಣಿ ಬಾಬ್ತು ನೆನಪಿರಲಿ"

ಚೆನ್ನಿ ತಗ್ಗಿಸಿದ ತಲೆಯನ್ನೆತ್ತದೆಯೇ ಹೊರಟಳು ಇನ್ನೂ ನಿಂತರೆ ಸೋಮಪ್ಪನೇ ಹೊರದೂಡಲು ಸಿದ್ಧನಿದ್ದ.

ಮೂವತ್ತರೊಳಗಿನ ಚೆನ್ನಿ ಬಾಳ ಬೇಗೆಯಲ್ಲಿ ಬೆಂದು ಹಣ್ಣಾದ ಚೆನ್ನಿ ಜಮೀನ್ದಾರರಿಗೆ ಮುದುಕಿಯಾಗಿ ಕಂಡಳು. ತಮಗಿಂತಲೂ ದೊಡ್ಡ ಅಂತಸ್ತಿನ ವರ ದೊರೆಯಬೇಕೆಂದು ಕಾದು ಕಾದು ಮದುವೆಯಾಗದೆ ಉಳಿದ ಇಪ್ಪತ್ತೆಂಟರ ಅವರ ಮಗಳು ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದ ಸಣ್ಣ ಹುಡುಗಿಯಾಗಿದ್ದಳು!

ಅವಮಾನ, ವ್ಯಥೆ, ಯೋಚನೆಗಳಿಂದ ಕಂಗೆಟ್ಟ ಚೆನ್ನಿ ಭಾರವಾದ ಹೆಜ್ಜೆಗಳನ್ನಿಡುತ್ತಾ ಮನೆಸೇರಿದಳು.

ಅವಳ ಮುಖ ನೋಡಿಯೇ ಫಲಿತಾಂಶವನ್ನೂಹಿಸಿದ ಅಲ್ಲ.. ಮೊದಲೇ ಊಹಿಸಿದ್ದ ಕರಿಯ ಮಾತನಾಡದೆ ಮಲಗಿಯೇ ಇದ್ದ.

ಎಲ್ಲಿಂದಲೋ ಬಂದ ಬಿರುಗಾಳಿ ಒಮ್ಮೆಯೇ ಬೀಸಿಬಿಟ್ಟಿತು. ಅಚೇತನಾವಸ್ಥೆಯಲ್ಲಿ ಮಲಗಿದ್ದ ಕರಿಯನನ್ನ ನಾಲ್ಕಾರು ಯುವಕರ ಸ್ಫೂರ್ತಿದಾಯಕ ಮಾತಿನ ವೈಖರಿ ಹೊಡೆದೆಬ್ಬಿಸಿತು. ಏನು ಮಾಡಲೂ ತೋಚದೆ ಕೈಕಟ್ಟಿ ಕುಳಿತ ಚೆನ್ನಿ ಕಣ್ತೆರೆದಳು.

"ನೀವ್ಯಾಕೆ ಹೆದರ್ತೀರಿ? ಗೇಣಿ ಬಾಕಿ ಇದ್ರೆ ಮುಂದಕ್ಕೆ ಸಲ್ಲಿಸ್ತೇವೆ ಅನ್ನಿ. ಭಾಗ ಬಿಡ್ಬೇಕಂತೆ ಸರಿಯಾಗಿ ಗೇಣಿ ಸಲ್ಲಿಸ್ತಾ ಇದ್ರೆ ಭಾಗ ಬಿಡ್ಬೇಕಾಗಿಯೇ ಇಲ್ಲ. ಅಲ್ಲದೆ ಬಿಡಿಸುವುದು ಅವರಿಂದ ಸಾಧ್ಯವೂ ಇಲ್ಲ. ನಿಮಗೆ ಗೊತ್ತಿಲ್ಲ. ನೋಡಿ ಬೇಕಾದರೆ ನಾವಿದ್ದೇವೆ ಧೈರ್ಯಕ್ಕೆ." ಮಗನೊಂದಿಗೆ ಬಂದ ಆ ಯುವಕನ ಸ್ಫೂರ್ತಿಯನ್ನು ನೋಡಿದ ಕರಿಯ ತಲೆದೂಗಿದ. ಬೆಳೆದ ಮಗನನ್ನು ಕಣ್ತುಂಬ ನೋಡಿದ ಚೆನ್ನಿ ಸಮಾಧಾನದ ಉಸಿರು ಬಿಟ್ಟಳು.

ಯುವಕರು ಆ ವೇಶದ ಮಾತಿನ ಪ್ರಭಾವವೋ, ಅಥವಾ ಅಲ್ಲಿಂದ ಹೋದರೆ ಮುಂದೆ ಬದುಕುವುದೆಲ್ಲಿ ಎಂಬ ಸಮಸ್ಯೆಯ ಪರಿಣಾಮವೋ ಅಂತೂ ಕರಿಯ ಗುಡಿಸಲಿನಿಂದ ಏಳಲೇ ಇಲ್ಲ. ಹತ್ತು ಸಲ ಜಮೀನ್ದಾರರ ಕರೆ ಬಂತು ಕರಿಯನಿಗೆ. ಕರಿಯ ಹೆದರಿ ಹೋಗಲಿಲ್ಲ. ಹೋಗುವ ಚೈತನ್ಯವೂ ಇರಲಿಲ್ಲ. ಮಾತ್ರವಲ್ಲ ಜಮೀನ್ದಾರರ ಆಜ್ಞೆಯನ್ನು ಪಾಲಿಸದ ಅಪರಾಧಕ್ಕೆ ತನ್ನ ಸಮಾಧಿ ಅವರ ಮನೆಯಂಗಳದಲ್ಲೇ ಆದೀತೆಂದು ಬೆದರಿದನಾತ.

ಮಗ ಮತ್ತು ಅವನ ನಾಲ್ಕಾರು ಸಂಗಡಿಗರು ಧೈರ್ಯ ಮತ್ತು ಭರವಸೆಯ ಮಾತುಗಳನ್ನಾಡುತ್ತಲೇ ಇದ್ದರು. ಅವರ ಆವೇಶದ ನುಡಿಗಳನ್ನು ಕೇಳಿದಾಗ ಕರಿಯನಿಗೂ ತುಸು ಸಮಾಧಾನ ಆದರೂ.... ಒಳಗಿಂದೊಳಗೇ ಒಂದು ರೀತಿಯ ಅಳುಕು.

ಮಧ್ಯಾಹ್ನದ ಉರಿ ಬಿಸಿಲು ಚೆನ್ನಿ ಹೊಲಕ್ಕೆ ದುಡಿಯಲು ಹೋಗಿದ್ದಳು ಕರಿಯ ಹರಕು ಚಾಪೆಯ ಮೇಲೆ ಕುಳಿತು ಯೋಚಿಸುತ್ತಿದ್ದ. ಮಗ ಯುವಕರೊಂದಿಗೆ ತನ್ನ 'ಆದರ್ಶ'ವನ್ನು ಹಳ್ಳಿಗೆಲ್ಲ ಬೆಳಗಿಸಲೋಸುಗ ತೆರಳಿದ್ದ.

"ಗೇಣಿ ಸರಿಯಾಗಿ ಕೊಡಿ. ಆದರೆ ಇಷ್ಟ ಬಂದಾಗ ಕರೆಯುವ ಬಿಟ್ಟಿಗೆ ಹೋಗಬೇಡಿ. ಅನುಕೂಲವಿದ್ದರೆ ಬಿಟ್ಟಿ ಮಾಡಿ. ಅ

REGD. No. B. G. 176
LICENCE No. 31
Licensed to Post without Prepayment

ತನಿಯ ಮತ್ತು ಅವನ ಸಂಗಡಿಗರು ಉತ್ಸಾಹದಿಂದ ಹೇಳುತ್ತಿದ್ದರು. ಹಳ್ಳಿಗರು ಸೋಜಿಗದಿಂದ ಕಿವಿಗೊಟ್ಟು ಆಲಿಸುತ್ತಿದ್ದರು.

ಕರಿಯ ಯೋಚಿಸುತ್ತಾ ಕುಳಿತಿದ್ದ.

"ಮಕ್ಕಳ ಮಾತು ಸುಳ್ಳಲ್ಲ. ಈ ನರಿಗೆ ತಲೆತಗ್ಗಿಸಿ ಬಗ್ಗಿ ಅನುಭವಿಸಿದ್ದಾಯ್ತು. ಇಲ್ಲವಾದರೆ ಈಗ ನನ್ನನ್ನೂ ಜಮೀನ್ದಾರ್ರು ಏನು ಮಾಡಿದ್ರು? ಏನು ಮಾಡುವಂತಿದೆ?"

ಕರಿಯನ ಯೋಚನೆ ಮುಂದೆ ಸಾಗುತ್ತಲೇ ಇತ್ತು.

"ಏನು ಕರಿಯಾ? ಏನು ಮಾಡಿದ್ದಿ?" ಕರ್ಕಶವಾಗಿ ಕೂಗಿದರು ಯಾರೋ.

ಕರಿಯ ಬೆಚ್ಚಿಬಿದ್ದ.

. ಜಮೀನ್ದಾರರ ನಾಲ್ಕಾರು ಆಳುಗಳು ನಿಂತಿದ್ದರು. ಕರಿಯ ಬೆದರಿದ.

"ಏನು? ಏನ್ಬೇಕಾಗಿತ್ತು?' ತೊದಲುತ್ತಾ ನುಡಿದ. ಅವನ ಯೋಚನೆ ತಲೆ ಕೆಳಗಾಗಿತ್ತು.

"ಜಮೀನ್ದಾರ್ರು ಅಂದ್ರೆ ಏನೆಂತ ತಿಳ್ಕೊಂಡಿ? ಹ್ಯಾಗ ಬಂದ ಮೇಲೆ ಭಾರೀ ಸೊಕ್ಕು ಬಂದಿದೆ ಅಲ್ವಾ?"

ಎನ್ನುತ್ತಾ ಒಬ್ಬೊಬ್ಬರಾಗಿ ಒಳ ನುಗ್ಗಿದರವರು. ಕರಿಯ ದಿಗ್ಭ್ರಾಂತನಾಗಿ ಅವರನ್ನೇ ದಿಟ್ಟಿಸಿದ. ಉಣ್ಣಲು ಒಂದು ತುತ್ತು ಅನ್ನಕ್ಕಾಗಿ ಜಮೀನ್ದಾರರ ಮುಖ ನೋಡಬೇಕಾದ ಪರಿಸ್ಥಿತಿಯ ಕಡೆಗಿಂತಲೂ ಹೀನ ಸ್ಥಿತಿಯ ಬಡವರೂ ಜಮೀನ್ದಾರರ ಭಟರಾಗಿ ತನ್ನನ್ನು ಹೀಯಾಳಿಸುತ್ತಿದ್ದರು. ಮಡದಿ ಮಕ್ಕಳು ಅನ್ನಕ್ಕಾಗಿ ಹಂಬಲಿಸುವಾಗಲೂ ತಾವು ಜಮೀನ್ದಾರರ ಮನೆಯಲ್ಲಿ ಹೊಟ್ಟೆ ತುಂಬಿಸಿಕೊಂಡು ನಿಶ್ಚಿಂತರಾಗಿರುವ ಮನುಷ್ಯ ಪ್ರಾಣಿಗಳು ಬಡವನಾದರೂ ಗೌರವದಿಂದ ಜೀವಿಸ ಬಯಸುವ ಮನುಷ್ಯನ ಸರ್ವನಾಶಕ್ಕಾಗಿ ಸಿದ್ಧರಾಗಿದ್ದರು. ಕರಿಯ ತುಸು ಹೊತ್ತು ಕಂಗಾಲಾಗಿ ನೋಡಿದ. ಅದರೆ ಅಷ್ಟರೊಳಗೇ ಅವನ ಆಸ್ತಿಯೆಂತಿದ್ದ ಬೀಜಕ್ಕೆಂದಿಟ್ಟ ಭತ್ತ, ಮಳೆಗಾಲದ ಊಟಕ್ಕೆಂದಿಟ್ಟ ಅಕ್ಕಿ, ಮುಡಿ ಕಾಸುಗಳಿರುವ ಹರಕು ಪೆಟ್ಟಿಗೆ ಎಲ್ಲವನ್ನೂ ತೆಗೆದು ಹೊರಗೆಸೆಯಲಾರಂಭಿಸಿದ್ದರವರು.

ಕರಿಯನ ತಾಳ್ಮೆ ಮೇರೆ ಮೀರಿತು. ಆತ ಎದ್ದು ಅವರಿಗಡ್ಡವಾಗಿ ನಿಂತ.

"ಇದೇನನ್ಯಾಯ! ಇದೇನು ಮಾಡುತ್ತೀರಿ?"

"ಅನ್ಯಾಯ! ನ್ಯಾಯದಿಂದ ಹೇಳಿದ್ರೆ ಮನೆ ಬಿಡಲ್ಲ. ಈಗೇನು ಮಾಡ್ತಿ? ಹೋಗು ನಿನ್ನ ಸಾಮಾನು ಯಾರಿಗ್ಬೇಕಾಗಿದೆ? ಹೋರಿ ಜತೆ ಮಾತ್ರ ಬಿಟ್ಟು ಎಲ್ಲಿಗ್ಬೇಕಾದರೂ ಹೋಗು." ಎನ್ನುತ್ತಾ ಮಧ್ಯಾಹ್ನದ ಊಟಕ್ಕೆಂದು ಮಾಡಿಟ್ಟ ಗಂಜಿಯ ಮಡಕೆಯನ್ನೆತ್ತಿ ಹೊರಗೆಸೆದ. ಅದು ಒಡೆದು ಗಂಜಿ ಅಂಗಳ ತುಂಬ ಹರಡಿತು.

ಕರಿಯನ ಹೊಟ್ಟೆಯಲ್ಲಿ ಬೆಂಕಿಯ ಜ್ವಾಲೆಯುರಿಯಿತು. ಆತನ ಕಾಯಿಲೆ ನಿಶಕ್ತಿಯ ಪರಿವೆ ಎತ್ತಲೋ ಹೋಯಿತು. ಆತ ಎದ್ದು ಚೆಲ್ಲಿದಾತನ ಕತ್ತು ಹಿಡಿದು ಹೊರಗೆದೂಡ ಲೆತ್ನಿಸಿದ. ಜಮೀನ್ದಾರರ ಮನೆಯಲ್ಲಿ ಚೆನ್ನಾಗಿ ತಿಂದು ಕೊಬ್ಬಿದ ಆ ಮನುಷ್ಯ ಅವಮಾನದಿಂದ ಕೆರಳಿದ. ಆತ ಕರಿಯನನ್ನೆಳೆದು ಹೊರಗೆ ದೂಡಿದರಭಸಕ್ಕೆ ಮೊದಲೇ ಅಶಕ್ತನಾದ ಕರಿಯ ಮೆಟ್ಟಲಿನಿಂದ ಕೆಳಗೆ ಉರುಳುತ್ತಾ ಬಿದ್ದ. ನೆಲಕ್ಕುರುಳಿದ ಕರಿಯನ ಮೂಗು, ಬಾಯಿಯಲ್ಲಿ ರಕ್ತ ಒಸರ ತೊಡಗಿ. ಕರಿಯನ ಪ್ರಜ್ಞೆತಪ್ಪಿತು. ಹೆದರಿದ ಆಳುಗಳು ಹೋರಿಗಳನ್ನಟ್ಟಿಕೊಂಡು ವೇಗವಾಗಿಹೋಗಿಬಿಟ್ಟರು.

ಚೆನ್ನಿ ಬರುವಾಗ ಎಲ್ಲವೂ ಅಲ್ಲೋಲ ಕಲ್ಲೋಲ. ಬಿದ್ದ ಕರಿಯ ಏಳಲೇ ಇಲ್ಲ; ಪ್ರಜ್ಞೆತಪ್ಪಿದಾತನಿಗೆ ಉಪಚರಿಸುವರಾದರೂ ಯಾರಿದ್ದರು? ಆತ ಕೊನೆಯುಸಿರೆಳೆದಿದ್ದ. ಚೆನ್ನಿ ಬೊಬ್ಬಿಟ್ಟಳು ಚೀರಿದಳು

ನೆರೆ ಹೊರೆಯವರು ಓಡಿ ಬಂದರು. ನಿಟ್ಟುಸಿರು ಬಿಟ್ಟರು. ಜಮೀನ್ದಾರರಿಗೆ ಇದಿರು ನಿಂತರೆ ಇಷ್ಟೆ ಲಾಭ ಎಂದು ಮೊದಲೇ ತಿಳಿದಿದ್ದ ಅವರ ನಂಬಿಕೆ ದೃಢವಾಯಿತು.

ವರ್ತಮಾನ ತಲಪಿದೊಡನೆ ಮಗ ಬಂದ. ಅವನ ಗೆಳೆಯರೂ ಬಂದರು. ಮಗನಿಗೆ ತಾಯಿಯನ್ನು ಸಮಾಧಾನ ಪಡಿಸುವ ಚೈತನ್ಯವಿರಲಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಅವನೇ ತಂದೆಯ ಸಾವಿಗೆ ಕಾರಣನಾಗಿದ್ದ. ಇಲ್ಲವಾದರೆ ಕರಿಯ ಇಷ್ಟು ದಿನಗಳೊಳಗೇ ಆ ಗುಡಿಸಲು ಬಿಟ್ಟು ಭಿಕ್ಷಾಟನೆಯಿಂದಲಾದರೂ ಹೊಟ್ಟೆ ಹೊರೆದುಕೊಂಡು ಬದುಕುತಿದ್ದನೇನೋ! ಮುಂದೇನಾಗುವುದೋ ಎಂಬ ಭಯವಿಲ್ಲದಿದ್ದರೂ ಒಳಗೊಳಗೇ ಒಂದು ರೀತಿಯ ಅಳುಕುಂಟಾಗಿ ಜಮೀನ್ದಾರರ ಆಳುಗಳು ಅತ್ತ ಕಾಲಿರಿಸಲಿಲ್ಲ;

ಬಿಸುಸುಯ್ದು ಉಮೇದ್ವಾರೀ ಯುವಕರು ಸುಮ್ಮನಾಗಲಿಲ್ಲ. ನ್ಯಾಯಾಲಯಕ್ಕಿದ್ದ ಮೆಟ್ಟಲೇರಿದರು. ಜಮೀನ್ದಾರರು ವಿಸ್ಮಿತರಾದರು.

ವಿಚಾರಣೆ ನಡೆಯಿತು. ಚೆನ್ನಿ ಅಳುತ್ತಲೇ ತನ್ನ ಕರುಣ ಕತೆಯನ್ನು ನಿವೇದಿಸಿದಳು. ಸಾಕ್ಷಿಗಳಾಗಿ ಬರುವ ಧೈರ್ಯವಿಲ್ಲದಿದ್ದರೂ ತನಿಯನ ಗೆಳೆಯರು ಕೆಲವರು ಜಮೀನ್ದಾರರೇ ಕರಿಯನ ಕೊಲೆಗೆ ಕಾರಣರೆಂಬುದನ್ನು ವಿವರಿಸಿದರು.

ಕೊನೆಯದಾಗಿ ನ್ಯಾಯಾಧೀಶರು ತೀರ್ಪಿತ್ತರು. "ಕರಿಯ ಕಾಯಿಲೆಯವನಾಗಿದ್ದ ಅಶಕ್ತನಾಗಿದ್ದ. ಕ್ಷಯ ರೋಗ ಅವನಿಗಂಟಿಕೊಂಡಿತ್ತು. ಆದರೂ ಆತ ಸಶಕ್ತ ಆಳುಗಳೊಂದಿಗೆ ಹೊಡೆದಾಟಕ್ಕೆ ತಾನಾಗಿಯೇ ನಿಂತ. ತಪ್ಪು ಕರಿಯನದ್ದೇ. ಆತ ಬಿದ್ದು ಸತ್ತ, ನಿರ್ಬಲ ದೇಹ ಸುಲಭದಲ್ಲಿ ಸಾವಿಗೆ ಬಲಿಯಾಗಿದೆ. ಆತ ವಿರೋಧಿಸಿ ಜಗಳ ಮಾಡಿದ್ದು ಅಪರಾಧ."

ರೈತರ ತಂಡ ತಲೆ ತಗ್ಗಿಸಿಕೊಂಡು ಹೋಗಿ ಬಿಟ್ಟಿತು. ನಿರಾಸೆ ಅವರಿಗೆ ಕಾದಿರಿಸಿದ ಸಂಪತ್ತೆಂಬುದು ದೃಢವಾಯಿತು.

ರಾಯರು ಗಹಗಹಿಸಿ ನಕ್ಕರು.

ನ್ಯಾಯಾಲಯದಲ್ಲೂ ನ್ಯಾಯ ಲಯವಾಗಿ ಬಿಟ್ಟ ಮೇಲೆ ಇನ್ನೆಲ್ಲಿಯ ನ್ಯಾಯ?

ನವಯುಗಾದಿ

"ಸಾಗರ್"

ಈಕೆ ಸತಿ, ಕಾಲಿಲ್ಲ
ಈತ ಪತಿ, ಕಣ್ಣಿಲ್ಲ
ಅದರೇನಂತೆ –
ಇಬ್ಬರೊಂದಾಗಿ ಸಾಗುತಿದೆ ಸವಾರಿ
ಇದು ಪ್ರಣಯ ಕಥೆ—
ಅರಿವಿಲ್ಲದಾದ್ಯಂತ ಜಗದ ದಾರಿ.

"ಭವಿಷ್ಯ ಗರ್ಭದ ಹೊತ್ತ
ಗತದ ಚಕ್ರದ ಜಳ್ಳು
ಬಿದ್ದಿತೊ ಅದೊ ಸಮಾಧಿ!
ರಹಸ್ಯವೃತ್ತಿಯ ಜೀವ
ಭಾವ ಬದುಕಿನ ಕಾಳು
ಹುಟ್ಟಿದೊ ನವಯುಗಾದಿ."

ಕಲ್ಲು ಕೂಡಾ ಕುಸುಮ
ಕನಸು ಕಾಣುವ ಕವಿಗೆ
ಕೇಳಬೇಕವನ ಹಾಡು;
ನಮ್ಮ ಮನೆಯಾರಾಮ
ಇಡೆಯೂವ ಮಕ್ಕಳಿಗೆ
ಬಿದ್ದರೂ ಹುಲ್ಲು ಮಾಡು?

ನಮ್ಮ—ನಮ್ಮವರು

(ಗತ ಪುಟದಿಂದ)

ಯವರು ಜಿಲ್ಲೆಯ ಶ್ರೇಷ್ಠ ಸಾರ್ವಜನಿಕ ಕಾರ್ಯಕರ್ತರಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದಿದ್ದಾರೆ.

ಶ್ರೀಮತಿ ಕಲ್ಯಾಣಿ ಡಿ ಶೆಟ್ಟಿ ಇವರು ಸ್ಥಳೀಯ ಆಡಳಿತೆಯ ರಂಗದಲ್ಲಿಯೂ ತುಂಬ ಪಳಗಿದವರು. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸದಸ್ಯೆಯಾಗಿ ಸಾಕಷ್ಟು ಅನುಭವಗಳಿಸಿದರು. ಸುಮಾರು ಹನ್ನೊಂದು ವರ್ಷಗಳ ಸುದೀರ್ಘಕಾಲ ಮಂಗಳೂರುನಗರ ಸಭಾಸದೆಯಾಗಿದ್ದು ಉತ್ತಮ ರೀತಿಯಿಂದ ತನ್ನ ಕರ್ತವ್ಯಗಳನ್ನು ನಿರ್ವಹಿಸಿದರು. ಇವರು. ಶ್ರೀಮತಿ ಶೆಟ್ಟಿ ಇವರು ಶ್ರೇಷ್ಠ ಮಟ್ಟದ ಭಾಷಣಕರ್ತೆ; ವಕ್ತೃತ್ವಶಾಲಿನಿ, ಉದಾರ ಸ್ವಭಾವದ ಶ್ರೀಮತಿಯವರು ತಮ್ಮ ಸದ್ಗುಣ ನಯವಿನಯಗಳಿಗೆ ಹೆಸರು ಪಡೆದಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ ರಾಜ್ಯದಲ್ಲಿಯೇ ಇವರ ಹೆಸರು ಪ್ರಸಿದ್ಧವಾಗುತ್ತಿದೆ. ಶ್ರೀಮತಿ ಕಲ್ಯಾಣಿಯವರಿಂದ ಸಮಾಜ ಇನ್ನೂ ಕಲ್ಯಾಣವಾಗಲಿದೆಯೆಂಬುದು ನಿರ್ವಿವಾದ.

ಸತ್ಯದ ಒಂದು ಕ್ಷಣ

ತಮಗೆ ಅಗತ್ಯವೆನಿಸಿದಾಗ ಹಣ ದೊರೆಯುವುದನ್ನು ಖಚಿತ ಪಡಿಸಲು ಜನರು ಸೇವಿಂಗ್ಸ್ ಬ್ಯಾಂಕ್ ಎಕೌಂಟನ್ನು ತೆರೆಯುತ್ತಾರೆ.

ಹಣದ ಅಡಚಣೆಗಳು ಮತ್ತು ಅವಕಾಶಗಳು ಎಚ್ಚರಿಕೆ ನೀಡದೇನೆ ಆಗಾಗ ಬರುವುದರಿಂದ ನಿಮ್ಮ ಸೇವಿಂಗ್ಸ್ ಎಕೌಂಟಿಗೆ ನಿಮಗೆ ಸಾಧ್ಯವಿರುವಷ್ಟನ್ನು ಕ್ರಮಬದ್ಧವಾಗಿ ಕೂಡಿಸುತ್ತಿರುವುದು ಅರ್ಥಯುಕ್ತವಾದ ಕಾರ್ಯ.

ಈ ಉತ್ತಮ ಕಾರ್ಯ ಮಾಡುವವರು, ಒಳ್ಳೆಯದಾಗಿ ಕೆಲಸ ಮಾಡುವರು ಮತ್ತು ಒಳ್ಳೆಯದಾಗಿ ನಿದ್ರಿಸುವರು........... ಏಕೆಂದರೆ, ಅಗತ್ಯವೆನಿಸಿದಾಗ "ಹಣವೆಲ್ಲಿಂದ ಬರುವುದೆಂದು" ಅವರು ಚಿಂತಿಸುವುದಿಲ್ಲ.

ನಿಮಗಾಗಿ ಉಪಕರಿಸಿರಿ........ಕ್ರಮಬದ್ಧ ಉಳಿತಾಯಗಾರರಾಗಿರಿ.

ಕ್ಲಪ್ತ ಸಮಯದಲ್ಲಿ ಇವರೊಡನೆ ಉಳಿಸಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

.... ವಿಶ್ವವ್ಯಾಪೀ ಬ್ಯಾಂಕಿಂಗಿಗಾಗಿ.

ಶಾಖೆಗಳು 190
ಚಲಾವಣಾ ನಿಧಿ ರೂ. 57 ಕೋಟಿಗೂ ಮಿಕ್ಕಿದೆ.

READ & ADVERTISE IN NAVAYUGA WEEKLY

Edited, Printed & Published by K. H. Shetty, at the Navayuga Press, Udipi, S. India.

NAVAYUGA—Nationalist Weekly ‡‡ ಉಡುಪಿ 9-4-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಮೊರಾರ್ಜಿ ದೇಸಾಯಿ

ಕಾಮರಾಜ ಸೂತ್ರದ ಪರಿಣಾಮವಾಗಿ ಕೇಂದ್ರ ಸಚಿವ ಸಂಪುಟದಿಂದ ಹೊರಬಂದ ಹಿರಿಯ ಮಂತ್ರಿಗಳಲ್ಲಿ ಮೊರಾರ್ಜಿ ದೇಸಾಯಿಯವರೊಬ್ಬರು ಇವರನ್ನು ಪ್ರಧಾನಿ ನೆಹರೂರವರು ಕೈಬಿಟ್ಟಾಗ ತುಸು ವಿಸ್ಮಯವನ್ನು ದೇಶವು ವ್ಯಕ್ತಪಡಿಸಿತ್ತು. ನಿಷ್ಠುರವಾದಿಗಳೆಂದು ಹೆಸರು ಪಡೆದ ಮೊರಾರ್ಜಿಯವರದು ಸ್ಪಷ್ಟವಾಕ್ಯ. ಇವರನು ಕೆಚ್ಚಿದೆ. ಇದರ ಪರಿಣಾಮವಾಗಿಯೇ ಚಿನ್ನ ನಿಯಂತ್ರಣಾಜ್ಞೆ ವ್ಯವಹಾರಕ್ಕೆ ಬಂದಿತೆಂಬುದನ್ನು ಮರೆಯಬಾರದು. ದೇಶದ ಮುಂದೆ ಸಂರಕ್ಷಣಾ ವ್ಯಯವು ಸರ್ವತಾಕಾರವಾಗಿ ನಿಂತಿದ್ದಾಗ, ಪಾನ ಪ್ರತಿಬಂಧವನ್ನು ಕಿತ್ತೊಗೆಯಿರಿ ಎಂದು ಕೆಲವು ವಿರೋಧಿ ಪಕ್ಷಗಳು ಬೊಬ್ಬಿಟ್ಟಾಗ, ಅದನ್ನು ಕಡೆಗಣಿಸಿ, ಅಧಿಕ ಕರಾಕರಣೆಯ ಮೂಲಕವೇ ಹಣಕೂಡಿಸುವ ದಿಟ್ಟತನ ತೋರಿಸಿದ ವಿತ್ತ ಮಂತ್ರಿಯವರು

ದೇಸಾಯಿಯವರು ಮೊದಲಿನಿಂದಲೂ ಪಾನಪ್ರತಿಬಂಧದ ಪ್ರಬಲ ಸಮರ್ಥಕರು. ಹಿಂದಿನ ಮುಂಬಯಿ ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಮದ್ಯಪಾನವನ್ನು ಶಾಸನರೀತ್ಯಾ ಪ್ರತಿಬಂಧಿಸಿ ಅದರಲ್ಲಿ ಯಶಸ್ಸು ಪಡೆದವರು. ಇಂದು ದೇಶದ ನಾನಾ ಮೂಲೆಗಳಲ್ಲಿ ಪಾನಪ್ರತಿಬಂಧವು ಯಶಸ್ವಿಯಾಗದಿರುವುದರಿಂದ ಆದರ್ಶದ ಬೆನ್ನು ಮೇಲೆ ಸವಾರಿಮಾಡದೆ, ಈ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆಗಳು ದಿನನಿತ್ಯವೆಂಬಂತೆ ಪ್ರತಿಧ್ವನಿಸುತ್ತಿವೆ. ಆದರೂ ಕೇಂದ್ರ ಸರಕಾರವು ನೇಮಿಸಿದ ಟೇಕಚಂದ ವರದಿಯು ಪ್ರಕಟವಾಗುವುದನ್ನೇ ಹೆಚ್ಚಿನ ರಾಜ್ಯಗಳು ಕಾಯುತ್ತಿವೆ. ಒಂದೆರಡು ರಾಜ್ಯಗಳು ಶಾಸನವನ್ನು ತುಸು ಸಡಿಲು ಬಿಡುವಷ್ಟು ಮುಂದುವರಿದಿವೆ. ಇಂತಹ ಸಮಯದಲ್ಲೂ ಮೊರಾರ್ಜಿಯವರು ಹೇಳುತ್ತಾರೆ "ಪಾನಪ್ರತಿಬಂಧವನ್ನು ಕೈಬಿಡಬಾರದು; ಅದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಬೇಕು"ಎಂದು. ಧ್ಯೇಯವಾದಿಗಳಾದ ಅವರಿಗೆ ಇದು ಯೋಗ್ಯವಾದುದೇ.

ನೆಹರೂರವರ ಇತ್ತೀಚಿಗಿನ ಅನಾರೋಗ್ಯ ಒಮ್ಮೆ ಹೊರಬಂದ ಲಾಲಬಹದೂರ ಶಾಸ್ತ್ರಿಯವರನ್ನು ಮತ್ತೆ ಮಂತ್ರಿ ಮಂಡಳಿಗೆ ಎಳೆದುಕೊಂಡಿತು ನೆಹರೂನಂತರ ಯಾರು ಎಂಬ ಪ್ರಶ್ನೆಗೆ ನೆಹರೂರವರೇ ಉತ್ತರ ನೀಡಬೇಕೆಂದು ಕೆಲವರ ಅಂಬೋಣ ಆದರೆ, ನೆಹರೂರವರು ಇದನ್ನು ಒಪ್ಪುವುದಿಲ್ಲ ಉಪಪ್ರಧಾನಿಯೊಬ್ಬನನ್ನು ನೇಮಿಸುವುದರಲ್ಲಿಯೂ ಅವರೀಗ ಆಸಕ್ತಿ ತೋರುತ್ತಿಲ್ಲ. ಆದುದರಿಂದ, ದೇಶದ ಸಂಕ್ರಾಂತಿ ಕಾಲದಲ್ಲಿ ಬಲಿಷ್ಠ ಹಾಗೂ ಸಮರ್ಥ ಮಂತ್ರಿಮಂಡಳವನ್ನು ರಚಿಸಬೇಕೆಂದು ಮತ್ತೆ ಕೆಲವರ ಅಭಿಪ್ರಾಯ. ಇದನ್ನು ರಾಷ್ಟ್ರಪತಿ—

ಇವ್ವೇ ಇನ್ನಿತರ ವರಿಷ್ಠರು ನೆಹರೂರವರಿಗೆ ಮನಗಾಣಿಸಬೇಕಂತೆ ಒಂದು ವೇಳೆ ಹೀಗಾದರೆ, ಒಂದೊಮ್ಮೆ ನೆಹರೂರ ಉತ್ತರಾಧಿಕಾರಿಯೆಂದು ಹೆಸರು ಪಡೆದ ಮೊರಾರ್ಜಿ ದೇಸಾಯಿಯವರು ಮತ್ತೆ ಮಂತ್ರಿಮಂಡಳ ಸೇರಿದರೆ ವಿಸ್ಮಯವಿಲ್ಲ, ಪ್ರಜಾಸತ್ತೆಯಲ್ಲಿ ಏನಾದೀತು, ಏನಾಗಬಾರದೆಂದು ಹೇಳುವುದು ಹೇಗೆ ತಾನೇ ಸಾಧ್ಯ?



ಎಸ್. ನಿಜಲಿಂಗಪ್ಪ

ಕರ್ನಾಟಕದ ಮುಖ್ಯಮಂತ್ರಿ ಸಿದ್ದವ್ವನ ಹಳ್ಳಿ ನಿಜಲಿಂಗಪ್ಪನವರು ಆರಂಭದಿಂದಲೂ ಕರ್ನಾಟಕವಾದಿಗಳು ಅವರು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ಸಿನಲ್ಲಿ ಮೊದಲಿದ್ದುಕೊಂಡು ಅನಂತರ ಮೈಸೂರಿಗೆ ಸೇರಿದನಮ. ಕರ್ನಾಟಕದ ತುಂಬ ಸಂಚಾರ ಮಾಡಿ ಅನುಭವ ಪಡೆದ ಇವರು ಕನ್ನಡಿಗರ ಸಂಕಷ್ಟಗಳನ್ನು ಪರಿಪೂರ್ಣವಾಗಿ ಮನಗಂಡವರು ಆದರೂ ಮೈಸೂರಿನ ರಾಜಕಾರಣದಲ್ಲಿ ಅವರು ಸಂಪೂರ್ಣ ಯಶಸ್ಸು ಪಡೆದಿದ್ದಾರೆಂದು ಹೇಳುವಂತಿಲ್ಲ. ಇದಕ್ಕೆ ಬೇರೆ ಬೇರೆ ರಾಜಕಾರಣವು ಕಾರಣ ಇರಬಹುದು. ಪರಿಸ್ಥಿತಿ ಹೀಗಿದ್ದರೂ ಹಳತು—ಹೊಸತು. ಎಂಬ ಭೇದ ಭಾವನೆಯನ್ನು ತೋರಿಸದೆ ಇಡೀ ಕರ್ನಾಟಕವನ್ನು ಒಂದಾಗಿ ಭಾವಿಸಿ ಮುನ್ನಡೆಸುವ ಉದಾರ ಹೃದಯ ಅವರದು ಸಮಾಧಾನ ಚಿತ್ತರಾದ ಇವರು ರಾಜ್ಯಹಿತವನ್ನು ಸಾಧಿಸುವಲ್ಲಿ ಮುನ್ನಡೆಯುತ್ತಿದ್ದಾರೆ.

ಇತ್ತೀಚಿಗೆ ನಿಜಲಿಂಗಪ್ಪನವರು ಒಂದೆರಡು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದಾರೆ. ಶರಾವತಿಯ ಪ್ರಸಂಗಕ್ಕೆ ಒಂದೊಮ್ಮೆ ಪೂರ್ಣವಿರಾಮವಿಕ್ಕಿದಂತಾಗಿದ್ದರೂ ಇದೀಗದು ಕೇವಲ ಅರ್ಧವಿರಾಮವಾದಂತಾಗಿದೆ ಇದರ ಮೇಲೆ ನ್ಯಾಯಾಂಗ ವಿಚಾರಣೆ ಆಗಬೇಕು ಎಂದು ಕಾಂಗ್ರೆಸ್ ಸದಸ್ಯರೂ ಕೇಳಿಕೊಳ್ಳತೊಡಗಿದ್ದಾರೆ; ಮತ್ತಾಯವನ್ನೂ ಹೇರತೊಡಗಿದ್ದಾರೆ ಆನವಟ್ಟಿಯಲ್ಲಿ ನದಿಗೆ ಆಣೆಕಟ್ಟು ಕಟ್ಟಬೇಕೆಂದು ಅಲ್ಲಿನವರು ಅನ್ನ ಸತ್ಯಾಗ್ರಹ ಮಾಡುವಷ್ಟು ಮುಂದುವರಿದಿದ್ದಾರೆ. ಇವುಗಳಿಂದ ನಿಜಲಿಂಗಪ್ಪನವರು ಹೇಗಾದರೂ ಪಾರಾಗಬಹುದು; ಪಾರಾಗಬಲ್ಲರು. ಆದರೆ, ಇದಕ್ಕಿಂತಲೂ ದೊಡ್ಡದಾದ ಒಂದು ಪ್ರಶ್ನೆಯನ್ನು ಇವರು ಎದುರಿಸಬೇಕಾಗಿದೆ

ಇತ್ತೀಚಿಗೆ ವಿಧಾನ ಸಭೆಯಲ್ಲಿ ವಿರೋಧಿ ಪಕ್ಷದ ನಾಯಕಮಣಿಗಳು ರಾಜ್ಯವನ್ನು ಒಡೆದು ಹೋಳುಮಾಡುವ ಅಪಾಯದ ಮಾತನ್ನು ಆಡಿದರು. ಇಂತಹ ಮಾತುಗಳು ಹಳತು-ಹೊಸತು ಮೈಸೂರೆಂಬ ಕ್ಷುಲ್ಲಕ ಸಂಕುಚಿತಮನೋವೃತ್ತಿಯ ದ್ಯೋತಕವೆಂದು ಎಲ್ಲರೂ ಹೇಳುತ್ತಾರೆ ತಿಳಿಯುತ್ತಾರೆ. ರಾಜ್ಯ ಒಡೆಯುವ ಮಾತು ಈ ಹಿಂದೆಯೂ ಒಮ್ಮೆ ಉಲ್ಬಣವಾಗಿ ಮುಂದೆ ಬಂದಿತ್ತು. ಇಂದಿನದು ಅದರ ಪ್ರತಿಧ್ವನಿ ಮಾತ್ರ ಹಾಗಿದ್ದರೂ ಈ ಬಗೆಯ ಒಡಕಿನ ಪ್ರವೃತ್ತಿಯನ್ನು ಹೆಚ್ಚು ಬೆಳೆಯಗೊಡುವುದರಿಂದ ರಾಜ್ಯದ ಪ್ರಗತಿಯು ಕುಂಠಿತಗೊಳ್ಳುತ್ತದೆ ಪಕ್ಷಪಾತವನ್ನು ನಿಜಲಿಂಗಪ್ಪನವರು ಎಂದಿಗೂ ಮೆಚ್ಚುವುದಿಲ್ಲ; ವಿಭಜನೆ ವಾದವನ್ನೂ ಅವರು ಪುರಸ್ಕರಿಸುವುದಿಲ್ಲ ಆದರೆ, ಕುಹಕಿಗಳನ್ನು ಹಾಗೂ ಸ್ವಾರ್ಥಿಗಳನ್ನು ಮೌನವಾಗಿಸಿ ಎರಡು ಕರ್ನಾಟಕದ ಕನಸು ಕಾಣುವುದನ್ನು ದೂರ ಮಾಡಬೇಕಾದರೆ, ರಾಜ್ಯದ ಹೆಸರನ್ನು ಕರ್ನಾಟಕವೆಂದು ಘೋಷಿಸುವುದೇ ಸೂಕ್ತ ಪರಿಹಾರ. ಆದುದರಿಂದ, ಇನ್ನೂ ಹೆಚ್ಚು ತಡ ಮಾಡದೆ, ರಾಜ್ಯವನ್ನು ಉಚಿತ ಮತ್ತು ಸಮರ್ಥನೀಯವಾದ ಕರ್ನಾಟಕವೆಂದು ಕರೆಯುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ ಕನ್ನಡಿಗರ ಮನೀಷೆಯನ್ನು ನಿಜಲಿಂಗಪ್ಪನವರು ಬೇಗನೇ ಪೂರೈಸಬೇಕು

ಬಿ ನಾರಾಯಣ ಶೇಕ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಸಮಾಜಗಳಲ್ಲಿ ಬಂಟರ ಯಾನೆ ನಾಡವರ ಸಮಾಜವು ಅಗ್ರಗಣ್ಯವಾದುದು. ಸೆಟ್ಟಿ, ಹೆಗ್ಡೆ, ಆಳ್ವ, ಭಂಡಾರಿ, ಮಾರ್ಲ, ಪೂಂಜ, ಅತ್ಯಂತಾಯ, ರೈ, ಮಲ್ಲಿ, ಬಲ್ಲಾಳ, ಅಜಿಲ, ನಾಯ್ಕ, ಶೇಣವ, ಪಕ್ಕಳ, ಸೆಮಿತ ಮೊದಲಾದುವುಗಳಂತೆಯೇ 'ಶೇಕ' ವೆಂಬುದೂ ಬಂಟರ ಉಪನಾಮಗಳಲ್ಲಿ ಒಂದೆಂಬುದನ್ನು ಹೆಚ್ಚಿನವರು ತಿಳಿದಿರಲಾರರು. ಶೇಕ ಮನೆತನದವರು ಪುತ್ತೂರು ತಾಲೂಕಿನ ಕೆಲವೇ ಕಡೆಗಳಲ್ಲಿರುತ್ತಾರೆ. ಈ ಮನೆತನಕ್ಕೆ ಸೇರಿದ ಅಗ್ರಮಾನ್ಯರು ಬಿ ನಾರಾಯಣ ಶೇಕರು.

ನಾರಾಯಣ ಶೇಕರು ಪುತ್ತೂರು ತಾಲೂಕಿನ ಬೆಳ್ಳಾರೆಯವರು. ಈ ಗ್ರಾಮದಲ್ಲಿ ಪಟೇಲರಾಗಿದ್ದು ಸಾಕಷ್ಟು ಪ್ರಭಾವ ಬೀರಿದವರು. ಪ್ರಾರಂಭದಿಂದಲೂ ಕಾಂಗ್ರೆಸ್ ಮನೋವೃತ್ತಿಯವರು. ಗ್ರಾಮ ಪಂಚಾಯತು ಸಹಕಾರ ಸಂಘ ಮೊ

(೧ನೇ ಪುಟ ನೋಡಿರಿ)

ವಾರದ ಕಥೆ

'ಆ ಬಸ್ಸು'

ಬರೆದವರು:— ಶ್ರೀ ಭಟ್ ಜಿ ಬನ್ನಂಜೆ.

ಸೀತಾರಾಮನು ರೂಮಿನಲ್ಲಿ ಚಡಪಡಿಸುತ್ತಿದ್ದನು ಗೋಪಾಲನಿಗೆ ಹೊರಟು ಇನ್ನೂ ಆಗಿರಲಿಲ್ಲ. ಗಂಟೆ ಆಗಲೇ ೮—೪೦ ಆಗಿತ್ತು. ರೂಮಿನಿಂದ ಬಸ್ಸ್ ಸ್ಟೋಪಿಗೆ ತಲಪಲು ಹೇಗಾದರೂ ೧೦ ನಿಮಿಷ ಬೇಕೇ ಬೇಕು, ಅಲ್ಲಿಗೆ ತಲಪಿ ನೋಡಿದಾಗ 'ಆ ಬಸ್ಸು' ಹೊರಟು ಹೋಗಿದ್ದಲ್ಲಿ ಕಾಲಿಗೆ ಹೋದಾಗ ಭಾಗೀರಥಿ ಅಪ್ರತ್ಯಕ್ಷವಾದಂತೆ ಆಗುತ್ತಿತ್ತು ಆತನಿಗೆ "ಆ ಬಸ್ಸು" ಎಂದೊಡನೆ ಆ ಬಸ್ಸಿನಲ್ಲೇನೂ ಸೀತಾರಾಮನಿಗೆ ಹೋಗಬೇಕಾಗಿರಲಿಲ್ಲ. ಆತನ ಕಾಲೇಜಿಗೆ ಬಸ್ ಸ್ಟೋಪಿನಿಂದ ಹತ್ತೇ ಹೆಜ್ಜೆ. ಆದರೂ "ಆ ಬಸ್ಸು" ಹೋಗುವ ಮೊದಲು ಬಸ್ ಸ್ಟೋಪಿಗೆ ಬಂದು, ಅದು ಹೋದ ಮೇಲೆಯೇ ಇಲ್ಲಿಂದ ಹೋಗುವುದು ಸೀತಾರಾಮನ ಪದ್ಧತಿ. ಅದು ಗೋಪಾಲನಿಗೆ ಕಬ್ಬಿಣದ ಕಡಲೆ ಆಗಿತ್ತು. ಬಿಡಿಸಲಾರದ ಒಗಟಾಗಿತ್ತು.

ಗೋಪಾಲನು ಹೊರಡುವುದೇನಾದರೂ ತಡವಾಗುವ ಸಂದರ್ಭ ಇದ್ದಲ್ಲಿ ಆತನನ್ನು ಬಿಟ್ಟು ಸೀತಾರಾಮನು ಹೋಗುತ್ತಿದ್ದನು. ಪ್ರಾಣ ಸ್ನೇಹಿತನನ್ನು ಬಿಟ್ಟು ಕಾಲೇಜಿಗೆ ಹೋಗಲಾರೆ ಎಂಬಂತೆ ಬಸ್ ಸ್ಟೋಪಿನಲ್ಲಿ ಆತನನ್ನು ಕಾಯುತ್ತಿದ್ದನು. ಅಂತೂ "ಆ ಬಸ್ಸಿ"ಗೂ ಸೀತಾರಾಮನಿಗೂ ಅದಾವುದೋ ಬಾದರಾಯಣ ಸಂಬಂಧ ಬೆಳೆದಿತು. ಬೆಳಗ್ಗೆ ೮-೩೦ ಆದೊಡನೆಯೇ ಆತನನ್ನು ಅದಾವುದೋ ಅವ್ಯಕ್ತ ಶಕ್ತಿ ಕರೆಯುತ್ತಿತ್ತು. ರೂಮಿನಲ್ಲಿ ಉಳಿದರೆ ನೀರಿನಿಂದ ಮೇಲೆ ಬಿಟ್ಟ ಮೀನಿನಂತೆ ಆಗುತ್ತಿದ್ದನು ಸೀತಾರಾಮ

ಆದಾದುದು ಹೀಗೆ ಆದೊಂದು ಶುಭ ಸೋಮವಾರ. ಅತ್ತಿತ್ತ ನೋಡುತ್ತಾ ಸೀತಾರಾಮನು ಸಾಗುತ್ತಿದ್ದನು. ಆಗ ಆತನ ಎದುರಿನ ಬಸ್‌ಸ್ಟೋಪ್ ಸರೋವರದಲ್ಲಿ ಅರೆ ಬಿರಿದ ತಾವರೆ ಒಂದು ನಿಂತಿತ್ತು. "ಆ ಬಸ್ಸು" ಇನ್ನೂ ಬಂದಿರಲಿಲ್ಲ. ಆಗಿನ್ನೂ ಸೀತಾರಾಮನಿಗೂ ಆ ಬಸ್ಸಿಗೂ ಬಾಂಧವ್ಯ ಬೆಳೆದಿರಲಿಲ್ಲ

ತಾವರೆಯ ಪರಿಮಳಕ್ಕೆ ತುಂಬಿ ಅಲ್ಲೇ ನಿಂತಿತು. ಅತ್ತಿತ್ತ ಸುತ್ತಾಡಿತು. ಕಂಪನ್ನೆಲ್ಲಾ ಹೀರುವಾಸೆ ತುಂಬಿಗಾದರೂ ಸಮಯವಿನ್ನೂ ಪಕ್ವವಾಗಿರಲಿಲ್ಲ. ಸುಮ್ಮನೆ ನಿಂತು ಮಾಡುವದೇನು? ನೋಡುವವರ ಕಣ್ಣಿಗೆ ಮಣ್ಣೆರಚಬೇಕು ತಾನೇ? ಆದಕ್ಕಾಗಿ ಪಕ್ಕದ ಬೀಡ ಅಂಗಡಿಯಿಂದ ಸಿಗರೇಟನ್ನು ತೆಗೆದುಕೊಂಡು ಸೇದಲಾರಂಭಿಸಿದನು ಸುರುಳಿ ಸುರುಳಿಯಾಗಿ ಮೇಲೇರುವ ಹೊಗೆ ಆತನ ತಲೆಯೊಳಗಿನ ತಳಮಳವನ್ನು ಸೂಚಿಸುತಿತ್ತು. ಕಡೆಗೂ "ಆ ಬಸ್ಸು" ಬಂತು ತಾವರೆಯು ನಿರ್ಗಮಿಸಿತು. ತಾವರೆಯಿಲ್ಲದ ಮೇಲೆ ಅಲ್ಲಿ ತುಂಬಿಗೇನು ಕೆಲಸ? ಸೀತಾರಾಮನು ಆ ದಿನ ಕಾಲೇಜಿಗೆ ಅರ್ಧ ಗಂಟೆ ತಡವಾಗಿ ಬರಲು ಕಾರಣ ಯಾರಿಗೂ ತಿಳಿದಿರಲಿಲ್ಲ.

ಕಾಲ ಚಕ್ರ ನಿದಾನವಾಗಿ ಉರುಳುತ್ತಿತ್ತು. ಸೀತಾರಾಮನು ೮॥ ಗಂಟೆಗೆ ರೂಮಿನಿಂದ ಹೊರಡುವುದು, ೯ರ ತನಕ ಬಸ್ ಸ್ಟೋಪಿನಲ್ಲಿ ಬಕಧ್ಯಾನ ಮಾಡುವುದು, 'ಆ ಬಸ್ಸಿ' ನಲ್ಲಿ ತನ್ನ ಚಿತ್ತವನ್ನು ಪ್ರಥಮ ದರ್ಶನದಲ್ಲಿ ಅಪಹರಿಸಿದವಳನ್ನು ಕಳುಹಿಸುವುದು ದಿನ ಚರ್ಯೆಯ ಒಂದು ಭಾಗವಾಯಿತು. ಕೆಲವಾರು ದಿನಗಳ ವರೆಗೆ ಅವಳಾರು ಎಂಬುದು ಆತನಿಗೆ ತಿಳಿಯಲಿಲ್ಲ. ತಿಳಿಯುವ ಆಸೆಯಿತ್ತು. ಮಾತ್ರ.

ಅವಳ ಕೈಯಲ್ಲಿ ಪುಸ್ತಕಗಳ ಕಂತೆ ಕಂಡ ಸೀತಾರಾಮನು ಅವಳು ಯಾವುದೋ ಶಾಲೆಗೆ ಹೋಗುವವಳು ಎಂದು ಸುಲಭವಾಗಿ ನಿಶ್ಚೈಸಿದನು. ಆದರೂ ಶಾಲೆಯ ಹೆಸರು, ತರಗತಿ, ಇತ್ಯಾದಿಗಳನ್ನು ತಿಳಿಯುವ ಕುತೂಹಲ ಹೆಚ್ಚಾಯಿತು. ದಿನಾ ಬೆಳಗ್ಗೆ ಮಾತ್ರ ಬರುತ್ತಿದ್ದ ಸೀತಾರಾಮ ಈಗ ಮಧ್ಯಾಹ್ನವೂ ಸಂಜೆಯೂ ಬಸ್‌ಸ್ಟಾಪಿನಲ್ಲಿ ತೊಡಗಿದ. ಕಾಲೇಜು ಸಮಯದಲ್ಲಿ ಅವನ ಮನಸ್ಸು ಅವಳಲ್ಲಿ ದೇಹ ಕಾಲೇಜಿನಲ್ಲಿ; ಉಳಿದ ಸಮಯದಲ್ಲಿ ಮನಸ್ಸು ಅವಳಲ್ಲಿ ದೇಹ ಬಸ್ ಸ್ಟೋಪಿನಲ್ಲಿ. ಅಂತೂ ಪ್ರಯೋಜನವೇನೂ ಕಂಡು ಬರಲಿಲ್ಲ ಕಾಲೇಜಿಗೆ ರಜೆಯಿದ್ದರೂ ಬೆಳಗ್ಗಿನ ಸಮಯ ರೂಮಿನಿಂದ ಬಸ್‌ಸ್ಟೋಪಿನ ವರೆಗೆ ಹೋಗುವನು. ಶುಕ್ರವಾರದ ಶುಭದಿನ ಕಾಲೇಜಿಗೆ ರಜೆ. ಆದರೂ ಸೀತಾರಾಮನಿಗೆ ರಜೆ ಇಲ್ಲ. ಬಸ್‌ಸ್ಟೋಪಿಗೆ ಬಂದು ಯಥಾ ಪ್ರಕಾರ ೯ ಗಂಟೆಗೆ ಬಸ್ ಹೊರಡುವಾಗ ಅವನೂ ಅದರಲ್ಲೇ ಇದ್ದನು. ಬಸ್ ಇನ್ನೊಂದು ಸ್ಟೋಪಿನಲ್ಲಿ ನಿಂತಿತು. ಅವಳು ಇಳಿದಳು. ಅವನೂ ಇಳಿದ ಅವಳೊಂದು ಹೈಸ್ಕೂಲ್ ಪ್ರವೇಶಿಸಿದಳು. ಅವನು ಹೈಸ್ಕೂಲಿಗೆ ಪ್ರದಕ್ಷಿಣೆ ಬಂದು ಅಲ್ಲಿಯ ಸಮಯಗಳನ್ನು ತಿಳಿದು ಕೊಂಡ. ಸಂಜೆ ಶಾಲೆ ಬಿಡುವ ಸಮಯವನ್ನು ಗಮನಿಸಿಟ್ಟು ರೂಮಿಗೆ ತಲಪಿದ.

ಸಾಯಂಕಾಲದ ಸಮಯ ಮಂಗಳೂರು ಬಸ್‌ಸ್ಟಾಪಿನಲ್ಲಿ ಕಾಯುತ್ತಾ ಕುಳಿತ್ತಿದ್ದನು ಸೀತಾರಾಮನು ಹಾಗೆಯೇ ಎಷ್ಟು ಸಮಯವಿರಲು ಸಾಧ್ಯ? ಪಕ್ಕದ ಹೋಟೇಲಿನ ಒಳಗಡೆ ಒಂದು ಕಿಟಕಿಯ ಬಳಿ ಕುಳಿತು ಹೊರಗೆ ಇಣುಕತೊಡಗಿತು ಆತನ ಕಣ್ಣು, ಕಾಪಿಯನ್ನು ಹೀರುತ್ತಿತ್ತು ನಾಲಗೆ. ತಾವರೆಯ ಬರವನ್ನು ಹಾರೈಸುತ್ತಿತ್ತು ಮನಸ್ಸು ಅಂತೂ ಕೈ ಹಣವನ್ನು ಕೊಟ್ಟಿತು. ಕಾಲು ಹೊರ ಬಂದಿತು ಪುನಃ ಅದೇ ಬಸ್‌ಸ್ಟೋಪಿನಲ್ಲಿ ಕಾಯಲಾರಂಭಿಸಿದನು. ತುಂಬಾ ಸಮಯದ ತಪಸ್ಸಿನ ಫಲವಾಗಿ 'ಆ ಬಸ್' ಬಂತು ಆದರಲ್ಲಿ ತಾವರೆಯಿತ್ತೇ? ಇರಲಿಲ್ಲ. ಪುನಃ ನಿರಾಸೆ ಆಗಲೇ ಬಂದ ಇನ್ನೊಂದು ಬಸ್ ನೋಡಿದಾಗಲೇ ಸೀತಾರಾಮನ ಮುಖದಲ್ಲೊಂದು ಆಶಾಕಿರಣ ಕಂಡಿತು ಬಸ್ಸಿನಿಂದ ಎಲ್ಲರೂ ಇಳಿದರು. ಅಂತೆಯೇ ಸೀತಾರಾಮನು ಹಾರೈಸುತ್ತಿದ್ದ ವಸ್ತುವೂ ಇಳಿಯಿತು. ಸಂಜೆ ೫-೩೦ ಸಮಯ. ಮೆಲ್ಲನೆ ಹೆಜ್ಜೆ ಹಾಕುತ್ತಾ ಮುನ್ನಡೆಯುತ್ತಿದ್ದ ಮಹಿಳಾಮಣಿಯನ್ನು ಕಂಡು ಸೀತಾರಾಮನ ಮನಸ್ಸಿನ ಅಶಾಂತಿಯು ಆಕೆಯನ್ನೇ ಹಿಂಬಾಲಿಸುವಂತೆ ಹೇಳಿತು. ಹೋಗುತ್ತಾ ಹೋಗುತ್ತಾ ಸೀತಾರಾಮನು ಏನೇನೋ ಕನಸು ಕಾಣುತ್ತಿದ್ದನು. ಎಲ್ಲಿಗೆ ಹೋಗುತ್ತಿರುವೆನೆಂದು ತಿಳಿಯಲಿಲ್ಲ. ಆದರೂ ತಿಳಿದವನಂತೆ ಮುನ್ನಡೆದನು. ಮಹಿಳೆಯು ಎಲ್ಲೋ ಓಣಿಯಿಂದ ಹೋಗಿ ಕಡೆಗೆ ಒಂದು ಸಾಧಾರಣವಾದ ಹೂದೋಟದ ಮಧ್ಯದಿಂದ ಮೇಲೆದ್ದ ಮಂದಿರವನ್ನು ಪ್ರವೇಶಿಸಿದಳು. ಸೀತಾರಾಮನಿಗೆ ಒಂದು ವಿಷಯ ಪತ್ತೆಯಾದಂತೆಯೇ ಅನ್ನಿಸಿತು ಆ ಮನೆಯ ಹಿಂಭಾಗಕ್ಕೆ ಅಂದರೆ ಅಲ್ಲಿರುವ ಶ್ರೀಕೃಷ್ಣಾ ಪಾರ್ಕಿಗೆ ಅವನು ಹಿಂದೆ ಬರುತ್ತಿದ್ದುದು ಆಗ ನೆನಪಾಯಿತು. ಇಷ್ಟು ಸಾಲದೆ ಅವಳ ವಿಷಯವಾಗಿ ಇನ್ನೂ ಅನೇಕ ವಿಚಾರಗಳನ್ನು ಸಂಗ್ರಹಿಸುವಾಸೆ ಬೆಳೆಯಿತು.

ಸೀತಾರಾಮನು ಪ್ರತಿದಿನ ಬೆಳಗ್ಗೆ ಭೇಟಿಯಾಗುವನು, ತೃಪ್ತಿಪಡುವನು. ಅವನ "ಕಾಲೇಜ್ ಡೇ"ಯು ಸಮೀಪವಾಗುತ್ತಾ ಇತ್ತು. ಸೀತಾರಾಮನು ಯೂನಿಯನ್ನಿನ ಅಧ್ಯಕ್ಷ ಆಗಿದ್ದನು. ಕಾಲೇಜ್ ಡೇಯ ಆಮಂತ್ರಣ ಪತ್ರಿಕೆಯ ಪ್ರತಿಯೊಂದನ್ನು ಹಿಡಿದುಕೊಂಡು ಅವಳಿಗೆ ಕೊಡಲಿಕ್ಕಾಗಿ ಹಲವಾರು ದಿನ ಪ್ರಯತ್ನಿಸಿದನು. ಆದರೆ ಒಂದು ದಿನವೂ ಆತನಿಗೆ ಸರಿಯಾದ ಅವಕಾಶ ಸಿಗಲಿಲ್ಲ ಅದನ್ನು ಕೊಟ್ಟು ಸ್ವಲ್ಪ ಮಾತನಾಡಬೇಕೆಂಬ ಆಶಯ ಅವನದು. ಅದಕ್ಕಾಗಿ ಸಮಯ ಕಾಯುತ್ತಿದ್ದನು ಒಂದು ದಿನ ಬೆಳಗ್ಗೆ ಬಸ್‌ಸ್ಟೋಪಿನಲ್ಲಿ ಅವಳು ಬರುವಾಗ ಹಾದಿಯಲ್ಲೇ ಸೀತಾರಾಮನು ಭೇಟಿಯಾದನು. ಅವಳೊಡನೆ ಇನ್ನಾರೂ ಇರಲಿಲ್ಲ. ಇದೇ ಉತ್ತಮಾವಕಾಶವೆಂದು ಆಮಂತ್ರಣ ಪತ್ರಿಕೆಯನ್ನೇನೋ ಕೊಟ್ಟನು, ಆದರೆ ಬೇಡವೆಂದೋ ಅಥವಾ ಧೈರ್ಯ ಸಾಲದೆಯೋ ಅಂತೂ ಮಾತನಾಡಲಿಲ್ಲ. ಸೀತಾರಾಮ ಮುಂದುವರಿದನು ಹಾಗೆಯೇ ಕಾಲೇಜ್ ಸೇರಿದನು. ಮನದೊಳಗೆ ಏನೇನೋ ಭಾವನೆಗಳೇಳುತ್ತಿದ್ದುವು.

ಸೀತಾರಾಮನು ಭವ್ಯ ಕನಸುಗಳನ್ನು ಕಾಣುತ್ತಾ ಇದ್ದನು. ಆದರೆ ಇನ್ನೂ ಆತನು ಅವಳ ಮಾತಿನ ಸವಿಯನ್ನು ಶ್ರವಣೇಂದ್ರಿಯದಿಂದ ಸವಿದಿರಲಿಲ್ಲ ಅವನು ಹಲವಾರು ತಿಂಗಳುಗಳ ಪರಿಶ್ರಮದಿಂದ ಸಂಗ್ರಹಿಸಿದ ಮುಖ್ಯಾಂಶಗಳಿವು— "ತಾ

(೧೧ನೇ ಪುಟ ನೋಡಿರಿ.)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚೈನೀ ಆನೆಗೆ

ಭಾರತೀಯ ಅಂಕುಶ

ಬರೆದವರು: ಶ್ರೀ ಶಿವಶಂಕರ, ಮದ್ರಾಸು.

ಜನತೆಯ ಹಾಹಾಕಾರವನ್ನೂ ಕಡೆಗಣಿಸಿ ಕಮ್ಯೂನಿಸ್ಟ ಸರ್ವಾಧಿಕಾರಿಗಳು ಪ್ರಪಂಚದಲ್ಲಿ ಪ್ರಮುಖರಾಗಿ ಮೆರೆದಾಡಲು ಚೈನಾದಲ್ಲಿ ಹವಣಿಸುತ್ತಿರುವದನ್ನು ನವಯುಗ ಜನತೆಗೆ ಸ್ಪಷ್ಟ ಪಡಿಸಿರುತ್ತದೆ. ಅಂಥಹ ಚೈನಾದ ಹೃದಯ ಪರಿವರ್ತನೆ ಅಷ್ಟು ಸುಲಭದ ಕಾರ್ಯವೇನು? ಹುಲ್ಲು-ಮುಳ್ಳು, ಮುಳಿ ಕಳೆ ಏನೂ ಬೆಳೆಯುದ ಒಂದಿಷ್ಟು ಭೂಪ್ರದೇಶವನ್ನು ಬಿಟ್ಟುಕೊಟ್ಟಲ್ಲಿ ಚೈನಿ ಕಮ್ಯೂನಿಸ್ಟ್ ಆನೆ ಅಲ್ಲಿ ಲಾಯ ಕಟ್ಟಿಕೊಂಡಿದ್ದು ಶಾಂತವಾಗಿರಬಹುದೆಂದು, ಭಾರತದ ಶಾಂತಿಪ್ರಿಯ ನೇತವರ್ಗ ಭಾವಿಸಿ ಕೊಂಡಿತ್ತು. ಸಧ್ಯದ ಪರಿಸ್ಥಿತಿ ಹಾಗಿರುವುದಿಲ್ಲ. ಬೆಂಕಿ ದಾರಿಯಲ್ಲಿ ಸಿಕ್ಕಿದುದೆಲ್ಲವನ್ನೂ ಸ್ವಾಹಮಾಡಿ ಕೊಂಡು ತ್ವರಿತ ಗತಿಯಿಂದ ಸಾಗುವಂತೆ ಚೈನಿ ಕಮ್ಯೂನಿಸ್ಟ್ ಪಡೆ ಬರುತ್ತಿದೆಯೆನ್ನುವದನ್ನು ರಕ್ಷಣಾ ಮಂತ್ರಿ ಯಶವಂತರೇ ಪ್ರಜಾ ಪ್ರತಿನಿಧಿಗಳ ಮುಂದೆ ತಿಳಿಸಿದ್ದು, ಕಡೆಗೆ ಬೇಕಾಗಿರುವ ಸಿದ್ಧತೆಗೆ ಜಾಗ್ರತೆಯಿಂದ ಪ್ರಯತ್ನಿಸುವುದಾಗಿ ಆಶ್ವಾಸನೆಯನ್ನು ಇತ್ತಿದ್ದು, ಈ ಲೇಖನ ಪ್ರಕಟವಾಗುವಾಗ ಅವರು ಅಮೇರಿಕದತ್ತ ಪ್ರಯಾಣ ಮಾಡಬಹುದು. ಇದು ಶಾಂತಿಪ್ರಿಯ ಸರಕಾರದ ದೃಷ್ಟಿ.

ಚೈನ ಕಮ್ಯೂನಿಸ್ಟ್ ಸೇನಾ ಪ್ರವಾಹ ಇತ್ತ ರಭಸದಿಂದ ಬರುತ್ತಿದ್ದಾಗ ಶಾಂತಿಪ್ರಿಯ ವಿನೋಭಾರವರು ಕಮ್ಯೂನಿಸ್ಟ್ ಚೈನೀಯರನ್ನೆದುರಿಸಲು ಭಾರತೀಯ ಬಾಲಕರನ್ನು [ಬಾಲರನ್ನಲ್ಲ, ಅಭಿಮನ್ಯುಗಳನ್ನಲ್ಲ] ಗಡಿಗೆ ಕಳುಹಿಸಬೇಕೆಂದು ಸೂಚನೆಯನ್ನಿತ್ತಿದ್ದರು. ಸರಕಾರವು ಪುಣ್ಯವಶಾತ್ ಹಾಗೆ ಮಾಡಿರುವುದಿಲ್ಲ ಈ ಕಮ್ಯೂನಿಸ್ಟ್ ದೈತ್ಯನನ್ನೆದುರಿಸಲು ಪ್ರಹ್ಲಾದನ ಆವಶ್ಯಕತೆಯುಲ್ಲಿ ಉಗ್ರನರಸಿಂಹನೇ ಬೇಕೆಂಬುದನ್ನು ಅವರೀಗ ಅರಿತುಕೊಂಡ. ಬಿಲಾಸಪುರದಲ್ಲಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುವರು.

ಶಾಂತಿ—ಸಂಧಾನ ಮಾತುಕತೆಯ ಮೂಲಕ 'ಗಡಿ-ವಿವಾದ'ವನ್ನು ತೀರಿಸಿ ಬಿಡುವುದಾಗಿ ಶಾಂತಿ ಸೇನೆ ನಾಗಲು ಪ್ರಯತ್ನಿಸಿತು ಚೈನಿ ಕಮ್ಯೂನಿಸ್ಟರನ್ನು ಅವರು ಹೊಗಳಿದರು, ಭಾರತೀಯರನ್ನು ತೆಗಳಿದರು. ಏನುಮಾಡಿದರೂ ಚೈನಾದೊಳಗೆ ಪ್ರವೇಶಿಸಲು ಅವರಿಗೆ ಅನುಮತಿ ಸಿಗಲೇ ಇಲ್ಲ.

ಹಾಗಾದರೇ ಈ ಕಮ್ಯೂನಿಸ್ಟ್ ಕರಾಳ ದೈತ್ಯನನ್ನೆದುರಿಸುವದು? ಮಹಾಭಾರತದಲ್ಲಿ ಗಾಂಡೀವಧಾರಿಯು ಚೈನೀಯರನ್ನೆದುರಿಸಿದನು ಅಯ್ಯೋ?! ಅದೆಲ್ಲಾ ಪುರಾಣದ ಬದನೇಕಾಯಿ! ಅದನ್ನು ಹಿಡಿದುಕೊಂಡು ಈಗೇನು ಮಾಡಲು ಸಾಧ್ಯ? ಎಂದು ರಾಗ ಎಳೆಯುವವರಿಗೆ ಇತ್ತೀಚಿನ ಒಂದು ಘಟನೆಯನ್ನು ಇಲ್ಲಿ ಕೊಡಲಾಗಿದೆ.

ಕೊರಿಯಾ ಕದನದ ನಂತರದ ಘಟನೆಯಿದು. ಕೈದಿಗಳನ್ನು ಶಿಬಿರಗಳಲ್ಲಿ ಬಿಟ್ಟಿದ್ದರು. ಆ ಶಿಬಿರವು ಪರ್ವತದ ಬುಡದಲ್ಲಿರುವ ವಿಶಾಲ ಮೈದಾನದಲ್ಲಿತ್ತು. ಮೈದಾನದ ಸುತ್ತಲೂ ತಂತಿಗೆ ಬೇಲಿ ಹಾಕಿದ್ದರು. ಅದರೊಳಗೆ ಸಾಧಾರಣ ಮೂರು ಸಾವಿರ ಯುದ್ಧ—ಕೈದಿಗಳಿದ್ದರು. ಅದರಲ್ಲಿ ಚೈನೀಯರೂ, ಕೊರಿಯನರು, ಬ್ರಿಟಿಷರು ಹಾಗು ಅಮೇರಿಕನರಿದ್ದರು. ಇದ್ದ ಕೈದಿಗಳನ್ನು ಐನೂರು ಜನರ ತಂಡಗಳ ವಿವಿಧ ಗುಂಪುಗಳನ್ನಾಗಿ ಪ್ರತ್ಯೇಕಿಸಿಡಲಾಗಿತ್ತು.

ಹೀಗಿರುವಾಗ ಒಂದು ದಿನ ಬೇಲಿಯೊಳಗೆ ಕೈದಿಗಳು ಅವರ ದೈನಂದಿನ ಕಾರ್ಯಕ್ರಮಗಳನ್ನು ಅಡ್ಡಿಯಿಲ್ಲದೆ ನಡೆಸುತ್ತಿದ್ದರು ಹೊರಗೆ, ಶಸ್ತ್ರ ಕಾವಲುಗಾರರು ಶಾಂತವಾಗಿ, ಆದರೆ ಕಣ್ಣಿನಲ್ಲಿ ಎಣ್ಣೆ ಹಾಕಿಕೊಂಡು, ತಮ್ಮ ಕರ್ತವ್ಯವನ್ನು ಪಾಲಿಸುತ್ತಿದ್ದರು. ಹಾಗಿರುವಾಗ ಇದ್ದಕ್ಕಿದ್ದಂತೆ ಅವರೆದ್ದು ನಟಿದು ನಿಂತುಕೊಂಡು ಪ್ರಣಾಮಕೊಟ್ಟರು. ಆ ಸಮಯದಲ್ಲಿ ಯೋಗ ಕ್ಷೇಮ ವಿಚಾರಿಸಲು ಅಧಿಕಾರಿಯು ಆ ಶಿಬಿರಕ್ಕೆ ಬಂದಿದ್ದರು.

ಆಗ ಆಗಮಿಸಿದ ಆಜ್ಞಾಧಿಕಾರಿಯು ಲೆಪ್ಟಿನೆಂಟ್—ಜನರಲ್ ಥೋರಾಟ್; ಹೊರಗೆ ಮೇಲ್ವಿಚಾರಣೆನೋಡಿಕೊಳ್ಳುತ್ತಿದ್ದ ಸೈನ್ಯವು ಭಾರತೀಯ ಸೇನೆ.

ಅದು ೧೯೫೩ ನೇ ಇಸವಿ.

ಸಪ್ಟೆಂಬರ ದಿನಾಂಕ ಇಪ್ಪತ್ತೈದರಂದು ಮೇಲ್ವಿಚಾರ ಹಾಗೂ ಕೈದಿ ಸೈನಿಕರಿಗೆ ಬೆಳಗ್ಗಿನ ವ್ಯಾಯಾಮ ಕಾರ್ಯಕ್ರಮ ಮುಗಿದಿತ್ತು.

"ಇನ್ನು ಮುಂದಿನ ಕಾರ್ಯಕ್ರಮಕ್ಕೆ" ನ್ನುತ್ತ ಜನರಲ್ ಥೊರಾಟ್ ತನ್ನಷ್ಟಕ್ಕೆ ಹೇಳಕೊಳ್ಳುತ್ತಾ, ಬೆಳಗ್ಗಿನ ಆಹಾರ ಸೇವನೆಯ ಕಾರ್ಯಕ್ರಮ ಮುಗಿಸಿ ಎದ್ದು ನಿಂತು, ಉಡುಗುತೊಡುಗೆ ಉಟ್ಟುಕೊಳ್ಳಲಾರಂಭಿಸಿದರು.

"ಮೇಜರ್ ಗ್ರೆವಾಲರನ್ನು ಕರೆಯಿರಿ" ತನ್ನ ಸಹಾಯಕನಿಗೆ ಸೂಚಿಸುತ್ತ "ನಾನು ಸಿದ್ಧ" ಎಂದರು.

ಜನರಲ್ ಥೊರಾಟರು ಮೇಜರ್ ಗ್ರೆವಾಲರನ್ನು ಭಾಷಾಂತರಗಾರರನ್ನಾಗಿ ಯೂವಾಗಲೂ ಒಟ್ಟಿಗೆ ಕರೆದುಕೊಂಡು ಹೋಗುತ್ತಿದ್ದರು. ಕೈದಿಗಳಿಗೆ ಅದೇನಾದರೂ ಆವಶ್ಯಕತೆ ಇದ್ದಲ್ಲಿ ಅದನ್ನು ಅಲ್ಲೇ ಕೇಳಿ ತಿಳಿದುಕೊಳ್ಳಲು ಹಾಗೂ ಅವರೊಡನೆ ನೇರ ಮಾತುಕತೆಯಾಡಲು ಮೇಜರ್ ಗ್ರೆವಾಲರ ಸಹಾಯ ಅವರಿಗೆ ಅತ್ಯಗತ್ಯವಿತ್ತು.

ಆಜ್ಞಾಧಿಕಾರಿಯು ಅಂದು ಚೈನಿ ಕೈದಿಗಳ ಶಿಬಿರದೊಳಗೆ ಪ್ರವೇಶಿಸಿದರು. ಮೇಜರ್ ಗ್ರೆವಾಲ್ ಅವರ ಹಿಂದುಗಡೆಯೇ ಇದ್ದರು. ಯಾರೂ ಏನನ್ನೂ ಹೇಳರಲಿಲ್ಲ. ಆದರೂ ಅಲ್ಲೇನೋ ಸಂಚು ಸಾಗುತ್ತಿದೆಯೆಂಬುದರ ಸೂಚನೆಯ ಚಿಹ್ನೆ ಕಂಡುಬರುತ್ತಿತ್ತು.

ಎಚ್ಚರಿಕೆಯ ಚಿಹ್ನೆ ಮೆದುಳಿಗೆ ಕೆಲಸವನ್ನಿತ್ತಿತು. ಆದರೂ ಅವರ ಮುಗುಳ್ನಗೆಯಲ್ಲಿ ಒಂದಿನಿತೂ ಬದಲಾವಣೆಯಾಗಲಿಲ್ಲ. ಅವರು ಆತ್ಮವಿಶ್ವಾಸದಿಂದ ಧೃತಿಗೆಡದ ಕೈದಿಗಳ ನಡುವೆ ಮುನ್ನಡೆದರು.

ತನ್ನ ಸುತ್ತುಮುತ್ತ ಇದ್ದ ಚೈನಿ ಕೈದಿಗಳತ್ತ ಅವರು ಬಲು ಜಾಗರೂಕತೆ ಹಾಗೂ ಚಾಣಾಕ್ಷತನದಿಂದ ದೃಷ್ಟಿ ಹಾಯಿಸಿದ್ದರು. ಕೈದಿಗಳ ಮುಖಗಳಲ್ಲಿ ಬದಲಾವಣೆ ಸ್ಪಷ್ಟವಾಗಿ ಕಂಡುಬರುತ್ತಿತ್ತು.

ಜನರಲ್ ಥೊರಾಟರು ಮೇಜರ್ ಗ್ರೆವಾಲರತ್ತ ಸ್ವಲ್ಪ ತಿರುಗಿದರು. ಡೇರಿಯತ್ತ ಅವರ ನೋಟ ಓಡಿದಾಗ ಅಲ್ಲಿ ಸಂಚು ನಡೆಯುತ್ತಿದೆಯೆಂಬುದು ಅವರಿಗೆ ಅತೀ ಸ್ಪಷ್ಟವಾಯಿತು. ಅಲ್ಲಿಯ ಕೈದಿಗಳು ನೋಡುತ್ತಿದ್ದ ನೋಟದಿಂದಲೇ ಜನರಲರ ಜೀವಕ್ಕೆ ಅಪಾಯ ಬರಲಿಕ್ಕಿದೆಯೆಂಬುದು ಗೊತ್ತಾಗುತ್ತಿತ್ತು.

ಅದೊಂದು ಮೂಕ ನಾಟಕವನ್ನಭಿನಯಿಸಿದಂತಿತ್ತು. ಅಷ್ಟರಲ್ಲೇ ಐನ್ನೂರು ಚೈನಿ ಕೈದಿಗಳು ಭಾರತೀಯ ಸೇನಾಧಿಕಾರಿಯನ್ನು ಸುತ್ತುವರಿದಿದ್ದರು. ಅವರು ಅತ್ತ ಎದ್ದು ಕಂಡುಬರುತ್ತಿದ್ದರು.

ಸೇನಾಧಿಕಾರಿಯವರು ಬೇಲಿಯತ್ತ ಒಮ್ಮೆ ನೋಟ ಬೀರಿದರು. ಅಲ್ಲಿ ಕಾವಲುಗಾರರು ಕಡೆದ ವಿಗ್ರಹಗಳಂತೆ ನಿಂತುಕೊಂಡಿದ್ದರು, ಕೋವಿಗಳು ಸಿದ್ಧವಾಗಿದ್ದುವು.

ಸೇನಾಧಿಕಾರಿಯು ಒಂದು ಆಜ್ಞೆ ಇತ್ತಲ್ಲಿ ಸಾಕಾಗಿತ್ತು. ಐನ್ನೂರು ಚೈನೀಯರನ್ನು ಪುಣ್ಯಮುಕ್ತಿಸಿ ಬಿಡಬಹುದಾಗಿತ್ತು ಅಷ್ಟರಲ್ಲೇ ಅವರ ದೃಷ್ಟಿಗೆ ಕಾವಲುಗಾರ ಸೈನಿಕರ ಬೆಳ್ಳಗಿನ ತೋಳುಪಟ್ಟಿಯ ಮೇಲಿದ್ದ ಅಕ್ಷರಗಳು ಕಂಡು ಬಂದುವು. ಅಲ್ಲಿ 'ಭಾರತ' ಶಬ್ದ ಎದ್ದು ಕಂಡು ಬರುತ್ತಿತ್ತು.

ಅದು ಶಾಂತಿಸೇನೆ— ಅವರು ಅವರ ಅಧಿಕಾರಿ. ರಕ್ತಪಾತವನ್ನವರು ಇಚ್ಛಿಸಲಿಲ್ಲ. ಹೀಗೆ ಕ್ಷಣಕಾಲ ಕಳೆದಿತ್ತು. ಮೇಲಿನ ವಾತಾವರಣ ಚುರಣೋತ್ತರ ಕಾಲದ ಸ್ಥಿತಿಯಂತಾಗಿತ್ತು.

ಜಾಗರೂಕತೆಯಿಂದ ಅವರೆಲ್ಲರ ಮುಖವನ್ನು ಸೇನಾಧಿಕಾರಿ ವೀಕ್ಷಿಸಿದರು. ಅವರಲ್ಲಿ ಆಂಗ್ಲ ಭಾಷೆ ಬರುತ್ತಿದ್ದವನೊಬ್ಬನನ್ನು ಅವರು ಬಳಿಗೆ ಕರೆದರು; ಮತ್ತು ಅವರೇ ಅತ್ತ ಹೋದರು.

ಅವನ ಬಳಿ ಮುಗುಳ್ನಗುತ್ತ, "ಏನಾಗಿದೆ ಇಂದು? ನಿಮ್ಮಲ್ಲಿ ಅದೇನೋ ಗೊಂದಲವೆದ್ದಿರುವಂತೆ ಕಂಡು ಬರುತ್ತಿದೆ. ನೀವು ಚೈನೀಯರು. ಆದರಾತಿಥ್ಯಗಳಿಗೆ ಹೆಸರು ಹೋದವರು. ಆದರೆ ಇಂದು ಒಂದು ಬಟ್ಟಲು ಚಹಾ ಕೂಡಾ ಕೊಟ್ಟಿರುವದಿಲ್ಲ. ನನಗಿಂದು ಚಹಾ ಸಿಗುವಂತಿಲ್ಲವೇ?" ಸೇನಾಧಿಕಾರಿಯ ಪ್ರಶ್ನೆ ಅವನನ್ನು ಉಭಯಸಂಕಟದಲ್ಲಿ ಸಿಕ್ಕಿಸಿತು. ಅವನು ಹಾಗೂ ಅವನ ಸಹ ಕೈದಿಗಳು ಬೇರೇ ವಾತಾವರಣವನ್ನು ಅಪೇಕ್ಷಿಸಿ ಎದುರು ನೋಡುತ್ತಿದ್ದರು. ಆದರೆ ಅಂದು ಹಾಗಾಗಲಿಲ್ಲ.

ಕ್ಷಣಕಾಲ ಅವನು ಸೇನಾಧಿಕಾರಿಯನ್ನು ದೃಷ್ಟಿಸಿ ನೋಡಿದನು. ಅನಂತರ ಅದೇನೋ ಕಂಡಿತು! ಅವನ ಮುಖಚರ್ಯೆಯಲ್ಲಿ ಬದಲಾವಣೆಯಾಯಿತು.

ಸೇನಾಧಿಕಾರಿಯವರಿಗೆ ಚಹಾ ಸಿದ್ಧಗೊಳಿಸಿ ತಂದು ಕೊಡಲಾಯಿತು

"ನೋಡುವ, ಈಗ ನಿಮಗೇನಾದರೂ ತೊಂದರೆ, ಕಷ್ಟಗಳಿದ್ದರೆ ಹೇಳಿರಿ." ಎಲ್ಲಾ ಮುಗಿದ ಮೇಲೆ ಸೇನಾಧಿಕಾರಿ ಮರಳಿದರು.

ಅಂದಿನ ಯುದ್ಧದಲ್ಲಿ ಒಂದು ಗುಂಡೂ ಹಾರಿರಲಿಲ್ಲ; ಆದರೆ ವಿಜಯ ವೈಜಯಂತಿಯನ್ನು ವೈಭವದಿಂದ ಮಂಡಿಸಲಾಗಿತ್ತು.

ಜಯವಂತನಿಗೆ ಅಶೋಕ ಚಕ್ರ ಸಿಕ್ಕಿತು.

ಇದು ಇತ್ತೀಚೆಗೆ ಒಂದು ಆಂಗ್ಲ ವಾರಪತ್ರಿಕೆಯಲ್ಲಿ ಪ್ರಕಟವಾಗಿರುವ ಕಥೆ.

ಭಾರತೀಯ ರಕ್ಷಣಾ ವಿಭಾಗ ಮತ್ತು ಆಡಳಿತ ವರ್ಗ, ಸಂತ ನಾಲಿನಲ್ಲಿರುವ ವಿನೋಬಾ ಹಾಗೂ ಶಾಂತಿ ಸೇನೆಗಳು ಗಡಬಡಿಸುತ್ತಿರುವಾಗ ಮೇಲಿನ ಕಥೆ ಜ್ಞಾಪಕಕ್ಕೆ ಬಂತು.

ಇಲ್ಲೇ ಶ್ರೀ ರಾಮಕೃಷ್ಣ ಪರಮಹಂಸರು ಹೇಳುತ್ತಿದ್ದ ಕಥೆಯೂ ಜ್ಞಾಪಕಕ್ಕೆ ಬರುತ್ತಿದೆ. ಸನ್ಯಾಸಿ ಸರ್ಪನಿಗೆ ಶಾಂತಿ ದೀಕ್ಷೆ ಕೊಟ್ಟ ಕಥೆಯಿದು. ಶಾಂತಿ ಎಂದರೆ ಅನಾವಶ್ಯಕವಾಗಿ ಕಚ್ಚಬಾರದೆಂಬುದು ಸನ್ಯಾಸಿಯ ಸದಭಿಪ್ರಾಯ ಸರ್ಪ ಅ

(೧೬ನೇ ಪುಟ ನೋಡಿರಿ)

ಉಡುಪಿ ಡಿ. ಮು ಕೋರ್ಟಿನಲ್ಲಿ

O. S. 34/61 R. E. P 621/63

ಅಕ್ಕಯ ಹೆಗಡ್ತಿ — ಅರ್ಜಿದಾರಳು

ಮತ್ತು

1. ಶೇಷಿ ಶೆಡ್ತಿ—ಮರಿಯಂಮ ಶೆಡ್ತಿ ಮಗಳು, 2. ನೋನಪ್ಪ ಶೆಟ್ಟಿ—ಶೇಷಿ ಶೆಡ್ತಿರ ಮಗ ಉಡ್ಪಿ ತಾಲ್ಲೂಕ ಚೇರ್ಕಾಡಿ ಗ್ರಾಮದ ಮುಂಡ್ಕಿನ ಜಡ್ಡಿನಲ್ಲಿರುವವರು —ಎದ್ರಿರು

ಮೇಲಿನ ಅಮಲ್ದಾರಿಯಲ್ಲಿ ದಾಖಲಾದ ಸ್ಥಿರಾಸ್ತಿಯಾಸ್ತಿಹಾರಿನ ಯೇಲಂ ಶರತುಗಳ ನಿರ್ಣಯದ ಬಗ್ಗೆ ತಾ. 18—4—64ಕ್ಕೆ ಸದ್ರಿ ಅಮಲ್ದಾರಿಯು ಮಿಶೋಣಾಗಿಯದೆ ಎಂತ ಎದ್ರಿಂಗೆ ತಿಳಿಯಪಡಿಸಿರುತ್ತದೆ.

Y. C. S. Hegde
Advocate for Petitioner

ಉಡುಪಿ, ತಾ 27—3—64

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಗೇಹ ರಾಜ್ಯದಲ್ಲಿ

ದೇಶಕ್ಕೆ ಬಂದಿದೆ ಸಿಹಿಗಾಲ

ರ

'ಏನಂತೆ? ಇವತ್ತು ಬೇಗನೇ ಚಂದ್ರೋದಯವಾಯ್ತು?'

"ಕೃಷ್ಣಪಕ್ಷ ಕಳೆದು ಶುಕ್ಲಪಕ್ಷ ಪ್ರಾರಂಭವಾಗಿದೆಯಲ್ಲ?'

"ಶುಕ್ಲಪಕ್ಷವೇನೋ ಪ್ರಾರಂಭವಾಗಿದೆ ನಿಜ ಆದ್ರೆ ಅದು ಆಕಾಶದಲ್ಲಿರೋ ಚಂದ್ರನಿಗೆ ಈ ಲೋಕದ ಚಂದ್ರನಿಗೆ ಶುಕ್ಲವೂ ಇಲ್ಲ, ಕೃಷ್ಣವೂ ಇಲ್ಲ?

ಸರಿಕನ್, ನೀನ ನೂತನ್ನಂತೂ ಸರಿ ಒಲ್ಲೆ ..., ಈ ರೀತಿ ಶ್ಲೇಷ—ಉತ್ಪ್ರೇಕ್ಷೆಯೆಲ್ಲ ಯಾವಾಗ ಎಲ್ಲ ಕಲ್ತುಕೊಂಡೇಂತ''

"ಶ್ಲೇಷವೂ ಉತ್ಪ್ರೇಕ್ಷೆಯೇ ಒಂದೂ ನಾನರಿಯ . ಸನ್ನೋ ಹೇಳ್ತೀ; ನುಡಿದು ಬಿಟ್ಟೆ "

ನೀನ ನ ಡಿವಸ್ವ ನಿಜಾನ್ನು ಆದ್ರೂ ನೋಡು ಅದು ಕಾವ್ಯಮಯವಾದ ಭಾಷೆಯಾಗಿ ಬಿಟ್ಟಿ'

'ಕಾವ ... ವ್ಯ ಒಂದೂ ನಂಗೊತ್ತಿಲ್ಲ ನಾನಂದು ಅಂದ್ರೆ ನೀವೊಂದು ತಿಳ್ಕೊಂಡ್ರೆ

'ಇಲ್ಲಪ್ಪ ಇಲ್ಲ ನಾನೇನೂ ಬೇರೆ ತಿಳ್ಕೊಳ್ಳಿಲ್ಲ ನೀನಂದದ್ರಲ್ಲೇ ಕಾವ್ಯತನ ಹುದುಗಿದೇಂತಂದ "

"ಕವಿಗಳಿಗೆ ಯಾವಾಗ್ಲೂ ಹಾಗೇ ತೋರುತ್ತೆ "

"ಛಿ ಛಿ ಏನಂದು ಬಿಟ್ಟೆ ಕಣೆ? ಕವಿಯಾ? ಏನು ತೋರುತ್ತದ? ಏನೇನೆಲ್ಲಾ ಅಂದಿಟ್ಟು ಕವಿಕುಲಕ್ಕೇನೇ ಕಲಂಕ ಹಚ್ಚುತ್ತಿರುವೆಯಲ್ಲಾ .."

"ತಪ್ಪಾಯ್ತು ಕ್ಷಮಿಸಿಬಿಡಿ ಸದ್ಯ ಕೆಂಪು ದೂಳು ಹಚ್ಚಿಲ್ಲವಲ್ಲಾ ಅದೇ ತೃಪ್ತಿ.'

"ಕೆಂಪು ದೂಳು ಹಚ್ಚೋದಕ್ಕೇ ಇವೆಯಲ್ಲಾ ಪಿಂಗನೀಸ್ ಇದುರು ತುಂಬಿದ ಲಾರಿಗಳು "

ನಾವ ತಾರ್ ರೋಡ್‌ನಲ್ಲಿ ನಡೆಯೋವಾಗ್ಲೆ ಹೀಗಂದ್ರೆ, ಒನಷ ಧೂಳು ತುಂಬಿದ ಮಣ್ಣು ರಸ್ತೆಯಲ್ತಿದ್ರೆ ಏನಾಗ್ತಿದ್ರೋ

'ಎದ್ದೇ ನೋಡು ಸಂಸ್ಕಾರ ಎಲ್ಲಾ ನಿಮ್ಮ ಕಾಂಗ್ರೆಸ್ನ ಬ್ಲಾಕ್ ಬೋರ್ಡ್ ಪಾಲಿಸಿ ದೆ "

'... ನ್ಯಾಸಾಗಿದೆ ಸರಿ ಆದ್ರೆ ... ವಾಗ ಬಿಳಿಬಟ್ಟೆ ಕೆಂಪಾಗಿ ಬಿಡತ್ತೆ '

"ಎದ್ದೇನು ಮಾಡೋದು? ಸುಧಾರಿಸಿಕೊಂಡು ಹೋಗ್ಬೇಕು."

"ಅಲ್ಲ, ಕೆಂಪಿನವ್ರೇ ತಂತಮ್ಮನ್ನ ಸುಧಾರ್ಸಿಕೊಂಡು ಹೋಗೋದಿಲ್ಲಾಂತ ಅಂದ್ರಿನೀವು; ಮತ್ತೆ ಯಾರು ಯಾರ್‍ನ್ನ ಸುಧಾರಿಸೋದೂಂತ?"

"ಆಕೆಂಪಿನವರ ಕಥೆ ಬಿಡಿ ಗಿಡು ..?"

"ಅದ್ಯಾಕೇಂತ?"

"ಇಲ್ಲಿ, ಕೆಂಪಿನವ್ರು ಹೆಸ್ರು ಕೇಳುತ್ಲೇ ನಿಂಗೇಕೆ ಇವಿ ಸಿಟ್ಟಗೆ ಆಗುತ್ತೆ?"

"ನಂಗೇಂದನು? ಆ ಕೆಂಪು ಅನ್ನುತ್ಲೇ ಎಲ್ರಿಗೂ ವೈನವರೇಳುತ್ತೆ—ಯದ್ರಿ, ಕೆಯಿಂದ."

"ಅದು ಸರೀನ್ನು .ಆದ್ರೂ .."

"ಅಲ್ಲ, ನೋಡಿ, ಕೆಂಪಾದ ರಶ್ಯ ಕೆಂಪಾದ ಚೀನಾ ಜಗಡೋದಕ್ಕೆ ಸುರು ಮಾಡಿವೆ ."

"ಅದು ನ್ಯಾಯಾನ್ನು—ನಾಯಿ ನಾಯಿಯನ್ನ ಕಂಡ್ರೆ ಮತ್ರ ಗುರ್ರೆನ್ನುತ್ತೆ "

"ಹಾಗಾದ್ರೆ ನಮ್ಮ ದೇಶದ ಕೆಂಪು ಕಮ್ಯುನಿಸ್ಟ್ರು ಯಾಕೆ ತಮ್ಮ ತಮ್ಮಲ್ಲೇ ಕಾಳಗ ಮಸೆಯುತಿದ್ದಾರೇಂತ?'

"ಅದ್ರಲ್ಲೂ ಈಗ ಎಡ ಬಲಾಂತ ಎರಡು ಪಂಗಡ ಆಗಿದೆ."

"ಅಲ್ಲ ನಿಮ್ಮ ಟೋಪಿಯವ್ರಲ್ಲೇ ಎಡಬಲ ಇರೋದಂತ ಅಂದ್ಕೊಂಡಿದ್ದ ಈಗ. ''

'ವಸ್ತ್ರಾಂತ್ರಾಬ್ಮೇಲೆ ಎಡ-ಬಲ, ಮುಂದೆ—ಹಿಂದ ಎಲ್ಲಾ ಇದ್ದೇ ತೀರ್ಬೇಕು. ಅವೆಲ್ಲಾ ಇದ್ರೆ ಮಾತ್ರ ಅದೊಂದು ವಸ್ತ್ರಾಂತ್ರಾಗುತ್ತೆ ಇಲ್ವಾದ್ರೆ .

"ಅದೆಲ್ಲಾ ನಾಯ್ಲಿ ಬಿಡಿ ಅಂತೂ ನಮ್ಮದೇಶದ ಕೆಂಪಿನವ್ರೂ ಹೀಗೇ ಮಾಡಿದ್ರೆ..."

"ಅದೇನೊ ಇವತ್ತು ನಿನ್ನೆಯದಲ್ಲ ಕಣೆ ಕೆಂಪು ಚೀನಿಯರನ್ನು ಕರೆದವರು ಎಡವಾದ್ರೆ ಹೊರದೂಡ್ಬೇಕೊಂತನ್ನೋರು ಬಲ."

ದಿ. ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ರಜಿಸ್ಟರ್ಡ್ ಆಫೀಸು - ಲೈಟ್ ಹೌಸ್ ಹಿಲ್ ರೋಡು, ಮಂಗಳೂರು-3.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಬಡ್ಡಿಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರ್ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ — ವ — ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಬರುವ ತಿಂಗಳ ತಾರೀಕು 16—4—64ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದ್ದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ಬರುವ ತಿಂಗಳ ತಾರೀಕು 23—4—64ರಲ್ಲು ಅಪರಾಹ್ನ ಗಂಟೆ 3-30ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು — ಯಾ — ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ — ಯಾ — ಖಾಸಗಿಯಾಗಿ ಹರಾಜು ಮಾಡಲಾದೀತು ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು — ವ — ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬ್ದಾರರಾಗಿರುತ್ತಾರೆ ತಿಳಿದಿರಲಿ.

ಕ್ರಮ	ಸಾಲದ ಜಂಜಾ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ರೂ. ನ ಪೈ
1.	480/61	ಕೆ ಹಸನ್ ಮೈದಿನ್, ಮೈದಿನ್ ಬ್ಯಾರಿಯವರ ಮಗ, ಮೂಲೂರು ಗ್ರಾಮ, ಪೋಸ್ಟು ಉಚ್ಚಿಲ	187=55
2	571/61	ಕೆ ಹಸನ್ ಮೈದಿನ್, ಮೈದಿನ್ ಬ್ಯಾರಿಯವರ ಮಗ, ಮೂಲೂರು ಗ್ರಾಮ, ಪೋಸ್ಟು ಉಚ್ಚಿಲ	31=85
3	1321/61	ಶ್ರೀಮತಿ ಸಚ್ಚು ಆಚಾರ್ತಿ, ತುಂಗು ಆಚಾರ್ತಿಯವರ ಮಗಳು, ಪದು ಗ್ರಾಮ, ಪೋಸ್ಟು ಕಾಪು	13=35
4.	92/62	ನೀಲಕಂಠ ಮೇಸ್ತ್ರಿ, ಕಮಲಾಂಡರನ್ ಮೇಸ್ತ್ರಿಯವರ ಮಗ, ಉಳಿಯಾರಗೋಳಿ ಗ್ರಾಮ, ಪೋಸ್ಟು ಉಳಿಯಾರಗೋಳಿ.	23=50
5	370/62	ಸೀನ ಪೂಜಾರಿ, ಕಾಂತು ಪೂಜಾರಿಯವರ ಅಳಿಯ, ಪಾಂಗಾಳ ಗುಡ್ಡೆ, ಅಕ್ಕು ತೋಟ ಮನೆ, ಪೋಸ್ಟು ಪಾಂಗಾಳ	41=10
6	434/62	ಬಿ ಆರ್ ಕೋಟಿಯಾನ್, ರಾಜು ಎ. ಬಂಗೇರರವರ ಮಗ, ಗರಡಿ ಮನೆ, ಪದು ಗ್ರಾಮ, ಪೋಸ್ಟು ಕಾಪು	63=95
7	483/62	ಶ್ರೀಮತಿ ನರ್ಸಿ ಕೋಟಿಯಾನ್, ಕೊರಪಳು ಮರಕಾಲ್ತಿಯವರ ಮಗಳು, ಮೂಲೂರು ಪಟ್ಟಣ, ಪೋಸ್ಟು ಉಚ್ಚಿಲ	93=20
8	636/62	ಲೋಕು ಶೇರಿಗಾರ, ಕೊರಗ ಶೇರಿಗಾರರ ಅಳಿಯ, ಕಲ್ಯಾ, ಉಳಿಯಾರಗೋಳಿ ಗ್ರಾಮ, ಪೋಸ್ಟು ಉಳಿಯಾರಗೋಳಿ	139=45
9	801/62	ಗೋವಿಂದ ಎ ಮೆಂಡನ್, ಐತ ಕರ್ಕೇರರ ಮಗ, ಮೀನು ವ್ಯಾಪಾರಿ, ಕಾಪು ಪೋಸ್ಟು	75=90
10.	807/62	ಶ್ರೀಮತಿ ಸುಂದರಿ, ಅಕ್ಕುರವರ ಮಗಳು, ಉಳಿಯಾರಗೋಳಿ ಗ್ರಾಮ, ಪೋಸ್ಟು ಉಳಿಯಾರಗೋಳಿ.	19=25
11	928/62	ಪೂವಪ್ಪ ಬಿ. ಬಂಗೇರ, ಬಾಡು ಸಾಲಿಯಾನ್‌ರವರ ಮಗ, ಸೆಲೂನ್ ಕೀಪರ್, ಕಾಪು	147=55
12.	1037/62	ಸೀನ ಪೂಜಾರಿ, ತಬುರ ಪೂಜಾರಿಯವರ ಮಗ, ಉಳಿಯಾರಗೋಳಿ ಗ್ರಾಮ, ಪೋಸ್ಟು ಉಳಿಯಾರಗೋಳಿ	61=75

ಸ್ಥಳ ದಿ ವಿಜಯ ಬೇಂಕ್ ಲಿಮಿಟೆಡ್, ಕಾಪು.
ತಾರೀಕು 31-3-64.

ಬಿ ಭಾಸ್ಕರ ಸೆಟ್ಟಿ,
ಏಜಂಟ್.

"ಎಡವೋ ಬಲವೋ ಅಲ್ಲಾ, ಪಕ್ಷ ಇನ್ನೂ ಗಟ್ಟಿಯಾಗಿಲ್ಲ ಅಗ್ಲೇ .."

"ಅಧಿಕಾರಾಂತನ್ನೋದು ಎಲ್ಲಾ ಮಾಡಿಸುತ್ತೆ "

"ಮತ್ತೆ ನೋಡಿ, ಇದುವರೆಗೆ ನಿಮ್ಮ ಕಾಂಗ್ರೆಸ್‌ನ ಅಧಿಕೃತ ಹುರಿಯಾಳುವನ್ನ ಮತ್ತೊಬ್ಬ ಕಾಂಗ್ರೆಸಿಗ ವಿರೋಧಿಸಿ ಚುನಾವಣೆಗೆ ನಿಲ್ಲುವುದಿತ್ತು. ಈಗ .."

"ಆ ಪದ್ಧತಿ ಕೆಂಪಿನವ್ರಲ್ಲೂ ಬಂದಿದೇಂತ ತಾನೇ ನೀನನ್ನೋದು"

'ಹಾದೂಂದ್ರೆ... ಇದೆಲ್ಲಾ ಎಂಥದೂಂತ?"

'ಇಲ್ಲಿಗೇ ಮುಗೀಲಿಲ್ಲ ಈ ರಾಮಾಯಣ .."

"ಮತ್ತೆ ..?"

"ಅದ್ರ ಅಧ್ಯಕ್ಷರು ಬ್ರಿಟಿಷರ ದಾಸರಾಗಿರೋದಕ್ಕೂ ಒಪ್ಪಿದವರಂತೆ. ಅದ್ರಿಂದ ಅವರನ್ನೇ ಕಿತ್ತು ಹಾಕ್ಬೇಕಂತ ಮಸಲತ್ತು ನಡೀತಿದೆ "

"ಅಧ್ಯಕ್ಷ್ರಾಂದ್ರೆ.. ...ಡಾಂಗೆ... ಅಲ್ವೆ?"

"ಹಂಗ್ಯಾಗಿಲ್ಲ ಕಣೇ ನೀನು. ಎಲಾ ತಿಳ್ಕೊಂಡ್ಬಿಟ್ಟಿದ್ದಿ. ಪರೀಕ್ಷೆಗೆ ಕೂರೋ ಪರೀಕ್ಷಾರ್ಥಿಗೂ ತಿಳೀಲಿಕ್ಕಿಲ್ಲ ಇದು .."

"ಸಾಕು ಬಿಡೀಂದ್ರೆ ...ನಿಮ್ಗೆ ನನ್ನನ್ನ ಹೊಗ್ಳಿ ಹೊಗ್ಳಿ ಬಾಯೇ ಒತ್ತೋದಿಲ್ಲ .."

"ಎಲ್ಲಿಯೇ ನಾನಿನ್ನ ಹೊಗಳಿದ್ದು?... ಪರೀಕ್ಷೆಗೆ ಕೂರೋದಕ್ಕೆ ನೀನು ನಾಲಾಯಕ್ಕೊಂದ್ರೆ ."

"ಅಂದ್ರೆ? "

"ಅಂದ್ರೆ ಏನಿಲ್ಲ ತಿಳ್ಕೊಳ್ಳದೇನೇ ಪರೀಕ್ಷೆಗೆ ಹೋಗಿ ಸರಿಉತ್ರ ಬರೀಬೇಕು, ಪಾಸಾಗ್ಬೇಕು, ಅದ್ರಲ್ಲಿದೆ ಮಜಾ ."

"ನಿಮ್ಮ ಟೋಪಿ ಸರ್ಕಾರದಲ್ಲಿ ಎಲ್ಲಾ ಆಗುತ್ತೆ "

'ಅಗ್ಲಿ ಬಿಡ ಇನ್ನು ನಿನ್ನ ಸೀರೆ ಸರ್ಕಾರ ಬರೋವಾಗ ಏನಾಗುತ್ತೆ ನೋಡೋಣ."

"ಆಗೋದೇನು ಮಣ್ಣು?"

'ಮಣ್ಣು ಏನಾಗುತ್ತೆ? ನೋಡ್ತಾ ಇದ್ದೀಯಲ್ಲಾ ನಿನ್ನ ಸುಚೇತಾರ ಸೀರೆ ಸರ್ಕಾರದ ರಾಜ್ಯದಲ್ಲಿ ."

"ಅಬ್ಬಬ್ಬ ನೀವೇ. ಇಲ್ಲ ನೋಡ್ರಿ, ಅದ್ರದ್ದು ಸೀರೇ ಸರ್ಕಾರಾದ್ರೂನೂ ಟೋಪೀನೆ ಅಲ್ವೆ?"

(೯ನೇ ಪುಟ ನೋಡಿರಿ)

ಪ್ರೊ ಕು ಶಿ ಹರಿದಾಸ ಭಟ್ಟ, ಎಂ ಎ

ಅವರ ನವೀನ ಪುಸ್ತಕಗಳು ರೂ ನ

ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಿವಾರಾ	2=00
ಏಶ್ಯದ ಸಂಪತ್ತು	2=00
ಅಮೇರಿಕದ ಆರು ಕತೆಗಳು	1=75
ವರ್ತಮಾನಕಾಲದ ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ ವಿವರವಾದ ಪಟ್ಟಿಗಾಗಿ 10 ನ ಪೈ ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಕವಲು ದಾರಿ—ಕೆಂಪು ದೀಪ

ಕೆಳಗಿಳಿಯುತ್ತಿರುವ ನಮ್ಮ ಚಿತ್ರೋದ್ಯಮ!

ಅವಸರದ ಹೆಜ್ಜೆಗಳನ್ನು ಕನ್ನಡ ಚಿತ್ರ ನಿರ್ಮಾಪಕರು ಇರಿಸುತ್ತಿದ್ದಾರೆ ಎಂಬುದು ಕಳೆದ ವರ್ಷ ನಾವು ಕಂಡುಕೊಂಡಾಗಿದೆ.

ಕಳೆದ ವರ್ಷ ನಾವು ನೋಡಿ ಅನುಭವಗಳಿಸಿಕೊಂಡ ಕನ್ನಡ ಚಿತ್ರಗಳಲ್ಲಿ, "ಉತ್ತಮ" ಎಂದು ಹೇಳಿಕೊಳ್ಳುವಂತಹ ಒಂದು ಚಿತ್ರವೂ ಇಲ್ಲ

ಆದರೂ ನಾವು ತೃಪ್ತಿಪಟ್ಟುಕೊಂಡಿದ್ದೇವೆ. ಕನ್ನಡ ಚಿತ್ರಗಳು ಪ್ರದರ್ಶನಕ್ಕಾಗಿಯಾದರೂ ಬರುತ್ತಿವೆಯಲ್ಲ ಮುಂದಕ್ಕಾದರೂ ಒಳ್ಳೆಯ ಚಿತ್ರಗಳು ಬರಬಾರದೆಂದೇನೂ ಇಲ್ಲವಲ್ಲ, ಎಂದು ಕನ್ನಡ ಚಿತ್ರೋದ್ಯಮಕ್ಕೆ ಸ್ವಾಗತ ಇತ್ತಿದ್ದೇವೆ.

ಆದರೆ ಈಗ ಆ ಭರವಸೆ ಕುಸಿಯುತ್ತಾ ಬಗಿದೆ. ಕನ್ನಡ ಚಿತ್ರೋದ್ಯಮ ಎಂದೂ ಉತ್ತಮ ಮಟ್ಟವನ್ನೇರಲಾರದೇನೋ ಎಂಬಂತೆ ನಮ್ಮ ಆಸೆಯ ಗೋಪುರ ಕುಸಿಯುತ್ತಿದೆ.

ನಮ್ಮಲ್ಲಿ ಯಾರ ಅಭಾವವಿದೆಯೆಂದು ನಮ್ಮ ಚಿತ್ರಗಳು ಹೀಗಾಗುತ್ತಿವೆ?

ಸಾಹಿತಿಗಳ ಅಭಾವವೇ ನಿರ್ದೇಶಕರ ಕೊರತೆಯೆ? ತಾಂತ್ರಿಕಜ್ಞರಿಲ್ಲವೆ? ಸಂಗೀತ ನಿರ್ದೇಶಕರು ಕಡಿಮೆ ಇದ್ದಾರೆಯೆ? ಯೋಗ್ಯ ನಟ—ನಟಿಯರಿಲ್ಲವೆ?

ಯಾವ ಕೊರತೆಯಿದೆ ನಮ್ಮಲ್ಲಿ?

ಇದ್ದರೆ ಸ್ಟುಡಿಯೋದ ಕೊರತೆಯಿದೆ. ಈ ಕೊರತೆ ತುಂಬಿ ಬರುತ್ತದೆ ಎಂದು ಕೆಲವರ್ಷಗಳಿಂದ ಹೇಳಿಕೊಳ್ಳಲಾಗುತ್ತಿದ್ದರೂ ಸಧ್ಯ, ಇದು ತುಂಬಿ ಬಾರದ ಕೊರತೆಯಾಗಿಯೇ ಇದೆ.

ಇದಕ್ಕೆ ಕಾರಣವೇನಾದರೂ ಇದ್ದರೆ ನಮ್ಮ ಉದಾಸೀನತೆಯೇ ಎನ್ನಬಹುದು.

ಈ ಕುರಿತು ಹಿಂದೊಮ್ಮೆ ಪ್ರಯತ್ನ ನಡೆಸಿದ್ದ—ಮೈಸೂರು ಸರಕಾರವು ಸ್ಟುಡಿಯೋದ ಬಗ್ಗೆ ವಿಚಾರವಿನಿಮಯ ನಡೆಸಲು ಏರ್ಪಡಿಸಿದ್ದ ಕಮಿಟಿಯ ಸದಸ್ಯರೂ ಆಗಿದ್ದ ಶ್ರೀಮಾನ್ ಬಿ ಆರ್. ಪಂತುಲು ಅವರ ಇತ್ತೀಚಿನ ಹೇಳಿಕೆಯು ತೀರಾ ವಿಚಿತ್ರವಾಗಿದೆ.

ಕರ್ನಾಟಕದಲ್ಲಿ ಸ್ಟುಡಿಯೋ ಆದರೂ ಸುಖವಿಲ್ಲವೆಂದು ಅವರನ್ನುತ್ತಾರೆ ಒಂದು ಹಾವು ಬೇಕಾಗಿದ್ದರೆ, ಎಕ್ಸ್‌ಟ್ರಾ ನಟ—ನಟಿಯರು ಬೇಕಾದರೆ ಮದ್ರಾಸಿಗೇನೇ ಓಡಬೇಕು ಎಂದು ಅವರು ಅನ್ನುತ್ತಾರೆ.

ನಮ್ಮಲ್ಲಿ ಹಾವುಗಳೂ, ಹೆಬ್ಬಾವುಗಳೂ ಘಟಸರ್ಪಗಳೂ ಇವೆ ನಮ್ಮಲ್ಲಿ ಸಾಕೆನಿಸುವಷ್ಟು ನಟನಟಿಯರು ಎಕ್ಸ್‌ಟ್ರಾ ರೂಪದಲ್ಲಿ ಕಾಣಿಸಿಕೊಳ್ಳಬಲ್ಲರು.

ಕ್ಷುಲ್ಲಕ ಕಾರಣಗಳನ್ನು ಮುಂದಿಟ್ಟುಕೊಂಡು ಸ್ಟುಡಿಯೋಯೋಜನೆಗೆ ತಣ್ಣೀರೆರಚುವ ಮಹಾಶಯರುಗಳು, ಕನ್ನಡ ಚಿತ್ರೋದ್ಯಮದ ಬೆಳವಣಿಗೆಯಾಗದಂತೆ ತಡೆಗಟ್ಟುವ ಮಹಾ ಕಾರ್ಯದಲ್ಲಿ ಇವತ್ತಿಗೆ ಆಸಕ್ತರಾಗಿದ್ದಾರೆ.

ಕನ್ನಡ ಸ್ಟುಡಿಯೋ ನಿರ್ಮಾಣಗೊಳ್ಳುವದರಿಂದ ಚಿತ್ರೋದ್ಯಮದ ಅನೇಕ ಸಮಸ್ಯೆಗಳು ಪರಿಹಾರ ಹೊಂದುತ್ತವೆ

ಹೊರಾಂಗಣ ದೃಶ್ಯಗಳ ಚಿತ್ರೀಕರಣಕ್ಕೆ ಕರ್ನಾಟಕದ ಹಲವು ಪ್ರದೇಶಗಳು ಅತ್ಯುತ್ತಮವಾಗಿವೆ. ನಮ್ಮ ಕಲಾವಿದರುಗಳು ನಮ್ಮ ನಾಡಿನಲ್ಲೇ ನೆಲಸುವಂತಾಗುತ್ತದೆ ಕನ್ನಡ ರಾಜ್ಯದ ಹಣ ರಾಜ್ಯದಲ್ಲೇ ಉಳಿಯುತ್ತದೆ, ನಮ್ಮ ತಾಂತ್ರಿಕಜ್ಞರು ನಮ್ಮ ಚಿತ್ರಗಳಿಗೆ ನೆರವಾಗಲು ಸಾಧ್ಯವಿದೆ

ಈ ರೀತಿಯಲ್ಲಿ ಸ್ಟುಡಿಯೋ ನಿರ್ಮಾಣದಿಂದ ಅನೇಕ ಬಗೆಯಿಂದ ಕನ್ನಡ ಚಿತ್ರೋದ್ಯಮಕ್ಕೆ ಶಕ್ತಿ ಬರುತ್ತದೆ.

ಮದ್ರಾಸಿನ ಸ್ಟುಡಿಯೋಗಳಲ್ಲಿ ತಮ್ಮ ಸರತಿಯನ್ನು ಕಾಯ್ದುಕೊಂಡ, ಅವಕಾಶ ಸಿಕ್ಕೊಡನೆ, ಅವಸರದ ಚಿತ್ರೀಕರಣದ ಕಾರ್ಯಮುಗಿಸಿಕೊಂಡು ಅವಸರವಾಗಿ ಹೊರ ಬರುವ ಚಿತ್ರಗಳನ್ನೇ ಈಗ ನಾವು ಕಾಣುತ್ತಿದ್ದೇವೆ. ಇದು ಸಲ್ಲದು

ಈ ಅವಸರದ ಚಿತ್ರೀಕರಣದ ಕಾರ್ಯದಿಂದಾಗಿ ಕನ್ನಡ ಚಿತ್ರಗಳು ಯಶಸ್ವಿಯಾಗುತ್ತಿಲ್ಲ. ಕೆಲ ಚಿತ್ರಗಳು ಅಲ್ಪಸ್ವಲ್ಪ ಯಶಸ್ಸುಗಳಿಸಿಕೊಂಡಿದ್ದರೆ, ಅದು ಕಲಾವಿದರ ಪುಣ್ಯ ಬಲದಿಂದಲೇ ಎಂದು ಅನ್ನಬೇಕಾಗುತ್ತದೆ!

ಇನ್ನೂ ಒಂದು ವಿಷಯದಲ್ಲಿ ನಮ್ಮ ಚಿತ್ರ ನಿರ್ಮಾಪಕರು ಹೆಮ್ಮೆ ಪಡುವಂತಹ ಕಾರ್ಯ ಸಾಧಿಸಿದ್ದಾರೆ ಅವರು ಚಿತ್ರೀಕರಣದ ಕಾರ್ಯ ಆದಷ್ಟು ಬೇಗ ಮುಗಿಸಬೇಕೆಂದು ಪ್ರಯತ್ನಿಸುತ್ತಿದ್ದರೆ ನಮ್ಮ ನಟನಟಿಯರು, ನಾಟಕ ಆಶಕ್ತಿ ಪ್ರವಾಸ ಕೈ ಕೊಳ್ಳುತ್ತಿದ್ದಾರೆ!

ಇದರಿಂದ ಚಿತ್ರೋದ್ಯಮಕ್ಕಿಂತಲೂ ನಾಟಕದಲ್ಲೇ ಹೆಚ್ಚುಗಳಿಸಿಕೊಳ್ಳಬಹುದಾಗಿದೆ ಎಂದು ನಮ್ಮ ನಟ—ನಟಿಯರು ತಿಳಿದಿರುವಂತಿದೆ

ಇದಕ್ಕಿಂತ ಹೆಚ್ಚು ವಿಡಂಬನೆಯ ಮಾತು ಬೇರೆಯಾವ ಚಿತ್ರೋದ್ಯಮದಲ್ಲೂ ಕಂಡು ಬರಲಿಕ್ಕಿಲ್ಲ. ಕನ್ನಡ ಚಿತ್ರೋದ್ಯಮವೇ ಉಳಿದ ಭಾಷಾ ಚಿತ್ರಗಳಿಗೆ ಈ ವಿಷಯದಲ್ಲಿ ಮಾದರಿಯಾಗಿ ನಿಲ್ಲುತ್ತದೆ.

ಕನ್ನಡ ಚಿತ್ರೋದ್ಯಮವು ಪ್ರಗತಿಯತ್ತ ಸಾಗುತ್ತಿದ್ದಂತೆ ಈ ವರೆಗೆ ಅನಿಸಿದ್ದರೆ, ಆದರ ಭವಿಷ್ಯವು ಹೀಗೆ ಸಂದೇಹದ ಅಲೆ ಅಲೆಗಳನ್ನೇ ಇಂದು ರೂಪಿಸುತ್ತಿದೆ

ಇವೆಲ್ಲವನ್ನು ಸರಿಪಡಿಸುವತ್ತ ಇವತ್ತು ಚಿತ್ರ ನಿರ್ಮಾಪಕರು ಲಕ್ಷ್ಯ ಕೊಡಬೇಕಾಗಿದೆ ಆ ಕೆಲಸವನ್ನು ಅವರು ಸಾಧಿಸ ಬಲ್ಲರೇ?

ಈ ಪ್ರಶ್ನೆಗೆ ಅವರೇ ಉತ್ತರ ಕೊಡಬೇಕಾಗಿದೆ. ಕನ್ನಡ ಚಿತ್ರಗಳು ಉಳಿದ ಭಾಷಾ ಚಿತ್ರಗಳಿಂದಲಾದರೂ ಪಾಠ ಕಲಿತುಕೊಳ್ಳುವದು, ಈ ದೃಷ್ಟಿಯಿಂದ ಚೆನ್ನಾಗಿರುತ್ತದೆ

ಹೊಸ ಪ್ರಯೋಗವೆಂಬ ಪ್ರಚಾರ ನಡೆಸಿದ ಮಾತ್ರದಿಂದ, ಚಿತ್ರವು ಪ್ರೇಕ್ಷಕರನ್ನು ತೃಪ್ತಿಪಡಿಸುವದಿಲ್ಲವಲ್ಲ?

ಹೊಸ ಪ್ರಯೋಗಕ್ಕೆ ತಕ್ಕಂತೆ ಹೊಸತನವಾದರೂ ಕಂಡು ಬರಬೇಕಲ್ಲ? ಕನ್ನಡಿಗರ ಪ್ರೋತ್ಸಾಹವು ಚಿರಕಾಲವೂ ಉಳಿಯುತ್ತದೆ; ಅದು ಚಿರಂಜೀವಿ ಎಂದು ಚಿತ್ರ ನಿರ್ಮಾಪಕರು ತಿಳಿದಂತಿದೆ.

ಅಂತೆಯೇ ನಮ್ಮ ಚಿತ್ರಗಳಲ್ಲಿ ಅಲಕ್ಷ್ಯತನವು ಹೆಚ್ಚು ಚೆನ್ನಾಗಿ ಕಾಣಿಸುತ್ತಿದೆ

— ಸುದಾಸ

ಅಭಿಪ್ರಾಯ ಮಂಡನೆ

ಶೇಕ ಅಬ್ದುಲ್ಲಾ

ಸುಮಾರು ಹತ್ತು ವರ್ಷಗಳಿಗೆ ಮೊದಲು ಪಾಕಿಸ್ತಾನದ ಚಟುವಟಿಕೆಗಳಲ್ಲಿ ತೊಡಗಿದ ಆರೋಪದ ಮೇಲೆ ಜಮ್ಮು—ಕಾಶ್ಮೀರದ ಪ್ರಧಾನಿಯಾಗಿದ್ದ ಶೇಖ ಅಬ್ದುಲ್ಲಾರು ಪದಚ್ಯುತರಾದರು. ಅಂದೇ ಅವರ ಮೇಲೆ ಅಪಾದನೆಯನ್ನು ಹೊರಿಸಿ ಮೊಕದ್ದಮೆಯನ್ನು ರಾಜ್ಯಸರಕಾರ ಹೂಡಿತು. ಅಂದಿನಿಂದಲೂ ಅಬ್ದುಲ್ಲಾರು ಜೇಲಿನಲ್ಲಿಯೇ ಉಳಿದಿದ್ದಾರೆ. ಮೊಕದ್ದಮೆಯ ವಿಚಾರಣೆಯೂ ನಡೆಯುತ್ತಾ ಬಂದ ಆದರೆ, ಶ್ರೀನಗರ ಸರಕಾರವು ಶೇಖ ಅಬ್ದುಲ್ಲಾರ ಮೇಲಿನ ಕಟ್ಲೆಯನ್ನು ಹಿಂತೆಗೆದುಕೊಂಡು, ಅವರನ್ನು ನಿಶ್ಶರ್ತವಾಗಿ ಬಂಧ ಮುಕ್ತಗೊಳಿಸಲು ನಿರ್ಧರಿಸಿರುವುದು ಭಾರತೀಯರ ಕುತೂಹಲವನ್ನು ಕೆರಳಿಸುತ್ತದೆ ಕಾಶ್ಮೀರದಲ್ಲಿ ಇಂದಿನ ದಿನಗಳಲ್ಲಿ ಯೂ ಅಂತರಿಕ ಶಾಂತಿಯು ಸಂಪೂರ್ಣ ನೆಲೆಗೊಂಡಿದೆಯೆಂದು ಹೇಳುವಂತಿಲ್ಲ. ಅದರ ಮೇಲೆ ಪಾಕಿಸ್ತಾನದ ಭಯೋತ್ಪಾದಕ ಚಟುವಟಿಕೆಗಳು ನಡೆಯುತ್ತಲೇ ಇವೆ ಈ ಸಂದರ್ಭದಲ್ಲಿಯೇ ಮೊನ್ನೆ ಮೊನ್ನೆ ಅಧಿಕಾರಕ್ಕೆ ಬಂದ ಪ್ರಧಾನಿ ಸಾದಿಕ್ ಅಲಿಯವರು ಮಾಡಿದ ನಿರ್ಧಾರದ ಉದ್ದೇಶವೇನು? ಶೇಖ ಅಬ್ದುಲ್ಲಾರ ಬಿಡುಗಡೆಯು ಕಾಶ್ಮೀರದ ಭದ್ರತೆಗೆ ಹೇಗೆ ಸಹಾಯಕವಾದೀತು ಎಂಬ ವಿವಂಚನೆ ಕೆಲವರಲ್ಲಿದೆ.

ಆದರೂ ಒಂದು ಸಮಾಧಾನ ಪಡಬಹುದು. ಕಾಶ್ಮೀರ ರಾಜ್ಯಸರಕಾರವು ಕೇಂದ್ರ ಸರಕಾರದೊಡನೆಯೂ ಈ ಸಂಬಂಧದಲ್ಲಿ ಸಮಾಲೋಚನೆ ನಡೆಸಿದೆ. ಕಳೆದ ಹತ್ತು ವರ್ಷಗಳಲ್ಲಿ ಕಾಶ್ಮೀರದಲ್ಲಿ ಮತ್ತು ಭಾರತದಲ್ಲಿ ಮಾತ್ರವಲ್ಲ ಅಂತರಾಷ್ಟ್ರೀಯ ಜಗತ್ತಿನಲ್ಲಿಯೂ ಬೇಕೆಂಬಷ್ಟು ಸ್ಥಿತ್ಯಂತರಗಳಾಗಿವೆ ಇವನ್ನು ಶೇಖ ಅಬ್ದುಲ್ಲಾರು ಅಳಿಸಿಹಾಕಲಾರರು ಕಾಶ್ಮೀರದ ಸೇರ್ಪಡೆಯು ಸಂಪೂರ್ಣವಾಗಿ ಭಾರತದಲ್ಲಾಗಿದೆಯೆಂಬುದನ್ನೂ ಅವರು ಮರೆಯಲಾರರು ಹಾಗಾಗಿ ಮುಂದವರು ಕಾಶ್ಮೀರದ ಜನತೆಯ ಇಚ್ಛೆಗೆ ವಿರುದ್ಧವಾದ ಯಾವ ಕಾರ್ಯವನ್ನೂ ಕೈಗೊಳ್ಳದೆ, ಕಾಶ್ಮೀರದ ಉನ್ನತಿಗಾಗಿ ಪರಿಶ್ರಮಿಸುವರೆಂಬ ವಿಶ್ವಾಸದಿಂದಲೇ ಅವರ ಬಿಡುಗಡೆಯಾಗಲಿದೆ. ರಾಷ್ಟ್ರಪತಿ ಡಾ| ರಾಧಾಕೃಷ್ಣನ್‌ರ ಈ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ಶೇಖ ಅಬ್ದುಲ್ಲಾರು ಬಿಡುಗಡೆಗೊಂಡರೆ, ಪೂರ್ತಿ ಸ್ವಾತಂತ್ರ್ಯದಲ್ಲಿಯೇ ಅವರ ಹಿರಿಮೆ ಅಡಗಿದೆ.

(ಆನೇ ಪುಟ ನೋಡಿರಿ)

ಮತ್ತೊಂದು ಆಕರ್ಷಕ ಉಳಿತಾಯ ಯೋಜನೆ

ಜಯೆಂಟ್ ಕ್ಯಾಷ್ ಸರ್ಟಿಫಿಕೇಟ್ಸ್

ವಿಶಿಷ್ಟ ಅನುಕೂಲತೆಗಳು:

- ರೂ. 100,- ಮತ್ತು ರೂ. 1,000/. ದ ಮೊತ್ತಗಳಲ್ಲಿ ದೊರಕುತ್ತವೆ.
- ಆರು ತಿಂಗಳ ನಂತರ ಏಳು ದಿವಸಗಳ ನೋಟೀಸಿನ ಮೂಲಕ ಪರಿಷ್ಕರಿಸಿದ ಬಡ್ಡಿ ಸಹಿತ ವಟಾಯಿಸಬಹುದು.
- ನಿಮ್ಮ ವಿನಿಯೋಗವು ಆರು ತಿಂಗಳ ನಂತರ ಬೆಳೆಯತೊಡಗುತ್ತದೆ. ಹಾಗೂ ನೀವಿಂದು ವಿನಿಯೋಗಿಸಿದ ರೂ. 100/- 60 ತಿಂಗಳುಗಳಲ್ಲಿ ರೂ. 126.10 ಆಗಿ ಬೆಳೆಯುತ್ತದೆ.

ವಿವರಗಳಿಗೆ ದಯವಿಟ್ಟು ನಿಮ್ಮ ಸಮೀಪದ ಶಾಖೆಯ ಸಂಪರ್ಕ ಬೆಳೆಸಿರಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

.... ವಿಶ್ವವ್ಯಾಪೀ ಬ್ಯಾಂಕಿಂಗಿಗಾಗಿ.

ನವಯುಗ

ವರುಷ	ಉಡುಪಿ	ವಾರ
೪೩	೯-೪-೧೯೬೪	೩೨

ಶೇಕ್ ಅಬ್ದುಲ್ಲಾ

ಪಾಕ್-ಭಾರತ ಸರಕಾರಗಳ ಗೃಹ ಮಂತ್ರಿಗಳ ಸಭೆ ನಡೆಯುವುದಕ್ಕೂ ಕಾಶ್ಮೀರದ ಮಾಜಿ ಪ್ರಧಾನಿ ಶೇಖ ಅಬ್ದುಲ್ಲಾರವರ ಬಂಧಮುಕ್ತಿಗೂ ಯಾವ ಸಂಬಂಧವೂ ಇಲ್ಲ. ಆದರೂ ಸಂದರ್ಭವಶದಿಂದ ಸಂಬಂಧವನ್ನು ಕಲ್ಪಿಸಿಕೊಳ್ಳುವವರೂ ಇದ್ದಾರೆ. ಗೃಹಮಂತ್ರಿಗಳ ಸಭೆಯ ಫಲಿತಾಂಶವನ್ನು ಮೊದಲೇ ಹೇಳುವುದು ಸಾಧ್ಯವಿಲ್ಲ; ಇಲ್ಲಿ ಒಂದು ಒಡಂಬಡಿಕೆಯಾದರೂ ಅದನ್ನು ಕೈಗೂಡಿಸಬೇಕಾದವರು ಉಭಯ ದೇಶದ ನಾಗರಿಕರು. ಶೇಕ ಅಬ್ದುಲ್ಲಾ ವ್ಯಕ್ತಿಯು ಭಾರತ ಸರಕಾರಕ್ಕಿಂತಲೂ ಕಾಶ್ಮೀರಕ್ಕೆ ಸಂಬಂಧಪಟ್ಟದ್ದು. ಸದ್ಯದ ಕಾಶ್ಮೀರ ಪರಿಸ್ಥಿತಿಯಲ್ಲಿ ಈ ಬಿಡುಗಡೆಯಿಂದ ಒಳಿತಾಗಬಹುದೆಂಬ ಧೈರ್ಯದಿಂದ ಹೊಸ ಪ್ರಧಾನಿ ಜಿ. ಎಂ. ಸಾದಿಕ್ ನಿರ್ಧರಿಸಿದ್ದಾರೆ. ಕೇಂದ್ರಕ್ಕೆ ಇದೊಂದು ಅಚ್ಚರಿಯ ಸುದ್ದಿಯಾಗಿ ಬಂದರೂ ಮರು ಮಾತಾಡುವ ಗೋಜಿಗೆ ಹೋಗಲಿಲ್ಲ. ಹಾಗಾಗಿ ಶೇಕ ಅಬ್ದುಲ್ಲಾರ ಮುಕ್ತಿಯಾಗಿದೆ.

ಒಂದೆ, ಪ್ರಧಾನಿ ನೆಹರುರವರ ನೆಚ್ಚಿನ ಮಿತ್ರರಾಗಿದ್ದು, ಕಾಶ್ಮೀರವು ಭಾರತದ ಅಂಗವೇ ಎಂಬ ನೀತಿಯನ್ನು ತಳೆದಿದ್ದ ಶೇಕ ಅಬ್ದುಲ್ಲಾರು ಷಡ್ಯಂತ್ರಕ್ಕೆ ಸಿಲುಕಿದರು. ಕಾಶ್ಮೀರವು ಪ್ರತ್ಯೇಕವಾದ ಸ್ವತಂತ್ರ ರಾಷ್ಟ್ರವಾಗಬೇಕು ಎಂದವರು ಬಯಸಿದ್ದಂತೆ ತೋರಿತು. ಇದರಿಂದ ಒಳಸಂಚು ಹೂಡಿದರೆಂಬ ಅಪಾದನೆಯ ಮೇಲೆ ಅವರನ್ನು ಪ್ರಧಾನಿಪಟ್ಟದಿಂದ ಸರ್ದಾರ್-ಇ-ರಿಯಾಸತರು ಕಿತ್ತು ಹಾಕಿದರು. ಕಾಶ್ಮೀರ ಸರಕಾರವು ಅಬ್ದುಲ್ಲಾರ ಮೇಲೆ ಒಳಸಂಚಿನ ಆರೋಪವನ್ನು ನ್ಯಾಯಾಲಯದ ಮುಂದೆ ಇಟ್ಟಿತು. ಕಳೆದ ಹಲವು ವರ್ಷಗಳಿಂದಲೂ ವಿಚಾರಣೆಯು ನಡೆಯುತ್ತಲೇ ಇತ್ತು. ೧೯೫೩ರಿಂದಲೂ ಶೇಕರು ಬಂಧಿಯಾಗಿದ್ದರು ನಡುವೊಮ್ಮೆ ಬಿಡುಗಡೆಯೊಂದಿದರೂ ಕೆಲವು ದಿನಗಳಲ್ಲೇ ಮರಳಿ ಬಂಧಿತರಾದರು. ಹೀಗೆ ಸುಮಾರು ಹತ್ತು ವರ್ಷಗಳ ಕಾಲ ಸ್ಥಾನಬದ್ಧತೆಯಲ್ಲಿ ಉಳಿದ ಶೇಕ್ ಅಬ್ದುಲ್ಲಾರ ಇಂದಿನ ವಿಚಾರವು ಹೇಗೆಂಬುದು ಸರಿಯಾಗಿ ವ್ಯಕ್ತವಾಗಿಲ್ಲ ಆದರೂ ತನ್ನ ಮಿತ್ರರು ಮತ್ತು ಸಂಬಂಧಿಕರೊಡನೆ ಮಾತಾಡುವಾಗ ಅವರು ಪಾಕ್ ಪರವಾದವನ್ನು ಹಿಡಿಯುವುದಿಲ್ಲವೆಂದು ತಿಳಿಯುತ್ತದೆ. ಹಾಗಿರುವಾಗ, ಅವರು ಇಂದಿಗೂ ಪ್ರತ್ಯೇಕತೆಯ ಕನಸು ಕಾಣುತ್ತಿದ್ದಾರೆಯೇ ಅಥವಾ ಕಾಶ್ಮೀರದ ಜನತೆಯ ಇಚ್ಛೆಯನ್ನು ಮನ್ನಿಸಲು ತಯಾರಿದ್ದಾರೆಯೇ ಎಂಬುದು ವ್ಯಕ್ತವಾಗುವುದಿಲ್ಲ. ಶೇಕ ಅಬ್ದುಲ್ಲಾರವರ ಮೇಲೆ ಹೇರಿದ ಒಳಸಂಚಿನ ಆರೋಪವನ್ನು ಕಾಶ್ಮೀರ ಸರಕಾರವು ಹಿಂತೆಗೆದುಕೊಳ್ಳಲು ಸಿದ್ಧವಾಯಿತು. ಬೇರೆ ಬೇರೆ ಕಾರಣಗಳಿಂದ ಕಾಶ್ಮೀರದ ಒಳಗಡೆ ಅಶಾಂತಿಯ ಘಟನೆಗಳು ನಡೆಯುತ್ತಿರುವಾಗ, ಪಾಕಿಸ್ತಾನದ ವಕ್ರದೃಷ್ಟಿಯು ಅದರ ಮೇಲೆ ತೀವ್ರವಾಗಿ ಬೀಳುತ್ತಿರುವಾಗ, ಒಂದೊಮ್ಮೆ ಜನನಾಯಕನೆನಿಸಿದ ಇವರನ್ನು ಬಿಡುಗಡೆಗೊಳಿಸಿದರೆ, ಪರಿಸ್ಥಿತಿ ಸುಧಾರಿಸುವುದೆಂದು ಸಾದಿಕ್ ಭಾವಿಸಿರಬಹುದು. ಅಬ್ದುಲ್ಲಾರು ಕೂಡ ಪಾಕ್‌ಪರ ಗುಂಪಿನೊಡನೆ ಸೇರಬೇಡಿರೆಂದು ತಮ್ಮ ಮಕ್ಕಳಿಗೆ ತಿಳಿಸಿರುವರಂತೆ. ಅದೇನೇ ಇದ್ದರೂ ಶೇಕ ಅಬ್ದುಲ್ಲಾರವರ ನೀತಿ-ಧೋರಣೆಗಳು ಏನು ಎನ್ನುವುದನ್ನು ಈಗಲೇ ಹೇಳುವಂತಿಲ್ಲ. ಪ್ರಧಾನ ಮಂತ್ರಿ ನೆಹರು-ಸರ್ವೋದಯ ನೇತಾರ ವಿನೋಬಾ ಮೊದಲಾದವರೊಡನೆ ನಡೆಯುವ ಮಾತುಕತೆಗಳ ಕಾಲದಲ್ಲಿ ಅವರ ಮನದಾಶಯ ತುಸುವಾದರೂ ಹೊರಪಟ್ಟೀತು. ಆನಂತರ ಅವರು ಕೈಗೊಳ್ಳುವ ಕಾರ್ಯಪ್ರಣಾಳಿಯು ಯಾವ ರೀತಿ ನಡೆಯುವುದೆಂಬುದನ್ನು ನೋಡಬೇಕು. ಪ್ರಧಾನಿಯವರು ಶೇಕ ಅಬ್ದುಲ್ಲಾರವರಿಗೆ ಸತ್ಯಸ್ಥಿತಿಯನ್ನು ನಿವೇದಿಸಿ ಪ್ರಸಂಗೋಚಿತವಾದ ನೀತಿಯನ್ನು ಸ್ವೀಕರಿಸಬೇಕೆಂದು ಕೇಳಿಕೊಳ್ಳಬಹುದು. ಹತ್ತು ವರ್ಷಗಳಿಂದ ನಡೆದಿರುವ ಜಾಗತಿಕ ಮತ್ತು ರಾಜಕೀಯ ಸ್ಥಿತ್ಯಂತರಗಳನ್ನು ಅವರಿಗೆ ಮನವರಿಕೆ ಮಾಡಿಕೊಡಬಹುದು. ಇದರಿಂದ ಒಂದು ವೇಳೆ ಶೇಕ್ ಅಬ್ದುಲ್ಲಾರು ತನ್ನ ಹಿಂದಿನ ಧೋರಣೆಗೇನೇ ಅಂಟಿಕೊಂಡಿದ್ದರೆ, ಅದನ್ನು ಹೃತ್ಪೂರ್ವಕ ಬಿಟ್ಟುಕೊಟ್ಟು ಕಾಶ್ಮೀರ ಸರಕಾರದೊಡನೆ ಸಹಕರಿಸಿ, ರಾಜ್ಯಾಭಿವೃದ್ಧಿ ಕಾರ್ಯದಲ್ಲಿ ಸಹಕರಿಸುವುದೂ ಅಸಂಭವವಲ್ಲ.

ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಶೇಕ ಅಬ್ದುಲ್ಲಾರ ಬಿಡುಗಡೆಯ ಬಗ್ಗೆ ಭಿನ್ನಾಭಿನ್ನಾಭಿಪ್ರಾಯವಿರಬಹುದು. ಆದರೂ ಅವರನ್ನು ಕಾಶ್ಮೀರ ಸರಕಾರ ನಂಬಿದೆ; ಭಾರತ ಸರಕಾರ ವಿಶ್ವಾಸವಿಟ್ಟಿದೆ. ಕಾಶ್ಮೀರದ ಭದ್ರತೆ—ಸುರಕ್ಷೆ—ಪ್ರಗತಿಗಳಿಗೆ ಇದು ಮತ್ತಷ್ಟು ಪ್ರೇರಕ ಶಕ್ತಿಯಾಗಬಹುದೆಂದು ಉಭಯ ಸರಕಾರಗಳೂ ಭರವಸಿಯಿಟ್ಟಿವೆ. ನಂಬಿಕೆಯನ್ನು ಉಳಿಸುವುದು, ಅಳಿಸುವುದು ಶೇಕ್ ಅಬ್ದುಲ್ಲಾರಿಗೆ ಸೇರಿದುದು. ಹಾಗಿರುವಾಗ, ರಾಷ್ಟ್ರಪತಿ ರಾಧಾಕೃಷ್ಣನ್ ಹೇಳುವಂತೆ ಶೇಕ್ ಅಬ್ದುಲ್ಲಾರು ಬದಲಾಯಿಸಿದ ನೀತಿಯನ್ನು ಸ್ವೀಕರಿಸಿ, ಜನತೆಯಿಟ್ಟ ಅಪಾರ ವಿಶ್ವಾಸವನ್ನು ಉಳಿಸಿಕೊಳ್ಳಬೇಕು. ಹಾಗಾಗಲಿ.

ಸಾಮ್ಯವಾದ ಜಾತಿವಾದ

ಮಾಜಿ ವಿತ್ತ ಮಂತ್ರಿ ಮುರಾರ್ಜಿ ದೇಸಾಯಿಯವರೊಂದು ಮಾತನ್ನು ಹೇಳಿದರು, ಸಾಮ್ಯವಾದ ಮತ್ತು ಜಾತಿವಾದಗಳು ದೇಶದ ಪ್ರಗತಿಯನ್ನು ನಾಶ ಮಾಡುತ್ತವೆಯೆಂದು. ಆದುದರಿಂದ ಈ ಎರಡರಿಂದ ದೂರವಿದ್ದು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಟ್ಟು ಮುಂದುವರಿಯಬೇಕೆಂದವರು ಕರೆ ನೀಡಿದ್ದಾರೆ. ಜಾತಿವಾದದ ಅನಿಷ್ಟ ಪರಿಣಾಮಗಳು ಭಾರತೀಯರಿಗೇನೂ ಹೊಸತಲ್ಲ. ದೇಶವಿಭಜನೆಯಂತಹ ಕೃತ್ಯ ಕೂಡ ನಮ್ಮ ಕಣ್ಣ ಮುಂದೆ ನಡೆದು ಹೋಯಿತು ಆನಂತರ ತೊಡಗಿ ಇಂದಿನ ವರೆಗೂ ಅದರ ಕಂಬನಿಗಳು ಭಾರತದ ಮೇಲೆ ಬೀಳುತ್ತಲೇ ಬಂದಿದೆ. ದೇಶದ ಪುನಾರಚನಾ ಕಾರ್ಯಕ್ಕೆ ಇದೊಂದು ದಯಾನಸ ಶಾಪವೆನ್ನಲೇ ಬೇಕು. ಇಂತಹ ಶಾಪ ಹೋರಲು ಯಾರು ಸಿದ್ಧರಿದ್ದಾರೆ? ಇನ್ನು ಕಮ್ಯುನಿಜಂನ (ಸಾಮ್ಯವಾದ) ವಿಚಾರ. ಕಮ್ಯುನಿಜಂ ನಮ್ಮ ದೇಶದ ಸಂಸ್ಕೃತಿ — ನಡಾವಳಿಗಳಿಗೆ ಹೊಂದಿಕೊಳ್ಳುವುದಿಲ್ಲ; ವಿದ್ರೋಹವೆಸಗಿ ದೇಶ ಪುನಾರಚನೆ ಮಾಡುವ ಅವಕಾಶಗಳು ನಮ್ಮಲ್ಲಿಲ್ಲ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸವೂ ಕಮ್ಯುನಿಸ್ಟರಿಗಿಲ್ಲ. ಕೆಂಪು ಚೀನವೇ ಇದಕ್ಕೆ ಉದಾಹರಣೆ. ಭಾರತೀಯ ಕಮ್ಯುನಿಸ್ಟರಲ್ಲಿಯೂ ಈಗ ಎರಡು ಪಂಗಡಗಳಿರುವುದು ಅಧಿಕ ಸ್ಫುಟವಾಗ ತೊಡಗಿದೆ. ಒಂದು ಕೆಂಪು ಚೀನೀಯರ ಸಾಮ್ರಾಜ್ಯವಾದವನ್ನು ಎತ್ತಿ ಹಿಡಿದರೆ ಇನ್ನೊಂದು ಸೋವಿಯತ್ ರಶ್ಯಾದಲ್ಲಿ ನಿಷ್ಠೆಯಿಡುತ್ತದೆ. ರಶ್ಯ—ಚೀನಾಗಳ ನಡುವಣ ತಾತ್ವಿಕ ವಿವಾದ ಬಗೆ ಹರಿಯುವಂತೆಯೂ ಇಲ್ಲ; ಈ ಕಮ್ಯುನಿಸ್ಟರ ಪಂಗಡವಾದ ನಿಲ್ಲುವುದೂ ಇಲ್ಲ. ಕ್ರಾಂತಿ ಪುರಸ್ಕರ್ತವಾದ ಸಾಮ್ಯವಾದ ಮತ್ತು ಅವಮಾನುಷವಾದ ಜಾತೀಯತೆಗಳು ಅವಶ್ಯ ತ್ಯಾಜ್ಯವಲ್ಲವೆ?

ಡಾ| ಕೆ. ಎಸ್. ಶೆಟ್ಟಿ

ಇವರ ನಿಧನ

ಮೈಸೂರು ಸರಕಾರದ ಪಶುಸಂಗೋಪನಾ ಶಾಖೆಯ ಡೈರೆಕ್ಟರಾದ ಡಾ| ಕೆ. ಎಸ್. ಶೆಟ್ಟಿ ಇವರು ಹೃದಯಾಘಾತದ ಪರಿಣಾಮವಾಗಿ ತಾ. ೨೦ರಂದು ಪೂರ್ವಾಹ್ನ ತಾಸು ೧೧-೩೦ಕ್ಕೆ ಬೆಂಗಳೂರಲ್ಲಿ ನಿಧನಗೊಂಡರು. ದಿವಂಗತರಿಗೆ ಮೃತ್ಯು ಸಮಯದಲ್ಲಿ ೫೫ ವರ್ಷ ಪ್ರಾಯವಾಗಿದ್ದು ಸದ್ಯದಲ್ಲಿಯೇ ಸೇವೆಯಿಂದ ನಿವೃತ್ತರಾಗಲಿದ್ದರು. ಡಾ| ಶೆಟ್ಟರು ತಮ್ಮ ಹಿಂದೆ ಮಡದಿ, ಆರು ಜನ ಪುತ್ರಿಯರು ಮತ್ತಿಬ್ಬರು ಪುತ್ರರನ್ನು ಬಿಟ್ಟು ಹೋಗಿದ್ದಾರೆ.

೧೯೦೯ರ ಜುಲಾಯಿಯಲ್ಲಿ ಜನಿಸಿದ್ದ ಡಾ| ಶೆಟ್ಟರು ಮದ್ರಾಸ್ ಮತ್ತು ಎಡಿನ್‌ಬರೋಗಳಲ್ಲಿ ಶಿಕ್ಷಣ ಪಡೆದರು. ಸಂಶೋಧನಾತ್ಮಕ ಮತ್ತು ಪಶುವೈದ್ಯಕೀಯದ ಹಲವಾರು ಸಂಸ್ಥೆಗಳನ್ನು ಸಂದರ್ಶಿಸುತ್ತ ಇವರು ವಿದೇಶ ಸಂಚಾರ ಮಾಡಿದರು ಹಿಂದಿನ ಹೈದರಾಬಾದ ಸರಕಾರದಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ ಡಾ| ಶೆಟ್ಟರು ೧೯೫೨ ರಲ್ಲಿ ಪಶುಸಂಗೋಪನಾ ವಿಭಾಗದ ಡೈರೆಕ್ಟರರ ಪದವಿಗೇರಿದರು.

೧೯೫೬ ರಲ್ಲಿ ರಾಜ್ಯ ಪುನರ್ಘಟನಾ ವೇಳೆಯಲ್ಲಿ ಡಾ| ಶೆಟ್ಟರ ಸೇವೆಯು ಮೈಸೂರು ಸರಕಾರಕ್ಕೆ ಒದಗಿತು. ಆಗಲೂ ಇವರು ಹೊಸ ರಾಜ್ಯದಲ್ಲಿಯೂ ಪಶುಸಂಗೋಪನಾ ವಿಭಾಗದ ಡೈರೆಕ್ಟರರೆಂದೇ ನಿಯುಕ್ತರಾದರು. ಪಶುವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸುವಲ್ಲಿ ಆಸಕ್ತರಾದ ಇವರ ಸಾಧನೆಯ ಪರಿಣಾಮವಾಗಿ ೧೯೫೮ ರಲ್ಲಿ ಅಂತಹ ಕಾಲೇಜು ರೂಪಗೊಂಡಿತು. ಮೀನುಗಾರಿಕೆಯ ಶಾಖೆಯು ಪ್ರತ್ಯೇಕವಾಗುವ ತನಕ ಅದರ ನಿರ್ವಹಣೆಯೂ ಇವರ ಕೈಯಲ್ಲಿತ್ತು. ಬೆಂಗಳೂರಿನ ಹಾಲು ಸರಬರಾಯಿ ಮತ್ತು ಹೈನ ಯೋಜನೆಯ ಸಂಘಟನೆ ಇವರ ಶ್ರಮ ಮತ್ತು ಆಸಕ್ತಿಯ ಕುರುಹು. ಭಾರತೀಯ ಕೃಷಿ ಸಂಸಂಶೋಧನಾ ಪರಿಷತ್ತಿನ ವಿವಿಧ ಸಮಿತಿಗಳಲ್ಲಿ ಸೇವೆ ಸಲ್ಲಿಸಿದ ಇವರು ಇತ್ತೀಚೆಗೆ ಅದರ ಆಡಳಿತೆ ಸಮಿತಿಯ ಸದಸ್ಯರಾಗಿಯೂ ಆಯ್ಕೆಗೊಂಡಿದ್ದರು. ೧೯೬೦ರಲ್ಲಿ ಅಮೇರಿಕನ್ ಸಂಚಾರ ಮಾಡಿ, ಅಲ್ಲಿ ಪಶು ಸಂಗೋಪನೆಯ ನೋಟ ತನ್ನ ಮಾಡಿದ ಅಧ್ಯಯನ ಫಲಿತಾಂಶಗಳನ್ನು ಇಲ್ಲಿ ಕಾರ್ಯರೂಪಕ್ಕೆ ಇಳಿಸುವಲ್ಲಿ ನಿರತರಾಗಿದ್ದರು. ರಾಜ್ಯಾದ್ಯಂತ ಕೃಷಿಕ ಮತ್ತು ಹೈನಿಕರಲ್ಲಿ ಪ್ರಿಯರಾದ ಇವರು ಆದರಣೀಯರಾಗಿದ್ದಾರೆ.

ಕರ್ತವ್ಯ ಪ್ರಜ್ಞೆ ಮತ್ತು ಕಾರ್ಯದಕ್ಷತೆಗಳು ಡಾ| ಶೆಟ್ಟರ ಅಮೂಲ್ಯ ಗುಣಗಳು. ಇದರಿಂದಾಗಿಯೇ ಸಹೋದ್ಯೋಗಿಗಳು ಮತ್ತು ಜನ ಸಮೂಹದಿಂದ ಮಾನ್ಯರಾದ ಇವರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಗೆ ಸೇರಿದವರು; "ನವಯುಗ"ದ ಅಭಿಮಾನಿಗಳಲ್ಲಿ ಒಬ್ಬರು. ದಿವಂಗತರ ಆತ್ಮ ಚಿರಶಾಂತಿಯಲ್ಲಿ ವಿಶ್ರಮ ಪಡೆಯಲಿ, ಬಂಧು-ಮಿತ್ರರಿಗೆ ಶೋಕ ಸಹನಶಕ್ತಿ ನೀಡಲಿಯೆಂದು ಸರ್ವಶಕ್ತನಲ್ಲಿ ಪ್ರಾರ್ಥನೆ. —ಸಂ. ಸ.

ವಿಜಯಾ ಬ್ಯಾಂಕು ನೋಟೀಸಿನ ತಿದ್ದುಪಡಿ — ಇದೇ ಸಂಚಿಕೆಯ 4ನೇ ಪುಟದಲ್ಲಿ ಪ್ರಕಟವಾದ ವಿಜಯಾ ಬ್ಯಾಂಕಿನ ಕಾಪು ಶಾಖೆಯ ಏಲಂ ನೋಟೀಸಿನಲ್ಲಿ ಏಲಂ ತಾ 23-4-64ಕ್ಕೆ ಎಂದು ಪ್ರಕಟವಾಗಿದೆ ಅದು ತಾ 29-4-61 ಎಂದು ಆಗಬೇಕು. ಅಲ್ಲದೆ ನಂ 801 62ನೇ ಶ್ರೀ ಗೋವಿಂದ ಎ ಮೆಂಡನ್ ಇವರ ಹೆಸರಿಗೆ ಸಂಬಂಧಪಟ್ಟ ವಿವರಗಳನ್ನು ಲೋಪಗೊಳಿಸಿ ಓದಿಕೊಳ್ಳಬೇಕು

ಬಂಟರ ಯೂನೆ ನಾಡವರ ಸಂಘ —ಈ ಸಂಘದ ಮಹಾ ಸಭೆಯು ತಾ. 19-4-64ರಂದು ಅಪರಾಹ್ನ ಗಂಟೆ 4ಕ್ಕೆ ಶ್ರೀ ಬಿ. ನಾರಾಯಣ ಶೇಕರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದೆಂದೂ ಸಭೆಗೆ ಸರ್ವರೂ ಬರಬೇಕೆಂದೂ ಆಡಳಿತೆ ಕಮಿಟಿಯ ಪರವಾಗಿ ಕಾರ್ಯದರ್ಶಿ ಶ್ರೀ ಕೆ. ಸುಂದರರಾಮ ಶೆಟ್ಟರು ವಿನಂತಿಸುತ್ತಾರೆ.

ಉಪಕಾರ ಸ್ಮರಣೆ

ಇದೇ ತಾ 2ರಿಂದ 5ರ ತನಕ ಕಿನ್ನಿಗೋಳಿ, ಮೂಡಿಗೆರೆ, ಚಿಕ್ಕಮಗಳೂರು, ಸಕಲೇಶಪುರ ಮೊದಲಾದ ಕಡೆಗಳಿಗೆ ನವಯುಗದ ಪರಿಷ್ಕರಣಾರ್ಥವಾಗಿ ಸಂಚರಿಸಿದಾಗ ಶ್ರೀಗಳಾದ, ಕೆ. ಶ್ರೀಧರ ಶೆಟ್ಟಿ, ಕಿನ್ನಿಗೋಳಿ; ಎನ್. ಕೆ. ನಂಜುಂಡೇಗೌಡ, ಪ್ಲಾಂಟರ್, ಮೂಡಿಗೆರೆ; ಕೆ. ಎಂ. ಶಾಮ ಶೆಟ್ಟಿ, ಮೆನೇಜರ್, ಕುದ್ರೆಗುಂಡಿ; ಎಸ್ಟೇಟ್, ಮೂಡಿಗೆರೆ; ಕೆ. ಎಸ್. ಬಲ್ಲಾಳ್, B. E., ಎಕ್ಸಿಕ್ಯೂಟಿವ್ ಇಂಜಿನಿಯರ್, ಚಿಕ್ಕಮಗಳೂರು; ಬಿ ವಿಶ್ವನಾಥ ಶೆಟ್ಟಿ, ಮಲಸಾವರೆ ಎಸ್ಟೇಟ್, ಆರೆಹಳ್ಳಿ ಆರ್ ಶೀನಪ್ಪ ಶೆಟ್ಟಿ, ಕಾಫಿ ಪ್ಲಾಂಟರ್, ನಾರ್ವೆ ಮೊದಲಾದವರು ಸಹಕರಿಸಿ, ಪ್ರೋತ್ಸಾಹಿಸಿದುದಕ್ಕಾಗಿ ನಾವು ಅವರ ಉಪಕಾರವನ್ನು ಸ್ಮರಿಸುತ್ತೇವೆ. ಅಲ್ಲದೇ ನಮ್ಮ ಸಂಚಾರವು ಯಶಸ್ವಿಯಾಗುವಂತೆ ಅಲ್ಲಲ್ಲಿ ಸಹಕರಿಸಿದ ಶ್ರೀಗಳಾದ ಕೆ. ರಘುರಾಮ ಅಡ್ಯಂತಾಯ, ಮೂಡಿಗೆರೆ; ಎನ್. ಎಸ್. ಪೂಂಜ, ಆರ್. ಟಿ. ಬಿ. ಚಿಕ್ಕಮಗಳೂರು; ಡಾ| ಎಸ್. ವಿ. ಶೆಟ್ಟಿ, ಚಿಕ್ಕಮಗಳೂರು; ವಿದ್ಯಾಸಾಗರ, ಚಿಕ್ಕಮಗಳೂರು; ಡಾ| ಎನ್. ಬಿ. ಶೆಟ್ಟಿ ಸಕಲೇಶಪುರ; ಡಾ| ಎನ್ ವಿ ಶೆಟ್ಟಿ. ಆರೆಹಳ್ಳಿ; ಇವರೇ ಮೊದಲಾದವರಿಗೆ ನಮ್ಮ ಹಾರ್ದಿಕ ವಂದನೆಗಳು

ಕೆ. ಹೊಸ್ಸಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ.

ಅಲ್ಲಲ್ಲಿಯ ಸುದ್ದಿ ಸಾರ

ಮೈಸೂರು ರಾಜಕೀಯ ಪರಿಷತ್ತು—ಮೈಸೂರು ರಾಜ್ಯ ಮಟ್ಟದ ರಾಜಕೀಯ ಪರಿಷತ್ತನ್ನು ಇದೇ ಮೇ ತಿಂಗಳ 2, 3 ಮತ್ತು 4ರಂದು ಮಂಗಳೂರಲ್ಲಿ ಜರಗಿಸಲು ಜಿಲ್ಲಾ ಕಾಂಗ್ರೆಸಿನ ಕಾರ್ಯಕಾರೀ ಸಮಿತಿಯು ನಿರ್ಧರಿಸಿದೆ ಈ ಬಗ್ಗೆ ಶ್ರೀ ಕೆ ಕೆ ಶೆಟ್ಟರು ಅಧ್ಯಕ್ಷರಾಗಿ, ಉಳ್ಳ ಕ್ರಿಯಾ ಸಮಿತಿಯೊಂದು ರಚಿಸಲ್ಪಟ್ಟಿದೆ. ಶ್ರೀಗಳಾದ ಕೆ. ವಿಶ್ವನಾಥ ಕಾಮತ್, ಮಣೇಲ್ ಶ್ರೀನಿವಾಸ ನಾಯಕ್ ಮತ್ತು ಬಿ. ವಿಠಲದಾಸ್ ಶೆಟ್ಟರು ಇದರ ಕಾರ್ಯದರ್ಶಿಗಳಾಗಿಯೂ ಶ್ರೀ ಗಜಾನನ ರಾವ್ ಪಂಡಿತರು ಕೋಶಾಧಿಕಾರಿಗಳಾಗಿಯೂ ಶ್ರೀಗಳಾದ ಕೆ. ದೂಮಪ್ಪ, ಡಾ॥ ಕೆ. ಬಿ. ಶೆಟ್ಟಿ, ಎಚ್. ಕೆ. ತಿಂಗಳಾಯ, ಜಿ. ಸೋಮಶೇಖರರಾವ್, ಬಿ. ನಾರಾಯಣ ನಾಯಕ್, ಶ್ರೀಮತಿ ಬಕ್ಳೇವಿಯೂ ಆಲ್ಬುಕರ್ಕ್ ಕೆ. ಎಸ್. ಎನ್. ಅಡಿಗ ಮತ್ತು ಬಿ. ರಾಜೀವ ಭಂಡಾರಿಯವರು ಸದಸ್ಯರಾಗಿಯೂ ಆರಿಸಲಟ್ಟಿದ್ದಾರೆ.

ಮುಂಬಾಯಿ— ಸಾಫಲ್ಯ ಸೇವಾ ಸಂಘದ ಕಚೇರಿಯ ಹೊಸ ಸ್ಥಳದ ಉದ್ಘಾಟನಾ ಸಮಾರಂಭವು ತಾ. 29 3.64 ರು ಶ್ರೀ ಬಿ. ವಿಠ್ಠಲರವರಿಂದ ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತ್ತು. ಅಧ್ಯಕ್ಷರ ವೇದಿಕೆಯಿಂದ ಮಾತಾಡುತ್ತಾ ಶ್ರೀ ವಿಠ್ಠಲರವರು ಸಂಘವು ಕಳೆದ 23 ವರ್ಷಗಳಲ್ಲಿ ಮಾಡಿದ ಕೆಲಸಗಳನ್ನು ಪ್ರಶಂಸಿಸಿದರಲ್ಲದೆ ಸಂಘಟನೆಯೇ ಸಮಾಜೋನ್ನತಿಯ ತಳಹದಿಯಾಗಿದೆಯೆಂದರು. ಔದ್ಯೋಗಿಕ ವಿದ್ಯಾ ಪ್ರಸಾರಕ್ಕೆ ಹೆಚ್ಚಿನ ಮಹತ್ವ ಕೊಡಬೇಕೆಂದೂ ಅಭಿಪ್ರಾಯ ಪಟ್ಟರು.

ಸಂಘದ ಶ್ರೇಯೋಭಿವೃದ್ಧಿಯನ್ನು ಬಯಸಿ ಅಂದಿನ ಮುಖ್ಯ ಅತಿಥಿಗಳಾದ ಶ್ರೀ ನೀಲಕಾಂತ ಹೆಜ್ಮಾಡಿಯವರು ಮತ್ತು ಸರ್ವಶ್ರೀ ಯಂ ಎಲ್. ದೂದ್‌ವಾಲಾ, ಡಿ ಸಿ. ಬಂಗೇರ, ವಾಸು ಬಿ ಪುತ್ರನ್, ಕೆ ಎಸ್. ಸಾಲಿಯಾನ್, ವಿ. ಲಕ್ಷ್ಮಣ, ಯಂ. ನಾರಾಯಣ ಮತ್ತು ಬಿ ವಿ ರಾವುರವರು ಸರಸ ಭಾಷಣ ಮಾಡಿದರು. ಕೊನೆಗೆ ಸಂಘದ ಗೌ. ಜೊತೆ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಕೆ. ನಾಗೇಶರು ಧನ್ಯವಾದ ಸಮರ್ಪಿಸಿದರು.

ಕಟ್ಟಡ ತೆರಿಗೆಗೆ ಮನೆತೆರಿಗೆ ತಳಹದಿಯಾಗಲಿ— ಶ್ರೀ ಸಿರಿಲ್ ಗೊನ್ಸಾಲ್ವಿಸ್‌ರವರ ನೇತೃತ್ವದಲ್ಲಿ ಮಂಗಳೂರಿನಲ್ಲಿ ರಚಿಸಲಾದ ಕಟ್ಟಡ ತೆರಿಗೆಯ ಪರಿಶೀಲನೆಯ ವಿಶೇಷ ಸಮಿತಿಯು ಕೆಳಗಿನ ಶಿಫಾರಸ್ಸುಗಳನ್ನು ಜಿಲ್ಲಾ ಕಾಂಗ್ರೆಸ್ಸಿನ ಮುಂದಿರಿಸಿದೆ ಇದನ್ನು ರಾಜ್ಯದ ಅರ್ಥಿಕ ಸಚಿವರಿಗೆ ತಿಳಿಸಲಾಗುವುದು.

ಕಾರ್ಪರೇಶನ್ ನಗರ ಸಭೆ ಅಥವಾ ಪಂಚಾಯತುಗಳಂತಹ ಸ್ಥಾನಿಕ ಸಂಸ್ಥೆಗಳಿಗೆ ಜನರು ಈಗ ಕೊಡುತ್ತಿರುವ ಮನೆ ತೆರಿಗೆಯೇ ಕಟ್ಟಡ ತೆರಿಗೆ ನಿರ್ಣಯಕ್ಕೆ ತಳಹದಿಯಾಗಿರಬೇಕು, ಮತ್ತು ಈ ತೆರಿಗೆಯನ್ನು ಸ್ವತ್ತು ತೆರಿಗೆಯ ಶೇಕಡಾ ಮಾನದ ಮೇಲೆ ನಿರ್ಧರಿಸಬೇಕು—ಅಥವಾ, (1) ಫ್ಯಾಕ್ಟರಿ ಮತ್ತು ವರ್ಕ್ ಶಾಪುಗಳಿಗೆ ಉಪಯೋಗಿಸಲ್ಪಡುತ್ತಿರುವ ಕಟ್ಟಡಗಳನ್ನು ತೆರಿಗೆಯಿಂದ ಮುಕ್ತಗೊಳಿಸುವುದು. (2) ಮಾಲಕರು ತಾವೇ ವಾಸಿಸುತ್ತಿರುವ ಮನೆಗಳಿಗೆ ಕಟ್ಟಡ ತೆರಿಗೆಯಿರಬಾರದು ಮತ್ತು (3) 1.11.56ರ ಮೊದಲು ಕಟ್ಟಿದ ಕಟ್ಟೋಣಗಳಿಗೆ ತೆರಿಗೆ ಹೊರಿಸಬಾರದು.

ಕಟ್ಟಡ ತೆರಿಗೆಯನ್ನು ಹಿಂತೆಗೆಯಲು ಒತ್ತಾಯ— ತಾ. 2.4.64ರಂದು ಬೆಂಗಳೂರು ನಗರದ ಪುರಭವನದಲ್ಲಿ ಶ್ರೀ ಪಿ. ಕೋದಂಡ ರಾವ್‌ರವರ ಅಧ್ಯಕ್ಷತೆಯಲ್ಲಿ ರಾಜ್ಯದ ಕಟ್ಟಡ ಮಾಲಕರ ಮತ್ತು ವಿವಿಧ ಸಂಸ್ಥೆಗಳ ಪ್ರತಿನಿಧಿಗಳ ಸಭೆಯಲ್ಲಿ, ಕಟ್ಟಡ ತೆರಿಗೆಯು ಅನ್ಯಾಯಯುಕ್ತವೆಂದೂ ಅದನ್ನು ಪ್ರಬಲವಾಗಿ ಪ್ರತಿಭಟಿಸಿ ಅದನ್ನು ಕೂಡಲೇ ಹಿಂತೆಗೆದು ಕೊಳ್ಳಬೇಕೆಂದು ಒತ್ತಾಯಿಸಿದೆ. ಈ ಬಗ್ಗೆ ಒಂದು ನಿಯೋಗವು ಮುಖ್ಯಮಂತ್ರಿ ಮತ್ತು ಅರ್ಥ ಮಂತ್ರಿಗಳನ್ನು ಭೇಟಿ ಮಾಡಬೇಕೆಂದು ಸಭೆ ತೀರ್ಮಾನಿಸಿದೆ ಮುಂದಿನ ಕಾರ್ಯಾಚರಣೆಗಾಗಿ ಶ್ರೀ ಬಿ. ಎನ್. ಗುಪ್ತರ ಅಧ್ಯಕ್ಷತೆಯಲ್ಲಿ ಪ್ರಾಂತೀಯ ಮಟ್ಟದ ಕ್ರಿಯಾಸಮಿತಿ ಚುನಾಯಿಸಲ್ಪಟ್ಟಿದೆ.

ಮಣಿಪಾಲ — ಇಲ್ಲಿ ನಿರ್ಮಿಸಲಾಗಿರುವ ಸಿಂಡಿಕೇಟ್ ಬ್ಯಾಂಕಿನ ಕೇಂದ್ರ ಕಚೇರಿಯ ಹೊಸ ಕಟ್ಟಡದ ಆರಂಭೋತ್ಸವವನ್ನು ಕೇಂದ್ರ ಸರಕಾರದ ಉಕ್ಕು, ಗಣಿಗಳು ಹಾಗೂ ಭಾರಿ ಕೈಗಾರಿಕೆಗಳ ಮಂತ್ರಿ ಶ್ರೀ ಸಿ. ಸುಬ್ರಮಣ್ಯಂರವರು ಎಪ್ರಿಲ್ ೧೯ರಂದು ನೆರವೇರಿಸುವರೆಂದು ಗೊತ್ತಾಗಿದೆ.

ಮಿಯಾರು ಪದವು — ಸ್ಥಳೀಯ ಪ್ರಾಥಮಿಕ ಶಾಲೆಯ ರಜತೋತ್ಸವವನ್ನು ತಾ. 4.1.64ರಂದು ಕಾಸರಗೋಡು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕಣಾರನ್‌ರವರ ಅಧ್ಯಕ್ಷತೆಯಲ್ಲಿ ಕೇರಳ ವಿಧಾನ ಸಭಾಸದಸ್ಯ ಶ್ರೀ ಕೆ ಮಹಾಬಲ ಭಂಡಾರಿಯವರು ಉದ್ಘಾಟಿಸುತ್ತಾ ವಿದ್ಯಾರ್ಜನೆಯ ಸಮಯದಲ್ಲಿ ಕೇವಲ ಉದ್ಯೋಗವನ್ನೇ ಗುರಿಯಾಗಿರಿಸಿಕೊಳ್ಳುವುದು ಕಡಿಮೆಯಾಗಬೇಕೆಂದರು. ವಿದ್ಯಾ ಪ್ರಗತಿಗಾಗಿ ಶ್ರಮಿಸುವ ಸಾರ್ವಜನಿಕ ಹಾಗೂ ಉಪಾಧ್ಯಾಯರನ್ನು ಶ್ಲಾಘಿಸಿ, ಸುಶಿಕ್ಷಿತ ತರುಣರು ಯೋಜನೆಗಳು ಸಫಲವಾಗಲು ಸಹಕರಿಸಬೇಕೆಂದರು.

ರೋಟರಿ ಕ್ಲಬ್ ಉಡುಪಿ — ವಿದೇಶಗಳೊಂದಿಗೆ ಹೋಲಿಸಿ ನೋಡಿದರೆ ಭಾರತದಲ್ಲಿನ ಶಿಕ್ಷಣ ಮಟ್ಟ ಕಡಿಮೆಯಾಗಿಲ್ಲವೆಂದೂ, ಸೌಲಭ್ಯಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಅದನ್ನು ಇನ್ನೂ ಹೆಚ್ಚಿಸಬಹುದೆಂದೂ ಭಾರತದ ಪಾರ್ಲಿಮೆಂಟ್‌ಸಿ ಮಂಡಳಿಯ ಮಾಜಿ ಅಧ್ಯಕ್ಷ ಶ್ರೀ ಎಂ. ಎಚ್ ಶ್ರಾಫ್ ತಾ. 31.3.64ರಂದು ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು. ರೋಟರಿ ಕ್ಲಬ್ಬುಗಳು ಈ ದಿಶೆಯಲ್ಲಿ ಸೇವೆ ಸಲ್ಲಿಸಬಹುದಾಗಿದೆ ಎಂದೂ ಅವರು ಹೇಳಿದರು ಕ್ಲಬ್ಬಿನ ಉಪಾಧ್ಯಕ್ಷರುಗಳಲ್ಲೊಬ್ಬರಾದ ಡಾ॥ ಕೆ. ಎಲ್ ಐತಾಳ್ ಅಧ್ಯಕ್ಷತೆ ವಹಿಸಿದ್ದರು.

ಡಾ॥ ಟಿ. ಎಂ ಎ. ಪೈಯವರ ನೇತೃತ್ವದಲ್ಲಿ ವಿದ್ಯಾ ಕೇಂದ್ರ ರಚನೆಯಾಗಿರುವುದನ್ನು ಶ್ರೀ ಬ್ರಿಜ್ ಪಂಡಿತ್ ಮದನ ಮೋಹನ ಮಾಲವೀಯರ ನೇತೃತ್ವದಲ್ಲಿ ಬನಾರಸ್ ವಿಶ್ವವಿದ್ಯಾನಿಲಯ ರಚನೆಯಾಗಿರುವುದರೊಂದಿಗೆ ಹೋಲಿಸಿ, ಇಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿತಗೊಂಡರೆ ಡಾ॥ ಮಾಧವ ಪೈಯವರ ಕಾರ್ಯೋತ್ಸಾಹ ಹೆಚ್ಚಾಗುತ್ತದೆಂದರು.

ಡಾ॥ ಟಿ ಎಂ. ಎ. ಪೈಯವರು ವಂದನಾರ್ಪಣೆ ಮಾಡಿದರು.

ಎಲ್ಲೂರು — ಎಲ್ಲೂರು ಯುವಕ ಮಂಡಳದ ಮಹಾ ಸಭೆಯು ತಾ. 22-3-64 ರಂದು ಅಧ್ಯಕ್ಷ ಶ್ರೀ ವೈ ಶ್ರೀಪತಿ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ 1964-65ನೇ ವರ್ಷದ ಬಗ್ಗೆ ನೂತನ ಕಾರ್ಯಕಾರಿ ಮಂಡಳಿಯನ್ನು ರಚಿಸಿತು. ಶ್ರೀ ವೈ ಎಸ್. ಭಟ್‌ರವರು ಅಧ್ಯಕ್ಷರಾಗಿಯೂ, ಶ್ರೀ ಎಸ್. ಎನ್. ಉಡುಪರು ಉಪಾಧ್ಯಕ್ಷರಾಗಿಯೂ ಶ್ರೀ ವೈ ವಿ. ಎಸ್. ರಾಯರು ಕಾರ್ಯದರ್ಶಿಗಳಾಗಿಯೂ ಶ್ರೀ ವೈ ಜಿ ರಾಯರು ಉಪಕಾರ್ಯದರ್ಶಿಗಳಾಗಿಯೂ ಶ್ರೀ ವೈ. ವಿ ಮೊಯಿಲಿಯವರು ಕೋಶಾಧಿಕಾರಿಗಳಾಗಿಯೂ ಶ್ರೀ ಕೆ. ಎಸ್. ರಾವ್ ಮತ್ತು ಶ್ರೀ ವೈ. ಎ ರಾಯರು ಸಹಾಯಕ ಸದಸ್ಯರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು.

ಶ್ರೀ ವೈ ಆರ್. ಭಟ್ ಮತ್ತು ಶ್ರೀ ವೈ ಆರ್. ದೇವಡಿಗರನ್ನು ಲೆಕ್ಕ ಪರಿಶೋಧಕರನ್ನಾಗಿಯೂ ಶ್ರೀ ವೈ. ಆರ್. ರಾವ್ ಮತ್ತು ಶ್ರೀ ಎಸ್. ಎನ್. ಶೆಟ್ಟಿರನ್ನು ಸಲಹೆಗಾರರನ್ನಾಗಿಯೂ ಆರಿಸಲಾಯಿತು.

ಶ್ರೀ ಬಿ ಲಿಂಗಪ್ಪ ಶೆಟ್ಟರ ನಿವೃತ್ತಿ — ಕಳೆದ 37 ವರ್ಷಗಳಿಂದಲೂ ತನ್ನ ಸೇವೆಯನ್ನು ಉಡುಪಿಯ ಕಡಿಯಾಳಿ ಜೂನಿಯರ್ ಎಲಿಮೆಂಟರಿ ಶಾಲೆಗೆ ನೀಡಿ ಅಧ್ಯಾಪಕ ವೃತ್ತಿಯಿಂದ ತಮ್ಮ 60ನೆ ವರ್ಷಾರಂಭದಲ್ಲಿ ತಾ. 31.3.64ರಂದು ನಿವೃತ್ತರಾದ ಶ್ರೀ ಬಿ ಲಿಂಗಪ್ಪ ಶೆಟ್ಟರನ್ನು ಬೀಳ್ಕೊಡಲಾಯಿತು. ಶ್ರೀ ಕೆ. ಕೆ. ಪೈ ಇವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳು ತಮ್ಮಲ್ಲಿಯೇ ಸಂಗ್ರಹಿಸಿಕೊಂಡ ನಿಧಿಯನ್ನು ಅತಿಥಿಗಳಿಗೆ ಅರ್ಪಿಸಿದರು. ಶ್ರೀ ಶೆಟ್ಟರು ಒಂದೇ ಶಾಲೆಯಲ್ಲಿ ದುಡಿದು ತಮ್ಮ ಶಿಷ್ಯವೃಂದ ಮತ್ತು ಅವರ ಹೆತ್ತವರ ಆದರ—ಗೌರವಗಳಿಗೆ ಪಾತ್ರರಾಗಿದ್ದಾರೆ.

ಶ್ರೀ ಲಿಂಗಪ್ಪ ಶೆಟ್ಟರು ಶಾಲೆಯ ಹಳೆಯ ವಿದ್ಯಾರ್ಥಿ ಸಂಘಕ್ಕೂ ಅಮೂಲ್ಯ ಸೇವೆ ಸಲ್ಲಿಸಿದ್ದರು. ಈ ಸಂಘದವರೂ ಶ್ರೀ ಶೆಟ್ಟರನ್ನು ಸತ್ಕರಿಸುವ ಸಿದ್ಧತೆ ನಡೆಯುತ್ತಿದೆ. ಧನ ಸಂಗ್ರಹದ ಕಾರ್ಯವು ಭರದಿಂದ ಸಾಗುತ್ತಿದೆ. ಧನ ಕಳಿಸ ಬಯಸುವವರು ತ್ವರಿತವಾಗಿ ಕಳಿಸಿಕೊಡ ಬಹುದು.

ಜಗತ್ಪರ್ಯಟನ

ಎಂ. ಸಿ. ಚಾಗ್ಲ

ಕೇಂದ್ರ ಸರಕಾರದಲ್ಲಿ ಎಂ. ಸಿ. ಚಾಗ್ಲ ಶಿಕ್ಷಣ ಮಂತ್ರಿಯಾದಂದಿನಿಂದ ಆ ಖಾತೆಯಲ್ಲಿ ಬಹಳಷ್ಟು ಸುಧಾರಣೆಗಳ ಹೆಸರಿನಲ್ಲಿ ಪರಿವರ್ತನೆಗಳು ನಡೆಯ ತೊಡಗಿವೆ. ಚಾಗ್ಲರ ವಾದವನ್ನು ವಕೀಲ ವಾದವೆಂದು ಪಾಕಿಸ್ತಾನದ ವಿದೇಶ ಮಂತ್ರಿ ಝುಲ್ಫಿಕರ್ ಎ. ಭುಟ್ಟೊ ಹೆಸರಿಸಿದರು ನಿಜ. ಆದರೆ, ಸತ್ಯವಾದನೆಂಬುದನ್ನು ಅವರ್ಯಾಕೆ ಬೇಕೆಂದೇ ವ್ಯಕ್ತಪಡಿಸಲಿಲ್ಲ. ಚಾಗ್ಲರು ಹಿಂದಿನ ಹಲವಾರು ಅನವಶ್ಯಕ ಸಮಿತಿಗಳನ್ನು ರದ್ದು ಮಾಡಿದರು; ಕ್ರಾಂತಿ ಪುರುಷರೆನ್ನಿಸಿದರು ಇದೀಗ ತನ್ನ ಖಾತೆಯ ಎಲ್ಲ ಕಾರ್ಯಗಳನ್ನೂ ಕೇವಲ ಐದು ವಿಭಾಗಗಳಲ್ಲಿ ಹಂಚಿ ಹಾಕಿದ್ದಾರೆ. ಇದರಿಂದ ತ್ವರಿತ ನಿರ್ಣಯಕ್ಕೆ ಬರುವುದರೊಡನೆ ಮಿತವ್ಯಯವೂ ಸಾಧ್ಯವಾಗುವುದು. ಇದರೊಂದಿಗೆ ಶಿಕ್ಷಣವು ಕೇಂದ್ರದ ವಿಷಯವಾಗಬೇಕೆಂಬ ಅವರ ಇಚ್ಛೆಯೂ ಈಡೇರಿದರೆ, ಮತ್ತೆ ಚಾಗ್ಲರ ಪೂರ್ಣ ವರ್ಚಸ್ಸು ಈ ಖಾತೆಯ ಮೇಲೆ ಬೀಳುವುದು ಸಾಧ್ಯವಾಗುವುದು.

ವಿನೋಬಾ ಭಾವೆ

ಸರ್ವೋದಯ ನಾಯಕರಾದ ವಿನೋಬಾ ಭಾವೆಯವರು ಹಳ್ಳಿಗಳನ್ನು ಕಡೆಗಣಿಸುವುದು ದೇಶಕ್ಕೆ ಅಪಾಯಕಾರಿ ಎಂದಿದ್ದಾರೆ. ಚೀನೀಯ ಸೈನ್ಯಕ್ಕಿಂತಲೂ ಇದು ಹೆಚ್ಚಿನ ಗಂಡಾಂತರಕಾರಿಯೆಂದು ಎಚ್ಚರಿಸಿದ್ದಾರೆ. ಇದನ್ನು ಮೊದಲೇ ಮನಗಂಡ ಪ್ರಧಾನಿ ನೆಹರು ಹೇಳಿದ್ದರು: ದೇಶದ ಕೃಷಿ—ಉದ್ದಿಮೆ ಹೀಗೆ ಬೇರೆ ಬೇರೆ ರಂಗಗಳಲ್ಲಿ ದುಡಿಯುವವರೆಲ್ಲರೂ ಚೀನೀಯ ಸೇನೆಯ ವಿರುದ್ಧ ಅಸ್ತ್ರವೆತ್ತುವ ವೀರರೆಂದು. ಹಳ್ಳಿಗಳ ಸುಧಾರಣೆಯಾದಂತೇ ದೇಶದ ಉದ್ಧಾರ; ಇದಕ್ಕೆಂದೇ ನಮ್ಮ ಯೋಜನೆಗಳು. ಬಡವ—ಬಲ್ಲಿದನೆಂಬ ಭೇದಭಾವ ಹಂತಹಂತವಾಗಿ ನಿವಾರಿಸುವುದೇ ಕಾಂಗ್ರೆಸಿನ ಸಮಾಜವಾದದ ಗುರಿ. ಇದನ್ನು ಒಂದು ಕ್ಷಣದಲ್ಲೇ ಸಾಧಿಸುವುದು ಅಲ್ಲಾವುದ್ದೀನನ ದೀಪದಿಂದಲೂ ಸಾಧ್ಯವಿಲ್ಲ. ವಿನೋಬಾ ಇದನ್ನು ಬಲ್ಲರು; ಆದರೀಗ ಈ ಮಾತನ್ನು ಮತ್ತೊಮ್ಮೆ ನೆನಪಿಸಿದರು ಅಷ್ಟೇ.

ಅಶೋಕ ಮೆಹತಾ

ಯೋಜನಾ ಆಯೋಗದ ಉಪಾಧ್ಯಕ್ಷ ಅಶೋಕ ಮೆಹತಾ ಬೆಂಗಳೂರಲ್ಲಿ ಇಳಿದಿದ್ದಾರೆ. ಅವರ ಮುಂದೆ ಮುಖ್ಯ ಮಂತ್ರಿ ಮತ್ತು ಅರ್ಥಮಂತ್ರಿಯವರು ರಾಜ್ಯ ಯೋಜನೆಗೆ ಕೇಂದ್ರಸರಕಾರದ ಸಹಾಯದ ಕುರಿತು ವಿಚಾರ ವಿನಿಮಯ ಮಾಡಿದರು. ಉಳಿದ ರಾಜ್ಯಗಳಿಗೆ ನೆಚ್ಚಿದ ೬೫ ಸೇ. ದಷ್ಟು ಕೇಂದ್ರ ಕೊಡುತ್ತದಾದರೆ, ಮೈಸೂರಿಗೆ ಮಾತ್ರ ಇದು ತಿರುವುಮುರುವು (೩೫ ಸೇ.) ಇದೇಕೆ ಹೀಗೆ ಎಂದರೆ, ರಾಜ್ಯದ ಅರ್ಥ ಸಂಗ್ರಹದಲ್ಲಿ ಸುಧಾರಣೆಯಿಲ್ಲದಿರುವುದು. ಹತ್ತಾರು ವರ್ಷಗಳಿಂದಲೂ ತೆರಿಗೆ—ತೀರ್ವೆ ತೆರದ ನಾಗರಿಕರು ಇರುವ ಈ ನಮ್ಮ ಮೈಸೂರಿನಲ್ಲಿ ಅರ್ಥಸಂಗ್ರಹ ಚುರುಕುಗೊಳ್ಳುವಂತೆ ಮಾಡುವುದು ಯಾರ ಕೆಲಸ? ಪ್ರಾರಂಭದಿಂದಲೂ ತೆರಿಗೆ, ಸ್ಕೂಲ್ ಫೀ ತೆರುವ ಅಭ್ಯಾಸವಿಲ್ಲದವರ ಖಾನೇಶುಮಾರಿ ತೆಗೆದರೆ, ಆಗ ಎರಡು ಕರ್ನಾಟಕ ವಾದಕ್ಕೆ ಪುರಸ್ಕಾರ ದೊರೆತರೂ ದೊರೆಯಬಹುದು.

ಚೆಸ್ಟರ್ ಬೌಲ್ಸ್

ಅರ್ಥ ಮಂತ್ರಿಯಾಗಿದ್ದಾಗ ಮುರಾರ್ಜಿ ದೇಸಾಯಿಯವರು ಅಮೆರಿಕಾ ಯಾತ್ರೆಗೆ ತೆರಳಿದ್ದರು. ಆಗ ಅವರು ಪ್ರಧಾನಿ ನೆಹರುರವರ ಉತ್ತರಾಧಿಕಾರಿಯೆಂದು ಸ್ವಾಗತಿಸಲ್ಪಟ್ಟಿದ್ದರು. ಆಬಳಿಕ ಅವರು ಅಧಿಕಾರದಲ್ಲಿಲ್ಲ. ಕೇಂದ್ರದ ಖಾತಾರಹಿತ ಮಂತ್ರಿ ಲಾಲಬಹದೂರ ಶಾಸ್ತ್ರಿಯವರನ್ನು ಉತ್ತರಾಧಿಕಾರಿಯ ಸ್ಥಾನಕ್ಕೇರಿಸಿದ ಭಾರತದಲ್ಲಿನ ಅಮೆರಿಕನ್ ರಾಜದೂತ ಚೆಸ್ಟರ್ ಬೌಲ್ಸ್ ಅವರೊಬ್ಬ ಒಳ್ಳೆಯ ಮನುಷ್ಯರು ಎಂದು ಉದ್ಗರಿಸಿದರು. ನೆಹರೂ ಉತ್ತರಾಧಿಕಾರಿಯ ಬಗ್ಗೆ ಹೆಚ್ಚಾಗಿ ಚಿಂತಿಸುವುದಿಲ್ಲ; ಈ ಕಾರಣದಿಂದಲೇ ಉಪ ಪ್ರಧಾನಿಯ ನೇಮಕವನ್ನೂ ಅವರು ತಿರಸ್ಕರಿಸಿದ್ದಾರೆ. ಉತ್ತರಾಧಿಕಾರಿಯ ಪ್ರಶ್ನೆ ಇರುವಷ್ಟು ಸಮಯ ಆಸ್ಥಾನಕ್ಕೆ ಬೇರೆ ಬೇರೆಯವರನ್ನ ಹೆಸರಿಸುವುದು ತಪ್ಪಲ್ಲ; ಆದರೆ ಅವಕಾಶ ಬಂದಾಗ ಮೂರನೆಯ ವ್ಯಕ್ತಿಯೊಂದು ಆಯ್ಕೆಗೊಳ್ಳುವುದೂ ಅಸಂಭವವಲ್ಲ

ಮಾವ ಮಾವಂದಿಗ

ಚೀನಾದ ನಾಯಕಮಣಿಗಳಾದ ಮಾವ ಮತ್ತು ಲಾಯರು ರಷ್ಯದಿಂದ ಭಾರಿ ಅಪವಾದವನ್ನು ಹೊತ್ತಿದ್ದಾರೆ, ಮೊದ ಮೊದಲು ತಮ್ಮ ತಮ್ಮಲ್ಲಿಯೇ ಕೊಡೆ ದಾಡುತ್ತಿದ್ದ ರಷ್ಯ—ಚೀನಗಳೀಗ ಬಹಿರಂಗಕ್ಕೆ ಬಂದಿವೆ. ಕಮ್ಯೂನಿಜಂ ಯಾವುದು ಎಂಬ ತತ್ವದ ಮೇಲೆಯೇ ಇಬ್ಬಣಗಳಲ್ಲಿ ಒಮ್ಮತವಿಲ್ಲ. ಮತ್ತೆ ಕಾರ್ಯಾಚರಣೆ ಹೊಂದಿಕೊಳ್ಳುವುದೆಂತು? ಇದರ ಪರಿಣಾಮವೇ ಭಾರತದಲ್ಲಿ ಡಾಂಗೆಯವರ ಮೇಲೆ ಹೊರಿಸಲಾದ ಅಪವಾದೆಯೆನ್ನಬೇಕು. ಡಾಂಗೆಯವರು ೧೯೨೪ರಲ್ಲಿ ವೈಸರಾಯಿಗೆ ಬರೆದರೆಂದು ಹೇಳಲಾದ ಪತ್ರವು ನಮ್ಮ ಕಮ್ಯೂನಿಸ್ಟರಲ್ಲಿಯೂ ಎಡಬಲ ತಾಕಲಾಟಕ್ಕೆ ತೊಡಗಿದೆ. ಕೇಂದ್ರ ಸರಕಾರವು ಡಾಂಗೆ ಮತ್ತಿತರ ಹಿಂಬಲಿಗರಿಗೆ ಆ ಪತ್ರವನ್ನು ಕಾಣಲು ಅವಕಾಶ ನೀಡಿದೆ. ಅದರ ಪರಿಶೀಲನೆಯನಂತರ ನಮ್ಮ ಮಾವಂದಿಗರ ಕಾರ್ಯಭಾರವೇನು ಎಂದು ನೋಡಬೇಕು.

ಕೃತಿ ಸಮೀಕ್ಷೆ

ವಿನಾಶದ ಹೆದ್ದಾರಿ ಹಿಡಿದ ಆಸುರೀ ಭೌತಿಕ ವಿಜ್ಞಾನ:

ಸಂಗ್ರಹ ಮತ್ತು ಅನುವಾದ: ಶ್ರೀ ಮಹಾಬಲೇಶ್ವರ ಐತಾಳ.

ಪ್ರಕಾಶಕರು: ಅಭ್ಯುದಯ ಕಾರ್ಯಾಲಯ, ತೆಂಬಟ್ಟು ಪೋಸ್ಟ್ ಉಳ್ತೂರು—೩ಳ, ದ.ಕ.
ಪುಟಗಳು: ೪೮ ಬೆಲೆ ರೂ ?

ಗೋರಖ ಪುರದಿಂದ ಪ್ರಕಟಗೊಳ್ಳುತ್ತಿರುವ ಧಾರ್ಮಿಕ ಮತ್ತು ಸಾಂಸ್ಕೃತಿಕ ಮಾಸ ಪತ್ರಿಕೆ ಕಲ್ಯಾಣದ ಮೂಲವನ್ನು ಆಧರಿಸಿದ ಕಿರುಹೊತ್ತಿಗೆಯಿದು. ಪ್ರಕಾಶಕರು ಈ ಪುಸ್ತಕದ ಬಗ್ಗೆ ಬರೆಯುತ್ತಾ "ಈ ಪುಸ್ತಕದಲ್ಲಿರುವ ಎಲ್ಲಾ ವಿಚಾರಗಳನ್ನು ಓದಿದವರೆಲ್ಲರೂ ಮೆಚ್ಚುವರೆಂದೇನೂ ನಾವು ತಿಳಿದಿಲ್ಲ. ಮೆಚ್ಚಲೇ ಬೇಕೆಂದೂ ನಾವು ಬಯಸಿಯೂ ಇಲ್ಲ ಆದರೆ ಒಳಿತು ಕೆಡುಕುಗಳನ್ನು ನಿರಾಯಾಸವಾಗಿ ಗುರುತಿಸಬಲ್ಲ ವಿಚಾರ ಶೀಲರಲ್ಲಿ ಕೆಲವರಾದರೂ ಈ ಪುಸ್ತಕ ವಿಚಾರ ಪ್ರಚೋದಕವಾಗಿದೆಯೆಂದು ಅಭಿಪ್ರಾಯ ಪಟ್ಟರೆ ನಮ್ಮ ಕಾರ್ಯ ಸಾರ್ಥಕವಾಯಿತೆಂದು ಭಾವಿಸುತ್ತೇವೆ" ಎಂದಿದ್ದಾರೆ. ಇದನ್ನು ಒಪ್ಪಲೇ ಬೇಕು.

ವಿಜ್ಞಾನವು ಮೂಲತಃ ಆಸುರೀಯಾಗಿದೆಯೆಂದು ಇಂದು ಹೇಳುವವರು ಅಲ್ಪ ಮಂದಿ. ಆದರೆ, ಅದರಿಂದ ಆಸುರೀ ಕೃತ್ಯವು ಸುಲಭ ಮತ್ತು ಸರಳವಾಗುತ್ತದೆ. ಕೈಯಲ್ಲಿರುವ ಮಸೆದ ಖಡ್ಗವು ಸಿರಪಂಥಿಯ ಕುತ್ತಿಗೆಯನ್ನು ಕತ್ತರಿಸಿದರೆ ಅದು ಆಸುರೀ ವಸ್ತು; ಬದಲು ಕ್ರೂರ ಕರಡಿಯನ್ನು ಕೊಂದರೆ ಅದು ಸುರೀಯೆನಿಸಬಹುದು. ವಿಜ್ಞಾನದ ಫಲವಾದ ಖಡ್ಗದಲ್ಲಿ ಆಸುರೀಯತೆಯಿಲ್ಲ; ಅದನ್ನು ಹಿಡಿದವರ ಸುರೀ—ಆಸುರೀ ಪ್ರವೃತ್ತಿಯಿಂದಲೇ ಉದ್ಧಾರ—ವಿನಾಶದ ದಾರಿ ತೆರವಾಗುವುದು. ಹಾಗಿರುವಾಗ, ವಿಜ್ಞಾನದ ನಾನಾ ಸಂಶೋಧನೆಗಳು ಮಾನವನನ್ನು ಅಮಾನವನನ್ನಾಗಿ ಮಾಡಿ ವಿನಾಶದ ಹೆದ್ದಾರಿಯಲ್ಲಿ ಮುನ್ನಡೆಸದೆ, ಮಾನವನಾಗಿ ಇರಿಸಿ, ಉನ್ನತಿಯ ದಾರಿಯಲ್ಲಿ ಕೊಂಡೊಯ್ಯಬೇಕೆಂಬ ಪ್ರೇರಣೆ ನೀಡುವುದೇ ಈ ಪುಸ್ತಿಕೆಯ ಉದ್ದೇಶ.

Life Insurance Corporation of India

(Established by the Life Insurance Corporation Act, 1956)

Udipi Divisional Office.

Notice having been given of the loss of Policy numbered 96550458 on the life of Sri Yelluru Gopal Rao issued by East & West Insurance Co. Ltd. Duplicate Policy will be issued unless objection is lodged with us within one month from this date.

T. R. A. Pai,
Sr. Divisional Manager.

Place: Udipi.
Date: 7-4-'64.

ಸುರಪುರದ ಶ್ರೀ ಭುವನೇಶ್ವರೀ ಪಂಚಾಂಗ.

ಕರ್ತರು: ಜ್ಯೋತಿರ್ವಿದ್ವಾನ್ ಶ್ರೀ ಶೇಷ ಶಾಸ್ತ್ರೀ, ಹೆಬ್ಬಾಳ, ಸುರಪುರ.

ಪ್ರಕಾಶಕರು: ಆರ್ಯವೈಶ್ಯ ಸಂಘ, ರಂಗಂಪೇಟೆ (ಸುರಪುರ)

ಬೆಲೆ: ರೂ. ೧—೦೦.

ಶ್ರೀಶಕ ೧೮೮೬ನೆಯ ಕ್ರೋಧಿ ಸಂವತ್ಸರದ ಈ ಬೃಹತ್ ಪಂಚಾಂಗವನ್ನು ಹೃತ್ಪೂರ್ವಕ ಸ್ವಾಗತಿಸುತ್ತೇವೆ. ಹಲವಾರು ತಲೆಮಾರುಗಳಿಂದ ನಡೆದು ಬಂದ ಸುರಪುರದ ಜ್ಯೋತಿರ್ವಿದ್ವಾಂಸರ ಮನೆತನದವರ ಈ ಪಂಚಾಂಗ ಮುಖ್ಯವಾಗಿ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಜನಾದರಣೆ ಪಡೆದಿದೆ. ಆದರೂ ಅದರಲ್ಲಿ ಅಡಕವಾಗಿರುವ ಜ್ಯೋತಿಷ್ಯಕ್ಕೆ ಸಂಬಂಧಪಟ್ಟ ಹಲವಾರು ವಿಚಾರಗಳು ಎಲ್ಲರ ನಿತ್ಯೋಪಯೋಗಕ್ಕೂ ಬೀಳುವುದರಿಂದ ದಕ್ಷಿಣ ಕರ್ನಾಟಕದವರಿಗೂ ಕನ್ನಡ ಬಲ್ಲವರಿಗೂ ಉಪಾದೇಯವಾಗಿದೆ. ದೈನಂದಿನ ಪಂಚಾಂಗ ವಿವರಗಳು, ರಾಶಿ ಭವಿಷ್ಯ, ಸಂವತ್ಸರ ಫಲ, ವಿವಿಧ ಮುಹೂರ್ತ ಮೊದಲಾದುವು ಎಲ್ಲಾ ಸಾಮಾನ್ಯ ಪಂಚಾಂಗಗಳಲ್ಲೂ ಕಾಣಬಹುದಾದ ವಿಚಾರಗಳು. ಆದರೆ, ಈ ವಿಸ್ತೃತ ಪಂಚಾಂಗವು ಜ್ಯೋತಿರ್ಗನ್ನಡಿಯೆನ್ನಬೇಕು. ಹಸ್ತ ಸಾಮುದ್ರಿಕೆ, ದೇಶ-ವಿದೇಶಗಳ ಭವಿಷ್ಯ, ವಧೂವರರ ನಾಲಾವಳಿ, ನಕ್ಷತ್ರಗಳನ್ನನುಸರಿಸಿ ಮಳೆ ಬರುವ ಫಲ, ಸಂಕ್ರಾಂತಿಫಲ ಇತ್ಯಾದಿ ಒಂದಲ್ಲ ಹಲವು ವಿಷಯಗಳು ಇದರಲ್ಲಿ ಅಡಕವಾಗಿದ್ದು ಗೃಹಸ್ಥರಿಗೆಲ್ಲಾ ಅತ್ಯುಪಯುಕ್ತವಾಗಿದೆ ಚೈತ್ರ ಮಾಸವು ಅಧಿಕವಿರುವುದರಿಂದ ನಿಜ ಚೈತ್ರದಲ್ಲಿಯೇ ಉಗಾದಿಯನ್ನು ಆಚರಿಸಬೇಕೆಂದು ಶ್ರೀ ಶಾಸ್ತ್ರಿಯವರು ಶಾಸ್ತ್ರಾಧಾರದಿಂದ ನಿರ್ಧರಿಸಿದ್ದಾರೆ. ದೇಶದಲ್ಲಿ ಕುತೂಹಲಕ್ಕೆ ಕಾರಣವಾದ ಪ್ರಧಾನಿ ನೆಹರೂರವರ ಆರೋಗ್ಯವು ಸುಧಾರಿಸಿ ಅವರು ವಿರೋಧಿಗಳ ಕಣ್ಣು ಕುಕ್ಕಿಸುತ್ತ ರಾಜಕಾರಣದಲ್ಲಿ ಅಪ್ರತಿಮ ಯಶಸ್ವಿಗಳಾಗಿ ಭಾರತದ ಸ್ವಾತಂತ್ರ್ಯ ಗೌರವವನ್ನುಳಿಸುವರೆಂದು ಭವಿಷ್ಯ ನುಡಿದಿದ್ದಾರೆ.

ಹಿಂದಿನ ವರ್ಷಗಳದರಂತೆಯೇ ಕ್ರೋಧಿ ಸಂ|| ದ ಈ ಪಂಚಾಂಗವು ಕನ್ನಡ ಬಲ್ಲವರಿಗೆ ಮಹೋಪಕಾರಿಯಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್— ಇದರ ೧೯೬೩ನೆಯ ವರ್ಷದ ವರದಿ ಮತ್ತು ಆಯ ವ್ಯಯ, ಸಾಲ ಮೂಲಗಳ ಪಟ್ಟಿಯು ನಮ್ಮ ಕೈ ಸೇರಿವೆ. ವರದಿ ವರ್ಷಾಂತ್ಯದಲ್ಲಿ ಬ್ಯಾಂಕಿನ ತೆತ್ತ ಬಂಡವಳವು ರೂ ೮೦,೫೯,೪೬೭ ಇದ್ದು; ಕಾಯ್ದಿಟ್ಟ ನಿಧಿಯು ರೂ. ೭೫,೨೫,೦೦೦ವಾಗಿದೆ ಒಟ್ಟು ಠೇವುಗಳು ರೂ. ೪೫|| ಕೋಟಿಗಳಷ್ಟಿದ್ದು ಇದು ಹಿಂದಿನ ವರ್ಷಕ್ಕಿಂತ ಶೇ. ೩೮ರಷ್ಟು ಹೆಚ್ಚಳವನ್ನು ಸೂಚಿಸುತ್ತದೆ; ಮಾತ್ರವಲ್ಲ, ಬ್ಯಾಂಕಿನ ಮೇಲೆ ಹೆಚ್ಚುತ್ತಿರುವ ಜನಪ್ರಿಯತೆಯನ್ನು ವ್ಯಕ್ತಪಡಿಸುತ್ತದೆ ರೂ. ೩೯,೯೧,೭೩೦ ಲಾಭಾಂಶ ಗಳಿಸಿದ ಬ್ಯಾಂಕು ಇಕ್ವಿಟಿ ಶೇರುಗಳ ಮೇಲೆ ಶೇ ೨೦ರಂತೆ ಡಿವಿಡೆಂಡು ಹಂಚಿದೆ. ಪ್ರಿಫೇರೆನ್ಸ್ ಶೇರುಗಳಿಗೆ ಹಂಚಿದ ಡಿವಿಡೆಂಡೂ ಆಕರ್ಷಣೀಯವಾಗಿದೆ. ನೌಕರವರ್ಗದ ಬೋನಸ್ಸಿಗೆಂದು ರೂ. ೫ ಲಕ್ಷವನ್ನು ತೆಗೆದಿಟ್ಟಿದೆ. ವರದಿ ವರ್ಷಾಂತ್ಯದಲ್ಲಿ ಬ್ಯಾಂಕಿನ ಒಟ್ಟು ಸೊತ್ತುಗಳು ೫೭ ಕೋಟಿಯನ್ನು ಮಿಕ್ಕಿವೆ. ೧೯೬೩ರಲ್ಲಿ ರಾಬರ್ಟ್‌ಸನ್ ಪೇಟೆಯ ಸಿಟಿ ಜನ್ ಬ್ಯಾಂಕ್, ಲಿ; ಪೊಲ್ಲಾಚಿಯ ಪೊಲ್ಲಾಚಿ ಟೌನ್ ಬ್ಯಾಂಕ್ ಲಿ. ಕೊಯಮುತ್ತೂರಿನ ಕನ್ನಿಕಾಪರಮೇಶ್ವರೀ ಬ್ಯಾಂಕ್, ಲಿ, ಗಳ ವ್ಯವಹಾರವನ್ನು ಸಿಂಡಿಕೇಟ್ ಬ್ಯಾಂಕ್ ತೆಗೆದು ಕೊಂಡಿದೆ. ಒಟ್ಟು ೧೮೪ ಶಾಖೆಗಳ ಮೂಲಕ ದಕ್ಷಿಣ ಭಾರತದ ಎಲ್ಲೆಡೆಗೂ ಬ್ಯಾಂಕಿಂಗ್ ಸೌಕರ್ಯವನ್ನಿದು ಒದಗಿಸುವಲ್ಲಿ ಸಮರ್ಥವಾಗಿದೆ. ವರದಿ ವರ್ಷದಲ್ಲಿ ಬ್ಯಾಂಕಿಗೆ ವಿದೇಶಿ ವಿನಿಮಯ ರಂಗಕ್ಕೂ ಇಳಿಯಲು ಅನುಮತಿ ದೊರೆತಿದ್ದು ವಿಶ್ವವ್ಯಾಪೀ ಬ್ಯಾಂಕಿಂಗ್ ಸವಲತ್ತುಗಳನ್ನು ಸಿಂಡಿಕೇಟು ಒದಗಿಸಲು ಸಮರ್ಥವಾಗಿದೆ.

ಜನಜನಕ್ಕೂ ಅನುಕೂಲವಾಗುವ ಬ್ಯಾಂಕಿಂಗ್ ಅನುಕೂಲತೆಗಳು ಪ್ರಾಮಾಣಿಕ ಮತ್ತು ಪರಿಪೂರ್ಣ ಸೌಲಭ್ಯ ಮತ್ತು ಸೇವೆ, ಚೆಯರ್‌ಮ್ಯಾನ್ ಮೆನೇಜಿಂಗ್ ಡೈರೆಕ್ಟರ್ ಮತ್ತಿತರ ಅಧಿಕಾರಿ-ನೌಕರ ವರ್ಗದ ಸೌಜನ್ಯಯುತ ಸೇವೆಗಳೇ ಸಿಂಡಿಕೇಟ್ ಬ್ಯಾಂಕಿನ ಜನಾನುರಾಗತೆ ಮತ್ತು ಯಶಸ್ವಿತೆಯ ಗುಟ್ಟು. ಹೊಸ ಹೊಸ ಪ್ರಯೋಗಗಳನ್ನು (ಉದಾಹರಣೆಗೆ ಮಹಿಳೆಯರಿಂದಲೇ ನಡೆಸಲ್ಪಡುವ ಶಾಖೆ, ಮಕ್ಕಳಲ್ಲಿ ಉಳಿತಾಯ ಚಿತ್ತ ಸಂವರ್ಧನೆ) ಬ್ಯಾಂಕು ವ್ಯವಹಾರಕ್ಕೆ ತರುವುದು ಇದರದೊಂದು ವೈಶಿಷ್ಟ್ಯ. ಮುಂದಿನ ವರ್ಷಗಳಲ್ಲಿ ಸಿಂಡಿಕೇಟು ತನ್ನ ಸೇವಾಕಾರ್ಯವನ್ನು ಮತ್ತಷ್ಟು ವಿಸ್ತರಿಸಿ ಗ್ರಾಮೀಣ ಹಾಗೂ ನಾಗರಿಕ ಜನತೆಗೆ ಅವಶ್ಯಕ ಬ್ಯಾಂಕಿಂಗ್ ಸೌಕರ್ಯಗಳನ್ನು ಇನ್ನೂ ಹೆಚ್ಚಾಗಿ ಸಲ್ಲಿಸುವಂತಾಗಲಿ; ಭಾರತದಲ್ಲಿ ಅಗ್ರಮ ಸ್ಥಾನಾಪನ್ನವಾಗಲಿ.

ಕರಿಮೆಣಸು ಒಣಶುಂಠಿ

ಮಥುರೆಯಲ್ಲಿ ಸರಸ್ವತೀ ಮಂದಿರದ ಮೂರಂತಸ್ತಿನ ಕಟ್ಟಡವೊಂದುರುಳಿ ಹಲವರು ಮೃತರಾದರು; ಅದಕ್ಕೂ ಹೆಚ್ಚಿನವರು ಗಾಯಗೊಂಡರು.

—ಎಯ್ಡೆಡ್ ಪ್ರಾಥಮಿಕ ಶಾಲೆಗಳ ಮನೇಜ್‌ಮೆಂಟುಗಳಿಗೆ ಮೈಂಟೆನೆನ್ಸ್ ಅಥವಾ ಕಂಪನ್‌ಸೇಶನ್ ಗ್ರಾಂಟು ಕೊಡಲು ಮೈಸೂರು ಸರಕಾರ ತಪ್ಪಿದ್ದರೆ; ಮುಂದಿನ ವರ್ಷದಿಂದ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಪುದಿಲ್ಲವೆಂದು ಮದರಾಸು ಕರ್ನಾಟಕದ ಮಕ್ಕಳ ಪತ್ರವರು ಇನ್ನು ಸುಲಭದಲ್ಲಿ ನಿರ್ಧಾರಕ್ಕೆ ಬರಬಹುದು.

೦ ೦ ೦

ಶೇಕ ಅಬ್ದುಲ್ಲಾರು ಬಿಡುಗಡೆಯಾದ ಕೂಡಲೇ ಪ್ರಧಾನಿ ನೆಹರು ಮತ್ತು ಸರ್ವೋದಯನಾಯಕ ವಿನೋಬಾ ಭಾವೆಯವರನ್ನು ಭೆಟ್ಟಿ ಮಾಡುವರು.

—ಇದಕ್ಕೆ ಮೊದಲೇ ಇವರನ್ನು ಮತ್ಯಾರೂ ಭೆಟ್ಟಿ ಮಾಡದಂತೆ ಎಚ್ಚರಿಕೆ ವಹಿಸುವುದು ಅಗತ್ಯವಾದೀತೆ?

೦ ೦ ೦ ೦

ನಾರಾಣಪುರದಲ್ಲಿ ಸುಮಾರು ನೂರು ಜನರನ್ನು ಕೊಂದು ತಿಂದ ನರಭಕ್ಷಕ ಹುಲಿಯನ್ನು ಕೊಂದವರಿಗೆ ಐದುನೂರು ರೂಪಾಯಿಗಳ ಬಹುಮಾನವನ್ನು ಸರಕಾರ ಸಾರಿದೆ.

— ನರಭಕ್ಷಕನು ನುಂಗಿದ ಪ್ರತಿಯೊಬ್ಬನ ಬೆಲೆಯು ರೂಪಾಯಿ ಐದು ಎಂದಾಯಿತೆ?

೦ ೦ ೦ ೦

☞ ದಿಲ್ಲಿಯಲ್ಲಿ ನಡೆಯುತ್ತಿರುವ ಭಾರತ-ಪಾಕ್ ಗೃಹಮಂತ್ರಿ ಸಭೆಯು ಭವಿತವ್ಯ ಶೂನ್ಯವಾಗಿದೆ ಎಂದು ಪಾಕ್ ಪತ್ರಿಕೆಗಳು ಮೊದಲೇ ಅಪ ಪ್ರಚಾರ ಪ್ರಾರಂಭಿಸಿದ್ದುವು.

— ಸರ್ವೋದಯ ಪ್ರಭೃತಿ ಜಯಪ್ರಕಾಶ ನಾರಾಯಣರೂ ಇದೇ ಮಾದರಿಯ ಅಭಿಪ್ರಾಯ ವ್ಯಕ್ತಪಡಿಸಿದರೆ, ಅದು ಅಪಪ್ರಚಾರವಲ್ಲ, ಕೇವಲ ಪ್ರಚಾರ.

ಅಭಿಪ್ರಾಯ ಮಂಡನೆ

(೫ನೇ ಪುಟದಿಂದ)

ಇದನ್ನು ಮೀರಿ, ಮರಳಿ 'ರಾಷ್ಟ್ರ ವಿಘಾತುಕ' ಚಟುವಟಿಕೆಗಳಲ್ಲಿ ಅವರು ತೊಡಗಿದರೆ ಕೆಟ್ಟ ಫಲವನ್ನು ಅವರೊಡನೆ ದೇಶವೂ ಉಣ್ಣಬೇಕಾಗಬಹುದಾದುದರಿಂದ ಅವರ ಮೇಲೆ ಹಾಗೂ ಅವರ ಚಲನವಲನ-ಕೆಲಸಕಾರ್ಯಗಳ ಮೇಲೆ ವಿಶೇಷ ದೃಷ್ಟಿಯಿಡುವುದು ಜಮ್ಮು ಮತ್ತು ಕಾಶ್ಮೀರ ಸರಕಾರದ ಕರ್ತವ್ಯ.

ಉಡುಪಿ —ಕುಮಾರ್

ಹೂವಿನ ಎಸಳನ್ನಾದರೂ.

ಕರ್ನಾಟಕ ಮಂತ್ರಿಮಂಡಳವನ್ನು ಚಿಕ್ಕದು ಮಾಡಬೇಕೆಂಬ ಸಲಹೆ ಬಂದು ಅದೀಗ ಹಳಸಿಹೋಗಿದೆ. ಇಲ್ಲಿನ ರಾಜಕೀಯ ಸ್ಥಿತಿಯಲ್ಲಿ ಅದು ಅಸಾಧ್ಯವೆಂಬ ಅಭಿಪ್ರಾಯ ಅಂದು ಬಂದಿತ್ತು. ಈಗ ದುರ್ದೈವದಿಂದ ಉಪಮಂತ್ರಿಗಳಲ್ಲಿ ಒಬ್ಬರಾದ ಶಂಸುದ್ದೀನರು ಮೃತ್ಯುಮುಖರಾದರು. ಈ ತೆರವಾದ ಸ್ಥಾನವನ್ನಾದರೂ ತುಂಬದೆ ಹೂ ಹಾಕುವಲ್ಲಿ ಎಸಳನ್ನಾದರೂ ಹಾಕಿ ಮಂತ್ರಿಮಂಡಳಿಯನ್ನು ಚಿಕ್ಕದು ಮಾಡಲು ಮುಖ್ಯಮಂತ್ರಿ ನಿಜಲಿಂಗಪ್ಪನವರು ತಯಾರಾಗಬೇಕು.

ಮುಲ್ಕಿ —ರಾಘವೇಂದ್ರ.

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ದೇಶಕ್ಕೆ ಬಂದಿದೆ ಸೆಖೆಗಾಲ

(೪ನೇ ಪುಟದಿಂದ)

"ನೀನನ್ನೋದೇನಂತೆ? ಗೊಂಗ್ಲ ಏಳೋದೆಲ್ಲಾ ಟೋಪಿಯವರಿಂದಾಂತ ಅಲ್ವೆ?'

"ಹಾಗೇನೂ ಇಲ್ಲ ಬಿಡಿ ಕೆಂಪಿನವ್ರೂ ಅದೇ ದಾರಿಗೆ ಬಂದ್ಮೇಲೆ ."

"ಅಲ್ಲಾ, ಕೆಂಪಿನವ್ರೂಂತಂದ್ರೆ, ದೇವಲೋಕದಿಂದ ಇಳಿದೋರಲ್ಲ ನೋಡು..'

"ಆದಿಲ್ಲ, ಈಗ, ಡಾಂಗೆ ಬ್ರಿಟಿಷರ ಗುಲಾಮನಾಗಿರೋದಕ್ಕೂ ಒಪ್ಪಿದ್ದಾರಂತೆ ಅಂದ್ರಲ್ಲಾ ಅದು ಹೇಗ ಗೊತ್ತಾಯ್ತೂಂತ..."

ಏನೋ, ನಲ್ವತ್ತು ವರ್ಷದ ಹಿಂದೆ ಸೈಸಂಬಾಯಿಗೊಂದು ಹಾಗೆ ಪತ್ರ ಒರ್ದಿದ್ರಾರಂತೆ "

'ಹಾಗ... ಅದ್ರೆ ನೋಡಿ, ನನಗೆ ಈಯೆಲ್ಲಾ ಕೆಂಪಿನವ್ರ ಜಗ್ಳದ್ಲ ವಿಶ್ವಾಸನೇ ಇಲ್ಲ '

"ಯಾಕೇಂತ?"

"ಏನೋ ತಂತ್ರ ಅಡಗಿರ್ಬಹುದೂಂತ'

"ಅಂದ್ರೆ ಇದೆಲ್ಲಾ ಕಪಟ ಕಲಹ .."

'ಹೌದು, ಹೌದು ರಾಕ್ಷಸನನ್ನ ಎಳೆಯೋಕೆ ಚಾಣಕ್ಯ-ಚಂದ್ರಗುಪ್ತರು ಜಗಳಾಡಿದ್ರಂತಲ್ಲಾ'

'ಹ್ಞಾಂ... ಹಾಗೆ, ಇದ್ರೂ ಇರಬಹುದು . "

"ಇರ್ಬಹುದೂ ಅಲ್ಲ, ಹಾಗೆಯೇ ಇರ್ಬೇಕು"

"ಇರ್ಲಿ ಬಿಡು .ನಮಗೇನಂತೆ?"

'ಏನಂತೇಂದ್ರೆ. ನಾವೆಲ್ಲಾ ತುಸು ವಿಚಿತ್ರನಾಗಿರ್ಬೇಕಲ್ವ?'

"ಈಗ ಹೇಗೂ ಸೆಖೆಗಾಲ ಮಲಗಿದ್ರೂ ನಿದ್ರೆ ಬರೋದಿಲ್ಲಾಂತಂದ್ಮೇಲೆ ಎಚ್ಚರವಾಗಿಯೇ ಇರ್ತೇವಪ್ಪ ."

"ದೇಶಕ್ಕೇನೇ ಈಗ ಸೆಖೆಗಾಲ ಅಲ್ವೆ?"

"ಸರೀನ್ನೆ ಒಂದ್ಕಡೆ ಚೀನಾದ ಬಿಸಿಗಾಳಿ, ಮತ್ತೊಂದೆಡೆ ಪಾಕಿಸ್ತಾನದ ಉರಿಗಾಳಿ, ಸುತ್ತಮುತ್ತ ಮಿಲಿಟರಿ ಗಾಳಿ, ಒಳಗಡೇನೂ ಉದ್ರೇಕದ ಗಾಳಿ .."

'ಹೌದ್ರಿ ಹೌದು '

ಅಂತೂ ದೇಶ ಜಾಗರವಾಗಿರ್ಬೇಕು

"ಖಂಡಿತಕ್ಕೂ "

"ಜತೆಗೆ ಹೊಟ್ಟೆಯೂ ಜಾಗ್ರತವಾಗಿದೆ. ಆದಕ್ಕೂ ನಿದ್ದೆ ಬರಿಲ್ಲ್ವದೋಂತ '

"ಅಯ್ಯಯ್ಯ ನೀವೆ? ಸರಿಯಾಗಿ ಬಾಯ್ಬಿಟ್ಟು ಹೇಳಿ .. ಹೊಟ್ಟೆ ಹಸಿಯುತ್ತೇಂತ "

"ಕುರಿ ಬೋದ ದೆಯು ಂ ಕಾವ್ಯ ಪ್ರಯೋಗ ಪರಿಣತ ಮತಿಯಾದ ನೀನು ಕಣೇ ."

ನಗೆಗಡಲು

ಮೀನುಗಳೆಲ್ಲ .

ನದಿಯೊಂದರ ದಡಕ್ಕೆ ಬರುತ್ತಲೇ ಸಹೀಬನಿಗೆ ಆ ನಿರ್ಮಲ ನೀರನ್ನು ಕಂಡು ಸ್ನಾನಮಾಡುವ ಆಶೆಯಾಯಿತು. ಎಂತಲೇ ಆತನು ಸಮೀಪದ ಗುಡಿಸಲಲ್ಲಿದ್ದ ಅಂಬಿಗನನ್ನು ಕರೆದು ಕೇಳಿದ.

"ತಮ್ಮಾ' ಈ ನದೀತೀರದಲ್ಲಿ ಮೀಯಬೇಕೆಂದಿದ್ದೇನೆ. ನೀರಿನಲ್ಲಿ ದೊಡ್ಡ ದೊಡ್ಡ ಮೀನುಗಳಿಲ್ಲ ತಾನೆ?'

"ಅಂಬಿಗನು ನಿಸ್ಸಂಕೋಚವಾಗಿಯೇ ಉತ್ತರಿಸಿದ—"ಇಲ್ಲ ಸ್ವಾಮಿ, ಬೇಕಾದುದು ತೆ ಸ್ನಾನ ಮಾಡಿ ಇದರಲ್ಲಿದ್ದ ದೊಡ್ಡ ಮೀನುಗಳನ್ನು ಮೊಸಳೆಗಳು ಎಂದೋ ತಿಂದುಬಿಟ್ಟಿವೆ "

ನಿರುಪಾಯ

ಆರೋಪಿಗೆ ಅಡ್ಡ ಸವಾಲು ಹಾಕುತ್ತಾ ನ್ಯಾಯಾಧೀಶರು ಪ್ರಶ್ನಿಸಿದರು.

ಹೇಗಾದರೆ, ನೀನು ಒಂದೇವಾರದಲ್ಲಿ ಒಂದೇ ಅಂಗಡಿಯಿಂದ ಮೂರು ಬಾರಿ ಕಳವುಮಾಡಿದೆ '

"ಮತ್ತೇನು ಮಾಡುವುದು ಸ್ವಾಮಿ, ಆ ರಸ್ತೆಯಲ್ಲಿ ಅದೊಂದೇ ಅಂಗಡಿಯಿದೆ '-ಆರೋಪಿ ನಿರುಪಾಯತೆಯನ್ನುವ್ಯಕ್ತ ಪಡಿಸಿದ

ಕೊಲೆಯಲ್ಲ, ಸೆರೆ

ಮೇಜರ್ ಜನರಲನೊಬ್ಬ ತನ್ನ ಸೈನಿಕ ಬಂಧುಗಳಿಗೊಂದು ಔತಣವೇರ್ಪಡಿಸಿದ ಅನಂತರ ಶಾಂಪೇನ್ ಬಾಟಲಿಗಳು ಮುಂದ ಬಂದುವು. ಅವನೆಂದ—'ಮಿತ್ರರೇ, ಶತ್ರುಗಳ ಮೇಲೆ ದಾಳಿ ಮಾಡುವಂತೆ ಇವನ್ನು ಮುತ್ತಿರಿ."

ತುಸುಸಮಯದನಂತರ ಒಬ್ಬ ಅಧಿಕಾರಿಯು ಶಾಂಪೇನಿನ ಬಾಟ್ಲಿಯೊಂದನ್ನು ಕೋಟಿನ ಕಿಸೆಗೆ ತುರುಕಿಸುವುದು ಕಂಡೇ ಬಂತು ಜನರಲ್ಲನು ಪ್ರಶ್ನಿಸಿದನು—"ಇದೇನು ಮಾಡುತ್ತಿದ್ದೀಯೋ"

"ಕೊಲಲಾಗದ ಶತ್ರುವನ್ನು ಸೆರೆಹಿಡಿಡಿಯುತಿದ್ದೇನೆ ಬುದ್ಧಿ"—ಉತ್ತರ ಕೂಡಲೇ ಬಂತು

ಸುಖ ಜೀವಿಗಳು

ಒಬ್ಬ—ಕೋಳಿಯು ಹೊಟ್ಟೆಯಿಂದ ಬೆಂದ ಮೊಟ್ಟೆಯೇ ಹೊರ ಬರುತ್ತಿದ್ದರೆ ನಮಗೆ ಬೇಯಿಸುವ ಕಷ್ಟವೇ ಇರುತ್ತಿರಲಿಲ್ಲ.

ಇನ್ನೊಬ್ಬ-ನಮ್ಮ ಹೊಟ್ಟೆಯಲ್ಲಿಯೇ ಕೋಳಿಯ ಮೊಟ್ಟೆ ಇರುತ್ತಿದ್ದರೆ ತಿನ್ನುವ ಕಷ್ಟವೂ ಇರುತ್ತಿರಲಿಲ್ಲ

ಮರ್ಯಾದೆಗೆ ಕುಂದು

ಸಂಗೀತದ ಕಾರ್ಯಕ್ರಮ ನಡೆಯುತಿತ್ತು ಒಂದು ತಾಸಿನ ಆಲಾಪನೆಯಾದ ಬಳಿಕ ಸಭಾ ಸಂಯೋಜಕರು ವೈಕಿನ ಮುಂದೆ ನಿಂತು ನೋಡಿದರು ಸಜ್ಜನರೇ ಮತ್ತು ದೇವಿಯರೇ, ತಾವು ಇಷ್ಟರವರೆಗೆ ಇಲ್ಲಿ ಆಸೀನ ಧೈರ್ಯ ಮತ್ತು ಶಾಂತಿಯಿಂದ ಕುಳಿತು ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದ್ದೀರಿ. ಅದಕ್ಕಾಗಿ ದನ್ಯವಾದಗಳು ಈಗ ಕಲಾವಿದರು ಸಂಗೀತವನ್ನು ತೊಡಗುತ್ತಾರೆ ಒಂದು ವೇಳೆ ನಿಮಗೆ ನಿದ್ದೆ ಬರುವುದಾದರೆ, ಕುಳಿತಲ್ಲಿಯೇ ಮಲಗಿಬಿಡಿ, ಎದ್ದು ಹೋಗಬೇಡಿರಿ ಸಂಗೀತದ ವೇಳೆ ನಮ್ಮ ನಾಗರಿಕರಿಗೆ ಬಹಳ ಶ್ರದ್ಧೆಯಿದೆಯೆಂಬ ಮರ್ಯಾದೆಗೆ ಕುಂದನ್ನು ತರಬೇಡಿರೆಂದು ಎರಡೂ ಕೈಮುಗಿದು ನಿಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ''

ಪ್ರತ್ಯುತ್ಪನ್ನಮತಿತ್ವ

ಒಂದು ವಿರೋಧಿ ರಾಜಕೀಯದಳವು ವಿಶಾಲ ವಿರೋಧ ಸಭೆಯೊಂದನ್ನು ಕರೆದಿತ್ತು ಅದರಲ್ಲಿ ಭಾಷಣಮಾಡಲಿದ್ದ ಮಹಾ ಮಹಾ ಪ್ರಭೃತಿಗಳ ಹೆಸರನ್ನು ಕೇಳಿಯೇ ದೊಡ್ಡ ಸಂಖ್ಯೆಯಲ್ಲಿ ಜನರು ನೆರೆದಿದ್ದರು ಆದರೆ, ಸಭಾಸಂಯೋಜಕರು ಮತ್ತು ಭಾಷಣಕರಿಗೆ ಯಾವುದನ್ನು ಅಥವಾ ಯಾರನ್ನ ವಿರೋಧಿಸಬೇಕೆಂದು ಮರೆತುಹೋಯಿತು ಆದರೂ ಪ್ರತ್ಯುತ್ಪನ್ನಮತಿಗಳಾದ ಅವರು ತಮ್ಮ ಅಧ್ಯಕ್ಷರನ್ನೇ ವಿರೋಧಿಸಿ ಪ್ರಚಂಡ ಭಾಷಣ ಮಾಡಿ ಬಹಳಷ್ಟು ಕಳೆಕಟ್ಟು ಕೊಂಡರು

ಸಮಾಸಮಸ್ಯೆ

"ನಾನು ಹುಡುಗನಿದ್ದಾಗ ತಂದೆ ಹೇಳಿದ ಕೆಲಸವನ್ನೇ ಮಾಡುತಿದ್ದೆ, ಈಗ ನಾನೇ ತಂದೆಯಾಗಿದ್ದೇನೆ, ಆದರೆ ನನ್ನ ಸಣ್ಣ ಮಕ್ಕಳು ಬಯಸಿದ್ದಂತೆಯೇ ಕೆಲಸ ಮಾಡುತ್ತೇನೆ ನನ್ನ ಮುಂದೆ ಒಂದೇ ಒಂದು ಸಮಸ್ಯೆ ನನಗೆ ಬೇಕಾದುವನ್ನು ನಾನು ಯಾವಾಗ ಮಾಡಿಕೊಳ್ಳಲಿ?"—ಎಂದೊಬ್ಬ ಸುಸಂಸ್ಕೃತ ನಾಗರಿಕ ಗೊಣಗಿಕೊಂಡನಂತೆ

ಕುರೂಪಿಯೇನು?

ಸ್ವರ್ಗೀಯ ಪೋಪ್ ಜಾನ್ ಅಧಿಕಾರ ಸ್ವೀಕರಿಸಿದ ಮೊದಲು ವೆಟಿಕನ್‌ನ ಉದ್ಯಾನಪ್ರಾಂತಕ್ಕೆ ತಿರುಗಾಡಲು ಬಂದರು ಆಗ, ಅಪರಿಚಿತನನರನ್ನು ಹೊರಕಳುಹಿಸುತ್ತಿರುವುದನ್ನು ಕಂಡು ಕಾರಣ ಕೇಳಿದರು ಅಂಗರಕ್ಷಕನೆಂದನು. "ಇಲ್ಲನಾದರೆ ಅವರೆಲ್ಲರೂ ತಮ್ಮನ್ನು ನೋಡುತಾರೆ ತಂದೆ' ಆಗ ಪೋಪ್ ಸವಾಲು ಹಾಕಿದರು "ಅಂದರೆ ಯಾರೂ ನೋಡಬಾರದಷ್ಟು ಕುರೂಪಿಯಾಗಿರುವೆನೇ ನಾನು?"

— ಗೋರಾ

"ಇಲ್ಲಿ ಉದರವೂ ಜಾಗ್ರತವಿದ್ರೆ ಕೆಲ್ಸ ಹೇಗೆ ನಡೀಬೇಕ ? ಹೋಗಿ ಕೈಕಾಲ್ತೊಳ್ಕೊಂಡು ಬನ್ನಿ ಬೇಗ .'

"ತಯಾರಿದ್ದೇನಮ್ಮಾ ಅದ್ಕೆ. '

"ತಯಾರಿದೆ ಎಲ್ಲಾ ಬೇಗ ಬನ್ನಿ ಮತ್ತೆ ..."

"ಮತ್ತೆಗಿತ್ತೇನಿಲ್ಲ ಈಗ್ಲೆ ಬಂದ್ಬಿಟ್ಟೆ '

"ಮತ್ತೇನು ಮಾಡೋದು?

— ಗೋರಾ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ. ರೂ ಎರಡು ಉತ್ತಮ ಪ್ರತಿ ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ:ರೂ 1-4-0 (1-25)

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹಿಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ
ವಾರ್ಷಿಕ ಚಂದಾ ರೂ. ೧೦.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಗಳು
ಫಾರ್ಮುಗಳು
ದೊರೆಯುತ್ತವೆ
ನವಯುಗ ಪ್ರೆಸ್, ಉಡುಪಿ

ನವಭಾರತ ನಿರ್ಮಾಣ

ಕಾಂಡ್ಲಾ ಮಹಾಬಂದರು



ಕಾಂಡ್ಲ ಬಂದರದ ಸುಂದರ ನೋಟ

ಸ್ವಾತಂತ್ರ್ಯಾನಂತರ ಭಾರತವು ಕಟ್ಟಿದ ಪ್ರಬುದ್ಧ ಬಂದರುಗಳಲ್ಲಿ ಕಾಂಡ್ಲಾ ಒಂದು. ಇದು ಮುಖ್ಯ ಬಂದರುಗಳಲ್ಲಿ ಒಂದಾಗಿ ಬೆಳೆದು ನಿಂತಿದೆಯೆಂದು ಈ ಬಂದರದ ಆಡಳಿತೆಯನ್ನು ನಿರ್ವಹಿಸಲು ಅಸ್ತಿತ್ವಕ್ಕೆ ಬಂದಿದೆ ಸ್ವಯಮಾಧಿಕಾರವುಳ್ಳ ವಿಶ್ವಸ್ಥ ಮಂಡಳವೊಂದು

ಕಾಂಡ್ಲಾ ಬಂದರಿನ ಸರಕು ಸಾಗಣೆಯ ಪರಿಮಾಣವು ವರ್ಷದಿಂದ ವರ್ಷಕ್ಕೆ ಏರುತ್ತಿದೆ ೧೯೬೨-೬೩ರಲ್ಲಿ ೧೬.೪೩ ಲಕ್ಷ ಟನ್‌ಗಳ ಸರಕು ಈ ಬಂದರಿನ ಮೂಲಕ ಸಾಗಿಸಲ್ಪಟ್ಟವು.

೧೯೩೧ರಲ್ಲಿ ಕಚ್ ಸಂಸ್ಥಾನದ ಅರಸರು ಕಾಂಡ್ಲಾವನ್ನು ಒಂದು ಚಿಕ್ಕ ಬಂದರವಾಗಿ ಕಟ್ಟಲು ನಿರ್ಣಯಿಸಿದರು ಆಗ ಅಲ್ಲಿ ಬಂದರು ಕಟ್ಟೆ (ಪಿಯರ್) ಒಂದನ್ನು ಮಾತ್ರ ಕಟ್ಟಲಾಯಿತು ಆ ಸಮಯದಲ್ಲಿ ಈ ಚಿಕ್ಕ ಬಂದರು ಮೂವತ್ತು ವರ್ಷಗಳಲ್ಲಿ ಭಾರತದ ಪ್ರಮುಖ ಬಂದರುಗಳಲ್ಲಿ ಆರನೆಯ ಸ್ಥಾನ ಪಡೆಯುವುದೆಂದು ಯಾರು ನಂಬಿದ್ದರು? ಅಥವಾ ಊಹಿಸಿದ್ದರು? ಉತ್ತರ ಗುಜರಾಥ, ರಾಜಸ್ಥಾನ, ಉತ್ತರ ಪ್ರದೇಶದ ಪಶ್ಚಿಮ ಭಾಗ, ಪಂಜಾಬ ಮತ್ತು ಜಮ್ಮೂ-ಕಾಶ್ಮೀರಗಳ ಸರಕು ಸಾಗಾಣಿಕೆಯು ಭಾರತ ಉಪಖಂಡ ವಿಭಜನೆಗೆ ಮೊದಲು ಕರಾಚಿಯ ಮೂಲಕವೇ ನಡೆಯುತಿತ್ತು. ದೇಶ ವಿಭಜನೆಯಾಗಿ ಕರಾಚಿಯು ಪಾಕಿಸ್ತಾನಕ್ಕೆ ಹೋದ ಬಳಿಕ ಭಾರತದಲ್ಲುಳಿದ ಭಾಗಕ್ಕೊಂದು ಬಂದರ ಅವಶ್ಯವಾಯಿತು ಇದಕ್ಕೆಂದೇ ಕಾಂಡ್ಲಾದ ಭಾಗ್ಯದ ಬಾಗಿಲು ತೆರೆಯಿತು

ಕಾಂಡ್ಲಾ ಮತ್ತು ಅಹಮ್ಮದಾಬಾದಗಳ ನಡುವೆ ಬ್ರಾಡ್ ಗೇಜು ರೇಲುದಾರಿಯನ್ನು ಹಾಕುವುದರಿಂದ ಈ ಬಂದರು ಮತ್ತೂ ಹೆಚ್ಚಿನ ಆಯಾತ ನಿರ್ಯಾತಗಳನ್ನು ಸಾಧಿಸಬಲ್ಲುದು. ಕಾಂಡ್ಲಾದ ನೈಸರ್ಗಿಕ ಪರಿಸ್ಥಿತಿ ಅಲ್ಲಿರುವ ನೀರಿನ ಆಳ ಎಲ್ಲವೂ ಸರಕುಗಳನ್ನು ಹಡಗಿಗೆ ತುಂಬುವುದಕ್ಕೂ ಇಳಿಸುವುದಕ್ಕೂ ಅನುಕೂಲವಾಗಿದೆ

ಕಾಂಡ್ಲಾದ ನೈಸರ್ಗಿಕತೆಯ ಅನುಕೂಲತೆಯನ್ನು ಕಂಡುಕೊಂಡ ಭಾರತ ಸರಕಾರವು ಅದನ್ನ ಮಹಾ ಬಂದರೆಂದು ರೂಪಿಸಲು ನಿರ್ಧರಿಸಿತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ನಿರ್ಮಾಣ ಕಾರ್ಯವು ಆರಂಭವಾಯಿತು ಪ್ರಾರಂಭದಲ್ಲಿ ಆಳವಾದ ಸಂಕಿನ ಕಟ್ಟೆ, ಎಣ್ಣೆ ಹೇರುವ ಮತ್ತು ಇಳಿಸುವ ಕಟ್ಟೆ, ಪ್ರಯಾಣಿಕರ ಕಟ್ಟೆ ಹಾಗೂ ಶೇಖರಣೆ ಕಟ್ಟೆಗಳನ್ನೂ ಅವುಗಳಿಗೆ ಸಂಬಂಧಿಸಿದ ಇತರ ಕಾಮಗಾರಿಗಳನ್ನೂ ೧೪.೨೨ ಕೋಟಿ ರೂಪಾಯಿಗಳ ವೆಚ್ಚದಿಂದ ಕೈಗೊಳ್ಳಲಾಯಿತು ೧೯೫೭ರ ಮಧ್ಯದಲ್ಲಿಯೇ ಬಂದರವನ್ನು ಹಡಗಗಳಿಗೆ ತೆರೆದಿಡಲಾಯಿತು

ಇಂದು ಕಾಂಡ್ಲಾ ಬಂದರದಲ್ಲಿ ಸಾಮಾನ್ಯ ಗಾತ್ರದ ಐದು ಹಡುಗುಗಳು ಒಂದು ಬಾರಿ ಬಂದು ತಂಗಬಹುದು, ಜತೆಗೆ ಒಂದು ಸಣ್ಣ ಹಡಗೂ ನಿಲ್ಲಬಲ್ಲುದು

ಅತ್ಯಗತ್ಯವಾದ ಎಲ್ಲಾ ಸೌಕರ್ಯಗಳು ಕಾಂಡ್ಲಾ ಬಂದರದಲ್ಲಿವೆ ಬಂದರದಲ್ಲಿ ಹೊಸ ಚೇತನ ಮೂಡುತ್ತಿರುವಂತೆಯೇ ಅಲ್ಲಿ ಗಾಂಧಿಧಾಮವೆಂಬ ಹೊಸನಗರವೊಂದು ರೂಪಗೊಳ್ಳುತ್ತಿದೆ, ಸುಮಾರು ೩೫ ಸಾವಿರ ಜನಸಂಖ್ಯೆಯುಳ್ಳ ಈ ನಗರದಲ್ಲಿ ವಿಮಾನ ನಿಲ್ದಾಣವೂ ಇರುವುದು ವಾರದಲ್ಲಿ ಮೂರು ವಿಮಾನ ಸೇವೆಯು ಇಲ್ಲಿಗೆ ಮುಂಬಾಯಿಯಿಂದಿದೆ

ಕಾಂಡ್ಲಾದಲ್ಲಿ ಕೈಗಾರಿಕೆಗಳೂ ಬೆಳೆದು ಬರುತ್ತಿವೆ ಭಾರತದ ಮೊತ್ತಮೊದಲಿನ ಪಾರ್ಮಾಲ್ಡಿಹೈಡ್ ತಯಾರಿಸುವ ಕಾರ್ಖಾನೆಯು ಈಗಾಗಲೇ ಉತ್ಪಾದನೆ ತೊಡಗಿದೆ ಅದು ದಿನಕ್ಕೆ ೪೦ ಟನ್‌ಗಳಷ್ಟು ಉತ್ಪಾದನಾ ಸಾಮರ್ಥ್ಯ ಪಡೆದಿದೆ ಕಾಂಡ್ಲಾದಲ್ಲಿ ದೊರೆಯುವ ಮೀನುಗಳನ್ನು ಸಂಸ್ಕರಿಸಿ ಡಬ್ಬದಲ್ಲಿ ತುಂಬಿಸುವ ಕೆಲಸವನ್ನು ಅಲ್ಲಿನ ಒಂದು ಕಾರಖಾನ ಆರಂಭಿಸಿದೆ ಉಪ್ಪು ತಯಾರಿಸುವ ಕಾರಖಾನೆಗಳೂ ಅಲ್ಲಲ್ಲಿ ತಲೆಯೆತ್ತುತ್ತಿವೆ ಈ ಪ್ರದೇಶದಲ್ಲಿ ಅನಿರ್ಬಂಧಿತ ವಾಣಿಜ್ಯ ವಲಯವನ್ನು ಸ್ಥಾಪಿಸುವ ನಿರ್ಣಯವಾಗಲೇ ಆಗಿರುವುದರಿಂದ ಈ ಕ್ಷೇತ್ರದಲ್ಲಿ ಮತ್ತು ಅಕ್ಕಪಕ್ಕದಲ್ಲಿ ತ್ವರಿತಗತಿಯ ಔದ್ಯೋಗೀಕರಣವಾಗುವುದು ಸಾಧ್ಯವಿದೆ.

ಸ್ವತಂತ್ರ ಭಾರತದ ಪುನಾರಚನಾ ಕಾರ್ಯವು ಹೇಗೆ ಸಾಗುತ್ತಿದೆಯೆಂಬುದಕ್ಕೆ ಕಾಂಡ್ಲಾ ಮಹಾ ಬಂದರೊಂದು ಉಜ್ವಲ ನಿದರ್ಶನವಾಗಬಲ್ಲುದು. ಭಾರತದ ವ್ಯಾಪಾರ- ವಹಿವಾಟುಗಳಿಗೊಂದು ಉತ್ತಮ ಮಾಧ್ಯಮವಾಗಿ ನಿಂತಿದೆ ಕಾಂಡ್ಲಾ



ಬಂದರದಲ್ಲಿ ತಂಗಿದ ಹಡಗ



ಸಂಪಿನ ನಾಳಕ ಹಡಗೊಂದರಿಂದ ಆಹಾರಧಾನ್ಯಗಳನ್ನು ಇಳಿಸುತ್ತಿರುವುದು.

ವಿವೇಚನೆ

ಪುನರ್ಜನ್ಮ ಇದೆಯೆ? ಏಕೆ?

ಲೇಖಕರು: ಶ್ರೀ ಉ. ಜೈ ಭಾಸ್ಕರಾಚಾರ್ಯ.

ಮಾನವನು ಜೀವನದಲ್ಲಿ ಕರ್ಮವನ್ನು ಮಾಡಿ ಅದರ ಫಲಾಫಲಗಳನ್ನನುಭವಿಸುತ್ತಾನೆ. ನಾವು ಅನುಭವಿಸುವುದೆಲ್ಲವೂ ಕರ್ಮಫಲವೇ ಸರಿ, ಜೀವತ್ವ ಪ್ರಾಪ್ತಿಯೂ ಕರ್ಮಫಲ ರೂಪವೆಂದಾಗುವಲ್ಲಿ ಜನ್ಮಪ್ರಾಪ್ತಿಯೂ ಕರ್ಮಫಲವೆಂದು ಹೇಳಬಹುದು. ಆಯಾ ಯೋನಿಯಲ್ಲಿ, ಆಯಾ ಜಾತಿಯಲ್ಲಿ ಒಂದೊಂದು ವೈಶಿಷ್ಟ್ಯದಿಂದ ಪ್ರಾಪ್ತವಾಗುವ ಜನ್ಮವೂ ಈ ಜನ್ಮದಲ್ಲಿ ಜರಗಿದ ಕರ್ಮಫಲವಾಗಿರದೆ ಹಿಂದಿನ ಕರ್ಮಫಲ ರೂಪಕವಾದುದೆಂದು ವಿವೇಚಿಸಬಹುದು. ಜಗತ್ತಿನಲ್ಲಿ ಕಂಡು ಬರುವ ವೈವಿಧ್ಯ ಹಾಗೂ ವೈಚಿತ್ರ್ಯಗಳಿಗೆ ಅವುಗಳ ಹಿಂದಿನ ವಿಭಿನ್ನ ಕರ್ಮಗಳೇ ಕಾರಣ. ವಿವಿಧ ಜಾತಿಯ ಜನ್ಮದಂತೆ ಜನ್ಮಾರಭ್ಯ ಇದ್ದ ವೈಗುಣ್ಯಕ್ಕೂ ವೈಶಿಷ್ಟ್ಯಕ್ಕೂ, ಜೀವನದಲ್ಲಿ ಕಂಡು ಬರುವ ಅಕಾರಣ ವೈರಕ್ಕೂ ಅಕಾರಣ ಪ್ರೇಮಕ್ಕೂ ಅಪ್ರಯತ್ನವಾಗಿ ಬರುವ ಸುಖ ದುಃಖಗಳಿಗೂ, ಹಾನಿ ಲಾಭಗಳಿಗೂ ಪ್ರಸ್ತುತ ಜನ್ಮ ಕರ್ಮವು ಕಾರಣವಾಗದಿರುವುದರಿಂದ ಇಂತಹ ಅನುಭವಗಳಿಗೆ ಹಿಂದಿನ ಜನ್ಮ ಕರ್ಮವೇ ಕಾರಣವೆಂದು ನಿಶ್ಚಯಿಸಬಹುದು. ಜನ್ಮವೆತ್ತಿದ ಮೇಲೆ ಆದ ಕರ್ಮವು ಮುಂದಿನ ಜನ್ಮಕ್ಕೆ ಕಾರಣವಾಗುವಂತೆ ಪ್ರಸ್ತುತ ಜನ್ಮಕ್ಕೆ ಗತ ಜನ್ಮದ ಕರ್ಮವು ಹೇತುವಾಗಿರುವುದು. ಹಿಂದಿನ ಜನ್ಮದ ಕರ್ಮಫಲ ಈ ಜನ್ಮಕ್ಕೆ, ಈ ಜನ್ಮದ ಕರ್ಮಫಲ ಮುಂದಿನ ಜನ್ಮಕ್ಕೆ, ಆ ಜನ್ಮ ಕರ್ಮಫಲ ಅದರ ಮುಂದಿನ ಜನ್ಮಕ್ಕೆ ಅನುಭಾವ್ಯವಾಗುವುದು. ಈ ಪ್ರಕಾರ ಜನ್ಮ ಪರಂಪರೆ ತಪ್ಪದೆ ಉಂಟಾಗಿ, ವಿಶಿಷ್ಟ ಫಲವನ್ನನುಭವಿಸುವ ಇಚ್ಛೆಯಿಂದ ಎಷ್ಟರವರೆಗೆ ಆಯಾ ಕರ್ಮವನ್ನೆಸಗುವ ಪ್ರವೃತ್ತಿ ಇರುವುದೋ ಅಷ್ಟರವರೆಗೆ ಅದರ ಫಲವನ್ನನುಭವಿಸಲು ಜನ್ಮವು ಅಪರಿಹಾರ್ಯವಾಗಿರುತ್ತದೆ. ಅನುಭವಿಸಿ ತೀರಿಹೋಗದ ಕರ್ಮವು ತನ್ನ ಫಲವನ್ನು ಕೊಟ್ಟೇ ಕೊಡುವುದೆಂದಾಗುವಲ್ಲಿ ಈ ಜನ್ಮದಲ್ಲಿ ಮಾಡಿದ, ಅನುಭವಿಸಿದ ಕರ್ಮವನ್ನುಣ್ಣಲು ಬರುವ ಮುಂದಿನ ಜನ್ಮವು ತಪ್ಪುವಂತಿಲ್ಲ. ವಾಂಛಿತ ಕರ್ಮಫಲವು ಈ ಜನ್ಮದಲ್ಲಿ ಅನುಭಾವ್ಯವಾಗದೆಂದಲ್ಲಿ, ಅದನ್ನು ಅನುಭವಿಸಲು ಮುಂದಿನ ಜನ್ಮವೆತ್ತಿಯೇ ತೀರಬೇಕು. ಬರವಣಿಗೆಯು ಶೇಷವಾಗಿ ಉಳಿದರೆ ಮಲಗಿ ಎದ್ದ ಮೇಲೆ ಪೂರ್ತಿ ಮಾಡುವಂತೆ ನಿದ್ರಾರೂಪವಾದ ಮರಣವಿಸ್ಮೃತಿಯಲ್ಲಿ ಕೆಲಕಾಲ ಕಳೆದು, ಪೂರ್ವ ಜನ್ಮದ ಅಪೂರ್ಣ ವಾಸನೆಯ ನಿವೃತ್ತಿಗಾಗಿ ಮುಂದಿನ ಜನ್ಮದಲ್ಲಿ ಕರ್ಮಗಳನ್ನೆಸಗಿ ತೀರಬೇಕು.

ವಿಶಿಷ್ಟ ಫಲಕ್ಕಾಗಿ ಹೇಗೆ ವಿಶಿಷ್ಟ ಕರ್ಮವನ್ನು ಆಚರಿಸಬೇಕೋ ಹಾಗೆ ಆ ಕರ್ಮಫಲವನ್ನು ಉಣ್ಣಲೂ ವಿಶಿಷ್ಟ ಕರ್ಮವನ್ನು ಎಸಗಬೇಕಾಗುವುದು. ಸಾಧನವೂ ಫಲಭೋಗವೂ ಕರ್ಮಗಳೇ. ಅನೇಕ ವಾಸನೆಗಳಿಂದ ಕರ್ಮಗಳನ್ನು ಮಾಡುತ್ತಲಿರುವ ಜೀವಿಗೆ ಕರ್ಮಫಲದ ವಾಸನೆಯು ನಿವಾರಣೆಯಾಗುವ ವರೆಗೆ ಜನ್ಮವು ಹೇಗೆ ತಾನೆ ಅಪರಿಹಾರ್ಯ? ಒಟ್ಟು ಬಾಹ್ಯ ಪದಾರ್ಥಗಳ ಸಂಗಡ ಇಂದ್ರಿಯಗಳ ಸಂಯೋಗವಾಗಿ ಆಗುವ ದೇಹ ಸುಖದ ವಾಸನೆಯಿಂದ ಮಾಡಿದ ಕರ್ಮಕ್ಕೆ ಫಲರೂಪವಾಗಿ ಈ ಜನ್ಮವು ಪ್ರಾಪ್ತಿಯಾಗಿರುವಂತೆ ಆ ವಾಸನೆಯು ಅಸ್ತಿತ್ವದಲ್ಲಿರುವ ವರೆಗೂ ಒಂದು ಜನ್ಮ ಕಳೆದು ಮತ್ತೊಂದು ಜನ್ಮವನ್ನು ಪಡೆಯುತ್ತಲೇ ಇರಬೇಕಾಗಿದೆ. ಪಂಚಭೂತಾತ್ಮಕ ದೇಹವು, ಪಂಚಭೂತಗಳಲ್ಲಿ ಕರಗಿ ಹೋದರೂ, ಆ ವಾಸನೆಯು ಮತ್ತೊಂದು ದೇಹವನ್ನು ಧರಿಸುವುದು. ಬಟ್ಟೆಯನ್ನು ಉಪಯೋಗಿಸಬೇಕೆಂಬ ವಾಸನೆಯಿರುವ ವರೆಗೆ ಹರಿದ, ಹಳತಾದುದನ್ನು ತ್ಯಜಿಸಿ ಹೊಸದಾದ ಬೇರೊಂದನ್ನು ಧರಿಸುವಂತೆ ದೇಹ ಸುಖವನ್ನನುಭವಿಸಬೇಕೆಂಬ ವಾಸನೆಯಿರುವ ವರೆಗೆ ಜೀರ್ಣ ದೇಹವನ್ನು ತ್ಯಜಿಸಿ ಹೊಸದೊಂದನ್ನು ಪಡೆಯುತ್ತಾನೆ. ಮನಸ್ಸಿಗೆ ತೃಪ್ತಿಯಾಗದಿದ್ದಲ್ಲಿ ಮಾಡಿದ ಬೊಂಬೆಯನ್ನು ನಷ್ಟಪಡಿಸಿ, ಮನಸ್ಸೊಪ್ಪುವ ಬೇರೊಂದನ್ನು ಆ ಮಣ್ಣಿನಿಂದ ಸಿದ್ಧಪಡಿಸುವಂತೆ, ಪಂಚಭೂತದಲ್ಲಿ ಲೀನವಾದ ದೇಹವನ್ನು ಬಿಟ್ಟು, ಇನ್ನೊಂದನ್ನು ಆ ಪಂಚಭೂತಗಳಿಂದಲೇ ಸಿದ್ಧಪಡಿಸಲಾಗುತ್ತದೆ.

ಶ್ರು|| ಅಥೋ ಖಲ್ವಾಹುಃ ಕಾಮಮಯ ಏವಾಯಂ
ಪುರುಷ ಇತಿ| ಸ ಯಥಾ ಕಾಮೋ ಭವತಿ
ತತ್ಕ್ರತುರ್ಭವತಿ| ಯತ್ಕ್ರತುರ್ಭವತಿ ತತ್ಕರ್ಮ
ಕುರುತೇ, ಯತ್ಕರ್ಮ ಕುರುತೇ ತದಭಿಸಂಪದ್ಯತೇ|| (ಬೃ. ಅ. ೪ ಬ್ರಾ ೫.)

ಜೀವಿಯು ವಾಸನಾಮಯವಿರುವುದು, ಸಂಸ್ಕಾರದ ಪ್ರಕಾರ ಆಯಾ ಸುಖದ ಭಾವನೆಯಲ್ಲಿ ನಿಶ್ಚಯವು ಹುಟ್ಟುವುದು. ಇದೇ ವಾಸನೆಯೆಂದೆನಿಸುವುದು. ಈ ವಾಸನೆಯಂತೆ ಅದರದರ ಪ್ರಾಪ್ತಿಗಾಗಿ ಆಯಾ ಕರ್ಮವನ್ನು ಅನುಷ್ಠಾನ ಮಾಡುತ್ತಾನೆ. ಯಾವ ಕರ್ಮವನ್ನು ಮಾಡುತ್ತಾನೋ, ಅದರ ಫಲವನ್ನುಣ್ಣುತ್ತಾನೆ.

ಶ್ರು|| ಅಥಾಕಾಮಯಮಾನೋ ಯೋಽಕಾಮೋ ನಿಷ್ಕಾಮಃ
ಆಪ್ತಕಾಮೋ ನ ತಸ್ಯ ಪ್ರಾಣಾ ಉತ್ಕ್ರಾಮಂತಿ
ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ||
(ಬೃ. ೪-೪-೬)

ಯಾವಾತನಿಗೆ ದೇಹವನ್ನು ಧರಿಸಿ ಬಾಹ್ಯಾರ್ಥಗಳ ಸುಖವನ್ನು ಅನುಭವಿಸುವ ಇಚ್ಛೆ ಇರದೋ ಅಂಥ ಅಕಾಮನು, ನಿಷ್ಕಾಮನು, ಆಪ್ತಕಾಮನು ಆತ್ಮಕಾಮನ ಪ್ರಾಣಗಳು ದೇಹದಿಂದ ಹೊರ ಹೊರಡವು, ಆ ಆತ್ಮ ಸುಖದಿಂದ ತೃಪ್ತಿಗೊಂಡವನು ಬ್ರಹ್ಮರೂಪನೇ ಆಗಿ, ದೇಹಪಾತದ ನಂತರ, ಇಲ್ಲಿಯೇ ಬ್ರಹ್ಮನಲ್ಲಿ ಐಕ್ಯವಾಗುವನು ಅರ್ಥಾತ್ ಬ್ರಹ್ಮವೇ ಆಗುವನು ಎಂದು ಶ್ರುತಿ ವಾಕ್ಯವಿದೆ.

'ಆ ಬಸ್ಸು

(೨ನೇ ಪುಟದಿಂದ)

ವರೆಯ ಹೆಸರು 'ವೀಣಾ' ಅವಳು ಹೋಗುತ್ತಿದ್ದುದು ೩ ಮೈಲು ದೂರದ ಬೋರ್ಡ್ ಹೈಸ್ಕೂಲಿಗೆ. ಅಲ್ಲಿ ೯ನೇ ತರಗತಿಯಲ್ಲಿ ಕಲಿಯುವುದು. ಮುಂದೆ ಕಾಲೇಜ್ ವಿದ್ಯಾಭ್ಯಾಸದ ಯೋಜನೆ. ಮನೆಯವರು ಅಷ್ಟು ಶ್ರೀಮಂತರೇನಲ್ಲ. ಅವಳು ಬೆಳಗ್ಗೆ ಹೋಗುವಾಗಲೇ ಮಧ್ಯಾಹ್ನದ ಆಹಾರಕ್ಕಾಗಿ ಏನಾದರೂ ಕೊಂಡೊಯ್ದು ಸಂಜೆ ಪುನಃ ಮನೆಗೆ ಬರುತ್ತಿದ್ದಳು."

ಸೀತಾರಾಮನಿಗೆ ಅವಳ ಸೀತನ, ವಿದ್ಯೆ ಒಂದೂ ಬೇಕಿರಲಿಲ್ಲ. ಅವನು ಇಚ್ಛಿಸಿದುದು ಒಂದೇ. ಆ ರೂಪರಾಶಿಯನ್ನು ತನ್ನದನ್ನಾಗಿ ಮಾಡುವುದು. ಅದಕ್ಕಾಗಿ ಅವನು ಯಾವ ಪ್ರಯತ್ನಕ್ಕೂ ಸಿದ್ಧನಿದ್ದನು. ಪ್ರಾಣತ್ಯಾಗಕ್ಕೂ ಹಿಂಜರಿಯುವಂತಿರಲಿಲ್ಲ, ಆದರೆ ಅದೊಂದು ದಿನ. ಆದಿನವನ್ನು ನೀವು ಸುದಿನವೆನ್ನಿ ಅಥವಾ ದುರ್ದಿನವೆನ್ನಿ. ಅದು ನಿಮಗೆ ಮೀಸಲು.

ಸೀತಾರಾಮನ ಕಾಲೇಜಿನ ವಾರ್ಷಿಕೋತ್ಸವ ಪರೀಕ್ಷೆ ಹತ್ತಿರವಾಗುತ್ತಾ ಬಂದಿತ್ತು, ಆದರೂ ದಿನ ಚರ್ಯೆಯಲ್ಲಿ ಎಳ್ಳಷ್ಟೂ ಲೋಪವಾಗಿರಲಿಲ್ಲ. ಎಂದಿನಂತೆ ಬೆಳಗಿನ ೯ ಗಂಟೆಯ ನಂತರ ಕಾಲೇಜಿಗೆ ಹೋಗುತ್ತಿರುವಾಗ ಆದಿನ ತನ್ನ ಹೈಸ್ಕೂಲಿನ ಮಿತ್ರ ಮಹಾಬಲನ ಭೇಟಿಯಾಯಿತು. ಇಬ್ಬರೂ ಪರಸ್ಪರ ಸಂತೋಷದಿಂದ ಕೂಡಿಕೊಂಡರು. ತನ್ನ ತನ್ನ ಯೋಗ ಕ್ಷೇಮಗಳನ್ನು ಕೇಳಿಕೊಂಡರು. ಅವರಿಬ್ಬರೂ ಹುಟ್ಟಿದ್ದು ಬೆಳೆದದ್ದೂ ಒಂದೇ ಊರು. ಈಗ ಇರುವಲ್ಲಿಂದ ಅಂದರೆ ಮಂಗಳೂರಿನಿಂದ ೧೮ ಮೈಲು ದೂರದ ಮೂಲ್ಕಿ. ಮಹಾಬಲನು ಮಂಗಳೂರಿನಲ್ಲಿ ಬಿಡಾರ ಮಾಡಿದ್ದನು. ಸೀತಾರಾಮನು ಅವನೊಡನೆ ಮನೆ ನೋಡಲು ಮತ್ತು ಹಳೆ ಮಿತ್ರತ್ವವನ್ನು ಪುನಃ ಚೇತರಿಸಲು ಎಂಬಂತೆ ಮಹಾಬಲನ ಮನೆಗೆ ನಡೆದನು. ದೈವ ವಶಾತ್ ಆ ಮನೆ ಇದ್ದದ್ದು ಶ್ರೀಕೃಷ್ಣ ಪಾರ್ಕಿನ ಪಕ್ಕದಲ್ಲಿ. ಮನೆಗೆ ಹೋದೊಡನೆಯೇ ತನ್ನ ತಾಯಿ, ಹತ್ತು ವರ್ಷದ ತುಂಟ ತಮ್ಮ ಚಂದ್ರ, ೭ ವರ್ಷದ ತಂಗಿ ಸುಮ ಇವರ ಪರಿಚಯ ಪಡಿಸಿದನು. ಸೀತಾರಾಮನಿಗೆ ಇದರಿಂದ ಬಹಳ ಪ್ರಯೋಜನ ದೊರೆಯುವಂತಿತ್ತು. ಅವನು ಚಂದ್ರನನ್ನು ಅತಿ ಮಮತೆಯಿಂದ ಕರಕೊಂಡು ಪೇಟೆಸುತ್ತುವ ನೆಪದಿಂದ ಹೊರಟನು. ನಡೆಯು ಬಹಳ ಮಾತುಕತೆಗಳಾದುವು. ಒಂದಾದ ಮೇಲೊಂದು ಪ್ರಶ್ನೆಗಳೂ ಉತ್ತರಗಳೂ ಸೀತಾರಾಮನಿಂದ ಬರುತ್ತಲೇ ಇದ್ದುವು. ತನ್ನ ಕನಸಿನ ರಾಣಿ ವೀಣಳ ಕುರಿತೂ ಹಲವು ಪ್ರಶ್ನಾವಳಿಗಳಾದುವು. ಚಂದ್ರನ ಉತ್ತರಗಳಿಂದ ಆತನ ಮುಖದಲ್ಲಿ ಸಂತೋಷ ಹೆಚ್ಚುತ್ತಿತ್ತು. ಕೇಳುತ್ತಾ ಕೇಳುತ್ತಾ ಪೇಟೆಯ ಹಲವು ಬೀದಿಗಳು ಮುಗಿದುದು ಸೀತಾರಾಮನಿಗೆ ತಿಳಿಯಲೇ ಇಲ್ಲ. ಚಂದ್ರನಿಗೆ ಆಯಾಸವಾಗಿದ್ದರೂ ತೋರಿಸಲಿಲ್ಲ. ಉತ್ಸಾಹದಿಂದಲೇ ಇದ್ದನು. ಕಡೆಗೊಂದು ಪ್ರಶ್ನೆಯು ಚಂದ್ರನ ಕಿವಿಗೆಬಿತ್ತು.—'ವೀಣಾಳು ಯಾವ ಮತಸ್ಥಳು?' ಸೀತಾರಾಮನು ಗಂಭೀರವಾಗಿಯೇ ಕೇಳಿದ್ದನು. ಚಂದ್ರನು—'ಅವಳ ತಂದೆ ಪಂಚಮ ಜಾತಿಯವರು ಈಗ ಆರ್ಯ ಸಮಾಜಕ್ಕೆ ಸೇರಿದವರು! ಎಂದನು. ಈ ಮಾತನ್ನು ಕೇಳುತ್ತಾ ಸೀತಾರಾಮನ ಮನಸ್ಸಿನಲ್ಲಿ ಆಕಾಶವೇ ಕಳಚಿ ಬಿದ್ದಂತಾಯಿತು. ತಾನು ಎಲ್ಲಿರುವೆನು? ಏನು ಮಾಡುತ್ತಿರುವೆನೆಂದು ಅರ್ಥವಾಗಲಿಲ್ಲ. ಅಲ್ಲೇ ಕುಳಿತನು. ಆದರೂ ಚಂದ್ರನನ್ನು ನೋಡಿ ಏನೋ ಜ್ಞಾಪಿಸಿ ಕೊಂಡು ಚೇತರಿಸಿ ಮುಂದೆ ನಡೆದನು. ಇಬ್ಬರೂ ಮೌನ ಸ್ವಲ್ಪ ಸಮಯದಲ್ಲೇ ಚಂದ್ರನು ಅಸ್ತಂಗತನಾದನು.

ಸೀತಾರಾಮನು ನಡೆದು ಅದೇ ಪಾರ್ಕಿಗೆ ಸಂಬಂಧಿಸಿದ ಒಂದು ಕಲ್ಲುಬಂಡೆಯ ಮೇಲೆ ಕುಳಿತು ಆಕಾಶವತ್ತ ನೋಡುತ್ತಿದ್ದನು. ಮುಸ್ಸಂಜೆ ಸಮಯ. ಬೀದಿಗಳ 'ಕ'ಪ್ರಕಾರ ಒಂದೊಂದೇ ಭಸ್ಮವಾಗುತ್ತಿದ್ದುವು. ಪಂಚಮಂ ನಮಣ ತಾವರೆಯ ಸೌಂದರ್ಯಾಸ್ವಾದನೆ ಈ ತಂಬಿಗೇಕೋ ಹಿತಕರವೆನಿಸಲಿಲ್ಲ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.

ಬೇಡವಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

READ & ADVERTISE IN

NAVAYUGA WEEKLY

REGD. No. B. G. 176
LICENCE No. 31
Licensed to Post without Prepayment

ಭಾರತೀಯರ ಅಂಕುಶ

(೩ನೇ ಪುಟದಿಂದ)

ದನ್ನು ಮಾಡದೆ ಶಿಲೆಯಂತೆ ಬಿದ್ದುಕೊಂಡರೆ ತುಂಟ ಬಾಲಕರು ಬಿಟ್ಟಾರೆ? ಹಾಗಾಗಿದೆ ಭಾರತದ ಸ್ಥಿತಿ. ನಾವೂ ಘರ್ಜಿಸಬೇಕು.

ವಿನೋಬಾ ಹಾಗೂ ಶಾಂತಿ ಸೇನೆಗಳು ರಕ್ತಪಾತವಿಲ್ಲದನೇ ಶಾಂತಿಗಾಗಿ ಹಾತೊರೆಯುತ್ತಿದ್ದರೂ ಅಸಹಾಯಕತೆಯ ಯೋಚನೆ ಮಾಡುತಿರುವಾಗ, ಒಂದೂ ಗುಂಡು ಹಾರಿಸದನೇ ವಿಜಯ ಪತಾಕೆಯನ್ನು ಹಾರಿಸಿರುವ ಧೀರ ಸೇನಾನಿ ನಡೆಸಿರುವ ಘಟನೆ ಅವರಿಗೆ ಆಶಾದೀಪವಾದೀತು. ಆಗ ಕೇವಲ ಶಾಂತಿ ಮಂತ್ರಕ್ಕೆ ಬೆಲೆ ಇಲ್ಲವೆಂಬುದನ್ನೂ ಅಲ್ಲಗಳೆಯಲು ಸಾಧ್ಯವಿಲ್ಲ. ಸೇನಾಧಿಕಾರಿಗೆ ಮಾತ್ರ ಶಾಂತಿ ಪತಾಕೆಯಲ್ಲೇ ವಿಜಯ ಪತಾಕೆಯನ್ನು ಹಾರಿಸಲು ಸಾಧ್ಯವೆಂಬುದು ಗೊತ್ತು.

ಎಂದಿನಂತೆ ಇಂದೂ ಚೈನಿ ಕಮ್ಯೂನಿಸ್ಟರು ಫಿತೂರಿ ನಡೆಸಿದ್ದಾರೆ. ಇದೇನೂ ಹೊಸತಿರುವದಿಲ್ಲ. ನಾವು ತಳೆದಿರುವ ಧೋರಣೆ ಮಾತ್ರ ಹೊಸತಿದೆ. ಅರ್ಜುನ ತಳೆದಿರುವ ಧೋರಣೆ ಅಥವಾ ಥೊರಾಟ್ ತಳೆದಿದ್ದ ಧೋರಣೆ ಸಮಯೋಚಿತವಾಗಿತ್ತು. ಅಂತೆಯೇ ಅವರು ವಿಜಯ ದೀಪವನ್ನು ಬೆಳಗಿಸಿದರು. ಇಂದು ನಾವು ಆ ದಿಕ್ಕಿನಲ್ಲಿ ತಪ್ಪ ಹೆಜ್ಜೆ ಇಟ್ಟಿದ್ದೇವೆ. ಇದನ್ನೊಪ್ಪಿಕೊಳ್ಳಲು ನಾಚಿಕೆ ಬೇಡ. ಇದನ್ನೊಪ್ಪಿಕೊಂಡು ಸರಿಯಾದ ಹೆಜ್ಜೆಯನ್ನಿಟ್ಟು ಮುನ್ನಡೆಯಲೇ ಬೇಕು. ಹಾದಿ ತಪ್ಪಿಸುತ್ತಿರುವ ಕಮ್ಯೂನಿಸ್ಟರ ಪಿತೂರಿಗೆ, ಕಿವಿ ಮಾತಿಗೆ ಕಿವಿಗೊಡದೆ ಮುನ್ನಡೆಯಲೇ ಬೇಕು. ಧ್ಯೇಯ ದಾರಿಯಲ್ಲಿ ವಿಜಯವನ್ನರಿಸಲು, ವಿಜಯ ವೈಜಯಂತಿಯನ್ನು ವೈಭವದಿಂದ ಹಾರಿಸಲು ಭಾರತೀಯರೆಲ್ಲರೂ ಒಂದಾಗಿ ಮುನ್ನಡೆಯಲೇ ಬೇಕು.

ಎದುತನಕ ಸ್ವಾತಂತ್ರ್ಯ ಸುರಕ್ಷಿತವಿಲ್ಲ ಅದುತನಕ ನಮಗೆ ವಿಶ್ರಾಂತಿ ಇಲ್ಲ.

ಉಡುಪಿ ಡಿ ಮು. ಕೋರ್ಟಿನಲ್ಲಿ—

R. T. A. 1 of 1964

ಅಂತಪ್ಪ ಶೆಟ್ಟಿ, ಕೂಡಾ—ಅಪೀಲಾಂಟರು

ಮತ್ತು

ರಾಜೀವಿ—V. ಹೆಗ್ಡೆ—ರತ್ನಾವತಿ ಶೆಡ್ತಿರ ಸಹೋದರಿ ಪ ಸೀತಮ್ಮ ಶೆಡ್ತಿರ ಮಗಳು—ಉಡುಪಿ ತಾಲೂಕು ಬೊಮ್ಮರಬೆಟ್ಟು ಗ್ರಾಮ—ಎದ್ರಿ—

ಇವರೊಳಗೆ—

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ:—

ಉಡುಪಿ ತಹಶಿಲ್ದಾರರವರ ಕೋರ್ಟಿನ F. R-O-P. ನಂಬ್ರ 34 /1962ರಲ್ಲಾದ ತೀರ್ಪಿನ ಮೇಲೆ ಅಪೀಲಾಂಟರು ನಡ್ಸಿದ ಮೇಲ್ಕಂಡ ಅಪೀಲು ತಾರೀಕು 17-4-1964ಕ್ಕೆ ಯಿಟ್ಟಿದೆ—ಉದಾಹರಿಸುವಂಥಾದ್ದಿದ್ದರೆ ಆ ಕುರಿತು ಸದ್ರಿ ಕೋರ್ಟಿನ ಮುಂದೆ ಪೂರ್ವಾಹ್ನ 10 ಗಂಟೆಗೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗ್ಯೆರುಹಾಜರಿಯಿಂದ ತೀರ್ಮಾನಿಸಲ್ಪಡುವದು.

K. Balachandra Rao.
Advocate for Appellants.
Udipi. 4-4-1961

ಅನುಭವಾಮೃತ

ನೀರಿನ ಬೆಲೆ

ನಾವು ಕೆಲವು ಗೆಳೆಯರು ಕೊಲ್ಲೂರಿನ ಮೂಕಾಂಬಿಕೆಯನ್ನು ಕಾಣಲು ತೆರಳಿದ್ದೆವು. ಅಲ್ಲಿಗೆ ಮುಟ್ಟಿದ ಬಳಿಕ ಕೊಟಚಾದ್ರಿಯನ್ನು ಹತ್ತಬೇಕೆಂಬ ಆಸೆ ನಮಗಾಯಿತು. ಕೊಲ್ಲೂರಿಂದ ನಾಗೋಡಿನ ತನಕ ಬಸ್ಸಿನಲ್ಲಿ ಬಂದೆವು. ಮುಂದೆ ಏಳೆಂಟು ಮೈಲು ನಡೆಯಬೇಕಾಗಿತ್ತು. ಗುಡ್ಡ-ಘಟ್ಟಗಳ ದಾರಿ, ಮೇಲಾಗಿ ಮಧ್ಯಾಹ್ನದ ಉರಿ ಬಿಸಿಲು. ನಾಗೋಡಿನಲ್ಲಿ ಕುಡಿದಿದ್ದ ಕಾಫಿ—ನೀರು ಅರ್ಧ ಮೈಲು ನಡೆಯುವಷ್ಟರಲ್ಲಿಯೇ ಬಡ್ಡಿ ಸಹಿತ ಮೈಯಿಂದ ಇಳಿದು ಹೋಗಿತ್ತು. ಕೆಳಗೆ ಕಾಲು ಮೇಲೆ ತಲೆ, ನಡುವೆ ಎದೆ ಜತೆಗೆ ತುಟಿಯೆಲ್ಲವೂ ಉರಿಯೇರಿತ್ತು. ಆದರೂ ಸಹನಾ ಶಕ್ತಿಯನ್ನೇ ಪುಟಕ್ಕಿಟ್ಟು ನಾವು ನಿಧಾನವಾಗಿಯೇ ಮುಂದುವರಿದೆವು. ಸುಮಾರು ನಾಲ್ಕು ಮೈಲು ದಾರಿ ಕ್ರಮಿಸಿದ ಬಳಿಕ ದೊಡ್ಡದಾದೊಂದು ಬೆಟ್ಟ ಸಿಗುತ್ತದೆ, ಏರು ತಗ್ಗು ಕಡಿದು ಕೂಡ. ನಮ್ಮ ಪಾದಮುಂದುವರಿಯಲಿಲ್ಲ ಕಾಡುತಿದ್ದ ತೃಷೆಯನ್ನು ಸಹಿಸಲಾಗಲಿಲ್ಲ. ಅಲ್ಲಿಯೇ ಹಾಯಾಗಿ ಐದು ನಿಮಿಷ ಕುಳಿತುಕೊಳ್ಳುವುದೆಂದು ನೆನಸಿದೆವು; ಐದಲ್ಲ ಐವತ್ತು ಮಿನಿಟುಗಳಾದರೂ ಏಳುವುದೇ ದುಸ್ತರವೆನಿಸಿತು. ಈ ನಡುವೆ ಹರಿಯುವ ನೀರಾದರೂ ಇದೆಯೇ ಎಂದು ಸುತ್ತ ನೋಡಿದೆವು, ಎಲ್ಲಿಯೂ ಸುಳಿವು ಗೋಚರಿಸಲಿಲ್ಲ. ಎಪ್ರಿಲ್ ತಿಂಗಳ ಮೊದಲ ದಿನಗಳವು, ನದಿಯಲ್ಲಿಯೇ ನೀರು ಒಣಗಿರುವಾಗ, ಆ ಬರಿಯ ಗುಡ್ಡದಲ್ಲಿ ಎಲ್ಲಿ ಹರಿಯಬೇಕು? ನಡುದಾರಿಯಲ್ಲಿ, ಬರುವಾಗ ನೀರು ತಾರದೆ ಇದ್ದುದಕ್ಕಾಗಿ ನಮ್ಮನ್ನು ನಾವೇ ಶಪಿಸಿಕೊಂಡೆವು.

ನಾವು ಮೆಟ್ಟಿ ಬಂದ ದಾರಿಯಲ್ಲೇ ಒಬ್ಬ ಯಾತ್ರಿಕ ಬರುವುದು ಗೋಚರಿಸಿತು; ಆತನೇನೋ ಭಾರವನ್ನು ಒಡಿದಿರುವಂತೆಯೂ ಭಾಸವಾಯಿತು. ಹತ್ತಿರ ಬಂದಾಗ ಅದೊಂದು ತಂಬಿಗೆಯೆಂದು ತಿಳಿಯಿತು. ನಾವು ಮೂವರಿದ್ದೆವು. ಆ ಒಣಗಿನ ಬಾಯಲ್ಲಿಯೂ ಈಗ ನೀರೂರಿತು. ತಂಬಿಗೆಯಲ್ಲಿ ನೀರಿದ್ದರೆ.... ಏದುತ್ತೇದುತ್ತಾ ಆ ಆಗಂತುಕ ನಮ್ಮ ಮುಂದೆಯೇ ಬಂದ. "ಹೋಗುವವರೋ ಬರುವವರೋ?" ಎಂದು ಪ್ರಶ್ನಿಸಿದ. ತುಟಿಯ ಪಸೆ ಒಣಗಿದ್ದರಿಂದ ಮಾತನಾಡುವುದೂ ಸಾಧ್ಯವಾಗಲಿಲ್ಲ. ನಮಗೆ. ತೊದಲುತ್ತ ನಾನಂದೆ: "ಬರುವವರೇ. ತುಂಬ ಬಾಯಾರಿಕೆ ಎಲ್ಲಿಯೂ ನೀರಿಲ್ಲ...." "ಓಹೋ ಅದಕ್ಕೇನಂತೆ? ಇಗೊಳ್ಳಿ ನಾನು ತಂದಿದ್ದೇನೆ" ಎಂದ ಆತ ತನ್ನ ತಂಬಿಗೆಯನ್ನು ಮುಂದೆ ಮಾಡಿದ ನಾವು ನೀರು ಕುಡಿದು "ಅಯ್ಯಬ್ಬಾ ಬದುಕಿದೆವು" ಎಂದು, ಅವನನ್ನು ಕೂಡಿ ಮುಂದುವರಿದೆವು.

ದಾರಿಯಲ್ಲಿ ಆ ಮಾತು ಈ ಮಾತು ಬಂತು. ಆತನೊಬ್ಬ ಕಡು ಬಡವ ಏನೋ ಹರಕೆ ತೀರಿಸಲೆಂದು ಐದು ವರ್ಷಗಳಿಂದ ಹಣ ಜೋಡಿಸಿ ಬಂದಿದ್ದನಂತೆ. ಕೊಟಚಾದ್ರಿಯ ಸರ್ವಜ್ಞಪೀಠ, ಉದಯಾಚಲ, ಅಸ್ತಾಚಲವೆಲ್ಲವನ್ನೂ ನೋಡಿ, ಆತನೊಡನೆಯೇ ನಾವೂ ಮರಳಿದೆವು. ಅವನು ಅನಾಯಾಸವಾಗಿ ಸಿಕ್ಕ ಸಂಗಾತಿಯಾದ. ಆತನ ದಾರಿದ್ರ್ಯವನ್ನೂ ನಮಗೆ ಮಾಡಿದ ಉಪಕಾರವನ್ನೂ ನೆನೆದು ಅಗಲುವ ಸಮಯ ಎರಡು ರೂಪಾಯಿಯ ನೋಟೊಂದನ್ನು ಸ್ವೀಕರಿಸುವಂತೆ ಮುಂದೆ ನೀಡಿದೆ. ಆತನು ತಿರಸ್ಕರಿಸಿದನು. ಕೊನೆ ಅಂದೆ, "ನೀನು ನೀರನ್ನು ಕೊಟ್ಟು ನಮ್ಮನ್ನು ಬದುಕಿಸಿದೆ. ಅದಕ್ಕಾಗಿಯಾದರೂ ಸ್ವೀಕರಿಸು"

ಆತ ಒಂದುಕ್ಷಣ ನನ್ನನ್ನೇ ನೋಡಿದ. ಮತ್ತೆ ಹೇಳಿದ:" ಸ್ವಾಮಿ, ಬೇಜಾರು ಮಾಡಬೇಡಿ. ನಾನು ನೀರಿಗೆ ಬೆಲೆ ತೆತ್ತಿಲ್ಲ. ಹಾಗಿರುವಾಗ ನಿಮ್ಮಿಂದ ಹೇಗೆ ತೆಗೆದುಕೊಳ್ಳಲಿ?"

ನಾನೆಂದೆ;"ಬೆಲೆ ತೆತ್ತಿಲ್ಲ ಸರಿ. ಆ ತಂಬಿಗೆಯನ್ನು ಹೊತ್ತಾದರೂ ತಂದಿದ್ದಿಯಲ್ಲಾ? ಅದರ ಶ್ರಮಕ್ಕೆಂದಾದರೂ...."

"ಏನು ಹೇಳ್ತೀರಿ ಬುದ್ಧಿ? ನಾನು ನನ್ನ ದೇಹವನ್ನು ಹೊತ್ತುಕೊಂಡು ಬಂದಿಲ್ಲವೇ?" ಎಂದು ಹೊಂಟೇಹೋದ.

ನಮ್ಮ ಮನಸ್ಸಿನಲ್ಲಿ ಆತನ ಕೊನೇಯ ವಾಕ್ಯ ಇಂದಿಗೂ ಪಡಿದನಿಗೊಡುತ್ತಿದೆ.

—ರಾಶಿ.

ನಮ್ಮ-ನಮ್ಮವರು

(೧ನೇ ಪುಟದಿಂದ)

ದಲಾದ ಸಾರ್ವಜನಿಕರಂಗಗಳ ಮೂಲಕ ಜನಸೇವೆಯನ್ನು ಸಲ್ಲಿಸಿದವರು. ಬೆಳ್ಳಾರೆಯಂತಹ ಗ್ರಾಮೀಣ ಪ್ರದೇಶದಲ್ಲಿ ಹೈಸ್ಕೂಲೊಂದರ ಸ್ಥಾಪನೆಯಾಗಬೇಕೆಂದು ಬಗೆದು ಹೈಸ್ಕೂಲ್ ಸಮಿತಿಯ ಅಧ್ಯಕ್ಷರಾಗಿ, ಊರವರ ಸಂಪೂರ್ಣ ಸಹಕಾರದಿಂದ ಹೈಸ್ಕೂಲ್ ಮತ್ತು ಹೈಸ್ಕೂಲ್ ಹಾಸ್ಟೆಲ್ ಕಟ್ಟಡಗಳನ್ನು ನಿರ್ಮಿಸಿದ ಸಾಹಸಿಗಳಿವರು. ಈಗ ಈ ಹೈಸ್ಕೂಲು ತಾಲೂಕು ಬೋರ್ಡಿನ ಮೂಲಕ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ಇಡಿಯ ಜಿಲ್ಲೆಯಲ್ಲಿಯೇ ಪ್ರಸಿದ್ಧ ವ್ಯಕ್ತಿಯೆನಿಸಿದ ನಾರಾಯಣ ಶೇಕರ, ವ್ಯವಹಾರ ಜ್ಞಾನಿಗಳು; ಪಂಚಾಯತುದಾರರು; ವೈದ್ಯಕೀಯವನ್ನೂ ಬಲ್ಲವರು; ಇದರಿಂದಾಗಿಯೇ ತಮ್ಮ ಗಂಡು ಮಕ್ಕಳೆಲ್ಲರಿಗೂ ವೈದ್ಯಕೀಯ ಶಿಕ್ಷಣವನ್ನು ಕೊಡಿಸಿದ್ದಾರೆ; ಕೊಡಿಸುತಿದ್ದಾರೆ. ಯಕ್ಷಗಾನದಲ್ಲಿ ಹೆಸರು ಪಡೆದ ಕವಿಭೂಷಣಕೆ. ಪಿ. ವೆಂಕಪ್ಪ ಶೆಟ್ಟರೊಡನಾಟದಿಂದಾಗಿ ಯಕ್ಷಗಾನ ಕಲಾಪ್ರಿಯರು ಉತ್ತಮ ಭಾಷಣಗಾರರು. ಜಿಲ್ಲೆಯ ಪವಿತ್ರ ಯಾತ್ರಾಸ್ಥಳ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ಆಡಳಿತ ಮಂಡಳಿಯಲ್ಲಿ ಟ್ರಸ್ಟಿಯಾಗಿದ್ದು, ಅದರ ಪುನಾರಚನಾ ಕಾರ್ಯದಲ್ಲಿ ಆಸಕ್ತಿಯಿಂದ ಮಹತ್ವದ ಪಾತ್ರವಹಿಸಿದ ಕಾರ್ಯಕುಶಲರು ಇವರು.

ನಾರಾಯಣ ಶೇಕರು ಹತ್ತು ವರ್ಷಗಳಿಗೆ ಹಿಂದೆ ಬೆಳ್ತಂಗಡಿ ತಾಲೂಕಿನ ಕುದುರೆ ಮುಖ ಶಿಖರದ ಸಮೀಪವಿರುವ ನಾವೂರಿನಲ್ಲಿ ಹಾಳುಬಿದ್ದ ಬಂಜರು ಭೂಮಿಯನ್ನು ಪಡೆದು ಅದನ್ನು ಉತ್ತಮ ಕೃಷಿಕ್ಷೇತ್ರವನ್ನಾಗಿ ಮಾರ್ಪಡಿಸಿದ್ದಾರೆ. ಮೈಲುದೂರದ ಬೆಟ್ಟದ ತುದಿಯಿಂದ ಕಾಲುವೆತೋಡಿ ಈ ಕ್ಷೇತ್ರಕ್ಕೆ ನೀರನ್ನು ಒದಗಿಸುವ ಸಾಹಸವನ್ನು ತೋರಿಸಿದ್ದಾರೆ. ದೊಡ್ಡ ಸುಧಾರಿತ ಅಣೆಕಟ್ಟು, ನೀರು ಸಂಗ್ರಹಿಸುವ ಟ್ಯಾಂಕು ಮೊದಲಾದ ಸಾಹಸ ಕಾರ್ಯಗಳನ್ನು ಸಾಧಿಸಿದ್ದಾರೆ. ಇನನ್ನು ಮೆಚ್ಚಿದ ಜಿಲ್ಲಾ ಬಂಟರ ಯಾನೆ ನಾಡವರ ಸಂಘ, ಮಂಗಳೂರು ಇವರು ತಮ್ಮ ಸುವರ್ಣ ಮಹೋತ್ಸವದ ವೇಳೆ ಬಂಟ ಸಮಾಜದಲ್ಲಿ ಕೃಷಿಕ್ಷೇತ್ರದ ಕ್ರಿಯಾಪಟು ವೆಂದು ೧೯೬೦ ರಲ್ಲಿ ಪಾರಿತೋಷಕವಿತ್ತು ಸನ್ಮಾನಿಸಿದ್ದಾರೆ. ಶ್ರೀಯುತರ ಸಮಾಜಸೇವೆಯ ಪರಿಣಾಮವಾಗಿಯೇ ತಾ ೧೯-೪-೬೪ ರಂದು ನಡೆಯಲಿರುವ ದಕ್ಷಿಣಕನ್ನಡ ಜಿಲ್ಲಾ ಬಂಟರಯಾನೆ ನಾಡವರ ಸಂಘದ ಮಹಾಸಭೆಯ ಅಧ್ಯಕ್ಷರನ್ನಾಗಿ ಆರಿಸಿ ಗೌರವವನ್ನೂ ಸಮರ್ಪಿಸಿದ್ದಾರೆ. ಉದಾರರೂ ಸೇವಾನಿರತರೂ ಆದ ನಾರಾಯಣ ಶೇಕರಿಗೆ ಈ ಸನ್ಮಾನ ದೊರೆತುದು ಯಥಾರ್ಥ ಮತ್ತು ನ್ಯಾಯೋಚಿತ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O S. 294/1957; R.E.P. 57/1963

ಕೆ. ಗಿರಿಯಂಣ ಶೆಟ್ಟಿ—ಅರ್ಜಿದಾರ.

ಮತ್ತು

ಮುದ್ದು ಶೆಟ್ಟಿ ಕೂಡಾ ಎದ್ರಿರು

ಇವರೊಳಗೆ

೨ನೇ ಎದ್ರಿ:—ಎಚ್ಚುಶೆಡ್ತಿ-ನರ್ಸಿಶೆಡ್ತಿ ಮಗಳು—ಉಡುಪಿ ತಾಲ್ಲೂಕು ಕೊರಂಗ್ರಪಾಡಿ ಗ್ರಾಮದ ಕೆಮ್ತೂರು.

ಸದ್ರಿ ಎದ್ರಿಳಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಮೇಲ್ಕಂಡ ಅಮಲ್ದಾರಿಯಲ್ಲಿ ಅರ್ಜಿದಾರನು ಹಾಜರು ಪಡ್ಸಿದ ಸೇಲ್ ಹಾಲಿನ ಶರ್ತುಗಳನ್ನು ನಿರ್ಣಯಿಸಲಿಕ್ಕೆ ತಾರೀಕು 13-4-64ಕ್ಕೆ ಯಿಟ್ಟಿದೆ. ಈ ಕುರಿತು ನಿಂಮ ಆಕ್ಷೇಪಣೆ ಯೇನಾದರೂ ಯಿದ್ದರೆ ಆ ದಿನ್ನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳಬಹುದೆಂದು ಈ ಮೂಲಕ ನಿಮಗೆ ತಿಳಿಸೋಣಾಗಿಯದೆ.

K. Ramakrishna Rao
Vakil for Petitioner
Udipi, Dated 4-4-1964

ಹೊಸ ಪುಸ್ತಕ—

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ನವಯುಗ ಪ್ರೆಸ್, ಉಡುಪಿ.

Edited, Printed & Published by K. H.Shetty, at the Navayuga Press, Udipi, S. India.

ನವಯುಗ

VOL. 43 No. 33 ಸಂಪುಟ ೪೩ ಸಂಚಿಕೆ ೩೩

NAVAYUGA—Nationalist Weekly ‡‡ ಉಡುಪಿ 16-4-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಸಿ. ಸುಬ್ರಹ್ಮಣ್ಯಂ

ಮದ್ರಾಸದಲ್ಲಿ ಯಶಸ್ವಿಯಾಗಿ ಮಹತ್ವಪೂರ್ಣ ಶಾಖೆಗಳ ಮಂತ್ರಿ ಪದವನ್ನು ನಿರ್ವಹಿಸಿದ ಸಿ. ಸುಬ್ರಹ್ಮಣ್ಯಂರವರ ಸೇವೆಯನ್ನು ಪ್ರಧಾನಿ ನೆಹರುರವರು ಬಯಸಿದ್ದು ತಪ್ಪಲ್ಲ. ಕೇಂದ್ರ ಸಚಿವ ಸಂಪುಟದಲ್ಲಿ ಹೊಸರಕ್ತಕ್ಕೆ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಸುಬ್ರಹ್ಮಣ್ಯಂರವರ ವ್ಯಕ್ತಿತ್ವಕ್ಕೊಂದು ಹೆಚ್ಚಿನ ಬೆಲೆ ಬಂತು. ಅವರಿಂದು ಕೇಂದ್ರ ಸರಕಾರದಲ್ಲಿ ಉಕ್ಕು, ಗಣಿ ಮತ್ತು ಭಾರ ಉದ್ದಿಮೆಗಳ ವಿಭಾಗವನ್ನು ನೋಡಿಕೊಂಡಿದ್ದಾರೆ. ಮದ್ರಾಸದಲ್ಲಿ ಅರ್ಥ ಶಾಖೆಯನ್ನು ನಿರ್ವಹಿಸಿದ ಇವರು ಉತ್ತಮ ಮತ್ತು ಸಮರ್ಥ ಮಂತ್ರಿಗಳಲ್ಲಿ ಒಬ್ಬರಾಗಿದ್ದಾರೆ. ಸ್ವತಂತ್ರ ಭಾರತದಲ್ಲಿ ಉಕ್ಕಿನ ಬೇಡಿಕೆಯು ದಿನದಿಂದ ದಿನಕ್ಕೆ ಮಿತಿಮೀರಿ ಹೆಚ್ಚುತ್ತಿರುವಾಗ ಉಕ್ಕಿನ ಕಾರಖಾನೆಗಳನ್ನು ಹೊಸತಾಗಿ ತೆರೆಯುವುದು ಮತ್ತು ಇದ್ದವುಗಳನ್ನು ವಿಸ್ತರಿಸುವುದು ಅಗತ್ಯವಾಗಿದೆ. ಅಮೆರಿಕನ್ ನೆರವಿನಿಂದ ಬುಕಾರೋವಿನಲ್ಲಿ ಸಾರ್ವಜನಿಕ ರಂಗದಲ್ಲಿ ಉಕ್ಕಿನ ಕಾರಖಾನೆಯೊಂದನ್ನು ಕಟ್ಟುವ ವಿಚಾರದಲ್ಲಿ ಬೇಕೆಂಬಷ್ಟು ಹಗರಣ ನಡೆಯಿತೆಂಬುದನ್ನು ಮರೆಯಬಾರದು.

ಬುಕಾರೋವಿನ ಬಗೆಗೆ ಇಂದು ಸುಬ್ರಹ್ಮಣ್ಯಂ ದೃಢ ನಿರ್ಧಾರಕ್ಕೆ ಬಂದಿದ್ದಾರೆ. ಅಮೆರಿಕನ್ ನೆರವು ದೊರೆಯಲಿ, ದೊರೆಯದಿರಲಿ ಅದನ್ನು ಇಷ್ಟರಲ್ಲಿಯೇ ಕಟ್ಟಲಾಗುವುದೆಂದವರು ಘೋಷಿಸಿದ್ದಾರೆ. ದೇಶದ ಸಂರಕ್ಷಣಾ ಸಾಧನೋಪಕರಣಗಳಿಗೂ ಉಕ್ಕಿನ ಆವಶ್ಯಕತೆ ಮಿತಿಮೀರಿರುವಾಗ, ಈ ದಿಸೆಯಲ್ಲಿಯೂ ನಾವು ಸ್ವಾವಲಂಬಿಗಳಾಗುವುದು ಅಗತ್ಯದ್ದಿದೆ. ದೇಶದ ಪುನಾರಚನೆಯ ಕಾರ್ಯದಲ್ಲಿ ಔದ್ಯಮೀಕರಣವು ಅಗ್ರಗಣ್ಯ ಪಾತ್ರವಹಿಸುವುದರಿಂದ ಉದ್ಯಮಗಳಿಗೆಲ್ಲ ಸಾಧನವಾದ ಉಕ್ಕಿನ ಉತ್ಪಾದನೆ ವಿಪುಲ ಪರಿಮಾಣದಲ್ಲಿ ಆಗಬೇಕಾಗಿದೆ. ಇದಕ್ಕಾಗಿಯೇ ಸುಬ್ರಹ್ಮಣ್ಯರವರ ಸಂಕಲ್ಪ ಮತ್ತು ಸಾಧನೆಗಳು ದೃಢವಾಗಬೇಕು

ಸಿ. ಸುಬ್ರಹ್ಮಣ್ಯಂ, ಇದೇ ತಿಂಗಳ ೧೯ರಂದು ಮಣಿಪಾಲದಲ್ಲಿ ಸಿಂಡಿಕೇಟ್ ಬ್ಯಾಂಕಿನ ಪ್ರಧಾನ ಕಾರ್ಯಾಲಯದ ಕಟ್ಟಡದ ಉದ್ಘಾಟನೆಯನ್ನು ಮಾಡಲಿರುವರು. ಇವರು ನಮ್ಮ ಜಿಲ್ಲೆಗೆ ಹೊಸಬರೇನೂ ಅಲ್ಲ. ನಮ್ಮ ಜಿಲ್ಲೆಯು ಮದ್ರಾಸರಾಜ್ಯಕ್ಕೆ ಸೇರಿಕೊಂಡಿದ್ದಾಗ ಇವರು ಒಂದಲ್ಲ ಹಲವು ಬಾರಿ ಇಲ್ಲಿಗೆ ಬಂದಿದ್ದಾರೆ; ಇಲ್ಲಿನ ನಾಗರಿಕರ ಪರಿಶ್ರಮ ಶೀಲತೆ ಸಾಧನೆಗಳಿಂದ ಮನಮೆಚ್ಚಿದ್ದಾರೆ. ಇಂದವರು ಬರುವಾಗ ಜಿಲ್ಲೆ ಮತ್ತೂ ಮುಂದುವರಿಸುದನ್ನು ಕಾಣಬಹುದು. ಖಾಸಗಿ ಕ್ಷೇತ್ರವು ನಮ್ಮ ಜಿಲ್ಲೆಯಲ್ಲಿ ಮಾಡಿದ ಕ್ರಾಂತಿಯನ್ನು ಸುಬ್ರಹ್ಮಣ್ಯಂ ಅವಶ್ಯ ಮೆಚ್ಚಿಯೇ ಮೆಚ್ಚುತ್ತಾರೆ. ಒಳ್ಳೆಯುದನ್ನು ನೋಡುವ ಮೆಚ್ಚುವ ಗುಣ ಅವರದ್ದು.

ಎಂ. ಸಿ. ಚಾಗ್ಲ

ಅಟರ್ನಿ ಜನರಲ್ ಆಗಿದ್ದ ಎಂ. ಸಿ. ಚಾಗ್ಲ ನಿವೃತ್ತಿಯಾದ ಬಳಿಕ ಇಂಗ್ಲೆಂಡಿನಲ್ಲಿ ಭಾರತದ ಹೈ ಕಮಿಶನರ್ ಆಗಿ ನಿಯುಕ್ತರಾದರು. ಬಳಿಕ ಆದೊಂದು ಸಂಕ್ರಾಂತಿಯ ಕಾಲದಲ್ಲಿ ಕೇಂದ್ರ ಮಂತ್ರಿ ಮಂಡಳಿಯನ್ನೂ ಸೇರಿದರು; ಶಿಕ್ಷಣ ಮಂತ್ರಿ ಶಾಖೆಯನ್ನೂ ಪಡೆದರು. ಚಾಗ್ಲ ಈ ಶಾಖೆಗೆ ಬಂದ ಬಳಿಕ ಅಲ್ಲಿ ಕೆಲವೊಂದು ಸುಧಾರಣೆಯ ಗಾಳಿ ಸೋಂಕ ತೊಡಗಿದೆ. ಮೊದಲಿದ್ದ ಹತ್ತಾರು ಸಲಹಾ ಸಮಿತಿಗಳನ್ನೂ ವಿಭಾಗಗಳನ್ನೂ ರದ್ದು ಪಡಿಸಿದರು. ಬಳಿಕ ಇಡಿಯ ಶಾಖೆಯ ಕಾರ್ಯಗಳನ್ನು ಕೇವಲ ಐದು ವಿಭಾಗಗಳಲ್ಲಿ ಹಂಚಿ ಹಾಕಿದರು; ಆವಶ್ಯಕವೆನಿಸಿದ ಕೆಲವೇ ಸಮಿತಿಗಳನ್ನು ಇಟ್ಟುಕೊಂಡರು. ಇದರಿಂದ ಅಲ್ಲೊಂದು ಕ್ರಾಂತಿಯ ಬಿರುಗಾಳಿಯೇ ಬೀಸಿತು ಎಂದು ಊಹಿಸಬಹುದು. ಇದರ ಪರಿಣಾಮವೂ ಲಾಭಪ್ರದವಾಗಬಹುದು.

ಭದ್ರತಾ ಮಂಡಳದಲ್ಲಿ ನಡೆದ ಮತ್ತು ನಡೆಯುವ ಕಾಶ್ಮೀರ ಚರ್ಚೆಯಲ್ಲಿ ಭಾರತದ ಪ್ರತಿನಿಧಿ ಮಂಡಳದ ನಾಯಕತ್ವ ವಹಿಸಿದವರು ಮತ್ತು ವಾದಿಸಿದವರು ಇವರು. ಕಾಶ್ಮೀರದ ಸಂಬಂಧದಲ್ಲಿ ಭಾರತ ಸರಕಾರದ ನೀತಿಯನ್ನು ಕೂಲಂಕಷವಾಗಿ ಅರಿತುಕೊಂಡ ಇವರು ತಮ್ಮ ಪಾತ್ರವನ್ನು ಯಶಸ್ವಿಯಾಗಿಯೇ ಆಡಿದರು. ಪಾಕಿಸ್ತಾನದ ವೃಥಾಪರಾಧವನ್ನು ಸಾಧಾರವಾಗಿ ಅಲ್ಲಗಳೆದರು. ಚಾಗ್ಲರವರು ಮುಂದಿನ ತಿಂಗಳ ೫ನೇ ದಿನ ಮತ್ತೆ ಈ ಸಂಬಂಧದ ಚರ್ಚೆಯಲ್ಲಿ ಭಾಗವಹಿಸಲಿರುವರು. ಕಾಶ್ಮೀರ ಸರಕಾರವು ಒಳಸಂಚಿನ ಪ್ರಕರಣವನ್ನು ನ್ಯಾಯಾಲಯದಿಂದ ಹಿಂತೆಗೆದುಕೊಂಡು ಶೇಕ್ ಅಬ್ದುಲ್ಲಾ ಮತ್ತವರ ಸಂಗಡಿಗರನ್ನು ಅನಿರ್ಬಂಧವಾಗಿ ಬಿಡುಗಡೆ ಮಾಡಿದ್ದರಿಂದ ತನ್ನ ವಾದಕ್ಕೆ ಮತ್ತಷ್ಟು ಬಲ ಬಂದಿತು ಎನ್ನುತ್ತಾರೆ, ಇವರು.

ಎಂ. ಸಿ. ಛಾಗ್ಲರ ಯೋಗ್ಯತೆಯನ್ನು ಈಗಾಗಲೇ ಪ್ರಶ್ನಿಸುವಂತಿಲ್ಲ. ಆದರೂ ಅವರು ಇಂಗ್ಲಿಷ್‌ನ ಬಗ್ಗೆ ತೋರಿಸುತ್ತಿರುವ ಉದಾರತೆ ಮತ್ತು ಹಿಂದಿಯ ಅಸಮರ್ಥತೆಯನ್ನು ಪ್ರದರ್ಶಿಸಿ ನೀಡುವ ಹೇಳಿಕೆಗಳಿಂದ ಹಿಂದೀ ಪ್ರೇಮಿಗಳಲ್ಲಿ ಕುಸು ಗೊಂದಲವೆಬ್ಬಿಸಿದ್ದಾರೆ. ಚಾಗ್ಲಾ ಹಿಂದೀಗೆ ವಿರೋಧಿಯೇ ಎಂಬ ಸವಾಲೂ ಕೆಲವೆಡೆ ಮುಂದೆ ಬಂದಿದೆ. ಸಂವಿಧಾನದಲ್ಲಿಯೇ ಮಾನಿತವಾದ ಹಿಂದಿಯನ್ನು ಚಾಗ್ಲಾ ಬಿಡುವುದಿಲ್ಲ. ಆದರೆ, ಇಂಗ್ಲಿಷನ್ನು ಕೈಬಿಡಬಾರದೆನ್ನುತ್ತಾರೆ ಅವರು. ಈ ಎರಡೂ ಭಾಷೆಗಳು ಏಕ ಕಾಲದಲ್ಲಿ ಬೆಳೆದು ಬರಬೇಕೆಂಬುದೇ ಇವರ ಅಭಿಪ್ರಾಯ. ಅಂತಾರಾಷ್ಟ್ರೀಯ ಭಾಷೆಯಾದ ಇಂಗ್ಲೀಷನ್ನು ಉಳಿಸಿಕೊಳ್ಳುವುದು ಅಗತ್ಯವೆಂದು ಕೆಲವರ ವಾದವಿದೆ. ಇದನ್ನು ಚಾಗ್ಲರಂತೆ ಅಲ್ಲಗಳೆಯದವರೂ ಹಲವರಿದ್ದಾರೆ. ಹಾಗಾಗಿ ಚಾಗ್ಲರಲ್ಲಿ ಪಕ್ಷಪಾತತನವಿಲ್ಲ; ಉಭಯ ಭಾಷೆಗಳ ಬಗೆಗೂ ಗೌರವದ ಭಾವನೆಯಿದೆ.

ಕೆ. ಸುಬ್ರಹ್ಮಣ್ಯ ಭಟ್

ಬೆಳ್ಳಾರೆಗೆ ಹೋದವರು ಅಲ್ಲಿರುವ ಶ್ರೀ ಕೆ. ಸುಬ್ರಹ್ಮಣ್ಯ ಭಟ್ ಇವರನ್ನೂ ಇವರ ಪರಿಶ್ರಮ--ಸಾಧನೆಗಳನ್ನೂ ನೋಡಿಬರಬೇಕು. ದೊಡ್ಡ ಸಾಹಿತಿಯಾಗಿ ಅಥವಾ ರಾಜಕಾರಣಿಯಾಗಿ, ಕಲಾವಿದನಾಗಿ ಹೆಸರು ಪಡೆದವರು ತುಂಬ. ಆದರೆ, ಭಟ್ಟರು ಸಾಹಿತಿಯೂ ಅಲ್ಲ, ರಾಜಕಾರಣಿಯೂ ಅಲ್ಲ. ನಮ್ಮ ರಾಷ್ಟ್ರದ ನಾಯಕ ಪಂಡಿತ ಜವಾಹರಲಾಲರು ಹೇಳುತ್ತ ಬಂದಿದ್ದಾರೆ: "ವಿದ್ಯಾವಂತ ನಾಗರಿಕರೇ ಹಳ್ಳಿಗಳಿಗೆ ತೆರಳಿರಿ" ಎಂದು. ಈ ಕರೆಯಿಂದ ಪ್ರಭಾವಿತರಾದ ಭಟ್ಟರು ಮೆಟ್ರಿಕ್ಯುಲೇಶನ್ ಪರೀಕ್ಷೆಯಾದ ಬಳಿಕ, ಗ್ರಾಮೀಣ ಜೀವನದಿಂದ ಆಕರ್ಷಿತರಾದರು. ಪಟ್ಟಣದ ಬೆಡಗಿನ ಜೀವನಕ್ಕೆ ಮರುಳಾಗದ ನೈಜ ಭಾರತೀಯ ಪೌರನಂತೆ ರೈತಾಪಿವೃತ್ತಿಯನ್ನು ಅವಲಂಬಿ

(೧೩ನೇ ಪುಟ ನೋಡಿ)

ವಾರದ ಕಥೆ

ನೆನಪಿದೆಯೆ..?

ಬರೆದವರು: ಶ್ರೀ "ಸಾಗರ್"

ಕಲ್ಲು ಮರಗಳಿಗೂ ಚೇತನವೀವ ದಿವ್ಯ ಶಕ್ತಿ ಪ್ರಾತಃಕಾಲದ ಶೀತಲ ಸಮೀರಕ್ಕಿದೆ ಫಾಲ್ಗುಣದಲ್ಲಿ. ಲಾವಣ್ಯವತಿಯ ನಡೆಯಂತೆ ಎಡೆಯೂಡಿ ಬರುವ ಅದರ ಅಮೃತ ಸ್ಪರ್ಶಕ್ಕೆ ಸತ್ತವನೂ ಒಮ್ಮೆ ಎದ್ದು ಕೂತಾನು. ನಿದ್ರೆಯಲ್ಲಿ ಮಾತ್ರವೇ ಮೈಮರೆತಿದ್ದ ಮಧುಸೂದನ ಎಚ್ಚತ್ತರೆ ಅದೊಂದು ಸಾಮಾನ್ಯ ವಿಷಯ. ಆದರೆ ಎಂದಿನಂತೆ ಆಗಲೇ ಎದ್ದು ಕಾಫಿ ಸಿದ್ಧಮಾಡೊಡನೆ ಗಂಡನನ್ನು ಎಬ್ಬಿಸಲು ಒದ್ದಾಡ ಬೇಕಾಗಿದ್ದ ಮೃದುಲ ಇನ್ನೂ ಮಲಗಿಯೇ ಇರುವುದೊಂದು ವಿಶೇಷವೇ ಸರಿ. ಅದು ಮಧುಸೂದನನ್ನು ಚಕಿತಗೊಳಿಸಿದಷ್ಟು, ಬೇರೆ ಯಾವ ಗಂಡನನ್ನು ತನ್ನ ಹೆಂಡತಿಯ ಸಂಬಂಧವಾಗಿ ಅಂಥ ಅನುಭವಕ್ಕೀಡು ಮಾಡಲಾರದು. ಏಕೆಂದರೆ ಎಲ್ಲರೂ ತಮ್ಮ ಪತ್ನಿಯರನ್ನು ಅವರವರ ಅರ್ಧಾಂಗವೆಂದು ಒತ್ತಾಯಕ್ಕೆ ಒಪ್ಪಿಕೊಳ್ಳುವವರಾದರೆ ಮೃದುಲ ತನ್ನ ಸರ್ವಾಂಗವನ್ನೂ ವ್ಯಾಪಿಸಿರುವ - ಸ್ವಕೀಯಳೆಂದು ಚುನಾವಣೆಯ ಭಾಷಣದಲ್ಲಿ ಬೇಕಿದ್ದರೂ ಘೋಷಿಸ ಬಲ್ಲವನು ಮಧು. ಇದೀಗ ತನ್ನ ಮಡದಿ ನಿಶ್ಚೇಷ್ಟಿತಳಾಗಿ ಬಿದ್ದಿರುವುದು ಏಕೆಂದು ಅವನಿಗೆ ಬಗೆಹರಿಯಲಿಲ್ಲ.

ತಾನಿರುವುದು ತಮ್ಮದೇ ಆದ ಶಯ್ಯಾಗೃಹದಲ್ಲಿ ಎಂಬ ಪರಿಜ್ಞಾನವಿದ್ದುದರಿಂದ ಅಸ್ತವ್ಯಸ್ತವಾದ ಮೃದುಲಳ ಉಡುಗೆಯನ್ನು ಸರಿ ಮಾಡುವ ವ್ಯವಸ್ಥಾಪಕ ವೃತ್ತಿ ಅಧಿಕಪ್ರಸಂಗವೆಂದು ಮಧುಸೂದನನಿಗೆ ತೋರಿತು. ಅಂಶಅಂಶದಲ್ಲೂ ಎದ್ದು ನರ್ತಿಸುತ್ತಲಿತ್ತು ರೂಪರೇಖೆ. ಮರುಳುಗೊಳಿಸುವ ಮೋಹ ಮಾಯೆ ಮೃದುಲಳ ಮಾಂಸಖಂಡಗಳಲ್ಲಿ ಮಲಗಿ ನಿದ್ರಿಸುತ್ತಿದ್ದಂತೆ ಕಂಡರೂ ದೃಶ್ಯ ಸುಖವನ್ನು ಮೆಲುಕು ಹಾಕಲು ಸೂಕ್ತ ಸಂದರ್ಭ ಅದಲ್ಲವೆಂದು ದೇಹ ಸ್ಥಿತಿಯನ್ನು ತಿಳಿದುಕೊಳ್ಳುವ ಕಾತುರತೆಯಿಂದ ಮಧು ಮೆತ್ತಗೆ ಮೈಮುಟ್ಟಿ ಮೃದುಲಳನ್ನು ಅಲುಗಾಡಿಸಿದ. ಆಯಾಸದ ಅನಂತ ವೇದನೆಯಲ್ಲಿ ಅಸಹಾಯಕಳಾದವಳಂತೆ ಕಣ್ಣು ತೆರೆದು ಶೂನ್ಯ ದೃಷ್ಟಿ ಬೀರಿದಳು ಮೃದುಲ. ಮನಸವೆಲ್ಲೋ! ದಿಕ್ಕು ತಪ್ಪಿ ಅಲೆದಾಡುತ್ತಿತ್ತು. ಜೀವಕಳೆ ಸುಳಿಗಾಳಿಯಲ್ಲಿ ತೂರಿಕೊಂಡು ಸೋರಿರಬೇಕು. ಇದ್ದ ಬಲವನ್ನು ಒಂದುಗೂಡಿಸಿ ಕ್ಷೀಣ ಸ್ವರವೊಂದನ್ನು ಹೊರದಬ್ಬಿದಳಾಕೆ ನರಳುವಿಗೆ ಎಂಬದರ ಅರ್ಥ. ಮರವಾಗಿ ಬಿದ್ದ ಕೈಗಳನ್ನು Jack ಕೊಟ್ಟು ಎಬ್ಬಿಸುವಂತೆ ಎತ್ತಿ ತನ್ನೆಡೆಗೆ ಬಾಗಿದ ಪತಿಯ ಕೆನ್ನೆಗಳನ್ನು ನೇವರಿಸಿದ ಅವಳ ದಾರುಣತೆ ಅಸಹನೀಯವಾಗಿತ್ತು. ಆದರ ಅರಿವು ಬೆಣ್ಣೆಗೆ ಬಿಸಿ ಮುಟ್ಟುವಂತೆ ಮಧುಸೂದನನ ಹೃದಯವನ್ನು ಮುಟ್ಟಿತು. ತಾಯಿ ತಂದೆ ಸತ್ತಾಗ ಅವರು ಸ್ವರ್ಗಸೇರುತ್ತಾರೆಂಬ ಸಮಾಧಾನ ಸಿಮೆಂಟಿನ ಅಣೆಕಟ್ಟಿನಂತೆ ಮಧುಸೂದನನ ಕಣ್ಣೀರನ್ನು ತಡೆದಿತ್ತು. ಈಗ ಯಾವ ಸಂತೋಷಕ್ಕಾಗಿ ಅವನ ಕಣ್ಣುಗಳು ಸುಮ್ಮನಿರಬೇಕು? ಅವು ಎರಡು ತೊಟ್ಟು ಜಲಜನ್ಮಕ್ಕೆ ಅನುಮತಿಯಿತ್ತು ಶಕ್ತಿ ಪ್ರದರ್ಶನ ಮಾಡಿದುವು. ಅಷ್ಟರಿಂದಲೇ ಅನಿಷ್ಟ ನಿವಾರಣೆಯಾದಂತಾಗಲಿಲ್ಲವಲ್ಲಾ? ಹಣೆ ಮುಟ್ಟಿ ನೋಡಬೇಕು; ನೋಡಿದರೆ ತಣ್ಣಗಿತ್ತು. ಅಂಗಾಲು ಮುಟ್ಟಿದರೆ ಅದು ಬೆಚ್ಚನಾಗಿತ್ತು. ಅಭ್ಯಾಸಬಲದಂತೆ ನಾಡಿ ಹಿಡಿದು ನೋಡಿದ; ಬಡಿತ ಎಷ್ಟಿರಬೇಕೋ ಅಷ್ಟೇ ಇತ್ತು. ಹೃದಯವೂ ಪರೀಕ್ಷೆಗೊಳಗಾಯಿತು; ಬಡಿತದಲ್ಲಿ ಯಾವ ವ್ಯತ್ಯಾಸದ ಪತ್ತೆಯೂ ಆಗಲಿಲ್ಲ. ತನ್ನವಳನ್ನು ತಿನ್ನುವ ಖಾಯಿಲೆಯ ಕ್ರಿಮಿ — ಯಾವುದೆಂದು ತಿಳಿಯದೆ ಅವಳನ್ನೇ ಕೇಳಿದ ವೈದ್ಯ ಮಹಾಶಯ —"ಏನಾಗುತ್ತಿದೆಯೋ ಮೃದುಲ?"

ಕಣ್ಣರಳಿಸಿ ನೋಡಿದಳೇ ಹೊರತು ಮಾತನಾಡಲಿಲ್ಲ.

"ಹೇಳಬಾರದೇ?"

ದೈನ್ಯತೆ ಅಂಜನೆಯನ್ನಾಗಿ ಬಾಗಿಸಿಂತಿತ್ತು.

"ನನಗೇನಾಗುತ್ತಿದೆಯೆಂದು ನನಗೇ ತಿಳಿಯದು."

ಅವಳ ಹೇಳಿಕೆ ಪರಿಹಾರ ಸೂಚಿಸದ ಕಳವಳವನ್ನು ಘೋಷಿಸಿತು.

ಏನಾಗಿರಬಹುದು ಇವಳಿಗೆ? ನಿನ್ನೆ ರಾತ್ರಿ ಹತ್ತು ಗಂಟೆಯವರೆಗೂ ಹುಷಾರಾಗಿದ್ದವಳಿಗೆ ಮುಂಜಾನೆ ಇಷ್ಟಕ್ಕಿಷ್ಟ ಹಾಗೆ ಇಂಥ ಅವಸ್ಥೆ ಬರಬೇಕಾದರೆ ಕಾರಣ!? ಯೋಚನೆಯಲ್ಲಿ ತಲೆ ಹುಕಿ ತಲ್ಲೀನನಾದ ಭಿಷಗ್ವರರು ಅಷ್ಟು ಹೊತ್ತು ಹಾಳಾಯಿತು; ಸಮಸ್ಯೆ ಸಾಯಲಿಲ್ಲ. ತನಗೇನಾಗುತ್ತಿದೆ ಎಂದು ಅವಳಿಗೇ ಗೊತ್ತಿಲ್ಲವಂತೆ; ಕಷ್ಟವಾಯಿತಲ್ಲಾ!? ಬಹುಕಾಲದ ಸಹ ಬಾಳ್ವೆಯ ಅನ್ಯೋನ್ಯ ವಿಚಾರ ವಿನಿಮಯಗಳ ಫಲವಾಗಿ ಹೆಂಡತಿಯಾದವಳ ಅಂತರಂಗದಲ್ಲಿಯ ಆಗುಹೋಗುಗಳನ್ನೇನೋ ಗಂಡನಾದ ಮಧು ಊಹಿಸಬಲ್ಲ. ಆದರೆ ಅಂತಹ ಮಾನಸಿಕ ವಿಕಲ್ಪಕ್ಕೆ ಅವಕಾಶವೇ ಇಲ್ಲದಿರುವಾಗ ಅವನ ವೈದ್ಯಕೀಯಕ್ಕೆ ಎಟಕದ ಈ ದೈಹಿಕ ಅಸ್ವಸ್ಥತೆಯನ್ನು ಶೋಧಿಸಲು ಅವಳನ್ನೇ ಆಧಾರವನ್ನಾಗಿಸುವ ವಿನಹ ಬೇರೆ ಉಪಾಯ ಮನದ ಮುಂದೆ ಹಾದು ಹೋಗಲಿಲ್ಲ.

"ಏನಾದರೂ ವೇದನೆಯಾಗುತ್ತಿದೆಯೋ ಮೃದುಲ?"

"ವೇದನೆಯಾಗುತ್ತಿದೆ; ಆದರೆ ಇಂಥದ್ದು ಎಂದು ಹೇಳಲಾರೆ."

"ಹೊಟ್ಟೆಯಲ್ಲೊಂದು ತರಹ ನೋವಾಗುತ್ತಿದೆಯೇ?"

"ಒಂದು ತರಹ ಏನೋ ಆಗುತ್ತದೆ, ಹುಳುಬಾಧೆಯಂತಹ ನೋವಲ್ಲ."

"ತಲೆ ಸುತ್ತುತ್ತಿದೆಯೇ?"

"ಸುತ್ತುವುದಿಲ್ಲ; ಸುತ್ತಿದ ಹಾಗೆ ಆಗುತ್ತೆ."

"ಕಾರಲು ಬರುತ್ತದೆಯೋ?"

"ಅದನ್ನೆಲ್ಲಾ ನನ್ನನ್ನೇನು ಕೇಳುತ್ತೀರಿ, ಡಾಕ್ಟರರಾದ ನಿಮಗೆ ಗೊತ್ತಾಗುವುದಿಲ್ಲವೇ?"

ಡಾಕ್ಟರ್ ನಿಜ ಆದರೆ ಇದು ಯಾವ ಜಾತಿಯ ರೋಗವೆಂದು ಗೊತ್ತಾಗುವುದಿಲ್ಲ. ಅವನಲ್ಲಿಗೆ ಚಿಕಿತ್ಸೆಗಾಗಿ ಎಲ್ಲಾ ನಮೂನೆವಾರಿನ ಖಾಯಿಲೆಯವರೂ ಬರುತ್ತಾರೆ; ಇಂಥಾ ಅನಾರೋಗ್ಯ ಭೇಟಿಯಾದುದು ಇದೇ ಮೊದಲು. ಎಷ್ಟು ವಿಚಾರಿಸಿದರೂ ತನ್ನ ಕುಲಗೋತ್ರದ ಗುಟ್ಟು ಬಿಡುವುದಿಲ್ಲ ಈ ಆಗಂತುಕ. ವೈದ್ಯಕೀಯ ಮತಾಚಾರಕ್ಕೆ ದೊಡ್ಡ ಆತಂಕವದು. ಆದರೂ ಸಾಧ್ಯವಿರುವ ಪ್ರಥಮ ಪರಿಚಯದ ಉಪಚಾರ ನಡೆಸಬೇಕಾದ ಗೃಹಸ್ಥ ಧರ್ಮ ಧನ್ವಂತರಿಯದು ಕೂಡಾ.

"ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲವೇ?"

"ಅವಕಾಶ ಕೊಟ್ಟಷ್ಟು ಅವಧಿಯಲ್ಲಿ ಚೆನ್ನಾಗಿಯೇ ಬಂತು."

ಹಾಗಿದ್ದರೆ ಎಂಟು ಗಂಟೆಯ ಕಾಲವನ್ನು ನಿದ್ದೆಯೇ ಜೀರ್ಣಿಸಿದೆ. ಧಾರಾಳವಾಯಿತಲ್ಲಾ? ಅನಿರೀಕ್ಷಿತವಾಗಿ ನಿತ್ರಾಣ ಬರುವ ವಾಡಿಕೆಯಿಲ್ಲ. ಗಂಡನ ತಿಳುವಳಿಕೆಯಲ್ಲಿ ಗರ್ಭಧಾರಣೆಯ ಸಂಭವವೂ ಸಾಧ್ಯವಿಲ್ಲ. ಕೃತಕ ಅಸುಖವಾದರೆ ಗೊತ್ತುಗುರಿಯಿಲ್ಲದೆ ಪ್ರತ್ಯಕ್ಷವಾಗಲೂ ಬಹುದು ಅದೇ ಇದ್ದರೆ ಮೃದುಲ ಪ್ರೇಮ ಜ್ವರದ ಒಂದು ದೃಶ್ಯವನ್ನು ಅಭಿನಯಿಸುತ್ತಿದ್ದಾಳೆ ಖಂಡಿತ.

"ಮೃದುಲಾ, ಗೊತ್ತಾಯಿತು ಬಿಡು, ಇದು ಅನುರಾಗ ರೋಗ. ನನ್ನನ್ನು ಪೆಪ್ಪುಕಟ್ಟಿಸುವ Politics ಇದು."

"Politics ಅಲ್ಲ Mathematics ನಾನು ಯಮ ಮಾವ ಬರುವ ಗಳಿಗೆ ಎಣಿಸುತ್ತಿದ್ದೇನೆ. ನಿಮಗೆ ಹೇಗೆ ಅರ್ಥವಾಗಬೇಕು ನನ್ನ ಸಂಕಟ!"

ಕಣ್ಣೀರಿನಲ್ಲಿ ಕಲಸಿ ಮೃತ್ಯು ಯಾತನೆಯ ವರ್ಣಚಿತ್ರ ಬಿಡಿಸಿದಳು ಮೃದುಲ. ಆ ಸಂದರ್ಭದಲ್ಲಿ ಬಾರದ ಕಣ್ಣೀರು ಇದ್ದೇನು ಉಪಯೋಗ? ದಿಂಬು ಕೂಡಾ ಒದ್ದೆಯಾಯಿತು. ಅದನ್ನು ಬದಲಾಯಿಸುವಷ್ಟು ತಾಳ್ಮೆ ಮಧುಸೂದನನಿಗಿಲ್ಲ. ಅವನ ಗಮನವೆಲ್ಲಾ ಮೃದುಲ ಮುಖದಲ್ಲಿ ಬೀಡ ಬಿಟ್ಟಿತ್ತು. ಆ ಕ್ಷಣಕ್ಕೆ ಅವಳು ನುಡಿದ ಮಾತು, ಮಿಡಿದ ಕಣ್ಣೀರು ಮಧುಸೂದನನ ಅಂತರಂಗವನ್ನು ವಿದ್ಯುತ್ ಪ್ರವಾಹದಂತೆ ಸೆಳೆಯಿತು. ಮುಖದಲ್ಲಿ ಮುಖವಿಟ್ಟು ಅತ್ತು ಬಿಟ್ಟ ಗಂಡ

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ. ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಕೆಂಪು ಚೀನಾದಲ್ಲಿ

ಗ್ರಾಮೀಣ ಜೀವನ

ಬರೆದವರು: ಶ್ರೀ ಶಿವಶಂಕರ, ಮದ್ರಾಸು.

ಕಮ್ಯೂನಿಸ್ಟ್ ಚೀನಾದ ಹಳ್ಳಿಯ ಜನರು ಕಮ್ಯೂನಿಸ್ಟ್‌ಷಾಹಿ ಎಂದು ಕೊನೆಗೊಳ್ಳಬಹುದೆಂಬುದನ್ನು ಕಡುಕಾತುರತೆಯಿಂದ ಎದುರು ನೋಡುತ್ತಿದ್ದಾರೆ. ಆದರೂ ಇತ್ತೀಚೆಗೆ ಪೆಕಿಂಗ್ ಪ್ರಜೆಗಳ ಪರಿಸ್ಥಿತಿ ಸುಧಾರಿಸುತ್ತಿರುವುದನ್ನು ತಿಳಿದುಕೊಂಡ ಬಳಿಕ ಸ್ವಾಭಾವಿಕವಾಗಿ ಹಳ್ಳಿಯ ಜೀವನವೂ ಸುಧಾರಿಸಲೇ ಬೇಕೆಂದು ಮಾನೂಶಯುವ ಮೇಲೆ ಗಣಿತಜ್ಞರು ತೋರಿಸಿಕೊಡಬಹುದು. ದೇವರು ಕೊಟ್ಟರೂ ಪೂಜಾರಿ ಬಿಡಲಾರನೆಂಬಂತೆ ತರಕಾರಿ—ಧಾನ್ಯಾದಿಗಳು ಚೆನ್ನಾಗಿ ಬೆಳೆದಿರುವದಾದರೂ ಬಡ ಜನತೆಗೆ ಅದು ಮಾಂತ್ರಿಕನ ಮಾವಿನ ಹಣ್ಣಿನಂತೆ ಇವೆ. ಬಡ ಚೀನೀ ಜನತೆಯು ತುತ್ತನ್ನು-ಇದೂ ಕೈಗೆ ಬಂದಿರುವ ತುತ್ತನ್ನು-ಬಾಯಿಗೆ ಬರುವ ಮುಂಚೆಯೇ ಕಸಿದುಕೊಂಡು ಅಣುಗುಂಡು ಸಿದ್ಧಗೊಳಿಸಲು ಬೇಕಾಗುವ ಯಂತ್ರ ಸೌಕರ್ಯಕ್ಕಾಗಿ ಉಪಯೋಗಿಸಲಾಗುತ್ತದೆಂಬುದನ್ನು ಚೌ-ಎನ್-ಲಾಯ್ ಸ್ಪಷ್ಟವಾಗಿ ಸೂಚಿಸಿದ್ದಾರೆ. ಕೆಲವೇ ವರ್ಷಗಳಲ್ಲಿ ಚೀನಾವು ಅಣುಗುಂಡು ಶಕ್ತಿಯುಳ್ಳ ಪ್ರಬಲ ರಾಷ್ಟ್ರವಾಗುತ್ತದೆಂಬುದನ್ನು ಅವರು ಪ್ರಕಟಪಡಿಸಿರುವರು. ಇದು ಯಾವ ರೀತಿಯ ನ್ಯಾಯ ಎಂಬುದನ್ನು ಮಾನವೀಯತೆಯ ಪರಿಚಯ ಇರುವ ರಾಷ್ಟ್ರಗಳು ತಿಳಿಸುಕೊಂಡಾವು. ಇವರಿಂದ ಪೆಕಿಂಗ್ ಪ್ರಜೆಗಳ ಕೈಗೆ ಬಂದ ತುತ್ತು ಜಾರಿಹೋಯಿತೆಂಬುದು ಗೊತ್ತಾಗುತ್ತದೆ. ನಾಲ್ಕು ರಾಷ್ಟ್ರಗಳ ರಾಯಭಾರಿಗಳಿರುವ, ಬಾಳುತ್ತಿರುವ ಪೆಕಿಂಗ ಪ್ರಜೆಗಳ ಪಾಡು ಹೀಗಾದಲ್ಲಿ ಒಳಪ್ರದೇಶಗಳಲ್ಲಿ, ಅನ್ಯ ರಾಷ್ಟ್ರಗಳ ದೂತರ ಕಣ್ಣಿಗೆ ಬೀಳದ ಜೀವನ ನಡೆಸುತ್ತಿರುವ ಹಳ್ಳಿಗರ ಪಾಡು ಹೇಗಿರಬಹುದೆಂಬುದನ್ನು ಪ್ರತ್ಯೇಕವಾಗಿ ವಿವರಿಸಬೇಕಾಗಿರುವುದಿಲ್ಲ. ಆದರೂ ಇಲ್ಲಿ ಗ್ರಾಮೀಣ ಜನತೆಯ ಪರಿಸ್ಥಿತಿಯ ಸ್ಥೂಲ ಪರಿಚಯ ಮಾಡಿಕೊಡಲಾಗಿರುತ್ತದೆ.

ಐವತ್ತು ಕೋಟಿಗಿಂತಲೂ ಹೆಚ್ಚಿನ ಚೈನಿ ಜನರು ಕೃಷಿಕರಾಗಿದ್ದಾರೆ. ಆದುದರಿಂದ ಅವರ ದಿನ ದಿನದ ಜೀವನವೇ ಚೈನಾದ ದೈನಂದಿನ ಜೀವನವಾಗುತ್ತದೆ. ಅವರ ಜೀವರಿನ ಸುರಿಯುವಿಕೆಯಿಂದ ಚೀನಾದಲ್ಲಿ ಮುಂಬರುವ ದಿನಗಳಲ್ಲಿ ಕೊಟ್ಟಿ ಹಾಕೂಗಿರಲು ಸಾಧ್ಯವೇ ಎನ್ನುವುದನ್ನು ನಿಶ್ಚಯಿಸಬಹುದು.

೧೯೬೪ರ ಬೇಸಿಗೆಯಲ್ಲಿ ಚೀನಾಕ್ಕೆ ಹೋದ ವೀಕ್ಷಕನಿಗೆ ಕೃಷಿಕರ ಜೀವನವು, ಅದರಲ್ಲೂ ಪ್ರಥಮ ದೃಷ್ಟಿಗೆ, ಪ್ರಪಂಚದಲ್ಲಿರುವ ಇತರ ರಾಷ್ಟ್ರಗಳ ಕೃಷಿಕರ ಜೀವನದಂತೆ ಇರುವುದು ತಿಳಿದು ಬರುತ್ತದೆ! ವರ್ಷ ವರ್ಷ ಚೈನಾದಲ್ಲಿ ನಡೆಯುತ್ತಿರುವ ರಾಜಕೀಯ ಬದಲಾವಣೆಗಳಿಗೂ ಈ ಕೃಷಿಕರ ಜೀವನವನ್ನು ಬದಲಿಸಲು ಸಾಧ್ಯವಾಗಿರುವುದಿಲ್ಲ. ಅವನು ಅಂದಿನಂತೆ ಇಂದೂ ಸೂರ್ಯನೊಡನೆಯೂ, ಇಂದ್ರನೊಡನೆಯೂ ಜೀವಿಸುತ್ತಿರಲೇ ಬೇಕಾಗಿರುತ್ತದೆ.

೧೯೬೩ರಲ್ಲಿ, ಹಿಂದಿನಂತೆ, ಚೈನಿ ಕೃಷಿಕನು ಬಹಳ ಬಡವನಾಗಿದ್ದನು. ಬಿತ್ತನೆಯ ಹಾಗೂ ಕೊಯ್ಲಿನ ಸಮಯ ಅವನು ಅತಿ ಶ್ರಮ ಪಟ್ಟು ದುಡಿಯಬೇಕಾಗಿತ್ತು, ಇತರ ಸಮಯದಲ್ಲಿ ಅವನಿಗೆ ಅಷ್ಟು ಕೆಲಸ ಕಾರ್ಯಗಳಿರುತ್ತಿರಲಿಲ್ಲ. ಆಗ ಅವನು ತನ್ನ ಗದ್ದೆಗಳನ್ನು ಮಾತ್ರ ನೋಡಿಕೊಳ್ಳುತ್ತಿದ್ದನು. ಅವನ ಪುಟ್ಟ ಪ್ರಪಂಚವೆಂದರೋ ಅವನ ಗದ್ದೆ ಹಾಗೂ ಅವನ ಕುಟುಂಬ ಮಾತ್ರವಾಗಿತ್ತು. ಅವೆಲ್ಲಾ ಅವನಿಗೆ ಅಕ್ಕಪಕ್ಕದಲ್ಲೇ ಇರುತ್ತಿದ್ದವು.

ಕಮ್ಯೂನಿಸ್ಟ್ ಪಾರ್ಟಿಯು ಕೂಡ ಗೋಳು ಅಲ್ಲಿ ಕಾಣಿಸಿಕೊಂಡಿತು. ಅವನ ಕುಟುಂಬವೆಂಬುದೀಗ ಮುಂಚಿನಂತಿಲ್ಲ. ಅವನಿಗೆ ತನ್ನ ಗದ್ದೆಗಳೆಂಬುದಿಂದಿಲ್ಲ. ಅವೆಲ್ಲವನ್ನು ಆಡಳಿತ ಯಂತ್ರ ಆಕ್ರಮಿಸಿಕೊಂಡಿರುತ್ತದೆ, ವಶಪಡಿಸಿಕೊಂಡಿರುತ್ತದೆ. ಎಲ್ಲಾ ವಿಧದ ಜವಾಬ್ದಾರಿಯನ್ನು ಸರಕಾರ ವಹಿಸಿಕೊಳ್ಳುತ್ತಿದೆ. ಬಿತ್ತನೆ ಹಾಗೂ ಕೊಯ್ಲಿನ ಕಾಲದಲ್ಲಿ ಅವನು ಗದ್ದೆಯಲ್ಲಿ ದುಡಿದ ನಂತರ ಇತರ ಸಮಯದಲ್ಲಿ ನೀರಾವರಿ ಕೆಲಸಕ್ಕಾಗಿ, ರಸ್ತೆ ರಚನೆ ಹಾಗೂ ಸಾಲುಮರಗಳನ್ನು ನೆಡುವ ಕಾರ್ಯಕ್ಕಾಗಿ ಈಗ ಎಡೆಬಿಡದೆ ದುಡಿಯಬೇಕಾಗಿರುತ್ತದೆ-ಸರಕಾರದ ತಾಳಕ್ಕೆ ಅವನು ಹೆಜ್ಜೆಗಳನ್ನು ಹಾಕಲೇಬೇಕು, ಜೀವದಿಂದಿರಬೇಕಾದಲ್ಲಿ.

ಹೀಗೆ, ಆರಂಭದಲ್ಲಿ ಸುತ್ತಿಗೆಯ ಪೆಟ್ಟು ಜೋರಾಗಿತ್ತು. ಫಲಿತಾಂಶವು ಅವರಿಗೆ ಪ್ರಮಾದದ ಪ್ರಜ್ಞೆಯನ್ನು ಬರಿಸಿತು. ಅವರ ಲೆಖ್ಖಾಚಾರವೆಲ್ಲ ತಲೆಕೆಳಗಾಗಿತ್ತು. ಅದನ್ನು ಕಂಡು ಅವರೀಗ ಕಪಿಮುಷ್ಟಿಯನ್ನು ಸ್ವಲ್ಪ ಸಡಿಲಿಸಿರುವರು. ಕಮ್ಯೂನೆಂಬ ಕಡ್ಡಾಯ ಕೃಷಿಕರ ಕೂಟದ ಬದಲು ಇದೀಗ ಅಲ್ಲಿ ಅನೇಕ ಹೆಸರುಗಳ ಸಹಕಾರ ಸಂಘಗಳ ನೆರೆಯಲ್ಲಿ ಕೃಷಿಕರ ಕೂಟವನ್ನು ಕಟ್ಟುತ್ತಿದ್ದಾರೆ. ಒಂದೊಂದು ಸಂಸ್ಥೆಗಳಲ್ಲಿ ಸಾಧಾರಣ ೩೦೦-೪೦೦ ಸದಸ್ಯರಿರುತ್ತಾರೆ. ಅವರ ದುಡಿಮೆಯ ಫಲದ ಒಂದು ಭಾಗವನ್ನು ಸರಕಾರ ವಶಪಡಿಸಿಕೊಳ್ಳುತ್ತದೆ. ಮಿಕ್ಕುಳಿದುದನ್ನು ಅವರೊಳಗೆ ಹಂಚಿಬಿಡಲಾಗುತ್ತದೆ. ಪಾಲು ಪಡೆದುಕೊಳ್ಳಲು ಇಷ್ಟವಿಲ್ಲದಿರುವವರು ಸಾಮೂಹಿಕ ಖಾನಾವಳಿಗಳಲ್ಲಿ ಊಟವೂ ಪಡೆಯಬಹುದು. ಪಾಲಿಗೆ ಬಂದ ಪದಾರ್ಥ ಸಾಕಾಗದಿರುವವರು ಮಾರುಕಟ್ಟೆಗಳಲ್ಲಿ ಪೂರಕವನ್ನು ಕ್ರಯಕ್ಕೆ ಪಡೆದುಕೊಳ್ಳಬಹುದು.

ಆಹಾರದ ನಂತರ ಅತ್ಯಗತ್ಯ ಬಳಕೆಯ ವಸ್ತುವೆಂದರೆ ಅರಿವೆ. ಆ ದಿಕ್ಕಿನಲ್ಲಿ ಚೀನಾ ಅಷ್ಟು ಮುಂದರಿದಿರುವದಿಲ್ಲ. ತನ್ನ ಜನತೆಗೆ ಬೇಕಾದಷ್ಟು ಬಟ್ಟೆಯನ್ನು ಒದಗಿಸಲು ಸರಕಾರ ಶಕ್ತವಿರುವದಿಲ್ಲ. ಚೀನಾ ಇಂದು ಕಮ್ಯೂನಿಸ್ಟ್ ಕಪಿಮುಷ್ಟಿಯೊಳಗಿದೆಯಾದರೂ ಬಟ್ಟೆಗಳನ್ನು ಪರರಾಷ್ಟ್ರಗಳಿಗೆ ರಫ್ತು ಮಾಡುತ್ತಿರುವದನ್ನು ಮರೆಯಲು ಸಾಧ್ಯ ಇರುವದಿಲ್ಲ. ಚೈನಾ ರೇಶ್ಮೆಯ ಬಟ್ಟೆಗಳನ್ನು ಕೂಡಾ ರಫ್ತುಮಾಡುತ್ತಿದೆ. ತನ್ನ ಜನತೆಯ—ಸ್ವದೇಶ ಬಾಂಧವರ ದೇಹವನ್ನು ನಿಸರ್ಗಕ್ಕೆ ಪ್ರದರ್ಶಿಸಿಯಾದರೂ ಕಮ್ಯೂನಿಸ್ಟ್ ಷಾಹಿಯು ಅರಿವೆಯನ್ನು ಅನ್ಯರಾಷ್ಟ್ರಗಳಿಗಿತ್ತು ಅಣು ಶಸ್ತ್ರ ತಯಾರಿಕೆ ಯಂತ್ರಗಳನ್ನು ಪಡೆದುಕೊಳ್ಳುತ್ತಿದೆ! ಇದೂ ಮಾನವೀಯತೆ ಏನು?

ಹೊಟ್ಟೆಗೆಂದಿಷ್ಟು ಹಾಕಿಕೊಂಡಮೇಲೆ, ಅಂಗಾಂಗಗಳ ಮೇಲೆ ಅದಿಷ್ಟು ಅರಿವೆಯನ್ನು ಹಾಕಿಕೊಂಡಮೇಲೆ ಮಾನವನಿಗೆ ಸುಖ ಅನುಭವಿಸಲು, ಆರಾಮ ಪಡೆಯಲು, ಮೋಜುಮಾಡಲು, ಮನಸ್ಸಾಗುವದು ವಿಶೇಷವಲ್ಲ. ಚೈನಾದ ಜನತೆ ಅರಿಯದೇನೇ ತಮ್ಮ ಕುತ್ತಿಗೆಯನ್ನು ಕಮ್ಯೂನಿಸ್ಟ್ ಕತ್ತಿಗೂ ತಲೆಯನ್ನು ಕಮ್ಯೂನಿಸ್ಟ್ ಸುತ್ತಿಗೆಗೂ ಒಡ್ಡಿಕೊಂಡೀಗ ವಿಲಿ ವಿಲಿ ಒದ್ದಾಡುತ್ತಿದೆಯಾದರೂ ಹಳೆಯ ವಾಸನೆ ಒಂದಿಷ್ಟನ್ನೂ ಬಿಟ್ಟುಕೊಡದಿರುವದು ವಿಚಿತ್ರವಲ್ಲ. ದುರ್ದೃಷ್ಟವಶಾತ್ ಅದಕ್ಕೆ ಅಷ್ಟು ಅವಕಾಶವೇ ಇರುವದಿಲ್ಲ. ಹಿಂದೆ ಆರಾಮ ಹರಾಮ್ ಎನ್ನಲಾಗುತ್ತಿತ್ತು. ಆದರೆ ಇದೀಗ ಅವರಿಗೆ ಅಲ್ಪ ವಿರಾಮ ದೊರೆಯುತ್ತದೆ. ಪ್ರತ್ಯೇಕ ಪ್ರತ್ಯೇಕ ಆಕಾಶವಾಣಿ ಸೆಟ್ಟನ್ನು ಪಡೆದುಕೊಳ್ಳಲು ಹಳ್ಳಿಯ ಜನತೆಗೆ ಈಗಲೂ ಅನುಮತಿ ಇರುವದಿಲ್ಲ. ಕಮ್ಯೂನಿಸ್ಟ್ ಧ್ವನಿವಾಹಕಗಳ ಮೂಲಕ ಅವರಿಗೆ ಆಕಾಶವಾಣಿ ಸೌಕರ್ಯ ಪೂರೈಸಿಕೊಡಲಾಗುತ್ತದೆ. ಅಂದರೆ ವ್ಯಕ್ತಿಗಿಷ್ಟ ಬಂದಂತೆ ಸಂಗೀತ ಸುಖ ಅನುಭವಿಸಲು ಅನುಕೂಲತೆ ಇರುವದಿಲ್ಲ. ಸರಕಾರ ಇಷ್ಟಪಟ್ಟು ಕೊಟ್ಟುದನ್ನು ಅವರು ಅನುಭವಿಸಲೇ ಬೇಕಾಗುತ್ತದೆ. ಹಿಂದಿನ ಲೇಖನ ಒಂದರಲ್ಲಿ ವ್ಯಕ್ತಿಗಳು ಪ್ರತ್ಯೇಕ ವಿಶಿಷ್ಟವಸ್ತುಗಳನ್ನು ಪಡೆಯಲು ಪ್ರಯತ್ನಿಸಿ ಪ್ರಾಣಕ್ಕೆ ಸಂಚಕಾರ ತಂದುಕೊಂಡಿರುವದನ್ನು ವಿವರಿಸಲಾಗುತ್ತದೆ. ಅವನೊಂದು ಆಕಾಶವಾಣಿಯನ್ನು ಪಡೆದುಕೊಂಡನೆಂದರೆ ಅವನಿಗೆ ಎಲ್ಲಿಂದ ಹಣ ಬಂತು, ಆಕಾಶವಾಣಿ ಎಲ್ಲಿಂದ ಬಂತು, ಅವನು ಅವ್ಯಾನ ವಿಷಯಗಳನ್ನು ಆಕಾಶವಾಣಿಯ ಮೂಲಕ ತೆಗೆದುಕೊಳ್ಳುತ್ತಾನೆ... ಇತ್ಯಾದಿ ಸಂಗತಿಗಳತ್ತ ಸರಕಾರ ಗಮನ ಹರಿಸಬೇಕಾಗುತ್ತದೆ.

ಪ್ರತ್ಯೇಕ ಆಕಾಶವಾಣಿ ಅನುಕೂಲತೆ ಇಲ್ಲದಿರುವದರಿಂದ ನಾಟಕ—ಚಲಚಿತ್ರ ಪ್ರದರ್ಶನಗಳಿಗಾದರೂ ಹೋಗುವ ಎಂದರೆ ಅದಕ್ಕೂ ಅವರಿಗೆ ಹಾಗೂ ಅನುಕೂಲತೆ ಅಷ್ಟು ಇರುವದಿಲ್ಲ. ಅಲ್ಲಿ ಕೇವಲ ಕೆಲವೇ ಪ್ರದರ್ಶನಾಲಯಗಳಿವೆ. ದೂರದಿಂದ ಅವರವರಿಗೆ ಇಷ್ಟಬಂದಂತೆ ಹೋಗಲು ಸಾಧ್ಯ ಇರುವದಿಲ್ಲ. ಅವರವರ ಸರ್ತಿಯ ಪ್ರಕಾರವೇ ಅವರು ಸುಖ ಅನುಭವಿಸತಕ್ಕದ್ದು.

ಈಗ ಅಲ್ಲಿ ಕೃಷಿಕರಿಗೆ ತಿಂಗಳಲ್ಲಿ ಎರಡು ದಿನ ಬಿಡುವು ಕೊಡಲಾಗುತ್ತದೆ; ವರ್ಷದಲ್ಲಿ ಐದು ದಿನ ರಜೆಯೂ ಇದೆ. ಆ ಸಮಯದಲ್ಲಿ ಅವರು ಮೀನು ಹಿಡಿಯಲು ಹೋಗುತ್ತಾರೆ.

ಹಳ್ಳಿಗಳಲ್ಲಿ ಹದಗೆಟ್ಟಿದ್ದ ಪರಿತಾಪಕರ ಪರಿಸ್ಥಿತಿ ಇದೀಗ ಕೊಂಚ ಬದಲಾಗಿದೆ ಎನ್ನುತ್ತಾರೆ. ಆದರೆ ಚೈನಾದಿಂದ ತಲೆ ತಪ್ಪಿಸಿಕೊಂಡು ಓಡಿ ಬರುತ್ತಿರುವವರು

(೧೦ನೇ ಪುಟ ನೋಡಿರಿ)

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ—

O S No 51/1964.

ದರೆಗುಡ್ಡೆ ಶ್ರೀನಿವಾಸ ತಂತ್ರಿ—ಶಿಲ್ಲಪುತ್ತಿಗೆ ಸೀತಾರಾಮ ತಂತ್ರಿ ಮಗ ಕಾರ್ಕಳ ತಾಲ್ಲೂಕು, ದರೆಗುಡ್ಡೆ ಗ್ರಾಮ— ವಾದಿ.

ಮತ್ತು

1, ಪರಮೇಶ್ವರಿ ಹೆಂಗಸು — ಬಾಗಿ ಹೆಂಗ್ಸಿನ ಮಗಳು ಶಿರ್ತಾಡಿ ಗ್ರಾಮ
2 S ರತ್ನ, ಲಕ್ಷ್ಮಿ ಮಗಳು
3, ಜಾನಕಿ, ಲಕ್ಷ್ಮಿ ಮಗಳು— ಕಾರ್ಕಳ ಕಸಬಾ. } ಪ್ರತಿವಾದಿರು

ಸದರಿ 1ನೇ ಪ್ರತಿವಾದಿಳು, ಪರಮೇಶ್ವರಿ ಹೆಂಗ್ಸಿಗೆ— ವಾದಿಯು, ನಿಮ್ಮಿಂದ ಕೊಡಾ ಬರತಕ್ಕ ಕೋರಿದವಿನ ಅಸಲು ಬಡ್ಡಿ ಹಣದ ವಸೂಲಿಗೆಗ್ಗೆ ನಿಮ್ಮ ಮೇಲೆ ಕೊಡಾ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಖು 6-6-1964ನೇ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಯಿಟ್ಟಿರುವದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉವಾಹಣೆಯು ಯಿರುವಲ್ಲಿ, ನೀವು ಸದರಿ ತಾರೀಕಿನಲ್ಲು ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ, ಜವಾಬು ಮಾಡಿಕೊಳ್ಳಬಹುದಾಗಿಯೂ, ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬದಾಗಿಯೂ, ಈ ಮೂಲಕ ನಿಮಗೆ ತಿಳಿಯ ಪಡಿಸಲಾಗುತ್ತದೆ.

A N. S Achar
Advocate for plaintiff
Karkala, 8-4-64

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ!

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಡಾ| ಕೆ. ಎಸ್. ಶೆಟ್ರಿ ನೆನಪರಿಕೆ

ಶ್ರಮವೆ ಜೀವನ—ಜೀವನವೆ ಶ್ರಮ

ಬರೆದವರು: ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.

ಇದೇ ಕಳೆದ ಮಾರ್ಚ ತಿಂಗಳ ತಾ. ೨೬ ರಲ್ಲಿ ಪುನಃ ನಾನು ಮೈಸೂರು ವಿಧಾನ ಪರಿಷತ್ತಿಗೆ ಆರಿಸಲ್ಪಟ್ಟೆ. ಸಹೋದ್ಯೋಗಿ ಮತ್ತು ಮಿತ್ರರನೇಕರು ಕಾಫಿ ಮತ್ತು ಭೋಜನಕ್ಕಾಗಿ ಒತ್ತಾಯಿಸಿದರು. ಒಂದಲ್ಲೊಂದು ನೆಪ ಮುಂದೊಡ್ಡಿ ನಾನವರ ಬಾಯಿ ಮುಚ್ಚಿಸಿದೆ. ಯಾಕೆಂದರೆ ಆಗ ನನ್ನ ಕೈ ಬರಿದಾಗಿತ್ತು. ದುಡ್ಡಿಲ್ಲದೆ ನನ್ನ ಹಾಗೆ ದೊಡ್ಡಸ್ತಿಕೆ ನಡೆಸುವವರು ಅತಿ ವಿರಳವಿರಬಹುದು.

ತಾ. ೨೯ ನೇ ಆದಿತ್ಯವಾರ ಮುಂಜಾನೆ ನನಗೊಂದು 'ಫೋನ್' ಕರೆ ಬಂತು. "ನೀವು ಇಂದು ಮಧ್ಯಾಹ್ನ ಊಟಕ್ಕೆ ನಮ್ಮಲ್ಲಿಗೆ ಬರಬೇಕು. ನಿಮ್ಮ ಮಿತ್ರರನ್ನೆಲ್ಲ ಕರೆದುಕೊಂಡು ಬನ್ನಿರಿ. ನಮ್ಮ ಜಿಲ್ಲೆಯ ಶಾಸಕರನ್ನು ನಾನೇ ಆಮಂತ್ರಿಸುತ್ತೇನೆ. ಕಾರು ಕಳುಹಿಸುತ್ತೇನೆ" ಈ ಕರೆ ಯಾರದೆಂದು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಅದರ ಉದ್ದೇಶವೇನೆಂಬುದನ್ನೂ ಸೂಚಿಸಬೇಕಿಲ್ಲ. ೧೯೪೨ರಲ್ಲಿ 'ಕ್ವಿಟ್ ಇಂಡಿಯಾ' ಆಂದೋಲನದಲ್ಲಿ ನಾನು ೧೮ ತಿಂಗಳ ಸುದೀರ್ಘ ಶಿಕ್ಷೆ ಅನುಭವಿಸಬೇಕಾಯಿತು. ಇನ್ನೊಂದು, ದೀರ್ಘಕಾಲ ನನ್ನ ಹೆಂಡತಿ ಮಕ್ಕಳ ಜೀವನ ವ್ಯವಸ್ಥೆ ಮಾಡಲು ನನ್ನಿಂದ ಸಾಧ್ಯವಿರಲಿಲ್ಲ. "ನಾನು ವಿದ್ಯಾರ್ಥಿಯಾಗಿದ್ದಾಗ ಶಾಂತಪ್ಪಣ್ಣನಿಂದ ಹಣ ಪಡೆದುಕೊಂಡಿದ್ದೆ. ಅದನ್ನು ಈವರೆಗೂ ಹಿಂದೆ ಕೊಡಲಾಗಲಿಲ್ಲ. ಈ ಸಂದರ್ಭದಲ್ಲಿ ಅದನ್ನು ಪ್ರತಿ ತಿಂಗಳು ಸ್ವಲ್ಪ ಸ್ವಲ್ಪ ಕಳುಹಿಸುತ್ತೇನೆ. ಅದನ್ನು ನೀವು ಸ್ವೀಕರಿಸಬೇಕು" ಎಂದು ನನ್ನ ಹೆಂಡತಿ ನೇತ್ರಾವತಿಗೆ, ನಾನು ಬಿಡುಗಡೆಯಾಗುವ ತನಕ ಹಣ ಸಹಾಯಮಾಡಿದ ಗುಪ್ತ ಹಾಗೂ ನಿರಾಡಂಬರ ನೆರವಿನ ಮನೋಭಾವವೇ ಡಾಕ್ಟರ್ ಶೆಟ್ಟರ ಜೀವನ ಮತ್ತು ಸ್ವಭಾವದ ವಿಶಿಷ್ಟತೆ. ನನ್ನ ಮಾವ ಬಂಧುಮಿತ್ರರಾಗಲಿ, ನನ್ನ ಸಾರ್ವಜನಿಕ ಜೀವನದಲ್ಲಿ, ಡಾಕ್ಟರ್ ಕೆ. ಎಸ್. ಶೆಟ್ರಿಷ್ಟು ಒಂದೇ ರೀತಿಯ ಆದರ ಹಾಗೂ ಅಭಿಮಾನ ತೋರಿಸಿಲ್ಲ. ನನ್ನ ಹೆಂಡತಿ ಮಕ್ಕಳ ಕಷ್ಟ ಕಾರ್ಪಣ್ಯದಲ್ಲಿ ಸಹಭಾಗಿಯಾದವರಿಲ್ಲ. ಹಿಂದಿನ ಯಾವ ಜನ್ಮದ ಋಣವನ್ನೋ ಡಾಕ್ಟರ್. ಕೆ.ಎಸ್. ಶೆಟ್ರಿ ತೀರಿಸಿ ನಮ್ಮ ಮೇಲೆಲ್ಲ ಋಣಭಾರದಲ್ಲಿ ಹಾಕಿ, ತನ್ನ ಸ್ವಭಾವಕ್ಕನುಗುಣವಾಗಿ ಯಾರಿಗೂ ಕಷ್ಟ ಕೊಡದೆ, ಯಾರ ಹಂಗಿಗೂ ಬೀಳದೆ ಕ್ಷಣ ಮಾತ್ರದಲ್ಲೆಂಬಂತೆ ಕಣ್ಮರೆಯಾಗಿ ಬಿಟ್ಟರು. ಸದಾ ನಗುಮುಖದ ನಲಿವನ್ನು ಬೆಳಗುತ್ತಿದ್ದ ಅವರ ಚಿಕ್ಕ ಪ್ರಾಯದ ಪತ್ನಿ ಮತ್ತು ಮಕ್ಕಳ ಒಲವಿನ ಸಂಪರ್ಕದ ಅವರ ಭೋಜನವು ತಾ. ೩೧ರದ್ದೇ ಕೊನೆಯದಾಗುವುದೆಂದು ಎಣಿಸಿದವರಾರು? ಇದೆಲ್ಲಾ ಆದೊಂದು ಅಂಥ ನಿಷ್ಠುರ ನಿಯಮಾನುಸಾರ ನಡೆಯುವ ವಿಧಿ ನೀತಿಯೆಂದೇ ಉದ್ಗರಿಸಿ ಸುಮ್ಮನಾಗಬೇಕು.

ಕ್ಷಣಮಾತ್ರದ ಮರಣ

ಎಪ್ರಿಲ್ ತಾ. ೨ರಲ್ಲು ನಾವೆಲ್ಲ ನಮ್ಮ ಪಕ್ಷದ ಸಭೆಗಾಗಿ 'ರೆಸಿಡೆನ್ಸಿಗೆ' ಹೋಗಿದ್ದೆವು. ಸಭೆ ಮುಗಿದಾಗ ಬಿಜಾಪುರ ಜಿಲ್ಲೆಯ ನನ್ನ ಮಿತ್ರರಾದ ಗೌಡರು, ಪಶುವೈದ್ಯ ಇಲಾಖೆಗೆ ಸಂಬಂಧಿಸಿದ ಯಾವುದೋ ಒಂದು ವಿಷಯವನ್ನು ನನ್ನೊಡನೆ ಪ್ರಸ್ತಾಪಿಸಿದರು. "ಇಂದು ಸಂಜೆ ನಾವಿಬ್ಬರೂ ಡಾಕ್ಟರ್ ಶೆಟ್ರನ್ನು ಕಂಡು ಮಾತಾಡೋಣ" ಎಂದು ಅವರಿಗೆ ತಿಳಿಸಿ ನಾನು ನಮ್ಮ ನಿವಾಸವಾದ ಲೆಜಿಸ್ಲೇಟರ್ ಹೋಮಿಗೆ ಬಂದೆ. ಅಲ್ಲಿ ನಾನು ಕೆಲ ಮಂದಿ ಮಿತ್ರರು ಮಾತಾಡುತ್ತಿದ್ದಾಗ, "ಡಾಕ್ಟರ್ ಶೆಟ್ರಿಗೆ ಗಂಭೀರ ಕಾಯಿಲೆ. ನೀವು ಕೂಡಲೇ ಹೊರಟು ಬನ್ನಿ" ಎಂದು ಫೋನ್ ಕರೆ ಬಂತು. ನಾವೆಲ್ಲ ಸ್ತಂಭಿತರಾದೆವು. ಕೆಳಗಿಳಿದು ಹೋಗುವಷ್ಟರಲ್ಲಿ ನನ್ನನ್ನು ಕರೆದೊಯ್ಯಲು ಒಂದು ಕಾರು ಕಳುಹಿಸಲ್ಪಟ್ಟಿದ್ದಿತು. ಅದರಲ್ಲಿ ಕೂತು ಡಾಕ್ಟರ್ ಶೆಟ್ರು ವಿಶ್ರಾಂತಿ ಪಡೆಯಲೆಂದು ಉಳಿದುಕೊಂಡಿದ್ದ ಅವರ ಅಳಿಯ ವಿಶ್ವನಾಥ ಆಳ್ವರ ಮನೆಗೆ ಸಮೀಪಿಸುವಷ್ಟರಲ್ಲಿ, ಅವರ ಹೆಂಡತಿ ಮಕ್ಕಳ ಹೃದ್ರಾವಕ ರೋದನದ ಧ್ವನಿ ನಮ್ಮನ್ನು ದಂಗುಬಡಿಸಿತು ಚೇತನ ಕುಸಿದು ಹೋಯಿತು. ಸ್ವಲ್ಪ ಸಮಯ ನಿಂತಲ್ಲೆ ನಿಂತು ಆ ಮೇಲೆ ಜೀವಂತ ಶವಗಳಂತೆ ಮನೆಯೊಳಗೆ ಹೋಗಿ ನೋಡುವುದೇನು? ತಾಯಿಯೊಂದಿಗೆ ಎಂಟು ಮಕ್ಕಳು ತಂದೆಯ ಶವದ ಮೇಲೆ ಬಿದ್ದು ಒಂದೇ ಸವನೆ ಗೋಳಿಡುವ ಕರುಳು ಕತ್ತರಿಸುವ ದುರಂತ ದೃಶ್ಯವನ್ನು ನನ್ನ ಜೀವಮಾನದಲ್ಲೇ ನೋಡಿದುದು ಇದೇ ಮೊದಲು. ಅದನ್ನು ಕಂಡು ಕಣ್ಣೀರಿಡದ ಜನರಿಲ್ಲ! ಅನುಕಂಪ ಪಡೆಯದ ಹೃದಯವಿಲ್ಲ! ಸಹಾನುಭೂತಿಯಿಂದ ಕರಗಿ ನೀರಾಗದ ಮನವಿಲ್ಲ!!!

ನಿರಂತರ ಪರಿಶ್ರಮ ಮತ್ತು ಸ್ವಪ್ರಯತ್ನದ ಸಾರ್ಥಕ ಜೀವನ

ಬಾಲ್ಯದ ತನ್ನ ೫ನೇ ವಯಸ್ಸಿನಲ್ಲೇ ತಂದೆಯನ್ನು ಕಳಕೊಂಡ ಡಾ| ಕೆ. ಶಾಮರಾಯ ಶೆಟ್ಟರು ತಾಯಿಯ ಸತತ ಪರಿಶ್ರಮದ ಮಡಿಲಲ್ಲೆ ಬೆಳೆದವರು ತನ್ನ ಏಕ ಮಾತ್ರ ಪುತ್ರನಿಗೆ ವಿದ್ಯೆ ಬುದ್ಧಿಯಿತ್ತು ಆದೊಂದು ಸ್ಥಾನಕ್ಕೆ ತರಬೇಕೆಂಬುದೇ ಅವರ ಮಾತೆಯ ಜೀವನದ ಏಕ ಮಾತ್ರ ಆಕಾಂಕ್ಷೆಯಾಗಿತ್ತು. ಅದಕ್ಕಾಗಿ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಚಿಕ್ಕಂದಿನಿಂದಲೇ ಕಷ್ಟ ಕಾರ್ಪಣ್ಯದ ಕಹಿಯನ್ನೂ ಬೇಕಷ್ಟು ಉಂಡು ಡಾಕ್ಟರ್ ಶೆಟ್ರು ಗಂಭೀರ ಸ್ವಭಾವದವರಿದ್ದರು. ತಾಯಿಗೆ ಸಾಧ್ಯವಾದಷ್ಟು ಕಡಿಮೆ ಕಷ್ಟ ಕೊಡುವಂತೆ ಜೀವನ ನಡೆಸುತ್ತಿದ್ದರು. ಪ್ರತಿನಿತ್ಯ ನಾಲ್ಕೈದು ಮೈಲು ಬೆಳಗ್ಗೆ ಮತ್ತು ಸಂಜೆ ಉಡುಪಿಗೆ ನಡೆದು ಹೋಗಿ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿದರು. ಆ ಮೇಲೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಬಡ ವಿದ್ಯಾರ್ಥಿ ಫಂಡಿನಿಂದ ಸಹಾಯ ಪಡೆದು ಇಂಟರ್‌ಮೀಡಿಯಟ್, ಪಾಸಾಗಿ ಮದ್ರಾಸಿನಲ್ಲಿ ವೆಟರ್ನರಿ ಕೊಲೇಜಿಗೆ ಸೇರಿ ಪದವೀಧರರಾದರು.

ಡಾಕ್ಟರ್ ಶೆಟ್ರು ಹೈದರಾಬಾದಿನಲ್ಲಿ ಸರ್ವಿಸಿಗೆ ಸೇರುವಂತೆ ಅವರ ತಾಯಿಯನ್ನು ಒಪ್ಪಿಸಲು ನಾನು ನೆರವಾದೆ. ಅಲ್ಲಿಗೆ ಹೋದ ಮೇಲೆ ಅವರು ತನ್ನ ನೌಕರಿಯಲ್ಲಿ ತೋರಿಸಿದ ದಕ್ಷತೆ ಮತ್ತು ಕರ್ತವ್ಯನಿಷ್ಠೆಯು ಅವರನ್ನು ಸ್ವಲ್ಪ ಸಮಯದಲ್ಲೇ ಜನಪ್ರಿಯರನ್ನಾಗಿ ಮಾಡಿತು. ಆಗ ಅಲ್ಲಿ ಡಾಕ್ಟರರಾಗಿದ್ದ ಡಾಕ್ಟರ್ ಕೆಂಬ್ಲಿಯವರ ಸಹಾಯದಿಂದ ಅವರಿಗೆ ಮೇಜರ್ ನಾಯುಡು, ಶ್ರೀಮತಿ ಸರೋಜಿನಿ ನಾಯುಡು, ಪದ್ಮಜ ನಾಯುಡು ಮೊದಲಾದವರ ಪರಿಚಯವಾಯಿತು. ಪಶು ಪಕ್ಷಿಗಳ ಚಿಕಿತ್ಸೆಯಲ್ಲಿ ಡಾಕ್ಟರ್ ಶೆಟ್ರು ಪ್ರಸಿದ್ಧಿ ಪಡೆದು ನಿಜಾಮರ ಅರಮನೆಗೂ ಅವರು ಕರೆಯಲ್ಪಟ್ಟರು. ಅವರ ಅಂತಸ್ತು ದಿನೇ ದಿನೇ ಹೆಚ್ಚಿತು. ಹೈದರಬಾದ್ ಸರಕಾರವು ಅವರನ್ನು ಹೆಚ್ಚಿನ ಅಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಿತು. ಎಡಿನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಬೆಕ್ಟೀರಿಯಲೊಜಿಯಲ್ಲಿ ಡಾಕ್ಟರೇಟ್ ಪಡೆದು ಹಿಂತಿರುಗಿದ ಮೇಲೆ ಡಾಕ್ಟರ್ ಶೆಟ್ರು ಹೈದರಾಬಾದಿನ ಪಶು ವೈದ್ಯ ಖಾತೆಯ ಡಿಪ್ಯೂಟಿ ಡೈರೆಕ್ಟರರಾಗಿ ನೇಮಿಸಲ್ಪಟ್ಟರು. ಹೈದರಾಬಾದಿನಲ್ಲಿ ಪ್ರಜಾರಾಜ್ಯ ಸ್ಥಾಪಿತವಾದಾಗ ಡಾಕ್ಟರ್ ಶೆಟ್ರು ಅವರ ಖಾತೆಯ ಡೈರೆಕ್ಟರರಾಗಿ ೫ ವರ್ಷ ಸೇವೆ ಸಲ್ಲಿಸಿದರು. ಆಂಧ್ರವು ಹೈದರಾಬಾದಿನೊಡನೆ ಸೇರಿದಾಗ ಫಿಶರೀಸ್ ಖಾತೆಯ ಆಡಳಿತವನ್ನೂ ಅವರೇ ವಹಿಸಿ ನಿರ್ವಹಿಸುತ್ತಿದ್ದರು. ೧೯೫೬ರಲ್ಲಿ ಕರ್ನಾಟಕ ರಾಜ್ಯ ಸ್ಥಾಪಿತವಾದಾಗ, ಡಾಕ್ಟರ್ ಶೆಟ್ರು ಮೈಸೂರು ಸರ್ವಿಸಿಗೆ ಸೇರಿ ಇದೀಗ ಸುಮಾರು ೮ ವರ್ಷಗಳಿಂದ ಪಶು ವೈದ್ಯ ಖಾತೆಯ ಡೈರೆಕ್ಟರರಾಗಿ ದುಡಿದರು. ಬರುವ ಜೂನ್ ತಿಂಗಳಲ್ಲಿ ಡಾಕ್ಟರ್ ಶೆಟ್ರು ನಿವೃತ್ತರಾಗುವ ಅವಧಿ ಬಂದಿತ್ತು. ಅವರಿಗೆ ಇನ್ನೆರಡು ವರ್ಷ ಎಕ್ಸ್‌ಟೆನ್ಶನ್ ದೊರೆಯುವುದಿತ್ತು. ಬೆಂಗಳೂರಲ್ಲಿ ಸ್ಥಾಪಿತವಾಗುವ ಕೃಷಿ ವಿಶ್ವವಿದ್ಯಾಲಯದ ಡೀನರಾಗಿ ಅವರನ್ನು ನೇಮಿಸಬೇಕೆಂದು ಮುಖ್ಯಮಂತ್ರಿ ನಿಜಲಿಂಗಪ್ಪನವರು ಸಂಕಲ್ಪಿಸಿದ್ದರು. ಈ ವರ್ಷ ಡಾಕ್ಟರ್ ಶೆಟ್ರು, ಅಖಿಲ ಭಾರತ ವ್ಯವಸಾಯ ಸಂಶೋಧನಾ ಕೌನ್ಸಿಲಿನ ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟಿದ್ದರು. ಇಡೀ ದೇಶದಲ್ಲಿ ಹೀಗೆ ಆರಿಸಲ್ಪಟ್ಟ ಮೂವರಲ್ಲಿ ಇವರೊಬ್ಬರು.

ಉಚ್ಚ ಶ್ರೇಣಿಯ ಸದ್ಗೃಹಸ್ಥ ಮತ್ತು ಜನಹಿತ ಸಾಧಕ

ಅನೇಕ ಮಂದಿ ಅಧಿಕಾರಿಗಳು ನೌಕರಿ ಮಾಡುತ್ತಾರೆ, ನಿವೃತ್ತರಾಗಿ ಮೂಲೆಗುಂಪಾಗುತ್ತಾರೆ, ಹೇಳಹೆಸರಿಲ್ಲದೆ ಕಣ್ಮರೆಯಾಗುತ್ತಾರೆ. ಆದರೆ ಡಾಕ್ಟರ್ ಶೆಟ್ರು ನೌಕರಿ ಜೀವನ ಅಂತಹುದಲ್ಲ. ತನ್ನಿಂದ ಕೂಡಿದಷ್ಟು ಜನಹಿತ ಸಾಧಿಸಬೇಕೆಂಬ ಆಕಾಂಕ್ಷೆಯಿಂದ ಇಡೀ ಜೀವನವನ್ನು ಗಂಧದ ಕೊರಡಿನಂತೆ ತೇದಿ ತೇದಿ ತಾನು ಹೋದಲ್ಲೆಲ್ಲ ಮಧುರ ಪರಿಮಳದ ವಾತಾವರಣವನ್ನುಂಟುಮಾಡಿದವರು. ಅಧಿಕಾರದ ಒಂದಿಷ್ಟೂ ಪ್ರತಿಷ್ಠೆಯೂ ಅವರನ್ನು ಸೋಂಕಿರಲಿಲ್ಲ. ನಮ್ರತೆ, ಸರಳತೆ ಮತ್ತು ಸೌಜನ್ಯದ ಪ್ರತಿ ಮೂರ್ತಿಯಾಗಿ ಅವರು ಯಾರೊಡನಾದರೂ ವ್ಯವಹರಿಸುತ್ತಿದ್ದರು. ಹೈದರಾಬಾದಿನಲ್ಲಿ ಡಾಕ್ಟರ್ ಶೆಟ್ರು ಪ್ರಥಮ ಶ್ರೇಣಿಯ ನಾಗರಿಕರಾಗಿ ಎಲ್ಲಾ ವರ್ಗದ ಜನರ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದರು. ರಜಕಾರ್ ಗಲಾಟೆಯ ಸಂದರ್ಭದಲ್ಲೂ ಡಾಕ್ಟರ್ ಶೆಟ್ರ ಕುರಿತು ಮುಸಲ್ಮಾನರೆಲ್ಲ ಅತ್ಯಂತ ಆದರದಿಂದ, ವ್ಯವಹರಿಸುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಜನರ ಕುರಿತು ಅವರು ಯಾವಾಗಲೂ ಅಭಿಮಾನ ಪಡುವವರಾಗಿದ್ದರು. ಯಾವಾಗಲೂ ಅವರಿಗೆ ಉಪಕಾರಾಕಾಂಕ್ಷಿಯಾಗಿಯೇ ಇರುತ್ತಿದ್ದರು. ಇವತ್ತಿಗಾದರೂ ಮೈಸೂರಿಗಿಂತಲೂ ಹೆಚ್ಚು ಆದರ ಮತ್ತು ಗೌರವವು ಡಾಕ್ಟರ್ ಶೆಟ್ರಿಗೆ ಹೈದರಾಬಾದಿನಲ್ಲಿದೆ. ಅವರು ಇತ್ತೀಚೆಗೆ ಅಮೆರಿಕದಿಂದ ಜಪಾನಿಗೆ ಹೋಗಿ ಕಲ್ಕತ್ತಕ್ಕೆ ವಿಮಾನ ಮೂಲಕ ಕೆಳಗಿಳಿಯುವಾಗ, ಬಂಗಾಳದ ಗವರ್ನರ್ ಪದ್ಮಜನಾಯ್ಡುರವರು, ತನ್ನ ಕಾರು ಕಳುಹಿಸಿ ತನ್ನ ಅತಿಥಿಯಾಗಿ ಬರಮಾಡಿ ಅವರನ್ನು ಗೌರವಿಸಿದ್ದರು.

ಮೈಸೂರಲ್ಲಿ ಪಟ್ಟಪಾಡು

ಡಾಕ್ಟರ್ ಶೆಟ್ರಷ್ಟು ತ್ರಿಕರಣ ಪೂರ್ವಕವಾಗಿ ತನ್ನ ಕೆಲಸ ಮಾಡುವ ಅಧಿಕಾರಿ ಈ ಕಾಲದಲ್ಲಿ ದೊರೆಯುವುದೇ ದುರ್ಲಭ. ಸರಕಾರದ ಸೌಲತ್ತನ್ನೂ ಅವರು ತನ್ನ ಸ್ವಂತಕ್ಕಾಗಿ ಉಪಯೋಗಿಸಿದವರಲ್ಲ. ತನ್ನ ರಾಜ್ಯವಾದ ಮೈಸೂರನ್ನು ಸಾಧ್ಯವಾದಷ್ಟು ಮೇಲೆತರಬೇಕು. ತನ್ನ ಖಾ

(೯ನೇ ಪುಟ ನೋಡಿರಿ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ ೫೮⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ, ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.
ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ಹೊಸ ವರ್ಷ ಬಂದಿದೆ

ಹೊಸ ಸುಗ್ಗಿಯನ್ನೂ ತರಲಿ

ಸೌರಯುಗಾದಿ ಮೊನ್ನೆ ತಾನೇ ಕಳೆಯಿತು. ಕ್ರೋಧಿ ಸಂವತ್ಸರ ಎಲ್ಲರಿಗೂ ಆರಂಭವಾದಂತಾಯಿತು. ರೈತರಿಗೆ ಉತ್ಸಾಹ, ಬಟ್ಟೆಬರೆ, ದವಸಧಾನ್ಯಗಳ ಸಂಗ್ರಹದ ಕಾಲ; ಮುಂಗಾರಿನ ಬಗ್ಗೆ ಯೋಚಿಸುವ ಅವಕಾಶ; ಸ್ವಲ್ಪ ಬಿಡುವಿನ ಕಾಲ. ಆದರೂ ಈ ಸಮಯವನ್ನು ರೈತರು ಹಾಳು ಮಾಡಬಾರದು. ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಳ್ಳುವುದಕ್ಕೆ ಮತ್ತು ಮಾರುವುದಕ್ಕೆ ಉಪಯೋಗಿಸಬೇಕು. ಇದರಿಂದ ಧಾನ್ಯಗಳ ಏರಿದ ಬೆಲೆಯ ಪ್ರಯೋಜನ ರೈತನಿಗೇನೇ ಲಭಿಸುತ್ತದೆ. ರೈತರು ಸುಸಂಘಟಿತರಾಗಿ ಕೃಷಿಕ ಸಮಾಜಗಳನ್ನು ಸ್ಥಾಪಿಸಿ ಸಮಾಜದ ಏಳಿಗೆಯ ದೃಷ್ಟಿಯಿಂದ ದುಡಿದರೆ, ಅಧಿಕ ಉತ್ಪಾದನೆಯ ಕನಸು ನನಸಾಗುವುದು; ನಮ್ಮ ದೇಶ ಖಂಡಿತವಾಗಿಯೂ ನಂದನವಾಗುವುದು.

ಭತ್ತ

ಫಸಲು ತೆಗೆದ ಎರೆ ಭೂಮಿಗಳಲ್ಲಿ ತಡ ಮಾಡದೆ ಹೆಗ್ಗುಂಟೆ ತೆಗೆಯಿರಿ. ಅಡ್ಡ ಮಳೆ ಬಂದು ನೆಲ ಹದವಾದರೆ, ಉಳುಮೆ ಮಾಡಿರಿ. ನೀರಾವರಿ ಗದ್ದೆಗಳನ್ನು ಉತ್ತಿದರೆ, ಮಳೆಬಂದ ನಂತರ ಎಕ್ರೆಗೆ ೨—೩ ಮಣ ಸೂಪರ್ ಫಾಸ್ಫೇಟನ್ನು ಎರಚಿ ಅಪ್ಸೆಣಬು, ಹುರುಳಿ ಬೀಜಗಳನ್ನು ಎರಚಿದರೆ, ಗದ್ದೆಗೆ ನೊಪ್ಪು ಗೊಬ್ಬರ ಒದಗಿ ಬರುವುದು. ಕಂಪೋಸ್ಟ್ ಗೊಬ್ಬರವನ್ನು ತಯಾರಿಸಿಡಲು ಮರೆಯಬೇಡಿ ತರಗೆಲೆ, ಕಸಕಡ್ಡಿ ಎಲ್ಲವನ್ನೂ ಸೆಗಣಿಯೊಂದಿಗೆ ಬೆರಸಿ ಗುಡ್ಡ ಹಾಕಿದರೆ, ಗೊಬ್ಬರ ಜೂನ್ ತಿಂಗಳಲ್ಲಿ ಸಿದ್ಧವಾಗುತ್ತದೆ. ಗುಳಿಯಲ್ಲಿ ಹಾಕಿದರೆ ಸಮಯ ಮಳಾಶವು ಹೆಚ್ಚು ಬೇಕಾಗುತ್ತದೆ ಕಾರ್ತಿ ಬೆಳೆಯ ಬಿತ್ತನೆಗಳಿಗೆ ಸುಧಾರಿತ ತಳಿಯ ಬೀಜಗಳನ್ನು ಮುಂದಾಗಿ ಶೇಖರಿಸಿಡಿ. ತಪ್ಪಿದರೆ ಮುಂದೆ ಕೈಕಾಲು ಬಿಡಬೇಕಾಗ ಬಹುದು.

ರಾಗಿ

ಮೈಸೂರಿನ ಮುಖ್ಯ ಆಹಾರಗಳಲ್ಲಿ ರಾಗಿಯೂ ಒಂದು. ಕಾರುರಾಗಿಯನ್ನು ಬಿತ್ತಲಿದೇ ಸಮಯ. ಮೊದಲ ಮಳೆ ಬಿದ್ದೊಡನೆಯೇ ಕುಂಟೆ ಹೊಡೆದು ಬಿತ್ತನೆ ಮಾಡಿರಿ. ಕಾಳನ್ನು ಉಪ್ಪು ನೀರಿನಲ್ಲಿ ಹಾಕಿ ಜೊಳ್ಳನ್ನು ತೆಗೆದು ಭಾರವಾದ ಕಾಳನ್ನು ಮಾತ್ರ ಬಿತ್ತನೆಗೆ ಉಪಯೋಗಿಸಿ. ಬಿತ್ತನೆಗೆ ಮುಂಚೆ ಉಚಿತ ಗೊಬ್ಬರ ಹಾಕಲು ಮರೆಯಬೇಡಿ.

ತೆಂಗು

ಬೀಜದ ಕಾಯಿಗಳನ್ನು ಆರಿಸಿ ತೆಗೆದಿಡುವ ಕಾಲವಿದು. ಉತ್ತಮವಾದ ದೊಡ್ಡ ಗಾತ್ರದ ಬೀಜದ ಕಾಯಿಗಳನ್ನು ಮಧ್ಯ ಪ್ರಾಯದ ಉತ್ತಮ ತಳಿಗಳಿಂದ ಚುನಾಯಿಸಿ ತೆಗೆದು ಒಂದು ತಿಂಗಳ ಕಾಲ ಒಣಗಲು ಇಟ್ಟು, ಹೊಂಡದ ಆಸರೆ ಇರುವ ಮರಗಳ ಜಾಗದಲ್ಲಿ ಒಂದೊಂದಡಿ ಅಂತರದಲ್ಲಿ ತೊಟ್ಟನ್ನು ಮೇಲ್ಭಾಗಕ್ಕೆ ನಟ್ಟು ಮಡಿಗಳನ್ನು ಮಾಡಬೇಕು. ಕಾಯಿಗಳನ್ನು ...

ಬೇಡಿ. ಅವುಗಳ ಮೇಲ್ಭಾಗವು ನೆಲ ಸಮಕ್ಕೆ ಸರಿಹೋಗುವಂತೆ ಎಚ್ಚರಿಕೆ ವಹಿಸಿ, ಪಾತಿಗಳಿಗೆ ಹದನೋಡಿ ನೀರು ಹಾಯಿಸುತ್ತಿರಿ. ಕಾಯಿಗಳು ಮೊಳೆತು ಸಸಿಗಳಾಗಲು ಕಡಿಮೆಪಕ್ಷ ೩—೪ ತಿಂಗಳುಗಳು ಬೇಕು.

ತೆಂಗಿನಲ್ಲಿ ಎತ್ತರ್ರ, ಗಿಡ್ಡ ಎಂಬೆರಡು ಜಾತಿಗಳಿವೆ. ಎತ್ತರದ ಗಿಡಗಳ ೮೦-೯೦ ವರ್ಷ ಬದುಕುತ್ತವೆ. ಇವುಗಳಲ್ಲಿ ಫಲವೂ ಹೆಚ್ಚು. ಕೊಬ್ಬರಿಯಲ್ಲಿ ಎಣ್ಣೆಯೂ ಅಧಿಕ. ನಟ್ಟ ೬—೮ ವರ್ಷಗಳಲ್ಲಿ ಈ ಗಿಡಗಳು ಫಲ ಕೊಡುತ್ತವೆ. ಎಪ್ರಿಲ್—ಮೇ ತಿಂಗಳುಗಳಲ್ಲಿ ತೆಂಗಿನ ಗರಿಗಳಿಗೆ ರೋಗ ತಗಲುವುದುಂಟು. ಈಗಲೇ ಮುನ್ನೆಚ್ಚರಿಗೆ ವಹಿಸಿ ಸೇಕಡ ೧೨ ಪ್ರಮಾಣದಲ್ಲಿ ಬೋರ್ಡೋ ಮಿಶ್ರಣವನ್ನು ಸಿಂಪಡಿಸಿದರೆ ಉತ್ತಮ.

ಅಡಿಕೆ

ತೋಟಗಳಿಗೆ ಅಧಿಕ ಗಮನಕೊಡಬೇಕು. ಎಪ್ರಿಲ್ ತಿಂಗಳು ಬಿಸಿಲಿನ ಬೇಗೆ ಅಧಿಕವಾಗುವುದು; ನೀರಿನ ಅಭಾವವೂ ಹೆಚ್ಚುವುದು. ಪಶ್ಚಿಮ ಸೂರ್ಯನ ಬಿಸಿಲಿಗೆ ಮೈಯೊಡ್ಡಿರುವ ಸಸಿಗಳಿಗೆ ಅಧಿಕ ಪ್ರಮಾಣದಲ್ಲಿ ನೀರುಬೇಕು. ಅಡಿಕೆ ಸಸಿಗಳನ್ನು ಊರುವುದಕ್ಕೆ ಇದು ಸರಿಯಾದ ಕಾಲ. ತೋಟಗಳಲ್ಲಿ ಅಗತೆಮಾಡಿ ಗುಳಿ ತೆಗೆದು ಸಿದ್ಧಗೊಳಿಸಿ. ಮುಂಗಾರಿನ ಹೊತ್ತಿಗೆ ಸಸಿಗಳಿಗೆ ಬಲವಾಗಿ ನೆಲ ಕಟ್ಟಿರಬೇಕಾದರೆ, ಈಗಲೇ ೯×೯ ಅಥವಾ ೧೨×೬ ಅಡಿ ಅಂತರದಲ್ಲಿ ಮೂರಡಿಯಾಳದ ಗುಳಿ ತೋಡಿ ಸಸಿಗಳನ್ನು ಹಾಕಿ.

ಕೆಂಪು ಮತ್ತು ಬಿಳಿಯ ಜೇಡರ ಜಾತಿಯ ಹುಳಗಳು ಅಡಿಕೆ ಸಸಿ ಮತ್ತು ಫಲ ಬಿಡುವ ಮರಗಳ ಮೇಲೆರಗಿ ಹೆಚ್ಚು ಹಾವಳಿಯನ್ನುಂಟು ಮಾಡುತ್ತವೆ. ಇವುಗಳ ಹಾವಳಿ ಪಶ್ಚಿಮ ಕರಾವಳಿಯಲ್ಲಿ, ಬಿಸಿಲುಗಾಲದಲ್ಲಿ ವಿಪರೀತ. ಇದಕ್ಕಾಗಿ ಹುಳ ಬಿದ್ದ ಮತ್ತು ಒಣಗಿದ ಎಲೆಗಳನ್ನು ಕೊಯ್ದು ಸುಡಬೇಕು. ಒಂದು ಔನ್ಸು ವೆಟ್ಟಬಲ್ ಗಂಧಕವನ್ನು ೨—೩ ಗ್ಯಾಲನ್ ನೀರಿನಲ್ಲಿ ಹಾಕಿ ಸಿಂಪಡಿಸಿ. ಮಲೆನಾಡಿನಲ್ಲಿ ಅಡಿಕೆ ಒಣಗಿಸಲು ಮನೆಗಳನ್ನು ಕಟ್ಟುವುದು ಸೂಕ್ತ. ಹೊಗೆಯಲ್ಲಿ ಒಣಗಿಸಿದರೆ ಒಳ್ಳೆಯ ಮಾಲು ಬರುವುದಿಲ್ಲ.

ಹತ್ತಿ

ಕರ್ನಾಟಕದಲ್ಲಿ ಹತ್ತಿ ಕೊಯ್ಯುವ ಕಾಲವಿದು. ಹತ್ತಿ ರೊಕ್ಕದ ಬೆಳೆ. ಕಪ್ಪು ಮಣ್ಣಿನಲ್ಲಿ ಬೆಳೆಯುವ ಜಯಧರ್ ಮತ್ತು ಕೆಂಪು ಮಣ್ಣಿನಲ್ಲಿ ಬೆಳೆಯುವ ಲಕ್ಷ್ಮಿ ಹತ್ತಿಗಳು ಕೊಯ್ಲಿಗೆ ಸಿದ್ಧವಾಗಿವೆ ಕೊಯ್ಯುವಾಗ ಬಲಿತ್ಯೆಯ ಮೂರು ಬೆರಳನ್ನು ಮಾತ್ರ ಉಪಯೋಗಿಸಿ ಕಿತ್ತ ಹತ್ತಿಯನ್ನು ಸಿಮೆಂಟಿನ ಅಥವಾ ಗಾರೆ ಮಾಡಿದ ಶುದ್ಧ ನೆಲದಲ್ಲಿ ಹರವಿರಿ. ಗಾಳಿ, ಮಳೆಗಳ ಹಾವಳಿ ಈ ತಿಂಗಳಲ್ಲಿ ಪ್ರಾರಂಭವಾಗುವುದರಿಂದ ಜೋಪಾನ ಮಾಡಿ. ಮಾರ್ಚಿ ತಿಂಗಳಲ್ಲೇ ಹತ್ತಿ ಕೊಯ್ದವರು ...

ಕ್ಕೆ ಕಳಿಸಬಹುದು ಒಂದು ಜಾತಿಯ ಹತ್ತಿಯನ್ನು ಯಂತ್ರಕ್ಕೆ ಒಡ್ಡಿದ ಮೇಲೆ ಆ ಯಂತ್ರವನ್ನು ಪೂರ್ತಿಯಾಗಿ ಸ್ವಚ್ಛಗೊಳಿಸದೆ ಮತ್ತೊಂದು ಜಾತಿಯದನ್ನು ಒಡ್ಡದಂತೆ ಎಚ್ಚರಿಕೆಯಿರಲಿ.

ಕಾಫಿ

ಕಾಫಿಗೆ ರೋಗ ತಗಲದಂತೆ ಬೋರ್ಡೋ ದ್ರಾವಣವನ್ನು ಸಿಂಪಡಿಸಲು ಈಗ ಉಚಿತ ಸಮಯ. ಬಂಡಾರಿ, ಕೊಳೆ ರೋಗ ಮತ್ತು ಕೆಂಡಿ ಸಾಯುವುದನ್ನು ತಪ್ಪಿಸಬೇಕಾದರೆ, ಮಳೆಗಾಲಕ್ಕೆ ಮೊದಲೇ ದ್ರಾವಣವನ್ನು ಸಿಂಪಡಿಸಬೇಕು.

ತರಕಾರಿ ತೋಟ

ಬೇಸಿಗೆ ತರಕಾರಿಗಳನ್ನು ನೀರಾವರಿಯ ಇತಿಮಿತಿಗಳನ್ನರಿತು ಬೆಳೆಯಬೇಕು. ಪಡವಲ, ಹಾಗಲ, ಹೀರೆ ಬೀಜಗಳನ್ನು ಕೆತ್ತ ಪಾತಿಗಳನ್ನು ಅಗತೆ ಮಾಡಿ ಬೇರು ಎಲೆಗಳಿಲ್ಲವನ್ನು ಮಣ್ಣಿನಲ್ಲಿ ಸೇರಿಸಿ ಗಾಳಿ ಬಿಸಿಲಿಗೆ ಬೀಳುವಂತೆ ಇಡಬೇಕು. ಮಾವಿನ ಮರಗಳಲ್ಲಿ! ಹೀಚು ಕಾಯಿ ಹಣ್ಣುಗಳಾಗುವ ಕಾಲವಿದು. ಹುಳಗಳು ತಗಲದಂತೆ ಔಷಧ ಸಿಂಪಡಿಸಿ.

ಹೂ ತೋಟ

ಹೂವಿನ ಕುಂಡಗಳಲ್ಲಿ ಸೇವಂತಿಕೆಗಿಡವನ್ನು ಹಾಕಿ, ಬಿಸಿಲಿಗಿಡಿ. ಕ್ರೋಟನ್ನು ಗಿಡಗಳನ್ನು ಬೆಳೆಸಲು ಮತ್ತು ಕಾರ್ನೇಷನ್, ಕೋಲಿಯಸ್, ಜರೇನಿಯಂ, ಬಗೋನಿಯಾ ಮುಂತಾದ ಗಿಡಗಳನ್ನು ನಾಟಲು ಇದು ಸರಿಯಾದ ಕಾಲ.

ಜೇನು

ತುಪ್ಪ ಶೇಖರವಾಗಿದ್ದರೆ ಯಂತ್ರದ ಸಹಾಯದಿಂದ ತೆಗೆಯಿರಿ. ಕಳೆದ ತಿಂಗಳು ಕೂತಿರುವ ಜೇನುಗಳನ್ನು 'ಡೆಕ್ಸ್ಟೈನ್' ಕೊಳವೆ ಗೂಡುಗಳಿಂದ ಪೆಟ್ಟಿಗೆಗೆ ಬದಲಾಯಿಸಿ ಗೂಡುಗಳನ್ನು ನೆರಳಲ್ಲಿಡಬೇಕು. ಮರಗಳ ಅಥವಾ ಜೇನುಗಳ ಪೊಟರೆಗಳಲ್ಲಿರುವ ಜೇನನ್ನು ಗೂಡಿಗೆ ಬದಲಾಯಿಸಬಹುದು.

ಕೃತಿ ಸಮೀಕ್ಷೆ

ಬಹುಮಾನ: (ಮಕ್ಕಳ ಕಥೆಗಳು)
ಲೇಖಕರು: ಶ್ರೀ ಬಿ. ಎ. ಸನದಿ.
ಪ್ರಕಾಶಕರು: ಪ್ರತಿಭಾಗ್ರಂಥಮಾಲೆ, ಧಾರವಾಡ.
ಪುಟಗಳು: ೪೪. ಬೆಲೆ: ರೂ ೦ ೬೦

ಒಂಬತ್ತರಿಂದ ಹದಿನಾಲ್ಕರ ವಯೋಮಾನದ ವಿದ್ಯಾರ್ಥಿಗಳಿಗೆ ಪಥ್ಯವಾಗುವಂತೆ ಬರೆದ ಬಹುಮಾನ, ಶಫಿಯ ತೋಟ ಮತ್ತು ಸೀತಿಯೆಂಬ ಮೂರು ಕಥೆಗಳ ಸಂಗ್ರಹವಿದು ಮಕ್ಕಳ ಮನಸ್ಸಿನಲ್ಲಿ ಬಹುಮಾನದ ಬಗ್ಗೆ ವಿಶೇಷ ಕುತೂಹಲ ಮತ್ತು ಆಶೆಗಳಿರುವುದು ಸ್ವಾಭಾವಿಕ. ಇಲ್ಲಿನ ಮೂರೂ ಕತೆಗಳಲ್ಲಿ ಆಸಾ, ಶಫಿ ಮತ್ತು ರವಿ ಮೊದಲಾದವರು ತಮ್ಮ ಉತ್ತಮ ನಡತೆಗಾಗಿ ಬೇರೆ ಬೇರೆ ರೀತಿಗಳಿಂದ ಬಹುಮಾನ ಪಡೆದರು. ಇದರಿಂದ ಇವರು ಓದುವ ಮಕ್ಕಳ ಮನಸ್ಸಿನ ಮೇಲೆ ಆದರ್ಶ ಪ್ರಭಾವ ಬೀರಬಲ್ಲರು. ಮಾತ್ರವಲ್ಲ, ಅಚ್ಚಳಿಯದೆ ನಿಲ್ಲಬಲ್ಲರು." ನೀವೂ ನಮ್ಮ ದಾರಿಯಲ್ಲೇ ನಡೆಯಿರಿ" ಎಂದು ಪದೇ ಪದೇ ನೆನಪಿಸಬಲ್ಲರು. ಚಿಕ್ಕ ಮಕ್ಕಳಲ್ಲಿ ಸಾಹಿತ್ಯ ಸಾಧನಗಳಿಂದ ಉತ್ತಮ ನಡಾವಳಿಯನ್ನು ರೂಪಿಸಲು ಇಂಥ ವಿಷಯಕ ಕಥೆಗಳು ಖಂಡಿತಕ್ಕೂ ಸಹಾಯಕವಾಗಬಲ್ಲವು.

ಮಕ್ಕಳಿಗೆ ತಿಳಿಯುವಂತಹ ಸರಳವಾದ ಭಾಷೆಯಲ್ಲಿ ಹೊಸತನ ಇಣುಕು ಹಾಕುವಂತೆ ಶ್ರೀ ಸನದಿಯವರು ಇಲ್ಲಿನ ಕಥೆಗಳನ್ನು ಬರೆದಿದ್ದಾರೆ. ಮೂಲ ಶಿಕ್ಷಣ ಇಂದಿನ ಯುಗದಲ್ಲಿ ನಿತ್ಯ ಜೀವನದ ಮೂಲಕ ಶಿಕ್ಷಣ ನೀಡಲು ನೆರವಾಗುವ ಈ ಮಕ್ಕಳ ಕಥೆಗಳ ಹುಟ್ಟು, ಸಂಗ್ರಹ ಬಾಲ ಸಾಹಿತ್ಯಕ್ಕೊಂದು ಉತ್ತಮ ಕಾಣಿಕೆ. ರಾಜ್ಯ ಸರಕಾರದಿಂದ ಬಹುಮಾನಿತರಾದ ಕವಿ—ಸಾಹಿತ್ಯ ಸನದಿಯವರಿಂದ ಬಾಲಕ ಜಗತ್ತು ಇನ್ನೂ ಉಪಕಾರ ಪಡೆಯುವುದೆಂದು ಹಾರೈಸಬಹುದು. ಪುಸ್ತಕದ ಮುದ್ರಣ, ರಕ್ಷಾಪತ್ರ, ಉಪಯೋಗಿಸಿದ ಅಚ್ಚು—ಎಲ್ಲವೂ ಆಕರ್ಷಕವಿವೆ.

ನಾಕನರಕ - (ಸಾಮಾಜಿಕ ನಾಟಕ)
ಲೇಖಕರು: ನಟವರ್ಯ ವಿ. ವಿ ನಾಯ್ಕ.
ಪ್ರಕಾಶಕರು: ಶ್ರೀ ಥಿಯೇಟರ್ಸ್, ಬಾರಕೂರ್.
ಪುಟಗಳು: ೯೬, ಬೆಲೆ: ರೂ. ೨-೦೦.

ನಟವರ್ಯ ಶ್ರೀ ವಿ. ವಿ ನಾಯ್ಕರ ಸಾಮಾಜಿಕ ಕೃತಿಯಿದು. ಮದ್ಯಪಾನದ ದುರ್ದಮನೀಯತೆ ಮತ್ತದರ ನಿರೋಧವೇ ಕೃತಿವಸ್ತು. ಬ್ರಾಹ್ಮಣ್ಯ, ತಪೋಶಕ್ತಿ, ವಿವೇಕ ಮತ್ತು ಬ್ರಹ್ಮಚರ್ಯಗಳಂತಹ ಸತ್ ಶಕ್ತಿಯೆಲ್ಲವನ್ನೂ ಅಸತ್ ಮಧುವೊಂದು ಕೆಡಿಸಿ, ಮಾನವನನ್ನು ವಾಸ್ತವಿಕವಾಗಿ ನರಕಕ್ಕೆ ಕೆಡಹಿ, ಅದನ್ನೇ ನಾಕವೆಂದು ಪರಿಭ್ರಮಿಸುವಂತೆ ಸಮ್ಮೋಹಿಸುವ ಸನ್ನಿವೇಶಾವಳಿಯನ್ನಿಲ್ಲಿ ಯಥೋಚಿತವಾಗಿ ಹೆಣೆಯಲಾಗಿದೆ. ತನ್ನಲ್ಲಿರುವ ಸತ್‌ಶಕ್ತಿಗಳ ಮೂಲಕ ಅಸತ್ ಶಕ್ತಿಯನ್ನು ಗೆಲ್ಲುವೆನೆಂಬ ಸದಾಶಿವನು ಸಂಪೂರ್ಣ ಪತಿತನಾದರೋ ಮಾಂಚಕಾರಿ ದೃಶ್ಯವನ್ನು ನಾವಿಲ್ಲಿ ಕಾಣಬಹುದು. ಗುರ್ವನುಗ್ರಹದ ಬಲದಿಂದ ಆತನು ಮರಳಿ ನರಕದಿಂದ ನಾಕಕ್ಕೆ ಬಂದನು; ಜನತೆಯನ್ನೂ ತಂದನು.

ಮದ್ಯಪಾನವೊಂದು ಸಾಮಾಜಿಕ ಶಾಪ. ಬೇಕಾಗಿಯೋ ಬೇಡವಾಗಿಯೋ ಈ ಶಾಪಗ್ರಸ್ತರಾದವರು ಅನೇಕರು. ಶಾಸನ ರೀತಿಯಿಂದ ಇದನ್ನು ಪ್ರತಿಬಂಧಿಸಬಹುದೆಂಬುದರಲ್ಲಿ ಇಂದು ಜನತೆಯಲ್ಲಿ ವಿಶ್ವಾಸ ಉಳಿಯುತ್ತಿದೆ ಮನಃ ಪರಿವರ್ತನೆ ಮತ್ತು ನ್ಯಾಸಕ ಪ್ರಚಾರಗಳಿಂದ ಜನ ಸಹಕಾರದಿಂದ ಪಾನ ಪ್ರತಿಬಂಧವನ್ನು ಸಾಧಿಸಬೇಕು ಇದಕ್ಕಾಗಿ 'ನಾಕ ನರಕ' ದಂತಹ ಕೃತಿಗಳು ರೂಪಿತವಾದರೆ ಮಾತ್ರ ಸಾಲದು, ಎಲ್ಲೆಂದರಲ್ಲಿ ಪರಿಣಾಮಕರವಾಗಿ ಅಭಿನಯಿಸಲ್ಪಡಬೇಕು. ಅಭಿನಯ ಚತುರರಾದ ನಾಯ್ಕರು ಈ ನಾಟಕವನ್ನು ಅಭಿನಯಕ್ಕೆ ಹೊಂದಿಕೊಳ್ಳುವಂತೆಯೇ ಮುನ್ನಡೆಸಿದ್ದಾರೆ. ಜನ ಸಾಮಾನ್ಯರ ಭಾಷೆಯನ್ನೇ ಬಳಸಿ ಕೊಂಡಿದ್ದಾರೆ. ಭಾಷೆಯು ಲ್ಲಾದರೂ ಬೇಕೆಂಬಲ್ಲಿ ಭಾವೋದ್ರೇಕವಿದೆ, ಕಸುವಿದೆ. ಪರಿಣಾಮ ಬೀರ ಬಲ್ಲ ಶಕ್ತಿಯಿದೆ. ಶ್ರೀ ನಾಯ್ಕರ ಈ ಕೃತಿ

ನವಯುಗ

ವರುಷ	ಉಡುಪಿ	ವಾರ
೪೩	೧೬-೪-೧೯೬೪	೩೩

ಕಾಶ್ಮೀರದ ಸಿಂಹ

ಪೂರ್ವ ನಿಯೋಜಿತ ಯೋಜನೆಯಂತೆ ಕಾಶ್ಮೀರದ ಸಿಂಹ ಶೇಕ ಅಬ್ದುಲ್ಲಾರವರು ಬಿಡುಗಡೆಯಾದರು:—ಹೊಸತಾಗಿ ಕಾಶ್ಮೀರದ ಅಧಿಕಾರ ಗ್ರಹಣ ಮಾಡಿದ ಸಾದಿಕ್‌ರವರ ನಾಯಕತ್ವದಲ್ಲಿರುವ ಅಲ್ಲಿನ ಸರಕಾರದ ಆತುರಾತಿರೇಕದ ಪರಿಣಾಮವಾಗಿ ಹನ್ನೊಂದು ವರ್ಷಗಳ ತನಕ ಸೆರೆಮನೆಯ ವಾಸದಲ್ಲಿದ್ದ ಶೇಕರಿಂದೀಗ ಸ್ವತಂತ್ರರಾದರು; ಅವರ ಗರ್ಜನೆ ಮರಳಿ ಕೇಳಿ ಬರತೊಡಗಿದೆ. ಹೊರ ಬಂದ ಈ ಶೇಕರನ್ನು ನಾಗರಿಕರು ಸ್ವಾಗತಿಸಿದ ವೈಭವವನ್ನು ನಾವು ಗಮನಿಸಿದರೆ, ಅವರು ಯಾವ ಕಾರಣಕ್ಕಾಗಿ ಕಾರಾಗೃಹ ಸೇರಿದ್ದರು, ಅವರ ಮೇಲೆ ಕಾಶ್ಮೀರ ಸರಕಾರ ಹೇರಿದ್ದ ಆರೋಪ ಯಾವುದು–ಎಂದು ಮುಂತಾದುವುಗಳ ಕಲ್ಪನೆಯೇ ಅವರಿಗಿಲ್ಲವೆಂದು ಹೇಳಬೇಕಾಗುತ್ತದೆ. ಅಬ್ದುಲ್ಲಾರು ಈಗಲೂ ತಮ್ಮ ನಾಯಕರೇ ಎಂದವರು ಭ್ರಮಿಸಿಕೊಂಡಂತಿದೆ. ಇದಕ್ಕೆ ಪೂರಕವಾಗಿಯೇ ಎನ್ನುವಂತೆ ಶೇಕ ಅಬ್ದುಲ್ಲಾ ಕೂಡಾ ತಮ್ಮ ನಾಲಿಗೆಗೆ ಸ್ವಾತಂತ್ರ್ಯವಿತ್ತು ಅಲ್ಲಲ್ಲಿ ಹೇಳಿಕೆಗಳನ್ನು ನೀಡುತ್ತಾ ಬರುತಿದ್ದಾರೆ. ಈ ಹೇಳಿಕೆಗಳ ಸಂಬಂಧದಲ್ಲಿ ಕಾಶ್ಮೀರಿ ರಾಜಕೀಯ ನಾಯಕರ ಪ್ರತಿಕ್ರಿಯೆಯು ಹೊರಪಟ್ಟಿಲ್ಲವಾದರೂ ಭಾರತದ ಹಿರಿಯ ಮಂತ್ರಿಗಳು ಮಾತ್ರ ತೀವ್ರ ವಿಮಂಚನೆಗೆ ಗುರಿಯಾಗಿದ್ದಾರೆ.

ಶೇಕ್ ಅಬ್ದುಲ್ಲಾರವರನ್ನು ಬಿಡುಗಡೆಗೊಳಿಸುವುದರಿಂದ ಆಗಬಹುದಾದ ಪರಿಣಾಮಗಳನ್ನು ಊಹಿಸದೆ ಬಿಡಲಿಲ್ಲ, ಕೇಂದ್ರದ ನಾಯಕರು. ಆದರೂ ಅವರು ವಸ್ತುಸ್ಥಿತಿಯನ್ನು ಮನಗಂಡು ಸೇರದಾರಿಯಲ್ಲಿ ಸರಿಯಾಗಿ ಮುಂದುವರಿಯುವರೆಂಬ ಆಶಯವನ್ನಿವರು ಇಟ್ಟುಕೊಂಡಿದ್ದರು. ಇಂದು ಶೇಕರ ಹೇಳಿಕೆಗಳು ಈ ಆಶಯಗಳನ್ನು ಸುಳ್ಳಾಗಿಸುತ್ತಿರುವಂತೆ ಭಾಸವಾಗುತ್ತಿದೆ. ಹಾಗಾಗಿ ಪರಿಸ್ಥಿತಿಯು ವಿಕೋಪಕ್ಕೆ ಹೋಗದಂತೆ ತೀವ್ರವಾಗಿ ಕ್ರಮ ಕೈಗೊಳ್ಳುವ ಅಗತ್ಯ ಕಾಣಬಹುದು. ಶೇಕ್ ಅಬ್ದುಲ್ಲಾರವರು ಕಾಶ್ಮೀರವನ್ನು ಪಾಕಿಸ್ತಾನದಲ್ಲಿ ಕೂಡಿಕೊಳ್ಳುವುದಕ್ಕೆ ಅನುಕೂಲವಾದ ದಾರಿಯನ್ನು ಸಂವಿಧಾನ ವಿರೋಧವಾಗಿ ಸುಗಮಗೊಳಿಸುವರೆಂಬ ಒಳಸಂಚಿನಿಂದಾಗಿ ಪದಚ್ಯುತರಾದರು. ಕಾಶ್ಮೀರವು ಭಾರತ ಒಕ್ಕೂಟದ ಅವಿಭಾಜ್ಯ ಅಂಗವೆಂಬುದು ಭಾರತದ ದೃಢ ನಿಲುವೆಯಾಗಿತ್ತು. ಇಂದಾದರೂ ಈ ನಿಲುವು ಅಚಲವಾಗಿಯೇ ಉಳಿದಿದೆ. ಆದರೆ ಪಾಕಿಸ್ತಾನವು ಜನಮತಗಣನೆಯ ಮೂಲಕ ಕಾಶ್ಮೀರವು ಯಾವುದರಲ್ಲಿ ಸೇರಿಗೊಳ್ಳಬೇಕೆಂಬುದನ್ನು ನಿರ್ಧರಿಸಲು ಒತ್ತಾಯಿಸುತ್ತಿದೆ. ಭಾರತ ಸರಕಾರವು ಈ ಬೇಡಿಕೆಯನ್ನು ಮುಖ್ಯವಾಗಿ ಮೂರು ಕಾರಣಗಳಿಂದ ಅಲ್ಲಗಳೆಯುತ್ತದೆ. ಮೊದಲನೆಯದಾಗಿ, ಸಂಯುಕ್ತ ರಾಷ್ಟ್ರ ಸಂಘದ ಗೊತ್ತುವಳಿಯಂತೆ ಜನಮತಗಣನೆಗೆ ಮೊದಲು ಪಾಕಿಸ್ತಾನವು ಕಾಶ್ಮೀರದ ಆಕ್ರಮಿತ ಭಾಗದಿಂದ ಹೊರ ನಡೆಯಬೇಕಾಗಿತ್ತು, ಅದು ಹಾಗೆ ಮಾಡದಿರುವುದರಿಂದ ಇಂದಿಗೂ ಆಕ್ರಮಣವನ್ನೇ ನಡೆಸುತ್ತಿದೆ ಜನಮತಗಣನೆಯ ಪ್ರಶ್ನೆಯು ಉದ್ಭವಿಸುವುದಿಲ್ಲ. ಎರಡನೆಯದಾಗಿ ಈ ಬಗೆಯ ಗಣನೆ ನಡೆಯುವುದರಿಂದ ಜಾತೀಯ ಗೊಂದಲಕ್ಕೆ ಆಸ್ಪದ ದೊರೆಯುವುದು ಮತ್ತು ಮೂರನೆಯದಾಗಿ, ಕಾಶ್ಮೀರಿಗಳು ತಮ್ಮದೆ ಸಂವಿಧಾನವನ್ನು ರೂಪಿಸಿ ಅದರಂತೆ ಚುನಾವಣೆಗಳನ್ನು ನಡೆಸಿ, ಭಾರತದ ಅಂಗವೇ ಕಾಶ್ಮೀರ ವೆಂಬದನ್ನು ದೃಢಪಡಿಸಿದ್ದಾರೆ. ಕಳೆದ ಹದಿನೇಳು ವರ್ಷಗಳ ಸುದೀರ್ಘ ಕಾಲಾವಧಿಯಲ್ಲಿ ಕಾಶ್ಮೀರವು ಭಾರತದ ಅಂಗವಾಗಿಯೇ ಮುಂದುವರೆದು ಬರುತ್ತಿದೆ; ಆದುದರಿಂದ ಕಾಲಮಾನ ಮತ್ತು ಕಾಲಸ್ಥಿತಿಯ ದೃಷ್ಟಿಯಿಂದ ಕೂಡ ಕಾಶ್ಮೀರವು ಸಮಸ್ಯೆಯಾಗಿಡೆಯೆಂಬುದನ್ನು ಭಾರತ ಒಪ್ಪುವುದಿಲ್ಲ.

ಆದರೆ, ಶೇಕಅಬ್ದುಲ್ಲಾ ಮತ್ತವರ ಸಹಚರರ ನಿಲುವೆಯು ಇಂದಿಗೂ ಹಿಂದಿನಂತೆಯೇ ಇದೆ ಎನ್ನಲಡ್ಡಿಯಿಲ್ಲ. ಕಾಶ್ಮೀರಿಗಳು ತಮ್ಮ ಭವಿಷ್ಯವನ್ನು ಚುನಾವಣೆಗಳ ಮೂಲಕ ಆಗಲೇ ನಿರ್ಧರಿಸಿದ್ದಾರೆಂಬುದನ್ನವರು ಒಪ್ಪುವುದಿಲ್ಲ. ಜನಮತಗಣನೆಯ ಒಂದು ವಿಚಾರವನ್ನು ಪಾಕಿಸ್ತಾನದಂತೆಯೇ ಎತ್ತಿಹಿಡಿದು ಅದರಲ್ಲಿಯೇ ಉಯ್ಯಾಲೆ ತೂಗುತ್ತಿದ್ದಾರೆ. ಮತಗಣನೆಯಿಂದ ಗೊಂದಲವಾದೀತೆಂದು ಭಾರತ ಹೆದರುವುದಾದರೆ, ಸೂಕ್ತ ಪರಿಹಾರಾರ್ಥಕ ಸೂಚನೆಯನ್ನದು ನೀಡಬೇಕೆಂದವರ ವಾದ. ಇದನ್ನು ಅವಲೋಕಿಸುವಾಗ, ಒಂದು ಮಾತು ಸ್ಪಷ್ಟವಾಗುತ್ತದೆ. ಕಾಶ್ಮೀರದ ಸಿಂಹಯಿಂದೂ ತನ್ನ ಹಳೆಯ ಅಭಿಪ್ರಾಯವನ್ನು ಬದಲಿಸಲಿಲ್ಲ. ಆದುದರಿಂದಲೇ ಲಾಲಬಹದೂರ್ ಶಾಸ್ತ್ರಿಯವರು ಅವರಿಗೆ ಎಚ್ಚರಿಕೆ ಕೊಟ್ಟದ್ದಾರೆ. ಪಾಕ್ ಸ್ವಾತಂತ್ರ್ಯವಿದೆ ನಿಜ; ಆದರೆ, ಒಕ್ಕೂಟದ ಅಂಗವಾದ ರಾಜ್ಯಕ್ಕೆ ಹೊರ ಹೋಗುವ ಸ್ವಾತಂತ್ರ್ಯವಿಲ್ಲವೆಂದು. ಈ ಬಗೆಯ ಎಚ್ಚರಿಕೆಯು ಶೇಕರ ಮೇಲೆ ಯಾವ ಬಗೆಯ ಪರಿಣಾಮವನ್ನೂ ಮಾಡಲಾರದು. ಏಕೆಂದರೆ, ಅವರ ವಿಚಾರ ಲಹರಿಯಲ್ಲಿ ಹೊಸ ನೀರಿನ್ನೂ ಸೇರಿಲ್ಲ. ಪ್ರಧಾನಿ ನೆಹರುರವರನ್ನು ಸದ್ಯದಲ್ಲಿಯೇ ಭೆಟ್ಟಿಯಾಗಲಿರುವ ಶೇಕರು ಆ ವೇಳೆಯಲ್ಲಾದರೂ ವಸ್ತುಸ್ಥಿತಿಯನ್ನರಿತುಕೊಂಡು ತನ್ನ ಅಭಿಪ್ರಾಯವನ್ನು ಬದಲಾಯಿಸಿದರೂ ಬದಲಾಯಿಸಬಹುದು. ಒಂದು ವೇಳೆ ಕಾಶ್ಮೀರದ ಸಿಂಹವು ಹನ್ನೊಂದು ವರ್ಷಗಳ ಹಿಂದಿನ ರಾಗವನ್ನೇ ಮುಂದೆಯೂ ಎಳೆಯುತ್ತ ಹೋದರೆ ಕಾಯಿದೆಯನ್ವಯ ಕ್ರಮ ಕೈಗೊಳ್ಳುವುದು ಅಗತ್ಯವೆನಿಸುತ್ತದೆ. ಕಾಶ್ಮೀರದ ಪರಿಸ್ಥಿತಿಯನ್ನು ಸುಧಾರಿಸುವುದರಲ್ಲಿ ನೆರವಾಗುವುದೆಂಬ ಕಾರಣದಿಂದ ರಾಜ್ಯ ಸರಕಾರವು ಕೈಕೊಂಡ ಮುಕ್ತತೆಯು ಉಪಕ್ರಮವು ಕೊರಳಿಗೆ ಉರುಳಾಗದಂತೆ ತಕ್ಕ ಮುನ್ನೆಚ್ಚರಿಕೆಯನ್ನು ಪ್ರಾರಂಭದಿಂದಲೇ ಕೈಗೊಳ್ಳದೆ ಹೋದರೆ, ಉರಿ ಉಲ್ಬಣಿಸಿದ ಮೇಲೆ ನೀರು ಎರಚಿದಂತಾದೀತು. ಭಾರತದ ರಾಜಕೀಯ ನೀತಿಗಳಲ್ಲಿ ಕೆಲವೊಂದು ಈ ರೀತಿ ನೆನೆಗುಂದಿಗೆ ಬಿದ್ದಿದ್ದು ಕೊಳೆಯುತ್ತಿರುವುದನ್ನು ನಾವು ಉಪೇಕ್ಷಿಸಬಾರದು. ಸಾದಿಕರ ನೇತೃತ್ವದಲ್ಲಿ ಕಾಶ್ಮೀರದ ಪಥ ಭ್ರಮಣ ವೆತ್ತ ಎಂಬ ಮಹಾ ಪ್ರಶ್ನೆಗೆ ಭಾರತಸರಕಾರ ಮೊದಲು ಉತ್ತರವರಸಿಕೊಳ್ಳಬೇಕಾದುದು ಅತ್ಯಗತ್ಯವೆನಿಸುತ್ತದೆ.

ಜಾತೀಯ ಸೌಹಾರ್ದ

ಜಾತೀಯ ಸೌಹಾರ್ದವನ್ನು ಬೆಳೆಸಿ ಉಳಿಸಿಕೊಂಡು ಬರಬೇಕು ಎಂಬ ತತ್ವದ ಬಗ್ಗೆ ಒಮ್ಮತದ ನಿರ್ಧಾರಕ್ಕೆ ಬಂದು ಉಳಿದೆಲ್ಲ ಪ್ರಶ್ನೆ—ಮರುಪ್ರಶ್ನೆಗಳನ್ನು ಉತ್ತರಿಸಲು ಮತ್ತೆ ಸಭೆಸೇರಲು ಪಾಕ್—ಭಾರತ ಗೃಹಮಂತ್ರಿಗಳು ಒಪ್ಪಿ ತಮ್ಮ ಸಮ್ಮೇಳನವನ್ನು ಬರ್ಖಾಸ್ತುಗೊಳಿಸಿದರು. ಮುಂದೆ ಕರಾಚಿಯಲ್ಲೋ ರಾವಲ್ಪಿಂಡಿಯಲ್ಲೋ ಇದು ಮುಂದುವರಿಯುವುದು. ಜಾತೀಯ ಸೌಹಾರ್ದವನ್ನು ಹೇಗೆ ಉಳಿಸಿಕೊಳ್ಳಬೇಕೆಂಬುದರ ಸಂಬಂಧವಲ್ಲಿಯೂ ಕೆಲವೊಂದು ಒಡಂಬಡಿಕೆಗಳು ನಡೆದುವು. ಆದರೆ, ಎರಡು ವಿಷಯಗಳಲ್ಲಿ ಮಾತ್ರ ತೀವ್ರ ಭಿನ್ನಾಭಿಪ್ರಾಯವುಳಿಯಿತು. ವೀಸಾ ಪದ್ಧತಿಯನ್ನು ಸೀದಾಗೊಳಿಸಬೇಕೆಂಬ ಭಾರತದ ಕೇಳಿಕೆಯನ್ನು ಪಾಕಿಸ್ತಾನ ಒಪ್ಪಲಿಲ್ಲ. ಪೌರತನ ನಿರ್ಧರಿಸಲು ಅಂತಾರಾಷ್ಟ್ರೀಯ ನ್ಯಾಯಮಂಡಳ ರಚನೆಯ ಪಾಕ್ ಸಲಹೆಯನ್ನು ಭಾರತ ಒಪ್ಪಲಿಲ್ಲ. ಪೂರ್ವ ಪಾಕಿಸ್ತಾನದಲ್ಲಿ ಉಂಟಾದ ಜಾತೀಯ ಗೊಂದಲಕ್ಕೆ ಭಾರತವು ಮುಸ್ಲಿಮರನ್ನು ಓಡಿಸುತ್ತಿರುವುದೇ ಕಾರಣವೆಂದು ಪಾಕ್ ಗೃಹ ಸಚಿವ ಹಬೀಬುಲ್ಲಾರ ಮತವಾದರೆ, ಅದಕ್ಕೆ ಪಾಕಿಸ್ತಾನವೇ ಕಾರಣವೆಂದು ಭಾರತದ ವಾದ. ಹೀಗೆ ವಾದ ಪ್ರತಿವಾದಗಳು ಇದ್ದಂತೆಯೇ ಉಳಿದಿವೆ. ಇಂತಹ ದ್ವಂದ್ವದ ನಡುವೆ ಸೌಹಾರ್ದಮಯ ವಾತಾವರಣ ಹುಟ್ಟಿಸುವುದಾದರೂ ಹೇಗೆ? ಬೆಕ್ಕಿನ ಕತ್ತಿಗೆ ಗಂಟೆಕಟ್ಟಬೇಕೆಂಬ ನಿರ್ಧಾರಕ್ಕೆ ಬಂದಾಯಿತು. ಈ ಕಾರ್ಯವನ್ನು ಸಾಧಿಸುವುದು ಹೇಗೆಂಬುದೇ ಯಕ್ಷ ಪ್ರಶ್ನೆ. ಹಲವು ಸುತ್ತಿನ ಮಾತುಕತೆಗಳಿಗಿದೊಂದು ದಾರಿ ಮಾತ್ರ ಆದೀತೇ ಎಂಬ ಸಂದೇಹ ಕಾಡುವುದು ಸಹಜ; ಆದರೆ, ಹಾಗಾಗದಿರಲಿ ಎಂಬುದೇ ಎಲ್ಲರ ಹಾರೈಕೆ. ಉಭಯತರ ಗೌರವ ಪ್ರತಿಷ್ಠೆಗಳು ಕೆಡದಂತೆ ಒಂದು ಒಡಂಬಡಿಕೆ ಸಾಧ್ಯವಾಗಬೇಕು; ಆದೀತೆಂದು ಆಶಿಸೋಣ.

ಜಗತ್ಪರ್ಯಟನ

ಝುಲ್ಫಿಕರ್ ಎ. ಭುಟ್ಟೋ

ಭಾರತ ಮೇಲೆಯೇ ವೃಥಾರೋಪ ಹೇರುವುದರಲ್ಲಿ ನಿಸ್ಸೀಮರಾದ ಪಾಕ್ ವಿದೇಶ ಮಂತ್ರಿ ಝುಲ್ಫಿ. ಎ. ಭುಟ್ಟೋರ ವರ್ತನೆಗ ತುಸು ಕಂಗೆಡುವಂತಾಗಿದೆ. ಒಂದು ಕೈಯಲ್ಲಿ ಬೆಣ್ಣೆ ಇನ್ನೊಂದರಲ್ಲಿ ದೊಣ್ಣೆ ಹಿಡಿಯುವ ಅವರ ಸ್ವಭಾವೀಗ ಸಂಪೂರ್ಣ ಹೊರಪಡುವಂತಾಗಿದೆ. ಕಾಶ್ಮೀರದಲ್ಲಿರುವ ಸಮರವಿರಾಮ ರೇಖೆಯನ್ನು ಒಂದಲ್ಲ ಹಲವುಬಾರಿ ಅತಿಕ್ರಮಿಸಿ, ನಿಶ್ಶಸ್ತ್ರ ಭಾರತೀಯರ ಮೇಲೆ ಹಲ್ಲೆ ಮಾಡಿದ ಪ್ರಕರಣವೀಗ ಸಂಯುಕ್ತರಾಷ್ಟ್ರ ಸಂಘದ ನಿರೀಕ್ಷಕರಿಂದ ಬೆಳಕಿಗೆ ಬಂದಿದೆ ಇದರಿಂದ ನ್ಯಾಯವಾದಿಗಳಾರು ಅನ್ಯಾಯವಾದಿಗಳಾರು ಎಂಬುದು ಜಗತ್ತಿಗೆ ವೇದ್ಯವಾಗುತ್ತದೆ. ತಾನು ಬೆಣ್ಣೆಯನ್ನು ತಿಂದು ಆಡಿನ ಮುಖಕ್ಕೆ ಸವರಿದ ಕೋತಿಯಂತೆಯೆ ಭುಟ್ಟೋ ತಮ್ಮ ಬಾಲವನ್ನೂ ಕತ್ತರಿಸಿಕೊಳ್ಳಬೇಕಾಗಿ ಬರುವ ದಿನ ದೂರವಿಲ್ಲದು. ಸತ್ಯಮೇವ ಜಯತೇ ಅಲ್ಲವೆ?

ಚಾರ್ಲ್ಸ್ ಡಿಗಾಲೆ

ಫ್ರಾನ್ಸಿನ ಅಧ್ಯಕ್ಷ ಚಾರ್ಲ್ಸ್ ಡಿಗಾಲೆಯವರು ಹೊಸ ದಾರಿಯನ್ನು ಮೆಟ್ಟತೊಡಗಿದ್ದಾರೆ. ಈ ಪ್ರವೃತ್ತಿಯ ಮುನ್ನಡೆಯೆಲ್ಲಿಯೆಂದು ಈಗಲೇ ಹೇಳುವಂತಿಲ್ಲ. ಕೆಂಪು ಚೀನೀಯ ಸರಕಾರವನ್ನು ಅವರು ಮನ್ನಿಸಿ ಅದರೊಡನೆ ರಾಜತಾಂತ್ರಿಕ ಸಂಬಂಧವಿರಿಸುವ ಉದಾರತೆ ತೋರಿಸಿದ ಡಿಗಾಲೆ ಈಗ ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದಾರೆ. ಕೆಲವಾರು ವರ್ಷಗಳಿಂದ ಕೆಂಪು ಚೀನಾಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರಾತಿನಿಧ್ಯ ಕೊಡುವ ಪ್ರಶ್ನೆ ಬಂದಿತ್ತು; ಬಂದಂತೆಯೇ ಹಿಂದೆಯೂ ಹೋಗಿತ್ತು. ಪಾಶ್ಚಾತ್ಯ ಬಣದಲ್ಲಿ ಸೇರಿದ ಫ್ರಾನ್ಸು ಈಗ ಪೂರ್ವದ ನಾಯಕತ್ವ ಪಡೆಯುವ ಆಸೆಯಿಟ್ಟುಕೊಂಡಿದೆಯೋ ನೋ! ಚೀನಾದ ಪರವಾಗಿ ವಕಾಲತ್ತನ್ನು ವಹಿಸುವ ಡಿಗಾಲೆ ನಿರ್ಧಾರ ಉಳಿದ ಪಾಶ್ಚಾತ್ಯರನ್ನು ಮತ್ತಷ್ಟು ದಂಗು ಬಡಿಸದೆ ಉಳಿಯದು.

ಎಸ್ ಎ. ಡಾಂಗೆ

ಭಾರತೀಯ ಕಮ್ಯುನಿಸ್ಟ ಪಕ್ಷದಲ್ಲಿ ತೀವ್ರ ಬಿಕ್ಕಟ್ಟು ಹೊರಗೆ ತೋರುವಂತಿದೆ. ಇದಕ್ಕೆ ಕಾರಣರಾದವರು ಅದರ ಅಧ್ಯಕ್ಷ ಎಸ್. ಎ. ಡಾಂಗೆಯವರು. ತನ್ನ ಮೇಲಿನ ಆಪಾದನೆಯ ಚರ್ಚೆಯ ವೇಳೆ ತಾನು ಸಭೆಯ ಅಧ್ಯಕ್ಷ ಪದವನ್ನು ಬಿಟ್ಟುಕೊಡಲು ಒಪ್ಪದಿದ್ದುದೇ ಇದರ ಕ್ರಿಯಾಶೀಲತೆಯ ನೆವನ. ರಶ್ಯ ಮತ್ತು ಚೀನೀಯರ ವಕೀಲರಂತೆ ನಡೆದುಕೊಳ್ಳುತ್ತಿರುವ ಭಾರತದ ಕಮ್ಯುನಿಸ್ಟ ನಾಯಕರು ನ್ಯಾಯಾಲಯದಲ್ಲಿ ವಾದಿಸುವ ವಕೀಲರಂತಿದ್ದಾರೆಯೋ ಎಂಬ ಸಂದೇಹಕ್ಕೆ ಆಸ್ಪದ ನೀಡಿದೆ. ಅಥವಾ ರಶ್ಯ—ಚೀನಾಗಳ ತಾತ್ವಿಕ ಭಿನ್ನಾಭಿಪ್ರಾಯದ ಬೀಜವೇ ಇಲ್ಲಿಯೂ ಮೊಳೆಯಲಾರಂಭಿಸಿತೇ ಎಂಬ ಊಹೆಯೇಳುತ್ತದೆ. ಎರಡನೆಯದಕ್ಕಿಂತ ಮೊದಲನೆಯದೇ ಹೆಚ್ಚು ಸರಿಯೆಂದರೆ ತಪ್ಪಾಗಲಾರದು; ಆದುದರಿಂದ ಯಾರೂ ಮೋಸ ಹೋಗಬಾರದು.

ಲಾಲಬಹದೂರ ಶಾಸ್ತ್ರಿ

ಭಾರತದ ಖಾತೆರಹಿತ ಮಂತ್ರಿ ಲಾಲ ಬಹದೂರರ ಹೊಣೆಗಾರಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿದೆ. ಕಾಶ್ಮೀರ ಸರಕಾರವು ಶೇಕ ಅಬ್ದುಲ್ಲರನ್ನು ಬಿಡುಗಡೆಗೊಳಿಸುವಲ್ಲಿ ತೋರಿಸಿದ ಗಡಿಬಿಡಿಯ ಅವಸರ ಮತ್ತು ಆತುರಗಳನ್ನು ಅವರಿನ್ನೂ ಅರ್ಥಮಾಡಿಕೊಂಡಿಲ್ಲ. ಜೇಲಿನಿಂದ ಹೊರ ಬಂದೊಡನೆಯೇ ಅಬ್ದುಲ್ಲಾ ತನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಪ್ರಕಟಿಸಲು ಹೊರಟದ್ದು ಮತ್ತಷ್ಟು ದಂಗು ಬಡಿಸುವಂತಾಗಿದೆ. ಶಾಸ್ತ್ರಿಗಳು ಹೇಳು

ವಂತೆ ಮೊದಲು ಭಾರತ ಮತ್ತು ಕಾಶ್ಮೀರಗಳಲ್ಲಿರುವ ಸಾರ್ವಜನಿಕಾಭಿಪ್ರಾಯವನ್ನು ತಿಳಿದುಕೊಂಡು ನಾಯಕರೊಡನೆ ವಿಚಾರ ವಿಮರ್ಶೆ ನಡೆಸಿ ಬಳಿಕ ಸಾರ್ವಜನಿಕ ಹೇಳಿಕೆ ನೀಡಬೇಕಾಗಿತ್ತು. ಯಾವುದೇ ದೇಶವು ದೇಶ ವಿಭಜನೆಯ ಹೇಳಿಕೆಯನ್ನು ಸಹಿಸದು. ಅಬ್ದುಲ್ಲಾ ವರ್ತನೆಯ ಮೇಲೆ ಶಾಸ್ತ್ರಿ ಕಣ್ಣಿಡಬೇಕಾಗಿ ಬಂದಿದೆ.

ಸರ್ದಾರ್ ಸ್ವರ್ಣಸಿಂಗ್

ಜಕಾರ್ತದಲ್ಲಿ ಇಂಡೋನೇಶ್ಯದ ಅಧ್ಯಕ್ಷ ಡಾ| ಸುಕರ್ಣರ ನಾಯಕತ್ವದಲ್ಲಿ ಸೇರಿದ ದ್ವಿತೀಯ ಆಫ್ರೋಏಸ್ಯಾ ಪರಿಷತ್ತಿನ ಪೂರ್ವ ಸಿದ್ಧತಾ ಸಭೆಯಲ್ಲಿ ಸರ್ದಾರ ಸ್ವರ್ಣಸಿಂಗರು ಭಾರತವನ್ನು ಪ್ರತಿನಿಧಿಸಿದ್ದಾರೆ. ಶ್ರೀ ಸಿಂಗರು ಭಾರತದ ನಿಲುವೆಯನ್ನಲ್ಲಿ ಸ್ಪಷ್ಟವಾಗಿ ಮಂಡಿಸಿದ್ದಾರೆ- ಸೋವಿಯತ್ ರಶ್ಯಾದ ಬಹುಭಾಗವು ಏಶ್ಯಾದಲ್ಲಿರುವುದರಿಂದ ಈ ಪರಿಷತ್ತಿಗೆ ಅದನ್ನೂ ಆಹ್ವಾನಿಸಬೇಕು ಎಂದೊಂದು ನೂತನ ಸಲಹೆ. ಆಫ್ರೋಏಶ್ಯಾದ ಪ್ರತಿರಂಗದ ಮೇಲೆಯೂ ಪರಿಣಾಮಕಾರಿ ಪ್ರಭಾವ ಬೀರಬಲ್ಲುದಾದುದರಿಂದ ಈ ಸಲಹೆಯು ಮಹತ್ವಪೂರ್ಣವೂ ಆಗಿದೆ. ಮೊದಲ ಪರಿಷತ್ತು ಏಶ್ಯಾದಲ್ಲಿ ಸೇರಿರುವುದರಿಂದ ಮುಂದಿನ ಎರಡನೆಯ ಪರಿಷತ್ತು ಆಫ್ರಿಕೆಯಲ್ಲಿ ಸೇರಬೇಕು ಎಂಬ ಇನ್ನೊಂದು ಸಲಹೆಯೂ ನ್ಯಾಯವಾದುದೇ. ಮೊದಲನೆಯದು ಬಿದ್ದುಹೋಯ್ತು; ಎರಡನೆಯದು ಸ್ವೀಕೃತವಾಯ್ತು.

In the Court of the District Munsif of Mangalore

O. S. No. 69/1964.

Between:

P. P. Mammoo Koya ... Plaintiff.

and

1. K. Radhakrishna R. Nayak } Defendants
2. K. Rama Nayak. }

NOTICE.

To

1) Sri K Radhakrishna R. Nayak, Son of 2nd Defendant, Merchant, residing in Belthangady, P. O. Belthangady. } Defendants.
2) Sri Rama Nayak, Son of Mahalinga Nayak, Merchant, residing in Belthangady, P. O. Belthangady. }

PLEASE TAKE NOTICE that the abovenamed plaintiff has filed a suit against you for the recovery of a sum of Rs. 3649 - 63 and costs of the suit in respect of the amount paid to you by the plaintiff in excess of the value of timber supplied by you and for damages for non-delivery of 6045 . 6 c. feet of Timber as per the agreement dated 14-9-1963, executed by you and the plaintiff and the same stands posted to 2—6—1964 at 11 A. M. for your appearance. If you fail to appear on that date either in person or through a pleader, the suit will be decided in your absence.

/ By order of Court /

B K. Mohan Rao,
Advocate for Plaintiff.

Mangalore, 13-4-1964.

ಅಲ್ಲಲ್ಲಿಯ ಸುದ್ದಿ ಸಾರ

ವಿದಾಯ ಸತ್ಕಾರ ತಾ. 9-4-64 ರಂದು ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ, ಇಲ್ಲಿಂದ ವರ್ಗವಾಗಿ ಹೋಗುವ ಸ್ಥಳೀಯ ಪೋಸ್ಟ್ ಮಾಸ್ಟರ್ ಶ್ರೀ ಬಿ. ಆರ್. ಬಾಗ್ಲೋಡಿಯವರನ್ನು ಗೌರವಿಸುವ ಸತ್ಕಾರ ಕೂಟವು ಡಾ| ವೈ. ಆರ್. ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ| ಕೆ. ಆರ್. ವೆಂಕಟಕೃಷ್ಣನವರು ಸ್ವಾಗತಿಸಿ ಶ್ರೀ ಬಾಗ್ಲೋಡಿಯವರು ಮೆಡಿಕಲ್ ರಿಲೀಫ್ ಎಸೋಸಿಯೇಶನಿಗೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು. ಸಭಿಕರ ಪರವಾಗಿ ಡಾ| ಯು. ಕೆ. ಆಚಾರ್, ಶ್ರೀ ಯು ಎಲ್. ಮೆಂಡೋನ್ಸ, ಶ್ರೀ ಎಂ. ವಿಠಲ ಮಾರ್ಲ, ಮತ್ತು ಶ್ರೀ ಕೆ. ವಾಸುದೇವ ಶೆಟ್ಟರು ಮೊತಾದಿ ಅತಿಥಿಗಳ ಗುಣಗಾನ ಮಾಡಿದರು. ಶ್ರೀ ಬಾಗ್ಲೋಡಿಯವರು ತನಗಿತ್ತ ಸತ್ಕಾರಕ್ಕೆ ಕೃತಜ್ಞತೆ ಸೂಚಿಸಿ ಮಾತನಾಡಿದ ಬಳಿಕ ಎಸ್. ಸಚ್ಚಿದಾನಂದ ಆಚಾರ್ಯರವರು ಧನ್ಯವಾದ ಸಮರ್ಪಿಸಿದರು.

ವಾರ್ಷಿಕ ಮಹಾಸಭೆ—ಶಿರ್ವದ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕ ಮಹಾ ಸಭೆಯು ತಾ 4-4-64 ರಂದು ಡಾ. ವೈ. ಆರ್. ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ಎಮ್. ಎಲ್ಲಪ್ಪ ಶೆಟ್ರು ವರದಿವಾಚನ ಮಾಡಿದರು. ಹೊಸ ವರ್ಷಕ್ಕೆ ಡಾ. ವೈ. ಆರ್. ಶೆಟ್ಟಿ (ಅಧ್ಯಕ್ಷ) ಶ್ರೀ ಎಂ. ವಿಠಲ ಮಾರ್ಲ (ಉಪಾಧ್ಯಕ್ಷ) ಶ್ರೀ ಎನ್ ಎಮ್. ಎಲ್ಲಪ್ಪ ಶೆಟ್ಟಿ (ಕಾರ್ಯದರ್ಶಿ ಮತ್ತು ಕೋಶಾಧಿಕಾರಿ) ಶ್ರೀ ಎಸ್. ಸಚ್ಚಿದಾನಂದ ಆಚಾರ್ (ಉಪ ಕಾರ್ಯದರ್ಶಿ) ಶ್ರೀ ಎಲ್ ಮೆಂಡೋನ್ಸ, ಶ್ರೀ ಬಿ. ಜಯರಾಮ ಶೆಟ್ಟಿ ಶ್ರೀ ಕೆ. ವಾಸುದೇವ ಶೆಟ್ಟಿ (ಸದಸ್ಯರು) ಮತ್ತು ಶ್ರೀ ಐ. ಡೆಮೆಲ್ಲೋರವರು ಗೌರವ ಲೆಕ್ಕ ಪರಿಶೋಧಕರಾಗಿ ಆರಿಸಲ್ಪಟ್ಟರು.

ಅಮೇರಿಕೆ—ಕಾಶ್ಮೀರ

ಶೇಖ ಅಬ್ದುಲ್ಲಾರ ಬಿಡುಗಡೆಯ ನಂತರ ಅಮೇರಿಕೆಯಲ್ಲಿ ಕಾಶ್ಮೀರ ನಿಲುವೆಯಲ್ಲಿ ಅನಿರ್ಧಾರಿತ ಸ್ಥಿತಿಯು ಕಾಣಿಸಿಕೊಂಡಿದೆ. ಭಾರತ—ಪಾಕಿಸ್ತಾನಗಳು ಒಂದಾಗಿ ಚೀನೀಯ ಆಕ್ರಮಣವನ್ನು ಎದುರಿಸಲು ಶಕ್ತವಾಗಬೇಕೆಂದೂ ಈ ರೀತಿ ಒಂದಾಗುವುದು ಭಾರತದ ತ್ಯಾಗದಿಂದ ಮಾತ್ರ (ಕಾಶ್ಮೀರವನ್ನು ಪಾಕಿಸ್ತಾನಕ್ಕೆ ದಾನವೆರೆಯುವುದು?) ಸಾಧ್ಯವೆಂದೂ ಆದರೂ ಇದು ಆಂತರಿಕ ವಿಷಯವಾದುದರಿಂದ ಅದರಲ್ಲಿ ಅಮೇರಿಕೆ ಕೈಹಾಕಬಾರದೆಂದೂ ಒಂದು ಅಭಿಪ್ರಾಯ. ಅಮೇರಿಕೆಯ ಶಸ್ತ್ರಾಸ್ತ್ರ—ಸಹಾಯದ ಭರವಸೆಯಲ್ಲಿ ಕಾಶ್ಮೀರವನ್ನು ಸ್ವತಂತ್ರಗೊಳಿಸಿ ಭಾರತ—ಪಾಕಿಸ್ತಾನಗಳ ನಡುವಣ ಸೇತುವೆಯಂತೆ ಇರಿಸಬೇಕೆಂಬುದು ಮತ್ತೊಂದು ಅಭಿಮತ. ಇನ್ನು ಕೆಲವರು ಇದಕ್ಕೂ ಮುಂದುವರಿದಿದ್ದಾರೆ. ಕಾಶ್ಮೀರ—ಪಾಕಿಸ್ತಾನ ಮತ್ತು ಭಾರತಗಳನ್ನು ಸೇರಿಸಿ ಫೆಡರಲ್ ಮಾದರಿಯ ಮಹಾಮಂಡಳ ರಚಿಸಿ ಭಾರತೀಯ ಉಪಖಂಡದ ಭದ್ರತೆಯನ್ನು ಹೆಚ್ಚಿಸಬೇಕು; ದೃಢಗೊಳಿಸಬೇಕು. ಎಂಬುದು ಮೂರನೇಯದು. ಆದರೆ, ಈ ಮೂರು ಅಭಿಪ್ರಾಯಗಳೂ ನಿಜಸ್ಥಿತಿಯನ್ನು ಮರೆಮಾಚಿ ಅಸತ್ಯ ಮತ್ತು ಅನ್ಯಾಯವನ್ನೇ ಪುರಸ್ಕರಿಸುವುದರಿಂದ ಇವುಗಳನ್ನು ಭಾರತವು ಎಂದಿಗೂ ಒಪ್ಪುವುದು ಸಾಧ್ಯವಿಲ್ಲ.

ವಿಶ್ವ ಆರೋಗ್ಯ ದಿನಾಚರಣೆ—ಈ ವರ್ಷ ವಿಶ್ವ ಆರೋಗ್ಯ ದಿನಾಚರಣೆಯ ವಿಷಯವಾದ ಕ್ಷಯ ರೋಗವನ್ನು ಕುರಿತು ಕಸ್ತೂರಬಾ ಮೆಡಿಕಲ್ ಕಾಲೇಜಿನ ಮೆಡಿಸಿನ್ ಪ್ರೊಫೆಸರ್ ಡಾ| ಸಿ. ಎಚ್. ಶಿವರಾಮನ್ ಮತ್ತು ದಕ್ಷಿಣ ಕನ್ನಡದ ಜಿಲ್ಲಾ ಆರೋಗ್ಯಾಧಿಕಾರಿ ಡಾ| ಎಚ್. ಎಸ್. ನಾಯಕ್‌ರವರು ತಾ. 7—4—64 ರಂದು ಮಣಿಪಾಲದಲ್ಲಿ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ನಡೆದ ಉಡುಪಿ ರೋಟರಿ ಕ್ಲಬ್‌ನ ಸಾಪ್ತಾಹಿಕ ಸಭೆಯಲ್ಲಿ ಭಾಷಣ ಮಾಡಿದರು. ಕ್ಷಯ ರೋಗವು ನಮ್ಮ ದೇಶದಲ್ಲಿ ಬಹಳ ವ್ಯಾಪಕವಾಗಿದೆ ಎಂದೂ, ಆರಂಭದಲ್ಲೇ ಪರಿಣಾಮಕಾರಿ ಚಿಕಿತ್ಸೆ ನಡೆಸಿ ಅದನ್ನು ಕಡಿಮೆ ಮಾಡಬಹುದೆಂದೂ ಡಾ| ಶಿವರಾಮನ್ ಹೇಳಿದರು. ಡಾ| ನಾಯಕರವರು ಕ್ಷಯ ರೋಗಕ್ಕೆ ಹೆಚ್ಚು ಗಮನ ಕೊಡುವುದು ಅಗತ್ಯವೆಂದರು. ರೋಗಿಗಳಿಗೆ ಮಾತ್ರೆಗಳನ್ನು ಉಚಿತವಾಗಿ ಹಂಚಬಹುದಾದರೂ ಅವುಗಳನ್ನು ಸೇವಿಸುತ್ತಾರೆಂದು ಖಾತ್ರಿ ಮಾಡಿಕೊಳ್ಳಬೇಕೆಂದರು.

ವಾರ್ಷಿಕೋತ್ಸವ— ಮಣಿಪಾಲದಲ್ಲಿ ಪ್ರಪ್ರಥಮವಾಗಿ ಸ್ಥಾಪಿತವಾದ ಕಿರಿಯ ಬುನಾದಿ ಶಾಲೆಯ ೩ನೇ ವಾರ್ಷಿಕೋತ್ಸವವು ತಾ. 13-4-64 ರಂದು ಕಸ್ತೂರಬಾ ಮೆಡಿಕಲ್ ಕಾಲೇಜಿನ ಸಭಾಮಂದಿರದಲ್ಲಿ ನಡೆಯಿತು. ಮಕ್ಕಳ ವಿದ್ಯಾಭ್ಯಾಸ ಸರಿಯಾಗಿ ನಡೆಯುವುದಕ್ಕಾಗಿ ಹೆತ್ತವರು ಶಿಕ್ಷಕರೊಡನೆ ಸಹಕರಿಸಬೇಕಾದುದು ಅಗತ್ಯವೆಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ| ಟಿ. ಎಂ. ಎ ಪೈಯವರು ನುಡಿದರು. ಶಾಲೆಯ ಹಸ್ತಲಿಖಿತ ಪತ್ರಿಕೆ 'ಪ್ರತಿಭೆ'ಯನ್ನು ಅವರು ಉದ್ಘಾಟಿಸಿದರು.

ಶಾಲೆಯ ವ್ಯವಸ್ಥಾಪಕ ಶ್ರೀ ಟಿ. ರಮೇಶ ಪೈಯವರು ಸ್ವಾಗತ ಭಾಷಣ ಮಾಡಿದ ಬಳಿಕ ಮುಖ್ಯೋಪಾಧ್ಯಾಯರಾದ ಶ್ರೀ ಪಾಳ. ನಾ. ಉಪಾಧ್ಯಾಯರವರು ವರದಿಯನ್ನು ಓದಿದರು. ಶ್ರೀಮತಿ ಶಾರದಾ ಮಾಧವ ಪೈಯವರು ಬಹುಮಾನಗಳನ್ನು ವಿತರಣೆ ಮಾಡಿದರು.

ಸ್ಥಾಪನಾ ದಿನ—ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಸಂಸ್ಥೆಯ ಸ್ಥಾಪನಾ ದಿನವನ್ನು ಇದೇ ದಿನಾಂಕ ೩೦ರಂದು ಇಲ್ಲಿ ಆಚರಿಸಲಾಗುವುದು. ತಿರುಚಿರಪಳ್ಳಿಯ ಸೀತಾಲಕ್ಷ್ಮಿ—ರಾಮಸ್ವಾಮಿ ಕಾಲೇಜಿನ ಸಂಸ್ಥಾಪಕ—ಅಧ್ಯಕ್ಷರಾದ ಪದ್ಮಶ್ರೀ ದಿವಾನ್ ಬಹದೂರ್ ಎನ್. ರಾಮಸ್ವಾಮಿ ಅಯ್ಯಂಗಾರರವರು ಅಂದಿನ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಬೀರೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನ - ಪ್ರದೇಶ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ, ತಾ. ೫ರಂದು ಬೀರೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವು ನೆರವೇರಿತು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಎನ್. ಎಸ್ ಸಿದ್ಧರಾಮಯ್ಯನವರು ಸ್ವಾಗತಿಸುತ್ತಾ ಕಾಂಗ್ರೆಸ್ ಆಡಳಿತದ ಹಲವಾರು ದೋಷದೋಷಗಳನ್ನು ಎತ್ತಿ ತೋರಿಸಿದರು. ಮೈಸೂರು ಸಂಸ್ಥಾನದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಸಲುವಾಗಿ ಸಂಸ್ಥಾನ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವನ್ನು ಕರೆಯಲು ನಿರ್ಧರಿಸಿ ಆ ಬಗ್ಗೆ ಸೂಕ್ತ ವ್ಯವಸ್ಥೆಗಳನ್ನು ಕೈಕೊಳ್ಳಲು ಸಮಿತಿಯೊಂದನ್ನು ರಚಿಸಲಾಯಿತು. ಮೈಸೂರು ರಾಜ್ಯಪಾಲರಾದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್‌ವರನ್ನು ಮದ್ರಾಸಿಗೆ ವರ್ಗಮಾಡಿ ಹೊರಡಿಸಿದ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ರಾಷ್ಟ್ರಾಧ್ಯಕ್ಷರನ್ನು ಒತ್ತಾಯಿಸುವ, ಶರಾವತಿ ಬಗ್ಗೆ ಸರಕಾರ ಹೊರಡಿಸಿರುವ ಶ್ವೇತಪತ್ರದಿಂದ ಉಂಟಾದ ಅನುಮಾನ ಪರಿಹಾರ್ಥ, ನ್ಯಾಯಾಂಗ ವಿಚಾರಣೆಯಾಗಬೇಕೆನ್ನುವ ನಿರ್ಣಯಗಳಾದುವು. ಶ್ರೀಗಳಾದ ಚನ್ನಯ್ಯ, ಎನ್. ರಾಚಯ್ಯ, ಅಣ್ಣಾರಾವ್ ಗಣಮುಖಿ, ಟಿ. ಸುಬ್ರಹ್ಮಣ್ಯಂ, ಎ. ರಾಮಣ್ಣ, ಎಂ. ಆರ್. ಸಿ. ಬಸಪ್ಪ, ಬಿ. ಶ್ರೀಕಂಠಪ್ಪ, ಶಿವನಂಜೇಗೌಡ, ಶ್ರೀಕಂಠ ಶೆಟ್ಟಿ, ಚನ್ನಸ್ವಾಮಿ ಮುಂತಾದವರು ಕಾಂಗ್ರೆಸ್ಸಿನ ದುರಾಡಳಿತದ ಕುರಿತು ಮಾತಾಡಿದರು.

ಸಿಂಡಿಕೇಟ್ ಬ್ಯಾಂಕಿನ ಹೊಸ ಕಟ್ಟಡದ ಉದ್ಘಾಟನೆ - ಮಣಿಪಾಲದ ಕ್ಷಿಕಲಾತ್ಮಕವಾಗಿಯೂ ವಿಶಾಲವಾಗಿ ನೂತನವಾಗಿ ನಿರ್ಮಿಸಿದ ಸಿಂಡಿಕೇಟ್ ಬ್ಯಾಂಕಿನ ಪ್ರಧಾನ ಕಾರ್ಯಾಲಯದ ಉದ್ಘಾಟನಾ ಸಮಾರಂಭವು ಇದೇ ತಾ 19ನೇ ಬೆಳಿಗ್ಗೆ 10 ಗಂಟೆಗೆ ಕೇಂದ್ರ ಸರಕಾರದ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂ ಇವರಿಂದ ನೆರವೇರಿಸಲ್ಪಡುವುದು. ದಕ್ಷಿಣ ಭಾರತದಲ್ಲಿ ವಿಶಾಲವಾಗಿ ಹರಡಿದ ತನ್ನ ಶಾಖೆಗಳ ಮೂಲಕ ಜನತೆಯಲ್ಲಿ ಬ್ಯಾಂಕಿಂಗ್ ಚಿತ್ತವನ್ನು ಹುಟ್ಟಿಸಿದ ಈ ಬ್ಯಾಂಕಿನ ಪ್ರಧಾನ ಕಾರ್ಯಾಲಯವು ಸುಮಾರು 8,00 ಜನಸಂಖ್ಯೆಯಿರುವ ಮಣಿಪಾಲದಲ್ಲಿ ಈಗಾಗಲೇ ಕಾರ್ಯಪ್ರವೃತ್ತವಾಗಿದೆ. ಉದ್ಘಾಟನಾ ಸಮಾರಂಭದ ವಿಸ್ತೃತ ಕಾರ್ಯಕ್ರಮಗಳನ್ನು ಈ ಸಂಚಿಕೆಯ ಕೊನೆಯ ಪುಟದಲ್ಲಿ ನೋಡಬಹುದು.

ಅಡಿಕೆ ಕೃಷಿಕರ ವಿಚಾರ ಗೋಷ್ಠಿ—ಚೊಕ್ಕಾಡಿ ಯುವಕ ಮಂಡಲದ ಆಶ್ರಯದಲ್ಲಿ ತಾಲೂಕಿನಲ್ಲೇ ಪ್ರಥಮ ಬಾರಿಯಾಗಿ ಅಡಿಕೆ ಕೃಷಿಕರ ವಿಚಾರಗೋಷ್ಠಿಯೊಂದು ಶ್ರೀ ಎನ್. ಎಂ ಬಾಲಕೃಷ್ಣ ಪಿ ದನಾರ್ದ ಇವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನೆರವೇರಿತು. ಶ್ರೀಗಳಾದ ಅಡಿಕೆ ಕೃಷಿತಜ್ಞ ಎಂ. ಮೋಹನರಾವ್ ಕೆ. ಎಸ್. ನಾಗರಾಜರಾವ್, ಡಾ| ಪಿ. ಎಸ್. ಈಶ್ವರ ಭಟ್, ಮತ್ತು ಕುಮಾರಿ ಲೀಲಾ, ಬಿ ಎಸ್. ಸಿ (ಎಗ್ರಿಕಲ್ಚರ್) ಇವರು ಯುವಕ ಮಂಡಲದ ಅಧ್ಯಕ್ಷರೊಡಗೂಡಿ ಊರಿನ ಕೆಲವು ತೋಟಗಳನ್ನು ಸಂದರ್ಶಿಸಿ ಕೃಷಿಕರಿಗೆ ಸಲಹೆಗಳನ್ನಿತ್ತರಲ್ಲದೆ ವಿಚಾರಗೋಷ್ಠಿಯಲ್ಲಿ ತಮ್ಮ ಅನುಭವಗಳನ್ನು ವಿವರಿಸಿ ಮಾತನಾಡಿದರು.

ಡಾ| ಕೆ. ಎಸ್. ಶೆಟ್ಟರ ಉತ್ತರಕ್ರಿಯೆ—ತಾ. 2-4—64ರಂದು ಸ್ವರ್ಗಸ್ಥರಾದ ಮೈಸೂರು ಸರಕಾರದ ವೆಟರಿನರಿ ಸರ್ವಿಸ್‌ನ ಡೈರೆಕ್ಟರ್ ಡಾ| ಕೆಮ್ತೂರು ಶಾಮರಾಯ ಶೆಟ್ಟರ ಉತ್ತರ ಕ್ರಿಯೆಯು ತಾರೀಕು 12—4-64ರಂದು ಬೆಂಗಳೂರು ಕ್ರೋಲ್ಸ್ ರೋಡಿನಲ್ಲಿರುವ ತಮ್ಮ ವಾಸದ ಮನೆಯಲ್ಲಿ ನೆರವೇರಿತು. ನಗರದ ಮತ್ತು ರಾಜ್ಯದ ಬೇರೆ ಬೇರೆ ಕಡೆಗಳ ಪ್ರತಿಷ್ಠಿತರನೇಕರು ಜಾತಿಮತ ಭೇದವಿಲ್ಲದೆ ಪವಿತ್ರ ಉತ್ತರಕ್ರಿಯೆಯಲ್ಲಿ ಭಾಗಿಗಳಾಗಿದ್ದರು.

ಉಪಕಾರ ಸ್ಮರಣೆ

ಕಳೆದ ವಾರದಲ್ಲಿ ನವಯುಗದ ಪರಿಷ್ಕರಣಕ್ಕಾಗಿ ಶ್ರೀಗಳಾದ ಬಿ. ಪಾಂಡು ಶೆಟ್ಟಿ, ಸೊಂದೆಪಳ್ಳಿ ಎಸ್ಟೇಟ್ ಬೆಳಗೋಡು; ಕೆ. ವೇಣುಗೋಪಾಲ ರಾಮ ನಾಯ್ಕ, ಉಪ್ಪಿನಂಗಡಿ; ಅರಿವಾರ್ ಬಾಲಪ್ಪ ರೈ, ಉಪ್ಪಿನಂಗಡಿ; ನಾಡಗೌಡ ಚಂದಯ್ಯ ಆಜ್ರಿ, ಪಟೇಲ್, ನಾಡ; ಡಾ. ಕೆ. ನಾಗಪ್ಪ ಆಳ್ವ, ಆರೋಗ್ಯ ಮಂತ್ರಿ, ಬೆಂಗಳೂರು, ಡಾ. ಸಿ. ಅನಂತ ರೈ, ಪುತ್ತೂರು; ಡಾ. ಐ. ದಿನಕರ ಶೆಟ್ಟಿ, ಕಾರ್ಕಳ; ಡಾ. ಎ. ಕೆ. ಹೆಗ್ಡೆ; ತರೀಕೆರೆ; ಡಾ. ಎಂ. ಎಸ್. ಕೋಟ್ಯಾರ್, ಕಡೂರು ಇವರೇ ಮೊದಲಾದವರು ಪ್ರೋತ್ಸಾಹಿಸಿ ಸಹಕರಿಸಿದ್ದಕ್ಕಾಗಿ, ಅವರ ಉಪಕಾರವನ್ನು ಸ್ಮರಿಸುತ್ತೇವೆ. ಅಲ್ಲದೆ ಮೈಸೂರಲ್ಲಿ ಹಲವಾರು ಚಂದಾದಾರರನ್ನು ಒದಗಿಸಿಕೊಟ್ಟ ಶ್ರೀ ಎ ರಾಮಣ್ಣ ಇವರಿಗೂ ನಮಗೆ ವಿವಿಧ ರೀತಿಯಲ್ಲಿ ಸಹಕಾರವಿತ್ತ ಡಾ| ಸಿ. ಎಂ. ಆಳ್ವ ಮೈಸೂರು; ಡಾ ಎ. ಎಂ ಶೆಟ್ಟಿ, ಬೀರೂರು, ಶ್ರೀಗಳಾದ ಕೆ. ಆರ್. ಶೆಟ್ಟಿ, ಬಿ ಎನ್. ಶೇಕ್, ಬಿ. ವಿಠಲ ರೈ ಇವರೇ ಮೊದಲಾದವರಿಗೂ ನಾವು ಕೃತಜ್ಞರಾಗಿದ್ದೇವೆ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ—ಸಂಪಾದಕ

READ & ADVERTISE IN NAVAYUGA WEEKLY

ನವಭಾರತ ನಿರ್ಮಾಣ

ಪಿಂಜೋರದ ಎಚ್ ಎಂ ಟಿ



ಪಿಂಜೋರದ ಎಚ್‌ಎಂಟಿ ಕಾರಖಾನೆಯ ಉತ್ಪಾದನಾ ವಿಭಾಗದ ವಿಹಂಗಮ ನೋಟವೊಂದು.

ಸ್ವತಂತ್ರ ಭಾರತದ ಪುನಾರಚನಾ ಕಾರ್ಯಕ್ರಮಗಳ ಸಾಧನೆಯಲ್ಲಿ ಹಿಂದುಸ್ಥಾನ್ ಮೆಷೀನ್ ಟೂಲ್ಸ್ ಅಗ್ರಗಣ ಸ್ಥಾನ ಪಡೆದಿದೆ ಎಚ್‌ಎಂಟಿ ಸಂಸ್ಥೆಯ ಮೂರನೆಯ ಸಾಧನಯಂತ್ರಗಳ ಕಾರಖಾನೆಯೊಂದು ಕಳೆದ ಅಕ್ಟೋಬರ ತಿಂಗಳಲ್ಲಿ ಪಿಂಜೋರದಲ್ಲಿ ಉದ್ಘಾಟಿತವಾಯಿತು. ಪ್ರಧಾನ ಮಂತ್ರಿ ಜವಾಹರಲಾಲ ನೆಹರು ಅವರು ಈ ಹೊಸ ಕಾರಖಾನೆಯನ್ನು ಉದ್ಘಾಟಿಸಿದ್ದರು. ಸುಪ್ರಸಿದ್ಧ ಪ್ರಾಚೀನ ಮೊಗಲರ ಉದ್ಯಾನವನವೊಂದರಲ್ಲಿ ಈ ನೂತನ ಕಾರಖಾನೆಯಿದೆ. ಸುಮಾರು ೮೦೦ ಎಕರೆಯಷ್ಟು ವಿಸ್ತಾರದ ಪ್ರದೇಶವನ್ನು ಈ ಕಾರಖಾನೆಯು ಒಳಗೊಂಡಿದೆ.

ಈ ಕರ್ಮಶಾಲೆಯ ಸ್ಥಾಪನೆಯ ಕಾರ್ಯವನ್ನು ಎರಡು ಹಂತಗಳಲ್ಲಿ ಮುಗಿಸುವ ಉದ್ದೇಶವಿದೆ. ಕಾರಖಾನೆಯ ನಿರ್ಮಾಣ ಕಾರ್ಯವು ಪರಿಪೂರ್ಣಗೊಂಡಾಗ, ವರ್ಷಂಪ್ರತಿ ೧೦ ಕೋಟಿ ರೂಪಾಯಿ ಬೆಲೆಬಾಳುವ ಸಾಧನೋಪಕರಣಗಳನ್ನು ತಯಾರಿಸುವ ಶಕ್ತಿ ಸಂಪನ್ನವಾಗಲಿರುವುದು. ಈ ಎರಡು ಹಂತಗಳಲ್ಲಿ ಮೊದಲನೆಯದು ಈಗಾಗಲೇ ಆರಂಭವಾಗಿದೆ. ಈ ಅವಧಿಯಲ್ಲಿದು ೫ ಕೋಟಿ ರೂಪಾಯಿ ಮೌಲ್ಯದ ಸಾಧನ ಯಂತ್ರಗಳನ್ನು ಉತ್ಪಾದಿಸುವುದು, ಸುಮಾರು ಮೂರು ಸಾವಿರ ಜನರಿಗೆ ಉದ್ಯೋಗ ಕಲ್ಪಿಸಿಕೊಡುವುದು. ಎರಡನೆಯ ಹಂತದಲ್ಲಿ ಉತ್ಪಾದನೆ ಮತ್ತು ಉದ್ಯೋಗಾವಕಾಶಗಳು ಇದರ ಇಮ್ಮಡಿಯಾಗುವುದು.

ಹೊಸ ಕಾರಖಾನೆಯು ವಿದ್ಯುಚ್ಛಕ್ತಿ ನಿಯಂತ್ರಿತ ನೀಟ್ಟೈಪ್ ಮಿಲ್ಲಿಂಗ್ ಯಂತ್ರಗಳಿಂದ ಮೊದಲುಗೊಂಡು ನಾನಾ ತರದ ಮಿಲ್ಲಿಂಗ್ ಮೆಷೀನ್‌ಗಳನ್ನೂ, ಗೀಅರ್ ಕಟ್ಟಿಂಗ್ ಯಂತ್ರಗಳನ್ನೂ ತಯಾರಿಸುವುದು. ಕಾರಖಾನೆಯ ಪ್ರಧಾನ ಕಟ್ಟಡವು ೫೦ ಎಕ್ರೆ ಸ್ಥಳವನ್ನು ಆವರಿಸಿರುವುದು. ಇದರಲ್ಲಿಯೇ ಅನೇಕ ಉತ್ಪಾದನಾ ವಿಭಾಗಗಳಿವೆ. ಭವಿಷ್ಯದಲ್ಲಿ ಕಾರಖಾನೆಯ ವಿಸ್ತರಣೆಯಿಂದ ಉತ್ಪಾದನೆಗೆ ಧಕ್ಕೆ ತಗಲದಂತೆ ತಕ್ಕ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗಿದೆ. ಅವಶ್ಯವೆನಿಸಿದಾಗ ಕಾರಖಾನೆಯ ಕುಲುಮೆಯನ್ನು ವಿಸ್ತರಿಸುವ ಅನುಕೂಲವಿದೆ. ಈಗಿರುವ ಕುಲುಮೆಯನ್ನು ಲೋಹ ಕರಗಿಸುವ ವಿದ್ಯುಚ್ಛಕ್ತಿ ಯಂತ್ರೋಪಕರಣಗಳಿಂದ ಸರ್ವಸಜ್ಜಿತಗೊಳಿಸಲಾಗಿದೆ. ಕುಲುಮೆಯು ಈ ವರ್ಷವೇ ತನ್ನ ಕಾರ್ಯಕ್ಕೆ ತೊಡಗುವುದೆಂದು ನಿರೀಕ್ಷೆಯಿದೆ. ಈ ಕಾರಖಾನೆಗೆ ಅವಶ್ಯವಾದ ವಿದ್ಯುಚ್ಛಕ್ತಿಯು ಭಾಕ್ರಾ ವಿದ್ಯುದುತ್ಪಾದನಾ ಕೇಂದ್ರದಿಂದ ಪೂರೈಕೆಯಾಗುತ್ತದೆ.

ಸಾಧನಯಂತ್ರಗಳನ್ನು ನಿಯಂತ್ರಿಸುವವರಿಗೆ ತರಬೇತಿಯು ಅಗತ್ಯ. ಇದಕ್ಕೆಂದೇ ಇಲ್ಲಿ ತರಬೇತಿ ಕೇಂದ್ರವೊಂದನ್ನು ತೆರೆಯಲಾಗಿದೆ. ಈ ಕೇಂದ್ರವು ಒಂದು ಬಾರಿಗೆ ನೂರು ಮಂದಿಗೆ ತರಬೇತಿ ನೀಡುವುದು. ಹೊಸ ಕಾರಖಾನೆಯ ಸ್ಥಾಪನೆಯ ಕಾರ್ಯ ನಡೆದಿರುವಾಗ ಸಿಬ್ಬಂದಿಗೆ ತರಬೇತಿ ನೀಡಲು ಹೆಚ್ಚು ಕಾಲಾವಕಾಶ ಬೇಕಾಗುವುದರಿಂದ, ತರಬೇತಿಯ ವಿಭಾಗವನ್ನು ಈಗಾಗಲೇ ಸ್ಥಾಪಿಸಲಾಗಿದೆ. ಈ ಕೇಂದ್ರದಲ್ಲಿ ೪೬೫ ಎಂಜಿನಿಯರರು ಮತ್ತು ತಂತ್ರಜ್ಞರಿಗೆ ಕಾರಖಾನೆಯ ಕಾರ್ಯ ವಿಧಾನಕ್ಕೆ ಸಂಬಂಧಿಸಿದಂತೆ ತರಬೇತಿ ಕೊಡಲಾಗಿದೆ.

ಪಿಂಜೋರಿನ ಎಚ್‌ಎಂಟಿ ಕಾರಖಾನೆಗೆ ಹೊಂದಿಕೊಂಡು ಒಂದು ಪುಟ್ಟ ನಗರವೂ ಇದೆ. ಇಲ್ಲಿ ಎಲ್ಲಾ ಪ್ರಕಾರದ ಆಧುನಿಕ ಸೌಕರ್ಯಗಳು ಲಭ್ಯವಾಗಿರುತ್ತವೆ. ಈ ನಗರವು ಉದ್ಯಾನಗಳ ನಗರವಾಗಿಯೇ ಉಳಿಯುವಂತೆ ಅದರ ನಿರ್ಮಾಣ ಕಾರ್ಯದಲ್ಲಿ ವಿಶೇಷ ಎಚ್ಚರಿಕೆ ವಹಿಸಲಾಗುತ್ತಿದೆ. ಮುಖ್ಯ ಕಾರಖಾನೆಯು ಪರಿಪೂರ್ಣವಾಗಿ ರೂಪಗೊಂಡ ನಂತರ, ಕೈಗಾರಿಕೆಯ ಕ್ಷೇತ್ರವನ್ನಾಗಿ ಈ ಪ್ರದೇಶವನ್ನು ರೂಪಿಸುವ ಉದ್ದೇಶವು ಭಾರತ ಸರಕಾರದ್ದಾಗಿದೆ.

ಎಚ್ ಎಂ ಟಿಯು ಬೆಂಗಳೂರಿನ ಕಾರಖಾನೆಗಳು ಈಗಾಗಲೇ ಪ್ರಗತಿಯ ದಾರಿಯಲ್ಲಿ ಮುಂದುವರಿದು ನಿರ್ದೇಶಿತ ಗುರಿಯನ್ನು ಮೀರಿ ನಿಂತಿವೆ. ಈಗ, ಪಂಜಾಬದ ರಾಜಧಾನಿ ಚಂಡೀಗಡಕ್ಕೆ ಸಮೀಪದ ಪಿಂಜೋರಿನಲ್ಲಿ ಇದರ ಮೂರನೆಯ ವಿಭಾಗವಿರುವುದು. ದೇಶಕ್ಕೆ ಬೇಕಾದ ಸಾಧನೋಪಕರಣಗಳನ್ನು ದೇಶದೊಳಗೇನೇ ಉತ್ಪಾದಿಸುವುದು, ದೇಶವನ್ನು ಔದ್ಯಮಿಕ ರಂಗದಲ್ಲಿಯೂ ಮುನ್ನಡೆಸುವುದು, ನಮ್ಮ ಉದ್ದೇಶ. ಪ್ರತಿರಂಗದಲ್ಲಿಯೂ ಸ್ವಾವಲಂಬನೆಯನ್ನು ಸಾಧಿಸುವುದು ನಮ್ಮ ಗುರಿ. ನವಭಾರತ ನಿರ್ಮಾಣದ ದಾರಿಯಲ್ಲಿನ ಮತ್ತೊಂದು ಮೈಲುಗಲ್ಲು ಪಿಂಜೋರದ ಕಾರಖಾನೆ.

ನಮ್ಮ ದೇಶದ ಸುಭಿಕ್ಷೆಗೆ, ಸಂಪನ್ನತೆಗೆ ಮುನ್ನಡೆಗೆ ಮತ್ತು ಸುಭದ್ರ ಭವಿಷ್ಯಕ್ಕಾಗಿ ಇಂತಹ ಕಾರಖಾನೆಗಳು ಬೆಳೆಯಬೇಕು; ಅವುಗಳ ಸ್ಥಾಪನೆಗೆ, ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು, ಮೈಮುರಿದು ದುಡಿಯಬೇಕು.

ಪುತ್ತೂರು ಡಿ ಮು ಕೋರ್ಟಿನಲ್ಲಿ

O S 682/62

ಸದ್ಯಾವತಿ ಅಮ್ಮ — ವಾದಿ

ಬಾಳಪ್ಪ ಪೂಜಾರಿ—ನೊಂಡ ಪೂಜಾರಿ ಮಗ—ಬಲ್ನಾಡು ಗ್ರಾಮ —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ನೀವು ವಾದಿಗೆ ತಾ. 28—9—1959ರಲ್ಲು ಬರಕೊಟ್ಟ ಚಾಲಗೇಣಿ ಚೀಟು ಪ್ರಕಾರ ನಿಮ್ಮಿಂದ ವಾದಿಗೆ ಬರತಕ್ಕ ಗೇಣಿ ಬಾಕಿಗೆ ಮಾಡಿದ ಮೇಲಿನ ದಾವೆಯನ್ನು ತಾರೀಕು 18—4—1964ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ ಆದ್ದರಿಂದ ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ವಾಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದಿತು

Sd/ M Sadashiva Rao
Vakil for Pltf.

ಪುತ್ತೂರು, ತಾ 10—4—64

ಕೃತಿಸಮೀಕ್ಷೆ

(೫ನೇ ಪುಟದಿಂದ)

ಯು ಈಗ ರಂಗಮಂಟಪವನ್ನು ಒಂದಲ್ಲ ಹಲವು ಕಾಲ ಕಾಣಬೇಕು, ಪಾನಪ್ರತಿಬಂಧ ಶಾಸನವನ್ನು ಯಶಸ್ವಿಗೊಳಿಸುವಲ್ಲಿ ನೆರವಾಗಬೇಕು, ಹಾಗಾಗಲಿ,

ಶ್ರೀ ಗಾಂಧಿ ನಿರ್ವಾಣಂ (ಖಂಡಕಾವ್ಯ)

ಲೇಖಕರು: ಶ್ರೀ ಕಡವ ಶಂಭು ಶರ್ಮರು.

ಪ್ರಕಾಶಕರು ಲೋಕಸೇವಾ ವೃಂದ (ರಿಜಿಸ್ಟರ್ಡ್), ಅಳಿಕೆ, ದ ಕ

ಪುಟಗಳು. ೨೩ ಬೆಲೆ: ರೂ. ೦-೨೫

ಸಂಶೋಧನೆ ಮತ್ತು ಕೃತಿಗಳಿಗೆಂದು ಹೆಸರಾದ ಶ್ರೀ ಕಡವ ಶಂಭು ಶರ್ಮರು ರಾಷ್ಟ್ರಪಿತ ಗಾಂಧೀಜಿಯವರ ಕೊಲೆಯ ಸನ್ನಿವೇಶದ ಕಾವ್ಯ ಸಂಸ್ಕೃತದಲ್ಲಿ ಬರೆದಿದ್ದರು ಅದನ್ನೀಗ ವಾರ್ಧಕ ಷಟ್ಪದಿ ಛಂದಸ್ಸಿನ ೮೮ ಪದ್ಯಗಳಲ್ಲಿ ಕನ್ನಡಿಸಿದ್ದಾರೆ ನಿರ್ವೀರ್ಯರಾಗಿದ್ದ ಭಾರತೀಯರಲ್ಲಿ ಕೆಚ್ಚನ್ನು ತುಂಬಿ ರಕ್ತರಹಿತ ಕದನದಲ್ಲಿ ಜಯಶೀಲರಾಗಿ ದೇಶೀಯರಿಗೆ ಸ್ವಾತಂತ್ರ್ಯವನ್ನೊದಗಿಸಿದ ಮಹಾ ಸತ್ವಶಾಲಿ ಗಾಂಧೀಜಿ ಪಾಕಿಸ್ತಾನದ ಜಾತೀಯ ನೀತಿಯಿಂದ ರೊಚ್ಚಿಗೆದ್ದವನೊಬ್ಬ, ಗಾಂಧೀಜೀಯ ನಿಲುಮೆಯನ್ನೊಪ್ಪದೆ ಅವರನ್ನು ಗುಂಡಿಕ್ಕಿ ಕೊಂದು ಬಿಟ್ಟ. ನಾಥರಾಮನನ್ನೇ ಜಪಿಸಿ ಪ್ರಾರ್ಥನಾ ಸಭೆಗೆ ನಡೆಯುತ್ತಿದ್ದವರನ್ನು ನಾಥರಾಮನೇ ಕೊನೆಗೊಳಿಸಿದನು ಮುಂದೆ ರಾಷ್ಟ್ರ ವೈಭವದೊಂದಿಗೆ ಅಂತ್ಯ ಸಂಸ್ಕಾರವೂ ನಡೆಯಿತು

ಶಂಭು ಶರ್ಮರ ಭಾಷೆಯಲ್ಲಿ ಸರಳವಾಗಿದೆ "ದಾಸವಾಳ ಹೂವಿನ ಹಾಗೆ ಕೆಂಪಾದ ಗಾಂಧಿಯ ಬಿಂಬವು ನೇಸರನದು' ಎಂದು ಮುಂತಾದ ಅಲಂಕಾರಗಳೂ ಇಣುಕು ಹಾಕಿವೆ ಸಾಧ್ಯವಾದಷ್ಟು ಮಟ್ಟಿಗೆ ಹೊಸಗನ್ನಡವನ್ನೇ ಕಾವ್ಯದಲ್ಲಿ ಬಳಸಿಕೊಂಡಿರುವುದು ಒಂದು ವೈಶಿಷ್ಟ್ಯ ಅದುದರಿಂದ ಸ್ವಾಭಾವಿಕವಾಗಿಯೇ ಭಾಷೆಯಲ್ಲಿ ಸರಳತೆಯಿದ್ದರೂ ಶೈಲಿಯಲ್ಲಿ ಪ್ರೌಢಿಮೆಯಿಲ್ಲ, ಬಂಧದಲ್ಲಿ ಬಿಗಿಯಿಲ್ಲ. ಆಧುನಿಕತೆಯ ಪ್ರಭಾವವಿಲ್ಲ ಬಿಟ್ಟಿದೆ ಯೆನ್ನಬಹುದು ರಾಷ್ಟ್ರೀಯ ಘಟನಾವಳಿಗಳನ್ನು ಕುರಿತು ಆಧುನಿಕ ಸ್ವಚ್ಛಂದ ಕವಿಗಳು ಛಂದೋಮುಕ್ತರಾಗಿ ಹಾಡಿದ್ದುಂಟು ಛಂದೋಬದ್ಧವಾಗಿ ಹಾಡಿದ ಕೀರ್ತಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕರ್ತರಲ್ಲಿ ಒಬ್ಬರಾಗಿ ಅವರ ಉಪದೇಶದ ದಾರಿಯಲ್ಲೇ ನಡೆಯುವ ಕಡವ ಶಂಭು ಶರ್ಮರಿಗೆ ಸೇರಿದ್ದು 'ಹಳೆಯ ಛಂದಸ್ಸಿನ ಚೌಕಟ್ಟಿನಲ್ಲಿ ಹೊಸ ವಿಷಯವನ್ನು ತುಂಬಿಸಿದ ಸಾಮಾನ್ಯ ಕೃತಿಯಿದು, ಇದರ ಪ್ರಯೋಜನವನ್ನು ಎಲ್ಲರೂ ಪಡೆಯಬಹುದು.

— ಗೋರಾ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಗಳು
ಫಾರ್ಮುಗಳು
ದೊರೆಯುತ್ತವೆ
ನವಯುಗ ಪ್ರೆಸ್, ಉಡುಪಿ

ಕವಲುದಾರಿ—ಕೆಂಪು ದೀಪ

ಇದು ಈಗ ನಡೆಯಬೇಕಾಗಿದೆ!

ಈಗ ಭಾರತದ ತುಂಬ ಒಂದು ಪ್ರಶ್ನೆ ಎದ್ದು ನಿಂತಿದೆ.

ಭಾರತವೂ ಕೂಡಾ ಪಾಕಿಸ್ತಾನದ ದಾರಿಯನ್ನೇ ತುಳಿಯ ಬಾರದೇ ಎಂದು ಆ ಪ್ರಶ್ನೆ ಸೂಚಿಸುತ್ತದೆ.

ಇದು ಸುಲಭವೂ ಹಿತಕರವೂ ಆಗಿದ್ದೆ, ಎಂದು ಈ ಕುರಿತು ಆಡುವವರಿದ್ದಾರೆ.

ಮುಸ್ಲಿಮರನ್ನೇಕೆ ಪಾಕಿಸ್ತಾನಕ್ಕೆ ಕಳಿಸಬಾರದು ಎಂದು ಮಂದಿ ಆಡುತ್ತಾರೆ.

ಮಂದಿಯ ಆನಿಸುವಿಕೆ ವಿಚಾರಕ್ಕೆ ಆಸ್ಪದ ಕೊಡುವಂತಿದೆ. ಪಾಕಿಸ್ತಾನದಂತೆಯೇ ಭಾರತವೂ ಕ್ರೂರ ನಡವಳಿಕೆಯ ಮುಖವಾಡ ತೊಡುವುದು ಸಾಧ್ಯವಿದೆ.

○ ○ ○

ಪಾಕಿಸ್ತಾನದ ಇವತ್ತಿನ ವರ್ತನೆಯು ನಿಜಕ್ಕೂ ಕುರುಕ್ಷೇತ್ರದ ನೆನಪು ಮಾಡಿಕೊಡುತ್ತದೆ.

ಪಾಕಿಸ್ತಾನ ಸರಕಾರವು ಅಲ್ಪ ಸಂಖ್ಯಾಕರ ಮೇಲೆ ನಡೆಸುತ್ತಿರುವ ದಾಳಿಯು, ವಿನಾಶದ ಗೋರಿ ತೋಡಿ ಕೊಂಡಂತಾಗಿದೆ.

ಮುಸ್ಲಿಮರ ಹೊರತಾಗಿ ಪಾಕಿಸ್ತಾನದಲ್ಲಿ ಬೇರಾರೂ ಇರಬಾರದು, ಎಂಬುದು ಅಲ್ಲಿನ ಸರಕಾರದ ದೃಢ ನಿಶ್ಚಯ

ಹಿಂದುಗಳು ಮಾತ್ರವೇ ಅಲ್ಲ ಅಲ್ಲಿನ ಕ್ರಿಶ್ಚಿಯನ್ನರೂ, ಈ ದೌರ್ಜನ್ಯಕ್ಕೆ ಬಲಿಯಾಗಬೇಕಾಗಿದೆ.

ತಮ್ಮ ನೀತಿಯನ್ನು ಸಮರ್ಥಿಸಿಕೊಳ್ಳುವ ಮಂದಿ, ಇನ್ನೊಬ್ಬರ ಹಿತವನ್ನು ಬಯಸುವುದಿಲ್ಲ. ಅಷ್ಟೇ ಅಲ್ಲದೆ, ಮನಸ್ಸಿನಲ್ಲಿ ಹುದುಗಿಕೊಂಡಿರುವ ಕೀಳು ವಿಚಾರಗಳಿಗೆ ಅವರು ಔಷಣವನ್ನೂ ಕಲ್ಪಿಸ ಬೇಕಾಗುತ್ತದೆ.

ಅಂತೆಯೇ ಅಂತಹ ಮಂದಿ ಇನ್ನೊಬ್ಬರಿಗೆ ಕೇಡು ಬಗೆಯಲು ಎಷ್ಟು ಸಾಧ್ಯವೋ ಅಷ್ಟೆಲ್ಲವನ್ನೂ ಮಾಡಿಯೇ ಮೊದುತ್ತಾರೆ. ಅಂದರೇನೇ ಅವರು ಸಂತೃಪ್ತರಾಗ ಬಲ್ಲರು.

ಎಷ್ಟು ಸಾಧ್ಯವೋ ಅಷ್ಟು ಕಿರುಕುಳವನ್ನು ಕೊಟ್ಟು ಭಾರತದ ಶಾಂತಿಯನ್ನು ಪರೀಕ್ಷಿಸಿದ ಪಾಕಿಸ್ತಾನವು, ಭಾರತದ ದೃಢತೆಯನ್ನು ಕಂಡು ಕೊಂಡಿದೆ.

ತನ್ನ ಕಾಲಡಿಯೇ ಭದ್ರವಾಗಿಲ್ಲವಾಗಿರುವಾಗ ಇನ್ನೊಬ್ಬರ ಕಾಲಡಿಯ ಪರೀಕ್ಷೆ ನಡೆಸುವ ಕಾರ್ಯವನ್ನು ಪಾಕಿಸ್ತಾನ ಮಾಡಿಯಾಗಿದೆ. ತನ್ನ ದೇಶದಲ್ಲಿ ಅರಾಜಕತೆ ತಾಂಡವವಾಡುತ್ತಿದ್ದರೆ, ಪಾಕಿಸ್ತಾನವು ಕಾಶ್ಮೀರಬೇಕು ಎನ್ನುತ್ತದೆ, ಭಾರತೀಯರ ಶಾಂತಿಗೆ ಸವಾಲು ಹಾಕುತ್ತೇನೆಂದು ಮುಂದುವರಿಯುತ್ತಿದೆ. ಗಡಿ ಪ್ರದೇಶಗಳಲ್ಲಿ, ಸಾಧ್ಯವಿರುವಷ್ಟು ಉಪದ್ರವಗಳನ್ನು ಕೊಡುತ್ತಿದೆ.

ಅಷ್ಟೇ ಅಲ್ಲದೆ, ಹಿಂದುಗಳ ಮೇಲೆ ಎಲ್ಲೆ ಮೀರಿ ಅತ್ಯಾಚಾರಕ್ಕಿಳಿದಿದೆ. ಲಕ್ಷಾಂತರ ಹಿಂದುಗಳು ಇದರ ಪರಿಣಾಮವಾಗಿ ಭಾರತಕ್ಕೆ ಬರಬೇಕಾಗಿದೆ.

ಇಷ್ಟಾದರೂ ಪಾಕಿಸ್ತಾನದ ನಡತೆಗೆ ಹೇಸಿಕೊಂಡು ಸುಮ್ಮನಿರಬಹುದು ಆದರೆ ಹಿಂದೂ ನಾರಿಯರ ಮೇಲೆ, ಪಾಕಿಸ್ತಾನೀಯರು ನಡೆಸುತ್ತಿರುವ ಅತ್ಯಾಚಾರವನ್ನು ನೋಡುತ್ತ ಸುಮ್ಮನಿರುವದು ಹಿಂದುಗಳಿಂದ ಮಾತ್ರವಲ್ಲ, ಭಾರತೀಯರೇ ಆಗಿರುವ ಮುಸ್ಲಿಮರಿಂದಲೂ ಸಾಧ್ಯವಿಲ್ಲ.

ಹಿಂದೂ ಸ್ತ್ರೀಯರ ಮೇಲೆ ಬಲಾತ್ಕಾರ ನಡೆಸಿ, ಅವರನ್ನು ಅರಬ ದೇಶಕ್ಕೆ ಒಯ್ದು ಮಾರುವ ಪ್ರಯತ್ನ ಈಗ ನಡೆಯುತ್ತಿದೆಯಂತೆ!

ಇದು ನಿಜಕ್ಕೂ ಪಾಕಿಸ್ತಾನದ ಮುಕ್ತಾಯದ ಘಟ್ಟವನ್ನು ತೋರಿಸುವಂತಿದೆ.

ಭಾರತವು ಶಾಂತಿಯ ದೇಶ. ನಿಜ ಆದರೆ ಭಾರತದ ಶಾಂತಿಗೂ ಒಂದು ಮಿತಿಯಿದೆ. ಅದನ್ನು ಪಾಕಿಸ್ತಾನವು ತಿಳಿದು ಕೊಳ್ಳಲು ತಡಮಾಡುತ್ತಿದೆ.

ಭಾರತೀಯ ಮಹಿಳೆಯ ಮೇಲೆ ಕೈ ಮಾಡುವವನತ್ತ ಸುಮ್ಮನೆ ನೋಡುವ ಕಾರ್ಯವನ್ನು ಕೇವಲ ನಿರ್ವೀರ್ಯರು ಮಾತ್ರ ಮಾಡುತ್ತಾರೆ ಇದನ್ನು ಯಾವ ಭಾರತೀಯನೂ ನೋಡುತ್ತ ನಿಲ್ಲುವುದಿಲ್ಲ. ಇದು ಭಾರತೀಯ ಸಂಸ್ಕೃತಿಗೆ ಎಂದೂ ಒಪ್ಪುವದಿಲ್ಲ; ಶೋಭಿಸುವದಿಲ್ಲ.

○ ○ ○ ○

ಕೊನೆಗಾಲವನ್ನೆದುರು ನೋಡುತ್ತಿದೆ ನಮ್ಮ ನೆರೆರಾಷ್ಟ್ರ ಪಾಕಿಸ್ತಾನ.

ಅದರ ದಾರಿಯನ್ನು ನಾವು ಮೆಚ್ಚಿ ಬಿಡಬಲ್ಲೆವೇ ವಿನಃ, ಆ ದಾರಿಯನ್ನೆಂದಿಗೂ ತುಳಿಯುವಂತಿಲ್ಲ.

ಈ ಕುರಿತು ಭಾರತವು ತನ್ನ ಆದರ್ಶವನ್ನು ಪಾಲಿಸಿಕೊಂಡು ಬಂದಿದೆ. ನಮ್ಮ ದಾರಿ ನಮ್ಮದೇ. ಆ ದಾರಿಯಲ್ಲಿ ಜಗತ್ತು ನಡೆಯುತ್ತಿದೆ. ಪಾಕಿಸ್ತಾನವೂ ತನ್ನ ದಾರಿಯಿಂದ ಬದಿಗೆ ಸರಿದು ಈ ದಾರಿಯತ್ತ ಬರದೆ ಎಂತು ಉಳಿಯಬಲ್ಲದು?

ಭಾರತದ ನಿವಾಸಿಗಳು ಹಿಂದುಗಳಿರಲಿ, ಮುಸ್ಲಿಮರಿರಲಿ, ಅವರು ನಾವೆಲ್ಲ ಭಾರತೀಯರು ಎಂಬುದನ್ನು ಮರೆಯದೆ ಇರುವ ವರೆಗೆ, ನಮ್ಮನ್ನು, ನಮ್ಮ ಒಳಿತಿನ ದಾರಿಯಿಂದ ಯಾರು ತಾನೇ ಸರಿಸಬಲ್ಲ?

ನಾವು ಹಿಂದುಗಳು ನಾವು ಮುಸ್ಲಿಮರು—ಎಂಬುದಕ್ಕಿಂತಲೂ ಉಚ್ಚವಾದ ಒಂದು ಮಾತು ನಮ್ಮ ಹೃದಯದಲ್ಲಿದೆ.

ನಾವು ಭಾರತೀಯರು

ಈ ಮಾತು ನಮ್ಮ ಸಂಜೀವಿನೀ ಶಕ್ತಿ. ಈ ಶಕ್ತಿಯನ್ನು ಅರಕ್ಷರಿಗೆಲ್ಲ ಕೊಡಬೇಕಾಗಿದೆ ಆ ಕಾರ್ಯ ಸತತವಾಗಿ ನಡೆಯಲಿ. ಅಂದರೆ ಪಾಕಿಸ್ತಾನಕ್ಕೂ ಸ್ವಲ್ಪ ಕಣ್ದೆರೆಯಲು ಅವಕಾಶ ಸಿಕ್ಕೀತಲ್ಲವೇ? ಅದರ ಅಮಲು ಇದರಿಂದಲಾದರೂ ಇಳಿದೀತು ಅಲ್ಲವೆ?

— ಸುದಾಸ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦.

»» ನಗೆಗಡಲು ««

ಆಕರ್ಷಣೆ

"ಧನಲಕ್ಷ್ಮಿ ಹೇರ್ ಕಟಿಂಗ್ ಸೆಲೂನ" ರಾಮಣ್ಣನಿಗೆ ಅಕಸ್ಮಾತ ರೂಂ ತಪ್ಪಿ ಹೋಗಿ, ಅದೃಷ್ಟವಶಾತ್—ಅದೇ ಮಾಳಿಗೆಯ ಮೇಲೆ ಚನ್ನಾದ ರೂಂ ಸಿಕ್ಕಿತು. ಕೊನೆಗೆ ತನ್ನ ಮೊದಲ ಗಿರಾಕಿಗಳು ತಪ್ಪಿ ಹೋಗಬಾರದೆಂದು ಈ ರೀತಿ ಬೋರ್ಡು ಹಾಕಿಸಿದ—

"ಕೆಳಗಿನ ಕೂದಲು ಕತ್ತರಿಸುವ ಅಂಗಡಿ ಮೇಲೆ ಬಂದಿದೆ."

○ ○ ○

ಮೆಟ್ಟಿನ ದರ

"ಮೆಟ್ಟುಗಳಿಗೆ (ಪಾದರಕ್ಷೆ) ಕೂಜಳ್ಳಿ ಪ್ರಸಿದ್ಧ ಎಂದು ತಿಳಿದು ಈ ರೀತಿ ಪ್ರಶ್ನೆ ಮಾಡಿದರು —

"ಏನೊ ಹನುಮಾನ್ ಫಸ್ಟ್‌ಕ್ಲಾಸ್ ಕೂಜಳ್ಳಿ ಮೆಟ್ಟಿನ ದರವೆಷ್ಟು....??

"ಫಸ್ಟಹೆಂಡ" ಬೇಕಾದರೆ.... ಹತ್ತು ರೂಪಾಯಿ. ಸೆಕೆಂಡ ಹೆಂಡ್ ಬೇಕಾದರೆ..ಏಳು ರೂಪಾಯಿ.. ಥರ್ಡ್ ಹೆಂಡನ್ನು ತಾವು ಉಪಯೋಗಿಸುತ್ತೀರಾ?..ಬರಿ ಮೂರು ರೂಪಾಯಿ."

○ ○ ○

ನಿಜಕಾರಣ

ಅತ:—ಗೋವಿಂದ ಇತ್ತೀಚಿಗೆ ಗಾಂಧಿ ಟೋಪಿ ಹಾಕಲಿಕ್ಕೆ ಹತ್ತಿದ್ದಾನೆ. ಚುನಾವಣೆಯೂ ಹತ್ತಿರ ಬಂದಿಲ್ಲಾ......ಅಥವಾ ಕಾಂಗ್ರೆಸ್ಸನಲ್ಲಿ ಏನಾದರೂ .

ಈತ —ಆತನ ಭೂಮಿ ಎಲ್ಲಾ ಹೋಯ್ತು. ಕಾಂಗ್ರೆಸ್ಸಗೆ ಸೇರಿದ್ದಾನೆಯೆ?.. ಗೋ.. ವಿ....ಂ...ದ ತಿರುಪತಿಗೆ ಹೋಗಿ ಬಂದಿದ್ದಾನೆ ಕಣೊ....

○ ○ ○

ಕಟ್‌ಧಾಳಿ

ಉದ್ದನಾಲಿಗೆಯ ನಾಲ್ವರಲ್ಲಿ ಮಾತ್ರ ಕಥೆ ಭರದಿಂದ ಮುಂದುವರಿದಿತ್ತು—

"ಹೆಂಗಸರಿಗೂ ಗಡ್ಡ—ಮೀಸೆ ಇದ್ದಿದ್ದರೆ..?

"ದಿನಚರಿಯಲ್ಲಿ ಮೊದಲನೆಯ ಸಾಲಲ್ಲಿ ಮುಖ ಕ್ಷೌರಮಾಡಿದೆ ಎಂದು ಬರೆಯ ಬೇಕಾಗಿತ್ತು . .

"ಛೆ, ಹಾಗೇನೂ ಇಲ್ಲ. 'ಸಮಾಜಮಂದಿರ'ಗಳಲ್ಲಿ 'ಅದನ್ನೂ' ಕಲಿಸುತ್ತಿದ್ದರಲ್ಲದೆ....ಈಗ ಫ್ರೆಂಚಕಟ್, ದಿಲೀಪ ಕುಮಾರಕಟ್, ರಾಜಕುಮಾರಕಟ್ ಜಾರಿಯಲ್ಲಿ ಬಂದ ಹಾಗೆ...ಸೀತಾಕಟ್, ಲೀಲಾವತಿಕಟ್ ಸರೋಜಾದೇವಿಕಟ್, ಸಾಧನಕಟ್ ಏನೇನೂ ಕಟ್‌ಗಳು ಜಾರಿಗೆ ಬರುತ್ತಿದ್ದವು.

"ಹಾಗಾದರೆ...ನಾಳೆಯಿಂದಲೆ-'ಹೆಂಗಸರಿಗೆ ಗಡ್ಡ—ಮೀಸೆ ಬರಲಿ ಎಂದು ಗ್ರಹದೇವಿಯನ್ನು ಆರಾಧಿಸು..."

○ ○ ○

ಸಿನೆಮಾ ಮದುವೆ

ಕಿಟ್ಟು:—ಸಿನೆಮಾ ನಟ-ನಟಿಯರು ಮದುವೆ ಆಗುದಿಲ್ಲವೇನೊ? .....

ಪುಟ್ಟು:—ನೀನು ಸಿನೆಮಾ ಯಾಕೆ ನೋಡ್ತಿ? ನಿನಗಿನ್ನೂ ಗೊತ್ತೆ ಇಲ್ಲವೆನು? ....ಒಂದೊಂದು ಸಿನೆಮಾದಲ್ಲಿ ಒಂದೊಂದು ಮದುವೆ ಆಗುತ್ತಾರೆ......"

— ಶ್ರೀ ಪಿ ಎನ್. ಹೆಗ್ಡೆ-ಶಂಭು;
ಹೊಸಕುಳಿ

ಶ್ರಮವೆ ಜೀವನ—ಜೀವನವೆ ಶ್ರಮ

(೪ನೇ ಪುಟದಿಂದ)

ತೆಯ ಮಟ್ಟವನ್ನೇರಿಸಬೇಕೆಂದು ಡಾಕ್ಟರ್ ಶೆಟ್ರು ಅಹರ್ನಿಶಿ ಬೆಳಗಿಸುತ್ತಾ ಪ್ರಯತ್ನ ಪಡುತ್ತ ಬಂದವರು. ಕಳೆದ ಆರು ವರ್ಷಗಳ ಸರ್ವಿಸಿನಲ್ಲಿ ಕ್ಯಾಜುವಲ್ ಲೀವ್ ಪಡೆದುದೆಂದರೆ ಮೊನ್ನೆ ಮಾತ್ರ. ಆದರೆ ಮೈಸೂರಿನ ಸಂಕುಚಿತ ವಾತಾವರಣದ್ದು. ಅವರು ಹೆಜ್ಜೆ ಹೆಜ್ಜೆಗೂ ಅಡೆ ಅತಂಕಗಳನ್ನೆದುರಿಸಬೇಕಾಯಿತು. ಅವರ ಕೈಕೆಳಗಣ ಕುಹಕಧೂರ್ತ ಅಧಿಕಾರಿಗಳು ಕೆಲವರ ದೊಡ್ಡ ಒಳಸಂಚಿನ ವಿರೋಧವಾಗಿ ಅವರು ಸದಾ ಹೋರಾಡಬೇಕಾಯಿತು. ಒಬ್ಬಿಬ್ಬರು ಮಂತ್ರಿಗಳ ಅಪಕೃಪೆಗೊಳಗಾಗ ಬೇಕಾಯಿತು. ಆದರೂ ಕೊನೆಯವರೆಗೆ ಅವರು ಏಕ ಪ್ರಕಾರವಾಗಿ ನಿಷ್ಠೆಯಿಂದ ದುಡಿದು ಜನಹಿತ ಸಾಧಕ ಯೋಜನೆಗಳನ್ನೆಲ್ಲ ಧೈರ್ಯದಿಂದ ಕಾರ್ಯಗತಗೊಳಿಸಿ ಕೃತಾರ್ಥರಾದರು. ಕರ್ತವ್ಯ ಪಾಲನೆಗಾಗಿ ಶ್ರಮಿಸಿ ಶ್ರಮಿಸಿ ಮರಣವನ್ನಪ್ಪಿದರು.

"ನಾನು ಯಾರ ಜಹಗೀರಿನಲ್ಲೂ ನೌಕರನಾಗಿಲ್ಲ"

"ನಾನು ಯಾರ ಜಹಗೀರಿಯಲ್ಲೂ ನೌಕರನಾಗಿಲ್ಲ. ನಾನೊಬ್ಬ ಪಬ್ಲಿಕ್ ಸರ್ವೆಂಟ್. ನೀವು ನಿಮಗೆ ತೋರಿದುದನ್ನು ಮಾಡಬಹುದು." ಶ್ರೀ ಎನ್. ರಾಚಯ್ಯನವರು ಪಶುವೈದ್ಯ ಇಲಾಖೆಯ ಮಂತ್ರಿಯಾಗಿದ್ದಾಗ, ತಲೆಗೆಟ್ಟು ತಪ್ಪಿ ಮಾತಾಡಿದಾಗ ಡಾಕ್ಟರ್ ಶೆಟ್ರು ಅವರಿಗಂದ ಮಾತಿದು. ಚೀಫ್ ಸಕ್ರೆಟರಿ ಶ್ರೀ ಪಿ. ವಿ ಆರ್. ರಾಯರನ್ನು ಹೆದರಿಸಿದ್ದ ಶ್ರೀ ಎನ್. ರಾಚಯ್ಯನವರು ಗುಡುಗಿನಂತಹ ಈ ಮಾತುಗಳಿಂದ ಬಾಯ್ಮುಚ್ಚಿ ಸುಮ್ಮನಿರಬೇಕಾಯಿತು ಡಾಕ್ಟರ್ ಶೆಟ್ರ ಮನಸ್ಸು ಕುಸುಮದಷ್ಟು ಕೋಮಲವಾದರೂ ಸಂದರ್ಭಾನುಸಾರ ವಜ್ರಕ್ಕಿಂತಲೂ ಕಠಿಣವಾಗುತ್ತಿತ್ತು. ಅನ್ಯಾಯಕ್ಕೆ, ಅಧಿಕಾರ ದರ್ಪಕ್ಕೆ ಒಳಸಂಚಿನ ಸೂತ್ರಜಾಲದ ಕ್ಷುದ್ರ ಜೀವಿಗೆ ಅವರೆಂದೂ ಬಗ್ಗುತ್ತಿದ್ದಿಲ್ಲ. ಅದಕ್ಕಿಂತ ನೌಕರಿ ಬಿಟ್ಟು ಹೋಗುವುದೇ ಮೇಲೆಂದು ಅವರ ಭಾವನೆಯಾಗಿತ್ತು. ಹೈದರಾಬಾದಿನ ರಜಾಕಾರ್ ಕಾಲದಲ್ಲಿಯೂ ನಾನು ಶ್ರೀ ಎನ್. ರಾಚಯ್ಯನವರ ಕೈಕೆಳಗೆ ಪಡುವಷ್ಟು ಪಾಡು ಪಟ್ಟಿಲ್ಲೆಂದು ಡಾಕ್ಟರ್ ಶೆಟ್ರು ಉದ್ಗಾರವೆತ್ತುತ್ತಿದ್ದರು

ಶ್ರೀ ಎಮ್. ವಿ ಕೃಷ್ಣಪ್ಪನವರು ಪಶು ವೈದ್ಯಖಾತೆಯನ್ನು ವಹಿಸಿದ ಮೇಲೂ ಪರಿಸ್ಥಿತಿ ಸುಧಾರಿಸಲಿಲ್ಲ. ಕ್ಷುದ್ರ ಬುದ್ಧಿಯ ಕೆಲಮಂದಿ ನೌಕರರು ಹಿಂದಿನಂತೆಯೇ ಒಳಸಂಚು ನಡೆಸುತ್ತಿದ್ದರು. ಅದನ್ನು ತಡೆಗಟ್ಟುವ ಶಕ್ತಿ ಮಂತ್ರಿಗಳಿಗಿರಲಿಲ್ಲ. ಅವರೊಂದಿಗನೇ ಸೇರಿ ವ್ಯವಹರಿಸುತ್ತಿದ್ದರು. ಇದರಿಂದ ಡಾಕ್ಟರ್ ಶೆಟ್ರು ಬೇಸತ್ತು ಹೋಗಿದ್ದರು; ನೊಂದಿಸಿಪಟ್ಟಿದ್ದರು. ಆದರೂ ಒಂದೇ ಸವನೆ ದುಡಿದು ದುಡಿದು ಮಡಿದರು. ಅವರ ಆತ್ಮ ಚಿರಶಾಂತಿ ಪಡೆಯಲಿ! ಈ ಆಕಸ್ಮಿಕವಾದ ಅಗಲುವಿಕೆಯ ಆಘಾತವನ್ನು ತಾಳಿಕೊಳ್ಳುವ ಸ್ಥೈರ್ಯವನ್ನು ಭಗವಂತನು ಅವರ ಮಡದಿ ಮಕ್ಕಳು ಮತ್ತು ಬಂಧುಗಳಿಗೀಯಲಿ!

ವಿಜ್ಞಾನದ ಮುನ್ನಡೆ

ನಾಯಿಕೊಡೆ ಸಂಗ್ರಹಾಲಯ

ನೆದರ್‌ಲ್ಯಾಂಡ್ಸಿನಲ್ಲಿ ಅಪರೂಪದ ಸಂಶೋಧನಾ ಸಂಸ್ಥೆಯೊಂದಿದೆ. ಆಕರ್ಷಕವಲ್ಲದ ಹೆಸರನ್ನು ಈ ಸಂಸ್ಥೆ ಪಡೆದಿದೆ. ನಾಯಿಕೊಡೆ ಅಥವಾ ಅಣಬೆಗಳ ಕೇಂದ್ರ ಸಂಸ್ಥೆಯೆಂದು ಇದರ ಹೆಸರು. ಈ ಸಂಸ್ಥೆ ಆಶ್ಚರ್ಯ ಬೇಡ. ಸಸ್ಯರೋಗಗಳ ವಿರುದ್ಧ ಯುದ್ಧ ಹೂಡಲು ಅಗತ್ಯವಾದ ಶಸ್ತ್ರಾಸ್ತ್ರಗಳ ನಿರ್ಮಾಣಗಾರ.

ಐವತ್ತು ವರ್ಷಗಳ ಹಿಂದೆ ಉಟ್ರೆಚ್ಟ್ ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರದ ಪ್ರಯೋಗಾಲಯದಲ್ಲಿ ಈ ಸಂಸ್ಥೆ ಜನ್ಮ ಪಡೆಯಿತು. ಈಗ ಬಾರ್ನ್ ಎಂಬ ಊರು ಈ ಸಂಸ್ಥೆಯ ತವರೂರಾಗಿದೆ. ಎಂಭತ್ತು ನಾಯಿಕೊಡೆಗಳ ಸಂಗ್ರಹದಿಂದ ಆರಂಭವಾದ ಈ ಸಂಸ್ಥೆ ಇಂದು ೧೧,೦೦೦ ಅಣಬೆಗಳ ಸಂಗ್ರಹ ಪಡೆದಿದೆ. ೬,೩೦೦ ವಿವಿಧ ಜಾತಿಯ ಅಣಬೆಗಳು ಇಲ್ಲಿವೆ. ವಿಶ್ವದಲ್ಲಿಯೇ ಅತಿ ಹೆಚ್ಚಿನ ನಾಯಿಕೊಡೆಗಳ ಸಂಗ್ರಹಾಲಯವೆಂಬ ಖ್ಯಾತಿಯನ್ನು ಇದು ಪಡೆದಿರುವುದಲ್ಲದೆ, ಅತಿ ಸೂಕ್ಷ್ಮ ನಾಯಿಕೊಡೆಗಳನ್ನು ಪ್ರನಾಳಗಳಲ್ಲಿ ಸಂಗ್ರಹಿಸಿರುವ ಜೀವಂತ ಅಣಬೆ ಕ್ಷೇತ್ರವೆಂಬ ಹೆಸರೂ ಇದಕ್ಕಿದೆ. ತಮಗೆ ತಿಳಿಯದ ನಾಯಿಕೊಡೆ ಜಾತಿಯೊಂದು ವಿಶ್ವದ ಯಾವ ವಿಜ್ಞಾನಿಗೆ ದೊರೆತರೂ ಅದು ಈ ಸಂಶೋಧನಾಲಯಕ್ಕೆ ಆಗಮಿಸುತ್ತದೆ ಪರಸ್ಪರ ಹೋಲಿಕೆ ವ್ಯತ್ಯಾಸಗಳಿಂದ ಅದರ ಜಾತಿಯ ನಿಷ್ಕರ್ಷೆ ಇಲ್ಲಿ ನಡೆಯುತ್ತದೆ. ವರ್ಷಂಪ್ರತಿ ಸಹಸ್ರ ಸಂಖ್ಯೆಗಳಲ್ಲಿ ಇಲ್ಲಿಗೆ ಅಣಬೆಗಳ ಯಾತ್ರೆ ಸಾಗುತ್ತಿರುತ್ತದೆ.

ನಾಯಿಕೊಡೆಗಳನ್ನು ವರ್ಗೀಕರಿಸುವುದು ಹಾಗೂ ಗುರುತಿಸುವುದು ಕಷ್ಟವಾದ ಕೆಲಸ. ನಾಯಿಕೊಡೆಗಳಲ್ಲಿ ಬೀಜೋತ್ಪತ್ತಿ, ಬೀಜೋತ್ಪಾದಕ ಅಂಗಗಳ ಸಹಾಯದಿಂದ ಇವುಗಳನ್ನು ವರ್ಗೀಕರಿಸಲಾಗುವುದು. ಬಾರ್ನ್ ಪ್ರಯೋಗ ಶಾಲೆಗಳು ನಾಯಿಕೊಡೆಗಳ ವರ್ಗೀಕರಣ ಮಾಡುತ್ತಿರುವುದಲ್ಲದೆ ೪೦೦೦ ವಿವಿಧ ಜಾತಿಯ ನಾಯಿಕೊಡೆಗಳನ್ನು ಬೇರೆ ವಿಶ್ವವಿದ್ಯಾನಿಲಯಗಳು, ಸಂಶೋಧನಾಲಯಗಳು, ವೈದ್ಯಕೀಯ ಸಂಸ್ಥೆಗಳು ಮತ್ತಿತರ ಅಣಬೆ ಅಗತ್ಯವಿರುವ ಸಂಸ್ಥೆಗಳಿಗೆ ಕಳುಹಿಸುತ್ತಿದೆ.

ಇದೆಲ್ಲಕ್ಕಿಂತ ಈ ಸಂಸ್ಥೆ ನಡೆಸುತ್ತಿರುವ ಪ್ರಶಂಸನೀಯ ಕಾರ್ಯವೆಂದರೆ ಸಸ್ಯರೋಗಗಳ ನಿವಾರಣೆಗೆ ಕೈಗೊಂಡಿರುವ ಯತ್ನ. ಈ ವಿಭಾಗದಲ್ಲಿ ಮೂವತ್ತೈದು ವಿಜ್ಞಾನಿಗಳು (ಅದರಲ್ಲೂ ಸ್ತ್ರೀಯರು ಹೆಚ್ಚು) ಕಾರ್ಯ ನಿರತರಾಗಿದ್ದಾರೆ. ನೆದರ್‌ಲ್ಯಾಂಡ್ಸಿನ ಜೀವಾಳ ತೋಟಗಾರಿಕೆ ಮತ್ತು ಬೇಸಾಯ. ಆದ್ದರಿಂದ ಈ ದಿಶೆಯಲ್ಲಿ ಸಂಶೋಧನೆ ಅಲ್ಲಿ ಅತ್ಯಗತ್ಯ. ಈ ಸಂಸ್ಥೆ ಈ ಕ್ಷೇತ್ರದಲ್ಲಿ ನಡೆಸುತ್ತಿರುವ ಸಂಶೋಧನೆಯ ಬಗ್ಗೆ ನಾಲ್ಕು ಮಾತು ಹೇಳುವುದು ಸೂಕ್ತವಾದೀತು. ಒಮ್ಮೆ ಆಲೂಗಡ್ಡೆಯ ಬೆಳೆಗೆ ರೋಗವೊಂದು ತಗಲಿತು, ಹೂ ಬಿಡುವುದನ್ನು ಆ ರೋಗ ತಡೆಗಟ್ಟುತ್ತಾದರೂ ಪ್ರಧಾನ ಕಾಂಡಕ್ಕೆ ತೊಂದರೆ ಆಗಿರಲಿಲ್ಲ. ಪ್ರಧಾನ ಕಾಂಡದಿಂದ ಆರೋಗ್ಯಕರ ಬೆಳೆ ತೆಗೆಯಬಹುದೆಂದು ಇಲ್ಲಿ ನಡೆಸಿದ ಪ್ರಯೋಗಗಳು ತೋರಿಕೊಟ್ಟವು. ಕಟ್ಟ ಬೀಜದಿಂದ ಬೀನ್ಸ್ ಬೆಳೆಗೆ ರೋಗವೊಂದು ತಗುಲಿತ್ತು. ಪ್ರಯೋಗಕ್ಕೆ ಅದನ್ನು ಒಳಪಡಿಸಲಾಯಿತು. ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು ಅದನ್ನು ತಡೆಯದಿದ್ದರೆ ಅಪಾರ ನಷ್ಟವುಂಟಾಗುತ್ತಿತ್ತು.

ಮರಗಳಿಗೆ ತಗಲುವ ರೋಗಗಳ ಬಗ್ಗೆ ಬಾರ್ನ್ ಪ್ರಯೋಗ ಶಾಲೆಗಳು ಹೇರಳವಾದ ಕೆಲಸ ಮಾಡುತ್ತಿವೆ. ಬೃಹದಾಕಾರದ ಎಲ್ಮ್ ವೃಕ್ಷ ರೋಗಕ್ಕೆ ಬಹುಬೇಗ ತುತ್ತಾಗುವುದೆಂಬ ನಂಬಿಕೆ ಅನೇಕ ರಾಷ್ಟ್ರಗಳಲ್ಲಿವೆ. ಶಿಷ್ಟವತ್ತಾದ ಭೂಮಿಯಲ್ಲಿ ಎತ್ತರಕ್ಕೆ ಬೆಳೆಯುವ ಡಚ್ ಎಲ್ಮ್ ವೃಕ್ಷಗಳು ನಾಯಿಕೊಡೆಯ ಸಾಂಕ್ರಾಮಿಕ ಜಾಡ್ಯಕ್ಕೆ ಸಿಲುಕಿ ಕಳೆದ ಶತಮಾನದಲ್ಲಿ ಅನೇಕ ಮರಗಳು ನಾಶವಾದವು. ಈ ರೋಗ ವಿದೇಶಗಳಲ್ಲೂ ಹರಡಿತು. ಅಮೇರಿಕಾದಲ್ಲಿ ಎಲ್ಮ್ ಮರಗಳು ನಾಶವಾಗಬಹುದೆಂಬ ಭೀತಿಯನ್ನು ಒಡ್ಡಿದ. ಈ ರೋಗ ನಿವಾರಣೆಗೆ ಅಮೇರಿಕಾದ ತಜ್ಞರು ಕ್ರಿಮಿನಾಶಕಗಳನ್ನು ಉಪಯೋಗಿಸಿ ಹೋರಾಡುತ್ತಿದ್ದಾರೆ. ಆದರೆ ನೆದರ್‌ಲ್ಯಾಂಡ್ಸಿನವರು ಕೈಗೊಂಡಿರುವ ಕಾರ್ಯ ಪ್ರತ್ಯೇಕವಾದುದು. ಇಲ್ಲಿ ಮರಗಳಿಗೆ ಸೂಜಿ ಮದ್ದನ್ನು ಚುಚ್ಚುವ ಕಾರ್ಯ ನಡೆದಿದೆ. ಬೆಳೆಯುವ ಮರಗಳು ಈ ನಾಯಿಕೊಡೆ ರೋಗಕ್ಕೆ ಬಹಳ ಬೇಗ ಗುರಿಯಾಗುವುದರಿಂದ ಮೇ ಜೂನ್ ತಿಂಗಳುಗಳಲ್ಲಿ ಚಿಗುರಿಕೊಳ್ಳುವ ಸಸಿಗಳಿಗೆ ನಾಯಿಕೊಡೆಯ ಸೂಜಿ ಮದ್ದನ್ನು ಬಲಿತ ಕಾಂಡದಲ್ಲಿ ಚುಚ್ಚಲಾಗುವುದು. ಈ ರೋಗ ನಿವಾರಣೆಯ ಜತೆಗೆ ಒಳ್ಳೆಯ ಜಾತಿಯ ಎಲ್ಮ್ ಮರಗಳನ್ನೂ ಹೇಗೆ ಬೆಳೆಯಬಹುದೆಂದೂ ಸಂಶೋಧನೆ ನಡೆಸಲಾಗುತ್ತಿದೆ.



ಗ್ರಾಮೀಣ ಜೀವನ

(೩ನೇಯ ಪುಟದಿಂದ)

ಕೊಡುವ ವಿವರಣೆ ಇದಕ್ಕೆ ವಿರುದ್ಧವಾಗಿದೆ. ನಿಜವಾಗಿ ಚೈನಾದ ಒಳಗೆ, ಕಮ್ಯೂನ್‌ಗಳೊಳಗೆ, ಒಳಹಳ್ಳಿಗಳಲ್ಲಿ ಅದೇನು ನಡಿಯುತ್ತಿದೆಂಬುದು ಯಾರಿಗೆ ಗೊತ್ತು? ಈ ಎರಡು ಅಭಿಪ್ರಾಯಗಳನ್ನು ಮುಂದಿಟ್ಟುಕೊಂಡು ಬುದ್ಧಿ ಜೀವಿಗಳು, ಅದರಲ್ಲೂ ವಿಚಾರಶೀಲ ವಿವೇಕಿಗಳು, ಒಂದು ನಿಶ್ಚಯಕ್ಕೆ ಬರಬಹುದು. ನೈಸರ್ಗಿಕವಾಗಿ ಅಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆ ಆಗಿರಬಹುದು. ಚೆನ್ನಾಗಿ ಕಾಲದಲ್ಲಿ ಮಳೆ ಬಂದಿರಬಹುದು. ನೆರೆಯ ಹಾವಳಿ ಕಮ್ಮಿ ಇದ್ದಿರಬಹುದು. ಮಿಡಿತೆಯ ಉಪಟಳ ಇಲ್ಲದಿದ್ದಿರಬಹುದು. ಹೀಗೆ ತುತ್ತು ಚೈನಿ ಜನತೆಯ ಕೈಗೆ ಬಂದಿತ್ತು. ಆದರೆ ಕಮ್ಯೂನಿಸ್ಟ್ ಸರಕಾರ ಸುಮ್ಮನಿರಬೇಕಲ್ಲ? ತಮ್ಮ ಮಾರುಕಟ್ಟೆ ಹಾಗೂ ಗೆಳೆತನ ಬೆಳೆಸಿಕೊಳ್ಳಲು ಸ್ವತಃ ಅವರ ಪ್ರಧಾನಿ ಚೌ ಎನ್‌-ಲೈ ಊರು ಬಿಟ್ಟು ಆಗಲೇ ಹೊರಟು ಹೋಗಿ ಆಫ್ರಿಕಾದ ಅನೇಕ ರಾಷ್ಟ್ರಗಳನ್ನು ಏಶ್ಯದ ಅನೇಕ ರಾಷ್ಟ್ರಗಳನ್ನು ನೋಡಿಕೊಂಡು ಚೈನಾಕ್ಕೆ ಬಂದಿದ್ದಾರೆ. ಆಗ ಫ್ರಾನ್ಸ್ ದೇಶಕ್ಕೆ ಹೋಗಿ ತಮ್ಮ ಬೆಳೆಯನ್ನು ಬೇಯಿಸಿಕೊಂಡರು. ಅಲ್ಲಿ ಅವರು ತಮಗೆ ಬೇಕಾದ ಮಾರುಕಟ್ಟೆಯನ್ನು ಕಂಡುಕೊಂಡರು. ಹೀಗೆ ಚೈನಿ ಜನತೆಯ ಕೈಗೆ ಬಂದ ತುತ್ತನ್ನು ಅವರ ಸರಕಾರ ಕಸಿದುಕೊಂಡು ಅನ್ಯ ರಾಷ್ಟ್ರಗಳಿಗೆ ರಫ್ತು ಮಾಡಿರುತ್ತದೆ.—ಕೇವಲ ಅಣು ಶಸ್ತ್ರ ತಯಾರಿಕೆಗೆ ಬೇಕಾಗುವ ವಸ್ತುಗಳಿಗಾಗಿ ಪಾರಮೀಯ ಅಥವಾ ರಾಕ್ಷಸೀಯ ಶಕ್ತಿಗಾಗಿ!

ನೈಜಸ್ಥಿತಿ ಹಾಗಿದ್ದರೂ ಇಲ್ಲಿರುವ ಕಮ್ಯೂನಿಸ್ಟರು ಹಾಗೂ ಅವರ ಸಹಚರರು ಅದನ್ನು ಮರೆ ಮಾಡುತ್ತಿದ್ದಾರೆ. ಚೈನಾದಲ್ಲಿ ಜೇನುತುಪ್ಪ-ಹಾಲು ಹರಿಯುತ್ತಿದೆಯೆಂದೂ ಅಲ್ಲಿಯ ಕಾರ್ಮಿಕರ ಪರಿಸ್ಥಿತಿ ಅತ್ಯುತ್ತಮವಿದೆಯೆಂದೂ, ಇಲ್ಲಿಯ ಪ್ರಜೆಗಳಿಗೆ ಸ್ವಾತಂತ್ರ್ಯವೇ ಸಿಕ್ಕಿಲ್ಲವೆಂದೂ ಅವರು ಅಪಪ್ರಚಾರ ನಡೆಸುತ್ತಿದ್ದಾರೆ. ಹೆಬ್ಬುಲಿ ಏಕಾದಶಿ ವ್ರತ ನಡೆಸುವಂತೆ ಇಲ್ಲಿಯು ಕ್ರೂರ ಕಮ್ಯೂನಿಸ್ಟರು ಇದೀಗ ಉಪವಾಸ ಸತ್ಯಾಗ್ರಹ ನಡೆಸಲಾರಂಭಿಸಿದ್ದಾರೆ. ಅಂದರೆ ಅವರ ಆಪ್ತ ಚೈನೀಯರು ದಂಡೆತ್ತಿಕೊಂಡು ಬರುತ್ತಿರುವಾಗ ಇಡೀ ರಾಷ್ಟ್ರದಲ್ಲಿ ಉಪವಾಸದ ನಾಟಕವನ್ನಾಡಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಅವರು ಪ್ರಯತ್ನಪಡುತ್ತಿದ್ದಾರೆ. ಹಿಂದೊಮ್ಮೆ ಚೈನಾ ಮುಂದಕ್ಕೆ ಬರುತ್ತಿದ್ದಾಗ ಅಸ್ಸಾಂ-ಬಂಗಾಲಗಳಲ್ಲಿ ಭೀಕರ ಬಂಡು ನಡೆಸಲು ಅವರು ಹವಣಿಸಿದ್ದರು. ಆದರೆ, ದೈವವಶಾತ್, ಅವರ ಹಂಚಿಕೆ ಮಣ್ಣುಪಾಲಾಯಿತು. ಅದನ್ನು ಸಾಧಿಸಿಕೊಳ್ಳಲು ಅವರೀಗ ಪುನಃ ಪ್ರಯತ್ನಿಸುತ್ತಿದ್ದಾರೆ.

ಪಾಕಿಸ್ಥಾನದ ಮತೀಯ ಜಾಡ್ಯ ಬಂಗಾಲದಲ್ಲಿ ಹಬ್ಬಿದಾಗ ಪಾಕಿಸ್ಥಾನಿಗಳ ಮನಸ್ಸನ್ನಾಕರ್ಷಿಸಿಕೊಳ್ಳಲು ಅವರಿಗೆ ಬೇಕಾದಂತೆ ಇಲ್ಲಿಯು ಕಮ್ಯೂನಿಸ್ಟರು ವೇಷ ಹಾಕಿದ್ದು, ಮುಹಮ್ಮದೀಯರನ್ನು ಕಲ್ಕತ್ತದಿಂದಟ್ಟಲಾಗುತ್ತಿದೆಯೆಂಬು ಅವರು ಕುಪ್ರಚಾರ ನಡೆಸಿರುವರು. ಅವರ ಕುಪ್ರಚಾರಕ್ಕೆ ಕಾರಣ ಚೀನಿ-ಪಾಕ್ ಮೈತ್ರಿ. ಕಲ್ಕತ್ತದ ಬಂದರಿನಲ್ಲಿ ಕೆಲಸಕ್ಕಿದ್ದ ಸಾವಿರಾರು ಮುಸಲ್ಮಾನರನ್ನು ಕೆಲಸ ಬಿಟ್ಟು ಪಾಕಿಸ್ಥಾನಕ್ಕೆ ಹೋಗುವಂತೆ ಕಮ್ಯೂನಿಸ್ಟರು ಪ್ರಚೋದಿಸಿರುವದರಿಂದ ಅವರೀಗ ಕಲ್ಕತ್ತ ಬಿಟ್ಟು ಇದ್ದಕ್ಕಿದ್ದಂತೆ ರಾಜಿನಾಮೆ ಕೊಟ್ಟುಬಿಟ್ಟು ಹೋಗಿರುವರು. ಈ ರೀತಿ ಶ್ರಮಿಕ ರಂಗಗಳಲ್ಲಿ ಗೊಂದಲವೆಬ್ಬಿಸಿ ಚೀನಿ ಕಮ್ಯೂನಿಸ್ಟರಿಗೆ ಪತಾಕೆ ತೋರಿಸುವದೇ ಈ ಕಮ್ಯೂನಿಸ್ಟರು ಕಾಣುತ್ತಿರುವ ಹಗಲುಗನಸು.

ಬ್ರಿಟನಿಗಿತ್ತ ಟೆಲಿವಿಷನ್ ಭೇಟಿಯಲ್ಲಿ ಚೌ-ಎನ್‌-ಲೈ ಅದಕ್ಕೆ ಸಂಬಂಧಪಟ್ಟ ಒಂದು ವಿಷಯವನ್ನು ತಿಳಿಸಿದ್ದಾರೆ. ಪ್ರಪಂಚದಲ್ಲಿರುವ ಎಲ್ಲಾ ಕಮ್ಯೂನಿಸ್ಟರು ಒಂದೇ ಇದ್ದು ಆಪತ್ಕಾಲದಲ್ಲಿ ಒಬ್ಬರನ್ನೊಬ್ಬರು ಬಿಟ್ಟು ಹಾಕುವದಿಲ್ಲವೆಂದು ಅವರು ಹೇಳಿರುವರು. ಅಂದರೆ, ಇಲ್ಲಿಯ ಕಮ್ಯೂನಿಸ್ಟರು ಸತ್ಯಾಗ್ರಹ ಪಗೈರೆ ಗೊಂದಲ ನಡೆದಾಗ ಅವರ ಸಹಾಯಕ್ಕೆಂಬ ನೆಪದಲ್ಲಿ ಗಡಿಯಲ್ಲಿರುವ ಚೈನಿ ಸೈನಿಕರು ಇತ್ತ ಧಾವಿಸಿ ಬರುವರೆಂಬುದೇ ಅದರ ಅರ್ಥವಿದೆ. ಚೈನಿ ಗ್ರಾಮೀಣ ಜನತೆಗೂ ಬೇಡವಾಗಿರುವ ಕ್ರೂರ ಸರಕಾರವನ್ನು ಇಲ್ಲಿರುವ ಕಮ್ಯುನಿಸ್ಟರು ಕೈ ತೋರಿಸಿ ಕರೆಯುತ್ತಿದ್ದಾರೆ— ದೂರದ ಬೆಟ್ಟ ನೋಡಲು ನುಣ್ಣಗೆಂಬಂತೆ

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ನೆನಪಿದೆಯೆ....?

(೨ನೇ ಪುಟದಿಂದ)

ನ ಸ್ಥಿತಿಯನ್ನು ಕಂಡು ಹೆಂಡತಿಗೆ ಉಪವಾಸಾತೀತ ಮರುಕವಾಗಿರಲೇಬೇಕು.

"ಹಸುಳೆಯಂತೆ ಅಳಬಾರದು ನನ್ನ ದೊರೆ."

ರಾಜಕೀಯ ದೊರೆಗಳು ಎಂದೋ ತಮ್ಮ ಸಿಂಹಾಸನದಿಂದ ಇಳಿದಿದ್ದರು. ಈ ದಾಂಪತ್ಯದ ದೊರೆಗಳಿಗೆ ಅಷ್ಟು ಉದಾರ ಮನಸ್ಸು ಹೆಕ್ಕಲು ಸಿಗುವುದಿಲ್ಲವಲ್ಲಾ ಪಾಪ!

"....ಜನನ ಮರಣಗಳನ್ನು ನಿಯಂತ್ರಿಸಲು ನಾವು ಯಾರು...."

ಆಧುನಿಕ ಉಪಾಯಗಳಲ್ಲಿ ವಿಶ್ವಾಸವಿಲ್ಲದುದರಿಂದ ಹೀಗೆ ಹೇಳಿರಬೇಕು ಮೃದುಲ-"...ಆತ್ಮಕ್ಕೆ ಅಳಿವಿದೆಯೇ?...."

ಚಿಕ್ಕಂದಿನಲ್ಲಿ ಅಜ್ಜ ಹೇಳಿದ ವೇದಾಂತ ನೆನಪಿಗೆ ಬಂತು ಸಕಾಲದಲ್ಲಿ ಪ್ರಯೋಗಿಸಿದಳು.

...ಆದು ಯಾವಾಗಲೂ ನಿಮ್ಮನ್ನು ಅಗಲಿರುವುದಿಲ್ಲ. ಈ ದೇಹವಾದರೋ ಎಂದಾದರೊಂದಿನ ನಿಮ್ಮನ್ನು ಬಿಟ್ಟು ದೂರವಾಗಲೇಬೇಕು. 'ಆ ಪ್ರಸಾದ ಇಷ್ಟು ಬೇಗ ಏಕೆ ಸಂಭವಿಸಬೇಕು? ಇನ್ನೂ ಸ್ವಲ್ಪಕಾಲ ತಡೆದರೆ ನಷ್ಟವೇನು?' ಎಂದು ನೀವು ಉದ್ಗರಿಸ ಬಹುದು. ಎಲ್ಲವೂ ನಮ್ಮ ಇಚ್ಛೆಗೆ ಅನುಗುಣವಾಗಿ—ನಮಗೆ ಸುಖವಾದರೆ ಜೀವನ ಕುತೂಹಲ ಪೂರ್ಣವಾಗಿರುವುದು ಶಾಧ್ಯವಿಲ್ಲ. ವಿಶ್ವ ವ್ಯವಹಾರ ರಹಸ್ಯಮಯವಾಗಿರಲೆಂದು ಈಶ್ವರ ವಿಧಿ ಪೂರ್ಣ ಸೂಚನೆ ವಿಲ್ಲದೆ ಪ್ರಪಂಚಕ ಸನ್ನಿವೇಶಗಳನ್ನು ಸೃಷ್ಟಿಸುತ್ತಾನೆ. ಇದೀಗ ಅಂಥ ಘಟನೆಗಳ್ಳೊಂದು. ಇಂಥ ಆಘಾತಗಳನ್ನೆದುರಿಸಲೆಂದೇ ಗಾಂಧಿ ನಿರ್ಲಿಪ್ತ ಲೌಕಿಕ ವಾದವನ್ನು ಇಳಿಬಿಟ್ಟಿದ್ದಾನೆ. ನೀವು ಆದನ್ನು ಹಿಡಿದುಕೊಂಡರೆ ಸುಲಭ ಸ್ವಾಂತನ ದೊರಕುತ್ತದೆ. ಇದಕ್ಕಿಂತ ಹೆಚ್ಚಿನ ಸಮಾಧಾನವನ್ನು ನಾನು ನಿಮಗೆ ಹೇಳಲಾರೆ. ನಾನಿಲ್ಲವೆಂದು ಚಿಂತಿಸಬೇಡಿ. ಇನ್ನೊಬ್ಬಳನ್ನು ಮಾಡಿಕೊಂಡು ಸಂತೋಷವಾಗಿ. ಆದೋ ಅಲ್ಲಿ ನೋಡಿ ನನ್ನನ್ನು ಕರೆದೊಯ್ಯಲು ಯಾರೋ ಒಬ್ಬ ಹೊಸವನು ಸಾಷ್ಯ ಬರುತ್ತಲಿದ್ದಾನೆ. ಈಗ ನನ ಧಮನಿಗಳಲ್ಲಿ ರಕ್ತ ಕಣಗಳು ಸಿಕ್ಕಿಕೊಂಡಂತೆ, ಮಿದುಳು ಉಳುಕಿದಂತೆ ಅನುಭವವಾಗುತ್ತದೆ. ಇಂಥ ಅನುಭವಕ್ಕೆ ಪರಲೋಕ ಪ್ರವಾಸದ ಸಂಕೇತವೆನ್ನುತ್ತಾರೆ. ವೇಳೆಯಾಯಿತು. ನಾನಿನ್ನು ಹೋಗಿಬರುತ್ತೇನೆ. ಆಡೋರ್ಲೈಲು ಬಂಡಿಮೊರಡುತ್ತಿದೆ. ಬೇಗನೇ ಒಂದು ಮುತ್ತು ಕೊಡಿ"

ಬಾಹು ದುರ್ಗ ಬಲಿಯಿತು. ಗೋಡೆಗೆ Poster ಅಂಟಿಸಿದಂತೆ ಇತ್ತಂಡ-ತುಟಿಗಳು ಕಲೆತುವು ಸತ್ತವಳ ಎದೆಗುಂಡಿಗೆ ದಾಪಾಸು ಹಾಕುವುದು ನಿಲ್ಲಿಲ್ಲ ಉಸಿರ ಓಡಾಟ ಮುಗಿಯಲಿಲ್ಲ. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಮಧು ಮೆಲ್ಲನೇ ತನ್ನ ಮುಖವನ್ನೆತ್ತಿ ಮೃದುಲಳ ಮುಖ ನೋಡಿದರೆ ಅದು ಮೆತ್ತಗೇ ನಗುತ್ತಿತ್ತು ಮುಗುಳು ಮುಗುಳು. ಬೇಸ್ತು ಬಿದ್ದವ ಬಾಯಿತೆರೆಯುವ ಮುನ್ನ ಮೃದುಲ ತಾನೇ ಕೇಳಿದಳು—

"ನೆನಪಿದೆಯೇ ಕಳೆದ ಎಪ್ರಿಲ್...."

ಹೇಳಿಮುಗಿಯುವ ಮೊದಲು ಮಧು ಅಲ್ಲಿ ನಿಲ್ಲದೆ ಓಟ್ಟಬದಲಾಯಿಸಿದ—ತನ್ನ ಮುಸುಡನ್ನು ತೊಳೆಯೋಣವೆಂದು ಬಚ್ಚಲು ಮನೆಯ ಕಡೆ ಓಡಿದ. ದಾರಿಯಲ್ಲಿ ಕಾಫಿ ಹಿಡಿದು ಅಡ್ಡನಾದ ಅತ್ತೆಯಿಂದ ಲೋಟೆಯನ್ನೆತ್ತಿ ಖಾಲಿ ಮಾಡುತ್ತಿದ್ದಾಗ ತನ್ನ ಕಣ್ಣುಗಳನ್ನು ಬಟಾಬೆಯ ಪ್ರಮಾಣಕ್ಕೆ ಪರಿವರ್ತಿಸಿ ಅಳಿಯ ದೇವರು ಕಾಫಿ ಕುಡಿಯುವ ವಿಧಾನ ವಿಶೇಷವನ್ನೇ ಎವೆಯಿಕ್ಕದೆ ನೋಡುತ್ತಿದ್ದಳು ಸಾವಿತ್ರಮ್ಮ. ಅಷ್ಟರಲ್ಲಿ ಹಿಂಬಾಲಿಸಿದ ಮೃದುಲಳನ್ನು ಕಂಡು ಮತ್ತೆ ಕೆಂಬಿ ಕೆತ್ತ ಮಧು. ಕುಲುಕುಲು ಬಳಕುತ ಕಿಲಕಿಲ ನಗುವ ಮಗಳನ್ನು ಕೇಳಿದಳು—ತಾಯಿ "ಏನೇ ಇದು?"

"ನಾನವರನ್ನು Fool ಮಾಡಿದೆ ನಮ್ಮಾ"

ನಗೆ ಬೆರಸಿದ ನುಡಿಯಲ್ಲಿ ಉಸುರಿದಳು ಮೃದುಲ.

"ಹಾಗೇನು ಇದೋ ಕುಡಿ"

ಲೋಟೆಯನ್ನು ಕೈಗಿತ್ತು ಮಗಳ ವಿನೋದದಲ್ಲಿ ಪಾಲುಗಾರ್ತಿಯಾದಳು ತಾಯಿ

o o o

Dispensaryಗೆ ಮಧು ಹೊರಟು ನಿಂತಾಗ ಎಚ್ಚರಿಸಿದಳು ಮೃದುಲ—

"ದವಾಖಾನೆಗೂ ನನ್ನಂಥ ರೋಗಿಗಳು ಬರಬಹುದು ಜಾಗ್ರತೆ".

— —

ವೀರಲಲನೆಯರು—೧

ದುರದೃಷ್ಟೆ ಚಂದ್ರಮತಿ

—ಶ್ರೀ ಶಿವಶಂಕರ ಪುಂಜಾಯಿ

ತನ್ನ ಏಕಮಾತ್ರ ಪುತ್ರನ ಪ್ರಾಣಹೀನ ಶರೀರವನ್ನು ಹೊತ್ತು ತಂದಿದ್ದ ಳಾಕೆ. ನರಿ ನಾಯಿಗಳು ಆಕೆಯನ್ನು ಹಿಂಬಾಲಿಸಿದ್ದವು. ನಿರ್ಜನ ಪ್ರದೇಶ, ಮಧ್ಯರಾತ್ರಿ, ಭಯಂಕರ ನೀರವ, ಕತ್ತಲೆ ಶೋಕದಿಂದ ಇನ್ನಷ್ಟು ಕಪ್ಪಾಗಿದ್ದಳು ಆಕೆ.

ಕಾಶಿಯ ಸುಡುಗಾಡಿನಲ್ಲಿ ತೆರ ವಸೂಲು ಮಾಡುವ ಪದ್ಧತಿ ಬಳಕೆಯಲ್ಲಿತ್ತು ವೀರಬಾಹುಕನ ಭೃತ್ಯ ತನ್ನ ದಂಡಯನ್ನೂರುತ್ತಾ ಆಕೆಗೆ ಬಂದ!

"ಹಾ ನನ್ನ ಕಂದಾ, ನಿರಾಶ್ರಿತಳಾದ ಈ ನನ್ನನ್ನು ನೀನು ಬಿಟ್ಟು ಹೋದೆಯಾ ಮಗನೇ? ಈ ದುಃಖಮಯ ಬಾಳಿನಲ್ಲಿ ಇನ್ನು ಯಾರ ಮುಖ ನೋಡಿ ನಾನು ಉಳಿದ ದಿನಗಳನ್ನು ಕಳೆಯಲಿ?" ಎಂಬ ಪ್ರಲಾಪ ಗೈಯುತ್ತಿದ್ದಳು ಆ ಅಬಲೆ. ದಾರಿದ್ರ್ಯ ಮೂರ್ತಿ ಆ ಹೆಣ್ಣು ತನ್ನ ಸೀರೆಯ ತುಂಡಿನಿಂದಲೇ ಮಗನ ಹೆಣವನ್ನು ಮರೆ ಮಾಡಿದ್ದಳು. ಆಕೆಯ ಕರುಣ ಕ್ರಂದನ ಸುಡುಗಾಡಿನ ನಿರ್ಮಮ ಹೃದಯವನ್ನು ಆರ್ದ್ರಗೊಳಿಸುವಂತಿತ್ತು.

"ಆಹಾ, ಇದೆಂತಹ ನಿಕೃಷ್ಟ ಕಾರ್ಯ. ಈ ಅಭಾಗಿನಿ ಹೆಣ್ಣಿನಿಂದಲೂ ತೆರ ವಸೂಲು ಮಾಡಬೇಕಲ್ಲಾ......." ಗುಣುಗುಣಿಸುತ್ತಿದ್ದ ವೀರಬಾಹುವಿನ ಕೆಲಸದಾಳು!

"ನೋಡು, ತೆರ ಕೊಡದೆ ಈ ಹೆಣಕೆ ಇಲ್ಲಿ ಅಂತಿಮ ಕ್ರಿಯೆ ಮಾಡಲು ಸಾಧ್ಯವಿಲ್ಲ. ವೀರಬಾಹುಕನ ಸುಡುಗಾಡಿದು ......" ಭೃತ್ಯನ ಸ್ವರ ಭಾರವಾಗಿತ್ತು ಅಂತೆಯೇ ಅಚಲವಾಗಿತ್ತು, ದೃಢವಾಗಿತ್ತು!

"ಹಾಯ್ ರಾಜಕುಮಾರ, ಇಂದು ಅಂತಿಮ ಯಾತ್ರೆಯ ತೆರ ಕೊಡುವ ಸಾಮರ್ಥ್ಯವೂ ಇಲ್ಲದಾಯ್ತೇ? ಒಂದು ದಿನ ಅಯೋಧ್ಯೆಯ ಸಿಂಹಾಸನದ ಶೋಭೆ ಹೆಚ್ಚಿಸಿದ್ದ ನಿನಗೆ ಇಂದು ಈ ನಿರ್ಗತಿಕತನವೇ?" ಆ ತಾಯಿಯ ಕೊರಳ ಸೆರೆ ಉಬ್ಬಿ ಬಂದಿತ್ತು.

ಮತ್ತು ವೀರಬಾಹುಕನ ಆ ಭೃತ್ಯ. ಅಯೋಧ್ಯೆಯ ಮಹಾರಾಜ ಹರಿಶ್ಚಂದ್ರ ಹಾಹಾಕಾರ ತುಂಬಿದ ಹೃದಯದಿಂದ ಚಿಂತಿಸುತ್ತಿದ್ದ—"ಚಂದ್ರಮತಿಯ ಮಾರಾಟವಾಯ್ತು. ನನ್ನನ್ನು ನಾನೇ ಮಾರಿಕೊಂಡೆನು, ಆದರೂ ಸತ್ಯದ ದೇವತೆ ತೃಪ್ತಳಾಗಲಿಲ್ಲವೇನು? ಸ್ವಯಂ ತಂದೆ, ಇಂದು ಮಗನ ಹೆಣದ ತೆರ ವಸೂಲು ಮಾಡಬೇಕೇನು? ನನ್ನ ಚಂದ್ರಮತಿ! ನನ್ನ ರೋಹಿತಾಶ್ವ! ಮಗೂ, ನಿನ್ನ ಈ ತಾಯಿ ಸತ್ಯಕ್ಕಾಗಿ— ನಿನ್ನ ನಿರ್ಭಾಗ್ಯ ತಂದೆಯು ಸತ್ಯವ್ರತಕ್ಕಾಗಿ ಏನೆಲ್ಲಾ ಬನ್ನ ಪಡಲಿಲ್ಲ! ಆತ್ಮ ಬಲಿ!· ಪುತ್ರ ಬಲಿ! ಅಯೋಧ್ಯೆಯ ಮಹಾರಾಣಿ ಇಂದು ಒಬ್ಬ ಸಾಮಾನ್ಯ ಆಳಾಗಿದಾಳು-ಕೇವಲ ಸಂಚಾರಕೆ......." ಸತ್ಯಯುಗದ ಅಂತಿಮ ಚರಣ ಚಿತ್ರಿಸಿತ್ತು. ದುಃಖಿಸಿ ತಾಯಿಯೊಬ್ಬಳು ವೀರಬಾಹುಕನ ಕಠೋರ ವೃತ್ತೀ ಭೃತ್ಯನ ಆಗ್ರಹದಂತೆ ತೆರವನ್ನು ತೆರಲೇ ಬೇಕಾಗಿ ಬಂತು.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸರಳ ಭಾಷಾಂತರ
ಈಗ ಮಾರಾಟಕ್ಕೆ ಸಿದ್ಧವಾಗಿದೆ.
60 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ಸ್ವವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಪ್ರತಿಗಳ ವರೆಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಎ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ

REGD. No. B. G. 176
LICENCE No. 31
Licensed to Post without Prepayment

ಕರಿಮಣಿಸು-ಬಿಳಿಶುಂಠಿ

ಕಳೆದೈದು ವರುಷಗಳಲ್ಲಿ ಮದ್ರಾಸು ರಾಜ್ಯದ 24 ದೇವಸ್ಥಾನಗಳಿಗೆ ಸೇರಿದ ಹಲವಾರು ಪ್ರತಿಮೆಗಳ ಕಳವಾಗಿದೆಯೆಂದು ಮದರಾಸಿನ ಮುಖ್ಯ ಮಂತ್ರಿ ಭಕ್ತವತ್ಸಲಂ ತಿಳಿಸಿ, ಅವುಗಳನ್ನು ಪುನಃ ಪಡೆಯಲು ಪೋಲೀಸರ ಸಹಕಾರದಿಂದ ಕ್ರಮ ಕೈಗೊಳ್ಳಲಾಗಿದೆಯೆಂದೂ ಹೇಳಿದರು. ಪಿ. ಟಿ. ಐ. ಸುದ್ದಿ.

—ಅಯ್ಯೋ ಪರಮಾತ್ಮಾ, ಆರು ಗತಿ ನಿನಗಿನ್ನು?

o o o

ಕಾರವಾರದಿಂದ ಸುಮಾರು ೫೨ ಮೈಲು ದೂರದಲ್ಲಿರುವ ಶರಾವತಿಯ ನಡು ನೀರಿನಲ್ಲಿ ೩೨ ಪ್ರಯಾಣಿಕರನ್ನೊಯ್ಯುತ್ತಿದ್ದ ಲಾಂಚೊಂದು ಮುಳುಗಿತು.

—ಅಧಿಕೃತ ವಾರ್ತೆ.

—ಶರಾವತಿಯಲ್ಲಿ ಈಗೀಗ ಅದೂ ಇದೂ ಮುಳುಗುವುದು ಮತ್ತು ಮುಳುಗಿಸುವುದು ಸರ್ವೇ ಸಾಧಾರಣವಾಯಿತು.

o o o

'ಅರಬ್ ರಾಷ್ಟ್ರಗಳಲ್ಲಿ ಹಿಂದೂ ತರುಣಿಯರ ಮಾರಾಟ, ಪಾಕಿಸ್ಥಾನದ ಕೃತ್ಯ'

—ವರದಿ.

—ಇದೂ ಮತ್ತೊಂದು 'ಹೆಣ್ ಹರಾಜ್' ನಾಟಕವೇ?

o o o

'ಭ್ರಷ್ಟಾಚಾರ ನಿರ್ಮೂಲನಕ್ಕೆ ರಾಷ್ಟ್ರೀಯ ಮಂಡಳಿಯ ರಚನೆ. ಘಟನೆಯ ಶಿಗ್ಗನೇ ನಿಬಂಧನೆಯ ತಿದ್ದುಪಡಿ'

—ಸಂತಾನಂ ಸಮಿತಿ

—'ರಾಷ್ಟ್ರೀಯ ಮಂಡಳಿಯಲ್ಲಿಯೂ ಭ್ರಷ್ಟಾಚಾರವೇ?' ಎಂಬ ತಲೆಬರಹವನ್ನು ಮುಂದಿನ ದೈನಿಕಗಳಲ್ಲಿ ಆಗಾಗ ನಾವು ನಿರೀಕ್ಷಿಸಬಹುದೇ?

o o o—

ಅಖಿಲಭಾರತ ಆಕಾಶವಾಣಿಯ ಬೆಂಗಳೂರು ನಿಲಯದಿಂದ ಪ್ರತೀ 15 ದಿನಗಳಿಗೊಮ್ಮೆ ಯಕ್ಷಗಾನ ಕಾರ್ಯಕ್ರಮಗಳು ಪ್ರಸಾರವಾಗುವಂತೆ, ವ್ಯವಸ್ಥೆ ಮಾಡಲಾಗಿದೆ.

ದಕ್ಷಿಣ ಕನ್ನಡ 'ಯಕ್ಷಗಾನ ಮೇಳ'ದವರನ್ನು ಯೋಗ್ಯ ಸಂಬಳದೊಂದಿಗೆ, ಆಕಾಶವಾಣಿ ನಿಲಯದವರು ಇರಿಸಿಕೊಳ್ಳುವರೆಂಬುದು ಶುದ್ಧ ಸುಳ್ಳಂತೆ!

o o o

ಔರಂಗಾಬಾದ್ ಹನುಮಾನ್ ಮಂದಿರದ ಸ್ವಂತ ಜಾಗದಲ್ಲಿ ಒಬ್ಬ ಮುಸಲ್ಮಾನನ ಶವ ಹೂಳಲಾಗಿದೆಯಂತೆ.

—ಕಾಲ ಕೆಟ್ಟು ಹೋಯಿತು. ದೇವಸ್ಥಾನದ ಆವರಣವೇ ಸ್ಮಶಾನವಾಗುವುದಾದರೆ ದೇವರು ಅಲ್ಲಿಂದ ಕಾಲು ಕೀಳಬೇಕಾದ್ದೇ ಸರಿ.

o o o

'ನಮ್ಮ ಸರಕಾರಕ್ಕೆ ಆಗಿರುವುದಾದರೂ ?ಏನು"—ವಿದರ್ಭದ ವಯೋವೃದ್ಧ ಮುಂದಾಳು ಲೋಕ ನಾಯಕ ಡಾ|| ಅಣೆಯವರ ಉದ್ಗಾರ.

—'ನಮ್ಮ ಸರಕಾರಕ್ಕೆ ಇನ್ನು ಆಗಬೇಕಾದುದು ಏನು?" ಇದು ಹಳ್ಳಿಯ ಹೈದನೋರ್ವನ ಆಶ್ಚರ್ಯೋದ್ಗಾರ.

o o o

'ನಾಗಾ ಬಂಡುಗಾರರಿಂದ ಸುಮಾರು ೧೦೦೦ ನಾಗರಿಕರ ಕೊಲೆ ನಡೆದಿದೆ—ನಾಗಾ ರಾಜ್ಯದ ಮುಖ್ಯ ಮಂತ್ರಿ ಶ್ರೀ ಪಿ. ಶೀಲೂ ಆವೋ ಅವರ ಹೇಳಿಕೆ.

—ಇಂತಹ ಘಟನೆಗಳಿಂದಾಗಿಯೇ ಜನಸಂಖ್ಯೆಯ ಭೀಕರ ಸಮಸ್ಯೆ ಇನ್ನೂ ಬೃಹತ್ಪ್ರಮಾಣ ತಾಳಿಲ್ಲ.

o o o

ಕಾವೇರೀ ನದಿಯಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಸುಮಾರು ಇಪ್ಪತ್ತಾರು ಕೋಟಿ ರೂಪಾಯಿ ವೆಚ್ಚದ ಯೋಜನೆಗೆ ಕೇಂದ್ರ ಸರಕಾರ ಮಂಜೂರಾತಿಯಿತ್ತಿದೆ.

—ಇದು ನಂಬರ್ ಎರಡನೇ ಶರಾವತಿ ಪ್ರಕರಣವಾಗದಿರಲಿ ಎಂದು ಪರಮಾತ್ಮನಲ್ಲಿ ಬಡ ಜೋರೇ ಗೌಡನ ಪ್ರಾರ್ಥನೆ.

o o o

"ಶಾಸಕ ಸಭೆಗಳು ಕುಸ್ತಿಯ ಅಖಾಡವಾಗದಿರಲಿಲ್ಲ!"

—ಲಾ. ಬ. ಶಾಸ್ತ್ರಿ.

—ಮಂತ್ರಿಗಳು ಕುಸ್ತಿ ಮಾಡುವುದಾದರೆ, ಇನ್ನು ಮುಂದೆ ಟಿಕೇಟು ಇಟ್ಟೇ ತಮ್ಮ ಪ್ರದರ್ಶನವನ್ನಿಡಬೇಕು ಎಂದು ಜನತೆಯ ಆಶಯ

o o o

ಗ್ರಾಮಾಂತರಗಳಲ್ಲಿ ಶಿಕ್ಷಣಕ್ಷೇತ್ರದ ವಿಕಾಸ ಎಷ್ಟಾಗ ಬೇಕಿತ್ತೋ ಅಷ್ಟು ಆಗಿಲ್ಲ-

—ಶ್ರೀ ಕಂಠಿ.

—ಪ್ರತಿ ಹಳ್ಳಿಗಳಲ್ಲೂ ಹೈಸ್ಕೂಲು ಕಾಲೇಜುಗಳು ಸ್ಥಾಪಿತವಾಗಲೇಬೇಕು.

o o o

೧೯೬೩ರಲ್ಲಿಯೂ ಕನ್ನಡ ಚಿತ್ರಗಳ ಚಟುವಟಿಕೆ ಉತ್ಸಾಹ ಭರಿತವಾಗಿಯೇ ಮುದುವರಿಯುತ್ತಲಿದೆ.

... ಅಧಿಕೃತವಾರ್ತೆ

—ಹಿಂದೀ ಚಿತ್ರಪ್ರೇಮಿಗಳಿಗಿದೊಂದು ನಿರುತ್ಸಾಹದ ವಾರ್ತೆ

o o o

'ಚೀನಾಭಾರತ ಗಡಿವಿವಾದವನ್ನು ಒಂದು ಶಾಂತ ವಿಧಾನದ ಮೂಲಕ ಬಗೆಹರಿಸಿ ಆ ಎರಡು ರಾಷ್ಟ್ರಗಳಲ್ಲಿ ಮೈತ್ರಿ ಸೌಹಾರ್ದವನ್ನು ಸ್ಥಾಪಿಸಬಹುದ ಎನ್ನುವ ಭರವಸೆ ನನಗಿದೆ'—ಲಂಕೆಯ ಪ್ರಧಾನಿ ಸಿರಿಮಾವೋ ಉವಾಚ.

—ಹೆಂಗಸರಿಗೆ ಭರವಸೆಗಳು ಎಷ್ಟೋ ಇರುತ್ತವೆ. ನಿಜ! ಆದರೆ ಆ ಭರವಸೆಗಳು ಫಲಿತವಾಗುವುದೂ ಬಿಡುವುದೂ ಮತ್ತಾರನ್ನಾದರೂ ಹೊಂದಿ ಕೊಂಡಿರುತ್ತವೆ.

o o o

'ಕನ್ನಡಿಗನ ಸರಾಸರಿ ಆದಾಯ ಕೇವಲ ನಾಲ್ಕಾಣೆ'—ಶ್ರೀಶಿವಪ್ಪ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಆದಿತ್ಯವಾರ 19ನೆ ಎಪ್ರಿಲ್ 1964ರಂದು
ಪೂರ್ವಾಹ್ನ ಗಂಟೆ 10ಕ್ಕೆ
ಮಾನ್ಯ ಶ್ರೀ ಸಿ. ಸುಬ್ರಹ್ಮಣ್ಯಂ
(ಉಕ್ಕು, ಗಣಿಗಳು ಮತ್ತು ಭಾರ ತಾಂತ್ರಿಕೋದ್ಯಮ ಶಾಖೆಯ ಮಂತ್ರಿಗಳು)
ಇವರಿಂದ ತಮ್ಮ
ನೂತನ ಪ್ರಧಾನ ಕಾರ್ಯಾಲಯ ಭವನದ
ಉದ್ಘಾಟನೆಯು
ನೆರವೇರುವುದೆಂದು ಪ್ರಕಟಿಸಲು ಸಂತೋಷಪಡುತ್ತದೆ.

ಟಿ. ಎ. ಪೈ — ಮೆನೇಜಿಂಗ್ ಡೈರೆಕ್ಟರ್.
ಡಾ| ಟಿ. ಎಂ. ಎ. ಪೈ — ಚೆಯರ್‌ಮನ್.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮಣಿಪಾಲ.
ಉತ್ತಮ ಬ್ಯಾಂಕಿಂಗ್ ವ್ಯವಹಾರಕ್ಕಾಗಿ.

ಕಾರ್ಯಕ್ರಮ

(ಸಾಂಸ್ಕೃತಿಕ ಪ್ರದರ್ಶನ)
18ನೆ ಎಪ್ರಿಲ್ 1964ರ ರಾತ್ರಿ.
ಪ್ರಧಾನ ಕಾರ್ಯಾಲಯ ಭವನದ ಮುಂದುಗಡೆ,
ಮಣಿಪಾಲ.
ಯಕ್ಷಗಾನ ಬಯಲಾಟ
ಎರಡು ಸುಪ್ರಸಿದ್ಧ ಮೇಳ
ಮಂದರ್ತಿ ಮತ್ತು ಮಾರಣಕಟ್ಟೆ
ಗಳ ನಡುವೆ

19ನೆ ಎಪ್ರಿಲ್ 1964ರಂದು ಪೂರ್ವಾಹ್ನ ತಾಸು 10.00ಕ್ಕೆ
ಸ್ವಾಗತ ಭಾಷಣ.
ಸಭಿಕರಿಂದ ಗೌರವಾರ್ಪಣೆ
ಮಾನ್ಯ ಶ್ರೀ ಸುಬ್ರಹ್ಮಣ್ಯಂರಿಂದ ಉದ್ಘಾಟನೆ
ಶಿಲ್ಪಿಗಳಿಗೆ ಸನ್ಮಾನ
ಧನ್ಯವಾದ
ರಾಷ್ಟ್ರಗೀತೆ

—ಮಂತ್ರಿಗಳ ಸರಾಸರಿ ದೈನಿಕವೆಚ್ಚ ಕೇವಲ ಇನ್ನೂರು ರೂಪಾಯಿ

o o o

—'ಗಂಡಸರೂ ಅಡುಗೆಮಾಡುವುದನ್ನು ಕಲಿತುಕೊಳ್ಳಬೇಕು!'

—ಶ್ರೀ ಚಾಗ್ಲಾ.

—'ಗಂಡಸರೂ ಹೆರುವುದನ್ನು ಕಲಿತುಕೊಳ್ಳಬೇಕು, ಎಂದು ಇನ್ನೂ ಯಾರೂ ಹೇಳಿಲ್ಲದಿರುವುದು ಪುಣ್ಯ.

o o o

ಕಾಳಸಂತೆಯು ಪೆಡಂಭೂತವಾಗಿ ರಾಷ್ಟ್ರವನ್ನು ಪೆಡರಿಸುತ್ತದೆ.

—ಆದುದರಿಂದ ಈ ಬ್ಲ್ಯಾಕುಮಾರ್ಕೆಟ್ಟು ವ್ಯವಹಾರವನ್ನು ಶಿಘ್ರದಲ್ಲಿಯೇ ರಾಷ್ಟ್ರೀಕರಣಮಾಡಬಾರದೇಕೆ

ಶಂಪ ಐತಾಳ, ಪಾರ್ಯೋಡಿ.

ನಮ್ಮ—ನಮ್ಮವರು

(೧ನೇ ಪುಟದಿಂದ)

ಸಿದರು. ಎಲೆಯ ಮರೆಯ ಕಾಯಿಯಂತೆ ದೇಶ ಸೇವೆ ಮಾಡುತ್ತಿರುವರು.

ಹವ್ಯಕ ಸಮಾಜಕ್ಕೆ ಕುಲಪುರೋಹಿತರಾದ ಶ್ರೀಯುತರಲ್ಲಿ ಕಲ್ಲು ಕೊಟ್ಟರೂ ಚಿನ್ನ ಮಾಡಬಲ್ಲೆನೆಂಬ ಆತ್ಮ ಧೈರ್ಯವಿದೆ. ಇದರಿಂದಾಗಿಯೇ ಕಲ್ಲು ಮುಳ್ಳುಗಳಿಂದ ಕೂಡಿದ ಬಂಜರು ಭೂಮಿಯಾಗಿದ್ದ ಚೇಮುಳ್ಳು ಎಂಬುದು, ಇಂದು ಇವರ ಕೈಗಳಲ್ಲಿ ಸಿಕ್ಕಿ ನಂದನ ವನದಂತೆ ಸಿರಿಮುಳ್ಳಾಗಿ ಕಂಗೊಳಿಸುತ್ತಿದೆ. ಇದವರ ಆತ್ಮ ವಿಶ್ವಾಸಕ್ಕೆ ಜ್ವಲಂತ ಆದರ್ಶ ನಿದರ್ಶನ. ಶಾಮುಕಷ್ಟ ಮತ್ತು ಆಸಕ್ತಿಗಳಿಂದ ಏನನ್ನು ಸಾಧಿಸಬಹುದೆಂಬುದಕ್ಕೆ ಭಟ್ಟರೊಂದು ಉದಾಹರಣೆ.ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳರಿಯೆಂಬ ಮಲೆ ನಾಡಿನ ಪಟ್ಟಣದ ಜನಜೀವನದಲ್ಲಿ ಇವರ ಸ್ಥಾನ ಅಗ್ರಮಾನ್ಯ ಈ ಜನ ಪ್ರೀತಿಯ ಕುರುಹಾಗಿಯೇ ಅವರು ಗ್ರಾಮ ಪಂಚಾಯತಿನ ಸದಸ್ಯರಾಗಿದ್ದಾರೆ.

ಭಾರತ ರೈತ ಜನರ ದೇಶ. ಇಲ್ಲಿನ ಜನರಲ್ಲಿ ಇಂದಿಗೂ ನೇಕಡಾ ಎಂಬತ್ತು ಜನರು ಗ್ರಾಮೀಣರೇ ಆಗಿದ್ದಾರೆ, ಗ್ರಾಮವಾಸಿಗಳು ತಂತಮ್ಮ ಭೂಮಿಯಲ್ಲಿ ಕೈ ಕೆಸರಾಗುವಂತೆ ದುಡಿದರೆ, ದೇಶದ ಬಾಯಿಗೂ ಮೊಸರಾಗುವುದೆಂಬುದಿವರ ಅಭಿಪ್ರಾಯ. ಕೃಷಿತೋ ನಾಸ್ತಿ ದುರ್ಭಿಕ್ಷಂ- ಎಂಬುದರಲ್ಲಿ ಸಂತತವಾದ ವಿಶ್ವಾಸ ಸುಬ್ರಹ್ಮಣ್ಯ ಭಟ್ಟರದು. ವಿನಯಶಾಲಿಗಳೂ ಉದಾರ ಮನಸ್ಕರೂ ಆದ ಇವರು ಯಾವ ರಾಜಕೀಯ ಬರಡೆಮ್ಮೆಯನ್ನೂ ಕರೆಯಲು ಹೋಗದೆ ಭೂಮಿ ತಾಯಿಯ ಮೊಲೆ ಹಾಲನ್ನೇ ಉಣ್ಣುತ್ತಿದ್ದಾರೆ; ಅದರಿಂದಲೇ ಸ್ವರ್ಗೋಪಮ ಸುಖವನ್ನು ನಿತ್ಯ ಅನುಭವಿಸುತಿದ್ದಾರೆ. ಮಣ್ಣಿನ ಮಗನಂತಿರುವ ಶ್ರೀ ಭಟ್ಟರ ಭಾವನೆ- ಅಭಿಪ್ರಾಯಗಳು ಇತರರಿಗೆ ಮಾದರಿಯಾಗಿವೆ.ನಮ್ಮ ಸುಶಿಕ್ಷಿತ ಜನಾಂಗ ಇವರ ಜೀವನದಿಂದ ಸಂಪ್ರೇರಿತರಾಗಿ ಹಳ್ಳಿಗಳಲ್ಲಿ ನೆಲಸಿ ಕೃಷಿರಂಗದಲ್ಲಿ ದುಡಿಯಲು ಮುಂದೆ ಬರಬೇಕು.

Edited, Printed & Published by K. H.Shetty, at the Navayuga Press, Udipi, S. India.

ಜವಹರಲಾಲ

ಭಾರತದ ಬಗ್ಗೆ ತನ್ನ ಜೀವಮಾನದ ಬಹು ಭಾಗವನ್ನೇ ವಿನಿಯೋಗಿಸಲಿಟ್ಟು ಸವೆಸುತ್ತಿರುವ ಪ್ರಧಾನ ಮಂತ್ರಿ ಜವಾಹರಲಾಲರು ಭಾರತದ ಬಗ್ಗೆಯೇ ಅಹೋರಾತ್ರಿ ಚಿಂತಿಸುತ್ತಿರುವರು ಅದರ ಮಾರ್ಗದರ್ಶನ ಭಾರತಕ್ಕೆ ನಭೂತೋ ನ ಭವಿಷ್ಯತಿಯೆಂಬಂತೆ ಅಭ್ಯುತ್ಥಾನದ ಪಥದಲ್ಲಿ ಭಾರತವನ್ನು, ಭಾರತೀಯರನ್ನು ಮುನ್ನಡೆಸುವ ಕೆಚ್ಚಿದೆಯು ನೆಹರು ಗ್ರಾಮ ವಾಸಿಗಳ ಬಗೆಗೆ ಹೆಚ್ಚಿನ ಕಾಳಜಿ ವಹಿಸಿದ್ದಾರೆ ಕೇಳಿ ಕೇಳಿ ಹಳ್ಳಿಗಳ ಕೃಷಿ ಪ್ರಧಾನವಾದ ವಿಶಾಲ ರಾಷ್ಟ್ರ ಭಾರತ ಆದುದರಿಂದಲೇ ಗ್ರಾಮೋದ್ಧಾರವೇ ಭಾರತೋದ್ಧಾರ.

ಗ್ರಾಮಗಳಿಗೆ ಸಕಲ ರೀತಿಯ ಸೌಕರ್ಯಗಳನ್ನು ಕಲ್ಪಿಸುವ ಗುರಿ ಭಾರತ ಸರಕಾರದ್ದು. ಆಹಾರ, ವಸತಿಗಳಂತೆಯೇ ಆರೋಗ್ಯದ ಸೌಕರ್ಯಗಳೂ ಸಿಗುವಂತಾಗಬೇಕು. ಜನತೆಯ ಆರೋಗ್ಯವೇ ದೇಶದ ಆರೋಗ್ಯ. ದೇಶದ ಪಂಚವಾರ್ಷಿಕ ಯೋಜನೆಗಳಲ್ಲಿಯು ಗ್ರಾಮೀಣ ಆರೋಗ್ಯದ ಕಡೆಗೆ ಹೆಚ್ಚಿನ ಗಮನವನ್ನೂ ನೀಡಲಾಗಿದೆ ಆದರೆ, ರಾಷ್ಟ್ರನಾಯಕರ ತಲೆತಿನ್ನುವ ಒಂದು ವಿಷಯವೆಂದರೆ, ಹಳ್ಳಿಗಳಲ್ಲಿ ಡಾಕ್ಟರರು ಕೆಲಸ ನಿಲ್ಲಲು ಒಪ್ಪದಿರುವುದು ಸಾಮಾನ್ಯವಾಗಿ ಎಲ್ಲ ಡಾಕ್ಟರರೂ ನಗರ ಇಲ್ಲವೇ ನಗರ ಸಮಾನವಾದ ಪಟ್ಟಣಗಳನ್ನೇ ಆಯ್ದುಕೊಳ್ಳುತ್ತಾರೆ ಇಂತಹ ಪರಿಸ್ಥಿತಿ ನೀಗಬೇಕು ಎನ್ನುತ್ತಾರೆ ಪ್ರಧಾನಿ ನೆಹರು.

ತನ್ನ ಅನಾರೋಗ್ಯದಿಂದ ಗುಣವು ಖಿಂಂದ ಪ್ರಧಾನಿ ನೆಹರು ಮೊತ್ತಮೊದಲ ಸಾರ್ವಜನಿಕ ಸಮಾರಂಭ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಘಟಿಕೋತ್ಸವದಲ್ಲಿ ಭಾಷಣ ಮಾಡಿ ಡಾಕ್ಟರರಿಗೆ ಹಳ್ಳಿಗಳಿಗೆ ತೆರಳಬೇಕೆಂದು ಕರೆಯಿತ್ತಿದ್ದಾರೆ "ಡಾಕ್ಟರರು ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಹಳ್ಳಿಗಳಿಗೆ ಒಯ್ಯುವಂತೆ ಅವರಿಗೆ ಹೇಗೆ ತರಬೇತಿ ನೀಡಬೇಕೊ ತಿಳಿಯದಾಗಿದೆ ವೈದ್ಯಕೀಯ ಪದವೀಧರರಲ್ಲಿ ಬಹು ಜನರು ಕಾಲೇಜು ಬಿಟ್ಟೊಡನೆಯೇ ನಗರ-ಪಟ್ಟಣಗಳಲ್ಲಿಯೇ ವೃತ್ತಿ ಬಯಸುತ್ತಾರೆ ಆದರೆ, ಹಳ್ಳಿ, ಗುಡ್ಡಗಾಡು ಪ್ರದೇಶಗಳ ಅಗತ್ಯಗಳ ಆಹ್ವಾನವು ಇವರ ಸಾಹಸದ ಮನೋಭಾವವನ್ನು ಬಡಿದೆಬ್ಬಿಸಬೇಕು

ಪದವೀಧರರೆಲ್ಲ ಮೊದಲ ಎರಡು ಮೂರು ವರ್ಷ ಈ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದರೆ ಈ ಅಲಕ್ಷಿತ ಸಮಾಜದೊಡನೆ ತರುಣ ಡಾಕ್ಟರರಿಗೂ ಒಳ್ಳೆಯದೇ" ಎಂದಿದ್ದಾರೆ, ನೆಹರು. ಈ ಸೂಚನೆಯನ್ನು —ಸಲಹೆಯನ್ನು— ತರುಣ ವೈದ್ಯರು ಕಾರ್ಯ ರೂಪಕ್ಕೆ ತರಬೇಕು.

ಡಾ| ಮತ್ತು ಶ್ರೀ ಪೈ

ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿದವರು ಸಿಂಡಿಕೇಟ್ ಬ್ಯಾಂಕಿನ ಹೆಸರನ್ನು ಮರೆಯುವುದಿಲ್ಲ; ಅದರ ಪ್ರಾಮಾಣಿಕ ಮತ್ತು ಸಮರ್ಥ ಸೇವೆಗಳನ್ನು ಮೆಚ್ಚದಿರುವುದಿಲ್ಲ. ಜತೆಗೆ ಬ್ಯಾಂಕಿನ ಸರ್ವಾಂಗೀಣ ಉನ್ನತಿಗಾಗಿ ಅಹರ್ನಿಶಿ ದುಡಿಯುತ್ತಿರುವ ಚೆಯರ್‌ಮ್ಯಾನ್ ಡಾ| ಟಿ. ಮಾಧವ ಪೈ ಮತ್ತು ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ ಎ. ಪೈಯವರನ್ನು ಮರೆಯದಿರುವುದಿಲ್ಲ ಇಂದು ಈ ಬ್ಯಾಂಕು ಹಲವಾರು ಸಣ್ಣ ದೊಡ್ಡ ಬ್ಯಾಂಕುಗಳ ವ್ಯವಹಾರವನ್ನು ವಹಿಸಿ ಇನ್ನೂರು ಇನ್ನೂರೆಪ್ಪತ್ತು ಶಾಖೆಗಳ ಮೂಲಕ ದಕ್ಷಿಣ ಭಾರತದ ತುಂಬ ಬ್ಯಾಂಕಿಂಗ್ ಮನೋವೃತ್ತಿಯನ್ನು ಹುಟ್ಟಿಸುತ್ತಿರುವುದಕ್ಕೆ ಪೈದ್ವಯರ ಸಮರ್ಥ ಮಾರ್ಗದರ್ಶನವೇ ಕಾರಣ ಬ್ಯಾಂಕಿನ ಹಿಂದಿನ ಮೆನೇಜಿಂಗ್ ಡೈರೆಕ್ಟರ್ ಡಾ| ಟಿ. ಮಾಧವ ಪೈಯವರು ನಡೆದ ದಾರಿಯಲ್ಲಿಯೇ ನಡೆಯುವ ಶ್ರೀ ಪೈಯವರಿಗೆ ಅವರ ಆಶೀರ್ವಾದ ಮತ್ತು ದಿಗ್ದರ್ಶನಗಳಲ್ಲಿ ಬದ್ಧ ಕಪಚವಿದೆ

ಡಾ| ಪೈಯವರದು ಪವಾಡ ಶಕ್ತಿ. ಬರಿಯ ಗುಡ್ಡ ಮಣಿಪಾಲವನ್ನು ಹಿರಿಯ ವಿದ್ಯಾಲಯಗಳಿಂದ ಮಾರಿಯದ ಗುತ್ತವನ್ನಾಗಿ ರೂಪಿಸಿದ ಮಹಾ ಶಿಲ್ಪಿಗಳು. ಪದವಿಯಲ್ಲಿವರು ಆರೋಗ್ಯ ಚಿಕಿತ್ಸಕರು ನಡುವೆ ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರಾಗಿ ನಾಡಿನ ಆರ್ಥಿಕ ಚಿಕಿತ್ಸೆಗೆ ತೊಡಗಿದರು ಇವೀಗ ಬೌದ್ಧಿಕ ಚಿಕಿತ್ಸೆಗೆ ತೊಡಗಿ ಅದರಲ್ಲಿಯೇ ಲೀನವಾಗಿದ್ದಾರೆ. ಡಾ| ಪೈಯವರ ದೂರದರ್ಶಿತನದಿಂದಲೇ ಸಿಗ್ನಿಯೂಗಿದ್ದ ಸಿಂಡಿಕೇಟು ಜಯಂಟ್ ಆಗುವಂತಾಯಿತು. ಅವರ ಸುಮಾರ್ಗದರ್ಶನದ ಪರಿಣಾಮವಾಗಿಯೇ ಅದು ಹೆಮ್ಮರವಾಯಿತು ಕ್ರಿಯಾಶೀಲರೂ ಪರಿಶ್ರಮಿಗಳೂ ಆದ ಡಾ| ಪೈಯವರದು ಪೂರ್ವಯೋಜನಾ ಬುದ್ಧಿ ಎಂತಲೇ ಇಂದವರು ವಿಶ್ವವಿದ್ಯಾಲಯದ ಕನಸನ್ನು ಕಾಣತೊಡಗಿದ್ದಾರೆ

ಬಹಳ ಎಳೆ ಹರೆಯದಲ್ಲಿಯೇ ಸಿಂಡಿಕೇಟ್ ಬ್ಯಾಂಕಿನಲ್ಲಿ ಬಹಳ ಜವಾಬ್ದಾರಿಯ ಪದದಲ್ಲಿ ನಿಯುಕ್ತರಾದ ಶ್ರೀ ಟಿ ಎ. ಪೈಯವರು ದೂರದರ್ಶಿಗಳು; ಪರಿಶ್ರಮ ಪಟುಗಳು, ಪರಿಶ್ರಮ ಪಟು ಪ್ರಿಯರು ಮಾಡುವ ಕೆಲಸವದೆಷ್ಟು ಚಿಕ್ಕದಿರಲಿ, ದೊಡ್ಡದಿರಲಿ, ಅದನ್ನು ಪೂರ್ಣ ಮನಸ್ಸಿನಿಂದ, ಪೂರ್ಣ ಶಕ್ತಿಯಿಂದ ಪರಿಪೂರ್ಣ ರೂಪದಿಂದ ಮಾಡುವವರು ಮಾಡುವವರನ್ನು ಮೆಚ್ಚುವವರು ಶ್ರೀ ಪೈಯವರು, ಇದರಿಂದಲೇ ಶ್ರೀ ಟಿ. ಎ ಪೈಯವರು ಜನಪ್ರಿಯತೆಯನ್ನು ಗಳಿಸಿದ್ದಾರೆ; ಅದರೊಂದಿಗೆ ಬ್ಯಾಂಕಿನ ಪ್ರಗತಿಯನ್ನೂ ಸಾಧಿಸಿದ್ದಾರೆ.

ದೇಶದಲ್ಲಿಂದು ಗ್ರಾಮೀಣ ಜನತೆಯಲ್ಲಿ ಬ್ಯಾಂಕಿಂಗ್ ಚಿತ್ತವನ್ನು ಕೆರಳಿಸಬೇಕೆಂಬ ವಿಚಾರಕ್ಕೆ ಪ್ರಚೋದನೆಯಿದೆ. ಆದರೆ, ಸಿಂಡಿಕೇಟ್ ಬ್ಯಾಂಕು ಬಹಳ ವರ್ಷಗಳಿಗೆ ಮೊದಲೇ ಈ ವಿಚಾರಕ್ಕೆ ಬಂದಿದ್ದು ಕಾರ್ಯಪ್ರವೃತ್ತವಾಗಿದೆ, ಇಂದಿಗೂ ಅದು ತನ್ನ ನೀತಿಯನ್ನು ಬದಲಾಯಿಸಿಲ್ಲ, ಅದರಂತವೇ ಧ ವಿಸುತ್ತಿದೆ ಪ್ರಮುಖ ಬ್ಯಾಂಕುಗಳು ತಮ್ಮ ಆಡಳಿತ ಕಚೇರಿಯನ್ನು ಚಿಕ್ಕನಗರಗಳಿಂದ ದೊಡ್ಡ ನಗರಗಳಿಗೆ ಒಯ್ಯುತ್ತಿರುವಾಗ ಸಿಂಡಿಕೇಟ್ ಬ್ಯಾಂಕು ನಗರದಿಂದ ಕೇವಲ ಮೂರುಸಾವಿರ ಜನಸಂಖ್ಯೆಯಿರುವ ಹಳ್ಳಿ ಅಥವಾ ಚಿಕ್ಕ ಪಟ್ಟಣ ಮಣಿಪಾಲಕ್ಕೆ ಒಯ್ದಿರುವುದು ಅದರ ಈ ಚಿತ್ತಕ್ಕೆ ನಿದರ್ಶನ ಶ್ರೀ ಪೈ ದ್ವಯರು ಇದೇ ದಾರಿಯಲ್ಲಿ ಇನ್ನೂ ಮುಂದು ವರಿಯಬೇಕು, ಬ್ಯಾಂಕಿಂಗ್‌ನ ರುಚಿಯನ್ನು ಭಾರತದ ಹಳ್ಳಿ ಹಳ್ಳಿಗರ ನಾಲಿಗೆಗೆ ಮುಟ್ಟಿಸಬೇಕು.



ಶ್ರೀಮತಿ ಶಾಂಭವಿ ಬಾಲಕೃಷ್ಣ ರೈ

ಸತಿಪತಿಯರು ಏಕಗುರಿಯತ್ತ ಏಕ ಪಂಥದಲ್ಲಿ ಸಾಗಿದರೆ, ಸಂಸಾರವು ಸುಖ

(ಆನೇ ಪುಟ ನೋಡಿರಿ)

ನಾರದ ಕಥೆ

"...ಅಣ್ಣ!"

ಬರೆದವರು: ಶ್ರೀ ವೀರೇಶ್ವರ ಭಟ್ಟ, ಮುಂಡಾಜೆ.

ದಿನ ಪತ್ರಿಕೆಯೊಂದರಲ್ಲಿ ಬಂದ ವಸಂತಿಯ ಫೋಟೋ ನೋಡಿ ಬೆರಗಾದೆ. ಏನು ವಿಶೇಷ, ಎಂದು ಕುತೂಹಲದಿಂದ ಕೆಳಗೆ ಕೊಟ್ಟ ಜಾಹೀರಾತನ್ನು ಓದಿದಾಗ ಮಾತ್ರ ಎದೆ ಝಲ್ಲೆನಿಸಿತು. "ವಸಂತಿ ಎಂಬ 5 ವರ್ಷದ ಹುಡುಗಿ, ಎತ್ತರ 3½' ಎಣ್ಣೆಗಪ್ಪಾದ ಬಣ್ಣ. ನೇರಳೆ ಕಲರ್‌ನ ಗವನು ತೊಟ್ಟುಕೊಂಡವಳು. ನಿನ್ನೆ ಸಂಜೆ ನಾಲ್ಕು ಘಂಟೆಯ ನಂತರ ಕಾಣೆಯಾಗಿದ್ದಾಳೆ. ಪತ್ತೆ ಹಚ್ಚಿದವರು ತಂದು ಕೊಟ್ಟಲ್ಲಿ ಬಹುಮಾನ ಕೊಡಲಾಗುವುದು." ನನ್ನ ಹೊಟ್ಟೆಯಲ್ಲಿ ಕಸಿವಿಸಿಯಾದಂತಾಯಿತು.

12 ವರ್ಷಗಳ ಹಿಂದೆ ನನ್ನ ಊರಿನಿಂದ 5 ಮೈಲು ದೂರವಿರುವ ಹೈಸ್ಕೂಲ್‌ನಲ್ಲಿ ಓದುತ್ತಿದ್ದೆ. ಪ್ರಸನ್ನ ಕುಮಾರ್ ಅಂತ ನನ್ನ ಒಬ್ಬ ಕ್ಲಾಸ್ ಮೇಟ್‌ಗೂ ನನಗೂ ಭಾರೀ ಆತ್ಮೀಯತೆ ಬೆಳೆದು ಬಂದಿತ್ತು. ಪೇಟೆಯಲ್ಲೇ ಅವರ ಮನೆ. ದಿನಾ ಸಂಜೆ ಶಾಲೆ ಬಿಟ್ಟೊಡನೆ ತನ್ನ ಮನೆಗೆ ಕಾಫಿಗೆ ಕರೆಯುತ್ತಿದ್ದ. ನನ್ನನ್ನು ನಾನು ಎಷ್ಟು ಬೇಡವೆಂದರೂ ಸಾಮ, ದಾನ, ಭೇದ, ದಂಡ; ಈ ನಾಲ್ಕು ಉಪಾಯಗಳಲ್ಲಿ ಒಂದನ್ನು ಪ್ರಯೋಗಿಸಿ ಕರೆದುಕೊಂಡೇ ಹೋಗುತ್ತಿದ್ದ! ಅದೆಂತು ನಮ್ಮೊಳಗೆ ಆ ರೀತಿಯ ಸ್ನೇಹ ಬಾಂಧವ್ಯ ಬೆಳೆದು ಬಂದಿತ್ತೋ ಕಾಣೆ; ಅಂತೂ ನನ್ನನ್ನು ಒಡಹುಟ್ಟಿದ ಸಹೋದರನಿಗಿಂತಲೂ ಹೆಚ್ಚಾಗಿ ಕಾಣುತ್ತಿದ್ದ. ನನಗೂ ಪ್ರಸನ್ನ ಕುಮಾರ್ ಅಂತ ಅಂದರೆ ಪ್ರಾಣ! ಅವನ ತಂದೆ-ತಾಯಿಗಳೋ, ಅವನಿಗಿಂತಲೂ ಮಿಗಿಲು! ನಾನು ಶಾಲೆಗೆ ಹೋಗುವುದಕ್ಕಾಗಿ, ಅಲ್ಲಿಯೇ ನಿಲ್ಲಬೇಕೆಂಬುದು ಅವರಿಚ್ಛೆಯಾಗಿತ್ತು. ಆದರೆ ನನಗೆ ಮಾತ್ರ ಇದು ಅಸಾಧ್ಯವಾಗಿತ್ತು.

ಜಯಶ್ರೀ ಮತ್ತು ವಸಂತಿ, ಪ್ರಸನ್ನ ಕುಮಾರ್‌ನ ತಂಗಿಯಂದಿರು. ಅವರಿಗೂ ಹಾಗೆಯೇ; ಒಂದು ದಿನ ನನ್ನ ಮುಖ ನೋಡದಿದ್ದರೆ ನಿದ್ದೆ ಹತ್ತುತ್ತಿರಲಿಲ್ಲ. ಚಿಕ್ಕವಳಾದ ವಸಂತಿಯಂತೂ, ನಾನು ಅಲ್ಲಿಗೆ ಹೋದೊಡನೆ ತನ್ನ ಊಟ ತಿಂಡಿಗಳ ಗಮನವೂ ಇಲ್ಲದೆ ನನ್ನ ತೊಡೆಯ ಮೇಲೆಯೇ ಹಟಕೊಚ್ಚುತ್ತಾ ಕುಳಿತು ಬಿಡುತ್ತಿದ್ದಳು. ನನಗೂ ಒಡಹುಟ್ಟಿದ ಸಹೋದರಿಯರಿರಲಿಲ್ಲವಾದುದರಿಂದ ಅವಳನ್ನೇ ನನ್ನ ತಂಗಿಯೆಂದು ಭಾವಿಸಿದ್ದೆ.

ಒಂದು ದಿನ ನನಗೇನೋ ಸೌಖ್ಯವಿರಲಿಲ್ಲ. ಹಾಗೆಯೇ ಲೀವ್ ಮಾಡಿ ಮನೆಯಲ್ಲೇ ಕುಳಿತುಬಿಟ್ಟಿದ್ದೆ. ಆ ದಿನ ವಸಂತಿ ಊಟವನ್ನೇ ಮಾಡಲಿಲ್ಲವಂತೆ. ಸಂಜೆಗೂ ನಾನು ಹೋಗದಿದ್ದುದನ್ನು ಕಂಡು ಅವಳದು ದೊಡ್ಡ ರಾದ್ಧಾಂತವೇ ಆಯಿತು "ಅಣ್ಣ ಬಾರದಿದ್ದರೆ ನಾನೂ ಊಟಾನೇ ಮಾಡೋಲ್ಲ." ಅಂತ ಗಟ್ಟಿಯಾಗಿ ಕುಳಿತು ಬಿಟ್ಟಿದ್ದಳು—ಸಾಯಂಕಾಲಕ್ಕಾಗುವಾಗ ಪ್ರಸನ್ನನಿಗೂ ಏಕೋ ತುಂಬ ಬೇಜಾರಾಯಿತು. ಅವನಿಗೂ ನನ್ನನ್ನು ಅಂದು ಕ್ಲಾಸಿನಲ್ಲಿ ನೋಡದೆ ಮಧ್ಯಾಹ್ನದ ಊಟ ರುಚಿಸಿರಲಿಲ್ಲ, ಸರಿ, ಸಂಜೆ ಶಾಲೆ ಬಿಟ್ಟದ್ದೇ ತಡ, ವಸಂತಿಯನ್ನು ಕೂಡಿಕೊಂಡು ಪ್ರಸನ್ನ, ನನ್ನ ಮನೆಗೇ ಬಂದುಬಿಟ್ಟ! ನನಗೆ ಬಹಳ ಆಶ್ಚರ್ಯವಾಯಿತು ಇತ್ತ ನನ್ನ ಅವಸ್ಥೆಯೂ ಅದೇ ರೀತಿಯಾಗಿತ್ತು! ಕೂತಲ್ಲಿ ನಿಂತಲ್ಲಿ ಬೇಸರ! ಊಟಕ್ಕೆ ಕುಳಿತಾಗ ಅಲ್ಲೂ ಬೇಜಾರು ಬಂದು ಹಾಗೇ ಎದ್ದು ಬಿಟ್ಟಿದ್ದೆ! ನನ್ನ ತಂಗಿ, ಪ್ರೀತಿಯ ವಸಂತಿಯನ್ನು ಕಾಣದ ಅಜ್ಞಾತ ವ್ಯಥೆಯೊಂದು ನನ್ನ ಹೃದಯವನ್ನು ಬಾರಿ ಬಾರಿಗೂ ಇರಿಯುತ್ತಲೇ ಇತ್ತು. ವಸಂತಿ ಮತ್ತು ಪ್ರಸನ್ನರು ಬಂದುದು ನನಗೂ ಅತ್ಯಂತ ಆನಂದವನ್ನುಂಟುಮಾಡಿತ್ತು. ಅವರು ಬಂದ ನಂತರವೇ ನನ್ನ ವ್ಯಥೆಯೆಲ್ಲ ಕರಗಿ ಚುರುಕಾಗಿ ಬಿಟ್ಟೆ!

ಈಗ ನಾನು ಶಾಲೆ ಬಿಟ್ಟು ಮನೆಯಲ್ಲೇ ಇದ್ದೆ. ಹೀಗಾಗಿ ಯಾವಾಗಲೂ ಪ್ರಸನ್ನನ ಮನೆಗೆ ಹೋಗಲಾಗುತ್ತಿರಲಿಲ್ಲ. ಆದರೂ 2—3 ದಿನಗಳಿಗೊಮ್ಮೆ ಅತ್ತ ಹೋಗದೆ, ನನಗೆ ನೆಮ್ಮದಿಯುಂಟಾಗುತ್ತಿರಲಿಲ್ಲ. ಇತ್ತೀಚೆಗೆ ನಾನು ಅತ್ತ ಹೋಗದೆ 1—3 ತಿಂಗಳುಗಳೇ ಕಳೆದು ಹೋಗಿದ್ದವು. ಅಲ್ಲಿಯವರ ಸಂಪರ್ಕವನ್ನೇ ಕಳೆದುಕೊಂಡಂತಾಗಿತ್ತು ನನಗೆ. ಪತ್ರಿಕೆಯಲ್ಲಿದ್ದ ಜಾಹೀರಾತನ್ನು ಓದಿದ ನನಗೆ ಒಂದು ಕ್ಷಣ ತಲೆ ತಿರುಗಿದಂತಾಯಿತು. ನಿಶ್ಚೇಷ್ಟಿತನಾಗಿ ಕುಳಿತು ಬಿಟ್ಟೆ. ಪತ್ರಿಕೆ ಕೈಯಲ್ಲೇ ಉಳಿಯಿತು. ನನ್ನ ತಲೆ ಮಾತ್ರ ವಿಚಾರಗಳ ಸುಳಿಯಲ್ಲಿ ಸಿಕ್ಕಿ ಕೊಂಡಿತು. "ನನ್ನ ವಸಂತಿ ಎಲ್ಲಿಗೆ ಹೋದಳು? ಏನಾಯಿತವಳಿಗೆ? ಒಬ್ಬಳೇ ಎಲ್ಲಿಗಾದರೂ ಹೋಗಲು ಅವಳಿಗೆ ಧೈರ್ಯ ಸಾಲದು! ಹಾಗಿದ್ದರೆ ವಸಂತಿ ಎಲ್ಲಿ?... ಎಲ್ಲಿ? ಆಡುವುದಕ್ಕಾಗಿ ಕಾಲುವೆ ಹೊಳೆಗಳತ್ತ ಹೋದವಳಿಗೆ ಏನಾದರೂ..., ಛೆ, ಅದೂ ಅಸಾಧ್ಯ. ಒಬ್ಬೊಬ್ಬಳೇ ಹಾಗೆಲ್ಲಾ ಹೋಗುವ ಹುಡುಗಿಯೇ. ಅಲ್ಲ ಹಾಗಾದರೆ ವಸಂತಿಯೇನಾದಳು?" ಇವೇ ಮುಂತಾದ ಯೋಚನೆಗಳು ನನ್ನ ತಲೆಯನ್ನು ತಿನ್ನತೊಡಗಿದವು. ಆದರೆ ಯಾವ ಯೋಚನೆಯೂ ಒಂದು ಕೊನೆಯನ್ನು ಮುಟ್ಟಲು ಅಸಾಧ್ಯವಾಯಿತು. ಹಾಗೆಯೇ ಎಷ್ಟು ಹೊತ್ತು ಕುಳಿತಿದ್ದೇನೋ ನನಗೆ ತಿಳಿಯದು ಪೇಪರ್ ಇನ್ನೂ ನನ್ನ ಕೈಯಲ್ಲೇ ಇತ್ತು! "ಢಣ್ ..ಢಣ್.." ಎಂದು ಗಂಟೆಹೊಡೆದಾಗ ಮಾತ್ರ ಯೋಚನಾ ಸಾಗರದಿಂದ ದಡ ಸೇರಿ ಹೊತ್ತು ನೋಡಿದೆ. ಗಂಟೆ 5 ಆಗಿತ್ತು. ಆಗಲೇ ನೆನಪಾಯಿತು, "ಹೋ, ಬೆಳಗ್ಗೆ 9 ಗಂಟೆಗೆ ಪೇಪರ್ ಓದಲು ಕುಳಿತಿದ್ದೆನೆಂದು. ಹಸಿವೆಗೆ ಅಂದು ನನ್ನ ಹೊಟ್ಟೆಯ ನೆನಪೇ ಆಗಿರಲಿಲ್ಲವೇನೋ! ಅಂತೂ ಒಂದು ಶರ್ಟ ಸಿಕ್ಕಿಸಿ ಪೇಟೆಯಲ್ಲಿಯೇ ಬಿಸಾಡಿ ಹಾಗೇ ಹೊರಟು ಬಿಟ್ಟೆ! ಎಲ್ಲಿಗೋ ನನಗೇ ಗೊತ್ತಿರಲಿಲ್ಲ

ಭಾವ ಸಮಾಧಿಯಿಂದ ಎಚ್ಚೆತ್ತ ನಾನು ಕಣ್ಣೆತ್ತಿ ನೋಡಿದಾಗ ಎದುರಿಗೆ ಕಂಡಿತು ಪ್ರಸನ್ನ ಕುಮಾರ್‌ನ ಮನೆ. ನನಗೆ ಬಹಳ ಆಶ್ಚರ್ಯವಾಯಿತು. ಯಾವುದೋ ವಿಶಿಷ್ಟ ಶಕ್ತಿಯೊಂದು ನನ್ನನ್ನಿಲ್ಲಿಗೆ ಎಳೆದು ತಂದಿತ್ತು. ನೇರವಾಗಿ ಮನೆಯೊಳಗೆ ಹೋದೆ. ಪ್ರಸನ್ನ ಕುರ್ಚಿಯ ಮೇಲೆ ಗದ್ದಕ್ಕೆ ಕೈಯೂರಿ ಕುಳಿತಿದ್ದ. "ಪ್ರಸನ್ನ......"ಎಂದು ಕರೆದೆ. ಆದರೆ, ನಂತರ ನನ್ನ ಬಾಯಿಯಿಂದ ಶಬ್ದಗಳೇ ಹೊರಡಲಿಲ್ಲ ನನ್ನ ಕರೆಯನ್ನು ಕೇಳಿದ ಪ್ರಸನ್ನ, ಭಾರವಾದ ತನ್ನ ತಲೆಯನ್ನೆತ್ತಿ ನನ್ನ ಮುಖವನ್ನು ಒಂದು ಕ್ಷಣ ದಿಟ್ಟಿಸಿದ. ಮರುಕ್ಷಣವೇ ಭರದಿಂದ ಎದ್ದು ಬಂದು ಗೋಳೋ ಎಂದು ನನ್ನನ್ನಪ್ಪಿಕೊಂಡು ಅತ್ತು ಬಿಟ್ಟ! ಅವನನ್ನು ಹೇಗೆ ಸಮಾಧಾನ ಪಡಿಸಬೇಕೋ ನನಗೇ ತಿಳಿಯಲಿಲ್ಲ. ಅವನ ದುಃಖದ ಇಮ್ಮಡಿ ವೇದನೆ, ನನ್ನ ಹೃದಯವನ್ನು ಇರಿಯುತ್ತಲಿತ್ತು! ಅಂತೂ ಬಹಳ ಹೊತ್ತಿನ ನಂತರ ಬಹಳ ಕಷ್ಟಪಟ್ಟು ಅವನನ್ನು ಸಮಾಧಾನ ಪಡಿಸಬೇಕಾದರೆ ನನಗೆ ಸಾಕು ಬೇಕಾಗಿತ್ತು

ಈ ಘಟನೆ ನಡೆದು 8 ವರ್ಷಗಳು ಸಂದಿದ್ದುವು—ಬೆಂಗಳೂರಿನಲ್ಲಿ ನನ್ನ ಸ್ನೇಹಿತರ ಒಬ್ಬ ಡಾಕ್ಟರರಾಗಿದ್ದರು ನಾನು ಅಲ್ಲಿಯೇ ಕಂಪೌಂಡರ್ ಕೆಲಸ ಮಾಡಿಕೊಂಡಿದ್ದೆ. ಪ್ರಸನ್ನ ಕುಮಾರ್‌ನ ಪತ್ರಗಳು 8 ದಿನಕ್ಕೊಂದು ಬರುತ್ತಲೇ ಇದ್ದುವು. ಆದರೆ ಮೊದ ಮೊದಲು ಅವನ ಪತ್ರಗಳಲ್ಲಿರುತ್ತಿದ್ದ ವಸಂತಿಯ ವಿಚಾರ ಕ್ರಮೇಣ ಕಮ್ಮಿಯಾಗುತ್ತಾ ಬರುತ್ತಿತ್ತು. ಅವನ ಮನೆಯವರೆಲ್ಲರೂ ಈ ದುಃಖವನ್ನು ಮರೆಯುತ್ತ ಬಂದಿದ್ದರು. ಆದರೆ ನನ್ನ ಹೃದಯದಲ್ಲಿ ವಸಂತಿಯ ಬಗ್ಗೆ ಇನ್ನೂ ವಿಚಾರ ತರಂಗಗಳು ಏಳುತ್ತಲೇ ಇದ್ದುವು—

2 ವರ್ಷಗಳ ನಂತರ ಮಾವಯ್ಯನವರಲ್ಲಿ ಕಂಪೌಂಡರ್ ಆಗಿದ್ದು ಸ್ವಲ್ಪ ಅನುಭವ ಪಡೆದ ಬಳಿಕ ಕಂಪೌಂಡರ್ ಟ್ರೈನಿಂಗ್‌ಗಾಗಿ ಮೈಸೂರಿಗೆ ಹೋದೆ. ಒಂದು ವರ್ಷ ಕಳೆಯಬೇಕಾಗಿತ್ತು ಮೈಸೂರಿನಲ್ಲಿ. ನನಗೆ ಯಾವಾಗಲೂ "ಪ್ರಸನ್ನ ಈಗ ನನ್ನೊಂದಿಗಿರುತ್ತಿದ್ದರೆ...." ಎಂದೆನಿಸುತ್ತಿತ್ತು. ಕಾರಣ ಇಲ್ಲಿ ನನಗೆ ತಕ್ಕ ಸಂಗಾತಿಗಳೇ ದೊರೆಯಲಿಲ್ಲ—ಇದ್ದವರೆಲ್ಲರೂ ಒರಟರಂತೆ ವರ್ತಿಸುತ್ತಿದ್ದರು. ಆಗಲೇ ನನಗೆ ಪದ್ಮಾವತಿಯು

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ಕೆಂಪು ಚೀನಕ್ಕೆ

ವಿದೇಶಗಳಿಂದ ನಿರಾಶೆಯ ಬುತ್ತಿ

—ಶ್ರೀ ಶಿವಶಂಕರ, ಮದ್ರಾಸು.

ಕಮ್ಯೂನಿಸ್ಟ್ ಚೈನಾದ ಪ್ರಧಾನಿ ಚೌ-ಎನ್-ಲ್ಯಾ ಮತ್ತು ಪರರಾಷ್ಟ್ರ ಇಲಾಖೆಯ ಮಂತ್ರಿ ಚೆನ್‌ಯಿಯವರು ಆಫ್ರಿಕಾದ ದೇಶ, ಪಾಕಿಸ್ಥಾನ, ಸಿಲೋನ್ ಹಾಗೂ ಬರ್ಮಾ ಪ್ರಯಾಣವನ್ನು ಮುಗಿಸಿಕೊಂಡು ಚೈನಾದ ರಾಜಧಾನಿಗೆ ನೇರ ಬರುವ ಬದಲು ದೂರದ ಹಳ್ಳಿಯಲ್ಲಿ ತಂಗಿದ್ದು, ನಂತರ ರಾಜಧಾನಿಗೆ ಮರಳಿರುವುದರಿಂದ ಜನೇಕರಿಗೆ ಅನೇಕ ರೀತಿಯಲ್ಲಿ ಗುಣಿಸಲೂ ಕೂಡಿಸಲೂ ಭಾಗಿಸಲೂ ಕಳೆಯಲೂ ಸಂದರ್ಭ ಸಿಕ್ಕಿರುತ್ತದೆ. ಆಫ್ರಿಕಾದಲ್ಲಿ ಕಮ್ಯೂನಿಸ್ಟ್ ಮಂತ್ರಿಗಳಿಗೆ ಸಿಕ್ಕಿರುವ ಸ್ವಾಗತ ಕುರಿತು ಆದಕ್ಕಿಂತಲೂ ಅವರ ಬೇಳೆ ಅಲ್ಲಿ ಬೆಂದಿದೆಯೋ ಎಂಬುದನ್ನು ಈ ಸಂಚಿಕೆಯಲ್ಲಿ ನೋಡುವ!

ಸಾಧಾರಣ ಎರಡು ತಿಂಗಳ ಕಾಲ ಅವರು ಪರ ರಾಷ್ಟ್ರಗಳಲ್ಲಿ ಪ್ರಯಾಣ ಮಾಡಿದ್ದರು. ಈ ರೀತಿ ದೀರ್ಘಕಾಲ ಅವರೆಂದೂ ಚೈನಾ ಬಿಟ್ಟು ಹೋಗಿದ್ದುದೆಂದಿಲ್ಲ—ಇದುವೇ ಪ್ರಥಮ ಬಾರಿ. ಈ ರೀತಿ ಪರದೇಶಗಳಲ್ಲಿ ಸುತ್ತಲು ಆ ದೇಶಗಳ ಗೆಳೆತನವನ್ನು ಗಿಟ್ಟಿಸಿಕೊಳ್ಳುವುದೆ ಇದೆನ್ನುವುದು ಸ್ವಾಭಾವಿಕ ಕಾರಣವಿದೆ. ಅದರೊಂದಿಗೆ ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಅವರು ಪರರಾಷ್ಟ್ರ ಪ್ರಯಾಣಕ್ಕೆ ಪ್ರಾರಂಭಿಸಿದ್ದರು. ಆ ರಾಷ್ಟ್ರಗಳ ನಾಡಿಬಡಿತದ ಪರೀಕ್ಷೆಯೂ ಆ ಉದ್ದೇಶಗಳಲ್ಲಿ ಒಂದು. ಇತ್ತೀಚೆಗೆ ಸ್ವತಂತ್ರವಾಗಿರುವ ಸಣ್ಣ ಪುಟ್ಟ ರಾಷ್ಟ್ರ, ಅರಬನಾಡು ಹಾಗೂ ಭಾರತದ ನೆರೆಕರೆಯಲ್ಲಿರುವ ಚಿಕ್ಕ ಪುಟ್ಟ ದೇಶಗಳ ಬಲಾಬಲಗಳನ್ನು ಸ್ವತಃ ತಿಳಿದುಕೊಳ್ಳುವುದೇ ಆ ಪ್ರಯಾಣದ ಉದ್ದೇಶವಾಗಿತ್ತು-ಮಾಗಿದ ಮಂದ್ವಾದ ಮಾವಿನ ಹಣ್ಣನ್ನು ತಿನ್ನುವ ಮುಂಚೆ ಮುದ್ದಿಡುವಂತೆ.

ಚೌ-ಎನ್—ಲೈ ಹೊರನಾಡುಗಳಿಗೆ ಹೊರಡುವ ಮುಂಚೆಯೇ ಅನೇಕ ಹಂಚಿಕೆಗಳನ್ನು ಹೂಡಿ ಕೆಲಸಗಳನ್ನು ಮಾಡಿರುವರು ಅವರು ಅನ್ಯ ರಾಷ್ಟ್ರಗಳ- ಅದರಲ್ಲೂ ಮುಖ್ಯವಾಗಿ ಆಫ್ರಿಕಾದ ರಾಷ್ಟ್ರಗಳ- ಅಮಾತ್ಯರನ್ನು, ಮುಖಂಡರನ್ನು, ಪ್ರಧಾನಿಗಳನ್ನು, ಪತ್ರಿಕಾ ಪ್ರತಿನಿಧಿಗಳನ್ನು ಚೈನಾಕ್ಕೆ ಕರೆತರಿಸಿ ಸ್ವಾಗತಿಸಿ ಸತ್ಕರಿಸಿದ್ದರು. ಉಂಡಮನೆಗೆ ಕಮ್ಯೂನಿಸ್ಟ್ ಚೈನಾ, ಇಸ್ಲಾಮಿ ಪಾಕಿಸ್ಥಾನಗಳಂತೆ ಎರಡು ಬಗೆಯಲು ಎಲ್ಲರಿಂದಲೂ ಸಾಧ್ಯವೇನು? ಅಲ್ಲದೆ, ಅದಕ್ಕೆ ಪ್ರತಿಯಾಗಿಯಾದರೂ ಅವರು ಏನನ್ನಾದರೂ ಕೊಡಬೇಕಲ್ಲವೆ? ಜಾಹೀರಾತು ಪಡೆಯುವ ವಿಧಾನ, ಮೀನಿಗೆ ಗಾಳ ಹಾಕುವ ಚಮತ್ಕಾರದಲ್ಲಿ ಚೌ—ಎನ್-ಲೈ ಚೆನ್ನಾಗಿ ಹಾಗೂ ಲಾಯಕ್ಕಾಗಿ ಪಳಗಿರುವರು

ಆಫ್ರಿಕಾ ಬಹುದೊಡ್ಡ ಖಂಡವಾದರೂ ಅಲ್ಲಿ ಅನೇಕಾನೇಕ ಚಿಕ್ಕ ಪುಟ್ಟ ದೇಶಗಳಿವೆ. ಅವುಗಳಲ್ಲಿ ಕೆಲವು ಸ್ವಾತಂತ್ರ್ಯ ಜ್ಯೋತಿಯನ್ನು ಕಂಡಿವೆಯಾದಲ್ಲಿ, ಕೆಲವು ಇದೀಗ ಕಾಣುವ ಸ್ಥಿತಿಯಲ್ಲಿವೆ. ಅದರಲ್ಲಿ ಅತಿ ಮುಖ್ಯ ವಿಷಯವೆಂದರೆ ಆ ರಾಷ್ಟ್ರಗಳು ಕಮ್ಯೂನಿಸ್ಟರನ್ನು ಚೈನಾದ ನ್ಯಾಯಪೂರ್ಣ ಆಡಳಿತ ಯಂತ್ರವೆಂದು ಒಪ್ಪಿಕೊಂಡಿರುವದಿಲ್ಲ. ಅಲ್ಲದೆ, ಈಗಲೂ ಅನೇಕರು ಚಿಯಾಂಗ್ ಕೈ-ಶೇಖರನ್ನು ಚೈನಾದ ನೈಜ ಸರಕಾರವೆಂದು ಮನ್ನಿಸುತ್ತಿರುವರು. ಇನ್ನೂ ಕೆಲ ಚತುರ ರಾಷ್ಟ್ರಗಳು ವಾದ ಭೂಮಿಯಲ್ಲಿ ನಾಲಗೆಯನ್ನು ನೃತ್ಯಕ್ಕೆ ಬಿಡದೆ, ತುಟಿ ಎರಡೂ ಮಾಡದೆ, ಅತ್ತ ಹುಲಿಯ ಬಾಯಿಗೂ ಸಿಗದೆ ಇತ್ತ ಹೊಳೆಗೂ ಹಾರದೆ ಹುಶ್ಯಾರಾಗಿದ್ದಾರೆ. ಅವರು ಸುಮ್ಮಗಿದ್ದಾರೆ. ಚೈನಾವನ್ನು ಕಮ್ಯೂನಿಸ್ಟರು ಆಳಿದರೆ ಅವರಿಗೇನು, ಚಿಯಾಂಗ್ ಕೈ-ಶೇಖರ ಪಕ್ಷ ಆಳಿದರೆ ಅವರಿಗೇನು?—ತಮ್ಮ ರಾಷ್ಟ್ರ ಪ್ರಬಲವಾಗಿ, ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗಬೇಕೆಂಬುದೇ ಅವರ ಮಹದಾಶಯ. ಅದರ ಅದಕ್ಕಾಗಿ ಅವರು ಅಕ್ಕಪಕ್ಕದವರ ಕೋಪಕ್ಕೆ ಗುರಿಯಾಗಲು ಸಿದ್ಧರಿಲ್ಲ. ಆದುದರಿಂದ ಬಹಳ ಚಮತ್ಕಾರವಾಗಿ ತಪ್ಪಿಸಿಕೊಳ್ಳುತ್ತಿದ್ದಾರೆ. ಚೈನೀ ಕಮ್ಯೂನಿಸ್ಟರ ಮನಸ್ಸಿನಲ್ಲಿ ಅಂತಹ ರಾಷ್ಟ್ರಗಳು ಪಹಿಯಾಗಿದ್ದು ಅಂಕೆ ಬರೆಯದಿರುವ ಚೆಕ್ಕುಗಳಿವೆ. ಅಂಕೆ ಬರೆದು ಸಂಬಂಧಪಟ್ಟ ಬ್ಯಾಂಕಿನಲ್ಲಿ ಕೊಟ್ಟು ಹಣವನ್ನು ಪಡೆದುಕೊಳ್ಳಬೇಕೆಂದು ಚೌ-ಎನ್-ಲ್ಯಾ ಆತ್ತಪಾದ ಬೆಳೆಸಿದರು. ಅವುಗಳನ್ನು ತಮ್ಮ ಕೆಂಪು ಬುಟ್ಟಿಯಲ್ಲಿ ಹಾಕಿಕೊಳ್ಳುವದು ಸುಲಭದ ಕಾರ್ಯ ಎಂದೇ ಅವರು ಭಾವಿಸಿಕೊಂಡಿದ್ದರು.

ಚೈನಾ ಹೊಸ ಸಂಖ್ಯೆ ಹಾಗೂ ವಿಸ್ತೀರ್ಣದಲ್ಲಿ ದೊಡ್ಡ ದೇಶವಿದೆ. ಅಂತಹ ದೇಶದ ಪ್ರಧಾನಿ ಇದ್ದಕ್ಕಿದ್ದಂತೆ ಹೋಗಿ ಪುಡಿರಾಷ್ಟ್ರಗಳ ಬಾಗಿಲಲ್ಲಿ ನಿಲ್ಲುವದು ಸರಿಯೇ! ಅದಕ್ಕಾಗಿ ಅವರು ಅದಾಗಲೇ ಏರ್ಪಾಡು ಮಾಡಿಕೊಂಡಿದ್ದರೂ ಕೂಡಾ ಮೊದಲ ಪ್ರಶಂಸಾ ಪತ್ರ ಸುಲಭವಾಗಿ ಉತ್ತಮವಾಗಿ, ಸಿಕ್ಕಿದಲ್ಲಿ ನಂತರ ಪ್ರೇಗಸಿಗೆ ಹಿಂದೆ ಬಾಲ ತಾನಾಗಿಯೇ ಬರುವಂತೆ ಇತರ ರಾಷ್ಟ್ರಗಳಲ್ಲಿ ಆದರ-ಸ್ವಾಗತ ಪ್ರಶಂಸೆ ಪಗೈರೆ ಬೇಡ—ಬೇಡವೆಂದರೂ ಬರುತ್ತಿರುತ್ತವೆನ್ನುವದು ಅವರಿಗೆ ಚೆನ್ನಾಗಿ ಗೊತ್ತು. ಪ್ರಶಂಸಾ ಪತ್ರ ಹಾಗೂ ಸ್ವಾಗತ ದೊಡ್ಡ ರಾಷ್ಟ್ರದಿಂದ ಹಾಗೂ ಗಣ್ಯ ವ್ಯಕ್ತಿಗಳಿಂದ ಸಿಕ್ಕಿದಲ್ಲಿ ನಂತರ ಎಲ್ಲರೂ ತಾವಾಗಿಯೇ ಕರೆದುಕೊಡುತ್ತಾರೆ ಈ ರೀತಿ ಲೋಕ—ವ್ಯವಹಾರದಲ್ಲಿ ಅನುಭವವಿದ್ದ ಚೌ ಎನ್-ಲ್ಯಾ ಆದಕ್ಕಾಗಿ ಅರಬರಾಷ್ಟ್ರವನ್ನು ಆರಿಸಿಕೊಂಡರು. ಅರಬರಾಷ್ಟ್ರಗಳ ಅಧ್ಯಕ್ಷನಾಸ್ಸೇರರ ಕೀರ್ತಿಯ ಲಾಭ ಪಡೆಯಲೆಂದೇ ಚೌ ಎನ್—ಲ್ಯಾ ಮೊದಲು ಅಲ್ಲಿಗೆ ಹೋದರು. ನಿರ್ಧರಿಸಿದಂತೆ ನಾಸ್ಸೇರ್ ಸಿಟಿದು ನಿಂತಿದ್ದರಿಂದ ಜಗತ್ತಿನ ದೃಷ್ಟಿ ಅತ್ತ ತಿರುಗಿದೆ. ನಾಸ್ಸೇರ್ ಕಮ್ಯೂನಿಸಂಪ್ರಿಯರಿರುವದರಿಂದ ಕಮ್ಯೂನಿಸ್ಟ್ ಚೈನಾಕ್ಕೆ ಅಲ್ಲಿ ಸ್ವಾಗತ ಸಿಗುವದು ಬಹಳ ಸುಲಭ. ಕಮ್ಯೂನಿಸಂ ನಂಟುತನದಿಂದ ಸ್ವಾಗತ ಗಿಟ್ಟಿಸಿ ಕೊಳ್ಳುವದು ಕಷ್ಟವೇನೂ ಅಲ್ಲ. ಆ ಸ್ವಾಗತದ ಪ್ರಭಾವ ಪವನ ಬಹಳ ದೂರದ ವರೆಗೂ ಬೀಸುತ್ತದೆ. ನಾಸ್ಸೇರ್ ನುಡಿದರೆ ನೆರೆಯ ಚಿಕ್ಕಪುಟ್ಟ ದೇಶಗಳು ಸೈಗುಟ್ಟುವದರಿಂದ ತನ್ನ ಕಾರ್ಯ ಹೂವೆತ್ತಿದಂತೆ ಸುಲಭವಾಗುತ್ತದೆಂಬುದು ಚೌ ಎನ್ - ಲ್ಯಾಗೆ ಚೆನ್ನಾಗಿ ಗೊತ್ತು. ಆದುದರಿಂದಲೇ ಚೌ ಎನ್-ಲ್ಯಾ ಅಲ್ಲಿ ಕಾಲಿಟ್ಟರು. ನಾಸ್ಸೇರ್ ಒಂದು ಕಾಲಿಗೆ ಕಮ್ಯೂನಿಸವಿನ ಜೆರ ಹಾಕಿಕೊಂಡಿದ್ದಲ್ಲಿ ಇನ್ನೊಂದು ಕಾಲಿಗೆ ಇಸ್ಲಾಮಿ ಮತೀಯ ಮೆಟ್ಟುಹಾಕಿಕೊಂಡಿದ್ದಾರೆ. ಅವರು ಅಕ್ಕಪಕ್ಕದ ಮುಸ್ಲಿಂ ದೇಶಗಳನ್ನು ನುಂಗಿ ವಿಶಾಲ ಅರಬರಾಷ್ಟ್ರವನ್ನು ಕಟ್ಟುವ ಹಂಬಲದಲ್ಲಿದ್ದಾರೆ. ಪಾಕಿಸ್ಥಾನದ ಗೆಳೆತನ ಅವರಿಗೆ ಅಗತ್ಯವಾಗಿ ಬೇಕಾದದ್ದೇ ಇದೆ. ಪಾಕಿಸ್ಥಾನಕ್ಕೂ ಚೈನಾಕ್ಕೂ ಗಳಸ್ಯ ಕಂಠಸ್ಯವಾಗಿರುವಾಗ ನಸ್ಸೇರ್ ತಾನೂ ಸೇರದೆ ಇರುತ್ತಾರೆಯೇ? ಆದರೂ ಇದ್ದಕ್ಕಿದ್ದಂತೆ ಭಾರತಕ್ಕೆದುರಾಗಿ ನಿಲ್ಲಲು ಅವರಿಗೆ ಇಷ್ಟವಿರುವದಿಲ್ಲ. ಭಾರತದ ಪ್ರಚಲಿತ ಪ್ರಧಾನಿ ಜವಾಹರಲಾಲ ನೆಹರೂ ಎಂದರೆ ನಾಸ್ಸೇರರಿಗೆ ಹೆಚ್ಚಿನ ಸ್ನೇಹಿಗ. ಏನಿದ್ದರೂ ಪ್ರಖ್ಯಾತಿಯ ಕಣದಲ್ಲಿ ಇಳಿದಿರುವಾಗ ಅವರು ಆಟ ಆಡಲೇಬೇಕಾಗಿಲ್ಲವೇ? ಇವೆಲ್ಲವನ್ನೂ ಯೋಚಿಸಿ ನಾಸ್ಸೇರರು ಚೌ ಎನ್—ಲ್ಯಾಯನ್ನು ಚೆನ್ನಾಗಿ ಸತ್ಕರಿಸಿದಾದರೂ 'ಹೋಗಿ ಬಾಮ್ಮ' ಎಂದು ಕಳುಹಿಸಿಕೊಟ್ಟರು.

ಒಳಗೊಳಗೆ ಆದೇನು ನಡೆದಿದ್ದರೂ ಹೊರಗಿನ ದೃಷ್ಟಿಯಲ್ಲಿ ಚೌ ಎನ್-ಲೈಗೆ ಚೆನ್ನಾಗಿ ಸ್ವಾಗತ ಸಿಕ್ಕಿತೆಂದಾಯಿತು. ಅದನ್ನು ಕೇಳಿದ ಮೇಲೆ ಚಿಕ್ಕಪುಟ್ಟ ರಾಷ್ಟ್ರಗಳು ತಮ್ಮ ಶಕ್ತಿಗೂ ಮೀರಿ ಅವರನ್ನು ಸ್ವಾಗತಿಸಲು ಪ್ರಯತ್ನಿಸಿರುವದಲ್ಲಿ ಆಶ್ಚರ್ಯವಿಲ್ಲ. ಅಂದರೆ ಹತ್ತೂ ಬೆರಳು ಒಂದೇರೀತಿ ಇವೆಯೇ?

ಕುಂಟನಿಗೆಂಟು ಬುದ್ಧಿ ಎಂದು ಸುಮ್ಮನೆ ಹೇಳುವದಲ್ಲ. ಕಮ್ಯೂನಿಸವನ್ನೊಂದರೆ ಮೈನವಿರೇಳುವ ರಾಷ್ಟ್ರಗಳೂ ಆಫ್ರಿಕದಲ್ಲಿವೆ ಅವು ರಷ್ಯಾದ ರಂಗಭೂಮಿಯಲ್ಲಿ ಕಮ್ಯೂನಿಸಂ ನಾಟಕಗಳನ್ನು ನೋಡಿ ಬಂದಿವೆ. ಅವುಗಳಿಗೆ ಕಮ್ಯೂನಿಸ್ಟ್ ದೇಶಗಳ ಮೇಲೆ ಕೋಪವಿರುವದು ಸ್ವಾಭಾವಿಕವಿದೆ. ಅಂತಹ ದೇಶಗಳಲ್ಲಿ ಕುಂಟ ತನ್ನ ಬುದ್ಧಿಯನ್ನು ತೋರಿಸಿಯೇ ಬಿಟ್ಟನು. ರಷ್ಯಾದ ಕರಡಿ ಕತ್ತಲೆ ಆಫ್ರಿಕಾದ ಚಿಕ್ಕಪುಟ್ಟ ಮೊಲಗಳನ್ನು ನುಂಗಲು ನೋಡಿದಾಗ ಅವು ಚಂಗನೆ ನೆಗೆದಿರುವದರಿಂದ ಅವುಗಳ ಬಳಿ ರಷ್ಯಾದ ವಿರೋಧಿ ತಾನೆಂದು ಹೇಳಿ ಚೌ ಎನ್ - ಲ್ಯಾ ಪಟಕ್ಕನೆ ಬಲೆ ಬೀಸಿದರು. ಆದರೆ ಪ್ರಯೋಜನವೇನು? ಎಲ್ಲಾ ಕಮ್ಯೂನಿಸ್ಟ್ ಶಕ್ತಿಗಳಿರುವದು ರಾಷ್ಟ್ರಗಳ ಕೊರಳು ಕೊಯ್ಯುವದಕ್ಕಾಗಿಯೇ ಎಂಬುದು ಆ ರಾಷ್ಟ್ರಗಳಿಗೆ ಚೆನ್ನಾಗಿ ಗೊತ್ತು.

ಕಮ್ಯೂನಿಸ್ಟ್ ಚೈನಾವು ಶಾಂತಿಪ್ರಿ

(೧೦ನೇ ಪುಟ ನೋಡಿರಿ)

" ಬ್ಯಾಂಕಿನಲ್ಲಿ.......ಇನ್ನೊಂದು ದಿನ

ಇನ್ನೊಂದು ರೂಪಾಯಿ ! "

ನೀವು ವ್ಯಾಪಾರದಲ್ಲಿ ಅಥವಾ ಒಂದು ವೃತ್ತಿಯಲ್ಲಿ, ಇಲ್ಲವೆ ಒಂದು ಉದ್ಯೋಗದಲ್ಲಿ ಇದ್ದರೆ ನಿಮಗದು ದೈನಿಕ ಸಂಪಾದನೆಯನ್ನು ತರುತ್ತದೆ, ನೀವಿದನ್ನು ಮುಖ್ಯವಾಗಿ 1964ರ ಆರ್ಥಿಕ ವಿಷಯವಾಗಿ ಮಾಡಲು ಅಪೇಕ್ಷಿಸುತ್ತೀರಿ.

ವರ್ಷದ ಪ್ರತಿಯೊಂದು ದಿನ ಒಂದು ರೂಪಾಯಿಯಂತೆ ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಡಿಪೋಸಿಟ್ ಖಾತೆಯಲ್ಲಿ ಉಳಿಸಿರಿ. ಏಳು ವರ್ಷಗಳಲ್ಲಿ ಈ ಡಿಪೋಸಿಟ್ ಪ್ರೌಢವಾದಾಗ ನೀವು ರೂ. 2,800 ನ್ನು ಪಡೆಯುವಿರಿ. ನೀವು ಕೆಲ ದಿನ ಹಣ ಕೊಡಲು ಅಸಮರ್ಥರಾದರೂ ಚಿಂತಿಲ್ಲ— ಕೊಡಲು ತಪ್ಪಬಾರದೆಂದಿಲ್ಲ— ಅದಕ್ಕೆ ದಂಡನೆ ಬಡ್ಡಿಯಿಲ್ಲ, ಆದರೂ ಖಾತೆಯಲ್ಲಿರುವ ನಿಮ್ಮ ಹಣವು ಬಡ್ಡಿಯೊಂದಿಗೆ ಏಕಪ್ರಕಾರವಾಗಿ ಬೆಳೆಯುತ್ತದೆ.

ಇದಕ್ಕೂ ಮಿಗಿಲಾಗಿ, ನೀವು ಖಾತೆಗೆ ಹಣ ಕೊಡಲು ಬ್ಯಾಂಕಿಗೇ ಹೋಗಬೇಕಾಗಿಲ್ಲ— ನಮ್ಮ ಜನ ನಿಮ್ಮ ಮನೆ ಬಾಗಿಲಲ್ಲೇ ಅದನ್ನು ಸಂಗ್ರಹಿಸುತ್ತಾನೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಇಲ್ಲಿ ಉಳಿತಾಯ ಮಾಡಿರಿ

ದೈನಿಕ ಸಣ್ಣ ಉಳಿತಾಯ ಯೋಜನೆಗಳಲ್ಲಿ ಅಗ್ರಗಾಮಿಯಾದುದು

ಪ್ರವಾಸ ಕಥನ

ರಜತಪೀಠದಿಂದ ತಿರುಮಲೆಗೆ

(ಲೇಖಾಂಕ—೧)

ಬರೆದವರು: ಶ್ರೀ ಉ. ಲಕ್ಷ್ಮೀನಾರಾಯಣ ಕಿಣಿ, ಉಡುಪಿ.

ಉತ್ತರಕ್ಕೆ ಬದರೀನಾಥ, ಕೇದಾರನಾಥ ಧಾಮಗಳ ತನಕ, ದಕ್ಷಿಣಕ್ಕೆ ಮಧುರೆ, ರಾಮೇಶ್ವರದ ತನಕ ಹಾಗೂ ಪೂರ್ವಕ್ಕೆ ಮದ್ರಾಸು, ಬುದ್ಧಗಯಾ ತನಕ ಹೀಗೆ ಬೇರೆ ಬೇರೆ ಏಳು ಸಂದರ್ಭಗಳಲ್ಲಿ ಒಟ್ಟಿಗೆ ಸುಮಾರು ೧೪,೦೦೦ ಮೈಲು ಪ್ರವಾಸ ಕೈಗೊಂಡಿದ್ದ ನನಗೆ ಇದೀಗ ಎಂಟನೇ ಬಾರಿ ಸಾಧಾರಣ ೧,೨೦೦ ಮೈಲಿಗಳ ಪ್ರವಾಸ ಮಾಡುವ ಸುಸಂದರ್ಭ ಒದಗಿ ಬಂದಿತು. ಇದು ತನಕ ಒಬ್ಬಂಟಿಗನಾಗಿ, ಮೂವರಾಗಿ, ಹೆಚ್ಚೆಂದರೆ ಹತ್ತು ಮಂದಿಗಳ ಪರಿವಾರದೊಡನೆ ಪ್ರವಾಸ ಕೈಗೊಂಡಿದ್ದರೆ ಈ ಬಾರಿ ನಮ್ಮ ಪರಿವಾರದಲ್ಲಿ ಸುಮಾರು ೨೪೦ ಮಂದಿ ಸ್ತ್ರೀ ಪುರುಷರೂ ಮಕ್ಕಳೂ ಇದ್ದರು. ಅಲ್ಲದೆ, ಈ ಪ್ರವಾಸದಲ್ಲಿ ಒಂದು ಪ್ರತ್ಯೇಕ ವೈಶಿಷ್ಟ್ಯವೂ ಇದ್ದಿತು.

ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಯತಿವರ್ಯರಾದ ಶ್ರೀ ಕಾಶೀಮಠ ಸಂಸ್ಥಾನಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರು ಸುಮಾರು ಒಂದು ತಿಂಗಳಿಂದ ತಿರುಪತಿ ಬೆಟ್ಟದಲ್ಲಿ ಶ್ರೀ ವೆಂಕಟರಮಣನ ಸಾನ್ನಿಧ್ಯದಲ್ಲಿ ವಿಶ್ರಮಿಸುತಿದ್ದು ತಾ. ೨-೨-೬೪ನೇ ಆದಿತ್ಯವಾರ ಪರಮಾತ್ಮನ ಸನ್ನಿಧಿಯಲ್ಲಿ ಗರುಡೋತ್ಸವವನ್ನು ನೆರವೇರಿಸಲಿದ್ದಾರೆಂಬ ಸಮಾಚಾರವು ನಾಲ್ಕೂ ಸುತ್ತು ಹರಡಿತ್ತು. ತಿರುಪತಿಗೆ ಯಾತ್ರೆ ಹೊರಡಲು ಕುಂದಾಪುರ, ಕಾರ್ಕಳ, ಉಡುಪಿ, ಕಟಪಾಡಿ, ಕಾಪು ಇತ್ಯಾದಿ ಕಡೆಗಳಿಂದ ಭಕ್ತಾದಿಗಳು ಸಾಮೂಹಿಕವಾಗಿ ಹೊರಡಲು ಉಡುಪಿಯಲ್ಲಿ ಒಂದುಗೂಡಿದರು.

ತಾ. ೩೦-೧-೬೪ನೇ ಗುರುವಾರ ಪ್ರಾತಃ ೬ ಘಂಟೆಗೆ ಸರಾಫ್ ಶ್ರೀ ರಾಘವೇಂದ್ರ ಕೃಷ್ಣ ಭಟ್ಟರ ನೇತೃತ್ವದಲ್ಲಿ, ಶ್ರೀಗಳಾದ ಮಾಧವ ಭಟ್, ಅನಂತ ನಾಯಕ್, ಗೋಪಾಲ ಕಾಮತ್, ರಾಮದಾಸು ವಿಠಲ ನಾಯಕ್, ಶಂಕರ ನಾರಾಯಣ ಕೊಡಂಚ, ಶ್ರೀಮತಿ ತಾರಮ್ಮ ಮೊದಲಾದವರ ಮೇಲ್ವಿಚಾರಣೆಯಲ್ಲಿ ನಮ್ಮ ಪರಿವಾರವು ನಾಲ್ಕು ಬಸ್ಸು ಮತ್ತು ಮೂರು ಕಾರುಗಳಲ್ಲಿ ಗೋವಿಂದ ಘೋಷ, ಜೈಕಾರಗಳೊಂದಿಗೆ ಯಾತ್ರಾ ಪ್ರವಾಸಕ್ಕೆ ಅಣಿಯಾಯಿತು. ಅನಾನುಕೂಲತೆಯ ಪ್ರಸಂಗಗಳಲ್ಲಿ ಉಪಯೋಗಕ್ಕಿರಲೆಂದು ನಾವು ಸ್ವಲ್ಪ ಮಟ್ಟಿಗೆ ಊಟ ಉಪಹಾರಗಳ ಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡಿದ್ದೆವು.

ಪ್ರಾತಃ ೭-೩೦ಕ್ಕೆ ಕಾರ್ಕಳಕ್ಕೆ ತಲಪಿ, ಶ್ರೀ ವೆಂಕಟರಮಣ ಮಂದಿರದಲ್ಲಿ ದೇವದರ್ಶನ ಮಾಡಿದೆವು. ಮಂದಿರದಲ್ಲೇ ನಮ್ಮ ಉಪಹಾರವೂ ಆಯಿತು. ಮುಂದೆ ಮೂಡಬಿದಿರೆ ಮತ್ತು ವೇಣೂರಿನಲ್ಲಿ ಕೊಂಚಕಾಲ ಕಳೆದು, ಸಾವಿರ ಕಂಬಗಳ ಬಸದಿಯನ್ನೂ ವೇಣೂರು ಗುಮ್ಮಟನನ್ನೂ ವೀಕ್ಷಿಸಿ, ನಮ್ಮ ಪರಿವಾರವು ಧರ್ಮಸ್ಥಳಕ್ಕೆ ಬಂದು, ವಸಂತ ಮಹಲಿನಲ್ಲಿ ತಳವೂರಿತು. ಪೂಜೆಯ ಸಮಯ ನಾವೆಲ್ಲರೂ ಮಂದಿರದಲ್ಲಿ ಹಾಜರಾದೆವು. ಕಾಣಿಕೆಗಳನ್ನು ಸಮರ್ಪಿಸಿ ಶ್ರೀ ಮಂಜುನಾಥನ ಪ್ರಸಾದವನ್ನು ಸ್ವೀಕರಿಸಿದೆವು. ಧರ್ಮಸ್ಥಳ ಹೆಗ್ಗಡೆಯವರು ನಮಗಾಗಿ 'ಸ್ಪೆಶಲ್' ಊಟದ ಏರ್ಪಾಡು ಮಾಡಿಸಿದ್ದರು. ಊಟವಾದ ನಂತರ, ಧರ್ಮಸ್ಥಳದಲ್ಲಿ ಕೆಲ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿ, ಧರ್ಮಸ್ಥಳದಿಂದ ಹೊರಟು ಬೇಲೂರನ್ನು ತಲಪಿದೆವು. ಬೇಲೂರು ಛತ್ರದಲ್ಲಿ ನಮಗೆ ಉಳಕೊಳ್ಳುವ ಏರ್ಪಾಡು ಮಾಡಲಾಗಿತ್ತು. ಚೆನ್ನಕೇಶವ ಮಂದಿರದಲ್ಲಿ ಸರ್ಚ್ ಲೈಟ್ ಹಾಕಿಸಿ, ಮಂದಿರದ ಸಮಗ್ರ ಶಿಲ್ಪಕಲಾ ಪ್ರೌಢಿಮೆಯನ್ನು ಸಾಧ್ಯವಾದಷ್ಟು ನೋಡಿ ಮನಸ್ಸನ್ನು ತಣಿಸಿಕೊಂಡೆವು. ರಾತ್ರಿ ಬೇಲೂರು ಪಂಚರತ್ನ ಕಲಾ ಸಂಘದ ವತಿಯಿಂದ ನಮಗಾಗಿಯೇ ಹರಿಕಥೆಯನ್ನು ಏರ್ಪಡಿಸಲಾಗಿತ್ತು. ಸಂಗೀತ ಹಾಗೂ ಹರಿಕಥಾಶ್ರವಣವನ್ನು ಮಾಡಿ ಎಲ್ಲರೂ ವಿರಮಿಸಿಕೊಂಡೆವು.

ಮರುದಿನ ಪ್ರಾತಃಕಾಲ ಎಲ್ಲರೂ ಎದ್ದು, ಆಹ್ನಿಕವನ್ನು ತೀರಿಸಿ, ಹೊರಡಲು ಅಣಿಯಾದೆವು. ಹಳೇಬೀಡಿಗೆ ಬಂದು ಅಕ್ಷಯ ಶಿಲ್ಪಕಲಾ ವೈಶಿಷ್ಟ್ಯವನ್ನು ಮನದಣಿಯೆ ನೋಡಿ, ಆನಂದಿಸಿದೆವು. ಉಪಾಹಾರ ಸೇವಿಸಿದುದರಿಂದ ಶರೀರವೂ ಸುಂದರ ದೃಶ್ಯಾವಲೋಕನದಿಂದ ಮನಸ್ಸೂ ಹರುಷಿತವಾಗಿತ್ತು. ಎಲ್ಲರೂ ತಮ್ಮ ಬಸ್ಸು ಮತ್ತು ಕಾರುಗಳನ್ನೇರಿ, ಭಜನೆ, ಕೀರ್ತನೆಗಳಲ್ಲಿ ಮಗ್ನರಾದೆವು. ನಡುನಡುವೆ ನಮ್ಮ ಕಾರು ಬಾರಿ ಬಾರಿಗೂ ಸಂಕಷ್ಟಕ್ಕೀಡಾಗುತ್ತಿತ್ತು. ಅದಕ್ಕೆ ಸಹಾನುಭೂತಿ ತೋರಿಸುವುದಕ್ಕೋ ಎಂಬಂತೆ ನಮ್ಮ ಇನ್ನೊಂದು ಕಾರೂ ಸತ್ಯಾಗ್ರಹ ಹೂಡಿತು. ಅಂತೂ ಸಂಜೆ ೫ಕ್ಕೆ ಎಲ್ಲರೂ ಬೆಂಗಳೂರು ತಲುಪಿದೆವು. ಭದ್ರಗಿರಿ ಬಂಧುಗಳಾದ ಅಚ್ಯುತದಾಸ, ಕೇಶವದಾಸರು ರಾಜಾಜಿ ನಗರದಲ್ಲಿರುವ ತಮ್ಮ ದಾಸಾಶ್ರಮದಲ್ಲಿ ನಮಗೆ ಉಳಕೊಳ್ಳಲು ಅಚ್ಚುಕಟ್ಟಾದ ವ್ಯವಸ್ಥೆಯನ್ನು ಮಾಡಿಸಿದ್ದರು. ಎಲ್ಲರೂ ಸ್ನಾನ ತೀರಿಸಿ, ಊಟಕ್ಕೆ ಕುಳಿತುಕೊಂಡೆವು. ಬಡಿಸುತ್ತಿರುವ ಸ್ವಯಂ ಸೇವಿಕೆಯರ ನಮ್ರತಾಪೂರ್ಣ ವಿನಯ ಸೌಜನ್ಯಗಳಿಂದ ನಮ್ಮ ದಣುವೆಲ್ಲಾ ಪರಿಹಾರವಾದಂತೆ ಭಾಸವಾಯಿತು. ನನಗಾದರೋ ಪ್ರತ್ಯಕ್ಷ ನನ್ನ ಮನೆಯಲ್ಲೇ ತಾಯಿಯು ಬಡಿಸಿದಂತಾಯಿತು. ಅವರ ವಾತ್ಸಲ್ಯ ಪೂರ್ಣ ಸ್ವಭಾವ, ನಿರ್ಮಲ ಮನಸ್ಸಿನ ಅತಿಥಿ ಸತ್ಕಾರ—ಭಾರತೀಯ ನಾರಿಯರಿಗೆ ಆದರ್ಶಪ್ರಾಯವಾಗಿದ್ದುವು. ಭದ್ರಗಿರಿ ಬಂಧು ಚತುಷ್ಟಯರು ಬಿಚ್ಚುಮನಸ್ಸಿನಿಂದ ನಮ್ಮೊಡನೆ ಬೆರೆತು, ತಮ್ಮ ಆಶ್ರಮದ ಪರಿಚಯ ಮಾಡಿಸಿಕೊಟ್ಟರು. ಕೀರ್ತನ ಕಾಲೇಜು, ಪುರಂದರ ವಿಠಲನ ಮಂದಿರ ಸುತ್ತಮುತ್ತಲ ವಾತಾವರಣ—ಇವೆಲ್ಲವೂ ಅತ್ಯಂತ ಆಕರ್ಷಣೀಯವೂ ಆಧ್ಯಾತ್ಮಿಕವೂ ಆಗಿದ್ದುವು ದಾಸ ಬಂಧುದ್ವಯರು (ಅಚ್ಯುತದಾಸ. ಕೇಶವದಾಸ ಅಂದು ರಾತ್ರೆ ತಮ್ಮ ಆಶ್ರಮದಲ್ಲೇ ಉಳಕೊಳ್ಳಬೇಕೆಂದು ವಿನಂತಿಸಿಕೊಂಡರೂ ತಿರುಪತಿಯಲ್ಲಿ ಜರಗುವ ಉತ್ಸವವನ್ನು ನೋಡುವ ಸಂದರ್ಭವು ತಪ್ಪಿಹೋದೀತೆಂದು ಬಗೆದು, ಅವರ ವಿನಂತಿಯನ್ನು ನಮ್ರತಾಪೂರ್ವಕ ನಿರಾಕರಿಸ ಬೇಕಾಯಿತು. ನಮ್ಮನ್ನು ಬೀಳ್ಕೊಡಲು ನಮ್ಮ ಬಸ್ಸುಗಳ ತನಕ ಆಗಮಿಸಿದ ಸ್ವಯಂ ಸೇವಿಕೆಯರಿಗೆ ಕೃತಜ್ಞತೆಗಳನ್ನು ಸಲ್ಲಿಸಿ, "ದಾಸಾಶ್ರಮಕೀ ಜೈ, ತಿರುಪತಿ ವೆಂಕಟರಮಣ ಗೋವಿಂದಾಽಽ ಗೋಽಽವಿಂದ" ಎಂದು ಘೋಷಿಸುತ್ತಿದ್ದಂತೆ ನಮ್ಮ ಬಸ್ಸುಗಳು ಮುಂದುವರಿದುವು. ದಾಸಾಶ್ರಮದಿಂದ ಭದ್ರಗಿರಿ ಅಚ್ಯುತದಾಸರೂ ನಮ್ಮ ಜತೆ ತಿರುಪತಿಗೆ ಆಗಮಿಸಿದ್ದರು. ಅವರು ನಮ್ಮೊಟ್ಟಿಗಿದ್ದುದರಿಂದ ನಮ್ಮ ಕೆಲವೊಂದು ಕೊರತೆಗಳೂ ನೀಗಿದವು.

ರಾತ್ರಿ ೩ ತಾಸಿಗೆ ನಮ್ಮ ವಾಹನಗಳು ಗೋವಿಂದರಾಜ ಪಟ್ಟಣವನ್ನು ತಲಪಿದವು. ಛತ್ರದಲ್ಲಿ ನಮ್ಮ ಉಳಕೊಳ್ಳುವ ವ್ಯವಸ್ಥೆಯಾಯಿತು.

ತಾ. ಒಂದರಂದು ಪ್ರಾತಃಕಾಲ ಬೇಗನೇ ಎದ್ದು, ನಿತ್ಯಾಹ್ನಿಕಗಳನ್ನು ಪೂರೈಸಿ, ಕಪಿಲ ತೀರ್ಥದಲ್ಲಿ ಕ್ಷೇತ್ರವಿಧಿಗಳನ್ನು ಮುಗಿಸಿ, ವರಾಹ ನಾರಾಯಣ ಮತ್ತು ಗೋವಿಂದರಾಜನ ದರ್ಶನ ಪಡೆದು, ಛತ್ರದಲ್ಲೇ ಉಪಹಾರ ಮತ್ತು ಊಟ ತೀರಿಸಿ, ಮಧ್ಯಾಹ್ನ ೨ ಘಂಟೆಯ ಚಳಿ ಬಿಸಿಲಿಗೇ ತಿರುಪತಿ ಬೆಟ್ಟವನ್ನೇರಲು ನಾವು ಸಿದ್ಧರಾದೆವು. ತಿರುಪತಿ ಬೆಟ್ಟಕ್ಕೆ ಕ್ಷೇತ್ರದ ಬಸ್ಸುಗಳ ವಿನಹ ಇತರ ಬಸ್ಸುಗಳನ್ನು ಬಿಡಲು ಪರವಾನಿಗೆಯಿಲ್ಲ. ಶ್ರೀ ಎ ನಗರಕಾರರಮೂತಿಗೆ ಮನ್ನಣೆಯಿತ್ತು, ನಮ್ಮನ್ನು ಕೊಂಡೊಯ್ಯಲು ಕ್ಷೇತ್ರದ ಬಸ್ಸುಗಳು ನಮ್ಮ ಛತ್ರದ ಬಳಿಗೇ ಬಂದಿದ್ದುವು. ನಮ್ಮ ಹೋಲ್ಡಾಲು ಇತ್ಯಾದಿ ಸಾಮಗ್ರಿಗಳನ್ನು ಮಾಡಿಗೇರಿಸಿ, ಎಲ್ಲರೂ 'ಬಸ್ಸಾರೂಢರಾದೆವು.

ತಿರುಪತಿ (ತಿರುಮಲ) ಬೆಟ್ಟದಲ್ಲಿ ವೆಂಕಟೇಶ್ವರ ಸಂಸ್ಕೃತ ವಿದ್ಯಾಪಾಠಶಾಲೆಯಲ್ಲಿ ನಮಗೆ ಉಳಕೊಳ್ಳುವ,—ಹಾಗೂ ಗುರುವರ್ಯರ ವತಿಯಿಂದ ನಮ್ಮ ಊಟ ಉಪಹಾರಗಳ ವ್ಯವಸ್ಥೆ ಮಾಡಲಾಗಿತ್ತು. ನಲ್ಲಿಗಳ ತಂಪಾದ ನೀರಲ್ಲಿ ಸ್ನಾನ ಮಾಡಿ ಒಮ್ಮೆ ಯಾವತ್ತೂ ಮಾರ್ಗಾಯಾಸವನ್ನು ನಿವಾರಿಸಿಕೊಂಡೆವು.

ಇಂದಿನ ಉತ್ಸವದಲ್ಲಿ ಭಾಗವಹಿಸಿ, ರಾತ್ರೆ ಊಟ ತೀರಿಸಿದನಂತರ ಎಲ್ಲರೂ ತಮ್ಮ ತಮ್ಮ ಬಿಡಾರಗಳಲ್ಲಿ ವಿಶ್ರಮಿಸಿಕೊಂಡೆವು.

(ಕ್ರಮಶಃ)

ಬೆಳ್ತಂಗಡಿ ಡಿ. ಮು. ಕೋರ್ಟು

S. C. 52/64

1. ಸುರದೇವಿ, 2 ಚಂದನದೇವಿ—ವಾದಿ.

—VS—

ಸಬಾಬ್ ಸಾಹೇಬ್—ಪ್ರತಿವಾದಿ.

S/o. ಮಹಮ್ಮದ್ ಸಾಹೇಬ್.

ಬೆಳ್ತಂಗಡಿ ತಾಲೂಕಿನ ಪಡಂಗಡಿ ಗ್ರಾಮದಲ್ಲಿರುವವ ಪ್ರತಿವಾದಿ.

ಪ್ರತಿವಾದಿಗೆ,

ಪ್ರತಿವಾದಿಯಿಂದ ಬರ ಬಾಕಿ ಬಗ್ಗೆ ರೂ. 279-49ಕ್ಕೆ ವಾದಿಯು ಮಾಡಿದ ದಾವೆಯಲ್ಲಿ ಕೈಪೇತು ನೋಟೀಸು ಪ್ಯಾದೆ ತಾ. 6.6.64ಕ್ಕೆ ಇಟ್ಟಿರುವುದರಿಂದ ಪ್ರತಿವಾದಿಯು ತನ್ನ ಆಕ್ಷೇಪಗಳೇನಾದರೂ ಹೇಳುವುದಿದ್ದರೆ ಅದಿನ ಈ ಕೋರ್ಟಿನ ಮುಂದೆ 11 ಘಂಟೆಗೆ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅತನನ್ನು ಶಿಪಾಯಿ ಎಂತ ಮಾಡಿ ಮುಂದಿನ ತನಿಕೆಯಿಂದ ತೀರ್ಮಾನಿಸಲಾಗುವುದು ಎಂತ ಈ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿದೆ.

(Sd) K. Veerasimha,
Advocate for Plaintiff.

ಬೆಳ್ತಂಗಡಿ, ತಾ. 17.4.64.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ **ಹಣವು** ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, **ಮಂಗಳೂರು—3.**

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಬಂಟರಿಗೆ ಕರೆ:

ಪರಿಸ್ಥಿತಿಗೆ ಹೊಂದಿ ನಡೆಯಬೇಕು

೧೯೦೭ರಲ್ಲಿ ಪ್ರಾರಂಭವಾದ ಬಂಟ ಸಮಾಜದ ಸಂಘಟನೆಯು ೧೯೦೮ರಲ್ಲಿ ಮೂರ್ತರೂಪಕ್ಕೆ ಬಂದಿತು ನಮ್ಮ ಸಮಾಜದಲ್ಲಿ ನವ ಪ್ರಾಣ ಪ್ರತಿಷ್ಠೆ ಮಾಡಿದ ಶ್ರೀ ಎ. ಬಿ. ಶೆಟ್ಟರ ಕೆಚ್ಚೆದೆಯ ಪ್ರತೀಕವಾಗಿ ಇಂದು ಈ ಬಂಟರ ಯಾನೆ ನಾಡವರ ಸಂಘವಿದೆ. ಅವರ ಚೈತನ್ಯಪೂರ್ಣ ವ್ಯಕ್ತಿತ್ವದ ಹರಕೆ ನಮ್ಮ ಮೇಲಿದೆ; ಇದರ ಬಲದಿಂದಲೇ ನಾವು ಮುಂದುವರಿಯುತ್ತಿದ್ದೇವೆ.

ನಾವು "ಒಕ್ಕೆಲಾಯಿ" ಎಂಬ ಹೆಸರು ಪಡೆದವರು. ಕೃಷಿಯನ್ನೇ ಅವಲಂಬಿಸಿದವರು. ನೀತಿ, ಶೀಲ, ಸತ್ಯ, ನ್ಯಾಯಗಳನ್ನು ಸಂರಕ್ಷಿಸಿಕೊಂಡು ಬಂದವರು. ನಗರ ಗ್ರಾಮಗಳಲ್ಲಿ ಪ್ರತಿಷ್ಠಿತವಾದ ಸಮಾಜಕ್ಕೆ ಸೇರಿದವರು. ಆಗಿದ ಹೊಸ ದೃಷ್ಟಿಯ ಪರಿಣಾಮವಾಗಿ ನಮ್ಮ ಗೌರವ ಕಡಿಮೆಯಾಗತೊಡಗಿದೆ, ಬದಲಾಗುತ್ತಿರುವ ಜಗತ್ತಿನಿಂದ ಬೇರೆಯಾಗುವುದು ಯಾರಿಗೂ ಅಸಾಧ್ಯ. ಮಿತಿಮೀರಿದ ವರದಕ್ಷಿಣೆ, ದುಂದುಗಾರಿಕೆ, ಶೀಲರಹಿತ ಜೀವನ, ಉತ್ಪಾದನಾ ಹೀನತೆ, ಯೋಜನಾರಹಿತ ಜೀವನ—ಮೊದಲಾದ ಕುಂದುಕೊರತೆಗಳನ್ನು ನಾವು ತಿದ್ದಿಕೊಂಡು ಸರಿದಾರಿಯಲ್ಲಿ ನಡೆಯಬೇಕು. ಸ್ವತಂತ್ರ ಭಾರತದ ಉತ್ತಮ ನಾಗರಿಕರಾಗಿ ಬೆಳೆದು ನಮ್ಮ ಸಮಾಜಕ್ಕೂ ದೇಶಕ್ಕೂ ಗೌರವ ತರಬೇಕು

ಇಂದು ಪ್ರಜಾಪ್ರಭುತ್ವದ ಯುಗ. ಎಲ್ಲರನ್ನೂ ಅಕ್ಷರಸ್ಥರನ್ನಾಗಿ ಮಾಡುವುದು ಸರಕಾರದ ಉದ್ದೇಶ, ನಮ್ಮ ಸಂಘವೂ ಉಚಿತ ವೇತನ; ಸಾಲ ಸೌಲಭ್ಯಗಳ ಮೂಲಕ ಆರ್ಥಿಕ ತೊಂದರೆಗಳಿಗೊಳಗಾದ ವಿದ್ಯಾರ್ಥಿಗಳಿಗೆ ಕೆಲ ಮಟ್ಟಿಗೆ ಸಹಾಯ ನೀಡಿದೆ.

ಸೆಕೆಂಡರಿ ಹಂತದವರೆಗೆ ಸರಕಾರವೇ ಉಚಿತ ಶಿಕ್ಷಣ ನೀಡಲು ಆತುರವಾಗಿರುವುದರಿಂದ ನಾವು ಉಚ್ಚ ಹಾಗೂ ತಾಂತ್ರಿಕ, ವೈದ್ಯಕೀಯ ಮೊದಲಾದ ಅಧಿಕ ವೆಚ್ಚ ಬರುವ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಕ್ರಮವನ್ನೇ ಇನ್ನೂ ಕಟ್ಟುನಿಟ್ಟಾಗಿ ಅನುಸರಿಸುವುದು ಸೂಕ್ತ.

ಮಂಗಳೂರಿನಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳೂ ಉಡುಪಿ, ಕುಂದಾಪುರ, ಕಾರ್ಕಳ ಮತ್ತು ಪುತ್ತೂರುಗಳಲ್ಲಿ ಉಪಭವನಗಳೂ ಈಗ ಇವೆ. ಪ್ರಚಲಿತ ಸ್ಥಿತಿಗತಿಗಳಿಗೆ ಅನುಕೂಲವಾಗುವಂತೆ ಉಳಿದೆಡೆಯಲ್ಲಿಯೂ ಭವನಗಳನ್ನು ತೆರೆಯಬಹುದು. ಉಪಭವನಗಳು ಸ್ಥಳೀಯರಿಂದಲೇ ಸಾಕಷ್ಟು ಸಹಕಾರ ಪಡೆದುಕೊಳ್ಳಬೇಕು. ಆದರೂ ಕೇಂದ್ರವೂ ತನ್ನಿಂದ ಸಾಧ್ಯವಾದ ನೆರವು ನೀಡಬೇಕು, ಸಮರಸದಿಂದ ಇಕ್ಕಡೆಯವರೂ ಮುಂದುವರಿದು ಸಂಘದ ಶೋಭೆಯನ್ನು ಹೆಚ್ಚಿಸಬೇಕು.

ಒಂದೇ ಸಮಾಜ ಅಥವಾ ಜಾತಿಯವರಿಗೆಂದು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಸರಿಯಲ್ಲ. ವಿದ್ಯಾರ್ಥಿಗಳಲ್ಲಿ ಜಾತೀಯ ಮತ್ತು ಮತೀಯ ಭಾವನೆಗಳನ್ನು ಬೆಳೆಸುವುದು ಉಚಿತವಲ್ಲ. ಜಾತೀಯ ಸೌಹಾರ್ದವಿಂದು ಭಾರತಕ್ಕೆ ಅಧಿಕವಿದೆ. ಇದರಂತೆ, ಸಂಘದ ನಿಯಮಗಳಲ್ಲಿ ತುಸು ಬದಲಾವಣೆಯಾಗಿರುವುದು ಸಂತೋಷಪ್ರದ. ಬಂಟರ ಯಾನೆ ನಾಡವರ ಸಂಘವು ಜಾತೀಯತೆಯನ್ನು ಬಿತ್ತುವ ಸಂಸ್ಥೆಯಾಗಬಾರದು. ನಮ್ಮ ಸಮಾಜದಲ್ಲಿ ಸತ್-ಸಂಪ್ರದಾಯವನ್ನು ಮಾಡಿಸಿ, ಹೊಸ ಜಗತ್ತಿನೊಡನೆ ಹೊಂದಿಕೊಳ್ಳುವ ಒಡಹುಟ್ಟಿನ ಭಾವನೆಯನ್ನು ಪ್ರಚೋದಿಸಬೇಕು.

ನಾವಿಂದು ಸ್ವತಂತ್ರ ನಾಗರಿಕರಿದ್ದೇವೆ. ಪ್ರಜಾಪ್ರಭುತ್ವ ಯುಗದಲ್ಲಿದ್ದೇವೆ. ಪ್ರಜಾಪ್ರಭುತ್ವದಲ್ಲಿ ನಾಗರಿಕನ ಕರ್ತವ್ಯಗಳಲ್ಲಿ ಶಿಸ್ತುಪಾಲನೆಯು ಮುಖ್ಯವಾದುದು. ಶಿಸ್ತಿನ ತವರು ಮನೆಯೆನಿಸಿದ ವಿದ್ಯಾಲಯಗಳಲ್ಲಿಯೂ ಅಶಿಸ್ತು ಇಂದು ಮಾಡಿರುವುದು ಶೋಚನೀಯ. ಬಂಟರಾದ ನಾವು ನಾಡಿನ ಗೌರವಕ್ಕೆ ತಕ್ಕಂತೆ ಶಿಸ್ತನ್ನು ಮೀರದೆ ವಿಧೇಯತೆಯ ಭಾವವನ್ನು ತಳೆಯಬೇಕು. ಎಲ್ಲರೂ ಸಮಾನರು; ತಾನು ಎಲ್ಲರಿಗಾಗಿ, ಎಲ್ಲವರು ತನಗಾಗಿ ಎಂಬ ಅರ್ಥವನ್ನು ನಾವು ಆಚರಣೆಗೆ ತಂದರೆ, ಆಗ ಅಶಿಸ್ತು ಮಾಯವಾಗುವುದು. ನಮ್ಮ ಯುವ ಜನಾಂಗದಲ್ಲಿ ಶಿಸ್ತು ಮತ್ತು ಧರ್ಮದ ಬಗ್ಗೆ ಜಾಗೃತಿ ಮಾಡಿಸಲು ಎಚ್ಚರಿಕೆ ವಹಿಸುವುದು ಅಗತ್ಯವಿದೆ.

ಪ್ರಜಾಪ್ರಭುತ್ವ ಭಾರತವಿಂದು ಭೂಸುಧಾರಣೆಯನ್ನು ಜಾರಿಗೆ ತರುತ್ತಿದೆ. ಈ ಸಂಬಂಧದ ಶಾಸನದನ್ವಯ ನಮ್ಮ ಸಮಾಜವು ಬಹಳ ದಕ್ಕೆಗೆ ಗುರಿಯಾಗುವುದು. ಇದನ್ನು ನ್ಯಾಯೋಚಿತ ರೀತಿಯಲ್ಲಿ ಪರಿಹರಿಸುವ ಪ್ರಯತ್ನ ಮಾಡಬೇಕು ದನಿಗಾಗಲೀ ಒಕ್ಕಲಿಗಾಗಲೀ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಇದು ಅಸಾಧ್ಯವಾದರೆ, ಆದರಿಂದ ಉಚ್ಚೇತರಾಗದೆ ನಮ್ಮ ಸ್ವಭಾವಿಕ ಕೆಚ್ಚಿನಿಂದಲೇ ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಮುಂದುವರಿಯಬೇಕು, ದೃತಿಗೆಡಬಾರದು, ಮತಿಗೆಡಬಾರದು, ರಂಚಿಕೆಡಿಸಿ ಕೊಳ್ಳಬಾರದು. ಮಾನವರಾಗಿ ಬಾಳಬೇಕು, ಮಾನವರಾಗಿ ಮೆರೆಯಬೇಕು, ಮಾನವರಾಗಿ ಮಡಿಯಬೇಕು. ಇದು ನಮ್ಮ ಗುರಿಯಾಗಬೇಕು.

ಸಂಘವು ಮಾಡಬೇಕಾದ ಕಾರ್ಯಗಳು ನೂರಾರಿವೆ. ಆದರೆ, ಮಾಡಿರುವುದು ಅಲ್ಲವಲ್ಲ. ಯಾವುದೇ ವಿಚಾರವಾಗಿ ಸಲಹೆ ಸೂಚನೆಗಳನ್ನು ನೀಡುವುದು ಸುಲಭ, ಅವನ್ನು ಕಾರ್ಯಾಚರಣೆಗೆ ತರುವುದು ಬಲು ಕಠಿಣ. ಸಂಘದ ಇದುವರೆಗಿನ ಸಾಧನೆಗಳಿಗೆ ಹೆಮ್ಮೆ ಪಡಬೇಕು, ಮುಂದೆಯೂ ಹೆಮ್ಮೆ ಪಡುವಂತಾಗಬೇಕು. ನಮ್ಮ ಸಂಘವು ಬಾಳಬೆಳಗಲಿ; ಬೆಳಗಿ ಬಾಳಲಿ; ಒಳ್ಳೆಯದನ್ನು ಯೋಚಿಸಲಿ, ಒಳ್ಳೆಯದನ್ನು ಸಾಧಿಸಲಿ, ಒಳ್ಳೆಯದನ್ನು ಸಿದ್ಧಿಸಿಕೊಳ್ಳಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

—ಶ್ರೀ ಬಿ. ನಾರಾಯಣಶೆಟ್ಟಿ, ನಾವೂರು

(ತಾ. ೧೯ರಂದು ನೆರವೇರಿದ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯ ಅಧ್ಯಕ್ಷ ಭಾಷಣದ ಸಾರ)

ಕರಿ ಮೆಣಸು-ಒಣ ಶುಂಠಿ

ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ನಿರಾಶ್ರಿತರ ಕುಟುಂಬಗಳಿಗಾಗಿ ವಸತಿ ಸೌಲಭ್ಯಗಳನ್ನು ಏರ್ಪಡಿಸಲಾಗುತ್ತಿದೆ.

—ನಿರಾಶ್ರಿತರಿಗೆ ಆಶ್ರಯ ಕೊಡುವುದು ಸರಿ. ಆದರೆ ನಿರಾಶ್ರಿತರಾಗುತ್ತಿರುವ ಜನರಿಗೆ ಬಾಡಿಗೆ ಮನೆಗಳ ಸೌಕರ್ಯವನ್ನು ಒದಗಿಸಿಕೊಡಲೂ ತಕ್ಕ ಕ್ರಮ ಕೈಗೊಳ್ಳಲಾಗುತ್ತಿಲ್ಲವೆಂಬುದು ಮಾತ್ರ ವಿಷಾದನೀಯ.

° ° °

ಅಮೇರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಭಾರತೀಯ ಸಮುದ್ರ ಆಹಾರ, ಮುಖ್ಯವಾಗಿ ಸಿಗಡಿ ಹಾಗೂ ಕಪ್ಪೆಯ ಕಾಲುಗಳಿಗೆ ಮಾರುಕಟ್ಟೆಯ ಸಾಧ್ಯತೆ ತಿಳಿಯಲು ೫ ವಾರಗಳ ಸಂಚಾರಾರ್ಥ ಮೆರೀನ್ ಪ್ರೊಡಕ್ಟ್ ಎಕ್ಸ್‌ಪೋರ್ಟ್ ಪ್ರಮೋಶನ್ ಕೌನ್ಸಿಲಿನ ಸಭಾಪತಿಯ ನಾಯಕತ್ವದಲ್ಲಿ ವ್ಯಾಪಾರೀ ನಿಯೋಗವೊಂದು ವಿಮಾನ ಮೂಲಕ ಕೊಚ್ಚಿಯಿಂದ ಹೊರಟಿತು.

— ಹಾಗಾದರಿನ್ನು ಮುಂದೆ ಕಪ್ಪೆಗಳೇ ವಿದೇಶ ಪ್ರವಾಸ ಮಾಡಿದ ಭಾಗ್ಯವಂತರು.

° ° °

ರಷ್ಯವು ಭಾರತದಿಂದ ಈ ವರ್ಷ ೨೭ ಕೋಟಿ ಸಂಖ್ಯೆಯ ರೇಜರು ಬ್ಲೇಡುಗಳನ್ನು ಆಮದುಮಾಡಿ ಕೊಳ್ಳುವುದು.

— ಕತ್ತರಿಸುವ ಸಾಧನವಾದ ಈ ಬ್ಲೇಡುಗಳನ್ನಾದರೂ ಆಮದು ಮಾಡಿಕೊಳ್ಳುವ ರಷ್ಯಕ್ಕೆ ಭಾರತ ಚಿರಋಣಿಯಾಗಿರಬೇಡವೇ?

° ° °

ಕಳ್ಳಭಟ್ಟಿ ಕೇಂದ್ರದ ಮೇಲೆ ಪೋಲೀಸರ ಧಾಳಿ.

—ಅಗತ್ಯ ಆಗಲೇ ಬೇಕು.

° ° °

ನಿರುದ್ಯೋಗೀ ಪದವೀಧರರ ಸಂಖ್ಯೆ ಹೆಚ್ಚುತ್ತಿದೆ.

—ಈ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲೆಂದಾದರೂ ನಮ್ಮ ಸರಕಾರ ಇನ್ನು ಮುಂದೆ ಹೊಳೆಯ ನೀರನ್ನು ಅಳೆಯುವ, ರಸ್ತೆಯ ಧೂಳು ಎಷ್ಟು ಎತ್ತರ ಹಾರುವುದೆಂದು ಶೋಧಿಸುವ ಹೊಸ ಹೊಸ ಯೋಜನೆಗಳನ್ನು ತಯಾರಿಸಲೇ ಬೇಕು.

° ° °

ಆಹಾರಧಾನ್ಯಗಳ ಬೆಲೆ ಏರುತ್ತಿರುವುದರಿಂದ ಆಹಾರ ಧಾನ್ಯ ವ್ಯಾಪಾರದ ಮೇಲೆ ಸರಕಾರದ ಹತೋಟಿ ಅನಿವಾರ್ಯ.

—ವ್ಯಾಪಾರದ ಮೇಲೆ ಸರಕಾರದ ಹತೋಟಿ ಅನಿವಾರ್ಯ ನಿಜ; ಆದರೆ ವ್ಯಾಪಾರಿಗಳ ಮೇಲೆ-?

° ° °

ವಿದ್ಯಾಭ್ಯಾಸದ ಇಲಾಖೆಯ ಮೂಲಕ ಪ್ರತ್ಯೇಕ ಹಿಂದಿ ಪರೀಕ್ಷೆಗಳನ್ನು ವ್ಯವಸ್ಥೆಮಾಡಲು ಸರಕಾರ ನಿರ್ಧರಿಸಿದೆ.

—ಈ ಯೋಜನೆಯಿಂದಲಾದರೂ ಹಿಂದೀ ಪ್ರಚಾರಕರ ಸಂಖ್ಯೆ ಹಳ್ಳಿಗಳಲ್ಲಿ ಕಡಿಮೆಯಾದೀತೇನೋ-

° ° °

೨ ಕೋಟಿ ೩೮ ಲಕ್ಷ ೬೪ ಸಾವಿರದ ೧೪೨ರೂ ಬೆಲೆಯ ಬ್ಯಾಸನ್ನುಗಳನ್ನು ಮೋಸ ಮತ್ತಿತರ ಅಕ್ರಮ ವಿಧಾನಗಳಿಂದ ೧೯೫೮ ರಿಂದ ೧೯೬೨ರ ಅವಧಿಯಲ್ಲಿ ಪಡೆಯಲಾಗಿವೆ— ಸಂತಾನಂ ಸಮಿತಿವರದಿ.

—ಸರಿಯಾದ ಲೆಕ್ಕವಿಟ್ಟ ಆ ಮಹನೀಯರಿಗೆ ಅಂಕೆ ಸಂಖ್ಯೆಗಳನ್ನಿಡುವ ಮಹಾಶಯರು ವಂದಿಸಲೇ ಬೇಕು.

° ° °

ಶ್ರೀ ಮಲ್ಲಾರಾಧ್ಯರು ವಿಧಾನ ಪರಿಷತ್ತಿನಲ್ಲಿ ಕಂಠಿಯವರೊಂದಿಗೆ 'ಮಲ್ಲಯುದ್ಧ' ವನ್ನೇ ಮಾಡಿದರೆನ್ನಬಹುದು—ಪತ್ರಿಕೆ.

—ಮಲ್ಲಾರಾಧ್ಯರದು ಅನ್ವರ್ಥ ನಾಮವೇ ಆದಂತಾಯಿತು.

° ° °

ರಾಷ್ಟ್ರವು ಸಂಕಟ ಸ್ಥಿತಿಯಲ್ಲಿರುವುದರಿಂದ ಒರಿಸ್ಸಾ ರಾಜ್ಯದಲ್ಲಿ ಬಕ್ರಿದ್ ಮತ್ತು ಹೋಳಿ ಹಬ್ಬಗಳನ್ನು ಆಚರಿಸಬಾರದೆಂದು ರಾಜ್ಯ ಸರಕಾರವು ಪತ್ರಿಕಾ ಪ್ರಕಟಣೆಯೊಂದರ ಮುಖಾಂತರ ಜನರನ್ನು ವಿನಂತಿಸಿದೆ.

— ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಜಾತ್ಯತೀತ ರಾಷ್ಟ್ರದಲ್ಲಿ ಸಂಬಂಧವಿದ್ದೇ ಇದೆ.

° ° °

ಭೂತಾನದ ಪ್ರಧಾನಿಯ ಕೊಲೆಯಲ್ಲಿ ಚೀನಾದ ಕೈವಾಡವಿದ್ದರೂ ಇರಬಹುದು.

— ಮೊಸರಿನಲ್ಲಿ ಕಲ್ಲು ಹುಡುಕಿದರೆ ಸಿಗುವುದಂಟು.

° ° °

ಭಾರತ ಸರಕಾರವು ಮೆಡಿಕಲ್ ಸ್ಟೋರ್ಸ್ ವಿಭಾಗದಲ್ಲಿ ಸಂತಾನ ನಿಯಂತ್ರಣದ 'ಪೋತಿಮ್' ಮಾತ್ರೆಗಳನ್ನು ತಯಾರಿಸುತ್ತಿದೆ.

—ಸಂತಾನಾಪೇಕ್ಷಿಗಳಿಗಾಗಿ ಸಂತಾನ ವರ್ಧಕ ಮಾತ್ರೆಗಳನ್ನೂ ತಯಾರಿಸಲಾಗುತ್ತದೆಯೆಂಬುದು ಬರೇ ಕುಹಕವಂತೆ.

° ° °

ಬಳ್ಳಾರಿಯಲ್ಲಿ ಕತ್ತೆಯೊಂದು ನೋಟಿನ ಕಂತೆಯನ್ನೇ ತಿಂದುಬಿಟ್ಟಿತು.

—ಮೊದಲು ಅಧಿಕಾರಿಗಳು ಮಾತ್ರ ತಿನ್ನುತ್ತಿದ್ದರು ಈಗ ಕತ್ತೆಗಳೂ ಸಹಾ....

° ° °

ರಷ್ಯದ ಪ್ರಧಾನಿ ನಿಕಿಟಾ ಕ್ರುಶ್ಚೇವ್ ನಿಧನರಾದರೆಂಬ ವರದಿ ಶುದ್ಧ ಸುಳ್ಳು ಎಂದು ಸೋವಿಯತ್ ವಾರ್ತಾ ಸಂಸ್ಥೆ 'ತಾಸ್'ದ ಉಪ ಸಂಪಾದಕರು ಹೇಳಿದರು.

—ಎಪ್ರಿಲ್ ಕಳೆಯುತ್ತಾ ಬಂದರೂ ಇದಾವ ಫೂಲು?

° ° °

—ಶ್ರೀ ಕಂಸ ಐತಾಳ, ಹಾರ್ಯಾಡಿ.

ನವಯುಗ

ವರುಷ	ಉಡುಪಿ	ವಾರ
೪೩	೨೩-೪-೧೯೬೪	೩೪

ಶುಭಕಾರ್ಯ

ಅಶೋಕ ಮೆಹತಾರವರು ಯೋಜನಾ ಆಯೋಗದ ಉಪಾಧ್ಯಕ್ಷ ಪದವಿಯನ್ನು ಸ್ವೀಕರಿಸಿದಂದಿನಿಂದ ಪ್ರಸವಾ ಪಕ್ಷದಲ್ಲಿಯೂ ಇಬ್ಬಗೆಯಾದಂತಿದೆ. ಒಂದು ಪಂಗಡದವರು ಅಶೋಕ ಮೆಹತಾರ ನೀತಿಯನ್ನು ಒಪ್ಪಿದರೆ, ಇನ್ನೊಂದು ಗುಂಪಿನವರು ಅದನ್ನು ವಿರೋಧಿಸಿದರು. ಮೆಹತಾರನ್ನು ಪಕ್ಷದಿಂದ ಹೊರಗಿಡುವಂತಹ ಯೋಚನೆಯನ್ನೂ ಅವರು ಮಾಡಿದರು. ಆದರೆ, ಇದಾವುದರಿಂದಲೂ ಮೆಹತಾರು ಧೃತಿಗೆಡಲಿಲ್ಲ. ತಾನು ಇಟ್ಟ ಹೆಜ್ಜೆಯು ಸರಿಯೆಂದವರು ಕಂಡುಕೊಂಡಿದ್ದರು; ಆದುದರಿಂದ ಅದನ್ನು ಹಿಂದಿಡುವಂತಹ ಪ್ರಶ್ನೆಯೇ ಅವರ ಮುಂದೆ ಬರಲಿಲ್ಲ. ಪ್ರಸವಾ ಪಕ್ಷದ ಕೆಲವು ನಾಯಕರು ವಹಿಸಿದ ನೀತಿಯಿಂದಾಗಿಯೇ ಆ ಪಕ್ಷಕ್ಕೆ ಕುಠಾರ ಬಡಿದಂತಾಗಿದೆ. ಮೆಹತಾರ ಬೆಂಬಲಿಗರೂ ಪಕ್ಷದ ಹಿರಿಯ ವ್ಯಕ್ತಿಗಳೂ ಆದ ಹಲವರು ಪ್ರಸವಾದ ಸದಸ್ಯತ್ವಕ್ಕೆ ರಾಜಿನಾಮೆ ನೀಡಿ ಕಾಂಗ್ರೆಸ್ಸನ್ನು ಸೇರಲಿರುವರೆಂದು ದಟ್ಟವಾದ ವರದಿಗಳು ನಂಬಲರ್ಹಮೂಲಗಳಿಂದ ಬರತೊಡಗಿವೆ. ಹೀಗಾದಲ್ಲಿ ಮೊದಲೇ ಬಡವಾಗಿದ್ದ ಪ್ರಸಾವ ಪಕ್ಷವು ಮತ್ತಷ್ಟು ಬಡವಾಗುವುದರಲ್ಲಿ ಸಂದೇಹವಿಲ್ಲ.

ನಮ್ಮ ದೇಶದಲ್ಲಿ ಹಲವಾರು ಪಕ್ಷಗಳಿವೆ. ಇವುಗಳ ನಡುವಣ ರಾಜಕೀಯ ಭಿನ್ನಾಭಿಪ್ರಾಯಗಳಿಗಿಂತಲೂ ಅವುಗಳಲ್ಲಿ ಸೇರಿಕೊಂಡಿರುವ ವ್ಯಕ್ತಿಗಳ ವ್ಯಕ್ತಿಗತ ಭಿನ್ನಾಭಿಪ್ರಾಯಗಳೇ ಈ ವಿಭಿನ್ನತೆ ಪ್ರೇರಕವೆನ್ನಬಹುದು. ಅಭಿಪ್ರಾಯ ಸ್ವಾತಂತ್ರ್ಯವಿರುವ ನಮ್ಮ ಭಾರತದಲ್ಲಿ ಪ್ರತಿಯೊಬ್ಬನೂ ತನ್ನದೇ ಅಭಿಮತ ವ್ಯಕ್ತಪಡಿಸಲು ಸಮರ್ಥನಿದ್ದಾನೆ. ಆದರೂ ಚಿಕ್ಕಪುಟ್ಟ ಮತಭೇದಗಳನ್ನು ಲಕ್ಷಿಸಿ ಒಂದೊಂದು ಪಕ್ಷವನ್ನು ಕಟ್ಟಲು ತೊಡಗಿದರೆ, ಜನಕ್ಕೊಂದು ಪಕ್ಷವಾದೀತು. ಆದುದರಿಂದ ಒಬ್ಬನ ಅಭಿಪ್ರಾಯಕ್ಕೆ ಸಾಮಾನ್ಯವಾಗಿ ಸರಿಹೊಂದುವ ಪಕ್ಷವನ್ನು ಸೇರುವುದು ಉಚಿತ. ಆದರೆ, ನಮ್ಮ ಶಕ್ತಿಯು ಹೊಸ ಹೊಸ ಪಕ್ಷಗಳನ್ನು ಕಟ್ಟುವುದರಲ್ಲಿಯೇ ವ್ಯಯವಾಗುತ್ತಿರುವುದು ಶುಭಚಿಹ್ನೆಯಲ್ಲ. ಕಾಂಗ್ರೆಸ್‌ನೊಂದಿಗೆ ತಲೆದೋರಿದ ಕೆಲವು ಭಿನ್ನಾಭಿಪ್ರಾಯದ ಪರಿಣಾಮವಾಗಿಯೇ ಕೆಲವರು ಗಣ್ಯವ್ಯಕ್ತಿಗಳು ಅದರಿಂದ ಹೊರಬಂದು ಪ್ರಜಾ ಪಕ್ಷವನ್ನು ಕಟ್ಟಿದ್ದನ್ನೂ, ಅದು ಮುಂದೆ ಸಮಾಜವಾದಿ ಪಕ್ಷದೊಡನೆ ಕೂಡಿಕೊಂಡದ್ದನ್ನೂ ನಾವು ಗಮನಿಸಬೇಕು. ಹಾಗಾದರೂ ಬಲಿಷ್ಠವಾದ ಪ್ರತಿಪಕ್ಷವೊಂದು ನಿರ್ಮಾಣವಾಗುವುದು ಸಾಧ್ಯವಾಗಲಿಲ್ಲ; ಪ್ರಸವಾ ಪಕ್ಷದ ಬಲವಾದರೂ ದಿನದಿಂದ ದಿನಕ್ಕೆ ಕ್ಷೀಣಿಸುತ್ತ ಬರುತ್ತಿರುವುದನ್ನು ನಾವು ಮರೆಯುವಂತಿಲ್ಲ. ಇಂತಹ ಸನ್ನಿವೇಶದಲ್ಲಿ ಸಮಾನಾಭಿಪ್ರಾಯವಿರುವ ರಾಜಕೀಯ ಪಕ್ಷಗಳು ಒಂದರೊಡನೊಂದು ವಿಲಯನ ಹೊಂದುವ ಬಗ್ಗೆಯೂ ಪ್ರಸ್ತಾಪಗಳು ಬರತೊಡಗಿದುವು. ಆದರೆ, ಅದೇನು ಕಾರಣವೋ ಪಕ್ಷಗಳ ಸಂಖ್ಯೆ ನಮ್ಮಲ್ಲಿ ಕಡಿಮೆಯಾಗಲಿಲ್ಲ.

ಪ್ರಸವಾ ಮತ್ತು ಕಾಂಗ್ರೆಸ್ ಪಕ್ಷಗಳ ನೀತಿಯು ಮೂಲಭೂತವಾಗಿ ಒಂದೇ ಆಗಿದೆ. ಆದರೆ, ಆ ನೀತಿಯನ್ನು ಕಾರ್ಯರೂಪಕ್ಕಿಳಿಸುವ ವಿಧಾನದಲ್ಲಿ ಮಾತ್ರ ತುಸು ವ್ಯತ್ಯಾಸವಿದೆ. ಇಂದು ಕಾಂಗ್ರೆಸ್ ಪ್ರಜಾಪ್ರಭುತ್ವದ ತಳಹದಿಯಲ್ಲಿಯೇ ಸಮಾಜವಾದ ರೂಪಿಸುವುದನ್ನು ತನ್ನ ನೀತಿಯನ್ನಾಗಿ ಅನುಷ್ಠಾನಕ್ಕೆ ತರುತ್ತಿದೆ. ಹಾಗಿರುವಾಗ, ಪ್ರಸವಾ ಪಕ್ಷವಾದರೂ ಕಾಂಗ್ರೆಸಿನೊಂದಿಗೆ ಸೇರಿ, ಅದರ ಕೈಯನ್ನು ಬಲಗೊಳಿಸಿತೆಂದರೆ, ದೇಶದ ಅಭಿವೃದ್ಧಿ ಕಾರ್ಯಕ್ರಮಗಳಿಗೊಂದು ಹೊಸ ಶಕ್ತಿ ಮೂಡುವುದು ಸ್ವಾಭಾವಿಕ. ಇದರಿಂದ ಎಲ್ಲರೂ ಬಯಸುವ ಸುಖೀ ರಾಜ್ಯ ಸ್ಥಾಪನೆಯೂ ಸರಳವಾಗುವುದು ಖಂಡಿತ. ಪ್ರಸವಾ ಪಕ್ಷದ ನಾಯಕಮಣಿಗಳಾಗಿದ್ದ ಅಶೋಕ ಮೆಹತಾರೇ ಹೇಳುವಂತೆ ಬರೇ ಪ್ರಸವಾ ಪಕ್ಷದಿಂದ ಯಾವ ಉದ್ದೇಶವೂ ಸಾಧಿತವಾಗಲಾರದು ಆದುದರಿಂದ ಕಾಂಗ್ರೆಸ್ಸಿನೊಂದಿಗೆ ಸಹಕರಿಸಿ ದೇಶೋದ್ಧಾರದ ಕಾರ್ಯದಲ್ಲಿ ಸಹಭಾಗಿಯಾಗುವುದು ಉಚಿತ. ಅಶೋಕ ಮೆಹತಾರವರಿಗೆ—ಪರವಾಗಿರುವ ಕೆಲವು ನಾಯಕರು ಅವರ ಮನೆಯಲ್ಲಿಯೇ ಸಭೆ ಸೇರಿ, ಕಾಂಗ್ರೆಸಿಗೆ ಸೇರುವ ನಿರ್ಧಾರ ಮಾಡಿದ್ದು ನಿಜಕ್ಕೂ ಸ್ವಾಗತಾರ್ಹ. ಅವರು ಇಂತಹ ನಿರ್ಧಾರಕ್ಕೆ ಬರಲು ಯಾವ ಕಾರಣವಿದ್ದರೂ ಅವರಿಟ್ಟ ಹೆಜ್ಜೆ ಸಮಾಜವಾದದಲ್ಲಿ ವಿಶ್ವಾಸವಿಟ್ಟವರಿಗೆ ಮಾರ್ಗದರ್ಶಕವಾಗಿದೆ. ಪಕ್ಷದೊಳಗೆನೇ ಭಿನ್ನಾಭಿಪ್ರಾಯ ಮೂಡಿದ ಘಟನೆ ಕಮ್ಯುನಿಸ್ಟರಲ್ಲಿಯೂ ತಲೆದೋರಿದೆ. ಕೇರಳದ ಹಿಂದಿನ ಕಮ್ಯೂನಿಸ್ಟ್ ಸರಕಾರದಲ್ಲಿ ಮುಖ್ಯ ಮಂತ್ರಿಯಾಗಿದ್ದ ಇ. ಎಂ. ಎಸ್. ನಂಬೂದ್ರಿಪಾದರು ಪಕ್ಷದ ಅಧ್ಯಕ್ಷ ಎಸ್. ಎ. ಡಾಂಗೆಯವರ ಮೇಲೆಯೇ ಯುದ್ಧ ಸಾರತೊಡಗಿದ್ದಾರೆ. ಹೀಗೆ ಪಕ್ಷದಲ್ಲಿ ಆಂತರಿಕ ಕಲಹ ಮನೆ ಮಾಡಿರುವಾಗ, ಅದು ಏನನ್ನು ತಾನೇ ಸಾಧಿಸಬಲ್ಲುದು? ನಾಯಕ ಮಣಿಗಳಾದವರು ತಂತಮ್ಮ ಭದ್ರತೆ ಮತ್ತು ಸುರಕ್ಷೆಗಳಿಗಾಗಿಯೇ ಹೋರಾಡತೊಡಗಿದ್ದರೆ, ದೇಶದ ಹಿತಚಿಂತನೆ ಹೇಗೆ ಸಾಧ್ಯವೆನಿಸೀತು? ಇದನ್ನೆಲ್ಲಾ ಕಂಡುಕೊಂಡ ಪ್ರಸವಾದ ನಾಯಕರು ಸರಿಯಾದ ಹೆಜ್ಜೆಯನ್ನೇ ಇಟ್ಟಿದ್ದಾರೆ. ಅವರು ನಡೆದ ದಾರಿಯನ್ನೇ ಉಳಿದವರೂ ತುಳಿದರೆ, ಪಕ್ಷಗಳ ಸಂಖ್ಯೆಯಾದರೂ ಕಡಿಮೆಯಾದೀತು; ಆಡಳಿತ ಪಕ್ಷಕ್ಕೆ ಸಮರ್ಥ ವಿರೋಧಿ ಪಕ್ಷ ಬೆಳೆದು ಬರುವುದಕ್ಕೆ ಅನುಕೂಲ ವಾತಾವರಣವೂ ಮೂಡಿಬಂದೀತು.

ಶೇಖರ ನಿಲುಮೆ

ಶೇಖ ಅಬ್ದುಲ್ಲಾರವರ ಸಾರ್ವತ್ರಿಕ ಭಾಷಣಗಳಿಂದ ಅವರ ಮನೋವೃತ್ತಿಯನ್ನು ಹೇಳುವುದಾದರೆ, ಕಾಶ್ಮೀರವು ಭಾರತದಲ್ಲಿ ವಿಲೀನಗೊಂಡಿಲ್ಲ; ಜನಮತಗಣನೆಯಿಂದಲೇ ಅದು ಯಾರಿಗೆ ಸೇರಬೇಕೆಂಬುದನ್ನು ನಿರ್ಧರಿಸಬೇಕು—ಎಂಬುದವರ ಆಶಯವಿದ್ದಂತಿದೆ. ಆದರೆ, ಶೇಖರ ಈ ವಾದವನ್ನು ಯಾರೂ ಒಪ್ಪುವುದಿಲ್ಲ. ಕಾಶ್ಮೀರದ ಸೇರ್ಪಡೆಯು ಭಾರತದಲ್ಲಿ ಈ ಹಿಂದೆಯೇ ಆಗಿರುವುದರಿಂದ ಭಾರತ ನೀತಿಗೆ ಸಂಪೂರ್ಣ ಬೆಂಬಲ ಕಾಶ್ಮೀರದಲ್ಲಿದೆ. ಅಲ್ಲಿನ ಪ್ರಧಾನಿ ಸಾದಿಕರು, ಶೇಖ ಅಬ್ದುಲ್ಲಾರು ಪಾಕಿಸ್ತಾನದ ಪರವಾಗಿಲ್ಲವೆಂಬುದಕ್ಕೆ ತೃಪ್ತಿ ವ್ಯಕ್ತಪಡಿಸಿದ್ದಾರೆ; ಸ್ವತಂತ್ರ ಕಾಶ್ಮೀರದ ಕನಸನ್ನೂ ಶೇಖರು ಕಾಣುತ್ತಿಲ್ಲವೆನ್ನುತ್ತಾರೆ. ಇಷ್ಟರಿಂದಲೇ ಸಮಾಧಾನ ಪಡುವುದು ಯಾರಿಗೂ ಸಾಧ್ಯವಿಲ್ಲ. ಕಾಶ್ಮೀರದ ಜನತೆ ತಮ್ಮ ರಾಜ್ಯದ ಸಂವಿಧಾನ ರಚಿಸಿ ಭಾರತದಲ್ಲಿ ಸೇರ್ಪಡೆಯನ್ನು ಸಾರಿರುತ್ತದೆ. ಆ ಸಮಯದಲ್ಲಿ ಸ್ವಯಂ ಶೇಖರೇ ಕಾಶ್ಮೀರದ ಪ್ರಧಾನಿಯಾಗಿದ್ದುದನ್ನು ನಾವು ಮರೆಯಬಾರದು. ೧೯೪೭ರಲ್ಲಿ ಭಾರತೀಯ ಸೇನೆಗಳು ಕಾಶ್ಮೀರದ ರಕ್ಷಣೆಗೆ ಹೋದಾಗಲೂ ಭಾರತ ಹೇಳಿತ್ತು, ಕಾಶ್ಮೀರಿಗಳು ಭಾರತ—ಪಾಕಿಸ್ತಾನಗಳಲ್ಲಿ ಯಾವುದರೊಡನೆಯೂ ಸೇರಿಕೊಳ್ಳಲು ಸ್ವತಂತ್ರರಿದ್ದಾರೆಯೆಂದು. ಇದರಂತೆ ಅವರು ಭಾರತದಲ್ಲಿ ಸೇರಿಕೊಂಡರು. ಇದರಲ್ಲಿ ಯಾರ ಕೈವಾಡವೂ ಇಲ್ಲ. ಅಂದಿನಿಂದ ಇಂದಿನವರೆಗೂ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದೆ; ಮುಂದೆಯೂ ಹಾಗೆಯೇ ಉಳಿಯುವುದು. ಶೇಕ ಅಬ್ದುಲ್ಲಾರ ಭಾಷಣ ಕೇಳಲು ಸಾವಿರಾರು ಜನ ಸೇರಿದರೆ, ಅದು ಅವರ ವಿಲಕ್ಷಣವಾದುದರಿಂದ ಮನಸೋತಲ್ಲ; ಒಂದೊಮ್ಮೆ ತಮ್ಮ ಪ್ರಧಾನಿಯಾಗಿದ್ದ ಗೌರವಾನ್ವಿತ ವ್ಯಕ್ತಿಗೆ ತಮ್ಮ ಕೃತಜ್ಞತೆಗಳನ್ನು ಅರ್ಪಿಸಲು ಮಾತ್ರ. ಈ ಸಂಗತಿಯನ್ನು ಶೇಖರು ಎಷ್ಟು ಬೇಗ ಅರಿತುಕೊಳ್ಳುವರೋ ಅಷ್ಟು ಅವರಿಗೂ ದೇಶಕ್ಕೂ ಹಿತಕರ.

ಜಗತ್ಪರ್ಯಟನ

ಡಾ| ಕೆ. ಎಲ್. ರಾವ್

ವಿಜಾಪುರ ಜಿಲ್ಲೆಯ ನಾರಾಯಣಪುರ ಮತ್ತು ಅಲಮಟ್ಟಿಗಳಲ್ಲಿ ನಿಯೋಜಿತ ಅಣೆಕಟ್ಟುಗಳು ಮೂರ್ತರೂಪಕ್ಕೆ ಬರಬೇಕೆಂಬ ಬೇಡಿಕೆಯು ಅನ್ನಸತ್ಯಾಗ್ರಹಕ್ಕೆ ನಾಂದಿಯಾಗುವುದಕ್ಕೂ ಮುಂದಾಯಿತು. ಕೇಂದ್ರ ನೀರಾವರಿ ಮಂತ್ರಿ ಡಾ| ಕೆ. ಎಲ್. ರಾವ್ ಈ ಎರಡೂ ಸ್ಥಳಗಳನ್ನು ಸಂದರ್ಶಿಸಿದರು. ಅಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹತ್ತು ಅಡಿಗಳಷ್ಟು ಹೆಚ್ಚಿಸಲು ಅವರು ಒಪ್ಪಿದರೇ ಹೊರತು ಅಣೆಕಟ್ಟು ಎಲ್ಲೆಲ್ಲಿ ಕಟ್ಟಲಾಗುವುದೆಂಬುದಕ್ಕೆ ಅಂತಿಮ ಅಭಿಪ್ರಾಯವನ್ನು ನೀಡಲಿಲ್ಲ. ಆದರೆ, ಕರ್ನಾಟಕ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಮಾತ್ರ ಎರಡು ಕಡೆಯಲ್ಲಿ ಅಣೆಕಟ್ಟು ಕಟ್ಟಲಾಗವುದೆಂದೂ ಲಾಲಬಹದೂರ ಶಾಸ್ತ್ರಿಯವರು ಅವುಗಳಿಗೆ ಮೇ ಮೊದಲ ವಾರದಲ್ಲಿ ಅಸ್ತಿವಾರ ಹಾಕಲಿರುವರೆಂದೂ ಹೇಳಿದ್ದಾರೆ. ಇಂತಹ ಹೇಳಿಕೆಗಳಿಗೆ ಅರ್ಥವೇನು ಎಂದು ತಿಳಿಯದಂತಾಗಿದೆ.

ನಿಕೀಟಾ ಕ್ರುಶ್ಚೇವ್

ಸೋವಿಯತ್ ರಷ್ಯಾದ ಪ್ರಧಾನಿ ನಿಕಿಟಾ ಕ್ರುಶ್ಚೇವರಿಗೆ ಎಪ್ಪತ್ತು ವರ್ಷ ತುಂಬಿತು. ಅವರ ಎಪ್ಪತ್ತೊಂದನೆಯ ಜನ್ಮದಿನಾಚರಣೆಯ ಸಡಗರದಲ್ಲಿಯೇ ಸೋಜಿಗವೊಂದೂ ನಡೆಯಿತು. ಪಶ್ಚಿಮ ಜರ್ಮನಿಯ ವಾರ್ತಾ ಸಂಸ್ಥೆಯು ತನ್ನ ರೇಡಿಯೋವಿನಲ್ಲಿ ಕ್ರುಶ್ಚೇವರು ಮೃತ್ಯುವಿಗೆ ತುತ್ತಾದರೆಂದು ವಾರ್ತಾ ಪ್ರಸಾರ ಮಾಡಿತು. ಇದನ್ನೇ ಇನ್ನೂ ಕೆಲವು ರೇಡಿಯೋಗಳು ಮರು ಪ್ರಸಾರ ಮಾಡಿದುವು. ಕೊನೆಗೆ ಇದು ಸುಳ್ಳು ಸುದ್ದಿಯೆಂದು ಗೊತ್ತಾಗಿ ತಪ್ಪು ವರದಿಗಳಿಂದಾದ ಗೊಂದಲವಿದೆಂದೂ ಪ್ರಕಟವಾಯ್ತು. ಅಂತೂ ಎಪ್ಪತ್ತೊಂದರ ಕ್ರುಶ್ಚೇವರು ಒಮ್ಮೆ ಸತ್ತು ಮತ್ತೆ ಬದುಕಿ ಬಂದರು; ಜಗತ್ತಿನ ವಿಚಾರ ಜೀವಿಗಳ ವಿಚಾರಕ್ಕೆ ಮತ್ತೆ ಶಕ್ತಿತುಂಬಿದರು. ಆದರೆ, ಈಗ ಹುಟ್ಟಿದ ಕ್ರುಶ್ಚೇವರು ಇಪ್ಪತ್ತೊಂದರ ಯುವಕರಾಗಿದ್ದಾರೆಯೇ ಎಂದು ಕಾದು ನೋಡಬೇಕಷ್ಟೆ.

ಮಹಾವೀರ ತ್ಯಾಗಿ

ಕಾಂಗ್ರೆಸಿನ ಪ್ರತಿಭಾವಂತ ಬುದ್ಧಿಜೀವಿ ಹಿರಿಯ ಸದಸ್ಯರಾದ ಮಹಾವೀರ ತ್ಯಾಗಿಯವರು ಮತ್ತೆ ಮಂತ್ರಿ ಮಂಡಳ ಸೇರಿದ್ದಾರೆ. ಪುನರ್ನಿವೇಶನ ಮಂತ್ರಿ ಖಾತೆಯನ್ನವರು ವಹಿಸಿಕೊಂಡಿದ್ದಾರೆ. ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಗೆ ವಸತಿ ಸೌಕರ್ಯವನ್ನು ಒದಗಿಸುವ ಮಹತ್ವದ ಹೊಣೆಗಾರಿಕೆ ಅವರ ತಲೆಯ ಮೇಲೆ ಬಿದ್ದಿದೆ. ತ್ಯಾಗ ಬುದ್ಧಿಯಿಂದಲೇ ಮಹಾವೀರರಾದ ಇವರು ಈ ಗುರು ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುವರೆಂದು ನಂಬುಗೆಯಿದೆ. ಈ ಕಾರ್ಯಭಾರದ ಬಳಿಕ ಅವರು ಗುಡ್ಡಗಳ ಆದಿವಾಸಿಗಳ ಸಮಸ್ಯೆಗಳನ್ನು ಕೂರ್ಸಿ ಹಿಂದುಳಿದ ಪ್ರದೇಶಗಳ ಮುನ್ನಡೆಯಲ್ಲಿಯೂ ಯಶಸ್ವಿಯಾಗಿ ಕಾರ್ಯಕರ್ತರಾಗುವರೆಂದು ನಂಬಬಹುದು. ತ್ಯಾಗಿಯವರ ವ್ಯಕ್ತಿತ್ವವೇ ಅಂತಹುದು.

ಜಿ. ಎಂ. ಸಾದಿಕ್

ಕಾಶ್ಮೀರದ ಸಿಂಹ ಶೇಖ ಅಬ್ದುಲ್ಲಾರ ಬಿಡುಗಡೆಯ ನಂತರ ಅವರ ಹೇಳಿಕೆಗಳಿಂದ ನೊಂದವರು ಹಲವರು. ಕಾಶ್ಮೀರಿ ಪ್ರಧಾನಿ ಜಿ. ಎಂ. ಸಾದಿಕರು ಮಾತ್ರ ಹೆಚ್ಚಿನ ಚಿಂತೆ ಪಡೆದಿಲ್ಲ. ತಾವು ಬಹು ಆಲೋಚನೆ ಮಾಡಿಯೇ ಉಚಿತ ಕಾಲದಲ್ಲಿಯೇ ಅವರನ್ನು ಬಿಡುಗಡೆ ಮಾಡಿರುವುದಾಗಿ ಅವರು ಹೇಳುತ್ತಾರೆ. ಶೇಖರಿನ್ನೂ ತನ್ನ ಕಾಶ್ಮೀರ ನೀತಿಯನ್ನು ಸ್ಪಷ್ಟವಾಗಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಬೆಳೆಯುತ್ತಿರುವ ಮಣಿಪಾಲದಲ್ಲಿ ಮೆರೆಯುತ್ತಿರುವ ಪ್ರಧಾನ ಕಾರ್ಯಾಲಯದ

ಹೊಸ ಕಟ್ಟಡದ ಉದ್ಘಾಟನಾ ಸಮಾರಂಭ

ಸಿಂಡಿಕೇಟ್ ಬ್ಯಾಂಕು ಉಡುಪಿಯಿಂದ ಕೇವಲ ಮೂರು ಮೈಲು ದೂರದ ವಿದ್ಯಾಕೇಂದ್ರವಾಗಿ ಬೆಳೆದು ಬರುತ್ತಿರುವ ಮಣಿಪಾಲದಲ್ಲಿ ತನ್ನ ಪ್ರಧಾನ ಕಾರ್ಯಾಲಯವನ್ನು ಪ್ರಾರಂಭಿಸಿತು. ಈ ಕಾರ್ಯಾಲಯ ಭವನದ ಉದ್ಘಾಟನೆಯನ್ನು ತಾ. 19ರಂದು ಕೇಂದ್ರದ ಉಕ್ಕು ಗನಿ ಮತ್ತು ಭಾರ ಉದ್ದಿಮೆಯ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ನೆರವೇರಿಸಿದರು. ಜಿಲ್ಲೆಯ ನಾನಾ ಮೂಲೆಗಳಿಂದ ಮಾತ್ರವಲ್ಲ ದಕ್ಷಿಣ ಭಾರತ-ಮಹಾರಾಷ್ಟ್ರ ಮೊದಲಾದೆಡೆಗಳಿಂದಲೂ ಕಿಕ್ಕಿರಿದ ದಟ್ಟಣೆಯು ಸಮಾರಂಭಕ್ಕೆ ಅತಿ ಶೋಭೆಯನ್ನು ನೀಡಿತ್ತು.

ಶ್ರೀಮತಿ ಉಷಾ ಖಾಡಿಲ್ಕರರು ಪ್ರಾರ್ಥನೆ ಮಾಡಿದ ತರುವಾಯ ಬ್ಯಾಂಕಿನ ಡೈರೆಕ್ಟರ ಮಂಡಳಿಯ ಅಧ್ಯಕ್ಷ ಡಾ| ಟಿ. ಎಂ. ಎ ಪೈ ಅವರು ಅಸಂಖ್ಯಾತ ಜನಸ್ತೋಮವನ್ನು ಸ್ವಾಗತಿಸುತ್ತ ಬ್ಯಾಂಕು ಸ್ಥಾಪನೆಗೊಂಡಾಗ ಅವರ ಸಂಸ್ಥಾಪಕರು ಇಟ್ಟುಕೊಂಡಿದ್ದ ವಿಚಾರಧಾರೆ, ಪಿಗ್ಮಿಯೇ ಮೊದಲಾದ ಸಕಲ ಜನೋಪಯೋಗಿ ಯೋಜನೆಗಳು, ಕಳೆದ ೩೭ ವರ್ಷಗಳಲ್ಲಿ ಸಿಂಡಿಕೇಟು ಗಳಿಸಿದ ಪ್ರಗತಿ ಮತ್ತು ಜನಪ್ರಿಯತೆ ಮೊದಲಾದುವನ್ನು ಪ್ರಸ್ತಾಪಿಸಿ ಗ್ರಾಮೀಣ ಜನತೆಯಲ್ಲಿ ಬ್ಯಾಂಕಿಂಗ್ ಚಿತ್ತ ಬೆಳೆಸುವಲ್ಲಿ ಬ್ಯಾಂಕಿನ ಪುರೋಗಾಮಿತ್ವವನ್ನು ಎತ್ತಿ ಹೇಳಿದರು.

ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ ಪೈಯವರು ಸಂದೇಶವಾಚನ ಮಾಡಿದರು. ರಾಷ್ಟ್ರೀಯ ಅಭಿವೃದ್ಧಿಗೆ ಬ್ಯಾಂಕುಗಳು ನೆರವಾಗುವುದರ ಅಗತ್ಯವನ್ನು ಎತ್ತಿ ಹೇಳಿ ಸಿಂಡಿಕೇಟ್ ಈ ದಿಸೆಯಲ್ಲಿ ಹಿಂದಿನಿಂದಲೇ ಪ್ರಾರಂಭವಾಗಿದೆಯೆಂದರು.

ಸಭಿಕರ ಪರವಾಗಿ "ಮಲೆಯಾಳ ಮನೋರಮಾ" ದೈನಿಕದ ಪ್ರಧಾನ ಸಂಪಾದಕರಾದ ಶ್ರೀ ಎಸ್ ಚೆರಿಯನ್ ಮತ್ತು ಪ್ರೀಮಿಯರ್ ಆಟಮೊಬೈಲ್ಸ್‌ನ ಡೈರೆಕ್ಟರ್ ಶ್ರೀ ಚಂದ್ರಕಾಂತ ದೇಸಾಯಿಯವರು ಬ್ಯಾಂಕಿಗೆ ಶುಭಕೋರಿ ಪೈದ್ವಯರ ಕರ್ತೃತ್ವ ಮತ್ತು ಕ್ರಿಯಾಶಕ್ತಿಗಳನ್ನು ಶ್ಲಾಘಿಸಿದರು.

ಮಾನ್ಯ ಮಂತ್ರಿಗಳು ತನ್ನ ಉದ್ಘಾಟನಾ ಭಾಷಣದಲ್ಲಿ ಸಿಂಡಿಕೇಟ್ ಬ್ಯಾಂಕು ರಾಷ್ಟ್ರೀಯ ದೃಷ್ಟಿ ಕೋನವಿಟ್ಟು ಮುನ್ನಡೆಯುತ್ತಿರುವುದನ್ನೂ ಗ್ರಾಮೀಣರಲ್ಲಿ ಉಳಿತಾಯ ಮತ್ತು ಬ್ಯಾಂಕಿಂಗ್ ಚಿತ್ತವನ್ನು ಹುಟ್ಟಿಸುತ್ತಿರುವುದನ್ನೂ ಪ್ರಶಂಸಿಸಿ ಇದೇ ನೀತಿಯನ್ನು ಎಲ್ಲಾ ಬ್ಯಾಂಕುಗಳೂ ಅನುಸರಿಸಿದರೆ ಬ್ಯಾಂಕು ರಾಷ್ಟ್ರೀಕರಣದ ಪ್ರಶ್ನೆ ತನಗೆ ತಾನಾಗಿಯೇ ನೀಗಬಹುದು ಎಂದು ಹೇಳಿದರು



ಶ್ರೀ ಸಿ. ಸುಬ್ರಹ್ಮಣ್ಯಂರವರು ನೂತನ ಕಟ್ಟಡದ ಪ್ರವೇಶಾರಂಭದಲ್ಲಿ ರಿಬ್ಬನ್ ಕತ್ತರಿಸುತ್ತಿರುವುದು. ಚಿತ್ರದಲ್ಲಿ ಕಟ್ಟಡದ ಕಂಟ್ರಾಕ್ಟರ್ ಶ್ರೀ ಸಿ. ಶ್ರೀಪತಿ ಆಚಾರ್, ಚೆಯರ್‌ಮ್ಯಾನ್ ಡಾ| ಪೈ, ಶ್ರೀ ಸುಬ್ರಹ್ಮಣ್ಯಂ, ಮೆನೇಜಿಂಗ್ ಡೈರೆಕ್ಟರ್ ಶ್ರೀ ಪೈ ಮೊದಲಾದವರಿರುವರು.

ದಕ್ಷಿಣ ಕನ್ನಡದ ಜಾನಪದ ಕಲೆ ಯಕ್ಷಗಾನ ಕಲಾವಿದರಾದ ಸರ್ವ ಶ್ರೀ ಹಾರಾಡಿ ರಾಮ, ಕೃಷ್ಣ, ನಾರಾಯಣ (ಮಂದರ್ತಿ ಮೇಳ) ಉಡುಪಿ ಬಸವ, ಕೋಡಿ ಶೀನ, ಹಾರಾಡಿ ಮಂಜು (ಮಾರಣಕಟ್ಟೆ ಮೇಳ), ಇವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡದ ಸಜೀವ ವಿಶ್ವಕೋಶ ಶ್ರೀ ಕೋಟ ಶಿವರಾಮ ಕಾರಂತರು ಯಕ್ಷಗಾನದ ಪರಂಪರೆ ಮತ್ತು ವೈಶಿಷ್ಟ್ಯಗಳನ್ನು ವಿವರಿಸಿದರು.

ಬ್ಯಾಂಕಿನ ನವ್ಯ ಮತ್ತು ಭವ್ಯವಾದ ಶೋಭಾಯಮಾನ ಮತ್ತು ನೇತ್ರಾನಂದಕರವಾದ ಕಟ್ಟಡದ ಶಿಲ್ಪಿಗಳಾದ ಶ್ರೀ ಕಾಲೇಕರ್ ಮತ್ತು ಶ್ರೀ ಸಿ. ಶ್ರೀಪತಿ ಆಚಾರ್ ಇವರಿಗೆ ಮೆಚ್ಚುಗೆಯನ್ನು ನೀಡಲಾಯಿತು.

ಬ್ಯಾಂಕಿನ ಡೈರೆಕ್ಟರರಲ್ಲಿ ಒಬ್ಬರಾದ ಶ್ರೀ ರಾಜಾಶೇಖರರು ಧನ್ಯವಾದವನ್ನು ಅರ್ಪಿಸಿದರು.

ತಾ. ೧೮ರಂದು ರಾತ್ರಿ ದಕ್ಷಿಣ ಕನ್ನಡದ ಪ್ರಸಿದ್ಧ ಯಕ್ಷಗಾನ ಮೇಳಗಳಾದ ಮಂದರ್ತಿ ಮತ್ತು ಮಾರಣಕಟ್ಟೆ ಮೇಳಗಳ ಜೋಡ ಮೇಳ ಬಯಲಾಟವನ್ನು ಏರ್ಪಡಿಸಲಾಗಿತ್ತು.

ಮಣಿಪಾಲದಲ್ಲಿ ನೆರವೇರಿದ ಈ ಸಮಾರಂಭವು ಮಣಿಪಾಲದ ಮಾತ್ರವಲ್ಲ ಇಡಿ ಜಿಲ್ಲೆಯ ಅಪೂರ್ವ ಸಮಾರಂಭಗಳಲ್ಲಿ ಒಂದಾಗಿದೆ. ಸಿಂಡಿಕೇಟ್ ಬ್ಯಾಂಕು ಉಡುಪಿಯಿಂದ ಮಣಿಪಾಲದಲ್ಲಿ ಪಾದಾರ್ಪಣ ಮಾಡಿದ ಶುಭಸಮಾರಂಭವಾಗಿದೆ.

ಡಾ| ಪೈಗಳ ಸ್ವಾಗತ ಭಾಷಣ

ಮಣಿಪಾಲದಲ್ಲಿ ಬ್ಯಾಂಕಿನ ಪ್ರಧಾನ ಕಾರ್ಯಾಲಯ ನಿರ್ಮಿಸ ಬೇಕೆಂಬ ಡೈರೆಕ್ಟರರ ಹೃದಯದ ಕನಸು ನನಸಾದ ಈ ದಿನ ಮಹತ್ವದ ದಿನ. ಉಕ್ಕು, ಗನಿ ಮತ್ತು ಭಾರ ಉದ್ದಿಮೆಗಳ ಸಚಿವ ಶ್ರೀ ಸುಬ್ರಹ್ಮಣ್ಯಂ ರವರು ಕಟ್ಟಡವನ್ನು ಉದ್ಘಾಟಿಸಲು ನಮ್ಮ ಮುಂದಿರುವುದು ಸಂತೋಷದ ಸಂಗತಿ. ಇವರಂತಹ ನೀತಿವಂತ ಮತ್ತು ನಿಸ್ವಾರ್ಥ ಸೇವಕರು ಭವನವನ್ನು ಉದ್ಘಾಟಿಸುವುದು ನಿಜಕ್ಕೂ ನಮ್ಮ ಸೌಭಾಗ್ಯ. ಉಕ್ಕಿನ ಮಂತ್ರಿಗಳು ಈ ಸಮಾರಂಭದಲ್ಲಿ ಕೂಡಿಕೊಂಡಿರುವುದು ಅತೀವ ಸಮುಚಿತವೆಂದು ನಾನು ತಿಳಿಯುತ್ತೇನೆ. ಉಕ್ಕಿನ ಉನ್ನತ ಗುಣಗಳಾದ ಶಕ್ತಿ, ಉಪಯುಕ್ತತೆ ಮತ್ತು ಬಾಳಿಕೆಗಳನ್ನು ಎಲ್ಲಾ ಬ್ಯಾಂಕುಗಳು ಸ್ವಭಾವಿಕವಾಗಿ ಆಶಿಸುತ್ತವೆ.

ಕಳೆದ ದಶಂಬರದಲ್ಲಿ ಸಿಂಡಿಕೇಟ್ ಬ್ಯಾಂಕಿನ ಒಟ್ಟು ಠೇವುಗಳು ರೂ. 45 ಕೋಟಿಯನ್ನು ಮೀರಿದ್ದವು. ನಾವು ಶೀಘ್ರದಲ್ಲಿಯೇ 50 ಕೋಟಿಯ ಗುರಿಯನ್ನು ದಾಟಿ ದೊಡ್ಡ ಬ್ಯಾಂಕುಗಳ ಚಿಕ್ಕ ವರ್ತುಲಕ್ಕೆ ಕಾಲಿಡುವುದು ನಿಸ್ಸಂದಿಗ್ಧ. ಕಳೆದ ಮತ್ತು ಈ ವರ್ಷಗಳು ನಮ್ಮ ಬ್ಯಾಂಕಿಗೆ ಮಹತ್ವದ ವರ್ಷಗಳು. ನಮ್ಮ ವಿದೇಶ ವಿನಿಮಯ ಶಾಖೆ, ಉದ್ಯಮ ಮತ್ತು ಕೃಷಿಗಳ ಅರ್ಥ ವ್ಯವಸ್ಥಾ ವಿಭಾಗಗಳ ಪ್ರಾರಂಭ, ಬ್ಯಾಂಕಿನ ಹೆಸರಿನಲ್ಲಿ ಪರಿವರ್ತನೆ, ಮಣಿಪಾಲದ [illegible]ನ ಕಟ್ಟಡಕ್ಕೆ ಪ್ರಧಾನ ಕಾರ್ಯಾಲಯದ ಸ್ಥಾನಾಂತರಗಳು ಈ ವರ್ಷಗಳಲ್ಲಿಯೇ ನಡೆದುವು.

ಉಡುಪಿಯ ಮತ್ತು ಆಸುಪಾಸಿನ ನೇಕಾರರಿಗೆ ಮತ್ತು ಚಿಕ್ಕ ಉದ್ದಿಮೆಗಳಿಗೆ ನೆರವಾಗುವ ಉದ್ದೇಶದಿಂದ ನಮ್ಮ ಬ್ಯಾಂಕು 1925ರಲ್ಲಿ ಸ್ಥಾಪಿತವಾಯಿತು. ಬ್ಯಾಂಕಿನ ಸ್ಥಾಪಕರು, ಈ ಸಂಸ್ಥೆಯು ಸಾಧಾರಣ ವ್ಯಕ್ತಿಯ ಸಂಸ್ಥೆಯಾಗಬೇಕು, ಶ್ರೀಮಂತ ಯಾ ಬಡವ, ಉದ್ಯಮಿ ಯಾ ಕೃಷಿಕ, ವ್ಯಾಪಾರಿ ಯಾ ವಿದ್ಯಾರ್ಥಿ ಹೀಗೆ ಎಲ್ಲ ವರ್ಗದ ಜನರ ಪ್ರಯೋಜನಕ್ಕೂ ನಿಲುಕಬೇಕೆಂದು ಬಯಸಿದ್ದರು. ಈ ಉದ್ದೇಶಗಳನ್ನು ಗಮನದಲ್ಲಿಟ್ಟು ಡೈರೆಕ್ಟರರು ಎಲ್ಲರಿಗೂ ಉತ್ತಮ ಮತ್ತು ಉಪಯುಕ್ತ ಸೇವೆ ದೊರೆಯುವಂತೆ ಹೊಸ ಹೊಸ ಯೋಜನೆಗಳನ್ನು ಅರಸುತ್ತ ಬಂದರು. 1928ರಲ್ಲಿ ಚಿಕ್ಕ ಉಳಿತಾಯಕ್ಕೆ ಅನುಕೂಲವಾದ ಪಿಗ್ಮಿಡಿಪೊಜಿಟ್ ಯೋಜನೆಯನ್ನು ಪ್ರಾರಂಭಿಸಿತು. ದಿನಕ್ಕೆ ಎರಡಾಣೆಯಂತಹ ಚಿಕ್ಕ ಮೊತ್ತವನ್ನು ಖಾತೆದಾರನ ಮನೆಬಾಗಿಲಲ್ಲಿಯೇ ವಸೂಲು ಮಾಡುವ ವ್ಯವಸ್ಥೆಯನ್ನೂ ಮಾಡಿತು. ನಮ್ಮ ಡೈರೆಕ್ಟರರು ಗ್ರಾಮೀಣ ಮತ್ತು ಗ್ರಾಮ-ಶಹರ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯುವ ಧೀರ ಹೆಜ್ಜೆಯಿಟ್ಟರು. ಸಿಂಡಿಕೇಟಿನ ಹೆಚ್ಚು ಡಿಪೋಜಿಟುಗಳು ನಗರಗಳಿಂದ ಬಂದಿಲ್ಲ, ದೇಶದ ಬಹು ಸಂಖ್ಯೆಯ ಗಿರಾಕಿಗಳಿಂದ ಬಂದಿದೆ. ಬ್ಯಾಂಕಿನ ನೌಕರ ಮತ್ತು ಗಿರಾಕಿಗಳ ನಡುವೆ ವಿಶ್ವಾಸವಿದೆ. ಎಂತಲೇ ಸಿಂಡಿಕೇಟಿನ ಹೆಸರು ಮನೆ ಮನೆಯ ಮಾತಾಗಿ ಪರಿಣಮಿಸಿದೆ. ಈ ಜಿಲ್ಲೆಯಲ್ಲಿ ಹಳ್ಳಿಗಳಲ್ಲಿ ಶಾಖೆ ತೆರೆಯುವ ಸಿಂಡಿಕೇಟಿನ ಪುರೋಗಮನ ಪ್ರಶಂಸನೀಯ. ಈ ಜಿಲ್ಲೆಯಲ್ಲಿ ಸಿಂಡಿಕೇಟಿನ 46 ಶಾಖೆಗಳಿವೆ; 1.8 ಲಕ್ಷ, ಅಂದರೆ, ಜನಸಂಖ್ಯೆಯಲ್ಲಿ ಎಂಟಕ್ಕೆ ಒಬ್ಬನಂತೆ, ಖಾತೆಗಳಿವೆ.

ಬ್ಯಾಂಕಿನ ಪ್ರಮಾಣವನ್ನು ಹೆಚ್ಚಿಸಲು ಹೊಸ ಸೇವೆಗಳನ್ನು ತೊಡಗುವುದು ಅಗತ್ಯವಾಯ್ತು. ಸೇಫ್ ಕಸ್ಟಡಿ, ಇನ್ವೆಸ್ಟ್‌ಮೆಂಟ್, ಇಂಡಸ್ಟ್ರಿಯಲ್ ಮತ್ತು ಎಗ್ರಿಕಲ್ಚರಲ್ ಫಿನ್ಯಾನ್ಸ್, ಫಾರೈನ್ ಎಕ್ಸ್‌ಚೇಂಜ್, ಕರೆಸ್ಪೋಂಡೆಂಟ್, ಶೇರ್, ಇತ್ಯಾಗಳ ಮೆನೇಜ್‌ಮೆಂಟ್ ಮೊದಲಾದುವು ನಮ್ಮ ಕೆಲವು ಸೇವೆಗಳು. ಚಿಕ್ಕ ವ್ಯಾಪಾರಿ, ಉದ್ಯೋಗವಾರಂಭಿಸುವ ವೃತ್ತಿಪರಶಿಕ್ಷಿತ, ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ವಿಶೇಷ ರೀತಿಯ ಸಾಲ ನೀಡುವ ಯೋಜನೆ

ರಾಷ್ಟ್ರೀಯ ದೃಷ್ಟಿ ಬೆಳೆಸಿಕೊಂಡರೆ

ಶ್ರೀ ಸಿ. ಸುಬ್ರಹ್ಮಣ್ಯಂ ಅವರ ಉದ್ಘಾಟನಾ ಭಾಷಣ

ಸಿಂಡಿಕೇಟ್ ಬ್ಯಾಂಕಿನ ಪ್ರಧಾನ ಕಾರ್ಯಾಲಯದ ನೂತನ ಕಟ್ಟಡ

ನೂತನ ದಾಖಲೆ

ಈ ಸಿಂಡಿಕೇಟ್ ಬ್ಯಾಂಕಿನ ನೂತನ ಕಟ್ಟಡದ ಭವ್ಯತೆಯೊಂದೇ ಆಕರ್ಷಣೀಯವಾದ ವಿಷಯವಲ್ಲ; ಶ್ರೀ ಟಿ ಎ ಪೈ ಅವರು ಈಗಾಗಲೇ ನುಡಿದಂತೆ ಬ್ಯಾಂಕಿನ ಪ್ರಧಾನ ಕಚೇರಿಯನ್ನು ಪೇಟೆಪಟ್ಟಣ ನಗರಗಳಿಗೆ ಒಯ್ಯುವುದರ ಬದಲು, ಸಿಂಡಿಕೇಟಿನವರು ಪೇಟೆಯಿಂದ ಒಂದು ಪುಟ್ಟ ಹಳ್ಳಿಗೆ ಒಯ್ದು ಬ್ಯಾಂಕಿಂಗ್ ಇತಿಹಾಸದಲ್ಲಿಯೇ ಒಂದು ಹೊಸ ದಾಖಲೆಯನ್ನು ನಿರ್ಮಿಸಿದ್ದಾರೆ ಅದರೆ ಅವರು ಆರಿಸಿರುವ ಹಳ್ಳಿ ಒಂದು ಬೆಳೆಯುತ್ತಿರುವ ಹಳ್ಳಿ, ಈ ಹಳ್ಳಿಯ ಬೆಳವಣಿಗೆಗೆ ಬ್ಯಾಂಕಿನ ಈ ಕಚೇರಿಯಿಂದ ಸಹಾಯವಾಗುವುದೆಂದು ನಾವು ನಿರೀಕ್ಷಿಸಬಹುದು ಈ ಸ್ಥಳವು ಕೇವಲ ಬಂಜರು ನೆಲವಾಗಿದ್ದಾಗಿನಿಂದಲೂ ನಾನು ಇದನ್ನು ಬಲ್ಲೆ. ಮದರಾಸು ರಾಜ್ಯದಲ್ಲಿ ನಾನು ಸಚಿವನಾಗಿದ್ದಾಗ ಮೆಡಿಕಲ್ ಕಾಲೇಜಿನ ಕಟ್ಟಡದ ಸಲುವಾಗಿ ಇಲ್ಲಿ ನೂರಾರು ಎಕ್ರೆ ಜಾಗ ಬೇಕೆಂದು ಡಾ| ಪೈ ಅವರು ಸಲ್ಲಿಸಿದ ಅರ್ಜಿಯನ್ನು ಸಚಿವ ಸಂಪುಟವು ಪರಿಶೀಲಿಸಬೇಕಾಗಿತ್ತು. ಸರಿಯಾದ ಒಂದು ಆಸ್ಪತ್ರೆಯೂ ಇಲ್ಲದ ಒಂದು ತಾಲೂಕು ಕೇಂದ್ರದಲ್ಲಿ ಮೆಡಿಕಲ್ ಕಾಲೇಜಿನ ಸ್ಥಾಪನೆಗಾಗಿ ಭೂಮಿಯನ್ನು ಬೇಡುವ ಈ ಮನುಷ್ಯನಿಗೆ ಹುಚ್ಚೇ ಹಿಡಿದಿರಬೇಕೆಂದು ನಾವೆಲ್ಲ ತೀರ್ಮಾನಿಸಿದೆವು ಆದರೆ ಆಗ ವೈದ್ಯಕೀಯ ಸಚಿವರಾಗಿದ್ದ ದಿವಂಗತ ಶ್ರೀ ಎ. ಬಿ. ಶೆಟ್ಟರು ಒತ್ತಾಯ ಪಡಿಸಿ, ಕಾಲೇಜು ಸ್ಥಾಪನೆಯಾಗದೆ ಹೋದಲ್ಲಿ ಭೂಮಿ ಸರ್ಕಾರಕ್ಕೆ ಮರಳುವದೆಂಬ ಷರತ್ತನ್ನು ಮುಂದಿಟ್ಟು ನಮ್ಮ ಮನವೊಲಿಸಿ ಭೂಮಿಯನ್ನು ಡಾ| ಪೈ ಅವರಿಗೆ ಕೊಡಮಾಡಿದರು

ಇಂಥ ಹುಚ್ಚರು ಇನ್ನಷ್ಟು ಹೆಚ್ಚಲಿ

ಈ ಹನ್ನೆರಡು ವರ್ಷಗಳ ಕಾಲ— ಹತ್ತು ರಾಜ್ಯದಲ್ಲಿ ಎರಡು ವರ್ಷ ಕೇಂದ್ರದಲ್ಲಿ-ಸಚಿವತನದ ಅನುಭವವನ್ನು ಪಡೆದ ಮೇಲೆ ದೇಶದ ಬೆಳವಣಿಗೆಯು ಇಂಥ ಹುಚ್ಚು ವಿಚಾರಗಳಿಲ್ಲದೆ ಸಾಧ್ಯವಿಲ್ಲವೆಂದು ನನಗೆ ಖಾತ್ರಿಯಾಗಿದೆ ಹುಚ್ಚು ಎಂದರೇನೆಂದು ಸ್ವಲ್ಪ ವಿಚಾರ ಮಾಡೋಣ. ನಮ್ಮ ವಿಚಾರಕ್ಕೆ ಒಗ್ಗದ ಎಲ್ಲವನ್ನೂ ನಾವು ಹುಚ್ಚೆಂದು ವಿಸರ್ಜಿಸುತ್ತೇವಷ್ಟೆ? ನಮ್ಮ ವಿಚಾರ ಪದ್ಧತಿಗೆ ಎಟುಕದಿರುವ, ಅನುಕೂಲವಾಗದಿರುವ ಯಾವುದನ್ನೂ ಹುಚ್ಚುತನದ ಪಟ್ಟಿಗೆ ನಾವು ಸೇರಿಸಿ ಬಿಡುತ್ತೇವೆ ಆದರೆ ಇಂದು ಭಾರತ ದೇಶಕ್ಕೆ ಇಂಥ ಹುಚ್ಚು ವಿಚಾರಗಳೂ, ಡಾ| ಪೈಯಂಥ ಹುಚ್ಚರೂ ಹೆಚ್ಚಾಗಿ ಬೇಕಾಗಿದ್ದಾರೆ. ತಮ್ಮ ಧೈರ್ಯಕ್ಕೆ ಸ್ಥಿರ ಪ್ರಾಮಾಣಿಕವಾಗಿಯೂ ನಿಷ್ಠೆಯಿಂದಲೂ ದುಡಿಯುತ್ತ, ಸುತ್ತಲಿನ ಜನರ ಅಪಹಾಸ್ಯವನ್ನು ಸಹಿಸಿಕೊಂಡು ತಮ್ಮ ವಿಚಾರಪ್ರಣಾಲಿಯನ್ನು ವರ್ಜಿಸದ ಯಶಸ್ಸನ್ನು ಸಂಪಾದಿಸಬಲ್ಲ ವೀರ ಪುರುಷರು ನಮಗಿಂದು ಬೇಕಾಗಿದ್ದಾರೆ. ಡಾ| ಪೈಯವರು ತನ್ನ ಹುಚ್ಚುತನವನ್ನು ಬಹಿರಂಗಗೊಳಿಸಿದ ಕೆಲ ವರ್ಷಗಳ ತರವಾಯ, ನಾನು ಮಣಿಪಾಲಕ್ಕೆ ಬಂದಿದ್ದೆ ಅಷ್ಟು ಹೊತ್ತಿಗಾಗಲೇ ಅವರು ಇಲ್ಲಿ ಕಟ್ಟಿದ ಸಂಸ್ಥೆಗಳನ್ನು ನೋಡಿ ನಾನು ಅವರ ವಿಚಾರ ಪುಂಜಗಳನ್ನು ಅಲ್ಲಿ ಬರಿದೆ ಮೆಚ್ಚಿದುದಷ್ಟೇ ಅವುಗಳ ಸುರಸ್ವರ್ತನೂ ಆಗಿ ಬಿಟ್ಟೆ. ಇಂದು ಅದೇ ಮಣಿಪಾಲವು ಗುರುತೇ ಸಿಗಲಾರದಷ್ಟು ಬೆಳೆದು ನಿಂತಿದೆ, ಬೆಳೆಯುತ್ತಿರುವ ಭಾರತದ ಸಂಕೇತವೆಂಬಂತೆ ಶೀಘ್ರ ಪ್ರಗತಿಯನ್ನು ಪಡೆದಿರುವುದನ್ನು ನಾನು ಕಂಡೆ. ಈಗಾಗಲೇ ಈ ವರ್ಷಕ್ಕೆ 65 ಕೋಟಿ ರೂಪಾಯಿಗಳ ಗುರಿಯನ್ನೂ ಏಳು ಲಕ್ಷ ಗ್ರಾಹಕಗಳನ್ನೂ ಪಡೆದಿರುವ ಈ ಬ್ಯಾಂಕು ಈ ಭಾಗದ ಪ್ರಗತಿಗೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ ಬಾಲವಾಡಿಯಿಂದ ಹಿಡಿದು ಸ್ನಾತಕೋತ್ತರ ವರ್ಗಗಳ ವರೆಗೂ ಶಿಕ್ಷಣವನ್ನು ನೀಡಲು ಈ ಅಪೂರ್ವ ಶಿಕ್ಷಣ ಕೇಂದ್ರಕ್ಕೆ ಈ ಪ್ರಧಾನ ಕಚೇರಿಯು ಒಂದು ಭೂಷಣವಾಗಲಿ. ಈ ಬಹು ಕ್ಷೇತ್ರಗಳಲ್ಲಿಯೂ ಅಪಾರ ಯಶೋಲಾಭವನ್ನು ಪಡೆದ ಡಾ| ಪೈಯವರಿಗೆ ರಾಷ್ಟ್ರೀಯ ಗೌರವ ಸಲ್ಲಬೇಕೆಂಬ ಮಾತು ಯಾರೋ ಅಂದರು ಈ ಸಂಸ್ಥೆಗಳನ್ನೆಲ್ಲ ಸೇರಿಸಿ ಒಂದು ಕೇಂದ್ರ ವಿಶ್ವವಿದ್ಯಾಲಯವನ್ನೇ ಸ್ಥಾಪಿಸುವುದು ಡಾ| ಪೈ ಅವರಿಗೆ ಸಲ್ಲಿಸುವ ಗೌರವವೆಂದು ನಾನು ತಿಳಿದಿದ್ದೇನೆ. ಮುಂದಿನ ಜನಾಂಗವು ಸದಾ ಆಲ್ಲ ಸ್ಮರಣೆಯಲ್ಲಿಡಬೇಕಾದ ಈ ನಾಯಕನ ಸಾಧನೆಗೆ ನಾವು ಸಲ್ಲಿಸುವ ಗೌರವದ ಸಂಕೇತವಾಗಿ ಇಲ್ಲಿ ವಿಶ್ವವಿದ್ಯಾನಿಲಯದ ಸ್ಥಾಪನೆಯಾಗಲಿ

ಆರ್ಥಿಕ ಬೆಳವಣಿಗೆ: ವ್ಯಕ್ತಿ ಸ್ವಾರ್ಥ ಮತ್ತು ವ್ಯಕ್ತಿ ಉದ್ದಿಷ್ಟ

ಸಿಂಡಿಕೇಟ್ ಬ್ಯಾಂಕು ಈಗ ತನ್ನ ಹೆಸರನ್ನು ಬದಲಾಯಿಸಿದ ಎಂದರು. ಹೆಸರಲ್ಲೇನಿದೆ? ಎಂಬ ಮಾತು ಸುಳ್ಳಲ್ಲ. ಹೆಸರಿನ ಹಿಂದಿರುವ ವ್ಯಕ್ತಿತತ್ತ್ವವು ಮುಖ್ಯ. ಸಮಾಜವೇ ಆಗಲಿ, ಸಂಸ್ಥೆಗಳೇ ಆಗಲಿ ಅಥವಾ ಒಂದು ಕುಟುಂಬವೇ ಆಗಲಿ ಬೆಳೆಯ ಬೇಕಾದರೆ ಅಲ್ಲಿನ ಜನರ ವ್ಯಕ್ತಿತ್ವ ಬೆಳೆಯಬೇಕೆಂಬುದೇ ಅರ್ಥ. ಪ್ರಗತಿ ಪರವಾದ ವಿಚಾರಗಳನ್ನು ಅನ್ವಯಿಸಿದರೆ ಬೆಳವಣಿಗೆ ತನ್ನಂತೆ ಸಾಧಿತವಾಗುವುದೆಂಬುದಕ್ಕೆ ಸಿಂಡಿಕೇಟ್ ಬ್ಯಾಂಕೇ ಸಾಕ್ಷಿ. ಸಂಪ್ರದಾಯಕ್ಕೆ ಹೊರಗಿನ ವಿಚಾರಗಳನ್ನು ಡಾ| ಪೈ ಮತ್ತು ಶ್ರೀ ಟಿ ಎ ಪೈ ಯವರು ಅವಲಂಬಿಸಿದ್ದೇ ಈ ಬ್ಯಾಂಕಿನ ಕ್ಷಿಪ್ರ ಪ್ರಗತಿಗೆ ಕಾರಣವಾಯಿತಷ್ಟೆ.

ಬ್ಯಾಂಕಿನ ಸಾಲಕೇಳಹೋದಾಗ ನಿಮ್ಮ ಆಸ್ತಿ ಎಷ್ಟೆಂದು ಕೇಳುವುದು ಹಳೆಯ ಪದ್ಧತಿ ಆಯಿತು. ಪ್ರಾಮಾಣಿಕತೆ ಮತ್ತು ಚಾರಿತ್ರ್ಯ ಶುದ್ಧಿ ಇಲ್ಲದ ಜನರ ಆಸ್ತಿಯ ಭದ್ರತೆ ಎಷ್ಟರ ಮಟ್ಟಿನ ಭದ್ರತೆ? ದೇಶದ ಉಳಿತಾಯವನ್ನು ಬ್ಯಾಂಕುಗಳ ಮುಖಾಂತರ ದೇಶವನ್ನು ಕಟ್ಟಬಲ್ಲ ವಿಚಾರಗಳಿಗೆ ಒದಗಿಸುವಾಗ ಆಸ್ತಿಗಿಂತ ಭಿನ್ನವಾದ ಮಾನದಂಡವನ್ನು ಬಳಸಬೇಕಾದ ಸನ್ನಿವೇಶ ಇಂದು ಒದಗಿ ಬಂದಿದೆ ನೂತನ ವಿಚಾರಗಳನ್ನು ಹಳೆಯ ಸಾಂಪ್ರದಾಯಿಕ ವಿಚಾರದ ಮಾನದಂಡದಿಂದ ಅಳೆಯುವುದಾದರೆ ದೇಶವು ಬೆಳೆಯುತ್ತ

ಸಂದೇಶಗಳು

ತ್ವರಿತಗತಿಯಿಂದ ಸರ್ವತೋಮುಖವಾಗಿ ವಿಸ್ತೃತವಾಗುತ್ತಿರುವ ಸಿಂಡಿಕೇಟ್ ಬ್ಯಾಂಕಿನ ಚಟುವಟಿಕೆಗಳನ್ನು ನಾವು ನಿರೀಕ್ಷಿಸುತ್ತ ಬಂದಿದ್ದೇವೆ ಡಾ| ಟಿ ಎಂ. ಎ. ಪೈ ಮತ್ತು ಶ್ರೀ ಟಿ. ಎ. ಪೈ ಯವರ ಸಮರ್ಥ ಮಾರ್ಗದರ್ಶನದಿಂದ ಇದು ಸಾಧ್ಯವೆನಿಸಿದೆ ಮಣಿಪಾಲದಲ್ಲಿ ಪ್ರಧಾನ ಕಾರ್ಯಾಲಯದ ನೂತನ ಕಟ್ಟಡದ ಉದ್ಘಾಟನೆಯು ಬ್ಯಾಂಕಿನ ಪ್ರಗತಿ ಪಥದ ಮತ್ತೊಂದು ಸೋಪಾನ ಸಾರ್ವಜನಿಕರಿಗೆ ಹೆಚ್ಚಿನ ಸೇವೆಯನ್ನು ಬ್ಯಾಂಕು ಸಲ್ಲಿಸುವಂತಾಗಲೆಂದು ಶ್ರೀಕೃಷ್ಣನಲ್ಲಿ ಪ್ರಾರ್ಥಿಸುತ್ತೇವೆ ಬ್ಯಾಂಕಿನ ಕಾರ್ಯಕ್ರಮಗಳಿಗೆ ಸೂಕ್ತ ಮಾರ್ಗದರ್ಶನ ದೊರೆಯುವಂತೆ ಡಾ| ಟಿ. ಎಂ ಎ. ಪೈಗಳಿಗೆ ಅವನು ದೀರ್ಘ ಆಯುಷ್ಯ ಮತ್ತು ಆರೋಗ್ಯವನ್ನು ಕರುಣಿಸಲೆಂದು ಬೇಡಿಕೊಳ್ಳುತ್ತೇವೆ.

ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಸ್ವಾಮಿಗಳು
ಶ್ರೀ ಸೋದೆವಾದಿರಾಜ ಮಠ ಉಡುಪಿ.

ನಾಡಿನ ಪ್ರಮುಖ ಬ್ಯಾಂಕುಗಳಲ್ಲಿ ಇದು ಒಂದು ಸಾರ್ವಜನಿಕರಿಗೆ ಸೇವೆ ಸಲಿಸುವಂತೆ ಭವಿಷ್ಯದಲ್ಲಿ ಬ್ಯಾಂಕು ಹೆಚ್ಚಿನ ಪ್ರಗತಿ ಪಡೆಯಲೆಂದು ಹಾರೈಸುತ್ತೇನೆ.

—ಶ್ರೀ ಶ್ರೀ ವಿದ್ಯಾವಾರಿನಿಧಿ ಸ್ವಾಮಿಯವರು.
ಶ್ರೀ ಕಾಣಿಯೂರು ಮಠ ಉಡುಪಿ.

ಇಂದು ಶ್ರೀ ಸಿ ಸುಬ್ರಹ್ಮಣ್ಯಂರವರು ಬ್ಯಾಂಕಿನ ಹೊಸ ಕಟ್ಟಡವನ್ನು ಉದ್ಘಾಟಿಸುವರೆಂದು ತಿಳಿಯಲು ಸಂತೋಷಿಸುತ್ತೇನೆ ಮಾತೃ ಭೂಮಿಯ ಕರ್ಷಕ ಮತ್ತು ಔದ್ಯಮಿಕ ಅಭಿವೃದ್ಧಿಗಾಗಿ ನೆರವಾಗಿ ನಾಡಿನ ಇತರರಿಗೂ ಉತ್ತಮ ಮನೆಗಳನ್ನು ಕಡೆಯುವುದರಲ್ಲಿ ನಿಮ್ಮ ಸುಸ್ಥಿತ ಬ್ಯಾಂಕು ಸಹಾಯವಾಗಲಿ.

ಶ್ರೀ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳು
ಶ್ರೀ ಅದಮಾರು ಮಠ ಉಡುಪಿ

ಬ್ಯಾಂಕುಗಳ ರಾಷ್ಟ್ರೀಕರಣ ಅನಗತ್ಯ

ಸಿಂಡಿಕೇಟ್ ಬ್ಯಾಂಕು ದೇಶಕ್ಕೊಂದು ಭೂಷಣ

ದು ಅಸಾಧ್ಯವೆಂದು ನಾನು ತಿಳಿದಿದ್ದೇನೆ. ಹೊಸ ವಿಚಾರಗಳಿಗೆ ಹೊಸ ಉದ್ಯಮಗಳ ಅಥವಾ ಇತರಸಂಸ್ಥೆಗಳ ರೂಪವನ್ನು ಕೊಡಬಲ್ಲ ಜನರ ಪ್ರಾಮುಖ್ಯ ಪ್ರಯತ್ನಕ್ಕಿಂತ ಹಿರಿದಾದ, ಆದರಣೀಯವಾದ ಭದ್ರತೆ (Security) ಬೇರೆ ಯಾವುದಿದ್ದೀತು? ಇಂಥ ಜಾಲದ ನೆರವಿನಿಂದ ಸಮಾಜವು ಬೆಳೆದೀತು ಅಲ್ಲದೆ ಹಳೆಯ ಸಂಪ್ರದಾಯವನ್ನೇ ನಂಬಿದರೆ ಬೆಳವಣಿಗೆಯ ನಡೆ ಮಂದವಾಗಬಹುದು ಹೊಸ ವಿಚಾರಗಳ ಪ್ರಗತಿಯನ್ನು ನೋಡಲಾರದ, ಅದನ್ನು ಊಹಿಸಲೂ ಆಗದ ಹಳಬರು ಒಂದು ಹದಿನೈದು ವರ್ಷ ಕಾಲ ವಿಶ್ರಾಂತಿ ಪಡೆದು ಬೇರೆ ಧೀರ ನಾಯಕರಿಗೆ ಆಸ್ಪದವನ್ನು ಮಾಡಿಕೊಡಬೇಕೆಂದು ನನ್ನ ಆಸೆ. ಬೇಕಾದರೆ ಹದಿನೈದು ವರ್ಷಗಳ ನಂತರ ಅವರು ನಮ್ಮನ್ನು ಕಾಡಿಕೊಳ್ಳಲಿ, ಅವರಿಗೆ ಹೊಸ ವಿಚಾರಗಳ ಚಲಾವಣೆಗೆ ಅವಕಾಶ ಒದಗಿಸಿ ಕೊಡಲಿ. ಹೊಸ ವಿಚಾರಗಳಿಂದ ಮಾತ್ರವೇ ವ್ಯಕ್ತಿ ಸಮಾಜ ಮತ್ತು ದೇಶದ ನಿರ್ಮಾಣ ಸಾಧ್ಯವೆಂಬ ವಿಶ್ವಾಸದಿಂದ ಈ ಮಾತು ಹೇಳುತ್ತಿದ್ದೇನೆ ಹೊಸ ವಿಚಾರದ ಅನುಸರಣೆಯಿಂದ ಕೆಲವೊಮ್ಮೆ ತಪ್ಪುಗಳು ಘಟಿಸಬಹುದು; ತಪ್ಪಾಗದೆ ಅನುಭವ ಹೇಗೆ ಬರಬೇಕು? ತಪ್ಪುಗಳಿಂದ ಪಾಠ ಕಲಿಯದೆ ಮರಳಿ ಅದೇ ತಪ್ಪುಗಳನ್ನು ಮಾಡುವುದು ನಿಜವಾದ ತಪ್ಪೆನಿಸೀತು ಆದರೆ ನಾವೆಲ್ಲಿ ತಪ್ಪಿದ್ದೇವೆಂಬುದನ್ನು ಶೋಧಿಸಿ, ನಾವು ತಪ್ಪು ಮಾಡಿದ್ದೇವೆಂಬುದನ್ನು ಆತ್ಮವಿಶ್ವಾಸದಿಂದ ಒಪ್ಪಿಕೊಳ್ಳುವುದಕ್ಕೆ ಬೇಕಾದ ಧೈರ್ಯವನ್ನು ಮೈಗೂಡಿಸಿಕೊಂಡು, ತಪ್ಪನ್ನು ಸರಿಪಡಿಸಬೇಕಾದ ತಿಳಿವಳಿಕೆಯನ್ನು ಅರ್ಜಿಸಬೇಕಾಗಿದೆ ತಪ್ಪುಗಳೇ ಇಲ್ಲದೆ ಯಾವ ಬದಲಾವಣೆಯೂ ಸಾಧಿಸಲಾರದೆಂಬುದನ್ನು ಇಂದಿನ ಯುವಕರು ತಿಳಿದಿರಬೇಕು.

ಹೊಸತನದಿಂದಲೆ ಪ್ರಗತಿ ಪಥದಲ್ಲಿ ಸಾಗಿದ ಸಿಂಡಿಕೇಟು ದಿಟ್ಟ ಹೆಜ್ಜೆಯನ್ನಿಟ್ಟು ಇನ್ನು ಮುಂದೆಯೂ ಸಾಗುವುದು ಈ ಸಂಸ್ಥೆಯ ಕಾರ್ಯಕರ್ತರಲ್ಲಿರುವ ದೂರದರ್ಶಿತ್ವ ಮತ್ತು ಕಾರ್ಯಸಾಧಕ ಸಾಹಸ ವು ಅಭಿನಂದನೀಯವೇ ಸರಿ

ರಾಷ್ಟ್ರೀಕರಣದ ಪ್ರಶ್ನೆ

ಬ್ಯಾಂಕುಗಳು ತಮ್ಮ ಕರ್ತವ್ಯವನ್ನು ರಾಷ್ಟ್ರೀಯ ದೃಷ್ಟಿಕೋನದಿಂದ ನಿರ್ವಹಿಸಿದ ಪಕ್ಷದಲ್ಲಿ ರಾಷ್ಟ್ರೀಕರಣದ ಆವಶ್ಯಕತೆಯೇ ಇರಲಾರದ ಅಥವಾ ಬ್ಯಾಂಕುಗಳು ಇದನ್ನು ಮರೆತು ತಮ್ಮ ಸ್ವಾರ್ಥಸಾಧನೆಗೂ, ಗುಂಪುಗಾರಿಕೆಗೂ, ವರ್ಗಶೋಷಣೆಗೂ ತಮ್ಮ ಶಕ್ತಿಯನ್ನು ವಿನಿಯೋಗಿಸುವುದಾದರೆ ಇದನ್ನು ನಿರೋಧಿಸುವ ಹೊಣೆಯನ್ನು ಸರ್ಕಾರ ವಹಿಸಿಕೊಳ್ಳಲೇ ಬೇಕಾಗುತ್ತದೆ ರಾಷ್ಟ್ರೀಕರಣದಿಂದ ಮಾತ್ರ ಇಂಥ ದುಷ್ಪ್ರವೃತ್ತಿಗಳ ನಿವಾರಣೆ ಸಾಗುವುದಾದರೆ ರಾಷ್ಟ್ರೀಕರಣವನ್ನೇ ಸರಕಾರ ಜಾರಿಗೆ ತರಲೂ ಬಹುದು. ಆದುದರಿಂದ ಬ್ಯಾಂಕುಗಳ ರಾಷ್ಟ್ರೀಕರಣ ಆಗುವುದೋ ಇಲ್ಲವೋ ಎಂಬ ಪ್ರಶ್ನೆ ಬ್ಯಾಂಕುಗಳ ವರ್ತನೆಯನ್ನೇ ಅವಲಂಬಿಸಿದೆ ಎನ್ನುವುದು ನನ್ನ ವಾದ. ಪ್ರಗತಿಹೇತುಕವಾದ ರೀತಿಯ ಸದ್ವರ್ತನೆಯಿಂದ ನಡೆಯುವ ಬ್ಯಾಂಕುಗಳು ಹಲವು ಇರಬಹುದು ಆದರೂ ನಾವು ಒಂದು ಮುಖ್ಯ ವಿಷಯವನ್ನು ಗಮನದಲ್ಲಿಡಬೇಕು. ಸಿಂಡಿಕೇಟು ಈ ವರ್ಷದ ಅಂತ್ಯದೊಳಗೆ 65 ಕೋಟಿಯಷ್ಟಕ್ಕೆ ತನ್ನ ಡಿಪಾಸಿಟನ್ನು ಬೆಳೆಸಿಕೊಳ್ಳುವುದಾದರೂ ಹೇಗೆ ಸಾಧ್ಯವೆಂಬುದನ್ನು ಪರಿಶೀಲಿಸೋಣ. ಬ್ಯಾಂಕಿನ ಪ್ರಾಮಾಣಿಕ ವರ್ತನೆಯಿಂದ ಉತ್ಪನ್ನವಾಗುವ 'ವಿಶ್ವಾಸ' (confidence) ಇದಕ್ಕೆ ಒಂದು ಕಾರಣ. ಆದರೆ ಸರಕಾರದ ನಿಯಮಾವಳಿಯಿಂದಲೂ, ಒಟ್ಟಿನಲ್ಲಿ ಅರ್ಥ ಮಂಡಲದಲ್ಲಿ ಪ್ರಚೋದಿಸಲ್ಪಡುವ ವಿಶ್ವಾಸದ ವಾತಾವರಣದಿಂದಲೂ ಈ ವಿಶ್ವಾಸವು ಸ್ಥಿರವಾಗಬೇಕು ಬ್ಯಾಂಕಿನ ಡಿಪಾಸಿಟರುಗಳಿಗೆ ಸರಕಾರವು ಒದಗಿಸುವ ಭದ್ರತೆಯು "ವಿಶ್ವಾಸ"ದ ಒಂದು ಮುಖ್ಯಾಂಶವೆಂಬ ನನ್ನ ಸೂಚನೆ ಲೇವಡಿಯಾಗಿದೆ ಆದರೆ ಬ್ಯಾಂಕುಗಳು ತಮ್ಮ ರಾಷ್ಟ್ರೀಯ ಕರ್ತವ್ಯವನ್ನು ಮರೆತಲ್ಲಿ ವಿಶ್ವಾಸದ ಹಂದರವು ಕುಸಿಯಬಹುದು; ಬ್ಯಾಂಕುಗಳು ರಾಷ್ಟ್ರೀಯ ಧ್ಯೇಯಗಳನ್ನು ಬೆಳೆಸಿಕೊಂಡು, ಸಿಂಡಿಕೇಟಿನಂತೆ ರಾಷ್ಟ್ರದ ಬೆಳವಣಿಗೆಗೆ ನೆರವಾದರೆ, ರಾಷ್ಟ್ರೀಕರಣದ ಹರವಾದಿಗಳು ಸಹ ಈ ರಾಷ್ಟ್ರೀಯ ಸಂಸ್ಥೆಗಳನ್ನು ಬೇರೆ ರಾಷ್ಟ್ರೀಕರಿಸುವುದೇಕೆಂದು ಸುಮ್ಮಗಿರಬಹುದು ಕೆಲವರು ರಾಷ್ಟ್ರೀಕರಣದ ವಿರೋಧಿಗಳು ಹೀಗೂ ಅನ್ನುವುದುಂಟು-ರಾಷ್ಟ್ರೀಕರಣವಾದ ವೇಳೆ ಈ ಬ್ಯಾಂಕುಗಳು ತಪ್ಪು ಮಾಡಲಾರವೆ? ಎಂದು ಕೇಳುವುದುಂಟು ತಪ್ಪು ಮಾಡುವುದು ಸಾಧ್ಯವೆಂದು ನಾನು ಒಪ್ಪುತ್ತೇನೆ ಬ್ಯಾಂಕುಗಳು ರಾಷ್ಟ್ರೀಕೃತವಾದ ವೇಲೂ ಓಬೀರಾಯನ ಕಾಲದ ರೀತಿ-ನೀತಿಗಳಿಗೂ ಸಂಪ್ರದಾಯಶರಣತೆಗೂ ಅತಿ ಮನ್ನಣೆ ಕೊಟ್ಟು ತಮ್ಮ ಧೋರಣೆಗಳನ್ನು ರೂಪಿಸಿಕೊಂಡರೆ ಉಳಿಯೋಗವೇನು? ಆದರೆ ಒಂದು ಮಾತನ್ನು ಇಲ್ಲಿ ವಿಚಾರಿಸೋಣ. ರಾಷ್ಟ್ರೀಕೃತ ಬ್ಯಾಂಕ್ ಶ್ರೀ ಟಿ ಎ. ಪೈ ಅಂಥವರನ್ನೇ ಮ್ಯಾನೇಜಿಂಗ್ ಡೈರೆಕ್ಟರರನ್ನಾಗಿ ನೇಮಿಸಿದರೆ ಅವರು ಈಗಿನಕ್ಕಿಂತಲೂ ಹೆಚ್ಚು ಉತ್ಸಾಹದಿಂದ ಪ್ರಗತಿಪರ ಧೋರಣೆಗಳನ್ನು ಹೊಂದಿಸಿಕೊಳ್ಳಲು ಸಾಧ್ಯವಿಲ್ಲವೆ? ರಾಷ್ಟ್ರದ ಸಂಪೂರ್ಣ ಬೆಂಬಲವುಳ್ಳ ಅವರು ಇನ್ನಷ್ಟು ಉತ್ಸಾಹದಿಂದಲೂ, ಧ್ಯೇಯನಿಷ್ಠವಾಗಿಯೂ ದುಡಿಯಲು ಅವಕಾಶ ಒದಗೀತು ಸದ್ಯ ಸಿಂಡಿಕೇಟ್ ಬ್ಯಾಂಕು ಕೇವಲ 65 ಕೋಟಿ ಧನ ಸಂಗ್ರಹವನ್ನೇ ತನ್ನ ಗುರಿಯಾಗಿಟ್ಟುಕೊಳ್ಳದೆ ಶ್ರೀ ಟಿ. ಎ. ಪೈ ಅವರು ಹೇಳಿದಂತೆ ರಾಷ್ಟ್ರದ ಪುನರುಜ್ಜೀವನದ ಬಗ್ಗೆ ಇರಿಸಿಕೊಂಡಿರುವ ಉತ್ತಮ ಧ್ಯೇಯಗಳನ್ನು ಹೊಂದಿರುವುದರಿಂದ ಈ ಬ್ಯಾಂಕಿನಿಂದ ಸಮಾಜ ಉನ್ನತಿಯೂ, ರಾಷ್ಟ್ರನಿರ್ಮಾಣವೂ ಸುಸಂಪನ್ನವಾಗುವುದೆಂದು ನಾನು ಭಾವಿಸಿದ್ದೇನೆ ಇವತ್ತು ನಾನು ಸಿಂಡಿಕೇಟ್ ಬ್ಯಾಂಕಿನ ಉದ್ಘಾಟನೆಯನ್ನಷ್ಟೇ ಮಾಡಿದೆನೆಂದು ನನಗನಿಸುವುದಿಲ್ಲ. ಇದು ರಾಷ್ಟ್ರೀಯವಾದ ಧ್ಯೇಯನಿಷ್ಠೆಯುಳ್ಳ ಬ್ಯಾಂಕಿಂಗ್ ಉದ್ಯಮದ ಬೆಳವಣಿಗೆಯ ದಿಗಂತವನ್ನು ಮುಟ್ಟಲು ಬ್ಯಾಂಕುಗಳು ಮಾಡಬೇಕಾದ ಯಾತ್ರೋಲ್ಲಾಸದ ಉದ್ಘಾಟನೆ ಎಂದು ನಾನು ಭಾವಿಸುತ್ತೇನೆ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಇರಲಿ ಅಥವಾ ಸಾಧಾರಣ ಗುಮಾಸ್ತೆಯೆ ಆಗಲಿ ತನ್ನ ಸಂಸ್ಥೆ ನೆರವೇರಿಸಬೇಕಾದ ರಾಷ್ಟ್ರೀಯ ಧ್ಯೇಯದ ಬಗ್ಗೆ ಆಸಕ್ತಿಯಿಂದ ದುಡಿದರೆ ನಮ್ಮ ಭವಿಷ್ಯವು ಉಜ್ವಲವಾಗುವುದರಲ್ಲಿ ಸಂದೇಹವೇನ ? ಈ ದಿಶೆಯಲ್ಲಿ ಸಿಂಡಿಕೇಟು ಕೃತಕೃತ್ಯರವಾಗಿ ಅದು ರಾಷ್ಟ್ರದ ಅಭಿವೃದ್ಧಿಯ ಮಂಗಲ ಸಂಕೇತವಾಗಿ ಮೆರೆದು ಇತರ ಬ್ಯಾಂಕುಗಳಿಗೆ ಆದರ್ಶವೆನಿಸಿದರೆ ತಪ್ಪೇನ ?

ಡಾ| ಪೈ ಅವರಿಗೂ, ಶ್ರೀ ಟಿ ಎ. ಪೈ ಅವರಿಗೂ, ಅವರ ಮಹೋನ್ನತ ಸಾಧನೆಗೂ ನನ್ನ ಅಭಿನಂದನೆಗಳು

ಉದ್ಘಾಟಕ ಶ್ರೀ ಸಿ. ಸುಬ್ರಹ್ಮಣ್ಯಂ, ಬಲದಲ್ಲಿ ಚೆಯರ್‌ಮ್ಯಾನ್ ಡಾ| ಟಿ. ಎಂ. ಎ. ಪೈ, ಎಡದಲ್ಲಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈ

ಸಂದೇಶ

ನಿಮ್ಮ ಆಡಳಿತೆಯಲ್ಲಿ ಮತ್ತು ಇತ್ತೀಚಿನ ವರ್ಷಗಳಲ್ಲಿ ನಿಮ್ಮ ಬ್ಯಾಂಕು ಪ್ರಶಂಸನೀಯ ಪ್ರಗತಿ ಸಾಧಿಸಿದುದಕ್ಕೆ ನಿಮ್ಮನ್ನೂ ಈಗಿನ ಮೆನೇಜಿಂಗ್ ಡೈರೆಕ್ಟರರನ್ನೂ ನಿಮ್ಮ ಸಹೋದ್ಯೋಗಿಗಳನ್ನೂ ಅಭಿವಂದಿಸಲು ಈ ಅವಕಾಶವನ್ನು ಆಗೆದುಕೊಳ್ಳ ಬಯಸುತ್ತೇನೆ. ಅದು ಅತ್ಯುಚ್ಚ ಗೌರವದ ಸ್ಥಾನವನ್ನು ಪಡೆದಿದೆ. ಅದು ವಿಸ್ತಾರಕ್ಕೆ ಹರಡಿದೆ. ಅದು ತನ್ನ ಚಟುವಟಿಕೆಗಳನ್ನು ವಿಸ್ತರಿಸಿದೆ. ಅದಕ್ಕೆ ಸಾಕಷ್ಟು ಸ್ಥಳಾವಕಾಶವಿರುವ ಪ್ರಧಾನ ಕಾರ್ಯಾಲಯದ ಆವಶ್ಯಕತೆಯಿತ್ತು ಮಣಿಪಾಲದಲ್ಲಿ ನೂತನ ಪ್ರಧಾನ ಕಾರ್ಯಾಲಯ ಭವನದ ಉದ್ಘಾಟನೆಯಿಂದ ಈ ಕೊರತ ದೂರವಾಯಿತು. ಪ್ರಧಾನ ಕಾರ್ಯಾಲಯದ ಕಟ್ಟಡವನ್ನು ಉದ್ಘಾಟಿಸಲು ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂ ರವರನ್ನು ಆಮಂತ್ರಿಸಿದುದಕ್ಕೆ ನಾನು ನಿಮ್ಮನ್ನು ಅಭಿವಂದಿಸುತ್ತೇನೆ ಅವರು ಸ್ವಾಭಾವಿಕವಾಗಿಯೇ ಸಂಸ್ಥೆಯ ಸಾಮರ್ಥ್ಯವನ್ನು ಚಾಣಾಕ್ಷತೆಯಿಂದ ನಿರ್ಣಯಿಸಿದ್ದಾರೆ ನಮ್ಮ ಈ ಆದರ್ಶ ದೇಶಭಕ್ತ ಮಾನ್ಯ ಶ್ರೀ ಸುಬ್ರಹ್ಮಣ್ಯಂ ದೇಶತುಂಬ ಉನ್ನತ ಗೌರವಾರ್ಹರಾಗಿದ್ದಾರೆ.

ಸಮಾರಂಭಕ್ಕೆ ನಾನು ಪರಿಪೂರ್ಣ ಯಶಸ್ಸನ್ನೂ ಬ್ಯಾಂಕಿಗೆ ಪ್ರಗತಿಯುಕ್ತ ಉತ್ಕರ್ಷದ ಸುದೀರ್ಘ ಗಮನವನ್ನೂ ಬಯಸುತ್ತೇನೆ.

ಶ್ರೀ ಬಿ ವೈಕುಂಠ ಬಾಳಿಗ,

ಭದ್ರ ಬ್ಯಾಂಕಿಂಗಿನಿಂದ ಆರ್ಥಿಕ ಅಭಿವೃದ್ಧಿ ಸಾಧ್ಯ

ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈ ಅವರ ಭಾಷಣ

ಮಾನ್ಯ ಸುಬ್ರಹ್ಮಣ್ಯಂ ನಮಗೆ ಹೊಸಬರಲ್ಲ

ಮಾನ್ಯ ಸಚಿವರಾದ ಶ್ರೀ ಸುಬ್ರಹ್ಮಣ್ಯಂ ಅವರು ನಮಗೂ ಮಣಿಪಾಲಕ್ಕೂ ಹೊಸಬರೇನೂ ಅಲ್ಲ. ಈ ಜಿಲ್ಲೆ ಮದ್ರಾಸ ರಾಜ್ಯದಲ್ಲಿದ್ದಾಗ ಇಲ್ಲಿನ ಸಂಸ್ಥೆಗಳ ಶ್ರೇಯಸ್ಸಿಗೆ ಅವರು ಕಾರಣರಾಗಿದ್ದರು. ಮಣಿಪಾಲದಲ್ಲಿನ ಮೆಡಿಕಲ್ ಕಾಲೇಜಿನ ಫಿಸಿಯಾಲಜಿ ಭವನದ ಶಂಕು ಸ್ಥಾಪನೆ ಮಾಡಿದ್ದಾರೆ. ಹಾಗೆಯೆ ಬ್ಯಾಂಕಿನ ಮಂಗಳೂರು ಶಾಖೆಯು ಕಟ್ಟಡಕ್ಕೂ ಶಂಕುಸ್ಥಾಪನೆ ಮಾಡಿದ್ದಾರೆ. ಈ ಸಂಸ್ಥೆಗಳಿಗೂ ಅವರಿಗೂ ಇಂಥ ನಿಕಟ ಸಂಪರ್ಕದಿಂದಲೂ, ಅವುಗಳು ಬೆಳೆದು ಬಂದ ಮಾದರಿಯಿಂದಲೂ, ಮಾನ್ಯ ಸಚಿವರಿಗೆ ಆನಂದವಾಗಿರುವುದು ಮಾತ್ರವಲ್ಲ, ಅವರು ಏಕಾಡಮಿಯ ಸದಸ್ಯತ್ವವನ್ನು ಸ್ವೀಕರಿಸಿ ಈ ಸಂಸ್ಥೆಗಳ ಪೋಷಕ ವರ್ಗಕ್ಕೂ ಸೇರಿದ್ದಾರೆನ್ನಬಹುದು.

ಬ್ಯಾಂಕಿಂಗ್ ಉದ್ಯಮಕ್ಕೆ ಸೇವೆ

ಇಂದು ಈ ನೂತನ ಭವನದ ಪ್ರವೇಶೋತ್ಸವದ ಶುಭ ದಿನದಂದು ಬ್ಯಾಂಕಿಗೆ ಸೇರಿದ ನಾವೆಲ್ಲರೂ ಬ್ಯಾಂಕಿಂಗ್ ಉದ್ಯಮದ ಸೇವೆಗೆ ಬದ್ಧಕಂಕಣರಾಗಬೇಕಾದುದು ನ್ಯಾಯವಾಗಿದೆ. ಬ್ಯಾಂಕ್ ರಾಷ್ಟ್ರೀಕರಣದ ಗುಲ್ಲಿನಿಂದಾಗಿ ಎಲ್ಲರೂ ಬ್ಯಾಂಕುಗಳು ಅದು ಹೇಗೆ ನಡೆಯುತ್ತವೆಂದು ಯೋಜನೆ ಮಾಡುವಂತಾಗಿರುವುದು ಸ್ವಾಗತಾರ್ಹವೇ ಸರಿ. ದುಡ್ಡಿರುವವರಿಗೆ ಮಾತ್ರ ಬ್ಯಾಂಕಿನ ಸೌಲಭ್ಯ ಬ್ಯಾಂಕುಗಳು ಬೇಕು ಎನ್ನುವ ಕಾಲ ಒಂದಿತ್ತು. ಬ್ಯಾಂಕಿನ ಬಳಿ ಬರಲು ದುಡ್ಡು ಇರಬೇಕಾದದ್ದಿಲ್ಲವೆಂದು ಸಾರುತ್ತಾ ಬಂದ ಬ್ಯಾಂಕೆಂದರೆ ಸಿಂಡಿಕೇಟು.

ಜನತೆಯ ತ್ಯಾಗದಿಂದಲೆ ರಾಷ್ಟ್ರ ನಿರ್ಮಾಣ

ಈ ನಮ್ಮ ದೇಶವು ಬೆಳೆಯಬೇಕಾದರೆ ಜನತೆಯ ತ್ಯಾಗವು ಅತ್ಯಾವಶ್ಯಕವಾಗಿದೆ ಯಾವುದೇ ಯೋಜನೆಯು ದೇಶದೊಳಗಿನ ಜನತೆಯ ಕಷ್ಟ, ತ್ಯಾಗ, ಉಳಿತಾಯದಿಂದಲೆ ನಡೆಯಬೇಕಾಗಿದೆ. ವಿದೇಶೀಯ ಹಣದಿಂದಲೇ ದೊಡ್ಡ ದೊಡ್ಡ ಯೋಜನೆಗಳು ಕಾರ್ಯಗತವಾಗುವುದರಿಂದ ಹೊರಗಿನವರ ತ್ಯಾಗವೇ ಸಾಕೆಂದು ಭಾವಿಸುವವರೂ ನಮ್ಮಲ್ಲಿದ್ದಾರೆ. ಹೆಚ್ಚು ಸಂಬಳ, ಕಡಿಮೆ ಕೆಲಸವೆಂದು ಚಳವಳಿ ಹೂಡುವ ಮಂದಿ ತ್ಯಾಗ ಮಾಡಲು ಹಿಂಜರಿಯುವರೆಂದು ನನ್ನ ಭಾವನೆ. ಆದರೆ ದೇಶದಲ್ಲಿ ಆಂತರಿಕವಾಗಿ ಸಾವಿರಾರು ಜನರ ತ್ಯಾಗ ಮತ್ತು ಉಳಿತಾಯ ಬಲದಿಂದಲ್ಲದೆ ಬೇರೆ ಬೆಳವಣಿಗೆಯ ಉಪಾಯವೇ ನನಗೆ ಕಾಣದು.

ಜನರ ಉಳಿತಾಯವನ್ನು ಸರಿದಾರಿಗೆ ಹಚ್ಚುವ ಸಾಧನಗಳನ್ನೊದಗಿಸಬಲ್ಲ ಬ್ಯಾಂಕಿಂಗ್ ಕ್ಷೇತ್ರ ಇನ್ನಷ್ಟು ವಿಸ್ತಾರವಾಗಬೇಕಾಗಿದೆ. ಯಾಕೆಂದರೆ ಅಖಿಲ ಭಾರತೀಯ ಬ್ಯಾಂಕಿಂಗ್ ಮಂಡಳದ ಡಿಪಾಸಿಟು 2400 ಕೋಟಿ ರೂಪಾಯಿ ಮಾತ್ರ (ಅಮೇರಿಕದಲ್ಲಿ ಒಂದೇ ಒಂದು ಬ್ಯಾಂಕಿನ ಡಿಪಾಸಿಟು 7500 ಕೋಟಿ ರೂಪಾಯಿ ಗಳಿದೆ!) ಅಮೇರಿಕದೊಡನೆ ತುಲನೆ ಮಾಡುವ ಕಾರಣವೇನೆಂದರೆ ಇಂದು ನಮ್ಮ ಬ್ಯಾಂಕಿಂಗ್ ಮಂಡಲದ ಅಭಿವೃದ್ಧಿಗೆ ನಾವು ಅಮೇರಿಕನ್ ಉಪಾಯಗಳನ್ನೇ ಬಳಸಿಕೊಳ್ಳಬೇಕಾಗಿದೆ. ಬ್ಯಾಂಕಿನ ಸಂದೇಶವನ್ನು ಪ್ರತಿ ಮನೆಗೂ ಮುಟ್ಟಿಸಬೇಕಾಗಿದೆ. ಹತ್ತು ಜನ ದೊಡ್ಡವರಿಂದ ಒಂದು ಕೋಟಿ ರೂಪಾಯಿಯಂತೆ ಹತ್ತು ಕೋಟಿ ಸಂಗ್ರಹಿಸುವುದು ನಮ್ಮ ದೇಶದಲ್ಲಿ ಕಷ್ಟದ ಮಾತೇ ಸರಿ. ಆದರೆ ತಲಾ ಹತ್ತರಂತೆ ಒಂದು ಕೋಟಿ ಜನರಿಂದ ಅಷ್ಟೇ ಮೊತ್ತವನ್ನು ಎತ್ತುವುದು ಸುಲಭ. ಜನರ ಉಳಿತಾಯವು ಹೆಚ್ಚು ಹೆಚ್ಚಾಗಿ ಬ್ಯಾಂಕಿನ ಮೂಲಕ ಪ್ರವಹಿಸದೆ ಇದ್ದರೆ ನಮ್ಮ ಕೃಷಿ ಮಂಡಲವೂ ಅಂತೆಯೇ ಔದ್ಯಮಿಕ ಮಂಡಲವೂ ಈಗಿನಂತೆ ಅಪ್ರಗತಿಕ ಸ್ಥಿತಿಯಲ್ಲಿಯೇ ಹಿಂದುಳಿದಿರಬೇಕಾದ ಪ್ರಮೇಯವಿದೆ.

ಜನ ಬ್ಯಾಂಕಿನ ಮೇಲೆ ವಿಶ್ವಾಸವಿಡುವ ದಿನ ಬಂದರೆ, ವಿಶ್ವಾಸವಿಡುವಂತೆ ಬ್ಯಾಂಕುಗಳು ಅವರನ್ನು ಸ್ವಾಗತಿಸಿದರೆ ನಮ್ಮ ರಾಷ್ಟ್ರೀಯ ಬ್ಯಾಂಕಿಂಗ್ ಕ್ಷೇತ್ರ ಬಲು ಬೇಗನೆ ವ್ಯಾಪಿಸಬಲ್ಲುದು. ಭುವನೇಶ್ವರದಲ್ಲಿ ಕಾಂಗ್ರೆಸ್ ಸಂಸ್ಥೆ ಕಟ್ಟಿಕೊಂಡ ಧ್ಯೇಯವೂ ಇದೇ. ಸೌಕರ್ಯವು ಬಡವರಲ್ಲಿ ಬಡವನಿಗೂ ದೊರೆಯುವಂತಾಗಬೇಕೆಂಬ ಅರ್ಥವೂ ಇದೇ. ಪ್ರಾಮಾಣಿಕನೂ, ಸಾಹಸಿಯೂ ಆದ ಮನುಷ್ಯನಿಗೆ ಸಾಲವನ್ನು ಒದಗಿಸುವುದು ಒಂದು ರಾಷ್ಟ್ರೀಯ ಕರ್ತವ್ಯವೆಂದು ನಾನು ತಿಳಿಯುತ್ತೇನೆ. ಒಂದು ಒಳ್ಳೆಯ ವಿಚಾರ, ಸಾಹಸ ಪ್ರಯೋಗವನ್ನೇ ಮುಂದಿರಿಸಿಕೊಂಡು ಉದ್ದಿಮೆ ಮಾಡುವವರಿಗೆ ಬ್ಯಾಂಕುಗಳು ನೆರವನ್ನು ನೀಡಲೇ ಬೇಕು. ಉದಾಹರಣೆಗೆ, ನಾವು ವಿದೇಶೀಯ ಶಿಕ್ಷಣಕ್ಕೆ ಕೊಡುವ ಸಾಲವನ್ನೇ ತೆಗೆದುಕೊಳ್ಳೋಣ. ಈ ಯೋಜನೆಯಂತೆ ಸುಮಾರು 200 ಮಂದಿ ವಿದ್ಯಾರ್ಥಿಗಳು ಈಗ ನಾನಾ ದೇಶಗಳಲ್ಲಿ ತಾಂತ್ರಿಕ ಶಿಕ್ಷಣ ಪಡೆಯುತ್ತಲಿದ್ದಾರೆ. ಇದೇ ರೀತಿ ನಮ್ಮ ದೇಶದ 20 ಅಗ್ರಗಣ್ಯ ಬ್ಯಾಂಕುಗಳು ಮಾಡಿದ್ದರೆ 2000 ಜನ ವಿಶೇಷ ಶಿಕ್ಷಣವನ್ನು ಪಡೆದು ದೇಶದ ಸಂಪನ್ಮೂಲವಾಗಿ ಬೆಳೆಯುತ್ತಿರಲಿಲ್ಲವೇ?

ಬ್ಯಾಂಕುಗಳ ರಾಷ್ಟ್ರೀಕರಣ ಅಗಲಿ ಬಿಡಲಿ, ಬ್ಯಾಂಕುಗಳಿಗೆ ಒಂದು ಘನವಾದ ರಾಷ್ಟ್ರೀಯ ಉದ್ದೇಶ ಇರಲೇ ಬೇಕಾಗಿದೆ. ಎಲ್ಲರನ್ನು ಮುಟ್ಟುವಂತೆ, ಎಲ್ಲರಿಗೂ ಎಟಕುವಂತೆ ಎಲ್ಲರ ಸಾಹಸಕ್ಕೂ ಅನುಕೂಲವಾಗುವಂತೆ ಬ್ಯಾಂಕುಗಳು ವರ್ತಿಸದಿದ್ದರೆ ಅವು ರಾಷ್ಟ್ರೀಕರಣವಾದರೂ ಆಗದಿದ್ದರೂ ಒಂದೇ. ಹದಿನೈದು ವರ್ಷಗಳ ಸಂತತ ಯತ್ನದಿಂದಲೂ ನಮ್ಮ ನಾಡಿನ ನೂರರಲ್ಲೆಂಬತ್ತು ಜನಗಳಾಗಿ ದಾರಿದ್ರ್ಯವಂತನಾಗಿ ಬಾಳುತ್ತಿರುವಾಗ ಆರ್ಥಿಕ ಅಭಿವೃದ್ಧಿಯ ಬಗ್ಗೆ ಘನವಾದ ಉದ್ಯೋಗಗಳನ್ನೂ, ಅನುಕೂಲ ಮಾರ್ಗಗಳನ್ನೂ ಹೊಂದಿಸಿಕೊಂಡು ರಾಷ್ಟ್ರ ಸೇವೆಯನ್ನು ಮಾಡಲು ಬ್ಯಾಂಕುಗಳು ಅಣಿಯಾಗ ಬೇಕು.

ಸಿಂಡಿಕೇಟು ಈ ವರೆಗಿನ ಜೀವಮಾನದಲ್ಲಿ ಸಣ್ಣ ಪುಟ್ಟ ಮನುಷ್ಯರನ್ನು ಉದ್ದಿಮೆಯವರನ್ನು ಮರೆಯದೆ ಮುಂದುವರಿದಿರುವುದು ನಮಗೆ ಹೆಮ್ಮೆಯ ವಿಷಯ. ನಮ್ಮ ಪಿಗ್ಮಿ ಯೋಜನೆಯು ಸಾವಿರಾರು ಕುಟುಂಬಗಳಿಗೆ ತಾರಕವಾಗಿದೆ. ನಾವು ಹೂಡಿದ ಹಲವು ವಿಧಾನಗಳನ್ನು ಸರಕಾರದವರು ಆ ಮೇಲೆ ಬಳಕೆಗೆ ತಂದಿದ್ದಾರೆನ್ನುವುದು ನಮಗೆ ಅಭಿಮಾನದ ವಿಷಯವಾಗಿದೆ. ಭದ್ರವಾದ ಬ್ಯಾಂಕಿಂಗ್‌ನಿಂದಲೇ ಆರ್ಥಿಕ ಅಭಿವೃದ್ಧಿ ಸಾಧ್ಯವೆಂಬ ನನ್ನ ನಂಬಿಕೆ ದಿನೇ ದಿನೇ ಬಲವಾಗುತ್ತಿದೆ ಸರಕಾರವೂ ಖಾಸಗಿ ಬ್ಯಾಂಕುಗಳೂ ಜತೆಯಾಗಿ ದುಡಿಯಬಹುದಾದ ಈ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಈ ನೂತನ ಕಟ್ಟಡವು ಮುಡಿಪಾಗಿರಲಿ ಎಂದು ಹಾರೈಸುತ್ತೇನೆ.

(1 ನೆ ಪುಟದಿಂದ)

ಗಳಿವೆ. ವಿದ್ಯಾಸಂಸ್ಥೆಗಳಿಗೆ ದೊಡ್ಡ ಮೊತ್ತದ ಸಹಾಯವೀಯುತ್ತಿದೆ. ರೂ. 1,51,000 ವನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಟ್ಟು ಅದ್ವಿತೀಯ ದಾಖಲೆಯನ್ನು ನಿರ್ಮಿಸಿದೆ. ಸಿಂಡಿಕೇಟ್ ಬ್ಯಾಂಕು ದೊಡ್ಡ ಸಂಸ್ಥೆಯಾಗುವುದರೊಡನೆ ಸಾಮಾಜಿಕ ಉದ್ದೇಶ ಮತ್ತು ರಾಷ್ಟ್ರೀಯ ಒಳಿತಿಗೆ ಸಂಪತ್ತು ದೊರೆಯುವಂತೆ ಪ್ರಯತ್ನಿಸುತ್ತ ಬರುತ್ತಿದೆ.

ದಕ್ಷಿಣ ಭಾರತದಲ್ಲಿ ರೂ. 100 ಕೋಟಿ ಠೇವಣಾತಿಯಿರುವ ಒಂದೇ ಒಂದು ಬ್ಯಾಂಕು ಇಲ್ಲ. ರೂ. 10 ಕೋಟಿಗಿಂತ ಮಿಕ್ಕಿರುವವಾದರೂ ಆರು ಮಾತ್ರ. ಮುಂದಿನ ಕೆಲವೇ ವರ್ಷಗಳಲ್ಲಿ ಸಿಂಡಿಕೇಟನ್ನು ರೂ. 100 ಕೋಟಿ ಠೇವು ಇರುವ ಬ್ಯಾಂಕನ್ನಾಗಿ ಕಟ್ಟಬೇಕೆಂದು ನಮ್ಮ ಹೆಬ್ಬಯಕೆ. ಯೂರೊಬ್ಬನ ಲೆಕ್ಕವಾದರೂ ಸಿಂಡಿಕೇಟಿಗೆ ಸಣ್ಣದಲ್ಲ' ಮತ್ತು ಸಮರ್ಥತೆಯಿಂದಲೇ ಪ್ರಗತಿಯಾಗಬೇಕು, ಎಂಬೆರಡು ನಮ್ಮ ಧ್ಯೇಯಗಳು.

ನಾವು ಮಣಿಪಾಲಕ್ಕೆ ಬಂದೆವು. ಸಾರ್ವಜನಿಕ ಹಿತದ ಸಾಧನವಾಗಿ ಬ್ಯಾಂಕು ಮುಂದಿನ ವರ್ಷಗಳಲ್ಲಿ ಶೀಘ್ರ ಪ್ರಗತಿ ಹೊಂದುವಂತೆ ಮಾನ್ಯ ಮಂತ್ರಿಗಳು ಈ ಕಟ್ಟಡವನ್ನು ಉದ್ಘಾಟಿಸಿ ಸೌಭಾಗ್ಯವನ್ನು ತರುವರೆಂದು ಹಾರೈಸುತ್ತೇನೆ. ಈ ಕಟ್ಟಡವು ಜನ ಸಾಧಾರಣರ ಮೇಲೆ ಸಿಂಡಿಕೇಟಿಗಿರುವ ಶುಭಕಾಮನೆಯ ಪ್ರತೀಕವಾಗಲಿ ಎಂದು ಬಯಸಿ ಈ ಬ್ಯಾಂಕು ಪ್ರತಿ ದಿನವೂ ವಿನಯ, ಸೇವೆಯುತ್ತು ಅತಿ ಸಮರ್ಥತೆಗಳನ್ನು ಮುಪ್ಪುರಿಗೊಳಿಸಿ ಮುಂದುವರಿಯಲು ಡೈರೆಕ್ಟರರು, ನೌಕರರು ಅಶಕ್ತಿ ವಹಿಸುವರೆಂದು ಭರವಸೆ ನೀಡುತೇನೆ

ಯಕ್ಷಗಾನ ಪಟುಗಳೊಂದಿಗೆ ಡಾ! ಪೈ ಶ್ರೀ ಸುಬ್ರಹ್ಮಣ್ಯಂ ಮತ್ತು ಶ್ರೀ ಪೈಗಳು.

ಸಂದೇಶ

ಬ್ಯಾಂಕಿಂಗ್ ಉದ್ದೇಶಗಳಿಗೆಂದು ಸಾಂಪತ್ತಿಕ ಮೂಲಗಳಿವೆಯೆಂಬುದನ್ನು ಯೋಚಿಸದ ಸಮಾಜದ ಕೆಲವರು ಯಶಸ್ವಿಯಾಗಿ ನಿಮ್ಮ ಬ್ಯಾಂಕಿನ ಪ್ರಯೋಜನ ಪಡೆದು ತಮ್ಮ ಚಿಕ್ಕ ಮೂಲಗಳನ್ನೇ ದೊಡ್ಡ ಉದ್ದೇಶಗಳಿಗೆ ಕೂಡಿಸುವಂತಹ ಪದ್ಧತಿಯು ಬ್ಯಾಂಕಿನ ಅತಿ ಮುಖ್ಯ ಕಾರ್ಯಕಲಾಪಗಳಲ್ಲಿ ಒಂದಾಗಿದೆ.

ನಿಮ್ಮ ಬ್ಯಾಂಕು ನಗರಗಳಲ್ಲಿ ಮಾತ್ರ ಶಾಖೆಗಳನ್ನು ತೆರೆಯದೆ ಬಹು ಸಂಖ್ಯೆಯ ಹಳ್ಳಿಗಳಲ್ಲಿಯೂ ತೆರೆದು ಹಳ್ಳಿಗರನ್ನು ಬ್ಯಾಂಕಿಂಗ್ ಚಿತ್ತರನ್ನಾಗಿ ಮಾಡಿದೆ. ನಿಮ್ಮ ಪ್ರಧಾನ ಕಾರ್ಯಾಲಯವನ್ನು ಈಗ ನಗರ ಪ್ರದೇಶದಿಂದ ಮಣಿಪಾಲಕ್ಕೆ ಕೊಂಡೊಯ್ಯುತ್ತಿರುವುದು ಈ ದಿಸೆಯಲ್ಲಿನ ಒಂದು ಹೆಜ್ಜೆಯೆಂದು ನಾನು ಹೇಳುವುದಗತ್ಯ.

....ಸಮಾರಂಭಕ್ಕೆ ಯಶಸ್ಸನ್ನು ಕೋರಿ, ಬ್ಯಾಂಕು ಬಹುಕಾಲ ಸಮಾಜಕ್ಕೆ ಸೇವೆಸಲ್ಲಿಸಲೆಂದು ಬಯಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ,
ಮೈಸೂರಿನ ಮುಖ್ಯ ಮಂತ್ರಿಗಳು.

ಚ್ಚರಿಸಿಲ್ಲ; ಆದರೂ ಮತಗಣನೆಯನ್ನು ಬಯಸುವಂತಿದೆ. ಸಾದಿಕ್ ಹೇಳುತ್ತಾರೆ: ಕಾಶ್ಮೀರ ಭಾರತದಲ್ಲಿ ಜನಾಭಿಪ್ರಾಯಕ್ಕೆ ಅನುಸಾರವಾಗಿಯೇ ಸೇರಿ ಬಿಡಲಾಗಿರುವಾಗ ಭಾರತದಿಂದ ಸಿಡಿದು ಹೋಗುವುದು ಸಾಧ್ಯವಿಲ್ಲ. ಅದು ಎಂದೆಂದಿಗೂ ಭಾರತದ ಒಂದು ರಾಜ್ಯವಾಗಿಯೇ ಉಳಿಯುವುದು. ಇಂತಹ ಭರವಸೆಯನ್ನು ಮತ್ಯಾರು ತಾನೇ ಕೊಡಬಲ್ಲರು?

ಸರ್ದಾರ ಸಿಂಗ

ಮುಂದಿನ ವರ್ಷ ಮಾರ್ಚಿಯಲ್ಲಿ ಆಫ್ರಿಕೆಯ ಒಂದು ರಾಷ್ಟ್ರದಲ್ಲಿ ನಡೆಯುರುವ ದ್ವಿತೀಯ ಬಾಡುಂಗ ಮಾದರಿಯ ಸಮ್ಮೇಳನದ ವ್ಯವಸ್ಥಾಪಕ ಸಮಿತಿಯಲ್ಲಿ ಭಾರತವೂ ಸೇರಿದೆ. ಜಕಾರ್ತಾದಲ್ಲಿ ಸೇರಿದ ಪೂರ್ವ ಸಿದ್ಧತಾ ಸಭೆಯು ಭಾರತವು ವಹಿಸಿದ ಪಾತ್ರ ಬಹು ಮೂಲ್ಯವಾದುದು. ರಚನಾತ್ಮಕ ಮತ್ತು ರಂಜಾನುಕರ ಸಲಹೆ ಮತ್ತು ಸೂಚನೆಗಳನ್ನು ನೀಡಿದ ಭಾರತವು ತನ್ನ ಗೌರವವನ್ನು ಹೆಚ್ಚಿಸಿಯೇ ಕೊಂಡಿತು. ಭಾರತವು ರಶ್ಯ ಮತ್ತು ಮಲೇಸಿಯಗಳನ್ನು ಪರಿಷತ್ತಿಗೆ ಕರೆಯಬೇಕೆಂದು ಕೇಳಿಕೊಂಡಿತ್ತು. ಇದನ್ನು ಭಿನ್ನಾಭಿಪ್ರಾಯ ಮೂಡಿದ್ದರಿಂದ ಮುಂದೆ ಸೇರಲಿರುವ ವಿದೇಶ ಮಂತ್ರಿ ಮಟ್ಟದ ಸಭೆಯ ನಿರ್ಧಾರಕ್ಕೆ ಬಿಡಲಾಯಿತು. ಇದಕ್ಕಿಂತಲೂ ಹೆಚ್ಚಿಗಿ ಭಾರತೀಯ ನಿಯೋಗದ ನಾಯಕ ಸರ್ದಾರ ಸ್ವರ್ಣ ಸಿಂಗರು ಇಂಡೊನೇಶ್ಯಾದ ಅಧ್ಯಕ್ಷ ಸುಕರ್ಣರನ್ನು ಭೆಟ್ಟಿಯಾದರು; ಭಾರತದ ಬಗೆಗವರು ಇಟ್ಟುಕೊಂಡಿರುವ ಪೂರ್ವಗ್ರಹವನ್ನು ದೂರ ಮಾಡುವ ಪ್ರಯತ್ನವನ್ನೂ ಮಾಡಿದರು, ಅದರಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯೂ ಆದರು.

ಜಗಜಿತ್ ಸಿಂಗ

ಒರಿಸ್ಸಾದ ಹಿಂದಿನ ಮುಖ್ಯ ಮಂತ್ರಿ ಬಿಜಯಾನಂದ ಪಟನಾಯಕರು ವಿಜ್ಞಾನದಲ್ಲಿ ಆಸಕ್ತಿಯಿರುವವರು; ಸ್ವಯಂ ವಿಮಾನ ಚಾಲಕರು. ೧೯೫೧ರಲ್ಲಿ ಅವರು ೧೦೦೦ ಪೌಂಡು ಮೊತ್ತದ ಬಹುಮಾನವನ್ನು ಸಂಯೋಜಿಸಿದ್ದರು. ವಿಜ್ಞಾನವನ್ನು ಜನಪ್ರಿಯಗೊಳಿಸುವ ವ್ಯಕ್ತಿಗೆ ಅದನ್ನು ನೀಡಲಾಗುವುದು. ಈ ವರ್ಷ ಈ ಬಹುಮಾನವನ್ನು ಪಡೆಯಲು ಯುನೆಸ್ಕೋದ ಅಂತಾರಾಷ್ಟ್ರೀಯ ತೀರ್ಪುಗಾರರು ಭಾರತೀಯ ವಿಜ್ಞಾನಿ ಶ್ರೀ ಜಗಜಿತ ಸಿಂಗರನ್ನು ಆರಿಸಿದ್ದಾರೆ. ಶ್ರೀ ಸಿಂಗರು ರೀಲ್ವೆ ಇಲಾಖೆಯಲ್ಲಿ ಸಂಶೋಧನಾ ವಿಭಾಗದ ಸಲಹೆಗಾರರಾಗಿರುವರು. ಇವರು ಕಾಸ್ಮೊಲಜಿ, ರಿಲೇಟಿವಿಟಿಯ ಮೇಲೆ ಐನ್ ಸ್ಟೀನರ ಸಿದ್ಧಾಂತ ಮತ್ತು ಆಸ್ಟ್ರೋಫಿಸಿಕಲ್ ಸಿದ್ಧಾಂತಗಳ ಮೂಲ ತತ್ವಗಳ ಮೇಲೆ ಬೆಳಕು ಹರಿಸಿದ್ದಾರೆ. ಈ ಪಾರಿತೋಷಕದ ಹೆಸರು ಕಳಿಂಗ ಪಾರಿತೋಷಕ.

ಅಯ್ಯೂಬಖಾನ್

ಭಾರತದ ನಿವೃತ್ತ ಮಹಾದಂಡನಾಯಕ ಜ। ಕಾರಿಯಪ್ಪನವರು ಪಾಕಿಸ್ತಾನಕ್ಕೆ ತೆರಳಿ ಅಲ್ಲಿ ಅಧ್ಯಕ್ಷ ಅಯ್ಯೂಬಖಾನರನ್ನು ಭೆಟ್ಟಿಯಾದರು. ಉಭಯ ದೇಶಗಳ ನಡುವಣ ಸಂಬಂಧ ತಿಳಿಗೊಳ್ಳುವುದು ಅಗತ್ಯವೆಂದು ಇಬ್ಬರೂ ಹೇಳಿದರು, ಅಯ್ಯೂಬಖಾನರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅಲ್ಲಮಟ್ಟಿಗೆ ಅತಿರಂಜಿತ ಮತ್ತು ಏಕಪಕ್ಷೀಯವಾಗಿಯೇ ಇವೆ. ಪ್ರಧಾನಿ ನೆಹರುರವರೊಡನೆ ತಾನು ಭೆಟ್ಟಿಯಾಗಲು ಸಿದ್ಧನೆಂದೂ ಆದರೆ, ಭಾರತವು ತನ್ನ ಇಂದಿನ ಕಾಶ್ಮೀರನೀತಿಯನ್ನು ಪರಿವರ್ತಿಸಬೇಕೆಂದೂ ಅವರು ಹೇಳುತ್ತಾರೆ. ಚೀನಾ—ಪಾಕ್ ಸಂಬಂಧವು ಭಾರತದ ಮೇಲಿ ಆಕ್ರಮಣಕ್ಕಾಗಿರದೆ ಪಾಕ್ ರಕ್ಷಣೆಗಿರುವುದು ಭಾರತಕ್ಕೆ ವಿದೇಶೀಯ ಶಸ್ತ್ರಾಸ್ತ್ರಗಳ ನೆರವು ಬರುವುದು ಪಾಕಿಗೆ ಮಾತ್ರ ಗಂಡಾಂತರಕಾರಿ—ಇದರ ಇಂಗಿತವೆಂದರೆ, ಅಯ್ಯೂಬರ ಏಕಪಕ್ಷೀಯ ನೀತಿಗೆ ನ್ಯಾಯೋಚಿತ ನೀತಿ ಮನ್ನು ಬಲಿಯಿಡಲು ಭಾರತ ಸಿದ್ಧವಾದರೆ, ಅಯ್ಯೂಬದೇವರು ಒಲಿಯುವರು! ಈ ದೇವರನ್ನು ಒಲಿಸಿಕೊಳ್ಳುವ ಅಗತ್ಯ ಇದೆಯೆ?

ಅಲ್ಲಲ್ಲಿಯ ಸುದ್ದಿ ಸಾರ

ಬಂಟರ ಯಾನೆ ನಾಡವರ ಸಂಘದ ಮಹಾಸಭೆ— ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆಯು ತಾ 19–4–64ರಂದು ಶ್ರೀ ಬೆಳ್ಳಾರೆ ನಾರಾಯಣ ಶೇಕರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನೆರವೇರಿತು. ಸಂಘದ ಅಧ್ಯಕ್ಷ ಶ್ರೀ ಕೆ. ಟಿ. ಆಳ್ವರು ಸ್ವಾಗತಿಸಿ ಶ್ರೀ ಶೇಕರ ಕಾರ್ಯದಕ್ಷತೆ, ಅವರು ಸಾಧಿಸಿದ ಜನಹಿತ ಕಾರ್ಯಗಳನ್ನು ವಿವರಿಸಿದರು. ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಇತ್ತೀಚೆಗೆ ನಿಧನರಾದ ಬೆಂಗಳೂರು ಕೋರ್ಪರೇಷನಿನ ಕಮಿಶನರ್ ಶ್ರೀ ಎಂ ಬಿ ಶೆಟ್ಟಿ, ಐ. ಎ. ಎಸ್., ಪಶು ಸಂಗೋಪನಾ ಇಲಾಖೆಯ ಡೈರೆಕ್ಟರ್ ಡಾ। ಕೆ. ಎಸ್. ಶೆಟ್ಟಿ ಇವರ ಸ್ಥಾನಮಾನಗಳ, ಆದರ್ಶ ಗುಣಗಳ ಕುರಿತು ಮಾತಾಡಿ ಸಂತಾಪ ಸೂಚಕ ಠರಾವನ್ನು ಸಭೆಯ ಮುಂದಿಟ್ಟರು ಸಭೆಯು ಅದನ್ನು ಮೌನಪ್ರಾರ್ಥನೆಯೊಂದಿಗೆ ಅಂಗೀಕರಿಸಿತು. ಅನಂತರ ಶ್ರೀಗಳಾದ ಕೆ. ಸುಂದರರಾಮ ಶೆಟ್ಟಿ, ಉಪ್ಪೂರು ಸುಮಿತ್ರ, ಎಚ್. ದಾಸಣ್ಣ ಆಳ್ವ, ಡಾ. ಕೆ. ಬಾಳಪ್ಪ ಶೆಟ್ಟಿ, ಟಿ ಕುಶಲ ಹೆಗ್ಡೆ, ಇವರು ಸಂಘದ ಮತ್ತು ಇತರ ರಿಪೋರ್ಟುಗಳನ್ನು ಓದಿದರು. ಅಧ್ಯಕ್ಷ ಶ್ರೀ ಶೇಕರು ಸಂಘವು ಬೆಳೆದು ಹೆಚ್ಚಿನ ಕೆಲಸ ಮಾಡಲು ಸಮರ್ಥವಾಗುವಂತೆ ಸಮಾಜ ಬಂಧುಗಳು ಸಹಕರಿಸಬೇಕೆಂದರು. (ಇವರ ಭಾಷಣದ ಸಾರಾಂಶವನ್ನು ಇನ್ನೊಂದೆಡೆ ಕೊಡಲಾಗಿದೆ.) ಬಳಿಕ ಶ್ರೀಗಳಾದ ಪಿ ಎಸ್. ತಿಮ್ಮಪ್ಪ ಶೆಟ್ಟಿ, ಕೆ. ಸುಬ್ಬಣ್ಣ ಚಕ್ಕಳ, ಎ. ಲಕ್ಷ್ಮೀನಾರಾಯಣ ಆಳ್ವ, ಡಾ. ಕೆ. ಬಾಬು ಶೆಟ್ಟಿ, ಜಿ. ಕುಶಲ ಹೆಗ್ಡೆ, ಪಿ ಎಂ. ಹೆಗ್ಡೆ ಮೊದಲಾದವರು ಸಂಘದ ಏಳಿಗೆಗಾಗಿ ಸಲಹೆ ಸೂಚನೆಗಳನ್ನಿತ್ತರು ಕಾರ್ಯದರ್ಶಿ ಕೆ. ಸುಂದರರಾಮ ಶೆಟ್ಟರು ಸಂಘದ ನಿಲುವೆಯನ್ನು ವಿವರಿಸಿದ ಬಳಿಕ ಆಡಳಿತ ಕಮಿಟಿಗೆ ಸದಸ್ಯರನ್ನು ಆರಿಸಲಾಯಿತು ಅಧ್ಯಕ್ಷರ ಸಮಾರೋಪ ಭಾಷಣವಾದ ಬಳಿಕ ಕೆ. ಸುಂದರರಾಮ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು

ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿ ಸಭೆಯು— ತಾರೀಕು 16–4 64ರಂದು ಶ್ರೀ ಎಂ. ಆರ್. ಎಚ್ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿ, 1–4–56ರ ಮೊದಲು ಕಟ್ಟಿಸಲಾದ ರೆಸಿಡೆನ್ಸಿಯಲ್, ನೋನ್ ರೆಸಿಡೆನ್ಸಿಯಲ್ ಮತ್ತು ಇಂಡಸ್ಟ್ರಿಯಲ್ ಕಟ್ಟಡಗಳನ್ನು 1962ರ ಮೈಸೂರು ಬಿಲ್ಡಿಂಗ್ ಟೇಕ್ಸ್ ಕಾನೂನಿಂದ ವಿರಹಿತಗೊಳಿಸಬೇಕೆಂದೂ, 1963—64ಕ್ಕೆ ಭೂ ತೆರಿಗೆಯ ಮೇಲೆ ಹೊರಿಸಲಾದ ಸರ್ ಚಾರ್ಜನ್ನು 1964ನೇ ಡಿಶಂಬರದ ನಂತರ ಸುಲಭ ಕಂತುಗಳಲ್ಲಿ ವಸೂಲು ಮಾಡಬೇಕೆಂದೂ ಸರಕಾರವನ್ನು ಕೇಳಿಕೊಳ್ಳುವ ಠರಾವುಗಳಾದವು.

ನಿಧನ— ತಾ. 16–4–64ರಂದು ಕಡೆಕಾರು ಪಟೇಲ್ ಮುದ್ದಣ್ಣ ಶೆಟ್ಟರು ತಮ್ಮ 80ನೇ ಪ್ರಾಯದಲ್ಲಿ ನಿಧನರಾದರು. ದಿವಂಗತರು ಸತ್ಯಸಂಧರಾಗಿ ಜನಪ್ರಿಯರಾಗಿದ್ದರು. ಅವರು ತಮ್ಮ ಜನ್ಮದಲ್ಲಿಯೇ ಸುಳ್ಳು ಹೇಳಲಿಲ್ಲವೆಂದೂ ಇದರ ಪ್ರಭಾವದಿಂದಾಗಿಯೇ ಊರಲ್ಲಿ ಅವರ ಭೀತಿಯಿತ್ತೆಂದೂ ಹೇಳಬಹುದು. ಅವರು ಸಾಧು ಸರಳ ಸ್ವಭಾವದವರಾಗಿ ಬಾಳಿ ಮಾದರಿ ಕೆಂಡದಂತಿದ್ದರು

ಕಾರ್ಕಳದಲ್ಲಿ ಮಂತ್ರಿ ಸುಬ್ರಹ್ಮಣ್ಯಂ— ನಮ್ಮ ವಿದ್ಯಾಭ್ಯಾಸ ಕ್ರಮವು ದೇಶಕ್ಕೆ ಪ್ರಯೋಜನಕಾರಿಗಳಾದಂಥವರನ್ನು ಸಿದ್ಧಗೊಳಿಸುವಂತಿರಬೇಕೆಂದೂ, ಅದಕ್ಕಾಗಿ ಜಗತ್ತಿನಲ್ಲಾಗುವ ಭಾರಿ ಬದಲಾವಣೆಗಳಿಗೆ ಅನುಗುಣವಾಗಿ ಹೊಸ ಕ್ರಮಗಳನ್ನು ಅಳವಡಿಸಿಕೊಳ್ಳಬೇಕೆಂದೂ ಕೇಂದ್ರ ಉಕ್ಕು, ಗಣಿ ಹಾಗೂ ಭಾರಿ ಕೈಗಾರಿಕೆಗಳ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ತಾ. 19 ರಂದು ಕಾರ್ಕಳದಲ್ಲಿ ನುಡಿದರು! ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಮಾತನಾಡುತ್ತಾ ಈಗಿನ ವಿದ್ಯಾಭ್ಯಾಸ ಪಡೆದವರನೇಕರು ನಿರುಪಯುಕ್ತರಾಗಿದ್ದಾರೆಂದರು. ಅದೇ ಕ್ರಮ ಮುಂದುವರಿದರೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತದೆಂದು ಹೇಳಿದರು.

ಅಕಾಡೆಮಿ ಅಫ್ ಜನರಲ್ ಎಜುಕೇಶನ್ ಸಂಸ್ಥೆಯ ರಿಜಿಸ್ಟ್ರಾರ್ ಡಾ। ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿ, ಶ್ರೀ ಸುಬ್ರಹ್ಮಣ್ಯಂರವರು ೧೯೫೩ರಲ್ಲಿ ಮಣಿಪಾಲಕ್ಕೆ ಭೇಟಿ ಕೊಟ್ಟು ಪ್ರೋತ್ಸಾಹದಾಯಕ ಮಾತುಗಳನ್ನಾಡಿದುದನ್ನು ಸ್ಮರಿಸಿಕೊಂಡರು ಅಕಾಡೆಮಿಯು ಸಾಧಿಸಿರುವ ಯಶಸ್ಸು ಗಮನಾರ್ಹವಾಗಿದೆ ಎಂದು ಶ್ರೀ ಸುಬ್ರಹ್ಮಣ್ಯಂ ತಿಳಿಸಿದರು. ಅಕಾಡೆಮಿಯು ದೂರದರ್ಶಿತ್ವ, ಕಾರ್ಯಪರತೆ ಹಾಗೂ ವಿಚಾರವಂತ ಜನರ ನೇತೃತ್ವದಲ್ಲಿ ಕೆಲಸ ಮಾಡುತ್ತಿದೆ ಎಂದರು. ಕಳೆದ ಹತ್ತು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮುಖ್ಯವಾಗಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಬಹಳ ಪ್ರಗತಿ ಸಾಧಿಸಿದೆ ಎಂದರು. ಆದರೆ ಇಷ್ಟರಿಂದಲೇ ತೃಪ್ತರಾಗದೆ ಡಾ। ಪೈಯವರಂಥವರು ವಿದ್ಯಾಭ್ಯಾಸ ಸುಧಾರಣೆಗಳನ್ನು ಮಾಡುವುದರಲ್ಲಿ ಮುಂದಾಳತ್ವ ವಹಿಸಬೇಕಾದುದಗತ್ಯವೆಂದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ದಾಮೋದರ ಕಿಣಿಯವರು ವಂದನಾರ್ಪಣೆ ಮಾಡಿದರು.

ವಿಚಾರಗೋಷ್ಠಿ— ಪತ್ರಿಕೋದ್ಯೋಗಿಯ ವೃತ್ತಿಧರ್ಮ ಕುರಿತು ಉಡುಪಿ ರೋಟರಿ ಕ್ಲಬ್ ತಾ. 14–4–64ರಂದು ಏರ್ಪಡಿಸಿದ್ದ ವಿಚಾರಗೋಷ್ಠಿಯಲ್ಲಿ ಶ್ರೀ ಆರ್. ಬಾಲಕೃಷ್ಣ ಉಪಾಧ್ಯಾಯರವರು ಮಾತನಾಡಿ, ಸರಕಾರ ಅಥವಾ ಬೇರೆ ಯಾರೂ ಪತ್ರಿಕೋದ್ಯೋಗಿಗಳ ಮೇಲೆ ನಿಯಮಗಳನ್ನು ಹಾಕಲಾರರಾದ್ದರಿಂದ ಪತ್ರಿಕೋದ್ಯೋಗಿಗಳು ಸ್ವತಃ ತಮ್ಮ ವೃತ್ತಿ ಧರ್ಮವನ್ನು ಗೊತ್ತು ಮಾಡಿಕೊಳ್ಳಬೇಕೆಂದರು. ಜನರ ಅಭಿಪ್ರಾಯಗಳನ್ನು ಮೂಡಿಸುವುದರಲ್ಲಿ ಪತ್ರಿಕೆಗಳು ಮಹತ್ತರ ಪಾತ್ರ ವಹಿಸುತ್ತವೆಂದರು. ಶ್ರೀ ಎ. ಜೆ. ಅಲ್ಸೆಯವರು ರೋಟರಿಯ ನಾಲ್ಕು ರೀತಿಯ ಪರೀಕ್ಷಾ ಕ್ರಮವು ಪತ್ರಿಕೋದ್ಯೋಗಿಗಳಿಗೆ ಅನುಕರಣೀಯವಾಗಿದೆ. ಅವರು ಸತ್ಯಕ್ಕೆ ಹೆಚ್ಚು ಗಮನ ಕೊಡಬೇಕು ಅವರ ಬರಹಗಳು ಸಂಬಂಧಪಟ್ಟವರಿಗೆಲ್ಲ ಹಿತಕರವಾಗಿರಬೇಕು, ಅವುಗಳು ಪ್ರಯೋಜನಕಾರಿಯಾಗಿಯೂ ಸೌಹಾರ್ದ ಬೆಳೆಸುವಂತೆಯೂ ಇರಬೇಕೆಂದರು

೩೧೮ನೇ ರೋಟರಿ ಜಿಲ್ಲೆಯ ಗವರ್ನರರಾಗಿ ನಾಮಕರಣ ಹೊಂದಿರುವ ಡಾ। ಟಿ. ಎಂ. ಎ. ಪೈಯವರು ರೋಟರಿಯ ಚತುರ್ವಿಧ ಪರೀಕ್ಷಾ ಕ್ರಮದ ಬಗ್ಗೆ ಭಾಷಣ ಮಾಡಿದರು. ಒಂದು ರೋಲಿಂಗ್ ಶೀಲ್ಡನ್ನು ಆರಂಭಿಸುವುದಕ್ಕಾಗಿ ರೊಟೇರಿಯನ್ ಅರೂರು ಲಕ್ಷ್ಮೀನಾರಾಯಣ ರಾಯರು 100 ರೂ. ದಾನವಿತ್ತಿದ್ದಾರೆಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ರಮೇಶ ಪೈ ಘೋಷಿಸಿದರು. ಶ್ರೀ ಎನ್. ಎಸ್. ಪ್ರಭು ವಂದನಾರ್ಪಣೆ ಮಾಡಿದರು.

ಮಣಿಪಾಲ— ಡಾ। ಸಿ. ಎಚ್. ಶಿವರಾಮನ್, ಎಂ.ಬಿ., ಬಿ.ಎಸ್., ಎಂ.ಆರ್. ಸಿ. ಪಿ., ಡಿ.ಟಿ. ಎಂ ಎಂಡ್ ಎಚ್., ರವರು ಮಣಿಪಾಲದ ಕಸ್ತೂರಬಾ ಜನರಲ್ ಆಸ್ಪತ್ರೆಯ ಔಷಧ ವಿಭಾಗದ ಮುಖ್ಯಾಧಿಕಾರಿಗಳಾಗಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿದ್ದಾರೆ. ಮದ್ರಾಸ್ ಮೆಡಿಕಲ್ ಕಾಲೇಜ್, ಎಡಿನ್ ಬರೋ ವಿಶ್ವವಿದ್ಯಾನಿಲಯ ಮತ್ತು ಎಡಿನ್ ಬರೋ ರಾಯಲ್ ಫಿಜಿಶಿಯನ್ಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಡಾ। ಶಿವರಾಮನ್ ನುರಿತ ವೈದ್ಯರಾಗಿದ್ದಾರೆ. ಅವರು ಹಿಂದೆ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು

ಉಪ್ಪೂರು— ಉಪ್ಪೂರು ಗ್ರಾಮ ಪಂಚಾಯತಿಯ ಉಪ ಸಭಾಪತಿ ಸ್ಥಾನಕ್ಕೆ ಯು.ಕೆ.ಗೋವಿಂದ ಶೆಟ್ಟರು ಅವಿರೋಧವಾಗಿ ಆಯ್ಕೆಗೊಂಡಿರುವರು.

ಹಿರಿಯಡ್ಕ— ಸ್ಥಳೀಯ ಶ್ರೀ ವೀರಭದ್ರ ದೇವಸ್ಥಾನದಲ್ಲಿ ತಾ 26–4–64 ರಿಂದ ತಾ. 1–5–64ರ ವರೆಗೆ ರಥೋತ್ಸವ ಕಾರ್ಯಕ್ರಮಗಳು ಮಾಮೂಲ್ ಮೇರೆಗೆ ನಡೆಯಲಿರುವವೆಂದೂ ಸರ್ವರೂ ಬಂದು ಶ್ರೀ ಮುಡಿ ಗಂಧ ಪ್ರಸಾದಗಳನ್ನು ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾಗಬೇಕೆಂದೂ ಮೆನೇಜಿಂಗ್ ಟ್ರಸ್ಟಿ ಶ್ರೀ ಬಿ ಜಗಂಜೀವ ಆಳ್ವರು ಕೋರುತ್ತಾರೆ.

ವಾರ್ಷಿಕೋತ್ಸವ— ಉಡುಪಿಯ ಪ್ರೊಗ್ರೆಸ್ಸಿವ್ ಕಮರ್ಶಿಯಲ್ ಎಂಡ್ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ 15ನೇ ವಾರ್ಷಿಕೋತ್ಸವವು ತಾ 19ರಂದು ಡಾ॥ ಏಸ್ ಆರ್. ಎಸ್ ಪೈಸ್ಮಾರಕ ಮಂಟಪದಲ್ಲಿ ಶ್ರೀ ಕು ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ಸಂದರ್ಭದಲ್ಲಿ ಶ್ರೀ ಕೆ. ಆರ್. ಶೆಣೈಯವರು ಸನ್ನಿವೇಶವನ್ನು ಉದ್ಘಾಟಿಸಿದರು.

ಉಪಕಾರ ಸ್ಮರಣೆ:—ಇತ್ತೀಚೆಗೆ, ಕೃಷ್ಣರಾಜ ಪೇಟೆಯಲ್ಲಿ ನವಯುಗಕ್ಕೆ ಚಂದಾದಾರರನ್ನು ಒದಗಿಸಲು, ನೆರವಾದ ಶ್ರೀ. ಬಿ ಆನಂದ ಹೆಗ್ಡೆಯವರಿಗೂ, ಉಪ್ಪೂರು ಮತ್ತಿತರ ಕಡೆಗಳಲ್ಲಿ ಹಲವಾರು ಚಂದಾದಾರರನ್ನು ಮಾಡಿಕೊಟ್ಟ ಡಾ। ಯು. ಚಂದ್ರಶೇಖರ ಇವರಿಗೂ ನಾವು ಆಭಾರಿಗಳಾಗಿದ್ದೇವೆ.

ಕೆ. ಹೊನ್ನಯ್ಯ ಶೆಟ್ಟಿ.
ಸಂಚಾಲಕ— ಸಂಪಾದಕ.

ನವಭಾರತ ನಿರ್ಮಾಣ

ಕಡಲ ನಡುವಣ ಲಕ್ಷದ್ವೀಪಗಳು

ಪಶ್ಚಿಮದ ಅಗಲಕಿರಿದಾದ ರಾಜ್ಯ ಕೇರಳದ ಕರಾವಳಿಯಿಂದ ೧೫೦–೨೦೦ ಮೈಲು ದೂರದಲ್ಲಿ ಸುಮಾರು ೧೦ ದ್ವೀಪಗಳ ಸಮುದಾಯವಿದೆ ಇದುವೇ ಲಕ್ಷದ್ವೀಪ—ಮಿನಿಕಾಯ್—ಅಮಿನ್‌ದೀವಿ ದ್ವೀಪಗಳೆಂದು ಕರೆಯಲ್ಪಡುತ್ತಿವೆ. ಈ ದ್ವೀಪಗಳಲ್ಲಿ ಕೆಲವುಗಳಲ್ಲಿ ಮಾತ್ರ ಜನವಸತಿಯಿದೆ ಜನವಸತಿಯಿಲ್ಲದ ದ್ವೀಪಗಳಲ್ಲಿಯೂ ಭೂಮಿಯನ್ನು ಸಾಗುವಳಿ ಮಾಡಲಾಗಿದೆ ಈಯೆಲ್ಲ ದ್ವೀಪಗಳೂ ಸಮುದ್ರ ಮಟ್ಟದಿಂದ ೧೦ರಿಂದ ೩೦ ಅಡಿ ಎತ್ತರದಲ್ಲಿವೆ.

ಸಿಬಿಡವಾಗಿ ಬೆಳೆದಿರುವ ತೆಂಗಿನ ಮರಗಳು, ಬಿಳಿಯ ಬಣ್ಣದ ಮರಳು—ಹವಳದ ದಿಬ್ಬ, ಪ್ರಶಾಂತ ಜಲ—ನೀಲ ಆಕಾರಗಳ ಎದೆಯಲ್ಲಿರುವ ಈ ದ್ವೀಪಗಳು ಮನಾನಂದಕಾರಕವಿವೆ. ತೆಂಗು, ಲಿಂಬೆ, ಕೊಟ್ಟೆಯ ಹಣ್ಣು, ಮತ್ತು ಆಲದ ಮರಗಳು ಇಲ್ಲಿ ಬೆಳೆಯುತ್ತವೆ ಒಂದು ಬಗೆಯ ಪೈನ್ ಮರಗಳೂ ಇಲ್ಲಿ ಹೇರಳವಾಗಿವೆ. ಈ ದ್ವೀಪಗಳಲ್ಲಿ ವನ್ಯ ಜೀವಿಗಳೇ ಇಲ್ಲ, ಹಾವುಗಳೂ ಇಲ್ಲ! ಇಲಿಗಳ ಹಾವಳಿ ಮಾತ್ರ ವಿಪರೀತ. ಸಮುದ್ರದಲ್ಲಿ ಮೀನುಗಳೂ ಹೆಚ್ಚು. ಆಳವಾದ ನೀರಿನಲ್ಲಿ ಟ್ಯೂನಾ ಮತ್ತು ಸ್ಕಿಪ್-ಜಾಕ್ ಜಾತಿಯವುಗಳು ಹೇರಳವಾಗಿವೆ. ಇಲ್ಲಿನ ಜನಸಂಖ್ಯೆ ೨೪,೧೦೮. ನಿವಾಸಿಗಳಲ್ಲಿ ಹೆಚ್ಚಿನವರು ಮುಸಲ್ಮಾನರು; ಮಲೆಯಾಳ ಭಾಷೀಯರು ಮಿನಿಕಾಯ್ ದ್ವೀಪದವರು ಮೊಹಲ್ ಭಾಷೆಯನ್ನೂ ಆಡುತ್ತಾರೆ. ರಾಜ್ಯ ಪುನರ್ಘಟನಾ ನಂತರ ಈ ದ್ವೀಪ ಸಮುದಾಯವನ್ನು ಕೇಂದ್ರಾಧೀನ ಪ್ರದೇಶವನ್ನಾಗಿಟ್ಟುಕೊಳ್ಳಲಾಗಿದೆ. ಬಹಳ ಹಿಂದುಳಿದಿದ್ದ ಈ ಪ್ರದೇಶದಲ್ಲಿ ಒಂದು ಕೋಟಿ ರೂಪಾಯಿಗಳ ವೆಚ್ಚದ ಮೂರನೆಯ ಪಂಚವಾರ್ಷಿಕ ಯೋಜನೆಯು ವ್ಯವಹೃತವಾಗುತ್ತಿದೆ. ತೆಂಗು ಮತ್ತು ಮೀನುಗಳು ಈ ದ್ವೀಪ ಸಮುದಾಯದ ಮುಖ್ಯೋತ್ಪತ್ತಿ. ೬,೫೦೦ ಎಕ್ರೆ ಜಮೀನಿನಲ್ಲಿ ತೆಂಗು ಬೆಳೆಯುತ್ತದೆ. ಸುಧಾರಿಸಿದ ತೆಂಗಿನ ಕೃಷಿಯ ಬಗ್ಗೆ ಹಲವು ಪ್ರಯೋಗಿಕ ಕೇಂದ್ರಗಳನ್ನು ತೆರೆಯಲಾಗಿದೆ ಮೀನುಗಾರಿಕೆಯಲ್ಲಿಯೂ ಅಭಿವೃದ್ಧಿಯನ್ನು ಸಾಧಿಸಲು ಹಲವು ಆಧುನಿಕ ತಂತ್ರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಕಟೀರೋದ್ಯೋಗಗಳಲ್ಲಿ ತೆಂಗಿನ ನಾರಿನ ಕೈಗಾರಿಕೆ ಮುಖ್ಯ. ಸುಮಾರು ಆರು ಸಾವಿರ ಜನರು ಇದರಲ್ಲಿ ತೊಡಗಿದ್ದಾರೆ ನೇಯ್ಗೆ, ಚಾಪೆಗಳ ಹೆಣಿಗೆ ಮೊದಲಾದುವುಗಳೂ ಮಹತ್ವದ ಉದ್ಯೋಗಗಳು. ಸಹಕಾರಿ ಸಂಘಗಳ ಮೂಲಕ ಈ ಉದ್ಯೋಗಗಳಿಂದ ಸಿದ್ಧವಾದ ವಸ್ತುಗಳು ವಿಕ್ರಯಿಸಲ್ಪಡುತ್ತವೆ,

ಲಕ್ಷದ್ವೀಪಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯವಿದೆ. ಈಗ ಇಲ್ಲಿ ೫,೨೦೦ ವಿದ್ಯಾರ್ಥಿಗಳು ಹೈಸ್ಕೂಲಿನ ವರೆಗೆ ಶಿಕ್ಷಣವನ್ನು ಪಡೆಯುತ್ತಿದ್ದಾರೆ ಕಾಲೇಜು ಅಧ್ಯಯನಕ್ಕಾಗಿ ವ್ಯಾಸಂಗ ವೇತನ, ಊಟ, ವಸತಿ ಮೊದಲಾದುವನ್ನು ಕಲ್ಪಿಸಿಕೊಡಲಾಗುತ್ತಿದೆ ಕೇರಳ ಮತ್ತಿತರ ರಾಜ್ಯಗಳಲ್ಲಿ ಉಚ್ಚ ವಿದ್ಯಾಭ್ಯಾಸವನ್ನು ಇಲ್ಲಿಯವರು ಪಡೆಯುತ್ತಾರೆ

ಆನೆಕಾಲು ಮತ್ತು ಕುಷ್ಠರೋಗಗಳು ಇಲ್ಲಿಗೊದಗಿದ ಶಾಪಗಳಾಗಿದ್ದುವು ಶುದ್ಧ ನೀರಿನ ಅಭಾವವಿತ್ತು ಆದರೆ, ಇತ್ತೀಚೆಗೆ ನಡೆದ ರಚನಾತ್ಮಕ ಕಾರ್ಯಕ್ರಮಗಳಿಂದ ರೋಗಗಳನ್ನು ತಡೆಹಿಡಿಯಲಾಯಿತ; ನೀರನ್ನು ಒದಗಿಸಲಾಯಿತು ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಾಲ್ಕು ಚಿಕಿತ್ಸಾಲಯಗಳು ಮತ್ತೊಂದು ಆಸ್ಪತ್ರೆಗಳು ಈಗ ಈ ದ್ವೀಪಗಳಲ್ಲಿವೆ.

ಸಂಪ್ರದಾಯ ಮತ್ತು ಅಂಧಶ್ರದ್ಧೆಗಳು ಈ ದ್ವೀಪಗಳ ಅಭಿವೃದ್ಧಿಗೆ ಅಂತರವಾಗಿವೆ. ಇಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಅಧಿಕ. ಸ್ತ್ರೀಯರಲ್ಲಿ ಪರ್ದಾಪದ್ಧತಿ, ಬಾಲ್ಯವಿವಾಹ ಮತ್ತು ಬಹುಪತ್ನೀತ್ವಗಳು ಪರಂಪರಾ ಪ್ರಾಪ್ತವಾಗಿದ್ದುವು ಶಿಕ್ಷಣ ಪ್ರಚಾರದ ಮೂಲಕ ಇವುಗಳನ್ನು ದೂರೀಕರಿಸುವುದು ಸಾಧ್ಯವಾಗಿದೆ ಮಹಿಳೆಯರಲ್ಲಿಯೂ ಜಾಗೃತಿಯ ಮನೋಭಾವ ಮೂಡಿ ಬಂದಿದೆ....

ನೌಕೆಗಳು ಭಾರತದ ಕರಾವಳಿ ಮತ್ತು ದ್ವೀಪಗಳ ನಡುವೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುತ್ತಿವೆ ವಯರ್‌ಲೆಸ್ ಮತ್ತು ತಂತಿಯ ಸೌಲಭ್ಯ ಈ ದ್ವೀಪಗಳಿವೆ. ಮಿನಿಕಾಯ್ ದ್ವೀಪಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸಲಾಗಿದೆ ಇಲ್ಲಿ ಮತ್ತು ಅಂಡ್ರೊತ್ ದ್ವೀಪಗಳಲ್ಲಿ ದೀಪಸ್ತಂಭಗಳಿದ್ದು, ಉಳಿದವುಗಳಲ್ಲಿಯೂ ಅವನ್ನು ಕಟ್ಟಲಾಗುತ್ತಿವೆ.

ಲಕ್ಷದ್ವೀಪಗಳು ಕಳೆದ ಏಳು ವರ್ಷಗಳಲ್ಲಿ ಅಪೂರ್ವ ಪ್ರಗತಿ ಸಾಧಿಸಿವೆ. ಇವುಗಳ ಭವಿಷ್ಯ ಉಜ್ವಲ ಮತ್ತು ಆಶಾದಾಯಕವಾಗಿದೆ ಅನೇಕ ಕ್ಷೇತ್ರಗಳಲ್ಲಿ ಈ ದ್ವೀಪ ಸಮೂಹವು ಸುಸಂಘಟಿತ ಪ್ರಯತ್ನ ಮತ್ತು ಸಹಕಾರದ ಬಲದಿಂದ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ

ಸಾಂಪ್ರದಾಯಿಕ ಉಡುಗೆಯಲ್ಲಿರುವ ಲಡಖದ ಎಳ ಹೆಂಗಸು.

ನಮ್ಮ-ನಮ್ಮವರು

(೧ನೇ ಪುಟದಿಂದ)

ದ ನಂದನವಾಗುವುದು. ಈ ರೀತಿ ಸಾಗುವವರು ತೀರಿಕೆಯ, ಮಟ್ಟಿಗೆ ಬಹು ಮಂದಿಯಿರಬಹುದು. ಆದರ್ಶ ದಾಂಪತ್ಯ ಜೀವನ ಬದುಕುವವರು ಬಹು ಕಡಿಮೆ. ಉಪ್ಪಿನಂಗಡಿಯ ಶ್ರೀ ಬಿ ಬಾಲಕೃಷ್ಣ ರೈ ಮತ್ತು ಶ್ರೀಮತಿ ಶಾಂಭವಿ ಬಾಲಕೃಷ್ಣ ರೈಯವರು ಈ ಬಗೆಯ ಜೀವನ ಮಾಡುವವರು, ಉಳಿದವರಿಗೆ ಮಾದರಿಯಾದವರು.

ಶ್ರೀಮತಿ ಶಾಂಭವಿ ಬಾಲಕೃಷ್ಣ ರೈಯವರು ಸಮಾಜ ಸೇವಾ ಕಾಂಕ್ಷಿಗಳು. ತನ್ನ ಪತಿಯು ಕೈಗೊಂಡ ಎಲ್ಲ ಸಾರ್ವಜನಿಕ ಕಾರ್ಯಕಲಾಪಗಳಲ್ಲಿಯೂ ಸಂಪೂರ್ಣ ಸಹಕಾರ ನೀಡಿದವರು ಶ್ರೀ ರೈಯವರು ಹಿಂದೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಮತ್ತು ಕರ್ನಾಟಕ ಪ್ರಾದೇಶಿಕ ಸಮಿತಿಯ ಸದಸ್ಯರಾಗಿ ಜನ ಸೇವೆಯಲ್ಲಿ ತೊಡಗಿದಾಗ, ಅವರ ಭುಜಕ್ಕೆ ಭುಜವಿತ್ತು, ತನ್ನ ಸತೀ ಧರ್ಮವನ್ನು ನೆರೆದವರು. ತಾನು ಕೂಡ ಉಪ್ಪಿನಂಗಡಿಯ ಪಂಚಾಯತ ಬೋರ್ಡಿನ ಸದಸ್ಯೆಯಾಗಿ ಆಯ್ಕೆಗೊಂಡರು ಆದರೆ, ಪಂಚಾಯತ ಬೋರ್ಡಿನ ಸೇವೆಯ ಆಸಕ್ತಿಯ ಪ್ರಮಾಣದ ಸಂಬಂಧದಲ್ಲಿ ಅತೃಪ್ತರಾದ ಇವರು ಎರಡೇ ವರ್ಷಗಳಲ್ಲಿ ರಾಜಿನಾಮೆಯಿತ್ತು ಹೊರಬಂದರು

ತಾಲೂಕು ಬೋರ್ಡುಗಳ ರಚನೆಯಾದಾಗ, ಪುತ್ತೂರು ತಾಲೂಕು ಅಭಿವೃದ್ಧಿ ಮಂಡಲದ ಸದಸ್ಯಸ್ಥಾನಕ್ಕೆ ಶ್ರೀ ಮತ್ತು ಶ್ರೀಮತಿ ರೈಯವರಿಬ್ಬರೂ ಸ್ವತಂತ್ರರಾಗಿ ಸ್ಪರ್ಧಿಸಿ ಜಯಶೀಲರಾದರು ೧೯ ಜನ ಸದಸ್ಯರಿರುವ ಈ ಮಂಡಳದಲ್ಲಿ ೧೭ ಜನರು ಕಾಂಗ್ರೆಸಿಗರು, ರೈ ದಂಪತಿಗಳು ಮಾತ್ರ ಯಾವ ಪಕ್ಷಕ್ಕೂ ಸೇರದ ಸ್ವತಂತ್ರರು. ಹೀಗಿದ್ದರೂ ತಮ್ಮ ಶಕ್ತಿ ಮೀರಿ ಜನತಾ ಸೇವೆಯೇ ಜನಾರ್ದನ ಸೇವೆಯೆಂದು ನಂಬಿ ನಂಬಿಕೆಯಂತೆ ನಡೆಯುತ್ತ ಬಂದಿದ್ದಾರೆ ಉತ್ತಮ ವಿಚಾರಗಳು ಎಲ್ಲಿದ್ದರೂ ಪುರಸ್ಕಾರ ಯೋಗ್ಯವಾಗಿವೆಯೆಂಬುದನ್ನು ಪ್ರತ್ಯಕ್ಷೀಕರಿಸಿದ್ದಾರೆ ಸ್ವಯಂ ಉದಾರ ಮನಸ್ಕರಾದ ರೈಯವರು ಸಮಾಜದ ಸುಖವನ್ನೇ ಬಯಸುವವರು, ಪರೋಪಕಾರಿಗಳು, ನುಡಿದಂತೆ ನಡೆಯುವವರು ಶಾಂಭವಿ ರೈಯವರ ಸತೀತ್ವ ಮತ್ತು ರೈ ದಂಪತಿಗಳ ದಾಂಪತ್ಯ ಉಳಿದವರಿಗೆ ಮಾರ್ಗದರ್ಶಕ ಮತ್ತು ಪ್ರೇರಣಾತ್ಮಕವಾಗಿದೆ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: **ಎಸ್. ಗೋಪೀಚಂದ ರಾವ್**, ವಿದ್ವಾನ್, ವಿಶಾರದ.

ಬೆಲೆ: ರೂ ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನೀರಲಲನೆಯರು ೨

ಸಾಧ್ವಿ ಸೀತಾಮಾತೆ

-ಶ್ರೀ ಶಿವಮೂಂಜಿ ಪರಾರಿ, ಮುಂಬಯಿ

ಬಂಧಿನಿ ಸೀತಾ ಲಂಕೆಯ ಅಶೋಕ ವಾಟಿಕೆಯಲ್ಲಿದ್ದಾಳೆ ದಿನ ಬರುತ್ತಿವೆ, ರಾತ್ರಿ ಕಳೆಯುತ್ತಿವೆ. ಆದರೆ ಆಕೆಗೆ ಮಲಗಲು ಆಗುತ್ತಿಲ್ಲ, ರಾಮ—ರಾವಣರ ಯುದ್ಧ ನಡೆಯುತ್ತಿದೆ ಅವಳ ಹೃದಯ ಅದೆಷ್ಟು ಆಶಂಕಿತವಾಗಿದೆ? ಅವಳ ಪ್ರತಿಯೊಂದು ಕ್ಷಣ ಅದೆಷ್ಟು ವಿಷಮವಾಗಿದೆ!.

ಒಂದು ರಾತ್ರಿ ಆಕಾಶದಲ್ಲಿ ನಕ್ಷತ್ರ ರಾಜಿಗಳು ತುಂಬಿದ್ದವು. ಆ ದುಃಖಿನಿ ವಿಹ್ವಲೆಯಾಗಿ ಅಶೋಕ ವೃಕ್ಷದೊಡನೆ ಅಗ್ನಿ ಪುಷ್ಪದ ಜೊತೆಗೆ ಗೈದಿದ್ದಳು— ಆತ್ಮಹತ್ಯೆಗಾಗಿ. ಆಗಲೇ ಮುಕ್ತಿಯ ಅಗ್ರ ದೂತನಂತೆ ಮಾರುತಿಯು ಆಗಮನವಾಯ್ತು, ರಾಘವನ ಪ್ರೇಮ ಮುದ್ರಿಕೆಯೂ ಪ್ರಾಪ್ತವಾಯ್ತು.

ರಾಮ ವಿಜಯಿಯಾದಾನು, ಅವನಿಗೆ ಬಲದೊರಕೀತು. ಅಸ್ಥಿ ಪಂಜರದಂತಿದ್ದ ಅವಳ ಕ್ಷೀಣ ಶರೀರ ಲತೆ ವಸಂತ ಋತುವಿನ ಆಗಮನದಂತೆ ನವೀನ ಆಶಾ ಸಂಚಾರದಿಂದ ಲವ ಲವಿಕೆ ಪಡೆಯಿತು.

ರಾಮ ರಾಷ್ಟ್ರ ನಾಯಕನು. ರಾಷ್ಟ್ರದ ಶ್ರದ್ಧಾ ಶಕ್ತಿಗಳು ಅವನಲ್ಲಿ ಕೇಂದ್ರೀಕೃತವಾಗಿದ್ದುವು. ಸೀತೆಯರೂ ಅವನನ್ನು ಪರಿಣಯಿಸಿ ತಾನು ಎಂದೆಂದೂ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುವೆನು ಎಂಬ ಕನಸನ್ನಾಕೆ ಕಂಡಿರಲಿಲ್ಲ ಪರಂತು, ಅವನ ಪ್ರತಿಯೊಂದು ಸಂಘರ್ಷದಲ್ಲಿ ಅವನೊಡನಿದ್ದು ಸಹಕರಿಸಬೇಕು ಎಂಬ ವಿಶ್ವಾಸ ಭಾವುಕತೆಗಳು ಆಕೆಗಿದ್ದುವು. ಆದರೆ ಇಂದು ಆ ವಿಶ್ವಾಸ ಜೀವನ ವ್ಯಾಪೀ ವೇದನೆಯ ರೂಪ ತಳೆದಿದೆ.

೦ ೦ ೦

ವನದೇವಿ ವಾಲ್ಮೀಕಿ ಮಹರ್ಷಿಯ ಆಶ್ರಮದಲ್ಲಿ ಅನ್ಯಮನಸ್ಕಳಾಗಿ ಕುಳಿತಿದ್ದಾಗಲೇ, ಸೂಚನೆ ಸಿಕ್ಕಿತು— "ಲವಕುಶರು ನಿಮ್ಮ ತಂದೆಯಿಂದ, ತನ್ನ ಪ್ರಾಣೇಶ್ವರನಿಂದ ಗುರುತಿಸಲ್ಪಟ್ಟರು. ರಾಘವನಿಂದು ಈ ಆಶ್ರಮಕ್ಕೆ ಬರಲಿದ್ದಾನೆ" ಎಂದ.

ಎಷ್ಟು ವರ್ಷಗಳು ಕಳೆದಿದ್ದುವು! ಇಂದವಳು ಪರಿತ್ಯಕ್ತೆಯಾಗಿರುವಳು. ಲಂಕಾ ವಿಜಯದ ಬಳಿಕ ಆನಂದೋಲ್ಲಾಸಗಳ ಪ್ರತ್ಯಾಗಮನವಾಗಿತ್ತು ಹರ್ಷಾತಿರೇಕದಿಂದ ಆಕೆ ಪುಷ್ಪಕ ವಿಮಾನದ ಹೊರಗಡೆ ತೇಲಾಡುತ್ತಿದ್ದ ಘನ ಮೇಘಗಳನ್ನು ಸ್ಪರ್ಶಿಸಲು ಭುಜವನ್ನೆತ್ತಿದ್ದಳು. ಅದೇ ಸಮಯ ಸುನೀಲ ಮೇಘಗಳ ಮಧ್ಯೆ ಮಿನುಗುತ್ತಿದ್ದ ಅವಳ ಕರಗಳಲ್ಲಿದ್ದ ಸ್ವರ್ಣ ಕಂಕಣವನ್ನು ಕಂಡು ಅದೆಷ್ಟು ಉತ್ಫುಲ್ಲಿತನಾಗಿದ್ದ ದಶರಥಾತ್ಮಜ!

ಅನಂತರ ಅಯೋಧ್ಯೆಯ ಮಹಲುಗಳಲ್ಲಿ ನಾಲ್ಕು ದಿನದ ಬೆಳದಿಂಗಳು.... ಅನಂತರ ... ಅನಂತರ ನಿಬಿಡ ನಿರಾಶೆಗಳ ಭಯೋತ್ಪಾದಕ ಮೋಡಗಳ ಮಾಲೆ ಯಾವುದೋ ನೆಪದಿಂದ, ಎಲ್ಲಿಗೋ ತಂದು ಇಲ್ಲಿ ಬಿಟ್ಟು ಹೋಗಿದ್ದ ಪ್ರೀತಿಯ ಮೈದುನ ಲಕ್ಷ್ಮಣ!

ತಮಸ್ಸಿನ ಧಾರೆಯಲ್ಲಿ ಒಂದೇ ಒಂದು ಚೀತ್ಕಾರವಿತ್ತು— "ಸೀತೆ, ರಘುಕುಲ ವಧು ಕಳಂಕಿತಳೇ?" ಎಂದು

ಇಂದು, ಅದೇ ಮರ್ಯಾದಾ ಪುರುಷೋತ್ತಮ ರಾಮ, ಅವಳ ಗುಡಿಸಲಿಗೆ ಆ ಪೂರ್ವತ್ಯಕ್ತಳನ್ನು ಪವಿತ್ರಗೊಳಿಸಲು ಬರುತ್ತಿದ್ದಾನೆ

ಆದರೆ ಇಂದವಳ ಹೃದಯದಲ್ಲಿ ಆ ಕೋಮಲತೆ, ಆ ಕಾಮನೆಗಳು ಒಂದಾದರೂ ಉಳಿದಿವೆಯೇ? ಸಮಾಜ ಅವಳಲ್ಲಿ ಏನೇನನ್ನೆಲ್ಲಾ ಪ್ರಶ್ನಿಸಿತು? ಅಯ್ಯೋ ಅದರ ಸ್ಪಷ್ಟ ಕಲ್ಪನೆ ಒಂದು ಸಲವಾದರೂ ಮೊದಲು ಆಗಿರುತ್ತಿದ್ದರೆ.... .. ಈಗ, ಅವಳು ಮುರಿದಿದ್ದಾಳೆ ಬಲಿದೇವತೆ ತನ್ನ ಕರಟಿ ಚಾಚಿತ್ತು

ಅನಂತರ ಅದಿನ ಅಯೋಧ್ಯೆಯ ರಾಮ ತಮಸಾ ನದೀ ತೀರದ ಆ ಗುಡಿಸಲಿಗೆ ಬಂದಾಗ ವಾಲ್ಮೀಕಿಯ ನೀರವ ಅಶ್ರು ಬಂಧುಗಳ ಹೊರತು ಬೇರೇನೂ ಉಳಿದಿರಲಿಲ್ಲ... ...ಏನೇನೂ ಇಲ್ಲ. ವನದೇವಿ, ಪೈಸೇಹಿ, ಅವದ ಭೂಮಿಯ ಪತಿ ಪರಿತ್ಯಕ್ತೆ ಸತೀ ಸೀತೆ ಶಾಂತಳಾಗಿದ್ದಳು.

ತ್ರೇತಾಯುಗದ ಕಾಲಪುರುಷ ಆದಿನ ಅದೆಷ್ಟು ಸಮ್ಮುಖದಲ್ಲಿ ಪಶ್ಚಾತ್ತಾಪ ಪಡಲು ಎರಡು ಕ್ಷಣದ ಅವಧಿಯನ್ನೂ ಕೊಡದೆ, ಒಲ್ಲವನ್ನೂ ತೊರೆದು ಹೋಗಿಬಿಟ್ಟಿದ್ದಳು ಮಿದಿಲೆಯ ರಾಜಕುಮಾರಿ ... .

ಅದಿನ ದೇಶದ ಮರ್ಯಾದೆ.. ..ಅಕ್ಷಯವಾಗಿತ್ತು ಅಖಂಡ, ಅಭೋಘ, ಅಶೀವವಾಗಿತ್ತು!

ಪ್ರೊ. ಕು ಶಿ. ಹರಿದಾಸ ಭಟ್ಟ, ಎಂ ಎ

ಅವರ ನವೀನ ಪುಸ್ತಕಗಳು ರೂ.ನ

ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಸಂಟವಾರಾ	2=00
ಐಶ್ವರ್ಯದ ಸಂಪತ್ತು	2=00
ಅಮೇರಿಕದ ಆರು ಕತೆಗಳು	1=75
ವರ್ತಮಾನಕಾಲದ	
ಗಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕೆಟಲಾಗಿಗೆ 10 ನ ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ನಗೆಗಡಲು

ಪುರಸ್ಕಾರ

ಒಬ್ಬಾತ ಪತಿ ತನ್ನ ಪತ್ನಿಗೆ ತನ್ನ ವಿಮೆ ರೀಸುದಾರಿಕೆಯ ಪತ್ರವನ್ನು ತೋರಿಸುತ್ತ ಹೇಳಿದ: "ನೋಡು, ನಾನು ಸತ್ತ ಬಳಿಕ ನಿನಗೆ ಪ್ರತಿ ತಿಂಗಳು ಎರಡು ಸಾವಿರ ರೂಪಾಯಿಗಳು ದೊರೆಯುವುವು ನೀನು ಎರಡನೆಯ ಮದುವೆಯನ್ನು ಮಾಡಿಕೊಂಡರೆ, ಆಗ ನಾಲ್ಕು ಸಾವಿರ ರೂಪಾಯಿಗಳು ಸಿಗುವುವು." ಹೆಂಡತಿ ಕುತೂಹಲದಿಂದ ಕೇಳಿದಳು. 'ಮದುವೆ ಮಾಡಿಕೊಂಡರೆ, ನನ್ನ ವೆಚ್ಚವನ್ನು ನೋಡಿಕೊಳ್ಳಲು ಬೇರೆಯವನು ಬರುತ್ತಾನೆ ಹಾಗಿದ್ದರೂ ದೊರೆಯುವ ಹಣವನ್ನು ಇಮ್ಮಡಿಗೊಳಿಸಲು ಕಾರಣವೇನು?"

ಆತ ಸರಳವಾಗಿಯೇ ಉತ್ತರಿಸಿದ "ನಿನ್ನನ್ನು ಮದುವೆಯಾಗುವಂತಹ ಧೈರ್ಯ ಮತ್ತು ಸಾಹಸ ಮಾಡಿದುದಕ್ಕೆ ಗಿಂಚಿತ್ತಾದರೂ ಪುರಸ್ಕಾರ ನೀಡಲೇಬೇಕು"

ಅದಲ್ಲ, ಇದು

ಮಾತು ಮಾತಿಗೂ ಪ್ರತಿನುಡಿ ನೀಡುತ್ತಿದ್ದ ತನ್ನ ಪತ್ನಿಯ ವರ್ತನೆಯಿಂದ ಬೇಸತ್ತ ಪತಿ ಹೇಳಿದ:

"ನೋಡು ನಾನಿನ್ನು ಮುಂದೆ ನಿನ್ನೊಡನೆ ಮಾತನ್ನೆ ಬಿಟ್ಟು ಬಿಡುತ್ತೇನೆ".

ತುಸು ಯೋಚಿಸಿ ಆಕೆ ಯೆಂದಳು."ಪರವಾಯಿಲ್ಲ. ನೀವು ನನ್ನೊಡನೆ ಮಾತನ್ನೇ ಬಿಟ್ಟು ಬಿಡಿ ನಾನೇ ಮಾತನಾಡುತ್ತೇನೆ. ಅದಕ್ಕೆ ಪ್ರತಿ ಮಾತನ್ನಾದರೂ ಆಡುವ ಕೃಪೆದೋರಿ"

ಕಾಸಿಲ್ಲದವರಿಗೆ

"ಕಣ್ಣಿಲ್ಲದವರಿಗೆ ನೀನೇ ಶಿವಾ ಕಾಲಿಲ್ಲದವರಿಗೆ ನೀನೇ ಶಿವಾ" ಎಂದೊಬ್ಬ ಭಿಕ್ಷುಕ ಮಾರ್ಗದ ಪಕ್ಕದಲ್ಲಿ ಬಿದ್ದು ಬೊಬ್ಬೆಯಿಡುತಿದ್ದ. ದಾರಿಹೋಗುತ್ತಿದ್ದ ಶ್ರೀಮಾನ್...ರಿಗೆ ದಯೆತೋರಿತು. ಅವರು ಐದುರೂಪಾಯಿ ನೋಟೊಂದದನ್ನು ಆತನ ತಗಡ ಕರಡಿಗೆಗೆ ಹಾಕಿ ಮುಂದುವರಿದರು. ಇದನ್ನು ಕಂಡವನೊಬ್ಬ ದೂರದಲ್ಲಿಯೇ ಹಲ್ಲು ಕಿರಿದು ಮುಂದೆ ಮುಂದೆ ಬಂದ. "ಕಾಸಿಲ್ಲದವರಿಗೆ ನೀನೇ ಶಿವಾ.." ಎನ್ನುತ್ತ ಆತ ಆ ಕರಡಿಗೇನೇ ಕೈಕೊಟ್ಟು ಕಾಲಿಗೆ ಬುದ್ಧಿ ಹೇಳಿದ.

ಮಣ್ಣು

ಮಗುವೊಂದು ಮಣ್ಣಿನಲ್ಲಿ ಆಡುತಿತ್ತು. ಮುಷ್ಟಿ ತುಂಬ ಮಣ್ಣನ್ನು ಹಿಡಿದು ಅದು ತಾಯಿ ಬಳಿಗೆ ದಟ್ಟಡಿಯಿಡುತ್ತ ಬಂದಿತು. ಆಕೆಯ ಬಾಯಿಯ ಮುಂದೆ ಮುಷ್ಟಿ ಹಿಡಿದು "ಅಮ್ಮಾ ತಿನ್ನು" ಎಂದಿತು ತಾಯಿಗೆ ನಗು ಬಂತು ಆದರೂ ಹೇಳಿದಳು. "ಅದು ಮಣ್ಣು ಮಗು ಅದನ್ನು ತಿನ್ನುವುದಾಗುವುದಿಲ್ಲ .."

ಮಗು ಮತ್ತೂ ಹಠ ಮಾಡಿತು ಆಗ ತಾಯಿ ಹೇಳಿದಳು: "ಮಗೂ ನೀನೇ ತಿನ್ನು."

ತಾಯಿಯ ಆಜ್ಞೆ ದೊರೆತದ್ದೇ ತಡ. ಮಗ ಕಣ್ಣು ಮೂಗು ಬಾಯಿಗಳಿಂದ ಮಣ್ಣು ತಿನ್ನತೊಡಗಿತು.

ಇದನ್ನು ಕಂಡ ತಾಯಿಗೆ ನಗು ತಡೆಯಲಾಗಲಿಲ್ಲ ಹೊಟ್ಟೆ ಹುಣ್ಣಾಗುವಂತೆ ನಕ್ಕಳವಳು.

—ಗೋ:

೦ ೦ ೦

ಅಜ್ಜಿಗೆ ಸ್ವಾಗತ

ಜೂನ್ ತಿಂಗಳ ಕೊನೆಯ ವಾರ ಅಂದು ವಿಶೇಷ ಮಳೆ ಬಂದು ಸುಬ್ಬನ ಮನೆಯ ಅಂಗಳ ಜಾರುತಿತ್ತು. ಆಗ ತಾನೇ ಅವನ ಅಜ್ಜಿ ಕಳ್ಳಮುಂಡ್ಕೂರಿನಿಂದ ಬಂದಿದ್ದರು ಸುಬ್ಬನು ಅಜ್ಜಿಯನ್ನು ಸ್ವಾಗತಿಸಲು ಬಾಗಿಲ ಬಳಿ ಕಾಯುತ್ತಾ ನಿಂತಿದ್ದನು "ಅಜ್ಜಿ ಬಂದರೆಂ"ದು ಸುಬ್ಬನು ಸಂತಸದಿಂದ ಕುಣಿದಾಡಿದನು. ಅಜ್ಜಿ ಬಂದವರೇ "ಅಂಗಳ ಜಾರುತ್ತದೆ. ನಡೆಯುವರೇ ಬಹಳ ಕಷ್ಟ" ಎಂದರು. ಅದಕ್ಕೆ ಸುಬ್ಬ "ಅಜ್ಜಿ, ಓಡಬೇಕು, ಜಾರುವುದಿಲ್ಲ" ಎಂದನು ಅಜ್ಜಿ ಅವನನ್ನು ಹುಡುಕಲು, ಸುಬ್ಬ ಅಲ್ಲಿ ಇರಲಿಲ್ಲ

ನೋಡಿದ ಬಗೆ

ಉಡುಪಿಯಲ್ಲಿ, ಗೋಕರ್ಣ ಮಠಾಧೀಶರು, ಬರುವವರಿದ್ದರು. ಅಂದು ಅವರನ್ನು ಸ್ವಾಗತಿಸಲು ಊರಿಗೆ ಊರೇ ಅಲ್ಲಿ ನೆರೆದಿದ್ದರು. ಆಗನಮ್ಮ ಸುಬ್ಬ ನಾಲ್ಕನೆಯ ದರ್ಜೆಯಲ್ಲಿ ಓದುತ್ತಿದ್ದನು ಅದರ ಮೊದಲನೇದಿನ ಸುಬ್ಬ ಶಾಲೆಗೆ ಹೋಗಿದ್ದನು. ಅಂದು ಅವನ ಅಧ್ಯಾಪಕರು" ನಾಳೆ ಮಠಾಧೀಶರು ಬರುವವರಿದ್ದಾರೆ. ನಾಳೆ ನಿಮಗೆ ರಜೆ ಎಲ್ಲರೂ ನಾಳೆ ಅವರನ್ನು ಕಾಣಬೇಕು ಇದಕ್ಕೆ ಮೊದಲು ಯಾರಾದರೂ ಅವರನ್ನು ನೋಡಿದ್ದೀರಾ? ಎಂದು ಕೇಳಿದರು ಕೊನೆಯ ಬೆಂಚಿನಲ್ಲಿ ಇದ್ದ ಸುಬ್ಬನು "ನಾನು ನೋಡಿದ್ದೇನೆ" ಸಾರ್; ಎಂದೇ ಬಿಟ್ಟ. "ಯಾವಾಗ, ಎಲ್ಲಿ"? ಎಂದು ಆಶ್ಚರ್ಯದಿಂದ ಕೇಳಿದರು, ಅವನ ಅಧ್ಯಾಪಕರ. "ನಿನ್ನೆ ರಾತ್ರಿ ಪರದಲ್ಲಿ ನೋಡಿದೆ ಸಾರ್, ಎಂದ ಸುಬ್ಬ. ಅವನ ಅಧ್ಯಾಪಕರು ಸದ್ದಿಲ್ಲದೆ ಮೆಲ್ಲನೆ ಹೊರಟು ಹೋದರು.

ಜಿ ಆರ್ ಭಟ್, ಮುಂಬಾಯಿ.

ಏರ್-ಕಿಂಗ್ ಪಾಕೆಟ್ ರೇಡಿಯೋ

ಇದು ಜಪಾನಿನ ಸಂಶೋಧನೆಯಾಗಿದ್ದು ದೊಡ್ಡ ರೇಡಿಯೋವಂತೆ ಖಾತ್ರಿಯಾಗಿ ಧ್ವನಿ ಕೊಡುತ್ತದೆ. ಎಲ್ಲಾ ಭಾಗಗಳೂ ಜಪಾನಿನಲ್ಲಿ ತಯಾರಾದವುಗಳು. ನೀವು ಸಂಗೀತ, ಸುದ್ದಿ ಮೊದಲಾದುವನ್ನು ಯಾವದೇ ಸ್ಥಳದಲ್ಲಿಯಾದರೂ

ಕೇಳಬಹುದು ಜಗತ್ತಿನ ಪ್ರತೀ ಕೇಂದ್ರವೂ ಖಾತ್ರಿಯಾಗಿ ಕೇಳಿಸುತ್ತದೆ ಕೇಳಲಿಕ್ಕೆ ಸರಿಯಾಗಿ ಸಂಪೂರ್ಣ ತಯಾರಿಸಿ ಕಳುಹಿಸಲಾಗುವುದು. ಬಳಕೆಗೆ ಅನುಕೂಲವಾಗಿಯೂ ಸುಂದರವಾಗಿಯೂ ಹಗುರವಾಗಿಯೂ ಇದೆಯಲ್ಲವೆ ಒಂದು ಸಾಬೂನು ಕರಡಿಗೆಯಷ್ಟು ಸಣ್ಣದಾಗಿದೆ ಮೂರು ವರ್ಷ ಗ್ಯಾರಂಟಿಯಿದೆ. ಡೀಲಕ್ಸ್ ಕ್ವಾಲಿಟಿ ನಂ AM 55—ಬೆಲೆ ರೂ 45/50 ವಿ. ಪಿ. ಚಾರ್ಜು ರೂ 4 ಅಗ್ರಾಹ್ಯವಾದರೆ ಬೆಲೆಯನ್ನು ಹಿಂತಿರುಗಿಸಲಾಗುವುದು ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾತ್ರ

ವಿಳಾಸ. GEMINI TRADERS (Ny 49)

P. Box 1607, DELHI—6

READ & ADVERTISE IN NAVAYUGA WEEKLY

ಹಸಿರು ದಾರಿ—ಕೆಂಪು ದೀಪ

ಚೇತೋಹಾರಿಯಾಗಿರುವ ಪ್ರವಾಸ

ಒಂದು ಕತೆ ಹೀಗಿದೆ:

ಕಂಡಕ್ಟರ್ ಹೇಳುತ್ತಾನೆ:

'ಸೀಟಿಲ್ಲ'

ಪ್ರಯಾಣಿಕನ ವಿನಂತಿ:

'ಒಂದು ಸೀಟು ಬೇಕು. ಅರ್ಜೆಂಟು ಹೋಗಬೇಕಾಗಿದೆ'

'ಸೀಟಿಲ್ಲ ಎಂದೆನಲ್ಲ'

'ನಿಂತಾದರೂ ಹೋಗುತ್ತೇನೆ. ಒಂದು ಟಿಕೇಟು ದಯವಿಟ್ಟು ಕೊಡಿ'

'ಇಲ್ಲ ಎಂದೆನಲ್ಲ. ಸ್ಟೇಂಡಿಂಗ್ ಕೂಡಾ ಇಲ್ಲ. ಇಳಿಯಿರಿ ಕೆಳಗೆ.'

"ಸ್ವಲ್ಪ ಮೆಲ್ಲನೆ ಮಾತಾಡಯ್ಯ"

"ಮೆಲ್ಲಗೇನೇ ಹೇಳಿದೆ ನಿಮಗೆ ಕೇಳಿಸೋಲ್ಲಾನ್ನೋದಕ್ಕೆ......"

"ಯಾರಿಗೆ ಕೇಳಿಸೋಲ್ಲ? ಏನಯ್ಯಾ ತಲೆಹರಟೆ ಮಾತಾಡ್ತೀ"

"ಮೊದಲು ಇಳಿಯಯ್ಯಾ ಕೆಳಗೆ. ನಿನ್ನಿಂದಾಗಿ, ಬಸ್ಸು ಇಲ್ಲೇ ನಿಲ್ಲೋಕಾಗೋಲ್ಲ"

"ಏನಯ್ಯಾ, ಬಸ್ಸು ನಿನ್ನ ಅಪ್ಪನ ಬಸ್ಸು ಅನ್ನೋ ಹಾಗೆ ಆಡ್ತೀ"

"ನನ್ನಪ್ಪನದ್ದಲ್ಲ. ನಿನ್ನಪ್ಪನದ್ದೇ? ಮೊದಲು ಇಳಿ ಕೆಳಗೆ"

ಮಾತು ಬೆಳೆಯುತ್ತಲೇ ಇರುತ್ತದೆ ಅದಕ್ಕೆ ಕೊನೆಯಿರುವುದಿಲ್ಲ.

ಇದು ನಮ್ಮ ಬಸ್ಸುಗಳಲ್ಲಿ ನಡೆಯುವ ನಿತ್ಯದ ಕತೆ:

ಕೊನೆಗೂ ಆ ಪ್ರಯಾಣಿಕನಿಗೆ ಸೀಟು ಸಿಗುವದಿಲ್ಲ

೦ ೦ ೦

ಇನ್ನೊಂದು ಕತೆ ಹೀಗಿದೆ:

ಬಸ್ಸು ತುಂಬಿರುತ್ತದೆ. ನಿಂತುಕೊಂಡಾದರೂ ಪ್ರವಾಸ ಮುಗಿಸಿದರೆ ಸರಿ ಅನ್ನೋ ಜನ, ಅಂತೂ ಬಸ್ಸಿನ ಒಳಗೆ ತೂರಿಕೊಳ್ಳುತ್ತಾರೆ.

ಒಳಗೆ ದುಡ್ಡು ಕೊಟ್ಟು (ನಿಂತುಕೊಂಡು ಪ್ರವಾಸ ಮಾಡುವ ಮಂದಿ ದುಡ್ಡು ಕೊಡುವದಿಲ್ಲ ಎಂದು ನಾನು ವಾದಿಸುವದಿಲ್ಲ!) ಕುಳಿತ ಮಂದಿ, ಬೆವರಿನ ಸ್ನಾನ ಮಾಡುತ್ತಿರುತ್ತಾರೆ. ಉಸಿರು ಕಟ್ಟುವಂತಾಗುತ್ತದೆ.

ಆದರೂ ಪ್ರವಾಸದ ಸರ್ವಸುಖವನ್ನೂ ಅವರು ಅನುಭವಿಸಿಯೇ ತೀರ ಬೇಕು.

ಅವಸರದಲ್ಲೊಬ್ಬ ಪ್ರಯಾಣಿಕನ ಆಗಮನವಾಗುತ್ತದೆ.

"ಒಂದೇ ಸೀಟು......"

"ಬನ್ನಿ...ಬನ್ನಿ...ನಿಮಗೆ ಇಲ್ಲಾನ್ನೋಕಾಗುತ್ಯೇ........"

ಒಳಗೆ ಕೂತು ಸುಸ್ತು ಹೊಡೆದ ಒಬ್ಬ ಪ್ರಯಾಣಿಕ:

"ಏನಯ್ಯಾ....ಇದು ಬಸ್ಸೋ ಇಲ್ಲಾ ಕುರಿಗಳ್ನ ತುಂಬಿಸೋ ಹಟ್ಟಿನೋ? ಜನ ತುಂಬ್ಸೋದಕ್ಕೆ ಒಂದು ಲಿಮಿಟ್ ಬೇಡ್ವೇ...."

"ನೀವು ಸುಮ್ನಿರಿ. ನನ್ನ ಜವಾಬ್ದಾರಿ ನನಗೊತ್ತು"

ಮತ್ತೇನೇನೋ ಮಾತುಗಳು.

ಶೀಲಾಶ್ಲೀಲದ ಸೀಮೆ ದಾಟಿಯಲ್ಲೂ ಅವರ ಮಾತುಕತೆ ಸಾಗಬಹುದು.

ಪ್ರವಾಸಿಯ ಜೊತೆಗೆ ಇನ್ನಾರೋ ಮಾತೆತ್ತುತ್ತಾರೆ. ಅದಕ್ಕಿಲ್ಲ ಇತಿಮಿತಿಯಿಲ್ಲ.

ಮಾತು ಕೈಕೈ ನೋಡುವ ಪ್ರಸಂಗದವರೆಗೂ ಹೋದೀತು. ಅದೆಲ್ಲಾ ಪ್ರಾಕೃತ ಕರ್ಮ.

ಅಂತೂ ಈ ಮಾದರಿಯ ಘಟನೆಗಳು ನಡೆಯಲೇ ಬೇಕು. ಇಲ್ಲದಿದ್ದರೆ ಅದೊಂದು ಬಸ್ಸೇ; ಅವನೊಬ್ಬ ಕಂಡಕ್ಟರೇ; ಅವನೊಬ್ಬ ಪ್ರವಾಸಿಯೇ?

೦ ೦ ೦

ಹಿಂದೊಮ್ಮೆ ಬಸ್ಸುಗಳು ಪ್ರವಾಸಿಕರನ್ನು ಕರೆದೊಯ್ಯಲು ಮನೆ ಮನೆಗೆ ಬರುತ್ತಿದ್ದುವಂತೆ! ಕಂಡಕ್ಟರನು ಬಹಳ ಸೌಜನ್ಯದಿಂದ ವರ್ತಿಸುತ್ತಿದ್ದರಂತೆ! ಪ್ರವಾಸಿಕರು ಸಂತೃಪ್ತಿಯಿಂದ ಇರುತಿದ್ದರಂತೆ!

ನಿಜಕ್ಕೂ ಈಗ ಕಾಲ ಬದಲಾಗಿದೆ. ಪ್ರವಾಸಿಗಳೂ ಅದನ್ನು– ತಿಳಿದಿರುತ್ತಾರೆ. ಕಂಡಕ್ಟರನಿಗೂ ಅದು ಗೊತ್ತಿದೆ!

೦ ೦ ೦

ಬಸ್ ಪ್ರವಾಸವೆಂದರೆ, ಯಾವದೋ ನರಕಕ್ಕೆ ಸಾಗುವ ಪ್ರವಾಸವೆಂದೂ ಅನ್ನುವವರಿದ್ದಾರೆ. ಇರಬಹುದೋ ಏನೋ?

ನಮ್ಮ ಜೀವನ—ಇವತ್ತಿಗೆ ಬದಲಾವಣೆಗೊಳ್ಳುತ್ತ, ನಿತ್ಯ ನರಕದ ಹೊಸ ಹೊಸ ಅನುಭವಗಳನ್ನು ಮನಗಾಣಿಸಿ ಕೊಡುತ್ತಿಲ್ಲ?

ಎಷ್ಟೆಲ್ಲಾ ಏರುಪೇರುಗಳು ನಿತ್ಯ ನಡೆಯುತ್ತಿಲ್ಲ?

ಹಳ್ಳಿಯಲ್ಲಿ ಯಾವದೋ ಗೋಳಿನ ಕತೆ ತುಂಬಿಕೊಂಡಿದ್ದರೆ, ಡಿಲ್ಲಿಯಲ್ಲೇನಾದರೂ ಸ್ವರ್ಗ ಸುಖವಿದೆಯೆ??

ಬಡವರು ನಿತ್ಯ ತಾಪತ್ರಯಗಳಲ್ಲಿ ಬಳಲುತ್ತಿದ್ದರೆ, ಶ್ರೀಮಂತರೇನು ಬಂಗಾರದ ಕಿರೀಟವಿಟ್ಟುಕೊಂಡು ಮೆರೆಯುತ್ತಿದ್ದಾರೆಯೆ?

ಅಲ್ಲೂ ಅದೇ ಗೋಳು; ಇಲ್ಲೂ ಇದೇ ಗೋಳು.

ಗೋಳಿನ ವರ್ತುಲಗಳು ಹಲವನ್ನು ರೂಪಿಸಿಕೊಂಡು ಮನುಷ್ಯನು ಸುತ್ತುತ್ತಲೇ ಇದ್ದಾನೆ. ಒಳಗಿಂದೊಳಗೆ ತನ್ನ ಮನುಷ್ಯತ್ವವನ್ನು ಕಳೆದುಕೊಳ್ಳುತ್ತಲೇ ಇದ್ದಾನೆ.

ಅಂತೆಯೇ ಬಸ್ಸಿನಲ್ಲಿ ಹೆಚ್ಚು ಸೌಕರ್ಯ ಸಿಗಬೇಕೆಂದು ಯಾರೂ ಹೆಚ್ಚು ಬಯಸಬಾರದು.

ಬಸ್ಸಿನಲ್ಲಿ ಏನೇ ನಡೆಯಲಿ, ಅದಕ್ಕೆ ನಾವು—ಪ್ರವಾಸಿಕರು ಭಾಧ್ಯಸ್ಥರೇ ಅಲ್ಲ ಎಂಬಂತೆ, ಸ್ಥಿತ ಪ್ರಜ್ಞತ್ವವನ್ನು ಕಳೆದುಕೊಳ್ಳದೆ ಇರಬೇಕು. ಅಂದರೇನೇ ಹೆಚ್ಚು ಅನುಕೂಲ. ಅಂದರೇನೇ ಪ್ರವಾಸವು ಕಿಂಚಿತ್ತಾದರೂ ಸುಖ ಪ್ರವಾಸವಾದೀತ!

ಆದರೂ ನಮ್ಮ ಕಂಡಕ್ಟರ್ ಮಹಾಶಯರುಗಳಲ್ಲೂ, ನಮ್ಮ ಜೊತೆಯಲ್ಲೇ ಸಹಪ್ರವಾಸಿಗಳಲ್ಲೂ ಒಂದು ಸೂಚನೆ.

ಪ್ರವಾಸ ಕಾಲದಲ್ಲಿ ಇಬ್ಬರೂ ಮೌನ ವ್ರತವನ್ನು ಪಾಲಿಸಿದರೆ, ಹೆಚ್ಚು ಚೆನ್ನಾಗಿರುತ್ತದೆ.

ಇಬ್ಬರೂ ತಾಳ್ಮೆಗೆ ಹೆಚ್ಚು ಬೆಲೆ ಕೊಟ್ಟರೆ ಚೆನ್ನಾಗಿರುತ್ತದೆ.

ಇಬ್ಬರೂ ಸೌಜನ್ಯಕ್ಕೆ ಹೆಚ್ಚು ಮಹತ್ವ ಕೊಟ್ಟರೆ ಚೆನ್ನಾಗಿರುತ್ತದೆ.

ಪ್ರವಾಸಿಕರಿಗಿಂತ ಕಂಡಕ್ಟರರ ಜವಾಬ್ದಾರಿ ಹೆಚ್ಚಿನದು. ಕಂಡಕ್ಟರ್ ಮಹಾಶಯ ತನ್ನ ಹೊಣೆಗಾರಿಕೆಯತ್ತ ಎಚ್ಚರವುಳ್ಳವನಾಗಿರಬೇಕು. ಕಂಡಕ್ಟರ್ ಎಂದರೆ ಟಿಕೇಟು ವಿತರಣೆ ಮಾಡುವ ಕೆಲಸವುಳ್ಳಾತ ಎಂಬುದನ್ನು ಆತ ಮರೆತು ಗುಣನಡತೆಯನ್ನು ಕಾಯ್ದುಕೊಳ್ಳ ಬೇಕಾದ ಹೊಣೆಗಾರಿಕೆ ಅವನ ಮೇಲಿದೆ ಎಂಬುದನ್ನು ಆತ ಮರೆಯಬಾರದು.

ಬಸ್ಸಿನ ಗುಣನಡತೆಯ ಪ್ರಶ್ನೆಯೆ? ಬಸ್ಸಿಗೆ ಒಂದು ಗುಣನಡತೆ ಎಂಬುದು ಇದೆಯೆ?

ಇರುತ್ತಿದ್ದರೆ— ಅದನ್ನು ಅರಿತುಕೊಳ್ಳುವವರಿದ್ದರೆ—ನಮ್ಮ ಪ್ರವಾಸವು ಹೆಚ್ಚು ಸೌಕರ್ಯಗಳನ್ನು ನಿರ್ಮಿಸಿ ಕೊಡುತ್ತಲಿತ್ತೋ ಏನೋ?

ಲೋಕಾನುಭವ ಹೆಚ್ಚು ಚೆನ್ನಾಗಿ ಅನುಭವಿಸುವಂತಾಗುವ ನಮ್ಮ ಬಸ್ ಪ್ರವಾಸವು ನಿಜಕ್ಕೂ ಚೇತೋಹಾರಿಯಾಗಿದೆ.

—ಸುದಾಸ.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ ಪಾಕೆಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧–೦೦

ಉತ್ತಮ ಪ್ರತಿ ರೂ. ೧–೫೦

ಏಜಂಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: **ಸುದರ್ಶನ ಟೈಲ್ ವರ್ಕ್ಸ್**, ಬೋಳಾರ, ಮಂಗಳೂರು–೧.

ವಿದೇಶಗಳಿಂದ ನಿರಾಶೆಯ ಬುತ್ತಿ

(೪ನೇ ಪುಟದಿಂದ)

ಯ ಭಾರತಕ್ಕೆ ಮಿತ್ರದ್ರೋಹವೆಸಗಿದ್ದರಿಂದ ಆಫ್ರಿಕಾದ ರಾಷ್ಟ್ರಗಳು ಚೈನಾದ ಕುರಿತು ಅಸಹ್ಯ ಮನೋಭಾವನೆಯನ್ನು ತಳೆದಿವೆ. ಈ ಭಾವನೆಯನ್ನು ತೊಡೆದು ಹಾಕಲು ಚೌ ಎನ್–ಲೈ ಚೆನ್ನಾಗಿ ಪ್ರಯತ್ನಿಸಿದರು.

ಸ್ವಾತಂತ್ರ್ಯ ದೇವಿಯನ್ನು ಸತ್ಕರಿಸಲು ಸಿದ್ಧವಾಗಿರುವ ಆಫ್ರಿಕಾದ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳಾಗುತ್ತವೆ. ಆಗ ಅವು ಕಮ್ಯೂನಿಸ್ಟ ಚೈನಾದ ಪರವಾಗಿ, ಅಲ್ಲದೆ ಅದಕ್ಕೆ ಸ್ಥಾನಗಿಟ್ಟಿಸಿ ಕೊಡುವದಕ್ಕಾಗಿ ಪ್ರಯತ್ನಿಸಿಯಾವೆಂಬ ಮಹದಾಶೆಯನ್ನಿಟ್ಟುಕೊಂಡು ಈ ಚೈನೀ ಡ್ರೇಗನ್ ಅತ್ತ ನಾಲಿಗೆ ಚಾಚಿತು.

ಹಲವಾರು ವಿಚಾರಗಳನ್ನು ಕಲ್ಪಿಸಿಕೊಂಡು ಚೌ ಎನ್–ಲ್ಯಾ ಪ್ರಯಾಣ ಬೆಳೆಸಿದ್ದರು. ಆದರೆ ಅವರಿಗದರಲ್ಲಿ ಸಫಲತೆ ಸಿಕ್ಕಿದೆಯೇ? ಇದು ಮಹತ್ವದ ವಿಷಯವಿದೆ. ಆ ಹಾತೆಗಳು ತಾವಾಗಿ ಬಂದು ಬೀಳಲೆಂದು ಕಮ್ಯೂನಿಸ್ಟ್ ಕಿಚ್ಚು ಅತ್ತ ಉರಿಯಿತು. ಅಲ್ಲದೆ ಆಫ್ರೋ—ಏಷ್ಯನ್ ಒಕ್ಕಟ್ಟೆಂಬ ಆಕರ್ಷಕ ಮಾಯಾಂಗನೆಯನ್ನು ಆಫ್ರಿಕದ ಗಂಡು ರಾಷ್ಟ್ರಗಳ—ಅದರಲ್ಲೂ ಇದೀಗ ಸ್ವತಂತ್ರವಾಗುತ್ತಿರುವ–ಮುಂದಕ್ಕೆ ನಿಲ್ಲಿಸಲಾಯಿತು. ಇದು ಮಯಾಂಗನೆಂಬುದು ಆ ಬೆಚ್ಚಗಿನ ರಾಷ್ಟ್ರಗಳಿಗೆ ತಿಳಿಯಿತು.

ಚೌ ಎನ್–ಲ್ಯಾ ಹಾಕಿದ್ದ ಇನ್ನೊಂದು ಮುಖವಾಡವು ಚೈನೀ-ಪಾಕ್ ಚೆಲ್ಲಾಟ. ಆಫ್ರಿಕಾದಲ್ಲಿ ಹಲವಾರು ಮುಸ್ಲಿಂ ರಾಷ್ಟ್ರಗಳಿವೆ. ಅವನ್ನು ಅತೀ ಸುಲಭವಾಗಿ ಬಲೆಯೊಳಗೆ ಹಾಕಿಕೊಳ್ಳಬಹುದೆಂದು ಅವರು ಭಾವಿಸಿದ್ದರು.

ಚಾ ಎನ್–ಲ್ಯಾಯವರಿಗಾಗ ನಿರಾಶೆ ಕಾದಿತ್ತು. ಅವರತ್ತ ಒಂದೊಡನೆ ಆದು ಅವರ ಕುತ್ತಿಗೆ ತೋಳನ್ನು ಹಾಕಿತ್ತು. ಅವರ ಕೆಲಸಕ್ಕೆ ಪ್ರಯೋಜನ ಸಿಗದಿದ್ದರೂ ಸ್ವಲ್ಪ ಮಟ್ಟಿಗೆ ಲಾಭವಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಆದುದೇ ತಾನು ಶಾಂತಿಪ್ರಿಯ ರಾಷ್ಟ್ರವೆಂದೂ, ಭಾರತವೇ ಪಾಕಿಸ್ತಾನ, ಚೈನಾ....ರಾಷ್ಟ್ರಗಳ ನೆಲವನ್ನು ಕಬಳಿಸುತ್ತಿದೆನ್ನುವ ಸುಳ್ಳಿನ ಗಾಳಿಯನ್ನು ಬೀಸುವದರಲ್ಲಿ ಅವರಿಗೆ ಸ್ವಲ್ಪ ಮಟ್ಟಿಗೆ ಯಶಸ್ಸು ಸಿಕ್ಕಿದೆ ಎನ್ನಬಹುದು. ಇದಕ್ಕೆ ಕಾರಣ ಭಾರತದ ಪ್ರಚಾರ ಶಾಖೆ ಪ್ರಬಲ ಕಾರ್ಯಕ್ರಮ ಇಟ್ಟುಕೊಳ್ಳದೇ ಇರುವದಿದೆ. ಅಲ್ಲದೆ ಇಲ್ಲಿಯ ಕಮ್ಯೂನಿಸ್ಟರ ಫಿತೂರಿಯೂ ಕಾರಣವಿದೆ. ಭಾರತದ ಲೋಕ ಸಭೆಯಲ್ಲೇ ಕಮ್ಯೂನಿಸ್ಟ್ ಸದಸ್ಯರು ಭಾರತವೇ ಚೈನೀ ನೆಲವಲ್ಲಿದೆನ್ನುವಾಗ ಪರ ರಾಷ್ಟ್ರಗಳು ಚೈನಿ ಮಾತಿಗೆ ಕಿವಿಕೊಡದಿರಲಿಕ್ಕಾಗುತ್ತದೆಯೇ?

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿ.

ವಾರ್ಷಿಕ ಚಂದಾ ರೂ. ೧೦.

"...ಅಣ್ಣ"

(೨ನೇ ಪುಟದಿಂದ)

ಪರಿಚಯವಾಯಿತು-ಅವಳು ಜಿಲ್ಲೆಗೆ ಮಿಡ್ ವೈಫ್ ಟ್ರೈನಿಂಗ್‌ಗಾಗಿ ಬಂದಿದ್ದಳು ನನಗೆ ಅವಳೊಡನೆ ಬಹಳ ಸ್ನೇಹವಾಯಿತು. ಅವಳ ನಿಷ್ಕಳಂಕ ಗುಣ ಅಷ್ಟು ನನ್ನನ್ನು ಆಕರ್ಷಿಸಿತ್ತು! ಅವಳೂ ನನ್ನನ್ನು ತುಂಬ ಮೆಚ್ಚಿದ್ದಳು ದಿನಾ ಸಂಜೆ ನಾವಿರ್ವರೂ ತಿರುಗಾಡಲು ಹೋಗುತ್ತಿದ್ದೆವು. ಎಷ್ಟೋ ಹೊತ್ತಿನವರೆಗೆ ಹರಟೆ ಕೊಚ್ಚುತ್ತ ಕುಳಿತು ಬಿಡುತ್ತಿದ್ದೆವು!

ಆ ಸ್ನೇಹ ಪ್ರಪಂಚದಲ್ಲಿ ನಮ್ಮ ತರಬೇತಿಯ ದಿನಗಳು ಮುಗಿಯುತ್ತ ಬಂದುದು ನಮ್ಮ ಗಮನಕ್ಕೇ ಬಂದಿರಲಿಲ್ಲ ಕಡೆಗೂ ನಾವು ಬೇರೆ ಬೇರೆಯಾಗಬೇಕಾದ ದಿನಗಳು ಬಂದೇ ಬಿಟ್ಟುವು. ಕೊನೆಯ ದಿನವೂ ಸಂಜೆ ಎಂದಿನಂತೆ ಅಡ್ಡಾಡಲು ಪಾರ್ಕಿಗೆ ಹೋಗಿದ್ದೆವು-ಆದರೆ ಮರುದಿನ ಅಗಲಬೇಕಾದ ನಮ್ಮೀರ್ವರ ಹೃದಯಗಳೂ ಭಾರವಾಗಿದ್ದುದರಿಂದ ಇಬ್ಬರೂ ಮೌನವಾಗಿದ್ದೆವು— ಪಾರ್ಕಿಗೆ ಹೋಗಿ ಇರ್ವರೂ ಒಂದೇ ಬೆಂಚಿನಲ್ಲಿ ಕುಳಿತುಕೊಂಡೆವು ತಾಂಡವವಾಡುತ್ತಿದ್ದ ಮೌನವನ್ನು ಮುರಿದು ಪದ್ಮಾವತಿಯೇ ಮೊದಲು ಮಾತನಾಡಿದಳು 'Mr ನನಗೆ ..ಒಡಹುಟ್ಟಿದ ಅಣ್ಣ ತಮ್ಮಂದಿರಿಲ್ಲ ..ನಾನು .ನಿಮ್ಮನ್ನೇ ನನ್ನ ಅಣ್ಣ ಅಂತ ಭಾವಿಸುತ್ತೇನೆ ..ನಿಮಗೆ ಬೇಸರವಿಲ್ಲವಷ್ಟೇ?"

ನನಗೇಕೋ ಅವಳ ವರ್ತನೆ ತೀರ ವಿಚಿತ್ರವಾಗಿ ಕಂಡಿತು, ಆಶ್ಚರ್ಯವೂ ಆಯಿತು ಈ ಹಿಂದೆ ನಾನೆಷ್ಟೋ ಹೆಂಗಸರ ಕಥೆಗಳನ್ನು ಕೇಳಿದ್ದೆ ಮೊದಲಿಗೆ ಪುರುಷರೊಡನೆ ಸ್ನೇಹವನ್ನು ಬೆಳೆಸಿ, ಕೊನೆಗೆ ಸ್ತ್ರೀಯರು ಮಾಡುವುದು ಪ್ರೇಮಯಾಚನೆಯನ್ನು ಮಾತ್ರ ಎಂದೇ ನನಗೆ ಇಂದಿನ ವರೆಗೂ ಗೊತ್ತಿದ್ದುದ ಪದ್ಮಾವತಿಯ ಅವಸ್ಥೆಯೂ ಇದೇ ಎಂದು ಪ್ರಾರಂಭದಿಂದಲೂ ಭಾವಿಸಿದ್ದ ನನಗೆ ಇಂದವಳ ಮಾತು ಕೇಳಿ ತುಂಬ ಆಶ್ಚರ್ಯವಾಯಿತು ಆದರೆ ಅವಳಾಡಿದ ಮಾತಿನಲ್ಲಿ ಕೃತಕತೆಯ ಲವಲೇಶವೂ ಇರಲಿಲ್ಲ. ಒಮ್ಮೆಲೇ ನನಗೆ ವಸಂತಿಯ ನೆನಪಾಯಿತು. ಎಷ್ಟೋ ವರ್ಷಗಳ ಹಿಂದೆ ಅವಳು ನನ್ನನ್ನು "ಅಣ್ಣಾ" ಎಂದು ಕರೆದ ಧ್ವನಿ, ನನ್ನ ಕಿವಿಗಳಲ್ಲಿ ಪ್ರತಿಧ್ವನಿಸಿ ಕಣ್ಣಿನಿಂದೆರಡು ಹನಿ ನೀರು ಕೆಳಗೆ ಬಿತ್ತು! ಆದರೆ ಅಂದು ನನ್ನನ್ನು ಅಣ್ಣನೆಂದು ಸಂಬೋಧಿಸಿದ ವಸಂತಿ ಮಾತ್ರ ಇಂದು ಇರಲಿಲ್ಲ! ಸಹೋದರಿಯರನ್ನು ಪಡೆಯದ ನಾನು ಇಂದು ಅನಾಯಾಸವಾಗಿ ಹೃದಯಾಂತರಾಳದಿಂದ ಅಣ್ಣನೆಂದು ಭಾವಿಸುವ ಓರ್ವ ತಂಗಿಯನ್ನು ಪಡೆಯುವನಾದರೆ ನಾನೆಷ್ಟು ಪುಣ್ಯವಂತ! ಅವಳ ಮಾತಿನಿಂದ ನಿಜವಾಗಿ ನನಗೆ ತಡೆಯಲಾರದ ಆನಂದವಾಗಿತ್ತು ಹಾಗೇ ಅವಳಿಗೆ ಹೇಳಿದೆ "ತಂಗಿ' ...ನನಗೊಡಹುಟ್ಟಿದ ಸಹೋದರಿಯರಿಲ್ಲ ...ಪ್ರೀತಿಯಿಂದ ನೀನೇ ನನ್ನನ್ನು ಅಣ್ಣನೆಂದು ಭಾವಿಸುವೆಯಾದರೆ ಖಂಡಿತ ನಾನೂ ನಿನ್ನನ್ನು ತಂಗಿಯೆಂದು ಭಾವಿಸುವೆನಮ್ಮಾ!'

"ಅಣ್ಣಾ, ನಾಳೆಯಿಂದ ನೀನೆಲ್ಲೋ ನಾನೆಲ್ಲೋ!...ಆದರೆ ಅಣ್ಣಾ, ನಿನ್ನ ಈ ಬಡ ತಂಗಿಯನ್ನು ಮರೆಯಬಾರದಣ್ಣಾ! ನನ್ನ ಮನೆ ಮಡಿಕೇರಿಯಲ್ಲಿ ಅಲ್ಲಿ ನನ್ನ ತಾಯಿಯಿದ್ದಾಳೆ ನಾವು ಮೂವರೂ ಒಂದೇ ಕಡೆಯಿರಬೇಕೆಂಬುದು ನನ್ನಾಸೆ' ಆದರೆ ದೇವರಿಗಿದು ಇಷ್ಟವಿಲ್ಲದಿದ್ದರೆ ...ನಾವೇನು ಮಾಡೋಣ?' ಅವಳ ಕಣ್ಣಿನಿಂದ ಧಾರಾಕಾರವಾಗಿ ನೀರು ಹರಿಯುತ್ತಲೇ ಇತ್ತು

ಅವಳ ಕಣ್ಣೀರು ನೋಡಿದ ನನಗೂ ಅಳುಬರುವಂತಾಯಿತು! ಅವಳ ಪ್ರಾಯ ಕೇವಲ 14-15 ವರ್ಷ ಆಗಿದ್ದರೂ ಹೃದಯದ ಭಾವನೆಗಳು ಮಾತ್ರ ಬಹಳ ಉಚ್ಚವಾಗಿದ್ದುವು! ಯಾವುದೋ ಒಂದು ರೀತಿಯ ಮಮತೆ ನನ್ನನ್ನು ಅವಳತ್ತ ಸೆಳೆಯುತ್ತಿತ್ತು! ನಾನೆಂದೆ, "ಪದ್ಮಾ, ಅಳಬೇಡ ನಮ್ಮ ಮೂವರ ಮನಸ್ಸುಗಳೂ ಒಂದೇ ರೀತಿಯಾಗಿದ್ದರೆ, ದೇವರಿಗೇಕೆ ಇಷ್ಟವಿಲ್ಲದಾದೀತು? ನೀನೇನೂ ಹೆದರಬೇಡ".

"ಸರಿ, ಅಣ್ಣಾ, ..ಅದೃಷ್ಟವಿದ್ದಂತಾಗಲಿ! ಅಣ್ಣಾ ..ನನ್ನನ್ನು.. ಮರೆಯುವುದಿಲ್ಲ ತಾನೇ? ಕಾಗದ ಹಾಕುತ್ತಿರು... ಅಣ್ಣಾ, ಹೋಗಿಬರುತ್ತೇನೆ ... ." ಪದ್ಮ ನನ್ನ ಕಾಲಿಗೆ ನಮಸ್ಕರಿಸಿದಳು — ಪ್ರೀತಿಯಿಂದ ಅವಳನ್ನೆತ್ತಿ, ತುಂಬಿದ ಹೃದಯದಿಂದ ಹೇಳಿದೆ. " . ಪದ್ಮಾ.. ನೀನೇ ನನ್ನ ನಿಜವಾದ ತಂಗಿ!" ಮುಂದೆ ಮಾತನಾಡುವುದು ನನ್ನಿಂದಾಗಲಿಲ್ಲ ನನ್ನ ಅಶ್ರುಗಳು ಅವಳ ತಲೆಯನ್ನು ತೊಳೆಯುತ್ತಿದ್ದರೆ, ಅವಳ ಕಣ್ಣೀರು ನನ್ನ ಕಾಲುಗಳ ಮೇಲೆ ಅಭಿಷೇಕ ಮಾಡುತ್ತಿತ್ತು'

ಎಷ್ಟೋ ಹೊತ್ತಿನ ನಂತರ ಮನಸ್ಸಿಲ್ಲದ ಮನಸ್ಸಿನಿಂದ ಹೇಗೋ ಇಬ್ಬರು ಅಗಲಿ ಬೇರೆ ಬೇರೆಯಾದೆವು ಮರುದಿನವೇ ನಾನು ಮೈಸೂರು ಬಿಟ್ಟು ಬಂಗಳೂರು ಸೇರಬೇಕಾಗಿತ್ತು. ರೂಮಿಗೆ ಒಂದು ಮಲಗಿದ ನನಗೆ ನಿದ್ದೆಯೇ ಬರಲಿಲ್ಲ ತಲೆಯ ಮೂಲೆ ಮೂಲೆಗಳಲ್ಲಿಯೂ ಪದ್ಮಾವತಿಯ ಮೂರ್ತಿಗಳೇ ಕುಳಿತಿದ್ದು ಶಿರವನ್ನು ಕೊರೆಯುತಿದ್ದುವು- ಮರುದಿನ ಹೇಗೂ ಬೆಂಗಳೂರಿಗೆ ಬಂದೆ

2 ತಿಂಗಳುಗಳು ಗತಿಸಿದುವು ನನ್ನ ಮತ್ತು ಪದ್ಮಾವತಿಯ ಪತ್ರವ್ಯವಹಾರ ನಡೆದೇ ಇತ್ತು ನಂತರ ನನಗೆ ಮದರಾಸಿನ ಗವರ್ನ್ಮೆಂಟ್ ಹಾಸ್ಪಿಟಲ್‌ನಲ್ಲಿ ಕಂಪೌಂಡರ್ ಕೆಲಸ ಸಿಕ್ಕಿತು. ಶತ ಪ್ರಯತ್ನ ಪಟ್ಟು ಪದ್ಮಾವತಿಗೂ ಅದೇ ಆಸ್ಪತ್ರೆಯಲ್ಲಿ ಮಿಡ್‌ವೈಫ್ ಕೆಲಸ ಕೊಡಿಸಿದೆ ಅವಳ ಆನಂದಕ್ಕೆ ಪಾರವೇ ಇರಲಿಲ್ಲ ಉಕ್ಕಿ ಬಂದ ಸಂತೋಷದಿಂದ ಅವಳು ಹೇಳಿದಳು, "ಅಣ್ಣಾ, ನಿನ್ನನ್ನಿದುವರೆಗೆ ಅಣ್ಣನೆಂದು ಭಾವಿಸಿದ್ದಕ್ಕೆ ಸಾರ್ಥಕವಾಯ್ತಣ್ಣ! ಅಂತೂ. ನನ್ನಿಚ್ಛೆಯಂತೆ ನಾವು ಮೂವರನ್ನೂ ಒಂದು ಗೂಡಿಸಿದೆಯಲ್ಲ, ನೀನು ನಿಜವಾಗಿಯೂ ದೇವರು!

"ಇದಕ್ಕೆಲ್ಲಾ ಮನಸ್ಸೇ ಕಾರಣ, ಪದ್ಮಾ ಎಲ್ಲರ ಮನಸ್ಸೂ ಒಂದೇಯಾಗಿದ್ದು, ಸದಾ ಒಳ್ಳೆಯದಾದ ಒಂದನ್ನೇ ಬಯಸುತ್ತಿದ್ದರೆ ದೇವರೂ ಅದಕ್ಕೆ ಅಡ್ಡ ಬರುವುದಿಲ್ಲ! ಇದನ್ನೆಲ್ಲಾ ದೇವರು ಮಾಡಿದುದು! ನನ್ನಿಂದೇನಾದೀತು? ಅದೆಲ್ಲ ಸರಿ, ಪದ್ಮಾ, ನೀನು ಇಷ್ಟು ಸಮಯ, ನಿನ್ನ ಅಣ್ಣನೆಂದು ಪ್ರೀತಿಸಿ, ನಾವು ಒಂದೇ ಕಡೆಯಲ್ಲಿರುವಂತೆ ಇಚ್ಛಿಸಲು ಕಾರಣವೇನು ಪದ್ಮಾ?" ಕುತೂಹಲದಿಂದ ಕೇಳಿದೆ.

'ಅಣ್ಣಾ," ಅವಳೆಂದಳು "ಅದನ್ನೆಲ್ಲ ಬಿಚ್ಚಿ ಹೇಳಿದರೆ, ದೊಡ್ಡ ಕಾದಂಬರಿಯೇ ಆಗಿ ಹೋದೀತು!"

'ಪರವಾಗಿಲ್ಲ .ಹೇಳು .!" ನಾನವಳ ಕಥೆ ಕೇಳಲು ಕುತೂಹಲ ಭರಿತನಾಗಿ ಕುಳಿತೆ,

ಅಣ್ಣಾ, ನನ್ನ ನಿಜವಾದ ಊರು ಯಾವುದೋ ನನಗೆ ಮರೆತು ಹೋಗಿದೆ ನನ್ನ ಹೆಸರು ವಸಂತಿ .." "ಹಾ, ವಸಂತಿಯೇ-" ಬೆರಗಾಗಿ ಕೇಳಿದೆ

"ಹೌದಣ್ಣ. ನಾನು ಚಿಕ್ಕವಳಿದ್ದಾಗ ನಮ್ಮ ಮನೆಗೊಬ್ಬರು ಬರುತ್ತಿದ್ದರು ಅವರ ಹೆಸರೇನೋ, ನನಗೆ ಗೊತ್ತಿಲ್ಲ. ಆದರೆ...ನನಗೆ ಸರಿ ನೆನಪಿದೆ, ನಾನು ಅವರನ್ನು 'ಅಣ್ಣ' ಅಂತ ಕರೆಯುತ್ತಿದ್ದೆ ಅವರೆಂದರೆ ನನಗೆ ಪ್ರಾಣ ಒಂದು ದಿನ ಅವರನ್ನು ನೋಡದೆ, ಅವರ ತೊಡೆಯ ಮೇಲಾಡದೆ ನನಗೆ ಊಟವೇ ರುಚಿಸಲಿಲ್ಲ........ ಆದರೆ, ಒಮ್ಮೆ ಅವರು 2 ತಿಂಗಳಾದರೂ ನಮ್ಮ ಮನೆಗೆ ಬರಲಿಲ್ಲ. ನನಗೆ ಹುಚ್ಚೇ ಹಿಡಿದಂತಾಗಿತ್ತು! ಹಿಂದೊಮ್ಮೆ ನಾನು ಅವರ ಮನೆಗೆ ಹೋಗಿದ್ದುದರಿಂದ, ಅವರ ಮನೆಯ ದಾರಿ, ಸ್ವಲ್ಪ ಸಲ್ಪ ನನಗೆ ಗೊತ್ತಿತ್ತು! ಹಾಗೇ ಒಂದು ದಿನ ಯಾರಲ್ಲಿಯೂ ಹೇಳದೆ ನೀದಾ ಅಣ್ಣನನ್ನು ಕರೆತರಲು ಅವರ ಮನೆಗೆ ಹೊರಟೆ! ದಾರಿಯಲ್ಲಿ ಹೋಗುತ್ತಾ ಇರುವಾಗ ಒಂದು ಲಾರಿ ನನ್ನನ್ನು ನೋಡಿ ನಿಂತಿತು ಡ್ರೈವರ್ ನನ್ನನ್ನು ಕೇಳಿದ, "ಎಲ್ಲಿಗೆ ಹೋಗ್ತಿದ್ದೆಯೊ ಮಗು.' ಅಂತ "ಅಣ್ಣನ ಮನೆಗೆ' ಅಂದೆ ನಾನು "ಸರಿ, ನಾನು ಕೊಂಡ್ಹೋಗಿ ಬಿಡ್ತೇನೆ" ಎಂದು ಲೋರಿಯುವ ನನ್ನನ್ನೂ ಅವನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಹೊರಟ ಅತ ನನ್ನನ್ನು ಅಣ್ಣನಲ್ಲಿಗೆ ಕೊಂಡೊಯ್ಯಲಿಲ್ಲ ಮಡಿಕೇರಿಗೆ, ತನ್ನ ಮನೆಗೆ ತಂದು ಬಿಟ್ಟ! ಅವನಿಗೆ ಮಕ್ಕಳಿರಲಿಲ್ಲ ನನ್ನನ್ನೇ ಮಗಳೆಂದು ಬಲು ಮುದ್ದಾಗಿ ಸಾಕಿದ. ಅವನ 2 ವರ್ಷಗಳ ಹಿಂದೆ, ಲಾರಿ ಅಪಘಾತವೊಂದರಲ್ಲಿ ಸತ್ತು ಹೋದ! ... ." ಅವಳು ತನ್ನ ಕಥೆಯನ್ನು ಹೇಳುತ್ತಲೇ ಇದ್ದಳು. ಅವಳಿಗರಿವಿಲ್ಲದಂತೆಯೇ ತುಂಬಿದ ಅವಳ ಕಪೋಲಗಳ ಮೇಲೆ ಅಶ್ರುಧಾರೆ ಹರಿದಿತ್ತು. ನನ್ನಿಂದ ಮುಂದಿನ ಕಥೆ ಕೇಳುವುದಾಗಲಿಲ್ಲ ಅವಳನ್ನು ನಡುವೆಯೇ ತಡೆದು ಹೇಳಿದೆ, 'ವಸಂತಿ, ...ಸಾಕು .ಇನ್ನು ಕೇಳಲಾರೆ! ನಿನ್ನ ಕಥೆ ನನಗೆ ಗೊತ್ತಾಯಿತು! ನಾನಾರು ಗೊತ್ತೇ ನಿನಗೇ?" "ಊಂ, ಯಾರು " ಪದ್ಮಾವತಿ ಬೆರಗುಗಣ್ಣುಗಳಿಂದ ನನ್ನನ್ನೂ ಪ್ರಶ್ನಿಸಿದಳು

"ಅವರೇ, ನೀನು ಚಿಕ್ಕವಳಾಗಿದ್ದಾಗ, 2 ತಿಂಗಳಾದರೂ ನಿನ್ನ ಮನೆಗೆ ಬರದಿದ್ದ ನಿನ್ನ ಪ್ರೀತಿಯ ಅಣ್ಣ!' ಸಂತೋಷವೂ ದುಃಖವೂ ಒಮ್ಮೆಗೇ ಉಮ್ಮಳಿಸಿ ಬಂದುದರಿಂದ ನನಗೆ ಮುಂದೆ ಹೆಚ್ಚು ಹೇಳುವುದಾಗಲಿಲ್ಲ. ಅಗತೇ ಅವಳು ಬಂ

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.

ಬೇಕಾದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ. ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಂಡಿತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ

ಪ್ರೊಪ್ರೈಟರ್ ರಾಘವೇಂದ್ರ ಕೃಷ್ಣ ಭಟ್

ಫೋನ್ ನಂಬ್ರ 66

ಉಡುಪಿ ಡಿಮು ಕೋರ್ಟಿನಲ್ಲಿ

O S No 76/64.

ಚಂದಮ್ಮ ಸೆಟ್ತಿ ಕೂಡಾ — ವಾದಿರು

ಮತ್ತು

ಕಲ್ಯಾಣಿ ಸೆಟ್ತಿ ಕೂಡಾ — ಪ್ರತಿವಾದಿರು

ಇವರೊಳಗೆ

ಪ್ರಕಟಣೆ

3ನೆ ಪ್ರತಿವಾದಿ ಪಿ. ರತ್ನಾಕರ ಸೆಟ್ಟಿ, 5ನೆ ಪ್ರತಿವಾದಿ ಶಶಿಕಲಾ ಸೆಟ್ತಿ — ಕಲ್ಯಾಣಿ ಸೆಟ್ತಿ — ಮ. ಉಪ್ಪೂರು ಕೃಷ್ಣಯ್ಯ ಶೆಟ್ರ ಮಕ್ಕಳು— ಉಡುಪಿ ತಾಲ್ಲೂಕು ಉಪ್ಪೂರು ಗ್ರಾಮದ ತೆಂಕಬೆಟ್ಟು ಹೊಸ ಮನೆಯಲ್ಲಿರುವವರು — ಇವರಿಗೆ

ವಾದಿರು ನೀವು ವಗೈರೇರ ಮೇಲೆ— ಪಾಲು . ವ . ಪುಟ್ಟಳ್ಳಿ ಕೇಳಿ ಮಾಡಿದ ದಾವೆಯು ತಾ 15-6-64 ಕ್ಕೆ ಇಟ್ಟಿದೆ ಆದರಲ್ಲಿ ನಿಮ್ಮ ಆಕ್ಷೇಪವೇನಾದರೂ ಇದ್ರೆ ನೀವು ಸ್ವತಹಾ ಯಾ . ವಕೀಲರ ಮುಖಾಂತರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಲ್ಪಡುವದು.

ಕೋರ್ಟಿನ ಹುಕುಂ ಪ್ರಕಾರ.

B Y Holla, B A., LL B,
Advocate for Plaintiffs.

Udipi, 16—4—64

ನಾರಿದ ಕಥೆ

ನಾಗಲೋಕದ ನಾಗಣ್ಣ

ಬರೆದವರು: ಶ್ರೀ ಪಿ. ಜಿ ಪರಮೇಶ್ವರಪ್ಪ

ಈ ದಿನ ನನ್ನ ಮನಸ್ಸಿಗೆ ನೆಮ್ಮದಿಯೇ ಇಲ್ಲ ಎಲ್ಲಿ ಕುಳಿತರೂ ಶಾಂತಿ ಇಲ್ಲ. ರಾತ್ರಿ ಊಟವಾಗುತ್ತಲೂ ಹಾಸಿಗೆಯ ಮೇಲೆ ಉರುಳಿದೆ ಕಣ್ಣು ಮುಚ್ಚಿದರೆ ನಿದ್ದೆ ಬರಲೊಲ್ಲದು ನಡೆದ ಘಟನೆಯು ಮತ್ತೆ ಮತ್ತೆ ಮನಸ್ಸಿನಲ್ಲಿ ಸುಳಿಯುತ್ತಿತ್ತು ಆ ಯೋಚನೆ ಎಷ್ಟು ಬೇಡವೆಂದರೂ ಮಿದುಳು ಅದೇ ಕಾರ್ಯವನ್ನೇ ಮಾಡತೊಡಗಿತು

ಈ ದಿನ ಸಂಜೆ .. ಹೌದು ಸಂಜೆ ಸುಮಾರು ಐದು ಗಂಟೆ ಸಮಯದಲ್ಲಿ...

ಅಡಿಗೆ ಕೋಣೆಯು ತುಂಬಾ ಹೊಗೆ ತುಂಬಿಕೊಂಡಿತ್ತು. ನಾನು ಒಲೆ ಊದಿ ಊದಿ ಸೋತಿದ್ದೆ. ಕಣ್ಣುಗಳು ಕೆಂಪಗಾದಂತೆ ನೀರು ಸುರಿಯತೊಡಗಿತ್ತು. ಉರಿಯುತ್ತಿರುವ ಕಣ್ಣೀರನ್ನು ಕೈವಸ್ತ್ರದಿಂದ ಒರೆಸಿ, [illegible] ಸ್ವಲ್ಪ ನೆಮ್ಮದಿಯಾಯಿತು. ಹೊರಗಡೆ ಹೋಗಿ ನಿಂತು [illegible] ಒಲೆಯನ್ನು ಬಿಟ್ಟು [illegible] ಪ್ರತಿ ಸಂಜೆ ಎಮ್ಮೆ ಹಿಂಡಿ, ಹಾಲಿನಿಂದಲೇ ಟೀ ಮಾಡಿಕೊಂಡು ಕುಡಿಯುವ ಪದ್ಧತಿ ನನ್ನದು ಎಂದಿನಂತೆ [illegible] ಎಂದು.

ಎರಡು ಕಪ್ [illegible] ಅಂತ ಮಾಡಿ [illegible] ಹೇಳಿದ್ದೆ. [illegible] ಸಿಗಬೇಕಲ್ಲ! ಆಗ ನೆನಪಾಯಿತು ಇಂದು ರವಿವಾರವೆಂದ [illegible] ಬಂತು ಅಂದ್ರೆ ಟೀ ಪುಡಿ ಮಾಯವಾಗಿರುತ್ತೆ ಪ್ರತಿ ಸೋಮವಾರ ಹತ್ತು ಪೊಟ್ಟಣಗಳನ್ನು ತರುತ್ತಾರೆ ನನಗೆ ನಾಲ್ಕೈದು ಜನ ಅತ್ತಿಗೆಯರು. ಅಮ್ಮ ಗಂಡಂದಿರಿಗೆ ಮಕ್ಕಳಿಗೆ ಟೀ ಮಾಡಿ ಕೊಡಲು ಟೀ ಪುಡಿ ತಂದ ದಿನವೇ ಪರಿಪಡಿಸಿಕೊಂಡಿರುತ್ತಾರೆ ಹೇಳುವವರು ಕೇಳುವವರು ಇಲ್ಲದ ಮನೆಯಲ್ಲಿ ಈ ರೀತಿಯಾಗುವುದು ಸಹಜ, ಟೀ ಪುಡಿಗೋಸ್ಕರ ಯಾವ ಅತ್ತಿಗೆಯನ್ನು ಕೇಳಲಿ? ಕೇಳಿದರೆ 'ನನಗೆ ಗೊತ್ತಿಲ್ಲ' ಅಂದರೆ? ಯಾವುದೂ ಬಗೆಹರಿಯದ ಸಮಸ್ಯೆಯಾಯಿತು.

ಯಾವುದೋ ಕೆಲಸಕ್ಕೆ ಅತ್ತಿಗೆಯು ಅಡಿಗೆ ಕೋಣೆಗೆ ನುಗ್ಗಿದಳು. ಧೈರ್ಯ ಮಾಡಿ ಕೇಳಿಯೇ ಬಿಟ್ಟೆ ಸಿಡಿರು ಪಂಡಿರು ಅನ್ನುತ್ತಾ ಮುಹಡಿ ಹತ್ತಿ ಹತ್ತಾರು ಮಡಿಕೆಗಳನ್ನು ಕೆಳಗಿಳಿಸಿ ಮೇಲಕ್ಕೇರಿಸಿ ಟೀ ಪುಡಿ ತಂದು ಕೊಟ್ಟಳು ಕಣ್ಣರಳಿಸಿ ಟೀ ಪುಡಿ ನೋಡುತ್ತೇನೆ, ಅರ್ಧ ಕಪ್ ಮಾಡಲು ಸಾಧ್ಯವಿಲ್ಲ ಅಯ್ಯೋ ದೇವರೇ ನನ್ನ ಅತ್ತಿಗೆ ಕೆಟ್ಟರ ಮನೆಯಲ್ಲಿರಬೇಕಾಗಿತ್ತು ಅಪ್ಪಿತಪ್ಪಿ ಲಿಂಗಾಯತರ ಮನೆಗೆ ಬಂದಿದ್ದಳೆ ಸಿಕ್ಕಿದಷ್ಟೇ ಶಿವಲಿಂಗ ಅನ್ನುತ್ತಾ ಟೀ ಪುಡಿ ಸುರಿದೆ. ಬಟ್ಟೆಯಿಂದ ಟೀ ಸೋಸಿಕೊಂಡು ಅಂಗಳದಲ್ಲಿ ಬಂದು ಕುಳಿತೆ.

ಟೀ ಬಿಸಿಯಾಗಿತ್ತು. ಬಿಸಿ ಕಡಿಮೆಯಾಗಲಿ ಅಂತ ಸುಮ್ಮನೆ ಕುಳಿತೆ. ಅಷ್ಟರಲ್ಲಿ ನಾಗಲೋಕದ ನಾಗಣ್ಣ ಪ್ರವೇಶಿಸಿದ ಅವನ ಹೆಸರು ನಾಗಣ್ಣನೆಂದೇ ಅವನು ಮಾಡುವ ಕಾರ್ಯಗಳಿಗೆ ಸರಿಯಾಗಿ ನಾಗ ಲೋಕದ ನಾಗಣ್ಣನೆಂನೆಂದು ಹೆಸರಿಟ್ಟಿದ್ದೆ, ಆ ಹೆಸರು ಅವನಿಗೆ ಮಾತ್ರ ಗೊತ್ತಿಲ್ಲ. ನನ್ನನ್ನು ನೋಡಿದ ಕೂಡಲೇ ಹರಳೆಣ್ಣೆ ಕುಡಿದವನಂತೆ ಮುಖ ಮಾಡಿದ. ನನಗೂ ಅವನಿಗೂ ಹಾವು ಮುಂಗುಸಿ ಇದ್ದ ಹಾಗೆ. ಕಪ್‌ನಲ್ಲಿ ಟೀ ಹಾಕಿಕೊಂಡು ಬೇಕಂತಲೇ ಎಮ್ಮೆ ಮುಸುರಿ ಕುಡಿದಂತೆ "ಗೊರಕ್" ಅಂತ ಸೀ ಗುಟುಕರಿಸಿದೆ. ಟೀ ಅವನಿಗೂ ಬೇಕಾಗಿತ್ತೋ ಏನೋ ಒಲೆ ಮುಂದೆ ಬಿದ್ದ ಕಸ ನೋಡಿ ಅವನ ಸಿಟ್ಟು ಹೆಚ್ಚಾಯಿತು ಈಗ ಸದ್ಯಕ್ಕೆ ಅಡಿಗೆ ಮಾಡುವ ಡ್ಯೂಟಿ ಅವನ ಹೆಂಡ್ತೀದೇ ಆದೂ ಅಲ್ಲದೆ ಎಮ್ಮೆಗೆ ಹಾಕಬೇಕಾಗಿದ್ದ ಸಗಣಿಯಂತಿರುವ ಸಪ್ಪೆಯನ್ನೇ ಒಲೆಗಿಟ್ಟಿದ್ದೆ. ಇನ್ನೂ ಉರಿದ ದಂಟುಗಳು ಒಲೆಯ ಮುಂದೇ ಬಿದ್ದಿದ್ದವು. ದನ ತಿನ್ನುವ ಸಪ್ಪೆಯನ್ನ ಒಲೆಗಿಡುವುದೇ? ಈ ಕಾರ್ಯ ತಪ್ಪು ಎನ್ನುವುದು ನನಗೂ ಗೊತ್ತು ಹಸಿ ಸೌದೆ ಉರಿಯಲಿಲ್ಲ. ಟೀ ಜಾಗ್ರತೆ ಕುಡಿಯಬೇಕೆಂಬ ಹಂಬಲ. ಮೂರ ನಾಲ್ಕು ದಿನಗಳಿಂದಲೂ ಸಪ್ಪೆಯನ್ನೇ ಇಟ್ಟು, ಟೀ ಮಾಡಿಕೊಂಡು ಕುಡಿಯುತ್ತಿದ್ದನ್ನು ನಾಗಲೋಕದ ನಾಗಣ್ಣ ಪ್ರತ್ಯಕ್ಷವಾಗಿಯೇ ನೋಡಿದ್ದ. ನನ್ನ ಹತ್ತಿರ ಜಗಳವಾಡಲು ನಾಯಂತೆ ಸಮಯ ಕಾಯುತ್ತಿದ್ದ. ಅವನ ಮುಖ ನೋಡಿದಾಗಲೇ ಜಗಳವಾಗುತ್ತೆ ಅಂತ ತೀರ್ಮಾನ ಮಾಡಿಕೊಂಡೆ. ಅಷ್ಟ್ರಿಗೆ ತಂದೆಯವರು ಸಪ್ಪೆ ಗಾಡಿಯೊಡನೆ ಬಂದರು. ಸರಿ, ತಂದೆ ಮಗನ ಭೇಟಿ. ಅಪ್ಪನನ್ನು ನೋಡಿದ ಕೂಡಲೇ ಉತ್ಸಾಹ ಹೆಚ್ಚಿ ಕೋಪ ಇಮ್ಮಡಿಯಾಯಿತು. ಅಪ್ಪನು ನಾಗಣ್ಣ ಕಡೆ ಸಪೋರ್ಟು ಕೊಂಡೆ ಬರುತ್ತಿರುವುದು ನೋಡಿ ಟೀ ಕುಡಿಯುತ್ತ ಮೇಲಕ್ಕೆ ಎದ್ದೆ.

"ನಾಗರಾಜ, ಸಪ್ಪೆಗಾಡಿ ಬಂದಿದೆ. ರೂಮಿನಲ್ಲಿ ಹಾಕಿಸು" ಅಪ್ಪ ನಾಗಣ್ಣನಿಗೆ ಹೇಳಿದರು ತಂದೆಯು ಮಾತನ್ನು ಪರಿಪಾಲಿಸುವುದರಲ್ಲಿ ಎತ್ತಿದ ಕೈ.

"ಯಾತಕ್ಕೆ ಹಾಕಿಸಿಕೊಂಡು ಬಂದೆ? ರೂಪಾಯಿ ಹೆಚ್ಚಾಗಿತ್ತೇನು ಒಲೆಗಿಟ್ಟು ಟೀ ಮಾಡಲು ಅನುಕೂಲವಾಯ್ತು ಕೆಲವರಿಗೆ" ಸಿಟ್ಟಿನಿಂದ ಹೇಳಿದ.

"ಯಾರು ಒಲೆಗಿಟ್ಟವರು" ನಮ್ಮಪ್ಪ ಜೋರಾಗಿಯೇ ಕೇಳಿದರು.

"ಬೃಹಸ್ಪತಿ ಬೀಸುಕಲ್ಲು ಹತ್ತಿರವೇ ಇದ್ದಾನೆ."

"ಉಶನೇ"

"ಉಶನೋ ಪರಮೇಶನೋ" ನನ್ನನ್ನು ನೋಡಿ ಹಲ್ಲುಕಿರಿದ,

"ದನಕ್ಕಾಗುವ ಸಪ್ಪೆಯನ್ನೇ ಒಲೆಗಿಡುತ್ತಾರೇನೋ" ನಮ್ಮಪ್ಪ ಸಮಾಧಾನದಿಂದಲೇ ಕೇಳಿದರು.

"ಹಸಿ ಸೌದ. ಅದಕ್ಕೇ ...." ತಪ್ಪಿಸುವಂತೆ ತಲೆಬುರಡೆ ಕೆರೆದೆ.

'ಇವನಿಗೊಬ್ಬನಿಗೆ ಹಸಿ ಸೌದೆಯೋ?'

"ನೀನು ಹೋಟಲಲ್ಲಿ ಅಡಿಗೆ ಭಟ್ಟನಾಗಿಯೋ ಕ್ಲೀನರನಾಗಿಯೋ ಕೆಲಸಮಾಡಿರಬೇಕು ಒಲೆ ಹಚ್ಚುವ ಅನುಭವ ನಿನಗಿದೆ"

"ಈ ರೀತಿಯಾಗಿ ದಿನಾ ಉರಿ ಹಚ್ಚುತ್ತಾ ಇದ್ದರೆ ಯಾರ ಮನೆ ಹಾಳು ಮಾಡಬೇಕು" ಮತ್ತೆ ಅದೇ ವಿಷಯಕ್ಕೆ ಬಂದ, ಮನೆ ಉದ್ಧಾರ ಮಾಡೋದು ಇವನಿಗೊಬ್ಬನಿಗೆ ಗೊತ್ತಿರೋದೇನೋ? ನಮ್ಮಪ್ಪ ಸರಿಯಾಗಿ ಕಣ್ತೆರದು ನೋಡಿದ್ದರೆ ಗೊತ್ತಾಗುತಿತ್ತು. ನನ್ನ ತಂದೆಯೋ ಕಣ್ಣು ಇದ್ದರೂ ಕುರುಡನಾಗಿದ್ದಾನೆ ನನ್ನ ಮೇಲೆ ಅಪ್ಪ ಸಿಟ್ಟು ಮಾಡಿಕೊಂಡ ನನಗೂ ಕೋಪ ಬಂತು ಅಪ್ಪನೇ ಸುಮ್ಮನಿರುವಾಗ ಅಪ್ಪನಿಗಿಂತಲೂ ಮಿಗಿಲಾದ ಮಾತನಾಡುತ್ತಿದ್ದನಲ್ಲ ಇವನ ಸೊಕ್ಕು ಇಳಿಸಲೇ ಬೇಕು ಅಂತಾ ಗಟ್ಟಿಮನಸ್ಸು ಮಾಡಿದ್ದೆ.

"ಮೂರು ಹಿಡಿ ಸಪ್ಪೆದಂಟು ಉರಿ ಹಚ್ಚಿದರೆ ಎಷ್ಟು ಸಾವಿರ ರೂಪಾಯಿ ನಷ್ಟವಾಗುತೆ? ಕಣ್ಣಿಗೆ ಕಂಡರೆ ಕಣ್ಣಿಗೆ ಕಾಣದಿದ್ದರೆ ಹೊಟ್ಟೆ ಉರಿ ಅಲ್ಲವೇ? ನನ್ನ ಹೆಂಡ್ತಿ ಮಾಡಿರುವ ಕೆಲಸ ನೋಡಿದ್ದಿಯೋ ನಿನ್ನ ಮುದ್ದು ಮಗನಿಗೆ ಹಾಲು ಕುಡಿಸಲು ದಿನಾ ಹಿತ್ತಾಳೆ ತಂಬಿಗೆಯಲ್ಲಿ ಹಾಲು ಕುಡಿಸುತ್ತಾಳೆ. ಹಿತ್ತಾಳೆ ತಂಬಿಗೆ ಕುಟ್ಟಿದರೆ ಏತಕ್ಕೆ ಬರುತ್ತೆ? ನಾನು ಸುಟ್ಟಿರುವ ಸಪ್ಪೆದಂಟು ನಾಲ್ಕೈದು ಪೈಸಾ ಆಗುವುದಿಲ್ಲ. ನನಗೆ ಬುದ್ಧಿ ಹೇಳುವ ಮೊದಲು ನನ್ನ ಹೆಂಡ್ತಿಗೆ ಹೇಳು ಮನೆ ಉದ್ಧಾರ ಮಾಡೋರು ಹಿತ್ತಾಳೆ ಪಾತ್ರೆ ಸುಡುವುದಿಲ್ಲ ಆಚಾರ ಹೇಳುವುದಕ್ಕೆ ನನಗೂ ಬರುತ್ತೆ."

"ಅವಳು ತವರು ಮನೆಯಿಂದ ತಂದಿರಬೇಕು" ನನಗೇ ಗದ್ದರಿಸಿದ

"ನಿನ್ನ ಬಾಯಿ ಜೋರಿಗೆ ಹೆದರುವನು ನಾನಲ್ಲ ತಂಬಿಗೆ ಮೇಲೆ ಅಪ್ಪನ ಹೆಸರಿದೆ ನೀನು ಯಾವ ಗಳಿಗೆಯಲ್ಲಿ ಕಾಲು ಇಟ್ಟಿಯೋ ಮನೆಯ ವಾತಾವರಣ ಕೆಡಿಸಿದೆ ಇನ್ನೂ ಸಾರಿಸಿ ರಂಗೋಲಿ ಇಡೋದೊಂದು ಬಾಕಿ ಇದೆ"

"ಆ ಕೆಲಸವನ್ನೂ ಮಾಡಿ ಬಿಡುತ್ತೇನೆ" ಅಪ್ಪ ಪಕ್ಕದಲ್ಲಿ ಇದ್ದಾನೆ ಎಂದು ಎಚ್ಚರವಿಲ್ಲದೆ ಮಾತನಾಡಿದ

"ನನಗೂ ಗೊತ್ತು ನೀನು ಅಂತಾ ಬೃಹಸ್ಪತಿ ಎಂದು, ಇಲ್ಲದೆ ಇದ್ರೆ ಅಪ್ಪನ ಸಪೋರ್ಟಿಗೆ ಬ್ರೋಕರ್ ಕೆಲಸ ಮಾಡುತ್ತಿದ್ದೆಯಾ?"

ಏನೋ ಅಂದಿದ್ದು" ನನ್ನ ಮೇಲೆ ನುಗ್ಗಿದ ಅಪ್ಪ ರಟ್ಟೆ ಹಿಡಿದು ನಿಲ್ಲಿಸಿದರು.

"ಕಂಡದ್ದನ್ನು ಕಂಡಂತೆ ಹೇಳಿದರೆ ಕೆಂಡದಂತ ಕೋಪವೇಕೆ? ಬ್ರೋಕರ್ ಕೆಲಸ ನಿನಗೇನು ಹೊಸದೇನು ಅಲ್ಲವಲ್ಲ!

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕಿರಿ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ, 1920. ಪ್ರಧಾನ ಕಛೇರಿ: ಉಡುಪಿ, ದ ಕನ್ನಡ.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ ಬಿ ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ. ದ ಕನ್ನಡ.

++

ಸಂಚಾಲಕ—ಸಂಪಾದಕ:

ಕೆ ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ.

(ನೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ ೧೦

ವಿದೇಶ ರೂ. ೧೫

++

ಜಾಹೀರಾತು ದರಗಳು.

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ 2-00

ನಿಯಮಿತ (ಕಂಟ್ರ್ಯಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಧ್ಯಾತ್ಮ ವಿಚಾರ

ದೇವರು ಎಲ್ಲಿದ್ದಾನೆ?

ಬರೆದವರು: ಸ್ವಾಮಿ ರಾಮತೀರ್ಥ

ಮಹಮ್ಮದೀಯರ ಆಳಿಕೆಯ ಒಂದಾನೊಂದು ಕಾಲದಲ್ಲಿ ಒಬ್ಬ ದೊರೆಯು ಒಬ್ಬ ಕಾಜಿಯನ್ನು ಗವರ್ನರನನ್ನಾಗಿ ಇಟ್ಟುಕೊಂಡಿದ್ದನು. ದೊರೆಯು ಅವನ ಪಾರಮಾರ್ಥಿಕ ಜ್ಞಾನವನ್ನು ಪರೀಕ್ಷಿಸಲು ಅಪೇಕ್ಷಿಸಿದನು. ಅರಸನು ಸ್ವತಃ ವಿದ್ವಾಂಸನಾಗಿರಲಿಲ್ಲ. ಗವರ್ನರ್ ಪದವಿಯು ತನಗೆ ಸಿಕ್ಕಬೇಕೆಂದು ಅಪೇಕ್ಷಿಸಿಕೊಂಡಿದ್ದ ಇನ್ನೊಬ್ಬನು ಅರಸನು ಕಾಜಿಗೆ ಹಾಕಬೇಕಾದ ಪ್ರಶ್ನೆಗಳನ್ನು ತಯಾರಿಸಿಕೊಟ್ಟನು.

ಕಾಜಿಯು ಅರಸನ ಮುಂದೆ ಬಂದು ನಿಂತನು. ಅರಸನು ಅವನಿಗೆ ಈ ರೀತಿ ಸವಾಲು ಹಾಕಿದನು:— "ದೇವರು ಯಾವ ದಿಕ್ಕಿಗೆ ಮುಖ ಮಾಡಿರುತ್ತಾನೆ? ಅವನು ಎಲ್ಲಿ ಕುಳಿತುಕೊಳ್ಳುತ್ತಾನೆ? ಏನು ತಿನ್ನುತ್ತಾನೆ? ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರಗಳನ್ನು ಕೊಟ್ಟರೆ ನಿನಗೆ ಬಡತಿಯು ಸಿಕ್ಕುವದೆಂ"ದು ಕೂಡ ಅರಸನು ಅವನಿಗೆ ಹೇಳಿದನು.

ಅರಸನಿಂದ ಬಂದಿರುವ ಈ ಪ್ರಶ್ನೆಗಳು ಬಹು ಕಷ್ಟವಾದವುಗಳೆಂದು ಕಾಜಿಯು ತಿಳಿದನು. ಅರಸನನ್ನು ಹೊಗಳಿ ಹೇಗೆ ಉಬ್ಬಿಸಬಹುದೆಂಬುದು ಕೂಡ ಅವನಿಗೆ ಗೊತ್ತಿತ್ತು. ಈ ಪ್ರಶ್ನೆಗಳಿಗೆ ಉತ್ತರ ಕೊಡಲು ತನಗೆ ೮ ದಿನಗಳ ಅವಕಾಶಕೊಡಬೇಕೆಂದು ಅವನು ಅರಸನನ್ನು ಕೇಳಿಕೊಂಡನು.

ಎಂಟು ದಿನಗಳಲ್ಲಿ ಕಾಜಿಯು ಮತ್ತೂ ಮತ್ತೂ ಆಲೋಚಿಸಿದನು. ಆದರೆ ಏನೊಂದು ತೀರ್ಮಾನವೂ ಅವನಿಗೆ ಕಂಡುಬರಲಿಲ್ಲ. ಅರಸನಿಗೆ ತೃಪ್ತಿಯಾಗುವಂತೆ ಈ ಪ್ರಶ್ನೆಗಳಿಗೆ ಹೇಗೆ ಉತ್ತರ ಕೊಡಬೇಕು? ಕೊನೆಗೆ ಎಂಟನೆ ದಿನ ಬಂತು. ಆದರೆ ಕಾಜಿಗೆ ಈ ಪ್ರಶ್ನೆಗಳ ಉತ್ತರಗಳು ಬರಲಿಲ್ಲ. ಆಗ ಅವನು ಇನ್ನೂ ಸ್ವಲ್ಪ ಸಮಯ ತೆಗೆದುಕೊಳ್ಳಲು ತನಗೆ ಕಾಯಿಲೆಯೆಂದು ನಟನೆ ಮಾಡಿದನು.

ಆ ಕಾಜಿಯ ಒಬ್ಬ ಸೇವಕನು ಅವನ ಸಮೀಪಕ್ಕೆ ಬಂದು ಸಮಾಚಾರವೇನೆಂದು ತಿಳಿಯಲು ಬಯಸಿದನು. ಕಾಜಿಯು ಬಹು ದುಃಖಿತನಾಗಿ ಹೇಳಿದನು:- "ದೂರ ಹೋಗು. ನನಗೆ ತೊಂದರೆ ಕೊಡಬೇಡ. ನಾನು ಸಾಯಲು ತಯಾರಾಗಿದ್ದೇನೆ."

ಸೇವಕನು ಮತ್ತೂ ಒತ್ತಾಯಿಸಿದನು. "ದಯವಿಟ್ಟು ತಿಳಿಸಿರಿ. ಏನು ಸಂಗತಿ? ನೀವು ತೀವ್ರ ವೇದನೆಗೆ ಗುರಿಯಾಗುವುದಕ್ಕಿಂತ ನಾನು ಸಾಯುವುದೇ ಮೇಲು."

ಆಗ ಆ ಕಷ್ಟದ ಸಂಗತಿಯು ಅವನಿಗೆ ವಿವರಿಸಿ ಹೇಳಲ್ಪಟ್ಟಿತು. ಈ ಸೇವಕನು ಬಹು ಕೆಳ ತರಗತಿಯ ಪರಿಸ್ಥಿತಿಯವನಿದ್ದನು. ಅವನೆಂದೂ ಒಂದು ಗಣನೆಗೆ ಬರುವ ವ್ಯಕ್ತಿಯಾಗಿರಲಿಲ್ಲ. ಒಂದು ಕಲ್ಲಿನ ತುಂಡು ಅಥವಾ ಮಣ್ಣಿನ ಹೆಂಟೆಯೆಂದು ಜನರು ಅವನನ್ನು ಭಾವಿಸುತ್ತಿದ್ದರು. ಆದರೆ ವಸ್ತುತಃ ಅವನು ಆ ಕಾಜಿಯ ಪ್ರಾಮಾಣಿಕ ಶಿಷ್ಯನಾಗಿಯೂ, ಸರಿಯಾಗಿ ಶಿಕ್ಷಣ ಪಡೆದ ಒಬ್ಬ ಪಂಡಿತನಾಗಿಯೂ ಇದ್ದನು. ಅವನು ಹೇಳಿದನು:— "ನನಗೆ ಈ ಪ್ರಶ್ನೆಗಳಿಗೆ ಉತ್ತರ ಗೊತ್ತಿದೆ. ನಾನು ಹೋಗಿ ಇವುಗಳಿಗೆ ಉತ್ತರ ಕೊಡುವೆನು. ನಾನು ಅರಸನಲ್ಲಿಗೆ ಹೋಗಲು ನೀವೊಂದು ಪತ್ರವನ್ನು ನನಗೆ ಬರೆದು ಕೊಡಬೇಕು. ಅವನ ಪ್ರಶ್ನೆಗಳಿಗೆ ತೃಪ್ತಿಕರವಾಗಿ ನಾನು ಉತ್ತರ ಕೊಡದಿದ್ದರೆ, ನೀವಲ್ಲ, ನಾನು ಸಾಯುವೆನು."

ಕಾಜಿಯು ಹೀಗೆ ಮಾಡಲು ಅನುಮಾನಪಟ್ಟನು. ಆದರೆ ಅದೇ ಸಮಯ ಅರಸನ ದೂತರು ಅಲ್ಲಿಗೆ ಬಂದರು. ಅವನು ಭಯದಿಂದ ಅತಿಯಾಗಿ ನಡುಗಿದನು. ಆದ್ದರಿಂದ ತನ್ನ ಸೇವಕನಿಗೆ ಅಲ್ಲಿಗೆ ಹೋಗಲು ಅವನು ಅಪ್ಪಣೆ ಕೊಟ್ಟನು.

ಸೇವಕನು ತನ್ನಲ್ಲಿದ್ದ ಹರುಕು ಬಟ್ಟೆಗಳಿಂದ ಅದಷ್ಟು ಉತ್ತಮವಾಗಿ ಉಡುಪನ್ನು ತೊಟ್ಟುಕೊಂಡನು. ಅವನೊಬ್ಬ ವೇದಾಂತಿ ಸನ್ಯಾಸಿಯಾಗಿದ್ದನು. ಭಾರತದಲ್ಲಿ ಅರಸರು ಆಗಾಗ್ಗೆ ಸ್ವಾಮಿಗಳ ಸಮೀಪಕ್ಕೆ ಹೋಗಿ ಅವರಿಂದ ಹೆಚ್ಚಾಗಿ ತತ್ವೋಪದೇಶಗಳನ್ನು ಪಡೆಯುವ ಪದ್ಧತಿಯಿದೆ. ಆದ್ದರಿಂದ ಈ ಸೇವಕ ಪಂಡಿತನು ನಿರ್ಭಯವಾಗಿ ಅರಸನಲ್ಲಿಗೆ ಹೋಗಿ ಕೇಳಿದನು:- "ನಿಮಗೇನು ಬೇಕು? ನೀವು ನನ್ನಲ್ಲಿ ಏನು ಕೇಳಲು ಬಯಸುತ್ತೀರಿ?"

ಅರಸನು ಹೇಳಿದನು— "ನಿನ್ನ ಯಜಮಾನನಿಗೆ ಹಾಕಿದ ಸವಾಲುಗಳಿಗೆ ನೀನು ಉತ್ತರ ಕೊಡಬಲ್ಲೆಯಾ?"

ಪಂಡಿತನು ಉತ್ತರಿಸಿದನು— "ನಾನು ಅವುಗಳಿಗೆ ಉತ್ತರ ಕೊಡಬಲ್ಲೆನು. ಆದರೆ ನಿಮಗೆ ಗೊತ್ತಿದೆ. ಉತ್ತರ ಕೊಡುವವನು ಉಪದೇಶಕನು. ಪ್ರಶ್ನೆ ಕೇಳುವವನು ಅವನ ಶಿಷ್ಯನು, ನೀವು ತಾಜಾ ಮಹಮ್ಮದೀಯರಾಗಿದ್ದು ಶಾಸ್ತ್ರ ವಿಧಿಗಳಿಗೆ ಸರಿಯಾಗಿ ನಡೆಯತಕ್ಕವರೆಂದು ನಾವು ತಿಳಿದಿರುತ್ತೇವೆ. ಶಾಸ್ತ್ರವಿಧಿಗನುಸಾರವಾಗಿ ನಾನು ಗೌರವದ ಉಚ್ಚ ಆಸನದಲ್ಲಿ ಕುಳಿತುಕೊಳ್ಳಬೇಕು."

ಆದ್ದರಿಂದ ಅರಸನು ಅವನಿಗೆ ಉತ್ತಮವಾದ ಉಡುಪನ್ನು ತೊಟ್ಟುಕೊಳ್ಳಲು ಕೊಟ್ಟನು. ಅವನು ಅರಸನ ಸಿಂಹಾಸನದ ಮೇಲೆ ಕುಳಿತುಕೊಂಡನು. ಅರಸನು ಕೆಳಗೆ ಮೆಟ್ಟಲುಗಳ ಮೇಲೆ ಕುಳಿತನು. ಅರಸನು ಹೇಳಿದನು—"ಒಂದು ವಿಷಯವಿದೆ. ನಿನ್ನ ಉತ್ತರವು ನನಗೆ ತೃಪ್ತಿಕರವಾಗದಿದ್ದರೆ ನಾನು ನಿನ್ನನ್ನು ಕೊಂದೇ ಬಿಡುವೆನು."

ಪಂಡಿತನು ಉತ್ತರಿಸಿದನು - "ನಿಶ್ಚಯ. ಅದು ನನಗೆ ಮೊದಲೇ ಗೊತ್ತಿದೆ."

ಆಗ ಮೊದಲಾಗಿ ಕೇಳಿದ ಪ್ರಶ್ನೆಯು "ದೇವರು ಎಲ್ಲಿ ಕುಳಿತುಕೊಳ್ಳುತ್ತಾನೆ?" ಎಂಬುದು. ಇದಕ್ಕೆ ನೇರವಾಗಿ ಉತ್ತರ ಕೊಟ್ಟರೆ ಅರಸನಿಗೆ ಗೊತ್ತಾಗಲಾರದು. ಆದ್ದರಿಂದ ಆ ಪಂಡಿತನು ಒಂದು ದನವನ್ನು ತರಲಿಕ್ಕೆ ಹೇಳಿದನು. ಒಂದು ದನವು ಅಲ್ಲಿಗೆ ತರಲ್ಪಟ್ಟಿತು;

ಆಗ ಪಂಡಿತನು ಕೇಳಿದನು. "ಈ ದನಕ್ಕೆ ಹಾಲಿದೆಯೆ?"

ಅರಸನು ಉತ್ತರ ಕೊಟ್ಟನು, "ಇದೆ. ನಿಜವಾಗಿ."

"ಆ ಹಾಲು ಎಲ್ಲಿ ಕುಳಿತುಕೊಂಡಿದೆ?"

"ಕೆಚ್ಚಲಿನಲ್ಲಿ" ಎಂದು ಅರಸನು ಉತ್ತರವಿತ್ತನು.

"ಅದು ತಪ್ಪು. ಹಾಲು ದನದ ಮೈಯಲ್ಲೆಲ್ಲಾ ವ್ಯಾಪಿಸಿಕೊಂಡಿದೆ. ದನವು ಹೋಗಲಿ" ಎಂದು ಪಂಡಿತನು ಹೇಳಿದನು.

ಆಗ ಸ್ವಲ್ಪ ಹಾಲು ಅಲ್ಲಿಗೆ ತರಲ್ಪಟ್ಟಿತು.

"ಬೆಣ್ಣೆಯು ಎಲ್ಲಿದೆ? ಹಾಲಿನಲ್ಲಿ ಬೆಣ್ಣೆ ಇದೆಯೆ?" ಪಂಡಿತನು ಕೇಳಿದನು.

"ಇದೆ" ಎಂದು ಅರಸನು ಉತ್ತರ ಕೊಟ್ಟನು.

"ಆದರೆ ಅದೆಲ್ಲಿದೆ? ನನಗೆ ಗೊತ್ತಾಗಲಿ" ಪಂಡಿತನು ಕೇಳಿದನು.

ಅರಸನಿಗೆ ಉತ್ತರ ಹೇಳಲು ಸಾಧ್ಯವಾಗಲಿಲ್ಲ.

ಆಗ ಪಂಡಿತನು ಹೇಳಿದನು— ನಿಮಗೆ ಬೆಣ್ಣೆಯು ಎಲ್ಲಿದೆಯೆಂದು ಹೇಳಲಿಕ್ಕಾಗದಿದ್ದರೂ ಅದು ಅಲ್ಲಿ ಇದೆಯೆಂದು ನಂಬಲೇಬೇಕು. ದೇವರು ಇಡೀ ವಿಶ್ವದಲ್ಲಿ ಎಲ್ಲಾ ಕಡೆಯಲ್ಲೂ ಇರುತ್ತಾನೆ; ಬೆಣ್ಣೆಯು ಹಾಲಿನಲ್ಲಿ ಎಲ್ಲಾ ಕಡೆಯಲ್ಲೂ ಇರುವಂತೆಯೇ, ಹಾಲೂ ದನದಲ್ಲಿ ಎಲ್ಲಾ ಕಡೆಯಲ್ಲೂ ಇದೆ. ಹಾಲನ್ನು ಪಡೆಯಬೇಕಾದರೆ ನಾವು ದನವನ್ನು ಕರೆಯಬೇಕು. ಹಾಗೆಯೇ ದೇವರನ್ನು ಪಡೆಯಬೇಕಾದರೆ ನಾವು ನಮ್ಮ ಹೃದಯವನ್ನು ಕರೆಯಬೇಕು."

ಆಗ ಪಂಡಿತನು "ಅರಸರೇ! ನಿಮಗೆ ಉತ್ತರವು ಸಿಕ್ಕಿತೇ?" ಎಂದು ಕೇಳಿದನು. ಅರಸನು " ಅಹುದು. ಅದು ಸರಿ" ಎಂದು ಹೇಳಿದನು.

ಆಗ ಏಳನೆಯ ಅಥವಾ ಎಂಟನೆಯ ಸ್ವರ್ಗದಲ್ಲಿ ದೇವರಿದ್ದಾನೆ ಯೆಂದು ಹೇಳಿದ ಜನರೆಲ್ಲಾ ಅರಸನ ದೃಷ್ಟಿಯಲ್ಲಿ ತಿರಸ್ಕಾರ ಪಾತ್ರರಾದರು. ಅವರ ವಾದವು ಸರಿಯಲ್ಲ. ಅವರೆಲ್ಲಾ ತನಗೆ ಅನುಪಯುಕ್ತರೆಂದು ಅರಸನಿಗೆ ಕಂಡುಬಂತು.

ಆಮೇಲೆ ಎರಡನೆಯ ಪ್ರಶ್ನೆಯು ಬಂತು. "ದೇವರು ಯಾವಕಡೆಗೆ ನೋಡುತ್ತಾನೆ? ಪೂರ್ವಕ್ಕೋ? ಪಶ್ಚಿಮಕ್ಕೋ? ಉತ್ತರಕ್ಕೋ? ಅಥವಾ ದಕ್ಷಿಣಕ್ಕೋ? ಎಂದು ಇದು ಕೂಡ ಒಂದು ವಿಚಿತ್ರವಾದ ಪ್ರಶ್ನೆ. ಆ ಜನರೆಲ್ಲರೂ ದೇವರನ್ನು ಒಬ್ಬ ಸಾಮಾನ್ಯ ಪುರುಷನಂತೆ ಕಾಣುತ್ತಿದ್ದರು.

ಪಂಡಿತನು—"ಸರಿ, ಒಂದುದೀಪವನ್ನು ತನ್ನಿರಿ" ಎಂದು ಹೇಳಿದನು.

ಒಂದು ಮೇಣದ ಬತ್ತಿಯನ್ನು ತಂದು ಉರಿಸಲಾಯಿತು. ಈ ಮೇಣಬತ್ತಿಯು ದಕ್ಷಿಣ ಉತ್ತರ, ಪೂರ್ವ ಅಥವಾ ಪಶ್ಚಿಮ ಯಾವದಿಕ್ಕಿಗೂ ಮುಖಮಾಡಿಕೊಂಡಿರುವುದಿಲ್ಲ. ಎಲ್ಲಾ ಕಡೆಗಳಿಗೂ ಒಂದೇ ವಿಧದಲ್ಲಿ ಅದು ಪ್ರಕಾಶ ಕೊಡುತ್ತಿದೆ ಎಂದು ಅವನು ಅವನಿಗೆ ತೋರಿಸಿದನು.

"ಇದೇ ರೀತಿಯಲ್ಲಿ ದೇವರು ನಮ್ಮ ಹೃದಯದಲ್ಲಿರುವ ಮೇಣದ ಬತ್ತಿಯು. ಆತನು ಎಲ್ಲಾಕಡೆಗೂ ಮುಖಮಾಡಿಕೊಂಡಿರುತ್ತಾನೆ. ಪಂಡಿತನು ಹೇಳಿದನು. ಅರಸನಿಗೆ ತೃಪ್ತಿಯಾಯಿತು,

"ದೇವರುಏನು ಮಾಡುತ್ತಾನೆ?" ಎಂದು ಆ ಮೇಲಿನ ಒಂದು ಪ್ರಶ್ನೆ ಬಂತು.

"ಸರಿ, ಈ ಪ್ರಶ್ನೆಗೆ ನಾನು ಉತ್ತರ ಕೊಡುವೆನು" ಪಂಡಿತನು ಹೇಳಿ ಕಾಜಿಯನ್ನು ಅಲ್ಲಿಗೆ ಕರೆತರಿಸಬೇಕೆಂದು ಅರ

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮಸಮೀಪದ ನಮ್ಮಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಬೆಳ್ತಂಗಡಿ ಡಿಸ್ಟ್ರಿಕ್ಟ್ ಮುನ್ಸಿಫ್ ಕಮ್-ಮೇಜಿಸ್ಟ್ರೇಟ್ ಕೋರ್ಟಿನಲ್ಲಿ

S. C. No. 46/1964.

ಬಾಬು ಪೂಜಾರಿ, ನಕ್ರ ಪೂಜಾರಿಗಳ ಮಗ ಬೆಳ್ತಂಗಡಿ ತಾಲ್ಲೂಕು ಕೊಕ್ರಾಡಿ ಗ್ರಾಮಸ್ಥ —ವಾದಿ

ತುಂಗಯ್ಯಯಾನೆ ತಿಮ್ಮಪ್ಪ ಪೂಜಾರಿ, ಪೊಂಚ ಪೂಜಾರಿ ಮಗ—ಬೆಳ್ತಂಗಡಿ ತಾಲ್ಲೂಕು ಸಾವ್ಯ ಗ್ರಾಮದ ಹೊಸಮನೆ ಎಂಬಲ್ಲಿ. ಪ್ರಕೃತ ಚಿಕ್ಕಮಂಗಳೂರು ಡಿಸ್ಟ್ರಿಕ್ಟ್ ಸೋಮವಾರ ಪೇಟೆಯಲ್ಲಿ ಜೇನುಗದ್ದೆ ಹೋಟೆಲಲ್ಲಿ ಮುಂಚಪ್ಪ ಪೂಜಾರಿಗಳಲ್ಲಿರುತ್ತಾನೆ— ಪ್ರತಿವಾದಿ

ಕೋರ್ಟು ಸ್ಟಾಂಪ್ ಪ್ರಕಾರ ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುದೇನೆಂದ್ರೆ— ವಾದಿಗೆ ಪ್ರತಿವಾದಿಯಿಂದ ಬರತಕ್ಕ ಡಿ. ಪ್ರೋ. ನೋಟಿನ ಅಸಲು ಬಡ್ಡಿ ರೂ 178/-ಕ್ಕೆ ಸದ್ರಿ ವಾದಿ ಪ್ರತಿವಾದಿಯ ಮೇಲೆ ಮಾಡಿದ ಮೇಲಿನ ದಾವೆ ತಾ.6.6 1964ಕ್ಕೆ ತನಿಖೆಗೆ ಇಟ್ಟಿರುತ್ತದೆ ಆದ್ದರಿಂದ ಸದ್ರಿ ಮ್ಯಾದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ಪ್ರತಿವಾದಿಯು ಸ್ವತಃ ಯಾ ವಕೀಲರ ದ್ವಾರಾ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಜಾಸದಿದ್ರೆ ಆದಿನ ಪ್ರತಿವಾದಿಯನ್ನು ಶಿಪಾಕ್ಕ ಮಾಡಿ ತೀರ್ಮಾನ್ಸಲಾದೀತು.

ಬಿ. ಕೆ. ಸೂರ್ಯನಾರಾಯಣ ರಾವ್,
ಎಡ್ವೋಕೇಟ್.

ಬೆಳ್ತಂಗಡಿ, 20.4.64.

ಪಾಕಿಸ್ತಾನದಲ್ಲಿ

ಅಯೂಬ-ಚೌ ಆಲಿಂಗನ

ಬರೆದವರು: ಶ್ರೀ ಶಿವಶಂಕರ, ಮದ್ರಾಸು

ಹಿಂದೆಯೇ ನಿಶ್ಚಯವಾಗಿತ್ತಾದರೂ ಆಫ್ರಿಕಾದ ಅನೇಕ ದೇಶಗಳಲ್ಲಿ ಚೌರಿಗೆ ಸ್ವಾಗತ ಸಿಗಲಿಲ್ಲ. ಹಾಗಾಗಿ ಕೆಲವು ದೇಶಗಳಿಗೆ ಅವರು ಹೋಗಲೇ ಇಲ್ಲ. ಆದರೂ ಅವರು ಪ್ರಯಾಣದ ಕಾಲವನ್ನು ಕಡಿಮೆ ಮಾಡಲಿಲ್ಲ. ನಿಶ್ಚಯಿಸಿದ್ದಂತೆ ನಿರ್ದಿಷ್ಟ ಸಮಯವನ್ನು ಅವರು ಆಫ್ರಿಕಾದಲ್ಲಿ ಕಳೆದರು. ಅಲ್ಲಿ ಅವರಿಗೆ ಅತ್ಯುತ್ತಮ ಸ್ವಾಗತ ಸಿಗದಿದ್ದರೂ ತನ್ನ ಮುಖ ಉಳಿಸಿಕೊಳ್ಳಲು ಅವರು ಪ್ರಯತ್ನಿಸಿದರು, ಅದಕ್ಕಾಗಿ ಅಲ್ಲೇ ಅಷ್ಟು ಸಮಯ ನಿಂತುಕೊಂಡರು. ಆಫ್ರಿಕಾದ ದೇಶವೊಂದರ ಗಣ್ಯ ಅಧಿಕಾರಿಯೊಬ್ಬರು ಚೈನಾ ತನಗೆ ಲಂಚಕೊಟ್ಟು, ಆಸೆ ತೋರಿಸಿ, ಬಲೆಯೊಳಗೆ ಬೀಳಿಸಿಕೊಳ್ಳಲು ಬಲು ಪ್ರಯತ್ನಿಸಿತ್ತೆಂಬುದನ್ನು ಇತ್ತೀಚೆಗೆ ಬಹಿರಂಗಪಡಿಸಿರುವರು. ಇದರ ಮೇಲಿಂದ ಆಫ್ರಿಕಾದಲ್ಲಿ ಅದೆಂತಹ ಸ್ವಾಗತ ಚೌರಿಗೆ ಸಿಕ್ಕಿತೆಂಬುವದನ್ನು ಸುಲಭವಾಗಿ ಊಹಿಸಿಕೊಳ್ಳಬಹುದು. ಆಫ್ರೋ—ಏಷ್ಯನ್ ಒಕ್ಕೂಟವು ತನ್ನ ಕೈಗೊಂಬೆಯಾಗಿದ್ದಲ್ಲಿ ಅದನ್ನು ಅಮುಕಿ ಹಿಸಲು ಚೌ ಚೆನ್ನಾಗಿ ಪ್ರಯತ್ನಿಸಿರುವರೆಂಬುದರ ಕುರಿತು ಕೆನ್ಯಾದ ಪ್ರತಿನಿಧಿ ಸ್ಪಷ್ಟವಾಗಿ ಹೇಳಿರುವರು. ಆದುದರಿಂದಲೇ ಆಫ್ರೋ-ಏಷ್ಯನ್ ಒಕ್ಕೂಟದಿಂದ ಚೈನಾವನ್ನು ಹೊರಗಿಡಲು ಪ್ರಯತ್ನಿಸಲಾಗುತ್ತಿದೆ. ಇಥಿಯೋಪಿಯಾದ ರಾಜರು ಕೂಡಾ ತನ್ನ ಭಿನ್ನಾಭಿಪ್ರಾಯವನ್ನು ಚೌರ ಮುಂದಿಟ್ಟಿರುವರು. ಚೈನಾವು ಭಾರತದ ಮೇಲೆ ಆಕ್ರಮಣ ನಡೆಸಿರುವದರ ಕುರಿತು ಚೌರಿಗೆ ಛೀಮಾರಿ ಹಾಕಿರುವರು. ಈ ರೀತಿ ಆಗಬಹುದೆಂಬುದನ್ನು ಚೌ ನಿರೀಕ್ಷಿಸಿರಲಿಲ್ಲ. ಕತ್ತಲು ಖಂಡದ ಕಿರಿಯ ದೇಶಗಳು ಕಮ್ಯೂನಿಸ್ಟ ರಕ್ಷೆಯ ಚೈನಿ ಚಿಟ್ಟಿಗೆ ಮಾರು ಹೋದಾವೆಂದು ಅವರು ಭಾವಿಸಿಕೊಂಡಿದ್ದರು. ಆ ರೀತಿ ಮಂಗಳಾರತಿ ಆದೊಡನೆ ಅವರು ಅಲ್ಲಿ ಹೊಸ ಆಟವನ್ನು ಆಡಿದರು. ನಾಲ್ಕಾರು ದೇಶಗಳಿಗೆ ಹೋಗಲಿಕ್ಕಾಗದಿದ್ದರೂ, ಅಲ್ಲಿ ಕಳೆಯ ಬೇಕಾಗಿದ್ದ ಕಾಲದಲ್ಲಿ, ಒಂದು ರಾಷ್ಟ್ರವನ್ನು ಇನ್ನೊಂದು ರಾಷ್ಟ್ರಕ್ಕೆ ಶತ್ರುವನ್ನಾಗಿ ಮಾಡುವ ಚೈನಿ ಕಲೆಯ ಪ್ರದರ್ಶನ ನಡೆಸಿದರು, ಕಮ್ಯೂನಿಸ್ಟ ಗರಡಿಯಲ್ಲಿ ಪಳಗಿದ್ದ ಮಲ್ಲ ಅದರಲ್ಲೂ ಅಷ್ಟು ಫಲ ಸಿಗದಿದ್ದುದರಿಂದ ಬಂದ ದಾರಿಗೆ ಸುಂಕವಿಲ್ಲವೆಂದು ಅವರು ಹಿಂದಿರುಗಿದರು; ಬಂದ ಮಾರಿ ಹೋಯಿತೆಂದು ಆಫ್ರಿಕಾದ ದೇಶಗಳಿಗೆ ಆನಂದವಾಯಿತು.

ಹಾಗೆಯೇ ಪ್ರಯಾಣ ಮುಂದುವರಿಸಿಕೊಂಡು ಅವರು ಬರ್ಮಾಕ್ಕಾಗಿ ಪಾಕಿಸ್ತಾನದಲ್ಲಿ ಹಾದಬಿಟ್ಟರು. ಬರ್ಮಾದಲ್ಲಿ ಅವರು ಮುಖ ತೋರಿಸುವ ಮುಂಚೆಯೇ ಅಲ್ಲಿಯ ಪ್ರಧಾನಿಯವರು ಭಾರತಕ್ಕೆ ಬಂದು ಇಲ್ಲಿಯ ಪ್ರಧಾನಿ ನೆಹರೂಜಿಯವರೊಡನೆ ಸಮಾಲೋಚನೆ ನಡೆಸಿದ್ದರು. ಬರ್ಮಾ ನಮ್ಮ ಗಡಿಯಲ್ಲೇ ಇದೆಯಾದರೂ, ಸಂಪರ್ಕದಲ್ಲಿದೆ ಯಾದರೂ ಅಲ್ಲಿ ನಮ್ಮ ನಾಡಿನ ರಾಯಭಾರಿ ಯಾರೂ ಇಲ್ಲವೆಂಬುದು ಗಣನೀಯ ವಿಷಯವಿದೆ. ಇದಕ್ಕೆ ಹಲವಾರು ಕಾರಣಗಳನ್ನು ಈ ಲೇಖನಕ್ಕೆ ಸಂಬಂಧಪಡದಿರುವದರಿಂದ ಇತರ ವಿವರಗಳನ್ನು ಇಲ್ಲಿ ಕೊಟ್ಟಿರುವದಿಲ್ಲ. ರಾಯಭಾರಿ ಅಲ್ಲಿ ಇಲ್ಲದೆ ಇರುವದರಿಂದ ಹಾಗೂ ಕಮ್ಯೂನಿಸ್ಟ ಚೈನಾದ ಪ್ರಧಾನಿ ಬರುವಾಗ ಭಾರತಕ್ಕೆ ವಿರೋಧವಾಗದಂತೆ ಹೇಗೆ ನಡೆದುಕೊಳ್ಳಬೇಕು ಅಲ್ಲದೆ ಭಾರತ—ಚೈನಾಕ್ಕೆ ರಾಜಿಗೆ ಏನನ್ನಾದರೂ ಮಾಡುವ ಉದ್ದೇಶದಿಂದ ಅವಂತ್ರ ಅವಸರ—ಅವಸರವಾಗಿ ಬಂದು ಹೋಗಿರುವರು. ಬರ್ಮಾದಲ್ಲಿ ಸಾಧಾರಣ ಮಟ್ಟಿಗೆ ಬಲಶಾಲಿ ಸೈನಿಕ ಆಡಳಿತವಿದೆಯಾದರೂ, ಅದು ಹಲವಾರು ಸಮಸ್ಯೆಗಳನ್ನೆದುರಿಸಬೇಕಾಗಿರುವದರಿಂದ ತನ್ನ ಭೂಭಾಗವನ್ನು ಕಮ್ಯೂನಿಸ್ಟ ಚೈನಾ ಕಪಿ ಮುಷ್ಟಿಯೊಳಗಿಟ್ಟುಕೊಂಡಿದೆ. ವಾಗ ಉಪಾಯವಿಲ್ಲದೆ ಸುಮ್ಮಗಿದ್ದಾರೆ, ಆದರೂ ಯುಕ್ತ ಸಮಯವನ್ನೆದುರು ನೋಡುತ್ತಿದ್ದಾರೆ. ಚೌ ಕೂಡಾ ಸೈನಿಕ ಆಸ್ವಾಮಿ ಇರುವದರಿಂದ ಅಲ್ಲಿ ಬಹಳ ಜಾಗ್ರತೆಯಿಂದಲೇ ನಡೆದುಕೊಂಡು ಅಯೂಬರ ಸತ್ಕಾರ ಸ್ವೀಕರಿಸಲು ಪಾಕಿಸ್ಥಾನಕ್ಕೆ ಪ್ರಯಾಣ ಬೆಳೆಸಿದರು.

ಭಾರೀ ಆಶೆಯನ್ನಿಟ್ಟುಕೊಂಡು ಚೌ ಪಾಕಿಸ್ತಾನದಲ್ಲಿ ಕಾಲಿಟ್ಟರು. ವಿಮಾನ ನಿಲ್ದಾಣದಲ್ಲೇ ಅವರಿಗೆ ತಾನು ಕಬ್ಬಿಣದ ಕಡಲೆಯನ್ನು ಜಗಿಯಬೇಕಾಗಿದೆಂಬುದರ ಅರಿವಾಯಿತು. ಕಪಟ ನಾಟಕದಲ್ಲಿ ಖಳನಾಯಕನ ಪಾತ್ರ ವಹಿಸಿ ಪಳಗಿರುವ ಚೌರಿಗೆ ಅಲ್ಲಿ ರಾಜಕೀಯ ನಾಟಕವಾಡಲು ಕಷ್ಟವಾಗಲಿಲ್ಲ. ಆದುದರಿಂದ ಭಾರೀ ಸತ್ಕಾರ ಪಡೆದಿರುವವರಂತೆ ನಟಿಸಿಕೊಂಡರು.

ಚೈನಾ—ಪಾಕ್‌ಗಳ ನಡುವೆ ಅದಾಗಲೇ ಅನೇಕಾನೇಕ ರೀತಿಯ ಒಪ್ಪಂದಗಳು ನಡೆದಿರುತ್ತವೆ. ಅಮೇರಿಕಾದಿಂದ ಬರುತ್ತಿರುವ ಶಸ್ತ್ರಾಸ್ತ್ರಗಳನ್ನು ಇನ್ನಷ್ಟು ಚೆನ್ನಾಗಿ ದುರುಪಯೋಗ ಪಡಿಸಿಕೊಳ್ಳಬೇಕೆಂದು ಪಾಕಿಸ್ಥಾನವು ಚೈನಾದ ನೆರವನ್ನು ಯಾಚಿಸಿರುತ್ತದೆ. ಅದಕ್ಕಾಗಿ ಅಲ್ಲಿಂದ ಅನೇಕ ಮಂದಿ ವಿವಿಧ ವೇಷಗಳಲ್ಲಿ ಕಮ್ಯೂನಿಸ್ಟ ಚೈನಾಕ್ಕೆ ಹೋಗಿ ಸೈನಿಕ ಶಿಕ್ಷಣವನ್ನು ಪಡೆದುಕೊಂಡು ಬರುತ್ತಿದ್ದಾರೆ. ಗೊರಿಲ್ಲಾ ಯುದ್ಧದಲ್ಲಿ ಅವರಿಗೆ ವಿಶೇಷ ಶಿಕ್ಷಣವನ್ನು ಕೊಡಲಾಗುತ್ತದೆ. ಅಂತಹ ಒಂದು ಗೊರಿಲ್ಲಾ ಪಡೆಗೆ ಆಲಂಗೀರ್ ಕಬೀರರು ದಳಪತಿಯಾಗಿದ್ದಾರೆ. ಅವರ ಅಣ್ಣ ಹುಮಾಯೂನ್ ಕಬೀರರು ಇಲ್ಲಿ ಕೇಂದ್ರದಲ್ಲಿ ರಾಸಾಯನಿಕ ಹಾಗೂ ಪೆಟ್ರೋಲಿನ ಮಂತ್ರಿಯಾಗಿದ್ದಾರೆ. ರಾಸಾಯನಿಕ ಪದಾರ್ಥ ಹಾಗೂ ಪೆಟ್ರೋಲ್ ರಾಷ್ಟ್ರದ ಬೆಳವಣಿಗೆಗೆ ಅದೆಷ್ಟು ಮುಖ್ಯ ವಸ್ತುಗಳೆಂಬುದನ್ನು ವಿವರಿಸುವ ಅಗತ್ಯ ಇಸಿತೂ ಇರುವದಿಲ್ಲ. ಹಾಗಿರುವಾಗ ಆಲಂಗೀರ್ ಕಬೀರರನ್ನು ದಳಪತಿಯನ್ನಾಗಿ ಮಾಡಿರುವದರಲ್ಲಿ ಚೌರ ಕೈವಾಡ ಇರಲೇಬೇಕೆಂದು ಗೊತ್ತಾಗುತ್ತದೆ. ಅದೆಂತು ಸಾಧ್ಯವೆಂದು ಮತೀಯ ವಾದಿಗಳೂ, ಕಮ್ಯೂನಿಸ್ಟರೂ ಒಕ್ಕೊರಲಿನಿಂದ ಕೇಳಬಹುದು. ಕುಂಟನು ಸಾಧಾರಣ ಆಸಾಮಿ ಅಲ್ಲವೆಂಬುದು ಎಲ್ಲರಿಗೂ ಗೊತ್ತು. ಚೌರವರು ಪಾಕಿಸ್ತಾನದ ಪಡೆಯ ವಿಷಯ ವಿವರವಾಗಿ ತಿಳಿದುಕೊಂಡಿರುವರು. ಇಲ್ಲದಿದ್ದಲ್ಲಿ ಶಿಕ್ಷಣ ಕೊಡಲು ಮುಂದೆ ಬರುತ್ತಿರಲಿಲ್ಲ. ಆ ಶಿಕ್ಷಣವಾದರೂ ಯಾವ ರೀತಿ ಇರಬಹುದು? ಚೈನಾ ಅದನ್ನು ಸುಲಭವಾಗಿ ಎದುರಿಸುವಂತೆಯೂ, ಭಾರತಕ್ಕೆ ಕಿರುಕುಳ ಕೊಡುವಂತಹದ್ದಾಗಿಯೂ ಇರುವ ಶಿಕ್ಷಣವನ್ನೇ ಅವರು ಕೊಡುತ್ತಾರೆ. ಅದರಲ್ಲಿ ಗೊರಿಲ್ಲಾ ಪಡೆ ಮುಖ್ಯ ಅಂಗವಿರುತ್ತದೆ. ಅದಕ್ಕೆ ಅದ್ಯಾವನು ಅತ್ಯುತ್ತಮ ಅಧಿಕಾರಿಯಾಗುವದು ಕಮ್ಯೂನಿಸ್ಟ ಚೈನಾಕ್ಕೆ ಹಿತಕಾರಿ? ಅದು ಭಾರತದಲ್ಲಿರುವ ಮಂತ್ರಿಗಳ, ಉಚ್ಚ ಅಧಿಕಾರಿಗಳ ಸಂಬಂಧಿಕರೇ ಸರಿ, ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳುವಾಗ ಆಲಂಗೀರ ಕಬೀರ ಅದೆಂತು ಕಣ್ಣು ತಪ್ಪಿಹೋಗಲು ಸಾಧ್ಯ? ಪಾಕಿಸ್ತಾನದ ಪಡೆಯ ವಿವರಗಳನ್ನು ವಿವಿಧ ಮೂಲಗಳಿಂದ ಪಡೆದುಕೊಂಡರೂ ಅವರ ಶೈಕ್ಷಣಿಕ ಭೇಗದ ಕೈ ತಮ್ಮ ಕಿಸೆಯೊಳಗಿದ್ದರೂ ಕುಂಟನು ಹೆಚ್ಚಾಗಿ ಯಾರನ್ನೂ ನಂಬುವುದಿಲ್ಲ. ಅವರು ಕಣ್ಣಾರೆ ಕಂಡು ಅನುಭವ ಪಡೆಯಲು ಇಚ್ಛಿಸುತ್ತಾರೆ. ಅಂತೆಯೇ ಚೌ ಅಯೂಬರ ಆಲಿಂಗನಕ್ಕೆ ಹಾತೊರೆದರು.

ಅವರ ಆಲಿಂಗನದ ಫಲವಾಗಿ ಕೆಲವು ಒಪ್ಪಂದವೆಂಬ ಶಿಶುಗಳ ಜನನವಾಯಿತು. ಅವುಗಳಿಗೆ ಅದೆಂತಹ ಸ್ಥಾನಮಾನ ಸಿಗಬಹುದೆಂಬುದು ಕ್ರಮಶಃ ತಿಳಿದು ಬರಲಿಕ್ಕಿದೆ. ಪಾಕ್ ಚೈನಾ ನಡುವೆ ಪ್ರಯಾಣಿಕ ವಿಮಾನ ಸಂಚಾರ ಆರಂಭವೂ ಒಂದು ಸುದ್ದಿ. ದಿನಚರಿ ಅದೆಷ್ಟು ಜನರು ಚೈನಾದಿಂದ ಪಾಕಿಸ್ತಾನಕ್ಕೆ, ಹಾಗೆಯೇ ಪಾಕಿಸ್ತಾನದಿಂದ ಚೈನಾಕ್ಕೆ ಹೋಗುತ್ತಾರೆಂಬುದು ಪ್ರಶ್ನಿಸಬೇಕಾಗಿರುವ ವಿಷಯವಿದೆ. ಆದರೆ ಅದಕ್ಕೆ ಉತ್ತರ ಕೊಡುವವರ್ಯಾರು? ಪ್ರಯಾಣಿಕರ ಹಣದಿಂದ ಲಾಭ ನಷ್ಟ ನೋಡುವವರು ಅದಕ್ಕೆ ಉತ್ತರಿಸಬಹುದು. ಪಾಕ್—ಚೈನಾಗಳಿಗೆ ಬೇಕಾದದ್ದು ಆ ಹಣವಲ್ಲ. ಅವರಿಗೆ ಬೇಕಾಗಿರುವದು ದೈನಂದಿನ ಸಂಪರ್ಕ. ಅದಕ್ಕಾಗಿಯೇ ಈ ನಾಟಕ.

ಪಾಕಿಸ್ತಾನವು ಚೈನಾಕ್ಕೆ ಧಾರಾಳವಾಗಿ ಉದ್ದದ ಹಗ್ಗವನ್ನು [ಸೆಣಬನ್ನು] ಕೊಡುತ್ತಿದೆ. ಚೈನಾವು ಪ್ರತಿಯಾಗಿ ಸೈನಿಕ ಶಿಕ್ಷಣ ಕೊಡುತ್ತಿದೆ. ಅಂದರೆ ಪಾಕಿಸ್ತಾನದ ಕುತ್ತಿಗೆಗೆ ಹಗ್ಗ ಹಾಕಲು ಹೊಂಚುಹಾಕುತ್ತಿದೆ. ವಿರೋಧ ಮನೋಭಾವನೆಯಿಂದ ಕುರುಡಾಗಿರುವ ಪಾಕಿಸ್ಥಾನಕ್ಕೆ ಅದು ಈಗ ತಿಳಿಯುವಂತಿಲ್ಲ. ಅವರಿಗಾದರೋ ತನ್ನೆರಡು ಕಣ್ಣುಗಳು ಹೋದರೂ ಚಿಂತಿಲ್ಲ, ಭಾರತದ ಒಂದು ಕಣ್ಣಾದರೂ ಹೋದರೆ ಸಾಕಾಗಿರುತ್ತದೆ. ಅದಕ್ಕೆಂದೇ ಚೌರೊಡನೆ ಚೆಲ್ಲಾಟಕ್ಕೆ ಅಯೂಬ ಅಣ್ಣು ಅಂದಿರುವರು.

ಈ ನಡುವೆ ಇನ್ನೊಂದು ಗಮನೀಯ ವಿಷಯವೆಂದರೆ ಚೌರವರು ಭಾರತದ ಮೇಲಿನಿಂದ ಹಾದು ಹೋಗಿರುವದಿದೆ. ಅದಕ್ಕೆ ಭಾರತ ಸರಕಾರ ಅನುಮತಿಯನ್ನಿತ್ತಿತ್ತು. ಪಾಕಿಸ್ಥಾನವಾದರೋ ತನ್ನ ನೆಲದ ಮೇಲಿನಿಂದ ಭಾರತದ ಸಾಧಾರಣ ವಿಮಾನವೂ ಹೋಗಕೂಡದೆಂದು ನಿರ್ಬಂಧಿಸಿರುತ್ತದೆ ಹೀಗಿರುವದರಿಂದ ಚೌ ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನುದುರಿಸಿರುವರು.

ಗಡಿಗೆ ಸಂಬಂಧಪಟ್ಟ ಒಪ್ಪಂದವೂ ಗಣನೀಯ ವಿಷಯವಿದೆ. ಕಾಶ್ಮೀರವು ಪಾಕಿಸ್ಥಾನವೆಂದೂ, ಲಡಕ್ ಮತ್ತು ಈಶಾನ್ಯ ಗಡಿಪ್ರದೇಶವು ಚೈನಾಕ್ಕೆ ಸೇರಿದ್ದೆಂದೂ ಅವರು ಒಪ್ಪಿಕೊಂಡಿರುವರು. ಯಾರ ಅಪ್ಪನ ಆಸ್ತಿಯನ್ನು ಅದ್ಯಾರು ಹಂಚಿಕೊಳ್ಳುವದೋ!

ಇಂತಹ ಹಲವು ಒಪ್ಪಂದಗಳು ನಡೆದಿರುತ್ತವೆ.

ಅಯೂಬರು ಸೈನಿಕ ಅನುಭವ ಉಳ್ಳವರು, ಅಂತೆಯೇ ಚೌ ಕೂಡಾ ನೇರ ಯುದ್ಧಕ್ಕಿಂತಲೂ ಗೋರಿಲ್ಲಾ ಕಾಳಗ ಹಾಗೂ ಪಂಚಮ ರೀತಿಯ ಯುದ್ಧ ಕುಶಲತೆ ಚೌಗೆ ಚೆನ್ನಾಗಿ ಗೊತ್ತು. ಆದುದರಿಂದಲೇ ಸೇನಾಧಿಕಾರಿಗಳ ನಡುವೆ ಮಾತುಕತೆ ನಡೆಯುತ್ತದೆ, ಒಪ್ಪಂದ ನಡೆಯುತ್ತದೆ. ಸೇನಾಧಿಕಾರಿಯ ಮಾತು ಇನ್ನೊಬ್ಬ ಸೇನಾಧಿಕಾರಿಗೆ ಸುಲಭವಾಗಿ ಅರ್ಥವಾಗುತ್ತದೆ. ಭಾರತ ಆ ಪರಿಸ್ಥಿತಿಯಲ್ಲಿಲ್ಲ. ಇಲ್ಲಿ ಮಾತುಕತೆಯಾಡಲು ಮುಂಬರುವವರು ಸೇನಾಧಿಕಾರಿಗಳಲ್ಲ, ಕೇವಲ ರಾಜಕೀಯವಾದಿಗಳು. ಆದುದರಿಂದಲೇ ಒಬ್ಬರ ಮಾತು ಇನ್ನೊಬ್ಬರಿಗೆ ಅರ್ಥವಾಗುವುದಿಲ್ಲ. ಈ ರಾಜಕೀಯವಾದಿಗಳಿಗೋ ತಮ್ಮ ರಾಷ್ಟ್ರದ ಗಡಿ ಎಲ್ಲಿದೆಂಬುದೂ ಗೊತ್ತಿರುವದಿಲ್ಲ. ನಮ್ಮದೆಂದು ಹೇಳಲಾಗುತ್ತಿರುವ ಹಾಗೂ ಬಹುಶಃ ನಮ್ಮದಾಗಿರುವ ಭೂಪ್ರದೇಶವೆಂದು ಅವರು ಅತಿ ಸುಲಭವಾಗಿ ಶತ್ರುವಶವಾಗಿರುವ ಮಾತ್ರ ಭೂಮಿಯ ಪ್ರದೇಶವನ್ನು ಕೈ ಬಿಟ್ಟು ಬಿಡುತ್ತಾರೆ. ಬೆರುಬಾರಿ ಹಾಗೂ ಅಂತಹ ಸ್ಥಳಗಳಲ್ಲಿ ಜನವಸತಿ ಇದೆಯೆಂಬುದೂ ಅವರಿಗೆ ಗೊತ್ತಿರುವದಿಲ್ಲ ಕಲ್ಲು ಮುಳ್ಳು ಬೆಳೆಯುವ ಪ್ರದೇಶ ಯಾವದೆಂಬುದೂ ಅವರಿಗೆ ಗೊತ್ತಿರುವದಿಲ್ಲ. ಶತ್ರುಗಳ ಊರಿನ ಜನರು ತಮ್ಮ ಗಡಿಯಲ್ಲಿ ತಂಗಿದರೆ ಅದ್ಯಾವ ಆಪತ್ತು ಬಂದೀತೆಂಬುದು ಅವರಿಗೆ ಗೊತ್ತಿರುವದಿಲ್ಲ. ಹೀಗಾಗಿ ನೆಹರೂ, ನಂದಾ ಬಹದೂರ್ ಮುಂತಾದವರಿಗೂ ಅಯೂಬ—ಚೌ ನಡುವೆ ಒಪ್ಪಂದ ನಡೆಯುವಂತಿಲ್ಲ. ಅದರ ಪೂರ್ಣ ಲಾಭ ಪಡೆಯಲು ಪಾಕಿಸ್ಥಾನದಲ್ಲಿ ಅಯೂಬ—ಚೌರ ಆಲಿಂಗನ ಚೆಲ್ಲಾಟ ನಡೆದಿರುತ್ತದೆ.



ಗೇಹ ರಾಜ್ಯದಲ್ಲಿ

ನೊಂದ ಜೀವಕ್ಕೆ ಭರವಸೆ

"ಕೇಳಿದಿರಲ್ಲಾ ದೊಡ್ಡ ಸುದ್ದಿಯನ್ನ?"

"ಕೇಳಿದೆ ಬಿಡು. ಕಾಶ್ಮೀರದ ಸಿಂಹದ ಗರ್ಜನೆ ತಾನೆ?"

"ಹ್ಞಾಂ...ಸಿಂಹ ದಿನದಿಂದ ದಿನಕ್ಕೆ ಆಟೋಪದಿಂದ ಆರ್ಭಟಿಸುತ್ತಿದೆ."

"ಸಿಂಹದ ಸ್ವಭಾವವೇ ಹಾಗೆ. ಒಂದ ಕ್ಕೊ ಎರಡಕ್ಕೊ ಆರ್ಭಟಿಸುವುದು. ಆದ ರೆ, ಈಗ ತನ್ನ ದೇಹದಲ್ಲಿ ಶಕ್ತಿ ಉಳಿದಿಲ್ಲ ವೆಂಬುದರ ಅರಿವೇ ಅದಕಿದ್ದಂತಿಲ್ಲ...."

"ನೀವು ಏನೇ ಹೇಳಿ, ಈ ಸಿಂಹ ಏ ನಾದರೂ ಗಂಡಾಂತರ ತಂದು ಹಾಕುವು ದು ಖಂಡಿತ...."

"ಹೇಗೆ ಹೇಳುತ್ತಿ ನೀನು? ನಮ್ಮ ದೊಡ್ಡ ದೊಡ್ಡ ರಾಜಕಾರಣಿಗಳೆಲ್ಲರೂ ಯಾವ ಸಿದ್ಧಾಂತಕ್ಕೂ ಬರಲಾರದೆ ತಡೆ ದು ನೋಡುತ್ತಿರುವಾಗ ನೀನು ಈಗಾಗ ಲೇ ಒಂದು ಸಿದ್ಧಾಂತಕ್ಕೆ ಬಂದು ಬಿಡ ಬೇಕಾದರೆ?"

"ಅವರಿಗೆ ತುದಿ ಬ ಡಗೊತ್ತಿಲ್ಲ. ಜ ವಾಬ್ದಾರಿಯಿದೆ. ಆದುದರಿಂದ ಅಬ್ದುಲ್ಲಾ ರಂತೆ ಕೂಗುವುದು ಸಾಧ್ಯವೆ? ನಮಗೇ ನಂತೆ. ನಮ್ಮ ನಾಲಿಗೆ ಹಾಗೂ ತಿರುಗುತ್ತ ದೆ; ಹೀಗೂ ಉರುಳುತ್ತದೆ...."

"ಸರಿಯಾದುದನ್ನೇ ನುಡಿದೆ"

"ಅಲ್ಲಾ, ಶೇಖರ ಮಾತುಗಳನ್ನು ಕೇ ಳಿಕೇಳಿಯೂ ಸುಮ್ಮನೇಕೆ ಇದ್ದಾರೆ?"

"ಅದರ ಪರಿಣಾಮವನ್ನು ಕಾದುನೋ ಡಬೇಕೆಂದು. ಮತ್ತು ನೋಡು ಎಲ್ಲ ವ ರಿಷ್ಠರೂ ಅವರ ವರ್ತನೆಯಿಂದ ದಂಗು ಬಡೆದಿದ್ದಾರೆ. ಈ ಸಿಂಹದ ನಿಲುವೆಯೇ ನು ಎನ್ನುವುದರ ಹರಿವೆಯನ್ನೂ ಯಾರಿ ಗೂ ಅದಂತಿಲ್ಲ..."

"ಅಲ್ಲ ರಾಷ್ಟ್ರಪತಿಯವರು ಶೇಖರು ಭಾರತೀಯರು ಅವರ ಮೇಲೆ ಇಂಸಿದ್ದ ವಿಶ್ವಾಸವನ್ನು ಉಳಿಸಿಕೊಳ್ಳುವರೆಂಬ ಆ ಶಯ ಪ್ರಕಟಿಸಿದ್ದರಲ್ಲಾ....ಅವರ ಆಶ ಯವೀಗ...."

"ಅದು ದಾರ್ಶನಿಕನೊಬ್ಬನ ವೇದಾಂ ತದ ಭಾವನೆ. ಆದರೆ, ಪ್ರಧಾನಿ ನೆಹರು ಹೇಳಿದರು ನೋಡು, ಶೇಖರ ಕೆಲವು ಹೇಳಿಕೆಗಳು ದುರದೃಷ್ಟಕರವೆಂದು."

"ಹೌದು, ಲಾಲಬಹದೂರ ಶಾಸ್ತ್ರಿ ಕಾಶ್ಮೀರ ಭಾರತದಿಂದ ಬೇರ್ಪಡಬೇಕೆಂ ಬ ಮಾತುಗಳ ವಿರುದ್ಧ ಎಚ್ಚರಿಕೆ ನೀಡಿ ದರು. ಭಾಗವತ್ ಝಾ ಆಜಾದರು ಶೇಖ ವಾಗಾಡಂಬರ ದ ನ್ಯಾಯಸಂಗ ನಿಲುವನ್ನು ಗಮನಕ್ಕೆ ತಂದರು. ಆದರೂ ಈ ಹುಲಿಯು ಒಂ ದೇ ಸವನೆ ಗರ್ಜಿಸುತ್ತಿದೆ."

"ಬರೇ ಗರ್ಜನೆಯಿಂದ ಆಗುವುದೇ ನು? ಆದರೂ ಇಂದಿನ ಆರ್ಭಟೆಯು ರಾಗ ತುಸು ವ್ಯತ್ಯಾಸವಾದಂತಿದೆ."

"ಏನಂತೆ?"

"ಭಾರತ-ಪಾಕಿಸ್ತಾನಗಳಲ್ಲಿರುವ ಅ ಲ್ಪ ಸಂಖ್ಯಾಕರ ಹಿತಕ್ಕಾಗಿ ಕಾಶ್ಮೀರವ ನ್ನು ಬಲಿಕೊಡುವುದು ಸಾಧ್ಯವಿಲ್ಲವೆಂದಿ ದ್ದ ಇವರೀಗ ಕಾಶ್ಮೀರ ಪ್ರಶ್ನೆಯ ಪರಿಹಾ ರದಲ್ಲಿ ಭಾರತ-ಪಾಕಿಸ್ತಾನಗಳಲ್ಲಿರುವ ಅಲ್ಪ ಸಂಖ್ಯಾಕರ ಭವಿತವ್ಯದ ಅಂಶವೂ ಅಡಕವಾಗಿದೆಯೆಂಬುದನ್ನು ಈ ದಿನ ಶು ಭ ದಿನದಂದು ಒಪ್ಪಿಕೊಂಡಿದ್ದಾರೆ."

"ಅಂದರೆ, ಇವರ ಅಭಿಪ್ರಾಯ ತುಸು ಬದಲಾದಂತಾಯಿತು. ಅಲ್ಲವೆ?"

"ಬದಲಾಗಿದೆಯೋ ಹೇಳಬಾರದು. ಜನಮತ ಗಣನೆಯ ಒಂದೇ ವಿಚಾರವ ನ್ನು ಅವರು ಕಟ್ಟಿಕೊಂಡಿದ್ದಾರೆ. ಪ್ರಾ ಯಶಃ ಸದ್ಯ ಪ್ರತ್ಯೇಕ ಕಾಶ್ಮೀರದ ಕನಸು ಕಾಣುವುದನ್ನು ತಡೆ ಹಿಡಿದಿದ್ದಾರೆ."

"ಸರೀನ್ನಿ. ಭಾರತ ಜನಮತಗಣನೆ ಯನ್ನೇ ವಿರೋಧಿಸುತ್ತಿರುವಾಗ, ಇದಕ್ಕಿಂ ತ ಹೆಚ್ಚಿನದೇನನ್ನು ಮಾಡಬಹುದು?"

"ಅದು ಹೌದು. ಈಗ ಭಾರತದ ಸ ದ್ಭಾವನೆ ಅವರಿಗಿಲ್ಲ. ಇನ್ನು ಜನಮತ ಗಣನೆಯನ್ನೂ ಬಿಟ್ಟರೆಂದರೆ, ಪಾಕಿಸ್ತಾ ನದ ವಿಶ್ವಾಸಕ್ಕೂ ಎರವಾಗಬಹುದು."

"ಅದಕ್ಕೇನಂತೆ? ಒಮ್ಮೆ ಪಾಕಿಗೆ ಸೇರಿ ದರೆ, ಮತ್ತೆ ಬೇಕೆಂಬಾಗ ಅದರಿಂದ ಹೊರಗೆ ನಿಲ್ಲಬಹುದು. ಆದರೆ, ಭಾರತದ ಲ್ಲಿ ಅದು ಸಾಧ್ಯವಿಲ್ಲವೆಂದು ಅವರು ತಿಳಿ ದಿದ್ದಾರೆ."

"ಒಳ್ಳೆದು ಅದೂ ಸರೀನ್ನು."

"ಅಲ್ಲ, ಇನ್ನು ನಾಳದು ಭಗಲಾ ಮ ತ್ತೊಮ್ಮೆ ಹೋಗುತ್ತಾರಲ್ಲಾ ಯುಕ್ತ ರಾಷ್ಟ್ರ ಸಂಘಕ್ಕೆ."

"ಅಲ್ಲಿ ಈಗ ಭುಟ್ಟೋರಿಗೆ ಬಿಡಲು ಒಳ್ಳೆ ಬುರುಡೆ ಸಿಕ್ಕಿದಂತಾಯಿತು."

"ನೋಡೀಂಪ್ರೆ...ಭಾರತದಲ್ಲಿ ಕಾಶ್ಮೀ ರ ಸೇರಿದೆ. ಮದ್ರಾಸ ಮೈಸೂರುಗಳಂ ತೆಯೇ ಅದೂ ಭಾರತದ ಅವಿಭಾಜ್ಯ ಅಂ ಗ ಎನ್ನುತ್ತೇವೆ ನಾವು."

"ಅದು ಸರಿ. ನೂರಕ್ಕೆ ನೂರರಷ್ಟು."

"ಹಾಗಾದರೆ, ಶೇಖರ ಭಾಷಣ-ಅಭಿ ಪ್ರಾಯಗಳು ದೇಶ ವಿಭಜನಾ ವಾದಕ್ಕೆ ಬೆಂಬಲ ಕೊಡುವದಲ್ಲ? ಅವರನ್ನು ಯಾ ಕೆ ದಂಡಿಸ ಬಾರದು?"

"ಅದನ್ನು ಈಗಲೇ ಮಾಡಿದರೆ ಲಾಭ ವಿಲ್ಲಾಂತ...."

"ಯಾಕೆ ಲಾಭವಿಲ್ಲ?"

"ನೋಡು, ಶೇಖರಿಂದೂ ಕಾಶ್ಮೀರದಲ್ಲಿ ಯೇ ತನ್ನ ಶೇಕಿಯನ್ನು ತೋರಿಸುತ್ತಲಿ ದ್ದಾರೆ. ಅವರು ಪ್ರಧಾನಿ ನೆಹರು ಮತ್ತಿತ ರ ಭಾರತೀಯ ನಾಯಕರನ್ನು ಹಾಗೆಯೇ ಪಾಕ್ ಧುರೀಣರನ್ನು ಕಂಡು ಮಾತಾಡಿ ದರೆ, ಇವರ ವಿಚಾರಧಾರೆಯೇನು ಎಂ ಬುದು ಮತ್ತಷ್ಟು ವ್ಯಕ್ತಪಟ್ಟೀತು."

"ಅಂದರೆ, ಅಬ್ದುಲ್ಲಾರ ಅಧ್ಯಯನ ಕ್ಕಾಗಿ ಅವರನ್ನೀಗ ಬಿಟ್ಟದ್ದು."

"ಬಿಟ್ಟದ್ದು ಯಾಕೇಂತ ನೆಹರೂಗೂ ಗೊತ್ತಿಲ್ಲ. ಭಾರತದ ಸದ್ಭಾವನೆಯಿಂದ ಲೇ ಅವರ ಬಿಡುಗಡೆಯಾಯ್ತು ಎನ್ನ ಬೇಕು. ಆದರೆ, ವೇದಾಂತದಲ್ಲಿ ವಿಶ್ವಾಸ ವಿಲ್ಲದವರಿಗೆ ಸರಿಯಾದ ಕಾರಣದ ಅರಿ ವಿಲ್ಲವಾದುದರಿಂದ ಇಂತಹ ಸಿದ್ಧಾಂತಕ್ಕೆ ಬರಬಹುದು."

"ಏನೋಪ್ಪಾ....ನಮ್ಮ ಗ್ರಹಗತಿ ಕೇ ಗಿಡೆಯೋ...."

"ಗ್ರಹಗತಿಯೇ ಪೇಚಾಟಕ್ಕೆ ಸಿಕ್ಕಿರು ವುದನ್ನು ಕಂಡೇ ಗ್ರಹಗತಿ ಹೇಗೆಂತ ಉ ಹಿಸ ಬಹುದಲ್ಲ?"

"ಹೌದೂಂದ್ರೆ, ನೋಡಿ ನಮ್ಮ ಗಣ ಪ್ಪೂ ನಾಲ್ಕುದಿನಗಳಿಂದ ಉಟಾನೇ ಮಾ ಡುತ್ತಿಲ್ಲ. ಬಹಳ ಬಚ್ಚಿಹೋಗಿದ್ದಾನೆ...."

"ಅಂದ್ರೆ ಅವನ ಗ್ರಹಗತೀನೂ ನೆಟ್ಟಗಿ ಲ್ಲ...ಏನು ಮಾಡೋದು ಹೇಳು, ಒಂ ದನೆ ತಾರೀಕು ಬರೋದಕ್ಕೆ ಇನ್ನೂ ಒಂದೆರಡು ದಿನವಿದೆ. ನಮ್ಮ ಗ್ರಹಗತಿ ಸುಧಾರಿಸದೆ ಗಣಪೂ ಗ್ರಹಗತಿ ಹೇಗೆ ಸುಧಾರಿಸ್ಬೇಕು?"

"ಅದ್ರ ಮೇಲೆ ನೋಡಿ, ನಮ್ಮ ಸಂ ದ್ರು ಬೊಂಬಾಯಿಗೆ ಹೋಗ್ತೇನಂತ ಪ ಟ್ಟು ಹಿಡಿದಿದ್ದಾನೆ...."

"ಹ್ಞಾಂ....... ...ಅವನಪ್ಪಾ ಸರಿಯಿ ಲ್ಲಾನ್ನು......."

"ಅಲ್ಲ, ಮತ್ತೆ ಸರಿ ಇರೋದಾದ್ರೂ ಯಾರದ್ದು?"

"ಅಯ್ಯೋ ಪೆದ್ದೆ, ಇಡಿ ಭಾರತದ ಗ್ರಹ ಗತೀನೇ ನೆಟ್ಟಗಿಲ್ಲದಿರೋವಾಗ ನೀದು ನಂದು ಏನೆಲ್ಲಾ ಮಹಾ?"

"ನಮ್ದು ನಂಗೆ ಹೆಚ್ಚು ತಾನೆ?"

"ನಮ್ಮೂಂತ ಒಂದು ಇದ್ರೆ ತಾನೆ?"

"ಇಲ್ಲನೆ ಎಲ್ಲಿ ಹೋಗಿದೆ?"

"ನಿನಗಿನ್ನೂ ಗೊತ್ತಿಲ್ಲ......ದಾಸರು ಹಾಡಿದ್ದಾರಲ್ಲ....."

"ನಿಮಗೊಂದು ದಾಸರು ಯಾಕಪ್ಪ ಸತ್ತು ನಾಲ್ಕುನೂರನೆಯ ವರ್ಷದಲ್ಲಿ ಪುನ ರ್ಜನ್ಮ ಪಡೆವರೋ?"

"ದಾಸರ ನಿಂದಿಸಬೇಡ ಹರಿದಾಸರ ನಿಂದಿಸಬೇಡ."

"ನಾನು ಹರಿಯುಲ್ಲ ಕಾಡ್ರಿ..."

"ರಾಮನ ನಿಂದಿಸಿ ರಾವಣ ಕೆಟ್ಟ ಹ ರಿದಾಸರ ನಿಂದಿಸಬೇಡ...."

"ಸಾಕು ಬಿಡೀಂಪ್ರೆ....ಏನೂ ಇನ್ನೂ ಮುಗೀಲಿಲ್ಲ ದಾಸ ಸಾಹಿತ್ಯ ಸ್ಪರ್ಧೆ?"

"ನಿನಗೇನು ಹೇಳು. ಮನೇಲಿ ಹಾಡಿ ದ್ದೇ ಹಾಡನ್ನು ಹಾಡುತ್ತಾ ಕೂತ್ರೆ ಸರಿ ಕಿರುಬಾಯಿ ದಾಸನ ಹಾಗೆ..."

"ನನಗೆ ಬೇಡಪ್ಪಾ, ಅಂತ ದಾಸ್ಯ. ಸ್ವತಂತ್ರ ಭಾರತದಲ್ಲಿದ್ದೂ ನಾವು ದಾಸ್ಯ ವನ್ಯಾಕೆ ಅಪ್ಪಬೇಕು?"

"ನೋಡು ಇದೇ ಬುದ್ಧಿ ಶೇಖ ಹುಲಿ ಗೂ ಬಂದಿದ್ದರೆ..."

"ಬರುತ್ತೆ....ಬರುತ್ತೆ...."

"ಹೌದೂನ್ನು. ಭವಿಷ್ಯವೇ ಭೂತ ಮತ್ತು ವರ್ತಮಾನಗಳಿಗಿಂತ ಭವ್ಯವಾ ದದು."

"ಇದೊಂದೇ ತಾನೇ ನೊಂದ ಜೀವ ಕ್ಕೆ ಭರವಸೆ?"

"ಜೀವನೊಂದಿದೆಯೋ ಇಲ್ಲವೋ ಕಾ ಣಲಾರೆ. ಹೊಟ್ಟೆಯಂತೂ ನೊಂದಿದೆ. ಆದಕ್ಕೆ ಭರವಸೆ ನೀಡು ಮೊದಲಿಗೆ..."

"ಹ್ಞಾ....ಮಾತಿಗೆ ಕೂತ್ರೆ ಏನೂ ಆ ರಿಯೋಲ್ಲ...."

"ಸರೀನ್ನು. ಬಂದ್ಬಿಟ್ಟೆ...ಹ್ಞಾಂ...."

—ಗೋರಾ.

ಉಳಿಸುವವನ ಆಯ್ಕೆ

"ಸಿಂಡಿಕೇಟ್ ಬ್ಯಾಂಕ್"

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಠೇವಣಿಗಾರರು ಪ್ರತಿಯೊಂದು ವೃತ್ತಿಯವರೂ ಇರುತ್ತಾರೆ .... ಮತ್ತು ಪ್ರತಿಯೊಂದು ಉದ್ದೇಶಕ್ಕೂ ಉಳಿಸುತ್ತಾರೆ. ವ್ಯಕ್ತಿಗಳು ಮತ್ತು ಕುಟುಂಬಗಳು, ದೊಡ್ಡ ಮತ್ತು ಸಣ್ಣ ಠೇವಣಿಗಾರರು ಮುಂಚಿತವಾಗಿ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಅವರಿಗೆ ಅಗತ್ಯವಿರುವ ವಿಷಯಕ್ಕಾಗಿ ಉಳಿಸುತ್ತಾರೆ. ಒಂದು ಖಾತೆಯನ್ನು ತೆರೆಯುವುದರ ಮೂಲಕ ಇಲ್ಲವೆ ನಿಮ್ಮ ಲೆಕ್ಕಕ್ಕೆ ಕ್ರಮವಾಗಿ ಕೂಡಿಸುವುದರ ಮೂಲಕ ನಿಮ್ಮ ಉದ್ದೇಶಗಳನ್ನು ಸಾಧಿಸಬಹುದೆಂಬುದನ್ನು ನಿಶ್ಚಯ ಮಾಡಿಕೊಳ್ಳಿರಿ. ಏಕಪ್ರಕಾರವಾದ ಬಡ್ಡಿ ಪಾವತಿಯು ನಿಮ್ಮ ಲೆಕ್ಕಕ್ಕೆ ಕೂಡಿಸಲ್ಪಡುತ್ತದೆ ಮತ್ತು ನಿಮ್ಮ ತೀವ್ರ ಅಭಿವೃದ್ಧಿಗೆ ಸಹಾಯ ಮಾಡುತ್ತದೆ.

ಸಿಂಡಿಕೇಟ್ ಬ್ಯಾಂಕ್, ಲಿಮಿಟೆಡ್.

.... ಭಾರತದ ಬ್ಯಾಂಕಿಂಗಿನಲ್ಲಿ ಒಂದು ಪರಿಚಯದ ಹೆಸರು

READ &
ADVERTISE IN
NAVAYUGA WEEKLY

ನವಯುಗ

ವರುಷ	ಉಡುಪಿ	ವಾರ
೪೩	೩೦-೪-೧೯೬೪	೩೫

ಅಪರಾಧಿ ಪಾಕಿಸ್ತಾನ

ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರ ತಂಡವು ಕಾಶ್ಮೀರದಲ್ಲಿ ಪಾಕಿಸ್ತಾನವು ಸಮರ ವಿರಾಮ ರೇಖೆಯನ್ನು ಉಲ್ಲಂಘಿಸಿದೆಯೆಂಬ ಸತ್ಯ ಸಂಗತಿಯನ್ನು ಬಹಿರಂಗಗೊಳಿಸಿದೆ. ಫೆಬ್ರವರಿ ೨೧ರಂದು ಕೆರೋನದ ಬಳಿ ೩೫ ಜನ ಭಾರತೀಯ ಪೋಲೀಸ್ ಪೆಟ್ರೋಲಿನ ತಂಡವು ಸಮರ ವಿರಾಮ ರೇಖೆಯಿಂದ ನಮ್ಮ ಪ್ರದೇಶದಲ್ಲಿ ತಮ್ಮ ದೈನಂದಿನ ಕರ್ತವ್ಯಕ್ಕೆ ತೊಡಗಿರುವಾಗ, ಪಾಕಿಸ್ತಾನಿ ಪಂಗಡವು ಅವರ ಮೇಲೆ ದಾಳಿ ಮಾಡಿತ್ತು. ಇಬ್ಬರನ್ನುಳಿದ ಇತರ ಭಾರತೀಯ ಪಂಗಡದವರು ಕಾಣೆಯಾದರು. ಈ ಅಪರಾಧವನ್ನು ಮುಚ್ಚುವುದಕ್ಕಾಗಿ ಪಾಕಿಸ್ತಾನವು ಹೊಸ ಕಥೆ ಕಟ್ಟಿತು. ಭಾರತೀಯ ಗಡಿ ಪೋಲೀಸರು ಸಮರ ವಿರಾಮ ರೇಖೆಯನ್ನು ದಾಟಿ ಪಾಕ್ ಪ್ರದೇಶಕ್ಕೆ ಬಂದಿದ್ದರಿಂದಲೂ, ಪಾಕ್ ಗಡಿ ಸಂರಕ್ಷಕರು ಆತ್ಮ ರಕ್ಷಣೆಗಾಗಿ ಕಾದಾಡಿದಾಗ ಭಾರತೀಯರು ಹಾನಿಗೊಂಡರೆಂದೂ ಅದು ಸಾರತೊಡಗಿತು. ಭಾರತ ಸರಕಾರವು ಈ ದುರ್ಘಟನೆಗೆ ಪ್ರೇರಕರಾರು ಎಂಬುದನ್ನು ಪರಿಶೀಲಿಸುವಂತೆ ಸಂ. ರಾ. ಸಂಘದ ನಿರೀಕ್ಷಕರನ್ನು ಕೇಳಿಕೊಂಡಿತು. ಅದು ತನ್ನ ವರದಿಯಲ್ಲಿ ಪಾಕಿಸ್ತಾನದ ಆರೋಪಗಳು ಸುಳ್ಳಿನ ಕತೆಯೆಂದು ಸ್ಪಷ್ಟವಾಗಿ ಹೇಳಿದೆ.

"ಭಾರತೀಯ ಪೆಟ್ರೋಲನ್ನು ಸಮರ ವಿರಾಮರೇಖೆಯ ಭಾರತೀಯ ಪಕ್ಷದಲ್ಲಿ ಪಾಕ್ ತಂಡವು ಆಕ್ರಮಿಸಿತ್ತು. ಕಿಶನ್‌ಗಂಗಾ ನದಿಯ ಈಚೆ ದಡದಿಂದಲೇ ಗುಂಡಿನ ಸುರಿಮಳೆಯೂ ನಡೆದಿತ್ತು. ಎಂದು ಪರಿಶೀಲಕರ ವರದಿಯು ಸಾರುತ್ತದೆ. ಒಂಬತ್ತು ಪೋಲೀಸರು ಎಲ್ಲಿದ್ದಾರೆಂದು ತನಗೆ ತಿಳಿದಿಲ್ಲವೆಂದ ಪಾಕಿಸ್ತಾನ ಹೇಳುವುದಾದರೂ ಅವರನ್ನು ಪಾಕಿಸ್ತಾನವು ಸೆರೆಹಿಡಿದಿದೆಯೆನ್ನುತ್ತದೆ ಆ ವರದಿ. ೧೪ ಮಂದಿಯನ್ನು ಕೊಲೆ ಮಾಡಲಾಗಿದೆಯೆಂಬ ಊಹನೆ. ಪಾಕಿಸ್ತಾನದತ್ತ ಬೊಟ್ಟು ಮಾಡಿ ನಿರೀಕ್ಷಕರ ತಂಡವು ತೋರಿಸುವುದು ಇದು ಮೊದಲನೆಯ ಬಾರಿಯಲ್ಲ. ಆದರೆ, ಈ ಕೆರೋನದ ಪ್ರಸಂಗವು ಇಂತಹ ಅತ್ಯಾಚಾರಗಳಲ್ಲಿ ಬಹುದೊಡ್ಡದು ಮತ್ತು ಕಠಿನತರವಾದುದು. ಇನ್ನೀಗ ಪಾಕಿಸ್ತಾನವು ಎರಡು ಕೆಲಸಗಳನ್ನು ಮಾಡಬೇಕಾಗಿದೆ. ಮೊದಲನೆಯದಾಗಿ, ತಾನು ಸೆರೆಹಿಡಿದಿರುವ ಒಂಬತ್ತು ಜನರನ್ನು ಮರಳಿ ಭಾರತಕ್ಕೆ ಒಪ್ಪಿಸುವುದೊಂದು; ಅನ್ಯಾಯವಾಗಿ ತನ್ನಿಂದ ಹತರಾದ ೧೪ ಮಂದಿಯ ಸಂಬಂಧಿಕರಿಗೆ ಸೂಕ್ತ ಪರಿಹಾರ ಕೊಡುವುದಿನ್ನೊಂದು. ಭಾರತ ಸರಕಾರವು ಈ ಪರಿಹಾರವನ್ನು ನೀಡಬೇಕೆಂದು ಪಾಕ್ ಸರಕಾರವನ್ನು ಕೇಳಿಕೊಂಡಿದೆ. ಭಾರತದ ಕೇಳಿಕೆಯು ಅಂತಾರಾಷ್ಟ್ರೀಯ ನ್ಯಾಯ ಸಮ್ಮತವಾಗಿಯೇ ಇರುವುದರಿಂದ ಇದನ್ನು ಅನ್ಯಾಯವೆಂದು ಯಾರೊಬ್ಬನೂ ಹೇಳಲಾರ. ಶೇಖ ಅಬ್ದುಲ್ಲಾರವರು ಕಾಶ್ಮೀರದ ವಿಷಯವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ತನಗನುಕೂಲವಾಗಿವೆಯೆಂದು ಪಾಕ್ ಸರಕಾರ ಸಂಬ್ರಮಿಸುತ್ತ ಈಗ ಕುಳಿತಿರಬಹುದು. ತನ್ನ ಪ್ರತೋದರರಿಂದು ಅವರನ್ನು ತಿಳಿದಿರಬಹುದು. ಅದುದರಿಂದಲೇ ಅದು ಒಂದೆಡೆ ಸಾಮಹಸ್ತವನ್ನು ಮುಂದೆ ಮಾಡಿ ಇನ್ನೊಂದೆಡೆ ಸಮರ ವಿರಾಮ ರೇಖೆಯನ್ನು ಉಲ್ಲಂಘಿಸುತ್ತ ಭಾರತಕ್ಕೆ ಕಿರುಕುಳ ಕೊಡುತ್ತಿದೆ. ಇಂತಹ ಸನ್ನಿವೇಶದಲ್ಲಿ ಸಮರ ವಿರಾಮ ರೇಖೆಯಲ್ಲಿ ಯಾವ ತಿಕ್ಕಾಟಕ್ಕೂ ಆಸ್ಪದವೀಯದಂತೆ ಅದನ್ನು ಸಂರಕ್ಷಿಸುವ ಜವಾಬ್ದಾರಿಯು ಸಂಯುಕ್ತ ರಾಷ್ಟ್ರ ಸಂಘಕ್ಕೆ ಸೇರಿದುದು. ಸಂ. ರಾ. ಸಂಘದ ೪೦ ನಿರೀಕ್ಷಕರು ಇಂದು ಸುಮಾರು ೧೦೦೦ ಮೈಲುದ್ದದ ವಿರಾಮ ರೇಖೆಯಲ್ಲಿ ಶಾಂತಿಯನ್ನು ಕಾಪಾಡಬೇಕಾಗಿದೆ. ಅದರಲ್ಲೂ ಈ ರೇಖೆಯ ಪ್ರದೇಶವು ಹೆಚ್ಚಾಗಿ ಬೆಟ್ಟ ಕಾಡುಗಳಿಂದ ಕೂಡಿ ದುರ್ಗಮವಾಗಿದೆ. ಆದುದರಿಂದ ಈ ನಿರೀಕ್ಷಕ ತಂಡವು ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ಮಾಡುವುದು ಬಹಳ ತ್ರಾಸದಾಯಕವಾಗುವುದು ಸಹಜ. ಸಂಯುಕ್ತ ರಾಷ್ಟ್ರಸಂಘದ ಶಾಂತಿ ರಕ್ಷಣಾ ವ್ಯವಸ್ಥೆಯ ಅಧಿಕಾರಿಯಾಗಿರುವ ಡಾ| ರಾಲ್ಫ್ ಬಂಚರು ಇತ್ತೀಚೆಗೆ ಕಾಶ್ಮೀರವನ್ನು ಸಂದರ್ಶಿಸಿದಾಗ, ಈ ವಿಷಯವನ್ನು ಅರಿತುಕೊಂಡಿದ್ದಾರೆ. ನಿರೀಕ್ಷಕರ ಸಂಖ್ಯೆಯಲ್ಲಿ ಹೆಚ್ಚಳವಾದರೆ, ವಿರಾಮ ರೇಖೆಯ ರಕ್ಷಣೆಯು ಸುಲಭವಾಗುವುದು ಎಂದು ಭಾರತವು ಈ ಮೊದಲೇ ಸೂಚಿಸಿದ್ದನ್ನು ಬಂಚರು ಒಪ್ಪಿಕೊಂಡಿದ್ದಾರೆ

ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರು ಯಾವ ಪಂಗಡಕ್ಕೂ ಸೇರಿದವರಲ್ಲ. ಅವರು ನಿಷ್ಪಕ್ಷಪಾತಿಗಳಾಗಿರಬೇಕು. ಸಮರ ವಿರಾಮ ರೇಖೆಯಲ್ಲಿ ಯಾವ ಕಡೆಯಿಂದಲೂ ಯಾವ ರೀತಿಯಲ್ಲಿಯೂ ಅನ್ಯಾಯ-ಅತ್ಯಾಚಾರಗಳಾಗದಂತೆ ಎಚ್ಚರಿಕೆ ವಹಿಸಬೇಕು. ಯಾವುದೇ ಕಡೆಯವರು ಈ ರೇಖೆಯನ್ನು ಮೀರಿದರೆ, ಈ ಸಂಗತಿಯ ವರದಿಯನ್ನು ಶೀಘ್ರವಾಗಿ ಪ್ರಕಟಿಸಬೇಕು. ನೈತಿಕ ಮಹತ್ವವಿರುವ ಸಂಗತಿಯಿದು ಎಂಬುದನ್ನು ಮರೆಯಬಾರದು. ಆದರೆ, ಕಾಶ್ಮೀರದ ಸಂಬಂಧದಲ್ಲಿ ಈ ತಂಡವು ಸಮರ್ಪಕವಾಗಿ ಕಾರ್ಯ ತತ್ಪರವಾಗಿದೆಯೆನ್ನುವಂತಿಲ್ಲ. ಇದಕ್ಕೆ ಪಾಕಿಸ್ತಾನಿಗಳು ರೇಖೆಯನ್ನು ದಾಟಿ ಭಾರತೀಯ ಹಳ್ಳಿಗಳನ್ನು ಲೂಟಿ ಮಾಡುವುದು; ಜನರಿಗೆ ಕೀಟಲೆ ಕೊಡುವುದು – ಮೊದಲಾದ ದುಷ್ಕೃತ್ಯಗಳೇ ನಿದರ್ಶನ. ಹೀಗಾದಲ್ಲಿ ದ್ವೇಷಮಯ ವಾತಾವರಣವು ಮತ್ತೂ ಹೆಚ್ಚುವುದರಿಂದ ನಿರೀಕ್ಷಕರ ಸಂಖ್ಯೆಯನ್ನು ಏರಿಸುವುದು ಅತ್ಯಗತ್ಯವಿದೆಯೆನ್ನಬಹುದು. ಪಾಕ್ ಅತ್ಯಾಚಾರಗಳ ಅನ್ಯಾಯವನ್ನು ಬಯಲಿಗೆಳೆಯುವುದರಲ್ಲಿ ಈ ಉಪಕ್ರಮ ಯಶಸ್ವಿಯಾದೀತು.

ಚಾಗ್ಲರ ಸಲಹೆ

ರಾಜ್ಯ ಶಿಕ್ಷಣ ಮಂತ್ರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಕೇಂದ್ರ ವಿದ್ಯಾ ಸಚಿವ ಎಂ. ಸಿ. ಚಾಗ್ಲ ಅವರು ಕೆಲವು ವಿಚಾರಗಳನ್ನು ಪ್ರಕಟಿಸಿದರು. ವಿಶ್ವವಿದ್ಯಾಲಯ ಸಹಾಯ ಧನ ಆಯೋಗ ಸ್ವರೂಪದ ಮಾಧ್ಯಮಿಕ ಶಿಕ್ಷಣ ಆಯೋಗದ ಸ್ಥಾಪನೆಯೂ ಅವುಗಳಲ್ಲಿ ಒಂದು. ಶಿಕ್ಷಣದಲ್ಲಿ ದೇಶೀಯ ಭಾಷೆಗಳೊಡನೆಯೇ ಇಂಗ್ಲಿಷ್, ಹಿಂದಿ ಮತ್ತು ವಿಜ್ಞಾನಗಳ ಬಗೆಗೆ ಹೆಚ್ಚಿನ ಆಸಕ್ತಿ ನೀಡಬೇಕು; ಉತ್ತಮ ಹಾಗೂ ಸಮರ್ಥ ಯುವಕರನ್ನು ಅಧ್ಯಾಪಕ ವೃತ್ತಿಗೆ ಆಕರ್ಷಿಸಲು ಶಿಕ್ಷಕರ ವೇತನ ಮತ್ತಿತರ ಸೌಲಭ್ಯಗಳನ್ನು ಹೆಚ್ಚಿಸಬೇಕು ಉನ್ನತ ಮಟ್ಟವನ್ನು ಶಿಕ್ಷಣದಲ್ಲಿ ತರುವುದಕ್ಕಾಗಿ, ಶಿಕ್ಷಣ ವಿಸ್ತಾರದತ್ತ ಆಸಕ್ತಿ ವಹಿಸುವುದನ್ನು ನಿಲ್ಲಿಸಬೇಕು ಎಂದು ಮುಂತಾಗಿಯೂ ಅವರು ಹೇಳಿದರು. ಒಂದಲ್ಲ ಹಲವು ವಿಚಾರಗಳಲ್ಲಿ ಅವರು ಮದ್ರಾಸದ ಮಾದರಿಯನ್ನು ಪ್ರಶಂಸಿಸಿದರು ಮತ್ತು ಉಳಿದ ರಾಜ್ಯಗಳೂ ಅದನ್ನೇ ಅನುಸರಿಸುವಂತೆ ಕೇಳಿಕೊಂಡರು. ಮದ್ರಾಸಿನಲ್ಲಿ ಶಿಕ್ಷಕರ ವೇತನ ಮತ್ತು ಇತರ ಸೌಲಭ್ಯಗಳು ಹೆಚ್ಚಿವೆ; ಅಲ್ಲಿನ ತರಗತಿಗಳು ಚಿಕ್ಕದಾಗಿವೆ; ಅಧ್ಯಾಪಕರ ನೇಮಕದಲ್ಲಿ ಉದಾರ ನೀತಿಯಿದೆ. ಆದುದರಿಂದಲೇ ಅಲ್ಲಿ ಉಚಿತ ಶಿಕ್ಷಣವು ಜ್ಯಾರಿಯಲ್ಲಿದ್ದರೂ ನಮ್ಮ ರಾಜ್ಯದಂತೆ ತರಗತಿಗಳು 'ಕಂಬಳದ ಗದ್ದೆ'ಯಾಗಿಲ್ಲ. ನಮ್ಮ ಸಂವಿಧಾನವು ೬ರಿಂದ ೧೪ ವರ್ಷ ಪ್ರಾಯದ ಮಕ್ಕಳಿಗೆ ಅನಿವಾರ್ಯ ಶಿಕ್ಷಣವನ್ನು ಕೊಡಲು ಉದ್ದೇಶಿಸಿರುವುದರಿಂದ ಈ ವಿಸ್ತರಣೆಯನ್ನು 'ಕೈಬಿಡುವುದ ಸಾಧ್ಯವಿಲ್ಲ. ಈಗಾಗಲೇ ಕೆಲವು ರಾಜ್ಯಗಳು ಉಚಿತ ಮಾಧ್ಯಮಿಕ ಶಿಕ್ಷಣವನ್ನೂ ವ್ಯವಹೃತಗೊಳಿಸಿವೆ. ಪ್ರಾಯಶಃ ಇನ್ನೂ ಹೆಚ್ಚಿನ ವಿನಾಯಿತಿಯಿತ್ತು ಗುಣಕಳೆದುಕೊಂಡು ಶಿಕ್ಷಣಾಲಯ ಗಳನ್ನು ದೇವರಿಲ್ಲದ ದೇವಾಲಯವನ್ನಾಗಿ ಮಾಡಬೇಡಿ ಎಂದು ಚಾಗ್ಲಾರ ಅಭಿಪ್ರಾಯವಿದ್ದರೆ, ಅದು ಸ್ವಾಗತಾರ್ಹವೇ.

ಜಗತ್ಪರ್ಯಟನ

ನೆಹರೂ-ಶೇಖ ಭೆಟ್ಟಿ

ಪ್ರಧಾನ ಮಂತ್ರಿ ನೆಹರುರವರನ್ನು ಜಮ್ಮು-ಕಾಶ್ಮೀರಗಳ ಮಾಜಿ ಪ್ರಧಾನಿ ಶೇಖ ಅಬ್ದುಲ್ಲಾರು ಕಂಡು ಇದೀಗ ತಾನೇ ಮಾತಿಗೆ ತೊಡಗಿದ್ದಾರೆ. ದೀರ್ಘ ಸಮಯಾನಂತರ ಸೇರುವ ಈ ಹಳೆಯ ಮಿತ್ರರು ಕಾಶ್ಮೀರದ ಪ್ರಶ್ನೆಗೆ ಪರಿಹಾರದ ಕುರಿತು ಚರ್ಚಿಸುವರು. ಉಭಯತರರಲ್ಲಿ ಮೂಲಭೂತ ಭಿನ್ನಾಭಿಪ್ರಾಯವಿದೆಯೆನ್ನುವುದು ಸರ್ವವಿದಿತ. ಕಾಶ್ಮೀರದ ಜನತೆಯು ಭಾರತದೊಂದಿಗಿನ ತಮ್ಮ ವಿಲೀನತೆಯನ್ನು ಈಗಾಗಲೇ ಸಾಧಿಸಿಕೊಂಡಿರುವುದರಿಂದ ಅದು ಭಾರತದ ಅವಿಭಾಜ್ಯ ಅಂಗವೇ ಆಗಿದೆಯೆಂಬುದು ನೆಹರು ನೀತಿಯಾದರೆ, ಇದನ್ನು ಶೇಖರು ಒಪ್ಪುವುದಿಲ್ಲ. ಕಾಶ್ಮೀರಿ ಜನರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಜನಮತ ಗಣನೆಯ ಅವಕಾಶವನ್ನು ಒದಗಿಸಿ ಕೊಡುವ ಏಕಮಾತ್ರ ಉದ್ದೇಶವಿಟ್ಟುಕೊಂಡು ತಾನು ದೆಹಲಿಗೆ ತೆರಳುವುದಾಗಿ ಹೇಳಿದ್ದಾರೆ ಶೇಖ ಅಬ್ದುಲ್ಲಾ. ಆದರೂ ಕಾಶ್ಮೀರದಲ್ಲಿರುವ ಅಲ್ಪಸಂಖ್ಯಾಕರಿಗೆ ಹಾನಿಯಾಗದಂತೆ ಭಾರತ-ಕಾಶ್ಮೀರ-ಪಾಕಿಸ್ತಾನಗಳಿಗೆ ಸಮ್ಮತವಾಗುವಂತೆ ನಿರ್ಧಾರ ಬೇಕೆನ್ನುತ್ತಾರೆ ಇವರು!

ಅಶೋಕ ಮೆಹತಾ

ಯೋಜನಾ ಆಯೋಗದ ಉಪಾಧ್ಯಕ್ಷ ಅಶೋಕ ಮೆಹತಾರು ಕೇಂದ್ರ ಸಚಿವ ಸಂಪುಟವನ್ನು ಸೇರುವರೆಂದೂ ಇದಕ್ಕೆ ಪೂರ್ವಭಾವಿಯಾಗಿ ಅವರು ಕಾಂಗ್ರೆಸ್ ಪಕ್ಷದ ಸದಸ್ಯರಾಗುವರೆಂದೂ ದಟ್ಟವಾದ ವಾರ್ತೆಗಳು ಹರಡಿದ್ದುವು. ಗುಲ್ಜಾರಿಲಾಲ ನಂದಾ ಅವರು ಗೃಹಖಾತೆಯನ್ನು ವಹಿಸಿಕೊಂಡ ಬಳಿಕ ಯೋಜನಾ ಮಂತ್ರಿಖಾತೆಯು ತುಸು ದುರ್ಬಲಗೊಂಡಿರುವದೂ ಯೋಜನಾ ಆಯೋಗ ಮತ್ತು ಸರಕಾರಗಳ ನಡುವೆ ತೀವ ಸಂಬಂಧದ ಅವಶ್ಯಕತೆಯಿರಬೇಕಾದುದೂ ಈ ವಾರ್ತೆಗಳಿಗೆ ಅನ್ನ ಒದಗಿಸಿತ್ತು. ಆದರೆ, ಈಗ ತಿಳಿದು ಬಂದ ವರದಿಗಳಂತೆ ಮೆಹತಾರನ್ನು ಸಚಿವರನ್ನಾಗಿ ನೇಮಿಸುವ ವಿಚಾರದಲ್ಲಿ ಹಿರಿಯ ಮಂತ್ರಿಗಳ ಭಿನ್ನಾಭಿಪ್ರಾಯ ತಳೆದಿದ್ದಾರೆ. ಹಾಗಾಗಿ ಮೆಹತಾ ತನ್ನ ಈಗಿನ ಹುದ್ದೆಯಲ್ಲಿ ಮಾತ್ರವೇ ಮುಂದುವರಿಯುವರು. ಪ್ರಧಾನಿ ನೆಹರೂರವರೂ ಇದಕ್ಕೆ ಸೈಗುಟ್ಟಲೇ ಬೇಕಾಗುವುದು.

ಜನತಾ ಉವಾಚ

ಸಿಂಡಿಕೇಟ್ ಬ್ಯಾಂಕಿನ ಉದ್ಘಾಟನಾ ಸಮಾರಂಭದಂದು ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರು ಮಾಡಿದ ಭಾಷಣದ ಸಾರಾಂಶವನ್ನು ಓದಿ ತುಂಬ ಸಂತೋಷವಾಯಿತು. ಮುಖ್ಯವಾಗಿ ಅವರು ವಿದೇಶಗಳಲ್ಲಿ ಅಧ್ಯಯನ ಮಾಡುವ ಸುಮಾರು ೨೦೦ ವಿದ್ಯಾರ್ಥಿಗಳಿಗೆ ಸಾಲರೂಪದ ಸಹಾಯವನ್ನು ಸಿಂಡಿಕೇಟು ನೀಡಿದೆಯೆಂದೂ ಇದೇ ರೀತಿ ನಮ್ಮ ದೇಶದ ೨೦ ಅಗ್ರಗಣ್ಯ ಬ್ಯಾಂಕುಗಳು ಮಾಡಿದ್ದರೆ ೨೦೦೦ ಜನ ವಿದೇಶ ಶಿಕ್ಷಣವನ್ನು ಪಡೆದು ದೇಶದ ಸಂಪನ್ಮೂಲ ಬೆಳೆಯುತಿತ್ತು ಎಂಬ ಮಾತು ಸತ್ಯ. ಸಿಂಡಿಕೇಟಿನ ಮಾದರಿಯನ್ನು ಉಳಿದ ದೊಡ್ಡ ಬ್ಯಾಂಕುಗಳೂ ಅನುಸರಿಸಿದರೆ, ದೇಶದ ಕಲ್ಯಾಣ ಸಾಧ್ಯ. ರಾಷ್ಟ್ರೀಯ ದೃಷ್ಟಿಕೋಣದಲ್ಲಿ ಇದೂ ಒಂದು. ಆದುದರಿಂದ ನಮ್ಮ ದೇಶದ ಇತರ ಹಿರಿಯ ಬ್ಯಾಂಕುಗಳು ಈ ದಾರಿಯಲ್ಲಿ ಮುಂದೆ ಬರುವುದು ಅಗತ್ಯ.

ಬೈಲೂರು, —ರಾಮಕೃಷ್ಣ.

ಪರಿಷ್ಕೃತ ಸೆಕೆಂಡರಿ ಶಿಕ್ಷಣದ ಪಾಠಪಟ್ಟಿಯಲ್ಲಿರುವ ಐಚ್ಛಿಕ ವಿಷಯಗಳನ್ನು ಮುಂದಿನ ವರ್ಷದಿಂದ ಕಿತ್ತು ಹಾಕಲಾಗುವುದೆಂಬ ವದಂತಿಯಿತ್ತು. ಆದರೆ, ಈ ಸಂಬಂಧದಲ್ಲಿ ಇದುವರೆಗೆ ಯಾವ ನಿರ್ಣಯವೂ ಅವಂತೆ ತಿಳಿದು ಬಂದಿಲ್ಲ. ಪ್ರತಿ ವಿಷಯವನ್ನೂ ಹನ್ನೊಂದನೆಯ ತಾಸಿನಲ್ಲೇ ಎತ್ತಿಕೊಂಡು ಅವಸರದ ಆಜ್ಞೆ ವಿಧಿಸುವ ಪರಿಪಾಠವನ್ನು ನಮ್ಮ ಮೈಸೂರು ಸರಕಾರ ಬಿಟ್ಟುಕೊಟ್ಟು ಈ ವಿಷಯವನ್ನು ಬೇಗನೇ ಇತ್ಯರ್ಥಗೊಳಿಸುವುದೆಂದು ಹಾರೈಸಬಹುದೆ?

ಬೆಂಗ್ರೆ, —ಸದಾನಂದ.

ಜೀವನದ ಆವಶ್ಯಕ ವಸ್ತುಗಳ ದರಗಳು ದಿನದಿಂದ ದಿನಕ್ಕೆ ಏರುತ್ತಲೇ ಹೋಗಿರುವುದು ಈ ವರ್ಷದ ಒಂದು ವೈಶಿಷ್ಟ್ಯ. ಆಹಾರ ಧಾನ್ಯಗಳ ಧಾರಣೆಯು ಇಳಿಮುಖವಾಗಬೇಕಾಗಿದ್ದ ಈ ಕಾಲದಲ್ಲಿಯೇ ಬಹಳ ಏರಿಬಿಟ್ಟಿದೆ. ಬಹುಶಃ ಕಳೆದ ವರ್ಷದ ಮಳೆಯ ದಿನಗಳಲ್ಲಿಯೂ ಇರದಷ್ಟು ಧಾರಣೆ ಈಗ ಇದೆಯೆಂದು ತೋರುತ್ತದೆ. ಹಾಗಿರುವಾಗ, ಮುಂದಿನ ಮಳೆಗಾಲದ ಗತಿಯೇನೆಂದು ಜನ ಸಾಮಾನ್ಯರು ಈಗಾಗಲೇ ಚಿಂತಿಸುವಂತಾಗಿದೆ. ಜೀವನೋಪಯೋಗಿ ಪದಾರ್ಥಗಳ ಬೆಲೆ ನಿಯಂತ್ರಣದ ಆಜ್ಞೆ ಮಾತ್ರ ಹೊರಡಿಸಿ ಪ್ರಯೋಜನವಿಲ್ಲ; ನಿಯಂತ್ರಿತ ಬೆಲೆಯಲ್ಲಿ ಅವು ವಿಪುಲವಾಗಿ ದೊರೆಯುವಂತೆ ನೋಡಿಕೊಳ್ಳಬೇಕಾದುದೂ ಸರಕಾರದ ಆದ್ಯ ಕರ್ತವ್ಯ.

ಕರ್ಕಳ, ಸತೀಶ ನಾಯಕ್.

ಅಲ್ಲಲ್ಲಿಯ ಸುದ್ದಿಸಾರ

ಎಲ್. ಐ. ಸಿ. ಯ ಹೊಸ ವ್ಯವಹಾರದ ಫಲಿತಾಂಶ— ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಮಾರ್ಚ್ 31ರಂದು ಅದರ ಆರ್ಥಿಕ ವರ್ಷ 1963—64ರ ವ್ಯವಹಾರವನ್ನು ಮುಗಿಸಿರುತ್ತದೆ. ಕಾರ್ಪೊರೇಷನ್‌ಗೆ ರೂ 757 82 ಕೋಟಿಗಳ ಮೌಲ್ಯದ 17,51,218 ಪ್ರಪೋಸಲ್‌ಗಳು ಬಂದಿತ್ತು. ಇದರಲ್ಲಿ ಮತ್ತು ಕಳೆದ ಲೆಕ್ಕಾಚಾರದ ಅವಧಿಯಲ್ಲಿ ಬಾಕಿ ಇದ್ದ ಪ್ರಪೋಸಲ್‌ಗಳಲ್ಲಿ ರೂ. 702.58 ಕೋಟಿಗಳ ಮೌಲ್ಯದ 16,46,320 ಪ್ರಪೋಸಲ್‌ಗಳು ಹೊಸ ವ್ಯವಹಾರದ ಪಾಲಿಸಿಗಳಾಗಿ ಪರಿಣಮಿಸಿರುತ್ತವೆ.

ಕಳೆದ ಲೆಕ್ಕಾಚಾರದ ಅವಧಿ 15 ಮಾಸಗಳಿಗೆ ಆಗಿದ್ದುದರಿಂದ (ಅಂದರೆ 1-1-62ರಿಂದ 31-3-63ರ ವರೆಗೆ) ಆ ಬಾರಿಯ ಅಂಕೆಗಳಿಗೆ ಈಗಿನ ಅಂಕೆಗಳನ್ನು ಹೋಲಿಸಲಾಗುವುದಿಲ್ಲ. ಕಳೆದ 15 ಮಾಸಗಳ ಲೆಕ್ಕಾಚಾರದ ಅವಧಿಗೆ ರೂ 838 75 ಕೋಟಿಗಳ ಮೌಲ್ಯದ 19,42,062 ಪ್ರಪೋಸಲ್‌ಗಳು ಕಾರ್ಪೊರೇಷನ್‌ಗೆ ಬಂದಿದ್ದು ಇವರಲ್ಲಿ ರೂ. 745 76 ಕೋಟಿಗಳ ಮೌಲ್ಯದ 17,67,544 ಪ್ರಪೋಸಲ್‌ಗಳು ಪಾಲಿಸಿಗಳಾಗಿ ಪರಿಣಮಿಸಿತ್ತು.

ಅದಕ್ಕಿಂತ ಮುಂದಿನ ಲೆಕ್ಕಾಚಾರದ ಅವಧಿಗೆ ಅಂದರೆ ಕೆಲೆಂಡರ್ ವರ್ಷ 1961ರಲ್ಲಿ ಕಾರ್ಪೊರೇಷನ್‌ಗೆ ರೂ. 702 93 ಕೋಟಿಗಳ ಮೌಲ್ಯದ 16,99,594 ಪ್ರಪೋಸಲ್‌ಗಳು ಬಂದಿದ್ದು ಇದರಲ್ಲಿ ರೂ 608 32 ಕೋಟಿಗಳ ಮೌಲ್ಯದ 14,69,664 ಪ್ರಪೋಸಲ್‌ಗಳು ಪಾಲಿಸಿಗಳಾಗಿ ಪರಿಣಮಿಸಿತ್ತು.

ಕಟೀಲಿನಲ್ಲಿ ಧರ್ಮ ಸಮ್ಮೇಳನ— ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವದ ಅಂಗವಾಗಿ ಕಳೆದ ತಾ. 17ರಿಂದ 19ರವರೆಗೆ, ಸ್ಥಳೀಯ ಶಾಲಾ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ, ಧರ್ಮ ಸಮ್ಮೇಳನ ಹಾಗೂ ಸಾಂಸ್ಕೃತಿಕ ಉತ್ಸವಗಳು ನೆರವೇರಿದವು

ತಾ. 17ರಂದು ಉದ್ಘಾಟನಾ ಸಮಾರಂಭವು ಜಿಲ್ಲಾಧಿಕಾರಿ ಶ್ರೀ ಕೆ. ಆರ್. ರಾಮಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು ದೇವಳದ ಆಡಳಿತೆ ಮುಕ್ತೇಸರ ಶ್ರೀ ಕೆ. ಶ್ರೀಧರ ಶೆಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಎ. ರಾಮಣ್ಣ ಭಟ್ಟರು ಅತಿಥಿ ಪರಿಚಯ ಮಾಡಿಕೊಟ್ಟ ಬಳಿಕ ಶ್ರೀ ಕೆ ರಘುನಾಥ ರಾವ್ ಬಾಳ "ಕರ್ಮಯೋಗ"ದ ಕುರಿತು ಭಾಷಣವಿತ್ತರು. ಕೊನೆಯಲ್ಲಿ ವಿವಿಧ ವಿನೋದಾವಳಿಗಳಾದವು.

ತಾ 18ರಂದು ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್—ಇವರ ಅಧ್ಯಕ್ಷತೆಯಲ್ಲಿ ಸಮಾರಂಭ ನೆರವೇರಿತು ಪೊಳಲಿ ಶ್ರೀ ಶಂಕರನಾರಾಯಣ ಶಾಸ್ತ್ರಿಗಳು 'ರಾಷ್ಟ್ರೀಯ ಪಂಥ'ದ ಕುರಿತು ಉಪನ್ಯಾಸ ಮಾಡಿದರು. ತಾ. 19ರಂದು, ಸಮಾರಂಭವು ಎಡ್ವಕೇಟ್ ಶ್ರೀ ಕೆ. ಬಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಮುಳಿಯ ಮಹಾಬಲ ಭಟ್ ಎಡ್ವಕೇಟ್, ಇವರು ಧಾರ್ಮಿಕ ಪ್ರಗತಿಯಲ್ಲಿ ಉತ್ಸವಗಳ ಸ್ಥಾನ ಎಂಬ ಕುರಿತೂ, ಶ್ರೀ ಕೆ. ರಘುನಾಥ್ ರಾವ್ ಬಾಳ ಇವರು ಕುಮಾರ ವ್ಯಾಸನ ಪಾತ್ರ ಸೃಷ್ಟಿ ಎಂಬ ಕುರಿತೂ ಭಾಷಣಗೈದರು.

ರೋಟರಿ ಸಭೆ— ಭೂಮಿಯಂತೆ ಇತರ ಗ್ರಹಗಳಲ್ಲೂ ಜೀವಿಗಳಿರುವ ಸಾಧ್ಯತೆ ಇದ್ದು, ಭವಿಷ್ಯತ್ತಿನಲ್ಲೊಂದು ದಿನ ಭೂಮಿ ಅವುಗಳೊಂದಿಗೆ ಸಂಪರ್ಕ ಹೊಂದಬಹುದೆಂದು ಕೇರಳ ಸೋಪ್ಸ್ ಎಂಡ್ ಆಯಿಲ್ಸ್ ಲಿಮಿಟೆಡ್ ಸಂಸ್ಥೆಯ ಜನರಲ್ ಮ್ಯಾನೇಜರ್ ಶ್ರೀ ಆಯಿ ಎಸ್. ಕಿಣಿ ತಾ. 21-4-64ರಂದು ಮಣಿಪಾಲದಲ್ಲಿ ತಿಳಿಸಿದರು.

ತಾವು ಬಹಳ ಆಸಕ್ತಿಯಿಂದ ಅಭ್ಯಾಸ ಮಾಡಿರುವ ಖಗೋಳ ಶಾಸ್ತ್ರದ ಬಗ್ಗೆ ಶ್ರೀ ಕಿಣಿಯವರು ಉಡುಪಿ ರೋಟರಿ ಕ್ಲಬ್ ಸಭೆಯಲ್ಲಿ ಮಾತನಾಡುತ್ತಾ, ಖಗೋಳ ಶಾಸ್ತ್ರವು ತತ್ವಶಾಸ್ತ್ರಕ್ಕೆ ಮುಂದುವರಿಯುತ್ತದೆಂದರು. ಪ್ರಪಂಚವು ಶೂನ್ಯದಿಂದ ರಚಿತವಾಗಿದ್ದು, ಶೂನ್ಯದಲ್ಲೇ ಪರ್ಯವಸಾನಗೊಳ್ಳುತ್ತದೆಂದು ಪ್ರಾಚೀನ ಭಾರತದ ಋಷಿಗಳು ವಾದಿಸಿರುವುದನ್ನು ಅಲ್ಬರ್ಟ್ ಐನ್‌ಸ್ಟೀನ್‌ರಂಥವರು ಮೊದಲು ನಂಬಲಿಲ್ಲವಾದರೂ ಅನಂತರ ಒಪ್ಪಿಕೊಂಡರೆಂದು ಹೇಳಿದರು. ಸೂರ್ಯನ ಶಕ್ತಿಯಲ್ಲಿ ಅಣುವಿನ ಅಂಶವಿದೆ. ಲಕ್ಷಗಟ್ಟಲೆ ನಕ್ಷತ್ರಗಳು ಹೊಳೆಯುತ್ತಿವೆ. ಗ್ರಹಗಳ ಸಂಖ್ಯೆ ಹಾಗೂ ಲಕ್ಷಣಗಳನ್ನು ಗಮನಿಸಿದರೆ ಮನುಷ್ಯ ಅಲ್ಪ ಇತಿಹಾಸವಿರುವ ಚಿಕ್ಕ ವ್ಯಕ್ತಿಯಾಗಿ ತೋರುತ್ತಾನೆ ಭೂಮಿಗೆ ಚಂದ್ರನ ಒಂದು ಭಾಗ ಮಾತ್ರ ಕಾಣಿಸುತ್ತದೆ. ನಮಗೆ ಕಾಣಿಸದೆ ಇರುವ ಭಾಗದಲ್ಲಿ ಏನಿದೆ ಎಂದು ನೋಡಲು ಖಗೋಳ ಯಾತ್ರಿಕರು ಪ್ರಯತ್ನಿಸುತ್ತಿದ್ದಾರೆ ಚಂದ್ರಗ್ರಹದ ಮೇಲೆ ಮನುಷ್ಯ ಇಳಿಯುವುದು ಸುಲಭವಾಗಲಾರದು ಎಂದು ನುಡಿದರು

ಸಭೆಯ ಅಧ್ಯಕ್ಷತೆ ವಹಿಸಿದ್ದ ಕ್ಲಬ್ಬಿನ ಅಧ್ಯಕ್ಷ ಶ್ರೀ ರಮೇಶ ಪೈಯವರು ಸದ್ಯದಲ್ಲೇ ಇಲ್ಲಿಂದ ತೆರಳಲಿರುವ ಕ್ಲಬ್ಬಿನ ಸದಸ್ಯ ಶ್ರೀ ಸುಂದರರಾವ್‌ರವರ ಸೇವೆಗಳನ್ನು ಸ್ಮರಿಸಿದರು ಶ್ರೀ ಪಿ ಶ್ರೀಪತಿ ಆಚಾರ್ಯ ಮತ್ತು ಡಾ| ಎ ಕೃಷ್ಣರಾವ್‌ರವರು ಪ್ರೊ| ಸುಂದರರಾವ್‌ರವರು ಸಲ್ಲಿಸಿರುವ ಸೇವೆಯನ್ನು ಶ್ಲಾಘಿಸಿದರು

ರೋಟರಿ ಜಿಲ್ಲಾ ಗವರ್ನರಾಗಿ ನಾಮಕರಣಗೊಂಡಿರುವ ಡಾ| ಟಿ ಎಂ. ಎ ಪೈ ರೋಟರಿಯು ಜಗತ್ತಿಗೆ ಸಲ್ಲಿಸುತ್ತಿರುವ ಸೇವೆಯನ್ನು ಕುರಿತು ಮಾತನಾಡಿದರು. ಕಾರ್ಯದರ್ಶಿ ಎ. ಜೆ. ಆಳ್ವ ವಂದನಾರ್ಪಣೆ ಮಾಡಿದರು.

ಯಕ್ಷಗಾನ— ಸುರತ್ಕಲ್ಲು ಕೇಂದ್ರದ ಬಾಳ ಶ್ರೀ ರಾಮಚಂದ್ರ ಪ್ರಾಥಮಿಕ ಶಾಲೆಯಲ್ಲಿ ಶ್ರೀರಾಮನವಮಿ ಉತ್ಸವದ ಅಂಗವಾಗಿ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳು ಸೇರಿದ ಯಕ್ಷಗಾನವು ಶ್ರೀ ಕೆ. ವೆಂಕಟರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ತಾ 21ರಲ್ಲು ನೆರವೇರಿತು. ಶ್ರೀ ಬಿ ರಘುನಾಥಾಚಾರ್ಯರು ಧನ್ಯವಾದ ಸಲ್ಲಿಸಿದರು

ಬೈರಂಜೆ— ಶ್ರೀ ಶಾರದಾ ಎಯ್ಡೆಡ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು, ತಾ. 16—4—64ರಲ್ಲು ಉಡುಪಿ ರೇಂಜ್ ಶಾಲೆಗಳ ಕಿರಿಯ ಪರೀಕ್ಷಾಧಿಕಾರಿ ಶ್ರೀ ಪಿ ಕೃಷ್ಣರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು ಸಭಿಕರಲ್ಲಿ ಶ್ರೀ ವೈ. ಭಾಸ್ಕರರಾಯರು ಭಾಷಣ ಮಾಡಿದರು ಬಳಿಕ ಮನರಂಜನಾ ಕಾರ್ಯಕ್ರಮಗಳಾದುವು.

ದ. ಕ ಮಂಗ್ಳೂರು ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ—

ಸ್ಮಾಲ್ ನಂಬ್ರ 22/64

ಎಸ್ ಆರ್ ಎಕ್ಕಾರ್ (ಶಿವರಾವ್ ಎಕ್ಕಾರ್)— ವಾದಿ

ಉಮ್ಮಾಜು ಹೆಂಗ್ಸು ಸಹಾ 5 ಜನರು — ಪ್ರತಿವಾದಿಗಳು.

5ನೇ ಪ್ರತಿವಾದಿ ತಂಗಿ ಹೆಂಗ್ಸು—ಉಮ್ಮಾಜು ಹೆಂಗ್ಸಿನ ಮಗಳು, ಮಂಗ್ಳೂರು ತಾಲ್ಕು ಬಡಗ ಎಕ್ಕಾರ್ ಗ್ರಾಮದಲ್ಲಿರುವವಳು— ಇವಳಿಗೆ.

ನೀವು ಕೂಡಾ ಪ್ರತಿವಾದಿಗಳು ವಾದಿಯ ಹಕ್ಕಿನ ಗದ್ದೆಗಳನ್ನು ವಗೈರೆ ಚಾಲಗೇಣಿ ಹಕ್ಕಿನಿಂದ ಅನುಭವಿಸುವ ಮೇರೆಗೆ ನಿಮ್ಮಿಂದ ಕೂಡಾ ಕಳೆದ 1957ನೇ ಇಸ್ವಿ ಲಾಗಾಯ್ತು ಬಾಕಿಯಾದ ಗೇಣಿ ಬಡ್ಡಿ ಸಮೇತ ರೂ. 154 1-16 ನ, ಪೈಯನ್ನು ವಸೂಲು ಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ. 15-6-1964ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುವುದರಿಂದ ಆ ದಿನ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗುವರೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜ್ರಿಯಲ್ಲಿ ಎಕ್ಸಪಾರ್ಟಿಯಾಗಿ ತೀರ್ಮಾನಿಸಲ್ಪಡುವುದೆಂದೂ ಈ ಮೂಲಕ ತಿಳಿಸಲಾಗುತ್ತದೆ.

(By order of the Court)

Shrinivasa Rao P,

B. A., B. L.,

Advocate for Plff.

Mangalore, 25-4-64.

ಗೋವಾ ಲೆ| ಗವರ್ನರ್ ಸಚ್‌ದೇವ್‌ರವರಿಗೆ ಕೆನರಾ ಬ್ಯಾಂಕಿನ ಸತ್ಕಾರ,

ಗೋವಾ, ದಾಮನ್ ಮತ್ತು ದಿಯುವಿನ ಲೆ. ಗವರ್ನರ್ ಶ್ರೀ ಎಮ್. ಆರ್. ಸಚ್‌ದೇವರ ಗೌರವಾರ್ಥವಾಗಿ ಕೆನರಾ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಎ ದಾಮೋದರ ಪೈಯವರು ಇದೇ ಎಪ್ರಿಲ್ 15ರಂದು ಬೆಂಗಳೂರಿನಲ್ಲಿರುವ ಬ್ಯಾಂಕಿನ ಆಡಳಿತ ಕಛೇರಿ ಕಟ್ಟಡದಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು ಈ ಸಮಾರಂಭಕ್ಕೆ ಶ್ರೀ ವಿ. ಪಿ ಮೆನೆನ್, ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ ಶ್ರೀ ಬಾಲಚಂದ್ರನ್ ಮೊದಲಾದ ಗಣ್ಯ ವ್ಯಕ್ತಿಗಳು ಆಗಮಿಸಿದ್ದರು.

ಶ್ರೀ ಎ. ದಾಮೋದರ ಪೈಯವರು ಸ್ವಾಗತ ಭಾಷಣದಲ್ಲಿ ಗೋವಾದ ಔದ್ಯೋಗಿಕ ಪ್ರಗತಿಗಾಗಿ ಕೆನರಾ ಬ್ಯಾಂಕು ಸಾಧ್ಯವಾದಷ್ಟು ನೆರವನ್ನು ನೀಡಲು ಸಿದ್ಧವೆಂದರು ಶ್ರೀ ಸಚ್‌ದೇವ್ ಅವರು ಕೆನರಾ ಬ್ಯಾಂಕು ಏರ್ಪಡಿಸಿದ್ದ ಗೌರವಾತಿಥ್ಯಕ್ಕೆ ಕೃತಜ್ಞತೆಯನ್ನು ಅರ್ಪಿಸಿದರು. ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷ ಭಾಷಣದಲ್ಲಿ ಕೆನರಾ ಬ್ಯಾಂಕಿನ ಚಟುವಟಿಕೆಗಳ ವಿಸ್ತರಣೆ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದರು. ಬ್ಯಾಂಕಿನ ಡೈರೆಕ್ಟರುಗಳಲ್ಲಿ ಒಬ್ಬರಾದ ಶ್ರೀ ಜಿನಾಭಾಯ್ ದೇವೀದಾಸ್ ಅವರು ವಂದನಾರ್ಪಣೆ ಮಾಡಿದರು.

ಕೆನರಾ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ. ದಾಮೋದರ ಪೈಗಳು ಗೋವಾದ ಲೆ| ಗವರ್ನರ್ ಶ್ರೀ ಸಚ್‌ದೇವ್ ಅವರ ಗೌರವಾರ್ಥ ಕೊಟ್ಟ ಉಪಾಹಾರ ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿದ ಗಣ್ಯ ಅತಿಥಿಗಳ ಒಂದು ನೋಟ

ಕೆನರಾ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ ದಾಮೋದರ ಪೈಗಳ ಸ್ವಾಗತ ಭಾಷಣಕ್ಕೆ ಶ್ರೀ ಸಚ್‌ದೇವ್ ಅವರು ಉತ್ತರ ಕೊಡುತ್ತಿರುವುದು.

ಎಡದಿಂದ ಬಲಕ್ಕೆ: ಶ್ರೀ ಜೀನಾಭಾಯಿ ದೇವಿದಾಸ್, ಡೈರೆಕ್ಟರ್, ಕೆನರಾ ಬ್ಯಾಂಕ್; ಶ್ರೀ ವಿ ಪಿ. ಮೆನೆನ್; ಶ್ರೀ ಸಚ್‌ದೇವ್ ಮತ್ತು ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರನ್ನು ಕಾಣಬಹುದು.

ಸಾಹಿತಿಗೆ ಬಿರುದು— ಸುರತ್ಕಲ್ಲು ವಿಜಯ ಸಾಹಿತ್ಯ ಮಾಲೆಯ ಸಂಪಾದಕರಾದ ಶ್ರೀ ವಿದ್ವಾನ್ ಕೆ ವೆಂಕಟರಾಯಾಚಾರ್ಯರಿಗೆ ಮದ್ರಾಸಿನ ಆರೋಗ್ಯಾಶ್ರಮದ ವತಿಯಿಂದ 'ಪಂಡಿತರತ್ನ' ಎಂಬ ಬಿರುದು ನೀಡಲಾಗಿದೆಯೆಂದು ತಿಳಿಯಬಂದಿದೆ.

ಶಾಲಾ ವರ್ಧಂತ್ಯುತ್ಸವ— ಕುಂತೂರು ತಾ. 25-4-64ರಂದು ಸ್ಥಳೀಯ ಬೋರ್ಡ್ ಹಾ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಶ್ರೀ ಕೆ. ವೇಣುಗೋಪಾಲ ನಾಯಕ್‌ರವರ ಅಧ್ಯಕ್ಷತೆಯಲ್ಲಿ ಜರಗಿತು ಬೆಳಿಗ್ಗೆ ಡಾ| ಯನ್. ಆರ್ ಮೋಹನ್‌ದಾಸ್‌ರವರು ಧ್ವಜಾರೋಹಣ ಗೈದರು ಸಂಜೆ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಎ ದಾಮೋದರ ಪ್ರಭುಗಳವರು ಸ್ವಾಗತ ಭಾಷಣ ಮಾಡಿದರು, ಅಧ್ಯಕ್ಷರ ಮೊದಲ ಮಾತಿನ ತರುವಾಯ ಮುಖ್ಯೋಪಾಧ್ಯಾಯ ಶ್ರೀ ಪಿ. ರಾಮಕೃಷ್ಣ ಆಚಾರ್ಯರವರು ವರದಿವಾಚನ ಗೈದರು. ನಂತರ ಅಧ್ಯಕ್ಷರು ಹಸ್ತ ಪತ್ರಿಕೆ "ಜ್ಞಾನ ಜ್ಯೋತಿ"ಯ ಉದ್ಘಾಟನೆಗೈದರು ಶ್ರೀನಿವಾಸ ಪ್ರಭುಗಳು ಹಸ್ತಪತ್ರಿಕೆಯ ವಾಚನ ಗೈದರು ಹಿತಚಿಂತಕರಲ್ಲಿ ಶ್ರೀ ಸಿಲ್ವೆಸ್ಟರ್ ಪಿಂಟೋ ಹಾಗೂ ಶ್ರೀ ಅಬ್ದುಲ್ ರಹಿಮಾನ್ ಅರಸಳಿಕೆ ಇವರು ಭಾಷಣ ಮಾಡಿದರು ಬಹುಮಾನ ವಿತರಣೆಯಾದ ನಂತರ ಅಧ್ಯಕ್ಷರು ಸಮಯೋಚಿತ ಭಾಷಣ ಗೈದರು. ನಂತರ "ಸತೀ ಸಾವಿತ್ರಿ" "ವಿಜಯ" ಅವರು ಶ 'ಪರಿಣಾಮ' "ಶಿವಾಜಿ ಪ್ರತಾಪ" ಹಾಗೂ "ಶ್ರೀನಿವಾಸ ಕಲ್ಯಾಣ"ಗಳೆಂಬ ವಿನೋದಾವಳಿಗಳು ಜರಗಿದುವು ಕೊನೆಯದಾಗಿ ಶ್ರೀ ಬಿ. ನಾರಾಯಣ ಭಟ್‌ರವರು ಧನ್ಯವಾದ ಸಮರ್ಪಿಸಿದರು.

ಕವಲು ದಾರಿ—ಕೆಂಪು ದೀಪ

ಕಟ್ಟುವೆವು ನಾವು ಹೊಸ ನಾಡೊಂದನು!

ಸುಖೀ ರಾಜ್ಯದ ಕಲ್ಪನೆ ನಮಗಿದೆ.

ಭಾವೀ ಜನಾಂಗದ ಸುಖಕ್ಕಾಗಿ—ಸೌಹಾರ್ದಮಯ ಬದುಕನ್ನು ಕಾಣುವದಕ್ಕಾಗಿ—ನಾವು ಶ್ರಮಿಸಿದ್ದೇವೆ. ಅಷ್ಟು ಮಾತ್ರವೇ ಅಲ್ಲ, ಇವತ್ತಿಗೆ ಶ್ರಮಿಸುತ್ತಲೂ ಇದ್ದೇವೆ.

ನಮ್ಮ ತರುಣರು ಈ ದಿಶೆಯಲ್ಲಿ ತುಂಬು ಆಶೆಯ ದಾರಿಯನ್ನು ನಿರೂಪಿಸಿಕೊಂಡು ಮುಂದುವರಿಯುತ್ತಿರುವುದು ಕಂಡು ಬರುತ್ತಿದ್ದು, ಇನ್ನೊಂದು ಇಪ್ಪತ್ತೈದು ವರ್ಷಕಾದರೆ ಭವ್ಯಭಾರತದ ಸೃಷ್ಟಿಯಾಗಿರುವುದನ್ನು ನಾವು ಕಾಣುವದರಲ್ಲಿ ಸಂಶಯವಿಲ್ಲ

ಹಳ್ಳಿಗಿಂತ ಪಟ್ಟಣವನ್ನು ಮೆಚ್ಚಿಕೊಳ್ಳುವ ನಮ್ಮ ತರುಣರು ಕಟ್ಟುವೆವು ನಾವು ಹೊಸನಾಡೊಂದನ್ನು ಎಂಬುವುದನ್ನು ಸಾರ್ಥಕಪಡಿಸುತಿದ್ದಾರೆ!

ಇದರಿಂದ ಸುಖೀರಾಜ್ಯದ ನಮ್ಮ ಕಲ್ಪನೆ, ಸುಂದರವಾದ ರೀತಿಯಲ್ಲಿ ನಿರ್ಮಾಣಗೊಳ್ಳುವ ಸಿದ್ಧತೆಗಳಿಂದ ಕೂಡಿಕೊಂಡು ಕಾರ್ಯರೂಪಕ್ಕಿಳಿಯುತ್ತಿದೆ ಎಂದು ತಿಳಿದುಬರುತ್ತದೆ.

ಉದಾಹರಣೆಯ ಅಗತ್ಯವೇನಾದರೂ ಇದ್ದರೆ, ಅದನ್ನೂ ಸಾದರಪಡಿಸಬಹುದು.

ಇತ್ತೀಚೆಗೆ ಇಂದೋರಿನಲ್ಲೇ ನಡೆದ ಘಟನೆಯೊಂದನ್ನು ಪರಾಂಬರಿಸುವುದೇ ಆದರೆ, ನಮಗೆ ಸರಿಯಾದ ಮಾಹಿತಿ ಸಿಗುವಂತಿದೆ.

ಅಲ್ಲಿನ ವಿದ್ಯಾರ್ಥಿಗಳಿಬ್ಬರು ಕೂಡಿಕೊಂಡು ಗುರುದಕ್ಷಿಣೆಯನ್ನು ಒಪ್ಪಿಸಿದ ರೀತಿಯು ಶ್ಲಾಘನೀಯವಾಗಿದೆ. ಮಾತ್ರವಲ್ಲ, ಮಾದರಿಗೆ ಕೂಡಾ ಉಪಯುಕ್ತವಾಗಿರುವಂತಿದೆ.

ಅಧ್ಯಾಪಕ ವೃತ್ತಿಯು ಒಂದು ಶಾಪವೆಂದು ತಿಳಿಯುವ ಕಾಲವಿದು. ಯಾವ ಜನ್ಮದಲ್ಲೂ ಇಂತಹ ವೃತ್ತಿಯೊಂದು ತಮ್ಮ ಪಾಲಿಗೆ ಬೇಡ ಎಂದು ಇಂದಿನ ಗುರುವೃಂದವೆಲ್ಲ ದೇವರಲ್ಲಿ ಬೇಡಿಕೊಳ್ಳುವುದೂ ಇದೆ.

ತಮ್ಮ ಮಕ್ಕಳ ಪಾಲಿಗಂತೂ ಇದು ಬೇಡವೇ ಬೇಡ ಎಂದು ಅನ್ನುವ ಗುರುಗಳೆಲ್ಲ ಇಂದೋರಿನಲ್ಲಿ ನಡೆದ ಘಟನೆಯನ್ನು ಕಣ್ಣಾರಳಿಸಿ ನೋಡಬೇಕು. ಇದರಿಂದ ಅವರಿಗೆ ತೃಪ್ತಿಯಾಗುತ್ತದೆ ಎಂಬುದರಲ್ಲಿ ಸಂದೇಹವೇನೂ ಇಲ್ಲ.

ಇವತ್ತಿಗೆ ನಮ್ಮ ಶಿಕ್ಷಣದ ಮಟ್ಟವು ಕೆಳಗಿಳಿಯುತ್ತ ಇದೆ ಎಂದು ಅಭಿಪ್ರಾಯಪಡಲಾಗುತ್ತಿದೆ. ಇದಕ್ಕೆ ನಮ್ಮ ಶಿಕ್ಷಕರೇ ಕಾರಣ ಎಂದು ಅಪವಾದದ ಹೊರೆ ಅಧ್ಯಾಪಕ ವೃಂದದ ಮೇಲಿದೆ.

ಈ ಮಾತನ್ನು ಹೆಚ್ಚು ಮಂದಿ ಒಪ್ಪಿಕೊಂಡಿದ್ದಾರೆ, ಒಪ್ಪಿಕೊಳ್ಳುತ್ತಲೂ ಇದ್ದಾರೆ.

ಶಿಕ್ಷಕರ ಹೊಣೆಗಾರಿಕೆ ಯಾವ ರೀತಿಯುಳ್ಳದ್ದಾದೆ ಎಂಬುದನ್ನು ಚರ್ಚಿಸುವ ಮೊದಲೊಮ್ಮೆ, ಇಂದೋರಿನ ಘಟನೆಯತ್ತ ಇಣುಕೋಣ!

ಪರೀಕ್ಷೆಯ ಹೊತ್ತು—

ರಾತ್ರಿ ಹಗಲು ಪಾರ ಉರು ಹೊಡೆದರೂ ಪರೀಕ್ಷೆಯಲ್ಲಿ ಪಾಸಾಗಿನೆಂಬ ಧೈರ್ಯ ಕೆಲವೊಮ್ಮೆ ಇರುವುದಿಲ್ಲ. ಅಂತೆಯೇ ಪರೀಕ್ಷೆಯ ದಿನದಂದು ತಮ್ಮ ಅದೃಷ್ಟವು ಹೆಚ್ಚು ಪ್ರಕಾಶಕ್ಕೆ ಬರುವಂತೆ ಸುಖೀ ರಾಜ್ಯದ ನಿರ್ಮಾಣಕ್ಕಾಗಿ ಸನ್ನದ್ಧರಾಗುವ ನಮ್ಮ ತರುಣರು, ಹೆಚ್ಚಿನ ಶ್ರಮ ತೆಗೆದುಕೊಳ್ಳುವದಿದೆ.

ಇಂದೋರಿನಲ್ಲಿ ಇಂತಹ ಪ್ರಯತ್ನ ನಡೆದುದೇನೂ ಹೆಚ್ಚಿನ ವಿಷಯವಲ್ಲ ಇಂತಹ ರೀತಿ ಎಲ್ಲೆಡೆಗಳಲ್ಲೂ ನಡೆಯುವಂತಹುದೇ ಆಗಿದೆ.

ಇಂದೋರಿನ ಒಂದು ಶಾಲೆಯ ಇಬ್ಬರು ವಿದ್ಯಾರ್ಥಿಗಳು ಇಂತಹ ಪ್ರಯತ್ನ ನಡೆಸಿಯೂ ಅಸಫಲರಾದರು.

ಅಸಫಲರಾದರೂ, ಅದಕ್ಕೆ ಕಾರಣರಾದ ಗುರುವನ್ನು, ಗುರುದಕ್ಷಿಣೆಯಿತ್ತು ಗೌರವಿಸದೆ ಬಿಡಲಿಲ್ಲ.

ಅಂತೆಯೇ ಈ ಸಂಗತಿ ಭಾರತಕ್ಕೆ ಮಾದರಿಯಾಗಬಹುದಾದ ವಿಷಯವೆನಿಸಿದೆ

ವರ್ಷವಿಡೀ ಕಲಿತಿರುವ ವಿಷಯವನ್ನು ಪರೀಕ್ಷಾ ಹಾಲಿನಲ್ಲಿ ಒಪ್ಪಿಸಲು ಕುಳಿತುಕೊಳ್ಳುವ ಹಲವು ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯವೆಲ್ಲ ಬರಿಯ ಶೂನ್ಯದಂತೆ ಕಾಣಿಸುವದಿದೆ. ಅಂತಹ ಹೊತ್ತಿನಲ್ಲಿ, ಅವರು ನಕಲು ತೆಗೆಯಲು ಪ್ರಯತ್ನಿಸದಿದ್ದರೆ ಅನ್ಯ ಉಪಾಯವಿರುವದಿಲ್ಲ

ಈ ಪ್ರಯತ್ನವನ್ನು ನಡೆಸುವ ವಿದ್ಯಾರ್ಥಿಗಳು ಯಶಗಳಿಸುವದು ಇದೆ. ಆದೆಲ್ಲಾ ಲಕ್ಕೀ ಛಾನ್ಸ್! ಲಕ್ಕೀ ಹೋಗಿ ಅವಲಕ್ಕೀಯಾಗುವದೂ ಇದೆ.

ಇಂದೋರಿನಲ್ಲೂ ಹೀಗೆಯೇ ನಡೆಯಿತು. ನಕಲು ತೆಗೆಯುವ ವಿದ್ಯಾರ್ಥಿಗಳಿಬ್ಬರನ್ನು ಅಲ್ಲಿನ ಗುರುಗಳೊಬ್ಬರು ಎಚ್ಚರಿಸಿದರು. ಅವರು ಹಾಗೆ ಮಾಡಬಾರದಿತ್ತು.

ಆದರೂ ತಪ್ಪಿ ಅಂತಹ ಕಾರ್ಯ ಅವರಿಂದ ನಡೆಯಿತು. ಅಂತೆಯೇ ಆ ಶಿಷ್ಯರುಗಳು ತಮ್ಮ ಭವಿಷ್ಯಕ್ಕೆ ಕಲ್ಲೆಸೆದ ಗುರುವನ್ನು ಗೌರವಿಸಲು ಸನ್ನದ್ಧರಾದರು.

ರಸ್ತೆಯಲ್ಲಿ ಗುರುವನ್ನು 'ಕಾಣಿಕೆ'ಯಿತ್ತು ಸತ್ಕರಿಸಿದರು. ಇದರಿಂದ ಪ್ರಾಣಾಪಾಯವೇನೂ ಆಗಿಲ್ಲವೆಂದು ನೋಡಿದವರೂ ಅನಂತರ ವಿಚಾರಿಸಿದ ಪೋಲೀಸರೂ ತಿಳಿಸಿದ್ದಾರೆ.

ಅಂತೂ ಇದು ಹೊಸತು ವಿಷಯವಲ್ಲವಾಗಿದ್ದರೂ ಮಾದರಿಗೆ ಇದನ್ನು ತೆಗೆದುಕೊಳ್ಳಬಹುದೆಂದು ಇಷ್ಟು ಸವಿಸ್ತಾರವಾಗಿ ವಿವರಿಸಿದೆ.

ಇಷ್ಟು ಹೇಳಿದ ಬಳಿಕ ಕಟ್ಟುವೆವು ನಾವು ಹೊಸ ನಾಡೊಂದನ್ನು ಎಂದು ಹೇಳಿದ ಕವಿ ಅಡಿಗರ ಹಾಡನ್ನು ಮತ್ತೆ ಹಾಡೋಣವೆಂದು ಇಚ್ಛೆಯಾಗುತ್ತದೆ!

ಇದಕ್ಕೆ ಕಾರಣರು ಯಾರು ಎಂದು ತಿಳಿಸುವುದು ಇಲ್ಲಿ ಅನಗತ್ಯ. ಇಂದಿನ ಶಿಕ್ಷಣಮಟ್ಟವು ಕೆಳಗಿಳಿಯುತ್ತಿದೆ ಎಂಬ ವಿಷಯಕ್ಕೆ ಕಾರಣರು ಯಾರುಎಂಬದನ್ನೂ ತಿಳಿಸುವುದು ಇಲ್ಲಿ ಅನಗತ್ಯ.

ನಮ್ಮ ವಿದ್ಯಾರ್ಥಿಗಳು ಎಷ್ಟರ ಹೊಣೆಗಾರಿಕೆಯಿಂದ ನಡೆಯುತ್ತಿರಬೇಕೋ ಆದರಂತೆ ನಡೆದುಕೊಳ್ಳುತ್ತಿಲ್ಲ ಎನಲೇ?

ಶಿಕ್ಷಕರು ತಮ್ಮ ಪದ್ಧತಿಗೆ ಹೊಸ ರೂಪ ಕೊಡುವುದು ವಿಹಿತವಾಗಿದೆ ಎನ್ನಲೇ?

ಪಾಲಕರು ಇವತ್ತಿಗೆ ಯಾವ ರೀತಿಯ ವ್ಯವಹಾರವನ್ನು ತಿಳಿದುಕೊಂಡು ನಡೆಯಬೇಕು ಎನ್ನಲೇ?

ಇಲ್ಲಿ ಅಧ್ಯಾಪಕರುಗಳ ಹೊಣಗಾರಿಕೆಯಲ್ಲಿ ಲೋಪವನ್ನು ಹುಡುಕುವದೂ ಚೆನ್ನಾಗಿರುವದಿಲ್ಲ.

ಪಾಲಕರೂ, ವಿದ್ಯಾರ್ಥಿಗಳೂ ಸೌಜನ್ಯದ ಸಾರವನ್ನು ಕಲಿತುಕೊಳ್ಳಬೇಕು. ಆದರೆ ಅಧ್ಯಾಪಕರುಗಳ ಕುರಿತು ಆಡಿಕೊಳ್ಳುವ ಪಾಲಕರು ತಮ್ಮ ಮಕ್ಕಳ ವ್ಯವಹಾರಕ್ಕೆ ಸಂತೃಪ್ತಿಯ ಮಂಗಳಗೀತೆ ಹಾಡುತ್ತಾರೆ! ಅಂತಹ ಪಾಲಕರಂತೂ ಧನ್ಯರೇ ಸರಿ!

ಶೋಚನೀಯ ರೀತಿಯಲ್ಲಿ ಇವತ್ತಿಗೆ ನಮ್ಮವಿದ್ಯಾದಾನವು ನಡೆಯುತ್ತಿದೆ. ಹೆತ್ತವರೂ ಹೆತ್ತ ಬದಲಿಗೆ ಕೆಸ್ರೆರಚಲು ಜನ್ಮತಾಳಿರುವ ಪುತ್ರ ರತ್ನಗಳೂ ಇದಕ್ಕೆ ಕಾರಣರು, ಎಂದು ಆಡಬಹುದು.

ಆದರೆ ಇಷ್ಟು ಆಡಿದ ಮಾತ್ರದಿಂದ ಅವರು ತಮ್ಮ ದಾರಿಯ ಒಳಿತು ಕೆಡುಕುಗಳನ್ನು ಅರಿತುಕೊಂಡು ಎಚ್ಚರಿಕೆ ವಹಿಸಬಹುದೆಂಬ ಭರವಸೆಯೇನೂ ನನಗಿಲ್ಲ!

ಆದರೂ ಅವರು ಅರಿತುಕೊಂಡರೆ.... ನಾವು ಹೊಸ ನಾಡೊಂದ, ಕಟ್ಟಿದರೂ ಕಟ್ಟಬಹುದಲ್ಲ?

—ಸುದಾಸ.

ನಮ್ಮ–ನಮ್ಮವರು

(೧ನೇ ಪುಟದಿಂದ)

ಇದ್ದೇವೆಯೆಂಬ ಭಾವನೆ ಮೂಡಿಸಿದ್ದಾರೆ.

ಪರಿಶ್ರಮದಿಂದಲೇ ಉದ್ದಿಮೆಯ ರಂಗದಲ್ಲಿ ಯಶಸ್ಸು ಪಡೆದವರು ಇವರು. ಪಿತ್ರಾರ್ಜಿತವಾಗಿ ಬಂದುದು ಇವರಿಗೆ ಭಗವದ್ಭಕ್ತಿ. ಇವರ ನರನಾಡಿಗಳಲ್ಲಿಯೂ ಅನೇಕನಾಗಿ ವ್ಯಾಪಿಸಿದೆ. ಮದ್ರಾಸದ ದಾಸಪ್ರಕಾಶದಲ್ಲಿ ವಿವಿಧ ಧಾರ್ಮಿಕ ಶುಭ ದಿನಗಳಲ್ಲಿ ಅವರು ವ್ಯವಸ್ಥಿತಗೊಳಿಸುತ್ತಿರುವ ವಿವಿಧ ಪೂಜೆ-ಪುರಸ್ಕಾರಗಳು ದಾನ ಧರ್ಮಗಳು ಇತರರಿಗೆ ಮಾದರಿಯೆನಿಸಿವೆ. ತನ್ನ ಗಳಿಕೆಯ ಒಂದು ಭಾಗವನ್ನು ಧರ್ಮಕಾರ್ಯಗಳಿಗೆಂದೇ ಮೀಸಲಿಟ್ಟ ಉದಾರಿಗಳು ಇವರು. ಉಡುಪಿಯ ಪುತ್ತಿಗೆ ಮಠಾಧೀಶರಾಗಿದ್ದ ವಿಷ್ಣುಪದಗತ ಶ್ರೀ ಸುಧೀಂದ್ರ ತೀರ್ಥರ ಶತಮಾನೋತ್ಸವದ ವೇಳೆಯಲ್ಲಿ ಕನಕಾಭಿಷೇಕ, ವಿದ್ವಜ್ಜನ ಮನ್ನಣೆ ಮೊದಲಾದ ಕಾರ್ಯಗಳಲ್ಲಿ ಆತ್ಮಸಂತೋಷದಿಂದ ಭಾಗವಹಿಸಿದ್ದರು.

ಶ್ರೀ ರಾಯರು ಉದಾರಿಗಳು, ಧರ್ಮಪರಾಯಣರು. ತಮ್ಮ ತಂದೆ ದಿ|| ಗೋವಿಂದದಾಸರಂತೆಯೇ ಪರಮಾತ್ಮ ಸೇವಕರು. ತಾವೂ ತಮ್ಮ ಮಕ್ಕಳೂ ಕೂಡಿ ಭಜನೆ ಮಾಡುತ್ತಾರೆ. ಅದರಲ್ಲಿಯೇ ಮೈಮರೆಯುತ್ತಾರೆ. ಅವರಲ್ಲಿರುವ ಈ ಧಾರ್ಮಿಕ ಪ್ರವೃತ್ತಿಯೇ ಅವರ ವ್ಯವಹಾರ ಯಶಸ್ಸಿನ ಗುಟ್ಟು. ಶ್ರೀ ಸೀತಾರಾಮರಾಯರ ಮಕ್ಕಳೆಲ್ಲರೂ ಸುಶಿಕ್ಷಿತರು. ಇವರ ಇಡಿಯ ಕುಟುಂಬವೇ ಧರ್ಮರಕ್ಷಣೆ ಮತ್ತು ಪರಮಾತ್ಮ ಸಾಧನೆಯಲ್ಲಿ ವ್ಯಸ್ತವಾಗಿದೆಯೆಂದರೆ ತಪ್ಪಲ್ಲ ಹೋಟೆಲ್ ದಾಸಪ್ರಕಾಶವು ನಾಡಿನ ಹಿರಿಯ ವ್ಯಕ್ತಿಗಳಿಂದ ಪ್ರಶಂಸಿತವಾದಂತೆಯೇ ಶ್ರೀ ಸೀತಾರಾಮರಾಯರೂ ತನ್ನ ಯಶಸ್ಸಿನ ಬಗ್ಗೆ ಅಭಿನಂದನಾರ್ಹರು ಅವರು ಆಯುರಾರೋಗ್ಯದೊಡನೆ ಬಹುಕಾಲ ಪ್ರಾಮಾಣಿಕ ಸೇವೆ ಮತ್ತು ಧರ್ಮಕಾರ್ಯಗಳಲ್ಲಿ ತೊಡಗಿ ಪರಿಪೂರ್ಣ ಯಶಸ್ಸುಗಳಿಸಲಿ.

ಗ್ರಾಮಾಂತರಗಳಲ್ಲಿ ಹಣ ಇಲ್ಲವೆನ್ನುವುದು ಸುಳ್ಳು

ನಮ್ಮ ಗ್ರಾಮಾಂತರದಲ್ಲಿ ಬ್ಯಾಂಕುಗಳೊಳಗೆ ಇನ್ನುವರೆಗೆ ಬಾರದ ಸಂಚಿತ ಹಣ ಎಷ್ಟೋ ಇದೆ ಎಂದು ನನ್ನ ಭಾವನೆ. ನಮ್ಮ ಒಂದು ಶಾಖೆಯಲ್ಲಿ ಒಬ್ಬರು ಸುಶಿಕ್ಷಿತ ಮಹನೀಯರು ಗೆದ್ದಲು ಹಿಡಿಸಿದ 10,000 ರೂಪಾಯಿ ನೋಟುಗಳನ್ನು ಬ್ಯಾಂಕಿಗೆ ತಂದು ನಮ್ಮ ನೆರವು ಬೇಡಿದರು. ಆದರೆ ಆ ಗೆದ್ದಲುಗಳು ನೋಟಿನ ಸಂಖ್ಯೆಯನ್ನೇ ತಿಂದಿದ್ದರಿಂದ ಅವರ ಯತ್ನ ವಿಫಲವಾಯಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಳ್ಳಿಯ ಒಂದು ಮಧ್ಯಮ ವರ್ಗದ ಮನೆಗೆ ಕನ್ನ ಹಾಕಿ 36,000 ರೂಪಾಯಿಯನ್ನು ದೋಚಿದರೆಂಬ ಸುದ್ದಿ ಕೇಳಿದೆ. ಆ ಶಾಖೆಯ ನಮ್ಮ ಮೆನೇಜರ ಆ ವ್ಯಕ್ತಿಯನ್ನು ಮತಾಂತರಿಸಲು ಅಸಮರ್ಥನಾದದ್ದು ನಮ್ಮ ಬ್ಯಾಂಕಿಂಗ್ ಕ್ಷೇತ್ರದ ಅಶಕ್ತಿ ಎಂದು ನಾನು ತಿಳಿಯುತ್ತೇನೆ. ಕರಿ ಮೆಣಸಿಗೆ ಒಳ್ಳೆಯ ಬೆಲೆಯಿದ್ದಾಗ ದರ 180ರಿಂದ 4,800ಕ್ಕೇರಿದಾಗ ಕಾಂಞಾಂಗಾಡಿನ ಅನೇಕ ಬೇಸಾಯಗಾರರು ಅರಮನೆಗಳನ್ನೇ ಕಟ್ಟಿದರು. ಈಗ ದರದ ಇಳಿತಾಯವಾದ ಮೇಲೆ ಆ ಮನೆಗಳ ಭದ್ರತೆಯಿಂದ 10,000 ರೂಪಾಯಿ ಸಾಲಪಡೆಯಲೂ ಅವರಿಗೆ ಅಸಾಧ್ಯವಾಗಿದೆ. ಇಂಥ ವಿಷಮ ಪರಿಸ್ಥಿತಿಯು ಬ್ಯಾಂಕಿಗ್ ಉದ್ದಿಮೆಯ ದೌರ್ಬಲ್ಯದ ಸಂಕೇತವೆಂದು ನಾನು ಭಾವಿಸುತ್ತೇನೆ. ಜನರಿಗೆ ಸರಿಯಾದ ಉಳಿತಾಯದ ಮಾರ್ಗದರ್ಶನಮಾಡುವುದು ನಮ್ಮ ಕರ್ತವ್ಯವಾಗಿತ್ತು-ಅದನ್ನು ನಾವು ಮಾಡದೆ ಜನರು ಈ ರೀತಿ ಕಷ್ಟಗಳಿಗೆ ಈಡಾಗುತ್ತಿದ್ದಾರೆ. ನಮ್ಮ ರಾಷ್ಟ್ರೀಯ ವರಮಾನವು(14,00) ಕೋಟಿ) ಒಂದು ಸಾರಿಬ್ಯಾಂಕಿಂಗಿನ ಮೂಲಕ ಹರಿದರೂ ಸಾಕು. ನಮ್ಮ ದಿಪಾಸಿಟು ಈಗಿನಕ್ಕಿಂತ ಮೂರು ನಾಲ್ಕು ಪಟ್ಟು ಬೆಳೆಯುವುದು ಸಾಧ್ಯವಿದೆ ನೂರು ರೂಪಾಯಿ ಸಂಬಳ ಬಂದರೂ ಅದನ್ನು ಮೊದಲು ಬ್ಯಾಂಕಿನಲ್ಲಿಟ್ಟು ಅನಂತರ ಚೆಕ್ ಮೂಲಕ ಖರ್ಚುಮಾಡುವುದರಿಂದ ರಾಷ್ಟ್ರೀಯವಾದ ಒಂದು ಕೆಲಸ ನಡೆಯಿತೆಂದು ನಾವು ತಿಳಿಯಬಹುದು

—ಶ್ರೀ ಟಿ. ಎ. ಪೈ.

(ತಾ 19-4-64ರ ಭಾಷಣದಿಂದ)

ಟರ್ಕಿ ದೇಶದಲ್ಲಿ

ಪುನರ್ಜನ್ಮ ಹೊಂದಿದ ಆಬಿದ್

ಕೆಲವು ತಿಂಗಳುಗಳಿಗೆ ಮೊದಲು ಭಾರತದ ಉತ್ತರ ಪ್ರದೇಶದಲ್ಲಿ ಸತ್ತ ಮಹಾಪುರುಷನೊಬ್ಬನು ಮತ್ತೆ ಜನ್ಮವನ್ನು ಪಡೆದು ಪೂರ್ವ ಜನ್ಮದ ಸ್ಮರಣೆಯಿಂದ ವರ್ತಿಸಿ ಎಲ್ಲರನ್ನೂ ಚಕಿತಗೊಳಿಸಿದ ಕಥೆ ಪ್ರಸಿದ್ಧವಾಗಿತ್ತು. ಇದೀಗ, ಇದೇ ಮಾದರಿಯ ವಾರ್ತೆಯೊಂದು ಟರ್ಕಿಯಿಂದ ಬಂದಿದೆ.

ಪ್ರತಿ ದೇಶದ ಪ್ರಾಚೀನ ಗ್ರಂಥಗಳಲ್ಲಿ ಆತ್ಮವು ಅಮರವೆಂದು ಹೇಳಿದೆ. ಪುನರ್ಜನ್ಮ ಸಿದ್ಧಾಂತವು ಹಲವು ಧರ್ಮಗಳ ಆಧಾರ ಸಿದ್ಧಾಂತವೆನಿಸಿದೆ. ಇದನ್ನು ಬಲಪಡಿಸುವ ಘಟನೆಗಳು ಆಕಸ್ಮಿಕ ಸ್ಮೃತಿ, ಸ್ವಪ್ನ ಮೊದಲಾದುವುಗಳ ಮೂಲಕ ಆಗಾಗ ನಡೆಯುತ್ತವೆ. ಆದರೆ, ಟರ್ಕಿಯ ಈ ಘಟನೆ ಆತ್ಮದ ಅಮರತ್ವ ಮತ್ತು ಪುನರ್ಜನ್ಮದ ವಿಚಾರವನ್ನು ವೈಜ್ಞಾನಿಕ ಒರೆಗಲ್ಲಿನಲ್ಲಿ ಒರೆಸು ನೋಡಲು ಬಹಳ ಸಹಾಯಕವೆನಿಸಿದೆ. ಇಸ್ತಾಂಬೂಲಿನ ಆತ್ಮವಿದ್ಯೆ ಮತ್ತು ವೈಜ್ಞಾನಿಕ ಸಂಶೋಧನಾ ಸಂಸತ್ತಿನ ಅಧ್ಯಕ್ಷರು ತಾನೇ ಈ ಘಟನೆಯನ್ನು ಪರಿಶೀಲಿಸಿ, "ಇದು ಆತ್ಮವು ದೇಹಾಂತರಗೊಂಡ ನಿಜ ಘಟನೆಯಲ್ಲದೆ ಒಂದು ಶರೀರದಲ್ಲಿ ಎರಡು ಆತ್ಮಗಳು ಹೊಕ್ಕದ್ದಲ್ಲ. ಇದರ ವರದಿಯನ್ನು ನಾವು ಆಧ್ಯಾತ್ಮ ವಿದ್ಯಾವೇತ್ತರ ಅಂತಾರಾಷ್ಟ್ರೀಯ ಪರಿಷತ್ತಿಗೆ ಕಳಿಸಿ ಕೊಡುತ್ತೇವೆ" ಅಂದಿದ್ದಾರೆ.

ನಾಲ್ಕು ವರ್ಷದ ಬಾಲಕ ಇಸ್ಮಾಯಿಲ್ ಈ ಘಟನೆಯ ನಾಯಕ. ಆರು ವರ್ಷಗಳಿಗೆ ಮೊದಲು ಆಗ್ನೇಯ ಟರ್ಕಿಯ ಅದನಾ ನಗರದಲ್ಲಿ ಕೊಲೆಯಾದ ಒಬ್ಬ ವ್ಯಕ್ತಿಯ ಆತ್ಮವು ಈ ಹುಡುಗನ ದೇಹದಲ್ಲಿ ನೆಲಸಿದೆಯೆಂದು ಅಲ್ಲಿನ ಮನೋವೈಜ್ಞಾನಿಕರ ಅಂಬೋಣ. ಹಲವು ತಿಂಗಳುಗಳಿಂದಲೂ ಮನೋವೈಜ್ಞಾನಿಕರೂ ಆಧ್ಯಾತ್ಮ ವಿದ್ಯಾವೇತ್ತರೂ ಅತಿ ತತ್ಪರತೆಯಿಂದ ಇದನ್ನು ಪರಿಶೀಲಿಸುತ್ತಿದ್ದಾರೆ.

ಕೊಲೆಗೊಂಡ ವ್ಯಕ್ತಿಯ ಹೆಸರು ಆಬಿದ್ ಸುಜುಲಯುಸ್. ಅವನಿಗೆ ಗುಲ್‌ಶರಾಂ, ಜೈಕಿ ಮತ್ತು ಹಿಕ್‌ಮತ್ ಎಂಬವರು ಮಕ್ಕಳು. ನಾಲ್ಕು ವರ್ಷದ ಇಸ್ಮಾಯಿಲ್ ಆಗಾಗ 'ತನ್ನ' ಈ ಮಕ್ಕಳನ್ನು ಕಾಣಲು ಆತುರಗೊಂಡು, ಹೆಸರೆತ್ತಿ ಕೂಗುತ್ತಾನೆ. ಸಾಮಾನ್ಯವಾಗಿ ಮಲಗಿದವನೇ ದಿಗ್ಗನೆದ್ದು "ಗುಲ್‌ಶರಾಂ, ನನ್ನ ಮಗಳೇ, ನೀನೆಲ್ಲಿದ್ದಿ?" ಎಂದು ಕೂಗುತ್ತಾನೆ.

ಇಸ್ಮಾಯಿಲ್‌ನ ತಂದೆ ಮಹಮೂದನೊಂದು ದಿನ ವಿಚಿತ್ರ ದೃಶ್ಯವೊಂದನ್ನು ಕಂಡನು. ಆತನ ಮನೆಯ ಮುಂದೊಬ್ಬ ಆಯಿಸ್‌ಕ್ರೀಮ್ ಮಾರುತ್ತ ಹೋಗುತ್ತಿದ್ದ. ಎಳೆಯ ಇಸ್ಮಾಯಿಲ್ ಆತನನ್ನು ಕೂಗಿ ಹೇಳಿದ—"ಮಹಮ್ಮದ, ನೀನೇನು ಮಾಡುತ್ತಿದ್ದಿಯ? ಮೊದಲು ಸಜ್ಜಿ ಮಾರುತ್ತಿದ್ದೆಯಲ್ಲ?" ಈ ಧ್ವನಿ ಕೇಳಿದ ಕ್ರೀಮ್‌ವಾಲಾ ವಿಸ್ಮಿತನಾದ. ಅವನ ಹೆಸರು ಮಹಮ್ಮದನೆಂದೇ ಇತ್ತು.

ಅವನು ಹುಡುಗನೊಡನೆ ಕೇಳಿದ: "ನಾನು ಸಜ್ಜಿ ಮಾರುತ್ತಿದ್ದೆನೆಂದು ನಿನಗೆ ಹೇಗೆ ಗೊತ್ತು?"

"ಏನು ಹೇಳುತ್ತೀಯ? ನಾನು ಆಬಿದ್ ಅಲ್ಲವೆ? ಮರೆತೇ ಬಿಟ್ಟಿಯೇನು ನನ್ನನ್ನು? ನೀನು ನನ್ನಿಂದಲೇ ಸಜ್ಜಿ ಒಯ್ಯುತ್ತಿದ್ದೆಯಲ್ಲಾ?" ಎಂದು ಮಾತು ಕೇಳಿ ಮಹಮ್ಮದ ದಂಗುಬಡೆದ, ಹೆದರಿದ. ಆದರೂ ಸುಧಾರಿಸಿಕೊಂಡು ಹೇಳಿದ: "ನನಗೆ ತಿಳಿದ ಮಟ್ಟಿಗೆ ಆಬಿದ ಕೊಲೆಯಾಗಿ ಆರು ವರ್ಷ ಕಳೆಯಿತು." ಅಷ್ಟರಲ್ಲಿ ಇಸ್ಮಾಯಿಲ್‌ನ ತಂದೆ ಬಂದು ಮಗನ ಕಥೆ ಹೇಳಿದ ಮೇಲೆ ಕ್ರೀಮ್‌ವಾಲಾನಿಗೆ ಧೈರ್ಯ ಬಂತು. ಅಂದಿನಿಂದ ಹುಡುಗ ಇಸ್ಮಾಯಿಲನಿಗೆ ನಿತ್ಯ ಐಸ್‌ಕ್ರೀಮ್ ಪುಕ್ಕಟೆ ದೊರೆಯತೊಡಗಿತು.

ಆಬಿದನು ಅದನಾ ನಗರದಲ್ಲಿ ನೆಲಸಿದ್ದನು. ಒಂದು ದಿನ ಅವನು ತನ್ನ ಹೆಂಡತಿ ಮತ್ತೆರಡು ಮಕ್ಕಳೊಡನೆ ಕೊಲೆಗೆ ತುತ್ತಾದನು. ಒಂದು ದಿನ ಇಸ್ಮಾಯಿಲನು ಹೇಳಿದನು: "ನನ್ನ ಮೂವರು ಮಕ್ಕಳು, ಗುಲ್‌ಶರಾಂ, ಜೈಕೀ ಮತ್ತು ಹಿಕ್‌ಮತ್ ಇಂದಿಗೂ ಜೀವಂತರಿದ್ದಾರೆ. ನನ್ನ ಮೊದಲ ಹೆಂಡತಿ ಹಾತಿಸ್ ಅವರನ್ನು ನೋಡಿಕೊಳ್ಳುತಿದ್ದಾಳೆ."

ಮತ್ತೊಂದು ದಿನ ಒಬ್ಬ ಪತ್ರಿಕಾ ಪ್ರತಿನಿಧಿಯು ಇಸ್ಮಾಯಿಲನನ್ನು ಅದನಾಕ್ಕೆ ಕರೆದೊಯ್ದು. ಆಬಿದನ ಮನೆ ಮುಟ್ಟುತ್ತ ಇಸ್ಮಾಯಿಲ್ ಉತ್ತೇಜಿತನಾದನು; ಕೂಗತೊಡಗಿದನು. ಗುಲ್‌ಶರಾಂ ಆತನನ್ನು ಸ್ವಾಗತಿಸಿದಳು. ಆಕೆಯನ್ನು ನೋಡುತ್ತಲೇ ಇಸ್ಮಾಯಿಲ್ ಸಹಜವಾಗಿ ಕೇಳಿದನು: "ಗುಲ್‌ಶರಾಂ, ನನ್ನ ಮಗಳೇ, ಹೇಗಿದ್ದೀಯಪ್ಪಾ?"

ಅಡಿಗೆ ಮಾಡುತಿದ್ದ ಒಬ್ಬಾಕೆ ಮುದುಕಿಯನ್ನು ಕಂಡು ಅವನು ಆಕೆಯ ಬಳಿಗೋಡಿದ. ಆಕೆಯ ಕೆನ್ನೆಗೆ ಮುತ್ತಿಟ್ಟು ಪತ್ರಿಕಾಕರ್ತನೊಡನೆ ಹೇಳಿದ: "ಈಕೆ ನನ್ನ ಮೊದಲ ಹೆಂಡತಿ ಹಾತಿಸ್."

"ನೀನು ಈಕೆಯನ್ನು ಬಿಟ್ಟು ಶಾಹಿನಾಳೊಡನೆ ಎರಡನೆಯ ಸಂಬಂಧ ಏಕೆ ಬೆಳಸಿದೆ?" ಎಂದು ಕೇಳಿದ ಆತ. ನಿಸ್ಸಂಕೋಚದಿಂದಲೇ ಇಸ್ಮಾಯಿಲ್ ಹೇಳಿದ: "ಶಾಹಿನಾ ಅತಿ ಸುಂದರಿಯಾಗಿದ್ದಳು. ಮತ್ತು ಈ ಹಾತಿಸಳಿಗೆ ಮಕ್ಕಳಾಗಲಿಲ್ಲ"

ಆಬಿದನ ಮನೆ ತನ್ನದೇ ಎಂಬಂತೆ ಇಸ್ಮಾಯಿಲ್ ತಿರುಗುತಿದ್ದ. ಯಾವ ವಸ್ತು ಎಲ್ಲಿ ಇದೆಯೆಂಬುದು ಅವನಿಗೆ ಗೊತ್ತಿತ್ತು. ಅವನು ಪತ್ರಿಕಾಕರ್ತನನ್ನು ಅಶ್ವಶಾಲೆಗೆ ಕರೆದೊಯ್ದ. ಅಲ್ಲಿ ಮುಟ್ಟುತ್ತಲೇ ಆತನ ಮುಖದ ಮಂದಹಾಸ ಮಾಯವಾಯಿತು. ೩೧-೧-೧೯೫೬ರಂದು ಈ ಅಶ್ವಶಾಲೆಯಲ್ಲಿ ತನ್ನ ಕೊಲೆಯಾಯಿತೆಂಬುದನ್ನು ವಿವರಿಸಿದ.

"ನಮ್ಮ ಸಂಸಾರ ಬಹಳ ಸುಖಿಯಾಗಿತ್ತು. ಪ್ರತಿಯೊಬ್ಬರಿಗೂ ನಾವು ಸಹಾಯ ಮಾಡುತಿದ್ದೆವು. ಒಂದು ದಿನ ರಜಮಾನ್ ಮತ್ತು ಮುಸ್ತಫಾ ಎಂಬ ಸೋದರರು ನನ್ನ ಬಳಿಗೆ ಬಿಲಾಲನೆಂಬವನನ್ನು ಕರೆತಂದರು; ಕೆಲಸಕೊಡಬೇಕೆಂದು ಬೇಡಿದರು. ತಾವು ಕಿಮಿಸ್ಕಗಜ್ಕ ನಗರದಿಂದ ಬಂದಿದ್ದೇವೆಯೆಂದರು.

"ನಾನು ಕಾಳು—ಬೇಳೆ ಬೆಳೆಸುವ ಕೆಲಸ ಮಾಡುತಿದ್ದೆ. ಅವರನ್ನು ಕೆಲಸಕ್ಕಿಟ್ಟುಕೊಂಡೆ. ಇಗನೆ ಜನವರಿಯ ದಿನ ರಜಮಾನನು ನನನ್ನು ಅಶ್ವಶಾಲೆಗೆ ಹೋಗುವಂತೆ ಹೇಳಿದ. ನನ್ನ ಕುದುರೆ ಸ್ವಲ್ಪ ಕುಂಟುತ್ತಿದೆಯೆಂದು ತಿಳಿಸಿದ. ನಾನು ಅಲ್ಲಿ ಹೋಗಿ ಬಗ್ಗಿ ಕುದುರೆಯ ಕಾಲನ್ನು ನೋಡುತ್ತಿದ್ದೆ.

"ನನ್ನ ತಲೆಯ ಮೇಲೆ ಬಲವಾದ ಏಟು ಬಿತ್ತು. ರಜಮಾನನು ಕಬ್ಬಿಣದ ಗುಂಡಿನಿಂದ ಹೊಡೆದನು."

ಈ ಕೊಲೆಯ ಕಥೆ ಹೇಳುತಿದ್ದಂತೆ ಇಸ್ಮಾಯಿಲ್ ಕೈ-ಮುಖಗಳಿಂದ ಅಭಿನಯವನ್ನೂ ಮಾಡುತಿದ್ದ; ಅವನ ಹಣೆಯಲ್ಲಿ ಬೆವರು ಬೆವರಿತು. ಘಟನೆಯನ್ನು ನೆನಪಿಸುವಲ್ಲ ಅವನಿಗೆ ಕಠಿಣತೆ ಕಂಡುಬಂತು. ಅನಂತರ ಅವನು ತನ್ನ ಪರಿವಾರವನ್ನು ಆಬಿದನ ಸಮಾಧಿಯ ಬಳಿ ಕರೆದೊಯ್ದು ಹೇಳಿದ: "ನನ್ನನ್ನು ಇಲ್ಲಿ ದಫನಗೊಳಿಸಿದ್ದರು."

ಇಸ್ಮಾಯಿಲನು ಆಬಿದನ ಕೊಲೆಯನ್ನು ವರ್ಣಿಸಿದ ರೀತಿಯು ಪೋಲೀಸರು ಆ ಕೊಲೆಯ ಮೇಲೆ ನೀಡಿದ ವರದಿಯನ್ನೇ ಸಂಪೂರ್ಣ ಹೋಲುತಿತ್ತು.

ಇಸ್ಮಾಯಿಲನನ್ನು ಈ ಹೆಸರಿನಿಂದ ಕರೆದಾಗ" ನನ್ನ ಹೆಸರು ಆಬಿದ್" ಎನ್ನುತಿದ್ದನು. ಈತನು ಹದಿನೆಂಟು ತಿಂಗಳಿನವನಾಗಿದ್ದಾಗ, ಮಾತಾಡುತಿದ್ದನು. ಆದರೆ, ಎರಡೂವರೆ ವರ್ಷದವನಾದ ಮೇಲೆ ತಾನು ಆಬಿದನಂತೆ ವ್ಯವಹರಿಸ ತೊಡಗಿದನು. ಹುಡುಗನ ಈ ವಿಚಿತ್ರ ನಡತೆಯನ್ನು ಕಂಡ ತಂದೆ ಮೊದ ಮೊದಲು ಗದರಿಸಿದನು; ಬಾರಿಸಿದನು. ಹುಡುಗನು ವಿನೋದವಾಡುತಿದ್ದಾನೆ; ಅಥವಾ ಆತನ ಶರೀರದಲ್ಲಿ ಭೂತ ಹೊಕ್ಕದೆಯೆಂದು ಆತನ ಅಭಿಪ್ರಾಯವಿತ್ತು.

ಬಾಲಕ ಇಸ್ಮಾಯಿಲನು ಮೊದಮೊದಲಿಗೆ ತಂದೆಯ ಕ್ರೂರ ವ್ಯವಹಾರಗಳನ್ನು ಶಾಂತಿಯಿಂದ ಸಹಿಸಿದನು. ಮುಂದೆ ಕೂಗಿ ಹೇಳಿದನು—"ಕೆಲವು ವರ್ಷ ಮೊದಲು ನೀನು ನನ್ನ ತೋಟದಲ್ಲಿ ಕೆಲಸ ಮಾಡುತಿದ್ದೆ; ನನ್ನೊಡನೆ ರಾಕೀ (ತುರ್ಕಿಯ ತೀಕ್ಷ್ಣ ಶರಾಬು) ಕುಡಿಯುತಿದ್ದೆ. ಆದರೆ, ಈಗ ಮಾತ್ರ ಬಹಳ ಕೃತಜ್ಞನಿರುವೆ."

ತಂದೆ ಕಂಗಾಲಾದ. ಅವನು ಆಬಿದನ ತೋಟದಲ್ಲಿ ಬಹಳ ವರ್ಷಗಳವರೆಗೆ ಕೆಲಸ ಮಾಡಿದ್ದನು; ಆಬಿದನೊಡನೆ ಕೂತುಕೊಂಡು ಯಾವಾಗಲೂ ರಾಕಿಯನ್ನೂ ಕುಡಿಯುತ್ತಿದ್ದನು.

ನೆರೆಯ ಮಕ್ಕಳು ಇಸ್ಮಾಯಿಲನನ್ನು ಆಟಕ್ಕೆ ಕರೆದಾಗ ಅವನು ಉತ್ತರಿಸುತಿದ್ದನು— "ಮಕ್ಕಳೊಡನೆ ಆಡುವ ದಿನಗಳು ಎಂದೋ ಸಂದು ಹೋಗಿವೆ. ಓಡಿ ಹೋಗಿ ಇಲ್ಲಿಂದ........"

ಕುಂದಾಪುರ ಡಿ ಮು ಕೋರ್ಟಿನಲ್ಲಿ

O. P 20/64

ಪಣಿಯಮ್ಮ—ಅರ್ಜಿದಾರಳು
ರುಕ್ಮಿಣಿಅಮ್ಮ ಸಹ—ಎದ್ರಿರು

ಅರ್ಜಿದಾರಳ ಕಡೆಯಿಂದ ಈ ಮೂಲ್ಕ ಜಾಹೀರ ಮಾಡಿಕೊಳ್ಳುವುದೇನೆಂದ್ರೆ.

ಅರ್ಜಿದಾರಳು ಪಣಿಯಮ್ಮ ಪಟೇಲ್ M ಸುಬ್ಬರಾಯರ ವಿಧವೆ, ಕುಂದಾಪುರ ತಾಲ್ಲೂಕು ಮುರವಂತೆಗ್ರಾಮ

ಎದ್ರಿರು—

1. ರುಕ್ಮಿಣಿಅಮ್ಮ — M ಮಹಾಬಲ ಹೆಬ್ಬಾರರ ಹೆಂಡ್ತಿ.
2. ಜನಾರ್ಧನ ಹೆಬ್ಬಾರ
3. ಶೇಷಗಿರಿ ಹೆಬ್ಬಾರ
4. ಪದ್ಮನಾಭ ಹೆಬ್ಬಾರ
5. ಸಚ್ಚಿದಾನಂದ ಹೆಬ್ಬಾರ
6. ಮೈನರ್ ಭಾಸ್ಕರ
7. ಮೈನರ್ ರತ್ನಾಕರ
8. ಮೈನರ್ ಸುರೇಶ

(2 ರಿಂದ 8: M. ಮಹಾಬಲ ಹೆಬ್ಬಾರರ ಮಕ್ಕಳು. ಪೈಕಿ ನಂ 6, 7, 8 ನೇಯವರ ಗಾರ್ಡಿಯನ್ ತಾಯಿ ರುಕ್ಮಿಣಿ ಅಮ್ಮ.)

1, 3 ರಿಂದ 8 ನೇ ವರೇಗಿನವರು ಕುಂದಾಪುರ ಕಸಬಾ ಗ್ರಾಮ 2 ನೇ ಎದ್ರಿ C/o ಎರ್ ಇಂಡಿಯಾ ಇಂಟರ್ ನೇಶನಲ್ ಸೇಲ್ಸ ಡಿಪಾರ್ಟಮೆಂಟ್ ಸಾಂತಾ ಕ್ರೂಂಜ್ ಬೊಂಬೆ_29

ಅರ್ಜಿದಾರಳ ಗಂಡ ವ 1ನೇ ಎದ್ರಿ ತಂದೆ ಮತ್ತು ಮಿಕ್ಕ ಎದ್ರಿರ ಅಜ್ಜ ಪಟೇಲ್ M ಸುಬ್ಬರಾಯರು ಮೃತಪಟ್ಟಿರುವವರಿಂದಲವರು ಮೃತ ಪಡುವ ಮೊದಲೇ ಬರೆದಿಟ್ಟ ವೀಲು ಪ್ರಕಾರ ಅವರಿಗೆ ಹೊರಗಿನಿಂದ ಬರತಕ್ಕ ಹಣಗಳನ್ನು ವಸೂಲು ಮಾಡುವರೆ ತನಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕೆಂಬ ಅರ್ಜದಾರಳು ಕೊಟ್ಟ ಅರ್ಜಿಯು ತಾ.6-6-64ಕ್ಕೆ ತನ್ಕಿಗೆ ಇಟ್ಟದೆ. ಆ ಕುರಿತು ಅಕ್ಷೇಪವಿದ್ದ ಸದ್ರಿ ದಿವಸ ಹಗಲು 11ಗಂಟೆಗೆ ಸ್ವತಹ ವ ವಕೀಲರದ್ವಾರಾ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಗೈರುಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂಬ ಸಂಗ್ತಿ ಅರ್ಜಿದಾರಳ ಕಡೆಯಿಂದ ಈ ಮೂಲ್ಕ ತಿಳಿಯಪಡಿಸಿದೆ.

M. M. Hebbar,
Advocate for Petr.

Kundapur,
ತಾ. 18-4-64.

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಪ್ರವಾಸ ಕಥನ

ರಜತಪೀಠದಿಂದ ತಿರುಮಲೈಗೆ

(ಲೇಖಾಂಕ ೨)

ಬರೆದವರು: ಶ್ರೀ ಉ. ಲಕ್ಷ್ಮೀನಾರಾಯಣ ಕಿಣಿ, ಉಡುಪಿ.

೨—೨—'೬೪ನೇ ಭಾನುವಾರ ಎಲ್ಲರೂ ಬೇಗನೆ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿ, ಕಾಲ್ನಡೆಯಾಗಿ ಪಾಪನಾಶಿನಿಗೆ (ತೊರೆಸ್ನಾನಕ್ಕೆ) ತೆರಳಿದೆವು ನಡು ಹಾದಿಯಲ್ಲಿ ಒಂದು ಕಡೆ ವಿಶ್ರಾಂತಿ ಪಡೆಯುತ್ತಿರುವಾಗ, ಶ್ರೀ ಅಚ್ಯುತದಾಸರು ರಮ್ಯ ಸುಲಲಿತವಾಗ ಸರಳ ಶೈಲಿಯಲ್ಲಿ ಕೊಂಕಣಿ ಭಾಷೆಯಲ್ಲಿ ತಿರುಪತಿ ಮಹಾತ್ಮೆಯನ್ನು ವರ್ಣಿಸಿದರು. ಭಾವೋದ್ರೇಕವನ್ನುಂಟುಮಾಡುತ್ತಿರುವ ಅವರ ವರ್ಣನಾ ವೈಖರಿಯನ್ನಾಲಿಸುತ್ತಿರುವಾಗ ನಮ್ಮೆಲ್ಲರ ಕಣ್ಣುಗಳಿಂದ ಭಕ್ತಿಗಂಗೆಯು ಪ್ರವಹಿಸತೊಡಗಿತು. ಅವ್ಯಾಹತವಾಗಿ ಸುಮಾರು ಒಂದು ಘಂಟೆಯ ತನಕ. ತಿರುಪತಿ ಮಹಾತ್ಮೆಯು ಸಾಗಿತು. ಮತ್ತೆ ನಮ್ಮ ಪಯಣವನ್ನು ಹೊಸ ಹುರುಪಿನಿಂದ ಮುಂದುವರಿಸಿದೆವು.

ಸುಮಾರು ನಾಲ್ಕು ಮೈಲು ದೂರವಿರುವ ಪಾಪನಾಶಿನಿಯ ತನಕ; ಉನ್ನತವಾದ ಏರು ತಗ್ಗುಗಳಲ್ಲಿ ನಡೆದು ನಡೆದು, ನಮ್ಮ ಶರೀರವು ನಜ್ಜುಗುಜ್ಜಾಗಿತ್ತು. ಮಂಜುಗಡ್ಡೆಯಂತಿರುವ ತಂಪಾದ ನೀರಲ್ಲಿ ಸ್ನಾನ ಮಾಡಿ ನಾವೆಲ್ಲರೂ ನವಜೀವನವನ್ನೇ ಪಡೆದೆವು.

ಹಿಂತಿರುಗಿ ಬಿಡಾರಕ್ಕೆ ಬಂದಾಗ ನಮಗಾಗಿ ಬಿಸಿ ಬಿಸಿ ಊಟವು ಸಿದ್ಧವಾಗಿತ್ತು. ಚೆನ್ನಾಗಿ ಹಸಿದ ನಮಗೆ ಅದು ಮೃಷ್ಟಾನ್ನದ ರುಚಿಯನ್ನೇ ತಂದು ಕೊಟ್ಟಿತು. ಊಟವಾದ ನಂತರ ನಮ್ಮ ಶರೀರಕ್ಕೂ ಮನಸ್ಸಿಗೂ ತುಂಬ ಆಪ್ಯಾಯಮಾನವೆನಿಸಿತು. ಸಾಯಂ. ಸದ್ಗುರುವರ್ಯರಾದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಜಿಯವರು ಗರುಡೋತ್ಸವದ ಮೆರವಣಿಗೆಯಲ್ಲಿ ಅಗ್ರಸ್ಥಾನವನ್ನಲಂಕರಿಸಿದ್ದರು. ಭಜನೆ, ಗರ್ನಾಲು, ವಾದ್ಯ ಮತ್ತು ವೇದ ಘೋಷಗಳ ನಡುವೆ ಸ್ವಾಮೀಜಿಯವರು ಸ್ವಾಮೀ ವಿವೇಕಾನಂದರಂತೆ ಭವ್ಯವಾಗಿ ಕಂಗೊಳಿಸುತ್ತಿದ್ದರು. ಸ್ವಾಮೀಜಿಯವರ ದರ್ಶನ ಭಾಗ್ಯವನ್ನು ಪಡೆಯುವ ಸಲುವಾಗಿ ನಾ ಮುಂದೆ ತಾ ಮುಂದೆ ಎಂದು ಮುಂದೆ ನುಗ್ಗುವವರಿಂದ ಶಿಸ್ತು ಭಂಗವಾಗದೆ ನೋಡಿಕೊಳ್ಳುವುದರ ಸಲುವಾಗಿ ನಾವು ಕೆಲ ಯುವಕರು ಕೈ ಕೈ ಹಿಡಿದು ಸ್ವಾಮೀಜಿಯವರ ಸುತ್ತಲೂ ಭದ್ರವಾದ ಮಾನವ ಕೋಟೆಯನ್ನು ನಿರ್ಮಿಸಿಕೊಂಡೆವು. ಕೆಲ ಯುವಕರು ಉನ್ನತವಾದ ಸ್ಥಳಗಳಲ್ಲಿ ನಿಂತುಕೊಂಡು, ಮೆರವಣಿಗೆಯ ಛಾಯಾಚಿತ್ರವನ್ನು ತೆಗೆಯುತ್ತಿದ್ದರು. ಯು. ಕೆ. ವ್ಯಾಸರಾವ್‌ರವರು ಚಾಮರ ಸೇವೆ ಸಲ್ಲಿಸುತ್ತಿದ್ದರು. ಶಂಕರನಾರಾಯಣ ಕೊಡಂಚರು ಭಜನೆ ಮಾಡುತ್ತಿದ್ದರು. ಇವರಲ್ಲಿ ಹೈದರಾಬಾದಿನ ಹಿಂದಿನ ಮುಖ್ಯ ಮಂತ್ರಿಗಳಾದ ರಾಮಕೃಷ್ಣರಾವ್, ಅವರ ಪರಿವಾರದವರೂ, ಅವರ ಮಕ್ಕಳಾದ ಅದೋನಿಯ ಬಾಲದ ವಟೂವೂ ಭಾಗವಹಿಸಿದ್ದರು. ಹೀಗೆ ಸುಮಾರು ನಾಲ್ವತ್ತೈದು ನಿಮಿಷಗಳ ತನಕ ಮೆರವಣಿಗೆಯು ಸಾಗಿತು.

ಸಾಯಂ. ೭ರಿಂದ ೮-೩೦ರ ತನಕ ಗೌಡ ಸಾರಸ್ವತ ಸಮಾಜದವರಿಗೆ ಮಾತ್ರ ಶ್ರೀ ವೆಂಕಟರಮಣನ ಧರ್ಮದರ್ಶನಕ್ಕೆ ಏರ್ಪಾಡು ಮಾಡಲಾಗಿತ್ತು. ಮಂದಿರದ ಬಳಿ ಶಿಸ್ತು ಭಂಗವಾಗುವ ಪ್ರಮೇಯವು ಒದಗಿಬಂದಾಗ, ನಮ್ಮ ಕೆಲ ದಷ್ಟಪುಷ್ಟ ಯುವಕರು ಅತೀವ ಚಾಕಚಕ್ಯತೆಯಿಂದ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಸುಮಾರು ೨೦೦೦ಕ್ಕೆ ಮೇಲ್ಪಟ್ಟ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದವರು ಮಾತ್ರ—ಒಂದೇ ಸಮಯದಲ್ಲಿ ವೆಂಕಟರಮಣನ ದರ್ಶನ ಲಾಭವನ್ನು ಪಡೆದುದು (ತಿರುಪತಿ) ಕ್ಷೇತ್ರದ ಇತಿಹಾಸದಲ್ಲೇ ಇದು ಪ್ರಥಮ ಬಾರಿ ಆಗಿದೆ. ದೇವರ ದರ್ಶನ ಪಡೆದ ನಂತರ ಎಲ್ಲರೂ ಬಿಡಾರಗಳಿಗೆ ಹಿಂತಿರುಗಿದೆವು. ಅವರವರ ಬಿಡಾರಗಳಲ್ಲೇ ಊಟಕ್ಕೆ ಎಲೆ ಹಾಕಿದ್ದರು. ಊಟ ತೀರಿಸಿದ ಕೊಂಚ ಹೊತ್ತಿನಲ್ಲಿ ನಮ್ಮ ಬಿಡಾರಗಳ ಸಮೀಪವೇ ಇರುವ ಕಲ್ಯಾಣ ಮಂಟಪದಲ್ಲಿ ಸ್ವಾಮೀಜಿಯವರ ಪ್ರವಚನದ ಕಾರ್ಯಕ್ರಮವಿದ್ದಿತು—ನಾವು ವಿಶ್ರಾಂತಿ ಪಡೆಯುವಾಗ ರಾತ್ರಿ ೨ ಘಂಟೆ ಮೀರಿತ್ತು.

ಮರುದಿನ ಮುಂಜಾನೆ ನಾಲ್ಕು ಘಂಟೆಗೆ ಎಂದಿನಂತೆ ಸುಪ್ರಭಾತದ ಮಂಜುಳ ನಿನಾದವು ಮೈಕಿನ ಮೂಲಕ ಎಲ್ಲೆಡೆಗಳಲ್ಲೂ ಪಸರಿಸತೊಡಗಿತ್ತು. ನಮ್ಮಲ್ಲಿ ಕೆಲವರು ಆದಾಗಲೇ ಎದ್ದು, ಶೌಚಾದಿಗಳಿಂದ ನಿವೃತ್ತರಾಗಿ ಸ್ವಾಮಿ ಪುಷ್ಕರಿಣಿಯಲ್ಲಿ ಮಿಂದು, ಮಗುದೊಮ್ಮೆ ದೇವ ದರ್ಶನಕ್ಕೆ ಹೊರಟರು, ಪ್ರಾತಃ ೫-೩೦ಯಿಂದ ೭ರ ತನಕ ಧರ್ಮ ದರ್ಶನವಿದೆ. ಎಲ್ಲರೂ ಕಾಣಿಕೆಗಳನ್ನೊಪ್ಪಿಸಿ, ಪ್ರಸಾದ ಪಡೆದು, ತಮ ತಮಗೆ ಬೇಕಾದ ಸಾಮಗ್ರಿಗಳನ್ನು ಪೇಟೆಯಲ್ಲಿ ಖರೀದಿಸಿಕೊಂಡೆವು; ಮಂದಿರದಿಂದ ಸುಮಾರು ೬ ಫರ್ಲಾಂಗು ದೂರ ನಾರಾಯಣ ನಗರದಲ್ಲಿ ನಮ್ಮ ಸದ್ಗುರುವರ್ಯರ ತಾತ್ಕಾಲಿಕ ಮಠವಿದೆ. ಅದರ ಸಮೀಪವೇ ಪ್ರಶಸ್ತವಾದ ಒಂದು ಉನ್ನತ ಸ್ಥಾನದಲ್ಲಿ ಕಾಂಕ್ರೀಟಿನ ಚಪ್ಪರವು ನಿರ್ಮಿಸಲ್ಪಟ್ಟಿದೆ. ಅಲ್ಲಿ ಕುಳಿತುಕೊಂಡು ದೂರದ ತನಕ ದೃಷ್ಟಿ ಹಾಯಿಸಿ ಪರಮಾತ್ಮನ ಸೃಷ್ಟಿ ಸೌಂದರ್ಯವನ್ನು ಮನಸಾರೆ ಸವಿಯಬಹುದು. ಸಾಯಂ. ೬ಕ್ಕೆ ಶ್ರೀ ಅಚ್ಯುತದಾಸರ ಹರಿ ಕೀರ್ತನೆಯನ್ನು ಅದೇ ಸ್ಥಳದಲ್ಲಿ ಏರ್ಪಡಿಸಲಾಗಿತ್ತು. ಕುಳಿಗಾಳಿಯು ಸೂಜಿಯಂತೆ ಶರೀರವನ್ನು ಕೊರೆಯುತ್ತಿತ್ತು. ಶರೀರವು ಚಳಿಯಿಂದ ನಡುಗುತ್ತಿತ್ತು. ಹಲ್ಲುಗಳು ಕಟಕಟಿಸುತ್ತಿದ್ದವು. ಪರಿಸ್ಥಿತಿಯನ್ನರಿತ ಹರಿದಾಸರು ಕೊಂಚ ಮೊದಲೇ ಕಥೆಯನ್ನು ಕೊನೆಗಾಣಿಸಿದರು. ನಮ್ಮಲ್ಲಿ ಕೆಲವರು ಸ್ವಾಮೀಜಿಯವರ ಬಳಿ ತೆರಳಿ, ಫಲಮಂತ್ರಾಕ್ಷತೆ, ಪ್ರಸಾದಗಳನ್ನು ಸ್ವೀಕರಿಸಿದೆವು. ಅಲ್ಲೇ ನಮಗೆ ಉಪಾಹಾರವಾಯಿತು. ಸ್ವಾಮೀಜಿಯವರ ಬಳಿ ತುಸು ಹೊತ್ತು ವಾರ್ತಾಲಾಪದಲ್ಲಿ ಕಳೆದೆವು. ಅಲ್ಲೇ ನನಗೆ ಸಂಸ್ಕೃತ ಮಹಾ ವಿದ್ವಾಂಸರಾಗಿರುವ ಕಾರ್ಕಳ ಪದ್ಮನಾಭ ಪುರಾಣಿಕರ ಪರಿಚಯವಾಯಿತು, ಬಿಚ್ಚು ಹೃದಯದ ಮಾತುಕತೆಯೂ ಜರಗಿತು. ಬಿಡಾರಕ್ಕೆ ತಲುಪುವಾಗ ರಾತ್ರಿ ೧ ಘಂಟೆ ಮೀರಿತ್ತು.

ಈ ಸಂದರ್ಭದಲ್ಲಿ ನೆನಪಿಗೆ ಬಂದ ಒಂದು ಮಾತು ಬರೆಯಲೇ ಬೇಕೆನಿಸುತ್ತದೆ. ಸ್ವಾಮೀಜಿಯವರು ಪೂಜೆ ಮಾಡುತ್ತಿರುವಾಗ ಜರಗಿದ ಒಂದು ಘಟನೆಯನ್ನು ಅಲ್ಲಿ ನೆರೆದಿದ್ದ ಜನರ ಬಾಯಿಂದ ನಾವು ಅತ್ಯಂತ ಕುತೂಹಲಾವಿಷ್ಟರಾಗಿ ಕೇಳಿದೆವು. ಸ್ವಾಮೀಜಿಯವರ ಮಠದ ಮುಂದುಗಡೆ ಕೊಂಚ ದೂರ ಯಾತ್ರಿಕರಿಗಾಗಿ ಕಟ್ಟಿಸಿದ ಹಲವಾರು ಬಿಡಾರಗಳಿವೆ. ಒಂದರಲ್ಲಿ ಬೊಂಬಾಯಿಯ ಒಂದು ಶ್ರೀಮಂತ ಹಿಂದೂ ಪರಿವಾರವು ಉಳಕೊಂಡಿತ್ತು. ಎರಡು ದಿನಗಳಿಂದಲೂ ಆ ಪರಿವಾರದ ಓರ್ವ ಮಹಿಳೆಯು ಸ್ವಾಮೀಜಿಯವರ ಪೂಜೆಯ ಸಮಯ ಬಂದು ಆರತಿ ಪ್ರಸಾದಗಳನ್ನು ಸ್ವೀಕರಿಸಿ ತನ್ನ ಬಿಡಾರಕ್ಕೆ ಹಿಂದಿರುಗುತಿದ್ದಳು ಆದಿನ ಅವರು ತಮ್ಮ ಊರಿಗೆ ಹಿಂತಿರುಗುವವರಿದ್ದರು. ಆ ಮಹಿಳೆಯು ತಾನು ಪೂಜೆ ನೋಡಿಬರುವ ತನಕ ತಡೆಯಬೇಕೆಂದು ವಿನಂತಿಸಿಕೊಂಡರೂ, ಆಕೆಯ ಪತಿಯು ಪೂರ್ಣ ನಿರಾಕರಿಸಿದರು; ಆಕೆಯು ತುಂಬ ಖಿನ್ನಳಾಗಿ ಕಾರಿನಲ್ಲಿ ಹೋಗಿ ಕುಳಿತುಕೊಂಡಳು. ಕಾರು ಸ್ಟಾರ್ಟಾಗಿ ಕೆಲವೇ ಹೆಜ್ಜೆ ಮುಂದೆ ಹೋಗಿ ನಿಂತುಬಿಟ್ಟಿತು. ಪತಿಯು ಆಕೆಯ ಖಿನ್ನ ಚಹರೆಯನ್ನು ಕಂಡು ಕಾರು ರಿಪೇರಿಯಾಗುವಷ್ಟರೊಳಗೆ ಪೂಜೆ ನೋಡಿಕೊಂಡು ಬರಲು ಅನುಮತಿಯಿತ್ತರು. ಆಕೆಯು ಮಠದ ಬಳಿ ಬಂದಾಗ ಪೂಜೆ ಮುಗಿದು ಪ್ರಸಾದ ಹಂಚುತಿದ್ದರು. ಪ್ರಸಾದ ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿ ಆಕೆಯು ಹಿಂತಿರುಗಿದಳೋ ಇಲ್ಲವೋ ಕಾರು ತಿರುಗಿ ಪಟಪಟನೆ ಸ್ಟಾರ್ಟ್ ಆಯಿತು. ಪತಿಯು ಆಶ್ಚರ್ಯ ದಿಙ್ಮೂಢರಾಗಿ ಕಾರಿಂದಿಳಿದು ಮರಳಿ ತನ್ನ ಪತ್ನಿಯನ್ನೊಡಗೂಡಿಕೊಂಡು ಸ್ವಾಮೀಜಿಯವರ ಬಳಿಗೆ ಬಂದು ಕಾಣಿಕೆಯೊಪ್ಪಿಸಿ ಪ್ರಸಾದ ಸ್ವೀಕರಿಸಿದರು ಅವರೇ ಈ ಘಟನೆಯನ್ನು ಗದ್ಗದ ಹೃದಯದಿಂದ ಅಲ್ಲಿ ನೆರೆದವರೊಡನೆ ನಿವೇದಿಸಿಕೊಂಡರಂತೆ. ಆದರೆ, ಸ್ವಾಮೀಜಿಯವರು ಆ ಕಡೆಗೆ ಗಮನವನ್ನೇ ಕೊಡಲಿಲ್ಲವಂತೆ.

(ಕ್ರಮಶಃ)

ದೇವರು ಎಲ್ಲಿದ್ದಾನೆ?

(೩ನೇ ಪುಟದಿಂದ)

ಸನನ್ನು ಕೇಳಿಕೊಂಡನು. ಕಾಜಿಯು ಅಲ್ಲಿಗೆಬಂದನು. ತನ್ನ ಸೇವಕನು ಅರಸನ ಸಿಂಹಾಸನದ ಮೇಲೆ ಕುಳಿತಿರುವುದ ನೋಡಿ ಅವನು ಆಶ್ಚರ್ಯ ಪಟ್ಟನು. ಪಂಡಿತನು ತಾನೂ ಅರಸನ ಸಿಂಹಾಸನದ ಮೇಲೆ ಕುಳಿತುಕೊಂಡು, ಕಾಜಿಯನ್ನು ತಾನು ಕುಳಿತುಕೊಳ್ಳಬೇಕಾದ ಸ್ಥಳದಲ್ಲಿ ಕುಳಿತುಕೊಳ್ಳುವುದಕ್ಕೂ, ಅರಸನು ಕಾಜಿಯು ಕುಳಿತುಕೊಳ್ಳುವಲ್ಲಿ ಕುಳಿತುಕೊಳ್ಳುವುದಕ್ಕೂ ಹೇಳಿದನು.

ಅವನು ಹೇಳಿದನು:—"ದೇವರು ಯಾವಾಗಲೂ ನಡೆಸುತ್ತಿರುವ ಕಾರ್ಯವು ಇದೇ. ಒಬ್ಬ ಪಂಡಿತನನ್ನು ಅರಸನನ್ನಾಗಿಯೂ, ಅರಸನನ್ನು ಕಾಜಿಯಾಗಿಯೂ, ಕಾಜಿಯನ್ನು ಪಂಡಿತನನ್ನಾಗಿಯೂ ಬದಲಾಯಿಸುವುದು. ಪ್ರಪಂಚದಲ್ಲಿ ನಿರಂತರವೂ ನಡೆಯುತ್ತಿರುವ ಸಂಗತಿಯೂ ಇದೇ. ಒಂದು ಕುಟುಂಬವು ಒಮ್ಮೆ ಉನ್ನತ ಸ್ಥಿತಿಗೆ ಹೋಗುತ್ತದೆ. ಆ ಮೇಲೆ ಅದು ಅದೃಶ್ಯವಾಗಿ ಇನ್ನೊಂದು ಅದರ ಸ್ಥಾನವನ್ನು ಪಡೆಯುತ್ತದೆ. ಒಂದು ಕಾಲದಲ್ಲಿ ಒಬ್ಬ ಮನುಷ್ಯನು ಅತ್ಯಂತ ಗೌರವವನ್ನು ಪಡೆಯುತ್ತಾನೆ. ಆ ಮೇಲೆ ಮತ್ತೊಬ್ಬನು ಅವನ ಸ್ಥಾನವನ್ನು ಹೊಂದುತ್ತಾನೆ. ಹೀಗೆ ದಿನದಿನಕ್ಕೂ ವರ್ಷವರ್ಷಕ್ಕೂ ನಡೆಯುತ್ತಲೇ ಇರುತ್ತದೆ. ಈ ಪ್ರಪಂಚದಲ್ಲಿ ಎಲ್ಲಾ ಕಾಲದಲ್ಲೂ ಇಂತಹ ಬದಲಾವಣೆಯು ನಡೆಯುತ್ತಾ ಇರುತ್ತದೆ."

ಅಂದಿನಿಂದ ಆ ಪಂಡಿತನನ್ನು ಅರಸನು ಕಾಜಿಯನ್ನಾಗಿ ಮಾಡಿದನು.

—ಅನು: ಕೆ. ನಾರಾಯಣ ಆಚಾರ್,
ಕಣ್ವತೀರ್ಥ

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.
ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಬಹುದು.
ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦.

ನಾಗಲೋಕದ ನಾಗಣ್ಣ

(೨ನೇ ಪುಟದಿಂದ)

ಹೊಟೆಲ್‌ನಲ್ಲಿ ಅಡಿಗೆ ಭಟ್ಟನಾಗಿಯೋ ಕೆಲಸಮಾಡಿ ಅದರ ಜತೆಗೆ ಸೈಡು ಬಿಜಿನೆಸ್ ಆಗಿ ಇಟ್ಟು ಕೊಂಡಿದ್ದೆ. ಕಲಿತ ಚಟ ಸುಟ್ಟರೂ ಹೋಗುತ್ತದೆಯೋ?"

"ಇನ್ನೊಂದು ಸಾರಿ ಹೇಳಿದರೆ ನಿನ್ನ ಹಲ್ಲು ಮುರಿದು ಬಿಡುತ್ತೇನೆ"

"ಇಂತಹ ಗಲಾಟೆಯಲ್ಲಿಯೇ ಎರಡು ಹಲ್ಲು ಮುರಿದು ಕೊಂಡಿರುವುದು ಸಾಲದೇ? ನಾನೇ ಬೇಕಾದರೆ ಇನ್ನೂ ನಾಲ್ಕು ಹಲ್ಲು ಮುರಿದು ಕೈಗೆ ಕೊಡುತ್ತೇನೆ ಬಾ. ನಮ್ಮಪ್ಪ ನಿನಗೆ ಸರಿಯಾಗಿ ಹೆಸರಿಟ್ಟದ್ದಾನೆ. ಹಲ್ಲಿಲ್ಲದ ಹಾವು ಹೆಡೆ ಎತ್ತಿ ಹಾಡಿದರೂ ನಮ್ಮನ್ನು ಏನೂ ಮಾಡಲಾರದು. ನಿನ್ನ ಒಣ ಜಂಬ ನನ್ನ ಹತ್ತಿರ ಬೇಡಾ ಕಣೋ ಅಣ್ಣಾ."

"ಲೋ ಈಗ ಸುಮ್ಮನೆ ಇರ್ರೋ. ಚಿಕ್ಕವರು ದೊಡ್ಡವರು ಅಂತಃ ತಾರತಮ್ಯ ಬೇಡವೇ? ಅಣ್ಣ ತಮ್ಮಂದಿರು ಅಂದ್ರೆ ಹೇಗಿರಬೇಕು? ರಾಮ ಲಕ್ಷ್ಮಣರಂತಿರಬೇಕು"

"ಇದು ಕಲಿಕಾಲವಪ್ಪಾ. ಹುಟ್ಟುತ್ತಾ ಅಣ್ಣ ತಮ್ಮಂದಿರು; ಬೆಳೆಯುತ್ತಾ ಅಲ್ಲ." ಈ ಮಾತನ್ನು ಆಡಬಾರದಾಗಿತ್ತು. ನಾಲಿಗೆ ತುದಿಗೆ ಮಾತು ಬಂತು ಆಡಿಯೂ ಬಿಟ್ಟೆ. ಅಪ್ಪನೂ ಏನು ತಿಳಿದುಕೊಂಡರೋ ಏನೋ? ತಂದೆಯವರು ಎಂದರೆ ನನಗೂ ಪೂಜ್ಯ ಭಾವನೆ ಇತ್ತು. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನ? ತಂದೆಯೇ ಬೇಜಾರಾಗಿ ಹೊರಗಡೆ ಹೋಗಿ ಬಂದರು.

"ರೂಂನಲ್ಲಿ ಯಾಕೋ ಲೈಟು ಹತ್ತುವುದಿಲ್ಲ?" ಎಂದು ನಾಗಣ್ಣನನ್ನು ವಿಚಾರಿಸಿದರು.

"ಬಲ್ಬು ಯಾರೋ ತೆಗೆದಿಟ್ಟಿದ್ದಾರೆ. ಸಂಜೆಯಿಂದ ಎಲ್ಲರನ್ನೂ ವಿಚಾರಿಸಿದೆ. ನನಗೊತ್ತಿಲ್ಲ ನನಗೊತ್ತಿಲ್ಲ ಅಂದ್ರು."

"ನೀನೇನಾದರೂ ತೆಗೆದಿಟ್ಟಿದ್ದೀಯೋ ಈಗ" ಅಪ್ಪ ನನ್ನನ್ನು ವಿಚಾರಿಸಿದರು.

"ನಾನೇ ತೆಗೆದಿಟ್ಟೆ, ದಿನಾ ನೂರು ಕ್ಯಾಂಡಲ್ ಬಲ್ಬು ಹಾಕಿಕೊಂಡು ಉರಿ ಹಚ್ಚಿದರೆ ಕರೆಂಟ್ ಚಾರ್ಜ ಜಾಸ್ತಿ ಬರಲ್ವೆ?"

"ನೀನು ಬೇಕಾದರೆ ರೂಮಿನಲ್ಲಿ ಹನ್ನೊಂದು ಗಂಟೆ ತನಕ ಉರಿ ಹಚ್ಚಬಹುದೋ?" ಸಿಟ್ಟಿನಿಂದಲೇ ಕೇಳಿದ.

"ಪರೀಕ್ಷೆ ಕಟ್ಟಿದ್ದರಿಂದ ಹಚ್ಚಿಕೊಳ್ಳಬೇಕಾಯಿತು"

"ನೀನು ಪರೀಕ್ಷೆಯಲ್ಲಿ ಪಾಸಾಗುವುದು ಅಷ್ಟರಲ್ಲಿಯೇ ಇದೆ. ಕಳ್ಳ ಹೊಕ್ಕ ಮನೆಗೆ ಎಣ್ಣೆ ಒಂದು ದಂಡ."

"ನಾನು ದಡ್ಡ. ನೀನು ಬುದ್ಧಿವಂತ. ನಿನ್ನ ಮಗನಂತೆ ಭರಣಿ ನಕ್ಷತ್ರದಲ್ಲಿ ಹುಟ್ಟಿದ್ದರೆ ಧರಣಿಯನ್ನೇ ಆಳುತ್ತಿದ್ದೆ. ನನ್ನ ಕರ್ಮಕ್ಕೆ ನೀನೇನು ಹೊಣೆಯೆ?"

"ಹೆಚ್ಚಿಗೆ ಮಾತನಾಡಬೇಡ ಮೊದಲು ಬಲ್ಬು ತಂದು ಕೊಡು" ಗದರಿಸಿದ.

"ಸಾಧ್ಯವಿಲ್ಲ" ನಿಧಾನದಿಂದಲೇ ಉತ್ತರಿಸಿದೆ.

"ಯಾಕೋ ಈ ಜಗಳ. ಬಲ್ಬು ತಂದು ಕೊಡಬಾರದೇನೋ ಈಗ" ಅಪ್ಪ ಅವನಂತೆ ಮಾತಾಡಿದರು.

"ನಿನಗೆ ಗೊತ್ತಾಗುವುದಿಲ್ಲ ಸುಮ್ಮನಿರಪ್ಪ. ಅವನ ರೂಂನಲ್ಲಿದ್ದ ಬಲ್ಬು ಬರ್ನ್ ಆಗುತ್ತಲೂ ಬೇರೆ ರೂಂನಿಂದ ಬಲ್ಬು ತಂದು ಹಾಕಿಕೊಂಡು ಬಿಡುತ್ತಾನೆ. ನೋಡುವುದಕ್ಕೆ ಬಸಪ್ಪ. ಒಳಗೆ ವಿಷಪ್ಪ. ಇವನೊಬ್ಬನಿಗೆ ನಾಲ್ಕೈದು ಬಲ್ಬು ಬರ್ನ್ ಮಾಡಿದ್ದಾನೆ. ಇನ್ನು ದುಡಿಯುತ್ತಾನೆ ಒಂದು ಬಲ್ಬು ತಂದು ಹಾಕಿಕೊಳ್ಳಲು ಆಗುವುದಿಲ್ಲವೇ? ಅವನ ದುಡಿದ ಹಣದಲ್ಲಿ ಮನೆಗೆ ಅಂತಾ ಎಂದು ನಯಾ ಪೈಸಾ ಖರ್ಚು ಮಾಡಿಲ್ಲ."

"ಅವನೇನೋ ಮಹಾ ದುಡಿದಿರೋದು?" ಅಪ್ಪ ಅವನ ಕಡೆ ಮಾತನಾಡತೊಡಗಿದರು.

"ಅಯ್ಯೋ ಶಿವ! ಅವನೇನು ದುಡಿದಿದ್ದಾನೆ? ಹೆಂಡ್ತಿ ಮಕ್ಕಳಿಗೆ ಬಟ್ಟೆಬರೆ ಕೊಡಿಸಲು ಹಣವಿರುತ್ತೆ. ರೂಪಾಯಿಗೆ ಆರು ಪೈಸಾ ಬಡ್ಡಿ ಕೊಡಲು ಹಣವಿರುತ್ತೆ. ತನ್ನ ಹೆಸರಿಗೆ ಆಸ್ತಿ ಮಾಡಿಕೊಳ್ಳಲು ಹಣವಿರುತ್ತೆ. ಆದರೆ ಒಂದು ಸಿಂಗಲ್ ಬಲ್ಬು ಹಾಕಿಕೊಳ್ಳಲು ಒಂದೂವರೆ ರೂಪಾಯಿ ಅವನ ಹತ್ತಿರವಿಲ್ಲವೋ?" ದಬಾಯಿಸಿಯೇ ಕೇಳಿದೆ.

"ಇಲ್ಲದೆಲ್ಲಾ ಬೊಗಳುತ್ತಿಯಲ್ಲೋ? ಆಸ್ತಿ ಎಲ್ಲಿ ಮಾಡಿಕೊಂಡಿದ್ದಾನೋ?" ಏನೂ ಅರಿಯದವನಂತೆ ಅಪ್ಪ ನನಗೆ ಪ್ರಶ್ನೆ ಹಾಕಿದ.

"ಹೊಲ ಮಾಡಿಕೊಂಡಿದ್ದಾನಂತೆ."

"ಓಹೋ! ಅದೋ ಹೊಲಕ್ಕೆ ನಾನೇ ಹಣ ಕೊಟ್ಟೆ." ಮಗನ ಮೇಲಿನ ಪ್ರೀತಿಯನ್ನು ತೋರಿಸಲು ಆ ಮಾತನ್ನು ದೇವರೇ ಆಡಿಸಿರಬೇಕು.

"ಈ ವಿಷಯ ನಾನೇ ಊಹಿಸಿದ್ದೆ. ಅದು ನಿಜವೂ ಆಯಿತು. ಇಷ್ಟು ದಿವಸ ದುಡಿದ ಮಕ್ಕಳು ಎಲ್ಲಿಗೋ ಹೋದರು, ನಿನ್ನೆ ಮೊನ್ನೆ ಬಂದವನಿಗೆ ಆಸ್ತಿ ಮಾಡಿದೆ. ಒಂದು ಕಣ್ಣಲ್ಲಿ ಬೆಣ್ಣೆ ಇನ್ನೊಂದು ಕಣ್ಣಲ್ಲಿ ಸುಣ್ಣ ಹಚ್ಚಬಾರದಪ್ಪ."

"ಹೆಚ್ಚಿಗೆ ಮಾತನಾಡಬೇಡ. ಮೊದಲು ಬಲ್ಬು ತಂದು ಕೊಡು ಇಲ್ಲದೆ ಇದ್ರೇ..."

"ಇಲ್ಲದೆ ಇದ್ರೆ ಏನು ಮಾಡುತ್ತೀಯೋ? ನಿನ್ನ ಪುಂಗಿ ನನ್ನ ಹತ್ತಿರ ನಡೆಯುವುದಿಲ್ಲ ಕಣೋ, ಹೆಂಗಸರಿಗೆ ಹೆದರಿಕೊಂಡು ಬಾಳ್ವೆ ಮಾಡುವವನಿಗೆ ನಾನು ಹೆದರುತ್ತೇನೆಯೇ? ನೀನು ಸುಮ್ಮನೆ ಬುಸುಗುಟ್ಟುವ ನಾಗರ ಹಾವು"

"ನಾಗರ ಹಾವಿನಲ್ಲಿ ವಿಷವಿದೆ ಎನ್ನುವುದನ್ನು ಮರೆಯ ಬೇಡ."

"ಹಾವಿನ ಬಾಯಲ್ಲಿ ಹಲ್ಲಿಲ್ಲ. ವಿಷವಿದ್ದು ಏನು ಪ್ರಯೋಜನ ನಿನ್ನಂತಹ ವಿಷಸರ್ಪಗಳಿಗೆ ದೊಣ್ಣೆಗಳಿಂದ ಮೋಕ್ಷವಾಗಬೇಕು."

"ನಿಮ್ಮಿಬ್ಬರ ಜಗಳ ಇನ್ನೂ ಮುಗೀಲಿಲ್ಲವೇನೋ? ಮೊದಲು ಸಪ್ಪೆ ಒಳಗೆ ಹಾಕ್ರೋ. ಗಾಡಿಯವನು ಎಷ್ಟು ಹೊತ್ತು ಕಾಯುತ್ತಾನೆ. ಕೆಲಸವಾದ ಮೇಲೆ ರಾತ್ರಿ ಮಲಗುವ ತನಕ ಜಗಳವಾಡುವಿರಂತೆ."

ಅಗಿನ ಕಲಹವು ನನ್ನ ಮನಸ್ಸಿನಿಂದ ದೂರವಾಗಲಿಲ್ಲ. ಕುಳಿತರೂ ನಿಂತರೂ ಮನಸ್ಸಿಗೆ ನೆಮ್ಮದಿ ಇಲ್ಲ. ರಾತ್ರಿ ಊಟವೂ ರುಚಿಸಲಿಲ್ಲ. ಹಾಸಿಗೆಯ ಮೇಲೆ ಮಲಗಿದ್ದ ಮೇಲೂ ಅದೇ ಚಿಂತೆ. ನಮ್ಮ ಮನೆಯ ಹಿಂದಿನ ಸ್ಥಿತಿ ನೆನೆಸಿದರೆ....... ಮಕ್ಕಳನ್ನು ತಾಯಿ ಸತ್ತ ಮೇಲೆ ತಂದೆ ಚಿಕ್ಕಪ್ಪ ಎಂಬ ಗಾದೆ ಮಾತು ಸುಳ್ಳಾಗಲಿಲ್ಲ. ನಾಗಲೋಕದ ನಾಗಣ್ಣ. ಇನ್ನೆರಡು ವರ್ಷ ಇದ್ದಾಗಲೇ ನೂರಾರು ರೂಪಾಯಿಗಳನ್ನು ತೆಗೆದುಕೊಂಡು ಕಾಲಿಗೆ ಬುದ್ಧಿ ಹೇಳಿದ್ದ. ಆಗ ಹೋದವನು ತಾಯಿ ಸಾಯುವ ವರ್ಷ ಮುಂಚೆ ಬಂದು ಇಲ್ಲ ಸಲ್ಲದ ಸುಳ್ಳಿನ ಕಂತೆಗಳನ್ನು ಹೇಳಿ ಮತ್ತೆ ಹೊರಟ. ಎಂದಿದ್ದರೂ ನಾಯಿ ಬಾಲ ಡೊಂಕಲ್ಲವೇ?

ತಾಯಿ ಸತ್ತ ಮೇಲೆ ನೆಲೆಯಾಗಿ ನಿಲ್ಲಲು ಬಂದ. ನಾಗಲೋಕದ ನಾಗಣ್ಣ ಮತ್ತೆ ಬಂದಾಗ ನನ್ನ ಕಣ್ಣಲ್ಲಿಯೂ ನೀರು ಬಂತು. ನನ್ನ ಪವಿತ್ರ ಮಾತೆಯ ಗರ್ಭದಲ್ಲಿ ಹುಟ್ಟಿ, ಮನೆತನಕ್ಕೇ ಕಳಂಕವನ್ನು ತಂದವನು ಬಂದರೆ ಸಂತೋಷವಾಗುತ್ತದೆಯೇ. ಎರಡನೆ ಬಾರಿ ಮನೆಗೆ ಬರುವಾಗ ನಾಗಲೋಕದ ನಾಗಣ್ಣ ಇಲಿಯಂತಿದ್ದ. ಗರ್ಭಿಣಿ ಸ್ತ್ರೀಯಂತೆ ರೂಮಿನಲ್ಲಿಯೇ ಕುಳಿತು ಗಣೇಶ ಬೀಡಿಗಳನ್ನು ಸೇದಿ ಕಾಲ ಕಳೆಯುತ್ತಿದ್ದ. ಬೀಡಿ ಸೇದುವುದರಲ್ಲಿ ತಂದೆಯನ್ನೇ ಮೀರಿಸುತ್ತಿದ್ದ. ಅವನನ್ನು ನೋಡಲು ಅನೇಕ ಜನರು ಬಂದರೂ ರೂಮಿನಿಂದ ಹೊರಗೆ ಬರುತ್ತಿರಲಿಲ್ಲ. ಅದಕ್ಕೂ ಒಂದು ಕಾರಣವಿತ್ತು. ಈ ಸಾರಿ ಮನೆಗೆ ಬಂದಾಗ ಬರಿ ಕೈಯಲ್ಲೇ ಬಂದಿದ್ದ. ರೈಲಿನಲ್ಲಿ ಬರುವಾಗ ಸಾಮಾನೆಲ್ಲಾ ಕಳೆದು ಹೋಯಿತು ಅಂತಾ ಸುಳ್ಳಿನ ಸರಪಳಿ ಹೆಣೆದು ಎಲ್ಲರ ಕಣ್ಣಿನಲ್ಲಿ ನೀರು ತರಿಸಿದ.

ಅವನು ಮನೆಗೆ ಬಂದದ್ದು ಅವನಿಗೇ ಲಾಭವಾಯಿತೆ ವಿನಃ ಮನೆಯವರಿಗೆ ಯಾರಿಗೂ ಏಳಿಗೆ ಆಗಲಿಲ್ಲ. ಬ್ರೋಕರ್ ಕೆಲಸ ಮಾಡಿದವನ ಕಾಲು ಸುಮ್ಮನೆ ಇರುತ್ತದೆಯೇ? ಹಸಿದ ನಾಯಿಯಂತೆ ಅಲೆದಾಡಿದ. ಮೊದಲು ಅಪ್ಪನಿಗೊಂದು ಗಂಟು ಹಾಕಿದ. ಅಂದಿನಿಂದಲೇ ತಂದೆ ಮಕ್ಕಳ ಪ್ರೀತಿ ವಿಶ್ವಾಸ ಗಾಢವಾಯಿತು. ಕ್ರಮೇಣ ಮನೆಯವರೆಲ್ಲರ ಮೇಲೂ ಅಧಿಕಾರ ಚಲಾಯಿಸುತ್ತಾ ಬಂದ. ನಮ್ಮಪ್ಪನ ಪುಂಗಿಗೆ ಹೆಡೆ ಎತ್ತಿ ಹಾಡಲು ಪ್ರಾರಂಭಿಸಿದ. ಸೊಸೈಟಿಯಿಂದ ಅಕ್ಕಿ, ಸಕ್ಕರೆಯನ್ನು ಅವನೇ ಚಿಕ್ಕಮ್ಮನ ಮನೆಗೆ ಸಾಗಿಸಲು ಪ್ರಾರಂಭಿಸಿದ. ಅಪ್ಪನಿದ್ದಾಗ ಚಿಕ್ಕಮ್ಮ ಎಂದು ಕರೆಯಬಹುದು. ಇಲ್ಲದ ವೇಳೆಯಲ್ಲಿ ಹೆಗಲ ಮೇಲೆ ಕೈ ಹಾಕುವನೇ. ಒಂದು ಬಿಂದಿಗೆ ಹಾಲಿಗೆ ಒಂದು ತೊಟ್ಟು ಹುಳಿ ಸಾಲದೇ?

ಒಂಟಿಯಾಗಿರುವವನಿಗೆ ಜಂಟಿಯನ್ನಾಗಿ ಮಾಡಲು ನಮ್ಮಪ್ಪನಿಗೆ ಆತುರ. ಸರಿ ಹೆಣ್ಣು ಹುಡುಕಲು ಪ್ರಾರಂಭಿಸಿದರು. ಬ್ರಹ್ಮ ಅವನಿಗೊಂದು ಹೆಣ್ಣು ಸೃಷ್ಟಿಸಿದ್ದ. ಮದುವೆಯಾದ ಮೇಲೆ ಅವನ ಬುದ್ಧಿಯು ಅತ್ತಿಗೆಯಿಂದಲಾದರೂ ಸರಿ ಹೊಂದಬಹುದು ಎಂದು ತಿಳಿದು ಕೊಂಡಿದ್ದೆ. ಅದರೆ ನನ್ನ ಊಹೆ ತಪ್ಪಾಯಿತು. ಉರಿಯುವ ಬೆಂಕಿಗೆ ನೀರು ಹಾಕಲಿಲ್ಲ ತುಪ್ಪವನ್ನೇ ಹಾಕಿದಳು.

ನೋಡುವರು ಎಲ್ಲಿ ತನಕ ನೋಡುತ್ತಾರೆ? ನೋಡಿ ನೋಡಿ ನನಗೂ ಸಾಕಾಗಿ ಹೋಯಿತು. ಇದರ ಮಧ್ಯೆ ನಮ್ಮಣ್ಣ ಸೊಪ್ಪು ತಿಂದುಕೊಂಡ. ಅಣ್ಣ ತಿಂದುಕೊಂಡನೆಂದ ನಮಗೆ ದುಃಖವಾದರೆ ಅವನಿಗೆ ಸಂತೋಷವಾಯಿತು. ಅವನಿಗೆ ರೆಕ್ಕೆಗಳೇ ಮೂಡಿ ಬಂದಂತಾದವು. ಮನೆ ತುಂಬಾ ಅವನದೇ ಓಡಾಟ. ಎಲ್ಲರ ಎದುರಿಗೂ ಸತ್ತ ಅಣ್ಣನಿಗೆ ಬೈಯಲು ಪ್ರಾರಂಭಿಸಿದ 'ಅವನು ಇದ್ದಿದ್ದರೆ ಯಾರ ಯಾರ ತಲೆ ತೆಗೆಯುತ್ತಿದ್ದನೋ' ಅಂದ. ಆ ಮಾತು ಕೇಳಿ ನನ್ನ ಹೊಟ್ಟೆ ಕರುಳು ಕಿವುಚಿದಂತಾಯಿತು. ಅಣ್ಣ ಸತ್ತಂದಿನಿಂದ ನನ್ನ ಬಲ ಸ್ಥೈರ್ಯ ಹೋಯಿತು. ಒಬ್ಬನಿಂದ ಏನು ಮಾಡಲು ಸಾಧ್ಯ?

ಅಣ್ಣ ಸತ್ತಂದಿನಿಂದಲೂ ನನ್ನನ್ನು ಅ ಜನ್ಮವೈರಿಯಂತೆ ನೋಡ ತೊಡಗಿದ. ಮನೆಯಲ್ಲಿದ್ದ ಸೈಕಲನ್ನು ತುಳಿಯುವುದಕ್ಕೂ ಕಷ್ಟಕ್ಕೆ ಬಂತು. ಸೈಕಲನ್ನು ಕೆಡಿಸಿಕೊಂಡು ಬಂದು ಸಲೀಸಾಗಿ ಗ್ಯಾರೇಜಿನಲ್ಲಿ ನಿಲ್ಲಿಸುತ್ತಿದ್ದ. ರಿಪೇರಿ ಮಾಡಿಸಲು ಒಂದು ನಯಾ ಪೈಸಾನೂ ಕೊಡುತ್ತಿರಲಿಲ್ಲ. ಆದರೆ ಸೈಕಲನ್ನು ತುಳಿಯಲು ನನಗೂ ಹಕ್ಕಿದೆ ಎಂದು ಜಗಳಕ್ಕೆ ಬರುವನು.

ಅವನ ಯೋಚನೆ ಸಾಕು ಅಂತಾ ಮುಖ ತುಂಬಾ ಹಚ್ಚಡ ಹೊದ್ದು ಕಾಲಿನಿಂದ ಜಗ್ಗಿದೆ. ಟರ್ ಎನ್ನುತ್ತ ಹಚ್ಚಡವನ್ನೇ ಹರಿದು ಹೋಗಬೇಕೇ. ಅಧಿಕ ಮಾಸದಲ್ಲಿ ದುರ್ಭಿಕ್ಷ ಬಂದಂತಾಯಿತು. ಮೈಗೆ ಬಟ್ಟೆ ಹೊಲಿಸುವುದೇ ಕಷ್ಟವಾಗಿರುವಾಗ ಇನ್ನು ಹಚ್ಚಡ ಕೇಳುವುದೆಲ್ಲಿ? ನಾನು ಬಟ್ಟೆ ಹಾಕಿಕೊಳ್ಳಬೇಕಾದರೆ ತಪಸ್ವಿಯಂತೆ ಒಂಟಿ ಕಾಲಿನಲ್ಲಿ ನಿಂತು ತಲೆ ಕೆರೆ

(೧ನೇ ಪುಟಕ್ಕೆ)

ಬೆಳ್ತಂಗಡಿ ಡಿಸ್ಟ್ರಿಕ್ಟ್ ಮುನ್ಸಿಪ್ ಕಮ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ

S. C. No. 20/961.

A. ಪದ್ಮಯ್ಯ ಹೆಗ್ಡೆ—ಎಲಂಬ ಬಾಬಂಜ ಹೆಗ್ಡೆರ ಅಳಿಯ—ಬೆಳ್ತಂಗಡಿ ತಾಲ್ಲೂಕು ನಾವೂ ಗ್ರಾಮದ ಎಲಂಬ ಎಂಬಲ್ಲಿ—ವಾದಿ.

ರಾಮಣ್ಣ ಶೆಟ್ಟಿ ದೊಗ್ಗು ಶೆಟ್ಟಿ ಅಳಿಯ, ಬೆಳ್ತಂಗಡಿ ತಾಲ್ಲೂಕು ಕೊಕ್ಕಡ ಗ್ರಾಮದ ಮಾಸ್ಕೋಡಿ ಎಂಬಲ್ಲಿ—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಯು ತನಗೆ ಪ್ರತಿವಾದಿಯಿಂದ ಕಳೆದ ಶೋಭಕೃತು ಸಂವತ್ಸರಕ್ಕೆ ಬರತಕ್ಕ ಗೇಣಿ ಬಾಕಿ ಇತ್ಯಾದಿ ರೂ 247-42ಕ್ಕೆ ಪ್ರತಿವಾದಿಯ ಮೇಲೆ ಮಾಡಿರುವ ಮೇಲಿನ ವ್ಯಾಜ್ಯ ತಾ 8-6-64ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆದ್ದರಿಂದ ಈ ಕುರಿತು ಆಕ್ಷೇಪವಿದ್ದರೆ ಸದ್ರಿ ವ್ಯಾಜ್ಯದಿನ ಪೂರ್ವಾಹ್ನ ಗಂಟೆ 11ಕ್ಕೆ ಪ್ರತಿವಾದಿಯು ಕೋರ್ಟಿನ ಮುಂದೆ ಹಾಜರಾಗಿ ಉದಾಸಗದಿದ್ದರೆ ಪ್ರತಿವಾದಿಯನ್ನು ರಿಸ್ಟ್ ಮಾಡಿ ವ್ಯಾಜ್ಯವನ್ನು ತೀರ್ಮಾನಿಸಲಾಗುವುದು—

[By order of the Court]

B K. Soorya Narayana Rao,
Advocate for Plff

ಬೆಳ್ತಂಗಡಿ, ತಾ. 20-4-64.

REGD. No. B. G. 176
LICENCE No. 31
Licensed to Post without Prepayment

ನಗೆಗಡಲು

ಟಿಟಿಕೆ ಜ್ಞಾನ

ಹಿಂದಿಯಲ್ಲಿ ಹಿಂದೆ ಬಿದ್ದಿರುವ ಟೊಣಪನನ್ನು ಹಿಂದಿ ಮೇಸ್ಟ್ರು ಗದರಿಸಿದರು, ಹೆದರಿಸಿದರು, ನಾಲ್ಕು ಬಡೆದರು, ಮನೆಯವರಿಂದಲೂ ಬಡಿಸಿದರು. ಆದರೂ ಟೊಣಪ ಗಡಿಪಾರವಾಗಿ ಬಿಟ್ಟ. ಕೊನೆಗೆ ಸಮಾಧಾನದ ದಾರಿಯನ್ನೇ ಹಿಡಿಯಬೇಕಾಯ್ತು ಮೇಸ್ಟ್ರು. ಒಂದು ದಿನ ಅವನನ್ನು ಕರೆದರು,

"ಟೊಣಪ..."

"ಏನು ಗುರುಗಳೆ?" ಅತಿ ವಿನಯ ತುಳುಕಾಡಿತು.

"ಹಿಂದೀ ನಮ್ಮ ರಾಷ್ಟ್ರಭಾಷೆ ಕಣಪ್ಪ..."

"ಅಲ್ಲ ಗುರುಗಳೇ ...."

"ಸದ್ಯವೇ ಆಗುತ್ತಪ್ಪ"

"ಎರಡು ತಲೆಮೂರು ಕಾಯಬೇಕಂತೆ ಗುರುಗಳೇ, ಹಾಗಿರುವಾಗ ಈಗಲೇ ಹಿಂದೀ ಮೇಸ್ಟ್ರನ್ನು ಯಾಕೆ ಇಡ್ಬೇಕು ಗುರುಗಳೇ? ಅವರಿಗೆ ಕೊಡೋ ಸಂಬಳ ಅಪವ್ಯಯವಾಗುತ್ತಲ್ಲ ಗುರುಗಳೇ." ಟೊಣಪನ ಟಿಟಿಕೆ ಜ್ಞಾನವನ್ನು ಕಂಡು ಮೇಸ್ಟ್ರು ಪೆಚ್ಚಾದರು.

ಟೊಣಪ ವಿಜಯ

ಶಾಲೆಗೆ ತಪ್ಪಿಸಿದರೆ, ರಜಾ ಅರ್ಜಿ ತಾರದೆ ಟೊಣಪನ ಗುರುಗಳು ತರಗತಿಗೆ ಪ್ರವೇಶ ನೀಡುತ್ತಿರಲಿಲ್ಲ. ಶಾಲೆಗೆ ಬಾರದ ಮರುದಿನ ತಾರದೆ ಹೋದರೆ, ತರುವವರೆಗೆ ಅಟೆಂಡನ್ಸ್ ಇಲ್ಲ. ಬರೇ ಅರ್ಜಿಯಾಗಿದ್ದರೆ ಏನಾದರೂ ಆಗುತಿತ್ತು: ಆದಕ್ಕೆ ಹೆತ್ತವರ ಯಾ ರಕ್ಷಕರ ಸಹಿಯೂ ಬೇಕಿತ್ತು. ಸುಳ್ಳು ಸಹಿ ಹಾಕಿಯೂ ಸಿಕ್ಕಿ ಬಿದ್ದಿದ್ದ ಟೊಣಪ

ವರ್ಷದ ಕೊನೆಯ ಕಾಲಾವಧಿನದ ಹಿಂದಿನ ದಿನ ಮಕ್ಕಳಿಗೆಲ್ಲಾ ಮೆಡಿಕಲ್ ಇನ್ಸ್‌ಪೆಕ್ಷನ್ ನಡೆಯಿತು. ಟೊಣಪ ಗೈರು ಹಾಜರು. ಈ ಇನ್ಸ್‌ಪೆಕ್ಷನನ್ನು ಬಾಕಿಯಿಡುವಂತಿಲ್ಲ ಮರುದಿನ ಬಂದ ಟೊಣಪನನ್ನು ಮೇಸ್ಟ್ರು ಡಾಕ್ಟರಲ್ಲಿಗೆ ಕಳಿಸಿದರು. ಆತ ಬಂದಮೇಲೆ ಲೀವ್‌ನೋಟ್ ಕೇಳಿದರು. ಟೊಣಪ ತಾನು ಶಾಲೆಗೆ ಬಂದಿದ್ದೇನೆಂದೂ ಮೆಡಿಕಲ್ ಇನ್ಸ್‌ಪೆಕ್ಷನ್ ಮಾಡಿಸಿದ್ದೇನೆಂದೂ ಮೇಸ್ಟ್ರು ಸುಂಸುಮ್ನೆ ಆಬ್ಸೆಂಟ್ ಹಾಕಿದ್ದಾರೆಂದೂ ಯಾವಾಗ್ಲೂ ತನ್ನ ಮೇಲೆ ಈ ರೀತಿಯ ದುರ್ವರ್ತನೆ ತೋರಿಸುತ್ತಿರುವರೆಂದೂ ಚಾರ್ಜ್‌ಶೀಟ್ ಹಾಕಿದ. ಆ ದಿನಕ್ಕೆ ಗೆದ್ದೂ ಬಿಟ್ಟ.

ಸಖ್ಯಭಾವ

ಟೊಣಪನ ಜತೆ ತರಗತಿಯಲ್ಲಿ ಕೂತುಕೊಳ್ಳುವವ ಗಣಪ. ಇಬ್ಬರ ರೂಪ–ಆಕಾರ–ಗಾತ್ರವೆಲ್ಲವೂ ಅವರ ಹೆಸರಿಗೆ ತಕ್ಕಂತೆಯೇ ಸಮಾನ ರೂಪಂ ವ್ಯಸನೇನ ಸಖ್ಯಂ– ಎಂಬಂತೆ ಅವರಲ್ಲಿ ಗಾಢವಾದ ದೋಸ್ತಿ. ಅಧ್ಯಾಪಕರು ತರಗತಿಗೆ ಬರುತ್ತಲೇ ಎದ್ದು ಕುಳಿತ ಅವರು ಮಾತಿಗೆ ತೊಡಗುತ್ತಾರೆ. ಅತ್ತ ಪಾಠ ನಡೆಯುತ್ತಲಿದೆ. ಇತ್ತ ಸಖದ್ವಯರ ಪ್ರವಚನ ಸಾಗುತ್ತಿದೆ.

ಒಂದು ದಿನ ಅಧ್ಯಾಪಕರಿಂದ ಇದನ್ನು ಸಹಿಸಲಾಗಲಿಲ್ಲ 'ಟೊಣಪಾ' ಗಟ್ಟಿಯಾಗಿ ಅರಚಿದರು. ದಿಗ್ಗನೆದ್ದವ ಟೊಣಪನಲ್ಲ ಗಣಪ!

"ನೀನು ಯಾಕೆ ನಿಂತಿಯೋ?"

"ನೀವು ಕೂಗಿದಿರಲ್ಲಾ ಸರ್..."

"ನಿನ್ನನ್ನಲ್ಲಾ ಕೂಗಿದ್ದು ಅವನನ್ನು.."

ಟೊಣಪನೇ ಎದ್ದು ಸಮಸ್ಯೆಗೆ ಪರಿಹಾರ ಸೂಚಿಸಿದ: "ಇಂದಿನ ದಿನಕ್ಕೆ ನಾನು ಗಣಪ ಅವನು ಟೊಣಪ ಅಂತ ಗೊತ್ತುವಳಿ ಈಗ ತಾನೇ ಸ್ವೀಕರಿಸಿದ್ದೇವೆ ಗುರುಗಳೇ!"

ಇಡಿಯ ತರಗತಿಯೊಮ್ಮೆ ಗೊಳ್ಳೆಂದು ನಕ್ಕಿತು ಹಂಚು ಹಾರಿಹೋಗದಿದ್ದದ್ದು ಮೆನೇಜ್‌ಮೆಂಟಿನ ಪುಣ್ಯ.

ವಿಜಯದ ಮೂಲ

ಶಾಲಾ ಪಾರ್ಲಿಮೆಂಟಿಗೆ ಚುನಾವಣೆ ನಡೆಯುವುದಿತ್ತು. ಭಾರತದ ಚುನಾವಣೆಗಿಂತಲೂ ಇಲ್ಲಿನದರಲ್ಲಿ ಕಾವು ಏರಿತ್ತು. ಜಾತೀಯ ತಳಹದಿಯಲ್ಲಿ ಎರಡು ಪಕ್ಷಗಳು ಹುಟ್ಟಿಕೊಂಡುವು ಟೊಣಪ ಮತ್ತು ಕಂಪೆನಿಯವರು 'ಅ' ನ ಪಕ್ಷ ವಹಿಸಿದರು. ಮತ ಬೇಡುವುದಕ್ಕೆ ಶುರುವಾಯ್ತು. 'ಅ'ನ ಪರವಾಗಿ ಸಖದ್ವಯರು ಮೈದಾನಿಗೆ ಇಳಿದರು. ಶಾಲಾ ಗೇಟಿನ ಹೊರಗೆ ನಿಂತರು. ಬರುವ ಪ್ರತಿ ವಿದ್ಯಾರ್ಥಿಯ ರಟ್ಟೆಯನ್ನು ಗಣಪ ಹಿಡಿದ. ಟೊಣಪ ಬೆನ್ನಿಗೊಂದು ಏಟುಕೊಟ್ಟ. 'ಓಟು 'ಅ'ನಿಗೆ ಹಾಕದೆ ಹೋದರೆ, ನಿಕ್ಕ ಇದೇ ದೊರೆತೀತು ಜಾಗ್ರತೆ' ಎಂದ ಆಶ್ಚರ್ಯ! 'ಅ' ಪ್ರಚಂಡ ಬಹುಮತದಿಂದ ಮಾತ್ರವಲ್ಲ; ಸರ್ವಾನುಮತದಿಂದ ಗೆದ್ದೇ ಬಿಟ್ಟ!

ನಾಗಲೋಕದ ನಾಗಣ್ಣ

(೧೧ನೇ ಪುಟದಿಂದ)

ಯುತ್ತಾ ಕೇಳಬೇಕು, ನನ್ನ ಗ್ರಹಚಾರ ಚನ್ನಾಗಿದ್ದರೆ ಒಂದೆರಡು ಬಟ್ಟೆಗಳನ್ನು ಹಾಕುತ್ತಿದ್ದರು. ಅದು ಎಂತಹ ಬಟ್ಟೆಯೋ? ಹಳೇ ಸ್ಟಾಕು ಮಾಲು. ಇಲ್ಲವಾದರೆ ಬೈಸಿಕೊಂಡು ತೆಪ್ಪಗೆ ಮನೆಯ ದಾರಿ ಹಿಡಿಯಬೇಕು ಇವನಾದರೋ ಯಾರು ಇಲ್ಲದ ಸಮಯ ನೋಡಿ ಬಟ್ಟೆ ಹೊಲಿಯಲು ದರ್ಜಿಯವನಿಗೆ ಕೊಡುತ್ತಿದ್ದನು. ಚಿಕ್ಕವನಿದ್ದಾಗಲೇ ಅಂಗಡಿಯಲ್ಲಿದ್ದ ಸೀರೆಗಳನ್ನೇ ಕದ್ದುಕೊಂಡು ಹೋಗಿ ಮಾರಿಕೊಳ್ಳುತ್ತಿದ್ದನು ಹೆಂಡ್ತಿಗೆ ಸೀರೆ, ಚೌಳಿ ಪೀಸುಗಳನ್ನು ಲೆಕ್ಕವಿಲ್ಲದಷ್ಟು ಟ್ರಂಕಿನಲ್ಲಿ ಸೇರಿಸಿದ. ತವರುನಲ್ಲಿ ಹತ್ತಾರು ಬಾರಿ ನೀರಿನಲ್ಲಿ ಹಾಕಿ ಹಳೆ ಬಟ್ಟೆಯಂತೆ ಮಾರ್ಪಾಡಿಸಿಕೊಂಡು ಏನೂ ಅರಿಯದವಳಂತೆ ಇಲ್ಲಿಗೆ ತರುತ್ತಿದ್ದಳು ನನ್ನ ಅತ್ತಿಗೆ.

ಸಾಕಪ್ಪಾ ಸಾಕು ನಾಗಲೋಕದ ನಾಗಣ್ಣ ವಿಷಯ ಬೇಡವೆಂದು ಇನ್ನೊಂದು ಮಗ್ಗುಲಿಗೆ ಹೊರಳುವಾಗ ಮಂಚದಿಂದ ಕೆಳಗೆ ಉರುಳಿದೆ. ಸೊಂಟಕ್ಕೆ ಪೆಟ್ಟು ಬಿತ್ತು. ಆವಾಗ್ಲೇ ಅಂತಾ ಹಾಸಿಗೆಯ ಮೇಲೆ ಕುಳಿತೆ. ಅಣ್ಣನ ಮೇಲೆ ತಪ್ಪು ಭಾವನೆಗಳನ್ನು ಕಲ್ಪಿಸಿದಕ್ಕೆ ತಕ್ಕ ಶಾಸ್ತಿಯೇ ಆಯಿತು ಅಂದುಕೊಂಡು ಮಲಗಿ ತುಂಬಾ ಮುಸುಕು ಎಳೆದುಕೊಂಡೆ ಆಗ ಕಚೇರಿಯ ಗಂಟೆ ನಿಧಾನವಾಗಿ ಹನ್ನೆರಡು ಬಾರಿಸಿತು.




ಬ್ಯಾಂಕಿನ ಆಡಳಿತ ಕಛೇರಿ ಕಟ್ಟಡ

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
ರಿಜಿಸ್ಟರ್ಡ್ ಆಫೀಸ್ ಮಂಗಳೂರು ● ಆಡಳಿತ ಕಛೇರಿ ಬೆಂಗಳೂರು
72 ಕೋಟಿಗೂ ಮೀರಿ ಠೇವಣಾತಿಗಳು
239 ಶಾಖೆಗಳು ● ಪ್ರಪಂಚದಾದ್ಯಂತ ಪ್ರತಿನಿಧಿಗಳು

ದಕ್ಷಿಣ ಭಾರತದಲ್ಲೇ ಪ್ರಮುಖ ಬ್ಯಾಂಕು

ನಮ್ಮ ಆನುಯಿಟಿ ಸರ್ಟಿಫಿಕೇಟ್‌ಗಳ ಅನೇಕ ಪ್ರಯೋಜನಗಳು ನಿಮಗೆ ಗೊತ್ತಿರಬಹುದಲ್ಲವೆ?
ವಿವರಗಳಿಗೆ ನಿಮ್ಮ ಸಮೀಪದಲ್ಲಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿ